ಅಕಾದೆಮಿ ಪ್ರಶಸ್ತಿ ಪುರಸ್ಕೃತ ಇಂಗ್ಲಿಷ್ ಕಾದಂಬರಿ 'ಕಕೋಲ್ಡ್'

ಬೇಗುದಿ

ಕಿರಣ್ ನಗರ್‌ಕರ್

ಅನುವಾದ:

ಆರ್. ಲಕ್ಷ್ಮೀನಾರಾಯಣ



ಕಕೋಲ್ಡ್ (ಬೇಗುದಿ) ಅತ್ಯಂತ ವಿಚಾರ ಪ್ರಚೋದಕ ಹಾಗೂ ಮನಕರಗಿಸುವಂಥ ಕೃತಿ. ಅಲ್ಲದೆ ಸರಾಗವಾಗಿ ಓದಿಸಿಕೊಂಡು ಹೋಗುವ ಗುಣವುಳ್ಳ ಅತ್ಯಂತ ಅಪರೂಪದ ಕಾದಂಬರಿ.

ಕಾದಂಬರಿಯ ಕಾಲ 16ನೇ ಶತಮಾನ. ಮೇವಾಡದ ರಜಪೂತ ಸಾಮ್ರಾಜ್ಯವು ತನ್ನ ಅಧಿಕಾರದ ತುತ್ತ ತುದಿಯಲ್ಲಿದೆ. ಅದು ದೆಹಲಿ, ಗುಜರಾತ್ ಮತ್ತು ಮಾಳ್ವದ ಸುಲ್ತಾನರುಗಳೊಂದಿಗೆ ಘೋರ ಯುದ್ಧದಲ್ಲಿ ತೊಡಗಿದೆ. ಆದರೆ ಮೇವಾಡದೊಳಗಡೆಯೇ ಇನ್ನೊಂದು ಯುದ್ಧ ಶುರುವಾಗಿದೆ. ಅದೆಂದರೆ ಮಹಾರಾಣನ ಮರಣದ ನಂತರ ಮೇವಾಡದ ಸಿಂಹಾಸನದ ಉತ್ತರಾಧಿಕಾರಿ ಯಾರು? ಎಂಬುದು. ಕೇವಲ ಮೇವಾಡದಷ್ಟೇ ಅಲ್ಲ, ಇಡೀ ಭಾರತದ ಇತಿಹಾಸದ ಪಥವೇ ಶಾಶ್ವತವಾಗಿ ಬದಲಾಗಿ ಬಿಡುವಂಥ ಸನ್ನಿವೇಶ. ಅದು ಈ ಕಾದಂಬರಿಯ ಕಥಾವಸ್ತು.

ಕಾದಂಬರಿಯ ಕೇಂದ್ರದಲ್ಲಿ ಕಾದಂಬರಿಯ ನಿರೂಪಕನಾದ ಮೇವಾಡದ ಖಚಿತ ಉತ್ತರಾಧಿಕಾರಿ ಇದ್ದಾನೆ. ಆತ ತಾನೂ ಒಂದು ಭಾಗವೇ ಆಗಿರುವ ಊಳಿಗಮಾನ್ಯ ಪ್ರಪಂಚಕ್ಕೆ ಆಧಾರವಾದ ಕಾಯಿದೆ, ಕಾನೂನುಗಳು, ಸಂಪ್ರದಾಯಗಳು ಹಾಗೂ ಗ್ರಹಿಕೆಗಳನ್ನು ಪ್ರಶ್ನಿಸುತ್ತ ಹೋಗುತ್ತಾನೆ. ಆ ಊಳಿಗಮಾನ್ಯ ಜಗತ್ತಿನಲ್ಲಿಯ ವ್ಯಕ್ತಿಗಳ ರಾಜಕೀಯ ಮತ್ತು ವೈಯಕ್ತಿಕ ನಡೆಗಳನ್ನು ನಿರ್ದೇಶಿಸುವಂಥವು ಧೈರ್ಯ, ಸಾಹಸ, ಪರಾಕ್ರಮ ಹಾಗೂ ವಿನಯದ ಮೌಲ್ಯಗಳು. ಅಲ್ಲಿ ಅಪಮಾನವನ್ನು ಅನುಭವಿಸುವುದಕ್ಕಿಂತ ಮೃತ್ಯುವನ್ನಪ್ಪುವುದೇ ಶ್ರೇಯಸ್ಕರವೆಂದು ತಿಳಿಯಲಾಗುತ್ತದೆ.

ನಗರ್‌ಕರ್ ಅವರು ಕಾದಂಬರಿಯ ಪ್ರಕಾರ ಮತ್ತು ಪರಂಪರೆಯೊಂದಿಗೆ ಅತ್ಯಂತ ಸೂಕ್ಷ್ಮವಾಗಿ ಆಟವಾಡುತ್ತಾರೆ. ಹಾಗೆ ಮಾಡುವ ಮೂಲಕ ಅವರು ನಮ್ಮ ಕಥನದ ಕಲ್ಪನೆಗಳನ್ನು ವಿಸ್ತರಿಸುತ್ತ ಹೊಚ್ಚಹೊಸ ಹಾದಿಯನ್ನು ತೆರೆದಿದ್ದಾರೆ.

Begudi (Kannada)
ISBN: 978-81-260-4383-0
Rs.350/-
Coverpage : P.S.Kumar





ಬೇಗುದಿ

ಅಕಾದೆಮಿ ಪ್ರಶಸ್ತಿ ಪುರಸ್ಕೃತ ಇಂಗ್ಲಿಷ್ ಕಾದಂಬರಿ 'ಕಕೋಲ್ಡ್'

ಬೇಗುದಿ

ಕಿರಣ್ ನಗರ್‌ಕರ್

ಅನುವಾದ:
ಆರ್. ಲಕ್ಷ್ಮೀನಾರಾಯಣ

ಸಾಹಿತ್ಯ ಅಕಾದೆಮಿ

BEGUDI : Kannada translation by R.Lakshminarayana of Kiran Nagarkar's award winning English novel *Cuckold*, Sahitya Akademi, 2013. Rs. 350/-

ಮೊದಲ ಮುದ್ರಣ : 2013

ಸಾಹಿತ್ಯ ಅಕಾದೆಮಿ

ರವೀಂದ್ರ ಭವನ, 35, ಫಿರೋಜ್ ಶಹಾ ರಸ್ತೆ, ನವದೆಹಲಿ 110 001
'ಸ್ವಾತಿ', ಮಂದಿರ್ ಮಾರ್ಗ, ನವದೆಹಲಿ 110 001
172, ಮುಂಬೈ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬೈ 400 014
4, ಡಿ.ಎಲ್. ಖಾನ್ ರಸ್ತೆ, ಕೊಲ್ಕತ್ತಾ 700 025
ಸೆಂಟ್ರಲ್ ಕಾಲೇಜ್ ಆವರಣ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು 560 001
443, ಗುಣ ಕಾಂಪ್ಲೆಕ್ಸ್, ಅಣ್ಣಾಸಾಲೈ, ತೇನಾಂಪೇಟೆ, ಚೆನ್ನೈ 600 018

ISBN : 978-81-260-4383-0

ಬೆಲೆ : ಮುನ್ನೂರ ಐವತ್ತು ರೂಪಾಯಿಗಳು

ಮುಖಪುಟ: ಪ.ಸ.ಕುಮಾರ್, ಬೆಂಗಳೂರು

ಪುಟ ವಿನ್ಯಾಸ ಮತ್ತು ಮುದ್ರಣ: ಕೀರ್ತಿ ಪ್ರಿಂಟರ್ಸ್, ಬೆಂಗಳೂರು

ಈ ಕಾದಂಬರಿಗೆ ಆಧಾರಭೂತವಾಗಿರುವ ತರ್ಕಗಳಲ್ಲೊಂದು; ಕಾದಂಬರಿಯಲ್ಲಿ ಬರುವ ಮಹಾರಾಜ್‌ಕುಮಾರ್, ರಾಣಾಸಂಗ ಮತ್ತು ಇತರೆ ವ್ಯಕ್ತಿಗಳ ಕಾಳಜಿಗಳು, ಇಕ್ಕಟ್ಟುಗಳು ಮತ್ತು ಅಹಿತಕರವಾದ ಸಂದರ್ಭಗಳು, ನಮ್ಮ ಕುಟುಂಬಗಳಲ್ಲಿ ಹುಟ್ಟು, ವಿಚ್ಛೇದನ, ಸಾವು ಹಾಗೂ ರಾಷ್ಟ್ರಜೀವನದಲ್ಲಿಯ ರಾಷ್ಟ್ರೀಯ ಬಿಕ್ಕಟ್ಟು ಅಥವಾ ಸೈನಿಕ ಸಂಘರ್ಷದಂಥ ಸನ್ನಿವೇಶದಲ್ಲಿ ನಾವು ತೊಡಗಿಸಿಕೊಂಡಷ್ಟೇ ವಾಸ್ತವ ಎನ್ನುವಂಥ ಅನುಭವವನ್ನು ತಂದುಕೊಡುವುದು ಸರಳವಾದ ಆಡುಭಾಷೆಯ ಮಾತಿನ ಸರಣಿ ಎನ್ನುವುದು. ಇದರ ಹಿಂದಿರುವ ಆಲೋಚನೆ ಎಂದರೆ, ಕಾಲದ ಗಣನೆ, ಶಿಕ್ಷಣ ಸಿದ್ಧಾಂತಗಳು, ಯುದ್ಧ ತಂತ್ರಜ್ಞಾನ, ಸಂಗೀತ, ಅಧಿಕಾರಶಾಹಿಯ ಕಾರ್ಯನಿರ್ವಹಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಇಂದು ನಾವು ಬಳಸುತ್ತಿರುವ ಪರಿಕಲ್ಪನೆಗಳು, ಹದಿನಾರನೇ ಶತಮಾನದಲ್ಲಿಯೂ ಲಭ್ಯವಿರುತ್ತಿರುವವರೆಗೂ ಸಮಕಾಲೀನ ನುಡಿಗಟ್ಟನ್ನೇ ಬಳಸಬೇಕು ಎನ್ನುವುದು. ಸ್ವಾಮಿನಿಷ್ಠೆಯನ್ನು ಕುರಿತಾದ ಯಾವುದೋ ಜಿಜ್ಞಾಸಾತ್ಮಕವಾದ ಕಲ್ಪನೆಗಿಂತ ವಾಸ್ತವದ ಬದುಕನ್ನು ಅತ್ಯುತ್ತಮವಾಗಿ ರೂಪಾಂತರಿಸಲು ನಾನು ಶ್ರಮಿಸುತ್ತಿದ್ದೆ.

ಅನುವಾದಕನ ಅರಿಕೆ

ಅನ್ಯಭಾಷೆಗಳ ಉತ್ಕೃಷ್ಟ ಕೃತಿಗಳನ್ನು ಕನ್ನಡಕ್ಕೆ ತರಬೇಕೆಂಬ ನನ್ನ ಆಕಾಂಕ್ಷೆಗೆ ಒತ್ತಾಸೆಕೊಡುವಂತೆ, ಕೇಂದ್ರಸಾಹಿತ್ಯ ಅಕಾಡೆಮಿ, ಖ್ಯಾತ ಇಗ್ಲಿಷ್, ಮರಾಠಿ ಲೇಖಕ ಕಿರಣ್‌ನಗರ್‌ಕರ್ ಅವರ ಪ್ರಶಸ್ತಿಪುರಸ್ಕೃತ ಕಾದಂಬರಿ "ಕಕೋಲ್ಡ್" ಅನ್ನು ಕನ್ನಡಕ್ಕೆ ಅನುವಾದಿಸುವ ಹೊಣೆಯನ್ನು ನನಗೆ ವಹಸಿಕೊಟ್ಟದ್ದರ ಫಲಸ್ವರೂಪವೇ ಪ್ರಸ್ತುತ ಕೃತಿ.

ಇದರ ಓದು ವಿನೂತನವೂ ವಿಶಿಷ್ಟವೂ ಆದೊಂದು ಅನುಭವವನ್ನು ನನಗೆ ತಂದುಕೊಟ್ಟಿತು. ಐತಿಹ್ಯ ಮತ್ತು ಜನಪದ ವೃತ್ತಾಂತಗಳನ್ನು ಬಳಸಿಕೊಂಡು ಇತಿಹಾಸದ ಭಿತ್ತಿಯಮೇಲೆ ಕಿರಣ್‌ನಗರ್‌ಕರ್ ಅವರು ಅಪೂರ್ವ ಕಲಾಕೃತಿಯೊಂದನ್ನು ನಿರ್ಮಿಸಿಬಿಟ್ಟಿದ್ದಾರೆ.

ಇದು ಭಾರತೀಯ ಇತಿಹಾಸದ ಅತ್ಯಂತ ಪ್ರಕ್ಷುಬ್ಧ ಕಾಲಘಟ್ಟವಾದ ಹದಿನಾರನೇ ಶತಮಾನದ ವಿಸ್ತೃತ ಐತಿಹಾಸಿಕ ಹಿನ್ನೆಲೆಯಲ್ಲಿ ರಚಿತವಾದ ಕೃತಿಯಾಗಿದೆ. ಈಗಾಗಲೇ ಸುಪ್ರಸಿದ್ಧವೂ ಚಿರಪರಿಚಿತವೂ ಆದ ಐತಿಹಾಸಿಕ ಸಂಗತಿಗಳು, ಸನ್ನಿವೇಶಗಳು ಮತ್ತು ಪಾತ್ರಗಳೊಂದಿಗೆ ಕಾಲ್ಪನಿಕ ಸಂಗತಿಗಳು ಮತ್ತು ಪಾತ್ರಗಳನ್ನು ಮೇಳವಿಸಲಾಗಿದೆ. ಸಂತ ಮೀರಾಬಾಯಿಯ ಐತಿಹ್ಯವನ್ನು ಎತ್ತಿಕೊಂಡು, ಅವಳ ವ್ಯಕ್ತಿತ್ವದ ಪ್ರಭಾವಳಿಯಲ್ಲಿ ಮರೆಯಾಗಿಹೋಗಿ ನಾಮಮಾತ್ರವಾಗಿಬಿಟ್ಟದ್ದ ಮೇವಾಡದ ಮಹಾರಾಜ್‌ಕುಮಾರ್‌ನ (ಭೋಜರಾಜ್) ಹಾಗೂ ಮೀರಾಳ ವ್ಯಕ್ತಿತ್ವಗಳನ್ನು ಎಲ್ಲ ಸಂಕೀರ್ಣತೆಯೊಂದಿಗೆ ಕಟ್ಟಿಕೊಡುವ ಕೆಲಸವನ್ನು ಕಾದಂಬರಿಕಾರರು ಇಲ್ಲಿ ಮಾಡಿದ್ದಾರೆ. ಅದರ ಜೊತೆಜೊತೆಗೇ ರಾಜಕೀಯ ಸ್ಥಿತ್ಯಂತರಗಳು, ರಜಪೂತರ ಶೌರ್ಯ, ಪರಾಕ್ರಮ ಮತ್ತು ದೇಶಭಕ್ತಿಗಳು, ಮೊಗಲರ ಮಹತ್ವಾಕಾಂಕ್ಷೆಗಳು ಎಲ್ಲವನ್ನೂ ಚಿತ್ರಿಸುತ್ತ ಅವೆಲ್ಲವೂ ಒಟ್ಟಾರೆಯಾಗಿ ಇತಿಹಾಸದ ಪಥಗತಿಯನ್ನು ಪ್ರಭಾವಿಸಿದ ರೀತಿಯನ್ನು ಅತ್ಯಂತ ಸಾವಧಾನವಾಗಿ, ನಿರುದ್ವಿಗ್ನವಾಗಿ ನಿರುಪಿಸುತ್ತ ಹೋಗುತ್ತಾರೆ.

ಮೇವಾಡದ ಅರಮನೆಯಲ್ಲಿ ನಡೆಯುವ ಚಾಣಾಕ್ಷ ರಾಜಕಾರಣದ ಮಸಲತ್ತುಗಳು, ಸಿಂಹಾಸನಕ್ಕೆ ನ್ಯಾಯವಾದ ಹಕ್ಕುದಾರನಾದ ಮಹಾರಾಜಕುಮಾರನಿಗೆ ಉತ್ತರಾಧಿಕಾರವನ್ನು ತಪ್ಪಿಸಲು ರಾಣಿಯರು ನಡೆಸುವ ಕುಟಿಲ ಕಾರಸ್ಥಾನಗಳು, ಮೇವಾಡದ ರಾಜಕಾರಣದ ಆಗುಹೋಗುಗಳು ಒಂದೆಡೆಯಾದರೆ, ಮೊಗಲ್ ಸಾಮ್ರಾಜ್ಯ ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯ ಬಾಬರನ ಸಂಚುಗಳು ಮತ್ತು ಸಮರತಂತ್ರಗಳು ಇನ್ನೊಂದೆಡೆ.

ತಾನು ಕೈಹಿಡಿದ ಹೆಣ್ಣು ತನಗೆ ನಿಷ್ಠೆಯಿಂದಿರದೆ ತನ್ನೊಂದಿಗೆ ಸಹಜ ಲೈಂಗಿಕ ಸಂಬಂಧ ಹೊಂದದೆ ಕಣ್ಣಿಗೆ ಕಾಣದ ಪುರುಷೋತ್ತಮನೆನಿಸಿದ ಗಿರಿಧರ ಗೋಪಾಲನೊಂದಿಗೆ ಅಲೌಕಿಕ ಪ್ರೇಮಸಂಬಂಧವನ್ನು ಸ್ಥಾಪಿಸಿಕೊಂಡು ಅವನಿಗೆ ಮಾತ್ರ ತನ್ನ ನಿಷ್ಠೆಯನ್ನು ಮೀಸಲಾಗಿರಿಸಿದ್ದಳೆಂಬ ಕಾರಣಕ್ಕೆ ನಿರಂತರವಾಗಿ ಬೇಗುದಿಗೊಂಡು ಪರಿತಪಿಸುತ್ತಿರುವ ಕಥಾನಾಯಕ ಮತ್ತೊಂದೆಡೆಯಾದರೆ, ಆ ಅರಕೆಯನ್ನು ತುಂಬಿಕೊಳ್ಳಲೋ ಎಂಬಂತೆ ತನ್ನನ್ನು ಹಾಲೂಡಿಬೆಳಸಿದ ದಾಯಿಯೂ ಸೇರಿದಂತೆ ಹಲವು ಹೆಣ್ಣುಗಳೊಂದಿಗೆ ಕಾಮ-ಪ್ರೇಮದ ಸಂಬಂಧಗಳಲ್ಲಿ ದಿಕ್ಕೆಟ್ಟು ಅಲೆಯುತ್ತಿರುವ ಸತಿನಿಷ್ಠೆವಂಚಿತ(=ಕಕೋಲ್ಡ್) ಮಗುದೊಂದೆಡೆ. ಒಂದುರೀತಿಯಲ್ಲಿ ಪ್ರೇಮವೇ ಈ ಕಾದಂಬರಿಯ ಸ್ಥಾಯಿಯೆನ್ನಬೇಕು. ಕಥಾನಾಯಕನ ಅಧಿಕಾರದ ಬಗೆಗಿನ ಪ್ರೇಮ, ತಂದೆಯ ಬಗೆಗಿನ ಪ್ರೇಮ, ಹಸಿರುಕಂಗಳ ಚೆಲುವೆ ಮೀರಾಳ ಬಗೆಗಿನ ಪ್ರೇಮ, ಕೌಸಲ್ಯಳ ಬಗೆಗಿನ ಪ್ರೇಮ, ಲೀಲಾವತಿ ಸುಗಂಧ ಇವರುಗಳ ಬಗೆಗಿನ ಪ್ರೇಮ, ಹಿಜಡಾ ಬೃಹನ್ನದನ ಊರ್ವಶಿಯ ಬಗೆಗಿನ ಪ್ರೇಮ ಹೀಗೆ ಕಾದಂಬರಿಯಲ್ಲಿ ಮೊದಲಿನಿಂದ ಕೊನೆಯವರೆಗೂ ಪ್ರೇಮದ ಆಖ್ಯಾನಗಳೇ ತುಂಬಿವೆ.

ಇದರ ಜೊತೆಗೆ ಯುದ್ಧತಂತ್ರಗಳು, ಹೋರಾಟದಿಂದ ಹಿಂಜರಿಯುವ ಹಿಕ್ಮತ್ತುಗಳು, ನಾಯಕತ್ವಕ್ಕಾಗಿ ನಡೆಯುವ ಸಂಘರ್ಷಗಳು, ಭ್ರಷ್ಟಾಚಾರ, ದ್ರೋಹ, ವಂಚನೆ, ಅಧಿಕಾರಸ್ಥರ ಕಾಮಜೀವನದ ವಿಚಿತ್ರ ಭೋಗವಿಲಾಸಗಳು, ಆಧ್ಯಾತ್ಮಿಕ ಜಿಹಾಸೆ, ಮಹಾರಾಜ್‌ಕುಮಾರನ ಒಳಚರಂಡಿಯೋಜನೆ ಮತ್ತು ಕುಡಿಯುವ ನೀರಿನ ಯೋಜನೆಗಳು, ಕಲೆ, ಸಂಗೀತ ಕುರಿತಾದ ವಿಚಾರಗಳು ಇವೆಲ್ಲವೂ ಕಾಲದ ಕನ್ನಡಿಯಲ್ಲಿ ವರ್ತಮಾನದ ವಾಸ್ತವಗಳನ್ನು ಪ್ರತಿಫಲಿಸುವಂಥವೇ ಆಗಿರುವ ಕಾರಣದಿಂದಾಗಿ 'ಕಕೋಲ್ಡ್' ಗತಕಾಲದ ಇತಿಹಾಸವನ್ನು ಕಟ್ಟಿಕೊಡುತ್ತಲೇ ವರ್ತಮಾನದ ವಾಸ್ತವಗಳಿಗೆ ಕನ್ನಡಿಹಿಡಿಯುವ ಕೆಲಸವನ್ನೂ ಮಾಡುತ್ತದೆಯೆನ್ನಬಹುದು.

ಕಾದಂಬರಿಯ ಬಹುಭಾಗದ ನಿರೂಪಣೆ ಕಥಾನಾಯಕ ಮಹಾರಾಜ್‌ಕುಮಾರ್ ಮಾತಿನಲ್ಲಿದ್ದು ವಿರಳವಾಗಿ ತೃತೀಯ ಪುರುಷದ ನಿರೂಪಣೆಯಲ್ಲಿದೆ.

ಹೆಣ್ಣನ್ನು ತುಚ್ಛೀಕರಿಸದೆ ಗಂಡನಿಗೆ ಮಾತ್ರ ಅನ್ವಯಿಸುವಂತೆ, ಕಾದಂಬರಿಯ ಶೀರ್ಷಿಕೆಯಾದ 'ಕಕೋಲ್ಡ್' ಶಬ್ದಕ್ಕೆ ಅತ್ಯಂತ ಸೂಕ್ತವೆನಿಸುವಂಥ ಕನ್ನಡಶಬ್ದ ದೊರೆಯದ ಕಾರಣ 'ಬೇಗುದಿ' ಎಂಬ ವಸ್ತುವಿನ ದ್ರವ್ಯಕ್ಕೆ ಹೊಂದುವ ಶೀರ್ಷಿಕೆಯನ್ನು ನೀಡಲಾಗಿದೆ. ಮೇಲಾಗಿ ಉತ್ಕೃಷ್ಟ ಕಾದಂಬರಿ ಎಂದು ಇಂಗ್ಲಿಷ್ ಓದುಗರ ತುಂಬು ಮೆಚ್ಚುಗೆಗೆ ಈಗಾಗಲೇ ಪಾತ್ರವಾಗಿರುವ ಈ ಕೃತಿ ಕನ್ನಡ ಓದುಗರಿಗೂ ಪ್ರಿಯವಾದೀತೆಂದು ಆಶಿಸಲಾಗಿದೆ.

ಇನ್ನು ಇದರ ಪ್ರಕಟಣೆಯಲ್ಲಿ ನೆರವಾದವರನ್ನೆಲ್ಲ ನೆನೆಯುವುದು ನನ್ನ ಆದ್ಯ ಕರ್ತವ್ಯ. ಖ್ಯಾತ ವಿಮರ್ಶಕ ಡಾ. ಗಿರಡ್ಡಿ ಗೋವಿಂದರಾಜ ಅವರು ಕೇಂದ್ರಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕರಾಗಿದ್ದಾಗ 2007ರಲ್ಲಿ ಇದರ ಅನುವಾದಕಾರ್ಯವನ್ನು ನನಗೆ ವಹಿಸಿಕೊಡಲು ತೀರ್ಮಾನಿಸಲಾಯಿತು. ಆ ಕಾರಣದಿಂದ ಡಾ.ಗಿರಡ್ಡಿಯವರು ಮತ್ತು ಆಗಿನ ಸಲಹಾ ಸಮಿತಿಯ ಸದಸ್ಯರಿಗೆ ಹಾಗೂ ಇದರ ಬಗ್ಗೆ ಹೆಚ್ಚು ಮುತುವರ್ಜಿತೋರಿದ ಸಂಪಾದಕರಾದ ಶ್ರೀ ಮಹಲಿಂಗೇಶ್ವರಭಟ್ಟರಿಗೆ, ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಗಳಾಗಿದ್ದ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರಿಗೆ, ಆಗ ಪ್ರಾದೇಶಿಕ ಕಾರ್ಯದರ್ಶಿಗಳಾಗಿದ್ದ ಶ್ರೀ ಇಳಂಗೋವನ್ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಅನಂತರದಲ್ಲಿ ಕನ್ನಡ ಸಲಹಾಸಮಿತಿಯ ಸಂಚಾಲಕರಾಗಿದ್ದ

ಡಾ. ಸಿದ್ದಲಿಂಗ ಪಟ್ಟಣಶೆಟ್ಟಿಯವರ ಅವಧಿಯಲ್ಲಿ ಇದು ಕಾರ್ಯರೂಪಕ್ಕೆ ಬಂದು ಅವರ ಅವಧಿಯಲ್ಲೇ ನಾನು ಅನುವಾದಕಾರ್ಯ ಮುಗಿಸಿ ಅನುವಾದಿತ ಕೃತಿಯನ್ನು ಅಕಾಡೆಮಿಗೆ ಸಲ್ಲಿಸಿದೆ. ಹಾಗಾಗಿ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿಯವರಿಗೆ ಮತ್ತು ಆಗಿನ ಸಲಹಾಸಮಿತಿಯ ಸದಸ್ಯರಿಗೆ ನಾನು ತುಂಬ ಕೃತಜ್ಞ. ಇನ್ನು ಈಗ ಮುದ್ರಿತವಾಗಿ ಹೊರಬರುತ್ತಿರುವುದು ಮಾನ್ಯ ಎನ್. ಸಿ. ಮಹೇಶ್ ಅವರು ಪ್ರಾದೇಶಿಕ ಕಾರ್ಯದರ್ಶಿಗಳಾಗಿ ಅಧಿಕಾರವಹಿಸಿಕೊಂಡ ನಂತರದಲ್ಲಿ. ಅವರು ಇದರ ಪ್ರಕಟಣೆಯಲ್ಲಿ ವಿಶೇಷ ಮುತುವರ್ಜಿ ತೋರಿದ್ದಾರೆ. ಅವರಿಗೆ ನಾನು ಆಭಾರಿ. ಎಲ್ಲಕ್ಕಿಂತ ಮುಖ್ಯವಾಗಿ ಇದರ ಮುದ್ರಣದ ಎಲ್ಲ ಹಂತಗಳಲ್ಲಿ ವಿಶೇಷ ಆಸಕ್ತಿ ಮತ್ತು ಶ್ರಮವಹಿಸಿರುವ ಸಂಪಾದನ ವಿಭಾಗದ ಡಾ.ಮೀನಲೋಚನಿ ಮತ್ತು ಶ್ರೀ ಷಣ್ಮುಖಾನಂದ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

– ಆರ್. ಲಕ್ಷ್ಮೀನಾರಾಯಣ

ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಪ್ರಮುಖ ವ್ಯಕ್ತಿಗಳು

ಮೇವಾಡದ ರಜಪೂತ ಸಾಮ್ರಾಜ್ಯ : ರಾಜಧಾನಿ ಚಿತ್ತೂರು

ಮಹಾರಾಜಾ ಅಥವಾ ರಾಣಾಸಂಗ	ಮೇವಾಡದ ಮಹಾರಾಜ
ಮಹಾರಾಜ್‌ಕುಮಾರ್	ರಾಣಾನ ಹಿರಿಯ ಮಗ ಮತ್ತು ಸಿಂಹಾಸನದ ಖಚಿತ ಉತ್ತರಾಧಿಕಾರಿ
ವಿಕ್ರಮಾದಿತ್ಯ	ರಾಣಾನ ಮೂರನೆಯ ಮಗ
ರಾಣಿ ಕರ್ಮವತಿ	ರಾಣಾನ ಅಚ್ಚುಮೆಚ್ಚಿನ ರಾಣಿ ಮತ್ತು ವಿಕ್ರಮಾದಿತ್ಯನ ತಾಯಿ
ಕೌಸಲ್ಯ	ಮಹಾರಾಜ್‌ಕುಮಾರ್‌ನ ದಾಯಿ ಅಥವಾ ಆತನಿಗೆ ಹಾಲುಣಿಸಿದ ಹೆಣ್ಣು
ರಾಜಕುಮಾರಿ	ಮಹಾರಾಜ್‌ಕುಮಾರನ ಹೆಂಡತಿ
ಕುಂಕುಮ್ ಕನ್ವರ್	ರಾಜಕುಮಾರಿಯ ದಾಸಿ
ಆದಿನಾಥ್‌ಜೀ	ಹಣಕಾಸು ಸಚಿವರು
ಲೀಲಾವತಿ	ಅವರ ಮೊಮ್ಮಗಳು
ಲಕ್ಷ್ಮಣಸಿಂಹ	ಗೃಹಸಚಿವರು
ರಾಜೇಂದ್ರ	ಅವರ ಹಿರಿಯ ಮಗ
ತೇಜ್	ಅವರ ಕಿರಿಯ ಮಗ
ಪೂರಣ್‌ಮಲ್‌ಜೀ	ಪ್ರಧಾನಮಂತ್ರಿ
ಮಂಗಳ್‌ಸಿಂಹ	ಗುಪ್ತಚರ ವಿಭಾಗದ ಮುಖ್ಯಸ್ಥ, ಕೌಸಲ್ಯಳ ಮಗ
ಸುನೇರಿಯಾ	ಅಗಸರವಳು
ಬೃಹನ್ನದ	ರಾಣಿ ಕರ್ಮವತಿಯ ಪ್ರಧಾನ ಹಿಜಡಾ
ರಾವ್ ವೀರಮ್‌ದೇವ್	ಮೆರ್ತಾದ ಪ್ರಭು ಮತ್ತು ರಾಜಕುಮಾರಿಯ ಸೋದರಮಾವ
ಪೂರಜೀಕೀಕಾ	ಭಿಲ್ ಜನರನಾಯಕ

ಗುಜರಾತಿನ ಮುಸ್ಲಿಂ ಸಾಮ್ರಾಜ್ಯ : ರಾಜಧಾನಿ ಅಹಮದಾಬಾದ್

ಮುಜಾಫ್ಫರ್ ಷಾ II	ಗುಜರಾತಿನ ಸುಲ್ತಾನ
ಬಹದ್ದೂರ್ ಷಾ (ಷಹಜಾದ)	ಅವನ ಎರಡನೇ ಮಗ

ಮಾಳ್ವದ ಮುಸ್ಲಿಂ ಸಾಮ್ರಾಜ್ಯ : ರಾಜಧಾನಿ ಮಂಡೂ

ಮಹಮದ್ ಖಾಲ್ಜಿ II	ಮಾಳ್ವದ ಸುಲ್ತಾನ
ಮೇದಿನಿ ರಾಯ್	ಅವನ ರಜಪೂತ ಪ್ರಧಾನಿ ಅನಂತರ ಅವನ ಶತ್ರು
ಹೇಮ್‌ಕರಣ್	ಮೇದಿನಿರಾಯ್ ಮಗ
ಸುಗಂಧ	ಮೇದಿನಿರಾಯ್ ಮಗಳು

ದೆಹಲಿಯ ಮುಸ್ಲಿಂ ಸಾಮ್ರಾಜ್ಯ : ರಾಜಧಾನಿ ದೆಹಲಿ

ಇಬ್ರಾಹಿಂ ಲೂದಿ	ದೆಹಲಿಯ ಸುಲ್ತಾನ
ಬಾಬರ್	ಸೆಂಟ್ರಲ್ ಏಷಿಯಾದಿಂದ ಬಂದ ಆಕ್ರಮಣಕಾರಿ ಮತ್ತು ಮೊಗಲ್ ರಾಜವಂಶದ ಸಂಸ್ಥಾಪಕ
ಹುಮಾಯೂನ್	ಬಾಬರನ ಹಿರಿಯ ಮಗ

ಅಧ್ಯಾಯ 1

ಸಣ್ಣ ವಿವಾದಗಳ ವಿಚಾರಣೆ ಮಾಡುವ ನ್ಯಾಯಪೀಠವು ಗುರುವಾರಗಳಂದು ವಿಚಾರಣೆಗೆ ಕೂಡುತ್ತದೆ. ತಂದೆಯವರು ರಾಜಧಾನಿಯಿಂದ ಹೊರಗಿದ್ದಾಗ ನಾನು ಅದರ ಅಧ್ಯಕ್ಷತೆ ವಹಿಸುತ್ತೇನೆ. ಅಂದು ನ್ಯಾಯ ಪೀಠದ ಮುಂದೆ ಇದ್ದದ್ದು ಹದಿನಾಲ್ಕು ದೂರುಗಳು. ಅವೆಲ್ಲವನ್ನೂ ನಾನು ವಿಚಾರಿಸಿದೆ. ಏನೇ ಆದರೂ ಸೂರ್ಯ ನಡುನೆತ್ತಿಗೆ ಇಳಿಯುತ್ತಿದ್ದಂತೆ, ನನ್ನ ಸಹನೆ ಮೀರತೊಡಗಿತು. ಏಳನೇ ಫಿರ್ಯಾದು ಅತ್ಯಂತ ಸ್ವಾರಸ್ಯಕರವಾಗಿತ್ತು. ಬಹುಶಃ ಅದಕ್ಕೆ ಕಾರಣ ಅದು ಹಣ ಅಥವಾ ಜಮೀನಿಗೆ ಸಂಬಂಧಿಸಿದ್ದಾಗಿರದೆ ಅದರ ಗತಿಯಲ್ಲೊಂದು ಬದಲಾವಣೆಯನ್ನು ಹಾಗೂ ಸ್ವಲ್ಪಮಟ್ಟಿನ ವಿನೋದವನ್ನೊಳಗೊಂಡ ಪ್ರಕರಣವಾಗಿದ್ದುದು.

ಬಾಗು ಬೆನ್ನಿನ ಮುದಿ ಅಗಸನೊಬ್ಬ ತನ್ನ ಹೆಂಡತಿಯ ಶೀಲದ ಬಗ್ಗೆ ದೂರು ತಂದಿದ್ದನು. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಸೀತೆಯ ಹೆಸರಿಗೆ ಕಲಂಕ ತಂದು ರಾಮನು ಸೀತೆಯನ್ನು ತ್ಯಜಿಸಿ ಕಾಡಿಗೆ ಅಟ್ಟುವಂತೆ ಮಾಡಿದ ಅಗಸ ಇವನೇ ಎಂದು ನಾನು ಆಣೆ ಮಾಡಿ ಹೇಳಿ ಬಿಡುತ್ತಿದ್ದೆ.

"ಅವಳಿಗೊಬ್ಬ ಪ್ರಿಯಕರ ಇದ್ದಾನೆ. ಇನ್ನೂ ಒಂದಷ್ಟು ಜನ ಇರಬಹುದು." ಜನ್ಮಕ್ಕಂಟಿದ ಗೂರಲಿನಿಂದಾಗಿ ಅವನ ದನಿ ಗೊಗ್ಗರ ದನಿಯಾಗಿತ್ತು. ಮಾತನಾಡುವುದಕ್ಕೆ ಮುಂಚೆ ಹಲವಾರು ಸಲ ಕೆಮ್ಮು ಸರಿಪಡಿಸಿಕೊಳ್ಳಬೇಕಾಗಿತ್ತು.

"ಗೆಣೆಕಾರ ಇದಾನೇನಮ್ಮ" ನಾನು ಅವನ ಹೆಂಡತಿಯನ್ನು ಕೇಳಿದೆ. ಅವಳ ವಯಸ್ಸು ಹದಿನಾರು ಅಥವಾ ಹದಿನೇಳಕ್ಕಿಂತ ಹೆಚ್ಚಿರಲಿಲ್ಲ. ನ್ಯಾಯ ಪೀಠಕ್ಕೆ ಬರುವವರು ಎಷ್ಟು ಮುಗ್ಧ ಅಥವಾ ಎಷ್ಟು ವಂಚಕರಾಗಿರುತ್ತಾರೆ? ಅವಳು ಯಾರ ಜೊತೆಯಲ್ಲಿ ಮಲಗುತ್ತಿದ್ದಳು ಎಂಬುದನ್ನು ಲಜ್ಜೆಯ ಸೋಗು ಹಾಕಿ ನಗುತ್ತಾ ನ್ಯಾಯಾಲಯಕ್ಕೆ ತಿಳಿಸಲಿ ಎಂದು ನಿಜಕ್ಕೂ ನಾನು ನಿರೀಕ್ಷಿಸಿದ್ದೆನೆ? ನನ್ನ ಮುತ್ತಾತ ಮಹಾರಾಣಾ ಕುಂಭ ಕಟ್ಟಿಸಿದ್ದ ಅರಮನೆಯ ಹಿಂಭಾಗದ ಗೋಡೆಯಿಂದ ಮುಂದಕ್ಕೆ ಚಾಚಿದಂತಿದ್ದ ಅರ್ಧಷಟ್ಕೋಣಾಕೃತಿಯ ಸಣ್ಣ ಉಪ್ಪರಿಗೆಯಲ್ಲಿ ನಾನು ಕುಳಿತಿದ್ದೆ. ಅವಳು ಮತ್ತು ಇತರ ಫಿರ್ಯಾದಿಗಳು ಹದಿನೈದು ಅಡಿ ಕೆಳಗೆ ನಿಂತಿದ್ದರು. ಹಸಿರು ಮತ್ತು ಹಳದಿ ಬಣ್ಣದ ಹೊದಿಕೆಯನ್ನು ಅವಳು ತಲೆಯ ಮೇಲೆ ಹೊದೆದುಕೊಂಡಿದ್ದಳು. ಆ ಹೊದಿಕೆಯನ್ನು ಅವಳ ಕುಪ್ಪಸದ ಮಧ್ಯಭಾಗಕ್ಕೆ ಸೇರಿಸಿ ಹೊಲಿಯಲಾಗಿತ್ತು. ಆ ಹೊದಿಕೆಯನ್ನು ಈ

ಮುಂಚೆ ನಾನು ಖಂಡಿತ ನೋಡಿದ್ದೆ. ನನ್ನ ಪ್ರಶ್ನೆಗೆ ಉತ್ತರಿಸಲು ಅವಳು ತನ್ನ ತಲೆಯನ್ನು ಎತ್ತಿದಾಗ ಸೂರ್ಯ ಅವಳ ಕಣ್ಣುಗಳನ್ನು ಹೊಕ್ಕನು. ತನ್ನ ಕಣ್ಣುಗಳನ್ನು ಮರೆಮಾಡಲು ಅವಳು ಸ್ವಲ್ಪ ಮುಂದಕ್ಕೆ ಬಾಗಿ, ತನ್ನ ತಲೆಯ ಮೇಲಿನ ರೇಷ್ಮೆ ಹೊದಿಕೆಯನ್ನು ಕೆಳಕ್ಕೆಳೆದುಕೊಂಡಳು. ಅವಳು ಧರಿಸಿದ್ದ ಒಂದಕ್ಕಿಂತ ಒಂದು ದೊಡ್ಡದಾದ ದಂತದ ಬಳೆಗಳು ಗಿಲಕ್ ಗಿಲಕ್ ಸದ್ದು ಮಾಡುತ್ತಾ ಮೊಳಕೈ ಕೊನೆಗೆ ಸರಿದು ನಿಂತುವು. ಸರೋವರದ ನುಣುಪು ಮರಳಿನ ಬಣ್ಣದ ಅವಳ ಸ್ತನಗಳು ಕ್ಷಣ ಕಾಲ ಗೋಚರಿಸಿದುವು. ನನ್ನ ಬೆನ್ನ ಹಿಂದೆ ಮಂಗಳನ ಕಣ್ಣುಗಳು ಇಣುಕುತ್ತಿರುವುದು ನನಗೆ ಅರಿವಾಯಿತು. ಆ ಹೊದಿಕೆ ನನಗೆ ಅಷ್ಟೊಂದು ಪರಿಚಿತವೆಂದು ಅದೇಕೆನಿಸಿತೆಂದು ಎಷ್ಟು ಪ್ರಯತ್ನಿಸಿದರೂ ತಿಳಿಯಲಿಲ್ಲ. ಅವಳು ನನ್ನ ಪ್ರಶ್ನೆಯನ್ನು ಕಡೆಗಣಿಸಿ, "ಅವನನ್ನೇ ಕೇಳಿ ನೋಡಿ. ನಮ್ಮಪ್ಪ ನನ್ನನ್ನು ಅವನಿಗೆ ಮದುವೆ ಮಾಡಿಕೊಟ್ಟು ಎರಡು ವರ್ಷ ಆದರೂ ಒಂದೇ ಒಂದು ಸಲವಾದರೂ ಗಂಡ ನಡೆದುಕೊಂಡ ಹಾಗೆ ನನ್ನ ಜೊತೆ ನಡೆದುಕೊಂಡಿದ್ದಾನೇನೋ?" ಅವಳ ಬಿಚ್ಚು ಮಾತು ಎಷ್ಟು ತಬ್ಬಿಬ್ಬುಗೊಳಿಸುವಂಥದಾಗಿತ್ತೋ ಅಷ್ಟೇ ಅನಿರೀಕ್ಷಿತವೂ ಆಗಿತ್ತು. ಅವಳ ಕಣ್ಣುಗಳು ನನ್ನ ಕಣ್ಣುಗಳನ್ನು ಸೆರೆ ಹಿಡಿದವು. ಅವಳ ದನಿಯಲ್ಲಿ ಕಹಿ ಇರಲಿಲ್ಲ. ಇದ್ದದ್ದು ಕೇವಲ ಕಟುವಾಸ್ತವ ಅಷ್ಟೆ.

"ಇದು ನಿಜವೆ?" ನಾನು ಅವಳ ಗಂಡನನ್ನು ಕೇಳಿದೆ.

"ತಾವು ಏನು ತಿಳಿದಿದ್ದೀರಿ. ಕೈ ಹಿಡಿದ ಗಂಡ ಹಾಗಿರಲಿ, ಯಾವ ಗಂಡುಸಾದರೂ ಅಂಥ ರಸಭರಿತ ಹಣ್ಣನ್ನು ದೂರ ಇಟ್ಟಿರಕ್ಕಾಗುತ್ತಾ.?"

"ನಿನ್ನ ವಯಸ್ಸೆಷ್ಟಪ್ಪ ಅಜ್ಜ?"

"ಅದಕ್ಕೂ ಅವಳಿಗೆ ನಿಯತ್ತು ಇಲ್ಲದೆ ಇರುವುದಕ್ಕೂ ಏನು ಸಂಬಂಧ"?

"ಉದ್ಧಟತನ ತೋರಿಸಬೇಡ. ತಪ್ಪಿದರೆ ಚಡಿ ಏಟು ಬೀಳುತ್ತೆ. ಮಹಾಪ್ರಭುಗಳಾದ ತಮ್ಮ ತಂದೆಯವರು ಹುಟ್ಟುವುದಕ್ಕೆ ಮುಂಚಿನಿಂದಲೂ ಬಟ್ಟೆ ಒಗೆಯುವ ಕೆಲಸ ಮಾಡುತ್ತಿದ್ದೀನಿ. ಆದರೂ ಈಗಲೂ ನನಗೆ ಸಾಮರ್ಥ್ಯ ಇದೆ. ನಾನು ಹತ್ಯಾರ ಅವರ ಧೋಬಿ ಆಗಿದ್ದೆ. 'ಶುಭ್ರತೆ'ಯ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಂಡ ರಾಜರುಗಳು ಹಿಂದೆಯೂ ಇರಲಿಲ್ಲ. ಆದರೆ ಅವರ ಕೈಗೆ ಹತ್ತಿದ ರಕ್ತವನ್ನು ಎಂದೂ ತೊಳೆದುಕೊಳ್ಳಲು ಆಗಲೇಇಲ್ಲ. ಅವರು ಯಾವಾಗಲೂ ಕಾಲಿಗೆ ಚಕ್ರ ಕಟ್ಟಿಕೊಂಡಿರುತ್ತಿದ್ದರು. ಅವರು ಎಲ್ಲೆಲ್ಲಿಗೆ ಹೋಗುತ್ತಿದ್ದರೋ ನಾನೂ ಅಲ್ಲಿಗೆ ಹೋಗುತ್ತಿದ್ದೆ."

"ಏ ಮುದುಕ ನೀನು ನಾಲಿಗೆ ತುಂಬ ಹರಿಬಿಡ್ತೀದಿಯಾ. ಇಷ್ಟರಲ್ಲೇ ಯಾವೊತ್ತಾದರೂ ಅದೇ ನಿನ್ನ ಕೊರಳಿಗೆ ನೇಣು ಆಗುತ್ತೆ ನೋಡ್ತಾ ಇರು."

"ನನಗೆ ಗೊತ್ತು ಹತ್ಯಾರಾನ ಹೆಸರನ್ನು ನಾನು ಹೇಳಬಾರದಾಗಿತ್ತು. ಆದರೆ ಅವರ ತಂದೆಗೆ ಸಾಯುವ ಅಥವಾ ಸಿಂಹಾಸನವನ್ನು ಬಿಟ್ಟುಕೊಡುವ ಉದ್ದೇಶ ಇರಲಿಲ್ಲ. ಮೂವತ್ತೈದು ವರ್ಷದ ತನಕ ಕಾಯೋದು ಅಂದರೆ ತುಂಬ ದೀರ್ಘ ಆಗುತ್ತೆ. ತನ್ನ ತಾಳ್ಮೆ ಕಳೆದುಕೊಂಡು ಅವರು ರಾಣಾ ಕುಂಭನನ್ನು ನಿವಾರಿಸಿಕೊಂಡದ್ದಕ್ಕೆ ಅವರನ್ನು ನೀವು ಬೈಯ್ಯುತ್ತೀರಾ? ನಿಮ್ಮ ತಂದೆ ರಾಣಾಸಂಗ ಅವರು ದೀರ್ಘಾಯುಷಿಯಾಗಿ ಬದುಕಿರಲಿ. ಆದರೆ ಅವರು ಇಲ್ಲಿಂದ ಮುಂದಕ್ಕೆ ಇನ್ನು ಮೂವತ್ತು ವರ್ಷ, ನಲವತ್ತು ವರ್ಷ ಅಥವಾ ಐವತ್ತು ವರ್ಷದ ತನಕ ಸಿಂಹಾಸನಕ್ಕೆ ಅಂಟಿಕೊಂಡು ಕುಳಿತರೆ ನೀವು ಅದಕ್ಕಿಂತ ಕಮ್ಮಿ ಏನಾದರೂ ಮಾಡುತ್ತೀರಾ?"

"ನಿನ್ನ ವಯಸ್ಸು ಅಡ್ಡ ಬರದೇ ಇದ್ದರೆ ನಿನ್ನ ರಾಜದ್ರೋಹಕ್ಕೆ ನೀನು ನೆಗೆದು ಬೀಳ್ತಿದ್ದೆ. ಆದರೂ ನ್ಯಾಯಾಲಯದ ವಿಚಾರಣೆ ನಂತರ ನಿನಗೆ ಹತ್ತು ಚಡಿ ಏಟು ಬೀಳುತ್ತೆ"

"ಆದರೆ ಮಹಾಸ್ವಾಮಿ ಅದರಿಂದ ನನ್ನ ಗಂಡುಸುತನ ಏನೂ ತಣ್ಣಗಾಗಲ್ಲ"

ಅವನ ತಲೆಹರಟೆಯಿಂದ ನನಗೆ ಆಯಾಸವಾಗುವುದಕ್ಕೆ ಶುರುವಾಯಿತು.

"ಅದನ್ನು ನೋಡೋಣವಂತೆ. ಸೋಮವಾರ ರಾತ್ರಿ ಹುಣಸೇ ಮರದ ಓಣಿಯ ಕೊನೆಯಲ್ಲಿರುವ ಸೂಳೇ ಮನೆಗೆ ಹೋಗಿ ರಸಿಕಾಬಾಯಿ ಜೊತೆ ಮಲಗಿ ನಿನ್ನ ಗಂಡುಸುತನದ ಸಾಮರ್ಥ್ಯವನ್ನು ಸಾಧಿಸಿತೋರಿಸು. ಅವಳು ವರದಿ ಕೊಡುವವರೆಗೂ ನನ್ನ ತೀರ್ಪನ್ನು ಮುಂದಕ್ಕೆ ಹಾಕುತ್ತೇನೆ."

"ಮಾತಿಗೆ ಹೇಳುತ್ತಾ ಇದ್ದೀನಿ. ಒಂದು ವೇಳೆ ನಾನು ಅದರಲ್ಲಿ ಸೋತರೆ ಅದರರ್ಥ ನನ್ನ ಹೆಂಡತಿಯ ನಂಬಿಕೆಯ ದ್ರೋಹ ಸರಿ ಅಂತಲೇ?

"ರಸಿಕಾಬಾಯಿಯ ಸಂಗದಲ್ಲಿ ನೀನು ಗಂಡುಸುತನವನ್ನು ಸಾಧಿಸಿ ತೋರಿಸಿದರೂ ನಿನ್ನ ಹೆಂಡತಿ ನಿನಗೆ ನಿಷ್ಠಳಾಗಿಲ್ಲ ಎನ್ನುವುದಕ್ಕೆ ನೀನು ಆಧಾರ ತೋರಿಸಬೇಕಾಗುತ್ತೆ"

* * *

ಬೆಳಗಿನ ಆರೂವರೆಯ ಹೊತ್ತಿಗೆಲ್ಲಾ ನಾನು ನನ್ನ ಕೆಲಸಕ್ಕೆ ಹಾಜರಾಗುವುದಕ್ಕೆ ಇಷ್ಟಪಡುತ್ತೇನೆ. ಇದರಿಂದ ನನಗೆ ಕಾಗದ ಪತ್ರಗಳನ್ನು ಪರಿಶೀಲಿಸಲು, ಒಂದೊಂದು ವಿಷಯದ ಗುಣ ನಿಷ್ಕರ್ಷೆ ಮಾಡಲು, ತೀರ್ಮಾನಗಳನ್ನು ತೆಗೆದುಕೊಳ್ಳಲು, ಪತ್ರಗಳ ಅಂಚಿನಲ್ಲಿ ನನ್ನ ಅಭಿಪ್ರಾಯಗಳನ್ನು ಗುರುತು ಹಾಕಲು, ಇನ್ನೂ ಹೆಚ್ಚಿನ ತುರ್ತಾದ ವಿಷಯಗಳ ಕಡೆ ಗಮನ ಕೊಡಲು ಒಂದೂವರೆ ಗಂಟೆಗಳಷ್ಟು ಸಮಯ ದೊರೆಯುತ್ತದೆ. ಒಂಬತ್ತು ಗಂಟೆಯ ಸುಮಾರಿಗೆ, ಕಳೆದ ವರ್ಷ ನಗರದ ಜನಸಂಖ್ಯೆ ಒಂದೂವರೆ ಸಾವಿರದಷ್ಟು ಹೆಚ್ಚಾದ ಕಾರಣ ಒಂದೆರಡು ಕುಡಿಯುವ ನೀರಿನ ಬಾವಿಗಳನ್ನು ತೆಗೆಸುವ ಬಗ್ಗೆ, ನಗರ ಯೋಜನಾ ಇಲಾಖೆಗೆ ಸೇರಿದ, ಸಾಪಸಮಲ್ ಜೊತೆ ಸಮಾಲೋಚನೆ ಮಾಡುತ್ತಿದ್ದಾಗ, ತಂದೆಯವರ ಕಡೆಯಿಂದ ಹರಿಕಾರನೊಬ್ಬ ಬಂದ. ಗುಜರಾತಿನ ಸುಲ್ತಾನನೊಂದಿಗಿನ ಸಂಘರ್ಷ ತಂದೆಯವರು ನಿರೀಕ್ಷಿಸಿದ್ದಕ್ಕಿಂತ ತುಂಬ ದುಸ್ತರವೆನಿಸತೊಡಗಿತ್ತು. ಪಡೆಗಳಿಗೆ ವೇತನ ನೀಡಲು, ಆಹಾರ ಪಾನೀಯಗಳನ್ನು ಕೊಳ್ಳಲು, ಐವತ್ತು ಜನ ರಾಣಾತರ, ರಾವಲರ ಬೆಂಬಲಕ್ಕೆ ಮತ್ತು ರಕ್ಷಕ ಸೈನ್ಯಕ್ಕೆ ಅವರಿಗೆ ಈಗ ಹಣ ಬೇಕಾಗಿತ್ತು.

ಖಜಾನೆಯಲ್ಲಿ ಹಣವಿರಲಿಲ್ಲ ಎಂಬುದಂತೂ ನಿಶ್ಚಯ. ನಾವು ನಮ್ಮ ಶತ್ರುಗಳು ಶಾಂತಿಗಾಗಿ ಕೋರುತ್ತ ನಮ್ಮ ಹಣದ ತಿಜೋರಿಗಳನ್ನು ತುಂಬಿಸಲೆಂದು ನಾವು ಅಸಂಖ್ಯಾತ ಯುದ್ಧಗಳನ್ನು ಮಾಡಿದೆವು. ನಮಗೆ ಹಣವನ್ನು ಸಾಲದ ರೂಪದಲ್ಲಿ ಪೂರೈಸುತ್ತಿದ್ದ ಕರುಣಾಳು ಧನಿಕಗಾದ ಮೆಹತಾಗಳಿಗೆ ಬಡ್ಡಿಯನ್ನು ಹಿಂತಿರುಗಿಸುವ ಸಲುವಾಗಿ– ಅಸಲನ್ನು ನೀಡುವ ಪ್ರಶ್ನೆಯೇ ಇರಲಿಲ್ಲವಾಗಿ,–ಆ ಹಣದ ತಿಜೋರಿಗಳನ್ನು ಕೂಡಲೇ ಖಾಲಿ ಮಾಡಿ ಬಿಡುತ್ತಿದ್ದೆವು. ಅಲ್ಲದೆ ಮುಂದಿನ ಯುದ್ಧಗಳ ಸಲುವಾಗಿ ಹಣ ಒದಗಿಸಬೇಕೆಂದು ಕೇಳುತ್ತಿದ್ದೆವು. ಅವರು ನಮ್ಮ ಬೊಕ್ಕಸ ತುಂಬಿ ತುಳುಕುವಷ್ಟು ಹಣ ಪೂರೈಸುತ್ತಿದ್ದು, ಬಡ್ಡಿ ನೀಡುವ ಬಗೆಗಿನ ಒತ್ತಡವನ್ನು ಸುರಳೀತಗೊಳಿಸುತ್ತಿದ್ದರು. ಈ ವಿಷಚಕ್ರವ್ಯೂಹ ಹೀಗೇ ಮುಂದುವರೆಯುತ್ತಿತ್ತು. ಎಲ್ಲಿಯವರೆಗೆಂದರೆ ಅದೇ ಒಂದು ಬಲೆಯಾಗಿ ಮಾರ್ಪಟ್ಟು ನಾವು ಅದರ ಮಧ್ಯದಲ್ಲಿ ನೊಣಗಳ ಹಾಗೆ ಜೀವದ್ರವವೆಲ್ಲ ಹೀರಲ್ಪಡುವ ತನಕ ಸಿಕ್ಕಿಕೊಂಡು ಒದ್ದಾಡುವರೆಗೂ.

ನಾನು, ನಮ್ಮ ಬೊಕ್ಕಸ-'ಕುಬೇರ ಭವನ'ದ ಮುಖ್ಯಸ್ಥರಾದ ಹಿರಿಯ ಶ್ರೀ ಆದಿನಾಥ ಮೆಹತಾ ಅವರು ನನ್ನ ಖಾಸಗಿ ಕೋಣೆಯಲ್ಲಿ ನನ್ನೊಂದಿಗೆ ಸಮಾಲೋಚಿಸುವ ಕೃಪೆ ಮಾಡಬೇಕೆಂದು ಒಂದು ಸಂದೇಶ ಕಳಿಸಿದೆ. ಆದಿನಾಥಾಜೀಯವರು ತಮ್ಮನ್ನು ನನಗೆ ಕೋರಿಕೆ ಸಲ್ಲಿಸುವ ಸ್ಥಾನದಲ್ಲಿರಿಸಿಕೊಂಡು, ಆದರೆ ತಮ್ಮದು ಮೇಲ್ಗೈಯಾಗಿರುವಂತೆ ಮಾಡಿ, ಈ ಶಿಷ್ಟಾಚಾರ ಪ್ರಕ್ರಿಯೆಯನ್ನು ನಯಗೊಳಿಸಿ ಅದಕ್ಕೊಂದು ಕಲೆಯ ರೂಪ ನೀಡಿ ಬಿಟ್ಟರು. ಅಂದು ಸಂಜೆ ನಾನು ಚದುರಂಗದಾಟವಾಡುವ ಮತ್ತು ತದನಂತರದಲ್ಲಿ ಭೋಜನ ಕೂಟದಲ್ಲಿ ಪಾಲ್ಗೊಳ್ಳುವ ಗೌರವ ನೀಡಲು ಸಾಧ್ಯವೆ? ಎಂದು ಕೇಳಿದ್ದರು. ಅಲ್ಲದೆ, ಸಂತಸಕರವಾದ ಕಾಕತಾಳೀಯವೆಂದರೆ ಅವರ ಹೆಂಡತಿ ನನಗೆ ಅತ್ಯಂತ ಇಷ್ಟವಾದ ಸಿಹಿ ರಬಾದಿಯನ್ನು ತಯಾರಿಸಿದ್ದರು. ಅದು ದೇಶದ ರಾಜಕೀಯ ವ್ಯವಹಾರಗಳಿಗಿಂತ ವಿಭಿನ್ನವಾದ ವಾತಾವರಣವಾಗಿ ಅವರ ಮೊಮ್ಮಗಳು ಲೀಲಾವತಿಯು, ನಾನು ಯುದ್ಧಕ್ಕೆ ನಮ್ಮ ಪಡೆಗಳನ್ನು ಕೊಂಡೊಯ್ಯುವಾಗ ನನ್ನ ಜೊತೆ ಕೊಂಡ್ಯೊಯುವ ಧ್ವಜಕ್ಕೆ ರಾಜಲಾಂಛನದ ಕಸೂತಿಯನ್ನು ಹಾಕುವಲ್ಲಿ ತಾನು ಸಾಧಿಸಿರುವ ಪ್ರಗತಿಯನ್ನು ತೋರಿಸಲು ಹರ್ಷಿಸುತ್ತಾಳೆ ಎಂದು ತಿಳಿಸಿದ್ದರು.

ಈಚಿನ ವರ್ಷಗಳಲ್ಲಿ ಹಾಲಿನಿಂದ ತಯಾರಿಸಿದ ಸಿಹಿಗಳಾವುದನ್ನೂ ನಾನು ಇಷ್ಟಪಡುವುದಿಲ್ಲವೆಂಬುದನ್ನು ಚೆನ್ನಾಗಿ ತಿಳಿದಿದ್ದ ಆದಿನಾಥಜೀಯವರು 'ರಬಾದಿ'ಯ ಪ್ರಸ್ತಾಪ ಮಾಡಿದ್ದು ಹಿತವಾಗಿತ್ತು. ಅಲ್ಲದೆ ಆದಿನಾಥರ ಆಹ್ವಾನವನ್ನು ತಿರಸ್ಕರಿಸಲು ನಾನಾರು? ಅದೂ ಅಲ್ಲದೆ, ಗೌರವಾನ್ವಿತ ವಯೋವೃದ್ಧನೊಂದಿಗೆ ಒಂಬತ್ತು ವರ್ಷದ ಲೀಲಾವತಿ ಇರುತ್ತಾಳೆನ್ನುವುದೇ, ಧನಿಕನ ಜೊತೆ ಇದ್ದಾಗ ನನಗಾಗಬಹುದಾದ ಇರುಸುಮುರುಸನ್ನು ಸರಿದೂಗಿಸುವಂಥಾಗಿತ್ತು. ಅವಳೊಬ್ಬ ಅತ್ಯುತ್ತಮ ಅಣಕುಗಾರ್ತಿ. ತಕ್ಷಣವೇ ಚತುರೋಕ್ತಿಗಳನ್ನಾಡುವ ಉತ್ಕೃಷ್ಟ ಬಾಲ ಪ್ರೌಢಿಮೆಯ, ಹಠಮಾರಿತನದ, ಆಶ್ಚರ್ಯಕರವೆನಿಸುವಷ್ಟರ ಮಟ್ಟಿಗೆ ಗುಣಶೀಲಗಳ ಜಾಣ ತೀರ್ಪುಗಾರಳು.

"ತಾವು ಹೊತ್ತಿಗೆ ಮುಂಚೆಯೇ ಭೋಜನ ಮಾಡಬೇಕಾದ್ದಿಲ್ಲ ಮಹಾಸ್ವಾಮಿ. ಮಹಾವೀರ ತೀರ್ಥಂಕರರು ನಾವು ಜೈನರು ಸೂರ್ಯಾಸ್ತಕ್ಕೆ ಮುಂಚೆಯೇ ಊಟ ಮಾಡಬೇಕೆಂದು ನಿಜಕ್ಕೂ ಆದೇಶಿಸಿದ್ದರೆ ಎಂಬ ಬಗ್ಗೆ ಸ್ವಲ್ಪ ಅನುಮಾನವಿದೆ. ತಮಗೆ ತಿಳಿದಿರುವ ಹಾಗೆ ನಾನು ಅದನ್ನು ಅನುಕೂಲಕರವಾಗಿ ಅರ್ಥೈಸುತ್ತೇನೆ. ಸಕಾರಣವಾಗಿ ಯೋಚಿಸಿ ನೋಡಿದರೆ ನನಗೇನು ಅನ್ನಿಸುತ್ತದೆ ಅಂದರೆ ಹಾಗೆ ಸೂರ್ಯಾಸ್ತಕ್ಕೆ ಮುನ್ನ ಊಟ ಮಾಡುವುದು ಜೀರ್ಣಕ್ಕೆ ಬಹಳ ಒಳ್ಳೆಯದು; ಅದರಲ್ಲೂ ನನ್ನ ವಯಸ್ಸಿನಲ್ಲಿ. ತಮಗೆ ಅಂಥ ಸಮಸ್ಯೆಯಿಲ್ಲ ಬಿಡಿ."

"ಖಂಡಿತಾ ನಾನು ಆಮೇಲೆ ಊಟ ಮಾಡುತ್ತೇನೆ" ಎಂದಿದ್ದರೆ, ಮತ್ತು ಅನಂತರ ಯೋಚಿಸಿದ ಮೇಲೆ-ಸ್ವಲ್ಪ ಮದ್ಯ ಸೇವಿಸಿದ ಮೇಲೆ ಎಂದು ಸೇರಿಸಿದ್ದರೆ ಏನಾಗುತ್ತೆ?

ಏನೂ ಆಗಲ್ಲ ಎಂದು ಹೇಳಬೇಕಾಗಿಯೇ ಇಲ್ಲ. ಏನೊಂದೂ ಗೆರೆಗಳೇ ಇಲ್ಲದ ಆದಿನಾಥರ ಮುಖ ಮುಜುಗರದ ಅಥವಾ ಸಂಕೋಚದ ಕಿಂಚಿತ್ತೂ ಸುಕ್ಕುಗೆರೆಯನ್ನು ಕಾಣಿಸುವುದಿಲ್ಲ. ಸಿಹಿ ಮತ್ತು ಹುಳಿಹುಣಿಸೆ ಮರದ ಓಣಿಯ ಮನೆಯಿಂದ ಹೆಣ್ಣೊಂದು ಬೇಕು ಎಂದು ಕೇಳಿದರೂ "ಅಯ್ಯೋ! ಅದಕ್ಕೆ ಏರ್ಪಾಟು ಮಾಡಬೇಕೆಂಬ ಆಲೋಚನೆಯನ್ನೇ ಮಾಡದ ನಾನೆಂಥವನು" ಎಂದು ಪ್ರತಿಕ್ರಿಯಿಸಿಯಾರು. ಅಷ್ಟೇ ಅಲ್ಲ, ಕಜರೀಬಾಯಿಯಂಥ ದುಬಾರಿ ಬೆಲೆಯ ಯಾರನ್ನಾದರೂ ಕರೆತರಲು ರಕ್ಷಣಾ ಸಿಬ್ಬಂದಿಯವರಿಗೆ ಹೇಳಿಕಳಿಸಿಯಾರು. ಅಚ್ಚುಕಟ್ಟಾಗಿ ಒಂದು ನಲವತ್ತು ನಲವತ್ತೈದು

ನಿಮಿಷ ಕಳೆದ ಮೇಲೆ. ಆ ಬೆಲೆವೆಣ್ಣನ್ನು ಕರೆತರಲು ಹೋಗಿದ್ದ ಕುದುರೆಗಾಡಿ ಅಪಘಾತಕ್ಕೆ ಒಳಗಾಗಿ ಆ ಬಡಪಾಯಿ ಹೆಂಗಸಿನ ಬೆನ್ನು ಮೂಳೆಮುರಿದಿತು ಅಂತಲೋ ಅವಳ ಬುರುಡೆ ಬಿಚ್ಚಿಕೊಂಡಿತು ಅಂತಲೋ ಅಥವಾ ಅವಳ ಹಲ್ಲುಗಳೆಲ್ಲಾ ಮುರಿದವು ಅಂತಲೋ ಹೇಳಿ ನನ್ನನ್ನು ಕ್ಷಮಿಸಿ ಎಂದು ಹೇಳಿ ಬಿಡುತ್ತಾರೆ.

ಊಟ ಎಂದಿನಂತೆ ಯಾವುದೇ ಗಲಿಬಿಲಿಗೆ ಅವಕಾಶವಿಲ್ಲದೆ ಸೊಗಸಾಗಿತ್ತು. ಇದು ಇಂಥ ರೀತಿಯ ಅಡುಗೆ ಎಂದು ಗೆರೆ ಎಳೆದು ಗುರುತಿಸಿರುವುದನ್ನು ಕಂಡರೆ ನನಗೆ ತೀರ ಬೆರಗು. ಈರುಳ್ಳಿ ಇಲ್ಲ, ಬೆಳ್ಳುಳ್ಳಿ ಇಲ್ಲ, ಗೆಡ್ಡೆಗೆಣಸು ಇಲ್ಲ. ಮಾಂಸಮದ್ದು ಇಲ್ಲ, ಮೀನು, ಮೊಟ್ಟೆ ಇಲ್ಲ. ಆದರೂ ಅದಕ್ಕಿರುವ ಕೊರತೆ ಎಂದರೆ ಅದು ಅಗತ್ಯಕ್ಕಿಂತ ಹೆಚ್ಚಿನದನ್ನು ಒಳಗೊಂಡಿರಲಿಲ್ಲವೆಂಬುದೊಂದನ್ನು ಬಿಟ್ಟು. ದಾಲ್‌ಬಾತಿ, ಗೋಧಿರೊಟ್ಟಿ, ಥಾಲ್, ಚಾವಲ್, ಕಾಳುಬೀಜ, ಉದ್ದಿನ ವಡೆಗಳು. ಮತ್ತು ಈ ಊಟ ಸಂಪೂರ್ಣ ಊಟ ಅಲ್ಲ ಅಂತ ನನಗೆ ಗೊತ್ತಿತ್ತು. ಹಾಗಾಗಿ ಆದಿನಾಥರ ಹೆಂಡತಿ ಎಣ್ಣೆಯಲ್ಲಿ ಕರಿದ ಮಸಾಲೆ ಬೆರಸಿದ ಅವರೆಬೀಜವನ್ನು–ತಂದಾಗ ಅದೊಂದು ಆಶ್ಚರ್ಯದ ಪ್ರತಿ ರೂಪದಂತಿತ್ತು. ತುಪ್ಪ ಬಡಿಸುವುದು ಆತಿಥ್ಯದ ಸಂಕೇತವೆಂದು ನಾನು ಬಲ್ಲೆ. ಆದರೆ ಆದಿನಾಥಜೀಯವರ ಹೆಂಡತಿ ಅದನ್ನು ಅಷ್ಟೇನೂ ದುಂದು ಮಾಡಲಿಲ್ಲ. ನಾನು ಒಂದೆರಡು ವಾರ ನೀರಿನಲ್ಲಿ ಕೊಳೆ ಹಾಕಿದ ಸತ್ತ ಎತ್ತಿನ ಶವದಂತೆ ಊದಿ ಬಿಟ್ಟಿದ್ದೇನೆ ಎನಿಸಿತು. ಆದರೂ ಮನೆಯ ಯಜಮಾನಿ ಬೂಂದಿಶಿರಾ ಮತ್ತು ಹಣ್ಣುಗಳನ್ನು ಬಡಿಸಲು ಆದೇಶಿಸಿದಾಗ ಅದನ್ನು ವಿರೋಧಿಸಲಿಲ್ಲ.

ನಾವು ದಿವಾನ್‌ಖಾನೆಯಲ್ಲಿ ಆಡಲು ಕುಳಿತೆವು. ಆದಿನಾಥಜೀಯವರಿಗೆ ಬದುಕೇ ಒಂದು ಚದುರಂಗದಾಟವಾಗಿರಬೇಕೆಂಬ ಅನಿಸಿಕೆ ನನ್ನದಾಗಿತ್ತು. ಭೋಜನಕ್ಕೆ ಆಹ್ವಾನಿಸಿದ್ದು, ಲೀಲಾವತಿಯ ಆಮಿಷವೊಡ್ಡಿದ್ದು (ಎರಡು ಬಾರಿ ಅವಳ ಬಗ್ಗೆ ವಿಚಾರಿಸಿದೆ, ಅವಳು ಬರುತ್ತಾಳೆ ಎಂದು ಹೇಳಿದರು. ಆದರೆ ಅದರ ಸೂಚನೆಯೇ ಕಾಣಲಿಲ್ಲ), ಭೋಜನಕ್ಕೆ ತಯಾರಿಸಿದ ಅಡಿಗೆ ಮತ್ತು ಚದುರಂಗದಾಟ–ಹೀಗೆ ಪ್ರತಿಯೊಂದು ನಡೆಯನ್ನೂ ಮುಂಚೆಯೇ ಯೋಜಿಸಲಾಗಿತ್ತು. ಈ ಇಡೀ ಆಚರಣೆಯೇ ಚಿರಪರಿಚಿತವಾದದ್ದಾಗಿತ್ತು ಎಂದರೆ ಅದಕ್ಕೆ ಕಾರಣ ಈ ಆಟವನ್ನು ನಾನು ಈ ಹಿಂದೆ ಹಲವಾರು ಸಲ ಆಡಿದ್ದೆ. ಯಾವುದಾದರೂ ಒಂದು ಹಂತವನ್ನು ಹಾರಿಸಿದರೋ, ಆಟ ಮುಗಿಯುವುದೇ ಇಲ್ಲ. ಆಟಗಳನ್ನು ಆಡುವುದೇನಿದ್ದರೂ ಅವುಗಳ ಮುಗಿತಾಯಕ್ಕಾಗಿ ಎಂಬುದು ಉಳಿದ ಅನೇಕರಿಗಿಂತ ಆದಿನಾಥಜೀಯವರಿಗೆ ಚೆನ್ನಾಗಿ ಗೊತ್ತಿತ್ತು.

ಇದು ನನಗೊಂದು ಒಳ್ಳೆಯ ತರಬೇತಿ. ಅವಸರದಲ್ಲಿದ್ದಾಗ ಅದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ ಆರಾಮಾಗಿರು, ದೀರ್ಘವಾಗಿ ಉಸಿರಾಡು, ನಿಧಾನವಾಗಿ ಮುಂದುವರಿ. ನಾನು ಚೆನ್ನಾಗಿ ಆಡುತ್ತಿದ್ದೀನಿ ಅಂತ ನನಗೆ ಗೊತ್ತಿತ್ತು. ಆದರೆ ಆದಿನಾಥರು ನನ್ನ ಜೊತೆ ಆಟ ಆಡುತ್ತಿದ್ದಾರೆ ಅಂತಲೂ ನನಗೆ ಗೊತ್ತಿತ್ತು. ಬಹುಶಃ ಅವರ ಧರ್ಮದ ಅಹಿಂಸಾ ತತ್ವಕ್ಕೂ ಈ ಆಟಕ್ಕೂ ಏನೋ ಸ್ವಲ್ಪ ಸಂಬಂಧ ಇದ್ದಿರಬೇಕು. ಅವರು ಮತ್ತು ಅವರ ಬಂಧು ಬಾಂಧವರು ಮಾಡಿದ ಒಂದೇ ಒಂದು ಯುದ್ಧವೆಂದರೆ ಈ ಚದುರಂಗದ ಯುದ್ಧ, ಮತ್ತು ಅವರು ರಕ್ತ ಸುರಿಸಿದ್ದು ಚದುರಂಗದ ಹಾಸಿನ ಮೇಲೆ ಮಾತ್ರ. ಸಾಮೂಹಿಕ ಹತ್ಯೆ ಮತ್ತು ಕಗ್ಗೊಲೆಗಳು ಅವರ ಅಭಿರುಚಿಗೆ ಹಿಡಿಸದವು. ಅವರ ಆದ್ಯತೆ ಏನಿದ್ದರೂ ದೀರ್ಘವೂ, ನಿಧಾನವೂ ಯಾತನಾಪೂರ್ಣವೂ ಆದ ಸಾವು. ನನ್ನ ಮಂತ್ರಿಯ ಮೇಲೆ ಅವರ ಕಣ್ಣು ಎಂದು ನನಗೆ ಗೊತ್ತಿತ್ತು. ಅದಕ್ಕೇ ಮಂತ್ರಿಯೊಬ್ಬನನ್ನೇ ಉಳಿಸಿದರು.

ಭಾರತದ ಎಲ್ಲ ರಾಜರುಗಳಿಗೂ, ಕಡೇ ಪಕ್ಷ ನನಗೆ ಗೊತ್ತಿದ್ದ ಎಲ್ಲ ರಾಜರುಗಳಿಗೂ ಹಣಕಾಸನ್ನು ಪೂರೈಸುತ್ತಿದ್ದವರೂ ಆದಿನಾಥಜೀಯವರ ಜೈನ ಬಂಧುಗಳೇ ಎಂಬುದು ಅಣಕವೇ ಸರಿ. ನಮ್ಮ ತಂದೆಯವರು ಹೋರಾಟ ನಡೆಸುತ್ತಿದ್ದ ಗುಜರಾತಿನ ಸುಲ್ತಾನನಿಗೆ ಜಾಮೀನು ನಿಂತವರು ಆದಿನಾಥರ ಅಳಿಯ ಸಹದೇವನಾಥರು. ದೆಹಲಿಯ ಇಬ್ರಾಹಿಂ ಲೂದಿ ಅವಲಂಬಿಸಿದ್ದು ಆದಿನಾಥರ ಭಾವಮೈದುನನ್ನು. ಆದಿನಾಥರ ಕಿರಿಯ ಮಗ ಮಾಳ್ವದಲ್ಲಿ ನೆಲಸಿದ್ದು, ಅಲ್ಲಿ ಪ್ರಭುಗಳಿಗೆ ಹಣವನ್ನು ಸಾಲ ಕೊಡುತ್ತಿದ್ದ, ಪ್ರಧಾನ ಲೇವಾದೇವಿಗಾರನಿಗೆ ಹಣವನ್ನು ಸಾಲ ನೀಡುತ್ತಿದ್ದನು. ಅಣಕಗಳು ಅದಕ್ಕಿಂತಲೂ ಹೆಚ್ಚು ವಕ್ರವಾಗಿ ಅನುರಣಿಸುತ್ತಿದ್ದುವು. ಜೈನ ಮನಸ್ಸೆಂಬುದೊಂದು ಮಣಿಚೌಕಟ್ಟು. ಅದು ಎಲ್ಲವನ್ನು ಅಂಕಿಗಳ ರೂಪದಲ್ಲೇ ನೋಡುತ್ತದೆ. ಬಡ್ಡಿ ಗಳಿಸಿದ ಹಾಗೆಯೇ ನೀವು ಅರ್ಹತೆಯನ್ನು ಗಳಿಸುತ್ತೀರಿ.

ನೀವು ಭಿಕ್ಷೆ ನೀಡಿದರೆ ಪುಣ್ಯ ಸಂಪಾದಿಸುತ್ತೀರಿ. ಬಡವರಿಗೆ ಭೋಜನವಿತ್ತರೆ ಅಥವಾ ದಿಗಂಬರರಿಗೆ ಉಣಬಡಿಸಿದರೆ ನೀವು ಇನ್ನಷ್ಟು ಪುಣ್ಯ ಸಂಪಾದಿಸುತ್ತೀರಿ. ಶಾಂತಿ ಪ್ರಿಯತೆ ಎಂಬುದು ಅತ್ಯುನ್ನತ ದರ್ಜೆಯ ಬಂಡವಾಳ ಹೂಡಿಕೆ ಇದ್ದಂತೆ. ಅದೊಂದು ರೀತಿಯ ಭೂಮಿ ಮತ್ತು ಸ್ವರ್ಗ ಎರಡರ ಮೇಲೂ ಕಣ್ಣಿಟ್ಟ ಅತ್ಯುಚ್ಚ ಚಕ್ರಬಡ್ಡಿಯ ಯೋಜನೆಯಂತೆ. ಈ ರೂಪಕವನ್ನು ಸ್ವಲ್ಪ ವಿಸ್ತರಿಸಿ ಅದು ಈಗ ಇಲ್ಲೂ ಮತ್ತು ಎಲ್ಲಾ ಕಾಲದಲ್ಲೂ ತನ್ನ ಕಾಲೂರಿದೆ. ಈಗ ಮೊದಲಿಗೆ ಎರಡನೆಯದನ್ನು ನೋಡೋಣ. ನೀವು ಪುಣ್ಯವನ್ನು ಸಂಪಾದಿಸಿದಂತೆಲ್ಲಾ ಮೋಕ್ಷಕ್ಕೆ ನಿಮ್ಮನ್ನು ಕೊಂಡೊಯ್ಯಲಿರುವ ನಿರ್ವಾಣ ಸ್ಥಿತಿಗೆ ನಿಮ್ಮನ್ನು ತಲುಪಿಸುವಲ್ಲಿ ನೀವು ಸಾಗಿ ಹೋಗಬೇಕಾಗಿರುವ ನಾನಾ ಜನ್ಮಾಂತರಗಳ ಸೇತು ನೀವಾಗುತ್ತೀರಿ. ಈ ನಡುವೆ ಈ ಜನ್ಮದಲ್ಲಿ ಅಹಿಂಸೆಯ ಫಲಗಳೆಷ್ಟು ಲಾಭದಾಯಕ ಎಂಬುದನ್ನಷ್ಟು ನೋಡಿ. ನಾನು ಹಾಗೂ ನನ್ನಂತಹ ರಜಪೂತ ಕುಲದವರು ಯಾರೋ ಪಾಪಗಳನ್ನು, ಕೊಲೆಗಳನ್ನು ಮಾಡುತ್ತಲೇ ಇದ್ದರೂ ನೀವು ಮಾತ್ರ ಪರಿಶುದ್ಧವಾಗಿಯೇ ಇರುತ್ತೀರಿ. ನೀವು ನಿಮ್ಮ ಧರ್ಮದ ಪ್ರಕಾರ ನಿಮ್ಮ ಕೈಗಳನ್ನು ರಕ್ತ ಸಿಕ್ತಗೊಳಿಸದಂತೆ ಇರುತ್ತೀರಿ. ಅದೇ ಸಮಯಕ್ಕೆ ನೀವು ಅತ್ಯಂತ ಶಕ್ತಿಶಾಲಿ ಸೈನ್ಯಗಳಿಗೆ ಅಪಾರವಾದ ಹಣದ ಮೊತ್ತವನ್ನು ಅತ್ಯಲ್ಪ ಬಡ್ಡಿಗೆ ಸಾಲವಾಗಿ ನೀಡುತ್ತೀರಿ. ಅದೆಲ್ಲಾ ಒಟ್ಟಾಗಿ ರಾಕ್ಷಸ ಗಾತ್ರದ ಬಡ್ಡಿಯಾಗಿ ಬೆಳೆದು ನಿಲ್ಲುತ್ತದೆ. ರಣರಂಗದ ಪರಿಣಾಮ ಏನಾದರಾಗಲಿ, ನಾವು ಯೋಧರು ನಿಮ್ಮನ್ನು ರಕ್ಷಿಸುತ್ತೇವೆ. ಅನೇಕ ವೇಳೆ ನಾವು ಸಾಯುತ್ತೇವೆ. ನೀವು ಮಾತ್ರ ಏನೊಂದು ಚೂರೂ ಗಾಯಗೊಳ್ಳದೆ ಉಳಿದುಕೊಳ್ಳುತ್ತೀರಿ, ಇನ್ನೊಂದು ಯುದ್ಧಕ್ಕೆ ಹಣ ಒದಗಿಸುತ್ತೀರಿ. ಅದಕ್ಕಿಂತ ಅತ್ಯುತ್ತಮವಾದ್ದು ಇದು: ಅಳಿಯಂದಿರು, ಭಾವಮೈದುನಂದಿರು, ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು, ಅಕ್ಕತಂಗಿಯರ ಮಕ್ಕಳು, ದಾಯಾದಿಗಳು, ಮತ್ತು ನಂಬಲು ಅಸಾಧ್ಯವಾದ ಬಾದರಾಯಣ ಸಂಬಂಧದ ಕುಟುಂಬ ವರ್ಗವೇ ನೀವೆಲ್ಲರು ಪುಣ್ಯವಂತರು. ನಿಮ್ಮ ಹಿತಾಸಕ್ತಿಗಳು ಎಲ್ಲ ತರದಲ್ಲೂ ರಕ್ಷಿಸಲ್ಪಡುತ್ತವೆ. ಶತ್ರುಗಳೋ, ಮಿತ್ರರೋ ಯಾರೇ ಗೆದ್ದರೂ ನೀವಂತೂ ಇನ್ನಷ್ಟು ಶ್ರೀಮಂತರಾಗಿ ಬಿಡುತ್ತೀರಿ.

ಆದಿನಾಥರು ಮತ್ತು ಅವರ ಕುಲದವರಿಗೆ ನಾನು ಈ ಹೊತ್ತು ಚಾಕು ಹಾಕಿದ್ದೀನಿ ಅಂತ ಅನ್ನಿಸುತ್ತೆ. ಅವರ ಎದುರಿನಲ್ಲೇ ಅಷ್ಟು ಯಾಕೆ ಅವಿವೇಕಿಯಾಗಿ ಬಿಡುತ್ತೇನೆ.? ಅವರು ಯಾವತ್ತೂ ಸ್ವಯಂ ನ್ಯಾಯ ಸಮ್ಮತವಾಗಿ ನಡೆದುಕೊಂಡಿಲ್ಲ. ಅವರು ಯುದ್ಧಗಳಿಗೆ ಹಣ ಪೂರೈಸಿದ ಹಾಗೆಯೇ, ಅಷ್ಟೇಕೆ ಸ್ವಂತ ಇಚ್ಛೆಯಿಂದ ಹೆಚ್ಚಿನ ಸಂತೋಷದಿಂದ ಸದಸದ್ವಿವೇಚನೆಯಿಂದಲೇ ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಅಣೆಕಟ್ಟೆಗಳ ನಿರ್ಮಾಣಕ್ಕೆ

ಅಥವಾ ವ್ಯಾಪಾರ ವಹಿವಾಟುಗಳಿಗೆ ಹಣವನ್ನು ತೊಡಗಿಸುತ್ತಾರೆ. ಪ್ರಾಯಶಃ ನಾನೇ ನಿಧಾನ ಅಥವಾ ಅವರಿಗೆ ನಮ್ಮ ಅಗತ್ಯಕ್ಕಿಂತ ಅವರ ಅಗತ್ಯ ನಮಗೇ ಹೆಚ್ಚಾಗಿದೆ ಅನ್ನುವುದೇ ನಿಜವಾದ ಸಂಗತಿ ಅನ್ನಿಸುತ್ತದೆ.

ಅಗೋ ಅವರು ತಮ್ಮ ಉಪಾಂತ್ಯದ ಚಲನೆ ಮಾಡಿದರು. ನಾನಾ ತಂತ್ರ, ಕುತಂತ್ರಗಳಿಂದ ಕೃತಕ ಮುಖಭಾವಗಳಿಂದ, ಅನೇಕ ಕಾಲಾಳು ಮತ್ತು ಕುದುರೆಗಳನ್ನು ಕಳೆದುಕೊಂಡು ರಾಜನನ್ನು ಅಧೀನವಾಗಿಸಲು ನನ್ನ ಮಂತ್ರಿಯನ್ನು ಹಿಡಿದಿದ್ದಾರೆ: ರಾಜನನ್ನು ಬಯಲುಗೊಳಿಸಲು ಇನ್ನೇನು ಶೀಘ್ರ ಸಾವಿಗಾಗಿ. ಆದರೆ ಕೌಶಲ ಪೂರ್ವಕವಾದ ಹೊಡೆತವನ್ನು ಎಲ್ಲೂ ಕೊಡಲೇ ಇಲ್ಲ. ತಮ್ಮ ಅಗ್ರಗಣ್ಯ ಸ್ಥಾನವನ್ನು ಮತ್ತೊಮ್ಮೆ ಸ್ಥಾಪಿಸಿದ ಮೇಲೆ, ಈಗ ಅವರು ಮೇಲ್ನೋಟಕ್ಕೇ ಕಾಣುವಂಥ ಹುಸಿ ತಪ್ಪನ್ನು ಮಾಡುವ ಮೂಲಕ ನನಗೆ ಗೆಲ್ಲಲ್ಲು ಅವಕಾಶ ಮಾಡಿಕೊಡುತ್ತಾರೆ. ಆದರೆ ಲೀಲಾವತಿ ಒಳಕ್ಕೆ ನುಗ್ಗಿಬಿಟ್ಟಳು. ಹೋರಾಡಿ ಮುತ್ತಿಗೆಗೆ ಗುರಿಯಾದ ನನ್ನ ರಾಜನನ್ನು ಹಾಗೂ ಆದಿನಾಥಜೀಯವರು ಗೆದ್ದು ಗುಡ್ಡೆಹಾಕಿಕೊಂಡದ್ದನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿಬಿಟ್ಟು ನೇರವಾಗಿ ನನ್ನ ತೊಡೆಯ ಮೇಲೆ ಹಾರಿ ಕುಳಿತಳು. ಅವಳ ಮಂಡಿ ನನ್ನ ಎಡ ವೃಷಣವನ್ನು ಅಪ್ಪಚ್ಚಿ ಮಾಡಿತ್ತು. ಅದೇ ಸಮಯಕ್ಕೆ ನನ್ನ ಎದೆಯ ಮೇಲೊಂದು ಹಚ್ಚೆ ಒತ್ತಿದಳು.

"ನೀವು ಬರುತ್ತೀರಿ ಅಂತ ನನಗೆ ಹೇಳಲೇ ಇಲ್ವಲ್ಲ." ನಾನು ಉಸಿರಾಡಲು ಯತ್ನಿಸಿದೆ. ನನ್ನ ತೊಡೆಗೆ ನೋವಾಯಿತೋ, ಎದೆಗೆ ನೋವಾಯಿತೋ ಇಲ್ಲ ಕುತ್ತಿಗೆಗೆ ನೋವಾಯಿತೋ ಹೇಳಲಾರೆ. "ನಮ್ಮ ಮುತ್ತಾತನ ಹತ್ತಿರ ಸಾಲ ಕೇಳುವುದಕ್ಕೆ ನೀವು ಬಂದಿರಬೇಕು. ಅದಕ್ಕೇ ನೀವು ಗುಟ್ಟಾಗಿ ಬರ್ತೀರಿ ಮತ್ತು ನಾಚಿದ ಮುಖ ಹೊತ್ತುಕೊಂಡು ಹೊರಟು ಹೋಗುತ್ತೀರಿ."

ಆದಿನಾಥರ ಬೆಣ್ಣೆಯಂತೆ ಮೃದುವಾದ ಮೇಣದ ಮುಖ ಸ್ವಲ್ಪ ಕೆಂಪಾಯಿತು. ಆ ಮುಖದಲ್ಲಿ ರಕ್ತದ ಮತ್ತು ಮಾನವೀಯತೆಯ ಕುರುಹುಗಳನ್ನು ಕಂಡು ಸಂತೋಷವಾಯಿತು. ಅವರ ಮರಿ ಮೊಮ್ಮಗಳು ನಿಜಕ್ಕೂ ಅವರನ್ನು ತಬ್ಬಿಬ್ಬುಗೊಳಿಸಿಬಿಟ್ಟಳು.

"ಏ ತುಂಟಿ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ನೀನು ನಡಿ ಇಲ್ಲಿಂದ. ನನ್ನ ರಕ್ತ ಹಂಚಿಕೊಂಡು ಹುಟ್ಟಿದ ಕೂಸೇ ಭಾವೀ ಮಹಾರಾಜರನ್ನು ಹೀಗೆ ಅವಮಾನ ಮಾಡುವುದನ್ನು ನೋಡುವುದಕ್ಕೆ ನಾನು ಬದುಕಿರುತ್ತೇನೆ ಅಂತ ತಿಳಿದಿರಲಿಲ್ಲ. ತಮ್ಮ ಎದುರುಗಡೆ ನಾನು ಇನ್ನು ಯಾವತ್ತೂ ತಲೆ ಎತ್ತಿಕೊಂಡು ತಿರುಗಾಡಲು ಸಾಧ್ಯವಿಲ್ಲ ಮಹಾಸ್ವಾಮಿ." ಆದಿನಾಥರು ತಮಗಾದ ಕಿರಿಕಿರಿಯನ್ನು ಅಭಿವ್ಯಕ್ತಿಸುವಲ್ಲಿ ಕೃತಕತೆಯೇನೂ ಇರಲಿಲ್ಲ. ನನ್ನ ವಿಷಯದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳದೆ ಇರಬಹುದು. ಆದರೆ ಮೇವಾಡದ ಅರಸು ಮನೆತನಕ್ಕೆ ಅವರ ನಿಷ್ಠೆ ಯಾವತ್ತೂ ಸಂಪೂರ್ಣವಾದ್ದು.

"ಅವಳು ಇರಲಿ ಬಿಡಿ"–ಕೊನೆಗೂ ನಾನು ಬಾಯಿ ಬಿಟ್ಟು ಹೇಳಿದೆ. "ನಾನು ಎರಡು ಸಲ ನಿನ್ನನ್ನು ಕೇಳಿದೆ. ನೀನು ಬರ್ತೀಯಾ ಅಂತ ಹೇಳಿದರು. ಆದರೆ ನೀನು ಆಟದಲ್ಲಿ ಎಷ್ಟು ಮಗ್ನಳು ಅಂದರೆ ನೀನು ಕೈಗೆ ಸಿಕ್ಕೋದೇ ಕಷ್ಟ ಅಂದರು."

"ನನಗೆ ಯಾರೂ ಹೇಳಲೇ ಇಲ್ಲ. ಅಜ್ಜ ಅವರು ನಿಮ್ಮ ಹತ್ತಿರ ವ್ಯವಹಾರದ ವಿಷಯ ಮಾತಾಡಬೇಕು ಅಂತ ಇದ್ದರು, ಈ ಕಾಲದಲ್ಲಿ ದುಡ್ಡಿಗೆ ಎಷ್ಟೊಂದು ಅಭಾವ, ಶೇಕಡಾ ಒಂದರ ಏಳನೇ ಒಂದು ಭಾಗ ಬಡ್ಡಿ ಹಾಕಬೇಕು ಅನ್ನುವುದನ್ನು ಹೇಳಬೇಕು ಅಂತ ಇದ್ದರು ಎಂದು ಬೇಕಾದರೆ ಬಾಜಿ ಕಟ್ಟುತ್ತೇನೆ. ಅದಕ್ಕೇ ನನ್ನಿಂದ ಮರೆಮಾಚಿದ್ದರು."

ಆದಿನಾಥರು ಈ ದೇಶದ ದೊಡ್ಡ ದೊಡ್ಡ ಲೇವಾದೇವಿಗಾರರ ಕೊನೆಯ ಆಶ್ರಯ. ಈಗಾಗಲೇ ಅವಮಾನದಿಂದ ನಾಚಿ ಕೆಂಪಾಗಿದ್ದ ಈ ಮಹಾಶಯ ಇನ್ನಷ್ಟು ನಾಚಿಕೊಳ್ಳಲು ಸಾಧ್ಯವಿತ್ತೆ? ಲೀಲಾವತಿ ನೀನು ಬೇಕಾದರೆ ನನ್ನ ಇನ್ನೊಂದು ವೃಷಣವನ್ನು ಒತ್ತಿ ದುಂಡನೆಯ ನಾಣ್ಯ ಮಾಡು; ಆದರೂ ನಾನು ನಿನಗೆ ಒಂದಕ್ಕೆ ಋಣಿ.

ನನ್ನ ಕೊರಳಸುತ್ತ ತನ್ನ ಕೈಗಳನ್ನು ಬಳಸುತ್ತ– "ನೀವು ನನಗೋಸ್ಕರ ಏನು ತಂದಿದ್ದೀರಿ" – ಎಂದು ಕೇಳಿದಳು.

"ನೀನು ನನಗೇನು ತಂದಿದ್ದೀ?" – ನಾನು ಈಗ ಪೂರ್ತಿ ಮೊದಲಿನಂತಾಗಿದ್ದೆ.

"ನೀವು ಬರುವುದು ನನಗೆ ಗೊತ್ತಿಲ್ಲದೆ ಇದ್ದರೂ ನಿಮಗೋಸ್ಕರ ನಾನು ಏನೋ ಒಂದು ತಂದಿದ್ದೀನಿ." ಅವಳು ಮೇಲಕ್ಕೆದ್ದು ಒಳಕ್ಕೆ ಹೋಗಿ ಒಂದು ಕ್ಷಣದಲ್ಲಿ ವಾಪಸಾದಳು. ಆಗ ಅವಳ ಕೈಯಲ್ಲಿ ಒಂದು ಬಟ್ಟೆಯ ತುಣುಕು ಇತ್ತು. ಅದು ನನ್ನ ವಂಶದ ಪೂರ್ವಜನಾದ ಸೂರ್ಯದೇವನ ಚಿತ್ರವನ್ನು ಜರತಾರಿಯ ಕಸೂತಿ ಹಾಕಿ ಬಿಡಿಸಿದ್ದ ಕೆಂಪು ಬಾವುಟ. ಸೂರ್ಯದೇವನ ಕಣ್ಣುಗಳು, ಮೀಸೆ, ಗರ್ವಿಷ್ಠ ತುಟಿಗಳು, ಮೂವತ್ತಾರು ಕಿರಣಗಳು, ಎಲ್ಲವನ್ನೂ ಅತ್ಯಂತ ಕುಶಲತೆಯಿಂದ ಬಿಡಿಸಿದ್ದ ಬಾವುಟ ಅದು.

"ಹಾಳಾದ್ದು ಇರಲಿ ಬಿಡಿ" – ಎಂದು ಹೇಳುತ್ತ ನನ್ನ ಕೈಯಿಂದ ಬಾವುಟವನ್ನು ಕಿತ್ತುಕೊಂಡಳು. "ನೀವು ನನಗೆ ಏನು ತಂದಿದ್ದೀರಿ ಅನ್ನುವುದನ್ನು ನಾನು ಮೊದಲು ನೋಡಬೇಕು."

"ಅದೇನಾದರೂ ಆಗಿರಲಿ. ನಿನ್ನ ಉಡುಗೊರೆಯ ಜೊತೆ ಅದನ್ನು ಹೋಲಿಸುವುದಕ್ಕೆ ಸಾಧ್ಯವಿಲ್ಲ."

"ಅದನ್ನು ತೀರ್ಮಾನ ಮಾಡೋಳು ನಾನು" – ನನ್ನ ಮಾತನ್ನು ಅಲ್ಲಿಗೇ ತುಂಡರಿಸಿ "ನನಗೆ ಅದನ್ನು ತೋರಿಸಿ" ಅಂದಳು.

ನಾನು ತಂದಿದ್ದ ಉಡುಗೊರೆಯನ್ನು ಅವಳಿಗೆ ನೀಡಿದೆ. ಅದಕ್ಕೆ ಸುತ್ತಿದ್ದ ರೇಷ್ಮೆ ವಸ್ತ್ರವನ್ನವಳು ಬಿಚ್ಚಿ ನಂಬಲಾಗದೆಂಬಂತೆ ತದೇಕ ದೃಷ್ಟಿಯಿಂದ ನೋಡಿದಳು.

"ಇದು ನೆರಳು ಗಡಿಯಾರ, ಇದನ್ನು ನೀವೇ ಕೈಯಾರ ಮಾಡಿದಿರಾ?"

"ಅದಕ್ಕೆ ರೇಷ್ಮೆ ವಸ್ತ್ರ ಸುತ್ತಿದ್ದು ಮಾತ್ರ ನನ್ನ ಕೈಯಿಂದಲೇ" – ನಾನು ವಿನೋದ ಮಾಡಲು ಪ್ರಯತ್ನಿಸಿದೆ. ಆದರೆ ಅವಳು ನೀಡಿದ ಉಡುಗೊರೆಯನ್ನು ತಯಾರಿಸಲು ಆಕೆ ತೋರಿದ ಶ್ರಮ ಮತ್ತು ಅಕ್ಕರೆಗೆ ಹೋಲಿಸಿದರೆ, ನನ್ನ ಉಡುಗೊರೆ ಎಷ್ಟೊಂದು ಕಾಂತಿಹೀನ ಮತ್ತು ಪೆಚ್ಚಾದ್ದು ಎಂಬುದು ಅರಿವಿಗೆ ಬಂದಿತು.

"ಮಹಾನ್ ಮನಸ್ಸುಗಳ ಆಲೋಚನೆ ಒಂದೇ ರೀತಿ ಇರುತ್ತದೆ. ನೋಡಿ ನಮ್ಮಿಬ್ಬರ ಮನಸ್ಸಿನ ಆಶಯವೂ ಒಂದೇ ಆಗಿತ್ತು. ಗಂಟೆಗಳನ್ನು ತೋರಿಸಲು ಬಳಸಿರುವುದು ನಿಜವಾದ ಮಾಣಿಕ್ಯಗಳೆ?"

"ನೀನು ಖಂಡಿತಾ ತಮಾಷೆ ಮಾಡ್ತಿದ್ದೀ. ಅವು ನಮ್ಮ ತೋಟದಲ್ಲಿ ಆರಿಸಿದ ಮಾಮೂಲಿ ಗಾಜಿನ ಚೂರುಗಳು."

ನಾನು ಮುಗುಳ್ನಗುವವರೆಗೂ ಅವಳು ಗಲಿಬಿಲಿಗೊಂಡಿದ್ದಳು. "ನೀವು ಸುಳ್ಳುಗಾರು. ಅವು ಖಂಡಿತಾ ಮಾಣಿಕ್ಯಗಳೇ" – ಹಾಗೆ ಹೇಳುತ್ತ ಅವಳು ನನ್ನನ್ನು ತಬ್ಬಿಕೊಂಡಳು.

ನಾನು ಮತ್ತು ಆದಿನಾಥರು ಸಾಲದ ವ್ಯವಹಾರವನ್ನು ಬೇಗನೆ ಇತ್ಯರ್ಥಗೊಳಿಸಿದೆವು. ಕಳೆದ ಸಲಕ್ಕಿಂತ ಶೇಕಡಾ ಒಂದರ ಎಂಟನೇ ಒಂದು ಭಾಗ ಬಡ್ಡಿ ಎಂದು ಇತ್ಯರ್ಥವಾಯಿತು.

* * *

ನಾನು ಮನೆಗೆ ಹಿಂತಿರುಗಿದಾಗ ತಡವಾಗಿತ್ತು. ಮಂಗಳನಿಗೆ ಕುದುರೆಗಳನ್ನು ಲಾಯಕ್ಕೆ ಕೊಂಡೊಯ್ಯಲು ತಿಳಿಸಿ ನಿಧಾನವಾಗಿ ಮಹಡಿಯ ಮೆಟ್ಟಿಲುಗಳನ್ನು ಹತ್ತಿದೆ. ರಾಣಿ ಕರ್ಮವತಿ ನನಗಾಗಿ ಕಾಯುತ್ತಿದ್ದಳು. ಆಕೆಯನ್ನು ಈ ಹೊತ್ತಿನಲ್ಲಿ ಅದೂ ನನ್ನ ಕೊಠಡಿಯಲ್ಲಿ ನೋಡುವುದೆಂದರೆ ಸ್ವಲ್ಪ ವಾಡಿಕೆಗೆ ಮೀರಿದ್ದೇ. ಸಾಮಾನ್ಯವಾಗಿ ಆಕೆ ಇರುವ ಕಡೆಗೆ ನನ್ನನ್ನೇ ಕರೆಸಿಕೊಳ್ಳುತ್ತಾಳೆ. ತಂದೆಯವರು ಹುಷಾರಾಗಿದ್ದಾರೆ ತಾನೆ? ಆಕೆಯ ಹಣೆಯ ಕುಂಕುಮ ಸಿಂಧೂರ ಮತ್ತು ಕೈಯ ಬಳೆಗಳನ್ನು ನೋಡಿ ನಿರಾತಂಕವಾಯಿತು.

"ನೀನು ಯಾಕೆ ಕುಂಟುತ್ತಿದ್ದೀ"

ನಾನೇನು ಕುಂಟುತ್ತಿರಲಿಲ್ಲ. ಆದರೆ ಊದಿದ ನನ್ನ ಮೃದು ವೃಷಣಗಳಿಗೆ ತೊಂದರೆಯಾಗ ಬಾರದೆಂದು ಹೆಚ್ಚುಕಡಿಮೆ ಪಾದಗಳನ್ನು ಎತ್ತದೆ ನಿಧಾನವಾಗಿ ನಡೆಯುತ್ತಿದ್ದೆ. "ಸ್ವಲ್ಪ ಆಯಾಸವಾಗಿದೆ ಅನ್ನಿಸುತ್ತೆ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರೆ ಸರಿಹೋಗುತ್ತೆ." ಅದು ತುಂಬಾ ಚೆನ್ನಾಗಿ ಆಯಿತು ಎಂದು ನನಗೆ ಅನ್ನಿಸಿತು. ಸಂದರ್ಶನವನ್ನು ಇನ್ನೂ ಹೆಚ್ಚು ಅನುಕೂಲಕರವಾದ ಸಮಯಕ್ಕೆ ಮುಂದೂಡಲು ಇದು ಒಂದು ಸೂಕ್ಷ್ಮ ಸೂಚನೆ. ಆಕೆ ಇಂಥ ಕರುಣಾಜನಕ ತಂತ್ರಕ್ಕೆಲ್ಲ ಸಿಕ್ಕಿಕೊಳ್ಳುವ ಪೈಕಿ ಇಲ್ಲ.

"ಮೆಹತಾಜಿಯವರ ಜೊತೆಗಿನ ಭೇಟಿ ಹೇಗಿತ್ತು? ನೀವಿಬ್ಬರೂ ಸೇರಿ ಬಡ್ಡಿದರ ಎಷ್ಟು ಇರಬೇಕು ಎಂದು ತೀರ್ಮಾನಿಸಿದಿರಿ? ನಿನ್ನನ್ನು ಸುಲಭವಾಗಿ ಮಣಿಸಬಹುದು ಎಂದು ಅವರು ಭಾವಿಸಿರುವುದರ ಫಲ ನಾವೆಲ್ಲರೂ ದಂಡ ತೆರಬೇಕಾಗುತ್ತೆ ಅಂತ ನಾನು ಬಾಜಿ ಕಟ್ಟುತ್ತೇನೆ"

ನಾನು ಆದಿನಾಥರ ಮನೆಗೆ ತೆರಳಿ ಯಾವುದನ್ನು ಕುರಿತು ಚರ್ಚಿಸಿದೆ ಎಂಬುದು ನನ್ನ ಬಲ ತಾಯಿಗೆ ತಿಳಿದದ್ದು ಹೇಗೆ ಎಂಬುದನ್ನು ಕೇಳುವುದರಲ್ಲಿ ಅರ್ಥವಿಲ್ಲ. ತನ್ನ ಭವಿಷ್ಯದ ಮೇಲೆ ಪ್ರಭಾವ ಬೀರಬಹುದಾದ ಅತಿ ವಿರಳ ಸಾಧ್ಯತೆ ಇರುತ್ತದೆ ಎಂದು ಆಕೆಗೆ ಅನ್ನಿಸಿದರೂ ಸಾಕು, ಅದು ಚಿತ್ತೂರಿನಲ್ಲಾದರೂ ಸರಿಯೇ ಚಿತ್ತೂರಿನ ಹೊರಗಡೆಯಾದರೂ ಸರಿಯೇ ನಡೆದದ್ದೆಲ್ಲವನ್ನೂ ತಿಳಿದುಕೊಳ್ಳತಕ್ಕದೆಂದು ಆ ತಾಯಿ ಭಾವಿಸಿದ್ದಳು. ಸಮಾಚಾರ ಎನ್ನುವುದೇ ಎಲ್ಲವೂ ಎಂದು ಆಕೆ ನಂಬಿರಲಿಲ್ಲ; ಆದರೆ ಅದೊಂದೇ ಎಂದು ಆಕೆ ನಂಬಿದ್ದಳು. ಆದರೆ ಅದರ ದುರಂತದ ಭಾಗವೆಂದರೆ, ಅದು ಸಾಧನ ಮಾತ್ರ, ತನಗೆ ತಾನೇ ಸಾಧ್ಯವಲ್ಲ ಎಂಬುದರ ವಿಷಯಕ್ಕೆ ಆಕೆ ಕುರುಡಾಗಿದ್ದಳು. ಒಂದು ವೇಳೆ ಆಕೆಗೆ ಕಣ್ಣು ಇದ್ದದ್ದೇ ಆಗಿದ್ದರೆ, ಅದು ನಿಷ್ಪ್ರಯೋಜಕವೆನ್ನಿಸಿದರೂ ಅದು ನಿಯಂತ್ರಿತವಾಗಿದ್ದಂತೆ ಆಕೆಗೆ ಅನ್ನಿಸುತ್ತಿತ್ತು. ಈ ಬಗ್ಗೆ ಆಕೆಯ ಜೊತೆ ತಲೆ ಕೆಡಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ತಂದೆಯವರು ತನ್ನ ಅತ್ಯಂತ ಅಚ್ಚುಮೆಚ್ಚಿನ ರಾಣಿಯನ್ನು ಗುಪ್ತಚಾರ ವಿಭಾಗದ ಮುಖ್ಯಸ್ಥಳನ್ನಾಗಿ ನೇಮಕ ಮಾಡಲಿಲ್ಲವೇಕೆ ಎಂದು ಇಂದಿನವರೆಗೂ ನನಗೆ ಅರ್ಥವಾಗಿಲ್ಲ.

ರಾಣಿ ಕರ್ಮವತಿಯು ಗೂಢಚಾರರ ಒಂದು ಸಂಕೀರ್ಣ ಜಾಲವನ್ನೇ ಹೊಂದಿದ್ದಳು. ತನಗೆ ದೊರೆತ ಮಾಹಿತಿಯು ನೂರಕ್ಕೆ ನೂರು ನಂಬಲರ್ಹವಾದದ್ದೆ ಎಂಬುದನ್ನು ಪತ್ತೆ ಹಚ್ಚುವ ಅತ್ಯಂತ ಯಾತನಾಪೂರ್ಣ ಆದರೆ ಸುರಕ್ಷಿತವಾದ ಸೋಲಿನ ವಾದ ವಿಧಾನವಿತ್ತು ಅವಳ ಬಳಿ. ಅದರ ಜೊತೆಗೆ ಚಿತ್ರಹಿಂಸೆ ಕೊಡಲು ಬಳಸುವ ಆಯುಧಗಳನ್ನು ತಯಾರಿಸುವ ದಿಗ್ಭ್ರಮೆಗೊಳಿಸುವ ಆಕೆಯ ಆಯುಧಗಾರ ಬೇರೆ. ಒಂದು ಗುರಿಯಲ್ಲಿ ಮನಸ್ಸಿಟ್ಟ ಅಸಂಸ್ಕೃತ ಪ್ರಭಾವಶಾಲಿ ಹೆಂಗಸು ಆಕೆ. ಯಾವುದಾದರೂ ಕೆಲಸಕ್ಕೆ ಬಾರದ, ಅಸಹ್ಯದ,

ಅಥವಾ ಆತಂಕದ ಚೂರುಪಾರು ವಿಷಯಗಳನ್ನು ಹೊರತೆಗೆಯಲು, ಕಾಡಿಸುವುದು, ಪೀಡಿಸುವುದು, ಪುಸಲಾಯಿಸುವುದು, ಗಿಲೀಟು ಮಾಡುವುದು, ಹೆದರಿಸುವುದು, ಬೆದರಿಸುವುದು, ದಲ್ಲಾಳಿ ಮಾಡುವುದು, ಕೊಟ್ಟು ತೆಗೆದುಕೊಳ್ಳುವುದು ಹೀಗೆ ಯಾವ ಮಟ್ಟಕ್ಕಾದರೂ ಇಳಿಯಬಹುದಾದಂಥ ಹೆಂಗಸು ಆಕೆ.

ನನ್ನಿಂದ ಇಡೀ ದಿನ ನಡೆದ ಎಲ್ಲಾ ವಿವರಗಳನ್ನು ಹೊರಡಿಸಿದ ಹೊರತು ನನ್ನನ್ನು ಬಿಟ್ಟು ಕೊಡುವ ಹಾಗೆ ಕಾಣಲಿಲ್ಲ ಆಕೆ. ಆಕೆಯ ಪ್ರಶ್ನೆಗಳಿಗೆ ಚಾಕಚಕ್ಯತೆಯಿಂದ ಉತ್ತರಿಸಲು ಇಲ್ಲವೆ ಅವಕ್ಕೆ ಉತ್ತರಿಸಲು ಅಡ್ಡ ಮಾರ್ಗ ಹಿಡಿಯಲು ಆಗದಷ್ಟು ಆಯಾಸಗೊಂಡಿದ್ದೆ. ನಾನು ಯಾವುದನ್ನೂ ಮುಚ್ಚಿಡದೇ ಎಲ್ಲವನ್ನು ಮನಬಿಚ್ಚಿ ಹೇಳಿಬಿಟ್ಟೆ. ವದಂತಿಗಳು, ಗಾಳಿ ಮಾತುಗಳು, ಗೊಡ್ಡು ಹರಟೆಗಳು, ಶಕುನಗಳು, ಕೊಂಕು ಮಾತುಗಳು, ಗುಟ್ಟಿನ ಸಂಗತಿಗಳು, ಭಂಡ ಅಪರಾಧಗಳು ಇಂಥವುಗಳ ವಿಷಯಕ್ಕೆ ಆಕೆಗೆ ಅಪಾರ ಹಸಿವು. ಅವಳ ಈ ಬಕಾಸುರ ಹಸಿವನ್ನು ತಣಿಸಲು ನನಗೆ ಬೇರಿನ್ನೇನೂ ದಾರಿ ಇರಲಿಲ್ಲ.

"ಖಂಡಿತವಾಗಿಯೂ ನೀವು ರಾತ್ರಿಯ ಈ ಸರಿಹೊತ್ತಿನಲ್ಲಿ ಇಂಥ ಕೆಲಸಕ್ಕೆ ಬಾರದ ಹರಟೆ ಹೊಡೆಯೋದಕ್ಕೋಸ್ಕರ ಬಂದಿಲ್ಲ"

"ಅದನ್ನು ತೀರ್ಮಾನ ಮಾಡುವವಳು ನಾನು. ನೀನು ಸಿಂಹಾಸನಕ್ಕೆ ಅಗ್ರ ಉತ್ತರಾಧಿಕಾರಿ ಆಗಿರಬಹುದು. ಆದರೆ ಕಡೇ ಪಕ್ಷ ಇಲ್ಲಿನವರೆಗೆ ಉತ್ತರಾಧಿಕಾರಿಗಿಂತ ಹೆಚ್ಚು ಖಚಿತ ಎಂದು ಹೇಳಲಿಷ್ಟಪಡುತ್ತೇನೆ".

ಈ ರಾತ್ರಿ ಮಾತೃ ವಾತ್ಸಲ್ಯ ವಾಹಿನಿ ಉಕ್ಕಿ ಹರಿಯುತ್ತಿದೆ. ನಾನು ಜೇಷ್ಠ ಪುತ್ರ. ಅದಕ್ಕಾಗಿ ರಾಣಿ ಕರ್ಮವತಿ ನನ್ನನೆಂದೂ ಕ್ಷಮಿಸಲಾರಳು. ತನ್ನ ಪುತ್ರ ವಿಕ್ರಮಾದಿತ್ಯ ಸಿಂಹಾಸನದ ಉತ್ತರಾಧಿಕಾರಿ ಆಗಬೇಕೆಂಬುದರ ಪರ ಆಕೆ.

"ನಿನ್ನ ಅಂತಃಪುರದಲ್ಲಿರುವ ಕುಣಿತದ ಹುಡುಗಿಯ ವಿಷಯ ಮಾತನಾಡಲು ಬಂದೆ. ಆಕೆಯನ್ನು ನಿನ್ನ ಹತೋಟಿಯಲ್ಲಿಟ್ಟುಕೊಳ್ಳುವಷ್ಟು ಗಂಡಸುತನ ನಿನಗಿದೆಯೇ"? ಅಥವಾ ಆ ಕೆಲಸವನ್ನು ನಿನ್ನ ಪರವಾಗಿ ನಾನೇ ಮಾಡಬೇಕು ಎನ್ನುವುದು ನಿನ್ನ ಇಚ್ಛೆಯೆ"?

ಆಕೆ ಹೇಳಿದ ಕುಣಿತದ ಹುಡುಗಿ ಇದೀಗ ತಾನೇ ನೋವು, ಗಾಯಗಳ ಅಸಹನೀಯ ಬೇನೆಯನ್ನು ಉಸಿರಾಡುತ್ತಿದ್ದಾಳೆ. ವರ್ಷಗಟ್ಟಲೆ ಬೈಗುಳಗಳ ನಂತರವೂ ನನ್ನ ಹೆಂಡತಿ ಈಗಲೂ, ರಾಣಿ ಅವಳನ್ನು ಕುರಿತು ಬಳಸುವ ಪ್ರೀತಿಯ ಸಂಬೋಧನೆಗೆ ಅವಳಿನ್ನೂ ರೂಢಿಯಾಗಿಲ್ಲ. ಈಗ್ಗೆ ಅರ್ಧ ಗಂಟೆಯಿಂದಲೂ ಗಾಜಿನ ಮಣಿಗಳ ಪರದೆಯ ಹಿಂದೆ, ಕೈಯಲ್ಲಿ ನೀರು ತುಂಬಿದ ಬೆಳ್ಳಿಯ ಪಾತ್ರೆ ಹಿಡಿದುಕೊಂಡು ತಾಳ್ಮೆಯಿಂದ ಕಾಯುತ್ತ ನಿಂತಿದ್ದಾಳೆ.

ಪರದೆಯಿಂದ ಸ್ವಲ್ಪ ದೂರದಲ್ಲಿ ನಿಂತುಕೊಂಡು ನೋಡಿದರೆ, ಮುಂದಕ್ಕೆ ಚಾಚಿದ ಕುತ್ತಿಗೆಯ, ಗರಿಗಳಿಂದ ಕೂಡಿದ ಉದ್ದನೆಯ ಬಾಲದ ನವಿಲನ್ನು ಕಾಣಬಹುದು. ಅದರ ಎಡಗಣ್ಣಿನ ಬಗ್ಗೆ ಒಂದು ವೈಚಿತ್ರ್ಯ ಇತ್ತು. ಆ ಕಣ್ಣಿನ ಜಾಗದಲ್ಲಿ ಆಕೆ ಬೇರೆ ಬಣ್ಣದ ಛಾಯೆಯ ಮಣಿಯನ್ನು ಅಂಟಿಸಿದ್ದಳು. ಹಾಗಾಗಿ ಅದು ಹೂಗಣ್ಣಿನ ಹಾಗೆ ಕಾಣುತ್ತಿತ್ತು.

ನನಗೋಸ್ಕರ ಯಾವತ್ತೂ ಕಾಯಬೇಡವೆಂದು ಹೇಳಿಬಿಟ್ಟದ್ದೇನೆ. ಆದರೆ ಅವಳು ತನಗೆ ಸರಿ ಕಂಡ ಹಾಗೆಯೇ ಮಾಡುತ್ತಾಳೆ. ನನ್ನ ಹೆಂಡತಿಗೆ ಅವಳದ್ದೇ ಆದ ಮನಸ್ಸಿದೆ. ತಾಯಿ ಕರ್ಮವತಿ ಇಲ್ಲಿಂದ ಹೊರಟ ಕೂಡಲೇ ಆಕೆ ಪರದೆಯ ಮರೆಯಿಂದ ಹೊರಬಂದು, ಬಂಗಾರದ ಕುಸುರಿ ಕೆಲಸ ಮಾಡಿರುವ ಚಿನ್ನದ ಲೋಟಕ್ಕೆ ನೀರು

ತುಂಬುತ್ತಾಳೆ. ಈ ಲೋಟ ಬೆಳ್ಳಿಯ ತಂಬಿಗೆಯ ಮುಚ್ಚಳವೂ ಹೌದು. ಅನಂತರ ನನ್ನ ಪಾದರಕ್ಷೆಗಳನ್ನು ಕಳಚುತ್ತಾಳೆ.

ಅವಳ ದೃಷ್ಟಿಯಲ್ಲಿ ನಾನು ತಪ್ಪು ಮಾಡುವಂಥವನಲ್ಲ. ಅದು ಪೂರ್ತಿ ನಿಜವಲ್ಲ. ಅವಳದು ಉನ್ನತ ನೈತಿಕ ಪ್ರಜ್ಞೆ. ಆದರೆ ನಾನು ಬಹುಮಟ್ಟಿಗೆ ಏನೂ ಮಾಡಬಹುದು. ಮುನಿಸು, ಪೋಲಿಹಾಸ್ಯ, ದೈಹಿಕ ಹಿಂಸೆ, ಅತ್ಯಂತ ಒರಟು ನಡತೆ, ವಿನಯ, ದಿಗ್ಭ್ರಮೆ, ಹತಾಶೆ, ಮನೋಭಾವಗಳಲ್ಲಿ ದುಷ್ಟ ಮತ್ತು ಒರಟು ಒಲೆದಾಟಗಳು ಹೀಗೆ ನಾನು ಏನು ಮಾಡಿದರೂ ಅದಕ್ಕೆ ಕ್ಷಮೆ ಇದೆ. ನಾನು ಏನೇ ಅಪ್ಪಣೆ ಮಾಡಿದರೂ ಒಂದರ ಹೊರತು ಅದಕ್ಕೆ ಏನೂ ಪ್ರತಿ ಹೇಳದೆ ಮಾಡಿ ಬಿಡುತ್ತಾಳೆ. ನಾನೊಂದು ಮಗುವೆಂಬಂತೆ ಕಾಣುತ್ತಾಳೆ. ನಾನು ಏನೇ ಹೇಳಿದರೂ, ಏನೇ ಮಾಡಿದರೂ, ಏನೇ ಯೋಚಿಸಿದರೂ ಅವಳಿಗೆ ಏನೂ ತಾಕುವುದಿಲ್ಲ.

“ಕಳೆದ ಆರು ತಿಂಗಳಿನಲ್ಲೇ ಏನಿಲ್ಲವೆಂದರೂ ಹದಿನೇಳು ಮದುವೆ ಪ್ರಸ್ತಾಪಗಳನ್ನು ತಂದಿದ್ದೇನೆ”– ಎತ್ತೆತ್ತಲೋ ಹರಿಯ ಹೊರಟಿದ್ದ ನನ್ನ ಮಾತನ್ನು ಮಧ್ಯದಲ್ಲೇ ತುಂಡರಿಸಿ ಮಾತನಾಡಿದವಳು ನನ್ನ ಎರಡನೆಯ ತಾಯಿ.

“ಅತ್ಯಂತ ಸುಖೀ ದಾಂಪತ್ಯದ ರಾಜಕುಮಾರರು ಕೂಡ ಅನೇಕ ಹೆಂಡಿರನ್ನು ಮದುವೆಯಾಗುತ್ತಾರೆ. ನಿಮ್ಮ ತಂದೆಯನ್ನೇ ನೋಡು. ನನ್ನನ್ನು ತುಂಬಾ ಪ್ರೀತಿಸುತ್ತಾರೆ. ಆದರೆ ತನ್ನ ಕರ್ತವ್ಯ ಏನು ಎಂದು ತಿಳಿದವರು. ವಿವಾಹಗಳು ರಾಜ ನೈತಿಕ ಸಂಬಂಧಗಳು. ಅವೂ ಒಂದು ರೀತಿಯ ರಕ್ಷಣೆ ಇದ್ದಂತೆ. ಅವುಗಳು ಉತ್ತರಾಧಿಕಾರ ಪರಂಪರೆ ಬಹು ಕಾಲ ಮುಂದುವರಿಯುವ ಭರವಸೆ ನೀಡುತ್ತವೆ. ಅಷ್ಟೇ ಅಲ್ಲ ಯಾರೇ ಮಹಾರಾಣಿ ತನ್ನ ಮಿತಿ ಮೀರಿ ಮುಂದುವರಿಯುವುದನ್ನು ತಡೆಯುತ್ತವೆ.”

ತಾಯಿ ಹಾಗೆ ಮಾತನಾಡಲೇಬೇಕು. ಚಿತ್ತೂರಿಗಿಂತ, ರಾಜಾಸ್ತಾನಕ್ಕಿಂತ, ದೆಹಲಿಯ ಸಿಂಹಾಸನಕ್ಕಿಂತ ಆಕೆಯ ಪಾದಗಳು ಬೆಳೆದು ಬಿಟ್ಟಿವೆ. ಅವುಗಳನ್ನು ಆಕೆ ನಿರಂತರವಾಗಿ ಬಾಯಿಂದ ಹೇಳುತ್ತ ಬಂದಿದ್ದಾಳೆ. ಮದುವೆಯ ಬಗೆಗಿನ ಈ ಉಪದೇಶ ಎಲ್ಲಿಗೆ ತೆಗೆದುಕೊಂಡು ಹೋಗುತ್ತೆ?. ನನಗೆ ಈಗಾಗಲೇ ಒಂದು ಸಲ ಮದುವೆ ಆಗಿದೆ ಮತ್ತು ಮದುವೆ ಎಂದರೆ ನನಗೆ ಹೊಟ್ಟೆ ಒಳಗಿನಿಂದ ತೊಳಸಿಕೊಂಡು ಬರುತ್ತದೆ. ರಾಣಿ ನಿಜಕ್ಕೂ ನಮ್ಮ ತಂದೆಯನ್ನು ಪ್ರೀತಿಸುತ್ತಿದ್ದಾಳೆಯೇ? ಅವರಿಗೆ ನಾನು ಬೇರಾರಿಗೂ ಕೊಡದೆ ಇರುವಷ್ಟು ಗೌರವ ಕೊಡುತ್ತೇನೆ. ಆದರೆ ಹಾಗೆಂದು ನಾನು ಅವರ ಜೊತೆಯಲ್ಲಿ ಮಲಗಬೇಕೆಂದಿಲ್ಲ. ಯಾವ ಹೆಂಗಸೇ ಆದರೂ ಅವರನ್ನು ಪ್ರೀತಿಸುವುದು ಹಾಗಿರಲಿ ಅವರನ್ನು ತಲೆ ಎತ್ತಿ ನೋಡುವ ಧೈರ್ಯ ತಾನೇ ಹೇಗೆ ಮಾಡಿಯಾಳು? ನನ್ನ ಹೆಂಡತಿ ಅವರನ್ನು ಮೊದಲನೇ ಸಲ ನೋಡಿದ ಕೂಡಲೇ ಪ್ರಜ್ಞೆ ತಪ್ಪಿದಳು. ತಂದೆಯವರು ಅದು ಬಿಸಿಲಿಗೆ ಇರಬಹುದು ಅಥವಾ ಮದುವೆಗೆ ಮುಂಚೆ ಯುವತಿಯರು ಕೈಗೊಳ್ಳುತ್ತಿದ್ದ ನಿಟ್ಟುಪವಾಸದ ಪರಿಣಾಮವಾಗಿ ಆಗಿರಬಹುದು ಎಂದು ನೆಪ ಹೇಳಿದರು. ರಾತ್ರಿಯ ದುಃಸ್ವಪ್ನಗಳು ಮತ್ತು ಪಾತಾಳ ದೇಶದ ದುಷ್ಟರು ಅವರಿಗಿಂತ ಕಡಿಮೆ ಭಯಂಕರರಾಗಿ ಕಾಣುತ್ತಾರೆಂದು ಅರಿತುಕೊಳ್ಳದೆ ಇರುವಷ್ಟು ಚತುರರು ಅವರು. ತನ್ನ ಸೋದರನಿಂದ ಒಂದು ಕಣ್ಣು ಕಳೆದುಕೊಂಡರು. ದೆಹಲಿಯ ಇಬ್ರಾಹಿಂ ಲೂದಿಯಿಂದ ಒಂದು ತೋಳು ಕಳೆದುಕೊಂಡರು. ಬಲಗಾಲನ್ನು ಎಳೆದು ಹಾಕುವುದಕ್ಕೆ ಕಾರಣನಾದವನು ಗುಜರಾತಿನ ಮುಝಫರ್. ಮತ್ತು ಅವರ ದೇಹದ ಮೇಲೆ ಆಗಿರುವ ಗಾಯಗಳು, ಗುರುತುಗಳು, ಕಚ್ಚುಗಳು, ಆಯುಧದ ಗುರುತುಗಳು ಇವುಗಳನ್ನು ಲೆಕ್ಕ ಹಾಕಿದರೆ ನಾವು ಶಸ್ತ್ರಾಸ್ತ್ರಗಳ

ಗುರಿ ಸಾಧನೆಗೆ ಬಳಸುತ್ತಿದ್ದ ಕೃತಕಾಕೃತಿಗಳು ಅವರಿಗಿಂತ ಸುಸ್ಥಿತಿಯಲ್ಲಿ, ಭಿನ್ನವಾಗದೆ ಇದ್ದುವು ಎಂದು ಹೇಳಬೇಕು. ಅವರಿಗಿಂತ ಹೆಚ್ಚು ಧೈರ್ಯಶಾಲಿಗಳು ಅಥವಾ ಅವರಿಗಿಂತ ಹೆಚ್ಚು ವೇಗವಾಗಿ ಮುನ್ನುಗ್ಗುವವರು ಇಲ್ಲವೇ ಇಲ್ಲ. ಬಹುಶಃ ಧೈರ್ಯ ಎನ್ನುವುದು ಅತ್ಯಂತಿಕ ವ್ಯಸನ.

"ಏ! ದಡ್ಡ ನಾನು ಹೇಳುವುದನ್ನು ಕೇಳಿಸಿಕೊಳ್ಳುತ್ತ ಇದ್ದೀಯಾ? ನಿನ್ನ ಕಣ್ಣುಗಳನ್ನು ನೋಡಿದರೆ ಅವು ನಿದ್ದೆಯಲ್ಲಿ ತೇಲುತ್ತ ಇವೆ. ಆದರೆ ಇಲ್ಲಿ ನೋಡಿದರೆ, ತೀರಾ ತುರ್ತಾಗಿ ಗಮನಿಸಬೇಕಾದಂಥ ವಿಷಯಗಳಿವೆ. ಅದೇ ಕುಣಿತದ ಹುಡುಗಿ."

"ನೀವು ನನ್ನ ಹೆಂಡತಿಯ ವಿಷಯಕ್ಕೆ ವಾಪಸ್ ಬರುತ್ತಾ ಇರುವುದನ್ನು ನೋಡಿದಾಗ, ಈ ರಾತ್ರಿ ಭೇಟಿಗೆ ನಿಮ್ಮನ್ನು ಹುರಿದುಂಬಿಸಿರೋದು ನಿಮ್ಮ ಸೊಸೇನೆ ಇರಬೇಕು. ಎಂದು ನಾನು ಅಶ್ಚರ್ಯಪಡುತ್ತಿದ್ದೆ." "ಅವಳು ನಮ್ಮ ಮರ್ಯಾದೆ ಕಳೆದಿದ್ದಾಳೆ. ನಮ್ಮ ಮಾನ, ಮರ್ಯಾದೆ ನಮ್ಮ ಹೆಸರಾಂತ ಮನೆತನ ಎಲ್ಲವೂ ಮಣ್ಣು ಪಾಲಾಗಿದೆ. ಚಿತ್ತೂರು ಹತ್ತಿಕೊಂಡು ಉರಿಯುತ್ತಾ ಇದ್ದರೆ, ನಿನ್ನ ಆ ಕುಣಿತದ ಹುಡುಗಿ ನಾಟ್ಯ ಮುಂದುವರೆಸಿದ್ದಾಳೆ."

ಹೊಸ ಶಬ್ದಕ್ಕೆ ಬೇರೇನಾದರೂ ಬಳಸಿ ತಾಯಿ, ಇಲ್ಲಿ ಇನ್ನೂರು ವರ್ಷಗಳ ಹಿಂದೆ ಅಲ್ಲಾವುದ್ದೀನ್ ಖಿಲ್ಜಿ ಚಿತ್ತೂರನ್ನು ವಶಪಡಿಸಿಕೊಂಡ ದಿನ ರಾಣಿ ಪದ್ಮಿನಿ ಮತ್ತು ಅವಳ ಸಖಿಯರು ಚಿತೆಗೆ ಹಾರಿದಂದು ಕೊನೆಯ ಜಾಲ್ವೆಗಳನ್ನು ಆರಿಸಲಾಗಿತ್ತಾದರೂ ಈಗ ಇಲ್ಲಿ ಬೆಂಕಿ ಇಲ್ಲ. ರೋಮ್ ನಗರ ಹೊತ್ತಿಕೊಂಡು ಉರಿಯುತ್ತಿದ್ದಾಗ ಚಕ್ರವರ್ತಿ ನೀರೋ ಪೀಟಿಲು ಬಾರಿಸುತ್ತಾ ಇದ್ದ ಎಂಬ ಮಾತನ್ನು ಬಳಸಿದ್ದು, ಸಮುದ್ರಾಚೆಯಿಂದ ಬಂದ ವಿದೇಶಿಯ ಎಂದು ನನ್ನ ನಂಬಿಕೆ.

ನಮ್ಮಿಬ್ಬರ ಸಂಭಾಷಣೆಗೆ ಮೂಕ ಪ್ರೇಕ್ಷಕನಾಗಿದ್ದ ನಪಂಸಕ ಬೃಹನ್ನದನ ತುಟಿಗಳ ಮೇಲೆ ಕಿಂಚಿತ್ ಪ್ರತಿಷ್ಠಾದ್ಯೋತಕ ಅಪ್ರಸನ್ನತೆಯ ಮುಗುಳ್ನಗೆ ಕಾಣಿಸಿತು. ಒಂದು ವೇಳೆ ರಾಣಿ ಕರ್ಮವತಿ ಈ ವಿಷಯಗಳನ್ನೆಲ್ಲಾ ಅವನ ಮುಂದೆ ಪ್ರಸ್ತಾಪಿಸಿರದಿದ್ದರೆ ಅಥವಾ ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಥವಾ ನನ್ನ ಹೆಂಡತಿಗೆ ಸಂಬಂಧಿಸಿದ ವಿಷಯ ಚರ್ಚೆ ಮಾಡುವ ಸಮಯದಲ್ಲಿ ತಾನು ಅಲ್ಲಿ ಇರಬಾರದು ಎನ್ನುವಷ್ಟು ಔಚಿತ್ಯವನ್ನು ತೋರಿಸಿದ್ದರೆ ಅದನ್ನು ನಾನು ತುಂಬ ಮೆಚ್ಚುತ್ತಿದೆ. ಆದರೆ ಅದು ಬರೀ ನನ್ನ ಭ್ರಾಂತಿ ಅಷ್ಟೆ. ಚಿತ್ತೂರಿನಲ್ಲಾಗಲಿ, ಅರಮನೆಯಲ್ಲಾಗಲಿ ನಪುಂಸಕ ಪಾಲ್ಗೊಳ್ಳದೆ ಯಾವ ವ್ಯವಹಾರವೂ ನಡೆಯುವುದಿಲ್ಲ. ಅವನು ಚತುರ, ಕುಟಿಲ ಮತ್ತು ನನಗೆ ಕೆಲವು ಸಲ ಅನ್ನಿಸುವುದೇನು ಅಂದರೆ ಅವನು ಮಹಾರಾಣಿಯ ದುಷ್ಟ ಪ್ರತಿಭೆ. ಅವನ ಶಿಷ್ಟಾಚಾರದ ನಡವಳಿಕೆ ನಿರ್ದುಷ್ಟವಾದ್ದು. ಅಲ್ಲದೆ ಶಿಷ್ಟಾಚಾರವು ಜೇಷ್ಠ ರಾಜಕುಮಾರನಿಗೆ ಎಷ್ಟು ವಿನಯದ ನಡೆ ಸಲ್ಲಬೇಕೆಂದು ಹೇಳುತ್ತದೋ ಅಷ್ಟು ಕನಿಷ್ಠ ಮಾತ್ರದ ವಿನಯದ ನಡೆಯುನ್ನು ತೋರುವ ಎಚ್ಚರಿಕೆಯುನ್ನು ಯಾವಾಗಲೂ ತೋರುತ್ತಾನೆ. ನಾನು ಬೃಹನ್ನದನಿಗಿಂತ ಕಡಿಮೆ ಸಭ್ಯನೇನಲ್ಲ. ಅವನ ವಿಷಯಕ್ಕೆ ನನ್ನ ಹೃದಯ ಭಾವಶೂನ್ಯ. ಹಾಗಾಗಿ ಅವನ ಹೆಸರನ್ನು ಹೇಳುವುದಾಗಲಿ, ಅಥವಾ ಅವನೊಂದಿಗೆ ವ್ಯವಹರಿಸುವುದಾಗಲಿ ಮಾಡುವುದಿಲ್ಲ.

"ಕುಣಿತವೇ? ಸ್ನಾನದ ಮನೆಯಲ್ಲಿ ಹಾಡಿಕೊಳ್ಳುವುದು ಅಂತ ತಾನೆ ನಿಮ್ಮ ಅರ್ಥ?" ಒಂದು ಮಾತನ್ನೂ ಆಡಬಾರದು ಎಂದು ನಾನು ಶಪಥ ಮಾಡಿದ್ದೆ. ಆದರೆ ನನ್ನ ಮೌನ ವ್ರತವನ್ನು ತಲೆಕೆಳಗು ಮಾಡುವುದರಲ್ಲಿ ಮಹಾರಾಣಿಗೆ ಯಾವತ್ತೂ ಜಯ ಶತಃಸಿದ್ಧ.

"ನಿನ್ನ ಹೆಂಡತಿ ಹಾಡಿನಿಂದ ನಾಟ್ಯಕ್ಕೆ ಏರಿದ್ದಾಳೆ. ತ್ರಿದೇವ ಮಂದಿರದ ಮೊದಲನೇ ಮಹಡಿಯಲ್ಲಿ ಅವಳು ಕುಣಿಯುತ್ತಾ ಇದ್ದರೆ ಕೆಳಗಡೆಯಿಂದ ಜನರ ಗುಂಪುಗಳು, ಹಿಜಡಾಗಳು, ರಾಜಕುಮಾರರು, ರಾಜಕುಮಾರಿಯರು, ಆಳುಕಾಳುಗಳು ಮತ್ತು ರಾಣಿಯರು ಕೆಳಗಿನಿಂದ ಅದನ್ನೇ ನೋಡುತ್ತಿದ್ದರು. ಕಟಾಂಜನದ ರಂಧ್ರಗಳ ಸಂದಿಯ ಮೂಲಕ ಅದನ್ನೇ ನೋಡುತ್ತಿದ್ದವರಿಗೆ ಅವಳ ಲಂಗ ಮೇಲಕ್ಕೆ ಎಗರಿ ಹರಡಿಕೊಳ್ಳುವ ಅಪೂರ್ವ ದೃಶ್ಯ! ನನ್ನಂಥ ವಯಸ್ಸಾದವಳ ಕಣ್ಣುಗಳನ್ನೂ ಸೆರೆ ಹಿಡಿದು ನಿಲ್ಲಿಸುವಂಥ ನೋಟ!"

ತ್ರಿದೇವ ಮಂದಿರವನ್ನು ನಮ್ಮ ತಾತ ರೈಮಲ್, ಹತ್ಯಾರ ಉದಾನ ಸೈನ್ಯವನ್ನು ಸೋಲಿಸಿ ಪಟ್ಟಾಭಿಷಿಕ್ತನಾದಾಗ ನಮ್ಮ ಕುಟುಂಬದವರಿಗಾಗಿ ಕಟ್ಟಿಸಿದ್ದು. ಅದು ನನಗೆ ಅತ್ಯಂತ ಪ್ರಿಯವಾದ ದೇವಸ್ಥಾನಗಳಲ್ಲೊಂದು. ಹೆಚ್ಚಿಗೆ ವಿವರಿಸಬೇಕಾಗಿಲ್ಲ. ಅತ್ಯಂತ ಸೂಕ್ಷ್ಮವಾದ ಕೆತ್ತನೆ ಕೆಲಸ ಮಾಡಲಾಗಿದೆ. ಆದರೆ ಅತಿ ಇಲ್ಲ. ಪ್ರಶಾಂತವಾದ ವಿವಿಕ್ತ ದೇವಾಲಯ. ಅದು ಅಂತಸ್ತುಗಳುಳ್ಳ ದೇವಾಲಯ. ನೆಲ ಅಂತಸ್ತಿನಲ್ಲಿ ಏಕಲಿಂಗೇಶ್ವರ, ಕೃಷ್ಣ ಮೊದಲ ಅಂತಸ್ತಿನಲ್ಲಿ ಮತ್ತು ಸೂರ್ಯದೇವ ಎರಡನೇ ಅಂತಸ್ತಿನಲ್ಲಿ.

"ನನ್ನ ತಮ್ಮ ವಿಕ್ರಮಾದಿತ್ಯನಿಗೆ ಪ್ರಮುಖ ಪಾರ್ಶ್ವದ ಆಸನಗಳಿದ್ದುವು ಎಂದು ಬಾಜಿ ಕಟ್ಟುತ್ತೇನೆ."

"ಅವನನ್ನು ಇದರಲ್ಲಿ ಸೇರಿಸಬೇಡ. ಈಗ ನಾವು ಚರ್ಚಿಸುತ್ತ ಇರುವುದು ಅವನ ವಿಷಯ ಅಲ್ಲ. ಕುಣತದವಳ ವಿಷಯ. ಅಲ್ಲದೆ ಒಂದು ವೇಳೆ ಅವನ ಹೆಂಡತಿ ಏನಾದರೂ ನೃತ್ಯ ಮಾಡುತ್ತ ಇದ್ದರೆ ನೀನು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದೆ"

"ಅವಳಿಗಿನ್ನೂ ಹದಿನಾಲ್ಕು ವರ್ಷ ಕೂಡ ಆಗಿಲ್ಲ."

"ಅವಳ ವಯಸ್ಸಿನಿಂದ ಏನು ವ್ಯತ್ಯಾಸವಾಗುತ್ತದೆ? ನಿಮಗೆ ಗಂಡಸರಿಗೆ ವಯಸ್ಸಾಗುತ್ತಿದ್ದ ಹಾಗೆಲ್ಲ ಯವ್ವನದ ಸುಖಗಳೇ ಬೇಕು. ನಿಮ್ಮ ಚಿಕ್ಕಪ್ಪಂದಿರನ್ನು ನೋಡು. ಅವರಿಗೆಲ್ಲ ಮೈ ನೆರೆಯದ ಹುಡುಗಿಯರೇ ಬೇಕು."

ಇದು ನಿಜವೆ? ನಾನೂ ಅವರ ಹಾಗೇ ಪರ್ಯವಸನವಾಗಿ ಬಿಡಲೆ?

"ನಮ್ಮ ಕುಟುಂಬವನ್ನು ಅವಳು ರಾಜಾಸ್ತಾನದ ನಗೆ ಪಾಟಲಿಗೆ ಗುರಿ ಮಾಡುವುದಕ್ಕೆ ಮುಂಚೆ ಅವಳನ್ನು ನೀನು ಬಿಟ್ಟು ಬಿಡು."

* * *

ನನ್ನ ಪಾದರಕ್ಷೆಗಳನ್ನು ಕಳಚಲು ಅವಳು ನನ್ನ ಪಾದವನ್ನು ತನ್ನ ಮಂಡಿಯ ಮೇಲೆ ಇರಿಸಿಕೊಂಡಳು. ನಾನು ಅದನ್ನು ಮೇಲಕ್ಕೆ ಎತ್ತಿ ಅವಳ ಮುಖವನ್ನು ಮೇಲೆತ್ತಿದೆ. ಅವಳು ತನ್ನ ಕಣ್ಣುಗಳನ್ನು ಕೆಳಗೆ ಹಾಕಲಿಲ್ಲ.

"ನೀನು ನಿಜಕ್ಕೂ ನೃತ್ಯ ಮಾಡಿದೆಯಾ"

"ನನಗೆ ನೆನಪಿಲ್ಲ"

ನನ್ನ ಪಾದ ಫಟ್ಟನೆ ಅವಳ ಮುಖವನ್ನು ಅಪ್ಪಳಿಸಿತು. ಅದೇನು ತುಂಬ ಭಾರಿಯಾದ ಏಟಲ್ಲ. ಆದರೆ ಅದು ಅವಳನ್ನು ನೆಲಕ್ಕೆ ಬೀಳಿಸಿತು. ನೀರಿನ ಪಾತ್ರೆಯ ಮುಚ್ಚಳ ಹಲವಾರು ಸಲ ಉರುಳಿ ಸದ್ದು ಮಾಡುತ್ತ ನಿಂತಿತು. ಅವಳ ಕೆಳತುಟಿ ಹರಿಯಿತು. ಅವಳ ರವಿಕೆಗೆ ರಕ್ತದ ಕಲೆ ಹತ್ತಿತ್ತು. ನೀರಿನ ಪಾತ್ರೆಯಿಂದ ಚೆಲ್ಲಿದ ನೀರು ಅವಳ ಒಳಲಂಗದ ಹಿಂಭಾಗವನ್ನು ಒದ್ದೆ ಮಾಡಿತು. ಅವಳು ಪುನಃ ನನ್ನ ಪಾದವನ್ನು ಕೈಗಳಿಂದ

ಎತ್ತಿಕೊಂಡು ಪಾದರಕ್ಷೆಯನ್ನು ಕಳಚಿದಳು. ನಂತರ ನನ್ನ ಕಾಲ್ಬೆರಳನ್ನು ಮೊದಲಿಗೆ ಎಡಗಣ್ಣಿಗೆ ನಂತರ ಬಲಗಣ್ಣಿಗೆ ಒತ್ತಿಕೊಂಡಳು. ನಾನು ಅವಳ ದೈವ ಮತ್ತು ಯಜಮಾನನಾದ್ದರಿಂದ ತಲೆ ಬಾಗಿ ಪ್ರಣಾಮ ಮಾಡುವುದರ ಹೊರತು ಬೇರೆ ರೀತಿ ಮಾಡಳು. ಏನು, ಏಕೆ ಎಂದು ಕೇಳಲಿಲ್ಲ, ನೊಂದಂತೆ ಕಾಣಲಿಲ್ಲ. ಅಥವಾ ತುಟಿಯ ಮೇಲಿನ ರಕ್ತವನ್ನು ಒರೆಸಿಕೊಳ್ಳಲಿಲ್ಲ. ನಾನು ಅವಳನ್ನು ಮತ್ತೆ ಒದ್ದೆನೆ ಇಲ್ಲವೆ ಎಂಬುದರ ಬಗ್ಗೆ ಅವಳು ತಲೆ ಕೆಡಿಸಿಕೊಳ್ಳಲಿಲ್ಲ.

ನಾನು ತುಂಬ ನರಳಿರಬೇಕು.

"ನಿಮಗೆ ಏಟಾಯಿತೆ?" ನನ್ನ ಹಣೆಯನ್ನು ಒರೆಸುತ್ತ ಕೇಳಿದಳು. ಅವಳ ಹಸ್ತ ಸ್ಪರ್ಶದಿಂದ ನಾನು ಬೆಚ್ಚಿದೆ. ಮಾನವರ ಹಸ್ತ ಎಂದಾದರೂ ಅಷ್ಟೊಂದು ಸಾಂತ್ವನಕಾರಿಯಾಗಿರುವುದುಂಟೆ? ನಾನು ಅವಳ ಹೆಗಲಿನಿಂದ ಅವಳ ತೋಳನ್ನು ತಿರುಚಿ ಕಿತ್ತು ಕೋಟೆಯಿಂದ ಆಚೆಗೆ ಎಸೆದು ಬಿಡಬಹುದಿತ್ತು. ಜಲಪಾತ್ರೆಯನ್ನು ಕೈಗೆತ್ತಿಕೊಂಡು ಹೊರಹೋಗಿ ಮತ್ತೆ ಅದರ ತುಂಬ ನೀರು ತುಂಬಿಕೊಂಡು ಬಂದಳು. ಅವಳು ನನ್ನ ಅಂಗವಸ್ತ್ರದ ಗುಂಡಿಗಳನ್ನು ಬಿಚ್ಚತೊಡಗಿದಳು. ನಾನು ಕೋಪದಿಂದ ಹೊರನಡೆದೆ. ಆದರೆ ನನ್ನ ನಾಟಕೀಯ ನಿರ್ಗಮನವನ್ನವಳು ಗಮನಿಸಿರಲಾರಳು ಎಂಬುದು ಖಂಡಿತ.

ಕುದುರೆಯ ಲಾಯಕ್ಕೆ ಹೋಗಿ ನಿದ್ರಿಸುತ್ತಿದ್ದ ಕಾಸ್ತಾರರನ್ನು ಎಬ್ಬಿಸಿ 'ಬೇಫಿಕಿರ'ನಿಗೆ ಜೀನು ಹಾಕುವಂತೆ ಹೇಳಿದೆ. ಮಂಗಳನು ನನ್ನ ಹಿಂದೆಯೇ ಧಾವಿಸಿ ಬಂದನು. ಅವನು ಕಕ್ಕಾಬಿಕ್ಕಿಯಾದವನಂತೆ ಮತ್ತು ನಂಬಿಕೆ ಬರದವನಂತೆ ಕಂಡ. ನನ್ನ ಹಠಾತ್ ನಿರ್ಗಮನಗಳು ಮತ್ತು ನನ್ನ ಮನಸ್ಥಿತಿಯ ಅನಿರೀಕ್ಷಿತ ತೊನೆದಾಟಗಳು ಅವನನ್ನು ಸಾಕುಗೊಳಿಸಿರಬೇಕು. ಆದರೆ ಅವನ ಆತಂಕಗಳು ಬೇರೆಯೇ ದಿಕ್ಕು ಹಿಡಿದಿದ್ದುವು.

"ನಾನು ಅವಳನ್ನು ಏನು ಮಾಡಬೇಕು?" – ಅವನು ಮೃದುವಾಗಿ ಪ್ರಶ್ನಿಸಿದ.

ಅವನ ಧಾರ್ಷ್ಟ್ಯವನ್ನು ನಾನು ಬಾಯಿ ಬಿಟ್ಟುಕೊಂಡು ನೋಡಿದೆ. ಅವಳ ಮೇಲೆ ನಾನು ಕೋಪಿಸಿಕೊಂಡಿರಬಹುದು, ಆದರೆ ಅವಳು ನನ್ನ ಹೆಂಡತಿ. ಅವಳ ಬಗ್ಗೆ ತಲೆಕೆಡಿಸಿಕೊಳ್ಳಲು ಅವನಿಗೆ ಎಷ್ಟೊಂದು ಧೈರ್ಯ:

"ನೀನು ಯಾರ ವಿಷಯ ಹೇಳುತ್ತಾ ಇದ್ದೀಯಾ?" – ನಾನು ಒರಟಾಗಿ ಕೇಳಿದೆ.

"ಅದೇ ನೀವು ಆ ದಿನ ನ್ಯಾಯಾ ಸ್ಥಾನದಲ್ಲಿ ನೋಡಿದ್ದಿರಲ್ಲ ಅವಳ ಬಗ್ಗೆ".

"ಯಾವ ಹೆಂಗಸು? ಅವಳ ಪ್ರಕರಣದ ಬಗ್ಗೆ ವಿಚಾರಿಸಲು ಗುರುವಾರದ ತನಕ ಕಾಯೋದಕ್ಕೆ ಅವಳಿಗೆ ಸಾಧ್ಯವಿಲ್ಲವೇನು?"

"ತನ್ನ ಹೆಂಡತಿ ತನಗೆ ನಿಷ್ಠಳಾಗಿಲ್ಲವೆಂದು ಅವಳ ಗಂಡ ದೂರು ತಂದಿದ್ದನಲ್ಲ ಅವಳ ಬಗ್ಗೆ" – ಅವನು ಇನ್ನೂ ಪಿತೂರಿ ನಡೆಸುತ್ತಿರುವವರ ದನಿಯಲ್ಲೇ ಮಾತನಾಡಿದ.

"ನಾನು ಅವಳ ಬಗ್ಗೆ ಅಲ್ಲ ಕೇಳಿದ್ದು?"

"ಅದು ನನಗೆ ಗೊತ್ತು. ಆದರೆ ಮಹಾಸ್ವಾಮಿಯವರು ಬಹುಶಃ ಒಂದು ಹೊಸ ಮುಖವನ್ನು ಅನುಭವಿಸಲು ಇಚ್ಛಿಸುತ್ತಾರೇನೋ ಎಂದು ನನ್ನ ಯೋಚನೆ"

"ಅವಳು ಬರಲು ಇಚ್ಛಿಸಿದಳೇನು?" ಹಳೆಯ ನಂಬಿಕಸ್ಥ ಸೇವಕರೊಂದಿಗೆ ಇರುವ ಕಷ್ಟವೆಂದರೆ ಇದೇ. ನಿಮಗಿಂತಲೂ ನಿಮ್ಮ ಮನಸ್ಸನ್ನು ತಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ ಎಂದು ಅವರು ಅಂದುಕೊಂಡು ಬಿಟ್ಟಿರುತ್ತಾರೆ.

"ಸಂತೋಷದಿಂದ"

"ಅವಳ ಗಂಡನ ವಿಷಯ ಏನು"? - "ಒಂದು ವೇಳೆ ಈ ಮೊಕದ್ದಮೆಯಲ್ಲಿ ತನ್ನ ಹೆಂಡತಿಯೊಂದಿಗೆ ವ್ಯಭಿಚಾರ ಮಾಡಿದವನು ಎಂದು ನನ್ನನ್ನು ಅವನು ಸಹ ಪ್ರತಿವಾದಿಯಾಗಿ ಪ್ರಸ್ತಾಪಿಸಿದರೆ ಏನು ಮಾಡುವುದು?"

"ಅವನು ಇಡೀ ರಾತ್ರಿ ಹೊರಗಡೆ ಇರುತ್ತಾನೆ. ಅವನನ್ನು ರಸಿಕಾಬಾಯಿ ಹತ್ತಿರ ಪರೀಕ್ಷಿಸಲಾಗುತ್ತದೆ."

"ಮಂಗಳ್, ನೀನೊಬ್ಬ ಗುಳ್ಳೇನರಿ. ಅವಳೊಂದು ವೇಳೆ ಕಂಡಕಂಡವರ ಜೊತೆ ಮಲಗುವಂಥವಳಾಗಿದ್ದು ಏನಾದರೂ ಖಾಯಿಲೆ-ಗೀಯಲೆ ಇದ್ದರೆ ಏನು ಮಾಡುವುದು?"

"ನನ್ನನ್ನು ನಂಬಿ ಮಹಾಸ್ವಾಮಿ"

"ಏನು ಹಾಗಂದರೆ? ಶಬರಿಯ ಹಾಗೆ ನಿನ್ನ ಒಡೆಯನಿಗಿಂತ ಮುಂಚೆ ನೀನು ಹಣ್ಣಿನ ರುಚಿಯನ್ನು ನೋಡಿದ್ದೀಯೇನು?"

"ಮಹಾಸ್ವಾಮಿಯವರನ್ನು ಎಷ್ಟು ಕೊಂಡಾಡಿದರೂ ಸಾಲದು. ತಾವು ನಗುವುದನ್ನು ಮತ್ತು ತಮಾಷೆ ಮಾಡುವುದನ್ನು ಪೂರ್ತಿ ಬಿಟ್ಟು ಬಿಟ್ಟೇದ್ದೀರಿ ಅಂತ ಭಾವಿಸಿದ್ದೆ."

"ನೀನು ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ"

"ಅವಳು ಕನ್ಯೆ"

"ಓಹ್! ಸಾಧ್ಯವೇ ಇಲ್ಲ. ದಯವಿಟ್ಟು ಕನ್ಯೆ ಅಂತ ಹೇಳಬೇಡ." ನನ್ನ ಮುಖದಲ್ಲಿ ಕಾಣಿಸಿದ ಗಾಬರಿಯನ್ನು ಅವನು ಅರ್ಥ ಮಾಡಿಕೊಂಡ. ಆದರೆ ಅದನ್ನು ಧರ್ಮ ಸೂಕ್ಷ್ಮ ಎಂದು ಭಾವಿಸಿದ.

"ತನ್ನ ಮುಗ್ಧತೆಯನ್ನು ಕಳೆದುಕೊಳ್ಳಲು ಕಾತರಳಾಗಿದ್ದಾಳೆ. ಅವಳನ್ನು ಚಂದ್ರಮಹಲ್‌ನಲ್ಲಿ ಬಿಟ್ಟು ಬಂದಿದ್ದೀನಿ"

"ಅವಳನ್ನು ಅರಮನೆಯ ಒಳಕ್ಕೆ ಕಳಿಸಿಕೊಡು." ಕಾದ ಕಬ್ಬಿಣದ ಸಲಾಕೆಯಿಂದ ನಾನು ಅವನನ್ನು ಸುಟ್ಟು ಬಿಟ್ಟೆನೇನೋ ಎನ್ನುವ ಹಾಗೆ ಮಂಗಳ್ ನನ್ನ ಕಡೆ ನೋಡಿದ.

"ಆದರೆ ನನ್ನ ಧಣಿ ರಾಜಕುಮಾರರೇ ಅದು ತುಂಬ ಹೆಚ್ಚಾಯಿತಲ್ಲವೆ"

"ನಾನು ಹೇಳಿದ್ದು ಕೇಳಿಸಿತಲ್ಲ." ಕೊನೇ ಪಕ್ಷ ಇವಳು ಈಗ ಮನೆಯಲ್ಲಿ ಇರುವವಳ ಹಾಗೆ ಕುಣಿತದ ಹುಡುಗಿಯಲ್ಲ "ಏನವಳ ಹೆಸರು?"

"ಸುನೇರಿಯಾ"

ಕುದುರೆಯ ಆಳು ಮಲಗುವುದಕ್ಕೆ ಹೊರಟು ಹೋಗಿದ್ದ. ನಾನು ಅವನನ್ನು ಕಾಲಿನಿಂದ ಒದ್ದೆ. ತೀರಾ ಜೋರಾಗೇನಲ್ಲ. ಅವನು ಎದ್ದು ಕಕ್ಕಾಬಿಕ್ಕಿಯಾದವನಂತೆ ಕಂಡ. ಕಾವಲಿನವನು ಮಧ್ಯರಾತ್ರಿ ಸೂಚಕ ಗಂಟೆ ಹೊಡೆದ. ಪಹರೆಯವನು ಗಟ್ಟಿಯಾಗಿ "ಎಚ್ಚರವಾಗಿರಿ" ಎಂದು ಕಿರುಚಿದ.

"ನೀನು ಕುದುರೆಗೆ ಇನ್ನೂ ಜೀನು ಹಾಕಿದ್ದೀಯೋ ಇಲ್ಲವೋ"

"ಹಾಕಿದ್ದೇನೆ ಒಡೆಯ"

"ಹಾಗಾದರೆ ಏತಕ್ಕೋಸ್ಕರ ಕಾಯುತ್ತಾ ಇದ್ದೀಯಾ? ಅದನ್ನು ಭದ್ರವಾಗಿ ಹಿಡಿದುಕೋ"

ಒಂದು ನಿಮಿಷದಲ್ಲಿ ಮಂಗಳನೂ ನನ್ನ ಜೊತೆ ಹತ್ತಿಕೂತ. ನಾವಿಬ್ಬರೂ ಕೋಟೆಯಿಂದ ಆಚೆಗೆ ಸವಾರಿ ಹೊರಟೆವು. ಸೂರಜ್ ಪೋಲ್‌ನ ಹತ್ತಿರ ಇರುವ ಕಾವಲಿನವನು ನಾನು

ಸಂಕೇತಾಕ್ಷರಗಳನ್ನು ಹೇಳದ ಹೊರತು ಹೋಗಲು ಬಿಡುವುದಿಲ್ಲ. ಕಳೆದ ವರ್ಷದಿಂದ ರಕ್ಷಣೆಯನ್ನು ಬಿಗಿಗೊಳಿಸುವ ಸಲುವಾಗಿ ಪ್ರತಿಯೊಂದು ದ್ವಾರದಲ್ಲೂ ಬೇರೆ ಬೇರೆ ಸಂಕೇತಾಕ್ಷರಗಳನ್ನು ಹೇಳುವ ವ್ಯವಸ್ಥೆಯನ್ನು ರೂಢಿಗೆ ತಂದಿದ್ದೇವೆ. ಇತ್ತೀಚೆಗೆ ಅತ್ಯಧಿಕ ಸಂಖ್ಯೆಯ ಕಾವಲು ಭಟರು ಮತ್ತು ಗುಪ್ತಚರರು ಗಸ್ತು ತಿರುಗುತ್ತಿರುತ್ತಾರೆ. ನಾವು ದಾಟಿ ಹೋದ ಮೂರು ಕಾವಲು ದ್ವಾರಗಳ ಕಾವಲು ಭಟರನ್ನು ತರಾಟೆಗೆ ತೆಗೆದುಕೊಳ್ಳಬೇಕು. ಅವರ ಮುಖದ ಮೇಲಿನ ಹುಸಿನಗೆಯನ್ನು ನಾವು ನೋಡಿರಬೇಕು. ಪಕ್ಕದ ಊರಿಗೆ ನಾವು ವ್ಯಭಿಚಾರದ ರಾತ್ರಿ ಸವಾರಿ ಹೊರಟಿದ್ದೀವಿ ಎಂದು ಅವರು ಅಂದುಕೊಂಡಿರಬೇಕೆಂಬುದಂತು ಖಚಿತ.

ಗಂಗಾ ಅತ್ಯಂತ ಪವಿತ್ರವಾದ ನದಿ ಇರಬಹುದು. ಅದು ಖಂಡಿತವಾಗಿಯೂ ತುಂಬ ದೊಡ್ಡ ನದಿ. ಆದರೆ ಅದು ನನ್ನ ನದಿಯಲ್ಲ. ಗಂಭೀರಾ ನದಿ ಚಿತ್ತೂರಿನ ಮಾತೆ ಮತ್ತು ಸ್ಮೃತಿಯಾದ್ದರಿಂದ ನನ್ನ ಮಾತೆ ಮತ್ತು ಸ್ಮೃತಿಯೂ ಹೌದು. ನಾನು ಹುಟ್ಟಿದಾಗ ನನ್ನನ್ನು ಅದರ ನೀರಿನಲ್ಲಿ ಮೀಯಿಸಿದರು. ದೈವೇಚ್ಛೆ ಇದ್ದಲ್ಲಿ ನನ್ನನ್ನು ಚಿತೆಯ ಮೇಲಿಡುವ ಮುನ್ನಾ ನನ್ನ ದೇಹವನ್ನು ಅದರ ನೀರಿನಿಂದ ಶುದ್ಧಗೊಳಿಸುವರು. ನನ್ನೆಲ್ಲಾ ಕೃತ್ಯಗಳ ನನ್ನ ಅಂತರಾಳದ ಆಲೋಚನೆಗಳ ಮತ್ತು ನನ್ನ ಆತ್ಮವನ್ನು ಧ್ವಂಸಗೊಳಿಸುವ ನನ್ನೆಲ್ಲಾ ದ್ವಂದ್ವಗಳ ರಹಸ್ಯಗಳನ್ನು ಬಲ್ಲವಳು ಆ ಗಂಭೀರೆ. ಅವಳು ಯಾವುದರ ಬಗ್ಗೆಯೂ ತೀರ್ಪು ನೀಡುವುದಿಲ್ಲ. ಮತ್ತು ಅವಳ ಬಳಿ ಉತ್ತರಗಳಿಲ್ಲ. ಅವಳ ಪಾತ್ರವೇನಿದ್ದರೂ ಎಲ್ಲಕ್ಕೂ ಸಾಕ್ಷಿಯಾಗಿರುವುದು. ಆದರೆ ಯಾವುದರಲ್ಲೂ ಮಧ್ಯ ಪ್ರವೇಶಿಸಲಾರಳು. ಬಹುಶಃ ಅವಳಿಗೆ ತನ್ನ ಅಭಿಪ್ರಾಯಗಳಿರುತ್ತವೆ: ಅಷ್ಟೇ ಅಲ್ಲ ಅವಳದ್ದೇ ಆದ ವಿಚಾರಗಳಿರುತ್ತವೆ, ಆದರೆ ತನ್ನ ನಾಲಿಗೆಯನ್ನು ಸದಾ ಬಿಗಿ ಹಿಡಿದಿರುತ್ತಾಳೆ. ನೀವು ಹಾಡುಗಳನ್ನು ಕೇಳುವುದನ್ನು ನಿಲ್ಲಿಸಿದ ಮೇಲೆ ಅವು ಎಲ್ಲಿ ಹೋಗುತ್ತವೆ? ಸಂಧ್ಯಾ ಸಮಯದಲ್ಲಿ ಸಹಸ್ರಾರು ಹಕ್ಕಿಗಳು ಗರಿಗೆದರುತ್ತ ತಮ್ಮ ಗೂಡಿನತ್ತ ಹಾರಿದ ಮೇಲೆ ಗಾಳಿಯ ಪ್ರಕ್ಷುಬ್ಧತೆ ಅದೆಲ್ಲಿ ಮಾಯವಾಗುತ್ತದೆ? ತಮ್ಮ ಕೆಂಪು ಅಂಗೈಗಳನ್ನು ಗೋಡೆಗಳ ಮೇಲೆ ಅಚ್ಚೊತ್ತುತ್ತ ಚಿತೆಗೆ ಹಾರುತ್ತಿದ್ದ ರಜಪೂತ ಸ್ತ್ರೀಯರ ಚೀರಾಟ ಎಲ್ಲಿ ಹೋದುವು?. ನನ್ನ ಬಾಲ್ಯ, ನನ್ನ ಮುರಿದ ಹಲಗೆ, ನನ್ನ ಕವಣೆ, ನಾನು ಸಾಕಿದ ಗಿಳಿ, ನನ್ನ ಯೌವನ, ನನ್ನ ಮೊದಲ ಪಾಪ ಅದರ ಬೆನ್ನ ಹಿಂದೆಯೇ ಆದಂಥವು – ಇವೆಲ್ಲ ಎಲ್ಲಿ ಹೋದುವು? ಎಲ್ಲಿ ನನ್ನ ಇಳಿ ವಯಸ್ಸು ಮತ್ತು ಮೆರ್ತಾದ ಹೆಣ್ಣನ್ನು ನಾನು ಮೊದಲು ಕಂಡದ್ದು ಎಲ್ಲಿ? ಗಂಭೀರೆಯನ್ನು ಕೇಳಿ. ಅವಳಿಗೆ ಎಲ್ಲ ಗೊತ್ತು. ನಾವೆಲ್ಲ ಸುರಕ್ಷಿತವಾಗಿದ್ದೇವೆ. ಏಕೆಂದರೆ ಗಂಭೀರೆ ತನ್ನ ಗುಟ್ಟುಗಳನ್ನೆಲ್ಲ ತನ್ನಲ್ಲಿಯೇ ಇಟ್ಟುಕೊಂಡಿರುತ್ತಾಳೆ. ಅವಳ ಹೆಸರೇ ಸೂಚಿಸುವಂತೆ ಅವಳು ಗಂಭೀರೆ, ವಿಷಣ್ಣೆ ಮತ್ತು ಧ್ಯಾನಶೀಲೆ.

ನದಿಯ ಮೇಲೆ ಮಂಜುಕವಿದಿದೆ. ಗಾಳಿ ಕುಂಟುತ್ತಿದೆ. ಚಂದ್ರನು ಭೀಕರ ಮೋಡಗಳಲ್ಲಿ ಸೋಮಾರಿಯಂತೆ ಅಂಡಲೆಯುತ್ತಿದ್ದಾನೆ. ನಾನು ಬಟ್ಟೆಗಳನ್ನು ಕಳಚಿ ಸ್ತೋತ್ರಗಳನ್ನು ಹೇಳುತ್ತಾ ಗಂಭೀರೆಗೆ ಜಾರಿಕೊಳ್ಳುತ್ತೇನೆ. ನೀರು ಕಪ್ಪಗೆ ಶೈತ್ಯದಿಂದ ಕೂಡಿದೆ. ಕಲ್ಲಿನ ಹಾಗೆ ನೀರಲ್ಲಿ ಮುಳಗಿ ಹಾಗೇ ತೇಲುತ್ತ ಮುಂದುವರೆಯುತ್ತೇನೆ. ನದಿಯ ನೀರು ಛಟೀರೆಂದು ಸುತ್ತಲೂ ನನಗೆ ಹೊಡೆಯುತ್ತದೆ. ನನ್ನ ಮಾಂಸಖಂಡದ ಎಳೆಗಳು ಬಿಚ್ಚಿಕೊಳ್ಳುತ್ತವೆ. ನನ್ನ ಆಲೋಚನೆಯ ಸಿಕ್ಕುಗಳು ಸಡಿಲಾಗುತ್ತವೆ. ಕರಿಯ ವಿಸ್ಮೃತಿಗಳು ನನ್ನ ನರಗಳಲ್ಲಿ ಹರಿಯತೊಡಗುತ್ತವೆ. ಈ ರಾತ್ರಿ ನದಿಯ ಬಗ್ಗೆ ಎಚ್ಚರವಿರಲಿ. ನದಿಯಲ್ಲಿ

ಎತ್ತರಕ್ಕೆ ಬೆಳೆದುನಿಂತ ಜೊಂಡು ಅಂಕುಡೊಂಕಾಗಿ ತೊನೆದಾಡುತ್ತ ನನ್ನ ಕಾಲುಗಳನ್ನು ಸಿಕ್ಕಿಸಿಕೊಳ್ಳುತ್ತವೆ. ನದಿಯ ದಡದ ಮೇಲಿನ ಪ್ರಪಂಚವನ್ನು ಮರೆತು ಬಂದು ಬಿಡಲು ಕೂಗಿ ಕರೆಯುತ್ತವೆ. ಯಮನು ಈ ದಿನ ತನ್ನ ವಾಹನವಾದ ಕೋಣವನ್ನು ಏರಿ ಅನ್ಯ ಲೋಕಗಳತ್ತ ಸಂಚಾರ ಹೊರಟಿದ್ದಾನೆ. ಈ ನದಿ ಇನ್ಯಾರೂ ಅಲ್ಲ; ಅವನ ತಂಗಿ ಯಮಿ. ಅವಳು ಮೃತ್ಯು ಮೋಹಿನಿ. ಯಮಿಯ ಕರೆಗೆ ಇಲ್ಲ ಎನ್ನಬಲ್ಲವರಾರು? ಅವಳ ಸೋದರನು ಅವಳೊಂದಿಗೆ ಮಲಗುತ್ತಾನೆ.

ಕ್ಷುದ್ರ ದೆವ್ವಗಳು ನನ್ನನ್ನು ಕಾಣಲು ಮೇಲೇಳುತ್ತವೆ. ನನ್ನ ವಂಶದ ಪೂರ್ವಿಕರ ನೀರು ನೀರಾದ ಮುಖಗಳು ನೀರವವಾಗಿ ಅರಚುತ್ತವೆ. ಅವರ ಸ್ರಾವ ರೂಪಿ ಅಷ್ಟಪಾದಿ ತೋಳುಗಳು ನನ್ನತ್ತ ಚಾಚುತ್ತ ನನ್ನ ಸುತ್ತಲು ಸುತ್ತಿಕೊಳ್ಳುತ್ತವೆ. ಬಪ್ಪಾರಾವಲ್, ರಾಣಾಹಮೀರ್, ರಾಣಿ ಪದ್ಮಿನಿ, ಹತ್ಯಾರ ಅವರೆಲ್ಲರಿಗೂ ನನ್ನ ಹತ್ತಿರ ತುರ್ತು ಕಾರ್ಯವಿದೆ. ಆದರೆ ಅವರೆಲ್ಲರ ಅಪೇಕ್ಷೆಗಳ ಅಪಸ್ವರವನ್ನು ಅವರ ತುಟಿ ಚಲನೆಯಿಂದ ನಾನು ತಿಳಿಯಲಾರೆ. ಬಹುಶಃ ನಾನು ಇನ್ನಷ್ಟು ಪಾತಾಳದಾಳಕ್ಕೆ ಇಳಿದರೆ ಅವರಿಗೆ ಸಹಾಯ ಮಾಡಲು ಸಾಧ್ಯವಾಗಬಹುದು.

ಯಾರೋ ನನ್ನ ಇಷ್ಟಕ್ಕೆ ವಿರುದ್ಧವಾಗಿ ನನ್ನನ್ನು ಮೇಲಕ್ಕೆ ಎಳೆಯುತ್ತಿದ್ದಾರೆ. ಸುಳಿಗಳ ನೀರಿನ ಹಿಂಬರಿವಿನ ಅಲೆಗಳ ಸೌಮ್ಯ ಚಲನೆ ಯಾವತ್ತೂ ಮೋಸ ಮಾಡವಂಥದ್ದು. ಅದು ನನ್ನನ್ನು ಸುರುಳಿ ಸುರುಳಿಯಾಗಿ ನುಂಗುತ್ತ ಸದ್ದಿಲ್ಲದೆ ಸಾಯಿಸಿ ಬಿಡುತ್ತದೆ. ಮಂಗಳ್ ನನ್ನನ್ನು ಹೆಸರು ಹಿಡಿದು ಕೂಗುತ್ತಿರುವುದು ಈಗ ಕೇಳಿಸುತ್ತಿದೆ. ನಾನು ಅದಕ್ಕೆ ಓಗೊಡುತ್ತಿಲ್ಲ. ನದಿಯೇ ನನ್ನ ಸಮಾಧಿ ಸ್ಥಳ ಮತ್ತು ನನಗೆ ಮತ್ತೆ ದಡ ಮುಟ್ಟುವ ಇಚ್ಛೆ ಇಲ್ಲ. ಮಂಗಳನ ಕರೆಗಳಲ್ಲಿ ಅವಸರ ಮತ್ತು ಹತಾಶೆ ತುಂಬಿದೆ. ಅವನು ನನ್ನ ಪಾಡಿಗೆ ನನ್ನನ್ನು ಬಿಟ್ಟು ಹೋಗಲೆಂಬ ಬಯಕೆ ನನಗೆ. ಅವನು ನಾನಿರುವ ಜಾಗವನ್ನು ಗುರುತಿಸಿದ್ದಾನೆ. ಮತ್ತು ಮೇಲೆ ಬರಲು ಒತ್ತಾಯಿಸುತ್ತಿದ್ದಾನೆ. ಈಗ ಜೋರಾಗಿ ಮಳೆ ಸುರಿಯುತ್ತಿದೆ. ಮಳೆಯ ಹನಿಗಳು ನದಿಯ ಮೈಯನ್ನು ಸಾವಿರಾರು ಕಡೆಗಳಲ್ಲಿ ಚುಚ್ಚುತ್ತಿವೆ. ಮಳೆಯ ಹನಿಗಳು ನನ್ನ ಶರೀರವನ್ನು ಚುಚ್ಚಿ ಒಳಕ್ಕೆ ಹೋಗುತ್ತಿದ್ದಂತೆ ನನ್ನ ಚರ್ಮ ತೀವ್ರ ಯಾತನೆಗೊಳಗಾಗುತ್ತಿದೆ. ನಾನು ಎಚ್ಚತ್ತಿದ್ದೇನೆ. ಮಂಗಳನು ನಾನು ಮರಣ ಹೊಂದಿದ್ದೇನೇನೋ ಎಂಬಂತೆ ನನ್ನ ಹೆಸರು ಹಿಡಿದು ಕರೆಯುತ್ತಿದ್ದಾನೆ. ನೀರು ನಿಧಾನವಾಗಿ ನನ್ನನ್ನು ಆವರಿಸುತ್ತಿದೆ. ನನ್ನನ್ನು ಹಿಡಿದ ಭೂತಗಳಿಂದ ನಾನು ಬಿಡುಗಡೆ ಹೊಂದಿದ್ದೇನೆ. ಮೋಡಗಳಿಂದ ಚಂದ್ರನು ಹೊರಬಂದನು. ಗಂಭೀರೆಯು ಪರವಶಗೊಳಿಸುವ ನಿಧಾನ ರಜತ ಮೋಹಿನಿಯಾಗಿದ್ದಾಳೆ.

ನಾನು ಮತ್ತು ಮಂಗಳ ಇಬ್ಬರೂ ಕುದುರೆಯ ಬೆನ್ನೇರಿ ವಾಪಸ್ ಹೊರಟಾಗ ನನಗೆ ನದಿಯಲ್ಲಿ ಈಜಿದ ನೆನಪೇ ಇಲ್ಲ. ನನ್ನ ದೇಹ ನದಿಯ ಕರಿ ನೀರಿನ ಉಬ್ಬರವಿಳಿತವಾಯಿತು.

ನಾನು ಹಿಂತಿರುಗಿದಾಗ ಅರಮನೆಯಲ್ಲಿ ದೀಪಗಳು ಉರಿಯುತ್ತಿದ್ದವು. ಅದು ದೀಪಾವಳಿಯಂತೆ ಕಾಣುತ್ತಿತ್ತು. ಅವಳು ಎಚ್ಚತ್ತಿದ್ದಾಳೆ, ಅವಳು ಹಳದಿ ರೇಷ್ಮೆಯ ಲಂಗ ಮತ್ತು ಕೆಂಪು ದಾವಣಿಯನ್ನು ಧರಿಸಿದ್ದಳು. ಎಳೆಯ ಗರುಕೆಯ ಬಣ್ಣದ ರವಿಕೆ ಧರಿಸಿದ್ದಳು. ಮುದಿ ಅಗಸನ ಹೆಂಡತಿ ಸುನೇರಿಯಾಳನ್ನವಳು ನೂತನ ಕೆಂಪು ಕಿನ್‌ಕಾಪಿನ ವಸ್ತ್ರದಿಂದ ಅಲಂಕರಿಸಿ ನವ ವಧುವಿನಂತೆ ಕಾಣುವ ಹಾಗೆ ಮಾಡಿದ್ದಾಳೆ.

ಅಧ್ಯಾಯ 2

ಅದು ಅತ್ಯಂತ ಪ್ರಾಥಮಿಕ ನಿಯಮವೇ ಆದರೂ ಏಕೋ ಏನೋ ಬಹುಮಟ್ಟಿಗೆ ಯಾರೂ ಆ ನಿಯಮವನ್ನು ಪಾಲಿಸುವುದಿಲ್ಲ ಅನ್ನುವುದು ನನಗೊಂದು ಆಶ್ಚರ್ಯ. ಯಾವುದೇ ಒಂದು ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎಂದು ತಿಳಿದುಕೊಳ್ಳಬೇಕೆಂದರಾಗಲಿ ಅಥವಾ ಯಾವುದಾದರೊಂದು ಯೋಜನೆಯ ಕೆಲಸದ ಪ್ರಗತಿ ಹೇಗೆ ಸಾಗಿದೆ ಎಂದು ತಿಳಿದುಕೊಳ್ಳಬೇಕೆಂದರಾಗಲಿ, ಹೇಳದೆಯೇ ಹೋಗು. ಅದಕ್ಕೂ ಅವರು ಮೂತ್ರ ವಿಸರ್ಜನೆ ಮಾಡುವಾಗಲೋ, ಅಥವಾ ಅವರ ಕೈ ಗಲ್ಲಾಪೆಟ್ಟಿಗೆಯಲ್ಲಿರುವಾಗಲೋ ಅವರನ್ನು ಹಿಡಿಯುವುದಕ್ಕೂ ಸಂಬಂಧವೇ ಇಲ್ಲ. ಸರಳವಾಗಿ ಹೇಳುವುದಾದರೆ, ಜನ ಸಾಮಾನ್ಯರನ್ನು ಅವರು ಇರುವ ರೀತಿಯಲ್ಲೇ ಕಾಣುವ ವಿಧಾನ ಅದೊಂದೇ. ಸಾಮಾನ್ಯವಾಗಿ ಸಮರ್ಥರು ಅಥವಾ ಕಾಟಾಚಾರಕ್ಕೆ ಕೆಲಸ ಮಾಡುವವರಾಗಿರುತ್ತಾರೆ. ಮುಂಚೆಯೇ ಸೂಚನೆ ಕೊಟ್ಟು ಬಿಟ್ಟರೆ ವೈಭವದ ಸ್ವಾಗತಕ್ಕೆ ಕೆಂಪು ಹಾಸನ್ನು ಸಿದ್ಧಪಡಿಸಿ ದೊಡ್ಡ ಪ್ರದರ್ಶನವನ್ನೇ ಮಾಡಿಬಿಡುತ್ತಾರೆ. ನೀವು ಮುಖ್ಯ ಎಂದು ಅನ್ನಿಸಬೇಕೆಂಬುದಷ್ಟೆ ನಿಮ್ಮ ಇರಾದೆ ಆಗಿದ್ದರೆ, ಅವರನ್ನು ಕರೆದರೆ ಸಾಕು. ಅದು ಕಡಿಮೆ ಕಷ್ಟದ್ದು. ನಿಮ್ಮ ವ್ಯವಸ್ಥಾಪಕರೋ ಮಂತ್ರಿಗಳೋ ಕೆಲಸ ನಿಲ್ಲಿಸಿ ವಿಶ್ರಾಂತಿ ತೆಗೆದುಕೊಳ್ಳಲು ಮತ್ತು ವಾಸ್ತವಾಂಶಗಳನ್ನು ಸಮರ್ಥವಾಗಿ ತಿದ್ದಿಬಿಡಲು ತುಂಬ ಸಂತೋಷಿಸುತ್ತಾರೆ. ಹಾಗಾಗಿ ಅಹಿತಕರವಾದ ಇಲ್ಲದೆ ಸರಿಪಡಿಸಲಾಗದಂಥ ಸಮಸ್ಯೆಗಳ ಬಗ್ಗೆ ಮತ್ತೆಂದೂ ತಲೆಕೆಡಿಸಿಕೊಳ್ಳಬೇಕಾದ ಪ್ರಮೇಯವೇ ಬರುವುದಿಲ್ಲ. ವಂದಿಮಾಗಧರು ಅರಸನ ರಕ್ಷಣೆಗೆ ಸಂಬಂಧಿಸಿದಂತೆ ಮೊದಲ ಪಂಕ್ತಿಯಲ್ಲಿ ಬರತಕ್ಕವರು. ಸತ್ಯದಿಂದ ಅವರು ಅವನನ್ನು ರಕ್ಷಿಸುತ್ತ ಅವನ ಸುತ್ತಲೂ ಒಂದು ಜಾಲವನ್ನೇ ನೇಯ್ದು ಬಿಡುತ್ತಾರೆ. ಅದು ಎಲ್ಲಾ ಮಾಹಿತಿಯನ್ನು ಸೋಸುತ್ತದೆ. ಅಶುಭ ಸಮಾಚಾರಗಳನ್ನು ತಡೆಯುವದಷ್ಟು ಮಾತ್ರವಲ್ಲ ಅನೇಕ ವೇಳೆ ಒಳ್ಳೆಯ ಸಮಾಚಾರ ಮತ್ತು ಒಳ್ಳೆಯ ವ್ಯಕ್ತಿಗಳನ್ನು ಹೋಗಗೊಡುವುದಿಲ್ಲ. ದೊರೆ ನೋಡುವುದು ಮತ್ತು ಕೇಳುವುದೇನಿದ್ದರೂ ಅವರು ಯಾವುದನ್ನು ದೊರೆ ನೋಡಬೇಕೆಂದು ಮತ್ತು ಕೇಳಬೇಕೆಂದು ಬಯಸುತ್ತಾರೋ ಅದನ್ನು ಮಾತ್ರ. ಅಂತಿಮ ಸಮಯ ಬಂದು ನಮ್ಮ ಆಸನದ ಅಡಿಯಿಂದಲೇ ಅಧಿಕಾರವನ್ನು ಸೆಳೆಯಲಾಗುತ್ತಿದೆ ಎಂದಾಗ ಎದೆಗೆಡಬೇಡಿ. ನೀವು ಉರುಳುವುದು ಅತ್ಯಂತ ಶೀಘ್ರ.. ಮತ್ತದೆಂದೂ ಮಾರ್ಪಡಿಸಲಾಗದಂಥದ್ದಾಗಿರುತ್ತದೆ.

ಮತ್ತೆ ಸಮಸ್ಯೆ ಇರುವುದು, ಅವರಿಗೆ ಮರುಳಾಗದೆ ಸುದ್ದಿಯ ಎಲ್ಲಾ ಮಾರ್ಗಗಳನ್ನು ತೆರೆದಿಡುವುದು ಹೇಗೆಂಬುದು. ಆಕ್ಷೇಪಣೆಯ ಮೂಲಗಳನ್ನು ಸಾಂಸ್ಥಿಕಗೊಳಿಸುವ

ಮಾರ್ಗವೇನಾದರೂ ಇದೆಯೇ? ಒಂದು ವೇಳೆ ಇದ್ದರೂ ಅದರಿಂದೇನೂ ಅಷ್ಟು ಉಪಯೋಗವಿಲ್ಲ. ಕಾರಣ ಯಾವುದೇ ಒಂದು ಅಭಿಪ್ರಾಯವನ್ನಾಗಲಿ, ವಿಚಾರವನ್ನಾಗಲಿ ಅದನ್ನು ಅಲಕ್ಷ ಮಾಡುವುದರಲ್ಲಿ ಜನರು ಎಷ್ಟೊಂದು ಜಾಣರಾಗಿದ್ದಾರೆಂದರೆ ನಾವು ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಇರುವಷ್ಟು. ಆ ವಿಷಯದ ಬಗ್ಗೆ ನನಗೆ ಇನ್ನೇನಾದರೂ ವಿಚಾರ ಇಲ್ಲವೆ ಅಭಿಪ್ರಾಯಗಳಿವೆಯೇ? ಅಷ್ಟೇನೂ ಸಹಾಯಕ್ಕೆ ಬಾರದ ಒಂದು ಸಣ್ಣ ಅಂಶ ಬಿಟ್ಟರೆ ಅಂಥದ್ದೇನೂ ಇಲ್ಲ. ನಿಮ್ಮ ಸಂವಹನ ವ್ಯವಸ್ಥೆಯನ್ನು ಮುಕ್ತವಾಗಿಡಲು ಯಾರೂ ಸಹಾಯ ಮಾಡಲಾರರು. ನಿಮಗೆ ನೀವೇ ಅದನ್ನೆಲ್ಲಾ ಮಾಡಬೇಕಾಗುತ್ತದೆ. ಜನರನ್ನು ತಲುಪಬೇಕಾಗುತ್ತದೆ. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬೇರೆಯವರು ಹೇಳಿದ್ದನ್ನು ಆಲಿಸಬೇಕಾಗುತ್ತದೆ.

ಸೂರ್ಯ ಹುಟ್ಟುವುದಕ್ಕೆ ಮುಂಚೆಯೇ ಸೇನಾ ಕಾರ್ಯಚರಣೆ ಮತ್ತು ಸಮರ ತಂತ್ರಗಳ ಉನ್ನತ ಸಂಸ್ಥೆಯಲ್ಲಿ ಹಾಜರಾದೆನು. ತಂದೆಯವರ ಅತ್ಯಂತ ಹಳೆಯ ಮತ್ತು ಅತ್ಯಂತ ನಿಷ್ಠಾವಂತ ಅನುಯಾಯಿಯೊಬ್ಬರು ಅದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಜಯಸಿಂಹ ಬಲೇಚ್ ಅವರು ನಮ್ಮ ತಂದೆಯವರನ್ನು, ಅವರಿನ್ನೂ ಅರಸರಾಗಿರುವುದಕ್ಕಿಂತ ಮುಂಚೆಯೇ ವೇಷ ಮರೆಸಿಕೊಂಡು ಯಾರಿಗೂ ಕಾಣದೆ ಅಡಗಿಕೊಂಡಿದ್ದಾಗಲೇ ಬಲ್ಲವರಾಗಿದ್ದರು. ಸಿಂಹಾಸನವನ್ನು ಏರಿದ ಮೇಲೆ ತಂದೆಯವರು ಜಯಸಿಂಹ ಅವರಿಗೆ ಇಪ್ಪತ್ತು ಹಳ್ಳಿಗಳನ್ನು ಜಹಗೀರ್ ಆಗಿ ಬಿಟ್ಟುಕೊಟ್ಟು ರಾವತ್ ಪದವಿಯನ್ನು ದಯಪಾಲಿಸಿದರು.

"ಮಹಾಸ್ವಾಮಿಯವರೇ ಇದೇನಾಶ್ಚರ್ಯ" ರಾವತ್ ಮುಜುಗರಗೊಂಡಂತೆ ಕಂಡರು. ಜಯಸಿಂಹ ಅವರ ಸ್ವಾಮಿನಿಷ್ಠೆಯನ್ನಾಗಲಿ ಪ್ರಾಮಾಣಿಕತೆಯನ್ನಾಗಲಿ ನಾನು ಶಂಕಿಸಲು ಕಾರಣವೇ ಇಲ್ಲ. ನನ್ನದೊಂದು ಎಂದಿನ ಮಾಮೂಲಿ ಭೇಟಿಯಾಗಿತ್ತು. ಅವರು ಗಾಬರಿಗೊಳ್ಳಲು ಇಲ್ಲವೇ ಮುಜುಗರಪಡಲು ಕಾರಣವೇ ಇರಲಿಲ್ಲ.

"ನಮ್ಮ ಭಾವಿ ಸೇನಾನಾಯಕರು ಮತ್ತು ಸಮರ ತಂತ್ರಜ್ಞರು ಹೇಗಿದ್ದಾರೆ ಹೋಗಿ ನೋಡಿ ಬರೋಣವೆಂದು ಯೋಚಿಸಿದ್ದೆ." ನಾನು ಹೇಳಿದ್ದು ಪೂರ್ತಿ ನಿಜವಲ್ಲ. ನನ್ನ ಇಷ್ಟಕ್ಕೆ ವಿರುದ್ಧವಾಗಿ ರಾವತ್ ಅವರ ಸಮರ ತಂತ್ರ ತೀರಾ ಸಾಂಪ್ರದಾಯಿಕ ವಿಧಾನದ್ದು. ಅಲ್ಲದೆ ನಾನು ಇತ್ತೀಚಿನ ತಂತ್ರಜ್ಞಾನವನ್ನು ಒಳಗೊಳ್ಳುವ ಹಾಗೆ ಸಂಸ್ಥೆಯ ವ್ಯಾಪ್ತಿಯನ್ನು ವಿಸ್ತರಿಸಲು ಉತ್ಸುಕನಾಗಿದ್ದೆ. ಯುದ್ಧ ಸಾಮಗ್ರಿಗಳ ಬಳಕೆಯಲ್ಲಿ ಅರಬ್ಬರು, ತುರ್ಕರು, ಮತ್ತು ಪೋರ್ಚುಗೀಸರು ಸಾಧಿಸಿದ್ದ ಪ್ರಗತಿಯ ಬಗ್ಗೆ ಅವರಿವರು ಹೇಳುತ್ತಿದ್ದುದ್ದನ್ನು ಅಸ್ಪಷ್ಟವಾಗಿ ಕೇಳಿದ್ದೆ. ತಂದೆಯವರೊಂದಿಗೆ ಇದರ ಬಗ್ಗೆ ಚರ್ಚಿಸುವುದಕ್ಕೆ ಮುಂಚೆ ಈ ವಿಷಯದಲ್ಲಿ ರಾವತ್ ಅವರ ಬೆಂಬಲವನ್ನು ಪಡೆದುಕೊಳ್ಳಲು ನಾನು ಉದ್ದೇಶಿಸಿದ್ದೆ.

ನಾವು ಮೊದಲಿಗೆ ಬಯಲಿನಲ್ಲಿ ನಡೆದ ಸಮರಾಭ್ಯಾಸಗಳನ್ನು ವೀಕ್ಷಿಸಿದೆವು. ಅನಂತರ ಉತ್ಕೃಷ್ಟ ರೀತಿಯ ಮುತ್ತಿಗೆ ಏರ್ಪಾಟುಗಳ ಬಗ್ಗೆ ಷಫಿಖಾನ್ ಅವರ ತರಗತಿಯಲ್ಲಿ ಕುಳಿತುಕೊಂಡೆವು. ಗೊತ್ತಾದ ಪ್ರಕರಣಗಳ ಅಧ್ಯಯನ ಹಾಗೂ ಅದಕ್ಕೆ ಸಂಬಂಧಿಸಿದ ನಕ್ಷೆಗಳನ್ನು ಒಳಗೊಂಡ ಸರಳ, ಸ್ಪಷ್ಟ ಉಪನ್ಯಾಸ ಅದಾಗಿತ್ತು. ನಾವು ಅಲ್ಲಿಂದ ಇನ್ನೇನು ಹೊರಡಬೇಕೆನ್ನುವಾಗ, ಯುದ್ಧದಿಂದ ಸೈನ್ಯ ಹಿಮ್ಮೆಟ್ಟುವುದಕ್ಕೆ ಸಂಬಂಧಿಸಿದಂತೆ ವಿಧಾನಗಳು, ತಾಂತ್ರಿಕತೆಗಳ ಬಗ್ಗೆ ಏನಾದರೂ ತರಗತಿಗಳನ್ನು ನಡೆಸುವಿರಾ ಎಂದು ಷಫಿಖಾನ್ ಅವರನ್ನು ಕೇಳಿದೆ. ತರಗತಿಯಾದರೋ ನನ್ನ ಪ್ರಶ್ನೆಯನ್ನು ಅತ್ಯಂತ ಹಾಸ್ಯಾಸ್ಪದವಾದುದೆಂದು ಭಾವಿಸಿ ಗೊಳ್ಳೆಂದು ನಕ್ಕುಬಿಟ್ಟಿತ್ತು. ಅದೇ ಅಧ್ಯಾಪಕ ಷಫಿ ಅವರಾದರೋ ಈ ನನ್ನ

ಮಾತನ್ನು ತನ್ನ ಬೋಧನೆಯ ಬಗೆಗಿನ ಟೀಕೆಯೆಂದು ತಿಳಿದು ಅಸಮಾಧಾನದ ಮುನಿಸು ತಾಳಿದರು.

"ನಾನು ಆ ಪ್ರಶ್ನೆಯನ್ನು ಹಾಕಿದ್ದು, ನಿಮಗಲ್ಲ. ತಮಾಷೆಯ ಮನರಂಜನೆ ಸಿಗಲಿ ಎಂದಲ್ಲ. ಯುದ್ಧ ವ್ಯವಹಾರದಲ್ಲಿ ಒಂದು ಕಡೆಯುವರು ಸೋಲುತ್ತಾರೆ. ಇನ್ನೊಂದು ಕಡೆಯವರು ಗೆಲ್ಲುತ್ತಾರೆ ಎಂದು ತಿಳಿದು ನಿಮಗೆ ಸೋಜಿಗವಾಗಬಹುದು. ಯುದ್ಧದಲ್ಲಿ ಹಿಮ್ಮೆಟ್ಟುವ ಕಲೆಯನ್ನು ನೀವು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ್ದೇ ಆದರೆ ಜೀವಹಾನಿಯನ್ನು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಕಡಿಮೆ ಮಾಡಬಹುದು. ಅಷ್ಟೇ ಅಲ್ಲ; ಇನ್ನೊಂದು ಯುದ್ಧ ಮಾಡಲು ಜೀವಂತವಾಗಿ ಉಳಿಯಲೂಬಹುದು"

ಹಾಗೆ ಹೇಳಿದ ಕೂಡಲೇ ಅಧ್ಯಾಪಕರು ಸಮಾಧಾನಗೊಂಡರು ಮತ್ತು ವಿದ್ಯಾರ್ಥಿಗಳು ದಾರಿಗೆ ಬಂದರು. ಹೊಸ ಸಂಗತಿಯ ಪ್ರಸ್ತಾಪದಿಂದ ಅವರು ಮೋಡಿಗೊಳಗಾದರು ಎಂದೇನಲ್ಲ. ಆದರೆ ಕ್ರಮಬದ್ಧವಾದ ಸೈನ್ಯದ ಹಿಂತೆಗೆತದ ತಂತ್ರದ ಬಗೆಗಿನ ಚರ್ಚೆಯು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇಬ್ಬರಿಗೂ ಒಂದು ಹೊಸ ವಿಷಯವಾಗಿತ್ತು.

ಜಯಸಿಂಹರ ಹಠದ ಮೌನಕ್ಕೆ ಕಾರಣವೇನೆಂದು ನನಗೆ ಅಳೆಯಲಾಗಲಿಲ್ಲ. ಸಂಸ್ಥೆಯಲ್ಲಿ ಎಲ್ಲವೂ ಕ್ರಮಬದ್ಧವಾಗಿತ್ತು. ಅವರ ಈ ಮೌನವನ್ನು ಉಪೇಕ್ಷಿಸುವುದೇ ಸರಿ ಎಂದು ಭಾವಿಸಿದೆ. ಮತ್ತು ಅವರ ಕಛೇರಿಗೆ ಹೋಗುವಾಗ ನನ್ನ ಮನಸ್ಸಿನಲ್ಲಿರುವ ವಿಷಯಗಳನ್ನು ಪ್ರಸ್ತಾಪಿಸುವುದೆಂದುಕೊಂಡೆ. ಆದರೆ ಅಣೆಕಟ್ಟೆ ಅದಕ್ಕೆ ಮುಂಚೆಯೇ ಬಿರಿಯಿತು. ಅದೂ ಬರಿ ಜಿನುಗು. ಆ ಮನುಷ್ಯನ ದನಿ ಬರಿ ಪಿಸುದನಿಯಾಗಿತ್ತು. ಆದರೆ ನನಗೆ ಗೊತ್ತಿತ್ತು ಎಲ್ಲೋ ಭಾರೀ ತಪ್ಪಾಗಿತ್ತು.

"ಮಹಾಸ್ವಾಮಿ ಈ ಹೊತ್ತು ಬೆಳಿಗ್ಗೆ ನಾನೇ ಆಮೇಲೆ ಬರೋಣವೆಂದಿದ್ದೆ. ಬಹುಶಃ ನೀವು ನಿಮ್ಮ ಮನಸ್ಸನ್ನು ಬದಲಾಯಿಸಿಲ್ಲ ಎಂದು ತಿಳಿದಿದ್ದೇನೆ. ನಿಮ್ಮ ಅತಿಥ್ಯಕ್ಕೆ ಪ್ರತಿಯಾಗಿ ನನಗೂ ಅತಿಥ್ಯ ಮಾಡಲು ಅವಕಾಶ ನೀಡುತ್ತೀರೆಂದು ನಂಬಿದ್ದೇನೆ. ನನ್ನ ಜೊತೆಯಲ್ಲಿ ಊಟಕ್ಕೆ ಇರುತ್ತೀರಲ್ಲವೆ.?"

"ತಮ್ಮ ದಯೆ ನಾನು ತಮಗೆ ತುಂಬ ಕೃತಜ್ಞ. ಆದರೆ ನಾನು ಇರಲು ಸಾಧ್ಯವಿಲ್ಲ."

ಅವರ ದೇಹ ಕಂಪಿಸಿತು. ಅವರ ಬೆನ್ನ ಮೇಲೆ ನಾನು ಕೈಯಿಟ್ಟಾಗ ಅವರು ತಮ್ಮ ತಲೆಯನ್ನು ಅತ್ತ ಇತ್ತ ಒಲೆದಾಡಿಸಿದರು. ಅವರ ದುಃಖದ ತೀವ್ರತೆ ನನಗೆ ಅರ್ಥವಾಗುತ್ತಿತ್ತು. ಆದರೆ ನನ್ನ ತಂದೆಯವರ ಅನುಪಸ್ಥಿತಿಯಲ್ಲಿ ಅವರ ಅಂತಿಮ ಮನವಿಯನ್ನು ಸ್ವೀಕರಿಸುವ ನ್ಯಾಯಾ ಸ್ಥಾನ ನಾನೇ. ನೊಂದ ವ್ಯಕ್ತಿ ನಾನು ಮಧ್ಯಸ್ಥಿಕೆ ವಹಿಸುವಂತೆ ಕೇಳಿಕೊಳ್ಳುವವರೆಗೂ, ನಾನು ಯಾವುದೇ ಪ್ರಯತ್ನ ಮಾಡುವುದಾಗಲಿ, ಮೊರೆಗೆ ಕಿವಿಗೊಡುವುದಾಗಲಿ ಅಥವಾ ಸಹಾಯ ಹಸ್ತ ಚಾಚುವುದಾಗಲಿ ಮಾಡುವುದಿಲ್ಲ.

"ನಾನು ತುಂಬ ಕಾರ್ಯಮಗ್ನನಾಗಿದ್ದರೆ, ನಿಮ್ಮನ್ನು ಒಳಗೆ ಕಳುಹಿಸಿಕೊಡುವಂತೆ ನನ್ನ ಸಿಬ್ಬಂದಿಯವರಿಗೆ ಸೂಚನೆ ಕೊಟ್ಟಿರುತ್ತೇನೆ."

* * *

ಆ ದಿನ ಮತ್ತೆ ಗುರುವಾರ. ಅಗಸ ಪ್ಯಾರೇಲಾಲ್ ಸರತಿಯ ಸಾಲಿನಲ್ಲಿ ಮೊದಲನೆಯವನಾಗಿದ್ದ. ಅಂದು ಅವನ ಕಣ್ಣಿನ ಕೆಳಗಡೆ ಸುಕ್ಕುಗಳಿದ್ದುವು. ಆದರೆ ಅದರಲ್ಲಿ ಗೆಲುವುಗಳೂ ಇದ್ದವು. ಅವನ ಹೆಂಡತಿ ಸುನೇರಿಯ ಅವನಿಗಿಂತ ಸ್ವಲ್ಪ ಹಿಂದೆ ನಿಂತಿದ್ದಳು. ಅವಳು ನನ್ನ ಕಡೆ ನೋಡುತ್ತಿರಲಿಲ್ಲ. ನನ್ನನ್ನು ದ್ವೇಷಿಸುತ್ತಿದ್ದಳೆ? ಅವಳ

ಹೃದಯದಲ್ಲಿ ನನಗೆ ಕ್ಷಮೆ ಇತ್ತೆ? ಇಷ್ಟಾದರೂ ಕೂದಲು ನರೆತ, ಹಲ್ಲಿಲ್ಲದ, ಪೇಟ ಧರಿಸಿದ್ದ ಈ ಗಂಡನೊಬ್ಬನ ಅವಶೇಷಕ್ಕೆ ನನ್ನ ಹೃದಯ ಸ್ಪಂದಿಸಿದ್ದು. ಅವನಿಗೆ ಆರು ಜನ ಹೆಂಡತಿಯರಿದ್ದರು. ಐದು ಜನ ಹೆಂಡತಿಯರು ಅವನಿಗೆ ಹೆಣ್ಣು, ಗಂಡು ಮಕ್ಕಳನ್ನು ಹೆತ್ತುಕೊಟ್ಟಿದ್ದರು. ಅವರಿಗೆಲ್ಲಾ ಅಸಂಖ್ಯಾತ ಮೊಮ್ಮಕ್ಕಳು ಇದ್ದರು. ಕೆಲವು ಹೆಂಡಿರು ತೀರಿಕೊಂಡಿದ್ದರು. ಇನ್ನು ಕೆಲವರು ಅವನನ್ನು ಬಿಟ್ಟುಬಿಟ್ಟಿದ್ದರು. ಏಳನೆಯವಳನ್ನು ಮದುವೆಯಾಗಿ ಅವಳ ವಿಷಯಕ್ಕೆ ಅನುಮಾನದ ರೋಗ ಹತ್ತಿ ಕೊರಗುತ್ತಿದ್ದ. ಜೊತೆಗೆ ಸೋಲಿನ ಚಿಂತೆಯೂ ಅವನನ್ನು ತಿನ್ನುತ್ತಿತ್ತು. ನಿಷ್ಠೆಯಿಲ್ಲದ ಹೆಂಡತಿಯ ಬಗ್ಗೆ ನನಗಿಂತ ಚೆನ್ನಾಗಿ ಇನ್ಯಾರಿಗೆ ಗೊತ್ತು?

"ಮಹಾಸ್ವಾಮಿ ಧಣಿಗಳೇ ನಾನು ಗಂಡು" ಅವನ ದನಿ ತಾರಕಕ್ಕೇರಿತು. ಜೊತೆಗೆ ಸ್ವಲ್ಪ ಉಬ್ಬಸವೂ ಸೇರಿತ್ತು. ಅವನ ಈ ಉಬ್ಬಸದಿಂದ ಅವನಿಗೆಂದೂ ಮುಕ್ತಿ ಸಿಗುವಂತಿಲ್ಲ ಎಂಬುದೂ ಸ್ಪಷ್ಟವಿತ್ತು. "ತಾವು ಆಜ್ಞಾಪಿಸಿದಂತೆ ಮಾಡಿ ನನ್ನ ಗಂಡಸುತನವನ್ನು ಸಾಬೀತು ಮಾಡಿದ್ದೇನೆ ಮಹಾಸ್ವಾಮಿ."

"ಹೌದು. ನೀನು ಗಂಡಸು ಅನ್ನುವುದು ನಿಜ ಪ್ಯಾರೇಲಾಲ್. ರಸಿಕಾಬಾಯಿ ಅದನ್ನು ದೃಢಪಡಿಸಿದ್ದಾಳೆ. ಈಗ ಏನು ಮಾಡಬೇಕೆಂದಿದ್ದೀಯಾ?"

"ಅದು ಕಿಂಚಿತ್ತೂ ಅನುಮಾನಕ್ಕೆ ಎಡೆಇಲ್ಲದ ಹಾಗೆ ನನ್ನ ಹೆಂಡತಿ ಅಪರಾಧಿ ಅನ್ನುವುದನ್ನು ಸಾಬೀತು ಮಾಡುತ್ತದಲ್ಲವೆ?"

"ಯಾವ ರೀತಿ ಅಪರಾಧಿ"?

"ನನಗೆ ಮೋಸ ಮಾಡಿದ ಅಪರಾಧಿ, ಇನ್ನೆಂಥ ಅಪರಾಧಿ"?

"ಇವಳ ಗೆಣೆಕಾರ ಯಾರು"?

"ನನಗೆ ಹೇಗೆ ಗೊತ್ತು? ಅವಳನ್ನೇ ಕೇಳಿ"

"ಅವಳಿಗೆ ಗೆಣೆಕಾರನೊಬ್ಬ ಇದ್ದು ಅವಳು ಕನ್ಯೆಯಾಗಿದ್ದಿರಬಹುದೆ?"

"ನನ್ನನ್ನೇನು ಅಂತ ತಿಳಿದುಕೊಂಡಿದ್ದೀರಿ, ಮೂರ್ಖ ಅಂತಲೇನು"

"ಅವಳು ಕನ್ಯೆ ಅಲ್ಲ. ಅದಂತೂ ನಿಶ್ಚಿತ"

"ನಿನಗೆ ಹೇಗೆ ಗೊತ್ತು"?

"ನಾನು ನಗುವ ಹಾಗೆ ಮಾತಾಡಬೇಡಿ?" ನಾನು ಅವಳ ಗಂಡ–ನಿಜ ತಾನೆ"?

"ನೀನು ಏತಕ್ಕೆ ಈ ಮೊಕದ್ದಮೆಯನ್ನು ಕೈ ಬಿಡಬಾರದು ಪ್ಯಾರೇಲಾಲ್"

"ನಿನ್ನ ಹೆಂಡತಿ ನಿನಗೆ ನಿಷ್ಠಳಿದ್ದಾಳೆ ಆದ್ದರಿಂದಲೇ ಆಕೆ ಕನ್ಯೆ"

"ತಾವು ಏನನ್ನೂ ಸೂಚಿಸುತ್ತಿದ್ದೀರಿ ಮಹಾಸ್ವಾಮಿ? ನಾನು ನಪಂಸಕ ಅಂತಲೇ?' ನಾನು ರಸಿಕಾಬಾಯಿ ಹತ್ತಿರ ನನ್ನ ಗಂಡಸುತನ ಸಾಬೀತು ಮಾಡಲಿಲ್ಲವೆ?"

"ನೀನು ಸಾಬೀತು ಮಾಡಿದ್ದೀ. ನೀನು ಖಂಡಿತವಾಗಿಯೂ ಸಾಬೀತು ಮಾಡಿದ್ದೀಯಾ. ಆದರೆ ಅದಕ್ಕೆ ಸ್ವಲ್ಪ ಹೊತ್ತು ಹಿಡಿಯಿತು. ವಾಸ್ತವವಾಗಿ ಇಡೀ ರಾತ್ರಿಯೆಲ್ಲಾ ಹಿಡಿಯಿತು. ಅದೂ ಬಹಳಷ್ಟು ಪುಸಲಾಯಿಸಿದ ಮೇಲೆ ಅಂತ ಅಂದುಕೊಂಡಿದ್ದೀನಿ. ರಸಿಕಾಬಾಯಿ ತನ್ನ ಪುಸ್ತಕದಲ್ಲಿ ಹೇಳಿರುವ ಎಲ್ಲಾ ವರಸೆಗಳನ್ನು ಪ್ರಯತ್ನಿಸಿದ್ದಾಳೆ. ನಿನಗೆ ಗೊತ್ತಿರಬೇಕಲ್ಲ, ಅವಳೊಂದು ಪುಸ್ತಕ ಬರೆದಿದ್ದಾಳೆ. ಎಲ್ಲ ವರದಿಗಳನ್ನೂ ನಂಬುವುದಾದರೆ ಎಷ್ಟೇ

ದುರ್ಬಲವಾದರೂ ಒಂದು ಜ್ವಾಲೆ ಉರಿಯುತ್ತಾ ಇದೆ ಅನ್ನುವುದನ್ನು ಒಪ್ಪುತ್ತೇನೆ. ಆದರೆ ನಿನ್ನ ಹೆಂಡತಿ ಅದನ್ನು ಜತನವಾಗಿ ಕಾಯ್ದುಕೊಂಡು ದೊಡ್ಡದಾಗಿ ಮಾಡುವಷ್ಟು ಅನುಭವ ಇಲ್ಲದವಳು?"

ಪ್ಯಾರೇಲಾಲ್‌ನ ಮುಖ ಜೋತು ಬಿತ್ತು. ಆದರೂ ಅವನು ಪೂರ್ತಿ ಬಿಟ್ಟು ಕೊಡುವವನಲ್ಲ.

"ಅವಳಿಗೊಬ್ಬ ಗೆಣೆಕಾರ ಇದ್ದಾನೆ ಅಂತ ನಾನು ಹೇಳುತ್ತೇನೆ ನಾನು ರಸಿಕಾಬಾಯಿಯ ಜೊತೆ ಇದ್ದ ರಾತ್ರಿ, ಅವಳು ಇಡೀ ರಾತ್ರಿ ಹೊರಗಿದ್ದಳು."

"ಕಳೆದ ಸೋಮವಾರ ಎಲ್ಲಾದರೂ ಇದ್ದಿರಲಿ, ರಸಿಕಾ ಬಾಯಿ ನಿನ್ನೆ ಅವಳನ್ನು ಪರೀಕ್ಷೆ ಮಾಡಿ ಅವಳು ಕನ್ಯೆ ಎಂದು ಸಾರಿ ಬಿಟ್ಟಿದ್ದಾಳೆ"

"ಅವಳಿಗೊಬ್ಬ ಗೆಣೆಕಾರ ಇದ್ದಾನೆ. ಅದನ್ನು ನಾನು ದೃಢವಾಗಿ ಬಲ್ಲೆ"

"ಅವನು ಯಾರು ಎಂದು ಪತ್ತೆ ಮಾಡು, ಕಾನೂನಿನ ಪ್ರಕಾರ ಅವನಿಗೆ ಅತ್ಯುಗ್ರ ಶಿಕ್ಷೆಯನ್ನು ವಿಧಿಸುತ್ತೇವೆ"– ನಾನು ಹೇಳಿದೆ. ಪ್ಯಾರೇಲಾಲ್ ಕೊನೆಗೆ ಮನೆಗೆ ಹೋದ.

ಕನ್ಯೆಯೋ ಅಲ್ಲವೋ ಒಟ್ಟಿನಲ್ಲಿ ತನ್ನ ಹೆಂಡತಿ ತನ್ನನ್ನು ವಂಚಿಸುತ್ತಾ ಇದ್ದಳು ಎಂಬುದು ಅವನಿಗೆ ತಿಳಿದಿತ್ತು.

* * *

ಆ ದಿನದ ಮಧ್ಯಾಹ್ನವನ್ನು ನಾನು ನಗರ ಯೋಜನಾ ಅಧ್ಯಕ್ಷ ಸಾಹಸಮಲ್‌ಗೆ ಮೀಸಲಿಟ್ಟಿದ್ದೆ. ವಿಜಯನಗರ ಸಾಮ್ರಾಜ್ಯದಲ್ಲಿ ನೀರು ಸಾಗಿಸುವ ಮೇಲ್ಗಾಲುವೆಗಳಿಗೆ ಪಿಂಗಾಣಿಯ ಕಾಲುವೆಗಳನ್ನು ಬಳಸುತ್ತಿದ್ದರು ಎಂದು ನಾನು ಕೇಳಿದ್ದೆ. ನಾವೂ ಅದೇ ಪದ್ಧತಿಯನ್ನು ಏಕೆ ಅಳವಡಿಸಿಕೊಳ್ಳಬಾರದು ಎಂದು ಅವನನ್ನು ಕೇಳಬೇಕೆಂದಿದ್ದೆ. ಎರಡನೇ ಸಮಸ್ಯೆಯೆಂದರೆ, ಚರಂಡಿಗಳದು. ಚಿತ್ತೂರಿನ ಬೀದಿಗಳು ಬೇಸಿಗೆ ಮತ್ತು ಚಳಿಗಾಲದಲ್ಲಿ ಸುಸ್ಥಿತಿಯಲ್ಲಿರುತ್ತಿದ್ದುವು. ಮಳೆಗಾಲ ಬಂತೆಂದರೆ ಸಾಕು ಸಂತೋಷವಾಗಿರಬೇಕೆಂದರೆ ಇರುವ ಮಾರ್ಗ ಎಮ್ಮೆಗಳಾಗುವುದೊಂದೇ. ದಾರಿಗಳ ತುಂಬ ಬರೀ ಚರಂಡಿಗಳು ಮತ್ತು ಗುಂಡಿಗಳೇ ಇರುತ್ತಿದ್ದು ಮನುಷ್ಯರ ತಲೆಗಳ ಮೇಲೆ ಸೊಳ್ಳೆಗಳ ಹಿಂಡು ಗುಂಯ್ ಎಂದು ಶಬ್ದ ಮಾಡುವ ಕಪ್ಪು ಮಸ್ಲಿನಿನ್ನ ಪೇಟಗಳಂತೆ ಜೋತಿರುತ್ತಿತ್ತು. ಕಡೇ ಪಕ್ಷ ರಸ್ತೆಗಳ ದುಃಸ್ಥಿತಿ ಏನಿದ್ದರೂ ಯಾವುದೇ ಒಂದು ಗೊತ್ತಾದ ಋತುವಿನಲ್ಲಿ ಮಾತ್ರ ಇರುತ್ತಿತ್ತು. ದುರಾದೃಷ್ಟಾವಶಾತ್ ಚರಂಡಿಗಳಂತೂ ಇಡೀ ವರ್ಷ ಪೂರ್ತಿ ಪೀಡೆಗಳಾಗಿರುತ್ತಿದ್ದುವು. ಪೀಡೆ ಅನ್ನುವ ಶಬ್ದ ಅದನ್ನು ವರ್ಣಿಸಲು ಅಷ್ಟು ಸೂಕ್ತವಾದ, ತಕ್ಕುನಾದ ಶಬ್ದವೇ ಅಲ್ಲ. ಅವು ನಿಜಕ್ಕೂ ಭಾರೀ ವಿಪತ್ತುಗಳೇ ಸರಿ.

ಯಾವುದೋ ಒಂದು ವಿಲಕ್ಷಣ ಕಾರಣಕ್ಕೆ, ನನ್ನ ಪೂರ್ವಜರು, ದೊಡ್ಡವರು, ಚಿಕ್ಕವರು ಯಾರೊಬ್ಬರೂ, ನಮ್ಮ ರಾಜ್ಯದ ಜನಸಂಖ್ಯೆಯ ಸಮಸ್ಯೆಯ ಬಗ್ಗೆ ಚರ್ಚಿಸುವಾಗ ನೇರವಾಗಿ ನೋಡಲು ಅಥವಾ ತರ್ಕಬದ್ಧವಾಗಿ ಯೋಚಿಸಲು ಸಾಧ್ಯವಾಗಿಲ್ಲ. ನಾವು ಸದಾ ಮಾಡುತ್ತಿದ್ದ ಯುದ್ಧಗಳಿಗೆ ಅದನ್ನು ಆರೋಪಿಸುತ್ತಿದ್ದರು. ಯುದ್ಧ ಹತ್ತನೇ ಒಂದು ಭಾಗದಷ್ಟು ಜನರನ್ನು ನಾಶ ಮಾಡಿಬಿಡುತ್ತದೆ. (ಪ್ರತಿ ಯೋಧ ಕುಟುಂಬದಲ್ಲೂ ಅಂಗಹೀನರಾದವರು, ವಿಕಲಾಂಗರಾದವರು, ವಿರೂಪಗೊಂಡವರು ಇವರುಗಳಿಗೆ ಹೋಲಿಸಿದರೆ ಸತ್ತವರು ಏನೇನೂ ಅಲ್ಲ. ಇನ್ನು ಪ್ರತಿ ಬೀದಿಗಳಲ್ಲಿ, ಓಣಿಗಳಲ್ಲಿ ಭಿಕ್ಷೆ ಬೇಡುತ್ತ ಇರುವ ನೂರಾರು ಜನರ ಬಗ್ಗೆ ಹೇಳುವುದೇ ಬೇಡ) ಆದರೆ ಪ್ರತಿ ಕೆಲವು

ವರ್ಷಗಳಲ್ಲಿ ನಮ್ಮ ಕಾಲುಭಾಗ ಅಥವಾ ಅರ್ಧ ಭಾಗದಷ್ಟು ಜನಸಂಖ್ಯೆಯನ್ನು ಒರೆಸಿ ಹಾಕಿಬಿಡುವಂಥದೆಂದರೆ ಆಗಾಗ್ಗೆ ಬರುವ ವ್ಯಾಧಿ ಅಥವಾ ಸಾಂಕ್ರಾಮಿಕ ರೋಗ.

ಹೊಲಸನ್ನು ಹೊರಸಾಗಿಸುವ ಚರಂಡಿ ವ್ಯವಸ್ಥೆಯ ಬಗ್ಗೆ ಯಾರೂ ಚರ್ಚೆಯನ್ನೇ ಮಾಡಿದ ಹಾಗೆ ಕಾಣಿಸುತ್ತಿಲ್ಲವೇನೋ. ಏಕೆಂದರೆ ಅದೊಂದು ಅಸ್ಪೃಶ್ಯ ವಿಚಾರ. ಇದಕ್ಕೆ ನಾವು ಗಮನಹರಿಸಿ, ಈ ಸಮಸ್ಯೆಗೆ ಅನ್ವಯಿಸಿದ ಹಾಗೆ ತಾಂತ್ರಿಕತೆ ಮತ್ತು ಪ್ರಭುತ್ವದ ಮಂಜೂರಾತಿಯ ಹೊರೆಯನ್ನು ನಾವು ಇಳಿಸದೇ ಹೋದರೆ ನಾವೆಲ್ಲರೂ ನಮ್ಮ ಹೇಲು ಮತ್ತು ಹೊಲಸಿನಲ್ಲಿ ಕೊಚ್ಚಿಹೋಗುತ್ತೇವೆ.

ನಗರ ಯೋಜನಾಧಿಕಾರಿ ಸಾಹಸ ಮಲ್ಲನೇ ಸ್ವಲ್ಪ ಮಟ್ಟಿಗೆ ಮುಖಭಂಗಕ್ಕೆ ಒಳಗಾದವನಂತೆ ಕಂಡ. ಮತ್ತು ಮೇಲುದನಿಯಲ್ಲೇ ಆಕ್ಷೇಪಿಸುತ್ತಾ ರಣಕ್‌ಪುರದಲ್ಲಿ ಕಂಡು ಬರುವಂಥ ರೀತಿಯಲ್ಲಿ ನೂತನವಾಗಿ ಅಮೃತಶಿಲೆಯ ದೇವಾಲಯ ಸಮುಚಯ ನಿರ್ಮಿಸುವುದಕ್ಕೆ ಸಂಬಂಧಿಸಿದ ಹಾಗೆ ಅಥವಾ ಕೀರ್ತಿಶೇಷ ರಣಕುಂಭ ಮಹಾಪ್ರಭುಗಳು ನಿರ್ಮಿಸಿದ್ದ ವಿಜಯ ಸ್ತಂಭದ ಎರಡರಷ್ಟು ಎತ್ತರದ ನೂತನ ವಿಜಯ ಸ್ತಂಭವನ್ನು ಕಟ್ಟುವುದಕ್ಕೆ ಸಂಬಂಧಿಸಿದ ಹಾಗೆ ವಾಸ್ತುಯೋಜನೆ ಕುರಿತು ನಾವು ಏಕೆ ಚರ್ಚಿಸಲಿಲ್ಲ ಎಂದು ಆಶ್ಚರ್ಯಚಕಿತನಾದ. ಎಷ್ಟೇ ಆಗಲಿ, ನಮ್ಮ ತಂದೆಯವರ ವಿಜಯಗಳು ನಮ್ಮ ಮುತ್ತಾತನ ವಿಜಯಗಳಿಗಿಂತ ಯಾವ ರೀತಿಯಲ್ಲೂ ಕಡಿಮೆಯಲ್ಲವಲ್ಲ. ಅವು ಬಹಳಷ್ಟು ಉತ್ಕೃಷ್ಟ ಯೋಚನೆಗಳೆಂದು ಆತನಿಗೆ ನಾನು ಹೇಳಿದೆ. ಅಲ್ಲದೆ ಈ ಯೋಜನೆಗಳಿಗೆ ಅಗತ್ಯವಾದ ಹಣಕಾಸನ್ನು ಅವನೇ ನಮ್ಮ ನಗರದಲ್ಲಿ ನೆಲೆಸಿರುವ ಉದಾರಿ ವಿದೇಶಿಯರಿಂದ ಹಾಗೂ ಮೇವಾಡದ ವಿಶಾಲ ಪ್ರದೇಶದಲ್ಲಿ ನೆಲೆಸಿರುವ ಶ್ರೀಮಂತ ನಾಗರಿಕರಿಂದ ಖಂಡಿತವಾಗಿಯೂ ಒಟ್ಟುಗೂಡಿಸಬಹುದೆಂದು ಹೇಳಿದೆ. ಆದರೆ ರಾಜ್ಯದ ಬೊಕ್ಕಸದ ಹಣ ಮಾತ್ರ ಚರಂಡಿ ಮತ್ತು ಮಲವನ್ನು ಹೊರಹಾಕುವಂಥ ಜನರ ಲೌಕಿಕ ಅಗತ್ಯಗಳಿಗೆ ಮೀಸಲಾಗಿರುತ್ತದೆ.

ಬಹುಶಃ ಆತ ನನ್ನ ಮಾತಿನ ಅಭಿಪ್ರಾಯವನ್ನು ಅರ್ಥ ಮಾಡಿಕೊಂಡ ಎಂದು ಅನಿಸಿತು. ಜಯಸಿಂಹ ಬಲೇಚ ಅವರು ಭೇಟಿಗಾಗಿ ಕಾದಿದ್ದಾರೆ ಎಂದು ಹೇಳಿದ ಕೂಡಲೇ ನಗರದ ಚರಂಡಿ ವ್ಯವಸ್ಥೆಯ ನಕ್ಷೆಯನ್ನು ಹುಡುಕುವುದಾಗಿ ಹೇಳಿದ. ನಾನು ಆತನಿಗೆ ಆಗಬಹುದು ಎಂದು ಹೇಳಿ ಆ ದಿನವೇ ಸಾಯಂಕಾಲ ಆರು ಗಂಟೆಗೆ ನಕ್ಷೆಗಳನ್ನು ಪರಿಶೀಲಿಸಲು ಸಾಧ್ಯವಾಗಬಹುದೆ ಎಂದು ಕೇಳಿದೆ. ಗಾಬರಿಯಿಂದ ಅವನ ಮುಖ ಜೋಲು ಬಿದ್ದಿತ್ತು. ಅಷ್ಟು ಹಳೆಯ ದಾಖಲೆಗಳನ್ನು ಪತ್ತೆ ಮಾಡಲು ಇರುವ ತೊಡಕಿನ ಬಗ್ಗೆ ಗೊಣಗುಟ್ಟುವುದಕ್ಕೆ ಶುರು ಮಾಡಿದ. ಜೊತೆಗೆ ಅಂಥ ನಕ್ಷೆಗಳು ಇರುವುದರ ಬಗ್ಗೆಯೇ ಅವನಿಗೆ ಖಾತರಿ ಇರಲಿಲ್ಲ.

"ಒಳ್ಳೆಯದು, ಅದು ಇತ್ಯರ್ಥವಾದ ಹಾಗಾಯಿತು. ಸರಿಯಾಗಿ ಆರು ಗಂಟೆ – ನೆನಪಿರಲಿ – ಶುಭವಾಗಲಿ ಎಂದೆ."

* * *

ಜಯಸಿಂಹ ಬಲೇಚ ತನ್ನ ಭಾವನೆಗಳನ್ನು ಒಳ್ಳೆಯ ಹಿಡಿತದಲ್ಲಿಟ್ಟುಕೊಂಡಿದ್ದರು. ಭಾವನಾರಹಿತ ನಿಷ್ಪಾರದರ್ಶಕ ಮುಖ ಇಟ್ಟುಕೊಳ್ಳುವುದು ನನಗೆ ಕಷ್ಟವಾಯಿತು. ಅವರು ಏನು ಹೇಳುತ್ತಾರೆ ಅನ್ನುವುದನ್ನು ನಾನು ಅತ್ಯಂತ ಗಮನವಿಟ್ಟು ಕೇಳಿದೆ. ಹೇಗೆ ತಾನೆ ಕೇಳದೆ ಇರಲಿ. ಬಿಕ್ಕಟ್ಟು ಆಗಲೇ ಉಲ್ಬಣಗೊಳ್ಳುತ್ತಿರುವುದರ ಗದ್ದಲ ಕೇಳಿಸುತ್ತಿತ್ತು. ಆಗ ನಾನು, ಅತ್ಯಂತ ವಿಷಮಕರವಾದ ಹಗರಣಗಳು, ವಿನಾಶಗಳು, ಹಿನ್ನಡೆಗಳು, ಅವಮಾನಗಳು

ಇವುಗಳ ಸರಮಾಲೆಗಳ ವಿವರಗಳು ಕಿವಿಯ ಮೇಲೆ ಬೀಳುತ್ತಿದ್ದಾಗಲೂ ಹೆಣದ ನಿಶ್ಚಲ ಮುಖಭಾವದಿಂದ ಇರುವುದು ಹೇಗೆ ಎಂಬುದನ್ನು ಕನ್ನಡಿಯ ಮುಂದೆ ಕುಳಿತು ದಿನವೂ ಅಭ್ಯಾಸ ಮಾಡಲು ನಿರ್ಧರಿಸಿದೆ. ಈ ಹಗರಣಗಳು, ವಿನಾಶಗಳು ಇವನ್ನೆಲ್ಲಾ ಈ ವಿಷಯದಲ್ಲಿ ನನಗಿದ್ದ ವೈವಿಧ್ಯಮಯವೂ ಶ್ರೀಮಂತವೂ ಆದ ಅನುಭವಗಳಿಂದ ಕಂಡುಕೊಳ್ಳಬಹುದು. ಅಥವಾ ನನಗೆ ನಾನೇ ವಿವರಿಸಿಕೊಳ್ಳಬಹುದೆಂದುಕೊಂಡೆನು.

"ಐದು ವಾರಗಳ ಹಿಂದೆ ರಾಜಕುಮಾರ ವಿಕ್ರಮಾದಿತ್ಯರು ನನ್ನ ಮನೆಗೆ ಭೇಟಿ ಕೊಟ್ಟಿದ್ದರೆಂಬುದು ಮಹಾಸ್ವಾಮಿಯವರಿಗೆ ನೆನಪಿರಬೇಕು. ನಮಗಂತೂ ಅದು ತುಂಬ ಗೌರವದ ವಿಷಯವಾಗಿತ್ತು. ಸೇನಾ ಸಂಸ್ಥೆಯಲ್ಲಿಯ ನನ್ನ ಹೊಣೆಗಾರಿಕೆಯಿಂದಾಗಿ ಖುದ್ದಾಗಿ ನಾನೇ ನಿಂತು ನೋಡಿಕೊಳ್ಳಲು ಸಾಧ್ಯವಾಗದೇ ಹೋದರೂ ನನ್ನ ಕುಟುಂಬದವರು ಅದು ತಮ್ಮ ಸುಯೋಗ ಎಂದು ಭಾವಿಸಿ ರಾಜಕುಮಾರರಿಗೆ ಸಂತೋಷದಾಯಕವಾಗುವಂತೆ ಮಾಡಲು ರೂಢಿಯ ಕ್ರಮವನ್ನು ಮೀರಿ ಉಪಚರಿಸಿದರು. ಅವರು ಈಗ್ಗೆ ಒಂದು ವಾರದ ಹಿಂದೆ ಚಿತ್ತೂರಿಗೆ ಹಿಂದಿರುಗಿದರು."

"ಹೌದು ನನಗೆ ಆ ವಿಷಯ ಗೊತ್ತು ಆ ಹೊತ್ತಿನಿಂದ ಅವನು ನನ್ನ ಹೆಂಡತಿಯ ಉನ್ಮಾದಕರ ಒಳಲಂಗದತ್ತ ಇಣುಕಿ ನೋಡುವಲ್ಲಿ ಸುಖ ಕಾಣುತ್ತಿದ್ದಾನೆ ಅಷ್ಟೆ ಅಲ್ಲ, ಇಡೀ ಊರೇ ಮುಗಿಬೀಳುವಂಥ ಅಶ್ಲೀಲ ಶೃಂಗಾರದ, ಖುಷಿ ಕೊಡುವಂಥ ಕ್ಷುಲ್ಲಕ ಪದ್ಯಗಳನ್ನು ರಚಿಸಿದ್ದಾನೆ."

"ಅವರು ತಾವೇ ಸಂಸ್ಥೆಗೆ ಖುದ್ದಾಗಿ ಬಂದು ಅತ್ಯಂತ ಪ್ರೀತಿ ಪೂರ್ವಕ ಮಾತುಗಳಲ್ಲಿ ನನಗೆ ಧನ್ಯವಾದಗಳನ್ನು ಹೇಳಿದರು. ಹಳ್ಳಿಯ ಹಿತಕರವಾದ ಹವೆಯಿಂದ ಮತ್ತು ನಾಲ್ಕು ಜನ ಮಕ್ಕಳ ಜೊತೆ ಅವರು ಮಾಡಿದ ಮೃಗಯಾವಿಹಾರ ಹಾಗೂ ಕುದುರೆ ಸವಾರಿಗಳಿಂದ ನವಚೈತನ್ಯ ಉಕ್ಕಿದಂತಾದರು. ತಾವು ಮತ್ತೆ ಬೇಗ ಬರಬೇಕು ಅಂತ ಹೇಳಿದೆ. 'ನನಗೂ ಬರಬೇಕೆಂದು ಆಸೆ ಇದೆ ಮಾವ ಆಸೆಯಿದೆ' ಎಂದು ಹೇಳಿ ಅಲ್ಲಿಂದ ಹೊರಟರು. ಅವರ ಹಿಂದೇನೇ ನನ್ನ ಹಿರಿಯ ಮಕ್ಕಳಿಬ್ಬರೂ ಒಬ್ಬರಾದ ಮೇಲೆ ಒಬ್ಬರು ಚಿತ್ತೂರಿಗೆ ಕುದುರೆ ಬೆನ್ನೇರಿ ಹೊರಟಿದ್ದೇ".

ಬಲೇಚ ನಿಲ್ಲಿಸಿದರು. ಪ್ರಭಾವಿ ವಾಕ್ಯಕ್ಕಾಗಿ ನಾನು ಕಣ್ಣು ಮುಚ್ಚಿ ಕಾದೆ ಅದು ಬರಲಿಲ್ಲ.

"ಮಹಾಸ್ವಾಮಿ ನನಗೆ ಹೇಗೆ ಮುಂದುವರಿಸಬೇಕೆಂದು ಗೊತ್ತಾಗುತ್ತಿಲ್ಲ."

ನಾನು ಕಣ್ಣು ಮುಚ್ಚಿಕೊಂಡೇ ಇದ್ದೆ. ಇದು ಭಾವೀ ಮಹಾರಾಜನಿಗೆ ಒಳ್ಳೆಯ ತರಬೇತಿ. ನಾನು ಅನುಮಾನಪಡುವುದು ಬೇಡವೆಂದು ನಿರ್ಧರಿಸಿದೆ. ಪ್ರವಾಹದೊಂದಿಗೆ ಸಾಗು. ನಿನ್ನ ನಾಲಿಗೆಯನ್ನು ಬಿಗಿ ಹಿಡಿ. ನಿನ್ನ ಶರೀರದ ಎಲ್ಲ ಅಂಗಗಳ ಮಾಂಸಖಂಡಗಳನ್ನು ಸಡಿಲಗೊಳಿಸು. ನಿಧಾನವಾಗಿ ಮುಂದುವರಿ, ನಿಧಾನವಾಗಿ. ಎಂದಿಗೂ ಆಶ್ಚರ್ಯ ಅಥವಾ ಇನ್ನಾವುದೇ ಭಾವವನ್ನು ತೋರಿಸಿಕೊಳ್ಳಬೇಡ.

"ಈಗ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೋ ಅದು ನಿಮ್ಮ ಕಿವಿಗಳಿಗೆ ಅಹಿತವನ್ನು ಉಂಟು ಮಾಡಿದರೆ ದಯವಿಟ್ಟು ಕ್ಷಮಿಸಬೇಕೆಂದು ಕೋರುತ್ತೇನೆ. ಆದರೆ ಅದನ್ನು ನಾನು ಹೇಳಲೇಬೇಕಾಗುತ್ತದೆ. ಅನೇಕ ವರ್ಷಗಳ ಹಿಂದೆ ನನ್ನ ಸ್ವಾಮಿನಿಷ್ಠೆಗಾಗಿ ತಮ್ಮ ತಂದೆಯವರು ನನಗೆ ದಯಪಾಲಿಸಿದ ಜಮೀನಿನಲ್ಲಿ ನಾವು ಒಂದು ಅಶ್ವಶಾಲೆಯನ್ನು ನಡೆಸುತ್ತಿರುವುದು ಮಹಾಸ್ವಾಮಿಯವರಿಗೆ ತಿಳಿದಿರಬೇಕು. ಏಕಲಿಂಗೇಶ್ವರನ ಕೃಪೆಯಿಂದ ಅಶ್ವಶಾಲೆ ಚೆನ್ನಾಗಿ ನಡೆದಿದೆ. ನಾವು ಸೇನೆಗೆ ಹಾಗೂ ಕುಲೀನರಿಗೆ ಕುದುರೆಗಳನ್ನು ಒದಗಿಸುತ್ತೇವೆ. ತಮ್ಮ 'ಬೇಫ಼ಿಕಿರ್' ಕೂಡ ನಮ್ಮ ಅತ್ಯಂತ ಬಹುಮಾನಿತ ಶ್ರೇಣಿಗಳ ಪೈಕಿಯದು.

ಒಂದೂವರೆ ವರ್ಷಗಳ ಹಿಂದೆ ಗೋದ್ವಾರದ ಸೋಲಂಕಿಗಳು ನಮ್ಮಲ್ಲಿ 'ಕಾಲೀಬಿಜಲಿ' ಎಂಬ ಹೆಣ್ಣು ಕುದುರೆ ಮರಿಯನ್ನು ಕಾಯ್ದಿರಿಸಿದ್ದರು. ಅದು ವಯಸ್ಸಿಗೆ ಬಂದಿತ್ತು. ನಾವು ಅದನ್ನು ಸೋಲಂಕಿಗಳಿಗೆ ಇನ್ನೇನು ಕಳಿಸಿಕೊಡಬೇಕೆನ್ನುವಷ್ಟರಲ್ಲಿ ಅದು ರಾಜಕುಮಾರ ವಿಕ್ರಮಾದಿತ್ಯರ ಕಣ್ಣಿಗೆ ಬಿತ್ತು. ಅದು ನಾವು ಸಾಕಿ ಬೆಳೆಸಿರುವ ಹೆಣ್ಣು ಕುದುರೆಗಳಲ್ಲಿ ಅತ್ಯುತ್ಕೃಷ್ಟವಾದ್ದು. ರಾಜಕುಮಾರರು ಅದು ಬೇಕೆಂದರು. ಅದು ಆಗಲೇ ಇನ್ನೊಬ್ಬರಿಗೆ ಖರೀದಿಯಾಗಿ ಬಿಟ್ಟಿದ್ದರಿಂದ ನನ್ನ ಮಕ್ಕಳು ಅದನ್ನು ಬಿಟ್ಟು ನಮ್ಮ ಅಶ್ವಶಾಲೆಯ ಬೇರಾವ ಕುದುರೆಯನ್ನು ಬೇಕಾದರೂ ಕೊಡುತ್ತೇವೆಂದರು. ರಾಜಕುಮಾರರು ನಮ್ಮ ಕೊಡುಗೆಯನ್ನು ತಿರಸ್ಕರಿಸಿದರು.

ಅವರು ಇಲ್ಲಿಂದ ಹೊರಟ ಮೇಲೆ, ಕಾಲಿಬಿಜಲಿ ಮತ್ತು ಇತರೆ ಒಂಬತ್ತು ಕುದುರೆಗಳು ನಾಪತ್ತೆಯಾಗಿರುವುದನ್ನು ನನ್ನ ಮಕ್ಕಳು ಕಂಡುಕೊಂಡರು."

ನನ್ನ ತಮ್ಮನ ಹತ್ತಿರ ಹೊಸಕುದುರೆ ಇರುವುದನ್ನು ನಾನು ನೋಡಿದ್ದೆ. ನನ್ನ ಅಭಿರುಚಿಗೆ ಅದು ತುಂಬಾ ಪೊಳ್ಳು ಆಡಂಬರದ ಮತ್ತು ಅತ್ಯಂತ ಬೇಗ ಉದ್ರಿಕ್ತಗೊಳ್ಳುವಂಥ ಕುದುರೆ. ಆದರೆ ನಾನು ಎಲ್ಲೂ ಕಂಡಿರದಂಥ ಅಪೂರ್ವ ಸೌಂದರ್ಯದ ಅಶ್ವ.

ನಾನು ಅದನ್ನು ಮೊದಲು ನೋಡಿದಾಗ, ಅವನು ಅದರ ಬೆನ್ನೇರಿ ತಾನು ಇತ್ತೀಚೆಗೆ ಕಲಿತಿದ್ದ ಯಾವುದೋ ಆಟ ಆಡುತ್ತಿದ್ದ. ಆ ಆಟ ಏನೆಂದರೆ ಕುದುರೆಯ ಬೆನ್ನೇರಿದ್ದಾಗ, ಮರದ ಕೋಲಿನಿಂದ ಇರುಳ ಹಕ್ಕಿಯೊಂದನ್ನು ಹೊಡೆಯುವುದು.

"ಅದು ನಿನಗೆ ಎಲ್ಲಿ ಸಿಕ್ಕಿತು?"

"ಅಜ್ಮೀರ್‌ನಲ್ಲಿ ಕುದುರೆಗಳ ಜಾತ್ರೆಯೊಂದರಲ್ಲಿ ಪಠಾಣ್ ಒಬ್ಬನಿಂದ ತೆಗೆದುಕೊಂಡೆ. ಕುದುರೆ ನಿನಗೆ ಇಷ್ಟ ಆಯಿತೇನು?"

"ನಿನಗೆ ಒಂದು ಕೈ ಒಂದು ಕಾಲು ಖರ್ಚಾಗಿರಬೇಕು. ಅದನ್ನು ಎರಡು ಕೈ ಎರಡು ಕಾಲು ಮಾಡಿ ಬಿಡು"

"ಹಣ ಮುಖ್ಯ ಅಲ್ಲ ಅಣ್ಣ. ಅಂಥ ಒಂದು ಒಳ್ಳೆಯ ಹಾಗೂ ಶ್ರೇಷ್ಠ ತಳಿಯ ಕುದುರೆಯನ್ನು ಸವಾರಿ ಮಾಡುವುದರಲ್ಲಿ ಇರುವ ಸುಖ ಇದೆಯಲ್ಲ ಅದು ಮುಖ್ಯ. ಆದರೆ ನಿನಗೆ ಸುಖ ಏನು ಗೊತ್ತು?"

ಅವನು ಹೇಳಿದ್ದರಲ್ಲಿ ಒಂದು ಅರ್ಥ ಇತ್ತು. ಆದರೆ ಅದನ್ನು ಕೊಳ್ಳಲು ಹಣ ಹೇಗೆ ಹೊಂದಿಸಿದ್ದ ಅನ್ನುವುದರ ಬಗ್ಗೆ ನನಗೆ ಖಾತರಿ ಇರಲಿಲ್ಲ. ಈಗಾಗಲೇ ಅವನು ತನ್ನ ಮಿತಿಯನ್ನು ಮೀರಿದ್ದ. ನಂಬಿದರೆ ನಂಬಿ, ಇಲ್ಲ ಬಿಡಿ, ನನ್ನನ್ನೂ ಒಳಗೊಂಡಂತೆ ನಮ್ಮ ಕುಟುಂಬದಲ್ಲಿ ಎಲ್ಲರ ಹತ್ತಿರವೂ ಸಾಲ ಮಾಡಿದ್ದಾನೆ. ಹೌದು ಅವನ ತಾಯಿ ಕರ್ಮವತಿ ಯಾವಾಗಲೂ ಇದ್ದಳು. ಆಕೆಗೆ ಅವಳದ್ದೇ ಆದ ಮೂಲಗಳಿದ್ದುವು. ಅವಳದ್ದೇ ಆದ ಖಾಸಗಿ ಗುಪ್ತ ನಿಧಿ ಇತ್ತು. ಎಲ್ಲಿ ಎನ್ನುವುದು ದೇವರಿಗೆ ಗೊತ್ತು.

"ಅದಷ್ಟೇ ಅಲ್ಲ. ಇಲ್ಲಿಂದ ಹೊರಡುವ ಹಿಂದಿನ ದಿನದ ರಾತ್ರಿ ಅವರು ನನ್ನ ಅಶ್ವ ಪಾಲಕನಿಗೆ ಲಂಚ ನೀಡಿದ್ದಾರೆ. ಅವನು ಇಡೀ ದೇಶದಲ್ಲಿಯೇ ಅತ್ಯುತ್ತಮ ಅಶ್ವಶಿಕ್ಷಕ. ದೆಹಲಿಯ ಚಕ್ರವರ್ತಿಗಳ ಹತ್ತಿರ ಅಶ್ವ ಶಿಕ್ಷಕನ ಕೆಲಸ ಮಾಡುತ್ತಾ ಇರುವವನಿಗಿಂತಲೂ

ಉತ್ತಮನಾದವನು. ಅವನು ಎಲ್ಲಿದ್ದಾನೆ ಎಂದು ಪತ್ತೆ ಮಾಡುವುದಕ್ಕಾಗುತ್ತಾ ಇಲ್ಲ. ಆದರೆ ಅವನನ್ನೂ ಅವನ ಕುಟುಂಬವನ್ನೂ ರಾಜಕುಮಾರರು ರಕ್ಷಿಸುತ್ತಾ ಇದ್ದಾರೆ ಅಂತ ನನ್ನ ಅನುಮಾನ."

ನಾನಾಗಿ ನಾನೇ ಸಾಯಬೇಕೆಂದು ಮನಸ್ಸು ಮಾಡಬೇಕಾಗಿರಲಿಲ್ಲ. ನಾನು ಮರಗಟ್ಟಿ ತಣ್ಣಗಾಗಿ ಬಿಟ್ಟಿದ್ದೆ. ವಿಕ್ರಮಾದಿತ್ಯನು ಎಂಥವನು ಎಂದರೆ ಕಷ್ಟ ಒದಗಿ ಬರಲಿ ಎಂದು ಕಾದುಕೊಂಡು ಕೂರುವಂಥ ಮನುಷ್ಯನಲ್ಲ. ಆದರೆ ಕಷ್ಟ ಒದಗಿ ಬರುವ ಹಾಗೆ ಮಾಡುವ ಮನುಷ್ಯ ಎನ್ನುವುದು ತಂದೆಯವರಿಗೆ, ನನಗೆ ಅಷ್ಟೇ ಏಕೆ ವಿಕ್ರಮಾದಿತ್ಯನ ಸಂಪರ್ಕವಿರುವ ಯಾರಿಗೇ ಆಗಲಿ ಗೊತ್ತಿರುವಂಥ ವಿಷಯ. ಏನಾದೀತು ಎಂದು ನಮಗೆಲ್ಲ ಗೊತ್ತಿರುತ್ತೆ. ಇಷ್ಟಾದರೂ ಹೊಸ ಮಾರ್ಗಗಳನ್ನು ಹುಟ್ಟು ಹಾಕುವ ವಿಷಯದಲ್ಲಿ ನನ್ನ ತಮ್ಮನನ್ನು ಯಾರೂ ಸರಿಗಟ್ಟಲಾರರು.

"ಆ ಹೆಣ್ಣು ಕುದುರೆ ನನಗೆ ವಾಪಸ್ ಬೇಕು. ಇನ್ನು ಅಶ್ವಪಾಲಕ ಮತ್ತು ಅವನ ಹೆಂಡತಿಗೆ ಸಂಬಂಧಿಸಿದ ಹಾಗೆ ತಾವು ನ್ಯಾಯವಾದುದನ್ನೇ ಮಾಡುತ್ತೀರಿ ಎಂದು ನನಗೆ ಖಾತರಿ ಇದೆ"

ನ್ಯಾಯವಾದ್ದು, ನ್ಯಾಯವಾದ್ದು, ಕೆಲಸ ಆಗಬೇಕಾದ್ದಷ್ಟೆ ನನಗೆ ಬೇಕಾಗಿರುವುದು. ನ್ಯಾಯವಾದ್ದು ಯಾವುದು ಎಂದು ನನಗೆ ಗೊತ್ತಿದೆಯೇ? ಬೇರೆಯವರಿಗೆ ಹಾಗಿರಲಿ ನನಗೆ? ಒಂದು ವೇಳೆ ನನಗೆ ಗೊತ್ತಿದ್ದರೂ ನ್ಯಾಯವಾದ್ದೇ ಆಗುವ ಹಾಗೆ ನಾನು ನೋಡಿಕೊಳ್ಳುವುದು ಹೇಗೆ?

"ಜಯಸಿಂಹ ಅವರೇ ಈ ವಿಷಯವನ್ನು ನನಗೆ ವರದಿ ಮಾಡುವುದಕ್ಕೆ ಹೆಚ್ಚು ಕಡಿಮೆ ಒಂದು ವಾರ ಏತಕ್ಕೆ ತೆಗೆದುಕೊಂಡಿರಿ?"

ಅವರು ಹಿಂದೆ ಮುಂದೆ ನೋಡಿದರು. "ನನ್ನ ದಾರಿಯಲ್ಲೇ ನಾನು ಹೋಗುವುದಾಗಿದ್ದರೆ ನಾನು ಈ ದಿನ ಇಲ್ಲಿ ನಿಮ್ಮ ಮುಂದೆ ನಿಂತಿರುತ್ತಾ ಇರಲಿಲ್ಲ. ನಾನು ಆದಿನಾಥ್‌ಜೀಯವರ ಹತ್ತಿರ ಹೋದೆ. ಆಮೇಲೆ ಪ್ರಧಾನಿಗಳ ಹತ್ತಿರ ಈ ವಿಷಯ ತೆಗೆದುಕೊಂಡು ಹೋದೆ. ಅವರೆಲ್ಲರೂ ನನ್ನ ಬಗ್ಗೆ ಅನುಕಂಪ ವ್ಯಕ್ತಪಡಿಸಿದರು. ಆದರೆ ಈ ಇಡೀ ಪ್ರಕರಣವನ್ನೇ ನಾನು ಮರೆತುಬಿಟ್ಟರೆ ಒಳ್ಳೆಯದು ಎಂದು ಸೂಚಿಸಿದರು."

ಒಂದು ವೇಳೆ ತಂದೆಯವರು ಇದ್ದಿದ್ದರೆ, ನನ್ನ ಬದಲಿಗೆ ಅವರ ಹತ್ತಿರಕ್ಕೆ ಈ ವಿಷಯವನ್ನು ಜಯಸಿಂಹ ಬಲೇಚ ತೆಗೆದುಕೊಂಡು ಹೋಗಿ ಬಿಡುತ್ತಿದ್ದರೇನೋ ಎಂದು ವಿಸ್ಮಿತನಾದೆ.

* * *

ನಾನು ವಿಕ್ರಮಾದಿತ್ಯನನ್ನು ನೋಡಲು ಹೊರಟೆ. ಅವನನ್ನೇ ಕರೆಸುವುದರಲ್ಲಿ ಅರ್ಥವಿಲ್ಲ. ಅವನು ಬರುವುದಕ್ಕೆ ಒಪ್ಪದೆ ಇರಬಹುದು. ಕಡೇಪಕ್ಷ ನಾನು ಆ ಅಪಮಾನದಿಂದ ಬಚಾವು ಆಗಬಹುದು.

ಸುತ್ತು ಬಳಸು ಮಾತಿನಿಂದ ಪ್ರಯೋಜನ ಇಲ್ಲ ಅನ್ನಿಸಿ – "ಕಾಲಿಬಿಜಲಿಯನ್ನು ಜಯಸಿಂಹ ಬಲೇಚಾ ಅವರಿಗೆ ಹಿಂತಿರುಗಿಸಿಬೇಕು ಎಂದು ಒತ್ತಾಯಿಸುತ್ತೇನೆ." – ಹಾಗೆ ಮಾಡಿದರೆ ಅವರು ನಿನ್ನ ವಿರುದ್ಧ ದೋಷಾರೋಪಣೆ ಮಾಡುವುದಿಲ್ಲ,

"ಕಾಲಿಬಿಜಲಿ ಅಂದರೆ ಯಾರು?"

"ಜಯಸಿಂಹ ಬಲೇಚ ಅವರ ಅಶ್ವ ಶಾಲೆಯಿಂದ ನೀನು ಕದ್ದು ತಂದ ಕುದುರೆ"

"ನನ್ನ ಕುದುರೆಯ ಹೆಸರು 'ಕಾಜಲ್' ಅಂತ. ನಾನು ಅದನ್ನು ಅಜ್ಮೀರ್ ಹತ್ತಿರ ಒಬ್ಬ ಪಠಾಣನ ಕಡೆಯಿಂದ ಕೊಂಡುಕೊಂಡೆ'

"ಅದನ್ನು ಕೊಂಡುಕೊಂಡಿದ್ದಕ್ಕೆ ನಿನ್ನ ಹತ್ತಿರ ದಾಖಲೆಗಳಿವೆಯೆ?"

"ಖಂಡಿತಾ. ಆದರೆ ಅವುಗಳನ್ನು ನಾನು ಎಸೆದುಬಿಟ್ಟೆ"

"ಬೇರೆ ಏನಾದರೂ ಸಾಕ್ಷಿ?"

"ನಾನು ಕೊಂಡು ತಂದದ್ದು ಹೆಂಡತಿಯನ್ನಲ್ಲ, ಕುದುರೆ ಅಷ್ಟೆ"

"ನೀನು ರಾವತ್ ಬಲೇಚ ಅವರಿಗೆ ಆ ಕುದುರೆಯನ್ನು ವಾಪಸ್ ಕೊಡುತ್ತೀಯಾ"

"ಇಲ್ಲ ನಾನು ಕೊಡುವುದಿಲ್ಲ"

"ಇದರ ಪರಿಣಾಮಗಳು ಏನು ಅಂತ ನಿನಗೆ ತಿಳಿದಿದೆಯಾ? ರಾವತ್ ಅವರು ತಂದೆಯವರ ಸ್ನೇಹಿತರು ಮತ್ತು ಅವರ ಅತ್ಯಂತ ನಂಬಿಕಸ್ಥ ಸೇನಾಧಿಕಾರಿ.. ಕೇವಲ ಒಂದು ಕುದುರೆಯ ಸಲುವಾಗಿ ನೀನು ಅವರನ್ನೂ ಅವರ ಕುಲವನ್ನೂ ದೂರ ಮಾಡಿಕೊಳ್ಳಬೇಕು ಅನ್ನುತ್ತೀಯಾ? ಗುಜರಾತ್ ಸುಲ್ತಾನನ ವಿರುದ್ಧವಾಗಿ ನಮ್ಮ ಪರವಾಗಿ ಹೋರಾಡುತ್ತಿರುವ ಗೋದ್‌ವಾರ್‌ನ ಸೋಲಂಕಿಗೆ ಈ ಕುದುರೆಯನ್ನು ಮಾರಲಾಗಿತ್ತು. ನಿನ್ನ ಕೃತ್ಯಗಳ ರಾಜಕೀಯ ಪರಿಣಾಮಗಳ ಕಿಂಚಿತ್ತಾದರೂ ಪರಿವೆ ನಿನಗಿದೆಯೆ?"

ನನ್ನ ನಾಲಿಗೆ ಒಣ ಬೂದಿಯ ಹಾಗೆ ರುಚಿಹೀನವಾಯಿತು. ನನ್ನ ತಮ್ಮನೊಂದಿಗೆ ನಾನು ತರ್ಕಕ್ಕೆ ಇಳಿದಿದ್ದೇನಲ್ಲ ನಾನೆಂಥ ಕತ್ತೆ?

"ಕುದುರೆ ನನ್ನದು. ಒಂದು ವೇಳೆ ಅದು ನನ್ನದಲ್ಲದೆ ಹೋದರೂ ರಾವ್, ರಾವತ್, ರಾಜ, ಯಾರೇ ಆದರೂ ನನ್ನಿಂದ ಅದನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಪುಕ್ಕಲುತನಕ್ಕೆ ನೀನು ಇನ್ನೊಂದು ಹೆಸರು ಅಣ್ಣ. ಆದರೆ ನಾನು ರಾಜನ ಮಗ. ನನಗೆ ಏನು ಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಸಿಂಹಾಸನವೂ ಸೇರಿದಂತೆ." ಹಾಗೆಂದು ಹೇಳಿ ಅವನು ಮುಗುಳ್ನಕ್ಕ. ಇಲ್ಲ ಅವನಿಗೆ ಅದು ಸಾಧ್ಯವಿಲ್ಲ. ಕುಹಕ ನಗೆ ಬೀರಿದ.

* * *

ನಾನು ಕಛೇರಿಗೆ ಹಿಂತಿರುಗಿ ಮಂಗಳನನ್ನು ಕರೆಸಿದೆ.

"ರಾಜಕುಮಾರ ವಿಕ್ರಮಾದಿತ್ಯನ ಹೊಸ ಕುದುರೆ ಎಲ್ಲಿದೆ ಎಂದು ನೀನು ಪತ್ತೆ ಹಚ್ಚಲು ಸಾಧ್ಯವೆ? ಅದು ಎಲ್ಲಿದೆ ಎಂದು ಪತ್ತೆ ಹಚ್ಚಲು ಸಾಧ್ಯಾವಾದರೆ, ಎಷ್ಟು ಜನ ಅದರ ರಕ್ಷಣೆ ಮಾಡುತ್ತಿದ್ದಾರೆ ಎಂದು ನನಗೆ ತಿಳಿಸು. ನಿನಗೆ ಇದನ್ನು ನಾನು ಹೇಳಬೇಕಾಗಿಲ್ಲ ಎಂದು ನನಗೆ ಗೊತ್ತು. ಆದರೆ ಕಿಂಚಿತ್ತೂ ಸಂಶಯ ಬರದೆ ಇರುವ ಹಾಗೆ ಮಾಡಲು ಸಾಧ್ಯವೆ ಅಂತ?"

ಅದರಲ್ಲೇನೂ ಅರ್ಥವಿಲ್ಲ ಎಂದು ನನಗೆ ಗೊತ್ತಿದೆ. ಆದರೆ ನಾನು ಪ್ರಾಚೀನ ಕಾಲದ ಮಹಾನ್ ರಾಜನೀತಿಜ್ಞ ಕೌಟಿಲ್ಯನ ಸಲಹೆಯನ್ನು ನೆನಪಿಸಿಕೊಂಡೆ–'ಸ್ಪಷ್ಟವಾಗಿ ತಿಳಿದಿರುವುದನ್ನು ಅದು ಸ್ಪಷ್ಟವಾಗಿ ತಿಳಿದಿದೆ ಎನ್ನುವ ಕಾರಣಕ್ಕೆ ತಳ್ಳಿ ಹಾಕಬೇಡ. ತಾಳೆ ನೋಡಬೇಕಾಗಿರುವ ವಿಷಯಗಳ ಪಟ್ಟಿ ಮಾಡಿಕೋ. ಅದರಲ್ಲಿ ಪ್ರತಿಯೊಂದು ಅಂಶವನ್ನೂ ಎಚ್ಚರಿಕೆಯಿಂದ ಪರಿಶೀಲಿಸು.'

ನಾನು ಕೂಡಲೇ ಕುಳಿತು ಮೂರು ಪರ್ಯಾಯ ಸಂದರ್ಭಗಳನ್ನು ಬರೆದಿಟ್ಟೆ. (1) ನಮಗೆ 'ಕಾಲಿಬಿಜಲಿ' ಸಿಕ್ಕುವುದಿಲ್ಲ, (2) ಪತ್ತೆ ಮಾಡುತ್ತೇವೆ ಮತ್ತು ಅದನ್ನು ವಶಕ್ಕೆ ತೆಗೆದುಕೊಳ್ಳುತ್ತೇವೆ, (3) ಪತ್ತೆ ಮಾಡುತ್ತೇವೆ. ಆದರೆ ವಶಕ್ಕೆ ತೆಗೆದುಕೊಳ್ಳುವುದಿಲ್ಲ. ನಾವು ಕೈಗೊಳ್ಳಬಹುದಾದ ಕ್ರಮಗಳ ಒಂದು ಪಟ್ಟಿ ಸಿದ್ಧಪಡಿಸಿದೆ. ಪಟ್ಟಿಯ ಕೊನೆಗೆ ದಪ್ಪ

ಅಕ್ಷರಗಳಲ್ಲಿ ಬರೆದೆ. ಕಾಲವೇ ಎಲ್ಲಕ್ಕಿಂತ ಬಹಳ ಮುಖ್ಯವಾದ್ದು. ಎಲ್ಲ ಅಂಶಗಳನ್ನೂ ಸಾದ್ಯಂತವಾಗಿ ಆಲೋಚಿಸುತ್ತೇನೆ. ತತ್‌ಕ್ಷಣವೇ ಕಾರ್ಯ ಪ್ರವೃತ್ತನಾಗುತ್ತೇನೆ. ಆದರೆ ಕಾನೂನಿನ ಚೌಕಟ್ಟಿನಲ್ಲಿ ಮಾತ್ರ.

ಯಾವುದನ್ನೇ ಆದರೂ ಬರೆದಿಟ್ಟಾಕ್ಷಣಕ್ಕೇ ತನಗೆ ತಾನೇ ಆಗಿಬಿಡುವುದಿಲ್ಲ. ಆದರೆ ಕೊನೇಪಕ್ಷ ನೀವೇನು ಮಾಡಬೇಕೆಂಬುದು ನಿಮಗೆ ಗೊತ್ತಿರಬೇಕು.

"ಅದು ಅಲ್ಲಿಲ್ಲ, ಕುದುರೆಯಾಳು, ಅಶ್ವ ಶಿಕ್ಷಕ ಹಾಗೂ ಕುದುರೆಗೆ ಸಂಬಂಧಿಸಿದವರಾರೂ ಬಾಯಿ ಬಿಡುತ್ತಿಲ್ಲ."

"ವಿಕ್ರಮಾದಿತ್ಯನ ಚಲನವಲನಗಳ ಮೇಲೆ ನಿಗಾ ಇಡಲು ನಿನ್ನ ಕಡೆಯ ಇಬ್ಬರನ್ನು ಹಾಕು. ಅವನನ್ನು ಯಾರು ಯಾರು ಭೇಟಿಯಾಗುತ್ತಾರೆ ಮತ್ತು ಎಷ್ಟು ಹೊತ್ತು ಆ ಭೇಟಿ ನಡೆಯುತ್ತದೆ ಎನ್ನುವುದು ನನಗೆ ಗೊತ್ತಾಗಬೇಕು. ಅವನು ಮನೆಯಿಂದ ಹೊರಕ್ಕೆ ಹೊರಟ ಕೂಡಲೇ ನನಗೆ ಅದು ತಿಳಿಯಬೇಕು. ಈ ದಿನ ರಾತ್ರಿ ಒಂಬತ್ತು ಗಂಟೆಗೆ ನನ್ನ ಕಛೇರಿಯಲ್ಲಿ ಭದ್ರತಾ ಸಮಿತಿಯ ಸಭೆ ಇದೆ ಎಂದು ಪ್ರಧಾನಿ, ನ್ಯಾಯಾಧಿಕಾರಿ ಮತ್ತು ಗೃಹ ಸಚಿವರಿಗೆ ತಿಳಿಸು. ರಕ್ಷಣಾ ಮುಖ್ಯಸ್ಥರಿಗೆ ಅದೇ ಸಮಯಕ್ಕೆ ಹಾಜರಿರಬೇಕೆಂದು ನೀನು ಕೊಡುವ ಆದೇಶಕ್ಕೆ ಕಾದಿರಬೇಕೆಂದೂ ತಿಳಿಸು. ರಾವತ್ ಜಯಸಿಂಹ ಬಲೇಚ ಅವರಿಗೆ ಒಂಬತ್ತು ಗಂಟೆ ಹತ್ತು ನಿಮಿಷಕ್ಕೆ ಅಲ್ಲಿ ಹಾಜರಿರಬೇಕೆಂದು ತಿಳಿಸು. ನಾವೇ ಮುಖ್ಯ ಎಂದು ಅನ್ನಿಸುವ ಸಮಯ ಅಲ್ಲ ಬಿಕ್ಕಟ್ಟಿನ ಕಾಲ. ಈ ಆಟ ಮುಗಿದಾಗ ನಿನ್ನ ಕೆಲಸಕ್ಕೂ ಮುಕ್ತಾಯ."

ನಗರ ಯೋಜನಾಧಿಕಾರಿಯ ಜೊತೆ ಚರಂಡಿ ವ್ಯವಸ್ಥೆಯ ಜಾಲವನ್ನು ಚೆನ್ನಾಗಿ ಕಣ್ಣಿಟ್ಟು ನೋಡಿದೆ. ಕೊಳಚೆಯ ವಿಷಯದಲ್ಲಿ ನನ್ನ ಆಸಕ್ತಿ ಸಾಂಕ್ರಾಮಿಕವಾಗಿದ್ದಿರಬೇಕು. ಕೊಳಾಯಿ, ಮಲ ಮತ್ತು ಚರಂಡಿ ನೀರಿಗೆ ಬದಲು ಆದನ್ನೊಂದು ಸಮಸ್ಯೆಯ ಹಾಗೆ ಕಾಣಲು ಶುರು ಮಾಡಿದ. ಈಗ ಅವನು ಇನ್ನೊಂದು ಮುಖವಾದ ಅದರ ಪರಿಹಾರದ ಬಗ್ಗೆ ಅಂದಾಜು ಹಾಕುತ್ತಾ ಇದ್ದ.

ಎರಡು ಸಲ ನನಗೆ ಅಡ್ಡಿ ಆಯಿತು. ಎರಡೂ ಸಲ ಆದದ್ದು ಮಂಗಳನಿಂದ. ಅವನು ನನ್ನನ್ನು ಪಕ್ಕಕ್ಕೆ ಒಳಕೋಣೆಗೆ ಕರೆದೊಯ್ದ. ನನ್ನ ತಮ್ಮ ವಿಕ್ರಮಾದಿತ್ಯನು ತನ್ನ ಮೂರು ಜನ ಅತ್ಯಂತ ಆಪ್ತಮಿತ್ರರಾದ ಫತೇಹ್‌ಸಿಂಹ, ಸಜ್ಜಾದ್ ಹುಸೇನ್ ಮತ್ತು ಮಹೇಶ್ ಇವರುಗಳ ಜೊತೆಯಲ್ಲಿ ಸಮಾಲೋಚನೆ ಮಾಡುತ್ತಿದ್ದನು. ಇದು ಮೊದಲನೆಯ ಸುದ್ದಿ. ಎರಡನೆಯ ಸುದ್ದಿ ಯಾವುದೆಂದರೆ ಸಜ್ಜಾದ್ ಹುಸೇನನು ವಿಕ್ರಮಾದಿತ್ಯನ ಮನೆಯಿಂದ ತುಂಬ ಅವಸರದಿಂದ ಹೊರಟ ಎಂಬುದು.

"ಸಜ್ಜಾದ್ ಹುಸೇನ್ ಕೋಟೆಯಿಂದ ಹೊರಟಿದ್ದಾನೆ ಅಂತ. ಆದರೆ ಅವನು ಗಂಭೀರಾ ನದಿಯನ್ನು ದಾಟಿದ ಮೇಲೆ ಅವನನ್ನು ಅಡ್ಡಗಟ್ಟಬೇಕು, ಅದಕ್ಕಿಂತ ಮುಂಚೆ ಅಲ್ಲ. ನಾನು ಮತ್ತೊಮ್ಮೆ ಹೇಳುತ್ತಾ ಇದ್ದೀನಿ ಮುಂಚೆ ಅಲ್ಲ. ಯಾವುದೇ ಮದುವೆಯ ತಂಡ ಅಥವಾ ನೌಟಂಕಿ ನಾಟ್ಯತಂಡ ಸಮೀಪದಲ್ಲಿ ಎಲ್ಲೂ ಇಲ್ಲ ಅನ್ನುವುದನ್ನು ನಿನ್ನ ಕಡೆಯವರು ಖಾತರಿ ಪಡಿಸಿಕೊಂಡು ಇದನ್ನು ಮಾಡಬೇಕು. ಸಜ್ಜಾದ್ ಜೊತೆ ಬೆಂಗಾವಲು ಪಡೆ ಇರಬಹುದು. ಆದರೆ ಅವರ ಸಂಖ್ಯೆ ನಮ್ಮವರ ಸಂಖ್ಯೆಯನ್ನು ಮೀರಬಾರದು ಅನ್ನುವುದನ್ನು ಖಾತರಿ ಪಡಿಸಿಕೋ ಸಜ್ಜಾದ್‌ನ್ನು ಹಿಡಿದು ಸುಲಿಗೆ ಮಾಡಿ ಅವನ

ಹತ್ತಿರವಿರುವ ಕಾಗದ, ಪತ್ರ ಹಣ ಎಲ್ಲವನ್ನೂ ವಶಪಡಿಸಿಕೊಳ್ಳಿ. ಅವನನ್ನು ಅವನ ಕಡೆಯವರನ್ನು ಕುಂಭಲ್‌ಗರ್ ಕೋಟೆಯಲ್ಲಿ ಸೆರೆಯಲ್ಲಿಡು. ಮಂಗಳ್ ನೀನು ಚಿತ್ತೂರನ್ನು ಬಿಡೋದೇ ಆಗಲಿ ಅಥವಾ ನಿನ್ನ ಮಂದಿಯನ್ನು ಕೊಳ್ಳೆ ಹೊಡೆಯಲು ಕೊಂಡೊಯ್ಯುವುದೇ ಆಗಲಿ ಮಾಡಕೂಡದು. ನೀನೇನಿದ್ದರೂ ನನ್ನ ಸೂಚನೆಗಳನ್ನು ಸರಿ ಹೊಂದಿಸಿ ಅವುಗಳನ್ನೆಲ್ಲಾ ಅಕ್ಷರಶಃ ಪಾಲಿಸಬೇಕು"

ನಗರ ಯೋಜಕ ಅತ್ಯಂತ ಸಂಭ್ರಮದಲ್ಲಿದ್ದ. ಹಳೆಯ ಚರಂಡಿ ವ್ಯವಸ್ಥೆಯನ್ನು ದುರಸ್ತಿಪಡಿಸುವ, ವಿಸ್ತರಿಸುವ ಅಥವಾ ಹಳೆಯ ವ್ಯವಸ್ಥೆಯನ್ನು ಹಂತ ಹಂತವಾಗಿ ಪೂರ್ತಿಯಾಗಿ ಬದಲಿಸಿ ಬಿಡುವ ಬಗ್ಗೆ ಆತನ ಯೋಜನೆಗಳನ್ನು ಸಲ್ಲಿಸಲು ಹಾಗೂ ಅದಕ್ಕೆ ತಗಲುವ ವೆಚ್ಚ ಮತ್ತು ಯೋಜನೆಗೆ ಹಣಕಾಸು ಒದಗಿಸಲು ಹೊಸದಾಗಿ ನೀರಿನ ತೆರಿಗೆ ಹಾಕುವುದು ಅಥವಾ ಅವನು ರೂಪಿಸುವ ಯಾವುದಾದರೂ ತಕ್ಕನಾದ ಯೋಜನೆಯ ಬಗ್ಗೆ ವರದಿಯನ್ನು ಬರೆದುಕೊಡಲು ನಾನು ಹೇಳಿದೆ. ದಿಢೀರ್ ಸ್ನಾನ ಮಾಡಿ ವಸ್ತ್ರವನ್ನು ಬದಲಿಸಿ, ನನ್ನ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡೆ.

ಮೊದಲು ಬಂದವರು ಆದಿನಾಥರು. ಈ ತುರ್ತು ಸಭೆಯನ್ನು ಕರೆದಿರುವುದೇತಕ್ಕೆ ಎಂಬುದರ ಸುಳಿವೇನಾದರೂ ಅವರಿಗೆ ಸಿಕ್ಕಿದ್ದರೆ ನನ್ನೊಂದಿಗೆ ಅದನ್ನು ಹಂಚಿಕೊಳ್ಳುವ ಅಥವಾ ನನ್ನನ್ನು ಪರೀಕ್ಷಿಸುವ ಉದ್ದೇಶ ಅವರಿಗಿರುವುದಿಲ್ಲ. ಎಲ್ಲಾ ಒಳ್ಳೆಯ ಸಮಯಕ್ಕೆ ಆಗುತ್ತಿವೆ. ಎಷ್ಟೊಂದು ವಿಚಿತ್ರ! ಈ ಮನುಷ್ಯನಿಂದ ನಾನು ಎಷ್ಟೊಂದೆಲ್ಲಾ ಕಲಿತೆ. ಆತನನ್ನು ನಾನು ಇಷ್ಟಪಡದೆ ಇರುವುದಕ್ಕೆ ಕಾರಣವೇ ಇಲ್ಲ. ಇಷ್ಟಾದರೂ ಅವರನ್ನು ಅತಿಯಾಗಿ ಇಷ್ಟಪಡುತ್ತಿರಲಿಲ್ಲ. ಅವರ ಗುಣ, ತಮ್ಮ ನಾಲಿಗೆಯನ್ನು ಹಿಡಿದಿಟ್ಟುಕೊಂಡಿದ್ದರು ಅನ್ನುವುದಲ್ಲ. ಆದರೆ ಅವರು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದರು ಅನ್ನುವುದು. ಅದು ನಿಷ್ಕ್ರಿಯ ಕೇಳಿಸಿಕೊಳ್ಳುವಿಕೆ ಅಲ್ಲ. ನಮ್ಮ ಪ್ರಧಾನಿ ಪೂರ್ಣಮಲ್‌ಜೀಯವರು ಹಾಗೆ ಮಾಡುತ್ತಿದ್ದರು ಅನ್ನುವುದು ನನ್ನ ಅನುಮಾನ. ಆದರೂ ಜನಗಳು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿದ್ದರು. ಆದರೆ ಮುಚ್ಚಿದ ಮನಸ್ಸಿನಿಂದ. ಆದರೆ ಅದೇ ಆದಿನಾಥ್‌ಜೀಯವರದು ನಿರ್ಭಾವುಕ ಅಭಿವ್ಯಕ್ತಿಯಾದರೂ ಪೂರ್ವಾಪರಗಳನ್ನು ತೂಗುವುದರಲ್ಲಿ ಕಾಲ ಕಳೆಯುತ್ತಾರಾದರೂ ತಾವು ಕೇಳಿದ್ದು ಸಕಾರಣವಾಗಿದೆ ಅನ್ನಿಸಿದರೆ ಅದು ನನ್ನ ಅಭಿಪ್ರಾಯ ಅನ್ನುವ ಕಾರಣಕ್ಕೆ ಅಥವಾ ಅದು ಒಂದು ವಿಷಯದ ಬಗ್ಗೆ ಪಡೆದುಕೊಂಡ ವಿವೇಕ ಅನ್ನುವ ಕಾರಣಕ್ಕೆ ಅದಕ್ಕೇ ಅಂಟಿಕೊಂಡು ಕೂರುವುದು ಗೌರವದ ಸಂಗತಿ ಎಂದು ತಿಳಿದಿಲ್ಲ.

"ಏನಿದೆಲ್ಲ ಗದ್ದಲ ಯಾವುದಕ್ಕೆ? ಅದೇನಾದರೂ ಆಗಿರಲಿ, ನಾಳೆ ಬೆಳಿಗ್ಗೆವರೆಗೂ ಮುಂದಕ್ಕೆ ಹಾಕಲು ಬರುತ್ತಿರಲಿಲ್ಲವೇ?" ನನ್ನ ಬಂಧು ಲಕ್ಷ್ಮಣ್‌ಸಿಂಹಜೀಯವರಿಗೆ ನನ್ನ ಜೊತೆ ಜಗಳಕ್ಕಿಳಿಯುವ ಮುನ್ನ ಬಾಗಿಲು ಹಾಕುವವರೆಗೂ ಕಾಯಲು ಆಗಲಿಲ್ಲ. ಸ್ವಲ್ಪ ಯೋಚಿಸಿದ ಮೇಲೆ "ಮಾನ್ಯ ಮಹಾಸ್ವಾಮಿಯವರೇ" ಅಂತ ಸೇರಿಸಿದರು.

ಗೃಹಮಂತ್ರಿಯವರು ಭಾರಿ ಸ್ಥೂಲಕಾಯದ ಮನುಷ್ಯ ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ನನಗೆ ಅವರ ನೆನಪಿದೆ. ಅವರು ಒಳ್ಳೆ ಠಾಕುಠೀಕಾದ ಎತ್ತರವಾದ ವ್ಯಕ್ತಿ. ಸದಾ ಧಾವಂತದಲ್ಲಿರುವ ಮನುಷ್ಯ. ಅವರು ನಮ್ಮ ಅತ್ಯುತ್ತಮ ಸೇನಾನಾಯಕರಲೊಬ್ಬರು. ತಂದೆಯವರು ಅವರಿಗೆ ಗೃಹ ಇಲಾಖೆಯ ಅಧಿಕಾರ ವಹಿಸಿಕೊಟ್ಟಾಗ ಅವರಿಗೆ ತುಂಬಾ ಅಸಮಾಧಾನವಾಗಿತ್ತು.

"ನಾವು ಬೇರೆ ಎಲ್ಲೋ ಯುದ್ಧ ಮಾಡುತ್ತಿರುವಾಗ, ಚಿತ್ತೂರಿಗೆ ಯಾರಾದರೂ ಮುತ್ತಿಗೆ ಹಾಕಿದರೂ ಅಂದರೆ – ದೇವರ ದಯೆಯಿಂದ ಹಾಗಾಗದೆ ಇರಲಿ – ಆಗ

ನಾನು ಸೈನ್ಯವನ್ನು ಮುನ್ನಡೆಸಲು ನಮ್ಮ ಹೆಣ್ಣು ಮಕ್ಕಳಿಗೆ ಹೇಳಲೇನು?" – ತಂದೆಯವರು ಅವರಿಗೆ ಪ್ರಶ್ನೆ ಹಾಕಿದ್ದರು. "ಅದೂ ಅಲ್ಲದೆ ನಾನು ಇಲ್ಲೇ ಇದ್ದಾಗಲೂ ಆಂತರಿಕ ರಕ್ಷಣೆಯ ಜವಾಬ್ದಾರಿಯನ್ನು ಹೊರಲು ನನಗೆ ನಂಬಿಕೆ ಇರುವಂಥವರು ಯಾರಾದರೂ ನನಗೆ ಬೇಕು."

ಲಕ್ಷ್ಮಣಸಿಂಹಜೀಯವರು ಗುರುಗುಟ್ಟುತ್ತ ಇದ್ದರು. ಅವರ ಮೂಗಿನ ಹೊಳ್ಳೆಗಳು ಅರಳಿದ್ದುವು. ಈ ಹಿಂದೆಯೂ ಅವರು ಈಗಿನ ಹಾಗೆಯೇ ಎಗರಾಡಿದ್ದುಂಟು – ಆದರೆ ಬೇರೆ ಕಾರಣಕ್ಕೆ. ಯೋಧನ ಕಡು ಕಷ್ಟದ ಜೀವನವನ್ನು ತ್ಯಜಿಸಿದ ಮೇಲೆ ಅವರು ಎಷ್ಟೊಂದು ದಪ್ಪ ಆಗಿಬಿಟ್ಟಿದ್ದರು ಎಂದರೆ, ಅವರನ್ನು ಆಸನದ ಮೇಲೆ ಆರಾಮವಾಗಿ ಕೂಡಿಸಲು ಇಲ್ಲವೆ ಎಬ್ಬಿಸಲು ಅವರಿಗೆ ಯಾರಾದರೂ ಒಬ್ಬರ ಸಹಾಯ ಬೇಕಾಗುತ್ತಿತ್ತು. ಅವರು ತುಂಬ ವೇಗವಾಗಿ ಮಾತನಾಡುತ್ತಿದ್ದರು. ಮತ್ತು ಅದರ ಜೊತೆಗೆ ಏದುಸಿರು ಬಿಡುವುದು ಎರಡೂ ಸೇರಿ ಅವರು ಹೇಳುವುದನ್ನು ತಿಳಿದುಕೊಳ್ಳುವುದು ತುಂಬ ಕಷ್ಟ ಆಗುತ್ತಿತ್ತು.

"ನನ್ನದೇ ಗುದವನ್ನು ನಿಮ್ಮ ಆಸನಕ್ಕಿಂತಲೂ ಎತ್ತರವಾದ ಆಸನದ ಮೇಲೆ ಇಡಬೇಕು ಅಂತ ನಿಮ್ಮ ಬಯಕೆಯೇನು?" ಅವರಿಗೆ ಅನುಕೂಲವಾಗುವಂತೆ ಮಾಡಲು ನಾನು ಮಂಗಳನಿಗೆ ಹೇಳಿ ನಾಲ್ಕು ಮೆತ್ತೆಗಳನ್ನು ಒಂದರ ಮೇಲೊಂದು ಇಡುವಂತೆ ಹೇಳಿ ಇಡಿಸಿದ್ದೆ. "ನಾನು ಈಗ ಮುದುಕನಾಗಿರಬಹುದು, ದಪ್ಪವೂ ಆಗಿರಬಹುದು. ಮತ್ತೆ ಒಂದೇ ಸಮ ಹೂಸೂ ಬಿಡಬಹುದು ಆದರೆ ಮಹಾರಾಜಕುಮಾರರಿಗೆ ಅಗೌರವವುಂಟು ಮಾಡುವಷ್ಟು ಮಟ್ಟಿಗೆ ನನ್ನ ಬುದ್ಧಿ ಕೊಳೆತು ನಾರುತ್ತಿಲ್ಲ."

ನಾನು ಕೇವಲ ಸ್ವಾರ್ಥಿಯಾಗಿರುತ್ತಿದ್ದೆ, ಅದಕ್ಕಿಂತ ಹೆಚ್ಚಲ್ಲ. ಕಳೆದ ಸಲ ನಾನು ಮತ್ತು ಮಂಗಳ್ ಇಬ್ಬರೂ ಸೇರಿ ಅವರನ್ನು ಎತ್ತಬೇಕಾಯಿತು. ನಾವಿಬ್ಬರೂ ಹೆಚ್ಚು ಕಡಿಮೆ ತಲೆಕೆಳಕಾಗಿ ಬಿಟ್ಟೆವು.

"ನೀವು ನಮಗೆ ತಂದೆ ಹಾಗೆ ಮಾವ. ನಾನು ನಿಮ್ಮ ಕಾಲ ಕೆಳಗೆ ಕೂತರೂ ಏನೂ ಯೋಚನೆ ಇಲ್ಲ"

"ತಂದೆಯ ಹಾಗೆ ನಿಜ. ಅದಕ್ಕಿಂತ ಕಿಂಚಿತ್ತೂ ಜಾಸ್ತಿ ಅಲ್ಲ. ನಿಮ್ಮ ಪೀಠ ಮತ್ತು ಉನ್ನತ ಸ್ಥಾನಕ್ಕೆ ಬದ್ಧರಾಗಿರಿ, ಮಹಾರಾಜ್ ಕುಮಾರ್. ಆಗಲೇ ಸೂರ್ಯ ಚಂದ್ರ ನಕ್ಷತ್ರಗಳೆಲ್ಲ ಆಕಾಶದಲ್ಲಿ ತಮ್ಮ ತಮ್ಮ ಜಾಗದಲ್ಲಿ ಇರುವುದು"

"ಗೃಹ ಮಂತ್ರಿಗಳು ಆಗಲೇ ಮಾತಿನ ಬೆಣ್ಣೆ ಹಚ್ಚುವುದಕ್ಕೆ ಶುರು ಮಾಡಿಬಿಟ್ಟಿದ್ದಾರೆ." ಪ್ರಧಾನಿ ಪೂರಣ್‌ಮಲ್‌ಜೀಯವರು ನಮಗೆ ಯಾರಿಗೂ ಗೊತ್ತಾಗದ ಹಾಗೆ ಸದ್ದಿಲ್ಲದೆ ಬಂದು ಬಿಟ್ಟರು. ಇಲ್ಲೊಂದು ಒಗಟಿತ್ತು. ದುರ್ಲಕ್ಷಣದ್ದಲ್ಲ, ಆದರೆ ಗುಟ್ಟಾದ್ದು. ನಯವಾದ, ಆಪ್ಯಾಯಮಾನವಾದ ಮತ್ತು ಏನೊಂದೂ ಭಾವೋದ್ರೇಕವಿಲ್ಲದ, ಬದುಕಲು ಬೇಕಾದ ಮುಂದುವರಿದ ಕೌಶಲ. ಕೇವಲ ತನಗಷ್ಟೇ ಅಲ್ಲ, ಮೇವಾಡಕ್ಕೆ. ತನ್ನನ್ನು ನಂಬಲಾಗದು ಎಂಬ ಅನಿಸಿಕೆಗೆ ಬೇಕೆಂದೇ ಒತ್ತಾಸೆ ನೀಡುತ್ತಾರೆ ಎಂದು ನನಗೆ ಅನಿಸುತ್ತದೆ. ಆ ರೀತಿಯಲ್ಲಿ ಅವರು ತನ್ನ ದೂರವನ್ನು ಕಾಪಾಡಿಕೊಳ್ಳಲು ಮತ್ತು ತನ್ನ ಆಯ್ಕೆಗಳನ್ನು ಮುಕ್ತವಾಗಿಟ್ಟುಕೊಳ್ಳಲು ಶಕ್ತರಾಗಿದ್ದಾರೆ.

"ಮಹಾಸ್ವಾಮಿಯವರು ಸುದೀರ್ಘ ಕಾಲ ಬಾಳಬೇಕು ಮತ್ತು ನನ್ನ ಆಯುಷ್ಯವೂ ತಮಗೆ ಸೇರಲಿ ಪ್ರಭು" ಪ್ರಧಾನ ಮಂತ್ರಿಯವರ ಆಶೀರ್ವಚನವನ್ನು ಅಂಗೀಕರಿಸುವ ಸಲುವಾಗಿ ನನ್ನ ಶಿರಸ್ಸನ್ನು ಸ್ವಲ್ಪ ಬಾಗಿಸಿದೆ. ಸೂರ್ಯವಂಶೀಯರಾದ ನಮ್ಮಲ್ಲಿ ಇಬ್ಬರು ಪ್ರಧಾನಿಗಳಿದ್ದಾರೆ. ತಂದೆಯವರು ನಮ್ಮ ಕುಲ ದೈವವಾದ ಪಂಚಮುಖದ ಏಕಲಿಂಗಜೀಗೆ

ದಿವಾನರು ಅಥವಾ ಪ್ರಧಾನಿ ಮತ್ತು ಅವರ ಕುಲ ಸಂಜಾತ ಹಾಗೂ ಈ ಭೂಮಿಯ ಮೇಲೆ ಅವರ ಪ್ರತಿನಿಧಿ. ಈಗ ತಾನೇ ಆಗಮಿಸಿದ ಪೂರ್ಣಮಲ್‌ಜೀಯವರು ನಮ್ಮ ತಂದೆ ರಾಣಾ ಅವರ ಪ್ರಧಾನಿ.

"ನಾನು ಸಂಕ್ಷಿಪ್ತವಾಗಿ ಮಾತನಾಡಿ ನಿಲ್ಲಿಸಿ, ನೇರವಾಗಿ ವಿಷಯಕ್ಕೆ ಬರುತ್ತೇನೆ. ಈ ಸುರಕ್ಷಣಾ ಸಮಿತಿಯ ಸಭೆಯನ್ನು ಕರೆಯುವುದರಲ್ಲಿ ನಾನು ತರಾತುರಿಯಾಗಿ ನಡೆದುಕೊಂಡಿರಬಹುದು. ಒಂದು ವೇಳೆ ನಿಜವಾಗಿದ್ದರೆ ನಾನು ಅದಕ್ಕೆ ಮುಂಚೆಯೇ ತಮ್ಮೆಲ್ಲರ ಕ್ಷಮೆ ಕೋರುತ್ತೇನೆ. ಆದರೆ ನಾವು ಸಮಯ ಮತ್ತು ರಹಸ್ಯವನ್ನು ಕಾಯ್ದುಕೊಳ್ಳಬೇಕಾಗಿತ್ತು. ನಮ್ಮ ಸಭೆಯ ಮೊದಲ ಭಾಗದಲ್ಲಿ ನಾವು ಮೇವಾಡದ ಅಂತಿಮ ನ್ಯಾಯಪೀಠವಾಗಿ ಕಾರ್ಯ ನಿರ್ವಹಿಸುತ್ತೇವೆ. ನಡವಳಿಯನ್ನು ನಾನೇ ದಾಖಲಿಸಿರುತ್ತೇನೆ."

"ಫಿರ್ಯಾದಿ ಯಾರು ಯಾರು? ಮತ್ತು ಅಪರಾಧ ಏನು?" ಲಕ್ಷ್ಮಣ್‌ಸಿಂಹಜೀಯವರು ಮಧ್ಯೆ ತಲೆ ಹಾಕಿದರು.

"ಜಯಸಿಂಹ ಬಲೇಚ್ ಅವರನ್ನು ಕರೆಯಿರಿ"

ಆದಿನಾಥ್‌ಜೀಯವರಾಗಲಿ, ಪ್ರಧಾನಿಗಳಾಗಲಿ, ಜಯಸಿಂಹ ಬಲೇಚ್ ಪ್ರಕರಣದ ಮುನ್ನರಿವು ಕಿಂಚಿತ್ತಾದರೂ ಇತ್ತೆಂಬುದನ್ನು ತೋರಿಸಿಕೊಳ್ಳಲಿಲ್ಲ, ಈಗ ಇನ್ನೇನು ವಿಷಯ ಬಹಿರಂಗವಾಗಲಿರುವ ಸಂದರ್ಭದಲ್ಲಿ ಅವರು ಹೇಗೆ ಪ್ರತಿಕ್ರಿಯಿಸುತ್ತಾರೋ ಎಂದು ನಾನು ವಿಸ್ಮಿತನಾದೆ. ಮಂಗಳನು ಜಯಸಿಂಹ ಬಲೇಚ್ ಅವರನ್ನು ಒಳಕ್ಕೆ ಬಿಟ್ಟನು. ರಾವತ್ ಅವರು ಕುಗ್ಗಿದವರಂತೆ ಕಂಡರು. ಅಂಥ ಒಂದು ಉನ್ನತಾಧಿಕಾರ ಸಮಿತಿಯ ಆಹ್ವಾನವನ್ನು ಅವರು ನಿರೀಕ್ಷಿಸಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು.

"ರಾವತ್ ಜಯಸಿಂಹ ಬಲೇಚ್"-ಮಾವ ಲಕ್ಷ್ಮಣ್‌ಸಿಂಹಜೀಯವರು ತಡವದೆ ಒಂದೇ ಸಲಕ್ಕೆ ಹೇಳಿದರು.- "ನೀವು ಈ ನೆಲದ ಅತ್ಯಂತ ಉನ್ನತ ನ್ಯಾಯಪೀಠದ ಮುಂದೆ ನಿಂತಿದ್ದೀರಿ. ಈಗ ಮಾತಾಡಿ ಇಲ್ಲ ಶಾಶ್ವತವಾಗಿ ನಿಮ್ಮ ನಾಲಿಗೆ ಬಿಗಿಹಿಡಿಯಿರಿ. ಮಾತಾಡಬೇಕು ಎಂದು ನೀವು ನಿರ್ಧಸಿದ್ದರೆ, ನಿಜ ಹೇಳಿ. ಕಾರಣ ಏನು ಅಂದರೆ, ನೀವು ನಿಜ ಹೇಳಲಿಕ್ಕಾಗದಿದ್ದರೆ, ನೀವು ನಿಮ್ಮ ಜೀವವನ್ನೇ ಕಳೆದುಕೊಳ್ಳಬೇಕಾಗಿಬರಬಹುದು. ಮಾತ್ರವಲ್ಲ ಸರ್ಕಾರ ನಿಮ್ಮ ಮತ್ತು ನಿಮ್ಮ ಮಕ್ಕಳ ಎಲ್ಲ ಜಮೀನು, ಆಸ್ತಿಪಾಸ್ತಿ ಹಕ್ಕು ಎಲ್ಲವನ್ನೂ ನಿಮ್ಮಿಂದ ಕಿತ್ತುಕೊಳ್ಳಬಹುದು."

ರಾವತ್ ಮುಖ ಈಗ ಬಲೆಯಲ್ಲಿ ಸಿಕ್ಕಿಬಿದ್ದ ಮಿಕದಂತಾಗಿತ್ತು. ಅವರು ಕಷ್ಟವನ್ನು ಹುಡುಕಿಕೊಂಡು ಹೋಗಿರಲಿಲ್ಲ. ಕಷ್ಟ ಅವರನ್ನು ಹುಡುಕಿಕೊಂಡು ಬಂದಿತ್ತು. ಅದರ ಫಲಿತಾಂಶ ಏನೇ ಆದರೂ ಕಳೆದುಕೊಳ್ಳುವವರು ಅವರೇ ಅಂತ ಅವರಿಗೆ ಗೊತ್ತಿತ್ತು. ಅವರು ಈಗ ಮಾತಾಡಿದರೆ, ನಮ್ಮ ಕೈಗಳನ್ನು ಬಲವಂತ ಪಡಿಸಿದ್ದಕ್ಕೆ ಅವರ ಬಗ್ಗೆ ನಾವು ಅಸಮಾಧಾನಪಟ್ಟುಕೊಳ್ಳುತ್ತೇವೆ. ಒಂದು ಕಾಲಕ್ಕೆ ಅವರ ಜೊತೆಗಾರರಾಗಿದ್ದ ರಾಣಾ ಈಗ ದೂರ ಆಗುತ್ತಾರೆ. ಒಂದು ವೇಳೆ ನಾಲಿಗೆ ಬಿಗಿ ಹಿಡಿದರೆ, ಗೋದ್ವಾರ್‌ನ ಸೋಲಂಕಿಯ ಶತ್ರುತ್ವ ಕಟ್ಟಿಕೊಳ್ಳಬೇಕಾಗುತ್ತದೆ. ಅದಕ್ಕಿಂತ ಕೆಟ್ಟದ್ದೆಂದರೆ, ತನ್ನ ಕುಲಕ್ಕೇ ಅವಮರ್ಯಾದೆ ಮಾಡಿದ ಹಾಗಾಗುತ್ತದೆ, ಮತ್ತು ಯಾವತ್ತೂ ತನ್ನ ಮಕ್ಕಳನ್ನು ಎದುರಿಸಲಾಗುವುದಿಲ್ಲ. ಕೆಳಗಿನ ಸ್ಥಾನದಲ್ಲಿದ್ದುಕೊಂಡು ನಗ್ನ ಅಧಿಕಾರದೊಂದಿಗೆ ವ್ಯವಹರಿಸಬೇಕಾಗಿ ಬಂದಾಗ ದೃಷ್ಟಿಕೋನಗಳು ವಿರೂಪಗೊಳ್ಳುತ್ತವೆ. ಅವರು ನೊಂದ ವ್ಯಕ್ತಿಯಾಗಿದ್ದರು. ಆದರೂ ತಾವೇ ತಪ್ಪು ಮಾಡಿದವರೆಂಬ ಭಾವವನ್ನು ತಾಳಿದರು ಮತ್ತು ಜೀವಮಾನ ಪರ್ಯಂತ ಅವರು ಹಾಗೇ ಇದ್ದು ಬಿಡುತ್ತಾರೆ.

ಅವರು ಶಾಂತವಾಗಿ ಮಾತನಾಡಿದರು. ಅವರು ಯಾವುದನ್ನೂ ಬಿಡಲಿಲ್ಲ. ಅವರು ಹೇಳಿ ಮುಗಿಸಿದಾಗ ನಿರ್ದಿಷ್ಟವಾಗಿ ಯಾರ ಕಡೆಗೂ ನೋಡದೆ ಹೇಳಿದರು – "ಆಪಾದಿತರ ಅಂತಸ್ತು, ಸ್ಥಾನ, ಮಾನಗಳನ್ನು ಪರಿಗಣಿಸದೆ, ನನಗೆ ನ್ಯಾಯ ನೀಡಬೇಕು."

ನನಗೆ ಗೊತ್ತಿತ್ತು. ಈ ಸಭೆಯ ಅತ್ಯಂತ ನಾಜೂಕಿನ ಹಂತಕ್ಕೆ ನಾವು ಬಂದಿದ್ದೇವೆ ಎಂದು. ನಾನು ಈ ಕ್ಷಣಕ್ಕಾಗಿ ಕಾಯುತ್ತಿದ್ದೆ. ಇದರ ಉಪಕ್ರಮವನ್ನು ಸರಿದಿಕ್ಕಿಗೆ ಹೊರಳಿಸದೆ ಇದ್ದರೆ, ಆದಿನಾಥ್‌ಜಿ ಮತ್ತು ಪ್ರಧಾನಿ ಪೂರ್ಣಮಲ್ ಅವರು ನನ್ನ ಪಾಡಿಗೆ ನನ್ನನ್ನು ಬಿಟ್ಟು ತಪ್ಪಿಸಿಕೊಂಡು ಹೊರಟು ಬಿಡುತ್ತಾರೆ. ಲಕ್ಷ್ಮಣಸಿಂಹಜೀಯವರು ಅತ್ಯಂತ ಸಭ್ಯ ಮನುಷ್ಯ. ಆದರೆ ಗ್ರಹಿಕೆಗೆ ಮೀರಿದ ಸೂಕ್ಷ್ಮ ವಿಚಾರಗಳಲ್ಲಿ ಮತ್ತು ಸೂಕ್ಷ್ಮ ರಾಜತಂತ್ರ ಕೌಶಲದಲ್ಲಿ ಬಹಳ ಭೋಳೇ ಮನುಷ್ಯ. ಅಲ್ಲದೆ ಅವರು ಆಗ ಇಷ್ಟವಿರಲಿ ಬಿಡಲಿ ಆದಿನಾಥ್‌ಜೀ ಮತ್ತು ಪೂರ್ಣಮಲ್‌ಜೀಯವರನ್ನೇ ಅನುಸರಿಸುತ್ತಾರೆ.

"ಧನ್ಯವಾದಗಳು ಜಯಸಿಂಹಜೀಯವರೆ. ನಮ್ಮ ಸಮಾಲೋಚನೆ ನಡೆಯುವಾಗ ನೀವು ನನ್ನ ಒಳ ಕೋಣೆಯಲ್ಲಿ ಕುಳಿತಿರುತ್ತೀರಾ?"

ಅವರು ಆ ಕಡೆ ಹೋದ ಮೇಲೆ, ನಾನು ವಿಕ್ರಮಾದಿತ್ಯನಿಗೂ ನನಗೂ ನಡೆದ ಮಾತುಕತೆಯ ವಿವರಗಳನ್ನು ಸಂಕ್ಷೇಪವಾಗಿ ಹೇಳಿದೆ.

"ತಾವು ನೋಡಿದ ಕುದುರೆ ಕಾಲಿಬಿಜಲಿನೇ ಅಂತ ನಿಮಗೆ ದೃಢಪಟ್ಟಿದೆಯೆ" – ಪ್ರಧಾನಿ ಪೂರ್ಣಮಲ್‌ರ ಪ್ರಶ್ನೆ.

ನಾನು ಮೊದಲೇ ನಿರೀಕ್ಷಿಸಿದ್ದ ಹಾಗೆಯೇ ಪ್ರಧಾನಮಂತ್ರಿಗಳ ತಂತ್ರಗಾರಿಕೆ ಏನು ಅಂದರೆ, ಸಾಕ್ಷಿಯಲ್ಲಿ ಹುಳುಕುಗಳನ್ನು ಎತ್ತೆತ್ತಿ ಹೇಳುತ್ತಾ ಹೋಗುವುದು. ಎಲ್ಲಿಯವರೆಗೆ ಅಂದರೆ ರಾಜಕುಮಾರನ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಸಾಧ್ಯವಾಗದಷ್ಟು ಮಟ್ಟಿಗೆ ದುರ್ಬಲವಾಗುವವರೆಗೂ.

"ಇಲ್ಲ ದೃಢಪಟ್ಟಿಲ್ಲ. ಜೊತೆಗೆ ಅವನು ಕರೆಯುವ 'ಕಾಜಲ್' ಎಂಬ ಹೆಸರಿನ ಕುದುರೆಯನ್ನು ತಾನು ಚಿತ್ತೂರಿನಲ್ಲಿ ಖರೀದಿಗೆ ಕೊಂಡದ್ದಲ್ಲ ಎಂದು ಒಪ್ಪಿಕೊಂಡ. ಅಲ್ಲದೆ ತಾನು ಕೊಂಡದ್ದೆಂದು ಹೇಳಿಕೊಳ್ಳುವ ಕುದುರೆಯು ಅಪರಿಮಿತ ಬೆಲೆ ಬಾಳುವಂಥದ್ದೆಂದು ಹೇಳಿದನು."

"ರಾಣಾ ಅವರ ಪುತ್ರ ಖಂಡಿತಾ ಅದನ್ನು ಕೊಳ್ಳಲು ಸಮರ್ಥರೆಂದು ಹೇಳಬಲ್ಲೆ. ನೀವು ಒಪ್ಪುವುದಿಲ್ಲವೇನು?" – ಹಾಗೆಂದು ಪೂರ್ಣಮಲ್‌ಜೀಯವರು ಹಣಕಾಸು ಸಚಿವರ ಕಡೆಗೆ ತಿರುಗಿ ಹೇಳಿದರು. ಆದಿನಾಥರು ತೆಳ್ಳಗೆ ಮುಗುಳ್ನಕ್ಕರು. ಆದರೆ ಆ ಉತ್ಪ್ರೇಕ್ಷೆಯ ಮಾತಿಗೆ ಏನೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ.

"ಆದಿನಾಥ್‌ಜೀಯವರೇ, ಈಗ್ಗೆ ಕೆಲವು ತಿಂಗಳಿನಿಂದ ನನ್ನ ತಮ್ಮ ನಿಮ್ಮ ಕುಟುಂಬಕ್ಕೆ ತುಂಬ ದೊಡ್ಡ ಮೊತ್ತದ ಹಣದ ಸಾಲಕ್ಕೆ ಬಾಕಿ ಇದ್ದಾನಲ್ಲವೆ?" ಒಂದು ಖಚಿತ ಮಾಹಿತಿಗಾಗಿ ಅವರನ್ನು ಮಾತಿನಲ್ಲಿ ಕಟ್ಟಿ ಹಾಕುವ ಸರದಿ ಈಗ ನನ್ನದಾಗಿತ್ತು.

"ಅಂಥ ಭಾರಿಯದು ಅಂತ ಹೇಳಲಾರೆ. ಸ್ವಲ್ಪ ಕೊಡಬೇಕಾಗಿದೆ ನಿಜ"

"ಇತ್ತೀಚಿಗೆ ಸಾಲಕ್ಕೆ ಮನವಿ ಸಲ್ಲಿಸಿದ್ದಾನೇನು"

"ಇಲ್ಲ"

"ಒಂದು ವೇಳೆ ಸಲ್ಲಿಸಿದ್ದರೆ ನೀವು ಆತನಿಗೆ ಸಾಲ ಕೊಟ್ಟು ಬಿಡುತ್ತಿದ್ದಿರಾ?"

"ಊಹಾತ್ಮಕ ಪ್ರಶ್ನೆಯ ಬಗ್ಗೆ ನಾನು ಅಭಿಪ್ರಾಯ ವ್ಯಕ್ತಪಡಿಸಲಾರೆ"

"ಅವನ ಸಾಲ ಪತ್ರದ ಅವಧಿ ತೀರಿದಾಗ, ನೀವು ಅವಧಿಯನ್ನು ವಿಸ್ತರಿಸಲು ನಿರಾಕರಿಸಿದ್ದು ಅಷ್ಟೇ ಅಲ್ಲದೆ ಬಡ್ಡಿ ಪಾವತಿಯ ವಿಷಯದಲ್ಲಿ ನೀವು ಆತನಿಗೆ ಯಾವುದೇ ರಿಯಾಯಿತಿ ನೀಡಲಾಗುವುದಿಲ್ಲ ಎಂದು ಹೇಳಿದ್ದು ನಿಜವಲ್ಲವೆ?"

ಆದಿನಾಥ್‌ಜೀಯವರು ಸ್ವಲ್ಪ ಹೊರಳಿ ತಾವು ಕೊಡಬೇಕಾದ ಉತ್ತರವನ್ನು ಒಂದು ನಿಮಿಷದಷ್ಟು ಯೋಚನೆ ಮಾಡಿ – "ಹೌದು ಅದು ನಿಜ" – ಎಂದರು.

"ಏನು, ಏನಿದು ಈಗ ನಾವು ಚರ್ಚಿಸುತ್ತಿರುವ ವಿಷಯಕ್ಕೂ ಇದೆಲ್ಲವುದಕ್ಕೂ ಏನು ಸಂಬಂಧ" – ಲಕ್ಷ್ಮಣಸಿಂಹಜೀಯವರು ಅಸಹನೆಯಿಂದ ಕೇಳಿದರು.

"ಬಹುಮಟ್ಟಿಗೆ ಏನೂ ಸಂಬಂಧವಿಲ್ಲ. ನಾನು ಏನಿದ್ದರೂ, ನಾವು ನಮ್ಮ ಕಣ್ಣಮುಂದೆ ಇರುವ ಈ ಪ್ರಕರಣವನ್ನು ಎದುರಿಸದೆ ಬಾಕಿ ಉಳಿದಿರುವ ರಾತ್ರಿಯನ್ನು ಕಳೆದು ಬಿಡುವುದಕ್ಕೆ ಇರಬಹುದಾದ ಇತರೆ ಸಂದುಗೊಂದುಗಳನ್ನೆಲ್ಲಾ ಮುಚ್ಚುವುದಕ್ಕೆ ಪ್ರಯತ್ನಿಸುತ್ತಾ ಇದ್ದೀನಿ ಅಷ್ಟೆ" ನಾನು ಅಪಾಯದ ಹಾದಿಯನ್ನು ಹಿಡಿದಿದ್ದೆ. ಪ್ರಧಾನ ಮಂತ್ರಿಯವರು ಮತ್ತು ಆದಿನಾಥ್‌ಜೀ ಇಬ್ಬರೂ ಯಾವಾಗ ನಾನು ಮಿತಿಮೀರಿ ಈ ಪ್ರಕರಣವನ್ನು ಉತ್ಸಾಹದಿಂದ ಮುಂದುವರೆಸುವುದರ ಆಚೆಗೆ, ವೈಯಕ್ತಿಕ ಹಗೆತನದತ್ತ ಅತಿಕ್ರಮಿಸಿ ಹೋಗುವೆನೋ ಎಂದು ಎಚ್ಚರಿಕೆಯಿಂದ ಗಮನಿಸುತ್ತಿದ್ದರು.

"ಅದೂ ಅಲ್ಲದೆ ರಾಜಕುಮಾರ ವಿಕ್ರಮಾದಿತ್ಯನು ನಿಮಗೆ ಕೊಡಬೇಕಾಗಿರುವ ಬಡ್ಡಿಯನ್ನು ಕೊಡುವುದಕ್ಕೆ ಬೇಕಾದಷ್ಟು ಹಣವನ್ನು ಕೂಡಿಸುವುದಕ್ಕೂ ಆಗುತ್ತಿರಲಿಲ್ಲ ಎನ್ನುವುದು ನಿಜವೇ?"

"ಅವರಿನ್ನೂ ಅದನ್ನು ಕೊಟ್ಟಿಲ್ಲ. ಅವರಿಗೆ ಹಣ ಕೂಡಿಸುವುದಕ್ಕೆ ಸಾಧ್ಯವಾಗಲಿಲ್ಲವೋ ಹೇಗೆ ಅಂತ ಗೊತ್ತಿಲ್ಲ"

"ಮಹಾಪ್ರಭುಗಳಾದ ರಾಣಾಸಂಗ ಅವರು ಹಿಂದಿರುಗಲು ಇನ್ನೂ ಒಂದು ತಿಂಗಳೋ, ಎರಡು ತಿಂಗಳೋ ಅಥವಾ ಒಂದು ವರ್ಷವೇ ತೆಗೆದುಕೊಳ್ಳುತ್ತಾರೋ ಹೇಗೋ ಏನೋ ಗೊತ್ತಿಲ್ಲ. ಅವರ ಅನುಪಸ್ಥಿತಿಯಲ್ಲಿ ರಾಜ್ಯದ ವ್ಯವಹಾರಗಳು ಒಂದು ನಿಲುಗಡೆಗೆ ಬರದೆ ಇರಲಿ ಎನ್ನುವ ಸ್ಪಷ್ಟ ಉದ್ದೇಶದಿಂದ ನನಗೂ ನಿಮಗೂ ಅಧಿಕಾರ ವಹಿಸಿಕೊಡಲಾಗಿದೆ. ರಾವತ್ ಅವರು ಮಾಡಿರುವ ಆಪಾದನೆಗಳ ಗಂಭೀರತೆಯನ್ನು ನಾನು ಒತ್ತಿಹೇಳಬೇಕಾದ್ದಿಲ್ಲ. ಏನೇ ಆಗಲಿ ನಾನು ಏನನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಅಂದರೆ, ಇದು ಒಂದು ಸರಳವಾದ ಆದರೆ ಘೋರವಾದ ಕಳ್ಳತನದ ಪ್ರಕರಣ ಎಂಬುದರ ಹೊರತಾಗಿ ಇತರೆ ರೀತಿಯ ಗೋಜಲುಗಳೇನಾದರೂ ಇದ್ದಲ್ಲಿ ಆಗ ನಾವು, ಈ ಅಪರಾಧದ ತೀವ್ರತೆ ಹಾಗೂ ನನಗೆ ವಹಿಸಿರುವ ಜವಾಬ್ದಾರಿ ಎರಡಕ್ಕೂ ಮೊದಲ ನೋಟಕ್ಕೆ ನಾವು ನೀಡಬೇಕೆಂದಿರುವುದಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯತೆ ಇದ್ದೀತು."

ಸಂಕ್ಷಿಪ್ತವಾಗಿ ಹೇಳುವುದನ್ನು ತಪ್ಪಿಸುವ ಸಲುವಾಗಿ ನಾನು ಉದ್ದನೆಯ ಗಂಭೀರವಾದ ಮಾತಿನ ಸರಣಿಗೆ ತೊಡಗಿದ್ದೆ. ಅದೇ ಸಮಯಕ್ಕೆ ಗೋಜಲುಗಳ ಕಡೆಗೆ ಸೂಕ್ಷ್ಮ ಸೂಚನೆ ಕೊಡುತ್ತಿದ್ದೆ. ಆದರೆ ಆ ಗೋಜಲುಗಳನ್ನು ಬಿಡಿಸದೆ ಅಗತ್ಯವಾದ ಸುಳಿವು ಅವರುಗಳ ಹಾಗೆ ನನಗೂ ಇರಲಿಲ್ಲ. ಆದರೆ ಯಾವುದೋ ಒಂದು ಗೊತ್ತಾದ ಕಡೆಗೆ ಬಾಣವನ್ನು ಗುರಿ ಇಟ್ಟು ಪ್ರಯೋಗಿಸದೆ ಇದ್ದರೂ ಅದು ತನ್ನ ಗುರಿಯನ್ನು ತಾಕಿತ್ತು.

"ಪೂರ್ಣಮಲ್‌ಜೀಯವರೇ, ನೀವು ಮತ್ತು ಇತರೆ ಹಿರಿಯರು ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸುತ್ತೀರಿ" ಎಚ್ಚರಿಕೆಯ ಪ್ರಬಲ ಸಮರ್ಥಕರಾದ ಚಿತ್ತೂರಿನ ಇಬ್ಬರು ಗಣ್ಯರು ದುಸ್ಸಾಹಸಕ್ಕೆ ಅಂಜಿ ಕುಳಿತ್ತಿದ್ದರೆ ಲಕ್ಷ್ಮಣಸಿಂಹಜೀಯವರು ಮಧ್ಯೆ ಬಾಯಿ ಹಾಕಿದರು. "ರಾಜಕುಮಾರ ವಿಕ್ರಮಾದಿತ್ಯರನ್ನು ಕರೆಸುವುದನ್ನು ಬಿಟ್ಟರೆ ಬೇರೆ ಏನಾದರೂ ದಾರಿ ಇದೆಯೇ?"

ಪೂರ್ಣಮಲ್‌ಜೀಯವರು ಮಾತಾಡುವುದಕ್ಕೆ ಮುಂಚೆ ಸ್ವಲ್ಪ ಬಿಡುವು ಇತ್ತು. "ಈ ದಿನ ರಾತ್ರಿ ಸಮಸ್ಯೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ನಿಶ್ಚಿಂತೆಯಾಗಿದ್ದು, ನಾಳೆ ಮತ್ತೆ ಸಭೆ ಸೇರುವುದರ ಬಗ್ಗೆಯೇ ಯೋಚಿಸುತ್ತಾ ಇದ್ದೆ."

"ಹಾಗೆ ಮಾಡಿದ್ದೇ ಆದರೆ, ಕರೆದು ಅನಗತ್ಯ ಪ್ರಚಾರಕ್ಕೆ ಅವಕಾಶ ಕೊಡುವುದು ಬೇಡ ಎಂಬ ಕಾರಣಕ್ಕೆ ಈ ರಾತ್ರಿ ಈ ನ್ಯಾಯಾಲಯದ ಸಭೆ ಕರೆದಿರುವ ಉದ್ದೇಶವೇ ತಲೆಕೆಳಗಾಗುತ್ತದೆ. ಅದರ ಜೊತೆಗೆ ಪಡೆದುಕೊಳ್ಳಬಹುದಾದ ಕಾಲಾವಕಾಶದಿಂದಲೂ ವಂಚಿತರಾಗುತ್ತೇವೆ." ನಾನು ಒಂದು ಒಳ್ಳೆಯ ವಾಗ್ಯುದ್ಧವನ್ನೇನೋ ಹೂಡಿದ್ದೆ. ಆದರೆ ಪೂರ್ಣಮಲ್‌ಜೀಯವರ ಸಮದಂಡಿ ನಾನಲ್ಲ ಎಂದು ನನಗೆ ಗೊತ್ತಿತ್ತು.

ಪೂರ್ಣಮಲ್‌ಜೀಯವರು ನಯವಾಗಿ ಮುಗುಳ್ನಕ್ಕು "ಅವಲಕ್ಷಣದ ಮುನ್ಸೂಚನೆ ಅನ್ನಿಸುವಂಥದ್ದಕ್ಕೆಲ್ಲಾ ಸರಳವಾದ ವಿವರಣೆ ಕೊಡುತ್ತಾ ಹೋದರೆ ಹೇಗೆ?" ಎಂದರು.

ಗೃಹಮಂತ್ರಿಯವರು ಮೇಲೆರಗುವುದಕ್ಕೆ ಎದ್ದರು. ಆದರೆ ಅವರ ಕಟು ವ್ಯಾವಹಾರಿಕ ವಿವೇಕ ಅವರನ್ನು ಬಲೆಗೆ ಬೀಳಿಸಲಿಲ್ಲ. "ಯಾಕೆ ಮಹಾಸ್ವಾಮಿ ನಾವೆಲ್ಲರೂ ಈಗಲೂ ಕೇಳಿಕೊಳ್ಳುತ್ತಿರುವ ಕರುಣೆ ಮತ್ತು ಫಲಿತಾಂಶ ಅದೇ."

"ಮಹಾರಾಜರ ರಕ್ಷಣಾ ದಳದ ಮುಖ್ಯಸ್ಥರು ಮತ್ತು ಆಯ್ದ ಸೇನಾಯೋಧರ ತಂಡವೊಂದು ರಾಜಕುಮಾರ ವಿಕ್ರಮಾದಿತ್ಯರನ್ನು ಹೋಗಿ ಕರೆದುಕೊಂಡು ಬರಬೇಕು." – ಅದೀಗ ಗೌರವಾನ್ವಿತ ಆದಿನಾಥ್‌ಜೀಯವರು ಚಿನ್ನದಂಥ ಮಾತನಾಡಿದರು. ಯೋಚಿಸುವ, ಇನ್ನೊಮ್ಮೆ ಯೋಚಿಸುವ ವ್ಯಕ್ತಿ. ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಿದ್ದರೆ ಅದರಲ್ಲಿ ಅರ್ಧಂಬರ್ಧ ಕ್ರಮ ಅಲ್ಲ. ನಮ್ಮ ವಶದಲ್ಲಿರುವ ಪೂರ್ಣ ಶಕ್ತಿಯೊಂದಿಗೆ ಕ್ರಮ ತೆಗೆದುಕೊಳ್ಳುವುದು.

ಸಜ್ಜಾದ್ ಹುಸೇನನಿಗೆ ಸಂಬಂಧಪಟ್ಟ ಏನಾದರೂ ಸಮಾಚಾರ ತೆಗೆದುಕೊಂಡು ಮಂಗಳ್ ಖಂಡಿತ ಮಧ್ಯೆ ತಲೆ ಹಾಕುತ್ತಾನೆ. ಎಂದು ಆಶಿಸಿದ್ದೆ. ಮಂಗಳ್ ಒಳಕ್ಕೆ ಬಂದ ಕೂಡಲೇ ಅವನ ಮುಖ ನೋಡಿ ನಾನೆಲ್ಲೋ ಬಿಸಿಲ್ಗುದುರೆ ಹಿಂದೆ ಓಡುತ್ತಾ ಇದ್ದೀನಿ ಅಥವಾ ವಿಕ್ರಮಾದಿತ್ಯ ನಾನು ಊಹೆ ಮಾಡಿದ್ದಕ್ಕಿಂತ ಹೆಚ್ಚು ಚಳ್ಳೆ ಹಣ್ಣು ತಿನ್ನಿಸುವಂಥ ಆಟ ಆಡುತ್ತಾ ಇದ್ದಾನೆ. ಎಂದು ಅರ್ಥ ಮಾಡಿಕೊಂಡೆ.

"ರಕ್ಷಣಾ ಪಡೆಯ ದಳಪತಿಯನ್ನು ಒಳಗೆ ಕಳುಹಿಸಿ"

"ಆದರೆ ಆತನಿಗೆ ಹೇಳಿಕಳಿಸಬೇಕಾಗಿತ್ತಲ್ಲವೆ?" – ಲಕ್ಷ್ಮಣಸಿಂಹಜೀಯವರು ಸ್ವಲ್ಪ ತಬ್ಬಿಬ್ಬುಗೊಂಡಂತೆ ಹೇಳಿದರು.

"ಮಹಾಸ್ವಾಮಿಯವರಾದ ಮಹಾರಾಜಕುಮಾರರು ಅಂಥ ತುರ್ತು ಸಂದರ್ಭ ಬಂದರೆ ಆತ ತಕ್ಷಣ ಸಿಗುವ ಹಾಗೆ ಇರಲಿ ಎನ್ನುವಂಥ ಮುಂಜಾಗರೂಕತಾಕ್ರಮ ಕೈಗೊಂಡಿದ್ದರು" – ಪೂರ್ಣಮಲ್‌ಜೀಯವರು ಮನಸ್ಸಿಲ್ಲದ ಮನಸ್ಸಿನಿಂದ ನನಗೆ ಸುಲಭವಾಗಿ ನುಣುಚಿಕೊಳ್ಳಲು ಬಿಟ್ಟರು.

"ಯಾರ ಗಮನಕ್ಕೂ ಬರದ ಹಾಗೆ ಸದ್ದಿಲ್ಲದೆ ಮುಂದುವರಿ. ಗೌರವಾನ್ವಿತ ರಾಜಕುಮಾರ ವಿಕ್ರಮಾದಿತ್ಯರ ಕಡೆಯಿಂದಾಗಲಿ ಅಥವಾ ಅವರ ಖಾಸಗಿ ರಕ್ಷಣಾಪಡೆಯಿಂದಾಗಲಿ ಏನಾದರೂ ವಿರೋಧ ಬಂದರೆ ಅದನ್ನು ಹತ್ತಿಕ್ಕಲು ಅಗತ್ಯ ಸಂಖ್ಯೆಯ ರಕ್ಷಣಾ ಯೋಧರನ್ನು ತೆಗೆದುಕೊಂಡು ಹೋಗು. ಅವರನ್ನು ನಮ್ಮೆದುರು ಹಾಜರುಪಡಿಸಲೇಬೇಕು. ಅಗತ್ಯ ಬಿದ್ದ ಹೊರತು ಬಲಪ್ರಯೋಗ ಮಾಡಬೇಡ. ಅವರಿಗೆ ನಾನು ಕೊಡುವ ಈ ಅಧಿಕಾರ ಪತ್ರವನ್ನು ಕೊಟ್ಟು ವಾಪಸ್ ಕರೆದುಕೊಂಡು ಬಾ." ರಕ್ಷಣಾಪಡೆಯ ಮುಖ್ಯಸ್ಥನು ನಾನು ವಿಕ್ರಮಾದಿತ್ಯನ ಹೆಸರನ್ನು ಹೇಳಿದಾಗ ಕಣ್ಣು ರೆಪ್ಪೆ ಮಿಟುಕಿಸಲಿಲ್ಲ, ಭಾವನಾರಹಿತ ಸಾದಾ ಮುಖವನ್ನು ತೋರಿಸುತ್ತಾ ತನ್ನ ಮನಸ್ಸಿನ ಅಂತರ್ಯದಲ್ಲಿ ಅದು ಯಾವ ನೈತಿಕ ಬಿಕ್ಕಟ್ಟನ್ನು ಬಗೆಹರಿಸಲು ಅವನು ಯತ್ನಿಸುತ್ತಿದ್ದನೋ ಎಂದು ಆಶ್ಚರ್ಯಗೊಂಡೆ. ಆಳುವ ಮಹಾಪ್ರಭುಗಳು ಮತ್ತು ಅವರ ಕುಟುಂಬವನ್ನು ರಕ್ಷಿಸುವ ಏಕೈಕ ಉದ್ದೇಶಕ್ಕಾಗಿ ತರಬೇತುಗೊಳಿಸಲಾಗಿದ್ದ ಗಣ್ಯ ರಕ್ಷಕರ ಪಡೆಯ ಮುಖ್ಯಸ್ಥನಾಗಿದ್ದ. ಅವನು ಮುಂದೆ ಬಹುಮಟ್ಟಿಗೆ ಮುಂದಿನ ರಾಣಾ ಆಗಲಿರುವ ಮಹಾಪ್ರಭುಗಳ ಪುತ್ರನನ್ನು ರಕ್ಷಿಸುವ ಬದಲಿಗೆ ಅವರನ್ನು ಅಪಾಯಕ್ಕೆ ಸಿಕ್ಕಿಸಿದ್ದಕ್ಕಾಗಿ ಅವನನ್ನು ಸೈನಿಕ ನ್ಯಾಯಾಲಯದ ಮುಂದೆ ನಿಲ್ಲಿಸುವುದಾಗಿ ರಾಣಿ ಕರ್ಮವತಿಯವರು ಅವನಿಗೆ ಹೇಳಿ ಬಿಟ್ಟಿದ್ದಾರೋ ಹೇಗೆ? "ರಾಜಕುಮಾರನನ್ನು ಕರೆದ್ಕೊಯಿರಿ" – ಭೀಕರ ಉದ್ಧಟತನದಿಂದ ಆಕೆ ಹೇಳುತ್ತಿದ್ದುದು ನನ್ನ ಕಿವಿಗೆ ಬೀಳುತ್ತಿತ್ತು. "ಖಂಡಿತ ಕರೆದ್ಕೊಯಿರಿ ಆದರೆ ಸಾವು ನಿಶ್ಚಿತ ಎಂದು ತಿಳಿದು"

ಇಷ್ಟು ಹೊತ್ತಿಗೆ ಮುದುಕರುಗಳೆಲ್ಲಾ ಆಕಳಿಸುತ್ತಿದ್ದರು. ಅವರಿಗೆಲ್ಲಾ ದಮ್ಮು ಬರುವವರೆಗೂ ಈ ಸಭೆಯನ್ನು ಮುಂದುವರಿಸಲೇಬೇಕಾಯಿತು. ಮಂಗಳ್ ಉಪಾಹಾರ ಮತ್ತು ಪಾನೀಯಗಳಿಗೆ ಏರ್ಪಾಟು ಮಾಡಿದ್ದ. ಅದನ್ನು ಕಾರ್ಯರೂಪಕ್ಕೆ ತರುವ ಶಬ್ದ ಹಗುರ – ಎಂದು. ನಾವು ನೀಡಲಿರುವ ಆಹಾರ ಅವರ ಹೊಟ್ಟೆಗಳಲ್ಲಿ ಹೋಗಿ ಜಡವಾಗಿ ಕುಳಿತು ಅವರೆಲ್ಲಾ ನಿದ್ದೆಗೆ ಸರಿದು ಬಿಡುವುದು ನನಗಿಷ್ಟವಿಲ್ಲ. ಉಪಾಹಾರ ಬರುವವರೆಗೂ ನಾನೆಷ್ಟು ಉದ್ವೇಗಕ್ಕೆ ಒಳಗಾಗಿದ್ದೆ ಎಂದು ಗೊತ್ತಿರಲಿಲ್ಲ. ನನಗೆ ಆ ಕಡೆಗೆ ನೋಡದೆ ಇರಲು ಸಾಧ್ಯವಾಗಲಿಲ್ಲ. 'ಶರೀರದ ಮೇಲೆ ಮನಸ್ಸಿಗೆ ಸಂಪೂರ್ಣ ಹತೋಟಿ ಇರಬೇಕೇ ಹೊರತು ಶರೀರ ಹೇಳಿದ ಹಾಗೆ ಮನಸ್ಸು ಕೇಳುವುದಲ್ಲ' ಎಂದು ನನ್ನ ಯೋಗ ಶಿಕ್ಷಕರು ಮೆಲ್ಲಗೆ ಹೇಳುತ್ತಾ ಇದ್ದದ್ದು ಕೇಳಿಸುತ್ತಾ ಇತ್ತು. "ಯಾರು ಯಜಮಾನರು, ಯಾರು ಸೇವಕರು ಎನ್ನುವುದರ ಬಗ್ಗೆ ಯಾರ ಮನಸ್ಸಿನಲ್ಲೂ ಅನುಮಾನ ಉಳಿಯುವುದು ಬೇಡ." ನಾನು ಬಲವಂತವಾಗಿ ಊಟಕ್ಕೆ ತೊಡಗಿದೆ. ನನಗೆ ನಮ್ಮ ಮಾವ ಲಕ್ಷ್ಮಣಸಿಂಹಜೀಯವರನ್ನು ಕಂಡು ಅಸೂಯೆಯಾಯಿತು. ಅದಕ್ಕೆ ಕಾರಣ ಅವರು ಅಪಾನವಾಯು ಸಲೀಸಾಗಿ ಸಾಗಿ ಹೋಗಲು ಎಡ ಅಥವಾ ಬಲ ಕುಂಡಿಯನ್ನು ಆಗಾಗೆ ಎತ್ತುತ್ತ ಮನಃಪೂರ್ತಿಯಾಗಿ ಉಂಡರು ಎಂಬುದಕ್ಕಲ್ಲ, ನಾವು ಏನು ಮಾಡುತ್ತಿದ್ದೇವೆ ಎಂಬುದರ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದೆ ಇದ್ದವರು ನಮ್ಮ ನಾಲ್ಕು ಜನರಲ್ಲಿ ಅವರೊಬ್ಬರೇ. ಅದರ ಪರಿಣಾಮುಗಳಂತೂ ಇದ್ದೇ ಇರುತ್ತವೆ. ಭಾರಿ ದಂಡ ಕೊಡಬೇಕಾಗಿರಬಹುದು. ಆದರೆ ಅಧಿಕಾರ ಮತ್ತು ಜವಾಬ್ದಾರಿಯ ಸ್ವರೂಪವೇ ಅಂಥದ್ದು: ಇನ್ನೇನಲ್ಲ. ಕೊಳಕ್ಕೊಂದು ಕಲ್ಲೆಸೆದರೆ ಗುಳ್ಳೆಗಳಂತೂ ಏಳಲೇಬೇಕು.

* * *

ವಿಕ್ರಮಾದಿತ್ಯನು ಧಾವಿಸಿ ಬಂದನು. ಅವನ ಕೈಗಳಿಗೆ ಕೋಳ ಹಾಕಿದ್ದು ಕಂಡು ನನ್ನ ಹೃದಯದ ಬಡಿತ ಒಂದು ಕ್ಷಣ ನಿಂತಿತು.

"ನಮಗೆ ಅನ್ಯಥಾ ಮಾರ್ಗ ಇರಲಿಲ್ಲ ಮಹಾಸ್ವಾಮಿಗಳೆ. ಘನತೆವೆತ್ತ ರಾಜಕುಮಾರ ವಿಕ್ರಮಾದಿತ್ಯರು ಅವರನ್ನು ಇಲ್ಲಿಗೆ ಕರೆತರುವ ನಮ್ಮೆಲ್ಲ ಮನವಿಗಳನ್ನು ವಿರೋಧಿಸಿದರು."

ರಕ್ಷಣಾಪಡೆಯ ನಾಯಕ ಮಾತು ಮುಗಿಸುವುದಕ್ಕೆ ಮುನ್ನವೇ ವಿಕ್ರಮಾದಿತ್ಯನು ನೇರವಾಗಿ ವಿಷಯಕ್ಕೆ ಬಂದನು.

"ಎಲಾ ಮುದಿ ನಾಯಿಗಳೇ, ನನ್ನನ್ನು ಬಲವಂತವಾಗಿ ಬಂಧಿಸಿ ಇಲ್ಲಿಗೆ ತರುವುದಕ್ಕೆ ನಿಮಗೆ ಅದೆಷ್ಟು ಧೈರ್ಯ? ನಾನು ಆಣೆ ಮಾಡಿ ಹೇಳುತ್ತೇನೆ, ನೀವು ಪ್ರತಿಯೊಬ್ಬರೂ ದೊಡ್ಡ ದಂಡ ತೆರಬೇಕಾಗುತ್ತೆ. ಎಷ್ಟು ದೊಡ್ಡ ದಂಡ ಎಂದರೆ ನಾವು ಯಾಕಾದರೂ ಹುಟ್ಟಿದೆವೋ ಎಂದು ಪಶ್ಚಾತ್ತಾಪ ಪಡಬೇಕಾಗಿ ಬರುವಷ್ಟು ದಂಡ ತೆರಬೇಕಾಗುತ್ತೆ. ಇನ್ನು ನೀನು, ರಾಜಕುಮಾರನಾಗಬೇಕೆಂದು ಮಹಾದಾಸೆ ಇಟ್ಟುಕೊಂಡಿರುವ ನೀನು, ಕಾನೂನಿನ ನಿಯಮಗಳ ಅಕ್ಷರದ ಗುಂಗು ಹಿಡಿದವನು, ಅದರ ಉದ್ದೇಶವಂತೂ ಲವಲೇಶವೂ ಗೊತ್ತಿಲ್ಲದೆ ಇರುವ ನೀನು, ನನ್ನ ಹೃದಯದಲ್ಲಿ ನಿನಗೊಂದು ವಿಶೇಷವಾದ ಜಾಗವನ್ನು ಮೀಸಲಾಗಿಟ್ಟಿದ್ದೇನೆ. ನಾನು ಎಚ್ಚತ್ತಿರುವ ಪ್ರತಿ ಗಂಟೆಯ, ಪ್ರತಿ ನಿಮಿಷವೂ ನಾನು ನಿನಗಾಗಿ ವಿನೂತನವೂ ಅತ್ಯಂತ ಮಾರಾಣಾಂತಿಕವೂ ಆದ ಚಿತ್ರಹಿಂಸೆಯನ್ನು ಕಂಡು ಹಿಡಿಯುತ್ತೇನೆ. ನಿನ್ನ ಬದುಕು ಹಾಗೂ ಬದುಕಿನ ಪುರೋಭಿವೃದ್ಧಿಯನ್ನು ಕುರಿತು ಚಿಂತಿಸು. ಚಿತ್ರಹಿಂಸೆಯ ಯಂತ್ರವೂ ಈಗ ನಾನು ನಿನಗೆ ಕಲ್ಪಿಸಬೇಕೆಂದಿರುವುದರ ಮುಂದೆ ಅತ್ಯಂತ ಸುಖಕರವಾಗಿರುತ್ತೆ."

"ನೀನು ಗೌರವದಿಂದ ನಡೆದುಕೊಳ್ಳುತ್ತೇನೆ ಹಾಗೂ ಈ ನ್ಯಾಯಾಲಯದ ಘನತೆಯನ್ನು ಎತ್ತಿ ಹಿಡಿಯುತ್ತೇನೆ ಎಂದು ಆಶ್ವಾಸನೆ ನೀಡಿದರೆ ನಿನ್ನ ಕೈಗಳಿಗೆ ಹಾಕಿರುವ ಬೇಡಿಯನ್ನು ತೆಗೆಯಲು ರಕ್ಷಣಾ ಪಡೆಯ ನಾಯಕನಿಗೆ ಹೇಳುತ್ತೇನೆ." ಅವನ ಸುದೀರ್ಘವಾದ ಬೆದರಿಕೆಗೆ ಉತ್ತರ ಕೊಡುವ ಉದ್ದೇಶ ನನಗಿರಲಿಲ್ಲ. "ನೀನು ಬೇರೆ ಯಾವುದಾದರೂ ರೀತಿಯಲ್ಲಿ ಇನ್ನೊಂದು ಸಲ ಶಾಪ ಹಾಕುವುದಾಗಲಿ, ಅಥವಾ ಕೆಟ್ಟದಾಗಿ ನಡೆದುಕೊಳ್ಳುವುದಾಗಲಿ ಮಾಡಿದರೆ, ನಿನ್ನ ಕೈಗಳಿಗೆ ಇನ್ನೊಮ್ಮೆ ಕೋಳ ಹಾಕಿ ಬಂಧಿಸಬೇಕಾಗುತ್ತೆ. ಏನಾಗುತ್ತೆ ಆಗ"

"ಯಾವ ನ್ಯಾಯಾಲಯದ ವಿಷಯ ನೀನು ಮಾತನಾಡುತ್ತಿರುವುದು? ಮುದುಕರಾಗಿ ಗುಡ್ಡಗೂರಿ ಕೂತಿರುವ ಈ ಮೂರು ಕೋಡಂಗಿಗಳು ಮತ್ತು ಬೆನ್ನೆಲುಬಿಲ್ಲದ, ನಾಚುವಾಲಿ ಹೆಂಡತಿಯ ಗಂಡನಾದ ರಾಜಕುಮಾರ ಇವರುಗಳಿಂದ ಕೂಡಿದ ಈ ಅಸಹ್ಯ ಸರ್ಕಸ್ಸಿನ ವಿಷಯ ತಾನೇ? ಅಯ್ಯೋ ರಾಜ್ಯಾಧಿಕಾರದ ಉತ್ತರಾಧಿಕಾರದ ಆಕಾಂಕ್ಷಿಯೇ, ರಾಜ್ಯದ ವ್ಯವಹಾರಗಳನ್ನು ನೋಡಿಕೊಳ್ಳುವ ನಾಟಕ ಮಾಡುವ ಬದಲು ನಿನ್ನ ವ್ಯವಹಾರಗಳನ್ನು ನೀನು ನೋಡಿಕೋ. ನಿನಗೊಂದು ಸಲಹೆ ಕೊಡುತ್ತೇನೆ. ಇಡೀ ನಗರಕ್ಕೆ ಗೊತ್ತಿದೆ ಆ ನಿನ್ನ ಹೆಂಡತಿ ಬಿಟ್ಟಿಯಾಗಿ ನೃತ್ಯ ಮಾಡುತ್ತಾಳೆ. ನೀನು ಯಾಕೆ ಅವಳ ತಲೆ ಹಿಡುಕ ಆಗಬಾರದು? ಹಾಗೆ ಮಾಡುವುದರಿಂದ ನಿನ್ನ ಕಾಲವನ್ನು ಸಾರ್ಥಕವಾಗಿ ಕಳೆದ ಹಾಗೆ ಆಗುತ್ತೆ ಮತ್ತು ನೀನು ಸ್ವಲ್ಪ ಹಣವನ್ನೂ ಸಂಪಾದನೆ ಮಾಡಬಹುದು"

ನಾನು ಬಚ್ಚಲ ಮನೆಯಲ್ಲಿದ್ದಾಗ, ನನ್ನ ತಮ್ಮನು ಬಳಸುವ ಅವಮಾನದ, ಮೂದಲಿಕೆಯ ಹಾಗೂ ಹುಚ್ಚು ಬಡಬಡಿಕೆಯ ಮಾತುಗಳ ಮಾಲೆಯ ಭಂಡಾರದ ಲೆಕ್ಕ ಹಾಕುತ್ತ ನಾನು ಹಂಡೆಯ ತಳವನ್ನು ಗೋಚಿ ಬಿಟ್ಟಿದ್ದೇನೆ ಎಂದುಕೊಂಡಿದ್ದೆ. ಆದರೆ ನಾನು ಸ್ಪಷ್ಟವಾದ ವಿಷಯವನ್ನು ಮರೆತಿದ್ದೆ. ಬಾಲ್ಯದ ಅಥವಾ ನಿಷ್ಕಪಟವಾದ ಮಾತನ್ನು, ಒಂದು ಎಡವಟ್ಟಾದ ಅಥವಾ ಪೇಚಿನ ಸಂದರ್ಭವೊಂದನ್ನು, ಅಕೃತ್ರಿಮವಾದ

ಜೀವನಪರ್ಯಂತದ ತಿರಸ್ಕಾರ ಅಥವಾ ಗೇಲಿಯ ಮೂಲವಾಗಿ ತಿರುಚಿ ಬಿಡುವಂಥ ವ್ಯಕ್ತಿ ಅವನು. ಅವನು ಶ್ಲೇಷಾರ್ಥಗಳ, ವ್ಯಂಗೋಕ್ತಿಗಳ, ದ್ವಂದ್ವಾರ್ಥಗಳ ಮಾತಿನ ಪರಿಣತನಾಗಿದ್ದನು. ತನ್ನನ್ನು ರಕ್ಷಿಸಿಕೊಳ್ಳುವುದು ತೀರಾ ದುಸ್ತರವಾದಾಗ ತನ್ನ ಈ ಮಾತಿನ ಪರಿಣತಿಯನ್ನು ಅವನು ಶತ್ರುವಾಗಲಿ, ಸ್ನೇಹಿತನಾಗಲಿ ಒಂದೇ ಸಮವಾಗಿ ಅವರ ಮೇಲೆ ಕೇಂದ್ರೀಕರಿಸುತ್ತಿದ್ದ. ಅಲ್ಲದೆ ತನಗೆ ರಕ್ಷಣೆಬೇಕೆಂದು ನಿರೀಕ್ಷಿಸುತ್ತಿರಲಿಲ್ಲ, ಅವನ ಹಾಸ್ಯ ಯಾವಾಗಲೂ ತೀರಾ ಕೀಳು ಮಟ್ಟದ್ದೋ, ಅಥವಾ ದೈಹಿಕ ಅಥವಾ ಆಂಗಿಕ ನ್ಯೂನತೆ ಅಥವಾ ವಿಕಲತೆಗಳನ್ನು ಅಣಕ ಮಾಡುವಂಥದ್ದೋ, ಎಂಬುದು ಮುಖ್ಯವಾಗಿರಲಿಲ್ಲ. ನೀವು ಅವನ ಬಲಿಪಶುಗಳಾಗಿದ್ದರೆ, ನಿಮ್ಮ ರಕ್ತ ಹೀರಿ, ಕಣ್ಣೀರು ಬರಿಸಿ, ನಿಮಗೆ ಹಾಸ್ಯ ಪ್ರಜ್ಞೆ ಇಲ್ಲವೆಂದು ಗೋಳಾಡಿಸಿ ನಿಮ್ಮ ಗಾಯಗಳಿಗೆ ಉಪ್ಪುಕಾರ ಹಚ್ಚಿ ತೀಡಿಬಿಡುತ್ತಾನೆ.

ಅವನ ಕಡೆ ನೋಡಿದೆ. ಎಂಥ ಸುಂದರವಾದ ಶಿರಸ್ಸು ಅವನದು! ಅವನ ಕಣ್ಣುಗಳೋ ಮೊನಚಾದ ಇರಿಯುವ ಕಣ್ಣುಗಳು. ಕೂದಲುಗಳಂತೂ ನೇರ. ಆದೆಷ್ಟು ನೇರ ಅಂದರೆ, ಯಾವುದರ ಬಗ್ಗೆಯಾದರೂ ರೇಗುವ ಅಥವಾ ನಗಲು ತಲೆಯನ್ನು ಹಿಂದಕ್ಕೊಗೆಯುವ ಸಂದರ್ಭದ ಹೊರತು ಆ ಕೂದಲುಗಳು ಅವುಗಳ ಜಾಗದಲ್ಲಿ ಕದಲದೆ ಕೂತಿರುತ್ತಿದ್ದವು. ಆಗ ಮಾತ್ರ ಅವು ಬೆಸ್ತರವನ ಕಪ್ಪು ಬಲೆಯ ಹಾಗೆ ಮೇಲಕ್ಕೆ ಎಗರಿ ಅವನ ಮುಖದ ಮೇಲೆಲ್ಲಾ ಮುಕುರಿಕೊಳ್ಳುತ್ತಿದ್ದವು. ಅವನಾಗಿ ಅವನೇ ಅವುಗಳ ಮೇಲೆ ಕೈಯಾಡಿಸಿ ಮತ್ತೆ ಅವುಗಳನ್ನು ಮೊದಲಿನ ಹಾಗೆ ಸರಿಪಡಿಸಿಕೊಳ್ಳುವವರೆಗೂ ಅವು ಹಾಗೇ ಮುಖದ ಮೇಲೆ ಮುಕುರಿಕೊಂಡಿರುತ್ತಿದ್ದವು. ಅವನು ಎತ್ತರದ ಆಳು. ನನಗಿಂತಲೂ ಸರಿಯಾಗಿ ಎರಡು ಅಂಗುಲ ಹೆಚ್ಚು ಎತ್ತರಕ್ಕೆ ಇದ್ದವ. ಹಾಗೆ ನೋಡಿದರೆ ಆರು ಅಡಿ ಒಂದು ಅಂಗುಲ ಎತ್ತರವಿದ್ದ. ನಾನು ಕುಳ್ಳೇನಲ್ಲ. ಅದೂ ಅಲ್ಲದೆ ಅವನ ಯದ್ವಾತದ್ವಾ ಕೆದರಿದ ತಲೆಕೂದಲಾಗಲಿ, ಅತ್ಯಂತ ಅವಮಾನಕರವಾದ ಉಡುಪುಗಳಾಗಲಿ, ಅವನ ಯಾವತ್ತಿನ ನಿರಲಂಕೃತ ಚೆಲುವನ್ನು ಇಮ್ಮಡಿಸುತ್ತಿದ್ದುವಷ್ಟೆ. ನಾವು ಹುಡುಗರಾಗಿದ್ದಾಗ ಅವನು ನನ್ನ ಅತ್ಯಂತ ಪ್ರೀತಿಯ ತಮ್ಮ. ಇಂದಿಗೂ ನಮ್ಮ ಸ್ನೇಹದ ನಷ್ಟ ನನ್ನನ್ನು ಬಾಧಿಸುತ್ತದೆ.

ಅವನು ಪೂರಣ್‌ಮಲ್‌ಜೀಯವರ ಮೇಲೆ ತನ್ನ ಕಣ್ಣುಗಳನ್ನು ನೆಟ್ಟಿದ್ದ. ಅದರ ಪರಿಣಾಮಕ್ಕಾಗಿ ತಡೆದ. ನನ್ನ ತಮ್ಮನ ವರ್ತನೆಗಳು ಮತ್ತು ಅವನೆಲ್ಲಾ ಉಪಾಯಗಳೂ ನನಗೆ ಚೆನ್ನಾಗಿ ಗೊತ್ತು. ನ್ಯಾಯಾಲಯದ ಮನಸ್ಸಿನಲ್ಲಿ ಭಯ ಮತ್ತು ಸಂದೇಹಗಳನ್ನು ಇನ್ನೇನು ಬಿತ್ತಲು ಹೊರಟಿದ್ದ.

“ಇಲ್ಲಿ ತೀರ್ಪು ನೀಡಲು ಕುಳಿತಿರುವ ನೀವುಗಳೆಲ್ಲಾ ಗಮನವಿಟ್ಟು ಕೇಳಿ” ತನ್ನ ವಿಶಾಲ ಧ್ವನಿಸಮುದಾಯದ ವ್ಯಾಪ್ತಿಯಲ್ಲಿ ಅತ್ಯಂತ ಮೆಲುವಾದ, ರೇಷ್ಮೆಯಷ್ಟು ನಯವಾದ ದನಿಯನ್ನು ಆಯ್ದುಕೊಂಡು “ಗಮನವಿಟ್ಟು ಕೇಳಿ, ನಾನು ಈ ನ್ಯಾಯಾಲಯವನ್ನು ಮಾನ್ಯ ಮಾಡುವುದಿಲ್ಲ. ಕಾರಣ ನನ್ನನ್ನು ವಿಚಾರಣೆಗೆ ಗುರಿಪಡಿಸುವ ಅರ್ಹತೆ ಇರುವಂಥ ನ್ಯಾಯಾಲಯ ಈ ರಾಜ್ಯದಲ್ಲಿಯೇ ಆಗಲಿ ಅಥವಾ ಈ ಭೂಮಿಯ ಮೇಲೆ ಎಲ್ಲಿಯೇ ಆಗಲಿ ಇಲ್ಲ. ನಾನು ರಾಜಕುಮಾರ ರಾಣಾ ಅವರ ಪುತ್ರ. ನನ್ನ ಕೈಗಳಿಗೆ ಹಾಕಿರುವ ಕೋಳವನ್ನು ತೆಗೆಸಿರಿ ಮತ್ತು ನಾನು ನೆಮ್ಮದಿಯಿಂದ ಹೋಗುವುದಕ್ಕೆ ಬಿಡಿ. ನೀವು ಹಾಗೆ ಮಾಡದೆ ಹೋದರೆ, ನಮ್ಮ ರಾಜ್ಯಕ್ಕೆ ಬಂದೊದಗಲಿರುವ ಅವ್ಯವಸ್ಥೆ ಮತ್ತು ಅನಾಯಕತ್ವಕ್ಕೆ ನೀವೇ ಜವಾಬ್ದಾರರಾಗುತ್ತೀರಿ”

ಒಂದು ನಿಮಿಷಕ್ಕೂ ಹೆಚ್ಚು ಹೊತ್ತು ಒಂದು ರೀತಿಯ ಅಸಹ್ಯ ಮೌನ ನೆಲಸಿತ್ತು.

ಅನಂತರ ಪ್ರಧಾನಿಗಳು ಮಾತನಾಡಿದರು. – "ಅವರ ಕೈ ಕೋಳಗಳನ್ನು ತೆಗೆದು ಬಿಡಿ" ಮಂಗಳನು ಬೇಡಿಗಳನ್ನು ತೆಗೆಯುತ್ತಿದ್ದಂತೆ ವಿಕ್ರಮಾದಿತ್ಯನು ಗೆದ್ದ ಮುಖಭಾವದಿಂದ ಹೊರಡಲು ಸಿದ್ಧನಾದ, "ರಾಜಕುಮಾರರೆ ತಾವು ಕುಳಿತುಕೊಳ್ಳಿ. ನಿಮಗೆ ನಾವು ಹೇಳುವವರೆಗೂ ನೀವು ಒಂದು ಮಾತೂ ಆಡಕೂಡದು. ರಾವತ್ ಜಯಸಿಂಹ ಬಲೇಚ್ ಅವರನ್ನು ಒಳಕ್ಕೆ ಕಳುಹಿಸಿ."

ಲಕ್ಷ್ಮಣಸಿಂಹಜೀಯವರು ಆರೋಪಗಳನ್ನು ಓದಿದರು.

"ರಾಜಕುಮಾರ ವಿಕ್ರಮಾದಿತ್ಯರೆ ತಾವು ಹೇಗೆ ಸಮರ್ಥನೆ ಮಾಡಿಕೊಳ್ಳುತ್ತೀರಿ?"

"ಯಾರೇ ಆಗಲಿ ತಮ್ಮ ಮನೆಯಲ್ಲಿ ತಾವೇ ಕಳ್ಳತನ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದರ ಹೊರತು, ನಿಮ್ಮ ಆ ಪ್ರಶ್ನೆಗೆ ಉತ್ತರಿಸುವುದನ್ನು ನಾನು ತಿರಸ್ಕರಿಸುತ್ತೇನೆ. ಎಲ್ಲ ರಾವ್‌ಗಳು, ರಾವತ್‌ರು ಮತ್ತು ರಾಜರುಗಳು. ನಮ್ಮ ಶಾಸನ ಹಾಗೂ ನಮ್ಮ ಇಚ್ಛೆಯ ಮೇರೆಗೆ ಹಾಗೆ ಇದ್ದಾರೆ. ನಮ್ಮ ಮೇಲ್ಪಟ್ಟು ಇರುವ ವಿಧಾಯಕ ಶಕ್ತಿ ಒಂದೇ ಒಂದು. ಅದೆಂದರೆ ಶ್ರೀ ಏಕಲಿಂಗಜೀ. ಅವನಿಗೆ ಮಾತ್ರ ನಾವು ಉತ್ತರದಾಯಿಗಳು".

ವಂಶಾನುಕ್ರಮದಲ್ಲಿ ನಾನೇ ನೇರ ಹಕ್ಕುದಾರ. ಮತ್ತು ದೇವರು ಇಚ್ಛಿಸಿದಲ್ಲಿ ನಮ್ಮ ತಂದೆಯವರು ಭಗವಾನ್ ಏಕಲಿಂಗಜೀಯವರ ದಿವಾನರಾಗಿದ್ದರು ಎನ್ನುವ ಕಾರಣಕ್ಕೆ ನಾನು ಸರ್ವತಂತ್ರ ನಿರಂಕುಶ ಪ್ರಭು ಆಗಲಿದ್ದೇನೆ. ಆದರೆ ಇದೇ ಏಕಲಿಂಗಜೀ ಪರಂಪರೆಯ ಒಗಟು ಮತ್ತು ವಿರೋಧಾಭಾಸ. ನಾವು ಈ ಭೂಮಿಯ ಮೇಲಿನ ಅವನ ಪ್ರತಿನಿಧಿಗಳು. ನಾಳೆ ಒಂದು ವೇಳೆ ಅವನು ಪ್ರತ್ಯಕ್ಷವಾಗಿ ಬಂದು ಈ ರಾಜ್ಯವನ್ನು ಕೊಡಬೇಕು ಎಂದು ಕೇಳಿದರೆ ನಾವು ಅವನಿಗೆ ಒಪ್ಪಿಸಿಕೊಡಬೇಕು. ಕಾರಣ ಇದನ್ನು ಅವನಿಂದ ನ್ಯಾಸವಾಗಿ ಪಡೆದಿದ್ದೇವೆ. ಕುಲೀನರಿಗೆ ಮತ್ತು ನಿಷ್ಠಾವಂತ ನಾಗರಿಕರಿಗೆ ನಾವು ಕೊಡಮಾಡುವ ಜಮೀನುಗಳೇನಿದ್ದರೂ ಉಂಬಳಿಗಳು. ಅವರು ಮೇವಾಡದ ವಿರುದ್ಧವಾಗಿ ತಪ್ಪಿ ನಡೆದರೆ ಸ್ವಾಮಿ ದ್ರೋಹ ಮಾಡಿದರೆ ಅಥವಾ ತಿರುಗಿ ಬಿದ್ದರೆ ಮಾತ್ರ ನಾವು ಅವುಗಳನ್ನು ವಾಪಸ್ ತೆಗೆದುಕೊಳ್ಳಬಹುದು. ಆಗ ಮಾತ್ರ ನಾವು ಅವರ ಜಮೀನುಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳಲು ಕಾನೂನು ಅವಕಾಶ ನೀಡುತ್ತೆ. ಕಡೇಪಕ್ಷ ನನ್ನ ಕಾನೂನಿನ ತಿಳುವಳಿಕೆ ಹಾಗೆ ಹೇಳುತ್ತೆ."

"ಮಹಾಸ್ವಾಮಿಯವರೆ, ತಾವು ಕುದುರೆಗಳನ್ನು ಕಳ್ಳತನ ಮಾಡಿದಿರಾ?" ಪೂರ್ಣಮಲ್‌ಜೀಯವರು ಕೇಳಿದರು.

"ನಾನು ಕಳ್ಳತನ ಮಾಡಿಲ್ಲ"

"ಜಯಸಿಂಹ ಬಲೇಚ್ ಅವರ ಅಶ್ವ ಶಾಲೆಯಿಂದ ಕಾಣೆಯಾಗಿರುವ ಹತ್ತು ಕುದುರೆಗಳು ತಮ್ಮ ಸುಪರ್ದಿನಲ್ಲಿವೆಯೇ?"

ಎಷ್ಟೊಂದು ಸೂಕ್ಷ್ಮವಾಗಿ ಮತ್ತು ಸೊಗಸಾಗಿ ಪ್ರಧಾನಿಯವರು ಆ ಪ್ರಶ್ನೆಯನ್ನು ರೂಪಿಸಿದ್ದರು! ನಾನು ಯಾವಾಗಲಾದರೂ ತೊಂದರೆಯಲ್ಲಿ ಸಿಕ್ಕಿಕೊಂಡರೆ ಪೂರಣ್‌ಮಲ್‌ಜೀಯವರನ್ನು ನನ್ನ ಕಡೆಯ ನ್ಯಾಯವಾದಿಯಾಗಿಟ್ಟುಕೊಳ್ಳಲು ಬಯಸುತ್ತೇನೆ. ವಿಕ್ರಮ್ ತನ್ನ ಮನಸ್ಸಿನ ಇಕ್ಕಟ್ಟಾದ ಸೆರೆಮನೆಯಲ್ಲಿ ವಿಲವಿಲನೆ ಒದ್ದಾಡುತ್ತಿರುವುದನ್ನು ಕಾಣಬಹುದಾಗಿತ್ತು. ಕಾರಣ ಅವನ ಮನಸ್ಸು ತೀರಾ ಸಂಕುಚಿತವಾದ ಮನಸ್ಸು. ಇಡೀ ಜೀವಮಾನದಲ್ಲಿ ಅತಿ ಹೆಚ್ಚು ಅಂದರೆ ಮೂರು ಅಥವಾ ನಾಲ್ಕು ಆಲೋಚನೆಗಳಿಗೆ ಮಾತ್ರ ಎಡೆಕೊಡಬಹುದಾದಂಥ ವ್ಯಾಪ್ತಿಯದು. ಅದೂ ಎಲ್ಲವನ್ನೂ

ಒಟ್ಟಿಗೆ ಒಂದೇ ಕಾಲದಲ್ಲಿ ಅಲ್ಲ: ಅದೊಂದು ಸ್ನೇಹಪರವಾದ, ಅರ್ಥಪೂರ್ಣವಾದ, ಯಾರೀತಿಯಲ್ಲೂ ಕೆಡುಕು ಮಾಡದಂಥ ಪ್ರಶ್ನೆಯೆಂಬಂತೆ ಕಾಣುತ್ತಿತ್ತು. ತಾನೀಗ ಉತ್ತರಿಸಬೇಕೆ? ಬೇಡವೆ? ಸಿಕ್ಕಿಸಿಕೊಳ್ಳುವ ಹುನ್ನಾರೇನಾದರೂ ಇದ್ದೀತೆ? ಪೂರಣ್‌ಮಲ್‌ಜೀಯವರಿಂದ ಈ ಪ್ರಶ್ನೆ ಬಂದಿದೆ ಅಂದ ಮೇಲೆ ಮೋಸ ಇರಲೇಬೇಕು. ಅವರ ಮನಸ್ಸು ಅಂದರೆ ನೀರು ತುಂಬಾ ಆಳವಾಗಿರುತ್ತೆ ಮತ್ತು ಒಳಹರಿವುಗಳು ಯಾವಾಗಲೂ ಅಗೋಚರ.

"ನಾನು ಆ ಪ್ರಶ್ನೆಗೆ ಉತ್ತರ ಕೊಡುವ ಗೋಜಿಗೆ ಹೋಗುವುದಿಲ್ಲ"

"ತಾವು ತಮ್ಮ ಅಧಿಕಾರದ ಉತ್ತಮ ಪ್ರಭಾವವನ್ನು ಬಳಸಿ ಈ ನ್ಯಾಯಾಲಯಕ್ಕಾಗಲಿ, ಅಥವಾ ನೇರವಾಗಿ ರಾವತ್ ಅವರಿಗಾಗಲಿ ಹಿಂತಿರುಗಿಸುವ ವ್ಯವಸ್ಥೆ ಮಾಡುವುದಕ್ಕಾಗುತ್ತದೆಯೆ?"

"ಆದರೆ ಅದಕ್ಕೀಗಾಗಲೇ ತೀರಾ ತಡವಾಗಿ ಬಿಟ್ಟಿದೆ"– ವಿಕ್ರಮಾದಿತ್ಯ ಬಾಯಿತಪ್ಪಿ ಆ ಮಾತಾಡಿದ್ದು, ಆದರೆ ಅದರಿಂದ ಏನೂ ಆಗುವುದಿಲ್ಲ ಅಂತ ನನಗೆ ಗೊತ್ತಿತ್ತು. ಯಾವುದೇ ಪೂರ್ವಯೋಜಿತ ತಿಳುವಳಿಕೆ ಇಲ್ಲದೆ ಅದು ಹೇಗೆ ನಾವು ನಮ್ಮಲ್ಲಿಯ ಅತ್ಯಂತ ಅನುಭವೀ ಮತ್ತು ಅತ್ಯಂತ ದಕ್ಷ ನ್ಯಾಯವಾದಿಗಳಿಗೆ ಈ ವಿಚಾರಣೆಯ ನಡೆವಳಿಯ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದೆವು ಅನ್ನುವುದು ವಿಚಿತ್ರವಾದ ಮತ್ತು ವಿವರಿಸಲು ಕಷ್ಟವಾದ ಸಂಗತಿಯಾಗಿದೆ.

"ಒಂದು ವೇಳೆ ನ್ಯಾಯಪೀಠ ಈ ಹೊತ್ತು ಸೇರುವ ಬದಲು ನಿನ್ನೆ ಸೇರಿದ್ದರೆ, ತಾವು ಆ ವ್ಯವಸ್ಥೆ ಮಾಡುವುದಕ್ಕಾಗುತ್ತಿತ್ತೆ?"

"ತಾವು ಏನು ಮಾತನಾಡುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ"

"ಕುದುರೆಗಳ ವಿಷಯ ಮಹಾಸ್ವಾಮಿ, ಬಹುಶಃ ಅವುಗಳ ಬಗ್ಗೆ ಏನನ್ನು ಮಾಡುವುದಕ್ಕೂ ತೀರಾ ತಡವಾಗಿ ಬಿಟ್ಟಿದೆ ಅನ್ನಿಸುತ್ತೆ. ಅವುಗಳನ್ನು ಕಳೆದುಕೊಂಡು ಬಿಟ್ಟಿರಾ? ಮಾರಿ ಬಿಟ್ಟಿರಾ? ಅಥವಾ ಯಾರಿಗಾದರೂ ಉಡುಗೊರೆಯಾಗಿ ಕೊಟ್ಟು ಬಿಟ್ಟಿರಾ?"

"ನಿಮ್ಮ ಕುತಂತ್ರಗಳನ್ನು ನನ್ನ ಮೇಲೆ ಪ್ರಯೋಗಿಸಬೇಡಿ ಪ್ರಧಾನಿಯವರೆ, ನಾನು ಅದಕ್ಕೆಲ್ಲ ಒಳಗಾಗುವಂಥವನಲ್ಲ. ನನ್ನ ಹತ್ತಿರ ಯಾವತ್ತೂ ಇಲ್ಲದೆ ಇರುವುದನ್ನು ನಾನು ಕಳೆದುಕೊಳ್ಳುವುದಕ್ಕಾಗಲಿ, ಮಾರುವುದಕ್ಕಾಗಲಿ ಅಥವಾ ಉಡುಗೊರೆಯಾಗಿ ಕೊಡುವುದಕ್ಕಾಗಲಿ ಹೇಗೆ ತಾನೆ ಸಾಧ್ಯ?"

"ಆ ಅಶ್ವ ಶಿಕ್ಷಕ ಪಾತಕನ ವಿಷಯ ಹೇಗೆ? ಅವನನ್ನು ಅವನ ನ್ಯಾಯ ಸಮ್ಮತ ಯಜಮಾನನ ಹತ್ತಿರಕ್ಕೆ ವಾಪಸ್ ಕಳುಹಿಸಿಕೊಡಬಹುದಲ್ಲವೆ"

"ಇಲ್ಲ ಅವನನ್ನು ಕಳಿಸಲಾಗುವುದಿಲ್ಲ"

"ಈಗ ಅವನು ಎಲ್ಲಿದ್ದಾನೆ?"

"ಅದನ್ನು ಹೇಳುವಷ್ಟು ಸ್ವಾತಂತ್ರ್ಯ ನನಗಿಲ್ಲ"

"ಅವನು ನಿಮ್ಮ ಹತ್ತಿರ ಕೆಲಸಕಿದ್ದಾನೇನು?"

"ಇಲ್ಲ"

"ಅವನನ್ನು ಇನ್ಯಾರಿಗಾದರೂ ಒಪ್ಪಿಸಿದ್ದೀರಾ?"

"ಅವನು ಸ್ವತಂತ್ರ ವ್ಯಕ್ತಿ. ಅವನಿಗಿಷ್ಟ ಬಂದ ಕಡೆ ಕೆಲಸಕ್ಕೆ ಹೋಗಬಹುದು"

ಮೆಲ್ಲಗೆ ಬಾಗಿಲು ತಟ್ಟಿದ ಶಬ್ದವಾಯಿತು. ಅದು ಮಂಗಲ್. "ಮಹಾರಾಜ್ ಕುಮಾರರೆ"– ಪೂರಣ್‌ಮಲ್‌ಜೀಯವರು ನನ್ನ ಕಡೆ ತಿರುಗಿ ಹೇಳಿದರು. "ಈ ವಿಚಾರಣಾ ತನಿಖೆ ನಮ್ಮನ್ನು ಎಲ್ಲಿಗೂ ಮುಟ್ಟಿಸುತ್ತಾ ಇಲ್ಲ. ನಾವು ಇದನ್ನು ನಿಲ್ಲಿಸಿ ನಮ್ಮ ಮುಂದಿನ ಕ್ರಮ ಏನು ಎಂದು ತೀರ್ಮಾನ ಮಾಡೋಣವೆ?"

"ಅದೇ ಒಳ್ಳೆ ಯೋಚನೆ ಅನ್ನಿಸುತ್ತೆ"

"ಆರೋಪಿಯನ್ನು ಒಳ ಕೋಣೆಗೆ ಕರೆದುಕೊಂಡು ಹೋಗು. ಆತ ಏನಾದರೂ ಅಬ್ಬರಿಸಿದರೆ ಕೈಗೆ ಬೇಡಿ ಹಾಕು. ಅಯ್ಯಾ ಪಹರೆಯವನೆ ರಾವತ್ ಅವರಿಗೆ ಅಕ್ಕಪಕ್ಕದ ಯಾವುದಾದರೂ ಕಛೇರಿಯಲ್ಲಿ ಅನುಕೂಲ ಮಾಡಿಕೊಡು."

ನಾನು ಹೊರಗೆ ತೆರಳಿ ಮಂಗಳನ ಜೊತೆ ಸೇರಿಕೊಂಡೆನು. ಅವನು ವಿಕ್ರಮಾದಿತ್ಯನ ಮೊಹರಿರುವ ಪತ್ರವೊಂದನ್ನು ಕೊಟ್ಟನು.

"ಸಜ್ಜಾದ್ ಹುಸೇನ್ ಮತ್ತು ಅವನ ಕಡೆಯ ಏಳು ಮಂದಿ ರಾಜ ಪಹರೆಯ ಕೊಠಡಿಗಳಲ್ಲಿ ಬಂದಿಗಳಾಗಿದ್ದಾರೆ"

"ಯಾಕೆ ನಿನಗೆ ಅಷ್ಟು ಹೊತ್ತು ಹಿಡಿಯಿತು. ಅವನು ಕೋಟೆ ಬಿಟ್ಟು ಹೊರಟಿದ್ದರೆ, ನೀವು ಅವನನ್ನು ಸಂಧಿಸಿರಲೇ ಬೇಕಾಗಿತ್ತು. ಅದೆಲ್ಲ ನಾಲ್ಕು ಗಂಟೆಗಳ ಹಿಂದೆನೇ ಆಗಿರಬೇಕಾಗಿತ್ತಲ್ಲ"

"ಅವನು ಬಾಗೋಲಿ ಬಿಟ್ಟ ಮೇಲೆ ಮಾತ್ರ ಅವನನ್ನು ಬಂಧಿಸಬೇಕು ಎಂದು ನನ್ನ ಕಡೆಯವರಿಗೆ ನಾನು ಸ್ಪಷ್ಟ ನಿರ್ದೇಶನ ಕೊಟ್ಟಿದ್ದೆ"

"ಅದು ಯಾಕೆ ಹಾಗೆ"? ನನ್ನ ಆಜ್ಞೆಯನ್ನು ರದ್ದು ಮಾಡಿದ್ದಕ್ಕೆ ಮಂಗಳನ ಕುತ್ತಿಗೆ ಹಿಸುಕಿ ಬಿಡಬೇಕು ಅನ್ನಿಸಿತು. ಅವನು ತನ್ನ ಯೋಗ್ಯತೆ ಮೀರಿ ಬೆಳೆದು ಬಿಟ್ಟಿದ್ದಾನೆ. ಈಗ ಅವನ ಬಾಲ ಕತ್ತರಿಸಬೇಕು ನಾನು. ಅಲ್ಲಿ ವಿಕ್ರಮಾದಿತ್ಯ ನನ್ನ ಜೊತೆ ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ ಅನ್ನುವ ಹಾಗೆ ಆಟ ಆಡಿಸ್ತಾ ಇದ್ದಾಗ ಈ ಕತ್ತೆ ಬೇಕುಫ಼ ನಾನು ತುದಿಗಾಲ ಮೇಲೆ ನಿಲ್ಲುವ ಹಾಗೆ ಮಾಡಿದ್ದಾನೆ.

"ನನಗೆ ಅವಿಧೇಯನಾಗಿ ನಡೆದುಕೊಂಡಿದ್ದಕ್ಕೆ ನಿನ್ನನ್ನು ಸೆರೆ ಮನೆಗೆ ತಳ್ಳಿಸಬಹುದು ನಾನು"

"ಸಜ್ಜಾದ್ ಹುಸೇನನಿಗೆ ಬಾಗೋಲಿಯಲ್ಲಿ ವ್ಯವಸಾಯದ ಜಮೀನು ಇದೆ"

"ಇದ್ದರೆ ಅದನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ? ನಾನು ಹೋಗಿ ಅಲ್ಲಿ ಜೋಳ ಬಿತ್ತಬೇಕು ಅನ್ನುತ್ತೀಯೇನು? ಅಯ್ಯೋ ದೇವರೆ! ನಾನೆಂಥ ಕಣ್ಣಿಲ್ಲದವನು! ನನ್ನ ಮೂರ್ಖತನಕ್ಕೆ ಕ್ಷಮೇನೇ ಇಲ್ಲ. ನೀನು ಅಲ್ಲಿ ಕಾಲೀಬಿಜಲಿಯನ್ನು ನೋಡಿದೆಯೇನು?"

"ಅಷ್ಟೇ ಅಲ್ಲ, ಬಾಕಿ ಒಂಬತ್ತು ಕುದುರೆಗಳು ಮತ್ತು ಅಶ್ವಪಾಲಕನನ್ನೂ"

"ಮಂಗಳ್ ನೀನು ಅಪರಾಧ ವಿಭಾಗದಲ್ಲಿರಬೇಕಾಗಿತ್ತು. ಅಪರಾಧಿಗಳು ಯಾವ ರೀತಿ ಯೋಚನೆ ಮಾಡುತ್ತಾರೆ ಮತ್ತು ಯಾವ ರೀತಿ ಕೆಲಸ ಮಾಡುತ್ತಾರೆ ಅನ್ನುವುದು ನಿನಗೆ ಹುಟ್ಟರಿವು. ಈ ವರ್ಷದ ಗೌರವ ಪ್ರಶಸ್ತಿಗೆ ನಿನ್ನ ಹೆಸರನ್ನು ಮಹಾಪ್ರಭುಗಳಿಗೆ ನಾನು ಶಿಫಾರಸ್ಸು ಮಾಡುತ್ತೇನೆ."

ಮಂಗಳ್ ಏನನ್ನೂ ಕೇಳಿಸಿಕೊಳ್ಳುತ್ತಿರಲಿಲ್ಲ. ಹಾಗೆ ಕೇಳಿಸಿಕೊಳ್ಳುತ್ತಿದ್ದರೆ, ಅದರಿಂದೇನು ಸಂಭ್ರಮ ಪಡುತ್ತಿರಲಿಲ್ಲ. ಅವನ ಮನಸ್ಸು ಬೇರೆಲ್ಲೋ ಇತ್ತು. "ಆ ಪತ್ರದಲ್ಲಿ ಏನಿದೆ ಅಂತ ತಿಳಿದುಕೊಳ್ಳುವುದು ನಿಮಗೆ ಬೇಕಿಲ್ಲವೇನು?"

ನಾನು ರಾಜಮುದ್ರೆ ಉಳ್ಳ ಆ ಪತ್ರ ತೆಗೆದುಕೊಂಡು ಮತ್ತೆ ನ್ಯಾಯ ಸಭೆಗೆ ಹಿಂತಿರುಗಿದೆ.

"ವಿಕ್ರಮಾದಿತ್ಯನ ಜೊತೆಯಲ್ಲಿ ಈಗ ಯಾವ ರೀತಿಯಲ್ಲಿ ವ್ಯವಹರಿಸಬೇಕು ಎಂದು ತಾವು ಸಲಹೆ ಮಾಡುತ್ತೀರಿ? ಸಾಂದರ್ಭಿಕ ಸಾಕ್ಷ್ಯಗಳೆಲ್ಲವೂ ಕುದುರೆಗಳ ಕಳ್ಳತನವನ್ನು ಸಮಗ್ರವಾಗಿ ಅವನೇ ಆಯೋಜಿಸಿದ್ದನೆಂಬುದನ್ನು ಗುರಿ ಮಾಡಿ ತೋರಿಸುತ್ತವೆ. ಆದರೆ ಅದಕ್ಕೆ ನಮ್ಮ ಬಳಿ ಸಾಕ್ಷ್ಯ ಇಲ್ಲ."

ನಾನು ಮಧ್ಯೆ ಬಾಯಿ ಹಾಕಿ ಹೇಳಿದೆ– "ನಮ್ಮ ಹತ್ತಿರ ಸಾಕ್ಷ್ಯ ಇದೆ ಪೂರಣ್‌ಮಲ್‌ಜೀಯವರೆ. ನಾವು ಹತ್ತೂ ಕುದುರೆಗಳನ್ನು, ಅಶ್ವಪಾಲಕನನ್ನು ಹಾಗೂ ರಾಜಕುಮಾರ ವಿಕ್ರಮಾದಿತ್ಯನು ಗುಜರಾತಿನ ರಾಜಕುಮಾರ ಬಹದ್ದೂರ್‌ಖಾನ್ ಅವರಿಗೆ ಬರೆದ ಪತ್ರ ಇವೆಲ್ಲವನ್ನೂ ವಶಪಡಿಸಿಕೊಂಡಿದ್ದೇವೆ. ನಿಮ್ಮ ಅನುಮತಿಯೊಂದಿಗೆ ಅದನ್ನು ತೆರೆಯುತ್ತಾ ಇದ್ದೇನೆ." ಆದರೆ ಅದಕ್ಕಿಂತ ಸೂಕ್ತವಾದ್ದು ಎಂದು ಯೋಚಿಸಿ ಆ ಪತ್ರದ ಮೇಲಿರುವ ರಾಜ ಮುದ್ರೆಯನ್ನು ಎಲ್ಲರೂ ನೋಡಲಿ ಎಂಬ ಉದ್ದೇಶದಿಂದ ಅಲ್ಲಿದ್ದ ಎಲ್ಲರಿಗೂ ಅದನ್ನು ಸುತ್ತಿಸಿದ್ದಾಯಿತು. ಅನಂತರ ನಾನು ಪತ್ರವನ್ನು ಓದಿದೆ;

"ಘನತೆವೆತ್ತ ಮಾನ್ಯ ರಾಜಕುಮಾರ ಬಹದ್ದೂರ್‌ಖಾನ್ ಅವರಿಗೆ. ಈ ಪತ್ರ ನಿಮ್ಮ ಕೈ ಸೇರುವಾಗ ತಾವು ಕ್ಷೇಮದಿಂದಿರುತ್ತೀರಿ ಮತ್ತು ಯುದ್ಧೋತ್ಸಾಹದಲ್ಲಿರುತ್ತೀರಿ ಎಂದು ತಿಳಿಯುತ್ತೇನೆ. ನಾವುಗಳು ಜೇಷ್ಠ ಪುತ್ರರುಗಳಲ್ಲ. ಹಾಗಾಗಿ ನಾವು ಮೊದಲಿಗೆ ಅಧಿಕಾರವನ್ನು ವಶಕ್ಕೆ ತೆಗೆದುಕೊಂಡು ಅನಂತರ ಸಿಂಹಾಸನವನ್ನು ವಶಕ್ಕೆ ತೆಗೆದುಕೊಳ್ಳಬೇಕು. ಇದು ಅದಕ್ಕೆ ಅತ್ಯಂತ ಸೂಕ್ತವಾದ ಸಮಯ ಅಂತ ನನಗೆ ಅನ್ನಿಸುತ್ತದೆ. ನಮ್ಮಿಬ್ಬರ ಅಪ್ಪಂದಿರೂ ಇದಾರ್ ವಿಷಯಕ್ಕೆ ಪರಸ್ಪರ ಹೋರಾಟದಲ್ಲಿ ಮುಳುಗಿದ್ದಾರೆ.

ರಾಜಕುಮಾರನೆಂದು ಕರೆಸಿಕೊಳ್ಳುತ್ತಿರುವ ನನ್ನ ಸೋದರ ಈಗ ಚಿತ್ತೂರಿನ ಅಧಿಕಾರವನ್ನು ವಹಿಸಿಕೊಂಡಿದ್ದಾನೆ. ಅವನು ತುಂಬಾ ದುರ್ಬಲ ಮತ್ತು ತನ್ನನ್ನು ತಾನು ಕಂಠೋಕ್ತವಾಗಿ ಹೇಳಿ ಪ್ರತಿಷ್ಠಾಪನೆ ಮಾಡಿಕೊಳ್ಳದೆ ಇರುವಂಥವನು; ಅವನ ಹೆಂಡತಿಯದು ಒಂದು ದೇಶ ವ್ಯಾಪೀ ಹಗರಣ ; ಅವಳು ಒಂದು ಹಾಡು ಮತ್ತು ನೃತ್ಯದ ಮೂಲಕ ಅವನನ್ನು ಮುಂದಕ್ಕೆ ಕರೆದೊಯ್ಯುತ್ತ ಇದ್ದರೆ, ಅವನು ಕೊರಗುತ್ತ ಇಬ್ಬಂದಿ ಸ್ಥಿತಿಯಲ್ಲಿರುತ್ತಾನೆ. ಮದುವೆಯಾಗಿ ಎಷ್ಟೋ ವರ್ಷಗಳಾಗಿದ್ದರೂ ಅವನಿಗೆ ಮಕ್ಕಳಿಲ್ಲ. ಅದು ಇಲ್ಲೂ ಇಲ್ಲ ಅಲ್ಲೂ ಇಲ್ಲ ಅನ್ನುವ ಹಾಗಾಗಿದೆ. ನೀವು ಎರಡು ಸಾವಿರ ಸೈನಿಕರ ಬಲದೊಂದಿಗೆ ಅತಿ ಶೀಘ್ರದಲ್ಲಿ ಚಿತ್ತೂರಿನ ಮೇಲೆ ಮುತ್ತಿಗೆ ಹಾಕಿದರೆ ನನ್ನ ಕಡೆಯವರು ನಿಮಗೆ ನಾಡಿನ ಬಾಗಿಲುಗಳನ್ನು ತೆರೆದು ಬರಮಾಡಿಕೊಳ್ಳುತ್ತಾರೆ ಅನ್ನುವ ನಂಬಿಕೆ ನನಗಿದೆ. ಜೊತೆಗೆ ನಾವು ಸಾವುನೋವುಗಳನ್ನು ಎರಡಂಕೆಗೆ ಸೀಮಿತಗೊಳಿಸಬಹುದು. ಚಿತ್ತೂರಿನ ಇಡೀ ಜನತೆ ದೃಢವಾಗಿ ನನ್ನೊಂದಿಗಿದೆ. ಜನರೆಲ್ಲ ಒಕ್ಕಣ್ಣಿನ, ಒಕ್ಕಾಲಿನ ರಾಜನಿಂದ ಬೇಸತ್ತು ಹೋಗಿದ್ದಾರೆ. ಮತ್ತು ಯಾವ ಹೊತ್ತಾದರೂ ಸರಿ ಹೃತ್ಪೂರ್ವಕವಾಗಿ ನಗಬಲ್ಲ, ವಿನೋದ, ಕ್ರೀಡೆಗಳು, ಮತ್ತು ಸಂತೋಷಗಳಿಗಾಗಿ ವಿಪರೀತವಾಗಿ ಹಾತೊರೆಯುವ, ದಿಟ್ಟ ಹಸನ್ಮುಖೀ ಹಾಗೂ ಕೆಚ್ಚೆದೆಯ ತರುಣನನ್ನು ಆಯ್ಕೆ ಮಾಡಿಕೊಂಡು ಬಿಡುತ್ತಾರೆ.

"ನಾನು ಸಿಂಹಾಸನದ ಮೇಲೆ ಪಟ್ಟಾಭಿಷಿಕ್ತನಾದ ಕೂಡಲೇ ನಾವು ಇದಾರ್ ಕಡೆಗೆ ಹೊರಟು ಬಿಡೋಣ. ನಿಮ್ಮ ತಂದೆ ಚಂಪಾನೇರ್‌ನಲ್ಲಿ ಅಡಗಿಕೊಂಡಿದ್ದಾರೆ. ಅದೇ ನಮ್ಮ ತಂದೆ ನಿಮ್ಮ ತಂದೆಯ ಸೇನಾಧಿಪತಿ ಮಲ್ಲಿಕ್‌ನೊಂದಿಗೆ ಹೋರಾಡುತ್ತಾ ಇದ್ದಾರೆ. ನಮ್ಮಿಬ್ಬರನ್ನೂ ಒಟ್ಟಿಗೆ ನೋಡಿದಾಗ ಎರಡೂ ಸೈನ್ಯಗಳಲ್ಲಿ ಉಂಟಾಗಬಹುದಾದ ಗೊಂದಲ

ಮತ್ತು ವಿಸ್ಮಯಗಳನ್ನು ನೀವು ಊಹಿಸಬಲ್ಲಿರಾ? ನಾವು ತ್ವರಿತವಾಗಿ ಅವರನ್ನು ಹೊಡೆದೋಡಿಸಿ ನಮ್ಮ ತಂದೆಯನ್ನು ಸೆರೆ ಹಿಡಿಯೋಣ. ಆನಂತರ ಶೀಘ್ರವಾಗಿ ಸೈನ್ಯವನ್ನು ಚಂಪಾನೇರ್‌ಗೆ ಮುನ್ನಡೆಸಿಕೊಂಡು ಹೋಗಿ ನಿಮ್ಮ ತಂದೆಯನ್ನು ಸೆರೆ ಹಿಡಿದು ನಿಮ್ಮನ್ನು ಗುಜರಾತಿನ ಮಹಾರಾಜನಾಗಿ ಪಟ್ಟಾಭಿಷೇಕ ಮಾಡೋಣ.

"ನಾನು ಇಲ್ಲಿ ಈಗಾಗಲೇ ಅಸಂತೋಷ ಮತ್ತು ಬಂಡಾಯದ ಬಂಡಿಗಳನ್ನು ಹರಿಯ ಬಿಟ್ಟಿದ್ದೇನೆ. ಈ ಪತ್ರ ತಲುಪಿದ ಕೂಡಲೇ ನೀವು ಅಲ್ಲಿಂದ ಹೊರಟು ಬಿಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ನನ್ನ ನಂಬಿಕೆಯ ಸೈನ್ಯಾಧಿಕಾರಿ ಸಜ್ಜಾದ್ ಹುಸೇನ್ ನಿಮ್ಮನ್ನು ಇಲ್ಲಿಗೆ ಸುರಕ್ಷಿತವಾಗಿ ಕರೆದುಕೊಂಡು ಬರುತ್ತಾನೆ. ನಮ್ಮ ಶಾಶ್ವತ ಸ್ನೇಹವನ್ನು ಗಟ್ಟಿಗೊಳಿಸುವುದಕ್ಕಾಗಿ ಮೇವಾಡದ ಹತ್ತು ಅತ್ಯುತ್ತಮ ಕುದುರೆಗಳನ್ನು ನಿಮಗಾಗಿ ಕಳಿಸಿಕೊಡುತ್ತಿದ್ದೇನೆ.

ಕಾಲಿಬಿಜಲಿ ಎಂಬ ಹೆಣ್ಣು ಕುದುರೆ ಅವೆಲ್ಲವುಗಳ ಪೈಕಿ ಕಿರೀಟಪ್ರಾಯವಾದ ಮತ್ತು ಹೆಮ್ಮೆಯ ಕುದುರೆ. ಅದು ನಮ್ಮ ನೆಲದಲ್ಲಿ ತಯಾರಾದ ಅತಿ ಶ್ರೇಷ್ಠ ಕುದುರೆ ಎಂದು ನಾನು ನಿಮಗೆ ಭರವಸೆ ಕೊಡುತ್ತೇನೆ. ಇಡೀ ಜಗತ್ತನ್ನೇ ಕೊಟ್ಟರೂ ನಾನು ಅದನ್ನು ಕಳೆದುಕೊಳ್ಳಲಾರೆ. ನಿಜಕ್ಕೂ ಈ ಕಪ್ಪು ಮಿಂಚನ್ನು ನಾನು ಕೊಡುಗೆಯಾಗಿ ಕೊಡುತ್ತಿರುವುದು ನಿಮ್ಮ ಮೇಲಿನ ನನ್ನ ಗೌರವ ಮತ್ತು ಪ್ರೀತಿಯ ದ್ಯೋತಕವಾಗಿ.

"ಈ ಕುದುರೆಗಳನ್ನು ಕರೆತರುತ್ತಾ ಇರುವವನು ಇವುಗಳನ್ನು ಪೋಷಿಸಿ ಪಳಗಿಸಿದ ಮನುಷ್ಯ. ಅವನು ನಮ್ಮ ಸಾಮ್ರಾಜ್ಯದ ಅತ್ಯುತ್ತಮ ಅಶ್ವಪಾಲಕ. ಅವನನ್ನೂ ನಿಮಗೇ ನೀಡುತ್ತಿದ್ದೇನೆ.

"ದೇವರು ಕಾಪಾಡಲಿ. ಮುಂದಿನ ದಿನಗಳಲ್ಲಿ ನಿಮ್ಮನ್ನು 'ಗುಜರಾತಿನ ಸಾರ್ವಭೌಮರೇ' ಎಂದು ಸಂಬೋಧಿಸುವ ಸಂದರ್ಭಕ್ಕಾಗಿ ಎದುರು ನೋಡುತ್ತಿರುತ್ತೇನೆ.

"ಎಂದಿನಂತೆ ನಿಮ್ಮ ನಿಜವಾದ ಸ್ನೇಹಿತ. ವಿಕ್ರಮಾದಿತ್ಯ ಸಿಸೋದಿಯ."

ನ್ಯಾಯಾಲಯವು ಕುದುರೆಗಳು ಹಾಗೂ ಅಶ್ವಪಾಲಕನನ್ನು ರಾವತ್ ಜಯಸಿಂಹ ಅವರಿಗೆ ಹಿಂತಿರುಗಿಸಿತು. ರಾಜಕುಮಾರ ವಿಕ್ರಮಾದಿತ್ಯನನ್ನು ಅವನ ರಾಜ ದ್ರೋಹದ ಸಾಕ್ಷ್ಯವನ್ನು ಮುಂದಿಟ್ಟು ಪ್ರಶ್ನಿಸಲಾಯಿತು. ನ್ಯಾಯವಾಗಿ ಅವನಿಗೆ ಮರಣ ದಂಡನೆ ವಿಧಿಸಬೇಕಾಗಿತ್ತು. ಆದರೆ ಅವನೊಬ್ಬ ರಾಜಕುವರ ಮತ್ತು ನನ್ನ ಸೋದರನಾಗಿದ್ದ. ಅಲ್ಲದೆ ತಂದೆಯವರು ಜೀವಂತವಿದ್ದು ಅವರೇ ಸಾರ್ವಭೌಮರಾಗಿದ್ದರು. ಹಾಗಾಗಿ ತಮ್ಮ ಮಗನ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ ಎಂದು ಅವರಿಗೆ ಬಿಡುವುದೇ ವಿಹಿತ. ಅವನನ್ನು ಒಂದು ನಿದರ್ಶನವಾಗಿ ಮಾಡದೆ ಇದ್ದುದು ಬಹುಶಃ ಅತ್ಯಂತ ಘೋರ ತಪ್ಪಾಯಿತು. ರಾಜ ದ್ರೋಹ ಮಾಡಿ ಅದಕ್ಕಾಗಿ ತಮ್ಮ ಜೀವತೆತ್ತ ಇತರೆ ಕುಲೀನರು ಮತ್ತು ಶ್ರೀ ಸಾಮಾನ್ಯರ ಹಾಗೆಯೇ ಇವನನ್ನು ಪರಿಗಣಿಸಿ ಶಿಕ್ಷೆಗೆ ಒಳಪಡಿಸಬೇಕಿತ್ತು. ನ್ಯಾಯಾಲಯ ಪರಸ್ಪರ ಹೊಂದಾಣಿಕೆಯಿಂದ ಮತ್ತು ಪ್ರಬಲವಾಗಿ ಕ್ರಮ ಕೈಗೊಂಡಿದ್ದರೆ. ಇತಿಹಾಸದ ಗತಿ ಬೇರೆಯೇ ಆಗುತ್ತಿತ್ತು. ಬದಲಿಗೆ ನಾವು ನಾಲ್ವರೂ ಅವನನ್ನು ಸ್ಥಾನಬದ್ಧ ಕೈದಿಯಾಗಿಡುವ ಆದೇಶಕ್ಕೆ ಸಹಿ ಹಾಕಿ ಬಲವಾದ ಬೆಂಗಾವಲಿನೊಂದಿಗೆ ಅವನನ್ನು ಕುಂಭಲ್‌ಗರ್ ಕೋಟೆಗೆ ಕಳುಹಿಸಿಕೊಟ್ಟೆವು. ತಂದೆಯವರು ಹಿಂತಿರುಗುವವರೆಗೂ ಅವನನ್ನು ಸೆರೆಯಲ್ಲಿಡಲು ಆದೇಶಿಸಲಾಗಿತ್ತು.

ವಿಕ್ರಮಾದಿತ್ಯ ಎಲ್ಲಿ ಎಂದು ಯಾರಾದರೂ ಪ್ರಶ್ನಿಸಿದಾಗ ಅವರಿಗೆ ಸತ್ಯ ಸಂಗತಿಯನ್ನು

ತಿಳಿಸಿದೆವು. ಅದು ಅರ್ಧಸತ್ಯವಾಗಿತ್ತು. ಕುಂಭಲ್‌ಗರ್‌ನಲ್ಲಿದ್ದುಕೊಂಡು ಅವನ ಪ್ರೀತಿಯ ಮೃಗಯಾ ವಿನೋದದಲ್ಲಿ ಆದ ಅನಿಷ್ಟ ಗಾಯದಿಂದ ಚೇತರಿಸಿಕೊಳ್ಳುತ್ತಿರುವನೆಂದು,

* * *

ನನಗೆ ಮನೆಗೆ ಹಿಂತಿರುಗುವ ಮನಸ್ಸಿರಲಿಲ್ಲ ನಾನು ತೀರಾ ಆಯಾಸಗೊಂಡಿದ್ದೆ. ಹತ್ತರವರೆಗೂ ಎಣಿಸಲು ಯತ್ನಿಸಿದೆ. ಆದರೆ ಮೂರನಂತರ ಬರುವ ಸಂಖ್ಯೆಯನ್ನು ನೆನಪಿಸಿಕೊಳ್ಳಲಾಗಲಿಲ್ಲ. ಅವಳ ಮುಖ ನೋಡುವುದಾಗಲಿ, ಅವಳು ಇಷ್ಟಪಟ್ಟು ಮಾಡುವ ಆರೈಕೆಯಾಗಲಿ ನನಗೆ ಬೇಕಿರಲಿಲ್ಲ. ನನ್ನ ಪಾದರಕ್ಷೆಗಳನ್ನು ಕಳಚಲು, ನನ್ನ ಪೇಟ ಮತ್ತು ಅಂಗರಕ್ಷೆಯನ್ನು ತೆಗೆಯಲು ಅವಳ ಅಗತ್ಯ ನನಗಿರಲಿಲ್ಲ. ನನ್ನ ಉಡುಪನ್ನು ಕಳಚಲು ಸಹಾಯ ಮಾಡುವುದಕ್ಕೆ ಸೇವಕರಿದ್ದರು. ಅದನ್ನು ಕಳಚುವುದೆಲ್ಲ ಯಾರಿಗೆ ಬೇಕಿತ್ತು? ನನಗೆ ಬೇಕಿದ್ದುದೆಲ್ಲ ಹಾಸಿಗೆಯಲ್ಲಿ ಮೈಚಾಚುವುದು ಮತ್ತು ಅಲ್ಲೇ ಮುಂದಿನ ಇನ್ನೂರು ವರ್ಷದವರೆಗೂ ಇದ್ದು ಬಿಡುವುದು.

ನಾನು ಚಂದ್ರ ಮಹಲ್ ಪ್ರವೇಶಿಸಿದೆ, ನನ್ನ ತಲೆ ನಿಜಕ್ಕೂ ತೀರಾ ಹಾಳಾಗಿದ್ದಿರಬೇಕು. ನಾನು ಭ್ರಾಂತಿಗೊಳಗಾಗಿದ್ದೆ. ಆ ಧೋಭಿ ಹೆಂಡತಿ, ಅವಳ ಹೆಸರು ನನಗೆ ನೆನಪಿಲ್ಲ, ನನ್ನ ಕೋಣೆಯಲ್ಲಿ ನನ್ನ ಹಾಸಿಗೆಯ ಹತ್ತಿರ ನಿಂತಿದ್ದಳು. ನಾನು ಅವಳನ್ನು ಲಕ್ಷ್ಯ ಮಾಡಲಿಲ್ಲ.

ಮಂಗಳ್ ಅವಳ ಹತ್ತಿರ ಮಾತಾಡಿದ – "ಈ ಹೊತ್ತು ಬೇಡ. ಇನ್ನು ಯಾವಾಗಲಾದರೂ ಸರಿ, ಅವರಿಗೆ ತುಂಬ ಆಯಾಸವಾಗಿದೆ"

"ಯಾರ ಜೊತೆ ನೀನು ಮಾತಾಡ್ತಿರೋದು" – ನಾನು ಸಿಟ್ಟಿನಿಂದ ಮಂಗಳನನ್ನು ಕೇಳಿದೆ.

"ನಾನು ಅವರನ್ನು ನೋಡಿಕೊಳ್ತೀನಿ" – ಅವಳು ಹೇಳಿದಳು.

"ನಾನು ಕೇಳಿದ್ದು ನೀನು ಯಾರ ಹತ್ತಿರ ಮಾತಾಡ್ತಿದ್ದಿ ಅಂತ ನಿನಗೆ. ಉತ್ತರ ಕೊಡೋಕ್ಕಾಗಲ್ಲವೇನು?"

"ಸುನೇರಿಯಾ ಮಹಾರಾಜಕುಮಾರರೇ".

ಏನು: – ಮುಂದಿನ ಅಶ್ಲೀಲ ಶಬ್ದಗಳನ್ನು ನುಂಗಿಕೊಂಡೇ "ಅವಳು ಇಲ್ಲೇನು ಮಾಡುತ್ತಾ ಇದ್ದಾಳೆ"?

"ಪ್ರತಿ ರಾತ್ರಿಯೂ ಇಲ್ಲಿಗೆ ಬರುತ್ತಾಳೆ'

ಈಗ ನನಗೆ ಅರೆ ಎಚ್ಚರ.

"ಯಾತಕ್ಕೆ ಬರ್ತಾಳೆ"

"ನೀವು ಅವಳಿಗೆ ಬರೋದಕ್ಕೆ ಹೇಳಿದ್ದಿರಿ ಅಂದಳು"

ನನಗೆ ಇದನ್ನು ನಿಭಾಯಿಸಲು ಸಾಧ್ಯವಾಗಲಿಲ್ಲ. ಗಂಭೀರಾ ನದಿಯಲ್ಲಿ ಕಾಣಿಸಿಕೊಂಡಿದ್ದ ಭೂತಗಳು ನನಗೆ ಸಂಜ್ಞೆ ಮಾಡುತ್ತಿದ್ದುವು.

"ನೀವಿಬ್ಬರೂ ತೊಲಗಿ ಹೋಗಿ". ನಾನು ಹಾಸಿನ ಮೇಲೆ ಬಿದ್ದುಕೊಂಡೆ.

ಬೆಳಿಗ್ಗೆ ಐದಕ್ಕೆ ಎಚ್ಚರವಾಯಿತು. ಗುರುಕುಲ ವಿದ್ಯಾಭ್ಯಾಸ ಮತ್ತು ಸೈನಿಕ ತರಬೇತಿಗಳು ನನ್ನ ನಿದ್ರೆಯನ್ನು ಶಾಶ್ವತವಾಗಿ ಹಾಳು ಮಾಡಿಬಿಟ್ಟಿದ್ದುವು. ನಾನು ಎಷ್ಟು ಹೊತ್ತಿಗಾದರೂ ಮಲಗಲಿ ಐದು ಗಂಟೆಗೆಲ್ಲಾ ಎದ್ದು ಬಿಡುತ್ತಿದ್ದೆ. ಸುನೇರಿಯಾ ಒಂದು ಮೂಲೆಯಲ್ಲಿ ಕುಳಿತಿದ್ದಳು.

"ನೀನು ಯಾವಾಗಲೂ ಕೊಳಕು ಬಟ್ಟೆಗಳನ್ನೇ ಉಟ್ಟುಕೊಳ್ಳುತ್ತೀಯಾ"?

"ನಾನು ತಪ್ಪು ಮಾಡಿದೆನೆ?"

"ನೀನು ನಿನ್ನ ಕೊಳೆ ಬಟ್ಟೆಗಳನ್ನು ಏನು ಮಾಡುತ್ತೀಯಾ?"

"ನನ್ನ ಹತ್ತಿರ ಇರುವುದು ಬರೀ ಎರಡು ಜೊತೆ ಬಟ್ಟೆ ಮಾತ್ರ, ಒಂದನ್ನು ಉಟ್ಟುಕೊಳ್ಳುತ್ತೇನೆ. ಇನ್ನೊಂದನ್ನು ಒಗೆಯುತ್ತೇನೆ"

"ಹಾಗಾದರೆ ಆ ದಿನ ನ್ಯಾಯಾಲಯದಲ್ಲಿ ಮೊದಲನೇ ದಿನ ನೀನು ಯಾರ ಚುನ್ನೀ ಧರಿಸಿದ್ದೇ?"

ಅವಳು ನಾಚಿ ಕೆಂಪಾದಳು. "ತಮ್ಮ ಪತ್ನಿ ಮಹಾರಾಣಿಯವರದ್ದು"

"ಕೋಟೆಯಲ್ಲಿ ಬೇರೆ ಯಾವ ಹೆಂಗಸಿನ ಹತ್ತಿರ ಇರುವುದಕ್ಕಿಂತಲೂ ನಿನ್ನ ಹತ್ತಿರ ಹೆಚ್ಚು ಬಟ್ಟೆಗಳಿರಬೇಕು. ರಾಣಿ ಕರ್ಮವತಿಯವರ ಹತ್ತಿರ ಇರುವುದಕ್ಕಿಂತಲೂ ಹೆಚ್ಚಿಗೆ ಇರಬೇಕು. ಏಕೆ ಅಂದರೆ ಇದೇ ಅರಮನೆಯೇ ತನ್ನ ಬಟ್ಟೆಗಳನ್ನೆಲ್ಲ ನಿನಗೆ ಕಳುಸುತ್ತೆ"

"ನಾನು ನ್ಯಾಯಾಲಯಕ್ಕೆ ಹೋಗುತ್ತಾ ಇರುವುದರಿಂದ ನಾನು ಒಳ್ಳೆ ಬಟ್ಟೆ ಧರಿಸಬೇಕು ಅಂತ ಅನ್ನಿಸಿತು. ನಾನು ಬೇರೆಯವರ ಬಟ್ಟೆಗಳನ್ನು ಎರವಲು ತೆಗೆದುಕೊಂಡದ್ದು ಅದೊಂದೇ ಸಲ"

"ನಂಬಬಹುದಾದ ಕತೆ"

ಅವಳು ಮುಗುಳ್ನಕ್ಕಳು. "ಹೌದು, ಕೆಲವೊಂದು ಸಲ ನಾನು ಸ್ವಲ್ಪ ಸಮಯಕ್ಕೆ ಮಾತ್ರ ಬಟ್ಟೆಗಳನ್ನು ಎರವಲು ತೆಗೆದುಕೊಳ್ಳುತ್ತೀನಿ. ಆದರೆ ಯಾವತ್ತೂ ಹಿಂತಿರುಗಿಸಿ ಬಿಡುತ್ತೇನೆ"

ಬಹುಮಟ್ಟಿಗೆ ಅತಿ ಸೂಕ್ಷ್ಮವಾದ ರೀತಿಯಲ್ಲಿ ಹೆಚ್ಚು ಕಡಿಮೆ ಪರದೆ ಸರಿಯಿತು. ನಾನು ನನ್ನ ತುಟಿಗಳ ಮೇಲೆ ಬೆರಳಿಟ್ಟು ಸುನೇರಿಯಾಳ ಕಡೆಗೆ ನೋಡಿದೆ. ಮೆಲ್ಲಗೆ ಎದ್ದೆ. ಮೂರು ದಾಟುಗಳಲ್ಲಿ ಮುಂದಿನ ಕೋಣೆಯಲ್ಲಿದ್ದೆ.

ಅವಳ ಬೆನ್ನಿನ ಒಂದು ಕಿಂಚಿನ್ಮಾತ್ರ ನೋಟ ಕಾಣಿಸಿತು, ಅವಳು ಜೋರಾಗಿ ಓಡುತ್ತಾ ಇದ್ದಳು. ಅವಳ ಉದ್ದನೆಯ ದಪ್ಪ ಜಡೆ ಅವಳ ಬೆನ್ನಿಗೆ ಜೋರಾಗಿ ತಾಕುತ್ತಿತ್ತು. ಅದು ಕೌಸಲ್ಯ,

ನಾನು ಕೋಣೆಯಿಂದ ಹೊರ ಬಂದೆ.

"ನೀನು ನನ್ನನ್ನು ತೀರಾ ಗಂಡಾಂತರಕ್ಕೆ ಈಡು ಮಾಡಿದ್ದೀಯಾ ಅನ್ನುವುದು ನಿನಗೆ ತಿಳಿದಿದೆಯಾ"

ಅವಳು ತಬ್ಬಿಬ್ಬುಗೊಂಡಂತೆ ಕಂಡಳು – "ಹೇಗೆ"?

"ನಿನ್ನ ಗಂಡ ನನ್ನನ್ನು ನಿನ್ನೊಂದಿಗೆ ವ್ಯಭಿಚಾರ ಮಾಡಿದವನು ಅಂತ ಹೆಸರಿಸಿದರೆ?"

"ಓ! ಅವೆಲ್ಲ ಕಾನೂನುಗಳು ಏನಿದ್ದರೂ ಅವನಂಥ ಮತ್ತು ನನ್ನಂಥ ಸಾಮಾನ್ಯ ಮನುಷ್ಯರಿಗೆ ನೀವು ಅದೆಲ್ಲಕ್ಕಿಂತ ಮೇಲಿನವರು?"

ವಿಕ್ರಮಾದಿತ್ಯನು ಖಂಡಿತವಾಗಿಯೂ ಅವಳ ಮಾತನ್ನು ಒಪ್ಪುತ್ತಿದ್ದ.

"ಅರಮನೆಯಲ್ಲಿ ಆ ಹೊತ್ತು ರಾತ್ರಿ ನನ್ನ ಮೇಲೆ ನಿನಗೆ ಸಿಟ್ಟು ಬಂದಿತ್ತಲ್ಲವೆ?"

"ನಾನು ಯಾಕೆ ಸಿಟ್ಟು ಮಾಡಿಕೊಳ್ಳಲಿ?'

"ಏಕೆ ಅಂದರೆ ಮಂಗಳನು ನಿನ್ನನ್ನು ಇಲ್ಲಿಗೆ ಬರುವುದಕ್ಕೆ ಬಲವಂತಪಡಿಸಿದ ಅಂತ"

"ಯಾರೂ ನನ್ನನ್ನು ಬಲವಂತಪಡಿಸಲಿಲ್ಲ. ನನಗೇ ಬರಬೇಕು ಅನ್ನಿಸಿದ್ದರಿಂದ ಬಂದೆ"

"ಹಾಗಾದರೆ ನಾನು ನಿನ್ನ ಕಡೆಗೆ ಬೆನ್ನು ತಿರುಗಿಸಿದಾಗ ನಿನಗೆ ತುಂಬಾ ಸಿಟ್ಟು ಬಂದಿರಬೇಕು"

"ನಿಮ್ಮ ಪತ್ನಿ ಮಹಾರಾಣಿಯವರು ನನ್ನ ಬಗ್ಗೆ ಅಷ್ಟೊಂದು ದಯಾಳುಗಳಾಗಿರಬೇಕಾದರೆ ನಾನು ನಿಮ್ಮ ಮೇಲೆ ಹೇಗೆ ತಾನೆ ಸಿಟ್ಟು ಮಾಡಿಕೊಳ್ಳೋದಕ್ಕೆ ಸಾಧ್ಯ?"

"ನೀನು ಇಡೀ ರಾತ್ರಿ ಆ ಮೂಲೆಯಲ್ಲೇ ಕೂತಿರುತ್ತೀಯೇನು"?

ಅವಳು ನಾಚುತ್ತಾ ಎದ್ದು ನಿಂತಳು ಮತ್ತು ಮುಂದೆ ಬಂದಳು. ಅವಳ ಬೆನ್ನ ಬದಿಯ ಕುಪ್ಪಸದ ದಾರಗಳನ್ನು ಸಡಿಲಿಸಿ ಅದನ್ನು ತೆಗೆಯಲು ಯತ್ನಿಸಿದೆ. ಆದರೆ ಎಂಟೊಂಬತ್ತು ಬಳೆಗಳು ನನ್ನನ್ನು ಜಡವಾಗಿ ನಿಲ್ಲಿಸಿಬಿಟ್ಟವು.

"ಅಂದರೆ ಕುಪ್ಪಸ ಬಿಚ್ಚಬೇಕು ಅಂದಾಗೆಲ್ಲ ಮೊದಲು ಈ ದಂತದ ಬಳೆಗಳನ್ನು ಕಳಚಬೇಕಾಗುತ್ತೆ ಅಂತ ನನಗೆ ಹೇಳುವುದಕ್ಕೆ ಯತ್ನಿಸುತ್ತಿದ್ದೀಯೇನು?"

ಅವಳು ನಕ್ಕಳು. ಅವಳ ಮಣಿಕಟ್ಟಿಗೆ ಹತ್ತಿಕೊಂಡಿದ್ದ ಬಳೆಯನ್ನು ಹಿಡಿದು ಎಳೆದೆ. ಅದು ಅತ್ಯಂತ ಕಿರಿದಾದ ಬಳೆ. ಒಂದಕ್ಕಿಂತ ಒಂದು ದೊಡ್ಡದಾಗಿದ್ದ ಉಳಿದೆಲ್ಲ ಬಳೆಗಳನ್ನು ಅದು ಭದ್ರವಾಗಿ ತಡೆಹಿಡಿದಿತ್ತು. ನಾನು ಬಳೆಯನ್ನು ಹಿಡಿದೆಳೆದದ್ದು ಏನೂ ಪ್ರಯೋಜನಕ್ಕೆ ಬರಲಿಲ್ಲ. ಅದರಿಂದ ಅವಳ ಮಣಿಕಟ್ಟೋ ಇಲ್ಲ ಒಂದೆರಡು ಬೆರಳುಗಳೋ ಮುರಿಯುವ ಸಾಧ್ಯತೆ ಇತ್ತು. ಅವಳು ತನ್ನ ಎಡಗೈನ ತೋರು ಬೆರಳು ಮತ್ತು ಹೆಬ್ಬೆರಳುಗಳಿಂದ ಬಲಗೈನ ಗೆಣ್ಣುಗಳನ್ನು ಬಲವಾಗಿ ಒತ್ತಿ ಹಿಡಿದು ಬಲಗೈಯಿಂದ ಮೊದಲನೇ ದಂತದ ಬಳೆಯನ್ನು ನಿಧಾನವಾಗಿ ತೂರಿಸಿ ಹೊರ ತೆಗೆದಳು. ಉಳಿದವು ಬೇಗನೆ ಹೊರ ಬಂದವು. ಅವಳು ಮಾಡಿದ್ದೆಲ್ಲ ಮುಂಗೈ ಮತ್ತು ತೋಳನ್ನು ಕೆಳಮುಖವಾಗಿ ಬಾಗಿಸಿದ್ದಷ್ಟೆ. ಎಡಗೈಯಿಂದಲೂ ಇದೇ ರೀತಿ ಮಾಡಿ ಅವಳು ಬಳೆಗಳನ್ನೆಲ್ಲಾ ತೆಗೆದ ಕೂಡಲೇ ನಾನು ಅವಳ ರವಿಕೆಯನ್ನು ಮೆಲ್ಲಗೆ ತೆಗೆದು ಹಾಕಿದೆ. ಪುಷ್ಕರ ಸರೋವರ ಮತ್ತು ಹಿಂದಿನ ರಾತ್ರಿಯ ಗಾಳಿ ಉಳಿಸಿದ್ದ ಮರಳ ಗುಡ್ಡಗಳು ನನ್ನ ಮನಸ್ಸಿನಲ್ಲಿ ಸುಳಿದವು. ಮರಳ ಗುಡ್ಡಗಳ ಆಕೃತಿಯನ್ನು ಎಲ್ಲಿ ಕದಲಿಸಿ ಬಿಡುತ್ತೇನೋ ಎಂಬ ಅಂಜಿಕೆಯಲ್ಲಿ ಅತ್ಯಂತ ಹಗುರವಾಗಿ ಅವುಗಳ ಮೇಲೆ ಕೈಯಾಡಿಸಿದೆ. ಕೋಮಲ ಕಾಂತಿಯ ಕರಗಳ ಚಲನೆಯಿಂದ ಹೊಮ್ಮಿದ ಮೆಲುಗಾಳಿಯಷ್ಟೇ ಸಾಕಾಯಿತು. ಮರಳು ಸರಿಯಿತು. ಅವುಗಳೊಳಗೆ ತರಂಗಗಳ ಸಂಚಾರವಾಯಿತು. ಬಾಡಿ ಹೋಗಿ ಸಡಿಲವಾಗಿದ್ದ ಪಾಟಲ ವರ್ಣದ ಸಸ್ಯಗಳು ನಿಧಾನವಾಗಿ ತಲೆ ಎತ್ತಿ ಸೊಗಸಾಗಿ ತಲೆದೂಗತೊಡಗಿದವು.

ಅವಳ ಒಳಲಂಗದ ಗಂಟನ್ನು ಸಡಿಲಿಸಿದೆ. ಅದು ಕಳಚಿ ಅವಳ ಕಾಲ ಬಳಿ ಬಿದ್ದಿತು. ಅವಳನ್ನು ನನ್ನ ತೋಳುಗಳಿಂದ ಎತ್ತಿಕೊಂಡು ಹಾಸಿಗೆಯ ಮೇಲೆ ಮಲಗಿಸಿದೆ. ಅವಳ ಕಣ್ಣುಗಳು ಅಗಲವಾಗಿ ತೆರೆದಿದ್ದುವು. ಅವುಗಳಲ್ಲಿ ತಲ್ಲಣವಿರಲಿಲ್ಲ. ಅವು ಎಚ್ಚರಿಕೆಯಿಂದ ಗಮನಿಸುತ್ತಿದ್ದುವು. ನನ್ನ ಮುಂದಿನ ನಡೆಯೇನೆಂದು ತಿಳಿದುಕೊಳ್ಳುವ ಅಪೇಕ್ಷೆ ಅವುಗಳದು. ಅವಳ ಕುಚಗಳ ನಡುವೆ ನಾಲಿಗೆಯಾಡಿಸಿದೆ. ಅವಳು ಕಂಪಿಸಿದಳು. ನನ್ನ ಬಟ್ಟೆಗಳನ್ನು ಕಳಚಿ ನನ್ನ ದೇಹದ ಭಾರವನ್ನು ಮೊಳಕೈಗಳ ಮೇಲೆ ಬಿಟ್ಟು ಅವಳ ಮೇಲೆ ಒರಗಿದೆ. ಅವಳ ದೇಹದಿಂದ ಆಗ ತಾನೆ ಇಸ್ತ್ರಿ ಮಾಡಿಟ್ಟ ಬಟ್ಟೆಗಳ ವಾಸನೆ ಹೊಮ್ಮತೊಡಗಿತು. ನನ್ನ ತಲೆಯನ್ನು ಸ್ತನಗಳಲ್ಲಿ ಹುದುಗಿಸಿ ಅವಳ ಬಲ ಮೊಲೆ ತೊಟ್ಟಿನ ಮೇಲೆ ನನ್ನ ನಾಲಗೆ ಆಡಿಸಿದೆ. ಇನ್ನೊಮ್ಮೆ ಕಂಪಿಸಿದಳು.

ಅವಳಲ್ಲಿ ಸೇರುವ ಮುನ್ನ ಒಮ್ಮೆಗೇ ಹಿಮ್ಮಡಿಯ ಮೇಲೆ ಎದ್ದು ಕುಳಿತೆ. ಆದರೆ ಸೆಡೆತುಕೊಂಡು ಬಿಟ್ಟೆ. "ನೀನು ಕನ್ಯೆಯೇನು"?

ಅಧ್ಯಾಯ 3

ಬಹುಪಾಲು ಜೋಡಿಗಳನ್ನು ಈ ಭೂಮಿಯ ಮೇಲೆ ಹೊಂದಿಸಲಾಗುತ್ತದೆ ಎಂದು ಯಾರೂ ನಿಮ್ಮನ್ನು ಮೂರ್ಖರನ್ನಾಗಿಸದಿರಲಿ. ಇಜ್ಜೋಡಿಗಳದೇ ಈಗ ಇನ್ನೊಂದು ಕಥೆ. ಅವರನ್ನು ಸ್ವರ್ಗದಲ್ಲಿ ಹೊಂದಿಸಲಾಗುತ್ತದೆ.

ಅವನು ಜಗತ್ತಿನ ಈ ಭಾಗದಲ್ಲೇ ಅತ್ಯಂತ ವಿವಾಹಯೋಗ್ಯ ವರ. ಅವನಿಗೊಬ್ಬ ವಧುವನ್ನು ಹುಡುಕಲು ಅವರಿಗೆ ಬಹಳ ಸಮಯ ಹಿಡಿಯಿತು. ಪ್ರತಿ ದಿನವೂ ಎರಡು ಮೂರು ಮದುವೆ ಪ್ರಸ್ತಾಪಗಳು ಜಾತಕದ ಸಮೇತ ಬರುತ್ತಿದ್ದುವು. ಈ ಜಾತಕಗಳನ್ನು ಪರಿಶೀಲಿಸಿ ಅವನ ಜಾತಕದೊಂದಿಗೆ ಯಾವುದು ಹೊಂದುತ್ತದೆಂಬುದನ್ನು ಇತ್ಯರ್ಥಪಡಿಸುವುದಕ್ಕಾಗಿಯೇ ಒಬ್ಬ ಜೋಯಿಸನನ್ನು ಇದಕ್ಕಾಗಿ ಗೊತ್ತುಪಡಿಸಬೇಕಾಯಿತು. ಪ್ರಸ್ತಾಪಗಳನ್ನು ಮೊದಲು ನೋಡಿ ಕೆಲವುಗಳ ಬಗ್ಗೆ ಅತಿಯಾಗಿ ಸಂಭ್ರಮಪಟ್ಟು ಆಮೇಲೆ ಶನಿ ಯಾವುದೋ ಆಗದೆ ಇರುವ ಮನೆಯಲ್ಲಿದ್ದಾನೆ ಎಂದು ಒಬ್ಬ ರಾಜಕುಮಾರಿಯ ವಿಷಯದಲ್ಲಿ ಪತ್ತೆ ಮಾಡಿ, ಇನ್ನೊಬ್ಬಳ ಜಾತಕದಲ್ಲಿ ಕೆಡುಕುಂಟು ಮಾಡುವ ಕುಜದೋಷ ಇದೆ ಎಂದು ಹೇಳುವುದರಲ್ಲಿ ಅರ್ಥವಿರಲಿಲ್ಲ.

ಮದುವೆ ಎನ್ನುವುದು ದ್ವಿಮುಖ ಮಾರ್ಗದ್ದು, ಹೆಣ್ಣಿನ ಕಡೆಯವರು ಪ್ರಸ್ತಾವನೆಗಳನ್ನು ತರುವುದನ್ನು ಆರಂಭಿಸುತ್ತಾರೆ. ಆದರೆ ಹುಡುಗನ ಕಡೆಯವರು ಕೂಡ ಏನೂ ಹಿಂದೆ ಬೀಳುವುದಿಲ್ಲ. ಆಕಾಶದಿಂದ ಧರೆಗಿಳಿವ ರಂಭೆಗೋಸ್ಕರ ಕಾಯುತ್ತಿರುತ್ತಾರೆ. ನೀವೂ ನಿಮ್ಮ ಪ್ರಯತ್ನ ಪ್ರಾರಂಭಿಸುವಿರಿ. ನೀವು ಸಂಬಂಧ ಬೆಳೆಸಬೇಕೆಂದಿರುವ ಮನೆಗಳ ಒಂದು ಪಟ್ಟಿ ತಯಾರಿಸುವಿರಿ. ಅನಂತರ ಕುಂಟು, ಪೋಲಿಯೋ ಹಿಡಿದ ಕಾಲು ಅಥವಾ ಬಿರುಸು ಗಂಟಲು ಇಲ್ಲದ ಸೂಕ್ತ ಅವಿವಾಹಿತ ಹುಡುಗಿಯರಿದ್ದಾರೆಯೇ ಎಂದು ಪತ್ತೆ ಹಚ್ಚುತ್ತೀರಿ. ಮಹಾರಾಜಕುಮಾರರ ತಂದೆ ರಾಣಾ ಅವರು ಮದುವೆಯಾದ ಸಮಯದ ನೆನಪು ನಿಮಗಿದೆಯೆ? ಮಂದಾಸೌರದ ರಾಜನಿಗೊಬ್ಬ ಸುಂದರ, ಚೈತನ್ಯದ ಚಿಲುಮೆಯಂಥ, ಬೆಳಗಿನ ಮಂಜನ್ನೂ ನಾಚಿಸುವಂಥ ಬಿಳುಪಿನ ಮಗಳಿದ್ದಳು. ಎಲ್ಲರ ಕಣ್ಣೆದುರೇ ಅವಳಿದ್ದರೂ ಯಾರೂ ಅವಳನ್ನು ಗಮನಿಸಲಿಲ್ಲ: ಪೂರ್ವ ನಿಶ್ಚಿತ ವೈರವಾಗಲಿ, ಮಂದಾಸೌರನಿಗೆ ಒಂದು ಪಾಠ ಕಲಿಸೋಣ ಎಂಬ ಪ್ರಶ್ನೆಯಾಗಲಿ, ಅವರೊಂದಿಗೆ ಸೇಡು ತೀರಿಸಿಕೊಳ್ಳೋಣ ಅಥವಾ ಅವಳನ್ನು ನಮ್ಮ ಎರಡನೆಯ ಮಗನಿಗೆ ಮೀಸಲಾಗಿಡೋಣ ಈಥರದ್ದು ಏನೂ ಇಲ್ಲ. ಅವರು ಅವಳ ಬಗ್ಗೆ ಸುಮ್ಮನೆ ಮರೆತುಬಿಟ್ಟರು

ಅಷ್ಟೆ. ರಾಣಾ ಅವಳನ್ನು ಮದುವೆಯಾಗದಿದ್ದಾಗ ಬೇರೆಯವರು ಅವರದ್ದೇ ಆದ ತೀರ್ಮಾನಕ್ಕೆ ಬಂದರು. ಚೆಹರೆಗಳೇ ಮೋಸ ಮಾಡುವಂಥವು ಎಂದು ಅನುಮಾನಪಟ್ಟರು. ವಿಧಿ ನಿರ್ಣಯದ ಪ್ರಕಾರವೇ ಅವಳಲ್ಲೇ ಏನೋ ತಪ್ಪಿದೆ ಎಂದು, ಇಲ್ಲದೆ ಇದ್ದರೆ ಅಂಥ ಒಳ್ಳೆ ಜೋಡಿ ಹೇಗೆ ತಪ್ಪಿಹೋಯಿತು ಎಂದೆಲ್ಲ ಹೇಳಿದರು. ಬಹುಬೇಗ ಪ್ರತಿಯೊಬ್ಬರೂ ಅವಳನ್ನು ದೂರವೇ ಇಟ್ಟರು. ಅವಳನ್ನು ಯಾವತ್ತೂ ತಿರಸ್ಕರಿಸಿರಲಿಲ್ಲ; ಕಾರಣ ಅವಳನ್ನು ಯಾವತ್ತೂ ಪರಿಗಣಿಸಿಯೇ ಇರಲಿಲ್ಲ. ಮೊದಲು ನಾಲ್ಕೈದು ವರ್ಷ ಹುಡುಗಿಯೂ ತಲೆ ಕೆಡಿಸಿಕೊಳ್ಳಲಿಲ್ಲ, ಆಮೇಲೆ ಯಾರೂ ತನ್ನನ್ನು ಯಾವತ್ತೂ ಕೇಳುತ್ತ ಇಲ್ಲ, ಅಥವಾ ತನ್ನ ಕಡೆಗೆ ಯಾರೂ ನೋಡುತ್ತಲೂ ಇಲ್ಲ ಎಂದು ಅರ್ಥ ಮಾಡಿಕೊಂಡಳು. ಅದು ಅವಳಿಗೆ ತುಂಬಾ ಕೆಡುಕೆನಿಸಿತು. ಅದು ಏನು ಎಂದು ಹೇಳಲಿಕ್ಕೆ ಆಗದೆ ಹೋದರೂ ತನ್ನಲ್ಲೇ ಏನೋ ಭಾರೀ ತಪ್ಪಿದೆ ಎಂದು ಅವಳಿಗೆ ತಿಳಿಯಿತು. ಹಾಗೆ ಹೇಳಬೇಕು ಅಂದರೆ, ಅವಳಲ್ಲೇ ಏನೋ ದೋಷ, ಏನೋ ಭಯಂಕರವಾದದ್ದು ಆಗಿಬಿಟ್ಟಿತು. ಅವಳ ಮುಖದಲ್ಲಿ ನರಗಳ ಸೆಳೆತ ಉಂಟಾಯಿತು. ಅದು ಕೈಗೆ ಹಬ್ಬಿತು. ಅವಳು ದೃಢವಾಗಿ ಕೂತುಕೊಳ್ಳಲಾಗುತ್ತಿರಲಿಲ್ಲ. ಅವಳ ಮೊಳಕೈ ಒಂದು ದಿಕ್ಕಿಗೆ ಎಳೆದರೆ, ಕಾಲು ಇನ್ನೊಂದು ದಿಕ್ಕಿಗೆ ಎಳೆಯುತ್ತಿತ್ತು. ಇದಾವುದೂ ತಿಳಿಯದೆ ಎಲ್ಲ ಕಡೆಗೂ ಮುಖ ಮಾಡುತ್ತಿದ್ದಳು. ಅವಳು ಹೊರಗಡೆ ತಿರುಗಾಡುವುದನ್ನು ನಿಲ್ಲಿಸಿದಳು. ಸ್ವಲ್ಪ ಸಮಯದ ಬಳಿಕ ಅವಳು ತನ್ನ ಕೊಠಡಿಯಿಂದ ಹೊರ ಬರಲಿಲ್ಲ. ಆಮೇಲೆ ಒಂದು ತೊಲೆಗೆ ಹಗ್ಗ ಕಟ್ಟಿ ತಾನು ಕುಳಿತಿದ್ದ ಪೀಠವನ್ನು ಒದ್ದಳು.

ಮಹಾರಾಜಕುಮಾರರ ಅಜ್ಜಿ, ರಾಜಮಾತೆಯವರೇ ಮಹಾರಾಜಕುಮಾರರಿಗೆ ಹುಡುಗಿಯನ್ನು ಹುಡುಕಿದರು. ಅವಳು ಜೋಧ್‌ಪುರದ ರಾವ್ ಗಂಗಾನ ಪ್ರಭುತ್ವಕ್ಕೊಳಪಟ್ಟಿದ್ದ ಮೇರ್ತಾದವಳು. ಅವಳು ಕುರ್ಕಿ ಎಂಬ ಹಳ್ಳಿಯಲ್ಲಿ ಹುಟ್ಟಿದವಳು. ಮೇರ್ತಾದ ರಾವ್‌ಡೂಡಾನ ಎರಡನೇ ಮಗ ರತ್ತನ್‌ಸಿಂಹನ ಏಕಮಾತ್ರ ಪುತ್ರಿ. ಅವಳಿನ್ನೂ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದರಿಂದ ತನ್ನ ತಾತ ಡೂಡಾನ ಮನೆಯಲ್ಲಿ ಬೆಳೆದಳು. ಅವಳ ಮೈಬಣ್ಣ ಜೇನಿನ ತೆಳು ಹೊಂಬಣ್ಣದಾಗಿತ್ತು. ಹಸುರು ಕಣ್ಣುಗಳ ಹುಡುಗಿ ಸೌಮ್ಯ ಸ್ವಭಾವದವಳಾಗಿದ್ದಳು. ಅವಳ ತಂದೆ ಯಾವಾಗಲೂ ಸಂಗ್ರಾಮ, ಪ್ರಯಾಣಗಳಲ್ಲಿ ತೊಡಗಿರುತ್ತ ಮನೆಯಿಂದ ದೂರವೇ ಇರುತ್ತಿದ್ದ.

ಅವಳು ಹುಡುಗಿಯ ಹಂತವನ್ನು ದಾಟಿದ್ದಳು. ಆದರೆ ಇನ್ನೂ ಹೆಣ್ಣು ಎಂದು ಕರೆಯಲು ಸಾಧ್ಯಾವಾಗದಿದ್ದ ಸಂದರ್ಭದಲ್ಲಿ ಅವಳ ತಾತ, ತನ್ನ ಮುದ್ದಿನ ಮೊಮ್ಮಗಳಿಗೆ ಸೂಕ್ತವಾದ ಹುಡುಗನನ್ನು ಹುಡುಕ ತೊಡಗಿದ. ಅವಳ ತಾತ, ಅವಳ ಚಿಕಪ್ಪಂದಿರು, ಚಿಕ್ಕಮ್ಮಂದಿರು, ಅವಳ ತಂದೆ ರತ್ತನ್‌ಸಿಂಹ ಕೂಡ ಎಲ್ಲ ಕಡೆ ಗಂಡುಗಳಿಗಾಗಿ ವಿಚಾರಿಸಿದರು. ನಾಲ್ಕು ಜನ ರಾಜಕುಮಾರರ ಪಟ್ಟಿ ತಯಾರಿಸಿದರು. ಮಹಾರಾಜಕುಮಾರ ಮತ್ತು ಈ ಹುಡುಗಿಯ ಜಾತಕಗಳು ಅತ್ಯದ್ಭುತವಾಗಿ ಹೊಂದಿಕೊಳ್ಳುತ್ತಿದ್ದುದರಿಂದಲೂ, ಅವನು ಆ ಕಾಲದ ಅತ್ಯಂತ ಪ್ರಸಿದ್ಧವಾದ ರಜಪೂತ ಸಂಸ್ಥಾನದ ಭಾವೀ ಉತ್ತರಾಧಿಕಾರಿಯೂ ಆಗಿದ್ದರಿಂದಲೂ ಹುಡುಗಿಯ ಕಡೆಯವರು ಅವನ ಅಜ್ಜಿಯ ಹತ್ತಿರ ಹೋದರು. ಮಹಾರಾಣಾ ಸಂಗ್ರಾಮಸಿಂಹನು, ಸಂಗಾ ಎಂದೇ ಜನಕ್ಕೆ ಪರಿಚಿತನಾದವನು. ತನ್ನ ಹಿರಿಯ ಮಗನಿಗೆ ಆ ಹುಡುಗಿಯೇ ಅತ್ಯಂತ ಪ್ರಶಸ್ತವಾದ ಜೋಡಿ ಎಂದು ಭಾವಿಸಿದನು. ಅತ್ಯಂತ ನಿಷ್ಪಕ್ಷಪಾತ ವ್ಯಕ್ತಿಗಳು ಮತ್ತು ಎಲ್ಲದಕ್ಕೂ ತಪ್ಪು ತೆಗೆಯುವ ತೀಕ್ಷ್ಣ ಟೀಕಾಕಾರರು ಕೂಡ ಹುಡುಗಿಯ ವಿಷಯದಲ್ಲಿ ಅತ್ಯಂತ ಪ್ರಶಂಸೆಯ ಮಾತುಗಳನ್ನೇ ಆಡುತ್ತಿದ್ದರು.

ಅವಳು ಸುಂದರಿ, ಧರ್ಮ ನಿಷ್ಠಳು ಮತ್ತು ವಿಧೇಯ ಹುಡುಗಿ. ಅವಳು ಒಬ್ಬ ಒಳ್ಳೆಯ ಹೆಂಡತಿ ಆಗಬಲ್ಲಂಥ ಹಾಗೂ ದೇವರು ಇಚ್ಛಿಸಿದಲ್ಲಿ ಕಾಲ ಬಂದಾಗ ಚಿತ್ತೂರಿನ ಮಹಾರಾಣಿಯೂ ಆದಾಳು ಎಂದರು.

ಮದುವೆಯ ನಿಶ್ಚಿತಾರ್ಥವನ್ನು ಖಾತರಿಪಡಿಸುವ ಸಲುವಾಗಿ ಹುಡುಗಿಯ ಸೋದರವಾವ ವೀರವ್‌ದೇವ್‌ನನ್ನು ಮಂಗಳ ದ್ರವ್ಯಗಳೊಂದಿಗೆ ಚಿತ್ತೂರಿಗೆ ಕಳಿಸಿಕೊಡಲಾಯಿತು. ಕುಲದ ಹಿರಿಯರು ಮತ್ತು ಸೇವಕರ ಪರಿವಾರದವರು ಒಂಟೆಗಳು ಮತ್ತು ಕುದುರೆಗಳ ಮೇಲೆ ಮೂರು ತೆಂಗಿನಕಾಯಿ ಮತ್ತು ಹನ್ನೊಂದು ಅಡಕೆಗಳನ್ನು ದಪ್ಪನಾದ ಚಿನ್ನದ ಎಲೆಯಲ್ಲಿಟ್ಟುಕೊಂಡು ಇನ್ನೂರು–ತೆಂಗಿನಕಾಯಿಗಳು, ಹತ್ತು ಪೌಂಡ್ ಬೆಲ್ಲ, ಹತ್ತು ಪೌಂಡ್ ಅಡಕೆ, ಹತ್ತು ಪೌಂಡ್ ದ್ರಾಕ್ಷಿ, ಹತ್ತು ಪೌಂಡ್ ಸಕ್ಕರೆ, ಹತ್ತು ಪೌಂಡ್ ಪಿಸ್ತಾಬೀಜ, ಹದಿನೈದು ಪೌಂಡ್ ಬಾದಾಮಿ, ಏಳು ಪೌಂಡ್ ಅರಗು, ಏಳು ಪೌಂಡ್ ವೀಳ್ಯದೆಲೆ – ಇದೆಲ್ಲವನ್ನೂ ಹೊರಿಸಿಕೊಂಡು ಹೋದರು. ಹುಡುಗನ ಹಣೆಯ ಮೇಲೆ, ಕುಂಕುಮದ ತಿಲಕದ ಮೇಲೆ ಅಂಟಿಸುವ ಸಲುವಾಗಿ ಇಪ್ಪತ್ತೊಂದು ಸಣ್ಣ ಮುತ್ತುಗಳು ಇದ್ದುವು. ವರನಿಗೆ ಮತ್ತು ಅವನ ಬಂಧು ಬಾಂಧವರಿಗೆ ಕೊಡುವುದಕ್ಕಾಗಿ ನೂರಾ ಒಂದು ಜರತಾರಿ ಉಡುಪುಗಳು, ಪೇಟಗಳು, ಧೋತಿಗಳು, ಶಿರೋವೇಷ್ಟನಗಳು ಮತ್ತು ಅಮೂಲ್ಯವಾದ ಮಣಿ ಖಚಿತವಾದ ನಾನಾ ನಮೂನೆಗಳ ಬಟ್ಟೆಗಳು ಇವೆಲ್ಲವನ್ನು ತರಲಾಗಿತ್ತು. ಕೊನೆಯ ಉಡುಗೊರೆ ಎಂದರೆ ರೇಷ್ಮೆ ಮಖಮಲ್ಲಿನಿಂದ ಹಾಗೂ ವಜ್ರಾಭರಣಗಳಿಂದ ಸಜ್ಜುಗೊಳಿಸಿದ ಹದಿನೈದು ಕುದುರೆಗಳು ಮತ್ತು ಲಕ್ಷ ನಾಣ್ಯ ನಗದು.

ಮಹಾರಾಜ ಕುಮಾರನು ಬಂದು ಪೀಠದ ಮೇಲೆ ಕುಳಿತನು. ಎದೆ ಮೇಲೆ ಹೊದ್ದಿದ್ದ ಜರತಾರಿ ಶಲ್ಯದ ಒಂದು ಎಳೆ ಅವನ ಕತ್ತಿನ ಹಿಂಭಾಗವನ್ನು ಉಜ್ಜುತ್ತಿದ್ದುದರಿಂದ ಅವನು ಚಡಪಡಿಸುತ್ತಿದ್ದನು. ಬಹಳ ದೀರ್ಘ ಕಾಲ ನಡೆದ ಸಮಾರಂಭದ ಕೊನೆಗೆ ಪುರೋಹಿತರು ಅವನ ಹಣೆಯ ಮೇಲೊಂದು ತಿಲಕವಿಟ್ಟರು. ಚಿನ್ನದ ತೆಂಗಿನಕಾಯಿಗಳನ್ನು ಮತ್ತು ಅಡಕೆಗಳನ್ನು ಮಹಾರಾಜ ಕುಮಾರ್‌ಗೆ ನೀಡಲಾಯಿತು. ಇತರೆ ಉಡುಗೊರೆಗಳನ್ನು ಎಲ್ಲರ ಮೆಚ್ಚಿಗೆಗಾಗಿ ಕಾಣುವಂತೆ ಇಡಲಾಯಿತು. ಅಂತಿಮವಾಗಿ ಮಹಾರಾಜ ರಾಣಾ ಉಡುಗೊರೆಗಳನ್ನು ನೋಡಿದನು. ಮದುವೆಯ ದಿನ ಮತ್ತು ಮುಹೂರ್ತ ನಿಶ್ಚಯವಾಯಿತು. ರಾವ್ ವೀರಮ್ ದೇವನು ಒಂದು ನೂರು ನಾಣ್ಯಗಳ ನಗದು ಮತ್ತು ಸಿಹಿ ತುಂಬಿದ ಹಲವಾರು ಗೂಡೆಗಳೊಂದಿಗೆ ಊರಿಗೆ ಹಿಂತಿರುಗಿದನು.

* * *

ಇಡೀ ಚಿತ್ತೂರಿಗೆ ಚಿತ್ತೂರೇ ಮದುವೆಯ ಸಲುವಾಗಿ ಮೆರ್ತಾಕ್ಕೆ ಹೋಗುತ್ತಿದೆಯೇನೋ ಎನ್ನಿಸುವಂತಿತ್ತು. ಇತರೆಯವರ, ನಿಮ್ಮ ಅಣ್ಣತಮ್ಮಂದಿರದ್ದು, ಅಕ್ಕತಂಗಿಯರದ್ದು ಅಥವಾ ಸ್ನೇಹಿತರ ಮದುವೆ ತಮಾಷೆ ಅನ್ನಿಸಬಹುದು. ಆದರೆ ನಮ್ಮದಲ್ಲ. ಮದುವೆಗೆ ಮುನ್ನ, ಪವಿತ್ರವಾದ ಗಣಪತಿಯನ್ನು ಏಳು ದಿನಗಳ ಕಾಲ ಇರಿಸಲಾಗುವುದು. ಪ್ರತಿ ದಿನವೂ ವರನಿಗೆ ಅದೆಂಥ ಮೃಷ್ಟಾನ್ನ ಭೋಜನ ಉಣಬಡಿಸಲಾಗುತ್ತಿತ್ತೆಂದರೆ ಅವನು ಭಾರೀ ಹೊಟ್ಟೆಬೆಳೆಸಿಕೊಂಡು ಗಣಪತಿಯ ಅವಳಿ ಸೋದರನಂತಾಗಿ ಬಿಡುತ್ತಿದ್ದ. ಕುಟುಂಬದ ಹೆಂಗಳೆಯರು ಪ್ರತಿ ರಾತ್ರಿಯೂ ಹಾಡುತ್ತಿದ್ದರು, ನರ್ತಿಸುತ್ತಿದ್ದರು. ಅವರ ಗಂಡಂದಿರು ಉಪ್ಪರಿಗೆಯಿಂದ ಅದನ್ನು ನೋಡುತ್ತಿದ್ದರು. ಹಾಡುಗಾರರೋ, ವಾದ್ಯದವರೋ, ಅಥವಾ ಡೋಲು ಬಾರಿಸುವವರೋ ತುಂಬಾ ಅದ್ಭುತವಾಗಿ ಸಾಧನೆಮಾಡಿದಾಗ ಕೆಳಗಡೆ ಇಳಿದುಹೋಗಿ ಕಲಾವಿದರಿಗೆ ಒಂದು ವರಹ ನಾಣ್ಯ ನೀಡುತ್ತಿದ್ದರು.

ಮದುವೆಯ ಮನೆಯಲ್ಲಿ ವಿಪರೀತ ಕುಡಿತ, ಮೋಜು ಹಾಸ್ಯ, ಪರಿಹಾಸ್ಯ, ವಿನೋದಗಳಿರುತ್ತಿದ್ದವು. ಎಲ್ಲ ಹಾಸ್ಯದ ಗುರಿ ಮದುಮಗನೇ ಆಗಿರುತ್ತಿದ್ದ. ಅವನು ಮುಗುಳ್ನಗುತ್ತಿದ್ದ, ಜೋರುನಗೆ ನಗುತ್ತಿದ್ದ, ಎಲ್ಲವನ್ನೂ ಸುಮ್ಮನೆ, ಶಾಂತ ಚಿತ್ತದಿಂದ ಸಹಿಸುತ್ತಿದ್ದ.

ಮೆರ್ತಾ ತಲುಪಲು ವಾರಗಟ್ಟಲೆ ಆಗುತ್ತಿತ್ತು. ರಾವ್ ಡೂದಾಜೀ, ರತ್ತನ್‌ಸಿಂಹರು, ವೀರಮದೇವ, –ಪ್ರತಿಯೊಬ್ಬರೂ ಮಹಾರಾಜ ಕುಮಾರ ಮತ್ತು ಅವನ ಮದುವೆ ದಿಬ್ಬಣವನ್ನು ಇದಿರುಗೊಳ್ಳಲು ಮೆರ್ತಾದ ಗಡಿಗೆ ಬಂದರು. ದಿಬ್ಬಣವು ಬಹಳ ವಿಜೃಂಭಣೆಯಿಂದ ಇಡೀ ಊರನ್ನು ಸುತ್ತು ಹೊಡೆದು ಅರ್ಜುನಸಿಂಹರ ಅರಮನೆಯ ಹತ್ತಿರ ಬಂದು ನಿಂತಿತು. ಅರಮನೆಯಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಕೋಣೆ ಸಿಗುವುದು ಹಾಗಿರಲಿ, ಒಂದೊಂದು ಹಾಸಿಗೆಯಾದರೂ ಸಿಕ್ಕುತ್ತದೆಯೇ ಎಂದು ಮಾತಾಡಿಕೊಂಡರು. ಆದರೆ ಅವರು ಚಿಂತಿಸಬೇಕಾಗಿರಲಿಲ್ಲ. ಮೆರ್ತಾ ಹೆದರಬೇಕಾಗಿರಲಿಲ್ಲ ಅಥವಾ ಚಿತ್ತೂರಿನ ಕೃಪಾ ಪೋಷಣೆಗೆ ಒಳಗಾಗ ಬೇಕಿರಲಿಲ್ಲ. ಅಥವಾ ಬಡ ಬಂಧು ಶ್ರೀಮಂತನನ್ನು ವಿವಾಹವಾಗಿರುವುದು ಎಂದೂ ಭಾವಿಸಬೇಕಿರಲಿಲ್ಲ. ಹೊರಗಡೆಯಿಂದ ನೋಡಿದಾಗ ಅಷ್ಟೇನೂ ಮನಸ್ಸಿಗೆ ಹಿಡಿಸುವಂತದ್ದಾಗಿ ಕಾಣದೇ ಹೋದರೂ, ಅದರ ಒಳಕ್ಕೆ ಒಂದು ಸಲ ಕಾಲಿಟ್ಟರೆ ಮುಗಿಯುವುದೇ ಇಲ್ಲವೇನೋ ಅನ್ನುವಂತಿತ್ತು. ಹೊಸ ಹೊಸ ವಿಭಾಗಗಳನ್ನು ಕಟ್ಟಿ ಸೇರಿಸಿದ್ದರು. ಕೊಠಡಿಗಳನ್ನೆಲ್ಲಾ ಚೆನ್ನಾಗಿ ಸಜ್ಜುಗೊಳಿಸಲಾಗಿತ್ತು. ಸಾಯಂಕಾಲದವರೆಗೂ ಎಲ್ಲರೂ ವಿಶ್ರಾಂತಿ ತೆಗೆದುಕೊಂಡರು.

ಈ ಕಡೆ ಇವರುಗಳು ಏಕೆ ಸರಿಯಾದ ಹೊತ್ತಿನಲ್ಲಿ ಮದುವೆಗಳನ್ನು ಏರ್ಪಡಿಸಬಾರದು? ಕಾರಣ ಏನಂದರೆ ಅವರು ಏರ್ಪಡಿಸಲ್ಲ, ಅಷ್ಟೆ. ಅದಕ್ಕೆ ಕೊನೆ. ಅಲ್ಲಿಗೆ ಮುಗಿಯಿತು. ದೊಡ್ಡ ದೊಡ್ಡ ಪೆಟ್ಟಿಗೆಗಳನ್ನು ತೆರೆದು ಪ್ರತಿಯೊಬ್ಬರೂ ಹೊಚ್ಚ ಹೊಸ ಬಟ್ಟೆಗಳನ್ನು ತೊಟ್ಟರು. ಮಹಾರಾಜಕುಮಾರ್‌ಗೋಸ್ಕರವಾಗಿಯೇ, ಕೊನೆ ಗಳಿಗೆಯ ಸಿದ್ಧತೆಗಳಿಗಾಗಿ ಇಬ್ಬರು ದರ್ಜಿಗಳು ಬಂದರು. ಒಂದು ಧೋತಿಯನ್ನು ಮಂಡಿಯವರೆಗೂ ಬರುವಂತೆ ಇಳಿಬಿಡಲಾಗಿತ್ತು. ನಯವಾದ ಮತ್ತು ಸೂಕ್ಷ್ಮವಾದ ಜರಿ ಕೆಲಸ ಮಾಡಿದ ಪಚ್ಚೆಯ ಬಣ್ಣದ ಕಿನ್‌ಕಾಪಿನ ವಸ್ತ್ರವನ್ನು ಹೊದಿಸಲಾಗಿತ್ತು. ಇನ್ನು ಪೇಟದ ವಸ್ತ್ರವಾದರೋ ಭರ್ಜರಿಯಾಗಿ ಅಲಂಕೃತಗೊಂಡು ಹೊಳೆಯುವಂಥಾದ್ದಾಗಿತ್ತು. ಅದು ಕೆಂಪು ಬಣ್ಣದ್ದಾಗಿದ್ದು, ಚಿನ್ನದ ಜರಿ ನೂಲಿನ ಬಲಿಷ್ಠ ಅಂಚಿನಿಂದ ಕೂಡಿತ್ತು. ಅತಿಚಿಕ್ಕ ಹರಳು ಮೇಲ್ತುದಿಯಲ್ಲಿದ್ದು, ಗೋಲಿಯಷ್ಟು ಗಾತ್ರದ ದಪ್ಪ ಹರಳುಗಳು ಕೆಳಗಡೆ ಇರುವಂತೆ ವಿನ್ಯಾಸಗೊಳಿಸಲಾಗಿದ್ದ ಏಳು ಎಳೆಗಳ ಕೆಂಪು ಹರಳಿನ ಸರ ರಾಜಕುಮಾರನ ಕೊರಳನ್ನು ಅಲಂಕರಿಸಿತ್ತು.

ಆಗ ವಧುವಿನ ಮನೆಗೆ ತೆರಳಿ ವಿವಾಹವಾಗುವ ಸುಮುಹೂರ್ತ.

* * *

ಒಮ್ಮಿಂದೊಮ್ಮೆಗೇ ಅವನು ಹೊಸಿಲ ಬಳಿ ಇದ್ದನು. ಆಗ ತಾನೆ ಆನೆಯ ಮೇಲಿಂದ ಕೆಳಗಿಳಿದಿದ್ದನು. ಪುರೋಹಿತರು ಪೂಜೆಯನ್ನು ನೇರವೇರಿಸಿದರು. ನಂತರ ಮೆರ್ತಾದ ಅತಿಥಿಯಾಗಿರುವಾಗ ರಾಣಾ ಒಂದು ತಾಮ್ರದ ನಾಣ್ಯವನ್ನೂ ಖರ್ಚು ಮಾಡಿಲ್ಲ ಅನ್ನುವುದನ್ನು ಖಾತರಿಪಡಿಸುವ ಸಲುವಾಗಿ ಮದುಮಗನ ತಂದೆಯ ರೇಷ್ಮೆ ಹಮ್ಮಿಣಿಯ ಸುತ್ತ ಪುರೋಹಿತರು ಒಂದು ದಾರವನ್ನು ಕಟ್ಟಿಬಿಟ್ಟರು. ಓಲಗ ಮತ್ತು ಡೋಲುಗಳ ಶಬ್ದ ಇನ್ನೂ ಕೇಳಿಬರುತ್ತಿತ್ತು. ರಾಜಕುಮಾರನು ಒಂದು ಸುತ್ತು ಕಣ್ಣು ಹೊರಳಿಸಿದ್ದರೆ, ತಂದೆ, ಹತ್ತಿರದ ಕುಟುಂಬ ವರ್ಗದವರು, ಮತ್ತು ಅರ್ಧ ಕುಲಬಾಂಧವರೆಲ್ಲರನ್ನೂ ಕಾಣಬಹುದಿತ್ತು.

ಆದರೆ ಅವನಿಗೆ ಅವರಿಂದ ಕಡಿದು ಹೋದಂತೆ ಅನ್ನಿಸಿತು. ಇನ್ನು ಮೇಲೆ ತಾನೇ ಅದನ್ನೆಲ್ಲ ರೂಢಿಸಿಕೊಳ್ಳಬೇಕು. ಮತ್ತೆ ತನ್ನ ಯೌವನಕ್ಕೆ ಮರಳುವ ಹಾಗಿಲ್ಲ. ಅವನ ನಿಶ್ಚಿಂತೆಯ ಆ ದಿನಗಳು ಆಗಾಗ್ಗೆ ಏರ್ಪಡಿಸುತ್ತಿದ್ದ ಉಚ್ಛೃಂಖಲ ಗೋಷ್ಠಿಗಳು, ಹೊಣೆಗಾರಿಕೆ ಇಲ್ಲದಿರುವಿಕೆ ಅವೆಲ್ಲವೂ ಈಗ ಹಳೆಯ ಕಥೆಯಾಯಿತು. ಬಾಗಿಲುವಾಡದ ಹಾಸುಗಲ್ಲಿನ ಕೆಳಗೆ ನಡೆದು ಹೋದರೆ ಸಾಕು, ಪೂರ್ಣವಾಗಿ ಬೆಳೆದುನಿಂತ ಗಂಡು ತಾನು. ಎಲ್ಲರಿಂದಲೂ ಪರಿತ್ಯಕ್ತನಾದ ಹಾಗೂ ಏಕಾಂಗಿಯಾದ ಭಾವವುಂಟಾಯಿತು. ಆ ಕಡೆಗೋ ಈ ಕಡೆಗೋ ಎರಡು ಹೆಜ್ಜೆ ಹಾಕಿದಾಕ್ಷಣಕ್ಕೇ ಅಂಥ ಒಂದು ಏರ್ಪಡಿಸಲಾಗದಂಥ ವ್ಯತ್ಯಾಸವನ್ನುಂಟು ಮಾಡಲು ಸಾಧ್ಯವಿಲ್ಲ. ಅದೊಂದು ರೀತಿಯಲ್ಲಿ ಅಸಂಗತ. ಆದರೆ ಏನೇ ಆಗಲಿ ನಿಜ. ತಾನೆಂದೂ ನೋಡಿಲ್ಲದ ತನ್ನ ಭಾವಿ ವಧುವನ್ನು ನೆನಪಿಸಿಕೊಂಡನು. ಅವಳು ಮನೆಯಿಂದ ಆ ಎರಡು ಹೆಜ್ಜೆ ಹೊರಗಿಟ್ಟಾಗ, ಅವಳು ತಾನು ಬೆಳೆದು ಬಂದ ತನ್ನವರಿಂದ ಮನೆಯಿಂದ, ಮರಗಳಿಂದ, ಹಕ್ಕಿ, ಪಕ್ಷಿಗಳಿಂದ, ದೇಗುಲ ಮತ್ತು ನಗರದಿಂದ ಶಾಶ್ವತವಾಗಿ ತನ್ನನ್ನು ದೂರ ಮಾಡಿಕೊಂಡು ಬಿಡುತ್ತಾಳೆ. ಒಂದೇ ಒಂದು ಹೊಡೆತಕ್ಕೆ ಅವಳಿಂದ ಅವಳ ಭೂತಕಾಲ ಬೇರ್ಪಡಿಸಲ್ಪಟ್ಟು ನೆನಪಿನ ಬೂದಿಯಾಗಿ ಮಾರ್ಪಡುತ್ತದೆ.

ಅವನು ಅವಳ ಜೊತೆ ನಿಲ್ಲುವನು, ಅವಳ ಸುತ್ತ ಕೈಹಾಕಿ ಅವಳನ್ನು ರಕ್ಷಿಸುವನು. ತಮ್ಮದೇ ಆದ ಬದುಕು ಸಾಗಿಸುವರು. ತನ್ನ ವಧುವನ್ನು ಯುದ್ಧದಲ್ಲಿ ಹೋರಾಡಿ ಗೆದ್ದಿದ್ದೇನೆಂಬುದನ್ನು ಸೂಚಿಸಲು ಹೆಬ್ಬಾಗಿಲ ಹಾಸುಗಲ್ಲಿನ ಮೇಲಿನ ತೋರಣವನ್ನು ತನ್ನ ಖಡ್ಗದಿಂದ ಏಳು ಭಾರಿ ಸ್ಪರ್ಶಿಸಿದನು. ಹೊಸಿಲು ಅಥವಾ ತೋರಣದಂಥ ಸಂಕೇತಗಳು ಅಷ್ಟೆಲ್ಲಾ ಅರ್ಥದ ಭಾರವನ್ನು ಏಕಾದರೋ ಹೊತ್ತಿವೆಯೋ!

ಅವನ ತಂದೆಯ ಸೋದರಿ, ಅವನ ಸೋದರತ್ತೆಯನ್ನು ಹುಡುಗಿಯ ಸೋದರಮಾವ ವೀರಮ್ ದೇವ್ ಅವರಿಗೆ ಮದುವೆ ಮಾಡಿಕೊಡಲಾಗಿತ್ತು. ಈ ಮದುವಣಗಿತ್ತಿಯನ್ನು ಸಾಕಿ ಬೆಳೆಸಿದ್ದು ಆಕೆಯೇ, ವರನಿಗೆ ಒಂದು ಸಣ್ಣ ಮಣೆಯ ಮೇಲೆ ಕೂರಲು ಹೇಳಿ ಅವನ ಹಣೆಯ ಮೇಲೊಂದು ತಿಲಕವಿಟ್ಟಳು. 'ಬಾಯಿ ತೆಗಿ' ಎಂದು ಹೇಳಿ ಮೊಸರು ಮತ್ತು ಸಿಹಿ ತಿಂಡಿಗಳನ್ನು ಅವನ ಬಾಯಿಗೆ ಹಾಕಿದಳು. ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಹಮ್ಮಿಣಿಯಿಂದ ಚಿನ್ನದ ವರಹವೊಂದನ್ನು ತೆಗೆದು ತಿಲಕದ ಮೇಲೆ ಅಂಟಿಸಿದಳು.

ಮನೆಯೊಳಗೆ ಸಜ್ಜುಗೊಳಿಸಿದ್ದ ಮದುವೆಯ ಮಂಟಪಕ್ಕೆ ಅವನನ್ನು ಕರೆದೊಯ್ದಳು. ಒಂದು ರತ್ನ ಕಂಬಳಿಯ ಮೇಲೆ ಕುಳಿತನು. ಅವನ ವಧು ನಡೆದು ಬಂದಳು. ತಲೆಯ ಮೇಲೆ ಹೊದ್ದುಕೊಂಡಿದ್ದ ಸೀರೆಯ ಸೆರಗು ಮುಖದ ಮೇಲಕ್ಕೆ ಜಾರಿತು. ಮದುವೆಯ ಸಮಾರಂಭ ಅನವರತವಾಗಿ ನಡೆಯಿತು. ಮೊದಲಿಗೆ ಅವನ ಎಡಗಾಲು ನಂತರ ಬಲ ತೊಡೆ ಮರಗಟ್ಟಿ ಹೋದವು. ಬೇರೆಯವರು ಹಿಡಿದೆತ್ತಿ ಸಪ್ತಪದಿಗೆ ಕರೆದುಕೊಂಡು ಹೋಗಬೇಕಾಯಿತು. ವಧುವಿನ ಮೇಲುಹೊದಿಕೆಯನ್ನು ಅವನ ಕೈನ ವಸ್ತ್ರಕ್ಕೆ ಸೇರಿಸಿ ಗಂಟು ಹಾಕಲಾಯಿತು. ವಧೂವರರು ಅಗ್ನಿಯ ಸುತ್ತ ಏಳು ಸುತ್ತು ಪ್ರದಕ್ಷಣೆ ಬಂದರು. ಅದರಲ್ಲಿ ನಾಲ್ಕು ಪ್ರದಕ್ಷಣೆಗಳಲ್ಲಿ ಅವನು ಮುಂದೆ ಅವಳು ಹಿಂದೆ. ಮೂರರಲ್ಲಿ ಅವಳು ಮುಂದೆ ಅವನು ಹಿಂದೆ. ಐದು ಗಂಟೆಗಳ ಈ ಎಲ್ಲ ವಿಧಿಗಳ ನಂತರ ಅವರಿಬ್ಬರು ಗಂಡ-ಹೆಂಡತಿ.

ಅವರನ್ನು ಅವರು ಮಲಗುವ ಮನೆಯಲ್ಲಿ ಕೂಡಿ ಹಾಕಿದಾಗ ರಾತ್ರಿ ಎರಡೋ ಎರಡೂವರೆಯೋ ಆಗಿರಬೇಕು. ಅವನು ಅವಳ ಕೈಯನ್ನು ಹಿಡಿದುಕೊಂಡನು.

ಅವಳು ಎಳೆದುಕೊಂಡಳು. ಅವನು ಮತ್ತೆ ಹಿಡಿದುಕೊಂಡನು. ಕುಳಿತುಕೋ ಎಂದು ಹೇಳಿ ಹಾಸಿಗೆಯ ಕಡೆಗೆ ಸಂಜ್ಞೆ ಮಾಡಿದನು. ಹಾಸಿಗೆ ಹಾಕಿದ್ದ ಮಂಚದ ಕಟ್ಟಿನಿಂದ ಮಲ್ಲಿಗೆ ಹೂವಿನ ಮತ್ತು ಚೆಂಡು ಹೂವಿನ ಮಾಲೆಗಳನ್ನು ಇಳಿ ಬಿಡಲಾಗಿತ್ತು. ಅವಳು ತಲೆ ಅಲ್ಲಾಡಿಸಿದಳು, ಅವಳ ಮುಖದ ಮೇಲೆ ನಗೆ ಸುಳಿದಾಡಿದ್ದನ್ನು ಕಂಡೆನೆಂದುಕೊಂಡನು. ಅವನನ್ನು ನೋಡಿ ಅವಳು ನಗುತ್ತಿದ್ದಳೆ? ಅವಳು ಹಾಸಿಗೆಯ ಕೆಳಗೆ ಬೆಟ್ಟು ಮಾಡಿ ತೋರುತ್ತಿದ್ದಳು. ಒಂದು ಕಾಲ್ಬೆರಳು ಹೊರಗೆ ಕಾಣಿಸುತ್ತಿತ್ತು. ಅವರಿಬ್ಬರೂ ಅನ್ಯೋನ್ಯವಾಗಿ ಹತ್ತಿರವಾದಾಗ ಅವರಿಬ್ಬರಿಗೂ ವಿಸ್ಮಯ ಉಂಟು ಮಾಡಬೇಕೆಂದು ಅವಳ ಸೋದರ ಸಂಬಂಧಿಯೊಬ್ಬ ಅಲ್ಲಿ ಗುಟ್ಟಾಗಿ ಅಡಗಿಕೊಂಡಿದ್ದನು. ಆ ಸೋದರ ಸಂಬಂಧಿ ಜೋರಾಗಿ ನಕ್ಕನು. ಮತ್ತು ಸಮಯಕ್ಕೆ ಮುನ್ನ ತಾನು ಪತ್ತೆಯಾದದ್ದಕ್ಕೆ ತನ್ನನ್ನೇ ಬೈಯ್ದುಕೊಂಡನು. ಕೋಣೆಯ ಹೊರಗಡೆ ಕಾಯುತ್ತಿದ್ದ ಗುಂಪಿಗೂ ಅಷ್ಟೇ ನಿರಾಸೆಯಾಯಿತು. ಕಾರಣ ಅವರು ನಿರೀಕ್ಷಿಸಿದ್ದ ನಗು ಕೇಳಿ ಬರಲಿಲ್ಲವಾಗಿ. ಬಾಗಿಲು ತೆಗೆದು ಒಳಗಿದ್ದವನನ್ನು ಹೊರಕ್ಕೆ ಕಳುಹಿಸಲು ಅವರು ತಮ್ಮದೇ ಸಮಯ ತೆಗೆದುಕೊಂಡರು.

ಅವಳು ಹಾಸಿಗೆಯ ಮೇಲೆ ಕುಳಿತಳು. ಅವನು ಅವಳನ್ನು ಸಮೀಪಿಸಿದಾಗ ಅವಳು ತನ್ನಲ್ಲೇ ಹುದುಗಿಕೊಂಡಳು. ತನ್ನನ್ನು ನೋಡಿ ಅವಳು ಗಾಬರಿಗೊಂಡಳೆಂದು ಅವನಿಗೆ ಪರಮಾಶ್ಚರ್ಯವಾಯಿತು. ಅವಳು ನಡುಗತೊಡಗಿದಳು. ಅವಳ ಹಲ್ಲುಗಳು ಮೆಲ್ಲಗೆ ಕಟಗುಟ್ಟ ತೊಡಗಿದವು.

"ನಿನಗೆ ಯಾವತ್ತೂ ಕಷ್ಟ ಕೊಡುವುದಿಲ್ಲ" – ಅವನು ಹೇಳಿದ.

ಅವಳು ಅವನತ್ತ ಕೃತಜ್ಞತೆಯಿಂದ ನೋಡಿದಳು. ಆದರೆ ಭಯ ಮಾತ್ರ ಇನ್ನೂ ಇದ್ದಿತು. ಅವಳು ತಲೆಯ ಮೇಲೆ ಹೊದ್ದಿದ್ದ ಸೆರಗನ್ನು ಹಿಂದಕ್ಕೆಳೆದನು. ತಲೆಗೂದಲನ್ನು ಇಬ್ಭಾಗ ಮಾಡಿ ಎರಡು ಜಡೆ ಹೆಣೆಯಲಾಗಿತ್ತು. ಆ ಜಡೆಯಾದರೋ ಅವಳ ಸೊಂಟದ ಕೆಳಗಿನವರೆಗೂ ಇಳಿ ಬಿದ್ದಿತ್ತು. ಅವಳ ಹಣೆಯ ಮೇಲೆ ದೊಡ್ಡದಾದ ಕೆಂಪು ತಿಲಕ ರಾರಾಜಿಸುತ್ತಿತ್ತು. ಅವಳದು ಉದ್ದನೆಯ ಮೂಗು, ಅಗಲ ಬಾಯಿ, ಕೆಳತುಟಿ ದೊಡ್ಡದಾಗಿ ಆದರೆ ತುಂಬ ಮೃದುವಾಗಿತ್ತು. ಅವನನ್ನು ಸೆರೆ ಹಿಡಿದದ್ದು ಅವಳ ಹಸಿರು ಕಂಗಳು. ಅವು ಭಯದಿಂದ ಹೊಳೆಯುತ್ತಿದ್ದುವು. ಬೇಟೆಗಾರನ ಅಂಡಲೆತಕ್ಕೆ ಒಳಗಾದ ಮೃಗದ ಕಂಗಳ ನೋಟದಿಂದ ಕೂಡಿದ್ದು, ಅವು ಅಂತಿಮ ಹೊಡೆತ ಮತ್ತು ತತ್ಪರಿಣಾಮವಾದ ನೋವಿನ ಅಂತ್ಯಕ್ಕಾಗಿ ಕಾದಿರುವಂತಿದ್ದುವು. ಅವಳ ಹೆದರಿಕೆಯಿಂದ ತನಗೆ ಜ್ವರ ಬಂದಾಂತಾಗಿದೆ ಎಂದು ಅರ್ಥೈಸಿಕೊಂಡನು. ಬೆಳ್ಳಗೆ ಬಿಳುಚಿಕೊಂಡ ಅನಾವೃತವಾದ ಅವಳ ನಡುವಿನ ಭಾಗವನ್ನು ನೋಡಿದ. ಬಾಗಿ ಅದನ್ನು ಮುತ್ತಿಟ್ಟು ಅವಳ ಉಸಿರಾಟ ಸರಾಗವಾಗಿ ಆಗುವವರೆಗೂ ಅದನ್ನು ಮೃದುವಾಗಿ ಸವರಬೇಕೆಂದು ಇಷ್ಟಪಟ್ಟನು. ಅವಳ ಬೆನ್ನ ಮೇಲೆ ಕೈ ಇಟ್ಟನು. ಅವಳು ಕಂಪಿಸುತ್ತ ದೂರ ಸರಿದಳು.

ಹೊಸ್ತಿಲ ಬಳಿ ಇದ್ದಾಗ ತಾನೇ ಸಂಕಲ್ಪ ಮಾಡಿದಂತೆ ಅವಳನ್ನು ಆಲಿಂಗಿಸಿಕೊಳ್ಳಬೇಕೆಂದು ಕೊಂಡನು. ಎಲ್ಲ ತೊಂದರೆಗಳಿಂದ ಅವಳನ್ನು ಕಾಪಾಡುತ್ತೇನೆಂದು ಅವನು ಹೇಗೆ ತಾನೆ ಅವಳಿಗೆ ಮನವರಿಕೆ ಮಾಡಿಕೊಟ್ಟಾನು? ಕೋಣೆಯಲ್ಲಿ ಒಂದು ಸಿಂಹವೋ, ಹುಲಿಯೋ ಇರಬೇಕಾಗಿತ್ತೆಂದು ಬಯಸಿದನು. ಒಂದು ವೇಳೆ ಅದು ತನ್ನನ್ನು ಗಾಯಗೊಳಿಸಿದರಾಗಲಿ, ತಾನು ಕಣ್ಣನ್ನೋ, ಕಿವಿಯನ್ನೋ ಇಲ್ಲ ತೋಳನ್ನೋ ಕಳೆದುಕೊಂಡರಾಗಲಿ ಅವನಿಗೆ ಅದರ ಚಿಂತೆ ಇಲ್ಲ. ಕಾರಣ ತನ್ನ ಕತ್ತಿಯಿಂದ ಅದನ್ನು ಕೊಂದು ತಾನು ಅವಳ ರಕ್ಷಕ ಎಂದು ಅವಳಿಗೆ ಮನವರಿಕೆ ಮಾಡಿಕೊಡುವವರೆಗೂ ತನಗೇನೂ ಯೋಚನೆ ಇಲ್ಲ.

ಅರಮನೆಯ ಆವರಣದಲ್ಲಿದ್ದ ಗಡಿಯಾರದಲ್ಲಿ ಐದು ಗಂಟೆಯಾಗಿದೆ ಎಂದು ಸೂಚಿಸುವ ಗಂಟೆ ಹೊಡೆದುಕೊಂಡಿತು. ಮಂಚದ ಕಟ್ಟನಿಂದ ನೇತು ಬಿಡಲಾಗಿದ್ದ ಬಹುಪಾಲು ಹೂವಿನ ಮಾಲೆಗಳು ಆಗಲೇ ಕಳಚಿ ಬಿದ್ದಿದ್ದವು. ಕೆಲವನ್ನಂತೂ ಹಾಸಿಗೆಯ ಮೇಲೆ ಹೊಸಕಿ ಹಾಕಲಾಗಿತ್ತು. ಅವಿನ್ನೂ ಕಣ್ಣುಮುಚ್ಚಾಲೆಯಾಡುತ್ತಿದ್ದುವು.

"ದಯವಿಟ್ಟು ಓಡಿಹೋಗಬೇಡ. ನಾನು ತುಂಬಾ ಬಳಲಿದ್ದೇನೆ. ನೀನೂ ಸಹ".

ಅವಳು ಮತ್ತೆ ಸೆರಗನ್ನು ತಲೆಯ ಮೇಲೆ ಮತ್ತು ಮುಖದ ಮೇಲೆ ಎಳೆದುಕೊಂಡಿದ್ದಳು. ಗಂಡ ಹೆಂಡತಿಯರು ಅಥವಾ ಹೊಸದಾಗಿ ಮದುವೆಯಾದವರು ನಡೆದುಕೊಳ್ಳುವುದು ಹೀಗೆ, ಎಂದು ಯಾರೂ ಅವನಿಗೆ ತಿಳಿಸಿರಲಿಲ್ಲ. ಇಂಥ ವಿಷಯಗಳ ಬಗ್ಗೆ ಅವನು ಮುಕ್ತವಾಗಿ ಮಾತನಾಡಬಹುದಾದ ಏಕೈಕ ವ್ಯಕ್ತಿ ಕೌಸಲ್ಯ ಕೂಡ ಈ ಬಗ್ಗೆ ಒಂದು ಮಾತೂ ಹೇಳಿರಲಿಲ್ಲ. ಅವನಿಗೆ ಏನೋ ಎಲ್ಲ ಖಾಲಿ ಖಾಲಿ ಅನ್ನುವ ಹಾಗೆ ಹಾಗೂ ಏನೋ ಕಳೆದುಕೊಂಡ ಹಾಗೆ ಅನಿಸಿತು. ಅವನು ಹಾಸಿಗೆಯ ಮಧ್ಯೆ ಕುಳಿತು ಹತಾಶೆಯಲ್ಲಿ ಮುಳುಗಿದನು. ಇನ್ನು ಒಂದು ನಿಮಿಷ ಕಳೆಯಿತು ಅಂದರೆ ಅವನು ಜ್ಞಾನತಪ್ಪುತ್ತಿದ್ದ. ಅವಳ ಕಡೆಗೆ ನುಗ್ಗಿದನು. ಅವಳು ಹೆಚ್ಚು ಕಡಿಮೆ ತಪ್ಪಿಸಿಕೊಂಡಳು, ಆದರೆ ಅವಳ ಜಡೆ ಹಾರಿ ಅವನ ಕೈಗೆ ಸಿಕ್ಕಿತ್ತು ಜಡೆಯನ್ನು ಹಿಡಿದು ಅವಳನ್ನು ಹಿಂದಕ್ಕೆಳೆದನು. ಅವಳು ತಡೆದಳು. ಆದರೆ ಅವಳ ಕೂದಲು ಹಿಡಿದು ಥಟ್ಟನೆ ಜಗ್ಗಿದನು. ನೋವಿನಿಂದ ನರಳುತ್ತ ಹಿಂದು ಹಿಂದಕ್ಕೆ ನಡೆದಳು. ಆದರೆ ಮಂಚ ಅಡ್ಡ ಬಂದು ನಿಂತಳು. ಬೋರಲಾಗಿ ಹಾಸಿಗೆಯ ಮೇಲೆ ಬಿದ್ದಳು. ಅವಳ ಕಾಲುಗಳು ಹಾಸಿಗೆಯಿಂದ ಹೊರಗೆ ಚಾಚಿದ್ದುವು.

"ದಯವಿಟ್ಟು ಬಿಡಿ. ನನ್ನನಾಗಲೇ ಕೊಟ್ಟಾಗಿದೆ" ಅವಳು ಪಿಸುಗುಟ್ಟಿದಳು.

ಏನವಳ ಮಾತಿನ ಅರ್ಥ? ಈ ದಿನ ನಾವು ಮದುವೆಯಾಗಲಿಲ್ಲವೇ? ಅವಳು ಅವನ ವಧುವಲ್ಲವೆ,? ಕನ್ಯೆಯಲ್ಲವೆ? ಅವಳ ಕೈಗಳನ್ನು ಭದ್ರವಾಗಿ ಹಿಂದಕ್ಕೆ ಕಟ್ಟಿ ನೆಲದ ಕೆಳಗೆ ಚಾಚಿದ್ದ ಕಾಲುಗಳನ್ನು ಎತ್ತಿ ಮೇಲಕ್ಕೆ ಹಾಕಿದನು. ಅವಳ ಒಳಲಂಗದ ದಾರವನ್ನು ಕಚ್ಚಿ ಕಿತ್ತೊಗೆದು ಅರ್ಧ ಹರಿದು ನೆಲಕ್ಕೆ ಕೆಡವಿದನು. "ನಾವಿಬ್ಬರೂ ಗಂಡ ಹೆಂಡತಿ, ಗಂಡ ಹೆಂಡತಿ" – ಎಂದು ಹೇಳಿ ತಮ್ಮ ಮದುವೆಯ ಬಗ್ಗೆ ಅವಳನ್ನು ಒಪ್ಪಿಸಲು ಪ್ರಯತ್ನಿಸುವುದಷ್ಟೇ ಅಲ್ಲದೆ ತನಗೂ ಹೇಳಿಕೊಳ್ಳುತ್ತಿದ್ದನು. ಅವಳು ಮತ್ತೆ ಅದನ್ನೇ ಹೇಳಿದಳು. "ನನ್ನ ನಿಶ್ಚಿತಾರ್ಥ ಬೇರೆಯವರೊಂದಿಗೆ ಆಗಿದೆ'

ಅವನು ರಭಸದಿಂದ ಅವಳ ಮೇಲೆ ಬಿದ್ದನು. ಅವಳು ಬಿಗಿದುಕೊಂಡು, ಯಾವುದಕ್ಕೂ ಬಗ್ಗಲಿಲ್ಲ. ತನ್ನ ಶಿಶ್ನವನ್ನು ಕೈಯಲ್ಲಿ ಹಿಡಿದು ಅವಳ ಯೋನಿಯೊಳಕ್ಕೆ ರಭಸದಿಂದ ತಳ್ಳಿದನು. ಇನ್ನೊಮ್ಮೆ, ಮತ್ತೊಮ್ಮೆ ಮಗದೊಮ್ಮೆ ಪುನರಾರ್ವತನೆ ಮಾಡಿದನು. ಅವಳು ಅಳುತ್ತಿದ್ದಳು. ಅವನು ಎಲ್ಲ ತಡೆಗಳನ್ನು ಮೀರಿ ಪೂರ್ತಿ ಮುಂದುವರಿದ್ದನು. ಶಿಶ್ನವನ್ನು ಹೊರ ತೆಗೆದು ಮತ್ತೆ ರಭಸವಾಗಿ ಪೂರ್ತಿ ಒಳ ನೂಕಿದನು. ಅದರಲ್ಲಿ ತನ್ನದೇ ಆದ ಗತಿಯನ್ನು ಕಂಡುಕೊಂಡಿದ್ದನು. ರಭಸದಿಂದ ಒಳಹೊಗಿಸುವುದು, ಹಿಂದಕ್ಕೆಳೆದುಕೊಳ್ಳುವುದು, ಒಳಹೊಗಿಸುವುದು, ಹಿಂದಕ್ಕೆಳೆದುಕೊಳ್ಳುವುದು. ಅವಳೋ ದುರ್ಬಲಳು. ಅವನು ಆವೇಶಗೊಂಡವನಂತೆ ಮುಂದುವರಿದನು. ಕ್ಷಣಾರ್ಧದಲ್ಲಿ ಕೆಳಹೊಡೆತವನ್ನು ತಪ್ಪಿಸಿಕೊಂಡು ಅವಳ ತೊಡೆಯನ್ನು ತಾಗಿದ. ಹಿಂದಕ್ಕೆಳೆದುಕೊಂಡು ಮತ್ತೆ ರಭಸವಾಗಿ ಒಳಹೊಗಿಸಿದನು.

ತನ್ನ ಶಿಶ್ನವನ್ನು ನೋಡಿಕೊಂಡಾಗ ಗಾಬರಿಗೊಂಡನು. ಅದು ಛಿದ್ರಗೊಂಡಿತ್ತು. ರಕ್ತ ಛಿಲ್ಲೆಂದು ಬುಗ್ಗೆ ಬುಗ್ಗೆಯಾಗಿ ಹರಿಯತೊಡಗಿತು. ಚಿಮ್ಮಿ ಚಿಮ್ಮಿ ಉಕ್ಕತೊಡಗಿತು.

ಅವಳ ಸೀರೆ, ರವಿಕೆ, ಒಳಲಂಗ, ಹಾಸಿಗೆ ಎಲ್ಲವೂ ರಕ್ತದಲ್ಲಿ ನೆನೆದು ಕೆಂಪಾಯಿತು. ಅವನ ಶಿಶ್ನದ ಕಡೆಗೆ ನಟ್ಟಿದ್ದ ತನ್ನ ಕಣ್ಣುಗಳನ್ನು ಅವಳು ಕೀಳದಾದಳು. ಅವನು ದಿಗಿಲಿನಿಂದ ಅವಳ ಕಡೆ ನೋಡಿದನು. ರಕ್ತ ಬಸಿಯುವುದನ್ನು ಹೇಗೆ ನಿಲ್ಲಿಸುವುದೆಂದು ತಿಳಿಯದಾದನು. ಅವನ ಹುಬ್ಬುಗಳ ಮೇಲೆ ಬೆವರು ಕಾಣಿಸಿಕೊಂಡಿತು. ನಿತ್ರಾಣಗೊಂಡಂತಾದನು. ರಕ್ತ ಇನ್ನೂ ಉಕ್ಕಿ ಹರಿಯುತ್ತಲೇ ಇತ್ತು. ತಾನು ಸಾಯಲಿದ್ದೇನೆಂದು ಅವನಿಗೆ ತಿಳಿಯಿತು. ತನ್ನ ಶಿಶ್ನವನ್ನು ಕೈಗಳಿಂದ ಕೆಳಮುಖವಾಗಿ ಹಿಡುದುಕೊಂಡನು. ಆದರೆ ಅವು ಅದೆಷ್ಟು ನೆನೆದಿದ್ದುವೆಂದರೆ ಶಿಶ್ನವು ಕೈಗಳಿಂದ ಜಾರಿ ಹೋಗುತ್ತಿತ್ತು. ತಲೆಗೆ ಹೊದ್ದಿದ ಸೆರಗನ್ನು ಎಳೆದುಕೊಂಡು, ಅವನ ಶಿಶ್ನದ ಸುತ್ತ ಸುತ್ತಿ ಅದರ ತುದಿಯನ್ನು ಮೇಲ್ಮುಖವಾಗಿ ಕೊಠಡಿಯ ಸೂರಿನ ಕಡೆಗೆ ಇರುವಂತೆ ನೇರವಾಗಿ ಹಿಡಿದುಕೊಂಡಳು. ಒಂದೆರಡು ನಿಮಿಷಗಳ ನಂತರ ರಕ್ತದ ಉಕ್ಕುವಿಕೆ ಕಡಮೆಯಾಯಿತು. ಆದರೆ ಅವನು ನಿದ್ರೆ ಹೋಗುವವರೆಗೂ ಅದನ್ನು ಮೆಲ್ಲಗೆ ಹಾಗೇ ಹಿಡಿದುಕೊಂಡೇ ಇದ್ದಳು.

ಅಧ್ಯಾಯ 4

ಗಾದೆಗಳನ್ನು ಕಟ್ಟಿದವರು ಯಾರು? ಅಥವಾ ಕಂಡು ಹಿಡಿದವರು ಯಾರು? ಅವು ಅನೇಕ ವೇಳೆ ಏನೇ ಆಗಲಿ ಚಿಂತಿಸಬೇಡಿ ಎನ್ನುವಂಥವುಗಳಿಂದ ತುಂಬಿ ತುಳುಕುವ ಗಡಿಗೆಗಳ ಹಾಗೆ. ಅವು ಸಾಮಾನ್ಯವಾದ ಮಾತುಗಳ ಮೇಲೆ ಮಾತುಗಳನ್ನು ಪೇರಿಸಿಕೊಳ್ಳುತ್ತ ಹೋಗುತ್ತವೆ. ಅಧಿಕ ಪ್ರಸಂಗಿಗಳ ಮತ್ತು ಅತ್ಯುತ್ಸಾಹಿಗಳ ಮಾತುಗಳನ್ನು ಯಾವಾಗ ಎಂದರೆ ಆಗ ಸ್ವೀಕರಿಸುತ್ತ, ಬಿಡುತ್ತ ಇರುತ್ತವಾಗಿ ಅವು ವಿವೇಕವನ್ನು ಭಟ್ಟಿ ಇಳಿಸಿದವುಗಳಾಗಿರುತ್ತವೆ. ಆದರೆ ಗಾದೆಗಳು ಘಟನಾನಂತರದ ವಿಶಿಷ್ಟ ವಿವೇಚನೆಗಳು. ನೀತಿ ಬೋಧೆಗಳು, ಸ್ವತಃಸಿದ್ಧ ಸ್ಪಷ್ಟೋಕ್ತಿಗಳು, ನಾಣ್ಣುಡಿಗಳು ಇವೆಲ್ಲ ಮಾತಾಳಿಗಳು, ಸಂದಿಗ್ಧ ಮನಸ್ಸಿನ ವ್ಯಕ್ತಿಗಳು, ಇಬ್ಬಂದಿತನದ ಹಾಗೂ ಸರಿ ಮತ್ತು ಹೀಗೂ ಸರಿ ಎನ್ನುವಂಥವರಿಂದ ಸೃಷ್ಟಿಯಾದವು. ನನಗೆ ಒಂದು ಗಾದೆಯನ್ನು ಹೇಳಿದರೆ ನಾನು ಅದಕ್ಕೆ ಪ್ರತಿಯಾದದ್ದನ್ನು ತೋರಿಸಬಲ್ಲೆ. ನಾನು ಎರಡನೇ ವರ್ಗದಲ್ಲಿ ಓದುತ್ತಿದ್ದಾಗ ನಮಗೆ ಒಂದಕ್ಕೊಂದು ತುಂಬ ಹತ್ತಿರವಾದ ಎರಡು ಕಥೆಗಳು ಅಭ್ಯಾಸಕ್ಕೆ ಇದ್ದುವು. ಒಂದರ ಶೀರ್ಷಿಕೆ–ಬಹಳ ಜನ ಒಂದು ವಿಷಯವನ್ನು ಹೇಳಿದರೆ, ಅದರಲ್ಲಿ ಸತ್ಯ ಇರಲೇಬೇಕು'–ಎಂದಿತ್ತು. ಇನ್ನೊಂದು ಕೂಡಲೇ ಅದನ್ನು ವಿರೋಧಿಸಲು ಸಿದ್ಧವಾಗಿತ್ತು. ಅದರ ಶೀರ್ಷಿಕೆ –ಎಲ್ಲರ ಮಾತನ್ನೂ ಕೇಳಿಸಿಕೊಳ್ಳಿ ಆದರೆ ನಿಮಗೆ ಸರಿಯೆನಿಸಿದ್ದನ್ನು ಮಾಡಿ. ನಮ್ಮ ಅಧ್ಯಾಪಕರಿಗೆ ನಾನು – ಅವರು ನರಕದಲ್ಲಿ ಕೊಳೆತು ಸ್ವರ್ಗದಲ್ಲಿ ಉದ್ಧಾರವಾಗಲಿ – ಈ ಕಥೆಗಳಲ್ಲಿ ಒಂದು ಇನ್ನೊಂದನ್ನು ವಿರೋಧಿಸುತ್ತವೆ ಎಂದು ಹೇಳಿದ್ದಕ್ಕೆ ನನ್ನನ್ನು ತನ್ನ ಮಂಡಿ ಮೇಲಕ್ಕೆ ಎಳೆದುಕೊಂಡು, ನನ್ನ ತಲೆ ಮತ್ತು ಪಾದಗಳು ಆ ಕಡೆ, ಈ ಕಡೆ ಜೋತಾಡುತ್ತಾ ಇರಲು ನನ್ನ ಕುಂಡಿಗಳು ತೂತು ಬೀಳುವವರೆಗೂ ಬೆತ್ತ ತೆಗೆದುಕೊಂಡು ಬಾರಿಸಿದರು. "ಮೂರ್ಖ ಮುಂಡೇದೇ ಅವೆರಡೂ ಒಂದಕ್ಕೊಂದು ಪೂರಕ ಕಣೋ." ನಮ್ಮ ಜನಕ್ಕೆ ಗಾಳಿಯಂತ್ರದಷ್ಟು ವೇಗ, ವಿಶ್ಲೇಷಣ ಸಾಮರ್ಥ್ಯ ಮತ್ತು ಬುದ್ಧಿಶಕ್ತಿ ಇದೆ ಅಂತ ತಿಳಿದಿದ್ದೀರಾ? ಅವರು ತಾವು ನೋಡಿರುವ ಕೊನೇ ಮನುಷ್ಯನ ವಿಚಾರಗಳನ್ನು ಅಂಗೀಕರಿಸಿ ಅವುಗಳನ್ನು ಪ್ರಚಾರ ಮಾಡುತ್ತಾರೆ. ವಿವಿಧತೆಯಲ್ಲಿ ಏಕತೆ, ಏಕತೆಯಲ್ಲಿ ವಿವಿಧತೆ. ನಮಗೆ ಯಾವ ವೈರುಧ್ಯಗಳೂ ಕಾಣಿಸುವುದಿಲ್ಲ. ಏಕೆಂದರೆ ವಿಸದೃಶವಾದವು, ತದ್ವಿರುದ್ಧವಾದವುಗಳು, ಏಕ ಮತ್ತು ಹಲವು ಎಲ್ಲವೂ ಒಂದೇ ಎಂದು ನಂಬುವುದು ನಮಗೆ ಬಹಳ ಪ್ರಿಯವಾದ್ದು.

ಹೀಗಾದರೆ ತಾನೆ ಏನು, ಹಾಗಾದರೆ ತಾನೆ ಏನು? ಸುದೀರ್ಘ ಕಾಲಾವಧಿಯಲ್ಲಿ ನಾವೆಲ್ಲರೂ ಸಾವಿನಲ್ಲೇ ಕೊನೆಗೊಳ್ಳುತ್ತೇವೆ.

ಇಷ್ಟೆಲ್ಲಾ ಉದ್ದದ ಪೀಠಿಕೆ ಯಾವುದರ ಸಲುವಾಗಿ? ನಾನೀಗ ಒಂದು ಗಾದೆ ಹೇಳಬೇಕಾಗಿದೆ.

ಜೀವನ ಕಥೆಗಿಂತಲೂ ವಿಚಿತ್ರ.

ನನ್ನ ಆರೋಗ್ಯ ತುಂಬಾ ಚೆನ್ನಾಗಿತ್ತು. ನಮ್ಮ ಸಾಮ್ರಾಜ್ಯವನ್ನು ನೋಡಬೇಕು ಎಂದೆನ್ನಿಸಿತ್ತು. (ನನ್ನ ಸಾಮ್ರಾಜ್ಯ ಅಂತ ಹೇಳುವುದಕ್ಕೆ ಹೊರಟಿದ್ದೆ. ಅದು ಪ್ರೀತಿಯ, ಅಧಿಕಾರದ, ಒಡೆತನದ, ಅಥವಾ ಹಂಬಲದ ಸಂಕೇತವೆ?) ನಾನು ವಿಜಯ ಗೋಪುರದ ತನಕ ಓಡಿದೆ. ಅದು ತೀರಾ ನಿಜವಲ್ಲ. ಅದರ ಮೆಟ್ಟಿಲುಗಳು ವಿಪರೀತ ಇಕ್ಕಟ್ಟಿನ ಹಾಗೂ ಕತ್ತಲೆ ತುಂಬಿದ ಜಾಗ. ಬಹಳ ವೇಗವಾಗಿ ಹೆಜ್ಜೆ ಹಾಕುತ್ತ ನಾಲ್ಕು ನಿಮಿಷದಲ್ಲಿ ನಲವತ್ತು ಗಜ ಮುಗಿಸಿದ್ದೆ. ಇಲ್ಲಿಂದ ಮೇವಾಡವನ್ನು ಮೆಚ್ಚದೆ ಇರುವುದಕ್ಕೆ ಹೇಗೆ ಸಾಧ್ಯ? ಅಲ್ಲಿಂದ ಕಾಣುವ ನೋಟ ನಿಜಕ್ಕೂ ದಂಗುಬಡಿಸುವಂಥದ್ದು. ಒಂದೊಂದು ಸಲ ನೇರವಾಗಿ ಕುಂಭಲ್‌ಗರ್ ದಾರಿ ಕಾಣಿಸುತ್ತದೆ. ಇಡೀ ರಾತ್ರಿಯೆಲ್ಲ ಮಳೆ ಸುರಿದು, ಬೆಳಗಿನ ಜಾವದ ಹೊತ್ತಿಗೆ ನಿಂತಿರಬೇಕು. ಆಕಾಶ ಶುಭ್ರವಾಗಿದೆ. ಬೇಕಾದರೆ ಮೋಡಗಳ ಹಿಂದೆ ದೇವರುಗಳನ್ನು ಕಾಣಬಹುದು. ನಾನು ತಲೆ ಬಾಗಿ, ನನ್ನನ್ನು ಆಶೀರ್ವದಿಸುವಂತೆ ನಮ್ಮ ವಂಶದ ಪೂರ್ವಜ ಸೂರ್ಯದೇವನನ್ನು ಕೇಳಿಕೊಂಡೆನು. ಅವನ ಧಾರಳತನಕ್ಕೆ ನನ್ನ ನಮನ. ಕೋಟೆಯ ಪ್ರದೇಶವಷ್ಟೂ ಹುಲ್ಲಿನಿಂದ ಹಸಿರಾಗಿತ್ತು, ಹಕ್ಕಿಗಳೆಲ್ಲ ಗುಂಪಾಗಿ ಹೊರಬೀಳುತ್ತಿವೆ. ಎಪ್ಪತ್ತು ಗಿಳಿಗಳು ಆಕಾಶದಲ್ಲಿ ವೃತ್ತಾಕಾರವಾಗಿ ಹಾರಾಡಿ ನೇರವಾಗಿ ನನ್ನೆಡೆಗೆ ಧಾವಿಸಿದವು. ಕೊನೆಯ ಕ್ಷಣದಲ್ಲಿ ಅವು ಅಗೋಚರ ಮೂಲೆಯತ್ತ ತಿರುಗಿ ರಾಣಿ ಪದ್ಮಿನಿಯ ಅರಮನೆಯ ಪಾಗಾರದ ಮೇಲೆ ಇಳಿದವು.

ಕಾಳಿಕಾ ಮಾತೆಯ ದೇಗುಲದ ಪೂಜಾರಿ ನಿಧಾನವಾಗಿ ಗಂಟೆಯನ್ನು ಬಾರಿಸುತ್ತಾ ಈ ಬೆಳಗಿನ ಆಗಸದಷ್ಟೇ ಶುದ್ಧ ಕಂಠದಲ್ಲಿ ಸೂರ್ಯ ಸ್ತೋತ್ರವನ್ನು ಹಾಡಿದನು. (ಕಾಳಿಕಾ ಮಾತೆಯ ದೇವಾಲಯವು ಮೂಲತಃ ಸೂರ್ಯದೇವನಿಗೆ ಸಮರ್ಪಿತವಾಗಿತ್ತೆಂಬುದು ನಿಮಗೆ ತಿಳಿದಿತ್ತೆ?) ಅವನು ಸೂರ್ಯದೇವನ ಪ್ರಖರ ತೇಜಸ್ಸನ್ನು ಕುರಿತು ಹಾಡಿದ. ಅನಂತರ ಸೂರ್ಯನ ರಥ, ಸಪ್ತಾಶ್ವಗಳು, ಸೂರ್ಯ ಸಾರಥಿ ಅರುಣ ಅವನು ಹೆಳವನಾಗಿರುವ ಬಗ್ಗೆಯೆಲ್ಲಾ ಹಾಡಿದ, ಪ್ರತಿದಿನವೂ ಆ ದೇವ ದೇವನ ನಭೋಮಂಡಲದ ಪಯಣವನ್ನು ಕುರಿತು ಅವನಿಗೆ ಇನ್ನಿಲ್ಲದ ಬೆರಗು. ಅವನ ವೇಗ, ಬೆಳಕು, ಅವನ ಸಂಚಾರ ಬೆಳಕಿನ ಮೂಲಕ. ಅವನ ಸಂದೇಶವೂ ಬೆಳಕು. ನಾನು ಕೈಗಳನ್ನು ಹೊರಚಾಚಿ ತೋಳತುಂಬ ಸೂರ್ಯ ಕಿರಣಗಳನ್ನು ಬಾಚಿ ಹಿಡಿಯುತ್ತೇನೆ.

ಚಿತ್ತೂರು ಒಂದು ಗುಡ್ಡದ ಮೇಲಿರುವ ಊರು. ಆ ಬೆಟ್ಟದ ಇಳಿಜಾರಿನ ದಟ್ಟ ಕಾಡುಗಳಲ್ಲಿ ಸಿಂಹಗಳು, ಹುಲಿಗಳು, ಜಿಂಕೆಗಳು ಮತ್ತು ಕರಡಿಗಳು ಎಲ್ಲವೂ ಬೆಳಗಾಯಿತೆಂದು ಸಾರುತ್ತಿವೆ. ಅವುಗಳು ನೀರು ಕುಡಿಯುವ ಕೊಳವೊಂದು ಇಲ್ಲಿಂದ ನನ್ನ ಕಣ್ಣಿಗೆ ಗೋಚರವಾಗುತ್ತಿದೆ. ಸುಂದರವಾದ ಕೊಂಬುಗಳ ಸಾರಂಗವೊಂದು ಸಾವಧಾನವಾಗಿ ನೀರು ಕುಡಿದು ಅನಂತರ ತಲೆ ಎತ್ತಿ ನೋಡಿತು. ಅದೇನು ಹೆಜ್ಜೆಯ ಸಪ್ಪಳವೋ ಅಥವಾ ಒಣಗಿದ ಕೊಂಬೆ ನೆಲಕ್ಕೆ ಬೀಳುತ್ತಿದೆಯೋ? ಅದರ ಕುತ್ತಿಗೆಯು

ಮಾಂಸಖಂಡಗಳಾದರೂ ಒಳ್ಳೆ ಬಿರುಸಾಗಿ ಮಾಂಸಲವಾಗಿದ್ದುವು. ಬೇಡದ ಆಗಂತುಕರು ಯಾರಾದರೂ ಇದ್ದಾರೇನೋ ಎಂದು ಅತಿ ಎಚ್ಚರಿಕೆಯಿಂದ ಸುತ್ತಲೂ ನೋಡುತ್ತಿದೆ. ಎಲ್ಲವೂ ಸರಿಯಾಗಿದ್ದಂತೆನ್ನಿಸುತ್ತಿದೆ. ಆಗ ಅದು ತನ್ನ ಸಂಗಾತಿಯನ್ನು ಕೂಗಿ ಕರೆಯಿತು. ಅದು ನಾಚುತ್ತ ಹೊರ ಬಂದಿತು. ತನ್ನ ಪಕ್ಕೆಯನ್ನು ಅದರ ಪಕ್ಕೆಗೆ ಉಜ್ಜಿತು. ಕೊಳದ ನೀರು ಕುಡಿಯಿತು. ಕಪಿಗಳ ಹಿಂಡೊಂದು ಮರಗಳ ಕೊಂಬೆಗಳನ್ನು ಜಗ್ಗುತ್ತಾ ಕೊಳದ ಇನ್ನೊಂದು ದಡದಲ್ಲಿ ಇಳಿದುವು, ಅವು ಕಿರುಚಾಡುವ, ಜಗಳಗಂಟ ಸ್ವಭಾವದವು. ಬೇಗನೆ ಅವು ಒಂದು ಇನ್ನೊಂದರ ಶರೀರದಿಂದ ಹೇನುಗಳನ್ನು ಹೆಕ್ಕ ತೊಡಗಿದವು.

ನಾನು ಪೂರ್ತಿ ಒಂದು ಸುತ್ತು ಸುತ್ತಿದೆ. ಕೋಟೆ ಗೋಡೆಗಳ ನಡುವಿನ ಪಟ್ಟಣ ನಿಧಾನವಾಗಿ ಎಂದಿನ ಜನಜೀವನಕ್ಕೆ ಮರಳುತ್ತಿತ್ತು. ಯಾವಾಗಲೂ ಎಲ್ಲರಿಗಿಂತ ಮೊದಲು ಎದ್ದು ನೀರು ತುಂಬಲು ಬರುವವರು ಹೆಂಗಸರು. ಯಾರಾದರೂ ನನ್ನನ್ನು ಮೇವಾಡ ಎಂದರೇನು ಎಂದು ಕೇಳಿದರೆ ನನ್ನ ಮೊದಲ ಉತ್ತರ ಮೇವಾಡ ಎಂದರೆ ಬಣ್ಣ ಎಂದು. ಇತರೆ ಕೆಲವು ಉತ್ತರಗಳಿರುತ್ತವೆ. ಕೆಲವು ಹೆಚ್ಚು ಪ್ರಮುಖವಾದವು. ನಮ್ಮ ಸಾಹಸ ಅಥವಾ ಶೌರ್ಯದ ಹಾಗೆ. ಆದರೆ ಅದು ಸ್ವಪ್ರೇರಣೆಯ ತತ್‌ಕ್ಷಣ ಪ್ರತಿಕ್ರಿಯೆ ಅಲ್ಲ. ನಾನು ಕಣ್ಣು ಮುಚ್ಚಿದಾಗ ಬಣ್ಣಗಳು ನನ್ನ ಕಡೆಗೆ ಕುಣಿಯುತ್ತ ಬರುವುದನ್ನು ಕಾಣುತ್ತೇನೆ. ಅವು ಪ್ರತಿಯೊಂದನ್ನೂ ಜಾರಿಕೊಂಡು, ಹೊರಳುತ್ತ, ನೂಕುತ್ತ, ತಳ್ಳುತ್ತ ಬರುತ್ತವೆ. ನೀವು ಮೇವಾಡದಲ್ಲಿ ಕೆಂಪು, ಹಳದಿ, ನೀಲಿ ಮತ್ತು ಹಸುರು ಹೂವುಗಳನ್ನು ಕಂಡಿದ್ದೀರಾ? ಅವುಗಳಲ್ಲಿ ಸೂರ್ಯನಿದ್ದಾನೆ ಮತ್ತು ತೆರೆದ ಗಾಯದಂಥ ಕಚ್ಚಾತನವಿದೆ. ಸದ್ದಿಲ್ಲದ ಬಣ್ಣಗಳು ಒಂದು ರೀತಿಯಲ್ಲಿ ಸಂಕೀರ್ಣವಾದವು. ಅವು ಸುಂದರ ಮತ್ತು ಆಹ್ಲಾದಕರ. ನಾನದನ್ನು ಇಲ್ಲವೆಂದು ಹೇಳಲಾರೆ. ಆದರೆ ಮೇವಾಡದ ವರ್ಣ ಸಂಯೋಜನೆಯ ಕೇವಲ ಶಾಂತತೆ ಸೌರ ಮಂಡಲದ ಜಾಲದಲ್ಲೊಂದು ಸಂತಸ. ಬದುಕಿನ ತೀರಾ ಸಾಮಾನ್ಯ ಹಾಗೂ ದಿನನಿತ್ಯದ ಸಂದರ್ಭಗಳಲ್ಲಿ ನನ್ನ ಜನರು ಪ್ರತಿನಿತ್ಯವೂ ಬಣ್ಣದ ಚಲನಶೀಲತೆಯನ್ನು ಮತ್ತೆ ಬರೆಯುತ್ತಾರೆ. ಅವರು ಯದ್ವಾತದ್ವಾ ದುಂದುಗಾರರು. ಅಷ್ಟಾದರೂ ಬಳಕೆ ಮಾಡಿದ ಪ್ರತಿ ಸಂದರ್ಭದಲ್ಲೂ ಅದನ್ನು ಪುನಃ ಕಲ್ಪಿಸುವಷ್ಟು ನಿಯಂತ್ರಣವುಳ್ಳವರು.

ಇದ್ದಿಲು ಪುಡಿಯೊಂದಿಗೆ ಅಫೀಮು ಸೇರಿಸಿ ಒಸಡುಗಳನ್ನು ಉಜ್ಜುತ್ತಿರುವ ಆ ಹೆಂಗಸನ್ನು ನೋಡಿ. ಅವಳ ಮುಖಾಕೃತಿ ನನಗೆ ಕಾಣುತ್ತಿಲ್ಲ. ಆದರೆ ಅಂಥ ಒಂದು ಸಾವಧಾನ ಹಾಗೂ ತುಂಬಿಕೊಂಡಂಥ ಸಂತೋಷ, ಎಚ್ಚರದ ಕ್ಷಣಗಳಲ್ಲಿ ಬರಬೇಕೆಂದರೆ ಅದು ತಲೆ ತಲಾಂತರಗಳಿಂದ ವಂಶ ಪಾರಂಪರ್ಯವಾಗಿ ಅನಿಶ್ಚಿತ ವ್ಯಸನದಿಂದ ಮಾತ್ರ ಬಂದದ್ದಾಗಿರಬೇಕು. ಅವಳು ತೊಟ್ಟಿರುವ ಕೆಂಪು ಮತ್ತು ಕಪ್ಪು ಬಣ್ಣದ ಲಂಗದ ಮೇಲೆ ಬಾಳೆಹಣ್ಣಿನ ಬಣ್ಣದ ಹಾಗೂ ವಸಂತದ ಮಾವಿನ ಎಲೆಯ ಹಸಿರಿನ ಹೊಳೆಯುವ ಬಣ್ಣದ ರೇಷ್ಮೆಯ ರವಿಕೆ ತೊಟ್ಟಿದ್ದಾಳೆ. ಬಾವಿಯ ಬಳಿ ಅವಳ ಇನ್ನಿಬ್ಬರು ಸಂಗಾತಿಗಳೆಂದರೆ, ಮಿಂಚಿನ ನೀಲಿ, ದಾಳಿಂಬೆ ಬೀಜದ ಕೆಂಪು ಮತ್ತು ಬದನೆ ಹೂವಿನ ಊದಾ ಬಣ್ಣ. ಬೆಳಿಗ್ಗೆ ಏಳುತ್ತಿದ್ದ ಹಾಗೆಯೇ ಈ ಬಣ್ಣಗಳು ತಕ್ಷಣ ನಿಮ್ಮ ಕಣ್ಣಿಗೆ ಬಿದ್ದರೆ ಲಸ್ಸಿ ಯಾರಿಗೆ ಬೇಕಾಗುತ್ತೆ? ಎಡಗಡೆಗಿರುವ ಗುಡಿಸಿಲ ಯಜಮಾನ ಮತ್ತು ಒಡೆಯನು ಎಚ್ಚೆತ್ತಿದ್ದಾನೆ ಮತ್ತು ಶ್ರೀಮತಿ ನೀಲೀ ಬದನೆ ಅವನ ಮೀಹಕ್ಕೆ ನೀರು ಸುರಿಯುತ್ತಿದ್ದಾಳೆ.

ನನ್ನ ಎಡಗಣ್ಣಿ ಕೊನೆಯಲ್ಲಿ ಏನೋ ಚಲಿಸತೊಡಗಿತು. ದೂರದಲ್ಲಿ ನೈರುತ್ಯ ದಿಕ್ಕಿನ ಕಡೆಯಿಂದ ಜನಗಳ ಗುಂಪೊಂದು ಬಿರುಸಾಗಿ ನಡೆದು ಬರುತ್ತಿರುವುದು ಕಾಣುತ್ತಿದೆ. ಈಗಿನ್ನೂ ಅವರು ಕಪ್ಪು ಚುಕ್ಕಿಗಳ ಹಾಗೆ ಕಾಣಿಸುತ್ತಾರೆ. ಆದರೆ ಅವರು ಹೊರಗಿನವರೆಂಬುದು

ನನ್ನ ಸಂದೇಹ. ಅವರ ಜೊತೆ ಬಾವುಟ ಇಲ್ಲ ಅನ್ನುವುದೇ ಒಂದು ವಿಚಿತ್ರ. ನಾನು ಕೆಳಗಿಳಿದು ಬಂದು ತಪಾಸಣಾ ಠಾಣದ ಬಳಿ ಇರುವ ರಕ್ಷಕ ಸಿಬ್ಬಂದಿಯರಿಗೆ, ಮೂವತ್ತು ಜನ ಹೊರಗಿನವರನ್ನು ಎಚ್ಚರಿಕೆಯಿಂದ ಗಮನಿಸಬೇಕೆಂದೂ ಭೇಟಿಗೆ ಬಂದಿರುವವರು ಯಾರು ಹಾಗೂ ಅವರ ಉದ್ದೇಶವೇನು ಎಂಬುದು ಗೊತ್ತಾದ ಕೂಡಲೇ ನನ್ನ ಕಛೇರಿಗೆ ಸುದ್ದಿ ಮುಟ್ಟಿಸಬೇಕೆಂದು ಅವರಿಗೆ ತಿಳಿಸುವಂತೆ ಕಾವಲಿನ ಸೈನಿಕನಿಗೆ ಹೇಳಿದೆ. ಆದರೆ ಆ ಬಾವುಟವಿಲ್ಲದ ಗುಂಪಿನ ಬಗೆಗಿನ ಯಾವುದೋ ಒಂದು ನನ್ನನ್ನು ತಿಂದು ಹಾಕುತ್ತಾ ಇತ್ತು. ಆಗಂತುಕರು ಯಾರು ಎಂದು ತಿಳಿದುಕೊಳ್ಳಲು ತಪಾಸಣಾ ಠಾಣದ ಸಮೀಪಕ್ಕೆ ಇಳಿದು ಹೋದೆ. ಕರ್ತವ್ಯದ ಮೇಲಿದ್ದ ಪಹರೆಯವನೊಬ್ಬ ನಿದ್ರೆ ಹೋಗಿದ್ದ. ನಾನು ಅವನನ್ನು ಎಬ್ಬಿಸಿ ಅವನಿಗೆ ಇನ್ನು ಮೇಲೆ ಇಲ್ಲಿ ಕೆಲಸವಿಲ್ಲ ಎಂದು ಹೇಳಿದೆ. ಅವನು ತನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡನು. ನಾನು ಅದನ್ನು ತಿರಸ್ಕರಿಸಿದೆ. ಇತ್ತ ಧಾವಿಸುತ್ತಿದ್ದವರು ಬಿಳಿಯ ಬಾವುಟವನ್ನು ಕೈಯಲ್ಲಿ ಹಿಡಿದು ಗಂಭೀರಾ ನದಿಯ ಮೇಲಿನ ಸೇತುವೆಯನ್ನು ದಾಟುತ್ತಿದ್ದರು.

ಅದು ಹಾಗಾಗಲು ಸಾಧ್ಯವಿಲ್ಲ. ಅದು ಸಾಧ್ಯವೇ? ಅದು ಬೇರೆ ಇನ್ಯಾರೂ ಅಲ್ಲ. ಸ್ವತಃ ಗುಜರಾತಿನ ರಾಜಕುಮಾರ ಬಹಾದೂರ್ ಖಾನ್ ಅವರೇ ಆಗಿದ್ದರು. ಇಬ್ಬರಲ್ಲಿ ಯಾರಾದರೊಬ್ಬರನ್ನು ಹಿಡಿದು ಬಿಡಬಹುದೆಂಬ ನಿರೀಕ್ಷೆಯಿಂದ ವಿಕ್ರಮಾದಿತ್ಯನು ಇಬ್ಬರು ದೂತರನ್ನು ಕಳುಹಿಸಿದ್ದನೆ? ಕೇವಲ ಎಂಟೊಂಬತ್ತು ಗಂಟೆಗಳ ಒಳಗಾಗಿ ರಾಜಕುಮಾರ ಅಹಮದಾಬಾದಿನಿಂದ ಹೇಗೆ ತಾನೆ ಪಯಣಿಸಿ ಬರಲು ಸಾಧ್ಯ? ಅವನ ಸೈನ್ಯ ಇಲ್ಲೇ ಎಲ್ಲೋ ಸಮೀಪದಲ್ಲಿ ಅಡಗಿರಬಹುದೆ? ನಾನು ನನ್ನ ಆಶ್ಚರ್ಯವನ್ನು ಅಡಗಿಸಿದೆ. ಅವನು ಹೆಚ್ಚು ಕಡಿಮೆ ತಲ್ಲಣಗೊಂಡಿದ್ದ.

“ನಾನು ಬರುತ್ತಿದ್ದೇನೆ ಎಂದು ನಿಮಗೆ ಹೇಗೆ ಗೊತ್ತಿತ್ತು'?

“ನನಗೆ ನನ್ನದೇ ಆದ ಸುದ್ಧಿ ಮೂಲಗಳಿವೆ'

ಅವನು ಬಹಳ ತಲೆಕೆಡಿಸಿಕೊಂಡನು. “ನಾವು ಯಾರಿಗೂ ಹೇಳಿರಲಿಲ್ಲವಲ್ಲ? ತನ್ನ ಸಹಚರರ ಕಡೆ ಅನುಮಾನದಿಂದ ನೋಡಿದನು. “ಅಲ್ಲದೆ ಕಳೆದೆರಡು ವಾರಗಳಿಂದ, ರಾತ್ರಿ ಹೊತ್ತು ವಿಶ್ರಾಂತಿಗಾಗಿ ತಂಗಿದ್ದು ಬಿಟ್ಟರೆ ನಾವು ಎಲ್ಲೂ ನಿಲ್ಲದೆ ಸವಾರಿ ಮಾಡುತ್ತ ಬಂದಿದ್ದೇವೆ”

ನಾನು ಪ್ರತಿಯಾಗಿ ಏನೂ ಹೇಳಲಿಲ್ಲ.

“ಘನತೆವೆತ್ತ ಮಹಾಸ್ವಾಮಿಯವರಾದ ಮಹಾರಾಜಕುಮಾರರೆ, ತಮ್ಮ ಪೂಜ್ಯ ತಂದೆಯವರಾದ ಮಹಾಪ್ರಭುಗಳಾದ ರಾಣಾ ಸಂಗ ಅವರ ಅನುಪಸ್ಥಿತಿಯಲ್ಲಿ ನಮಗೆ ಚಿತ್ತೂರಿನಲ್ಲಿ ಆಶ್ರಯ ಮತ್ತು ರಕ್ಷಣೆ ನೀಡಬೇಕೆಂದು ಕೋರಲಿಚ್ಛಿಸುತ್ತೇನೆ. ಇದೀಗ ನಾನು ಕ್ರಮ ಪ್ರಕಾರವಾಗಿ ನನ್ನ ಖಡ್ಗ, ಗುರಾಣಿ ಮತ್ತು ನನ್ನನ್ನು ತಮ್ಮ ಸುಪರ್ದಿಗೆ ಒಪ್ಪಿಸುತ್ತಿದ್ದೇನೆ. ಅದೇ ರೀತಿ ನನ್ನ ಸಹಚರರೂ ತಮ್ಮನ್ನು ಒಪ್ಪಿಸಿಕೊಳ್ಳುತ್ತಿದ್ದಾರೆ.”

“ನೀವೂ ನನ್ನ ಜೊತೆಯಲ್ಲಿ ಅತಿಥಿ ಅರಮನೆಗೆ ಏಕೆ ಸವಾರಿ ಬೆಳೆಸಬಾರದು? ಅಲ್ಲೇ ಏಕೆ ಸ್ನಾನ ಮಾಡಿ ಬಟ್ಟೆ ಬದಲಾಯಿಸಿ ಉಪಾಹಾರ ಮಾಡಬಾರದು? ಆಮೇಲೆ ನಮಗೆ ಮಾತಾಡಲು ಬೇಕಾದಷ್ಟು ಸಮಯ ಇರುತ್ತೆ.”

ಅವನ ಸೈನ್ಯ ಒಂದು ವೇಳೆ ಅಡಗಿಕೊಂಡಿದ್ದರೂ, ರಾಜಕುಮಾರ ನಮ್ಮ ಬಳಿ ಇದ್ದಾನೆಂದರೆ, ಚಿತ್ತೂರಿನ ಮೇಲೆ ಆಕ್ರಮಣವೆಸಗಲು ಎರಡೆರಡು ಬಾರಿ ಯೋಚಿಸುವರು.

ಆದರೆ ಆಮೇಲೆ ಆದ ಅತಿ ಸಾಧಾರಣ ಕಾಕತಾಳೀಯವೆಂದರೆ, ವಿಕ್ರಮಾದಿತ್ಯನು ಬಹಾದೂರ್‌ಖಾನನಿಗೆ ಚಿತ್ತೂರಿನ ಸಿಂಹಾಸನದ ಮೇಲೆ ಆಕ್ರಮಣ ಮಾಡಲು ಸೈನ್ಯ ಸಮೇತ ಬರಲು ಪತ್ರ ಬರೆದದ್ದು ಹಾಗೂ ಅದರ ಮರುದಿನವೇ ಬಹಾದೂರ್‌ಖಾನ್ ಬಂದು ಆಶ್ರಯ ಕೋರಿದ್ದು.

ನಾನು ಬಹಾದೂರ್‌ಖಾನನನ್ನು ಅತಿಥಿಗಳ ಅರಮನೆಯಲ್ಲಿ ರಾಜಕುಮಾರನ ಕೋಣೆಯಲ್ಲಿ ಇಳಿಸಿದೆ. ಅಲ್ಲಿದ್ದ ಸೇವಕರ ಸ್ಥಾನದಲ್ಲಿ ಗುಪ್ತಚರ ಸೇವಕರನ್ನು ನೇಮಿಸಿದೆ. ಅವರು ಅಡಿಗೆ ಮಾಡುವುದರಲ್ಲಿ ಮತ್ತು ವೈಯಕ್ತಿಕ ಅಂಗರಕ್ಷಕರಾಗಿ ಕಾರ್ಯ ನಿರ್ವಹಿಸುವುದರಲ್ಲಿ ಅತ್ಯುತ್ತಮವಾಗಿ ತರಬೇತಾಗಿದ್ದರು. ನಾನು ನನ್ನ ಕಛೇರಿಯಲ್ಲಿ ಹೋಗಿ ಸೇರಿಕೊಂಡೆ. ಏನಾಗ್ತಾ ಇದೆ? ಈಗ ಹಗಲಿನ ಒಂಬತ್ತೂ ಹದಿನೇಳರ ಸಮಯ. ನಾನು ಇದರ ಕನಸನ್ನೂ ಕಾಣಲು ಸಾಧ್ಯವಿಲ್ಲದ್ದು. ರಾಜಕುಮಾರ ಬಹದ್ದೂರ್ ಖಾನ್ ಶರಣಾಗತನಾಗಿ ಚಿತ್ತೂರಿನಲ್ಲಿ ಏನು ಮಾಡುತ್ತಿದ್ದಾನೆ? ನಾವು ಅಹಮದ್ ನಗರವನ್ನು ಕೊಳ್ಳೆ ಹೊಡೆದದ್ದಕ್ಕೆ ಪ್ರತೀಕಾರ ಕ್ರಮವಾಗಿ ಚಿತ್ತೂರನ್ನು ನೆಲಸಮ ಮಾಡಲು, ಹಾಗೂ ಇಡೀ ಮೇವಾಡವನ್ನು ವಶಪಡಿಸಿಕೊಳ್ಳಲು ಪ್ರತಿಜ್ಞೆ ಮಾಡಿದ್ದನು.

ಆದರೆ ಅವನು ತನ್ನ ನಿರ್ಧಾರವನ್ನು ಮುಂದೂಡಲೇಬೇಕಾಯಿತೆಂಬುದು ಸ್ಪಷ್ಟವೇ ಇದೆ. ಆನಂತರ ನಾನು ದುರ್ಬಲ ನಿರ್ಧಾರ ಕೈಗೊಂಡದ್ದಕ್ಕೆ ಹಾಗೂ ನಮ್ಮ ಎದೆಯಲ್ಲಿ ಹಾವಿಗೆ ಹಾಲೆರೆಯುತ್ತಿರುವುದಕ್ಕಾಗಿ, ಕುಲೀನ ವರ್ಗದವರ ಒಂದು ಗುಂಪು, ರಾಣಿ ಕರ್ಮವತಿ ಹಾಗೂ ಸ್ವಯಂ ವಿಕ್ರಮಾದಿತ್ಯ ಇವರೆಲ್ಲರ ಟೀಕೆಗೆ ಒಳಗಾಗುವೆ. ಆದರೆ ಈ ವಿಷಯದಲ್ಲಿ ನಮಗೆ ನಿಜಕ್ಕೂ ಆಯ್ಕೆಯಿತ್ತೆ ಎಂಬುದು ಪ್ರಶ್ನೆ? ಖಂಡಿತವಾಗಿಯೂ ಅವನ ಮುಖಕ್ಕೆ ಹೊಡೆದಂತೆ ಬಾಗಿಲುಗಳನ್ನು ಮುಚ್ಚಿ ಬಿಡಬಹುದಿತ್ತು. ಅಥವಾ ಅದಕ್ಕಿಂತ ಉತ್ತಮವಾದದ್ದೆಂದರೆ, ಅವನ ಸಹವರ್ತಿಗಳ ಸಹಿತ ಅವನನ್ನು ವಧಿಸಿಬಿಡಬಹುದಿತ್ತು. ಮೊದಲಿನ ಕ್ರಮದಿಂದ ರಾಜಕುಮಾರ ನಮ್ಮಿಂದ ಇನ್ನಷ್ಟು ದೂರವಾಗುತ್ತಿದ್ದ, ಎರಡನೆಯ ಕ್ರಮವು ಅವರ ತಂದೆ ಮುಜಫ್ಫರ್‌ಷಾನನ್ನು ಇನ್ನೊಂದು ಕೊನೆಗೆ ದೂಡಿ, ಅವನನ್ನು ಅತ್ಯಂತ ಕ್ರೋಧೋದ್ದೀಪಿತನಾಗುವಂತೆ ಮಾಡುತ್ತಿತ್ತು. ಎಷ್ಟರಮಟ್ಟಿಗೆ ಎಂದರೆ, ತಂದೆಯವರು ಅವನ ವಿರುದ್ಧ ನಡೆಸುತ್ತಿರುವ ಹೋರಾಟದ ಫಲಿತಾಂಶದ ಮೇಲೆ ಪ್ರಬಲ ಪರಿಣಾಮ ಬೀರುವಷ್ಟು. ಈ ರೀತಿ ಅವನು ಈಗ ನಮ್ಮ ಅತಿಥಿ ಮತ್ತು ಒತ್ತೆಯಾಳಾಗಿದ್ದನು. ಅದು ಮುಜ಼ಾಫರ್‌ನನ್ನು ಅಪಮಾನಿತಗೊಳಿಸುತ್ತಿತ್ತು ಹಾಗೂ ಒಂದು ವೇಳೆ ಪರಿಸ್ಥಿತಿ ಏನಾದರೂ ನಮಗೆ ತೀರಾ ಪ್ರತಿಕೂಲಕರವಾಗಿ ಬಿಟ್ಟರೆ ಗುಟ್ಟಾಗಿ ನಮಗೆ ಅನುಕೂಲವೂ ಆಗುತ್ತಿತ್ತು. ಅದೂ ಅಲ್ಲದೆ, ಮುಂದೇನಾದರೂ ಭವಿಷ್ಯದಲ್ಲಿ ಬಹದ್ದೂರ್ ಗುಜರಾತಿನ ಮಹಾರಾಜನಾಗಿ ತಾನು ಪ್ರತಿಜ್ಞೆ ಮಾಡಿದಂತೆ ಚಿತ್ತೂರನ್ನು ಗೆದ್ದು ವಶಪಡಿಸಿಕೊಂದದ್ದೇ ಆದರೆ, ಆಗ ಚಿತ್ತೂರಿನ ಜನಗಳ ಬಗ್ಗೆ ದಯೆ ತೋರಿ ಅವರನ್ನು ಉಳಿಸಬಹುದು.

ಆ ಹಗಲು, ರಾತ್ರಿ ಮರುದಿನದ ಹಗಲು ಪೂರ್ತಿ ಅವನು ನಿದ್ರಿಸಿದ. ಅವನನ್ನು ಎಬ್ಬಿಸಲು ಮಂಗಳನನ್ನು ಕಳಿಸಿಕೊಟ್ಟೆ ಮತ್ತು ಆ ದಿನ ರಾತ್ರಿ ನನ್ನೊಂದಿಗೆ ಊಟ ಮಾಡಲು ಹೇಳಿ ಕಳಿಸಿದೆ. ಏಳು ಗಂಟೆಗೆ ಸರಿಯಾಗಿ ಬಹಾದೂರ್ ನನ್ನ ಅರಮನೆಯಲ್ಲಿ ಹಾಜರಾದ. ಅವನು ತನ್ನೊಂದಿಗೆ ಕೆಲವು ಉಡುಗೊರೆಗಳನ್ನು ತಂದಿದ್ದ. ನನಗೆ ಇಸ್ತಾನ್ ಬುಲ್‌ನಿಂದ ತರಿಸಿದ್ದ ಆರು ಚಿನ್ನದ ಮಧು ಪಾತ್ರೆಗಳ ಜೊತೆ ಮತ್ತು ನನ್ನ ಹೆಂಡತಿಗಾಗಿ ಗುಜರಾತಿನ ಪಚ್ಚೆ ಕಲ್ಲಿನಲ್ಲಿ ಅತ್ಯದ್ಭುತವಾಗಿ ಕೆತ್ತಿದ ಕೃಷ್ಣನ ಸುಂದರವಾದ ಸಣ್ಣ ವಿಗ್ರಹ.

ಒಬ್ಬ ವ್ಯಕ್ತಿಯ ಮುಖ ನೋಡಿ ಅದರಿಂದ ಅವನ ಗುಣವನ್ನು ತಿಳಿಯಬಹುದೆ? ಬಹುಶಃ ಅದಕ್ಕೊಂದು ಶಾಸ್ತ್ರವೇ ಇದೆ. ಹುಬ್ಬುಗಳ ದಟ್ಟಣೆ, ಅವುಗಳ ಕೋನ, ಹಣೆಯ ಅಗಲ, ಮೂಗಿನ ಡೊಂಕು, ತುಟಿಗಳ ಆಕೃತಿ, ಹಲ್ಲುಗಳ ಬಣ್ಣ, ಕಿವಿಗಳ ಸ್ಥಾನ, ನಿರ್ದಿಷ್ಟತೆ ಮತ್ತು ಅವುಗಳ ಅಳತೆ ಇವೆಲ್ಲವೂ ಒಂದು ಮಿತಿಯೊಳಗೆ ಗಂಡು ಅಥವಾ ಹೆಣ್ಣಿನ ಕರಾರುವಾಕ್ಕಾದ ಸೂಚಕಗಳು. ಅದು ತೋರುವಷ್ಟು ಪ್ರಯಾಸದ್ದೇನಲ್ಲ. ಚಿತ್ತೂರಿನಲ್ಲೇ ಮಾಖನಲಾಲಜೀಯವರು ಕೇವಲ ಒಬ್ಬ ವ್ಯಕ್ತಿಯ ಮುಖ ನೋಡಿದಷ್ಟರಿಂದಲೇ ಅವನ ಭವಿಷ್ಯ ಹೇಳಬಲ್ಲರು. ಮೆರ್ತಾದಲ್ಲಿರುವ ಛಾಯಾಶಾಸ್ತ್ರಿಗಳೆಂಬುವವರು, ನಿಮ್ಮ ನೆರಳಿನ ಅಳತೆ ನೋಡಿ, ತಮ್ಮ ಬಳಿ ಇರುವ ಗ್ರಂಥದಲ್ಲಿ ಇಣುಕಿ ನಿಮ್ಮ ಉದ್ಯೋಗ ಮತ್ತು ಭೂತಕಾಲದ ವಿಷಯಗಳನ್ನೆಲ್ಲಾ ಹೇಳಿಬಿಡುತ್ತಾರೆ. ನನಗೆ ಅಂಥ ಸುಪ್ತ ಪ್ರತಿಭೆಯಾಗಲಿ, ಸಾಮರ್ಥ್ಯವಾಗಲಿ ಇಲ್ಲ. ನಾನು ಮಾಡಬಹುದಾದ್ದೇನಿದ್ದರೂ ಊಹೆ ಅಥವಾ ಅನುಮಾನ ಮಾತ್ರ. ಅದು ಹೆಚ್ಚೆಂದರೆ ನೆಚ್ಚರ್ಲಹವಲ್ಲದ ಕೆಲಸ. ಇಷ್ಟಾದರೂ ಯಾರೇ ಆಗಲಿ ಒಬ್ಬ ವ್ಯಕ್ತಿಯನ್ನು ನೋಡಿದ ಕ್ಷಣದಿಂದ, ಅನೈಚ್ಛಿಕವಾಗಿಯೇ ಅವನ ಪಾರ್ಶ್ವ ಚಿತ್ರವನ್ನು ರೇಖಿಸುತ್ತಿರುತ್ತಾನೆ. ಅಲ್ಲದೆ ಇಚ್ಛೆ-ಅನಿಚ್ಛೆ, ನಂಬಿಕೆ-ಅಪನಂಬಿಕೆ ಕಾಂತಿಹೀನ-ಉಜ್ವಲ, ಮುಕ್ತ-ನೇರವಲ್ಲದ- ಮುಂತಾದ ಬಹು ವಿಧದ ಧ್ರುವೀಕೃತ ಅಕ್ಷಗಳಲ್ಲಿ ಅವನನ್ನು ನೆಲೆಗೊಳಿಸುತ್ತಿರುತ್ತಾನೆ. ನಾನೊಂದು ವೇಳೆ, ಜನಗಳನ್ನು ಕುರಿತಂತೆ ಸರಿಯಾದ ತೀರ್ಮಾನ ತೆಗೆದುಕೊಳ್ಳುವ ತೀರ್ಪುಗಾರನಾಗಿದ್ದರೆ, ಅದಕ್ಕೆ ಕಾರಣ ನಾನು ಜನ್ಮಜಾತವಾದ ಕೌಶಲವನ್ನು ಅವಲಂಬಿಸಿದ್ದು, ಹಾಗೂ ಅದೇ ಸಮಯಕ್ಕೆ ಅವರನ್ನು ನಂಬದೆ ಇದ್ದುದು.

ನಾನು ಬಹಾದೂರ್ ಖಾನ್‌ನನ್ನು ಇಷ್ಟಪಡುತ್ತೇನೆ, ಆದರೆ ನಂಬುವುದಿಲ್ಲ. ಆ ಮನುಷ್ಯ ಥಟ್ಟನೆ ಹಿಂದು ಮುಂದು ನೋಡದೆ ಮುನ್ನುಗ್ಗುವ ರಭಸದ ಪ್ರವೃತ್ತಿಯವನಿರುವಷ್ಟು ನಂಬಿಕೆಗೆ ಅರ್ಹನಲ್ಲದ ವ್ಯಕ್ತಿಯಲ್ಲ. ಮತ್ತು ಯಾವುದೇ ವಿಷಯವನ್ನು ಇನ್ನೊಮ್ಮೆ ಮತ್ತೊಮ್ಮೆ ಯೋಚನೆ ಮಾಡುವುದಕ್ಕೆ ಪುರಸತ್ತು ಮಾಡಿಕೊಳ್ಳುವ ಪೈಕಿಯೇ ಅಲ್ಲ. ಆದರೂ ಆ ಮನುಷ್ಯ ಪ್ರೌಢವಾಗಿ ಯೋಚಿಸುವ ಸಾಮರ್ಥ್ಯವುಳ್ಳವನೆಂದು ನನಗೆ ಗುಮಾನಿ. ಆ ಕಾರಣದಿಂದಲೇ ದೀರ್ಘ ಕಾಲಾವಧಿಯಲ್ಲಿ ಆ ಮನುಷ್ಯ ಅಪಾಯಕಾರಿಯಾಗುತ್ತಾನೆಂದು ನನಗನ್ನಿಸುತ್ತದೆ. ಅವನೊಬ್ಬ ಮುದ್ದಿನಿಂದ ಹಾಳಾದವನು ಮತ್ತು ಅವನ ಮಹತ್ವಾಕಾಂಕ್ಷೆ ಒಬ್ಬ ಸೋಂಬೇರಿ ಮತ್ತು ಅತಿ ಬುದ್ಧಿವಂತಿಕೆ ಮಾಗಲು ಹೋಗಿ ವಿಫಲವಾಗುವ ತಾಯಿಯ ಪ್ರಯತ್ನದ ರೀತಿ. ಅವನಾದರೋ ತಾಳ್ಮೆಯಿಲ್ಲದವನು. ಅಲ್ಲದೆ ಬಹುಮಂದಿ ಭಾವೀ ಆಕ್ರಮಣಕಾರರ ಹಾಗೆ ಬದುಕಿನ ಸಾರ ಸತ್ವದ ಅರಿವಿಲ್ಲದವನು. ಅದೆಂದರೆ ಪುತ್ರರು ಮುಂದೆ ಅಪ್ಪಂದಿರಾಗುತ್ತಾರೆ ಮತ್ತು ತಾವು ತಮ್ಮ ತಂದೆ ತಾಯಿಗಳಿಗೆ ತಂದೊಡ್ಡಿದ್ದ ಇಕ್ಕಟ್ಟುಗಳನ್ನೇ ತಾವೂ ಎದುರಿಸಲೇಬೇಕಾಗುತ್ತದೆ ಎಂಬುದು.

ದಪ್ಪ ರತ್ನಗಂಬಳಿಯ ಮೇಲೆ ನಾವಿಬ್ಬರೂ ಎದುರುಬದುರು ಕುಳಿತುಕೊಳ್ಳುತ್ತೇವೆ. ನಮ್ಮಿಬ್ಬರಿಗೂ ಸಮಾನ ಶತ್ರುವಾದ ಮಾಳ್ವದ ಸುಲ್ತಾನರು ತಂದೆಯವರಿಗೆ ಉಡುಗೊರೆಯಾಗಿ ನೀಡಿದ್ದ ರತ್ನಗಂಬಳಿ ಅದು. ರಾಜಕುಮಾರನು ಭೋಜನವನ್ನು ಸವಿಯುತ್ತಿದ್ದಾನೆ. ಇಂಥ ವಿಷಯಗಳಲ್ಲಿ ನಮ್ಮ ಗುಪ್ತಚರ ಇಲಾಖೆ ಸಾಕಷ್ಟು ಉತ್ತಮವಿದೆ. ಆತನಿಗೆ ತುಂಬ ಇಷ್ಟವಾದ ಖಾದ್ಯಗಳಾದ ಆಫ್‌ಘನಿತಂಗ್ಡಿ ಕಬಾಬ್, ಘಜಬ್‌ಗೋಶ್ತ್ ಮತ್ತು ಗುಜರಾತಿ ಸಿಹಿ ತಿಂಡಿ ಶ್ರೀಖಂಡ ಇವುಗಳನ್ನು ತಯಾರಿಸಲು ಅಡಿಗೆಯವರನ್ನು ಗೊತ್ತು ಮಾಡಿದ್ದೆ. ಒಡೆದ ಹಾಲಿನ ಗರಣೆಗಳನ್ನು ಮಸ್ಲಿನ್ ಬಟ್ಟೆಯಲ್ಲಿ ಕಟ್ಟಿಟ್ಟು ನೀರೆಲ್ಲವನ್ನೂ ಹೋಗಿಸಿದ ಮೇಲೆ ಸಕ್ಕರೆ ಮತ್ತು ಕುಂಕುಮ ಕೇಸರಿಗಳನ್ನು ಬೆರಸಿ ಚೆನ್ನಾಗಿ ಕಲಕಿದ

ಮೇಲೆ ಸಿದ್ಧವಾಗುವಂಥದು ಈ ಶ್ರೀಖಂಡ. ಆಮೇಲೆ ನಾವು ಸ್ವಲ್ಪ ಹೊತ್ತು ಮಾತನಾಡುತ್ತೇವೆ. ಏನನ್ನೋ ಹೇಳಬೇಕೆಂದು ಆತನ ಮನಸ್ಸಿನಲ್ಲಿದೆ. ಆದರೆ ಆತ ಬೆಳೆದು ಬಂದ ಉತ್ತಮ ಸಂಸ್ಕಾರ ನಮ್ಮ ಊಟ ಮುಗಿಯುವವರೆಗೂ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ನನಗೆ ಗೊತ್ತು.

"ಚಿತ್ತೂರಿಗೆ ನಾನು ತಕ್ಷಣ ಹೊರಟು ಬರೋ ಹಾಗೆ ಮಾಡಿದ್ದು ಯಾವುದು ಅಂತ ನಿಮಗೆ ಆಶ್ಚರ್ಯ ಆಗಿರಬೇಕು"

ವಿಷಯ ಆರಂಭ ಮಾಡಿದಾಗ ನಾವು ತಾಂಬೂಲ ಸವಿಯುತ್ತಿದ್ದೆವು.

"ತಮ್ಮಂಥ ಘನತೆವೆತ್ತ ಅತಿಥಿಗಳು ನಮ್ಮೊಂದಿಗಿರುವುದು ಅತ್ಯಂತ ಅಪೂರ್ವವಾದ ಸಂತಸವನ್ನು ನೀಡುತ್ತಿದೆ"

"ತಾವು ತುಂಬಾ ದಯಾಳುಗಳು. ಇಷ್ಟರಲ್ಲೇ ನಾನೂ ತಮ್ಮ ಆತಿಥ್ಯಕ್ಕೆ ಪ್ರತಿಯಾಗಿ ಆತಿಥ್ಯ ಮಾಡಬಹುದೂಂತ ಆಶಿಸುತ್ತೇನೆ. ಹಾಗೆ ಹೇಳಬೇಕೆಂದರೆ, ನನ್ನ ಪಾಡಿಗೆ ನನ್ನನ್ನು ಬಿಟ್ಟರೆ ಬಹಳ ಬೇಗನೆ ಅದು ಸಾಧ್ಯ"

"ವಿಶ್ರಾಂತಿ ತೆಗೆದುಕೊಳ್ಳಿ. ನಿರಾತಂಕವಾಗಿರಿ. ತಾವು ಎಷ್ಟು ದಿವಸ ಇರಲು ಇಷ್ಟಪಡುತ್ತೀರೋ ಅಷ್ಟು ದಿನ ತಾವು ಇರಬೇಕೆಂದು ನಾವು ಬಯಸುತ್ತೇವೆ. ಚಿತ್ತೂರನ್ನು ನಿಮ್ಮ ಇನ್ನೊಂದು ಮನೆಯೆಂದೇ ತಿಳಿಯಿರಿ."

"ಮಹಾರಾಜ್ ಕುಮಾರ್ ಅವರೇ" – ಇಂಥ ನಯವಾದ ವಾಗ್ಯುದ್ಧದ ಪರಿಚಯ ಅವನಿಗೆ ಸಾಕುಬೇಕಾದಷ್ಟಾಗಿತ್ತು.

"ಈ ನಯ ಸೂಕ್ಷ್ಮತೆಗಳನ್ನು ಬದಿಗಿರಿಸಿ, ನೇರವಾಗಿ ವಿಷಯಕ್ಕೆ ಬರುತ್ತಿರುವುದಕ್ಕೆ ಕ್ಷಮಿಸಿ. ದಯವಿಟ್ಟು ಹೇಳಿ ಮಿತ್ರರ ಮಧ್ಯೆ ಔಪಚಾರಿಕತೆ ಬೇಡ."

"ನಮ್ಮ ತಂದೆಯವರ ಸೇನಾ ತುಕಡಿಗಳು ಇದಾರ್ ಸಾಮ್ರಾಜ್ಯದ ಸಮೀಪದಲ್ಲಿ ಮೇವಾಡದ ಸೇನಾ ತುಕಡಿಗಳೊಂದಿಗೆ ಯುದ್ಧದಲ್ಲಿ ತೊಡಗಿವೆ. ನೀವು ನನಗೆ ಕೇವಲ ಇಪ್ಪತ್ತು ಸಾವಿರ ರಾವುತ ಪಡೆಯ ನೆರವು ದೊರಕಿಸಿ ಕೊಟ್ಟದ್ದೇ ಆದರೆ ನಾನು ನನ್ನ ಬೆಂಬಲಿಗರು ಮತ್ತು ಅಹಮದಾಬಾದ್‌ನಲ್ಲಿ ನನ್ನ ವಿಷಯದಲ್ಲಿ ಸಹಾನುಭೂತಿ ಇರುವವರು ಮತ್ತು ನನ್ನ ಅನುಯಾಯಿಗಳ ಬಲದೊಂದಿಗೆ ನಮ್ಮ ಅಹಮದಾಬಾದ್‌ನ ರಾಜಧಾನಿಯನ್ನು ವಶಪಡಿಸಿಕೊಂಡು ನಮ್ಮ ತಂದೆ ಸುಲ್ತಾನ್ ಮುಜಾಫರ್ ಷಾ ಅವರನ್ನು ಪದಚ್ಯುತಗೊಳಿಸುತ್ತೇನೆ. ನಾನು ಇದಾರ್‌ಅನ್ನು ಬಿಟ್ಟು ಕೊಡುತ್ತೇನೆ. ಮಿಂಚಿನ ಒಂದು ನಡೆಯಿಂದ ಇದಾರ್ ನಿಮ್ಮ ತಂದೆಯವರ ಸಾಮ್ರಾಜ್ಯದ ಒಂದು ಭಾಗವಾಗಿ ಬಿಡುತ್ತದೆ. ಗುಜರಾತ್ ಮತ್ತು ಮೇವಾಡಗಳೆರಡೂ ಒಂದು ಶಾಂತಿ ಒಪ್ಪಂದಕ್ಕೆ ಸಹಿಹಾಕಿ ನಿಮ್ಮ ದೇಶ ನನ್ನನ್ನು ಆಜೀವ ಪರ್ಯಂತದ ಮಿತ್ರನನ್ನಾಗಿಸಿಕೊಳ್ಳುವುದು. ನಿಮ್ಮ ಸೇನೆಯ ಸೇವೆಯನ್ನು ಪಡೆದುಕೊಂಡದ್ದಕ್ಕೆ ಪ್ರತಿಯಾಗಿ ದಿನವೊಂದಕ್ಕೆ ಐವತ್ತು ಸಾವಿರ ವರಹಗಳಂತೆ ನಿಮಗೆ ಪರಿಹಾರವನ್ನೂ ನಾನು ನೀಡುತ್ತೇನೆಂಬುದನ್ನು ಹೇಳಬೇಕಾದ್ದೇ ಇಲ್ಲ"

ಇದಾರ್ ಅನ್ನು ತಟ್ಟೆಯಲ್ಲಿ ಪಡೆದುಕೊಳ್ಳುವುದು ನಿಜಕ್ಕೂ ಅದ್ಭುತವೇ. ಇದಾರ್‌ಅನ್ನು ವಶಪಡಿಸಿಕೊಳ್ಳುವ ಹೋರಾಟ ನನ್ನ ಅತ್ಯಂತ ಪ್ರಾರಂಭದ ನೆನಪಿನಷ್ಟು ಹಿಂದೆ ಹೋಗುತ್ತದೆ. ಬಹಾದೂರ್ ಏನೋ 'ಆದರೆ'ಗಳ ಸೊಗಸಾದ ಸರಣಿಯನ್ನೇ ಸಿದ್ಧಪಡಿಸಿಟ್ಟಿದ್ದಾನೆ. ಅನೂಹ್ಯವಾದವುಗಳ ಬಗ್ಗೆ ಯೋಚಿಸುತ್ತಾ ಕೂತುಕೊಳ್ಳುವುದು ಅವನ ಉದ್ದೇಶಕ್ಕೆ ಹೊಂದುವುದಿಲ್ಲ. ಇಪ್ಪತ್ತು ಸಾವಿರ ಅಶ್ವ ಪಡೆಯನ್ನು ನಾನು ಕೂಡಿಸಲು ಸಾಧ್ಯವೆ?

ಅಷ್ಟು ಸಂಖ್ಯೆ ಸಾಕಾಗುತ್ತದೆಯೆ? ಅಹಮದಾಬಾದ್‌ನಲ್ಲಿ ಅವನ ಬೆಂಬಲಿಗರು ಸಾಕಷ್ಟಿದ್ದಾರೆಯೇ? ಅಹಮದಾಬಾದ್ ಕಳಿತ ಮತ್ತು ಕೊಳೆತ ರಾಮಫಲದ ಹಾಗೆ ಅವನ ಬೊಗಸೆಗೆ ಬಿದ್ದು ಬಿಡುತ್ತದೆಯೆ? ಒಂದು ವೇಳೆ ನಮ್ಮ ಸೈನ್ಯದ ತುಕಡಿಗಳೇ ನಾಶವಾಗಿ ಬಿಟ್ಟರೆ ಏನು ಗತಿ? ಬಹಾದೂರ್‌ನ ಯುದ್ಧತಂತ್ರ ನೈಪುಣ್ಯದ ಬಗ್ಗೆ ನನಗೆಷ್ಟು ಗೊತ್ತು? ಸೈನ್ಯದ ಪ್ರಯಾಣದ ಖರ್ಚಿಗೆ ಅಗತ್ಯವಾದ ಹಣ ನೀಡುತ್ತಾನೆಂಬುದು ಉತ್ಸಾಹ ಉಂಟು ಮಾಡುವಂಥ ವಿಷಯವೇ. ಆದರೆ ಆ ರೀತಿ ಹಣವನ್ನು ಎಲ್ಲಿಂದ ಪಡೆದುಕೊಳ್ಳಲು ಯೋಜಿಸಿದ್ದಾನೆ ಮತ್ತು ಅದಕ್ಕೆ ಆಧಾರ ಏನು? ಆದಿನಾಥ್‌ಜೀಯವರ ಜೊತೆಗಿನ ನನ್ನ ವ್ಯವಹಾರ ನನಗೆ ಕಲಿಸಿರುವುದೇನೆಂದರೆ, ಯಾವುದಾದರೂ ಸಾಲದ ಪ್ರಸ್ತಾಪಕ್ಕೆ ಅವರು ಕಿವಿಗೊಡಬೇಕು ಎಂದರೆ, ಅದಕ್ಕೆ ಆಧಾರವಾಗಿ ಅವರಿಗೆ ಬೇಕಾಗಿರುವುದು ಕೋಟೆ ಕೊತ್ತಲಗಳು ಮತ್ತು ಭೂಮಿಯ ಮೇಲೆ ಸ್ಥಿರವಾಗಿ ನಿಂತಿರುವಂಥವು, ಗಾಳಿ ಗೋಪುರಗಳಲ್ಲ. ವಿಕ್ರಮಾದಿತ್ಯನಿಗೆ ಅವರು ಏನೇ ಸಾಲ ಕೊಟ್ಟಿದ್ದರೂ ಅದೆಲ್ಲವೂ ಸಾಧಾರವಾಗಿಯೇ ಹಾಗೂ ರಾಜಕುಮಾರನ ತಾಯಿ ಮೂಲ ಧನ ಮತ್ತು ಅತ್ಯಧಿಕ ಪ್ರಮಾಣದ ಚಕ್ರಬಡ್ಡಿ ಸಮೇತ ಬರಬೇಕು ಎಂಬ ಷರತ್ತಿನೊಂದಿಗೆ. ಆಜೀವ ಪರ್ಯಂತದ ಶಾಂತಿ ಒಪ್ಪಂದದ ಸ್ನೇಹಕ್ಕಾದರೆ, ಅದು ಬಹಳ ಸಂತೋಷದ ಸಂಗತಿ, ಆದರೆ ತಕ್ಷಣಕ್ಕೆ ಅದು ತುಂಬ ದೂರ ಎಳೆದ ಹಾಗಾಯಿತು.

ನನ್ನ ಮನಸ್ಸಿನಲ್ಲಿ ನಾನು ಎತ್ತಿದ ಒಂದೊಂದು ಆಕ್ಷೇಪಣೆಯೂ ರಾಜಕುಮಾರನಿಗೆ ನೆರವಾಗಬೇಕೆಂದು ನನಗೆ ಉತ್ಸಾಹವೇನಾದರೂ ಇದ್ದರೆ ಅದನ್ನು ತಣ್ಣಗೆ ಮಾಡಲು ಸಾಕಾಯಿತು. ಆದರೆ ಸಕಾರಣದಿಂದ ಮತ್ತು ತಾರ್ಕಿಕ ವಿಶ್ಲೇಷಣೆಯಿಂದ ಕೂಡಿದ ಆ ಉತ್ತಮ ಅಂಶಗಳೆಲ್ಲವೂ ವಿಷಯವನ್ನು ಮಿತಿಗೊಳಪಡಿಸುತ್ತಿದ್ದುವು. ರಾಜಕುಮಾರ ಬಹದ್ದೂರ್‌ನು ನೂರಕ್ಕೆ ನೂರರಷ್ಟು ಗುಜರಾತಿನ ಸಿಂಹಾಸನವನ್ನು ಗೆಲ್ಲುತ್ತಾನೆಂಬ ಭರವಸೆ ಇದ್ದರೂ, ಎರಡು ಸಂಗತಿಗಳನ್ನಂತೂ ಅದು ಬದಲಾಯಿಸಲು ಸಾಧ್ಯವಿರಲಿಲ್ಲ. ಮೊದಲನೆಯದು ನ್ಯಾಯಬದ್ಧ ದೊರೆ ಅವರ ತಂದೆ ಬದುಕಿದ್ದಾರೆ ಹಾಗೂ ಎರಡನೆಯದು ಉತ್ತರಾಧಿಕಾರದಲ್ಲಿ ಆತನ ಸ್ಥಾನ ಎರಡನೆಯದು.

ನನ್ನ ನಿರ್ಭಾವುಕ ಮುಖದ ಒಂದೇ ಒಂದು ಗೆರೆಯೂ ಚಲಿಸಲಿಲ್ಲ. ಆದರೆ ಅವನನ್ನು ಕುತ್ತಿಗೆಗೆ ಕೈ ಹಾಕಿ ಎಳೆದುಕೊಂಡು ಮುಖಕ್ಕೆ ಸರಿಯಾಗಿ ನಾಲ್ಕು ಬಾರಿಸುವುದರ ಜೊತೆಗೆ ಸದಾ ಜ್ಞಾಪಕ ಇಟ್ಟುಕೊಂಡಿರಬೇಕಾದಂಥ ಛಡಿಏಟುಗಳನ್ನು ಕೊಟ್ಟು ಕತ್ತಲೆ ಕೋಣೆಗೆ ದೂಡಬೇಕು. ಹಲ್ಲು ಬಿದ್ದು ಕಣ್ಣು ಕಾಣಿಸದ ಹಾಗೆ ಆಗುವವರೆಗೂ ಅಲ್ಲೇ ಕೊಳೆಯುವುದಕ್ಕೆ ಬಿಟ್ಟು ತಾನಾಗಿ ಸೂರ್ಯನ ಬಿಸಿಲು ನೋಡಲು ಮತ್ತು ಹೊಸ ಗಾಳಿ ಸೇವಿಸಲು ನನ್ನನ್ನು ಹೊರಗೆ ಬಿಡಿ, ಹಿರಿಯ ಮಗನಿಗೆ ರಾಜ್ಯಾಧಿಕಾರ ಎಂಬ ಕಾನೂನನ್ನು ನಾನು ಅನುಸರಿಸುತ್ತೇನೆ ಎಂದು ಹೇಳಿ ಪ್ರತಿಜ್ಞೆ ಮಾಡುತ್ತ ಮಂಡಿ ಊರಿ ಬೇಡಿಕೊಳ್ಳುವರೆಗೂ ಅಲ್ಲೇ ಇಟ್ಟಿರಬೇಕು ಎಂಬುದನ್ನು ಬಹಳ ಕಷ್ಟದಿಂದ ತಡೆದುಕೊಂಡೆ.

ಅಧ್ಯಾಯ 5

ನನ್ನ ಕರುಳಿನ ತಂತುವನ್ನೇ ಹರಿದು, ನನ್ನ ಮನಸ್ಸನ್ನು ನಿಶ್ಚೇಷ್ಟಗೊಳಿಸುವಂಥ ಉತ್ತರಾಧಿಕಾರದ ಹಕ್ಕು ಹಾಗೂ ಅದೇ ರೀತಿಯ ಇತರ ನಿರ್ಬಂಧಿತ ವಿಷಯಗಳ ಬಗೆಗೆ ಮಾತನಾಡುವುದನ್ನು ನಾನು ತಪ್ಪಿಸಿಕೊಂಡಿದ್ದೇನೆ. ಆದರೆ ರಾಜಕುಮಾರ ಬಹದ್ದೂರ್ ಒಂದು ಸೂಕ್ಷ್ಮವಾದ ಭಾಗವನ್ನು ಸ್ಪರ್ಶಿಸಿದ್ದಾನೆ. ನಾನು ಮಾಡಬಹುದಾದ ಅತ್ಯಂತ ಕನಿಷ್ಠ ಕಾರ್ಯ ಎಂದರೆ, ಅದರ ಬಗ್ಗೆ ಮಾತನಾಡುವ ಮೂಲಕ ಸ್ವಲ್ಪ ನೆಮ್ಮದಿ ಪಡೆದುಕೊಳ್ಳುವುದು.

ನಾನೊಬ್ಬ ಸಂಕೋಚ ಸ್ವಭಾವದ ಮನುಷ್ಯ. ಏಕಾಂಗಿಯಾಗಿರಲು ಇಷ್ಟಪಡುವವರು ಸಾಮಾನ್ಯವಾಗಿ ಅಂಥವರಾಗಿರುತ್ತಾರೆ. ಯಾವಾಗಲೂ ಅಲ್ಲದೆ ಹೋದರೂ ಕೆಲವೊಮ್ಮೆಯಾದರೂ ನನ್ನ ಮನಸ್ಸು ಹೇಗೆ ಕೆಲಸ ಮಾಡುತ್ತದೆಂದು ನನಗೆ ಗೊತ್ತು. ಅಲ್ಲದೆ ನಾನು ಎಂಥ ಮನುಷ್ಯ ಅನ್ನುವುದರ ಸರಿಸುಮಾರಾದ ಪರಿಜ್ಞಾನ ನನಗಿದೆ. ನಾನು ಮಹತ್ವಾಕಾಂಕ್ಷೆಯ ಮನುಷ್ಯ. ಇಂದೇ ಮಹಾರಾಜನಾಗಬೇಕೆಂಷ್ಟು ಮಹತ್ವಾಕಾಂಕ್ಷೆಯಂತೂ ಇದೆ. ಸಾಮ್ರಾಜ್ಯಕ್ಕೆ ಸಂಬಂಧಿಸಿದ ವಿಷಯ ಮತ್ತು ನೀತಿಯ ವಿಷಯದಲ್ಲಿ ನನಗೆ ಯಾವುದೇ ನೈತಿಕ ವಿವೇಚನೆ ಇಲ್ಲ. ಒಂದು ವೇಳೆ ಲಾಭವಿದೆ ಎಂದಾದರೆ, ನಮ್ಮ ಕಟ್ಟಾ ಶತ್ರುಗಳಲ್ಲೊಬ್ಬರ ಮಕ್ಕಳನ್ನು ಬೆಂಬಲಿಸುವುದರಲ್ಲಿ ಲಾಭವಿದೆ ಎಂದಾದರೆ, ಉದಾಹರಣೆಗೆ ಬಹದ್ದೂರ್‌ಖಾನ್ ನನ್ನ ಕೆಲವೊಂದು ತತ್ವಗಳಿಗೆ ವಿರುದ್ಧವಾಗಿ ಹೋಗುವುದು ನನಗೆ ಎಷ್ಟೇ ನೋವುಂಟು ಮಾಡುವಂಥದಾದರೂ ನಾನು ಅದನ್ನು ಸಂತೋಷವಾಗಿ ಮಾಡುತ್ತೇನೆ.

ಆದರೆ ನಾನು ಮೇವಾಡದ ಮಗ ಹಾಗೂ ಒಬ್ಬ ಗುಹಿಲೋಟ್ ಸಿಸೋದಿಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಏಳು-ಎಂಟನೇ ಶತಮಾನಗಳಷ್ಟು ಹಿಂದಿನ ಹಾಗೂ ಯಾವುದೇ ವಿಚ್ಛಿತ್ತಿ ಇಲ್ಲದೆ ನಿರಂತರವಾಗಿ ನಡೆದುಕೊಂಡು ಬಂದಿರುವ ಮೂವತ್ತು ನಲವತ್ತು ರಾಜರುಗಳವರೆಗಿನ ಸರಣಿ ಹೊಂದಿರುವ ಏಕೈಕ ರಾಜವಂಶ ಇದು. ನಮ್ಮದು ಚಾರಣರ ಮತ್ತು ಗಾಯಕರ, ಲಾವಣಿಕಾರರ ಮತ್ತು ವೀರಗೀತೆಗಳ ಗಾಯಕರ ನಾಡು. ನನ್ನ ವಂಶದ ಪೂರ್ವಜರಾದ ಬಪ್ಪಾರಾವಲ್, ರಾಣಾ ಹಮೀರ್, ಚುಂಡಾ ಮತ್ತು ರಾಣಾಕುಂಭ ಮೊದಲಾದವರ ವೀರಗಾಥೆಗಳನ್ನು ಹಾಡಿದಣಿಯರು ಅವರು. ನನಗನ್ನಿಸುವುದು ಬಹುಶಃ ನಾವು ಗಾಳಿಯನ್ನು ಉಸಿರಾಡುವುದಕ್ಕಿಂತ ಹೆಚ್ಚಾಗಿ ಇವರ ವೀರಗಾಥೆಗಳನ್ನು ಉಸಿರಾಡುತ್ತೇವೆ ಎಂದು. ನಮ್ಮ ಕಥೆ ಉಪಕಥೆಗಳೆಲ್ಲಾ ಈ

ರಾಜರ ಇತಿಹಾಸವೇ. ನಮ್ಮ ಮಕ್ಕಳು ರಾತ್ರಿ ಮಲಗುವಾಗ ಕೇಳುವ ಕಥೆಗಳು ಏನಿದ್ದರೂ ನಮ್ಮ ಹಿಂದಿನ ವೀರರು ಮತ್ತು ಜೀವಂತ ಪ್ರಭುಗಳ ಬದುಕಿಗೆ ಸಂಬಂಧಿಸಿದ್ದು, ನಮ್ಮ ನರನರವೂ ಇವರುಗಳ ಕಥೆಗಳಿಂದಲೇ ತುಂಬಿ ಹೋಗಿದೆ. ನನಗೆ ಅನೇಕ ಸಲ ಅನ್ನಿಸುವುದೇನೆಂದರೆ ನಮಗೆ ವರ್ತಮಾನವಿಲ್ಲ ಇರುವುದೇನಿದ್ದರೂ ಭೂತಕಾಲ ಮಾತ್ರ.

ಈ ಚಾರಣರು ಮತ್ತು ಗಾಯಕರು ಅತ್ಯಂತ ವರ್ಣರಂಜಿತ ಚಿತ್ರವನ್ನು ನೀಡುತ್ತಾರೆ. ಅಲ್ಲದೆ ಅವರು ಒಳ್ಳೆಯ ವಿವೇಚನೆ ಉಳ್ಳವರು. ಕಾರಣ ಅವರು ಕೆಟ್ಟ ಆಸಾಮಿಗಳನ್ನು ಕುರಿತು ಬಹುವೇಳೆ ಹಾಡುವುದಿಲ್ಲ ಮತ್ತು ಹಾಡಿದರೂ ಹೆಚ್ಚು ಹೊತ್ತು ಅಂಥವರ ಬಗ್ಗೆ ಹಾಡುವುದಿಲ್ಲ. ಅದು ಪೂರ್ತಿ ನಿಜವಲ್ಲ. ಅವರು ಮಾಡುವುದು ಇನ್ನೂ ಅಪಾಯಕಾರಿಯಾದದ್ದು. ರಾಜನ ಮರಣಾನಂತರ ಸಿಂಹಾಸನಕ್ಕಾಗಿ ನಡೆಯುವ ಸೋದರ ಹತ್ಯೆಗಳು ಹಾಗೂ ರಕ್ತಪಾತದಿಂದ ಕೂಡಿದ ಕದನಗಳಿಗೆ ವೀರ ಮತ್ತು ಸಾಹಸದ ನೂರಾರು ಸಾವಿರಾರು ದ್ವಿಪದಿಗಳ ರೂಪ ಕೊಟ್ಟುಬಿಡುತ್ತಾರೆ. ಪ್ರತಿಯೊಬ್ಬ ಮಹಾರಾಜನ ಕಿರೀಟದ ಮೇಲೆ ತೂಗಾಡುತ್ತಿರುವ ಸಾವಿನ ಶಿರಸ್ಸನ್ನು ಅವರು ಕಾಣಲಾರರು. ಎರಡೂ ಕಡೆಯವರಿಗೂ ಘಾತಕವಾದ ಮೇವಾಡಕ್ಕಾಗಿ ನಡೆಯುವ ಈ ಹುಚ್ಚು ರಕ್ತಪಾತದ ಬೆಲೆ ಎಷ್ಟು ಎಂದು ಯಾರೂ ಲೆಕ್ಕ ಹಾಕುವುದಿಲ್ಲ. ನಾವು ನಮ್ಮ ಶತ್ರುಗಳ ಆತ್ಮೀಯ ಸ್ನೇಹಿತರು. ಕಾರಣ ನಮಗೆ ನಾವು ತಂದುಕೊಳ್ಳುವುದಕ್ಕಿಂತ ಹೆಚ್ಚಿನದೇನು ಅವ್ಯವಸ್ಥೆ ಮತ್ತು ಅನಾಯಕತ್ವವನ್ನು ಮೇವಾಡಕ್ಕೆ ಅವರು ಹಾರೈಸಿಯಾರು? ನಮ್ಮ ನೆರೆಯ ಸಾಮ್ರಾಜ್ಯಗಳಲ್ಲೂ ಅಂಥದೇ ಭಯಾನಕ ಹೋರಾಟಗಳು ನಡೆಯುತ್ತವೆಂದು ಒಬ್ಬ ಅದೂರದೃಷ್ಟಿಯ ಮೂರ್ಖ ಮಾತ್ರ ಸಮಾಧಾನ ತಾಳಬಲ್ಲ.

ನಾನು ಮೇವಾಡದ ಮಹಾರಾಜರ ಜೇಷ್ಠ ಪುತ್ರ, ಸಿಂಹಾಸನದ ಅಗ್ರ ಪಟ್ಟಾಧಿಕಾರಿ ಮತ್ತು ಮಹಾರಾಜಕುಮಾರ. ಜೇಷ್ಠ ಪುತ್ರನಿಗೆ ರಾಜ್ಯಾಧಿಕಾರ ಎಂಬ ನೀತಿಯಲ್ಲಿ ನನಗೆ ಇಷ್ಟೊಂದೇಕೆ ಆಸಕ್ತಿ ಎಂಬುದಕ್ಕೆ ಕಾರಣ, ಅದರಿಂದ ನಾನು ಪಡೆಯುವುದು ರಾಜ ಕಿರೀಟ ಮತ್ತು ಮೇವಾಡದ ಸಾಮ್ರಾಜ್ಯವನ್ನಲ್ಲದೆ ಬೇರೆ ಅಲ್ಲ. ಅಷ್ಟೇ ಅಲ್ಲ, ಅದಕ್ಕಿಂತ ಸ್ವಲ್ಪ ಹೆಚ್ಚಿನದೇ. ನನಗೂ ನನ್ನ ಸೋದರರಿಗೂ ಭವಿಷ್ಯ ಎಷ್ಟೊಂದು ಅನಿಶ್ಚಿತತೆಯಿಂದ ತುಂಬಿದೆ ಎಂಬುದು ನನಗೆ ಯಾವತ್ತೂ ತಿಳಿದಿದೆ. ಕಾರಣ ನಮ್ಮ ಪಿತೃಗಳ ಮತ್ತು ಸೋದರರ ರಕ್ತದಿಂದ ನಮ್ಮ ಕೈಗಳು ಎಷ್ಟೊಂದು ಕೆಂಪಾಗಿವೆ ಮತ್ತು ಅಂಟಂಟಾಗಿದೆ ಎಂಬುದನ್ನು ನಾನು ಮರೆಯಲಾರೆ. ನಾವು ತೀರಾ ಹಿಂದಕ್ಕೇನೂ ಹೋಗಬೇಕಾಗಿಲ್ಲ. ಉದಾಹರಣೆಗೆ ನಮ್ಮ ಮುತ್ತಾತ ಮಹಾರಾಣಾ ಕುಂಭ ಅವರನ್ನೇ ತೆಗೆದುಕೊಳ್ಳಬಹುದು. ಮೇವಾಡ ಕಂಡಿರುವ ಅತಿ ದೊಡ್ಡ ಮಹಾರಾಜ, ಬಪ್ಪಾರಾವಲ್ ಮತ್ತು ಹಮೀರರಿಗಿಂತ ದೊಡ್ಡವರೆಂದು ಕೆಲವರು ಹೇಳುತ್ತಾರೆ. ಇದೊಂದು ವ್ಯರ್ಥ ಊಹೆ. ಈಗ ಮುಖ್ಯವಾದ್ದೇನೆಂದರೆ, ಕುಂಭನು ಪಟ್ಟಕ್ಕೆ ಬಂದಾಗ, ಆಗ್ಗೆ ಒದಗಿಬರಬಹುದಾದ ಅಥವಾ ಸನ್ನಿಹಿತವಾಗಿರುವ ಅಪಾಯ ಯಾವುದು ಎಂಬುದನ್ನು ಅವನು ಇಂಥ ಕೋನದಿಂದ ನೋಡಲಿಲ್ಲ ಎಂದು ಹೇಳುವ ಹಾಗಿಲ್ಲ. ನಮ್ಮ ಇಂದಿನ ಶತ್ರುಗಳಾದ ದೆಹಲಿ, ಗುಜರಾತ್ ಮತ್ತು ಮಾಳ್ವಗಳು ಮೇವಾಡದ ತುಣುಕುಗಳನ್ನು ಹಿಡಿದಿಟ್ಟುಕೊಂಡೋ ಇಲ್ಲ ಅದರ ವಿನಾಶಕ್ಕೋ ಯತ್ನಿಸುತ್ತಾ ಸದಾ ಅದರ ಪಕ್ಕಗಳತ್ತ ಕಣ್ಣು ಹಾಯಿಸುತ್ತ ಇದ್ದುವು. ಆದರೆ ನಮ್ಮ ರಜಪೂತರಲ್ಲಿ ಯಾವತ್ತಿನಿಂದಲೂ ನಾವು ಹೆದರಬೇಕಾಗಿದ್ದದ್ದು ಹೊರಗಿನವನಿಗಲ್ಲ; ಬೇರೆ ಯಾವುದೇ ವಿದೇಶೀ ಶತ್ರುವಿಗಿಂತ ಪರಿಣಾಮಕಾರಿಯಾಗಿ ನಮ್ಮ ಶಕ್ತಿಯನ್ನು ಒಳಗೊಳಗೇ ಹಾಳು ಮಾಡುವ ನಮ್ಮ ರಕ್ತ ಸಂಬಂಧಿಗಳು ಮತ್ತು ಹತ್ತಿರದ ಬಂಧು

ಬಾಂಧವರಿಗೆ. ಶಿರೋಹಿಯ ರಜಪೂತ ರಾಜ, ಬುಂಡಿಯ ಹದಾಸ್, ಮಾರ್‌ವಾಡದ ಜೋಧ, ರಾಣಾ ಅವರ ತಮ್ಮ ಖೇಮ್‌ಕರಣನ ಹೆಸರನ್ನು ಹೇಳಬೇಕಾಗಿಯೇ ಇಲ್ಲ– ಇವರೆಲ್ಲ ಕೆಲವೊಮ್ಮೆ ನಮ್ಮ ಶತ್ರುಗಳ ಜೊತೆ ಕೈಜೋಡಿಸಿ ರಾಣಾ ಕುಂಭನನ್ನು ತುದಿಗಾಲ ಮೇಲೆ ನಿಲ್ಲುವ ಹಾಗೆ ಮಾಡುತ್ತಿದ್ದರು.

ಅದು ಹಾಗಿರಲಿ. ಗುಜರಾತ್ ಮತ್ತು ಮಾಳವ ದೇಶಗಳೊಂದಿಗೆ ಎರಡು ವಿಭಿನ್ನ ನೆಲೆಗಳಿಂದ ಏಕಕಾಲದಲ್ಲಿ ಯುದ್ಧ ಮಾಡಿದವನೆಂದು ನಮ್ಮ ಜೀವಂತ ನೆನಪಿನಲ್ಲಿರುವ ಏಕೈಕ ರಾಣಾ ಎಂದರೆ ಕುಂಭ ಮಾತ್ರ. ಅವರಲ್ಲಿ ಯಾರೊಬ್ಬರನ್ನೂ ಅವನು ನಾಶ ಮಾಡಲಾಗಲಿಲ್ಲ ಎಂಬುದು ನಿಜ. ಆದರೆ ತನ್ನ ಇಬ್ಬರು ದರೋಡೆಕೋರರನ್ನು ಹತ್ತಿರ ಬರದಂತೆ ನೋಡಿಕೊಳ್ಳುವುದರಲ್ಲಿ ಯಶಸ್ವಿಯಾದ. ಅಲ್ಲದೆ ತನ್ನ ಹಿಂದಿನ ಬೇರೆ ಯಾವ ರಾಜನೂ ವಿಸ್ತರಿಸಿದ್ದಕ್ಕಿಂತ ಹೆಚ್ಚಾಗಿ ಮೇವಾಡದ ಗಡಿಗಳನ್ನು ವಿಸ್ತರಿಸಿದನು. ಸಾರಂಗಪುರ, ಗಾಗ್ರೊನ್, ನಾರಣ, ಅಜ್ಮೀರ್, ಮಂದೌರ್, ಮಂಡಲ್‌ಘರ್, ಖಟು, ಚತ್ಸು, ಅಬು, ರಣಥಂಬೂರ್ ಮತ್ತು ಇನ್ನಿತರ ನಗರ ಮತ್ತು ಕೋಟೆಗಳನ್ನು ವಶಪಡಿಸಿಕೊಂಡನು. ಅವನ ಮರಣಾನಂತರ ಅದರಲ್ಲಿ ಅನೇಕವು ಹಲವಾರು ಬಾರಿ ಒಡೆತನವನ್ನು ಬದಲಾಯಿಸಿವೆ. ಅವನು ಸದಾ ಕಾಲಿಗೆ ಚಕ್ರ ಕಟ್ಟಿಕೊಂಡಿರುತ್ತಿದ್ದನು. ಅವನ ಕೈಗಳು ಯಾವಾಗಲೂ ತುಂಬಿ ತುಳುಕುತ್ತಿದ್ದುವೆನಿಸುತ್ತದೆ. ಮೂವತ್ತೆರಡು ಕೋಟೆಗಳನ್ನು ಕಟ್ಟಲು ಆತನಿಗೆ ಅದು ಹೇಗೆ ಸಮಯ ಸಿಕ್ಕಿತೆಂದು ಕಲ್ಪಿಸಿಕೊಳ್ಳುವುದೂ ಕಷ್ಟ. ಈ ಹೊತ್ತಿಗೂ ವಿದೇಶೀ ಆಕ್ರಮಣದ ವಿರುದ್ಧ ರಕ್ಷಕ ಗೋಡೆಗಳ ನಿರ್ಮಾಣ ಮಾಡುವುದೆಂದರೆ ಆತನಿಗೆ ಇನ್ನಿಲ್ಲದ ಹುಚ್ಚು ಉತ್ಸಾಹವಿದ್ದಿರಬೇಕು. ದೇವಸ್ಥಾನಗಳನ್ನು ಕಟ್ಟಿಸಿದನು. ಅರಮನೆಗಳನ್ನು ನಿರ್ಮಿಸಿದನು. ವಿಜಯಸ್ತಂಭವನ್ನು ನಿರ್ಮಿಸಿದನು. ಭೂಗೋಳವೆಂದರೆ ವಿಶ್ವದ ಕಾಲಾತೀತ ವಾಸ್ತುಶಿಲ್ಪವೆಂದು ಅವನು ತಿಳಿದಿದ್ದನು. ಮಾನವ ಕಾಲವನ್ನು ಮೀರುವ ಒಂದೇ ಒಂದು ಮಾರ್ಗವೆಂದರೆ, ವಿನಾಶವಾಗದ ಕಟ್ಟಡಗಳನ್ನು ಹಿಂದೆ ಬಿಟ್ಟು ಹೋಗುವುದು. ತನ್ನ ನೆಚ್ಚಿನ ವಾಸ್ತುಶಿಲ್ಪಿಗಳಾದ ಜೈಟ ಮತ್ತು ಮಂದನ್ ಅವರೊಂದಿಗೆ ಬಹು ಸಮಯವನ್ನು ಕಳೆಯುತ್ತಿದ್ದನು. ತನ್ನ ಶತ್ರುಗಳು ಯಾರಾದರೂ ತನ್ನ ಬದುಕನ್ನು ಮೊಟಕುಗೊಳಿಸಬಹುದೆಂಬ ಸಂದೇಹ ಅವನಿಗಿತ್ತು. ಆದರೆ ತನ್ನ ನಗರಯೋಜಕರು ಚಿತ್ತೂರಿನ ಮುಂದಿನ ಪೀಳಿಗೆಯಲ್ಲಿ ತನಗೊಂದು ಸ್ಥಾನವನ್ನು ಖಂಡಿತವಾಗಿಯೂ ದೊರಕಿಸಿಕೊಡುತ್ತಾರೆಂದು ಭರವಸೆ ತಾಳಿದನು. ಅವನ ವಾಸ್ತುಶಿಲ್ಪಿಗಳು ಅವನ ಭರವಸೆಯನ್ನು ಹುಸಿಗೊಳಿಸಲಿಲ್ಲ. ನೀವಿಂದು ಚಿತ್ತೂರಿನಲ್ಲಿ ಓಡಾಡಿದರೆ ಅಲ್ಲಿ ನೀವು ರಾಣಾ ಕುಂಭನ ಮುಂಗಾಣ್ಕೆಯಲ್ಲಿ ಹೆಜ್ಜೆ ಇರಿಸುವಿರಿ.

ಅವನು ಚತುರ, ವಿವೇಕಿ ಮತ್ತು ತಾನೊಬ್ಬನೇ ಯಾವಾಗ ಹೊರಡಬೇಕೆಂಬುದನ್ನು ಚೆನ್ನಾಗಿ ತಿಳಿದಿದ್ದನು. ಅವನ ಉಳಿದೆಲ್ಲ ಸಾಧನೆಗಳನ್ನು ಯಶಸ್ಸುಗಳನ್ನು ಮರೆತರೂ ಅವನು ಇಲ್ಲೇ ಎಲ್ಲೋ ಸುತ್ತಾಡುತ್ತಾ ಇದ್ದಾನೆ ಎನ್ನುವುದೇ ನಾಡಿಗೆ ಸ್ಥಿರತೆ ಮತ್ತು ನಿರಂತರತೆಯನ್ನು ತಂದುಕೊಟ್ಟಿತು. ಚಿತ್ತೂರಿನ ಹಾಗೆ ವಿಶಾಲವಾಗಿ, ಎತ್ತರವಾಗಿ ಬೆಳೆದಿದ್ದನು. ಅಲ್ಲದೆ ಹೆಚ್ಚು ಕಡಮೆ ಅಜೇಯನಾಗಿದ್ದನು. ಅವನು ಹುಟ್ಟಿದಾಗಿನಿಂದ ಎಂದೂ ಖಾಯಿಲೆ ಬಿದ್ದಿರಲಿಲ್ಲ. ಮೂವತ್ತೈದು ವರ್ಷ ಸಿಂಹಾಸನದ ಮೇಲೆ ಕುಳಿತು ಆಳಿದನು. ಇನ್ನೂ ಮೂವತ್ತು ಮೂವತ್ತೈದು ವರ್ಷ ಆಳಬಹುದು ಅನ್ನುವಷ್ಟು ಆರೋಗ್ಯವಾಗಿದ್ದನು. ಅವನ ಮಗ ರಾಜಕುಮಾರ ಉದಾನ ಅತ್ಯಾಶೆ ಮತ್ತು ಅಸಹನೆ ಕೈಮೀರಿ ಹೋದಾಗ ಅವನು ತನ್ನ ತಂದೆಯನ್ನೇ ಕೊಂದು ಬಿಟ್ಟನು.

ಹತ್ಯಾರಾ ಸಿಂಹಾಸವನ್ನು ವಶಕ್ಕೆ ತೆಗೆದುಕೊಂಡಾಗ ಅದಿನ್ನೂ ಅಲುಗಾಡುವ ಸಿಂಹಾಸನವಾಗಿತ್ತು. ಹಾಗೂ ಅವನು ಕಿರೀಟ ಧರಿಸಿದ್ದು ಸುಲಭದಲ್ಲಂತೂ ಅಲ್ಲ. ರಾಜ್ಯಾಧಿಕಾರವನ್ನು ವಹಿಸಿಕೊಳ್ಳುವ ಪೂರ್ವದಲ್ಲಿ ಕೊಲೆಯಂಥ ಹೇಯ ಕೃತ್ಯಗಳು ನಡೆಯುವುದು ರಾಜಾಸ್ತಾನದಲ್ಲಿ ಗೊತ್ತಿಲ್ಲದೆ ಇದ್ದದ್ದೇನಲ್ಲ. ಆದರೆ ಉದಾನ ವಿರುದ್ಧ ಎಂಥ ಒಂದು ಪ್ರತಿರೋಧದ ಅಲೆ ಎದ್ದಿತೆಂದರೆ ಅವನಿಗೆ ತನ್ನ ಜನಗಳಿಂದಲೇ ಮತ್ತು ಊಳಿಗಮಾನ್ಯ ಪ್ರಭುಗಳಿಂದಲೇ ತಾನು ಬೆದರಿಕೆಗೊಳಗಾದಂತೆನಿಸಿತ್ತು. ರಾಜಕುಮಾರರು, ಮಹಾರಾವ್‌ಗಳು ಮತ್ತು ರಾವಲ್‌ಗಳ ಅನುಗ್ರಹ ಸಂಪಾದಿಸಲು ಕುಂಭನು ವಶಪಡಿಸಿಕೊಂಡಿದ್ದ ಪ್ರದೇಶಗಳನ್ನೆಲ್ಲಾ ಅದೆಷ್ಟು ವೇಗವಾಗಿ ಕಳಚಿಕೊಂಡು ತೊರೆದುಬಿಟ್ಟನೆಂದರೆ, ಮೇವಾಡವು ಬಹುಬೇಗನೆ ಮೂರನೇ ದರ್ಜೆಯ ಸಂಸ್ಥಾನದ ಗಾತ್ರಕ್ಕೆ ಕುಗ್ಗಿಬಿಟ್ಟಿತು. 'ಅಬು'ವನ್ನು ದಯೋರಾದ ರಾಜಕುಮಾರನಿಗೆ, ಹಿಂದಿರುಗಿಸಿದನು. ಮತ್ತು ಸಂಬೂರ್, ಅಜ್ಮೀರ್ ಹಾಗೂ ಅದರ ಅಕ್ಕಪಕ್ಕದ ಜಿಲ್ಲೆಗಳನ್ನು ಜೋಧ್‌ಪುರದ ಎಳೆಯ ಅನನುಭವಿ ರಾಜನಿಗೆ ಸ್ನೇಹದ ಬೆಲೆಯಾಗಿ ಕೊಟ್ಟುಬಿಟ್ಟನು. ಅವರುಗಳು ಇಡಿಯಾದ ಪ್ರಾಂತ್ಯಗಳನ್ನು ಲಂಚವಾಗಿ ಸಂತೋಷದಿಂದ ಸ್ವೀಕರಿಸಿದರು. ಆದರೆ ಸ್ವಯಂ ಅನಾಥನಾದ ದೊರೆಗೆ ತಮ್ಮ ನಿಷ್ಠೆಯನ್ನಾಗಲಿ, ಬೆಂಬಲವನ್ನಾಗಲಿ ನೀಡಲಿಲ್ಲ.

ನೀವು ಏಕಕಾಲಕ್ಕೆ ಅಸ್ವಾಭಾವಿಕವಾಗಿ ದುರಾಶಾಪೀಡಿತರೂ ಮೃದು ಹೃದಯಿಗಳೂ ಆಗಿರಲು ಸಾಧ್ಯವಿಲ್ಲ. ಉದಾ ಭಿನ್ನಾಭಿಪ್ರಾಯವನ್ನು ನಿರ್ದಯತೆಯಿಂದ ಕೊನೆಗಾಣಿಸಬೇಕಿತ್ತು. ಅವನೇನೋ ಉಗ್ರವೂ, ಮೃಗೀಯ ಹೇಡಿತನದ್ದೂ ಆದ ಕ್ರಮ ತೆಗೆದುಕೊಂಡಿದ್ದ. ಆದರೆ ಅವನಿಗೆ ಅದನ್ನು ಅತ್ಯಂತ ನಿರ್ದಯವಾಗಿ ಕೊನೆಮುಟ್ಟಿಸುವ ಛಾತಿ ಇರಲಿಲ್ಲ. ಪಶ್ಚಾತ್ತಾಪ ಒಂದು ಪ್ರಬಲವಾದ ಭ್ರಮೆ. ತನ್ನ ಸಾಮ್ರಾಜ್ಯದಲ್ಲೆಲ್ಲಾ ಅಪಾಯಗಳು ಮತ್ತು ಬಂಡಾಯಗಳು ತಲೆ ಎತ್ತುತ್ತಿರುವುದನ್ನು ಕಂಡನು. ಇದರಿಂದ ಅವನು ಎಷ್ಟರಮಟ್ಟಿಗೆ ಅಧೈರ್ಯಗೊಂಡನೆಂದರೆ ತಾನೇ ಖುದ್ದಾಗಿ ಹೋಗಿ ದೆಹಲಿ ಸುಲ್ತಾನನಿಗೆ ಅಡ್ಡಬಿದ್ದು ತನ್ನೆಲ್ಲ ಕೃತ್ಯ ಮತ್ತು ಅಧಿಕಾರಗಳಿಗೆ ಸುಲ್ತಾನನ ಮಂಜೂರಾತಿ ಪಡೆಯುವ ಸಲುವಾಗಿ ತನ್ನ ಮಗಳನ್ನು ಕೂಡಾ ಅವನಿಗೆ ಕೊಟ್ಟ, ರಾಜಕುಮಾರನಿಗೆ ಉದಾನ ಜೀವವನ್ನು ಕೊನೆಗಾಣಿಸಲು ಅಬ್ಬಬ್ಬಾ ಎಂದರೆ ಐದು ವರ್ಷ ಅಲ್ಲಿಂದಿಲ್ಲಿಗೆ ಅಲೆಯಬೇಕಾಯಿತು.

ಈಗ ಸ್ವಲ್ಪ ಬೇರೆ ವಿಷಯಕ್ಕೆ ಬರುತ್ತೇನೆ. ಆದರೆ ಧರ್ಮವಾಗಿ ಇರುವುದಕ್ಕೂ ಧೈರ್ಯಕ್ಕೂ ಅಥವಾ ಅಪೂರ್ವವಾದ ಸಾಹಸಕ್ಕೂ ಏನೇನೂ ಸಂಬಂಧವಿಲ್ಲ. ದುಷ್ಟ ಶಕ್ತಿಗಳು ಧರ್ಮದ ಶಕ್ತಿಗಳಷ್ಟೇ ಉತ್ಸಾಹ ಪೂರ್ಣವಾಗಿ ಅಥವಾ ಭಯಾನಕಾಗಿ ಸೆಣಸುತ್ತವೆ. ರಜಪೂತರಾದ ನಮ್ಮ ಅತ್ಯಪೂರ್ವವಾದ ಶೌರ್ಯ ಸಾಹಸಗಳ ಬಗ್ಗೆ ಜನರು ಅತ್ಯಂತ ಸೋಜಿಗವೆಂಬಂತೆ ಮಾತನಾಡುತ್ತಾರೆ. ಇದು ಸ್ವಯಂ ಸ್ಪಷ್ಟವಾಗೇ ಇರುವುದರ ಲೋಪಮಾಡಿದಂತೆ. ನಮ್ಮ ತಂದೆಯವರಾಗಲಿ, ನನ್ನ ಸೋದರರಾಗಲಿ, ನನ್ನ ಪೂರ್ವಜರಾಗಲಿ, ನಾನಾಗಲಿ, ನಮ್ಮ ನಾಡಿನ ಜನತೆಯಾಗಲಿ ತಮ್ಮನ್ನು ಮೀರಿಸಲಾರದಷ್ಟು ನಿರ್ಭೀತರು ಮತ್ತು ಶೂರರು ಎಂಬುದನ್ನು ಹೇಳಬೇಕಾಗಿಯೇ ಇಲ್ಲ. ಈ ಮಾತಿನಲ್ಲಿ ಅರ್ಥವಿದ್ದೀತು. ಆದರೆ ಆಶ್ಚರ್ಯ ಪಡುವಂಥದೇನಿಲ್ಲ. ಬಾಲ್ಯದಿಂದಲೇ ನಮ್ಮಲ್ಲಿ ಎಲ್ಲರೂ ವೈಯಕ್ತಿಕವಾಗಿ ಧೈರ್ಯಶಾಲಿಗಳು ಎಂಬುದು ಪೂರ್ವನಿಶ್ಚಿತವಾದ ವಿಷಯ. ಪೂರ್ವನಿಶ್ಚಿತವಾದ ವಿಷಯ ಎಂಬ ಮಾತನ್ನು ಉದ್ದೇಶ ಪೂರ್ವಕವಾಗಿಯೇ ಬಳಸಿದ್ದೇನೆ. ಮೇವಾಡದಲ್ಲಿ ಯಾರೂ ಮಕ್ಕಳ ಮನಸ್ಸನ್ನು ಪಲ್ಲಟಗೊಳಿಸುವುದಿಲ್ಲ. ಅಥವಾ ಧೈರ್ಯದ

ಪ್ರಾಮುಖ್ಯವನ್ನು ಒತ್ತುಕೊಟ್ಟು ಹೇಳುವುದಿಲ್ಲ. ಅದೆಲ್ಲ ಒಂದು ದಿನದ ಕೆಲಸ. ನಾನು ಹದಿನಾಲ್ಕು ವರ್ಷದವನಾಗಿದ್ದಾಗ ವಿಸ್ತಾರವಾದ ವೃತ್ತಾಕಾರದ ಮರದಿಂದ ನಿರ್ಮಿಸಿದ ಆವರಣದ ಒಂದು ತುದಿಯಲ್ಲಿ ನಿಂತಿದ್ದು ನೆನಪಿಗೆ ಬರುತ್ತಿದೆ. ಬಾಗಿಲನ್ನು ತೆರೆದು ಒಂದು ವಾರದಿಂದ ಹಸಿದು ಕಂಗೆಟ್ಟಿದ್ದ ಹುಲಿಯೊಂದನ್ನು ಒಳಗೆ ಬಿಡಲಾಯಿತು. ನಾನು ನಿರಾಯುಧನಾಗೇನೂ ಹುಲಿಯೊಂದಿಗೆ ಸೆಣಸಬೇಕಾಗಿರಲಿಲ್ಲ, ಉಕ್ಕಿನ ಕವಚ ತೊಟ್ಟಿದ್ದೆ. ತನ್ನ ಕೈಗಳಿಗೆ ದಪ್ಪನೆಯ ಮೆತ್ತೆಗಳನ್ನು ಅಳವಡಿಸಲಾಗಿತ್ತು. ನನ್ನ ಕೈಗಳಲ್ಲಿ ಬಿಲ್ಲು, ಬಾಣ, ಒಂದು ಕತ್ತಿ ಮತ್ತು ಗುರಾಣಿಗಳಿದ್ದವು.

ಹಸಿದ ಹುಲಿಯನ್ನು ನೀವು ಕಂಡಿದ್ದೀರಾ? ಅದು ಅತ್ಯಂತ ಚುರುಕಾದ, ಕ್ರೂರ ಪ್ರಾಣಿ. ಆದರೆ ನೆಟ್ಟ ದೃಷ್ಟಿ ಇಲ್ಲದ್ದು. ನಾನು ಅದಕ್ಕೆ ಒಂದು ವಾರದ ತಿಂಡಿಯೋ ಅಥವಾ ಊಟವೋ. ಹಾಗಾಗಿ ನನ್ನತ್ತ ನೇರವಾಗಿ ಧಾವಿಸಿತು. ನಾನು ಗುರಿ ಇಟ್ಟೆ; ತುಂಬ ಜತನದಿಂದೇನಲ್ಲ. ನಾನು ಹೆದರಿದ್ದೆ. ಒಂದು ಬಾಣ ಬಿಟ್ಟೆ. ಅದು ಅದರ ಹೃದಯವನ್ನೋ ಮೆದುಳನ್ನೋ ಭೇದಿಸಬೇಕಿತ್ತು. ಆದರೆ ಅದು ಅದರ ಪೃಷ್ಠವನ್ನು ಭೇದಿಸಿತು. ತನಗೆ ತಾಕಿದ್ದೇನು ಎಂದು ಪರೀಕ್ಷಿಸಲು ಹಾಗೂ ಅದನ್ನು ಕಿತ್ತುಹಾಕಲು ಸಾಧ್ಯವೇ ಎಂದು ನೋಡಲು ಅದು ಒಂದು ಸುತ್ತು ಪೂರ್ತಿ ತಿರುಗಿನೋಡಿತು. ನನ್ನ ಶಿಕ್ಷಕ ರಾವತ್ ಜಯಸಿಂಹಬಲೇಚ್ ಅವರು ತಮ್ಮ ಭರ್ಜಿಯನ್ನು ಇನ್ನೇನು ಎಸೆಯಬೇಕೆಂದಿದ್ದರು. ಅಷ್ಟು ಹೊತ್ತಿಗೆ ತಂದೆಯವರು ತಮ್ಮ ಕೈಬೀಸಿ ಅವರು ಎಸೆಯುವುದನ್ನು ತಪ್ಪಿಸಿದರು. ನನಗೆ ನೆಮ್ಮದಿಯಾಯಿತು. ನಾನು ನನ್ನ ಬತ್ತಳಿಕೆಯಿಂದ ಇನ್ನೊಂದು ಬಾಣವನ್ನು ಸೆಳೆದುಕೊಂಡೆ. ನೋವು, ಕೋಪ ಮತ್ತು ಹಸಿವಿನಿಂದ ಕೆರಳಿದ ಹುಲಿ ನನ್ನ ಕಡೆಗೆ ಧಾವಿಸತೊಡಗಿತು. ನಾನು ನನ್ನೆಲ್ಲಾ ಶರೀರದ ಭಾರವನ್ನು ನನ್ನ ಮಂಡಿಯ ಮೇಲೆ ಊರಿ, ಮೂವತ್ತು ಡಿಗ್ರಿ ಕೋನದಲ್ಲಿ ಬಾಣವನ್ನು ಬಿಟ್ಟೆ. ಅದು ಅದರ ಬಲಗಣ್ಣಿನ ಮೂಲಕ ಮೆದುಳಿಗೆ ನುಗ್ಗಿತ್ತು. ಅದು ಮೂರ್ಛೆ ಹೋಯಿತು. ಕಾಲುಗಳನ್ನು ರಭಸದಿಂದ ಒದರಿ ಎದ್ದಿತು. ಆದರೆ ಅದರ ಉಗ್ರತೆ ಕುಂದಿಹೋಗಿ ದೃಷ್ಟಿ ತೀರಾ ಹಾಳಾಗಿತ್ತು. ನಾನು ಕತ್ತಿಯನ್ನು ಕೈಗೆತ್ತಿಕೊಂಡು ಅದರ ಕುತ್ತಿಗೆಗೆ ಹೊಡೆದೆ. ತಂದೆಯವರು ಆ ಕಡೆಯಿಂದ ಹಾರಿ ಬಂದು ಅದರ ಕುತ್ತಿಗೆಯನ್ನು ಕತ್ತರಿಸಲು ನೆರವಾದರು.

"ಇದೀಗ ನೀನು ನಿಜವಾದ ಸಿಂಹ. ನಿನ್ನ ಹೆಸರಿಗೆ ತಕ್ಕಂತೆ"

ಅಲ್ಲಿಯವರೆಗೂ ನನ್ನ ಹೆಸರಿನಲ್ಲಿರುವ ಸಿಂಹ ಹಾಗೂ ಎಲ್ಲ ರಜಪೂತರ ಹೆಸರಿನಲ್ಲಿರುವ 'ಸಿಂಹ' ಎಂಬುದು ನಾನು ಮತ್ತು ನನ್ನ ಜನರೆಲ್ಲರೂ ಸಿಂಹಗಳೆಂದು ಸೂಚಿಸುತ್ತಿದೆ ಎಂಬುದು ನನಗೆ ಹೊಳೆದೇ ಇರಲಿಲ್ಲ.

ಸಂದೇಹ, ಭಯ ಮತ್ತು ಹಿಮ್ಮೆಟ್ಟುವ ಆಯ್ಕೆಗಳನ್ನು ಯೋಚಿಸುವುದೂ ಸಾಧ್ಯವಿಲ್ಲ. ಕಾರಣ ನಮ್ಮ ಮನಸ್ಸಿನ ಈ ಭಾಗಗಳನ್ನು ಪೂರ್ತಿಯಾಗಿ ಮೊಹರು ಹಾಕಿ ಮುಚ್ಚಲಾಗಿದೆ. ನಮ್ಮ ಶೌರ್ಯದಲ್ಲಿ ತಾರತಮ್ಯವಾಗಲಿ, ಒಪ್ಪಿಗೆಯಾಗಲಿ ಇಲ್ಲ, ಅದು ಕುರುಡುತನದ್ದು, ದುಡುಕಿನದು ಹಾಗೂ ದೃಢವಾದ್ದು, ಕಾರಣ ಪರಸ್ಪರ ಎದುರಾದಾಗ ಬೇರಿನ್ನಾವುದೇ ರೀತಿಯಲ್ಲಿ ಪ್ರತಿಕ್ರಿಯಿಸುವುದು ನಮಗೆ ತಿಳಿದಿಲ್ಲ.

ಉದಾನ ಕಥೆ ತಡೆಯಿಲ್ಲದ ದುರಾಶೆಯನ್ನು ಕುರಿತ ನಿರ್ದಯ ವ್ಯಾಖ್ಯಾನವಾದರೆ, ಅವನ ಸೋದರ ಮತ್ತು ಉತ್ತರಾಧಿಕಾರಿ ಎನ್ನಿಸಿದ ರಾಣಾ ರೈಮಲ್‌ನ ಮೂರು ಜನ ಹಿರಿಯ ಮಕ್ಕಳು ಇದರಿಂದೇನೂ ಪಾಠ ಕಲಿತಂತೆ ಕಾಣಲಿಲ್ಲ. ತಮ್ಮ ತಂದೆ ಇನ್ನೂ ಚಿಕ್ಕ ವಯಸ್ಸಿವನನಾಗಿದ್ದು, ಆತನಿಗೆ ತನ್ನ ಇಂದ್ರಿಯಗಳ ಮೇಲಿನ ಹತೋಟಿ ಇನ್ನೂ

ಪೂರ್ತಿ ಚೆನ್ನಾಗಿರುವಾಗಲೇ ಸಿಂಹಾಸನದ ಉತ್ತರಾಧಿಕಾರಿ ಯಾರಾಗುತ್ತಾರೆಂದು ಕಂಡುಕೊಳ್ಳಲು ಅವರು ತೋರುವ ಅಸಹ್ಯ ಆತುರವೆನ್ನುವುದು ಮೇವಾಡದ ರಾಜಮನೆತನದ ಮುಂದಿನ ಪೀಳಿಗೆಯನ್ನು ನಾಶ ಮಾಡುವ ಶಾಪವಾಯಿತು.

ನನ್ನ ತಾತ ರಾಣಾ ರೈಮಲ್ಲನಿಗೆ ಹನ್ನೊಂದು ರಾಣಿಯರಿಂದ ಹದಿನಾಲ್ಕು ಜನ ಗಂಡು ಮಕ್ಕಳು ಮತ್ತು ಎರಡು ಹೆಣ್ಣು ಮಕ್ಕಳಿದ್ದರು. ಹಿರಿಯ ಮಗನಾದ ಪೃಥ್ವೀರಾಜ ಮತ್ತು ಮೂರನೇ ಮಗನಾದ ಸಂಗ್ರಾಮಸಿಂಹ (ನಂತರ ಸಂಗ ಎಂದು ಹೆಸರಾದವನು) ಝಾಲಿ ರಾಜಕುಮಾರಿ ರತನ್ ಝಾಲಿ ಕನ್ವರ್‌ಳ ಮಕ್ಕಳು. ಇನ್ನೊಬ್ಬ ರಾಣಿಯ ಎರಡನೆಯ ಮಗನ ಹೆಸರು ಜೈಮಲ್ ಎಂದು. ಈ ಕಳಂಕಿತ ವ್ಯಕ್ತಿಗಳ ಸಾಲಿಗೆ ಸೇರಬೇಕಾದ ಇನ್ನೊಂದು ವ್ಯಕ್ತಿ ಸೂರಜ್‌ಮಲ್. ಇವನು ಕಿರಿಯ ರಾಜಕುಮಾರನ ಸೋದರಮಾವ. ಈ ಮನುಷ್ಯನದು ಕುಟಿಲ ಕಾರಾಸ್ಥಾನ ಪ್ರತಿಭೆ. ಬೇರೆಯವರ ಭಾವನೆಗಳನ್ನು ಕೆರಳಿಸಬಲ್ಲಂತ ಪ್ರತಿಭೆವುಳ್ಳವನು. ಅವನ ಗುರಿ ಸಾಧನೆಯ ಅಪೇಕ್ಷೆ ಮೇವಾಡದ ಸಿಂಹಾಸನವನ್ನೂ ಬಿಡಲಿಲ್ಲ. ಉಳಿದೆಲ್ಲವನ್ನು ಹಿಂದೆ ಹಾಕಿ ರಾಜನು ಯಾರಾಗುತ್ತಾರೆಂಬ ಪ್ರಶ್ನೆಯೇ ಮೇಲುಗೈ ಸಾಧಿಸಿತು. ಹಾಗೂ ಅದು ರಾಜಕುಮಾರರೆಲ್ಲರ ಮನಸ್ಸುಗಳನ್ನು ಮುಂಚೆಯೇ ಆಕ್ರಮಿಸಿಕೊಂಡು ಬಿಟ್ಟಿತ್ತು. ಇಷ್ಟಾದರೂ ಯಾರೊಬ್ಬರಿಗೂ ತಮ್ಮ ಮನಸ್ಸಿನಾಳದ ಆಲೋಚನೆಗಳನ್ನು ಬಹಿರಂಗವಾಗಿ ಹೇಳುವ ಧೈರ್ಯವಿರಲಿಲ್ಲ. ಕೊನೆಗೊಂದು ದಿನ ಸೂರಜ್‌ಮಲ್ ಹೇಳಿದ: "ಬಿಲ್ಗಾರಿಕೆಗೆ ಯಾರು ಬಹುಮಾನಗಳಿಸುವಿರಿ? ಉಸ್ತುವಾರಿ ನೋಡಿಕೊಳ್ಳುವ ದಾದಿ ಅನುಪಮ ಸುಂದರಿ ಸತ್ಯಕನ್ವರ್‌ಳ ಮಕ್ಕಳನ್ನು ಕಸಿದುಕೊಳ್ಳುವವರು ಯಾರು? ಮತ್ತು ಅವಳ ಜೊತೆ ಮಲಗುವವರು ಯಾರು? ನಾಳಿನ ಆನೆಗಳ ಕಾಳಗದಲ್ಲಿ ಯಾರ ಆನೆ ಇನ್ಯಾರ ಆನೆಗಳ ಭರವಸೆಯನ್ನು ನುಚ್ಚು ನೂರು ಮಾಡೀತು? ದೇವರ ಹೆಸರಿನಲ್ಲಿ ಇವುಗಳಲ್ಲಿ ಯಾವುದರ ಫಲಿತಾಂಶದ ಬಗ್ಗೆಯಾದರೂ ಹಿಡಿ ಶಾಪ ಹಾಕುವವರು ಯಾರು? ತುಂಬ ಗಾಬರಿಗೊಂಡವನ ಹಾಗೆ ತೋರಿಸಿಕೊಳ್ಳಬೇಡ ಸಂಗ್ರಾಮ್. ನಿನ್ನ ಎಚ್ಚರದ ಮತ್ತು ಕನಸಿನ ವೇಳೆಗಳಲ್ಲಿ ನಿನ್ನ ಜೊತೆಗೊಡುವ ಏಕಮಾತ್ರ ಪ್ರಶ್ನೆ ಇದೆ."

ರಾಜಕುಮಾರರು ದೂರಕ್ಕೆ ನೋಡುತ್ತಿದ್ದರು. ಅವರ ಪೈಕಿ ಹಿಂದು ಮುಂದು ನೋಡದ ಆವೇಶ ಸ್ವಭಾವದ ಪೃಥ್ವಿರಾಜನಿಗೆ ತನ್ನ ನಾಲಗೆಯ ಮೇಲೆ ಹತೋಟಿಯಾಗಲಿ ತನ್ನ ಕತ್ತಿಯ ಮೇಲೆ ಹಿಡಿತವಾಗಲಿ ಇರಲಿಲ್ಲ. ತನ್ನ ಮಾವನ ಕಡೆ ಉದ್ಧಟತನದ ನೋಟದಿಂದ ನೋಡುತ್ತ ಕೇಳಿದ – "ಯಾವ ಪ್ರಶ್ನೆ ಅದು"?

"ಅದೊಂದು ಸರಳ ಪ್ರಶ್ನೆ. ನಿಮ್ಮ ತಂದೆ ಮೃತಿ ಹೊಂದಿದ ಸಂದರ್ಭದಲ್ಲಿ ರಾಜರು ಯಾರಾಗುತ್ತಾರೆ?"

ನಿಷಿದ್ಧವೂ, ಅಪವಿತ್ರವೂ ಆದ ಶಬ್ದಗಳನ್ನು ಹೇಳಿ ಆಗಿತ್ತು. ಭೂಮಿ ಬಾಯಿ ಬಿಟ್ಟಿರಲಿಲ್ಲ. ಅವರ ಮಾವನಿಗೆ ಸಿಡಿಲು ಬಡಿದಿರಲಿಲ್ಲ. ಮೂವರು ರಾಜಕುಮಾರರ ಶಿರಸ್ಸುಗಳು ಇನ್ನೂ ಮುಂಡದ ಮೇಲೇ ಇದ್ದುವು.

"ನಿಮ್ಮ ಹತ್ತಿರ ಏನಾದರೂ ಉತ್ತರವಿದೆಯೆ?" – ಪೃಥ್ವಿರಾಜ್ ಇನ್ನೂ ಮಾತಾಡುತ್ತಲೇ ಇದ್ದ. – "ಕಾರಣ ಹಕ್ಕಿನ ಪ್ರಕಾರ ಅದು ನನ್ನದು. ಬೇರಿನ್ನಾರದ್ದೂ ಅಲ್ಲ"

"ಹೌದು ಕಾನೂನಿನ ಪ್ರಕಾರ. ಎಷ್ಟಾದರೂ ನೀನು ನಿಮ್ಮ ಕುಟುಂಬದಲ್ಲಿ ಮೊದಲು ಹುಟ್ಟಿದ ಪುತ್ರಸಂತಾನ. ಆದರೆ ಯಾರಿಗೆ ಗೊತ್ತು – ನೀನು ಜ್ವರದಿಂದ ಸಾಯಬಹುದು.

ನಿಮ್ಮ ತಂದೆ ನಿನ್ನನ್ನು ಗಡೀಪಾರು ಮಾಡಬಹುದು. ಅಥವಾ ನಿನಗೆ ಮರಣಾಂತಿಕ ಆಘಾತವಾಗಬಹುದು. ಅಥವಾ ನಿನ್ನ ತಮ್ಮಂದಿರಲ್ಲಿ ನಿನ್ನನ್ನು ಅತಿಯಾಗಿ ತಾರತಮ್ಯವೆಣಿಸದೆ ಪ್ರೀತಿಸುವವನೊಬ್ಬ ನಿನ್ನ ಕೊಲೆ ಮಾಡಿಸುವ ಸಾಧ್ಯತೆ ಸದಾ ಇದ್ದೇ ಇರುತ್ತದೆ"

"ನಾನು ಕೇಳಿದ್ದು ನಿನ್ನ ಹತ್ತಿರ ಏನಾದರೂ ಉತ್ತರವಿದೆಯೆ ಅಂತ? ಈ ಕಾಯಿಲೆ ಮತ್ತು ಅಪಘಾತಗಳ ಬಗ್ಗೆ ಇಂಥ ಹುಚ್ಚು ಬಡಬಡಿಕೆ ಅಲ್ಲ."

"ಅದೊಂದು ಹಾಳು ನಾಚಿಕೆಗೇಡಿನ ವಿಷಯ. ನಿಜ ತಾನೆ? ಕಾಲನೊಬ್ಬನೇ ಇದನ್ನು ಬಲ್ಲನು. ಸರಿಯಾಗಿ ಗಳಿಗೆ ಕೂಡಿ ಬಂದಿದೆ ಎಂದು ಅವನಿಗೆ ಅನ್ನಿಸದ ಹೊರತು ತನ್ನ ಗುಟ್ಟನ್ನು ಅವನು ಯಾರಿಗೂ ಬಿಟ್ಟು ಕೊಡುವುದಿಲ್ಲ."

ಯುವ ರಾಜಕುಮಾರರು ತಮ್ಮ ಸೋದರಮಾವನ ಕಡೆ ಅತ್ಯಂತ ತಿರಸ್ಕಾರದಿಂದ ನೋಡಿದರು. ಅವನೊಬ್ಬ ನಾರದ ಮುನಿಯೇ ಹೊರತು ಬೇರೆ ಅಲ್ಲ. ಅವನು ಹೆಸರಿಸಬಾರದ್ದನ್ನು ಹೆಸರಿಸಿದ್ದನು. ಹೇಳಬಾರದ್ದನ್ನು ಹೇಳಿದ್ದನು. ಎಲ್ಲರ ಕೂತುಹಲವನ್ನು ಕೆರಳಿಸಿದ ಮೇಲೆ ಎಲ್ಲರನ್ನೂ ಆತಂಕದ ತುದಿಯಲ್ಲಿ ನಿಲ್ಲಿಸಿದ್ದನು.

"ಎಂಥಾ ಅಮೂಲ್ಯವಾದ ಮಾತುಗಳು! ಎಂಥ ವಿವೇಕದ ತಿರುಳು. ಮಾವ ನಿಮ್ಮ ವೇದಾಂತದ ಉಪದೇಶಗಳಿಂದ ನಮ್ಮನ್ನು ಪಾರು ಮಾಡಿ ಸಾಕು" – ಎಂದು ಜೈಮಲ್ ಕುಗ್ಗಿದ ದನಿಯಲ್ಲಿ ಮಾತಾಡಿದನು. ಆ ಮೂರೂ ಜನ ಮುಖ ತಿರುಗಿಸಿ ಇನ್ನೇನು ಹೊರಡುವುದರಲ್ಲಿದ್ದರು.

'ಇಲ್ಲಿದೆ'... ಅವರ ಮಾವನ ದನಿ ಮೆದುವೂ ನಿಧಾನವೂ ಆಗಿತ್ತು. "ಇಲ್ಲಿ ಇನ್ನೊಂದು ದಾರಿ ಇದೆ"

"ನಿಮಗೆ ಒಳ್ಳೆದಾಗಲಿ... ಅದನ್ನು ನೀವೇ ಇಟ್ಟುಕೊಳ್ಳಿ" ಪೃಥ್ವಿರಾಜ್ ಹೇಳಿದ – "ನನಗೆ ನಿಮ್ಮ ಈ ಬಾಲಿಶ ಆಟಗಳಲ್ಲಿ ಆಸಕ್ತಿ ಇಲ್ಲ"

"ಒಳ್ಳೇದು ಹಾಗಾದರೆ. ಜೈಮಲ್ ಮತ್ತು ಸಂಗ್ರಾಮ್ ಜೊತೆ ನಹಾರ್ ಮಾರ್ಗದಲ್ಲಿರುವ ಚಾರಣಿದೇವಿಯ ಪೂಜಾರಿಯ ಹತ್ತಿರ ನಾನು ಹೋಗುತ್ತಿದ್ದೀನಿ"

ಆ ಯೋಚನೆಯ ಧಾರ್ಷ್ಟ್ಯ ಆಶ್ಚರ್ಯಗೊಳಿಸುವಂಥದು. ಇಲ್ಲ, ಅದು ಅದಕ್ಕಿಂತ ಹೆಚ್ಚಿನದು. ಅದು ಅತ್ಯಂತ ಭಯಂಕರ ಯೋಚನೆ ಆಗಿತ್ತು. ನಿಮ್ಮ ರಕ್ತ ನಾಳದ ರಕ್ತವನ್ನು ಹೆಪ್ಪುಗಟ್ಟಿಸುವಂಥದು. ನಿಮ್ಮ ಹೊಟ್ಟೆಯನ್ನು ತಿರುಚಿ ಒಂದು ಶಬ್ದವನ್ನೂ ಉಚ್ಚರಿಸದಷ್ಟು ಮಟ್ಟಿಗೆ ನಿಮ್ಮ ನಾಲಗೆಯನ್ನು ದಪ್ಪವಾಗಿಸಿಬಿಟ್ಟಿದೆ. ರಾಜಕುಮಾರರ ಹೃದಯಗಳಲ್ಲಿ ಭಯ ಇತ್ತು. ಕಾರಣ ನೀವು ಚಾರಣಿ ದೇವಿಯ ಹೆಸರನ್ನು ಹಗುರವಾಗಿ ಉಚ್ಚರಿಸಲಿಲ್ಲ ಮತ್ತು ಅದನ್ನು ಸುಮ್ಮ ಸುಮ್ಮನೆ ಹೇಳಿದ್ದಲ್ಲ. ಅವರು ಹುಲಿಯ ಸವಾರಿಯೆನಿಸಿದ ನಹಾರ್ ಮಾರ್ಗಕ್ಕೆ ಹೊರಟರು. ಆದರೆ ಕೆಚ್ಚೆದೆಯ ಪೃಥ್ವಿರಾಜನೂ ಮನೆಗೆ ಹಿಂದಿರುಗಿ ಬಿಡುತ್ತಿದ್ದ. ತಮ್ಮ ದೇಹಕ್ಕೆ ಎಂಥದೇ ಗಂಡಾಂತರ ಬರಲಿ ಬೇರೆಯವರು ಭವಿಷ್ಯದ ಹೃದಯದಲ್ಲಿ ಅಡಗಿರುವ ರಹಸ್ಯವನ್ನು ಭೇದಿಸಿ ಬಿಡುತ್ತಾರೆಂಬ ಭಯವೇ ಅವರನ್ನು ಅಲ್ಲಿಗೆ ಹೋಗುವಂತೆ ಮಾಡಿತ್ತು.

ದೇವಿಯ ಬಗ್ಗೆ ಅನೇಕ ದಂತಕಥೆಗಳು ಇದ್ದವು. ಅಂಥ ಒಂದು ಕಥೆಯನ್ನು ನಾನು ಮಗುವಾಗಿದ್ದಾಗ ಕೌಸಲ್ಯ ಹೇಳಿದ್ದಳು. ಕಾಲಕ್ಕೆ ಅತ್ಯಂತ ಉಲ್ಬಣಾವಸ್ಥೆಗೆ ಬಂದ ಸ್ವಪ್ರತಿಷ್ಠೆಯ ಖಾಯಿಲೆ ಹಿಡಿದಿತ್ತು. ಕಾಲವೇ ಎಲ್ಲದರ ಎಲ್ಲೆಕಟ್ಟು. ಎಲ್ಲ ಸಂಗತಿಗಳು ಆ ಲಿಪಿಗಳ

ನಡುವೆಯೇ ಘಟಿಸಬೇಕು. ದೈತ್ಯರು, ದೇವತೆಗಳು, ಆಕಾಶ ವಿಶ್ವ ಎಲ್ಲವೂ ಕಾಲಬದ್ಧ. ಯಾವುದೊಂದಕ್ಕೂ, ಶೂನ್ಯಕ್ಕೆ ಕೂಡ ಕಾಲದ ಮಿತಿಯನ್ನು ಮೀರಿದ ಅಸ್ತಿತ್ವವಿಲ್ಲ. ಹಾಗಾಗಿ ಕಾಲ ತಾನೇ ಎಲ್ಲದರ ಕಾರಣ ಮತ್ತು ಪರಿಣಾಮ, ತಾನೇ ಜನ್ಯ ಮತ್ತು ಜನಕ, ತಾನೇ ಎಲ್ಲದರ ಪ್ರಾರಂಭ ಮತ್ತು ಮುಕ್ತಾಯ ಎಂದು ತಿಳಿದಿದ್ದರಲ್ಲೇನೋ ಆಶ್ಚರ್ಯವಿಲ್ಲ. ಕಾಲನಿಗೆ ಉಂಟಾಗಿದ್ದು, ಕೇವಲ ಮಹೋನ್ನತಿಯ ಭ್ರಮೆ ಅಲ್ಲ. ತಾನೇ ಸರ್ವಜ್ಞ, ಸರ್ವಾಂತರ್ಯಾಮಿ ಮತ್ತು ಸರ್ವಶಕ್ತ ಎಂದು ಅಂದುಕೊಂಡಿದ್ದದ್ದು ಆಗಿಬಿಟ್ಟಿರುವಂತೆ ತೋರುತ್ತಿತ್ತು.

ತ್ರಿಮೂರ್ತಿಗಳನ್ನೂ ಒಳಗೊಂಡಂತೆ ದೇವಾನುದೇವತೆಗಳೆಲ್ಲರೂ ಅನೇಕ ವಿಷಮ ಪರಿಸ್ಥಿತಿಗಳನ್ನು ಕಂಡಿದ್ದರು. ಅನೇಕ ವೇಳೆ ಸೋಲಿನ ಅಥವಾ ವಿನಾಶದ ಅಂಚಿಗೆ ತಲುಪಿಬಿಟ್ಟಿದ್ದರು. ಆದರೂ ಆ ಎಲ್ಲಾ ಸಮಯದಲ್ಲೂ ಕೊನೇ ಗಳಿಗೆಯಲ್ಲಿ ಪ್ರತಿಭಾ ಶಕ್ತಿಯಿಂದಲೋ ಕುತಂತ್ರದಿಂದಲೋ, ಮೋಸದಿಂದಲೋ ಅಥವಾ ಶಕ್ತಿಯ ಚಾತುರ್ಯದಿಂದಲೋ ಅವ್ಯವಸ್ಥೆಯ ಅಂಚಿನಿಂದ ಹಿಂದೆ ಸರಿದು ಯಶಸ್ಸು ಕಂಡಿದ್ದರು. ಆಗೆಲ್ಲ ಕಾಲ ಅವರ ಕಡೆ ಇತ್ತು. ಈಗ ಅದೆಲ್ಲ ಸ್ವಲ್ಪ ವ್ಯತ್ಯಾಸವಾಯಿತು. ಅವರು ವಿಶ್ವಾಸ ಮತ್ತು ಸಮಾಧಾನವನ್ನು ಕಾಲದ ಬಳಿಗೆ ರಾಯಭಾರಿಗಳಾಗಿ ಕಳುಹಿಸಿದರು. ಸಮರ ಸಭೆಗಳನ್ನು ನಡೆಸಿದರು. ಒಳಸಂಚು ಮಾಡಿದರು. ಹಾಗೂ ಎರಡರಷ್ಟು, ಮೂರರಷ್ಟು, ನಾಲ್ಕರಷ್ಟು ಬಾಧೆಗಳನ್ನು ಉಂಟು ಮಾಡುವ ಬಗ್ಗೆ ಕೂಡಾ ಯೋಚಿಸಿದರು. ಅವರ ಬಳಿ, ವೇಷಗಳ, ಕೈಚಳಕಗಳ, ಲಂಚಗಳ, ದ್ರೋಹಗಳ, ವಂಚನೆಗಳ ಒಂದು ದೊಡ್ಡ ಭಂಡಾರವೇ ಇತ್ತು. ಕಾಲವು ಇವರು ಒಡ್ಡುವ ಗಾಳಕ್ಕೆ ಬಲಿಯಾಗಬಹುದು ಅಥವಾ ಇನ್ನೂ ದೀರ್ಘ ಕಾಲ ಅವನು ಬದುಕಲೂಬಹುದು. ಅವರು ಅವನಿಗೆ ಅಮಿಷ ಒಡ್ಡಿ ದಾರಿ ತಪ್ಪಿಸಬೇಕು. ಅವರು ಅವನ ಸ್ವಪ್ನಗಳನ್ನು ಕಾಮಪ್ರಚೋದಕವಾಗುವಂತೆ ಮಾಡಿದರು. ಅವನ ಕಾಮ ಭಾವನೆಗಳು ಉದ್ರಿಕ್ತಗೊಂಡಾಗ ಅವರು ಅಪ್ಸರೆಯರನ್ನು ಹಾಗೂ ಮೋಹಿನಿ ವೇಷದಲ್ಲಿ ವಿಷ್ಣುವನ್ನು ಅವನ ಬಳಿಗೆ ಕಳುಹಿಸಿದರು.

ಎಲ್ಲವೂ ನಿಷ್ಫಲವಾಯಿತು. ಎಲ್ಲಾ ರೀತಿಯ ಮಾನಸಿಕ, ಶಾರೀಕ ಯಾತನೆಗಳು ಮತ್ತು ವಿಪತ್ತುಗಳ ನಂತರವೂ ಬದುಕುಳಿದಿದ್ದ ದೇವತೆಗಳ ಸತ್ಯದ ಮೂಹೂರ್ತ ಸಮೀಪದಲ್ಲಿತ್ತು. ಕಾಲ ಇನ್ನೇನು ಮೂರು ಲೋಕಗಳನ್ನೂ ತನ್ನ ಗರ್ಭದಲ್ಲಿ ಸೇರಿಸಿ ಬಿಡುವುದರಲ್ಲಿದ್ದ. ಅಷ್ಟರಲ್ಲಿ ಚಾರಣಿ ದೇವಿ ಧಾವಿಸಿ ಬಂದಳು. ಕಾಲದ ಲಕ್ಷಾಂತರ ಎಳೆಗಳನ್ನು ಇಲ್ಲಿ, ಅಲ್ಲಿ, ಮೇಲೆ, ಕೆಳಗೆ, ಮುಂದೆ, ಆ ಕಡೆ, ಈ ಕಡೆ ಎಲ್ಲಾ ಕಡೆಗಳಿಂದಲೂ ಸಂಚಯಿಸುತ್ತಿದ್ದಳು. ಅವಳು ಎಡಕ್ಕಾಗಲಿ ಬಲಕ್ಕಾಗಲಿ ನೋಡಲಿಲ್ಲ. ಅವಳ ಕೈಗಳು ಚಾಚಿಕೊಂಡವು. ಚಿಕ್ಕದಾಗಿ ತೋರಿದ ಅವಳ ಬೆರಳುಗಳು ಇಳಿಬಿಟ್ಟ ತುದಿಗಳನ್ನು ಹಾಗೂ ಹರಿಗಡಿಯದ ದಾರಗಳನ್ನು, ಇತಿಹಾಸ ಪೂರ್ವದ, ಭಾವಿ ಇತಿಹಾಸದ ಹಾಗೂ ಏಕಕಾಲಿಕ ವರ್ತಮಾನದ ಅರ್ಥಾತ್ ಬಾಹ್ಯಾಕಾಶದ ಎಲ್ಲ ಬಿಂದುಗಳಿಂದ ವರ್ಧಿಸಲ್ಪಟ್ಟ ಅದೇ ಕ್ಷಣದ – ಎಳೆಗಳನ್ನು ಎತ್ತಿಕೊಂಡವು. ಅವಳು ತನ್ನ ಬೆರಳುಗಳ ತುದಿಗೆ ಅಂಟು ಸವರಿಕೊಂಡಿದ್ದಿರಬೇಕು. ಕಾರಣ ಎಳೆ ಎಳೆಯಾಗಿ ಕಿತ್ತುಹೋಗಿ ಅಸ್ತವ್ಯಸ್ತವಾಗಿ ಚದುರಿ ಹೋದ ಯಾವುದೇ ಎಳೆಯೂ ತಪ್ಪಿಸಿಕೊಳ್ಳಲಿಲ್ಲ. ಅವುಗಳನ್ನೆಲ್ಲ ಹೇಗೆಂದರೆ ಹಾಗೆ ಒಟ್ಟು ಜಮಾಯಿಸಿದಳು. ಅದಕ್ಕೆ ಒಂದು ಮೊದಲಿಲ್ಲ, ಕೊನೆಯಿಲ್ಲ, ಮಧ್ಯವಿಲ್ಲ, ಒಂದು ಕ್ರಮವಿಲ್ಲ ಕೇವಲ ವಿಶ್ವದ ಗಾತ್ರದ ಒಂದು ದೊಡ್ಡ ಚೆಂಡಿನಾಕೃತಿಯದು. ಅನಂತರ ದೇವಿಯು ತನ್ನ ಬಾಯಿ ತೆರೆದು ಅದೆಲ್ಲವನ್ನು ಒಂದೇ ಸಲಕ್ಕೆ ನುಂಗಿ ನೊಣೆದಳು.

ಈ ಮಹಾನ್ ವಿಜಯವನ್ನು ಅತ್ಯಂತ ವೈಭವಯುತವಾಗಿ ಸಂತಸದಿಂದ ಇನ್ನೇನು ಆಚರಿಸಬೇಕು ಎನ್ನುವ ಹೊತ್ತಿಗೆ, ದೇವತೆಗಳಿಗೆ ತಾವು ಜಾಣತನದಿಂದ ಒಂದು ಅಪಾಯದಿಂದ ತಪ್ಪಿಸಿಕೊಂಡು ಅದಕ್ಕಿಂತಲೂ ಹೆಚ್ಚು ವಿನಾಶಕರವಾದ ಇನ್ನೊಂದರ ಬಲಿಪಶುಗಳಾಗುತ್ತಿದ್ದೇವೆಂದು ಅರ್ಥವಾಯಿತು. ಕಾಲ ಸತ್ತು ನಿಂತಿತ್ತು. ಹಾಗೆಯೇ ಉಳಿದೆಲ್ಲವೂ. ಕಾರಣ ಬದುಕು ನಮಗೆಲ್ಲ ತಿಳಿದಿರುವ ಹಾಗೆ ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಸ್ಪಷ್ಟವೂ ಅಸ್ಥಿರವೂ ಆದ ವಿಭಾಗಗಳಿಂದ ಕೂಡಿದ ಕಾಲದ ಅಕ್ಷದ ಮೇಲೆ ಸಂಭವಿಸುವಂಥದು. ಚಾರಣಿ ದೇವಿಯ ಉದರದಲ್ಲಿ ಕಾಲನು ಗೋಜಲು ಮನಸ್ಸಿನವಾಗಿ ಗೊಂದಲಗೊಂಡು ಕುಳಿತಿರಲು ಬದುಕು ಮುಕ್ತಾಯವಾಗುತ್ತದೆ.

ದೇವತೆಗಳೆಲ್ಲಾ ಮತ್ತೆ ಒಟ್ಟು ಸೇರಿದರು. ಚಾರಣಿ ದೇವಿಯ ಒಪ್ಪಿಗೆ ಪಡೆದು ಅವಳ ಉದರವನ್ನು ಬಗೆದು ಕಾಲವನ್ನು ಹೊರಹೊರಡಿಸಬಹುದು. ಆದರೆ ಅದು ಅವರನ್ನು ಮೊದಲಿದ್ದಲ್ಲಿಗೇ ತಂದು ಬಿಡುತ್ತದೆ. ಅಥವಾ ಅದಕ್ಕಿಂತ ಕೆಟ್ಟದ್ದು ಆಗಬಹುದು. ಕಾರಣ ತನ್ನನ್ನು ಬಿಟ್ಟರೆ ದೇವತೆಗಳಿಗೆ ಬೇರೆ ವಿಧಿ ಇಲ್ಲ ಎಂದು ಕಾಲನಿಗೆ ಗೊತ್ತಾಗುತ್ತದೆ. ಇನ್ನೂ ಒಂದು ಪರಿಹಾರವಿದೆ. ಅದನ್ನು ಯೋಚಿಸಲೂ ಸಾಧ್ಯವಿಲ್ಲದಂಥದು. ಏಕೆಂದರೆ, ಚಾರಣಿ ದೇವಿಯ ಸಮೀಪಕ್ಕೆ ಹೋಗಲು ಯಾರ್‍ಯಾರಿಗೂ, ಬ್ರಹ್ಮನಿಗೆ ಕೂಡ ಸಾಧ್ಯವಿಲ್ಲ. ಆ ದೇವಿಯು ಇದೀಗ ತಾನೆ ಅಸಾಧ್ಯವಾದದ್ದನ್ನು ಮಾಡಿದ್ದಳು. ಅವಳು ಮಾಡಿದ ಕಾರ್ಯದಿಂದ ವಿಶ್ವದ ರಕ್ಷಣೆಯಾಯಿತು. ಇದೀಗ ಇನ್ನೂ ಒಂದು ಅಸಾಧ್ಯವಾದುದನ್ನು ದೇವಿ ಮಾಡಬೇಕೆಂಬುದು ಅವರ ನಿರೀಕ್ಷೆಯಾಗಿತ್ತು. ಅದು ಅವಳನ್ನು ಶಾಶ್ವತವಾಗಿ ನಿದ್ರೆಯಿಂದ ವಂಚಿತಳನ್ನಾಗಿ ಮಾಡುವಂಥದು. ಅದು ಎಂದಿಗೂ ಯಾವತ್ತೂ ಮುಗಿಯದಂಥದು. ಜಗತ್ತಿನಲ್ಲಿ ಅತ್ಯಂತ ಏಕಾಕಿತನದ ಕಾರ್ಯ. ಬೇರೆ ಯಾರೂ ಮುಂದೆ ಬಾರದಿದ್ದಾಗ ಶಿವನೇ ಈ ಸವಾಲನ್ನು ಕೈಗೆತ್ತಿಕೊಂಡನು. ಸ್ವರ್ಗದಲ್ಲಿದ್ದ ದೇವಿಯ ಭವ್ಯ ಸೌಧಕ್ಕೆ ಶಿವನು ತೆರಳಿದನು. ಅವಳು ಯಾವ ಕಾಲದಲ್ಲೂ ಇರದಿದ್ದ, ಯಾವ ಗರ್ಭಿಣಿಗಿಂತಲೂ ಬೃಹದಾಕಾರದ ದೇವಿಯಾಗಿದ್ದಳು. ಕಾರಣ ಆಕೆಯ ಹೊಟ್ಟೆಯಲ್ಲಿದ್ದುದು ಕಾಲ.

ಶಿವ ಕೇಳಿದ : "ನಾನು ಯಾತಕ್ಕೆ ಬಂದಿದ್ದೀನಿ ಅಂತ ನಿನಗೆ ಗೊತ್ತಿದೆ. ನಿನಗೆ ಗೊತ್ತಿಲ್ಲವೆ?"

ದೇವಿಯು ತನ್ನ ವಿಶಾಲ ಸ್ವಚ್ಛ ಕಣ್ಣುಗಳಿಂದ ಶಿವನತ್ತ ನೋಡಿದಳು. ಇಡೀ ಸ್ವರ್ಗದಲ್ಲಿಯ ದೇವಿಯರಲ್ಲಿ ಚಾರಣಿ ದೇವಿಯು ಅತ್ಯಂತ ಲವಲವಿಕೆಯ ಮತ್ತು ಕ್ಷುಬ್ಧ ದೇವಿಯರಲ್ಲೊಬ್ಬಳಾಗಿದ್ದಳು. ಆದರೆ ಅವಳ ಅದೃಷ್ಟದ ಕುರಿತಾದ ತಿಳುವಳಿಕೆ ಅವಳ ಮುಖಕ್ಕೇನೋ ಒಂದು ವೈಚಿತ್ರ್ಯವನ್ನುಂಟು ಮಾಡಿತು. ಅದು ಅವಳಿಗೆ ಒಂದು ಶಾಂತತೆ ಮತ್ತು ಸಮಾಧಾನವನ್ನು ತಂದು ಕೊಟ್ಟಿತು. ಅದನ್ನು ಕಂಡು ಶಿವನ ಹೃದಯ ಹಿಂಡಿದಂತಾಯಿತು. ಶಿವನು ಅವಳ ಕೈಗಳನ್ನು ಮೆಲ್ಲಗೆ ತನ್ನ ಕೈಗಳಲ್ಲಿ ತೆಗೆದುಕೊಂಡನು. ದೇವಿಯು ಅದನ್ನು ಎಂದಿಗೂ ಬಿಡೆನೆಂಬಂತೆ ಭದ್ರವಾಗಿ ತನ್ನ ಕೈಗಳಲ್ಲಿ ಹಿಡಿದುಕೊಂಡಳು.

"ಕಾಲದ ಲಾಡಿ ಹುಳವನ್ನು ನಾನು ಬಿಚ್ಚಿಡಬೇಕೆಂದು ನಿಮ್ಮ ಅಪೇಕ್ಷೆ. ವರ್ತಮಾನವನ್ನು ನೀವು ಮರಳಿ ಪಡೆಯಲಿಚ್ಛಿಸುತ್ತೀರಿ." – ದೇವಿ ಬಹಳ ಹೊತ್ತಿನ ನಂತರ ಹೇಳಿದಳು.

"ನೀನು ಅದನ್ನು ಮಾಡುವೆಯಾ?" – ಶಿವ ಕೇಳಿದ. ಅವಳು ಅದಕ್ಕೆ ಎಂದಿಗೂ ಉತ್ತರಿಸುವುದಿಲ್ಲವೆಂದು ತೋರಿತು.

"ಅದೊಂದು ಸುದೀರ್ಘ, ಏಕಾಂತದ ಮತ್ತು ಪ್ರೀತಿ ರಹಿತ ಜಾಗರಣೆ" ಅವಳು ಹೇಳಿದಳು. – "ಸುದೀರ್ಘ ಹಾಗೂ ಏಕಾಂತದ್ದು" ಆದರೆ "ಪ್ರೀತಿರಹಿತ ಅಲ್ಲ" ಶಿವ

ಹೇಳಿದನು. ಯಾರೂ ನಮ್ಮನ್ನು ಎಂದಿಗೂ ಅಗಲಿಸಲಾರರು. ನೀನು ನನ್ನ ಬಗ್ಗೆ ಯೋಚಿಸಬೇಡ. ನಾನು ಎಲ್ಲೇ ಇದ್ದರೂ ನಿನ್ನ ಬಳಿಗೆ ಹಿಂತಿರುಗಿ ಬರುತ್ತೇನೆ.

ಶಿವನು ದೇವಿಯನ್ನು ಶಾಶ್ವತವಾಗಿ ಆಲಿಂಗಿಸಿಕೊಂಡನು. ಆ ಕಾರಣಕ್ಕಾಗಿಯೇ ಲಿಂಗ ಮತ್ತು ಯೋನಿಯ ಸಂಯೋಗವು ಒಂದು ಕಾಲಾತೀತ ಸಂಯೋಗವೆನಿಸಿದೆ. ಹೀಗಾಗಿ ಚಾರಣಿ ದೇವಿಯು ದೇವಸ್ಥಾನದಲ್ಲಿ ನೆಲೆಸಿ ಅತ್ಯಂತ ಸೂಕ್ಷ್ಮವಾಗಿ ಯ:ಕಶ್ಚಿತ್ ಜೀವಿಯಾದ ಮನುಷ್ಯನ ಕಿಂಚಿನ್ಮಾತ್ರ ಭಾಗವನ್ನು ತನ್ನ ಬಾಯಿಂದ ಹೊರಹೊರಡಿಸುತ್ತಾಳೆ. ದೇವಿ ಎಂದೂ ತನ್ನ ಬಾಯನ್ನು ಮುಚ್ಚಲಾರಳು. ಏಕೆಂದರೆ ಹಾಗೊಂದು ವೇಳೆ ಆ ದೇವಿ ಬಾಯಿ ಮುಚ್ಚಿದ್ದೇ ಆದರೆ, ದೇವ, ದಾನವ ಹಾಗೂ ಮನುಷ್ಯ ಜಾತಿಯೆಲ್ಲವೂ ಶಾಶ್ವತವಾಗಿ ನಿಶ್ಚೇಷ್ಟ ಸ್ಥಿತಿಯಲ್ಲಿ ಹೂತು ಹೋಗುತ್ತದೆ.

* * *

ಇಲ್ಲ. ಖಂಡಿತವಾಗಿಯೂ ಅದರಿಂದ ದೇವಿಯ ಅವಕೃಪೆಗೆ ಪಾತ್ರವಾಗುವುದಿಲ್ಲ.

ದೇವಿಗೊಬ್ಬ ಸಹಾಯಕಳು ಅರ್ಥಾತ್ ಒಬ್ಬ ಪೂಜಾರಿಣಿ ಇದ್ದಾಳೆ. ಅವಳು ದೇವಿಯನ್ನು ಸದಾ ನಿಗಾ ಮಾಡುತ್ತಾಳೆ. ದೇವಿಗೆ ಸ್ನಾನ ಮಾಡಬೇಕೆನಿಸಿದಾಗ, ವಸ್ತ್ರ ಬದಲಾಯಿಸಬೇಕಾದಾಗ ಅಥವಾ ಕಣ್ಣಿಗೆ ತಣ್ಣುಗೊಳಿಸುವ ಲೇಪನವನ್ನು ಹಚ್ಚಬೇಕಾದಾಗ ಅವಳು ನೆರವಾಗುತ್ತಾಳೆ. ಅವಳು ದೇವಿಗೆ ತೀರಾ ಆಪ್ತಳಾಗಿರುವ ಕಾರಣ ದೇವಿಗೆ ತೀರಾ ಸಮೀಪವಿರುವ ಕಾರಣ, ದೇವಿಯ ತೆರೆದ ಬಾಯೊಳಗೆ ನೋಡಬಲ್ಲಳು; ಅವಳ ಕಿರು ನಾಲಗೆಯವರೆಗೂ, ಅಷ್ಟೇ ಅಲ್ಲ, ಅವಳ ಬಾಯಿಯ ಅಂತ್ಯ ಸ್ಥಾನವಾದ ಗಂಟಲು ಪ್ರಾರಂಭವಾಗುವರೆಗೂ ನೋಡಬಲ್ಲಳು. ಹಾಗಾಗಿಯೇ ಈ ಪೂಜಾರಿಣಿಯು ದೈವ ವಾಣಿಯ ಮತ್ತು ಭವಿಷ್ಯದ್ರಷ್ಟಾರನ ಮಾಂತ್ರಿಕ ಶಕ್ತಿ ಹೊಂದಿದ್ದಳು.

ಪೃಥ್ವಿರಾಜ್ ಮತ್ತು ಜೈಮಲ್ ಇಬ್ಬರೂ ಮೊದಲಿಗೆ ದೇವಿಯ ಕತ್ತಲು ತುಂಬಿದ ತಣ್ಣನೆಯ ನೆಲಮಾಳಿಗೆಯ ದೇವಸ್ಥಾನವನ್ನು ಪ್ರವೇಶಿಸಿದರು. ಸ್ವಲ್ಪ ಸ್ಪಷ್ಟವಾಗಿ ಕಾಣಲು ತೊಡಗಿದಾಗ, ಅವರಿಬ್ಬರೂ ಒಂದು ಮೆತ್ತೆಯ ಮೇಲೆ ಕುಳಿತರು. ಅವರನ್ನು ಹಿಂಬಾಲಿಸಿ ಬಂದ ಸಂಗಾ ಕತ್ತಲೆಯಲ್ಲಿ ಎಡವಿದನು. ದೇವಿಯ ವಿಷಯದಲ್ಲಿ ತಪ್ಪಿ ನಡೆಯಲು ಅವನಿಗೆ ಇಷ್ಟವಿರಲಿಲ್ಲ. ಅದರಿಂದ ಅವನೆಲ್ಲಿದ್ದನೋ ಅಲ್ಲೇ ಕುಳಿತನು. ಸೂರಜ್‌ಮಲ್ ಅವನ ಬೆಂಬೆತ್ತಿ ಬಂದನು. ಚೆನ್ನಾಗಿ ಕಾಣುವವರೆಗೂ ಕಾದು ಕುಳಿತನು. ಅನಂತರ ತನ್ನ ಸುತ್ತಣ ಪರಿಸರದ ಮೇಲೆ ಕಣ್ಣು ಹಾಯಿಸಿದನು. ಪೃಥ್ವಿರಾಜನು ಒಂದು ಪರದೆಯ ಹಿಂದೆ ಪೂಜಾರಿಣಿಯನ್ನು ಗುರುತಿಸಿದನು. ಅವಳು ಒಂದು ಮರದಂತೆ ನಿಶ್ಚಲವಾಗಿ ನಿಂತಿದ್ದಳು. ಅವಳ ಕಣ್ಣುಗಳು ಮುಚ್ಚಿದ್ದುವು. ಆದರೆ ಅವಳು ತಮ್ಮನ್ನು ಗಮನಿಸುತ್ತಿದ್ದಾಳೆಂದು ಅವನಿಗೆ ಗೊತ್ತಿತ್ತು. ಅದು ಈಗಾಗಬೇಕು. ಇಲ್ಲದಿದ್ದರೆ ಇನ್ನೆಂದಿಗೂ ಆಗಲಾರದು – ಎಂದು ತನಗೆ ತಾನೆ ಹೇಳಿಕೊಂಡನು. ಸೂರಜ್‌ಮಲ್ ಸಂಗ್ರಾಮ್ ಪಕ್ಕದ ಜಾಗವನ್ನು ಆರಿಸಿಕೊಂಡನು. ಅವನು ಇನ್ನೂ ನೆಲಕ್ಕೆ ಮಂಡಿ ಊರಿರಲಿಲ್ಲ. ಆಗ ಪೃಥ್ವಿರಾಜ ಮಾತನಾಡಿದನು. – "ಪೂಜಾರಮ್ಮನವರೇ ನಾವು ಈಗ ಬಂದಿರುವುದು ನಮ್ಮಲ್ಲಿ ಮೇವಾಡದ ಮುಂದಿನ ಪ್ರಭು ಯಾರು ಆಗುತ್ತಾರೆ ಎಂಬುದನ್ನು ತಿಳಿದುಕೊಳ್ಳಲು"

ಪೃಥ್ವಿರಾಜನು ತನ್ನ ಎಂದಿನ ವಾಡಿಕೆಯಂತೆ, ದೇವಿಗೆ ನಮಸ್ಕರಿಸುವುದಕ್ಕೂ ಕಾಯದೆ, ಪೂಜಾರಮ್ಮನಿಗೆ ಔಪಚಾರಿಕವಾಗಿ ನಮಸ್ಕಾರ ಎಂದೂ ಹೇಳದೆ ಅಥವಾ ತನ್ನ ಗೌರವ ಸಲ್ಲಿಸದೆ ಹಿಂದೆ ಮುಂದೆ ನೋಡದೆ ತಕ್ಷಣ ತನ್ನ ಪ್ರಶ್ನೆಯನ್ನು ಚಿಮ್ಮಿಸಿಬಿಟ್ಟಿದ್ದನು.

ಬಿಲ್ಲಿನಿಂದೊಗೆದ ಬಾಣದಂತೆ ಈ ಭಯಂಕರ ಪ್ರಶ್ನೆ ಪುಟಿದಿತ್ತು. ಈಗ ಅದರಿಂದ ಹಿಂದೆ ಸರಿಯುವಂತಿಲ್ಲ.

ಸೂರಜ್‌ಮಲ್ ಒಂದು ಮಂಡಿಯನ್ನು ಊರಿ ಬೆನ್ನು ಬಾಗಿಸಿ ಭವಿಷ್ಯವಾದಿನಿಯ ಪ್ರತಿಕ್ರಿಯೆಗಾಗಿ ಕಾದನು. ಎಚ್ಚರಿಕೆಯಿಂದ ಈಕೆಯ ಬಗ್ಗೆ ವಿಷಯ ಸಂಗ್ರಹಿಸಿದ್ದರೂ ಅವನು ಹೇಗೆ ತಾನೆ ಪೂಜಾರಮ್ಮನನ್ನು ಕಳೆದುಕೊಳ್ಳಲು ಸಾಧ್ಯ ಎಂದು ತನಗೆ ತಾನೆ ಕೇಳಿಕೊಂಡನು. ಅವಳಿಗೆ ತಮಾಷೆ ಅನ್ನಿಸಿರಬೇಕು. ಅವಳ ತುಟಿಗಳ ನಡುವೆ ತಿರಸ್ಕಾರ ಬೆರೆತ ವ್ಯಂಗದ ಮಾತು ಇದ್ದಿತೆ? ಅವಳ ಕಣ್ಣುಗಳು ಅವರಿಬ್ಬರ ಕಡೆಗೂ ಹರಿಯಿತು. ಆಮೇಲೆ ಸಂಗ್ರಾಮ ಸಿಂಹನತ್ತ ತಿರುಗಿತು.

"ಸಂಗ್ರಾಮ್‌ಗೆ ಕಾಣಿಸಲಿಲ್ಲ. ತನಗೆ ಎಲ್ಲಿ ಕೂತುಕೊಳ್ಳಲಿಕ್ಕೆ ಆಯಿತೋ ಅಲ್ಲಿ ಕೂತು ಬಿಟ್ಟ. ತಾನು ದೇವಿಯ ಚಿರತೆಯ ಚರ್ಮದ ಮೇಲೆ ಕುಳಿತಿದ್ದೇನೆಂಬುದರ ಅರಿವೂ ಅವನಿಗಿಲ್ಲ" – ಹಾಗೆಂದು ಪೂಜಾರಮ್ಮ ಕೇಳಿಸಲೇ ಇಲ್ಲವೇನೋ ಎನ್ನುವಷ್ಟು ಮೆಲ್ಲಗೆ ಹೇಳಿದಳು.

ಸಂಗ್ರಾಮ್ ಕೆಳಗಡೆ ದೃಷ್ಟಿ ಹಾಯಿಸಿದನು. ಅವನು ನಿಜಕ್ಕೂ ಚಿರತೆಯ ಚರ್ಮದ ಮೇಲೆ ಕುಳಿತಿದ್ದನು. ದೇವಿಯ ಪೀಠದ ಮೇಲೆ ಕೂರುವ ಧಾರ್ಷ್ಟ್ಯ ತೋರುವ ಮೂಲಕ ದೇವಿಗೆ ಅವನು ಅವಮಾನ ಮಾಡಿದ್ದನೆ? ದೇವಿ ಅವನ ಮೇಲೆ ಕೋಪಗೊಂಡಿದ್ದಾಳೆಯೇ? ದೇವಿಯು ಅವನಿಗೆ ಯಾವ ರೀತಿಯ ಶಿಕ್ಷೆ ವಿಧಿಸಬಹುದು? ವಿಶ್ವವನ್ನು ಕಾಪಾಡಿದ ದಿನದಿಂದಲೂ ದೇವಿಯು ಒಂದು ಭಯಂಕರ ರೌದ್ರ ಮನೋಭಾವವನ್ನು ಅಳವಡಿಸಿಕೊಂಡಿರುವಳೆಂದು ಎಲ್ಲರಿಗೂ ಗೊತ್ತಿತ್ತು. ಹಾಗಾಗಿ ತನ್ನ ಕೋಪಕ್ಕೆ ಗುರಿಯಾದ ವ್ಯಕ್ತಿಯನ್ನು ಸಾವಿಗಿಂತಲೂ ಘೋರವಾದ ಶಿಕ್ಷೆಗೆ ಗುರಿ ಮಾಡಬಹುದು ಎಂದು ತಿಳಿದಿದ್ದರು. ಅವನು ತರಾತುರಿಯಿಂದ ಮೇಲೆದ್ದನು. ಅದು ತೀರಾ ತಡವಾಯಿತೆಂದು ಬಗೆದು ಮತ್ತೆ ಕುಳಿತು ಬಿಟ್ಟನು.

"ವಿಧಿಯ ಹಾದಿಗಳು ವಿಚಿತ್ರ" – ಭವಿಷ್ಯವಾದಿನಿಯ ಕಣ್ಣುಗಳು ಇನ್ನೂ ಮುಚ್ಚಿಯೇ ಇದ್ದುವು. "ಅದು ಅವನನ್ನು ಮುಂದಿನ ಪ್ರಭುವನ್ನಾಗಿ ಆರಿಸಿಕೊಂಡಿದೆ."

ಆಕೆ ಯಾರನ್ನು ಕುರಿತು ಹೇಳುತ್ತಿದ್ದಳು? ಕಂಡ ಹಾಗೆಯೇ ಆಕೆ ಕುರುಡಾಗಿಯೇ ಎಲ್ಲವನ್ನೂ ಮಾಡುತ್ತಿದ್ದಳು. ಆಕೆ ಭವಿಷ್ಯವಾದಿನಿಯಾಗಿ 'ವಿಧಿಯ ವಿಚಿತ್ರ ಹಾದಿಗಳ ಬಗೆಗೆ ಹೇಳುತ್ತಿದ್ದಳು. ವಿಷಯಗಳನ್ನು ಗೋಜಲುಗೊಳಿಸುತ್ತಿದ್ದಳು. ಆಕೆ ತಪ್ಪು ಮಾಡುತ್ತಿದ್ದಾಳೆಂದು ಪೃಥ್ವಿರಾಜನಿಗೆ ಖಚಿತವಾಗಿ ಗೊತ್ತಾಗಿತು. ಅದಕ್ಕೆ ಅವನು ಅನುಮತಿ ನೀಡಲಾರ. ಅವನು ಅವಳ ಕಣ್ ತೆರೆಸಿ ತಮ್ಮ ಮೂರೂ ಜನರ ಕಡೆ ದೃಷ್ಟಿ ಹಾಯಿಸಿದ ಮೇಲೆ ಭವಿಷ್ಯವನ್ನು ಹೇಳುವಂತೆ ಮಾಡುವನು. ಸೂರಜ್‌ಮಲ್ ಅಂತೂ ಹೇಗೂ ಈ ಪ್ರಭುತ್ವದ ಉತ್ತರಾಧಿಕಾರದ ಸಾಲಿನಲ್ಲಿ ಇಲ್ಲ. ಅವನೇನಿದ್ದರೂ ಯುವ ರಾಜಕುಮಾರರ ಜೊತೆ ಬಂದಿದ್ದಾನೆ ಅಷ್ಟೆ.

"ಸೂರಜ್‌ಮಲ್ ಮಾಮನಿಗೆ ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ" – ಎಂದು ಪೃಥ್ವೀರಾಜನ ಆಲೋಚನಾ ಲಹರಿಗಳನ್ನು ಅಡ್ಡಗಟ್ಟುತ್ತ – "ಅವನು ಪಕ್ಕಕ್ಕೆ ವಾಲಿ ಬೀಳಲಿಲ್ಲ. ಹಾರುವುದಕ್ಕೆ ಮುಂಚೆ ವಿವೇಕಿಯಂತೆ ಕಾದು ನೋಡಿ ಅನಂತರ ಸಂಗ್ರಾಮನ ಪಕ್ಕದ ಸ್ಥಾನವನ್ನು ಬೇಕೆಂದೇ ಆಯ್ಕೆ ಮಾಡಿಕೊಂಡಿದ್ದಾನೆ. ಆದರೆ ಸಂಗ್ರಾಮ್ ಅವನಿಗೆ ಉಳಿಸಿದ್ದು ಒಂದು ಹೆಜ್ಜೆ ಇಡೋಷ್ಟು ತುಂಡು ಜಾಗ ಮಾತ್ರ. ಸೂರಜ್‌ಮಲ್ ಸಿಂಹಾಸನವೇನೋ ನಿನ್ನ ಎಟುಕಿನಲ್ಲಿರುತ್ತದೆ. ನೀನು ಅದನ್ನು ಅನುಭವಿಸಲೂ ಬಹುದು.

ಆದರೆ ಅದರ ಮೇಲೆ ನಿನ್ನ ಹಿಡಿತ ಅತ್ಯಂತ ಅನಿಶ್ಚಿತ ವಾಗಿರುತ್ತೆ. ಓಹ್! ಸೂರಜ್‌ಮಲ್ ನಿನ್ನ ಬಯಕೆಗಳಷ್ಟೇ ನಿನ್ನ ವಿಧಿಯೂ ಔದಾರ್ಯಪೂರ್ಣವಾಗಿದ್ದಿದ್ದಿರೆ!"

"ನನ್ನ ಬಗ್ಗೆ ಏನು?" ಪೃಥ್ವೀರಾಜ್ ತನ್ನ ಒರೆಯಿಂದ ಕತ್ತಿಯನ್ನು ಹೊರಗೆಳೆದ. "ನನ್ನ ವಿಷಯ ಏನು ಮುದುಕಿ?" ಅವನ ಕಣ್ಣುಗಳಲ್ಲಿ ಅದೆಷ್ಟು ರೋಷ ಮತ್ತು ನಿರಾಶೆ ತುಂಬಿತ್ತೆಂದರೆ, ಅವನು ಅವಳಷ್ಟೇ ಕುರುಡಾಗಿಬಿಟ್ಟಿರಬೇಕು. "ನಿನ್ನ ನಿರ್ಭಾಗ್ಯ ಭವಿಷ್ಯದ್ ವಾಣಿಯನ್ನು ನೀನು ಈಗಲೇ ಬದಲಾಯಿಸೋ ಹಾಗೆ ಮಾಡ್ತೀನಿ" ಅವನು ತನ್ನ ಕತ್ತಿಯನ್ನು ಝಳಪಿಸಿದಾಗ ಅರೆಹುಚ್ಚನೇ ಆಗಿ ಬಿಟ್ಟಿದ್ದ. ದಿವ್ಯ ವಾಣಿಯ ಗದ್ದುಗೆ ಅಲ್ಲಿ ಇನ್ನಿಲ್ಲದಂತಾಯಿತು. ಬಾವುಟ ಫಟ ಫಟನೆ ಹಾರಾಡಿತು. ಅವನು ಎಷ್ಟೇ ಯತ್ನಿಸಿದರೂ ಅದನ್ನು ಬೇರ್ಪಡಿಸಲಾಗಲಿಲ್ಲ. "ನಿನ್ನ ಮಾತನ್ನು ಸುಳ್ಳೆಂದು ತೋರಿಸುತ್ತೇನೆ. ನಾನು ರಾಜನಾಗಲೆಂದೇ ಹುಟ್ಟಿದವನು. ಬೇರೆ ಯಾರೂ ನನ್ನ ಸಿಂಹಾಸನವನ್ನು ಕಿತ್ತುಕೊಳ್ಳಲಾರರು. ಅದರಲ್ಲಿಯೂ ಎಲ್ಲರಿಗಿಂತ ಅಲ್ಪನಾದ ಈ ನನ್ನ ತಮ್ಮ" ಅವನ ಖಡ್ಗ ಬಿರುಸಾಗಿ ಕೆಳಗೆ ಬೀಸಿತು. ಸಂಗ್ರಾಮ್ ತಕ್ಷಣ ತನ್ನ ತಲೆಯನ್ನು ಪಕ್ಕಕ್ಕೆ ಸರಿಸಿಕೊಂಡನು. ಅವನ ಎಡಗಣ್ಣಿನ ಗುಡ್ಡೆ ಕತ್ತರಿಸಿ ಕತ್ತಿಯ ಮೇಲೆ ಕುಳಿತುಕೊಂಡಿತು. ಸಂಗ್ರಾಮನ ಕಣ್ಣ ಸಂಪುಟದ ನೆಲೆ ತಪ್ಪಿದ ಕಣ್ಣಗುಡ್ಡೆ ಅಲ್ಲಿನ ದೃಶ್ಯವನ್ನು ನಿರ್ಲಿಪ್ತವಾಗಿ ಸಮೀಕ್ಷಿಸಿತು. ಪೃಥ್ವೀರಾಜನು ಮತ್ತೊಮ್ಮೆ ಕತ್ತಿ ಬೀಸಿದ್ದನು. ಸೂರಜ್‌ಮಲ್‌ನ ಖಡ್ಗ ಅದು ಮುನ್ನುಗ್ಗುವುದನ್ನು ತಡೆದಿತು. ಆದರೆ ಸಂಗ್ರಾಮನ ತಲೆಗಾದ ಗಾಯದಿಂದ ರಕ್ತ ಬುಗ್ಗೆಂದು ಸುರಿಯತೊಡಗಿತು. ಹಿಂದು ಮುಂದೆ ನೋಡದೆ ಗುಹೆಯ ಬಾಗಿಲಿನಾಚೆಗೆ ಓಡಿ ಹೋಗುತ್ತಿದ್ದಾಗ ಪೃಥ್ವೀರಾಜನ ಖಡ್ಗ ಅವನ ಬಲ ಹೆಗಲ ಮೇಲೆ ಮತ್ತು ಅವನ ಮೂಳೆಯ ಕೆಳಗೆ ತಾಕಿತು.

ಸೂರಜ್‌ಮಲ್ ಮತ್ತು ಪೃಥ್ವೀರಾಜ್ ಒಬ್ಬರನ್ನೊಬ್ಬರು ಬಿಟ್ಟು ಕೊಡದೆ ಹೊಡೆದಾಡಿದರು. ಅವರಿಬ್ಬರಲ್ಲಿ ಯಾರಾದರೊಬ್ಬ ಸಾಯುವ ತನಕ ಅವರು ನಿಲ್ಲಿಸುವುದಿಲ್ಲವೆನ್ನುವುದು ಸ್ಪಷ್ಟವೇ. ಅವರು ಈಗ ಕಾದಾಡುತ್ತಿರುವುದಕ್ಕೆ ಕಾರಣವೇನಾದರೂ ಇದೆಯೇ? ಇದು ಅವರ ಕಾದಾಟಗಳಲ್ಲಿ ಮೊದಲನೆಯದು ಎಂಬುದನ್ನು ಕಾಲವೇ ಸಾಧಿಸಿ ತೋರಿಸಬೇಕಿತ್ತು. ಮುಂದೆ ಅವರಿಗಿದೊಂದು ಚಟ ಮತ್ತು ವ್ಯಸನವಾಗಿ ಬಿಟ್ಟಿತು. ಕಡೇ ಪಕ್ಷ ಮುಂದೆ ಅದಕ್ಕೆಲ್ಲಾ ನೆಪಗಳಿದ್ದುವು – ಭೂಮಿ, ಸಣ್ಣ, ದೊಡ್ಡ ಸಾಮ್ರಾಜ್ಯಗಳು, ಪ್ರಾಂತೀಯ ಅಗತ್ಯಗಳು ಮುಂತಾದುವು. ಆದರೆ ಹೇಳಲಾಗದ ಒಂದು ಸರಳ ಸತ್ಯವೆಂದರೆ ಅವರಿಬ್ಬರೂ ಅದನ್ನು ತುಂಬ ಆನಂದಿಸುತ್ತಿದ್ದರು. ಒಬ್ಬರನ್ನೊಬ್ಬರು ಹಣಿಯುವುದೇ ಗುರಿಯಾಗಿಬಿಟ್ಟಿತ್ತು. ಸೋಜಿಗದ ಸಂಗತಿಯೆಂದರೆ, ಒಬ್ಬರು ಇನ್ನೊಬ್ಬರನ್ನು ಕೊಲ್ಲಲಾಗಲೇ ಇಲ್ಲ. ಅಥವಾ ಬಹುಶಃ ಅದು ಅಂಥ ವಿಚಿತ್ರವೂ ಆಗಿರಲಿಲ್ಲ. ಕಾರಣ ಒಬ್ಬ ಸೋತು ಕೆಳಗೆ ಬಿದ್ದನೆಂದರೆ ಇನ್ನೊಬ್ಬ ಏನು ಮಾಡಬೇಕು?

ಜೈಮಲ್ ಪೃಥ್ವೀರಾಜನ ಹತ್ತಿರ ಹೇಳಿದ – "ನೀನು ನಮ್ಮ ಮಾವನ ಜೊತೆ ಹೋರಾಡುತ್ತಿದ್ದಾಗ, ಆಕ್ರಮಣಕಾರಿ ಓಡಿ ಹೋಗಿ ಬಿಟ್ಟಿದ್ದಾನೆ."

ಪೃಥ್ವೀರಾಜನಿಗೆ ಜ್ಞಾನೋದಯವಾಯಿತು. ಗಾಯಗೊಂಡ ಸೂರಜ್‌ಮಲ್ ವಿಶ್ರಾಂತಿ ಸಿಕ್ಕಿದ್ದಕ್ಕೆ ಸಂತಸಗೊಂಡನು. ತಮ್ಮ ಸೋದರನು ಯಾವ ಕಡೆಗೆ ಓಡಿ ಹೋದನೆಂದು ಜಯಮಲ್ ಊರಿನವರನ್ನು ಕೇಳಿದನು. ಪೃಥ್ವೀರಾಜ್ ಮತ್ತು ಜೈಮಲ್ ತಮ್ಮ ಕುದುರೆಗಳ ಬೆನ್ನೇರಿ ಅವನ ಬೆನ್ನಟ್ಟಿ ಹೋದರು.

* * *

ರಾಠೋಡ್ ಬಿದಾ ಜೈಟ್‌ಮಲೋಟ್ ಮತ್ತು ಅವನ ಇಬ್ಬರು ಮಕ್ಕಳು ರೂಪನಾರಾಯಣ ಮಂದಿರವನ್ನು ನೋಡಲೆಂದು 'ಸೇವಂತ್ರಿ' ಹಳ್ಳಿಗೆ ಬಂದಿದ್ದರು. ಅವರು ಅಲ್ಲಿ ಪೂಜೆ ಮಾಡಿ ಕಾಣಿಕೆಗಳನ್ನು ಸಲ್ಲಿಸಿ, ಇನ್ನೇನು ಮನೆಗೆ ಹಿಂತಿರುಗಬೇಕೆನ್ನುವಾಗ ರಕ್ತ ಸಿಕ್ತ ಬಟ್ಟೆಗಳ ಸಂಗ್ರಾಮ್ ದೇವಸ್ಥಾನದ ಆವರಣವನ್ನು ಪ್ರವೇಶಿಸಿದನು.

"ರಾಠೋಡ್ ಬಿದಾಜೀಯವರೆ ರಾಣಾ ಮಗನಾದ ಸಂಗ್ರಾಮ್ ಸಿಂಹ ರೈಮಲ್‌ನ ಮಗನಾದ ನಾನು ನನ್ನ ತಮ್ಮಂದಿರಾದ ಪೃಥ್ವೀರಾಜ್, ಜೈಮಲ್ ಅವರಿಂದ ಆಶ್ರಯ ಮತ್ತು ರಕ್ಷಣೆ ನೀಡಬೇಕೆಂದು ಬೇಡಿಕೊಳ್ಳುತ್ತೇನೆ, ಅವರಿಬ್ಬರೂ ನನ್ನ ತೀವ್ರ ಹುಡುಕಾಟದಲ್ಲಿದ್ದಾರೆ ಹಾಗೂ ನನ್ನನ್ನು ಕೊಲ್ಲಬೇಕು ಅಂತ ಇದ್ದಾರೆ"

ಸಂಗ್ರಾಮ್ ತುಂಬ ರಕ್ತವನ್ನು ಕಳೆದುಕೊಂಡಿದ್ದನು. ಅವನು ಜ್ಞಾನ ತಪ್ಪಿದ. ರಾಠೋಡ್ ಮತ್ತು ಅವನ ಮಕ್ಕಳು ದೇವಾಲಯದೊಳಗೆ ಕರೆದೊಯ್ದು ಗಾಯಗಳನ್ನು ತೊಳೆದು ಪಟ್ಟಿ ಹಾಕಿದರು. ನೀರು ಸಿಂಪಡಿಸಿ, ಪ್ರಬಲವಾದ ಗಿಡ ಮೂಲಿಕೆಗಳ ರಸವನ್ನು ಕುಡಿಸಿ ಎಚ್ಚರ ಬರುವಂತೆ ಮಾಡಿದರು. ಅವನ ಸಹೋದರರಿಂದ ಏಕೆ ಮತ್ತು ಯಾವ ಕಾರಣಕ್ಕೆ ಬದ್ಧ ದ್ವೇಷವುಂಟಾಯಿತೆಂದು ಇನ್ನೇನು ಅವನನ್ನು ಕೇಳಬೇಕೆಂದಿದ್ದರು. ಅಷ್ಟು ಹೊತ್ತಿಗೆ ಅವರಿಗೆ ನಾಗಾಲೋಟದಲ್ಲಿ ಧಾವಿಸುತ್ತಿರುವ ಕುದುರೆಗಳ ಖುರಪುಟ ಧ್ವನಿ ಕೇಳಿಸಿತು.

"ನೀನು ನನ್ನ ತಮ್ಮನನ್ನು ನೋಡಿದೆಯಾ"? – ಕುದುರೆಗೆ ಜೀನು ಹಾಕುತ್ತಿದ್ದ ಬಿಡಾನನ್ನು ಪೃಥ್ವೀರಾಜನು ಕೇಳಿದನು. "ಅವನು ನಮಗಿಂತ ಐದು ನಿಮಿಷ ಮುಂಚೆ ಕುದುರೆಯೇರಿ ಹೊರಟನು."

"ಇಲ್ಲ." ನಾನು ಮತ್ತು ನನ್ನ ಮಕ್ಕಳಿಬ್ಬರೂ 'ರೂಪನಾರಾಯಣಜೀ' ದೇವಸ್ಥಾನವನ್ನು ನೋಡಿಕೊಂಡು ನಮ್ಮ ಮನೆಗೆ ಹಿಂತಿರುಗುತ್ತಿದ್ದೇವೆ" – ಎಂದು ರಾಠೋಡ್ ಉತ್ತರಿಸಿದನು.

"ಹಾಗಾದರೆ ಆ ಇನ್ನೊಂದು ಕುದುರೆ ಯಾರದು ಬಿಡಾಜೀ ಅವರೆ? ನಿಮ್ಮ ಕುದುರೆಗಳಲ್ಲಿ ಯಾವುದಕ್ಕಾದರೂ ಆಯಾಸವಾದರೆ ಅಥವಾ ಏನಾದರೂ ಆಘಾತವಾದರೆ ಇರಲಿ ಎಂದು ಹೇಳಿ ಒಂದು ಹೆಚ್ಚಿಗೆ ಕುದುರೆಯನ್ನು ನೀವು ನಿಮ್ಮ ಪ್ರಯಾಣದೊಂದಿಗೆ ತಂದಿದ್ದೀರಾ?"

"ಹೌದು ಸುಮ್ಮನೆ ರಕ್ಷಣೆಗಿರಲಿ – ಅಂತ."

"ಹಾಗಾದರೆ ಅದು ಏಕೆ ಬಾಯಿಂದ ಅಷ್ಟೊಂದು ಜೊಲ್ಲು ಸುರಿಸುತ್ತಾ ಇದೆ ಮತ್ತು ತುಂಬಾ ಬೆದರುತ್ತಾ ಇದೆ? ಅಲ್ಲದೆ ನಾನು ಅದನ್ನು ಈ ಮುಂಚೆ ಎಲ್ಲೋ ನೋಡಿದ್ದೀನಿ ಎನ್ನುವ ಭಾವನೆ ಯಾಕೆ ಬರುತ್ತಾ ಇದೆ? ಅದೂ ಒಂದು ಸಲ ಅಲ್ಲ. ಹಲವಾರು ಸಲ?" ಜೈಮಲ್‌ನ ಖಡ್ಗ ಹೊರಚಿಮ್ಮಿತು. "ನನ್ನ ತಮ್ಮ ಸಂಗ್ರಾಮ್‌ಸಿಂಹನನ್ನು ನನಗೆ ಒಪ್ಪಿಸಿಬಿಡು. ಕಾರಣ ಏನಾದರೂ ಆಗಲಿ, ಹೋರಾಟ ಇರೋದು ನಮಗೂ ಅವನಿಗೂ. ಅದಕ್ಕೂ ನಿನಗೂ ಸಂಬಂಧವಿಲ್ಲ. ನಾನು ಕೇಳುತ್ತಾ ಇರುವುದು ಇಷ್ಟೆ : ಸಂಗ್ರಾಮನನ್ನು ನಮಗೆ ಒಪ್ಪಿಸಿಬಿಡು. ಆಮೇಲೆ ನಿನ್ನ ಮಕ್ಕಳನ್ನು ಕರೆದುಕೊಂಡು ನೆಮ್ಮದಿಯಿಂದ ಹೊರಟುಹೋಗು".

"ರಾಜಕುಮಾರ ಜೈಮಲ್, ನಾನು ನಿನ್ನ ಹಾಗೆಯೇ ರಜಪೂತ. ಸಂಗ್ರಾಮಸಿಂಹನಿಗೆ ಆಶ್ರಯ ಮತ್ತು ರಕ್ಷಣೆ ನೀಡುವುದಾಗಿ ರಾಜಕುಮಾರ ಸಂಗ್ರಾಮನಿಗೆ ಮಾತು ಕೊಟ್ಟಾಗಿದೆ. ಅವನನ್ನು ಕೊಂಡೊಯ್ಯುವ ಏಕೈಕ ಮಾರ್ಗ ಅಂದರೆ ನನ್ನನ್ನೂ ನನ್ನ ಮಕ್ಕಳನ್ನು ಕೊಲ್ಲುವುದು.

ರಜಪೂತನ ಮಾತಿನ ಬೆಲೆ ಎಷ್ಟು? ಹೆಚ್ಚೇನಲ್ಲ ಅದರಿಂದ ರಾಠೋಡ್ ಜೈಟ್‌ಮಲೋಟ್ ಮತ್ತು ಅವನ ಇಬ್ಬರು ಮಕ್ಕಳು ಜೀವ ತೆರಬೇಕಾಯಿತು. ಅವರು ಧೀರವಾಗಿ ಹೋರಾಡಿದರು. ಅವರು ನೆಲದ ಮೇಲೆ ನಿಂತು ಹೋರಾಡಿದರೆ ಪೃಥ್ವೀರಾಜ್ ಮತ್ತು ಜೈಮಲ್ ಇಬ್ಬರೂ ತಮ್ಮ ಕುದುರೆಗಳ ಮೇಲೆ ಕುಳಿತು ಕತ್ತಿಗಳಿಂದ ಬೀಸಿ ಹೊಡೆದರು. ಈ ಸಂದರ್ಭದಲ್ಲಿ ಸಂಗ್ರಾಮಸಿಂಹನು ತಪ್ಪಿಸಿಕೊಂಡು ಓಡಿದನು.

ಹಾಗಾದರೆ ರಾಠೋಡ್ ಬಿಡಾ ಅವನಿಗೆ ಮಾತು ಕೊಡಬಾರದಿತ್ತೆ? ಅವನು ಮಾತನ್ನು ಮುರಿಯ ಬೇಕಿತ್ತೆ? ಇದರ ನಡುವಣ ಗೆರೆ ಎಲ್ಲಿ? ಕೊನೇಪಕ್ಷ ಹೆಸರಿಗಾದರೂ ಮಹಾರಾಣಿ ಎನಿಸಿದ್ದ, ರಾಣಿಯರಲ್ಲಿ ಜೇಷ್ಠ ರಾಣಿಯಾದ ನನ್ನ ತಾಯಿ ಈ ಕಥೆಯನ್ನು ನನಗೆ ಹೇಳಿದಾಗ – ಅವಳು ಅನೇಕ ವೇಳೆ ಈ ಕಥೆ ಹೇಳುತ್ತಿದ್ದಳು – ಅವಳು ಹೇಳಲು ಮರೆತಾಗ ಮಗುವಾಗಿದ್ದ ನಾನು, ನಿದ್ರೆ ಬರುವವರೆಗೂ ಅದನ್ನು ಮತ್ತೆ ಹೇಳಲು ಅವಳನ್ನು ಒತ್ತಾಯಿಸುತ್ತಿದ್ದೆ. – ಅಲ್ಲಿ ಖಳನಾಯಕರು ಯಾರೂ ಇರಲಿಲ್ಲ. ಪೃಥ್ವೀರಾಜ್, ಜೈಮಲ್, ಸೂರಜ್‌ಮಲ್, ಬಿಡಾ ಮತ್ತು ಅವನ ಮಕ್ಕಳು ಎಲ್ಲರೂ ನಾಯಕರೇ. ಒಂದು ವೇಳೆ ನಮ್ಮ ತಂದೆ ಅವರ ಸೋದರರ ಕೈಯಲ್ಲಿ ಸತ್ತಿದ್ದರೆ ಏನಾದರೂ ವ್ಯತ್ಯಾಸವಾಗುತ್ತಿತ್ತೆ? ಕಥೆ ಹೇಳಲು ಉಳಿದಿರುವ ಇತರೆ ಎಲ್ಲ ರಜಪೂತರಿಗಾಗಲಿ, ನಮ್ಮ ತಾಯಿಗಾಗಲಿ, ಕಥೆ ಅದೇ ಆಗಿರುತ್ತಿತ್ತು. ಬಹುಶಃ ತಂದೆಯವರ ಪಾಲಿಗಾದರೂ ಅದರಿಂದೇನೂ ವ್ಯತ್ಯಾಸವಾಗುತ್ತಿರಲಿಲ್ಲ. ಕೊನೇಪಕ್ಷ ಅವರು ಅದನ್ನು ಎಂದಿಗೂ ತೋರಿಸಿಕೊಳ್ಳುವುದಿಲ್ಲ. ಅವರು ಖಂಡಿತವಾಗಿಯೂ ವಿಷಯವನ್ನು ಹೇಳುವುದಿಲ್ಲ. ಅಂಥ ಸ್ವೇಚ್ಛಾಚಾರದ ರಕ್ತಪಾತದಿಂದ ತೀರಾ ಆವೇಶಕ್ಕೊಳಗಾಗಿ ಚಿಂತಿತನಾಗುವವನೆಂದರೆ ಪ್ರಾಯಶಃ ನಾನೊಬ್ಬನೇ ಅಂತ ಕಾಣಿಸುತ್ತೆ.

ತಂದೆಯವರು ಅವರ ಕಣ್ಣಿನ ಹಾಗೂ ಶರೀರದ ಉಳಿದೆಲ್ಲ ಗಾಯಗಳು ಪೂರ್ತಿ ಮಾಯುವವರೆಗೂ ಕಾದರು. ತನ್ನ ವೇಷ ಮರೆಸಿಕೊಂಡು ಮಾರವಾಡದ ದನ ಕಾಯುವವನಾಗಿ ಬದುಕು ಸಾಗಿಸಿದರು. ಅವನೊಬ್ಬ ಮೂರ್ಖನೆಂದು ಭಾವಿಸಿದ್ದರಿಂದ, ಹಾಗೂ ದನ ಕಾಯುಬೇಕಾದ ಹೊತ್ತಿನಲ್ಲಿ ರೊಟ್ಟಿ ತಿಂದ ಕಾರಣಕ್ಕಾಗಿ ಅವನನ್ನು ಕೆಲಸದಿಂದ ತೆಗೆದುಹಾಕಲಾಯಿತೆಂದು ಹೇಳಲಾಗುತ್ತದೆ. ಅವರು ಮಾರವಾಡವನ್ನು ಬಿಟ್ಟು ಗುಪ್ತ ವೇಷದಲ್ಲಿ ಅಜ್ಮೀರ್ ಕಡೆಗೆ ಹೊರಟರು. ಮಾರ್ಗ ಮಧ್ಯದಲ್ಲಿ ಶ್ರೀ ನಗರದ ಪರಮಾರರ ಮುಖಂಡನಾದ ರಾವ್ ಕರಮ್‌ಚಂದ್ ಅವರ ಸೈನ್ಯದಲ್ಲಿ ಸೈನಿಕನಾಗಿ ಸೇರಿಕೊಂಡರು. ಶ್ರೀ ನಗರ ಅಜ್ಮೀರ್‌ದಿಂದ ಹತ್ತು ಮೈಲಿಗಳ ದೂರದಲ್ಲಿ ಇರುವ, ಪರಮಾರರ ಪುರಾತನ ರಾಜಧಾನಿ. ಪರಮಾರರು ಆಗ್ಗೆ ತೀರಿ ಹೋದ ಶಕ್ತಿ. ಆದರೆ ಕರಮ್‌ಚಂದ್ ಬಳಿ ಇನ್ನೂ ಮೂರು ಸಾವಿರ ರಜಪೂತರ ಸೈನ್ಯವಿತ್ತು. ತಂದೆಯವರು ಅವರುಗಳಲ್ಲಿ ಇನ್ನೊಬ್ಬ ಯೋಧ ಅಷ್ಟೆ.

ವರ್ಷಗಳು ಉರುಳಿದುವು. ಅಣ್ಣ ತಮ್ಮಂದಿರ ನಡುವಿನ ಕಲಹದ ವಿಚಾರ ತಿಳಿದು ರಾಣಾರೈಮಲ್, ಪೃಥ್ವೀರಾಜನನ್ನು ಚಿತ್ತೂರಿನಿಂದ ಗಡೀಪಾರು ಮಾಡಿದನು. ಪೃಥ್ವೀರಾಜನು ನೆಲಮಾಳಿಗೆಯೊಂದರಲ್ಲಿ ಆಶ್ರಯ ಪಡೆದುಕೊಂಡನು. ಆದರೆ ಅತ್ಯಲ್ಪ ಕಾಲದಲ್ಲೇ ದೊಡ್ಡ ಹೆಸರು ಮಾಡಿದನು. ಹೋರಾಟವೇ ಅವನ ಧಾತುವಾಗಿತ್ತು. ವೀರರ ಪಂದ್ಯವೊಂದರಲ್ಲಿ ತನ್ನ ಧೀರ ಕೃತ್ಯಗಳಿಂದ ಹಾಗೂ ವೈಭವದ ಕಾರ್ಯಗಳಿಂದ ಎಲ್ಲರನ್ನೂ ಮೀರಿಸಿದನು. ಚಾರಣಿ ದೇವಿಯ ದೇವಾಲಯದಲ್ಲಿ ಎಲ್ಲಕ್ಕೂ ಮೂಕಪ್ರೇಕ್ಷಕನಾಗಿದ್ದ ರಾಜಕುಮಾರ ಜೈಮಲ್ ರಾಣಾನ ಸಿಂಹಾಸನದ ಉತ್ತರಾಧಿಕಾರಿಯಾಗಬಹುದೆಂದು

ತೋರುತ್ತಿತ್ತು. ಅವನು ಬಹಳ ಜಾಗರೂಕನಾಗಿ ತನ್ನ ಸಮಯ ಕಾಯುತ್ತಿದ್ದ. ಆದರೆ ತಾನು ಪ್ರೀತಿಸುತ್ತಿದ್ದ ರಾಜಕುಮಾರಿಗೆ ಉದ್ದೇಶಪೂರ್ವಕವಾಗಿ ಅವಮಾನ ಮಾಡಿದಾಗ ಅವನು ತನ್ನ ಅದೃಷ್ಟವನ್ನು ಕಳೆದುಕೊಂಡನು. ಅವಳ ತಂದೆ ಆ ಜಾಗದಲ್ಲೇ ಅವನನ್ನು ಕೊಂದು ಹಾಕಿದನು. ಪೃಥ್ವೀರಾಜನ ಮೇಲೆ ಮತ್ತೆ ಮಹಾರಾಜನ ಕೃಪೆಯಾಯಿತು. ಹಾಗಾಗಿ ಅವನನ್ನು ಕರೆಸಲಾಯಿತು. ಸಿಂಹಾಸನ ಮತ್ತು ಕಿರೀಟ ಎರಡೂ ಖಂಡಿತಾ ಈಗ ಅವನದಾಗುತ್ತವೆ. ಜೈಮಲ್ ಇಷ್ಟಪಟ್ಟಿದ್ದ ಹೆಣ್ಣನ್ನು ಅವನು ಮದುವೆಯಾದನು. ಪೃಥ್ವೀರಾಜ ಮತ್ತು ತಾರಾ ಇಬ್ಬರೂ ತಮ್ಮ ದುಸ್ಸಾಹಸದ ಕೃತ್ಯಗಳನ್ನು ಮುಂದುವರಿಸಿದರು. ಕಳೆದುಕೊಂಡ ಸಾಮ್ರಾಜ್ಯಗಳನ್ನು ಮತ್ತೆ ಪಡೆದುಕೊಂಡರು. ಶತ್ರುಗಳನ್ನು ನಿರಾಶೆಗೆ ತಳ್ಳಿದರು. ತಮ್ಮ ಇಡೀ ಬದುಕಿನ ಸುತ್ತ ಒಂದು ಪುರಾಣ ಪರಿವೇಶವನ್ನೇ ನಿರ್ಮಿಸಿಕೊಂಡು ಬಿಟ್ಟರು. ಆ ಮೂಲಕ ಪ್ರಜಾ ಸಮುದಾಯದ ಕಲ್ಪನಾಪ್ರಿಯ ಮೂರ್ತಿಗಳಾದರು.

ನಮ್ಮ ತಂದೆ ಆ ಘಟನೆ ನಡೆಯುವವರೆಗೂ ಅಜ್ಞಾತರಾಗಿಯೇ ಉಳಿದರು. ಇದನ್ನು ನೀವು ಪೂರ್ತಿ ನಂಬದೆ ಇರಬಹುದು ಅಥವಾ ನಂಬಬಹುದು. ಕಾರಣ ತಲೆ ಮರೆಸಿಕೊಂಡ ಅನೇಕ ರಾಜಕುಮಾರರ ಬಗ್ಗೆ ಈ ಕಥೆಯನ್ನು ಹೇಳಲಾಗಿದೆ. ನಮ್ಮ ತಂದೆ ಹೊಲದಲ್ಲಿ ನಿದ್ದೆ ಮಾಡುತ್ತಿದ್ದಾಗ ಒಂದು ಸರ್ಪ ತನ್ನ ಹೆಡೆ ಬಿಚ್ಚಿ ಅವರ ತಲೆಗೆ ನೆರಳು ಮಾಡಿದ್ದನ್ನು ಜಯಸಿಂಹ ಬಲೇಚ್ (ನನ್ನ ತಮ್ಮ ವಿಕ್ರಮಾದಿತ್ಯ ಅಣಕ ಮಾಡಿದ್ದು ಇದೇ ಜಯಸಿಂಹ ಬಲೇಚರ ಆತಿಥ್ಯವನ್ನು) ಮತ್ತು ಜನ್ನಾ ಸಿಂಧಾಲ್ ಅವರಿಬ್ಬರೂ ಪತ್ತೆ ಮಾಡಿದರು. ಈ ಇದಿಷ್ಟು ಶಕುನ ಸಾಲದೆಂಬಂತೆ, ಒಂದು ಶಕುನದ ಹಕ್ಕಿ ಹಾವಿನ ಹೆಡೆಯ ಮುಡಿಯ ಮೇಲೆ ಹಾರಿ ಬಂದು ಕುಳಿತುಕೊಂಡು ಕಿಚ್ ಕಿಚ್ ಎಂದು ಶಬ್ದ ಮಾಡುತ್ತ ಹಾರಿಹೋಯಿತು. ಶಕುನಗಳ ಅರ್ಥವನ್ನು ಯುಕ್ತವಾಗಿ ಬಿಡಿಸಿ ತಿಳಿದುಕೊಂಡರು. ಅದರ ಪರಿಣಾಮವಾಗಿ ತನ್ನ ಹತ್ತಿರ ಆಳಾಗಿ ಸೇವೆ ಸಲ್ಲಿಸುತ್ತಿರುವವನು ಮೇವಾಡದ ರಾಜಕುಮಾರನಲ್ಲದೆ ಬೇರೆ ಅಲ್ಲ ಎಂದು ಕರಮ್‌ಚಂದನಿಗೆ ತಿಳಿದು ಬಂತು. ತನ್ನ ಗೋಪ್ಯತೆ ಬಯಲಾದದ್ದಕ್ಕೆ ತಂದೆಯವರು ಬಹಳವಾಗಿ ಪರಿತಾಪ ಪಟ್ಟಿರಬೇಕು. ಕಾರಣ ಈ ಸುದ್ದಿ ಬಹುಬೇಗ ಎಲ್ಲ ಕಡೆ ಹರಡಿತು. ಹಳೆಯ ಸೇಡು ಮತ್ತು ತಪ್ಪುಗಳನ್ನು ತೀರಿಸಿಕೊಳ್ಳಲು ಪೃಥ್ವೀರಾಜನು ಅತ್ತ ಬರುತ್ತಿದ್ದಾನೆಂದು ತಿಳಿಯಿತು. ಇದೆಲ್ಲ, ತಾನೇ ಪ್ರಾರಂಭಿಸಿದ್ದು.

ಅನೇಕ ವರ್ಷಗಳ ನಂತರ ಇಬ್ಬರು ಅಣ್ಣ ತಮ್ಮಂದಿರು ಪರಸ್ಪರ ಎದುರಾಗಿದ್ದರೆ ಏನಾಗುತ್ತಿತ್ತು ಎಂಬುದು ಊಹೆಗೆ ಬಿಟ್ಟ ವಿಷಯವಾಯಿತು. ಕಾರಣ ಪೃಥ್ವೀರಾಜನ ಸೋದರಿ ಆನಂದಾ ಬಾಯಿಯಿಂದ ಬಂದ ಪತ್ರವೊಂದು ಅವನ ಪಯಣವನ್ನು ತಡೆದಿತು. ಅವಳ ಪತಿ ಶಿರೋಡಿಯ ರಾವ್‌ಜಗ್‌ಮಲ್ ಅವಳನ್ನು ಅದೆಷ್ಟು ನಿಕೃಷ್ಟವಾಗಿ ಕಾಣುತ್ತಿದ್ದಾನೆಂಬುದನ್ನು ಅದರಲ್ಲಿ ವಿವರಿಸಿದ್ದಳು. ತನ್ನನ್ನು ಅವನಿಂದ ಬಿಡಿಸಿಕೊಂಡು ಮರಳಿ ತೌರಿಗೆ ಕರೆದೊಯ್ಯಬೇಕೆಂದು ಅದರಲ್ಲಿ ಬೇಡಿಕೊಂಡಿದ್ದಳು. ನನ್ನ ದೊಡ್ಡಪ್ಪ ಪೃಥ್ವೀರಾಜನು – ಆತನನ್ನು ನಾನೆಂದೂ ಸಂಧಿಸಲೇ ಇಲ್ಲ – ಕೋಪಾವಿಷ್ಟನಾಗಿ ಶಿರೋಹಿ ರಾವ್ ಜಗ್‌ಮಲ್‌ನ ಮೇಲೆ ಪ್ರತೀಕಾರ ಕೈಗೊಳ್ಳುತ್ತೇನೆಂದು ಶಪಥ ಮಾಡಿದನು. ತನ್ನ ಪ್ರಯಾಣದಲ್ಲಿ ಮತ್ತು ಯೋಜನೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ಮಧ್ಯರಾತ್ರಿಯ ಹೊತ್ತಿಗೆ ರಾಜಕುಮಾರ ಪೃಥ್ವೀರಾಜನು ಶಿರೋಹಿ ತಲುಪಿದನು. ಅವನ ಮನೆಯ ಬಾಗಿಲು ತಟ್ಟಲಿಲ್ಲ. ಅರಮನೆಯ ಗೋಡೆಗಳನ್ನು ಏರಿ ಇಳಿದು ಬೆಳಗಾಗ ಏಳುವ ಹೊತ್ತಿಗೆ ಜಗಮಲ್‌ನ ಕುತ್ತಿಗೆಯ ಬಳಿ ಕತ್ತಿಯನ್ನು ಚಾಚಿದ್ದನು.

ನನ್ನ ದೊಡ್ಡಪ್ಪ ಯಾವುದೇ ಹಿಂಜರಿಕೆಯಿಲ್ಲದೆ ಈ ಅಪರಾಧಿ ಭಾವಮೈದುನನ ಕುತ್ತಿಗೆಯನ್ನು ಸೀಳಿ ಬಿಡುತ್ತಿದ್ದ. ನನ್ನ ಅತ್ತೆ ಅರ್ಥಾತ್ ಅವನ ಸೋದರಿ, ತನಗೆ ಕರುಣೆ

ತೋರಬೇಕೆಂಬ ಗಂಡನ ಮಾತಿಗೆ ಸ್ಪಂದಿಸಿ ತನ್ನ ಪತಿಯ ಪ್ರಾಣವನ್ನು ಉಳಿಸಬೇಕೆಂದು ಪೃಥ್ವೀರಾಜನನ್ನು ದೀನಳಾಗಿ ಬೇಡಿಕೊಂಡಳು. ಜಗಮಲ್ ತನ್ನ ಹೆಂಡತಿಯ ಪಾದರಕ್ಷೆಗಳನ್ನು ತಲೆಯ ಮೇಲಿಟ್ಟುಕೊಂಡು ಅವಳ ಕಾಲುಮುಟ್ಟಿ ಕ್ಷಮೆ ಕೋರಬೇಕೆಂಬ ಷರತ್ತಿನೊಂದಿಗೆ ಅದಕ್ಕೆ ಒಪ್ಪಿದನು. ಜಗಮಲ್ ಅವನ ಆದೇಶವನ್ನು ಕೂಡಲೇ ಪಾಲಿಸಿದನು. ಎಲ್ಲವನ್ನೂ ಮರೆತು ಕ್ಷಮಿಸಿಬಿಟ್ಟನು. ಮರುದಿನ ಜಗಮಲ್ ತನ್ನ ಅತಿಥಿ ರಾಜನನ್ನು ದೊಡ್ಡ ಸಮಾರಂಭದಲ್ಲಿ ಸನ್ಮಾನಿಸಿದನು. ಈ ರಾಜಿ ಸಮಾರಂಭದಲ್ಲಿ ಶಿರೋಹಿಯ ಎಲ್ಲ ದೊಡ್ಡ ಮನುಷ್ಯರು ಹಾಜರಿದ್ದರು. ಅದು ರಾಜಕುಮಾರ ಪೃಥ್ವೀರಾಜನಿಗೆ ವಿದಾಯ ಹೇಳುವ ಸಮಯ. ಜಗಮಲ್ ಸಿಹಿ ತಿಂಡಿಗಳಿಗೆ ತುಂಬ ಪ್ರಸಿದ್ಧನಾಗಿದ್ದನು. ರಾಜಕುಮಾರನಿಗೆ ಮೂರು ಬಗೆಯ ಸಿಹಿ ತಿಂಡಿಗಳನ್ನು ಕಾಣಿಕೆಯಾಗಿ ನೀಡಿದನು.

ದೊಡ್ಡಪ್ಪ 'ಮಾಮದೇವಿ' ಪುಣ್ಯಕ್ಷೇತ್ರವನ್ನು ತಲುಪಿದ ಮತ್ತು ದೂರದಿಂದಲೇ ತನ್ನ ಪ್ರಿಯತಮೆಯ ಕುಂಭಲ್‌ಗರ್ ಕಣ್ಣಿಗೆ ಬಿತ್ತು. ಆದರೆ ತಾನು ಅಲ್ಲಿಗೆ ತಲುಪಲು ಸಾಧ್ಯವೇ ಇಲ್ಲವೆಂದು ಅವನಿಗೆ ಅರ್ಥವಾಯಿತು. ಕೋಟೆಯಲ್ಲಿ ಇದ್ದ ತನ್ನ ಹೆಂಡತಿಗೆ ಹೇಳಿ ಕಳಿಸಿದನು. ಆದರೆ ತಾರಾಬಾಯಿ ಬಂದು ವಿದಾಯ ಹೇಳುವುದಕ್ಕೆ ಮುಂಚೆಯೇ ಜಗಮಲ್ ಸಿಹಿಯಲ್ಲಿ ಬೆರೆಸಿದ್ದ ವಿಷ ಅವನ ಹೃದಯ ಮತ್ತು ಮೆದುಳಿಗೆ ಸೇರಿಬಿಟ್ಟಿತ್ತು. ಬದುಕಿನ ಮಹಾಸಾಹಸ ಯಾತ್ರೆಯಲ್ಲಿ ತನ್ನ ಸಂಗಾತಿಯಾಗಿದ್ದ ಪತಿಯಿಲ್ಲದೆ ಬದುಕಿರಲು ಅವಳಿಗಿಷ್ಟವಿರಲಿಲ್ಲ. ರಾಜಕುಮಾರ ಪೃಥ್ವೀರಾಜನ ಚಿತೆಗೆ ಅಗ್ನಿಸ್ಪರ್ಶ ಮಾಡಲಾಯಿತು. ಬೆಂಕಿಯ ಜ್ವಾಲೆಗಳು ಮೇಲೇಳುತ್ತಿದ್ದಂತೆ ತಾರಾಬಾಯಿ ಪತಿಯನ್ನು ಆಲಿಂಗಿಸಿಕೊಂಡು ಸೂರ್ಯಲೋಕವನ್ನು ಸೇರಿದಳು.

ಈಗ ದಾರಿ ಸುಗಮವಾಗಿತ್ತು. ರಾಣಾರೈಮಲ್‌ನು ಖಾಯಿಲೆಯಿಂದ ಹಾಸಿಗೆ ಹಿಡಿದಿದ್ದನು. ಶ್ರೀ ನಗರದಲ್ಲಿ ರಾವ್‌ಕರಮ್‌ಚಂದನ ತೋಟಗಳಲ್ಲಿ ಕೆಲಸ ಮಾಡಿಕೊಂಡಿದ್ದ ರಾಜಕುಮಾರ ಸಂಗ್ರಾಮ ಸಿಂಹನಿಗೆ ಕರೆ ಕಳುಹಿಸಲು ಇದು ಸಕಾಲವಾಗಿತ್ತು.

ರಕ್ತ. ನಾವು ರಕ್ತದ ನದಿಗಳನ್ನು ಎಂದಾದರೂ ನಿಲ್ಲಿಸಲು ಸಾಧ್ಯವೇ? ಸಿಂಹಾಸನದ ನಿಜವಾದ ಉತ್ತರಾಧಿಕಾರಿಯನ್ನು ಹೊರತುಪಡಿಸಿ ಬೇರೆ ಯಾರೇ ಆದರೂ ಸಿಂಹಾಸನವನ್ನೇರುವ ಹಂಚಿಕೆ ಮಾಡಿದ್ದೇ ಆದರೆ ಅವರನ್ನು ಕೂಡಲೇ ಕೊನೆಗಾಣಿಸಲಾಗುವುದೆಂಬ ರಾಜಾದೇಶವನ್ನು ಅಂತಿಮವಾಗಿ ಹೊರಡಿಸಬೇಕೆಂದು ತಂದೆಯವರೊಂದಿಗೆ ನಾನು ಅದೆಷ್ಟು ಸಲ ವಾದ ಮಾಡಿಲ್ಲ?

ತಂದೆಯವರು ನಾನು ಹೇಳಿದ್ದನ್ನು ಕಿವಿಗೊಟ್ಟು ಕೇಳುತ್ತಾರೆ ಮತ್ತು ಸಮ್ಮತಿಸೂಚವಾಗಿ ತಲೆ ಆಡಿಸುತ್ತಾರೆ. ಇದರಿಂದ ಅದೆಷ್ಟು ಜೀವಗಳು ಉಳಿಯುತ್ತವೆ. ಅದೆಷ್ಟು ದುರದೃಷ್ಟಗಳನ್ನು ಅದು ತಪ್ಪಿಸುತ್ತದೆ ಮತ್ತು ಅದರಿಂದ ನಮ್ಮ ಸಾಮ್ರಾಜ್ಯಗಳಿಗೆ ಎಷ್ಟೆಲ್ಲ ಪ್ರಯೋಜನವಾಗುತ್ತದೆ ಎಂದೆಲ್ಲ ಅವರಿಗೆ ಅರ್ಥವಾಗುತ್ತದೆ. ಅಷ್ಟೊಂದು ದೀರ್ಘ ಕಾಲ ಅಷ್ಟೆಲ್ಲ ಅವಮಾನಗಳನ್ನು ಅನುಭವಿಸಿದ ಅವರಿಗಿಂತ ಚೆನ್ನಾಗಿ ನನ್ನ ಸಲಹೆಯ ಪರಿಣಾಮಗಳನ್ನು ಬೇರೆ ಯಾರು ತಾನೆ ಮೆಚ್ಚಬಲ್ಲರು? ಅಷ್ಟಾದರೂ ಅಂಥ ಒಂದು ಶಾಸನಕ್ಕೆ ತನ್ನ ಮುದ್ರೆ ಒತ್ತಲೊಲ್ಲರು. ಕಾರಣ ರಾಣಿ ಕರ್ಮವತಿ ಅವರ ಹೆಗಲ ಮೇಲೆ ಕುಳಿತಿದ್ದಾಳೆ.

* * *

"ನಮಗೆ ನಿಮ್ಮ ಸ್ನೇಹ ಹಸ್ತವನ್ನು ಚಾಚುವ ಮೂಲಕ ನಮಗೆ ಸಾಂಕೇತಿಕ ಗೌರವವನ್ನು ನೀಡಬೇಕು ರಾಜಕುಮಾರರೇ. ನಾನಾಗಲಿ, ಘನತೆವೆತ್ತ ಮಹಾಪ್ರಭುಗಳಾದ ರಾಣಾ

ಅವರಾಗಲಿ ಗುಜರಾತ್ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ನಮ್ಮ ಸಂಬಂಧದಲ್ಲಿ ಇದಕ್ಕಿಂತ ಹೆಚ್ಚಿನದೇನನ್ನೂ ನಾನು ಬಯಸುವುದಿಲ್ಲ. ಸತತವಾಗಿ ಯುದ್ಧ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವ ನಾವುಗಳೆಲ್ಲರೂ ಒಂದು ಅದ್ಭುತ ಸರಳ ಸತ್ಯವನ್ನು ಕಂಡುಕೊಳ್ಳುತ್ತಿಲ್ಲ. ಅದೆಂದರೆ ವಿಜಯದಿಂದ ಗಳಿಸಿರುವ ಎಲ್ಲ ಕೊಳ್ಳೆಗಳಿಗಿಂತ ಶಾಂತಿಯಿಂದ ಲಭಿಸುವ ಲಾಭಗಳು ಹೆಚ್ಚಿನವು ಎಂಬುದನ್ನು, ಆದರೆ ಎರಡು ವಿಷಯಗಳಲ್ಲಿ ನೀವು ತೊಡಗಿಸಿಕೊಳ್ಳಬೇಕೆಂದು ಕೋರುತ್ತೇನೆ."

ಬಹದ್ದೂರ್ ಷಹಜಾದನಿಗೆ ಮುಂದೇನು ಆಗಲಿದೆ ಎಂಬುದರ ಅರಿವಿತ್ತೆ? ಅವನು ಒಮ್ಮೆಯೂ ವಿಕ್ರಮಾದಿತ್ಯನ ಹೆಸರು ಹೇಳಿರಲಿಲ್ಲ. ಅವನನ್ನು ಕೇಳಿಯೂ ಇರಲಿಲ್ಲ. ಅವನು ಬಾಯಲ್ಲಿ ಬೆರಳಿಟ್ಟರೆ ಕಚ್ಚುವುದಕ್ಕೆ ಬರುವುದಿಲ್ಲ ಎನ್ನುವಂಥವನು ಎನ್ನುತ್ತಾರೆ. ಅವನ ಕಡೆಯ ಮೂಲಗಳು ವಿಕ್ರಮಾದಿತ್ಯ ಬಂಧಿತನಾಗಿರುವುದನ್ನು ಅವನಿಗೆ ತಿಳಿಸಿರುತ್ತವೆ ಎಂದು ನನಗೆ ನಿಶ್ಚಯವಿದೆ. ಮೇವಾಡ ಮತ್ತು ಗುಜರಾತನ್ನು ತಾವಿಬ್ಬರೇ ಹಂಚಿಕೊಂಡು ಬಿಡುವ ಬಗ್ಗೆ ಅವನಿಗೂ ನನ್ನ ಸೋದರನಿಗೂ ನಡೆದ ಸಂಭಾಷಣೆ ನಮಗೆ ಗೊತ್ತಿಲ್ಲದೆ ಇರುವುದಕ್ಕೆ ಸಾಧ್ಯವಿಲ್ಲ ಎಂದು ಅವನಿಗೆ ತಿಳಿದಿತ್ತು. ಅವನ ಕಡೆಯಿಂದ ಖಂಡಿತವಾಗಿಯೂ ಏನೋ ತಪ್ಪಾಗಿ ಬಿಟ್ಟಿತ್ತು. ಆ ಕಾರಣದಿಂದಲೇ ಚಿತ್ತೂರಿನಲ್ಲಿದ್ದ ಅವನು ಸಹಪಿತೂರಿಗಾರನಿಗೆ ಮುನ್ಸೂಚನೆ ಕೊಡದೆ ಹಾಗೂ ತನಗೆ ನಿಷ್ಠೆಯಿಂದಿದ್ದ ಸೈನ್ಯವಿಲ್ಲದೆ ತನ್ನ ನಿರ್ಗಮನದ ಸಂಗತಿಯನ್ನು ಮುಂದೆ ಮಾಡಿದ್ದು.

ಅವನು ಕಿರಿಯ. ಖಂಡಿತವಾಗಿಯೂ ನನಗಿಂತಲೂ ಕಿರಿಯನೇ ಆದರೂ ತನ್ನ ಸ್ವಂತ ಊರಿನಲ್ಲಿ ಹಾಗೂ ಇಲ್ಲಿ ಚಿತ್ತೂರಿಗೆ ಬಂದ ಮೇಲೆ ತನಗೆ ಹಿನ್ನಡೆ ಉಂಟಾಗಿದೆ ಎಂಬುದನ್ನು ನಮಗೆ ತಿಳಿಯಪಡಿಸದೆ ಇರುವಷ್ಟು ರಾಜತಾಂತ್ರಿಕ ಕಲೆಯಲ್ಲಿ ಅವನಿಗೆ ಆಳವಾದ ನೈಪುಣ್ಯವಿತ್ತು.

"ಬೇಡಿಕೊಳ್ಳುತ್ತಿರುವವನು ನಾನು. ತಾವು ಆಸಕ್ತಿ ವಹಿಸಬೇಕೆಂದು ಕೋರುತ್ತೇನೆ. ಎರಡು ವಿಷಯಗಳು ಯಾವುವು?"

"ನೀವು ಬಂದಿರುವ ವಿಷಯವನ್ನು ಹಾಗೂ ನಿಮ್ಮ ಸಲಹೆಗಳ ವಿಷಯವನ್ನು ಘನತೆವೆತ್ತ ಮಹಾಪ್ರಭು ರಾಣಾ ಅವರಿಗೆ ನಾನು ತಿಳಿಸಲೇಬೇಕಾಗಿದೆ. ನಿಮಗೆ ತಿಳಿದಿರುವಂತೆ ಮೇವಾಡದಲ್ಲಿ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಅವರೇ ಅಂತಿಮ ತೀರ್ಮಾನ ತೆಗೆದುಕೊಳ್ಳುವವರು."

"ಅದು ನಿಜ ಬಿಡಿ. ಅದನ್ನು ಹೇಳಬೇಕಾದ್ದೇ ಇಲ್ಲ. ಮಾನ್ಯ ಮಹಾಪ್ರಭುಗಳಿಗೆ ನನ್ನ ಶುಭಾಶಯಗಳನ್ನು ತಿಳಿಸಿ ಮತ್ತು ಅವರಿಗೆ ಯಶಸ್ಸನ್ನು ಕೋರುತ್ತೇನೆ"

ನನ್ನ ಮಾತನ್ನು ಮಧ್ಯದಲ್ಲಿ ಅವನು ತಡೆಗಡಿಯಲೇ ಇಲ್ಲವೇನೋ ಎಂಬಂತೆ ನಾನು ಮಾತು ಮುಂದುವರಿಸಿದೆ– "ನೀವು ಇಲ್ಲಿಗೆ ಆಗಮಿಸಿರುವುದನ್ನು ಹಾಗೂ ನಿಮ್ಮ ಸ್ವಾರಸ್ಯಕರವಾದ ಪ್ರಸ್ತಾಪವನ್ನು ಅವರು ಹೃತ್ಪೂರ್ವಕವಾಗಿ ಸ್ವಾಗತಿಸುವರೆಂದು ನನಗೆ ಖಾತರಿ ಇದೆ." ಅವರ ತಂದೆ ಗುಜರಾತಿನ ಸುಲ್ತಾನರಿಗೆ ನಾನು ಈಗಾಗಲೇ ಪತ್ರ ರವಾನಿಸಿರುವುದನ್ನು ಹೇಳಹೋಗಲಿಲ್ಲ. ಅವರಿಗೂ ನಾನು ಶುಭಾಶಯಗಳನ್ನು ಕಳಿಸಿದೆ. ಆದರೆ ಮೇವಾಡದೊಂದಿಗೆ ಅವರು ಹೂಡಿರುವ ಯುದ್ಧದಲ್ಲಿ ಯಶಸ್ಸು ಕೋರಲು ಮುಂದುವರಿಯಲಿಲ್ಲ. ಅವರ ಎರಡನೇ ಮಗ ರಾಜಕುಮಾರ ಷಹಜಾದಾ ಬಹದ್ದೂರ್ ಕಾಣೆಯಾಗಿರುವ ಬಗ್ಗೆ ಅವರಿಗೆ ಆಗಿರುವ ಆತಂಕವೇನೂ ಕಡಿಮೆಯಲ್ಲ ಹಾಗೂ ಈ

ಬಗೆಗಿನ ಅವರ ಚಿಂತೆಯನ್ನು ನಿರ್ಮೂಲ ಮಾಡುವುದು ನನಗೆ ಸಂತೋಷದ ವಿಷಯ ಎಂದು ತಿಳಿಸಿದ್ದೆ. ರಾಜಕುಮಾರ ಬಹದ್ದೂರ್ ಈಗ ನಮ್ಮೊಂದಿಗಿದ್ದಾರೆ. ಅವರು ಚೆನ್ನಾಗಿದ್ದಾರೆ. ಅವರು ಇಚ್ಛಿಸುವವರೆಗೂ ನಮ್ಮ ಅತಿಥಿಯಾಗಿರುತ್ತಾರೆ ಎಂದು ತಿಳಿಸಿದೆ. ಇತಿ ನಿಮ್ಮ ವಿಶ್ವಾಸಿ ಇತ್ಯಾದಿ ಇತ್ಯಾದಿ...

ಅವರ ಮಗ ಚಿತ್ತೂರಿನಲ್ಲಿ ಇರುವುದರ ಬಗ್ಗೆ ಅವರಿಗೆ ತಿಳಿದು ಬಂದೇ ಬರುತ್ತದೆ. ಅಷ್ಟೇ ಅಲ್ಲ ಅದರಿಂದ ಸ್ವಲ್ಪ ಸಹಾಯವೂ ಆದೀತು.

"ನೀವು ಬಯಸುತ್ತಿರುವ ಸೇನಾಪಡೆಗಳ ವ್ಯವಹಾರದ ವಿಷಯ ಸ್ವಲ್ಪ ಸಮಸ್ಯೆ ಉಂಟು ಮಾಡಬಹುದು. ನಿಮ್ಮ ಗುಪ್ತಚರ ವಿಭಾಗ ಕರಾರುವಾಕ್ಕಾಗಿದೆ. ಮೇವಾಡದಲ್ಲಿ ನಮ್ಮ ಬಳಿ ಸುಮಾರು ಇಪ್ಪತ್ತು ಸಾವಿರ ಸೈನಿಕಪಡೆ ಇದೆ. ಅಹಮದಾಬಾದ್‌ಗೆ ಪಯಣ ಬೆಳೆಸುತ್ತಿರುವ ಅವರೆಲ್ಲರನ್ನೂ ಪಟ್ಟಿ ಮಾಡಿ ತಿಳಿಸುವುದು ಬುದ್ಧಿಗೇಡಿತನ ಎಂಬುದನ್ನು ಹಾಗೂ ಅದರಿಂದ ಮೇವಾಡವನ್ನು ಬಯಲುಗೊಳಿಸಿದಂತಾಗುತ್ತದೆ ಎಂಬುದನ್ನು ಎಲ್ಲರಿಗಿಂತ ಮೊದಲು ನೀವು ಒಪ್ಪುತ್ತೀರಿ.

"ಆದರೆ ನನ್ನ ಮನಸ್ಸಿನಲ್ಲಿರುವ ಅಂತಿಮ ಸಂಗತಿಯೆಂದರೆ ನಿಮ್ಮ ಈ ಯೋಜನೆಯ ಮೇಲೆ ತಣ್ಣೀರು ಸುರಿಯುವುದು. ಇದನ್ನು ಒತ್ತಿ ಹೇಳಬಯಸುತ್ತೇನೆ. ನಾನು ಸೂಚಿಸಬಯಸುವುದೇನೆಂದರೆ ನಮ್ಮ ಅತ್ಯಂತ ಕಳಕಳಿಯ ಉದ್ದೇಶ ಹಾಗೂ ನಮ್ಮ ಬದ್ಧತೆಯೂ ಇದು ಆಗಿರುವ ಕಾರಣದಿಂದ, ನಮ್ಮ ಇಲ್ಲಿಯ ಸೇನಾಪಡೆಗಳಲ್ಲಿ ಹತ್ತು ಸಾವಿರ ಸೇನಾ ತುಕಡಿಗಳನ್ನು ಮೀಸಲಾಗಿಡುವಂತೆ ಮಹಾರಾಜ ರಾಣಾ ಅವರಿಗೆ ಪತ್ರ ಬರೆಯುತ್ತೇನೆ. ನಾವು ಅವರ ಉತ್ತರಕ್ಕಾಗಿ ಕಾಯುತ್ತಿರುವ ಅವಧಿಯಲ್ಲಿ ನೀವು ಗುಜರಾತಿನ ಉನ್ನತ ವರ್ಗದವರು ಮತ್ತು ಸಾಮಂತರಲ್ಲಿರುವ ನಿಮ್ಮ ಸ್ನೇಹಿತರ ಕಡೆಯಿಂದ ಮತ್ತು ಅಹಮದಾಬಾದ್‌ನಲ್ಲಿರುವ ಮತ್ತು ನಿಮ್ಮ ಸಾಮ್ರಾಜ್ಯದ ಉಳಿದ ಪ್ರದೇಶಗಳಲ್ಲಿರುವ ನಿಮಗೆ ನಿಷ್ಠವಾದ ಸೇನಾಪಡೆಗಳ ಕಡೆಯಿಂದ ಎಂದು ಹೇಳಬೇಕಾದ್ದೇ ಇಲ್ಲ, ಒಟ್ಟು ಇನ್ನೂ ಹತ್ತು ಸಾವಿರ ಸೇನಾ ತುಕಡಿಗಳನ್ನು ಒಟ್ಟು ಗೂಡಿಸುವ ಪ್ರಯತ್ನ ಮಾಡುತ್ತಿರಿ. ಆನಂತರ ಅಹಮದಾಬಾದಿನ ಮೇಲೆ ಆಕ್ರಮಣ ಮಾಡುವ ಲಘು ಕಾರ್ಯವನ್ನು ನಮ್ಮ ಸಂಯುಕ್ತ ಸೇನೆ ಕೈಗೊಳ್ಳುವುದು.

ನಾನು ಸುಳ್ಳು ಹೇಳುತ್ತಿದ್ದೆನೆ? ಇಲ್ಲ ಸುಳ್ಳು ಹೇಳುತ್ತಿರಲಿಲ್ಲ ಮತ್ತು ಅದು ಅವನಿಗೆ ಗೊತ್ತಿತ್ತು. ಅಥವಾ ಅವನಿಗೆ ತಿಳಿದಿದೆ ಎಂದು ನಾನು ನಂಬಿದೆ. ನಾನು ಮಾಡುತ್ತಿದ್ದುದೆಲ್ಲಾ ಮೇವಾಡದ ಪಣಗಳನ್ನು ಕಾಪಾಡುವುದು. ನಮ್ಮ ಸಾಮ್ರಾಜ್ಯ ಹಾಗೂ ನಮ್ಮ ಆಳ್ವಿಕೆಗೆ ಒಳಪಟ್ಟ ಸಂಸ್ಥಾನಗಳಿಂದ ಇಪ್ಪತ್ತು ಸಾವಿರ ತುಕಡಿಗಳಿಗಿಂತ ಹೆಚ್ಚು ಸೇನಾಪಡೆಯನ್ನು ಕೂಡಿಸುವುದು ಸಾಧ್ಯವಿತ್ತು ಸರಿಯೆ. ಆದರೆ ಅದು ಇಲ್ಲಿಗೂ ಅಲ್ಲ ಅಲ್ಲಿಗೂ ಅಲ್ಲ. ಅಹಮದಾಬಾದಿನ ಮೇಲೆ ಒಂದು ವೇಳೆ ಆಕ್ರಮಣವೇನಾದರೂ ಆದರೆ, ಅದು ಗುಜರಾತಿನ ಒಳಗಡೆಯಿಂದ ಎದ್ದ ದಂಗೆ ಅಥವಾ ಬಂಡಾಯ ಎನ್ನುವ ಹಾಗೆ ಕಾಣಬೇಕೇ ಹೊರತು ಈಗಾಗಲೇ ಹಳೆಯ ಸ್ವಯಂ ಪ್ರೇರಿತ ಶತ್ರು ಎಂದು ನಿರ್ಧಾರಿತವಾಗಿರುವ ಚಿತ್ತೂರಿನ ಕಡೆಯಿಂದ ಅಲ್ಲ ಎನ್ನುವುದು ನಿರ್ಣಾಯಕ.

ನಾನು ಅವನನ್ನು ಒಂದು ಷರತ್ತಿಗೆ ಒಳಪಡಿಸಿದ್ದೆ ಎಂದು ಅವನಿಗೆ ಗೊತ್ತಾಯಿತು. ಆದರೆ ನಾನು ಹೇಳುತ್ತಿರುವುದರಲ್ಲಿ ಅರ್ಥವಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳುವಷ್ಟು ಚತುರನಾಗಿದ್ದ ಅವನು ಎನ್ನುವುದು ಅವನ ಉತ್ತರದಿಂದ ಗೊತ್ತಾಯಿತು.

"ನೀವು ಹೇಳುವುದರಲ್ಲೂ ಒಂದು ಮುಖ್ಯವಾದ ಅಂಶ ಇದೆ ಅಂತ ನನಗನ್ನಿಸುತ್ತೆ. ನನ್ನದೇ ಆದ ಸೇನಾ ತುಕಡಿಗಳಿಲ್ಲದೆ ಮತ್ತು ಕುಲೀನ ವರ್ಗದವರ ಒಂದು ಬೆಂಬಲವಿಲ್ಲದೆ ನಾನು ಅಹಮದಾಬಾದಿನ ಜನತೆಯನ್ನು ದೂರವಾಡಿಕೊಳ್ಳುವುದರಲ್ಲಷ್ಟೆ ಇದು ಕೊನೆಗಾಣಬಹುದು."

ನಾನೀಗ ನನಗೆ ಬೇಕಾದ ಕಾಲಾವಕಾಶವನ್ನು ಪಡೆದುಕೊಂಡಿದ್ದೇನೆ ಮತ್ತು ಅವನ ಬೆಂಬಲಿಗನಾಗಿ ಹೊರಹೊಮ್ಮಿದ್ದೇನೆ. ಆದರೆ ಅದರಲ್ಲಿ ಅತಿಯಾದ ಉತ್ಸುಕತೆಯಾಗಲಿ, ಅತಿಯಾದ ಆತುರವಾಗಲಿ ಇಲ್ಲ ಎಂದು ಆಶಿಸಿದೆ.

"ಇದೀಗ ನಾವು ರಾಜಕೀಯ ವ್ಯವಹಾರದ ವಿಷಯಗಳನ್ನು ಮುಗಿಸಿರುವುದರಿಂದ ಇನ್ನು ನಾವು ಕೆಲವು ಸಂತಸ ಕೊಡುವಂಥ ಜರೂರಿನ ವಿಷಯಗಳತ್ತ ಗಮನ ಹರಿಸೋಣ. ಘನತೆವೆತ್ತ ಮಹಾರಾಜರು ಇಲ್ಲಿಂದ ತೆರಳಿದ ನಂತರ ಇಲ್ಲಿ ಬರಗಾಲ ಬಂದು ಬಿಟ್ಟಿದೆ. ನೀವೊಂದು ನೆಪದ ಹಾಗೆ ನನಗೆ ಸಿಕ್ಕಿದ್ದೀರಿ. ಈ ದಿನಗಳಲ್ಲೇ ಯಾವಾಗಲಾದರೂ ನಾವು ಬೇಟೆಗೆ ಹೋದರೆ ಹೇಗೆ? ನೀವು 'ಕುಸ್ತಿ' ಕ್ರಿಡೆಯ ಅತ್ಯಂತ ಉತ್ಕಟ ಪ್ರೇಮಿ, ಅದರ ಪ್ರೋತ್ಸಾಹಕರು ಎಂದು ನನಗೆ ಗೊತ್ತಿದೆ. ನಿಮ್ಮ ಕುಸ್ತಿ ದಿಗ್ಗಜಗಳ ವೇಗ ಮತ್ತು ಕೌಶಲ್ಯವನ್ನು ಸರಿಗಟ್ಟುವ ಸಾಮರ್ಥ್ಯ ನಮ್ಮ ಕುಸ್ತಿಪಟುಗಳಿಗಿಲ್ಲ ಎಂದು ನನ್ನ ಭಯ. ಆದರೆ ನೀವು ನಮ್ಮ ತಂಡಗಳನ್ನು ಪರಿಶೀಲಿಸಿ ಹೇಗೆ ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬಹುದು ಎಂಬುದರ ಬಗ್ಗೆ ನಮಗೆ ಸಲಹೆ ನೀಡಬಹುದು."

ಕೂಡಲೇ ಅಲ್ಲಿಂದ ಹೊರಡಲೆಂದು ಎದ್ದೆ. ಆಮೇಲೆ ಬೇಕೆಂದೇ ಬಾಗಿಲ ಕಡೆಗೆ ತಿರುಗಿ "ಓಹ್! ನಾನು ಏನೋ ಒಂದು ಮರೆತೆ. ನಿಮಗೆ ಯಾವಾಗಲಾದರೂ ಜೊತೆ ಬೇಕು ಎಂದು ಅನಿಸಿದಾಗ ಮಂಗಳಸಿಂಹನಿಗೆ ತಿಳಿಸಿಬಿಟ್ಟರೆ ಸಾಕು. ಅವನು ಆ ತಕ್ಷಣ ನಿಮಗೆ ಏನು ಬೇಕೋ ಅದನ್ನೆಲ್ಲ ಒದಗಿಸುತ್ತಾನೆ. ನಿಮಗೆ ಇಂಥದ್ದೇ ಬೇಕು ಎಂದು ತಿಳಿಸಿಬಿಟ್ಟರೆ, ಬಹುಶಃ ನಿಮ್ಮನ್ನು ತೃಪ್ತಿಪಡಿಸುವ ಭರವಸೆಯನ್ನು ಅವನು ಕೊಟ್ಟುಬಿಡುತ್ತಾನೆ."

ಅಧ್ಯಾಯ 6

ಓ ಹೌದು 'ಸತ್ಯ' ದ ವಿಷಯ. ಅದು ಇಲ್ಲದೆ ಇದ್ದರೇನೇ ತುಂಬ ಚೆನ್ನಾಗಿರುತ್ತಿತ್ತು ಎಂದು ನಮಗೆಲ್ಲ ಗೊತ್ತಿದ್ದರೂ ಆ ಶಬ್ದದ ಬಗ್ಗೆ ನಾವೆಷ್ಟು ಗದ್ದಲ ಎಬ್ಬಿಸುತ್ತೇವೆ.

ಮದುವೆ ದಿಬ್ಬಣ ಮನೆಗೆ ಮರಳಿತು. ಅವಳ ಅಕ್ಕರೆಯ ಮಾವ ರಾವ್‌ವೀರಮ್ ದೇವ್ ಅವಳನ್ನು ಚಿತ್ತೂರಿಗೆ ಕರೆತಂದರು. ತನ್ನ ಜೀವನದುದ್ದಕ್ಕೂ ತನ್ನ ಜೊತೆಯಲ್ಲಿ ಇರುವ ಸಲುವಾಗಿ ಯಾರಾದರೂ ಗೆಳತಿಯನ್ನೋ ಅಥವಾ ಸೇವಕಳನ್ನೋ ಕರೆದುಕೊಂಡು ಬರುವ ಅವಕಾಶ ಅವಳಿಗೆ ಇತ್ತು. ಅವಳು ತನ್ನ ಬಾಲ್ಯ ಸ್ನೇಹಿತೆ, ಸೇವಕಿ ಕುಂಕುಮ್ ಕನ್ವರ್ ಎನ್ನುವವಳನ್ನು ಜೊತೆಯಲ್ಲೇ ಕರೆತಂದಳು. ಅವರು ಯಾವತ್ತೂ ಮೆರ್ತಾ ಬಿಟ್ಟು ಹೊರಕ್ಕೆ ಹೋದವರಲ್ಲ. ಹೀಗಾಗಿ ಕುಂಕುಮ್‌ಗಳಿಗಂತೂ ಚಿತ್ತೂರಿನ ನೋಟಗಳು, ಪರಿಸರ ರೀತಿ ನೀತಿಗಳು ಎಲ್ಲವೂ ಅಚ್ಚರಿಯೋ ಅಚ್ಚರಿ ಮತ್ತು ಗಾಬರಿ. ಚಿತ್ತೂರಿಗೆ ಹೋಲಿಸಿದರೆ ಮೆರ್ತಾ ಒಂದು ಸಣ್ಣ ಪಟ್ಟಣ. ಚಿತ್ತೂರು ಸಂಪದ್ಭರಿತ ಮತ್ತು ವ್ಯಾವಹಾರಿಕ. ಅದು ಕೊಳಕಾದ, ವಿಶಾಲವಾದ ಜನಸಂದಣಿಯ, ಭ್ರಷ್ಟ ಮತ್ತು ಆತ್ಮವಿಶ್ವಾಸದ ನಗರ. ಕುಂಕುಮ್ ಕನ್ವರ್‌ಗೆ ತನಗೆ ಆದ ಭಾವೋದ್ವೇಗವನ್ನು ತಡೆದುಕೊಳ್ಳಲಾಗಲಿಲ್ಲ. ತನ್ನ ಗೆಳತಿಯ, ರವಿಕೆಯ ತೋಳು ಜಗ್ಗಿ ಉಸಿರು ಬಿಗಿಹಿಡಿದು ಅಬ್ಬಬ್ಬಾ! ಎಂದು ವಿಜಯಸ್ತಂಭದ ಕಡೆಗೆ ಬೆರಳು ಮಾಡಿ ತೋರಿಸಿದಳು. ಭಿಕ್ಷುಕರ ಸಂಖ್ಯೆ ಮತ್ತು ಅವರ ಎದೆಗಾರಿಕೆ ಕಂಡು ಅವಳಿಗೆ ಗಾಬರಿಯಾಯಿತು. ಮಾರುಕಟ್ಟೆ ಪ್ರದೇಶದಲ್ಲಿ ತೀರಾ ಮಾಮೂಲಿ ಎನ್ನುವ ಹಾಗೆ ಕಂಡು ಬಂದ ಮಾರಾಟಕ್ಕಿಟ್ಟಿದ್ದ ತರಹೆವಾರಿ ವಜ್ರ, ವೈಢೂರ್ಯ, ಮುತ್ತು ಮಾಣಿಕ್ಯ, ಪುಷ್ಯರಾಗವೇ ಮೊದಲಾದ ಬೆಲೆ ಬಾಳುವ ಹರಳುಗಳು ಮತ್ತು ಒಡವೆಗಳನ್ನು ಕಂಡು ಅವಳ ಕಣ್ಣುಗಳು ಇವುಗಳೇ ಹೌದೋ ಅಲ್ಲವೋ ಎಂದು ಅಪನಂಬಿಕೆಯಿಂದ ಇಷ್ಟು ಅಗಲ ಆದುವು. ಇಡೀ ದಿನವೆಲ್ಲಾ ಅವಳು ಬಿಟ್ಟ ಬಾಯಿ ಬಿಟ್ಟಹಾಗೇ ಇದ್ದಳು.

ಅವಳ ಕಿರಿಯ ಒಡತಿ ಶಾಂತವಾಗಿದ್ದಳು. ಕೀಳರಿಮೆಯ ಭಾವದ ಪ್ರತಿಷ್ಠೆಯವಳೋ ಅಥವಾ ಒಣಜಂಬಗಾತಿಯೋ ಅವಳಾಗಿರಲಿಲ್ಲ. ಅವಳೂ ತನ್ನ ಸೇವಕಳಷ್ಟೇ ಉತ್ಸುಕಳೂ, ಪ್ರಭಾವಿತಳೂ ಭಾವೋದ್ರಿಕ್ತಳೂ ಆಗಿದ್ದಳು. ಹದಿವಯಸ್ಸಿಗೆ ಅಡಿಯಿಟ್ಟಾಗಿನಿಂದಲೂ ಯಾವಾಗಲೂ ಅವಳು ಲಜ್ಜಾನ್ವಿತಳೂ ಶಾಂತಳೂ ಆಗಿರುತ್ತಿದ್ದಳು. ಚಿತ್ತೂರಿನ ಮಹಾರಾಜಕುಮಾರನ ವಧು ಎಂಬ ಅವಳ ಈಗಿನ ಹೊಸ ಅಂತಸ್ತು ಅವಳ ಮನೋಧರ್ಮಕ್ಕೊಂದು ಬಿಗುಮಾನದ ಮೊನಚವನ್ನು ಸೇರಿಸಿತ್ತೆನಿಸುತ್ತದೆ. ಕಾರಣ

ಅಂಥದೊಂದು ದೊಡ್ಡ ಹಾಗೂ ಪರಿಚಿತ ಕುಟುಂಬವನ್ನು ಪ್ರವೇಶಿಸಿದ್ದರಿಂದಾದ ಪರಿಣಾಮಗಳು ಮತ್ತು ಸೂಕ್ಷ್ಮಗಳನ್ನು ಅವಳು ಅರ್ಥಮಾಡಿಕೊಳ್ಳಲಿಲ್ಲ. ಅದರ ಅತ್ಯಂತ ಹೊರಗಿನ ಎಲ್ಲೆಯಲ್ಲೂ ಎಂದೆಂದೂ ಇರಲು ಸಾಧ್ಯವಿಲ್ಲದಂಥವಳು ಈಗ ಅದರ ಕೇಂದ್ರಕ್ಕೆ ಬಂದು ಕುಳಿತು ಬಿಟ್ಟಿದ್ದಾಳೆ. ಅವಳ ಪತಿ ಅವಳು ಅಲ್ಲಿದ್ದ ಮೊದಲ ಆರು ದಿನ ಅವಳೊಂದಿಗೆ ಮಾತಾಡಲಿಲ್ಲ. ಅವನು ರಕ್ತಹೀನನಾಗಿ ಬಿಳಿಚಿಕೊಂಡವನ ಹಾಗೆ ಕಾಣುತ್ತಿದ್ದನು. ಹಾಗೂ ಮನುಷ್ಯರ ಸಹಾಯಕ್ಕೂ ಮೀರಿ ಘಾತಗೊಂಡಿದ್ದನು. ಅವನ ಪಾದರಕ್ಷೆಗಳನ್ನು ತಂದುಕೊಡುವುದು, ಅವನ ಪೇಟ ತೆಗೆದುಕೊಡುವುದು. ಅವನ ಅಂಗಿಯ ಗುಂಡಿ ಹಾಕುವುದು, ಸ್ನಾನ ಮಾಡಿದ ನಂತರ ಒದ್ದೆಯ ತಲೆಗೂದಲು ಒಣಗಿಸುವುದು ಇತ್ಯಾದಿಯಾದ ಅವನ ಕೆಲಸಗಳನ್ನು ಮಾಡಿಕೊಡಲು ಅವಳು ಯತ್ನಿಸಿದಳು. ಆದರೆ ಅದಕ್ಕೆಲ್ಲ ಅವನು ಮುಖ ತಿರುಗಿಸಿದನು. ತನಗೇನಾದರೂ ಬೇಕಾದರೆ ಕೌಸಲ್ಯಳನ್ನು ಕೇಳುತ್ತಿದ್ದನು. ಕೌಸಲ್ಯ ಅವನಿಗೆ ಎದೆ ಹಾಲು ಕುಡಿಸಿ ಬೆಳೆಸಿ ಅವನನ್ನು ನೋಡಿಕೊಳ್ಳುತ್ತಿದ್ದ ದಾಯಿ ಎಂದು ತಿಳಿದುಕೊಂಡಳು. ಕೌಸಲ್ಯ ಅವಳನ್ನು ಎಂದೂ ಕಡೆಗಣಿಸಿ ಅವಮರ್ಯಾದೆ ಮಾಡದೆ ಇದ್ದರೂ ಮೌನವಾಗಿ ದೂರವಿದ್ದು ಬಿಡುತ್ತಿದ್ದಳು.

ಏಳನೇ ದಿನ ತನ್ನ ಸೋದರಮಾವನೊಂದಿಗೆ ಮೆರ್ತಾಕ್ಕೆ ಹೊರಟು ನಿಂತಳು. ಅವಳ ಪತಿ ಅವಳು ಹೊರಡುವುದನ್ನು ನೋಡಲು ಬಂದನು. ಅವನು ಅವಳನ್ನು ಮಾತಾಡಿಸಲೂ ಇಲ್ಲ ಅವಳಿಗೆ ವಿದಾಯ ಹೇಳಲೂ ಇಲ್ಲ, ಬೇಕೆಂದೇ ತಳೆದ ಆ ನಿರ್ವಿಕಾರ ಮುಖದ ಹೊರತಾಗಿಯೂ ಅವನು ಅದೆಷ್ಟು ಏಕಾಂಗಿಯೂ ದುಃಖಿಯೂ ಆಗಿ ಕಂಡು ಬಂದ! ಅವನ ನೋವು ಅವಳಿಗೆ ತಟ್ಟಿತು. ಆದರೆ ಅವನಿಗೆ ಸ್ಪಂದಿಸುವುದು ಹೇಗೆಂದು ಅವಳಿಗೆ ತಿಳಿಯಲಿಲ್ಲ. ಮರಳಿ ತೌರಿಗೆ ಹೋಗುತ್ತಿರುವುದಕ್ಕೆ ಅವಳಿಗೆ ಸಂತಸವಾಗಿತ್ತು. ಮೆರ್ತಾದಲ್ಲಿ ತನ್ನ ಮನೆಯವರೊಂದಿಗೆ ಮೂರು–ನಾಲ್ಕು ತಿಂಗಳು ಇರಬಹುದು. ಅವಳು ತನ್ನ ಮನಸ್ಸನ್ನು ಅದಕ್ಕೆ ಹೊಂದಿಸಿಕೊಂಡದ್ದೇ ಆದರೆ ಅವಳು ತನ್ನ ಮಾವ ವೀರಮ್‌ದೇವನ ಮೇಲೆ ಮೋಡಿ ಮಾಡಿ ಇನ್ನೊಂದು ತಿಂಗಳು ಅಲ್ಲೇ ಉಳಿಯಬಹುದು. ಇದು ಈಡೇರಲ್ಪಡುತ್ತಿರುವ ಅವಳ ಕೊನೆಯ ಬಯಕೆ. ತನ್ನ ತವರಿನೊಂದಿಗೆ ಎಲ್ಲ ಬಗೆಯ ಸಂಬಂಧಗಳನ್ನು ಕಡಿದುಕೊಳ್ಳುತ್ತಿರುವುದಕ್ಕೆ ಅವಳಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಈ ಅವಕಾಶ ನೀಡುತ್ತಿರುವುದು. ಈ ದಿನ ಮಗಳಾಗಿದ್ದು, ಮರುದಿನವೇ ಹೆಂಡತಿಯಾಗಿ ಬಿಡಲು ಸಾಧ್ಯವಿಲ್ಲ, ತವರು ಮನೆಗೂ ಗಂಡನ ಮನೆಗೂ ಇರುವ ದೂರ ಅಪರಿಮಿತವಾದ್ದು. ಅದನ್ನು ರಾತ್ರೋರಾತ್ರಿ ಸೇರಿಸಿಬಿಡಲು ಹೊರಟರೆ, ಅದರ ಪರಿಣಾಮಗಳು ಅತ್ಯಂತ ಆಘಾತಕಾರಿಯಾಗಿ ಬಿಡುತ್ತವೆ ಎಂಬುದು ಈ ಸಂಪ್ರದಾಯದ ವಿನ್ಯಾಸವನ್ನು ರೂಪಿಸಿದವರಿಗೆ ಚೆನ್ನಾಗಿ ತಿಳಿದಿತ್ತು.

ಈ ಸಲ ತವರಿಗೆ ಹೋದಾಗ ತಾನೇನು ಮಾಡಬೇಕೆಂದು ಅವಳಿಗೆ ಗೊತ್ತಿತ್ತು. ತನ್ನ ಹಳ್ಳಿಯ ತನ್ನ ಮನೆ ತನ್ನ ಕುದುರೆ ತನ್ನ ಬಾವಿ, ತನ್ನ ತಂದೆ, ತಾತ, ತನ್ನ ಚಿಕ್ಕಮ್ಮಂದಿರು, ದೊಡ್ಡಮ್ಮಂದಿರು ಊರಿನ ದೇವಾಲಯದ ಮೂರ್ತಿ, ಮರಳುಗಾಡಿನ ಮರಳು, ಮರಗಳು, ಕುಮಾತಿಯ, ಖಜರಿ ಮತ್ತು ಕೈರ್ ಈ ಎಲ್ಲದರ ಚಿತ್ರಗಳನ್ನು ತನ್ನ ನೆನಪಿನಲ್ಲಿ ಅಚ್ಚೊತ್ತಿಕೊಳ್ಳಬೇಕು. ತನ್ನ ಶಾಲೆಯ ಘಂಟಾನಾದ, ಮರಳನ್ನು ತೂರುವ ಸುಂಟರಗಾಳಿಯ ಸೂಸೂ ಶಬ್ದ, ಮರಳ ಮೇಲೆ ಮಳೆ ಹನಿ ಬಿದ್ದಾಗ ಆಗುವ ಬುಸ್ ಬುಸ್ ಶಬ್ದ, ಒಂದು ತೆಳು ಬಟ್ಟೆಯಿಂದ ಅವಳ ಚಿಕ್ಕಮ್ಮ ಅವಳ ಒದ್ದೆ ಕೂದಲ ನೀರನ್ನು ತೊಡೆದು ಹಾಕಲು ಕೂದಲನ್ನು ಗಸಗಸ ತೀಡುವ ರೀತಿ, ಬಾವಿಯ ಕಟ್ಟೆಯ ಮೇಲಿಟ್ಟಿರುವ ನೀರಿನ

ಪಾತ್ರೆಯು ಕೆಳಗೆ ಆಳದಲ್ಲಿರುವ ನೀರಿಗೆ ತಾಕುವ ಶಬ್ದ, ಬಿಸಿಲಿಗೆ ಮರಳು ಕಾದಾಗ ಹೊಮ್ಮುವ ಗಂಧ, ಎಣ್ಣೆ ಮತ್ತು ಮಸಾಲೆಗಳನ್ನು ಕರಿಯುವ ದೊಡ್ಡ ಪಾತ್ರೆಯ ಕಟು ವಾಸನೆ, ದಿನವೆಲ್ಲ ತಮ್ಮ ಹೊಲ ಗದ್ದೆಗಳನ್ನು ನೋಡಿಕೊಂಡು ಹಿಂತಿರುಗಿದ ಅಪ್ಪನ ಕಂಕುಳ ಕೆಳಗಿನಿಂದ ಹೊಮ್ಮುತ್ತಿದ್ದ ಬೆವರಿನ ವಾಸನೆ, ತಮ್ಮ ತೋಟದಲ್ಲಿ ಬೆಳೆದು ನಿಂತಿದ್ದ..... ಎಲೆಗಳ ಕಟು ವಾಸನೆ ಇವೆಲ್ಲವನ್ನೂ ಅವಳ ಸ್ಮೃತಿಪಟಲದಲ್ಲಿ ಅಂಕಿಸಿಕೊಳ್ಳಬೇಕು. ಆ ನೆನಪುಗಳು ಅವಳ ಜೀವನ ಪರ್ಯಂತ ಉಳಿದಿರಬೇಕು. ಅವಳು ಮರಳಿ ಬಂದು ತಮ್ಮನ್ನು ನೋಡಿಹೋಗಲು ಅವು ಅನುಮತಿಯನ್ನೇನೋ ನೀಡುತ್ತವೆ. ಆದರೆ ಈ ಸಲದ ಅವಳ ಭೇಟಿ ಖಂಡಿತವಾಗಿಯೂ ವಿದಾಯದ ಭೇಟಿ. ತನ್ನ ತಂದೆ ತಾತಂದಿರ ಮನೆಯಲ್ಲಿ ಅವಳು ಕೊನೆಯದಾಗಿ ತಂಗುವುದು.

ಹೆಚ್ಚಿಗೆ ಒಂದು ತಿಂಗಳ ಕಾಲ ತಾನು ಅಲ್ಲಿ ಉಳಿದುಕೊಳ್ಳಲು ಅವಳು ತನ್ನ ಸೋದರಮಾವನನ್ನು ಮನವೊಲಿಸಿ ಪುಸಲಾಯಿಸಬೇಕಾಗಿ ಇರಲಿಲ್ಲ. ಅವಳು ಮನೆಬಿಟ್ಟು ಹೋಗುವ ಯೋಚನೆಯನ್ನು ಸಹಿಸುವುದು ಕೂಡ ಅವನಿಗೆ ಸಾಧ್ಯವಾಗಿರಲಿಲ್ಲ. ಅವನಿಗೆ ಅವಳು ತನ್ನ ಸೋದರಿಯ ಮಗಳು ಅನ್ನುವ ಕಲ್ಪನೆಯೇ ಎಂದಿಗೂ ಇರಲಿಲ್ಲ. ಅವಳು ಅವನ ಮಗಳು, ಅವರ ಅಪ್ಪನ ಮಗಳಲ್ಲ, ಅದರಿಂದಾಗಿಯೇ ಜನ್ಮ ಕೊಟ್ಟ ಅಪ್ಪ ಮತ್ತು ಸಾಕಿದ ಅಪ್ಪನ ವಿಷಯ ಬಂದಾಗ ಇಬ್ಬರಿಗೂ ಜಗಳ ಆಗುತ್ತಿತ್ತು. ಆದರೆ ಆ ಹೆಚ್ಚಿನ ಒಂದು ತಿಂಗಳು ಬೇಗನೆ ಮುಗಿದು ಹೋದದ್ದರಿಂದ ಅಪ್ಪನಿಗಾಗಲಿ, ಮಾವನಿಗಾಗಲಿ ವಾದ ಮಾಡುವ ಧೈರ್ಯವಾಗಲಿಲ್ಲ.

'ಯಾರದು'? ಅವನ ದನಿ ಮೆದುವಾಗಿತ್ತು.

ಅವಳು ಉತ್ತರಿಸಲಿಲ್ಲ. ಅವಳು ಹಿಂತಿರುಗಿ ಆಗಲೇ ಏಳು ವಾರವಾಗಿತ್ತು. ಪ್ರತಿ ರಾತ್ರಿಯೂ ಅವನು ಇದೇ ಪ್ರಶ್ನೆ ಕೇಳುತ್ತಿದ್ದನು. ಅವಳು ಇಲ್ಲಿಂದ ಹೊರಡುವುದಕ್ಕಿಂತ ಮೊದಲಿಗಿಂತಲೂ ಹೆಚ್ಚು ಪೀಡಿತನಂತೆ ಕಾಣುತ್ತಿದ್ದನು. ಅವನು ಬಾಯಿ ಭದ್ರಪಡಿಸಿಕೊಂಡಿದ್ದನು. ಇನ್ನು ಅವನ ಕಣ್ಣುಗಳೋ ಅವರ ಮನೆಯಲ್ಲಿನ ನೂರಡಿ ಆಳದ ಬಾವಿಯ ತಳದಲ್ಲಿನ ನೀರಿನ ಹಾಗೆ ಕಂಡವು. ಅಲ್ಲಿಂದ ಮುಂದಕ್ಕೆ ಅವನೆಂದೂ ರಾತ್ರಿಯ ಹೊತ್ತು ನಿದ್ರಿಸಲು ಪ್ರಯತ್ನಿಸಲಿಲ್ಲ. ಅವನ ನಿಲುವು ಸದಾ ನೇರ. ಅನೇಕ ವರ್ಷಗಳ ಕಾಲದ ಸೇನಾ ತರಬೇತಿಯಿಂದ ಅಭ್ಯಾಸವಾಗಿದ್ದದ್ದನ್ನು ಅವನ ಶರೀರ ಮರೆಯಲು ಸಾಧ್ಯವಾಗಲಿಲ್ಲ. ಬೆಳಿಗ್ಗೆ ಆರು ಗಂಟೆಯ ಹೊತ್ತಿಗೆಲ್ಲ ಕೆಲಸಕ್ಕೆ ಹಾಜರಾಗುವುದು, ತನ್ನ ಕೈ ಕೆಳಗಿನ ಸಚಿವ ಖಾತೆಗಳ ವ್ಯವಹಾರಗಳನ್ನು ನೋಡಿಕೊಳ್ಳುವುದು, ವ್ಯವಹಾರದ ವಿಷಯ ಮಾತನಾಡುವುದು, ಸಮರ ತಂತ್ರಗಳನ್ನು ರೂಪಿಸುವಲ್ಲಿ ತಂದೆಗೆ ನೆರವಾಗುವುದು. ಅಧಿಕೃತ ಸಮಾರಂಭಗಳಿಗೆ ಹಾಜರಾಗುವುದು, ಗುರುವಾರಗಳಂದು ಸಣ್ಣ ವ್ಯಾಜ್ಯಗಳ ನ್ಯಾಯಾಲಯ ಸಭೆಗಳ ಅಧ್ಯಕ್ಷತೆ ವಹಿಸುವುದು, ಹೊಸ ವರ್ಷದ ರಾತ್ರಿ ಇಸ್ಪೀಟಾಡುವುದು ಇದೆಲ್ಲವನ್ನೂ ನಿರ್ವಹಿಸಿದ್ದು, ಒಂದು ಖಾಲಿ ಚಿಪ್ಪು. ಆದರೆ ಅಲ್ಲಿ ಯಾವ ವ್ಯಕ್ತಿಯೂ ಇರುತ್ತಿರಲಿಲ್ಲ. ಗೊತ್ತಿಲ್ಲದಿರುವ ನೋವು ಮತ್ತು ಸತ್ಯ ಪತ್ತೆಯಾಗಿ ಬಿಡಬಹುದೆಂಬ ಭಯ ಮಾತ್ರ.

"ನಿನ್ನನ್ನು ಯಾರಿಗೆ ಕೊಡಬೇಕು ಅಂತ ನಿಶ್ಚಿತಾರ್ಥ ಆಗಿತ್ತು? ನನಗೆ ತಿಳಿಯುವ ಹಕ್ಕಿದೆ"

ಅವನಿಗೆ ಖಂಡಿತ ತಿಳಿಯುವ ಎಲ್ಲ ಹಕ್ಕೂ ಇತ್ತು. ದೈವೇಚ್ಛೆ ಇದ್ದರೆ ಆಕೆ ಅವನನ್ನು ತನ್ನ ಎದೆಗೆ ಅವಚಿಕೊಂಡು ಸುಡುತ್ತಿರುವ ಅವನ ಹುಬ್ಬನ್ನು ತಂಪು ಮಾಡಿ, ಯಾತನೆಗೊಳಗಾದ ಅವನ ದೇಹವನ್ನು ಸಾಂತ್ವನಗೊಳಿಸಬಲ್ಲಳು.

ಆದರೆ ನಿನ್ನ ಪ್ರಿಯನ ಹೆಸರನ್ನು ನೀನು ಹೇಳುವಂತಿಲ್ಲ ಎಂಬುದು ಅವನಿಗೆ ತಿಳಿಯದೆ?

ಅವನು ದಿನವೂ ಸಂಜೆ ಹೊತ್ತು ತಡವಾಗಿ ಬರತೊಡಗಿದ. ಒಳಗೆ ಬಂದ ಕೂಡಲೇ ಅಲ್ಲಿದ್ದ ಸೇವಕಿಯರಿಗೆ ಮತ್ತು ಹಿಜಡಾಗಳಿಗೆ ಮತ್ತು ಕೌಸಲ್ಯಳಿಗೆ ಸಹ ಅಲ್ಲಿಂದ ಜಾಗ ಬಿಟ್ಟು ಹೊರಡುವಂತೆ ಹೇಳಿದನು. ಅವರುಗಳು ಕಿಸಿ ಕಿಸಿ ಕುಲು ಕುಲು ನಗುತ್ತಿದ್ದರು.

ಅವಳು ಬೆಳ್ಳಿ ತಟ್ಟೆಯಲ್ಲಿ ಊಟ ತಂದಿಟ್ಟಳು, ಅವನು ಅದನ್ನು ಕಾಲಿನಿಂದ ಒದೆದು ಬಿಟ್ಟನು.

"ನೀನು ಯಾಕೆ ನನ್ನನ್ನು ಮದುವೆಯಾದೆ? ನಾನೇನೂ ನಿನಗೆ ಬಲವಂತ ಮಾಡಿರಲಿಲ್ಲ."

ಇಲ್ಲ, ಅವನು ಒತ್ತಾಯ ಮಾಡಿರಲಿಲ್ಲ ಅವಳು ತನ್ನ ಅತ್ತೆಗೆ ಹೇಳಬೇಕೆಂದಿದ್ದಳು. ಆದರೆ ಅವಳು ಮೊದಲು ತಬ್ಬಿಬ್ಬುಗೊಂಡವಳಂತೆ ಕಂಡಳು. ಆಮೇಲೆ ನಕ್ಕು ತನ್ನ ದಿಗ್ಭ್ರಮೆಯನ್ನು ಮುಚ್ಚಿ ಹಾಕಿದಳು. ಮತ್ತೆ ಅವಳು ಆ ವಿಷಯವನ್ನು ಪ್ರಸ್ತಾಪಿಸಿದಾಗ ಅವಳ ಅತ್ತೆ ತಾಳ್ಮೆ ಕಳೆದುಕೊಂಡಿದ್ದಳು. "ಈ ಹುಡುಗಾಟವನ್ನು ಇನ್ನು ಸಾಕು ಮಾಡು. ಅವನು ಒಬ್ಬ ಸುಂದರ ಯುವಕ. ರಾಜಕುಮಾರ. ಕೇವಲ ರಾಜಕುಮಾರ ಅಲ್ಲ; ಚಿತ್ತೂರು ಸಾಮ್ರಾಜ್ಯದ ಮಹಾರಾಜ ಕುಮಾರ (ಜೇಷ್ಠ ರಾಜಕುಮಾರ). ಕೃತಘ್ನಳಾಗಬೇಡ. ನಿನೊಬ್ಬಳೇ ಅಲ್ಲ ಮದುವೆ ಆಗುತ್ತ ಇರುವವಳು. ನಿಶ್ಚಿತಾರ್ಥ ಎರಡು ಕುಟುಂಬಗಳನ್ನು ಬೆಸೆಯುತ್ತದೆ."

ಆಮೇಲೆ ಅವನು ಊಟದ ತಟ್ಟೆಯನ್ನು ಒದೆಯುವುದನ್ನು ನಿಲ್ಲಿಸಿದನು. ಸಿಟ್ಟಿನಿಂದ ಅವನ ದೇಹ ಕಂಪಿಸಿತು. ಅವನು ಮುಖ ತಿರುಗಿಸಿದನು.

ಒಂದು ಮಧ್ಯಾಹ್ನ ಅರಮನೆಯಲ್ಲಿ ಎಲ್ಲರೂ ನಿದ್ರಿಸುತ್ತಿದ್ದರು. ರಾಜಕುಮಾರಿ ದೇವರ ಪೀಠದ ಹತ್ತಿರ ಕೂತು ಬರೆಯುತ್ತಾ ಇದ್ದಾಗ ಕೌಸಲ್ಯ ಅವಳ ಕೊಠಡಿಯೊಳಕ್ಕೆ ಬಂದಳು.

"ಮಹಾರಾಜಕುಮಾರರಿಗೆ ನೀನು ಮಾಡುತ್ತಿರುವುದಾದರೂ ಏನು ರಾಜಕುಮಾರಿ? ಅವರು ನವೆದು ಹೋಗುವಂಥ ಅದೆಂಥಾ ರೋಗಕ್ಕೆ ಅವರನ್ನು ಗುರಿ ಮಾಡಿದ್ದೀ ನೀನು? ಮಾತಾಡು ಹೆಣ್ಣೆ."

ಬರೆಯುತ್ತಿದ್ದ ಲೇಖನಿಯನ್ನು ಅತ್ತ ಇಟ್ಟು ಬರೆಯುತ್ತಿದ್ದ ಹಾಳೆಗಳನ್ನು ಮುಚ್ಚಿಟ್ಟಳು.

"ನೀನು ಅವರ ಮೇಲೆ ಅದೇನು ಮಾಟ ಮಾಡಿದ್ದಿ? ನೀನು ನಿನ್ನ ಪ್ರಣಯದಾಟದಿಂದ ಅವರನ್ನು ಕೊಂದು ಬಿಡುವೆ. ಈಗ ಕೆಲವು ವಾರಗಳಿಂದ ನಿನ್ನನ್ನು ನೋಡಿದ್ದೀನಿ. ಕೆಲಸ ಮುಗಿಸಿಕೊಂಡು ಅವರು ಸಾಯಂಕಾಲ ಬರುತ್ತಾರೆ. ಎಲ್ಲರನ್ನು ಆಚೆಗೆ ಅಟ್ಟುತ್ತಾರೆ. ಬಾಗಿಲು ಬೀಗ ಹಾಕುತ್ತಾರೆ. ನಿಮ್ಮಿಬ್ಬರ ಮಧ್ಯೆ ಯಾವತ್ತೂ ಮಾತುಕತೆಯಿಲ್ಲ. ಇದೆಯಾ? ರಾತ್ರಿ ಮೇಲೆ ರಾತ್ರಿ ಇಡೀ ರಾತ್ರಿಯೆಲ್ಲಾ ಅವರನ್ನು ಹತ್ತಿರ ಇಟ್ಟುಕೊಂಡಿರುತ್ತೀಯಲ್ಲಾ ಹೆಣ್ಣೆ, ನಿನಗೆ ಅದಿನ್ನೆಂಥ ತಣಿಯದ ಹಸಿವು? ಅವರಿಗೆ ಅದಿನ್ನೆಂಥ ಅದ್ಭುತ ಮಾಟ ಮಾಡಿಸಿದ್ದೀ ನೀನು, ಅವರು ಅವರನ್ನು ಪ್ರೀತಿಸುವ ಬೇರೆ ಎಲ್ಲರನ್ನು ದೂರ ಇಟ್ಟುಬಿಟ್ಟಿದ್ದಾರೆ. ಅವರಿಗಾಗಿ ಜೀವ ಕೊಡುವಂಥ ನನ್ನನ್ನೂ"

* * *

ಒಂದೆರಡು ತಿಂಗಳ ನಂತರ ಮತ್ತೆ ಬಂದಳು.

"ಅವರು ಇಲ್ಲಿ ಇಲ್ಲದೆ ಇದ್ದಾಗ ಅದು ಹೇಗೆ ಯಾವಾಗಲೂ ಬರೀತಾ ಇರುತ್ತೀಯಲ್ಲ"?

ಅವಳು ನಿಧಾನವಾಗಿ ತಲೆ ಎತ್ತಿ ತನ್ನ ಬರವಣಿಗೆಯ ಸಾಮಗ್ರಿಗಳನ್ನೆಲ್ಲಾ ಅತ್ತ ಸರಿಸಿದಳು. ಕೌಸಲ್ಯ ಆತಂಕಗೊಂಡವಳಂತೆ ಕಂಡಳು. ಬಹಳ ಹೊತ್ತು ಅವಳು ಮೌನ ತಾಳಿದಳು. ಅದು ಹೇಗೆ ಅಂದರೆ ಅವಳ ಮನಸ್ಸಿನಲ್ಲಿ ಏನೋ ಹೇಳಬೇಕೆಂದು ಇದೆ. ಆದರೆ ತನ್ನ ಭಾರವನ್ನು ಇಳಿಸಿಕೊಳ್ಳಲು ಅವಳಿಗೆ ಸರಿಯಾದ ಪದಗಳು ಸಿಕ್ಕುತ್ತಿಲ್ಲ.

"ನೀನು ಏಕೆ ಅವರಿಗೆ ನಿರಾಕರಿಸುತ್ತೀ?" ಕೌಸಲ್ಯಳಿಗೆ ಇನ್ನು ಹೆಚ್ಚು ಹೊತ್ತು ಅದನ್ನು ಹಿಡಿದಿಟ್ಟುಕೊಳ್ಳಲಾಗಲಿಲ್ಲ. ತಾನು ಅದನ್ನು ಯಾವ ರೀತಿಯಲ್ಲಿ ಹೇಳಿದೆ ಅನ್ನುವುದರ ಕಡೆಗೆ ಲಕ್ಷ್ಯ ಕೊಡಲಿಲ್ಲ.

ರಾಜಕುಮಾರಿಗೆ ಇದಕ್ಕೆ ಹೇಗೆ ಪ್ರತ್ಯುತ್ತರ ಕೊಡಬೇಕೆಂದು ಗೊತ್ತಾಗಲಿಲ್ಲ. ಹಿಂದಿನ ಸಲ ಹಿಡಿದ ದಾರಿಗಿಂತ ಕೌಸಲ್ಯ ಈಗ ಹಿಡಿದ ದಾರಿ ಸಂಪೂರ್ಣ ಭಿನ್ನವಾಗಿತ್ತು. ಈಗ ಅವಳು ರಕ್ಷಿತ ನೆಲೆಯಿಂದ ಹೊರಗೆಸೆಯಲ್ಪಟ್ಟಿದ್ದಳು. ಅವಳಿಗೆ ಇದು ಹೇಗೆ ಗೊತ್ತಾಯಿತು? ಅದು ಸುಮ್ಮನೆ ನೋಡೋಣವೆಂದು ಕತ್ತಲೆಯಲ್ಲಿ ಒಂದು ಕಲ್ಲು ತೂರಿದ್ದೆ? ಅಥವಾ ಅವನು ಅವಳೊಂದಿಗೆ ಮಾತಾಡಿದ್ದನೆ? ಅವನು ಅಷ್ಟೊಂದು ಹೆಮ್ಮೆಯಿಂದ ಬೀಗುತ್ತಿದ್ದ. ಹಾಗಾಗಿ ಅದು ಸಂಭವವೆಂದು ತೋರುತ್ತಿಲ್ಲ. ಅವಳ ಪ್ರಶ್ನೆಗೆ ಉತ್ತರಿಸುವುದರಲ್ಲೇನು ಅರ್ಥವಿದೆ? ಎಷ್ಟೇ ವಿವರಣೆ ನೀಡಿದರೂ ಯಾರಿಗೂ ಅರ್ಥವಾಗುವಂತಿರಲಿಲ್ಲ.

"ನಿನಗೆ ಲೈಂಗಿಕ ಆಸಕ್ತಿ ಇಲ್ಲವೆ? ನಿನಗೆ ನಿನ್ನ ಶರೀರ ಇಷ್ಟವಾಗುವುದಿಲ್ಲವೆ? ಅವರನ್ನು ಯಾಕೆ ಹೆಣಗಾಡಿಸುತ್ತೀಯಾ? ನಿನಗೇನು ಖಾಯಿಲೆ ಹೆಣ್ಣೆ?"

ಕೌಸಲ್ಯ ತನ್ನ ಕೈಚಾಚಿ ಮೃದುವಾಗಿ ಅವಳ ಕೆನ್ನೆಯನ್ನು ನೇವರಿಸಿದಳು. "ಮಗು ನೀನು ಏಕಾಂಗಿಯೇ? ತವರುಮನೆ ತಪ್ಪಿ ಹೋಯಿತು ಅಂತ. ಅನ್ನಿಸುತ್ತದೆಯೇ? ನಿನ್ನನ್ನು ನೀನೆ ನೋಡಿಕೋ. ನಿನ್ನ ಮುಖದ ಮೇಲೆ ಒಂದೇ ಒಂದು ಕಲೆಯಾಗಲಿ, ಗುರುತಾಗಲಿ ಇಲ್ಲ. ನಿನ್ನ ಮೈಬಣ್ಣದ ಹಾಗೆ ನಿನ್ನ ಜೀವನ ಕೂಡ ಕುಂದಿಲ್ಲದ್ದು. ಹಾಗೂ ಬೇರೆ ಯಾರೂ ಸ್ಪರ್ಶಿಸದೇ ಇರುವಂಥದ್ದು. ನೀನು ಎಂಥಾ ಸುರಕ್ಷಿತವಾದ ಬದುಕನ್ನು ಬದುಕಿದ್ದೀ ಎಂದರೆ, ಕ್ರೌರ್ಯ ಮತ್ತು ದ್ವೇಷ ಎಂದರೇನೆಂದು ನಿನಗೆ ತಿಳಿದಿಲ್ಲ. ನಿನ್ನಲ್ಲಿ ಯಾವುದೇ ಹಮ್ಮು ಇಲ್ಲ. ಇರುವುದೆಲ್ಲ ಮುಗ್ಧತೆ ಮಾತ್ರ. ಅದೂ ಒಂದು ಥರಾ ಅಷ್ಟೇನೂ ಒಳ್ಳೆಯದಲ್ಲದ ಅಹಂಕಾರವಿರಬೇಕು; ನನಗೆ ಗೊತ್ತಿಲ್ಲ. ಯಾರಾದರೂ ನಿನ್ನ ಬಗ್ಗೆ ಕೆಟ್ಟದಾಗಿ ಅಥವಾ ತುಚ್ಛವಾಗಿ ನಡೆದುಕೊಂಡಿದ್ದಾರೆಯೇ? ನಿನಗೆ ನೋವಾಗುವ ಹಾಗೆ ನಾವೇನಾದರೂ ಅಂದಿದ್ದೇವೆಯೇ?"

ಅವಳು ತಲೆ ಅಲ್ಲಾಡಿಸಿದಳು. ಆದರೆ ಏನೂ ಮಾತಾಡಲಿಲ್ಲ.

"ನೀನು ಅವರನ್ನು ಕೊಲ್ಲುತ್ತಾ ಇದ್ದೀಯ. ನಿನಗೆ ಅದು ಅರ್ಥವಾಗುತ್ತದೆ, ಅಲ್ಲವೆ? ನನಗೆ ಗೊತ್ತು ಅವರು ಬದುಕಿರುತ್ತಾರೆ, ಆದರೆ ಜೀವಂತವಾಗಿರುವುದಕ್ಕಿಂತ ಹೆಚ್ಚಾಗಿ ಸತ್ತ ಹಾಗೆ ಇರುತ್ತಾರೆ ಅಂತ." ಕೌಸಲ್ಯ ಅವಳ ಭುಜಗಳನ್ನು ಹಿಡಿದು ಜೋರಾಗಿ ಅಲ್ಲಾಡಿಸಿದಳು. "ಮಹಾರಾಜ್ ಕುಮಾರರಿಗೇನಾದರೂ ಆದರೆ ನಾನು ನಿನ್ನನ್ನು ಕೊಂದು ಬಿಡುತ್ತೇನೆ." ಅವಳ ಭುಜದ ಮೇಲಿಂದ ಕೈ ತೆಗೆದಳು. ರಾಜಕುಮಾರಿಯ ಕಡೆಯಿಂದ ಇದಕ್ಕೆ ಪ್ರತಿರೋಧವೇನೂ ಇರಲಿಲ್ಲ. ಸಂಕಷ್ಟ ಸ್ಥಿತಿಗೆ ಸಿಲುಕಿದ ಪ್ರಾಣಿಯ ಹತಾಶ ಮನೋಭಾವವಿತ್ತು. "ಅದು ನಾನೆ? ನಾನು ಇಲ್ಲಿರೋದರಿಂದ ನಿನಗೆ ಅಸಹ್ಯ ಅನ್ನಿಸುತ್ತಿದೆಯೆ? ನಾನು ಶಾಶ್ವತವಾಗಿ ಹೋಗಿಬಿಟ್ಟರೆ ಒಳ್ಳೆಯದು ಅನ್ನಿಸುತ್ತದೆಯೇ? ಒಂದು ವೇಳೆ ಹಾಗಿದ್ದರೆ, ನನಗೆ ಎಷ್ಟೇ ಕಷ್ಟವಾದರೂ ನಾನು ಹೊರಟು ಹೋಗುತ್ತೇನೆ.

ನಿನಗಾಗಲಿ, ಅವರಿಗಾಗಲಿ ನಾನು ಎಂದೂ ನನ್ನ ಮುಖ ತೋರಿಸುವುದಿಲ್ಲ. ಹೇಳು ಹೆಣ್ಣೆ, ಹೇಳಿ ಬಿಡು ಸಾಕು. ರಾಜಕುಮಾರರ ಕಷ್ಟವನ್ನು ಕೊನೆಗಾಣಿಸು."

ಕೌಸಲ್ಯ ನಿಲ್ಲಿಸಿ ಬಿಟ್ಟಳು. ಅಲ್ಲಿಂದ ಹೊರ ನಡೆದಳು. ಆದರೆ ಮರುಕ್ಷಣವೇ ಹಿಂತಿರುಗಿದಳು.

"ನಾನು ಇಲ್ಲಿಂದ ಹೋಗುವುದಿಲ್ಲ. ನೀನು ಅವರಿಗೆ ಅದೇನು ಮಾಟ-ಮದ್ದು ಮಾಡಿಸಿದ್ದೀಯೋ. ಜೋಕೆ ರಾಜಕುಮಾರಿ. ನಾನು ನಿನ್ನ ಮೇಲೆ ಒಂದು ಕಣ್ಣು ಇಟ್ಟಿರ್ತಿನಿ. ನೀನು ಯಾಮಾರಿ ಯಾವತ್ತಾದರೂ ತಪ್ಪು ಮಾಡೇ ತೀರುತ್ತೀಯಾ. ನಿನ್ನ ಅಡ್ಡ ಮಾರ್ಗದ ಹಂಚಿಕೆಗಳು, ಅದೆಷ್ಟೇ ಸೂಕ್ಷ್ಮವಾದದ್ದಾದರೂ ಅದನ್ನು ನಾನು ಕಂಡು ಹಿಡೀತೀನಿ. ಆಗ ನಿನ್ನನ್ನು ದೇವರು ಕಾಪಾಡಬೇಕು"

ಕೌಸಲ್ಯ ಅವಳ ಮಾತಿಗೆ ತಕ್ಕಂತೆ ನಡೆದುಕೊಂಡಳು. ಭವಾಯಿಯೊಬ್ಬನ ಕಡೆಯಿಂದ ಮಾಡಿಸಿದ ಹುಡುಕಾಟ ಮತ್ತು ಸಂಚಿನ ದೊಡ್ಡ ನಾಟಕದಲ್ಲಿ ಕೌಸಲ್ಯ ಇಪ್ಪತ್ತು ನಾಲ್ಕು ಗಂಟೆಯೂ ರಾಜಕುಮಾರಿಯ ಹಿಂದೆ ಬೀಳಲೂ ಇಲ್ಲ. ಅಥವಾ ವಿದೂಷಕ ಗುಪ್ತಚಾರನ ಹಾಗೆ ಅವಳ ಮೇಲೆ ಕಣ್ಣಿಡಲೂ ಇಲ್ಲ. ಹಾಗೇನಾದರೂ ಇದ್ದರೂ ಮೊದಲಿಗಿಂತ ವಿರಳವಾಗಿ ಅತ್ತ ಬರುತ್ತಿದ್ದಳು.

ಕೌಸಲ್ಯಳಿಗೆ ತುಂಬ ವಿಚಿತ್ರ ಅನ್ನಿಸಿದ್ದು ರಾಜಕುಮಾರಿಯ ಬರವಣಿಗೆಯನ್ನು ಕುರಿತೋ ಇಲ್ಲವೆ ಅದನ್ನು ಅವಳು ತೆಗೆದಿಡುತ್ತಿದ್ದ ರೀತಿಯೋ ಅವಳಿಗೆ ಖಚಿತವಿರಲಿಲ್ಲ. ಈಚಿನ ದಿನಗಳಲ್ಲಿ ಎಲ್ಲ ಕಡೆಯೂ ಎಲ್ಲದರಲ್ಲೂ ಶಕುನಗಳನ್ನು, ಸುಳಿವು ಸೂಚನೆಗಳನ್ನು ಊಹಿಸುವುದರಲ್ಲಿ ಅವಳ ಮನಸ್ಸು ಅತ್ಯಧಿಕವಾಗಿ ತೊಡಗಿರುತ್ತಿತ್ತು. ಒಬ್ಬ ರಾಜಕುಮಾರಿ ಅಕ್ಷರಸ್ಥಳೇ ಆದರೂ ಕೂಡ ಯಾವಾಗಲೂ ಬರೆಯುತ್ತಾ ಇರುವುದು ಎಂದರೆ ಸ್ವಲ್ಪಮಟ್ಟಿಗೆ ಅಸಾಧಾರಣವೆಂಬುದನ್ನು ಒಪ್ಪಲೇಬೇಕು. ಉದಾಹರಣೆಗೆ ಮಹಾರಾಣಿಯವರಾಗಲಿ ಅಥವಾ ಮಹಾಪ್ರಭುಗಳ ನೆಚ್ಚಿನ ರಾಣಿ ಕರ್ಮವತಿಯಾಗಲಿ ಯಾವತ್ತೂ ಏನೂ ಬರೆಯುಲಿಲ್ಲ. ಆ ಕೆಲಸ ಮಾಡಲು ಯಾರಾದರೊಬ್ಬ ಲಿಪಿಕಾರರನ್ನು ಗೊತ್ತು ಮಾಡಿಕೊಳ್ಳುತ್ತಿದ್ದರು.

ಆಕೆ ತಾನು ಬರೆದದ್ದನ್ನೆಲ್ಲಾ ಎಲ್ಲಿ ಅಡಗಿಸಿಟ್ಟಿದ್ದಳು ಎಂಬುದೇ ಒಂದು ರಹಸ್ಯ. ಅವಳ ಕೋಣೆಯಲ್ಲಿದ್ದ ಎಲ್ಲವನ್ನೂ ಕೌಸಲ್ಯ ನೋಡಿದ್ದಳು. ಅದು ಬಹಳ ಸಮಯ ತೆಗೆದುಕೊಂಡಿತು. ಅವಳ ಆ ಕೋಣೆಯನ್ನು ಹುಡುಕಿ ನೋಡಬಹುದಾದ ಒಂದೇ ಒಂದು ಸಮಯವೆಂದರೆ ಅವಳು ಸ್ನಾನಕ್ಕೆ ಹೋಗಿದ್ದಾಗ ಮತ್ತು ಬೇರೆ ಇನ್ಯಾರೂ ಅಲ್ಲಿ ಇಲ್ಲದಿದ್ದಾಗ. ಅವಳು ಯಾವುದನ್ನೂ, ತನ್ನ ಒಡವೆಗಳನ್ನು ಕೂಡ ಬೀಗ ಹಾಕಿ ಭದ್ರ ಪಡಿಸದೇ ಇರುತ್ತಿದ್ದುದು, ಸ್ವಲ್ಪ ಮುಜುಗರವನ್ನುಂಟು ಮಾಡುತ್ತಿತ್ತು. ಅವಳು ಎಲ್ಲವನ್ನೂ ನಂಬುವಂಥ ಒಬ್ಬ ಅವಿವೇಕಿ. ಅದನ್ನು ಹೇಳಿದ ಮೇಲೆ, ಹಾಗಾದರೆ ಆರು ತಿಂಗಳುಗಳಲ್ಲಿ ಬರೆದದ್ದೆಲ್ಲಾ ಎಲ್ಲಿಗೆ ಹೋಯಿತು ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಕೌಸಲ್ಯ ಕುಂಕುಮ್ ಕನ್ವರ್‌ಳ ಸ್ನೇಹ ಬೆಳೆಸಿದಳು. ಹೀಗೇ ಒಂದು ದಿನ ಸಾಂದರ್ಭಿಕವಾಗಿ ಅವಳ ಒಡತಿ ಸದಾ ಬರೆಯುತ್ತಿರುವುದರ ಬಗ್ಗೆ ಪ್ರಸ್ತಾಪಿಸುವುದೇನೂ ಕಷ್ಟವಾಗಲಿಲ್ಲ.

"ಯಾರಿಗೆ ಗೊತ್ತು ಬಹುಶಃ ಅವಳ ತಂದೆಗೆ ಬರೆಯುತ್ತಾ ಇರಬಹುದು. ಅಥವಾ ಅವಳ ಸೋದರಮಾವ, ಅತ್ತೆಗಿರಬಹುದು. ಆದರೆ ನನಗೆ ಹೇಗೆ ತಾನೆ ಗೊತ್ತಾಗಬೇಕು?

ನನಗೆ ಓದುವುದಕ್ಕೂ ಬರೆಯುವುದಕ್ಕೂ ಗೊತ್ತಿಲ್ಲ." ಕುಂಕುಮ್ ಕನ್ವರ್‌ಳ ಮುಖದಲ್ಲಿ ಯಾವುದೇ ವಂಚನೆಯಾಗಲಿ, ಬೇಕೆಂದೇ ಸುಳ್ಳು ಹೇಳುವಂಥದ್ದಾಗಲಿ ಇರಲಿಲ್ಲ.

"ನನಗೆ ತಾನೆ ಎಲ್ಲಿ ಸಾಧ್ಯ" ಎಂದುಕೊಂಡಳು. ಕೌಸಲ್ಯ.

ಕೌಸಲ್ಯ ತಾನು ಊಹಿಸಿದ್ದಂತೆ ಕಡೆಯದೊಂದು ಜಾಗದಲ್ಲಿ, ರಾಜಕುಮಾರಿಯ ದೇವರ ಕೋಣೆಯಲ್ಲಿ ಆ ಎಲ್ಲ ಬರಹ ಅವಳಿಗೆ ಸಿಕ್ಕಿತು. ಅವಳು ಪೂಜಿಸುತ್ತಿದ್ದ. ದೇವ ದೇವತಾ ವಿಗ್ರಹಗಳನ್ನು ಎತ್ತರವಾದೊಂದು ವೇದಿಕೆಯ ಮೇಲೆ ಹಳದಿ ಪೀತಾಂಬರದ ಹಾಸಿನ ಮೇಲೆ ಇಡಲಾಗಿತ್ತು. ಅಲ್ಲಿದ್ದ ದೇವತಾ ವಿಗ್ರಹಗಳೆಂದರೆ, ಕಪ್ಪು ಶಿಲೆಯ ಶಿವಲಿಂಗ, ತುಂಬ ಸುಂದರವಾದ ಸರಸ್ವತಿಯ ಕಂಚಿನ ವಿಗ್ರಹ, ತಾಮ್ರದ ಏಕಲಿಂಗಜೀ ವಿಗ್ರಹ, ರಾಮ ಸೀತೆ, ಲಕ್ಷ್ಮಣರ ವಿಗ್ರಹಗಳು, ಚಿನ್ನದ ಸೂರ್ಯ ವಿಗ್ರಹ, ಪ್ರಶಸ್ತ ಶಿಲೆಯಿಂದ ಮಾಡಿದ ವಿಷ್ಣು ವಿಗ್ರಹ ಹಾಗೂ ಕಪ್ಪು ಅಮೃತಶಿಲೆ (ಸಂಗಮರಮರಿ)ಯಿಂದ ಮಾಡಿದ ಉಗ್ರ ಮುಖ ಭಾವದ ಚಾಮುಂಡಿ ವಿಗ್ರಹ. ಬರಹದ ಹಾಳೆಗಳನ್ನು ತೆಳ್ಳನೆಯ ಹತ್ತಿ ಬಟ್ಟೆಯಲ್ಲಿ ಸುತ್ತಿ ವೇದಿಕೆಯ ಕೆಳಗಡೆ ಇದ್ದ ಖಾನೆಯಲ್ಲಿ ಮಸಿಕುಡಿಕೆ ಮತ್ತು ಲೇಖನಿಗಳ ಸಮೇತ ಸುರಕ್ಷಿತವಾಗಿ ಇಡಲಾಗಿತ್ತು.

ಅಲ್ಲಿ ಇದ್ದದು ಕಡಿಮೆ ಎಂದರೆ ನಾಲ್ಕು ನೂರು-ಐದುನೂರು ಹಾಳೆಗಳು. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಹಾಳೆಗಳಲ್ಲಿ ಬರೆಯಲಾಗಿತ್ತು. ಒಂದೊಂದು ಅಕ್ಷರವೂ ಅತ್ಯಂತ ಜತನದಿಂದ ಕೊರೆಯಲಾದ ಕಪ್ಪು ಮೂಗುತಿಯ ಹಾಗೆ ಅತ್ಯಂತ ಸುಂದರವಾಗಿ ರೂಪಿತವಾಗಿತ್ತು ಮತ್ತು ಕೆಲವೊಂದು ಸಲ ಇಡೀ ವಾಕ್ಯ ಕಪ್ಪು ಮುತ್ತುಗಳಿಂದ ನಿರ್ಮಿತವಾದ ಕಂಠಹಾರದ ಹಾಗೆ ಎದ್ದು ಕಾಣುತ್ತಿತ್ತು. ಆದರೆ ಎಲ್ಲ ಸಾಲುಗಳನ್ನು ಒಟ್ಟಾಗಿ ತೆಗೆದುಕೊಂಡಾಗ ಹಾಳೆಯ ಮೇಲಿನ ಒಟ್ಟಾರೆ ಕುಸುರಿ ಕೆಲಸವು ಗೊಂದಲದ ಹಾಗೂ ಜಟಿಲವಾದ ಅವ್ಯವಸ್ಥೆಯ ಗೂಡಾಗಿತ್ತು. ಆ ಬರಹದಲ್ಲಿ ಅವಳ ಮನಸ್ಸಿನ ಉದ್ರಿಕ್ತ ಭಾವಗಳನ್ನು ಹಿಡಿದಿಡಲು ಯತ್ನಿಸುತ್ತಿರುವ ಗೀಚು ಬರವಣಿಗೆಯಲ್ಲಿದ್ದ ಉದ್ದುದ್ದನೆಯ ಸಾಲುಗಳಿದ್ದುವು. ಈ ಬರವಣಿಗೆ ರಾಜಕುಮಾರಿಯದೆಂದು ನಂಬಲು ಕೌಸಲ್ಯಳಿಗೆ ಸಾಧ್ಯವಾಗಲಿಲ್ಲ. ಕಾರಣ ಅವಳು ಅಷ್ಟೊಂದು ಅಂದದ, ಅಚ್ಚುಕಟ್ಟಾದ ಮತ್ತು ಅಕ್ಷುಬ್ಧ ವ್ಯಕ್ತಿ. ಅವಳಿಗೆ ಎಲ್ಲವೂ ಹಾಗೆ ಆಗಲೇಬೇಕಿತ್ತು; ಬೇರೆ ಮಾರ್ಗವೇ ಇಲ್ಲ. ತಾನು ಬಯಸಿದ ಹಾಗೆಯೇ ವಸ್ತುಗಳು ಸಂಗತಿಗಳು ಒದಗಿಬರಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಲು ಬಹುಮಟ್ಟಿಗೆ ಯಾವಾಗಲೂ ಎಲ್ಲವನ್ನೂ ತಾನೇ ಮಾಡುತ್ತಿದ್ದಳು. ಅವಳ ಬರವಣಿಗೆ ನೋಡಿದರೆ, ಅದರಿಂದ ವ್ಯಕ್ತವಾಗುವುದು ಒಬ್ಬ ಅತಿರೇಕಗಳ, ಪ್ರಚಂಡ ಏರಿಳಿತಗಳ ಮನಸ್ಥಿತಿಯ ಹಾಗೂ ಅವ್ಯವಸ್ಥೆಯ ಮತ್ತು ಗೊಂದಲಗಳ ವ್ಯಕ್ತಿ.

ಕೌಸಲ್ಯ ನಕ್ಕಳು. ಓದಲು ಗೊತ್ತಿಲ್ಲದ ಮತ್ತು ಅವಳಿಗೆ ಗೊತ್ತಿದ್ದ ಮಟ್ಟಿಗೆ ಅಕ್ಷರಗಳು ಯಾವುದೋ ಬೇರೆ ಭಾಷೆಯಲ್ಲಿದ್ದಿರಬಹುದು. ಆದರೆ ಒಬ್ಬ ಅಡ್ಡ ಕಸುಬಿ ಸ್ವಭಾವ ದರ್ಶಕಳಾಗಿ ಅವಳು ಅಷ್ಟೇನೂ ಅದರಲ್ಲಿ ನಿಷ್ಪ್ರಯೋಜಕಳಲ್ಲ. ಅಂಗೈ ಮೇಲಿನ ಗೆರೆಗಳನ್ನು ಅರ್ಥೈಸುವ ಹಸ್ತ ಸಾಮುದ್ರಿಕ ಶಾಸ್ತ್ರಜ್ಞಳಾಗಿಯೋ, ಅಥವಾ ಜಾತಕವನ್ನು ಗುಣಿಸಿ ನೋಡುವ ಹೋರಾರತ್ನವಾಗಿಯೋ ಧಂಧೆ ಪ್ರಾರಂಭಿಸಬಹುದು. ತನ್ನ ಬರಹದ ಕೆಲವು ಹಾಳೆಗಳು ಕಳೆದುಹೋಗಿರುವ ಸಂಗತಿ ರಾಜಕುಮಾರಿಗೆ ಗೊತ್ತಾಗಬಾರದೆಂದು ಅವಳ ಇಚ್ಛೆ. ಅದಕ್ಕಾಗಿ ಆ ಬರಹದ ಹಾಳೆಗಳಲ್ಲಿ ಮಧ್ಯದ ಸುಮಾರು ಐವತ್ತರಷ್ಟು ಹಾಳೆಗಳ ಒಂದು ಕಟ್ಟನ್ನು ತನ್ನ ಕುಪ್ಪಸದೊಳಕ್ಕೆ ಸೇರಿಸಿಕೊಂಡು ಬಿಟ್ಟಳು. ಅದು ನೇರವಾಗಿ

ಹೊಕ್ಕುಳಿನ ಹತ್ತಿರಕ್ಕೆ ಬಂದು ಸೇರಿತು. ಬರೆಹದ ಉಳಿದ ಹಾಳೆಗಳನ್ನು ಹಾಗೆಯೇ ಖಾನೆಯಲ್ಲಿಟ್ಟು ಜಗಲಿಯನ್ನು ರೇಷ್ಮೆಯ ಪೀತಾಂಬರದಿಂದ ಮುಚ್ಚಿದಳು. ವಿಗ್ರಹಗಳನ್ನು ಜತನದಿಂದ ಮತ್ತೆ ಮೊದಲಿದ್ದ ಹಾಗೆಯೇ ಅವುಗಳ ಜಾಗದಲ್ಲಿ ಇಟ್ಟುಬಿಟ್ಟಳು. ಅವಳಿಗೆ ತಿಳಿದ ಮಟ್ಟಿಗೆ ಬೇರೆ ಯಾರಿಗೇ ಆದರೂ ವಿಗ್ರಹಗಳನ್ನು ಕದಲಿಸಿರುವುದಾಗಲಿ, ಅದರ ಕೆಳಗಡೆ ಏನಿದೆ ಅನ್ನುವುದಾಗಲಿ ಹೇಳುವುದು ಅಸಾಧ್ಯ.

ಈಗ ಅವಳ ಹತ್ತಿರ ರಾಜಕುಮಾರಿಯ ಬರವಣಿಗೆಯ ಹಾಳೆಗಳೇನೋ ಇದ್ದುವು. ಆದರೆ ಅವುಗಳನ್ನು ಪತ್ತೆ ಮಾಡಲು ಮತ್ತು ಕದಿಯಲು ಅಷ್ಟೆಲ್ಲಾ ದೂರ ತಾನು ಯಾಕಾದರೂ ಹೋದೆ ಅನ್ನುವುದು ಅವಳಿಗೆ ಅರ್ಥವಾಗಲಿಲ್ಲ. ಅದನ್ನು ತೆಗೆದುಕೊಂಡು ತಾನೇನು ಮಾಡಬೇಕು? ಅದನ್ನವಳು ತನ್ನ ಮಗ ಮಂಗಳನಿಗೆ ತೋರಿಸಬಹುದು. ಅವನಿಗೆ ಅದನ್ನು ಓದಲು ಬರುತ್ತದೆ. ಮಹಾರಾಜಕುಮಾರರೊಂದಿಗೆ ಅವನು ತರಗತಿಗಳಿಗೆ ಹಾಜರಾಗುತ್ತಿದ್ದನು. ಆದರೆ ತಾಯಿ ಮತ್ತು ಮಗನ ಮಧ್ಯೆ ಅನೇಕ ವರ್ಷಗಳಿಂದ ಗಂಭೀರವೂ ಭಯಂಕರವೂ ಆದ ಅಂತರವುಂಟಾಗಿ ಬಿಟ್ಟಿತ್ತು. ಬಾಯಿ ಬಿಟ್ಟು ಏನೂ ಹೇಳಿರಲಿಲ್ಲ. ಏನೊಂದು ಕಾರಣವೂ ಇರಲಿಲ್ಲ. ಆದರೆ ತನ್ನ ಮಗ ತನ್ನನ್ನು ದ್ವೇಷಿಸುತ್ತಾನೆ ಎಂದು ಕೌಸಲ್ಯಳಿಗೆ ಅನುಮಾನವಿತ್ತು. ಅವರಿಬ್ಬರಿಗೂ ಸಮಾನವಾಗಿ ಬೇಕಾಗಿದ್ದ ವ್ಯಕ್ತಿಯೆಂದರೆ ಮಹಾರಾಜ್ ಕುಮಾರ್. ಅವರಿಗೆ ಬದುಕಿನಲ್ಲಿ ಅದಕ್ಕಿಂತ ಹೆಚ್ಚಿಗೆ ಇನ್ನೇನೂ ಇರಲಿಲ್ಲ. ಮಹಾರಾಜ್‌ಕುಮಾರ್ ಸಲುವಾಗಿಯೇ ತಮ್ಮಿಬ್ಬರಲ್ಲಿ ಯಾರಾದರೊಬ್ಬರು ಇನ್ನೊಬ್ಬರನ್ನು ಕೊಲ್ಲುವುದೇನೂ ಅಸಂಭವವಲ್ಲ ಎಂದು ಕೌಸಲ್ಯಳಿಗೆ ಅನ್ನಿಸಿತು.

ಅವಳು ಆ ಬರಹದ ಹಾಳೆಗಳನ್ನು ಒಂದು ವಾರದವರೆಗೂ ತನ್ನ ಬಳಿ ಇಟ್ಟುಕೊಂಡಿದ್ದಳು. ಅನಂತರ ಮಹಾರಾಜ್‌ಕುಮಾರರ ಅರಮನೆಯ ಹೊರಗಡೆ ಪ್ರವೇಶದ್ವಾರದ ಎದುರು ನಿಂತುಕೊಂಡಳು. ಆ ದಿನ ಅವನು ಅವಳನ್ನು ನೋಡಿದ ಕೂಡಲೆ ತನ್ನ ಮದುವೆಯಾದಾಗಿನಿಂದ ಮಾಡುತ್ತಿದ್ದ ಹಾಗೆಯೇ ತನ್ನ ಮುಖವನ್ನು ಅತ್ತ ಸರಿಸಿದನು. ಬಾಗಿಲುಗಳ ಹಿಂದೆ ಇನ್ನೇನು ಮರೆಯಾಗಿಬಿಡುತ್ತಾನೆಂಬ ಹೊತ್ತಿಗೆ ಅವಳು ಅವನನ್ನು ಮೃದುವಾಗಿ – "ಮಹಾರಾಜ್‌ಕುಮಾರ್ ನಿಮಗೇನೋ ಒಂದನ್ನು ತೋರಿಸಬೇಕಾಗಿದೆ." ಎಂದಳು.

"ನನಗೆ ಅದರಲ್ಲಿ ಆಸಕ್ತಿ ಇಲ್ಲ"

"ಅದು ಏನು ಅಂತ ಕಣ್ಣಿಂದ ನೋಡದ ಹೊರತು ಅದು ನಿಮಗೆ ಹೇಗೆ ಗೊತ್ತಾಗುತ್ತೆ'?

"ನನ್ನ ಪಾಡಿಗೆ ನನ್ನನ್ನು ಒಬ್ಬನನ್ನೇ ಬಿಟ್ಟುಬಿಡು."

ಅವಳು ಫಕ್ಕನೆ ಅವನ ಕೈಯನ್ನು ಹಿಡಿದುಕೊಂಡಳು. ಅವನು ಬಿಡಿಸಿಕೊಳ್ಳಲು ಯತ್ನಿಸಿದನು. ಆದರೆ ಅವಳು ಅದನ್ನು ಗಟ್ಟಿಯಾಗಿ ಹಿಡಿದೇ ಇದ್ದಳು.

"ನಾನು ಹೋಗೋದಕ್ಕೆ ಬಿಡು ಕೌಸಲ್ಯ. ನೀನು ಬಿಡದೆ ಹೋದರೆ..."

"ನಾನು ಬಿಡದೆ ಹೋದರೆ ನೀವು ನನ್ನ ಕಪಾಳಕ್ಕೆ ಹೊಡೀತೀರಿ ಹೌದು ತಾನೆ"?

ಅವನೊಮ್ಮೆ ದೀರ್ಘವಾಗಿ ಉಸಿರಾಡಿದ, ಅವನು ಅವಳ ಕಡೆ ನೋಡಲೊಲ್ಲ. "ಇಲ್ಲ ನಾನು ಹೊಡೆಯಲ್ಲ"

ಅವಳು ತನ್ನ ತಲೆಯನ್ನು ಒತ್ತಿದಳು. "ನೀವು ಒಂದು ವೇಳೆ ಹೊಡೆದರೆ ನಾನು ಅದನ್ನು ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳುತ್ತೇನೋ ಇಲ್ಲವೋ ಗೊತ್ತಿಲ್ಲ. ಕೊನೇಪಕ್ಷ ಅದೊಂದು

ರೀತಿಯಲ್ಲಿ ನನ್ನ ಜೊತೆ ಮಾತನಾಡಿದ ಹಾಗೆ ಆಗುತ್ತೆ. ಇತ್ತೀಚೆಗೆ ನಾನು, ನೀವು ಅದನ್ನು ನಡೆಸಲಾರದಂಥ ಸ್ಥಿತಿಗೆ ಬಂದಿದ್ದೀವಿ."

"ನಾನೀಗ ಹೋಗಲಾ"?

"ಅವಳೇನು ಬರೀತಾಳೆ ಅಂತ ನೋಡೋದಕ್ಕೆ ನಿಮಗೆ ಇಷ್ಟವಿಲ್ಲವೇನು"

ಅದು ಅವಳು ಅವನ ಹೃದಯಕ್ಕೆ ಚೂರಿ ಹಾಕಿದಂತಿತ್ತು. ಅವನು ಅಲ್ಲಾಡದೆ ನಿಂತನು. ಅವನ ಭುಜಗಳು ಕುಸಿದವು. ಕಣ್ಣು ರೆಪ್ಪೆಗಳನ್ನು ಮುಚ್ಚಿದನು.

"ನೀನು ಯಾರ ವಿಷಯ ಮಾತಾಡುತ್ತಿದ್ದೀಯಾ"?

"ಯಾರ ವಿಷಯ ಅಂತ ನಿಮಗೆ ಗೊತ್ತು"

"ಅದರಲ್ಲಿ ವಿಶೇಷ ಅನ್ನುವಂಥದ್ದೇನಾದರೂ ಇದೆಯೆ? ನಿನ್ನಂಥ ಅನಕ್ಷರಸ್ಥರಿಗೆ ಅರ್ಥ ಮಾಡಿಕೊಳ್ಳುವುದು ಸ್ವಲ್ಪ ಕಷ್ಟವಾಗಬಹುದು. ಆದರೆ ಬರವಣಿಗೆ ಗೊತ್ತಿರುವಂಥವರು, ಮನೆಯ ಬಂಧು ಮಿತ್ರರಿಗೆ ಏನನ್ನಾದರೂ ಹೇಳಬೇಕೆಂದಿರಬಹುದು."

ಅವನಿಗೇನಾಗಿತ್ತು? ಉದ್ದೇಶಪೂರ್ವಕವಾದ ಇಷ್ಟೊಂದು ಹೆಚ್ಚಿನ ಕ್ರೌರ್ಯ ಯಾಕೆ? ಇದು ಅವನ ಸ್ವಭಾವಕ್ಕೆ ತೀರಾ ಅಪರಿಚಿತವಾದ್ದು.

"ದಿನವೂ ಮಧ್ಯಾಹ್ನದ ಹೊತ್ತು ಬರೀತಾ ಇರೋದು ಮತ್ತು ಈ ಸುದ್ದಿ ಸಮಾಚಾರಗಳನ್ನು ಯಾರಿಗೂ ಕಳಿಸದೆ ಎಲ್ಲರ ಕಣ್ಣಿಂದ ಮರೆಮಾಚಿ ಬಚ್ಚಿಟ್ಟು ಬಿಡೋದಾ" – ಹಾಗೆ ಹೇಳಿ ತನ್ನ ಕುಪ್ಪಸದೊಳಗಿಂದ ರಾಜಕುಮಾರಿ ಬರವಣಿಗೆ ಮಾಡಿದ್ದ ಎಲ್ಲಾ ಹಾಳೆಗಳನ್ನೂ ಅವನಿಗೆ ಕೊಟ್ಟುಬಿಟ್ಟಳು.

"ನನಗೆ ಅದರಲ್ಲಿ ಆಸಕ್ತಿ ಇಲ್ಲ-ಇಲ್ಲ" ಅವನು ಆ ಹಾಳೆಗಳನ್ನು ತನ್ನ ಕೈಯಲ್ಲಿ ಹಿಡಿದು ಕೊಠಡಿಯೊಳಹೊಕ್ಕನು.

* * *

ಆ ದಿನ ರಾತ್ರಿ ಅವನು ಮಲಗಿಕೊಳ್ಳುವ ನೆಪ ಹೂಡಲಿಲ್ಲ. ಕರ್ತವ್ಯದ ಮೇಲಿದ್ದ ಹಿಜಡಾನಿಗೆ ರಾಜಕುಮಾರಿಯನ್ನೂ ಒಳಗೊಂಡಂತೆ ಯಾರನ್ನೂ ಕೊಠಡಿಗೆ ಬಿಡಕೂಡದು ಎಂದು ಹೇಳಿ ಮುಕ್ಕಾಲು ಮಣೆಯ ಮೇಲೆ ಕುಳಿತು ಆ ಎಲ್ಲಾ ಪುಟಗಳನ್ನು ಹತ್ತು, ಹದಿನೈದು, ಒಂದುನೂರು ಸಲ ಓದಿದನು. ಅವುಗಳಲ್ಲಿ ಕೆಲವೊಂದು ಕಡೆ ಕಂಡು ಬಂದ ಅಂಕು ಡೊಂಕಾದ ಬರಹವನ್ನು ಅವನು ಜೋಡಿಸದಾದನು. ಅದು ಪುಟದ ಮಧ್ಯದಿಂದ ಪ್ರಾರಂಭವಾಗಿ ಮುಂದಿನ ಪುಟಕ್ಕೆ ಸಾಗಿ ಹಿಂದಿನ ಪುಟದ ಅಂಚಿನವರೆಗೂ ಬಂದಿರುತ್ತಿತ್ತು. ವಾಕ್ಯವನ್ನು ಅರ್ಧಕ್ಕೆ ಬಿಟ್ಟು ಬೇರೊಂದು ವಾಕ್ಯ ಪ್ರಾರಂಭಿಸಲಾಗಿತ್ತು. ಮತ್ತೆ ಅದನ್ನು ಅಲ್ಲಿಗೇ ಬಿಟ್ಟು ಮೊದಲಿನ ವಾಕ್ಯವನ್ನು ಪೂರ್ತಿ ಮಾಡಲು ಪ್ರಯತ್ನಿಸಲಾಗಿತ್ತು. ಬರವಣಿಗೆಯೆಲ್ಲಾ ಒಂದಕ್ಕೊಂದು ಸಂಬಂಧವಿಲ್ಲದೆ, ಒಂದಕ್ಕೊಂದು ಹೊಂದಿಕೆಯಾಗದೆ ಇದ್ದರೂ ಅದೆಲ್ಲವನ್ನೂ ಒಬ್ಬ ವ್ಯಕ್ತಿಗೆ ಸಂಬೋಧಿಸಿ ಬರೆಯಲಾಗಿತ್ತು. ಅದು ಭಾವೋದ್ರೇಕದ ಹುಚ್ಚು ಆಲಾಪ. ಭಾವಾವೇಶದ ಮತ್ತು ಆಕ್ಷೇಪಣೆಯ ಮಾತುಗಳನ್ನು ಉನ್ಮಾದಕ್ಕೊಳಗಾದವರಂತೆ ತೋಡಿಕೊಳ್ಳುವುದು, ಅತ್ಯಂತ ದಾಸ್ಯಭಾವದ, ದೈನ್ಯದ, ಸಿಟ್ಟಿನ ಕೆರಳಿಕೆಗಳ, ಕೋಪೋದ್ರೇಕದ ಮಾತುಗಳು, ಬಿಗುಮಾನದ ತಿರಸ್ಕಾರಗಳು, ತೀವ್ರವಾದ ನಗ್ನ ಶೃಂಗಾರದ, ಆ ವ್ಯಕ್ತಿಗೆ ತನ್ನೆದುರಿನಲ್ಲಿ ಬಂದು ಕಾಣಿಸಿಕೊಳ್ಳಲು ಮತ್ತು ತನ್ನನ್ನು ಶಾಶ್ವತವಾಗಿ ಮನುಷ್ಯ ಸಮೂಹದಿಂದಲೇ ಬೇರ್ಪಡಿಸಿ ಕರೆದುಕೊಂಡು ಹೋಗಿ ಬಿಡಲು,

ಮತ್ತು ನನ್ನ ಶರೀರದ ಆಸ್ತಿಗಳು ನುಗ್ಗು ನುರಿಯಾಗುವ ತನಕ ನಿನ್ನ ಬಾಹುಗಳಲ್ಲಿ ವೇಗವಾಗಿ ಬಿಗಿಯಾಗಿ ಬಂಧಿಸಿಬಿಡು ಎಂಬ ವಾದಗಳು, ಮೊರೆಗಳು, ತುಂಬಿದ ಭಾಗಗಳು ಸೇರಿರುವ ಬರವಣಿಗೆ. ಅವನೇಕೆ ಬರಲಿಲ್ಲ, ಈ ಪ್ರತಿಷ್ಠೆ ಏಕಾಗಿ, ಅವನನ್ನು ಪಡೆಯಲು ಇಷ್ಟೇಕೆ ಕಷ್ಟ, ಅವನಿಲ್ಲದೆಯೂ ತಾನು ಇರಬಲ್ಲಳು. ಅವನ ಅಗತ್ಯವೇ ತನಗಿಲ್ಲ. ತನಗೆ ತಾನೊಬ್ಬಳೇ ಸಾಕು, ಅವಳು ತನ್ನನ್ನು ತಾನು ಇಲ್ಲವಾಗಿಸಿಕೊಂಡು ಬಿಡುವಳು. ಮಹಾರಾಜ್‌ಕುಮಾರನ ಖಡ್ಗದಿಂದ ತನ್ನೆದೆಗೆ ಇರಿದುಕೊಂಡು ಮಹರಾಜ್ ಕುಮಾರನನ್ನು ಶಾಶ್ವತವಾಗಿ ಬಂಧಮುಕ್ತಗೊಳಿಸಿ ಬಿಡುವಳು, ಆ ಪ್ರೀತಿಯ ಬಡಪಾಯಿಯನ್ನು ತಾನು ಆದೆಷ್ಟು ಗೋಳಾಡಿಸಿದಳು. ಇನ್ನು ಸಾಕು. ತಾನು ಅಮರಣಾಂತ ಉಪವಾಸ ಮಾಡುವಳು. ಈ ಹೊತ್ತಿಗೆ ಅದರ ಐದನೇ ದಿನ. ಆದೆಷ್ಟು ಬಾಯಾರಿಕೆ ತನಗಾಗಿದೆ, ತನ್ನ ಹತ್ತಿರ ಈಗ ಇರುವ ನೀರು ಸ್ವಲ್ಪ ಮಾತ್ರ. ಆಗ ಸೇವಕಿಯು ಜೇನುತುಪ್ಪ ಬೆರೆಸಿದ ತಂಪಾದ ನಿಂಬೆಹಣ್ಣಿನ ಪಾನಕವನ್ನು ತಂದಳು. ಅದು ಅಮೃತದಂತಿತ್ತು. ಓಹ್! ಅದೆಲ್ಲ ಮರೆತುಬಿಡಬೇಕು. ತನ್ನ ಪತ್ರಗಳಿಗೆ ಉತ್ತರಿಸುವಷ್ಟು ಸೌಜನ್ಯವೂ ಇಲ್ಲದವನ, ತ್ವರಿತ ಕರೆಗಳಿಗೆ ಓಗೊಡದವನ ಸಲುವಾಗಿ ತಾನಾದರೂ ಏಕೆ ಉಪವಾಸವಿರಬೇಕು. ಇಂಥವು ಪ್ರತಿದಿನವೂ ಹತ್ತಾರು. ಆದರೆ ತನ್ನ ಪ್ರಿಯೆಯನ್ನು ಪುರಸ್ಕರಿಸುವ ರೀತಿಯೇ ಇದು? ಕೆಲವೊಮ್ಮೆ ಈ ಪ್ರೇಮವೆಂಬುದು ಕೇವಲ ಕುರುಡು ಹಾದಿ. ತಾನು ತನ್ನೆಲ್ಲವನ್ನೂ ಕೊಟ್ಟಾಯಿತು. ಅವನಾದರೋ ಹೌದು ಅಥವಾ ಇಲ್ಲ ಎಂದು ಹೇಳಲಿಲ್ಲ. ಅವನು ತನ್ನ ಪ್ರೀತಿಯನ್ನು ಅಂಗೀಕರಿಸಿಲ್ಲ. ಅದನ್ನು ನಿರಾಕರಿಸಿಯೂ ಇಲ್ಲ. ಇಂಥವನಿಂದ ನನಗೇನಾಗಬೇಕು. ಮತ್ತು ಪ್ರತಿಸ್ಪಂದನವಿಲ್ಲದ ತನ್ನ ಪ್ರೀತಿಯಿಂದ ತನಗೆ ಆಗಬೇಕಾದದ್ದೇನು? ತನ್ನ ಬಗ್ಗೆ ಎಂದೂ ಯೋಚಿಸದಿರುವ, ತನ್ನ ಹೆಸರು ಹಿಡಿದು ಎಂದೂ ತನ್ನನ್ನು ಕರೆಯದ ತಾನು ಹುಟ್ಟಿದ ದಿನವನ್ನು ಎಂದೂ ನೆನಪಿಟ್ಟುಕೊಳ್ಳದ, ತಾನು ಅವನ ಮುಂದೆ ಹಾಡಿದ ಮೊದಲ ಹಾಡನ್ನು ಸ್ಮರಿಸದ ಪ್ರಿಯಕರನೊಂದಿಗೆ ಮದುವೆ ನಿಶ್ಚಯವಾಗಿರುವುದಕ್ಕೆ ಏನು ಅರ್ಥವಿದೆ? ಮತ್ತೆ ಇದ್ದಕ್ಕಿಂದಂತೆ ನೀಲಾಕಾಶ ಕಪ್ಪಾಯಿತು, ಗುಡುಗಾದರೋ, ಪರ್ವತಗಳನ್ನು ಹಣಿಯುವ ಹೆಬ್ಬಾವಾಯಿತು. ಚೇಳಿನ ಮಿಂಚು ಫಳಕ್ಕನೇ ಚಿಮ್ಮಿ ಹೊಳೆದು ಅವಳ ಕಣ್ಣು ಕುಕ್ಕಿತು. ಘನಘೋರ ವರ್ಷ ಅವಳ ಶರೀರವನ್ನು ಚುಚ್ಚಿ ಜಾಲಾಡಿತು. ಆಗ ಅದೋ ಅಲ್ಲಿ ಕಾಣಿಸಿಕೊಂಡ ಅವಳ ಪ್ರಿಯ ಜೀವದ ಗೆಳೆಯ, ದಡವನ್ನು ಮುಟ್ಟಿ ವಾಪಸ್ಸಾದ ಸಾಗರದ ನೀರು, ಮುಂದೆ ಸಾಗುತ್ತಿರುವ ಮಳಲ ಸ್ಫೂರ್ತಿ, ಕಿವಿಯೊಳಕ್ಕೆ ನಾಲಿಗೆ ಚಾಚುತ್ತಿರುವ ಗಾಳಿ, ನವಿಲು ಗರಿಯ ಚಿನ್ನಾಟ ಮತ್ತು ಎದೆಯನೊತ್ತುತ್ತಿರುವ ಕೊಳಲು... ಈ ಭಾಗಗಳಿಂದ ಭರಿತವಾದ ಸಾಲುಗಳು.

ಅದರಲ್ಲಿ ಚೌಪದಿಗಳಿದ್ದುವು. ಅರ್ಥಕ್ಕೆ ನಿಂತ ಪದ್ಯಗಳಿದ್ದುವು ಹಾಗೂ ಇಡಿಯಾದ ಪದ್ಯಗಳಿದ್ದುವು. ಪದ್ಯ ಪಾದಗಳನ್ನು ಬರೆಯಲಾರಂಭಿಸಿ ಅನಂತರ ಹೊಡೆದುಹಾಕಲಾಗಿದ್ದಂಥವು ಇದ್ದುವು. ಅವನು ಓದದೆ ಹಾಗೆಯೇ ಬಿಟ್ಟವೆಂದರೆ ಗೀತಗಳನ್ನು ಮಾತ್ರ, ಆ ಕಾವ್ಯಕ್ಕೆ ಅವನು ಸ್ಪಂದಿಸದಾದನು. ಅವನ ಕುತೂಹಲವಾದರೋ ತೀವ್ರವಾಗೇ ಇತ್ತು. ಆದರೆ ಅವನು ಎಷ್ಟೇ ಪ್ರಯತ್ನಿಸಿದರೂ ಕಾವ್ಯದ ವಿಷಯಕ್ಕಿದ್ದ ತನ್ನ ಪ್ರತಿರೋಧವನ್ನು ಹತ್ತಿಕ್ಕದಾದ. ಹೇಗೂ ಅದರಲ್ಲಿ ಸಾಕಷ್ಟು ಗದ್ಯವೂ ಇದ್ದದ್ದರಿಂದ, ಅಲ್ಲಿಯ ಕವಿತೆಗಳನ್ನು ಆಮೇಲೆ ನೋಡಿದರಾಯಿತೆಂದು ನಿರ್ಧರಿಸಿದ. ಅದರಲ್ಲಿ ದೇವರನ್ನು ಕುರಿತ ಪ್ರಾರ್ಥನಾ ಗೀತೆಗಳು, ದುಃಖ ಗೀತೆಗಳು, ಚರಮ ಗೀತೆಗಳು, ದೇವತಾಸ್ತುತಿ ಗೀತೆಗಳು, ಆತ್ಮನಿವೇದನೆಯ ಗೀತೆಗಳು, ಚಿತ್ತೂರಿನ ಅವಳ ಬದುಕಿನ, ಅವಳ ಏಕಾಂತದ ನೋವಿನ ವಿಸ್ತಾರವಾದ

ವರ್ಣನೆಯ ಗೀತೆಗಳು, ಕುಂಕುಮ್‌ಳೊಂದಿಗಿನ ಅವಳ ಸಂಭಾಷಣೆ, ರಾಣಾ ಅವರ ಅದ್ಭುತವಾದ ನುಡಿ ಚಿತ್ರಗಳು, ರಾಣಿ ಕರ್ಮವತಿಯನ್ನು ಕುರಿತಾದ ಒಳನೋಟದಿಂದ ಕೂಡಿದ ತೀರ್ಮಾನ, ತನ್ನ ಪತಿಯಾದ ಮಹಾರಾಜ್ ಕುಮಾರ್‌ಗೆ ತಾನು ಉಂಟು ಮಾಡಿರುವ ನೋವು ಮತ್ತು ಯಾತನೆ ಯಾವ ಮಟ್ಟದೆಂಬುದರ ಬಗೆಗಿನ ಅವಳ ಯಾತನಾಪೂರ್ಣವಾದ ಹಾಗೂ ದೃಢವಾದ ಅಂತರ್ನಿರೀಕ್ಷೆ ಮತ್ತು ಅವನಿಗೆ ನೆರವಾಗಲು ಅಥವಾ ಅವನಿಗೆ ನೆಮ್ಮದಿ ತರುವಲ್ಲಿ ತನಗಿರುವ ಅಸಹಾಯಕತೆ, ಅವಳ ಸೋದರಮಾವ, ತಾತನನ್ನು, ಕುರಿತ ಅವಳ ಸೂಕ್ಷ್ಮ ನೆನಪುಗಳು ಅವಳ ತಾಯಿಯ ಸಾವಿನ ವಿಷಯಕ್ಕೆ ಅವಳ ತಂದೆಯ ಅಪರಾಧಿಭಾವ, ತಾಯಿಯ ಪ್ರೀತಿಯಿಂದ ವಂಚಿತವಾದ ಮಗು ಮತ್ತು ಅವಳೊಂದಿಗೆ ಹೇಗೆ ಮಾತನಾಡಬೇಕೆಂದು ಗೊತ್ತಿಲ್ಲದ ಅವನದೇ ಆದ ಅಪರಾಧಿಭಾವ, ಇವೆಲ್ಲವುಗಳ ನೆನಪಿನ ಬರಹಗಳಿದ್ದವು. ಬೀಜವೊಂದು, ಈ ಜಗತ್ತಿನ ವಿದ್ಯಮಾನಗಳನ್ನರಿಯಲು ತಾತ್ಕಾಲಿಕವಾಗಿ ಹೊರಹೊಮ್ಮಿಸುವ, ಕಣ್ಣಿಗೇ ಬೀಳದಷ್ಟು ಚಿಕ್ಕದಾದ ಸೂಚಕ ರೂಪದ ಮೊಳಕೆ, ತನಗೊಂದು ಗೂಡು ಮಾಡಿಕೊಳ್ಳಲು ಮರಕುಟಿಗ ಹಕ್ಕಿಯೊಂದು ಕಳೆದ ಹದಿನೇಳು ದಿನಗಳಿಂದ ಮರವನ್ನು ಕೊರೆಯುತ್ತಿದ್ದರೂ ಅದರ ಕೊಕ್ಕು ಸವೆದಿಲ್ಲದಿರುವುದು, ಅಥವಾ ಅದರ ಹರಿತ ಇನ್ನು ಕಡಿಮೆಯಾಗದಿರುವುದರ ಬಗ್ಗೆ, ಚಂದ್ರನ ಏರಿಳಿತಗಳಿಗೂ ಅವಳ ಮನಸ್ಥಿತಿಗೂ ಏನಾದರೂ ಸಂಬಂಧವುಂಟೆ, ಹಾಗೂ ಅವನನ್ನು ಕುರಿತ ಅವಳ ಪ್ರೀತಿಯು ಬಯಲ ಮೇಲೆ ಪ್ರವಾಹವಾಗಿ ಹರಿದು ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುವಂತೆ ಮಾಡುತ್ತಿದೆಯೇ? ಚಿತ್ತೂರಿನ ಹಸಿರ ಸಮೃದ್ಧಿ, ಮರಗಳು, ಅರಣ್ಯಗಳ ಬಗ್ಗೆ ಪ್ರಸ್ತಾಪಿಸುವುದನ್ನು ನಿಲ್ಲಿಸಲೊಲ್ಲಳು. ಮೆರ್ತಾಕ್ಕೊಂದು, ಚಿತ್ತೂರಿಗೊಂದು ಹೀಗೆ ಎರಡು ಭೂಮಿಗಳಿವೆಯೇ ಎಂದು ಆಶ್ಚರ್ಯಪಟ್ಟಿದ್ದಳು. ಅಷ್ಟೊಂದು ಹಸಿರಿನ ಸಮೃದ್ಧಿಯನ್ನು ಅವಳು ಕಂಡೇ ಇರಲಿಲ್ಲ. ತನ್ನ ಇಂದ್ರಿಯ ಸಮಸ್ತದೊಂದಿಗೆ ಅದೆಲ್ಲವನ್ನೂ ತನ್ನೊಳಗೆ ಆತ್ಮೀಕರಿಸಲು ಪ್ರಯತ್ನಿಸಿದ್ದಳು. ಅವಳ ಆಸೆಯಾದರೋ ತಣಿಸಲಾರದ್ದು. ಹೂ, ಮರಗಿಡ, ಬಳ್ಳಿಗಳನ್ನವಳು ತಾನು ಮಾತನಾಡಿಸಬಹುದಾದ ಜೀವಿಗಳೆಂಬಂತೆ ವರ್ಣಿಸಿದ್ದಳು. ಅವಳ ಪಾಲಿಗೆ ಮರದ ಪ್ರತಿ ಕೊಂಬೆಯೂ ಒಂದು ಬಾಹು, ಮರವಾದರೋ ಸಹಸ್ರ ಬಾಹುಗಳ ದೇವತೆ, ಎಲೆಗಳು ಆ ದೇವತೆಯ ಸಂತಾನಗಳಾದ ಮಕ್ಕಳು. ಎಲೆಯೊಂದನ್ನು ಗಂಟೆಗಟ್ಟಲೆ ನೋಡುತ್ತಿರಬಲ್ಲಳು. ಅದರ ನರ ನಾಡಿಗಳ ಜಾಲವನ್ನು ಕುರಿತು ವಿಸ್ತಾರವಾಗಿ ಹೇಳಬಲ್ಲಳು. ನೂರಾರು ವಿಧದ ಹಸಿರು ಮರ ಗಿಡಗಳನ್ನು ವಿಂಗಡಿಸಿ ಚಿತ್ರಿಸಬಲ್ಲಳು. ಗಾಳಿ ಅವಳ ಪಾಲಿಗೆ ಕೆಲವೊಮ್ಮೆ ಕೊಳಲಾದರೆ, ಬೇರೆಯವರ ವಿಷಯಕ್ಕೆ ನಿರ್ಲಜ್ಜವಾಗಿ ಮೂಗು ತೂರಿಸುವ ವ್ಯಕ್ತಿ. ಅದರ ಮೃದು ಕಾಂತಿಯ ಸ್ಪರ್ಶವೇ ಮರಗಳಲ್ಲಿ ಮೊಡವೆ ಗುಳ್ಳೆಯ ರೀತಿಯ ಗಂಟುಗಳನ್ನು ಉಬ್ಬಿಸುತ್ತಿತ್ತು. ಅಲ್ಲದೆ ಅಶ್ಲೀಲ ಮಾತುಗಳನ್ನಾಡಿ ಮರವನ್ನು ಕೆರಳಿಸಿ, ಮೇಲೆ ಕೆಳಗೆ ಆಡುವಂತೆ ಮಾಡಿಬಿಡುತ್ತಿತ್ತು. ಎಷ್ಟರಮಟ್ಟಿಗೆ ಎಂದರೆ ತನ್ನ ಪಾಡಿಗೆ ತನ್ನನ್ನು ಬಿಟ್ಟುಹೋಗಬೇಕೆಂದು ಮರ, ಗಾಳಿಗೆ ಹೇಳಿತು. ಆದರೆ ಅದರಿಂದ ಅದಕ್ಕೆ ಇನ್ನಷ್ಟು ಪೊಗರು ಬಂದು ಇಡೀ ಮರವನ್ನೇ ಆಡಿಸುತ್ತಿತ್ತು. ಮತ್ತು ಗಾಳಿ ನಿಲ್ಲುತ್ತಲೇ ಇರಲಿಲ್ಲ. ಮರವೂ ಅಲ್ಲಾಡುವುದನ್ನು ನಿಲ್ಲಿಸಲೂ ಇಲ್ಲ.

ನಪುಂಸಕನು ತೂಕಡಿಸುತ್ತಿದ್ದನು. ಮಹಾರಾಜ್ ಕುಮಾರ್ ಅವನನ್ನು ಎಬ್ಬಿಸಿ ಕೌಸಲ್ಯಳನ್ನು ಕರೆತರಲು ಹೇಳಿದನು.

"ಹಾಗಾದರೆ ಬಾಕಿ ಪುಟಗಳು ಎಲ್ಲಿ?"

"ನಿಮಗೆ ಅದರಲ್ಲಿ ಆಸಕ್ತಿ ಇಲ್ಲ ಎಂದು ಭಾವಿಸಿದ್ದೆ."

"ನಾನು ಕೇಳ್ತಾ ಇದ್ದೀನಿ ಬಾಕಿ ಪುಟಗಳು ಎಲ್ಲಿ ದಯವಿಟ್ಟು ಕೌಸಲ್ಯ..."

ಓ ದೇವರೆ! ಅವಳು ಹೋಗಿ ಏನು ಮಾಡಿಬಿಟ್ಟಳು. ಅವನ ಆತ್ಮಕ್ಕೆ ನಾಟಿರುವ ಬಾಣ ಯಾವುದಿದು? ಹಗಲಿರುಳೂ ರಕ್ತ ಸುರಿಸುವ ಈ ಗಾಯ ಎಲ್ಲಿತ್ತು? ಇಷ್ಟಾದರೂ ಇದಕ್ಕೆ ಬಾಯಿ ಇರಲಿಲ್ಲವೇ? ಅವನ ಹಣೆಯ ಮೇಲೆ ಸುಡುವ ಜ್ವರವಿದೆ. ಅವನಿಗೆ ಮೇಲುಸಿರು ಬರುತ್ತಿದೆ. ಮತ್ತು ಅವನ ಕಣ್ಣುಗಳು ನೋವಿನಿಂದ ಕುರುಡಾಗಿವೆ ಎಂದು ಆ ಬರವಣಿಗೆಯ ಪುಟಗಳು ಅವನಿಗೆ ಹೇಳಿದವೆ.?

"ನನ್ನ ರಾಜಕುಮಾರ, ನನ್ನ ಬಂಗಾರ" ಎಂದು ಹೇಳಿ ಅವನ ಕೈ ಮುಟ್ಟಿ–"ನಿನ್ನ ಯಾತನೆಯನ್ನು ಹೋಗಲಾಡಿಸಲು ನಾನೇನಾದರೂ ಮಾಡಬಲ್ಲೆನೆ?"

ಅವಳಿಂದ ಕೈಬಿಡಿಸಿಕೊಂಡಾಗ ಅವಳನ್ನು ದೂರ ತಳಲಿಲ್ಲ. "ಹೌದು ನೀನು ಮಾಡಬಲ್ಲೆ. ಬಾಕಿ ಪುಟಗಳು ಎಲ್ಲಿವೆ ಎಂದು ನೀನು ಹೇಳಬಹುದು"

ಅವಳು ಅವನ್ನು ಅವನಿಗೆ ತೋರಿಸಿದಳು.

ಅಂಥವೇ ಇನ್ನಷ್ಟಿದ್ದವು. ಅದೇ ರೀತಿ ಮುಂದುವರೆದಿದ್ದವು. ಅದೇ ಕಾದಾಟ, ಸಮಾಧಾನಪೂರ್ಣ ಸಾಮಂಜಸ್ಯಗಳು.

ಮೂರು ಗಂಟೆಗೆ ಅವನು ನಪಂಸಕನನ್ನು ಅಲ್ಲಿಂದ ಬರ್ತರ್ಫ್ ಮಾಡಿ ರಾಜಕುಮಾರಿಯ ಮಲಗುವ ಕೋಣೆಯನ್ನು ಹೊಕ್ಕನು. ಅವಳು ಒಂದು ಪಕ್ಕಕ್ಕೆ ಹೊರಳಿ ಮಲಗಿದ್ದಳು. ಅವಳ ಎದೆಯ ಮೇಲೆ ಕಿವಿ ಹಚ್ಚಿನೋಡಿದ ಹೊರತು ಅವಳು ಜೀವಂತವಿದ್ದಾಳೆಂಬುದು ಗೊತ್ತಾಗುವುದೇ ಇಲ್ಲ. ಮನುಷ್ಯರ ಮುಖಗಳೆಂಬುವು ಬರೀ ಸುಳ್ಳುಗಳು. ಅವಳು ಪ್ರಶಾಂತವಾಗಿ ಕನಸುಗಳಿಲ್ಲದೆ ಮಗುವಿನಂತೆ ಮಲಗಿದ್ದಳು. ಆ ಪ್ರಶಾಂತ ಮುಖದಡಿಯಲ್ಲಿ ಏನೆಲ್ಲ ತಳಮಳದ ಅಲ್ಲೋಲ ಕಲ್ಲೋಲಗಳು ನಡೆಯುತ್ತಿದ್ದವು ಎಂದು ಯಾರು ತಾನೆ ಊಹಿಸಿದ್ದರು.? ಅವನು ಅವಳ ಭುಜಗಳನ್ನು ಹಿಡಿದು ಅಲ್ಲಾಡಿಸಿ ಎಚ್ಚರಿಸಿದನು. ಅವಳು ಆ ಕೂಡಲೇ ಎಚ್ಚೆತ್ತಳು. ಒಂದು ಜಾಗೃತಾವಸ್ಥೆಯಿಂದ ಮತ್ತೊಂದಕ್ಕೆ ಒಗ್ಗಿಸಿಕೊಳ್ಳಲು 'ಭ್ರಮೆ'ಯ ಕಾಲಾಂತರ ಅಗತ್ಯ. ಆದರೆ ಅಂಥ ಯಾವುದೇ ಭ್ರಮೆಗೆ ಒಳಗಾಗದೆ ಅವಳು ಎಚ್ಚೆತ್ತಳು.

"ನಾನು ಅವನನ್ನು ಕೊಂದು ಬಿಡುತ್ತೇನೆ" ಮಹಾರಾಜ್ ಕುಮಾರ್ ಹೇಳಿದನು. "ಅವನು ಯಾರಾದರೂ ಆಗಿರಲಿ ನಾನು ಅವನನ್ನು ಕೊಲ್ಲುತ್ತೇನೆ."

ಅವಳು ಮುಗುಳ್ನಕ್ಕಳು.

ಅಧ್ಯಾಯ 7

ಯುದ್ಧರಂಗದಿಂದ ಬಂದ ವಾರ್ತೆ ತೀರಾ ಕೆಟ್ಟದ್ದೂ ಆಗಿರಲಿಲ್ಲ, ತೀರಾ ಒಳ್ಳೆಯದೂ ಆಗಿರಲಿಲ್ಲ. ಸುಲ್ತಾನ್ ಮುಜಫರ್‌ಷಾ ಧೈರ್ಯಗೆಟ್ಟಿದ್ದಾನೆ ಹಾಗೂ ಆ ಕಾರಣದಿಂದಲೇ ತಂದೆಯವರ ವಿರುದ್ಧವಾಗಿ ಸೇನೆಯನ್ನು ಮುನ್ನಡೆಸುವ ಬದಲು ಚಂಪಾನೇರ್‌ಗೆ ಹಿಂತಿರುಗಿದ್ದಾನೆ ಎಂದು ಒಮ್ಮೊಮ್ಮೆ ನನಗೆ ಅನ್ನಿಸುತ್ತದೆ. ಆದರೆ ಗುಜರಾತಿನ ಸುಲ್ತಾನನು ನಂಬಿಕೆಗೆ ಅರ್ಹನಲ್ಲದ ಕೆಟ್ಟ ಮನುಷ್ಯ. ಯುದ್ಧ ಅವನ ಕಡೆಯಿಂದ ತಪ್ಪಿ ಅಧಿಕಾರವೂ ಅವನ ಕೈಯಿಂದ ಜಾರಿ ಹೋಗುತ್ತಿದೆಯೆಂದು ನಮ್ಮನ್ನು ನಂಬಿಸುವುದು ಅವನ ಉದ್ದೇಶ. ಸಾಧನೆಗೆ ತಕ್ಕಂತೆಯೇ ಇದೆ. ಬಹುಶಃ ನಮಗೆ ರಜಪೂತರಿಗೆ ತಿಳಿಯದೇ ಇದ್ದ ಹಾಗೂ ತಿಳಿಯುವ ಸಂಭವವೂ ಇಲ್ಲದ ಒಂದೆರಡು ಸಂಗತಿಗಳು ಅವನಿಗೆ ತಿಳಿದಿದ್ದುವು. ಪ್ರತಿಯೊಂದು ಸಣ್ಣ ಪುಟ್ಟ ಘರ್ಷಣೆಯೂ ಕದನವಲ್ಲ. ಮತ್ತು ಪ್ರತಿಯೊಂದು ಕದನವೂ ಮಹಾಯುದ್ಧವಲ್ಲ ಎಂಬ ಸಂಗತಿಯನ್ನು ಅವನು ಅರ್ಥ ಮಾಡಿಕೊಂಡನು. ಎರಡನೆಯದಾಗಿ ನಿಯೋಗವನ್ನು ಕಳುಹಿಸುವುದರಿಂದಾಗುವ ಪ್ರಯೋಜನಗಳನ್ನು ಅರ್ಥ ಮಾಡಿಕೊಂಡನು. ಎಲ್ಲಾ ಕೆಲಸವನ್ನು ನೀವು ಹೇಗೋ ಮಾಡಿ ಮುಗಿಸಿದ್ದರೂ ನಿಮ್ಮ ಸೇನಾಧಿಕಾರಿಗಳಿಗೆ ಭಾರಿ ಮೊತ್ತದ ವೇತನವನ್ನು ಏಕೆ ಕೊಡಬೇಕು ಮತ್ತು ವಿಸ್ತಾರವಾದ ಜಹಗೀರುಗಳನ್ನು ಅವರಿಗೆ ಬಳುವಳಿಯಾಗಿ ಏಕೆ ಕೊಡಬೇಕೆಂಬುದನ್ನು ಅವನು ಅರ್ಥೈಸಿಕೊಂಡನು. ಮೂರನೆಯದಾಗಿ ಒಂದು ವೇಳೆ ಗುಜರಾತಿನ ಸೇನಾಪಡೆಗಳು ಸೋತರೆ, ಅದರಿಂದ ಬರುವ ಅಪಮಾನ ಮತ್ತು ಕಳಂಕ ಅದರ ಹೊಣೆಹೊತ್ತ ಸೇನಾಧಿಕಾರಿಗಳದೇ ಹೊರತು ತನ್ನದಲ್ಲ ಎಂದು ಗ್ರಹಿಸಿದನು. ಕಡೆಯದಾಗಿ, ತಾನು ಮತ್ತು ತನ್ನ ತಂದೆಯವರು ಮತ್ತು ತಾನು ನಡೆಸುತ್ತಿದ್ದ ಯುದ್ಧದ ಅದೃಷ್ಟಲಕ್ಷ್ಮಿ ತೂಗುಯ್ಯಾಲೆಯ ಮೇಲೆ ಕುಳಿತು ಒಮ್ಮೆ ನಮ್ಮತ್ತ ಚಲಿಸಿದರೆ ಇನ್ನೊಮ್ಮೆ ಅವರತ್ತ ಚಲಿಸುತ್ತಿದ್ದಳು. ನಿರ್ದಿಷ್ಟವಾದ ಮತ್ತು ಶಾಶ್ವತವಾದ ಫಲಿತಾಂಶ ಬರುವುದು ಸ್ವಲ್ಪ ಅಸಂಭವವೆಂದೇ ತೋರುತ್ತಿತ್ತು. ಹಾಗಿದ್ದ ಮೇಲೆ ಇದಕ್ಕಾಗಿ ಯಾಕೆ ಶ್ರಮಿಸಬೇಕು? ಮತ್ತು ಯಾರಾದರೂ ತಮ್ಮ ಪ್ರಾಣ ಮತ್ತು ಗೌರವಗಳನ್ನು ಯಾಕೆ ಅಂಚಿಗೆ ಕೊಂಡೊಯ್ಯಬೇಕು?

ವಿಕ್ರಮಾದಿತ್ಯನ ದ್ರೋಹ ಮತ್ತು ಬಂಧನದ ವಿಷಯಕ್ಕೆ ತಂದೆಯವರು ಉದ್ದೇಶಪೂರ್ವಕವಾಗಿ ಮೌನಕ್ಕೆ ಮೊರೆಹೋಗಿದ್ದರು. ನನ್ನದು ಅತಿಯಾಗಿ ಜಗ್ಗಿಸಿದ ಅತ್ಯಾಶೆಯೆಂದು, ತುಂಬ ಭೋಳೇ ಸ್ವಭಾವದ ವಿಕ್ರಮಾದಿತ್ಯನ ವಿರುದ್ಧವಾಗಿ ಸುಳ್ಳು ಆರೋಪಗಳನ್ನು ಮೋಸದಿಂದ ಹೆಣೆದಿದ್ದೇನೆ ಎಂದು ನನ್ನ ವಿರುದ್ಧ ರಾಣಿ ಕರ್ಮವತಿ

ಆರೋಪಿಸಿ ತಂದೆಯ ಬಳಿಗೆ ದೂತರನ್ನು ಅಟ್ಟುತ್ತಿರುವುದಲ್ಲದೆ ಸೋದರ ವಿಕ್ರಮಾದಿತ್ಯನನ್ನು ಬಿಡುಗಡೆಗೊಳಿಸಬೇಕೆಂದು ಮನವಿ ಮಾಡುತ್ತಿರುವುದು ನನಗೆ ಗೊತ್ತು. ಕೆಲವೊಮ್ಮೆ ತಾನೇ ಕುಂಭಲ್‌ಗರ್‌ಗೆ ಖುದ್ದಾಗಿ ತೆರಳಿ, ತನ್ನ ಪ್ರೀತಿಯ ಪುತ್ರನನ್ನು ಬಂಧಿಯಾಗಿಟ್ಟಿರುವ ಸೆರೆಮನೆಯ ಬಾಗಿಲಿನ ಮೂರು ಅಗಳಿಗಳು ಮತ್ತು ಬೀಗಗಳನ್ನು ತೆರೆದುಬಿಡುವುದಾಗಿ ಬೆದರಿಕೆ ಹಾಕುತ್ತಾಳೆ. ಆಕೆಯ ಪುತ್ರನನ್ನು ಆಕೆಗೂ ಎಟುಕದಂತೆ ನಾನು ಇಡಲಾಗುವುದಿಲ್ಲ. ಆಕೆಗೆ ಯಾವ ರೀತಿ ಪ್ರತಿಕ್ರಿಯಿಸಬೇಕೆಂದು ನನಗೆ ನಿಜಕ್ಕೂ ಗೊತ್ತಾಗುತ್ತಿಲ್ಲ. ಕುಂಭಲ್‌ಗರ್ ಕೋಟೆಯಲ್ಲಿರುವ ಸೈನಿಕರು ರಾಣಿಗೆ ವಿಕ್ರಮಾದಿತ್ಯನ ಸಮೀಪಕ್ಕೆ ಪ್ರವೇಶವಾಕಾಶವನ್ನು ಬಹುಶಃ ನಿರಾಕರಿಸಲಾರರು. ಆಕೆ ನನ್ನನ್ನೂ ಒಬ್ಬನನ್ನೇ ಏನೂ ಬಿಟ್ಟಿಲ್ಲ. ಆಕೆ ನನ್ನ ಕಛೇರಿಗೆ ಬಂದು ತನ್ನನ್ನು 'ಸೆರೆಮನೆಗೆ ತಳ್ಳು' ಎಂದು ಒಂದು ಮೈಲಿ ದೂರಕ್ಕೆ ಕೇಳಿಸುವಷ್ಟು ಮೇಲುದನಿಯಲ್ಲಿ ಪಿಸುಗುಡುತ್ತಾ ಸವಾಲು ಹಾಕುತ್ತಾಳೆ. ಆಕೆ ಮಾಡದೇ ಇರುವ ಅಪರಾಧಕ್ಕೆ ನಾನು ಸೆರೆಮನೆಗೆ ತಳ್ಳುವ ಧೈರ್ಯ ಮಾಡಲಾರೆ. ಮತ್ತು ಒಂದು ವೇಳೆ ಆಕೆ ರಾಜಕುಮಾರ ವಿಕ್ರಮಾದಿತ್ಯನನ್ನು ಸೆರೆಯಿಂದ ಮುಕ್ತಗೊಳಿಸಿದರೂ ನಾನು ಆಕೆಯನ್ನು ಸೆರೆಯಲ್ಲಿಡಬಲ್ಲನೆ ಎಂಬುದು ಅನುಮಾನ. ಒಂದೊಂದು ಸಲ ಅವಳು ಅತ್ಯಂತ ಮೋಹಕವಾಗಿ ಪ್ರೀತಿಯ ಮಳೆಗರೆಯುತ್ತ ನನ್ನ ಯೋಗಕ್ಷೇಮವನ್ನು ವಿಚಾರಿಸುತ್ತಾಳೆ ಮತ್ತು ತಾನೇ ಕೈಯಾರ ಮಾಡಿದ್ದೆಂದು ರುಚಿಕರವಾದ ಉಪ್ಪುಖಾರದ ತಿಂಡಿಗಳನ್ನು ತರುತ್ತಾಳೆ. ಇಡೀ ಒಂದು ವಾರ ಪೂರ್ತಿ ವಿಕ್ರಮಾದಿತ್ಯನ ವಿಷಯವನ್ನೇ ಪ್ರಸ್ತಾಪಿಸುವುದಿಲ್ಲ. ಆಮೇಲೆ ಇದ್ದಕಿದ್ದ ಹಾಗೆ ಅವನ ವಯಸ್ಸನ್ನು ಮುಂದಿಟ್ಟು, ಅವನಿಗೆ ಅನುಭವ ಸಾಲದು, ಎಂದು ಹೇಳಿ, ಇದೊಂದು ಸಲ ನೀನು ಅವನನ್ನು ಕ್ಷಮಿಸುವುದಿಲ್ಲವೆ ಎಂದು ಕೇಳುತ್ತಾಳೆ. ವಿಷಯ ಈಗ ನನ್ನ ಕೈಯಲ್ಲಿ ಇಲ್ಲ ಎಂದು ನಾನು ಹೇಳಿದ ಕೂಡಲೆ ಅವಳು ಜೋರಾಗಿ ಚೀರಲು ಶುರುಮಾಡುತ್ತಾಳೆ. ನಾನೊಬ್ಬ ಬೊಗಳೆ, ಒಬ್ಬ ದುರಾಶೆಯ ಧನ ಪಿಶಾಚಿ, ಮಹತ್ವಾಕಾಂಕ್ಷೆಯ ಕ್ಷುದ್ರ ವ್ಯಕ್ತಿ ಎಂದು ನೆನಪಿಸುತ್ತಾಳೆ. ಅಲ್ಲದೆ ತಮ್ಮನ ಅಸಾಧಾರಣ ನಾಯಕತ್ವದ ಗುಣಗಳು, ಮತ್ತು ಜನರ ಅಪಾರ ಪ್ರೀತಿಗಳಿಂದ ನಾನು ಅದೆಷ್ಟು ಹೆದರಿಬಿಟ್ಟಿದ್ದೇನೆಂದರೆ, ಅವನನ್ನು ಬೀಗ ಹಾಕಿ ಬಂಧಿಸಿಟ್ಟಿರುವುದು ನನ್ನ ಹಿತದೃಷ್ಟಿಯಿಂದ ಎಂದು ನಾನು ಭಾವಿಸಿದ್ದೇನೆ ಎಂದು ನೆನಪಿಸುತ್ತಾಳೆ.

ಈ ಎಲ್ಲ ಉಪದ್ವ್ಯಾಪದಲ್ಲಿ ತಂದೆಯವರು ಎಲ್ಲಿ ನಿಲ್ಲುತ್ತಾರೆ? ಅವರು ಅದನ್ನು ದ್ರೋಹ ಎಂದು ಪರಿಗಣಿಸುತ್ತಾರೆಯೋ ಅಥವಾ ರಾಣಿ ಹೇಳುವಂತೆ ಕೇವಲ ತನ್ನ ತಂದೆಯ ಹೆಜ್ಜೆಗಳನ್ನನುಸರಿಸುತ್ತಿರುವ ಶೌರ್ಯ ಮತ್ತು ಅಸಹನೆಯಿಂದ ಕೂಡಿದ ಯುವಕನೊಬ್ಬನ ಉದ್ರಿಕ್ತ ನಡವಳಿಕೆ ಎಂದೋ? ನಮ್ಮ ಸಾಮ್ರಾಜ್ಯದ ಶಿಖರಸದೃಶ ವ್ಯಕ್ತಿಗಳಿಂದಾದ ನ್ಯಾಯಾಯಲವು ರಾಜಕುಮಾರನನ್ನು ಸೆರೆಮನೆಗೆ ಕಳುಹಿಸಬೇಕೆಂದು ಅನುಮೋದಿಸಿರುವುದನ್ನು ಅವರು ಮೆಚ್ಚುತ್ತಾರೆಯೇ? ನಮ್ಮ ನಿರ್ಣಯವನ್ನು ಅವರು ಸಮರ್ಥಿಸುತ್ತಾರೆಯೇ?

ಈ ಮಧ್ಯೆ ನಮ್ಮ ಅತಿಥಿಯಾದ ರಾಜಕುಮಾರ ಬಹದ್ದೂರ್ ಚಿತ್ತೂರಿನಲ್ಲಿ ತುಂಬ ಯಶಸ್ವಿಯಾಗಿದ್ದಾನೆ. ರಾಜಮಾತೆಯವರು ಕೂಡ ಅವನನ್ನು ತುಂಬ ಇಷ್ಟಪಡತೊಡಗಿದ್ದಾರೆ. ನಾನು ಆತನಿಗೆ ರಕ್ಷಣೆ ಮತ್ತು ಆತಿಥ್ಯ ನೀಡಬೇಕೆಂದು ಮನವಿ ಮಾಡಿಕೊಂಡಾಗ ಅನೇಕರು ಆಕ್ಷೇಪಿಸಿದ್ದರು. ಆದರೆ ಆತನ ಮುಗುಳ್ನಗೆ ಅಸಾಧಾರಣ ವಿನಯ ಮತ್ತು ಆತನ ಉದಾರ ಸ್ವಭಾವ ಇವುಗಳು–ಸದ್ಯಕ್ಕೆ ಅದರ ಬಂಡವಾಳ ಯಾರದ್ದಾದರೂ ಆಗಿರಲಿ, ಅದರ ಚಿಂತೆ ಬೇಡ– ಹಾಗೆ ಆಕ್ಷೇಪಿಸಿದವರ ಮನಸ್ಸಿನ ಎಲ್ಲಾ ವಿರೋಧಗಳನ್ನೂ

ತೊಡೆದು ಹಾಕಿವೆ. ಬಹದ್ದೂರ್ ಬಹಳ ಚೆನ್ನಾಗಿ ಓದಿಕೊಂಡಿರುವ, ಬಹುಶ್ರುತ ವ್ಯಕ್ತಿ. ತನಗೆ ಪರಿಚಯವಿಲ್ಲದ ಬಹುಮಟ್ಟಿಗೆ ಎಲ್ಲಾ ವಿಷಯಗಳ ಬಗ್ಗೆ ಆತನಿಗೆ ತುಂಬ ಕುತೂಹಲ. ಆತ ಬುದ್ಧಿವಂತ, ಕುಶಾಗ್ರಮತಿ, ತನ್ನ ಸ್ವಂತ ನೆಲದಲ್ಲಿ ಮೂರ್ಖರನ್ನು ಆತ ಸಹಿಸುವುದಿಲ್ಲ ಎಂದು ನನಗೆ ವಿಶ್ವಾಸವಿದೆ. ಆದರೆ ಚಿತ್ತೂರಿನಲ್ಲಿ ಯಾರನ್ನೂ ಬಾಯಿ ಮುಚ್ಚಿಸಲು ಹೋಗುವುದಿಲ್ಲ. ಅಲ್ಲದೆ ತನ್ನ ಸುತ್ತ ಯಾರೇ ಇದ್ದರೂ ಅವರಿಗೆ ತಕ್ಕಂತೆ ತನ್ನ ಬೌದ್ಧಿಕ ಮಟ್ಟವನ್ನು ಹೊಂದಾಣಿಕೆ ಮಾಡಿಕೊಳ್ಳುವ ಚಾತುರ್ಯವುಳ್ಳ ವ್ಯಕ್ತಿ ಆತ.

ಆತನಿಗೆ ಅಶ್ಲೀಲವಾದ ಮತ್ತು ಪೋಲಿ ಮಾತುಗಳ ಒಳ್ಳೆಯ ಹಾಸ್ಯ ಪ್ರಜ್ಞೆ ಇದೆ. ಅದು ಎಂದೂ ಅಸಭ್ಯ ಮಟ್ಟಕ್ಕೆ ಇಳಿಯುವಂಥದ್ದಲ್ಲ. ಅವನ ಹಾಸ್ಯ ವಿನೋದದ ಮಾತುಗಳ ಸರಕು ಬೇರೆಯವರನ್ನು ಬೆರಗುಬಡಿಸುವಂಥದ್ದು. ಆದರೆ ಒಂದು ಸಲ ಹೇಳಿದ ಹಾಸ್ಯದ ಮಾತನ್ನು ಎಂದೂ ಪುನರುಚ್ಚಿಸುವುದಿಲ್ಲ. ಗುಜರಾತಿ ನಗೆಹನಿಗಳು, ಮಾಳವದ ನಗೆ ಹನಿಗಳು, ದೆಹಲಿಯ ನಗೆಹನಿಗಳು, ಇವನ್ನೆಲ್ಲಾ ಹೇಳುತ್ತಿದ್ದ. ಇಲ್ಲಿಯವರು ಅದನ್ನು ಸ್ವೀಕರಿಸುತ್ತಾರೆನ್ನುವ ಬಗ್ಗೆ ಹಾಗೂ ತನಗೆ ನಂಬಿಕೆ ಉಂಟಾಗಿ ಬಿಟ್ಟಿತೆಂದರೆ ರಜಪೂತರ ನಗೆಹನಿಗಳನ್ನೂ ಹೇಳತೊಡಗಿದನು.

ಸಾಯಂಕಾಲದ ಹೊತ್ತು ತನ್ನ ಐವರು ತಾಯಂದಿರೊಡನೆ ಅವನು ಹಾಸ್ಯದ ಮಾತುಗಳನ್ನಾಡುವಾಗ ಅವನನ್ನು ನೋಡಬೇಕು. ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಬೇರೆ ಬೇರೆ ದನಿಗಳೊಂದಿಗೆ ಪೋಲಿ ನಗೆಹನಿಗಳನ್ನು ಹೇಳುತ್ತಾನೆ ಮತ್ತು ಅದೇ ಸಮಯಕ್ಕೆ ಅವರಲ್ಲಿ ಮತ್ಸರವುಂಟು ಮಾಡುತ್ತಾನೆ. ನೀಲಾಕಾಶದಿಂದೆಂಬಂತೆ ಅಃತಪುರದ ನಪಂಸಕರ ಮುಖ್ಯಸ್ಥನು ಕಾಣಿಸಿಕೊಳ್ಳುತ್ತಾನೆ. ಕಾಮುಕ ನೋಟದಿಂದ ಅವರನ್ನು ಕುಚೋದ್ಯ ಮಾಡುತ್ತಾನೆ ಹಾಗೂ ಅವರಿಗೆ ಕಾಮುಕ ಕಥೆಗಳನ್ನು ಹೇಳುತ್ತಾನೆ. ಸುಲ್ತಾನ್ ಯುದ್ಧಕ್ಕೆ ತೆರಳಿರುತ್ತಾನೆ. ಇಲ್ಲವೆ ಯಾರಾದರೊಬ್ಬ ಉಪಪತ್ನಿಯೊಡನಿರುತ್ತಾನೆ. ಕಾಮಕಾತರರಾದ ರಾಣಿಯರು ಓಮ್ಮೆಲೇ ತಮ್ಮ ಆಪ್ತನಾದ ನಪಂಸಕನ ಮೇಲೆ ಮುಗಿಬೀಳುತ್ತಾರೆ. ಅವನು ಬೇರೆ ವಿಧಿಯಿಲ್ಲದೆ ನಿರ್ವೀರ್ಯನಾಗಿಯೇ ಅವರ ಕಾಮವಿಕಾರದ ಹುಚ್ಚನ್ನು ತಣಿಸಬೇಕು. ನನ್ನ ಸೋದರ ಸಂಬಂಧಿಗಳು, ಸಹೋದ್ಯೋಗಿಗಳು ಮತ್ತು ಪ್ರತಿಷ್ಠಿತ ವ್ಯಕ್ತಿಗಳು ಗಹಗಹಿಸಿ ನಗುತ್ತಾರೆ. (ನಾನು ಕೂಡ). ಆದರೆ ನಮ್ಮ ಅಃತಪುರಗಳನ್ನು ಕುರಿತಂತೆ ಎಂಥ ವಾಸ್ತವ ಚಿತ್ರವನ್ನು ಅವನು ಚಿತ್ರಿಸುತ್ತಿದ್ದಾನೆ ಎಂಬುದರ ಹಾಗೂ ನಮ್ಮೆಲ್ಲರ ಮುಖದ ನರಗಳ ಸೆಳೆತಗಳನ್ನು ಕುರಿತಂತೆ, ವೈಯಕ್ತಿಕ ವೈಚಿತ್ರ್ಯಗಳನ್ನು ಕುರಿತಂತೆ ಮತ್ತು ನಮ್ಮೆಲ್ಲರ ದುರ್ಬಲ ಅಹಂಗಳನ್ನು ಕುರಿತಂತೆ ಹಾಗೂ ನಮ್ಮ ಹಾಸ್ಯಾಸ್ಪದ ಅವಿವೇಕಗಳನ್ನು ಕುರಿತಂತೆ ಎಂಥ ವಿಸ್ಮಯಕರವಾದ ಕಥೆಗಳನ್ನು ನಮ್ಮ ಕುಟುಂಬಗಳವರಿಗೆ ಅವನು ಹೇಳಬೇಕಾಗಿ ಬರುತ್ತದೆ ಎಂಬುದರ ಕಿಂಚಿತ್ತೂ ಅರಿವಿಲ್ಲದೆ ನಗುತ್ತೇವೆ. ಅವನ ಕಂಠಕ್ಕೆ ಒಂದು ವಿಶಿಷ್ಟವಾದ ನಾದದ ಗುಣವಿದೆ.

ಅವನ ನಗೆಯಾದರೋ ತುಂಬ ಗಾಢವಾದ್ದು ಮತ್ತು ಒಬ್ಬರಿಂದ ಮತ್ತೊಬ್ಬರಿಗೆ ಹರಡುವಂಥದ್ದು. ಈಗ ಅವನು ನಗರದ ಪ್ರೀತ್ಯಾದರಕ್ಕೆ ಪಾತ್ರನಾಗಿದ್ದಾನೆ. ಮುಂದಿನ ಹದುನೈದು ದಿನಗಳವರೆಗೆ ಅವನ ಕಾರ್ಯಕ್ರಮಗಳ ದಿನಚರಿಯ ಪುಸ್ತಕ ಭರ್ತಿಯಾಗಿದೆ.

ಅರಮನೆಯ ಹೆಂಗಸರು ಅವನ ಬಗ್ಗೆ ಮತ್ತು ಅವನ ರಾತ್ರಿಯ ಸಹಚರಿಯರ ಬಗ್ಗೆ ಒಂದೇ ಸಮನೆ ತಮ್ಮಲ್ಲೇ ಹರಟುತ್ತಾರೆ. ಠಾಕು ಠೀಕಾಗಿ ಹೊಲಿದು ಸಿದ್ಧಪಡಿಸಿದ ಬಿಳಿಯ ವಸ್ತ್ರಗಳನ್ನು ಧರಿಸಿ ತನ್ನ ನಡುವಿನ ದಟ್ಟ ಹಸಿರಿನ ಅಥವಾ ತೆಳುಗೆಂಪಿನ ಪಟ್ಟಿ ಧರಿಸಿ, ತಲೆ ಮೇಲೆ ಆಕರ್ಷಕವಾದೊಂದು ರುಮಾಲು ಧರಿಸಿ ಅತಿಥಿ ಅರಮನೆಯಿಂದ

ಹೊರಟನೆಂದರೆ, ಅಂತಃಪುರ ಸ್ತ್ರೀಯರು ತಮ್ಮ ಬೆಳಕಿಂಡಿಗಳಿಂದ ಅವನನ್ನು ಗಮನಿಸುತ್ತಿದ್ದರು. ಅವರೆಲ್ಲಾ ತನ್ನನ್ನು ಗಮನಿಸುತ್ತಿದ್ದಾರೆಂದು ಅವನಿಗೆ ಗೊತ್ತು. ಹಾಗಾಗಿ ಬೇಕೆಂದೇ ಅತಿಯಾಗಿ ಲಂಪಟನಂತೆ ತೋರಿಸಿಕೊಳ್ಳುತ್ತಾನೆ. ನಾವು ರಾತ್ರಿ ಊಟಕ್ಕೆ ಜೊತೆಯಲ್ಲಿ ಹೊರಟಾಗ ಮನೆಯ ಹೆಂಗಸರು, ಅವನನ್ನು ನೋಡಬೇಕು ಅನ್ನುವ ಕುತೂಹಲ ಎಷ್ಟೋ, ಅಷ್ಟೇ ಕೇಳಬೇಕು ಎಂಬ ಆಸಕ್ತಿಯಿಂದ, ನೆಪಕ್ಕೆ ನಮ್ಮನ್ನು ಅವರಿಂದ ಬೇರ್ಪಡಿಸುವ ತಮ್ಮ ಪರದೆಗಳ ತೀರಾ ಸನಿಹ ಇರಬೇಕು ಎಂದು ಪರಸ್ಪರ ಸ್ಪರ್ಧಿಸುತ್ತಿದ್ದರು. ಬಹದ್ದೂರ್‌ನನ್ನ ಅತಿ ಸಭ್ಯತೆಯ ಕಣ್ಣುಗಳನ್ನು ತೆರೆಸಿದ್ದಾನೆ. ಹೆಂಗಸರು ಎರಡರ್ಥದ ನಗೆಹನಿಗಳನ್ನು, ಪೋಲಿ ಮತ್ತು ಲೈಂಗಿಕ ಹಾಸ್ಯವನ್ನು ಗಂಡಸರಿಗಿಂತ ಅತಿ ಕಡಿಮೆ ಸಂಕೋಚದಿಂದ ಸವಿಯುತ್ತಾರೆ. ಅವರು ಹೃದಯಪೂರ್ವಕವಾಗಿ ನಗುವುದನ್ನು ಕೇಳಬಹುದು. ಗಂಡಸರು ತಮ್ಮನ್ನು ಗಮನಿಸುತ್ತಾ ಇದ್ದಾರೆ ಅನ್ನುವುದು ಅರಿವಿಗೆ ಬಂದ ಕೂಡಲೆ ಇದ್ದಕ್ಕಿದ್ದಂತೆ ನಿಲ್ಲಿಸಿ ಬಿಡುತ್ತಾರೆ.

ನಮ್ಮ ಮಿತ್ರ ಬಹದ್ದೂರ್ ಸುಮ್ಮನೆ ಏನೂ ಕುಳಿತ್ತಿಲ್ಲ. ನ್ಯಾಯವಾಗಿ ಹೇಳಬೇಕೆಂದರೆ ಅವನೊಂದಿಗೆ ಸಂಧಾನ ಪ್ರಾರಂಭಿಸಿರುವುದರಲ್ಲಿ ವಿಕ್ರಮಾದಿತ್ಯನ ತಾಯಿಯವರೇ ಮೊದಲಿಗರು. ಬಹದ್ದೂರ್ ಒಂದು ವೇಳೆ ತನ್ನ ಜನಗಳದೊಂದು ಸಣ್ಣ ತಂಡ ಕಟ್ಟಿಕೊಂಡು ಹೋಗಿ ರಾಜಕುಮಾರ ವಿಕ್ರಮಾದಿತ್ಯನನ್ನು ಬಂಧಮುಕ್ತಗೊಳಿಸಿದ್ದೇ ಆದರೆ ಹನ್ನೆರಡು ಸಾವಿರ ಕುದುರೆ ಸೈನ್ಯ ಮತ್ತು ಹತ್ತು ಸಾವಿರ ಕಾಲಾಳುಗಳನ್ನು ನೀಡುವುದಾಗಿ ರಾಣಿಯವರು ವಾಗ್ದಾನ ಮಾಡಿದ್ದಾರೆ. ಬಹದ್ದೂರ್ ಈ ಯೋಜನೆಯ ವಿಷಯದಲ್ಲಿ ಆಸಕ್ತಿಯನ್ನೇನೋ ತೋರಿದ್ದಾನೆ. ಆದರೆ ಆತನೇನೂ ದಡ್ಡನಲ್ಲ. ಹೋರಾಟದಲ್ಲಿ ಸೋತು ಹೋದ ಮಿತ್ರನ ಜೊತೆ ಆತ ಸೇರಲಾರ, ಕಡೇಪಕ್ಷ ಈಗಂತೂ ಅಲ್ಲ. ನಿನ್ನೆಯ ದಿನ ರಾಣಿ ಕರ್ಮವತಿಯು ಈ ವಿರೋಧವನ್ನು ಮತ್ತೆ ಪ್ರಸ್ತಾಪಿಸಿ ತನ್ನ ಮಗನನ್ನು ಸೆರೆಮನೆಯಿಂದ ಹಾರಿಸಿಕೊಂಡು ಬರಲು ಮುಂದಾಳತ್ವ ವಹಿಸುವುದಾದರೆ ತಾನು ಜನಗಳನ್ನು ಒದಗಿಸುವುದಾಗಿ ಬಹದ್ದೂರ್‌ಗೆ ಹೇಳಿದ್ದಾಳೆ. ನಾನು ಅದನ್ನು ಮೆಚ್ಚುತ್ತೇನೆ. ಇದರಿಂದಲೂ ಅವನು ನುಣುಚಿಕೊಂಡು ಬಿಡುತ್ತಾನೆ ಎನ್ನುವ ಖಾತರಿ ನನಗಿದೆ. ಆದರೆ ಅದನ್ನು ಅವನು ಹೇಗೆ ಮಾಡುತ್ತಾನೆ ಎನ್ನುವ ಬಗ್ಗೆ ನನಗೆ ತೀವ್ರ ಕುತೂಹಲವಿದೆ. ಅದು ಅತಿಯಾದ ಆತ್ಮವಿಶ್ವಾಸ. ನಾನು ಜಾರಿಕೊಳ್ಳುತ್ತಾ ಇದ್ದೀನಿ. ಆಕೆಯ ಕೊಡುಗೆಯನ್ನು ಸ್ವೀಕರಿಸುವ ಬಗ್ಗೆ ಆತ ಸರಿಯಾದ ತೀರ್ಮಾನ ತೆಗೆದುಕೊಳ್ಳಬಹುದು.

ಬಹದ್ದೂರ್ ಎಷ್ಟೇ ಕೆಚ್ಚುಳ್ಳ ಜನಪ್ರಿಯ ವ್ಯಕ್ತಿಯೇ ಆಗಿದ್ದರೂ ಅವನಿಗೂ ಸಮಸ್ಯೆಗಳಿಲ್ಲದೆ ಇಲ್ಲ. ಅವನು ಮದ್ಯವನ್ನು ತನ್ನೊಳಗಿಟ್ಟುಕೊಳ್ಳಲಾರ. ಕೆಲವೊಂದು ಸಲ ಅವನ ಬಾಯಿ ಅವನೊಂದಿಗೇ ಓಡಿಬಿಡುತ್ತದೆ. ಈಚೆಗೆ ಅವನು ನಮ್ಮ ಕೈ ಮೀರಿ ಹೋಗುತ್ತಾನೆ. ಎನ್ನುವಾಗ ನಮ್ಮ ಕಡೆಯವರು ಯಾರಾದರೂ ಒಬ್ಬ ಅವನ ಮದ್ಯದ ಬಟ್ಟಲಿಗೆ ಅಫೀಮ್ ಬೆರೆಸುವುದನ್ನು ಖಾತರಿಪಡಿಸಿಕೊಳ್ಳುತ್ತೇನೆ. ಆದ್ದರಿಂದ ಆ ವಿಷಯ ಬೇಗ ಇತ್ಯರ್ಥವಾದ ಹಾಗೆ ಆಗುತ್ತೆ. ಕಾರಣ ಇನ್ನೂ ವಾಕ್ಯದ ಮಧ್ಯದಲ್ಲಿದ್ದಾಗಲೇ ಗಾಢವಾಗಿ ನಿದ್ರೆ ಹೋಗಿಬಿಡುತ್ತಾನೆ. ಒಂದು ಸಲ ಮೊದಲಿನ ದಿನಗಳಲ್ಲಿ ಅವನ ಜೊತೆ ಎಚ್ಚರಿಕೆಯಿಂದ ಹೋಗುತ್ತಿದ್ದಾಗ, ಗೃಹ ವ್ಯವಹಾರಗಳ ಸಚಿವರಾದ ಲಕ್ಷ್ಮಣ ಸಿಂಹಜೀಯವರ ಮನೆಗೆ ಭೋಜನಕ್ಕೆ ನಮ್ಮನ್ನು ಆಮಂತ್ರಿಸಲಾಯಿತು. ನನ್ನ ಮಾವ ಲಕ್ಷ್ಮಣಸಿಂಹಜೀಯವರಿಗೆ ಜೊತೆ ಬೇಕು. ಕಷ್ಟ ಏನೆಂದರೆ ಅವರು ಏನನ್ನು ಬೇಕಾದರೂ ಕುಡಿದು ಹಿಡಿತ ತಪ್ಪದೆ ಇರಬಲ್ಲರು. ಮೂರನೇ ಬಟ್ಟಲನ್ನು ಕೈಗೆತ್ತಿಕೊಂಡಾಗ ಒಳ್ಳೆಯ ಸ್ನೇಹಿತರಾಗಿ ಬಿಟ್ಟಿದ್ದ

ಬಹದ್ದೂರ್ ಮತ್ತು ಲಕ್ಷ್ಮಣಸಿಂಹಜೀಯವರ ಮಗ ರಾಜೇಂದ್ರ ಒಬ್ಬರ ಬೆನ್ನಿಗೆ ಇನ್ನೊಬ್ಬರು ಅಂಗೈಯ್ಯಿಂದ ಹೊಡೆಯುತ್ತಾ ಇದ್ದರು. ಅವರಿಬ್ಬರೂ ಐದನೆಯ ಸುತ್ತಿಗೆ ಬಂದಾಗ ಬಹದ್ದೂರ್ ಮತ್ತು ಮಂತ್ರಿ ಮಾನ್ಯರಿಬ್ಬರೂ ಮಾಳವ ಮತ್ತು ದೆಹಲಿಯ ಸೇನೆಗಳ ಉಲ್ಲಾಸದ ಅಪರಾಧಗಳಿಗೆ ಸಂಬಂಧಿಸಿದ ಸ್ವಾರಸ್ಯಕರ ಪ್ರಸಂಗಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಲಕ್ಷ್ಮಣ್‌ಸಿಂಹಜೀಯವರನ್ನು ಹಿಂದೆ ಹಾಕುವ ಕೌಶಲದ ಸರದಿ ಇದೀಗ ಬಹದ್ದೂರ್‌ದಾಯಿತು. ಬಹದ್ದೂರ್ ಹನ್ನೊಂದು ವರ್ಷದವನಿದ್ದಾಗ ಅವರ ತಂದೆ ತೋರಿದ ಒಂದು ಚಾತುರ್ಯವನ್ನು ನೆನಪಿಸಿಕೊಂಡನು.

"ಯುದ್ಧದ ಹಿಂದಿನ ದಿನ ಸಂಜೆ ತಂದೆಯವರು ತನ್ನ ರಾಯಭಾರಿಯಾಗಿ ಶೈಸ್ತಾಖಾನ್ ಅವರನ್ನು ಬಿಳಿಯ ಬಾವುಟದೊಂದಿಗೆ ಶತ್ರು ಪಾಳಯಕ್ಕೆ ಕಳುಹಿಸಿದರು. ಖಾನರ ಭೇಟಿಯನ್ನು ಕುರಿತು ಅವರೇನು ಬಯಸುತ್ತಾರೆ ಎಂಬ ಬಗ್ಗೆ ಬಹಳಷ್ಟು ಊಹಾಪೋಹಗಳಿದ್ದವು. ಗುಜರಾತ್ ಶಾಂತಿಗಾಗಿ ಕೋರುತ್ತಿದೆಯೇ? ಸುಲ್ತಾನರು ಶತ್ರುವಿನೊಂದಿಗೆ ವ್ಯವಹಾರವನ್ನು ಕುದುರಿಸಲು ಬಯಸುತ್ತಾರೆಯೇ? ಅಂಥದ್ದೇನೂ ಇಲ್ಲ. ಅವರದ್ದೊಂದು ಸಣ್ಣ, ಒಂದು ಯಃಕಶ್ಚಿತ್ ಕೋರಿಕೆ ಇತ್ತು. "ನಾಳೆ ಇಸ್ಲಾಮ್ ಹಬ್ಬ. ಮೇವಾಡವು ಕೇವಲ ಇಪ್ಪತ್ತನಾಲ್ಕು ಗಂಟೆಗಳ ಕಾಲ ಯುದ್ಧವನ್ನು ಮುಂದೂಡುವ ಕೃಪೆಮಾಡಲು ಸಾಧ್ಯವೇ?" (ಆತ ತೀರಾ ಆಪ್ತವಲಯದ ಕಥೆಗಳಿಗೆ ಹಾರಿದ ಕೂಡಲೇ ಷಾಹಜಾದಾ ಅವರು ಸಂದಿಗ್ಧ ವಲಯಕ್ಕೆ ಇನ್ನೇನು ಪ್ರವೇಶಿಸುತ್ತಿದ್ದಾರೆಂದು ನಾನು ತಕ್ಷಣ ತಿಳಿಯಬೇಕಿತ್ತು.) ಮೇವಾಡದ ಸೇನಾಧಿಪತಿ ದೊಡ್ಡ ದೊಡ್ಡ ಆಡಂಬರದ ಮಾತುಗಳನ್ನಾಡುವ ಬುರುಡೆ ಅಸಾಮಿ. ಅವನು ದೊಡ್ಡ ದೊಡ್ಡ ಉದಾತ್ತವಾದ ಇಂಗಿತಗಳಲ್ಲಿ ನಂಬಿಕೆ ಇಟ್ಟಿದ್ದ ಅಸಾಮಿ. "ನಾವು ನಾಗರಿಕರೂ, ಸುಸಂಸ್ಕೃತರೂ, ಧೀರರೂ ಆದ ಜನ ಮತ್ತು ಮಹಾಪ್ರಭುಗಳ ಮಾತನ್ನು ಸಂತಸದಿಂದ ನಡೆಸಿಕೊಡುತ್ತೇವೆ. ನಾಳೆಯ ದಿನವನ್ನು ವಿಶ್ರಾಂತಿಯ ದಿನವೆಂದು ಪರಿಗಣಿಸುತ್ತೇವೆ ಮತ್ತು ನಾಡಿದ್ದು ಬೆಳಗ್ಗೆ ಒಂಬತ್ತು ಗಂಟೆಗೆ ಯುದ್ಧರಂಗದಲ್ಲಿ ನಿಮ್ಮನ್ನು ಬಂದು ಸೇರುತ್ತೇವೆ. ಎಂದು ಮಹಾಪ್ರಭುಗಳಿಗೆ ತಿಳಿಸಿ ಎಂದನು. ಆ ದಿನ ರಾತ್ರಿ ಮೇವಾಡದ ಸೈನ್ಯ ಶಿಬಿರದಲ್ಲಿ ವಿಪರೀತ ಅಮೋದ, ಪ್ರಮೋದಗಳು ಕುಡಿತಗಳು ತುಂಬಿದ್ದುವು. ಮರುದಿನ ಬೆಳಿಗ್ಗೆ ಸೈನಿಕರು ಇನ್ನೂ ಕುಡಿತದ ಮಂಪರಿನಲ್ಲಿ ಮುಳುಗಿ ಆರಾಮವಾಗಿದ್ದಾಗ, ಗುಜರಾತ್ ಪಡೆಗಳು ಆಕ್ರಮಣ ಮಾಡಿದನು. ಅದೊಂದು ಕಗ್ಗೊಲೆ. ಹಿಂದೆಂದೂ ನಡೆದಿರದಂಥ ಕಗ್ಗೊಲೆ. ಹತ್ತಿರ ಹತ್ತಿರ ಮೂರು ಸಾವಿರ ಮೇವಾಡದ ಸೈನಿಕರನ್ನು ಸಾಮೂಹಿಕವಾಗಿ ಹತ್ಯೆ ಮಾಡಲಾಯಿತು"

ಲಕ್ಷ್ಮಣಸಿಂಹಜೀಯವರು ಮುಖದಲ್ಲಿ ಏನೊಂದೂ ಭಾವನೆಗಳಿಲ್ಲದಂತೆ ತೋರಿಸಿಕೊಳ್ಳಲು ಹೆಣಗಾಡಬೇಕಾಯಿತು.

ರಾಜಕುಮಾರ ಮತ್ತೆ ಮತ್ತೆ ಅದನ್ನೇ ಹೇಳುವುದಕ್ಕೆ ತೊಡಗಿದ. "ಇದರ ಯಶಸ್ಸನ್ನೆಲ್ಲಾ ನಾವು ಯಾರಿಗೆ ಕೊಟ್ಟೆವು ಗೊತ್ತೇನು.? ಜಗತ್ತಿನ ಅತ್ಯಂತ ದಿಟ್ಟ ಸೇನೆಯ ಸೇನಾಧಿಪತಿಗೆ. ಯುದ್ಧವನ್ನು ಮುಂದುವರೆಸುವುದರಲ್ಲಿ ನೀತಿ ನಿಯಮಗಳು ಇರುತ್ತವೆಂದು ಆ ಮೂರ್ಖ ನಂಬಿದ್ದ. ಯುದ್ದದಲ್ಲಿರುವುದು ಒಂದೇ ನೀತಿ. ಅದರ ಹೆಸರು 'ಜಯ'. ಏನೇ ಆಗಲಿ ಜಯ ಸಾಧಿಸಬೇಕು. ಬಾಕಿಯದೆಲ್ಲಾದರೂ ಹಾಳಾಗಲಿ."

ಬಹದ್ದೂರ್ ಹೃತ್ಪೂರ್ವಕವಾಗಿ ನಕ್ಕ. ನನ್ನ ಸೋದರ ಸಂಬಂಧಿ ರಾಜೇಂದ್ರ ಒಂದು ನಿಮಿಷ ಬರುತ್ತೀನಿ ಎಂದು ಹೇಳಿ ಒಳ ಹೊಕ್ಕ. ನನಗೂ ಒಂದು ಥರಾ ಪೆಚ್ಚಾಯಿತು. ತಲೆ ಎತ್ತಿ ನೋಡಲಾಗದಷ್ಟು ಸಿಟ್ಟು ಬಂದಿತು. ಮೇವಾಡದ ಚರಿತ್ರೆಯಲ್ಲಿ ಆ ಸಾಮೂಹಿಕ

ಕಗ್ಗೊಲೆಯೆಂಬುದೊಂದು ಅತ್ಯಂತ ಕರಾಳದಿನ. ಅನಂತರ ಲಕ್ಷ್ಮಣ ಸಿಂಹಜೀಯವರು ಆ ದಿನ ತಾವು ಕಳೆದುಕೊಂಡ ಮೂರು ಸಾವಿರ ಸೈನ್ಯಕ್ಕೆ ಪ್ರತಿಯಾಗಿ ಗುಜರಾತ್ ಸುಲ್ತಾನನೊಂದಿಗೆ ಇನ್ನೂ ಹೆಚ್ಚಾಗಿ ಮುಯ್ಯಿ ತೀರಿಸಿಕೊಂಡರು. ಆದರೆ ಮೇವಾಡದ ಜನ ಗುಜರಾತನ್ನು ಅದರ ಪಾಶವೀಕೃತ್ಯಕ್ಕಾಗಿ ಎಂದಿಗೂ ಕ್ಷಮಿಸಲಿಲ್ಲ. ಏನೇ ಆಗಲಿ ಬಹದ್ದೂರ್ ಸರಿಯಾಗಿ ಹೇಳಿದ್ದ. ರಜಪೂತರಿಗೆ ಇವತ್ತಿಗೂ ಅರ್ಥ ಮಾಡಿಕೊಳ್ಳಲಿಕ್ಕೆ ಆಗದೆ ಇರುವ ಯುದ್ಧದ ಅರ್ಥವನ್ನು ಸುಲ್ತಾನ್ ಮಾಡಿಕೊಂಡನು. ಇಡೀ ದೇಶದ ಬದುಕೇ ಅದರ ಮೇಲೇ ನಿಂತಿದೆಯೇನೋ ಎನ್ನುವ ಹಾಗೆ ಯುದ್ಧವನ್ನು ಮಾಡಬೇಕು. ಅನೇಕ ವೇಳೆ ಹಾಗೆ ನಿಂತಿರುತ್ತದೆ. ಯುದ್ಧವನ್ನು ಎಲ್ಲ ರೀತಿಯಲ್ಲೂ ಮಾಡಬೇಕು. ನ್ಯಾಯ, ಅನ್ಯಾಯ ಎಲ್ಲ. ಸಾಧ್ಯವಿದ್ದದ್ದೇ ಆದರೆ ಸಂಹಾರಕ್ಕೆ ತೊಡಗಬೇಕು, ಸಾಧ್ಯವಿಲ್ಲವೆಂದಾದರೆ ನಿಮ್ಮ ಸಮಯಕ್ಕಾಗಿ ಕಾಯಬೇಕು.

ಗೃಹಮಂತ್ರಿ ನಕ್ಕೇನೋ ನಕ್ಕರು. ಆದರೆ ಅದೆಂಥಾ ನಗು? ಉಲ್ಲಾಸರಹಿತ, ಗದ್ಗದ ಕಂಠದಿಂದ ಹೊಮ್ಮಿದ ಕಷ್ಟದ ನಗು. ಬಹದ್ದೂರ್ ಒಂದು ದೊಡ್ಡ ಸೀಸೆಯ ತುಂಬ ಮದ್ಯ ಸುರುವಿದನು. ತಾನೋ ಅದಕ್ಕಿಂತ ದೊಡ್ಡ ಸೀಸೆಯ ತುಂಬ ಸುರುವಿಕೊಂಡನು. ಬಹದ್ದೂರ್ ತನ್ನ ಕಥೆಗೊಂದು ಶೀರ್ಷಿಕೆ ಸೂಚಿಸಲು ಲಕ್ಷ್ಮಣ್‌ಸಿಂಹಜೀಗೆ ಹೇಳಿದರು. ಲಕ್ಷ್ಮಣ್ ಸಿಂಹಜೀಯವರು ವ್ಯಥೆಯಿಂದ ಮುಗುಳ್ನಕ್ಕರು. "ರಾಜಕುಮಾರರೇ ನಾನು ಈ ಹೊತ್ತು ಅದೆಷ್ಟೊಂದು ನಕ್ಕಿದ್ದೇನೆ ಎಂದರೆ ಇನ್ನೇನು ಕಣ್ಣೀರು ಬಂದುಬಿಡುತ್ತದೇನೋ ಎನ್ನುವಷ್ಟು. ಇನ್ನಾವತ್ತಾದರೂ ಒಂದು ದಿನ, ತೀರಾ ದೂರಾ ಏನಿಲ್ಲ. ಇಷ್ಟರಲ್ಲೇ ನಿಮ್ಮ ಹೊಟ್ಟೆ ಬಿರಿಯುವವರೆಗೂ ನಗುಬರಿಸುವಂಥ ಒಂದು ತತ್ತರಿಸುವ ಸೋಲಿನ ಬಗ್ಗೆ ಹೇಳುತ್ತೇನೆ. ಅದಕ್ಕಾಗಿ ಈಗ ಕುಡಿಯೋಣ."

* * *

ಆ ಬೆಳಗ್ಗೆ ನಗರ ಯೋಜಕ ಸಾಹಸಮಲ್ ಜೊತೆ ಇದ್ದೆ. ಆತ ತುಂಬ ಶ್ರಮವಹಿಸಿ ಚರಂಡಿ ವ್ಯವಸ್ಥೆಯ ಬಗ್ಗೆ ಒಂದು, ಕುಡಿಯುವ ನೀರಿನ ಬಗ್ಗೆ ಒಂದು ಹೀಗೆ ಎರಡು ಯೋಜನೆಗಳನ್ನು ತಯಾರಿಸಿದ್ದನು. ಅವನ ಯೋಜನೆ ಇಡೀ ನಗರಕ್ಕೆ ಅನ್ವಯಿಸುವಂತೆ ಪ್ರಮುಖವಾದ ಬೇರೆ ಬೇರೆ ಹಂತಗಳ ಎರಡು ನೂತನ ಕೊಳಾಯಿಗಳ ಜಾಲವನ್ನು ಒಳಗೊಂಡಿತ್ತು. ಸಾಮಾನ್ಯವಾಗಿ ಸೋರಿಕೆಯೇನಿದ್ದರೂ ತಗ್ಗಿನ ಕಡೆಗಿರೋದರಿಂದ, ಶುದ್ಧ ನೀರಿನ ಕೊಳಾಯಿಗಳು ಅಶುದ್ಧ ನೀರನ್ನು ಕೊಂಡೊಯ್ಯುವ ಕೊಳಾಯಿಗಳಿಗಿಂತ ಮೂರು ಅಡಿ ಮೇಲೆ ಇರುತ್ತವೆ. ಹೊಸ ನೀರು ಸರಬರಾಜು ಕೆಲಸ ಮತ್ತು ಚರಂಡಿ ವ್ಯವಸ್ಥೆಗಳನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು ಮತ್ತು ಎರಡು ವಿಧಾನಗಳಲ್ಲಿ ಅದಕ್ಕೆ ಹಣಕಾಸು ಒದಗಿಸಲಾಗುವುದು. ಮೊದಲನೆಯ ವಿಧಾನವೆಂದರೆ ಇದರ ಹಣಕಾಸು ಹೂಡಿಕೆದಾರರು ಶೇಕಡ ನಾಲ್ಕರ ಬಡ್ಡಿ ಮತ್ತು ಶೇಕಡ ನಾಲ್ಕರ ತೆರಿಗೆ ರಿಯಾಯಿತಿಗಳನ್ನು ಪಡೆಯುವರು. ಬಾಕಿ ಹಣವನ್ನು ಪ್ರತಿವರ್ಷವೂ ಮುಂಗಡವಾಗಿ ಕೊಡಬೇಕಾಗಿ ಬರುವ ನೀರಿನ ಕಂದಾಯದ ಮೂಲಕ ಸಂಗ್ರಹಿಸಲಾಗುವುದು.

"ನನಗೆ ಈ ನಿಮ್ಮ ನೀರಿನ ಯೋಜನೆಗಳು ಇಷ್ಟವಾಗಿವೆ" ಎಂದು ಹೇಳಿದೆ. "ಇನ್ನೊಂದೆರಡು ತಿಂಗಳಲ್ಲಿ ಇವನ್ನು ಇನ್ನಷ್ಟು ಪರಿಷ್ಕರಿಸಿ ಘನತೆವೆತ್ತ ಮಹಾಸ್ವಾಮಿಗಳು ಹಿಂತಿರುಗಿದಾಗ ಅವರ ಮುಂದೆ ಪ್ರಸ್ತುತ ಪಡಿಸೋಣ, ಧನ್ಯವಾದಗಳು" ಎಂದೆ. ಆತ ಹೊರಟು ನಿಂತು ಬಾಗಿಲ ಹತ್ತಿರ ಇದ್ದಾಗ ಕರೆದು ಹೇಳಿದೆ. "ಸಾಹಸಮಲ್‌ಜೀಯವರೇ ನಿಮ್ಮ ಯೋಜನೆಗಳು ರಾಣಾ ಕುಂಭ ಅವರ ವಾಸ್ತುಶಿಲ್ಪಿಗಳಾದ ಜೈತಾ ಮತ್ತು ಮಂದನ್

ಅವರುಗಳದ್ದಕ್ಕಿಂತ ಅತಿ ಹೆಚ್ಚು ಪ್ರಯೋಜನಕಾರಿ ಮತ್ತು ಹೆಚ್ಚು ದೀರ್ಘಕಾಲ ಉಳಿಯುವಂಥವು. ಮುಂದಿನ ಮಂಗಳವಾರ ಮತ್ತೆ ಬನ್ನಿ. ನಾವು ಇನ್ನಷ್ಟು ಹೊತ್ತು ಈ ಬಗ್ಗೆ ಯೋಚನೆ ಮಾಡೋಣ?"

ನಾನಿನ್ನೂ ವಾಕ್ಯ ಪೂರ್ತಿ ಮುಗಿಸಿರಲಿಲ್ಲ. ಮಂಗಳ್ ಒಳಕ್ಕೆ ಬಂದಿದ್ದ. ಅವನು ಇಲ್ಲೇನು ಮಾಡುತ್ತಿದ್ದ, ಅವನು ಬಹಾದೂರ್ ಜೊತೆ ಬೇಟೆಗೆ ಹೋಗಿರಬೇಕಾಗಿತ್ತಲ್ಲವೆ? ಅವನ ಬಿಳಿಚಿದ ಮುಖ ಮತ್ತು ಆಯಾಸಗೊಂಡ ಕಣ್ಣುಗಳನ್ನು ನೋಡಿದರೆ ತನ್ನನ್ನು ಕ್ಷಮಿಸಬೇಕೆಂದು ಬೇಡುವಂತಿತ್ತು. ಅಲ್ಲದೆ ಏನೋ ಭಯಂಕರವಾದ್ದು ಆಗಿದೆ ಎಂದು ನನಗೆ ಗೊತ್ತಾಯಿತು. ಅವನಿಗೆ ಹೊರಗಡೆ ಸ್ವಲ್ಪ ಕಾಯಲು ಸಂಜ್ಞೆ ಮಾಡಿ ಸಾಹಸಮಲ್‌ನನ್ನು ಬೀಳ್ಕೊಟ್ಟೆ. ವಿವೇಕವನ್ನು ತಂದುಕೊಂಡು ಶಾಂತವಾಗಿ ಶತಪದ ಹಾಕಿದೆ. ಮಂಗಳನು 'ಬೇಷ್ಕಿಕಿರ್ ಅನ್ನು ಹಗ್ಗ ಕಳಚಿ ಬಿಟ್ಟಿದ್ದ ಮತ್ತು ನನಗಾಗಿ ಕಾಯುತ್ತಿದ್ದ.

"ಎಲ್ಲಿಗೆ ಹೋಗಬೇಕು"

"ಅತಿಥಿ ಅರಮನೆಗೆ"

"ಆಗಿರುವ ಗಾಯ ಎಷ್ಟು ತೀವ್ರವಾದ್ದು"

"ತುಂಬಾ"

"ಆತ ಕೆಳಗೆ ಬಿದ್ದನೆ"

"ಇಲ್ಲ ನನ್ನ ರಾಜಕುಮಾರ"

ನಾನು ಹೋಗಬೇಕಾಗಿತ್ತು. ಆದರೆ ಅದನ್ನು ಹೇಳಲು ಈಗ ತೀರಾ ತಡವಾಗಿದೆ. ಬಹಾದೂರ್‌ಗೆ ನಾನು ತೀರ ಮುಚ್ಚಟೆ ಮಾಡುತ್ತಿದ್ದೇನೆ ಅನ್ನುವ ಭಾವವುಂಟಾಗಿತ್ತು. ಅವನು ಇಲ್ಲಿಗೆ ನನ್ನ ಕಣ್ಗಾವಲಿಗೆ ಬಂದಾಗ ರಕ್ಷಣೆ ಕೋರಿದ್ದ. ನಾನು ಅದಕ್ಕೆ ತಕ್ಕಂತೆ ಅಕ್ಷರಶಃ ಪಾಲಿಸಿದ್ದರಿಂದ ಅವನು ತುಂಬ ಅಸಮಾಧಾನಪಟ್ಟುಕೊಳ್ಳುತ್ತಿದ್ದನು. ಅವನು ತುಂಬಾ ಉತ್ಸಾಹೀ ಬೇಟೆಗಾರ. ಚಿತ್ತೂರಿನ ಸುತ್ತ ಮುತ್ತಲಿನ ಕಾಡುಗಳು ಇಡೀ ಸಾಮ್ರಾಜ್ಯದಲ್ಲೇ ಬೇಟೆಗೆ ಅತ್ಯುತ್ತಮ ಅವಕಾಶ ಒದಗಿಸುತ್ತವಾದ್ದರಿಂದ ನಾನು ರಾಜಬೇಟೆಗೆ ಏರ್ಪಾಟು ಮಾಡಿದೆ. ಆತ ತನ್ನ ಪಾಡಿಗೆ ತಾನು ಸಂತೋಷವಾಗಿರುತ್ತಾನೆ ಮತ್ತು ನಾನು ಅಲ್ಲಿ ಇಲ್ಲದೆ ಇದ್ದರೆ ಬೇಟೆಯ ವಿನೋದವನ್ನು ಚೆನ್ನಾಗಿ ಅನುಭವಿಸುತ್ತಾನೆಂದು ಖಚಿತವಾಗಿ ನಂಬಿದೆ. ಜೊತೆಗೆ ಮಂಗಳ್ ಹೇಗೂ ಅವನ ಮೇಲೊಂದು ಕಣ್ಣಿಟ್ಟೇ ಇರುತ್ತಾನೆ ಎಂಬುದು ನನ್ನೆಣಿಕೆ. ಬೇಟೆಯ ಸಂದರ್ಭದಲ್ಲಿ ರಾಜಕುಮಾರ ಬಹಾದೂರ್ ಗಾಯಗೊಳ್ಳಬಹುದೆಂಬುದು ನನಗೆ ಹೊಳೆದಿರಲಿಲ್ಲ.

"ರಾವ್‌ಭಗತ್ ಮತ್ತು ಹದಾ ಕೋಮಲ್ ಅವನ ಜೊತೆ ಇರಲಿಲ್ಲವೆ?"

"ಇದ್ದರು ಮಹಾಸ್ವಾಮಿ. ಹಾಗೆಯೇ ನಾನು ಕೂಡಾ ಇದ್ದೆ. ನಾನು ನಿಮ್ಮ ನಂಬಿಕೆ ಉಳಿಸಲಿಲ್ಲ"

"ಅದರ ವಿಷಯ ಆಮೇಲೆ ನೋಡೋಣ. ರಾಜ ವೈದ್ಯರನ್ನು ಕರೆಸಿದ್ದೀಯಾ?"

"ಹೌದು ಮಹಾಸ್ವಾಮಿ. ಮತ್ತು ಹಕೀಮರೂ ಇದ್ದಾರೆ. ಅವರಿಗೆ ತುಂಬಾ ರಕ್ತಸ್ರಾವ ಆಗಿದೆ"

ನಾವು ಅರಮನೆಯ ಹತ್ತಿರ ಹೋದೆವು. ಬಹಾದೂರ್‌ನನ್ನು ತಾತ್ಕಾಲಿಕ ಡೋಲಿಯಿಂದ ಹಾಸಿಗೆಗೆ ತಂದು ಮಲಗಿಸಿದ್ದರು. ಅಲ್ಲಿ ನಾರುತ್ತಿರುವ ಸೋಂಕು ಗಾಯದ ದಟ್ಟ ವಾಸನೆ ಹರಡಿತ್ತು. ನನಗೆ ಈಗಲೋ ಆಗಲೋ ವಾಕರಿಕೆ ಬರುವಂತಾಯಿತು.

"ಎಲ್ಲರೂ ಇಲ್ಲಿಂದ ಮೊದಲು ಜಾಗ ಖಾಲಿ ಮಾಡಿ. ರಾಜ ವೈದ್ಯರು ಹಕೀಮ್ ಅಲ್ತಾಫ್ ಹುಸೇನ್ ಮತ್ತು ಮಂಗಳ್ ಇಷ್ಟು ಜನರನ್ನು ಬಿಟ್ಟು ಬಾಕಿ ಎಲ್ಲರೂ ಇಲ್ಲಿಂದ ಹೊರಟು ಬಿಡಿ" ಎಂದು ನಾನು ಗಟ್ಟಿಯಾಗಿ ಹೇಳಿದೆ. ಬೇಟೆಯ ತಂಡದವರು, ಸೇವಕರು ಮತ್ತು ನೋಡುತ್ತ ನಿಂತವರು ಜಾಗ ಖಾಲಿ ಮಾಡಿದರು. ನಾನು ಬಹಾದೂರ್ ಹಣೆಯ ಮೇಲೆ ಕೈಯಾಡಿಸಿದೆ. ಅದು ಕೆಂಡದ ಹಾಗೆ ಸುಡುತ್ತಿತ್ತು. "ನೀವಿಬ್ಬರೂ ಏನು ಮಾಡಬೇಕು ಅಂತ ಯೋಚನೆ ಮಾಡಿದ್ದೀರಿ"- ಎಂದು ವೈದ್ಯರಿಬ್ಬರನ್ನೂ ಅವರ ಮೈಮರೆವಿನಿಂದ ಎಚ್ಚರಿಸಿದೆ. "ಮಹಾಸ್ವಾಮಿ" – ಹಿಂಜರಿಯುತ್ತ ಹಕೀಮ್ ಹೇಳಿದ – "ನಾನು ಅವರ ನಾಡಿ ನೋಡಿದ್ದೀನಿ. ಈಗ ಏನು ಮಾಡುವುದಕ್ಕೂ ತೀರಾ ತಡವಾಗಿದೆ"

'ನೀವು ಏನು ತೀರ್ಮಾನಕ್ಕೆ ಬಂದಿದ್ದೀರಿ'?

"ನನಗೇನೂ ಗೊತ್ತಾಗುತ್ತಿಲ್ಲ ಮಹಾಪ್ರಭು. ಆದರೆ ರೋಗಿ ಈಗ ಚೇತರಿಸಿಕೊಳ್ಳುವ ಹಂತ ದಾಟಿದ್ದಾರೆ ಅನ್ನಿಸುತ್ತೆ"

"ಕೂತುಕೊಳ್ಳಿ" – ಇಬ್ಬರಿಗೂ ಮೃದುವಾಗಿ ಹೇಳಿದೆ. "ಒಂದು ವೇಳೆ ಅವರು ರಾಜಕುಮಾರರಲ್ಲದೆ ನಮ್ಮ ಹಳ್ಳಿಯ ಒಬ್ಬ ಸಾಮಾನ್ಯ ಮನುಷ್ಯನಾಗಿದ್ದರೆ ನೀವು ಏನು ಮಾಡ್ತಾ ಇದ್ದಿರಿ? ಅವರಲ್ಲಿ ದುರ್ಬಲವಾಗಿ ನಾಡಿ ಇನ್ನೂ ಆಡುತ್ತಾ ಇರುವುದನ್ನಂತೂ ನೀವು ಕಂಡಿದ್ದೀರಿ, ಅಲ್ಲವೆ ಹಕೀಮ್ ಅಲ್ತಾಫ್ ಹುಸೇನ್ ಅವರೆ? ಅದರರ್ಥ. ಆತ ಇನ್ನೂ ಬದುಕಿದ್ದಾರೆ, ಸರಿ ತಾನೆ? ತುಂಬಾ ಖಾಯಿಲೆಯಿಂದಿರುವ, ಇನ್ನೂ ಸತ್ತಿಲ್ಲದ, ಒಬ್ಬ ಹಳ್ಳಿಯವನು ಅವನದೇ ಹೊಲಸಿನಲ್ಲಿ ಮಲಗಿರುವುದಕ್ಕೆ ಮತ್ತು ಅವನ ಬಟ್ಟೆಯನ್ನು ಬದಲಾಯಿಸದೆ ಇರುವುದಕ್ಕೆ ನೀವು ಅವಕಾಶ ಕೊಡ್ತಾ ಇದ್ದಿರಾ? ನೀವು ಅವರು ರಾಜವಂಶಸ್ಥರು ಎನ್ನುವ ಕಾರಣಕ್ಕೆ ತುಂಬಾ ಭಯಪಟ್ಟು ಏನೂ ಮಾಡದೆ ನಿಷ್ಕ್ರಿಯರಾಗಿದ್ದೀರಿ. ನೀವಿಬ್ಬರೂ ಒಬ್ಬರಿಗೊಬ್ಬರು ಮಾತಾಡಿಕೊಂಡು, ಅತ್ಯಂತ ಹೀನಾಯ ಸ್ಥಿತಿಯಲ್ಲಿರುವ ಯಾವುದೇ ಒಬ್ಬ ಮನುಷ್ಯನಿಗೆ ಚಿಕಿತ್ಸೆ ಕೋಡೋ ಹಾಗೆ ಅವರಿಗೂ ಚಿಕಿತ್ಸೆ ಕೊಡಿ. ಈಗಲೇ ಕೆಲಸ ಶುರು ಮಾಡಿ. ನಿಮಗೆ ಸಾಧ್ಯವಾದದ್ದೆಲ್ಲಾ ಮಾಡಿ. ಉಳಿದದ್ದು ದೇವರಿಗೆ ಬಿಡಿ"

ನಾನು ಕೋಣೆಯಿಂದ ಹೊರಬಂದೆ. ಅತಿಥಿ ಅರಮನೆಯ ಅಂತ್ಯವೇ ಇಲ್ಲದ ಕೈಸಾಲೆಗಳ ಮೂಲಕ ಉದ್ಯಾನಕ್ಕೆ ಹೋದೆ. ಅಲ್ಲಿ ಅದ್ಭುತವೆನ್ನುವಷ್ಟು ಪರಿಶುದ್ಧವಾದ, ದುರ್ವಾಸನೆಯಿಲ್ಲದ, ಚಿತ್ತೂರಿನ ಹೊಚ್ಚ ಹೊಸ ಗಾಳಿಯನ್ನು ಹಲವಾರು ಸಲ ದೀರ್ಘವಾಗಿ ಎಳೆದುಕೊಂಡೆ.

ಅಧ್ಯಾಯ 8

ಅದು ಕೆಟ್ಟ ನೌಟಂಕಿ ನಾಟಕಗಳ ಸರಕು. ಗಂಡಸು, ಹೆಂಗಸು ಮತ್ತು ಪ್ರೇಮಿ. ಕೊನೆಯವನು ಸರ್ವಶಕ್ತ ದೇವರು ಆಗಿದ್ದ ಎನ್ನುವುದೊಂದೇ ಅಪವಾದ.

"ಇದು ನಗುವಂಥ ವಿಷಯ ಎಂದು ನೀನು ತಿಳಿದಿದ್ದೀಯಾ? ಅವನು ಯಾರು ಎಂದು ನೀನು ನನಗೆ ತಿಳಿಸಬೇಕು. ಈಗ ನಾನು ಅವನನ್ನು ಕೊಂದು ನಿನ್ನನ್ನು ಕೊಲ್ಲುತ್ತೇನೆ" ಅವನ ದನಿ ವಿಚಿತ್ರವಾಗಿತ್ತು ಮತ್ತು ಅಮಾನವೀಯವಾದ ಹಿಂಸಾತ್ಮಕ ಮಾತು ಅವನದಾಗಿತ್ತು. "ನಿನ್ನ ಗಂಡನ ಮನೆಯಲ್ಲಿ ಇದನ್ನು ಮುಂದುವರಿಸುತ್ತಾ ಇರುವುದಕ್ಕೆ ನಿನಗೆ ನಾಚಿಕೆಯಾಗೋಲ್ಲವೆ? ಹೇಳು ಹಾದರಗಿತ್ತಿ. ಹೇಳು ಯಾರವನು, ಅದು ಯಾರು ಅವನು, ನಿನ್ನ ಗಂಡನಿಗೆ ನ್ಯಾಯಬದ್ಧವಾಗಿ ನಿನ್ನನ್ನು ಕೂಡೋದಕ್ಕೆ ಇರುವ ಹಕ್ಕನ್ನು ನೀನು ನಿರಾಕರಿಸುತ್ತ ಇರೋವಾಗ ಇದೇ ಜಾಗದಲ್ಲೇ ನಿನ್ನನ್ನು ಸಂಭೋಗಿಸುತ್ತಿದ್ದೋನು ಯಾರವನು?

"ಶಾಂತರಾಗಿ, ದಯವಿಟ್ಟು ಶಾಂತರಾಗಿ" – ಎಂದು ಗಂಡನಿಗೆ ಬೇಡಿಕೊಂಡಳು. "ನೀವು ಇಡೀ ಅರಮನೇನೆಲ್ಲ ಎಬ್ಬಿಸಿ ಬಿಡುತ್ತೀರಿ"

"ಎದ್ದವನಿಗೆ ನಾನೇನೂ ಕುದುರೆ ಲದ್ದಿ ಕೊಡಲ್ಲ. ಜಗದೀಶ್ವರನನ್ನೇ ಎಬ್ಬಿಸುವುದಕ್ಕೂ ಸರಿ, ನಾನೇನೂ ಚಿಂತೆ ಮಾಡಲ್ಲ. ಅಷ್ಟೇ ಅಲ್ಲ ಇಲ್ಲೇ ಸರಿಯಾಗಿ ಅವನ ಕಣ್ಣೆದುರಿನಲ್ಲೇ ಎಷ್ಟೊಂದು ಸಂತೋಷವಾಗಿದ್ದಾಳೆಂದು ಹೇಳುವುದಕ್ಕೂ ಚಿಂತಿಸಲ್ಲ." ಆದರೆ ಹೇಗೋ ಏನೋ ಅಷ್ಟು ಹೊತ್ತಿಗೆ ಅವನು ತನ್ನ ದನಿ ತಗ್ಗಿಸಿದ್ದನು. ಈ ಹೊಲಸು ಹೆಂಗಸು ತಾನು ಕಂಡಿರಬಹುದಾದ ಪೂರ್ಣ ವಂಚಕಿ. ಖುಷಿಯಾಗಿ ಕಾಲ ತಳ್ಳುತ್ತಿರುವಂಥ ಈ ಹೆಣ್ಣಿನ ತಲೆಯಲ್ಲಿನ ಒಂದೇ ಒಂದು ಕೂದಲು ಕೂಡ ಯಾವತ್ತೂ ತನ್ನ ಜಾಗ ಬಿಟ್ಟು ಕದಲುವುದಿಲ್ಲ. ಅವಳ ಹಣೆಯ ಮೇಲೆ ಒಂದೂ ಚಿಂತೆಯ ಗೆರೆ ಮೂಡಿಲ್ಲ. ದ್ವಿಮುಖ ಬದುಕು ಸಾಗಿಸುತ್ತಿದ್ದೂ ತನ್ನ ಗಂಡ ಜೋರಾಗಿ ಮಾತಾಡಿದರೆ ಯಾರಾದರೂ ಕೇಳಿಸಿಕೊಂಡು ಬಿಟ್ಟಾರು ಎನ್ನುವ ಚಿಂತೆ ಬೇರೆ. ಸರಿ ಇನ್ನೇನೂ ಅವಳು ಯೋಚನೆ ಮಾಡಬೇಕಾಗಿಲ್ಲ. ಕಾರಣ ಎಲ್ಲಾ ಸೇವಕರನ್ನೂ ಆತ ಆಗಲೇ ಆಚೆ ಕಳಿಸಿಯಾಗಿತ್ತು. ಈಗ ಅವನು ಅವಳಿಂದ ಸತ್ಯವನ್ನು ಹೊರಕ್ಕೆ ಹೊರಡಿಸುವವರೆಗೂ ಅಲ್ಲಿ ಇರುವವಳು ಅವಳೊಬ್ಬಳೇ.

"ಅಲ್ವೇ ಯಾರದು, ನನ್ನ ತಮ್ಮ ರತನ್ನಾ ಅಥವಾ ನನ್ನ ರಸಿಕ ಮಾವನಮಗ ರಾಜೇಂದ್ರನಾ? ಅಥವಾ ನಿನ್ನ ಸುತ್ತಮುತ್ತನೇ ಯಾವಾಗಲೂ ಸುಳಿದಾಡಿಕೊಂಡಿದ್ದು,

ಚಿನ್ನದ ಕಾಲಂದಿಗೆ ಹಾಕಿಕೊಂಡಿರೋ ನಿನ್ನ ಕಾಲುಗಳು ಕಂಡ ಕೂಡಲೇ ಜೊಲ್ಲು ಸುರಿಸುತ್ತಾ ನಿಂತಿದ್ದು, ಯಾರೂ ನೋಡ್ತಾ ಇಲ್ಲ ಅಂತ ಗೊತ್ತಾದ ಕೂಡಲೇ ಇನ್ನೊಂದಷ್ಟು ಒಳಕ್ಕೆ, ಎದೆಯ ಮಧ್ಯಕ್ಕೆ ಇಳಿಯೋದಕ್ಕೆ ಸಾಧ್ಯವೇನೋ ಅಂತ ತನ್ನ ಅತ್ತಿಗೆಯ ಕುಪ್ಪಸದ ಕಡೇನೇ ಇಣುಕಿ ನೋಡುತ್ತಾ ಇರೋದಕ್ಕೆ ಅವನೇನು ವಿಕ್ರಮಾದಿತ್ಯನಾ ಯಾರವನು?" ಹಾಗೆ ಕೂಗಾಡಿ ತಕ್ಷಣ ಸ್ತಬ್ದನಾಗಿ ಬಿಟ್ಟ. ತಾನು ಎಷ್ಟೊಂದು ಕೀಳುಮಟ್ಟಕ್ಕೆ ಇಳಿದು ಬಿಟ್ಟೆನಲ್ಲಾ ಎಂದು ದಿಙ್ಮೂಢನಾದ. ಯಾರೇ ಆದರೂ, ಸರಿ ಅನುಮಾನಕ್ಕೆ ಹೊರತಲ್ಲ. ಬೆಳಗಿನ ಮಂಜಿನಷ್ಟೇ ಪರಿಶುದ್ಧಳಾದ ರಾಜಕುಮಾರಿ, ಎಲ್ಲರನ್ನು ಮೀರಿಸಿದಂಥಾ ಸೂಳೆ ಎಂದು ಯಾರಾದರೂ ಅವನನ್ನು ನಂಬಿಸಬಹುದೇ? ಯಾವುದೂ ಅಸಾಧ್ಯವಲ್ಲ. "ಅದು ಯಾರು ತಂದೆಯವರಾ? ಅದಕ್ಕೋಸ್ಕರಾನೇ ಅವರನ್ನು ಮೊದಲಿಗೆ ನೋಡಿದ ಕೂಡಲೇ ನೀನು ಮೂರ್ಛೆ ಹೋದೆಯ?"

"ನಿಲ್ಲಿಸಿ, ದಯಮಾಡಿ ನಿಲ್ಲಿಸಿ. ನೀವು ಆಡಿದ ಮಾತಿಗೆ ಪಶ್ಚಾತಾಪ ಪಡುತ್ತೀರಿ ಮತ್ತು ನಿಮ್ಮನ್ನು ನೀವೇ ದ್ವೇಷಿಸುತ್ತೀರಿ"

"ಅಥವಾ ಅದು ನೀನು ಮೆರ್ತಾಗೆ ವಾಪಸ್ಸು ಹೋಗುವಾಗ ನಿನ್ನ ಜೊತೆ ಬಂದರಲ್ಲ ನಿಮ್ಮ ಮಾವ ರಾವ್‌ಮೀರಮ್‌ದೇವ್ – ಅವರಾ? ನಮ್ಮ ತಂದೆಯವರ ತಂಗಿಯನ್ನು ಮದುವೆಯಾಗಬೇಕು ಅಂತ ಆಗಿತ್ತಲ್ಲಾ ಆ ವ್ಯಕ್ತಿ ಜೊತೆಯಲ್ಲೇನು ನಿನ್ನ ನಿಶ್ಚಿತಾರ್ಥ ಆಗಿದ್ದದ್ದು? ನೀನಿನ್ನೂ ಚಿಕ್ಕವಳಿದ್ದಾಗಲೇ ಅವನು ಶುರು ಮಾಡಿಕೊಂಡಿದ್ದನಾ? ಅದೂ ಅವನದು ಅದೆಷ್ಟೊಂದು ಸುಂದರವಾದ, ಲಕ್ಷಣವಾದ, ಗೌರವಾನ್ವಿತವಾದ ಘನತೆವೆತ್ತ ಮುಖ? ಅದೇ ನೀನು ಮಗುವಾಗಿದ್ದಾಗ ಹಿಡಿದುಕೊಂಡು ಅವನ ರೆಟ್ಟೆಗಾತ್ರದ ಮೀಸೆಯಿಂದ ಜೋತುಬೀಳ್ತಾ ಇದ್ದೆಯಲ್ಲ. ಅವನು ತನ್ನ ರೆಟ್ಟೆ ಮೀಸೆಯಿಂದ ನಿನ್ನ ಕಿವಿಗೆ ಕಚಗುಳಿ ಇಡುತ್ತಾ ಇದ್ದನಾ? ಇದು ನಮ್ಮಿಬ್ಬರ ಮಧ್ಯದ ಗುಟ್ಟು ; ಇದನ್ನು ನಾವಿಬ್ಬರೂ ಜೀವನಪೂರ್ತಿ ಹಂಚಿಕೊಳ್ಳೋಣ ಅಂತ ಅವನು ಹೇಳಿದನಾ?"

ಈಗ ಅವಳು ಅಳುತ್ತಾ ಇದ್ದಳು, ಅದೂ ನೀರವವಾಗಿ. ಅವಳ ಹೃದಯ ಉದ್ವಿಗ್ನಗೊಂಡಿತ್ತು. ಅವಳು ಮಾತಾಡಬೇಕು ಎಂದು ಪ್ರಯತ್ನಿಸಿದಳು. ಆದರೆ ನಾಲಗೆ ಹಿಂದೆ ಸರಿಯಿತು. ಅವಳ ಉಸಿರಾಟದ ಗತಿ ಏರುಪೇರಾಯಿತು. ಅವಳ ಕಣ್ಣುಗಳು ಮೇಲುಗಡೆಗೆ ತಿರುಗಿದುವು. ಅವುಗಳ ಬಿಳುಪು ಮಾತ್ರ ಕಾಣಿಸುತ್ತಿತ್ತು. ಅವಳ ಕೈಗಳು ಮತ್ತು ಪಾದಗಳು ಬಿಗಿದುಕೊಂಡವು. ಅವಳ ಬಾಯಿ ಎತ್ತೆತ್ತಲೋ ಹೋಗಲು ಶುರುವಾಯಿತು.

"ಆಹಾ! ಹೆಂಗ್ಸೆ, ನೀನು ಈ ತಳ ತಂತ್ರಾನ ನನ್ನ ಮೇಲೆ ತೋರಿಸೋದಕ್ಕೆ ಆಗಲ್ಲ. ಉನ್ಮಾದದ ಮೂರ್ಛೆ ಅಥವಾ ಮೂರ್ಛೆಯ ನಟನೆ ಯಾವುದೂ ಮಾಡಬೇಡ ದಯವಿಟ್ಟು" ಹಾಗೆ ಹೇಳಿ ಅವನು ಜೋರಾಗಿ ಅವಳ ಕೆನ್ನೆಗೆ ಬಾರಿಸಿದ. ಮತ್ತೂ ಹೊಡೆದ. ಅವಳ ಉಸಿರಾಟ ಸರಿಹೋಯಿತು. ಅವಳ ದೃಷ್ಟಿ ಸರಿಹೋಯಿತು. ಆದರೆ ಅವಳಿನ್ನೂ ದಿಗ್ಭ್ರಮೆಗೊಂಡೇ ಇದ್ದಳು.

"ದಯವಿಟ್ಟು ಇನ್ನು ಹೊಡಿ ಬೇಡಿ. ಅದು ಯಾರು ಅಂತ ಹೇಳ್ತೀನಿ"

ಈಗ ಬಾಯಿಮುಚ್ಚಿಕೊಳ್ಳುವ ಸರದಿ ಅವನದಾಯಿತು. ಅವನನ್ನು ನೋಡಿದರೆ ಯಾರಾದರೂ ಅವನ ಕುತ್ತಿಗೆ ಹಿಸುಕುತ್ತಿದ್ದಾರೆಯೋ ಎಂಬಂತಿತ್ತು ಅವನ ನೋಟ. ಕಳೆದ ಏಳೆಂಟು ತಿಂಗಳಿನಿಂದ ಅಥವಾ ಒಂದು ವರ್ಷದಿಂದಲೋ ಏನೋ, ಅವನು ಅವಳಿಂದ ತಿಳಿದುಕೊಳ್ಳಬೇಕು ಎಂದು ಇದ್ದದ್ದು ಅವಳನ್ನು ನಿಶ್ಚಿತಾರ್ಥ ಮಾಡಿಕೊಟ್ಟದ್ದು ಯಾರಿಗೆ ಅನ್ನುವುದನ್ನು. ಈಗಿನ್ನೇನು ಅವಳು ಅವನ ಹೆಸರನ್ನು ಹೇಳಿಬಿಡುತ್ತಾಳೆ.

ಆದ್ದರಿಂದ ಈಗ ಅವನಿಗೆ ಧೈರ್ಯವಿಲ್ಲದಾಯಿತು. ಅವನಿಗೆ ಈಗ ಆ ಹೆಸರನ್ನು ತಿಳಿದುಕೊಳ್ಳುವುದು ಬೇಡವಾಯಿತು. ಲೇ...ಹಾದರಗಿತ್ತಿ ನಿನ್ನ ಬಾಯಿಗೆ ಬೀಗ ಹಾಕಿಕೋ. ಇಲ್ಲ ಅಂದರೆ, ನಿನ್ನ ನಾಲಿಗೆ ಇರಿದುಬಿಡ್ತಿನಿ. ಬಾಯಿ ಮುಚ್ಚು. ಎಲ್ಲಿಯವರೆಗೆ ನನಗೆ ಈ ವಿಷಯ ಗೊತ್ತಿರುವುದಿಲ್ಲ ಅಂತ ಹೇಳಿ ನಿಭಾಯಿಸುತ್ತ ಇರುತ್ತೇನೋ, ದರಿದ್ರದವನಿಗೆ ಬೈಯೋದಿಲ್ಲ ಅಷ್ಟೆ.

ಅವಳ ಹಾಸಿಗೆಯ ಪಕ್ಕದಲ್ಲಿದ್ದ ಸಣ್ಣ ಅಮೃತಶಿಲೆಯ ವಿಗ್ರಹದ ಕಡೆಗೆ ಬೆಟ್ಟುಮಾಡಿ ತೋರಿಸುತ್ತ ಹೇಳಿದಳು–"ಅದು ಅವನು"

"ಯಾರು?"– ಅವನು ಕೇಳಿದ.

ಅವಳು ಮತ್ತೆ ಅದೇ ವಿಗ್ರಹದ ಕಡೆಗೆ ಬೆಟ್ಟುಮಾಡಿ ತೋರಿಸಿದಳು.

"ಅದು ಶ್ರೀಕೃಷ್ಣ. ಅವನಿಗೂ ಇದಕ್ಕೂ ಏನು ಸಂಬಂಧ?"

"ಅವನೇ ಅದು"

"ಇದು ನೀನು ಮಾಡುತ್ತಿರುವ ತಮಾಷೆಯೆ?"

ಅವಳು ಅಲ್ಲವೆಂದು ತಲೆ ಅಲ್ಲಾಡಿಸಿದಳು.

"ನೀನು ನನ್ನನ್ನು ಯಾರೋ ಒಬ್ಬ ಮೂರ್ಖ ಅಂದುಕೊಂಡಿದ್ದೀಯಾ. ನೀನು ಒಪ್ಪಿಕೊಳ್ಳುತ್ತೀಯೋ ಅಥವಾ ನಿಜ ಏನು ಅಂತ ನಿನ್ನಿಂದ ಹೊರಡಿಸೋದಕ್ಕೆ ನಿನ್ನ ಕುತ್ತಿಗೆ ಹಿಸುಕಬೇಕೋ?"

"ಸತ್ಯ ಅದೇನೇ"

ಅವನು ಅವಳನ್ನು ಹೊಡೆದ. ಅವಳ ಗಲ್ಲ ಬಿರಿಯಿತು. ಅವನ ಇನ್ನೊಂದು ಹೊಡೆತ ಅವಳ ಎಡಗಣ್ಣಿಗೆ ಬಿತ್ತು. "ರಜಪೂತರು ತಮ್ಮ ಹೆಂಡತಿಯ ಮೇಲೆ ಯಾವತ್ತೂ ಕೈ ಮಾಡುವುದಿಲ್ಲ" ಅವನು ಅವಳನ್ನು ಹೊಡೆಯುವುದು ನಿಲ್ಲಿಸಲಿಲ್ಲ.

"ಆದರೆ ಅವರ ಹೆಂಡತಿಯರು ಮದುವೆಯಾದ ವರ್ಷದಿಂದಲೇ ಪರಪುರುಷರ ಜೊತೆ ಕಾಣಿಸಿಕೊಳ್ಳೋಲ್ಲ" ಅವನು ಹೇಳಿದ.

"ನೀವು ನಾನು ಬರೆದ್ದದನ್ನೆಲ್ಲಾ ಓದಿದ್ದೀರಿ ಅಂದುಕೊಂಡಿದ್ದೀನಿ"

"ಏನು"? ಅವಳು ಏನು ಹೇಳ್ತಾ ಇದ್ದಾಳೆ ಅನ್ನುವುದನ್ನು ಅರ್ಥ ಮಾಡಿಕೊಂಡಿದ್ದೀನಿ ಎನ್ನುವ ನಂಬಿಕೆ ಇರಲಿಲ್ಲ ಅವನಿಗೆ. ಅವಳ ಮಾತುಗಳು, ಅವಳ ಊದಿದ ತುಟಿಗಳ ಹಾಗೆಯೇ ಅಸ್ಪಷ್ಟವಾಗಿದ್ದುವು.

"ಚಿಂತೆಯಿಲ್ಲ"

"ಹೌದು ಹಾಳು ಆ ಪದ್ಯಗಳನ್ನು ಬಿಟ್ಟು ಬಾಕಿ ಎಲ್ಲ ಓದಿದ್ದೀನಿ. ಆದರೆ ಆ ಕಗ್ಗಾನೆಲ್ಲ ಸಹಿಸಕ್ಕಾಗಲಿಲ್ಲ" ಅವಳು ಮುಗುಳ್ನಕ್ಕಳು.

* * *

ಅವಳು ಸುಳ್ಳು ಹೇಳುತ್ತಿದ್ದಳು. ಶ್ರೀ ಕೃಷ್ಣನಷ್ಟೇ ಅಸಂಗತ ಹಾಗೂ ನಂಬಿಕೆಗೆ ಮೀರಿದ ಯಾರಾದರೊಬ್ಬ ಪ್ರಿಯಕರನ ಹೆಸರನ್ನು ಅವಳು ಹೇಳಬಹುದೆಂದು ನಂಬಿದನು. ಸರಳವಾದ ನೇರವಾದ ಮನುಷ್ಯನಾದರೆ ಸಾಲದು ಅವಳಿಗೆ. ಕೇವಲ ದೇವರು ಮಾತ್ರ. ಅದೂ ದೇವತೆಗಳಲ್ಲೇ ಅತ್ಯಂತ ಶಕ್ತಿವಂತನಾದ, ಬಹಳ ಪ್ರಮುಖನಾದ ಹಾಗೂ ಅತ್ಯಂತ

ಪ್ರೀತಿಯ ದೇವರಾಗಬೇಕು. ತನ್ನ ವಿಷಯದಲ್ಲಿ ಕೀಳು ಅಭಿಪ್ರಾಯ ಹೊಂದಿದ್ದಳೆಂದಾಗಲಿ ಆಕೆಯಲ್ಲಿ ಕಲ್ಪನೆಯ ಕೊರತೆ ಇದೆಯೆಂದಾಗಲಿ ಅಲ್ಪ ವ್ಯಾಪ್ತಿಉಳ್ಳವಳೆಂದಾಗಲಿ ಆಕೆಯ ಬಗ್ಗೆ ಆರೋಪ ಹೊರಿಸುವಂತೆಯೇ ಇಲ್ಲ. ಅದು ಎಷ್ಟೊಂದು ಅಸಹಜವೂ, ಎಳೆದು ತಂದದ್ದೂ ಅಸಂಭವವೂ, ಅಸಾಧ್ಯವೂ ಆಗಿತ್ತೆಂದರೆ, ಅತ್ಯಂತ ಸುಲಭವಾಗಿ ನಂಬಿಬಿಡುವ ಮೂರ್ಖ ಮಾತ್ರ ಅದನ್ನು ನಂಬಬೇಕು ಅಷ್ಟೆ. ಶ್ರೀ ಕೃಷ್ಣ ಹ್ಹ–ಹ್ಹ–ಹ್ಹ

ಬರವಣಿಗೆ ಮಾಡಿದ್ದ ಹಾಳೆಗಳನ್ನು ಓದಲೆಂದು ಕೋಣೆಯೊಳಕ್ಕೆ ಕೊಂಡೊಯ್ದನು. ಆದರೆ ತೂಕಡಿಕೆ ಬಂದಿತು. ಅವನು ಎಚ್ಚೆತ್ತಾಗ ಮಧ್ಯಾಹ್ನ ಒಂದು ಗಂಟೆಯ ಸಮಯ. ಮೇಲಿನ ಐವತ್ತು ಪುಟಗಳನ್ನು ಕೋಣೆಗೆ ಎತ್ತಿಕೊಂಡೊಯ್ದನು.

ಬೇಗನೆ ಕರೆ ತನ್ನಿ ಅವನ
ಇದು ತೀರಾ ಗಂಡಾಂತರಕಾರಿ
ಎಂದವಗೆ ಹೇಳಿ
ವೈದ್ಯರೆಲ್ಲ ಕೈ ಚೆಲ್ಲಿ ಕುಳಿತಿಹರು.
ತಾಳಲಾರೆ ನಾನದನು
ನಾ ಸಾವೆನೆನಿಸಿದೆ
ಇದು ಬೆನ್ನು ಮೂಳೆಯ ಹೊರಳಿಕೆ
ಬೆನ್ನು ಮೂಳೆಯುದ್ದಕೂ
ಕಿತ್ತು ತಿನ್ನುವ ನೋವು.
ಬುರುಡೆಗೋ ಬೆಂಕಿಬಿದ್ದಂತಾಗಿದೆ
ಮೂತ್ರ ಪಿಂಡದಲಿ
ಧೂಮಕೇತು ಸಿಡಿಯುತಿದೆ.
ಇಲ್ಲಿಹನೇನು ಅವನು?

ಕರೆಯಿರವನನು ಓಡಿ
ಬರಹೇಳವನನು
ಇದು ನನ್ನ ಅಂತ್ಯ
ಬೇಗ ಬೇಗನೆ
ಕ್ಷಯ ನನ್ನ ತುತ್ತುಗೊಳ್ಳುತಿದೆ.
ಪುಪ್ಪುಸಗಳೆರಡೂ ಸತ್ತಿವೆ
ಆತ್ಮವಾದರೋ ಹಾರಿದೆ
ಬಂದನೇನವನು?

ಎಚ್ಚರಿಕೆ ಗಂಟೆ ಬಾರಿಸು
ಸ್ವರ್ಗದ ಬಾಗಿಲ ತಟ್ಟು
ಹಾಸಿಗೆಯಿಂದ ಎಬ್ಬಿಸವನನು.
ಇದು ಅಂತಿಮ ಹಂತದ
ಕರುಳ ಹುಣ್ಣು.
ಅನ್ನನಾಳಕೂ
ಹರಡಿದೆ ಈಗ.

ಗುದದ್ವಾರವನು
ಭೇದಿಸಿದೆ.
ಮೂಳೆ ಮೊಲೆ
ಜಠರ ಯಾವುದ ತಾನೇ
ಬಿಟ್ಟಿದೆ ಇದು?
ಅವನಿನ್ನೂ ಬರಲಿಲ್ಲವೇ?

ಧಾವಿಸಿ ಬರಹೇಳವನ
ಇನ್ನೇನು
ಕೊನೆಯುಸಿರ ಎಳೆವೆನಿದೋ
ಅಂಥದ್ದೇನೂ ನಿಜಕೂ ಆಂತಕವಿಲ್ಲ
ವಾಮೂಲಿ
ಹೃದಯಾಘಾತ.
ಸತ್ತು ಮಲಗಿರುವೆ
ನಾ ನೊಂದು ಕಣ್ತೆರೆದು
ಚಿತೆಯ ಮೇಲೊರಗಿರುವೆನೆಂದು ಹೇಳು?
ಮೊಗದಲೊಂದು ಹುಸಿನಗೆಯ ಬೀರುತ
ತೋಳಲೊಬ್ಬ ಜಾರೆಯೊಡನೆ
ಬಂದನೆ ಎಂಬುದ ಅರಿಯೆ?

ಬೇಗ ಬರದಿರೆ
ಬರಲೇಳು ಅವ ಸಾವಕಾಶ
ಕಾಯ್ವೆನಲ್ಲಿಯ ತನಕ.
ಚಪಲಚಿತ್ತ ತಾನೆಂದು
ಬಗೆವುದು ಮುಖ್ಯವೆನಿಸಿದರೆ
ನಾನೆ ತಣಿಸುವೆನು ಅವನ.

ಪ್ರಿಯ ಗಿರಿಧರನೆ
ನನಗೂ ಇನ್ನೊಬ್ಬನಿಹನು.

ನಿಲ್ಲಿಸು
ನಿಲ್ಲಿಸಾ ಕಿಚ್ಚ ಹಚ್ಚುವನ.
ಬೀಳಿಸಿ ಅಲ್ಲಾಡದಂತೆ
ಕೈಕೋಳ ಹಾಕಿ.
ಒಬ್ಬನನೆ ಏಕಾಂಗಿಯಾಗಿರಿಸಿ
ಕಠಿಣ ಶಿಕ್ಷೆಗಳ ನೀಡಿ ಅವಗೆ.
ಹಾಡೆ ಹಗಲೊಳು
ಕಿಚ್ಚನಿಕ್ಕಿದನು ನನಗೆ
ಧಗಧಗಿಸುವ ಪಂಜ
ಮಾಡಿದನೆನ್ನ.
ಜನ ನೋಡುತಿರೆ ನಕ್ಕನವ.

ಆರಿಸಿ ಅದನು. "ಅದೊ
ತಾನೆ ಹೊತ್ತಿಸಿಕೊಂಡ ಉರಿ ಇದು
ತಾನೆ ಕಿಚ್ಚಿಕ್ಕಿಕೊಂಡಳು.
ಆದರೆ ಸುಡಳೆಂದಿಗೂ."
ನನ್ನೊಳಿದ್ದು ಕಿಚ್ಚ ಹೊತ್ತಿಸುವ
ಪ್ರಣಯಲೋಲ ಶ್ಯಾಮ.
ಅದೆಷ್ಟು ಜನರು?
ಹದಿನೇಳು ಸಾವಿರ ನೀರೆಯರ
ಸುಟ್ಟುರುಹಿದೆ ಶ್ಯಾಮ
ನೀನಿಲ್ಲಿಯ ತನಕ.
ಏರುಂಜವ್ವನದ ಒಲುಮೆಯಲಿ
ಮೋಹಾವೇಶದೆ ನಿನ್ನನು
ಹಂಬಲಿಸಿ, ಹತರಾದರು ಅವರೆಲ್ಲ.
ಕಾಮಾಂಧರು ; ಆಸೆಗೆ ವಶರಾಗಿ
ಹೊತ್ತಿ ಉರಿದರು ದರವೇಶಿಗಳು
ನಿನ್ನನೆ ನೆನೆಯುತ ಶಪಿಸುತಲಿ.
ನಿನ್ನ ನಂಬಿಕೆ ದ್ರೋಹವು ಉರಿಯ
ಹೆಚ್ಚಿಸುತ್ತಿರೆ ಇನ್ನೂ
ಹುಸಿನಗೆ ಸೂಸುವ ಅವಿವೇಕಿಗಳಿಗೆ
ಅವರಿಗಾಗಿ ಚರಮಗೀತೆಯನು
ಹಾಡೆನು ನಾನು
ಕಚ್ಚೆಹರುಕನಿಗೆ
ಹಾತೊರೆವುದಕಿಂತಲು
ಸಾವುದು ಲೇಸು.
ಕೀಳು ಮಟ್ಟದ ಸರಳ ಹಾಡೊಂದು
ತುಟಿಗಳ ಮೇಲೆ.
ಬೆತ್ತಲೆಗೊಳಿಸುವ ಕಾಮುಕ
ನೋಟವು ಕಣ್ಣಲಿ ಕುಣಿದಿದೆ.
ಆದರೆ ನಿನಗೊಂದು ಸುದ್ದಿಯಿದೆ ನನ್ನ ದೇವರೆ
ನಾನೀಗ ನೋಡುವ ಆಟಗಳ ನಿಲಿಸುವೆ
ಆ ಸಮಯವನೂ.
ನನ್ನೆಲ್ಲ ಕೋಪ ತಾಪಗಳ
ನಿನ್ನ ಮೇಲೆಯೆ ತಿರುಗಿಸುವೆನು ನೇಹಿಗನೆ.
ನಡಿಗೆಯಲೊಂದು ಸುಂದರ
ವ್ಯತ್ಯಯವು ಕೂಡ ನೀನು ಉರುಳಲು
ಈಗ ಕಾರಣವಾಗದೆ ದೊರೆಯೆ?
ಉಗುಳನು ಬೆಳಕಾಗಿಸು ಕರುಣಾಳು
ಈಗೊಂದು ಸುಂದರ ಉರಿಯ ಕೊಳ್ಳೋಣ.

ತಿರು ತಿರುಗುತ ನೀಲಿಯ
ಮೃದು ಕಂದು ಬಣ್ಣದ
ಸುವರ್ಣವಾಗಿಸೋಣ ಮತ್ತೆ
ಹದವಾಗಿ ಬೇಯಿಸಿದ
ರಸಸಿಕ್ತ ಮಾಂಸದ ಹಾಗೆ
ಮಾಡೋಣ.
ಈ ಸಲದ ಸುತ್ತಿನಲ್ಲಿ
ಆ ನಿನ್ನ ಹೃದಯವ
ನಾ ಕದಿಯುವೆನು
ಅದೊ ಹೃದಯದ ಉರಿಗೂ ಮಿಗಿಲು
ಹೃದಯಾಘಾತವೆ ನಿಶ್ಚಯ
ಮಾರಕವಾದದನೇ ಒಲವೆನ್ನು

ಶ್ಯಾಮ್, ಗಿರಿಧರ್ – ಇಂಥದೇ ಕಥೆ. ನಾಳೆ ಅವಳು ಅವನನ್ನು ಪಾರ್ಥ, ಸಂಜಯ, ಕನ್ಹಯ್ಯಾ ಅಥವಾ ನನ್ನನ್ನು ದಾರಿ ತಪ್ಪಿಸಲೆಂದೇ ಅವಳ ಮನಸ್ಸಿಗೆ ತೋಚುವ ಇನ್ಯಾವುದೇ ಹೆಸರಿನಿಂದ ಕರೆಯಬಹುದು ಎಂದು ಅವನು ಅಂದುಕೊಂಡನು.

ಅಧ್ಯಾಯ 9

ದೈಹಿಕವಾಗಿ ಅದು ಅಸಾಧ್ಯ. ಕಡೇಪಕ್ಷ ನಾನು ಹಾಗೆಂದು ಭಾವಿಸಿದೆ; ಆದರೆ ರಾಜಕುಮಾರನ ದೇಹ ಮೊದಲಿಗಿಂತ ಬಿಸಿಯಾಗಿತ್ತು. ಆತನ ಬಟ್ಟೆಗಳನ್ನು ಬದಲಾಯಿಸಿ ಹಣೆಯ ಮೇಲೆ ಒದ್ದೆ ಬಟ್ಟೆಹಾಕಲಾಗಿತ್ತು. ಕೊಠಡಿಯಲ್ಲಿ ಅತ್ತರಿನ ಸಾಂದ್ರ ಪರಿಮಳ ಹರಡಿತ್ತು. ಆದರೆ ಕೊಳೆತ ಮಾಂಸದ ಕಮಟು ವಾಸನೆ ಹೇಗೊ ಏನೋ ಹೊರಹೊಮ್ಮುತ್ತಿತ್ತು.

"ಅವರ ಗಾಯಗಳನ್ನು ತೊಳೆಯಲಾಗಿದೆಯೇ?" ಎಂದು ವೈದ್ಯರನ್ನು ನಾನು ಕೇಳಿದೆ.

ಕೇವಲ ಮೇಲುಮೇಲಷ್ಟೇ ಅಚ್ಚು ಕಟ್ಟು ಮಾಡಿದೆ. ಅವರ ಅಂಗಿಯ ಬಟ್ಟೆ ಮಣ್ಣು ಮತ್ತು ಬೆವರು ಎಲ್ಲಾ ಸೇರಿ ಒಂದು ಗಟ್ಟಿಯಾದ ಹೆಕ್ಕಳಿಕೆ ಥರಾ ಆಗಿ ಬಿಟ್ಟಿತ್ತು. ಅದನ್ನು ಕಿತ್ತು ಹಾಕಿದರೆ, ಅವರಿಗೆ ಮತ್ತೆ ರಕ್ತ ಸ್ರಾವ ಶುರುವಾಗುತ್ತೆ.

ಏನಾದರೂ ಪವಾಡವಾದೀತೇನೋ ಎಂದು ಆಶಿಸಿ ರಾಜಕುಮಾರನ ಕೋಣೆಗೆ ಮತ್ತೆ ವಾಪಸಾಗಿದ್ದೆ. ನಾನು ಅಲ್ಲಿ ಕಂಡಿದ್ದೆಂದರೆ ಸೋಂಕು ನಿಧಾನವಾಗಿ ಹಬ್ಬತೊಡಗಿತ್ತು ಮತ್ತು ಅವನ ದೇಹಸ್ಥಿತಿ ವಿಷಮವಾಗತೊಡಗಿತು.

ನಾನು ನನ್ನ ಕಛೇರಿಗೆ ಹಿಂತಿರುಗಿದೆ. ಅವಸರವಸರವಾಗಿ ಸ್ವಹಸ್ತದಿಂದ ಒಂದು ಟಿಪ್ಪಣಿ ಬರೆದು ರಾಜಮುದ್ರೆ ಹಾಕಿ ಚಿತ್ತೂರಿನ ಉತ್ತರಕ್ಕಿರುವ ಪರ್ವತ ಪ್ರದೇಶಗಳ ಭಿಲ್ ಸಾಮ್ರಾಜ್ಯವಾದ ಕಠೋಡಾಕ್ಕೆ ಮಂಗಳನನ್ನು ಅಟ್ಟದೆ. ಮಂಗಳನ ನೈತಿಕ ಸ್ಥೈರ್ಯ ಕುಸಿದಿತ್ತು. ಮತ್ತು ಅವನು ತೀರ ಆಯಾಸಗೊಂಡಿದ್ದನು. ಆದರೆ ಇದಾದರೋ ಬೇರೆ ಯಾರಿಗೂ ವಹಿಸಲಾಗದಂಥ ವಿಶೇಷ ಕಾರ್ಯವಾಗಿತ್ತು. ಮೇವಾಡ ಮತ್ತು ಭಿಲ್ ನ ಕಠೋಡಾಗಳೆರಡೂ ತಲೆತಲಾಂತರಗಳಿಂದ ಒಂದಕ್ಕೊಂದು ಹತ್ತಿರವಾಗಿದ್ದಂಥವು. ಅದು ಬುಡಕಟ್ಟು ಜನಾಂಗದ ಹಾಗೂ ನಾಗರಿಕರ ನಡುವಿನ ಒಂದಕ್ಕೊಂದು ಎಣೆಯಿಲ್ಲದ ಮಿತ್ರತ್ವವಾಗಿತ್ತು. ಆದರೆ ಇದು ರಜಪೂತರಿಗೆಲ್ಲ ಸಾಮಾನ್ಯವಾಗಿ ಇರುವ ಪ್ರತಿಷ್ಠೆ ಮತ್ತು ಒಣ ಜಂಬದ ಮೇಲೆ; ಪರಸ್ಪರರಿಗೆ ಅನುಕೂಲಕರವಾದ ಹಾಗೂ ವಿವೇಕಯುತವಾದ ಸ್ವಹಿತಾಸಕ್ತಿಯ ವಿಜಯವಾಗಿತ್ತು. ಅಲ್ಲದೆ ಇದರಿಂದ ಭಿಲ್ಲರು ನಗರಜನತೆಯ ಸೋಗಲಾಡಿತನಗಳನ್ನು ಕುರಿತ ತಮ್ಮ ಸಹಜವಾದ ಅಪನಂಬಿಕೆಯನ್ನು ನೀಗಿಕೊಂಡಿದ್ದರು. ಯುದ್ಧದ ಕಾರ್ಮೋಡಗಳು ಕವಿದಾಗ, ನಮ್ಮ ಯುದ್ಧ ಸಮಿತಿಯ ಸಭೆಗಳಲ್ಲಿ ಕುಳಿತುಕೊಳ್ಳುತ್ತಿದ್ದರು ಮತ್ತು ಯುದ್ಧರಂಗದಲ್ಲಿ ನಮ್ಮ ಅತ್ಯಂತ ಆಪ್ತ ಮಿತ್ರರಾಗಿರುತ್ತಿದ್ದರು. ಅವರು ಬಳಸುತ್ತಿದ್ದ ಶಸ್ತ್ರಾಸ್ತ್ರಗಳು ಮತ್ತು ಯುದ್ಧತಂತ್ರಗಳು ನಮ್ಮದಕ್ಕಿಂತ ಭಿನ್ನ. ಆದರೆ

ಅವರು ಪ್ರತಿಯೊಬ್ಬರೂ ರಜಪೂತರಷ್ಟೇ ಧೀರರು. ಅರಾವಳಿ ಪರ್ವತಗಳನ್ನು ಅವರಿಗಿಂತಲೂ ಚೆನ್ನಾಗಿ ಬೇರಾರೂ ಅರಿತಿಲ್ಲ. ತಾವಷ್ಟೇ ಯುದ್ಧಮಾಡುವಾಗ, ಅವರ ಯುದ್ಧ ತಂತ್ರವೆಂದರೆ, ಶತ್ರುವನ್ನು ಪರ್ವತಾರಣ್ಯಗಳಿಗೆ ಎಳೆದೊಯ್ಯುವುದು. ಶತ್ರು ಎಷ್ಟೇ ಪ್ರಬಲನಾದರೂ ಭಿಲ್ಲರ ಸ್ವಂತನೆಲೆಯಲ್ಲಿ ಅವರ ವಿರುದ್ಧ ಗೆಲ್ಲುವ ಸಂಭವ ಹೆಚ್ಚಿಲ್ಲ.

ಶಾಂತಿಯ ಸಮಯದಲ್ಲಿ ನಾವು ಭಿಲ್ಲರೊಂದಿಗೆ ವ್ಯಾಪಾರ-ವ್ಯವಹಾರ ನಡೆಸುತ್ತೇವೆ, ಪಟ್ಟಾಭಿಷೇಕ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತೇವೆ ಮತ್ತು ಕಠೋಡಾ ಮತ್ತು ಇನ್ನಿತರೆ ಭಿಲ್ ಸಾಮ್ರಾಜ್ಯಗಳಿಗೆ ರಾಯಭಾರಿಗಳನ್ನು ಕಳಿಸುತ್ತೇವೆ. ಅವರು ತಮ್ಮ ರಾಜಪುತ್ರರನ್ನು ವಿದ್ಯಾಭ್ಯಾಸಕ್ಕಾಗಿ ನಮ್ಮ ಗುರುಕುಲಗಳಿಗೆ ಕಳಿಸಿಕೊಡುತ್ತಾರೆ. ನಾನು ಅದೇ ಗುರುಕುಲದಲ್ಲೇ ನನ್ನ ಮಿತ್ರ ಪೂರಜೀಕಿಕಾ ಅವರನ್ನು ಭೇಟಿಮಾಡಿದ್ದು. ನನಗೆ ಕಾಡಿನ ಸದ್ದುಗಳು, ಅದರ ವಾಸನೆಗಳು, ಅದರ ನೀರವತೆ, ಅದರ ಹುಳು-ಹುಪ್ಪಟೆಗಳು, ಅದರ ಸಸ್ಯಸಮೃದ್ಧಿ ಅದರ ಮರ-ಗಿಡಗಳು, ಅದರ ಹಿಂಸ್ರ ಪಕ್ಷಿಗಳು ಮತ್ತು ಕಾಗೆಗೂಗೆಗಳು, ಅದರ ಸಣ್ಣ, ದೊಡ್ಡ ಪ್ರಾಣಿಗಳು ಹೀಗೆ ಕಾಡಿನಬಗ್ಗೆ ನನಗೆ ಏನೆಲ್ಲಾ ತಿಳಿದಿದೆ ಅದೆಲ್ಲದಕ್ಕೂ ನಾನು ಪೂರಜೀಕಿಕಾ ಅವರಿಗೆ ಋಣಿಯಾಗಿದ್ದೇನೆ. ಗಿಡಮೂಲಿಕೆಗಳು ಮತ್ತು ಬೀಜಗಳು ಮೂರ್ಛಿತಗೊಳಿಸಬಲ್ಲವು, ಪುನಶ್ಚೇತಗೊಳಿಸಬಲ್ಲವು ಮತ್ತು ಕೊಲ್ಲಬಲ್ಲವು ಎಂದು ಕಲಿಸಿದವರು ಅವರು. ಅವು ನಿದ್ರೆಬರಿಸಬಲ್ಲವು, ರಕ್ತಸಂಚಾರ ನಿಲ್ಲಿಸಬಲ್ಲವು, ಹಾವು ಮತ್ತು ಚೇಳಿನ ಕಡಿತವನ್ನು ಹಿಮ್ಮುಖಗೊಳಿಸಬಲ್ಲವು; ಅಷ್ಟೇ ಅಲ್ಲ ಮನುಷ್ಯರನ್ನು ಉನ್ಮತ್ತಗೊಳಿಸಬಲ್ಲವು, ಮೆದುಳನ್ನು ಆಕ್ರಮಿಸಬಲ್ಲವು ಮತ್ತು ಮನುಷ್ಯರನ್ನು ಗಿಡವಾಗಿ ಪರಿವರ್ತಿಸಬಲ್ಲವು.

ನಾನು ಟಿಪ್ಪಣಿ ಬರೆದು ಕಳಿಸಿದ್ದು, ಈಗ ಭಿಲ್ ಸಾಮ್ರಾಜ್ಯದ ಮಹಾರಾಜರಾಗಿದ್ದ ಪೂರಜಿ ಅವರಿಗೆ. ನಮ್ಮ ಸಂಬಂಧಗಳು, ಸ್ವಲ್ಪ ಮಟ್ಟಿಗೆ ಬಿಗಡಾಯಿಸಿಕೊಂಡಿದ್ದವು. ಪೂರಜಿ ಅವರ ಪ್ರಕಾರ, ಅದಕ್ಕೆ ಕಾರಣ, ನಮ್ಮ ಕೆಲವು ಕುಲೀನರು ಕಠೋಡಾದ ಗಡಿನಾಡಿನ ಸುತ್ತು ಮುತ್ತಲ ಪ್ರದೇಶವನ್ನು ವಶಪಡಿಸಿಕೊಂಡು ಕಾಡಿನ ಪ್ರಾಣಿಗಳನ್ನು ಯದ್ವಾತದ್ವಾ ಕೊಲ್ಲುತ್ತಿದ್ದಾರೆ ಎಂಬುದು. ಭಿಲ್ಲರ ಬದುಕು ನಿಂತಿರುವುದೇ ಕಾಡಿನ ಪ್ರಾಣಿಗಳ ಮೇಲಾದ್ದರಿಂದ ಜಿಂಕೆಗಳು, ಕಾಡುಹಂದಿಗಳು, ನೀಲ್ಗಾಯ್ ಮುಂತಾದವುಗಳ ಸಂತತಿಯ ವಿನಾಶ ಅವರ ಅಸ್ತಿತ್ವವನ್ನೇ ಹಾಳುಗೆಡವುತಿತ್ತು. ರಾಜಾ ಪೂರಜೀಕೀಕಾ ಕೇವಲ ನೆರೆಯ ಒಬ್ಬರಲ್ಲ, ಕೇವಲ ಒಬ್ಬ ದೊರೆ ಮತ್ತು ಇನ್ನಿತರೆ ಔಪಚಾರಿಕ ಸಂಗತಿ ಅಲ್ಲ. ಎಲ್ಲಕ್ಕಿಂತ ಮೊದಲಿಗೆ ಮತ್ತು ಅಂತಿಮವಾಗಿ ಅವರು ನನ್ನ ಸ್ನೇಹಿತ. ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಬಿಕ್ಕಟ್ಟಿನ ವಿಷಯದಲ್ಲಿ ಹಾಗೂ ಅನಂತರ ಬಹಾದುರ್ ಆಗಮನದ ವಿಷಯದಲ್ಲಿ ಸ್ವಲ್ಪ ಹೆಚ್ಚಾಗಿಯೇ ತೊಡಗಿಸಿಕೊಂಡಿದ್ದರಿಂದ, ಸ್ಥಳೀಯ ಜಾಗೀರುದಾರರು ನಡೆಸಿದ ಅಪರಾಧಗಳನ್ನು ಪರಿಶೀಲಿಸುವುದಾಗಲಿ, ಅಥವಾ ಅವುಗಳನ್ನು ಪರಿಹರಿಸುವುದಾಗಲಿ ಮಾಡಿರಲಿಲ್ಲ.

ಶಬ್ದಗಳನ್ನು ಕಡಿತಗೊಳಿಸುವುದರಲ್ಲಿ ಅರ್ಥವಿರಲಿಲ್ಲ. ಅವರ ದೂರಿಗೆ ಗಮನ ಕೊಡುವಲ್ಲಿ ನಾನು ವಿಳಂಬ ಮಾಡಿದ್ದಕ್ಕೆ ಕ್ಷಮೆಯೇ ಇಲ್ಲವೆಂದು ನಾನು ರಾಜಾ ಅವರಿಗೆ ತಿಳಿಸಿದ್ದೆ. ಮುಂದಿನ ಕೆಲವು ವಾರಗಳಲ್ಲಿ ಅತ್ತ ಲಕ್ಷ್ಯವಹಿಸುವುದಾಗಿ ಹೇಳಿದೆ. ಸೌಮ್ಯವಾಗಿ ಹೇಳಬೇಕೆಂದರೆ, ನಾನೀಗ ಸಂಕಷ್ಟದಲ್ಲಿದ್ದೆ, ಭಾರೀ ಸಂಕಷ್ಟದಲ್ಲಿದ್ದೆ. ಅರಮನೆಯ ಅತಿಥಿಯಾಗಿದ್ದ, ಗುಜರಾತಿನ ರಾಜಕುಮಾರ ಹೆಣ್ಣು ಹುಲಿಯಿಂದ ಆಘಾತಕ್ಕೊಳಗಾಗಿದ್ದ. ಚಿತ್ತೂರಿನ ವೈದ್ಯರುಗಳು ಅಷ್ಟೇನೂ ಭರವಸೆಯಿಡಬಹುದಾದವರಂತೆ ಕಾಣುತ್ತಿಲ್ಲ.

ವ್ಯಾಧಿಯನ್ನು ಸರಿಯಾಗಿ ನಿದಾನ ಮಾಡಲಿಲ್ಲ, ಅವನನ್ನು ಪೂರ್ತಿ ಕೈಬಿಟ್ಟಂತೆ ಕಾಣುತ್ತಿದೆ. ಅವರು ತಮ್ಮ ಖಾಸಗಿ ವೈದ್ಯರಾದ 'ಏಕ' ಅವರನ್ನು ರಾಜರ ಬಳಿ ಇರುವ ಅತ್ಯಂತ ವೇಗದ ಕುದುರೆಯ ಮೇಲೆ ದಯವಿಟ್ಟು ಈ ಕೂಡಲೇ ಕಳುಹಿಸಿಕೊಡುವರೆ? ರಾಜಕುಮಾರನ ಜೀವ ಮತ್ತು ನನ್ನ ಗೌರವ ಮತ್ತು ಖ್ಯಾತಿಗಳು ತೀರ ಗಂಡಾಂತರದಲ್ಲಿವೆ.

ನಾಲ್ಕನೇ ದಿನ, ಅಂತ್ಯ ಸಮೀಪಿಸುತ್ತಿದೆ ಎಂದು ನನಗೆ ಗೊತ್ತಿತ್ತು. ವಿಚಿತ್ರವೆಂದರೆ, ವೈದ್ಯರ ಮತ್ತು ಹಕೀಮರ ಔಷಧಿಗಳು ಅದ್ಭುತವಾದ ರೀತಿಯಲ್ಲಿ ಪರಿಣಾಮಕಾರಿಯಾಗಿದ್ದವು. ಜ್ವರ ಇಳಿದಿತ್ತು. ಬಹಾದುರ್‌ನ ಕಳಾಹೀನತೆಯಲ್ಲಿ ಸುಧಾರಣೆಯಾಗಿತ್ತು. ಆತ ಅಷ್ಟೊಂದು ಆತಂಕಕ್ಕೊಳಗಾದಂತೆ ಕಾಣಲಿಲ್ಲ. ನೋವೂ ಕಡಿಮೆಯಾದಂತೆನಿಸುತಿತ್ತು. ಆದರೆ ನಾನಿನ್ನೂ ಅತಿಥಿ ಅರಮನೆಯ ಆವರಣದ ಗೋಡೆಯ ಸಮೀಪಕ್ಕೆ ಪ್ರವೇಶಿಸುತ್ತಿದ್ದ ಹಾಗೆಯೇ, ಕೊಳೆಯುತ್ತಿರುವ ಮಾಂಸದ ಮತ್ತು ಕೊಳಕಿನ ತಡೆಯಲಸಾಧ್ಯವಾದ ದುರ್ಗಂಧ ಬಹುದೂರದಿಂದಲೇ ನನಗೆ ಬಂದು ತಾಕಿತು. ವಾರಗಟ್ಟಲೆ, ದಿನಗಟ್ಟಲೆ ಮೂಗಿನ ಹೊಳ್ಳೆಗಳಿಗೆ ಹತ್ತಿಕೊಂಡು, ತಲೆಬುರುಡೆಯ ಮಡಿಕೆಯೊಳಕ್ಕೆ ನುಸುಳಿಬಿಡುವ, ತಲೆತಿರುಗು ಬರಿಸುವಂಥ, ಕಟ್ಟರೆಯಾಗುವಂಥ, ದಟ್ಟ ವಾಸನೆ ಸದಾ ಕಾಲ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದುಬಿಡುತ್ತದೆಂದು ನನಗೆ ತಿಳಿದಿತ್ತು.

ನಮ್ಮ ಅರ್ಥಮಂತ್ರಿ ಆದಿನಾಥಜೀಯವರ ಮರಿಮಗಳು ಲೀಲಾವತಿ ನನಗೆ ಅಷ್ಟೆಲ್ಲಾ ನೆನಪಿಸಿದ್ದ ನನ್ನ ಕಿರಿಯ ತಂಗಿ ಸುಮಿತ್ರಾ, ನಾನು ಹದಿನಾಲ್ಕು ವರ್ಷದವನಾಗಿದ್ದಾಗ ಉಯ್ಯಾಲೆಯಿಂದ ಬಿದ್ದುಬಿಟ್ಟಳು. ಅವಳು ನನ್ನ ಅಚ್ಚು ಮೆಚ್ಚಿನ ತಂಗಿ ಎಂದು ನನ್ನ ಊಹೆ. ನಾನು ಯಾವಾಗಲೂ ಹಾಗಂತ ಒಪ್ಪಿಕೊಳ್ಳುತ್ತಿರಲಿಲ್ಲ. ಬಚ್ಚಲು ಮನೆ, ಕಕ್ಕಸ್ಸು ಮನೆ ಹೀಗೆ ನಾನೆಲ್ಲಿಗೆ ಹೋದರೂ ಅಲ್ಲಿ ನನ್ನ ಜೊತೆ ಇರಬೇಕು ಎಂದು ಬಯಸುತ್ತ ನನಗೆ ಹುಚ್ಚು ಹಿಡಿಸಿದ್ದಳು. ನಾನು ಏನೇ ಮಾಡಿದರೂ ತಾನೂ ಅದನ್ನು ಮಾಡಬೇಕೆಂದು ಬಯಸುತ್ತಿದ್ದಳು. ನಾನು ಗುರುಕುಲಕ್ಕೆ ಹೋದರೆ ಅಲ್ಲಿಗೆ ಬರುತ್ತಾ ಇದ್ದಳು. ಕುಸ್ತಿ ಪಂದ್ಯಗಳಿಗೆ ಬರುತ್ತಾ ಇದ್ದಳು. ಬೇಟೆ ತಂಡಗಳಿಗೆ ನುಗ್ಗುತ್ತಿದ್ದಳು. ನಾವು ಹುಡುಗರು ಸೂಳೆಗೇರಿಗೆ ಹೊರಟರೆ ಅವಳೂ ನಮಗೆ ಗಂಟುಬೀಳುತ್ತಿದ್ದಳು. ಅವಳೊಂದು ಪೀಡೆಯಾಗಿದ್ದಳು. ನಾನು ಅವಳ ಆರಾಧನೆಯ ಮೂರ್ತಿಯಾಗಿ ಬಿಟ್ಟದ್ದೆ.

ನಮಗೆ ಸದಾ ಅವಳ ಬಗ್ಗೆ ಚಿಂತೆ ಇತ್ತು. ಕಾರಣ ತುಂಬ ಎತ್ತರಕ್ಕೆ ಉಯ್ಯಾಲೆಯಲ್ಲಿ ತೂಗಿಕೊಂಡು ತಲೆಕೆಳಕಾಗಿ ಬಿದ್ದಿದ್ದಳು. ನಲವತ್ತೆಂಟು ದಿನಗಳಕಾಲ ಅವಳು ಪ್ರಜ್ಞಾಹೀನಳಾಗಿದ್ದಳು. ಅವಳು ಮತ್ತೆ ಪ್ರಜ್ಞಾವಸ್ಥೆಗೆ ಮರಳಿ ಮೊದಲಿನಂತಾಗಿದ್ದಳು. ಅವಳು ಉಯ್ಯಾಲೆಯಿಂದ ಕೆಳಗೆ ಬಿದ್ದದ್ದನ್ನು ಮರೆತೇ ಬಿಟ್ಟಿದ್ದೆವು ಎನ್ನುವ ಹೊತ್ತಿಗೆ ಅವಳು ನಡೆದಾಡತೊಡಗಿದಳು. ಇನ್ನೊಂದು ಗೀಳು ಕಳೆದು ಹೋಗುತ್ತದೆ ಎಂದು ನನಗೆ ನಾನೇ ಹೇಳಿಕೊಂಡೆ. ಕೆಲವು ತಿಂಗಳ ಹಿಂದೆ ತಳ್ಳುವ ಗಾಡಿ ಹಿಡಿದು ಓಡಾಡುವುದೊಂದೇ ಅವಳ ಚಲನೆಯ ಏಕೈಕ ವಿಧಾನವಾಗಿದ್ದ ಕಾಲವೂ ಇತ್ತು.

ಮೂರನೇ ದಿನ ನಾನು ಅದು ಹೇಗೆ ಲಕ್ಷ್ಯವನ್ನೇ ಮಾಡಿರಲಿಲ್ಲ ಎನ್ನುವುದನ್ನು ಅರ್ಥಮಾಡಿಕೊಂಡೆ. ಅವಳ ಬಲಗಾಲಿನ ಹೆಜ್ಜೆ ಊದಿತ್ತು. ಹಲವಾರು ದಿನಗಳಿಂದ ನೋವನ್ನು ಅನುಭವಿಸುತ್ತಾ ಇದ್ದಳು. ಆ ವಿಷಯವನ್ನು ನಮಗೆ ಹೇಳೇ ಇರಲಿಲ್ಲ ಯಾಕೆ ಅಂದರೆ ನಮ್ಮ ತಲೆಕೆಡಿಸುವುದು ಅವಳಿಗೆ ಇಷ್ಟವಿರಲಿಲ್ಲ. ಅವಳ ಹಿಮ್ಮಡಿಯನ್ನು ನೋಡಿದೆ, ಅದು ಮೃದುವಾಗಿ ದಪ್ಪನಾಗಿ ಊದಿಕೊಂಡಿದ್ದು ಅದರ ಮಧ್ಯದಲ್ಲೊಂದು

ಚೂಪಾದ ಗುರುತು ಇತ್ತು. ಕೈಯಿಂದ ಅದನ್ನು ಉಜ್ಜಿದರೆ ಸಾಕು ಅವಳು ನೋವಿನಿಂದ ಅತ್ತು ಬಿಡುತ್ತಿದ್ದಳು. ನಾವು ರಾಜವೈದ್ಯರನ್ನು ಕರೆಸಿದೆವು. ಅದೊಂದು ಒಳಗಡೆಯಿಂದ ಆದ ಒಂದು ಥರದ ಕುರು ಎಂದು ಅವರು ಭಾವಿಸಿದರು. ಕಾಲಿಗೆ ಪೋಲ್ಟೀಸು ಹಾಕಿ ಒಂದು ಗುಟುಕು ಔಷಧ ಕುಡಿಸಿದರು.

ಈಗ ಅವಳ ಇಡೀ ಕಾಲು ಊದಿತ್ತು. ಆಗಿಂದಾಗ್ಗೆ ಅವಳು ಅರೆಪ್ರಜ್ಞಾವಸ್ಥೆಯ ಮಂಪರಿಗೆ ಸರಿದು ಬಿಡುತ್ತಿದ್ದಳು. ಒಂದು ಮಧ್ಯಾಹ್ನ ಎಚ್ಚೆತ್ತು ನನಗೆ ಹೇಳಿದಳು– "ನಾನು ಏತಕ್ಕೆ ಬಿದ್ದೆ ಅಂತ ನನಗೆ ಗೊತ್ತು; ನನ್ನ ಅಂಗಾಲಿಗೆ ಒಂದು ಮುಳ್ಳು ಚುಚ್ಚಿಕೊಂಡುಬಿಟ್ಟತ್ತು. ನಾನು ಕಾಲನ್ನು ಊರಿದಾಗ ಅದೆಷ್ಟೊಂದು ನೋವಾಗಿ ಬಿಟ್ಟತೆಂದರೆ ನಾನು ಉಯ್ಯಾಲೆಯನ್ನು ಬಿಟ್ಟುಬಿಟ್ಟೆ.?"

"ಇಷ್ಟು ದಿನಗಳತನಕ ನೀನು ಅದನ್ನೆಲ್ಲಾ ಏಕೆ ಜ್ಞಾಪಿಸಿಕೊಳ್ಳಲಿಲ್ಲ?"

ಒಂದು ಕ್ಷಣ ಅವಳು ತಬ್ಬಿಬ್ಬಾದವಳಂತೆ ಕಂಡಳು. ಆಮೇಲೆ ಮುಗುಳ್ನಕ್ಕು ಹೇಳಿದಳು– "ನೀನು ಈಗ ಕೇಳುವವರೆಗೂ ನಾನು ಅದರ ಬಗ್ಗೆ ಯೋಚನೇನೇ ಮಾಡಿರಲಿಲ್ಲ. ನಾನು ಬಿದ್ದು ಎಚ್ಚರಗೊಂಡ ಮೇಲೆ ನನ್ನ ನೆನಪಿನಿಂದ ಒಂದೆರಡು ಮಗ್ಗಿಗಳು ಮರೆಯಾದವು. ಮೂರೇಳಲ ಎಷ್ಟೆಂದು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದೆ, ಆದರೆ ನನಗೆ ಅದು ಸಾಧ್ಯವಾಗಲೇ ಇಲ್ಲ. ಐದರ ವರೆಗೂ ಮಗ್ಗಿ ಜ್ಞಾಪಕ ಇತ್ತು. ಮತ್ತೆ ಎಂಟರಿಂದ ಹನ್ನೆರಡರ ವರೆಗೂ ಜ್ಞಾಪಕ ಇತ್ತು. ಆದರೆ 6 ಮತ್ತು 7ರ ಮಗ್ಗಿಗಳು ನನ್ನ ಮನಃಪಟಲದಿಂದ ಹೋಗಿಬಿಟ್ಟಿದ್ದವು. ಹಾಗಾಗಿಯೇ ನನಗೆ ಕಳೆದ ಲಘು ಪರೀಕ್ಷೆಯಲ್ಲಿ ಅಷ್ಟೊಂದು ತೀರಾ ಕಡಿಮೆ ಅಂಕಗಳು ಬಂದಿದ್ದು.

"ನೀನು ಈಗ ಅವುಗಳ ಜ್ಞಾಪಕ ಮಾಡಿಕೊಳ್ಳಲಾಗುತ್ತದೆಯೇ?" ಅವಳಿಗೆ ಒಂದುವೇಳೆ ಏನಾದರೂ ಭ್ರಾಂತಿಗೀಂತಿ ಆಗಿದೆಯೇನೋ ಎಂದು ತಿಳಿಯಲು ಕೇಳಿದೆ. ಆದರೆ ಹಾಗೇನೂ ಆಗಿರಲಿಲ್ಲ ಅವಳು ಆ ಮಗ್ಗಿಗಳನ್ನು ಮತ್ತೆ ಯಥಾವತ್ತಾಗಿ ಕರಾರುವಾಕ್ಕಾಗಿ ಹೇಳಿದಳು. "ನಿನ್ನ ಪಾಡಿಗೆ ನೀನು ನೆಮ್ಮದಿಯಿಂದ ಮಲಗಿಕೋ. ನಾನು ಹೋಗಿ ಅದು ನಿನ್ನ ಕಾಲಿಗೆ ಚುಚ್ಚಿದ್ದ ಮುಳ್ಳು ಅಷ್ಟೇ ಎಂದು ವೈದ್ಯರಿಗೆ ಹೇಳ್ತೀನಿ"

"ನೀನು ಬೇಗ ಹೋಗ್ತೀ ತಾನೇ? ಇಲ್ಲದೇ ಹೋದರೆ ನೀನು ವಾಪಸ್ ಬರುವ ಹೊತ್ತಿಗೆ ನಾನು ನಿದ್ದೆ ಮಾಡಿ ಬಿಟ್ಟಿರುತ್ತೇನೆ."

ಅವಳ ಹತ್ತಿರಕ್ಕೆ ಹಿಂತಿರುಗುವುದಕ್ಕೆ ಮುಂಚೆ ಇಡೀ ಚಿತ್ತೂರುತುಂಬ ಜೋತಾಡಿಕೊಂಡು ಬರಬೇಕು ಎನ್ನುವ ಉದ್ದೇಶ ಪೂರಾ ಇತ್ತು. ಆದರೆ ಏನೋ ಕಾರಣಕ್ಕೆ ನಾನು ವೈದ್ಯರ ಕಡೆಯಿಂದ ಬೇಗನೆ ಧಾವಿಸಿ ಬಂದೆ. ಅದುವರೆಗಾಗಲೇ ಅವಳು ಪ್ರಜ್ಞಾಹೀನಳಾಗಿದ್ದಳು ಮತ್ತು ವಾಸನೆ ಬರುವುದಕ್ಕೆ ಶುರುವಾಗಿತ್ತು. ಅವಳ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ ದೆಯ್ಯಗಳೊಂದಿಗೆ ಅವಳು ಹೋರಾಡುತ್ತಿದ್ದಳು. ಅವಳ ದುಃಸ್ವಪ್ನಗಳೊಳಕ್ಕೆ ಇಳಿದು ಅವಳ ಪಕ್ಕದಲ್ಲಿದ್ದುಕೊಂಡು ನಾನೂ ಹೋರಾಡಿ ಅವಳನ್ನು ವಾಪಸ್ ಕರೆತರುವ ದಾರಿ ಯಾವುದೂ ಇರಲಿಲ್ಲ.

ಅವಳ ಕಾಲು ಕಪ್ಪಗೆ ಮತ್ತು ನೇರಿಳೆ ಬಣ್ಣಕ್ಕೆ ತಿರುಗಿ ಹೊಳೆಯತೊಡಗಿತ್ತು. ವೈದ್ಯರು ಶಸ್ತ್ರಚಿಕಿತ್ಸಕರನ್ನು ಕರೆದರು. ಆತ ತನ್ನ ಉಪಕರಣಗಳನ್ನು ಸಿದ್ಧಪಡಿಸಿಕೊಂಡು ಇನ್ನೇನು ಕಾಲಿನ ಮೇಲೆ ಒಂದು ಸೀಳು ಹಾಕಬೇಕು ಎನ್ನುವಷ್ಟರಲ್ಲಿ ಅವಳ ಶರೀರ ಬಿಗಿದುಕೊಂಡು ಅವಳ ಕಾಲುಗಳು ಮತ್ತು ಕುತ್ತಿಗೆ ಊಹಿಸಲೂ ಸಾದ್ಯವಾಗದ ಕೋನಗಳಲ್ಲಿ ತಿರುಚಿಕೊಂಡು

ಬಿಟ್ಟವು ಮತ್ತು ಅದೇ ಸ್ಥಿತಿಯಲ್ಲಿ ಬಹಳ ದೀರ್ಘಕಾಲ ಇದ್ದವು. ವಿಷ ಮೆದುಳಿಗೆ ಹತ್ತಿದೆ ಎಂದು ರಾಜವೈದ್ಯರು ನಮಗೆ ತಿಳಿಸಿದರು. ಶಮನಕಾರಿಯಾದೊಂದು ಔಷಧವನ್ನು ಗಂಟಲಿಗೆ ಸುರುವಲೆಂದು ಅವಳ ಬಾಯನ್ನು ಬಲವಂತವಾಗಿ ತೆರೆಸಲು ವೈದ್ಯರು ಪ್ರಯತ್ನಿಸಿದರು; ಆದರೆ ಏನೂ ಪ್ರಯೋಜನವಾಗಲಿಲ್ಲ.

ಮಾರನೇ ದಿನ ಸುಮಿತ್ರಾಳಿಂದ ಒಂದು ಕಾಲು ಮೈಲಿ ದೂರ ಕೂಡ ನಿಲ್ಲಲಾಗಲಿ, ವ್ರಣವಾಗಿ ಕೊಳೆಯುತ್ತಿರುವ ಅವಳ ಕಾಲಿನಿಂದ ಹೊಮ್ಮುತ್ತಿದ್ದ ತೀವ್ರ ದುರ್ವಾಸನೆಯಿಂದ ಕುಸಿದುಬೀಳದೆ ಇರುವುದಾಗಲಿ ಸಾಧ್ಯವಾಗುತ್ತಿರಲಿಲ್ಲ. ರಕ್ತಸಿಕ್ತಳಾದ ಆ ಹುಡುಗಿ ಅಪ್ರಜ್ಞಾವಸ್ಥೆಯಲ್ಲಿದ್ದಳು. ನಾನೊಂದು ವೇಳೆ ಅವಳ ಕೈ ಹಿಡಿದುಕೊಳ್ಳದೆ ಹೋಗಿದ್ದರೆ, ನಾನು ವಾಪಸ್ ಬಂದು ಅವಳ ತೆಳ್ಳನೆಯ ಅಂಗೈಯನ್ನು ನನ್ನ ಕೈಯಲ್ಲಿ ತೆಗೆದುಕೊಳ್ಳುವವರೆಗೂ, ಅವಳು ನನ್ನ ಹೆಸರು ಹಿಡಿದು ಕರೆಯುವುದನ್ನು ನಿಲ್ಲಿಸಲಿಲ್ಲ. ಮುಳುಗುವ ಸೂರ್ಯನ ಬೆಳಕು ಕೊಠಡಿಯೊಳಕ್ಕೆ ನುಗ್ಗಿದಾಗ ಅವಳು ಕಣ್ತೆರೆದಳು.

"ನನ್ನ ಕಾಲನ್ನು ಕತ್ತರಿಸಿ ಹಾಕಿಬಿಡುತ್ತಾರೆ ಅಲ್ಲವೇ?"

"ಖಂಡಿತಾ ಇಲ್ಲ ಮಗು. ಅವಳು ಕೇಳಿದ್ದು ನನ್ನಾದರೂ ಮಾತಾಡಿದ್ದು ತಂದೆಯವರು. "ನಾನು ಬದುಕಿರೋವಾಗ ಯಾರೂ ನಿನ್ನ ಕಾಲನ್ನು ಕತ್ತರಿಸುವುದಿಲ್ಲ."

ಅಪ್ಪ ಸತ್ತು ವೈದ್ಯರು ಅವಳ ಕಾಲನ್ನು ಕತ್ತರಿಸಲೆಂದು ಬಿಡಬೇಕಿತ್ತೆ? ಇನ್ನೊಬ್ಬರಿಗೆ ಕೇಡುಣಿಸುವಂಥ ರುಚಿಯ ಮತ್ತು ಮನಸ್ಸಿಗೆ ಅಸಹ್ಯ ಹುಟ್ಟಿಸುವಂಥ ದುರ್ಗಂಧದ ಮಡುಗಳಲ್ಲಿ ನಾನು ಈಜಾಡುವುದನ್ನು ಅನಿವಾರ್ಯವಾಗಿಸಿದ್ದಕ್ಕೆ ನಾನು ಸುಮಿತ್ರಳನ್ನು ದ್ವೇಷಿಸತೊಡಗಿದೆ. ನಾನು ಅವಳಿಗೆ ಶಾಪಹಕುತ್ತಾ ನಾನಿನ್ನೆಂದೂ ಹಿಂತಿರುಗುವುದಿಲ್ಲವೆಂದು ಶಪಥಮಾಡಿದೆ. ನನಗೇನೂ ಅಲ್ಲಿರಲೇಬೇಕೆಂದು ಯಾರದ್ದೂ ಒತ್ತಾಯವಿರಲಿಲ್ಲ. ಅವಳ ತಾಯಿ, ಅಕ್ಕ-ತಂಗಿಯರು, ಕೊನೆಗೆ ಆಳು-ಕಾಳುಗಳು ಯಾರೊಬ್ಬರೂ ಅವಳ ಸಮೀಪ ಸುಳಿಯಲಿಲ್ಲ. ವೈದ್ಯರು ಪ್ರತಿನಾಲ್ಕು ಗಂಟೆಗೊಮ್ಮೆ ಅವಳ ಆರೋಗ್ಯದ ವರದಿಯನ್ನು ತರಿಸಿಕೊಳ್ಳುತ್ತಿದ್ದರು. ಅವಳ ಹತ್ತಿರಕ್ಕೆ ಹೋಗುವ ಧೈರ್ಯಮಾಡದೆ ಅದೇ ಔಷಧವನ್ನು ಕುಡಿಸುತ್ತಿದ್ದರು. ಆತ ಏನು ಔಷಧ ಕೊಡುತ್ತಾ ಇದ್ದಾರೆ ಅಂತ ನಾನು ಯಾವತ್ತೂ ಕೇಳಲಿಲ್ಲ. ಆದರೆ ಅದು ಅಫೀಮಿನಿಂದ ತಯಾರಿಸಿದ್ದೆಂಬುದರ ಬಗ್ಗೆ ನನಗೆ ಬಹುಮಟ್ಟಿಗೆ ಖಾತರಿಯಾಗಿತ್ತು. ಅವಳ ನೋವು ಅವಳಿಗೆ ಗೊತ್ತಾಗದ ಹಾಗೆ ಅವಳನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಇಟ್ಟದ್ದಕ್ಕಾಗಿ ನಾನು ಆತನಿಗೆ ಕೃತಜ್ಞನಾಗಿರಬೇಕು ಎಂಬುದು ನನಗೆ ಗೊತ್ತಿತ್ತು. ಆದರೆ ಅವರು ಅದಕ್ಕಿಂತ ಹೆಚ್ಚಿನದೇನನ್ನೂ ಮಾಡಲಿಲ್ಲ ಎಂದು ಅವರನ್ನು ದ್ವೇಷಿಸಿದೆ. ಆತ ವೈದ್ಯ ತಾನೇ? ಅಲ್ಲದೆ ವೈದ್ಯರುಗಳೆಂದರೆ, ನಿಮ್ಮ ಪ್ರೀತಿಪಾತ್ರರಾದವರನ್ನು ಉಳಿಸಬಲ್ಲ ದೇವರುಗಳಲ್ಲವೇ? ತಾವು ಸರ್ವಶಕ್ತರುಗಳೆಂದು ಸೋಗು ಹಾಕುವ ದೇವರುಗಳು ಕೂಡ ಯಾರನ್ನೂ ಉಳಿಸಲಾರರೆಂದು ಆಗ ನನಗೆ ತಿಳಿದಿರಲಿಲ್ಲ.

ಕಣ್ಣಿಗೆ ಕಾಣದೆ, ಆ ಇಡೀ ಪ್ರದೇಶದ ವಿಶಾಲ ಜಾಗಕ್ಕೆಲ್ಲಾ ಹಗುರವಾದ ಘಾತುಕ ವಾಸನೆ ಹರಡಿಕೊಂಡ ಎಂಟನೇ ದಿನ ಅವಳನ್ನು ನೋಡಲು ಹೋಗುತ್ತಿರುವಾಗ ನಾನು ಮೂರ್ಛಿತನಾದೆ. ಹಿಂದಿನ ದಿನ ರಾತ್ರಿ ಮತ್ತು ಮರುದಿನ ಇಡೀ ಹಗಲು ಆ ಕೊಳಕು ಹುಡುಗಿ ಒಂದೇ ಸಮನೆ ನನ್ನ ಹೆಸರಿನ ಜಪ ಮಾಡುತ್ತಿದ್ದಳು. ಓ ಮಧುರ ವಿಸ್ಮೃತಿಯೇ, ಇದು ಸಾವು ಎನ್ನುವುದಾದರೆ, ಅರಳುತ್ತಾ ಅರಳುತ್ತಾ ಒಂದು ದಿನ ಇಡೀ ಭೂಮಂಡಲದ ಮೇಲಿನ ನಿವಾಸಿಗಳನ್ನೆಲ್ಲಾ ತೊಲಗಿಸಿ, ಸೂರ್ಯನನ್ನೇ ಸಂಪೂರ್ಣವಾಗಿ ಮರೆಮಾಡಿ ಬಿಡುವ ಹಾಗೆ, ಬೆಳೆಯುತ್ತಲೇ ಇರುವಂಥಾ ಕಾಳಪುಷ್ಪವೊಂದನ್ನು ಕೈಯಲ್ಲಿ

ಹಿಡಿದುಕೊಂಡು ಆ ಪೋರಿಯ ಸಮೀಪಕ್ಕೆ ನಾನು ಹೋಗದಿರುವ ಕಾಲವಷ್ಟೂ ಅದರಲ್ಲಿ ಮುಳುಗಿ ಬಿಟ್ಟಿರುವಂತಾಗಲಿ.

ಯಾರೆಲ್ಲ ಅವಳನ್ನು ಪ್ರೀತಿಸುತ್ತಿದ್ದರೋ ಹಾಗೂ ಏಳು ಹಗಲು ಹಾಗೂ ಏಳು ರಾತ್ರಿ ಅವಳ ಸಮೀಪಕ್ಕೆ ಸುಳಿಯದಿರುವಂಥ ಸಾರ್ಥಕ ಕೃಪೆ ತೋರಿದರೋ, ಅವರೆಲ್ಲರೂ, ದೇವಸ್ಥಾನಗಳಿಗೆ ತೆರಳಿ, ಸುಪ್ರಭಾತ ಹಾಡಿ, ನನ್ನ ತಂಗಿ ಸುಮಿತ್ರಳ ವೇದನೆಯನ್ನು ಹೋಗಲಾಡಿಸಲು ಮೊರೆಯಿಡುವ ಸಲುವಾಗಿ ಬ್ರಾಹ್ಮಣರಿಗೆ ಭರಪೂರ ದಕ್ಷಿಣೆಗಳನ್ನು ನೀಡಿದರು. ನಾನಾದರೋ ಆ ಸುಮಿತ್ರಳನ್ನು ನನ್ನ ಬರಿಕೈಗಳಿಂದಲೇ ಸಾಯಿಸಿಬಿಡಬೇಕೆಂದಿದ್ದೆ. ಆದರೆ ಅವಳ ಕುತ್ತಿಗೆ ಅದೆಷ್ಟು ಸಣ್ಣ, ಅವಳ ದನಿ ಅದೆಷ್ಟು ಕ್ಷೀಣ, ಅವಳ ಶರೀರ ಅದೆಷ್ಟು ಕಪ್ಪು ಮತ್ತು ಕೀವುದುಂಬಿತ್ತೆಂದರೆ ನನಗೆ ಅವಳನ್ನು ಮುಟ್ಟಲು ಧೈರ್ಯವಾಗಲಿಲ್ಲ.

ಅವಳ ಮರಣದ ವಾಸನೆ ಸಿಕ್ಕಿತ್ತೆಂದೇ, ದೇವಸ್ಥಾನದ ಪೂಜಾರಿಗಳು ಘಂಟಾನಿನಾದವನ್ನು ಜೋರು ಜೋರಾಗಿ ಬಾರಿಸುತ್ತಿದ್ದರೆ? ಕಾಳಿಕ ಮಾತೆಯ ದೇಗುಲದಲ್ಲಿ, ಏಕಲಿಂಗಜೀ ದೇಗುಲದಲ್ಲಿ, ಜೈನಬಸದಿಯಲ್ಲಿ ಮತ್ತು ಕುಂಭಶ್ಯಾಮ್ ದೇಗಲದಲ್ಲಿ ಗಂಟೆಗಳನ್ನು ಬಾರಿಸುತ್ತಿದ್ದರು. ಅದು ಅವಳ ಸಲುವಾಗಿಯೋ ಇಲ್ಲ ನನ್ನ ಸಲುವಾಗಿಯೋ? ಸಾವಿನಲ್ಲಿ ಅವಳೂ ನನ್ನ ಜೊತೆಗೂಡುವಳೆಂದಾದರೆ, ನಾನು ಸಾಯುವುದಿಲ್ಲ. ಇಲ್ಲಾ ಅವಳಿರಬೇಕು, ಇಲ್ಲಾ ನಾನಿರಬೇಕು. ನೀನು ಮನಸ್ಸು ಮಾಡು. ನಾನು ಅಲ್ಲಿಗೆ ಬಂದಾಗ, ನಾನು ಪೂರ್ತಿಸತ್ತ ಹಾಗೆ ಅಥವಾ ಪೂರ್ತಿ ಮೂರ್ಛೆ ಹೋಗಿರುವವನ ಹಾಗೆ ನಟಿಸಿದೆ. ಅವರು ಈರುಳ್ಳಿಗಳನ್ನು, ಪಾದರಕ್ಷೆಯ ಅಟ್ಟೆಗಳನ್ನು, ಜಗತ್ತಿನ ದೂರದೂರದ ಮೂಲೆಗಳಿಗೆಲ್ಲಾ ರಫ್ತು ಮಾಡುವ, ಸುಗಂಧ ದ್ರವ್ಯಗಳನ್ನು ಶ್ಯಾಮ್ ಪ್ರಸಾದ್ ರಾಮಲಾಲನ ಮಳಿಗೆಗಳಿಂದ ತರಿಸಿ ನನ್ನ ಮೂತಿಗೆ ಹಿಡಿದರು. ಅಷ್ಟೂ ಹೊತ್ತು ಅವಳು ನನ್ನನ್ನು ಹೆಸರು ಹಿಡಿದು ಕರೆಯುತ್ತಿದ್ದುದು ಕೇಳಿಸುತ್ತಿತ್ತು.

ಏನು ಪ್ರಯೋಜನ? ಈ ಹಾಳು ನೀತಿಗೆಟ್ಟ ಹೆಣ್ಣು ಯಾವತ್ತೂ ಸಾಯೋದೂ ಇಲ್ಲ. ನನ್ನನ್ನು ಹೋಗುವುದಕ್ಕೂ ಬಿಡುತ್ತಿಲ್ಲ. ನೀವು ಹೋಗುವ ಹಾಗಿಲ್ಲ ನಿಮ್ಮ ಆರೋಗ್ಯ ಸರಿ ಇಲ್ಲ. ನೀವು ಬಹಳ ದಿನದಿಂದ ನಿದ್ದೆಯನ್ನೇ ಮಾಡಿಲ್ಲ. ನೀವು ಹೋಗಬೇಕಾದ್ದಿಲ್ಲವೆಂದು ಅವರು ಹೇಳಿದರು. ಆ ಮಾಟಗಾತಿ ಅಷ್ಟು ಸುಲಭವಾಗಿ ನನ್ನನ್ನು ಹೋಗುವುದಕ್ಕೆ ಬಿಡುತ್ತಾಳೆಂದು ತಿಳಿದಿದ್ದೀರೇನು?

ಸುಮಿತ್ರಾಳ ಕೋಣೆಯಲ್ಲಿ ಒಬ್ಬೇ ಒಬ್ಬ ವ್ಯಕ್ತಿ ಇದ್ದಿತು. ಅದು ಕೌಸಲ್ಯ. ಇಡೀ ವಾರದುದ್ದಕ್ಕೂ ಅವಳು ಸುಮತ್ರಾಳ ಹಣೆ, ಹುಬ್ಬುಗಳ ಮೇಲೆ ಹತ್ತಿಯ ತುಣುಕಿನಿಂದ ಒರೆಸುತ್ತಾ ಒದ್ದೆಬಟ್ಟೆಗಳನ್ನು ಹಾಕುತ್ತಾ, ಹತ್ತಿಯ ಹೊದಿಕೆಯನ್ನು ಅವಳು ಕಿತ್ತೆಸದಾಗ, ಅದನ್ನು ಮತ್ತೆ ಹೊದಿಸುತ್ತಾ, ಕೀವು ಸೋರಿ ಮಲಿನವಾಗಿದ್ದ ಹಾಸಿಗೆಯ ಮೇಲು ಹೊದಿಕೆಯನ್ನು ಬದಲಾಯಿಸುತ್ತಾ ಅಲ್ಲಿಯೇ ಇದ್ದಳು. ಚಮಚದಿಂದ ನೀರು ಕುಡಿಸುತ್ತಾ ಆಗಾಗ್ಗೆ ಬಲವಂತದಿಂದ ಗಂಜಿಯನ್ನು ಕುಡಿಸುತ್ತಾ ಇದ್ದಳು. ವೈದ್ಯರು ಕಳಿಸಿಕೊಟ್ಟ ಪುಡಿಗಳನ್ನು ಹಾಲಿನಲ್ಲಿ ಕದಡಿ ಕುಡಿಸುತ್ತಿದ್ದಳು. ಅವಳೇನಾದರೂ ಅದನ್ನು ಕೈಯಿಂದ ತಳ್ಳಿದರೆ, ಅದನ್ನು ಚೊಕ್ಕಟಪಡಿಸುತ್ತಿದ್ದಳು. ಈ ಕೆಲಸ ಮಾಡಲು ಕೌಸಲ್ಯಗೆ ಯಾರೂ ಹೇಳಿರಲಿಲ್ಲ. ಅರಮನೆಯ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅವಳು ಪ್ರಮುಖಳೂ ಅತ್ಯಂತ ಗೌರವಾರ್ಹಳೂ ಆದ ವ್ಯಕ್ತಿಯಾಗಿದ್ದು ಇಂಥ ಸಂಗತವಲ್ಲದ ಮತ್ತು ನಿಷ್ಪ್ರಯೋಜಕವಾದ ಕೆಲಸವನ್ನು ಆಕೆ ಮಾಡಬೇಕಾಗಿರಲಿಲ್ಲ. ಆದರೆ, ತಾನೇನೋ ಒಂದು ವಿಶೇಷವಾದ್ದನ್ನು ಮಾಡುತ್ತಿದ್ದೇನೆಂದು ಕೌಸಲ್ಯ ತಿಳಿದಿರಲಿಲ್ಲ. ಅವಳು ಸುಮಿತ್ರಾಳನ್ನು ಪ್ರೀತಿಸುತ್ತಿದ್ದಳು ಹಾಗೂ ಏನು ಮಾಡಬೇಕೆಂದು ಅಂದುಕೊಂಡಿದ್ದಳೋ ಅದನ್ನೇ ಮಾಡುತ್ತಿದ್ದಳು.

ನಾನು ಬೇಗ ಬರಬೇಕೆಂದು ಕೌಸಲ್ಯ ನಿರೀಕ್ಷಿಸಿದ್ದಳೇ? ಅಥವಾ ಅಲ್ಲಿಂದ ಹೊರಡಲೇ ಬಾರದೆಂದುಕೊಂಡಿದ್ದಳೊ? ಕಾರಣ ಸುಮಿತ್ರಾಳ ಕರೆಗಳಿಗೆ ಓಗೊಡುತ್ತಿದ್ದವಳು ಅವಳೇ. ನಾನು ಬರುತ್ತಾ ಇದ್ದೇನೆಂದೂ,ಬೇಗನೆ ಅವಳ ಹತ್ತಿರಕ್ಕೆ ಬರುತ್ತಿದ್ದೇನೆಂದು ತಿಳಿಸುತ್ತಿದ್ದವಳು ಅವಳೇ. ನನ್ನನ್ನು ನನ್ನ ಪ್ರೀತಿಯ ತಂಗಿಯಿಂದ ದೂರ ಇಟ್ಟಿರುವುದಾವುದು ಎನ್ನುವುದನ್ನು ಅವಳು ಊಹಿಸಲಾರಳು. ಆದರೆ ನಾನು ಹೋಗುವುದು, ಬರುವುದರ ಬಗ್ಗೆ, ನನ್ನ ಕರ್ತವ್ಯಗಳ ಬಗ್ಗೆ ಕೌಸಲ್ಯ ನನಗೆ ಒಂದು ಮಾತನ್ನೂ ಹೇಳಲಿಲ್ಲ. ನನ್ನ ವಿಷಯಕ್ಕೆ ಸುಮಿತ್ರಾಳ ನಿರೀಕ್ಷೆಗಳಿಗೆ ಅವಳು ಯಾವ ಹೆಸರನ್ನೂ ಕೊಡಲಿಲ್ಲ.

ನಾನು ಪರದೆಗಳನ್ನು ಸರಿಸಿ ಬೆಳಕು ಬರುವಂತೆ ಮಾಡಿದೆ. ಆ ಮೇಲೆ ಬಂದು ಸುಮಿತ್ರಾಳ ಪಕ್ಕ ಕುಳಿತೆ. ಅವಳು ಹೇಳುವುದು ಸಾಕೂಸಾಲದ ಹಾಗೆ ಕೇಳಿಸುತ್ತಿತ್ತು. ಆದರೆ ಅವಳ ತುಟಿಗಳ ಚಲನೆಯಿಂದ ನನ್ನ ಹೆಸರನ್ನು ಉಚ್ಚರಿಸುವುದು ಗೊತ್ತಾಗುತ್ತಿತ್ತು. ಸುಮಿತ್ರಾಳಿಗೆ ಇಷ್ಟವಾಗುವ ರೀತಿಯಲ್ಲಿ ಅವಳ ತಲೆಬಾಚಿ ಒಂದು ಹೆರಳು ಹಾಕಿದ್ದಳು. ಅವಳ ಮೈಯನ್ನು ಶುಭ್ರಗೊಳಿಸಿ, ಸುಮಿತ್ರಾಳ ಮೆಚ್ಚಿನ ಸಮುದ್ರದ ಬಣ್ಣದ ರವಿಕೆ ಮತ್ತು ಸೀರೆಯನ್ನು ಉಡಿಸಿದ್ದಳು. ಒಂದು ವೇಳೆ ಅವಳಿಗೇ ಬಿಟ್ಟದ್ದರೆ, ಅವಳು ನನ್ನದೇ ಬಟ್ಟೆಗಳನ್ನು ಧರಿಸುತ್ತಿದ್ದಳು. ಅವಳ ಹಣೆಯ ಮೇಲೆ ಒಂದು ಸಣ್ಣ ಕೆಂಪು ತಿಲಕವನ್ನು ಹಾಕಿದ್ದಳು. ಅಲ್ಲದೆ ಕೌಸಲ್ಯ ಅದಕ್ಕೆ ಹೊಂದುವಂಥ ಮಾಣಿಕ್ಯದ ಹರಳಿನ ಕಿವಿಯೋಲೆ ತೊಡಿಸಿದ್ದಳು. ನಾನು ಬಂದಿರುವುದು ಅವಳಿಗೆ ಗೊತ್ತಾಗಿರಬೇಕು. ಅವಳೀಗ ಮೆಲುದನಿಯಲ್ಲಿ ಮಾತನಾಡುವುದನ್ನು ನಿಲ್ಲಿಸಿದ್ದಳು. ಅವಳ ಅಂಗೈ ತೆರೆದಿತ್ತು. ನಾನು ನನ್ನ ಬಲಗೈ ತೋರುಬೆರಳನ್ನು ಅವಳ ತರೆದ ಅಂಗೈಯಲ್ಲಿಟ್ಟೆ. ಅವಳು ಅದರ ಸುತ್ತಾ ತನ್ನ ಮುಷ್ಟಿಯನ್ನು ಬಿಗಿಗೊಳಿಸಿದಳು. ಅವಳ ಉಸಿರಾಟ ಈಗ ಹೆಚ್ಚು ಕ್ರಮಬದ್ಧವಾಗಿ ಸ್ಥಿರಗೊಳ್ಳುವಂತೆ ಕಾಣುತ್ತಿತ್ತು. ಅತ್ಯಂತ ಅಸಂಭವವಾದ ಯೋಚನೆಯೊಂದು ನನ್ನ ಮನಸ್ಸಿನಲ್ಲಿ ಸುಳಿದುಹೋಯಿತು. ನಿಮ್ಮ ಸಾವಿನಿಂದ ಮಾತ್ರ ನೀವು ಕಳೆದುಕೊಳ್ಳಬೇಕಾದಂಥ ಕೆಲ ವ್ಯಕ್ತಿಗಳಿರುತ್ತಾಳೆ, ಅದು ಸಾಗಿ ಹೋಗಲು ನಾನು ಬಿಟ್ಟೆ.

ಕೌಸಲ್ಯ ಬಂದು ಕೊಳೆಯಾಗಿದ್ದ ಸುಮಿತ್ರಾಳ ಕಾಲ ಕೆಳಗಿನ ಬಟ್ಟೆಯನ್ನು ಬದಲಿಸಿದಳು. ಅವಳು ನೋವಿನಿಂದ ನರಳಿದಳು. ನನ್ನ ಅಂಗೈನಿಂದ ಅವಳನ್ನು ನೇವರಿಸಿ ಅವಳ ಹಣೆಯ ಕೆಂಪು ತಿಲಕವನ್ನು ಚುಂಬಿಸಿದೆ. ಅವಳು ಕಣ್ಣುತೆರೆದು ಕೋಣೆಯನ್ನೆಲ್ಲಾ ನೋಡಿ, ಒಂದೇ ಸಮನೆ ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿದಳು. ನಾನು ನಿಧಾನವಾಗಿ ಮುಗುಳ್ನಕ್ಕೆ; ಅವಳ ಮುಖ ಅರಳಿತು. ಪ್ರತಿಯಾಗಿ ಮುಗುಳ್ನಕ್ಕಳು. ಅವಳ ಎಡಗೆನ್ನೆಯ ಮಧ್ಯದಲ್ಲೊಂದು ಗುಳಿ ಬಿದ್ದಿತು.

"ನಾನು ಹೊರಟೆ" ಎನ್ನುತ್ತಾ ಕೊನೆಯುಸಿರೆಳೆದಳು.

ಅಧ್ಯಾಯ 10

> **ಅವನು ನನ್ನ ಅತ್ಯಂತ ಒಳ್ಳೆಯ ಸ್ನೇಹಿತ. ನನ್ನ ವಿಶ್ವಾಸಪಾತ್ರ ಮಾರ್ಗದರ್ಶಕನೂ ಹೌದು. ವೇಣುಧಾರಿಯಾದ ಈ ನೀಲಮೇಘ ಶ್ಯಾಮನು ತಲೆಯಮೇಲೆ ನವಿಲುಗರಿಯನ್ನು ಧರಿಸಿದ್ದಾನೆ.**

ಅವಳು ಬಹಳ ಗುಂಭ. ಅವನು ಅದನ್ನು ಅವಳಿಗೆ ನೀಡಬೇಕಾತ್ತು. ಅದು ಅವಳ ಮತ್ತು ಅವನ ನಡುವಿನ ಏಕಮುಖದ ವಾಗ್ಯುದ್ಧದಲ್ಲಿ, ನೇರವಾಗಿ ಹೇಳಬೇಕೆಂದರೆ ಅತ್ಯಂತ ಚಾತುರ್ಯದ ಹೊಡೆತಕ್ಕೆ ಹತ್ತಿರವಾದದ್ದು. ನಿಮಗೆ ಹೆಸರು ಬೇಕಿದ್ದರೆ, ಹೆಸರು ಬೇಕಿದೆ ಎಂದು ಹೇಳಿ. ನಿಜಕ್ಕೂ ಒಂದು ಹೆಸರು ಬೇಕಿದೆ ಎನ್ನಿ. ಎಷ್ಟೊಂದು ತಿಂಗಳುಗಳ ತನಕ ಅದೊಂದೇ ಪ್ರಶ್ನೆಯಿಟ್ಟುಕೊಂಡು, ಅವನು ಅವಳ ಬೆನ್ನು ಹತ್ತಿದ್ದ? ಇಲ್ಲಿದೆ ನೋಡಿ ಅದು. ನಿನ್ನ ಬಗ್ಗೆ ನನಗೆ ಇರುವ ಆಸಕ್ತಿಗೆ-ಮುಂದಿನ ಏಳು ನೂರೋ, ಸಾವಿರವೋ ವರ್ಷಗಳ ತನಕ ಇದನ್ನು ಕಡಿದುಕೊಂಡಿರು, ತಗೋ ನಡಿ, ಎಂದು ಹೇಳಿ ನಾಯಿಗೆ ಮೂಳೆ ಚೂರು ಎಸೆಯುವ ಹಾಗೆ ಹೀಗೇ ಸುಮ್ಮನೆ ಅವನ ಕಡೆಗೆ ಒಂದು ಹೆಸರನ್ನು ಎಸೆದಿದ್ದರು.

ಏನು ಹೆಸರು? ತುಂಬಾ ಅಳೆದು-ಸುರಿದು ಎಚ್ಚರಿಕೆಯಿಂದ. ಅದೂ ಕೌರ್ಯತುಂಬಿದ ಸಂತಸದಿಂದ ಆಯ್ಕೆ ಮಾಡಿದ್ದಿರಬೇಕು. ಅದು ಒಂದು ಹೆಸರು ಮತ್ತು ಅದೇ ಸಮಯಕ್ಕೆ ಒಂದು ನೂರು ಹೆಸರು. ಅದೊಂದೇ, ಒಬ್ಬನಿಗೆ ಮಾತ್ರ ಅನ್ವಯಿಸುವಂಥದು ಅಥವಾ ಯಾರಿಗೆ ಬೇಕಾದರೂ ಹೇಳಬಹುದಾದ ಹೆಸರು. ಒಂದು ಪದ್ಯದಲ್ಲಿ ಗಿರಿಧರ್ ಎಂದು ಇದ್ದರೆ, ಇನ್ನೊಂದರಲ್ಲಿ ಶ್ಯಾಮ್ ಎಂದು ಮತ್ತೊಂದರಲ್ಲಿ ಗೋಪಾಲ್, ಮಗುದೊಂದು ಹೆಸರಿಲ್ಲದ್ದಕ್ಕೆ ಅನ್ವಯಿಸುತಿತ್ತು. ಅದೊಂದು ಮಿಥ್ಯಾನಾಮವಾಗಬಹುದು, ಅಕ್ಕರೆಯ ಅಡ್ಡಹೆಸರಾಗಬಹುದು ಅಥವಾ ಪ್ರೇಮಿಯೊಬ್ಬನ ಖಾಸಗಿ ಹೆಸರಾಗಬಹುದು. ಅದು ಒಬ್ಬನದಾಗಬಹುದು, ಅಥವಾ ಅವಳು ಪ್ರಸ್ತಾಪಿಸಿದವರೆಲ್ಲರದೂ ಆಗಬಹುದು ಅಥವಾ ಅವರಾರದ್ದೂ ಆಗದೇ ಇರಬಹುದು. ಅವಳು ತನ್ನ ಪಾಲಿನದನ್ನು ಹಾಗೇ ಇರಿಸಿಕೊಂಡಿದ್ದಳು. ಈಗ ಅವನು ತನ್ನ ಕೃತ್ಯಕ್ಕೆ ತಾನೇ ಪಶ್ಚಾತ್ತಾಪ ಪಡಬೇಕಾಗಿತ್ತು.

ಅವನು ತನ್ನ ತಲೆಯನ್ನೊಮ್ಮೆ ಹಿಂದಕ್ಕೊಗೆದು ನಕ್ಕ. ಯಾವುದೇ ಒತ್ತಾಯದ್ದಲ್ಲದ, ನಿಸ್ಸಂದಿಗ್ಧ ಅಟ್ಟಹಾಸ ಅದು. ದೇವರ ವಧು-ಏನೀ ಒಗಟಿನ ಅರ್ಥ? ಅಯ್ಯಾ, ಅದನ್ನು ಪ್ರಯತ್ನಪಟ್ಟು ಅರ್ಥ ಮಾಡಿಕೊ. ಗೊಂದಲದ ಬೀಜವನ್ನು ಬಿತ್ತಿ ಜಾರಿಕೊಳ್ಳುವುದರಲ್ಲಿ ಅವಳೊಬ್ಬ ಮಾಯಾಂಗನೆ. ಅವಳ ಜಾಗದಲ್ಲಿ ನಿಮ್ಮನ್ನು ಕಲ್ಪಿಸಿಕೊಳ್ಳಿ. ನಿಮಗೆ ಒಬ್ಬನ

ಜೊತೆ ಅತ್ಯಂತ ಗದ್ದಲದ, ಕಿವಿಗಡಚಿಕ್ಕುವಂಥ ಪ್ರಬಲವಾದ ಪ್ರೇಮ ಪ್ರಕರಣವಿದೆ. ಆಗ ನಿಮ್ಮ ಕುಲದಲ್ಲೇ ಅತ್ಯಂತ ಪ್ರತಿಷ್ಠಿತ ಸಾಮ್ರಾಜ್ಯದ ಭಾವೀ ಯುವರಾಜನಿಗೆ ಮದುವೆ ಮಾಡಿಬಿಡುತ್ತಾರೆ. ನಿಮ್ಮ ಗುಟ್ಟನ್ನು ನಿಮ್ಮಲ್ಲೇ ಇಟ್ಟುಕೊಡಿರುತ್ತೀರಾ? ಖಂಡಿತಾ ಇಲ್ಲ ಸ್ವಾಮಿ. ನೀವು ಒಬ್ಬ ನೇರನುಡಿಯ ಪ್ರಾಮಾಣಿಕ ವ್ಯಕ್ತಿ. ನಿಮ್ಮ ಮದುವೆಯ ರಾತ್ರಿಯೇ ನೀವು ನಿಮ್ಮ ಗಂಡನಿಗೆ ನಿಮ್ಮ ಸತ್ಯವನ್ನು ಮಾತ್ರ ಹೇಳಿಬಿಡುತ್ತೀರಿ. ಅವನಿಗೆ ಆ ಇನ್ನೊಬ್ಬ ಮನುಷ್ಯ ಯಾರು ಎಂದು ತಿಳಿದುಕೊಳ್ಳಬೇಕೆಂಬ ಇಚ್ಛೆ. ಅವನಿಗೆ ಆ ಪ್ರಶ್ನೆಗೆ ಉತ್ತರದ ಅಗತ್ಯ ಎಷ್ಟಿದೆ ಅಂದರೆ, ತನ್ನಲ್ಲಿ ನಾನೇ ಕುಸಿದು ಹೋಗುತ್ತಾ ಇದ್ದಾನೆ. ಅಕ್ಷರಶಃ ಕುತೂಹಲದಿಂದ ಸಾಯುತ್ತಾ ಇದ್ದಾನೆ. ಆ ಮನುಷ್ಯ ಪೂರ್ತಿ ಕೋಪೋದ್ರಿಕ್ತನಾಗುವವರೆಗೂ ನೀವು ನಿಮ್ಮ ಮೌನವನ್ನು ಬಿಗಿಹಿಡಿದಿರುವಿರಿ. ಇನ್ನು ಹೆಚ್ಚು ಹೊತ್ತು ಅವನನ್ನು ಆ ಸ್ಥಿತಿಯಲ್ಲಿಟ್ಟಿರಲು ಸಾಧ್ಯವಿಲ್ಲ ಎಂದು ಅನ್ನಿಸಿದಾಗ ನೀವು ಯಾವ ಹೆಸರು ಹೇಳುವಿರಿ? ಅವಳನ್ನು ಬಿಟ್ಟು ಬೇರೆ ಯಾವುದೇ ಹೆಣ್ಣೇ ಆದರೂ ತಾನು ಪ್ರೀತಿಸುತ್ತ ಇದ್ದದ್ದು ದೇವರು ಅಂತ ಹೇಳುವ ಯೋಚನೆಯನ್ನು ಯಾವತ್ತಾದರೂ ಮಾಡುತ್ತಾಳೆಯೇ?

ಶಿವ, ಬ್ರಹ್ಮ, ಇಂದ್ರ, ಅಗ್ನಿ, ವರುಣ, ವಿಷ್ಣು, ಅಥವಾ ಇನ್ಯಾವುದೇ ದೇವರನ್ನು ಅವಳು ಏಕೆ ಆಯ್ಕೆಮಾಡಿಕೊಳ್ಳಲಿಲ್ಲ? ಗೀತಾಚಾರ್ಯ ಶ್ರೀಕೃಷ್ಣ, ಕೃಷ್ಣ, ಬಾಲಕೃಷ್ಣ, ವೇಣುಗೋಪಾಲ, ಗಿರಿಧರ್, ಗೋಪಾಲ್, ಗೋವಿಂದ, ಆತ್ಮಾರಾಮ್, ಶ್ಯಾಮ್, ನವಿಲುಗರಿಯನ್ನು ಧರಿಸಿದವನು, ವಾಸುದೇವ, ಕನ್ಹಯ್ಯಾ, ಕನ್ಹ, ಮುರಳೀಧರ, ಕಾಳಿಂಗ ಮರ್ದನ, ನಾಗರ, ಮಧುಸೂದನ ಮತ್ತಿನ್ನಿತರೆ ಸಹಸ್ರನಾಮಗಳನ್ನು ಅವಳು ಹೇಗೆ ಆರಿಸಿಕೊಂಡಳು? ನೀಲಮೇಘಶ್ಯಾಮನೆಂದರೆ ಅವನಿಗ್ಯಾವ ಭಾವನೆ ಇದೆ ಎಂಬುದೇನಾದರೂ ಅವಳಿಗೆ ತಿಳಿದಿತ್ತೆ? ಅವನು ಅವಳಿಗೆಂದೂ ಈ ಬಗ್ಗೆ ಹೇಳಿರಲಿಲ್ಲ. ತನ್ನ ಹೃದಯದಲ್ಲಿ ಕೃಷ್ಣನಿಗೆ ವಿಶೇಷಸ್ಥಾನವಿದೆಯೆಂದು ಹೇಳಲು ಅವನಿಗೂ ಅವಳಿಗೂ ಅಂಥಾ ಮಾತುಕತೆಯಾದರೂ ಎಂದು ನಡೆದಿತ್ತು? ಅದೂ ಅಲ್ಲದೆ ಅವನು ಎಂದೂ ಹೊರಗಡೆ ತೋರಿಸಿಕೊಳ್ಳುವಂಥವನಲ್ಲ. ಯಾವುದೇ ಬಹಿರಂಗ ಪೂಜೆಯ ಸಂದರ್ಭದಲ್ಲಿ ಕೃಷ್ಣನನ್ನು ಪ್ರತ್ಯೇಕವಾಗಿ ಪೂಜಿಸಿರಲಿಲ್ಲ. ಬೆಳಗ್ಗೆ ಸ್ನಾನಮಾಡಿದ ಮೇಲೆ ಸಂಧ್ಯಾವಂದನೆ ಮಾಡಿ, ದೇವ-ದೇವರುಗಳ ಹಣೆಯ ಮೇಲೆ ಕೆಂಪು ತಿಲಕವನ್ನು ಹಚ್ಚಿ ಸ್ತೋತ್ರಗಳನ್ನು ಹೇಳಿಕೊಂಡು, ದೀರ್ಘದಂಡ ನಮಸ್ಕಾರ ಮಾಡಿ ತನ್ನ ಕೆಲಸಕ್ಕೆ ಹೋಗುತ್ತಿದ್ದನು.. ತನ್ನ ತಾಯಿಗಾಗಲೀ ಕೌಸಲ್ಯಳಿಗಾಗಲೀ ತನಗೂ ಕೃಷ್ಣನಿಗೂ ಇದ್ದ ಆಪ್ತತೆಯ ಬಗ್ಗೆ ಏನೇನೂ ಅರಿವಿಲ್ಲ ಎಂಬ ಬಗ್ಗೆ ಅನುಮಾನವಿರಲಿಲ್ಲ. ಅಷ್ಟೇ ಅಲ್ಲ, ಆ ಬಗ್ಗೆ ಕಿಂಚಿತ್ತೂ ಗೊತ್ತಿರಲಿಲ್ಲ. ಹಾಗಾದರೆ ಅವಳು ಹೇಗೆ ಇದನ್ನು ಪತ್ತೆ ಮಾಡಿದಳು? ಅವಳಿಗೇನು ಅತೀಂದ್ರಿಯದೃಷ್ಟಿ ಇತ್ತೆ? ವ್ಯಕ್ತಿಯೊಬ್ಬನ ಮನಸ್ಸಿನೊಳಕ್ಕೆ ದೃಷ್ಟಿಹಾಯಿಸಿ, ಅವನ ಅಂತರಂಗದ ಆಳದ ಗುಟ್ಟುಗಳನ್ನೆಲ್ಲಾ ಕಾಣಬಲ್ಲಳೆ? ತನ್ನ ಪತಿ ಅದೆಷ್ಟು ಘಾಸಿಗೊಳಗಾಗಬಹುದೆಂಬುದು ಹಾಗೂ ಅವನೆಷ್ಟು ಗೊಂದಲಕ್ಕೊಳಗಾಗುವನು ಮತ್ತು ಅವನೆಷ್ಟು ವೇದನೆಗೊಳಗಾಗುವನೆಂಬುದು ಗೊತ್ತಿದ್ದೂ ಬೇಕೆಂದೇ ಅವಳು ಕೃಷ್ಣನನ್ನು ಆರಿಸಿಕೊಂಡಿದ್ದಳೆ? ಅವನಿಗೆ ತನ್ನದೆಲ್ಲವೂ ಬಯಲಾದ ಭಾವವುಂಟಾಯಿತು. ಅವನ ಹೆಂಡತಿಯೊಬ್ಬ ಅಪರಿಚಿತ, ನಕ್ಷೆಯಿಲ್ಲದ ಭೂಪ್ರದೇಶವಾಗಿದ್ದಳು. ಅವಳ ಬಗ್ಗೆ ಗೊತ್ತಿದ್ದಷ್ಟು ಅಲ್ಪ ತಿಳಿವಿನಿಂದ ಅವನಿಗೆ ಗೊತ್ತಿದ್ದೆಂದರೆ ತನಗೆ ಪರಿಚಯವಿದ್ದ ಎಲ್ಲರಿಗಿಂತ ಉಪಾಯಗಾತಿ; ಒಂದಕ್ಕಿಂತ ಒಂದು ದೊಡ್ಡದಾದ ವಿಸ್ಮಯಗಳ ರಾಶಿ ಅವಳು. ಅವೆಲ್ಲವೂ ಅಹಿತಕರವೂ ಮನಕದಡುವಂಥವೂ ಆಗಿದ್ದವು. ಅವನೊಳಗೆ ಭಯದ ತಲ್ಲಣವುಂಟಾಯಿತು.

ಯಾರವಳು? ಅವಳು ಏನು ಮಾಡಬೇಕೆಂದಿದ್ದಳು? ಇನ್ನೆಷ್ಟು ಭಯಾನಕವಾದ ವಿಸ್ಮಯಗಳು ಮತ್ತು ಆಘಾತಗಳು ಅವನಿಗಾಗಿ ಮುಂದೆ ಕಾದಿವೆಯೋ?

ದೇವರ ಸಲುವಾಗಿಯೇ ದೇವರನ್ನು ಪ್ರೀತಿಸುವುದನ್ನು ಯಾರಾದರೂ ಕೇಳಿದ್ದಾರೆಯೇ? ದೇವರುಗಳಿರುವುದು ಪೂಜಿಸುವುದಕ್ಕೆ, ಪ್ರಾರ್ಥಿಸುವುದಕ್ಕೆ, ಬೇಡಿಕೆ ಸಲ್ಲಿಸಲು; ಕಷ್ಟಗಳು ಮತ್ತು ವಿಪತ್ತು ಉಂಟಾದಾಗ, ಮೊರೆಯಿಡಲು, ಅವನ ಕೃಪೆಯನ್ನು ಬೇಡುವುದಕ್ಕೆ. ಕೃಷ್ಣನಂತೂ ಖಂಡಿತವಾಗಿಯೂ ಎಲ್ಲ ದೇವರುಗಳಿಗಿಂತ ಹೆಚ್ಚು ಆಕರ್ಷಕ ಮತ್ತು ಪ್ರೀತಿಯೋಗ್ಯ ದೇವರು. ಅವನ ಬಗ್ಗೆ ಇರುವ ಕಥೆಗಳನ್ನು ನಂಬುವುದಾದರೆ ಹೆಂಗಸರ ವಿಷಯಕ್ಕಂತೂ ಕಿಂಚಿತ್ ಹೆಚ್ಚೇ ಎನ್ನುವಷ್ಟು ಮೃದು. ಅವನಿಗೆ ಅರ್ಥವಾಗದೆ ಇದ್ದ ಒಂದು ವಿಷಯ ಅಂದರೆ, ಶ್ರೀ ಕೃಷ್ಣನಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಸ್ವೇಚ್ಛಾ ಲೈಂಗಿಕತೆ. ನಿಜ ಹೇಳಬೇಕೆಂದರೆ ಅವನಿಗೆ ಅದರಲ್ಲಿ ಆಸಕ್ತಿಯೂ ಇರಲಿಲ್ಲ. ಈ ನೀಲಮೇಘಶ್ಯಾಮನು ತನ್ನ ಹೆಂಡತಿಯರಲ್ಲದೆ, ಬೇರೆಲ್ಲ ದೇವರುಗಳಿಗಿಂತ ದೊಡ್ಡ ರಾಣೀವಾಸವನ್ನು ಹೊಂದಿದ್ದ. ಅಲ್ಲದೆ ಬೃಂದಾವನದ ಪ್ರತಿಯೊಬ್ಬ ಗೋಪಿಕಾಸ್ತ್ರೀಯೂ ಅವನ ವಿಷಯಕ್ಕೆ ಮೋಹಪರವಶಗೊಂಡಿದ್ದಳು.

ಅವನ ಬೇರೆಲ್ಲ ಹೆಂಡತಿಯರಿಗಿಂತ, ರಾಧಾ ಎಂಬುವವಳು ಅವನಿಗೆ ಅತ್ಯಂತ ಆಪ್ತಳಾಗಿದ್ದಳು. ಅದೇ ಕಾರಣಕ್ಕೆ ಕೃಷ್ಣನನನ್ನು ರಾಧೇಶ್ಯಾಮನೆಂದು ಪೂಜಿಸುತ್ತಾರೆ. ಆದರೆ ಗೋಪಿಯರು, ರಾಧೆ ಮತ್ತು ಕೃಷ್ಣನ ಹೆಂಡತಿಯರೆಲ್ಲರೂ ಅವನೊಂದಿಗೆ ಮಾತನಾಡುತ್ತಿದ್ದರು, ಅವನ ಮಧುರ ದನಿಯನ್ನು ಕೇಳುತ್ತಿದ್ದರು, ಅವನೊಂದಿಗೆ ವಿಹರಿಸುತ್ತಿದ್ದರು, ಅವನೊಂದಿಗೆ ನರ್ತಿಸುತ್ತಿದ್ದರು, ಅವನು ಕೊಳಲು ನುಡಿಸುವುದನ್ನು ಆಲಿಸುತ್ತಿದ್ದರು, ಅವನ ಸುಂದರ ಕಣ್ಣುಗಳನ್ನು ಮತ್ತು ಅವನ ಹೊಳೆಯುವ ನೀಲ ವರ್ಣವನ್ನು ನೋಡುತ್ತಿದ್ದರು. ತಮ್ಮನ್ನು ಮಳೆಯಿಂದ ರಕ್ಷಿಸಲು, ತನ್ನ ಕಿರುಬೆರಳ ತುದಿಯಲ್ಲಿ ಗೋವರ್ಧನ ಗಿರಿಯನ್ನೆತ್ತಿ ಹಿಡಿದದ್ದನ್ನು ನೋಡಿದ್ದರು. ಈ ಭೂಮಿಯ ಮೇಲಿನ ಪಾಪಗಳನ್ನು ನಾಶಮಾಡಿದ್ದಕ್ಕೆ ಸಾಕ್ಷಿಯಾಗಿದ್ದರು. ಈ ನೀತಿದಾಯಕ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅವರೆಲರೂ ಅವನನ್ನು ಪ್ರತ್ಯಕ್ಷವಾಗಿ ರಕ್ತಮಾಂಸಗಳಿಂದ ಕೂಡಿದ ಶರೀರದಲ್ಲಿ ಕಂಡಿದ್ದರು. ಅವನನ್ನು ಪ್ರೀತಿಸಲು ಇರುವ ಮಾರ್ಗ ಅದೊಂದೇ. ಮರದಲ್ಲಿ ಕೆತ್ತಿದ್ದನ್ನೋ, ಕಲ್ಲಿನಲ್ಲಿ ಕಡೆದದ್ದನ್ನೋ ಅಥವಾ ಚಿತ್ರದಲ್ಲಿ ಚಿತ್ರಿಸಿದ್ದನ್ನೋ ಕಾಣುವುದರಿಂದ ಅಲ್ಲ.

* * *

ಕೃಷ್ಣನ ಮೇಲಿನ ಪ್ರೀತಿಯಿಂದ, ಅವನು ಮತ್ತೆ ನಕ್ಕ, ಇಂಥದೇ ಕಥೆ.

ಅವನು ಏಕಾಂಗಿ ಹುಡುಗ. ಅವನ ತಂದೆ ಬಹುಪಾಲು ಸಮಯ ಹೊರಗೆ ಯುದ್ಧದಲ್ಲಿ ಇರುತ್ತಿದ್ದನು. ಮನೆಯಲ್ಲಿ ಇದ್ದಾಗಲೂ ಅವನು ಮಿತಭಾಷಿ. ಅವನು ದೊರೆಯಾದ್ದರಿಂದ ಯಾವಾಗಲೂ ರಾಜ್ಯದ ವ್ಯವಹಾರಗಳಲ್ಲೇ ಮುಳುಗಿರುತ್ತಿದ್ದನು. ಅವರ ಅಪ್ಪನು ಕಾಣಲಿಕ್ಕೆ ನಿಷ್ಠುರನ ಹಾಗಿದ್ದನೋ ಅಥವಾ ನಿಜಕ್ಕೂ ನಿಷ್ಠುರನೋ ಎಂಬುದು ರಾಜಕುಮಾರನಿಗೆ ಖಚಿತವಾಗಿ ತಿಳಿದಿರಲಿಲ್ಲ. ಸ್ಪರ್ಧೆಗಳನ್ನೋ, ಕ್ರೀಡೆಗಳನ್ನೋ ಏರ್ಪಡಿಸಿದಾಗ ಅವನು ಸೀದಾ ಗುರುಕುಲಕ್ಕೆ ಬಂದು ಬಿಡುತ್ತಿದ್ದನು. ತನ್ನ ಮಗನ ಪ್ರಗತಿಯನ್ನು ನಿಜಕ್ಕೂ ಮನವರಿಕೆ ಮಾಡಿಕೊಳ್ಳಬೇಕೆಂದಲ್ಲ, ಅವನು ಗುರುಕುಲದ ಪೋಷಕನಾಗಿದ್ದರಿಂದಾಗಿ ಮತ್ತೆ ಪೋಷಕರಿಂದ ನಿರೀಕ್ಷಿಸುತ್ತಿದ್ದುದು ಅದನ್ನೇ. ಕೆಲವೊಂದು ಸಲ ಅವನ ಹಿರಿಯಮಗನು ಒಂದೆರಡು ಪದಕಗಳನ್ನು ಗೆಲ್ಲುತ್ತಿದ್ದನು. ಯಾವುದೋ

ಒಂದು ವರ್ಷ ಬಾಣ ಬಿಡುವ ಸ್ಪರ್ಧೆಯಲ್ಲಿ, ಸೈನಿಕ ಕಾರ್ಯಾಚರಣೆಯಲ್ಲಿ, ಈಜುವ ಸ್ಪರ್ಧೆಯಲ್ಲಿ ಮತ್ತು ಕುದುರೆಸವಾರಿಯಲ್ಲಿ ಅವನು ಮೊದಲ ಬಹುಮಾನ ಪಡೆದ. ರಾಣಾನ ಎದೆ ಹೆಮ್ಮೆಯಿಂದ ಬೀಗಿದ್ದರೆ ಅವನು ಅದನ್ನು ವ್ಯಕ್ತಪಡಿಸುತ್ತಿದ್ದ ಒಂದೇ ವಿಧಾನವೆಂದರೆ, ವಾಮಾಮೂಲಿಯಾಗಿ ಅವನೊಂದಿಗೆ ಕಿರಿಕಿರಿಯಾಗಿ ನಡೆದುಕೊಳ್ಳುತ್ತಿದ್ದುದಕ್ಕಿಂತ ಹೆಚ್ಚು ಕಿರಿಕಿರಿ ಉಂಟುಮಾಡುವ ಹಾಗೆ ನಡೆದುಕೊಳ್ಳುತ್ತಿದ್ದನು. ತನ್ನ ತಂದೆಯಿಂದ ದೂರವಾದ ಭಾವನೆ, ತಾನು ಕಡೆಗಣಿಸಲ್ಪಟ್ಟಂತೆ, ಅಲಕ್ಷ್ಯಕ್ಕೊಳಗಾದಂತೆ ಅವನಿಗೆ ಅನ್ನಿಸಿರಬೇಕು. ಆದರೆ ಅವನಿಗೆ ಹಾಗೆ ಅನ್ನಿಸಲಿಲ್ಲ. ತನ್ನ ತಂದೆ ತನ್ನ ಮೇಲೊಂದು ಕಣ್ಣಿಟ್ಟಿದ್ದಾರೆ ಎಂದು ಅವನಿಗೆ ಗೊತ್ತಿತ್ತು. ಅವನಿನ್ನೂ ತುಂಬಾ ಚಿಕ್ಕವನಾಗಿದ್ದಾಗಲೇ ಅವನು ಗ್ರಹಿಸಿದ ಸಮಸ್ಯೆಯ ಒಂದು ಅಂಶವೆಂದರೆ, ಅವನು ಮತ್ತು ಅವನ ತಂದೆ ಇಬ್ಬರೂ ತೋರಿಸಿಕೊಳ್ಳುವ ವ್ಯಕ್ತಿಗಳಾಗಿರಲಿಲ್ಲ; ಭಾವನೆಗಳ ವಿಷಯಕ್ಕೆ ಬಂದರೆ ಅವರಿಬ್ಬರೂ ನಾಜೂಕಿಲ್ಲದ ಒಡ್ಡರಾಗುತ್ತಿದ್ದರು. ಮನೋಭಾವದಿಂದ ಮತ್ತು ವೃತ್ತಿಯಿಂದ ಇಬ್ಬರೂ ತಮ್ಮ ಮೇಲೆಯೇ ತೀವ್ರ ನಿಗಾ ಇಟ್ಟಿರುತ್ತಿದ್ದರು. ಅಲ್ಲದೆ ತೀರಾ ಅಪರೂಪಕ್ಕೆ ತಮ್ಮ ಭಾವನೆಗಳನ್ನು ತೋಡಿಕೊಳ್ಳುತ್ತಿದ್ದರು. ಅನೇಕ ಸಲ ಅವರ ಅಪ್ಪನ ಕಡೆ ನೋಡಿದ ಕೂಡಲೇ ಅವನಿಗೆ ತನ್ನ ತಂದೆಯ ಶಾಂತ ಮುಖಭಾವದ ಹಿಂದೆ, ಏನಾಗುತ್ತಿದೆ ಎಂಬುದರ ಸೂಚನೆ ಸಿಕ್ಕಿಬಿಡುತ್ತಿತ್ತು. ತನ್ನ ತಂದೆಯೂ ತನ್ನ ಮುಖಭಾವದ ಹಿಂದಿನದನ್ನು ಒಳನೋಟದಿಂದ ಅತ್ಯಂತ ಕರಾರುವಾಕ್ಕಾಗಿಯೇ ಕಂಡುಕೊಂಡು ಬಿಡುತ್ತಿದ್ದರೆಂದು ಅವನಿಗೆ ಅನಿಸುತ್ತಿತ್ತು. ಹಾಗೆಂದರೆ ಅವರು ನಿರ್ಭಾವುಕರೆಂದಲ್ಲ. ಅದಕ್ಕೆ ತೀರಾ ತದ್ವಿರುದ್ಧವಾಗಿದ್ದರು. ಅವರು ತೀವ್ರ ಭಾವನೆಗಳನ್ನು ಹೊಂದಿದ್ದ ಭಾವುಕಜೀವಿಗಳಾಗಿದ್ದರು. ಆದರೆ, ಉತ್ತಮ ನಾಯಕನೆನಿಸಿಕೊಳ್ಳಬೇಕೆಂದರೆ, ಭಾವನೆಗಳು ಉತ್ಕಟ ಸ್ಥಿತಿಗೆ ಹೋಗದಂತೆ ನೋಡಿಕೊಳ್ಳಬೇಕೆಂಬುದು ಅವರಿಗೆ ತಿಳಿದಿತ್ತು. ಹಾಗೊಂದು ವೇಳೆ ಅಂಥ ಸ್ಥಿತಿಗೆ ಹೋದ ಭಾವನಾವಶತೆಯನ್ನು ವಿವೇಚನೆಯಿಂದ ಪ್ರತ್ಯೇಕಗೊಳಿಸುವಷ್ಟು ಎಚ್ಚರ ವಹಿಸುತ್ತಿದ್ದರು ಮತ್ತು ವಿವೇಚನೆಯನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದರು. ತನ್ನ ತಂದೆ ತನ್ನ ಬಗ್ಗೆ ಬಹಳಷ್ಟು ಯೋಚಿಸಿದ್ದರು ಎಂಬುದು ಅವನಿಗೆ ತಿಳಿದಿತ್ತು ಹಾಗೂ ಅದು ತನಗೆ ದೊರೆಯುವ ಪಿತೃಪ್ರೇಮಕ್ಕೆ ಹತ್ತಿರವಾಗಿತ್ತು ಅಥವಾ ಯಾರ ಬಗ್ಗೆಯಾದರೂ ಯೋಚಿಸುವುದೆಂದರೆ ಅದು ಅವರ ಬಗೆಗಿನ ಪ್ರೀತಿ ಎಂದೇ.

ಅವನ ತಾಯಿ ಮಹಾರಾಣಿ ನಿಜಕ್ಕೂ ಅತ್ಯಂತ ಪ್ರೇಮಲ ಸ್ವಭಾವದ ವ್ಯಕ್ತಿ. ಅವನು ಆಕೆಯ ಪುತ್ರ, ಅವಳ ಚೊಚ್ಚಲ ಮಗ, ಆಕೆ ತನ್ನ ತಂದೆಯನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ತನ್ನನ್ನು ಪ್ರೀತಿಸುತ್ತಾಳೆಂದು ಭಾವಿಸಿದ್ದನು. ಅವನು ಹಾಲುಕುಡಿದನೆ, ಬೆಳಗಿನ ಉಪಹಾರ ಸೇವಿಸಿದನೆ, ಮೊಟ್ಟೆಗಳು, ತುಪ್ಪ ಸವರಿದ ಮುಸುಕಿನ ಜೋಳದ ರೊಟ್ಟಿಗಳನ್ನು ತಿಂದನೆ, ಬಾದಾಮಿ ಮತ್ತು ಶೀರಾಗಳನ್ನು ತಿಂದನೆ ಎಂದು ವಿಚಾರಿಸಿಕೊಳ್ಳುತ್ತಿದ್ದಳು. ಮಧ್ಯಾಹ್ನದ ಊಟಕ್ಕೆ ಏನೇನು ಪದಾರ್ಥಗಳೆಂದು ಹೇಳುತ್ತಿದ್ದಳು. ಊಟದ ನಂತರ, ದಾಲ್, ರೊಟ್ಟಿ, ಕೋಸು, ಬಟಾಣಿಗಳನ್ನು ಸಾಕಷ್ಟು ತಿಂದನೆ, ಎಲ್ಲಕ್ಕಿಂತ ಹೆಚ್ಚಾಗಿ ಮಸಾಲೆ ಭರಿತ ಮಾಂಸ-ಕೋಳಿ ಮಾಂಸ, ಮೂರು ಬಗೆಯ ಮೀನಿನ ಖಾದ್ಯ- ಇವನ್ನೆಲ್ಲಾ ತಿಂದನೆ, ಇಲ್ಲವೇ ಎಂದೆಲ್ಲ ವಿಚಾರಿಸುತ್ತಿದ್ದಳು.

"ನೀನು ತರಕಾರಿ ತಿನ್ನಬೇಕು ಆದರೆ ನೀನು ಮಹಾರಾಜನಾಗಬೇಕು ಎಂದರೆ, ಮಾಂಸ, ಗೋಡಂಬಿ ಬೀಜಗಳು, ಪಿಸ್ತಾ, ಬಾದಾಮಿ ಮತ್ತು ಹೆಚ್ಚು ಹೆಚ್ಚು ಹಾಲು ಕುಡಿಯಬೇಕು. ಆದರೆ ಮೀನಿನ ಜೊತೆ ಮಾತ್ರ ಯಾವತ್ತೂ ಕುಡಿಯಬಾರದು, ಗೊತ್ತಾಯಿತೆ," ಎನ್ನುತ್ತಿದ್ದಳು.

ಯಾವಾಗಲೂ ಮಧ್ಯಾಹ್ನದ ಊಟದ ಸಮಯದಲ್ಲಿ ರಾತ್ರಿ ಊಟಕ್ಕೆ ಏನೇನು ಮಾಡಬೇಕೆಂದ್ದಾಳೆ ಅನ್ನುವುದನ್ನು ತಾನೇ ಖುದ್ದಾಗಿ ಹೇಳುತ್ತಿದ್ದಳು–ಅದನ್ನು ಹೇಳುವುದು ಏನೋ ಒಂದು ಪಿತೂರಿ ಮಾಡುವವರಥರ ಇರುತ್ತಿತ್ತು. ಕಾರಣ ಅದನ್ನು ಪಿಸುಮಾತಿನಲ್ಲಿ ಹೇಳುತ್ತಿದ್ದಳು. ತನ್ನ ತಾಯಿಯ ಕಣ್ಣಿನಲ್ಲೂ ಅಷ್ಟೇ, ಬಹುಶಃ ಬೇರೆಯವರ ಕಣ್ಣಿನಲ್ಲಿ ಕೂಡ, ಊಟ ನೀಡುವುದು, ಅನ್ನುವುದು ಪ್ರೀತಿಯ ತಿರುಳಾಗಿತ್ತು.

ಅವನ ತಾಯಿಗೆ ಇಡೀ ದಿನ ಬೇರೇನೂ ಮಾಡಲು ಇರುತ್ತಿರಲಿಲ್ಲ. ಮತ್ತು ಅದೇ ಅವಳಿಗೆ ಕೈತುಂಬ ಕೆಲಸದ ಹಾಗಿರುತಿತ್ತು. ಅವನ ಊಟದ ಸಂದರ್ಭದಲ್ಲಿ ಭಾಗವಹಿಸುವುದಕ್ಕಿಂತ ಆಲಿಸಲು ಹಾಜರಾಗುವುದಕ್ಕೆ ಆಕೆಗೆ ತಾಳ್ಮೆ ಇರುತ್ತಿರಲಿಲ್ಲ ಎನ್ನುವುದೇ ಅವನ ಅದೃಷ್ಟ ವಿಶೇಷ. ಕಾರಣ ಮಗುವಾಗಿದ್ದಾಗ ಊಟಮಾಡಲು ತುಂಬ ಕುಸುಬಿಷ್ಟೆ ಮಾಡುತ್ತಿದ್ದನು. ಅದರಲ್ಲೂ ಅವನೇನಾದರೂ ಅಷ್ಟೋ ಇಷ್ಟೋ ತಿಂದಿದ್ದರೆ ಅದು ಅವನ ಅಜ್ಜಿ ಮತ್ತು ಕೌಸಲ್ಯ–ಇವರಿಬ್ಬರು ಹೇಳುತ್ತಿದ್ದ ಕಥೆಗಳ ಕಾರಣದಿಂದ. ಆವೆಲ್ಲಾ ರಾಮಾಯಣ–ಮಹಾಭಾರತ, ಪುರಾಣಗಳು ಮತ್ತು ಪಂಚತಂತ್ರದ ಕಥೆಗಳಾಗಿರುತ್ತಿದ್ದವು, ಹಾಗೂ ಅವನ ವಂಶದವರ ಹಾಗೂ ಸಾಹಸದ ಕಥೆಳಾಗಿರುತ್ತಿದ್ದವು. ಅದದೇ ಕಥೆಗಳನ್ನು ಅವರಿಬ್ಬರೂ ಮತ್ತೆ ಮತ್ತೆ ಹೇಳಿದ್ದಿರಬಹುದು. ಆದರೆ ಅವರಿಬ್ಬರ ಹತ್ತಿರವೂ ಕಥೆಗಳ ಅಕ್ಷಯ ಭಂಡಾರವೇ ಇತ್ತು. ಅವನು ಬೆಳೆದು ದೊಡ್ಡವನಾದ ಮೇಲೆ ಆಗಾಗ ಹೇಳುತ್ತಿದ್ದ– "ನೀನು ಆ ಕಥೆಯನ್ನು ಈ ಮುಂಚೇನೇ ಹೇಳಿದ್ದೀ" ಎಂದಾಗ ಸ್ವಲ್ಪವೂ ತಾಳ್ಮೆಕಳೆದುಕೊಳ್ಳದೆ ಹಾಗೂ ರೆಪ್ಪೆ ಮಿಟುಕಿಸದೆ ಅವರು ಇನ್ನೊಂದು ಕಥೆಗೆ ಹೊರಳುತ್ತಿದ್ದರು. ಕೆಲವೊಮ್ಮೆ ಅದೇ ಕಥೆಯನ್ನು ಅದೇ ದಿನ ಹಲವಾರು ಸಲ ಹೇಳುತ್ತಿದ್ದರು. ಅವನಿಗೆ ಅನ್ನಿಸುತ್ತಿದ್ದುದೆಂದರೆ, ಅದೇ ಕಥೆಯೇ ಅದರೂ ಅದೆಷ್ಟು ಬೇರೆ ರೀತಿಯಲ್ಲಿ ಹೇಳುತ್ತಿದ್ದರು ಎಂದು! ಕೇವಲ ಧ್ವನಿಯ ಏರಿಳಿತ, ಹೇಳುವ ವಿಧಾನ ಅವುಗಳ ನಿಲುಗಡೆ, ಪರಾಕಾಷ್ಠೆಯ ಕಡೆಗೆ ಅವನ್ನು ತೆಗೆದುಕೊಂಡು ಹೋಗುವ ರೀತಿ–ಅಷ್ಟೇ ಅಲ್ಲ ಅವುಗಳ ವಸ್ತು ಕೂಡ ವೈವಿಧ್ಯಮಯ. ವಿರೋಧಾಭಾಸದ ಸಂಗತಿ ಎಂದರೆ, ಅವನ ಅಜ್ಜಿ ಯಾರು ಏನು ಮಾಡಿದರು, ಹೇಗೆ ಮಾಡಿದರು, ಯಾರದ್ದು ಸರಿ, ಯಾರದ್ದು ತಪ್ಪು ಅದನ್ನು ನೇರವಾಗಿ ಗಂಟಲು ತಗೆದು ಹೇಳಿಬಿಡುವಂಥ ವಾಸ್ತವಾಂಶಗಳಿಗೇ ಹೆಚ್ಚು ಗಂಟು ಬಿದ್ದ ಹೆಂಗಸು. ಇನ್ನೊಂದು ಕಡೆ, ಒಂದು ಕಥೆಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಹೇಳುತ್ತಿದ್ದಳು. ಯಾವಾಗಲೂ ಅವಳು ಏಕೆ ಎಂದು ಕೇಳುತ್ತಿರುವಂತೆನಿಸುತ್ತಿತ್ತು. ಏಕೆ ಎಂದು ಕೇಳಿದ್ದಾದರೆ, ಯಾರದ್ದು ತಪ್ಪು, ಯಾರದ್ದು ಸರಿ ಎಂದು ಪತ್ತೆ ಮಾಡುವುದು ಅಷ್ಟು ಸುಲಭದ್ದಾಗಿರಲಿಲ್ಲ.

ಅವನ ಕಣ್ಣೆದುರು ಅನೇಕ ನಾಯಕರಿದ್ದರು. ಕೆಲವರು ಅವನ ವಂಶಕ್ಕೆ ಸೇರಿದವರು, ಇನ್ನು ಬಹಳಷ್ಟು ಜನ ರಾಮಾಯಣ–ಮಹಾಭಾರತಕ್ಕೆ ಸಂಬಂಧಪಟ್ಟವರಾಗಿದ್ದರು. ಭೀಮ, ರಾಮ, ಶಿವ, ಲಕ್ಷ್ಮಣ ಭೀಷ್ಮ, ಹನುಮಾನ್–ಇವರೆಲ್ಲರನ್ನು, ಅವರ ಸಾಹಸ ಕೃತ್ಯಗಳನ್ನು ಹಗಲೂ–ರಾತ್ರಿ ಕನಸುಕಾಣುತ್ತಿದ್ದ. ಅವನು ಬೆಳೆದು ದೊಡ್ಡವನಾದ ಮೇಲೆ ಅವರೆಲ್ಲ ಸ್ಥಗಿತ ವ್ಯಕ್ತಿಗಳೆಂದು ಅರಿತುಕೊಂಡನು. ಅವರು ದೇಹದಲ್ಲಿ ಮತ್ತು ವಯಸ್ಸಿನಲ್ಲಿ ಬೆಳೆದಿರಬಹುದು, ಆದರೆ ಅವರು ಮೊದಲು ಹೇಗಿದ್ದರೋ ಕೊನೆಯಲ್ಲೂ ಅದೇ ಆಗಿದ್ದರು! ಬದಲಾದೆದ್ದೆಂದರೆ ಕಥಾವಸ್ತು, ಘಟನೆಗಳು ಮತ್ತು ವ್ಯತ್ಯಸ್ತಗೊಂಡ ಸಂದರ್ಭಗಳು. ಆದರೆ ಅವರು ಮಾತ್ರ ಬದಲಾಗದೇ ದೃಢವಾಗಿದ್ದರು. ವೈಭವದ ತುತ್ತ ತುದಿಯಿಂದ ಕಡುಬಡತನದತ್ತ ಅವರು ಸಾಗಿದರು. ಸಮರದಿಂದ ಶಾಂತಿಯ ಕಡೆಗೆ, ಶಾಂತಿಯಿಂದ ಸಮರದ ಕಡೆಗೆ ನಡೆದರು, ತಮ್ಮ ಸಾಮ್ರಾಜ್ಯಗಳನ್ನು ಪರಿತ್ಯಜಿಸಿದರು ಅಥವಾ ಅವರ

ತಂದೆ ಕೊಟ್ಟ ಮಾತಿಗಾಗಿ ತೀವ್ರ ಬ್ರಹ್ಮಚರ್ಯವನ್ನು ಕೈಕೊಂಡರು. ಅವರ ಪಾದ ಕಲ್ಲನ್ನು ಸೋಕಿದ ಪರಿಣಾಮವಾಗಿ ಹೆಣ್ಣೊಬ್ಬಳು ಜೀವತಳೆದು ನಿಲ್ಲುವಂತೆ ಮಾಡಿದರು. ದೇವರನ್ನು ಪೂಜಿಸಿ ದೇವರುಗಳೇ ಅವರಿಗೆ ಹೆದರುವಂಥ ವರಗಳನ್ನು ಪಡೆದರು. ಅವರ ಬದುಕು ಪ್ರಕ್ಷುಬ್ಧಮಯ. ಆದರೆ ಅವರ ಅನುಭವದ ಗುಣಮಟ್ಟವು ಅವರು ವಸ್ತುಗಳನ್ನು ನೋಡುವ ದೃಷ್ಟಿಯನ್ನು ಬದಲಾಯಿಸುತ್ತಿದ್ದುದಾಗಲಿ, ವಕ್ರಗೊಳಿಸುತ್ತುದ್ದುದಾಲಿ ವಿರಳ. ಅವರ ಮನಸ್ಸುಗಳು ವಿಚಲಿತವಾಗದಂಥವು. ಅವರು ಬಹಳಷ್ಟು ಅನುಭವ ಗಳಿಸಿದ್ದರು. ಆದರೆ ಅವರ ಅನುಭವವು ಅವರನ್ನು ಬದಲಾಯಿಸಲಾಗಲೀ, ಅವರ ದೃಷ್ಟಿ ಕೋನವನ್ನು ಆಮೂಲಾಗ್ರವಾಗಿ ಬದಲಾಯಿಸಲಾಗಲಿ, ಪುನರ್ರೂಪಿಸುವುದಾಗಲಿ ಸಾಧ್ಯವಾಗಲಿಲ್ಲ.

ಅದಕ್ಕೆ ಒಂದೇ ಒಂದು ಅಪವಾದವೆಂದರೆ ಶ್ರೀ ಕೃಷ್ಣ. ದೇವರು ಅವನೊಂದಿಗೇ ಬೆಳೆಯುತ್ತಿದ್ದಂತೆನಿಸುತ್ತಿತ್ತು. ಅಲ್ಲಿ ಇದ್ದದ್ದು ಒಬ್ಬ ಶ್ರೀ ಕೃಷ್ಣನಲ್ಲ, ತೀರ ಕಮ್ಮಿ ಎಂದರೆ ಮೂರು–ನಾಲ್ಕು ಮಂದಿ ಶ್ರೀ ಕೃಷ್ಣರಿದ್ದರು. ಅವನು ನಾನಾ ರೂಪಗಳನ್ನು ಧರಿಸಬಲ್ಲವನಾಗಿದ್ದ ಹಾಗೂ ತಾನೇ ಇರಬಹುದಾದ ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ತನ್ನ ಭೂಮಿಕೆಯನ್ನು ಬದಲಾಯಿಸಿಕೊಳ್ಳುತ್ತಿದ್ದನು. ಅವನ ಪಾತ್ರದ ಮೇಲೆ ಬೆರಳಿಟ್ಟು, ಹೌದು ಇದೇ ಶ್ರೀ ಕೃಷ್ಣ ಎಂದು ಹೇಳಲಾಗುವುದಿಲ್ಲ. ಅವನು ಎಲ್ಲ ಲಕ್ಷಣಗಳನ್ನೂ ಮೀರುತ್ತಿದ್ದನು. ಅವನು ಹೇಗೆ ವರ್ತಿಸುತ್ತಾನೆ ಅಥವಾ ಯಾವ ರೀತಿ ಪತಿಕಿಯಿಸುತ್ತಾನೆ ಎಂದು ಎಂದಿಗೂ ಮುಂಚೆ ಭವಿಷ್ಯ ನುಡಿಯಲಾಗುತ್ತಿರಲಿಲ್ಲ. ಅವನಿಗೇನಾದರೂ ತತ್ವಗಳಿದ್ದುವೆ? ಹೌದು ಇದ್ದವು. ಆದರೆ ಸಂದರ್ಭ ಬಂದಿತೆಂದರೆ ಅವುಗಳನ್ನು ಬದಿಗಿಡುತ್ತಿದ್ದ, ಇಲ್ಲವೆ ಬದಲಾಯಿಸುತ್ತಿದ್ದ ಅಥವಾ ಮರೆತೂ ಬಿಡುತ್ತಿದ್ದ. ಹಾಗಾದರೆ ಅವನೊಬ್ಬ ಯಾವುದಕ್ಕೂ ಹೇಸದ, ನಿರ್ದಯಿ ಸಮಯಸಾಧಕನೇ? ಕೆಲವೊಮ್ಮೆ. ಆದರೆ ಶ್ರೀ ಕೃಷ್ಣನು ಅವುಗಳಿಗೆ ಉತ್ತರಿಸುವಾಗ, ಆ ರೀತಿಯಲ್ಲಿ ಪ್ರಶ್ನೆಗಳನ್ನು ರೂಪಿಸುತ್ತಿರಲಿಲ್ಲ; ಅಥವಾ ಅವುಗಳಿಗೆ ಉತ್ತರಿಸುವಾಗ ಸೂಕ್ಷ್ಮವಾಗಿ ವಿಷಯಾಂತರ ಮಾಡಿಬಿಡುತ್ತಿದ್ದ. ಅತಿಯಾಗಿ ಸರಳೀಕರಿಸಿಬಿಡುವುದರಿಂದ ಅದನ್ನು ನಿಭಾಯಿಸುವುದು ಸುಲಭ. ಆದರೆ ಅದು ಅಪಾಯಕಾರಿಯೂ ಹೌದು. ಸತ್ಯದ ಮೇಲೆ ಯಾರಿಗೂ ಏಕಸ್ವಾಮ್ಯ ವಿಲ್ಲ. ಹಿಂದಿನ ಅನುಭವ, ಕುಟುಂಬ ವಂಶ ಅಥವಾ ವೃತ್ತಿನಿಷ್ಠೆ, ಸಾಂಸ್ಕೃತಿಕ ಹಿನ್ನಲೆ ಮತ್ತು ಬದುಕಿನಿಂದ ಬಯಸುವುದೇನು ಎಂಬಿವುಗಳಿಗೆ ತಕ್ಕಂತೆ ನಮ್ಮ ಸತ್ಯದ ಗ್ರಹಿಕೆ ಬದಲಾಗುತ್ತಿತ್ತು. ವಿಶಾಲವಾದ ಚಿತ್ರವನ್ನು ಕಂಡನೆಂಬ ಕಾರಣಕ್ಕೆ ಶ್ರೀ ಕೃಷ್ಣ ಕ್ರಿಯಾಶೀಲನೆನಿಸಿದನೆ ಅಥವಾ ಪ್ರತಿಸನ್ನಿವೇಶ ಮತ್ತು ಪ್ರತಿ ಸಮಸ್ಯಾವಳಿಗೆ ಬೇರೆಯದೇ ಆದ ರೀತಿಯಲ್ಲಿ ಅವನು ಪ್ರತಿಕ್ರಿಯೆ ತೋರಿದನೆಂಬ ಕಾರಣಕ್ಕೆ ಅವನ ಚಿತ್ರದ ಭಿತ್ತಿ ವಿಸ್ತಾರವೂ ಹೆಚ್ಚು ಹೆಚ್ಚು ಸಂಕೀರ್ಣವೂ ಆಯಿತೇ?

ಮಹಾರಾಜ್ ಕುಮಾರ್ ಮಗುವಾಗಿದ್ದಾಗ ಏನು ಆಗಿರಲಿಲ್ಲವೋ ಬಾಲಕೃಷ್ಣನು ಅದೆಲ್ಲವೂ ಆಗಿದ್ದನು. 'ಅವನೊಬ್ಬ ಅತ್ಯುನ್ನತ ಪೋರ, ತುಂಟ, ಹಟಮಾರಿ, ವಿರೋಧಿಗಳನ್ನು ಗೆದ್ದುಕೊಳ್ಳುವ, ಸ್ವಪ್ರತಿಷ್ಠೆಯ ಅತ್ಯಂತ ಉದ್ರೇಕ ಸ್ವಭಾವದ, ಮುದ್ದಿನ ಮತ್ತು ಎಲ್ಲರ ಸ್ನೇಹ ಬಯಸುವವನಾಗಿದ್ದ. ಗೋಕುಲದ ಹದಿನೈದರೊಳಗಿನ ಎಲ್ಲ ಹುಡುಗರೂ ಅವನ ಗೆಳೆಯರಾಗಿದ್ದರು. ಹಳ್ಳಿಗಳಲ್ಲಿನ ಬಹುಮಂದಿ ಮಕ್ಕಳ ಹಾಗೆ ಅವನು ಕೂಡ ಕೇವಲ ಒಬ್ಬ ದನಗಾಹಿ. ಅವನು ಅವರ ಮುಖಂಡ. ಕೊಳಲನ್ನೂದಿ ಅವರೆಲ್ಲರನ್ನೂ ಅವನು ಕರೆಯುತ್ತಿದ್ದನು ಮತ್ತು ಅವರೆಲ್ಲರೂ ಅವನು ಹೋದೆಡೆಯೆಲ್ಲಾ ಅವನನ್ನು ಅನುಸರಿಸಿಹೋಗುತ್ತಿದ್ದರು. ಅವನು ಮಾಡಿದ್ದೆಲವೂ ಒಂದು ಸಾಹಸವೇ. ಅವನು ಯಾವಾಗಲೂ ತೊಂದರೆಯಲ್ಲಿರುತ್ತಿದ್ದನು ಮತ್ತು ಅದರಿಂದ ಹೇಗೆ ಹೇಗೋ ಕಷ್ಟಪಟ್ಟು

ಹೊರಬರುತ್ತಿದ್ದನು. ಆಗತಾನೇ ಮೊಸರು ಕಡೆದು ತೆಗೆದ ಬೆಣ್ಣೆಯನ್ನು ಅವನು ಅಡಿಗೆಮನೆಯಿಂದ ಕದ್ದು ಬಿಡುತ್ತಿದ್ದುದರಿಂದ ಅವನ ತಾಯಿ ಬೆಣ್ಣೆಯ ಮಡಕೆಯನ್ನು ಎತ್ತರದಲ್ಲಿ ನೇತುಹಾಕುತ್ತಿದ್ದಳು. ದೂರದಿಂದ ಮಡಕೆಗೆ ಗುರಿ ಇಟ್ಟು, ಕಲ್ಲು ಎಸೆದು ತೂತುಮಾಡಿ, ಅಲ್ಲಿಂದ ಸುರಿಯುವ ಬೆಣ್ಣೆಗೆ ಅಗಲವಾಗಿ ಬಾಯೊಡ್ಡಿ ನಿಂತುಬಿಡುತ್ತಿದ್ದನು. .ಅಥವಾ ತನ್ನ ಗೆಳೆಯರ ಬೆನ್ನನ್ನೇ ಗೋಪುರಮಾಡಿಕೊಂಡು ಮೇಲೆ ಹತ್ತಿ ಮಡಕೆಗೆ ಕೈಹಾಕಿ ಬೆಣ್ಣೆ ಅಷ್ಟನ್ನೂ ನೆಕ್ಕಿಬಿಡುತ್ತಿದ್ದನು. ಅವನ ಕಳ್ಳತನ ಪತ್ತೆಯಾಗಿ ಸಿಕ್ಕಿಕೊಂಡರೆ ಯಾವಾಗಿನಂತೆ ತಾನು ಅದರ ಹತ್ತಿರ ಸುಳಿದೇ ಇಲ್ಲವೆಂದು ಹೇಳಿಬಿಡುತ್ತಿದ್ದನು. ನಾನು ದನಗಳನ್ನು ಮೇಯಿಸುತ್ತಿದ್ದೆ ಎಂದು ಸುಳ್ಳು ಹೇಳಿಬಿಡುತ್ತಿದ್ದನು.

ಮಗುವಾಗಿದ್ದಾಗ ಅವನು ಮಾಡಿದ ನಂಬಲಸಾಧ್ಯವಾದ ಸಾಹಸ ಕೃತ್ಯಗಳ ಕತೆಯೇ ಇತ್ತು. ತೃಣಾವರ್ತ ಅಘಾಸುರ, ಧೇನುಕಾಸುರ ಎಂಬ ರಾಕ್ಷಸರನ್ನು ಇನ್ನೂ ತೊದಲು ಮಾತನಾಡುತ್ತಿದ್ದಷ್ಟು ಕಾಲದಲ್ಲೆ ಸಂಹರಿಸಿದನು. ಏಳನೇ ವಯಸ್ಸಿಗಾಗಲೇ ಬಾಲಕೃಷ್ಣನಿಗೆ ಬುದ್ಧಿಕಲಿಸಬೇಕೆಂಬ ಉದ್ದೇಶದಿಂದ ದೇವರಾಜ ಇಂದ್ರನು ಗೋಕುಲದ ಜನಗಳಿಗೆ ತಂದೊಡ್ಡಿದ ವಿಪತ್ತಿನಿಂದ ಅವರನ್ನು ಪಾರುಮಾಡಿದ್ದನು. ಅದಕ್ಕೆ ದೇವಬಾಲಕನು ತೋರಿದ ಪ್ರತಿಕಿಯೆ ಸ್ವಲ್ಪ ತೀವ್ರವೇ ಆಗಿತ್ತು. ತನ್ನ ಕಿರುಬೆರಳಿನಿಂದ ಗೋವರ್ಧನಗಿರಿಯನ್ನೆತ್ತಿ ಹಿಡಿದು ಅದರಡಿಯಲ್ಲಿ ತನ್ನ ಜನರನ್ನೆಲ್ಲಾ ರಕ್ಷಿಸಿದ್ದನು.

ಅವನು ಲಾಡುಗಳನ್ನು ಕದಿಯುತ್ತಿದ್ದಾಗ ಯಶೋದೆಯ ಕೈಗೆ ಸಿಕ್ಕಿಬಿದ್ದನು. ಎಂದಿನಂತೆ ಏನೂ ಗೊತ್ತಿಲ್ಲದ ಮುಗ್ಧನಂತೆ, ದುಃಖಿತನಂತೆ ತೋರಿಸಿಕೊಂಡನು. ಬಾಯಿ ತೆರೆ ಎಂದು ಅಜ್ಞಾಪಿಸಿದಳು. ಅವಳು ಹೇಳಿದ ಕೂಡಲೇ ಅವನು ಅನಿಚ್ಛೆಯಿಂದೆಂಬಂತೆ ಬಾಯಿ ತೆರೆದನು. ಅವಳು ಆ ಬಾಯಿಯಲ್ಲಿ ಕಂಡ ದೃಶ್ಯವನ್ನೆಂದೂ ಮರೆಯದಾದಳು. ಇಡೀ ವಿಶ್ವವೇ, ಬ್ರಹ್ಮಾಂಡವೇ ಅವನ ಬಾಯಲ್ಲಿ ಅಡಗಿತ್ತು.

ನೀನು ಮಾಡುವುದನ್ನೆಲ್ಲಾ ಮಾಡಿ, ಅದು ಹೇಗೆ ನಿಭಾಯಿಸಬಲ್ಲೆ ಎಂದು ಕೃಷ್ಣನನ್ನು ಅವನು ಆಗಾಗ್ಗೆ ಕೇಳುತ್ತಿದ್ದನು. ಅವನು ಬೆಳೆದು ವಯಸ್ಸಿಗೆ ಬಂದು ಕಾಮಾಸಕ್ತಿ ಅದಮ್ಯವಾದಾಗ ಕೃಷ್ಣನು ಯಮುನೆಯ ದಡದಮೇಲಿನ ಮರದ ಕೊಂಬೆಯ ಮೇಲೆ ಕುಳಿತು ಜಲಕ್ರೀಡೆಯಾಡುತ್ತಿದ್ದ ಗೋಪಿಕಾಸ್ತ್ರೀಯರನ್ನು ನೋಡುತ್ತಿದ್ದಂತೆ, ಅರಮನೆಯ ನಾರಿಯರು ನಗ್ನರಾಗಿ ಸ್ನಾನಮಾಡುತ್ತಿದ್ದುದನ್ನು ನೋಡಬೇಕೆಂದು, ಅವರ ವಸ್ತ್ರಗಳನ್ನು ಕದಿಯಬೇಕೆಂದು ಅವನಿಗೆ ಆಸೆಯಾಯಿತು. ನಗರದ ನಾರಿಯರು ಗಂಭೀರಾ ನದಿಯಲ್ಲಿ ಸ್ನಾನಮಾಡುತ್ತಿದ್ದಾಗ ವಸ್ತುಶಃ ಅವರನ್ನು ನೋಡಲೆಂದೇ ಅಲ್ಲಿಗೆ ತೆರಳಿದ್ದನು. ಅವರು ಮೈಮೇಲೆ ಬಟ್ಟೆಯನ್ನು ತೊಟ್ಟಿದ್ದರೂ ಒದ್ದೆ ಬಟ್ಟೆಯೊಳಗಿನಿಂದ ಅವರ ಮೊಲೆಗಳನ್ನು, ಮೊಲೆತೊಟ್ಟುಗಳನ್ನು ಕಾಣಬಹುದಿತ್ತು. ಅವನಿಗೆ ತೀವ್ರ ಕಾಮೋದ್ರೇಕವಾಗಹತ್ತಿದಾಗ, ಕೌಸಲ್ಯ ಅವನನ್ನು ಅಲ್ಲಿ ಕಂಡಳು. ಕೌಸಲ್ಯಳಿಂದ ಜೀವಮಾನದ ಮೊದಲ ತಪರಾಕಿಯನ್ನು ಪಡೆದ. ನೀನೇ ನನಗೆ ಕೃಷ್ಣ ಹಾಗೂ ಗೋಪಿಕಾಸ್ತ್ರೀಯರು ಯಮುನೆಯಲ್ಲಿ ರಾಸಕ್ರೀಡೆಯಾಡಿದ ಕಥೆ ಹೇಳಿದ್ದು, ನಾನು ಅದನ್ನೇ ಮಾಡಿದರೆ ಏನು ತಪ್ಪು ಎಂದು ಕೇಳಬೇಕೆನಿಸಿತು. ಹಾಗೆ ಕೇಳಲಿಲ್ಲವೇಕೆಂದರೆ, ಅವಳು ಅವನ ಕಣ್ಣುಗಳಲ್ಲಿ ಆಳವಾಗಿ ದಿಟ್ಟಿಸಿನೋಡಿ, ಆಕ್ಷೇಪಿಸಿ ಇನ್ನೊಮ್ಮೆ ಕೆನ್ನೆಗೆ ತಪರಾಕಿ ಕೊಡುತ್ತಿದ್ದಳು.

ಮಹಾರಾಜ್ ಕುಮಾರ್ ಬಾಲಕೃಷ್ಣನನ್ನು ಮರೆಯಲಿಲ್ಲ. ಆದರೆ ವರ್ಷಗಳು ಉರುಳುತ್ತಿದ್ದಂತೆ ಅವನನ್ನು ಹಿಂದೆ ಬಿಟ್ಟನು. ಅವನು ಮಹಾಭಾರತವನ್ನು ಅದರಲ್ಲೂ ವಿಶೇಷವಾಗಿ ಕೆಲವು ಭಾಗಗಳನ್ನು ಮತ್ತೆ ಮತ್ತೆ ಓದಿದನು ಹಾಗೂ ಬೆಳೆದು ಪ್ರೌಢಾವಸ್ಥೆಗೆ

ಬಂದ ಶ್ರೀ ಕೃಷ್ಣನನ್ನು ಕುರಿತಂತೆ ತುಂಬ ಕುತೂಹಲ ಮತ್ತು ದಿಗ್ಭ್ರಮೆಗಳುಂಟಾದವು. ಅವನ ಪವಾಡಮಯವಾದ ಬಾಲ್ಯ ಜೀವನದಿಂದ ಎಲ್ಲ ಸಂಬಂಧಗಳನ್ನು ಕಡಿದುಕೊಂಡಂತೆ ಕಾಣುತ್ತದೆ. ಮಹಾರಾಜ್‌ಕುಮಾರ್‌ನ ಪೂರ್ವಜರು ಮತ್ತು ಇತರೆ ರಜಪೂತರಂತಲ್ಲದೆ ಶೀರಾ ವೀರಕೃತ್ಯಗಳಲ್ಲಿ ತೊಡಗಿಕೊಳ್ಳುವುದನ್ನು ಶ್ರೀ ಕೃಷ್ಣನು ದ್ವೇಷಿಸುತ್ತಿದ್ದನು. ಅನೇಕ ವೇಳೆ ಅವನು ಕಾದು ನೋಡುವುದು, ರಾಯಭಾರದ ಆಟಗಳನ್ನಾಡುವುದು; ಸಂಧಾನ ನಡೆಸುವುದು, ಸಾಧ್ಯವಾದಷ್ಟೂ ಸಂಘರ್ಷಗಳನ್ನು ನಿವಾರಿಸುವುದು ಇವಕ್ಕೇ ಬಹುವಾಗಿ ಆದ್ಯತೆ ನೀಡುತ್ತಿದ್ದನು ಹಾಗೂ ಜನರಿಗೆ ಅವರೇ ಕೇಡು ತಂದುಕೊಳ್ಳಲನುವಾಗುವಂತೆ ಅವರನ್ನು ಸ್ವೇಚ್ಛೆಯಾಗಿಬಿಟ್ಟು ಬಹುದೀರ್ಘಕಾಲದವರೆಗೆ ತಾಳುತ್ತಿದ್ದನು. ಕಾಲವು ಸಮಸ್ಯೆಗಳನ್ನು ಮಾಯಿಸುವುದಷ್ಟೆ ಅಲ್ಲದೇ, ಸಮಸ್ಯೆಗಳು ಮತ್ತು ಪ್ರಕರಣಗಳು, ತಮಗೆ ತಾವೇ ಇತ್ಯರ್ಥಗೊಳ್ಳುವಂತೆ ಮಾಡುವ ಮಾರ್ಗಕೂಡ ಕಾಲಕ್ಕೆ ಗೊತ್ತಿದೆ ಎಂದೇ ಅವನು ತಿಳಿದಂತಿತ್ತು. ಕೃಷ್ಣನು ತನಗೆ ಎದುರಾದ ಯುದ್ಧದ ಕರೆಯನ್ನು ಅನೇಕ ವೇಳೆ ಸವಾಲಾಗಿ ಸ್ವೀಕರಿಸಲಿಲ್ಲವೆಂಬ ಹಾಗೂ ಅದು ಯಾವೆಲ್ಲವನ್ನು ಪವಿತ್ರವೆಂದು ಭಾವಿಸಬೇಕೆಂದು ಮಹಾರಾಜ್ ಕುಮಾರ್‌ಗೆ ಬೋಧಿಸಲಾಗಿತ್ತೋ ಅವಕ್ಕೆ ಹಾಗೂ ಅವನ ಸ್ವಭಾವಕ್ಕೆ ವಿರುದ್ಧವಾಗಿಯೇ ಇದ್ದವೆಂಬುದು ನಿಜಕ್ಕೂ ಆಶ್ಚರ್ಯಕರವೇ. ಎಷ್ಟೇ ಪ್ರಚೋದನೆಗೊಳಗಾದರೂ ಅವನು ಕಾಲದ ಸಲುವಾಗಿ ಆಡಿದನು. ಇದೀಗ ಅದರ ತಿರುಳು ಇಲ್ಲಿತ್ತು. ಸಾಧ್ಯವಾದಷ್ಟುಮಟ್ಟಗೂ ಸಾಹಸ ಮತ್ತು ಶೌರ್ಯಗಳಿಂದ ಅವನು ದೂರವಿರುತ್ತಿದ್ದನು. ಅವನ ಮುತ್ಸದ್ದಿತನ ಫಲಪ್ರದವಾಗಲಿಲ್ಲವೆಂದರೆ, ಆಗ ಅವನು ಕುತಂತ್ರ ಮತ್ತು ಅಡ್ಡದಾರಿಯನ್ನು ಹಿಡಿಯುತ್ತಿದ್ದನು. ಯುದ್ಧ ಎಂದೆಂದಿಗೂ ಪರ್ಯಾಯವಾಗಿರಲಿಲ್ಲ. ಇತರೆ, ಮನವೊಲಿಕೆಯ ಎಲ್ಲ ಮಾರ್ಗಗಳೂ ನಿರರ್ಥಕವಾದಾಗ, ಅದು ಆತ್ಯಂತಿಕ ಆಶ್ರಯವಾಗಿತ್ತು. ಒಂದು ರೀತಿಯಲ್ಲಿ, ಜಗತ್ತು ಇದುವರೆಗೆ ಕಂಡ ಅತಿದೀರ್ಘವೂ, ಅತಿದೊಡ್ಡದೂ ಅತಿ ವಿನಾಶಕರವೂ ಆದ ಕುರುಕ್ಷೇತ್ರ ಮಹಾಯುದ್ಧಕ್ಕೆ ಅವನೇ ಕಾರಣ. ಆದರೆ ಇದು ಸಾಧ್ಯವಿಲ್ಲ ಎಂದು ಅಂತಿಮವಾಗಿ ಕೈಚೆಲ್ಲುವ ಮುನ್ನ ಶಾಂತಿಸಂಧಾನಕ್ಕೆ ಎಲ್ಲ ರೀತಿಯ ತಂತ್ರಗಳನ್ನೂ ಪ್ರಯತ್ನಿಸಿದನು.

ಜನಗಳು ತನ್ನ ಬಗ್ಗೆ ಏನು ಯೋಚಿಸುತ್ತಾರೆ ಎಂಬ ಬಗ್ಗೆ ಕೃಷ್ಣನು ತನ್ನ ಅಂತರಂಗದ ಆಳದಲ್ಲಿ ಯಾವತ್ತೂ ತಲೆಕೆಡಿಸಿಕೊಳ್ಳಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ಮಹಾರಾಜ್ ಕುಮಾರ್‌ಗೆ ವರ್ಷಗಟ್ಟಲೆಯಷ್ಟು ದೀರ್ಘಸಮಯ ಹಿಡಿಯಿತು. ದೇವನಿಗೆ ತನ್ನ ಬಗ್ಗೆ ಅತೀವ ವಿಶ್ವಾಸವಿದ್ದು ತನಗೇನು ಬೇಕಾಗಿದೆ ಎಂಬುದರ ಅರಿವಿತ್ತು. ತನ್ನ ಬದುಕಿನ ಯಾವೊಂದು ಸಂದರ್ಭದಲ್ಲೂ ತನಗೆ ತಾನೇ ಸರಿ ಎಂದು ಸಾಬೀತುಮಾಡಿ ತೋರಿಸಬೇಕಾದ್ದಿರಲಿಲ್ಲ. ತಾವೇ ಮಹಾವೀರರಾಗಿದ್ದರೂ ಕೃಷ್ಣನ ಬಂಧು ಬಾಂಧವರೆಲ್ಲರೂ ಅವನಂತಲ್ಲದೆ ತಮ್ಮ ಉತ್ಸಾಹ ಎಷ್ಟು ಮಾತ್ರಕ್ಕೂ ಬತ್ತಿಲ್ಲವೆಂದು ಪ್ರತಿನಿತ್ಯವೂ ತಮಗೆ ತಾವೇ ಮನದಟ್ಟು ಮಾಡಿಕೊಳ್ಳಬೇಕಾಗಿತ್ತು. ಈ ಅಭದ್ರತೆಯ ಭಾವ ಎಂದಿನಿಂದ ಶುರುವಾಯತೆಂದು ಅವನು ಖಚಿತವಾಗಿ ಹೇಳಲಾರ. ರಜಪೂತರ ಗೌರವ ಮತ್ತು ಸಾಹಸ ಸಂಹಿತೆ, ಅವರ ಸ್ವಂತ ಬದುಕಿನ ಬಲಿದಾನಕ್ಕೆ ಯಾವಾಗಲೂ ಯಾಕೆ ತಳುಕು ಹಾಕಿಕೊಂಡಿದ್ದವು? ಅಂಜುಕುಳಿಗಳೆಂದು ಕರೆಸಿಕೊಳ್ಳುವುದಕ್ಕೆ ಯಾವಾಗಲೂ ಅವರೇಕೆ ಅಷ್ಟೊಂದು ಅಂಜುತ್ತಿದ್ದರು? ಕುಟಿಲತಂತ್ರಗಳಿಗೆ, ಕಾರಸ್ಥಾನಗಳಿಗೆ ಅವರಲ್ಲಿ ಕಿಂಚಿತ್ತೂ ಎಡೆಯಿರಲಿಲ್ಲ. ಆ ಒಂದು ಪರಿಕಲ್ಪನೆಗೆ ಬಹುಮಟ್ಟಿಗೆ ಜಗತ್ತು ಶ್ರೀ ಕೃಷ್ಣನಿಗೆ ಋಣಿಯಾಗಿರುತ್ತದೆ.

ಕೃಷ್ಣನಿಗೆ ಬಾಲಮುದುರಿಕೊಂಡು ಹೆದರಿ ಹಿಮ್ಮೆಟ್ಟುವುದೇನೂ ಸಮಸ್ಯೆಯಲ್ಲ. ಕೃಷ್ಣನು ತನ್ನ ಎಲ್ಲ ಏಳುಜನ ಒಡಹುಟ್ಟಿದವರನ್ನು ಕೊಂದಿದ್ದ ಕ್ರೂರಿಯಾದ ಮಾವ ಕಂಸನನ್ನು ಮುಗಿಸಿ ಬಿಡುವ ಭಯಂಕರ ಅವಸರದಲ್ಲಿರುತ್ತಾನೆಂದು ಯಾರಾದರೂ ಅಂದುಕೊಂಡಿರುತ್ತಾರೆ. ಬದಲಿಗೆ ಕೃಷ್ಣನು ಎಷ್ಟು ದಿನ ಸಾಧ್ಯವೋ ಅಷ್ಟು ದಿನ ಅವನಿಂದ ದೂರ ಉಳಿದಿದ್ದನು. ಈ ಎಲ್ಲಾ ಕ್ರೂರಿ ರಾಜರುಗಳಿಗಿಂತ ಬಹುಶಃ ಅತ್ಯಂತ ಭಯಂಕರನಾದ, ಎಲ್ಲರನ್ನೂ ಸೋಲಿಸಿ ರಾಜಾಧಿರಾಜನಾಗಬೇಕೆಂದಿದ್ದ ಜರಾಸಂಧನು ಮಥುರೆಯ ಜನಗಳ ಮೇಲೆ ಮತ್ತು ಕೃಷ್ಣನ ಮೇಲೆ ಆಕ್ರಮಣ ಮಾಡುವುದಾಗಿ ಬೆದರಿಕೆ ಹಾಕಿದಾಗ ಕೃಷ್ಣನು ಕೇವಲ ಹಿಂದೆ ಸರಿದದ್ದಷ್ಟೇ ಅಲ್ಲ ತನ್ನ ಸಮಸ್ತವನ್ನೂ ತೆಗೆದುಕೊಂಡು ತನ್ನೆಲ್ಲಾ ಪ್ರಜೆಗಳ ಸಮೇತ ದ್ವಾರಕೆಗೆ ಓಡಿಬಿಟ್ಟನು. ಅವನೊಂದಿಗೆ ಮುಯ್ಯಿತೀರಿಸಿಕೊಳ್ಳಲೇ ಬೇಕಾಗಿ ಬಂದಾಗ, ಶಕ್ತಿಶಾಲಿ ಯೋಧ ಭೀಮನನ್ನು ಅವನೊಂದಿಗೆ ಯುದ್ಧಕ್ಕೆ ತೊಡಗಿಸಿದನು.. ಜರಾಸಂಧನು ಭೀಮನ ಮೇಲೆ ಮೇಲುಗೈ ಸಾಧಿಸಿದಾಗ, ಮರದ ಕೊಂಬೆಯೊಂದನ್ನು ತೆಗೆದುಕೊಂಡು ಅದನ್ನು ಇಬ್ಭಾಗ ಮಾಡಿದನು. ಭೀಮನಿಗೆ ಈ ಸಂಜ್ಞೆ ಅರ್ಥವಾಯಿತು. ಜರಾಸಂಧನ ಕಾಲುಗಳನ್ನು ಹಿಡಿದು ಮಧ್ಯಕ್ಕೆ ಸರಿಯಾಗಿ ಸೀಳಿಬಿಟ್ಟನು.

ಬಹುಶಃ ಮಹಾರಾಜ್ ಕುಮಾರ್ ಕೃಷ್ಣನಿಗೆ ಬಹುವಾಗಿ ಋಣಿಯಾಗಿದ್ದುದೆಂದರೆ ಒಂದು ಮನೋಭಾವಕ್ಕೆ. ಯಾವುದನ್ನೇ ಆಗಲೀ ಪ್ರಮಾಣಭೂತವಾದದ್ದೆಂದು ಬಗೆಯಬೇಡ. ಬೇರೆಯವರಿಂದ ಪಡೆದ ಜ್ಞಾನ ಬಹಳ ಒಳ್ಳೆಯದೇನೋ ನಿಜ. ಕಾರಣ, ಅದು ಅನೇಕ ಶತಮಾನಗಳಿಂದ ಗಳಿಸಿದ ಅನುಭವದ ಅರ್ಕ. ಆದರೆ ಯಾರೋ ಹೇಳಿದ್ದಾರೆಂದಾಕ್ಷಣಕ್ಕೇ ಅತ್ಯಂತ ಪುರಾತನ ಕಾಲದಿಂದ ಹಾಗೆ ನಡೆದು ಬಂದಿದೆ ಎಂದಾಕ್ಷಣಕ್ಕೇ ಅದು ಹಾಗಿರುವುದಿಲ್ಲ. ಅದನ್ನು ಮತ್ತೆ ಪರೀಕ್ಷಿಸು, ಪ್ರಶ್ನಿಸು, ಅನುಮಾನಪಡು. ಅಗತ್ಯ ಬಿದ್ದರೆ, ಅದರ ದುಷ್ಪರಿಣಾಮಗಳಿಗಿಂತ ಅದರಿಂದೊದಗುವ ಅನುಕೂಲಗಳು ಹೆಚ್ಚೆಂದಾದರೆ ಮಾತ್ರ, ಪ್ರವಾಹದ ವಿರುದ್ಧ ಈಜಲು ಎಂದಿಗೂ ಹಿಂದೆಗೆಯಬೇಡ. ಅನೇಕ ವೇಳೆ ಅವನು ಕೃಷ್ಣನೊಂದಿಗೆ ಮಾತಾಡಿ, ಸಮಸ್ಯೆಯೊಂದರ ಅಥವಾ ಸಂದರ್ಭದ ಸಾಧಕ–ಬಾಧಕಗಳನ್ನು ಚರ್ಚಿಸಿ, ತನ್ನ ವಾದವನ್ನು ಮುಂದಿಡುತ್ತಿದ್ದನು. ಯುದ್ಧ ತಂತ್ರಗಳನ್ನು ಯೋಜಿಸುವ ಸಂದರ್ಭದಲ್ಲಿ ಹಾಗೂ ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ಅವುಗಳ ಮಥಿತಾರ್ಥ, ಸೂಚ್ಯಾರ್ಥಗಳನ್ನು ಪಡೆಯುತ್ತಿದ್ದುದು ಕೃಷ್ಣನ ಕಾರ್ಯತಂತ್ರಗಳೊಂದಿಗೆ ಹೋ^ಲಿಸಿ ನೋಡಿಯೇ. ಸ್ವತಃ ಭಗವಾನ್ ಕೃಷ್ಣನ ಉಪದೇಶಗಳನ್ನು ಪ್ರಶ್ನಿಸಲೂ ಮತ್ತು ಪರಿಷ್ಕರಿಸಲು ಅವನು ಬಯಸುತ್ತಿದ್ದನೆಂಬುದೇ, ಅವನು ಶ್ರೀ ಕೃಷ್ಣನಿಂದ ಪಾಠಗಳನ್ನು ಚೆನ್ನಾಗಿ ಕಲಿತಿದ್ದನಿಂಬುದಕ್ಕೆ ಸ್ಪಷ್ಟ ಸಾಕ್ಷಿ.

ಇದೀಗ ಅವನ ಈ ಹೆಂಡತಿ, ನೀಲಮೇಘಶ್ಯಾಮನು, ತನಗಾಗಿ ಮಾತ್ರವೇ ಎಂದು ಅತ್ಯಂತ ಅನಿರೀಕ್ಷಿತವಾಗಿ ತನ್ನ ಹಕ್ಕು ಸಾಧಿಸುತ್ತಿದ್ದಳು.

ಅಧ್ಯಾಯ 11

ಬಹಾದ್ದೂರ್ ಖಾನನನ್ನು ಅವನ ಹೊಸ ಸ್ನೇಹಿತರು, ಅವನ ಹಿತೈಷಿಗಳು ಅಲ್ಲದೆ ಅವನ ಹಳೆಯ ಆಪ್ತಮಿತ್ರರೂ ತ್ಯಜಿಸಿದ್ದರು. ವಾಸ್ತವದ ಸಂಗತಿ ಅದಲ್ಲ. ಅವನ ದುರ್ನಾತ ಅವರನ್ನೆಲ್ಲಾ ಓಡಿಸಿತ್ತು. ಆಗಿಂದಾಗ್ಗೆ ಅವನ ಮೆದುಳನ್ನು ಆಕ್ರಮಿಸಿದ್ದ ಜ್ವರ ಮತ್ತು ವಿಷವಸ್ತುಗಳಿಂದ ಅವನು ಪಾರಾಗುತ್ತಾನೆ. ಕೆಲವೊಮ್ಮೆ ತಾನೆಲ್ಲಿದ್ದೇನೆಂಬುದು ಗೊತ್ತಾಗದೆ ಅಪ್ಪ ಎಲ್ಲಿ ಎಂದು ಕೇಳುತ್ತಿದ್ದನು. ಕಳೆದ ಮೂರು ದಿನಗಳಲ್ಲಿ ನನ್ನನ್ನು ಹೊರತುಪಡಿಸಿ ಅವನ ನಿಗಾ ನೋಡುತ್ತಿದ್ದ ವ್ಯಕ್ತಿ ಕೌಸಲ್ಯ. ತನ್ನ ತಂದೆಯೊಂದಿಗೆ ರಹಸ್ಯ ಒಪ್ಪಂದ ಏನನ್ನಾದರೂ ಮಾಡಿಕೊಂಡು ಅವನನ್ನು ನಾನು ಬಂಧಿಸಿಟ್ಟಿದ್ದೇನೇನೋ ಎಂದು ನನ್ನನ್ನು ಅನೇಕ ಸಲ ಆ ಮನುಷ್ಯ ಕೇಳಿದ. ಕೌಸಲ್ಯಳು ಅವನ ಹೆಂಡತಿಯೋ, ತಾಯಿಯೋ, ವೇಶ್ಯೆಯೋ ಗೂಢಚಾರಿಣಿಯೋ ಎಂಬುದಾವುದೂ ಆತನಿಗೆ ಖಚಿತವಿರಲಿಲ್ಲ. ಅವಳತ್ತ ದಯನೀಯವಾಗಿ ನೋಡುತ್ತಾ ನನ್ನ ಮೇಲೆ ಪ್ರಭಾವವನ್ನು ಬೀರಿ ಅವನನ್ನು ಬಂಧನದಿಂದ ಬಿಡಿಸಿಕೊಡುವಂತೆ ಬೇಡಿಕೊಂಡನು. ಅವಳು ತಲೆ ಅಲ್ಲಾಡಿಸಿ ನಾನು ಏಕಾಂತದಲ್ಲಿ ಭೇಟಿಗೆ ಸಿಕ್ಕಿದ ಕೂಡಲೇ ತನ್ನೊಂದಿಗೆ ಮಾತನಾಡುವುದಾಗಿ ತಿಳಿಸಿದಳು.

"ನಮ್ಮ ತಂದೆಯೇನೂ ತೀರಾ ಸಾಧಾರಣ ವ್ಯಕ್ತಿ ಅಲ್ಲ; ಅವರು ಗುಜರಾತಿನ ಸುಲ್ತಾನರು. ರಾಜಕುಮಾರರು ಎಷ್ಟು ರುಸುಮು ಕೇಳಿದರೂ ಅವರು ಕೊಡುತ್ತಾರೆ– ಜಹಗೀರುಗಳು, ಆನೆ–ಕುದುರೆ–ಏನು ಬೇಕು ನೀನು ಹೇಳು, ಅದನ್ನು ಅವರು ಕೊಡುತ್ತಾರೆ. ಕಾರಣ ಸಿಕಂದರ್ ಹಿರಿಯ ಮಗ ಆಗಿರಬಹುದು, ಆದರೆ ನಾನು ಅವರ ತುಂಬ ನೆಚ್ಚಿನ ಪುತ್ರ" – ಎಂದು ಅವಳಿಗೆ ತಿಳಿಸಿದನು. ಅವನು ಕೌಸಲ್ಯಳ ಕೈಹಿಡಿದುಕೊಂಡು ಅದನ್ನು ತನ್ನ ತುಟಿಗಳಿಂದ ಮತ್ತು ಕಣ್ಣಿಂದ ಚುಂಬಿಸಿದನು. "ನೀನು ಖಂಡಿತಾ ನನ್ನನ್ನು ಬಿಡುಗಡೆಗೊಳಿಸುತ್ತೀ ಅಲ್ಲವೇ"–ಎಂದು ಹೇಳುತ್ತಾ ಅಳತೊಡಗಿದ. "ನನಗೆ ನಿನ್ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ನೀನೂ ಕೈಬಿಟ್ಟರೆ, ಮಹಾರಾಜ್ ಕುಮಾರ್ ನನ್ನನ್ನು ಸಾವಿಗೆ ಗುರಿಮಾಡುತ್ತಾರೆ. ಈ ಹೊತ್ತು ಅವರು ಏನು ಮಾಡಿದರು ಅಂತ ನೋಡಿದೆಯಾ? ಅವರು ನನ್ನನ್ನು ಕೊಲ್ಲಲು ಯತ್ನಿಸಿದರು."

ಕೌಸಲ್ಯ ಕೇಳಿದಳು–"ಅವರು ಅದನ್ನು ಹೇಗೆ ಮಾಡಿದರು?" ಅದರ ಬಗ್ಗೆ ಆ ಮನುಷ್ಯ ಬಹಳ ಹೊತ್ತು ಯೋಚನೆ ಮಾಡಿ, ಅವಳ ಕಿವಿಯಲ್ಲಿ ಪಿಸುಗುಟ್ಟಿದ– "ಅವರಿಗೆ ಚಿತ್ತೂರಿನ ಮತ್ತು ಅದರ ಸುತ್ತ–ಮುತ್ತಲಿನ ಸಿಂಹ, ಸಿಂಹಿಣಿಗಳೆಲ್ಲಾ ಗೊತ್ತು. ನನ್ನನ್ನು ಕೊಲ್ಲಲು ಒಂದು ಸಿಂಹವನ್ನು ಕೊಟ್ಟರು. ಆದರೆ ನಾನು ಅದನ್ನು ನನ್ನ ಬರಿಗೈಗಳಿಂದಲೇ ಕೊಂದುಹಾಕಿದೆ."

ಇನ್ನುಳಿದ ಅರೆಪ್ರಜ್ಞಾವಸ್ಥೆಯಲ್ಲಿ ಆತ ಜೋರಾಗಿ ಅರಚಿದ. ನಾನು ಅವನ ನಾಲಿಗೆಯನ್ನು ಕತ್ತರಿಸಿಬಿಡಬೇಕೆಂದಿದ್ದೆ. ಅವನ ಗಂಟಲಿನೊಳಕ್ಕೆ ಮರದ ದೊಣ್ಣೆಯನ್ನು ತುರುಕಿಬಿಡಬೇಕೆನಿಸಿತು. ಕೌಸಲ್ಯಳು ನಿಶ್ಚಲಳಾಗಿ ಕುಳಿತು ನಾನೊಬ್ಬ ಅತಿ ಮುದ್ದಿನಿಂದ ಹಾಳಾದ ಮಗುವೆಂಬ ಭಾವ ಬರುವಂತೆ ಮಾಡಿದಳು.

ಬಹಾದ್ದುರ್ ಬೇಗನೆ ಚಿರ ನಿದ್ರೆಗೆ ಹೋಗ ತೊಡಗಿದ್ದಾನೆ. ಕಡಿಮೆ ಎಂದರೆ ಕಳೆದ ಮೂವತ್ತಾರು ಗಂಟೆಗಳಿಂದ ಅವನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾನೆ. ವೈದ್ಯರುಗಳು ದಿನವೂ ಎರಡುಸಲ ಬಂದುಹೋಗುತ್ತಿದ್ದಾರೆ, ಕಾರಣ ನಾನು ಸಿಟ್ಟಾಗುತ್ತೇನೆಂದು. ಸಮಯ ಸಮಯಕ್ಕೆ ಅವರು ಔಷಧಿಗಳನ್ನು ಬದಲಾಯಿಸುತ್ತಿದ್ದರು. ಆದರೆ ಅದು ರೋಗಿಗಿಂತ ಹೆಚ್ಚಾಗಿ ನನ್ನ ಸಲುವಾಗಿ. ನನ್ನ ತಂಗಿ ಸುಮಿತ್ರಾಳ ಪ್ರಕರಣದಲ್ಲಿ ಶಸ್ತ್ರಚಿಕಿತ್ಸಕರು ಅವಳ ಕಾಲನ್ನು ಕತ್ತರಿಸಲು ತಂದೆ ಅನುಮತಿ ಕೊಟ್ಟಿದ್ದರೆ, ಅವಳು ಖಂಡಿತಾ ಬದುಕುತ್ತಿದ್ದಳೆಂದು ನನಗೆ ಈಗ ನಂಬಿಕೆಯಿತ್ತು. ಆದರೆ ಈ ಬಹಾದ್ದುರ್ ಪ್ರಕರಣದಲ್ಲಿ ಶಸ್ತ್ರಚಿಕಿತ್ಸಕರು ಏನನ್ನು ಕತ್ತರಿಸಬೇಕಿತ್ತು. ಅವನ ಕೊಳೆಯುತ್ತಿರುವ ಕರುಳಹುರಿಯನ್ನೇ ಅಥವಾ ಹೃದಯದ ಮೇಲು ಭಾಗದಲ್ಲಿರುವ ಎದೆಯ ಗುಂಡಿಯನ್ನೇ?

ನನ್ನ ಯೋಚನೆಗಳು ಮತ್ತೆ ಸುಮಿತ್ರಾಳತ್ತ ತಿರುಗಿದವು. ಅವಳನ್ನು ಹಾಗೆಯೇ ಇರಗೊಡಿ ಎಂದು ಶಸ್ತ್ರಚಿಕಿತ್ಸಕರಿಗೆ ಅಪ್ಪ ಹೇಳಿದಾಗ, ಅವರ ಮನಸ್ಸಿನಲ್ಲೇನಿತ್ತು ಎಂದು ನನಗೆ ತಿಳಿದಿತ್ತು. ಅವಳು ಖಾಯಿಲೆಯಿಂದ ಸುಧಾರಿಸಿದ ಮೇಲೆ ಅವಳು ಕುಂಟಿಕೊಂಡು, ದೇಕಿಕೊಂಡು ತಿರುಗಾಡ್ತಾಳೆ; ಆಗ ಯಾರಾದರೂ ರಾವ್ ಅಥವಾ ರಾವಲ್ ಅವಳನ್ನು ಮದುವೆಯಾಗುವಂತೆ ತನ್ನ ಮಗನನ್ನು ಒತ್ತಾಯಿಸುತ್ತಾನೆ. ಕಾರಣ ಚಿತ್ತೂರಿನ ಸಂಬಂಧವೆಂದರೆ ತುಂಬಾ ಆಪ್ಯಾಯಮಾನವಾದ್ದು. ಇನ್ನು ಅವಳ ಗಂಡ ಅವಳನ್ನು ಕುಂಟಿ ಎಂದು ತಿಳಿದು ಅವಳ ನಡಿಗೆಯನ್ನು ಆಡಿಕೊಂಡು, ಅಣಕಿಸಿ ಅವಳಿಗೆ ಅವಮಾನ ಮಾಡುತ್ತಾನೆ. ಅವನು ಅವಳ ವಿರುದ್ಧ ತನ್ನ ದನಿಯನ್ನೇನಾದರೂ ಎತ್ತಿದರೆ, ನಾನು ನನ್ನ ದೇಶದ ಯಾವ ಮೂಲೆಯಲ್ಲಿದ್ದರೂ ಅಲ್ಲಿಂದಲೇ ಧಾವಿಸಿಹೋಗಿ ಅವನ ಮೈಚರ್ಮವನ್ನು ಸುಲಿದು ಬಿಡುತ್ತೇನೆಂದು ನಮ್ಮ ತಂದೆಗೆ ಹೇಳಬೇಕೆಂದು ನನ್ನ ಮನದಾಳದಲ್ಲಿ ಹೇಳಿಕೊಂಡಿದ್ದೆನು. ಅವಳೇಕೆ ನಮ್ಮೊಂದಿಗೆ ಉಳಿದು ಬಿಡಬಾರದಿತ್ತು? ನಾನೇ ಅವಳನ್ನು ನೋಡಿಕೊಳ್ಳುತ್ತಿದ್ದೆ.

ನಾನು ನೋಡಿಕೊಳ್ಳುತ್ತಿದ್ದೆ ನಿಜ. ಆದರೆ ಅದಕ್ಕೆ ಅರ್ಥವೇ ಇಲ್ಲ. ಕಾರಣ ಸುಮಿತ್ರ ಈಗ ಇಲ್ಲಿಲ್ಲ. ನಾನಾದರೋ ಯಾವುದು ನನ್ನನ್ನು ಒಂದೇ ಸಮನೆ ದುರುಗುಟ್ಟಿಕೊಂಡು ನೋಡುತ್ತಿದೆಯೋ, ಅದನ್ನು ನೋಡುವುದನ್ನು ತಪ್ಪಿಸಲು ಅವಳನ್ನು ಒಂದು ದೀಹದ ಹಾಗೆ ಬಳಸುತ್ತಿದ್ದೇನೆ. ಆ ಹಾಳಾದ್ದು ಮಂಗಳ ಎಲ್ಲಿ ಹಾಳಾಗಿ ಹೋಗಿದ್ದಾನೆ?

ರಜಪೂತ ಅತಿಕ್ರಮಣಕಾರರ ಮೇಲೆ ಕ್ರಮ ಕೈಗೊಳ್ಳದೇ ಇದ್ದುದಕ್ಕೆ, ಪೂರಜೀಕಿಕಾ, ನನ್ನ ವಿರುದ್ಧ ಸೇಡು ತೀರಿಸಿಕೊಳ್ಳಲು, ನನಗೆ ಪಾಠ ಕಲಿಸಲು ಆಡುತ್ತಿರುವ ಆಟವೋ ಇದು? ಗುಡ್ಡಗಾಡು ವೈದ್ಯ 'ಏಕ' ಒಂದೆರಡು ವರ್ಷಗಳ ಹಿಂದೆಯೇ ಸತ್ತುಹೋಗಿದ್ದು ನನಗೆ ಅದು ಗೊತ್ತಾಗಿಲ್ಲವೋ ಹೇಗೆ? ಬಹಾದುರ್ ಜೀವಿಸುವಂತೆ ಮಾಡಲು ನಾನು ಏನು ಬೇಕಾದರೂ ಮಾಡುತ್ತೇನೆ. ಇಷ್ಟಾದರೂ ಅವನ ಸಾವಿನಿಂದ ನನಗೆ ದೊರೆಯಬಹುದಾದ ನೆಮ್ಮದಿಯ ಭಾವನೆಯನ್ನು ಕುರಿತು ಯೋಚಿಸಿದ ಸಂದರ್ಭಗಳಿವೆ. ಈ ಅಸಹ್ಯದ ಕೊಳೆಯಿಂದ ನಾನು ಏಕ್ ದಂ ಮುಕ್ತ, ಮುಕ್ತನಾಗಿಬಿಡುತ್ತೇನೆ.

ನಾವು ತುಂಬಾ ದೊಡ್ಡದಾದ ಚಿತೆಯನ್ನು ಸಿದ್ಧಪಡಿಸುವೆವು. ನಾನು ಅಲ್ಲಿಗೆ ಸರಿಯಾದ ಸಮಯಕ್ಕೆ ಅದಕ್ಕೋಸ್ಕರವಾಗಿಯೇ ನಿಯುಕ್ತನಾದ ಮನುಷ್ಯನ ಹಾಗೆ ಹೋಗುತ್ತೇನೆ. ತುಪ್ಪವನ್ನು ಸುರಿದು ಅವನ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ತಲೆ, ಕಾಲು ಮತ್ತು ಪಕ್ಕಗಳಲ್ಲಿ ಚಿತೆಗೆ ಬೆಂಕಿ ಹೊತ್ತಿಸುತ್ತೇನೆ. ಎಷ್ಟು ದೊಡ್ಡದಾಗಿ ಎಂದರೆ, ಆಕಾಶದೆತ್ತರಕ್ಕೆ ಉರಿಚಾಚುವ ಹಾಗೆ. ನಾನು ಸ್ವಸ್ಥ ಚಿತ್ತದಿಂದ ಇಲ್ಲ ಎಂದು ಅರ್ಥಮಾಡಿಕೊಂಡೆ. ರಾಜಕುಮಾರ ಮುಸಲ್ಮಾನ. ಹಾಗಾಗಿ ನಾವು ಅವನನ್ನು ಹೂಳಬೇಕಾಗುತ್ತದೆ. ಆದರೆ ಎಷ್ಟು ಮಣ್ಣು ಸುರಿದರೂ ಆ ದುರ್ವಾಸನೆಯನ್ನು ತೊಡೆದುಹಾಕಲಾಗುವುದಿಲ್ಲ. ಗುಂಡಿಯನ್ನು ಆಳವಾಗಿ ತೆಗೆಯುವಂತೆ ಕೆಲಸಗಾರರಿಗೆ ಹೇಳುತ್ತೇನೆ. ಎಷ್ಟು ಆಳ ಎಂದು ಅವರು ಕೇಳುತ್ತಾರೆ. ನನ್ನ ಮುತ್ತಾತ ಕುಂಭಲ್‌ಗರ್‌ನಲ್ಲಿ ತೋಡಿಸಿದ್ದ ಆಳವಾದ ಶಾಶ್ವತ ಜಲಮೂಲದ ಬಾವಿಯನ್ನು ನೆನಪಿಸಿಕೊಂಡೆ. ಅದು ಇನ್ನೂರೆಪ್ಪತ್ತು ಅಡಿಗೂ ಆಳವಾದ ಬಾವಿ. ಅವರು ನಿಧಾನಕ್ಕೆ ಅಗೆಯುತ್ತಿದ್ದಾರೆ. ಬಿಳಿಯ ಚಾದರದಿಂದ ಆವೃತವಾದ ರಾಜಕುಮಾರನ ಕಳೇಬರ ಬಿಸಿಲಿನಲ್ಲಿ ಕೊಳೆಯಹತ್ತಿದೆ. ನಾನು ನನ್ನ ನಿಲುವಂಗಿಯನ್ನು ಕಳಚಿ ಹಗ್ಗಕ್ಕೆ ನೇತುಬಿದ್ದು ಕೆಳಕ್ಕಿಳಿಯುತ್ತೇನೆ. ನಾನು ಹುಚ್ಚನಂತೆ ಅಗೆಯುತ್ತೇನೆ. ಕೆಲಸಗಾರರು ನಾಚುವಂತೆ ವೇಗವಾಗಿ ಅಗೆದು ಸನಿಕೆಯಿಂದ ಮಣ್ಣು ತೆಗೆಯುತ್ತೇನೆ. ಆಗ ರಾತ್ರಿ. ಆದರೂ ನಾವು ನಿಲ್ಲಿಸುವುದಿಲ್ಲ. ಯಾರೋ ಒಂದು ಅಳತೆಯ ಟೇಪು, ಇನ್ನೂರೆಪ್ಪತ್ತು ಅಡಿ ಅಳತೆಯ ಟೇಪು ತರುತ್ತಾರೆ. ಅಗೆಯುವುದನ್ನು ನಿಲ್ಲಿಸಿ ಮೇಲೆ ಹತ್ತಿ ಬರುತ್ತೇವೆ. ಶವವನ್ನು ಗುಂಡಿಗೆ ಇಳಿಸುತ್ತೇವೆ. ಬಾವಿಯಲ್ಲಿನ ಬಕೆಟ್ಟಿನ ಹಾಗೆ ಅದು ಮುಳುಗುತ್ತಿರುವ, ಗುಂಡಿಯ ಅಕ್ಕ-ಪಕ್ಕಗಳಿಗೆ ತಾಗುತ್ತಿರುವ ಶಬ್ದಕೇಳಿಸುತ್ತದೆ. ಆಳವಾದ ಧಡ್ ಎಂಬ ಶಬ್ದ ಕೇಳಿಬರುತ್ತದೆ. ನಾವು ಹಗ್ಗವನ್ನು ಕೆಳಗೆಸೆದು ಮಣ್ಣಿನಿಂದ ಗುಂಡಿಯನ್ನು ಮುಚ್ಚತೊಡಗಿದೆವು. ಅದಕ್ಕೆ ಮೂರು ಹಗಲು ಮತ್ತು ಮೂರು ರಾತ್ರಿ ಬೇಕಾಯಿತು. ನಾನು ಗಟ್ಟಿ ಮಣ್ಣನ್ನು ಸಮಾಧಿಯ ಮೇಲೆ ಹಾಕಿ, ಅದರ ಮೇಲೆ ಆಯಾಸಗೊಂಡವನಂತೆ ಮಲಗಿದೆ. ನಾನಿನ್ನೇನು ನಿದ್ದೆ ಹೋಗಬೇಕು, ಗಾಳಿಯಲ್ಲೇನೋ ಇರುವಂತೆ ನನಗನ್ನಿಸಿತು. ನೆಲದಾಳದ ಹುತ್ತದಿಂದ ಸರ್ಪ ಹೊರ ಬರುತ್ತಿರುವಂತೆನಿಸಿತು. ಬಹದ್ದೂರ್‌ನ ಶವದ ದುರ್ನಾತ ಎಷ್ಟೊಂದು ಉತ್ಸುಕತೆಯಿಂದ ಪ್ರೀತಿಯಿಂದ ನನ್ನನ್ನು ಅಪ್ಪಲು ಮೇಲೇಳುತ್ತಿದೆ; ನಾವು ಮತ್ತೆ ಅಗೆತ ಪ್ರಾರಂಭಿಸುತ್ತೇವೆ.

ಮಂಗಳನನ್ನು ಹಿಂಬಾಲಿಸಿ ಬಂದವನು 'ಏಕ' ಅಲ್ಲದೆ ಬೇರಾರೂ ಅಲ್ಲವೆಂದೇ ನನ್ನಣಿಕೆ. ನಾನು ಅತ್ಯಂತ ಗಟ್ಟಿಯಾಗಿ- "ನೀನು ಅದೆಲ್ಲಿ ಹಾಳಾಗಿ ಹೋಗಿದ್ದೆ?" ಎಂದು ಇನ್ನೇನು ಕೇಳಬೇಕೆಂದಿದ್ದೆ. ಅದೃಷ್ಟವಶಾತ್ ಏಕ ನನ್ನನ್ನು ಸಂಪೂರ್ಣವಾಗಿ ಕಡೆಗಣಿಸಿದ. ಮಂಗಳ್ ನನ್ನನ್ನು ಪಕ್ಕಕ್ಕೆ ಕರೆದು ಪೂರಜಿಯ ವೈದ್ಯರು ಚಿಕಿತ್ಸೆ ಮಾಡಲು ಅಗತ್ಯವಿರುವ ಗಿಡಮೂಲಿಕೆಗಳಿಗಾಗಿ ದಿನವಿಡೀ ತೆಗೆದುಕೊಂಡರೆಂದು ಹೇಳಿದನು. ಹಾಗಾದರೆ ಬಿಡುಗಡೆ ಎಲ್ಲಿ ಎಂದು ನನ್ನನ್ನೇ ಕೇಳಿಕೊಂಡೆ. ಯಾವುದೂ ಬದಲಾಗಿಲ್ಲ. ಏನಾದರೂ ಬದಲಾಗಿದ್ದರೆ ರಾಜಕುಮಾರನು ಸಾವಿಗೆ ಇಪ್ಪತ್ತನಾಲ್ಕು ಗಂಟೆಗಳ ಹತ್ತಿರದಲ್ಲಿದ್ದಾನೆ, ನಾನಿನ್ನೇನು ಅಲ್ಲಿಂದ ಹೊರಡಬೇಕೆನ್ನುವಾಗ ವೈದ್ಯರಿಂದ ಕರೆ ಬಂತು. "ನಾನು ಪರೀಕ್ಷೆ ಮಾಡಿದ್ದು ಮುಗಿಯುವವರೆಗೂ ನೀವು ಹೊರಗಡೆ ಕಾಯುತ್ತಿರಿ." ನನಗೆ ಗೌರವಸೂಚಕ ಸಂಬೋಧನೆಯಿಲ್ಲದೆ ನನ್ನ ಜೊತೆ ಮಾತಾಡಿದ್ದು ಅಂದರೆ ತುಂಬ ದಿನಗಳ ನಂತರ. ರೀತಿ-ನೀತಿಗಳ ಪರಿಜ್ಞಾನವಿಲ್ಲದ ಅವನ ಮಾತಿನಿಂದ ನನಗೆ ಮುಜುಗರವಾಯಿತಾದರೂ ನಾನು ಅವನಿಗೆ ಕೃತಜ್ಞ, ನನಗೆ ಯಾರಾದರೂ ಆದೇಶ ಮಾಡುತ್ತಾರೆಂದರೆ ಬೇರಿನ್ನಾರೋ ಅಧಿಕಾರ ವಹಿಸಿಕೊಂಡಿರಬೇಕು.

'ಏಕ', ಒಂದು ಮೂವತ್ತು ನಿಮಿಷಗಳಷ್ಟು ತಗೆದುಕೊಂಡ. ಆಗೊಮ್ಮೆ ಬಹಾದುರ್‌ನ ಅರಚಾಟ ಕಿರುಚಾಟಗಳು ಕೋಟೆಯ ಗೋಡೆಗಳನ್ನು ಜಖಂಗೊಳಿಸಿದವು. ಏಕ ಸಂಕ್ಷಿಪ್ತವಾಗಿ ಉಸುರಿದ: "ರಾಜಕುಮಾರನಿಗೆ ಬಹುಥರದ ಸೋಂಕುಗಳಾಗಿವೆ: ಸಿಂಹಿಣಿಯ ಹಲ್ಲು, ಧೂಳು ಮತ್ತು ಕಸಕ್ಕೆ ಸಂಬಂಧಿಸಿದವು. ಏನೇ ಆದರೂ ಅವರ ಗಾಯಗಳನ್ನು ಶುಚಿಗೊಳಿಸಬೇಕಾಗಿತ್ತು. ಆದರೆ ಏನನ್ನು ಮಾಡಿಲ್ಲವೋ ಅದನ್ನು ಇನ್ನು ಮಾಡದೇ ಇರಲು ಆಗಲ್ಲ. ಅವರೀಗಾಗಲೇ ವಿಪರೀತ ವೇದನೆಗೆ ಒಳಗಾಗಿದ್ದಾರೆ ಮತ್ತು ವಿಪರೀತ ರಕ್ತನಾಶವಾಗಿದೆ. ಜೊತೆಗೆ ಅನೇಕ ದಿನಗಳ ಕಾಲ ಜ್ವರ ಬೇರೆ ಬಂದಿತ್ತು. ನಾನೀಗ ಅವರಿಗೆ ಪ್ರಜ್ಞೆಹೋಗಿಸುತ್ತೇನೆ, ಹಾಗೆ ಮಾಡದೇ ಹೋದರೆ ಅವರ ದೇಹದ ವ್ಯವಸ್ಥೆಗೆ ಆಗರುವ ಆಘಾತವನ್ನು ಅವರು ತಡೆದುಕೊಳ್ಳಲಾರರು. ಆಮೇಲೆ ಅವರ ಗಾಯಗಳನ್ನು ಚೊಕ್ಕಟಗೊಳಿಸುತ್ತೇನೆ. ಆತ ಬದುಕುಳಿದದ್ದೇ ಆದರೆ, ಹಾಗೂ ಅವರಿಗಾಗಿರುವ ನಂಜು ಸರಿಪಡಿಸಲಾಗದಷ್ಟು ಹಾನಿಮಾಡಿಲ್ಲದೆ ಹೋದರೆ, ಆಗ ಗಾಯಗಳಿಗೆ ಪೋಲ್ಟೀಸ್ ಹಾಕಿ ಪಟ್ಟಿಗಳನ್ನು ಕಟ್ಟುತ್ತೇನೆ."

"ಅವರು ಬದುಕುಳಿಯುವ ಸಾಧ್ಯತೆಗಳು ಎಷ್ಟು? ನನ್ನ ಲೆಕ್ಕದಲ್ಲಿ ಅದು ತೀರಾ ಕಮ್ಮಿ. ಮೇಲ್ನೋಟದಲ್ಲಿ ಶೇಕಡಾ ಇಪ್ಪತ್ತೈದು ಅಷ್ಟೇ. ಅವರ ಪರವಾಗಿರುವ ಒಂದೇ ಒಂದು ಅಂಶವೆಂದರೆ ಅವರ ಯೌವನ. ಅವರಿಗೆ ಆಗಿರೋಹಾಗೆ ಇಷ್ಟೆಲ್ಲಾ ಆಗಿ ಕತ್ತೆಯ ಹಾಗೆ ಅರಚುವ ಯಾರಿಗೇ ಆದರೂ ಕತ್ತೆಯ ಆರೋಗ್ಯವೇ ಇರಬೇಕು?"

"ನಾನು ಇದೇ ಚಿಕಿತ್ಸೆ ಮುಂದುವರೆಸಲೋ ಅಥವಾ, ಅವರ ನೋವನ್ನು ಕಡಿತಗೊಳಿಸುವ ಕಡೆಗೆ ಗಮನ ಕೊಡಬೇಕು ಎಂದು ಹೇಳುತ್ತೀರೋ?"

ಆತ ನನಗೊಂದು ಪ್ರಶ್ನೆ ಎಸೆದು ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿಯನ್ನೂ ನನಗೇ ಬಿಟ್ಟಿದ್ದಾನೆ. ದೊರೆತನದ ಅರ್ಥ ಇದೇನೇ? ನನ್ನ ಊಹೆ ಸರಿಯಾಯಿತು. "ನೋವನ್ನು ಕಡಿಮೆಮಾಡಿದರೆ ಅವರು ಗುಣವಾಗುತ್ತಾರೆಯೇ?"

"ಇಲ್ಲ. ಈಗಾಗಲೇ ನಾನು ವಿವರಿಸಿರುವ ಹಾಗೆ, ಮೊದಲನೇ ಆಯ್ಕೆ ಅದರ ಖಾತರಿಕೂಡ ನೀಡುವುದಿಲ್ಲ"

"ಅವರು ಬದುಕುಳಿಯುವ ತೀರಾ ವಿರಳ ಸಾಧ್ಯತೆ ಏನಾದರೂ ಇದ್ದರೆ, ಅದು ಮೊದಲ ಆಯ್ಕೆಯೊಳಗಡೆ ಬರುತ್ತದೆಯೇ?"

"ನೀವು ತೀರ್ಮಾನತೆಗೆದುಕೊಳ್ಳುವುದಕ್ಕೆ ನನ್ನ ಕಡೆ ನೋಡುತ್ತಿರುವ ಹಾಗಿದೆ?"

"ಇಲ್ಲ." ಎಂದು ಹೇಳಿ ಭದ್ರವಾಗಿ ಅವನ ಬಾಯಿ ಮುಚ್ಚಿಸಿದೆ. "ನಾನು ಏನಾದರೂ ತೀರ್ಮಾನ ತೆಗೆದುಕೊಳ್ಳುವುದಕೆ ಮುಂಚೆ ಎಲ್ಲ ವಾಸ್ತವಾಂಶಗಳು ನನ್ನ ಎದುರಿನಲ್ಲಿರಬೇಕು."

"ನನ್ನೆಲ್ಲಾ ತಪಾಸಣೆ ಮತ್ತು ಗಾಯಗಳನ್ನು ತೊಳೆದು ಶುಚಿಗೊಳಿಸುವ ಕ್ರಿಯೆಯಿಂದ ಅವರ ಸಾವನ್ನು ನಾನು ಇನ್ನಷ್ಟು ತ್ವರೆಗೊಳಿಸುವ ಸಾಧ್ಯತೆಗಳೇ ಹೆಚ್ಚು. ಆದರೆ ಅವರಿಗೆ ಇನ್ನೇನೂ ಈಗ ಮಾಡಲಿಕ್ಕಾಗಲ್ಲ.

"ಒಳ್ಳೆಯದು. ನಾವು ನಮ್ಮ ನಮ್ಮ ಅದೃಷ್ಟ ಹೇಗಿದೆ ನೋಡೋಣ. ಅವರ ಗಾಯಗಳನ್ನು ಶುಚಿಗೊಳಿಸಿ"

* * *

ಅರಮನೆಯ ದಾರಿಯಲ್ಲಿ ಸುಮಾರು ಐದುನೂರು ಗಜ ದೂರದಲ್ಲಿ ನನಗಾಗಿ ಕಾಯುತ್ತಿದ್ದ ಮುಲ್ಲಾನನ್ನು ಕೇಳಿದೆ–

“ಘನತೆವೆತ್ತ ರಾಜಕುಮಾರ ಬಹಾದುರ ಅವರು ಗುಣಮುಖರಾಗಲೆಂದು ನೀವು ಪ್ರಾರ್ಥನೆ ಮಾಡುತ್ತಿದ್ದೀರೇನು?”

“ಹೌದು ಮಹಾಸ್ವಾಮಿಗಳೆ, ದಿನಕ್ಕೆ ಐದುಸಲ.”

“ಅವು ಅಷ್ಟೇನೂ ಪರಿಣಾಮ ಬೀರಿದ ಹಾಗಿಲ್ಲ ಅಲ್ಲವೇ? ಬಹುಶಃ ನೀವು ಇನ್ನೂ ಹೆಚ್ಚು ಬಾರಿ ಹೆಚ್ಚು ಹೃದಯಪೂರ್ವಕವಾಗಿ ಮಾಡಬೇಕಾದೀತು.”

“ಅವೆಲ್ಲಾ ನೇರವಾಗಿ ಹೃದಯದಿಂದಲೇ ಹೊಮ್ಮಿದವು, ಮಹಾಸ್ವಾಮಿ.”

“ನಮ್ಮ ಆರೋಗ್ಯದ ಸಲುವಾಗಿ ಯಾವಾಗಲಾದರೂ ಪ್ರಾರ್ಥನೆ ಮಾಡುತ್ತೀರಾ ಮುಲ್ಲಾ?”

“ಪ್ರತಿದಿನವೂ ಮಾಡುತ್ತೇನೆ, ಮಹಾರಾಜ ಕುಮಾರರೆ.”

ಬಹುಶಃ ಅವನು ಮಾಡುತ್ತಿರಬಹುದು. ನನ್ನ ಆತ್ಮದ ಉದ್ದಾರಕ್ಕಾಗಲೀ ಅವನ ಆತ್ಮದ ಉದ್ಧಾರಕ್ಕಾಗಲೀ ಪ್ರಾರ್ಥನೆ ಮಾಡದೆ ಇರುವ ನನ್ನ ಥರ ಅಂತೂ ಅಲ್ಲ.

“ನಿಮ್ಮಿಂದ ಒಂದು ಅನುಗ್ರಹ ಬಯಸಿ ಬಂದಿದೇನೆ, ಮಹಾಸ್ವಾಮಿ.”

ನನಗಿದು ಗೊತ್ತಾಗಬೇಕಿತ್ತು. ಉಚಿತವಾಗಿ ಯಾವ ಅನುಗ್ರಹವೂ ಸಿಕ್ಕುವುದಿಲ್ಲ. ಅವನಿಗೇನು ಬೇಕಾಗಿದೆ? ಅವನ ಮಗನಿಗೆ ಸೈನ್ಯದಲ್ಲಿ ಕೆಲಸವೇ? ಅಥವಾ ಸೈನ್ಯದ ಕೆಲಸದಿಂದ ನಾಗರಿಕ ಸೇವೆಗೆ ಬದಲಾವಣೆಯೇ? ಅವನೇ ಹೇಳಲಿ ಅಂತ ಕಾದೆ.

“ಮಹಾಸ್ವಾಮಿ, ನಮ್ಮ ಮಸೀದಿ ದುರಸ್ತಿ ಇಲ್ಲದೆ ತೀರಾ ದುಃಸ್ಥಿತಿಯಲ್ಲಿದೆ. ಅದರ ಪುನರ್ನಿರ್ಮಾಣಕ್ಕೆ ರಾಜ್ಯ ಖಜಾನೆಯಿಂದ ದೇಣಿಗೆ ಕೊಡುವುದನ್ನು ಮಹಾಸ್ವಾಮಿಯವರು ಪರಿಗಣಿಸಬಹುದೇ?”

“ಇಲ್ಲ. ನನ್ನ ಉತ್ತರ ನಾನು ಅಂದುಕೊಂಡದ್ದಕ್ಕಿಂತಲೂ ತೀಕ್ಷ್ಣವಾಗಿತ್ತು. ಆದರೆ ಕಳೆದ ವರ್ಷ ಘನತೆವೆತ್ತ ಮಹಾಸ್ವಾಮಿಯವರಾದ ರಾಣ ಅವರು ಶಿವ ದೇವಸ್ಥಾನವೊಂದರ ಮತ್ತು ಜೈನ ದೇವಾಲಯವೊಂದರ ನಿರ್ಮಾಣಕ್ಕಾಗಿ ಭಾರೀ ಮೊತ್ತದ ದೇಣಿಗೆಯನ್ನು ನೀಡಿದ್ದರು.”

“ಮುಲ್ಲಾ, ನೀವು ಏನೋ ಒಂದು ಹೇಳುತ್ತೀರಿ; ಹಿಂದೂ ದೇವಾಲಯದ ಸಂರಕ್ಷಣೆಗೆ ಸಣ್ಣ ಮೊತ್ತದ ದೇಣಿಗೆಯನ್ನು ನೀಡುವುದನ್ನಾದರೂ ಒಬ್ಬ ಮುಸ್ಲಿಂ ದೊರೆ ಪರಿಗಣಿಸುತ್ತಾನೆಯೇ?” ಅವನು ಮುಖ ಜೋತುಹಾಕಿಕೊಂಡು ಹೋಗಲು ತಿರುಗಿದ.

“ಆದರೆ ಆ ವಿಷಯದ ಬಗ್ಗೆ ಸ್ವಲ್ಪ ಯೋಚನೆಮಾಡುತ್ತೇನೆ;” ನನ್ನ ಮುಖಮುರಿಯುವ ತಿರಸ್ಕಾರದ ಮಾತಿನ ನಂತರ ಅದು ಅವನ ಮನಸ್ಸನ್ನು ತಟ್ಟಿದಂತೆನಿಸಿತು.

“ಅಲ್ಲಾ ನಿಮ್ಮನ್ನು ಕಾಪಾಡಲಿ”

ವಾಪಸ್ ಹೋಗುತ್ತಿದ್ದವನ ಬೆನ್ನಿನತ್ತ ತಿರುಗಿ ಮತ್ತೆ ಕರೆದೆ– “ಮುಲ್ಲಾ ಇದೇನೂ ಷರತ್ತೇನಲ್ಲ; ಆದರೆ ನಿಮ್ಮ ಪ್ರಾರ್ಥನೆ ನನ್ನ ಸ್ನೇಹಿತ ರಾಜಕುಮಾರನನ್ನು ಗುಣಪಡಿಸಿದ್ದೇ ಆದರೆ ನನಗದು ತುಂಬಾ ಸಂತೋಷವಾಗುತ್ತೆ.”

ಈ ಏಳು ದಿನಗಳಲ್ಲಿ ನಾನು ಏಕಲಿಂಗಜಿ ದೇವಾಲಯಕ್ಕೆ ಹೋಗುತ್ತಾ ಇರುವುದು ಇದು ಏಳನೇ ಸಲ. ನಾನು ದೇವಸ್ಥಾನ ಪ್ರವೇಶ ಮಾಡುತ್ತಿದ್ದ ಹಾಗಯೇ ನನ್ನ

ಅಂಗರಕ್ಷಕರು ಜನರ ಗುಂಪನ್ನು ಲಾಠಿ ಪ್ರಹಾರಮಾಡಿ ಹಿಮ್ಮೆಟ್ಟಿಸಿದರು. ಅಲ್ಲಿಯ ಮುಖ್ಯ ಅರ್ಚಕರಿಗೆ ಅಭಿಷೇಕಕ್ಕೆ ಹಣಕೊಟ್ಟು ನನಗೆ ಸ್ವಲ್ಪ ಹೊತ್ತು ಏಕಾಂತಕ್ಕೆ ಅವಕಾಶಮಾಡಿಕೊಡಲು ಸಾಧ್ಯವೇ ಎಂದು ಕೇಳಿದೆ. ಅವನು ಅಲ್ಲಿಂದ ಹೊರಟಮೇಲೆ, ನಾನು ದೀರ್ಘದಂಡ ನಮಸ್ಕಾರ ಮಾಡಿದೆ. ನನ್ನ ಮನಸ್ಸು ಜಡವಾಗಿತ್ತು. ಶಿವ ವಿನಾಶಕಾರಕ ದೇವರು. ಆದರೆ ಹೊಸದಾಗಿ ಸೃಷ್ಟಿಸುವ ಸಲುವಾಗಿ ನಾಶಮಾಡುತ್ತಾನೆ ಎಂದು ಹೇಳುತ್ತಾರೆ. ನೀನು ನನಗೆ ಅದನ್ನು ಕೊಡು. ನಾನು ನಿನಗೆ ಇದನ್ನು ಕೊಡುತ್ತೀನಿ ಅಂತ ದೇವರೊಂದಿಗೆ ವ್ಯಾಪಾರ ವಿನಿಮಯ ಮಾಡುವುದು ನನ್ನಿಂದ ಸಾಧ್ಯವಿಲ್ಲದ್ದು. ಅಥವಾ ಅವನನ್ನು ಅಹವಾಲು ಪೆಟ್ಟಿಗೆಯನ್ನಾಗಿ ಪರಿಗಣಿಸಲೂ ನನ್ನಿಂದಾಗದು. ನಾನು ಅಡ್ಡಬಿದ್ದ ಭಂಗಿಯಲ್ಲೇ ಹದಿನೇಳು ಸಲ ಅವನ ನಾಮಸ್ಮರಣೆ ಮಾಡಿ–"ದೇವರೆ, ನಿನಗೆ ಒಳ್ಳೆಯದಾಗಲಿ ಎಂದು ನನ್ನ ಹಾರೈಕೆ. ನಮ್ಮನ್ನು ನೀನು ಚೆನ್ನಾಗಿ ಇಟ್ಟಿರುತ್ತೀ ಎಂದು ನಾನು ನಂಬಿದ್ದೇನೆ. ಬಹಾದುರ್ ನನ್ನ ಅತಿಥಿ ಹೇಗೋ ನಿನ್ನ ಅತಿಥಿಯೂ ಹೌದು. ನಾವು ಯಾವಾಗಲೂ ನಮ್ಮ ಅತಿಥಿಗಳನ್ನು ಗೌರವದಿಂದ ಮತ್ತು ಔದಾರ್ಯದಿಂದ ನಡೆಸಿಕೊಂಡಿದ್ದೇವೆ. ಈಗಲಾದರೂ ನಾವು ಅವರಿಗೆ ಇದನ್ನು ತಪ್ಪಿಸುವುದಿಲ್ಲ. ನಿನ್ನ ಆಶೀರ್ವಾದದ ಹಸ್ತ ನನ್ನ ಹಾಗೂ ಬಹಾದುರನ ತಲೆಯ ಮೇಲಿರಲಿ?"

ಏಕಲಿಂಗಜೀಯ ಸುತ್ತಾ ಹತ್ತು ಸಲ ಪ್ರದಕ್ಷಿಣೆಮಾಡಿ ಮನೆಗೆ ಹೋದೆ.

ಲೀಲಾವತಿ ಅರಮನೆಯಲ್ಲಿ ಉಯ್ಯಾಲೆಯ ಮೇಲೆ ಕುಳಿತಿದ್ದಳು. ಬೇರೇನೂ ಭಾವಿಸದೆ ನಾನು ಅವಳತ್ತ ಓಡಿದೆ. ಅವಳು ಉಯ್ಯಾಲೆಯಿಂದ ನೇರವಾಗಿ ನನ್ನ ತೋಳುಗಳಿಗೆ ಹಾರಿಕೊಂಡು ನನ್ನನ್ನು ಅಪ್ಪಿಕೊಂಡಳು. ಅವಳು ನನ್ನನ್ನು ಬಿಡವೊಲ್ಲಳು. ನಾನಾದರೂ ಅವಳನ್ನು ಬಿಡುವೊಲ್ಲೆ.

ನನ್ನ ಮಾತನ್ನು ನಂಬುವುದಾದರೆ, ಯಾವುದೇ ಹಿಂಜರಿಕೆ ಇಲ್ಲದೆ ಹೇಳಬಹುದಾದ್ದು, ಹಿಂದಿನ ಜನ್ಮದಲ್ಲಿ ನಾನೂ ಸ್ವಲ್ಪ ಒಳ್ಳೆಯದು ಮಾಡಿದ್ದಿರಬೇಕು.

"ಇಷ್ಟು ದಿವಸ ನೀನು ಎಲ್ಲಿ ಹೋಗಿದ್ದೆ?"

" ನೀವು ಕೇಳಬೇಕು. ನೀವು ಯಾವತ್ತೂ ಮನೆಗೆ ಬರಲ್ಲ. ಮತ್ತು ನನಗೆ ಹೇಳಿಕಳಿಸುವುದೂ ಇಲ್ಲ."

"ನೋಡು ಯಾರು ಶಹಬ್ಬಾಸ್‌ಗಿರಿ ಗಿಟ್ಟಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ?"

ತಪ್ಪು ನಮ್ಮದಾಗಿದ್ದಾಗ ನಾವೇ ಮೇಲುಬಿದ್ದುಬಡೋದು. "ನೀನೇ ಬರಬಹುದಾಗಿತ್ತಲ್ಲವೆ?"

"ನಾನು ಅಪ್ಪನನ್ನು– ತಾತನನ್ನು ಪ್ರತಿದಿನವೂ ಕೇಳುತ್ತಿದ್ದೆ. ನಿಮಗೆ ವಿಪರೀತ ಕೆಲಸ; ಬಿಡುವಿರಲ್ಲ. ಈಗ ತೊಂದರೆ ಕೊಡುವಂತಿಲ್ಲ, ಎಂದು ಹೇಳುತ್ತಿದ್ದರು."

"ಅವರು ಹೇಳುವ ಹಾಗೆ ನನಗೆ ಅಷ್ಟೊಂದು ಕೆಲಸ ಇರುತ್ತೆ ಅನ್ನುವುದಾದರೆ, ಅದು ಹೇಗೆ ನೀನಿವತ್ತು ಇಲ್ಲಿದ್ದೀಯಾ?"

"ನನ್ನನ್ನು ಇಲ್ಲಿಗೆ ಕರೆಸಿದ್ದಾರೆ–ದಯವಿಟ್ಟು ತಿಳಿದುಕೊಳ್ಳಿ."

ಪರದೆಯ ಹಿಂದೆ ಅವಳದೊಂದು ಮಿಂಚಿನನೋಟ ಕಾಣಿಸಿತು. ಅವಳು ಯಾತಕ್ಕೆ ಇಲ್ಲಿಗೆ ಬಂದಿದ್ದಾಳೆ? ನನ್ನ ಮತ್ತು ಕೃಷ್ಣನ ನಡುವೆ ಆಗಲೇ ಒಂದು ಬೇಲಿಯನ್ನು

ಹೊಡೆದಿದ್ದಳು. ಇದೀಗ ಅವಳು ಈ ಮಗುವಿನಿಂದಲೂ ನನ್ನನ್ನು ವಂಚಿಸುವ ಹಂಚಿಕೆಹಾಕುತ್ತಿದ್ದಾಳೆಯೇ? ನನ್ನ ಸೋದರಿ ಸುಮಿತ್ರಾಳಿಗೂ ನನಗೂ ಇರುವ ಏಕೈಕ ಜೀವಂತ ಕೊಂಡಿ ಎಂದರೆ ಲೀಲಾವತಿ. ಅವಳನ್ನು ಕಳೆದುಕೊಳ್ಳುವ ಯಾವ ಉದ್ದೇಶವೂ ನನಗಿಲ್ಲ. ನನಗೆ ನಿಜಕ್ಕೂ ಬೆದರಿಕೆ ಹಾಕಿದಂತೆನಿಸಿರಬೇಕು. ಮಗುವಿಗೆ ಕೊನೇಪಕ್ಷ ದಿನಕ್ಕೊಮ್ಮೆಯಾದರೂ ಹಾಕುವ ಅದೇ ದಡ್ಡ ಪ್ರಶ್ನೆಯನ್ನು– "ನೀನು ಯಾರನ್ನು ಹೆಚ್ಚು ಇಷ್ಟಪಡುತ್ತೀಯಾ, ನನ್ನನ್ನೋ ಅವಳನ್ನೋ?" ಹಾಕಬೇಕೆಂದಿದ್ದೆ. ಅಷ್ಟರಲ್ಲಿ ಅದೃಷ್ಟವಶಾತ್ ಲೀಲಾವತಿ ಮಧ್ಯೆ ಬಾಯಿಹಾಕಿದಳು:

"ನೀವು ನನಗೆ ಏನು ತಂದಿದ್ದೀರಿ?"

ಯೋಚನೆಮಾಡಲು ಸ್ವಲ್ಪ ಸಮಯಾವಕಾಶ ಪಡೆದುಕೊಳ್ಳುವ ಉಪಾಯವಾಗಿ ನಾನು ಅವಳಿಗೆ ಏಕಲಿಂಗಜೀಯ ಪ್ರಸಾದ ಕೊಟ್ಟೆ. ಅವಳು ಅಷ್ಟು ದೂರ ಸಿಹಿ ತಿನ್ನುವುದಕ್ಕೆ ಬಂದವಳಲ್ಲ. ಕಾರಣ, ತುಂಬ ಸಮಯದಿಂದ ನಾನು ಚಿಕ್ಕು ಹಲ್ವಾ ಹಾಗೂ ಇನ್ನಿತರೆ ಸಿಹಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದನ್ನು ನಿಲ್ಲಿಸಿದ್ದೆ.

"ನೀನು ಇಲ್ಲಿ ಕಾಯುತ್ತಿರು. ನಿನ್ನ ಕಣ್ಣುಗಳನ್ನು ಮುಚ್ಚಿಕೊ, ಅಲ್ಲಾಡಬೇಡ. ಒಂದಿಂಚು ಕೂಡ; ಅಷ್ಟೇ ಅಲ್ಲ. ಒಂದು ನೂಲಿನ ಎಳೆಯಷ್ಟೂ ಕದಲಬೇಡ."

"ಒಂದುವೇಳೆ ನಾನು ಕದಲಿದರೆ?"

"ನೀನು ಕಲ್ಲಾಗುವೆ."

ನಾನು ಅವಳನ್ನು ನೋಡುತ್ತಿದ್ದೇನೋ ಹೇಗೆ ಎಂದು ಪರೀಕ್ಷಿಸಲು ಅರ್ಧ ಕಣ್ತೆರೆದಳು.

"ಹಾಗೆಲ್ಲಾ ಮೋಸಗೀಸ ಮಾಡೋಹಾಗಿಲ್ಲ ಅಮ್ಮನವರೆ."

ಅವಳು ತಕ್ಷಣ ಕಣ್ಮುಚ್ಚಿದಳು. ನಾನು ಉದ್ಯಾನದೊಳಕ್ಕೆ ಓಡಿದೆ. ಹತ್ತು–ಹನ್ನೆರಡು ಗುಲಾಬಿ ಕಿತ್ತುಕೊಂಡೆ. ತಕ್ಷಣ ಹಿಂದಕ್ಕೆ ಓಡಿದೆ. ನನ್ನ ಆಟದ ಸಾಮಾನುಗಳನ್ನು ಕೂಡಿಟ್ಟಿದ್ದ ಮೇಲಟ್ಟದ ಕೋಣೆಗೆ ಓಡಿದೆ. ಅನೇಕ ವರ್ಷಗಳ ಹಿಂದೆ ತುಂಬಿಟ್ಟಿದ್ದ ಬಾಟಲಿನೊಳಗಿಂದ ಹತ್ತು ಗೋಲಿಗಳನ್ನು ಎತ್ತಿಕೊಂಡೆ. ಅವಳಿನ್ನೂ ಕಣ್ಣುಮುಚ್ಚಿಕೊಂಡು ಅಲ್ಲಾಡದೆ ನಿಂತಿದ್ದಳು.

"ಕಣ್ಣು ಬಿಡಲೆ?"

ನಾನು ಅವಳ ಎಡಗಣ್ಣನ್ನು ಮೊದಲು ಚುಂಬಿಸಿ ನಂತರ ಬಲಗಣ್ಣನ್ನು ಚುಂಬಿಸಿದೆ. "ಈಗ ನೀನು ಕಣ್ಣು ಬಿಡಬಹುದು." ಕಣ್ತೆರೆದ ಕೂಡಲೇ ಅವಳಿಗೆ ಹೂಗುಚ್ಛ ನೀಡಿದೆ. ಅದು ಎಂಥಾ ಅನಿರೀಕ್ಷಿತವಾದ ಉಡುಗೊರೆ ಆಗಿತ್ತೆಂದರೆ, ಅವಳು ಸ್ವಲ್ಪ ಸಂಕೋಚದಿಂದ ಯೋಚನಾಮಗ್ನಳಾದಳು.

"ಇದರರ್ಥ, ನೀವು ನನ್ನನ್ನು ಪ್ರೀತಿಸುತ್ತಿದ್ದೀರಿ, ಅಂತಲೇ?"

"ಅಯ್ಯೋ ದಡ್ಡಿ! ನಾನು ನಿನ್ನನ್ನು ಯಾವತ್ತೂ ಪ್ರೀತಿಸುತ್ತಿದ್ದೆ, ಹಾಗೂ ಯಾವತ್ತೂ ಪ್ರೀತಿಸುವೆ."

"ಎಂದೆಂದಿಗೂ?"

"ಹೌದು, ಏಳೇಳು ಜನ್ಮದ ತನಕ; ಅಷ್ಟೇಕೆ, ಇನ್ನೂ ಮುಂದಕ್ಕೂ"

"ಈಗ ನೋಡಿ, ಯಾರು ದಡ್ಡರು ಅಂತ. ನೀವಲ್ಲ–ನಾನು. ಕಾರಣ, ವಟಸಾವಿತ್ರಿ ಹಬ್ಬದ ದಿವಸ, ಮುಂದೆ ಏಳೇಳು ಜನ್ಮಕ್ಕೂ ನೀವೇ ನನ್ನ ಗಂಡನಾಗಿರಬೇಕು ಅಂತ ಹೇಳಿ, ಅರಳೀಮರಕ್ಕೆ ದಾರಿಕಟ್ಟಬೇಕಾದವಳು ನೀವಲ್ಲ; ನಾನು."

ಪರದೆಯು ಹೆಚ್ಚು ಕಡಿಮೆ ಅತಿಸೂಕ್ಷ್ಮವಾಗಿ ಸರಿಯಿತು. ಹಸುರು ಕಣ್ಣಿನವಳು ಲೀಲಾವತಿಯ ಮತ್ತು ನನ್ನ ಸಂವಾದವನ್ನು ಕೇಳಿಸಿಕೊಳ್ಳುತ್ತಿದ್ದಳು. ನನ್ನ ಮುಖದ ಮಾಂಸ ಖಂಡಗಳು ಬಿಗಿದುಕೊಳ್ಳುತ್ತಿರುವುದನ್ನು ಲೀಲಾವತಿ ನೋಡದೆ ಇರಲಿಲ್ಲ.

"ಈ ಹೂಗಳು ನಮ್ಮ ನಿಶ್ಚಿತಾರ್ಥದ ಸಂಕೇತಗಳೆಂಬುದು ನಿಜ ತಾನೆ?"

ಹೂಗಳಿರುವುದು ಅದಕ್ಕೇ ಏನು? ನನ್ನ ಹೆಂಡತಿಗೊಂದಿಷ್ಟನ್ನು ಕೊಟ್ಟರೆ ನಾವು ಮದುವೆಯಾಗಿಬಿಡುತ್ತೇವೆಯೇ?

ನನ್ನ ಮೌನದಿಂದ ಲೀಲಾವತಿ ಕಸಿವಿಸಿಗೊಂಡತಾದಳು,

"ಹೌದು."

ಅವಳು ಮುಗುಳ್ನಕ್ಕು ನನಗೊಂದು ಹೂವನ್ನು ಹಿಂತಿರುಗಿಸಿದಳು. "ಈಗ ನೋಡಿ, ಮದುವೆಯನ್ನು ಮೊಹರುಮಾಡಿ ಆಯಿತು."

"ನೀನು ಹೀಗೇ ನನ್ನನ್ನು ಚುಚ್ಚುತ್ತಾ ಇರುತ್ತೀಯೋ ಅಥವಾ ನಿನ್ನ ಎರಡನೆಯ ಉಡುಗೊರೆಯನ್ನು ನಿನಗೆ ಕೊಡುವುದಕ್ಕೆ ನನಗೆ ಅವಕಾಶ ಸಿಗುತ್ತೋ?"

ಅವಳಿಗೆ ನಾನು ಗೋಲಿಗಳನ್ನು ಕೊಟ್ಟೆ. ಅವಳ ಕಣ್ಣುಗಳು ಜಾಜ್ವಲ್ಯಮಾನವಾದ ಸಂತಸದಿಂದ ಬೆಳಗಿದವು.

"ವೀರ್‌ದೇವ್, ರಘುದೇವ್, ಅಶೋಕ್ ಸಿಂಹ, ಪ್ರತಾಪ್, ಎಲ್ಲರೂ ನರಕಕ್ಕೆ ಹೋಗಬಹುದು. ನನಗೆ ಇನ್ನು ಅವರ ಗೋಲಿಗಳು ಯಾವ ಕಾರಣಕ್ಕೂ ಬೇಕಿಲ್ಲ. ಅವರು ನನ್ನ ಜೊತೆ ಆಟ ಆಡದೆ ಇದ್ದರೆ ಒಳ್ಳೆಯದು. ಈಗ ನಾನು ನನ್ನದೇ ಆಟ ಸಿದ್ದಪಡಿಸಬಲ್ಲೆ. ನಿಮಗೆ ನಾನು ಏನು ತಂದಿದ್ದಿನಿ ಅಂತ ಕೇಳಲೇ ಇಲ್ಲ."

"ಹೇಗೂ ನೀನು ಆ ವಿಷಯ ಹೇಳೇ ಹೇಳ್ತೀಯಾ ಅಂತ ನನಗೆ ನಂಬಿಕೆಯಿದೆ."

"ಅದಾಗುತ್ತೆ. ಅದು ಏನು ಅಂತ ನಾನು ನಿಮಗೆ ಹೇಳಲ್ಲ; ಮತ್ತು ನಿಮ್ಮ ಹಾಗೆ ಬೇರೆಯವರನ್ನು ಕೀಳಾಗಿ ಕಾಣುವವರಿಗೆ ನಾನು ಅದನ್ನು ಕೊಡುವುದಿಲ್ಲ."

ನಾನು ಕ್ಷಮೆಕೋರಿದೆ–ಕರುಣಿಸಬೇಕೆಂದು ಕೇಳಿದೆ.

ಆದರೆ ಆಕೆ ನನ್ನನ್ನು ಕ್ಷಮಿಸುವಂತೇನೂ ಕಾಣಲಿಲ್ಲ.

ನಾನು ಏನಾದರೂ ಆಸಕ್ತಿ ಕಳೆದುಕೊಂಡಿದ್ದೀನೇನೋ ಎಂದು ಭಾವಿಸಿ– "ನಾನು ಅದನ್ನೆಲ್ಲಾ ಸ್ವತಃ ನನ್ನ ಕೈಯಿಂದ ಮಾಡಿದ್ದೆ."

"ಏನದು?" ನಾನು ಮುಗ್ಧವಾಗಿ ಕೇಳಿದೆ.

"ಕುಂಟೋಬಿಲ್ಲೆ ಹೆಂಚಿನಚೂರು."

"ಅಲ್ಲಿದೆ, ನೀನು ಹೇಳಿದೆ"–ಅದು ಏಟುಗಳ ಸುರಿಮಳೆಯನ್ನೇ ತಂದಿತು.

"ನೀವು ನನಗೆ ಚಳ್ಳೆಹಣ್ಣು ತಿನ್ನಿಸಿದಿರಿ."

"ಹೆಚ್ಚು ಮೂರ್ಖಳಾಗಿದ್ದು ನೀನು."

"ಇದಕ್ಕೆ ನಾನು ನಿಮಗೆ ಕೊಡುಸ್ತೀನಿ. ನಾನೂ ಪಡೆದುಕೊಳ್ಳುವೆ."

"ನಾವು ಆಟ ಆಡ್ತೀವಾ ಇಲ್ಲ, ಬರೀ ಹೀಗೇ ಹರಟೋದಾ?"

"ನೀವು ನಿಜಕ್ಕೂ ನನ್ನೊಂದಿಗೆ ಕುಂಟೋ ಬಿಲ್ಲೆ ಆಡುತ್ತೀರಾ"– ಅವಳು ತನ್ನ ಸಂತಸವನ್ನು ತಡೆದುಕೊಳ್ಳದಾದಳು. ಕಪ್ಪೆ ಚಿಪ್ಪುಗಳನ್ನು ಹೊರತೆಗೆದಳು. ಅವುಗಳಿಗೆ

ಹೊಳೆಯುವ ಸಿಂಧೂರದ ಬಣ್ಣ ಬಳಿದಿದ್ದಳು. "ಮಧ್ಯರಾತ್ರಿ ಹೊತ್ತಿನಲ್ಲಿ ನೀವು ಅವುಗಳನ್ನಿಟ್ಟುಕೊಂಡು ಆಟ ಆಡಬಹುದು. ಅಲ್ಲದೆ ಅವುಗಳು ನಿಮಗೆ ಕಾಣುತ್ತವೆ."

ನಾವು ಸಾಯಂಕಾಲ ಆಟ ಆಡುತ್ತಿದ್ದುದನ್ನು ಅವಳು ಕಿಟಕಿಯಿಂದ ನೋಡಿದಳು. ಒಂದು ಸಲ ನಾನು ಎಡವಿ ನೆಲದಮೇಲೆ ಉರುಳಿ ಬಿದ್ದಾಗ ಅವಳು ನಕ್ಕದ್ದನ್ನು ಕೇಳಿಸಿಕೊಂಡೆ ಅನ್ನಿಸಿತು.

ರಾಜಕುಮಾರನ ಖಾಯಿಲೆ ಶುರುವಾದಮೇಲೆ ನಾನು ನಿದ್ದೆಮಾಡಿದ್ದು ಅದೇ ಮೊದಲ ರಾತ್ರಿ. ರಾತ್ರಿ ಒಂದೂವರೆಯ ಹೊತ್ತಿಗೆ ನನ್ನನ್ನು ಎಬ್ಬಿಸಲಾಯಿತು. ಬುಡಕಟ್ಟಿನ ಕಡೆಯಿಂದ ನನಗಾಗಿ ಒಂದು ಸಂದೇಶವಿತ್ತು. ಆ ವೈದ್ಯನಿಗೆ ರಾಜಕುಮಾರನ ನಾಡಿ ಸಿಕ್ಕಿರಲಿಲ್ಲ. ರಾಜಕುಮಾರನಿಗೆ ವಿದಾಯ ನಮಸ್ಕಾರ ಹೇಳುವುದಾದರೆ ಅದಕ್ಕೆ ಇದು ಸಮಯ ಎಂಬುದೇ ಆ ಸಂದೇಶ.

"ಅವರು ಎಚ್ಚೆತ್ತಿದ್ದಾರೆಯೇ?"

"ಇಲ್ಲ ಮಹಾಸ್ವಾಮಿ." ನನ್ನ ಅತಿಥಿಯ ಅದೃಷ್ಟವನ್ನು ಬದಲಾಯಿಸುವಲ್ಲಿ ತನ್ನ ಅಸಾಮರ್ಥ್ಯ ಸೂಚಿಸಲು ಈ ಗೌರವಪೂರ್ಣ ಶಬ್ದವನ್ನು ನನ್ನ ಸಮಾಧಾನಕ್ಕೆ ಬಳಸಿದ್ದಾನೆಯೇ? ಅವನಿಗೆ ಪ್ರಜ್ಞೆ ಬರದೇ ಇದ್ದರೆ, ನನ್ನನ್ನು ಕರೆಸುವುದರಲ್ಲಿ ಏನು ಅರ್ಥ? ನಾನು ಅವನನ್ನು ನಿಗಾ ಮಾಡಬೇಕಾ? ಅವರ ಆತ್ಮಕ್ಕೆ ಒಂದು ಪ್ರಾರ್ಥನೆ ಸಲ್ಲಿಸುವುದೆ? ನನ್ನ ಆಲೋಚನೆಗಳು ಏನೆಂದು ಅವನಿಗೆ ಅರ್ಥವಾಗಿರಬೇಕು.

"ಒಂದೊಂದು ಸಲ ಅವರು ಏಳುತ್ತಾರೆ. ಬೇರೆಲೋಕಗಳಿಗೆ ತೆರಳುವ ಮುಂಚೆ ಶುದ್ಧಾಂಗವಾಗಿ ಸ್ವಸ್ಥವಾಗಿರುತ್ತಾರೆ."

ನನಗೆ ಗೊತ್ತಿಲ್ಲವೇ ಅದು? ಒಂದು ಸಲ ಸಾಕು. ನಾನು ಅವನಿಗೆ ಏನು ಹೇಳಲಿ? ರಾಜಕುಮಾರ ಆ ದಿನವಾಗಲೀ ಅದರ ಮರುದಿನವಾಗಲೀ ಎಚ್ಚರಾಗಲಿಲ್ಲ.

ಮತ್ತೆ ಹೋಗಿ ಮಲಗುವುದರಲ್ಲಿ ಏನೂ ಅರ್ಥವಿಲ್ಲ ಅಂತ ಅನ್ನಿಸಿತು. ಗಂಭೀರಾ ನದಿಯಲ್ಲೊಂದು ಮುಳುಗು, ಥೂ, ನೀರು ತುಂಬ ತಣ್ಣಗಿತ್ತು, ಅಥವಾ ಬಹುಶಃ ನನ್ನ ದೇಹಸ್ಥಿತಿ ಅಷ್ಟು ಉತ್ತಮವಾಗಿಲ್ಲದೆ ಇರಬಹುದು. ನಾನು ಲಕ್ಷ್ಮಣಸಿಂಹಜೀಯವರ ಕಛೇರಿಗೆ ಹೋದೆ.

ರಾಜಾ ಪೂರಜೀಕಿಕಾ ಅವರ ದೂರಿನ ಬಗ್ಗೆ ಅವರೊಂದಿಗೆ ಒಂದುತಿಂಗಳ ಹಿಂದೆ ಚರ್ಚಿಸಿದ್ದೆ. ಆದರೆ ನಾನು ಆ ವಿಷಯದಲ್ಲಿ ಮುಂದುವರೆದಿರಲಿಲ್ಲ. ಗಡಿನಾಡು ಪ್ರದೇಶಗಳಿಂದ ನಮ್ಮ ಕುಲೀನ ಜನರನ್ನು ಚಿತ್ತೂರಿಗೆ ಕರೆಸಿಕೊಂಡು ಏನಾಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸುವಂತೆ ಅವರಿಗೆ ಹೇಳಬೇಕು ಎಂಬುದು ಅವರ ಅಭಿಪ್ರಾಯ.

"ಅವರುಗಳು ಒಂದುವೇಳೆ ಜಮೀನನ್ನು ಅತಿಕ್ರಮಿಸಿದ್ದು ನಿಜವೇ ಆಗಿದ್ದರೆ– ಈ ಆಗಿದ್ದರೆ ಅನ್ನುವುದೊಂದು ದೊಡ್ಡ ರೆ–ಅದನ್ನು ಅವರು ಒಪ್ಪಿಕೊಳ್ತಾರೆ ಅನ್ತೀರಾ?"

"ಅವರು ಬಹಳ ನಿಯತ್ತಿನ ಜನ ಅಂತಲೇ ಅಂದುಕೊಂಡಿದ್ದೀನಿ. ಒಂದುವೇಳೆ ಅವರು ಸುಳ್ಳನ್ನೇ ಹೇಳಿದರೂ ಅವರು ತಮಗೇ ಗೊತ್ತಿಲ್ಲದೆ ತಪ್ಪು ಮಾಡಿಯೇ ತೀರಬೇಕು."

"ಅವರು ನಿಯತ್ತಿನ ಮನುಷ್ಯರಾಗಿದ್ದರೆ, ಭಿಲ್ಲರ ಜಮೀನುಗಳನ್ನು ಅವರು ಬಲವಂತವಾಗಿ ಕಸಿದುಕೊಳ್ಳಲ್ಲ. ವಾಸ್ತವ ಸಂಗತಿಗಳನ್ನು ಪರಿಶೀಲಿಸಿದರೆ ರಾಜಾ ಪೂರಜಿ ಈ ಒಂದು ದೂರನ್ನು ಎತ್ತಿರಲಾರರು. ಆದರೆ ಇಲ್ಲಿ ತೀರಾ [illegible]ನ ಇನ್ನೊಂದು ವಿಷಯ ಇದೆ:

ನಾವಿಬ್ಬರೂ ಬಿಗಿಯಾಗಿಲ್ಲದೆ ಇರುವವಷ್ಟೇ ಅಲ್ಲದೆ ಅವರು ಸ್ನೇಹವನ್ನು ನೀಡುವುದಾದರೆ, ನಾವು ಅವರ ಸ್ನೇಹವನ್ನು ಮಾನ್ಯಮಾಡುತ್ತೇವೆ ಎನ್ನುವ ಸಂಕೇತವನ್ನು ನೀಡಬೇಕು ಎನ್ನುವುದು ನನ್ನ ಇಷ್ಟ."

"ಇಷ್ಟಾದರೆ ಬೇಕಾದಷ್ಟಾಯಿತು. ಆದರೆ ಅಷ್ಟೊಂದು ಅವಸರ ಏಕೆ? ಆ ಭಿಲ್ಲರ ದೊರೆ ನಿಮ್ಮ ಗುರುಕುಲದ ಸ್ನೇಹಿತ ಎಂದೇ?"

"ಅಲ್ಲ. ಚಾರಣರು ಮತ್ತು ಇತರ ಗಾಯಕರು ಹಾಡುವ ವೀರಕತೆಗಳನ್ನು ಕೇಳಿ ನಾನು ದಿಗ್ಭ್ರಮೆಗೊಂಡಿದ್ದೇನೆ. ಕಳೆದ ಐವತ್ತು ವರ್ಷಗಳಲ್ಲಿ ಮಿತಿಮೀರಿದ ದುರಾಶೆಯಿಂದ ಕೂಡಿದ ಒಬ್ಬ ಅಲ್ಪಕಾಲದ ಜಹಗೀರುದಾರನಿಂದ ಪ್ರಚೋದಿತವಾದ ಕ್ಷುದ್ರವಾದ ಗಡಿವಿವಾದವಷ್ಟೇ ಕಾರಣವಾಗಿ ಅದೆಷ್ಟು ಯುದ್ಧಗಳಾಗಿವೆ ಅಂತ ನಿಮಗೆ ಗೊತ್ತೇನು? ನಾವು ಸ್ನೇಹ ಮಾಡಿಕೊಂಡು ಉಳಿಸಿಕೊಳ್ಳ ಬಯಸುವ ಪ್ರತಿಯೊಬ್ಬ ರಾಜನು ನಮಗಿಂತ ಕಡೇಪಕ್ಷ ಒಂದು ಯುದ್ಧ ಕಡಿಮೆ ಗೆದ್ದಿರಬೇಕು."

ಅವರು ಒಂದು ನಿಮಿಷ ಮೌನವಾಗಿದ್ದರು.

"ನಾನು ಹಾದಾ ಪರ್ವತ್‌ಗೆ ಹೇಳಿ ಕಳಿಸುತ್ತೇನೆ."

"ಹಾಗೆ ಮಾಡುವುದರಿಂದ ನಾವು ಆಟವನ್ನು ಬಿಟ್ಟುಕೊಟ್ಟಹಾಗೆ ಆಗುವುದಿಲ್ಲ್ವೇ?"

"ನನಗೂ ಸ್ವಲ್ಪ ಮನ್ನಣೆ ಕೊಡಿ ಮಹಾರಾಜ್ ಕುಮಾರ್ ಅವರೆ. ತಪ್ಪು ಮಾಡಿರುವ ಜಮೀನುದಾರರನ್ನೆಲ್ಲಾ ಅವನು ಭೇಟಿ ಮಾಡಲಿ; ಭೂಕಬಳಿಕೆ ಮತ್ತು ಭೂ ಅತಿಕ್ರಮಣದ ಬಗ್ಗೆ ಸಹಾನುಭೂತಿ ತೋರಿಸಿ ಗುಟ್ಟಾಗಿ ನಮಗೆ ಬೇಕಾಗಿರುವ ಸಮಾಚಾರವನ್ನೆಲ್ಲಾ ಹೊರಡಿಸುತ್ತಾನೆ. ಏನು ಮಾಡಬೇಕು ಅನ್ನುವುದನ್ನು ಸರಿಯಾಗಿ ಹೇಳಿಕೊಟ್ಟರೆ, ಅವನು ಸಮರ್ಥವಾಗಿ ಮಾಡುತ್ತಾನೆ. ಅವನು ನಾಳೆ ಹೊರಡುತ್ತಾನೆ."

ಅವರು ಹೇಳಿದ್ದು ಸರಿ. ಈ ಕೂಡಲೇ ವಿಚಾರಣಾ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಾ ಇದ್ದೀನಿ ಹಾಗೂ ಅದರ ಪ್ರಗತಿಯನ್ನು ತಿಳಿಸುತ್ತಾ ಇರುತ್ತೇನೆ ಎಂದು ಒಬ್ಬ ಹರಿಕಾರನ ಮುಲಕ ಸುದ್ದಿ ಕಳಿಸಿದೆ.

ಹತ್ತು ಗಂಟೆಗೆ ರಾವ್ ಜಯಸಿಂಹ ಬಲೇಚ್ ಅವರೊಂದಿಗೆ ಒಂದು ಸಮಾಲೋಚನೆ ಇತ್ತು. ಒಂದು ವಿಷಯಕ್ಕೆ ನನಗೆ ಕೃತಜ್ಞತೆ ವ್ಯಕ್ತಪಡಿಸಿದರು. ಕಬ್ಬಿಣ ಹದವಾಗಿದ್ದಾಗಲೇ ಬಡಿಯಬೇಕು ಎಂದುಕೊಂಡೆ. ಅವರ ಕುಟುಂಬದ ಬಗ್ಗೆ, ಅದರಲ್ಲೂ ಮುಖ್ಯವಾಗಿ ಅವರ ಗಂಡುಮಕ್ಕಳ ಬಗ್ಗೆ ವಿಚಾರಿಸಿ ನೇರವಾಗಿ ವ್ಯವಹಾರದ ವಿಷಯಕ್ಕೆ ಬಂದೆ.

"ನೀವು ಕೊಟ್ಟ ವರದಿಯನ್ನು ನಾನು ಓದಿದ್ದೇನೆ. ನಮ್ಮ ನೆರೆಯ ರಾಜ್ಯಗಳಲ್ಲಿಯ ಶಸ್ತ್ರಾಸ್ತ್ರಗಳ ತಾಂತ್ರಿಕತೆಯ ಸ್ಥಿತಿಗತಿಗಳ ಬಗ್ಗೆ ಮತ್ತು ಸಲಕರಣೆಗಳ ಬಗ್ಗೆ ನಮಗೆ ತಿಳಿದರೆ, ಕೊನೇಪಕ್ಷ ನಾವು ಅವರ ಸಮಕ್ಕೆ ನಿಲ್ಲಬಹುದು ಎಂಬ ನಿಮ್ಮ ವಿಶ್ಲೇಷಣೆಯನ್ನು ನಾನು ಒಪ್ಪುತ್ತೇನೆ. ಅನೇಕ ಸಂದರ್ಭಗಳಲ್ಲಿ ನಮ್ಮ ಆನೆಗಳು ನಮ್ಮ ಬೆಂಬಲಕ್ಕಿರುವ ಬಹಳ ಪ್ರಮುಖವಾದ ಅಂಶ ಎಂಬುದು ಸಾಬೀತಾಗಿದೆ. ಆದರೆ ಸೈನಿಕ ವಿದ್ಯಾಲಯದಲ್ಲಿ ನೀವು ನಮಗೆ ಏನು ಹೇಳಿಕೊಟ್ಟಿದ್ದಿರಿ ಎನ್ನುವುದು ನಿಮಗೆ ನೆನಪಿದೆಯೇ? ಯುದ್ಧತಂತ್ರಜ್ಞಾನದಲ್ಲಿ ಕಂಚಿಗೂ ಕಬ್ಬಿಣಕ್ಕೂ ಇರುವ ವ್ಯತ್ಯಾಸ ಒಂದು ಅದ್ಭುತ ನೆಗೆತ, ಅವುಗಳ ನಡುವಿನ ವ್ಯತ್ಯಾಸ ಅದಕ್ಕಿಂತ ಇದು ಎಷ್ಟರ-ಮಟ್ಟಿಗೆ ಮೇಲು ಎನ್ನುವುದಲ್ಲ; ಆದರೆ ಅದು ಬಹುಮಟ್ಟಿಗೆ ವಿಭಿನ್ನ ಜಾತಿಗಳ ನಡುವಿನ ವ್ಯತ್ಯಾಸ. ಶತ್ರುಗಳಿಬ್ಬರೂ ಖಡ್ಗಗಳಿಂದ ಹೋರಾಡಿದರು. ಆದರೆ ಕಬ್ಬಿಣದ ಖಡ್ಗಗಳೆದುರು ಕಂಚಿನಖಡ್ಗಗಳು

ಮಣ್ಣಿನಷ್ಟು ಮೃದುವಾಗಿದ್ದವು. ವಾಯುವ್ಯದ ಕಡೆಯಿಂದ ಟರ್ಕಿ ಮತ್ತು ಅದರಾಚೆಯಿಂದ ಇಲ್ಲಿಗೆ ತಲುಪಿರುವ ವರದಿಗಳಿಂದ ತಿಳಿದು ಬಂದಿರುವ ಪ್ರಕಾರ, ಯುದ್ಧ ಸಾಮಗ್ರಿಗಳಿಗೆ ಸಂಬಂಧಿಸಿದ ತಂತ್ರಜ್ಞಾನದಲ್ಲಿ ಅತ್ಯಂತ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿರುವಂತೆ ಕಂಡುಬರುತ್ತಿದೆ. ನಾನು ಫಿರಂಗಿಗಳ ವಿಷಯ ಮಾತನಾಡುತ್ತಿಲ್ಲ. ಅವರ ಹತ್ತಿರ ಈಗ ತುಂಬ ದೊಡ್ಡ ದೊಡ್ಡ ಬಂದೂಕುಗಳಿವೆ ಎಂದು ಕೇಳಿದ್ದೇನೆ. ಅವಕ್ಕೆ ಏನೆಂದು ಕರೆಯುತ್ತಾರೆ ಎನ್ನುವುದು ನನಗೆ ಖಚಿತವಿಲ್ಲ. ಆದರೆ ಎರಡು ಶತ್ರುಪಕ್ಷಗಳ ಸೈನ್ಯಗಳು ಪರಸ್ಪರ ಕೈ ಕೈ ಮಿಲಾಯಿಸಿ ಹೋರಾಡುವುದಕ್ಕೆ ಮುಂಚೆ ಕೇವಲ ಹತ್ತು-ಹನ್ನೆರಡು ಬಂದೂಕುಗಳು ಭಾರೀ ವಿನಾಶವನ್ನು ಮಾಡಿಬಿಡಬಹುದು."

"ಹೊಸ ಯುದ್ಧೋಪಕರಣ ಯಾವ ರೀತಿಯದು ಅನ್ನುವುದರ ಪರಿಚಯ ನಮಗಾಗದೇ ಇದ್ದರೆ, ನಮ್ಮ ಪಾಡು, ಕಬ್ಬಿಣದ ಖಡ್ಗದೊಂದಿಗೆ ಹೋರಾಡಬೇಕಾದ ಕಂಚಿನ ಖಡ್ಗ ಹಿಡಿದ ಸೈನಿಕರ ಪಾಡಾಗುತ್ತದೆ."

ಅವರು ನನ್ನ ಮಾತುಗಳನ್ನು ಅತ್ಯಂತ ಗೌರವದಿಂದ ಗಮನವಿಟ್ಟು ಕೇಳಿದರು. ನಾನು ಎಷ್ಟೇ ಆದರೂ ಮಹಾರಾಜ ಕುಮಾರನಲ್ಲವೇ. ಆದರೆ ಅವರು ನನ್ನನ್ನು ಪರಿಹಾಸ್ಯಮಾಡುವುದು ನನಗೆ ಇಷ್ಟವಿರಲಿಲ್ಲ.

"ಇದಕ್ಕೆಲ್ಲಾ ಸಮಯ ಹಿಡಿಸುತ್ತೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲ ಮಾಹಿತಿಯನ್ನು ಎಷ್ಟು ಬೇಗ ತರಿಸಬಹುದು ಎಂದು ನೀವು ಅಂದುಕೊಂಡಿದ್ದೀರಿ? ಅದರ ಹೆಸುಗಳು, ನಕ್ಷೆಗಳು, ಗುರಿ ಪರಿಣಾಮಕಾರಿಯಾಗಲು ಇರಬೇಕಾದ ದೂರ ಎಷ್ಟು, ಬಂದೂಕಿನ ಮದ್ದನ್ನು ತಯಾರಿಸುವುದು ಹೇಗೆ ಮತ್ತು ಬಂದೂಕುಗಳನ್ನು ತಯಾರಿಸುವುದು ಹೇಗೆ? ಅದರ ಲೋಹವಿದ್ಯೆ ಅದರ ತಯಾರಿಕಾ ನೈಪುಣ್ಯ ತಿಳಿದಿರುವವರು ಯಾರು? ಮತ್ತು ಅದರ ಮಾರಾಟ ಯಾರು ಮಾಡುತ್ತಾರೆ? ಅದರ ಸ್ಪರ್ಧಾತ್ಮಕ ಖರೀದಿ ಬೆಲೆಗಳು ಏನು, ಕೊನೆಯದಾಗಿ ಅದರೆ, ಮುಖ್ಯವಾಗಿ ನಮ್ಮವರಿಗೆ ತರಬೇತಿಕೊಡಲು ತಜ್ಞರನ್ನು ಮತ್ತು ಬೋಧಕರನ್ನು ಎಲ್ಲಿಂದ ನೇಮಿಸಿಕೊಳ್ಳಬಹುದು?"

ಅವರು ದಿಗ್ಭ್ರಮೆಗೊಂಡರು. ನನ್ನದು ಸ್ವಲ್ಪ ಅತಿಯಾಯಿತು; ನಾನು ಬಹುಶಃ ಹಂತ ಹಂತವಾಗಿ ಆ ಬಗ್ಗೆ ಹೋಗಬೇಕಾಗಿತ್ತು.

"ನಿಮ್ಮ ತಂದೆಯವರು ಇದನ್ನೆಲ್ಲಾ ಅನುಮೋದಿಸುವರೇ?"

"ತಂದೆಯವರು ಅನುಮೋದಿಸಲಿ, ಬಿಡಲಿ, ಆದರೆ ಈ ಹೊಸ ತಂತ್ರಜ್ಞಾನ ನಮ್ಮೆಲ್ಲರನ್ನೂ ಹಿಂದೆಹಾಕಿ ಮುಂದೆಹೋಗುತ್ತದೆ. ತಂತ್ರಜ್ಞಾನದ ರೀತಿಯೇ ಹಾಗೆ. ನಾವು ಕನಿಷ್ಠವಾಗಿ ಮಾಡಬಹುದಾದ್ದು ಎಂದರೆ ನಾವು ಹಿಂದೆ ಬೀಳದೆ ಅದಕ್ಕೆ ಸರಿಮಿಗಿಲಾಗಿ ಇರುವಂಥದು. ನಾವು ಹಾಗಿಲ್ಲದೆ ಹೋದರೆ ಬೇರೆ ಯಾರಾದರೂ ಹಾಗೆ ಮಾಡೇ ಮಾಡುತ್ತಾರೆ. ಆಮೇಲೆ ಅಲ್ಲಿಗೆ ನಮ್ಮ ಸರ್ವನಾಶ." ಈ ಚರ್ಚೆಯನ್ನು ಮುಕ್ತಾಯಗೊಳಿಸುವ ಕ್ರಮವಾಗಿ ಈ ಯೋಜನೆಗೆ ಅಂತಿಮ ಗಡುವನ್ನು ಗೊತ್ತುಮಾಡಿ, ಅದರ ಗಂಭೀರತೆಯನ್ನು ಒತ್ತಿ ಹೇಳಬೇಕೆಂದು ತೀರ್ಮಾನಿಸಿದೆ. "ಈ ಯೋಜನೆಗೆ ನಾನು ರಕ್ಷಣಾ ಆಯ-ವ್ಯಯದಲ್ಲಿ ಮೂವತ್ತು ಸಾವಿರ ಟಂಕಾಗಳನ್ನು ಮೀಸಲಿಟ್ಟಿದ್ದೇನೆ. ಎರಡು ತಿಂಗಳೊಳಗಾಗಿ ಇದರ ಬಗ್ಗೆ ಒಂದು ಪೂರ್ವಭಾವೀ ವರದಿ ಮತ್ತು ಐದು ತಿಂಗಳೊಳಗಾಗಿ ಒಂದು ವಿಸ್ತೃತ ವರದಿ ನನ್ನ ಕೈಸೇರಬೇಕೆಂದು ನನ್ನ ಇಚ್ಛೆ. ಇದನ್ನು ಎಲ್ಲಕ್ಕಿಂತ ಹೆಚ್ಚಿನ ಆದ್ಯತೆಯದಾಗಿ ಪರಿಗಣಿಸಬೇಕೆಂಬುದು. ನನ್ನ ಸೂಚನೆ."

ಅವರು ಆ ಕಡೆ ಹೋದಮೇಲೆ ನಾನು ಅಂಚೆ ಪತ್ರಗಳನ್ನು ತೆರೆದೆ.; ರಾಜ್ಯ ಖಜಾನೆಗೆ ಬರಬೇಕಾದ ಹಣಕ್ಕೆ ಸಂಬಂಧಿಸಿದಂತೆ ಎರಡು ಪತ್ರಗಳಿದ್ದವು. ಒಂದು ಸಿರೋಹಿಯವರದಾಗಿತ್ತು. ತಡವಾದದ್ದಕ್ಕೆ ವಿಷಾದ ಸೂಚಿಸಿದ್ದು, ಮುಂದಿನ ಎರಡು ವಾರಗಳಲ್ಲಿ ಹಣವನ್ನು ನೀಡುವುದಾಗಿ ತಿಳಿಸಲಾಗಿತ್ತು. ಇನ್ನೊಂದು ಪತ್ರ ಮಂದಾಸೌರನಿಂದ ಬಂದಿದ್ದು, ಅತಿಯಾದ ವಿನಯ ಸೌಜನ್ಯಗಳಿಂದ ಕೂಡಿತ್ತು. ಅವರು ಹಣ ಕೊಡುವುದು ನಿಲ್ಲಿಸಿದ್ದಾರೆ ಅಂತ ಗೊತ್ತಾಗಿದೆ. ಎಲ್ಲರೂ ಮಾಮೂಲಿನಂತೆ ಹೇಳುವ ಹಾಗೆ–ಮುಂಗಾರು ಕೈಕೊಟ್ಟತು, ಹಾಗಾಗಿ ಬೆಳೆ ಇಲ್ಲ. ಜೊತೆಗೆ ಈಚಿನ ಯುದ್ಧಗಳ ದೆಸೆಯಿಂದಾಗಿ ಖಜಾನೆ ಖಾಲಿಯಾಗಿದೆ. ನಾವು ಅವರು ಕೊಡಬೇಕಾಗಿರುವ ಸಾಲದ ಹಣ ಹಿಂತಿರುಗಿಸಲು ಬೇರೊಂದು ದಿನಾಂಕ ನಿಗದಿಪಡಿಸಲು ಸಾಧ್ಯವೇ? ಹಾಗೂ ಬಡ್ಡಿಯನ್ನು ಮನ್ನಾ ಮಾಡುವರೆ? ಎಂದಿತ್ತು. ಬೇರೆ ಏನೂ ಮಾರ್ಗವಿಲ್ಲ. ಅವರಿಗೆ ನಾಳೆ ನಾನು ಬರೆದು ಹಾಕುತ್ತೇನೆ. ಮುಂಗಾರು ಪ್ರಾರಂಭದಲ್ಲಿ ಕೈಕೊಟ್ಟತ್ತು. ಆದರೆ ಆಮೇಲೆ ತುಂಬಾ ಚೆನ್ನಾಗಿ ಬಂತು. ಹಾಗಾಗಿ ಮುಂಗಾರು ಬೆಳೆ ತುಂಬಾ ಚೆನ್ನಾಗಿಯೇ ಇರುತ್ತೆ. ಅಲ್ಲದೆ ಅವರು ಹೇಳಿದ ಯುದ್ಧಗಳೆಂಬುವು ಒಂದೂವರೆ ವರ್ಷದ ಹಿಂದೆ ನಡೆದಂಥವು. ಅವರ ವಿಷಯಕ್ಕೆ ನಮಗೆ ಇರುವ ವಿಶೇಷ ಗೌರವದ ಕಾರಣದಿಂದಾಗಿ ಅವರಿಗೆ ಅರವತ್ತು ದಿನಗಳ ರಿಯಾಯಿತಿ ಅವಧಿಯನ್ನು ಕೊಡುವೆವು.

ತಂದೆಯವರಿಂದ ಒಂದು ಪತ್ರವಿತ್ತು. ಮಾಳವದ ಮಹಮ್ಮದ್‌ಷಾ ಖಿಲ್ಜಿ ಮತ್ತೆ ತುಂಬಾ ಆತಂಕಕ್ಕೊಳಗಾಗುತ್ತಾ ಇದ್ದಾನೆ ಎಂದು ಕೇಳಿರುವುದಾಗಿಯೂ ನಾವು ಅವರ ಕೆಲವು ಪತ್ರಗಳನ್ನು ತಡೆಹಿಡಿದು ಓದಿ, ಮತ್ತೆ ಮೊಹರುಹಾಕಿ ಅದು ತಲುಪಬೇಕಾದ ಕಡೆಗೆ ಕಳಿಸಿರಬಹುದೆ ಎಂದು ಆಶ್ಚರ್ಯಪಟ್ಟಿರುವುದಾಗಿಯೂ ತಿಳಿಸಿದ್ದರು. ಜೊತೆಗೆ ರಾಜ್ಯದ ಈಶಾನ್ಯ ಭಾಗದಲ್ಲಿ ಶತ್ರುಗಳ ಸ್ಥಾನಬಲ ಮೊದಲಾದವುಗಳನ್ನು ತಿಳಿದುಕೊಳ್ಳಲು ಅಲ್ಲಿಗೆ ಹೋಗಿ ನಡೆಸುತ್ತಿರುವ ಕಾರ್ಯಾಚರಣೆ ಬಗ್ಗೆ ಕೂಡ ವರದಿಗಳನ್ನು ಕಳಿಸಲು ಸಾಧ್ಯವೇ ಎಂದಿತ್ತು. ಅವರಮನಸ್ಸಿನಲ್ಲಿ ಏನಿತ್ತು? ದೆಹಲಿಯ ಸುಲ್ತಾನ್ ಇಬ್ರಾಹಿಂ ಲೂದಿ ಖಂಡಿತವಾಗಿಯೂ ಆ ಭಾಗದ ಮೇಲೆ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಿದ್ದ. ಹಾಗಾದರೆ ತಂದೆಯವರು ಆತನ ವಿರುದ್ಧ ದಂಡೆತ್ತಿ ಹೋಗಲು ಯೋಚಿಸುತ್ತಿದ್ದಾರೆಯೇ?

ತಂದೆಯುವರಿಗೆ ವರದಿ ಕೊಡಲೇಬೇಕಾಗಿತ್ತು. ಅವರಿಗಿಂತ ಹಿಂದೆ ಇದ್ದ ರಾಜರುಗಳಂತಲ್ಲದೆ ಇತರೆ ರಜಪೂತ ಸಂಸ್ಥಾನಗಳೊಂದಿಗಿನ ಹಾಗೂ ರಾಜರುಗಳೊಂದಿಗಿನ ಅವರ ಸಂಬಂದ ಅನುಕರಣೀಯವಾಗಿತ್ತು. ಎಷ್ಟೇ ತೀವ್ರವಾಗಿ ಪ್ರಚೋದಿಸಿದರೂ, ಅವರೊಂದಿಗೆ ಸೈನಿಕ ಸಂಘರ್ಷವನ್ನು ತಪ್ಪಿಸುತ್ತಿದ್ದರು. ನಮ್ಮ ತಾತ ರೈಮಲ್ ಹಾಗೂ ನಮ್ಮ ದೊಡ್ಡಪ್ಪ ಪೃಥ್ವೀರಾಜ್ ಅವರ ಪತ್ರವ್ಯವಹಾರಗಳು ಮತ್ತು ಬೇರೆ ದಾಖಲೆಗಳನ್ನು ನೋಡಿದರೆ ಸಾಕು. ಅವರ ರಕ್ತ ಸಂಬಂಧಿಗಳೊಂದಿಗೆ ಸದಾ ಯುದ್ಧಗಳಲ್ಲಿ ತೊಡಗಿರುತ್ತಿದ್ದರೆಂಬುದು ತಿಳಿಯುತ್ತದೆ. ತಂದೆಯವರಿಗೇನಾದರೂ ಒಂದುವೇಳೆ ಇನ್ನೊಂದು ನಲವತ್ತು ವರ್ಷ ಅಳ್ವಿಕೆ ನಡೆಸುವ ಅವಕಾಶ ಸಿಕ್ಕಿದ್ದೇ ಅದರೆ, ರಜಪೂತರಲ್ಲಿ ಶಾಂತಿ ನೆಲೆಸುವಂತೆ ಮಾಡುವಲ್ಲಿ ಅಷ್ಟುಮಾತ್ರವಲ್ಲ, ಅದಕ್ಕಿಂತಲೂ ಮೂಲಭೂತವಾಗಿ, ಮನಸ್ಸು ಮಾಡಿದರೆ, ನಾವು ಜೀವಂತವಾಗಿದ್ದೀವಿ ಎಂದು ದೃಢಪಡಿಸಲು ಸಾಯುವವರೆಗೂ ಒಬ್ಬರಿಗೊಬ್ಬರು ಹೋರಾಡಬೇಕಾದ ಅಗತ್ಯವಿಲ್ಲ ಎಂದು ಸಾಧಿಸಿತೋರಿಸುವಲ್ಲಿ ಅವರೊಂದು ಪೂರ್ವನಿದರ್ಶನವನ್ನೇ ನೆಲೆಗೊಳಿಸುತ್ತಾರೆ. ಅಲ್ಲದೆ ಶಾಂತಿ ನೆಲೆಸುವುದರ ಫಲವಾಗಿ ಬರುವ ಲಾಭಗಳನ್ನು ರಾಜ್ಯದ ಪ್ರಗತಿಯಲ್ಲಿ ತೊಡಗಿಸಬಹುದು ಎಂಬುದಕ್ಕೆ ಪೂರ್ವನಿದರ್ಶನವನ್ನು ನೆಲೆಗೊಳಿಸುತ್ತಾರೆ.

ನನ್ನ ಈ ಆಲೋಚನೆಗಳನ್ನು ಯಾರಿಗೇ ಆದರೂ, ಕೊನೇಪಕ್ಷ ತಂದೆಯವರಿಗಾದರೂ ಹೇಳುವ ಧೈರ್ಯವನ್ನು ಯಾವತ್ತೂ ಮಾಡುವುದಿಲ್ಲವೆಂಬುದೊಂದು ವ್ಯಂಗ್ಯವಲ್ಲವೇ? ಅವು ಸ್ಪಷ್ಟವಾಗಿ ಸುಳ್ಳೆಂಬಂತೆ ತೋರುತ್ತವೆ. ಹಾಗೆ ಹೇಳಬೇಕೆಂದರೆ ತಂದೆಯವರ ಅಥವಾ ಯಾವುದೇ ರಾಜರ ಬಹುದೊಡ್ಡ ಜೀವಂತ ಆತಂಕವೆಂದರೆ ನಿಜಕ್ಕೂ ಹಿರಿಯ ಮಗನೇ ಇರಬೇಕು.

ನಾನು ಮತ್ತು ನಮ್ಮ ತಂದೆ ಯಾವತ್ತೂ ಅನ್ಯೋನ್ಯವಾಗಿರಲು ಸಾಧ್ಯವೇ ಇಲ್ಲ, ಎನ್ನುವ ದುರಂತವನ್ನು ಕಂಡುಕೊಡೆ. ನನ್ನ ಪ್ರತಿಯೊಂದು ನಡೆಯನ್ನೂ ಅವರು ಸಂದೇಹಿಸಲೇಬೇಕು. ಅವರ ಗೈರುಹಾಜರಿಯಲ್ಲಿ ನನ್ನನ್ನು ರಾಜ್ಯದ ಮುಖ್ಯಸ್ಥನನ್ನಾಗಿ ನೇಮಿಸಲು ತೀರಾ ಅಸಾಧಾರಣವಾದ ಧೈರ್ಯವನ್ನು ತೆಗೆದುಕೊಂಡಿರಬೇಕು. ಬಂಡಾಯದ ಬಾವುಟವನ್ನು ಎತ್ತಿಹಿಡಿದು ಅವರ ಸಿಂಹಾಸನವನ್ನು ಆಕ್ರಮಿಸಿಕೊಂಡು ಬಿಡುತ್ತೇನೆಂದು ಅವರು ಪ್ರತಿರಾತ್ರಿಯೂ ಚಿಂತೆಗೊಳಗಾಗುತ್ತಿದ್ದಾರೆಯೇ ಅಥವಾ ಅವರ ಸುತ್ತಲೂ ಇರುವ ಜನ ಈಗಲೂ ಅವರ ಮಧು ಪಾತ್ರೆಯಲ್ಲಿ ವಿಷವೆರೆಯುತ್ತಿದ್ದಾರೆಯೇ? ನಾನು ನನ್ನ ಸೋದರರ ಕೊಲೆಯ ಸಂಚನ್ನು ರೂಪಿಸುತ್ತಿದ್ದೇನೆಯೇ? ಕೊಲೆಗಡುಕ ಹತ್ಯಾರಾ ಉದಾನ ನೆನಪು ಅವರ ಮನಸ್ಸಿನಲ್ಲಿ ನನ್ನ ನೆನಪಿಗಿಂತ ಹೆಚ್ಚು ಹಸಿರಾಗಿರಬಹುದು. ಹಾಗೂ ಸಿಂಹಾಸನಕ್ಕಾಗಿ ಅವರ ಮತ್ತು ಅವರ ಸೋದರರಾದ ಪೃಥ್ವೀರಾಜ್ ಮತ್ತು ಜೈಮಲ್ ರ ನಡುವಿನ ಸ್ಪರ್ಧೆ ಅವರಿಗೆ ಅವರ ಜೀವನದ ಪ್ರತಿದಿನವೂ ದುಃಸ್ವಪ್ನವಾಗಿ ಕಾಡುತ್ತಿರಬಹುದು. ಇದರ ಜೊತೆಗೆ ಪಿತೃವಧೆ ಮತ್ತು ಭ್ರಾತೃವಧೆಗಳು ರಜಪೂತರ ಏಕಸ್ವಾಮ್ಯವೇನಲ್ಲ. ನಮ್ಮ ಅತಿಥಿಯಾದ ಬಹಾದ್ದೂರರನ್ನೇ ನೋಡಿ–ಅವರು ಅವರ ತಂದೆಯ ಎರಡನೇ ಮಗನಾದರೂ ಸಿಂಹಾಸನಕ್ಕಾಗಿ ಅವರ ಮಹತ್ವಾಕಾಂಕ್ಷೆ ಹೇಗಿದೆ?

ತಂದೆಯವರಿಗೆ ರಾಜ್ಯದ ಹೊರಗಡೆ ಅನೇಕ ಶತ್ರುಗಳು ಮತ್ತು ಮನೆಯೊಳಗೆ ಏಳು ಜನ ಶತ್ರುಗಳಿದ್ದರೆ, ನನಗೆ ನನ್ನ ಆರು ಜನ ಸೋದರರಾದ ರತನ್, ವಿಕ್ರಮಾದಿತ್ಯ, ಕರಣ್, ಪರ್ವತ್, ಕೃಷ್ಣದಾಸ್ ಮತ್ತು ಉದಯ ಇವರುಗಳಿಂದ ಅಪಾಯವಿತ್ತು. ಈ ಕೃತ್ಯದಲ್ಲಿ ವಿಕ್ರಮಾದಿತ್ಯನು ಸಿಕ್ಕುಬಿದ್ದಿದ್ದನು. ಇತರೆ ಸೋದರರಿಗೆ ತಾವು ಇದರಲ್ಲಿ ಸಿಕ್ಕು ಹಾಕಿಕೊಳ್ಳಬಾರದೆನ್ನುವಷ್ಟು ವಿವೇಕ ಮತ್ತು ಅದೃಷ್ಟವಿತ್ತು. ಈ ಕಾರಣದಿಂದಷ್ಟೇ ಅವರು ಮುಗ್ಧರಾಗಿದ್ದರು. ನನಗೆ ಮಕ್ಕಳಾದರೆ ಏನಾಗಬಹುದು? ಹೆಚ್ಚಿಗೆ ಏನಿಲ್ಲ; ನಾನು ಎಷ್ಟು ಜನ ಗಂಡುಮಕ್ಕಳಿಗೆ ಜನ್ಮ ಕೊಡುತ್ತೇನೋ, ಅಪಾಯದ ಅಂಶವೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ಅದಕ್ಕಿರುವ ಏಕೈಕ ಪರಿಹಾರವೆಂದರೆ, ಹುಟ್ಟುತ್ತಿದ್ದಹಾಗಯೇ ಅವರೆಲ್ಲರನ್ನೂ ಕೊಲ್ಲುವುದು, ಇಲ್ಲವೇ ದೂರದ ಸೆರೆಮನೆಯಲ್ಲಿ ಬಂಧಿಗಳನ್ನಾಗಿಟ್ಟುಕೊಳ್ಳುವುದು, ಬಂದೀಖಾನೆಯ ಬೀಗದಕೈಯನ್ನು ಎಲ್ಲೋ ಎಸೆದುಬಿಡುವುದು.

ಇಲ್ಲ; ಅವರು ಯಾವತ್ತೂ ಅದರ ಬಗ್ಗೆ ಯೋಚನೆ ಮಾಡುವುದನ್ನು ನಿಲ್ಲಿಸುವುದಿಲ್ಲ ಎಂದು ನನಗೆ ಖಚಿತವಾಗಿ ತಿಳಿದಿರುವ ವಿಷಯ ಕುರಿತಂತೆ ವಿವೇಕದಿಂದ ಯೋಚಿಸಿ ಎಂದು ನನ್ನ ತಂದೆಯವರನ್ನು ಹೇಗೆ ತಾನೆ ನಾನು ಮನವೊಲಿಸಲಿ? ನಮ್ಮೆಲ್ಲರ ತಲೆಗಳ ಮೇಲೆ ತೂಗುತ್ತಿರುವ ಈ ಕತ್ತಿ ಯಾವತ್ತು ಮತ್ತು ಹೇಗೆ ನಿವಾರಿತವಾಗುತ್ತದೋ?

* * *

ನಾನು ಸುನೇರಿಯಾಳಿಗಾಗಿ ಚಂದ್ರಮಹಲಿನಲ್ಲಿ ಕಾದೆ. ಕೆಲವೊಂದು ಸಲ ಬಂದಳು, ಇನ್ನು ಕೆಲವೊಂದು ಸಲ ಬರಲಿಲ್ಲ; ಅವಳು ಬಂದರೆ ನಾನು ತಲ್ಲಣಗೊಳ್ಳುತ್ತಿದ್ದೆ. ಅವಳು ಬರದೆ ಇದ್ದರೆ ಕಸಿವಿಸಿಗೊಳ್ಳುತ್ತಿದ್ದೆ. ಅವಳು ಏನನ್ನೂ ನಿರೀಕ್ಷಿಸಲಿಲ್ಲ. ಅವಳು ಎಂದಿಗೂ

ನಿರಾಶೆಗೊಳ್ಳಲಿಲ್ಲ. ತುಂಬ ಗಟ್ಟಿಗಿತ್ತಿ ಹೆಣ್ಣು ಎಂದರೆ ಅಂಥವಳೇನೇನು? ಅವಳ ಗಂಡ ಅವಳನ್ನು ಕಂಡುಬಿಟ್ಟರೆ ನಾಳೆ ನಾನು ಅವಳ ಕೈಗಳಿಂದ ನುಣುಚಿಕೊಂಡರೆ, ನನ್ನ ಹೆಂಡತಿ ನನ್ನ ಮೇಲೆ ತನ್ನ ಹಕ್ಕು ಸಾಧಿಸಿದರೆ, ಅದು ಏನಾದರೂ ಆಗಲಿ ಅವಳು ಮುಂದಕ್ಕೆ ಹೋಗುವವಳೇ. ಹೋಗುವುದೆಲ್ಲಿಗೆ? ಯಾವ ದಿಕ್ಕಿನಲ್ಲಿ ನಡೆಯುವುದು ಎಂದು ಅವಳಿಗೆ ಗೊತ್ತಿರಲಿಲ್ಲ, ಅವಳು ಅದಕ್ಕೆ ಲೆಕ್ಕಿಸಲೂ ಇಲ್ಲ. ಕಾರಣ ತಿಳಿಯುವುದು ಮತ್ತು ಲೆಕ್ಕಿಸುವುದು–ಇವುಗಳಿಂದ ಹೆಚ್ಚೇನೂ ಸಹಾಯವಾಗುವುದಿಲ್ಲ. ಅವಳು ಆ ಎಲ್ಲ ಬೆಲೆಬಾಳುವ ವಸ್ತ್ರಗಳನ್ನು ಮಾಮೂಲಿಯಾಗಿ, ಬೇಕಾಬಿಟ್ಟಿಯಾಗಿಯೇ ಧರಿಸಿದಳು ಹಾಗೂ ಅದು ಅವಳಿಗೇ ಗೊತ್ತಿಲ್ಲದ ಹಾಗೆ ಅವಳನ್ನು ಮೊದಲಿಗಿಂತ ಹೆಚ್ಚು ಪ್ರಚೋದಕವಾಗಿಯೂ, ಇಷ್ಟಪಡುವ ಹಾಗೆಯೂ ಮಾಡಿದವು. ಅತ್ಯಂತ ಅವೇಳೆ ಹೊತ್ತಿನಲ್ಲಿ ಉಪ್ಪಿನ ಕಾಯಿ ತಿನ್ನುವುದು ಅವಳಿಗೆ ಬಲು ಇಷ್ಟ. ಹಿಂದಿನ ಸಲ ಇಲ್ಲಿಗೆ ಬಂದಿದ್ದಾಗ, ಅವಳ ಬೆಲೆ ಬಾಳುವ ಲಂಗದ ಮೇಲೆ ಮಾವಿನಕಾಯಿ ಉಪ್ಪಿನಕಾಯನ್ನು ಬೀಳಿಸಿಕೊಡಳು. "ನನ್ನನ್ನು ಹೇಗೂ ತೀವ್ರವಾಗಿ ನಿಂದಿಸುತ್ತಾರೆ" ಎಂದಳು. "ನಿಂದೆಯಲ್ಲೇ, ನಾನು ನನ್ನ ಕೈ ಒರೆಸಿಕೊಳ್ಳಬಹುದು." ಅವಳು ಹಾಗೇ ಮಾಡಿದಳು. ಅವಳು ಪರಿಣಾಮಕ್ಕಾಗಿ ಹಾಗೆ ಮಾಡಿದಳೆ? ಅವಳು ನನ್ನತ್ತ ನೋಡಿ– "ಚಿಂತಿಸಬೇಡಿ, ನಾನು ಕಲೆಗಳನ್ನೆಲ್ಲಾ ತೊಳೆದುಕೊಂಡು ಬಿಡುತ್ತೇನೆ. ನನ್ನ ತೀಕ್ಷ್ಣವಾದ ಘಾಟುಬೆರಳುಗಳಿಂದ ನಿಮ್ಮನ್ನು ಸ್ಪರ್ಶಿಸುವುದಿಲ್ಲ ಎಂದಳು." ಆ ಮಾತಿನ ಕೊನೆಯ ತುಣುಕು ನನಗೆ ನೆಮ್ಮದಿಯನ್ನುಂಟುಮಾಡಿತು. ನನ್ನ ಬೆರಳ ತುದಿಗಳಲ್ಲಾಗಲೀ, ಬೇರೆಯವರ ಬೆರಳ ತುದಿಗಳಲ್ಲಾಗಲೀ, ಆಹಾರದ ವಾಸನೆ ಉಳಿಯುವುದನ್ನು ನಾನು ಸಹಿಸಲಾರೆ.

ಅವಳು ಹಿಂತಿರುಗಿದಾಗ ಅವಳ ಕೂದಲುಗಳು ಸಡಿಲವಾಗಿ ಹರಡಿಕೊಂಡು ಅವುಗಳಿಂದ ನೀರು ತೊಟ್ಟಿಕ್ಕುತ್ತಿತ್ತು. ಅವಳು ನನ್ನ ಬಟೆಗಳನ್ನು ಕಳಚಿ ಹಾಕಿ ಕೆಳಗೆ ಹಾಸಿಗೆಯ ಮೇಲೆ ನನ್ನನ್ನು ಮಲಗಿಸಿ ನಿರಾಳಗೊಳಿಸಿದಳು. ನನ್ನ ಕಣ್ಣುಗಳನ್ನು ಮುಚ್ಚಿದಳು. ತನ್ನ ತಲೆಗೂದಲನ್ನು ನನ್ನ ಕಾಲುಗಳ ಮೇಲೆ, ನನ್ನ ಉದರದ ಮೇಲೆ, ನನ್ನ ಎದೆಯಮೇಲೆ, ಅನಂತರ ನನ್ನ ಮುಖದ ಮೇಲೆ ಮೃದುವಾಗಿ ಹರಡಿದಳು. ಅದುವರೆಗೂ ನನಗೆ ಶರೀರದ ಮೇಲಿನ ನೀರಿನ ಚಿಕಿತ್ಸಕ ಶಕ್ತಿಯ ಅರಿವಾಗಲೀ ಶರೀರದ ಮೇಲೆ ಕೂದಲನ್ನು ಮೃದುವಾಗಿ ಹರಡುವುದರ ಚಿಕಿತ್ಸಕ ಶಕ್ತಿಯ ಅರಿವಾಗಲೀ ಇರಲಿಲ್ಲ. ಅವಳು ತನ್ನ ಕೂದಲುಗಳನ್ನು ಸ್ವಲ್ಪಹೊತ್ತು ನನ್ನ ತುಟಿಯಮೇಲೆ ನೀರು ತೊಟ್ಟಿಕ್ಕುವ ಹಾಗೆ ಮಾಡಿದಳು. ಅದರಿಂದ ತುಟಿಗಳ ಬೇಗೆ, ಆಯಾಸ ಮತ್ತು ಬಿಗುವನ್ನು ಹೀರಿದ ಅನುಭವ ಉಂಟಾಯಿತು. ಅವಳು ಮತ್ತೆ ಹೋಗಿ ಕೂದಲನ್ನು ನೆನೆಸಿಕೊಂಡು ಬಂದಳು. ನನ್ನನ್ನು ಬೆನ್ನುಮೇಲಾಗಿ ಹೊರಳಿಸಿದಳು. ಈ ಸಲ ಅವಳು ನನ್ನ ಪಿರ್ರೆಗಳ ಮೇಲಿನಿಂದ ಪ್ರಾರಂಭಿಸಿ ತನ್ನ ಕೂದಲುಗಳು ನನ್ನ ಬೆನ್ನಮೇಲೆ ವೇಗವಾಗಿ ಎರ್ರಾಬಿರ್ರಿ ತಿರುವುಗಳು ತೆಗೆದುಕೊಳ್ಳುವಂತೆ ಮಾಡಿದಳು. ಅವಳು ಯಾವುದಾದರೊಂದು ಅಂಚು ಹಿಡಿದು ತಿರುಗಿಸುವಳೋ ಅಥವಾ ನನ್ನ ಚರ್ಮದ ಮೇಲೆ ಹಾಗೆಯೇ ತೇಲಿಬಿಡುವಳೋ ಎಂದು ವಿಸ್ಮಯಪಡುತ್ತಾ ನನ್ನ ಶರೀರವಷ್ಟೂ ಬಿಗಿದುಕೊಂಡಿತು. ನೀರು ಜಿನುಗಿ ಮಾಂಸಖಂಡಗಳು ಸಡಿಲಾದವು. ನನ್ನ ಶರೀರದ ಮಾಂಸ ಮತ್ತು ಮೂಳೆಗಳ ಪ್ರತಿಕಣದಲ್ಲೂ ಶಕ್ತಿಗುಂದಿಂತಾದೆ. 'ನಿದ್ದೆಮಾಡಿ,' ಎಂದು ಹೇಳಿದ ಅವಳು "ನೀವು ಎಚ್ಚೆತ್ತಮೇಲೆ ನಾವು ನಲಿಯೋಣ" ಎಂದಳು. ಅವಳು ಮುಂದಿನ ಕ್ಷಣದ ಮುಂದಿನ ಊಟದ ಮತ್ತು ಮರುದಿನದ ಯೋಚನೆ ಮಾಡಲಿಲ್ಲವಾದ್ದರಿಂದ ಯಾವುದೇ ಗಡಿಬಿಡಿ ಅಥವಾ ಆತುರವಿರಲಿಲ್ಲ. ಅವಳೇನೇ ಮಾಡುವುದಿದ್ದರೂ ಇಂದು ಮಾತ್ರ ಮಾಡಬಲ್ಲಳು. ನಾಳೆ ಬಹುಶಃ ಇಲ್ಲವೇ ಇಲ್ಲ.

ಇಂದು ಅವಳು ಬರುವಳೇ? ಅವಳ ಭೇಟಿಗಳ ಹಿಂದಿನ ತರ್ಕ ಏನು? ಅದೇನು ಖಯಾಲಿಯೋ ಥಟ್ಟನೆ ಬಂದ ಅನಿಸಿಕೆಯೋ, ಅಥವಾ ಯಾವುದೋ ಒಂದು ರಾತ್ರಿ ಅವಳ ಗಂಡ ಮುಂಚೆಯೇ ನಿದ್ದೆಹೋಗಿಬಿಟ್ಟಿದ್ದಾನೆಂಬಷ್ಟು ಸರಳವೋ?

"ಇದೇ ಏನು ಕೊನೆಯದಲ್ಲ. ಆಗ ಅದೃಷ್ಟದ ಮೇಲೆ ವಿಪರೀತ ಒತ್ತಡ ಹಾಕಿದ ಹಾಗಾಗುತ್ತೆ. ಅವನು ನಿದ್ದೆಹೋಗಬೇಕು ಅಂತ ನನಗೆ ಅನ್ನಿಸಿದಾಗ ನಾನು ಅವನಿಗೆ ಹಾಲಿಗೆ ಸ್ವಲ್ಪ ಸಕ್ಕರೆ ಮತ್ತು ಇನ್ನೇನೋ ಒಂದು ಚೂರು ಸೇರಿಸಿ ಕೊಟ್ಟುಬಿಡುತ್ತೀನಿ. ಅವನು ಮಗುವಿನ ಥರ ನಿದ್ದೆ ಮಾಡುತ್ತಾನೆ."

"ನೀನು ನನಗೂ ಅದನ್ನು ಕೊಡಬೇಕು."

"ನಿಮ್ಮಲ್ಲಿ ಮಗು ಇಲ್ಲ. ನನ್ನ ಗಂಡನು ನಿಮಗಿಂತ ಹೆಚ್ಚು ಅದೃಷ್ಟವಂತ. ಈ ವಯಸ್ಸಿನಲ್ಲೂ ಅವನಿಗೆ ನಿದ್ದೆಬಂದುಬಿಡುತ್ತೆ. ಅಲ್ಲದೆ ಅವನು ಗಂಟೆಗಟ್ಟಲೆ ನಿದ್ದೆಮಾಡಬಲ್ಲನು. ನೀವು ನಿದ್ದೆಯನ್ನು ಅಳಿಸಿಹಾಕಿಬಿಡುತ್ತೀರಿ. ನೀವು ತುಂಬಾ ಮುತುವರ್ಜಿ ವಹಿಸುತ್ತೀರಿ, ಮಹಾರಾಜ್ ಕುಮಾರ್." ನನ್ನ ತಲೆ ಅವಳ ತೊಡೆಯಮೇಲಿತ್ತು. ಅವಳು ನನ್ನ ಹಣೆಯನ್ನು ತಟ್ಟುತ್ತಿದ್ದಳು.

"ಅದು ಒಳ್ಳೆಯದೋ ಕೆಟ್ಟದ್ದೋ?"

"ಒಬ್ಬೊಬ್ಬರಿಗೂ ಅವರವರದ್ದೇ ವಿಧಾನವಿರುತ್ತೆ. ಅದು ಹೋಗಲಿ ರಾಜಕುಮಾರರೆ. ಅಷ್ಟೆಲ್ಲಾ ಅಸಂತೋಷ ತೊಲಗಲಿ."

ಅವಳ ಬಳೆಗಳು ಶಿಸ್ತು ಪಾಲನೆಯಲ್ಲೊಂದು ಪ್ರತ್ಯಕ್ಷ ತರಬೇತಿ. ನನಗೆ ಎಷ್ಟೇ ಆತುರವಿದ್ದರೂ ಅವು ನನಗೆ ತಡೆಯೊಡ್ಡುತ್ತಿದ್ದುವು. ಅವುಗಳನ್ನು ಕಳಚಿಹಾಕಲು ನಾನು ಹೆಚ್ಚು ಹೆಚ್ಚು ಒರಟನೂ ಬಳಲಿದವನೂ ಆದಂತೆಲ್ಲ ಅವು ತೆಗೆಯಲಾಗದಂತೆ ಹೆಚ್ಚು ಹೆಚ್ಚು ಮೊಂಡು ಹಿಡಿದವು. ಅಲ್ಲಿ ಸುತ್ತಮುತ್ತ ಯಾರೂ ಇರುತ್ತಿರಲಿಲ್ಲ ಅನ್ನುವುದು ನಿಜವಲ್ಲ. ಚಂದ್ರಮಹಲ್‌ನಲ್ಲೇ ಆಗಲೀ, ಬೇರೆಲ್ಲೇ ಅರಮನೆಯಲ್ಲಿ ಆಗಲಿ, ಯಾವಾಗಲೂ ಯಾರಾದರೂ ಇರುತ್ತಿದ್ದರು. ನನಗೆ ಅವುಗಳ ಕಣಕಣಶಬ್ದವೆಂದರೆ ಆಗುತ್ತಿರಲಿಲ್ಲ. ಅದು ನನಗೆ ಭಯಂಕರ ಸಂಕೋಚ ಉಂಟುಮಾಡುತ್ತಿತ್ತು. ಇದನ್ನು ಮಾಡಲು ಇದ್ದ ಒಂದೇ ಮಾರ್ಗವೆಂದರೆ, ನನಗೆ ನಾನು ಹೇಳಿಕೊಳ್ಳುತ್ತಿದ್ದುದು, "ನರಗಳನ್ನು ಸಡಿಲಬಿಡು, ಆರಾಮವಾಗಿರು," ಎಂದು. ಮೊದಲನೇ ಸಲ ಮಾಡಿದ ಹಾಗೆ ಅವುಗಳನ್ನು ತಾನೇ ತೆಗೆಯುತ್ತೇನೆ ಎಂದು ಕೈಹಾಕಿದಳು. ಆದರೆ ನಾನು ಅವಳು ಹಾಗೆ ಮಾಡುವುದಕ್ಕೆ ಬಿಡುತ್ತಿರಲಿಲ್ಲ. ಆದರೆ ಅವಳ ಕೈಗಳ ಮಣಿಕಟ್ಟನ್ನು ಈ ಕಡೆಯಿಂದ ಆ ಕಡೆಗೆ ಮೃದುವಾಗಿ ಸವರುತ್ತ ಒತ್ತುತ್ತ ಇರುವುದರಲ್ಲಿ ಹಾಗೂ ಅದು ನಯಗಾರೆಯ ಹಾಗೆ ತುಂಬ ನುಣುಪೂ, ಜಾರಿಕೆಯದೂ ಆದಾಗ, ಬಳೆಗಳು ಕಿಣಿಕಿಣಿ ಶಬ್ದಮಾಡುತ್ತ ನೆಲದಮೇಲೆ ಬೀಳುವಂತೆ ಮಾಡುವುದರಲ್ಲಿ, ನಂತರ ಮೋಡದ ಮರೆಯಿಂದ ಚಂದ್ರ ನಿಧಾನವಾಗಿ ಜಾರಿಕೊಳ್ಳುವ ಹಾಗೆ, ಅವಳ ತೋಳು ಬತ್ತಲಾಗುವುದನ್ನು ಕಾಣುವುದರಲ್ಲಿ ಒಂದು ವಿಧವಾದ ನಿಗೂಢ ಕಾಮಪ್ರಚೋದಕ ಶಕ್ತಿ ಇದೆ. ದೇಹದ ರಹಸ್ಯ, ಬಟ್ಟೆಗಳಲ್ಲಿ ಅಡಗಿದೆಯೇ? ಅದು ಉಡುಪುಗಳನ್ನು ಬಂಧಿಸುವ ದಾರಗಳನ್ನು ಗಂಟು ಹಾಕಿದ ಗಂಟಿನಲ್ಲಿದೆಯೇ? ಬೆರಳುಗಳು ರವಿಕೆಯನ್ನು ಜಾರಿಸುವುದನ್ನು, ಒಳಲಂಗವನ್ನು ಕೆಳಗೆ ಬೀಳಿಸುವುದನ್ನು ಹಾಗೂ ಅನಂತರ ಅದನ್ನು ಆತುರಾತುರವಾಗಿ ಪುನಃ ಏರಿಸುದನ್ನು ನೋಡುತ್ತಿರುವುದರಲ್ಲಿದೆಯೇ? ಹೆಣ್ಣಿನ ಶರೀರದ ಮೇಲೆ ಕೈಯಾಡಿಸುವಾಗ ಕೈಗಳನ್ನು ಉಬ್ಬು-ತಗ್ಗುಗಳಲ್ಲಿ, ಸಂದುಗೊಂದುಗಳಲ್ಲಿ

ಅದರ ಆಕಾರಕ್ಕೆ ತಕ್ಕಂತೆ ಆಡಿಸುವುದರಲ್ಲಿದೆಯೇ? ಸುನೇರಿಯ, ಕಾಲ್ಗೆಜ್ಜೆಗಳನ್ನು ಧರಿಸುವುದನ್ನು ನೋಡುವುದು ಲೈಂಗಿಕ ಭೋಗವೇ? ಹಾಗೂ ಅವಳು ತಲೆಗೂದಲನ್ನು ಬಿಚ್ಚಿ ಕೊಡವಿಕೊಳ್ಳುವುದು, ಅದನ್ನು ಮತ್ತೂ ಗಂಟಾಗಿ ಹೆಣೆಯುವುದು ಲೈಂಗಿಕತೆಯೇ? ಅವಳ ಬಲಗೈ ತೋರುಬೆರಳಿನ ಮೇಲಿನ ಕುಂಕುಮಚೂರ್ಣವನ್ನು ತೆಗೆದುಕೊಂಡು ಸರಿಯಾಗಿ ಅವಳ ಹಣೆಯ ಮಧ್ಯಭಾಗಕ್ಕೆ ವೃತ್ತಾಕಾರದಲ್ಲಿ ಇಟ್ಟು ಅದರ ಮೇಲೆ ತಿಲಕವನ್ನಿಡುವುದೇ? ಇಲ್ಲ ಬಕೆಟ್ಟಿನ ನೀರನ್ನು ಹಿಡಿದುಕೊಳ್ಳಲು ಕೈಗಳನ್ನು ಬಟ್ಟಲಿನಾಕಾರ ಮಾಡಿಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಮುಖಕ್ಕೆ ನೀರೆರೆಚಿಕೊಳ್ಳುವುದೆ? ಅಪಜ್ಞಾಪೂರ್ವಕವಾಗಿ ಮತ್ತು ಬಹುಮಟ್ಟಿಗೆ ಅನೈಚ್ಛಿಕವಾಗಿಯೇ ಪ್ರತಿದಿನವೂ ಮಾಡುವ ಆಕೆಯ ಆಂಗಿಕ ಚಲನೆಗಳು ಲೈಂಗಿಕತೆಯೇ?

ನನ್ನ ಉದ್ವೇಗವನ್ನು ಕಳೆದು ಹಾಕು ಸುನೇರಿಯಾ. ನನ್ನ ಬೆನ್ನಿನ ಮಾಂಸಖಂಡಗಳ ಮೇಲೆ ನಿನ್ನಕೈಗಳನ್ನು ಒತ್ತು. ನನ್ನ ಬೆನ್ನುಹುರಿಯ ಪಕ್ಕಗಳಲ್ಲಿಯ ಆಳವಾದ ಸುಕ್ಕುಗಳ ಮೇಲೆ ಉದ್ದಕ್ಕೂ ನಿನ್ನ ಹೆಬ್ಬೆರಳುಗಳನ್ನು ಆಡಿಸು. ನಿನ್ನ ಬೆರಳುಗಳಿಂದ ನನ್ನ ಕಣತಲೆಯ ಮೇಲೆ ಉಜ್ಜು. ಆ ಜಾಗ ಸೀಳಿ ಅಲ್ಲಿಂದ ನನ್ನ ಮಿದುಳ ಬಳ್ಳಿ ಒಳಗಿನಿಂದ ನಿಶ್ಶಬ್ದವಾಗಿ ಹೊರಹೊಮ್ಮುವವರೆಗೂ ಉಜ್ಜು. ನನ್ನ ಅಂಗಾಲ ಕುಳಿಗಳನ್ನು ತಿವಿ. ನನ್ನ ಒತ್ತಡ ಬಿಂದುಗಳನ್ನೆಲ್ಲಾ ತೆರೆದುಬಿಡು ಮತ್ತು ನನಗೆ ಹರಿಯಗೊಡು.

ಅವಳು ಆ ರಾತ್ರಿ ಬರಲಿಲ್ಲ.

* * *

ಅತಿಥಿ ಅರಮನೆಯನ್ನು ತಲುಪಲು ಇನ್ನೂ ಅರ್ಧ ಮೈಲಿ ಇದೆ ಎನ್ನುವಾಗಲೇ ಅದು ತಿಳಿಯಿತು. ವಾಸನೆ ಇಲ್ಲವಾಗಿತ್ತು. "ಖುದಾಹಾಫೀಜ್ ಷಹಜಾದಾ," ಎಂದು ಹೇಳಿ ವೇಗವಾಗಿ ಮುಂದೆ ನಡೆದೆ. ಷಹಜಾದನು ಮೃತನಾದನೆಂದು ಘೋಷಿಸುವ ಮತ್ತು ಆ ಸಂದರ್ಭದಲ್ಲಿ ವಹಿಸಬೇಕಾದ ಎಚ್ಚರಿಕೆಯ ಭಯದಿಂದ ಒಮ್ಮೆಗೇ ಬಿಡುಗಡೆ ಹೊಂದಿದ್ದೆ.

ಅದು ಆಗಲೇ ಆಗಿತ್ತು. ಈಗ ಹೇಗೆ ಮುಂದುವರಿಯಬೇಕೆಂಬುದು ಗೊತ್ತಿತ್ತು. ಅವರ ತಂದೆಗೆ ಬರೆಯಬೇಕಾದ ಕಾಗದ ನನ್ನ ಮನಸ್ಸಿನಲ್ಲಿ ಸಿದ್ಧವಾಗಿತ್ತು. ಅಂತ್ಯಕ್ರಿಯೆ ಸಕಲ ರಾಜ ಮರ್ಯಾದೆಯೊಂದಿಗೆ ಆಗಬೇಕಿತ್ತು. ಬಹುಶಃ ಇದು ತಂದೆಯವರ ಮತ್ತು ಸುಲ್ತಾನ್ ಮುಜಫರ್ ಷಾ ನಡುವಿನ ಸಮರವನ್ನು ತಪ್ಪಿಸಬಹುದು. ಏನೇ ಆಗಲಿ ಬಹಾದ್ದುರ್ ನ ಪ್ರಯೋಜನಗಳಂತೂ ಇದ್ದೇ ಇವೆ.

ಅದಕ್ಕೆ ಬದಲಾಗಿ ಎರಡು ದಿಂಬುಗಳಿಗೆ ಹಗುರವಾಗಿ ಒರಗಿಕೊಂಡು ಅವನು ಕುಳಿತಿದ್ದನು. ಅವನ ಕೊಠಡಿಯಲ್ಲಿ ಮುಂಬೆಳಗಿನ ಬೆಳಕಿತ್ತು. ತೋಳುಗಳಿಂದ ಬಳಸಿ ಅವನನ್ನು ಅಪ್ಪಿಕೊಂಡು ಹಣೆಯಮೇಲೆ ಮುತ್ತಿಟ್ಟು– "ಓಹ್! ಬಹಾದ್ದುರ್, ನಿಮ್ಮನ್ನು ನಾವು ಕಳೆದುಕೊಂಡು ಬಿಟ್ಟೆವು ಅಂದುಕೊಂಡಿದ್ದೆ."

"ನಿಮಗೆ ನಾನು ಕೊಟ್ಟಿರುವ ತೊಂದರೆಗೆ ನನ್ನನ್ನು ದಯವಿಟ್ಟು ಕ್ಷಮಿಸಿಬಿಡಿ, ಮಹಾರಾಜ್ ಕುಮಾರ್. ನೀವು ನನಗೆ ಮಾಡಿದಷ್ಟನ್ನು ನನ್ನ ಯಾವ ಸೋದರರೂ ಮಾಡುತ್ತಿರಲಿಲ್ಲ. ನಾನು ನಿಮಗೆ ಬಹಳ ಋಣಿಯಾಗಿದ್ದೇನೆ." ಅವನು ಪ್ರಜ್ಞೆ ತಪ್ಪಿದನು.

"ಅವರು ವಿಶ್ರಾಂತಿ ತೆಗೆದುಕೊಂಡು ಸುಧಾರಿಸಿಕೊಳ್ಳಲಿ" ಏಕನು ಶಾಂತವಾಗಿ ಹೇಳಿದನು.

"ಮೇವಾಡದ ರಾಜಮನೆತನ ನಿಮಗೆ ತುಂಬ ಕೃತಜ್ಞವಾಗಿದೆ ಏಕಾಜಿ ಅವರೆ. ನೀವು ನಮ್ಮ ಅತಿಥಿಯನ್ನೂ ನಮ್ಮ ಗೌರವವನ್ನೂ ಉಳಿಸಿದ್ದೀರಿ. ಈ ಕೂಡಲೇ ನಾನು

ಮೊದಲು ಮಾಡಬೇಕಾದ ಕೆಲಸ ಒಂದಿದೆ. ಈ ಹೊತ್ತಿನಿಂದ ನೀವು ಮೇವಾಡದ ಗೌರವಾನ್ವಿತ ರಾಜವೈದ್ಯರು. ನೀವು ನಮಗೆ ಮಾಡಿರುವ ಈ ಉಪಕಾರವನ್ನು ಮನ್ನಿಸಿ ರಾಜ್ಯವು ಗಂಭೀರಾ ನದಿಯ ದಡದಲ್ಲಿ ನಿಮ್ಮ ಭಿಲ್ ಪ್ರಾಂತಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಮುಜಾದಿ ಮತ್ತು ಇನ್ನೂ ಹತ್ತು ಹಳ್ಳಿಗಳನ್ನು ಕೊಡುಗೆಯಾಗಿ ನೀಡುತ್ತಿದೆ." ಧನ್ಯವಾದ ಹೇಳಿ ಅವರ ಕೈಗಳನ್ನು ಬಿಟ್ಟೆ.

"ದಯಪಿಟ್ಟು ಈಗಲೇ ಹೋಗಬೇಡಿ. ಅವರಿಗಿನ್ನೇನೂ ಅಪಾಯ ಇಲ್ಲ ಎನ್ನುವವರೆಗೂ ಇಲ್ಲೇ ಇರಿ."

"ನನ್ನ ಉದ್ದೇಶವೂ ಅದೇ ಆಗಿದೆ ಮಹಾರಾಜ ಕುಮಾರರೆ"

ನಾನು ಏಕಲಿಂಗಜೀ ದೇವಾಲಯಕ್ಕೆ ತೆರಳಿ ದೇವರಿಗೆ ನನ್ನ ಪ್ರಾರ್ಥನೆ ಮತ್ತು ನಮಸ್ಕಾರಗಳನ್ನು ತಿಳಿಸಿದೆ. ಶಿವನು ಷಹಜಾದನನ್ನು ಹೆಚ್ಚು ಕಡಿಮೆ ಇಲ್ಲವಾಗಿಸಿ ಬಿಟ್ಟಿದ್ದನು. ಈಗಲಾದರೋ ಅವನನ್ನು ಬಹುಮಟ್ಟಿಗೆ ಬೂದಿಯಿಂದ ಪುನಃ ಸೃಷ್ಟಿಸಿದ್ದಾನೆ. ನಿನ್ನನ್ನು ಏನನ್ನಾದರೂ ಬೇಡಿಕೊಳ್ಳಲು ಅಡ್ಡಿಬರುತ್ತಿರುವುದು ನನ್ನ ಪ್ರತಿಷ್ಠೆಯಲ್ಲ ದೇವರೆ, ನೀನು ಎಲ್ಲವನ್ನೂ ಬಲ್ಲೆ ಎಂಬ ಸಂಗತಿ ಸ್ವಾಮಿ ಎಂದು ಹೇಳಿದೆ; ಮತ್ತೊಮ್ಮೆ ನಿನಗೆ ನಮಸ್ಕಾರ.

ಮುಂದಿನ ಏಳು ದಿನಗಳು ಪೂರ್ತ ದೇವಾಲಯದ ನೌಬತ್ ಖಾನೆಯಿಂದ ಶಹನಾಯಿಯ ವಾದನ ನಡೆಯಿತು. ಪ್ರತಿದಿನ ಬೆಳಗ್ಗೆ ನಮ್ಮ ವಂಶದ ಮೂಲಪುರುಷನಾದ ಸೂರ್ಯದೇವನಿಗೆ ಸೂರಜ್ ಗೋಖದಾಸ್‌ನಿಂದ ಪ್ರಾರ್ಥನೆಗಳನ್ನು ಸಲ್ಲಿಸಿದೆ. ಆ ದೇವಸ್ಥಾನವಾದರೋ ಅರಮನೆಯ ಗೋಡೆಗಳಿಂದ ಹೊರಚಾಚಿದ ಮೊಗಸಾಲೆಯ ಗೋಪುರದಂತಿತ್ತು. ದೇವಸ್ಥಾನ ಪೂರ್ವಾಭಿಮುಖವಾಗಿತ್ತು. "ನಿನ್ನ ಜ್ಯೋತಿ ಸದಾ ನಮ್ಮ ಮೇಲಿರಲಿ ಮತ್ತು ನೀನು ಮೇವಾಡವನ್ನು ಸದಾ ಅದರ ಅತ್ಯಂತ ಕಷ್ಟ ಕಾಲದಲ್ಲಿ ಕಾಪಾಡು" ಎಂದು ಕೋರಿದೆ.

ಅಧ್ಯಾಯ 12

ಅದೊಂದು ಅಸಮ ಹೋರಾಟ. ಇದೇನೂ ಮಹಾಪ್ರಳಯದ ಯುದ್ಧವಲ್ಲ;
ಕೇವಲ ಒಬ್ಬ ದೇವನ ಕ್ರೀಡೆ.

ಅವನು ಕೆಲಸದಿಂದ ಹಿಂತಿರುಗುತ್ತಿದ್ದಾಗ ಮೊದಲಿಗೆ ಹಾಡುವುದನ್ನು ಕೇಳಿದ್ದು. ಅದು ತುಂಬಾ ದೂರದಿಂದ ಮತ್ತು ತುಂಬಾ ಕ್ಷೀಣವಾಗಿ ಕೇಳಿಸುತ್ತಿತ್ತು. ಹಾಗಾಗಿ ಅದು ನಗರದ ಹೃದಯ ಭಾಗದಿಂದ ಕೇಳಿಬಂತೋ ಅಥವಾ ಖೇತಾನ್ ರಾಣಿಯ ಅರಮನೆಯಿಂದ ಇನ್ನೂ ಸ್ವಲ್ಪ ಆಚೆ ಇರುವ ಕೋಟೆಯ ವಿಶಿಷ್ಟವಾದ ಪ್ರದೇಶದಿಂದ ಕೇಳಿಬಂತೋ ಎಂಬುದು ಅವನಿಗೆ ಖಚಿತವಿರಲಿಲ್ಲ. ಅದೊಂದು ವಿಚಿತ್ರ ಕಾಕತಾಳೀಯ. ಇದೀಗ ಷಹಜಾದಾ ನ ಆರೋಗ್ಯ ಸುಧಾರಿಸುತ್ತಾ ಇದ್ದುದರಿಂದ ಅವನ ಆರೋಗ್ಯ ಸುಧಾರಣೆಯನ್ನು ಆಚರಿಸುವ ಸಲುವಾಗಿ ಒಂದು ಜಲಸಾವನ್ನು ಏರ್ಪಡಿಸಬೇಕೆಂದು ಆಲೋಚಿಸುತ್ತಿದ್ದಾನೆ. ಈ ಮುಂಚೆ ಈ ದನಿಯನ್ನವನು ಕೇಳಿರಲಿಲ್ಲ. ಅವರ ತಂದೆಯವರನ್ನು ಹೊರತುಪಡಿಸಿದರೆ, ಸಂಗೀತದ ಹುಚ್ಚು ಹಿಡಿಸಿಕೊಂಡವರು, ಮತ್ತು ರಾಜ್ಯದ ಹೊರಗಿನ ಪ್ರತಿಭೆಯನ್ನು ಆಹ್ವಾನಿಸಬೇಕೆಂಬ ಗೀಳು ಹಿಡಿದವರು ಇಬ್ಬರು ಮಾತ್ರ. ಅವರ ಮಾವ ಮತ್ತು ಗೃಹಸಚಿವರಾದ ಲಕ್ಷ್ಮಣಸಿಂಹಜೀ ಮತ್ತು ಪದಾತಿ ಸೈನ್ಯದ ಮುಖ್ಯಸ್ಥ ನರಬದ್‌ಸಿಂಹ. ಇದರಲ್ಲಿ ಕೊನೆಯವರು ಅವನ ತಂದೆಯ ಜೊತೆ ರಾಜಧಾನಿಯ ಹೊರಗಡೆ ಇದ್ದುದರಿಂದ ಈಗ ಇದ್ದವರು ಲಕ್ಷ್ಮಣಸಿಂಹರೊಬ್ಬರೇ. ಯಾರಾಗಿರಬಹುದು? ಚಿತ್ತೂರಿನ ಯಾವುದೇ ಮಹಾನ್ ಸಂಗೀತಗಾರರ ದನಿಗಿಂತ ಇದು ಭಿನ್ನವಾಗಿತ್ತು.

ಅವನು ಅಲ್ಲೇ ಸ್ಥಿರವಾಗಿ ಸಿಂತು ಆ ದನಿಯನ್ನು ತನ್ನ ಮೇಲೆ ಹರಿಯಬಿಟ್ಟನು. ಯಾವ ಕಾರಣಕ್ಕೆ ಅಂತ ಅವನಿಗೆ ಹೇಳಲಿಕ್ಕೆ ಸಾಧ್ಯವಿಲ್ಲ; ಪರ್ವತದ ತಪ್ಪಲನ್ನು ಏರಿ ಹೋಗುತ್ತಿದ್ದಾಗಲಾಗಲಿ ಅಥವಾ ಮೆಟ್ಟಿಲುಗಳನ್ನು ಹತ್ತಿ ಹೋಗುತ್ತಿರುವಾಗಾಗಲಿ, ಯಾರಾದ್ದಾದರೂ ಕಿಟಕಿಯಿಂದ ಹೊರಹೊಮ್ಮುತ್ತಿರುವ ನಾದ ಮತ್ತು ರಾಗವನ್ನು ಕೇಳಿದ್ದೇ ಆದರೆ, ಅದು ಅತ್ಯಂತ ಮನಕರಗುವಂತಿರುತ್ತಿರುತ್ತೆಂಬುದು ಅವನ ಅನುಭವ. ಅವರ ಮುತ್ತಾತ ಒಬ್ಬ ಒಳ್ಳೆಯ ಸಂಗೀತಗಾರರು ಮತ್ತು ಸಂಗೀತ ಶಾಸ್ತ್ರಜ್ಞರಾಗಿದ್ದರು. ದೊಡ್ಡ ಸಂಗೀತಗಾರರು, ಬೇರೆ ರಾಜರುಗಳ ಆಸ್ಥಾನಗಳಲ್ಲಿದ್ದ ಸಂಗೀತಗಾರರೂ ರಾಣಾ ಕುಂಭನಿಂದ ಹಾಡಲು ಆಹ್ವಾನಿತರಾಗುವುದೆಂದರೆ, ಅದೊಂದು ದೊಡ್ಡಗೌರವ ಎಂದು ಭಾವಿಸಿದ್ದರು. ಯಾರನ್ನಾದರೂ ಸ್ಥಾನದಿಂದ ಇಳಿಸಿದರೆ, ಅಥವಾ ಆಸ್ಥಾನದಿಂದ

ಹೊರಹಾಕಲ್ಪಟ್ಟರೆ, ಅಥವಾ ತಮ್ಮ ಪೋಷಕರಾಜರೊಂದಿಗೇನಾದರೂ ಭಿನ್ನಾಭಿಪ್ರಾಯ ಉಂಟಾದರೆ, ರಾಣಾ ಕುಂಭ ಅವರ ಆಸ್ಥಾನದಲ್ಲಿ ಅವರಿಗೆ ಸದಾ ಒಂದು ಸ್ಥಾನವಿರುತ್ತಿತ್ತು.

ರಾಗ ಸಹಿತವಾದ ಶಾಸ್ತ್ರೀಯ ಸಂಗೀತದ ಗುಣ ಸೂಕ್ಷ್ಮಗಳನ್ನಾಗಲೀ, ಅದರ ಸಂಕೀರ್ಣತೆಯನ್ನಾಗಲೀ, ಮಹಾರಾಜ ಕುಮಾರ್‌ಗೆ ಯಾರೂ ಹೇಳಿ ಕೊಟ್ಟಿರಲಿಲ್ಲ. ನಾಲ್ಕು ವರ್ಷದ ಮಗುವಾಗಿದ್ದಾಗ, ಬೆನ್ನು ಮೂಳೆಯನ್ನು ನೇರವಾಗಿ ಇರಿಸಿಕೊಂಡು ಪದ್ಮಾಸನದಲ್ಲಿ ನಿರಾಳವಾಗಿ ಕುಳಿತಿರುತ್ತಿದ್ದನು, ಹಾಡುಗಾರ ಇಲ್ಲವೆ ವಾದ್ಯ ಸಂಗೀತಗಾರನು ರಾಗವನ್ನು ನಿರೂಪಿಸುತ್ತಿದ್ದನು. ಮಹಾರಾಜ್‌ಕುಮಾರ್ ಏನಾದರೂ ಅಂಕೆಮೀರಿದರಾಗಲಿ, ಮೊಂಡುತನಮಾಡಿದರಾಗಲಿ ಅಥವಾ ಏನಾದರೂ ಅರಚುವುದು–ಕಿರುಚುವುದಕ್ಕೆ ಪ್ರಾರಂಭ ಮಾಡಿದರಾಗಲಿ, ಅವನನ್ನು ದೇವರೇ ಕಾಪಾಡಬೇಕು. ಆಗ ಅವರ ತಂದೆಯ ತಲೆ ನಿಧಾನವಾಗಿ ಅವನತ್ತ ತಿರುಗಿ, ಅವರ ಕಣ್ಣು ಅವನ ಮುಖದ ಮೇಲೆ ನೆಟ್ಟ ನೋಟಬೀರುತ್ತಿತ್ತು. ಅವನು ಬೂದಿಯಾಗುವುದಕ್ಕೆ ಒಂದೆರಡು ಕ್ಷಣ ಸಾಕಾಗುತ್ತಿತ್ತು. ಇನ್ನು ಅವನ ಜಾಗದಲ್ಲಿ ಉಳಿಯುತ್ತಿದ್ದುದು ಮೂತ್ರದ ಮಡು ಮಾತ್ರ.

ರಾಜಕುಮಾರ ಅಥವಾ ರಾಜಕುಮಾರಿಯ ಸಂಗೀತಾಸಕ್ತಿ ಮುಂದುವರಿದದ್ದೇ ಆದರೆ, ವಾರದಲ್ಲಿ ಎರಡು ದಿವಸ ಒಬ್ಬ ಸಂಗೀತದ ಅಧ್ಯಾಪಕರು ಸಂಜೆ ಆರು ಗಂಟೆಗೆ ಬಂದು ಒಂದು ಗಂಟೆಕಾಲ ಸಂಗೀತ ಹೇಳಿಕೊಡುತ್ತಿದ್ದರು. ಮಹಾರಾಜ್ ಕುಮಾರ್ ಸಂಗೀತದ ಪ್ರಾಥಮಿಕ ಪಾಠಗಳನ್ನು ಕೇವಲ ಮೂರು ವರ್ಷಗಳವರೆಗೆ ಕಲಿತನು. ಸಂಗೀತದ ಅಧ್ಯಾಪಕರು ಮಹಾರಾಜ್ ಕುಮಾರ್‌ನ ತಾಯಿಗೆ ವಿನಯವಾಗಿ ತಿಳಿಸಿದ ಸಂಗತಿ ಎಂದರೆ, 'ಅವನ ಕಂಠ ಇದ್ದುದರಲ್ಲಿ ಚೆನ್ನಾಗಿದೆ. ಆಂಥ ವಿಶೇಷದ್ದಲ್ಲ' ಎಂದು. ಅಷ್ಟಾದರೂ ಅವನು ವಿಷಯವನ್ನು ಗ್ರಹಿಸುವ ರೀತಿ ಅದ್ಭುತವಾದದ್ದು. ಅವನ ಕಿವಿ ಎಂದೂ ತಪ್ಪುತ್ತಿರಲಿಲ್ಲ. ಯಾವುದೋ ಒಂದು ರಾಗವನ್ನು ಹೇಗೆ ಮತ್ತು ಏಕೆ ಹಾಗೆಯೇ ಹಾಡಬೇಕೆಂದು ಹೇಳಬಲ್ಲವನಾಗಿದ್ದನು.

ಯಾವುದಾದರೂ ಸಂಗೀತ ಸಭೆ, ಸಮಾರಂಭಗಳಲ್ಲಿ ಶ್ರೋತೃಗಳು, ಸಂಗೀತದ ಬಗ್ಗೆ ಉಬ್ಬುಬ್ಬಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಅದರ ದ್ಯೋತಕವಾಗಿ ತಮ್ಮ ತೊಡೆಗಳ ಮೇಲೆ ಕೈಗಳಿಂದ ತಾಳಹಾಕುತ್ತಾ, ತಲೆಗಳನ್ನು ಅಲ್ಲಾಡಿಸುವುದು, ಸಂಗೀತಗಾರರು ತನಿಬಿಟ್ಟು ಒಂದು ಸುತ್ತು ಪೂರ್ತಿಬಂದರೆ, ತಮ್ಮ ವಾಹ್ವ್ ವಾಹ್ವ್, ಭೇಷ್ ಭೇಷ್, ಗಳನ್ನು ವ್ಯಕ್ತಪಡಿಸಿದ್ದೇ ಆದರೆ, ಮಹಾರಾಜ್ ಕುಮಾರ್ ಬೇಜಾರು ಮಾಡಿಕೊಂಡು ಎದ್ದು ಹೋಗಿ ಬಿಡುತ್ತಿದ್ದನು. ವ್ಯಾಕರಣ, ಸಾಮರ್ಥ್ಯದ ದ್ಯೋತಕವೇ ಹೊರತು ಉತ್ಕೃಷ್ಟತೆಯ ದ್ಯೋತಕವಲ್ಲ. ಯಾರಾದರೂ ಎಳೆಂಟು ಉಪವಾಕ್ಯಗಳಿಂದ ಕೂಡಿದ ಸುದೀರ್ಘ ವಾಕ್ಯವೊಂದನ್ನು ಒಂದೇ ಒಂದು ಪ್ರತ್ಯಯ ಬಿಡದ ಹಾಗೆ ರಚನೆ ಮಾಡಿದ್ದಕ್ಕೆ ಅಥವಾ ಕ್ರಿಯಾವಿಶೇಷಣಗಳನ್ನು ತಪ್ಪು ತಪ್ಪಾಗಿ ಬಳಸಿ, ಇಡೀ ವಾಕ್ಯ ರಚನೆಯನ್ನೇ ಹಾಳುಗೆಡವದೇ ಇರುವುದಕ್ಕೆ ಮೆಚ್ಚುಗೆಯ ನಗೆಯಿಂದ ಶಹಬ್ಬಾಸ್‌ಗಿರಿ ಕೊಡಲಿಕ್ಕಾಗುತ್ತದೆಯೇ? ಬಹಳ ಸುಲಭವಾಗಿ, ಸಂತೃಪ್ತಗೊಂಡ ಶ್ರೋತೃವರ್ಗ ತನ್ನ ಅಭಿರುಚಿಗಾಗಿ ತನ್ನನ್ನೇ ಅಭಿನಂದಿಸಿಕೊಳ್ಳುವುದಲ್ಲದೆ, ಕಲಾವಿದನನ್ನು ಅಭಿನಂದಿಸುತ್ತಿರುತ್ತದೆ. ಕಲಾವಿದನು ತಾನಾಗಿ ತಾನೇ ಶ್ರೋತೃಗಳ ಕುಯುಕ್ತಿಯ ಭಾಗವಾಗಿ ಬಿಡುವುದೆಂದರೆ ಅದೊಂದು ಮೂರ್ಖರ ಆಟ. ಮಹಾನ್ ಕಲೆಯನ್ನು ಮೆಚ್ಚಿದರಷ್ಟೇ ಸಾಲದು. ಅವರು ಕನಿಷ್ಠವಾಗಿ ಮಾಡಬೇಕಾದ್ದು ಸಾಮಾನ್ಯವಾದದ್ದರಿಂದ ಹಾಗೂ ತುಂಬ ಸಮರ್ಥವಾದದ್ದರಿಂದ ಅದನ್ನು ಬೇರ್ಪಡಿಸುವುದು. ಅಲ್ಲದೆ ಕಲಾವಿದ ಮತ್ತು ಶ್ರೋತೃ ಇಬ್ಬರನ್ನೂ ಪರವಶಗೊಳಿಸುವ

ಮತ್ತು ಪರಿವರ್ತಿತಗೊಳಿಸುವಂಥ ಕಲಾ ಪ್ರಸ್ತುತಿಯನ್ನು ಆತ್ಮಕೇಂದ್ರಿತವೂ ಉಜ್ವಲವೂ ಆದ ಪ್ರಸ್ತುತಿಯಿಂದ ಬೇರ್ಪಡಿಸುವುದು. ಪ್ರಶಂಸೆ ಮಾಡುವುದರಲ್ಲಿ ಅವನು ಕೃಪಣನಲ್ಲ. ಪ್ರಶಂಸಾರ್ಹವಾದ್ದು ಕ್ಷುಲ್ಲಕವಾದ ಸಂಗತಿಯಾಗಿರಲಿಲ್ಲ ಎನ್ನುವುದೊಂದೇ.

ಚಿತ್ತೂರು ತನ್ನದೇ ಆದ ಮಹಾ ವ್ಯಕ್ತಿಗಳು ಮತ್ತು ಸಾಂದರ್ಭಿಕವಾಗಿ ಅಸಾಧಾರಣ ಪ್ರತಿಭೆ ತೋರಿದ ವ್ಯಕ್ತಿಗಳ ನಾಡಾಗಿತ್ತು. ಅದು ಕೇವಲ ಶ್ವಾಸಕೋಶಗಳು, ವಪೆ, ಧ್ವನಿತಂತುಗಳಂಥ ಸಾಧನಗಳ ವಿಷಯವಲ್ಲ ಹಾಗೂ ಎಷ್ಟೆಲ್ಲ ಸಾಧನೆ, ಮತ್ತು ತರಬೇತಿ ಅದರ ಹಿಂದಿದೆ ಎಂಬುದಲ್ಲ. ಕಲಾವಿದನ ಮನಸ್ಸು, ಅನುಭವದ ವೈಶಾಲ್ಯ ಮತ್ತು ಅವನ ಕಲ್ಪನೆ ಇವುಗಳನ್ನೆಲ್ಲಾ ಬಳಸಿಕೊಂಡು ಏನೆಲ್ಲಾ ಮಾಡಬಹುದು ಎಂಬ ಪ್ರಶ್ನೆಯಾಗಿತ್ತು. ಶಾಲಿವಾಹನ ಸಾಮಂತ್, ರಜಬ್ ಆಲಿ ಮತ್ತು ರಸೂಲನ್‌ಬಾಯಿ ಇವರುಗಳ ಕಂಠ ಸಾಗರದಷ್ಟು ಆಳವೂ, ವೈವಿಧ್ಯವೂ ಅಗಿದ್ದರೆ ಅವರುಗಳ ಭಾವ ಶ್ರೀಮಂತಿಕೆ ಮತ್ತು ಧ್ಯಾನಶಿಲತೆ ಜೀವನ ದರ್ಶನದ ವ್ಯಾಪ್ತಿಯದಾಗಿತ್ತು. ಅವನಿಗೆ ಈಗ ತಾನು ಆಲಿಸುತ್ತಿದ್ದ ಕಂಠದ ವ್ಯಾಪ್ತಿಯ ಬಗ್ಗೆ ಏನೂ ಗೊತ್ತಿರಲಿಲ್ಲ. ಜೊತೆಗೆ ಮೊದಮೊದಲಿನ ಅನಿಸಿಕೆಗಳು, ಮೌಲ್ಯಯುತವಾಗಿದ್ದು, ಬದುಕಿನಲ್ಲಿ ತನ್ನದೇ ಆದ ಸ್ಥಾನ ಹೊಂದಿದ್ದರೆ, ಅವುಗಳ ಬಗ್ಗೆ ಅವನು ಬಹು ಜಾಗರೂಕನಾಗಿದ್ದನು. ಒಬ್ಬ ಕಲಾವಿದನ ಸಂಗೀತವನ್ನು ಕೆಲವು ಕಾಲ, ಬೇರೆ ಬೇರೆ ಸಂದರ್ಭಗಳಲ್ಲಿ ಕೇಳಿದ ಮೇಲೆ ಮಾತ್ರವೇ ಆತ ಅದನ್ನೇ ಪುನರಾವರ್ತನೆ ಮಾಡುತ್ತಿದ್ದಾನೆಯೇ, ಇಲ್ಲ ಆತ ಬಹುಮುಖಪ್ರತಿಭಾವಂತನೇ ಹಾಗೂ ವಿವಿಧ ರೀತಿಗಳನ್ನು ನಿರ್ವಹಿಸಬಲ್ಲ ವ್ಯಾಪ್ತಿ ಆತನಿಗಿದೆಯೇ, ಎಂಬುದನ್ನು ಹೇಳಲು ಸಾಧ್ಯ. ತನ್ನ ನಿರ್ಣಯವನ್ನು ಕ್ಷಣಕಾಲ ತಡೆಹಿಡಿಯುತ್ತಿದ್ದನು. ಆದರೆ, ಈ ಹೊಸ ಕಂಠದ ತೀವ್ರತೆ ಆತಂಕವುಂಟುಮಾಡುವಂಥದು ಎಂದು ಒಪ್ಪಲೇಬೇಕಾಗಿತ್ತು. ಭೂಮ್ಯಾಕಾಶಗಳನ್ನು ಆವರಿಸಿ ಬಿಡುತ್ತಾಳೇನೋ ಎನ್ನುವಂಥ ಬೀಸು ಅವಳದು. ಅದೊಂದು ಈಟಿ ಇದ್ದಂತೆ. ಅದರ ಬೆಳಕಿನ ಮಾರ್ಗವಾದರೋ ಬಿರುಗಾಳಿ ಮತ್ತು ಚಂಡಮಾರುತಗಳಿಂದ ಸ್ವಲ್ಪವೂ ಪ್ರಭಾವಿತವಾಗದಿರುವಂಥದು. ಕಾರಣ ಫಳಕ್ಕನೆ ಹೊಮ್ಮುವ ಬೆಳಕು ಮತ್ತು ಪ್ರಚಂಡ ಸೌದಾಮಿನಿಗಳೇ ಅದರ ಧಾತು. ಯಾರೇ ಆದರೂ ಅಂಥ ನಗ್ನ ಶಕ್ತಿಯನ್ನು ಯಾರಾದರೂ ತಾಳಿಕೊಳ್ಳಬಲ್ಲರೆ ಎಂದು ಊಹಿಸುವುದೇ ಕಷ್ಟ. ಅವನಿಗೆ ಇದ್ದಕ್ಕಿದ್ದಂತೆ ಹೊಳೆದದ್ದೆಂದರೆ, ಆ ಕಂಠವನ್ನು ಅಣಕ ಮಾಡುವುದು ಅದೆಷ್ಟು ಸುಲಭವಾದೀತು ಹಾಗೂ ತಮ್ಮ ತೀವ್ರ ಸಂಕೋಚ ಪ್ರಜ್ಞೆಯ ದೃಷ್ಟಿಯಿಂದ ಅಣಕಮಾಡುವುದು ಅದೆಷ್ಟು ಸುಲಭವಾದೀತು ಎಂಬುದು. ಕಾರಣ ಅದು ಮಾಡಿದ್ದು ಸಂಗೀತಗಾರನ ಅಂತರಾಳದ ವ್ಯಕ್ತಿತ್ವವನ್ನು ಹೊರಹೊಮ್ಮಿಸಿದ್ದು. ಅದೂ ಪರಿಣಾಮಕಾರಿಯಲ್ಲದ ರೀತಿಯಲ್ಲಲ್ಲ, ಖಾಸಗಿ ಬಿಡುವುಗಳಿಲ್ಲದ ಹಾಗೂ ಸಂದಿಗ್ಧತೆಗಳಿಗೆ ಅವಕಾಶವಿಲ್ಲದ ರೀತಿಯಲ್ಲಿ. ಅದು ಎಲ್ಲವನ್ನೂ ಬಹಿರಂಗವಾಗಿ ತೆರೆದು ತೋರಿಸಿತು. ಸಮಾಜ ಸುಲಲಿತವಾಗಿ ಸಾಗಲು ಅವಶ್ಯಕವಾದ ಸಾಮಾನ್ಯ ಸಭ್ಯತೆಯ ಮುಚ್ಚುಮರೆಗಳೊಂದೂ ಇಲ್ಲದಂತೆ ತನ್ನನ್ನು ತೆರೆದಿಟ್ಟಿತು. ಅದು ಅಪಾಯಕಾರಿ, ಏಕೆಂದರೆ ನಮ್ಮ ಲೋಕ ಮರ್ಯಾದೆಗಳಿಗೆ ಮತ್ತು ಬೂಟಾಟಿಕೆಗಳಿಗೆ ಕಿಂಚಿತ್ತೂ ಬೆಲೆಕೊಡುತ್ತಿರಲಿಲ್ಲ. ಅಲ್ಲದೆ ಯಾವುದೇ ರಾಜಿಗೆ ಅಲ್ಲಿ ಅವಕಾಶವಿರಲಿಲ್ಲ.

ತನ್ನದೇ ಶರೀರ ಅಥವಾ ಮುಖವಿಲ್ಲದೆ ಎಲ್ಲಿಂದಲೋ ಹರಿದು ಬರುತ್ತಿರುವ ಧ್ವನಿ ಹೆಚ್ಚಿಗೆ ಏನನ್ನೂ ಹೇಳಲಾರದು, ಎಂದು ತನಗೆ ತಾನೇ ಹೇಳಿಕೊಂಡನು. ನನ್ನ ಕಲ್ಪನಾಶಕ್ತಿ ಯಾವಾಗಲೂ ನನ್ನೊಂದಿಗೇ ಏಕೆ ಓಡಿಬಿಡುತ್ತೆ ಎಂದು ತನಗೆ ತಾನೇ ವಕ್ರನಗೆ ನಕ್ಕ. ಆ ಧ್ವನಿಗೆ ಅವನು ಹಚ್ಚುತ್ತಿದ್ದ ರಂಜಕ ಅಸಂಬದ್ಧತೆಗಳನ್ನು ಪರೀಕ್ಷಿಸಿ ನೋಡಲು ಇದ್ದದ್ದು

ಒಂದೇ ಮಾರ್ಗ: ಆ ಧ್ವನಿ ಯಾರದ್ದೆಂದು ಪತ್ತೆ ಹಚ್ಚುವುದು ಮತ್ತು ಕೆಲವು ತಿಂಗಳುಗಳ ಕಾಲಾನಂತರ ತಾನೆಷ್ಟು ದೂರ ಹೋಗಿದ್ದೇನೆಂದು ನೋಡಿಕೊಳ್ಳುವುದು. ಹೇಗಾದರಾಗಲಿ ಯಾರ ಧ್ವನಿ ಅದು? ಪ್ರತಿ ಕೆಲವು ಗಜ ಮುಂದೆ ಸಾಗಿ ನಿಲ್ಲುತ್ತಿದ್ದನು. ಶಾಸ್ತ್ರೀಯ ಸಂಗೀತವನ್ನು ಸವಿಯುವುದರಲ್ಲಿ ಅವನಿಗಿದ್ದ ಒಂದೇ ಒಂದು ಮುಖ್ಯ ಕೊರತೆ ಎಂದರೆ, ಅವನು ಶಬ್ದಗಳಿಗೆ ಏನೇನೂ ಗಮನ ಕೊಡುತ್ತಿರಲಿಲ್ಲವೆನ್ನುವುದು. ಬಹುಶಃ ಅದೇ ಕಾರಣ, ಅವನಿಗೆ ಕಾವ್ಯದ ಓದಿಗೆ ತನ್ನನ್ನು ಒಗ್ಗಿಸಿಕೊಳ್ಳಲು ಆಗದೇ ಇದ್ದದ್ದು. ಅದೊಂದು ವೇಳೆ ಜನಪದಸಂಗೀತವೋ, ಅಥವಾ ಜನಪ್ರಿಯ ಬೀದಿಹಾಡೋ ಆಗಿದ್ದರೆ, ಅವನ ಕಿವಿಗಳು ಅದನ್ನು ಹಿಡಿಯುತ್ತಿದ್ದವು. ಆದ್ದರಿಂದ ಆ ಹಾಡು ಏನು ಎಂತು ತಿಳಿದುಕೊಳ್ಳಬೇಕೆನಿಸಿತ್ತು. ಭಿಲ್ಲರು ಹಾಡುತ್ತಿದ್ದ ಪ್ರಣಯದ ಹಾಡುಗಳ ಅಶ್ಲೀಲ ಹೂರಣ ಹಾಗೂ ಪ್ರಸ್ತುತ ರಾಜಕೀಯ ಸನ್ನಿವೇಶ, ಕೆಲವು ಹೆಸರಾಂತ ವ್ಯಕ್ತಿಗಳ ಸಣ್ಣ ಪುಟ್ಟ ಲೈಂಗಿಕ ಅಪರಾಧಗಳು, ಅಥವಾ ನೆರೆಹೊರೆಯ ರಾಜ್ಯಗಳ ಚಂಚಲ ನಿಷ್ಠೆಯ ಸುತ್ತಾ ಸಂಚಾರಕ್ಕೆ ಹೊರಟಿದ್ದ ವಿಡಂಬನೆಯ ಹಾಡುಗಳ ತೀಕ್ಷ್ಣತೆಯನ್ನು ಕಂಡು ಅವನು ಬೆರಗಾಗಿದ್ದನು. ಇದಕ್ಕೆ ವಿರುದ್ಧವಾಗಿ, ಶಾಸ್ತ್ರೀಯ ಸಂಗೀತದಲ್ಲಿ ಶಬ್ದಗಳೆಂದರೆ, ಹಾಡಿಗೆ ಆಧಾರವಾಗಿರುವಂಥ ಗೂಟ ಎಂದೇ ಆತನ ಭಾವನೆ. ಈ ವಿಷಯದಲ್ಲಿ ತಾನು ನ್ಯಾಯ ಸಲ್ಲಿಸುತ್ತಿಲ್ಲ ಎಂದು ಅರ್ಥೈಸಿಕೊಂಡನು. ಆದರೆ ತಾನು ಶಬ್ದಗಳನ್ನು ಅರ್ಥೈಸಿಕೊಂಡಿದ್ದ ಬಹುತೇಕ ಸಂದರ್ಭಗಳಲ್ಲಿ ಅಥವಾ ಅದರ ವಿವರಗಳನ್ನು ಗ್ರಹಿಸಿದಾಗ ಅವನಿಗನ್ನಿಸಿದ್ದು ಅವೆಲ್ಲವೂ ತೀರಾ ನಿಸ್ಸಾರವಾದವು ಎಂದು.

ತುಂತುರು ಮಳೆ ಶುರುವಾಗಿತ್ತು. ಮಳೆ ಬೀಳುತ್ತಿರುವ ಚಿತ್ತೂರೆಂದರೆ ಅವನಿಗೆ ತುಂಬಾ ಇಷ್ಟ. ಪ್ರತಿಯೊಂದೂ, ಕಲ್ಲುಗಳು ಕೂಡಾ ಸ್ವಲ್ಪಮಟ್ಟಿಗೆ ದೃಷ್ಟಿಯಿಂದ ಮರೆಯಾಗುತ್ತಿದ್ದವು. ಕೀರ್ತಿಸ್ತಂಭ ಮತ್ತು ಜೈನಬಸದಿಗಳು ಕೆಳಮಟ್ಟದಲ್ಲಿ ಚಲಿಸುತ್ತಿದ್ದ ಮೋಡಗಳಲ್ಲಿ ಮರೆಯಾಗುತ್ತಿದ್ದವು.

ಮುಂಗಾರಿನ ಹುಲ್ಲೆಂದರೆ, ಅವನಿಗೆ ರಂಗದ ಮೇಲೆ ಕಾಣಿಸಿಕೊಳ್ಳಲು ನೇಪಥ್ಯದಲ್ಲಿ ಕಾತರದಿಂದ ಕಾಯುತ್ತ ಕುಳಿತಿದ್ದ ನಟ ಎಂದೆನಿಸುತ್ತಿತ್ತು. ಒಂದು ಬಡಿತ, ಸ್ವಲ್ಪ ತುಂತುರು ಮಳೆ, ಬಂತೆಂದರೆ ಸಾಕು ಇಡೀ ಹಸಿರು ಹುಲ್ಲಿನ ಸೈನಿಕ ಪಡೆಗಳು ರಾತ್ರಿಯೋ ರಾತ್ರಿ ಕಾಣಿಸಿಕೊಂಡು ಬಿಡುತ್ತಿದ್ದುವು. ಹಸಿರೆಂದರೆ ಸಾಕು, ಗಂಡು-ಹೆಣ್ಣುಗಳಿಗೆ ಅಷ್ಟೆಲ್ಲಾ ಏಕೆ ಅನ್ನಿಸಬೇಕು ಮತ್ತು ಅಷ್ಟೊಂದೆಲ್ಲಾ ವ್ಯತ್ಯಾಸ ಎಂದು ಏಕೆ ಅನ್ನಿಸಬೇಕು? ಅಷ್ಟೇ ಹರ್ಷೋಲ್ಲಾಸದಿಂದ ಕೂಡಿದ ಒಣಬೇಸಗೆಯನ್ನು ಕುರಿತು ಯಾರೂ ಏಕೆ ಹಾಡುವುದಿಲ್ಲ? ಹಾಗಾದರೆ ಹಸಿರೆಂಬುದು ಬದುಕಿನ ಬಣ್ಣವೆ ಅಥವಾ ಅದು ಹುಚ್ಚಿನ ಬಣ್ಣವೆ? ಹುಲ್ಲಿನ ಹಸಿರು ಎಲ್ಲವನ್ನೂ ತನ್ನದಾಗಿ ಮಾಡಿಕೊಳ್ಳುವ ಬಣ್ಣ ಮತ್ತು ದುರಾಸೆಯ ಬಣ್ಣ. ಅದು ಬೇರಿನ್ನಾವುದಕ್ಕೂ ಒಂದಂಗುಲದಷ್ಟೂ ಜಾಗ ಬಿಟ್ಟುಕೊಡುವುದಿಲ್ಲ. ಎಲ್ಲ ನನಗೆ ಬೇಕು! ನನಗೆ ಬೇಕು, ನನಗೆ ಬೇಕು. ಅದು ಎಲ್ಲವನ್ನೂ ಆವರಿಸುತ್ತದೆ. ಜವಳಿ ಅಂಗಡಿಯ ಬಟ್ಟೆವ್ಯಾಪಾರಿಯಂತೆ. ಒಂದಾದ ಮೇಲೊಂದರಂತೆ ಗಜಗಟ್ಟಲೆ ಹಸಿರುಹುಲ್ಲನ್ನು; ಚಿತ್ತೂರಿನ ಮೂರು ಚದರ ಮೈಲಿ ಪ್ರದೇಶವಷ್ಟೂ ನಳನಳಿಸುವ ಹಸಿರು ಹಾಸಾಗುವಂತೆ ಹರಡುತ್ತಾ ಹೋಗುತ್ತದೆ. ಆಗೊಮ್ಮೆ-ಈಗೊಮ್ಮೆ ಆಕಾಶದ ಸಣ್ಣಗುಂಡಿ ಕಾಣಿಸಿಕೊಳ್ಳುತ್ತದೆ. ಇದ್ದಕ್ಕಿದ್ದಂತೆ ಗಗನದಲ್ಲಿ ಬಿರುಕು ಕಾಣಿಸಿಕೊಂಡು ಅದರಿಂದ ಬೆಳಕು ಹೊರಚೆಲ್ಲುತ್ತದೆ. ಅಲ್ಲೆಲ್ಲೋ ದೂರದಲ್ಲಿ ಖಂಡಿತವಾಗಿಯೂ ಮಳೆಬಿಲ್ಲು ಇದ್ದೇ ಇರುತ್ತದೆಂದು ನನಗೆ ಖಾತರಿ ಇದೆ.

ಈ ಬೆಳಕು ಮತ್ತು ಮಳೆ ಆ ಹೆಣ್ಣಿನ ಧ್ವನಿಯ ಗುಣದ ಮೇಲೆ ಪರಿಣಾಮ ಬೀರಿತು. ಅದು ಇನ್ನಷ್ಟು ಪರಿಶುದ್ಧವಾಯಿತು ಮತ್ತು ಅದರಲ್ಲಿ ದಃಖದ ತುಣುಕು ಸೇರಿಕೊಂಡಿತು. ಈಗ ಅವನು ಪೂರ್ತಿ ತೊಯ್ದು-ಹೋಗಿದ್ದನು. ಆಕಾಶವನ್ನೆಲ್ಲಾ ಸೀಳಿಕೊಂಡು ಸದ್ದಿಲ್ಲದೆ ಮಿಂಚು ಚಿಮ್ಮುತ್ತಿತ್ತು. ಅನಂತರ ತೀರ ತಡವಾಗಿ ಕೋಟೆಯ ಪೂರ್ವದ ಮೂಲೆಯಲ್ಲಿ ಕಿರಿಕಿರಿಯಾಗುವಷ್ಟರ ಮಟ್ಟಿಗೆ ಗುಡುಗು ಗೊಣಗುಟ್ಟಿತು. ಮುಸ್ಸಂಜೆಯ ಬೆಳಕು-ಅವನ ಮೇಲೆ ವಿಚಿತ್ರ ಪರಿಣಾಮ ಬೀರಿತು. ಅವನ ಇಂದ್ರಿಯಗಳು ಚುರುಕಾದವು. ತನ್ನ ಸುತ್ತಮುತ್ತಣ ಎಲ್ಲದರಿಂದ ತಾನು ದೂರವಾದಂತೆನಿಸಿತು. ಹಾಡಿನ ಶಬ್ದಗಳು ಈಗ ಕೇಳಹತ್ತಿದವು.

ಗಗನಕೇರಿವೆ ಬಂಡೆಗಳು
ಸ್ವರ್ಗವನು ಮತ್ತೆ ನೆಲೆಗೊಳಿಸಲಾಗಿದೆ.
ಅದು ಕೆಳಗೆ ಹೋಗಿದೆ.

ದಿಕ್ಸೂಚಿಯ ಮುಳ್ಳುಗಳು ಜಾರಿಹೋಗಿವೆ.
ಅದರ ಭಾಗಗಳೂ ಉದುರಿಬಿದ್ದಿವೆ.

ಅಧೋಲೋಕವದು ತೇಲುತಿದೆ ಗಾಳಿಯಲಿ,
ದಾನವರು ಎಲ್ಲೆಲ್ಲೂ ಹರಡಿಹರು.
ನೀಲ ಮೇಘ ಶ್ಯಾಮನೆ,
ನೀನೆ ತಾವೆಂದು ಭ್ರಮಿಸಿ ಯಾರಾದರು
ನಿನ್ನ ಕುತ್ತಿಗೆಯ ಕೊಯ್ದಾರು, ಎಚ್ಚರ.

ತಲೆಕೆಳಕಾಗಿ ನಿಲ್ಲು ಕೃಷ್ಣನೆ,
ಇದು ಅಯೋಮಯರಾತ್ರಿ.
ನನ್ನ ತೋಳುಗಳೆ ಕಾಳಸರ್ಪಗಳು.
ಬಾ ನೀನು, ಸುತ್ತುವೆನು ನಿನ್ನ ನಾ ತೋಳುಗಳಲಿ
ನಿನ್ನೊಳಗೆ ಮತ್ತೆ ನಿನ್ನ ಸುತ್ತೂ ಹೊರಳುತ್ತಾ
ಸುತ್ತಿಕೊಳ್ಳುವೆನು ಮೈಯ ಸುತ್ತೂ ಮುತ್ತು.
ನಿನ್ನಂಗಕ್ಕೆ ಹೊಸೆ ಹೊಸೆದು ಮರ್ದಿಸುತೆ
ತೂಗಾಡುವೆನು ನಿನಗೆ ತೆಕ್ಕೆಬಿದ್ದು
ಕಾಳವರ್ಷವೇ ನೋವ ಹರಿಸುವ ನನ್ನ
ನಯ ಮುಲಾಮು.

ಎದೆಗೆಎದೆ, ಮೊಲೆಗೆಮೊಲೆ, ರಸನೆಗೆ
ರಸನೆಯನು ಬೆಸೆಯೊ ನೀನು.
ಎಂದೆಂದು ಬಿಡಿಸಲಾಗದ ಬಂಧದಲಿ ಬೆಸೆದು
ಸುರುಳಿಗಳೆರಡು ಬೆಸೆದಂತೆ
ಹೆಣೆದುಕೊಂಡು ಬಿಡೋಣ.
ಸರ್ಪಬಂಧದಲಿ ಬಿಗಿದು
ನರಗಳನು ಧಮನಿಧಮನಿಗಳನು
ಜಡೆಯಂತೆ ಹೆಣೆದುಕೊಂಡು
ನಲಿಯೋಣ ನಾವಭೇದ್ಯರಾಗಿ.

ಎಲ್ಲಕ್ಕು ನೆಲೆಯಿದೆ ಉದ್ದೇಶವಿದೆ
ಎಂದು ತಿಳಿಸಿರುವೆ ನೀನೆ ನಮಗೆ
ವಿಷಸರ್ಪವು ಇರಬೇಕು
ತನ್ನ ಜಾತಿಗುಣಕೆ ತಕ್ಕಂತೆ
ವಿಷದ ಹಲ್ಲು ಇನ್ನಷ್ಟು ಮೊನಚಾಗಬೇಕು
ಜೀವ ಹೀರುವ ವಿಷ
ಬಲಿಪಶುವಾಗಿದೆ ತಾನೆ
ಬಾ ಪ್ರಿಯನೆ ನನ್ನೊಡನೆ ಮಲಗು ಇಂದು
ಮತ್ತು ಎಂದೆಂದಿಗೂ,
ವಿಷ ಅಮೃತಗಳೆರಡನೂ, ನೀನೆ ಸವಿಯದ ಹೊರತು,
ಹೇಳದಿರು ಎಂದೆಂದು ಅವು ಒಂದೆ ಎಂದು.

ಅದು ಕಾಳಸರ್ಪ. ಅದು ಈ ರಾತ್ರಿಯ ಹಾಡು ಮತ್ತು ಹಂಬಲ. ಯಾರಾದರೂ ನಿಮ್ಮಿಂದ ಅಗಲಿದಾಗ ನೀವು ದೇಶಾಂತರ ಹೋಗುತ್ತೀರಿ. ತಾನು ಪ್ರೀತಿಸುವ ಜನಗಳ ಹೊರತಾಗಿ ಯಾರಾದರೂ ಏಕಾಂಗಿಯಾಗಿಬಿಡುತ್ತಾರೆಯೆ? ಓ ದೇವರೆ, ನನಗಿನ್ನೂ ಇಪ್ಪತ್ತೇಳು ವರ್ಷ ಕೂಡ ಇಲ್ಲ. ಅದು ಹೇಗೆ ನಾನು ನನ್ನ ಬದುಕನ್ನು ಗೊಂದಲಮಯ ಮಾಡಿಕೊಂಡುಬಿಟ್ಟೆ? ಸುನೇರಿಯಾ, ತನ್ನ ಬದುಕನ್ನು ಏಕಾಂಗಿ ಎಂದು ತಿಳಿದಿದ್ದಾಳೋ ಅಥವಾ, ಅವ್ಯವಸ್ಥೆಯದೆಂದು ತಿಳಿದಿದ್ದಾಳೋ? ನನ್ನ ಗುರುವಾಗು ಸುನೇರಿಯಾ. ಏನದು ನಿನ್ನ ಕೊನೆಯ ಶಬ್ದಗಳು? 'ಹೋಗಲು ಬಿಡಿ' ಹೌದು, ಹೌದು– 'ಹೋಗಲು ಬಿಡುವುದನ್ನು' ನನಗೆ ಕಲಿಸಿಕೊಡು ಸುನೇರಿಯಾ. ಬಾ ನನ್ನ ಗೆಳೆಯಾ–ಹಾಗೆಂದು ಅವನು ತನಗೆ ತಾನೇ ಹೇಳಿಕೊಂಡನು. ಆತ್ಮಾನುಕಂಪೆ ಎಂಬುದು ಬೆಲೆತೆತ್ತು ಪಡೆದುಕೊಳ್ಳಲಾಗದ ತೃಪ್ತಿ. ಅರಮನೆಯ ಕಡೆಗೆ ಹೆಜ್ಜೆ ಹಾಕಿದನು. ಬಹಳ ಜೋರಾಗಿ ಮಳೆ ಹೊಯ್ಯತೊಡಗಿತ್ತು. ಆಕಾಶ ಮತ್ತೆ ಕಪ್ಪಾಗತೊಡಗಿತ್ತು. ಆ ಧ್ವನಿ ಹೆಚ್ಚು ಹೆಚ್ಚು ಪ್ರಬಲವಾಗತೊಡಗಿತು. ಸೇವಕರು ಮನೆಕಡೆ ಏಕೆ ಕುದುರೆ ಏರಿ ಬರಲಿಲ್ಲ ಅಥವಾ ಛತ್ರಿ ತರಲು ಹೇಳಿಕಳಿಸಲಿಲ್ಲ ಎಂದು ಕೇಳುತ್ತಾ ಅತ್ತಿತ್ತ ಓಡತೊಡಗಿದನು. ಆತನ ಹಾಗಯೇ ಸಂಗೀತ ಕೇಳುತ್ತಾ ಸುತ್ತಲೂ ಜನ ನಿಂತಿದ್ದರು. ಅವನು ಅವರನ್ನೆಲ್ಲಾ ಪಕ್ಕಕ್ಕೆ ತಳ್ಳಿ ನಡೆದನು. ಮಹಡಿಯ ಮೆಟ್ಟಿಲಿನವರೆಗೂ ದಿಕ್ಕುಗೆಟ್ಟವನಂತೆ ನಡೆದನು. ಅವನ ಒದ್ದೆಯಾದ ಕಾಲಬೆರಳುಗಳು ಜಾರಿದವು. ಹೇಗೋ ಏನೋ ಕಷ್ಟಪಟ್ಟು ಸಮತೋಲನವನ್ನು ಕಾಯ್ದುಕೊಂಡನು. ತನ್ನ ಬಲ ಮಂಡಿಯನ್ನು ಉಜ್ಜಿಕೊಂಡನು. ಆದರೆ ನಡೆಯುತ್ತಲೇ ಇದ್ದನು. ಹಾಡುವ ಹುಡುಗಿಯನ್ನು, ಬಾಡಿಗೆ ಕೊಟ್ಟು ಅರಮನೆಯಲ್ಲಿ ಅವನ ಅನುಮತಿಯಿಲ್ಲದೆ ಅವನ ಕೊಠಡಿಯ ಸಂಕೀರ್ಣಕ್ಕೆ ಕರತರುವ ಧಾರ್ಷ್ಟ್ಯ ಯಾರಿಗೆ ತಾನೆ ಇದ್ದೀತು? ಖಂಡಿತವಾಗಿಯೂ ಅವರ ಮನೆ ಇನ್ನೂ ಕೋಠಿಯಾಗಿಲ್ಲ.

ಅವನ ಹೆಂಡತಿ ತನ್ನ ಕೋಣೆಯ ನಡುವೆ ಕೃಷ್ಣನ ಅಮೃತ ಶಿಲಾವಿಗ್ರಹದ ಮುಂದೆ ಕುಳಿತಿದ್ದಳು. ಆಕೆಯ ಬಲಗೈ ಬೆರಳುಗಳು ಏಕತಾರಿಯನ್ನು ಮೀಟುತ್ತಿದ್ದವು. ಆಕೆಯ ಕಣ್ಣುಗಳು ಮುಚ್ಚಿದ್ದವು. ಆಕೆಯ ಮುಖ ಕಾಂತಿಯಿಂದ ಹೊಳೆಯುತ್ತಿತ್ತು. ಆಕೆ ಕಿಂಚಿತ್ ಅತ್ತಿಂದಿತ್ತ ಒಲೆದಾಡುತ್ತಿದ್ದಳು. ಆಕೆ ಅತಿಮಾನುಷಳೇನೋ ಎಂಬಂತೆ ಆತ ಆಕೆಯನ್ನು ನೋಡಿದ. ಆ ಭಾವ ಮರೆಯಾಗಲೆಂದು ಆತ ಕಾದನು. ಅದು ಮರೆಯಾಗುವಂಥದೇ. ಅದೃಷ್ಟವಶಾತ್ ಬಹುಕಾಲ ವಾಸ್ತವಕ್ಕೆ ಅಂಟಿಕೊಂಡಿರದೆ ಹಾಗೂ ವಾಸ್ತವರೂಪಕ್ಕೆ

ತಿರುಗದೆ ಇರುವುದೇ ಭ್ರಾಂತಿಯ ಸ್ವಭಾವ. ಮೇವಾಡದ ರಾಜಕುವಾರಿ ಸಾಕ್ಷಾತ್ ಮಹಾರಾಜಕುಮಾರರ ಪತ್ನಿ, ಅದೂ ಅರಮನೆಯಲ್ಲೇ. ವೇದಿಕೆಯ ಕೆಳಗಡೆ ಇರುವ ನಲವತ್ತೈವತ್ತು ಮಂದಿ ಹಾಗೂ ಅವರ ಖಾಸಗಿ ಕೋಣೆಯ ಹೊರಗಡೆಯಲ್ಲಿರುವ ಒಂದಷ್ಟು ಮಂದಿ ಶ್ರೋತೃಗಳೊಂದಿಗೆ ಸೇರಿಕೊಂಡು ವೇಶ್ಯೆಯ ಹಾಗೆ ಹಾಡುತ್ತಾಳೆಂದು ಭಾವಿಸುವವನು ಅಸ್ವಸ್ಥನೇ, ತುಂಬ ಅಸ್ವಸ್ಥನೇ ಆಗಿರಬೇಕು.

ಅಮೃತ ಮತ್ತು ವಿಷಗಳೆರಡೂ ನೀನೆ
ಸವಿಯದ ಹೊರತು
ಹೇಳದಿರು ಎಂದೆಂದು ಅವು ಒಂದೆ ಎಂದು.

ಆಕೆ ತನ್ನ ಹಾಡಿನ ಕೊನೆಯ ಚರಣವನ್ನು ಪುನಃ ಎತ್ತಿಕೊಂಡು ಅದನ್ನು ಬಣ್ಣಕಟ್ಟಿ ಹಾಡತೊಡಗಿದಳು. ಅವನು ಅವಳ ಕೈಯಲ್ಲಿದ್ದ ಏಕತಾರಿಯನ್ನು ಜಾಡಿಸಿ ಒದ್ದನು. ಅದು ಎರಡು ಭಾಗವಾಗಿ ಸೀಳಿ ಅವಳ ಕೈಯಿಂದ ಜಾರಿ ಬಿತ್ತು. ನಿಧಾನವಾಗಿ ಆಕೆ ಕಣ್ತೆರೆದಳು. ತನ್ನನ್ನು ಆಕೆ ನೋಡುತ್ತಿಲ್ಲ ಎಂದು ಅವನಿಗೆ ಗೊತ್ತಾಯಿತು.

ಅಧ್ಯಾಯ 13

ಆದಿನಾಥಜೀಯವರಿಗೆ ಲಘು ಸ್ವರೂಪದ ಶ್ವಾಸನಾಳದ ತೊಂದರೆಯಿಂದ ಎಚ್ಚತ್ತುಕೊಳ್ಳಲು ಹತ್ತಿರ ಹತ್ತಿರ ಒಂದು ತಿಂಗಳೇ ಹಿಡಿಯಿತು. ಯುವಕರ ವಿಷಯದಲ್ಲಾದರೆ, ಅದರಲ್ಲೂ ಸದಾ ಚಟುವಟಿಕೆಯಿಂದಿರುವಂಥ ಬಹಾದುರ್ ವಿಷಯದಲ್ಲಿ ಅದರ ರೀತಿಯೇ ಬೇರೆ. ಹತ್ತು ದಿನಗಳಲ್ಲಿ ಓಡಾಡತೊಡಗಿದ್ದೇ ಅಲ್ಲದೆ ರಾತ್ರಿ ಬಹಳ ಹೊತ್ತಿನವರೆಗೂ ನನ್ನ ಜೊತೆ ಚದುರಂಗ ಆಡತೊಡಗಿದ. ಕೊನೇ ಗಳಿಗೆಯಲ್ಲಿ ತಾಳ್ಮೆ ಕಳೆದುಕೊಳ್ಳುವುದು ಅಥವಾ ಧೈರ್ಯ ಕಳೆದುಕೊಳ್ಳುತ್ತಿದ್ದದ್ದು ಬಿಟ್ಟರೆ ಆತ ನನಗಿಂತಲೂ ಒಳ್ಳೆಯ ಆಟಗಾರ. ನನ್ನ ಒಂದೇ ಶಕ್ತಿ ಎಂದರೆ, ಅದನ್ನು ಶಕ್ತಿ ಎಂದು ಕರೆಯಬಹುದಾದರೆ, ನಾನೊಬ್ಬ ಸತತವಾಗಿ ಶ್ರದ್ಧೆಯಿಂದ ಆಡುವ ಆಟಗಾರ.

ಆಟದ ಮಧ್ಯೆ ಒಮ್ಮೆ – “ನನಗೇನಾದರೂ ಕಾಗದ ಬಂದಿತ್ತೆ” ಎಂದು ಕೇಳಿದ. ಆತ ತನ್ನ ದನಿಯು ಸಾಮಾನ್ಯವಾಗಿರುವಂತೆ ಪ್ರಯತ್ನಿಸಿದರೂ, ಅದರಲ್ಲಿ ಆತಂಕವಿದ್ದುದು ನನಗೆ ಗೊತ್ತಾಯಿತು.

“ನನಗೆ ಗೊತ್ತಿಲ್ಲ. ಕಾಗದ ಬಂದಿತ್ತು ಅಂತ ಅನ್ನಿಸುವುದಿಲ್ಲ. ತೀರಾ ಇತ್ತೀಚೆಗಂತೂ ಇಲ್ಲ”.

“ಇತ್ತೀಚೆಗೆ ಅಂತಾಗಲಿ, ಅಥವಾ ಅದಕ್ಕೆ ಮುಂಚೆ ಅಂತಾಗಲಿ ಅಲ್ಲ, ನಾನು ಗುಜರಾತಿನ ಶ್ರೀಮಂತರು ಮತ್ತು ಕುಲೀನರೊಂದಿಗಿನ ನನ್ನ ಸ್ನೇಹದ ವಿಷಯದಲ್ಲಿ ವಿಪರೀತ ನಂಬಿಕೆ ಇಟ್ಟಿದ್ದೆನೇನೋ ಅಥವಾ ನನ್ನ ಸಮಯದ ಆಯ್ಕೆಯೇ ಎಲ್ಲಾ ತಪ್ಪೋ ಏನೋ?”

ಇದಕ್ಕೆ ಏನು ಉತ್ತರ ಕೊಡಬೇಕೆಂದು ನನಗೆ ತಿಳಿಯಲಿಲ್ಲ.

ಇವತ್ತಲ್ಲ, ನಾಳೆ, ನಿಜಜೀವನದಲ್ಲಿ ಬಂಡಾಯವೇಳುವುದಕ್ಕಿಂತ ತಾತ್ವಿಕವಾಗಿ ಬಂಡಾಯ ಬಹಳ ಸುಲಭ ಎಂದು ಅವನು ಕಂಡುಕೊಳ್ಳುತ್ತಾನೆ.

“ನಾನು ಅಷ್ಟು ದೂರ ಹೋಗಲ್ಲ. ಚಿತ್ತೂರಿಗೆ ಪತ್ರಗಳು ತಲುಪುವುದು ತುಂಬ ತಡವಾಗುತ್ತೆ. ಪತ್ರವಾಹಕ ಯುದ್ಧ ರಂಗವನ್ನು ತಪ್ಪಿಸುವ ಸಲುವಾಗಿ ಬಳಸು ದಾರಿ ಹಿಡಿದು ಬರಬೇಕಾಗುವುದರಿಂದ ಇದು ನಿಜ, ಅಲ್ಲದೆ ನಿಮ್ಮ ಅಣ್ಣ ರಾಜಕುಮಾರ ಸಿಕಂದರ್ ವಿಷಯ ಒಂದಿದೆ. ಇದನ್ನು ಹೇಳುತ್ತಿರುವುದಕ್ಕೆ ಸಾವಿರ ಸಲ ಕ್ಷಮೆ ಬೇಡುತ್ತೇನೆ. ನೀವು ಎಷ್ಟೇ ಸಮರ್ಥರಾದರೂ ಕುಲೀನರನ್ನು ತಡೆಯಲು ಅದು ಕಾರಣವಾಗುತ್ತದೆಯೆ?”

“ಯಾವುದೇ ಅಪರಾಧವಾಗಿಲ್ಲ, ಭವಿಷ್ಯದಲ್ಲೇನಿದೆ ಅಂತ ನನಗೆ ಗೊತ್ತಿಲ್ಲ. ಆದರೆ ಇಷ್ಟು ಆಶ್ವಾಸನೆಯನ್ನಂತೂ ನೀಡಬಲ್ಲೆ. ಅದೆಂದರೆ ನಾನು ಗುಜರಾತಿನ ರಾಜನಾಗುವೆ. ಯಾವಾಗ ಎನ್ನುವುದು ಹೇಳುವುದಕ್ಕಾಗದಿದ್ದರೂ, ಆಗುವುದು ಖಚಿತ.”

ನಾನು ಇಬ್ಬರಿಗೂ ಮದ್ಯವನ್ನು ತುಂಬಿದೆ. "ಅದಕ್ಕಾಗಿ ನಾವು ಮದ್ಯ ಸೇವಿಸೋಣ. ವೈಯಕ್ತಿಕ ಹಂತದಲ್ಲಿ ನಾವಿಬ್ಬರೂ ತುಂಬ ಹತ್ತಿರವಾಗಿದ್ದೇವೆ ಅನ್ನುವುದಷ್ಟೇ ಅಲ್ಲದೆ ನೀವು ಹೇಳಿದ ಗುಜರಾತ್ ಹಾಗೂ ಮೇವಾಡದ ನಡುವಿನ ಶಾಂತಿ ಒಪ್ಪಂದ, ಎರಡೂ ದೇಶಗಳಿಗೆ ವರವಾಗಿ ಪರಿಣಮಿಸಲಿದೆ. ಕಾಲ ಕೂಡಿ ಬಂದಾಗ ನೀವು ನಿಜಕ್ಕೂ ಗುಜರಾತಿನ ದೊರೆಯಾಗಿ ಎಂದು ಹಾರೈಸುತ್ತೇನೆ. ನಿಮಗೆ ಎಲ್ಲ ರೀತಿಯ ಯಶಸ್ಸನ್ನು ಕೋರುತ್ತೇನೆ. ಷಹಜಾದರೆ."

ಹದಿನೈದನೆಯ ದಿನದ ಹೊತ್ತಿಗೆ ಆತ ನನ್ನ ಜೊತೆ ಕುದುರೆ ಸವಾರಿ ಹೊರಟಿದ್ದ. "ಬನ್ನಿ ರಾಣಿ ಪದ್ಮಿನಿಯವರ ಅರಮನೆಗೆ ನಿಮ್ಮ ಜೊತೆ ನಾನು ಕುದುರೆ ಸವಾರಿ ಸ್ಪರ್ಧೆ ಮಾಡಬೇಕು" ಎಂದು ಆತ ಹೇಳಿದ. ನಮ್ಮ ವಂಶದ ಪೂರ್ವಜರಾದ ಬಪ್ಪಾ ಮತ್ತು ಇತರೆ ಮುಂಚಿನ ರಾಜರುಗಳ ಕಿರೀಟಧಾರಣೆ ನಡೆದಿದ್ದ ವೇದಿಕೆಯ ಸಮೀಪದ ರಸ್ತೆಯಲ್ಲಿ ಹೋಗುತ್ತಿದ್ದೆವು.

"ನೀವು ಪೂರ್ತಿ ಗುಣವಾಗಲು ಇನ್ನೂ ಒಂದು ವಾರ ಅಥವ ಅದಕ್ಕಿಂತ ಹೆಚ್ಚು ಕಾಲ ಬೇಕಾಗುತ್ತೆ ಅನ್ನಿಸುತ್ತೆ"

"ಏನು ಮಾತು? ಬೇರೆ ಏನೂ ನೆಪಗಳನ್ನು ಹೇಳಬೇಡಿ"

ಅವನು ಗಾಳಿಯಂತೆ ಒಮ್ಮೆಗೇ ಕುದುರೆಯನ್ನು ಓಡಿಸಿದನು. ನಾನು ಆತನನ್ನು ಹಿಂದೆ ಹಾಕಲು ಯತ್ನಿಸಿದೆ. ಆದರೆ ಏನೇ ಮಾಡಿದರೂ ಆತನ ಸಮಕ್ಕೆ ಬರಲೂ ಸಾಧ್ಯವಾಗಲಿಲ್ಲ. ಗೆಲುವಿನಿಂದಾಗಿ ಆತ ಒಳ್ಳೆ ಲಹರಿಯಲ್ಲಿದ್ದ.

"ಒಂದು ಸೂಕ್ಷ್ಮ ವಿಷಯ ಮಹಾರಾಜ್‌ಕುಮಾರ್ ಅವರೆ" ಎನ್ನುತ್ತ ನನ್ನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು "ಆದರೆ ಅದನ್ನು ಹೇಗೆ ಪ್ರಸ್ತಾಪಿಸುವುದು ಎಂದು ಗೊತ್ತಾಗುತ್ತಿಲ್ಲ" ಎಂದನು.

"ಹಾಗಿದ್ದರೆ ಅದನ್ನು ಎಷ್ಟು ಸರಳವಾಗಿ ಸಾಧ್ಯವೋ ಅಷ್ಟು ಸರಳವಾಗಿ ನನಗೆ ಹೇಳುವುದು ಒಳ್ಳೆಯದು"

ಅದರಿಂದ ಅವನಿಗೇನೂ ಅಷ್ಟೊಂದು ಅನುಕೂಲ ಆದ ಹಾಗೆ ಕಾಣಲಿಲ್ಲ. ಅವನ ಕಣ್ಣು ಸುತ್ತೆಲ್ಲಾ ಅಲೆದಾಡಿತು. "ನಾವೀಗ ಅರಮನೆ ಒಳಕ್ಕೆ ಹೋಗಬಹುದೆ?"

"ನಾವು ಅಲ್ಲಿಗೆ ಹೋಗಬಹುದೇನೋ. ಆದರೆ ಕೆಲವು ರಾಣಿಯರು ಮತ್ತು ಅವರ ಪರಿವಾರದವರು ಅಲ್ಲಿ ಸ್ನಾನ ಮಾಡುತ್ತಿರಬಹುದು." ನಾನು ಹಾಗೆ ಹೇಳುತ್ತಿದ್ದ ಹಾಗೆಯೇ ಮಹಾರಾಣಿಯವರ ಪಲ್ಲಕ್ಕಿ ಅರಮನೆಯಿಂದ ಹೊರಟಿತು.

"ಓಹ್! ಕ್ಷಮಿಸಿ, ರಾಣಿ ಪದ್ಮಿನಿಯವರ ಅರಮನೆ ಈಗಲೂ ಬಳಕೆಯಾಗುತ್ತಿದೆ ಎನ್ನುವುದು ನನಗೆ ಗೊತ್ತಿರಲಿಲ್ಲ"

"ಆದರೆ ನೀವು ನನ್ನನ್ನು ಕೇಳಬೇಕೆಂದಿದ್ದುದು ಅದನ್ನಲ್ಲ ಅಲ್ಲವೆ?"

"ಇಲ್ಲ ನಾನು ಅದನ್ನು ಕೇಳಬೇಕೆಂದಿರಲಿಲ್ಲ" ಆತ ಒಂದು ಕ್ಷಣ ಹಿಂದೆಮುಂದೆ ನೋಡಿದನು. ಆ ನಂತರ ಅವನು ಬಾಯಿ ಬಿಟ್ಟನು.

"ಅದೇ ಆ ಹೆಂಗಸು. ನಾನು ಕಾಯಿಲೆ ಮಲಗಿದ್ದಾಗ, ನನ್ನನ್ನು ನೋಡಿಕೊಳ್ಳುತ್ತಿದ್ದ ಹೆಂಗಸು ಬಹುಶಃ ನಿಮ್ಮ ದಾಯಿ ಅಂತ ಅಂದುಕೊಂಡಿದ್ದೀನಿ"

"ಹೌದು ಅವಳು ನನ್ನ ದಾಯಿ"

"ಆಕೆ ಈಗ ಬರೋದು ನಿಲ್ಲಿಸಿದ್ದಾಳೆ"

"ಅದು ಯಾಕೆ ಅಂದರೆ, ಬಹುಶಃ ನೀವೀಗ ಚೆನ್ನಾಗಿದ್ದೀರಿ, ಆಕೆಯ ಸಹಾಯ ಇನ್ನು ಬೇಕಿಲ್ಲ ಅನ್ನುವ ಕಾರಣಕ್ಕಿರಬಹುದು"

"ಹೌದು ಅದೇ ಕಾರಣ." ಆತ ಇನ್ನೂ ವಿಷಯಕ್ಕೆ ಬರುವುದಕ್ಕೆ ಕಷ್ಟ ಪಡುತ್ತಿದ್ದಾನೆ ಅನ್ನಿಸಿತು. ಅವನ ಕಣ್ಣುಗಳು ನನ್ನ ಕಣ್ಣುಗಳಲ್ಲಿ ನೆಟ್ಟುವು "ನಾನು ಅವಳನ್ನು ಇರಿಸಿಕೊಳ್ಳಬಹುದೆ?"

ಅಂದರೆ, ನೀನು ಎಲ್ಲವನ್ನೂ ನೋಡಿದ್ದೀಯಾ ಅಂತ ಅಂದುಕೊಂಡಿದ್ದೀ ಮತ್ತು ನೀನು ಏನನ್ನು ನೋಡಿಲ್ಲ ಅದನ್ನು ಕಲ್ಪಿಸಿಕೊಳ್ಳುವಷ್ಟು ಬುದ್ಧಿ ನಿನಗಿದೆ. ಈ ಜಗತ್ತಿನಲ್ಲಿರುವ ಎಲ್ಲವುದಕ್ಕೂ ಹಾಗೂ ಯಾವುದಕ್ಕೇ ಆದರೂ ಸಾಧ್ಯವಿರುವ ಎಲ್ಲ ದೃಶ್ಯಗಳನ್ನು ಕಲ್ಪಿಸಿಕೊಳ್ಳುವುದು. ನನ್ನ ಮೌನದಲ್ಲಿ ಅಡಗಿದ್ದ ಸಂಕೋಚವನ್ನು ಆತ ಗ್ರಹಿಸಿದ.

"ಶಾಶ್ವತವಾಗಿ ಅಲ್ಲ. ನಾನು ಇಲ್ಲಿ ಇರುವವರೆಗೆ ಮಾತ್ರ"

"ಅದು ನಿಮಗೂ ಅವಳಿಗೂ ಬಿಟ್ಟದ್ದು"

* * *

ಕೌಸಲ್ಯ ನನಗೆ ಸ್ತನ್ಯಪಾನ ಮಾಡಿಸಿದ್ದಳು. ಆಮೇಲೆ ನಾನು ಹದಿಮೂರು ಹದಿನಾಲ್ಕರ ಹದಿಹರಯದಲ್ಲಿದ್ದಾಗ ನನಗೆ ಲೈಂಗಿಕತೆಗೆ ಪ್ರವೇಶ ದೊರಕಿಸಿದಳು. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಮುಂಚೆಯೋ ತಡವಾಗಿಯೋ ಲೈಂಗಿಕತೆಯ ಬಗ್ಗೆ ಅರಿತುಕೊಳ್ಳುತ್ತಾರೆ. ನೀವು ಹೇಗೆ ಮಾಡುತ್ತೀರಿ ಎಂಬುದು ವಿವರಣೆಗೆ ಬಿಟ್ಟದ್ದು.

ಕೌಸಲ್ಯಳ ಪೂರ್ವಿಕರ ಬಗ್ಗೆ ನನಗೆ ಏನೂ ಗೊತ್ತಿರಲಿಲ್ಲ. ನಮ್ಮ ತಾತ ರಾಣಾ ರೈಮಲ್ ತನ್ನ ಮನ ಸೆಳೆದ ಮತ್ತು ತನ್ನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ದಾಸಿಯೊಬ್ಬಳೊಂದಿಗೆ ಅಲ್ಪಕಾಲದ ಪ್ರೇಮ ಸಂಬಂಧವಿಟ್ಟುಕೊಂಡಿದ್ದರೆಂದು ವದಂತಿ ಇತ್ತು. ಅಲ್ಪಕಾಲದ ಸಂಬಂಧ ಎಂದರೆ ಅದು ಒಂದು ರಾತ್ರಿ ಆಗಿರಬಹುದು ಅಥವಾ ಒಂದೆರಡು ರಾತ್ರಿಗಳು ಅಥವಾ ಹೊರಗಡೆ ಕೆಲವು ತಿಂಗಳುಗಳೇ ಇರಬಹುದು, ಒಂದು ವರ್ಷವೇ ಇದ್ದಿರಬಹುದು. ಆ ಸ್ವೇಚ್ಛಾಚಾರದ ಫಲವೇ ಕೌಸಲ್ಯ. ಅದೊಂದು ಕಥೆ. ಅದಲ್ಲದೆ ಬೇರೆ ಐದಾರು ಇದ್ದವು. ಬಹುಶಃ ಈ ಬಗ್ಗೆ ಕೌಸಲ್ಯ ಇನ್ನಷ್ಟು ಬೆಳಕು ಚೆಲ್ಲಬಹುದೇನೋ. ಆದರೆ ನನಗೆ ಅಂಥ ಭಾರೀ ಕುತೂಹಲವೇನೂ ಇಲ್ಲ. ಅವಳಿಗೆ ಹನ್ನೆರಡು ವರ್ಷ ಆಗಿದ್ದಾಗ ತಂದೆಯವರ ಸೇವೆಯಲ್ಲಿ ಆಸ್ಥಾನದಲ್ಲಿದ್ದ ವಂದಿ ಮಾಗಧ ಸಿಬ್ಬಂದಿಯೊಬ್ಬನಿಗೆ ಮದುವೆ ಮಾಡಿಕೊಡಲಾಗಿತ್ತು. ಕೌಸಲ್ಯ ಮತ್ತು ಆ ಸ್ತುತಿಪಾಠಕ ದಂಪತಿಗೆ ಮಂಗಳ ಎಂಬ ಮಗನಿದ್ದ. ಅವನು ನಾನು ಹುಟ್ಟುವುದಕ್ಕೆ ಹತ್ತು ದಿನ ಮುಂಚೆ ಹುಟ್ಟಿದ್ದ. ನಾನು ಹುಟ್ಟಿದ ಮೇಲೆ ಖಚಿತ ಉತ್ತರಾಧಿಕಾರಿ ಮತ್ತು ಮೇವಾಡದ ಭರವಸೆಯ ಭಾವಿ ಮಹಾರಾಜರ ಶುಶ್ರೂಷೆ ಮಾಡುವ ಜವಾಬ್ದಾರಿಯನ್ನು ಕೌಸಲ್ಯಳಿಗೆ ವಹಿಸಲಾಯಿತು. ಎದೆ ಹಾಲು ಉಣಿಸುವಲ್ಲಿ ಮಹಾರಾಜ ಕುಮಾರರ ವಿಷಯದಲ್ಲಿ ಪಕ್ಷಪಾತ ತೋರುತ್ತಿದ್ದಳೋ ಅಥವಾ ತನ್ನ ಸ್ವಂತ ಮಗನ ವಿಷಯದಲ್ಲಿ ತೋರುತ್ತಿದ್ದಳೋ ಈಗ ನನಗೆ ಖಚಿತವಾಗಿ ನೆನಪಿಲ್ಲ.

ಪ್ರಾಯಶಃ ನನಗೆ ಹೆಚ್ಚಿನ ಮುತುವರ್ಜಿ ತೋರಲಾಯಿತು. ಏನೇ ಆದರೂ ಮಹಾರಾಜನ ಜೇಷ್ಠ ಪುತ್ರನ ದಾಯಿಯಾಗಿ ಆಯ್ಕೆಯಾಗುವುದೆಂದರೆ ಅದೊಂದು ದೊಡ್ಡ ಗೌರವವಾಗಿತ್ತು. ಬಹುಶಃ ಆಕೆ ನಿಷ್ಪಕ್ಷ ಪಾತಿಯಾಗಿಯೇ ಇದ್ದಳು. ಯಾರು ಗಟ್ಟಿಯಾಗಿ ಅರಚುತ್ತಿದ್ದರೋ ಅವರಿಗೆ ಮೊದಲು ಹಾಲೂಡುತ್ತಿದ್ದಳು ಅಥವಾ ಬಹುಮಟ್ಟಿಗೆ ಎರಡೂ ಮಕ್ಕಳಿಗೆ

ಸಾಕಾಗಿ ಮಿಗುವಷ್ಟು ಹಾಲಿರುತ್ತಿತ್ತು. ಅವಳ ತುಂಬಿದ ಮೊಲೆಗಳನ್ನು ಇಬ್ಬರೂ ಜೊತೆ ಜೊತೆಯಲ್ಲೇ ಹೀರಿದೆವು.

ಮಂಗಳ ಮತ್ತು ನಾನು ಇಬ್ಬರೂ ಸುಮಾರು ಒಂದು ವರ್ಷದವರಾಗಿದ್ದಾಗ, ಕೌಸಲ್ಯಳ ಗಂಡ ಮಾಳವದ ಸೈನ್ಯದೊಂದಿಗೆ ಯುದ್ಧ ಮಾಡಲು ತಂದೆಯವರ ಜೊತೆ ಹೋಗಿ ಅಲ್ಲೇ ವೀರಮರಣವನ್ನಪ್ಪಿದ. ಕೌಸಲ್ಯ ಆಗಲೇ ಅರಮನೆಯ ಸೇವೆಯಿಂದ ಬಿಡುಗಡೆ ಪಡೆಯಬಹುದಿತ್ತು. ಅವಳ ಗಂಡನಿಗೆ ಸೇರಿದ ಹನ್ನೆರಡು ಹಳ್ಳಿಗಳಿಗೂ ಮಿಕ್ಕಿನ ಸಂಖ್ಯೆಯ ಹಳ್ಳಿಗಳು ಅವಳದಾಗಿದ್ದುವು ಜೊತೆಗೆ ತನ್ನದೇ ಆದ ಸ್ವಲ್ಪ ಹಣವನ್ನು ಇಟ್ಟುಕೊಂಡಿದ್ದಳು. ಆದರೆ ಅರಮನೆಯ ಸೇವೆಯಲ್ಲೇ ಉಳಿಯಲು ಬಯಸಿದಳು. ನಗರ ಜೀವನಕ್ಕೆ ಅವಳು ಆಗಲೇ ಒಗ್ಗಿ ಹೋಗಿದ್ದಳು ಅಲ್ಲದೆ ಮಂಗಳನಿಗೆ ಚಿತ್ತೂರಿನಲ್ಲಿ ಸಿಗುತ್ತಿದ್ದಂಥ ಶಿಕ್ಷಣ ಬೇರೆಡೆ ಸಿಗುತ್ತಿರಲಿಲ್ಲ. ಅವಳು ತನ್ನ ಆಸ್ತಿಯ ಮೇಲೆ ಒಂದು ನಿಗಾ ಇಟ್ಟಿದ್ದು, ಅಲ್ಲೊಂದು ಕೋಳಿ ಸಾಕಾಣಿಕೆ ವ್ಯವಹಾರ ಪ್ರಾರಂಭಿಸಿದಳು. ನನಗೆ ಜ್ಞಾಪಕ ಇರುವ ಹಾಗೆ ಅವಳು ಅರಮನೆಗೆ ಕೋಳಿ ಮತ್ತು ಮೊಟ್ಟೆಗಳನ್ನು ಸರಬರಾಜು ಮಾಡುತ್ತಿದ್ದವರಲ್ಲಿ ಬಹುಮುಖ್ಯಳು. ಅಲ್ಲಿಂದೀಚೆಗೆ ಆಕೆ ಗಣನೀಯವಾಗಿ ಥರಥರಾವರಿ ಬದಲಾವಣೆ ಮಾಡಿಕೊಂಡಿದ್ದಾಳೆ. ನಾವು ತಿನ್ನುವ ಶೇಕಡಾ ಐದರಷ್ಟು ಮಾಂಸ ಮತ್ತು ಶೇಕಡಾ ಹತ್ತರಷ್ಟು ತರಕಾರಿ ಬರುವುದು ಆಕೆಯ ಕೃಷಿ ಜಮೀನುಗಳಿಂದ. ಆಕೆ ಈಗ ಸಾಕಷ್ಟು ಸ್ಥಿತಿವಂತ ಹೆಣ್ಣು ಎಂದು ನಾನು ಅಂದುಕೊಂಡಿದ್ದೇನೆ. ಅದರಲ್ಲೂ ಅರಮನೆಯ ರಾಣಿಯರಿಗೆ ಮತ್ತು ಉಪಪತ್ನಿಯರಿಗೆ ಬಡ್ಡಿಗೆ ಹಣ ಸಾಲ ಕೊಡುವ ವ್ಯವಹಾರ ಪ್ರಾರಂಭಿಸಿದ ಮೇಲೆ.

ಅವಳು ಹಿನ್ನೆಲೆಗೆ ಸರಿದ ಮೇಲೂ, ನಾನು ಅನೇಕ ಸಲ ಕೌಸಲ್ಯಳ ಬಗ್ಗೆ ಯೋಚಿಸಿದ್ದೇನೆ. ಆಕೆ ಬಹುಮಟ್ಟಿಗೆ ಅರಮನೆಯಲ್ಲೇ ಹುಟ್ಟಿದವಳು. ಅವಳು ಖಂಡಿತವಾಗಿಯೂ ತನ್ನ ಬದುಕಿನ ಬಹುಭಾಗವನ್ನು ಅರಮನೆಯಲ್ಲಿ ರಾಣಿಯರೊಂದಿಗೆ ಅವರ ಸೇವಕರೊಂದಿಗೆ, ಆಸ್ಥಾನದ ಸಖಿಯರೊಂದಿಗೆ ಎಲ್ಲ ಪ್ರಮುಖ ನಾರಿಯರೊಂದಿಗೆ, ಕಳೆದಿದ್ದಾಳೆ. ಆದರೂ ಆಕೆ ಅವರೆಲ್ಲರಂತಲ್ಲ. ಅರಮನೆಯಲ್ಲಿರುವ ರಾಣಿಯರ ಬಗ್ಗೆ ಯೋಚಿಸಿದಾಗ ನನ್ನ ಹೃದಯ ಹತಾಶೆಯಲ್ಲಿ ಮುಳುಗಿ ಬಿಡುತ್ತದೆ. ರಾಣಿಯಾದದ್ದರ ಪರಿಣಾಮವಾಗಿ ಅನುಭವಿಸಬೇಕಾಗಿ ಬರುವ ಕೊನೆಯಿಲ್ಲದ ನಿಷ್ಕರುಣವಾದ ಸುದೀರ್ಘ ಬೇಸರವನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ? ಸ್ನಾನಾನಂತರ, ತಲೆಗೂದಲನ್ನು ಸ್ವಚ್ಛಗೊಳಿಸುತ್ತ ಇನ್ನಷ್ಟು ಹೊತ್ತು ಕಳೆಯಬಹುದು, ಅನಂತರ ಕೂದಲೊಣಗಿಸಿಕೊಂಡ ಮೇಲೆ, ಬೆಳಗಿನ ಉಪಾಹಾರ ಮತ್ತು ಎರಡು ಊಟ. ಎಂಟು ಗಂಟೆಗಳ ನಿದ್ದೆಯನ್ನು ಮುಗಿಸಿದ ಮೇಲೆ ಇಪ್ಪತ್ತನಾಲ್ಕು ಗಂಟೆಗಳ ಒಂದು ದಿನದಲ್ಲಿ ಇನ್ನೂ ಹನ್ನೆರಡು ಗಂಟೆಗಳು ಉಳಿಯುತ್ತವೆ. ಮತ್ತು ಈ ಹನ್ನೆರಡು ಗಂಟೆ ಮಾಡುವುದಕ್ಕೆ ಏನೇನೂ ಇರುವುದಿಲ್ಲ. ರಾಜನಿಗೆ ತುಂಬ ಅಚ್ಚುಮೆಚ್ಚಿನವಳಾಗಿದ್ದರೆ ರಾಜನು ಒಂದು ತಿಂಗಳಿನಲ್ಲಿ ಹದಿನೈದು ದಿನ ಬರಬಹುದು. ಆದರೆ ಅವನು ವರ್ಷದಲ್ಲಿ ಆರು ತಿಂಗಳು ರಾಜಧಾನಿಯ ಹೊರಗಿರುತ್ತಾನೆ. ತಂದೆಯವರಿಗೆ ಇಪ್ಪತ್ತೇಳು ಜನ ರಾಣಿಯರಿದ್ದಾರೆ. ಇನ್ನು ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಉಪಪತ್ನಿಯರ ವಿಷಯ ಹೇಳುವುದೇ ಬೇಡ. ಇನ್ನುಳಿದ ಇಪ್ಪತ್ತಾರು ರಾಣಿಯರು ಮತ್ತು ಉಪಪತ್ನಿಯರುಗಳಿಗೇನಾಗುತ್ತದೆ? ಸುದೀರ್ಘ ವಿರಾಮಕಾಲದ ಬೇಸರ ಅವರಿಗೆ ಹುಚ್ಚು ಹಿಡಿಸುವುದಿಲ್ಲವೆ? ಖಂಡಿತವಾಗಿಯೂ. ಆಗೊಮ್ಮೆ ಈಗೊಮ್ಮೆ ಉಪಪತ್ನಿ ಅಥವಾ ರಾಣಿಯರು ಪ್ರಣಯ ವ್ಯವಹಾರವಿಟ್ಟುಕೊಂಡಿರುವ ಬಗ್ಗೆ ವದಂತಿಗಳು ಹುಟ್ಟುತ್ತವೆ.

ಆದರೆ ರಾಣಿಯೊಬ್ಬಳ ಅತ್ಯಂತ ಹೀನ ಶತ್ರುವೆಂದರೆ ಉಳಿದೆಲ್ಲ ರಾಣಿಯರು. ಅದರಿಂದ ಸಂಗತಿಗಳು ಅದೆಷ್ಟು ತೊಡಕಾಗಬಹುದೆಂಬುದನ್ನು ಊಹಿಸಬಹುದೆ? ಕಾರಣ ಸೇವಕಿಯೊಬ್ಬಳಿಗೆ ಏಕಾಂತ ಸಿಗಬಹುದು. ರಾಣಿಯರು ಒಬ್ಬರು ಇನ್ನೊಬ್ಬರ ಮೇಲೆ ಸದಾ ನಿಗಾ ಇಟ್ಟಿರುತ್ತಾರೆ. ಬೇರೆ ಯಾರೂ ತಮ್ಮ ಗುಂಪಿನಿಂದ ಹೊರಹೋಗುವುದು ಅವರಿಗಿಷ್ಟವಿರುವುದಿಲ್ಲ.

ಮಕ್ಕಳೊಂದಿಗೆ ಅವರು ಸಮಯ ಕಳೆಯಲಾರರು. ಏಕೆಂದರೆ ಅದಕ್ಕೆ ದಾದಿಯರಿರುತ್ತಾರೆ. ತಮ್ಮ ಸ್ವಂತ ಮಕ್ಕಳಿಗೂ ಅವರು ಸ್ತನ್ಯಪಾನ ಮಾಡಿಸಲಾರರು. ಏಕೆಂದರೆ ಹಾಗೆ ಮಾಡಿಸುವ ಪದ್ಧತಿ ಇಲ್ಲ. ಹಾಲು ತುಂಬಿಕೊಂಡು ನೋವಿನಿಂದ ರಾಣಿಯರು ಕಿರಿಚುತ್ತಿರುವುದನ್ನು ನಾನು ನೋಡಿದ್ದೇನೆ. ಕಾರಣ ತಮ್ಮ ಸ್ತನಗಳನ್ನು ಹಿಸುಕಿ ಹಾಲನ್ನು ಹೊರಹೊರಡಿಸುವಂತೆ ಯಾರೂ ಅವರಿಗೆ ಹೇಳಿರುವುದಿಲ್ಲ. ಅಲ್ಲದೆ ಆ ಸ್ತನಗಳು ಎಷ್ಟೊಂದು ಹಿಗ್ಗಿಕೊಂಡು ಅದೆಷ್ಟು ಸೂಕ್ಷ್ಮವಾಗಿರುತ್ತವೆಂದರೆ, ಗಾಳಿಯ ಒಂದು ಸುಳಿವು ಕೂಡ ಅವರಿಗೆ ವೇದನಾಮಯವಾಗಬಲ್ಲುದು. ಅವರಲ್ಲಿ ಬಹಳಷ್ಟು ಮಂದಿ ಓದುವುದಿಲ್ಲ. ಅವರು ಕುಂಟೋಬಿಲ್ಲೆಯನ್ನೋ ಅಥವಾ ಇನ್ನೇನಾದರೂ ಮಕ್ಕಳಾಟವನ್ನೋ ಆಡುತ್ತಾರೆ ಅಥವಾ ಇಸ್ಪೀಟಾಡುತ್ತಾರೆ, ಜೂಜಾಡುತ್ತಾರೆ ಮತ್ತು ಶ್ರೀಮಂತ ರಾಣಿಯರ ಬಳಿಯೋ ಅಥವಾ ಆದಿನಾಥಜೀಯವರ ಕುಟುಂಬದವರ ಬಳಿಯೋ ತುಂಬ ಸಾಲ ಮಾಡಿ ಸಾಲದ ಜಾಲದಲ್ಲಿರುತ್ತಾರೆ. ಅವರು ಮಾತಾಡುತ್ತಾರೆ, ಹರಟೆ ಹೊಡೆಯುತ್ತಾರೆ ಮತ್ತು ಸಂಚುಗಳನ್ನು ಹೂಡುತ್ತಾರೆ, ಅಂತಃಪುರದಲ್ಲಿ ಅನೇಕ ಬಣಗಳಿವೆ. ಅವುಗಳಲ್ಲಿ ಶಾಶ್ವತವಾಗಿ ಉಳಿಯುವದೆಂದರೆ ರಾಜನ ಮೆಚ್ಚಿನ ರಾಣಿಯ ಬಣಕ್ಕೂ ಉಳಿದ ಇತರೆ ರಾಣಿಯರೆಲ್ಲರ ಬಣಕ್ಕೂ ವಿಭಜನೆ. ಮೆಚ್ಚಿನವಳು ಬದಲಾಗುತ್ತಾಳೆ. ಶಾಶ್ವತವಾಗಿರುವುದೆಂದರೆ ವಿರೋಧಿ ಬಣ.

ದೊಡ್ಡ ಪ್ರತಿಫಲವೆಂದರೆ ರಾಜಸಿಂಹಾಸನ ಎಂಬುದು ಸುಸ್ಪಷ್ಟ. ಪುತ್ರನನ್ನು ಹೆತ್ತ ಯಾವ ರಾಣಿಯೇ ಆದರೂ ರಾಜ ಕಿರೀಟ ತನ್ನ ಮಗನ ಶಿರಸ್ಸನ್ನು ಅಲಂಕರಿಸಬೇಕೆಂದು ಬಯಸುತ್ತಾಳೆ. ಆದರೆ ಕಿರೀಟವೆಂಬುದು ರಾಣಿಯರ ನಡುವಿನ ಪರಸ್ಪರ ತೀವ್ರ ದ್ವೇಷದ ಆರಂಭ. ಅವರಿಗೆ ಸಿಗುವ ಭತ್ಯೆಗಳು ಉಡುಪುಗಳ ಕಪಾಟಿನ ಗಾತ್ರ, ಯಾರಿಗೆ ಎಲ್ಲಿ ಕುಳಿತುಕೊಳ್ಳಲು ಅವಕಾಶ ಸಿಗುತ್ತದೆ, ಯಾರ ಮಗು ಓದಿನಲ್ಲಿ ಚುರುಕಾಗಿದೆ, ಯಾರ ಬಳಿ ಹೆಚ್ಚಿನ ಸಂಖ್ಯೆಯ ಹಿಜಡಾಗಳು ಮತ್ತು ನೋಡಿಕೊಳ್ಳುವ ದಾದಿಯರಿದ್ದಾರೆ. ಯಾರ ತಂದೆ ಅಥವಾ ಮನೆತನ ಹೆಚ್ಚು ಶಕ್ತಿಶಾಲಿ, ಯಾರಿಗೆ ಉದ್ದ ಕೂದಲಿದೆ, ಯಾರ ಚರ್ಮ ತುಂಬ ನಯವಾಗಿದೆ, ಇವುಗಳಲ್ಲಿ ಯಾವೊಂದು ನೆಪವೂ ತಾನು ಅವಮಾನಿತಳಾದೆನೆಂದು ವಂಚಿತಳಾದೆನೆಂದು ತಿಳಿಯಲು ಮತ್ತು ದ್ವೇಷ ಸಾಧಿಸಲು ಸಾಕು. ಲೈಂಗಿಕ ಪ್ರಲೋಭನೆ ಖಂಡಿತವಾಗಿಯೂ ನೆರವಾಗುತ್ತದೆ. ಆದರೆ ರಾಣಿ ಕರ್ಮವತಿ ತಂದೆಯ ಮೆಚ್ಚಿನ ರಾಣಿಯಾಗಿದ್ದುದು ಬಹಳ ಹಿಂದೆ. ಇಷ್ಟಾದರೂ ಈಗಲೂ ಅವರ ಮೇಲೆ ಆಕೆ ಅಪೂರ್ವವಾದ ಅಧಿಕಾರ ಮತ್ತು ಹಿಡಿತವನ್ನು ಹೊಂದಿರುವುದನ್ನು ಅರ್ಥೈಸಿಕೊಳ್ಳುವುದು ಮತ್ತು ವಿವರಿಸುವುದು ಎರಡೂ ಕಷ್ಟ. ತಂದೆಯವರಾದರೋ ಅತ್ಯಂತ ಜಾಗರೂಕ ವ್ಯಕ್ತಿ. ಎಲ್ಲ ವಿಷಯಗಳನ್ನೂ ಅತ್ಯಂತ ಎಚ್ಚರಿಕೆಯಿಂದ ತೂಗಿ ನೋಡುವಂಥ, ಎಂದೂ ಭಾವಾವೇಗಕ್ಕೊಳಗಾಗಿ ಕಾರ್ಯ ಪ್ರವೃತ್ತರಾಗದಂಥ ವ್ಯಕ್ತಿ. ಇಷ್ಟಾದರೂ ರಾಣಿ ಕರ್ಮವತಿ ಅಕ್ಕಪಕ್ಕದಲ್ಲಿದ್ದರೆ ಅಥವಾ ಅವರ ಮೇಲೆ ತನ್ನ ಕೈವಾಡ ತೋರಿಸುವ ಅವಕಾಶವಿದ್ದರೆ ಈ ಅತ್ಯಂತ ವ್ಯವಹಾರ ಕುಶಲ ಮತ್ತು ವಿವೇಚನಾಶೀಲ ಮನುಷ್ಯ ತನ್ನೆಲ್ಲ ವಿವೇಚನೆಯನ್ನು ನೀಗಿಕೊಂಡು ಬಿಡಬಲ್ಲ. ಇಲ್ಲಿಯವರೆಗೂ, ಬಹು ಮಟ್ಟಿಗೆ ತೀರಾ ಯಃಕಶ್ಚಿತ್ ವಿಷಯಗಳಿಗೆ

ಸಂಬಂಧಿಸಿದಂತೆ ಮಾತ್ರ ಆಕೆ ತನ್ನ ಇಷ್ಟ ಸಾಧಿಸಿಕೊಂಡಿದ್ದಾಳೆ ಎನ್ನುವುದು ಅದೃಷ್ಟವೇ ಸರಿ. ಆದರೆ ಅದು ಅತ್ಯಂತ ಕೆಟ್ಟ ಪೂರ್ವ ನಿದರ್ಶನ ಹಾಗೂ ಇಷ್ಟರಲ್ಲೇ ಆಕೆ ರಾಜ್ಯದ ಭವಿಷ್ಯವನ್ನು ಪ್ರಭಾವಿಸುವಂಥ ವಿಷಯಗಳಲ್ಲೂ ಅವರ ಕೈಗಳನ್ನು ಕಟ್ಟಿಹಾಕಬಹುದು.

ಏನೇ ಆಗಲಿ ಒಂದು ಸುದೀರ್ಘ ಸುತ್ತು ಬಳಸಿನ ಅಪ್ರಸ್ತುತ ಪ್ರಸ್ತಾಪ ಕೌಸಲ್ಯಳನ್ನು ಕುರಿತು ಹೇಳುತ್ತದೆ. ಅವಳಿಗೆ ಹರಟೆಹೊಡೆಯಲಾಗಲಿ. ಚಿಲ್ಲರೆ ರಾಜಕೀಯಕ್ಕಾಗಲಿ ಸಮಯವಿರಲಿಲ್ಲ. ನಾನು ತುಂಬ ಚಿಕ್ಕವನಾಗಿದ್ದಾಗ ನನ್ನನ್ನು ತನ್ನ ಬದುಕಿನ ಕೃತಿಯಾಗಿ ಮಾಡಲು ನಿರ್ಧರಿಸಿದಳು. ಹಾಗೆ ನೋಡಿದರೆ ಇದು ಖಂಡಿತವಾಗಿಯೂ ಪಶ್ಚಿಮ ಬುದ್ಧಿಯ ಮಾತು. ಆದರೆ ಕೌಸಲ್ಯಳಂತೂ ಸ್ಪಷ್ಟ ಚಿಂತನೆಯ ಹಾಗೂ ಸಂಗತಿಗಳ ಬಗ್ಗೆ ದೂರದೃಷ್ಟಿಯ ತೀರ್ಮಾನ ತೆಗೆದುಕೊಳ್ಳಬಲ್ಲಂಥವಳು. ಅವಳ ಕಾರ್ಯಯೋಜನೆ ಇದ್ದದ್ದು ತೀರ ಸಂಕುಚಿತವಾದ ಭಿತ್ತಿಯ ಮೇಲೆ ಅನ್ನುವುದನ್ನು ಒಪ್ಪಬೇಕು. ಆದರೆ ಅದು ಅವಳಿಗೆ ತೀಕ್ಷ್ಣ ಕೇಂದ್ರ ದೃಷ್ಟಿ ನೀಡಿತು. ಅಲ್ಲದೆ ಒಂದು ವೇಳೆ ನಾನು ಯಾವತ್ತಾದರೂ ರಾಜನಾದರೆ, ಅವಳ ಒಂದು ರೀತಿಯ ಒಂದು ನಿರ್ದಿಷ್ಟ ಅಭಿಪ್ರಾಯದ ಪರವಾದ ಬಣ್ಣ ತೊಡೆಯುವ ಲೋಕ ದೃಷ್ಟಿ ಸಮಸ್ತ ಜನತೆಯ ಮೇಲೆ ಪರಿಣಾಮಬೀರುತ್ತದೆ. ಅಧಿಕಾರ, ಅದು ತೆರೆಯ ಮರೆಯ ಅಧಿಕಾರವೇ ಆದರೂ ಅದು ತನ್ನದೇ ಆದ ಪ್ರತಿಫಲ ಮತ್ತು ಉದ್ದೇಶದಿಂದ ಕೂಡಿರುವಂಥದು. ಅಲ್ಲದೆ ಅದು ಅವಳ ವ್ಯಕ್ತಿಯ ಆಯ್ಕೆಯಲ್ಲಿ ತನ್ನ ಪಾತ್ರವನ್ನು ವಹಿಸಿದ್ದಿರಬೇಕು. ಅವಳು ಮಹತ್ವಾಕಾಂಕ್ಷಿಯೂ ಹೌದು. ಅದು ಅವಳಿಗಿಂತ ಹೆಚ್ಚಾಗಿ ನನ್ನ ಸಲುವಾಗಿ. ನಾನು ಅವಳಿಂದ ವಾರಸುರೂಪದಲ್ಲಿ ಪಡೆದದ್ದೇನು ಎಂಬುದನ್ನು ಸರಿಯಾಗಿ ತಿಳಿಯಲು ತುಂಬ ದೀರ್ಘ ಸಮಯ ಹಿಡಿಸುತ್ತದಷ್ಟೇ ಅಲ್ಲ ಹೆಚ್ಚಿನ ಪರಿಪಕ್ವತೆ ಬೇಕಾಗುತ್ತದೆ ಎನಿಸುತ್ತದೆ. ನನಗನ್ನಿಸುವುದೆಂದರೆ ಅವಳು ಸಾಕಷ್ಟು ಯೋಚಿಸದೆ ನನಗೆ ಒಂದು ವಸ್ತುವನ್ನು, ವಿಷಯವನ್ನು ನೋಡುವ ದೃಷ್ಟಿಯನ್ನು ನೀಡಿದಳು. ಜಗತ್ತಿನಲ್ಲಿ ಸರಿ ತಪ್ಪು ಎನ್ನುವುದು ಇದೆ ಹಾಗೂ ಎಲ್ಲ ಸಮಯದಲ್ಲೂ ಒಂದು ನೈತಿಕ ಆಯ್ಕೆ ಸೇರಿರುತ್ತದೆ. ಮುತ್ಸದ್ದಿತನದ ಕೌಶಲ ಎಂದರೆ ನಾವು 'ಸರಿ' ಎನಿಸಿದ್ದರ ಕಡೆಗೆ ಎಷ್ಟರಮಟ್ಟಿಗೆ ನಿಲ್ಲಬಲ್ಲೆವು ಹಾಗೂ ರಾಷ್ಟ್ರಹಿತದೃಷ್ಟಿಯಿಂದ ಅದನ್ನು ಯಾವಾಗ ತ್ಯಜಿಸಬಹುದು ಎಂಬುದನ್ನು ತಿಳಿಯುವುದೇ ಆಗಿದೆ. ಅವಳ ದೃಷ್ಟಿಯಲ್ಲಿ ನಿರ್ದಯತೆ ಒಂದು ಗುಣ. ಅದಕ್ಕೂ ಕ್ರೌರ್ಯ ಅಥವಾ ಚಿತ್ರಹಿಂಸೆಗೂ ಸಂಬಂಧವಿಲ್ಲ. ನಿರ್ದಯತೆಯು, ಬದುಕಿನ ಗೌಣಸಂಗತಿಗಳು ಮತ್ತು ಅಸಂಬದ್ಧತೆಗಳಲ್ಲಿ ಸಿಲುಕಿಕೊಳ್ಳದಿರುವ ಅಥವಾ ಅವುಗಳಿಂದ ಪ್ರಭಾವಿತವಾಗದಿರುವ ಸಲುವಾಗಿ, ವಿಷಯಗಳಲ್ಲಿ, ನಿಸ್ಸಾರವಾದದ್ದನ್ನೆಲ್ಲ ತೆಗೆದು ಹಾಕಿ ಸಾರವತ್ತಾದ್ದಕ್ಕೆ ಅವನ್ನು ಭಟ್ಟಿ ಇಳಿಸುವುದು. ಅವಳಿಗೆ ಗೊಂದಲಮಯತೆ ಅಕ್ಷಮ್ಯವಾಗಿತ್ತು. ಅವಳಲ್ಲದೆ ಇದ್ದರೆ, ನಮ್ಮ ಕುಟುಂಬದ ಇತರೆಯವರಿಗೆ ಹೇಗೋ ಹಾಗೇ ನನಗೂ ವಿದ್ಯಾವಂತರ ಬಗ್ಗೆ ತಿರಸ್ಕಾರವೇ. ನಮ್ಮ ರಜಪೂತ ಬಂಧುಗಳಲ್ಲಿ ಬುದ್ಧಿಜೀವಿಗಳಿಗೆ ಎಂದೂ ಹೆಚ್ಚು ಬೆಲೆಯಿಲ್ಲ. ಅವರನ್ನೇನೂ ದೂರವಿಡಲಾಗುವುದಿಲ್ಲ. ಆದರೆ ಅವರು ಹಾಸ್ಯಾಸ್ಪದರು ಮತ್ತು ತಿರಸ್ಕೃತರು. ಕ್ರಿಯಾಶೀಲ ಜೀವನವೊಂದೇ ಅವರ ಬದುಕಿನ ಏಕೈಕ ಗುರಿ.

ಸ್ವತಃ ಕೌಸಲ್ಯಳಿಗೆ ಓದು ಬರಹ ಗೊತ್ತಿರಲಿಲ್ಲ. ಅವಳು ಬಾಲಕಿಯಾಗಿದ್ದಾಗ, ತನ್ನದೇ ವಯಸ್ಸಿನ ರಾಜಕುಮಾರಿಯರೊಂದಿಗೆ ಇರುತ್ತಿದ್ದಳು ಮತ್ತು ಅವಳ ಉಪಾಧ್ಯಾಯರೇ ಇವಳಿಗೂ ಇರುತ್ತಿದ್ದರು. ಅವಳಿಗೆ ಕಲಿಕೆಯಲ್ಲೇನೋ ಕೊರತೆ ಇದ್ದದ್ದರಿಂದ ಓದುವುದು, ಬರೆಯುವುದರಲ್ಲಿ ಪ್ರಾವೀಣ್ಯ ಹೊಂದಲಾಗಲಿಲ್ಲ. ಅವಳು ಸೂಕ್ಷ್ಮಸಂವೇದನೆ ಹೊಂದಿದವಳಾಗಿದ್ದಳು ಮತ್ತು ಸ್ವಾಭಿಮಾನಿಯಾಗಿದ್ದಳು. ಅವಳಿಗಿದ್ದ ಕೊರತೆಯಿಂದಾಗಿ

ನಷ್ಟ ಅನುಭವಿಸಬೇಕಾಯಿತು. ಈ ಕೊರತೆಯನ್ನು ತುಂಬಿಕೊಳ್ಳಲೆಂದೋ ಏನೋ ಆಕೆಗೆ ನೆನಪು ಸಂಪೂರ್ಣವಾಗಿತ್ತು. ಅವಳೇನೂ ಅಪಾರ ಶ್ರದ್ಧಾಭಕ್ತಿಯ ಅಥವಾ ಮಿತಿಮೀರಿದ ಧಾರ್ಮಿಕ ಭಾವದ ವ್ಯಕ್ತಿಯಾಗಿರಲಿಲ್ಲ. ಆದರೆ ಅವಳು ನಿಯತವಾಗಿ ದೇವಸ್ಥಾನಗಳಿಗೆ ಮತ್ತು ಕೀರ್ತನೆಗಳಿಗೆ ಹೋಗುತ್ತಿದ್ದಳು. ಬ್ರಾಹ್ಮಣರು ಮತ್ತು ಚಾರಣರು ಮಾತನಾಡಲು ಮತ್ತು ತಮಗಿರುವ ಜ್ಞಾನವನ್ನು ತೋರಿಸಿಕೊಳ್ಳ ಬಯಸುತ್ತಾರೆ ಎಂದು ಹೇಳಿದಳು. ಕೆಲವೊಮ್ಮೆ ತಾವು ರಾಜರುಗಳಿಗಿಂತ ಚೆನ್ನಾಗಿ ಆಡಳಿತ ನಡೆಸಬಲ್ಲೆವೆಂದು ಭಾವಿಸಿದ್ದರು. ತಮ್ಮ ವಾದವನ್ನು ಸಮರ್ಥಿಸಲು ಪೌರಾಣಿಕ, ಐತಿಹಾಸಿಕ, ಲೌಕಿಕ ಎಲ್ಲ ಮೂಲಗಳಿಂದ ಶ್ಲೋಕಗಳನ್ನು ಉದ್ಧರಿಸುತ್ತಿದ್ದರು. ಅವರು ಬಹಳಷ್ಟು ಸಲ ಉದ್ಧರಿಸುತ್ತಿದ್ದ ಬಹಳ ಮುಖ್ಯ ವ್ಯಕ್ತಿಯೆಂದರೆ ಅರ್ಥಶಾಸ್ತ್ರ ಕರ್ತೃವಾದ ಕೌಟಿಲ್ಯನದು ಎಂದು ತಿಳಿಸಿದಳು. ನಾನು ಹದಿನಾಲ್ಕು ವರ್ಷದವನಾಗಿದ್ದಾಗ ತಂದೆಯವರ ಗ್ರಂಥ ಭಂಡಾರದಿಂದ ಅರ್ಥಶಾಸ್ತ್ರ ಗ್ರಂಥವನ್ನು ತರಬೇಕೆಂದು ಹೇಳಿ, ಅದರಿಂದ ದಿನವೂ ಎರಡು ಪುಟವನ್ನು ನಾನು ಅವಳಿಗೆ ಓದಿ ಹೇಳುವಂತೆ ಮಾಡಿದಳು. ಆ ಕಾಲದಲ್ಲಿ ಅದರ ಮಹತ್ವ ಮತ್ತು ಅರ್ಥ ಬಹಳ ಮಟ್ಟಿಗೆ ನನ್ನ ಹಿಡಿತಕ್ಕೆ ಸಿಕ್ಕದಿದ್ದರೂ ಅದು ಅವಳ ಬದುಕಿನ ಅತ್ಯಂತ ಸಾರ್ಥಕ ಅನುಭವಗಳಲ್ಲೊಂದು. ಅವಳು ಯಾವುದಾದರೊಂದು ದೃಷ್ಟಾಂತ ಕಥೆ, ಮಾದರಿ ನಿದರ್ಶನಗಳ ಮೂಲಕ ವಿಷಯದ ಕೇಂದ್ರಭಾಗಕ್ಕೆ ಹೋಗುತ್ತಿದ್ದಳಾದ್ದರಿಂದ ಮೇವಾಡದ ನಮ್ಮದೇ ರಾಜಕೀಯ ಘಟನೆಗಳ ವಾಸ್ತವ ಬದುಕಿನ ಬಿಕ್ಕಟ್ಟು ಮತ್ತು ಸಂದರ್ಭಗಳಿಂದ ಕೌಟಿಲ್ಯನ ಬೋಧನೆಗಳನ್ನು ನನಗೆ ಪ್ರಾಯೋಗಿಕವಾಗಿ ಮನದಟ್ಟುಮಾಡಿಸಿದಳು.

ನನಗೆ ಆ ದಿನಗಳು ಸ್ಪಷ್ಟವಾಗಿ ನೆನಪಾಗುತ್ತವೆ. ನಾನು ಬೇರೇನನ್ನೂ ಮಾಡಲಾಗುತ್ತಿರಲಿಲ್ಲ. ಅವಳಿಗೆ ಅರ್ಥಶಾಸ್ತ್ರವನ್ನು ಓದಿ ಹೇಳುತ್ತಿದ್ದಾಗಲೂ, ನನ್ನ ಮನಸ್ಸು ಅಲೆದಾಡುತ್ತಿತ್ತು. ಅವಳು ನನ್ನನ್ನು ತೀಕ್ಷ್ಣವಾಗಿ ಆಕ್ಷೇಪಿಸುತ್ತಿದ್ದಳು. ಕಾರಣ ನಾನು ಗ್ರಂಥದಲ್ಲಿಯ ಪದಗಳನ್ನು ನೋಡಿಕೊಂಡು ಪುನರುಚ್ಚರಿಸುತ್ತಿದ್ದಾಗ, ಅರ್ಥ ತಪ್ಪಿಹೋಗುತ್ತಿತ್ತು ಮತ್ತು ನನ್ನ ಓದು ಸರಿಯಾಗುತ್ತಿರಲಿಲ್ಲ.

ಮಂಗಳನೂ ಸೇರಿದಂತೆ ನನ್ನ ಗೆಳೆಯರೆಲ್ಲ ಬಹಳ ಹೆಚ್ಚಾಗಿ ಮುಷ್ಟಿ ಮೈಥುನ ಮಾಡಿಕೊಳ್ಳುತ್ತಿದ್ದರು. ಅವರು ಅದನ್ನು ಎಷ್ಟೊಂದು ತೀವ್ರವಾಗಿ ಮತ್ತು ಉತ್ಕಟವಾಗಿ ಮಾಡಿಕೊಳ್ಳುತ್ತಿದ್ದರೆಂದರೆ ಅವರಿಗೆ ಅದು ಬಹುಮಟ್ಟಿಗೆ ಧಾರ್ಮಿಕ ಆಚರಣೆಯಂತಿತ್ತು. ಆದರೆ ಅದು ಎಲ್ಲರೂ ಒಟ್ಟಾಗಿ ಒಂದೆಡೆ ಸೇರಿಕೊಂಡು ತಮ್ಮ ಶಿಶ್ನಗಳನ್ನು ತಟ್ಟಿಕೊಳ್ಳುವ ಸಾಮೂಹಿಕ ಕ್ರಿಯೆಯಾಗಿರಲಿಲ್ಲ. ಮುಷ್ಟಿ ಮೈಥುನ ಮಾಡಿಕೊಳ್ಳಬಹುದಿತ್ತು. ಆದರೆ ಅದು ಕಡ್ಡಾಯವಿರಲಿಲ್ಲ. ಇದು ನನ್ನ ಅದೃಷ್ಟ. ಪ್ರತಿಷ್ಠೆ ಅಥವಾ ನಾನು ಬೇರೆಯವರಿಗಿಂತ ಶ್ರೇಷ್ಠ ಎಂಬ ಭಾವನೆಯ ಕಾರಣಕ್ಕಾಗಿ ಅಲ್ಲ. ಆದರೆ ನನ್ನೊಂದಿಗೆ ನಾನೇ ರಮಿಸುವುದರಲ್ಲಿ ನಾನು ಯಾವುದೇ ಉತ್ಸಾಹವನ್ನು ತಾಳಲಾರದಾದೆ. ಇದರ ಪರಿಣಾಮವಾಗಿಯೋ ಅಥವಾ ಅಲ್ಲವೋ ಖಚಿತವಾಗಿ ಹೇಳಲಾರೆ, ಆದರೆ ಬಹುಮಟ್ಟಿಗೆ ಪ್ರತಿರಾತ್ರಿಯೂ ಕಾಮದ ಕನಸುಗಳು ಬಿದ್ದು ವೀರ್ಯ ಸ್ಖಲನವಾಗತೊಡಗಿತು. ಕೆಲವೊಮ್ಮೆ ಎರಡು ಸಲ. ದಿನವೂ ಮಲಗುವಾಗ ಲಂಗೋಟಿ ಕಟ್ಟಿಕೊಳ್ಳತೊಡಗಿದೆ. ಅದರಿಂದ ವೀರ್ಯ ಸ್ಖಲನವಾಗುವುದು ಕಮ್ಮಿಯಾಯಿತಾದರೂ ಅದು ನೆರವಾಗಲಿಲ್ಲ. ಸ್ಖಲನದಿಂದ ಹೊರಹೊಮ್ಮಿದ್ದು ಏನೇ ಆಗಿದ್ದರೂ, ಅದು 'ನೀರು' ಆಗಿರಲಿಲ್ಲ ಎಂಬುದಂತೂ ನಿಜ. ಹಾಳಾದ್ದು ಅದು ಬಟ್ಟೆಯ ಮೇಲೆ ಗಂಜಿಯಂಥ ಮಂದ ಕರೆಯನ್ನುಂಟುಮಾಡುತ್ತಿತ್ತು.

ನಾನು ಆತುರಾತುರವಾಗಿ ಮೇಲು ಹಾಸನ್ನು ತೆಗೆದುಕೊಂಡು ಬಚ್ಚಲು ಮನೆಗೆ

ಹೋಗಿ ತೊಳೆಯುತ್ತಿದ್ದೆ. ಅಲ್ಲಿಂದ ಹೊರಕ್ಕೆ ಬಂದ ಮೇಲೆ ಅದೇನಷ್ಟು ಬುದ್ಧಿವಂತಿಕೆಯ ಕ್ರಮವಾಗಿರಲಿಲ್ಲ ಎಂದು ಅರಿವಾಯಿತು. ಹಾಸಿಗೆಯಲ್ಲಿ ಹೇಗೂ ಕಲೆ ಆಗಿಯೇ ಇರುತ್ತಿತ್ತು. ಜೊತೆಗೆ ನಾನು ಹಾಸಿಗೆಯನ್ನು ಒದ್ದೆ ಮಾಡುತ್ತಿದ್ದೇನೆಂದು ಕೌಸಲ್ಯ ನಂಬುವಷ್ಟು ಅದು ಒದ್ದೆಯಾಗಿರುತ್ತಿತ್ತು. ಮೊದಲ ದಿನ ನಾನು ಮೈಗೆ ಹುಷಾರಿಲ್ಲ ಎಂದು ನಟಿಸಿ ಕಾಲಿನಿಂದ ಕುತ್ತಿಗೆಯವರೆಗೂ ಒಂದು ತೆಳು ಹೊದಿಕೆ ಹೊದ್ದುಕೊಂಡೆ.

"ಮಹಾರಾಜ್‌ಕುಮಾರ್ ಎಷ್ಟು ಹೊತ್ತಾಗಿದೆ ಈಗ ಅಂತ ಗೊತ್ತಿಲ್ಲವೇನು ನಿಮಗೆ? ಏಳಿ, ಎದ್ದು ಬಟ್ಟೆ ಹಾಕಿಕೊಳ್ಳಿ ಇಲ್ಲದೆ ಹೋದರೆ ತರಗತಿಗೆ ತಡವಾಗಿ ಬಿಡುತ್ತೆ"

ನಾನು ಕಣ್ತೆರೆದು ಮೌನವದನನಾಗಿ ಅವಳತ್ತ ನೋಡಿದೆ. "ನನಗೆ ಜ್ವರ ಬಂದ ಹಾಗೆ ಆಗಿದೆ ಕೌಸಲ್ಯ" ಅವಳು ಹತ್ತಿರ ಬಂದು ನನ್ನ ಹಣೆಯ ಮೇಲೆ ಕೈ ಇಟ್ಟು ನೋಡಿದಳು. "ಬಿಸಿಯಾಗಿದೆ ಎಂದು ಅನ್ನಿಸುತ್ತಿಲ್ಲ. ಮನೆಯಲ್ಲಿ ಮಾಡಿಕೊಂಡು ಬರುವುದಕ್ಕೆ ಹೇಳಿದ್ದನ್ನು ಮಾಡಿಲ್ಲ ಅಥವಾ ಈ ದಿನದ ಲಘು ಪರೀಕ್ಷೆ ತಪ್ಪಿಸಿಕೊಳ್ಳಬೇಕು ಅನ್ನುವುದನ್ನು ನನಗೆ ಹೇಳಬೇಡಿ".

ನಾನು ತಲೆ ಅಲ್ಲಾಡಿಸಿದೆ. "ಮಂಗಳನನ್ನು ಕೇಳು ಬೇಕಾದರೆ, ಇವತ್ತು ಯಾವ ಲಘು ಪರೀಕ್ಷೆಯೂ ಇಲ್ಲ"

"ನೋಡೋಣ ಮಧ್ಯಾಹ್ನದ ಹೊತ್ತಿಗೆ ನಿಮ್ಮ ಪರಿಸ್ಥಿತಿ ಹೇಗಿರುತ್ತೆ ಅಂತ ನೋಡೋಣ"

ನಾನು ನನ್ನ ಕಣ್ಣುಗಳನ್ನು ಮುಚ್ಚಿಕೊಂಡೆ. ಸುತ್ತಮುತ್ತಿನ ಜಾಗವನ್ನೆಲ್ಲ ಚೊಕ್ಕಟಗೊಳಿಸುತ್ತ ಒಂದರ ಮೇಲೊಂದು ಏನೇನೋ ಚಿಲ್ಲರೆ ಕೆಲಸಗಳನ್ನು ಮಾಡುತ್ತಾ ಇದ್ದಳು. ನಾನು ನಿದ್ದೆ ಹೋದದ್ದರಿಂದ ಅವಳು ಯಾವಾಗ ಅಲ್ಲಿಂದ ಹೊರಟಳು ಎಂದು ನನಗೆ ಗೊತ್ತಾಗಲಿಲ್ಲ. ನಾನು ಹತ್ತೂವರೆಯ ಹೊತ್ತಿಗೆ ಎಚ್ಚೆತ್ತೆ. ಹಾಸಿಗೆ ಮೇಲಿನ ವಸ್ತ್ರದ ಒದ್ದೆ ಆರಿ ಹೋಗಿತ್ತು. ಆದರೆ ಅಲ್ಲೊಂದು ಗುರುತಾಗಿತ್ತು. ನನಗೆ ಇನ್ನೊಮ್ಮೆ ವೀರ್ಯಸ್ಖಲನವಾಗಿತ್ತು. ನಾನು ಏನು ಮಾಡಲಿ? ಕೌಸಲ್ಯ ತಾಯಿಗೆ ಇದನ್ನು ಹೇಳುವಳೆ? ತಾಯಿ ಅದನ್ನು ತಂದೆಯವರಿಗೆ ಹೇಳುತ್ತಾರಾ?

ನನ್ನ ಈ ರಾತ್ರಿ ಹೊತ್ತಿನ ವಿಪರೀತ ವೀರ್ಯಸ್ಖಲನದ ಸಂಗತಿಯನ್ನು ಗಮನಿಸದೆ ಇರಲು ಸಾಧ್ಯವಿಲ್ಲ. ಆದರೆ ಅವಳು ಎಂದೂ ಇದರ ಬಗ್ಗೆ ಪ್ರಸ್ತಾಪಿಸಲಿಲ್ಲ.

ಈಗ ಹಿಂದಿನದನ್ನು ನೆನಸಿಕೊಂಡಾಗ, ಕೆಲವು ತಿಂಗಳು ಕಳೆದ ಹಾಗೆ, ಕೆಲವೊಮ್ಮೆ ಕೌಸಲ್ಯ ನಿಜವಾಗಿಯೂ ಇದನ್ನು ಗಮನಿಸದೆ ಇರಲಿ ಎಂದು ಬಯಸಿದೆನೆ ಎಂದು ಆಶ್ಚರ್ಯವಾಗುತ್ತೆ. ಇದು ಗಂಭೀರಾ ನದಿಯ ದಡದಲ್ಲಿದ್ದ ಅರಳಿಮರದ ಕೊಂಬೆಗಳ ಮರೆಯಲ್ಲಿ ಅವಿತುಕುಳಿತು ಅಲ್ಲಿ ನದಿಯಲ್ಲಿ ಸ್ನಾನ ಮಾಡಲು ಹಾಗು ಬಟ್ಟೆಗಳನ್ನು ಒಗೆಯಲು ಬರುತ್ತಿದ್ದ ಹೆಂಗಸರನ್ನು ನೋಡುತ್ತಿದ್ದಾಗ ನನ್ನನ್ನು ಕೌಸಲ್ಯ ಪತ್ತೆ ಹಚ್ಚಿದ ಸಮಯವೇ ಆಗಿತ್ತು. ಇದು ಕಳೆದ ಹದಿನೈದು ದಿನಗಳಲ್ಲಿ ನಾನು ಹಾಗೆ ಕದ್ದು ನೋಡುತ್ತಿದ್ದುದು ಏಳನೇ ಸಲವಾಗಿತ್ತು. ಬೇರೆ ಯಾರೂ ನನ್ನನ್ನು ಪತ್ತೆ ಮಾಡಿಲ್ಲ ಎಂದು ಸಂಪೂರ್ಣ ಖಾತರಿ ಇತ್ತು. ನಾನು ಅಲ್ಲಿ ಹೆಚ್ಚಿಗೆ ನೋಡುವುದೇನೂ ಇರಲಿಲ್ಲ. ಮರವು ದಡದ ಅಂಚಿಗೆ ಸರಿಯಾಗಿಯೇನೂ ಇರಲಿಲ್ಲ. ಅಲ್ಲದೆ ಹೆಂಗಸರು ತಮ್ಮೆಲ್ಲಾ ಬಟ್ಟೆಗಳನ್ನೂ ಪೂರ್ತಿ ಕಳಚುತ್ತಲೂ ಇರಲಿಲ್ಲ. ಸ್ನಾನ ಮಾಡಿದ ಮೇಲೆ ಒಣಗಿದ ಸೀರೆಗಳನ್ನು ಉಟ್ಟುಕೊಳ್ಳುವಾಗಲೂ ಬಹಳ ಎಚ್ಚರಿಕೆಯಿಂದ ಒದ್ದೆ ಬಟ್ಟೆಗಳ ಮೇಲೆ ಒಣ ಬಟ್ಟೆಗಳನ್ನು ಉಟ್ಟುಕೊಂಡು, ಒದ್ದೆ ಸೀರೆಗಳನ್ನು ನೆಲದ ಮೇಲೆ ಉದುರಿಸುತ್ತಿದ್ದರು.

ಕೌಸಲ್ಯ ನಾನಲ್ಲಿದ್ದೇನೆಂದು ಅದು ಹೇಗೆ ಪತ್ತೆ ಹಚ್ಚಿದಳೋ ಗೊತ್ತಿಲ್ಲ. ಅವರೆಲ್ಲಾ ಹೋಗುವವರೆಗೂ ಕಾದಿದ್ದು ನನ್ನನ್ನು ಮರದಿಂದ ಕೆಳಕ್ಕೆ ಇಳಿಯಲು ಹೇಳಿದಳು.

"ಇನ್ನೊಂದು ಸಲ ಇಲ್ಲೇ ಆದರೂ ಸರಿ, ಅಥವಾ ಬೇರೆ ಎಲ್ಲೇ ಆದರೂ ಗುಟ್ಟಾಗಿ ಅಡಗಿಕೊಂಡು ಹೆಂಗಸರು ಸ್ನಾನ ಮಾಡೋದನ್ನು, ಬಟ್ಟೆ ಬಿಚ್ಚುವುದನ್ನು ನೀವು ನೋಡುತ್ತಿರುವಾಗ ನಾನು ಹಿಡಿದದ್ದೇ ಆದರೆ ನಿಮ್ಮ ಮೈಯಿನ ಚರ್ಮ ಒಂದು ಚೂರೂ ಉಳಿಯದ ಹಾಗೆ ಬಡೀತೀನಿ ಮತ್ತು ಮಹಾರಾಜಾ ರಾಣಾ ಅವರಿಗೆ ತಿಳಿಸುತ್ತೇನೆ."

ಕೌಸಲ್ಯ ಮತ್ತು ಮಂಗಳ ಅವರ ಕೊಠಡಿಗಳು ನನ್ನ ಕೊಠಡಿಗೆ ಹೋಗುವ ಓಣಿಯಲ್ಲೇ ಪಕ್ಕಕ್ಕಿದ್ದುವು. ಆ ಘಟನೆ ನಡೆದು ಒಂದು ವಾರವೋ ಹತ್ತು ದಿವಸವೋ ಆಗಿರಬಹುದು. ಕೌಸಲ್ಯ ತನ್ನ ಮಗ ಮಂಗಳನನ್ನು ಕರೆದು ಅವನೀಗ ಬೆಳೆದ ಯುವಕನಾಗಿರುವುದರಿಂದ ಪಕ್ಕದ ಕಟ್ಟಡದಲ್ಲಿ ನೆಲ ಹಂತದಲ್ಲಿ ಒಂದು ಕೋಣೆಯನ್ನು ಕೊಡಿಸಿ ಅದರಲ್ಲಿರಲು ವ್ಯವಸ್ಥೆ ಮಾಡಿದಳು. ಆ ನಂತರದ ಒಂದೆರಡು ರಾತ್ರಿಗಳಲ್ಲಿ ನನಗೆ ಎಚ್ಚರವಾದಾಗ ನನ್ನ ಬೆರಳುಗಳು ಒದ್ದೆಯಾಗಿರುವುದು ಗೊತ್ತಾಯಿತು. ಅವುಗಳು ಕೌಸಲ್ಯಳ ಲಂಗದೊಳಕ್ಕೆ ಇಳಿದಿದ್ದುವು.

ನಾನು ಮತ್ತು ಅವನ ತಾಯಿ ಇಬ್ಬರೂ ಪರಸ್ಪರ ಪ್ರೇಮಿಗಳಾಗಿದ್ದೆವೆಂದು ಅವಳ ಮಗನಿಗೆ ತಿಳಿದಿತ್ತೋ ಇಲ್ಲವೋ ಎಂಬುದು ನನಗೆ ಈ ದಿನದವರೆಗೂ ತಿಳಿದಿಲ್ಲ. ನನ್ನೊಂದಿಗಿನ ಅವನ ಸಂಬಂಧದಲ್ಲಿ ಖಂಡಿತವಾಗಿಯೂ ಬದಲಾಗಲಿಲ್ಲ. ಹಾಗೇನಾದರೂ ವ್ಯತ್ಯಾಸವಾಗಿದ್ದರೆ, ವರ್ಷಗಳು ಕಳೆದಂತೆ ಅವನು ನನಗೆ ಮೊದಲಿಗಿಂತ ಹೆಚ್ಚು ನಿಷ್ಠೆಯುಳ್ಳವನಾಗಿದ್ದಾನೆ. ನನ್ನ ಸುರಕ್ಷತೆಯ ಬಗ್ಗೆ ಹೆಚ್ಚು ಜಾಗರೂಕನಾಗಿದ್ದಾನೆ. ಎರಡನೆಯದರ ಬಗ್ಗೆ ನಾವು ಎಂದೂ ಚರ್ಚೆ ಮಾಡಿಲ್ಲ. ಆದರೆ ನನ್ನೆಲ್ಲಾ ತಮ್ಮಂದಿರ ಮೇಲೆ ಮತ್ತು ಅವರ ಸ್ನೇಹಿತರೆನ್ನಿಸಿಕೊಂಡವರ ಮೇಲೆ ಹದ್ದಿನ ಕಣ್ಣಿಟ್ಟಿದ್ದಾನೆ. ಅವನು ತನ್ನದೇ ಆದ ಗುಪ್ತಚರ ಜಾಲವನ್ನಿಟ್ಟುಕೊಂಡಿದ್ದಾನೆ. ಅದು ರಾಜ್ಯದ ಬೇಹುಗಾರಿಕೆ ವಿಭಾಗಕ್ಕಿಂತ ಹೆಚ್ಚು ಸಮರ್ಥವೂ, ನಂಬಲರ್ಹವೂ ಆದಂಥದ್ದು. ಅಲ್ಲದೆ ಕಡೇ ಪಕ್ಷ ಮುಂದಿನ ಏಳು ದಿನಗಳವರೆಗಿನ ನನ್ನ ಕಾರ್ಯಕ್ರಮಗಳ ಸರಿಯಾದ ಅಂದಾಜು ಹೊಂದಿರುತ್ತಾನೆ. ಅದರಿಂದ ತನ್ನ ಕಡೆಯವರನ್ನು ಅನುಕೂಲವಾದ ಸ್ಥಳಕ್ಕೆ ಗೊತ್ತು ಮಾಡಲು ಸಾಧ್ಯವಾಗುತ್ತದೆ.

ನಾನು ನೇರವಾಗಿ ಯೋಚನೆ ಮಾಡುತ್ತಿಲ್ಲ, ಮಾಡುತ್ತಿದ್ದೇನೆಯೆ? ನೇರವಾಗಿದೆಯೆ? ನಾನು ತಿಳಿದುಕೊಂಡಿರುವಷ್ಟು ಮಟ್ಟಿನ ಅರ್ಧದಷ್ಟು ಬೇಹುಗಾರಿಕೆಯ ಸಾಮರ್ಥ್ಯವನ್ನು ಅವನು ಹೊಂದಿದ್ದರೂ, ಆಗ ನನ್ನ ಮತ್ತು ಅವನ ತಾಯಿಯ ಬಗ್ಗೆ ಅವನಿಗೆ ಗೊತ್ತಿಲ್ಲದೆ ಇರುವ ಸಾಧ್ಯತೆ ಇಲ್ಲ. ತನ್ನ ತಾಯಿಯೊಂದಿಗಿನ ಅವನ ಸಂಬಂಧ ಯಾವತ್ತೂ ಹಿತಕರವಾದದ್ದಾಗಿರಲಿಲ್ಲ. ನನ್ನನ್ನು ಅವರಿಬ್ಬರ ಮಧ್ಯೆ ಪ್ರವೇಶಿಸದವನು ಅಂತ ಅವನು ಪರಿಗಣಿಸಿದನೆ? ನನ್ನನ್ನು ಬಿಟ್ಟರೆ ಅವಳ ಬದುಕಿನಲ್ಲಿಯ ಏಕೈಕ ವ್ಯಕ್ತಿ ಅವನು ಮಾತ್ರ. ಅವರಿಬ್ಬರೂ ಸ್ವಭಾವತಃ ಕಡಿಮೆ ಮಾತಿನವರು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಅವರಿಬ್ಬರ ನಡುವೆ ಶೀತಲ ಸ್ಥಿತಿ ಇದೆ. ಅದು ಅವನ ಕಡೆಯಿಂದ ತೀವ್ರ ದ್ವೇಷಕ್ಕೆ ಹತ್ತಿರವಾದಂಥದ್ದು. ಕೌಸಲ್ಯ ತಾಯಿಯಾಗಿ ತಾನು ಮಾಡಬೇಕಾದ ಕರ್ತವ್ಯ ಮಾಡಿದ್ದಾಳೆ. ಅವನ ಮದುವೆ ಮಾಡಿದ್ದಾಳೆ. ಅದೂ ನನ್ನ ಮದುವೆ ಆದ ಮೇಲೆ ಶಿರೋಹಿಯ ಒಂದು ಹೆಸರಾಂತ ಕುಟುಂಬದ ಹುಡುಗಿಯೊಡನೆ. ಅರಮನೆಗೆ ಅತಿ ಸಮೀಪದಲ್ಲಿ ಅವನಿಗಾಗಿ ಒಂದು ಒಳ್ಳೆಯ ಮನೆಯನ್ನು ಖರೀದಿಸಿದ್ದಾಳೆ. ಸೊಸೆ ವರದಕ್ಷಿಣೆಯ

ರೂಪದಲ್ಲಿ ತಂದ ಹಣವನ್ನು ಸೊಸೆ ಮತ್ತು ಮಗನ ಸಲುವಾಗಿ ಅವನ ಪರವಾಗಿ ಜಮೀನು ವ್ಯವಹಾರದಲ್ಲಿ ತೊಡಗಿಸಿದ್ದಾಳೆ. ತನ್ನ ಮಗನ ಹೆಂಡತಿಯೊಂದಿಗೆ ಅತಿಯಾದ ಸ್ನೇಹ ತೋರಿಸಿಲ್ಲ. ಅವಳಾದರೂ ಇವಳ ವ್ಯವಹಾರದಲ್ಲಿ ಮೂಗು ತೂರಿಸಿಲ್ಲ.

ಅಷ್ಟೇ ಅದಕ್ಕಿಂತ ಹೆಚ್ಚು ಮುಂದುವರಿದಿಲ್ಲ. ಕೌಸಲ್ಯಳಿಗೆ ತನ್ನ ಮಿತಿಗಳ ಪರಿಜ್ಞಾನ ಅತ್ಯಧಿಕವಾಗೇ ಇದೆ. ಎಲ್ಲೆಕಟ್ಟುಗಳು ಕೇವಲ ಭೌತಿಕ ಮತ್ತು ಭೌಗೋಳಿಕಗಳಿಗಷ್ಟೇ ಅಲ್ಲ, ಆದರೆ ಪರಸ್ಪರರ ನಡುವಿನ ವೈಯಕ್ತಿಕ ಸಂಬಂಧಗಳಿಗೂ ಅಗತ್ಯವಿದ್ದುದಕ್ಕಿಂತಲೂ ಹೆಚ್ಚಾಗಿ ಅವಳು ಈ ಎಲ್ಲೆಕಟ್ಟುಗಳ ಗೆರೆ ಎಳೆಯುವವಳೇ. ಅದರ ಹಿಂದಿತ ತರ್ಕವನ್ನು ನಾವು ಒಪ್ಪದಿರಬಹುದು. ಆದರೆ ಒಮ್ಮೆ ಅಂಥ ಗೆರೆಗಳನ್ನು ಎಳೆದಾಯಿತೆಂದರೆ, ಅವಳು ಅವಳದೇ ಸ್ವಾತಂತ್ರ್ಯಕ್ಕೆ ತಡೆಯೊಡ್ಡುವಲ್ಲಿ ಭಾವನಾತ್ಮಕವಾಗಿ ಅವಳಿಗೆ ವೇದನೆ ಉಂಟು ಮಾಡುವಲ್ಲಿ ಅವು ಕೊನೆಗೊಂಡರೂ ಅವಳು ಮಾತ್ರ ಅದಕ್ಕೆ ಅಂಟಿಕೊಳ್ಳುವವಳೇ. ನಾನು ಬೆಳೆದು ದೊಡ್ಡವನಾಗಿ, ನನ್ನ ಕಣ್ಣುಗಳು ಅತ್ತಿತ್ತ ಅಲೆದಾಡತೊಡಗಿದ ಮೇಲೆ, ಅವಳು ನನ್ನನ್ನು ಚಂದ್ರಮಹಲಿಗೆ ಕಳಿಸಿಕೊಟ್ಟಳು. ಈ ಹೊತ್ತೋ ನಾಳೆಯೇ ನಾನು ಹೇಗೂ ಚಂದ್ರಮಹಲ್‌ಗೆ ಹೋಗುವವನೇ ಇದ್ದೆ. ನನ್ನ ಅನೇಕ ಜನ ತಮ್ಮಂದಿರು, ದಾಯಾದಿಗಳು, ಇನ್ನು ತಂದೆ ಮತ್ತು ಸೋದರ ಬಂಧುಗಳ ಹೆಸರು ಹೇಳುವುದೇ ಬೇಡ, ಇವರೆಲ್ಲರಿಗೂ ಚಂದ್ರ ಮಹಲಿನಲ್ಲಿ ಅವರದ್ದೇ ಆದ ಕೊಠಡಿಗಳಿದ್ದುವು ಮತ್ತು ಅದಕ್ಕೆ ಪ್ರತ್ಯೇಕ ಪ್ರವೇಶದ್ವಾರಗಳಿದ್ದುವು. ಅವರು ತಮ್ಮ ಜೊತೆ ಬೇಕಾದ ಹೆಣ್ಣನ್ನು ಅಲ್ಲಿಗೆ ಕರೆದೊಯ್ಯುತ್ತಿದ್ದರು ಅಥವಾ ಅಲ್ಲಿರುವ ಆಳುಗಳಿಗೋ ಭದ್ರತಾ ದಳದವರಿಗೋ ಯಾರಾದರೂ ಹೆಣ್ಣನ್ನು ಕರೆತರುವಂತೆ ಹೇಳುತ್ತಿದ್ದರು. ನನ್ನ ಬಳಿಗೆ ಕಳಿಸಲಾಗುವ ಹುಡುಗಿಯರು ಯಾವುದೇ ಸೋಂಕುಗಳಿಲ್ಲದೆ ಶುಭ್ರರಾಗಿರುವ ಬಗ್ಗೆ ಕೌಸಲ್ಯ ಖಾತರಿಪಡಿಸಿಕೊಳ್ಳುತ್ತಿದ್ದಳು. ಅವಳಿಗೆ ಈ ಬಗ್ಗೆ ಅಸೂಯೆ ಮತ್ತು ಅಸಮಾಧಾನಗಳಿದ್ದುವೆ? ಅವಳಿಗೆ ನೋವು ಅಭದ್ರತೆಯ ಭಾವ ಉಂಟಾಗುತ್ತಿತ್ತೆ? ನನಗಂತೂ ಎಂದಿಗೂ ತಿಳಿಯುತ್ತಿರಲಿಲ್ಲ. ಬಹುಶಃ ನಾನು ಅವಳಲ್ಲಿಗೆ ಮತ್ತೆ ಹೋಗಿಯೇ ತೀರುತ್ತೇನೆಂದು ಅವಳಿಗೆ ನಂಬಿಕೆ ಇತ್ತು.

ನನ್ನ ಮದುವೆಯಾಗುವವರೆಗೂ ನಾನು ಅವಳಲ್ಲಿಗೆ ಹೋಗುತ್ತಲೇ ಇದ್ದೆ. ಚಿತ್ತೂರಿನಲ್ಲಿ ವಧುವಿನ ಪ್ರಸ್ಥದ ಕೋಣೆಯನ್ನು ಸಜ್ಜುಗೊಳಿಸಿದ್ದೇ ಅವಳು ಮತ್ತು ನನ್ನ ಹೆಂಡತಿಯನ್ನು ತನ್ನ ರಕ್ಷೆಯಲ್ಲಿಟ್ಟುಕೊಂಡಳು. ಆ ಸಮಯದಲ್ಲಿ ಅವಳ ಅಗತ್ಯ ನನಗಿದ್ದ ಹಾಗೆ ಬೇರಾವಾಗಲೂ ಇರಲಿಲ್ಲ. ನಾನು ನನ್ನ ತಲೆಯನ್ನು ಅವಳ ತೊಡೆಗಳ ನಡುವೆ ಹುದುಗಿಸಿ ಅವುಗಳನ್ನು ಹಿಸುಕಿ ಒಮ್ಮೆ ಬಲವಂತವಾಗಿ ಅವಳ ಗರ್ಭದೊಳಕ್ಕೆ ಸೇರಿ ಬಿಡಬೇಕೆನಿಸಿತ್ತು. ಅವಳಿಗೆ ತೆಕ್ಕೆ ಬಿದ್ದು, ಅವಳ ಸ್ತನಗಳು ಬಿರಿದು ಹೋಗುವ ಹಾಗೆ ಮತ್ತು ನನ್ನ ತಲೆಯೂ ಬಿರಿದು ಹೋಗುವ ಹಾಗೆ ಜೋರಾಗಿ ತಾಕಿಸಬೇಕೆಂದೆನಿಸಿತ್ತು. ಅದರಿಂದಾಗಿ ಮುಂದೆ ಬೇರಿನ್ನಾವ ಭಾವವೂ ಬರದಿರಲೆನಿಸಿತ್ತು. ನನ್ನ ಶಿಶ್ನದಿಂದ ರಕ್ತ ಹೊರ ಹೊಮ್ಮಿಂದ ಸಂಗತಿಯನ್ನು, ನನ್ನ ಕೈ ಹಿಡಿದ ವಧು ತಾನಾಗಲೇ ವಿವಾಹಿತಳೆಂದು ಸಮರ್ಥಿಸಿಕೊಂಡದ್ದನ್ನು ಹೇಳಬೇಕೆಂದು ಕೊಂಡೆ. ಈಗ ನಾನೇನು ಮಾಡಬೇಕು, ನಾನೆಲ್ಲಿ ನನ್ನ ಮುಖ ಹುದುಗಿಸಿಕೊಳ್ಳಬೇಕು, ಅವಳೇಕೆ ಈ ಮುಂಚೆ ನನಗೆ ಹೇಳಲಿಲ್ಲ, ನಾನು ಕಾರಣನಲ್ಲದ, ಬೇರೆ ಯಾರೂ ಸಮರ್ಥಿಸದ ಈ ಸಿಕ್ಕಿನಿಂದ ನಾನು ಹೊರಬರುವುದು ಹೇಗೆ? ದಾರಿಯನ್ನು ಕಂಡುಕೊಳ್ಳುವುದು ಹೇಗೆ ಎಂದೆಲ್ಲ ಕೇಳಬೇಕೆಂದಿದ್ದೆ. ಆದರೆ ನಾನು ಅವಳ ಬಳಿ ಹೋಗಿ. ನನಗಾದ ನಾಚಿಕೆಯನ್ನು ಹೇಳಿಕೊಳ್ಳಲಾಗಲಿಲ್ಲ. ಅದೇನು ಸ್ವಾಭಿಮಾನವೆ,

ಅವಮಾನವೆ. ಹಾನಿಗೊಳಗಾದ ಮತ್ತು ಆಘಾತಕ್ಕೊಳಗಾದ ನನ್ನ ಅಹಮ್ಮೆ? ಯಾರಿಗೆ ಗೊತ್ತು? ನನ್ನ ಗುಟ್ಟುಗಳು ಯಾರಿಗಾದರೂ ಗೊತ್ತಿದ್ದರೆ ಅದು ಕೌಸಲ್ಯಳಿಗೆ. ನಮ್ಮ ತಂದೆಯ ಬಗೆಗಿನ, ಉತ್ತರಾಧಿಕಾರದ ಬಗೆಗಿನ, ದೇಶದ ಭವಿಷ್ಯದ ಬಗೆಗಿನ ನನ್ನ ಶಾಶ್ವತ ಮತ್ತು ಭಾರೀ ತಲ್ಲಣಗಳು, ನಮ್ಮ ಆಯುಧಾಗಾರದ ಸ್ಥಿತಿಗತಿಯ ಬಗೆಗಿನ ನನ್ನ ಸಂದೇಹಗಳು, ಶತ್ರುಗಳಿಂದ ಆಕ್ರಮಣಕ್ಕೊಳಗಾದ ಸಂದರ್ಭದಲ್ಲಿ ತಪ್ಪಿಸಿಕೊಳ್ಳುವ ತಂತ್ರಗಳು ಇವೆಲ್ಲಾ ಆಕೆಗೆ ತಿಳಿದಿತ್ತು. ನನ್ನ ಲೈಂಗಿಕ ಖುಷಿಗಳು ಮತ್ತು ಆದ್ಯತೆಗಳು ಇವೆಲ್ಲಾ ಅವಳೊಬ್ಬಳಿಗೆ ಮಾತ್ರವೇ ಗೊತ್ತಿತ್ತು ಮತ್ತು ಇವುಗಳಲ್ಲಿ ಬಹಳಷ್ಟನ್ನು ನಾನು ಕಲಿತದ್ದು ನಿಸ್ಸಂಶಯವಾಗಿ ಅವಳಿಂದಲೇ. ಅದರಿಂದ ಯಾವುದೂ ಬಗೆಹರಿಯದೇ ಇದ್ದಿರಬಹುದಾದರೂ, ನನ್ನ ಬದುಕನ್ನೇ ತನ್ನ ಜೀವಿತೋದ್ದೇಶವಾಗಿ ಮಾಡಿಕೊಂಡಿದ್ದವಳೊಂದಿಗೆ, ರಾಜಕುಮಾರಿಯೊಂದಿಗಿನ ನನ್ನ ವಿಲಕ್ಷಣ ಸಂಬಂಧದ ಮಾತಾಡಿದ್ದರೆ, ನನ್ನ ಮನಸ್ಸಿನ ಭಾರವಾದರೂ ಇಳಿಯುತ್ತಿತ್ತು. ಅದರಿಂದ ಎಲ್ಲರೂ ಈಗ ನನ್ನ ಹೆಂಡತಿ ಎಂದು ತಿಳಿದಿರುವ ಹೆಂಗಸಿನೊಂದಿಗೆ ಬಹುಶಃ ಆಕೆ ತರ್ಕಿಸುತ್ತಿದ್ದಳು. ಅವಳಿಗೆ (ರಾಜಕುಮಾರಿಗೆ) ಜ್ಞಾನೋದಯವನ್ನುಂಟು ಮಾಡುತ್ತಿದ್ದಳೋ ಏನೋ. ಹಾಗಲ್ಲದೆ ಹೋಗಿದ್ದರೆ, ಆ ಹೆಂಗಸಿನ ಗತಕಾಲದ ಅಜ್ಞಾನದ ಕತ್ತಲೆಯನ್ನು ಹೊರದೂಡಿ ಹೆಸರಿಲ್ಲದ, ಆ ನಿಗೂಢ ಅಪರಿಚಿತ ಯಾರೆಂದು ಆಕೆ ಹೊರಗೆಡಹುತ್ತಿದ್ದಳು.

ನನ್ನ ವಿಷಯದಲ್ಲಿ ತಲೆ ಹಾಕಲಿಷ್ಟವಿಲ್ಲದೆ ಕೌಸಲ್ಯ ತೆರೆಯ ಮರೆಯಲ್ಲೇ ಉಳಿದಳು. ನನ್ನ ಹೆಂಡತಿ ನನ್ನಿಂದ ದೂರವಾಗಿ ತನ್ನ ತವರು ಮನೆಗೆ ಹೋಗಿದ್ದ ನಾಲ್ಕು ತಿಂಗಳುಗಳ ಕಾಲ ನನಗೆ ಸ್ನಾನಕ್ಕೆ ನೀರು ಸಿದ್ಧಪಡಿಸುತ್ತಿದ್ದವಳು ಅವಳು, ನಾನು ಆಸ್ಥಾನಕ್ಕೆ ಹೋಗಬೇಕಾದರೆ ಅಥವಾ ಅಧಿಕೃತ ಸಮಾರಂಭಕ್ಕೆ ಧರಿಸಬೇಕಾಗಿದ್ದ ಉಡುಪು. ತೆಗೆದಿಡುತ್ತಿದ್ದವಳು ಅವಳು. ನನಗೆ ಊಟ ಬಡಿಸುತ್ತಿದ್ದಳು ಮತ್ತು ನಾನು ಊಟ ಮಾಡುತ್ತಿದ್ದಾಗ ಸದ್ದಿಲ್ಲದೆ ಕುಳಿತಿರುತ್ತಿದ್ದಳು. ಅವಳು ತನ್ನ ಹಳೆಯ ಕೋಣೆಯಲ್ಲೇ ಮಲಗುತ್ತಿದ್ದಳು. ಇಡೀ ರಾತ್ರಿ ನಾನೇನಾದರೂ ಶತಪಥ ಸುತ್ತುತ್ತಿದ್ದರೆ ಹಾಲಿಗೆ ಅರಿಶಿನದ ಪುಡಿ ಹಾಕಿಕೊಂಡು ತರುತ್ತಿದ್ದಳು. ಆದರೆ ನಾವು ಪರಸ್ಪರ ಒಂದು ಮಾತೂ ಆಡುತ್ತಿರಲಿಲ್ಲ. ಅವಳು ರಾತ್ರಿ ಬಂದು ತನ್ನ ಮೊಲೆ ತೊಟ್ಟುಗಳನ್ನು ನನ್ನ ಬಾಯಿಗೆ ಒತ್ತಬಹುದಿತ್ತು. ನನ್ನ ನಾಲಿಗೆಯನ್ನು ಹೊರಗೆಳೆದು ಅವಳ ನಿಗೂಢ ಕಣಿವೆಗಳಲ್ಲಿ ಅದನ್ನು ಹುಡುಕಾಡಲು ಬಿಟ್ಟು ನನ್ನಲ್ಲಿ ಮತ್ತೆ ಯೌವನವನ್ನು ಕೊನರಿಸಬಹುದಿತ್ತು. ಆದರೆ ಅವಳು ತನ್ನ ಪಾಡಿಗೆ ತಾನು ಇದ್ದು ಬಿಟ್ಟಳು ಮತ್ತು ನಾನಾದರೋ ನನಗೆ ಅವಳ ಅಗತ್ಯತೆ ಎಂಬುದು ಪೂರ್ತಿ ಜಡ್ಡುಗಟ್ಟಿ ಹೋಗುವವರೆಗೂ ನಿರ್ಲಿಪ್ತನಂತಿದ್ದು ಬಿಟ್ಟೆ. ಅದು ಏಕೆ ಹಾಗೆ ಎಂದು ಅರ್ಥವಾಗಲಿಲ್ಲ ಅಷ್ಟೇ ಅಲ್ಲ; ಅದನ್ನು ನಾನು ಮೀರಲೂ ಸಾಧ್ಯವಾಗಲಿಲ್ಲ.

ನನಗೂ ತನ್ನ ತಾಯಿಗೂ ಮಧ್ಯೆ ದೊಡ್ಡ ಕಂದರವೇರ್ಪಡುತ್ತಿದೆ ಎಂಬುದನ್ನು ಮಂಗಳನು ಬಹಳ ಹಿಂದೆಯೇ ಅರಿತಿದ್ದನು. ಅವಳಿಗಾದ ಸೋಲಿನಿಂದ ಅವನು ಹಿಗ್ಗುತ್ತಿದ್ದನೆಂದೂ, ಅವಳೊಂದಿಗೇ ಇದ್ದು ಅವಳು ದುಃಖಪಡುವುದನ್ನು ಮೌನವಾಗಿ ಗಮನಿಸುವುದೆಂದರೆ ಅವನಿಗೆ ಎಲ್ಲಿಲ್ಲದ ಸಂತಸ ಉಂಟಾಗುತ್ತದೆಂದು ಕೆಲವೊಮ್ಮೆ ನಾನು ಭಾವಿಸಿದೆ. ಕಾರಣ, ಅವಳು ಅನುಭವಿಸಿದ್ದಂತೂ ನಿಜ. ಅವಳ ಮೇಲಿನ ನನ್ನ ಕೋಪಕ್ಕೆ ಕಾರಣವೇನೆಂದು ಅವಳಿಗೆ ತಿಳಿಯದು. ತಾನೆಲ್ಲಿ ತಪ್ಪು ಮಾಡಿದೆನೆಂಬುದು ಅವಳಿಗೆ ಗೊತ್ತಿಲ್ಲ. ಹೊಸ ಹೆಂಗಸಿಗೆ ನಾನು ಕೌಸಲ್ಯಳ ಮರ್ಮಾಂಗದಲ್ಲಿ ಕೈ ಇಟ್ಟು ಬೆರಳುಗಳನ್ನು ಒದ್ದೆ ಮಾಡಿಕೊಳ್ಳುತ್ತಿದ್ದುದನ್ನು ಹೇಳಿಬಿಟ್ಟಿದ್ದೆನೆ? ನಮ್ಮಿಬ್ಬರ ಮಧ್ಯೆ ಇದ್ದ

ಅರೆವಾಸಿ ನಿಷಿದ್ಧ ಲೈಂಗಿಕ ಸಂಬಂಧದ ವಿಷಯವನ್ನು ನನ್ನ ಹೆಂಡತಿಗೆ ನಮ್ಮ ಮೊದಲ ರಾತ್ರಿಯಂದು ತಿಳಿಸಿದ್ದೆನೆ? ಅವಳೊಂದಿಗೆ ಯಾವುದೇ ಬಗೆಯ ಸಂಬಂಧವನ್ನು ಇಟ್ಟುಕೊಳ್ಳಕೂಡದೆಂದು ನನ್ನ ಹೆಂಡತಿ ಅಡ್ಡಿಪಡಿಸಿದ್ದಳೆ? ನಾನಿನ್ನೂ ಹದಿನಾಲ್ಕು ವರ್ಷದ ಹುಡುಗನಾಗಿದ್ದಾಗಲೇ, ಅರಮನೆಯ ಜೇಷ್ಠ ರಾಜಕುಮಾರನಿಗೆ ಅಪರಿಮಿತವಾಗಿ ಲಭ್ಯವಿರಬಹುದಾದ ನನ್ನ ವಯಸ್ಸಿನ ಹುಡುಗಿಯರೊಂದಿಗೆ ವ್ಯವಹಾರವಿಟ್ಟುಕೊಳ್ಳಬೇಕಾಗಿದ್ದ ಸಮಯದಲ್ಲಿ ಕೌಸಲ್ಯ ನನ್ನನ್ನು ಅಕ್ರಮ ಲೈಂಗಿಕ ಸಂಭೋಗಕ್ಕೆ ಪ್ರೇರಿಸಿದ್ದಳೆಂದು ಅವಳು ಹೊರಗಡೆ ಎಲ್ಲಾ ಕಡೆ ಪ್ರಚಾರ ಆಗುವ ಹಾಗೆ ಮಾಡಿದ್ದಳೆ? ಅವಳನ್ನು ಅರಮನೆಯಿಂದ ಹೊರಗಟ್ಟಲಾಗುವುದೆ? ಅವಳ ಆಸ್ತಿಪಾಸ್ತಿಯನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡು ಶಾಶ್ವತವಾಗಿ ಗಡೀಪಾರು ಮಾಡಲಾಗುವುದೆ? ನಾನೊಂದು ಮುಖ್ಯ ವಿಷಯವನ್ನು ತಪ್ಪಿಸುತ್ತಾ ಇದ್ದೇನೆ. ಅವಳಿಗಿದ್ದ ದೊಡ್ಡ ಭಯ ಮತ್ತು ಅವಳ ಕಣ್ಣುಗಳಲ್ಲಿ ಆ ಭಯ ಮಡುಗಟ್ಟಿನಿಂತಿತ್ತು. ಅವಳ ಬದುಕಿನ ಅತ್ಯಂತ ಬೆಲೆ ಬಾಳುವ ಪದಾರ್ಥವಾದ ನನ್ನಿಂದ ಅವಳನ್ನು ದೂರಮಾಡಲಾಗುತ್ತದೆ ಎಂಬುದು. ನಾನು ಅವಳೊಂದಿಗೆ ಮಾತನಾಡದಿದ್ದರೆ ನನ್ನ ಕಣ್ಣೆದುರಿನಲ್ಲೇ ಇದ್ದರೂ ನಾನು ಅವಳನ್ನು ನೋಡದೆ ಇದ್ದರೆ, ಅವಳು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಈ ಹೊಸ ಹೆಣ್ಣು ನನ್ನ ತಲೆಕೆಡಿಸಿದ್ದಾಳೆ ಅಂತ ಆದರೆ ಅದರ ಬಗ್ಗೆ ಕಿಂಚಿತ್ತೂ ಚಿಂತೆ ಇಲ್ಲ. ನನ್ನ ಕಣ್ಣಿನಲ್ಲಿ ಅವಳ ವಿಷಯಕ್ಕೆ, ತಣ್ಣನೆಯ ದ್ವೇಷ ಹೊರತು ಬೇರೇನೂ ಇಲ್ಲ ಹಾಗೂ ಹಳೆಯ ಸಂಬಂಧ ನನಗೇನೂ ಗೊತ್ತಿಲ್ಲ ಎನ್ನುವಂತಿದ್ದರೂ, ಆಗಾಗ ಒಮ್ಮೆ ನನ್ನನ್ನು ನೋಡಲು ಅವಳಿಗೆ ಅವಕಾಶವಷ್ಟಿದ್ದರೆ ಸಾಕು ಬೇರೇನೂ ಬೇಡ.

ನಾನು ಏನು ಅಂತ ತನಗೆ ಗೊತ್ತೆಂದು ಅವಳು ಭಾವಿಸಿದ್ದಳು. ನನ್ನ ಪ್ರಾರಂಭದ ದಿನಗಳು ಅವಳಿಗೆ ತಿಳಿದಿಲ್ಲವೆಂದು ಅವಳು ಕಂಡುಕೊಂಡಳು. ಮನೆಯಲ್ಲಿನ ಪರಿಸ್ಥಿತಿ ಇನ್ನೂ ಕೆಟ್ಟದ್ದಾಯಿತು. ಅವಳು ಎದುರುಗಡೆ ಇದ್ದಾಗ ನಾನು ಅನ್ಯ ಮನಸ್ಕನಾಗುತ್ತಿದ್ದೆ ಮತ್ತು ಹೆಪ್ಪುಗಟ್ಟುತ್ತಿದ್ದೆನೆನಿಸುತ್ತದೆ. ರಾಜ್ಯದಲ್ಲಿ ಎಲ್ಲೆಡೆಯಲ್ಲೂ ಭಾರೀ ಸಂಚು ನಡೆಯುತ್ತಿತ್ತು. ಹಿಂದೆ ಆಗಿದ್ದರೆ ನಾನು ನನ್ನ ವಿಚಾರಗಳನ್ನು ಅವಳಿಂದ ಆಚೆಗೆ ಜಾರಿಸಿಬಿಡುತ್ತಿದ್ದೆ ಅಥವಾ ನನ್ನ ಹಠದ ಮೌನವನ್ನು ನಮ್ಮಿಬ್ಬರಿಗೂ ಹಂಚಿ ಬಿಡುತ್ತಿದ್ದೆ. ಈಗಾದರೋ ನಾನು ನನ್ನ ಹಾಸಿಗೆಯನ್ನಾಗಲಿ, ನನ್ನ ನೆಚ್ಚಿಗೆಯನ್ನಾಗಲಿ ಅವಳೊಂದಿಗೆ ಹಂಚಿಕೊಳ್ಳುತ್ತಿಲ್ಲ. ಬಹಾದುರ್ ಅತ್ಯಂತ ಹೀನದೆಶೆಯಲ್ಲಿದ್ದ ದಿನಗಳಲ್ಲಿ ಅವನನ್ನು ನೋಡಿಕೊಂಡಳು ಮತ್ತು ಆ ಭಯಾನಕ ರಾತ್ರಿಗಳಲ್ಲಿ ಅವನ ಸನಿಹದಲ್ಲಿ ಕುಳಿತಿದ್ದಳು. ಇದಕ್ಕೆ ಕಾರಣ ತನ್ನನ್ನು ತಾನು ಎಂಥ ಚಿತ್ರ ಹಿಂಸೆಗೆ ಗುರಿಪಡಿಸಿಕೊಳ್ಳುವಂಥವಳೆಂದು ತೋರಿಸಿಕೊಳ್ಳುವುದು ಅವಳಿಗೆ ಬೇಕಾಗಿತ್ತು ಎಂದು ನನಗೆ ನಾನೇ ಎಷ್ಟೇ ಮನವರಿಕೆ ಮಾಡಿಕೊಳ್ಳಲೆತ್ನಿಸಿದರೂ ಅವಳ ಮನಸ್ಸು ಕೆಲಸ ಮಾಡುತ್ತಿದ್ದ ರೀತಿ ಅದಲ್ಲ ಎಂದು ನನ್ನ ಆಂತರ್ಯಕ್ಕೆ ತಿಳಿದಿತ್ತು. ಅಲ್ಲಿ ಎಲ್ಲೆ ಕಟ್ಟುಗಳಿದ್ದುವು. ಹಾಗೆಯೇ ಕರ್ತವ್ಯಗಳೂ ಇದ್ದುವು. ಅವುಗಳನ್ನು ಹೇಗಾದರೂ ಅರ್ಥೈಸಲಿ, ಅವುಗಳ ಪರಿಣಾಮ ಏನಾದರೂ ಆಗಲಿ, ಅದನ್ನು ಲೆಕ್ಕಿಸದೆ ಅವಳು ಮೊದಲನೆಯದನ್ನು (ಮಿತಿಗಳನ್ನು) ಮೀರುತ್ತಿರಲಿಲ್ಲ ಮತ್ತು ಎರಡನೆಯದನ್ನು (ಕರ್ತವ್ಯಗಳನ್ನು) ಪಾಲಿಸುತ್ತಿದ್ದಳು.

* * *

“ರಾಜಕುಮಾರ ಬಹಾದುರ್‌ಗೆ ನೀನು ಬೇಕಾಗಿದ್ದೀಯೆ” ಎಂದು ಹೇಳಿ ಕೌಸಲ್ಯಳನ್ನು ನನ್ನ ಕೊಠಡಿಗೆ ಕರೆಸಿದ್ದೆ. ಅದೊಂದು ಸಂದಿಗ್ಧ ಹೇಳಿಕೆ. ನನ್ನನ್ನು ರೇಗಿಸಲು ಹಾಗೂ ನನ್ನನ್ನು

ಇನ್ನಷ್ಟು ಪೇಚಿಗೆ ಗುರಿ ಮಾಡಲು ಮತ್ತು ನನಗೆ ಮುಜುಗರವುಂಟು ಮಾಡಲು, ಅವಳು ಆ ವಾಕ್ಯದ ಶಬ್ದಗಳ ಮೇಲೇ ಆಟವಾಡಬಹುದಿತ್ತು. ಅವಳು ಕೂಡಲೇ ಆ ಮಾತಿನ ಮಥಿತಾರ್ಥವನ್ನು ಗ್ರಹಿಸಿದಳು. ಸಂದಿಗ್ಧವಾದ ಮಾತುಗಳನ್ನಾಡುವುದಾಗಲಿ, ಕೂದಲು ಸೀಳುವ ಕಾಯಕದಲ್ಲಿ ತೊಡಗುವುದಾಗಲಿ ಅವಳ ರೀತಿಯಲ್ಲ.

"ನೀವು?"

"ನಾನು ಏನು?"

"ನೀವು ನಾನು ಹೋಗಬೇಕು ಅಂತ ಬಯಸುತ್ತೀರಾ?"

"ಅದು ನಿನಗೂ ಅವನಿಗೂ ಬಿಟ್ಟದ್ದು ಅಂತ ಅವನಿಗೆ ನಾನು ಹೇಳಿದ್ದೀನಿ".

ನಾವು ಶತ್ರುಗಳಾಗಿದ್ದರೆ ಚೆನ್ನಾಗಿತ್ತು. ನನ್ನ ನಿಷ್ಠುರ ನಿರ್ಲಕ್ಷ್ಯದ ಮುಖವಾಡ ಅವಳ ಮೇಲೆ ಹೆಚ್ಚು ಪರಿಣಾಮ ಉಂಟುಮಾಡಲಿಲ್ಲ. ತನ್ನ ತಿರಸ್ಕಾರ ಮತ್ತು ನಿರಾಶೆಯನ್ನು ಮರೆಮಾಚಲು ತನ್ನ ಮುಖವನ್ನು ಅತ್ತ ತಿರುಗಿಸಿ ಹೊರನಡೆದಳು. ನಾನು ನನ್ನ ಕೆಲಸಕ್ಕೆ ಹೊರಟೆ. ಪ್ರಧಾನಮಂತ್ರಿ ಪೂರನ್‌ಮಲ್‌ಜೀಯವರೊಂದಿಗೆ ಚಿತ್ತೂರಿನ ರಕ್ಷಣಾವ್ಯವಸ್ಥೆ ಕುರಿತು, ಎರಡು ಸಭೆಗಳಲ್ಲಿ ಭಾಗವಹಿಸುವುದಿತ್ತು. ಇನ್ನೊಂದು ಇಬ್ಬರು ಕುಲೀನರು ರಾಜಾ ಪೂರಜೀ ಕೀ ಕಾ ಅವರ ಆಳ್ವಿಕೆಗೆ ಸೇರಿದ ಸಂಸ್ಥಾನದ ಹಲವಾರು ಹಳ್ಳಿಗಳನ್ನು ಒತ್ತುವರಿ ಮಾಡಿ ನಿಶ್ಚಿತವಾಗಿಯೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡುಬಿಟ್ಟಿರುವ ವಿಚಾರದಲ್ಲಿ; ಇದು ನಮ್ಮ ತನಿಖೆಯಿಂದ ತಿಳಿದುಬಂದಿದೆ, ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಲಕ್ಷ್ಮಣ ಸಿಂಹಜೀಯವರ ಜೊತೆ. ಮತ್ತೊಂದು ಸಭೆ ರಾಜ್ಯದ ವರಮಾನ ಕುಸಿಯುತ್ತಿರುವ ಬಗ್ಗೆ ಮತ್ತು ಅದನ್ನು ಉತ್ತಮಪಡಿಸುವ ಬಗ್ಗೆ ತೆಗೆದುಕೊಳ್ಳಬೇಕಾಗಿರುವ ಅಲ್ಪಕಾಲದ ಮತ್ತು ದೀರ್ಘಕಾಲೀನ ಕ್ರಮಗಳ ಬಗ್ಗೆ ವಾಣಿಜ್ಯ ವ್ಯವಹಾರಗಳ ಸಚಿವರ ಜೊತೆ. ಇಷ್ಟು ವರ್ಷಗಳೂ ನಾನು ಪಟ್ಟಣದೊಳಕ್ಕೆ ಬರುವ ವಸ್ತುಗಳ ಮೇಲೆ ಸುಂಕ ಹಾಕಬೇಕೆಂಬ ಹಾಗೂ ಮಾರಾಟ ತೆರಿಗೆ ವಿಧಿಸಬೇಕೆಂಬ ನಿಲುವಿನವನಾಗಿದ್ದೆ. ನಾವು ಅದನ್ನು ಸ್ವಲ್ಪ ಅತಿಮಾಡಿದೆವೇನೋ ಎಂದು ವಿಸ್ಮಿತನಾದದ್ದೂ ಉಂಟು. ಕಾರಣ ಅದರಿಂದ ನಮ್ಮ ರಫ್ತುಗಳ ಮೇಲೆ ವಿಪರೀತ ಪರಿಣಾಮ ಉಂಟಾಗಿತ್ತು. ಎಲ್ಲಾ ಸಭೆಗಳಲ್ಲಿ ನಾನು ಗಮನವಿಟ್ಟು ಕೇಳಿದೆ. ನಾವು ಯಾವುದೇ ತೀರ್ಮಾನಕ್ಕೆ ಬರುತ್ತಾ ಇಲ್ಲ ಅನ್ನಿಸಿದಾಗ ಸಭೆಯ ಕಲಾಪಗಳಲ್ಲಿ ಮಧ್ಯೆ ಪ್ರವೇಶಿಸಿದೆ. ಮಂತ್ರಿಗಳು ಮತ್ತು ಸ್ವತಃ ನಾನು ಹಳೆಯ ಸಮಸ್ಯೆಗಳನ್ನು ಹೊಸ ಮತ್ತು ರಚನಾತ್ಮಕ ದೃಷ್ಟಿಯಿಂದ ಅರ್ಥೈಸಿ ನೋಡಲು ಪ್ರಯತ್ನಿಸಿದೆವು. ಇಬ್ಬರು ರಾವ್‌ಗಳಿಗೆ ಶಿಕ್ಷೆ ಹಾಗೂ ದಂಡ ವಿಧಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಯಿತು ಹಾಗೂ ಮೂವತ್ತು ದಿನಗಳೊಳಗಾಗಿ ಹೊಸ ತೆರಿಗೆ ನೀತಿಯನ್ನು ರೂಪಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ನಿರ್ಣಯ ತೆಗೆದುಕೊಳ್ಳಲಾಯಿತು. ಆದರೆ ಅದೇನಾಗಿತ್ತೋ ಏನೋ ಅದನ್ನು ಅರ್ಥ ಮಾಡಿಕೊಳ್ಳಲು ಇಪ್ಪತ್ತನಾಲ್ಕು ಗಂಟೆಗಳು ಬೇಕಾಯಿತು.

ಸತ್ತು ಹೋಗಿದೆಯೆಂದು, ಅಷ್ಟೇ ಅಲ್ಲ ಅದರ ನೆನಪುಗಳೂ ಅಳಿಸಿಹೋಗಿವೆಯೆಂದು ಭಾವಿಸಲಾಗಿದ್ದ ಉತ್ಕಟ ಕಾಮವನ್ನು ಬೇರೊಬ್ಬನ ಬಯಕೆ ಹೇಗೆ ತಾನೆ ಮತ್ತೆ ಕೆರಳಿಸಲು ಸಾಧ್ಯ? ಯಾವುದನ್ನು ನಾನು ಉದ್ದೇಶ ಪೂರ್ವಕವಾಗಿಯೇ ಸಾಯಿಸಿಬಿಟ್ಟಿದ್ದೆನೋ ಅದು ಯಾವ ಕಾರಣವೂ ಇಲ್ಲದೆ ಈಗ ಭೂತದ ಹಾಗೆ ಕಾಡ ತೊಡಗಿತ್ತು. ನಾನು ಹಲ್ಲು ಹಲ್ಲು ಮಸೆಯುತ್ತ, ತುಟಿ ಕಚ್ಚಿ ಕೌಸಲ್ಯಳನ್ನು ದೂರ ಮಾಡಿದೆ. ಆದರೆ ಬಹಾದುರ್‌ಗೆ ಅವಳ ಬಗೆಗಿನ ಆಸಕ್ತಿಯಾದರೋ ಕಾಡುಕಿಚ್ಚಿನಂಥದು. ನಾನು ಅದನ್ನು ಆರಿಸಲು

ಯತ್ನಿಸಿದಷ್ಟೂ ಅದು ಇನ್ನಷ್ಟು ಜೋರಾಗಿ ಹಬ್ಬುತ್ತಿತ್ತು. ಕೌಸಲ್ಯಳ ದೇಹದ ನೆನಪು ಮತ್ತು ನಮ್ಮ ಪ್ರಣಯದ ನೆನಪು ಮತ್ತು ನನ್ನ ಮಾತುಕತೆಗಳಲ್ಲಿ ನಾನು ಸಿದ್ಧಪಡಿಸುತ್ತಿದ್ದ ಜ್ಞಾಪನಪತ್ರಗಳ ಮೇಲೆ, ಆದಿನಾಥರು ಮಂಡಿಸುತ್ತಿದ್ದ ಮುಂದಿನ ವರ್ಷದ ಮುಂಗಡ ಪತ್ರದ ಮೇಲೆ, ಹೀಗೆ ಎಲ್ಲದರ ಮಧ್ಯೆ ತಲೆಹಾಕುತ್ತಿತ್ತಲ್ಲದೆ ಎಲ್ಲದರ ಮೇಲೂ ತೀವ್ರ ಪರಿಣಾಮ ಬೀರುತ್ತಿತ್ತು. ಆಗಲೇ ಅನಿರೀಕ್ಷಿತವಾದ ಒಂದು ಸಂಗತಿ ನಡೆಯಿತು. ಮೊದಲೇ ಚಿತ್ರಹಿಂಸೆಗೆ ಗುರಿಯಾಗಿ, ಧ್ವಂಸಗೊಂಡಿದ್ದ ನನ್ನ ಮನಸ್ಸು, ನನ್ನ ಹೆಂಡತಿ ಎಂಬುವವಳಿಂದ ಉಧ್ವಸ್ಥಗೊಂಡು, ಆಕ್ರಮಣಕ್ಕೊಳಗಾಗಿ ನಲುಗಿ ಹೋಗಿದ್ದ ಕಾರಣ, ಎಷ್ಟೇ ಕ್ಷಣಿಕ ಕಾಲಕ್ಕೇ ಆದರೂ ಈಗ ಬೇರಿನ್ನಾರಿಗೋ ಎಡೆಮಾಡಿಕೊಟ್ಟಿತ್ತು. ಕೌಸಲ್ಯ, ನನ್ನ ಪ್ರತಿಷ್ಠೆ ಹಾಳಾಗಲಿ! ನಾನೇಕೆ ರಾಜಕುಮಾರನಿಗೆ ಕೌಸಲ್ಯಳನ್ನು ಕಳಿಸಲಾಗುವುದಿಲ್ಲ ಎಂದು ಹೇಳಲಿಲ್ಲ? ಕೌಸಲ್ಯ ನನ್ನ ದಾದಿ ಎಂಬ ಅವಳ ಅಸಾಧಾರಣವಾದ ಸ್ಥಾನದ ಅರಿವಿತ್ತು ಅವನಿಗೆ. ಹಾಗಾಗಿ ನನ್ನ ಅನುಮತಿಯನ್ನು ಕೇಳಲೇ ಬೇಕಾದ ಅನಿವಾರ್ಯತೆ ಇತ್ತು. ಮೇವಾಡದ ರೀತಿ ರಿವಾಜುಗಳು ಸಂಪ್ರದಾಯಗಳು ಹಾಗೂ ವಿಧಿ ನಿಷೇಧಗಳ ಬಗ್ಗೆ ನಾನು ಕೇವಲ ಗೊಣಗಾಡಬೇಕಿತ್ತಷ್ಟೆ. ಅಪವಿತ್ರವಾದದ್ದನ್ನು ಸೂಚಿಸಿದ್ದಕ್ಕೆ ಅವನನ್ನು ಪೇಚಿಗೆ ಸಿಲುಕಿಸಿ ಅವನು ಕ್ಷಮೆ ಯಾಚಿಸುವಂತೆ ಮಾಡಬಹುದಿತ್ತು. ನಾನು ಆಗುವುದಿಲ್ಲ ಎಂದು ಹೇಳುತ್ತೇನೆಂದು ಕೌಸಲ್ಯ ಕಾದಿದ್ದಳು. ಅವನನ್ನು ದೂರಮಾಡುವುದು ಹೇಗೆ ಎಂಬ ಬಗ್ಗೆ ಅವಳು ಬೇರೇನಾದರೂ ಯೋಚಿಸುತ್ತಿದ್ದಳು. ಅದೇನೆಂದು ನನಗೆ ತಿಳಿಯದು. ಅವಳು ಬೇರೇನಾದರೂ ಯೋಚಿಸುತ್ತಿದ್ದಳು. ಅವಳಂತೂ ಅನಂತ ಉಪಾಯಗಳ ಗಣಿಯಾಗಿದ್ದಳು. ಆದರೆ ನಾನು ಇದರಲ್ಲಿ ಪಾತ್ರವಹಿಸುವ ಬಗ್ಗೆ ಅದೆಷ್ಟು ವ್ಯಸ್ತನಾಗಿದ್ದೆನೆಂದರೆ, "ಆ ಹಾಳಾದವನಿಗೆ ನಾನು ಕೊಡುವುದಿಲ್ಲ, ನಿನಗೆ ಹೇಗೆ ಅನ್ನಿಸುತ್ತೋ ಹಾಗೆ ಮಾಡು; ನನಗೇನಾಗಬೇಕು ಅದು ಎಂದು," ಅವಳು ನನಗೆ ಏನೆಲ್ಲ ಆಗಿದ್ದಳು ಅನ್ನುವುದನ್ನು ಹಾಗೂ ಅವಳನ್ನು ಕಳೆದುಕೊಳ್ಳಲು ಅಷ್ಟೇಕೆ ತುದಿಗಾಲ ಮೇಲೆ ನಾನು ನಿಂತಿದ್ದೆ ಎಂದು ನನ್ನನ್ನೇ ನಾನು ಕೇಳಿಕೊಳ್ಳುವುದರ ಬಗ್ಗೆಯೂ ನಾನು ತಲೆಕೆಡಿಸಿಕೊಳ್ಳಲೇ ಇಲ್ಲ.

ಅತಿಥಿ ಅರಮನೆಯಲ್ಲಿ ಷಹಜಾದಾ ಬಹಾದುರ್‌ಗೆ ಕಡೇ ಪಕ್ಷ ಹತ್ತಿಪ್ಪತ್ತು ಜನ ಹುಡುಗಿಯರು ಸಿಕ್ಕುತ್ತಿದ್ದರು. ಅವನು ಇನ್ನಿತರೆ ಮೂಲಗಳಿಂದಲೂ ಪ್ರಯತ್ನಿಸಿದ್ದ ಎನ್ನುವುದು ನನಗೆ ಬೇರೆಯವರಿಂದ ತಿಳಿದಿತ್ತು. ಅವನದೇ ಜನಾಂಗದ ಕೆಲವು ಕುಟುಂಬಗಳು ಅವನ ಕೃಪಾನುಗ್ರಹಗಳಿಸಲು, ಅಷ್ಟೇ ಅಲ್ಲ, ಗುಜರಾತಿನ ರಾಜಕುಟುಂಬದೊಂದಿಗೆ ಸಂಬಂಧ ಬೆಳೆಸುವ ಕನಸು ಕಾಣುತ್ತಿದ್ದುವು ಎಂದು ನನಗೆ ನಿಶ್ಚಿತವಾಗಿತ್ತು.

ಅವನ ಬಳಕೆಗೆ ಇಷ್ಟೆಲ್ಲಾ ಹುಡುಗಿಯರಿದ್ದಾಗ್ಯೂ ರಾಜಕುಮಾರ ಕೌಸಲ್ಯಳನ್ನು ಏಕೆ ಬಯಸಿದ? ಅಷ್ಟಾಗಿ ಅವಳಲ್ಲಿ ಏನನ್ನು ಕಂಡಿದ್ದ? ಹಾಗೆ ಕೇಳುವಾಗಲೂ ಅದೊಂದು ಬೂಟಾಟಿಕೆಯ ಪ್ರಶ್ನೆ ಎಂದು ನನಗೆ ಖಚಿತವಾಗಿ ಗೊತ್ತು. ಅವಳು ಕೇವಲ ಚಿಕ್ಕವಯಸ್ಸಿನವಳ ಹಾಗೆ ಕಾಣುತ್ತಿದ್ದುದಷ್ಟೇ ಅಲ್ಲ ಚಿಕ್ಕವಳಾಗಿಯೂ ಇದ್ದಳು. ಒಂದೇ ಒಂದು ಸಲ ಅದೂ ಕ್ಷಣಿಕ ಕಾಲ ನೋಡಿದರೂ ಸಾಕು ಅವಳ ಕಣ್ಣುಗಳನ್ನಾಗಲಿ ಅವಳ ಮುಖದ ಭಂಗಿಗಳನ್ನಾಗಲಿ, ಅವಳ ನಡಿಗೆಯ ಅಥವಾ ನಿಲುವಿನ ಭಂಗಿಗಳನ್ನಾಗಲಿ ಗಮನಿಸಲು ಪುರಸೊತ್ತಿಲ್ಲದಿದ್ದರೂ, ಅವಳು ಮನಸ್ಸಿನ ಮಲೆ ಶಾಶ್ವತವಾದ ಪ್ರಭಾವ ಮುದ್ರೆಯನ್ನೊತ್ತಿ ಬಿಡುತ್ತಾಳೆ. ನಿಮ್ಮ ಮನಸ್ಸಿನಲ್ಲಿ ನೆಲೆನಿಂತು ಬಿಡುವಂಥ ನಿಲುವು, ವರ್ಚಸ್ಸು ಅವಳದು. ನನ್ನ ಕುಟುಂಬದ ಪುರುಷರು ಅವಳನ್ನು ದೂರವಿಟ್ಟಿದ್ದರೆ, ಅದಕ್ಕೆ ಕಾರಣ ಅವಳು

ಸಂಕೋಚ ಪ್ರವೃತ್ತಿಯವಳು ಮತ್ತು ಮಹಾರಾಜಕುಮಾರ್‌ನ ದಾಯಿ ಎನ್ನುವುದಷ್ಟೇ ಅಲ್ಲ, ಭಯಕ್ಕೂ ಅದಕ್ಕೂ ಸಂಬಂಧವಿತ್ತು. ನಿಮಗೆ ಒಳ್ಳೆಯದು ಯಾವುದು ಎಂದು ತಿಳಿದಿದ್ದರೆ ಅವಳನ್ನು ಸಂಧಿಸುವುದಿಲ್ಲ. ನಾನು ನೋಡಿದ ಅತ್ಯಂತ ನೇರ ಕಣ್ಣುಗಳ ಹೆಣ್ಣು ಅವಳು. ನಿಮ್ಮ ಮತ್ತು ನಿಮ್ಮ ಉದ್ದೇಶಗಳ ಒಳಹೊಕ್ಕು ನೋಡುತ್ತಿದ್ದುವು ಮತ್ತು ದೂರ ಇರಿ ಎಂದು ಹೇಳುತ್ತಿದ್ದುವು.

ಬಹಾದುರ್‌ಗೆ ಕೌಸಲ್ಯ ಏನು ಹೇಳುವಳು ಅವನು ಹೇಗೆ ವಿಷಯವನ್ನು ಪ್ರಸ್ತಾಪಿಸುವನು? ಪರಿಚಯವಿಲ್ಲದ ಹಾಗೂ ಎಂದೂ ಮಾತನಾಡದಿರುವ ಹೆಣ್ಣಿಗೂ ತನಗೂ ನಡುವೆ ಇರುವ ಕಂದರವನ್ನು ಒಬ್ಬ ಮನುಷ್ಯ ಹೇಗೆ ತಾನೆ ಭೇದಿಸುವನು? ಅವನು ಖಂಡಿತವಾಗಿಯೂ ಅವಳನ್ನು ನೋಡಿದ್ದಾನೆ. ಆದರೆ ಆಗ ಅದರ ಪರಿವೆ ಇರಲಿಲ್ಲ ಅವನಿಗೆ. ಅವಳನ್ನು ನೇರವಾಗಿ ಮುಲಾಜಿಲ್ಲದೆ ಕೇಳುವನೆ? ಅವಳ ಸೀರೆ ಮತ್ತು ರವಿಕೆಗಳನ್ನು ಕಳಚಿಹಾಕುವನೆ? ಅವಳ ಮೊಲೆಗಳನ್ನು ಪಕ್ಕನೆ ಹಿಡಿದು ಮೊಲೆತೊಟ್ಟುಗಳ ಮಧ್ಯೆ ಗುಳಿ ಬೀಳುವಂತೆ ಮೃದುವಾಗಿ ತಟ್ಟಿ ಅವುಗಳನ್ನು ಹೀರುತ್ತ ಒಮ್ಮೇಲೇ ಕಚ್ಚಿ ಬಿಡುವನೆ? ಅವಳ ಪರಕಾರವನ್ನು ಕಿತ್ತೆಸೆದು, ಅವಳು ಅದರಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವಾಗ ಹಾಸಿಗೆಯ ಮೇಲೆ ಅವಳನ್ನು ಅಂಗಾತ ಮಲಗಿಸಿ ಅವಳ ಕೈಗಳನ್ನು ಮಂಚದ ತುದಿಗೆ ಕಟ್ಟಿ ಅನಂತರ ಅವಳೊಳಕ್ಕೆ ಥಟ್ಟನೆ ಮುನ್ನುಗ್ಗುವನೆ? ಇದು ವಿಲಕ್ಷಣವಾದ್ದು, ತುಂಬ ವಿಲಕ್ಷಣವಾದ್ದು. ಕಾರಣ ಇತರೆಯವರ ಲೈಂಗಿಕ ಒಲವುಗಳ ಬಗ್ಗೆ ಸಾಮಾನ್ಯವಾಗಿ ನಾನೆಂದೂ ಚಿಂತಿಸುತ್ತ ಕಾಲಕಳೆಯುವುದಿಲ್ಲ. ಆನಂತರ ಅದು ನನಗೆ ತಾಕೀತು. ನಾನು ಅದಾವುದನ್ನೂ ಸೃಷ್ಟಿಮಾಡಿ ಹೇಳುತ್ತಿಲ್ಲ. ನಮ್ಮವರೊಬ್ಬರು ರಾಜಕುಮಾರನ ರಾತ್ರಿ ಬದುಕನ್ನು ಕುರಿತು ನೀಡಿದ ವರದಿಯನ್ನು ಯಥಾವತ್ತಾಗಿ ಪುನರಾವರ್ತಿಸುತ್ತಿದ್ದೆ ಅಷ್ಟೆ. ಸಂಭೋಗ ಪೂರ್ವದ ಪ್ರಣಯದಾಟದ ನಡುವೆಯೋ ಅಥವಾ ಅದರ ಕೊನೆಗೋ ಬಹಾದುರ್ ತೀರಾ ಉಗ್ರನಾಗುತ್ತಿದ್ದ ಮತ್ತು ಪ್ರಣಯದ ನಾನಾ ಕ್ರೂರ ವಿಧಾನಗಳ ಪ್ರಯೋಗಗಳಿಗೆ ತೊಡಗುತ್ತಿದ್ದ. ರಾಜಕುಮಾರನ ಬಗ್ಗೆ ವರದಿಗಾರನೊಬ್ಬ ನೀಡಿದ ಎಚ್ಚರಿಕೆಯ ಸಲಹೆಗಳಲ್ಲೊಂದು, ಅವನಿಗೆ ಮನುಷ್ಯರ ನೋವಿನ ಸಹನೆಯ ಮಿತಿಗಳನ್ನು ಪರೀಕ್ಷಿಸಬೇಕೆಂಬ ಇಚ್ಛೆಯಿದ್ದಂತೆ ತೋರುತ್ತದೆ ಮತ್ತು ಹಾಗೆ ಪರೀಕ್ಷಿಸುವಾಗ ಅನೇಕ ವೇಳೆ ಮನುಷ್ಯರ ಸಹನೆಯ ಮಿತಿಗಳನ್ನು ಮೀರುತ್ತಿದ್ದನಾಗಿ ಅವನ ಮೇಲೆ ಕಣ್ಣಿಡಬೇಕೆಂದು ವರದಿ ನೀಡಲಾಗಿತ್ತು. ಅವನ ಮೇಲೆ ಕಣ್ಣಿಡಬೇಕೆಂದು ನಮ್ಮ ವರದಿಗಾರ ಹೇಳಿದ್ದರ ಅರ್ಥವನ್ನು ಯಾರು ಹೇಗೆ ಬೇಕಾದರೂ ಊಹಿಸಬಹುದು. ನಾವು ಬಹಾದುರ್‌ನ ಕೋಣೆಯ ಹೊರಗೆ ಕಾದಿದ್ದು. ಅವನ ಕೈಗೆ ಸಿಕ್ಕಿ ಒದ್ದಾಡುತ್ತಿರುವ ಹೆಂಗಸು ಒಮ್ಮೆಗೇ ಕಿರಿಚುವುದನ್ನು ನಿಲ್ಲಿಸಿ, ಮೈಮೇಲಿನ ಎಚ್ಚರವನ್ನು ಕಳೆದುಕೊಳ್ಳುವ ಸಮಯಕ್ಕೆ ಬಾಗಿಲನ್ನು ಒಡೆದು ಒಳಹೊಕ್ಕು ನಮ್ಮ ಟೋಪಿಯನ್ನು ತೆಗೆದು ರಾಜಕುಮಾರನಿಗೆ ಗೌರವ ತೋರಿಸಿ 'ತಮ್ಮ ಅಪ್ಪಣೆಯ ಮೇರೆಗೆ ಮಹಾಸ್ವಾಮಿಯವರೆ ಎಂದೋ' ಅಡಚಣೆಗಾಗಿ ಕ್ಷಮಿಸಬೇಕು ಮಹಾಸ್ವಾಮಿ, ಆದರೆ ಈ ಹೆಣ್ಣಿಗೆ ಪುನಃ ಪ್ರಜ್ಞೆ ಬರುವ ಹಾಗೆ ಮಾಡುವ ಅಗತ್ಯವಿದೆ ಅಂತ ನಮಗನ್ನಿಸುತ್ತೆ' ಎಂದೋ ಹೇಳಬೇಕೆಂದೆ? ಅವನ ಇನ್ನೊಂದು ಶಿಫಾರಸು ಏನೆಂದರೆ, ಇಂಥದ್ದರಲ್ಲೆಲ್ಲಾ ಚೆನ್ನಾಗಿ ಪರಿಣತಿ ಇರುವ, ಅಷ್ಟೇ ಅಲ್ಲ ಅಂಥದ್ದನ್ನು ಬೇರೆಯವರಿಗೂ ಕೊಡುವುದರಲ್ಲಿ ನಿಷ್ಣಾತಿ ಇರುವ ಹಳಬರಾದ ಹೆಂಗಸರನ್ನು ಮಹಾಸ್ವಾಮಿಯವರ ಜೊತೆಗಾತಿಯರನ್ನಾಗಿ ಆರಿಸಿ ಕಳಿಸಬೇಕು. ಒಳ್ಳೆಯ ಸಲಹೆ. ನಮ್ಮ ಗುಪ್ತಚರ ವಿಭಾಗದ ಬಳಿ ಅಂಥ ಅನುಭವೀ ಹಾಗೂ ಇಷ್ಟವಾಗುವಂಥ ಕಸಬುದಾರ

ಹೆಣ್ಣುಗಳು ಇಪ್ಪತ್ತು ಮೂವತ್ತು ಜನರ ಒಂದು ಪಟ್ಟಿಯೇ ಇದೆ ಎಂದು ನನಗೆ ಖಚಿತವಾಗಿ ಗೊತ್ತು.

ಆ ವರದಿ ಬಂದ ಕೂಡಲೇ ರಾಜಕುಮಾರ ಕಾಯಿಲೆ ಬಿದ್ದ. ಆ ಎಲ್ಲಾ ಆತಂಕದಲ್ಲಿ ಇದುವರೆಗೂ ಅದು ನನ್ನ ಮನಸ್ಸಿನಿಂದ ಹಾರಿಹೋಗಿತ್ತು. ನನ್ನ ಈ ಜಡ ನಿರ್ಲಕ್ಷ್ಯದ ಮನೆ ಹಾಳಾಗ? ನಾನು ಹೇಳಿದ್ದನ್ನು ಬರೆದುಕೊಳ್ಳುವವನಿಗೆ ಈ ದಿನ ಮಧ್ಯಾಹ್ನದ ಕಾರ್ಯಕಲಾಪಗಳನ್ನೆಲ್ಲ ರದ್ದುಪಡಿಸಲು ಹೇಳಿ ಮನೆಯತ್ತ ಕುದುರೆಯೇರಿ ಹೊರಟೆ. ಆ ಹೆಂಗಸು ಹಾಡುತ್ತಿದ್ದಳು. ಅವಳ ಕೋಣೆಯ ಬಾಗಿಲನ್ನು ಮುಚ್ಚಿ ಹೊರಗಿನಿಂದ ಬೀಗಹಾಕಿದೆ. ಎಲ್ಲ ಕಡೆ ಹುಡುಕಾಡಿದೆ. ಎಲ್ಲೂ ಕೌಸಲ್ಯಳ ಸುಳಿವಿಲ್ಲ. ರಾಣಿಯರ ಅರಮನೆಗಳಲ್ಲಿ ಹಾಗೂ ಒಂದು ವೇಳೆ ಯಾರಾದರೂ ಬಡರೋಗಿಗಳಿಗೆ ಮನೆಯಲ್ಲಿ ಸಿದ್ಧಪಡಿಸಿದ ಔಷಧಿಗಳನ್ನು ಕೊಡಲು ನೌಕರರ ಮನೆಗಳ ಕಡೆ ಹೋಗಿದ್ದರೆ ಅಲ್ಲಿ ಹುಡುಕಿ ನೋಡಲು ಒಬ್ಬ ಕೆಲಸದಾಳಿಗೆ ಹೇಳಿದೆ. ಹತ್ತಿರ ಹತ್ತಿರ ಒಂದು ಗಂಟೆ ಕಳೆಯಿತು. ಅವಳು ಹೋದವಳು ಹಿಂತಿರುಗಿ ಬರಲಿಲ್ಲ. ಇನ್ನೊಬ್ಬ ಕೆಲಸದಾಳನ್ನು ಹುಡುಕಿಕೊಂಡು ಬರಲು ಹೇಳಿ ಅವಳು ಹತ್ತು ನಿಮಿಷಗಳಲ್ಲಿ ವಾಪಸ್ ಬರದೆ ಇದ್ದರೆ ಕುಂಭಲ್‌ಗರ್ ಸೆರೆಮನೆಗೆ ಕಳಿಸುವುದಾಗಿ ಹೇಳಿದೆ. ನಾನು ಅವಳ ಜೊತೆ ಹೋಗಿ ರಾಣಿ ವಾಸಕ್ಕೆ ಮುಂಚೆ ಎಡಕ್ಕೆ ತಿರುಗಿದೆ. ನನ್ನ ಪಾದರಕ್ಷೆಗಳನ್ನು ಕಳಚಿ, ನೆಲಮಾಳಿಗೆಯಲ್ಲಿ ಉಗ್ರಾಣದ ಪಕ್ಕದಲ್ಲಿದ್ದ ಗೂಡಿನಲ್ಲಿದ್ದ ಅನ್ನಪೂರ್ಣಾ ದೇವಿಗೆ ನಮಸ್ಕರಿಸಿದೆ. ಅಲ್ಲಿ ಒಂದು ವೇಳೆ ಶತ್ರುಗಳು ಆಕ್ರಮಣ ಮಾಡಿದರೆ, ಅರಮನೆಯಲ್ಲಿರುವವರಿಗೆಲ್ಲ ಕೊನೆಯ ಪಕ್ಷ ಆರು ತಿಂಗಳವರೆಗೆ ಆಗುವಷ್ಟು ಅವರೆಕಾಳು, ಒಣ ಹುರುಳಿಕಾಳುಗಳು ಮತ್ತು ಬೆಲ್ಲವನ್ನು ತುಂಬಿಸಿಟ್ಟಿದ್ದ ಗೋಣಿ ಚೀಲಗಳನ್ನು ಪೇರಿಸಿ ಇಟ್ಟಿದ್ದ ಸಾಲುಗಳ ನಡುವೆ ಜಾಗ ಮಾಡಿಕೊಂಡು ಮುಂದೆ ಸಾಗಿದೆ. ಒಂದು ವೇಳೆ ಆಕೆ ಜಮೀನುಗಳಿಂದ ಬಂದಿದ್ದ ದವಸ ಧಾನ್ಯಗಳನ್ನು ತಂದೊಪ್ಪಿಸುವುದನ್ನು ಪರೀಕ್ಷಿಸಲು ಅಲ್ಲಿರಬಹುದೇನೋ ನೋಡೋಣ ಎಂದು ಸುಮ್ಮನೆ ಒಂದು ಅವಕಾಶ ತೆಗೆದುಕೊಳ್ಳುತ್ತಿದ್ದೆನೆಂದು ನನಗೆ ಗೊತ್ತಿತ್ತು. ಅವಳು ಅಲ್ಲಿರಲಿಲ್ಲ. ಎರಡನೇ ಸಲ ಕಳಿಸಿದ್ದ ಹೆಣ್ಣಾಳು ಮೊದಲು ಕಳಿಸಿದ್ದವಳ ಜೊತೆ ಹಿಂತಿರುಗಿದಾಗ ಕೌಸಲ್ಯ ಅರಮನೆಯ ಆವರಣದಲ್ಲಿ ಎಲ್ಲೂ ಇಲ್ಲ ಎಂದು ತಿಳಿಸಿದಳು. (ಅವಳು ನನ್ನ ತಾಯಿ ಮಹಾರಾಣಿಯೊಂದಿಗೆ ರಾಣಿ ಕರ್ಮವತಿ ಆಡುತ್ತಿದ್ದ ಚೌಪಟದ ಆಟದಲ್ಲಿ ಮುಳುಗಿ ಹೋಗಿದ್ದಳು, ಅದೂ ಮುಂಚೆಯೇ ನಿಗದಿತವಾದ ಭಾರೀ ಪಣಕ್ಕಾಗಿ)

ನಾನು ಮಂಗಳನಿಗೆ ಹೇಳಿಕಳಿಸಿದೆ. ಅವನ ತಾಯಿ ಅಕಸ್ಮಾತ್ ಅವನ ಮನೆ ಕಡೆ ಏನಾದರೂ ಬಂದಿದ್ದಳೆ ಎಂದು ಕೇಳಿದೆ. ಇಲ್ಲ ಅವಳು ಬಂದಿರಲಿಲ್ಲ. ಅತಿಥಿ ಅರಮನೆಯನ್ನು ದಾಟಿ ಮುಂದೆ ಹೋದೆ. ಕಳೆದ ರಾತ್ರಿ ಷಹಜಾದನ ಬಳಿ ಬಂದಿದ್ದ ಹೆಣ್ಣು ಯಾರು ಎಂದು ಭದ್ರತಾ ಸಿಬ್ಬಂದಿಯವರನ್ನು ಕೇಳುವುದು ತೀರಾ ನಾಚಿಕೆಗೇಡಿನದು ಎನಿಸಿತು. ರಾಜಕುಮಾರ ಅಲ್ಲಿದ್ದನೆ ಎಂದು ವಿಚಾರಿಸಿದರೆ ಹೌದು ಮಹಾಸ್ವಾಮಿ, ಆದರೆ ಯಾರೂ ಬಂದು ತನಗೆ ತೊಂದರೆ ಕೊಡಬಾರದೆಂದು ಅವರಿಗೆಲ್ಲ ಕರಾರುವಾಕ್ಕಾಗಿ ಸೂಚಿಸಿಬಿಟ್ಟಿದ್ದಾರೆ.

ಅವಳು ಅವನೊಂದಿಗೆ ಇದ್ದಳೆ? ಹಿಂದಿನ ರಾತ್ರಿ ಅಲ್ಲಿಗೆ ಹೋದವಳು ಅಲ್ಲಿಂದ ಹೊರಬಂದಿಲ್ಲವೆ? ಹಾಗಾದರೆ ಅವರಿಬ್ಬರ ಆಸಕ್ತಿಗಳು ಪರಸ್ಪರ ಅಷ್ಟರ ಮಟ್ಟಿಗೆ ಒಂದೇ ಬಗೆಯವಾಗಿದ್ದವೆ? ತನಗೂ ಚರ್ಮ, ಚಾಟಿ, ಚಿಮಟ ಮತ್ತು ಕೊಳ್ಳಿ ಎಂದರೆ ಇಷ್ಟ ಎಂದು ಕಂಡುಕೊಂಡಳೆ? ಅಷ್ಟೆಲ್ಲಾ ವಾರ ವಾರವೂ ತಿಂಗಳು ತಿಂಗಳೂ ನನ್ನಿಂದ ಪಡೆಯುತ್ತಿದ್ದುದು ಬರೀ ತಣ್ಣನೆಯ ಅಪ್ಪುಗೆ ಮತ್ತು ವಿಷಾದ ಮೌನವನ್ನೆ? ಅವನೂ

ನನ್ನಂತೆಯೇ ಅವಳ ಹೊಕ್ಕುಳಲ್ಲಿ ಮಧುವನ್ನು ಸುರಿದು ನೆಕ್ಕುತ್ತಿದ್ದನೆ? ಅವಳ ಬೆನ್ನನ್ನು ನವಿಲು ಗರಿಯಿಂದ ಸವರುತ್ತಿದ್ದನೆ? ಅವಳು ಅವನ ತಲೆಗೂದಲಲ್ಲಿ. ನಿಧಾನವಾಗಿ ತನ್ನ ಬೆರಳಾಡಿಸುತ್ತ ಅವನು ಅರೆ ಪ್ರಜ್ಞಾವಸ್ಥೆಯ ಸ್ಥಿತಿಗೆ ಹೋಗುವವರೆಗೂ ತಲೆಯನ್ನು ತಿಕ್ಕುತ್ತಿದ್ದು ಅವನ ಮೊಲೆ ತೊಟ್ಟಿನ ಮೇಲೆ ತನ್ನ ನಾಲಿಗೆಯಾಡಿಸುತ್ತಿದ್ದಾಗ ಒಮ್ಮೆಲೇ ಜಾಗೃತ ಗೊಂಡನೆ? ನಾನು ಮತ್ತು ಕೌಸಲ್ಯ ಪರಸ್ಪರ ಕಂಡು ಕೊಂಡು ನಮ್ಮಿಬ್ಬರ ನಡುವೆ ಪರಿಣತಿಯನ್ನು ಸಾಧಿಸಿದ ಅದೆಷ್ಟೋ ಹೇಳಲಾರದ ಮತ್ತು ಅತ್ಯಂತ ಉದ್ರೇಕದ ಸಂಗತಿಗಳಿದ್ದುವು. ನಾವಿಬ್ಬರು ಶೋಧಿಸಿ ಕಂಡುಕೊಂಡು ಪಟ್ಟಿಮಾಡಿಕೊಳ್ಳಲು ಹತ್ತು ವರ್ಷಕ್ಕಿಂತಲೂ ಹೆಚ್ಚು ಸಮಯ ತೆಗೆದುಕೊಂಡವುಗಳನ್ನೆಲ್ಲಾ ಬಹಾದುರನೊಂದಿಗೆ ಹಂಚಿಕೊಂಡು ಅವುಗಳಲ್ಲಿ ಅವನಿಗೆ ಸಂಕ್ಷಿಪ್ತ ಶಿಕ್ಷಣ ನೀಡುತ್ತಿದ್ದಳೆ?

ನನಗೇನಾಗಿ ಬಿಟ್ಟಿದೆ? ಕೌಸಲ್ಯಳನ್ನು ನಾನು ಅಷ್ಟೆಲ್ಲಾ ಕಳೆದುಕೊಂಡಿದ್ದೀನಿ ಎಂದಾಗಿದ್ದರೆ, ನನಗೆ ಮುಂಚೆ ಏಕೆ ಅದು ಗೊತ್ತಾಗಲಿಲ್ಲ? ಮತ್ತೆ ನಾನು ನಿಜವನ್ನು ಕಂಡುಕೊಂಡಾಗ ನನ್ನ ಉತ್ಕಟ ಕಾಮಾಸಕ್ತಿ ರಣೋನ್ಮತ್ತವಾದ್ದೇಕೆ? ಅದು ನಾನು ಅವಳೊಂದಿಗೆ ಹಂಚಿಕೊಂಡ ಸವಿದ ಆಪ್ತ ಕ್ಷಣಗಳನ್ನು ಉಕ್ಕಿಸಿಕೊಂಡು ಹೊರ ಕಕ್ಕುವ ಮೂಲಕ ನನ್ನನ್ನು ನಾನೇ ಒಂದು ರೀತಿಯ ಲೈಂಗಿಕ ಹುಚ್ಚು ಆವೇಶಕ್ಕೆ ದೂಡಿಕೊಂಡಂತೆ. ಹಾಗಲ್ಲದೆ ಹೋದರೆ ಅವಳು ಎಚ್ಚರ ತಪ್ಪಿ ಎಲ್ಲಿ ಮಲಗಿದರೆ ನನಗೇನಂತೆ? ಮತ್ತೆ ಸರಿ ಪಡಿಸಲಾಗದಷ್ಟು ಮಟ್ಟಿಗೆ ಕೇವಲ ದೈಹಿಕವಾಗಿ ಮಾತ್ರವಲ್ಲ ಅದಕ್ಕಿಂತ ಹೆಚ್ಚಾಗಿ ಅವಳ ಆತ್ಮಕ್ಕೆ ಅವನು ಆಘಾತ ಉಂಟು ಮಾಡಿದ್ದರೆ ಏನಂತೆ?

ಓ ದೇವರೆ! ನೀನೆಲ್ಲಾದರೂ ಇರು, ಅವಳನ್ನು ಚೆನ್ನಾಗಿ ಇಟ್ಟಿರು. ಸಾಧ್ಯವಾದರೆ ಅವಳು ಷಹಜಾದನವಳಾಗದೆ ನನ್ನವಳಾಗಿಯೇ ಇರಲಿ.

ಆದರೆ ಅವಳೆಲ್ಲಿದ್ದಳು?

ಅಧ್ಯಾಯ 14

> **ನಾವು ಅತ್ಯಂತ ಅಪರೂಪದ ದಂಪತಿಗಳಾಗಿದ್ದೆವು. ಮದುವೆಯಾದ ಎಷ್ಟೋ ವರ್ಷಗಳ ನಂತರವೂ ನಾವು ಹುಚ್ಚೆನಿಸುವಷ್ಟು ಪ್ರೀತಿಸುತ್ತಿದ್ದೆವು; ಅವಳನ್ನು ನಾನು, ಅವಳು ಇನ್ಯಾರನ್ನೋ.**

ಅವಳ ನಾಲಿಗೆಯನ್ನು ಕಿತ್ತೆಳೆಯ ಬೇಕೋ ಇಲ್ಲವೆ ಅವಳ ಬಾಯಿಗೆ ಕರವಸ್ತ್ರವನ್ನು ತುರುಕಬೇಕೋ ಎಂದವನು ಚಕಿತನಾದ. ಅವಳೇನು ವಿಕೃತ ವ್ಯಕ್ತಿಯೆ? ಅವನನ್ನು ರೇಗಿಸಲೆಂದೇ ಬೇಕೆಂತಲೇ ಹೀಗೆ ಮಾಡುತ್ತಿದ್ದಾಳೆಯೆ? ಅವನು ಏಕತಾರಿಯನ್ನು ಎರಡು ತುಂಡಾಗಿ ಕತ್ತರಿಸಿ ಹಾಕಿದ್ದನು. ಅದರಿಂದೇನೂ ಅಂಥ ವ್ಯತ್ಯಾಸವಾದ ಹಾಗೆ ಕಾಣಲಿಲ್ಲ. ಅದಿಲ್ಲದೆ ಅವಳು ಹಾಡಿದಳು. ಏನೇ ಆದರೂ ಅವಳು ಹಾಡುವುದನ್ನು ನಿಲ್ಲಿಸಬೇಕೆಂದು ಅವನು ನಿರ್ಧರಿಸಿದ್ದರೂ, ಉದ್ದೇಶ ಪೂರ್ವಕವಾಗಿ ಅದನ್ನು ಆಲಿಸಿದನು. ಏಕತಾರಿ ಇಲ್ಲದೆ ಅವಳು ನೇರವಾಗಿ ಕೆಳಕ್ಕಿಳಿಯುವಾಗ ಶ್ರುತಿ ತಪ್ಪುವಳೆ. ತಪ್ಪು ಸ್ವರ ಹಾಡುವಳೆ? ಅದು ಒಂದು ವೇಳೆ ಅವಳೇನಾದರೂ ತನ್ನ ಅವರೋಹಣದಲ್ಲಿ ಅತ್ಯಲ್ಪ ಕ್ಷಣವಾದರೂ ಅತ್ತ ಇತ್ತ ಜೋಲಿಹೊಡೆದದ್ದನ್ನು ಹಿಡಿಯಲು ಸಾಧ್ಯವಾಗಿದ್ದರೆ ಮಾತ್ರ. ಆದರೆ ಅವಳು ಹಾಗೆ ಮಾಡಲಿಲ್ಲ. ಅವಳ ಕಂಠ ಶಸ್ತ್ರ ವೈದ್ಯನ ಹಸ್ತದ ಹಾಗೆ ಸ್ಥಿರವಾಗಿತ್ತು. ಅದು ಅಡ್ಡಾದಿಡ್ಡಿಯಾಗಿ ಸಾಗಿದ್ದರೆ, ಅದಕ್ಕೆ ಕಾರಣ, ಅವಳು ಮರಳಿನ ಮೇಲೆ ಎರಗಿ ಬಿದ್ದು ಅಕ್ಕಪಕ್ಕ ಹೊರಳಾಡುತ್ತ ವಕ್ರಗತಿಯಲ್ಲಿ ಸಾಗುವ ಮರಳು ಗಾಡಿನ ಹಾವಿನಂತೆ ತಾನವನ್ನು ತೆಗೆಯ ಬಯಸಿದ್ದಳು. ಅವಳು ಆ ಕಂಠವನ್ನು ಎಲ್ಲಿ ಪಡೆದುಕೊಂಡಳು? ಅವಳು ಐದಡಿ ಎರಡಂಗುಲ ಎತ್ತರವಿದ್ದು ಸ್ವಲ್ಪಮಟ್ಟಿನ ಕಲ್ಪನಾಶಕ್ತಿ ಇದ್ದವಳು. ಅವಳು ತೆಳ್ಳಗೆ – ಸಣ್ಣಗೆ ಇದ್ದಳು. ಅವಳ ಆರೋಹಣದ ವ್ಯಾಪ್ತಿ ಮತ್ತು ತರಲತೆ ಎಂಥದೆಂದರೆ ಕರ್ಷಣಗುಣವುಳ್ಳ ಉಕ್ಕಿನಿಂದ ಮಾಡಿದ ಧ್ವನಿಪೆಟ್ಟಿಗೆಗೆ ಅರಮನೆಯ ಗಾತ್ರದ ತಿದಿಯನ್ನು ಅಳವಡಿಸಿದ್ದರೆ ಅದರಿಂದ ಹೊರಡಬಹುದಾದಂಥದು.

ಅವನು ಅವಳನ್ನು ಕುಳ್ಳಿರಿಸಿದ. ತನ್ನ ಧ್ವನಿಯ ಏರಿಳಿತಗಳನ್ನು ಸಮಸ್ಥಿತಿಗೆ ತಂದುಕೊಂಡು ಹೇಳಿದ: "ಹಾಡಬೇಡ, ಅರ್ಥ ಆಯಿತು ತಾನೆ? ನನ್ನ ಮನೆಯಲ್ಲಿರುವಾಗ ನೀನು ಹಾಡಕೂಡದು"

"ಏಕೆ?" ಅವಳು ಮುಗ್ಧವಾಗಿ ಕೇಳಿದಳು ಅಥವಾ ತುಂಬ ಸೊಗಸಾಗಿ ಮುಗ್ಧತೆಯ ಸೋಗಿನಿಂದ ಕೇಳಿದಳು.

"ಏಕೆಂದರೆ ರಾಜಕುಮಾರಿಯರು ಸಾರ್ವಜನಿಕರಿಗಾಗಿ ಹಾಡುವುದಿಲ್ಲ. ಕೊನೇ ಪಕ್ಷ ಈ ಮನೆಯಲ್ಲಂತೂ ಇಲ್ಲ. ವೇಶ್ಯೆಯರು ಹಾಡುತ್ತಾರೆ."

"ಅದು ಬರೀ ಭಜನೆ ಅಷ್ಟೆ"

"ರಸಿಕಾ ಬಾಯಿ ತನ್ನ ಪ್ರತಿ ಸಂಗೀತ ಕಛೇರಿಯನ್ನು ಭಜನೆಯಿಂದ ಮುಗಿಸುತ್ತಾಳೆ. ನಿನ್ನ ಹಾಗೇ ಅವಳಿಗೂ ನೂರಾರು ಜನ ಶ್ರೋತೃಗಳು ಕಿಟಕಿ ಹತ್ತಿರ, ಮಹಡಿಯ ಮೇಲೆ ನಿಂತಿರುತ್ತಾರೆ. ಇಷ್ಟರಲ್ಲೇ ಅವರೆಲ್ಲಾ ನಿನ್ನ ಕಡೆಗೆ ಕಾಸುಗಳನ್ನು ಎಸೆಯುತ್ತಾರೆ" ನಾನು ನನ್ನ ಮಾತಿನ ಓಘದಲ್ಲಿ ಮುಂದುವರೆದಿದ್ದೆ. "ಆದರೆ ಅದು ನನಗೆ ಸಂಬಂಧಿಸಿದ್ದು ಅಂತಾದರೆ ಅವರು ಹಾಗೆ ದುಡ್ಡು ಎಸೆಯುವುದಿಲ್ಲ. ಈ ಹೊತ್ತು ಏನು ನೀನು ಸಂಗೀತ ಕಛೇರಿ ನಡೆಸಿದೆ, ಅದೇ ಕೊನೆಯದು ಗೊತ್ತಾಯಿತಲ್ಲ?"

"ಅದು ನಿಮ್ಮನ್ನು ಅಷ್ಟೊಂದು ತಳಮಳಗೊಳಿಸುತ್ತದೆಂದಾದರೆ ನಾನು ಹಾಡುವುದಿಲ್ಲ"

"ಅದು ಬರೀ ನನ್ನನ್ನಷ್ಟೇ ತಳಮಳಕ್ಕೆ ಈಡು ಮಾಡಿರೋದಲ್ಲ. ಇಡೀ ನಮ್ಮ ಕುಟುಂಬವನ್ನೇ ತಳಮಳಕ್ಕೆ ಈಡು ಮಾಡಿದೆ. ನಮ್ಮ ತಾಯಿ, ಇತರೆ ರಾಣಿಯರು, ರಾಜಕುಮಾರರು ಅವರ ಹೆಂಡಂದಿರು ಮತ್ತು ನಮ್ಮ ತಂದೆ ಎಲ್ಲರನ್ನೂ ತಳಮಳಗೊಳಿಸಿದೆ"

"ನನ್ನನ್ನು ಕ್ಷಮಿಸಿ, ಅದು ಇಡೀ ಕುಟುಂಬವನ್ನೇ ತಳಮಳಕ್ಕೀಡುಮಾಡುವಂಥ ಸಂಗತಿಯಾಗುತ್ತೆ ಅಂತ ನನಗೆ ಗೊತ್ತಾಗಲಿಲ್ಲ"

"ರಾಣಿ ಕರ್ಮವತಿ ನಿನ್ನೆ ನನ್ನನ್ನು ಕರೆದು ನನ್ನ ಮುಖಕ್ಕೆ ಹೊಡೆದ ಹಾಗೆ ನೇರವಾಗಿ ಹೇಳಿದರು – ಮೆರ್ತಾದಿಂದ ನಾವು ಕರೆಸಿಕೊಂಡಿರುವ ಹೊಸ ಸಂಗೀತಗಾರ್ತಿಯನ್ನು ತಾನು ಕರೆದುಕೊಂಡು ಹೋಗಬಹುದೆ ಎಂದು ಚಂದೇರಿಯ 'ರಾವ್' ಕೇಳಿದನಂತೆ. ಅಷ್ಟೇ ಅಲ್ಲ ಭರ್ಜರಿ ಸಂಭಾವನೆ ಕೊಡುತ್ತೀನಿ ಅಂತ ಹೇಳಿದನಂತೆ"

"ನಾನು ಅಲ್ಲಿಗೆ ಹೋಗಿ ಹಾಡಬೇಕು ಅಂತ ನೀವು ಹೇಳ್ತೀರಾ? ನನಗೆ ಸಾಧ್ಯವಿಲ್ಲ. ನನಗೆ ತುಂಬಾ ನಾಚಿಕೆಯಾಗುತ್ತೆ"

ಅವಳು ತನಗೆ ಸೋಗು ಹಾಕುತ್ತಿದ್ದಾಳೆ ಎಂದು ಅವನಿಗೆ ಖಂಡಿತವಾಯಿತು. ಅದರ ಬಗ್ಗೆ ಇನ್ನೇನೂ ಪ್ರಶ್ನೆಯಿಲ್ಲ. ಅವಳೇನು ಹುಚ್ಚಳೆ? ತುಂಬಾ ಭೋಳೇ ಮತ್ತು ಮೂರ್ಖಳೆ? ಅಥವಾ ಅವನನ್ನು ಮೂರ್ಖ ಎಂದು ಪರಿಗಣಿಸಿದಳೆ? ಈ ಹೆಂಗಸಿನ ಹತ್ತಿರ ಯಾರೇ ಆದರೂ ಹೇಗೆ ಮಾತನಾಡುವುದು? ಅವನ ಕೋಪ ಉಕ್ಕಿ ರಕ್ತ ನೆತ್ತಿಗೇರಿದ್ದು ಗೊತ್ತಾಯಿತು. ಶಾಂತವಾಗು ಶಾಂತವಾಗು ಎಂದು ತನಗೆ ತಾನೇ ಹೇಳಿಕೊಂಡನು. ಎಷ್ಟೇ ತನಗೆ ತಾನೆ ಬುದ್ಧಿವಾದ ಹೇಳಿಕೊಂಡರೂ ಅವನ ಹುಚ್ಚು ಕೆರಳುತ್ತ ಹೋಯಿತು.

"ಅದನ್ನು ಸುಮ್ಮನೆ ಮರೆತು ಬಿಡು, ನಿನಗೆ ಅದು ಅರ್ಥವಾಗಿದೆ ಅಂತ ಆದ ಮೇಲೆ ಇನ್ನು ಮುಂದೆ ಅದರ ವಿಷಯ ಮಾತಾಡಲು ನನಗಿಷ್ಟವಿಲ್ಲ. ಎಂಥದೇ ಸಂದರ್ಭದಲ್ಲೂ ಇನ್ನು ಮುಂದೆ ನಿನ್ನ ಸಂತೋಷಕ್ಕೇ ಆದರೂ ಸರಿ, ಬೇರೆಯವರ ಸಂತೋಷಕ್ಕೆ ಆದರೂ ಸರಿ ನೀನು ಹಾಡಕೂಡದು".

ಅವನಿಗೆ ಇನ್ನೂ ಚೆನ್ನಾಗಿ ಅರ್ಥವಾಗಬೇಕಿತ್ತು. ಅವಳು ದಿನವೂ ಹಾಡುತ್ತಿದ್ದಳು. ಅವನ ಹೆಂಡತಿ ಎಲ್ಲರ ಮನೆ ಮಾತಾದಳು. ಅವನಿಗೆ ಏನೂ ಮಾಡಲಾಗಲಿಲ್ಲ. ಮಿತಿಮೀರಿದ ರೀತಿಯ ಕ್ರಮಕೈಗೊಳ್ಳುವುದು ಅವನಿಗೆ ಹೊಳೆಯಲಿಲ್ಲ ಅಂತ ಅಲ್ಲ. ಆದರೆ ಅವಳು ಅಕಸ್ಮಾತ್ತಾಗಿ ಹೇಳಿದ ಒಂದು ಮಾತು ಅವನ ಮನಸ್ಸಿನಲ್ಲಿ ತೇಲಿ ಬಂತು ಅದೆಂದರೆ–

"ನಾನು ಹಾಡುತ್ತಾ ಇದ್ದೀನಿ ಅಂತ ನನಗೆ ಗೊತ್ತಿರಲಿಲ್ಲ. ನಾನು ಪ್ರಾರ್ಥನೆ ಮಾಡುವುದಕ್ಕೆ ಅಂತ ಕುಳಿತುಕೊಳ್ತೀನಿ. ಆಗ ನನಗೆ ನನ್ನ ಸುತ್ತಣ ಪರಿವೆ ಇರುವುದಿಲ್ಲ. ಎಲ್ಲ ಮುಗಿದ ಮೇಲೆ ನಿಮ್ಮ ಆಜ್ಞೆಯನ್ನು ನಾನು ಪುನಃ ಉಲ್ಲಂಘಿಸಿದ್ದೀನಿ ಅಂತ ಗೊತ್ತಾಗುತ್ತೆ"

ತಮ್ಮ ಕೃತ್ಯಗಳ ಹೊಣೆ ಹೊತ್ತು ಕೊಳ್ಳದಿರುವವರೆಂದರೆ ಅವನಿಗೆ ಜುಗುಪ್ಸೆ. ನಾವು ಯಾವುದೋ ಪ್ರವಾಹದ ಸೆಳೆತಕ್ಕೆ ಸಿಕ್ಕಿ ಸಾಗುತ್ತಿದ್ದೇವೆಂದು ನಮಗೆ ನಾವೇ ಹೇಳಿಕೊಂಡರೂ ನಾವೆತ್ತ ಸಾಗುತ್ತಿದ್ದೇವೆಂದು ನಮಗೆ ಗೊತ್ತಿರುತ್ತದೆಂದು ಅವನು ನಂಬಿದ್ದ.

"ನಾನೇನು ಮಾಡುತ್ತಿದ್ದೆ ಅಂತ ನನಗೆ ಗೊತ್ತಿರಲಿಲ್ಲ. ಆಣೆ ಮಾಡಿ ಹೇಳುತ್ತೇನೆ, ನನಗೆ ಗೊತ್ತಿರಲಿಲ್ಲ. ಅವನ ಹಾಸಿಗೆಯಲ್ಲಿದ್ದೆ ಅಂತ ಗೊತ್ತಾಯಿತು. ಅಲ್ಲದೆ ಅವನ ಜೊತೆ ನಾನು ಮಲಗಿದ್ದೆ ಅಂತಲೂ ಗೊತ್ತಾಯಿತು ಅಥವಾ 'ಏನಾಗುತ್ತಿದೆ ಅಂತ ನನಗೆ ಗೊತ್ತಿರಲಿಲ್ಲ. ಆದರೆ ಒಂದು ಇನ್ನೊಂದಕ್ಕೆ ಎಡೆಮಾಡಿಕೊಟ್ಟಿತು. ಯಾವುದು ಏನು ಅಂತ ಗೊತ್ತಾಗುವುದಕ್ಕೆ ಮುಂಚೆ ನಾನು ಅವನನ್ನು ಇರಿದುಬಿಟ್ಟೆ" ಸ್ವಲ್ಪ ಇದೇ ಥರದ ಕಥೆ. ಇಷ್ಟಾದರೂ ಹತಾಶನಾಗಿ ಅವನು ಅವಳನ್ನು ನಂಬಲಿಚ್ಛಿಸಿದನು.

ಹಾಗೆ ನೋಡಿದರೆ ಭೂತ ಮೈ ಮೇಲೆ ಬರುವುದೇನೂ ಅಸಾಧಾರಣ ಸಂಗತಿಯಲ್ಲ. ಸಿಡುಬು, ದೇವಿಯ ಕೋಪವೆಂದೇ ಎಲ್ಲರೂ ತಿಳಿದಿದ್ದಾರೆ. ಆ ದೇವಿ ನಮ್ಮನ್ನು ಸಾಯಿಸಬಹುದು, ಕಣ್ಣು ಕುರುಡಾಗಿಸಬಹುದು. ದೇವತೆಯಾದ್ದರಿಂದ ಮುಖ, ಶರೀರವನ್ನೆಲ್ಲಾ ಸಿಡುಬಿನ ಕಲೆಗಳಿಂದ ಶಾಶ್ವತವಾಗಿ ವಿಕಾರಗೊಳಿಸಬಹುದು. ಒಂದು ವೇಳೆ ಅವನ ಹೆಂಡತಿಯ ಸ್ಥಿತಿಗೆ ಬೇರೆ ಯಾರಾದರೂ ಕಾರಣವಾಗಿದ್ದರೆ, ಅವಳು ಬೇರೆ ಬೇರೆ ಹೆಸರಿನಿಂದ ಕರೆಯುವ ಈ ಇನ್ನೊಬ್ಬನಿಂದ ಬಿಡಿಸಿಕೊಳ್ಳಲೂ ಬಹುದೇನೋ. ಆಮೇಲೆ ಬಹುಶಃ ಅವನೂ ಅವನ ಹೆಂಡತಿ ಇಬ್ಬರೂ ಎಂದಿನ ವೈವಾಹಿಕ ಜೀವನದಲ್ಲಿ ನೆಲೆಗೊಳ್ಳಬಹುದೇನೋ, ಎಲ್ಲ ಬಹುದೇನೋ ಅಷ್ಟೆ.

ಚಿತ್ತೂರಿನಿಂದ ನಲವತ್ತು ಮೈಲಿಗಳ ದೂರದಲ್ಲಿ ಒಂದು ಗುಹೆಯಲ್ಲಿ ಭೂತಾನಿ ಮಾತಾ ಎಂಬ ಹೆಂಗಸು ವಾಸವಾಗಿದ್ದಳು. ಅವಳ ಪೂರ್ವೋತ್ತರಗಳು ಏನೆಂದು ಯಾರಿಗೂ ತಿಳಿದಿರಲಿಲ್ಲ. ಅವಳು ಒಬ್ಬಳೇ ಇರುತ್ತಿದ್ದಳು ಮತ್ತು ರಹಸ್ಯವಾಗಿ ಪ್ರಾಣಿ ಬಲಿಗಳು ಮತ್ತು ಪೂಜೆಗಳನ್ನು ಮಾಡುತ್ತಿದ್ದಳು. ಕೆಲವೊಮ್ಮೆ ಅವಳ ಮನಸ್ಥಿತಿ ಸರಿ ಇತ್ತು ಎಂದಾರೆ, ಯಾರಿಗಾದರೂ ಸಹಾಯ ಮಾಡಬೇಕು ಎನ್ನುವ ತೀರ್ಮಾನಕ್ಕೆ ಬರಬಹುದು. ಆದರೆ ಆಕೆಯನ್ನು ಯಾರೂ ಒತ್ತಾಯ ಮಾಡುವುದಾಗಲಿ ಅರಮನೆಗೆ ಕರೆದೊಯ್ಯುವುದಾಗಲಿ ಸಾಧ್ಯವಿರಲಿಲ್ಲ.

ಅವನು 'ಎಲ್ಲಕಾಲಕ್ಕೂ' ಮೊರೆಹೋಗಬಹುದಾದಂಥ ವ್ಯಕ್ತಿಯಾಗಿರಲಿಲ್ಲ ಭೂತಾನಿ ಮಾತಾ. ಆದರೆ 'ಎಲ್ಲಕಾಲಕ್ಕೂ' ಎಂಬುದು ಬದಲಾಗಬಹುದಾದ ಮತ್ತು ಪರಿಮಿತವಾದ ಶಬ್ದ: ಅವನಿಗೆ ಗೊತ್ತಿರಲಿ ಬಿಡಲಿ, ಸ್ವಸ್ಥ ಮನಸ್ಸಿನವನನ್ನು ಸಮತೆ ತಪ್ಪಿದ ವ್ಯಕಿಯಿಂದ ಬೇರ್ಪಡಿಸುವ ಗೆರೆಯನ್ನು ಅವನು ದಾಟಿಯಾಗಿತ್ತು. ತನ್ನ ಹೆಂಡತಿಯ ಮನಸ್ಸನ್ನು ಅವಳಿಂದ ಅಪಹರಿಸಿ ಇಡೀ ಮೇವಾಡದೊಂದಿಗೆ ಸಂಘರ್ಷಕ್ಕೆ ತೊಡಗಿಸಿರುವುದರ ಕಡೆಯಿಂದ ಮತ್ತೆ ವಶಕ್ಕೆ ತೆಗೆದುಕೊಳ್ಳಲು ಅವನು ಏನು ಬೇಕಾದರೂ ಮಾಡಲು ಸಿದ್ಧನಿದ್ದ. ತನ್ನ ಭಿಲ್ ಮಿತ್ರ ಪೂರಜಿ ಕೀಕಾ ಅವರನ್ನು ಮಂಗಳ ಹಾಗೂ ಇನ್ನಿತರ ಹತ್ತು ಹನ್ನೆರಡು ಜನರ ಪರಿವಾರದವರೊಂದಿಗೆ ಭೇಟಿ ಮಾಡಲು ಹೊರಟನು. ಹಾಗೆ ಸಾಗುತ್ತಿರುವಾಗ ಅವರು ಬಳಸು ದಾರಿಯನ್ನು ಹಿಡಿದರು. ಮಂಗಲ್ ಮತ್ತು ಇತರರನ್ನು

ಕಾಯಲು ಹೇಳಿ, ಭೂತಾನಿ ಮಾತಾಳ ಗುಹೆಯಿರುವ ಪರ್ವತದ ಕಡಿದಾದ ಕಡೆ ಏರಿ ಹೋದನು. ಗವಿಯ ಬಾಯ ಬಳಿ ನಿಂತು "ಮಾತಾ ನನ್ನ ಹೆಂಡತಿ ನನ್ನ ಜೊತೆ ಸಂಸಾರ ನಡೆಸುತ್ತಿಲ್ಲ. ತನ್ನ ಜೀವನದಲ್ಲಿ ಬೇರೊಬ್ಬನಿದ್ದಾನೆ, ತಾನು ಅವನಿಗೆ ಸೇರಿದವಳು ಎಂದು ಅವಳು ಹೇಳುತ್ತಾಳೆ. ಆ ಇನ್ನೊಬ್ಬ ವ್ಯಕ್ತಿಯನ್ನು ನಾನು ಯಾವತ್ತೂ ನೋಡಿಯೇ ಇಲ್ಲ. ಹಾಗಾಗಿ ಅವಳಿಗೆ ದೆವ್ವ ಹಿಡಿದಿರಬೇಕು ಅಂತ ನನ್ನ ಆತಂಕ. ದಯಮಾಡಿ ನನಗೆ ಸಹಾಯ ಮಾಡು" ಎಂದು ಪಿಸುಗುಟ್ಟಿದ. ಆ ಗುಹೆ ಬಹುಶಃ ತುಂಬ ಉದ್ದವಾಗಿ ಹಾಗೂ ಸುತ್ತು ಬಳಸಿನದ್ದಾಗಿದ್ದಿರಬೇಕು. ಕಾರಣ ಆಕೆಯ ಧ್ವನಿ ಇವನ ಕಿವಿಗೆ ಬೀಳಲು ಸ್ವಲ್ಪ ಹೊತ್ತು ಹಿಡಿಯಿತು. ಆಕೆಯ ಸಂದೇಶ ತುಂಬ ಚುಟುಕಾಗಿತ್ತು. ಅವಳು ಏನೋ ಒಂದು ಪೋಲಿ ಮಾತು ಹೇಳಿ ಅವನ ವಿಷಯಕ್ಕಾಗಲಿ ಅವನು ನಿಷ್ಠೆಯಿಲ್ಲದ ಹೆಂಡತಿಗಾಗಲಿ ತನ್ನ ಹತ್ತಿರ ಸಮಯವಿಲ್ಲ ಎಂದು ಹೇಳಿದಳು. ತನ್ನ ಬಗ್ಗೆ ವಾದ ಮಾಡತೊಡಗಿದ. ಅವಳು ಎಸೆದ ಒಂದು ಕಲ್ಲು ಅವನ ಹಣೆಗೆ ತಗುಲಿತು. ಅವನು ಕೂಡಲೇ ಅಲ್ಲಿಂದ ಹೊರಟು ಹೋಗಬೇಕೆಂದೂ, ಅವನು ಹಾಗೆ ಹೋಗದಿದ್ದರೆ ಇನ್ನೊಂದು ಕಲ್ಲನ್ನು ಅವನ ವೃಷಣಗಳತ್ತ ಎಸೆಯುವುದಾಗಿಯೂ ಆಗ ಅವನ ಹೆಂಡತಿ ಇಡೀ ಜಗತ್ತಿನ ಜೊತೇನೇ ಮಲಗಿದರೂ ಏನೇನೂ ವ್ಯತ್ಯಾಸವಾಗುವುದಿಲ್ಲವೇಕೆಂದರೆ ಅವನು ಅವಳಿಗೆ ಹೇಗೂ ನಿಷ್ಪ್ರಯೋಜನಕನಾಗಿ ಬಿಡುವನು ಎಂದಳು. ಹಿಂದಕ್ಕೆ ಹೋಗಿಬಿಡುವುದೆಂದು ಯೋಚಿಸಿದವನು ಅನಂತರ ಅದಕ್ಕೆ ಬದಲಾಗಿ ಗವಿಯೊಳಕ್ಕೆ ಪ್ರವೇಶಿಸುವುದೆಂದು ನಿರ್ಧರಿಸಿದನು. ಏನೇ ಆದರೂ ಅದರಿಂದ ಕಳೆದುಕೊಳ್ಳುವಂಥದ್ದೇನಿದೆ?

"ನಾನೀಗ ಒಳಗೆ ಬರುತ್ತಿದ್ದೇನೆ" ಎಂದು ಅವಳಿಗೆ ಹೇಳಿ ಅವಳ ಉತ್ತರಕ್ಕೆ ಕಾಯಲಿಲ್ಲ. ಹತ್ತು ಹದಿನೈದು ನಿಮಿಷಗಳ ನಂತರ ತಾನು ದಾರಿ ತಪ್ಪಿದೆನೆಂದು ಅನ್ನಿಸಿತು. ಓಣಿಗಳು ಕಪ್ಪಗಿದ್ದು, ಬೂಷ್ಟು ಹತ್ತಿತ್ತು. ಕೆಲವೊಂದು ಕಡೆಯಂತೂ ಬಾವಲಿಗಳ ಹಿಚಿಕೆಯ ದಟ್ಟ ವಾಸನೆ ತುಂಬಿತ್ತು. ಕೆಲವೊಂದು ಸಲ ತನ್ನ ಕೈ ಯಾವುದೋ ಹಲ್ಲಿಗೆ ತಾಕಿರಬೇಕು ಎಂದು ಅಂದುಕೊಂಡರೆ ಇನ್ನು ಕೆಲವು ಸಲ ಮೈಯೆಲ್ಲಾ ಕೂದಲಿರುವ ಹೆಜ್ಜೇಡಗಳು ಅವನ ಮೇಲೆ ಹರಿದುಹೋದುವು. ತನ್ನ ಕಣ್ಣುಗಳು ಏಕೆ ಕತ್ತಲಿಗೆ ಹೊಂದಿಕೊಳ್ಳಲಿಲ್ಲವೆಂದು ಅವನಿಗೆ ಆಶ್ಚರ್ಯವಾಯಿತು. ಸ್ವಲ್ಪ ಅಸ್ಪಷ್ಟವಾಗಿಯಾದರೂ ಎಲ್ಲ ಕಾಣಬೇಕಿತ್ತು. ಆದರೆ ಹೆಚ್ಚು ಹೊತ್ತು ನಿಂತಷ್ಟೂ ಕಾಣುವುದು ಕಡಿಮೆಯಾಗುತ್ತಿತ್ತು. ಉಸಿರಾಡುವುದು ತೀರ ಕಷ್ಟವೆನಿಸಿತು. ಸಮಯ ಎಷ್ಟಾಗಿರಬಹುದು ಆಗ? ತಾನು ಬಂದು ಎಷ್ಟು ಹೊತ್ತು ಆಯಿತು? ಅದು ಕೇವಲ ಐದಾರು ನಿಮಿಷವೋ ಅಥವಾ ಒಂದೆರಡು ಗಂಟೆ ಹೊತ್ತಾಯಿತೋ? ತನ್ನನ್ನು ಹಿಂಬಾಲಿಸಿ ಬರಕೂಡದೆಂದು ಮಂಗಳನಿಗೆ ಕಟ್ಟುನಿಟ್ಟಾದ ಸೂಚನೆ ಕೊಟ್ಟಿದ್ದನು. ತನ್ನ ಆಜ್ಞೆಯನ್ನು ಮೀರಲು ಮಂಗಳನಿಗೆ ಎಷ್ಟು ಹೊತ್ತು ಬೇಕಾದೀತು? ದೀಪ ತರಬೇಕು ಎನ್ನುವಷ್ಟು ಬುದ್ಧಿ ತೋಚುತ್ತೋ ಅವನಿಗೆ? ತಾನೇ ಆ ಬಗ್ಗೆ ಖಂಡಿತವಾಗಿಯೂ ಯೋಚಿಸಿರಲಿಲ್ಲ. ದೀಪದಿಂದ ನಿಜವಾಗಿಯೂ ಅನುಕೂಲವಾಗುತ್ತದೆಯೆ? ಅಥವಾ ಅದರ ಜ್ವಾಲೆಯೂ ಕಪ್ಪಾಗಿ ಬಿಡುವುದೆ? ಮಂಗಳ ಮತ್ತು ಉಳಿದೆಲ್ಲರ ಸಾವಿಗೆ ನಾನು ಕಾರಣನಾಗುವೆನೆ? ಆ ಯೋಚನೆ ಬಂದದ್ದೇ ತಡ ದಿಗಿಲಿನ ಭಾವ ಉಂಟಾಯಿತು. ಈಗ ವಾಪಸ್ ಹೋಗುವ ದಾರಿ ಹುಡುಕಬೇಕು.

ತನ್ನ ಪ್ರಕ್ಷುಬ್ಧಗೊಂಡ ಮನಸ್ಸನ್ನು ಶಾಂತವಾಗಿಸಿಕೊಂಡು ಎಚ್ಚರಿಕೆಯಿಂದ ತಾನು ಹಾದು ಬಂದ ಹಾದಿ ಕುರಿತು ಯೋಚಿಸತೊಡಗಿದ. ಅವನು ಪಶ್ಚಿಮದ ಕಡೆಯಿಂದ ಗುಹೆಯನ್ನು ಪ್ರವೇಶಿಸಿದ್ದನು. ಮೊದಲ ಎರಡು ತಿರುವುಗಳು ದಕ್ಷಿಣಕ್ಕಿದ್ದುವು. ಆ ಮೇಲೆ

ಉತ್ತರದ ಕಡೆಗೆ. ಅದರ ಮುಂದೆ ತಾನು ಹೇಗೆ ಮುಂದಕ್ಕೆ ಸಾಗಿದ್ದೆನೆಂಬುದು ನೆನಪಾಗಲಿಲ್ಲ. ಅವನಿಗೆ ದಿಕ್ಕು ತಪ್ಪುತ್ತಿತ್ತು. ಪಶ್ಚಿಮದ ಕಡೆಯಿಂದ ಪ್ರವೇಶಿಸಿ, ಮತ್ತೆ ಬಂದ ದಾರಿಯಲ್ಲೇ ಹಿಂದಕ್ಕೆ ಹೋಗಬೇಕೆಂದರೆ ಆಗ ಪೂರ್ವಕ್ಕೆ ಹೋಗುತ್ತೇವೋ ಅಥವಾ ಪಶ್ಚಿಮಕ್ಕೋ? ಅದೊಂದು ತೊಡಕಿನ ಪ್ರಶ್ನೆ. ಅದರ ಬಗ್ಗೆ ತಲೆಕೆಡಿಸಿಕೊಂಡರೂ ನಿಶ್ಚಿತವಾದ ಉತ್ತರ ಅವನಿಗೆ ಹೊಳೆಯಲಿಲ್ಲ. ಭೂತಾನಿ ಮಾತಾಳ ಅಂಧಕಾರದಲ್ಲಿ ಬಹುಶಃ ಎಲ್ಲ ದಿಕ್ಕುಗಳು ಇಲ್ಲವಾಗುತ್ತವೆ. ತಾನು ಹಿಂದೆ ಕಲಿತಿದ್ದ ರೇಖಾಗಣಿತದ ಪಾಠಗಳನ್ನು ನೆನಪಿಸಿಕೊಂಡನು. ವೃತ್ತದ ಒಂದು ತುದಿಯಿಂದ ಹೊರಟರೆ, ನೀವು ಹೊರಟಲ್ಲಿಗೇ ಬರುತ್ತೀರಿ ಎಂಬುದೇ ಅದು. ತಾನು ಎಡಗಡೆಗೆ ಚಲಿಸಿ ಪ್ರತಿ ತಿರುವಿನಲ್ಲಿ ಎಡ ತುದಿಗೆ ಹೋಗುವುದೆಂದುಕೊಂಡನು. ತಾನು ಇನ್ನೊಂದು ನಿಯಮವನ್ನು ಅನುಸರಿಸುವುದಾಗಿ ಯೋಚಿಸಿದನು: ತಾನು ಚಲಿಸಿದ ಹೆಜ್ಜೆಗಳನ್ನು ಎಣಿಸುವುದು. ಹದಿನೇಳು ಸಾವಿರ ಹೆಜ್ಜೆಗಳವರೆಗೆ ಎಣಿಸಿ ಅನಂತರ ಸುಸ್ತಾದ. ಅದು ಹೋಗಲಿ ಈಗ ಅವನ ಅದೃಷ್ಟ ಭೂತಾನಿ ಮಾತಾಳ ಕೈಯಲ್ಲಿದೆ. ಅಂಥ ಒಂದು ವ್ಯಕ್ತಿ ಇರುವುದೇ ಆದರೆ ತನಗೇನಾಗುತ್ತೆ ಎನ್ನುವುದರ ಬಗ್ಗೆ ತನಗೇನೂ ಚಿಂತೆಯಿಲ್ಲ.

"ನನ್ನ ಜೊತೆಗಾರರು ಅಪಾಯದಲ್ಲಿದ್ದಾರೆಯೆ? ಅವರೂ ಗುಹೆಯನ್ನು ಪ್ರವೇಶಿಸಿದರೆ? ನನಗೆ ನೀನು ಏನು ಮಾಡಿದರೂ ಸರಿ ಆದರೆ ನನ್ನ ಕೃತ್ಯಗಳಿಗೆ ಅವರು ಬೆಲೆ ತೆರುವ ಹಾಗೆ ನೀನು ಮಾಡುವ ಹಾಗಿಲ್ಲ"

ಎರಕದಿಂದ ಮಾಡಿದ ಒಂದು ಕೈ ಮುಖಕ್ಕೆ ಬಾರಿಸಿತು. "ನಾನೇನು ಮಾಡಬಲ್ಲೆ ಅಥವಾ ಮಾಡಲಾರೆ ಅಂತ ನೀನು ನನಗೆ ಹೇಳಬೇಡ"

"ಉದ್ದಕ್ಕೂ ನೀನು ನನ್ನನ್ನು ಹಿಂಬಾಲಿಸಿಕೊಂಡು ಬಂದಿದ್ದಿ ಅಲ್ಲವೆ?" ಏಟಿನಿಂದ ಉಸಿರು ತಿರುಗಿಸಿಕೊಂಡ ಮೇಲೆ ಕೇಳಿದನು.

ಎಂಟು ಕೈಗಳು ಅವನನ್ನು ಎತ್ತಿಕೊಂಡವು. ನಾಲ್ಕು ಕೈಗಳು ಅವನಿಗೆ ಆಧಾರವಾಗಿದ್ದವು. ಒಂದು ಅವನ ಮುಖವನ್ನು ಸ್ಪರ್ಶಿಸಿತು. ಅದರ ಆಕಾರವನ್ನು ತಿಳಿಯಲೆಂಬಂತೆ ಒಂದು ಅವನ ಎದೆ ಮತ್ತು ಭುಜಗಳ ಸುತ್ತ ತಡಕಾಡಿತು. ಏಳನೇ ಕೈ ಅವನ ಶಿಶ್ನವನ್ನು ಸ್ಪರ್ಶಿಸಿತು. ಕೊನೆಯದು ಅವನ ಕೂದಲನ್ನು ಹಿಡಿದೆಳೆಯಿತು. ನಾಲಗೆಯೊಂದು ತನ್ನ ಮುಖವನ್ನು ನೆಕ್ಕಿದಂತಾಯಿತು. ಕೈಗಳು ಅವನ ಉಡುಪುಗಳನ್ನು ಕಿತ್ತು ಹಾಕಿದುವು. ನಾಲಗೆ ಅವನ ಪಾದಗಳನ್ನು ಮತ್ತು ಕುತ್ತಿಗೆಯನ್ನು ಸ್ಪರ್ಶಿಸಿತು. ಎಷ್ಟುದ್ದ ಇತ್ತು ಅದು? ಅದು ಒಂದು ನಾಲಗೆಯೋ ಹಲವಾರೊ? ಕೈಗಳು ಅವನನ್ನು ಕೆಳಕ್ಕೆ ಕೂಡಿಸಿದುವು.

"ಭಯಭೀತ ನಿಷ್ಪ್ರಯೋಜಕ ತಾನೆ ನೀನು? ಗರ್ವಿಷ್ಠನಿಗೇನಾಯಿತು? ನಾನು ಬರ್ತಾ ಇದ್ದೀನಿ?"

ಮಣ್ಣಿನ ತುದಿಯಿಂದ ನೀರು ಬೀಳುತ್ತಿರುವ ಶಬ್ದ ಕೇಳಿಸಿತು. ಅಲ್ಲದೆ ದೂರದಿಂದ ನಿರಂತರವಾದ ನೋವಿನಿಂದ ಚೀರುತ್ತಿರುವ ಧ್ವನಿಗಳು ಕೇಳಿಸಿದುವು. ತಲೆಗೂದಲಿನಿಂದ ಹಿಡಿದೆತ್ತಿದ ಮುಂಡವಿಲ್ಲದ ರುಂಡಗಳಿಂದ ರಕ್ತ ತೊಟ್ಟಿಕ್ಕುತ್ತಿರುವುದನ್ನು ಕಂಡನು. ಹೊಟ್ಟೆ ಅಡಿಯಾಗಿ ಮಲಗಿದ್ದ ಭೂತದ ಬೆನ್ನ ಮೇಲೆ ಕಪ್ಪು ಹೆಜ್ಜೆಗಳು ಬಲವಾಗಿ ಊರಿರುವುದನ್ನು ಕಂಡ. ಸೊರ ಸೊರ ಶಬ್ದ ಮಾಡುತ್ತ ತುಟಿಗಳು ರಕ್ತ ಹೀರುತ್ತಿರುವುದು ಕೇಳಿಸಿತು. ಭೂಮಿ ಮತ್ತು ಆಕಾಶಗಳು ಸಂಭೋಗದಲ್ಲಿ ತೊಡಗಿದ್ದನ್ನು ಕಂಡನು. ಜೊತೆಗೆ ಸುಖದಲ್ಲಿ ನಿಧಾನವಾಗಿ, ಹಿತವಾಗಿ ನರಳುವ ಶಬ್ದವನ್ನು ಕೇಳಿದ. ಕತ್ತರಿಸಿ ತುಂಡಾದ ಕಾಲುಗಳು

ಅಲ್ಲಿ ವಿಲಿವಿಲಿ ಒದ್ದಾಡುತ್ತ ಬಿದ್ದಿದ್ದುವು. ಒಂದು ಕೈ ತನಗೆ ತಾನೇ ಕೆಳಗೆ ಬಂದು ಒಂದು ಕಾಲನ್ನು ಎತ್ತಿಕೊಂಡು ಅದನ್ನು ಮುಖವಿಲ್ಲದ ಬಾಯಿಗೆ ತುರುಕಿತು. ಅದು ಅದನ್ನು ಕಟಕಟ ಎಂದು ಶಬ್ದಮಾಡುತ್ತ ಕಡಿಯ ತೊಡಗಿತು. ಅವನು ತನ್ನ ಕಣ್ಣುಗಳನ್ನು ತೆರೆದ. ಅವನ ಎದುರಿನಲ್ಲೊಂದು ದೊಡ್ಡ ಡೊಗರುಳ್ಳ ಗುಹೆ ಸಿದ್ಧವಾಗಿತ್ತು. ಅದರ ಮಧ್ಯದಲ್ಲೊಂದು ವೇದಿಕೆ. ಹಲ್ಲಿಲ್ಲದ ಕುರುಡಾದ ಹಣ್ಣು ಹಣ್ಣು ನಗ್ನ ಮುದುಕಿಯೊಬ್ಬಳು ಅದರ ಮೇಲೆ ಕುಳಿತಿದ್ದಳು.

“ಬೇರೆಯವರು ಇದ್ದಾರೆ. ನೀನು ಅದನ್ನು ಅವರ ಜೊತೆ ಯಾಕೆ ಮಾಡಬಾರದು? ನೀನು ಬೇರೊಂದು ಮದುವೆಯಾಗಬಹುದು. ಅವಳು ಸಾಯುವವರೆಗೂ ಅವಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳಬೇಡ” ಸ್ವಲ್ಪ ಹೊತ್ತು ಬಿಡುವು. “ನಾನು ಆಗಬಹುದೋ?”

ಹೇವರಿಕೆಯಿಂದ ಅವನ ದೇಹ ಬಿಗಿದುಕೊಂಡಿತು. “ಇದೊಂದು ಭಯಂಕರ ಯೋಚನೆ ಅಲ್ಲವೆ?” ಅವಳು ಮಾತಾಡುತ್ತಿದ್ದಂತೆ ಯುವತಿಯಾಗಿ ಬದಲಾದಳು. ಅವಳದು ಸಮೃದ್ಧವಾದ ದೇಹ. ದುಂಡಾದ ದೃಢವಾದ ಮೊಲೆಗಳು. ಸ್ತನಗಳನ್ನು ಬಿಗಿದು ಕಟ್ಟಲಾಗಿತ್ತು ಧರಿಸಿದ ಕಂಚುಕವಾದರೋ ಭುಜ ಮತ್ತು ತೋಳುಗಳು ಎದ್ದು ಕಾಣುವಂತೆ ಬಿಗಿಯಾಗಿತ್ತು. ದೇಹದ ಮಾಟಕ್ಕೆ ಹೊಂದುವಂಥ ಸೀರೆ. ಅದರ ಮೇಲ್ಭಾಗದಲ್ಲಿ ಸುರುಳಿ ಸುರುಳಿಯಾಗಿದ್ದ ಚಿನ್ನದ ಪಟ್ಟಿಗಳನ್ನು ಅಳವಡಿಸಲಾಗಿತ್ತು. ಹೊಕ್ಕುಳಿನ ಕೆಳಗಡೆ ನೇತಾಡುತ್ತಿದ ಚಿನ್ನದ ನಡುಪಟ್ಟಿ. ಹಗುರವಾಗಿ ನೇತಾಡುತ್ತಿದ್ದ ತನ್ನ ತಲೆಗೂದಲನ್ನು ಅಳ್ಳಕವಾಗಿ ಹರಡಿಕೊಂಡಿದ್ದಳು. ಅದು ಬೆಳಕನ್ನು ತುಂಡರಿಸಿತ್ತು. ಅವನಿಗೆ ಮೊದಲಿಗೆ ಶಬ್ದ ಕೇಳಿಸಿತು. ತಾರಕಕ್ಕೆ ಏರಿದ ಹರಿತವಾದ ಶ್ರುತಿಯ ದನಿ ಕಿವಿದೆರೆಯನ್ನು ತಾಕಿತು. ಅವಳು ವರ್ತುಲಾಕಾರದಲ್ಲಿ ತಲೆಯನ್ನು ತಿರುಗಿಸುತ್ತಿದ್ದಳು. ಆ ಕೂದಲುಗಳು ಸೊಂಯ್ ಎಂದು ಶಬ್ದ ಮಾಡುತ್ತ ಅವನ ಮಾಂಸಲ ಕೆನ್ನೆಗೆ ಛಟೀರೆಂದು ತಾಕಿದ್ದು ನೂರಾರು ಲಕ್ಷಾಂತರ ಸಣ್ಣ ಹಲ್ಲುಗಳಿರುವ ಕುಂಟೆ ಬಂದು ತಾಕಿದಂತೆ ಆಯಿತು. ಅವಳ ತಲೆಯಾದರೋ ಅತ್ಯಂತ ವೇಗವಾಗಿ ತಿರುಗುತ್ತಿತ್ತು. ಅವನ ಶರೀರವನ್ನು ಚಾಟಿಯಿಂದ ಹೊಡೆಯಲಾಗುತ್ತಿತ್ತು ಮತ್ತು ಚರ್ಮವನ್ನು ಅತ್ಯಂತ ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಲಾಗುತ್ತಿತ್ತು. ಎಷ್ಟು ಸಣ್ಣ ಎಂದರೆ, ಒಂದೂ ಸಣ್ಣ ಚೂರು ಪ್ರತ್ಯೇಕವಾಗಿ ಕಾಣುತ್ತಿರಲಿಲ್ಲ. ಓಡಿ ಬಿಡಬೇಕೆಂಬ ಪ್ರಯತ್ನದಲ್ಲಿ ಎದ್ದು ನಿಂತನು. ಆದರೆ ಉದ್ದನೆಯ ಕೂದಲು ಅವನ ಕೆಂಪಗಿನ ಹಸಿಮಾಂಸದ ಗಾಯಕ್ಕೆ ಆಳವಾಗಿ ತಾಕುತ್ತಲೇ ಇತ್ತು.

“ಅವಳಿಗೆ ಭೂತ ಹಿಡಿದಿದೆಯೋ ಅಥವಾ ನಿನಗೆ ಅವಳ ಭೂತ ಹಿಡಿದಿದೆಯೋ? ಎಷ್ಟು ದಿನ, ವಾರ, ತಿಂಗಳುಗಳಿಂದ ಅವಳ ಯೋಚನೆಯ ಹೊರತಾಗಿ ಬೇರೆ ಯಾವ ಯೋಚನೆ ನಿನ್ನ ಮನದಲ್ಲಿತ್ತು? ಭೂತೋಚ್ಚಾಟನೆಯಾಗಬೇಕಾದ್ದು ನಿನಗೆ ಎಂದು ನಾನು ಹೇಳುತ್ತೇನೆ”. ತನ್ನ ತಲೆತೂಗುವುದನ್ನು ಸ್ವಲ್ಪ ನಿಲ್ಲಿಸಿ. ತಾನು ಹೇಳಿದ ಮಾತು ಆಳದಲ್ಲಿ ನೆಲೆಯೂರಲಿ ಎಂದು, ಸ್ವಲ್ಪ ಹೊತ್ತು ನಿಲ್ಲಿಸಿದಳು.

“ನಮಗೇ ಹೆಚ್ಚಾಗಿ ಚಿಕಿತ್ಸೆ ಬೇಕಿರುವಾಗ ನಾವು ಯಾವಾಗಲೂ ಬೇರೆಯವರಿಗೆ ಚಿಕಿತ್ಸೆ ಮಾಡುವುದಕ್ಕೆ ಪ್ರಯತ್ನಿಸುತ್ತಿರುತ್ತೇವೆ. ನೀನೇನು ಹೇಳುತ್ತೀ? ನೀನು ಇಲ್ಲಿದ್ದೀ. ಒಂದೇ ಒಂದು ನಿಮಿಷ ಸಾಕು ನೀನು ಅವಳ ಬಗ್ಗೆ ಯೋಚನೆ ಮಾಡುವುದನ್ನೇ ನಿಲ್ಲಿಸಿ ಬಿಡುತ್ತೀಯಾ. ನೀನು ಆಗ ಪೂರ್ತಿ ಬಿಡುಗಡೆ ಹೊಂದಿ ಸ್ವತಂತ್ರ ಮನುಷ್ಯನಾಗುವೆ.” ಮತ್ತೆ ಸ್ವಲ್ಪ ಹೊತ್ತು ತಡೆದಳು. “ನೀನು ಸ್ವತಂತ್ರ ಮನುಷ್ಯನಾಗಲು ಇಷ್ಟ ಪಡುವೆಯಾ?”

'ಹೌದು' ಎಂದು ಹೇಳಬೇಕೆಂದುಕೊಂಡನು. ಅವನ ಶರೀರದ ಪ್ರತಿಯೊಂದು ಕಣವೂ "ಹೌದು" ಎಂದಿತು. ಆದರೆ ಆ ಶಬ್ದವನ್ನು ತಾನೇ ಉಚ್ಚರಿಸಲು ಅವನಿಗೆ ಸಾಧ್ಯವಾಗಲಿಲ್ಲ.

"ನಾನು ಹಾಗೇ ಅಂದುಕೊಂಡೆ. ನಿರಂತರವಾಗಿ ದಾಸ್ಯದಲ್ಲೇ ಇರಬೇಕೆನ್ನುವುದಾದರೆ ಸ್ವಾತಂತ್ರ್ಯ ಯಾರಿಗೆ ಬೇಕು" ಗಾಢ ಮೌನ ನೆಲಸಿತ್ತು. ಜೊತೆಗೆ ಉಸಿರಾಡಲು ತೀವ್ರ ಸಂಕಟವಾಗುತ್ತಿತ್ತು. "ಎಲ್ಲಿಯವರೆಗೂ ನೀನು ಹೋಗಲು ಇಚ್ಛಿಸಿದ್ದಿ?" ಆ ಕೊನೆಯ ಪ್ರಶ್ನೆಯಿಂದ ಅವನು ವಿವಂಚನೆಗೊಳಗಾದನು. ಆ ಮಾತಿನ ತೀಕ್ಷ್ಣತೆ ಅರ್ಥವಾಯಿತೊ ಹೇಗೆ ಎಂದು ಅವನಿಗೇ ಖಾತರಿ ಇರಲಿಲ್ಲ. ಅವನು ಥಟ್ಟನೆ ಹೇಳಿದ.

"ಹಣ ಮುಖ್ಯವಲ್ಲವೇ ಅಲ್ಲ"

'ನೀನು ನಿನ್ನ ಹಣವನ್ನು ನಿನಗೆ ಗೊತ್ತಿರುವ ಕಡೆ ಒಗೆಯಬಹುದು. ಅದನ್ನು ತೆಗೆದುಕೊಂಡು ನಾನು ಏನು ಮಾಡಬೇಕು ಅಂತ ನಿನ್ನ ಯೋಚನೆ ? ಅದರದ್ದು ಸರ ಮಾಡಲೆ? ತಿನ್ನಲೆ? ಅದರಿಂದ ನೂಲು ತೆಗೆದು ನನ್ನ ಬಾಗಿಲು ತಟ್ಟುವವರ ಮುಖವನ್ನು ಮುಚ್ಚಿಬಿಡಲೆ? ಜೀವನದಲ್ಲಿರುವುದು ಒಂದೇ ಒಂದು ಪ್ರಶ್ನೆ. ಒಂದು ಸಲ ಅದಕ್ಕೆ ಉತ್ತರ ಗೊತ್ತಾಯಿತು ಅಂದರೆ, ನೀನು ಎಲ್ಲ ಕಾಲಕ್ಕೂ ತಿಳಿದುಕೊಳ್ಳಬೇಕಾಗಿರುವುದನ್ನು ತಿಳಿದುಕೊಂಡು ಬಿಡುವೆ. ಅದು ಏನೆಂದರೆ ನಿನಗೆ ಬೇಕಾದದ್ದನ್ನು ನೀನು ಎಷ್ಟರ ಮಟ್ಟಿಗೆ ಪಡೆದುಕೊಳ್ಳಲಿಚ್ಛಿಸುವೆ ಎಂದು?'

"ಬಹಳಷ್ಟು ಮಟ್ಟಿಗೆ ಅಂತ ತಿಳಿದುಕೊಂಡಿದ್ದೇನೆ"

"ಅಯ್ಯಾ! ಮೂರ್ಖ ಮನೆಗೆ ಹೋಗು, ನಿನಗೆ ಉತ್ತರ ಗೊತ್ತಾದ ಕಾಲಕ್ಕೆ ನಾನು ಅಲ್ಲಿರುತ್ತೇನೆ. ಆದರೆ ಆ ಸಮಯಕ್ಕೆ ನಿನಗೆ ನಾನು ಬೇಕಾಗದೆ ಹೋಗಬಹುದು."

"ಯಾರು ಅದು. ಅವಳ ಪ್ರಿಯಕರನ ಹೆಸರೇನು?"

"ಅದರಿಂದ ಏನು ವ್ಯತ್ಯಾಸವಾಗುತ್ತೆ?"

ಅವನಿಗೆ ಇನ್ನೂ ಬೇಕಾದಷ್ಟು ಪ್ರಶ್ನೆಗಳನ್ನು ಕೇಳುವುದಿತ್ತು. ಗುಹಾ ಪ್ರವೇಶದ್ವಾರದ ಬಳಿಯಲ್ಲಿದ್ದ ಬೆಳಕು ಅವನ ಕಣ್ಣನ್ನು ಕುರುಡಾಗಿಸಿತು.

ಅಧ್ಯಾಯ 15

“ಸಪ್ತಮಿಯ ರಾತ್ರಿ ಷಹಜಾದಾನ ಜೊತೆ ಇದ್ದವರು ಯಾರು?” ನಾನು ಕೊನೆಯದಾಗಿ ತಾಳ್ಮೆ ಮತ್ತು ವಿವೇಕವನ್ನು ಕಳೆದುಕೊಂಡು ಭದ್ರತಾ ಸಿಬ್ಬಂದಿಯ ಮುಖ್ಯಸ್ಥನನ್ನು ಕೇಳಿದೆ.

“ಅದು ಒಂದು ವಾರದ ಹಿಂದೆ. ನನಗೆ ಸರಿಯಾಗಿ ನೆನಪಿಲ್ಲ ಮಹಾಸ್ವಾಮಿ. ತಾವು ಅದನ್ನು ತಿಳಿದುಕೊಳ್ಳಬೇಕು ಎಂದರೆ ನಾನು ದಾಖಲೆಗಳನ್ನು ನೋಡಬೇಕು.” ನನ್ನ ಧ್ವನಿಯನ್ನು ನಿಯಂತ್ರಿಸಿಕೊಂಡು ಕೇಳಿದೆ– “ಹೌದು ನಾನು ತಿಳಿದುಕೊಳ್ಳಬೇಕು.”

“ಈಗಲೇ ಬೇಕೆ?”

“ಹೌದು”

ಅವನು ಎಲ್ಲೋ ಹೋಗಿ ಇಪ್ಪತ್ತು ನಿಮಿಷದಲ್ಲಿ ವಾಪಸ್ ಬಂದ.

“ಯಾರದು?”

“ಅದೊಂದು ಹೆಣ್ಣು ಮಹಾಸ್ವಾಮಿ”

“ಅವಳ ಹೆಸರೇನು?”

“ನಮ್ಮ ಹತ್ತಿರ ಅದಿಲ್ಲ ರಾಜಕುಮಾರರೆ. ಕಾರಣ ಷಹಜಾದರು ಆ ರಾತ್ರಿ ಹೆಣ್ಣನ್ನು ಒದಗಿಸಬೇಕು ಎಂದು ಕೇಳಿರಲಿಲ್ಲ.”

“ಅವಳು ನೋಡುವುದಕ್ಕೆ ಹೇಗಿದ್ದಳು?”

“ಇಲ್ಲಿ ಅವಳ ಬಗ್ಗೆ ಕೇವಲ ಒಂದು ವಾಕ್ಯದ ವಿವರ ಇದೆ. ಅದೇನೆಂದರೆ ತಲೆಯ ಮೇಲೆ ಹಾಕಿಕೊಂಡಿದ್ದ ಸೆರಗಿನಿಂದ ಮುಖವನ್ನು ಪೂರ್ತಿಯಾಗಿ ಮುಚ್ಚಿಕೊಂಡಿದ್ದಳು ಎಂದು. ಆಗ ಸಮಯ 9 ಗಂಟೆ ಹತ್ತು ನಿಮಿಷ ಆಗಿತ್ತು.”

“ಎಷ್ಟು ಹೊತ್ತಿಗೆ ಇಲ್ಲಿಂದ ಹೊರಟಳು?”

ಲೆಕ್ಕದ ಪುಸ್ತಕದಲ್ಲಿ ನೋಡುತ್ತಿರುವಂತೆ ಅಭಿನಯಿಸುತ್ತ ಸ್ವಲ್ಪ ಹೊತ್ತು ಅವನು ತಡವರಿಸಿದ.

“ಯಾವ ಕಾರಣಕ್ಕೋ ಏನೋ ಅದನ್ನು ಇದರಲ್ಲಿ ನಮೂದಿಸಿಲ್ಲ ಮಹಾಸ್ವಾಮಿ”

“ಯಾವ ಕಾರಣಕ್ಕೆ ಅಂತ ನನಗೆ ಸರಿಯಾಗಿ ಗೊತ್ತಿಲ್ಲ ಮುಖ್ಯಸ್ಥನೆ ನಿನ್ನನ್ನು ಇಷ್ಟರಲ್ಲೇ ನಿನ್ನ ಸ್ಥಾನ ಮತ್ತು ಕೆಲಸದಿಂದ ತೆಗೆಯಲಾಗುತ್ತದೆ ಎಂದು ನನಗೆ ಅನ್ನಿಸುತ್ತಿದೆ.

ಅದು ಆ ವ್ಯಕ್ತಿ, ಷಹಜಾದಾ ಅವರಿಗೆ ಗೌರವ ತೋರಿಸಲೋ ಇಲ್ಲವೆ ಕೆಲವು ಕಲಾಕೃತಿಗಳನ್ನು ಅರಮನೆಯಿಂದ ಕದಿಯುವ ಉದ್ದೇಶದಿಂದಲೋ ಅಥವಾ ಅವರನ್ನು ಕೊಲ್ಲುವ ಉದ್ದೇಶದಿಂದಲೋ ಅಲ್ಲಿಗೆ ಹೋಗಿರುವ ಹೆಂಗಸು, ಗಂಡಸು ಅಥವಾ ನಪುಂಸಕನಾಗಿರಬಹುದು. ನಿಮ್ಮ ಪುಸ್ತಕದಲ್ಲಿ ಅದನ್ನೇನೂ ದಾಖಲೆ ಮಾಡಿಲ್ಲ; ಮತ್ತು ನೀವು ಅದರ ಬಗ್ಗೆ ಲಕ್ಷ್ಯ ಇಟ್ಟಿಲ್ಲ. ಅವನೋ ಅವಳೋ ಅದೋ ಅವರ ಜೊತೆ ಇಡೀ ರಾತ್ರಿ ಇದ್ದಿರಬಹುದು, ರಾಜಕುಮಾರನನ್ನು ಅಪಹರಿಸಲೂ ಬಹುದಿತ್ತು. ಆದರೆ ನೀನು ನಿನ್ನ ಸಿಬ್ಬಂದಿಗೆ ಮಾತ್ರ ಗೊತ್ತಿಲ್ಲ. ಏಕೆ ಅಂದರೆ ಅವರು ನೀನು ಎಲ್ಲರೂ ಇಸ್ಪೀಟಾಡುತ್ತಿದ್ದಿರಿ. ಇಲ್ಲ ಯಾರೋ ಸೂಳೆ ಹತಿರ ಇದ್ದಿರಬೇಕು ಇಲ್ಲ ಕೆಲಸದ ಮೇಲಿದ್ದಾಗ ನಿದ್ದೆ ಮಾಡುತ್ತಿದ್ದಿರಬೇಕು".

ಅವನು ಅದನ್ನು ವಿರೋಧಿಸಲು ಯತ್ನಿಸಿದ. ಅವನ ಹತ್ತಿರ ಸಬೂಬುಗಳ ಸರಪಳಿಯೇ ಇತ್ತು ಎಂದು ನನಗೆ ಗೊತ್ತಿತ್ತು. ಆದರೆ ಅದರಲ್ಲಿ ನನಗೆ ಆಸಕ್ತಿ ಇರಲಿಲ್ಲ.

"ಇನ್ನು ಹದಿನೈದು ದಿನದಲ್ಲಿ ನಿಮ್ಮ ಮೇಲಧಿಕಾರಿಗಳೊಂದಿಗೆ ಇದರ ಬಗ್ಗೆ ಮತ್ತೆ ಪುನರ್ವಿಮರ್ಶೆ ಮಾಡುತ್ತೇನೆ ಅಲ್ಲಿಯ ತನಕ ನಿನ್ನನ್ನೂ ಆ ಕರ್ತವ್ಯದ ಮೇಲೆ ಇದ್ದ ಭದ್ರತಾ ಸಿಬ್ಬಂದಿಯನ್ನೂ ಅಮಾನತ್ತಿನಲ್ಲಿ ಇಡಲಾಗಿದೆ."

ಆ ದಿನ ಸಾಯಂಕಾಲ ಮಂಗಳನನ್ನು ಹಿಡಿತಕ್ಕೆ ತೆಗೆದುಕೊಂಡು ಕೇಳಿದೆ – "ನಿಮ್ಮ ತಾಯಿ ಎಲ್ಲಿದ್ದಾಳೆ. ಎನ್ನುವುದರ ಬಗ್ಗೆ ನಿನಗೇನೂ ಚಿಂತೇನೇ ಇಲ್ಲವೇನು? ಕಳೆದ ಒಂದು ವಾರದಿಂದ ಅವಳು ಕಾಣುತ್ತಾ ಇಲ್ಲ ಮತ್ತು ಅವಳು ಬದುಕಿದ್ದಾಳೋ ಸತ್ತಿದ್ದಾಳೋ ಎಂದು ಯಾರಿಗೂ ಗೊತ್ತಿಲ್ಲ"

ಅವನು ಭುಜವನ್ನು ಹಾರಿಸುತ್ತ– "ಅವಳು ದೊಡ್ಡವಳಾಗಿದ್ದಾಳೆ. ಅವಳು ತನ್ನನ್ನು ತಾನು ಸರಿಯಾಗಿ ನೋಡಿಕೊಳ್ಳಬಲ್ಲಳು."

ಮಂಗಳನ ಬುದ್ಧಿಯನ್ನು ಅವನ ನಿರ್ಲಕ್ಷ್ಯವನ್ನು ನಾನು ತೀವ್ರ ತರಾಟೆಗೆ ತೆಗೆದುಕೊಳ್ಳಬೇಕಾಗಿತ್ತು. ಅವನ ಮುಖದ ಮೇಲೆ ದ್ವೇಷದ ಸಂತೃಪ್ತಿ ತಾಂಡವವಾಡುತ್ತಿರುವುದನ್ನು ನೋಡುವುದು ನನಗೆ ಬೇಕಿರಲಿಲ್ಲ. ನಾನು ಸುತ್ತಲೂ ನೋಡಿ ಅಲ್ಲಿಂದ ಹೊರಟೆ. ಸಾಮಾನ್ಯವಾದ ಪರಿಸ್ಥಿತಿಗಳಲ್ಲಿ ಕೌಸಲ್ಯ ತನ್ನ ಬಗ್ಗೆ ತಾನು ನಿಗಾವಹಿಸಿಕೊಳ್ಳುವಷ್ಟು ಸಮರ್ಥಳು ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ಆದರೆ ಲೈಂಗಿಕ ಸಮಾಗಮಕ್ಕೆ ಆಹ್ವಾನ ನೀಡುವುದು ಖಂಡಿತಾ ಸಾಧಾರಣ ಸಂಗತಿ ಅಲ್ಲ. ಅಲ್ಲದೆ ರಾಜಕುಮಾರನಿಗೆ ಹಿಂಸ್ರ ಸ್ವಭಾವಕ್ಕೆ ತೀರಾ ದೂರವಾದ ಬೇರೊಂದು ಮುಖವೂ ಇತ್ತೆಂದು ತಿಳಿದು ನನಗೆ ಮೆಚ್ಚಿಕೆಯಾಗ ಹತ್ತಿತು. ಕುಸ್ತಿ ಪಂದ್ಯಗಳು ನಡೆದ ಆ ರಾತ್ರಿ ಆ ಮನುಷ್ಯನ ಅಂತರಂಗವನ್ನರ್ಥ ಮಾಡಿಕೊಳ್ಳಲು ಒಂದು ಹೊಸ ಒಳ ನೋಟವನ್ನು ನೀಡಿತ್ತು.

ತಾನು ಕುಸ್ತಿ ಪಂದ್ಯವನ್ನು ನೋಡುವುದನ್ನು ಕಳೆದುಕೊಳ್ಳುತ್ತಿರುವುದಾಗಿ ಹಲವು ಬಾರಿ ಹೇಳಿದ್ದನು. ಅವನ ಜೊತೆ ಚಿತ್ತೂರಿಗೆ ಬಂದಿದ್ದ ಸಹಚರರಲ್ಲೊಬ್ಬನು ಗುಜರಾತಿನಲ್ಲಿಯೇ ಅತ್ಯಂತ ಶ್ರೇಷ್ಠ ಕುಸ್ತಿ ಪಟುಗಳಲ್ಲೊಬ್ಬನಂತೆ. ಕೆಲವು ದಿನಗಳ ಹಿಂದೆ ಅಂತಿಮವಾಗಿ ನಾನು ಇಡೀ ಒಂದು ಸಂಜೆಯ ಕಾರ್ಯಕ್ರಮವನ್ನು ಏರ್ಪಡಿಸಿದೆ. ಬಹಾದ್ದೂರ್ ಒಳ್ಳೆ ಲಹರಿಯಲ್ಲಿದ್ದ. ಹತ್ತು ಪಂದ್ಯಗಳಲ್ಲಿ ಮೊದಲ ಒಂಬತ್ತು ಪಂದ್ಯಗಳು ಮೇವಾಡದವರ ನಡುವೆ, ಕೊನೆಯ ಪಂದ್ಯ ಷಹಜಾದನ ಕಡೆಯವನಿಗೂ ನಮ್ಮ ಒಬ್ಬ ಸ್ಥಳೀಯ

ತಾರೆಗೂ ಏರ್ಪಾಟಾಗಿತ್ತು. ರಾಜಕುಮಾರನ ಅದೃಷ್ಟ ಚೆನ್ನಾಗಿತ್ತು. ಮೊದಲ ಒಂಬತ್ತು ಪಂದ್ಯಗಳಲ್ಲಿ ಅವನು ಬಾಜಿ ಕಟ್ಟಿದ್ದ ಏಳು ಜನ ಸ್ಪರ್ಧಿಗಳು ಗೆದ್ದಿದ್ದರು.

"ಮಹಾಸ್ವಾಮಿಯವರೆ, ತಾವು ಏನು ಬಾಜಿ ಕಟ್ಟಲಿದ್ದೀರಿ? ಯಾರ ವಿರುದ್ಧ ತಾವು ಏನು ಪಣ ಒಡ್ಡುವಿಥಿ?" ಅವನ ಕಣ್ಣುಗಳಲ್ಲಿ ಒಂದು ಹುಚ್ಚು ಹೊಳಪು ಮಿನುಗುತ್ತಿತ್ತು. "ಅವನು ನಿಮ್ಮವನನ್ನು ಚಚ್ಚಿ ಹಾಕುತ್ತಾನೆ" ಎಂದನು.

"ನಿಮಗೆ ಹೇಗೆ ಗೊತ್ತು" ನಾನು ಕೇಳಿದೆ

"ಏಕೆಂದರೆ ನಾನು ನಿನ್ನೆ ಅವನು ಅಭ್ಯಾಸ ಮಾಡುತ್ತಿದ್ದುದನ್ನು ನೋಡಿದೆ. ನಮ್ಮ ಕಡೆಯವನು ಅವನ ಕೈ ಕಾಲು ಮುರಿದು ಹಾಕುತ್ತಾನೆ."

"ಹಾಗಾದರೆ ಷಹಜಾದರೆ ನೀವು ಮುಂಚೆನೇ ಆಟ ಗೊತ್ತು ಮಾಡಿಕೊಂಡು ಬಿಟ್ಟಿದ್ದೀರಾ?"

ನಾನು ಕುಶಾಲಿನಿಂದಲೇ ಕೇಳಿದೆ. ಆ ಮನುಷ್ಯನ ನೋಟದಲ್ಲಿ ಎಂಥ ಒಂದು ತಿರಸ್ಕಾರ ಇತ್ತೆಂದರೆ ನಮ್ಮ ಕಡೆಯವನು ಬಹಳ ಮುಂಚೆಯೇ ಸೋತು ಹೋಗಲಿ ಎಂದು ದೇವರಿಗೆ ಕೇಳಿಕೊಂಡೆ. ಈಗ ಅದರ ಬಗ್ಗೆ ಏನು ಮಾಡುವುದಕ್ಕೂ ಸಮಯ ಮೀರಿ ಹೋಗಿತ್ತು.

"ರಾಜಕುಮಾರರೆ ಗುಜರಾತ್ ಮೇವಾಡವನ್ನು ರಣರಂಗದಲ್ಲೇ ಆಗಲಿ ಎಲ್ಲೇ ಆಗಲಿ ಹಣಿಯುತ್ತೆ. ನಮ್ಮವನು ನಿಮ್ಮವನನ್ನು ಖಂಡಿತವಾಗಿಯೂ ಮುಗಿಸಿ ಹಾಕುತ್ತಾನೆ. ಅದೂ ಆ ಬಡಪಾಯಿ ಇನ್ನೂ ಮೊದಲನೇ ಪಟ್ಟು ಹಾಕುವುದಕ್ಕೆ ಮುನ್ನವೇ"

ಕನಿಷ್ಠ ಪಕ್ಷ ಅಲ್ಲಿ ಐದು ಸಾವಿರ ಜನ ಸೇರಿದ್ದರು. ಕಿವಿ ಗಡಚಿಕ್ಕುವಂಥ ಗಲಾಟೆ. ಜನರ ಭಾವೋದ್ವೇಗ ಸ್ವಲ್ಪ ಮಟ್ಟಿಗೆ ಹತೋಟಿ ಮೀರಿದ್ದೇ ಆಗಿತ್ತು. ಆಗ ಮಳೆಗಾಲ. ಬಯಲಿನಲ್ಲಿ, ಎಲ್ಲರಿಗೂ ಜಾಗ ಆಗುವಂತೆ ನಾವು ದೊಡ್ಡ ಶಾಮಿಯಾನವನ್ನೇನೋ ಹಾಕಿಸಿದ್ದೆವು. ಮರಳಿನ ಹಳ್ಳವೊಂದೇ ಬಹಿರಂಗವಾಗಿ ಕಾಣುತ್ತಿದ್ದುದು. ಪ್ರತಿಯೊಬ್ಬರೂ ಧಗೆಯಿಂದ ಬೆವರಿದ್ದರು ಮತ್ತು ಎಲ್ಲ ರೀತಿಯ ತಿನಿಸುಗಳನ್ನು ತಿನ್ನುತ್ತಿದ್ದರು. ಬಹಾದುರ್ ಆಗಲೇ ಮದ್ಯಪಾನ ಮಾಡಿದ್ದನು. ಜೊತೆಗೆ ಯಾವುದೋ ಮಾದಕ ವಸ್ತುವನ್ನು ಸೇವಿಸಿದ್ದ ಕಾರಣ ಅವನು ತುಂಬ ಉದ್ವೇಗ ಮತ್ತು ಆತಂಕಕ್ಕೊಳಗಾಗಿದ್ದನೆಂದು ನನ್ನ ಅನುಮಾನ. ಅವನ ಕಣ್ಣ ಪಾಪೆಗಳು ಅಗಲವಾಗಿದ್ದು ಕೈಗಳು ನಡುಗುತ್ತಿದ್ದುವು

"ನೀವು ಏನನ್ನು ಪಣ ಒಡ್ಡುವಿರಿ?"

"ಒಂದು ನೂರು ನಾಣ್ಯಗಳನ್ನು ನಿಮ್ಮ ಮನುಷ್ಯನ ಮೇಲೆ ಹೂಡಿದರೆ ಹೇಗೆ?" ಅವನು ಹೋರಾಟಕ್ಕೆ ಎದುರು ನೋಡುತ್ತಲೇ ಇದ್ದ. ಆದರೆ ಅವನ ಒತ್ತಾಯಕ್ಕೆ ನಾನು ಮಣಿಯುವವನಾಗಿರಲಿಲ್ಲ.

"ನಮ್ಮ ಮನುಷ್ಯನ ಮೇಲಾ? ನಿಮಗೇನಾದರೂ ಆತ್ಮಗೌರವ ಮತ್ತು ದೇಶಾಭಿಮಾನ ಇಲ್ಲವೇ?"

"ನಾನು ಗೆಲ್ಲುವ ಗುಂಪಿನಲ್ಲಿ ಇರಲು ಇಷ್ಟಪಡುತ್ತೇನೆ."

"ಹಾಗಾದರೆ ನೀವು ನಿಮ್ಮ ನೆಲೆ ಮತ್ತು ನಾಡನ್ನು ತೊರೆಯಬೇಕಾಗುತ್ತೆ"

"ಬರೀ ನೂರು ಟಂಕಾಗಳು! ಮೇವಾಡ ಪಣಕ್ಕೆ ಒಡ್ಡಲು ಸಾಧ್ಯವಿರುವುದು ಅಷ್ಟೇನೆ?"

"ಮಹಾಸ್ವಾಮಿ ನಾವು ಆಳುವ ದೊರೆಯಾಗುವ ಸಂದರ್ಭ ಬಂತೆಂದರೆ ನಾವು ಒಂದು ಶಾಂತಿ ಒಪ್ಪಂದಕ್ಕೆ ಸಹಿ ಹಾಕುತ್ತೇವೆ ಎನ್ನುವುದನ್ನು ತಾವು ಮರೆತು ಬಿಟ್ಟಿರೋ ಹಾಗಿದೆ."

“ಶಾಂತಿ ಒಪ್ಪಂದವನ್ನು ಕಿತ್ತು ಒಗೆಯಿರಿ. ಎಷ್ಟು ಪಣ ಒಡ್ಡುತ್ತೀರಿ? ಜೊತೆಗೆ ನೀವು ಮೇವಾಡದ ಮೇಲೆ ಮಾತ್ರ ಪಣ ಒಡ್ಡಬಹುದು.”

ನಾನು ಅಂದುಕೊಂಡದ್ದೇನು ಅಂದರೆ ಯುದ್ಧಗಳಿಗೆ ಕುಸ್ತಿ ಪರ್ಯಾಯವಾಗುವುದಾದರೆ, ಮುಂದೆ ಎಲ್ಲ ಕಾಲಕ್ಕೂ ಬಹಾದುರ್ ಮತ್ತು ಗುಜರಾತ್ ಪ್ರತಿ ಹೋರಾಟದ ಪಂದ್ಯದಲ್ಲೂ ಗೆದ್ದರೆ ನನಗೇನೂ ಯೋಚನೆಯಿಲ್ಲ.

“ಐದು ನೂರು” ಎಂದು ಹೇಳಿ ನಾನು ಹಣವನ್ನು ಜೂಜಾಟದ ವ್ಯಾಪಾರದವನಿಗೆ ಕೊಟ್ಟೆ.

“ಆಗೋದಿಲ್ಲ ಆಗೋದಿಲ್ಲ” ಸಿಡಿಲೆರಗಿತು ಮತ್ತು ಭಯಂಕರ ಮಳೆಯೂ ಬಂದಿತು. ಇಬ್ಬರೂ ಕುಸ್ತಿಪಟುಗಳು ಪಂದ್ಯದಿಂದ ಸೋತು ಹೊರಬಂದರು. “ನಾನು ಹತ್ತು ಸಾವಿರ ಹಾಕಿದ್ದೇನೆ. ತಾವೂ ಕನಿಷ್ಟ ಅಷ್ಟನ್ನು ಹಾಕಬೇಕಾಗುತ್ತೆ.”

ಅದೃಷ್ಟಾವಶಾತ್ ಅದು ತೀರಾ ತಡವಾಗಿತ್ತು. ಮರಳ ಹಾಸಿನ ಮೇಲಿದ್ದ ಇಬ್ಬರು ಸ್ಪರ್ಧಿಗಳೂ ಒಬ್ಬರನ್ನೊಬ್ಬರು ಬಲವಾಗಿ ಹಿಡಿದಿದ್ದರು. ತಮ್ಮ ಕಡೆಯ ಕುಸ್ತಿ ಪಟು ಅಸ್ಲಾಂ ಜಾಫರ್ ಮೇಲೆ ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಏಕೆ ಪಣ ಒಡ್ಡಿದನೆಂಬುದು ಈಗ ಅರ್ಥವಾಯಿತು. ಅವನು ಒಳ್ಳೆ ಪರ್ವತದ ಹಾಗೆ ಕಟ್ಟುಮಸ್ತಾಗಿ ಎತ್ತರಕ್ಕೆ ಬೆಳೆದು ನಿಂತಿದ್ದ ಮನುಷ್ಯ. ಅವನ ಪ್ರತಿಸ್ಪರ್ಧಿ ಭರತ್ ಅವನ ಅರ್ಧದಷ್ಟಿದ್ದ. ಅಲ್ಲದೆ ಅದಕ್ಕಿಂತ ಮುಖ್ಯವಾಗಿ, ಸ್ವಲ್ಪ ಬೆದರಿದವನಂತೆ ಕಂಡ. ಅವರಿಬ್ಬರೂ ಮೈತುಂಬ ಬಹಳ ಎಣ್ಣೆ ಹಚ್ಚಿಕೊಂಡಿದ್ದರು. ಜೊತೆಗೆ ಆಕಾಶದ ತೂಬು ತೆರೆದದ್ದು ಅವರಿಗೆ ಅನುಕೂಲವಾಗಲಿಲ್ಲ. ಮೊದಲ ಒಂದು ನಿಮಿಷ ಮತ್ತು ನಲವತ್ತೈದು ಕ್ಷಣಗಳಲ್ಲಿ ಭರತನ ಏಕೈಕ ತಂತ್ರ ಮತ್ತು ಚಿಂತೆ ಎಂದರೆ ಅಸ್ಲಾಮ್‌ನ ಗುಹೆಯಂಥ ತೋಳುಗಳಿಂದ ನುಣುಚಿಕೊಳ್ಳುವುದೇ ಆಗಿತ್ತು.

ಬಹಾದುರ್ ನನಗೆ ಹೇಳಿದ “ಚಿತ್ತೂರಿನ ಇಲಿಗೆ ಹೋರಾಟ ಮಾಡುವಷ್ಟು ಕೆಚ್ಚಿಲ್ಲ. ನೋಡಿ ಅವನು ಹೇಗೆ ಅಸ್ಲಾಮ್‌ನನ್ನು ತಪ್ಪಿಸುತ್ತಾ ಇದ್ದಾನೆ ನೋಡಿ” ಆದರೆ ಅಸ್ಲಾಂ ವಿಧಿ ಇದ್ದಂತೆ. ಅವನ ಜೊತೆಗಿನ ಸ್ಪರ್ಧೆಯನ್ನು ಮುಂದೂಡುವುದಾಗಲಿ ಇಲ್ಲವಾಗಿಸುವುದಾಗಲೀ ಮಾಡಲು ಸಾಧ್ಯವಿಲ್ಲ. “ನೀವು ನೋಡುತ್ತಿರಿ. ಅಂಥ ಮಿಂಚಿನಂಥ ವೇಗದ ಪಟ್ಟುಗಳ ಸರಣಿಯೇ ಅವನಿಗೆ ಗೊತ್ತಿದೆ. ಅವನು ಒಂದು ಸಲ ಪಟ್ಟು ಹಾಕಿದ ಅಂದರೆ ನಿಮ್ಮ ಕಡೆಯವನು ಬಿಟ್ಟು ಬಿಡಬೇಕು ಅಂತಬೇಡಿ ಕೊಳ್ಳುವನು. ಅವನಿಗೆ ಬೇಕಾಗಿರುವುದೇನಿದ್ದರೂ ಭರತನನ್ನು ಮರಳ ಮೇಲೆ ಬೆನ್ನು ಕೆಳಗಾಗಿ ಮಾಡಿ ಬಿಟ್ಟು ಬಿಡುವುದು ಅಷ್ಟೆ”.

ಈಗ ಆಗುತ್ತಾ ಇದ್ದುದು ಅದೇ. ಆದರೆ ಅದು ಭರತನಿಗಲ್ಲ, ಅವನು ತೆಳ್ಳಗಿದ್ದರೂ ತುಂಬ ಬಲಿಷ್ಠ ವ್ಯಕ್ತಿ. ತನ್ನ ಶರೀರದೊಂದಿಗೆ ಹೋರಾಡುತ್ತಿದ್ದುದಕ್ಕಿಂತ ಅದನ್ನು ಬಳಸಿಕೊಳ್ಳುತ್ತಿದ್ದುದೇ ಹೆಚ್ಚು. ಹೋರಾಟವನ್ನು ಮನಸ್ಸಿನೊಳಕ್ಕೆ ತೆಗೆದುಕೊಂಡನು. ಅವನ ಮನಸ್ಸಾದರೋ ವಿಚಿತ್ರವಾದ ವಿವರಿಸಲು ಕಷ್ಟಕರವಾದ ಸುಳ್ಳುಗಾರ. ಅದು ಎದುರಾಳಿಗೆ ತದ್ವಿರುದ್ಧವಾದ ಸಂಕೇತಗಳನ್ನು ಕಳಿಸಿತು. ಅವನು ಯಾರ ಮೇಲೋ ಏರಿ ಬಂದು ತನ್ನ ಎದುರಾಳಿ ಬೇರೆಯವರ ಮೇಲೆ ಬೀಳುವಂತೆ ಮಾಡಿದ. ಅವನು ವೇಗಕ್ಕಿಂತ ಹೆಚ್ಚಾಗಿ ಬಿಗಿಯಾಗಿದ್ದ. ಅವನನ್ನು ಅರ್ಥಮಾಡಿಕೊಳ್ಳುವ ಸರಿಯಾದ ಸಮಯವೆಂದರೆ, ಅವನು ಬೇರೆಯವರ ಆಟದ ಬಗ್ಗೆ ಅಭಿಪ್ರಾಯ ರೂಪಿಸಿಕೊಳ್ಳುತ್ತಿರುವಾಗ ಹಾಗೂ ಅವರ ತಾತ್ಕಾಲಿಕ ಮನಃಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಿರುವಾಗ.

ಆ ನಂತರ ಸಂದರ್ಭ ಅಸ್ಲಾಮ್‌ಗೆ ಸ್ವಲ್ಪ ಕಠಿಣವಾಯಿತು. ಅಸ್ಲಾಂ ಬಕಾಸುರ ಪಟ್ಟನ್ನು ಹಾಕಿ ಭರತನನ್ನು ಎಷ್ಟೊಂದು ಹಿಂದಕ್ಕೆ ತಳ್ಳಿ ಭದ್ರವಾಗಿ ಹಿಡಿದುಕೊಂಡನೆಂದರೆ ಅವನು ಅಂಗಾತ ಬೀಳಲು ಒಂದೆರಡು ಕ್ಷಣಗಳು ಮಾತ್ರ ತೆಗೆದುಕೊಳ್ಳಬಹುದಷ್ಟೆ. ಆ ಒಂದೆರಡು ಕ್ಷಣಗಳೆಂದರೆ ಅತ್ಯಂತ ನಿರ್ಣಾಯಕವಾದ ಕ್ಷಣಗಳು. ಭರತನ ಕಾಲ್ಬೆರಳು ಅಸ್ಲಾಮನ ಮಂಡಿಯ ಚಿಪ್ಪನ್ನು ಅಪ್ಪಳಿಸಿತು. ಅಸ್ಲಾಮ್ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಬಹು ಒದ್ದಾಡಿದ. ಭರತ್ ಮೇಲೆದ್ದು ನಿಂತ. ಅವನ ಪಾದ ಅಸ್ಲಾಮನ ಕಾಲುಗಳನ್ನು ಥಟ್ಟನೆ ಸರಕ್ಕನೆ ಮುಂದಕ್ಕೆ ನೂಕಿತು. ಅವನ ತಲೆ ಅಸ್ಲಾಮನ ಎದೆಗೆ ಡಿಕ್ಕಿ ಹೊಡೆಯಿತು. ಅದರ ಪರಿಣಾಮ ಅಸ್ಲಾಮ್ ಕೆಳಗೆ ಬೀಳುತ್ತ ಬೀಳುತ್ತ ಬೆನ್ನು ಕೆಳಗಾಗಿ ಅಂಗಾತ ಬಿದ್ದ.

ಬಹಾದುರ್ ಖಾನ್ ಎದ್ದು ನಿಂತು ಹುಚ್ಚು ಹಿಡಿದವರಂತೆ "ಅಕ್ರಮ, ಮೋಸ, ಇದು ಪಂದ್ಯವೇ ಅಲ್ಲ. ಭರತನನ್ನು ಅನರ್ಹಗೊಳಿಸಿ, ಆ ತೀರ್ಪುಗಾರ ಪಕ್ಷಪಾತ ಮಾಡಿದ್ದಾನೆ." ಎಂದೆಲ್ಲ ಕಿರಿಚಾಡ ತೊಡಗಿದ. ಐದು ಸಾವಿರ ಸಂಖ್ಯೆಯ ಚಿತ್ತೂರಿನ ಜನಸಮುದಾಯ, ಆಶ್ಚರ್ಯ, ದಿಗ್ಭ್ರಮೆ, ಕೋಪೋದ್ರೇಕದಿಂದ ಅವನನ್ನು ನೋಡತೊಡಗಿತು. ತಾನೇನಾದರೂ ಅಕ್ಷಮ್ಯವಾದದ್ದೇನನ್ನಾದರೂ ಮಾಡಿದ್ದೇನೆಯೇ ಎಂದು ಭರತನು ವಿಸ್ಮಯದಿಂದ ನನ್ನ ಕಡೆ ನೋಡಿದ. ಹಾಗೆ ಕಣ್ಣಲ್ಲಿ ಕಣ್ಣಿಟ್ಟು ನೋಡುವುದರಲ್ಲಿ ಏನೂ ಅರ್ಥವಿಲ್ಲ ಅನ್ನಿಸಿತು. ಜನರ ಗುಂಪು ಆಗಲೇ ತಿರಸ್ಕಾರ ಲೇವಡಿ ಸೂಚಕ ಸದ್ದುಗಳನ್ನು ಮಾಡತೊಡಗಿತ್ತು. ಜನಸಮೂಹ ತನಗೆ ವಿರುದ್ಧವಾಗಿರುವುದನ್ನು ಷಹಜಾದ ಕಂಡುಕೊಂಡು ಕುಳಿತು ಬಿಟ್ಟನು. ಪ್ರಕ್ಷುಬ್ಧತೆಯನ್ನು ಹೋಗಲಾಡಿಸಲು ಸರಿಯಾದ ಸಮಯವೆಂದು ತಿಳಿದು ನಾನು ಎದ್ದುನಿಂತೆ. "ಶುಭರಾತ್ರಿ ಎಲ್ಲರಿಗೂ ನಮಸ್ಕಾರ. ಈಗಾಗಲೇ ತಡವಾಗಿದೆ. ನಾವೆಲ್ಲ ಈಗ ಮನೆಗೆ ಹೋಗುತ್ತಾ ಇದ್ದೀವಿ. ನಾಳೆ ನಾವೆಲ್ಲ ಕೆಲಸಕ್ಕೆ ಹೋಗಬೇಕಾಗಿದೆ. ಧನ್ಯವಾದಗಳು ಅಸ್ಲಾಮ್. ಈ ಸುಂದರ ಸಂಜೆಗಾಗಿ ಭರತ್ ನಿನಗೆ ವಂದನೆಗಳು."

ರಾಜಕುಮಾರನು ಅರಮನೆಯ ಆವರಣದಿಂದ ಮರಳು ಗುಂಡಿಗೆ ಕಾಲಿಟ್ಟಾಗಲೇ ಜನರ ಗುಂಪು ಚದುರ ತೊಡಗಿತ್ತು. ಆಗಿನ್ನೂ ಮಳೆ ಬೀಳುತ್ತಿತ್ತು. ಎಲ್ಲವೂ ಮಬ್ಬು ಮಬ್ಬಾಗಿ ಅಸ್ಪಷ್ಟವಾಗಿ ಕಾಣುತ್ತಿತ್ತು. ಅಸ್ಲಾಮ್ ಜಾಫರ್ ಸ್ವಲ್ಪ ದಿಕೆಟ್ಟವನಂತೆ ಕುಳಿತಿದ್ದ. ಭರತ್ ಅವನಿಗೆ ಕೈ ಆಧಾರ ಕೊಟ್ಟು, ಎಬ್ಬಿಸಲು ಯತ್ನಿಸುತ್ತಿದ್ದಂತೆ, ಬಹದ್ದೂರ್ ಖಾನನ ಕಾಲು ಅಸ್ಲಾಮನ ಬಾಯನ್ನು ಅಪ್ಪಳಿಸಿತು. ಏಳು ಹಲ್ಲುಗಳು ಮುರಿದು ಬಿದ್ದುವು. ಅಸ್ಲಾಂ ಇನ್ನೊಮ್ಮೆ ಬೆನ್ನು ಅಡಿಯಾಗಿ ಕೆಳಗೆ ಬಿದ್ದ. ಷಹಜಾದ ಮತ್ತೆ ಮತ್ತೆ ಒದೆಯ ತೊಡಗಿದ. ಜನತೆ ಇದ್ದಕ್ಕಿದ್ದಂತೆ ಸ್ತಬ್ದಗೊಂಡದ್ದರಿಂದ ಅಸ್ಲಾಮನ ಮೂಳೆ ಮುರಿದ ನಿಟಿನಿಟಿಲು ಸದ್ದು ಮತ್ತಷ್ಟು ಗಟ್ಟಿಯಾಗಿ ಕೇಳಿಸ ತೊಡಗಿತು. ಷಹಜಾದನ ಕಾಲು ಐದು, ಆರು, ಏಳು ಸಲ ಅಸ್ಲಾಮನ ಪಕ್ಕೆಲುಬಿಗೆ ಅಪ್ಪಳಿಸಿತು. ಆ ಮೇಲೆ ಅವನನ್ನು ಹೊರಳಿಸಿ ಅವನ ಮೂತ್ರ ಪಿಂಡಕ್ಕೆ ಆ ಕಾಲು ಅಪ್ಪಳಿಸಿದನು. ಬೆನ್ನಿಗೆ ಗುರಿ ಇಟ್ಟು ಹೊಡೆದ. ಎರಡು ಒದೆತ. ಅನಂತರ ಕುತ್ತಿಗೆಗೆ ಒದ್ದನು. "ನೀನು ಸುಲ್ತಾನರಿಗೆ, ನನಗೆ ಮತ್ತು ಗುಜರಾತಿಗೆ ಸೋಲುಣಿಸಿದೆ. ದೈವದ್ರೋಹಿಗಳ ಕಣ್ಣಲ್ಲಿ ನಮ್ಮ ಸಾಮ್ರಾಜ್ಯದ ಗೌರವ ಮಣ್ಣು ಪಾಲಾಯಿತು. ನಿನಗುಳಿದಿರುವ ಒಂದೇ ಒಂದು ಗೌರವ ಅಂದರೆ ಸಾಯುವುದು." ಈಗ ನಾನು ಮಧ್ಯೆ ಪ್ರವೇಶಿಸಲು ಸರಿಯಾದ ಸಮಯ ಎಂದು ಅನ್ನಿಸಿತು. ಅವನು ನನ್ನ ಕಡೆಗೆ ವಾಲಿದ. ಆದರೆ ನಾನು ಥಟ್ಟನೆ ಬಗ್ಗಿ ಹೇಳಿದೆ – ದಿನದ "ಐದನೆಯ ನಮಾಜ್ ಮಾಡುವ ಸಮಯ ಈಗ ರಾಜಕುಮಾರ". ಅಲ್ಲಿಗೆ ಅವನು ನಿಲ್ಲಿಸಿದ.

ನಾನು ಕುದುರೆಗಳನ್ನು ಎರಡು ಸಲ ಬದಲಾಯಿಸಿ ರೊಹಾಲಾವನ್ನು ಐದು ಗಂಟೆಗಳಲ್ಲಿ ತಲುಪಿದೆ.

ಅಪರಾತ್ರಿಯಲ್ಲಿ "ಬೆಫಿಕೀರ್" ಬೆನ್ನೇರಿದಾಗ ಮಂಗಳ ನನ್ನ ಹಿಂದೆಯೇ ಓಡಿ ಬಂದು "ಮಹಾಸ್ವಾಮಿ ತಾವೊಬ್ಬರೇ ಹೋಗುವಂತಿಲ್ಲ" ಎಂದನು.

"ಕಳೆದ ಸಲ ನಾವು ಭೇಟಿಯಾದಂದಿನಿಂದೀಚೆಗೆ ನೀನು ಬಹಳಷ್ಟು ಮುಂದುವರಿದಿದ್ದೀ ಅಂತ ನನಗೆ ಗೊತ್ತಾಗುತ್ತಾ ಇದೆ. ನಾನೀಗ ನಿನ್ನಿಂದ ಅಪ್ಪಣೆ ಪಡೆದುಕೊಳ್ಳಬೇಕೆ?"

"ತಮಗೆ ಸಲಹೆ ನೀಡುವಷ್ಟು ಧಾರ್ಷ್ಟ್ಯ ತೋರಿಸುತ್ತಾ ಇರುವುದಕ್ಕೆ ದಯವಿಟ್ಟು ಕ್ಷಮಿಸಿ ಮಹಾಸ್ವಾಮಿ" ನಾನು ಬೇಕೆಂದೇ ಅವನ ಕಾಳಜಿಯಿಂದ ಕೂಡಿದ ಮಾತುಗಳನ್ನು ತಿರಿಚುತ್ತಿದ್ದೇನೆಂದು ಅವನಿಗೆ ಚೆನ್ನಾಗಿ ಗೊತ್ತಿತ್ತು – "ಆದರೆ ಮಹಾರಾಜ್ ಕುಮಾರ್ ಅವರು ರಾತ್ರಿ ಹೊತ್ತು ಏಕಾಂಗಿಯಾಗಿ ಹೊರಗೆ ಹೋಗುವುದು ಅಪಾಯ" ಎಂದನು.

"ನನ್ನ ರಕ್ಷಣೆಯ ವಿಷಯದಲ್ಲಿ ನೀನು ತೋರಿಸುತ್ತಿರುವ ವೈಯಕ್ತಿಕ ಕಾಳಜಿ ತುಂಬ ಶ್ಲಾಘನೀಯವಾದ್ದು. ಆದರೆ ಇದನ್ನೇ ನಿಮ್ಮ ತಾಯಿಯ ವಿಷಯಕ್ಕೆ ತೋರಿಸಿದ್ದರೆ ಹೆಚ್ಚು ಉಚಿತವಾಗಿರುತ್ತಿತ್ತು. ನನಗೆ ಬೆಂಗಾವಲಿಗೆ ಯಾರನ್ನಾದರೂ ಕರೆದುಕೊಂಡು ಹೋಗಬೇಕು ಅಂತ ಅನ್ನಿಸಿದರೆ ನಾನು ಯಾರನ್ನಾದರೂ ಕರೆದುಕೊಳ್ಳುವೆನು. ತಕ್ಷಣಕ್ಕೆ ಈಗ ನನಗೆ ಸ್ವಲ್ಪ ನಿರಾಳವಾಗಿ ಇರಬೇಕು. ಜೊತೆಗೆ ಸ್ವಲ್ಪ ಒಬ್ಬನೇ ಸ್ವತಂತ್ರವಾಗಿ ಓಡಾಡುವುದು ಬೇಕಾಗಿದೆ"

ಯಾವುದರ ಮೇಲೆ ಎಂದು ನಿರ್ದಿಷ್ಟವಿಲ್ಲ. ಆದರೆ ನನಗೆ ಕೋಪ ಬರುತ್ತಿತ್ತು. ನಾನಾಡಿದ ಕ್ಷುಲ್ಲಕ ವ್ಯಂಗ್ಯಗಳಿಗೆ ನಾನೇ ಪಶ್ಚಾತ್ತಾಪ ಪಡುತ್ತಿದ್ದೆ. ಅದೇ ಸಮಯದಲ್ಲಿ ಒಬ್ಬ ಮನುಷ್ಯ ಕೆಳಗೆ ಬಿದ್ದು ಪ್ರತಿಯಾಗಿ ಮುಯ್ಯಿ ತೀರಿಸಿಕೊಳ್ಳಲು ಸಾಧ್ಯವಿಲ್ಲದೆ ಇದ್ದಾಗಲೇ ಅವನಿಗೆ ಹೊಡೆತ ಕೊಡುವುದೇ ಸರಿ ಅಂತ ನಾನು ಭಾವಿಸಿದೆ. ನಾನು ರೊಹಾಲಾಕ್ಕೆ ಹೋಗಿ ತುಂಬಾ ದೀರ್ಘಕಾಲವಾಗಿತ್ತು. ನನಗೆ ಅಲ್ಲಿಯ ಕೋಣೆಗಳು, ಅಂಗಳ ಅದರ ಹೊರಗಡೆ ಇದ್ದ ಚಿಲುಮೆ ಮತ್ತು ತುಳಸೀ ಗಿಡ ಇದೆಲ್ಲ ನೆನಪಿತ್ತೇ ಹೊರತು ನಾನು ಹುಡುಕಿಕೊಂಡು ಹೊರಟಿದ್ದ ಮನೆಯ ಹಿಂಭಾಗ ಹೇಗಿತ್ತು ಅನ್ನುವುದರ ನೆನಪು ಎಳ್ಳಷ್ಟೂ ಇರಲಿಲ್ಲ. ರೊಹಾಲಾದಂಥ ಊರಿನಲ್ಲಿ, ತುಂಬ ಬೃಹತ್ತಾದ ಮತ್ತು ಅತ್ಯಂತ ಭವ್ಯವಾದ ಮನೆಯನ್ನು ಹುಡುಕುವುದು ಕಷ್ಟವಾಗಲಾರದು ಎಂದು ನನಗೆ ನಾನೇ ಹೇಳಿಕೊಂಡೆ. ಆದರೆ ಅದು ಬೆಳುದಿಂಗಳಿಲ್ಲದ ರಾತ್ರಿಯಾಗಿತ್ತು ಮತ್ತು ರಾತ್ರಿ ಕಾವಲಿನವನ ಹತ್ತಿರ ಹೋಗಿ, ರಾಜ್ಯದ ರಾಜಕುಮಾರನೊಬ್ಬ ಅವನ ಹಳ್ಳಿಗೆ ರಾತ್ರಿ ರಹಸ್ಯವಾಗಿ ಭೇಟಿ ನೀಡುತ್ತಿದ್ದಾನೆಂದು ಅವನಿಗೆ ಗೊತ್ತಾಗುವಂತೆ ಮಾಡುವುದು ನನಗೆ ಅಸಹ್ಯ ತರಿಸುತ್ತಿತ್ತು. ಆ ಊರಿನ ಚಕ್ರ ಭೀಮನ ಕೋಟೆಯ ಓಣಿಗಳು ಮತ್ತು ಕಿರು ಓಣಿಗಳನ್ನು ದಾಟಿ, ಆ ಊರಿನ ಒಟ್ಟಾರೆ ಭೌಗೋಳಿಕ ಲಕ್ಷಣದ ನೋಟ ಸಿಗುವಂಥ ಅನುಕೂಲಕರವಾದ ಒಂದು ಜಾಗಕ್ಕೆ ಹೋಗಬೇಕಿತ್ತು.

ಪ್ರಶ್ನೆ ಇದ್ದುದು ಹೇಗೆ ಎಂದು. ಆ ಊರಿನ ನೆಲ ನನ್ನ ಹೊಟ್ಟೆಯಷ್ಟೇ ಚಪ್ಪಟೆಯಾಗಿತ್ತು. ಸದಾ ಕಾವಲಾಗಿ ನಿಂತಿರುವ ಅರಾವಳಿ ಪರ್ವತಗಳು ಪೂರ್ವಕ್ಕೆ ಅಲೆಯಲೆಯಾಗಿ ಹಬ್ಬಿ ನಿಂತಿದ್ದುವು. ಆದರೆ ಅವು ಸರಿಯಾಗಿ ಐದಾರು ಮೈಲಿಗಳ ದೂರದಲ್ಲಿದ್ದುವು.

ನಾನು ನನ್ನ ಕುದುರೆಯನ್ನೊಂದು ಕಡೆಕಟ್ಟಿ ಹಾಕಿದೆ. ಏಳು ತಿಂಗಳ ಮಗು ಪ್ರಾರಂಭದಲ್ಲಿ ಹೇಗೆ ಅಂಬೆಗಾಲಿಟ್ಟುಕೊಂಡು ಮುಂದೆ ಹೋಗುತ್ತದೋ ಅದೇ ರೀತಿ, ನಾನು ಅಂಗೈಗಳ ಮೇಲೆ ಊರಿಕೊಂಡು ಒಂದು ಅರಳಿಯ ಮರವನ್ನೇರಿದೆ. ಬೆಳೆದು ದೊಡ್ಡವರಾದ

ಮೇಲೆ ಮತ್ತೆ ಹಿಂತಿರುಗಿದಾಗ, ನಮ್ಮ ಶಾಲೆ, ತರಗತಿಯ ಕೊಠಡಿಗಳು, ಮನೆ, ಉದ್ದವಾಗಿ ನಿಂತಿರುವ ಬೆದರಿಸುವ ಆಡಳಿತ ಕಛೇರಿಯ ಕಟ್ಟಡಗಳು, ತಂದೆ, ತಾಯಿ ಪ್ರತಿಯೊಬ್ಬರೂ, ಪ್ರತಿಯೊಂದೂ ಎಲ್ಲವೂ ದೂರ ಹೋಗಿವೆ ಎಂದು ನಮಗೆ ಅನ್ನಿಸುತ್ತದೆ. ನನ್ನ ನೆನಪು ನನ್ನ ಮೇಲೇನೂ ಮೋಡಿ ಮಾಡದಿದ್ದರೆ ರೊಹಾಲಾ ಈಗ ತನ್ನ ಸ್ವಭಾವಕ್ಕೆ ವಿರುದ್ಧವಾಗಿತ್ತು. ಅದು ಮುಂದುವರಿದು ಈಗ ನಗರವಾಗಿತ್ತು. ರೊಹಾಲಾ ಸಮೀಪವಿದ್ದ ಮಯೂರ ಸರೋವರ ಒಂದೂವರೆ ಮೈಲಿಗಳಷ್ಟು ಉದ್ದವಾಗಿದ್ದು ಅರ್ಧ ವೃತ್ತಾಕಾರದಲ್ಲಿತ್ತು. ನೀರಿನ ಊದಾ ಬಣ್ಣದ ಕಲ್ಲು ನಡೆದಾಡಲು ಯೋಗ್ಯವಾದಷ್ಟು ಗಡುಸಾಗಿತ್ತು. ಕುದುರೆಗಳು ಸರಿಯಾಗಿ ಸರೋವರದ ವ್ಯಾಸದ ಹತ್ತಿರ ಏಕೆ ನಿಂತು ಬಿಟ್ಟಿದ್ದುವು ಎನ್ನುವುದು ನಿಜಕ್ಕೂ ಒಂದು ರಹಸ್ಯವೇ. ಅದರ ಪರಿಣಾಮ ರೊಹಾಲಾವನ್ನು ಆಟದ ಬೊಂಬೆಗಳ ನಗರವನ್ನಾಗಿ ಪರಿವರ್ತಿಸುವುದಾಗಿತ್ತು. ಒಂದು ವೇಳೆ ಮಯೂರ ಸರೋವರವೇನಾದರೂ ಬತ್ತಿ ಹೋದರೆ, ನಗರಕ್ಕೆ ತನ್ನದೇ ಆದೊಂದು ನದಿ, ಅದು ಬನಾಸ್‌ನ ಉಪನದಿ ಅಲ್ಲಿ ಇತ್ತು. ಅಲ್ಲಿ ಕಡೇ ಪಕ್ಷ ನಲವತ್ತು ಎರಡಂತಸ್ತಿನ ಮನೆಗಳಿದ್ದುವು, ನದಿಯ ಎಡದಂಡೆಯ ಮೇಲೆ ಮೀನಾರನ್ನು ಹೊಂದಿದ ಮಸಿದಿಯೊಂದು, ಒಂದು ದೇವಸ್ಥಾನ ಇದ್ದುವು.

ಪಟ್ಟಣಕ್ಕಾಗಲಿ, ನಗರಕ್ಕಾಗಲಿ, ಊರಿಗಾಗಲಿ, ತನ್ನದೇ ಆದ ಹೃದಯ, ಮನಸ್ಸು ಮತ್ತು ಆತ್ಮಗಳಿರುತ್ತವೆಯೆ? ಸರೋವರ ಇರುವುದು ವಿರಾಮಕ್ಕೆ ಮತ್ತು ಪಟ್ಟಣ ನದಿಯ ಸುತ್ತ ಬೆಳೆಯಬೇಕೆಂದು ನಿಶ್ಚಯಿಸಿದವರಾರು? ನನಗೇ ಗೊತ್ತಿಲ್ಲದ ಹಾಗೆ ರೊಹಾಲಾ ನನಗೆ ಮಂಕು ಹಿಡಿಸಿ ನನ್ನ ಬೆನ್ನ ಹಿಂದೆಯೇ ಬೆಳೆದು ಹಬ್ಬಿದೆಯೇನೋ ಎನ್ನುವಂತಾಗಿತ್ತು. ನಮ್ಮ ರಾಜ್ಯದ ವಿಷಯ ಅದು ಹೇಗೆ ನನಗೇ ಗೊತ್ತಿರಲಿಲ್ಲವಲ್ಲ? ಇನ್ನೆಷ್ಟು ಹಳ್ಳಿಗಳು ನಗರಗಳಾಗಿ ಬೆಳೆದಿವೆಯೋ? ಎಷ್ಟು ಹಳ್ಳಿಗಳು ಸೊರಗಿ ಹೋಗಿವೆಯೊ? ಏನು ಮಾಡಬೇಕೆಂದು ತಿಳಿದಿತ್ತು. ಮೇವಾಡದ ಪ್ರತಿಯೊಂದು ಭಾಗವನ್ನು ಪ್ರವಾಸ ಮಾಡಬೇಕು. ನನ್ನ ಜನಗಳ ಮುಖ ನೋಡಬೇಕೆನಿಸಿತು. ಅವರೊಂದಿಗೆ ನಾನು ಮಾತಾಡಬೇಕು. ಅವರ ಮಳೆ, ಬೆಳೆ ಕೈಗಾರಿಕೆಗಳ ಬಗ್ಗೆ ಕೇಳಬೇಕು. ಅವರ ಸಮಸ್ಯೆಗಳೇನು? ಅವರು ತೆರಿಗೆ ಸರಿಯಾಗಿ ಕಟ್ಟುತ್ತಾ ಇದ್ದಾರೆಯೆ? ನಮ್ಮ ಕಂದಾಯ ಅಧಿಕಾರಿಗಳು ಭ್ರಷ್ಟರೆ? ಆ ಹಳೆಯ ನರಿ ಆದಿನಾಥಜೀ ಅವರು ಸರಿಯಾಗಿಯೇ ಇದ್ದಾರೆ. ಪ್ರಗತಿಯ ಸಾಧನಗಳೆಂದರೆ ವ್ಯವಸಾಯ ಕೈಗಾರಿಕೆ ಮತ್ತು ವ್ಯಾಪಾರಗಳೇ ಹೊರತು ಯುದ್ಧವಲ್ಲ. ರೋಹಲಾದ ಅಭಿವೃದ್ಧಿಯ ರಹಸ್ಯವೇನು? ಅದನ್ನು ಯಥಾವತ್ತಾಗಿ ಅನುಕರಿಸಬಹುದೆ? ಅದು ಪ್ರತಿಯೊಂದು ಜಾಗದ ಕುಲದೇವತೆಯನ್ನು ಕುರಿತು ಅಧ್ಯಯನ ಮಾಡುವ ಉಪಾಯವೆ? ...ಮತ್ತು ಚಾಮುಂಡಿ. ನದಿ ದಡದಲ್ಲಿರುವ ದೇವಸ್ಥಾನ ಚಾಮುಂಡಿ ದೇವಸ್ಥಾನ ಮತ್ತು ಅದರ ಪಕ್ಕದಲ್ಲಿರುವ ಮನೆಯನ್ನೇ ನಾನು ಹುಡುಕುತ್ತಿದ್ದುದು.

ಬಹಳ ಹೊತ್ತು ಆ ಮನೆಯ ಬಾಗಿಲು ತಟ್ಟಿದೆ. ಅವಳು ಅಲ್ಲಿದ್ದಳೆ? ಆ ಮನೆಯ ಹಗೆತನ ನನ್ನ ಅನುಭವಕ್ಕೆ ಬರುತ್ತಿತ್ತು. ಬಾಗಿಲು ತಟ್ಟುವವನ ಪ್ರತಿ ಪೆಟ್ಟಿಗೂ ಅದು ಹಿಂದಕ್ಕೆ ಸರಿಯಿತು. ಎರಡಂತಸ್ತಿನ ಆ ಭವನವು ಈಗ ಕೇಡೆಣಿಸುವ ಉದ್ದೇಶದ ಬಿಗಿದ ಚೆಂಡಾಗಿತ್ತು. ಅದು ನನ್ನ ಕಡೆಗೆ ಪುಟ ನೆಗೆದಿತು.

"ಯಾರದು?" ಸೇವಕ ಕೇಳಿದ. ಅವನು ಸತ್ತವನ ಹಾಗೆ ನಿದ್ರಿಸುತ್ತಿರುವನೆಂದೇನೂ ಅನ್ನಿಸಲಿಲ್ಲ. ಅವನು ಬಹಳ ಜಾಗರೂಕನೂ, ಜಗಳ ಗಂಟನೂ, ಹೊಡೆದಾಟಕ್ಕೆ ಕಾಲು ಕೆರೆದುಕೊಂಡು ನಿಂತವನೂ ಆಗಿದ್ದ.

"ದಾಯಿ ಕೌಸಲ್ಯ ಇಲ್ಲಿ ಇದ್ದಾಳೆಯೆ?"

"ಇಲ್ಲ ಮಹಾಸ್ವಾಮಿ ಅವಳು ಇಲ್ಲಿಲ್ಲ."

ಅವನೊಬ್ಬ ವೃತ್ತಿ ನಿರತ ಸುಳ್ಳುಗಾರ. ಎಂಥದೇ ಕಷ್ಟ ಸಂದರ್ಭ ಬಂದರೂ ನಿಭಾಯಿಸಬಲ್ಲವನು. ಅಗತ್ಯ ಬಿದ್ದರೆ ಅದಕ್ಕೆ ಮುಕ್ತಾಯ ಹಾಡಬಲ್ಲವನೂ ಆಗಿದ್ದ. ಆದರೆ ನಾನೊಬ್ಬ ಅಪರೂಪದ ವ್ಯಕ್ತಿ ಅಲ್ಲದೆ ನಾನು ಭಾವಿ ಮಹಾರಾಜನೆಂಬುದನ್ನು ಎಂದಿಗೂ ಮರೆಯಲಾರೆ.

"ನಿನ್ನ ಉತ್ತರ ತಪ್ಪು" ನೀನು ಹೇಳಬೇಕಾಗಿದ್ದು – "ಯಾವೋನೋ ನೀನು ಹಾಳಾದೋನು?" ಎಂದು. ನಾನು ಅವನನ್ನು ಹಿಂದಕ್ಕೆ ತಳ್ಳಿ ಒಳಕ್ಕೆ ಪ್ರವೇಶಿಸಿದೆ. ಚಿಲುಮೆ ಚಿಮ್ಮುತ್ತಿತ್ತು. ಮನೆಯ ಭೂಗೋಳ ನನಗೆಲ್ಲ ನೆನಪಿಗೆ ಬಂತು.ನಾನು ಬಲಕ್ಕೆ ತಿರುಗಿದೆ. ಕೌಸಲ್ಯಳ ಕೊಠಡಿ ಮೊದಲ ಮಹಡಿಯ ಮೇಲಿತ್ತು. ನಾನು ಮೆಟ್ಟಲೇರಿ ಹೋದೆ. ಎಡಕ್ಕೆ ತಿರುಗಿದೆ. ಮನೆಯ ಅಂಗಳದಿಂದ ಕಾಣುತ್ತಿದ್ದ ಮೆಟ್ಟಿಲಿಗೆ ಹಾಕಿದ್ದ ಕಟಾಂಜನದ ಗುಂಟ ಓಡಿದೆ. ನಾಲ್ಕನೇ ಕೊಠಡಿಯ ಬಾಗಿಲನ್ನು ತಟ್ಟಿದೆ. ಏನೂ ಉತ್ತರವಿಲ್ಲ ಮತ್ತೆ ತಟ್ಟಿದೆ. ಮೌನ, ಬಾಗಿಲನ್ನು ಬಲವಾಗಿ ತಳ್ಳಿದೆ. ಅದು ಮುರಿಯಲಿಲ್ಲ. ನನಗೆ ಸಮಾಧಾನವಾಯಿತು. ಅವಳು ಒಳಗಿನಿಂದ ಬೀಗ ಹಾಕಿಕೊಂಡಿರಬೇಕು.

"ಕೌಸಲ್ಯ ನೀನು ಬಾಗಿಲು ತೆಗೆಯದೆ ಹೋದರೆ, ನಾನು ಅದನ್ನು ಒಡೆದು ಹಾಕುತ್ತೀನಿ." ಸೇವಕ ಕೆಳಗಡೆಯಿಂದ ನನ್ನನ್ನು ಗಮನಿಸಿದ. ಅವನ ಜೊತೆಗೆ ಇನ್ನೂ ಮೂರು ಜನ. ಅದರಲ್ಲಿ ಇಬ್ಬರು ಹೆಂಗಸರು ಸೇರಿಕೊಂಡರು. ಹೊರಗಡೆಯಿಂದ ಅಗುಳಿ ಹಾಕಿತ್ತು. ಬಹಳ ಸೊಗಸಾದ ತಂತ್ರ ಎಂದು ಅಂದುಕೊಂಡೆ ಅಗುಳಿಯನ್ನು ಸರಿಸಿ ಬಾಗಿಲನ್ನು ತೆರೆದೆ. ಅಲ್ಲಿ ಕತ್ತಲೆ ಕವಿದಿತ್ತು. ಆದರೆ ಅಲ್ಲಿ ಒಳಗಡೆ ಯಾರೂ ಇಲ್ಲ ಎಂದು ನನಗೆ ಗೊತ್ತಿತ್ತು. ನಾನು ಒಳಹೊಕ್ಕು ಹಾಸಿಗೆಯ ಮೇಲೆ ತಡಕಾಡಿದೆ. ಅವಳು ಅಲ್ಲಿರಲಿಲ್ಲ.

"ಏ ಧಾಂಡಿಗ ಆ ದೀಪ ಕೊಡು ಇಲ್ಲಿ" – ಕಾವಲುಗಾರನಿಗೆ ಗದರಿಸಿ ಹೇಳಿದೆ. ಅವನು ಮೆಟ್ಟಲು ಹತ್ತಿ ಓಡೋಡಿ ಬಂದು ದೀಪವನ್ನು ಕೊಟ್ಟ. ಪ್ರತಿ ಕೊಠಡಿಗೂ ಹೋದೆ ಬಚ್ಚಲು ಮನೆಗಳು ಶೌಚ ಗೃಹಗಳಲ್ಲೂ ಹುಡುಕಾಡಿದೆ. ಸೇವಕರ ವಸತಿ ಗೃಹಗಳನ್ನು ತಲಾಶ್ ಮಾಡಿದೆ. ಪಾದರಕ್ಷೆಗಳನ್ನು ಕಳಚಿ, ಗಣೇಶ, ವಿಷ್ಣು, ಚಾಮುಂಡಿ ಮತ್ತು ಕೃಷ್ಣ ವಿಗ್ರಹಗಳಿದ್ದ ದೇವರ ಕೋಣೆಯನ್ನೂ ಹೊಕ್ಕು ನೋಡಿದೆ. ಮತ್ತೆ ವಾಪಸ್ ಹೋಗಿ ನೆಲ ಅಂತಸ್ತಿನ ಕೋಣೆಗಳನ್ನು ಮತ್ತೊಮ್ಮೆ ಶೋಧಿಸಿ ನೋಡಿದೆ. ಓ ದೇವರೆ, ಓ ನನ್ನ ಅತ್ಯಂತ ಪ್ರೀತಿಯ ದೇವರೆ, ನನ್ನ ಒಂದು ಕಾಲದ ತಾಯಿ, ಸೋದರಿ, ಹೆಣ್ಣು, ಪ್ರಿಯತಮೆ, ಆತ್ಮಸಖಿ, ಮಾರ್ಗದರ್ಶಕಿ ಎಲ್ಲಿದ್ದಾಳೆ? ನಾನು ಆತಂಕಪಟ್ಟಿದ್ದ ಅತ್ಯಂತ ಕೆಟ್ಟದ್ದು ನಿಜವಾಗಿತ್ತು. ಎಷ್ಟೇ ಆವೇಶ ಉಂಟಾಗಿದ್ದರೂ ಷಹಜಾದಾನನ್ನು ಮುಟ್ಟುವಂತಿರಲಿಲ್ಲ ಎಂದು ನನಗೆ ಗೊತ್ತಿತ್ತು.

ಮನೆಗಳವರೆಲ್ಲ ನಾನೊಬ್ಬ ನಾಟಕದ ನಟನೇನೋ ಎಂಬಷ್ಟರ ಮಟ್ಟಿಗೆ ನನ್ನ ಕಡೆ ನೋಡುತ್ತಿದ್ದರು. ನನಗೂ ಕುದುರೆಗೂ ನೀರು ಕೊಡಬೇಕೆಂದು ಕೇಳಿದೆ. ನಮಗೆ ಬಹಳ ದೂರ ಹಿಂತಿರುಗಿ ಹೋಗುವುದಿತ್ತು. ನಾನು ಮತ್ತೆ ಬಾಗಿಲನ್ನು ತೆರೆದಾಗ ಅವರು ಅದನ್ನು ಆಗಲೇ ಹಾಕತೊಡಗಿದ್ದರು. ಬಿಸಿಲು ಮಚ್ಚಿನ ಮೇಲೊಂದು ಕೊಠಡಿ ಇತ್ತು.

ಅಲ್ಲಿ ಅವಳು ನಗ್ನಳಾಗಿ ಹಾಸಿಗೆಯ ಮೇಲೆ ಅಂಗಾತ ಮಲಗಿದ್ದಳು, ಅತ್ಯಂತ ತೆಳುವಾದ ಮಸ್ಲಿನ್ ಬಟ್ಟೆಯೊಂದು ಅವಳ ದೇಹವನ್ನು ಮರೆಮಾಡಿತ್ತು. ಜ್ವರದಿಂದಾಗಿ ಅವಳ ಕಣ್ಣುಗಳು ಕೆಂಡದಂತೆ ಉರಿಯುತ್ತಿದ್ದುವು ಅವಳ ದೇಹದ ಮೇಲೆಲ್ಲಾ, ಬೊಬ್ಬೆಗಳು,

ಗುಳ್ಳೆಗಳು, ಬಾಸುಂಡೆಗಳು ಇದ್ದುವು. ನಾನು ಬಾಗಿಲ ದಾರಿಯಲ್ಲಿ ನಿಂತಿದ್ದೆ. ನನ್ನ ಆಗಮನದಿಂದ ನನ್ನ ನೆರಳು ಕಾಣಿಸಿಕೊಂಡಿತ್ತು. ಹಿತ್ತಾಳೆಯ ದೀಪದ ಉರಿ ಹೆದರಿದ ಹಕ್ಕಿಯ ಹಾಗೆ ನಡನಡನಡುಗಿ ಆರಿಯೇ ಹೋಯಿತು.

ಅವಳೇನು ಮಾಡಿದ್ದಳೆಂಬುದು ನನಗೆ ಅರ್ಥವಾಯಿತು. ಅತ್ಯಂತ ವಿಷಯುಕ್ತವಾದ ನಸುಗುನ್ನಿ ಬೇರನ್ನು ಮೈಗೆಲ್ಲಾ ತಿಕ್ಕಿ ಕೊಂಡಿದ್ದಳು. ಈ ಬಳ್ಳಿ ರಾಮ್ ಕಾಳಿ ಬೆಟ್ಟಗಳ ಪೂರ್ವದ ಇಳಿಜಾರಿನ ಜೌಗು ಪ್ರದೇಶದಲ್ಲಿ ಬೆಳೆಯುತ್ತಿತ್ತು. ಎಲ್ಲ ಪ್ರಾಣಿಗಳೂ ತಮ್ಮ ಸಹಜ ಅರಿವಿನಿಂದ ಇದರಿಂದ ದೂರವಿರುತ್ತಿದ್ದುವು. ಸಪ್ತಮಿಯ ರಾತ್ರಿ ರಾಜಕುಮಾರ ಬಹಾದುರನ ಕೊಠಡಿಗೆ ಹೋಗುವ ಮನ್ನ ಇದನ್ನು ತನ್ನ ದೇಹಕ್ಕೆ ತೀಡಿಕೊಂಡಿದ್ದಳು.

ಜಜ್ಜಿ ಸೀಳಿ ಬಿಟ್ಟ ಟೊಮೇಟೋ ಹಣ್ಣಿನಂತೆ ಅವಳ ದೇಹ ಕೆಂಪಗೆ, ಕಪ್ಪಗೆ ಇತ್ತು. ಅದರ ಮೇಲೆ ಬೂಸ್ಟು ಬೆಳೆದಿತ್ತು. ಇಸಬು ಅವಳ ಮುಖದ ಆಕೃತಿಯನ್ನೇ ವಿಕಾರ ಗೊಳಿಸಿತ್ತು ಮತ್ತು ಅವಳ ಕಣ್ಣಿನವರೆಗೂ ಊದಿಸಿ ಬಿಟ್ಟಿತ್ತು. ತುಟಿ ಮತ್ತು ಮೂಗುಗಳು ಹೇಗೆ ಹೇಗೋ ಆಗಿದ್ದುವು. ನಾನು ನನ್ನ ಬಟ್ಟೆಗಳನ್ನು ನಿಧಾನವಾಗಿ ಕಳಚಿದೆ. ಕೌಸಲ್ಯ ಎದ್ದು ಕುಳಿತುಕೊಳ್ಳಲು ಯತ್ನಿಸಿ ಆಗದೆ ಸುಸ್ತಾಗಿ ಹಿಂದಕ್ಕೆ ಬಿದ್ದು ಬಿಟ್ಟಳು. ಮುಂದೆ ಬರಬೇಡಿ ಮಹಾರಾಜ್ ಕುಮಾರ್ ಬೇಡಿಕೊಳ್ತೀನಿ ಮುಂದೆ ಬರಬೇಡಿ. ಈ ತುರಿಕೆ ಎಷ್ಟೊಂದು ಸಾಂಕ್ರಾಮಿಕ ಅಂತ ನಿಮಗೆ ಗೊತ್ತಿಲ್ಲ. ಅವಳಿಗೆ ಹೊದಿಸಿದ್ದ ತೆಳು ಮಸ್ಲಿನ್ ಪರದೆಯನ್ನು ಮೆಲ್ಲಗೆ ತೆಗೆದೆ. ಅತ್ಯಂತ ಹಗುರವಾಗಿ ಅವಳ ಮೇಲೆ ಮಲಗಿದೆ.

"ನಿನ್ನನ್ನು ಮತ್ತೆಂದಿಗೂ ಬಿಡುವುದಿಲ್ಲ ಕೌಸಲ್ಯ"

* * *

ಜೈ ಶ್ರೀ ಏಕಲಿಂಗಜೀ

ನಿನಗೆ ನಮ್ಮ ಆಶೀರ್ವಾದಗಳು.

ಒಬ್ಬ ಯೋಗ್ಯ ದೊರೆಯಾದವನು ತನ್ನ ಸಮಯವನ್ನು ಸಾಮ್ರಾಜ್ಯಕ್ಕೂ ಸಮರರಂಗಕ್ಕೂ ಹಂಚಿ ಬಿಡಬೇಕು. ಇದೀಗ ನಾವು ರಾಜಧಾನಿಗೆ ಹಿಂತಿರುಗಿ ಆಡಳಿತ ಸೂತ್ರಗಳನ್ನು ಮತ್ತೆ ಕೈಗೆ ತೆಗೆದುಕೊಳ್ಳಲು ಸುಸಮಯ.

ಯುದ್ಧವನ್ನು ನಡೆಸುವುದು ಮತ್ತು ನಿರ್ದೇಶಿಸುವುದು ರಾಜಕುಮಾರನಾದವನಿಗೆ ಶ್ರೇಷ್ಠವಾದ ಮತ್ತು ಅತ್ಯಗತ್ಯ ತರಬೇತಿಯನ್ನು ನೀಡುತ್ತವೆ. ನಮ್ಮ ಸೈನ್ಯದ ಹೊಣೆಗಾರಿಕೆಯನ್ನು ಈಗ ನೀನು ವಹಿಸಿಕೊಂಡು ನಮ್ಮ ಶತ್ರುವಾದ ಗುಜರಾತಿನ ಸುಲ್ತಾನನ ಸೈನ್ಯದೊಂದಿಗೆ ಸಮರ ಪ್ರಾರಂಭಿಸಬೇಕೆಂದು ನಮ್ಮ ಇಚ್ಛೆ.

ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸು, ದೇವಸ್ಥಾನಗಳಿಗೆ ತೆರಳಿ ದೇವರುಗಳಿಗೆ ಕಾಣಿಕೆಯನ್ನು ಸಮರ್ಪಿಸಿ ಕೂಡಲೆ ಇದಾರ್‌ಗೆ ಹೊರಟು ಬಾ. ನಾವು ನೀನು ಬರುವುದನ್ನೇ ಎದುರು ನೋಡುತ್ತಿರುತ್ತೇವೆ.

ಶ್ರೀ ಸೂರ್ಯ ನಮಃ

ನಿನ್ನ ತಂದೆ ಮಹಾರಾಜಾ ರಾಣಾ ಸಂಗ.

ನನ್ನ ಬಾಲ್ಯ ಕಳೆದು ಯೌವನಕ್ಕೆ ಕಾಲಿಟ್ಟಾಗಿನಿಂದ ನನ್ನ ಮನದ ಮೇಲ್ತುದಿಯಲ್ಲಿದ್ದ ಒಂದು ಬಯಕೆ ಎಂದರೆ, ಮೇವಾಡದ ಸೈನ್ಯವನ್ನು ಮುನ್ನಡೆಸುವುದು. ಐದು ಪ್ರಮುಖ ಸೈನಿಕ ಕಾರ್ಯಾಚರಣೆಗಳಲ್ಲಿ ತಂದೆಯವರ ಜೊತೆಯಲ್ಲಿದ್ದೆ. ಸಮರ ತಂತ್ರ ಯೋಜನೆಯಲ್ಲಿ ಪಾಲ್ಗೊಂಡಿದ್ದೆ ಮತ್ತು ಕಳೆದೆರಡು ಸಂದರ್ಭಗಳಲ್ಲಿ ಪ್ರಮುಖ ಆಕ್ರಮಣಗಳ ನಾಯಕತ್ವ ವಹಿಸಿದ್ದೆ. ಆದರೆ ಅದೆಲ್ಲವೂ ತಂದೆಯವರ ಕಣ್ಗಾವಲಿನಲ್ಲಿ ಮತ್ತು ಅವರ ಸೇನಾಧಿಪತ್ಯದಲ್ಲಿ. ಇದೀಗ ನಾನು ಗುಜರಾತಿನ ಸೈನಿಕ ಕಾರ್ಯಾಚರಣೆಯ ಏಕೈಕ ಸೇನಾ ನಾಯಕನಾಗಿರಬೇಕಾಗಿತ್ತು. ಇಷ್ಟಾದರೂ ಯಾವುದೇ ಅಭ್ಯಂತರವಿಲ್ಲದೆ ನಾನು ಖುಷಿ ಪಡುವುದಾಗಲಿಲ್ಲ. ಕೆಲವೇ ಗಂಟೆಗಳಲ್ಲಿ ಸುದ್ದಿ ಎಲ್ಲ ಕಡೆ ಹಬ್ಬುತ್ತದೆ ಮತ್ತು ಪ್ರತಿಯೊಬ್ಬ ಮಂತ್ರಿ, ಕಾರ್ಯದರ್ಶಿ ಅಧೀನ ಕಾರ್ಯದರ್ಶಿ ಸರ್ಕಾರದ ನಾಗರಿಕ ಸೇವೆಯಲ್ಲಿ ಪ್ರಮುಖ ಹುದ್ದೆಯಲ್ಲಿರುವವರೆಲ್ಲರೂ, ಮತ್ತು ಚಿತ್ತೂರಿನ ಇಡೀ ಜನತೆ ನನ್ನನ್ನು ಅಭಿನಂದಿಸಲು ಬರಲಿದ್ದಾರೆ. ಆದರೆ ಯಾವುದೇ ಕೆಲಸವನ್ನಾಗಲಿ, ಅರ್ಧ ದಾರಿಯಲ್ಲೇ ಕೈ ಬಿಡುವುದು, – ಅದರಲ್ಲೂ ಸೈನಿಕ ಕಾರ್ಯಾಚರಣೆಯಂಥ ಒಂದು ಪ್ರಮುಖ ದಂಡಯಾತ್ರೆಯನ್ನು, – ತಂದೆಯವರ ಸ್ವಭಾವದಲ್ಲಿಯೇ ಇಲ್ಲ ಎಂಬುದು ನನಗೆ ಗೊತ್ತಿತ್ತು. ಯಾವುದೇ ಯೋಜನೆಯ ನಾಯಕತ್ವವನ್ನು ಮಧ್ಯದಲ್ಲಿಯೇ ಬದಲಾಯಿಸುವುದು, ಅದರಲ್ಲೂ ಯುದ್ಧ ಮಾಡುತ್ತಿದ್ದಾಗ; ಸೈನಿಕರನ್ನಷ್ಟೇ ಅಲ್ಲ ಸೇನಾಧಿಕಾರಿಗಳು ಮತ್ತು ದಂಡನಾಯಕರನ್ನು ಗೊಂದಲಕ್ಕೀಡು ಮಾಡಿ ಅಂತಿಮವಾಗಿ ಅವರ ಸ್ಥೈರ್ಯವನ್ನು ಕೆಡಿಸುತ್ತದೆ ಎಂದು ಅವರು ಆಗಾಗ ಹೇಳುವುದನ್ನು ಕೇಳಿದ್ದೆ.

ಸಮಸ್ಯೆಯೊಂದನ್ನು ಗುರುತಿಸಿ ಅದರ ಪರಿಹಾರವನ್ನು ಕಂಡುಕೊಳ್ಳುವಾಗ ಆಲೋಚನಾ ಪ್ರಕ್ರಿಯೆ ಮತ್ತು ಪರಿಕಲ್ಪನೆಗಳಲ್ಲಿ ವಸ್ತು ಮತ್ತು ಶೈಲಿಯಲ್ಲಿ – ಒಂದು ತಂಡದ ಒತ್ತಡ ಮತ್ತು ಸಂಬದ್ಧತೆಯ ಮೇಲೆ ಪ್ರತಿಕೂಲ ಪರಿಣಾಮವುಂಟುಮಾಡುವ ಒಂದು ಬದಲಾವಣೆ ಇರುತ್ತದೆ. ಮಾಳ್ವ, ಗುಜರಾತ್ ಮತ್ತು ದೆಹಲಿಗಳ ವಿರುದ್ಧ ಮೇವಾಡ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ಯುದ್ಧ ಸುಮುಖವಾಗಿಲ್ಲದೆ ಅವುಗಳ ವಿರುದ್ಧ ನಾವು ಜಯ ಸಾಧಿಸಿದಾಗ, ಅದರ ಯಶಸ್ಸನ್ನು ಬಹಳಷ್ಟು ಸಂದರ್ಭಗಳಲ್ಲಿ ಈ ರಾಜ್ಯಗಳ ಸಾರ್ವಭೌಮರು ತಮ್ಮ ಆದೇಶಗಳಲ್ಲಿ ಇದ್ದಕ್ಕಿದ್ದಂತೆ ಮಾಡಿದ ಮಾರ್ಪಾಟುಗಳಿಗೆ ಅವರು ನೀಡಿದ್ದಾರೆ.

ತಂದೆಯವರು ತಮ್ಮ ಮೂಲಭೂತ ಸಿದ್ಧಾಂತಗಳಲ್ಲೊಂದನ್ನು ಏಕೆ ಕೈ ಬಿಡುತ್ತಿದ್ದಾರೆ? ಮೇವಾಡದ ಸೇನೆಯ ಸೇನಾಧಿಪತಿಯಾಗುವ ಗೌರವಕ್ಕಾಗಿ ನಾನು ರಾಣಿ ಕರ್ಮವತಿಯ ಪ್ರಭಾವಕ್ಕೆ ಋಣಿಯಾಗಿ ಬಿಟ್ಟನೆ?

ಕಳೆದ ಒಂದೂವರೆ ತಿಂಗಳಿನಲ್ಲಿ ತಂದೆಯವರಿಗೆ ದಿನಕ್ಕೆ ಎರಡರಂತೆ ಅಪಾರ ಪ್ರಮಾಣದ ಪತ್ರಗಳ ಮಹಾಪೂರವನ್ನೇ ಆಕೆ ಕಳಿಸುತ್ತಿದ್ದಳು. ನಾನು ಅವುಗಳನ್ನು ತಡೆಯಬೇಕು ಮತ್ತು ಇಲ್ಲವಾಗಿಸಬೇಕೆಂದುಕೊಂಡಿದ್ದೆ. ಆದರೆ ವೈಯಕ್ತಿಕ ವ್ಯವಹಾರಗಳ ಮೇಲೆ ನಿಗಾ ಇಡಲು ಒಮ್ಮೆ ತೊಡಗಿದರೆ, ತಳವೇ ಇರದ ಅನುಮಾನಗಳ ಮತ್ತು ಕಿರುಕುಳಗಳ ಆಳಗುಂಡಿಗೆ ಬೀಳಬೇಕಾಗುತ್ತದೆ. ಬಹಳ ಮುಖ್ಯವಾದ ಸಂಗತಿಯೆಂದರೆ ರಾಣಿ ಕರ್ಮವತಿಯನ್ನು ನಾನು ತಂದೆಯೆಂದು ತಪ್ಪು ಗ್ರಹಿಕೆ ಮಾಡಿಕೊಳ್ಳಬಾರದು.

ಕತೆಗಳನ್ನು ಹೇಳುವ ವ್ಯಕ್ತಿ ಅಪರಾಧಿಯಲ್ಲ. ಆದರೆ ಅವುಗಳನ್ನು ಕಿವಿಗೊಟ್ಟು ಕೇಳುವವನು ಅಪರಾಧಿ. ಮಹಾರಾಣಿಯಾಗಲಿ ಆಕೆಯ ಪ್ರಧಾನ ನಪುಂಸಕ ಬೃಹನ್ನದನಾಗಲಿ ಅವಳ ಸಾಲು ಸಾಲು ಭಟ್ಟಂಗಿಗಳಾಗಲಿ ಅಥವಾ ರಾಜ್ಯದ ಯಾರಾದರೂ ಮಂತ್ರಿಯೇ ಆಗಲಿ, ನಮ್ಮ ತಂದೆಯವರ ಕಿವಿಯಲ್ಲಿ ಏನನ್ನೇ ತುಂಬಿಸಲಿ, ಏನೇ ಚಾಡಿ ಮಾತು ಹೇಳಲಿ,

ನನ್ನನ್ನು ಕುರಿತಾದ ತಮ್ಮ ಹಿಂದಿನ ಅನುಭವನ್ನಾಧರಿಸಿ, ನಿಷ್ಪಕ್ಷಪಾತದಿಂದ ಸಾಕ್ಷ್ಯಾಧಾರಗಳನ್ನು ತೂಗಿ ನೋಡಿ ನಿರ್ಣಯಕ್ಕೆ ಬಾರದೆ, ಆ ಮಾತುಗಳನ್ನು ಕೇಳಿದ ಹಾಗೂ ಅದರ ಪ್ರಕಾರ ಕ್ರಮ ಕೈಗೊಂಡ ಸಂಪೂರ್ಣ ಜವಾಬ್ದಾರಿ ಅವರದೇ ಹಾಗೂ ಅವರೊಬ್ಬರದು ಮಾತ್ರವೇ. ತಕ್ಷಣದಲ್ಲಿ ಮಹಾರಾಣಿಯ ಕೋರಿಕೆಗಳು ಎಚ್ಚರಿಕೆಗಳು, ಉಪದೇಶಗಳು ಇವೆಲ್ಲವೂ ತಂದೆಯವರ ಆತ್ಮಸಾಕ್ಷಿ ಮತ್ತು ನ್ಯಾಯ ಸಮ್ಮತವಾಗಿ ಕಾರ್ಯಕೈಗೊಳ್ಳುವ ಪ್ರಜ್ಞೆಯೊಂದಿಗೆ ಸಂಘರ್ಷ ನಡೆಸುತ್ತಿರುವಂತೆ ತೋರುತ್ತಿತ್ತು. ನಮ್ಮಲ್ಲಿ ಯಾರೊಬ್ಬರಿಗೂ ಅಸಂತೋಷವುಂಟು ಮಾಡಬಾರದೆಂಬುದು ಅವರ ಬಯಕೆ. ಸುವರ್ಣ ಮಾಧ್ಯಮದ ಹಾದಿ ಸರ್ವೋತ್ಕೃಷ್ಟವಾದ ತತ್ವ ಸರಿಯೆ. ಆದರೆ ರಾಜಕೀಯ ವ್ಯವಹಾರದಲ್ಲಿ ಪ್ರತಿಯೊಬ್ಬರನ್ನೂ ಸಂತೃಪ್ತಗೊಳಿಸಲಾಗುವುದಿಲ್ಲ.

ಆದರೆ ಪ್ರಾಯಶಃ ತನ್ನ ಲಾಭಕ್ಕಾಗಿ ಅವರು ಮಾಡುತ್ತಿದ್ದುದು ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿ ಕಟ್ಟುವುದು. ತಾನು ರಾಜಧಾನಿಗೆ ವಾಪಸ್ ಬಂದಾಗ, ನನ್ನನ್ನು ಸೇನಾಧಿಪತಿಯನ್ನಾಗಿ ಮಾಡಿ, ತಮ್ಮ ದಾರಿಯಿಂದ ದೂರಮಾಡಿ ಅಪಾಯದಲ್ಲಿದೆ ಎಂದು ಭಾವಿಸಲಾದ ತಮ್ಮ ರಾಜ್ಯಾಧಿಕಾರವನ್ನು ಮರಳಿ ಪಡೆಯುವುದು ಮತ್ತು ವಿಕ್ರಮನನ್ನು ಮುಕ್ತಗೊಳಿಸುವುದು.

ನಾನು ತಕ್ಷಣವೇ ಬಿಟ್ಟು ಹೊರಡದೆ ಇದ್ದುದಕ್ಕೆ ಇನ್ನಿತರೆ ಕಾರಣಗಳು ಇದ್ದುವು. ಮೇವಾಡದ ಭವಿಷ್ಯದ ದೃಷ್ಟಿಯಿಂದ ನಿರ್ಣಾಯಕವಾಗಿ ಮಹತ್ವದ್ದೆಂದು ನಾನು ನಂಬಿದ್ದ ಯೋಜನೆಯೊಂದನ್ನು ಪ್ರಾರಂಭಿಸಿದ್ದು.

ನಮ್ಮ ಜನಗಳ ಆರೋಗ್ಯ ಹಾಗೂ ಅದಕ್ಕೆ ಸಂಬಂಧಿಸಿದ ಚರಂಡಿ ವ್ಯವಸ್ಥೆ ನನಗೆ ಎಲ್ಲಕ್ಕಿಂತ ಮುಖ್ಯವಾದದ್ದಾಗಿತ್ತು. ಆದರೆ ನೀರಿನ ಮತ್ತು ಚರಂಡಿ ವ್ಯವಸ್ಥೆಗಳು ಕೂಡಾ ಬಚ್ಚಿಡುವ ಪ್ರಯತ್ನಗಳಾಗಿದ್ದುವು. ನನ್ನ ಮೊದಲ ಕಾಳಜಿ ಕೋಟೆಯದು. ಅತ್ಯಂತ ಬಲಯುತವೂ, ಶಕ್ತಿಯುತವೂ, ವಿಸ್ತೃತವೂ ಆದ ಕೋಟೆಯೊಂದು ಮುಂದೊಡ್ಡಿದ್ದ ಸಮಸ್ಯೆಯಿಂದ ಈಗ್ಗೆ ಕೆಲವು ವರ್ಷಗಳಿಂದ ನಾನು ಆತಂಕಕ್ಕೀಡಾಗಿದ್ದೆ. ಚಿತ್ತೂರು ಕೋಟೆ ಅಂಥ ಒಂದು ಕೋಟೆ. ಅತ್ಯಂತ ಎತ್ತರದ ಕೋಟೆ ಅದಾಗಿತ್ತು. ಮೂರು ಮೈಲಿಗಳಷ್ಟು ಉದ್ದವಾದ ಪ್ರಸ್ಥಭೂಮಿಯ ಮೇಲೆ ಚಿತ್ತೂರು ನಗರ ಹಬ್ಬಿತ್ತು. ಅದಕ್ಕೆ ಅದರದೇ ಆದ ಎಂದೂ ಬತ್ತದ ನೀರಿನ ಚಿಲುಮೆಗಳಿದ್ದುವು. ಬಹು ದೊಡ್ಡ ಕಣಜಗಳಿದ್ದುವು. ಅಜೇಯವೂ, ಆಕ್ರಮಿಸಲು ಅಸಾಧ್ಯವೂ ಆದ ಕೋಟೆಯೊಂದಿದ್ದರೆ ಅದು ಚಿತ್ತೂರಿನ ಕೋಟೆ. ಇಷ್ಟಾದರೂ ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿ ಮಾಡಿದ ದೀರ್ಘಕಾಲದ ಮುತ್ತಿಗೆಯು ಚಿತ್ತೂರನ್ನು ಮಣಿಸಿ, ಬಹುಮಟ್ಟಿಗೆ ರಜಪೂತ ಯೋಧರ ಒಂದು ಇಡೀ ಸಮುದಾಯವನ್ನೇ ಕೋಟೆಯಲ್ಲಿ ಕೊಂದು ಹಾಕಿತ್ತು.

ಕೆಲವು ಕಾಲ ಕೋಟೆಯ ವ್ಯವಸ್ಥೆಯೇ ಒಂದು ಸಮಸ್ಯೆ ಎಂದು ನನಗೆ ಮನವರಿಕೆಯಾಗಿತ್ತು. ಅತ್ಯಂತ ಸುರಕ್ಷಿತ ನೆಲೆ ಎಂದರೆ ಒಂದು ಕಪಟ ತಂತ್ರ ಎಂದು ನನಗೆ ಹೆಚ್ಚು ಕಡಿಮೆ ಮನವರಿಕೆ ಮಾಡಿಕೊಡಲಾಯಿತು. ಅದು ತಕ್ಷಣ ಗಮನ ಕೊಡಬೇಕಾದ ಒಂದು ತುರ್ತು ಬಾಗಿಲು. ಶತ್ರು ಸೇನೆಗಳು ದಾಳಿಯಿಟ್ಟಾಗ ನಾವು ಮಾಡಿದ್ದು ಅದನ್ನೇ. ನಾವು ಪ್ರತಿಯೊಂದು ಬಾಗಿಲಿಗೂ ಬೀಗ ಹಾಕಿ ಬಿಟ್ಟೆವು. ಬೀಗದ ಕೈಗಳನ್ನು ಎಸೆದು ಬಿಟ್ಟೆವು. ಶತ್ರುಗಳಿಂದ ಸುತ್ತುವರಿಯಲ್ಪಟ್ಟು ಹೊಟ್ಟೆಗಿಲ್ಲದೆ ಕಂಗಾಲಾಗಿ ಅನೇಕ ತಿಂಗಳ ನಂತರ, ನಮಗುಳಿದಿದ್ದ ಏಕೈಕ ಭರವಸೆ ಮತ್ತು ಕಷ್ಟ ಪರಿಸ್ಥಿತಿಯಿಂದ ಬಿಡುಗಡೆ ಹೊಂದುವ ಹಾದಿ ಎಂದರೆ ಶತ್ರುಗಳೇ. ಮುತ್ತಿಗೆಯನ್ನು ಇನ್ನಷ್ಟು

ಹೆಚ್ಚಿಸುವುದರಿಂದಲೋ, ಅಥವಾ ಬಾಗಿಲುಗಳನ್ನು ಒಡೆದು ಹಾಕುವುದರಿಂದಲೋ ಶತ್ರು ಮಾತ್ರವೇ ನಮ್ಮನ್ನು ಇದರಿಂದ ಬಿಡುಗಡೆಗೊಳಿಸಬಲ್ಲವನಾಗಿದ್ದ. ನೀರಿನ ಹಂಡೆಯ ಸಮೇತ ಮಗುವನ್ನೂ ಆಚೆಗೆಸೆದು ಬಿಡಲು ಹೊರಟಿದ್ದೆನೆಂದು ಹೇಳಬೇಕಾಗಿಲ್ಲ.

ತಿಂಗಳುಗಟ್ಟಲೆ ಆ ಬಗ್ಗೆ ಯೋಚಿಸಿ ಚಕ್ರವನ್ನು ಮತ್ತೆ ಕಂಡುಹಿಡಿದೆ. ಕೋಟೆ ಒಂದು ಆದರ್ಶ ಪರಿಹಾರವೇನಲ್ಲ. ಅದು ಎಷ್ಟೇ ಅಪರ್ಯಾಪ್ತವಾದರೂ ಅದೇ ಅತ್ಯಂತ ವ್ಯವಹಾರ್ಯವಾದ್ದು. ಹಾಗಾದರೆ ಬೇರೆ ಏನೂ ಮಾರ್ಗವಿಲ್ಲವೇ? ನನ್ನ ಶಕ್ತಿ ಮತ್ತು ಕಲ್ಪನೆಯನ್ನು 'ಬೇರೆ ಮಾರ್ಗ' ಎಂಬ ಶಬ್ದಗಳ ಮೇಲೆ ಕೇಂದ್ರೀಕರಿಸಿದ್ದೇ ಆದರೆ ಇದೆ ಎಂದು ಅರಿವಾಯಿತು. ಚಿತ್ತೂರಿನ ಬಹು ದೊಡ್ಡ ಆಸ್ತಿಗಳಲ್ಲೊಂದು ಅದರ ಇಳುಕಲುಗಳು ದಟ್ಟಕಾಡುಗಳಿಂದ ಆವೃತ್ತವಾಗಿರುವುದು. ನನ್ನ ಯೋಜನೆ ಇದು. ಒಳಚರಂಡಿ ವ್ಯವಸ್ಥೆಗಾಗಿ ಅಗೆಯುವ ನೆವದಲ್ಲಿ ಹೊರಕ್ಕೆ ಮಾತ್ರ ತೆರೆದುಕೊಳ್ಳುವ ಬೃಹತ್ತಾದ ಸುರಂಗಗಳ ವಿಸ್ತೃತ ರಹಸ್ಯ ಜಾಲದ ಯೋಜನೆ ನಿರ್ಮಿಸುವುದು. ಇದನ್ನು ಏಳೆಂಟು ಕಡೆ ಚಿತ್ತೂರಿನ ತಪ್ಪಲಿನಲ್ಲಿರುವ ಬೆಟ್ಟಗಳ ಮೇಲೆ ಕಾಡುಗಳಲ್ಲಿ ಅತ್ಯಂತ ಗುಟ್ಟಾಗಿ ನಿರ್ಮಿಸುವುದು.

ಮುತ್ತಿಗೆ ಅನಿವಾರ್ಯವಾದಾಗ ಮೊದಲು ಮಾಡಬೇಕಾದ ಕೆಲಸ ಎಲ್ಲ ಹೆಂಗಸರು, ಮಕ್ಕಳನ್ನು ಖಾಲಿ ಮಾಡಿಸುವುದು. (ತಮ್ಮದೆಲ್ಲವನ್ನೂ ಕಳೆದುಕೊಂಡ ಸ್ತ್ರೀಯರು ವೀರಾವೇಶದಿಂದ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳಬಹುದು. ಆದರೆ ಈ ನಡುವೆ ಅವರ ರಕ್ಷಣೆ ಕುರಿತಾದ ಕಾಳಜಿಯು ಪುರುಷರ ನಿರ್ಧಾರವನ್ನು ದುರ್ಬಲಗೊಳಿಸಿತು). ಸಾಧ್ಯವಿದ್ದಷ್ಟೂ ಕೋಟೆಯ ಸಂಗ್ರಹಣಾ ಸಾಮರ್ಥ್ಯವಿರುವಷ್ಟೂ ಆಹಾರ, ಸೌದೆ, ಮತ್ತು ಶಸ್ತ್ರಾಸ್ತ್ರಗಳನ್ನು ಶೇಖರಿಸಬೇಕು. ಜನರ ಸಂಖ್ಯೆ ಕಡಿಮೆಯಿದ್ದಾಗ್ಯೂ ಕೋಟೆಯಲ್ಲಿನ ಸಂಪನ್ಮೂಲಗಳು ಅಪರಿಮಿತವಲ್ಲ. ನಮ್ಮಲ್ಲಿನ ಆಹಾರ ಪಾನೀಯಗಳು, ನೀರು ಮತ್ತು ಸ್ಥೈರ್ಯ ಕುಗ್ಗಿವೆ ಎಂದು ಶತ್ರುವಿಗೆ ಮನವರಿಕೆಯಾದಾಗ, ಅರ್ಧ ಸೈನ್ಯವನ್ನು ರಾತ್ರಿ ಹೊತ್ತು, ಸಾಧ್ಯವಾದರೆ ಬಿರುಗಾಳಿ ಮತ್ತು ಸಿಡಿಲುಗಳ ಭೋರ್ಗರೆತದ ರಾತ್ರಿಯಂದು ಸುರಂಗಗಳ ಮೂಲಕ ಹೊರಗೆ ಸಾಗಿಸುವುದು. ಗುಡುಗು ಸಿಡಿಲುಗಳಿಲ್ಲದಿದ್ದಾಗ, ಸೇನಾ ಪಡೆಗಳು ಯಶಸ್ವಿಯಾಗಿ ತಪ್ಪಿಸಿಕೊಂಡು ಹೋಗಲನುವಾಗುವಂತೆ ಉದ್ದೇಶ ಪೂರ್ವಕವಾಗಿ ಪರಿಣಾಮಕಾರಿಯಾದ ರೀತಿಯಲ್ಲಿ ಶತ್ರು ಸೈನ್ಯದ ಗಮನವನ್ನು ಬೇರೆಡೆಗೆ ತಿರುಗಿಸಬೇಕು. ಒಂದು ಸಲ ಕೋಟೆ ಬಿಟ್ಟು ಹೊರ ಹೋದ ಮೇಲೆ ರಾತ್ರಿ ವೇಳೆಯಲ್ಲಿ ಮತ್ತೆ ತಂಡಗಳನ್ನಾಗಿ ರಚಿಸಿ ಶತ್ರುವಿಗೆ ದಿಗ್ಭ್ರಮೆಯಾಗುವ ಹಾಗೆ ಹಿಂದಿನಿಂದ ಆಕ್ರಮಣ ಮಾಡಿ ಶತ್ರು ಸೈನ್ಯದಲ್ಲಿ ಭಾರೀ ಅನಾಹುತವುಂಟು ಮಾಡಬೇಕು. ಒಂದು ವೇಳೆ ರಾತ್ರಿ ಆಕ್ರಮಣ ಯಶಸ್ವಿಯಾಗದಿದ್ದಲ್ಲಿ, ಕೋಟೆಯೊಳಗೆ ಉಳಿದಿರುವ ರಕ್ಷಕ ಸೈನ್ಯವನ್ನೂ ಮರುದಿನ ರಾತ್ರಿ ಖಾಲಿ ಮಾಡಿಸಬೇಕು.

ಶತ್ರುವು ಮರುದಿನ ನಗರ ಮತ್ತು ಕೋಟೆಯೆಲ್ಲ ಖಾಲಿಯಾಗಿ ಸತ್ವರಹಿತವಾಗಿರುವುದನ್ನು ಕಂಡುಕೊಳ್ಳುತ್ತಾನೆ. ಖಂಡಿತವಾಗಿಯೂ ಕೈಗೆ ಸಿಕ್ಕಿದ್ದನ್ನೆಲ್ಲಾ ದೋಚಿ ಕಣ್ಣಿಗೆ ಕಂಡದ್ದಕ್ಕೆಲ್ಲಾ ಬೆಂಕಿ ಹಚ್ಚುತ್ತಾನೆ. ಸಾಯುವ ತನಕ ಹೋರಾಡಿದರೂ ಅದೇ ಕೆಲಸ ಮಾಡುತ್ತಾನೆ. ಸಣ್ಣದೊಂದು ಗುಂಪಿಗೆ ಕೋಟೆಯ ರಕ್ಷಣೆಯನ್ನು ವಹಿಸಿಕೊಟ್ಟು ಶತ್ರುಸೈನ್ಯದ ತುಕಡಿಗಳು ಶತ್ರುಗಳಿಂದ ಲೂಟಿಮಾಡಿ ಕಿತ್ತುಕೊಂಡ ನಗನಾಣ್ಯಾದಿಗಳನ್ನು ಹೇರಿಕೊಂಡು ಹೊರಟಾಗ, ನಿಮ್ಮಲ್ಲಿರುವ ಸಕಲ ಸಾಮರ್ಥ್ಯದೊಂದಿಗೆ ಹೊರಲಾರದೆ ಹೊತ್ತು ಸಾಗುತ್ತಿರುವ ಆಯಾಸಗೊಂಡ ಅಜಾಗರೂಕ ಸೈನ್ಯವನ್ನು ಆಕ್ರಮಣ ಮಾಡಿ ಮರುದಿನ ಶತ್ರು ಸೈನ್ಯ ದಿಕ್ಕಾಪಾಲಾಗಿ ಓಡುವಂತೆ ಮಾಡಬೇಕು. ಕಾರಣ ಎಲ್ಲ ರೀತಿಯ ಸರಬರಾಜುಗಳನ್ನು

ಪೂರ್ಣವಾಗಿ ನೀಗಿಕೊಂಡು ಅತ್ಯಂತ ಹಾಳಾಗಿರುವ ನಿಮ್ಮದೇ ಕೋಟೆಯನ್ನು ನೀವು ಮುತ್ತಿಗೆ ಹಾಕಿ, ಸಾಧ್ಯವಾದಷ್ಟೂ ಬೇಗ ಅದನ್ನು ವಶಪಡಿಸಿಕೊಳ್ಳುವಿರಾದ್ದರಿಂದ.

ನನಗೆ ಉಳಿದಿದ್ದು ಸರಿಯಾಗಿ ನಲವತ್ತೆಂಟು ಗಂಟೆಗಳೂ ಅಲ್ಲ. ಅಷ್ಟರೊಳಗೆ ನನ್ನೆಲ್ಲಾ ವ್ಯವಹಾರಗಳನ್ನು ಇತ್ಯರ್ಥ ಮಾಡಿ, ನನ್ನ ಗಂಟು ಮೂಟೆಗಳನ್ನು ಕಟ್ಟಿ, ಎಲ್ಲರಿಗೂ ವಿದಾಯ ಹೇಳಬೇಕಾಗಿತ್ತು. ನಾನು ಚಿತ್ತೂರನ್ನು ಬಿಡುವ ಮುನ್ನ, ನಾನು ಹೊಸದಾಗಿ ಪರಿವರ್ತನೆಗೊಳಿಸಿದ, ನಗರ ಯೋಜಕ ಸಾಹಸ ಮಲ್‌ನನ್ನು ಭೇಟಿ ಮಾಡಲು ಕಾಲಾವಕಾಶ ಮಾಡಿಕೊಳ್ಳಬೇಕಿತ್ತು. ಸುರಂಗ ಯೋಜನೆ ಕುರಿತಾದ ನನ್ನ ವಿಚಾರಗಳನ್ನು ಸ್ಥೂಲವಾಗಿ ವಿವರಿಸಿದಾಗ, ಅವನು ಅದರ ಬಗ್ಗೆ ಸಂದೇಹಗಳನ್ನು ವ್ಯಕ್ತ ಪಡಿಸಿದನು. ಅಂಥ ಮಹತ್ವಾಕಾಂಕ್ಷೆಯ ಯೋಜನೆ ಪೂರ್ಣಗೊಳ್ಳಲು ತೆಗೆದುಕೊಳ್ಳುವ ಸಮಯದ ಬಗ್ಗೆ ಅವನು ಚಿಂತಿತನಾಗಿದ್ದ.

"ರಾಣಾ ಕುಂಭ ವಿಜಯಸ್ತಂಭವನ್ನು ರಾತ್ರೋ ರಾತ್ರಿ ಕಟ್ಟಲಿಲ್ಲ"

"ಆದರೆ ಮಹಾಸ್ವಾಮಿಗಳೆ ಬಯಲಿನಲ್ಲಿ ಸುಭದ್ರವಾದೊಂದು ಬಂಡೆಯ ಮೇಲೆ ಕಟ್ಟುವುದು ಮೈಲಿಗಟ್ಟಲೆ ಬಂಡೆಗಳನ್ನು ಅಗೆಯುತ್ತಾ ಹೋಗುವುದಕ್ಕಿಂತ ತುಂಬ ಸುಲಭವಾದ ಪ್ರಸ್ತಾವ. ವಿಜಯಸ್ತಂಭ ನಿರ್ಮಾಣದಲ್ಲಿ ಕೇವಲ ಕಲ್ಲಿನ ಮೇಲೆ ಕಲ್ಲಿಡುತ್ತಾ ಹೋಗುತ್ತಾರೆ ಆದರೆ ಎರಡನೆಯದರಲ್ಲಿ (ಸುರಂಗ ನಿರ್ಮಾಣದಲ್ಲಿ) ಒಂದು ಅಂಗುಲ ಅಗಲ ನೆಗ್ಗಿಸಬೇಕಾದರೆ ದಿನಗಟ್ಟಲೆ ಬಂಡೆಯನ್ನು ಕೊರೆಯಬೇಕಾಗುತ್ತದೆ"

ಅವನು ಉದ್ಧರಿಸಿದ ಪ್ರಾಥಮಿಕ ಉದಾಹರಣೆ, ಅದರಲ್ಲಿ ಒಳಗೊಂಡಿರುವ ಶ್ರಮದ ಸಮಸ್ಯೆ ಎಷ್ಟೆಂಬುದನ್ನು ನಾನು ಕಲ್ಪಿಸಿಕೊಂಡಿದ್ದಕ್ಕಿಂತಲೂ ಚಿತ್ರವತ್ತಾಗಿ ಮನವರಿಕೆಮಾಡಿಕೊಟ್ಟಿತೆಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು.

"ಸರಿ ವಿಜಯಸ್ತಂಭವನ್ನು ನಿರ್ಮಿಸುವುದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಅದರಿಂದೇನಂತೆ? ಸುರಂಗಗಳು ಶತ ಶತಮಾನಗಳು ಕಳೆದ ನಂತರವೂ ನಮ್ಮ ಮಕ್ಕಳ ಮಕ್ಕಳಿಗೆ ಪ್ರಯೋಜನಕ್ಕೆ ಬರುತ್ತದೆ ಎಂದು ನಮ್ಮ ಹಾರೈಕೆ. ಅಲ್ಲದೆ, ಶತ್ರುಗಳು ಮುತ್ತಿಗೆ ಹಾಕಿದಾಗ, ಈ ಯೋಜನೆ ನಮಗೆ ನಿಜಕ್ಕೂ ರಕ್ಷಣೆ ನೀಡುತ್ತದೆಂದಾದರೆ ನಾವು ಭೂಮಿಯ ಮೇಲಿನ ನಿರ್ಮಾಣಕ್ಕೆ ನೇಮಕ ಮಾಡಿಕೊಳ್ಳುವ ಕೆಲಸಗಾರ ಸಿಬ್ಬಂದಿಯ ನೇಮಕಾತಿಯನ್ನು ಎರಡರಷ್ಟು ಮೂರರಷ್ಟು ಹೆಚ್ಚಿಸಬಹುದು"

"ಎರಡನೆಯ ಸಮಸ್ಯೆ ಇನ್ನೂ ಹೆಚ್ಚು ಕಗ್ಗಂಟಾದ್ದು ಸುರಂಗಗಳಲ್ಲಿಯ ವಾಯುವಿನ ಬಗ್ಗೆ ನನಗೆ ಹೆಚ್ಚು ಚಿಂತೆಯಾಗಿದೆ."

"ಸುರಂಗಗಳನ್ನು ತೋಡುವಾಗಲೋ ಅನಂತರವೋ"

"ಎರಡೂ ಸಂದರ್ಭಗಳಲ್ಲಿ. ಅದರಲ್ಲೂ ವಿಶೇಷವಾಗಿ ವರ್ಷಗಟ್ಟಲೆ ಅದನ್ನು ಮುಚ್ಚಿ ಬಿಟ್ಟಿದ್ದಾಗ. ಅದು ವಿಷಯುಕ್ತವಾಗಿ ಮಾರಣಾಂತಿಕವಾಗಬಹುದು."

"ಚಿತ್ತೂರು ಎತ್ತರದಲ್ಲಿದೆ. ಆದರೆ ಭೂಮಿಯಲ್ಲಿ ಒಂದೆರಡು ಮೈಲಿಗಳಷ್ಟು ಆಳಕ್ಕೆ ಅಗೆಯಬೇಕಾದಷ್ಟು ಎತ್ತರದಲ್ಲಿಲ್ಲ. ಬಹುಶಃ ನಾವು ವಾತಾನುಕೂಲಗಳ ವ್ಯವಸ್ಥೆಯನ್ನು ಮಾಡಬೇಕಾಗಿ ಬರಬಹುದು. ಮತ್ತು ಪಂಜರದಲ್ಲಿ ಹಕ್ಕಿಗಳನ್ನಿಟ್ಟು ಸುರಂಗಗಳಲ್ಲಿ ಇರಿಸಿ ಅವು ಬದುಕುಳಿಯುತ್ತವೆಯೋ ಹೇಗೆಂದು ನೋಡಬೇಕಾಗುತ್ತದೆ. ನಾನು ಈ ತಕ್ಷಣಕ್ಕೆ ಊಹೆ ಮಾಡಿಕೊಂಡು ಹೇಳುತ್ತಿದ್ದೀನಿ ಗೊತ್ತಾಯಿತೆ? ನಾನು ನೀವು ಹೇಳಿದ ಅಡ್ಡಿ, ಪರಿಮಿತಿಗಳನ್ನು ಅಲಕ್ಷ್ಯ ಮಾಡುತ್ತೇನೆ ಎಂದಾಗಲಿ ಅಥವಾ ಅದನ್ನು ಲೆಕ್ಕಕ್ಕೆ

ತೆಗೆದುಕೊಳ್ಳುತ್ತಿಲ್ಲ ಎಂದಾಗಲಿ ಅಲ್ಲ. ಬಹುಶಃ ಇನ್ನೂ ಹೆಚ್ಚು ಕಗ್ಗಂಟಾದ ಸಮಸ್ಯೆಗಳು ಇರುತ್ತವೆ. ಆದರೆ ಅವುಗಳನ್ನು ಪರಿಹರಿಸುವುದನ್ನು ನಾನು ನಿಮಗೆ ಬಿಡುತ್ತೇನೆ. ಈ ಯೋಜನೆಯನ್ನು ನಾವು ಪೂರ್ಣಗೊಳಿಸಲಿಕ್ಕೆ ಸಾಧ್ಯವಾದರೆ ಎಷ್ಟು ಜೀವಗಳನ್ನು ಉಳಿಸಬಹುದು ಎಂಬುದನ್ನಷ್ಟು ಯೋಚಿಸಿ ಸಾಹಸಮಲ್. ನಾವು ಒಂದು ವೇಳೆ ಬದುಕುಳಿದರೆ, ಶತ್ರುಗಳ ಸೋಲಿನಲ್ಲಿ ನಾವು ಕೊನೆ ಮುಟ್ಟಬಹುದು. ನಾವು ಮೊದಲಿಗೆ ಭೇಟಿಯಾದಾಗ, ನಿಜವಾಗಿಯೂ ವಿಜಯ ಸ್ತಂಭವನ್ನು ನಿರ್ಮಿಸುವುದು ನಿಮ್ಮ ಉದ್ದೇಶವಾಗಿರಲಿಲ್ಲ. ಆದರೆ ನಾವು ಅದನ್ನು ಸಾಹಸ ಮಲ್ ಅವರ ವಿಜಯ ಸುರಂಗಗಳೆಂದು ಕರೆಯೋಣ. ಭಾವೀ ಜನಾಂಗ ನಿಮಗೆ, ಅದೆಷ್ಟು ಋಣಿಯಾಗಿರುತ್ತವೆ ಎಂಬುದನ್ನಷ್ಟು ಯೋಚಿಸಿ,

"ಪ್ರಾರಂಭದ ಯೋಜನೆಗಳನ್ನು ಯಾವಾಗ ನೋಡಬೇಕೆನ್ನುತ್ತೀರಿ"

"ನೀವು ಹೇಳಿ"

"ಇಲ್ಲಿಂದ ಇನ್ನು ನಾಲ್ಕು ವಾರಗಳಲ್ಲಿ, ನನ್ನ ಮಗ ಸ್ವತಃ ಅದನ್ನು ನಿಮ್ಮ ಕಡೆ ತರುತ್ತಾನೆ."

"ಅವು ಬೇರೆ ಯಾರ ಕೈಗೂ ಸಿಕ್ಕುವುದು ನನಗಿಷ್ಟವಿಲ್ಲ"

"ನಾನು ಅವುಗಳನ್ನು ಸಂಕೇತಾಕ್ಷರಗಳಲ್ಲಿ ತಯಾರಿಸುತ್ತೇನೆ' ಸುರಂಗಗಳನ್ನೆಲ್ಲಾ ಭೂ ಪಾತಳಿಯ ಮೇಲೆ ತೋರಿಸುತ್ತೇನೆ. ಆಗ ಇಡೀ ಯೋಜನೆ ಅಸಂಗತವೆಂಬಂತೆ ತೋರುತ್ತದೆ. ಮತ್ತು ಅದು ಒಟ್ಟಾರೆ ಗ್ರಹಿಸಲಾಗದಂತಿರುತ್ತದೆ."

"ಆಗಬಹುದು. ನೀವೇನು ಮಾಡುತ್ತೀರಿ ನೋಡೋಣ."

"ದೇವರು ಕಾಪಾಡಲಿ ಮಹಾಸ್ವಾಮಿಯವರೆ"

ಕಡೆಯದಾಗಿ ಒಂದು ಕೆಲಸ ಉಳಿಯಿತು. ಮುಲ್ಲಾಗೆ ಹೇಳಿ ಕಳಿಸಿದೆ. "ನೀವು ಮಾಡಿದ ಪ್ರಾರ್ಥನೆಯೋ ಇಲ್ಲ ನಮ್ಮ ಪೂಜಾರಿಗಳು ದೇವಸ್ಥಾನಗಳಲ್ಲಿ ಸಲ್ಲಿಸಿದ ಪ್ರಾರ್ಥನೆಯೋ ಯಾವುದರ ಪ್ರಭಾವವೊ? ನಮ್ಮ ದೇವಾನು ದೇವತೆಗಳೋ ಅಥವಾ ನಿಮ್ಮ ಏಕೇಶ್ವರನೋ ಯಾರು ಷಹಜಾದನನ್ನು ರಕ್ಷಿಸಿದ್ದು?"

ಮುಲ್ಲಾ ಗೊಂದಲಕ್ಕೊಳಗಾದವನಂತೆ ಕಂಡ. ರಾಜಕುಮಾರನನ್ನು ಅಸಂತೋಷ ಗೊಳಿಸುವುದು ಅವನಿಗೆ ಬೇಕಿರಲಿಲ್ಲ. ಆದರೆ ದೇವರು ಅವನ ವಿಷಯಕ್ಕೆ ಅಪ್ರಸನ್ನನಾಗುವುದೂ ಬೇಕಿರಲಿಲ್ಲ.

"ಏನೂ ಯೋಚಿಸಬೇಡಿ ಮುಲ್ಲಾ. ನಿಮ್ಮ ಮಸೀದಿಯ ದುರಸ್ತಿಗೆ ಬೇಕಾದಷ್ಟು ಹಣ ಇಲ್ಲಿದೆ."

ಕೃಷ್ಣನು ಹುಟ್ಟಿದ್ದು ಮಧ್ಯರಾತ್ರಿಯಾದ್ದರಿಂದ ಜನ್ಮಾಷ್ಟಮಿ ಮಹೋತ್ಸವದ ಪೂಜೆ ಅಧಿಕೃತವಾಗಿ ಆ ಪುಣ್ಯ ಮುಹೂರ್ತದಲ್ಲಿ ಆಗಬೇಕು. ಆದರೆ ಏಕಲಿಂಗಜೀ ನಮ್ಮ ಮನೆದೇವರಾದ್ದರಿಂದ ಆ ದೇವನು ನಮಗೆ ಸಮಾನರಲ್ಲಿ ಪ್ರಥಮ. ಇಡೀ ರಾತ್ರಿ ಜಾಗರಣೆ ಮಾಡಿಸಿಕೊಳ್ಳುವ ಗೌರವ ಆ ದೇವನೊಬ್ಬನಿಗೆ ಮಾತ್ರ ಸಲ್ಲುವಂಥದು. ಕೃಷ್ಣನಿಗೆ ನಮ್ಮ ಕುಟುಂಬ ಸಲ್ಲಿಸುವ ಪೂಜೆ ಎಂಬುದು ರಾತ್ರಿ ನಡೆಸುವ ಖಾಸಗಿ ಉತ್ಸವವಾಗಿತ್ತು. ಸಾರ್ವಜನಿಕ ಸಮಾರಂಭ ಮರುದಿನ ಸಂಜೆ ನಡೆಯುತ್ತಿತ್ತು. ನಾನಂತೂ ಕೃಷ್ಣನೊಂದಿಗೆ ಹೆಚ್ಚು ಕಡಿಮೆ ಸಂಪೂರ್ಣವಾಗಿ ಸಂಬಂಧಗಳನ್ನು ಕಡಿದುಕೊಂಡಿದ್ದೆ. ಆದರೆ ಇದು ಅಧಿಕೃತ

ವ್ಯವಹಾರವಾಗಿತ್ತು. ಜನ್ಮಾಷ್ಟಮಿಯ ದಿವಸ ಮೇವಾಡದ ರಾಜರುಗಳು ಬೃಂದಾವನಿ ದೇವಸ್ಥಾನಕ್ಕೆ ಭೇಟಿಕೊಟ್ಟು, ಆರತಿ ಮಾಡಿ, ನೀಲ ಮೇಘಶ್ಯಾಮನ ಪಾದ ಸ್ಪರ್ಶಿಸಿ ನಮಸ್ಕಾರ ಮಾಡಿ, ಪ್ರಸಾದ ಸ್ವೀಕರಿಸಿ ಚಿತ್ತೂರಿನ ಸಾರ್ವಜನಿಕರಿಗೆ ದಾನಧರ್ಮಗಳನ್ನು ನೀಡುತ್ತಿದ್ದರು. ಅವನೊಂದಿಗೆ ನನ್ನ ವೈಯಕ್ತಿಕ ಕಲಹ ಏನೇ ಇದ್ದರೂ, ನಾನು ಸಂಪ್ರದಾಯವನ್ನು ಮುರಿಯುವಂತಿಲ್ಲ. ರಾಜತ್ವವೆಂಬುದು ಸಂಸ್ಥೆಗಳ ಮೇಲೆ ನಿಂತಿರುವಂಥದ್ದು. ಸಂಪ್ರದಾಯಕ್ಕಿಂತ ಮಿಗಿಲಾದ ಸಂಸ್ಥೆ ಮತ್ತೊಂದಿಲ್ಲ.

ಅದೊಂದು ರಾಜ್ಯದ ಸಮಾರಂಭ. ಕೌಸಲ್ಯ ಸಂಪೂರ್ಣ ರಾಜಪೋಷಾಕನ್ನು ಧರಿಸಲು ನೆರವಾದಳು. ಹಳದಿ ರೇಷ್ಮೆಯ ಧೋತಿ, ಚಂದನ, ಬಣ್ಣದ ಬಿಳಿಯ ನಿಲುವಂಗಿ, ಅದರ ಮೇಲೆ ಬೆಳ್ಳಿಯ ದಾರದಿಂದ ಸೂಕ್ಷ್ಮವಾದ ಕುಸುರಿ ಕೆಲಸವನ್ನು ಮಾಡಲಾಗಿತ್ತು. ಹಾಗೆಲ್ಲ ಗೊಂದಲಕ್ಕೆಡೆಕೊಡುವಂಥದೇನಿರಲಿಲ್ಲ. ಬಿಳಿಯದರ ಮೇಲೆ ಬಿಳಿದು ಎನ್ನುವ ಸೂಕ್ಷ್ಮತೆ. ಕೇವಲ ಕೆಲವೇ ಆಸ್ಥಾನಿಕರು ಮಾತ್ರ ಗಮನಿಸಿ ಮೆಚ್ಚುವಂಥದು. ಜೊತೆಗೆ ಬಿಳಿಯ ಗರಿಗಳನ್ನು ಸೆಕ್ಕಿಸಿದಂಥ ಹಸಿರು ರುಮಾಲು. ಚಿನ್ನ ಬೆಳ್ಳಿಗಳ ಕುಸುರಿ ಕೆಲಸ ಮಾಡಿದ್ದಂಥ ಹದಿನಾಲ್ಕು ಎಳೆಗಳ ಚಿನ್ನದ ಕಂಠೀಹಾರವನ್ನು ಹಾಕಿಸಿಕೊಳ್ಳಲು ಕೌಸಲ್ಯಳ ಮುಂದೆ ನನ್ನ ತಲೆಯನ್ನು ಬಾಗಿಸಬೇಕಾಯಿತು.

"ಕನ್ನಡಿ ತಂದು ಕೊಡಲೆ" ಎಂದು ಆಕೆ ಕೇಳಿದಳು.

ನಾನು ಬೇಡವೆಂದು ತಲೆ ಅಲ್ಲಾಡಿಸಿದೆ. ನನ್ನದೇ ಪ್ರತಿಬಿಂಬವನ್ನು ನೋಡಿಕೊಳ್ಳುವುದರಲ್ಲಿ ನನಗೆ ಯಾವಾಗಲೂ ಅಲಕ್ಷ್ಯವೇ.

"ನಾನು ಹೇಗೆ ಕಾಣ್ತೇನಿ ಅಂತ ನೀನು ಹೇಳು"

"ಭಾವೀ ಮಹಾರಾಜರ ಹಾಗೆ. ಅಲ್ಲದೆ ಮಹಾರಾಜರಾದವರು ತನ್ನ ಪ್ರಜೆಗಳ ಮೇಲೆ ಯಾವ ರೀತಿಯ ಪ್ರಭಾವವನ್ನು ತಾನು ಉಂಟುಮಾಡುತ್ತಿದ್ದೇನೆಂದು ಸದಾ ತಿಳಿದಿರಬೇಕು"

"ಆಯಿತು ತಂದುಕೊಡು."

ಅತ್ಯಂತ ತೀಕ್ಷ್ಣವಾದ ಆಲೋಚನೆಗಳಲ್ಲಿ ಮುಳುಗಿದ ನೋಟದ ಯುವ ಮನುಷ್ಯನನ್ನು ನಾನು ಅದರಲ್ಲಿ ಕಂಡೆ. ಅತ್ಯಂತ ಆಳ ಕಂಗಳ, ಪರಸ್ಪರ ದೂರವಿರುವ ಹುಬ್ಬುಗಳು, ದೃಢತೆಯನ್ನು ಸಾರುವ ಮೂಗು, ಅಗಲವಾದ ಬಾಯಿ, ಕೆದರಿಕೊಂಡ ಒರಟಾದ ದೊರಗು ಕೂದಲು. ಈಗ ಅದು ಪೇಟದೊಳಗೆ ಸೇರಿದ್ದರಿಂದ ಹಾರಾಡದೆ ಒತ್ತಾಗಿತ್ತು. ಈಚಿನ ಕೆಲ ವರ್ಷಗಳಲ್ಲಿ ಅದೇಕೆ ನಾನು ನೋವನ್ನನುಭವಿಸುತ್ತಿರುವ ತೀರ ಗಂಭೀರ ವ್ಯಕ್ತಿಯಾಗಿ ಬಿಟ್ಟೆ?

ನನ್ನ ಸೋದರರು, ಪ್ರಧಾನ ಮಂತ್ರಿ ಪೂರಣ್ ಮಲ್‌ಜೀ, ಆದಿನಾಥ್‌ಜೀ, ಗೃಹಮಂತ್ರಿ ನನ್ನ ಮಾವ ಲಕ್ಷ್ಮಣ ಸಿಂಹಜೀ, ಇತರೆ ಸಂಪುಟ ದರ್ಜೆಯ ಸಚಿವರು ಮತ್ತು ಗೌರವಾನ್ವಿತರೆಲ್ಲರೂ ಅರಮನೆಯ ಹೊರಗೆ ಕಾಯುತ್ತಿದ್ದರು. ಪ್ರತಿಯೊಬ್ಬರೂ ನನಗೆ ತಲೆಬಾಗಿ ಗೌರವಸಲ್ಲಿಸಿದರು. ನಾನು ಪಟ್ಟದಾನೆ 'ತೂಫಾನ್'ನ ಮೇಲೇರಿದೆ. ನಾನು ನಿರಾಳವಾಗಿ ಆತ್ಮವಿಶ್ವಾಸದಿಂದ ಕೂಡಿದ್ದು. ಎಂದಿನಂತೆ ನನ್ನ ಮೇಲೇ ಒಂದು ಕಣ್ಣಿಟ್ಟಿದ್ದೆ. ಸಾರ್ವಜನಿಕ ಸಮಾರಂಭವೊಂದರಲ್ಲಿ ಮಹಾರಾಜರ ಪರವಾಗಿ ಅವರ ಸ್ಥಾನದಲ್ಲಿದ್ದುಕೊಂಡು ನಾನು ಪಾಲ್ಗೊಳ್ಳುತ್ತಿರುವುವುದು ಇದೇ ಮೊದಲು. ಸಂದರ್ಭದ ವೈಭವ ಮತ್ತು ಗಾಂಭೀರ್ಯಗಳೆರಡರ ಅರಿವೂ ನನಗಿತ್ತು. ರಸ್ತೆಗಳು ನಗರದ ಜನಗಳಿಂದ ಕಿಕ್ಕಿರಿದಿದ್ದುವು. ಜನರು ಉಪ್ಪರಿಗೆಗಳ ಮೇಲೆ ಒರಗಿಕೊಂಡು, ಗೋಡೆಗಳ ಮುನ್

ಚಾಚುಗಳ ಮೇಲೆ ನಾಜೂಕಾಗಿ ನಿಂತುಕೊಂಡು, ಬಿಸಿಲುಮಚ್ಚುಗಳ ಮೇಲಿಂದ ಕೆಳಗೆ ಇಣುಕುತ್ತ ಇದ್ದರು. ನನಗೂ ತಂದೆಯವರಿಗೂ ಚಿರಕಾಲ ಬಾಳಲೆಂದು ಹಾರೈಸಿದರು. ಅವರ ಮುಚ್ಚುಮರೆಯಿಲ್ಲದ ಬೆಚ್ಚನೆಯ ಪ್ರೀತಿಯಿಂದ ನನ್ನ ಮನಸ್ಸು ತುಂಬಿಬಂದಿತು. ಅವರು ನನ್ನಲ್ಲಿಟ್ಟಿರುವ ಭರವಸೆಯಿಂದ ನಾನು ಭಾವಪರವಶನಾದೆ. ನಾನೊಂದು ವೇಳೆ ನಾಳೆಯೇ ನನ್ನೊಂದಿಗೆ ಬಂದು ಗುಜರಾತ್ ಸೇನೆಯೊಡನೆ ಸಂಗ್ರಾಮಕ್ಕೆ ನಿಲ್ಲಬೇಕೆಂದು ಕೇಳಿದ್ದೇ ಆದರೆ ಅವರು ಹಿಂದು ಮುಂದು ನೋಡದೆ ಪ್ರಶ್ನಿಸದೆ ಬಂದು ಬಿಡುತ್ತಿದ್ದರು. ಅವರು ನನ್ನ ಮೇಲೆ ಹೂ ಮಳೆಗರೆದರೆ, ಸ್ತ್ರೀಯರು ದೃಷ್ಟಿ ದೋಷ ಪರಿಹಾರಕ್ಕಾಗಿ ಕಣತಲೆಗೆ ಬೆರಳುಗಳನ್ನು ಒತ್ತಿ ನೆಟ್ಟಿಗೆ ಮುರಿದರು. ಅವರತ್ತ ಕೈ ಬೀಸಿ ಅವರೆಲ್ಲರನ್ನು ಅಪ್ಪಿಕೊಳ್ಳಬೇಕೆನಿಸಿತು. ಅದರ ಬದಲಿಗೆ ಭಾವೀ ಮಹಾರಾಜನು ಮಾಡುವ ಹಾಗೆ ಕಿಂಚಿತ್ ಮುಗುಳ್ನಗೆ ಬೀರಿ ಕ್ಷಣಕ್ಕೊಮ್ಮೆ ನಿಧಾನವಾಗಿ ಕೈ ಎತ್ತಿದೆ.

ನಾವು ಬಲಕ್ಕೆ ತಿರುಗಿ ಮಹಾರಾಣಾಕುಂಭ ಮಹಾ ಮಾರ್ಗದತ್ತ ಸಾಗಿದ್ದೆವು. ಆ ದಿನ ಮಳೆ ಸುರಿಯುತ್ತಿದ್ದಾಗ ಮೊದಲು ಕೇಳಿದ್ದಂಥದೇ ದನಿ ಕೇಳಿ ಬಂತು. ನಾನು ಹಗಲುಗನಸು ಕಾಣುತ್ತಿದ್ದೆ. ಅದನ್ನೇನು ಕೇಳುವಂತೆಯೇ ಇಲ್ಲ. ಊರಿನ ಈ ಭಾಗದಲ್ಲಿ ಅವಳೇನು ಮಾಡುತ್ತಿರಬಹುದು? ದೇವರ ಹೆಸರಿನಲ್ಲಿ ಅವಳೇನು ಮಾಡಲು ಹೊರಟಿದ್ದಳು? ನಾವು ಬೇರೆಬೇರೆಯಾಗಿ ಸ್ವತಂತ್ರವಾಗಿ ಬದುಕುತ್ತಿದ್ದುದರಿಂದ ಅವಳು ಎಲ್ಲಿ ಇರುತ್ತಿದ್ದಳೆಂಬುದಾಗಲಿ, ಅವಳು ಏನು ಚಟುವಟಿಕೆಯಲ್ಲಿ ತೊಡಗಿದ್ದಳೆಂಬುದಾಗಲಿ ನನಗೇನೇನೂ ತಿಳಿದಿರಲಿಲ್ಲ. ಆದರೆ ಅದು ಒಪ್ಪಲಸಾಧ್ಯವಾದ್ದಾಗಿ ತೋರುತ್ತಿತ್ತು. ನನ್ನದೇ ಸಣ್ಣ ವಿವಾದಗಳ ನ್ಯಾಯಾಲಯದಲ್ಲೂ ಅದು ಹಾಸ್ಯಾಸ್ಪದವೆನಿಸುತ್ತಿತ್ತು ಮತ್ತು ಅಂಗೀಕೃತವಾಗುತ್ತಿರಲಿಲ್ಲ. ಈ ದೇಶದ ಮಹಾರಾಜ್‌ಕುಮಾರ್‌ಗೆ ತನ್ನ ಹೆಂಡತಿಯ ಚಲನವಲನಗಳ ಬಗ್ಗೆಯೇ ಏನೂ ಗೊತ್ತಿಲ್ಲವೆಂದಾದರೆ ಆತ ಸನ್ಯಾಸ ತೆಗೆದುಕೊಂಡು ಪರ್ವತಾರಣ್ಯಗಳತ್ತ ತೆರಳುವುದೊಳ್ಳೆಯದು. ತನ್ನ ಹೆಂಡತಿಯನ್ನೇ ಸರಿಯಾಗಿ ನೋಡಿಕೊಳ್ಳಲಾರದವನು, ತನ್ನ ಪ್ರಜೆಗಳನ್ನು ಹಾಗೂ ತನ್ನ ಸಾಮ್ರಾಜ್ಯವನ್ನು ಹೇಗೆ ನೋಡಿಕೊಂಡಾನು? ಆ ಹೊತ್ತು ಜನ್ಮಾಷ್ಟಮಿ, ಶ್ರೀ ಕೃಷ್ಣನ ಜನ್ಮದಿನ ಎಂದು ನನಗೆ ಗೊತ್ತಿರಲಿಲ್ಲವೆ? ತನ್ನ ಹೃದಯ ಪರಿವರ್ತನೆ ಮಾಡಿಕೊಂಡು, ನೀಲಮೇಘ ಶ್ಯಾಮನನ್ನು ತ್ಯಜಿಸಿ, ಬಂದು ನನ್ನೊಂದಿಗೆ ಮಲಗುವಳೆಂದು ನಾನು ನಿರೀಕ್ಷಿಸಿದ್ದೆನೆ? ಈಗ ನಾನು ನನ್ನ ಹೊರತು ಬೇರೆ ಯಾರನ್ನೂ ಹಳಿಯುವಂತಿರಲಿಲ್ಲ. ನಾನು ಈಗಾಗಲೇ ಎಲ್ಲರ ಮನೆಮಾತಾಗುವಂತೆ, ಎಲ್ಲರ ಹರಟೆಯ ವಸ್ತುವಾಗುವಂತೆ ಮಾಡುವಲ್ಲಿ ವಿಕ್ರಮಾದಿತ್ಯನು ಕಾರಣನಾಗಿರದೆ ಇದ್ದಲ್ಲಿ ಸ್ವತಃ ನನ್ನನ್ನು ನಾನೇ ಮೇವಾಡದಲ್ಲಿ ಪ್ರತಿ ಭವ್ಯೆ ಮತ್ತು ನೌಟಂಕಿ ನಾಟಕಗಳಲ್ಲಿ ಮತ್ತು ಪ್ರಹಸನಗಳಲ್ಲಿ ಕುಲಟೆಯ ಗಂಡ, ವಿದೂಷಕ ಮತ್ತು ಮೂರ್ಖ ಎಂದು ಬಿಂಬಿಸ ಹೊರಟಿದ್ದೆ.

ಏನನ್ನು ನಿರೀಕ್ಷಿಸಬೇಕೆಂದು ನನಗೆ ತಿಳಿದಿತ್ತು. ನಾನು ಮುಖವನ್ನು ನೇರವಾಗಿಟ್ಟುಕೊಂಡು, ನೇರವಾಗಿ ಮುಂದಕ್ಕೆ ನೋಡಿದೆ. ತುಂಬ ಗರ್ವಿಷ್ಠನಂತೆ ಕಾಣಿಸಿಕೊಂಡರೆ, ನಿನ್ನನ್ನು ಯಾರೊಬ್ಬರೂ ಅಪಹಾಸ್ಯ ಮಾಡುವ, ಅಣಕದ ಮಾತಾಡುವಂಥ ಧೈರ್ಯವನ್ನು ಕೊನೆಯ ಪಕ್ಷ ನಿನ್ನೆದುರಿನಲ್ಲಿ ತೋರಲಾರರು ಎಂದು ನನಗೆ ನಾನೇ ಹೇಳಿಕೊಂಡೆ. ಆದರೆ ಮೇವಾಡದ ಜನಗಳು ಸರಸ ಸ್ವಭಾವದವರು. ತಮ್ಮ ಮಹಾರಾಜ್ ಕುಮಾರನ ಬಹಿರಂಗ ಅಪಮಾನವನ್ನು ಅಲಕ್ಷ್ಯ ಮಾಡಲು ಇಷ್ಟಪಡುತ್ತಾರೆ. ನಾವೀಗ, ಚಿತ್ತೂರನ್ನು ಹೆಚ್ಚು ಕಡಿಮೆ ಎರಡು ಸಮಭಾಗ ಮಾಡುವಂಥ

ಕೇಂದ್ರ ಹೆದ್ದಾರಿಯಾದ ಬಪ್ಪಾರಾವಲ್ ಪಥದಲ್ಲಿದ್ದೆವು. ಪ್ರತಿ ಐವತ್ತು ಗಜಕ್ಕೆ ಇಪ್ಪತ್ತೈದು ಮೂವತ್ತು ಅಡಿ ಎತ್ತರದಲ್ಲಿ ಹಗ್ಗಗಳಿಂದ ಕಟ್ಟಿದ್ದ ಗಡಿಗೆ ಇತ್ತು. ಆ ಗಡಿಗೆಯ ಸುತ್ತಲೂ ಸಮೃದ್ಧವಾಗಿ ದ್ರಾಕ್ಷಿಯ ಬಳ್ಳಿಗಳನ್ನು ಹೂಗಳನ್ನೂ ಕಟ್ಟಲಾಗಿತ್ತು. ಈ ಒಂದು ಅಲಂಕಾರ ನನಗೆ ಪರಿಚಿತವಲ್ಲದ್ದು. ಗಡಿಗೆಗಳಲ್ಲಿ ಕೃಷ್ಣನಿಗೆ ಬಹುಪ್ರಿಯನಾಗಿದ್ದ ಮೊಸರು, ಮಜ್ಜಿಗೆ ಇದ್ದಿತೆ ಎಂದು ನನಗೆ ವಿಸ್ಮಯ. ಆ ಪ್ರಶ್ನೆಯ ಉತ್ತರಕ್ಕೆ ನಾನು ಬಹಳ ಹೊತ್ತು ಕಾಯಬೇಕಾಗಲಿಲ್ಲ. ನನ್ನ ತಲೆಯ ಮೇಲೆ ಇದ್ದ ಗಡಿಗೆಯ ಕಂಠವನ್ನು ಎಳೆಯುವ ಶಬ್ದ ಕೇಳಿ ಬಂತು. ಅದಕ್ಕೆ ನನ್ನ ತಕ್ಷಣದ ಪ್ರತಿಕ್ರಿಯೆ ನನ್ನ ತಲೆಯನ್ನು ತಗ್ಗಿಸಿಕೊಳ್ಳುವುದು. ಗಡಿಗೆಗಳಲ್ಲಿದ್ದ ಹಾಲಿನ ಉತ್ಪನ್ನಗಳಿಂದ ಕಲೆ ಮಾಡಿಸಿಕೊಳ್ಳುವ ಮನಸ್ಥಿತಿಯಲ್ಲಿ ನಾನಿರಲಿಲ್ಲ. ಅದೃಷ್ಟವಶಾತ್, ನನ್ನ ತಲೆಯನ್ನು ಪಕ್ಕಕ್ಕೆ ವಾಲಿಸಿ ಇಟ್ಟುಕೊಂಡಿದ್ದರಿಂದ ನಾನು ಪಿಗ್ಗಿ ಬೀಳಲಿಲ್ಲ. ಹೂವಿನ ಮಳೆಗರೆಯಲಾಯಿತು. ಏಳನೇ ಗಡಿಗೆ ಖಾಲಿಯಾಗುವ ಹೊತ್ತಿಗೆ, ತೂಫಾನ್ ಮತ್ತು ನಾನು ಅಷ್ಟೇ ಅಲ್ಲ, ತೆಳುಗೆಂಪು ಹಳದಿ ಬಿಳಿ ಮತ್ತು ಕೆಂಪು ವರ್ಣದ ಹೂಗಳ ಚಿತ್ತಾರಗಳಿಂದ ಇಡೀ ರಸ್ತೆ ತುಂಬಿಹೋಗಿತ್ತು.

ನವಿಲುಗಳೆಲ್ಲಾ ಎಲ್ಲಿ ಹೋದುವು? ಅವುಗಳ ಸುದೀರ್ಘ ನಿರ್ವಿಣ್ಣ ಅರಚಾಟ ಏಕೆ ನನ್ನ ಹೆಂಡತಿಯ ಹಾಡನ್ನು ಕೇಳದಂತೆ ಮಾಡುತ್ತಿಲ್ಲ?

ಇಂದಿನ ನೇಸರ ನೋಡಿದೆಯಾ?
ನವಿಲಿನ ನೀಲಿ ಬಣ್ಣವನಾಂತಿದೆ ಅದು
ಇಂದು ನಸುಕಿನಲಿ
ನನ್ನ ನಾಲಗೆಯ ನೋಡಿದೆಯಾ
ಅದೂ ಅದೇ ಪೂರಾ ನೀಲಿ
ಚೆಂಡು ಹೂಗಳು ಕೂಡ ನೀಲಿ
ಡೊಂಬ ಕಾಗೆಯು ನೀಲಿ, ಹುಲ್ಲು ನೀಲಿ
ನನ್ನ ಕಣ್ಣಿಗೂ ನೀಲಿ ಪರೆ ಬಂದಿರಬೇಕೆಂದು
ಹೇಳಿದೆ ನಾನು.
ಆಗ ಅಕಸ್ಮಾತ್ ಪಂಚಾಂಗದತ್ತ
ಕಣ್ಣು ಹಾಯಿಸಿದೆ
ತಾಳ್ಮೆಗೆಟ್ಟು ವರ್ಷದ
ಮುನ್ನೂರ ಅರುವತ್ತ ನಾಲ್ಕು ದಿನವೂ
ನೋಡುವೆ. ಈ ದಿನ ಮಾತ್ರ ಹೊರತು
ನಿನಗೆ ನೀಲಿ ಹುಟ್ಟು ಹಬ್ಬವ
ಹಾರೈಸುವೆ ಪ್ರಿಯನೆ
(ದೇವರುಗಳಿಗೆ ಜನ್ಮದಿನವುಂಟೆ)
ಆದಿಯು ಇಲ್ಲದ, ಅಂತ್ಯವು
ಇಲ್ಲದವರು ಅವರೆಂದು ತಿಳಿದಿದ್ದೆ ನಾನು)
ನನ್ನ ಪ್ರಿಯಕರನ ಬಣ್ಣ ನೀಲಿ
ನನ್ನ ವಿಶ್ವದ ಬಣ್ಣ ನೀಲಿ

ವೇಶ್ಯೆಯೆಂದು, ಸೂಳೆಯೆಂದು
ಬೆಲೆವೆಣ್ಣೆಂದು, ಕುಲಟೆಯೆಂದು,
ಹಾದರಿಯೆಂದು ಕರೆಯುವರು ನನ್ನ.
ಬೇಡಿಕೊಳ್ಳುವೆ ನಿನ್ನನು
ಹೇಳವರಿಗೆ ನೀನು.
ಯಾಚಿಸುವೆ ನಿನ್ನನು
ಹೇಳವರಿಗೆ ನೀನು.
ನನ್ನ ಮರ್ಯಾದೆ ಉಳಿಸು ಪ್ರಿಯಕರನೆ
ಮರ್ಯಾದೆ ಉಳಿಸು.
ನಾನಾರೆಂಬುದ ಹೇಳವರಿಗೆ
ಬೇಡುವೆ ನಿನ್ನನು.
ದೇವರ ಸತಿಯೆಂದು ಅದಕಿಂತ
ಕಿಂಚಿತ್ತು ಕಡಮೆ ಅಲ್ಲೆಂದು
ಸಾರು ನೀನು.
(ನಾನೆಂದರೆ ನಿನಗೆ ಅವಮಾನವೆ
ನನ್ನನೇಕೆ ನೀನು ನಿಗೂಢ ರಹಸ್ಯೆಯಾ
ಗಿರಿಸಿರುವೆ?)
ನಿನ್ನವಳು ನಾನೆಂದು
ದೇವತೆಗಳೆದುರಿನಲಿ
ವಿಧಿ ಪೂರ್ವಕ ವಿವಾಹಿತ ಹೆಣ್ಣೆಂದು
ಹೇಳವರಿಗೆ.
ರವಿಚಂದ್ರ ತಾರೆಗಳ ಸಾಕ್ಷಿಯಲಿ
ನನ್ನ ಕೊನೆಯ ಉಸಿರಿರುವ ತನಕ
ನೀಲಿ ನಾನೆಂದು ಹೇಳವರಿಗೆ,
ನನ್ನ ಮರ್ಯಾದೆ ಉಳಿಸು ಪ್ರಿಯನೆ, ಮರ್ಯಾದೆ ಉಳಿಸು
ಇಂದಿನ ನೇಸರ ನೋಡಿದೆಯಾ?

ನಾವು ವೃಂದಾವನಿ ದೇವಸ್ಥಾನದ ಮಹಾದ್ವಾರದ ಬಳಿ ಹೋಗಿ ನಿಲ್ಲುತ್ತಿದ್ದಂತೆ ಹಾಡು ಮತ್ತು ದನಿ ಶ್ರೀಕೃಷ್ಣನ ಸಹಸ್ರನಾಮಗಳಲ್ಲೊಂದರ ಉನ್ಮತ್ತ ಸಂಕೀರ್ತನೆಗೆ ಏರಿತು. ನಾನು ತೂಫಾನಿನ ಬೆನ್ನಿಂದ ನಿಧಾನವಾಗಿ ಕೆಳಕ್ಕಿಳಿದೆ. "ನನ್ನ ಮರ್ಯಾದೆ ಉಳಿಸು" ಎಂದು ಅವಳು ಬಾರಿ ಬಾರಿಗೆ ಕಣ್ಣೀರಿಟ್ಟಳು. "ನನ್ನ ಮರ್ಯಾದೆಯನ್ನು ರಕ್ಷಿಸು." ನನ್ನ ಪ್ರಿಯ ನಲ್ಲೆ, ಇಲ್ಲಿ ಏನೋ ಒಂದು ಸ್ವಲ್ಪ ತಪ್ಪು ತಿಳುವಳಿಕೆಯಾದಂತಿದೆ. ಈಗ ರಕ್ಷಣೆಯ ಅಗತ್ಯವಿರುವುದು ನನ್ನ ಮತ್ತು ಮೇವಾಡದ ಗೌರವಕ್ಕೆ ಎಂದು ನಾನು ನಂಬಿದ್ದೇನೆ. ನನ್ನ ಪಾದರಕ್ಷೆಗಳನ್ನು ಕಳಚಿದೆ. ಪ್ರಧಾನಿಯವರು ಮತ್ತು ಕುಲಪತಿಗಳು ನನ್ನ ಕಣ್ಣು ತಪ್ಪಿಸುತ್ತಿದ್ದಾರೆಂದು ನನಗನ್ನಿಸಿತು, ಅವರಿಗೆ ಗೊತ್ತಾಯಿತೆ? ನನ್ನೊಂದಿಗೆ ಬರುತ್ತಿದ್ದ ಎಲ್ಲ ಆಸ್ಥಾನಿಕರು, ರಾವ್ ಮತ್ತು ರಾವತ್‌ಗಳಿಗೆಲ್ಲ ಹಾಡುತ್ತಿದ್ದವಳ ಗುರುತು ಸಿಕ್ಕಿತೆ? ಈಗಲೂ ನನಗೆ ನಾನೇ ವಂಚಿಸಿಕೊಳ್ಳಲು ಬಯಸುತ್ತಿದ್ದೆ. ಖಂಡಿತವಾಗಿಯೂ ಅವರಿಗೆ ಗೊತ್ತಿತ್ತು.

ಮುದುಕನೊಬ್ಬ ಬಾಗಿ ನನ್ನ ಕಾಲು ಮುಟ್ಟಿ ನಮಸ್ಕರಿಸಿದ. ನಾನು ಅವನ ಕೈ ಹಿಡಿದು ಮೇಲೆತ್ತಿದೆ. ಅವನು ನನ್ನ ಕಡೆ ವಿಷಣ್ಣ ವದನನಾಗಿ ನೋಡಿ, ತಲೆ ಅಲ್ಲಾಡಿಸುತ್ತ ನಿಶ್ಚಿತವಾಗಿ ಯಾರೊಬ್ಬರನ್ನೂ ಕುರಿತಂತೆ ಅಲ್ಲದೆ ಹೇಳಿದ– "ರಾಜಕುಮಾರಿ ಸನ್ಯಾಸಿನಿಯರ ಸಂಗವನ್ನು ತೊರೆದು ಬಿಡು. ನಿನ್ನ ಸ್ವಂತ ಹುಟ್ಟೂರಾದ ಮೆರ್ತಾ ನಿನ್ನಿಂದಾಗಿ ಲಜ್ಜಿತವಾಗಿದೆ. ಹಾಗೆಯೇ ಚಿತ್ತೂರು ಕೂಡ".

ನನ್ನ ದುಃಸ್ಥಿತಿಯನ್ನು ಕುರಿತ ಅವನ ಅನುಕಂಪ ನನ್ನ ಹೃದಯದ ತಂತಿಯನ್ನು ಮಿಡಿದಿದ್ದರೆ, ನಾನದನ್ನು ತೋರಿಸಿಕೊಳ್ಳುವಂತಿಲ್ಲ. ನಾನು ಗಂಭೀರವಾಗಿ ನೂರು ಮೆಟ್ಟಿಲುಗಳನ್ನು ಹತ್ತಿ ಮಂಟಪ ಮತ್ತು ಕಲ್ಯಾಣಮಂಟಪಗಳತ್ತ ಹೆಜ್ಜೆ ಹಾಕಿದೆ. ಸಾವಿರಾರು ಜನ ನಾಗರಿಕರನ್ನು ನಿಯಂತ್ರಣದಲ್ಲಿಡಲು ಭದ್ರತಾ ಸಿಬ್ಬಂದಿ ತುಂಬ ಹೆಣಗುತ್ತಿದ್ದರು. ನನ್ನ ಹೆಂಡತಿ ನೃತ್ಯಗಾತಿಯರು ಕಟ್ಟಿಕೊಳ್ಳುವ ಗೆಜ್ಜೆಗಳನ್ನು ತನ್ನ ಕಾಲಂದುಗೆಯ ಸುತ್ತ ಕಟ್ಟಿಕೊಂಡು ಸಮಸ್ತರಿಗೂ ಕಾಣುವಂತೆ ನರ್ತಿಸುತ್ತಿದ್ದಳು. ಅವಳು ನಡುವಿಗೆ ಧರಿಸಿದ್ದ ಉಡುಗೆ ನಸುಕೆಂಪು ಬಣ್ಣದ್ದಾಗಿದ್ದು. ಧ್ಯಾನ ಸ್ಥಿತಿಯಲ್ಲಿ ಜೋಗಿಣಿಯ ಹಾಗೆ ತಿರ್ರನೆ ತಿರುಗುತ್ತಿದ್ದಳು. ಅವಳ ಮೇಲು ಹೊದಿಕೆ ಮತ್ತು ರವಿಕೆಗಳು ಇನ್ನೂ ತೊಯ್ದು ತಪ್ಪೆಯಾಗಿ ಅರೆಪಾರದರ್ಶಕವಾಗಿಲ್ಲದಿದ್ದರೂ. ಅವಳು ಬೆವರಿನಿಂದ ತೊಯ್ದು ಹೋಗಿದ್ದಳು. ಅವಳು ಎಷ್ಟು ಹೊತ್ತಿನಿಂದ ನರ್ತಿಸುತ್ತಿದ್ದಳು? ತೀವ್ರ ಭಾವಾವೇಶಕ್ಕೊಳಗಾದ ಹೆಣ್ಣು ಮಾತ್ರ ಇಂಥ ಅಲೌಕಿಕ ಶಕ್ತಿ ಹೊಂದಿರಲು ಸಾಧ್ಯ. ಅಯ್ಯಾ ಕೃಷ್ಣ ಇಷ್ಟು ಹೊತ್ತೂ ನನ್ನ ಮನಸ್ಸಿನ ನೆಮ್ಮದಿಯನ್ನು ಕಾಪಾಡಿಕೊಂಡಿದ್ದೇನೆ, ಆದರೆ ನಿನ್ನ ಜೊತೆ ನಾನು ಮುಯ್ಯಿ ತೀರಿಸಿಕೊಳ್ಳುವುದಿದೆ ಈಗ.

ನಾನು ಬಯಸಿದ್ದನ್ನು ಪಡೆದುಕೊಳ್ಳಲು ಯಾವ ಮಟ್ಟದವರೆಗೆ ಹೋಗಲಿಚ್ಛೆ ಇದೆ ಎಂದು ಭೂತಾನಿ ಮಾತಾಕೇಳಿದ್ದಳು. ಅದಕ್ಕೆ ನನ್ನ ಮೂರ್ಖ ಉತ್ತರ "ಸಾಕಷ್ಟು ದೂರ" ಎಂದಾಗಿತ್ತು. ಸಾಕಷ್ಟು ಯೋಚನೆಯೇ ಮಾಡದೆ ಉತ್ತರಿಸಿದ ಮೂರ್ಖ ಎಂದು ಅವಳು ನನ್ನ ಬಗ್ಗೆ ಆಲೋಚಿಸಿದ್ದರೆ ಅದರಲ್ಲೇನೂ ಆಶ್ಚರ್ಯವಿಲ್ಲ.

ಈಗ ನಾನು ತುಂಬ ದೂರ ಹೋಗಲು ಸಾಧ್ಯವಾಗಲಿಲ್ಲ. ಹಾದಿ ಪೂರ್ತ ಮಾತಾ. ಇಡೀ ಹಾದಿಪೂರ್ತ. ಅದು ಎಲ್ಲಿಯವರೆಗೆ ಕೊಂಡೊಯ್ಯುತ್ತೋ ಅಲ್ಲಿಯ ತನಕ. ಅವಳನ್ನು ನಿವಾರಿಸಲು ಏನೆಲ್ಲ ಆದರೂ ಸರಿಯೆ. ಈ ಪ್ರಪಂಚದಲ್ಲಿ ಈ ಇಹ ಮತ್ತು ಪರಗಳಲ್ಲಿ ಏನೆಲ್ಲ ಹಿಂಸೆ ಮತ್ತು ಯಾತನೆ, ನೋವು ಸಾಧ್ಯವೋ ಅದರ ಸಹಿತವಾಗಿ. ಅದನ್ನು ನೆರವೇರಿಸು ಭೂತಾನಿ ಮಾತಾ. ನೆರವೇರಿಸಿ ನನ್ನ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸು. ನಾನು ಅದನ್ನು ಗಳಿಸಿದ್ದೇನೆ.

ದೇವತೆಗಳು ಮತ್ತು ರಾಕ್ಷಸರೊಂದಿಗೆ ನಾನು ಒಪ್ಪಂದ ಮಾಡಿಕೊಳ್ಳುತ್ತೇನೆ. ಯಾರೊಂದಿಗೆ ಬೇಕಾದರೂ ಸರಿ, ಬ್ರಹ್ಮ, ವಿಷ್ಣು, ಇಂದ್ರ, ಮಹೇಶ, ವರುಣ, ಅಗ್ನಿ ಮತ್ತು ಭಯಾವಹನಾದ ಯಮನೊಂದಿಗಾದರೂ ಸರಿಯೆ. ಅಗತ್ಯ ಬಿದ್ದರೆ, ಪೂರ್ವದ ಮತ್ತು ಅನಾದಿಕಾಲದ ದೇವತೆಗಳೊಂದಿಗೆ. ನಾನು ಅಲ್ಲಿಗೇ ನಿಲ್ಲುವುದಿಲ್ಲ. ದುಷ್ಟತನ ಮತ್ತು ವಾಮಾಚಾರವನ್ನು ಅಳವಡಿಸಿಕೊಳ್ಳುತ್ತೇನೆ. ನನ್ನ ಹೃದಯಕ್ಕೆ ಮಸಿ ಬಳಿದುಕೊಂಡು ಒಂದು ಕಾಳ ರಾತ್ರಿಯಲ್ಲಿ ದ್ವಾರಗಳನ್ನು ತೆರೆದು ಅವಳ ಮೇಲೆ ಮತ್ತು ಅವಳಂಥವಳ ಮೇಲೆ ಕಡು ಮಾರಕ ರೋಗಗಳನ್ನು ಆವಾಹನೆ ಮಾಡುತ್ತೇನೆ. ಓ ಭೂತಾನಿ ಮಾತಾ, ನಿನ್ನ ಮೃತ್ಯು ಶಿರಗಳ ನಿಕ್ಷೇಪಗಳನ್ನು ಜಂತು, ಜೀರುಂಡೆಗಳ, ಮರಿಹುಳುಗಳ, ಹುತ್ತಗಳ ಅಸಂಖ್ಯಾತ ನಿಧಿಯನ್ನು ತೆರೆದು ಬಿಡು. ಅವು ಇಡೀ ಭೂಮಂಡಲವನ್ನೆಲ್ಲಾ

ವ್ಯಾಪಿಸಿಕೊಂಡು, ಕಲ್ಲು, ಮಣ್ಣು, ಆಕಾಶ, ನೀರು, ಗಾಳಿ, ಬೆಂಕಿ ಇವು ಏನೊಂದೂ ಉಳಿಯದಂತೆ ಮೂರೂ ಲೋಕಗಳ ಸಾರಸತ್ವವನ್ನೆಲ್ಲ ಕಬಳಿಸುತ್ತ ನಿರಂತರ ತಳಮಳವೊಂದುಳಿದು, ಅಸಂಖ್ಯಾತವಾಗಿ ಒಳಗೊಳಗೇ ಕುದಿಯುತ್ತಿರುವ ಅಧೋಲೋಕದ ಜೀವ ಜಂತುಗಳ ಸಂಖ್ಯೆ ಅಸಂಖ್ಯಾತವಾಗಲಿ. ಅವು ಒಂದನ್ನೊಂದು ನುಂಗುವುದರ ಹೊರತು ಏನೇನೂ ಉಳಿಯದ ಹಾಗೆ ಮೂಳೆ ಮಾಂಸಗಳನ್ನೆಲ್ಲ ತಿಂದು ಹಾಕುತ್ತ ಕಣ್ಣ ಗುಡ್ಡೆಗಳಿಂದ, ಕಿವಿ, ಮೂಗು ಬಾಯಿ ಮತ್ತು ಗುದದ್ವಾರದ ತೆರವುಗಳಿಂದ ತೆವಳುತ್ತ ಹೊರ ಬರಲಿ. ಏನೊಂದೂ, ಏನೊಂದೂ, ಏನೊಂದೂ ಉಳಿಯದಿರಲಿ.

* * *

"ಅವಳನ್ನು ತೂಫಾನ್ ಕಾಲುಗಳ ಕೆಳಕ್ಕೆ ಎಸೆಯಿರಿ, ಆನೆ ಅವಳನ್ನು ತುಳಿದು ಸಾಯಿಸಲಿ. ಊರ ಮಧ್ಯದ ಚೌಕದಲ್ಲಿ ಅವಳನ್ನು ಒಂದು ಕಂಬಕ್ಕೆ ಕಟ್ಟಿಹಾಕಿ, ಅವಳ ರಕ್ತನಾಳಗಳಲ್ಲಿರುವ ಒಂದೊಂದು ರಕ್ತದಹನಿಯೂ ನೆಲಕ್ಕೆ ತೊಟ್ಟಿಕ್ಕುವವರೆಗೂ ಚಾಟಿ ಏಟಿನಿಂದ ಥಳಿಸಿ" ಎಂದು ರಾಣಿ ಕರ್ಮವತಿ ನನ್ನ ಕಡೆ ನೋಡುತ್ತ ಕಿರಿಚಾಡುತ್ತಿದ್ದಳು. ಇತರೆ ರಾಣಿಯರು ಮತ್ತು ದಾಸಿಯರು ತೀವ್ರ ಘಾಸಿಗೊಂಡ ಸ್ಥಿತಿಯಲ್ಲಿದ್ದರು. ತನ್ನ ಯಜಮಾನಿಯ ಬಗ್ಗೆ ಅಪಾರವಾದ ಮತ್ತು ಕುರುಡು ಪ್ರೀತಿ ಹೊಂದಿರುವ ಕುಂಕುಮ್ ಕನ್ವರ್ ಕೂಡ ಅತ್ಯಂತ ದಿಗ್ಭ್ರಾಂತಳೂ ದಿಕ್ಕು ತಪ್ಪಿದವಳೂ ಆಗಿ ಕಣ್ಣಂಚಿನಲ್ಲಿ ನೀರು ತುಂಬಿಕೊಂಡಿದ್ದಳು. "ನಿನ್ನ ದೌರ್ಬಲ್ಯ ಮತ್ತು ವಿಧೇಯತೆ ನಮ್ಮನ್ನು ಯಾವ ಮಟ್ಟಕ್ಕೆ ತಂದಿಟ್ಟಿದೆ ಎಂದು ನೀನೇ ನೋಡ್ತಾ ಇದ್ದೀಯಲ್ಲ? ಮನೆಯಲ್ಲಿ ಅವಳು ಕುಣಿಯುತ್ತಾ ಇದ್ದಾಗಲೇ ನಾನು ನಿನ್ನನ್ನು ಎಚ್ಚರಿಸಿದ್ದೆ. ಅವಳಿಂದ ದೂರವಾಗಲು, ಅವಳನ್ನು ತೊರೆದು ಬಿಡಲು, ಶಾಶ್ವತವಾಗಿ ಕೂಡಿ ಹಾಕಲು, ಸದಾಕಾಲಕ್ಕೆ ಅವಳನ್ನು ತೊಲಗಿಸಲು ನಿನಗೆ ಹೇಳಿದ್ದೆ. ಆದರೆ ನೀನು ಕೇಳಲಿಲ್ಲ. ನಾವು ಹೇಗಾದರೂ ಈ ಅವಮಾನವನ್ನು ತಾಳಿಕೊಳ್ಳೋದು. ನಿಮ್ಮ ತಂದೆ ಘನತೆವೆತ್ತ ಮಹಾರಾಜ ರಾಣಾ ಅವರು ಮತ್ತೆ ತಮ್ಮ ತಲೆಯೆತ್ತಿ ನಿಲ್ಲಲು ಸಾಧ್ಯವೆ? ನಾನು ಅವಳ ಕೈಕಾಲುಗಳನ್ನು ಕಿತ್ತೆಸೆಯುತ್ತೇನೆ. ಅಯ್ಯಾ ಹೆಣ್ಣಿಗ, ಏಳು ಮೇಲೆ ಅವಳನ್ನು ಮನೆಗೆ ಎಳೆದುಕೊಂಡು ಹೋಗು"

"ಈಗಲ್ಲ ತಾಯಿ" ನನ್ನ ಧ್ವನಿ ಅತ್ಯಂತ ಕ್ಷೀಣ ಮತ್ತು ಅಪಾಯಕಾರಿ ಎನ್ನಬಹುದಾದಷ್ಟು ಶಾಂತವಾಗಿತ್ತು. "ನಾನು ಮೌನವಹಿಸುತ್ತೇನೆ. ನೀಲ ಮೇಘ ಶ್ಯಾಮನಿಗೆ ಪೂಜೆ ಪುರಸ್ಕಾರಗಳನ್ನರ್ಪಿಸಲು ಬಂದಿದ್ದೇನೆ. ನನಗೆ ನೆಮ್ಮದಿಬೇಕು. ಇಲ್ಲಿ ಪ್ರತಿಯೊಬ್ಬರೂ ಅವರವರ ದಾರಿಯಲ್ಲಿ ಪ್ರಾರ್ಥಿಸಲಿ. ನನ್ನ ಧ್ವನಿ ಅನುರಣಿಸುತ್ತಿತ್ತು ಮತ್ತು ಪ್ರತಿಧ್ವನಿಸುತ್ತಿತ್ತು. "ಇದು ಅವಳ ರೀತಿ. ಅದನ್ನು ನಾವೆಲ್ಲ ಗೌರವಿಸೋಣ"

ನನ್ನ ಧಾರ್ಷ್ಟ್ಯದಿಂದ ರಾಣಿಯು ಮಾತಿಲಿಯಾದಳು. ಅದು ಎಷ್ಟು ಅನಿರೀಕ್ಷಿತವೋ ಅಷ್ಟೇ ಉತ್ತರಿಸಲಾಗದ್ದು. ಕೆಟ್ಟ ರೀತಿಯಲ್ಲಿ ಅಡಗಿಸಿಕೊಂಡಿದ್ದ ದ್ವೇಷದಿಂದ ನನ್ನತ್ತ ನೋಡಿದಳು. ನಾನು ತೋರಿಸಿದ ದುರಹಂಕಾರಕ್ಕೆ ಮತ್ತೆ ನನ್ನೆಡೆಗೆ ಬಂದೇ ಬರುತ್ತಾಳೆ. ಆದರೆ ತತ್ಕಾಲದಲ್ಲಿ ಅವಳು ಮೌನವಹಿಸಿದ್ದಾಳೆ.

ಭೂತಾನಿ ಮಾತಾ ನನ್ನ ಪಕ್ಕ ನಿಂತಿದ್ದಳು. ಅವಳು ಹಾಗೆ ನಿಂತಿದ್ದುದು ಅಪಾರ ದರ್ಶಕ ಗುಹೆಯ ಬಂಡೆಯ ಬಿಳಿಗಡ್ಡೆ ಬೆನ್ನ ಹಿಂದೆ ನಿಂತಂತಾಗಿತ್ತು. ಅವಳು ನನ್ನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡಾಗ ಅವಳ ಅಂಗೈನ ಲೋಳೆಯ ಆರ್ದ್ರತೆ ನನ್ನ ಅನುಭವಕ್ಕೆ ಬಂತು. "ಒಂದು ನಿರ್ಣಯಕ್ಕೆ ಬರುವುದಕ್ಕೆ ಮುಂಚೆ ನೀನು ಯಾಕೆ, ನಿನ್ನ ಸಮಯ ತೆಗೆದುಕೊಳ್ಳಬಾರದು ರಾಜಕುಮಾರ? ಜೀವನದಲ್ಲಿ ಹಿಂದಕ್ಕೆ ಹೆಜ್ಜೆ ಹಾಕುವ

ಪ್ರಶ್ನೆಯೇ ಇಲ್ಲ. ಮುಂದೆ ಸಾಗಿದ ಮೇಲೆ ಎಷ್ಟೇ ಬಯಸಿದರೂ ಹಿಂದೆ ಮಾಡಿದ ಕಾರ್ಯವನ್ನು ಇಲ್ಲಗೈಯಲು ಸಾಧ್ಯವಿಲ್ಲ." ಅಸಹ್ಯದಿಂದ ನಾನು ಅವಳ ಕೈಯನ್ನು ದೂರ ತಳ್ಳಿದೆ. ನಾನು ಯಾರ ವಿರುದ್ಧ ನಿಂತಿದ್ದೇನೆ ಎಂಬುದು ಈ ಮುದಿ ಹೆಣ್ಣಿಗೆ ನಿಜಕ್ಕೂ ಅರ್ಥವಾಯಿತೆ? "ಅದರ ಬಗ್ಗೆ ಯೋಚನೆ ಮಾಡು ಮಹಾರಾಜ್‌ಕುಮಾರ್" ಎಂದಳು. ಒಣಗಿ ಸುಕ್ಕುಗಟ್ಟಿ ಜೋತಾಡುತ್ತಿದ್ದ ಅವಳ ಮೊಲೆಗಳು ನನ್ನ ಮುಖಕ್ಕೆ ಅಪ್ಪಳಿಸಿದುವು. "ಆತುರ ಬಿದ್ದು ಮಾಡುವುದು, ವಿರಾಮವಾಗಿದ್ದಾಗ ಪಶ್ಚಾತ್ತಾಪ ಪಡುವುದು. ಏನು ಹೇಳ್ತೀಯಾ ರಾಜಕುಮಾರ?" ನಾನು ಮುಖ ತಿರುಗಿಸಿ ಕೃಷ್ಣನ ಗರ್ಭಗುಡಿ ಪ್ರವೇಶಿಸಿದೆ.

ನಂಬಿಕೆ ದ್ರೋಹಕ್ಕಿಂತ ಅತ್ಯಂತ ನೋವಿನ ಮತ್ತು ಖಿನ್ನತೆಯ ಸಂಗತಿ ಮತ್ತೊಂದಿದೆಯೆ? ಅದು ನಷ್ಟ. ನಷ್ಟಕ್ಕಿಂತಲೂ ಹೆಚ್ಚು ಕೆಟ್ಟದ್ದೆಂದರೆ, ನೆನಪು ಹೂಡುವ ತಂತ್ರಗಳು ಇನ್ನೂ ಕೆಟ್ಟದ್ದಾಗಿರುತ್ತವೆ. ನಾನು ಕೃಷ್ಣನ ಕಡೆ ನೋಡಿದೆ. ಅದೊಂದು ರೀತಿಯಲ್ಲಿ ವರ್ಷಗಳ ನಂತರ ಪ್ರಾಣಸ್ನೇಹಿತನನ್ನು ಸಂಧಿಸಿದಂತೆ. ನೋಡಿದ ಕೂಡಲೆ ನನಗೆ ಮೊದಲಿಗೆ ಬಂದ ಪ್ರೇರಣೆ ಎಂದರೆ, ಅದೊಂದು ಪ್ರೇರಣೆಯೇ ಅಲ್ಲ; ಆದರೆ ಜಗತ್ತಿನಲ್ಲಿ ಅತ್ಯಂತ ಸಹಜ ಕ್ರಿಯೆ, ನಾನು ನಾಲ್ಕೈದು ವರ್ಷದವನಾಗಿದ್ದಾಗ, ಮಾಡಿದಂತೆ ಅವನನ್ನು ಮುಟ್ಟುವುದು. ಆದರೆ ಪೂಜಾರಿಯು ನನ್ನನ್ನು ಬರಮಾಡಿಕೊಳ್ಳಲು ಮುಂದೆ ಬಂದದ್ದರಿಂದ ಆ ಮನಸ್ಥಿತಿ ಮುರಿದು ಬಿದ್ದಿತ್ತು. ಅಂತಿಮವಾಗಿ ನಾವಿಬ್ಬರೂ ಪರಸ್ಪರ ಮುಖಾಮುಖಿಯಾಗಿದ್ದೆವು. ಇಬ್ಬರು ಮಾನವ ಶತ್ರುಗಳು. ಒಂದು ತಿದ್ದುಪಡಿ. ಒಂದು ಮಾನವ, ಇನ್ನೊಂದು ದೈವಿಕ ಮತ್ತು ಅಮರ. ಅವನ ವಿಷಯಕ್ಕೆ ನನಗೆಂಥ ಅಸಹ್ಯದ ಅಲೆ ಉಕ್ಕಿ ಬಂದಿತ್ತೆಂದರೆ, ಅವನ ಉಸಿರಿನ ಕೊನೆಯ ಎಳೆಯೂ ಇಲ್ಲವಾಗುವಂತೆ, ಕುತ್ತಿಗೆ ಹಿಸುಕಿ ಅನಂತರ ಅದನ್ನು ಮುರಿಯಬೇಕೆನಿಸಿತು, ನಾನಿಲ್ಲೇನು ಮಾಡುತ್ತಿದ್ದೆ. ನನ್ನ ಉಳಿದ ಬದುಕಿನಲ್ಲಿ ಅವನ ಸಾಮೀಪ್ಯವಿರುವ ಎಲ್ಲಿಯೇ ಆದರೂ ಸರಿಯೆ ನಾನು ಅವನ ಮುಖ ನೋಡಲು ಇಚ್ಛಿಸುವುದಿಲ್ಲ. ಅವನನ್ನು 'ಏಕೆ' ಎಂದು ಕೇಳುವುದು. ಭಾವೋದ್ವೇಗದ ಮತ್ತು ದಡ್ಡ ಪ್ರಶ್ನೆ. ಒಂದು ವಿರಳ ಸಂದರ್ಭದಲ್ಲಿ ಯಾರಾದರೂ ಅದಕ್ಕೆ ಒಂದು ಕಾರಣ ಕೊಡಲು, ಒಂದು ಸಮರ್ಥವಾದ ಕಾರಣವನ್ನೇ ನೀಡಲು ಮುಂದೆ ಬಂದರೂ ಎಂದಾದರೂ ಅದು ಹೃದಯವನ್ನು ಮುಟ್ಟುತ್ತದೆಯೆ? ಅಥವಾ ಸತ್ಯವನ್ನು ಬಯಲು ಮಾಡುತ್ತದೆಯೆ?

ಕೃಷ್ಣನ ಹೆಣ್ಮರುಳತನವೆಂಬುದು ದಂತಕತೆಯಾಗಿ ಬಿಟ್ಟಿತ್ತು. ಯಾವಾಗ ನೋಡಿದರೂ ಹೆಂಗಸರು ಅವನನ್ನು ಸುತ್ತುವರಿದಿರುತ್ತಿದ್ದರು. ಆದರೆ ಯಾವಾಗಲೂ, ವಿಸ್ಮಯಕ್ಕೀಡು ಮಾಡುತ್ತಿದ್ದ, ತಬ್ಬಿಬ್ಬುಗೊಳಿಸುತ್ತಿದ್ದ, ವಿವರಣೆಗೆ ಸಿಗದ ಸಂಗತಿಯೆಂದರೆ, ಕುತೂಹಲಕರವಾದ ಅವನ ಆಕರ್ಷಿಸುವ ಸ್ವಭಾವ. ಹೆಚ್ಚು ಹೆಂಗಸರು ಅವನಿಗಿದ್ದಷ್ಟೂ ಹೆಂಗಸರು ಅವನನ್ನು ಬಯಸುತ್ತಿದ್ದರು. ಅವನು ಅವರನ್ನು ತೊರೆದಾಗ ಅಥವಾ ಸುಮ್ಮನೆ ಹಾಗೇ ಸುಮ್ಮನೆ ಮರೆತು ಬಿಟ್ಟಾಗ, ಅವನು ಇನ್ನಷ್ಟು ಆಕರ್ಷಕನೂ ಇನ್ನಷ್ಟು ಅಪೇಕ್ಷಣೀಯವೂ ಆಗಿಬಿಟ್ಟನು. ನಿಜಸಂಗತಿ ಬಹುಶಃ ತುಂಬ ಸರಳವಾದ್ದು; ಸ್ತ್ರೀಯರು ಸ್ತ್ರೀಲೋಲನನ್ನು ಪ್ರೀತಿಸುತ್ತಾರೆ.

ಆದರೆ ಅದೆಲ್ಲ ಒಂದೆರಡು ಸಾವಿರ ವರ್ಷಗಳ ಹಿಂದೆ. ಅವನು ಅತ್ಯಂತ ಪ್ರಾಪಂಚಿಕವಾದ ದುರಂತದ ಸಾವನ್ನು ಸತ್ತಿದ್ದನು. ಇಷ್ಟೊಂದು ವರ್ಷಗಳ ಬಳಿಕ ಅದೆಲ್ಲ ಏಕೆ, ಮರೆತು ಬಿಡಿ. ಆ ಮಾರ್ಗದಲ್ಲಿ ಯೋಚಿಸುವುದು ಅಂಥದೇನೂ ಫಲಕಾರಿಯಲ್ಲ. ನಾನು ಏನು ಮಾಡಬೇಕಿತ್ತೋ ಅದೆಲ್ಲವನ್ನು ಅಭಿಷೇಕ ಪೂಜೆ, ಆರತಿ,

ದೀರ್ಘ ದಂಡ ನಮಸ್ಕಾರ, ಪ್ರದಕ್ಷಿಣೆ ನಮಸ್ಕಾರ, ಮಾಡಿದೆ. ಪ್ರಸಾದವನ್ನು ತಿಂದೆ. ಹಿರಿಯ ಮಂತ್ರಿಗಳದೂ ಮುಗಿದ ಮೇಲೆ ನಾವು ಅಲ್ಲಿಂದ ಹೊರಟೆವು.

* * *

ನನ್ನ ಸೋದರ ಸಂಬಂಧಿ ರಾಜೇಂದ್ರ ಸಿನ್ಹಾನ ನಿವಾಸದಲ್ಲಿ ಸೇರಿದ್ದ ಗೌರವಾನ್ವಿತ ಮಹಾಸಭೆ ಮಹಾರಾಜ್ ಕುಮಾರ್ ಮತ್ತು ಷಹಜಾದರನ್ನು ಸ್ವಾಗತಿಸಲು ಎದ್ದು ನಿಂತಿತು. ಆಹ್ವಾನ ಬಂದಿದ್ದು ರಾಜೇಂದ್ರನ ಕಡೆಯಿಂದ. ಆದರೆ ಕುಟುಂಬದ ಹಿರಿಯರಾಗಿ ಅವರ ತಂದೆ ನಮ್ಮ ಮಾವ ಲಕ್ಷ್ಮಣ ಸಿಂಹರು ನಮ್ಮನ್ನು ಸ್ವಾಗತಿಸಲು ಮುಂದೆ ಬಂದರು. ನನ್ನನ್ನು ಆಲಿಂಗಿಸಿಕೊಂಡು ರಾಜಕುಮಾರ ಬಹಾದುರ್ ಕಡೆ ತಿರುಗಿ.

"ಸಲಾಂ ಆಲೇಕುಂ ರಾಜಕುಮಾರ, ತುಂಟ ಬಾಲಕೃಷ್ಣನ ಜನ್ಮದಿನಕ್ಕೆ ನಿಮಗೆ ಸ್ವಾಗತ. ನಮ್ಮ ಮನೆಯನ್ನು ನಿಮ್ಮ ಮನೆಯೆಂದೇ ತಿಳಿಯಿರಿ. ಉಲ್ಲಾಸ ಹೊಂದಿರಿ. ಬಾಲಕೃಷ್ಣನ ಆಶೀರ್ವಾದ ನಿಮ್ಮ ಮೇಲಿರಲಿ"

ನನ್ನ ಹೃದಯದ ಬಡಿತ ಒಂದು ಕ್ಷಣ ನಿಂತಿತು. ಬಹಾದುರ್ ಮತ್ತು ನಾನು ಇಬ್ಬರೂ ಕೌಸಲ್ಯಳ ಸಂಗತಿಯನ್ನು ನಮ್ಮ ಹಿಂದೆ ಇಟ್ಟುಕೊಂಡಂತಿತ್ತು. ಅವನೇನೂ ಮೂರ್ಖನಲ್ಲ. ಅಲ್ಲದೆ ಕೌಸಲ್ಯಳ ತಂತ್ರಗಾರಿಕೆಯಿಂದ ಖಂಡಿತ ಅವನು ಮೋಸ ಹೋಗಿರಲಿಕ್ಕಿಲ್ಲ. ಮೊದಲೇ ನಿರ್ಧರಿಸಿದಂತೆ ಪ್ರಣಯದ ಆ ರಾತ್ರಿ, ತನ್ನ ಉಲ್ಬಣಗೊಳ್ಳುತ್ತಿರುವ ಗೊನೋರಿಯಾ ಬಗ್ಗೆ ಅವನಿಗೇನಾದರೂ ಹೇಳಿದಳೋ ಅಥವಾ ಕೋಪ, ನಾಚಿಕೆಗಳಿಂದ ಕೆಂಪಾಗಿ ತನ್ನನ್ನೇ ತಿರಸ್ಕರಿಸಿ ಭರ್ತ್ಸನೆ ಮಾಡುತ್ತಿರುವ ಇಡೀ ದೇಹದೊಂದಿಗೆ ಮಾತಿಲ್ಲದೆ ನಿಂತಿದ್ದಳೋ ಎಂಬುದನ್ನು ನಾನು ಖಚಿತವಾಗಿ ಹೇಳಲಾರೆ. ಅವನು ಅವಳಿಂದ ತಿರಸ್ಕೃತಗೊಂಡಿದ್ದನು. ತನಗೆ 'ಇಲ್ಲ' ವೆಂದು ಹೇಳುವ ಯಾರನ್ನೇ ಆಗಲಿ ರಾಜಕುಮಾರನು ಕಲ್ಪಿಸಿಕೊಳ್ಳಲೂ ಆರ. ಅಪರಾಧವೇನೆಂಬುದು ಗಮನಕ್ಕೆ ಬಂದಿತ್ತು. ಆದರೆ ಅದನ್ನು ಸುಗಂಧಭರಿತ ಪುಷ್ಪವೊಂದನ್ನು ಪ್ರಿಯತಮೆಯಿಂದ ತೆಗೆದುಕೊಂಡು ಬಹು ಜನರು ಕೈಯಾಡಿಸುವ ಪುಸ್ತಕದಲ್ಲಿಡುವಂತೆ ಇಡಲಾಗಿತ್ತು. ಅವನು ಒಂದು ದಿನ ಅದನ್ನು ಹೊರ ತೆಗೆದು, ಒಣಗಿ, ತೇವವೆಲ್ಲಾ ಇಂಗಿಹೋದ ಹೂವಿನ ಎಸಳ ಕಡೆ ಗುರಿ ಇಲ್ಲದವನಂತೆ ನೋಡಿ ಪೆಟ್ಟುಕೊಡುವನು. ಅವನನ್ನು ಕೊಂಡೊಯ್ಯಲು 'ಅತಿಥಿ ಅರಮನೆಗೆ' ಹೋದಾಗ, ಅವನು ತನ್ನ ಎಂದಿನ ಬೆಚ್ಚನೆಯ ಪ್ರೀತಿಯಿಂದ ಕೂಡಿದ ವ್ಯಕ್ತಿಯೇ ಆಗಿದ್ದನು. ಯಾವುದೋ ದೂರದ ಭವಿತವ್ಯಕ್ಕಾಗಿ ವರ್ತಮಾನದ ಪ್ರೀತಿಯನ್ನು ಹಾಳು ಮಾಡಿಕೊಳ್ಳುವುದು ಅರ್ಥವಿಲ್ಲವೆನಿಸಿತು. ಭವಿಷ್ಯತ್ತು ಸಾಗಿ ಹೋಗಲು ಬಂದಾಗ, ಅವನು ಪ್ರತೀಕಾರದ ಬೆಲೆಯನ್ನು ಬಲಾತ್ಕಾರವಾಗಿ ವಸೂಲು ಮಾಡಿಕೊಳ್ಳುತ್ತಾನೆ.

ಹಿಂದೂ ದೇವರ ಹೆಸರನ್ನು ಹೇಳಿದ್ದು ಅವನ ಜಠರದಲ್ಲಿ ಸಿಕ್ಕಿಕೊಳ್ಳುತ್ತದೆಯೆ? ದುಡುಕಿನಿಂದ ಮುನ್ನುಗ್ಗಿ ಅದನ್ನೇ ಒಂದು ಹಗರಣವನ್ನಾಗಿ ಮಾಡಿಬಿಡುವನೆ? ಶತ್ರುಗಳ ಶಸ್ತ್ರಬಲ ತಗ್ಗಿಸಿದ ನಗೆ ಮತ್ತು ವಿಜಯದ ಮುಗುಳ್ನಗೆ ಬೀರಿದನು. ತನ್ನ ಧಾರ್ಮಿಕ ನಂಬುಗೆಯ ಸಂಪ್ರದಾಯಾನುಸಾರ ವಾಲೇ ಕುಮ್ ಸಲಾಮ್ ಎಂದು ಹೇಳಿ ಮಾವ ಲಕ್ಷ್ಮಣ ಸಿಂಹಜೀಯುವರನ್ನು ಮೂರು ಬಾರಿ ಅಲಂಗಿಸಿಕೊಂಡನು. ಲಕ್ಷ್ಮಣ ಸಿಂಹಜೀಯವರೂ ಅದಕ್ಕೆ ತಕ್ಕಂತೆ ಪ್ರತಿಯಾಗಿ ತೀರಾ ಕೆಟ್ಟದಲ್ಲದ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಹಿಂದೆ ಭೇಟಿ ಮಾಡಿದಾಗ, ಅವನು ಹೇಳಿದ ವಿನೋದದ ಸಾಂದರ್ಭಿಕ ಕಥೆಯೊಂದನ್ನು ಅಲಕ್ಷಿಸಿದ್ದರು. ಷಹಜಾದಾ ಲಕ್ಷ್ಮಣ ಸಿಂಹಜೀಯವರನ್ನು ಪೂರ್ತಿಯಾಗಿ ಬಳಸಲು ಸಾಧ್ಯವಾಗದಿದ್ದರೂ ಲಕ್ಷ್ಮಣ ಸಿಂಹಜೀಯವರು ಕರ್ತವ್ಯ ಬದ್ಧರಾಗಿ ತಮ್ಮ ಎಡಕೆನ್ನೆ, ಬಲಕೆನ್ನೆ ಮತ್ತೆ ಎಡಕೆನ್ನೆಗಳನ್ನು ಮುಂದು ಮಾಡಿದರು.

ನಮ್ಮ ಮಾವನನ್ನು ಕಂಡರೆ ನನಗೆ ತುಂಬ ಇಷ್ಟ. ಹಾಗೆಯೇ ನನ್ನನ್ನು ಕಂಡರೆ ಅವರಿಗೂ ತುಂಬ ಇಷ್ಟ ಎಂದು ನನ್ನ ಊಹೆ. ಅವರ ಬೊಜ್ಜು ಮೈಯಿನ ಬೃಹದಾಕಾರ, ಜೋತಾಡುತ್ತಿರುವ ಮೊಲೆಗಳು, ಅಥವಾ ಸಂಜೆ ಹೊತ್ತು ಅಂಗಮರ್ದಕನೆದುರಿಗೆ ಅಂಗಮರ್ದನಕ್ಕೊಳಗಾದಾಗ ಅವರ ದೇಹ ಸಮುದ್ರದ ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಹೋಗುವ ಮಾಂಸದ ಅಲೆಗಳಿಂದಾಗಲಿ ನಿರುತ್ಸಾಹ ತಾಳಬೇಕಿಲ್ಲ. ಅವರು ಶ್ರೇಷ್ಠ ಅಭಿರುಚಿಯ, ತುಂಟತನದಿಂದ ಕೂಡಿದ ವಿನೋದದ, ಮನುಷ್ಯ. ಅವರ ಅತ್ಯುಚ್ಚ ಕಾಮಾಸಕ್ತಿಯಾದರೋ ಯಾವುದೇ ಹೆಣ್ಣಿಗೆ ತಡೆದುಕೊಳ್ಳಲಾಗದಷ್ಟು. ಚಿತ್ತೂರಿನಲ್ಲಿ ಅವರೊಬ್ಬರೇ ನಿಜಕ್ಕೂ ಭೋಗಲೋಲುಪ. ಒಳ್ಳೆ ಭೋಜನಪ್ರಿಯ, ಮದ್ಯಪ್ರಿಯ ಮತ್ತು ವಿವಿಧ ಸ್ವರಗತಿಗಳಲ್ಲಿ ಹೂಸು ಬಿಡುವುದೂ ಸೇರಿದಂತೆ ದೇಹಸುಖಗಳನ್ನು ಬಹುವಾಗಿ ಇಷ್ಟಪಡುವ ವ್ಯಕ್ತಿ. ಅಲ್ಲದೆ ತುಂಬ ಒಳ್ಳೆಯ ಸಂಗೀತಗಾರ. ಅವರ ಕಂಠಕ್ಕೆ ವಿಶಿಷ್ಟವಾದ ಅನುರಣನಕಾರಿಯಾದ ನಾದ ಗುಣವಿತ್ತು. ಈ ಕಾರಣದಿಂದಲೇ ಅವರು ಸಪೂರವಾಗಿ ಚಟುವಟಿಕೆಯಿಂದ ಕೂಡಿದ ಯೌವನದ ದಿನಗಳಲ್ಲಿ ಎಲ್ಲ ಸಂತೋಷ ಕೂಟಗಳಲ್ಲಿ ಅತ್ಯಂತ ಬೇಡಿಕೆಯಿರುವ ಜನಪ್ರಿಯ ಹವ್ಯಾಸಿ ಗಾಯಕರಾಗಿದ್ದರು. ತನ್ನ ಗಾಯನದ ಸಂಗತಿಯನ್ನು ಅವರೆಂದೂ ಅನಗತ್ಯವಾಗಿ ದೊಡ್ಡದು ಮಾಡುತ್ತಿರಲಿಲ್ಲ. ಅವರಿಗೆ ತನ್ನ ಬಗ್ಗೆಯೇ ತುಂಬು ಮೆಚ್ಚಿಕೆ ಇತ್ತು ಹಾಗೂ ಇತರೆಯುವರೂ ತನ್ನನ್ನು ತುಂಬ ಇಷ್ಟಪಡುತ್ತಾರೆಂಬುದೂ ಚೆನ್ನಾಗಿ ಗೊತ್ತಿತ್ತು. ಅವರು ತಂದೆಯವರ ಸೋದರ ಸಂಬಂಧಿ. ತಂದೆಯವರು ಬಹುಮಟ್ಟಿಗೆ ರಾಜಧಾನಿಯಿಂದ ಹೊರಗಿರುತ್ತಿದ್ದುದರಿಂದ ಹಾಗೂ ಅವರ ಮಗ ರಾಜೇಂದ್ರ ಮತ್ತು ನಾನು ಇಬ್ಬರೂ ಸಮವಯಸ್ಕರಾಗಿದ್ದರಿಂದ ಅವರು ತಾವಾಗಿಯೇ ನನ್ನ ಪೋಷಕರಾಗುವ ಹೊಣೆ ಹೊತ್ತರು.

ರಾಜೇಂದ್ರ ಅಪ್ಪನ ಮಗನೇ. ಜೀವನದಲ್ಲಿನ ಒಳ್ಳೆಯದೆಲ್ಲವೂ ಅವನಿಗೆ ಇಷ್ಟ. ನಾನು ಚಿಕ್ಕವನಾಗಿದ್ದಾಗ, ನನಗೆ ಪ್ರೋತ್ಸಾಹದ ಬೆಂಬಲ ಬೇಕಾದಾಗಲೆಲ್ಲ ಅವನಲ್ಲಿಗೆ ಹೋಗುತ್ತಿದ್ದೆ. ನಾವು ಬೆಳೆದು ದೊಡ್ಡವರಾದ ಮೇಲೆ ದೂರವಾದೆವು. ಅಂಥ ಜಗಳ ಗುದ್ದಾಟ ಏನಿಲ್ಲ. ಹೀಗೇ ನಮ್ಮ ನಮ್ಮ ದಾರಿಗಳಲ್ಲಿ ನಾವು ಸಾಗಿಹೋಗುವುದು. ಹಾಗೆ ಹೋದದ್ದು ಬಹಳಷ್ಟು ಸಲ ನಮ್ಮನ್ನು ಹತ್ತಿರ ತರುವಂಥವಾಗಿರಲಿಲ್ಲ. ತಂದೆಯವರು ಅವನನ್ನು ಒಂದು ಅಶ್ವದಳಕ್ಕೆ ಮುಖ್ಯಸ್ಥನನ್ನಾಗಿ ನೇಮಕ ಮಾಡಿರುವುದರಿಂದ ಇನ್ನು ಮುಂದೆ ನಾವಿಬ್ಬರೂ ಪರಸ್ಪರ ಜೊತೆ ಜೊತೆಯಲ್ಲೇ ಇರುತ್ತೇವೆ. ನಾನು ರಾಜೇಂದ್ರನಿಗೆ ಮತ್ತೆ ಹತ್ತಿರವಾಗುವುದನ್ನು ಎದುರು ನೋಡುತ್ತಿದ್ದೇನೆ. ಕಾರಣ ನನಗೆ ಸ್ನೇಹಿತರು, ಗೆಳೆಯರು ಬೇಕು. ಅಷ್ಟೇ ಅಲ್ಲ, ನನಗೆ ರಾಜೇಂದ್ರ ಅಂದರೆ ತುಂಬ ಇಷ್ಟ. ಅನೇಕ ಸಮುದಾಯ ಪ್ರಿಯ ಮತ್ತು ವಾಚಾಳಿ ಪ್ರಾಣಿಗಳಲ್ಲಿ ಆಗುವಂತೆ ಅವನ ಮನಸ್ಸಿನಲ್ಲಿ ಏನಾಗುತ್ತಿದೆ ಅಥವಾ ಅವನೇಕೆ ಬೇರೆಯವರಿಗೆ ನೋವುಂಟು ಮಾಡುತ್ತಾನೆ ಎಂದು ನೀವು ಎಂದೂ ತಿಳಿಯಲಾಗುವುದಿಲ್ಲ. ಅವನೊಬ್ಬ ಸಂಪನ್ನ ವ್ಯಕ್ತಿ ಮತ್ತು ನಿಷ್ಠಾವಂತ ವ್ಯಕ್ತಿ. ಮೊದಲಿಗೆ ಬಹಾದುರ್ ಖಾನನ ಜೊತೆಗಿನ ಅವನ ಕಾವು ಮನೆಯ ಸ್ನೇಹದ ಬಗ್ಗೆ ಸ್ವಲ್ಪಮಟ್ಟಿಗೆ ಜಾಗರೂಕನಾಗಿಯೇ ಇದ್ದೆ. ಆದರೆ ನಾನು ಅದರ ಭಾಗವಾದ ಮೇಲೆ, ಅದು ಏನಿದ್ದರೂ ತನ್ನದಾಗಿ ಮಾಡಿಕೊಳ್ಳುವ ಪ್ರವೃತ್ತಿ ಅಷ್ಟೇ ಹೊರತು ಮತ್ತೇನಲ್ಲ ಎಂದು ಊಹಿಸಿದೆ. ಅವರಿಬ್ಬರೂ ನನ್ನನ್ನು ಬಿಟ್ಟು ಹೋದರೆಂದೆನಿಸಿತು. ಆದರೆ ನಗರದಲ್ಲಿ ಅವರೊಂದಿಗೆ ರಾತ್ರಿ ವಿಹಾರಕ್ಕೆ ಸೇರಿಕೊಳ್ಳಲು ನನಗೆ ಮನಸ್ಸಾಗಲಿಲ್ಲ. ಯಾರ ಹತ್ತಿರ ನಾವು ಅನ್ಯೋನ್ಯವಾಗಿರುವುದರ ಬಗ್ಗೆ ಮತ್ತು ಆ ಅನ್ಯೋನ್ಯತೆಗೆ ನೀರೆರೆಯುವ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳಲಿಲ್ಲವೋ, ಅದರ ವಿಷಯದಲ್ಲಿ ನಾವು ಸದಾ ನಮ್ಮ ಹಕ್ಕು ಸ್ಥಾಪಿಸ

ಹೊರಡುತ್ತೇವೆ. ಬಹಾದುರ್ ಮತ್ತು ರಾಜೇಂದ್ರ ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುವುದು, ಇಬ್ಬರೂ ಭೇಟಿಯಾದಾಗ ಒಬ್ಬರನ್ನೊಬ್ಬರು ನಮಸ್ಕರಿಸಿ ಕುಶಲ ಪ್ರಶ್ನೆ ಮಾಡುವ ರೀತಿ. ಇವುಗಳನ್ನು ನೋಡಿದಾಗ, ಅವರಿಬ್ಬರೂ ಈಗಲೂ ಆಪ್ತರೇ.

ಪ್ರಧಾನಮಂತ್ರಿ ಪೂರಣ್‌ಮಲ್‌ಜೀ, ಆದಿನಾಥ್‌ಜೀ, ಸಂಪುಟದ ಇತರೆ ಸಚಿವರು, ನನ್ನ ಸೋದರ ಸಂಬಂಧಿಗಳು, ಅಕ್ಕ ತಂಗಿಯರ ಮಕ್ಕಳು, ತಮ್ಮಂದಿರ ಮಕ್ಕಳು ತಮ್ಮಂದಿರು, ಎಲ್ಲರೂ ಬಂದು ನನಗೆ ಶುಭಾಶಯ ಕೋರಿದರು. ಇದೊಂದು ಅನೌಪಚಾರಿಕ ಸಮಾರಂಭ. ಆದರೆ ಅನಂತರ ಅವರ ಜೊತೆ ನಾನು ಸೇರಿಕೊಳ್ಳುತ್ತೇನೆ. ಚಿತ್ತೂರಿನಲ್ಲಿ ನಾನು ತಂದೆಯುವರ ಪ್ರತಿನಿಧಿಯಾಗಿರುವುದರಿಂದ, ಪೂಜಾವಿಧಿಗಳು ಪ್ರಾರಂಭವಾಗುವವರೆಗೂ ನಾನು ನನ್ನ ಘನತೆಗೆ ತಕ್ಕಂತೆ ನಡೆದುಕೊಳ್ಳಬೇಕೆಂದು ಆಸ್ಥಾನ ಸಂಪ್ರದಾಯದ ಆಗ್ರಹ. ಈಗ ಅವರು ಏನು ಯೋಚಿಸುತ್ತಿರಬಹುದೆಂದು ನನಗೆ ತಿಳಿದಿದೆ. ಅದೃಷ್ಟವಶಾತ್ ಈಗಲೂ ಕುಂಭಲ್‌ಗರ್‌ನಲ್ಲಿ ಜೈಲಿನಲ್ಲಿರುವ, ವಿಕ್ರಮಾದಿತ್ಯನೊಬ್ಬನನ್ನು ಹೊರತುಪಡಿಸಿದರೆ, ಬೇರೆ ಯಾರೂ ಈ ಮಧ್ಯಾಹ್ನ ಬೃಂದಾವನಿಯ ದೇವಸ್ಥಾನದಲ್ಲಿಯ ನನ್ನ ಹೆಂಡತಿಯ ಹಾಡು ಮತ್ತು ನೃತ್ಯದ ಬಗ್ಗೆ ಪ್ರಸ್ತಾಪಿಸುವುದಿಲ್ಲವೆಂದು ನನಗೆ ಖಾತರಿ ಇದೆ. ನಾನು ಎಲ್ಲರೊಡನೆ ಹರಟುವೆ. ಅವರ ಹೆಂಡತಿ ಮಕ್ಕಳ ಬಗ್ಗೆ ವಿಚಾರಿಸುವೆ ಮತ್ತು ಅಷ್ಟೇನೂ ಮುಖ್ಯವಲ್ಲದ ವಿಷಯಗಳ ಬಗ್ಗೆ ಒತ್ತುಕೊಟ್ಟು ಮಾತಾಡುವೆ.

ಈ ಹೊತ್ತು ದೀಪಾವಳಿಯೇನೋ ಎಂಬಂತೆ ಮನೆ ತುಂಬ ದೀಪಗಳು ಬೆಳಗುತ್ತಿವೆ. ನಮ್ಮ ಮಾವ ದೀಪಗಳನ್ನು ವಿಪುಲವಾಗಿ ಸಂಗ್ರಹಿಸಿದ್ದಾರೆ. ಅವುಗಳನ್ನೆಲ್ಲ ಪ್ರದರ್ಶಿಸಲು ಇದು ಸರಿಯಾದ ಜಾಗ. ಬೃಹದಾಕಾರದ ಕಿಟಕಿಗಳಲ್ಲಿ ಆಕಾಶ ನೀಲಿಯ ಪರದೆಗಳನ್ನು ಲಘು ನಿಯಂತ್ರಣದೊಂದಿಗೆ ತೂಗು ಬಿಡಲಾಗಿತ್ತು. ಆದರೆ ವಿರುದ್ಧ ದಿಕ್ಕಿನಿಂದ ಬೀಸುವ ಗಾಳಿ ಅವುಗಳನ್ನು ಹಾರಾಡುವಂತೆ ಮಾಡಿ ಮತ್ತೆ ಅವು ಹೊರಳಿ, ಛಾವಣಿಯನ್ನು ಸ್ಪರ್ಶಿಸುವಂತಾಗುತ್ತಿತ್ತು. ನಮ್ಮ ಮನೆಗಳಲ್ಲಿ ತುಂಬ ಬೆಲೆ ಬಾಳುವ ರತ್ನಗಂಬಳಿಗಳಿರಬಹುದು. ಆದರೆ ಲಕ್ಷ್ಮಣ ಸಿಂಹರ ಮನೆಯಲ್ಲಿರುವ ಪರ್ಶಿಯಾದ ಮತ್ತು ಆಫ್ಘಾನಿಸ್ತಾನದ ರತ್ನಗಂಬಳಿಗಳು ಹೆಚ್ಚು ಗಟ್ಟಿ ಮತ್ತು ಆಕರ್ಷಕವಾದವು. ಅವುಗಳ ಮೇಲೆ ಕೂರಬಹುದು ಹೊರಳಾಡಬಹುದು ಅಥವಾ ಮಲಗಿ ಗೊರಕೆ ಹೊಡೆಯಬಹುದು. ಯಾರೂ ಓಡಿ ಬಂದು, ಹುಷಾರಾಗಿರಿ, ರತ್ನಗಂಬಳಿ ಹಾಳಾದೀತು, ಕಾರಣ ಇದು ಕಾಶ್ಮೀರದ ಮಹಾರಾಜನ ಕಾಣಿಕೆಯಾದರೆ, ಕೆಸರು ಹತ್ತಿದ ಪಾದರಕ್ಷೆಗಳನ್ನಿಡುವ ಇನ್ನೊಂದು ತುರ್ಕಿಯ ಸುಲ್ತಾನನ ಕೊಡುಗೆ ಎಂದು ಎಚ್ಚರಿಸುವುದಿಲ್ಲ. ಬಂಧನದಲ್ಲಿರುವ ರಾಜನೊಬ್ಬನನ್ನು ಬಿಡುಗಡೆಗೊಳಿಸಲು ತೆರಬೇಕಾದ ಹಣದ ಬೆಲೆಬಾಳುವಂಥದು. ಅದು ಸಂಗ್ರಾಹಕನೊಬ್ಬನ ಅಪೂರ್ವ ವಸ್ತು. ನಿಜಕ್ಕೂ ರತ್ನಗಂಬಳಿಯ ಮೇಲೆಲ್ಲಾ ನೂರಾರು ಮೆತ್ತೆಗಳನ್ನು ಸಜ್ಜುಗೊಳಿಸಲಾಗಿತ್ತು. ಕೆಲವು ಗುಂಡಾಕಾರದಲ್ಲಿ ಕೆಲವು ಚೌಕಾಕಾರ. ಇನ್ನು ಕೆಲವು ಕೊಳವೆಯಾಕಾರ. ಯಾರ ಗಮನಕ್ಕೂ ಬಾರದಂಥ ಜಾಗವೊಂದರಲ್ಲಿ ಕುಳ್ಳಿರಲು ನಾನು ಇಷ್ಟಪಡುತ್ತೇನೆ. ಏಕೆಂದರೆ ಒಂದು ವೇಳೆ ಬೇಸರವಾದರೆ, ಅಲ್ಲಿಂದ ಜಾರಿಕೊಳ್ಳಬಹುದು. ಆದರೆ ತನ್ನ ಕ್ಷೇತ್ರದಲ್ಲಿ ಪ್ರತಿಷ್ಠೆಯ ವ್ಯಕ್ತಿಯಾಗಿದ್ದು, ಬೇರೆಯವರು ಲಕ್ಷ್ಮಿಸದಂತಿರಬೇಕೆಂದರೆ ಸಾಧ್ಯವಿಲ್ಲ.

ಈ ರಾತ್ರಿ ಔಪಚಾರಿಕ ಭೋಜನವಿರುವುದಿಲ್ಲ. ಹಸಿವಾದಾಗ ಅಂಗಳದಲ್ಲಿ ಹಾಕಿರುವ ಬೃಹತ್ ಚಪ್ಪರದಡಿಗೆ ಹೋಗಿ ಭರಪೂರ ಭೋಜನ ಮಾಡಬಹುದು. ಆ ಭೋಜನವಾದರೋ ಈ ಪ್ರಾಂತ್ಯದಲ್ಲಿ ದೊರೆಯುವ ಅತಿ ಉತ್ಕೃಷ್ಟ ಭೋಜನ ಅಥವಾ ಅಪಾರ ಸಂಖ್ಯೆಯಲ್ಲಿರುವ ಉಪ್ಪುಖಾರದ ಬೇರೆ ಬೇರೆ ರೀತಿಯ ತಿಂಡಿಗಳನ್ನು ಸವಿಯಬಹುದು.

ಪಕ್ಕ ವಾದ್ಯ ನುಡಿಸುವವರು ಮತ್ತು ಸಾರಂಗಿ ನುಡಿಸುವವರು ಬಂದು ನನಗೆ, ಬಹಾದುರ್ ಖಾನ್‌ಗೆ, ನನ್ನ ಮಾವನವರಿಗೆ ಮತ್ತು ರಾಜೇಂದ್ರನಿಗೆ ಹಾಗೂ ಉಳಿದೆಲ್ಲಾ ಗೌರವಾನ್ವಿತ ವ್ಯಕ್ತಿಗಳಿಗೆ ನಮಸ್ಕರಿಸಿ ತಮ್ಮ ತಮ್ಮ ವಾದ್ಯಗಳನ್ನು ಅಣಿಗೊಳಿಸಲು ತೊಡಗಿದರು. ರಾಣಾ ಅವರ ಆಗಮನಕ್ಕಾಗಿ, ಅವರಿಲ್ಲದಿದ್ದರೆ ಮಹಾರಾಜ್‌ಕುಮಾರ್ ಅವರ ಆಗಮನಕ್ಕಾಗಿ ಕಾಯಬೇಕು. ಆದರೆ ಈ ನಿಯಮಕ್ಕೊಂದು ಅಪವಾದವಿದೆ. ಗಾಯಕ ಅಥವಾ ನೃತ್ಯಗಾರನಾದ ಕಲಾವಿದ ಅಥವಾ ನೌಟಂಕಿ ಆಡುವವನು ಮಹಾರಾಜರು ಆಸೀನರಾಗುವವರೆಗೂ ಕಾಣಿಸಿಕೊಳ್ಳುವುದಿಲ್ಲ. ಇದು ಸ್ತ್ರೀಯರಿಗೆ ಪಾರ್ಶ್ವಭಾಗದಲ್ಲಿ ಆಸೀನರಾಗಲು ಸೂಚನೆ. ಹೆಚ್ಚಿನದಾದ ತಟ್ಟಿ ಬಾಜಿಸುವ ಮತ್ತು ತಂತೀ ವಾದ್ಯಗಳ ಮೇಲೆ ಕೆಂಪು ಬೆಳಕು ಹಾಯುತ್ತದೆ. ಆ ಕೆಂಪು ಬೆಳಕು ನನ್ನ ತೊಡೆಯೇರಿ, ಅದರ ತೋಳುಗಳು ನನ್ನ ಕಂಠವನ್ನು ಬಳಸಿರುತ್ತವೆ. ಆದಿನಾಥಜೀಯವರು ಪ್ರತಿಭಟಿಸಲು ಏಳುತ್ತಾರೆ. ಆದರೆ ನಾನು ಕೈ ಎತ್ತುತ್ತೇನೆ. ಎಂದಿನಂತೆ ಲೀಲಾವತಿಯು ನನ್ನ ಅಹಂಗೆ ಉತ್ಸಾಹಕ್ಕೆ, ಹೃದಯಕ್ಕೆ, ಆತ್ಮಕ್ಕೆ ಮತ್ತು ಈಗಲೂ ಸುತ್ತಲೂ ಮನಸ್ಸಿನ ಮೂಲೆ ಮುಡುಕುಗಳಿಗೆ ಅದ್ಭುತಗಳನ್ನುಂಟುಮಾಡುತ್ತಾಳೆ.

"ನಾಳೆ ದಿನ ನೀನು ವಿದಾಯವನ್ನೂ ಹೇಳದೆ ಹಾಗೇ ಹೊರಟು ಹೋಗುವೆ"

"ಅದು ನಿಜವಲ್ಲ, ನಾಳೆ ನಸುಕಿನಲ್ಲಿ ನಮ್ಮ ಗೌರವಾನ್ವಿತ ಅತಿಥಿ ನೀವು. ನನಗೆ ಮೇವಾಡದ ಪದಕವನ್ನು ನೀಡಲಿರುವವರು ತಾವು'

"ನೀನು ಮನೆಗೆ ಬರಬಹುದಿತ್ತು"

ಇನ್ನೊಂದೆರಡು ವರ್ಷಗಳು ಕಳೆದರೆ ಲೀಲಾವತಿ ನನಗೆ ತೆಕ್ಕೆ ಬೀಳುವುದಿಲ್ಲ. ಅವರು ಯಾರಾದರೊಬ್ಬ ಲೇವಾದೇವಿಗಾರನಿಗೆ ಅವಳನ್ನು ಮದುವೆ ಮಾಡಿಕೊಟ್ಟುಬಿಡುತ್ತಾರೆ. ಆ ಮೇಲೆ ನಾನು ಅವಳಲ್ಲಿಗೆ ಹೋಗುವುದು, ಅವಳು ನಮ್ಮಲ್ಲಿಗೆ ಬರುವುದು ಇಲ್ಲವೇ ಇಲ್ಲ.

" ನೀನಿನ್ನೂ ಘನತೆವೆತ್ತ ಗುಜರಾತಿನ ಮಹಾಸ್ವಾಮಿಯವರಾದ ರಾಜಕುಮಾರರಿಗೆ ಗೌರವ ನಮಸ್ಕಾರ ತಿಳಿಸಿಲ್ಲ" ಎಂದು ಹೇಳಿ ನಾನು ವಿಷಯ ಬದಲಾಯಿಸಿದೆ. ಚಿತ್ತೂರನ್ನು ಬಿಡಲು ನನಗೆ ಕೊಟ್ಟಿರುವ ಅತಿ ಕಡಿಮೆ ಕಾಲಾವಕಾಶದ ಬಗ್ಗೆ ನಾನು ದೀರ್ಘ ವಿವರಣೆ ನೀಡಲು ಹೊರಟಿರಲಿಲ್ಲ.

"ತಾವು ನಮ್ಮ ಪರಿಚಯಮಾಡಿಸಲಿಲ್ಲ"

"ಷಹಜಾದರೆ ಈಕೆ ಲೀಲಾವತಿ, ಆದಿನಾಥಜೀಯವರ ಮರಿಮಗಳು ಲೀಲಾವತಿ. ಇವರು ಘನತೆವೆತ್ತ ರಾಜಕುಮಾರ ಬಹಾದುರ್‌ಖಾನ್ ಅವರು"

ಲೀಲಾವತಿ ಎದ್ದು ನಿಂತು ರಾಜಕುಮಾರನಿಗೆ ತಲೆಬಾಗಿ ನಮಸ್ಕರಿಸಿದಳು.

"ಈ ಸುಂದರ ಯುವತಿಯನ್ನು ಮಹಾರಾಜ್‌ಕುಮಾರ್ ಅವರು ಪರಿಚಯ ಮಾಡಿಕೊಡುವರೋ ಇಲ್ಲವೋ ಎಂದು ನಾನು ವಿಸ್ಮಿತನಾಗಿದ್ದೆ. ನೀವು ಅವರ ಅಚ್ಚು ಮೆಚ್ಚಿನವರೆ"?

"ಹೌದು, ಅವರು ನನ್ನವರು"

ಎಂಥಾ ಅದ್ಭುತ ಮೆದುಳು ಲೀಲಾವತಿಯದು! ರಾಜಕುಮಾರ ಬಹಾದುರ್ ನನ್ನ ಆಲೋಚನೆಗಳನ್ನು ಅರ್ಥೈಸಿಕೊಂಡಿರಬಹುದು. "ಆಕೆ ಮೇವಾಡದ ಅತ್ಯಂತ ಸುಂದರಿಯರಲ್ಲೊಬ್ಬಳೆನಿಸುತ್ತಾಳೆ"

"ಈಗಾಗಲೇ ಅವಳು ಅತ್ಯಂತ ಕಾಂತಿಯುತ ಚೆಲುವೆ"

ಕಲಾಪ್ರದರ್ಶನ ನೀಡಲಿರುವ ಕಲಾವಿದನ ಹೆಸರನ್ನು ಕಲಾಪ್ರದರ್ಶನ ಮುಗಿಯುವವರೆಗೂ ಯಾವತ್ತೂ ಹೇಳದಿರುವುದು ಲಕ್ಷ್ಮಣ ಸಿಂಹಜೀಯವರ ಜನ್ಮಾಷ್ಟಮಿ ಸಮಾರಂಭಗಳ ಒಂದು ಸಂಪ್ರದಾಯವೇ ಆಗಿಬಿಟ್ಟಿತ್ತು. ಕಲಾ ಪ್ರದರ್ಶನ ನೀಡಲಿರುವ ವ್ಯಕ್ತಿ ಗಂಡೋ ಹೆಣ್ಣೋ ಗಾಯಕರೋ ವಾದ್ಯಕಾರರೋ, ಅಥವಾ ನೃತ್ಯಗಾರರೋ, ಆಕೆಯ ಆತನ ಹೆಸರು ಇತ್ಯಾದಿಗಳನ್ನೆಲ್ಲ ಊಹಿಸುವುದು ಸಾಯಂಕಾಲದ ವಿನೋದಾಚರಣೆಯ ಒಂದು ಭಾಗವಾಗಿತ್ತು. ಇದನ್ನು ಊಹಿಸಲು, ಮದ್ಯ ತುಂಬಿದ ಮರದ ಪೀಪಾಯಿಗಳು, ಸಾವಿರ ನಾಣ್ಯಗಳು, ಒಂದು ಕುದುರೆ, ಒಂಟೆ ಮತ್ತು ಕೆಲವೊಮ್ಮೆ ಒಂದೆರಡು ಹಳ್ಳಿಗಳು ಇವನ್ನು ಜನಪಣವಾಗಿ ಒಡ್ಡುತ್ತಿದ್ದರು. ಪ್ರತಿಯೊಬ್ಬರಿಗೆ ತಮ್ಮ ಸ್ವಂತದ ದ್ರಾಕ್ಷಿ ತೋಟಗಳಿರುತ್ತಿದ್ದುವು. ಅವರು ಹೇಳಿದ ವಿಷಯ ಸತ್ಯವೇ ಎಂದು ಪರೀಕ್ಷಿಸಬಯಸುತ್ತಿದ್ದರು. ರಾಜೇಂದ್ರ ತಲೆಯಾಡಿಸುತ್ತ ಪ್ರತಿಯೊಬ್ಬರ ಊಹೆಗಳನ್ನು ಕೇಳಿಕೊಳ್ಳುತ್ತಿದ್ದನು. ಸಭೆಯ ನೀತಿಯಲ್ಲಿ ಒಂದು ಬಹುಮುಖ್ಯ ಬದಲಾವಣೆಯಾಗಿದೆ, ಹಾಗಾಗಿ ಅರ್ಧಭಾಗ ಹೆಣ್ಣು. ಇನ್ನರ್ಧ ಭಾಗಗಂಡಿನ ನಾಮಧೇಯವನ್ನು ಹೊಂದಿರುವ ದ್ವಿಲಿಂಗ ದೇವತೆ ಅರ್ಧನಾರೀಶ್ವರನ ಹೆಸರಿನ ವ್ಯಕ್ತಿಯೊಬ್ಬರು ಸ್ತ್ರೀ ಪುರುಷ ಸಂಬಂಧಿ ಗೀತೆಗಳನ್ನು ಹೆಣ್ಣು ಮತ್ತು ಗಂಡಿನ ದನಿಗಳಲ್ಲಿ ಏಕಕಾಲದಲ್ಲಿ ಹಾಡಲಿದ್ದಾರೆಂದು ಅದೇ ವ್ಯಕ್ತಿ ಯುಗಳ ನೃತ್ಯ ಪ್ರದರ್ಶನ ನೀಡಲಿದ್ದಾರೆಂದೂ ನನ್ನ ಮಾವ ಬಹು ಗಂಭೀರವಾಗಿ ಘೋಷಿಸಿದರು.

"ಆ ವ್ಯಕ್ತಿ ಒಬ್ಬ ನೃತ್ಯಗಾತಿ ಮತ್ತದು ಹೆಣ್ಣೇ ಆಗಿರುತ್ತದೆಂದು ನನ್ನ ವಜ್ರದ ಮತ್ತು ಪಚ್ಚೆಯ ಕಂಠೀಹಾರವನ್ನು ನಿಮ್ಮ ಹತ್ತಿರ ಪಣವಾಗಿ ಒಡ್ಡಿ ಹೇಳುತ್ತಿದ್ದೇನೆ" ಎಂದು ಷಹಜಾದಾ ಲೀಲಾವತಿಗೆ ಹೇಳಿದನು.

"ತಪ್ಪು, ಭಾಗಶಃ ತಪ್ಪು. ಅದು ಒಬ್ಬ ಮಹಿಳಾ ಗಾಯಕಿಯಾಗಿರುತ್ತಾರೆ" ಲೀಲಾವತಿ ಆತನಿಗೆ ಹೇಳಿದಳು.

"ಬರೀಖಾಲೀ ಶಬ್ದಗಳು ಪ್ರಯೋಜನವಿಲ್ಲ ಲೀಲಾವತಿಯವರೆ. ನೀವು ಮಾತಾಡುವ ಜಾಗದಲ್ಲಿ ಹಣ ಇಡಬೇಕು. ನೀವು ಏನನ್ನು ಪಣವಾಗಿ ಇಡುತ್ತಿದ್ದೀರಿ?"

"ಪಣವಾಗಿಡಲು ನನ್ನ ಹತ್ತಿರ ಏನೂ ಇಲ್ಲ"

"ನೀವು ಸೊಂಟಕ್ಕೆ ಕಟ್ಟಿಕೊಂಡಿರುವ ಬಂಗಾರದ ಡಾಬನ್ನು ಪಣವಾಗಿಡುವುದರ ಬಗ್ಗೆ ಹೇಗೆ?"

ಲೀಲಾವತಿ ಹಿಂದೆ ಮುಂದೆ ನೋಡಿದಳು. "ನಿಮ್ಮ ಕಾಲಂದುಗೆಯೇ ಸಾಕು. ಅದನ್ನು ನನ್ನ ಮಣಿ ಕಟ್ಟಿಗೆ ಕಟ್ಟಿಕೊಳ್ಳುತ್ತೇನೆ" ಬಹಾದುರ್ ಲೀಲಾವತಿಯನ್ನು ಹಗ್ಗದಲ್ಲಿ ಕಟ್ಟಿಹಾಕಲು ಯತ್ನಿಸುತ್ತಿದ್ದನು. ಲೀಲಾವತಿಗೆ ಇದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ನಿರ್ಧರಿಸಲಾಗಲಿಲ್ಲ.

"ನನಗೊಂದು ಕಂಠೀಹಾರವನ್ನು ಪೋಣಿಸುವುದರ ಬಗ್ಗೆ ಹೇಗೆ?" ಷಹಜಾದನು ಎಷ್ಟೊಂದು ಚಾತುರ್ಯದಿಂದ ಲೀಲಾವತಿಯ ಸುತ್ತ ಒಂದು ಉರುಲನ್ನು ಜೀರುತ್ತ ಇದ್ದ ಅಂತ ನನಗೆ ಅರ್ಥವಾಗಿರಲಿಲ್ಲ.

"ಆಗಬಹುದು. ನನಗೆ ಅದು ಒಪ್ಪಿಗೆ. ನೀವು ಮಹಾರಾಜ್ ಕುಮಾರ್ ಜೊತೆ ಸೇರಿಕೊಳ್ಳುತ್ತೀರಾ ಅಥವಾ ಮಾಮು ರಾಜೇಂದ್ರ ಕುಮಾರ್ ಅವರ ಜೊತೆ ಸವಾರಿ ಮಾಡುತ್ತೀರಾ?"

ಇಡೀ ಸಭೆ ಗುಜು ಗುಜು ಗಲಾಟೆ ಮಾಡುತ್ತಿತ್ತು.

ಆದರೆ ಬಹಾದುರನ ನಿಷ್ಠುರ ಮೌನ ನನ್ನ ಮೆದುಳಿನಲ್ಲಿ ಎಚ್ಚರಿಕೆಯ ಗಂಟೆಯಂತೆ ಬಾರಿಸಿತು. ನಾನು ನನ್ನ ಸೊಂಟಪಟ್ಟಿಯನ್ನು ಕಳಚಿ ಲೀಲಾವತಿಗೆ ಕೊಟ್ಟೆ.

"ನಾವು ಘನತೆವೆತ್ತ ಪ್ರಭು ಮಹಾರಾಜ್‌ಕುಮಾರ್ ಅವರ ಪಚ್ಚೆ ಮತ್ತು ಮಾಣಿಕ್ಯಗಳ ಪಟ್ಟಿಯನ್ನು ಪಣವಾಗಿಡುತ್ತೇವೆ. ಅದು ನಿಮಗೆ ಸರಿ ಅಂತ ಅನ್ನಿಸುತ್ತದೆಯೆ?" ಅದು ಎಂಥ ಆತ್ಮೀಯ ಕರೆ ಎಂದು ಹೇಳಲು ಬಯಸಲಿಲ್ಲ.

ಷಹಜಾದಾ ಕಂಠೀಹಾರವನ್ನು ಲೀಲಾವತಿಯ ಕೊರಳ ಸುತ್ತ ಹಾಕಿ "ಏನೇ ಆಗಲಿ ಈ ಬಾರಿ ನೀವೇ ಗೆದ್ದಿರುವಿರಿ ಲೀಲಾವತಿ ಅವರೆ" ಎಂದು ಹೇಳಿದ.

ಅದೃಷ್ಟದ ಪ್ರಕಾರ ನಾನು ನನ್ನ ಪಟ್ಟಿಯನ್ನು ಕಳೆದುಕೊಳ್ಳುತ್ತಿರಲಿಲ್ಲ.

ಪಕ್ಕ ವಾದ್ಯದವನ ಹಾಗೂ ಸಾರಂಗಿಯವನ ಮುಂದೆ ಬಂದು ಸುಖವಾಗಿ ಆಸೀನಳಾದ ಮೇಲೆ ಮಹಿಳೆ ತನ್ನ 'ಹೆಸರು ಸಜನೀ ಬಾಯಿ' ಎಂದು ಘೋಷಿಸಿದಳು. "ಹೆಸರುಗಳು ಮೋಸ ಮಾಡುತ್ತವೋ ಅಥವಾ ಅವು ವ್ಯಕ್ತಿಯ ಬಗ್ಗೆ ಬಹುಮುಖ್ಯವಾದ್ದನ್ನು ಹೇಳುತ್ತವೋ? ಕೆಲವರು ನನ್ನನ್ನು ಪ್ರತಿಯೊಬ್ಬರ ಸಜನಿ ಎಲ್ಲರ ಪ್ರೀತಿ ಪಾತ್ರಳು ಎಂದು ಭಾವಿಸುತ್ತಾರೆ. ಇನ್ನು ಕೆಲವರು ನನ್ನನ್ನು ತಮ್ಮವಳೆಂದು, ತಮಗೆ ಮಾತ್ರ ಸೇರಿದವಳೆಂದು ಭಾವಿಸುತ್ತಾರೆ. ಗಣ್ಯರೆ ತಮ್ಮ ಅಭಿಪ್ರಾಯಗಳನ್ನು ತಾವು ಹೊಂದಲು ಸ್ವತಂತ್ರರಿದ್ದೀರಿ, ಕಾರಣ ನಿಮಗೆ ತಿಳಿದಿರುವಂತೆ ಹೆಣ್ಣು ಸಿಂಹಾಸನವಿದ್ದಂತೆ." ಅವಳು ಮುಗುಳ್ನಕ್ಕು ತನ್ನ ದೊಡ್ಡ ಗಾತ್ರದ ಕಡೆಗೆ ಸನ್ನೆ ಮಾಡುತ್ತ "ಒಂದು ಹೆಣ್ಣು ಅವಳೆಷ್ಟೇ ದೊಡ್ಡ ಗಾತ್ರದವಳಾದರೂ ಒಂದು ಗೊತ್ತಾದ ಕಾಲದಲ್ಲಿ ಒಬ್ಬ ವ್ಯಕ್ತಿಯನ್ನು ಮಾತ್ರ ರಮಿಸಬಹುದು. ಈ ಸುಖವನ್ನು ನನ್ನಿಂದ ಪಡೆಯಿರಿ ಎಂದು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಆದೇಶಿಸಿದಾಗ, ನನ್ನ ಸಂತೋಷವೇನಿದ್ದರೂ ನನಗೆ ಜೀವನದ ವರವನ್ನು ನೀಡಿದವರಿಗೆ. ಮಹಾರಾಜ ಕುಮಾರರಿಗೆ ನನ್ನ ನಮಸ್ಕಾರ. ರಾಜಕುವಾರ ಬಹಾದುರ್ ಖಾನ್‌ರಿಗೆ ನಮಸ್ಕಾರ, ಲಕ್ಷ್ಮಣ ಸಿಂಹಜೀಯವರಿಗೆ ನಮಸ್ಕಾರ, ಕಲಾಪ್ರೇಮಿಗಳಾದ ತಮ್ಮೆಲ್ಲರಿಗೂ ನಮಸ್ಕಾರ. ನೀವು ನನ್ನನ್ನು ಕಾಣಲು ಅಯೋಧ್ಯೆಗೆ ಬರುವವರಲ್ಲವಾದ ಕಾರಣ ನಿಮ್ಮನ್ನು ನೋಡಲು ನಾನೇ ಬರಬೇಕಾಯಿತು"

ನಿನದಿಸುತ್ತಿದ್ದ ತಂತೀವಾದ್ಯವನ್ನು ತೊಡೆಯ ಮೇಲಿಟ್ಟು ಕೊಂಡು ಕಣ್ಣು ಮುಚ್ಚಿಕೊಂಡಳು. ಅವಳ ದಪ್ಪ ಬೆರಳುಗಳು ತಂತಿಗಳನ್ನು ಮೃದುವಾಗಿ ಮೀಟಿದುವು. ಸತ್ಯದ ಕ್ಷಣ: ನಾನು ತುಂಬ ಮೆಚ್ಚುವ ನಮ್ಮ ಶಾಸ್ತ್ರೀಯ ಸಂಗೀತದ ಭಾಗವೆಂದರೆ ಆಲಾಪ. ಅದೊಂದು ರೀತಿಯಲ್ಲಿ ಅಂತರಂಗ ಪಯಣ, ಅಜ್ಞಾತ ಲೋಕದತ್ತ ಸಾಹಸದ ಸಂಚಾರ. ಅಲ್ಲಿ ನೀವೊಬ್ಬರೇ ಬ್ರಹ್ಮಾಂಡದಲ್ಲಿ ನಿಜಕ್ಕೂ ಏಕಾಂಗಿ. ಪಕ್ಕ ವಾದ್ಯವಿಲ್ಲ, ಸಾರಂಗಿ ಇಲ್ಲ, ಕೇವಲ ನಿಮ್ಮ ದನಿ ಅದರ ದಾರಿಯನ್ನು ಕಂಡುಕೊಳ್ಳುವುದು, ಅದೊಂದು ಶಬ್ದರಹಿತ ಧ್ಯಾನ, ಮಾನವ ಚಿಂತನೆಯ ಪರಿಧಿಯಾಚೆಗಿನ ವಿಷಯಗಳ ಮನನ. ಪ್ರಾರಂಭದಲ್ಲೇ ಸಾರಿ ಹೇಳಿದ ಯೋಜನೆಯಲ್ಲಿ ಮುನ್ನಡೆದು ಮನುಷ್ಯ ಸ್ಥಿತಿಯ ವ್ಯಾಪ್ತಿ ಸಮಸ್ತವನ್ನು ಶೋಧಿಸುವ ಸಂಪೂರ್ಣ ಸ್ವಾತಂತ್ರ್ಯ ನಿಮ್ಮದು. ಕಲಾವಿದನಾಗಿ ನಿಮ್ಮನ್ನು ತೆರೆದಿಟ್ಟು ನಿಮ್ಮ ಮೌಲ್ಯವನ್ನು ನಿರ್ಣಯಿಸುವುದು ಶೋಧನೆಯ ಗುಣ ಮತ್ತು ಸುಲಲಿತವಾಗಿ ದಂಡ ವೃತ್ತವಾಗಿ ಸಾಗುತ್ತ ಹೋಗುವ ಗುಣ.

ಪ್ರಜ್ಞಾಪೂರ್ವಕವಾಗಿ ಮತ್ತು ಅನುದ್ದೇಶಿತವಾಗಿಯೇ ಕಲಾಪ್ರಕಾರವನ್ನು ಯಾವುದಾದರೊಂದು ದಿಸೆಯತ್ತ ಕೊಂಡೊಯ್ಯುವವರು ಸ್ತ್ರೀಯರು ಮತ್ತು ಪುರುಷರೇ. ನಮ್ಮ ಶಾಸ್ತ್ರೀಯ ಸಂಗೀತ ಇನ್ನೂ ರೂಪುಗೊಳ್ಳುತ್ತಿದ್ದ ಕಾಲದಲ್ಲಿ, ಈಗಿಗಿಂತ ಮೊದಲಿನ ಕಾಲದಲ್ಲಿ ನಾನೊಂದು ವೇಳೆ ಹುಟ್ಟಿದ್ದರೆ, ಅಥವಾ ಇಂದೇ ಅದಕ್ಕೆ ನನ್ನನ್ನು ತೊಡಗಿಸಿಕೊಂಡದ್ದೇ ಆದರೆ ಆಲಾಪ್‌ನ ವ್ಯಾಪ್ತಿ ಮತ್ತು ಮಹತ್ವವನ್ನು ಇನ್ನಷ್ಟು ವಿಸ್ತಾರಗೊಳಿಸುತ್ತೇನೆ ಮತ್ತು ಕಲಾವಿದನನ್ನು ಒರೆ ಹಚ್ಚುವ ಅನಿವಾರ್ಯ ನಿಕಷವನ್ನಾಗಿ ಮಾಡುತ್ತೇನೆ. ಕಾರಣ, ಎಲ್ಲ ರೀತಿಯ ಧ್ಯಾನದಂತೆ, ಆಲಾಪವು ಸ್ತೋತ್ರದ ಸ್ವರೂಪ ಮತ್ತು ಏಕಾಂತವನ್ನು ಹೊಂದಿದೆ. ಒಂದು ರೀತಿಯಲ್ಲಿ ಅವರದ್ದು ಭಾವಶುದ್ಧಿಯ ಮತ್ತು ಪರಿಶುದ್ಧಿಯ ಕ್ರಿಯೆ. ನೀವು ದೈವದ ಆಶೀರ್ವಾದ ಮತ್ತು ದೈವ ಸ್ಪರ್ಶ ಹೊಂದಿ ಆ ಪವಿತ್ರ ವಸ್ತುವಿನ ಅವಿಭಾಜ್ಯ ಅಂಗವಾಗುವಂತೆ ಮಾಡುತ್ತದೆ.

ಪ್ರಾಚೀನ ಕಾಲದ ಸಮರ್ಥ ಕಲಾವಿದರೆಲ್ಲ ಆಲಾಪವನ್ನು ಸಂಕ್ಷಿಪ್ತಗೊಳಿಸಿಕೊಂಡು, ಪಕ್ಕವಾದ್ಯದವನ ಒಂದು ಬಡಿತವೇ ನಿಮ್ಮ ಮಾರ್ಗದರ್ಶಕವಾಗಿರುವ ವಿಲಂಬಿತ ತಾಳದ ಸುಲಭ ಹಾಗೂ ನಿಧಾನಗತಿಗೆ ಬದಲಾಯಿಸಿಕೊಳ್ಳುತ್ತಿದ್ದರೆಂಬುದು ಸಕಾರಣವಾಗಿಯೇ ಇದೆ. ಅವರಿಗೆ ಬಹುಪಾಲು ಗಾಯಕರ ಮತ್ತು ವಾದ್ಯ ಸಂಗೀತದವರ ಮಿತಿಗಳು ಮತ್ತು ಆತಂಕಗಳು ತಿಳಿದಿದ್ದುವು. ಆಳಕ್ಕಿಳಿದು ರಹಸ್ಯಗಳನ್ನರಿಯಬೇಕೆಂದಿದ್ದರೆ, ಸುರಕ್ಷಿತವಾದ ಮೇಲು ಮೇಲಿನದನ್ನು ಸುಲಭ ರಸಭಾವಗಳನ್ನು ಇತರೆಯವರ ಒಡನಾಟವನ್ನು ತ್ಯಜಿಸಬೇಕು. ತಮ್ಮದೇ ಆದ ದೌರ್ಬಲ್ಯಗಳು, ಸಾಮಾನ್ಯ ಯೋಗ್ಯತೆ, ಕೊರತೆಗಳು, ಆಳಕ್ಕಿಳಿಯುವ ಆತಂಕ ಇವುಗಳನ್ನೆಲ್ಲ ದಿಟ್ಟತನದಿಂದ ಎದುರಿಸಿ ನಿಲ್ಲಬೇಕು.

ಸಜನೀ ಬಾಯಿಗೆ ಇಂದು ಇರುವುದು ಒಂದೇ ಪರೀಕ್ಷೆ. ಅದು ನನಗೆ ಭರವಸೆಯ ಜೀವಾಧಾರವಾಗಿರುವಷ್ಟು ಮಟ್ಟಿಗೆ ಆಕೆಗೆ ಅಂಥ ಪರೀಕ್ಷೆಯಲ್ಲ. ನನ್ನನ್ನು ಮಂತ್ರ ಮುಗ್ಧಗೊಳಿಸಿ ನನ್ನನ್ನು ವಿಸ್ಮೃತಿಯ ಕೂಪದಾಳಕ್ಕೆ ಎಳೆದು ಬಿಡುವಳೆ? ಈ ಮಧ್ಯಾಹ್ನದ ಯಾತನೆಯಿಂದ ಬಿಡುಗಡೆಗೊಳಿಸುವಳೆ? ಅವಳು ನನ್ನ ಗಾಯವನ್ನು ಮಾಯಿಸುವಳೆ? ನನ್ನನ್ನು ಮೊದಲಿನ ಪೂರ್ಣ ವ್ಯಕ್ತಿಯನ್ನಾಗಿ ಮಾಡುವಳೆ? ಅವಳು ಆಳವಾದ, ಹಗುರವಾದ ಹಾಗೂ ಗಂಭೀರವಾದೊಂದು ಸ್ವರವನ್ನು ಮೀಟಿ ಅದನ್ನು ದೀರ್ಘವಾದ ಅನಂತ ಕ್ಷಣದವರೆಗೆ ಧಾರಣ ಮಾಡಿದಳು. ಎಲ್ಲಿಯವರೆಗೆ ಎಂದರೆ ಕಾಲದ ಹಿಡಿತದಿಂದ ಅದು ನುಣುಚಿಕೊಳ್ಳುವವರೆಗೆ. ಅನಂತರ ಗ್ರಹಿಕೆಗೆ ಬರದ ಹಾಗೆ ಇನ್ನೊಂದಕ್ಕೆ ತಿರುಗಿದಳು. ರಾಗಯೋಜನೆಯನ್ನು ಹರಳುಗಟ್ಟಿಸಿದ ಪದವಿನ್ಯಾಸದಲ್ಲಿ ಹೇಳಿದಳು. ಅನಂತರ ತನ್ನದೇ ರೀತಿಯಲ್ಲಿ ಪ್ರಾರಂಭಿಸಿದಳು.

ಸಂಗೀತದ ಬಗ್ಗೆ ಮಾತಾಡುವುದೆಂದರೆ ಗ್ರಹಿಸಲಾಗದುದರ ಬಗ್ಗೆ ಮಾತನಾಡುವುದೆಂದು. ಅದರ ಸಾರಸತ್ವವನ್ನು ಪದಗಳಲ್ಲಿ ಹಿಡಿಯುವುದೆಂದರೆ ಹುಚ್ಚು ಸಾಹಸ ಮತ್ತು ವಿನಾಶವೆಂದೇ. ನನ್ನ ಮನಸ್ಸಿನಲ್ಲಿ ಮತ್ತು ನನ್ನ ಕಣ್ಣ ಗುಡ್ಡೆಗಳ ಹಾಗೂ ಕಣ್ಣ ರೆಪ್ಪೆಗಳ ನಡುವಿನ ಪರದೆಯ ಮೇಲೆ ಸಂಗೀತವು ಮೂಡಿಸಿದ ಮಾಂತ್ರಿಕ ಚಿತ್ರಗಳು ಸುಸಂಬದ್ಧವಾಗಿ ಬೆಳೆಸಿದ ರೂಪಕಗಳಲ್ಲ. ಅವು ಹೊಂದಾಣಿಕೆಯಿಲ್ಲದವೂ ವಿಭಿನ್ನವೂ ಆಗಿದ್ದರೂ ತನ್ನದೇ ಆದ ಆಂತರಿಕ ವಿವೇಚನೆಯಿಂದ ಕೂಡಿರುವ ಸಹಜ ಕ್ರಿಯಾಶೀಲ ಕಲೆ.

ಅವಳು ತನ್ನ ವರ್ಣ ಫಲಕವನ್ನು ಹಾಗೂ ತಾನು ಬಳಸಲಿರುವ ಬಣ್ಣಗಳ ಸರಣಿಯನ್ನು ಅಣಿಗೊಳಿಸುತ್ತಾಳೆ. ಲಯ ಬದ್ಧವಾದ, ಸೂಕ್ಷ್ಮ ಹಾಗೂ ಸ್ಥೂಲ ಚಲನೆಯಿಂದ ಅದರಲ್ಲಿ ಯಾವ ಅಸಂಪೂರ್ಣತೆ ಇಲ್ಲದೆ ಇದ್ದರೂ ಅವಳು ತನ್ನ ವಸ್ತು ಮತ್ತು ಕಾಳಜಿಗಳನ್ನು

ರೇಖಿಸುವಳು. ಅವಳ ಧ್ವನಿ ಈಗಲೂ ಗುಡು ಗುಡು ಸದ್ದು ಮಾಡುವ, ಸಂಧಿಸುವ ಅಥವಾ ಸಂಧಿಸದೆ ಇರುವ, ಬಾವಿಯ ಚಿಲುಮೆಗಳ ಹಾಗೂ ಇದೇ ತಾನೇ ಆರಂಭಿಸಿರುವ ಹಕ್ಕಿಯ ಹಾರಾಟದ ಇಣುಕು ನೋಟಗಳ ರೀತಿ. ಅಲ್ಲಿ ಗಿಡ ಮರಗಳ ವಿಶಾಲ ಪ್ರದೇಶಗಳಿವೆ. ಮರಗಳ ಲಕ್ಷಾಂತರ ಎಲೆಗಳು ಮತ್ತು ಪೊದೆಗಳ ಮಧ್ಯದಿಂದ ತೂರಿ ಬರುವ ಓರೆಯಾದ ಸೂರ್ಯಕಿರಣಗಳು, ಅವುಗಳನ್ನು ತೆಳು ಹಸಿರು ಬಣ್ಣದ ದೀರ್ಘ ಯೋಚನಾ ಮಗ್ನ ಕಾಡುಗಳಾಗಿ ಪರಿವರ್ತಿಸುತ್ತಿವೆ. ಪುರಾಣ ಪ್ರಪಂಚದ ಪ್ರಾಣಿಗಳು ಅಮಂಗಳ ಸೂಚಕವಾಗಿ ಕಾಡಿನಲ್ಲಿ ಸುಳಿದಾಡುತ್ತಿವೆ. ಕೆಳಗೆ ಆಳದಲ್ಲಿ ನೀರು ಬಂದು ಸೇರುತ್ತಿದೆ. ವಲಸೆ ಹಕ್ಕಿಗಳ ನಿಶ್ಯಬ್ದ ಹಾರಾಟದಲ್ಲಿ ಕಣ್ಕೋರೈಸುವ ಆಗಸದ ನೋಟಗಳು ಮತ್ತು ಏರುಗತಿಯ ರೂಪಣಗಳಿವೆ. ಜೋಡಿಯೊಂದು ಬೇರೆಯಾಗಿ, ಕಡಿದಾದ ಇಳಿಜಾರಿನಲ್ಲಿ ಒಂದು ಸುತ್ತು ಬಂದು ಕೆಳಗಿಳಿಯುತ್ತಿವೆ. ಇದ್ದಕ್ಕಿದ್ದಂತೆ ಆಕೆಯ ದನಿ ವಿಸ್ತಾರವಾದ ತುಂಬು ನದಿಯಂತೆ, ಆದರೆ ಅವಸರವಿಲ್ಲದ್ದಾಗುತ್ತದೆ. ನೀರು ಹಳ್ಳಗಳ ಮೇಲೆ ಕಲ್ಲುಗಳ ಮೇಲೆ, ಕ್ರೀಡಿಸುತ್ತ ಬೀಳುತ್ತದೆ ಮತ್ತೆ ಅದು ವೇಗವನ್ನು ಗಳಿಸಿಕೊಂಡು, ಇಳಿಜಾರಿನ ಹರಿವುಗಳಲ್ಲಿ ಕಾಡು ಕುದುರೆಯ ಹಾಗೆ ನೊರೆಗಟ್ಟುತ್ತದೆ. ನಾನು ಕಣ್ತೆರೆದೆ. ಇನ್ನೂ ಶುದ್ಧವಾದ ಸಮಶ್ರುತಿಯನ್ನು ಕಂಡುಕೊಳ್ಳುವ ಯತ್ನದಲ್ಲಿ ಸಜನೀ ಬಾಯಿಯ ಎಡಗೈ ಅವಳ ಎಡಗಿವಿಯನ್ನು ಅಮುಕುತ್ತಿದೆ. ಮೂಳೆರಹಿತವಾದ ಅವಳ ಬಲಗೈ ಬೆರಳುಗಳು ನೀರಿನೊಳಗಿನ ತರಲ ಶಾಖೆಗಳಂತೆ ಅಲೆಯಲೆಯಾಗಿ ಏರಿಳಿಯುತ್ತಿವೆ. ಅವಳ ಕಣ್ಣುಗಳು ನನ್ನನ್ನು ನೋಡಿಯೇ ಇಲ್ಲವೆಂಬಂತೆ ನನ್ನ ಮುಖದ ಮೇಲಿನಿಂದ ಅಂಧಕಾರದತ್ತ ಸಾಗುತ್ತಿವೆ. ತನ್ನ ಸಂಗಾತಿಯನ್ನು ಕಳೆದುಕೊಂಡ ಹಕ್ಕಿಯ ಇರಿಯುವ ಕೂಗು ಆಕಾಶವನ್ನು ಗಾಯಗೊಳಿಸುತ್ತಿದೆ. ನನ್ನ ಕಣ್ಣುಗಳು ಮುಚ್ಚಿಕೊಳ್ಳುತ್ತವೆ. ಕೆಂಪು ಉರಿಯುತ್ತಿದೆ. ನಾನು ಕಣ್ಣ ರೆಪ್ಪೆಗಳನ್ನು ಗಟ್ಟಿಯಾಗಿ ಒತ್ತಿಕೊಳ್ಳುತ್ತೇನೆ. ಜಾಜ್ವಲ್ಯಮಾನವಾದ ಕೆಂಪು ನನ್ನ ಮುಖದ ಮೇಲಿನಿಂದ ಕೆಳಕ್ಕೆ ಸಣ್ಣಧಾರೆಯಾಗಿ ಜಿನುಗುತ್ತಿದೆ. ಅವಳ ದನಿ ನೆಗೆಯುತ್ತಿದೆ. ವೇಗಗೊಳ್ಳುತ್ತಿದೆ, ಎತ್ತರಕ್ಕೇರುತ್ತಿದೆ, ಎಂದೂ ಏರದಷ್ಟು ಎತ್ತರಕ್ಕೆ. ಕೊಂಕಾದ ಅಲೆಯ ಹಾಗೆ ಕಮಾನಾಗುತ್ತ ಕೋಟ್ಯಂತರ ಬಿಂದುಗಳಲ್ಲಿ ಪ್ರವೇಶಿಸುತ್ತಿದೆ. ನನ್ನ ಕಣ್ಣರೆಪ್ಪೆಗಳ ಮೇಲಿನ ಒತ್ತಡವನ್ನು ಸಡಿಲುಗೊಳಿಸಿದೆ. ನಾನಾ ವರ್ಣಮಯವಾದ ನಕ್ಷತ್ರ ಗುಚ್ಛವು ಮಧ್ಯರಾತ್ರಿಯ ನೀಲಿಯ ಮೇಲೆ ಅಡ್ಡಗೆರೆಗಳನ್ನೆಳೆಯಿತು. ಗೆರೆಗಳು ಆಘಾತಕಾರಿಯಾದ ವೇಗದಲ್ಲಿ ಹಿಸ್ ಎಂದು ಶಬ್ದಮಾಡುತ್ತ ವೇಗವಾಗಿ ಓಡುತ್ತಿವೆ. ನನ್ನ ಎಡಗಣ್ಣಿನ ಮೂಲೆಯಿಂದ ಬಿಳಿಯ ಮಂಜು ತೂರಿ ಬರುತ್ತಿದೆ. ಅದು ವೇಗವಾಗಿ ಮೇಲೇರುತ್ತಿದೆ. ಭೂಗರ್ಭದಲ್ಲಿ ಹರಿಯುತ್ತಿರುವ ನದಿ ಅದರ ಮೂಲಕವೇ ಹರಿದು ಮೇಲೆ ಕಾಣಿಸುತ್ತದೆ. ಅದು ಪ್ರವಾಹದಲ್ಲಿದೆ. ನನ್ನನ್ನಂತೂ ಚೆಂಡಿನಂತೆ ಒದ್ದು, ತಿರುಚಿ, ಭಂಗಗೊಳಿಸಿ, ಗಾಯಗೊಳಿಸಿ ಅದರ ಮೂಲಕವೇ ಪುನರ್ರೂಪಿಸಲಾಯಿತು. ನನ್ನ ತೋಳುಗಳು ಗಂಭೀರೆಯಷ್ಟೇ ಉದ್ದವಾಗಿವೆ. ನಾನು ಅದನ್ನು ಇಡಿಯಾಗಿ ನುಂಗುವೆ.

ನಿರ್ದೇಹಿಯಾದ ದನಿಯನ್ನು ಪ್ರೀತಿಸಲು ಸಾಧ್ಯವೆ?

ನನ್ನನ್ನು ಕೊಚ್ಚಿಕೊಂಡು ದಡ ಸೇರಿಸಲಾಗಿದೆ. ನಾನೀಗ ಅಪೂರ್ವವಾದ ಶಾಂತಿಯನ್ನು ತಳೆದಿದ್ದೇನೆ.

ಸಜನೀ ಬಾಯಿ ತನ್ನ ಸಂಗೀತ ಕಛೇರಿಯನ್ನು ಮುಗಿಸಿದಾಗ ಮಧ್ಯರಾತ್ರಿಯಾಗಿತ್ತು. ಲೀಲಾವತಿ ನನ್ನ ತೊಡೆಯ ಮೇಲೆ ಗಾಢ ನಿದ್ರೆಯಲ್ಲಿದ್ದಾಳೆ. ಪಟ್ಟಿಯನ್ನು ನನ್ನ ಬಳಿಯೇ ಇಟ್ಟುಕೊಂಡಿರಬೇಕೆಂಬುದು ನನ್ನ ಹಣೆಯಲ್ಲಿ ಬರೆದಿರಲಿಲ್ಲ. ರಾಜೇಂದ್ರ ಹಮ್ಮಿಣಿಯನ್ನು

ಸಜನೀ ಬಾಯಿಗೆ ಒಪ್ಪಿಸಿದನು. ಆದಿನಾಥರು ಲೀಲಾವತಿಯನ್ನು ಎತ್ತಿಕೊಂಡು ಸಜನೀ ಬಾಯಿಯನ್ನು ಸಮೀಪಿಸಿದರು. ನಾನು ನನ್ನ ಪಟ್ಟಿಯನ್ನು ಸಜನೀ ಬಾಯಿಗೆ ಉಡುಗೊರೆಯಾಗಿ ನೀಡಿದೆ. ಅವಳು ನನ್ನ ಕಾಲು ಮುಟ್ಟಿ ಏನೋ ಹೇಳಿದಳು. ಆ ಶಬ್ದಗಳನ್ನು ಕೇಳಿಸಿಕೊಳ್ಳಲು ನಾನು ಬಾಗಬೇಕಾಯಿತು. "ರಾಜಕುಮಾರ ಈ ದಿನ ನಾನು ಹಾಡಿದ್ದು ನಿಮಗಾಗಿ ಕೇವಲ ನಿಮಗಾಗಿ. ಅದು ನಿಮಗೆ ಮರೆಯಲು ಬಹುಶಃ ಗುಣಪಡಿಸಲೂ ನೆರವಾಗುವುದಾದರೆ, ಇನ್ನೆಂದಾದರೂ ನಾನು ನಿಮಗಾಗಿ ಹಾಡುತ್ತೇನೆ. ಗಾಬರಿಯಾಗಬೇಡಿ ಮಹಾರಾಜ್‌ಕುಮಾರ್, ನಿಮ್ಮ ಮುಖ ಪಾರದರ್ಶಕವಲ್ಲ, ನನ್ನ ಮನಸ್ಸು ಪಾರದರ್ಶಕ. ನಿಮಗೆ ಅತ್ಯಂತ ಸಹಜವಾಗಿ ಸಂಗೀತ ಸವಿಯುವ ಅಪೂರ್ವ ವರವಿದೆ. ಅದನ್ನು ಕಳೆದುಕೊಳ್ಳಬೇಡಿ."

"ಮಹನೀಯರೆ ಮತ್ತು ಮಹಿಳೆಯರೆ ಎರಡು ಪ್ರಕಟಣೆಗಳಿವೆ. ಕೆಳಗಡೆ ಶಾಮಿಯಾನದಲ್ಲಿ 'ಭೋಜನ ಮತ್ತು ಅಲ್ಪಾಹಾರವಿದೆ. ನಿಮ್ಮದಿನ್ನೂ ಆಗಿಲ್ಲದಿದ್ದರೆ, ನಮ್ಮ ಮನೆಯನ್ನು ಅವಮಾನಿಸಬೇಡಿ. ಅದರಲ್ಲೂ ವಿಶೇಷವಾಗಿ ನಮ್ಮ ತಾಯಿಯನ್ನು. ನಮ್ಮ ಆತಿಥ್ಯವನ್ನು ತಿರಸ್ಕರಿಸಬೇಡಿ. ಇನ್ನೊಂದು ಪ್ರಕಟಣೆಯು ನಿಮ್ಮನ್ನು ಅಪರಿಮಿತವಾಗಿ ಸಂತುಷ್ಟಗೊಳಿಸಲಿದೆ. ಒಂದು ಗಂಟೆಯ ನಂತರ ವಿಸ್ಮಯಕರವಾದ ಹಾಡುಗಾರಿಕೆ ಇದೆ."

ನಾನೆಷ್ಟು ಹಸಿದಿದ್ದೆನೆಂದೇ ನನಗೆ ಗೊತ್ತಾಗಿರಲಿಲ್ಲ. ರಾಜೇಂದ್ರ ಹೇಳಿದ್ದು ಸರಿ. ಭೋಜನ ಎಷ್ಟೊಂದು ಸೊಗಸಾಗಿತ್ತೆಂದರೆ ಅದು ನನ್ನ ಹಸಿವನ್ನು ಇನ್ನಷ್ಟು ತೀವ್ರಗೊಳಿಸಿತು. ಪ್ರತಿಯೊಬ್ಬರೂ ಉಲ್ಲಾಸದಿಂದ ಮತ್ತು ಸ್ನೇಹದಿಂದಿದ್ದರು. ನಾನು ಕೂಡ ಅತಿ ಉತ್ಸಾಹದಲ್ಲಿದ್ದೆ. ಸಜನೀ ಬಾಯಿ ಮತ್ತು ನನ್ನ ನಡುವೆ ಏನೋ ಒಂದು ಸೂಕ್ಷ್ಮ ಇದೆ ಎಂದು ರಾಜೇಂದ್ರ ತೀರ್ಮಾನಿಸಿಬಿಟ್ಟಿದ್ದನು. ಬಹು ಬೇಗನೆ ಬಹಾದುರ್ ಕೂಡ ಅವರುಗಳ ಜೊತೆ ಸೇರಿಕೊಂಡು ಅವಳ ಕಂಠ, ಎದೆ ಮತ್ತು ಸಜನೀ ಬಾಯಿ ನನಗೆ ಮಾಡಿರಬಹುದಾದ ಕಡೇ ಪಕ್ಷ ಐವತ್ತಕ್ಕಿಂತ ಹೆಚ್ಚು ಅಶ್ಲೀಲ ಸೂಚನೆಗಳನ್ನು ತುಂಬ ಅದ್ಭುತವಾಗಿ ಅನುಕರಣೆಮಾಡಿದನು. ಪ್ರತಿಯೊಂದು ಸೂಚನೆಯೂ ಒಂದಕ್ಕಿಂತ ಒಂದು ಅನೀತಿಯುತವೂ ಕಾಮುಕತನದ್ದೂ ಆಗಿತ್ತು. ಅಲ್ಲದೆ ಪ್ರತಿಯೊಬ್ಬರೂ ಸೊಂಟ ಬಗ್ಗಿಸಿದ್ದರು. ಹಾಗೇನೂ ಅರ್ಥವಿಟ್ಟುಕೊಳ್ಳದೆ, ನಾವು ಷಹಜಾದಾ ಮತ್ತು ರಾಜೇಂದ್ರ ಅವರ ಸುತ್ತಲೂ ಅರ್ಧ ವೃತ್ತಾಕಾರದಲ್ಲಿ ಬಳಸಿ ನಿಂತಿದ್ದೆವು. ನನಗೆ ಚಿಂತೆ ಉಂಟು ಮಾಡಿದ ಒಂದೇ ಒಂದು ಸಂಗತಿಯೆಂದರೆ ಷಹಜಾದಾ ಒಂದೇ ಸಮನೆ ಕುಡಿಯುತ್ತಿದ್ದ. ನಾನು ಅವನ ಗಮನವನ್ನು ಬೇರೆ ಕಡೆ ಸೆಳೆಯಲೆತ್ನಿಸಿದಾಗ, ಅವನು ಇನ್ನೊಂದು ಮದ್ಯದ ಹೂಜಿಯನ್ನು ಎದುರುನೋಡುತ್ತಿದ್ದ.

"ಸಜನೀ ಬಾಯಿಗೆ ನಾನು ಏನು ಹೇಳಿದೆ ಎಂಬುದನ್ನು ನೀವು ಹೇಳುವುದಿಲ್ಲವೆ?"

ಇದಕ್ಕೂ ಮುನ್ನ ಅವರು ವ್ಯಭಿಚಾರ ಮಾಡುತ್ತಿದ್ದರು ಎಂಬುದನ್ನು ನಾನು ನಿಜಕ್ಕೂ ನಂಬಿದ್ದೆನೆ? ಅವರು ಸಂಯಮರಹಿತವಾಗಿ ಆಶು ರಚನೆಗಳನ್ನು ಮಾಡುತ್ತಿದ್ದರು; ಅದೂ ಎಷ್ಟು ಕರಾರುವಾಕ್ಕಾಗಿ ಸಮಯವನ್ನು ಆಯ್ಕೆ ಮಾಡುತ್ತಿದ್ದರು ಎಂದರೆ ತಮ್ಮ ಕೃತ್ಯವನ್ನು ತಿಂಗಳುಗಟ್ಟಲೆ ಅಭ್ಯಾಸ ಮಾಡಿದ್ದಾರೇನೊ ಎನ್ನುವಷ್ಟು ಮಟ್ಟಿಗೆ. ಈ ಗುಪ್ತ ಪ್ರಣಯಿಗಳು ಎಲ್ಲಿ ಸೇರುತ್ತಿದ್ದರು? ವಿಜಯ ಗೋಪುರದಲ್ಲಿ. ಅದೂ ಎಲ್ಲದಕ್ಕಿಂತ ಮೇಲಿನ ಅಂತಸ್ತಿನಲ್ಲಿ. ಅಲ್ಲಿ ಯಾರೂ ಇರುವುದಿಲ್ಲ. ಇಡೀ ಚಿತ್ತೂರು ನಮ್ಮ ಕಾಲಡಿಯಲ್ಲಿರುತ್ತಿತ್ತು. ನಾವೊಂದು ವೇಳೆ ಕೈಯೆತ್ತಿದರೆ ಅವು ಆಕಾಶವನ್ನು ಮುಟ್ಟುತ್ತಿದ್ದವು. ನನ್ನದು ಮುಟ್ಟುತ್ತದೆ. ನಿಮ್ಮದು ನನ್ನ ಸೊಂಟದ ಸಮಕ್ಕೆ ಬರಬಹುದೆಂದು ನನ್ನ ಊಹೆ." ಸಜನೀ ಬಾಯಿ ವಿಜಯ

ಗೋಪುರದೊಳಕ್ಕೆ ಇರುಕಿಸಿಕೊಂಡು ಹೋಗುವಲ್ಲಿ ಸ್ವಲ್ಪ ಸಮಸ್ಯೆಯಿದೆ. ಪಕ್ಕದಿಂದ ಆ ಹೆಂಗಸನ್ನು ನುಸುಳುವಂತೆ ಮಾಡುವ ಮೂಲಕ ಸಮಸ್ಯೆಯನ್ನು ನಿವಾರಿಸಿಕೊಳ್ಳುವರು. ಅದೇನಂಥ ಬುದ್ಧಿವಂತಿಕೆಯ ಪ್ರಯತ್ನವಲ್ಲ. ಆಕೆ ಸಮನಾಗಿ ಊದಿರುವುದರಿಂದ, ಪ್ರವೇಶ ದ್ವಾರದಲ್ಲಿ ಮುಂದಕ್ಕೆ ಚಲಿಸಲಾಗದೆ ನಿಂತು ಬಿಟ್ಟಳು. ಈ ಸುಂದರಿಯನ್ನು ಹೊರಗೆ ಹಾಕುವ ಸಲುವಾಗಿ ಗೋಡೆಯನ್ನು ಒಡೆಯಲು ಕೈದಿಗಳ ಗುಂಪೊಂದನ್ನು ನಿಯೋಜಿಸಲಾಯಿತು. ವಿಜಯ ಗೋಪುರದ ಮಧ್ಯದ ಆಧಾರವನ್ನು ತೆಗೆಸಿಬಿಟ್ಟರೆ, ಗೋಪುರವು ಕುಸಿದು ಬಿಡುತ್ತದೆಂದು ಒಂದು ಮಗು ಭಾವಿಸುತ್ತದೆ. ಮಗುವಿನ ಅಪ್ಪ ಒಂದು ಪೆಟ್ಟುಕೊಡುತ್ತಾನೆ. ಆದರೆ ಮಗುವಿನ ಆಲೋಚನೆ ಸರಿ. ಸಜನೀ ಬಾಯಿ ಅಂತಿಮವಾಗಿ ಅಲ್ಲಿಂದ ಹೊರಟು ನಿಂತಾಗ, ಮಹಾನ್ ಗೋಪುರ ಅಲುಗಾಡುತ್ತ ಕುಸಿಯಲು ಪ್ರಾರಂಭಿಸಿ ಅಂತಿಮವಾಗಿ ಕುಸಿದು ಬೀಳುತ್ತದೆ. ಅದೃಷ್ಟವಶಾತ್ ಪ್ರೇಮಿಗಳು ಗಾಯಗೊಳ್ಳದೆ ಪಾರಾಗುತ್ತಾರೆ.

'ಅದರ ಬಗ್ಗೆ ನಾನೇಕೆ ಯೋಚಿಸಲಿಲ್ಲ' ಎಂದು ರಾಜಕುಮಾರ ತನ್ನನ್ನು ತಾನು ಮತ್ತು ತನ್ನ ಪ್ರಿಯೆಯನ್ನು ಕೇಳುತ್ತಾನೆ. "ನಮ್ಮ ಸಮಸ್ಯೆಗೊಂದು ಪರಿಹಾರವಿದೆ. ರಜಪೂತ ದಾಯಾದಿಗಳೊಂದಿಗೆ ಹೋರಾಡಲು ಮತ್ತು ಅವರ ಹಾಸಿಗೆ ಮೀಸಲಿಡಲು, ದೈತ್ಯಗಾತ್ರದ ನಮ್ಮ ಗೃಹ ಸಚಿವ ಲಕ್ಷ್ಮಣ ಸಿಂಹಜೀಯವರನ್ನೇ ಕಳಿಸಿಕೊಡೋಣ. ನಾವಿಬ್ಬರೂ ಹಿಡಿಸಲು ಅದೊಂದೇ ಸಾಕು." ಸಜನೀ ಬಾಯಿ ಅದನ್ನು ವಿರೋಧಿಸಿದಳು. "ಆದರೆ ನೀವು ಮತ್ತು ನಿಮ್ಮ ಸೋದರ ಸಂಬಂಧಿಗಳು ತುಂಬ ಒಳ್ಳೆಯ ಸ್ನೇಹಿತರು ಅಲ್ಲದೆ ಇತ್ತೀಚೆಗೆ ನೀವು ಅವರೊಂದಿಗೆ ಶಾಶ್ವತ ಸ್ನೇಹದ ಒಪ್ಪಂದ ಬೇರೆ ಮಾಡಿಕೊಂಡಿದ್ದೀರಿ" "ಅದೇನು ಪರವಾಗಿಲ್ಲ. ನಿನ್ನ ಸಲುವಾಗಿ ನಾನು ನನ್ನ ಸ್ನೇಹಿತ, ಶತ್ರು ಮತ್ತು ಕುಟುಂಬ ಎಲ್ಲರನ್ನೂ ತ್ಯಜಿಸಬಯಸುತ್ತೇನೆ ಸಜನಿ." ಹಾಗಾಗಿ ಲಕ್ಷ್ಮಣ ಸಿಂಹಜೀಯವರನ್ನು ಈ ಕೂಡಲೇ ಮತ್ತು ಅನೌಪಚಾರಿಕವಾಗಿ ನಿಯುಕ್ತಿಗೊಳಿಸಲಾಗುತ್ತಿದೆ. ಕೊನೆಗೆ ಅವರಿಬ್ಬರೂ ಏಕಾಂತದಲ್ಲಿ ಅದೂ ಹಾಸಿಗೆಯಲ್ಲಿ ಉಳಿದರು. ಬೆಚ್ಚಗಿನ ಭಾವೋದ್ರೇಕದ ದೀರ್ಘ ಅಪ್ಪುಗೆಯಲ್ಲಿ ಅವರು ಬಂಧಿತರಾದರು. ಆಮೇಲೆ ಇನ್ನೇನೋ ಭಯಂಕರವಾದ್ದೊಂದು ಆಗುತ್ತದೆ. ಹಾಸಿಗೆ ತುಂಡಾಗುತ್ತದೆಯೆ? ನೀವು ತಮಾಷೆ ಮಾಡುತ್ತಿರಬೇಕು. ಇಬ್ಬರು ಸಜನಿಗಳನ್ನು ತಡೆದುಕೊಳ್ಳುವಷ್ಟು ಬಲಯುತವಾಗಿದೆ ಅದು. ಸಜನೀ ಬಾಯಿ ರಾಜಕುಮಾರನ ಮಾತನ್ನು ಕೇಳಬಹುದು ಅಷ್ಟೇ. ಆದರೆ ಅವನು ಎಲ್ಲಿದ್ದಾನೆಂಬುದನ್ನು ಪತ್ತೆ ಹಚ್ಚಲಾರಳು. ಓ ದೇವರೆ, ಅವನೆಲ್ಲಿ ಮರೆಯಾಗಿರಬಹುದು? ಅವಳು ತನ್ನ ಬಲ ತೋಳನ್ನೆತ್ತಿ ಅದರ ಕೆಳಗೆ ನೋಡುತ್ತಾಳೆ. ನಂತರ ಎಡಗೈ ಎತ್ತಿನೋಡುವಳು. ಆ ಬಡಪಾಯಿ ಪ್ರೇಮಿ ಅವಳ ಕಂಕುಳಲ್ಲಿ ಕಳೆದು ಹೋದನೆ? ಅವನ ಗುರುತೇ ಇಲ್ಲ. ಅವಳು ತನ್ನ ಒಳಲಂಗವನ್ನು ಕೈಗೆ ತೆಗೆದುಕೊಳ್ಳುವಳು.

ಈ ಒಂದು ಸೂಕ್ಷ್ಮಗಳಿಗೆಯಲ್ಲಿ, ನನ್ನ ಅಜ್ಜಿ ರಾಜಮಾತೆಯವರು ಈ ಮಾಂತ್ರಿಕ ವೃತ್ತದೊಳಕ್ಕೆ ನಡೆದು ಬಂದರು. ಆಕೆಯ ಹುಬ್ಬುಗಂಟಿಕ್ಕಿತು. ತುಟಿ ಬಿಗಿಹಿಡಿದಿದ್ದಳು. "ಅಸಹ್ಯ, ನಾಚಿಕೆಗೇಡು, ವಯಸ್ಸಿಗೆ ಬಂದಿರುವ ಹುಡುಗರು ವಿನೋದ ಪಡುವ ರೀತಿ ಇದೇ ಏನು?" ಎಲ್ಲರೂ ಭಯ ಭೀತರಾದರು. ಯಾರಿಗೂ ತಲೆ ಎತ್ತಿ ನೋಡುವ ಧೈರ್ಯವಿಲ್ಲ. "ನಿಮ್ಮ ವಿನೋದದಲ್ಲಿ ಹೆಂಗಸರನ್ನು ಸೇರಿಸಿಕೊಳ್ಳದೆ ಇರೋದಾ? ಏನಾಯಿತು ಬೇಟಾ?" ಹಾಗೆಂದು ಷಹಜಾದನನ್ನು ಕೇಳಿದರು. "ಆಕೆಯ ಕಣ್ಣಿಗೆ ನನ್ನ ಮಹಾರಾಜ್‌ಕುಮಾರ್ ಬಿದ್ದನೋ ಇಲ್ಲವೋ"

ಆಗ ದೀಪಮಹಲ್‌ಗೆ ಹೋಗುವ ಸಮಯ.

ಅಷ್ಟು ಹೊತ್ತಿಗೆ ನಾವೆಲ್ಲ ತುಂಬ ಉತ್ತೇಜಿತರಾಗಿದ್ದೆವು.

ಲಕ್ಷ್ಮಣಸಿಂಹರ ಜನ್ಮಾಷ್ಟಮಿ ಗೋಷ್ಠಿಯಲ್ಲಿ ಸಾಮಾನ್ಯವಾಗಿ ಒಬ್ಬ ಕಲಾವಿದ ಇರುತ್ತಾನೆ ಅಷ್ಟೆ. 'ಇವತ್ತಿಗೇನಿದೆ? ಯಾರು, ಏನು, ಯಾವಾಗ, ಯಾಕೆ ಮತ್ತು ಹೇಗೆ? ಸಾಯಂಕಾಲದ ಉತ್ತರಾರ್ಧದ ಪಂದ್ಯಗಳ ಸಂಚಾಲಕನಾಗಿ, ಲಕ್ಷ್ಮಣಸಿಂಹರ ಮಗನಾದ ಚತುರ ರಾಜೇಂದ್ರ ಅದನ್ನೆಲ್ಲ ಆಗಲೇ ಕಲೆಹಾಕುತ್ತಿದ್ದ. ಐಂದ್ರಜಾಲಿಕರು, ದೊಂಬರಾಟದವರು, ಕಲಾಪ್ರದರ್ಶನ ನೀಡುವ ಹಿಜಡಾಗಳು, ಚಾರಣರು, ನೃತ್ಯಗಾರರು, ಸಿಂಹವನ್ನು ಪಳಗಿಸುವವರು, ಕುಸ್ತಿ ಪಟುಗಳು ಇವರುಗಳಲ್ಲಿ ಯಾರದ್ದಾದರೂ ಹೆಸರು ಹೇಳಿದರೆ. ಆ ಸಲಹೆ ಒಪ್ಪಿತವಾಗದೆ, ಅನೇಕ ಜನ ಅದರ ಮೇಲೆ ಸವಾಲೆಸೆಯುವವರು ಸಿದ್ಧ, ಅದೋ ನೋಡಿ ಯಾರು ಬಂದರು ಎಂದು ಊಹಿಸಿ. ಬಲ ಭಾಗದ ಈ ಮೂಲೆಯಲ್ಲಿ ಬಂದವರು ಬೇರಿನ್ನಾರೂ ಅಲ್ಲ. ಏಳು ನೂರೂ ಚಿಲ್ಲರೆ ಒನಕೆಗಳು. ಏಕಮಾತ್ರ ಸಜನೀಬಾಯಿ. ಅಲ್ಲಿದ್ದುದು ಭೀತಿ ಮಿಶ್ರಿತ ಮೌನ. ಎಲ್ಲರೂ ರಾಜೇಂದ್ರ ಸಿಂಹನ ಸುತ್ತ ಗುಂಪುಗೂಡಿ ಅವನ ರಕ್ತಕ್ಕಾಗಿ ಬೊಬ್ಬೆ ಹಾಕುತ್ತಿದ್ದರು. ನನ್ನ ಮುಖದ ಮೇಲಿನ ಮುಗುಳು ನಗೆಯನ್ನು ಮರೆಮಾಚಲಾಗಲಿಲ್ಲ. ಆ ಹಂದಿ, ನಾಚಿಕೆಯಿಲ್ಲದ ದುಷ್ಟ ನಮ್ಮೆಲ್ಲರನ್ನು ತಲೆಮೆಟ್ಟಿ ಹೋದ ಹಾಗೆ ಅಂದುಕೊಂಡು ಬಿಟ್ಟಿದ್ದಾನಲ್ಲ. ಅವನು ಹೇಳಿದ್ದು 'ವಿಸ್ಮಯ' ಇದೆ ಅಂತ ಅಷ್ಟೆ. ಹಾಗಂದರೆ ಸಜನೀ ಬಾಯಿಯನ್ನು ತಳ್ಳಿಹಾಕಿಲ್ಲ.

ಆದರೆ ಸಜನೀಬಾಯಿ ತನ್ನ ಗಾಯನವನ್ನು ಆಗಲೇ ಪ್ರಾರಂಭಿಸಿದ್ದಳು. ಒಮ್ಮೆಗೇ ಸಂಪೂರ್ಣ ಮೌನ ಆವರಿಸಿತು. ಅದು ಧೋಲಾ ಮತ್ತು ಮಾರು ಎಂಬ ದಂತ ಕಥೆಯ ದುರಂತ ಪ್ರಣಯಿಗಳ ಕಥೆ. ಮಾರು ಧೋಲಾಳನ್ನು ಮೊದಲ ಸಲ ನೋಡಿದ. ಅವಳ ಗೆಳತಿಯರು ಅವಳನ್ನು ಛೇಡಿಸುತ್ತಾರೆ. ನಮಗೆಲ್ಲಾ ಆ ಜನಪದ ಗೀತೆ ಚೆನ್ನಾಗಿ ಗೊತ್ತು. ಅದನ್ನು ನೂರಾರು ಸಲ ಕೇಳಿದ್ದೇವೆ. ಆದರೆ ಸಜನೀ ಬಾಯಿ ಏನು ಮಾಡುತ್ತಾಳೆಂದರೆ ಅದಕ್ಕೊಂದು ಹೊಸತಿರುವು ಕೊಡುತ್ತಾಳೆ, ಬಹುಮಟ್ಟಿಗೆ ಅದನ್ನು ಹೊಸದಾಗಿ ಸೃಷ್ಟಿಸುತ್ತಾಳೆ. ಅವಳ ಭವ್ಯ ಕಂಠದ ಸವಿಯನ್ನು ಇನ್ನೇನು ಸವಿಯಬೇಕೆನ್ನುವಾಗ, ನೂಪುರಗಳ ಸದ್ದು ಕೇಳಿಬರುತ್ತದೆ. ಅಲ್ಲದೆ ಏಳು ಜನ ಅಪ್ಸರೆಯರು ಹೇಗೆಂದರೆ ಹಾಗೆ ಕೈಕಾಲು ಚಾಚಿಕೊಂಡು ಮಂತ್ರ ಮುಗ್ಧರಾಗಿ ಕುಳಿತಿರುವ ಪುರುಷರ ನಡುವೆ ದಾರಿ ಮಾಡಿಕೊಂಡು ಹೆಜ್ಜೆ ಹಾಕುತ್ತ ಬರುತ್ತಾರೆ. ಅವರು ನರ್ತಿಸ ತೊಡಗುತ್ತಾರೆ. ಕೀಚು ಶಿಲ್ಲೆಗಳು, ಶಿಲ್ಲೆಗಳು, ಚಪ್ಪಾಳೆ ಮತ್ತು ಪ್ರಶಂಸೆಯ ಚಪ್ಪಾಳೆಗಳ ಸುರಿಮಳೆಯಾಯಿತು. ಬಹುಪಾಲು ಹುಡುಗಿಯರು ಕೇವಲ ಹದಿನೇಳು ಅಥವಾ ಹದಿನೆಂಟರ ಪ್ರಾಯದವರು. ಕೆಲವರು ತುಂಬ ಮನೋಜ್ಞ, ಕೆಲವರು ಲಜ್ಜಾನ್ವಿತೆಯರು ಮತ್ತು ಆತ್ಮವಿಶ್ವಾಸದಿಂದ ಕೂಡಿದವರು. ಆದರೆ ಅವರಲ್ಲಿ ಪ್ರತಿಯೊಬ್ಬರೂ ಅತಿಮಾನುಷರೆಂಬಂತಿದ್ದಾರೆ. ನಮ್ಮಲ್ಲಿ ನಾಳೆ ಬೆಳಿಗ್ಗೆ ಇಲ್ಲಿಂದ ಹೊರಡುವವರು, ಇಲ್ಲ ಈಗಲೇ ಈ ಬೆಳಿಗ್ಗೆನೇ ಹೊರಡುವವರಿಗೆ ರಾತ್ರಿಯ ರತಿಕನಸಿನ ವಸ್ತುಗಳು ಈ ಕನ್ಯೆಯರೇ ಎಂದು ಚೆನ್ನಾಗಿ ಗೊತ್ತು. ನಮ್ಮ ಎಚ್ಚರದ ಮತ್ತು ನಿದ್ರೆಯ ಗಳಿಗೆಗಳಲ್ಲಿ ಅವರಿಗಾಗಿ ನಾವು ತೀವ್ರವಾಗಿ ಹಂಬಲಿಸಿ ಬೇಯುತ್ತೇವೆ. ಓ ದೇವರೆ ಯುವಕರಾಗಿ ಮತ್ತು ಮುದ್ದಾಗಿರಲು ನನಗೆ ವಯಸ್ಸಾದಂತೆನಿಸುತ್ತಿದೆ. ಹಾಡು ನಿಲ್ಲುವ ಸಮಯ ಬಂದಿತೆಂದರೆ, ಸ್ತ್ರೀಯರೂ ಸೇರಿದಂತೆ ನಾವೆಲ್ಲರೂ ಒಟ್ಟಾಗಿ ಸೇರಿ ಸಾಮೂಹಿಕವಾಗಿ ಹಾಡುತ್ತೇವೆ. ರಾಜಾಸ್ತಾನದ ಜನಪದ ಗೀತೆಯನ್ನು ಹಾಡುತ್ತಿದ್ದಾಗ ಅಲ್ಲಾಡದೆ ಕುಳಿತುಕೊಳ್ಳುವುದು ಅಸಾಧ್ಯ. ನಾವೆಲ್ಲರೂ

ಚಪ್ಪಾಳೆ ತಟ್ಟುವುದರಲ್ಲಿ ನಿಷ್ಣಾತರು. ಹಾಗಾಗಿ ಪಕ್ಕವಾದ್ಯದವನೊಂದಿಗೆ ನಾವೂ ತಾಳಹಾಕುತ್ತೇವೆ. ಹಾಡಿನ ಮೇಲೆ ಹಾಡುಗಳು, ಇಡೀ ವಾತಾವರಣದಲ್ಲಿಯೇ ಮದ ಮತ್ತು ಮಸ್ತಿ ತುಂಬಿದೆ. ನಾವು ಮದ್ಯಪಾನ ಮಾಡಿದ್ದೆವು ಜೊತೆಗೆ ಹಾಡು, ಸ್ತ್ರೀಯರು ಮತ್ತು ಅತಿಯಾದ ಉಲ್ಲಾಸದಿಂದ ಮತ್ತೇರಿದ್ದೆವು.

ಅವರೆಲ್ಲರೂ ಚಂದೇಲರ ಲಂಗಗಳನ್ನು ಮತ್ತು ಗಾಢ ಮಣ್ಣಿನ ಬಣ್ಣದ ಚೋಲಿಗಳನ್ನು ಧರಿಸಿದ್ದಾರೆ. ತಲೆಯ ಮೇಲೆ ಚುನ್ನಿಗಳನ್ನು ಧರಿಸಿದ್ದಾರೆ. ಕುಪ್ಪುಸಗಳ ಕತ್ತಿನ ಭಾಗದಲ್ಲಿ ಅವುಗಳನ್ನು ಕುಪ್ಪುಸಗಳಿಗೆ ಸೇರಿಸಿ ಹೊಲಿಯಲಾಗಿದೆ. ಎಲ್ಲರೂ ತಮ್ಮ ಕಾಲಂದಿಗೆಗಳ ಸುತ್ತ ಬೆಳ್ಳಿಯ ನೂಪುರಗಳನ್ನು ಧರಿಸಿದ್ದರು. ಗಾಢವಾದ ನಶ್ಯದ ಬಣ್ಣದ ಚೋಳಿ–ಲಂಗ ಧರಿಸಿರುವ ಹುಡುಗಿಯೊಬ್ಬಳಿದ್ದಾಳೆ ಇಲ್ಲಿ. ಅವರಲ್ಲೆಲ್ಲ ಅತ್ಯಂತ ನಾಚಿಕೆಯ ಸ್ವಭಾವದ ಹೆಣ್ಣು. ಅವರಲ್ಲಿ ಎಲ್ಲರಿಗಿಂತ ಇವಳೇ ಚಿಕ್ಕವಳೆ? ಅದನ್ನು ಹೇಳಲು ಬೇರೆ ಉಪಾಯವಿಲ್ಲ. ನಾನಾಗಲಿ, ಬೇರೆ ಯಾರೇ ಆಗಲಿ ಖಂಡಿತವಾಗಿ ಹೇಳಬಹುದಾಗಿದ್ದ ಸಂಗತಿ ಎಂದರೆ ಅವಳು ಇಷ್ಟೆಲ್ಲ ನಾಚಿಕೆಯ ಸ್ವಭಾವದವಳಾಗಿದ್ದಾಗ್ಯೂ ಅವಳು ಷಹಜಾದನ ಪ್ರಣಯದಲ್ಲಿ ಸಿಲುಕಿದ್ದಾಳೆ. ಅವನ ಕಡೆ ಎಷ್ಟು ಸಾಧ್ಯವೋ ಅಷ್ಟು ಕಳ್ಳ ನೋಟಗಳನ್ನು ಬೀರುತ್ತಲೇ ದಾರಿಯ ಮಧ್ಯದವರೆಗೂ ಕೆಳಗಡೆಗೆ ನೋಡುತ್ತಿರುತ್ತಾಳೆ. ಅವಳ ಕೆಂಪು ಮಿಶ್ರಿತ ಹಳದಿ ಬಣ್ಣದ ಮೈ ಬಣ್ಣದೊಂದಿಗೆ ಅವಳು ಧರಿಸಿರುವ ಉಡುಪಿನ ನಶ್ಯದ ಬಣ್ಣವು ಉದ್ರೇಕಗೊಳಿಸುವ ಮಟ್ಟಿಗೆ ಸ್ಪರ್ಧಿಸುತ್ತಿದೆ. ಇವಳು ಸಾಮಾನ್ಯವಾದ ನಾಟ್ಯದ ಹುಡುಗಿಯಲ್ಲ. ಇತರೆ ಬೇರಾವ ಹುಡುಗಿಯೊಬ್ಬಳೂ ಅಲ್ಲ.

ಷಹಜಾದನು ಅವಳ ಸೌಂದರ್ಯವನ್ನು ತದೇಕ ಚಿತ್ತನಾಗಿ ಹೀರುತ್ತಿದ್ದಾನೆ. ಅವನ ಮುಖದ ಮೇಲೆ ಸಂತಸದ ನೋಟವಿದೆ. ಹುಡುಗಿಯು ತನ್ನ ವಿಷಯಕ್ಕೆ ಹೊಂದಿರುವ, ಅತ್ಯಂತ ಸಂಯಮದ ಹಾಗೂ ಆ ಕಾರಣಕ್ಕಾಗಿಯೇ ಬಹು ಆಕರ್ಷಕವೂ ಪ್ರಬಲವೂ ಆದ ವ್ಯಾಮೋಹವನ್ನು ಗಮನಿಸಿದ್ದಾನೆ. ಬೇರೆ ಯಾವುದೇ ಪ್ರಕಟವಾದ ರೀತಿಯ ಆರಂಭವೂ ಅದಕ್ಕಿಂತ ಹೆಚ್ಚು ಮನವೊಲಿಸುವಂಥದ್ದಾಗಿರಲು ಸಾಧ್ಯವಿಲ್ಲ.

ನವಾಜ್‌ಗೆ ಕೂರುವ ಸ್ಥಿತಿಯಲ್ಲಿ ಕುಳಿತೇ, ಅತ್ತ ಇತ್ತ ಅಲುಗಾಡುತ್ತ ಸ್ವಲ್ಪ ಅನಿಶ್ಚಿತವಾಗಿಯೇ "ಅವಳ ಹೆಸರೇನು" ಎಂದು ಕೇಳಿದನು.

"ರಾಜಕುಮಾರರೆ ನೀವು ಕೇಳಬಾರದ ವ್ಯಕ್ತಿಯನ್ನು ಕೇಳುತ್ತಿದ್ದೀರಿ, ನಿಮ್ಮಷ್ಟೇ ಅಜ್ಞಾನಿ ನಾನು."

"ಅವಳು ಬೇರೆ ಥರಾ ಅನ್ನಿಸೋದಿಲ್ಲವೆ?"

"ಯಾರು?" ನಾನು ಮುಗ್ಧವಾಗಿ ಕೇಳಿದೆ.

"ಅವಳಲ್ಲದೆ ಇಲ್ಲಿ ಬೇರೆ ಯಾರಾದರೂ ಇದ್ದಾರೆಯೆ?"

"ಅವರಲ್ಲಿ ಏಳು ಜನ. ನನ್ನ ಬದುಕಿನ ಪ್ರಿಯತಮೆ ಸಜನೀ ಬಾಯಿಯನ್ನು ಹೇಳಬೇಕಾದ್ದೇ ಇಲ್ಲ"

"ಹೌದು ಸ್ವಾಮಿ, ಸಜನೀ ಬಾಯಿ ನಿಮಗಾಗಿಯೇ ಇರುವಂಥವಳು" ಅವನು ಅನಿಶ್ಚಯತೆಯಿಂದ ನಕ್ಕ.

"ಮಹಾಸ್ವಾಮಿಯವರೇ, ನನ್ನ ಮಾತು ಕೇಳಿ ಆ ಜೋಡಿ ಸ್ವರ್ಗದಲ್ಲಿ ಆದಂಥ ಜೋಡಿ ಆದರೆ ಆ ಕಾಂತಿಯುತವಾದ ಕಂದು ಬಣ್ಣದಲ್ಲಿ ಯಾವ ಹುಡುಗಿ ಎಂದು ತಮಗೆ ಗೊತ್ತಾಯಿತೆ, ನನಗೆ ಆ ಬಣ್ಣವನ್ನು ಸರಿಯಾಗಿ ವರ್ಣಿಸಲು ಗೊತ್ತಾಗ್ತಾ ಇಲ್ಲ."

“ಅಂದರೆ ತಾವು ಹೇಳುತ್ತಿರುವುದು ಎಡಗಡೆಯಿಂದ ಮೂರನೇ ಹುಡುಗಿ ತಾನೆ?” ನಾನು ಬೇಕೆಂದೇ ಯಾವುದೋ ಬೇರೆ ಹುಡುಗಿಯ ಕಡೆ ಬೊಟ್ಟು ಮಾಡಿ ತೋರಿಸಿದೆ.

“ಅಯ್ಯೋ ಬೆಪ್ಪೆ ಅಲ್ಲ ಅಲ್ಲ, ನಾನು ಹೇಳಿದ್ದು ಆ ಹೊಳೆಯುವ ಕಂದು ಬಣ್ಣ” ಅವನು ಏಳ ತೊಡಗಿದ. ಎಡವಿದ, ನಂತರ ತನ್ನ ತೋರು ಬೆರಳನ್ನು ಒಂದು ಕಡೆಗೆ ಗುರಿಮಾಡುತ್ತ ಡೋಲಾಯಮಾನವಾಗಿ ತೋರಿಸಿದ. ಇಷ್ಟು ಹೊತ್ತಿಗೆ ಆ ಹುಡುಗಿ ನಾಚಿ ಕೋಪದಿಂದ ತನ್ನ ಹೆಬ್ಬೆರಳತ್ತ ನೋಡ ತೊಡಗಿದಳು. ಅದನ್ನು ಈಗ ತಾನೆ ಕಂಡು ಕೊಂಡಳೋ ಎಂಬಂತೆ. ನಾಚಿಕೆ ಅವಳ ಮುಖಕ್ಕೆ ಎಲ್ಲಿಲ್ಲದ ಸೌಂದರ್ಯ ತಂದಿತ್ತು.

“ಅದು ಹೊಳೆಯುವ ಕಂದು ಬಣ್ಣ ಅಥವಾ ಬೇರೆ ಅಲ್ಲ, ಅದು ನಶ್ಯದ ಬಣ್ಣ”

“ಅದು ಕಂದೋ, ನಶ್ಯದ ಬಣ್ಣವೋ, ಊದಾ ಬಣ್ಣವೋ ಅದನ್ನು ನಾನು ಜರೀತೀನಿ ಅಂತ ಅಂದುಕೊಡಿದ್ದೀರೇನು ನೀವು ? ಅವಳ ಹೆಸರೇನು?”

“ಶ್, ಶ್, ಮೆಲ್ಲಗೆ ಷಹಜಾದಾ” ಬನ್ನಿ ಕೂತುಕೊಳ್ಳಿ ಎಂದು ಅವನಿಗೆ ವಿನಂತಿಸಿದೆ.

“ನೀವು ಅವಳ ಹೆಸರು ಹೇಳುವುದಾದರೆ ಮಾತ್ರ”

“ಮಹಾಸ್ವಾಮಿ ಬನ್ನಿ ದಯವಿಟ್ಟು ನಮ್ಮ ಜೊತೆಕೂತುಕೊಳ್ಳಿ” ಪ್ರತಿಯೊಬ್ಬರೂ ಅವನ ಅಬ್ಬರದ ನಡೆಯ ಮಜಾ ತೆಗೆದುಕೊಳ್ಳುತ್ತಿದ್ದರು. ಸುಖ ತರುವ ಮತ್ತು ಹೇಳಿದ್ದನ್ನೇ ಮತ್ತೆ ಹೇಳುವಂತೆ ಮಾಡುವ ಆ ಇನ್ನೊಂದು ಕುಡಿತವನ್ನು ಕುಡಿದನು. ಈಗ ರಾಜಕುಮಾರನನ್ನು ಮಲಗಲು ಕರೆದೊಯ್ಯುವುದು ತುಂಬ ಒಳ್ಳೆಯದು ಎಂದು ಭಾವಿಸಿ ಮಂಗಳನಿಗೆ ಇನ್ನಷ್ಟು ಮದ್ಯ ತರಲು ಸೂಚನೆ ನೀಡಿದೆ. ನಾನು ಹೇಳಿದ್ದರ ಅರ್ಥ ಏನೆಂದು ಅವನಿಗೆ ತಿಳಿಯಿತು. ಒಳಗೆ ಹೊರಗೆ ಅಲೆದಾಡುವ ಜನರಿಗೆ ಸ್ವಲ್ಪ ಅಫೀಮು ಸೇರಿಸಿ ಕೊಟ್ಟರೆ ಅದೊಂದು ಪವಾಡವನ್ನೇ ಮಾಡಿ ಬಿಡುತ್ತದೆಂದು ಅವನಿಗೆ ಗೊತ್ತಿತ್ತು. ಅದೃಷ್ಟವಶಾತ್ ರಾಜಕುಮಾರನ ಮದ್ಯದ ಪಾತ್ರೆಯನ್ನು ತುಂಬುವಂತೆ ರಾಜೇಂದ್ರನು ತನ್ನ ಸೇವಕನೊಬ್ಬನಿಗೆ ಆಜ್ಞಾಪಿಸಿದನು.

“ನಾನು ಯಾರ ಬಗ್ಗೆ ಮಾತಾಡುತ್ತಿದ್ದೇನೆ ಅಂತ ನಿಮಗೆ ಗೊತ್ತು. ಅವಳ ಹೆಸರೇನು?”

“ಕ್ಷಮಿಸಿ ನನಗೆ ಗೊತ್ತಿಲ್ಲ ಷಹಜಾದಾ”

“ನಿಮ್ಮ ಮನೆಯಲ್ಲೊಬ್ಬರ ಹೆಸರೇ. ನಿಮಗೆ ಗೊತ್ತಿಲ್ಲವೆ?” ನನ್ನ ಉತ್ತರ ಅವನಿಗೆ ಹಿಡಿಸಲಿಲ್ಲ.

“ಇದು ನನ್ನ ಮನೆ ಅಲ್ಲ. ಇದು ಲಕ್ಷ್ಮಣ ಸಿಂಹಜೀ ಮತ್ತು ರಾಜೇಂದ್ರ ಅವರ ಮನೆ”

“ಓಹ್! ನಿಜ. ಹಾಗಿದ್ದ ಮೇಲೆ ನಾನು ರಾಜೇಂದ್ರ ಅವರನ್ನು ಕೇಳುವುದೊಳ್ಳೆಯದು” ರಾಜೇಂದ್ರನ ಕಡೆ ತಿರುಗಿದ.

“ನಿಮಗೆ ತೊಂದರೆ ಕೊಡುತ್ತಾ. ಇರುವುದಕ್ಕೆ ಕ್ಷಮಿಸಿ. ನಿಮ್ಮ ಮನೆಯಲ್ಲೇ ಅಂಥ ಒಳ್ಳೆಯ ಮೋಜಿನ ಗೆಳತಿ ಇರಬೇಕಾದರೆ, ಆ ನಶ್ಯದ ಬಣ್ಣದ ಉಡುಪಿನಲ್ಲಿರುವ ಹುಡುಗಿಯ ಹೆಸರನ್ನು ಹೇಳುವಿರಾ?”

“ನನಗೆ ಸರಿಯಾಗಿ ನೆನಪಿಲ್ಲ ಮಹಾಸ್ವಾಮಿ. ಅದು ಸಲ್ಮಾ ಅಥವಾ ನಿಖಾತ್ ಇರಬೇಕು” ರಾಜೇಂದ್ರ ಮುಗುಳ್ನಕ್ಕು ಹುಡುಗಿಯರ ನೃತ್ಯ ನೋಡಲು ಹೊರಟ.

“ಸಲ್ಮಾ? ನಿಖಾತ್? ಹಿಂದೂ ಹುಡುಗಿ ಅಲ್ಲವೇ?” ಬಹಾದುರ್ ಗೊಂದಲಕ್ಕೊಳಗಾದವನಂತೆ ಕಂಡ.

"ಅದೇಕೆ ನೀವು ಹಾಗೆ ಅಷ್ಟೊಂದು ಒಂದೇ ಮನಸ್ಸಿನಿಂದ ಗುರಿ ಇಟ್ಟು ಅವಳ ಹಿಂದೆ ಬಿದ್ದಿದ್ದೀರಿ? ನೀವು ಅವಳನ್ನು ಗುರುತಿಸಬಲ್ಲಿರಾ?"

"ನಾನು ಗುರುತಿಸಬೇಕೆ? ನಾನು ಅವಳ ಜೊತೆ ಸುಖ ಅನುಭವಿಸಿದ್ದೇನೆಯೆ?"

"ಇಲ್ಲಾ ಸ್ವಾಮಿ, ಎಲ್ಲ ಹುಡುಗಿಯರೂ ಕನ್ಯೆಯರು"

"ಹಾಗಿದ್ದ ಮೇಲೆ ನಾನೇಕೆ ಗುರುತಿಸಲಿ"

ಯಾವ ಕಾರಣಕ್ಕೋ ಏನೋ ನನ್ನ ಸೋದರ ಸಂಬಂಧಿಗೆ ಆ ಪ್ರಶ್ನೆ ತುಂಬ ಹರ್ಷೋಲ್ಲಾಸದ ಪ್ರಶ್ನೆ ಎನ್ನಿಸಿತು.

"ನನಗೆ ಗೊತ್ತಿಲ್ಲ. ನೀವು ಮಗುವಾಗಿದ್ದಾಗ ಅವಳ ಜೊತೆ ಆಟ ಆಡಿರಬಹುದು ಅಂತ ನನಗೆ ಅನ್ನಿಸಿತು"

"ಮೇವಾಡದ ಹುಡುಗಿಯ ಜೊತೆ ಆಟ ಆಡೋದೆ? ಅದು ಹೇಗೆ ಸಾಧ್ಯ?"

ಷಹಜಾದಾ ಕೋಪಗೊಂಡವನ ಹಾಗೆ ಕಾಣ ತೊಡಗಿದ.

ನಾನು ಕೂಡ ಅವನಂತೆಯೇ ಸೋಗು ಹಾಕಿದ್ದೆ ಎಂಬುದನ್ನು ಒಪ್ಪಿಕೊಳ್ಳಬೇಕು.

"ನೀವು ಒಗಟಿನಲ್ಲಿ ಮಾತಾಡ್ತಿದ್ದೀರಿ ಅನ್ನುತ್ತೆ ರಾಜೇಂದ್ರ ಸಿಂಹ"

"ಅವಳು ಅಹಮದ್‌ನಗರದ ಕಾಜ಼ಿಯ ಮಗಳು. ನೀವು ಮಗುವಾಗಿದ್ದಾಗ, ನಿಮ್ಮ ತಂದೆಯ ಜೊತೆ ಹೋಗಿದ್ದಾಗ ಅವಳನ್ನು ಭೇಟಿಯಾಗಿದ್ದಿರಬೇಕು ಎಂದು ನನ್ನ ಊಹೆ"

"ಹಾಗಾದರೆ ಅವಳು ಇಲ್ಲೇನು ಮಾಡ್ತಿದ್ದಾಳೆ?"

ಗಾಯನ ನಿಂತಿತ್ತು. ಹುಡುಗಿಯರು ಪರಸ್ಪರ ಆಲಿಂಗಿಸಿಕೊಳ್ಳುತ್ತ ಅಲ್ಲೇ ಸ್ಥಿರವಾಗಿ ನಿಂತಿದ್ದರು. ಅವರು ಭಯಗೊಂಡಂತಿತ್ತು. ಸಲ್ಮಾ ಅಥವಾ ನಿಖಾತಳ ಮೇಲ್ತುಟಿಯ ಮೇಲೆ ಬೆವರಿನ ಹನಿಗಳು ಇದ್ದುವು. ಅಷ್ಟು ದೀರ್ಘಕಾಲ ನರ್ತನ ಮಾಡಿದ ಆಯಾಸದಿಂದಾಗಿ ಅವಳ ಕಂಕುಳು ಬೆವರಿನಿಂದ ತೊಯ್ದಿದ್ದುವು. ಆದರೆ ಅವಳು ಕಂಪಿಸುತ್ತಿದ್ದಳು. ಅವಳ ಹರಿಣಾಕ್ಷಿಗಳು ಎಲ್ಲ ಕಡೆಯೂ ಹರಿದಾಡಿದುವು. ತನ್ನ ಜೊತೆಗಾತಿಯ ಕೈಗಳನ್ನು ಬಿಗಿಯಾಗಿ ಹಿಡಿದು ಕೊಂಡಿದ್ದರೂ ಒಂದು ವೇಳೆ ದೀಪ್ ಮಹಲ್‌ನಿಂದ ಹೊರ ಹೊರಡಲು ಸಾಧ್ಯವಾಗಿದ್ದರೆ ಅಹಮದ್ ನಗರಕ್ಕೆ ಓಡಿಹೋಗಿ ಬಿಡುತ್ತಿದ್ದಳು. ರಾಜೇಂದ್ರ ಏನು ಮಾಡಲು ಹೊರಟಿದ್ದ. ತಾನೇನು ಹೇಳುತ್ತಿದ್ದೇನೆ ಎಂಬುದು ಅವನಿಗೆ ಗೊತ್ತಿತ್ತೇ? ಅಹಮದ್ ನಗರವನ್ನೇಕೆ ತರಬೇಕು? ಆಮೇಲೆ ಅದು ನನಗೆ ಅರ್ಥವಾಗ ತೊಡಗಿತು, ಷಹಜಾದಾ ಮೇವಾಡದ ಸೈನ್ಯದ ಕಗ್ಗೊಲೆ ಮತ್ತು ಲಕ್ಷ್ಮಣ ಸಿಂಹರ ಪತನದ ಕತೆಯನ್ನು ಹೇಳಿದಾಗ ಅವನ ಮುಖ ನೆನಪಿಗೆ ಬಂದಿತು. ರಾಜೇಂದ್ರನು ಮನಸ್ಸಿನಲ್ಲಿ ಏಕೈಕ ಉದ್ದೇಶವಿಟ್ಟುಕೊಂಡು. ಈ ದಿನದ ಸಂಗೀತ ಕಛೇರಿಯ ಸಮಾರಂಭವನ್ನು ಏರ್ಪಡಿಸಿದ್ದನು. ಬಹಾದುರ್‌ಗೆ ಆಗಿನ ಸಂದರ್ಭವನ್ನು ನಾವು ಗುಜರಾತಿನ ವಿರುದ್ಧ ತಿರುಗು ಮುರುಗು ಮಾಡಿ ಅಹಮದ್ ನಗರವನ್ನು ಸೋಲಿಸಿದ್ದು ಅವರ ಮಸೀದಿಗಳನ್ನು ನಾಶಪಡಿಸಿದ್ದು, ಅವರ ಚಿನ್ನ ಬೆಳ್ಳಿಗಳನ್ನು ಲೂಟಿ ಮಾಡಿದ್ದು, ಸಾವಿರಾರು ನಾಗರಿಕರನ್ನು ಕಗ್ಗೊಲೆ ಗೈದದ್ದು ಇವೆಲ್ಲವನ್ನೂ ಅವನಿಗೆ ನೆನಪಿಸುವ ಮೂಲಕ ತನ್ನ ಸೇಡು ತೀರಿಸಿಕೊಳ್ಳಬೇಕೆಂದು ಯೋಜಿಸಿದ್ದನು.

"ರಾಜೇಂದ್ರ ನೀನು ಸರಿಯಾಗಿ ಪ್ರಜ್ಞೆ ತಂದುಕೊಂಡು ಈ ಏನೇನೋ ಅರ್ಥವಿಲ್ಲದ ಮಾತುಗಳನ್ನು ನಿಲ್ಲಿಸು"

ಆದರೆ ಅವನು ನನ್ನ ಮಾತನ್ನು ನಿರ್ಲಕ್ಷಿಸಿದ.

"ಮೇವಾಡದ ಸೈನ್ಯ ನಿಮ್ಮ ತಂದೆಯವರ ಸೈನ್ಯವನ್ನು ಚೆಲ್ಲಾಪಿಲ್ಲಿಮಾಡಿ ಅಹಮದ್ ನಗರವನ್ನು ಲೂಟಿ ಮಾಡಿದ ಸಂದರ್ಭ ನಿನಗೆ ನೆನಪಿದೆಯೆ ರಾಜಕುಮಾರ ? ಅದೊಂದು ಕಗ್ಗೊಲೆ. ಕಾಜಿ ಕೂಡ ಕೆಳಗೆ ಬಿದ್ದ. ಆದರೆ ನಾವು ಸ್ತ್ರೀಯರ ವಿಷಯಕ್ಕೆ ಗೌರವ ತೋರುವ ಆದರ್ಶವೀರರು. ಸ್ತ್ರೀಯರನ್ನೂ ಅವರ ಹೆಣ್ಣುಮಕ್ಕಳನ್ನು ನಮ್ಮೊಂದಿಗೆ ಕರೆದುಕೊಂಡು ಬಂದು ಅವರಿಗೊಂದು ಉದ್ಯೋಗದ ತರಬೇತಿ ನೀಡುತ್ತಿದ್ದೇವೆ. ಅವರು ನಮಗೆ ಸಂತಸ ನೀಡುತ್ತಾರೆಂದು ನಂಬಿದ್ದೇವೆ. ಈ ಹೊತ್ತು ನೀಡಿದ ಹಾಗೆ, ಅಲ್ಲದೆ ನಾವು ಅವರಿಗೆ ದೊಡ್ಡ ಮೊತ್ತದ ಬಹುಮಾನ ನೀಡುತ್ತೇವೆ. ನಾವು......."

ಅವನು ವಾಕ್ಯವನ್ನು ಪೂರ್ತಿ ಮಾಡಲು ಅವಕಾಶವೇ ಸಿಗಲಿಲ್ಲ. ನಾನಾಗಿದ್ದರೆ ಅವನ ನಾಲಿಗೆಯನ್ನು ಕಿತ್ತೋ ಇಲ್ಲವೆ ಅವನ ಮುಖಕ್ಕೆ ಹೊಡೆಯುವುದನ್ನೋ ಮಾಡಿಬಿಡುತ್ತಿದ್ದೆ. ನನ್ನ ಪ್ರೀತಿಯ ಸೋದರ ಸಂಬಂಧಿ ರಾಜೇಂದ್ರನು ತನ್ನ ತಂದೆಗಾದ ಅಪಮಾನವನ್ನು ಅಷ್ಟೆಲ್ಲ ಮನಸ್ಸಿಗೆ ಹಚ್ಚಿಕೊಂಡು ನನ್ನ ಪಕ್ಕ ನಿಂತು ಗುಜರಾತ್ ವಿರುದ್ಧ ಯುದ್ಧ ಮಾಡುತ್ತಿದ್ದ.

ಬಹಾದುರ್ ತುಂಬ ನೋವಿನಲ್ಲೆಂಬಂತೆ ಮುಂದೆ ಬಾಗಿದ. ಅದು ಅತ್ಯಂತ ಸಾಧಾರಣ ತಂತ್ರ, ಆದರೆ ನಾನು ಅದರಿಂದ ಮೋಸ ಹೋದೆ.

"ನೀವು ಸರಿಯಾಗಿದ್ದೀರಾ ಷಹಜಾದಾ?" ನಾನು ಕೇಳಿದೆ.

"ನಾನು ಸರಿಯಾಗಿಯೇ ಇದ್ದೇನೆ. ಸರಿಯಾಗಿಲ್ಲದೆ ಇರುವುದು ನಿಮ್ಮ ಸೋದರ ಸಂಬಂಧಿ." ತನ್ನ ಕತ್ತಿಯಿಂದ ವೇಗವಾಗಿ ಏಳು ಸಲ ಹೊಡೆದನು. ಆಮೇಲೆ ರಾಜೇಂದ್ರ ನಿರ್ಜೀವ ಶವವಾದ. ನಮ್ಮೆಲ್ಲರನ್ನು ಶ್ಮಶಾನ ಮೌನ ಆವರಿಸಿಕೊಂಡಿತು. ಬಡಹುಡುಗಿ ಸಲ್ಮಾಳೋ ನಿಖಾತಳೋ ಕುಸಿದು ಕುಳಿತಳು. ನಾನು ರಾಜೇಂದ್ರನನ್ನು ಎತ್ತಿಕೊಂಡೆ. ನನ್ನ ಬಟ್ಟೆಬರೆಗಳು, ಕೈ ಎಲ್ಲವೂ ರಕ್ತ ಸಿಕ್ತವಾಗಿದ್ದುವು. ನನ್ನ ಷಂಡ ನೋವಿನಲ್ಲಿ ಎಲ್ಲ ದೇವರುಗಳನ್ನೂ ಕೆಳಕ್ಕೆ ಕೆಡವಬೇಕೆನಿಸಿತು. ನಾನು ಸೂರಿನ ಕಡೆ ನೋಡಿದೆ, ದೀಪಗಳ ಕಡೆ ನೋಡಿದೆ. ಯಾರ ಕಂಠವು ಈ ಜಗತ್ತಿನಲ್ಲಿ ನೋಡಬೇಕಾದ್ದೆಲ್ಲವನ್ನೂ ನೋಡಿತ್ತೋ ಅನುಭವಿಸಬೇಕಾದೆಲ್ಲವನ್ನೂ ಅನುಭವಿಸಿತ್ತೋ ಆದರೆ ರಾಜೇಂದ್ರನ ಸಾವನ್ನು ನೋಡಿರಲಿಲ್ಲವೋ ಅಂಥ ಸಜನೀ ಬಾಯಿಯತ್ತ, ನನ್ನ ಮಾವನತ್ತ, ಮೃತಿ ಹೊಂದಿದ ನನ್ನ ಸೋದರ ಸಂಬಂಧಿಯತ್ತ ನೋಡಿದೆ. ನನ್ನ ದೇಹ ನಡುಗಿ ತತ್ತರಿಸಿತು. ಆದರೆ ಬಾಯಿ ಚೀರಲಿಲ್ಲ. ಓಹ್! ರಾಜೇಂದ್ರ ನಮ್ಮ ಗುಜರಾತ್ ಸೈನಿಕ ಕಾರ್ಯಾಚರಣೆ ಪ್ರಾರಂಭವಾಗುವುದಕ್ಕೆ ಕಾಯುವ ಬದಲು ಈ ಮುಂಚೆಯೇ ನಾನೇಕೆ ನಿನಗೆ ಹತ್ತಿರವಾಗಲಿಲ್ಲ?

ಒರೆಯಿಂದ ಕತ್ತಿ ಹೊರಬರುವ ಶಬ್ದ. ಒಂದು ಸಲ, ಎರಡು ಸಲ, ಮೂರು ಸಲ ಕೇಳಿಸಿತು. ರಾವ್ ಸೂರಜ್ ಮಲ್, ನರ್ಬದ್ ಹಾದಾ, ರಾವತ್ ಜೋಧಾಸಿಂಹ ಈ ಮೂರೂ ಜನ ಷಹಜಾದಾನನ್ನು ಸುತ್ತು ಗಟ್ಟಿದರು. ಇತರೆಯವರು ತಮ್ಮ ಕತ್ತಿಗಳನ್ನು ಒರೆಯಿಂದ ತೆಗೆಯುತ್ತಿದ್ದರು. ನಾನು ರಾಜೇಂದ್ರನ ದೇಹವನ್ನು ಕೆಳಗಿಳಿಸಿ ಕತ್ತಿಯನ್ನು ಹೊರಸೆಳೆದು ಬಹದ್ದೂರ್ ಮುಂದೆ ನಿಂತೆ.

"ನನಗೆ ಯಾರ ರಕ್ಷಣೆಯೂ ಬೇಕಿಲ್ಲ ಮಹಾರಾಜ್ ಕುಮಾರ್. ಅವರಿಗೆ ಗುಂಡಿಗೆ ಇದ್ದರೆ ಒಬ್ಬರಾಗುತ್ತಲೇ ಇನ್ನೊಬ್ಬರು ಎಲ್ಲರನ್ನೂ ನಾನೇ ಬಲಿ ತೆಗೆದುಕೊಳ್ಳುತ್ತೇನೆ"

“ನಮ್ಮ ತಂದೆ ರಾಣಾ ಸಂಗಾ ಅವರ ರಾಜ್ಯದಲ್ಲಿ ನೀವು ನಿಮ್ಮ ನಾಲಗೆ ಬಿಗಿ ಹಿಡಿಯ ಬೇಕು ರಾಜ್‌ಕುಮಾರ. ನಿಮ್ಮ ಆಯುಧಗಳನ್ನೆಲ್ಲ ಇಲ್ಲಿ ಕೊಡಿ”

“ನನ್ನ ಆತ್ಮರಕ್ಷಣೆ ಮಾಡಿಕೊಳ್ಳದೆ ನಾನು ಸಾಯಬೇಕೆಂದು ನಿಮ್ಮ ನಿರೀಕ್ಷೆಯೆ ರಾಜಕುಮಾರ?”

“ಇನ್ನಾವ ಹತ್ಯೆಯೂ ನಡೆಯದು ಷಹಜಾದಾ, ನಿಮ್ಮ ಆಯುಧಗಳನ್ನು ಮಂಗಳನಿಗೆ ಹಸ್ತಾಂತರಿಸಿ” ನಾನು ಅವನ ಕಡೆ ನೋಡಿದರೆ ಅವನು ದೃಷ್ಟಿ ಯುದ್ಧದ ಸ್ಪರ್ಧೆ ಪ್ರಾರಂಭಿಸಿ ಬಿಡುತ್ತಾನೆ ಎಂದು ಗೊತ್ತಿತ್ತು. ಹಾಗೆ ಮಾಡದೆ ಬದಲಿಗೆ ಪ್ರತೀಕಾರದ ಗುರಿ ಹೊಂದಿದ್ದ ಮೂರು ಪ್ರಮುಖ ಮುಖಂಡರನ್ನು ನನ್ನ ಕಣ್ಣ ನೋಟದಲ್ಲಿ ಹಿಡಿದಿರಿಸಿದೆ. ಷಹಜಾದನ ಆಂತರಿಕ ತಳಮಳದ ಬಿಸಿ ನನಗೆ ತಟ್ಟಿತು. ಅವನು ನನ್ನನ್ನು ನಂಬುವನೆ? ಸ್ವತಃ ಅವನೇ ಅಸ್ತ್ರ ರಹಿತನ ಮೇಲೆ ಆಕ್ರಮಣ ಮಾಡಿದ್ದ. ರಕ್ಷಣೆಯಿಲ್ಲದಂತಾಗುವುದೇ ಅವನ ಅತ್ಯುತ್ತಮ ರಕ್ಷಣೆಯೆ? ತಾನೆಂಥ ಘೋರ ಕೃತ್ಯವನ್ನು ಗೈದೆನೆಂಬುದರ ಅರಿವು ಅವನಿಗೆ ಬಹುಶಃ ಆಗ ತೊಡಗಿತು. ಆತ್ಮಾವಲೋಕನಕ್ಕಾಗಲಿ, ಪಶ್ಚಾತ್ತಾಪಕ್ಕಾಗಲಿ ಅವನು ಎಡೆಕೊಟ್ಟನೆ ಎಂಬುದು ಅನುಮಾನವೇ. ಅವನು ಹೋರಾಟ ಮಾಡುವನೇ. ನಾನು ಮಾತ್ರ ಅವನಿಗಿದ್ದ ಭರವಸೆ ಎಂಬುದನ್ನು ಅವನು ತಿಳಿದಿದ್ದ.

ಷಹಜಾದನು ತನ್ನ ಕಠಾರಿ ಮತ್ತು ಖಡ್ಗವನ್ನು ಮಂಗಳನಿಗೆ ಒಪ್ಪಿಸಿದನು.

“ಅವನು ಜೀವಂತವಾಗಿ ದೀಪ್ ಮಹಲ್‌ನಿಂದ ಹೋಗುವುದಿಲ್ಲ ಮಹಾಸ್ವಾಮಿ” ಎಂದು ಹೇಳುತ್ತ ಹಾದಾನರ್ಬದ್ ಷಹಜಾದಾ ಮತ್ತು ನನ್ನತ್ತ ನುಗ್ಗಿದ.

“ಅವರು ನಮ್ಮ ಅತಿಥಿ. ಷಹಜಾದನ ಕೂದಲು ಮುಟ್ಟುವಷ್ಟು ಧಾರ್ಷ್ಟ್ಯ ತೋರಿದರೂ ನಾನವನನ್ನು ಮೊದಲು ಕೊಲ್ಲುವೆ?” ಅದು ಬರೀ ಬಡಾಯಿಯಾಗಿತ್ತೇ ಆ ಸಭಾಂಗಣದಲ್ಲಿ ನೂರಕ್ಕೂ ಹೆಚ್ಚು ಜನರ ವಿರುದ್ಧ ಹೋರಾಡ ಬೇಕಿತ್ತೆ? “ನಾನು ಮಹಾರಾಜ್‌ಕುಮಾರ್. ನಾನು ಒಂದೊಂದು ಶಬ್ದವನ್ನು ಪ್ರತ್ಯೇಕವಾಗಿ ಉಚ್ಚರಿಸುತ್ತ ನಿಮ್ಮೆಲ್ಲರ ಆಯುಧಗಳನ್ನು ಕೆಳಗಿಟ್ಟು ಮನೆಗೆ ತೆರಳಿ” ಎಂದೆ. ಅವರು ಸಂದಿಗ್ಧದಲ್ಲಿ ನಿಂತರು. ಅವರು ನನ್ನ ಮಾತನ್ನು ಕೇಳುತ್ತಿದ್ದರೆ? ಅಥವಾ ತಿರುಗಿ ಬೀಳುತ್ತಿದ್ದರೆ? ಹೇಗಾದರೂ ಸರಿ, ಹಾದಾನ ಕಣ್ಣುಗಳಲ್ಲಿಯ ಅಸಹ್ಯ, ತಿರಸ್ಕಾರ ಮತ್ತು ದ್ವೇಷವನ್ನು ಮರೆಯಲಾಗುವುದಿಲ್ಲ. ರಾಜಮಾತೆ ನನ್ನ ಅತ್ತೆಯ ಜೊತೆ ನಮ್ಮತ್ತ ನಡೆದುಬಂದರು.

“ಮಹಾರಾಜ್‌ಕುಮಾರ್ ಹೇಳಿದ್ದನ್ನು ನೀವು ಕೇಳಿಸಿಕೊಳ್ಳಲಿಲ್ಲವೇನು? ನಿಮ್ಮ ಖಡ್ಗಗಳನ್ನು ಒರೆಯಲ್ಲಿ ಹಾಕಿ ಇಲ್ಲಿಂದ ಹೊರಡಿ. ಗತಿಸಿದ ನಮ್ಮ ಮೊಮ್ಮಗುವಿಗಾಗಿ ಗೋಳಾಡಲು ನಮಗೆ ಕಾಲ ಮತ್ತು ಅವಕಾಶ ನೀಡಿ.” ರಾಜಕುಮಾರ ಬಹಾದುರ್ ಕಡೆ ತಿರುಗಿ ರಾಜಮಾತೆ “ನಿನಗೆ ಯಾರೂ ಅಪಾಯ ಮಾಡುವುದಿಲ್ಲ ಅಂತ ಮಹಾರಾಜ್‌ಕುಮಾರ್ ಮತ್ತು ನಾನು ಮಾತು ಕೊಡುತ್ತೇವೆ ಮಗು. ನಾನು ನಿನ್ನನ್ನು ವಾತ್ಸಲ್ಯದಿಂದ ನೋಡಿದೆ. ಆದರೆ ನೀನು ಮೇವಾಡಕ್ಕೆ ಮತ್ತು ನನ್ನ ಆತಿಥ್ಯ ಮತ್ತು ವಾತ್ಸಲ್ಯ ಎರಡಕ್ಕೂ ಅವಮಾನ ಮಾಡಿದ್ದೀ. ನೆಮ್ಮದಿಯಿಂದ ಹೋಗು”

ರಾಜೇಂದ್ರನ ಸಾವಿಗೆ ಪ್ರತೀಕಾರ ಮಾಡದೆ ಇದ್ದದ್ದಕ್ಕೆ ಬಹುಶಃ ಮೇವಾಡ ಮತ್ತು ಅದರ ಜನತೆ ಯಾವತ್ತೂ ನನ್ನನ್ನು ಕ್ಷಮಿಸುವುದಿಲ್ಲ. ನಾನು ಕೂಡ ನನ್ನ ಹಣೆಬರಹವನ್ನು ನಿರ್ಣಯಿಸಿಬಿಟ್ಟೆನೆ?

ಅಧ್ಯಾಯ 16

ನೀವು ಭೂತದ ಭೂತ ಬಿಡಿಸಬಹುದು. ಆದರೆ ನೀವು ದೇವರಿಂದ ಹೇಗೆ ಬಿಡುಗಡೆ ಪಡೆಯುವಿರಿ?

ಮಹಾರಾಜ್ ಕುಮಾರ್ ಅರಮನೆಯನ್ನು ತಲುಪಿದ. ಕರ್ತವ್ಯದ ಮೇಲಿದ್ದ ಕಾವಲು ಭಟರು ಗೌರವ ವಂದನೆ ಸಲ್ಲಿಸಿದರು. ಅವನು ಕೆಳಗಿಳಿಯಬೇಕೆ? ಅವನು ಮನೆಗೇಕೆ ಬಂದಿದ್ದಾನೆ, ಬೇಫಿಕಿರ್ ತಾಳ್ಮೆಯಿಂದ ನಿಂತುಕೊಂಡಿತು. ಅದೇ ಸಮಯಕ್ಕೆ ಮಹಾರಾಜ್‌ಕುಮಾರ್ ತನ್ನದೇ ಮನೆಯ ಬಾಗಿಲ ಬಳಿ ನಿಂತು ಬೆಳಗಿನ ಜಾವ ಮೂರುಗಂಟೆಯ ಸಮಯದಲ್ಲಿ ಏನು ಮಾಡುತ್ತಿದ್ದಾನೆಂಬುದನ್ನು ಅರ್ಥಮಾಡಿಕೊಳ್ಳಲು ಯತ್ನಿಸಿತು. ಅವನು ಅತ್ಯಂತ ಗೊಂದಲಕ್ಕೆ ಒಳಗಾಗಿದ್ದನು. ಬಡಗಿಯ ಅಂಗಡಿಗೆ ಹೋಗಿ, ಒಂದು ಉದ್ದವಾದ, ಹರಿತವಾದ ಗರಗಸವನ್ನು ತೆಗೆದುಕೊಂಡು, ವಾಪಸ್ ಬಂದು ತನ್ನ ಹಾಸಿಗೆಯಲ್ಲಿ ಮಲಗುವುದು ಅಷ್ಟೇ ಅವನಿಗೆ ಬೇಕಾಗಿದ್ದುದು. ಅವನು ಹಾಯಾಗಿ ಸ್ಥಾಪಿತನಾದ ಮೇಲೆ, ಗರಗಸ ತೆಗೆದುಕೊಂಡು ಸರಿಯಾಗಿ ತನ್ನ ಹುಬ್ಬುಗಳ ಮೇಲು ಭಾಗದಿಂದ ಪ್ರಾರಂಭಿಸಿ ನಿಧಾನಗತಿಯಲ್ಲಿ ತಲೆಯ ಸುತ್ತಲೂ ಸಮಸಂಖ್ಯೆಯ ಪೆಟ್ಟುಗಳನ್ನು ಕೊಟ್ಟುಕೊಳ್ಳುವನು. ಮೆದುಳು ಸಮೇತ ತಲೆಯ ಮೂರನೇ ಒಂದು ಭಾಗ ಕೆಳಗುರುಳಿದ ಮೇಲೆ, ಮಾತ್ರ ಅಂತಿಮವಾಗಿ ಅವನು ನೆಮ್ಮದಿಯಿಂದ ನಿದ್ರಿಸಲು ಸಾಧ್ಯ. ಯಾವುದೇ ಯೋಚನೆಗಳಿಲ್ಲ, ಯಾವುದೇ ಪ್ರಶ್ನೆಗಳಿಲ್ಲ, ಅವನ ಹೆಂಡತಿ ಮತ್ತು ಬೇಸರ ತರಿಸುವ ಅವಳ ಪ್ರಣಯ ಇವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಾಗಲಿ ಮತ್ತು ಈ ಬದುಕೆಂಬ ಪೀಡೆಯ ಜೊತೆ ಏಗುವುದಾಗಲಿ ಇರುವುದಿಲ್ಲ.

"ಘನತೆವೆತ್ತ ಮಹಾಸ್ವಾಮಿಗಳೇ – ಬೆಫ಼ಿಕಿರ್ ಅನ್ನು ಲಾಯದಲ್ಲಿ ಬಿಟ್ಟು ಬರಬೇಕೆನ್ನುತ್ತೀರಾ" ಎಂದು ಸೇನೆಯ ದಳದ ಮುಖ್ಯಸ್ಥನು ಕೇಳಿದನು. ಬೇಫಿಕೀರ್‌ನನ್ನು ಲಾಯಕ್ಕೇಕ್ಕೆ ಕಳಿಸಬೇಕು ಎಂದು ವಿಸ್ಮಿತನಾದನು. ತನಗಿಂತಲೂ ಕುದುರೆಗೇ ಹೆಚ್ಚು ವಿವೇಕವಿದೆ. ಬೇಫಿಕಿರ್‌ಗೆ ತನ್ನ ಮನೆ ಎಲ್ಲಿದೆ ಎಂದು ಗೊತ್ತಿದೆ. ತನ್ನ ಯಜಮಾನ ಯಾರೆಂದು ತಿಳಿದಿದೆ. ತಾಂತ್ರಿಕ ಶಬ್ದಗಳಾದ, ಬಹುವೇಗದ ಓಟ, ನಾಗಾಲೋಟ, ಸಾಮಾನ್ಯ ವೇಗದ ನಡಿಗೆ ಮತ್ತು 'ನಿಲ್ಲು' ಇವೆಲ್ಲ ಅರ್ಥವಾಗುತ್ತವೆ. ಅದಕ್ಕೆ ತನ್ನ 'ಧರ್ಮ' ತಿಳಿದಿದೆ. ಅವನು ಮಹಾರಾಜ್ ಕುಮಾರ್, ಈಗ ಅಂಥ ಮಹಾರಾಜ್ ಕುಮಾರ್ ತನ್ನ ಬಾಗಿಲ ಬಳಿ ಏಕೆ ಬಂದಿದಾನೆಂದು ತಿಳಿದಿಲ್ಲ. ಅಲ್ಲಿಗೆ ಬಂದ ಮೇಲೆ, ಅವನೇನು ಮಾಡಬೇಕಾಗಿದೆ. ಕುದುರೆಯಿಂದ ಕೆಳಗಿಳಿದು,

ತನ್ನ ಕೊಠಡಿಯ ಕಡೆಯ ಸೋಪಾನಗಳನ್ನೇರಿ ಸಾಗುವುದು. ಅಲ್ಲಿ ತನ್ನ ಹಾಸಿಗೆಯ ಮೇಲೆ ಕುಳಿತು ತನ್ನ ಬದುಕಿನಲ್ಲಿ ಮುಂದೇನು ಮಾಡಬೇಕಾಗಿದೆ ಎಂದು ನಿರ್ಧರಿಸಬೇಕಾಗಿರುವುದನ್ನು ಬಿಟ್ಟು ಬೇರಿನ್ನೇನೂ ಮಾಡುವಂಥದ್ದಿಲ್ಲ.

ಅವನು ಇನ್ನೇನು ಹಾಸಿಗೆಯ ಮೇಲೆ ಬಿದ್ದುಕೊಳ್ಳಬೇಕು ಎನ್ನುವ ಹೊತ್ತಿಗೆ ಅವನಿಗೆ ತನ್ನ ಹೆಂಡತಿಯ ದನಿ ಕೇಳಿಸಿತು. ಅವಳು ಯಾರೊಂದಿಗೆ ಮಾತಾಡುತ್ತಿರಬಹುದು? ಅವಳ ಕೊಠಡಿಯ ಬಾಗಿಲಿಗೆ ಹೊರಗಡೆಯಿಂದ ಶಾಶ್ವತವಾಗಿ ಬೀಗ ಹಾಕಿಬಿಡಬೇಕೆಂದು ಹಿಂದಿನ ದಿನದ ಸಂಜೆಯೇ ಕಟ್ಟುನಿಟ್ಟಾಗಿ ಆದೇಶಿಸಿದ್ದನು. ಕುಂಕುಮ್ ಕನ್ವರ್ ಅವಳಿಗೆ ಅಡಿಗೆ ಮಾಡಿಹಾಕಬಹುದು. ಮಾಡಿಸಬಹುದು, ತನ್ನ ಯಜಮಾನಿ ಇನ್ನೇನೇನು ಮಾಡಬೇಕೆಂದು ಬಯಸುತ್ತಾಳೋ ಅದೆಲ್ಲವನ್ನೂ ಮಾಡಬಹುದು. ಆದರೆ ಏನೇ ಆದರೂ, ಒಂದು ವೇಳೆ ಬೆಂಕಿ ಹತ್ತಿಕೊಂಡರೂ ಅವಳನ್ನು ಹೊರಗೆ ಮಾತ್ರ ಬಿಡುವ ಹಾಗಿಲ್ಲ. ಅವಳ ಬಾಗಿಲ ಹೊರಗಡೆ ಇದ್ದ ಹಿಜಡಾ ಗಾಢ ನಿದ್ರೆಯಲ್ಲಿದ್ದ. ಅವನು ಸಣ್ಣಗೆ ಗೊರಕೆ ಹೊಡೆಯುತ್ತಿದ್ದ. ಅವನು ಉಸಿರು ಬಿಟ್ಟಾಗ, ಗಾಳಿಯನ್ನು ಫಕ್ಕನೆ ಹಿಡಿದು ನುಂಗಲು ಅವನ ಬಾಯಿ ಭಯಂಕರವಾಗಿ ತೆರೆದುಕೊಳ್ಳುತ್ತಿತ್ತು. ಅವಳೊಂದಿಗೆ ಮಾತಾಡುತ್ತಿರುವವನು ಅವನೇ? ಅವನು ಇರಲಾರದು. ಏಕೆಂದರೆ, ಅವನು ಅಮೃತದಷ್ಟು ರುಚಿಕರವಾದದ್ದೇನನ್ನೋ ತಿನ್ನುವುದರಲ್ಲಿ ಮಗ್ನನಾಗಿದ್ದ. ಅದು ಬಹುಶಃ ಅವನಿಗೆ ಸಾಕಷ್ಟಿರಲಿಲ್ಲ. ರಾಜಕುಮಾರನಿಗೆ ತನ್ನ ಹೆಂಡತಿಯ ದನಿ ಈಗ ಇನ್ನೂ ಚೆನ್ನಾಗಿ ಕೇಳಿಸುತ್ತಿತ್ತು. ಭಾರವಾದ ಈ ಬೊಜ್ಜು ದೇಹದ ಜೊತೆ ಬೀಗ ಜಡಿದ ಬಾಗಿಲ ಮೂಲಕ ಮಾತನಾಡುವುದು ತೀರ ಅಸಂಭವವೇ. ನೋಡಲು ಅಷ್ಟೇನೂ ಕೆಟ್ಟದಾಗಿಲ್ಲ ಅವನು, ಯುವಕನಾಗಿದ್ದಾಗ, ಸುಂದರಾಕಾರನಿದ್ದಿರಬೇಕು. ಹೊರಗಿನ ಪುರುಷಾಂಗಗಳು ಇಲ್ಲವಾಗಿದ್ದರೂ ರಾಣಿಯರಲ್ಲಿ ಬಹುಜನ ಪ್ರಿಯನಾಗಿದ್ದ. ಹಿಜಡಾಗಳ ಸಂಪ್ರದಾಯವೊಂದು ಇದ್ದಿತೆ ಎಂಬುದು ರಾಜಕುಮಾರನಿಗೆ ಖಚಿತವಾಗಿ ತಿಳಿದಿಲ್ಲ. ಮಕ್ಕಳನ್ನು ಹುಟ್ಟಿಸುವುದು, ಪಡೆಯುವುದು ಅವರಿಗೆ ಸಾಧ್ಯವಿಲ್ಲವೆಂಬುದು ಗೊತ್ತಿದ್ದದ್ದೇ. ಅದನ್ನು ಹೊರತು ಪಡಿಸಿದರೆ, ಯಾವ ರಾಜ ಮನೆತನದವರಿಗೂ, ಮೇವಾಡದ ಕೆಲವು ಅತ್ಯಂತ ಸುಂದರ ಮತ್ತು ಶ್ರೀಮಂತ ಹೆಂಗಸರೊಂದಿಗೆ ಕಾಣಿಸಿಕೊಳ್ಳಲು ಅವರಿಗಿದ್ದಷ್ಟು ಸಮಯವಾಗಲಿ, ಅವಕಾಶವಾಗಲಿ ಇರಲಿಲ್ಲ. ಆ ಬಕಾಸುರ ಬಾಯಿ, ಅದೆಷ್ಟು ಜನ ಮಹಾರಾಜ್ ಕುಮಾರನ ತಾಯಂದಿರನ್ನು ನೋಡಿತ್ತೋ, ಮುತ್ತಿಟ್ಟಿತ್ತೋ ಮಲಗಿತ್ತೋ, ದೇವರಿಗೆ ಗೊತ್ತು. ಗಂಡಸರಾದರೋ ವಿಚಿತ್ರ ಜನ. ರಾತ್ರಿಗಳಲ್ಲಿ ಮಾತ್ರ ಪ್ರೇಮಿಸುತ್ತಾರೆ ಮತ್ತು ಏಕಮಾತ್ರ ಲೈಂಗಿಕ ಕ್ರಿಯೆಯೆಂದರೆ ಯೋನಿ ಪ್ರವೇಶ ಎಂದು ನಂಬಿಸಲು ಇಚ್ಛಿಸುತ್ತಾರೆ. ನಿಜವಾಗಿ ಒಳಪ್ರವೇಶಿಸುವ ಸಾಧನವಾವುದಾದರೂ ಇದ್ದರೆ ಅದು ನಾಲಿಗೆ. ದೇಹದ ಉಳಿದ ಅಂಗಗಳಾದ ಕೈ, ತುಟಿಗಳು, ಕಿವಿಗಳು ತೊಡೆಯ ಒಳ ಪಾರ್ಶ್ವಗಳು, ಕಾಲಿನ ಹೆಬ್ಬೆರಳು, ಹೊಕ್ಕುಳು, ಹಾಗೆ ನೋಡಿದರೆ ರುಚಿಯ ಅನುಭವಕ್ಕಾಗಲಿ, ಕಾಮೋತ್ತೇಜಕ ಭಾಗಗಳಿಗಾಗಲಿ ಲೆಕ್ಕವುಂಟೆ? ಇವಾವುವೂ ಲೆಕ್ಕಕ್ಕಿಲ್ಲ.

ಯಾವ ಕಾರಣಕ್ಕೋ ಏನೋ, ಲಿಂಗರಹಿತವಾದ ದೇಹವನ್ನು ಸ್ಪರ್ಶಿಸುವುದೆಂದರೆ, ಜುಗುಪ್ಸೆ ತರಿಸುವಂಥದು. ಹಿಜಡಾನ ಜೇಬಿನಲ್ಲಿ ಕೈ ತೂರಿಸಲು ಬಾಗಿದ ಮಹಾರಾಜ್ ಕುವಾರ್, ಕಟಕಟನೆ ಹಲ್ಲು ಕಡಿಯಬೇಕಾಯಿತು. ಅವನ ಹತ್ತಿರವಿದ್ದ ಎರಡು ಡಜನ್‌ಗಿಂತಲೂ ಹೆಚ್ಚಿನ ಸಂಖ್ಯೆಯ ಬೀಗದ ಕೈಗಳಲ್ಲಿ ತನ್ನ ಹೆಂಡತಿಯ ಕೋಣೆಯ ಬಾಗಿಲಿಗೆ ಯಾವುದು ಹೊಂದುತ್ತದೆಂಬುದನ್ನು ಕಂಡುಕೊಳ್ಳಲು, ಯಾವು ಯಾವುದನ್ನೋ ಹಾಕಿ ತೆಗೆದು ನೋಡಿ ಪರೀಕ್ಷಿಸಲು ಸುಮಾರು ಸಮಯ ಹಿಡಿಯಿತು. ಅಗುಳಿಯನ್ನು

ಸದ್ದಾಗದಂತೆ ಮೆಲ್ಲಗೆ ತೆಗೆದನು. ಮದುವೆಯ ರಾತ್ರಿಯಂದು ಅವನ ಹಾಸಿಗೆಯನ್ನು ಅಲಂಕರಿಸಿದಂತೆಯೇ ಅವಳ ಹಾಸಿಗೆಯನ್ನು ಅಲಂಕರಿಸಲಾಗಿತ್ತು. ನಾಲ್ಕು ಭಿತ್ತಿಪಟಗಳ ತುದಿಯಿಂದ ನೆಲದ ಹಾಸಿನವರೆಗೂ ಹೂವುಗಳನ್ನು ಇಳಿಬಿಡಲಾಗಿತ್ತು. ಅವಳು ಅಂಗಾತನಾಗಿ ಮಲಗಿದ್ದಳು. ಒಂದು ಬಟ್ಟೆಯ ತುಣುಕೂ ಅವಳ ಮೈಮೇಲಿರಲಿಲ್ಲ. ಯಾವನೋ ಆತುರಾತುರವಾಗಿ, ಒರಟೊರಟಾಗಿ ಅವಳನ್ನು ನಗ್ನಗೊಳಿಸಿರಬೇಕೆನ್ನುವಂತೆ ಅವಳ ಬಟ್ಟೆಗಳನ್ನು ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಎಸೆಯಲಾಗಿತ್ತು. ಹಿಜಡಾನನ್ನು ದಾಟಿ, ಅವನ ಹಿಂದೆ ಹಗುರವಾಗಿ ಬಾಗಿಲನ್ನು ಮುಚ್ಚಿದನು. ಅವನು ಸುತ್ತ ತಿರುಗಿದಾಗ ಮರಗಟ್ಟಿದಂತಾದ. ಅವಳು ಅವನತ್ತಲೇ ಎವೆಯಿಕ್ಕದೆ ದಿಟ್ಟಿಸಿ ನೋಡುತ್ತಿದ್ದಳು. ಅವಳಿಗೆ ಅವನು ಏನು ಹೇಳ ಹೊರಟಿದ್ದನು? ನೀನು ಚೆನ್ನಾಗಿದ್ದೀಯಾ ಅಂತ ನೋಡುವುದಕ್ಕೆ ಮಾತ್ರ ಬಂದಿದ್ದೇನು ಎಂದೆ? ಇಲ್ಲ. ಪ್ರಾಮಾಣಿಕ ಒಳ್ಳೆಯತನ. ನಾನೊಂದು ಭಯಂಕರ ದುಃಸ್ವಪ್ನವನ್ನು ಕಂಡೆ. ಅದರಿಂದ ನಾನು ಕಿಂಚಿತ್ ಧೈರ್ಯಗುಂದಿದ್ದೆ. ನಾನು ನಿನ್ನ ಹಾಸಿಗೆಯಲ್ಲಿ ಮಲಗಿದರೆ ಹೇಗೆ ಅಂತ ವಿಸ್ಮಿತನಾಗಿದ್ದೆ. ಇದರಲ್ಲೇನೂ ಕೃತ್ರಿಮ ಅಥವಾ ಮೋಸವಿಲ್ಲ ಅಂತ ಮಾತು ಕೊಡುತ್ತೇನೆ. ಆಮೇಲೆ ಅವನಿಗೆ ಅರ್ಥವಾದದ್ದೆಂದರೆ, ಅವಳೂ ಅವನನ್ನು ಸಂಪೂರ್ಣವಾಗಿ ಗಣನೆಗೇ ತೆಗೆದುಕೊಂಡಿಲ್ಲ ಎಂದು. ಅವಳು ಮಲಗಿದಾಗ, ಅವಳ ಕಣ್ಣರೆಪ್ಪೆಗಳು ಮುಕ್ಕಾಲು ದೂರದವರೆಗೆ ಮಾತ್ರ ಹಾಯ್ದುವು. ಅದರಿಂದ ಕೆಳಗಡೆ ಕಾಣುತ್ತಿದ್ದ ಬಾಲಚಂದ್ರಾಕೃತಿಯ ಬಿಳಿಯ ಗೆರೆಗಳು ಕಣ್ಣುಗಳೊಂದಿಗೆ ಹೆಚ್ಚು ಹತ್ತಿರವಾಗಿರಲಿಲ್ಲ. ಹಾಗಾಗಿ ಅವಳು ಮುಚ್ಚಿದ ಕಣ್ಣುಗಳಿಂದ ನೋಡುತ್ತಿದ್ದಾಳೆಂಬ ವಿಚಿತ್ರ ಭಾವನೆ ಮೂಡಿಸುವಂತಿದ್ದುವು.

ಎದುರುಗಡೆಯ ಗೋಡೆಗೊರಗಿಸಿಟ್ಟದ್ದ ಒಂದು ತಗ್ಗಾದ ಮೂರಂಗುಲ ಎತ್ತರ ಇರಬಹುದೋ ಏನೋ ಎನ್ನುವಂಥ ಕೆಂಪು ಬಣ್ಣದ ಮರದ ಸಣ್ಣ ಕುರ್ಚಿ ಇತ್ತು. ಅದರ ಮುಂದೆ ಎಲ್ಲ ರೀತಿಯ ಖಾದ್ಯಗಳು, ಬಹುಮಟ್ಟಿನವು ಹಾಲು ಮತ್ತು ಮೊಸರಿನಿಂದ ತಯಾರಾದ ಸಿಹಿ ಮತ್ತು ಹಿಟ್ಟಿನಿಂದ ಮಾಡಿದ ಭಕ್ಷ್ಯಗಳಿಂದ ತುಂಬಿ ತುಳುಕುವ ಒಂದು ಥಾಲಿಯನ್ನು ಇಡಲಾಗಿತ್ತು. ಇಲ್ಲ, ಇದು ತನಗಾಗಿ ಸಿದ್ಧಪಡಿಸಿಟ್ಟ ಊಟ ಎನ್ನುವ ಹಾಗೆ ಕಾಣುತ್ತಿದೆ ಎಂದು ತನಗೆ ತಾನೆ ಹೇಳಿಕೊಂಡನು. ಕೊಠಡಿಯ ಒಂದು ಮೂಲೆಯಲ್ಲಿ, ಯಮುನೆಯ ದಡದಲ್ಲಿ ತಾನು ಮತ್ತು ಕೃಷ್ಣ ಇಬ್ಬರೂ ರಾಸ ಲೀಲೆಯಾಡುತ್ತಿರುವ ನಂಬಲಸಾಧ್ಯವಾದಷ್ಟು ವಿಸ್ತಾರವಾದ ಚಿತ್ರವೊಂದನ್ನು ರಂಗೋಲಿ ಪುಡಿಯಿಂದ ಅವಳು ರಚಿಸಿದ್ದಳು.

ಅವನು ತನ್ನ ಕಣ್ಣುಗಳನ್ನು ಅವಳಿಂದ ಕೀಳದಾದ. ಯಾರೋ ಅವಳ ಗುಂಗುರು ಕೂದಲಿನಲ್ಲಿ ಕೈಬೆರಳಾಡಿಸುತ್ತಿರುವಂತೆ ಅವಳ ತಲೆ ಅತ್ಯಂತ ಅನುಕೂಲಕರವಾದ ರೀತಿಯಲ್ಲಿ ಹಿಂದಕ್ಕೆ ಚಾಚಿಕೊಂಡಿತ್ತು. ಅವಳು ಇದ್ದಕ್ಕಿದಂತೆ ಹೊರಳಿ ಕುಲುಕಾಡಿದಳು; "ಕೂಡದು, ಕೂಡದು, ಕೂಡದು, ಕೂಡದು, ಕೂಡದು. ನೀನು ನನ್ನ ಕಿವಿಗಳಿಗೆ ಕಚಗುಳಿಯಿಡುತ್ತಿದ್ದೀ, ದಯವಿಟ್ಟು ನಿಲ್ಲಿಸು ಅದನ್ನು. ನಾನು ಹೇಳ್ತಾ ಇರೋದು ನಿನಗೆ ಕೇಳಿಸ್ತಿದೆಯಾ? ಯಾವಾಗಲಾದರೂ ಸರಿ ನಾನೊಂದು ಹೇಳಿದರೆ ನೀನು ಅದಕ್ಕೆ ತದ್ವಿರುದ್ಧವಾದ್ದನ್ನು ಮಾಡುತ್ತೀ. ವಕ್ರವಾಗಿರುವುದನ್ನು ಬಿಟ್ಟು ಬಿಡು. ನನ್ನಿಂದ ದೂರ ಹೋಗಿ ಬಿಡು ಇಲ್ಲದೆ ಹೋದರೆ ನಿನ್ನ ಕೂದಲನ್ನು ಜೋರಾಗಿ ಎಳೀತೀನಿ." ಅವಳು ಒಬ್ಬಳೇ ಇದ್ದಾಳೆ ಎಂದು ಅವನಿಗೆ ತಿಳಿದಿತ್ತು. ಅವಳ ಪ್ರಿಯಕರನು ಏನು ಮಾಡಹೊರಟಿದ್ದನೆಂಬುದೂ ಅವನಿಗೆ ನಿಶ್ಚಿತವಾಗಿ ಗೊತ್ತಿತ್ತು. ಹೊರಕ್ಕೆ ಚಾಚಿದ್ದ ಅವಳ ತೋಳಿನ ಒಳಭಾಗವನ್ನು ಅವನು ನೇವರಿಸುತ್ತಿದ್ದನು. ಅವನ ಕೈಯ ನವಿಲುಗರಿ ಅವಳ ಕಂಕುಳ ಕೆಳಗಿನ ಆಳದಲ್ಲಿ ಇಳಿದು

ನಂತರ ಅವಳ ಎಡ ಮೊಲೆಯ ಮೇಲಿನಿಂದ ಕೆಳಗಿಳಿದು ಹೊಕ್ಕುಳ ಮೇಲೆ ಆಡುತ್ತಿದ್ದರೆ, ಅವನು ಅವಳ ಕತ್ತಿನ ಹಿಂಭಾಗವನ್ನು ಸ್ವಲ್ಪ ಸ್ವಲ್ಪವಾಗಿ ಕಚ್ಚುತ್ತಿದ್ದನು. ಈಗ ಅವಳು ಅವನನ್ನು ಚುಂಬಿಸುತ್ತಿದ್ದಳು. ಅವಳ ಕೈಗಳನ್ನು ಮೇಲಕ್ಕೆ ಎತ್ತಿ ಕಟ್ಟಲಾಗಿತ್ತು. ಅವಳು ಅವನನ್ನು ದೇವನ ಸಹಸ್ರಾನಾಮಗಳಲ್ಲಿ ಗಿರಿಧರಲಾಲ್ ಘನ ಶ್ಯಾಮಾ ಎಂಬ ಎರಡು ಹೆಸರನ್ನು ಕೂಗಿ ಕರೆದಳು. ಅವಳ ದನಿಯಲ್ಲಿ ಎಂಥ ಪ್ರೀತಿ ಮತ್ತು ಅಪೇಕ್ಷೆ ಇತ್ತೆಂದರೆ, ಅದು ರಾಜಕುಮಾರನ ಹೃದಯವನ್ನು ಇರಿಯಿತು.

ನಿನ್ನಲ್ಲಿ ಕಿಂಚಿತ್ತಾದರೂ, ಘನತೆ ಎನ್ನುವುದಿದ್ದರೆ, ಇಲ್ಲಿಂದ ಮೊದಲು ಆಚೆಗೆ ನಡೆ. ಆದರೆ ಅವನು ಅಲ್ಲಿಂದ ಕದಲಲಿಲ್ಲ ಮತ್ತು ಕದಲಲು ಅವನಿಗೆ ಇಷ್ಟವೂ ಇರಲಿಲ್ಲ. ಅದೊಂದು ಚಿತ್ರ ಹಿಂಸೆಯಾಗಿತ್ತು ಮತ್ತು ಅದು ಅವನನ್ನು ಹರಿದು ಹಾಕಿತು. ಆದರೆ ಅದು ನಿಲ್ಲುವುದು ಅವನಿಗೆ ಬೇಕಿರಲಿಲ್ಲ. 'ಕಾಮಾಸಕ್ತಿ' ಎಂಬುದು ಅತ್ಯಂತ ಉತ್ಪ್ರೇಕ್ಷೆಯ ಶಬ್ದ ಎಂದು ಅವನು ಯಾವತ್ತೂ ಅರ್ಥಮಾಡಿಕೊಂಡಿದ್ದನು. ಆದರೆ ಅವಳು ಅದರ ಪ್ರಾಬಲ್ಯ ಮತ್ತು ಉಕ್ಕುವ ಆನಂದಾತಿರೇಕದ ಸಂವೇದನೆಯನ್ನು ಅವನಿಗೆ ಉಂಟು ಮಾಡಿದಳು. ಅಷ್ಟೇ ಅಲ್ಲದೆ ಸಂತಸವೆಂಬ ಹೃದಯದ ಮರ್ಮದಲ್ಲಿ ಅದರ ಸ್ಥಾನವೇನೆಂಬುದರ ಸಂವೇದನೆಯನ್ನೂ ಉಂಟು ಮಾಡಿದಳು. ಪ್ರಥಮ ಬಾರಿಗೆ ಅವಳು ಹಾಡಿದ್ದನ್ನು ಕೇಳಿದ್ದು ನೆನಪಾಯಿತು. ಅಲ್ಲಿ ಯಾವುದನ್ನೂ ತಡೆ ಹಿಡಿಯಲಿಲ್ಲ, ಅರ್ಥಂಬರ್ಥದ ಮಾತಿಲ್ಲ, ಅವಳು ತನ್ನೆಲ್ಲವನ್ನು ಅದಕ್ಕೆ ಸಮರ್ಪಿಸಿದ್ದಳು. ಈಗಲೂ ಅವಳು ಅದನ್ನೇ ಮಾಡುತ್ತಿದ್ದಳು. ತನ್ನದೆಲ್ಲವನ್ನೂ ಪಣವಾಗಿ ಒಡ್ಡಿದ್ದಳು.

ಅವಳ ಮುಖ ಮತ್ತು ದೇಹ ಹೊರಸೂಸುತ್ತಿದ್ದ ಆನಂದ ಪರವಶತೆ ಅವನ ನಿರೀಕ್ಷೆಯನ್ನು ಭಂಗಗೊಳಿಸಿತು. ಬಾಲಕನಾಗಿದ್ದಾಗ ಕೂಡ ಅವನಿಗೆ ಅಷ್ಟೊಂದು ಸಂಪೂರ್ಣವೂ, ಹಿಡಿತವೇ ಇಲ್ಲದ ಅಪಾರವೂ ಆದದ್ದು. ಗೊತ್ತೇ ಇರಲಿಲ್ಲ. ಅವಳೊಂದು ಸಂತಸದ ಆಕರದಂತೆ ಕಂಡಳು. ಅವಳ ಈ ಪರಿತ್ಯಾಗ ಮತ್ತು ಸಮೃದ್ಧಿ ಎಲ್ಲಿಂದ ಬಂದುವು? ತನ್ನ ಸುತ್ತಣ ಪ್ರಪಂಚದ ಅರಿವೇ ಇಲ್ಲದ ಆಕೆಯಂಥ ತೀರ ಸಾಮಾನ್ಯ ಮಾನವ ವ್ಯಕ್ತಿಯೊಂದು ಅಂಥ ಆನಂದಾತಿಶಯುವನ್ನು ಅನುಭವಿಸಲು ಹೇಗೆ ಸಮರ್ಥಳಾದಳು? ಅವಳೊಂದು ಮುಕ್ತಾಯಗೊಂಡ ಪೂರ್ಣ ವೃತ್ತ. ಅದರಲ್ಲಿ ಅವನಿಗೆ ಸ್ಥಾನವಿಲ್ಲ. ಆಕೆ ಮತ್ತು ಕೃಷ್ಣ ತಮ್ಮ ಮಟ್ಟಿಗೆ ತಾವು ಪರ್ಯಾಪ್ತರಾಗಿದ್ದರು. ಬಲವಂತವಾಗಿ ಒಳಗೆ ಪ್ರವೇಶಿಸುವುದು ಅಸಾಧ್ಯವಾಗಿತ್ತು. ಅವನನ್ನು ಹೊರಗಿಡಲಾಗಿತ್ತು. ಅವನು ಹೊರಗಡೆ.

ಆಗ ಅವನಿಗೊಂದು ಭಯಂಕರ ತಿಳಿವು ತಾಗಿತು. ಇದುವರೆಗೂ ಪರಿಸ್ಥಿತಿ ಎಷ್ಟೇ ಹಾಳಾಗಿದ್ದರೂ, ಕೊನೇ ಪಕ್ಷ ಅವನಿಗೆ ತನ್ನ ಮೇಲೆ ನಿಯಂತ್ರಣವಿತ್ತು. ಕೃಷ್ಣನು ಅವನ ಶತ್ರುವಾಗಿದ್ದ. ಒಂದು ಗೀಳಿಗೂ ಮೀರಿದ, ತೀವ್ರವಾದ ಕೋಪೋದ್ರೇಕದಿಂದ ಅವನನ್ನು ದ್ವೇಷಿಸುತ್ತಿದ್ದನು. ಅವನ ಪಾಲಿಗೆ ಅಯೋಮಯವಾಗಿ ಬಿಟ್ಟಿದ್ದ ಪ್ರಪಂಚದಲ್ಲಿ ಕೃಷ್ಣನನ್ನು ಕುರಿತಾದ ದ್ವೇಷವೇ ಏಕೈಕ ಧ್ರುವತಾರೆ ಮತ್ತು ದೃಢವಾದ ಆಕಾಶದೀಪವಾಗಿತ್ತು. ವಾಸ್ತವ ಸಂಗತಿಯೆಂದರೆ ಅವನು ತನ್ನ ಭೂತದ ಬಗ್ಗೆ ಏನನ್ನೂ ಹೇಳಲಿಲ್ಲ. ಅವನು ತಾನು ಅನುಭವಿಸಿದ ಎಲ್ಲ ಅಪಮಾನ, ನೋವು ಇಂದು ತಾನು ಕಂಡ ಭಾವೋದ್ವೇಗದ ನಾಚಿಕೆಗೆಟ್ಟ ಪ್ರದರ್ಶನ ಇವುಗಳ ಬಗ್ಗೆ ಏನೊಂದು ಚೂರೂ ಹೇಳಲಿಲ್ಲ. ಅವನಿಗೆ ಒಳಗಡೆ ಹೋಗುವುದು ಬೇಕಾಗಿತ್ತು.

ಅವನು ಬಾಗಿಲನ್ನು ಮೆಲ್ಲಗೆ ಮುಚ್ಚಿದನು. ಬೀಗದ ಕೈಗಳನ್ನು ಹಿಜಡಾನ ಜೇಬಿಗೆ ಮತ್ತೆ ಸೇರಿಸಿದನು.

ಅಧ್ಯಾಯ 17

ಎನಗೆ ಬಳಲಿ ಖಾಲಿ ಖಾಲಿಯಾದಂತೆನಿಸಿಬಿಟ್ಟಿತ್ತು. ಕೇವಲ ಇಪ್ಪತ್ತನಾಲ್ಕು ಗಂಟೆಗಳು. ಅಷ್ಟೆಲ್ಲ ಅಲ್ಲೋಲ ಕಲ್ಲೋಲಗಳು, ಅನಾಹುತಗಳು ಮತ್ತು ದುರಂತಗಳನ್ನು ಹೇಗೆ ಗುಡ್ಡೆ ಹಾಕಲು ಸಾಧ್ಯ? ಅದು ತರ್ಕಬದ್ಧವಾಗಿರಲಿಲ್ಲ. ಬಹಾದುರ್! ನಿನಗೆ ನನ್ನ ಶಾಪವಿರಲಿ. ನಿನ್ನನ್ನು ನಾವು ಕಳೆದುಕೊಂಡೇ ಬಿಟ್ಟಿದ್ದೆವು. ನೀನು ಯಾವ ಸ್ಥಿತಿಗೆ ತಲುಪಿದ್ದೆ ಎನ್ನುವುದು ದೇವರಿಗೆ ಕೌಸಲ್ಯಳಿಗೆ ಭಿಲ್ ಶಮನ್‌ಗೆ ಮತ್ತು ನನಗೆ ಮಾತ್ರ ಗೊತ್ತು. ನಾವು ಹೇಗೋ ಏನೋ ನಿನ್ನನ್ನು ಯಮನ ದವಡೆಯಿಂದ ಪಾರು ಮಾಡಿದೆವು. ವಿಧಿಯೋ ನಾನೋ ನಿನ್ನನ್ನು ಸಾಯಲು ಬಿಟ್ಟಿದ್ದರೆ. ಥೂ ಹಾಳಾದವನೆ ರಾಜೇಂದ್ರ! ನೀನು ಈಗ ಬದುಕಿಲ್ಲ. ಆದರೆ ನೀನು ಮಾಡಿರುವ ಅನಾಹುತಗಳನ್ನು ನೋಡು! ಬಹಾದುರ್‌ನ ತಂದೆಯೊಂದಿಗೆ ಗುಜರಾತಿನ ಸೈನ್ಯದೊಂದಿಗೆ ನಾವಿನ್ನೂ ಯುದ್ಧ ಮಾಡುತ್ತಿರುವಾಗಲೇ, ಷಹಜಾದನೊಂದಿಗೆ ಸಂಬಂಧವನ್ನು ಕುದುರಿಸುವಲ್ಲಿ ಮೇವಾಡವು ಹಲವಾರು ತಿಂಗಳುಗಳನ್ನು ವ್ಯಯಿಸಿತ್ತು. ಏಕೆ? ಒಂದು ವೇಳೆ ಸ್ಪಷ್ಟವಾಗಿ ಗೆಲುವು ಸಾಧಿಸಲು ಸಾಧ್ಯವಿಲ್ಲದೆ ಹೋದರೆ, ಇಡೀ ಸಾಮ್ರಾಜ್ಯವನ್ನು ಗೆಲ್ಲುವುದು ಮತ್ತು ಸ್ವಾಧೀನ ಪಡಿಸಿಕೊಳ್ಳುವುದು ಹಾಗಿರಲಿ, ನೆರೆಯವರೊಂದಿಗೆ ಶಾಂತಿ ಸ್ಥಾಪಿಸಲು ಹಾಗೂ ಅವರೊಂದಿಗೆ ಅನ್ಯೋನ್ಯತೆಯಿಂದಿರಲು ಅದು ಆಗ ಉತ್ತಮ ಆರ್ಥಿಕ ರಾಜಕೀಯ ಮತ್ತು ಸೈನಿಕ ವಿವೇಕಗಳನ್ನು ಮೂಡಿಸುತ್ತದೆ. ಆಗ ನೀನು ವಿವೇಕ ಮತ್ತು ಎಚ್ಚರಿಕೆಗಳನ್ನು ಗಾಳಿಗೆ ತೂರಿ, ಅತ್ಯಂತ ಜತನದಿಂದ ಪೋಷಿಸಿ ಬೆಳೆಸಿದ್ದೆಲ್ಲವನ್ನು ಚರಂಡಿಗೆ ತಳ್ಳಿ, ಚೊಕ್ಕಟವಾಗಿ ಒರೆಸಿಹಾಕಿ ಬಿಡುವೆ. ನನ್ನ ಸೈನಿಕ ಚಳುವಳಿಗೆ ನಿನ್ನ ಅಗತ್ಯ ನನಗಿದ್ದಾಗ, ನನ್ನ ಜೊತೆ ನೀನು ಇರುವುದಿಲ್ಲ. ನಮ್ಮ ಸಮಾಜದ ಅತ್ಯಂತ ಗೌರವಾನ್ವಿತ ಹಿರಿಯರ ಗೌರವಕ್ಕೆ ತೀವ್ರ ಆಘಾತ ತಟ್ಟಿದೆ. ಅವರಿಗೆ ಸಾಧ್ಯವಾಗುವಂತಿದ್ದರೆ, ಬಹಾದುರ್ ಜೊತೆ ನನ್ನ ತಲೆಯನ್ನು ತೆಗೆದುಕೊಳ್ಳಲು ಅವರು ತೀರಾ ಉತ್ಸುಕರಾಗಿರುತ್ತಾರೆ. ಯಾವ ಗೌರವದ ಬಗ್ಗೆ ನಾವು ಮಾತನಾಡುತ್ತಿರುವುದು? ವಿಪರೀತ ಕುಡಿದಿದ್ದ ಒಬ್ಬ ಅತಿಥಿ ರಾಜಕುಮಾರನು ಅನೇಕ ತಿಂಗಳುಗಳ ಹಿಂದೆ ಮಾಡಿದ್ದ ವೈಯಕ್ತಿಕ ಅವಮಾನಕ್ಕಿಂತ ಮೇವಾಡ ಹೆಚ್ಚು ಪ್ರಮುಖವಾದ್ದು ಮತ್ತು ದೊಡ್ಡದು.

ದೀಪ್ ಮಹಲ್‌ನಲ್ಲಿ ನೃತ್ಯ ಮಾಡುತ್ತಿದ್ದ ಹುಡುಗಿಯರು ಅಹಮದ್‌ನಗರದ ಕಾಜಿಯ ಮಕ್ಕಳು ಎಂದು ಹೇಳುವ ಮೂಲಕ ಮೂರು ಸಾವಿರ ರಜಪೂತರ ಸಾವಿನ ಸೇಡನ್ನು ನೀನು ತೀರಿಸಿ ಕೊಳ್ಳಲು ಹೊರಟಿದ್ದೆ. ಧೀರ! ಸೇಡು ತೀರಿಸಿಕೊಳ್ಳಬೇಕೆಂಬ ನಿನ್ನದಾಹ ನಿನ್ನ ಶಿಶ್ನದ ಮುಂದೊಗಲಿಗಿಂತಲೂ ಮೇಲು ಮೇಲಿನದು. ನಿನಗೆ ಕಿಂಚಿತ್ತಾದರೂ

ಬುದ್ಧಿ ಇಲ್ಲದೆ ಇದ್ದರೆ ಹೋಗಲಿ, ಕಿಂಚಿತ್ತಾದರೂ ತಾಳ್ಮೆ ಎನ್ನುವುದು ನಿನಗಿದ್ದಿದ್ದರೆ, ನೀನು ನನಗೇ ಗಂಟು ಬಿದ್ದಿರುತ್ತಿದ್ದೆ. ಅಲ್ಲದೆ ನೀನು ಬಯಸಿದ್ದ ಮೂರು ಸಾವಿರದ ಎರಡರಷ್ಟು ತಲೆಗಳನ್ನು ನಿನಗೆ ಖಾತರಿಯಾಗಿ ಸಿಗುವಂತೆ ಮಾಡುತ್ತಿದ್ದೆ. ಸೋದರ ಬಂಧು, ನಾನು ನಿನ್ನನ್ನು ಪ್ರೀತಿಸಿದ್ದೆ. ನಾನು ನಿನ್ನನ್ನು ಬಹುವಾಗಿ ಕಳೆದುಕೊಳ್ಳುತ್ತೇನೆ. ಆದರೆ ನನ್ನ ಪ್ರಥಮ ಆಂದೋಲನದ ಸಂದರ್ಭದಲ್ಲಿ ಹದಿಹರೆಯದ, ಆತುರ ಸ್ವಭಾವದ ಹುಡುಗರು ನನಗೆ ಬೇಕಿಲ್ಲ. ಇನ್ನೊಂದೇ ಒಂದು ವಿಷಯ. ನೀನು ಹಲಗೆಯನ್ನು ಚೊಕ್ಕಟವಾಗಿ ಒರೆಸಲಿಲ್ಲ ಎಂದು ನಿನ್ನ ಬಗ್ಗೆ ನಾನು ತಪ್ಪು ತಿಳಿದಿದ್ದೆ. ಸೂರಜ್ ಪೋಲ್ ಮೂಲಕ ಬಹಾದುರ್ ಆ ಮೊದಲನೇ ಬೆಳಿಗ್ಗೆ ಸವಾರಿ ನುಗ್ಗಿಸಿಕೊಂಡು ಬಂದಾಗಲೇ ಅದು ಚೊಕ್ಕಟವಾಗಿತ್ತು. ನಾವಿಬ್ಬರೂ ಪರಸ್ಪರ ಅಪರಿಚಿತರು. ನಾವಿಬ್ಬರೂ ಬಹಳ ಹೆಚ್ಚೆಂದರೂ, ತೀರ ಕೆಟ್ಟದ್ದೆಂದರೂ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ತಾತ್ಸಾರ. ಈಗ ಷಹಜಾದನು ಮೇವಾಡದಲ್ಲಿನ ತನ್ನ ಕೊನೆಯ, ಅತ್ಯಂತ ಆತುರದ, ಅತ್ಯಂತ ಅಸಮಂಜಸವಾದ, ಅತ್ಯಂತ ಎಳಸು ಕಾರ್ಯವನ್ನು ಜೀವನವಿಡೀ, ಅತ್ಯಂತ ತಿರಸ್ಕಾರ ಮತ್ತು ಹೇವರಿಕೆಯಿಂದ ನೆನೆಯುತ್ತಿರುತ್ತಾನೆ. ಅಷ್ಟೆಲ್ಲ ಪ್ರೀತಿ, ಕರುಣೆ, ಅಷ್ಟೆಲ್ಲ ಸ್ನೇಹಕ್ಕೆ ಪ್ರತಿಯಾಗಿ ರಕ್ತ ಮತ್ತು ಸಾವನ್ನು ನೀಡಿದ್ದಕ್ಕೆ ತನ್ನನ್ನೇ ತಾನು ಎಂದಿಗೂ ಕ್ಷಮಿಸಲಾರ.

ಎಣಿಕೆಗೇ ಸಿಗದಿರುವ ಕೆಟ್ಟದ್ದೆಂದರೆ, ಅವನ ಜೀವನವನ್ನು ಎರಡು ಸಲ ಉಳಿಸಿದ್ದಕ್ಕೆ ನನ್ನನ್ನೆಂದಿಗೂ ಅವನು ಕ್ಷಮಿಸದೆ ಇರುವುದು. ಮೇವಾಡವು ಅವನ ಪಕ್ಕೆಗಳಲ್ಲಿ ಕೋಪವುಕ್ಕಿಸುವ ಮುಳ್ಳಾಗಿ ಚುಚ್ಚುತ್ತದೆ. ಹಾಗಾಗಿ ಸರಿಪಡಿಸಲಾಗದಷ್ಟು ಹಾಳಾಗಿ ಹೋಗಿರುವ ಅತ್ಯಂತ ಸವಿ ನೆನಪೊಂದನ್ನು ನಾಶಮಾಡಲು ಸೂಕ್ತ ಸಮಯಕ್ಕಾಗಿ ಅವನು ಕಾಯುತ್ತಿರುತ್ತಾನೆ.

“ರಾಜೇಂದ್ರ ಸಿಂಹ ಮತ್ತು ಷಹಜಾದರ ಬಗ್ಗೆ ಯೋಚಿಸುವುದನ್ನು ಬಿಟ್ಟು ಬಿಡಿ ನನ್ನ ರಾಜಕುಮಾರ, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ” ಎಂದು ಹೇಳುತ್ತ ಕೌಸಲ್ಯ ನನ್ನ ತಲೆಯನ್ನು ತಟ್ಟಿದ್ದಳು.

ಗಾಯದ ಮೇಲಿನ ಪಟ್ಟಿಯನ್ನು ಬಲವನ್ನು ಉಪಯೋಗಿಸಿ ತೆರೆದು ಹೆಕ್ಕಳಿಕೆಯನ್ನೆಲ್ಲ ಸರಿಸುವ ಹಾಗೆ, ನಾನೊಬ್ಬನೇ ವಿಷಯವನ್ನು ಬಿಟ್ಟು ಹೋಗಿ ಮತ್ತೆ ಅಲ್ಲಿಗೆ ವಾಪಾಸಾಗಲು ಸಾಧ್ಯವಿಲ್ಲ. ನಾನೇಕೆ ಒಬ್ಬ ಒಳ್ಳೆಯ ರಜಪೂತನಾಗಿ ಸಂಗತಿಗಳನ್ನು ಸರಳವಾಗಿ ಕಪ್ಪು ಬಿಳುಪು ರೂಪದಲ್ಲಿ ಕಾಣಬಾರದು. ಶೀಘ್ರ ಮತ್ತು ನ್ಯಾಯಯುತವಾದ ವಿಚಾರಣೆಗಳು ನನ್ನನ್ನು ಬಹಳಷ್ಟು ಜನರ ಕಣ್ಣಿಗೆ ಬೀಳುವಂತೆ ಮಾಡುತ್ತವಷ್ಟೇ ಅಲ್ಲ, ಅಪಾರವಾದ ಜನಪ್ರಿಯತೆಯನ್ನೂ ತಂದುಕೊಡುತ್ತವೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಆದರೆ ಆಡಳಿತ ಮತ್ತು ರಾಜತಂತ್ರದ ಕಲೆ ಅದಕ್ಕಿಂತಲೂ ಸ್ವಲ್ಪ ಮಟ್ಟಿಗೆ ಸಂಕೀರ್ಣವಾದ್ದು ಎಂಬುದು ಖಂಡಿತ. ಬಹಾದುರ್ ಸುಲ್ತಾನನಲ್ಲ; ಕೊನೆಯ ಪಕ್ಷ ಇಷ್ಟರ ತನಕವಂತೂ ಆಗಿಲ್ಲ. ಅವರ ತಂದೆ ಸುಲ್ತಾನರು. ಒಂದು ವೇಳೆ ಬಹಾದುರ್‌ನನ್ನು ಚಿತ್ತೂರಿನಲ್ಲಿ ಸಾಯಿಸಿದರೆ ಅವರ ತಂದೆ ಸುಲ್ತಾನ್ ಮುಜಫರ್ ಷಾ ಅವರ ಗೌರವಕ್ಕೆ ಧಕ್ಕೆಯೊದಗುವುದಷ್ಟೇ ಅಲ್ಲ ಗುಜರಾತಿನ ಜನತೆಗೂ ಅವಮಾನವಾಗುತ್ತದೆ. ಅದು ತುಂಬ ಅಪಾಯಕಾರಿಯಾಗಿ ಬಿಡಬಹುದು. ಪ್ರತೀಕಾರದ ಕಠೋರ ತರ್ಕ ಮತ್ತು ರಾಷ್ಟ್ರೀಯ ಅಭಿಮಾನಗಳು ಸಂತೃಪ್ತಿಯನ್ನು ಆಗ್ರಹ ಪೂರ್ವಕವಾಗಿ ಕೇಳುತ್ತವೆ. ಅದೂ ಅಲ್ಲದೆ ತನ್ನ ಸೈನ್ಯಗಳನ್ನು ಮೇವಾಡದ ಕಡೆಗೆ ಹೊರಳಿಸುತ್ತವೆ. ನಾವೀಗಾಗಲೇ ಯುದ್ಧದಲ್ಲಿ ತೊಡಗಿದ್ದೇವಲ್ಲವೆ? ಆದರೆ ಇದಾರ್‌ನ ಸಲುವಾಗಿ ನಾವು ಮಾಡುವ ಯುದ್ಧ ಪ್ರಾದೇಶಿಕ

ಪ್ರಭಾವಕ್ಕೆ ಸಂಬಂಧಿಸಿದ ವಿಷಯ ಅಷ್ಟೆ. ಗುಜರಾತ್ ಆಗಲಿ, ಮೇವಾಡವಾಗಲಿ, ತಮ್ಮ ಭೂಮಿಗಾಗಲಿ, ತಮ್ಮ ಉಳಿವಿಗಾಗಲಿ ಹೋರಾಡುತ್ತಿಲ್ಲ. ಇದಾರ್‌ನ ಸಿಂಹಾಸನಕ್ಕೆ ಬೇರೆ ಬೇರೆ ವಾರಸುದಾರರನ್ನು ನಾವು ಬೆಂಬಲಿಸುತ್ತಿದ್ದೇವೆ ಮತ್ತು ಪರಕೀಯರ ನಾಡಿನಲ್ಲಿ ಸಣ್ಣ ಪಡೆಗಳ ನಡುವೆ ಚಿಕ್ಕ ಪುಟ್ಟ ಘರ್ಷಣೆಗಳಿಗೆ ಎಡೆಮಾಡಿಕೊಟ್ಟಿದ್ದೇವೆ. ನಮ್ಮ ನೆಲದ ಮೇಲೆ ನಡೆಯುವ ಯುದ್ಧದ ವಿಷಯವೇ ಬೇರೆ. ಬಹುಶಃ ನಾವು ಗುಜರಾತಿಗೆ ಭಯಂಕರ ಸೋಲುಂಟು ಮಾಡಬಹುದು. ಆದರೆ ಅದಕ್ಕೆ ಮೇವಾಡ ತೆರಬೇಕಾದ ಬೆಲೆ ಎಷ್ಟು? ಹಳ್ಳಿಗಳು, ಪಟ್ಟಣಗಳು ಮತ್ತು ನಗರಗಳು ಧ್ವಂಸಗೊಳ್ಳುತ್ತವೆ. ಒಂದು ವರ್ಷದ ಬೆಳೆ ನಾಶವಾಗುತ್ತದೆ. ದೇಶದ ಆರ್ಥಿಕತೆ ಹದಗೆಡುತ್ತದೆ. ಸಹಸ್ರಾರು ಜನ, ರೈತರು, ಕುಶಲಕರ್ಮಿಗಳು, ವ್ಯಾಪಾರಿಗಳು, ನಮ್ಮ ಸೈನಿಕರದಂತೂ ಹೇಳುವುದೇ ಬೇಡ, ಇವರೆಲ್ಲ ಮೃತಿ ಹೊಂದುವರು, ಘಾತಿತರಾಗುವರು. ಷಹಜಾದಾನನ್ನು ಉಳಿಯಗೊಟ್ಟರೆ, ನಮಗೊಬ್ಬ ಕೃತಜ್ಞ ತಂದೆ ಲಭಿಸುತ್ತಾನೆ. ತಾನು ಇವರಿಗೊಂದು ದೊಡ್ಡ ಉಪಕಾರ ಮಾಡಬೇಕಾಗಿದೆ ಎಂಬುದನ್ನು ನೆನಪಿಟ್ಟುಕೊಳ್ಳುವ ತಂದೆ ಲಭಿಸುತ್ತಾನೆ.

ಇಷ್ಟಾದರೂ, ಅದು ನಿಜವಾಗಿಯೂ ಹೆಚ್ಚು ಪಕ್ವವಾದ ಮತ್ತು ವಿವೇಚನೆಯಿಂದ ಕೂಡಿದ ಪ್ರತಿಕ್ರಿಯೆಗಾಗಿ ಒತ್ತಾಯ ಹಾಕುತ್ತಿರುವುದು ರಾಜ್ಯದ ಕಾರಣಗಳೆ ಎಂದು ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ. ಅಥವಾ ನಾನೇ ವಾಸ್ತವದಿಂದ ಹಾಗೂ ನಮ್ಮ ಜನರಿಂದ ಬಹುದೂರವಿದ್ದೇನೆಯೆ? ಮಹತ್ತಾದ ವಿಷಯುಗಳಲ್ಲೇ ಮನಸ್ಸು ಮಗ್ನವಾಗಿದ್ದರಿಂದ, ಸರಳ ಸತ್ಯಗಳನ್ನು ನಾನು ಕಾಣಲಾಗುತ್ತಿಲ್ಲವೆ? ಯಾವ ನಾಯಕನೇ ಆದರೂ ತನ್ನ ಸ್ವಂತ ಕ್ಷೇತ್ರವನ್ನು ಕಳೆದುಕೊಂಡಲ್ಲದೆ ಜನಪ್ರಿಯವಾದ ಕಾರ್ಯಕ್ರಮಗಳನ್ನು ಲೇವಡಿ ಮಾಡಲು ಶಕ್ತನಾಗಲಾರ.

ನಾನು ಶೋಕ ಸೂಚಕ ಬಿಳಿ ಉಡುಪಿಗೆ ಬದಲಾಗುತ್ತಿದ್ದಾಗ, "ಸುನೇರಿಯಾ ಚಂದ್ರ ಮಹಲ್‌ನಲ್ಲಿ ನಿಮಗಾಗಿ ಕಾಯುತ್ತಿದ್ದಾಳೆ" ಎಂದು ಕೌಸಲ್ಯ ಹೇಳಿದಳು. "ಕಳೆದ ನಾಲ್ಕು ದಿನಗಳಿಂದಲೂ ಅವಳು ದಿನವೂ ಬಂದು ಹೋಗುತ್ತಿದ್ದಾಳೆ. ಈ ದಿನ ಅವಳನ್ನು ಕಾಣಿ. ಕೊನೆಯ ಪಕ್ಷ ಅವಳನ್ನು ಮಾತಾಡಿಸಿ. ಹಾಗೆ ಮಾಡದೆ ಹೋದರೆ ನೀವು ಹೊರಡುವ ಮುನ್ನ ಹೋಗಿಬರುತ್ತೇನೆಂದು ಹೇಳುವ ಕಷ್ಟವನ್ನು ತೆಗೆದುಕೊಳ್ಳಲಿಲ್ಲ ಎಂದುಕೊಂಡು ಬಿಡುತ್ತಾಳೆ" ಎಂದು ಹೇಳಿದಳು.

ನನಗೆ ಕೌಸಲ್ಯಳನ್ನು ಕಂಡರೆ ಬೆರಗು. ಪೂರ್ವಗ್ರಹಗಳು ಬಂದು ತಮ್ಮ ಒಡೆತನ ಸ್ಥಾಪಿಸುವಷ್ಟೇ ಅವಳೂ ತನ್ನ ಒಡೆತನ ಸ್ಥಾಪಿಸುವ ಸ್ವಭಾವದವಳು. ಆದರೆ ತನ್ನ ಪೂರ್ವಗ್ರಹಗಳು, ತನ್ನ ಕರ್ತವ್ಯದಲ್ಲಿ ಮೂಗು ತೂರಿಸಲು ಬಿಡುವುದಿಲ್ಲ. ನಾನು ಮಹಾರಾಜ್ ಕುಮಾರ್, ನನಗೆ ವೈವಿಧ್ಯ ಬೇಕು. ಬದಲಾವಣೆ ಬೇಕು. ಹೊಸ ಮುಖಬೇಕು. ಅವಳಿಗೆ ಸುನೇರಿಯಾಳ ಬಗ್ಗೆ ಗೊತ್ತು. ಈಗ್ಗೆ ಕೆಲವಾರು ತಿಂಗಳುಗಳಲ್ಲಿ ಈ ಅಗಸರವಳು ಬಂದಾಗ, ಮಾಮೂಲು ಅಲ್ಲದ ವಿಶೇಷ ರೀತಿಯಲ್ಲಿ ಕಾಣುತ್ತಾಳೆ. ನನ್ನ ಮದುವೆ ಸಾರ್ಥಕವಾಗಬೇಕೆನ್ನುವವಳು. ನನಗೆ ತಿಳಿದಿರುವ ಧರ್ಮ ದೇವರುಗಳ ಬಗ್ಗೆ ಏನೇನೂ ತಲೆ ಕೆಡಿಸಿಕೊಳ್ಳದಂಥ ಹೆಣ್ಣು. ಆದರೆ ನನಗೆ ಹೇಳದೆ ಅತ್ಯಂತ ಕಟ್ಟುನಿಟ್ಟಾದ ಮೂರು ಉಪವಾಸ ವ್ರತಗಳನ್ನು ಹಿಡಿದಿದ್ದಳು. ಈಗಲೂ ಸೋಮವಾರ ಮತ್ತು ಗುರುವಾರಗಳಂದು ಏನನ್ನೂ ತಿನ್ನುವುದಿಲ್ಲ. ಇದೆಲ್ಲವೂ ನನ್ನ ಹೆಂಡತಿ ನನಗೊಬ್ಬ ಮಗನನ್ನು, ಸಿಂಹಾಸನಕ್ಕೊಬ್ಬ ಉತ್ತರಾಧಿಕಾರಿಯನ್ನು ನೀಡಲೆಂದು.

"ತಾವು ನಿಜಕ್ಕೂ ಹೋಗುತ್ತಿದ್ದೀರಾ ಮಹಾರಾಜ್ ಕುಮಾರರೆ" ಇದು ಸುನೇರಿಯಾ ರೀತಿ ಅಲ್ಲ. ಅವಳು ಅಷ್ಟೆಲ್ಲ ಸುಲಭವಾಗಿ ಖಿನ್ನಳಾಗುವಂಥ ಪೈಕಿ ಅಲ್ಲ. ನಾನು ಹೊರಡತ್ತೇನೆಂದು ಖಂಡಿತಾ ಅಲ್ಲ. ಅವಳು ಯಾವಾಗಲೂ, ಸೂಕ್ಷ್ಮವಾಗಿ, ಆದರೆ ತೀಕ್ಷ್ಣವಾಗಿ, ನನ್ನಿಂದ ಮತ್ತು ನನ್ನೊಡನೆ ಸ್ವಾತಂತ್ರ್ಯವನ್ನು ದೃಢಪಡಿಸಿದಳು.

"ಹೌದು ಮಹಾಪ್ರಭುಗಳು ನಾನು ಅಧಿಕಾರ ವಹಿಸಿಕೊಳ್ಳುವುದನ್ನೇ ಕಾಯುತ್ತಿದ್ದಾರೆ. ಕಳೆದ ಬಾರಿ ನಾವಿಬ್ಬರೂ ಕೂಡಿದ್ದಾಗ ಇದನ್ನು ನಿನಗೆ ವಿವರಿಸಿದ್ದೆ ಅಂತ ಅಂದುಕೊಂಡಿದ್ದೆ"

"ನಾನು ತಮ್ಮ ಜೊತೆ ಬರಲೆ? ತಮಗೆ ಜೊತೆ ಬೇಕಾಗುತ್ತದೆ. ಇಂದಿನ ದಾರುಣ ದುರಂತವನ್ನು ಮರೆಯಲು ನಾನು ತಮಗೆ ನೆರವಾಗುತ್ತೇನೆ"

"ನನ್ನ ಬಗೆ ನೀನು ತುಂಬ ಯೋಚನೆ ಮಾಡ್ತಿರೋದು ತುಂಬ ಸಂತೋಷ. ನಾನು ಹೋಗ್ತಾ ಇರೋದು ಯುದ್ಧಕ್ಕೆ. ನೀನು ಅಲ್ಲೇನು ಮಾಡುವೆ?"

"ನಾನು ನಿಮ್ಮ ಬಟ್ಟೆಗಳನ್ನು ಒಗೆಯುತ್ತೇನೆ. ನೀವೇನು ಮಾಡು ಅಂದರೆ, ಅದೆಲ್ಲವನ್ನೂ ಮಾಡುತ್ತೇನೆ"

ಅವಳು ತಲೆ ಎತ್ತಿ ನೋಡಲಿಲ್ಲ.

"ಅದೇನದು ಸುನೇರಿಯಾ? ನಿನ್ನ ಮನಸ್ಸಿನಲ್ಲೇನೋ ಬೇರೆ ಇದ್ದ ಹಾಗಿದೆ"

"ನೀವೆಷ್ಟು ಕಣ್ಣಿಲ್ಲದವರು" ಅವಳು ಈ ಮಾತನ್ನು ಸರಳವಾಗಿ, ಯಾವುದೇ ಕಟುಮತ್ಸರ ಇಲ್ಲದೆ ಸರಳವಾಗಿ ಹೇಳಿದ್ದಳು. "ನಾನು ನಿಮ್ಮನ್ನು ಪ್ರೀತಿಸುತ್ತೇನೆ ರಾಜಕುಮಾರ."

ನಾನು ಜನಗಳನ್ನು ಅರ್ಥಮಾಡಿಕೊಳ್ಳಬಲ್ಲೆ ಎಂದು ನಾನು ಅಂದುಕೊಂಡೆ.

ನಾವಿಬ್ಬರೂ ಅದರಲ್ಲೂ ವಿಶೇಷವಾಗಿ ಸುನೇರಿಯಾ ನಮ್ಮಿಬ್ಬರ ಪ್ರಕರಣವನ್ನು ಮಾಮೂಲಿಯಾದ್ದೆಂದು ಭಾವಿಸಲು ಮತ್ತು ಎಲ್ಲ ರೀತಿಯಲ್ಲಿ ಭಾವನಾತ್ಮಕವಾಗಿ ತನ್ಮಯವಾಗುವುದರ ಕುರಿತು ಹಕ್ಕು ಸ್ಥಾಪಿಸದೆ ಇರಲು ತೀರ್ಮಾನಿಸಿದ್ದೆವು.

"ಆತಂಕ ಬೇಡ ರಾಜಕುಮಾರ, ನಾನು ನಿಮಗೆ ಗಂಟು ಬೀಳುತ್ತಿಲ್ಲ. ನನ್ನನ್ನು ಒಬ್ಬ ಮನುಷ್ಯಳಂತೆ ನೋಡಿದ ಮೊದಲನೇ ವ್ಯಕ್ತಿ ನೀವು. ಮತ್ತದನ್ನು ಅತ್ಯಂತ ಸಹಜವಾಗಿ ಮಾಡಿದಿರಿ. ಆದರೆ ನಾನು ಇದನ್ನು ಕೃತಜ್ಞತೆಯ ಮಾತಾಗಿ ಹೇಳುತ್ತಿಲ್ಲ"

"ನಾನು ಮತ್ತೆ ಹಿಂತಿರುಗಿ ಬರುತ್ತೇನೆ ಸುನೇರಿಯಾ"

"ತಾವು ಕ್ಷೇಮವಾಗಿ ಹಿಂತಿರುಗಿ ಬರಲೆಂದು ದಿನವೂ ದೇವರಿಗೆ ಪ್ರಾರ್ಥನೆ ಮಾಡ್ತೀನಿ. ಆದರೆ ನನ್ನ ಹತ್ತಿರಕ್ಕೆ ನೀವು ಹಿಂತಿರುಗುತ್ತೀರೆಂಬ ಬಗ್ಗೆ ನನಗೆ ಅನುಮಾನ" ಹಾಗೆ ಹೇಳಿ ಎಂದಿನಂತೆ ತನ್ನ ಗಡಸು ಕೆಲಸ ಮಾಡುವ ಕೈಗಳನ್ನು ಸೆರಗಿನ ಹೊದಿಕೆಯಲ್ಲಿ ಮರೆಮಾಡಿಕೊಂಡಳು.

ನಾನು ಲಕ್ಷ್ಮಣ ಸಿಂಹಜೀಯವರ ಮನೆಯನ್ನು ನಸುಕಿನ ಐದೂ ಮುಕ್ಕಾಲು ಗಂಟೆಗೆ ತಲುಪಿದೆ. ಹೊರಗಡೆ ಹುಲ್ಲು ಹಾಸಿನ ಮೇಲೆ ಇದ್ದ ಜನರ ಗುಂಪು ನನ್ನಿಂದ ಬೇರೆಯಾಗಿ ನನ್ನನ್ನು ಒಳಕ್ಕೆ ಬಿಡಲು ತನ್ನದೇ ಸಮಯ ತೆಗೆದುಕೊಂಡಾಗಲೇ ನಾನು ಗುಂಪಿನ ಮನಃಸ್ಥಿತಿಯನ್ನು ಅಂದಾಜು ಮಾಡಬೇಕಿತ್ತು. ಒಳಗಡೆ ರಾಜೇಂದ್ರನನ್ನು ಎತ್ತರದಲ್ಲಿ ಚಟ್ಟದ ಮೇಲೆ ಮಲಗಿಸಲಾಗಿತ್ತು. ನಾನೊಬ್ಬನೇ ಅವನೊಂದಿಗೆ ಇರಬೇಕೆಂಬ ಉದ್ದೇಶದಿಂದ, ಎಲ್ಲರೂ ಹೋಗುವ ತನಕ ಕಾದಿದ್ದೆ. ರಜಪೂತ ಯೋಧನೊಬ್ಬ ತನ್ನ ಅಂತಿಮ ಯುದ್ಧ

ಹಾಗೂ ಅಂತಿಮ ಪಯಣದಂದು ಧರಿಸುವ ಕೇಸರಿ ಉಡುಪನ್ನು ಅವನು ಧರಿಸಿದ್ದನು. ಷಹಜಾದನು ತನ್ನ ಖಡ್ಗವನ್ನು ಒರೆಯಿಂದ ಎಳೆದು ಅದನ್ನು ತನ್ನ ದೇಹದೊಳಕ್ಕೆ ನುಗ್ಗಿಸಿದಾಗ ಅವನ ಮುಖದ ಮೇಲೆ ಕಾಣಿಸಿಕೊಂಡ ಅಂತಿಮ ಕ್ಷಣದ ಆ ಬೆರಗು ಅವನ ನೋಟದಲ್ಲಿ ಈಗಲೂ ಇತ್ತು. ಇನ್ನು ಕೆಲವು ಕ್ಷಣಗಳಲ್ಲಿ ಆರೇಳು ಅಡಿ ಹೂಗಳಲ್ಲಿ ಅವನನ್ನು ಹೂಳಿ ಬಿಡಲಾಗುತ್ತದೆ. ಅವನ ಕೈಗಳನ್ನು ನಾನು ನನ್ನ ಕೈಗಳಲ್ಲಿ ತೆಗೆದುಕೊಂಡೆ. ಅವನ ಬಲಗೈ ಮಣಿಕಟ್ಟಿನ ಮೇಲಿದ್ದ ಚಿನ್ನದ ತೋಡಾದ ಮೇಲೆ ನನ್ನ ಕಣ್ಣು ಬಿತ್ತು. ನಾನದನ್ನು ಸಂಪೂರ್ಣವಾಗಿ ಮರೆತಿದ್ದೆ. ನಮ್ಮ ಓದು ಮುಗಿದ ವರ್ಷ ನಾನದನ್ನು ಅವನಿಗೆ ಕೊಟ್ಟಿದ್ದೆ. ಅದನ್ನು ನಾನು ಅಲ್ಲಿಂದ ಸರಿಸಿದೆ. ಅದರ ಒಳಪಾರ್ಶ್ವದ ಮೇಲೆ ದಂತ ಕತೆಯೊಂದನ್ನು ಕೆತ್ತಲಾಗಿತ್ತು. "ನನ್ನ ಗೆಳೆಯನೇ ನಾವಿಬ್ಬರೂ ಯುದ್ಧದ ಕಲೆಯೊಂದಿಗೆ ಬೆಳೆದು ಮುದುಕರಾಗೋಣ". ಆದರೆ ಪ್ರೀತಿಭರಿತ ಮಾತುಗಳು ಚುಚ್ಚಲಾರವು ಮತ್ತು ಕೊಲ್ಲಲಾರವು ಎಂದು ಇಷ್ಟು ವರ್ಷಗಳೂ ನಾನು ನಂಬಿದ್ದೆ. ಅವನ ತೋಳನ್ನು ಭಾವಣಿಗೆ ನೇತುಹಾಕಿ ಅವನನ್ನು ತಟ್ಟಿ ಅಲುಗಾಡಿಸಿ ಎಚ್ಚರಿಸಬೇಕೆಂದಿದ್ದೆ– ಅಯ್ಯಾ ಸೋಂಬೇರಿ ದುಂದುಗಾರ ಏಳು, ಎದ್ದೇಳು, ನಿನ್ನ ಕುಂಡಿ ಎತ್ತಿಕೊಂಡು ಏಳು, ಬಟ್ಟೆ ಹಾಕಿಕೋ ಹೊರಡೋಣ– ಎಂದು. ನಾವು ಮಾಡಬೇಕಾದ ಯುದ್ಧ ನಮಗಾಗಿ ಕಾದಿದೆ. ಅದು ಅಷ್ಟೊಂದು ನಾಗರಿಕವಾದ್ದೇನಲ್ಲ. ಅದು ನಮ್ಮ ಗುರುಕುಲದ ದಿನಗಳಿಂದ ಬಂದಿದ್ದ ಪೋಲಿ ಮಾತುಗಳ ಸರಣಿ. ನಾನು ವಸ್ತುಶಃ ಅವನನ್ನು ಅಲುಗಾಡಿಸಿದ್ದೆ. ಅವನ ಎಡಗಾಲು ಮಂಡಿ ಹತ್ತಿರ ಮಡಚಿತ್ತು. ಅವನ ಮುಂಡ ರುಂಡದಿಂದ ಯಾವತ್ತೂ ಬೇರ್ಪಟ್ಟಿತ್ತು. ಆದರೆ ಅದೇನೂ ಉಪಯೋಗವಿಲ್ಲ. ಅವನಂತೂ ಮಿಸುಗುವಂತಿರಲಿಲ್ಲ. ನಾನು ಅವನ ಕೈಯನ್ನು ಬಿಟ್ಟೆ. ಅದು ಚಟ್ಟದ ಹೊರಕ್ಕೆ ಅವಲಕ್ಷಣವಾಗಿ ಇಳಿಬಿದ್ದು ನೆಲದ ಮೇಲೆ ಕೂತಿತು. ತೋಡಾವನ್ನು ಅದರ ಜಾಗದಲ್ಲಿಟ್ಟುಬಿಟ್ಟೆ.

ನಾನು ಹೊರಬಂದು ಮನೆಯ ಮೆಟ್ಟಿಲುಗಳ ಮೇಲೆ ನಿಂತು ಕೊಂಡೆನು. ಶಿಷ್ಟಾಚಾರದಂತೆ ಅದು ಅಲ್ಲಿ ಸೇರಿದ್ದ ದುಃಖಿಗಳಿಗೂ, ಮನೆಯ ಉಳಿದ ಸದಸ್ಯರಿಗೂ ರಾಜೇಂದ್ರನಿಗೆ ಅಂತಿಮ ಪ್ರಣಾಮ ಸಲ್ಲಿಸಲು ಸಂಕೇತ. ಸಾವಿರಕ್ಕೂ ಹೆಚ್ಚು ಜನ ಹೊರಗಡೆ ಕಾಯುತ್ತಿದ್ದರು. ಅವರು ಹೆದರಿಕೆ ಉಂಟು ಮಾಡುವ ಹಾಗೆ ಮುಂದೆ ನೂಕುತ್ತಿದ್ದರು. ಯಾರೋ ಒಂದು ಘೋಷಣೆ ರಚಿಸಿದರು. "ರಕ್ತಕ್ಕೆ ರಕ್ತ. ಮೇವಾಡದ ಗೌರವ ಬಹಾದುರ್‌ನ ರಕ್ತವನ್ನು ಕೇಳುತ್ತಿದೆ." ಬೇಗನೆ ಎಲ್ಲರೂ ಅದನ್ನು ಗ್ರಹಿಸಿಬಿಟ್ಟರು. ಅವರಿಗೆ ಬೇಕಾದ್ದು ದೊರಕದೆ ಹೋದರೆ, ಅವರು ನನ್ನ ವಿರುದ್ಧ ಮುಯ್ಯಿ ತೀರಿಸಿಕೊಳ್ಳಬಯಸುತ್ತಾರೆಂಬುದು ಸ್ಪಷ್ಟವೇ ಇತ್ತು. "ವಿಕ್ರಮಾದಿತ್ಯರನ್ನು ಬಿಡುಗಡೆ ಮಾಡಿ ದೇಶದ್ರೋಹಿ ಮಹಾರಾಜ್‌ಕುಮಾರ್‌ನನ್ನು ಬಂಧಿಸಿ" ಈ ಹೊಸ ಯೋಚನೆಯನ್ನು ಪ್ರೇರಿಸಿದವರಾರೆಂದು ಊಹಿಸುವುದೇನೂ ಕಷ್ಟವಲ್ಲ. ನನ್ನ ಬಂಧನಕ್ಕಾಗಿ ಎದ್ದ ಕರೆಗಳು ಆ ಕ್ಷಣದಲ್ಲಿ ಮೂಡಿ ಬಂದಂಥವು. ಬಹಳ ಒಳ್ಳೆಯ ಪ್ರಯತ್ನ ತಾಯಿ ಕರ್ಮವತಿಯವರೆ. ಈ ಹಾಳಾದ್ದು ಮಂಗಳ ಎಲ್ಲಿ? ಎಲ್ಲೂ ಕಣ್ಣಿಗೆ ಕಾಣಿಸುತ್ತಿಲ್ಲ. ಆದರೆ ಅದೃಷ್ಟ ನನ್ನ ಕಡೆ ಇತ್ತು. ಈಗ್ಗೆ ಒಂದು ಕ್ಷಣದ ಹಿಂದೆ, ಪರಿಸ್ಥಿತಿ ಹತಾಶೆಗೆ ಹತ್ತಿರ ಹತ್ತಿರವಿದ್ದರೆ, ಈಗಂತೂ ಸರಿಪಡಿಸಲಾಗಲಿ, ಉದ್ಧರಿಸಲಾಗಲಿ ಸಾಧ್ಯವೇ ಇಲ್ಲವೆನ್ನುವಂತಾಗಿತ್ತು. ಮಂಗಳಸಿಂಹನ ಬದಲಿಗೆ, ಸರ್ವಶಕ್ತ ದೇವರೆ ನನಗೆ ನೆರವಾಗು, ಷಹಜಾದನು ಜನರ ಗುಂಪಿನ ಕಡೆಗೆ ನಡೆದು ಬರುತ್ತಿದ್ದನು. ಮಹಾಮೂರ್ಖ, ನನಗೆ ಸಾಕಷ್ಟು ತೊಂದರೆ ಮಾಡಿಲ್ಲವೇನೋ ಎನ್ನುವ ಹಾಗೆ. ಅದೇನು ತಡವಾದ ಆತ್ಮ ಸಾಕ್ಷಿಯ ಪ್ರಕರಣವೆ? ಅಥವಾ ನಾನು ಊಹಿಸಿದಂತೆ ಅವನು ಈಗಲೂ ತನ್ನ ನಾಟಕೀಯ ಸಾಹಸವನ್ನು ಪ್ರದರ್ಶಿಸುವುದನ್ನು ಬಿಡಲಾರದಾದನೆ?

"ಮಹಾರಾಜ್ ಕುಮಾರ್ ಅವರನ್ನು ಒಬ್ಬರನ್ನೇ ಇರೋದಕ್ಕೆ ಬಿಟ್ಟುಬಿಡಿ." ಅವನದ್ದು ಪ್ರತಿಧ್ವನಿ ಬರಿಸುವಂಥ ಕಂಠ. ಅದನ್ನು ಅವನು ಅದ್ಭುತ ಪರಿಣಾಮವನ್ನುಂಟು ಮಾಡುವ ಸಲುವಾಗಿ ಬಳಸುತ್ತಿದ್ದ. "ನಿಮಗೆ ನಾನು ಬೇಕಾಗಿದೆ. ನಾನು ಇಲ್ಲಿದ್ದೇನೆ. ಗುಜರಾತಿನ ಮತ್ತು ಇಸ್ಲಾಮಿನ ಗೌರವವನ್ನು ಕಾಪಾಡುವ ಸಲುವಾಗಿ ನಾನು ನನ್ನ ಪ್ರಾಣಾರ್ಪಣೆ ಮಾಡಲು ಸಿದ್ಧನಿದ್ದೇನೆ. ಕೇವಲ ಹೇಡಿಗಳು ಮಾತ್ರ ಒಬ್ಬ ಮನುಷ್ಯನ ಮೇಲೆ ಬೀಳುತ್ತಾರೆ. ಹತ್ತು ಜನ ಒಬ್ಬನನ್ನು ನೂರು ಜನ ಒಬ್ಬನನ್ನು ಅಥವಾ ಈಗಿನ ಹಾಗೆ ನಿಮ್ಮ ಥರ ಸಾವಿರ ಜನ ಒಬ್ಬನನ್ನು ಆಕ್ರಮಣ ಮಾಡುತ್ತಾರೆ. ನಿಮಗೆ ಧೈರ್ಯ ಇದ್ದರೆ ಒಬ್ಬೊಬ್ಬರಾಗಿ ಮುಂದೆ ಬನ್ನಿ. ನ್ಯಾಯವಾದ ರೀತಿಯಲ್ಲಿ ಸೆಣಸಿ. ನ್ಯಾಯವಂತನಾದವನು ಗೆಲ್ಲಲಿ."

ಜನರ ಗುಂಪು ಈಗ ಒಂದಾದ ಮೇಲೊಂದು ಸಲ ನನ್ನ ಮತ್ತು ಬಹದ್ದೂರನ ತಲೆದಂಡಕ್ಕಾಗಿ ಜೋರಾಗಿ ಮೊರೆಯುತ್ತಿತ್ತು. ಜನರಿಗೆ ರಕ್ತದ ವಾಸನೆ ಹತ್ತಿತ್ತು. ಅದು ನನ್ನದೋ ಅಥವಾ ನನ್ನ ಶತ್ರುವಿನದೋ ಎನ್ನುವುದು ಮುಖ್ಯವಲ್ಲ. ಅವರು ಅದನ್ನು ಪಡೆಯದೆ ಇರಲಾರರು.

"ಬಹುಶಃ ಸ್ಪರ್ಧೆಗಳನ್ನು ನೋಡುತ್ತ ಅಖಾಡದಲ್ಲಿದ್ದೀವಿ ಎಂಬ ಭಾವನೆ ನಿಮಗೆ ಬಂದಿರಬಹುದು. ಇಷ್ಟರಲ್ಲೇ ಕುಸ್ತಿ ಪಂದ್ಯಗಳು ಪ್ರಾರಂಭವಾಗಲಿವೆ" ಆ ದನಿಯನ್ನು ಈ ಮುಂಚೆ ಯಾರಾದರೂ ಕೇಳಿದ್ದಿರಬಹುದೆ ಎಂದು ಆಶ್ಚರ್ಯ ಪಡುವಷ್ಟು ಸಣ್ಣ ದನಿ. ಆದರೆ ಎಲ್ಲರ ತಲೆಗಳೂ ನಿಧಾನವಾಗಿ ಅತ್ತ ಕಡೆ ತಿರುಗಿದವು. ಲಕ್ಷ್ಮಣ ಸಿಂಹಜೀಯವರ ದನಿಗೆ ಕಿವಿಗೊಟ್ಟುವು. "ನನ್ನ ಹಿರಿಯ ಮಗ ರಾಜೇಂದ್ರ ಈಗ ಸತ್ತಿದ್ದಾನೆ. ನಿಮ್ಮ ಹುಚ್ಚು ನಡತೆಯೊಂದಿಲ್ಲದಿದ್ದರೆ, ಇದುವರೆಗೆ ನಾವು ರುದ್ರಭೂಮಿಯಲ್ಲಿರುತ್ತಿದ್ದೆವು."

ಶವಸಂಸ್ಕಾರದ ನಂತರ ನಾನು ಗಂಭೀರಾ ನದಿಯಲ್ಲಿ ಸ್ನಾನ ಮಾಡಿದೆ. ಏಕಲಿಂಗಜೀಯ ದೇವಾಲಯಕ್ಕೆ ತೆರಳಿ ತೀವ್ರವಾಗಿ ಪ್ರಾರ್ಥಿಸಿದೆ. ಇತ್ತೀಚೆಗೆ ತಾನೆ ನನ್ನ ನಿಷ್ಠೆಯನ್ನು ಕೃಷ್ಣನ ಕಡೆಯಿಂದ ನಮ್ಮ ಕುಲದೈವಕ್ಕೆ ಬದಲಾಯಿಸಿಕೊಂಡಿದ್ದೆ. ಹತನಾದ ರಾಜೇಂದ್ರನನ್ನು ಆಲಿಂಗಿಸಿಕೊಂಡು ಪುನರ್ಜನ್ಮದ ಚಕ್ರದಿಂದ ಬಿಡುಗಡೆಗೊಳಿಸಬೇಕೆಂದು ಆ ದೇವನ್ನು ಬೇಡಿಕೊಂಡೆ. ನನ್ನ ಸ್ವಂತಕ್ಕಾದರೆ ನನಗೆ ಜ್ಞಾನ ಮತ್ತು ವಿವೇಕ ಹಾಗೂ ಮೇವಾಡಕ್ಕೆ ಅಪಾರವಾದ ಕೀರ್ತಿಯನ್ನು ದಯಪಾಲಿಸಬೇಕೆಂದು ಕೋರಿದೆ. ಅಲ್ಲಿಯ ಪ್ರಧಾನ ಪುರೋಹಿತರು ರಾಜೇಂದ್ರನ ಸಾವು ಒಂದು ಅಪಶಕುನದ ಸಂಕೇತವಿರಬೇಕೆಂದೂ ಹಾಗಾಗಿ ಅಲ್ಲಿಂದ ಒಂದು ವಾರದ ನಂತರ ಹೊರಡುವುದು ತುಂಬ ಒಳ್ಳೆಯದೆಂದು ಸೂಚಿಸಿದರು. ಹತ್ತು ದಿನಗಳ ನಂತರ ಹೊರಡುವುದು ಇನ್ನೂ ಒಳ್ಳೆಯದೆಂದು, ಕಾರಣ ಅಂದು ಒಳ್ಳೆಯ ದಿನ ಎಂದು ಹೇಳಿದರು. ಬೇರೆ ಯಾವತ್ತಾದರೂ ಆಗಿದ್ದರೆ ನನ್ನ ಮನಸ್ಸು ಇಬ್ಬಂದಿಯಲ್ಲಿರುತ್ತಿತ್ತು. ಆದರೆ ಅದೃಷ್ಟವಶಾತ್ ಈ ವಿಷಯದಲ್ಲಿ ನನಗೆ ಆಯ್ಕೆಯೇ ಇರಲಿಲ್ಲ. ಮಹಾರಾಜರನ್ನು ಕಾಯಿಸುವಂತಿಲ್ಲ.

ಸೂರ್ಯ ನಡುನೆತ್ತಿಗೆ ಬರುವ ದಾರಿಯಲ್ಲಿ ಅದಾಗಲೇ ಅರ್ಧ ಹಾದಿ ಸವೆಸಿದ್ದ. ಎಲ್ಲವೂ ಸರಿಯಾಗಿ ನಡೆದಿದ್ದರೆ, ನಾವು ಬೆಳಿಗ್ಗೆ ಆರೂವರೆಗೆ ಹೊರಟು ಬಿಡುತ್ತಿದ್ದೆವು. ನಾನು ಬೇಗ ಹೊರಡಬೇಕೆಂದಿದ್ದೆ. ಆದರೆ ವಿಜಯ ಸ್ತಂಭದವರೆಗೂ ಹೋಗದ ಹೊರತು ಹೊರಡುತ್ತಿರಲಿಲ್ಲ. ಯುದ್ಧದ ಬಗ್ಗೆ ಭಾವೋದ್ವೇಗಕ್ಕೆ ಒಳಗಾಗಬೇಕಾದ್ದಿಲ್ಲ. ಯೋಧನೊಬ್ಬ ಮರುಪ್ರಯಾಣದಲ್ಲಿ ತೀರ ನಂಬಿಕೆ ಇಡುವ ಧೈರ್ಯ ಮಾಡಲಾರನೆಂದು ಒಪ್ಪುವುದು ಸಕಾರಣವಾದುದೇ, ನಾನು ಬಹು ಬೇಗನೆ ನನ್ನ ಟಿಪ್ಪಣಿಗಳನ್ನು ಮಾಡಿಕೊಂಡೆ. ಹಣಕಾಸು

ಖಾತೆ ಸಚಿವ ಆದಿನಾಥಜೀಯವರು ಪ್ರತಿ ದಿನವೂ ದರ್ಶನಕ್ಕೆ ತೆರಳುವ ದಿಗಂಬರ ದೇವಾಲಯವು ಮೂಲತಃ ಒಂದು ವಿಷ್ಣು ದೇವಾಲಯವಾಗಿತ್ತೆಂದು ಹೇಳುತ್ತಾರೆ. ನನಗೆಂದೂ ಅರ್ಥವಾಗದ ವಿಷಯವೆಂದರೆ ದೇವಾಲಯಗಳು ಹೇಗೆ ಧರ್ಮಗಳನ್ನು ಬದಲಾಯಿಸುತ್ತವೆ ಅಥವಾ ಒಂದು ದೇವರನ್ನು ಶತಮಾನಗಳ ಕಾಲ ಪೂಜಿಸಿ ರಾತ್ರೋ ರಾತ್ರಿ ಬೇರಾವುದೋ ದೇವರನ್ನು ಹೇಗೆ ಪೂಜಿಸಲಾಗುತ್ತದೆ ಎಂಬುದು. ಅದರ ಪಕ್ಕದಲ್ಲಿರುವುದೇ ಕೀರ್ತಿ ಸ್ತಂಭ. ಅದೂ ಇನ್ನೊಂದು ಜೈನರ ಮಹಾಮೈಲಿಗಲ್ಲು. ಜೈನ ವ್ಯಾಪಾರಿ ಜೀಜಾ ಭಗ್ಯೆರ್ಲಾಲ್ ಮಹಾಜನ್, ಇಪ್ಪತ್ತನಾಲ್ಕು ತೀರ್ಥಂಕರರ ಪವಿತ್ರ ಬಸದಿಗಳ ಯಾತ್ರೆ ಮಾಡಿದ್ದರ ನೆನಪಿಗೆ ಹನ್ನೆರಡನೇ ಶತಮಾನದಲ್ಲಿ ಇದನ್ನು ಕಟ್ಟಿಸಿದನು. ಅದು ಸುಮಾರು ಎಪ್ಪತ್ತು ಅಡಿಯಷ್ಟು ಎತ್ತರವಿದೆ ಮತ್ತು ಏಳು ಅಂತಸ್ತುಗಳಿಂದ ಕೂಡಿದೆ. ನಮ್ಮ ಮುತ್ತಾತ ಮಹಾರಾಣಾ ಕುಂಭ, ವಿಜಯ ಸ್ತಂಭವನ್ನು ಕಟ್ಟಿದಾಗ, ಕೀರ್ತಿ ಸ್ತಂಭಕ್ಕಿಂತ ಎತ್ತರಕ್ಕೆ ಕಟ್ಟುವ ಉದ್ದೇಶವಿತ್ತು. ಹಾಗಾಗಿ ಜೈನಸ್ತಂಭ ಚಿಕ್ಕದಾಗಿದೆ ಮತ್ತು ಅದರ ಒಳಗಡೆ ಯಾವುದೇ ಕೆತ್ತನೆಯ ಕೆಲಸವಿಲ್ಲ.

ಇದರ ನಂತರ ನಾನು ಚತುರಂಗ ಮೌರ್ಯಕೆರೆಯತ್ತ ಗಮನ ಹರಿಸುತ್ತೇನೆ. ಕೆರೆಯ ಮಧ್ಯದಲ್ಲಿರುವ ಶಿವದೇವಾಲಯವು ದಟ್ಟವಾದ ಬೌದ್ಧ ಲಕ್ಷಣಗಳನ್ನು ಹೊಂದಿದೆ. ಅದನ್ನು ನೋಡಿದರೆ, ಇಲ್ಲಿಯೂ ದೇವತಾ ವಿಗ್ರಹಗಳು ಬದಲಾಗಿರಬೇಕೆಂದು ನನ್ನ ಊಹೆ. ರಾವ್ ರಣಮಲ್ ಮನೆ, ಬಾದಷಾಹ್‌ನ ಬಕ್ಸಿ ಆಗಿದೆ. ಸ್ಥಳೀಯ ಐತಿಹ್ಯದ ಪ್ರಕಾರ, ರಣಕುಂಭನ ಕಾಲದಲ್ಲಿ ಗುಜರಾತ್ ಸುಲ್ತಾನನ್ನು ರಾಮ್‌ಪುರ್ ಭಾನ್‌ಪುರಾನ ಅರಮನೆಯಲ್ಲಿ ಅದೇ ಕಾಲಕ್ಕೆ ಬಂಧನದಲ್ಲಿಡಲಾಯಿತು. ಈ ಹೊತ್ತು ಭಾನ್‌ಪುರಾಗಳು ಪ್ರಾಚೀನ ಕುಲೀನ ಮನೆತನ, ಆದರೆ ಹಳೆಯ ಸಂಪತ್ತಾವುದೂ ಇಲ್ಲ. ರಾಣಿ ಪದ್ಮಾವತಿಯ ಅರಮನೆ. ಅದರಲ್ಲಿ ಜಲಮಹಲ್ ಇದೆ. ರಾಣಿ ಆಗಾಗ್ಗೆ ಮಹಿಳೆಯರ ಸಭೆ, ಸಮ್ಮೇಳನಗಳನ್ನು ನಡೆಸಲು ಆದೇಶಿಸುವ ಜಲಮಹಲ್, ಕಾಳಿಕಾ ದೇವಸ್ಥಾನ ಅರಮನೆಯ ಆನೆಗಳನ್ನು ಮೀಯಿಸುವ ಹಾಥ್‌ಕುಂಡ್. ರಾಣಿ ಪದ್ಮಿನಿ ಅರಮನೆಯ ಹಿಂದೆ ಇರುವುದೇ ಖತನ್ ರಾಣಿ ಅರಮನೆ. ಈಕೆ ರಾಣಿಯೇನಲ್ಲ. ಆದರೆ ಬಡಗಿ ಜಾತಿಗೆ ಸೇರಿದ ಕೆಳವರ್ಗದ ಹೆಣ್ಣು. ರಾಣಾ ಕ್ಷತ್ರಸಿಂಹನ ಕಣ್ಣಿಗೆ ಬಿದ್ದು ಅವನ ನೆಚ್ಚಿನ ಉಪಪತ್ನಿಯಾದವಳು. ನಂತರ ಅಲ್ಲೊಂದು ಸಾಸ್– ಬಹು ಕುಂಡ– ಅತ್ತೆ ಸೊಸೆ ಕಲ್ಯಾಣಿ ಎಂಬ ಹೆಸರಿನ ಕಲ್ಯಾಣಿ ಇದೆ. ಅತ್ತೆ ಸೊಸೆಯರು, ತಾಯಂದಿರು ಸಮಾನ ನೆಲೆಯಲ್ಲಿ ಸ್ನಾನ ಮಾಡುವ ಜಾಗ ಇದೊಂದೇ. ಕಾರಣ ಇಬ್ಬರೂ ಸ್ನಾನಕ್ಕೆ ಬರುತ್ತಾರಾದ್ದರಿಂದ. ಅದರ ಚಿಲುಮೆಗಳು ಈ ಹೊತ್ತಿಗೂ ಒಂದು ರಹಸ್ಯ. ಕಾರಣ ಅವುಗಳ ಮೂಲವನ್ನಾಗಲಿ, ಅವುಗಳ ನಿರಂತರ ಜಲಸಮೃದ್ಧಿಯ ರಹಸ್ಯವನ್ನಾಗಲಿ ಯಾರೂ ತಿಳಿದಿಲ್ಲ. ಅಲ್ಲಿಯೆ ಸತ್ತಾಬೀಸ್ ದೇವ ಎಂದು ಕರೆಯಲಾಗುವ ಹನ್ನೊಂದನೇ ಶತಮಾನದಲ್ಲಿ ನಿರ್ಮಿಸಲಾದ ಇಪ್ಪತ್ತೇಳು ಸಣ್ಣ ದೇವಾಲಯಗಳಿವೆ. ಚಿತ್ತೂರಿನ ನನ್ನ ಈ ಸುಂಟರಗಾಳಿಯ ಪ್ರವಾಸದ ಕೊನೆಯ ದೃಶ್ಯಾವಳಿಯೆಂದರೆ, ನಾನು ನನ್ನ ಜೀವನ ಪರ್ಯಂತ ವಾಸಿಸುತ್ತಿರುವ ರಾಜರ ಅರಮನೆಗಳ ಸಂಕೀರ್ಣ.

ದುರಾಸೆಯಿಂದ ನೀರಿನ ಗುಂಡಿಯಿಂದ ನೀರು ಸಂಗ್ರಹಿಸಿಕೊಳ್ಳುತ್ತಿರುವ ಒಂಟೆಯಂತೆ ನಾನು ಎಂದು ನನಗನ್ನಿಸುತ್ತಿದೆ. ಹೆಚ್ಚಿನ ಸೂಕ್ಷ್ಮ ವ್ಯತ್ಯಾಸಗಳೇನೂ ಇಲ್ಲ ಎಂದೇ ನನ್ನ ಆತಂಕ. ಶೋಕ ಸಂದರ್ಭಗಳು ಅಥವಾ ಅತಿಮಾನುಷ ಕ್ಷಣಗಳಿಗಾಗಿ ನಾನು ಎದುರುನೋಡುತ್ತಿಲ್ಲ, ಕೇವಲ ಚಿತ್ತೂರಿನ ಬದುಕಿನ ಭಾಗಗಳು ಮತ್ತು ತುಣುಕುಗಳು

ಹಾಗೂ ಅವರ ಲಯುಗಳಿಗಾಗಿ ಎದುರು ನೋಡುತ್ತಿದ್ದೇನೆ. ಬಟ್ಟೆಗಳ ರಾಶಿಯನ್ನು ಮಧ್ಯದಲ್ಲಿ ಹೇರಿಕೊಂಡು ಅದರ ಸುತ್ತ ಕುಳಿತಿರುವ ಹೆಂಗಸರ ಗುಂಪನ್ನು ನೋಡಿ. ಬಟ್ಟೆಯ ಸಣ್ಣ ತುಣುಕುಗಳನ್ನು ತೆಗೆದುಕೊಂಡು ಅವುಗಳ ಸುತ್ತ ಗಂಟುಕಟ್ಟಿ ಅವುಗಳನ್ನು ಬಣ್ಣ ತುಂಬಿರುವ ಕಡಾಯಿಗಳಲ್ಲಿ ಅದ್ದುತ್ತಿದ್ದರು. ಅವರುಗಳ ಹಿಂದೆ, ಬೊಂಬುಗಳ ಸಾಲು ಸಾಲುಗಳನ್ನು ಓರೆಯಾಗಿ ಹೂಳಿ ಹಗ್ಗ ಕಟ್ಟಲಾಗಿದೆ. ಇದೀಗ ಯಾವುದೇ ಕ್ಷಣದಲ್ಲಾದರೂ ಹಗ್ಗದ ಮೇಲೆ ನಡೆಯುವವರ, ತಂಡಗಳು ಬೊಂಬಿನ ಕಂಬಗಳನ್ನು ಏರಿ, ಬಿಗಿದು ಕಟ್ಟಿದ ಹಗ್ಗಗಳ ಮೇಲೆ ನಿರ್ಲಕ್ಷ್ಯದಿಂದ ನಡೆದುಬಿಡಲಿವೆ. ಬದಲಿಗೆ ಹೆಂಗಸೊಬ್ಬಳು ಮೇಲೆ ಬಣ್ಣದಲ್ಲಿ ಅದ್ದಿ ತೆಗೆದ, ಗಂಟು ಕಟ್ಟಿದ ಬಟ್ಟೆಗಳನ್ನು ಅವುಗಳ ಮೇಲೆ ಒಣಗಿ ಹಾಕುತ್ತಿದ್ದಾಳೆ. ಚಿತ್ರ ವಿಚಿತ್ರ ಬಣ್ಣಗಳಿಂದ ಕೂಡಿದ. ಹಾಯಿಪಟಗಳ ಮೇಲೆ ಗಾಳಿ ತೀಡುತ್ತದೆ ಮತ್ತು ಸಮುದ್ರ ಮಟ್ಟದಿಂದ ಐದು ನೂರು ಅಡಿಗಳ ಮೇಲೆ ಪೂರ್ಣ ಪ್ರಮಾಣದ ದೋಣಿ ಪಂದ್ಯವಿದೆ. ಮಾಳಿಗೆಯ ಇಳಿಜಾರಿನಲ್ಲಿ ಒಂದು ಜೊತೆ ಎತ್ತು ಮತ್ತು ಒಬ್ಬ ರೈತ ಹಿಂದಕ್ಕೆ ನಡೆದು ಹೋಗುತ್ತಿದ್ದಾರೆ. ದೂರದಲ್ಲೆಲ್ಲೋ ಬಾವಿಯಲ್ಲಿ ಬಾನಿಗಳು ನೀರಿಗೆ ತಾಕಿದ ಸದ್ದು ಕೇಳಿ ಬರುತ್ತಿದೆ. ಈಗ ಅವು ಮುಂದೆ ಸಾಗಿ ಮೇಲೆ ಬಂದು ನೀರಿನ ಚಕ್ರ ನೀರನ್ನು ಕಾಲುವೆಗಳಿಗೆ ಸುರಿಯುತ್ತದೆ. ನನ್ನ ಕಣ್ಣುಗಳು ಗಂಭೀರಾ ನದಿಯಗುಂಟ ಸಾಗಿ ಧೋಬಿಘಾಟ್ ಬಳಿ ನಿಲ್ಲುತ್ತವೆ. ಅವಳು ಅಷ್ಟೊಂದು ದೂರವಿದ್ದಾಳೆ. ಆದರೆ ಅವಳನ್ನು ಬೇರೆ ಯಾರೋ ಎಂದು ತಪ್ಪು ತಿಳಿಯುವ ಸಂಭವವೇ ಇಲ್ಲ. ಅಂಥ ಮೃದುವಾದ, ಆತ್ಮ ಪ್ರಜ್ಞಾರಹಿತವಾದ ಕೈಕಾಲುಗಳ ಆ ಚೆಲುವು ಮತ್ತು ಅವುಗಳ ವಿಲಾಸ ಸುನೇರಿಯಾದ್ದಲ್ಲದೆ ಬೇರೆ ಯಾರದ್ದೂ ಆಗಿರಲು ಸಾಧ್ಯವೇ ಇಲ್ಲ. ಇಂದು ನಸುಕಿನಲ್ಲಿ ಅವಳು ಆಡಿದ ಒಗಟಿನಂಥ ಮಾತಿನ ಅರ್ಥವೇನು? ಅವಳೇನು ಅತೀಂದ್ರಿಯ ಜ್ಞಾನವುಳ್ಳವಳೆ? ನಾನೇಕೆ ಅವಳಲ್ಲಿಗೆ ಹಿಂತಿರುಗಬಾರದು? ಇಷ್ಟು ಅಧ್ವಾನವಾಗಿ ಆರಂಭವಾದ ಈ ಆಂದೋಲನ ನನ್ನ ಜೀವವನ್ನೇ ಬಲಿ ತೆಗೆದುಕೊಳ್ಳುವುದೆ? ಅವಳ ತೋಳು ಮತ್ತು ಕೈಗಳು ಮೇಲಕ್ಕೆ ಹೋಗುತ್ತವೆ ಮತ್ತು ಅವಳು ಎತ್ತಿ ಒಗೆಯುತ್ತಿರುವ ಧೋತಿ ಅಥವಾ ಹಾಸಿಗೆಯ ಹೊದಿಕೆ ಎರಡು ಮಡಿಕೆಯಾಗಿ ಒದ್ದೆ ಬಂಡೆಗೆ ಅಪ್ಪಳಿಸುತ್ತದೆ. ಅವಳ ತೋಳುಗಳು ದಷ್ಟ ಪುಷ್ಟವೆಂಬಂತೆ ಕಾಣುವುದಿಲ್ಲ, ಆದರೆ ನೂರಾರು ಬಟ್ಟೆಗಳನ್ನು ನಿರಾಯಾಸವಾಗಿ ಗಂಟೆಗಟ್ಟಲೆ ಒಗೆಯುವ ಅವು ನಿಜಕ್ಕೂ ಹುರಿಗಟ್ಟಿದ ಉಕ್ಕಿನಿಂದಾಗಿರಬೇಕು. ಅವಳ ಬೆನ್ನು ಹಾಗೂ ಕಾಲುಗಳ ಮೇಲಿನ ಕಪ್ಪನೆಯ ಜಜ್ಜುಗಾಯಗಳು, ಅವಳ ಬೆನ್ನ ಮೇಲಿನ ಬಾಸುಂಡೆ, ಕಾಣೆಯಾಗಿರುವ ಅವಳ ಎಡಗೈ ಬಳೆ, ಊದಿರುವ ಮೂಗಿನ ಕಂಬ; ಇವೆಲ್ಲ ನನ್ನನ್ನು ತಾಗುತ್ತವೆ. ಒಂದು ವಾರದ ಹಿಂದೆ ಮನೆಯಲ್ಲಿ ಬಿದ್ದು ಆದ ಗಾಯಗಳೆಂದು ಹೇಳಿದಳು. ಅವಳು ಹೇಳಿದ್ದು ಸರಿ. ನಾನು ಬರೀ ಕುರುಡನಲ್ಲ, ಕಿವುಡ ಕೂಡ. ಅವಳ ಮುದಿಗಂಡ, ಅವಳನ್ನೇ ಆಗಲಿ ಬೇರೆ ಯಾರನ್ನೇ ಆಗಲಿ ಸಂಭಾಳಿಸಲಾರ. ಆದರೆ ದೊಣ್ಣೆಯಿಂದ ಅವಳನ್ನು ಬಾರಿಸಲು ಅವನಿಗೆ ಅದಷ್ಟೇ ಕಾರಣ ಬೇಕಾದಷ್ಟಾಯಿತು. ಅವಳು ಏತಕ್ಕೆ ಅವನ ಮೂಳೆಗಳನ್ನು ಮುರಿಯಲಿಲ್ಲ? ಅವಳಿಗೆ ಖಂಡಿತವಾಗಿಯೂ ಅಷ್ಟು ಶಕ್ತಿ ಇದೆ. ಅವಳ ಆ ಒರಟಾದ ಮತ್ತು ಗಟ್ಟಿಯಾದ ಕೈಗಳು. ಅದು ಅವಳಿಗೂ ಗೊತ್ತು ಮತ್ತು ಅವುಗಳನ್ನು ಸದಾ ಮರೆ ಮಾಡಲು ಯತ್ನಿಸುತ್ತಿರುತ್ತಾಳೆ ಅವುಗಳಿಂದ ಒಂದು ಜೋರಾದ ಹೊಡೆತ ಬಿದ್ದರೆ ಅವಳ ಗಂಡ ಒಂದು ವಾರ ಮೇಲೆ ಏಳಲು ಆಗುವುದಿಲ್ಲ. ನಾನು ಮಾತನಾಡುತ್ತಿರುವುದೆಲ್ಲ ಕೆಲಸಕ್ಕೆ ಬಾರದ ಮಾತು. ಅವಳು ಎಷ್ಟೇ ಸ್ವತಂತ್ರಳು, ಹಠಮಾರಿತನದ ಹೆಂಗಸು, ಅಂತ ಆದರೂ, ಒಬ್ಬ ಮನುಷ್ಯನ ಕೆಲಸವನ್ನು ಅವಳು ಮಾಡುತ್ತಾಳಾದರೂ, ಅವಳು ಸಂಪ್ರದಾಯ ಬದ್ಧಳು, ಅವಳು ಮುಯ್ಯಿ ತೀರಿಸಿಕೊಳ್ಳುವುದಿಲ್ಲ.

ರಾಮಫಲದ ಗಿಡಗಳು ಹಣ್ಣಿನ ಭಾರದಿಂದ ಜಗ್ಗುತ್ತಿವೆ. ಇನ್ನೂ ಪಕ್ವವಾಗಿಲ್ಲ. ಆದರೆ ನಾನೊಂದಿಷ್ಟು ಹಣ್ಣುಗಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತೇನೆ. ಚಿತ್ತೂರಿನಲ್ಲಿ ಸಿಗುವಂಥ ರಾಮಫಲದ ಹಣ್ಣುಗಳು, ಎಲ್ಲೂ, ನಾನು ಹೋಗಿರುವ ಯಾವ ಕಡೆಯೂ ಸಿಗುವುದಿಲ್ಲ.

ವಿಜಯ ಸ್ತಂಭದಿಂದ ಇಳಿದಾಗ ಮಂಗಳನನ್ನು ಕೂಗಿ ಕರೆದು ಹೇಳಿದೆ. ಸುನೇರಿಯಾಳ ಗಂಡನಿಗೆ ಭಯ ಹುಟ್ಟಿಸು. ಇನ್ನೊಂದು ಸಲ ಏನಾದರೂ ಅವನ ಹೆಂಡತಿಯ ಮೈ ಮುಟ್ಟಿದ್ದೇ ಆದರೆ, ಹೆಂಡತಿಯ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿರುವುದಕ್ಕೆ ಅವನನ್ನು ಏಕಾಂತವಾಗಿ ಸೆರೆವಾಸದಲ್ಲಿಡುತ್ತೀವಿ ಎಂದು ಹೇಳು. ನೀನು ಬಹಳ ವಿವೇಕಿ ಅಂತ ನನಗೆ ಗೊತ್ತಿದೆ. ಈ ಬೆದರಿಕೆಗೆ ಮೂಲ ಯಾವುದು ಅಂತ ಅವನಿಗೆ ಗೊತ್ತಾಗಬಾರದು.

ಲೀಲಾವತಿ, ರಾಜ ಕುಟುಂಬದವರು, ರಾಜ ಮಾತೆ ಮತ್ತು ಉಳಿದೆಲ್ಲಾ ರಾಣಿಯರು, ಆದಿನಾಥ ಜೀ, ಪ್ರಧಾನರು, ಚಿತ್ತೂರಿನ ಕುಲೀನರು ಮತ್ತು ನಾಗರಿಕರು ಎಲ್ಲರೂ ಕವಾಯತು ಮೈದಾನದಲ್ಲಿ ಕಾಯುತ್ತಿದ್ದರು. ನನ್ನ ಸೋದರ ಬಂಧು ಲಕ್ಷ್ಮಣ ಸಿಂಹಜೀಯವರಿಗೆ ಸೈನ್ಯದ ಧ್ವಜವನ್ನು ನೀಡುವ ಸಮಾರಂಭಕ್ಕೆ ಬರಬೇಕಿಲ್ಲವೆಂದೂ ವಿಶ್ರಾಂತಿ ತೆಗೆದುಕೊಳ್ಳಬೇಕೆಂದೂ ಹೇಳಿದ್ದೆ. ಅವರು ಬಾರದೆ ಇರಲೆಂದು ನಿಜಕ್ಕೂ ನಾನು ನಿರೀಕ್ಷಿಸಿದ್ದೆನೆ? ಅವರ ಕಿರಿಯ ಮಗ ತೇಜನನ್ನು ರಾಜೇಂದ್ರನ ಜಾಗದಲ್ಲಿ, ನನ್ನ ಜೊತೆಗೆ ನಾನು ಕರೆದೊಯ್ಯುವ ದಳದ ಮುಖ್ಯಸ್ಥನನ್ನಾಗಿ ನೇಮಿಸಿದ್ದೆ.

ಲೀಲಾವತಿ ಕ್ರೀಡಾಂಗಣದ ಮಂಟಪದ ಅಡಿಯಲ್ಲಿ ಗಾಂಭೀರ್ಯದಿಂದ ಕಾಯುತ್ತ ನಿಂತಿದ್ದಳು. ಈ ಸಲ ಅವಳು ನನಗೆ ಒರಗಿಕೊಳ್ಳುವುದಾಗಲಿ, ತೆಕ್ಕೆ ಬೀಳುವುದಾಗಲಿ ಮಾಡಲಿಲ್ಲ, ಅವಳೊಬ್ಬ ಪುಟ್ಟ ರಾಣಿಯಂತೆ ಅಲ್ಲಿ ನಿಂತಿದ್ದಳು. ಅವಳು ಬಂಧನಿ, ಪರಕಾರ ಮತ್ತು ಕುಪ್ಪಸ ತೊಟ್ಟು ಢಾಕಾ ಮೇಲು ಹೊದಿಕೆ ಧರಿಸಿದ್ದಳು. ನನ್ನ ಪಡೆಗಳು ಮತ್ತು ನಾನು ಜನಸಮೂಹವನ್ನು ದಾಟಿ ಮುನ್ನಡೆದು ಲೀಲಾವತಿಯ ಮುಂದೆ ಬಂದು ನಿಂತೆವು. ನಾನು ಎಡಕ್ಕೆ ತಿರುಗಿ, ನನ್ನ ಭಲ್ಲೆಯನ್ನು ಮೇಲೆತ್ತಿ ಹಿಡಿದೆ. ಲೀಲಾವತಿಯು ನನಗಾಗಿ ಕಸೂತಿ ಹಾಕಿದ್ದ ಕಿರು ಬಾವುಟವನ್ನು ಹಾರಿಸಿದಳು ಮತ್ತು ಅದನ್ನು ಹಿತ್ತಾಳೆಯ ಹಿಡಿಕೆಯ ಮೇಲಕ್ಕೆ ಜಾರಿಸಿದಳು. ದಾಸಿಯೊಬ್ಬಳು, ಅರಿಶಿನ, ಕುಂಕುಮವಿರುವ ದೀಪ ಸಹಿತವಾದ ಬಂಗಾರದ ತಟ್ಟೆಯೊಂದನ್ನು ಲೀಲಾವತಿಗೆ ನೀಡಿದಳು. ಲೀಲಾವತಿ ನನಗೆ ಆರತಿ ಎತ್ತಿ, ನಸು ಬಾಗಿದ್ದ ನನ್ನ ಹಣೆಗೆ, ಹೆಬ್ಬೆಟ್ಟು ಪೂರ್ತಿ ಅರಿಶಿನ, ಕುಂಕುಮವನ್ನಿಟ್ಟಳು. "ಮೇವಾಡದ ಗೌರವ ನಿಮ್ಮ ಕೈಯಲ್ಲಿದೆ ಮಹಾರಾಜ್ ಕುಮಾರ್ ಅದನ್ನು ಕಾಪಾಡಿ. ಶತ್ರುವನ್ನು ಜಯಿಸಿ. ಅಜೇಯರಾಗಿ ಹಿಂತಿರುಗಿ ಬನ್ನಿ. ದೇವರು ನಿಮ್ಮನ್ನು ರಕ್ಷಿಸಲಿ. ಜೈ ಏಕಲಿಂಗಜೀ" ಎಂದು ಹೇಳಿದಳು. ನಾನು ನೇರವಾಗಿ ನಿಂತು ಸೂರ್ಯದೇವನ ಚಿಹ್ನೆಯಿದ್ದ ಕಿರು ಬಾವುಟಕ್ಕೆ ಗೌರವ ವಂದನೆ ಸಲ್ಲಿಸಿದೆ.

ನಾವು ನಮ್ಮ ದಾರಿಯಲ್ಲಿ ಸಾಗಿದ್ದೆವು. ಆದರೆ ಅದಕ್ಕೆ ಮುನ್ನ ನಾನೊಂದು ಸಣ್ಣ ದೌತ್ಯ ಕಾರ್ಯವನ್ನು ನಿರ್ವಹಿಸಿದೆ. ಸುನೇರಿಯಾಳ ವಿಚಿತ್ರ ಮಾತುಗಳ ಕುರಿತಾದ್ದು ನನ್ನನ್ನು ಬಾಧಿಸ ತೊಡಗಿತು. ನಾನು ಮಂಗಳ್ ಮತ್ತು ಇನ್ನೊಬ್ಬ ಗುಮಾಸ್ತನ ಸಾಕ್ಷಿಗಳಾಗಿಟ್ಟುಕೊಂಡು ನಮ್ಮ ಕಛೇರಿಗೆ ಹೋದೆ. ನನ್ನ ಸ್ವಂತ ಆಸ್ತಿಯಿಂದ ಎರಡು ಹಳ್ಳಿಗಳನ್ನು ಸುನೇರಿಯಾಳ ಹೆಸರಿಗೆ ವರ್ಗಾಯಿಸಿ, ದಾಖಲೆ ಪತ್ರವನ್ನು ಕಳಿಸಿಕೊಟ್ಟೆನು. ಜೊತೆಗೆ ಕೌಸಲ್ಯಳಿಗೊಂದು ಟಿಪ್ಪಣಿಯನ್ನು ಕಳಿಸಿದೆ. ಪ್ರಮುಖ ಪಹರೆಯವನು, ಷಹಜಾದ ಮತ್ತು ಅವನ ಸಹಚರರನ್ನು

ಮುಖ್ಯದ್ವಾರದ ಬಳಿಗೆ ಕರೆತಂದು ನನಗೆ ಒಪ್ಪಿಸಿದನು. ರಾಜಕುಮಾರ ಬಹಾದ್ದೂರ್‌ಗಾಗಲಿ ನನಗಾಗಲಿ ಸಂದರ್ಭದ ಅಣಕಗಳ ಅರಿವಿರಲಿಲ್ಲ. ತಿಂಗಳುಗಳ ಹಿಂದೆ, ಷಹಜಾದಾ ಕುದುರೆಯೇರಿ ಬಂದಿದ್ದನು, ತಂದೆಯ ವಿರುದ್ಧ ಮೇವಾಡದಲ್ಲಿ ಆಶ್ರಯ ಕೋರಿ ಬಂದಿದ್ದನು. ಈಗ ಬೆಂಗಾವಲಿನಲ್ಲಿ ಇಲ್ಲಿಂದ ಹೊರಡುತ್ತಿದ್ದಾನೆ. ಕಾರಣ ಅವನ ನೂತನ ಸ್ನೇಹಿತರು ಇನ್ನು ಅವನ ಸಹವಾಸವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಈಗ ಅವನು ಮೇವಾಡಕ್ಕೆ ಎಷ್ಟರ ಮಟ್ಟಿಗೆ ಶತ್ರುವೋ ಅವನ ತಂದೆಗೂ ಅಷ್ಟೇ ಶತ್ರು. ನಮ್ಮ ಸಾಮ್ರಾಜ್ಯದ ಗಡಿಯಲ್ಲಿ ಅವನಿಂದ ನಾವು ಅಗಲಲಿದ್ದೇವೆ. ಅವನು ಆಗ ಮಾಡಿದ್ದು ಅವನ ವ್ಯವಹಾರ. ಅಹಮದಾಬಾದ್ ಅಥವಾ ಚಂಪಾನೇರ್‌ನ ತನ್ನ ಸ್ವಂತ ಊರಿಗೆ ಹೋಗುವ ಬದಲು ಅವನು ಗುಜರಾತ್ ಸೈನ್ಯವನ್ನು ಸೇರಿಕೊಳ್ಳುವ ಸಂಭವ ಇತ್ತು. ಅಲ್ಲದೆ ಇನ್ನು ಬರಲಿರುವ ಕೆಲವು ವಾರಗಳಲ್ಲಿ ಪರಸ್ಪರ ಕೈಕೈ ಮಿಲಾಯಿಸುವ ಕಾಳಗದಲ್ಲಿ ನಾವು ಸಂಧಿಸಲಿದ್ದೇವೆ.

ಅಧ್ಯಾಯ 18

ನನ್ನ ಮಿತ್ರರು, ಸಮಾನ ಸ್ಕಂಧರು, ಸಹೋದ್ಯೋಗಿಗಳು, ಸೋದರ ಬಂಧುಗಳು, ಸೋದರರು ಇವರನ್ನೆಲ್ಲ ನೋಡಿದಾಗ, ನಾನೆಂಥ ದಡ್ಡ ಎಂಬುದು ನನಗೆ ಮನದಟ್ಟಾಯಿತು. ಅವರೆಲ್ಲ ಒಟ್ಟಿಗೆ ಮದ್ಯಪಾನ ಮಾಡಿ ಖುಷಿಯಾಗಿರುತ್ತಾರೆ, ವೇಶ್ಯೆಯರ ಮನೆಗಳಿಗೆ ಹೋಗುತ್ತಾರೆ, ತುಂಬ ಉಲ್ಲಾಸದಿಂದಿರುತ್ತಾರೆ, ಕೀಟಲೆ, ವಿನೋದಗಳನ್ನು ಮಾಡುತ್ತಾರೆ. ಯಾವಾಗಲಾದರೊಮ್ಮೆ ಅವರೊಂದಿಗೆ ಸೇರಬೇಕೆನಿಸುತ್ತದೆ. ಆದರೆ ನನ್ನನ್ನು ಆಹ್ವಾನಿಸುವುದು ತೀರ ವಿರಳ. ಕಾರಣ ನನ್ನ ವಯಸ್ಸಿಗೆ ಮೀರಿದ ಗಾಂಭೀರ್ಯ ನನಗೆ. ಅಲ್ಲದೆ ಬಹುಮಟ್ಟಿಗೆ ಅವರ ಅತ್ಯುತ್ಸಾಹಕ್ಕೆ ತಣ್ಣೀರೆರಚುತ್ತೇನೆ. ಬೇರೆ ರೀತಿಯಲ್ಲಿ ನಾನು ತುಂಬ ಶ್ರದ್ಧೆಯಿಂದ ಕೆಲಸ ಮಾಡುವವನು. ನನ್ನ ಹಿರಿಯರೂ ಕೂಡ, ನನ್ನನ್ನು ತಲೆ ಚಿಟ್ಟು ಹಿಡಿಸುವವನು ಮತ್ತು ವಿಪರೀತ ಗಂಭೀರವಾದವನು ಎಂದೇ ತಿಳಿದಿದ್ದಾರೆ. ಯುದ್ಧವೆಂದರೆ ಅವರಿಗೆ ಆಟ ಮತ್ತು ವಿನೋದ. ಠಾಕುಠೀಕಾಗಿ ಉಡುಪು ಧರಿಸುತ್ತಾರೆ, ಮೀಸೆಗಳನ್ನು ತಿದ್ದಿ ತೀಡಿ ಮೆರುಗು ಕೊಡುತ್ತಾರೆ. ಕುದುರೆ ಸವಾರಿ ಮಾಡುತ್ತಾರೆ ಮತ್ತು ಕುರುಡು ಕುರುಡಾಗಿ ಅವಕ್ಕೆ ಆಜ್ಞಾಪಿಸುತ್ತಾರೆ. ಅವರು ಸಾಯಿಸುತ್ತಾರೆ ಇಲ್ಲ ಸಾಯುತ್ತಾರೆ. ಆ ರೀತಿಯಲ್ಲಿ ನೋಡಿದರೆ ಜೀವನವೆಂಬುದು ಸರಳ ಮತ್ತು ಹೆಚ್ಚು ಉದ್ವೇಗಕರ.

ಯುದ್ಧ ನನ್ನ ಅತ್ಯಂತ ಮೆಚ್ಚಿನ ಆಟವಲ್ಲ. ಅತ್ಯಂತ ಅಪವಾದಾತ್ಮಕವಾದ ಪ್ರಚೋದನೆಯಿಂದ ಮಾತ್ರ ಅದಕ್ಕೆ ಮೊರೆಹೋಗುತ್ತೇನೆ ಅಥವಾ ಸಮಗ್ರವಾಗಿ ಯೋಜಿಸಿದ ಮೇಲಷ್ಟೇ ಮಹಾವಿನಾಶದ ತೀರ್ಮಾನ ಕೈಗೊಳ್ಳುತ್ತಿದ್ದೆ. ವಾಸ್ತವ ಸಂಗತಿ ಎಂದರೆ, ನಿಡುಗಾಲದ ಅವಧಿಯಲ್ಲಿ ಬಹುತೇಕ ಯುದ್ಧಗಳು, ಎಲ್ಲಿಗೂ ಕೊಂಡೊಯ್ಯಲಾರವು. ಬದಲಿಗೆ ನಾವು ಹೊರಟಲ್ಲಿಗೆ ಎಳೆತರುತ್ತವೆ. ನಾನು ಯುದ್ಧ ಮಾಡಬೇಕಾಗಿ ಬಂದರೆ, ನಮ್ಮ ರಾಜಕೀಯ ಭೂಗೋಳದಲ್ಲಿ ಮತ್ತು ಭಾಗ್ಯದಲ್ಲಿ ಬಹು ಪ್ರಮುಖವಾದ ಮತ್ತು ಸಾಧ್ಯವಾದರೆ ಶಾಶ್ವತ ಬದಲಾವಣೆಗಳನ್ನು ಮಾಡಲಿಷ್ಟಪಡುತ್ತೇನೆ. ಹಾಗಲ್ಲದೆ ಹೋದರೆ, ಮನೆಯಲ್ಲಿ ಕುಳಿತು ನೆರೆಯವರೊಂದಿಗೆ ನೆಮ್ಮದಿಯಿಂದಿರಲಿಚ್ಛಿಸುತ್ತೇನೆ. ಒಂದು ಸಂಘರ್ಷಕ್ಕೆ ಮುನ್ನ ನಾನು ಸಿದ್ಧತೆ ಮಾಡಿಕೊಳ್ಳಬಯಸುತ್ತೇನೆ. ಅದಕ್ಕಾಗಿ ನಾನು ನನ್ನ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಶತ್ರುವಿನ ಮೇಲೆ ನಾನು ಆಕ್ರಮಣ ಮಾಡುವ ಬಗ್ಗೆ ಪ್ರತಿಯೊಂದು ವಿವರ ಮತ್ತು ಸಂಗತಿಯನ್ನು ತಿಳಿದುಕೊಳ್ಳ ಬಯಸುತ್ತೇನೆ. ಪ್ರತಿಯೊಂದು ವಿವರ ಅಂದರೆ ನಿರಂಕುಶ ಪ್ರಭು, ಅವನ ಸೇನಾಧಿಪತಿಗಳು ಮತ್ತು ಅವನ ಸೈನ್ಯ, ಅವರ ಇಷ್ಟ ಮತ್ತು ಅನಿಷ್ಟಗಳು, ಅವರ ಅಲ್ಪ ದೋಷಗಳು, ಅವರ ಒಲವುಗಳು, ಅವರ ಮನೋಸ್ಥೈರ್ಯ

ಅವರ ಹಿಂದಿನ ಆಂದೋಲನಗಳು, ಅವರು ಏನನ್ನು ತಿನ್ನುವರು, ಕಷ್ಟಗಳ ಬಗೆಗಿನ ಅವರ ಕಲ್ಪನೆ, ಅವರ ನಿದ್ರಾಭ್ಯಾಸಗಳು, ಮತ್ತು ಯೋಚಿಸಬಹುದಾದ ಇನ್ನಿತರೆ ಚಿಲ್ಲರೆ ವಿಷಯಗಳು, ಇವೆಲ್ಲವುಗಳ ಬಗ್ಗೆ ನಾನು ತಿಳಿಯಲಿಚ್ಛಿಸುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ, ಅವರು ಹೇಗೆ ಯೋಚಿಸುತ್ತಾರೆಂದು ಕಂಡುಕೊಳ್ಳುವುದರಲ್ಲಿ ನನಗೆ ತುಂಬ ಆಸಕ್ತಿ. ಸಿಂಹಾಸನಕ್ಕೆ ಸ್ಪರ್ಧಿಗಳು ಮತ್ತು ಸುಳ್ಳು ಹಕ್ಕುದಾರರ ವಿಷಯ ಏನು? ಯಾದವೀ ಕಲಹವನ್ನು ನಾವು ನಿಭಾಯಿಸಬಹುದಾದರೆ ಮತ್ತು ನಮ್ಮ ಸಲುವಾಗಿ ಯುದ್ಧವನ್ನೆಲ್ಲ ಮಾಡುವವರನ್ನು ನಾವು ಪಡೆದುಕೊಳ್ಳಲು ಸಾಧ್ಯವಾದರೆ ಹೋರಾಡುವ ಅಗತ್ಯವೇನಿದೆ? ಒಂದು ವೇಳೆ ಆಂತರಿಕ ಅಸೂಯೆಗಳು ಮತ್ತು ಅಧಿಕಾರದ ಸಮಾನತೆಗಳು ಯಾವುದೇ ಯುದ್ಧದ ಅಂತಿಮ ಫಲಿತಾಂಶಕ್ಕೆ ತೀರ ಹತ್ತಿರದ ಸಂಬಂಧ ಹೊಂದಿದ್ದರೆ, ಮತ್ತು ಅದನ್ನು ಬಳಸಿಕೊಳ್ಳುವ ಅಗತ್ಯವಿದ್ದರೆ, ಸಾಮಾನ್ಯ ನಾಗರಿಕನೊಬ್ಬನ ಮನಃಸ್ಥಿತಿಯನ್ನರಿತುಕೊಳ್ಳುವುದು ಅಷ್ಟೇ ಪ್ರಸ್ತುತವಾಗುತ್ತದೆ. ಸಾಮಾನ್ಯ ಜನಗಳು ಸಂಘರ್ಷಗಳಿಂದ ಅಥವಾ ಬೆಂಬಲದಿಂದ ಬೇಸರಗೊಂಡಿದ್ದಾರೆಯೆ? ಹಾಲಿ ಈ ವರ್ಷ ಮತ್ತು ಅದರ ಹಿಂದಿನ ಮೂರು ವರ್ಷಗಳಲ್ಲಿ ಫಸಲು ಹೇಗಿತ್ತು? ಆರ್ಥಿಕ ಪರಿಸ್ಥಿತಿ ಅಷ್ಟೇ ಅಲ್ಲ, ವ್ಯಾಪಾರ ಕೂಡ, ದೀರ್ಘಕಾಲದ ಯುದ್ಧವನ್ನು ಮಾಡುವ ಶತ್ರುವಿನ, ಅಷ್ಟೇ ಏಕೆ ನಮ್ಮ ಸಾಮರ್ಥ್ಯಕ್ಕೆ ಪರೋಕ್ಷ, ಆದರೆ ಸಾಕಷ್ಟು ಸಂಬಂಧವುಳ್ಳದ್ದಾಗಿದೆ. ಯಾವ ಪ್ರಸ್ತಾವಗಳೂ ತೀರಾ ಮೌಲಿಕವಾದವೇನಲ್ಲ. ಆದರೆ ಬಹುಪಾಲು ಯುದ್ಧ ತಂತ್ರ ನಿಪುಣರು ಮತ್ತು ಸೇನಾಧಿಪತಿಗಳು ಯುದ್ಧವೊಂದಕ್ಕೆ ತಯಾರಿ ನಡೆಸುವಲ್ಲಿ ಮೂಲ ತತ್ವಗಳನ್ನನುಸರಿಸುವ ವಿಷಯದಲ್ಲಿ ಅದೆಷ್ಟು ಅಸಡ್ಡೆ ತೋರುತ್ತಾರೆಂದು ತಿಳಿದು ನಾನು ಗೊಂದಲಗೊಂಡಿದ್ದೇನೆ. ಮಾಹಿತಿಯನ್ನು ಸಂಗ್ರಹಿಸುವುದು, ಅದರಲ್ಲೂ ಹೆಚ್ಚು ಕರಾರುವಾಕ್ಕಾಗಿ ನಂಬಲರ್ಹವಾದ ಮಾಹಿತಿಯನ್ನು ಸಂಗ್ರಹಿಸುವುದು, ಅತ್ಯಂತ ಶ್ರಮದಾಯಕವಾದ್ದು, ತುಂಬ ಕಾಲ ತಗಲುವಂಥದೂ, ಬೇಸರ ತರಿಸುವಂಥದೂ ಆದದ್ದು ಎಂದು ನಾನು ಒಪ್ಪುತ್ತೇನೆ. ಅಲ್ಲದೆ ಅದನ್ನು ಸಂತತವಾಗಿ ನಡೆಸಿದಾಗ ಮಾತ್ರ ಪರಿಣಾಮಕಾರಿ ನಿರ್ಣಾಯಕ ಯುದ್ಧವೇ ಮೂರು, ಐದು ಅಥವಾ ಹೆಚ್ಚೆಂದರೆ ಏಳು ಗಂಟೆಗಳನ್ನು ತೆಗೆದುಕೊಳ್ಳುವಾಗ ಶತ್ರುವಿನ ಆರ್ಥಿಕ, ರಾಜಕೀಯ ಮತ್ತು ಸೈನಿಕ ಸಾಮರ್ಥ್ಯಗಳನ್ನು ತಿಂಗಳುಗಟ್ಟಲೆ, ಕೆಲವೊಮ್ಮೆ ವರ್ಷಗಟ್ಟಲೆ ಅಧ್ಯಯನ ಮಾಡುವುದನ್ನು ಊಹಿಸಿಕೊಳ್ಳಿ.

ಈ ಸಲ ನನಗೆ ದೊರೆತ ಕಾಲಾವಧಿ ಅದೆಷ್ಟು ಕಡಿಮೆಯಾಗಿತ್ತೆಂದರೆ ಇದು ತೀರಾ ಅನನುಕೂಲಕರವಾದದ್ದೆಂದು ನನಗನ್ನಿಸಿತು. ನನ್ನ ಮೊತ್ತ ಮೊದಲ ದಂಡಯಾತ್ರೆಯ ಅಧಿಪತ್ಯದ ನಿಯಂತ್ರಣವನ್ನು ವಹಿಸಿಕೊಳ್ಳುವ ಉತ್ಕೃಷ್ಟವಾದ ಮಾರ್ಗ. ಬೇರೆ ಯಾವುದು ಎಲ್ಲಾದರೂ ಹೋಗಲಿ, ಭೂಭಾಗದ ವಿನ್ಯಾಸ ನನಗೆ ತಿಳಿಯದೆ ಇದ್ದರೆ ನನ್ನ ಜನರನ್ನು ಹೇಗೆ ತಾನೆ ನಾನು ಮುನ್ನಡೆಸಬಲ್ಲೆ? ಇದಾರ್ ವಿಷಯವನ್ನೆತ್ತಿಕೊಂಡು ನಾವೇಕೆ ಗುಜರಾತಿನೊಂದಿಗೆ ಹೋರಾಡುತ್ತಿದ್ದೇವೆಂಬುದೂ ನನಗೆ ಖಚಿತವಿಲ್ಲ. ನಾನು ಉತ್ಪ್ರೇಕ್ಷಿಸುತ್ತಿದ್ದೇನೆ, ನಿಜ. ಆದರೆ ಕಾರಣಗಳು ರಾಜಕೀಯ, ಆರ್ಥಿಕ ಅಥವಾ ಯುದ್ಧ ತಂತ್ರ ನೈಪುಣ್ಯಕ್ಕಿಂತ ಭಾವನಾತ್ಮಕ ಅಥವಾ ಸೂಕ್ಷ್ಮವಾದವು. ನನ್ನ ಸೋದರಿಯ ಗಂಡ ರೈಮಲ್ ಇದಾರ್ ಸಿಂಹಾಸನದ ಮೇಲೆ ತನ್ನ ಹಕ್ಕು ಸಾಧಿಸುತ್ತಿದ್ದಾರೆ. ಆದರೆ ಅದರ ಮೇಲೆ ಅವರು ಕೂತದ್ದೇ ಅಪರೂಪ. ಇದಾರ್ ಎನ್ನುವಂಥದ್ದು ಗುಜರಾತ್ ಮತ್ತು ಮೇವಾಡಗಳ ನಡುವೆ ಸದಾ ಚಲಿಸುತ್ತಿರುವ ಚೆಂಡು. ಕೆಲವು ಕಾಲ ಅದು ನಮ್ಮ ಬಳಿ ಇದ್ದರೆ, ಇನ್ನು ಕೆಲವು ಕಾಲ ಗುಜರಾತ್ ಬಳಿ ಇರುತ್ತದೆ. ಇದಾರ್ ಅಷ್ಟೇಕೆ ಚಂಚಲ ಮತ್ತು ಅಸ್ಥಿರವೆನಿಸಿತು?

ನೀವು ಸ್ವಲ್ಪ ಹಿಂದಕ್ಕೆ, ರಾಜಕುಮಾರ ಬಹಾದುರ್‌ನ ಮುತ್ತಾತ ಸುಲ್ತಾನ್ ಮೊಹಮ್ಮದ್ ಆಳುತ್ತಿದ್ದ ಕಾಲಕ್ಕೆ ಹೋಗಬೇಕು. ಇದಾರ್ ಕೆಲವು ಕಾಲ ಗುಜರಾತಿನ ಪಶ್ಚಿಮದ ಗುಡ್ಡಗಾಡು ಪ್ರದೇಶದಲ್ಲಿ ಒಂದು ಮುಳ್ಳಾಗಿತ್ತು. ಜೊತೆಗೆ ಅದರ ಯಾವುದೇ ನಿರ್ದಿಷ್ಟವಾದ ಕಪ್ಪ ಕಾಣಿಕೆಯೊಂದಿಗೆ ಮುಂದೆ ಬರುತ್ತಿರಲಿಲ್ಲ. ಇದಾರ್‌ನ ಮುಖ್ಯಸ್ಥನಾಗಿದ್ದ ಹರ್‌ರಾವ್ ಎಂಬುವನು ತಾನಿನ್ನೇನಾದರೂ ಅನಿಶ್ಚಯತೆ ತೋರಿದರೆ, ಸುಲ್ತಾನ್ ಮೊಹಮ್ಮದ್ ಇದಾರ್ ಅನ್ನು ಸಂಪೂರ್ಣವಾಗಿ ಕಸಿದುಕೊಂಡು ಬಿಡಬಹುದೆಂದು ಗ್ರಹಿಸಿದಾಗ, ವಿಷಯ ಸ್ವಲ್ಪ ನಾಜೂಕಿನದಾಯಿತು. ಆಗ ಅವನು ರಜಪೂತ ದೊರೆಗೆ ಅತ್ಯಂತ ಅಸಹಜವೆನ್ನಬಹುದಾದ್ದನ್ನು ಮಾಡಿದನು. ಸುಲ್ತಾನನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವ ಮೂಲಕ ಈ ಸಮಸ್ಯೆಯಿಂದ ಪಾರಾಗುವ ದಾರಿಯನ್ನು ಕಂಡುಕೊಂಡನು.

ವೈವಾಹಿಕ ಸಂಬಂಧವು ಇದಾರ್‌ಗೆ ಕೆಲವು ತಲೆಮಾರುಗಳವರೆಗೆ ಅಂದರೆ ರೈಮಲ್‌ರಾವ್ ಇದಾರ್‌ನ ದೊರೆಯಾಗುವವರೆಗೂ ನೆಮ್ಮದಿಯನ್ನು ತಂದುಕೊಟ್ಟಿತು. ಅವನು ಸಿಂಹಾಸನಕ್ಕೆ ಬಂದ ಕೂಡಲೇ ಯುವ ರೈಮಲ್ ರಾವ್‌ನನ್ನು ಅವನ ಚಿಕ್ಕಪ್ಪ ಭೀಮ್ ರೈಮಲ್ ಪದಚ್ಯುತಗೊಳಿಸಿದ್ದರಿಂದ, ಅವನು ಚಿತ್ತೂರಿನಲ್ಲಿ ಆಶ್ರಯ ಪಡೆದು ನನ್ನ ತಂಗಿಯನ್ನು ಮದುವೆಯಾದನು.

ಈ ಮಧ್ಯೆ ರಾವ್ ಭೀಮ್, ಗುಜರಾತ್‌ನೊಂದಿಗೆ ಸಂಘರ್ಷದ ಹಾದಿಯನ್ನು ಹಿಡಿದನು. ಗುಜರಾತ್ ಸುಲ್ತಾನನಿಗೆ ಕಪ್ಪ ಕಾಣಿಕೆಕೊಡುವುದನ್ನು ನಿಲ್ಲಿಸಿದನು. ಬಂಡಾಯದ ಮಟ್ಟವನ್ನು ಹೆಚ್ಚಿಸಿದನು. ಸಬರಮತಿ ನದಿಯ, ಪೂರ್ವಕ್ಕಿದ್ದ ಗುಜರಾತ್ ಪ್ರದೇಶವನ್ನು ಕೊಳ್ಳೆ ಹೊಡೆದನು. ಅದೇನಂಥ ವಿವೇಕದ ಹೆಜ್ಜೆಯಲ್ಲ. ಬಹಾದುರನ ತಂದೆ ಎರಡನೇ ಮುಜಾಫರ್ ಈಗ ಗುಜರಾತಿನ ಸುಲ್ತಾನನಾಗಿದ್ದನು.

ಮುಜಾಫರ್‌ನ ಕೋಪವೆಂಬ ಹರಿತ ಖಡ್ಗ, ಇದಾರ್‌ನ ಮೇಲೆ, ಅದು ಸಪೂರವಾಗಿ ಎತ್ತರಕ್ಕೆ ಬೆಳೆದು ನಿಂತ ಹುಲ್ಲೋ ಎಂಬಂತೆ ಎರಗಿತು. ಗುಜರಾತಿನ ಪಡೆಗಳು ಇದಾರ್‌ನ ರಾಜಧಾನಿಯನ್ನು ಸೂರೆ ಮಾಡಿದುವು. ಸಣ್ಣ ಪುಟ್ಟ ದೇವಾಲಯಗಳನ್ನು ಕಟ್ಟಡಗಳನ್ನು ಕೊಳ್ಳೆ ಹೊಡೆದುವು. ಇಡೀ ನಾಡನ್ನೇ ಧ್ವಂಸ ಮಾಡಿದುವು. ರಾವ್ ಭೀಮ್ ತನ್ನ ಅಲ್ಪ ಸಾಹಸಕ್ಕೆ ಭಾರೀ ಬೆಲೆಯನ್ನು ತೆತ್ತನು. ಸುಲ್ತಾನ್ ಮುಜಾಫರ್‌ನನ್ನು ಸಂತೃಪ್ತಗೊಳಿಸಲು ಇಪ್ಪತ್ತು ಲಕ್ಷ ವರಹಗಳು ಮತ್ತು ಒಂದು ನೂರು ಆನೆಗಳನ್ನು ಕೊಡಬೇಕಾಗಿ ಬಂತು.

ಎರಡು ವರ್ಷಗಳ ನಂತರ ರಾವ್ ಭೀಮ್ ಮೃತನಾದ. ಅವನ ಮಗ ಭರ್‌ಮಲ್ ಸಿಂಹಾಸನವನ್ನೇರಿದ. ಸಂಗತಿ ಒಂದು ಸುತ್ತು ಬಂದಂತಾಯಿತು. ದೇಶ ಭ್ರಷ್ಟನಾಗಿದ್ದ ರೈಮಲ್ ಭರಮಲ್‌ನ ಉತ್ತರಾಧಿಕಾರವನ್ನು ವಿರೋಧಿಸಿದನು. ನಮ್ಮ ತಂದೆಯವರು ಅಳಿಯನ ಬೆಂಬಲಕ್ಕೆ ಬಲವಾದ ಸೈನ್ಯವನ್ನು ಕಳಿಸಿಕೊಟ್ಟಾಗ, ಭರ್ಮಲ್ ಇದಾರ್‌ಗೆ ಮಣ್ಣು ಮುಕ್ಕಿಸಿದ್ದ ಗುಜರಾತ್ ಸುಲ್ತಾನನ ಮೊರೆಹೊಕ್ಕನು. ನಾವು ಗುಜರಾತ್‌ನ ಈ ಕಲಹದಲ್ಲಿ ಸಿಕ್ಕಿಕೊಂಡ ಸಂಕ್ಷಿಪ್ತ ಕಥೆ ಇದು.

ನಾವು ಬಹಳಷ್ಟು ದಿನಗಳು ಕಷ್ಟದಿಂದ ಕುದುರೆಯ ಬೆನ್ನೇರಿ ಸಾಗಿ ಅಂತಿಮವಾಗಿ ಗಡಿಯಲ್ಲಿದ್ದೆವು. ಆಹಾರ ಪದಾರ್ಥಗಳು, ನೀರು ಸೇರಿದಂತೆ, ಬಹಾದುರ್‌ನ ಅಗತ್ಯಗಳನ್ನೆಲ್ಲ, ಬೇರೆ ಏನೇನು ಕೇಳಿದರೆ ಅದೆಲ್ಲವನ್ನೂ ಪೂರೈಸುವಂತೆ ಮಂಗಳನಿಗೆ ತಿಳಿಸಿದ್ದೆ. ಜೊತೆಗೆ ಅವನನ್ನು ಮತ್ತು ಅವನ ಸ್ನೇಹಿತರನ್ನು ಬಿಟ್ಟು ಬಿಡಲೂ ತಿಳಿಸಿದ್ದೆ. ರಾಜಕುಮಾರ

ಬಹಾದುರ್, ತನ್ನ ಮನವಿ ಸಲ್ಲಿಸಲು ಕಿಂಚಿತ್ ಕಾಲಾವಕಾಶ ನೀಡುವ ಕೃಪೆ ಮಾಡಲು ಮಹಾರಾಜ್ ಕುಮಾರ್ ಅವರಿಗೆ ಸಾಧ್ಯವೆ ಎಂಬ ಸಂದೇಶವನ್ನು ಹೊತ್ತು ಹಿಂತಿರುಗಿದನು.

"ತಾನು ಮಾಡಿದ ಕೃತ್ಯಗಳಿಗೆ ಪಶ್ಚಾತ್ತಾಪ ಪಡುವುದು ರಾಜವಂಶದಲ್ಲಿ ಉದಯಿಸಿದ ರಾಜಕುಮಾರನಿಗೆ ಶೋಭಿಸುವುದಿಲ್ಲ. ನಾನು ಇನ್ನು ಮುಂದೆ ನಿಮ್ಮನ್ನು ಮಿತ್ರನಾಗಿ ಹೊಂದಿರಲಾರದ್ದಕ್ಕೆ ಕ್ಷಮೆ ಇರಲಿ. ನಾನು ಎಂದೂ ಕಲ್ಪಿಸಿಕೊಳ್ಳಲು ಕೂಡಾ ಸಾಧ್ಯವಿಲ್ಲದಂಥ ಆತಿಥೇಯರಾಗಿದ್ದಿರಿ ತಾವು. ಎರಡು ಸಲ ತಾವು ನನ್ನ ಜೀವವುಳಿಸಿದ ಋಣ ನನ್ನ ಮೇಲಿದೆ. ಅದು ನಾನು ಎಂದೆಂದೂ ತೀರಿಸಲಾರದ ಋಣ. ನಾನಾಗಲಿ, ಬೇರೆ ಯಾರೇ ಆಗಲಿ ನಿಮ್ಮಿಂದ ಕಲಿಯುವುದು ತುಂಬ ಇದೆ. ನಾನು ಕುರುಡನಲ್ಲ, ಮಹಾಸ್ವಾಮಿಯವರೆ. ನಾನು ತಿಳಿದಿರುವ ಅತ್ಯಂತ ಏಕಾಂಗಿ ವ್ಯಕ್ತಿ ನೀವು. ನಿಮ್ಮ ವೈಯಕ್ತಿಕ ಸಂಗತಿಗಳು ನಿಮ್ಮ ವೃತ್ತಿ ಬದುಕನ್ನು ಬಾಧಿಸಲು ಅವಕಾಶ ನೀಡುವುದಿಲ್ಲವಾದ್ದರಿಂದ ಯಾವುದೇ ಅಪನಿಂದೆ ಅಥವಾ ಅಪಹಾಸ್ಯ ನಿಮ್ಮನ್ನು ಮುಟ್ಟಲಾರವು. ಎರಡನೆಯದಾದ ಗೇಲಿಗೆ ಸಂಬಂಧಿಸಿದಂತೆ ನಾನು ತಮ್ಮನ್ನು ತುಂಬಾ ಗೌರವಿಸುತ್ತೇನೆ. ಜನಪ್ರಿಯವಲ್ಲದ ಕ್ರಮಗಳನ್ನು ಒಪ್ಪಿಕೊಳ್ಳುವಂತೆ ಮಾಡುವ ರೀತಿ ನಿಮಗೆ ತಿಳಿಯದೆ ಇರುವುಧರಿಂದ ನೀವು ಸಿಂಹಾಸನವೇರುವ ಸಂದರ್ಭ ಬಂದಾಗ, ತಾವು ಜನಪ್ರಿಯ ಅರಸರಾಗುತ್ತೀರೋ ಹೇಗೆ ಎಂದು ನನಗೆ ಸಂದೇಹವಿದೆ.

ಹೊಲಸನ್ನು ದೂರ ಸಾಗಿಸುವ ಚರಂಡಿ ಕೊಳವೆಗಳು ರಾಜಕುಮಾರನೊಬ್ಬನ ಗಮನವನ್ನು ಸೆಳೆಯಲರ್ಹವಾದ ವಿಷಯ ಎಂಬುದನ್ನು ನನಗೆ ನೀವು ಕಲಿಸಿಕೊಟ್ಟಿದ್ದೀರಿ. 'ಮಲ' ನಿಮ್ಮ ಪ್ರಮುಖ ಅಂಶ ಎಂದು ಜನ ಹೇಳುತ್ತಾರೆ. ದೂರ ಭವಿಷ್ಯದಲ್ಲಿ ಮುಂದೆಂದಾದರೂ ನಾನು ರಾಜಸಿಂಹಾಸನವೇರಿದ್ದೇ ಆದರೆ, ನನ್ನ ಪ್ರಜೆಗಳು ನನ್ನನ್ನು ಅದೇ ರೀತಿ ಕರೆದರೆ ಅದನ್ನು ನಾನು ಪ್ರಶಂಸೆ ಎಂದು ಪರಿಗಣಿಸುತ್ತೇನೆ. ನಿಮ್ಮನ್ನು ಮತ್ತೆಯೂ ಪೇಚಿಗೆ ಸಿಕ್ಕಿಸುವುದಿಲ್ಲ. ಇಷ್ಟು ವರ್ಷಗಳು ನಾನು ಹಣವೆನ್ನುವುದು ರಾಜರ ಹಕ್ಕು ಮತ್ತು ಅದನ್ನು ಖರ್ಚು ಮಾಡುವುದು ಅವನ ಕರ್ತವ್ಯವೆಂದು ನಂಬಿದ್ದೆ. ಯಾರೇ ಆಗಲಿ ಪ್ರಭುವಾಗಬೇಕೆಂದರೆ ಹಣದ ಮೇಲೆ ಪ್ರಭುತ್ವ ಸಾಧಿಸಬೇಕಾಗುತ್ತದೆಂದು ಈಗ ನನಗೆ ಗೊತ್ತಾಗಿದೆ. ಯುದ್ಧ ಮತ್ತು ವಿಜಯಕ್ಕಿಂತ ಅರ್ಥಶಾಸ್ತ್ರ ಮತ್ತು ವಾಣಿಜ್ಯ ಶಾಸ್ತ್ರಗಳು ಹೆಚ್ಚು ಪ್ರಮುಖವಾದುವು ಎಂದು ನೀವು ನನಗೆ ಕಲಿಸಿಕೊಟ್ಟಿದ್ದೀರಿ.

ಈ ಸೈನಿಕ ಕಾರ್ಯಾಚರಣೆಯಲ್ಲಿ ನಿಮಗೆ ನಾನು ಶುಭ ಕೋರುವುದಿಲ್ಲ. ಆದರೆ ದೇವರು ನಿಮ್ಮನ್ನು ಕಾಪಾಡಲಿ ಹಾಗೂ ದೇವರು ನಿಮ್ಮೊಂದಿಗಿರಲಿ. ಖುದಾ ಹಾಫಿಜ್"

"ಎಲ್ಲಿಗೆ ಹೋಗುತ್ತೀರಿ ರಾಜಕುಮಾರರೆ?"

"ನನ್ನ ಸೋದರ ಸಿಕಂದರ್ ನನ್ನ ತಲೆಗೆ ಕಾದು ಕೂತಿದ್ದಾನೆ. ಈಗ ಅದನ್ನು ನಾನು ನನ್ನ ಭುಜಗಳ ಮೇಲೆ ನಿಲ್ಲಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ನಾನು ದೆಹಲಿಗೆ ಧಾವಿಸುತ್ತಿದ್ದೇನೆ ಘನತೆವೆತ್ತ ಮಹಾಸ್ವಾಮಿ"

"ನಮಸ್ಕಾರ, ಗುಜರಾತ್‌ನೊಂದಿಗೆ ಶಾಂತಿ ಸಂಧಾನ ಮಾಡಿಕೊಳ್ಳುವುದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೆ."

"ಈಗಲೂ ತಾವು ಹಾಗೆಯೇ ಪರಿಗಣಿಸಿದ್ದೀರೆಂದು ನನಗೆ ಗೊತ್ತಿದೆ. ಆದರೆ ಅದನ್ನು ಅರ್ಥಮಾಡಿಕೊಳ್ಳಲು ನಾನು ಬಹಳ ಕಾಲ ತೆಗೆದುಕೊಂಡೆ."

* * *

ಇನ್ನು ಅಪ್ಪ. ಅವರ ಮೊದಲ ಉದ್ಯೋಗ ಸಂದರ್ಶನದ ಸಂದರ್ಭದಲ್ಲಿ ನಾನು ತೀರ ದಡ್ಡನೆಂದೇಕೆ ನನಗೆ ಅನಿಸುತ್ತಿದೆ? ಬಹುಶಃ ಅವರು ಮಹಾರಾಜ ಮತ್ತು

ಉದ್ಯೋಗದಾತರಂತೆ ವರ್ತಿಸುತ್ತ ಅವರ ಅಸ್ತವ್ಯಸ್ತವಾದ ಶಿಬಿರದ ನಿರೀಕ್ಷಣಾ ಕೊಠಡಿಯಲ್ಲಿ ಕಳೆದ ಹದಿನೈದು ನಿಮಿಷಗಳಿಂದ ನನ್ನನ್ನು ಕಾಯಿಸುತ್ತಿರುವುದೇ ಇದ್ದೀತು. ಅದೊಂದು ಅನುಕೂಲಕರವಾದ ತಂತ್ರ. ಇದು ಕೆಳಗಿನವನನ್ನು ನರಕದಲ್ಲೆಂಬಷ್ಟು ಉದ್ವಿಗ್ನಗೊಳಿಸುತ್ತದೆ. ಅವನ ಮನಸ್ಸು ಕೋಪೋದ್ರಿಕ್ತಗೊಳ್ಳುತ್ತದೆ ಮತ್ತು ಅವನ ಬುದ್ಧಿ ಅಸ್ವಸ್ಥಗೊಳ್ಳುತ್ತದೆ.

ತಂದೆಯವರಿಗೆ ನನ್ನ ಬಗ್ಗೆ ಅಸಮಾಧಾನವೆ? ಈ ಮಹಾನ್ ವ್ಯಕ್ತಿಯನ್ನು ಉದ್ವಿಗ್ನಗೊಳಿಸುವಂಥದ್ದೇನನ್ನಾದರೂ ಹೇಳಿದೆನೆ? ಈ ಇಪ್ಪತ್ತೇಳು, ಮೂವತ್ತು ಅಥವಾ ನೂರು ವರ್ಷಗಳಲ್ಲಿ ನನ್ನ ಯಾವುದಾದರೂ ಕೃತ್ಯದಿಂದ ಅವರಿಗೆ ಅಪಚಾರವುಂಟು ಮಾಡಿದ್ದೇನೆಯೆ? (ಅಥವಾ ಪ್ರಾಯಶಃ ನಾನಿನ್ನೂ ತಾಯ ಗರ್ಭದಲ್ಲಿರುವಾಗಲೇ ಅವರ ಹಗೆತನಕ್ಕೆ ಒಳಗಾಗಿರಬೇಕು.) ನನ್ನ ಬೆನ್ನ ಹಿಂದೆ ಬಹುಶಃ ಯಾರೋ ನನ್ನ ಬಗ್ಗೆ ಅವರಿಗೆ ಕಿವಿ ತುಂಬಿರಬೇಕು. ಕಾವಲು ಸಿಪಾಯಿಯ ಕಣ್ಣುಗಳಲ್ಲಿ ಅದು ನನಗೆ ಕಾಣುತ್ತಾ ಇದೆ. ನಾನೊಬ್ಬ ಅಪ್ರಿಯ ವ್ಯಕ್ತಿ. ನಾನು ಎಲ್ಲರಿಗೂ ಬೇಡವಾದವನು.

ಅದು ಬಹಳ ಒಳ್ಳೆಯ ತಂತ್ರ. ಕಾಲವಲ್ಲದ ಕಾಲದಲ್ಲಿ ಕೂಡಿದ್ದರ ಫಲವಾಗಿ ಹುಟ್ಟಿದ ದುರಹಂಕಾರಿ ಮಗ ತನ್ನ ಸ್ವಯಂಕೃತಾಪರಾಧಕ್ಕೆ ತಾನೇ ಚಿಂತಿಸಿ ಒದ್ದಾಡಲಿ. ಈ ಹುಡುಗ ಮುಂಡೇವು ಅವರ ಹಿರಿಯರ ಆಸ್ತಿಯೂ ಸೇರಿದಂತೆ ಇಡೀ ಭೂಮಂಡಲವೇ ತಮ್ಮದೆಂದು ತಿಳಿಯುತ್ತಾರೆ. ಅವರು ಪೂರ್ತಿ ಕೈ ತಪ್ಪಿಹೋಗುವುದಕ್ಕಿಂತ ಮುಂಚೆ ಅವರ ಅಹಂಕಾರ ಇಳಿಸುವುದು ಒಳ್ಳೆಯದು. ಆದರೆ ಇಷ್ಟು ಹೊತ್ತಿಗೆ ನಾನು ನಿಜಕ್ಕೂ ಆತ್ಮವಿಶ್ವಾಸವನ್ನು ಗಳಿಸಿದ್ದೆ. ಕಲ್ಲೂ ಕರಗುವಂತೆ ಕರುಣಾಜನಕ ಮುಖ ಮಾಡುತ್ತ, ನೀವು ಯಾವತ್ತೂ ನನ್ನನ್ನು ಪ್ರೀತಿಸಲಿಲ್ಲ ಅಪ್ಪ. ನನ್ನ ಆತ್ಮವಿದ್ದ ಸ್ಥಳದಲ್ಲಿ ಈಗ ಶೂನ್ಯವಿದೆ ಮತ್ತು ಗಾಯದ ಕಲೆ ಉಳಿದಿದೆ ಎಂದುಕೊಂಡೆ:

ಆದರೆ ನನ್ನ ದಡ್ಡತನಗಳಾವುವೂ ಈ ಭೇಟಿಯ ಬಗೆಗಿನ ನನ್ನ ಆತಂಕ ತಳಮಳಗಳನ್ನು ಮರೆಮಾಡಲಾರವು. ಮಹಾರಾಜರ ಪ್ರತಿನಿಧಿಯಾಗಿ ನಾನು ಆಳ್ವಿಕೆ ನಡೆಸುತ್ತಿದ್ದಾಗ, ಅಷ್ಟೇನೂ ಭಾರೀ ಅದೃಷ್ಟದ ದಿನಗಳನ್ನು ಕಾಣಲಿಲ್ಲ. ಕಂಡಿದ್ದೆನೆ? ರಾಜಮನೆತನದ ರಾಜಕುಮಾರನೊಬ್ಬನೊಂದಿಗೆ ತಂದೆಯವರ ಸಾಕ್ಷಾತ್ ಪುತ್ರ ವಿಕ್ರಮಾದಿತ್ಯನು ನಂಬಿಕೆ ದ್ರೋಹ ಮಾಡುವುದೆಂದರೇನು? ಮತ್ತು ಈಗ ಬಹಾದುರ್ ಲಕ್ಷ್ಮಣ ಸಿಂಹಜೀಯವರ ಮಗ ರಾಜೇದ್ರನನ್ನು ಕೊಲ್ಲುವುದೆಂದರೇನು? ಲಕ್ಷ್ಮಣಸಿಂಹರು ತಂದೆಯವರ ಅತ್ಯಂತ ಆಪ್ತ ಸಹಚರ, ಅಂತರಂಗದ ವ್ಯಕ್ತಿ ಮತ್ತು ಅತ್ಯಂತ ಹಳೆಯ ಗೆಳೆಯ. ಇದೆಲ್ಲವೂ ನನ್ನ ಪಾಲಿಗೆ ಅಹಿತಕಾರಿಯೇ. ಆದರೆ ನಾನದನ್ನು ಎದುರಿಸಿ ನಿಲ್ಲಬಲ್ಲೆ. ಎಲ್ಲ ದಹನಕಾರಿ ವಸ್ತುಗಳ ಮಾತೃ ಸ್ವರೂಪಿ ರಾಣಿ ಕರ್ಮವತಿ ಎಂಬುವಳು ತಲೆ ಹಾಕುವವರೆಗೂ ಇದೆಲ್ಲವೂ ಕೇವಲ ಜಡ ಇಂಧನ. ನಾವು ಹೆಚ್ಚು ಕಡಿಮೆ ಎಲ್ಲೂ ನಿಲ್ಲದೆ ನಿರಂತರವಾಗಿ ಕುದುರೆ ಸವಾರಿ ಮಾಡಿ ಬಂದಿದ್ದೇವೆ. ರಾತ್ರಿ ಹೊತ್ತು ಕೇವಲ ಕೆಲವು ಗಂಟೆಗಳಷ್ಟು ಕಾಲ ಮಾತ್ರ ನಾವು ತಂಗಿದ್ದು, ಆಹಾರ ತೆಗೆದುಕೊಳ್ಳಲು ಮತ್ತು ಕುದುರೆಗಳು ಮೇಯಲನುಕೂಲವಾಗುವಷ್ಟು ಕಾಲ ಮಾತ್ರ ಪ್ರಯಾಣವನ್ನು ನಿಲ್ಲಿಸಿದ್ದೆವು. ರಾಜೇಂದ್ರನ ಕೊಲೆಯ ಸುದ್ದಿಯನ್ನು ನನ್ನ ಹೊರತು ಬೇರಾರೂ ಹೇಳಬಾರದೆಂದು ಪ್ರತಿಯೊಬ್ಬರನ್ನೂ ತಿವಿದು ಎಚ್ಚರಿಸಿದ್ದೇನೆ. ಆದರೆ ಅದೊಂದು ವ್ಯರ್ಥ ಪ್ರಯತ್ನ ಎಂದು ನನಗೆ ಗೊತ್ತು. ರಾಣಿ ಕರ್ಮವತಿಯ ಕಡೆಯ ವ್ಯಕ್ತಿಯೊಬ್ಬ ನಾನು ಬರುವುದಕ್ಕೆ ಮುಂಚೆಯೇ ಇಲ್ಲಿಗೆ ಬಂದು ತಂದೆಯವರಿಗೆ ಆ ಸುದ್ದಿಯನ್ನು ಈಗಾಗಲೇ ತಿಳಿಸಿದ್ದಾನೆ ಎಂದು ನಾನು ಬಾಜಿ ಕಟ್ಟುತ್ತೇನೆ.

ನನಗೆ ಒಳಗೆ ಬರಲು ಕರೆ ಬಂತು. ರಾಣಿ ಕರ್ಮವತಿಯ ಕಡೆಯ ವ್ಯಕ್ತಿಯ ಬಗ್ಗೆ ನಾನು ಅಂದುಕೊಂಡದ್ದು ಸರಿ ಇತ್ತು. ಆದರೆ ತಂದೆಯವರು ಉದ್ದೇಶ ಪೂರ್ವಕವಾಗಿಯೇ ನನ್ನನ್ನು ಕಾಯಿಸಿದ್ದರೆಂದು ನಾನು ಯೋಚಿಸಿದ್ದು ತಪ್ಪಾಗಿತ್ತು. ಅವರಿಗೆ ಇತ್ತೀಚೆಗೆ ಆಗಿದ್ದ ಗಾಯಗಳ ಪಟ್ಟಿಕಟ್ಟಿ ಉಪಚರಿಸುವ ಸಲುವಾಗಿ, ಶಸ್ತ್ರ ವೈದ್ಯರು ಅವರ ಜೊತೆಯೇ ಇರುತ್ತಿದ್ದಾರೆ. ಅವರು ಹೇಗೆ ತಾನೆ ನೀರಸ್ನಾಗಲಿ ರಕ್ತವನ್ನಾಗಲಿ, ಅಥವಾ ಇನ್ನಾವುದೇ ದ್ರವವನ್ನಾಗಲಿ, ಧಾರಣೆ ಮಾಡುತ್ತಾರೆ ಎಂಬುದೇ ನನಗೊಂದು ವಿಸ್ಮಯ. ದೇಹದ ಮೇಲೆಲ್ಲಾ ನೂರಾರು ಧಾರೆಗಳನ್ನು ಹರಿಸುತ್ತಿರುವ ಚಿಲುಮೆಯೇ ಇರಬೇಕು ಆವ್ಯಕ್ತಿ. ಎಲ್ಲದರ ಹೊಣೆಗಾರಿಕೆಯನ್ನು ಅವರೇಕೆ ಹೊರಬೇಕು ಎನ್ನುವುದನ್ನು ಯಾರು ಬೇಕಾದರೂ ಊಹಿಸಬಹುದು. ಅದು ಪ್ರತಿಷ್ಠೆಯೋ, ಅಧಿಕಾರದ ಬಗೆಗಿನ ವ್ಯಾಮೋಹವೋ ಮನೋವ್ಯಾಧಿಯೋ ಅಥವಾ ಭಯವೋ? ತಂದೆಯವರ ಬಗ್ಗೆ ಮಾತನಾಡುವ ಯಾರಿಗೇ ಆದರೂ ಹೊಳೆಯುವ ಅತ್ಯಂತ ಅಪರೂಪದ ಮತ್ತು ಅಂತಿಮ ಶಬ್ದವೆಂರೆ ಭಯ. ಆದರೆ ತಂದೆಯವರು, ಮೇವಾಡದ ಅಥವಾ ಭೂಮಂಡಲದ ಯಾವುದೇ ವ್ಯಕ್ತಿಯಂತಲ್ಲದೆ ಹೆದರುತ್ತಾರೆ. ಅವರ ಸೋದರರು ಚಾರಣಿ ದೇವಿಯ ದೇವಸ್ಥಾನದಲ್ಲಿ ಅವರನ್ನು ಬೆನ್ನಟ್ಟಿ ಬಂದ ದಿನದಿಂದ ಹೆದರುತ್ತಲೇ ಇದ್ದಾರೆ. ಅವರ ಕಣ್ಣು ಅವರ ಕಣ್ಣ ಗುಡ್ಡೆಯಿಂದ, ರಾಮಫಲದ ಒಳಗಿನ ತಿರುಳು ಮತ್ತು ಬೀಜದ ಹಾಗೆ ಕಳಚಿ ನೇತಾಡುತ್ತಿದ್ದಾಗ ಅವರು ದೃಢ ನಿರ್ಧಾರ ತೆಗೆದುಕೊಂಡು ತಮ್ಮಂದಿರೊಂದಿಗೆ ನಿಂತು ಹೋರಾಡಲಿಲ್ಲವೆಂಬ ಕಾರಣಕ್ಕೆ ತಮ್ಮನ್ನು ಯಾರಾದರೂ ಹೇಡಿ ಎಂದು ಕರೆದಾರೆಂದು ಹೆದರಿಕೆ. ಅವರ ಹೃದಯದಾಳದಲ್ಲೆಲ್ಲೋ ಒಂದು ಕಡೆ ರಜಪೂತರ ಕೆಚ್ಚು ಮತ್ತು ಆತ್ಮಗೌರವದ ಪರಂಪರೆಯನ್ನು ಮೆಚ್ಚುತ್ತಾರೆ. ತಾನು ತೀರಾ ಕಲಂಕವಿಲ್ಲದ ಸಾವನ್ನು ಸಾಯುತ್ತಿಲ್ಲವೆಂದು ಅವರಿಗೆ ಸಿಗ್ಗು.

ಅಂತೂ ಕೊನೆಗೊಮ್ಮೆ ನಾವಿಬ್ಬರೂ ಮುಖಾ ಮುಖಿಯಾದೆವು ಅವರು ಮುಜುಗರ ಪಡುವ ರೀತಿಯಲ್ಲಿ ಲಘುವಾಗಿ ಅಪ್ಪಿಕೊಂಡರು. ಒಲ್ಲದ ಮನಸ್ಸಿನಿಂದ ಎಂದು ಹೇಳ ಹೊರಟಿದ್ದೆ. ಆದರೆ ಅದು ಸರಿಯಲ್ಲ. ತಂದೆ ಮತ್ತು ಮಗನನ್ನು ಒಟ್ಟಿಗೆ ಸೇರಿಸಿರುವುದೇ ಈ ಮುಜುಗರವೆನ್ನುವುದು. ನನ್ನೊಂದಿಗಿದ್ದಾಗ ಅವರು ಮುಜುಗರ ಪಡುವುದಕ್ಕಿಂತ ಹೆಚ್ಚು ಅವರೊಂದಿಗಿದ್ದಾಗ ನಾನು ಮುಜುಗರಪಡುತ್ತೇನೆ. ಅವರನ್ನು ನಾನು ತುಂಬ ಪ್ರೀತಿಸುತ್ತೇನೆ. ಆದರೆ ಅದನ್ನು ಹೇಗೆ ವ್ಯಕ್ತಪಡಿಸಬೇಕೆಂದು ತಿಳಿಯದೆ ಅವರ ಬಗ್ಗೆ ಎಲ್ಲ ಥರದ ಜಾಣ್ನುಡಿಗಳನ್ನು ನಾನೇ ಹೇಳಿಕೊಳ್ಳುತ್ತೇನೆ. ಅವರ ಅನುಪಸ್ಥಿತಿಯಲ್ಲಿ ನಾನು ತೆಗೆದುಕೊಂಡ ಪ್ರಮುಖ ಕ್ರಮಗಳು ಮತ್ತು ನನ್ನ ಕೈಮೀರಿ ಹೋದ ಸಂದರ್ಭಗಳ ಸಂಕ್ಷಿಪ್ತ ಮತ್ತು ಸ್ಪಷ್ಟ ವಿವರಣೆ ನೀಡಿದೆ. ಅಸಂತೋಷಕರವಾದ ತುಣುಕುಗಳನ್ನು ನಾನು ತುಂಡರಿಸುವುದಿಲ್ಲ. ಅಥವ ಅವುಗಳಲ್ಲೇ ಓಲಾಡಿ ಖುಷಿಪಡುವುದೂ ಇಲ್ಲ. ಅವರು ಅದನ್ನೆಲ್ಲಾ ನಿರ್ಭಾವುಕವಾಗಿ ಆಲಿಸುತ್ತಾರೆ. ಆದರೆ ಸಿಟ್ಟು ಬರಿಸುವ ರೀತಿಯಲ್ಲಾಗಲಿ, ದ್ವೇಷದಿಂದಾಗಲಿ ಅಲ್ಲ. ಅದರ ಕೊನೆಗೆ ನಾನು ವಿವೇಕಿಯಾಗಿಯೂ ಉಳಿಯಲಿಲ್ಲ. ಆದರೆ ಅವರು ವಿವೇಕಿಯಾಗಿದ್ದರೆಂದು ನನ್ನೆಣಿಕೆ. ಅವರು ಅದನ್ನು ಅನುಮೋದಿಸಿದರೆ, ಅನುಮೋದಿಸಲಿಲ್ಲವೆ ಅಥವಾ ಅಲಕ್ಷ್ಯ ಮಾಡಿದರೆ? ನಾನು ಜವಾಬ್ದಾರಿಯುತವಾಗಿ ನಡೆದುಕೊಂಡೆನೆ? ನನ್ನ ಪರಿಸ್ಥಿತಿಯಲ್ಲಿ ಅವರು ಇದ್ದಿದ್ದರೆ, ಹೇಗೆ ಪ್ರತಿಕ್ರಿಯಿಸುತ್ತಿದ್ದರು? ಹಾಗಾದರೆ ಈಗ ಏನು ಮಾಡಬೇಕು? ಈಗ ನಾನು ಅತ್ಯಂತ ತುರ್ತಾಗಿ, ಇದೇ ರೀತಿಯ ಇನ್ನೂ ಸಾವಿರಾರು ಪ್ರಶ್ನೆಗಳಿಗೆ ಯಾವುದಕ್ಕೂ ಲೆಕ್ಕಿಸದೆ ಉತ್ತರಿಸಬೇಕಾಗಿದೆ.

ಈಗಾಗಲಿ, ಇನ್ನೆಂದಾದರಾಗಲಿ ಅವರು ನನ್ನನ್ನು ಸುಮ್ಮನೆ ಹೋಗ ಗೊಡುವುದಿಲ್ಲ. ಅವರು ನನ್ನನ್ನು ಸಿರಾಶೆಗೊಳಿಸುವುದಿಲ್ಲ. ವಿಕ್ರಮಾದಿತ್ಯನ. ವಿಷಯ ಏನು? ಅವನ ವಿಷಯಕ್ಕೆ ಅವರ ಯೋಜನೆಗಳೇನು?. ಇಲ್ಲೂ ನಾನು ಅವರ ಹೂಟಗಳೇನೆಂದು ಊಹಿಸಬಹುದು. ಅವರು ಅತ್ಯಂತ ಗುಟ್ಟಾಗಿ ತಮ್ಮ ತಂತ್ರಗಳನ್ನು ಹೂಡುತ್ತಾರೆ. ಮೇವಾಡದ ಉಳಿದ ಜನತೆ ಅದನ್ನು ಪತ್ತೆ ಹಚ್ಚಿದ ಮೇಲಷ್ಟೇ ನಾನು ಅವರ ಮನಸ್ಸು ಮತ್ತು ನಡೆಯನ್ನು ಅರಿಯಬಹುದು.

"ಈ ಕಾರ್ಯಾಚರಣೆಯ ಸಂದರ್ಭದಲ್ಲಿ ನಾವು ತಿಂಗಳುಗಟ್ಟಲೆ ದೂರ ಇದ್ದೆವು. ಒಂದೆರಡು ಸಂದರ್ಭಗಳಲ್ಲಿ ಗುಜರಾತಿನ ಪಡೆಗಳಿಗೆ ನಾವು ಹೊಡೆತ ಕೊಟ್ಟಿದ್ದೇವೆ. ಎಷ್ಟರ ಮಟ್ಟಿನ ಪರಿಣಾಮವಾಯಿತು? ಮುಜಾಫರ್‌ಷಾ ತನ್ನ ಸೇನೆಯ ಮುಖಂಡತ್ವವನ್ನು ಒಬ್ಬ ಸೇನಾಧಿಪತಿಯಿಂದ ಇನ್ನೊಬ್ಬ ಸೇನಾಧಿಪತಿಗೆ ಬದಲಾಯಿಸಿದ್ದಾನೆ. ಅಲ್ಲದೆ ನಮ್ಮ ಅಳಿಯ ರಾವ್ ರೈಮಲ್ ಅವರ ನೈತಿಕ ಸ್ಥೈರ್ಯ ನಿಜಕ್ಕೂ ಒಂದು ಹೊಸ ತಿರುವನ್ನು ಪಡೆದುಕೊಂಡಿರುವುದೊಂದು ಒಳ್ಳೆಯ ಬೆಳವಣಿಗೆ. ಅದರ ವಿಷಯ ಇದು. ನಾವು ಶಾಶ್ವತವಾಗಿ ಇಲ್ಲೇ ಇರಲು ಸಾಧ್ಯವಿಲ್ಲ. ಅಥವಾ ನಮ್ಮ ಪಡೆಗಳನ್ನು ಇಲ್ಲೇ ಖಾಯಂ ಆಗಿ ನಿಯೋಜಿಸಲೂ ಸಾಧ್ಯವಿಲ್ಲ. ನನಗೊಂದು ತೀರ್ಮಾನ ಬೇಕಾಗಿದೆ. ನಿನ್ನಲ್ಲಿ ಹೊಸ ಹೊಸ ಯೋಚನೆಗಳಿವೆ. ಮಗೂ ನಮಗೊಂದು ನಿರ್ಣಾಯಕವಾದ ಗೆಲುವನ್ನು ತಂದುಕೊಡು. ಇದಾರ್ ಅದರ ನ್ಯಾಯ ಸಮ್ಮತ ಒಡೆಯನಿಗೆ ಮರಳಿ ಹೋಗಲಿ. ಮತ್ತು ಇನ್ನಿತರೆ ಜರೂರಾದ ವಿಷಯಗಳತ್ತ ಗಮನಹರಿಸೋಣ".

ನಾನು ಮಾತಾಡಲಿಲ್ಲ. "ನೀನು ನಮ್ಮ ನೀರಿನ ಮತ್ತು ಒಳಚರಂಡಿ ಯೋಜನೆಗಳ ಬಗ್ಗೆ ಮಾಡುತ್ತಿರುವಂಥ ಕೆಲಸ ನನಗೆ ತುಂಬ ಇಷ್ಟವಾಗಿದೆ. ನಾನು ಇಲ್ಲಿಂದ ಹಿಂತಿರುಗಿದ ಮೇಲೆ, ಯೋಜನೆಗಳನ್ನು ಅಧ್ಯಯನ ಮಾಡುತ್ತೇನೆ. ಅನಂತರ ನಾನು ನೀನು ಇಬ್ಬರೂ ಸೇರಿ ಒಂದು ತೀರ್ಮಾನ ತೆಗೆದುಕೊಳ್ಳೋಣ. ಒಂದು ನಿರ್ಣಾಯಕವಾದ ವಿಜಯದ ಬಗ್ಗೆ ನಿನಗೆ ಅಭ್ಯಂತರವಿದೆಯೆ?" ನನಗೆ ಇನ್ನೂ ಚೆನ್ನಾಗಿ ಗೊತ್ತಾಗಬೇಕಾಗಿತ್ತು. ನನ್ನನ್ನು ಇಕ್ಕಟ್ಟಿಗೆ ಸಿಕ್ಕು ಹಾಕಿಸಲೆಂದೇ ನನ್ನ ಗಮನವನ್ನು ಬೇರೆ ಕಡೆಗೆ ತಿರುಗಿಸಿದ್ದರೆ? ನಾನು ಒಂದು ಶಬ್ದವನ್ನೂ ಹೇಳಿರಲಿಲ್ಲ. ಆದರೆ ಅವರು ನನ್ನ ಮೌನವನ್ನು ಸರಿಯಾಗಿಯೇ ಅರ್ಥೈಸಿದ್ದರು. ಈಗ ನಯವಾಗಿ ಮಾತಾಡುವುದರಲ್ಲೇನೂ ಅರ್ಥವಿಲ್ಲ.

"ನಾನು ಮುಚ್ಚು ಮರೆ ಇಲ್ಲದೆ ನೇರವಾಗಿ ಮಾತಾಡಲೇ ಅಪ್ಪ?"

"ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಆಗುವುದೇ ಇಲ್ಲ ಎನ್ನುವುದಕ್ಕೆ ಮುಂಚೆನೇ ನೀನು ಈಗಲೇ ಖಡಾಖಂಡಿತವಾಗಿ ಮಾತನಾಡುವುದು ಒಳ್ಳೆಯದು".

"ತಾವು ಇದಾರ್ ಬಗ್ಗೆ ನಿರ್ಣಯಕ್ಕೆ ಬರಬೇಕೆಂದಾದಲ್ಲಿ ತಾವು ಮೊದಲು ಗುಜರಾತ್ ಜೊತೆ ಸೆಣಸಬೇಕಾಗುತ್ತೆ"

"ಅಂದರೆ ನೀನು ಹೇಳ್ತಿರೋದು ಗುಜರಾತ್ ಜೊತೆ ನಾವು ಯುದ್ಧ ಮಾಡಬೇಕು"

"ಹಾಗಲ್ಲ ಅಪ್ಪ. ನನಗೆ ಅನ್ನಿಸಿದ್ದನ್ನು ಹೇಳಿದೆ. ಅನೇಕ ವರ್ಷಗಳಿಂದ ನಾವು ಗುಜರಾತ್ ಜೊತೆ ಹೋರಾಡ್ತಾ ಇದ್ದೀವಿ. ಅದು ಎಲ್ಲಿಗೆ ಮುಟ್ಟಿಸಿದೆ?"

"ನೀನು ಇದರ ಬಗ್ಗೆ ಗಂಭೀರವಾಗಿದ್ದಿ. ಅಲ್ಲವೆ" ಅವರು ಅದನ್ನೊಂದು ಪ್ರಶ್ನೆಯ ರೀತಿ ಕೇಳಲಿಲ್ಲ.

"ಗುಜರಾತ್ ಮೇಲೆ ನಾವು ಆಕ್ರಮಣ ಮಾಡಬೇಕೆಂದು ನಾನು ಸೂಚಿಸುತ್ತಾ ಇಲ್ಲ, ಇದಾರ್ ಅನ್ನು ಶಾಶ್ವತವಾಗಿ ಪಡೆದುಕೊಳ್ಳಲು ಅಗತ್ಯವಾದ ಪೂರ್ವಭಾವಿ ಷರತ್ತನ್ನು ಸ್ಪಷ್ಟಪಡಿಸುತ್ತಿದ್ದೇನೆ ಅಷ್ಟೆ"

"ನೀನು ಹೇಳುವ ಮಾತನ್ನು ನಾನು ಒಪ್ಪಿದ್ದೇ ಆದರೆ, ನೀನು ಏನಂತ ಸಲಹೆ ಕೊಡುತ್ತೀಯಾ?"

"ನಾವು ನಮ್ಮ ಪೂರ್ವಸಿದ್ಧತೆಯನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಬೇಕು ಅಂತ ನನ್ನ ಸಲಹೆ. ಸದ್ಯದಲ್ಲಿ, ಎಷ್ಟೇ ಖರ್ಚಾಗಲಿ ಏನೇ ಆಗಲಿ ನಾವು ಗುಜರಾತ್ ವಿರುದ್ಧ ಜಯ ಸಾಧಿಸುತ್ತೇವೆ ಅಂತ ನಾನು ಭಾವಿಸಿಕೊಂಡಿದ್ದೇನೆ. ಆದರೆ, ಗುಜರಾತ್ ಅಷ್ಟೆಲ್ಲ ಕಷ್ಟನಷ್ಟಗಳು ಖರ್ಚುವೆಚ್ಚಗಳು ಮತ್ತು ಸಾವುನೋವುಗಳ ಬೆಲೆಬಾಳುತ್ತದೆಯೆ ಅಂತ? ಅಥವಾ ಎಲ್ಲವನ್ನು ಲೆಕ್ಕಕ್ಕೆ ತೆಗೆದುಕೊಂಡು, ಈಗಾಗಲೇ ಅತ್ಯಂತ ಅವನತಿ ಮತ್ತು ಕ್ಷೀಣ ಸ್ಥಿತಿಯಲ್ಲಿರುವ ದೆಹಲಿ ಸುಲ್ತಾನ ಶಾಹಿಯ ಮೇಲೆ ಆಕ್ರಮಣ ಮಾಡುವುದು ಕಡಿಮೆ ಖರ್ಚಿನ, ಹೆಚ್ಚು ಲಾಭದಾಯಕ ಮತ್ತು ಕಡಿಮೆ ಶ್ರಮದ್ದಾಗುತ್ತದೆಯೆ ಹೇಗೆ? ಅಥವಾ ನಾವು ನಮ್ಮ ರಾಜ್ಯದ ದಕ್ಷಿಣ ಮತ್ತು ನೈರುತ್ಯ ಭಾಗವನ್ನು ಗಮನಿಸುತ್ತಾ ಇಲ್ಲವೆ? ನಾನು ನಿಮಗೇ ತಿಳಿದಿರುವಂತೆ ನಮ್ಮ ನೆರೆಯ ಮಾಳ್ವದ ಮಹಮ್ಮದ್ ಖಾಲ್ಜಿಯ ಬಗ್ಗೆ ಹೇಳ್ತಾ ಇದ್ದೀನಿ. ಗುಜರಾತಿನ ಮುಜಾಫ಼ರ್ ಷಾ ತುಂಬ ಶಕ್ತಿಯುತ, ಕ್ರಿಯಾಶೀಲ ಮತ್ತು ಚಟುವಟಿಕೆಯಿಂದ ಕೂಡಿರುವ ದೊರೆ. ಮಹಮದ್ ಖಾಲ್ಜಿ ದುರ್ಬಲ, ಸದಾ ನಿಶ್ಚಯಕ್ಕೆ ಬರಲಾಗದೆ ಡೋಲಾಯಮಾನಸ್ಥಿತಿಯಲ್ಲಿರುವ, ತನ್ನ ವೈಯಕ್ತಿಕ ಧೈರ್ಯ ಸಾಹಸದಾಚೆಗೆ ಕಿಂಚಿತ್ತೂ ಇಲ್ಲದಿರುವ ವ್ಯಕ್ತಿ. ಅದೂ ಅಲ್ಲದೆ ಆತನಿಗೂ ಆತನ ಪ್ರಧಾನಿ ಮೇದಿನಿರಾಯ್‌ಗೂ ಇರುವ ವೈಯಕ್ತಿಕ ಭಿನ್ನಾಭಿಪ್ರಾಯಗಳ ಲಾಭ ಪಡೆದುಕೊಳ್ಳಬಹುದು.

"ಹಾಗಾದರೆ ಅವರ ಮೇಲೆ ಬೀಳಲು ಇದು ಸಕಾಲ ಅಂತ ನೀನು ಭಾವಿಸುತ್ತೀಯಾ?"

"ಇಲ್ಲ ಅಪ್ಪ. ನಿಮ್ಮ ನೇತೃತ್ವದಲ್ಲಿ, ರಜಪೂತರು ಮತ್ತು ಇನ್ನಿತರೆ, ಸಮಾನ ಮನಸ್ಕರ, ಒಂದು ಶಕ್ತಿಶಾಲಿಯೂ, ಅಭೇದ್ಯವೂ ಆದಂಥ ಒಂದು ಮೈತ್ರಿ ಕೂಟವನ್ನು ರಚಿಸಿಕೊಳ್ಳುವ ಹಂಚಿಕೆ ಹಾಕಿಕೊಳ್ಳಲು ಇದು ಸಕಾಲ. ಗುಜರಾತ್ ಸುಲ್ತಾನನು ಮಾಳ್ವದೊಂದಿಗೆ ಇದುವರೆಗೂ ಹೋರಾಟ ಮಾಡದೆ ಅದನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳದೆ ಇರುವ ಕಾರಣವೆಂದರೆ, ಅವರದು ಮುಸ್ಲಿಂ ಸಾಮ್ರಾಜ್ಯ. ನಾವು ಮಾಳ್ವದೊಂದಿಗೆ ಯುದ್ಧ ಮಾಡಬೇಕೆಂದರೆ ನಾವು ಅತ್ಯಂತ ಎಚ್ಚರಿಕೆಯಿಂದ ಮತ್ತು ಒಮ್ಮೆಗೇ ಮುನ್ನಡೆಯಬೇಕು. ಮಾಳ್ವದೊಂದಿಗೆ ಗುಜರಾತ್ ಕೈ ಜೋಡಿಸುವುದು ನಮಗೆ ಬೇಕಿಲ್ಲ"

"ಆಳವಾದ ಶಾಂತವಾದ ನೀರು ಹೇಗೆ ಹರಿಯುತ್ತೆ ಎನ್ನುವುದನ್ನು ನಾನು ಮರೆತು ಬಿಟ್ಟಿದ್ದೆ ಮಗು? ನಿನ್ನ ಮಹತ್ವಾಕಾಂಕ್ಷೆ ಅಷ್ಟೆಲ್ಲಾ ಸ್ಪಷ್ಟವಾಗಿ ದೀರ್ಘಕಾಲದ ಯೋಜನೆಯ ರೂಪವನ್ನು ಪಡೆದುಕೊಂಡಿದೆ ಎಂದು ನನಗೆ ತಿಳಿದಿರಲಿಲ್ಲ"

"ನಾವು ಮೊದಲಿಗೆ ಪ್ರಭುಗಳು ಅನಂತರ ಯೋಧರು. ಆದ್ದರಿಂದಲೇ ಮೊದಲಿಗೆ ನಮಗೊಂದು ಸರಿಯಾದ ಕಾಣ್ಕೆ ಇರಬೇಕು. ಅನಂತರ ಈ ಕಾಣ್ಕೆಯನ್ನು ವಾಸ್ತವಕ್ಕೆ ಪರಿವರ್ತಿಸಲು ಅಗತ್ಯವಾದ ಒಂದು ನೀತಿಬೇಕು. ಘನತೆವೆತ್ತ ಪ್ರಭುವೇ ನಾನು ಏನೇ ಮಹತ್ವಾಕಾಂಕ್ಷೆ ಹೊಂದಿದ್ದರೂ ಅದು ಮೇವಾಡದ ಸಲುವಾಗಿ"

ಅವರು ನನ್ನನ್ನು ನಂಬಿದರೆ?

"ಮೊದಲಿಗೆ ಇದಾರ್ ಅನ್ನು ಮರಳಿ ಪಡೆದುಕೋ. ಅಲ್ಲಿಂದ ಹಿಂತಿರುಗಿದ ಮೇಲೆ ಬಂದು ನನ್ನೊಂದಿಗೆ ಮಾತನಾಡು. ಆಗ ನಿನಗೆ ಇನ್ನಿತರೆ ಆಯ್ಕೆಗಳನ್ನು ಪರಿಗಣಿಸಲು

ಮತ್ತು ಶಿಫಾರಸುಗಳನ್ನು ಮಾಡಲು ಬೇಕಾದಷ್ಟು ಕಾಲಾವಕಾಶ ಇರುತ್ತದೆ" ಹಾಗೆ ಹೇಳಿ ಅವರು ಮೇಲೆದ್ದರು ಮತ್ತು ಆ ಅಲ್ಪ ಕಾಲದ ಭೇಟಿ ಮುಗಿಯಿತು. ನಾನು ಬಾಗಿ ಅವರ ಕಾಲು ಮುಟ್ಟಿದೆ. ಅವರ ಕೈ ನನ್ನ ತಲೆಯ ಮೇಲಾಡಿತು ಮತ್ತು ಒಂದು ವಿಧವಾದ ನಿರ್ವಿಶೇಷವಾದ ಭಾವದಲ್ಲಿ ತಲೆಗೂದಲನ್ನು ಸವರಿತು. 'ಏಕಲಿಂಗಜೀ ದೇವರ ಕೃಪೆ ನಿನ್ನ ಮೇಲಿರಲಿ ಎಂದು ಆಶೀರ್ವದಿಸಿದರು.

"ಗುಜರಾತಿನ ಸೈನ್ಯದ ಬಗ್ಗೆ ನಾನು ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಬೇಕಾದಂಥ ವಿಶೇಷವೇನಾದರೂ ಇದೆ ಅಂತ ತಾವು ಹೇಳ್ತೀರಾ?"

"ಅದರ ಬೀಗದ ಕೈ ಅದರ ಸೇನಾಧಿಪತಿ ಮಲಿಕ್ ಅಯಾಜ಼್. ಅವನು ಹುಟ್ಟಿನಿಂದ ರಷ್ಯನ್. ತುರ್ಕ ಸ್ಥಾನದವರು ಅವನನ್ನು ಜೀತದ ಆಳಾಗಿ ಮಾಡಿಕೊಂಡರು. ಅದರ ಪರಿಣಾಮವಾಗಿ ವ್ಯಾಪಾರಿಯೊಬ್ಬನ ರಕ್ಷಣೆಯಲ್ಲಿ ಅವನು ಬೆಳೆದ. ಆ ವ್ಯಾಪಾರಿ ಅವನನ್ನು ಬಹುಶಃ ಮುಜಾಫ಼ರ್‌ಷಾನ ತಾತನಿಗೆ ಬಳುವಳಿಯಾಗಿ ಕೊಟ್ಟ ಅಂದುಕೊಂಡಿದ್ದೀನಿ. ಅವನು ಜಾಣ, ಮಹತ್ವಾಕಾಂಕ್ಷಿ ಮತ್ತು ಅವನು ಹಿಂದೆ ನಡೆದ ಸಂಗತಿಗಳ ಬಗ್ಗೆ ಬಹಳ ಸೂಕ್ಷ್ಮವಾಗಿರುವಂಥವನು. ಗುಲಾಮನ ಹಂತದಿಂದ, ಈಗಿನ ಗುಜರಾತ್ ಸುಲ್ತಾನನ ಅತ್ಯಂತ ನಂಬುಗೆಯ ಸೇನಾಧಿಪತಿಗಳಲ್ಲೊಬ್ಬನ ಹಂತಕ್ಕೆ ಏರಬೇಕಾದರೆ ಅವನು ಬಹುಶ್ರಮಪಟ್ಟು ಎರಡರಷ್ಟು ಕೆಲಸ ಮಾಡಬೇಕಾಯಿತು. ಆ ವಿಷಯದಲ್ಲಿ ಗುಜರಾತಿನ ಅಥವಾ ಮೇವಾಡದ ಬೇರಾವುದೇ ಸೈನ್ಯಾಧಿಕಾರಿಗಿಂತ ಹೆಚ್ಚಿನ ಅಪಾಯದ ಸ್ಥಿತಿಯಲ್ಲಿದ್ದಾನೆ. ಸುಲ್ತಾನ್ ಮುಜಾಫ಼ರ್ ತನ್ನನ್ನು ಆಯ್ಕೆ ಮಾಡಿದ್ದು ಸರಿಯಾಗಿದೆ ಎಂಬುದನ್ನು ಸಾಧಿಸಬೇಕಾದ ಅಗತ್ಯ ಅವನಿಗಿದೆ. ಇತರೆ ಸೈನ್ಯಾಧಿಕಾರಿಗಳು ಅವನನ್ನು ಕೀಳಾಗಿ ಕಾಣುತ್ತಾರೆ ಅವನು ಅಧಃಪತನ ಹೊಂದುವುದನ್ನು ಕಾಣುವುದು ಅವರಿಗೆ ಅತ್ಯಂತ ಸಂತಸದ ವಿಷಯ ಮತ್ತು ಅವನ ಪತನಕ್ಕೆ ಅವರು ಕೈ ಜೋಡಿಸಲೂ ಬಹುದು. ವಯಸ್ಸು ಮೀರಿರುವ ಅವನು ಈಗ ತಾನೆ ಮತಾಂತರ ಹೊಂದಿದವನಂತೆ ಅತಿಯಾದ ಉತ್ಸಾಹ ಉಳ್ಳವನು. ಬಹಳ ಒಳ್ಳೆಯ ಸೇನಾಧಿಪತಿ".

ತಂದೆಯವರ ಸಂಗ್ರಹ ಗುಣ ಮಾತಿಗೆ ಮೀರಿದ್ದು. ಸಾಧ್ಯವಾದರೆ ಅವರು ಅಕ್ಷರಶಃ ಶಬ್ದಗಳನ್ನು ದೂರವಿಡುತ್ತಾರೆ. ಇಷ್ಟೂ ವರ್ಷಗಳಲ್ಲಿ ನನ್ನೊಂದಿಗೆ ಮಾತಾಡಿರುವುದಕ್ಕಿಂತಲೂ ಈ ದಿನ ನನ್ನೊಂದಿಗೆ ಹೆಚ್ಚು ಮಾತನಾಡಿದ್ದಾರೆ. ಯಾವುದೇ ಚರ್ಚೆಯಲ್ಲಿ ಬಹುಮುಖ್ಯ ವಿಷಯದ ಮೇಲೆ ಗಮನವನ್ನೆಲ್ಲ ಕೇಂದ್ರೀಕರಿಸುವಂತೆ ಮಾಡುವ ಒಂದು ಕೌಶಲ ಅವರಿಗೆ ಕರಗತವಾಗಿದೆ. ಒಂದು ವಿಷಯದ ಮೇಲೆ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಿ ಆಮೇಲೆ ಹಿಂದೆ ಸರಿದು ಬಿಡುವುದು ಅವರ ನೀತಿ.

ನಾವಿಬ್ಬರೂ ಭೇಟಿಯಾದಾಗ ಇನ್ನೊಂದು ಸಂದರ್ಭವೂ ಕೂಡಿ ಬಂದಿತ್ತು. ಬೆಳಿಗ್ಗೆ ಅವರು ಅಲ್ಲಿಂದ ಹೊರಟಾಗ ಸೈನ್ಯದ ಪಥ ಸಂಚಲನವಿತ್ತು. ನಾವಿಬ್ಬರೂ ಸೈನ್ಯದ ಗೌರವ ರಕ್ಷೆ ಸ್ವೀಕರಿಸಿದೆವು. ಆಮೇಲೆ ಅವರು ಸೈನ್ಯದ ಆಧಿಪತ್ಯವನ್ನು ಅಧಿಕೃತವಾಗಿ ನನಗೆ ವಹಿಸಿಕೊಟ್ಟರು. ಅಂದಿನ ಬೀಳ್ಕೊಡುಗೆಯ ಉಪಾಹಾರ ಕೂಟದಲ್ಲಿ, ಪ್ರಮುಖ ಮತ್ತು ಅಪ್ರಮುಖ ರಾವ್‌ಗಳು, ರಾಜಾಗಳು, ಇದಾರಿನ ರಾವ್ ಆದ ನನ್ನ ಭಾವ ಮೈದುನ ರೈಮಲ್‌ನನ್ನೂ ಒಳಗೊಂಡಂತೆ ರಾವಲ್‌ಗಳು ಎಲ್ಲರೂ ಸೇರಿದ್ದರು. ತಂದೆಯವರು ಕಡುಬೊಂದನ್ನು ಇನ್ನೇನು ಕಚ್ಚಬೇಕು ಅಷ್ಟರಲ್ಲಿ ಅದನ್ನು ಕೆಳಗಿಸಿಳಿದರು. ಇದು ಎಲ್ಲರಿಗೂ ಚೆನ್ನಾಗಿ ಗೊತ್ತಿದ್ದ ಅವರ ಉದ್ದೇಶ ಪೂರ್ವಕ ಅಥವಾ ವಿಲಕ್ಷಣ ನಡೆಗಳಲ್ಲೊಂದು. ಅದು ಯಾವುದು ಅಂತ ಯಾರಿಗೂ ಗೊತ್ತಿರಲಿಲ್ಲ. ಅದು ಅವರ ಮನಸ್ಸಿನಲ್ಲಿ ಏನೋ

ಇದೆ ಮತ್ತು ಅದನ್ನು ಅತ್ಯಂತ ಜಾಗರೂಕತೆಯಿಂದ ಆಲಿಸುವುದು ಅವರೆಲ್ಲರ ಕಾಲವನ್ನು ಅತ್ಯಂತ ಸದುಪಯೋಗ ಮಾಡಿದ ಹಾಗೆ ಎಂದು ಅತ್ಯಂತ ವಿನಯದಿಂದ ಮತ್ತು ಪರೋಕ್ಷವಾಗಿ ಸೂಚಿಸುತ್ತಿತ್ತು.

ತಮ್ಮ ಕರ್ಕಶ ಪಿಸುಮಾತಿನಲ್ಲಿ "ಇಲ್ಲಿರುವ ಬಹುಮಟ್ಟಿನ ಎಲ್ಲರೂ ನನ್ನ ಮಗನಿಗಿಂತ ಹಿರಿಯರು ಮತ್ತು ವಿವೇಕಿಗಳು. ನೀವೆಲ್ಲರೂ ಅವನಿಗಿಂತ ಹೆಚ್ಚು ಮುಂಗಾರುಗಳನ್ನು, ವಸಂತಗಳನ್ನು, ಹೆಚ್ಚು ಯುದ್ಧಗಳನ್ನು ಕಂಡವರು ಮತ್ತು ಅವನಿಗಿಂತ ಅತ್ಯಂತ ಹೆಚ್ಚಿನ ಅನುಭವ ಉಳ್ಳವರು. ಇದೆಲ್ಲವೂ ಅವನಿಗೆ ಅತ್ಯಮೂಲ್ಯವಾದವು. ಈ ಎಲ್ಲ ಸಂಪನ್ಮೂಲಗಳ ಸದುಪಯೋಗವನ್ನು ಅವನು ಪಡೆದುಕೊಳ್ಳಬೇಕೆಂದು ನನ್ನ ಸಲಹೆ. ಅವನ ವಿಚಾರದಲ್ಲಿ ಒಂದು ಅನಿಸಿಕೆಯನ್ನು ನಿಮ್ಮೊಂದಿಗೆ ನಾನು ಹಂಚಿಕೊಳ್ಳಬೇಕಾಗಿದೆ. ಆ ನಂತರ ನಾನು ಇಲ್ಲಿಂದ ಹೊರಡುತ್ತೇನೆ. ಅವನ ವಯಸ್ಸನ್ನು ನೀವು ಲೆಕ್ಕಹಾಕಬೇಡಿ. ನೀವು ಒಳ್ಳೆಯ ಕೈಗಳ ಹಿಡಿತದಲ್ಲಿದ್ದೀರಿ. ಜೈ ಏಕಲಿಂಗಜೀ"

* * *

ನಾನು ಆ ದಿನವೆಲ್ಲಾ ತಂದೆಯವರು ಯಾರ ಬುದ್ಧಿವಾದವನ್ನು ಕೇಳಲು ಹೇಳಿದ್ದರೋ ಅಂಥ ಹಿರಿಯರು ಮತ್ತು ರಾಜ್ಯಗಳ ಮುಖ್ಯಸ್ಥರೊಂದಿಗೆ ಸಮಾಲೋಚಿಸುವುದರಲ್ಲಿ ಕಳೆದೆ. ತಂದೆಯವರು ಅವರ ಸಲಹೆ ತೆಗೆದುಕೊಳ್ಳಲು ಹೇಳಿದ್ದರು. ಅದರಲ್ಲಿ ಕೆಲವರನ್ನು ಮೊದಲ ಬಾರಿಗೆ ಭೇಟಿಯಾಗುತ್ತಿದ್ದೆ, ಇನ್ನಿತರರನ್ನು ನನ್ನ ಬಾಲ್ಯದಿಂದಲೂ ಬಲ್ಲೆ ಅಥವಾ ಇತರೆ ಸೈನಿಕಕಾರ್ಯಾಚರಣೆಗಳ ಸಂದರ್ಭದಲ್ಲಿ ಅವರ ಕೆಳಗೆ ಕೆಸಲಮಾಡಿದ್ದೆ. ಆದರೆ ನಾನೀಗ ಸೈನ್ಯಾಧಿಪತಿಯಾಗಿದ್ದೆ ಹಾಗೂ ಗುಜರಾತಿನ ಸೈನ್ಯಾಧಿಪತಿ ಮಲಿಕ್ ಅಯಾಜ್‌ನಂತೆ ನಾನೂ ಕೂಡ ನನ್ನನ್ನು ಎರಡರಷ್ಟಾಗಿ ಸಾಧಿಸಿ ತೋರಿಸಬೇಕಿತ್ತು. ನಾನು ಅವರನ್ನು ನನ್ನ ಭಿಲ್ ಸ್ನೇಹಿತ ರಾಜಾ ಪೂರಜಿಕೀಕಾ ಮತ್ತು ನನ್ನ ಸೋದರ ಸಂಬಂಧಿ ತೇಜ್‌ಗೆ ಪರಿಚಯಿಸಿಕೊಟ್ಟೆ. ತೇಜ್‌ನನ್ನು ನನ್ನೊಂದಿಗೆ ಕರೆತಂದದ್ದು ಒಂದು ರಾಜಕೀಯ ನಡೆ. ರಾಜೇಂದ್ರನ ತಮ್ಮನಾಗಿ ಅವನ ಉಪಸ್ಥಿತಿ ಅವರ ಮೇಲೆ ಪ್ರಭಾವ ಬೀರುವುದರಲ್ಲಿ ಯಶಸ್ವಿಯಾಗದೆ ಇರಲಿಲ್ಲ. ಆದರೆ ಪೂರಜಿ ಮತ್ತು ನನಗೆ ಇಬ್ಬರಿಗೂ, ಅವನೊಬ್ಬ ದೊಡ್ಡ ದ್ಯೂತವಾಗಿದ್ದ. ಮೇವಾಡದ ಬಗೆಗಿನ ಅವನ ನಿಷ್ಠೆ ಸಂದೇಹಾಸ್ಪದವಾಗಿರಲಿಲ್ಲ. ಆದರೆ ನನ್ನನ್ನು ಕುರಿತಾದ ಅವನ ಅಭಿಪ್ರಾಯ ಸಂದೇಹಾಸ್ಪದವಾಗಿತ್ತು. ನಾನೊಬ್ಬ ಹೇಡಿ ಮತ್ತು ನೀಚ ಎಂದು ಅವನ ಭಾವನೆಯಾಗಿತ್ತು. ನಮ್ಮ ಬಳಿ ಐವತ್ತು ಸಾವಿರಕ್ಕಿಂತ ಸ್ವಲ್ಪ ಕಡಿಮೆರಾವುತ ಸೈನ್ಯ ಮತ್ತು ಪದಾತಿ ಸೈನ್ಯ ಇದೆ. ಜೋಧ್‌ಪುರದ ರಾವ್ ಗಂಗಾ ಅವರು ತಮ್ಮೊಂದಿಗೆ ಏಳು ಸಾವಿರದ ಒಂದು ಪಡೆಯನ್ನು, ಮತ್ತು ನನ್ನ ಹೆಂಡತಿಯ ಮಾವ ಹಾಗೂ ತಂದೆಯವರ ಅತ್ಯಂತ ಆಪ್ತ ಸಹಚರ ಮೆರ್ತಾದ ರಾವ್‌ವೀರಮ್ ದೇವ್ ಅವರು ಐದು ಸಾವಿರ ಪಡೆಗಳ ನೇತೃತ್ವ ವಹಿಸಿಕೊಂಡು ಬಂದಿದ್ದರು. ದಂಗಾರ್‌ಪುರ್ ರಾಜ್ಯದ ರಾವಲ್ ಉದಯ್‌ಸಿಂಹ ಮತ್ತು ಬನ್ಸ್ ವಾರಾದ ದೊರೆ ಅಶ್ವಿನ್ ಸಿಂಹ ಈ ಇಬ್ಬರೂ ಮೇವಾಡದ ಧ್ವಜದಡಿಯಲ್ಲಿ ತಮ್ಮದೇ ಸಣ್ಣ ಸೈನ್ಯಗಳೊಂದಿಗೆ ಹೋರಾಡುತ್ತಿದ್ದರು. ನಮ್ಮಲ್ಲಿ ನೂರೂ ಚಿಲ್ಲರೆ ಆನೆಗಳಿಲ್ಲದೆ ಇದ್ದರೂ ನಮ್ಮದೇನೂ ಪ್ರಭಾವ ಬೀರದೆ ಇರುವಂಥ ಬಲವೇನಲ್ಲ. ರಾವ್ ವೀರಮ್‌ದೇವ್ ಅವರ ಪ್ರಕಾರ ಸುಮಾರು ಅರುವತ್ತು ಸಾವಿರದಷ್ಟಿರುವ ಗುಜರಾತಿನ ಪಡೆಗಳೊಂದಿಗೆ ಸರಿ ಸಮಾನವಾಗಿ ತೂಗುತ್ತಿತ್ತು.

ಮಲಿಕ್ ಅಯಾಜ್‌ನ ಕೈಕೆಳಗೆ ನಾಲ್ಕು ಜನ ಅಧೀನ ಅಧಿಕಾರಿಗಳಿದ್ದರು. ಅವರೆಲ್ಲರೂ ಪಳಗಿದ ದಳಪತಿಗಳಾಗಿದ್ದರು. ಅಲ್ಲದೆ ಅನೇಕ ಸಂದರ್ಭಗಳಲ್ಲಿ ನಮ್ಮ ಸೇನೆಯೊಂದಿಗೆ

ಸೆಣಸಿದ್ದರು. ನಾನು ರಾವ್ ಗಂಗಾ ಅವರನ್ನು ಅವರೆಲ್ಲರ ಹಾಗೂ ಮಲಿಕ್ ಅಯಾಜನ ವಿಸ್ತಾರವಾದ ವ್ಯಕ್ತಿ ವಿವರಗಳನ್ನು, ಅದರಲ್ಲೂ ಮುಖ್ಯವಾಗಿ ಅವರ ಹಿಂದಿನ ಯುದ್ಧಗಳು ಮತ್ತು ಅವರು ಉಪಯೋಗ ಮಾಡಿದ ಸಮರ ತಂತ್ರಗಳನ್ನು ಸಂಗ್ರಹಿಸಿಕೊಡಲು ಸಾಧ್ಯವೆ ಎಂದು ಕೇಳಿದೆ. ಅವು ಯಾವ ಉದ್ದೇಶವನ್ನು ಪೂರೈಸುತ್ತವೆ ಎಂಬುದು ಅವನಿಗೆ ಖಾತರಿ ಇರಲಿಲ್ಲ. ಆದರೆ ನಾನು ಹೇಳಿದ್ದನ್ನು ಪಾಲಿಸುವ ಇಚ್ಛೆಯಿತ್ತು ಅವನಿಗೆ.

"ನಮ್ಮ ಪಡೆಗಳಲ್ಲಿ ಎಷ್ಟು ಜನ ಮುಸ್ಲಿಮರಿದ್ದಾರೆ?"

"ನೀವು ನಿಮ್ಮ ಜೊತೆ ಕರೆತಂದ ಐವತ್ತು ಜನರನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಇದ್ದರೆ, ಏಳು ನೂರರ ಒಳಗೆ" ಎಂದು ರಾವ್ ವೀರಮ್‌ದೇವ್ ನನಗೆ ತಿಳಿಸಿದರು. "ಅವರೆಲ್ಲರೂ ಒಳ್ಳೆಯ ಯೋಧರು ಮತ್ತು ನಮಗೆ ನಿಷ್ಠೆಯಿಂದ ಇರುವಂಥವರೆಂದು ನಿಮಗೆ ಭರವಸೆ ಕೊಡುತ್ತೇನೆ"

"ನನ್ನ ಪ್ರಶ್ನೆಗೆ ಅದು ಸಮರ್ಥನೆ ಅಲ್ಲ. ನಮ್ಮ ಭದ್ರತೆ ಮತ್ತು ಸುರಕ್ಷತೆಯೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳದೆ ಅವರ ಸಂಖ್ಯೆಯನ್ನು ಹೆಚ್ಚು ಮಾಡಲು ಸಾಧ್ಯವೆ ಅಂತ?"

"ನಿಮಗೆ ಎಷ್ಟು ಮಂದಿ ಬೇಕು?"

"ಐದು ಸಾವಿರವಾದರೆ ಅದೊಂದು ಒಳ್ಳೆಯ ಸಂಖ್ಯೆ. ಸದ್ಯಕ್ಕೆ ಎರಡು ಸಾವಿರದಷ್ಟಾದರೆ ಸಾಕು"

"ಅವರಿಲ್ಲದೆ ಇದ್ದರೂ ನಾವು ಇನ್ನೂ ಉತ್ತಮಸ್ಥಿತಿಯಲ್ಲಿರುತ್ತೇವೆ" ಎಂಬುದು ಆ ಸಭೆಯಲ್ಲಿ ತೇಜ್‌ನ ಪ್ರತಿಕ್ರಿಯೆ.

'ನನಗೆ ಸಾಧ್ಯವಾದರೆ ಆದಿನಾಥಜಿಯವರ ಜೈನರನ್ನು ನಮ್ಮ ಜೊತೆ ಯುದ್ಧ ಮಾಡಲು ಕರೆತರುತ್ತೇನೆ. ಅದೃಷ್ಟವಶಾತ್ ನಮ್ಮ ಮುಸ್ಲಿಂ ನಾಗರಿಕರು ಶಾಂತಿ ಪ್ರಿಯರಲ್ಲ. ಅವರು ಅವರ ದೇಶಕ್ಕೆ ಕಿಂಚಿತ್ ಸೇವೆ ಮಾಡದೆ ಇರುವುದಕ್ಕೆ ತುಂಬ ಸಂತಸ ಪಡುತ್ತಾರೆ." ತೇಜ್ ನನ್ನ ಬಗ್ಗೆ ಇರುವ ತಿರಸ್ಕಾರವನ್ನು ಮುಚ್ಚಿಡದಾದ. "ಆದರೆ ಇನ್ನೊಂದು ಕಾರಣ ಇದೆ. ಸಾಧ್ಯವಾದರೆ ನಾವು ಮಲಿಕ್ ಅಯಾಜ್ ಅಥವಾ ಅವನ ಸಾರ್ವಭೌಮ ಮುಜಾಫ್ಫರ್‌ಷಾ ಈ ಯುದ್ಧವನ್ನು ನಾಸ್ತಿಕರ ವಿರುದ್ಧದ ಜಿಹಾದ್ ಆಗಿ ಪರಿವರ್ತಿಸುವುದನ್ನು ತಪ್ಪಿಸ ಬಯಸುತ್ತೇವೆ. ಅವರು ಲಕ್ಷ್ಯ ಮಾಡದೆ ಅದನ್ನು ಮಾಡಬಹುದು. ಆದರೆ ನಮ್ಮ ಕಡೆ ಹೋರಾಡುವ ಸಾಕಷ್ಟು ಸಂಖ್ಯೆಯ ಮುಸ್ಲಿಂ ಯೋಧರನ್ನು ನಾವು ಹೊಂದಿದ್ದರೆ ಅವರಿಗೆ ಅವರ ವಾದವನ್ನು ಎತ್ತಿ ಹಿಡಿಯುವುದು ಕಷ್ಟವಾಗುತ್ತದೆ."

ವಾಸ್ತವವಾಗಿ ಹೇಳಬೇಕೆಂದರೆ ನನಗೂ ನನ್ನದೇ ಆದ ಸಂದೇಹಗಳಿದ್ದುವು. ನಮ್ಮ ಸೈನ್ಯ ಪಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರನ್ನು ಹೊಂದಿದ್ದರೆ, ಕಾಫಿರರನ್ನು ಬೆನ್ನಟ್ಟಬೇಕೆಂಬ, ಮುಜಾಫ್ಫರ್ ಷಾ ಅಥವಾ ಬೇರಾವುದೇ ಪ್ರಬಲ ಮುಸ್ಲಿಂ ದೊರೆಯ ಮತಾಂಧವೂ ನಂಬಲಸಾಧ್ಯವಾದಷ್ಟು ಪರಿಣಾಮಕಾರಿಯೂ ಆದ ಮನವಿಯನ್ನು ನಿಜಕ್ಕೂ ತಡೆಯಬಲ್ಲುದೆ? ಯೋಧರಿಗೆ ಮಾಡಲಾಗುವ ಅಂಥ ಒಂದು ಪ್ರಬಲ ಕರೆಯನ್ನು ಎದುರಿಸುವುದು ಹೇಗೆ ಎಂದು ವಿಸ್ಮಯ ಪಡುತ್ತ ನಾನು ಈ ಹಿಂದೆ ಅನೇಕ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದ್ದೇನೆ. ನಿಜ ಹೇಳಬೇಕೆಂದರೆ, ಇಸ್ಲಾಂನ ಶಕ್ತಿ ಮತ್ತು ಪ್ರೇರಣೆಗಳನ್ನು ಹೋಲುವಂಥದ್ದು ಯಾವುದೂ ನಮ್ಮ ಧರ್ಮ ಗ್ರಂಥಗಳಲ್ಲಿರುವುದು ನನಗೆ ತಿಳಿದಿಲ್ಲ. ನಾವು ಕೂಡ ಪವಿತ್ರ ಯುದ್ಧಗಳನ್ನು ಮಾಡಬಲ್ಲೆವು ಮತ್ತು ಸೆಣಸಬಲ್ಲೆವು. ಆದರೆ ನಮ್ಮ ಧರ್ಮದಲ್ಲಿ ಮತಾಂತರಕ್ಕೆ ಸಂಬಂಧ ಪಟ್ಟ ಯಾವುದೇ ತಾಂತ್ರಿಕ ಕೌಶಲಗಳಿಲ್ಲ. ಮತಾಂತರ

ಮಾಡಬೇಕೆಂಬ ತುಡಿತ ನಿಶ್ಚಯವಾಗಿಯೂ ಇಸ್ಲಾಂನ ಚಾಲಕ ಶಕ್ತಿಗಳಲ್ಲೊಂದು. ನಮ್ಮ ಮಹಾನ್ ಸಮರದ ಕರೆ ಎಂದರೆ ಭಗವದ್ ಗೀತೆ. ಗೀತೆ ಹೇಳುವುದಾದರೂ ಏನು? ಯುದ್ಧ ಮಾಡು ಅಥವಾ ಫಲಾಫಲಗಳ ಗೊಡವೆಯಿಲ್ಲದೆ ನಿನ್ನ ಪಾಲಿನ ಕರ್ತವ್ಯ ಕರ್ಮಗಳನ್ನು ನೀನು ಮಾಡು. ಇದರೊಂದಿಗೆ ಅತ್ಯಂತ ನಿಷ್ಕೃಷ್ಟವಾಗಿ ವಾಸ್ತವ ರೀತಿಯಲ್ಲಿ ಇಸ್ಲಾಂ ಸೂತ್ರೀಕರಿಸಿರುವುದನ್ನು ಹೋಲಿಸಬೇಕು, ದೇವರಿಗಾಗಿ ಯುದ್ಧ ಮಾಡುತ್ತ ನೀನು ಮಡಿದರೆ, ಅಪ್ಸರೆಯರು ಮತ್ತು ಉಜ್ವಲವಾಗಿ ವರ್ಣಿಸಿರುವ ಇನ್ನಿತರೆ ಸುಖಗಳು ನಿನಗಾಗಿ ಕಾದಿರುವ ಸ್ವರ್ಗಕ್ಕೆ ನೀನು ನೇರವಾಗಿ ಹೋಗುವೆ.

ಭಗವದ್ಗೀತೆಯಲ್ಲಿ ಕೊಡಮಾಡುವ ಮರಣಾನಂತರದ ಬದುಕು. ಎಂಥದು? ಅಜಾಗೃತ ಚೇತನಗಳಾದ ನಮ್ಮಂಥ ಬೃಹತ್ ಸಮುದಾಯದ ಜನತೆಗೆ ಕೊನೆಯಿಲ್ಲದ ಜನ್ಮಾಂತರ ಚಕ್ರಗಳ ಹೊರತು ಬೇರೇನೂ ಇಲ್ಲ. ಮರಣಾನಂತರದ ಬದುಕಿನ ಬಗ್ಗೆ ಸಂದೇಹಕ್ಕೆಡೆಯಿಲ್ಲದೆ ಹೇಳದ ಹೊರತು ಹಾಗೂ ತಮ್ಮ ಕರ್ತವ್ಯಗಳನ್ನು ಚಾಚು ತಪ್ಪದೆ ನಿರ್ವಹಿಸಿದವರಿಗೆ ಮೀಸಲಾಗಿರುವ ಸುಖಸಮೃದ್ಧಿಗಳ ಕುರಿತು ಹೇಳದ ಹೊರತು ಮುಸ್ಲಿಮರ ಉತ್ಸಾಹ ಮತ್ತು ಬದ್ಧತೆಗೆ ನಾವು ಸಮವಾಗುವುದರಲ್ಲಿ ನನಗೆ ಸಂಶಯವಿದೆ.

ಹೀಗಿರುವಾಗ ತಾವು ಮಾಡಿದ ಯುದ್ಧಗಳಲ್ಲೆಲ್ಲಾ ಹಿಂದುಗಳು ವಿಜಯ ಸಾಧಿಸುತ್ತಿರುವುದು ಅತ್ಯಂತ ಆಶ್ಚರ್ಯವೇ ಸರಿ.

ಮುಸ್ಲಿಂ ಯುದ್ಧ ತಂತ್ರ ನಿಪುಣನಾದ ಷಫಿಖಾನ್‌ನನ್ನು ಕರೆತರಲು ಮಿಲಿಟರಿ ಸಂಸ್ಥೆಗೆ ಹೇಳಿ ಕಳುಹಿಸಿದೆ. ಅವನು ಸಂಕೋಚದಿಂದ ಒಳಬಂದ. ನನ್ನ ಅವನ ಮೊದಲ ಮುಖಾಮುಖಿ ಅಷ್ಟೇನೂ ಸುಮುಖವಾಗಿರಲಿಲ್ಲ. ಅದು ಇನ್ನೂ ಅವನ ಮನಸ್ಸಿನಿಂದ ಮಾಸಿರಲಿಲ್ಲ. ಅವನು ನನಗೆ 'ಅದಾಬ್' ಹೇಳಿದ. ಆಮೇಲೆ ಸಮಿತಿಯ ಉಳಿದ ಸದಸ್ಯರಿಗೆ ಹೇಳಿದ. ಅದು ಹೇಗೆ ನನ್ನ ಜೊತೆ ಮನಸ್ತಾಪ ಉಂಟಾಗಿತ್ತು ತನಗೆ ಎಂದು ಆಶ್ಚರ್ಯ ಪಡುತ್ತಾ ನಿಂತನು. ನಾನು ತಕ್ಷಣ ನನ್ನ ಖಡ್ಗವನ್ನು ಹೊರ ಸೆಳೆದೆ. ಖಡ್ಗವನ್ನು ಒರೆಯಿಂದ ಹೊರ ಸೆಳೆದ ಶಬ್ದ ಸತ್ತ ಮನುಷ್ಯನ ನರಗಳನ್ನು ಕರ್ಕಶಗೊಳಿಸಿ ಬಿಡುತ್ತಿತ್ತು. ನಾನು ಷಫಿಖಾನ್‌ನ ಕಡೆಗೆ ಖಡ್ಗವನ್ನು ಗುರಿ ಮಾಡಿ ಆ ಕೈಯಿಂದ ಈ ಕೈಗೆ ಬದಲಾಯಿಸಿದೆ.

ನಾನು ಮೆಲುದನಿಯಲ್ಲಿ "ನಾವೀಗ ನಿನ್ನನ್ನು ಕೊಲ್ಲುವ ಹಂಚಿಕೆ ಹೂಡಿದ್ದೇವೆ. ನೀನು ಅದು ಹೇಗೆ ಓಡುತ್ತೀ" ಎಂದು ಹೇಳಿದೆ.

"ಯಾವ ತಪ್ಪಿಗೆ ಸ್ವಾಮಿ" ಅವನು ನಡುಗುತ್ತಿದ್ದನು.

"ಏಕೆಂದರೆ ನನಗೆ ನಿನ್ನ ಮುಖ ಇಷ್ಟವಾಗಲ್ಲ" ಹಾಗೆಂದು ನಾನು ಖಡ್ಗವನ್ನು ಎತ್ತಿದೆ.

"ನನಗೆ ಉತ್ತರ ಕೊಡು"

"ನಾನು ಒಳಕ್ಕೆ ಪ್ರವೇಶಿಸಿದ ಶಾಮಿಯಾನಾದ ಮಾಮೂಲಿ ದಾರಿಯಿಂದಲೇ ನಾನು ಹಿಮ್ಮೆಟ್ಟಿ ಹೋಗಬೇಕೆಂಬುದು ನಿಮ್ಮ ನಿರೀಕ್ಷೆ" ಈಗ ನಾನು ಆಡುತ್ತಿದ್ದ ವಿನೋದದ ಆಟ ಅವನಿಗೂ ಇಷ್ಟವಾಯಿತು.

"ಆದರೆ ಅದರ ಬದಲಿಗೆ ನಾನು ನನ್ನ ಬಲಗಡೆಗೆ ಓಡಿ, ರಾವಲ್ ಉದಯ್ ಸಿಂಹ ಮತ್ತು ತೇಜ್ ಸಿಂಹರು ನನ್ನದಾರಿಗೆ ಅಡ್ಡ ಬಂದರೆ ಅವರನ್ನು ಕೊಲ್ಲುತ್ತೇನೆ. ಅವರು ನನ್ನನ್ನು ತೀರಾ ಬಲವಂತ ಪಡಿಸಿದರೆ ಮಾತ್ರ, ಆಮೇಲೆ ಗುಡಾರದ ಪಾರ್ಶ್ವವನ್ನು ಹರಿದು ಹಾಕಿ ಓಡಿ ಬಿಡುವೆ"

"ನಿನ್ನ ಎಡಗಡೆ ಯಾಕಾಗಬಾರದು?"

"ರಾವ್ ವೀರಮ್‌ದೇವ್ ಮತ್ತು ರಾವ್ ಗಂಗಾ ಅವರೊಂದಿಗೆ ಹೋರಾಡುವುದು ಅಪಾಯಕಾರಿ"

"ನನ್ನನ್ನು ಬಹಳ ಸುಲಭವಾಗಿ ತೊಲಗಿಸಿ ಬಿಡಬಹುದು ಅಂದುಕೊಂಡೆಯ?" ತೇಜ್ ಕೆರಳಿದನು. "ನನ್ನನ್ನು ಒಂದು ಕೈ ನೋಡು."

"ನಿಮಗೆ ತುಂಬ ಕೆಟ್ಟ ಸಿಟ್ಟಿದೆ. ನೀವು ತಪ್ಪುಗಳನ್ನು ಮಾಡುವುದಕ್ಕೆ ಅದು ನೆರವಾಗುತ್ತೆ ಅನ್ನುವ ಕಾರಣಕ್ಕೆ ನಾನು ಅದನ್ನೇ ನೆಚ್ಚಿದ್ದೆ. ಇನ್ನು ರಾವಲ್ ಉದಯ ಸಿಂಹನಿಗೆ ಸಂಬಂಧ ಪಟ್ಟ ಹಾಗೆ, ಅವರು ಕುದುರೆಯ ಬೆನ್ನೇರಿರುವವರೆಗೂ ನಾನು ಅವರ ವಿರುದ್ಧ ಸೆಣಸುವ ಧೈರ್ಯ ಮಾಡಲಾರೆ. ನೆಲದ ಮೇಲೆ ನಿಂತಿರುವಾಗ ಅವರ ಒಂದು ಕಾಲು ಮರದ ಕಾಲು. ಅವರ ಈ ದೌರ್ಬಲ್ಯವನ್ನು ನಾನು ನನ್ನ ಅನುಕೂಲಕ್ಕೆ ಬಳಸಿಕೊಳ್ತೀನಿ."

"ಯುದ್ಧದಲ್ಲಿ ಹಿಮ್ಮೆಟ್ಟುವುದಕ್ಕೆ ಸಂಬಂಧಪಟ್ಟ ಹಾಗೆ ನೀನು ಬರೆಯುತ್ತಾ ಇದ್ದ ಶಾಸ್ತ್ರ ಗ್ರಂಥ ಎಲ್ಲಿಗೆ ಬಂತು?"

"ಅರ್ಧ ಆಗಿದೆ ಮಹಾರಾಜ್‌ಕುಮಾರ್"

ನನ್ನ ಜೊತೆಗಾರರಿಗೆ, ನನ್ನ ಈ ಖಾಸಗಿ ಸಂಭಾಷಣೆ ಕುರಿತು ಬೆಳಕು ಚೆಲ್ಲಬೇಕಾಯಿತು.

"ಷಫಿ ಖಾನ್ ಸಮರ ತಂತ್ರಗಳ ಅಧ್ಯಯನದಲ್ಲಿ ಮತ್ತು ಅವುಗಳನ್ನು ಆಧುನಿಕಗೊಳಿಸುವುದರಲ್ಲಿ ಹದಿನೈದು ವರ್ಷಗಳನ್ನು ಕಳೆದಿದ್ದಾನೆ. ತಂದೆಯವರು, ಇಲ್ಲಿ ಕಳೆದ ಬಾರಿ ಮಾಡಿದ ಯುದ್ಧದಲ್ಲಿ ಆ ಸಮರ ತಂತ್ರಗಳಲ್ಲೊಂದನ್ನು ಬಳಸಿದ್ದಾರೆ ಎಂದು ನನ್ನ ನಂಬಿಕೆ. ಷಫೀಖಾನ್‌ಗೆ ನಾನು ಬೇರೊಂದು ಕೆಲಸವನ್ನು ವಹಿಸಿದ್ದೇನೆ. ಅದು ಯುದ್ಧದಿಂದ ಹಿಮ್ಮೆಟ್ಟುವ ಕಾರ್ಯತಂತ್ರಗಳನ್ನು ಯೋಜಿಸುವುದು."

ಎಂದಿನಂತೆ, ನನ್ನ ಇಂಗಿತವನ್ನು ಮೊದಲು ಅರ್ಥಮಾಡಿಕೊಂಡವರು ರಾವ್ ವೀರಮ್‌ದೇವ್.

"ಅದು ಅತ್ಯಂತ ಅರ್ಥಪೂರ್ಣವಾದದ್ದು, ನಾವು ಯುದ್ಧ ಮಾಡುವಾಗ ಕಳೆದುಕೊಳ್ಳುವುದಕ್ಕಿಂತ ಹಿಮ್ಮೆಟ್ಟುವಾಗ ಹೆಚ್ಚು ಜನರನ್ನು ಕಳೆದುಕೊಳ್ಳುತ್ತೇವೆ".

"ನಿನ್ನ ಬಲಗೈ ಹೆಬ್ಬೆಟ್ಟನ್ನು ಇತ್ತ ಚಾಚು ಷಫೀಖಾನ್" ಎಂದು ಹೇಳಿ ನಾನು ನನ್ನ ಕತ್ತಿಯ ಅಲಗನ್ನು ಅದರ ಮೇಲೆ ಆಡಿಸಿದೆ. ಹೊರಗೆ ಛಿಲ್ ಎಂದು ಉಕ್ಕಿದ ರಕ್ತದ, ದಪ್ಪ ಹನಿಯಲ್ಲಿ ನನ್ನ ಹೆಬ್ಬೆರಳನ್ನು ಅದ್ದಿ ಅವನ ಹಣೆಯ ಮೇಲೆ ರಕ್ತ ತಿಲಕವನ್ನಿಟ್ಟೆ. ಅನಂತರ ನನ್ನ ಹಣೆಯ ಮೇಲಿಟ್ಟು ಕೊಂಡೆ. "ಈ ಸೈನಿಕ ಕಾರ್ಯಾಚರಣೆಯ ಸರಣಿಯ ಸಮರ ಸಮಿತಿಗೆ ನಿನ್ನನ್ನು ಈ ಮೂಲಕ ಸದಸ್ಯನನ್ನಾಗಿ ನೇಮಿಸಿದ್ದೇನೆ.

"ಷಫೀಖಾನ್ ಸಾವಿನ ಸಂಕಟ ಸಮಯದಲ್ಲಿಲ್ಲೂ ಮೇವಾಡ ಸಾಮ್ರಾಜ್ಯವನ್ನು ಬಿಟ್ಟು ಬೇರಾವುದಕ್ಕೂ ನಿಷ್ಠನಾಗದೆ, ಸಂಪೂರ್ಣ ರಹಸ್ಯವನ್ನು ಕಾಪಾಡಿಕೊಳ್ಳುವುದಾಗಿ ಪ್ರತಿಜ್ಞೆ ಮಾಡುವೆಯಾ?"

"ನಾನು ಪ್ರತಿಜ್ಞೆ ಮಾಡುತ್ತೇನೆ ಮಹಾಸ್ವಾಮಿ"

ಆ ಭೂ ಸ್ವರೂಪವನ್ನು ಮನಸ್ಸಿಗೆ ತಂದುಕೊಳ್ಳುವ ಸಲುವಾಗಿ ಪೂರಜೀಕೀಕಾ ತೇಜ್, ಷಫಿ ಮತ್ತು ನಾನು ಊಟದ ನಂತರ, ರಾವ್ ರೈಮಲ್ ಜೊತೆ ಹೊರ ಹೊರಟೆವು. ನಾವು ಇದಾರ್‌ನ ವಾಯವ್ಯಕ್ಕೆ ಸುಮಾರು ಎಪ್ಪತ್ತು ಮೈಲಿ ಸಾಗಿದ್ದೆವು. ಅದರ ಬಹುಭಾಗ ಬೆಟ್ಟಗುಡ್ಡಗಳಿಂದ ಕೂಡಿದ್ದರೆ, ಕೆಲವೊಂದು ಭಾಗ ದಟ್ಟ ಅರಣ್ಯಗಳಿಂದ

ಕೂಡಿತ್ತು. ನೆಲ ತಗ್ಗುದಿಣ್ಣೆಗಳಿಂದ ಕೂಡಿತ್ತು. ಕೊನೆಯ ಸಲ ಆ ನೆಲದ ಇಳಿಜಾರಿನಲ್ಲಿ ಇಳಿಯುತ್ತಿದ್ದಂತೆ ನಾವು ಒಂದೆರಡು ಮೈಲುಗಳು ಉತ್ತರಕ್ಕೆ ಚಾಚಿದ್ದ ಸಮತಲದ ಮೇಲಿದ್ದೆವು.

"ಈ ಸಮತಲದ ಅಂಚಿಗೆ ಇರುವುದಾದರೂ ಏನು" ಎಂದು ರಾವ್ ರೈಮಲ್‌ನನ್ನು ಕೇಳಿದೆ.

"ಕಣಿವೆಗಳು, ಗುಡ್ಡಗಳು ಮತ್ತು ಕಾಡುಗಳು. ದೇಶದ ಪಶ್ಚಿಮ ಭಾಗಕ್ಕೆ ಬಹು ಸುಲಭವಾಗಿ ಮೋಸ ಹೋಗಬಹುದಾದ ಜೌಗು ಮತ್ತು ಕೆಸರು ನೆಲ. ಮೂರು ವರ್ಷಗಳ ಹಿಂದೆ ಆದ ಭೂಕಂಪದ ಬಳುವಳಿ ಅವು. ಸಮುದ್ರದ ಅಂಚಿನಲ್ಲಿದ್ದ ಭೂಭಾಗವನ್ನು ಮಥಿಸಿ ಸ್ಥಳಾಂತರಿಸಿದ ಪರಿಣಾಮವಾಗಿ ರೂಪಗೊಂಡದ್ದು ಅವೆಲ್ಲ"

"ನಾವು ಪಶ್ಚಿಮಕ್ಕೆ ಹೋಗಿ ಮರಳಿನ ಅಂಚಿನಲ್ಲಿ ಸುತ್ತಾಡೋಣ"

ರಾವ್ ಮತ್ತು ನಾನು ಮುಂದೆ ಸಾಗಿದೆವು. ಪೂರಜಿ ಕೀಕಾ ಮತ್ತು ಇನ್ನಿಬ್ಬರು ನಮ್ಮನ್ನು ಅನುಸರಿಸಿದರು. ಇದಾರ್‌ನ ನನ್ನ ಪದಚ್ಯುತ ಭಾವ ಮೈದುನ. ರಾವ್ "ಇದಾರ್ ಹೋರಾಟ ಮಾಡಿ ಪಡೆಯಬಹುದಾದಷ್ಟು ಅಮೂಲ್ಯವಾದ್ದು ಅಂತ ನೀವು ತಿಳಿದಿಲ್ಲ ಎಂದು ನನ್ನ ನಂಬಿಕೆ" ಎಂದು ತುಂಬ ಕಹಿಯಾಗಿ ಹೇಳಿದನು. "ನೀವು ಈ ನಟನೆಯನ್ನು ಯಾವಾಗ ಕೈ ಬಿಟ್ಟು ಇದಾರ್‌ನ ವಿಷಯ ಕೈ ಬಿಡುತ್ತೀರಿ?"

ನಾನು ರಾವ್ ಅವರ ಮಾತನ್ನು ಅಲ್ಲೇ ತುಂಡರಿಸುತ್ತ ಒರಟಾಗಿಯೇ ಹೇಳಿದೆ– "ದಡ್ಡ ಗುಪ್ತಚಾರರನ್ನು ನೇಮಿಸುವುದರಿಂದ ಆಗುವ ಅನಾಹುತ ಎಂದರೆ ಅವರು ತಪ್ಪು ಸುದ್ದಿಕೊಡುತ್ತಾರೆ ಅನ್ನೋದಲ್ಲ, ಆದರೆ ಅದನ್ನು ನೀವು ನಂಬಿ ಬಿಡುತ್ತೀರಿ ಅನ್ನುವುದು. ಈ ಬೆಳಿಗ್ಗೆ ನಿಮ್ಮನ್ನು ವಿಷಾದ ಮತ್ತು ಮೌನಕ್ಕೆ ದೂಡಿದ್ದು ಅದು ಅಂತ ಆಯಿತು. ನೀವು ನನ್ನ ತಂಗಿಯ ಕೈ ಹಿಡಿದವರಲ್ಲದೆ ಹೋಗಿದ್ದರೆ ಮತ್ತು ನಿಮ್ಮ ಸಲುವಾಗಿ ಈ ಯುದ್ಧ ಹೂಡದೆ ಇದ್ದಿದ್ದರೆ, ಮಹಾಪ್ರಭುಗಳ ಮಾತನ್ನು ನೀವು ಕದ್ದು ಕೇಳಿಸಿಕೊಂಡದ್ದಕ್ಕೆ ನಿಮ್ಮನ್ನು ಸಮರ ಸಮಿತಿಯಿಂದ ತೆಗೆದುಹಾಕಿ ಬಿಡುತ್ತಿದ್ದೆ." "ಮಹಾಪ್ರಭು ರಾಣಾ ಅವರಿಗೆ ನಾನು ಏನು ಹೇಳಿದೆ ಅನ್ನುವುದು ನಿಮಗೆ ಸಂಬಂಧಪಟ್ಟಿದ್ದಲ್ಲ. ಆದರೆ ನೀವು ಸ್ವಲ್ಪ ಜವಾಬ್ದಾರಿಯಿಂದ ನಡೆದುಕೊಳ್ಳುತ್ತೀರಿ ಎನ್ನುವ ನಂಬಿಕೆಯಿಂದ, ರಾಣಾ ಅವರು ನನಗೆ ಏನು ಹೇಳಿದರು ಅನ್ನುವುದನ್ನು ನಿಮಗೆ ತಿಳಿಸುತ್ತೇನೆ." ಅವರು ಹೇಳಿದರು "ಇದಾರ್ ಅನ್ನು ಗೆದ್ದು ಕೊಂಡು ಬಾ"

"ನನ್ನನ್ನು ಕ್ಷಮಿಸಿ ಮಹಾರಾಜ್‌ಕುಮಾರ್. ಅದನ್ನು ನನ್ನ ವಿರುದ್ಧವಾಗಿ ಎತ್ತಿ ಹೇಳಬೇಡಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನಿಮ್ಮ ಬಗ್ಗೆ ನನಗೆ ಎಂಥ ಗೌರವ ಇದೆ ಎನ್ನುವುದು ನಿಮಗೆ ಗೊತ್ತು. ನಿಮ್ಮನ್ನು ಆತಂಕಕ್ಕೀಡು ಮಾಡುವಂಥದ್ದನ್ನೆಂದಿಗೂ ನಾನು ಮಾಡುವುದಿಲ್ಲ. ನಾನು ಹಿಂತಿರುಗಿದ ಕೂಡಲೇ ಆ ಗುಪ್ತಚರನನ್ನು ಕಿತ್ತೊಗೆಯುತ್ತೇನೆ. ನಿಮ್ಮನ್ನು ನಿಂದೆ ಮಾಡಿದ್ದಕ್ಕೆ ಅವನಿಗೆ ಚಾಟಿ ಏಟು ಕೊಡಿಸುತ್ತೇನೆ."

"ಸ್ವಲ್ಪ ತಡೆದುಕೊಳ್ಳಿ ರಾವ್ ರೈಮಲ್. ನೀವು ಕೋರುತ್ತಿರುವ ಕ್ಷಮೆ ನೀವು ನನ್ನ ವಿರುದ್ಧ ಮಾಡಿದ ಆಪಾದನೆಗಳಿಗಿಂತ ಕೆಟ್ಟದಾಗಿವೆ. ನೀವು ನಿಮ್ಮ ಮಾತನ್ನು ಹೊಂಚಿ ಕೇಳಿದವನಿಗೆ ಚಾಟಿ ಏಟು ಕೊಡಿಸುವ ಮುನ್ನ, ಅವನಿಗೆ ಈ ಕೆಲಸ ಒಪ್ಪಿಸಿದವರಾರು ಎಂಬುದನ್ನಷ್ಟು ನಿಮಗೆ ನೀವೇ ಕೇಳಿಕೊಳ್ಳಿ."

ನಾನು ಸ್ವಲ್ಪ ನಿಧಾನಿಸಿ, ಇತರರೂ ನಮ್ಮನ್ನು ಕೂಡಿಕೊಳ್ಳಲು ಕಾದೆ. ರಾವ್ ಹೇಳುವ ಮತ್ತಾವುದನ್ನೂ ಕೇಳುವ ಇಚ್ಛೆ ನನಗಿರಲಿಲ್ಲ. ನಾವು ಅಲ್ಲಿಂದ ಹೊರಟಾಗ, ಕಂಡ

ಬೆಟ್ಟಗುಡ್ಡಗಳು ಮತ್ತು ಕಣಿವೆಗಳು ಹೆಚ್ಚು ಕಡಿಮೆ ಈಗಾಗಲೇ ನಾವು ಓಡಾಡಿ ಬಂದ ಪ್ರದೇಶಗಳಲ್ಲಿದ್ದವುಗಳ ಪುನರಾವರ್ತನೆಯಂತಿದ್ದುವು. ನಾವು ನಮ್ಮ ದಿಕ್ಕನ್ನು ಬದಲಿಸಿ ಜೌಗು ಪ್ರದೇಶದತ್ತ ಕುದುರೆಗಳನ್ನೇರಿ ಹೊರಟೆವು. ಅವು ಸುಮಾರು ಒಂದೂವರೆ ಮೈಲಿಗಳಷ್ಟು ವಿಸ್ತಾರಕ್ಕೆ ಹರಡಿಕೊಂಡಿದ್ದುವು. ರಾವ್ ರೈಮಲ್ ನಮ್ಮನ್ನು ಎಚ್ಚರಿಸದೆ ಹೋಗಿದ್ದರೆ, ನಾವು ಅತ್ಯುತ್ಸಾಹದಿಂದ ಅತ್ತ ನುಗ್ಗಿ ಬಿಡುತ್ತಿದ್ದೆವು. ರಾಜಾಪೂರಜೀ ಕೀಕಾ ಮತ್ತು ನಾನು ಒಬ್ಬ ಮನುಷ್ಯನ ಗಾತ್ರದ ಮರದ ಕೊಂಬೆಯನ್ನು ಹಿಡಿದು ತೂಗಾಡಿ ಎಷ್ಟು ದೂರ ಸಾಧ್ಯವೋ ಅಷ್ಟು ದೂರ ನೆಗೆದೆವು. ಅದು ನಮ್ಮಿಂದ ಎಂಟು ಅಡಿ ದೂರಕ್ಕೆ ಬಿತ್ತು. ಕೆಲವೇ ಕ್ಷಣಗಳಲ್ಲಿ ಅದು ನಮ್ಮ ಕಣ್ಣಿಗೆ ಬೀಳದಂತೆ ಜೌಗಿನಲ್ಲಿ ಹುದುಗಿ ಹೋಗಿತ್ತು.

ನಾವು ನಿನ್ನೆ ನೋಡಿದ ತುಣುಕುಗಳ ದೃಶ್ಯಾವಳಿಯ ಸಕೃದ್ದರ್ಶನಕ್ಕಾಗಿ, ಮರುದಿನ ಬೆಳಿಗ್ಗೆ ಸೂರ್ಯೋದಯಕ್ಕೆ ಮುನ್ನವೇ ಹತ್ತಿರದ ಎತ್ತರವಾದೊಂದು ಗುಡ್ಡಕ್ಕೆ ನಾನು ಕುದುರೆಯ ಬೆನ್ನೇರಿ ಹೊರಟೆ. ಹತ್ತು ನಿಮಿಷಗಳ ಕಾಲ ರಾತ್ರಿಯ ಮುಚ್ಚಿದ ಬಿಂಬವು ದಿಗಂತದ ಹರಿತವಾದ ಮೊನಚು ಅಲಗಿನ ಕತ್ತಿಯಂಥ ತೆಳು ಪಂಕ್ತಿಯ ಮೂಲಕದ ಹೊರತಾಗಿ ಬೆಳಕನ್ನು ಒಳ ಬಿಡುವುದಿಲ್ಲ. ಆನಂತರ ಸೂರ್ಯನ ಬೆಳಕು ಒಮ್ಮೆಲೇ ಮುನ್ನುಗ್ಗಿ ಈ ತರಂಗಿತವಾದ ಭೂಮಿಯನ್ನು ಪ್ರವಾಹದೋಪಾದಿಯಲ್ಲಿ ತುಂಬಿಕೊಂಡು ಬಿಟ್ಟಿತ್ತು. ಊದಾ ಮತ್ತು ನೇರಿಳೆ ಬಣ್ಣಗಳು ಸೂರ್ಯಜಲದ ಬಣ್ಣಗಳಾಗಿದ್ದುವು. ಅವು ಆಕಾಶದಲ್ಲಿ ಒಂದಾದ ಮೇಲೊಂದರಂತೆ ಪಟ್ಟಿಕೆಗಳ ರೂಪದಲ್ಲಿ ಮೇಲೇರಿದುವು. ಬಹುಬೇಗನೆ ಎರಡೂ ಬಣ್ಣಗಳ ನೀರು ಪರಸ್ಪರ ಮಿಶ್ರಗೊಂಡವು, ಮತ್ತು ಕಡುಕೆಂಪು ಮದ್ಯವು ಭೂಮಿಯ ಅಂಚಿನಲ್ಲಿ ಸುತ್ತು ಗಟ್ಟಿತು. ನಾನು ನನ್ನ ಬಲಗಡೆಗೆ ದೃಷ್ಟಿ ಹಾಯಿಸಿದೆ. ಮಲ್ಲಿಕ್ ಅಯಾಜನ ಪಡೆಗಳು ಮೈದಾನದ ಮೇಲೆ ಬಂದು ಸೇರತೊಡಗಿದವು. ಶಿಸ್ತುಬದ್ಧ ಸೇನೆಯೊಂದು ತನ್ನ ಕಾರ್ಯವನ್ನು ಕರಾರುವಾಕ್ಕಾಗಿ ಮಾಡುವುದನ್ನು ನೋಡುವುದೆಂಥ ಅದ್ಭುತ ದೃಶ್ಯ! ಮಲಿಕ್ ಅಯಾಜ಼್ ನೀನು ಕಾಲವನ್ನು ಸ್ವಲ್ಪವೂ ವ್ಯರ್ಥಮಾಡಿಲ್ಲ. ಶತ್ರುವನ್ನು ಸ್ವಾಗತಿಸುವ ಏಕೈಕ ಮಾರ್ಗವೆಂದರೆ ಅವನು ಎಚ್ಚರ ತಪ್ಪಿರುವಾಗಲೇ ಹಿಡಿದು ಬಿಡುವುದು. ನಾನು ಸರಸರನೆ ಕೆಳಗಿಳಿದು ನಮ್ಮ ಬಿಡಾರವನ್ನು ತಲುಪಿ ಮಂಗಳನನ್ನು ಕರೆದು ಇನ್ನೈದು ನಿಮಿಷದಲ್ಲಿ ಸಮರ ಸಮಿತಿಯ ಮುಖಂಡರನ್ನೆಲ್ಲಾ ನನ್ನ ಶಿಬಿರಕ್ಕೆ ಕರೆ ತರುವಂತೆ ಹೇಳಿದೆ. ಈ ಬೆಳಿಗ್ಗೆ ನಾನು ಆ ಗುಡ್ಡದ ಮೇಲಕ್ಕೆ ಹೋಗದಿದ್ದರೆ ಏನಾಗಿ ಬಿಡುತ್ತಿತ್ತು? ನಿಶ್ಚಲವಾದ ಹಾಗೂ ಸಿದ್ಧತೆ ಇಲ್ಲದ ಸೇನೆಯು ಕಗ್ಗೊಲೆಗೆ ಬಹಳ ಸುಲಭವಾಗಿ ಗುರಿಯಾಗಿ ಬಿಡುವುದರ ಕುರಿತು ನಾನು ಹೇಳುತ್ತಿಲ್ಲ. ಅದಕ್ಕೆ ತೀರಾ ತದ್ವಿರುದ್ಧವಾದದ್ದರ ಕುರಿತು. ನನ್ನ ಪ್ರಶ್ನೆ ಪೂರ್ತಿ ಬೇರೆಯದೇ ಆದದ್ದು. ಗುಜರಾತಿನ ಪಡೆಗಳನ್ನು ಎದುರಿಸಲು ನಾವು ಇಲ್ಲಿಗೆ ಬರದೆ ಇದ್ದರೆ ಏನಾಗುತ್ತಿತ್ತು. ಬೇಸರದಿಂದ ಹಿಂತಿರುಗಿ ಹೋಗಿ ಬಿಡುತ್ತಿದ್ದನೆ? ಅವನು ಮುನ್ನುಗ್ಗುತ್ತಿದ್ದನೆ? ನಾವು ಯುದ್ಧದಲ್ಲಿ ಅವನನ್ನು ಕೂಡಿಕೊಳ್ಳುವ ಯೋಜನೆ ಹಾಕಿದ್ದೇವೋ ಹೇಗೆಂದು ನಮಗೆ ಸಂದೇಶ ಕಳಿಸಿಕೇಳುತ್ತಿದ್ದನೆ? ಗುಜರಾತ್ ಬೇಷರತ್ತಾಗಿ ಜಯ ಸಾಧಿಸಿದೆ ಎಂದು ಭಾವಿಸಿ ಬಿಡುತ್ತಿದ್ದನೆ? ಅವನು ಗೊಂದಲಕ್ಕೊಳಗಾಗಿ ಕೆರಳುತ್ತಿದ್ದನೆ ಮತ್ತು ಅವನ ಪಡೆಗಳು ಬೇಸರಗೊಂಡು, ಹಸಿದು ಗೊತ್ತು ಗುರಿಯಿಲ್ಲದೆ ಕಾದದ್ದಕ್ಕೆ ನಿರುತ್ಸಾಹಗೊಳ್ಳುತ್ತಿದ್ದುವೆ? ಹೋರಾಡುತ್ತಿರುವ ಸೇನೆಗಳೊಳಗೆ ಆಗಿರುವ ರಹಸ್ಯವೂ ಅನುಕ್ತವೂ ಆದ ಒಪ್ಪಂದವೇನು? ಗುಪ್ತಪ್ರಣಯಿಗಳಂತೆಯೋ, ವೈಯಕ್ತಿಕ ಗೌರವದ ವಿಷಯವನ್ನು ಇತ್ಯರ್ಥ ಮಾಡಿಕೊಳ್ಳಲು

ಭೇಟಿಯಾಗುತ್ತಿರುವ ದ್ವಂದ್ವ ಯುದ್ಧ ಮಾಡುವವರಂತೆಯೋ ನಿಗದಿತ ಸಮಯಕ್ಕೆ ಭೇಟಿಯಾಗುವಂತೆ ಅಲ್ಲ ಇದು. ಕಾಲವನ್ನು ಗೊತ್ತು ಪಡಿಸುವವರು ಯಾರು? ಎರಡೂ ಸೇನೆಗಳು ಒಬ್ಬರ ವಿರುದ್ಧ ಮತ್ತೊಬ್ಬರು ಏಕೆ ಪಕ್ಷಗಳನ್ನು ವಹಿಸಿ ನಿಲ್ಲುತ್ತವೆ? ಸೇನಾಧಿಪತಿಗೆ ನೆಗಡಿಯಾಗಿರುವ ಕಾರಣಕ್ಕೋ ಅಥವಾ ಪ್ರಿಯಕರ ಕಾಡುಗಳ್ಳನೊಟ್ಟಿಗೆ ಓಡಿಹೋಗಿರುವ ಸೈನಿಕನೊಬ್ಬನ ನಾದಿನಿಯನ್ನು ವಾಪಸ್ ಕರೆತಂದು ಅವಳಿಗೆ ಅರಿವುಂಟು ಮಾಡಬೇಕೆಂದೋ ಅವುಗಳಲ್ಲಿ ಯಾವುದಾದರೊಂದು ಸೈನ್ಯ ಅಥವಾ ಎರಡೂ ಸೇನೆಗಳು ಒಂದು ದಿನ ಯುದ್ಧ ಮಾಡುವುದಿಲ್ಲವೆಂಬ ತೀರ್ಮಾನಕ್ಕೆ ಬಂದರೆ ಹೇಗೆ? ಯಾವುದಾದರೊಂದು ಪಕ್ಷವು ಅವರ ಕಣ್ಣುಗಳಲ್ಲಿರುವ ಬೆಳಕಿಗೆ ಕುರುಡಾದರೆ ಹೇಗೆ? ಅದೇ ದಿನ, ಅದೇ ಸಮಯಕ್ಕೆ ಹೋರಾಡುವುದು ಗೌರವ ತರುವಂಥದೆಂದು ಭಾವಿಸುತ್ತೇವೆ ಏಕೆ? ಯಾವುದಾದರೊಂದು ಸೇನೆಯು, ತನ್ನ ಶಿಬಿರದಲ್ಲೇ ಉಳಿದಿರಲು ನಿರ್ಧರಿಸಿದರೆ ಅಥವಾ ತಾನೇ ಆಯ್ದುಕೊಂಡ ಬೇರೊಂದು ಸ್ಥಳದಲ್ಲಿ ಕಾಯಲು ನಿರ್ಧರಿಸಿದರೆ, ಮಹಾನ್ ಯುದ್ಧಗಳ ಫಲಿತಾಂಶವೇನಾಗುತ್ತಿತ್ತು?

ರಾವ್ ವೀರಮ್‌ದೇವ್, ರಾವ್ ಗಂಗಾ, ರಾವ್ ಉದಯ್‌ಸಿಂಹ, ಮತ್ತು ರಾಜಾ ಪೂರಜೀ ಕೀಕಾ ಇವರೆಲ್ಲ ಹಳೆಯ ಅನುಭವಸ್ಥರು. ಅಂತೇ ಅವರ ಪಡೆಗಳು. ಅವರಿಗೆ ವ್ಯವಹಾರದ ತಂತ್ರಗಳು ಚೆನ್ನಾಗಿ ತಿಳಿದಿವೆ ಮತ್ತು ಅವರು ಅಷ್ಟು ಸುಲಭವಾಗಿ ಗೊಂದಲಕ್ಕೊಳಗಾಗುವುದಿಲ್ಲ. ಅವರು ಅನೇಕ ಯುದ್ಧಗಳನ್ನು ಕಂಡಿದ್ದಾರೆ. ಅವರನ್ನು ಆಶ್ಚರ್ಯಗೊಳಿಸುವಂಥದ್ದು ಹೆಚ್ಚಿಲ್ಲ. ಹಿಂದೂಕುಶ್ ಪರ್ವತದ ಕಣಿವೆಗಳ ಮೂಲಕ ನಮ್ಮ ದೇಶದೊಳಕ್ಕೆ ಬಂದ ಈ ಆಫ್‌ಘನ್ ಅಲೆಮಾರಿಗಳ ಗುಂಪಿನ ವಿರುದ್ಧ ಹೋರಾಡುವ ವಿಷಯದಲ್ಲಿ ನಮ್ಮ ರಜಪೂತ ಪೂರ್ವಜರಿಗೆ ಒಂದೆರಡು ಸಂಗತಿಗಳ ಪರಿಚಯವಿರಬಹುದಷ್ಟೆ. ಇದು ಇತರೆ ಹಿಂದೂ ರಾಜರಿಗೆ ಗೊತ್ತಿರಲಿಲ್ಲ. ಜಿಹಾದ್ ಬಗೆಗಿನ ಮುಸ್ಲಿಮರ ಗಾಢಾನುರಕ್ತಿಗೆ ಅವರು ಕಂಡುಕೊಂಡಿದ್ದ ಪರಿಹಾರವೆಂದರೆ, ಸಾವಿನ ವೈಭವೀಕರಣ ಎಷ್ಟರಮಟ್ಟಿಗೆ ಎಂದರೆ, ಬೇರಿನ್ನಾವುದೇ ರೀತಿಯ ಸಾವು ಅವರಿಗೆ ಅದಕ್ಕಿಂತ ಕೆಳಸ್ತರದ ಬದುಕು ಮತ್ತು ಅದು ಅಗೌರವಕ್ಕೆ ಹತ್ತಿರವಾದಂಥದ್ದು ಎನಿಸುತ್ತಿತ್ತು.

ನಮ್ಮ ಎಲ್ಲ ಐವತ್ತು ಸಾವಿರ ಯೋಧರು ಚೆನ್ನಾಗಿ ಯುದ್ಧ ಮಾಡಿದರು; ಆದರೆ ಶತ್ರುಗಳ ಷರತ್ತಿನ ಪ್ರಕಾರ ಮಧ್ಯಾಹ್ನದ ಹೊತ್ತಿಗೆ ನಾವು ಏಳು ನೂರಾ ಐವತ್ತು ಯೋಧರನ್ನು ಕಳೆದುಕೊಂಡಿದ್ದೆವು. ಆಗಲೇ ನಾನೊಂದು ನಿರ್ಣಾಯಕವಾದ ತೀರ್ಮಾನವನ್ನು ತೆಗೆದುಕೊಂಡೆ. ಅದರಿಂದ ಎಲ್ಲಾ ರಾವ್‌ಗಳಿಗೂ ಹಿರಿಯರಿಗೂ ನನ್ನ ವಿಷಯದಲ್ಲಿ ಭಯಂಕರ ಕೋಪ ಬಂದಿತು ಮತ್ತು ನಾನು ನಮ್ಮ ಎಲ್ಲ ಸೇನಾಪಡೆಗಳ ನಿಂದೆಗೆ ಗುರಿಯಾಗಬೇಕಾಯಿತು. ರಾವ್ ವೀರಮ್ ದೇವ್‌ಗೆ ನನ್ನೊಂದಿಗೆ ಮಾತನಾಡುವುದೇ ಬೇಕಿಲ್ಲವಾದರೆ ಉದಯಸಿಂಹನಂತೂ ನನ್ನ ವಿಷಯಕ್ಕೆ ತಡೆದುಕೊಳ್ಳಲೇ ಆರ. ಸೈನ್ಯದಲ್ಲಿರುವ ಉದಯೋನ್ಮುಖ ಕವಿಗಳೆಲ್ಲರೂ ನೀತಿಗೆಟ್ಟ ಹೆಣ್ಣಿನ ಗಂಡ ಮತ್ತು ಹೇಡಿಯ ಬಗ್ಗೆ ಚುಟುಕಗಳನ್ನು ರಚಿಸುವುದರಲ್ಲಿ ವ್ಯಸ್ತರಾಗಿದ್ದಾರೆಂದು ರಾಜಾ ಪೂರಜೀ ಕೀಕಾ ನನಗೆ ಹೇಳುತ್ತಾರೆ.

ಬಹುಶಃ ನನ್ನ ಮೊದಲ ಕಾರ್ಯ ಮತ್ತು ಅಪರಾಧವು ಈಗ ನಡೆದದ್ದಕ್ಕೆಲ್ಲಾ ದನಿಕೊಟ್ಟಿತು ಎಂದು ನನ್ನ ಊಹೆ. ಮೊದಲಿಗೆ ನಾನು ಸೇನಾಪಡೆಗಳ ನಾಯಕತ್ವ ವಹಿಸಿರಲಿಲ್ಲ ಮತ್ತು ಮೊದಲ ಆಕ್ರಮಣದಲ್ಲಿ ಸೇನೆಯನ್ನು ನಾನು ಮುನ್ನಡೆಸಿರಲಿಲ್ಲ. ನಾನೇ ಮುನ್ನಡೆಸಬೇಕೆಂದಿದ್ದೆ. ಆದರೆ ಅದಕ್ಕಿಂತ ಹೆಚ್ಚಾಗಿ ನನಗೆ ಬೇಕಾಗಿದ್ದದ್ದು ಮೇವಾಡ

ಮತ್ತು ಅದರ ರಕ್ಷಣೆಯಲ್ಲಿರುವ ರಾಜ್ಯಗಳ, ಬೇರೆ ಬೇರೆ ಪಡೆಗಳ ಸಮುದಾಯಗಳು ಯಾವ ರೀತಿ ಒಟ್ಟಾಗಿ ಕೂಡಿಕೊಂಡು ಕೆಲಸ ಮಾಡುತ್ತಿವೆ ಎಂಬುದರ ಪರಿಚಯ ಮಾಡಿಕೊಳ್ಳುವುದು ಮತ್ತು ಎತ್ತರದ ಜಾಗದಿಂದ ಮಲಿಕ್ ಅಯಾಜ್‌ನ ಉಪಾಯ ಯೋಜನೆಯನ್ನು ವೀಕ್ಷಿಸುವುದು. ಇದನ್ನೆಲ್ಲ ಮಾಡಬೇಕಾಗಿದ್ದ ಸರಿಯಾದ ಸಮಯವೆಂದರೆ, ಯುದ್ಧ ಅರ್ಧ ಮುಂದುವರಿದಿದ್ದಾಗ. ಆದರೆ ಅದನ್ನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ ಎಂದು ಚಿತ್ತೂರಿನ ಯಾವ ಬೀದಿಯ ಮಗುವಾದರೂ ನಿಮಗೆ ಹೇಳುತ್ತೆ. ಯುದ್ಧದ ಸಂದರ್ಭದಲ್ಲಿ ನೀವು ಕಾಣೆಯಾದರೆ, ನೀವು ಮಾರಕವಾಗಿ ಗಾಯಗೊಂಡಿದ್ದೀರಿ ಎಂದು ನಿಮ್ಮ ಸೈನ್ಯ ಪಡೆಗಳು ಭಾವಿಸುತ್ತವೆ. ಅದರ ಪರಿಣಾಮ ಸೈನ್ಯದಲ್ಲೆಲ್ಲ ಗೊಂದಲ ಗಲಾಟೆಗಳು ಶುರುವಾಗಿ ಬಹುವೇಳೆ ಪಲಾಯನಕ್ಕೂ ಕಾರಣವಾಗಿ ಬಿಡುತ್ತದೆ. ನನ್ನಲ್ಲೇ ನಂಬಿಕೆ ಇರಲಿಲ್ಲ ಅನ್ನುವುದು ಆ ದೇವರಿಗೆ ಗೊತ್ತು. ನನ್ನ ಅದೃಷ್ಟವನ್ನು ಪರೀಕ್ಷೆ ಮಾಡಿ ನೋಡೋಣ ಎಂದು ಅಂದುಕೊಂಡು ಸಮರ ಸಮಿತಿಗೆ ನನ್ನ ಉದ್ದೇಶವನ್ನು ತಿಳಿಸಿದೆ. ಅವರಿಗೆ ಅದರಿಂದ ಸಂತೋಷವಾಗಲಿಲ್ಲ. ನಾನು ತೋರಿಸಿದ ನನ್ನ ನೂತನ ವಿಚಾರಗಳ ಮೊನಚನ್ನು ಅವರು ನಂಬಲಿಲ್ಲ. ನನ್ನದು ತೋರಿಕೆಯಾಗಿತ್ತು. ಆದರೆ ಅವರು ಅದನ್ನು ವ್ಯಕ್ತಪಡಿಸಲಿಲ್ಲ, ಅವರು ಅದನ್ನು ಪರೋಕ್ಷವಾಗಿ ಸೂಚಿಸಿದರು, ಪೂರಜೀ ಕೀಕಾ ಒಬ್ಬರನ್ನು ಬಿಟ್ಟು. ಇದೊಂದು ಸಲ ಏನೇ ಆದರೂ ಅವರು ನನ್ನ ಇಚ್ಛೆಯನ್ನು ಪೂರೈಸಲು ಮನಸ್ಸು ಮಾಡಿದರು. ಪೂರಜೀ ಕೀಕಾ ಇಡೀ ಸಮಿತಿಯ ಎದುರಿನಲ್ಲೇ 'ಮಹಾಸ್ವಾಮಿ ಇದನ್ನು ಮಾಡಬೇಡಿ' ಎಂದರು.

ಮಲಿಕ್ ಅಯಾಜನು ಈಗಾಗಲೇ ಯಶಸ್ವಿ ಎಂದು ಸಿದ್ಧವಾದ ಅಭಿಜಾತ ಸಮರ ವ್ಯೂಹದ ಪ್ರಕಾರವೇ ತನ್ನ ಸೇನಾಪಡೆಗಳನ್ನು ಅಣಿಗೊಳಿಸಿದ್ದುದನ್ನು ಗುಡ್ಡದ ಮೇಲೆ ನಾನಿದ್ದ ಸ್ಥಳದಿಂದಲೇ ಕಂಡುಕೊಂಡೆನು. ಅವನು ಆಯ್ಕೆ ಮಾಡಿದ್ದ ಮೈದಾನ ಉತ್ಕೃಷ್ಟವಾಗಿತ್ತು. ಸೂರ್ಯಬಿಂಬ ಅವರ ಹಿಂದುಗಡೆಗಿತ್ತು ಮತ್ತು ಅದರ ಕಿರಣಗಳು ನೇರವಾಗಿ ನಮ್ಮ ಸೈನಿಕರ ಕಣ್ಣಿಗೆ ಬೀಳುತ್ತಿತ್ತು. ಅವನೊಬ್ಬ ಸಣ್ಣ ಸಣ್ಣ ವಿವರಗಳಿಗೂ ಗಮನ ಕೊಡುವ ನಿಖರವಾದ ಮನುಷ್ಯ. ತಂದೆಯವರು ಇಲ್ಲಿಂದ ನಿರ್ಗಮಿಸಿದ ಬೆನ್ನಿಗೇ ನಾವಿನ್ನೂ ನಮ್ಮ ನೆಲೆಗಳನ್ನು ಕಂಡುಕೊಳ್ಳುವಷ್ಟರಲ್ಲೇ ನಮ್ಮ ಮೇಲೆ ಆಕ್ರಮಣ ಮಾಡುವ ತನ್ನ ಕುತಂತ್ರದ ಮೂಲಕ ತಾನು ಸಂಪ್ರದಾಯ ಶರಣನಲ್ಲವೆಂಬುದನ್ನು ತೋರಿಸಿದ್ದ. ಅವನು ಗೌರವ ಕೊಡುವಂಥ ಮನುಷ್ಯ. ಆದರೆ ಏನಾಗುತ್ತೋ ನೋಡೋಣ ಎಂದು ಅದೃಷ್ಟ ಪರೀಕ್ಷೆ ಮಾಡಿಕೊಳ್ಳಬಹುದಾದಂಥವನಲ್ಲ. ಅವನ ಆನೆ ಅಷ್ಟೇನೂ ಪ್ರಸಿದ್ಧವಲ್ಲದೊಂದು ಜಾಗದಲ್ಲಿ ಅಡಗಿಕೊಂಡಿತ್ತು; ಅವನ ಪಕ್ಕದಲ್ಲಿ ಇಪ್ಪತ್ತು ಜನ ಸುದ್ದಿ ರಾವುತರ ತಂಡ ಸಿದ್ಧವಾಗಿ ನಿಂತಿತ್ತು. ಅವರುಗಳು ಯುದ್ಧ ಮುಂದುವರಿದಂತೆಲ್ಲ ಹಾಗೂ ಆಕ್ರಮಣದ ವಿಧಾನಗಳು ಮತ್ತು ರಕ್ಷಣೆಯ ವಿಧಾನಗಳು ಬದಲಾದಂತೆಲ್ಲ ಬೇರೆ ಬೇರೆ ವಿಭಾಗಗಳಿಂದ ಅವನಿಗೆ ಸುದ್ದಿಯನ್ನು ತಂದೊಪ್ಪಿಸುತ್ತಿದ್ದರು. ಹಾಗೂ ಅವನು ಅವರಿಗೆ ಸುದ್ದಿಯನ್ನು ಕಳುಹಿಸುತ್ತಿದ್ದನು.

ಈಗ ನಾವು ಈ ಹೋರಾಟದ ತುತ್ತ ತುದಿಯಲ್ಲಿದ್ದೆವು. ಪರಸ್ಪರ ಸೆಣಸುತ್ತಿರುವ ಎರಡು ಟಗರುಗಳು, ಒಂದು ಇನ್ನೊಂದರ ರಕ್ಷಣೆಯನ್ನು ಸೀಳಿ ಹಾಕುವ ಹಾಗೆ. ಅದೊಂದು ರೀತಿಯಲ್ಲಿ ಯಾವೊಂದು ಪಕ್ಷವೂ ಒಂದಂಗುಲವನ್ನೂ ಬಿಟ್ಟುಕೊಡದಂಥ, ಬಿಗಿ ನಿಲುವಿನಿಂದ ಮುಂದುವರಿಯಲಾಗದ ಬಿಕ್ಕಟ್ಟಿನ ಹಂತ. ನಾವು ನಮ್ಮ ನಿಲುವಿಗೇ ಅಂಟಿಕೊಂಡಿರಲು ಸಾಧ್ಯವಾದರೆ, ನಾವು ಸಕಾಲದಲ್ಲಿ ಗುಜರಾತ್ ಸೇನೆಗಿರುವ

ಅನುಕೂಲಗಳನ್ನು ವ್ಯರ್ಥಗೊಳಿಸಬಹುದು. ಆಗಲೂ ಕೂಡ ನಾನು ಭ್ರಮಾತ್ಮಕ ಕಲ್ಪನೆಗಳನ್ನು ಮಾಡುತ್ತಿದ್ದೆನೆಂದು ನನಗೆ ಗೊತ್ತಿತ್ತು. ಮೇವಾಡ, ಮೆರ್ತಾ, ಜೋಧ್‌ಪುರ, ಬನ್ಸ್‌ವಾರಾ, ಡಂಗಾರ್ ಪುರ ಇವೆಲ್ಲವೂ ಒಟ್ಟಾಗಿ ಸೇರಿ ಭಯಂಕರವಾಗಿ ಶತ್ರುಸೈನ್ಯಕ್ಕೆ ಪ್ರತಿರೋಧವನ್ನೊಡ್ಡುತ್ತಿದ್ದವು. ಆದರೆ ಅವೆಲ್ಲವೂ ಬೇರೆ ಬೇರೆ ದಿಕ್ಕುಗಳತ್ತ ಎಳೆಯ ತೊಡಗಿದ್ದವು. ಕಾರಣ ನಮ್ಮದು ಒಂದೇ ಸೈನ್ಯವಲ್ಲ, ಬೇರೆ ಬೇರೆ ಘಟಕಗಳು ಒಂದೇ ಕಡೆ ಒಟ್ಟುಗೂಡಿದಂಥದು. ನಿಜ ನಾವೆಲ್ಲರೂ, ಎಲ್ಲರಿಗೂ ಸಾಮಾನ್ಯವಾದ ಭಾವನೆ ಹಾಗೂ ನಿಷ್ಠೆಯಿಂದಾಗಿ ಒಟ್ಟುಗೂಡಿದ್ದೆವು. ಆದರೆ ಭಾವದ ಏಕತೆ ಯಾವತ್ತು ತಾನೆ ಯುದ್ಧದಲ್ಲಿ ಜಯ ಸಾಧಿಸಿತ್ತು? ನಾವು ಈ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾಗ, ನಾನು ಮಾಡಬೇಕಾದ ಮೊದಲನೇ ಕೆಲಸ ಏನಾಗಿರುತ್ತೆ ಎಂದು ನನಗೆ ಗೊತ್ತಿತ್ತು. ಅದು ತಿಂಗಳುಗಳಷ್ಟೇ ಅಲ್ಲ; ಬಹುಶಃ ವರ್ಷಗಳನ್ನೇ ತೆಗೆದುಕೊಳ್ಳುತ್ತದೆ. ಆದರೆ, ನಮ್ಮ ನಾನಾ ಶಕ್ತಿಗಳನ್ನೆಲ್ಲ ಒಂದು ಮಹಾನ್ ಹೋರಾಟದ ಯಂತ್ರವಾಗಿ ಬಹುಶ್ರಮದಿಂದ ರೂಪಿಸಬೇಕಾಗುತ್ತದೆ. ಆ ಹೋರಾಟಯಂತ್ರದ ಕ್ರಿಯೆಗಳು ಅದರ ಉದ್ದೇಶಗಳಷ್ಟೇ ಏಕ ಮನಸ್ಸಿನವೂ, ಪರಸ್ಪರ ಸಂಬದ್ಧವೂ ಆದಂಥವು.

ನಾವೊಂದು ಮರಳಗೋಡೆಯ ಹಾಗೆ ನಮಗೇ ಗೊತ್ತಿಲ್ಲದಂತೆ ಕುಸಿಯ ತೊಡಗಿದ್ದೆವು. ಕುತೂಹಲದ ಸಂಗತಿ ಎಂದರೆ, ಬಿರುಕುಗಳು ಈಗ ದೊಡ್ಡದಾಗತೊಡಗಿದ್ದುವು. ಸೇನೆಯಲ್ಲಿದ್ದ ವಿವಿಧ ಘಟಕಗಳು ಈಗ ತಾವೆಲ್ಲ ಒಂದೇ ಸೈನ್ಯವೆಂದು ಹೇಳುತ್ತಿರಲಿಲ್ಲ. ನಟನೆ ಕೂಡ ಮಾಡುತ್ತಿರಲಿಲ್ಲ. ನಾನು ಸರ್ರನೆ ಕೆಳಗಿಳಿದು ಹೋದೆ. ಆಗಲಿರುವ ಹಾನಿಯನ್ನು ನಾನು ತಡೆಯುವ ಹಾಗೂ ಪ್ರವಾಹದ ದಿಕ್ಕನ್ನು ಪೂರ್ತಿ ತಿರುಗಿಸುವ ಸಂಭವವಂತೂ ದೂರವೇ ಉಳಿಯಿತು; ಆದರೆ ಆ ಬಗ್ಗೆ ಉತ್ತಮ ಪ್ರಯತ್ನವನ್ನಂತೂ ಮಾಡುತ್ತಿದ್ದೆ. ನಾನು ಪೂರಜಿ ಕೀಕಾನನ್ನು ನನ್ನ ಸುಪರ್ದಿಗೆ ತೆಗೆದುಕೊಂಡು, ಅವರ ಸೇನಾಪಡೆಗಳು ಗಟ್ಟಿಯಾಗಿ ಜೈ ಮಹಾರಾಜ್ ಕುಮಾರ್ ಎಂದು ಘೋಷಣೆ ಮಾಡಬೇಕೆಂದು ಆದೇಶಿಸುವಂತೆ ಹೇಳಿದೆ. ಅದರಿಂದ ನಮ್ಮ ಸೇನಾಪಡೆಗಳಿಗೆ ನಾನು ತಮ್ಮ ಮಧ್ಯದಲ್ಲೇ ಇದ್ದೇನೆಂದು ತಿಳಿಯುತ್ತದೆ. ಘೋಷಣೆ ಅಷ್ಟೇನೂ ಉತ್ಸಾಹ ಹುಟ್ಟಿಸಿದಂತೆ ಕಾಣಲಿಲ್ಲ. ಆದರೆ ದೂರದಲ್ಲಿ ಸೈನಿಕರು ತಮ್ಮ ರಾಜಕುಮಾರನ ಮುಖದೊಂದು ಇಣುಕು ನೋಟಕ್ಕಾಗಿ ತಮ್ಮ ರಿಕಾಪುಗಳಲ್ಲಿ ನಿಂತು ಕೊಂಡದ್ದು ನನಗೆ ಕಾಣಿಸಿತು. ನಾನು ನನ್ನ ಖಡ್ಗವನ್ನೆತ್ತಿ ನನ್ನ ತಲೆಯ ಮೇಲೆ ಗಿರ್ರನೆ ಸುತ್ತಿಸಿದೆ ಮತ್ತು 'ಜೈ ಮೇ ವಾರ್' ಎಂದು ಇನ್ನೇನು ಗಟ್ಟಿಯಾಗಿ ಘೋಷಿಸಲು ಹೊರಟಿದ್ದೆ. ಆಗ ತಕ್ಷಣ ನಾನು ಮುನ್ನಡೆಸುತ್ತಿರುವುದು ಕೇವಲ ಮೇವಾಡದ ಸೇನಾಪಡೆಗಳನ್ನಷ್ಟೇ ಅಲ್ಲ ಎಂದು ಅರಿವಾಯಿತು. ಹಾಗಾಗಿ 'ಜೈ ರಾಣಾ ಸಂಗ' ಎಂದು ನನ್ನ ಘೋಷಣೆಯನ್ನು ಬದಲಾಯಿಸಿದೆ. ಅದಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿತು. ತಂದೆಯವರ ಹೆಸರನ್ನು ಮಂತ್ರದಂತೆ ಪುನರುಚ್ಚರಿಸಿದೆ. ಅದು ಎಲ್ಲರನ್ನೂ ಪುನಶ್ಚೇತನಗೊಳಿಸುವಂತೆ ತೋರಿತು. ನನ್ನ ಸುತ್ತಲೂ ಇದ್ದ ಮಂದಿ ಈಗ ದಾಳಿಯಿಡಲು ಮೇಲೆದ್ದರು. ನಾವು ಶತ್ರು ಸೈನ್ಯವ್ಯೂಹವನ್ನು ಭೇದಿಸಿ ಮುನ್ನುಗ್ಗಲು ಸಾಧ್ಯವಾಯಿತು. ನಾವು ಅದೇ ಒತ್ತಡವನ್ನು ಕಾಪಾಡಿಕೊಂಡು ಸೈನ್ಯದ ತೀರ ಒಳಕ್ಕೆ ಪ್ರವೇಶಿಸಿದೆವು. ಆದರೆ ನಾವು ಮುಂದೆ ನುಗ್ಗಿದ ಹಾಗೆ ಬೇರೆ ಸೈನ್ಯ ಪಡೆಗಳು ಮುನ್ನುಗ್ಗಲಿಲ್ಲ ಎಂದು ತಿಳಿದು ಬಂತು. ಈಗ ನಮಗೆ ಲಭಿಸಿದ್ದು ಒಂದು ವಿನಾಶವೇ. ಗುಜರಾತ್ ಸೈನ್ಯ ಸಾಗರದಲ್ಲಿ ರಜಪೂತರ ತೀರ ಸಣ್ಣದೊಂದು ದಳ ಒಂದು ದ್ವೀಪದಂತಾಯಿತು. ಎಲ್ಲೆಡೆಯಿಂದಲೂ ನಮ್ಮ ಕಡೆ ತುಂಬ ನಷ್ಟವಾಯಿತು. ನಾನು ನಮ್ಮ ತಂದೆಯ ಮಗನೆಂಬುದನ್ನು ಸಾರ್ಥಕ ಗೊಳಿಸುವ ಹಾಗೆ

ನನಗೂ ಕೆಲವೊಂದು ಕಚ್ಚು, ಗಾಯಗಳಾದವು. ಅದರಲ್ಲಿ ಒಂದಂತೂ ತುಂಬ ದೊಡ್ಡದಾದ ಗಾಯ. ನಾನು ಯುದ್ಧವನ್ನು ನಿಲ್ಲಿಸಲು ತೀರ್ಮಾನಿಸಿದೆ.

* * *

ನಾವೊಂದು ಬಿಳಿಯ ಬಾವುಟವನ್ನು ಎತ್ತಿ ಹಿಡಿದು ಒಂದು ಚಿಕ್ಕ ಸಂದೇಶದೊಂದಿಗೆ ರಾಜಾಪೂರಜೀ ಕೀಕಾನನ್ನು ಮಲಿಕ್ ಅಯಾಜನೆಡೆಗೆ ಕಳಿಸಿಕೊಟ್ಟೆವು.

> ಗುಜರಾತಿನ ಸೇನಾಪಡೆಗಳ ಗೌರವಾನ್ವಿತ ಮಹಾ ದಂಡನಾಯಕರಾದ ಮಲ್ಲಿಕ್ ಅಯಾಜ್ ಅವರಿಗೆ:
>
> ತಮಗೆ ಶುಭಾಶಯಗಳು, ಘನತೆವೆತ್ತ ಮಹಾಸ್ವಾಮಿಯವರಾದ ಮಹಾರಾಜ್ ಕುಮಾರರು ತೀವ್ರವಾಗಿ ಗಾಯಗೊಂಡಿದ್ದಾರೆ. ಆದ್ದರಿಂದ, ಶಾಂತಿಗಾಗಿ ಮನವಿ ಮಾಡುತ್ತಿದ್ದಾರೆ. ಅವರು ಗುಣಮುಖರಾದ ಕೂಡಲೇ ತಮ್ಮೊಂದಿಗೆ ಶರಣಾಗತಿಯ ಷರತ್ತುಗಳನ್ನು ಚರ್ಚಿಸಬಹುದೆ?
>
> ತಮ್ಮ ನಂಬುಗೆಯ
> ರಾಜಾ ಪೂರಜೀ ಕೀಕಾ
> ಘನತೆವೆತ್ತ ಮಹಾರಾಜ್‌ಕುಮಾರರ ಪರವಾಗಿ

ಅಂಥದೊಂದು ಅಪಮಾನದ ಪತ್ರಕ್ಕೆ ತನ್ನ ಸಹಿಹಾಕಲು ರಾವ್ ವೀರಮ್‌ದೇವ್ ನಿರಾಕರಿಸಿದ್ದರಿಂದ, ರಾಜಾ ಪೂರಜೀ ಕೀಕಾ ಆತಿಥೇಯನಾಗಿ ಅತಿಥಿಗಳನ್ನು ಸತ್ಕರಿಸಬೇಕಾಯಿತು. ನಾವು ಎರಡು ಗಂಟೆಗಳಲ್ಲದೆ ಹೋದರೆ ಕಡೇ ಪಕ್ಷ ಇನ್ನೊಂದು ಗಂಟೆಯವರೆಗಾದರೂ ಹೋರಾಡಬಹುದಿತ್ತೆಂದು, ಅವರು ಹಾಗೂ ಸೇನೆಯಲ್ಲಿನ ಪ್ರತಿ ದಳಪತಿ ಅಧಿಕಾರಿ ಮತ್ತು ಸೈನಿಕನ ಅಭಿಪ್ರಾಯವಾಗಿತ್ತು. ನಮ್ಮ ಕಡೆಯ ಗಾಯಾಳುಗಳ ಸಂಖ್ಯೆ ದೊಡ್ಡದಿತ್ತು ಎಂಬುದು ನಿಜ. ಆದರೆ ಗಾಬರಿ ಪಡುವಂಥದಲ್ಲ. ನಾವು ಪರಿಸ್ಥಿತಿಯನ್ನು ಮಲ್ಲಿಕ್ ಅಯಾಜ್ ಮತ್ತು ಅವನ ಕಡೆಯವರ ವಿರುದ್ಧವೇ ತಿರುಗಿಸಿರಲಿಕ್ಕೂ ಸಾಕು, ಆದರೆ ಅದನ್ನು ಯಾರೂ ಎಂದಿಗೂ ಹೇಳಲಾಗುವುದಿಲ್ಲ. ಕಡೇ ಪಕ್ಷ ನಾವು ನಮ್ಮ ಸಾಮರ್ಥ್ಯವನ್ನು ಸಾಧಿಸಿ ತೋರಿಸುತ್ತಿದ್ದೆವು. ಮಹಾರಾಜ್ ಕುಮಾರ್‌ರ ನಾಯಕತ್ವದಲ್ಲಿ ನಮ್ಮ ಸೇನಾಪಡೆಗಳು ಕಾದುತ್ತಿದ್ದ ಮೊದಲ ಯುದ್ಧ ಇದು. ನಮ್ಮ ಸೇನಾಪಡೆಗಳಿಗೆ, ಅದಕ್ಕಿಂತ ಮುಖ್ಯವಾಗಿ ಶತ್ರುವಿಗೆ ರಾಣಾ ಅವರ ಹಿರಿಯ ಮಗ ಏನು ಸಂಕೇತವನ್ನು ಕಳಿಸಿದ ಹಾಗಾಯಿತು? ಮತ್ತೆ ಇನ್ನು ಯಾರು ತಾನೆ ಮೇವಾಡದ ಸೇನಾಪಡೆಗಳನ್ನು ಗಂಭೀರವಾಗಿ ಪರಿಗಣಿಸುವರು? ದೇಶದ ಅತ್ಯಂತ ಪ್ರಬಲ ಸಾಮ್ರಾಜ್ಯಗಳು ಭಯ ಮತ್ತು ಅಸೂಯೆಪಡುವಂಥ ಮಹಾನ್ ಕೀರ್ತಿಯನ್ನು ಸಂಪಾದಿಸಲು ರಾಣಾ ಅವರು ಇಡೀ ಜೀವಮಾನವೆಲ್ಲ ಕಳೆದಿದ್ದರು. ರಾಣಾ ಅವರ ಉತ್ತರಾಧಿಕಾರಿ ತಮ್ಮ ಈ ಒಂದು ಮುಂದಾಲೋಚನೆಯಿಲ್ಲದ ನಡೆಯಿಂದ, ರಾಣಾ ಅವರು ಅತ್ಯಂತ ಎಚ್ಚರಿಕೆಯಿಂದ ನಿರ್ಮಿಸಿದ ನಿರ್ಧಾರ ಮತ್ತು ನಿರೋಧಗಳ ಈ ಭವ್ಯ ಭವನವನ್ನು ಕೆಡವಿ ಹಾಕಿದ್ದಾರೆ. ಮಹಾರಾಜ್ ಕುಮಾರ್ ಅವರಿಗೆ ಯುದ್ಧ ಸಂದರ್ಭದಲ್ಲಿ ಆಗಿರುವ ಗಾಯಗಳು ಭಾರಿಯಾದವೇ. ಆದರೆ ಖಂಡಿತಾ ಗಂಭೀರ ಸ್ವರೂಪದವಲ್ಲ. ಶಾಂತಿ ಒಪ್ಪಂದದ ಬೆಲೆಯಾಗಿ ಮಹಾರಾಜ್‌ಕುಮಾರ್ ಅವರು ಗುಜರಾತಿಗೆ ಯಾವ ಪ್ರಾಂತ್ಯವನ್ನು ಬಿಟ್ಟುಕೊಡಲು ಯೋಚಿಸಿದ್ದಾರೆ?

"ಅವನ ವಯಸ್ಸನ್ನು ನೋಡಬೇಡಿ" ತಂದೆಯವರು ಈ ಒಗಟಿನಂಥ ಶಬ್ದಗಳಲ್ಲಿ ನನ್ನ ಹಿರಿಯ ದಳಪತಿಗಳಿಗೆ ನನ್ನ ಬಗ್ಗೆ ಶಿಫಾರಸು ಮಾಡಿದ್ದರು. ಅವು ಈಗ ನಿಜವಾಗುತ್ತಿದ್ದುವು.

ದುಡುಕು ಬುದ್ಧಿಯ ಚಂಚಲ ಸ್ವಭಾವದ ಹದಿಹರೆಯದವನಷ್ಟೇ ನಂಬಲರ್ಹನೆಂದು ಋಜುವಾತು ಪಡಿಸತೊಡಗಿದ್ದೆ. ದುಡುಕು ಖಂಡಿತಾ ಎಂಥ ಯುಕ್ತವಾದ ಶಬ್ದ. ಆದರೆ ರಾವ್ ವೀರಮ್ ದೇವ್ ಆಗಲಿ ಅಥವಾ ಅವರ ಸಹಚರರಾಗಲಿ ಶಬ್ದ ಚಮತ್ಕಾರ ಮಾಡುವ ಮನಸ್ಥಿತಿಯಲ್ಲಿರಲಿಲ್ಲ. ಈಗ ನನ್ನ ಕಷ್ಟಗಳು ಏಕಕಾಲಕ್ಕೆ ಕುದಿಬಿಂದುವಿಗೆ ಬಂದಿದ್ದುವು. ಅದೂ ಅಷ್ಟೊಂದು ಪಾತ್ರೆಗಳಲ್ಲಿ. ಯಾವುದನ್ನು ಮೊದಲು ವಿಚಾರಿಸಿಕೊಳ್ಳಬೇಕು ಎನ್ನುವುದನ್ನು ನಿರ್ಧರಿಸುವುದೇ ಕಷ್ಟವಾಯಿತು. ನಮ್ಮ ಕುಟುಂಬದ ನನ್ನ ದುರಹಂಕಾರಿ ಭಾವ ಮೈದುನ ರಾವ್ ರೈಮಲ್, ಅವನ ವೈವಾಹಿಕ ಸಂಬಂಧ ಕುರಿತಂತೆ ನಮ್ಮ ತಂದೆಯವರು ಬಡಪಾಯಿ ತಂಗಿಯನ್ನು ನೆನದಾಗಲೆಲ್ಲ ವಿಷಾದ ಪಡುತ್ತಿದ್ದರು. ರಾಜನೀತಿಯ ಸಂದಿಗ್ಧ ಕಾರಣಗಳಿಗಾಗಿ ಅವರ ಅಧಿಕಾರಸ್ಥಾನದ ಉಮೇದುವಾರಿಕೆಯನ್ನವರು ಬೆಂಬಲಿಸಬೇಕಾಗಿತ್ತು. ಅಂಥ ವ್ಯಕ್ತಿ ಈಗ ನನ್ನ ಶರಣಾಗತಿಯಂಥ ಅವಮಾನಕರವಾದ ನಡೆಯನ್ನು ತಿಳಿಸುವ ಹಾಗೂ ನನ್ನನ್ನು ಪದಚ್ಯುತಗೊಳಿಸಿ ಆ ಸ್ಥಾನದಲ್ಲಿ ರಾವ್ ವೀರಮ್ ದೇವ್‌ರನ್ನು ನೇಮಿಸಬೇಕೆಂದು ಕೋರುವ ಮನವಿ ಪತ್ರಕ್ಕೆ ಸಣ್ಣ ಸಂಸ್ಥಾನಗಳ ಮುಖ್ಯಸ್ಥರ, ವಿಭಾಗೀಯ ದಳಪತಿಗಳ ಮತ್ತು ಸಾಮಾನ್ಯ ಸೈನಿಕರ ಬೆಂಬಲವನ್ನು ಕೋರುವ ಪ್ರಚಾರದಲ್ಲಿ ವ್ಯಸ್ತನಾಗಿದ್ದನು.

"ಸೇನೆಯನ್ನು ದಂಗೆ ಏಳಲು ಅವನು ಪ್ರಚೋದಿಸುವುದಕ್ಕೆ ಮುಂಚೆ, ನಾನೀ ಅಸಂಬದ್ಧವನ್ನು ನಿಲ್ಲಿಸಬೇಕೆ ಹೇಳಿ ರಾಜಕುಮಾರ" ಎಂದು ರಾಜಾ ಪೂರಜೀಕೀಕ ನನ್ನನ್ನು ಕೇಳಿದರು?

"ಬೇಡ, ಬೇಡವೇ ಬೇಡ. ಅವನ ಈ ಮಹತ್ ಪ್ರಚಾರ ಕಾರ್ಯದಲ್ಲಿ ಅವನೆಷ್ಟರ ಮಟ್ಟಿಗೆ ಯಶಸ್ವಿಯಾಗುತ್ತಾನೋ ಎಂದು ತಿಳಿಯುವ ಕುತೂಹಲವಿದೆ ನನಗೆ. ಹಾಗೆಯೇ ನಮ್ಮ ಸೈನ್ಯದ ಅಸಂತೋಷ ಯಾವ ಮಟ್ಟದ್ದು ಎಂಬುದರ ಸರಿಯಾದ ಕಲ್ಪನೆ ನಮಗೆ ಸಿಕ್ಕುತ್ತದೆ. ಹಾಗೂ ಅದು ಎಲ್ಲಿಯವರೆಗೂ ಈ ವಿಷಯದಲ್ಲಿ ಮುಂದುವರಿಯಲಿಚ್ಛಿಸುತ್ತದೆ ಎಂಬುದು ತಿಳಿಯುತ್ತದೆ. ಏನೇ ಆಗಲಿ ಅವನ ಮೇಲೆ ತೀವ್ರವಾದ ನಿಗಾ ಇಟ್ಟಿರಿ. ಹರಿಕಾರ ಪತ್ರವನ್ನು ತೆಗೆದುಕೊಂಡು ಇಲ್ಲಿಂದ ಹೊರಡುವಾಗ, ಅವನನ್ನು ಮುಂಚೆಯೇ ತಡೆದು ನಿಲ್ಲಿಸಬೇಕೆಂಬುದು ನನ್ನ ವಿಚಾರ. ಆ ಮನುಷ್ಯನನ್ನು ವಶಕ್ಕೆ ತೆಗೆದುಕೊಳ್ಳಿ. ಆದರೆ ಈ ವಿಷಯ ಬೇರೆ ಯಾರಿಗೂ ಗೊತ್ತಾಗದೆ ಇರುವುದನ್ನು ಖಚಿತಪಡಿಸಿಕೊಳ್ಳಿ."

"ಏನು ತಂತ್ರ ಹೂಡಬೇಕು ಎಂದಿದ್ದೀರಿ ಮಹಾರಾಜ್ ಕುಮಾರ್" ಎಂದು ನನ್ನ ಹಳೆಯ ಆತ್ಮೀಯ ಮಿತ್ರ ಪೂರಜೀ ಕೀಕ ತನ್ನ ಆ ದಿನದ ಮೊದಲ ಮುಗುಳ್ನಗೆಯೊಂದಿಗೆ ಕೇಳಿದರು.

"ಏನೂ ತಂತ್ರಗಿಂತ್ರ ಇಲ್ಲ ರಾಜಾ. ನಾನು ಅತ್ಯಂತ ಆಸಕ್ತಿಯಿಂದಿದ್ದೇನೆ."

ನಾನು ಹೆಚ್ಚು ಹೇಳಬೇಕಾಗಿಯೇ ಇರಲಿಲ್ಲ. ತೇಜ್ ನನ್ನ ಮೇಲೆ ತಿರುಗಿ ಬಿದ್ದದ್ದು ಕೇಳಿಸುತ್ತಿತ್ತು.

"ಮಹಾರಾಜ್ ಕುಮಾರ್, ಹೊರಗೆ ಬನ್ನಿ. ಶತ್ರುವಿನೊಂದಿಗೆ ನೀವು ಒಳಒಪ್ಪಂದ ಮಾಡಿಕೊಂಡಿದ್ದೀರಿ ಎಂದು ನಾನು ನಿಮ್ಮ ಮೇಲೆ ಸಾರ್ವಜನಿಕವಾಗಿ ಆರೋಪ ಮಾಡ್ತಾ ಇದ್ದೀನಿ. ಅಷ್ಟೇ ಅಲ್ಲ, ಸಾಯುವವರೆಗೂ ನೀವು ಹೋರಾಡಿ ಎಂದು ಸವಾಲು ಹಾಕುತ್ತೇನೆ. ಮಹಾರಾಜ್‌ಕುಮಾರ್ ಅವರು ಇನ್ನೇನು ಇಷ್ಟರಲ್ಲೇ ಇದಾರ್ ಮತ್ತು ಮೇವಾಡದ ಒಂದು ದೊಡ್ಡ ಭಾಗವನ್ನೇ ಮುಝಾಫರ್‌ಷಾಗೆ ಒಪ್ಪಿಸಿ ಬಿಡುತ್ತಾರೆ ಎಂದು ಇಲ್ಲಿ ಸೇರಿರುವ ಎಲ್ಲರಿಗೂ ಎಚ್ಚರಿಸುತ್ತಾ ಇದ್ದೇನೆ. ಮೇವಾಡದ ಸಿಂಹಾಸನವನ್ನು ನೀವು

ಕಸಿದುಕೊಳ್ಳಲು ರಾಜಕುಮಾರ ಬಹಾದುರ್ ಮತ್ತು ಅವರ ತಂದೆಯೊಂದಿಗೆ ಏನು ಒಪ್ಪಂದ ಮಾಡಿಕೊಂಡಿದ್ದೀರಿ ನೀವು? ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳಬಹುದು. ಕಾರಣ ನೀವು ಚಟ್ಟ ಏರಿದ ಹೊರತು ನಾನು ಬಿಡುವುದಿಲ್ಲ".

ಈಗೇನು ಮಾಡುವುದು? ನಾನು ನನ್ನ ಸೋದರ ಸಂಬಂಧಿಯ ರಕ್ತವನ್ನು ಚೆಲ್ಲುವುದೋ ಅಥವಾ ತನ್ನ ಸೋದರನ ಸಾವನ್ನು ಒಪ್ಪಿಕೊಳ್ಳಲಾಗದೆ ಉದ್ವೇಗಕ್ಕೊಳಗಾಗಿರುವ ತರುಣ ಗೂಳಿಯಿಂದ ಕೊಲ್ಲಲ್ಪಡುವುದೋ, ಇಲ್ಲ. ಪ್ರತೀಕಾರ ತೆಗೆದುಕೊಳ್ಳಲು ಅವನನ್ನು ತಡೆದ ಮನುಷ್ಯನನ್ನು ಹಾಗೇ ಹೋಗಲು ಬಿಡುವುದೆ? ನಾನೇನು ಮಾಡಬೇಕೆಂದು ನಿನ್ನ ಇಚ್ಛೆ ದೇವರೆ. ಈ ಯುವಕನ ಯಾತನೆಯನ್ನು ಕೊನೆಗೊಳಿಸಲಾರೆಯಾ ಏಕಲಿಂಗಜೀ. ಮತ್ತು ಅವನ ಗತಿಸಿದ ಸೋದರನಿಗಿಂತ ಅವನು ನನಗೆ ಎರಡರಷ್ಟು ಪ್ರಿಯನಾದವನೆಂದು ಅವನಿಗೆ ಅರ್ಥಮಾಡಿಕೊಳ್ಳುವಂತೆ ಮಾಡಲಾರೆಯಾ?

"ಹೊರಗೆ ಬಾ ದ್ರೋಹಿ. ಇಲ್ಲದೆ ಹೋದರೆ ನಿನ್ನ ಶಿಬಿರಕ್ಕೆ ಬೆಂಕಿ ಹಚ್ಚಿ ನೀನೆಂದೂ ಜೀವಂತವಾಗಿ ಹೊರಬರದಂತೆ ಮಾಡುವೆ"

ಅದು ಹಾಗಿರಲಿ. ಆದರೆ ಅಷ್ಟು ಹೊತ್ತಿಗೆ ಆಗಲೇ ಅವನು ಉರಿಯುತ್ತಿರುವ ಬೆಂಕಿಯನ್ನು ನಾನು ಇರುತ್ತಿದ್ದ ನನ್ನ ತಂದೆಯವರ ಇಳಿಜಾರಾದ ಶಿಬಿರದ ಛಾವಣಿಯ ಮೇಲೆ ಎಸೆದುಬಿಟ್ಟಿದ್ದನು. ರಾಜಾಪೂರಜೀ ಕೀಕಾ ಮತ್ತು ನಾನು ಅತ್ಯಂತ ಮುಖ್ಯವಾದ ದಾಖಲೆಗಳನ್ನು ರಕ್ಷಿಸಿ ಹೊರಕ್ಕೆ ಓಡುವಷ್ಟರಲ್ಲಿ, ಬೆಂಕಿ ಜೋರಾಗಿ ಹಬ್ಬುತ್ತಿತ್ತು. ಅದೃಷ್ಟವಶಾತ್ ಆದಿನ ಗಾಳಿ ಇರಲಿಲ್ಲ; ಅಲ್ಲದೆ ಉಳಿದ ಶಿಬಿರಗಳು ತಂದೆಯವರ ಶಿಬಿರದಿಂದ ದೂರ ದೂರದಲ್ಲಿದ್ದರಿಂದ, ಬೆಂಕಿ ಅಷ್ಟು ಸುಲಭವಾಗಿ ಹಬ್ಬಲಿಲ್ಲ.

ತನ್ನದೇ ಕೃತ್ಯದಿಂದ ತೇಜ್ ಉತ್ತೇಜಿತಗೊಂಡಿದ್ದು ಸ್ಪಷ್ಟವಿತ್ತು. ನಾಟಕೀಯವಾಗಿ ಗಹಗಹಿಸಿ ನಕ್ಕು ತನ್ನ ಖಡ್ಗವನ್ನು ಗಾಳಿಯಲ್ಲಿ ಬೀಸಿದನು.

"ಮುಳುಗುತ್ತಿರುವ ಹಡಗನ್ನು ಬಿಟ್ಟು ಇಲಿಗಳೆಲ್ಲ ಹೇಗೆ ಹೊರಗೆ ಬರ್ತಾ ಇದ್ದಾವೆ ನೋಡಿ" ಎಂದನು.

ಸಮುದ್ರಕ್ಕೆ ಸಂಬಂಧಿಸಿದ ಅವನ ಪ್ರತಿಮೆಯ ಸೂಚಿತಾರ್ಥಗಳ ಬಗ್ಗೆ ನನಗೇನೂ ಖಾತರಿ ಇರಲಿಲ್ಲ. ಆದರೆ ನಾನು ಹೊರಬಂದು ಅವನಿಗೆ ಬದಲು ಹೇಳಲಾಗದಂತೆ ಆದೇಶಿಸಿದೆ. "ತೇಜ್ ಈ ದಾಖಲೆಗಳನ್ನೆಲ್ಲ ನನಗೋಸ್ಕರ ಹಿಡಿದುಕೋ?" ಅವನು ಯೋಚನೆಯೇ ಮಾಡದೆ ಸಹಜವೆಂಬಂತೆ ಕಾಗದ ಪತ್ರಗಳ ರಾಶಿಯನ್ನು ಹಿಡಿದುಕೊಳ್ಳಲು ತನ್ನ ಕೈಗಳನ್ನು ಮುಂದೆ ಚಾಚಿದ. ಕಾಗದ ಪತ್ರಗಳು ಅವನ ಕೈ ಸೇರಿದ್ದುವು, ನನ್ನ ಕಾಲಿನ ಮಂಡಿ ಅವನ ಶಿಶ್ನಕ್ಕೆ ಡಿಕ್ಕಿ ಹೊಡೆಯಿತು ಮತ್ತು ನಾನು ಅವನ ಮುಖಕ್ಕೆ ಜೋರಾಗಿ ಗುದ್ದಿದೆ. ತೇಜ್ ಆಘಾತಕ್ಕೊಳಗಾದ. ನನ್ನ ಏಟುಗಳು ಸಾಕಷ್ಟು ಜೋರಾಗಿಯೇ ಇದ್ದರೂ, ನನ್ನ ಏಟುಗಳಿಗಿಂತ ಹೆಚ್ಚಾಗಿ, ನನ್ನ ಮೃಗೀಯ ಹೇಡಿತನದ ವರ್ತನೆಯಿಂದಾಗಿ ಅವನು ಆಘಾತಕ್ಕೊಳಗಾಗಿದ್ದನು. ನನಗಿದ್ದ ಅನುಕೂಲ ಪರಿಸ್ಥಿತಿಯಲ್ಲಿ ನಾನು ಮುಂದುವರೆದೆ. ಅವನು ಎಚ್ಚೆತ್ತುಕೊಳ್ಳಲು ಅವಕಾಶಕೊಡಲಿಲ್ಲ. ಅವನ ಕುತ್ತಿಗೆಯ ಹಿಂದೆ ಕೊಚ್ಚಿ ಮಾಡಿದ ಗಾಯದಿಂದ ಅವನು ಪ್ರಜ್ಞೆ ಕಳೆದುಕೊಂಡು ಕೆಳಕ್ಕೆ ಬೀಳುವ ಹಾಗೆ ಮಾಡುವುದಕ್ಕೆ ಮುಂಚೆ ಅವನ ಕಿವಿಯಲ್ಲಿ ನೋಡಯ್ಯ ಮೂರ್ಖ ನೀನು ನನಗೆ ಜೀವಂತವಾಗಿ ಬೇಕು, ಶತ್ರುವಾಗಿ ಅಲ್ಲ, ಮಿತ್ರನಾಗಿ ಮತ್ತು ಸಹೋದ್ಯೋಗಿಯಾಗಿ. ಅವನು ವಿಪರೀತವಾಗಿ ಪೆಟ್ಟು ತಿಂದಿದ್ದರಿಂದ ನನ್ನ ಮಾತು ಗ್ರಹಿಸಲಿಲ್ಲ. ಅವನು

ಉರುಳಿ ಬಿದ್ದ. ಸೈನಿಕರು, ರಾಜಪರಿವಾರದ ಹಿರಿಯರ ಪರಿಗಣನೆಯಲ್ಲಿ ನಾನು ಎತ್ತರಕ್ಕೆ ಏರದೆ ಇದ್ದರೂ ಅವರ ಮೇಲೆ ಅಚ್ಚಳಿಯದ ಪ್ರಭಾವವನ್ನು ಖಂಡಿತಾ ಉಂಟುಮಾಡಿದ್ದೆ. ನಾನು ಎಷ್ಟೆಲ್ಲ ಕೆಳಮಟ್ಟಕ್ಕೆ ಇಳಿಯಬಹುದೆಂಬ ವಿಚಾರದಿಂದಲೇ ಅವರೆಲ್ಲ ಮೂಕವಿಸ್ಮಿತರಾಗಿದ್ದರು.

"ಅವನನ್ನು ಕೂಡಿ ಹಾಕಿ ಬೀಗಹಾಕಿ" ಎಂದು ನಾನು ಹೇಳಿದೆ. ನಾನು ಯಾರೊಬ್ಬರಿಗೂ ನಿರ್ದಿಷ್ಟವಾಗಿ ಹಾಗೆ ಹೇಳದೆ ಇದ್ದರೂ ಕೊನೇ ಪಕ್ಷ ಏಳು ಜನ ಸೈನಿಕರು ನನ್ನ ಆಜ್ಞೆಯನ್ನು ಪಾಲಿಸಲು ಮುಂದೆ ನುಗ್ಗಿದರು.

"ರಾವ್ ವೀರಮ್ ದೇವ್ ನಾನು ನಿಮ್ಮ ಶಿಬಿರದಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳಲೆ?"

"ನಾನು ಅದನ್ನು ಈಗಲೇ ಖಾಲಿ ಮಾಡ್ತೀನಿ ಮಹಾಸ್ವಾಮಿ" ಎಂದು ಅವರು ನೀರಸವಾಗಿ ಪ್ರತಿಕ್ರಿಯಿಸಿದರು. "ನನ್ನನ್ನು ಸ್ವಾಗತಿಸಲು ನೀವು ಅಲ್ಲಿ ಇಲ್ಲದೆ ಹೋದರೆ, ನಿಮ್ಮ ಆತಿಥ್ಯವನ್ನು ನಾನು ಸವಿಯಲು ಸಾಧ್ಯವಿಲ್ಲ."

ನಾನು ಅವರ ಜೊತೆಯಲ್ಲಿ ಸ್ವಲ್ಪ ಕಾಲ ಕಳೆಯಬೇಕು ಎಂದಿದ್ದಾಗ, ರಾವ್ ತನ್ನ ಮಾಮೂಲಿ ಸೌಜನ್ಯವನ್ನು ನನಗೆ ಮಾರಾಟ ಮಾಡಿ ತಪ್ಪಿಸಿಕೊಳ್ಳುವುದಕ್ಕೆ ಬಿಡಲು ಸಿದ್ಧವಿರಲಿಲ್ಲ. "ಇಲ್ಲ ಮಹಾಸ್ವಾಮಿ ಒಬ್ಬ ಆತಿಥೇಯನಾಗಿ ನಾನು ಕರ್ತವ್ಯದಿಂದ ಚ್ಯುತನಾಗುವುದಿಲ್ಲ."

"ಅದು ನಿಮ್ಮ ಸಜ್ಜನಿಕೆ. ಮಂಗಳ್ ನನಗೆ ಇನ್ನೊಂದು ಶಿಬಿರವನ್ನು ಸಿದ್ಧಪಡಿಸು. ಅದು ಸಿದ್ಧವಾದ ಮೇಲೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗು."

ರಾವ್‌ರ ನಿವಾಸ ತುಂಬ ಶಿಸ್ತಿನದು ಮತ್ತು ಕಟ್ಟುನಿಟ್ಟಿನದು. ಅವರು ತುಂಬ ಬಿಗಿದುಕೊಂಡು, ಮಾತನಾಡಲಾರದೆಯೋ, ಮಾತನಾಡಲಿಷ್ಟವಿಲ್ಲದೆಯೋ ಕುಳಿತುಕೊಳ್ಳುತ್ತಿದ್ದರು. ನಾನು ಅದೆಷ್ಟು ಆಶ್ಚರ್ಯವೆನಿಸುವಷ್ಟು ವೇಗವಾಗಿ ಜನಗಳನ್ನು ದೂರಮಾಡಿಕೊಳ್ಳುತ್ತಿದ್ದೆನೆಂದರೆ, ಬಹುಬೇಗನೆ ಇಡೀ ದೇಶದಲ್ಲಿ ನನಗೆ ಒಬ್ಬನೇ ಒಬ್ಬ ಗೆಳೆಯನೂ ಇಲ್ಲದಂತಾಗುತ್ತಾನೆ. ರಾವ್ ವೀರಮ್ ದೇವ್‌ರಂಥ ಮುಖಂಡರ ಕ್ರಿಯಾಶೀಲ ಸಹಕಾರವಿಲ್ಲದೆ ನಾನು ಹೇಗೆ ತಾನೆ ಈ ಸೈನಿಕ ಕಾರ್ಯಾಚರಣೆಯಲ್ಲಿ ಮುಂದುವರಿಯಲು ಸಾಧ್ಯ? ಮನವೊಲಿಸುವುದು ನನಗೇ ತುಂಬ ಕಷ್ಟವಾಗಿ ಈಗಾಗಲೇ ಅದು ಪ್ರಾರಂಭವಾಗಿ ಬಿಟ್ಟಿದೆ ಎನ್ನುವುದು ಅನುಭವಕ್ಕೆ ಬರುತ್ತಾ ಇದೆ. "ಇಲ್ಲಿಯವರೆಗೂ ನಿಮ್ಮ ವಿಶ್ವಾಸವನ್ನು ಪ್ರೇರಿಸುವಂಥದ್ದನ್ನು ನಾನು ಹೆಚ್ಚು ಮಾಡಿಲ್ಲ. ಎಂದು ನನಗೆ ಗೊತ್ತಿದೆ ಆದರೆ ಈ ಮಧ್ಯಾಹ್ನ ಯುದ್ಧವನ್ನು ಮುಂದುವರಿಸಿದ್ದರೆ, ನಮ್ಮ ಕಡೆ ಗಾಯಾಳುಗಳ ಸಂಖ್ಯೆಯನ್ನು ಹೆಚ್ಚಿಸುವುದರ ಹೊರತು ನಾವು ಗಳಿಸುವಂಥದ್ದೇನಿರಲಿಲ್ಲ ಎಂಬುದನ್ನು ಈ ನಾಲ್ಕು ಗೋಡೆಗಳ ನಡುವಿನ ಏಕಾಂತದಲ್ಲಿ ಒಪ್ಪುತ್ತೀರಲ್ಲವೆ?" ಈ ಪ್ರಶ್ನೆಯಿಂದ ರಾವ್ ಇರುಸು ಮುರುಸುಗೊಂಡಂತೆ ಕಂಡರು ಮತ್ತು ಕೆಮ್ಮಿ ಗಂಟಲನ್ನು ಸರಿಪಡಿಸಿಕೊಳ್ಳತೊಡಗಿದರು. ಆದರೆ ಅವರಿಗೆ ಸಂಕೋಚವುಂಟು ಮಾಡುವ ಇರಾದೆ ನನಗಿರಲಿಲ್ಲ. "ಈಗ ಅದೆಲ್ಲಾ ಆದ ಮೇಲೆ ಸೇತುವೆ ಕೆಳಗೆ ಸಾಕಷ್ಟು ನೀರುಹರಿದಿದೆ. ಒಂದು ಸ್ವಲ್ಪಕಾಲ ನನ್ನೊಂದಿಗೆ ಮತ್ತು ಕೆಲವೊಮ್ಮೆ ತೋರುವ ನನ್ನ ಅಸಾಂಪ್ರದಾಯಿಕ ರೀತಿಗಳೊಂದಿಗೆ ತಾಳ್ಮೆಯಿಂದಿರುವಿರಾ?"

"ನಿಮ್ಮ ಮನಸ್ಸಿನಲ್ಲೇನಿದೆ ಎನ್ನುವುದು ನನಗೆ ಗೊತ್ತಾಗದ ಹೊರತು ನಾನು ನಿಮ್ಮ ಪ್ರಶ್ನೆಗೆ ಉತ್ತರಿಸಲಾರೆ"

"ನಾನೊಂದು ಕ್ರಿಯಾ ಯೋಜನೆ ಹೊಂದಿದ್ದೇನೆಂದು ಹೇಳಿದರೆ, ನಾನು ಬಿಚ್ಚು ಮನಸ್ಸಿಗಿಂತಾ ಕಡಮೆ ಇರುತ್ತೇನೆ." ನಾನು ಬಿಚ್ಚು ಮನಸ್ಸಿಗಿಂತ ಕಡಮೆ ಇದ್ದದ್ದು ನಿಜ. ತಕ್ಷಣದಲ್ಲಿ ನನ್ನನ್ನು ಯಾರೂ ಅಲ್ಲಾಡದಂತೆ ಹಿಡಿದುಕೊಳ್ಳುವುದು ನನಗೆ ಬೇಕಿಲ್ಲ. "ನಾನು ನನ್ನ ನೆಲೆಯನ್ನು ಕಂಡುಕೊಂಡು ನನ್ನ ದಾರಿಯನ್ನು ಕಂಡುಕೊಳ್ಳಲು ನೀವು ನನಗೆ ಕಾಲಾವಕಾಶ ಕೊಡುತ್ತೀರಾ? ಎಲ್ಲ ಮುಖಂಡರು ಹಾಗೂ ಸೈನ್ಯ ನಿಮ್ಮಿಂದ ಸೂಚನೆಯನ್ನು ಪಡೆದುಕೊಳ್ಳುತ್ತದೆ. ನಾನು ಕೂಡ ನಿಮ್ಮಿಂದಲೇ ಸೂಚನೆ ಪಡೆದುಕೊಳ್ಳುವೆ. ನೀವು ನನ್ನನ್ನು ನಂಬಿದ್ದೇ ಆದರೆ ಅವರೂ ನಂಬುತ್ತಾರೆ. ನಾನು ಕೂಡ ನಂಬುತ್ತೇನೆ"

"ನೀವು ಕೇಳ್ತಾ ಇರೋದು ತುಂಬಾ ಜಾಸ್ತಿ ಆಯಿತು ಮಹಾರಾಜ್ ಕುಮಾರ್. ಅದೂ ಅಲ್ಲದೆ ಅದೆಲ್ಲವೂ ಕೇವಲ ಕುರುಡು ನಂಬಿಕೆಯ ಮೇಲೆ"

"ಹೊಸಬನೊಬ್ಬ ಉದ್ಯೋಗವನ್ನು ಹುಡುಕಿಕೊಂಡು ಹೋದಾಗ, ಬಹುಮಟ್ಟಿಗೆ ಎಲ್ಲರೂ ತಪ್ಪದೆ ಹೇಳುವುದು ನಾವು ಅನುಭವ ಹೊಂದಿರುವವನನ್ನು ನೋಡ್ತಾ ಇದ್ದೀವಿ ಎಂದು. ಸ್ಪಷ್ಟವಾಗಿರುವುದನ್ನು ಲಂಬಿಸಿ ಹೇಳಬೇಕು ಎಂದರೆ ಯಾರೂ ಕೆಲಸವನ್ನೇ ಕೊಡದಿದ್ದರೆ ಅವನಿಗೆ ಅನುಭವವಾದರೂ ಹೇಗೆ ಬರಲು ಸಾಧ್ಯ?"

"ನನಗೂ ನಿಮ್ಮನ್ನು ನಂಬಬೇಕು ಅನ್ನಿಸುತ್ತೆ ಮಹಾರಾಜ್‌ಕುಮಾರ್. ನಂಬುವ ಕ್ರಿಯೆಯ ಮೂಲಕ ನಾವು ನಿಮ್ಮನ್ನು ಕಂಡುಕೊಳ್ಳಬೇಕಾಗುತ್ತೆ ಅಂತ ಕಾಣಿಸುತ್ತೆ" ಎಂದು ಮೊದಲ ಬಾರಿಗೆ ಆತ ಮುಗುಳ್ನಕ್ಕರು. ಅವರ ಮುಗುಳ್ನಗೆ ನನಗೆ ನನ್ನ ದಿನವನ್ನು ಗಳಿಸಿಕೊಟ್ಟಿತು. ಅದೊಂದು ಪ್ರಾಸಂಗಿಕವಾದ್ದು. ಆದರೆ ಅದು ಮುಖವನ್ನು ಬೆಳಗಿತು ಅಲ್ಲದೆ ನನ್ನ ಹೃದಯವನ್ನು ಬೆಚ್ಚಗಾಗಿಸಿತು. ಈ ಹಿರಿಯ ನಿಷ್ಠಾವಂತ ಕಟ್ಟಾಳುವಿನ ಎಣಿಕೆಯಲ್ಲಿ ಎತ್ತರದವನಾಗಬೇಕೆಂದು ನನ್ನಾಸೆ. ಅವರು ನನ್ನನ್ನು ಇಷ್ಟಪಡುತ್ತಿದ್ದರು. ಆದರೆ ಆ ಗೌರವ ವೃತ್ತಿ ಸಂಬಂಧಕ್ಕೆ ಹೆಚ್ಚು ಪಕ್ವವಾದ ಮತ್ತು ಶಾಶ್ವತವಾದ ತಳಹದಿ ಎಂದು ನನಗೆ ತಿಳಿದಿತ್ತು. "ನಿಮ್ಮ ಮುಂದಿನ ಕಾರ್ಯಕ್ರಮ ಏನು ರಾಜಕುಮಾರರೆ?"

ನಾನು ದೀರ್ಘವಾಗಿ ಉಸಿರೆಳೆದುಕೊಂಡೆ. "ನಮ್ಮ ರಾವುತ ಪಡೆಗೆ ನಾಳೆದಿನ ಕುದುರೆಯ ಪಂದ್ಯವನ್ನು ಏರ್ಪಡಿಸೋಣವೆ ಎಂದು ಯೋಚಿಸುತ್ತಾ ಇದ್ದೆ. ಮಹಾಸ್ವಾಮಿ"

"ಎಲ್ಲ ಇಪ್ಪತ್ತಮೂರು ಸಾವಿರ ಅಶ್ವಸೈನ್ಯದವರಿಗೂ ಏರ್ಪಡಿಸುವುದೇ?" ಅವರ ಮಾತಿನಲ್ಲಿ ಆಶ್ಚರ್ಯವೇನೂ ಕಾಣಲಿಲ್ಲ. ಅವರಿಗೆ ಸರಿಯಾದ ವಿವರಗಳು ಬೇಕಾಗಿತ್ತು ಅಷ್ಟೆ. ವಿಶ್ವಾಸದ ಕ್ರಿಯೆ ಭದ್ರವಾಗಿ ಅದರ ಸ್ಥಾನದಲ್ಲಿತ್ತು. ಈಗ ನಗುವ ಸರದಿ ನನ್ನದಾಗಿತ್ತು.

ಆ ರಾತ್ರಿ ಮಂಗಳ್ ನನ್ನ ಭಾವ ಮೈದುನನ ಪತ್ರ ಕೊಂಡೊಯ್ಯುತ್ತಿದ್ದ ಓಲೆಕಾರನನ್ನು ಅಡ್ಡಗಟ್ಟಿ ಆ ಪತ್ರವನ್ನು ನನಗೆ ತಂದುಕೊಟ್ಟನು. ರಾವ್ ರೈಮಲ್ ಭಾರೀ ಕೆಲಸ ಮಾಡಿದ್ದನು. ಅದರಲ್ಲಿ ಮೂರು ಸಾವಿರ ಸೈನಿಕರು ಅದಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿದ್ದರು. ಅದರಲ್ಲಿ ನಾನೊಬ್ಬ ಹೇಡಿ ಮತ್ತು ಅಸಮರ್ಥ. ರಣರಂಗದಿಂದ ನಾನು ದೂರವುಳಿದಿದ್ದೆ. ಅಲ್ಲದೆ ಮೇವಾಡದ ಸೇನಾ ಪಡೆಗಳು ಇನ್ನೇನು ವಿಜಯದ ಹೊಸ್ತಿಲಿನಲ್ಲಿವೆ ಎನ್ನುವಾಗ ನಾನು ಬಿಳಿಯ ಬಾವುಟವನ್ನು ಹಾರಿಸಿ ಶಾಂತಿ ಒಪ್ಪಂದಕ್ಕೆ ಪ್ರಾರ್ಥಿಸಿದ್ದೆ. ಇದೀಗ ನಾನು ಅತ್ಯಂತ ಸಂಪದ್ಭರಿತವಾದ ಎರಡು ಪ್ರಾಂತಗಳನ್ನು, ನಿಶ್ಚಯವಾಗಿಯೂ ಇದಾರ್ ಅನ್ನೂ ಗುಜರಾತಿಗೆ ಒಪ್ಪಿಸುವ ಹಂಚಿಕೆ ಹಾಕಿದ್ದೇನೆ. ಹೊಸದಾಗಿ ಸೇರಿಸಿದ ಮಾತಿನಲ್ಲಿ ಶತ್ರುಗಳೊಂದಿಗೆ ಈ ಬೆಳಿಗ್ಗೆ ಅಷ್ಟೆಲ್ಲಾ ವೀರಾವೇಶದಿಂದ ಹೋರಾಡಿದ ವೀರ ತೇಜ್

ಮೇಲೆ ಸಂಚು ಮಾಡಿ ದ್ವೇಷದಿಂದ ಅವನ ಮೇಲೆ ಉಗ್ರವಾಗಿ ಆಕ್ರಮಣ ಮಾಡಿ ಅವನ ಶಿಬಿರಕ್ಕೆ ಬೆಂಕಿ ಹಚ್ಚಿದ್ದೇನೆ ಎಂದು ಹೇಳಲಾಗಿತ್ತು. ರಾಜ್ಯದ ಹಿತಾಸಕ್ತಿಗೆ ಶಾಶ್ವತವಾಗಿ ಇನ್ನೂ ಹೆಚ್ಚಿನ ಹಾನಿಯನ್ನುಂಟು ಮಾಡದೆ ಇರಬೇಕು ಎನ್ನುವುದಾದರೆ, ಮೇವಾಡದ ಕೀರ್ತಿಗೆ ಕಪ್ಪು ಚುಕ್ಕೆಯಂತಿರುವ ಈ ಮಗನನ್ನು ಕೂಡಲೇ ತೆಗೆದು ಬದಲಿಯವರನ್ನು ನೇಮಿಸಬೇಕೆಂದು ತಂದೆಯವರನ್ನು ಹೃತ್ಪೂರ್ವಕವಾಗಿ ಮನವಿ ಮಾಡಿಕೊಳ್ಳುವುದರೊಂದಿಗೆ ಪತ್ರವು ಕೊನೆಗೊಂಡಿತ್ತು.

"ಶತ್ರು ಸೈನ್ಯದಲ್ಲಿ ಯಾರಿಗಾದರೂ ಈ ಪತ್ರದ ವಿಷಯದಲ್ಲಿ ಆಸಕ್ತಿ ಇದೆ ಎಂದು ನಿನಗನ್ನಿಸುವುದೆ?"

ಗಂಭೀರವಾದ ಮುಖಭಾವದಿಂದ "ಯಾರಿಗೆ ಗೊತ್ತು ಅವರಿಗೆ ಇದ್ದಿರಬಹುದು" ಎಂದ ಮಂಗಲ್

"ಅತಿ ಹೆಚ್ಚು ಸವಾಲು ಕೂಗುವವನಿಗೆ ಕೊಡಲನುಕೂಲವಾಗುವಂತೆ ಇದರ ಹರಾಜಿಗೆ ಏರ್ಪಾಟು ಮಾಡ್ತೀಯಾ"

"ನಾನು ಪ್ರಯತ್ನ ಪಡಬಹುದು. ಆದರೆ ಮಾರಾಟವಾಗಿಯೇ ತೀರುತ್ತೆ ಅಂತ ಖಾತರಿ ಕೊಡಲಾರೆ"

ಇಬ್ಬರೂ ನಕ್ಕೆವು.

"ಕಡಿಮೆ ಹಣಕ್ಕೆ ಮಾರಬೇಡ ಮತ್ತು ನನಗೆ ಹಣ ಸಿಗುತ್ತದೆ ಅನ್ನುವುದನ್ನು ಖಾತರಿಪಡಿಸಿಕೋ. ನನ್ನ ಮೇಲೆ ಸುಳ್ಳು ಆರೋಪಗಳನ್ನೇನಾದರೂ ಆಡಿದರೆ, ನಾನು ಅದರಿಂದ ಕೂಡಲೇ ಸ್ವಲ್ಪ ನಗದು ಹಣವನ್ನಾದರೂ ಮಾಡಿಕೊಳ್ಳಬಹುದು"

"ಆಗ ಏನಾಗುತ್ತೆ?"

"ಏನೂ ಆಗಲ್ಲ. ಸರಿಯಾದ ಸಮಯದಲ್ಲಿ ಸುಲ್ತಾನ್ ಮುಜಾಫರ್ ಷಾ ಕೈಗೆ ಆ ಪತ್ರದ ಒಂದು ಪ್ರತಿ ಸಿಕ್ಕುತ್ತದೆ. ತಂದೆಯವರು ಮೂಲಪತ್ರದೊಂದಿಗೆ ಬರುತ್ತಾರೆ"

"ಈ ಪತ್ರ ಮಹಾಸ್ವಾಮಿಯವರ ಕೈ ಸೇರುವಂಥ ಅಪಾಯವನ್ನು ನಿಶ್ಚಯವಾಗಿಯೂ ನೀವು ತೆಗೆದುಕೊಳ್ಳಬೇಕು ಅಂತ ಇದ್ದೀರಾ? ಆ ಮೂರು ಸಾವಿರ ಹೆಬ್ಬೆಟ್ಟಿನ ಗುರುತುಗಳನ್ನು ನಿರ್ಲಕ್ಷಿಸುವುದು ಕಷ್ಟ"

"ಆ ಅಪಾಯವನ್ನು ನಾನು ಎದುರಿಸಲೇಬೇಕು. ಆದರೆ ಮಲ್ಲಿಕ್ ಅಯಾಜನಿಗೆ ಅದನ್ನು ನಾನು ತಪ್ಪಿಸಲು ಸಾಧ್ಯವಿಲ್ಲ. ಅದರಿಂದ ಅವನಿಗೆ ಅಪರಿಮಿತವಾದ ಆನಂದವಾಗುತ್ತದೆ"

ಸ್ಪರ್ಧೆಗಳನ್ನು ಏರ್ಪಡಿಸಬೇಕೆಂಬ ವಿಚಾರಕ್ಕೆ ಮೊದಲನೇ ದಿನ ಸಾಕಷ್ಟು ಟೀಕೆ ಮತ್ತು ಪ್ರತಿಭಟನೆ ಬಂದವು. ಆದರೆ ಹಗಲೆಲ್ಲಾ ಬೇಕಾದಷ್ಟು ತಿನಿಸು ಮತ್ತು ರಾತ್ರಿಗೆ ಯಥೇಚ್ಛವಾಗಿ ಮದ್ಯ ಇತ್ತು. ನೌಟಂಕಿ ನಾಟಕಗಳ ಬಗ್ಗೆ ಹೇಳುವುದೇ ಬೇಡ. ಪ್ರತಿಯೊಬ್ಬರೂ ಬಹಳ ಮೋಜಿನಲ್ಲಿದ್ದರು.

ಫಲಿತಾಂಶ ಬರುವ ಹೊತ್ತಿಗೆ ನಾಲ್ಕು ದಿನಗಳ ಕಾಲ ಇಡೀ ದಿನ ಇಪ್ಪತ್ತು ನಾಲ್ಕು ಗಂಟೆ ಸ್ಪರ್ಧೆಗಳು ನಡೆದವು. ಪಾಳೆಯದಲ್ಲಿ ಈಗ ಭಯಂಕರ ಹಬ್ಬದ ವಾತಾವರಣ ತುಂಬಿತ್ತು. ಅದು ಹೆಚ್ಚು ಕಡಿಮೆ ಚಿತ್ತೂರಿನಲ್ಲಿ ನಡೆಯುತ್ತಿದ್ದ ವಾರ್ಷಿಕ ಸ್ಪರ್ಧೆಗಳಂತಿತ್ತು.

ಹಗಲಿನಲ್ಲಿ ಈಜುಗಾರಿಕೆ, ಕುಸ್ತಿ, ಬಿಲ್ಗಾರಿಕೆ ರಾತ್ರಿಯ ವ್ಯೂಹರಚನೆಗಳು, ಗುರಿಯಿಟ್ಟು ಭರ್ಜಿಗಳನ್ನೆಸೆಯುವುದು. ಇತ್ಯಾದಿ ಸ್ಪರ್ಧೆಗಳಿರುತ್ತಿದ್ದುವು. ರಾತ್ರಿಯ ಹೊತ್ತು ಹಾಡುಗಾರಿಕೆ ಹಾಗೂ ಕಥೆಗಳನ್ನು ಹೇಳುವ ಸ್ಪರ್ಧೆಗಳಿರುತ್ತಿದ್ದುವು. ನಾವು ಮಾಡಿದ ಒಂದೇ ಒಂದು ವ್ಯತ್ಯಾಸವೆಂದರೆ ಕೈ ಕೈ ಮಿಲಾಯಿಸಿ ಮಾಡುವ ಕಾಳಗಗಳು. ಕುದುರೆ ಸವಾರರು ಮತ್ತು ಕಾಲಾಳುಗಳು ಹುಲ್ಲು ತುಂಬಿದ ಕೃತಕ ಆಕೃತಿಗಳತ್ತ, ತಮ್ಮ ತಲೆಯನ್ನು ಮುಂದೆ ಮಾಡಿಕೊಂಡು ಅದರ ಮೇಲೆ ದಾಳಿ ಮಾಡಿ ಕೊಚ್ಚಿಹಾಕುತ್ತಿದ್ದರು. ಕೃತಕ ಆಕೃತಿಯ ಬೆನ್ನು ಮೂಳೆಯನ್ನು ಮುರಿಯಲು ಪ್ರತಿಯೊಬ್ಬ ಸೈನಿಕನಿಗೂ ಒಂದೇ ಒಂದು ಅವಕಾಶ ಮಾತ್ರ ದೊರೆಯುತ್ತಿತ್ತು. ಅದು ಸುಲಭವೆನ್ನುವ ಹಾಗೆ ತೋರುತ್ತಿತ್ತು. ಆ ಕೃತಕ ಆಕೃತಿಯ ಬೊಂಬೆಯೊಳಗೆ ನಾಲ್ಕು ಅಂಗುಲ ದಪ್ಪನಾದ ಹಸಿಬೊಂಬು ಇರುತ್ತಿತ್ತು. ಎಂಥ ಪಳಗಿದವರಿಗೂ ಅದು ತ್ರಾಸಕೊಡುತಿತ್ತು. ಎಲ್ಲಾ ಸ್ಪರ್ಧೆಗಳ ಫಲಿತಾಂಶಗಳನ್ನು ಪಟ್ಟಿಮಾಡಿ ಗೆದ್ದವರಿಗೆ ಬಹುಮಾನ ಕೊಡಲಾಯಿತು. ಈಗ ನಮ್ಮ ಬಳಿ ನಮ್ಮ ಅತ್ಯಂತ ವೇಗದ ಸವಾರರಾರು, ನಮ್ಮ ಅತ್ಯಂತ ಶಕ್ತಿಯುತ ಮತ್ತು ಕ್ರೂರ ಕೊಲೆಗಡುಕರಾರು ಎಂಬ ದಾಖಲೆ ಸಿಕ್ಕಿತು.

ಆ ಎಲ್ಲ ಗಲಾಟೆಯ ದೀರ್ಘ ಹಗಲಗಳಂದು ನಾನು ನನ್ನ ಶಿಬಿರದೊಳಗೇ ಉಳಿದು, ಬಿಡುವೇ ಇಲ್ಲದೆ ದುಡಿದೆ. ಮೂರನೇ ದಿನ, ನನ್ನ ಗಾಯಗಳು ವಾಸಿಯಾದ ಬಗ್ಗೆ ವಿಚಾರಿಸಲು ಹಾಗೂ ಶರಣಾಗತಿಯ ಷರತ್ತುಗಳಿಗೆ ಅಂತಿಮ ರೂಪು ಕೊಡಲು, ನಾವು ಯಾವಾಗ ಸಂಧಿಸಬಹುದೆಂದು ಕೇಳಲು ಮಲಿಕ್ ಅಯಾಜ್ ತನ್ನ ಸಂದೇಶ ವಾಹಕ ಲಿಯಾಖತ್ ಆಲಿಯನ್ನು ನನ್ನ ಬಳಿಗೆ ಕಳುಹಿಸಿದನು. ಲಿಯಾಖತ್ ಆಲಿ ನಾಲ್ಕು ಗಂಟೆಗಳ ಕಾಲ ಕಾಯ್ದು ಕೂತಿದ್ದನು. ಆ ಸಮಯದಲ್ಲಿ ವೈದ್ಯರುಗಳು ಅತ್ತಿಂದಿತ್ತ ಇತ್ತಿಂದತ್ತ ಓಡಾಡಿದರು. ಮಹಾರಾಜ್‌ಕುಮಾರ್ ಅವರ ಪ್ರಕೃತಿ ಅಷ್ಟೊಂದು ಕೆಟ್ಟಿರುವಾಗ ಇಷ್ಟೆಲ್ಲಾ ಆಮೋದ ಪ್ರಮೋದಗಳು ಯಾವುದರ ಸಲುವಾಗಿ ಎಂದು ಅವನು ಅಚ್ಚರಿಗೊಂಡನು.

"ಬಂಡುಕೋರರ ಸೇನೆಗಿಂತ ಮೋಜಿನಲ್ಲಿರುವ ಸೇನೆ ಲೇಸು" ಎಂದು ಮಂಗಳನು ಅಡಕವಾಗಿ ಹೇಳಿ ಮಹಾರಾಜ್‌ಕುಮಾರ್ ಅವರು ತಮ್ಮ ಆರೋಗ್ಯ ಉತ್ತಮವಾದ ಕೂಡಲೇ ತಾವೇ ಬಂದು ಮಹಾದಂಡನಾಯಕರನ್ನು ಖುದ್ದಾಗಿ ಭೇಟಿಯಾಗುವುದಾಗಿ ತಿಳಿಸಿದನು"

"ಯಾವ ರೀತಿಯ ಗಾಯ....."

"ಮೊದಲನೆಯದಾಗಿ ನಿಮ್ಮ ಕಡೆಯ ಸೈನಿಕನೊಬ್ಬನಿಂದ ತಲೆಗೆ ಭಯಂಕರವಾದ ಪೆಟ್ಟು. ಆನಂತರ ಮಹಾರಾಜ್ ಕುಮಾರ್ ಅವರು ಶಾಂತಿಗಾಗಿ ಮನವಿಮಾಡಿದ್ದಕ್ಕಾಗಿ ತೇಜ್ ಸಿಂಹನು ಹೊಟ್ಟೆಗೆ ಹೊಡೆದದ್ದರಿಂದಾದ ಗಾಯ" ಎಂದು ಮಂಗಳನು ಅವನಿಗೆ ವಿವರಿಸಿದನು.

ಆರನೇ ದಿನದ ಹೊತ್ತಿಗೆ ಆತಂಕದಿಂದ ತಾಳ್ಮೆ ಕಳೆದುಕೊಂಡು ಅಸ್ವಸ್ಥವಾಗ ತೊಡಗಿದೆ. ಸ್ಪರ್ಧೆಗಳೆಲ್ಲ ಮುಗಿದಿದ್ದುವು. ಲಿಯಾಖತ್ ಆಲಿ ನನ್ನನ್ನು ನೋಡಲು ಮತ್ತೆ ಬಂದು ಹೋಗಿದ್ದನು. ನಾನು ಅತ್ಯಂತ ಶೀಘ್ರವಾಗಿ ಹೋಗಿ ಮಲಿಕ್ ಅಯಾಜ್‌ನನ್ನು ಭೇಟಿ ಮಾಡಲೇಬೇಕಾದ್ದು ಅನಿವಾರ್ಯ. ಯಾವ ಷರತ್ತುಗಳನ್ನು ನಾನು ಅವನಿಗೆ ಸೂಚಿಸಲಿ? ನನ್ನ ಭಾವಮೈದುನ ರಾವ್ ರೈಮಲ್‌ನ ಮಾತುಗಳು ನಿಜವಾಗಿ ಬಿಡುತ್ತವೆಯೆ? ಮೇವಾಡವು ಛಿದ್ರಗೊಳ್ಳಲು ನಾನೇ ಸಾಧನವಾಗಿ ಬಿಡುವೆನೆ? ಕಿಂವದಂತಿಗಳನ್ನು ಹರಡುವುದರಲ್ಲೂ

ರಾವ್ ರೈಮಲ್ ಕ್ರಿಯಾಶೀಲನಾಗಿದ್ದ. ನಮ್ಮ ಸೇನಾ ಪಡೆಗಳಿಗೆ ಮೇವಾಡ ಮತ್ತು ಅದರ ಮಿತ್ರದೇಶಗಳ ಅಂತ್ಯ. ಅವುಗಳ ನಾಯಕ ಮಹಾರಾಜ್ ಕುಮಾರ್‌ಗೆ ಧನ್ಯವಾದಗಳು– ಎಂಬ ದೃಶ್ಯಾವಳಿಗಳನ್ನು ಒದಗಿಸುತ್ತಿದ್ದನು. ಮತ್ತೊಮ್ಮೆ ನೈತಿಕ ಸ್ಥೈರ್ಯ ಕುಸಿಯುತ್ತಿತ್ತು. ಈ ಅಸಂಬದ್ಧಕ್ಕೆಲ್ಲ ಒಂದು ಮುಕ್ತಾಯ ಹಾಡಬೇಕಾಗಿತ್ತು. ಆದರೆ ಹೇಗೆಂದು ಗೊತ್ತಾಗಲಿಲ್ಲ. ಸಂಪೂರ್ಣ ಉದ್ಧಟತನವಿದ್ದಾಗ್ಯೂ ತೇಜನನ್ನು ಕೂಡಿಬೀಗ ಹಾಕಿದ್ದು. ಸೈನಿಕರಿಗೆ ಸರಿ ಕಂಡಿರಲಿಲ್ಲ. ರಾಜದ್ರೋಹಕ್ಕಾಗಿ ರಾವ್ ರೈಮಲ್‌ನನ್ನು ಬಂಧಿಸುವ ಪ್ರಶ್ನೆಯೇ ಇಲ್ಲ. ಕಾರಣ ಐವತ್ತು ಸಾವಿರ ಸೈನಿಕರು ಮತ್ತು ನಾನು ಇಲ್ಲಿರಲು ಕಾರಣವಾದವನೇ ಅವನು. ರಾವ್ ವೀರಮ್ ದೇವ್ ತನ್ನ ನಾಲಗೆಯನ್ನು ಬಿಗಿಹಿಡಿದಿದ್ದರು. ಆದರೆ ನಾನು ಅವರ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದೇನೆಂದು ನನಗೆ ಗೊತ್ತಿತ್ತು. ನನ್ನನ್ನು ನಂಬಿ ಅವರು ತಪ್ಪು ಮಾಡಿದರೆ? ಸಂದರ್ಭಗಳು ರೂಪು ತಾಳುವುದನ್ನು ಲೆಕ್ಕ ಹಾಕುವಲ್ಲಿ ನಾನು ಪೂರ್ತಿ ತಪ್ಪಿದೆನೆ?

ನಾನು ಮಾಡಿದ ಗಂಭೀರ ಸ್ವರೂಪದ ತಪ್ಪೆಂದರೆ ನಾನು ಸಂಭವನೀಯ ಯೋಜನೆಗಳನ್ನೇನೂ ಹಾಕಿರಲಿಲ್ಲ. ಈಗ ನಾನು ವ್ಯಾವಹಾರಿಕನಾಗಬೇಕಾದ ಸಮಯ ಬಂದಿದೆ. ಆ ರಾತ್ರಿ ಕುಳಿತು ನಾನು, ನಮ್ಮ ಅವಮಾನಕರವಾದ ಸೋಲು, ಇದಾರ್ ಮೇಲಿನ ನಮ್ಮ ಅಧಿಕಾರದ ಜೊತೆಗೆ ನಾನು ಗುಜರಾತಿಗೆ ಒಪ್ಪಿಸಬೇಕೆಂದಿರುವ ಪ್ರಾಂತಗಳು ಎಲ್ಲವನ್ನೂ ವಿವರಿಸಿ ನಮ್ಮ ತಂದೆಯವರಿಗೊಂದು ಪತ್ರ ಬರೆದೆ. ನಮ್ಮೆಲ್ಲಾ ನಗರಗಳು ಮತ್ತು ಹಳ್ಳಿಗಳು ನಮಗೆ ಸಮಾನವಾಗಿ ಪ್ರಿಯವಾದವು. ತೀರಾ ಬಂಜರಾಗಿರುವ ಭೂ ಪ್ರದೇಶಗಳು ಕೂಡ ಭಾವನಾತ್ಮಕ ಹಾಗೂ ಐತಿಹಾಸಿಕ ಬಾಂಧವ್ಯದ ಕಾರಣಗಳಿಂದಾಗಿ ಅತ್ಯಮೂಲ್ಯವಾದವು. ಆದರೆ ನಮ್ಮ ಹೃದಯಗಳನ್ನು ಕಲ್ಲುಮಾಡಿಕೊಂಡು ಭಾವನಾ ರಹಿತರಾಗಿ ನೋಡಿದಾಗ, ಸೇನಾಕಾರ್ಯಾಚರಣೆಯ ಅನುಕೂಲದ ದೃಷ್ಟಿಯಿಂದ, ರಾಜಕೀಯ ಹಾಗೂ ಆರ್ಥಿಕ ದೃಷ್ಟಿಗಳಿಂದ ನಾವು ತೀರಾ ಬಿಟ್ಟುಕೊಡಬಹುದಾದ ಪ್ರದೇಶಗಳೆಂದರೆ– ಆ ಘೋರ ಶಬ್ದ ನನ್ನ ಗಂಟಲಲ್ಲಿ ಸಿಕ್ಕಿಕೊಂಡಿತು – ಜರೋಲ್ ಮತ್ತು ಬೀಜಾ ಬೈರ್. ತಂದೆಯವರು ನನ್ನ ಆಯ್ಕೆಯನ್ನು ಒಪ್ಪಿದರೆ? ನನ್ನ ನಿರುತ್ಸಾಹದ ಸಾಧನೆ ಕುರಿತಂತೆ ಒಂದು ಕ್ಷಮಾಯಾಚನೆಯ ಪತ್ರವನ್ನು ಹೆಣೆಯಲು ಯತ್ನಿಸಿದೆ. ಆದರೆ ಅದರಿಂದೇನೂ ಉಪಯೋಗವಿರಲಿಲ್ಲ. ನನ್ನ ಶಬ್ದಗಳು ಅತ್ಯಂತ ದೀನ ಹಾಗೂ ಕರುಣಾಜನಕ ಅಥವಾ ಪೊಳ್ಳು ಮತ್ತು ಚಪ್ಪಟೆ ಅಡಿಯವು ಎಂದೆನ್ನಿಸಿದುವು. ತೀರ ಅನಿವಾರ್ಯವಾದ ಸಂಗತಿಗಳಷ್ಟಕ್ಕೆ ಮಾತ್ರ ಅಂಟಿಕೊಳ್ಳುವುದೆಂದು ತೀರ್ಮಾನಿಸಿ, ನನಗಾದ ಭಯಂಕರ ಅಪಮಾನವನ್ನು ಅರ್ಥಮಾಡಿಕೊಳ್ಳುವುದನ್ನು ಅವರ ಕಲ್ಪನೆಗೆ ಬಿಡುವುದೆಂದು ತೀರ್ಮಾನಿಸಿದೆ.

ಮರುದಿನ ಬೆಳಗಾದಾಗ ಅಂದರೆ ಯುದ್ಧರಂಗದಲ್ಲಿ ಆದ ಸಂಪೂರ್ಣ ಸೋಲಿನ ಏಳನೇ ದಿನ. ನಮಗೆ ಆ ದಿನ ಮಧ್ಯಾಹ್ನ ಹತ್ತು ಸಾವಿರ ಗುಜರಾತಿ ಪಡೆಗಳು ಸ್ವಸ್ಥಾನಕ್ಕೆ ಹೊರಡಲಿವೆ ಎಂಬ ಸುದ್ದಿ ಬಂತು. ಇದು ಸಿದ್ಧತೆಗೆ ಏನೇನೂ ಕಾಲಾವಕಾಶವಿಲ್ಲದ ಸೂಚನೆ. ಆದರೆ ಮಲ್ಲಿಕ್ ಅಯಾಜನಿಗೆ ತನ್ನ ಶಿಸ್ತು ಬದ್ಧವಲ್ಲದ ಸೈನಿಕರ ಮಾತಿಗೆ ಒಪ್ಪದೆ ಬೇರೆ ಆಯ್ಕೆಯೇ ಇರಲಿಲ್ಲ. ನಾನು ಕೂಡಲೇ ಮಲ್ಲಿಕ್ ಅಯಾಜರಿಗೆ ಅವರನ್ನು ಭೇಟಿ ಮಾಡಲು ತಡಮಾಡಿದ ಬಗ್ಗೆ ಕ್ಷಮೆ ಕೋರಿ, ಹಾಗೂ ಶರಣಾಗತಿಯ ಷರತ್ತುಗಳನ್ನು ಕುರಿತಂತೆ ಚರ್ಚಿಸಲು ಮರುದಿನ ಭೇಟಿಗೆ ಅವಕಾಶ ಮಾಡಿಕೊಡಬೇಕೆಂದು ಕೋರಿ ಪತ್ರವೊಂದನ್ನು ಕಳಿಸಿಕೊಟ್ಟೆ. ತೀರ ಅಪರೂಪಕ್ಕೆ ಅಷ್ಟು ಬೇಗನೆ ನನಗೆ ಉತ್ತರ ಬಂದಿದ್ದುಂಟು. ಪತ್ರದ ಒಕ್ಕಣೆ "ಗುಜರಾತಿನ ಮಹಾದಂಡ ನಾಯಕರು ಮರುದಿನ

ಬೆಳಿಗೆ ಹನ್ನೊಂದೂವರೆಗೆ ಅತಿಥಿ ರಾಜರನ್ನು ಭೇಟಿಯಾಗಲು ಸಂತೋಷಿಸುತ್ತಾರೆ. ಅವರೊಂದಿಗೆ ಭೋಜನ ಮಾಡುವ ಕೃಪೆಯನ್ನು ತಾವು ತೋರುವರೆ?" ನಿರೀಕ್ಷಿಸಿದಂತೆ, ಮಲಿಕ್ ಅಯಾಜ್ ಮನೆಗೆ ಹಿಂತಿರುಗುವ ಆತುರದಲ್ಲಿದ್ದ. ಅವನು ಊರು ಬಿಟ್ಟು ಆಗಲೇ ಒಂಬತ್ತು ತಿಂಗಳಿಗೂ ಹೆಚ್ಚು ಸಮಯವಾಗಿತ್ತು. ಗುಜರಾತಿನ ಮಹಾವೀರನಿಗಾಗಿ ಕಾದಿರುವ ಭವ್ಯ ವಿಜಯದ ಸ್ವಾಗತವನ್ನು ಎದುರು ನೋಡಬಹುದು.

ನಾವು ಎರಡು ಗಂಟೆಯ ಸುಮಾರಿಗೆ ಶಿಬಿರದಿಂದ ಹೊರಟೆವು. ರಾಜಾ ಪೂರಜೀಕೀಕಾ, ಮಂಗಳ್ ಮತ್ತು ಇತರೆ ಹನ್ನೆರಡು ಜನರು ಹಲವು ಗಂಟೆಗಳು ಮುಂಚೆಯೇ ಹೋಗಿದ್ದರು. ನಾವು ಹೊರಟ ಒಂದು ಗಂಟೆಯ ನಂತರ, ನನ್ನ ಕೈಯನ್ನು ಮೇಲೆತ್ತಿ ಸೈನಿಕರನ್ನು ತಡೆದೆ. ಇನ್ನೊಂದೆರಡು ಗಂಟೆಗಳು ಕಳೆದರೆ ಕಗ್ಗತ್ತಲಾಗುತ್ತಿತ್ತು.

"ಈಗ ಇಲ್ಲಿ ನಾವು ಎರಡು ಸಾವಿರದ ಏಳು ನೂರಾ ಅರುವತ್ತು ಮತ್ತು ರಾವಲ್ ಉದಯ ಸಿಂಹ, ನಿಮ್ಮ ಹತ್ತು ಜನ ಸೇನಾ ಮುಖ್ಯಸ್ಥರು ಮತ್ತು ನಾನು ಇದ್ದೇವೆ. ನೀವು ನಮ್ಮ ಅತ್ಯಂತ ವೇಗದ ಸೈನಿಕರಾದ್ದರಿಂದ ನಿಮ್ಮನ್ನು ಆಯ್ಕೆ ಮಾಡಲಾಗಿದೆ. ನಾವೊಂದು ಅಚ್ಚುಕಟ್ಟಾಗಿ ಮೂರು ಸಾವಿರದಷ್ಟು ಸಂಖ್ಯೆಯಲ್ಲೂ ಇಲ್ಲ. ಈ ದಿನ ಊರಿಗೆ ಹೊರಟಿರುವ ಗುಜರಾತ್ ಸೈನಿಕರ ಸಂಖ್ಯೆ ಹತ್ತು ಸಾವಿರ. ಅಂದರೆ ನಮ್ಮ ಮೂರರಷ್ಟಕ್ಕಿಂತ ಒಂದು ಸಾವಿರ ಜಾಸ್ತಿ ನೀವೆಲ್ಲ ಮಹಾನ್ ಸಾಹಸೀ ಯೋಧರೆಂದು ನನಗೆ ಗೊತ್ತು. ಆದರೆ ಅದಷ್ಟು ಸಾಲುವುದಿಲ್ಲ. ಜೀವ ಉಳಿಸಿಕೊಳ್ಳಲಿಕ್ಕೇ ನೀವು ಪ್ರತಿಯೊಬ್ಬರೂ ಕಡೇ ಪಕ್ಷ ಶತ್ರುವಿನ ಮೂರರಷ್ಟು ಕೆಚ್ಚೆದೆಯ ಸಾಹಸಿಗಳಾಗಬೇಕಾಗುತ್ತದೆ" ಅದು ಅವರ ಮನಸ್ಸಿಗೆ ಇಳಿಯಲು ಪೂರ್ತಿ ಮೂವತ್ತು ಸೆಕೆಂಡುಗಳ ಕಾಲಾವಕಾಶ ಕೊಟ್ಟೆ. ಹೆಚ್ಚು ಕಡಿಮೆ 'ಇಂದಿಗೆ ಸರಿಯಾಗಿ ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಗೌರವಾನ್ವಿತ ಗೃಹ ಸಚಿವ ಲಕ್ಷ್ಮಣ ಸಿಂಹಜೀಯವರ ನೇತೃತ್ವದಲ್ಲಿ ಇಲ್ಲಿಂದ ಸುಮಾರು ಅರುವತ್ತು ಮೈಲಿಗಳಷ್ಟು ದೂರದಲ್ಲಿ ನಮ್ಮ ಸೇನಾಪಡೆಯ ಮೂರು ಸಾವಿರ ಸೈನಿಕರು ಗುಜರಾತ್ ಸೇನೆಯಿಂದ ವಿಶ್ವಾಸ ಘಾತುಕತೆಯಿಂದ ಕೊಲ್ಲಲ್ಪಟ್ಟರು. ಆ ಭೀಕರ ಹಾಗೂ ಮೋಸದ ಕಗ್ಗೊಲೆಯ ಇಡೀ ಕಥೆಯನ್ನು ನಾನು ನಿಮಗೆ ಮತ್ತೆ ಹೇಳಬೇಕಾಗಿಲ್ಲ. ನಿಮಗೆಲ್ಲ ಅದು ಚೆನ್ನಾಗಿ ಗೊತ್ತು. ಪ್ರತೀಕಾರ ಎಂದರೆ ನೀವು ಏನೆಂದು ತಿಳಿದಿದ್ದೀರಿ ಎಂದು ತಿಳಿದುಕೊಳ್ಳಲು ನನಗಿಷ್ಟ. ಎಂದಾದರೊಂದು ದಿನ ನೀವು ಮೂರು ಸಾವಿರ ಗುಜರಾತ್ ಸೈನಿಕರನ್ನು ಕೊಂದರೆ ಸಂತೋಷವಾಗುತ್ತದೆಯೆ? ನಿಮ್ಮ ಕಣ್ಣಿನಲ್ಲಿ ಆ ಹೊಳಪು ಕಾಣುತ್ತಿದೆ. ಭಲೇ ಸೈನಿಕರೆ! ಸರಾಗವಾಗಿ ಸಂತೃಪ್ತಿಯನ್ನು ಹೊಂದುವಿರಿ. ನೀವು ಕೇವಲ ಸೇಡಿಗೆ ಪ್ರತಿಸೇಡಿನ ಜನ. ನಿಮ್ಮ ಆ ಮೂರು ಸಾವಿರ ಸೋದರರು ಅಷ್ಟಕ್ಕೇ ಅರ್ಹರು ಎಂದು ನಿಮಗನ್ನಿಸಿದರೆ ನಾವು ಇದಾರ್ ಅನ್ನು ಆ ಯುದ್ಧವನ್ನು ಮರೆತು ಬಿಡೋಣವೆಂದು, ನಮ್ಮ ಶಿಬಿರಗಳನ್ನು ಕಿತ್ತು ನಮ್ಮ ಮನೆಗೆ ಹೋಗಿ ಬಿಡೋಣವೆಂದು ನನ್ನ ಸೂಚನೆ.

ಏಳು ದಿನಗಳ ಹಿಂದೆ, ಬಿಳಿಯ ಬಾವುಟವನ್ನು ಹಾರಿಸೋಣವೆಂದು ನಾನು ಹೇಳಿದಾಗ, ಬಹಳಷ್ಟು ವೀರಾವೇಶದ ಮಾತುಗಳು ಕೇಳಿ ಬಂದವು. ನಮ್ಮ ಏಳು ನೂರಾ ಐವತ್ತು ಜನ ಇಲ್ಲವಾಗಿದ್ದರು ಮತ್ತು ನೀವೆಲ್ಲರೂ ಸೋಲನ್ನು ಗೆಲುವನ್ನಾಗಿ ಪರಿವರ್ತಿಸಲು ನೀವೊಂದು ಅವಕಾಶ ಕೊಡಬೇಕು ಅಂತ ಕೇಳಿದಿರಿ. ನಾಳೆ ಬೆಳಿಗ್ಗೆ ಐದೂವರೆ ಗಂಟೆಗೆ ನೀವು ಗುಜರಾತಿನ ಸೇನಾಪಡೆಗಳನ್ನು ಸಂಧಿಸುತ್ತೀರಿ. ನಿಮ್ಮೆಲ್ಲಾ ಮಾತುಗಳ ಪರಿಣಾಮ ಏನಾಗುತ್ತೆ ಅಂತ ನೋಡೋಣ. ನಿಮಗೆ ನನ್ನ ಒಂದೇ ಒಂದು ಸಲಹೆ. ನೀವು ಭಾಗಿಗಳಾಗಿರುವ ಇನ್ನು ಮುಂದಿನ ಯಾವುದೇ ಹೊಡೆದಾಟ, ಅಥವಾ ಯುದ್ಧ,

ಅಥವಾ ಯಾವುದೇ ಕದನದಲ್ಲಿ ಇದು ಸತ್ಯ ಅಂತ ಸಾಧಿತವಾಗುತ್ತೆ. ಗೆಲುವಿನ ರಹಸ್ಯ ಸಂಖ್ಯೆಗಳಲ್ಲಿದೆ. ನಿಮ್ಮ ಶತ್ರುವನ್ನು ಕೊಲ್ಲಲು ನಿಮಗೆ ಒಂದು ಏಟಿಗೆ ಸಾಧ್ಯವಾಗುತ್ತದೆಯೋ ಅಥವಾ ಮೂರೊ? ಅದು ಒಂದು ವೇಳೆ ಮೂರು ಎಂದಾರೆ ಇನ್ನಿಬ್ಬರು ಶತ್ರು ಸೈನಿಕರು ನಿಮ್ಮ ಕಡೆಗೆ ಒಂದು ಹೊಡೆತ ಕೊಟ್ಟಿರುತ್ತಾರೆ. ಆಗ ನಿಮ್ಮನ್ನು ನೀವು ರಕ್ಷಿಸಿಕೊಳ್ಳಲಾರಿರಿ. ಅದೂ ಅಲ್ಲದೆ ನೀವು ಬಹಳ ಬೇಗ ಆಯಾಸಗೊಳ್ಳುವಿರಿ. ಒಂದು ವೇಳೆ ಅದು ಒಂದೇ ಏಟು ಎಂದಾದರೆ, ಆಗ ಉಳಿದಿಬ್ಬರು ಶತ್ರು ಸೈನಿಕರು ಹೆಚ್ಚು ಎಚ್ಚರಿಕೆಯಿಂದ ಇರುತ್ತಾರೆ. ನೀವು ಕೊನೇ ಪಕ್ಷ ಇಪ್ಪತ್ತು ಜನ ಶತ್ರು ಸೈನಿಕರನ್ನು ಹೇಗೆ ಏಕಾಂಗಿಯಾಗಿ ಗಾಯಗೊಳಿಸಿದಿರೆಂದು ನಿಮ್ಮ ಮಕ್ಕಳು ಮೊಮ್ಮಕ್ಕಳಿಗೆ ಹೇಳಲು ನಿಮ್ಮಲ್ಲಿ ಕೆಲವರು ಬದುಕಿರುತ್ತೀರಿ. ಈಗ ನಮ್ಮಲ್ಲಿ ಮನೆಯೊಳಗಿನ ಶತ್ರುಗಳು ಯಾರು ಅಂತ ತಿಳಿದಿದ್ದೇವೆ. ಯಾರು ಕೊಲ್ಲದೆ ಗಾಯಗೊಳಿಸುತ್ತಾನೋ, ಅವನ ಸ್ನೇಹಿತ ಮತ್ತು ನೆರೆಯವನ ಪ್ರಾಣ ತೀರಾ ಅಪಾಯದಲ್ಲಿದೆ ಎನ್ನುವುದನ್ನು ಖಾತರಿಪಡಿಸಿಕೊಳ್ಳುತ್ತಾನೆ. ಒಂದು ವೇಳೆ ಎಡಗೈಗೆ ಗಾಯವಾದರೆ, ಬಲಗೈ ಈಗಲೂ ಖಡ್ಗವನ್ನು ಹಿಡಿಯಬಲ್ಲುದು ಮತ್ತು ಕೊಲ್ಲಬಲ್ಲದು. ದೇಹದಲ್ಲಿ ಎಪ್ಪತ್ತು ಎಂಬತ್ತು ಗಾಯಗಳಾಗಿಯೂ ಕಡೇ ಪಕ್ಷ ಎಪ್ಪತ್ತು ಜನರನ್ನು ಕೊಲ್ಲುವಷ್ಟು ಸಾಮರ್ಥ್ಯವನ್ನು ಉಳಿಸಿಕೊಂಡಿರುವುದಕ್ಕೆ ನಮ್ಮ ತೀರ್ಥರೂಪರವರಾದ ರಾಣಾ ಮಹಾಶಯರೇ ಜೀವಂತ ಸಾಕ್ಷಿಯಾಗಿದ್ದಾರೆ. ಗಾಯಗೊಂಡ ಹುಲಿ ಎಷ್ಟು ಮಾರಕ ಎಂಬುದು ನಮಗೆಲ್ಲಾ ತಿಳಿದಿದೆ. ಗಾಯಗೊಂಡ ಶತ್ರು ಸೈನಿಕ ಅದೆಷ್ಟು ಹೆಚ್ಚು ಅಪಾಯಕಾರಿಯಾಗಿರುತ್ತಾನೆ ಎಂದು ನೀವು ಕಲ್ಪಿಸಿಕೊಳ್ಳಬಲ್ಲಿರಾ? ಅವನು ತನ್ನ ದ್ವೇಷವನ್ನೇ ಪೋಷಿಸಿಕೊಂಡು ಏಕೈಕ ವಿಚಾರವನ್ನಿಟ್ಟುಕೊಂಡು ಬದುಕುತ್ತಾನೆ. ಅವನು ಸೇಡು ತೀರಿಸಿಕೊಳ್ಳಲಿಚ್ಛಿಸುತ್ತಾನೆ. ಅವನ ಒಂದೇ ಒಂದು ಕಷ್ಟವೆಂದರೆ ಅವನ ಸೇಡು ತಣಿಸಲಾರದ್ದು. ಅವನೆಂದಿಗೂ ಸೇಡುತೀರಿಸಿಕೊಳ್ಳಲಾರ. ಇನ್ನೊಂದು, ಆಮೇಲೆ ಮತ್ತೊಂದು, ಆಮೇಲೆ ಮಗುದೊಂದು, ಅದರ ಬಗ್ಗೆ ಯೋಚಿಸಿ. ಸತ್ತ ಮನುಷ್ಯನಿಗೆ ಶತ್ರುಗಳಿಲ್ಲ.

ಕೊನೆಯದಾಗಿ ಒಂದು ಮಾತು. ಇಲ್ಲಿಂದ ಮುಂದಕ್ಕೆ ನಿಮ್ಮಲ್ಲಿ ಯಾರಾದರೂ ತನ್ನ ನೆರೆಯವನೊಂದಿಗೆ ಜಗಳವಾಡಲು ತೀರ್ಮಾನಿಸಿದರೆ ಅಂಥವರು ಎರಡು ಸಾವಿರದ ಏಳುನೂರಾ ಎಪ್ಪತ್ತ ಮೂರು ಜನ ದೇಶ ಬಾಂಧವರನ್ನು ಅಪಾಯದಲ್ಲಿ ಸಿಲುಕಿಸುತ್ತಾನೆ. ಉಳಿದ ನಮಗೆ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂದು ನನ್ನ ಆತಂಕ. ನಿಮ್ಮ ಎರಡು ಸಾವಿರದ ಏಳು ನೂರಾ ಎಪ್ಪತ್ತ ಮೂರು ಜನರು ನಿಮ್ಮನ್ನು ಕೊಲ್ಲಲೆಂದು ಖಂಡಿತಾ ನೀವು ಬಯಸುವವರಲ್ಲ" ಅವರೆಲ್ಲ ನಕ್ಕರು. "ದೇವರು ನಿಮ್ಮನ್ನು ರಕ್ಷಿಸಲಿ ಮತ್ತು ನಿಮಗೆ ಶುಭವಾಗಲಿ."

ಇಲ್ಲಿಂದ ಊರಿಗೆ ಹೊರಡಲಿರುವ ಗುಜರಾತ್ ಸೈನ್ಯ ಹಿಡಿದ ಮಾರ್ಗಕ್ಕೆ ಸಮಾನಾಂತರವಾದ ಮಾರ್ಗವನ್ನು ನಾವು ಹಿಡಿದೆವು. ರಾಜಾ ಪೂರಜೀ ಕೀಕಾ ಮತ್ತು ಮಂಗಳ್ ಇಬ್ಬರೂ ನಮ್ಮ ಪಾಳೆಯದಿಂದ ಹನ್ನೆರಡು ಮೈಲಿಗಳ ದೂರದ ಒಂದು ಜಾಗವನ್ನು ಬಯಲು ಶಿಬಿರಕ್ಕೆ ಆರಿಸಿದ್ದರು. ಜನರು ರಾತ್ರಿ ಶಿಬಿರಗಳಲ್ಲಿ ನೆಲೆ ನಿಂತಾಗ ರಾಜಾಪೂರಜೀ ಕೀಕಾನ ಕಡೆಯವರು ತೇಜನನ್ನು ಕರೆತಂದರು. ಏಕಾಂತದ ಸೆರೆವಾಸದಲ್ಲಿರಬೇಕಾಗಿ ಬಂದದ್ದಕ್ಕೆ ನನ್ನ ಸೋದರ ಸಂಬಂಧಿ ಸ್ವಲ್ಪ ಕೆಟ್ಟ ಸ್ಥಿತಿಯಲ್ಲಿದ್ದಂತೆ ಕಂಡ. ಆದರೆ ಅವನ ಮನಃಸ್ಥಿತಿ ಉತ್ತಮವಾಗುತ್ತದೆಂದು ನನಗೆ ಖಾತರಿ ಇತ್ತು.

"ರಾವಲ್ ಉದಯ್ ಸಿಂಹ ಮತ್ತು ರಾಜಾ ಪೂರಜೀ ಕೀಕಾ ಇವರುಗಳಿಗೆ ಇರುವ ಸೈನಿಕರನ್ನು ಸಮಾನವಾಗಿ ವಿಭಾಗಿಸಿ ಕೊಡುತ್ತಿದ್ದೇನೆ. ಅಂದರೆ ನಿಮ್ಮಗಳ ಕೈಕೆಳಗೆ,

ಒಂಬೈನೂರಕ್ಕಿಂತ ಸ್ವಲ್ಪ ಹೆಚ್ಚು ಸೈನಿಕರಿರುತ್ತಾರೆ." ನಾನು ನನ್ನ ಭಿಲ್ ಸ್ನೇಹಿತನ ಕಡೆಗೆ ತಿರುಗಿದೆ. "ಮಹಾಸ್ವಾಮಿ ದಯವಿಟ್ಟು ತಾವು ಪ್ರದೇಶಗಳನ್ನು ತೋರಿಸುವಿರಾ?"

ಒಂದು ಪ್ರದೇಶದ ನಕ್ಷೆಯನ್ನು ತಯಾರಿಸುವುದರಲ್ಲಿ ಅದರಲ್ಲೂ ಬೆಟ್ಟಗುಡ್ಡಗಳ ಪ್ರದೇಶದ ನಕ್ಷೆ ತಯಾರಿಸುವುದರಲ್ಲಿ ರಾಜಾಪೂರಜೀ ಕೀಕಾ ಮತ್ತು ಅವರ ಕಡೆಯವರನ್ನು ಬಿಟ್ಟರೆ ಅವರಿಗೆ ಹೋಲಿಸಬಹುದಾದವರು ಬೇರೆ ಯಾರನ್ನೂ ನಾನು ಕಾಣೆ. ಏಳು ಲಕ್ಷ ಮರಗಳ ಒಂದು ಕಾಡು ಇದೆ ಎಂದಾದರೆ, ಏಳು ವಷಗಳ ಹಿಂದೆ ಯಾವ ಅರಳಿ ಮರಕ್ಕೆ ನನ್ನ ಕುದುರೆ ಬೇಫ್ಲಿಕೀರ್ ಅನ್ನು ಕಟ್ಟಿದ್ದನೆಂಬುದನ್ನು ಹಾಗೂ ಯಾವ ಮರದ ಕೆಳಗೆ ನಾವು ವನಭೋಜನ ಮಾಡಿದ್ದೆವು ಎಂಬುದನ್ನು ರಾಜಾ ಗುರುತು ಮಾಡಿ ಹೇಳಬಲ್ಲ. ಅವನಿಗೆ ಇಡೀ ಪ್ರದೇಶದ ಭೌಗೋಳಿಕತೆ ನೆನಪಿರುತ್ತಿತ್ತು. ಅವನಿಲ್ಲ ಅಂದರೆ ನಾಳೆ ನಾವು ದಾರಿ ತಪ್ಪುತ್ತೇವೆ. ಬೃಹತ್ ಶಿಬಿರದಿಂದ ಇನ್ನೂ ಸರಿಯಾಗಿ ಒಂದು ಮೈಲಿ ಕೂಡ ಹೋಗಿರಲಿಲ್ಲ. ಆಗ, ಆ ಇಡೀ ಭೂ ಪ್ರದೇಶ ಅದೆಷ್ಟು ಗೊಂದಲಗೊಳಿಸುವಂಥದೆಂಬುದನ್ನು ಅರ್ಥಮಾಡಿಕೊಂಡೆ. ತೆಳುವಾಗಿ ಮರಗಳಿದ್ದ ಏಳು ಗುಡ್ಡಗಳನ್ನು ನಾವು ಹತ್ತಿ ಇಳಿಯುತ್ತಿದ್ದೆವು. ಆನಂತರ ಒಮ್ಮೆಲೇ ಸಮತಟ್ಟಾದ ಭೂಮಿ ಕಾಣಿಸಿಕೊಂಡಿತು.

ಅದೊಂದು ನಂಬಲು ಸಾಧ್ಯವೇ ಇಲ್ಲದಂಥ ಒಂದು ಪ್ರಶಾಂತ ದೃಶ್ಯ. ಅಲ್ಲಿ ದೂರದಲ್ಲಿ ಮರಳ ಗುಡ್ಡಗಳ ಕೆಳಗೆ ಸೂರ್ಯ ಮುಳುಗುತ್ತಿದ್ದು ಸರಳ ಸುಂದರವಾಗಿತ್ತು. ಸೈನಿಕರು ಇಸ್ಪೀಟಾಡುತ್ತಿದ್ದರು, ಹುಕ್ಕ ಸೇದುತ್ತಿದ್ದರು, ತನ್ನ ಶಿಬಿರದ ಪಕ್ಕದಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದ ಸೇನೆಯ ಅಧಿಕಾರಿಯೊಂದಿಗೆ ಹರಟುತ್ತಿದ್ದರು. ನಾವೆಲ್ಲ ಬೆನ್ನು ಮೇಲಾಗಿ ಮಲಗಿದ್ದಾಗ ಕತ್ತರಿಯ. ಕಟಕಟಸದ್ದು, ಆತಂಕ ಉಂಟು ಮಾಡುವ ರೀತಿಯಲ್ಲಿ ಕೇಳಿಸುತ್ತಿತ್ತು. ಒಬ್ಬ ಹಾಡೋದಕ್ಕೆ ಪ್ರಾರಂಭಿಸಿದ ಅಂದರೆ ಇನ್ನೊಬ್ಬನು ಅವನ ಜೊತೆಗೆ ಸೇರಿಕೊಳ್ಳುತ್ತಿದ್ದ. ಹಾಗಲ್ಲ, ಮೊದಲನೆಯವನು ಎತ್ತಿದ ಪ್ರಶ್ನೆಗೆ ಎರಡನೆಯವನು ಉತ್ತರ ಕೊಡುತ್ತಿದ್ದನು. ಅದೊಂದು ರೀತಿಯ ಸವಾಲ್ ಜವಾಬ್ ಕವ್ವಾಲಿ. ಪರಿಷ್ಕರಿಸಿದ ಅದರ ರೀತಿ ನನಗೆ ತುಂಬ ಇಷ್ಟವಾದ್ದು. ಚಾಟೂಕ್ತಿಗಳು, ಹರಿತವಾದ ಟೀಕೆಗಳು ತಾತ್ವಿಕ ಜನಾಂತಿಕಗಳು ಮತ್ತು ಹಾಸ್ಯದ ಮಾತುಗಳು ಇವುಗಳಿಂದ ತುಂಬಿತ್ತು. ಅವರು ಧಾರ್ಮಿಕ ಕವ್ವಾಲಿಯನ್ನು ಹಾಡುತ್ತಿರಲಿಲ್ಲ, ಆದರೆ ಅದು ಧರ್ಮ ಮುಕ್ತ, ಜಾತ್ಯತೀತ ಹಾಡಾಗಿತ್ತು.

"ನೀವು ಮನೆಯಿಂದ ದೂರವಿದ್ದಾಗ ನಿಮ್ಮ ಪ್ರಿಯೆ ಇನ್ನಷ್ಟು ಹೆಚ್ಚು ಪ್ರಿಯಳಾಗುತ್ತಾಳೆ." "ಮನೆಯಿಂದ ದೂರವಿದ್ದಾಗಲೇ ಯಾರಿಗೇ ಆದರೂ ಮನೆಯನ್ನು ಕಳೆದುಕೊಂಡಂತೆ ಅನ್ನಿಸುತ್ತದೆ." ಮೊದಲನೆಯ ಗಾಯಕ ಪ್ರಶ್ನೆಗಳನ್ನು ಕೇಳುತ್ತಿದ್ದರೆ ಎರಡನೆಯವನು ತನ್ನ ಅದ್ಭುತ ಕೈ ಚಪ್ಪಾಳೆಯಿಂದ ತಾಳಹಾಕುತ್ತಿರುತ್ತಾನೆ. 'ಕೊಳಲಿನಲ್ಲಿ ಸಂಗೀತವಿದೆಯೆ? ಅದಕ್ಕೆ ಎರಡನೇಯವನ ಉತ್ತರ ಅದನ್ನು "ಊದದೆ ಇದ್ದಾಗಲೆ?" "ಅಷ್ಟಮ ಸ್ವರ ನಿಮ್ಮ ತುಟಿಗಳ ಮೇಲೋ ಅಥವಾ ನಿಮ್ಮ ಬೆರಳುಗಳು ಜೊಂಡಿನ ವಾದ್ಯದ ಮೇಲೆ ಚಲಿಸುವಾಗಲೋ" ಬುಲ್ ಬುಲ್ ತರಂಗ್ ವಾದ್ಯ ಗಾಯಕರ ಪಕ್ಕ ವಾದ್ಯ ವಾದ್ಯವಾಗಿದೆ. ಜನರೆಲ್ಲ ಈಗ ಅವನನ್ನು ಸುತ್ತುವರಿದಿದ್ದಾರೆ. ಮೊದಲನೆಯ ಪ್ರತಿಕ್ರಿಯೆ ಆ ತಕ್ಷಣ ಹೊರಹೊಮ್ಮಿತು – 'ಹೇಗಾದರೂ ಸರಿ.' ತಾಳ ಹಾಕುತ್ತಿರುವವರು ಯಾರು, ನೃತ್ಯ ಮಾಡುತ್ತಿರುವವರು ಯಾರು? "ನಾವು ಹಾಡುವಾಗ ನಮಗೆ ನೃತ್ಯ ಮಾಡುವವರು ಯಾರು? ಅಥವಾ ದೇವರೇ ನೃತ್ಯ ಮಾಡುತ್ತಾನೋ?" ಬುಲ್ ಬುಲ್ ತರಂಗ್‌ನ ತಂತಿಗಳೆಂದರೆ ನಾದದ ಸ್ವಚ್ಛ ಜಲಧಾರೆ. ಒಮ್ಮೆ ಚಿಂತನೆಯ ಧಾಟಿಯಲ್ಲಿದ್ದರೆ ಇನ್ನೊಮ್ಮೆ

ಗುಳುಗಳು. ಸುತ್ತ ಇದ್ದವರೆಲ್ಲ ಚಪ್ಪಾಳೆ ತಟ್ಟುತ್ತಾರೆ. ಅವರು ತರಗತಿಗಳನ್ನು ತೆಗೆದುಕೊಂಡರೆ, ಅಂಥ ಒಂದು ಲಯಸಿದ್ಧಿಯನ್ನು ಸಾಧಿಸಲು ವರ್ಷಗಟ್ಟಲೆ ಸಾಧನೆ ಮಾಡಿರುವರೆ? ನನ್ನ ಜೊತೆಗಾರರತ್ತ ನೋಡಿದೆ. ನಾನು ತೇಜ್‌ನತ್ತ ಒಂದು ಕಳ್ಳ ನೋಟ ಬೀರಿದೆ. ತನ್ನ ಘೋಷಿತ ಶತ್ರುವನ್ನವನು ಖಂಡಿತಾ ಮರೆತಿಲ್ಲ. ಉತ್ತರಿಸಲಾಗದ ಈ ಕಾಲಾತೀತ ಪ್ರಶ್ನೆಗಳು ಅವನ ತೀವ್ರ ಗಮನವನ್ನು ಹೇಗಾದರೂ ಹೊರ ಸೆಳೆಯಲು ಸಾಧ್ಯ? "ಹೇಳಯ್ಯಾ ನನ್ನ ಪ್ರಿಯ ಗೆಳೆಯ ಒಂದು ಸೀನಿನ ವೇಗವೆಷ್ಟು?" ಅದು ನಸು ನಗೆಯನ್ನು ಹೊಮ್ಮಿಸುತ್ತದೆ. "ನಿನಗೆ ಉತ್ತರ ಗೊತ್ತಿದರೆ ದಯಮಾಡಿ ಹೇಳು ಒಂದು ಆಲೋಚನೆ ಒಂದು ಸೀನಿಗಿಂತ ಎಷ್ಟು ಲಕ್ಷಪಟ್ಟು ವೇಗವನ್ನು ಹೊಂದಿದೆ?" ಇವರೆಲ್ಲ ಅನಕ್ಷರಸ್ಥ ಸೈನಿಕರೋ ಇಲ್ಲವೆ ಋಷಿಗಳ ಆಚಾರ್ಯರೋ?

ದನಗಳ ಕೂಗು ಅರಚಾಟಗಳಿಂದ ಗಾಯನ ಒಮ್ಮೆಲೇ ಕೇಳದಂತಾಯಿತು. ಅದು ನನ್ನ ಬೆನ್ನು ಮೂಳೆಯಲ್ಲಿ ಗರಗಸದಿಂದ ಕೊಯ್ದಂಥ ನಡುಕವನ್ನುಂಟು ಮಾಡಿತು. ರಾತ್ರಿಯ ಊಟಕ್ಕೆ ಅವರು ಎಮ್ಮೆಗಳನ್ನು ಕೊಲ್ಲುತ್ತಿದ್ದಾರೆ. ಅದೊಂದು ಉಗ್ರವೂ, ಭಯಂಕರವೂ ಆದ ಶಬ್ದ. ಕಿಂಚಿತ್ ಕೊಯ್ದು ರಕ್ತವನ್ನು ಹರಿಬಿಡುವ ಈ ಆಚರಣೆಯಿಂದ (ಹಲಾಲ್) ಭಯಂಕರ ಸಾವು ಸಮೀಪಿಸುತ್ತಿದೆ ಎಂಬುದನ್ನು ಅರಿತ ಪ್ರಾಣಿಗಳ ಆಕ್ರಂದನ ಇದು. ದನಗಳನ್ನು ಕೂಡುವ ರೊಪ್ಪದ ಬಾಗಿಲಿಗೆ ಸರಿಯಾಗಿ ಅಗಳಿ ಹಾಕದೆ ಅಗಲವಾಗಿ ತೆರೆದರೆ ಏನಾಗುತ್ತದೆ? ತಮ್ಮ ಜೀವವುಳಿಸಿಕೊಳ್ಳಲು ಅವು ಓಡುತ್ತವೆಯೆ? ಹಾಗೆ ಮಾಡುವುದಿಲ್ಲವೆಂದೇ ನನ್ನ ಊಹೆ. ತಮ್ಮ ಸಾವಿನಿಂದ ತಾವೇ ಸಮ್ಮೋಹನಗೊಂಡುವು. ಮೇಕೆಗಳು ಈ ಭಯಂಕರ ಒಕ್ಕೊರಲಿನ ಕೂಗಿನಲ್ಲಿ ಸೇರಿಕೊಂಡಿವೆ. ಹಲಾಲ್ ಮಾಡಿದ್ದರಿಂದ ರಕ್ತ ಉಕ್ಕಿ ಹರಿಯಿತು. ಹೃದಯ ರಕ್ತವನ್ನು ಥಟ್ಟನೆ ಹೊರಚಿಮ್ಮಿತು. ಅವುಗಳ ಯಾತನೆ ಮುಗಿಯುವ ತನಕ. ಆದರೆ, ಒಂದು ದೇಹ ಎಷ್ಟು ರಕ್ತವನ್ನು ಧಾರಣೆ ಮಾಡಬಹುದು ಎಂಬುದು ಗೊತ್ತಾಗುತ್ತದೆ. ಆ ಪ್ರಾಣಿ ದಿಗ್ಭ್ರಮೆಗೊಂಡ ಸ್ಥಿತಿಯಲ್ಲಿದೆ. ಕಟುಕನು ಮಾಡಿದ ಒಂದೇ ಒಂದು ಕಡಿತವನ್ನು ಅಗಲಗೊಳಿಸಲೋ ಎಂಬಂತೆ ಹಾಗೂ ಚೇತರಿಸಿಕೊಳ್ಳಲೆಂದೊ ಏನೋ ಅದು ತನ್ನ ತಲೆಯನ್ನು ಹಿಂದಕ್ಕೆ ಒಗೆದಿದೆ. ಯಾವಾಗಲಾದರೊಂದು ಸಲ, ಅದರ ನಿರ್ಜೀವ ಶರೀರ ತುಯ್ಯುತ್ತದೆ. ಅದು ಹೇಗೆ ಕಾಣುತ್ತೆ ಅಂದರೆ, ಕೊನೇ ಗಳಿಗೆಯಲ್ಲಿ ಸಾಯುವುದರ ಬಗ್ಗೆ ಪುನಃ ಆಲೋಚನೆ ಮಾಡುತ್ತಿದೆಯೇನೋ ಅನ್ನುವ ಹಾಗೆ. ನನಗೇಕೆ ಅಸಹ್ಯವಾಗುತ್ತಿದೆ? ನಾಳೆ ನಮ್ಮ ಪಾಳೆಯಕ್ಕೆ ಹಿಂತಿರುಗಿದ ಮೇಲೆ ಇಷ್ಟಪಟ್ಟು ತಿನ್ನುವುದಿಲ್ಲವೇ? ಗಾಯಕರು ವಿಚಲಿತರಾಗದೆ ತಮ್ಮ ಕೆಲಸ ಮುಂದುವರಿಸಿದ್ದರು.

ಎಲ್ಲರೂ ಬಹಳವಾಗಿ ಹೆದರುವ, ಸೇನಾ ಪಡೆಗಳ ಮುಖ್ಯಸ್ಥ ಬಂದೇ ಆಲಿಖಾನನ ವಾಸಸ್ಥಾನದ ಹತ್ತಿರ, ಶಿಬಿರದ ಕೇಂದ್ರ ಭಾಗದ ಸಮೀಪದಲ್ಲಿ ಅಲ್ಲೇ ಸ್ವಲ್ಪ ಅಡ್ಡವಾಗಿ ಕಬಡ್ಡಿ ಆಟ ಶುರುವಾಯಿತು. ಯುವಕನೊಬ್ಬ ತನ್ನ ಎದುರಾಳಿ ತಂಡದೊಳಗೆ ಪ್ರವೇಶಿಸಿ ಕಬಡ್ಡಿ ಕಬ್ಬಡಿ ಎಂದು ಉಚ್ಚರಿಸುತ್ತ ಚುರುಕಾಗಿ ಸುತ್ತಾಡುತ್ತಾ ಎಲ್ಲ ಕಡೆಯೂ ಕೈಗಳು ಮತ್ತು ಕಾಲ್ಬೆರಳಗಳನ್ನು ಬೀಸುತ್ತಿದ್ದಾನೆ. ಮಿಂಚಿನಂತೆ ಮುನ್ನುಗ್ಗಿ ಎದುರಾಳಿ ತಂಡದ ಇಬ್ಬರನ್ನು ಮುಟ್ಟಿ ಅವರನ್ನು ಔಟ್ ಮಾಡಿದನು. ಎದುರಾಳಿ ತಂಡದವರ ತಂತ್ರವೊಂದಿದೆ. ಅದೆಂದರೆ ಅವರು ಅವನಿಂದ ದೂರ ಉಳಿದಿದ್ದರೂ ಅವನನ್ನು ಕೆಳಕ್ಕೆ ಕೆಡವಿ ಕಬಡ್ಡಿ ಕಬಡ್ಡಿ ಎನ್ನುವುದನ್ನು ನಿಲ್ಲಿಸುವವರೆಗೂ ಅದುಮಿಕೊಂಡಿರುತ್ತಾರೆ. ಬಂದೇ ಆಲಿ ಶಿಬಿರದಿಂದ ಹೊರಟು ಆಟದಲ್ಲಿ ಸೇರಿಕೊಂಡ ಮೇಲೆ ಶತ್ರುವಿನ ಶಿಬಿರದ ವಿನ್ಯಾಸದ ಬಗ್ಗೆ ವ್ಯಾಪಕವಾಗಿ ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಿದ್ದೇನೆ. ಅವನಿಗೆ ಸ್ವಲ್ಪ ವಯಸ್ಸಾಗಿದೆ. ತನ್ನ ವೇಗದಲ್ಲಿನ

ಕೊರತೆಯನ್ನು ಮೋಸದಿಂದ ಸರಿದೂಗಿಸುತ್ತಾನೆ. ಅವನು ಇರುವುದರಿಂದ ಅವನ ಪಡೆಗಳವರು ಹೆದರುತ್ತಾರೆ ಎನ್ನುವುದಂತೂ ಸ್ಪಷ್ಟವೇ. ಆ ಮೇಲೆ ಯಾರೋ ಯುವಕನೊಬ್ಬ ತನ್ನ ಭುಜಗಳನ್ನು ಕುಣಿಸುತ್ತ ತನಗೆ ತಾನೇ ಏನಿದು ಸುಡುಗಾಡು ಅಂತ ಹೇಳಿಕೊಂಡು ಈ ಹಿರಿಯನ ಕಾಲು ಹಿಡಿದುಕೊಂಡು ಬಿಡುತ್ತಾನೆ. ಬಂದೇ ಆಲಿ ಹತಾಶನಾಗಿ ನಡುವಿನ ಪಟ್ಟಿಯನ್ನು ಮುಟ್ಟಲು ಯತ್ನಿಸುತ್ತಾನೆ. ಕಾರಣ ಅದು ಅವನಿಗೆ ಜೀವದಾನ ಮಾಡುತ್ತದೆ. ಆದರೆ ಇತರೆ ಸೈನಿಕರು ಧೈರ್ಯ ತಂದುಕೊಂಡು ಅವನ ಮೇಲೆ ಮುಗಿ ಬೀಳುತ್ತಾರೆ. ಆದರೆ ಅವನು ಉಸಿರುಬಿಟ್ಟು ಕಬಡ್ಡಿ ಕಬಡ್ಡಿ ಎನ್ನುವುದನ್ನು ನಿಲ್ಲಿಸುವವರೆಗೂ ಅವನನ್ನು ಗಟ್ಟಿಯಾಗಿ ಹಿಡಿದಿರುತ್ತಾರೆ. ತೇಜ್ ಬಂದೇ ಆಲಿಯನ್ನು ಉದ್ದೇಶಪೂರ್ವಕವಾಗಿ ಗಮನಿಸುತ್ತಿರುತ್ತಾನೆ.

ಮೋಜನ್ ಅಲ್ಲಾ ಹೋ ಅಕ್ಬರ್ ಎಂದು ಕೂಗುತ್ತ ನಿಷ್ಠಾವಂತರನ್ನು ಪ್ರಾರ್ಥನೆಗೆ ಕರೆಯುತ್ತಾನೆ. ಎಲ್ಲಾ ಚಟುವಟಿಕೆಗಳೂ ಸ್ತಬ್ಧಗೊಂಡು ಮುಕ್ಕಾಲು ಭಾಗದಷ್ಟು ಸೇನಾಪಡೆಗಳು ಪಶ್ಚಿಮದ ಕಡೆ ಗುಂಪು ಸೇರುತ್ತವೆ. ಅಡಿಗೆಯವರು, ಅವರ ಸಹಾಯಕರು ಮತ್ತು ದನಗಾಹಿಗಳು ಅವರನ್ನು ಕೂಡಿಕೊಳ್ಳುತ್ತಾರೆ. ಎಷ್ಟು ಸೊಗಸಾಗಿ ಅವರು, ಮಧ್ಯೆ ಮಧ್ಯೆ ಸಮನಾಗಿ ಜಾಗ ಬಿಟ್ಟು ಸಾಲುಗಳನ್ನು ರಚಿಸಿಕೊಂಡು ಎಲ್ಲರೂ ಮಂಡಿಯೂರಿ ಕುಳಿತುಕೊಂಡು, ತಲೆಗಳ ಮೇಲೆ ವಸ್ತ್ರಗಳನ್ನು ಹಾಕಿಕೊಂಡು ಅಂಗೈಗಳನ್ನು ಮೇಲೆ ಮಾಡಿಕೊಂಡು, ಅಲ್ಲಾನ ಕೃಪೆಗಾಗಿ ಮೊರೆಯಿಡುತ್ತಾರೆ. ಹಾಗಾದರೆ ಇಸ್ಲಾಂನ ಮಹಾನ್ ಪ್ರತಿಭೆ ಸೇನೆಯದೆ? ಅಂಥ ಸಂಪೂರ್ಣ ವಿಧೇಯತೆಯನ್ನು ಅದು ಏಕೆ ಹೊರ ಸೆಳೆಯುತ್ತದೆಂಬುದನ್ನು ಬಹುಶಃ ಇದು ವಿವರಿಸುತ್ತದೆ. ಸೂರ್ಯಾಸ್ತದ ನಂತರ, ಸೂರ್ಯಕಾಂತಿ ಹೂಗಳು ಒಟ್ಟಾಗಿ ಬಾಗುವಂತೆ, ಇವರೂ ತಮ್ಮ ತಲೆಗಳನ್ನ ಬಾಗಿಸುತ್ತಾರೆ. ಸೇನಾ ಘಟಕದಲ್ಲಿರುವ ಹಿಂದೂಗಳು ಏನೋ ಸ್ವಲ್ಪ ಕಳೆದುಕೊಂಡವರಂತಿದ್ದು ತಮ್ಮ ಕೆಲಸ ಕಾರ್ಯಗಳಿಗೆ ಸದ್ದಿಲ್ಲದೆ ತೆರಳುತ್ತಾರೆ. ಕೋಳಿಗಳು ಮತ್ತು ಹುಂಜಗಳು ಮಾತ್ರ ಈ ಗಂಭೀರ ಆಚರಣೆಯ ಅರಿವಿಲ್ಲದಂತಿರುತ್ತವೆ. ಇನ್ನು ಇಲ್ಲಿರುವ ಸಾವಿರಾರು ನೊಣಗಳಾದರೋ ಒಂದಕ್ಕೊಂದು ಡಿಕ್ಕಿ ಹೊಡೆಯುತ್ತ, ಒಂದನ್ನೊಂದು ತಳ್ಳಾಡುತ್ತ. ನೂಕಾಡುತ್ತ, ಈಗಾಗಲೇ ಮಣ್ಣಿನಲ್ಲಿ ಮರೆಯಾಗಿ ಹೋಗಿರುವ ರಕ್ತದ ಮೇಲೆ ಕೂರಲು ಹವಣಿಸುತ್ತಿವೆ. ಇನ್ನೊಂದು ಸಾವಿರ ನೊಣಗಳಾದರೋ ಎಮ್ಮೆಯ ಕುತ್ತಿಗೆಯ ಮೇಲೆ ಬೇಗ ಒಣಗುತ್ತಿರುವ ಕತ್ತರಿಸಿದ ಗಾಯದ ಮೇಲೆ ಕುಳಿತುಬಿಟ್ಟಿವೆ. ಓ ಸರ್ವಶಕ್ತ ದೇವನೆ! ಆ ಹಾಳಾದ್ದು ಇನ್ನೂ ಜೀವಂತವಾಗಿದೆ. ಅದು ನಿಧಾನವಾಗಿ ತನ್ನ ತಲೆಯನ್ನು ಅಲುಗಿಸುತ್ತಿದೆ. ನೊಣಗಳು ಗಾಳಿಯಲ್ಲಿ ತೇಲುವ ಜೇನುಗೂಡಿನಂತೆ ಮೇಲೇಳುತ್ತಿವೆ.

ನಾವು ಶಿಬಿರಕ್ಕೆ ಹಿಂತಿರುಗುವ ಹೊತ್ತಿಗೆ ಆಗಲೇ ಕತ್ತಲಾಗುತ್ತಿತ್ತು. ರಾವಲ್ ಉದಯ್ ಸಿಂಹ, ರಾಜಾ ಪೂರಜೀ ಕೀಕಾ, ತೇಜ್, ಮಂಗಲ್, ಪದಾತಿದಳದ ಮುಖ್ಯಸ್ಥರು ಮತ್ತು ನಾನು ಎಲ್ಲರೂ ಕೊನೆಯ ಬಾರಿಗೆ ಸಮಾಲೋಚನೆ ನಡೆಸಿದ್ದೆವು. ಸೈನ್ಯದ ನಡೆ, ಅದರ ವಿರುದ್ಧವಾದ ನಡೆ, ಆಕ್ರಮಣ, ರಕ್ಷಣೆ, ತಂತ್ರಗಾರಿಕೆ ಇತ್ಯಾದಿ ಪ್ರತಿಯೊಂದು ಹಂತವನ್ನೂ ಎಚ್ಚರಿಕೆಯಿಂದ ಪರಿಶೀಲಿಸಿದೆವು. ಪ್ರತಿಯೊಬ್ಬ ದಳದ ಮುಖ್ಯಸ್ಥರಿಗೂ ನಿರ್ದಿಷ್ಟ ಕೆಲಸವನ್ನು ಮತ್ತು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ವಹಿಸಿ ಕೊಡಲಾಯಿತು. ನಾನಾಗಲಿ, ರಾಜಾ ಪೂರಜೀ ಕೀಕಾ ಆಗಲಿ, ಅಥವಾ ರಾವಲ್ ಉದಯ್ ಸಿಂಹ ಆಗಲಿ ಆದೇಶ ಮಾಡದ ಹೊರತು ಅಥವಾ ತೀರಾ ವಿರಳ ಸಂದರ್ಭಗಳ ಹೊರತು ಆತ ಅಲ್ಲಿಂದ ಎಲ್ಲಿಗೂ ಹೋಗುವಂತಿಲ್ಲ. ನಾವು ಕಡೆಗಣಿಸಿದ ಆಕಸ್ಮಿಕ ಸಂದರ್ಭಗಳು ಒಂದು ನೂರು

ಇದ್ದುವು ಎಂದು ನಾನು ಸವಾಲು ಹಾಕಬೇಕೆಂದಿದ್ದೆ. ಇಷ್ಟಾದರೂ ಒಂದು ವಿವರವಾದ ಯೋಜನೆ ಹಾಕಿಕೊಂಡು ಪ್ರತಿಯೊಬ್ಬರೂ ಅವರ ಪಾತ್ರವನ್ನು ಮತ್ತು ಅದರ ಉದ್ದೇಶವನ್ನು ಅರಿತರೆಂಬುದನ್ನು ಖಚಿತಪಡಿಸಿಕೊಂಡದ್ದು ಅತ್ಯಂತ ಮುಖ್ಯವಾದ್ದು. ನಾವು ಪರಸ್ಪರ ಎದುರಾಗುವ ಜಾಗ ಮತ್ತು ಕಾಲವನ್ನು ಆಯ್ಕೆ ಮಾಡಿಕೊಳ್ಳಲಿಷ್ಟಪಡಲಿಲ್ಲ. ಜೊತೆಗೆ ಶತ್ರು ಹಿಂದೆಸರಿಯುವ ವಿಧಾನದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದೂ ನನಗೆ ಬೇಕಿರಲಿಲ್ಲ. ಶತ್ರು ಎಲ್ಲಿ, ಯಾವಾಗ ಮತ್ತು ಹೇಗೆ ಹಿಂದೆ ಸರಿಯಬೇಕೆಂಬುದನ್ನು ಮಾತ್ರ ನಾವು ಅಪ್ಪಣೆ ಮಾಡುವುದು ತುಂಬ ಆತಂಕದ ವಿಷಯವಾಗಿತ್ತು.

ಒಂಬತ್ತೂ ಕಾಲರ ಹೊತ್ತಿಗೆ ಪಾಳೆಯ ಶಾಂತವಾಗಿತ್ತು. ಜನ ನಿದ್ದೆ ಹೋಗಿದ್ದರೆ, ಹೇಗೆ ಎಂಬುದು ನನಗೆ ಗೊತ್ತಿಲ್ಲ. ಆದರೆ, ಅವರೆಲ್ಲರೂ ತಮ್ಮ ಜೊತೆ ತರುವುದಕ್ಕೆ ಅನುಮತಿ ಕೊಡಲಾಗಿದ್ದ ಒಂದು ಹಾಸಿಗೆ ಬಟ್ಟೆಯನ್ನು ಹಾಸಿದ್ದರು ಮತ್ತು ಒಂದು ಹೊದಿಕೆಯನ್ನು ಹೊದ್ದಿದ್ದರು. ರಾತ್ರಿ ಊಟಕ್ಕೆ ಮಾಡಿಸಿದ್ದ ಅಡಿಗೆ ಎಂದರೆ ನಾಲ್ಕು ದೊಡ್ಡ ದೊಡ್ಡ ಸಜ್ಜೆಗೆ ರೊಟ್ಟಿ, ಗಟ್ಟಿ ತುಪ್ಪ, ಮೂಲಂಗಿ ಮತ್ತು ಬೆಳ್ಳುಳ್ಳಿ ಚಟ್ನಿ. ಚಟ್ನಿ ಎಷ್ಟು ಖಾರವಾಗಿತ್ತು ಅಂದರೆ ತಿಂದವರು ಅಳಬೇಕು ಅಷ್ಟು ಖಾರ. ಊಟ, ತಿಂಡಿಯ ಕ್ರಮವನ್ನು ಬದಲಾಯಿಸಬಹುದಾಗಿತ್ತು. ಆದರೆ ನಾಳೆ ಬೆಳಿಗ್ಗೆ ಉಪಾಹರಕ್ಕೆ ಅದೇ ತಿಂಡಿಯನ್ನೇ ಒಂದು ಬಟ್ಟೆಯಲ್ಲಿ ಸುತ್ತಿ, ನೀರು ತುಂಬಿದ ಚರ್ಮದ ಚೀಲದ ಜೊತೆ ಅವನ ಸವಾರಿ ಆಸನದ ಪಕ್ಕದಲ್ಲಿಟ್ಟಿರುತ್ತಿತ್ತು. ಎಲ್ಲರೂ ನಾಲ್ಕೂವರೆಗೆ ಏಳಬೇಕೆಂದು ತಿಳಿಸಲಾಗಿತ್ತು. ಯೋಗ ನಿದ್ರೆಯನ್ನೋ ಶವಾಸನವನ್ನೋ ಮಾಡದ ಹೊರತು ನನಗೆ ನಿದ್ರೆ ಬರುತ್ತಿರಲಿಲ್ಲ. ನಾನು ಅಂಗಾತ ಮಲಗಿ ಆಕಾಶವನ್ನು ನೋಡಹತ್ತಿದೆ. ಅದು ಸಮತಲವಾಗಿ ಕಪ್ಪಗಿದ್ದು ತೂತುಗಳಿಂದ ಕೂಡಿತ್ತು. ಸಣ್ಣ ಚುಕ್ಕಿಯಂಥ ತೂತುಗಳ ಮೂಲಕ ಬೆಳಕು ಹೊರ ಚಿಮ್ಮುತ್ತಿತ್ತು. ನನಗೆ ಇಂಥ ಹಲವು ರಂಧ್ರಗಳು ಗೊತ್ತಿತ್ತು. ಶಾಲೆಯಲ್ಲಿ ನಮ್ಮ ನೆಲೆಯನ್ನು ಕಂಡುಕೊಳ್ಳಲು ಸಹಾಯಕವಾಗಲೆಂದು ಇವನ್ನು ಓದಲು ಕಲಿಸಲಾಗಿತ್ತು. ಆದರೆ ಒಂದು ಆಧ್ಯಾತ್ಮಿಕ ಬಿಕ್ಕಟ್ಟಿನ ಸಮಯದಲ್ಲಿ ನನಗೆ ಮಾರ್ಗದರ್ಶನ ಮಾಡುತ್ತವೆಂದು ತಿಳಿದಿರಲಿಲ್ಲ. ನಾನು ನನ್ನ ಕಣ್ಣುಗಳನ್ನು ಮುಚ್ಚಿಕೊಂಡು ನನ್ನ ಮುಚ್ಚಿದ ಕಣ್ಣು ಗುಡ್ಡೆಗಳ ತೆರೆಯ ಮೇಲೆ ನಕ್ಷತ್ರಗಳನ್ನು ನೆನಪಿಸಿಕೊಂಡೆ. ಅವು ನನ್ನ ಸಾವಿಗೆ ಸಾಕ್ಷಿಯಾಗಿರುತ್ತವೆ. ನಾನು ಕಾಲಿನ ಹೆಬ್ಬೆರಳಿನಿಂದ ಪ್ರಾರಂಭಿಸಿದೆ. ಅದರ ಬಗೆಗಿನ ನನ್ನ ಅರಿವನ್ನು ಹಿಂತೆಗೆದುಕೊಂಡೆ. ಆಮೇಲೆ ಇತರೆ ಕಾಲ್ಬೆರಳುಗಳು, ಹಿಮ್ಮಡಿಗಳು, ಮಂಡಿಗಳು, ತೊಡೆಗಳು, ನನ್ನ ಶಿಶ್ನ, ಹೊಟ್ಟೆ ಇವೆಲ್ಲವೂ ಇಲ್ಲದಂತಾದುವು. ಆನಂತರ ಶ್ವಾಸಕೋಶಗಳು, ಕೈಗಳು ತೋಳುಗಳು ಮತ್ತು ಹೆಗಲುಗಳು ಇವೆಲ್ಲವೂ ನನ್ನ ಪಾಲಿಗೆ ಸತ್ತಂತಾದುವು. ನನ್ನಿಂದ ನಾನು ಬಿಡುಗಡೆಗೊಂಡು ನಕ್ಷತ್ರಗಳ ಜೊತೆ ನಿಂತು ನನ್ನ ನಿರ್ಜೀವ ದೇಹವನ್ನು ಎಚ್ಚರಿಂದ ಗಮನಿಸ ತೊಡಗಿದೆ. ನನ್ನ ಪಾದಗಳು ಪರಸ್ಪರ ಒಂದೂವರೆ ಅಡಿ ದೂರ ಇದ್ದುವು. ನನ್ನ ಕೈಗಳು ನನ್ನ ಪಕ್ಕದಲ್ಲಿ ಇಳಿಬಿದ್ದಿದ್ದವು. ನಾನೊಬ್ಬ ಮೃತಿ ಹೊಂದಿದ ಮನುಷ್ಯ. ಚಟ್ಟವಿಲ್ಲ, ಹೂಗಳಿಲ್ಲ, ಅಳುವವರಿಲ್ಲ ಅಷ್ಟೆ. ನನ್ನ ತಲೆ ಮಾತ್ರ ಚಿತ್ತೂರಿನ ಸಂತೆಗಿಂತ ಹೆಚ್ಚು ವ್ಯಸ್ತ. ವಿಕ್ರಮಾದಿತ್ಯನ ಬಗ್ಗೆ ತಂದೆಯವರು ಏನು ತೀರ್ಮಾನ ತೆಗೆದುಕೊಂಡರು? ಸುನೇರಿಯಾಳ ಬಳೆಗಳು ಒಡೆದು ಹೋದವು. ತಾಯಿ ಊಟ ಮಾಡಲು ಬಲವಂತ ಮಾಡುತ್ತಿದ್ದಾಳೆ. ನನ್ನ ಮೂಗಿನ ಹೊಳ್ಳೆಯಲ್ಲಿ ಕೌಸಲ್ಯಳ ಯೋನಿಯ ವಾಸನೆ ಹೊಡೆಯುತ್ತಿದೆ. ನಾನು ಸಾಂಪ್ರದಾಯಿಕ ಹಾಗೂ ವಿವೇಚನೆಯಿಂದ ಕೂಡಿದ ಯುದ್ಧದ

ಹಾದಿಗಳನ್ನು ತ್ಯಜಿಸಿದೆನೆಂದು ತಿಳಿದಾಗ ತಂದೆಯವರ ಪ್ರತಿಕ್ರಿಯೆ ಏನಾದೀತು? ಗುಜರಾತಿನ ದಂಡನಾಯಕ ಬಂದೇ ಆಲಿ ಸ್ವಲ್ಪ ಹೂಗಣ್ಣಿನವನೆ? ನಾಳೆ ಅವನ ಜೊತೆ ಹೋರಾಡುವವರು ಯಾರು? ನನ್ನ ಮೊದಲ ಪತನದ ಚಿತ್ರಗಳು ಮಧ್ಯಭಾಗಕ್ಕೆ ಬರಲೆತ್ನಿಸುತ್ತಿವೆ. ಆದರೆ ಅವನ್ನೆಲ್ಲ ನನ್ನ ಹೆಂಡತಿ ಕಂತೆಕಟ್ಟಿ ಕಳಿಸುತ್ತಿದ್ದಾಳೆ. ನನ್ನ ಕಣ್ಣುಗಳ ನಡುವೆ ನಾನೊಂದು ತಿರುಗಣಿ ಮಡುವಿನ ಮಂಡಲವನ್ನು ನಿರ್ಮಿಸಿ ಅದನ್ನು ತಿರುಗಿಸುತ್ತೇನೆ. ಅದು ವೇಗದಿಂದ ಸುತ್ತ ತೊಡಗಿದ ಮೇಲೆ ಅದು ಎಲ್ಲ ಆಲೋಚನೆಗಳು, ಚಿತ್ರಗಳು, ಬಣ್ಣಗಳು, ವಿಚಾರಗಳ ತನ್ನ ತಿರುಗಣಿಗೆ ಸೆಳೆದುಕೊಳ್ಳುತ್ತದೆ. ಎಲ್ಲವೂ ಅದರ ಸುತ್ತುವ ವೇಗಕ್ಕೆ ಕುಸಿದು ಬೀಳುವ ಮಟ್ಟಿಗೆ ವೇಗದಿಂದ ಅತಿವೇಗದಲ್ಲಿ ಸುತ್ತುತ್ತದೆ. ಅದರ ಸ್ಥಿರ ಕಂಪನ ಕೇಂದ್ರದಲ್ಲಿ ಎಂದೂ ಮುಚ್ಚದ, ಎಲ್ಲವನ್ನೂ ನೋಡುವ ಮೂರನೆಯ ಕಣ್ಣಿದೆ. ಕ್ರಮೇಣ ಎಲ್ಲವೂ ನಿಲುಗಡೆಗೆ ಬರುತ್ತದೆ. ಆಗೊಮ್ಮೆ ಈಗೊಮ್ಮೆ ಸುಳಿಯುವ ನನ್ನ ಆಲೋಚನೆ, ನನ್ನ ಮನಸ್ಸಿನಿಂದ ಕೆಳಗಿಳಿದು ದಡಕ್ಕೆ ಕೊಚ್ಚಿಹಾಕಲ್ಪಡುತ್ತದೆ. ಶೂನ್ಯವು ಬಂದು ದಡಕ್ಕೆ ಹೊಡೆಯುವ ಶಬ್ದ ಸಾಂತ್ವನ ನೀಡುತ್ತದೆ. ಆಗ ನನಗೆ ನಾವು ಹಿಂತಿರುಗಿ ಬರಲಾಗದ ಸ್ಥಿತಿಯನ್ನು ದಾಟಿ ಹೋಗಿದ್ದೇವೆ ಎಂದೆನಿಸಿತು. ನಾವು ಎರಡು ಸಾವಿರದ ಏಳು ನೂರಾ ತೊಂಬತ್ತ ನಾಲ್ಕು ಜನ ಮತ್ತೆ ಎಂದೆಂದಿಗೂ ಮನುಷ್ಯ ಸಮೂಹವನ್ನು ಸೇರಿಕೊಳ್ಳಲಾರೆವು. ನಾವು ಬೇರೆಯುವರೊಂದಿಗೆ ಬೆರೆಯುಬಹುದು, ಅವರೊಂದಿಗೆ ಊಟವನ್ನೂ ಮಾಡಬಹುದು, ಅವರೊಂದಿಗೆ ಕವಿಗೋಷ್ಠಿಗೂ ಹೋಗಬಹುದು, ಅವರೊಂದಿಗೆ ಹೋಳಿ ಆಡಬಹುದು. ಅವರ ಹೆಣ್ಣು ಮಕ್ಕಳೊಂದಿಗೆ ಸಂಭೋಗ ಮಾಡಬಹುದು. ಆದರೆ ನಾವು ಎಲ್ಲ ಕಾಲಕ್ಕೂ ಹೊರಗಿನವರಾಗುತ್ತೇವೆ. ಮರುದಿನ ನಾವು ಮಾಡ ಹೊರಟಿರುವ, ಮಾತಿನಲ್ಲಿ ಹೇಳಲಾಗದ ಕೃತ್ಯಗಳಿಂದಾಗಿ ಒಟ್ಟಿಗೆ ಒಂದು ಬಂಧದಲ್ಲಿ ಬೆಸೆಯಲ್ಪಟ್ಟಿರುತ್ತೇವೆ.

ನಾವು ಬೆಳಗಿನ ಜಾವ ನಾಲ್ಕು ಗಂಟೆಯ ಸುಮಾರಿಗೆ ಎದ್ದೆವು. ಕುದುರೆಗಳಿಗೆ ಹುಲ್ಲು ಹಾಕಿದ್ದಾಯಿತು. ಸೈನಿಕರೆಲ್ಲ ತಮ್ಮ ಪ್ರಾತರ್ವಿಧಿಗಳನ್ನು ನಾಲ್ಕು ಇಪ್ಪತ್ತಕ್ಕೆ ಮುಗಿಸಿದರು. ಬೆಳಗಿನ ಉಪಾಹಾರಕ್ಕೆ ಹತ್ತು ನಿಮಿಷ. ನಾಲ್ಕುವರೆಗೆ ಮಾರ್ಗ ಮಧ್ಯದಲ್ಲಿ ಸಿಕ್ಕುವ ಏಳು ಗುಡ್ಡಗಳ ಕಡೆಗೆ ಕುದುರೆಗಳನ್ನು ನಡೆಸಿಕೊಂಡು ಹೊರಟಿದ್ದೆವು. ಮೊದಲ ನಾಲ್ಕು ಗುಡ್ಡಗಳ ಮೇಲೆ ನಾವು ನಾಗಾಲೋಟದಿಂದ ಕುದುರೆಗಳನ್ನು ಓಡಿಸಬಹುದಿತ್ತು. ಕಾಡಿನ ಮರಗಳು ಕುದುರೆಗಳ ಹೊಟ್ಟೆಯುಬ್ಬರದ ದನಿಯನ್ನು ಕುಂದಿಸುತ್ತಿದ್ದುವೋ ಏನೋ. ಆದರೆ ಈ ವಿಷಯದಲ್ಲಿ ನಾನು ಅದೃಷ್ಟ ಪರೀಕ್ಷೆ ಮಾಡಿ ನೋಡಲು ಸಿದ್ಧನಿರಲಿಲ್ಲ. ಐವತ್ತು ನಿಮಿಷಗಳೊಳಗಾಗಿ ನಾವು ಹಿಂದಿನ ದಿನ ಸಂಜೆ ಹೋಗಿದ್ದ ಜಾಗದಲ್ಲೇ ನಾವು ಚೆದರಿದಂತೆ ಬೆನ್ನು ಮೇಲಾಗಿ ಮಲಗಿಕೊಂಡೆವು. ನಾವು ಬಹಳ ಕಾಲದಿಂದ ನಮಗೆ ತೀರ ಸಮೀಪವಾದ ಪಾರ್ಶ್ವದಲ್ಲಿ ಏಕೆ ಏಳು ಜನ ಕಾವಲು ಸಿಪಾಯಿಗಳು ಮಾತ್ರ ಗುಜರಾತ್ ಶಿಬಿರದ ಕಾವಲು ಕಾಯುತ್ತಿದ್ದರು ಎಂದು ನಾನು ವಿಸ್ಮಿತನಾದೆ. ಅದಕ್ಕೆ ಉತ್ತರವನ್ನು ಕಂಡುಕೊಳ್ಳಲು ನನಗೆ ಸ್ವಲ್ಪ ಕಾಲ ಹಿಡಿಸಿತು. ಅವರ ದೃಷ್ಟಿಯಲ್ಲಿ ಯುದ್ಧ ಮುಗಿದಿದೆ. ಅವರು ನಮ್ಮನ್ನು ಸೋಲಿಸಿಬಿಟ್ಟಿದ್ದರು ಮತ್ತು ಈಗ ಮನೆಗಳಿಗೆ ತೆರಳುತ್ತಿದ್ದರು. ರಾಜಾಪೂರಜೀ ಕೀಕಾನ ಕಡೆಯವರು, ಸದ್ದಿಲ್ಲದೆ ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುವ ಹಾಗೆ ಆ ಏಳು ಜನರನ್ನು ತಮ್ಮ ಬಿಲ್ಲು ಬಾಣಗಳಿಂದ ವಿಚಾರಿಸಿಕೊಂಡರು. ಅವರು ಈಗ ದನಗಳ ದೊಡ್ಡಿಯಲ್ಲಿದ್ದು ಕೊಂಡು ದನಗಳನ್ನು ಹೊರಬಿಡುತ್ತಿದ್ದರು. ಐನೂರು ಎಮ್ಮೆಗಳಲ್ಲಿ ತೀರಾ ಜಡ ಸ್ವಭಾವದವನ್ನು ಚಲಿಸುವಂತೆ ಮಾಡಲು ಹೆಚ್ಚು ತಿವಿಯಬೇಕಾಗುತ್ತಿತ್ತು. ಹತ್ತು ಜನ ಬಿಲ್ಲರ ಸಣ್ಣದೊಂದು ದಳ ಎಡಭಾಗದಲ್ಲಿ

ದಾರಿಮಾಡಿಕೊಂಡು ಕೆಳಗೆ ಬರುತ್ತಿತ್ತು. ಅಲ್ಲಿಯೇ ಅರ್ಧ ಮೈಲಿದೂರದಲ್ಲಿ ಸೇನಾ ಕಾವಲು ಪಡೆಯ ಅರ್ಧದಷ್ಟು ಕುದುರೆಗಳನ್ನು ಹಗ್ಗದಿಂದ ಕಟ್ಟಿಹಾಕಲಾಗಿತ್ತು. ಗಾಳಿ ಕೆಳ ಭಾಗದ ಕಡೆಗೆ ಬೀಸುತ್ತಿತ್ತು. ನಾಯಿಯೊಂದು ಒಳಗೆ ನುಸುಳಿದವರ ವಾಸನೆಯನ್ನು ಗ್ರಹಿಸಿ ಜೋರಾಗಿ ಬೊಗಳ ತೊಡಗಿತು. ಒಂದು ನಿಮಿಷದಲ್ಲಿ ಇಡೀ ಶಿಬಿರದಲ್ಲಿ ನಾಯಿಗಳ ಗುಂಪೆಲ್ಲ ಸೂಚನೆಯನ್ನು ಗ್ರಹಿಸಿ, ಕಾಶ್ಮೀರ, ಪರ್ಷಿಯ, ಚೈನಾದ ತಮ್ಮ ಜ್ಞಾತಿಬಂಧುಗಳನ್ನೆಲ್ಲಾ ಎಚ್ಚರಿಸಿಬಿಡುತ್ತವೆಂದ ಮೇಲೆ ಬಂದೇ ಆಲಿ ಮತ್ತು ಅವನ ಸೇನೆಯ ವಿಷಯ ಹೇಳುವುದೇ ಬೇಡ. ರಾಜಾಪೂರಜೀ ಕೀಕಾನ ಬಾಣ ನಾಯಿಯ ಕೂಗನ್ನು ತುಂಡರಿಸಿತು. ಅದು ಎಲ್ಲಿಂದಲೋ ಇನ್ನೈದು ನಾಯಿಗಳು ಆಗಲೇ ಬಂದು ಬಿಟ್ಟವು. ಜಡವಾಗಿದ್ದ ನಾಯಿಯ ಬಗ್ಗೆ ಅವಕ್ಕೆ ಏನೋ ಅನ್ನಿಸಿ ಅವನ್ನು ಎಚ್ಚರಿಸಿ ಅವು ರೋದನದ ದನಿ ತೆಗೆಯುಂತಾಯಿತು. ಆದರೆ ಅವು ಬೊಗಳಲಿಲ್ಲ. ನೆಲದ ಮೇಲೆಲ್ಲ ದಟ್ಟವಾಗಿ ಇಬ್ಬನಿ ಸುರಿದಿತ್ತು. ನಾನು ಹುಲ್ಲಿನ ಮೇಲೆ ಮಲಗಿದ ಕೂಡಲೆ ಅರ್ಧ ನೆನದು ಬಿಟ್ಟೆ. ಗುಡ್ಡಗಳ ಮೇಲೆ ತೆಳುವಾಗಿ ಮಂಜು ಕವಿದಿತ್ತು. ಅದು ಬೇಗನೆ ಶಿಬಿರವನ್ನು ಆವರಿಸುತ್ತದೆ. ಕೆಲವು ಕಡೆ ಆಕಾಶ ಬೆಳ್ಳಗಾಗುತ್ತಿತ್ತು. ಹಕ್ಕಿಗಳು ಯಾವ ಕ್ಷಣದಲ್ಲಾದರೂ ಗೂಡು ಬಿಟ್ಟು ಹೊರಬರಬಹುದು. ಆಕಾಶದ ತೆರವಾದ ಜಾಗಗಳು ದಟ್ಟ ಮೋಡಗಳಿಂದ ಆವೃತವಾಗಿ ಕೆಲವು ಕ್ಷಣಗಳವರೆಗೆ ಕತ್ತಲೆಯು ಹೆಚ್ಚು ದಟ್ಟವಾಗತೊಡಗಿತು. ಹೆಂಗಸರು ಸಮೀಪದಲ್ಲಿಲ್ಲದಿದ್ದರೆ ಬೇಗ ಏಳುವವರು ಯಾರು? ಅಡಿಗೆಯವರೆ? ಕುದುರೆಯಾಳೆ ಅಥವಾ ಮುಲ್ಲಾನೆ? ಸೈನ್ಯವೊಂದು ಮನೆಗೆ ಮರಳುತ್ತಿರುವಾಗ ಅದರಲ್ಲಿ ಇದು ಎಂಥ ಆರಾಮದ ಹಾಗೂ ಎಂಥ ಸೊಂಬೇರಿ ದೃಶ್ಯ!

ಅಲ್ಲೊಂದು ಹಕ್ಕಿಯ ಕೂಗು ಕೇಳಿಸಿತು. ಅದು ಕಾಲವಲ್ಲದ ಕಾಲದಲ್ಲಿ ಚಾತಕ ಪಕ್ಷಿಯ ಕೂಗು. ಅತ್ತ ರಾಜಾ ಪೂರಜೀ ಕೀಕಾನ ಕಡೆಯವನೊಬ್ಬ ಕುದುರೆಗಳ ಕಟ್ಟನ್ನು ಬಿಚ್ಚಲಾಗಿದೆ ಎಂದು ಹೇಳುತ್ತಿದ್ದನು. ನನ್ನಲ್ಲೇ ನಾನು ಸೇನಾಪಡೆಗಳ ನಾಯಕತ್ವವಹಿಸಿ ಮುನ್ನಡೆಸಲೋ ಅಥವಾ ಹಿಂದೆ ಕುಳಿತು ಸೇನೆಯ ಕಾರ್ಯಾಚರಣೆಯನ್ನು ಸಂಘಟಿಸಲೋ ಎಂದು ಕೊನೆಗಾಣದ ಚರ್ಚೆ ನಡೆಸಿದ್ದೇನೆ. ಈ ದಿನದ ವಂಚನೆಯಲ್ಲಿ ನಾನೊಂದು ನಿದರ್ಶನವನ್ನು ನಿರ್ಮಿಸದೆ ನನಗೆ ಬೇರೆ ವಿಧಿಯಿಲ್ಲ ಎಂದು ನನ್ನ ಹೃದಯಕ್ಕೆ ತಿಳಿದಿತ್ತು ಎಂದು ನನ್ನ ಊಹೆ.

ಸೇನಾ ಪಡೆಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿತ್ತು. ತೇಜ್‌ನನ್ನ ಎಡಗಡೆಗೆ, ರಾವಲ್ ಉದಯ್ ಸಿಂಹನು ನನ್ನ ಬಲಗಡೆಗೆ. ನಮ್ಮ ಪ್ರತಿಯೊಬ್ಬರ ಕೈಕೆಳಗೂ ಒಂಬೈನೂರಕ್ಕೂ ಹೆಚ್ಚು ಕಾಲಾಳುಗಳು ಇದ್ದರು. ನನ್ನ ಸೇನಾಪಡೆಗಳು ಮತ್ತು ನಾನು ಆಕ್ರಮಣದ ನಾಯಕತ್ವ ವಹಿಸಿದ್ದೆವು. ನಮ್ಮಿಬ್ಬರ ಬಲಕ್ಕಾಗಲಿ ಎಡಕ್ಕಾಗಲಿ ಯಾರೂ ತಪ್ಪಿಸಿಕೊಳ್ಳದಂತೆ, ತಡೆಯುವ ಹಾಗೂ ಆ ಮೂಲಕ ಶತ್ರು ನಿರ್ವಾಹವಿಲ್ಲದೆ ಒಂದೇ ದಿಕ್ಕಿನಲ್ಲಿ ನಮ್ಮಿಂದ ನೇರವಾಗಿ ಮುಂದಕ್ಕೆ ಹಿಂದೆ ಸರಿಯುವ ಹಾಗೆ ಒತ್ತಾಯಿಸುವಂತೆ ಮಾಡುವ ಕೆಲಸ ತೇಜಸಿಂಹನದು. ಎಲ್ಲ ದಾರಿಗಳು ನೈರುತ್ಯ ದಿಕ್ಕಿನತ್ತ ಮುಖಮಾಡುವಂತಾಗ ಬೇಕೆಂಬುದೇ ನಮ್ಮ ಇಚ್ಛೆಯಾಗಿತ್ತು.

ಈಗ ನಾನು ಮತ್ತು ನನ್ನ ದಳ ತಲೆ ತಗ್ಗಿಸಿ ನಿಧಾನವಾಗಿ ಸಾಗಬೇಕಾದ ಸಮಯ. ನಾವು ಗುಡ್ಡದ ತಳಭಾಗವನ್ನು ತಲುಪಿದಾಗ, ತೇಜನು ಬಾಣದ ತುದಿಗೆ ಸುತ್ತಿದ್ದ ಒದ್ದೆ ಬಟ್ಟೆಯನ್ನು ಎಳೆದನು. ಗುರಿಯಿಟ್ಟು ಬಿಲ್ಲಿನ ಹೆದೆಗೇರಿಸಿ ಎಷ್ಟು ಹಿಂದಕ್ಕೆಳೆಯಬಹುದೋ, ಅಷ್ಟು ಹಿಂದಕ್ಕೆಳೆದು ಬಿಟ್ಟನು. ಉಳಿದ ಅಧಿಕಾರಿಗಳೂ ಅದೇ ರೀತಿ ಮಾಡಿದರು. ನನ್ನಿಂದ ಸಂಕೇತ ಬಂದ ಕೂಡಲೇ ಎಲ್ಲ ಬಾಣಗಳೂ ಅವುಗಳ ವಿವಿಧ ಗುರಿಗಳತ್ತ

ಹಾರಿದುವು. ತೇಜನ ಬಾಣ ನೇರವಾಗಿ ಬಂದೇ ಆಲಿಯ ಶಿಬಿರದ ಶಾಮಿಯಾನಕ್ಕೆ ನೇರವಾಗಿ ತಾಕಿತು. ಅದು ತನ್ನ ಎತ್ತರದಿಂದ ಚ್ಯುತವಾಯಿತು. ಆದರೆ ಅದು ಫಲಪ್ರದವಾಗುವುದಿಲ್ಲವೆಂದು ನನಗೆ ಖಚಿತವಾಗಿ ಗೊತ್ತಿತ್ತು. ನಾನೇನೂ ಚಿಂತಿಸುವ ಅಗತ್ಯವಿರಲಿಲ್ಲ. ಅದು ಶಾಮಿಯಾನದ ಅಲಂಕೃತ ಅಂಚಿಗೆ ಕುಸಿದಿತು. ಮತ್ತು ಅದರ ಸೂರನ್ನು ಬೇಕೆಂದೇ ಹೊತ್ತಿಸಿತು. ಎಲ್ಲೆಡೆಯಲ್ಲೂ ಸುಂಯ್ ಎಂದು ಶಬ್ದ ಮಾಡುತ್ತ ಜ್ವಾಲೆಗಳು ಎದ್ದವು. ಬಂದೇ ಆಲಿಯ ಬಿಡಾರದ ಬಳಿ ಕಾವಲು ಕಾಯುತ್ತಿದ್ದವನು ಧೂಮಕೇತುಗಳು ಎಲ್ಲಿಂದ ಧಾವಿಸಿ ಬರುತ್ತಿವೆ ಎಂದು ಪತ್ತೆ ಹಚ್ಚಲು ಮೇಲೆದ್ದಿರಬೇಕು. ಮತ್ತೆ ಯಾರೂ ಅವನ ದನಿ ಕೇಳಲಿಲ್ಲ. ರಾಜಾ ಪೂರಜೀ ಕೀಕಾನ ಬಾಣ ಕಾವಲುಗಾರನ ಗೋಮಾಳೆಯ ಕೆಳಗಿನ ಮೃದುವಾದ ಭಾಗಕ್ಕೆ ತಾಗಿತ್ತು. ಆಕಾಶ ಇನ್ನಷ್ಟು ಹೊಳವಾಯಿತು. ಭಗವಾನ್ ಭಾಸ್ಕರನ ಸಪ್ತಾಶ್ವಗಳು ತಲೆಯ ಮೇಲಿನ ಹಳದಿ ಮತ್ತು ಕೆಂಪು ಮೋಡಗಳನ್ನು ಕದಡುತ್ತ ಧಾವಿಸಿ ಬಂದುವು. ಮೋಜನನ ಅಲ್ಲಾ ಹೋ ಅಕ್ಬರ್ ಅಲ್ಲಾ ಪ್ರಶಾಂತ ವಾತಾವರಣವನ್ನು ಭೇದಿಸಿತು. (ಊಹೆಗೂ ಮೀರಿದವನ್ನೆಲ್ಲಾ ನಾನು ಲೆಕ್ಕ ಹಾಕಿ ಬಿಟ್ಟಿದ್ದೇನೆಂದು ಭಾವಿಸಿದ್ದೆ. ಬಂದೇ ಆಲಿಯ ಕಡೆಯವರು ಇನ್ನೊಂದೆರಡು ನಿಮಿಷಗಳಲ್ಲಿ ಎದ್ದು ಪ್ರಾರ್ಥನೆಗೆ ಹೊರಡುವರು) ಸೂರ್ಯ ತನ್ನ ತಲೆಯನ್ನು ಹೊರಚಾಚಿದ. ನಾನು ತಲೆ ಬಾಗಿ ನಮಸ್ಕರಿಸಿ ಸ್ತೋತ್ರವನ್ನು ಹೇಳಿದೆ. ಮೋಜನ್ನನು ಏಕಿನ್ನೂ ಸುತ್ತಲಿನ ಬಾಣ ಬಿರುಸುಗಳನ್ನು ಗಮನಿಸಿಲ್ಲ? ನನ್ನ ಹಿಮ್ಮಡಿ ಬೇಫಿಕೀರನ ಪಕ್ಕೆಯಲ್ಲಿ ಹುದುಗಿದ ಕೂಡಲೇ ಶಿಬಿರದಲ್ಲಿ ಎಲ್ಲೆಡೆ ಬೆಂಕಿ ಆವರಿಸಿಕೊಂಡಿತ್ತು. ಇಷ್ಟು ಹೊತ್ತಿಗಾಗಲೇ ಗುಜರಾತ್ ಶಿಬಿರದಲ್ಲಿರುವ ಪ್ರಾಣಿಗಳು ಮಲಗಿದ್ದವರ ದೇಹದ ಮೇಲೆ ಮಾರಣಾಂತಿಕವಾಗಿ ಮುನ್ನುಗ್ಗುತ್ತಿರಬೇಕು. ಕಿವಿಗಡಚಿಕ್ಕುವ ಶಬ್ದವು ನಮಗೆ ಇನ್ನಿಲ್ಲದ ಅನುಕೂಲವನ್ನೊದಗಿಸಿತು. ಹತ್ತು ಸಾವಿರ ಸಂಖ್ಯೆಯ ರಾವುತ ದಳ ರಭಸದಿಂದ ಮುನ್ನುಗ್ಗಿ ಬರುತ್ತಿದೆ ಎಂಬ ಭಾವನೆಯನ್ನುಂಟು ಮಾಡಿತು. ಪೂರಜೀ ಕೀಕಾನ ಕಡೆಯ ಇಪ್ಪತ್ತು ಮಂದಿ ರಭಸದಿಂದ ಹಾರಿ ಶಿಬಿರದ ಇನ್ನೊಂದು ತುದಿಯಲ್ಲಿದ್ದ ಕುದುರೆಯ ಲಾಯದ ಸರಣಿಯತ್ತ ಮುನ್ನುಗ್ಗಿದರು. ಅವರೊಂದು ವೇಳೆ ಕುದುರೆಗಳು ಮತ್ತು ಒಂಟೆಗಳನ್ನು ಕಟ್ಟುಬಿಚ್ಚಿ ಬಿಟ್ಟರೆ ಅದರಿಂದ ಹುಯಿಲು ದ್ವಿಗುಣಗೊಳ್ಳುತ್ತದೆ. ನನ್ನ ಖಡ್ಗ ಒರೆಯಿಂದ ಹೊರಬಂತು. ನಾನು ಕೆಳಗೆ ಬಾಗ ಹತ್ತಿದೆ. ನಾನು ಮೇಲೆದ್ದ, ಉರುಳಿದ, ಚಲಿಸಿದ, ಎದ್ದು ನಿಂತ, ಚೀರಿದ ಅಥವಾ ಓಡಹತ್ತಿದ್ದ ಎಲ್ಲವನ್ನೂ ಹೊಡೆದೆ. ನಾನು ಕೊಚ್ಚಿದೆ. ಕತ್ತರಿಸಿದೆ, ತುಂಡರಿಸಿದೆ, ಧ್ವಂಸಮಾಡಿದೆ. ಗುಜರಾತಿ ಸೈನಿಕರು, ಇನ್ನೂ ಅರೆ ಎಚ್ಚರದ ಸ್ಥಿತಿಯಲ್ಲಿದ್ದವರು, ದಿಗ್ಭ್ರಮೆಗೊಂಡು ನಮ್ಮ ಕತ್ತಿಗಳ ಏಟನ್ನು ತಪ್ಪಿಸಿಕೊಳ್ಳಲು ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿದರು. ಕೈಗಳು ಮತ್ತು ತಲೆಗಳು ಒಟ್ಟಿಗೇ ಕೆಳಗುರುಳಿದವು. ಬೇರೆಯವರೂ ನನ್ನ ಜೊತೆ ವೇಗವಾಗಿ ಹೆಜ್ಜೆ ಹಾಕುವ ಹಾಗೆ ಕಾರ್ಯಾಚರಣೆ ಚುರುಕುಗೊಳಿಸಿದೆ. ನನ್ನವರು ಅದನ್ನೇ ಅನುಸರಿಸಿದರು. ಸೈನಿಕನೊಬ್ಬನನ್ನು ನಾನು ಬಹಳ ಬಲವಾಗಿ ಹೊಡೆದಾಗ, "ನನ್ನ ಸಲುವಾಗಿ ದೇವರನ್ನು ಪ್ರಾರ್ಥಿಸು" ಎಂದು ನಾನು ಪಿಸುಗುಟ್ಟಿದೆ. ಕುತ್ತಿಗೆಯ ಎಡಭಾಗದಿಂದ ಸೊಂಟದ ಬಲ ಭಾಗಕ್ಕೆ ಕರ್ಣ ರೇಖಾತ್ಮಕವಾದ ಹೊಡೆತ, ಎಡಭಾಗದ ಹೆಗಲೆಲುಬನ್ನು ನುಚ್ಚುಗುಜ್ಜು ಮಾಡುವಂತೆ ಅಪ್ಪಳಿಸಿದ ಏಟು, ಎದೆಯ ಗೂಡನ್ನು ಕುಸಿಯುವಂತೆ ಮಾಡಿ ಹೃದಯವನ್ನು ಸೀಳಿಹಾಕಿತು. ಒರೆಯಾಕಾರದಲ್ಲಿ ಮಾಡಿದ ಒಂದು ಕಚ್ಚು ಎಷ್ಟು ಶಕ್ತಿಯುತವಾಗಿ ಮತ್ತು ಒಪ್ಪವಾಗಿತ್ತೆಂದರೆ ರುಂಡ ಮತ್ತು ಮುಂಡಗಳಿಗೆ ತಾವು ಬೇರೆಯಾದದ್ದು ಗೊತ್ತೇ ಆಗಲಿಲ್ಲ. ಜ್ಞಾನೋದಯವಾದಂತೆ ಸಾಮಾನ್ಯವಾದೊಂದು ಆಲೋಚನೆಯು ನನ್ನ ಮನಸ್ಸಿನಲ್ಲಿ ಸುಳಿದು ಹೋಯಿತು. ನಿರಾಯುಧನೂ, ಹಾಗೂ

ಯಾವುದೇ ಸಿದ್ಧತೆ ಮಾಡಿಕೊಳ್ಳದ ಯೋಧನೆಂದರೆ ಸಾಮಾನ್ಯ ನಾಗರಿಕನೆಂದೇ ಅರ್ಥ. ರಾಜೇಂದ್ರ ನಿಮ್ಮ ತಂದೆಯವರ ಆಧಿಪತ್ಯದಲ್ಲಿದ್ದ ಸೇನೆಯಲ್ಲಿ ಕಪಟದಿಂದ ಗುಜರಾತಿ ಸೇನಾ ಪಡೆಯಿಂದ ಕೊಲ್ಲಲ್ಪಟ್ಟ ಪ್ರತಿ ಒಬ್ಬ ಮನುಷ್ಯನಿಗೆ ಪ್ರತಿಯಾಗಿ ಇಬ್ಬರನ್ನು ಕೊಲ್ಲುವುದಾಗಿ ನಿನಗೆ ಮಾತು ಕೊಟ್ಟಿದ್ದೆ. ಈಗ ಎಣಿಸಲು ಶುರು ಮಾಡು. ಚಕ್ರ ಬಡ್ಡಿ ಸಮೇತ ನಾನು ನಿನಗೆ ಹಿಂತಿರುಗಿಸುತ್ತೇನೆ ಎಂಬ ಭರವಸೆ ನನಗಿದೆ. ವಂಚನೆ ಮತ್ತು ಮೋಸದಲ್ಲಿ ನಾನು ಯಾರಿಗೇ ಆದರೂ ಸಮ. ಮೇವಾಡದ ವಿರುದ್ಧ ಮಾಡಲಾದ ಅಪರಾಧಗಳನ್ನು ನಾನು ಮರೆಯುವುದೂ ಇಲ್ಲ, ಕ್ಷಮಿಸುವುದನ್ನೂ ಇಲ್ಲ. ಈಗ ನನ್ನಿಂದ ನೀನು ನಿರೀಕ್ಷಿಸುವುದೇನಿದ್ದರೂ ಅತ್ಯಂತ ಕೆಟ್ಟದ್ದನ್ನು. ನಾನು ಯಾವಾಗಲೂ ನೀನು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನದೇ ನೀಡುತ್ತೇನೆ.

ಭಯ ಹಾಗೂ ಭಯದ ನಿಃಸ್ಸತ್ವದಷ್ಟು ಬೇಗ ಹರಡುವುದು ಬೇರಾವುದೂ ಇಲ್ಲ. ಬಡಪಾಯಿ ಮತ್ತು ಅಸಹಾಯಕ ದಡ್ಡರು ನಡುಗುತ್ತ, ತಮ್ಮ ಚಲ್ಲಣಗಳಲ್ಲಿ ಉಚ್ಚೆ ಹೊಯ್ದುಕೊಳ್ಳುತ್ತ ನಿಂತರು. ನಾವು ಅವರನ್ನೇನೂ ನಿರಾಶೆಗೊಳಿಸಲಿಲ್ಲ. ಉರಿಯುತ್ತಿರುವ ಶಿಬಿರಗಳಿಂದ ಹಾರಿದರು, ತಮ್ಮ ಆಯುಧಗಳನ್ನು ಕೈಗೆತ್ತಿಕೊಳ್ಳಲು ಹಿಂದಕ್ಕೆ ಓಡಿದರು. ಅರ್ಧದಷ್ಟು ಮಂದಿಗೆ ಉಸಿರು ಕಟ್ಟಿಬಿಟ್ಟಿತು. ಇನ್ನು ಕೆಲವರು ಸಾಂಕೇತಿಕವಾಗಿ ಪ್ರತಿರೋಧ ಒಡ್ಡಲು ಹಿಂತಿರುಗಿದರು. ನಾವೇನು ನಿಜವಾದ ಮನುಷ್ಯರೋ ಇಲ್ಲ ದೆವ್ವಗಳೋ ಎಂದು ಗೊತ್ತಿರಲಿಲ್ಲ. ನಾವು ಎಲ್ಲಿಂದ ಬಂದೆವು? ಯುದ್ಧ ಮುಗಿದಿತ್ತಲ್ಲವೆ? ಅದೊಂದು ಅಸಮ ಹೋರಾಟ. ನೆಲದ ಮೇಲೆ ಎಳೆದಾಡಲಾಯಿತು. ನಾವು ಕುದುರೆಯ ಬೆನ್ನೇರಿದ್ದೆವು. ಹಾಗಾಗಿ ರಭಸ ಇದ್ದದ್ದು ನಮ್ಮ ಕಡೆ. ಅವರೆಲ್ಲರ ಅರಚಾಟ ಕಿರಿಚಾಟಗಳಲ್ಲಿ ವಿಚಿತ್ರವಾದೊಂದು ಊಳುವ ಶಬ್ದ ಸೇರಿತು. ಈ ಗಟ್ಟಿ ದನಿಯ ರೋದನ ಮತ್ತು ನರಳಿಕೆ ಶಬ್ದ ಎಲ್ಲಿಂದ ಬರುತ್ತಿತ್ತು? ಅದು ನನ್ನೊಳಗಿನಿಂದ ಮತ್ತು ಮೇವಾಡದ ಸೇನಾಪಡೆಗಳಿಂದ ಹೊರಹೊಮ್ಮುತ್ತಿತ್ತು. ನಾವು ಶರೀರವನ್ನು ಇರಿಯುತ್ತ, ಮೂಳೆಯನ್ನು ಮುರಿಯುತ್ತ, ತಲೆಗಳನ್ನು ಒಡೆಯುತ್ತ ಹೋದಂತೆ ಅದೊಂದು ಭೀಕರವಾದ, ಚೀರಾಟ, ನಂಬಲಾಗದ, ಕೂಗು. ಕೃಪೆಗಾಗಿ– ನಮ್ಮ ಭಾವೀ ಬಲಿಪಶುಗಳ ಕಡೆಯಿಂದ ಕ್ಷಮೆಗಾಗಿ ಮೊರೆ ಕೇಳಿಬಂತು.

ಆಗ ಮೋಜನ್ ನನ್ನ ಕಣ್ಣಿಗೆ ಬಿದ್ದ. ತನ್ನ ಎಡಗಾಲನ್ನು ಹೆಣದ ಮೇಲಿಟ್ಟುಕೊಂಡು, ತಲೆಯನ್ನು ಓರೆಯಾಗಿ, ಶಬ್ದಗಳ ಇಂಗಿತವನ್ನು ಗ್ರಹಿಸಲೆಂಬಂತೆ, ಅಸ್ಥಿರವಾಗಿ ನಿಂತಿದ್ದನು. ಪ್ರತಿಯೊಂದು ಚೀತ್ಕಾರವೂ ಅವನ ದೇಹವನ್ನು ಗುರಿಯಾಗಿಟ್ಟುಕೊಂಡೇ ಹೊರಟಿತು. ಪ್ರಾರಂಭದ ಕೆಲ ಕ್ಷಣಗಳಲ್ಲೇ ಬೆಂಕಿ ಹಚ್ಚಿದ್ದನ್ನು ಅವನೇಕೆ ಗಮನಿಸಲಿಲ್ಲ ಎಂದು ಈಗ ನನಗೆ ತಿಳಿಯಿತು. ಅವನು ಕುರುಡ. ಅವನು ಮುಗ್ಗರಿಸಿ ಕೆಳಗೆ ಬಿದ್ದ. ನಾನು ಅವನತ್ತ ಬಾಗಿ, ಆಧಾರವಾಗಿ ಹಿಡಿದುಕೊಳ್ಳಲು ನನ್ನ ಕೈ ಚಾಚಿದೆ ಅವನು ನನಗೆ ಒಳ್ಳೆಯದಾಗಲೆಂದು ಹರಸಿದ. "ಏನು ನಡೆಯುತ್ತಾ ಇದೆ? ಈ ಹೊತ್ತು ದೈವನಿರ್ಣಯದ ದಿವಸವೇನು?" ಎಂದು ನನ್ನನ್ನು ಕೇಳಿದನು. "ಹೌದು, ಮುದುಕ ಸತ್ತವರಿಗಲ್ಲ ಮುದುಕ, ಸಾಯಿಸಿದವರಿಗೆ. ನಿಶಬ್ದವಾಗಿ ಮಲಗಿಬಿಡು ಮುದುಕ; ನಿನ್ನನ್ನು ಯಾರೂ ಮುಟ್ಟುವುದಿಲ್ಲ. ಯಾರೂ." ಹಾಗೆಂದು ಹೇಳಿ ಆತುರದಿಂದ ಹೊರಟೆ.

ಶಾನ್–ಎ–ರಿಯಾಸತ್ ಬಂದೇ ಆಲಿಯು ಸುಮಾರು ಒಂದು ಸಾವಿರ ಮಂದಿಯ ನೇತೃತ್ವ ವಹಿಸಿ ನಮ್ಮೆಡೆಗೆ ಕುದುರೆಯೇರಿ ಬರುತ್ತಿದ್ದನು. ನಾನು ಬೆಫೀಕೀರನ ಮೇಲಿನ ಒತ್ತಡವನ್ನು ಸಡಿಲಿಸಿದೆ. ನಾವು ಸಾಧಾರಣ ಓಟದಿಂದ ಸಾಗಿದೆವು. ಶಾನ್–ಎ–ರಿಯಾಸತ್‌ನ

ಗುತ್ತನೆಯ ಅಂಗಿಯ ಗುಂಡಿಗಳು ಕಳಚಿ ಅವನ ಪೇಟ ಬಣ್ಣದ ಛಾಯೆಯಿಂದ ಕೂಡಿ ಸೊಟ್ಟನಾಗಿತ್ತು. ತನ್ನ ಕವಚವನ್ನು ಬಿಗಿಯಾಗಿ ಕಟ್ಟಿಕೊಳ್ಳಲು ಅವನಿಗೆ ಪುರಸತ್ತಿರಲಿಲ್ಲ. ಅವನೆಷ್ಟು ಎತ್ತರದ ಹಾಗೂ ನೇರ ವ್ಯಕ್ತಿ ಎಂಬುದು ತಿಳಿದಿರಲಿಲ್ಲ. ಅವನು ಮುಂದಕ್ಕೆ ಬಾಗಿದ; ಈಗ ಅವನ ಖಡ್ಗ ಭೂಮಿಗೆ ಸಮಾನಾಂತರವಾಗಿತ್ತು. ಅವನು ಮತ್ತು ಅವನ ಕಡೆಯುವವರು ಒಂದು ವೇಗದ ಸುಂಟರಗಾಳಿ. ಅವರು ಅದೆಷ್ಟು ವೇಗವಾಗಿ ಧಾವಿಸುತ್ತಿದ್ದರೆಂದರೆ ಅವರು ಹೆಚ್ಚು ಕಮ್ಮಿ ಚಲಿಸದೆ ಸ್ಥಿರವಾಗಿದ್ದಂತೆ ಕಂಡು ಬಂದರು. ನನ್ನ ಕಿವಿಗಳಲ್ಲಿ ಶಬ್ದ ಪ್ರವಾಹ ನಿಂತು ಹೋಯಿತು. ನರಳುವ ಮತ್ತು ಅಳುವ ಶಬ್ದಗಳೆಲ್ಲ ನಿಂತು ಹೋದವು. ಕುದುರೆಗಳ ಭಾರೀ ಹೊಡೆತದ ಶಬ್ದಕೂಡ ಕೇಳಿಸಲಿಲ್ಲ. ಹೋರಾಟಕ್ಕೆ ಸಿದ್ಧವಾಗಲು ಒಂದು ಸಾವಿರ ಕುದುರೆಗಳು ತಮ್ಮ ಸ್ನಾಯುಗಳನ್ನು ಮತ್ತು ಶರೀರವನ್ನು ಬಿಗಿಗೊಳಿಸುತ್ತಿದ್ದುವು. ಕಪ್ಪು, ಹಳದಿ, ಕಂದು ಹಳದಿ, ಬಣ್ಣ, ಹಲವು ಬಣ್ಣಗಳ ಚಿಕ್ಕೆಗಳು, ಹಳದಿ ಕಿತ್ತಳೆ ಮಿಶ್ರ ಬಣ್ಣ, ಮಹಾಗನಿ (ಕಡು ಕಪ್ಪುಬಣ್ಣ) ಗಾಳಿ ಮತ್ತು ಚರ್ಮ ಸೂರ್ಯನ ಎಳೆ ಬಿಸಿಲಲ್ಲಿ ನಿಗಿ ನಿಗಿ ಮಿಂಚುತ್ತಿದ್ದುವು. ಒಂದು ಸಾವಿರ ರಾವುತರು ಕುದುರೆಗಳ ಎರಡೂ ಪಾರ್ಶ್ವಗಳಲ್ಲಿ ಒಂದೊಂದು ಕಾಲನ್ನಿಟ್ಟು ಅವುಗಳ ಮೇಲೆ ಕುಳಿತಿದ್ದರು.

ಗುಜರಾತಿನ ರಾವುತ ದಳವೆಂದರೆ ತಮ್ಮ ದಾರಿಗೆ ಅಡ್ಡವಾದ್ದೆಲ್ಲವನ್ನೂ ಸಮುದ್ರದ ಭರತದ ಅಲೆಯಂತೆ ಗುಡಿಸಿಹಾಕುವಂಥದು, ನಿಜ. ಬಹುಮಟ್ಟಿಗೆ ಉಳಿದ ದಿನಗಳಲ್ಲಿ ಅದು ಹಾಗೆಯೇ.

ಈಗಾಗಲೇ ಅಭಾಸ ಮಾಡಿದಂತೆ ನನ್ನ ಕಡೆಯ ಒಂಬೈನೂರು ಜನ ಮಧ್ಯದಲ್ಲಿ ಬೇರ್ಪಟ್ಟು ಬಹಳವಾಗಿ ನಿರೀಕ್ಷಿಸಿದ್ದ ಅತಿಥಿಗಳನ್ನು ನಮ್ಮ ಮನೆಗಳೊಳಕ್ಕೆ ಬರಮಾಡಿಕೊಳ್ಳುವಂತೆ ಬಂದೇ ಆಲಿ ಮತ್ತು ಅವರ ಕಡೆಯವರನ್ನು ಒಳಕ್ಕೆ ಬಿಟ್ಟರು. ಗುಜರಾತ್ ಸೈನಿಕರು ನಮ್ಮ ಸೈನ್ಯದ ಸಾಲುಗಳ ತಡೆಗಳನ್ನು ದಾಟಿಕೊಂಡು ಮುನ್ನುಗ್ಗಿದ್ದರಿಂದ ನಾವು ಹಿಮ್ಮೆಟ್ಟಿದೆವೆಂದು ಗುಜರಾತ್ ಸೇನಾ ಪಡೆಯ ಗ್ರಹಿಕೆಯಾಗಿತ್ತು. ಈಗ ನನ್ನ ಕಡೆಯವರು ಅವರನ್ನು ಗೋಡೆಯಿಂದ ಸುತ್ತುವರಿದು ಅಮುಕಿಬಿಟ್ಟರು. ಅವರ ಪಕ್ಕದಲ್ಲಿದ್ದ ಮೇವಾಡದ ಯೋಧರನ್ನು ಕಡೆಗಣಿಸಬಹುದಿತ್ತು ಹಾಗೂ ತಮ್ಮ ಮೊದಲಿನ ದಾರಿಯಲ್ಲೇ ಮುಂದುವರಿಯುವ ಮೂಲಕ ಸದ್ದಿಲ್ಲದೆ ಹೋಗಿ ಬಿಡಬಹುದಿತ್ತು. ಆಮೇಲೆ ಪುನಃ ಒಟ್ಟಾಗಿ ಸೇರಿ ತಿರುಗಿ ಬೀಳಬಹುದಿತ್ತು. ಆದರೆ ಅವರ ಮನಸ್ಸುಗಳು ಮತ್ತು ಆಲೋಚನೆಗಳು ಯಾವುದೋ ಒಂದು ಗೊತ್ತಾದ ರೀತಿಯಲ್ಲಿ ರೂಪುಗೊಂಡಂಥವು. ಅಲ್ಲದೆ ಅವರು ಅವರ ಕೋಪದಲ್ಲಿ ಮತ್ತು ಪ್ರತೀಕಾರದ ಅನಿವಾರ್ಯತೆಯಲ್ಲಿ ಸಿಕ್ಕಿಕೊಂಡು ಬಿಟ್ಟಿದ್ದರು.

ಒಂದು ಸಾವಿರ ಜನ ರಾವುತರು ಒಂದು ತೀರ ಇಕ್ಕಟ್ಟಾದ ಜಾಗದಲ್ಲಿ ಹೇಗೆ ಹಿಡಿಸಿರಬಹುದು ಎಂಬುದು ಅಚ್ಚರಿ ಉಂಟುಮಾಡುವ ವಿಷಯ ಎಂದು ಮನಸ್ಸಿದ್ದರೆ ತಿಳಿಯುತ್ತದೆ. ಅವರು ತಮ್ಮ ಮೇಲೆಯೇ ಕುಸಿಯತೊಡಗಿದ್ದರು. ಅವರಿಗೆ ಚಲಿಸಲು ಜಾಗವೇ ಇರಲಿಲ್ಲ. ತೀರ ಕೊನೆಯಲ್ಲಿರುವ ರಾವುತ ದಳ ಮಾತ್ರ ನಮ್ಮೊಂದಿಗೆ ಹೋರಾಡಬಹುದಿತ್ತು. ಆದರೆ ಅದು ಈಡೇರುವ ಸಂಭವ ಇರಲಿಲ್ಲ. ಬಹಳ ಭದ್ರವಾಗಿ ಸುತ್ತಿದ ಗುಜರಾತಿನ ಚೆಂಡಿನ ಒಂದೊಂದೇ ಪದರಗಳನ್ನು ಸುಲಿಯುತ್ತ ಹೋದೆವು. ಈ ನಡುವೆ ಮಧ್ಯಭಾಗದಲ್ಲಿದ್ದವರಿಗೆ, ಇಕ್ಕಟ್ಟಿನ ಭಯ ಅತಿ ತೀವ್ರವಾಯಿತು. ಹೊರಗಡೆ ಏನು ನಡೆಯುತ್ತಿದೆ ಎಂಬ ಬಗ್ಗೆ ಗೊಂದಲಗೊಂಡು ಅವರು ಕಂಗಾಲಾದರು. ಹೊರಗಿನ ಪಡೆಗಳು ಇದೀಗ ಏಕಕಾಲಕ್ಕೆ ಶತ್ರು ಮತ್ತು ಒಳಗಿನ ಸ್ಫೋಟಕ ಸ್ವರೂಪದ ಇಕ್ಕಟ್ಟು ಎರಡನ್ನೂ ಎದುರಿಸಬೇಕಾಯಿತು. ಹಿಂದೆಯೇ ನಿರ್ಧರಿಸಲಾದ ಒಂದು ಸಂಕೇತದ

ಮೇರೆಗೆ ನನ್ನ ಕಡೆಯವರು ಈಶಾನ್ಯ ಭಾಗದಲ್ಲಿ ಒಂದು ಹೊರದ್ವಾರವನ್ನು ಕಲ್ಪಿಸುವ ಮೂಲಕ ಒಮ್ಮೆಲೇ ಒತ್ತಡವನ್ನು ಸಡಿಲ ಗೊಳಿಸಿದರು. ಗುಜರಾತಿನ ದಳ ತೆರೆದ ಬಯಲಿಗೆ ಹೋಗಿ ಅಲ್ಲಿಂದ ತಪ್ಪಿಸಿಕೊಂಡು ಬಿಡಲು ಗುಂಪುಗುಂಪಾಗಿ ತಳ್ಳಾಡುತ್ತ ನೂಕಾಡುತ್ತ ಮುನ್ನುಗ್ಗಿದರು. ನಾನು ಮತ್ತು ನನ್ನ ಕಡೆಯ ಬೆರಳೆಣಿಕೆಯಷ್ಟು ಮಂದಿ ರಾವುತರು ಅವರಿಗಾಗಿ ಕಾಯುತ್ತಿದ್ದೆವು. ಅನೇಕರು ತಪ್ಪಿಸಿಕೊಂಡರು. ಆದರೆ ಬಹುಮಂದಿ ಒಬ್ಬರ ಹಿಂದೊಬ್ಬರು ಸಾಲಾಗಿ ಬಂದಾಗ ಅದೆಷ್ಟು ಸುಲಭವಾಗಿ ನಮಗೆ ಬಲಿ ಸಿಕ್ಕಿದರೆಂದರೆ, ನಾವು ಹಿಂದೆ ಮಾಡಿದಂತೆ ಕೊಚ್ಚುವುದು ಕತ್ತರಿಸುವುದಕ್ಕೆ ತೊಡಗಿದೆವು.

ಷಾನ್-ರಿಯಾಸತ್ ಬಂದೇ ಆಲಿ ಖಾನರ ಕತೆಯೇನಾಯಿತು? ನಾವಿಬ್ಬರು ಮಾರಣಾಂತಿಕ ಹೋರಾಟದಲ್ಲಿ ತೊಡಗಿಕೊಂಡೆವೆಂದು ಹೇಳುವುದೇ ಹೆಚ್ಚು ಸರಿ. ನಮ್ಮಿಬ್ಬರಲ್ಲಿ ನಾನೇ ಶ್ರೇಷ್ಠನಾಗಬೇಕಿದ್ದರೆ ನಾನು ಅವನನ್ನು ಅಸಾಧಾರಣ ಸಾಮರ್ಥ್ಯದ ಮತ್ತು ವಂಚನೆಯ ವ್ಯಕ್ತಿಯನ್ನಾಗಿ ಪರಿವರ್ತಿಸಬೇಕಿತ್ತು. ಒಬ್ಬ ಅದೂರ ದೃಷ್ಟಿಯ ನಾಯಕನು ಮಾತ್ರ ಆ ರೀತಿಯ ಕ್ಷುದ್ರ ಆಕ್ರಮಣಶೀಲತ್ವದ ವೈಭೋಗವನ್ನು ತಾಳಿಕೊಳ್ಳಬಲ್ಲ. ಬಂದೇ ಆಲಿ ನಾಲ್ವರನ್ನು ಬಲಿತೆಗೆದುಕೊಂಡನು. ಆಮೇಲೆ ಅವನು ನನ್ನತ್ತ ತನ್ನ ದೃಷ್ಟಿಯಿಟ್ಟಿದ್ದರೆ ನನ್ನ ಕಡೆಯ ವೀರನೊಬ್ಬನು ಅವನನ್ನು ಅತ್ಯಂತ ಹೀನಾಯಕರವಾದ ರೀತಿಯಲ್ಲಿ ಕೊಂದನು.

ಗುಜರಾತಿನ ಪಡೆಗಳು ಈಗ, ಕಾಲ ಮೇಲೆ ಕುದುರೆಯ ಮೇಲೆ ಹೇಗೆಂದರೆ ಹಾಗೆ ಓಡತೊಡಗಿದುವು. ಕುರುಡು ಭೀತಿ ಹಿಡಿದಾಗ ಬಹುಪಾಲು ಸೇನಾಪಡೆಗಳು ಮಾಡುವಂತೆ ಅವು ಕೂಡ ಧೈರ್ಯ ಕಳೆದುಕೊಂಡಿದ್ದವು. ಕುದುರೆಗಳು, ದನಗಳು, ಜನ ಮತ್ತು ಒಂಟೆಗಳು ಎಲ್ಲವೂ ನಮ್ಮ ಮಾರ್ಗದರ್ಶನದಲ್ಲಿ ಒಂದೇ ಜಾಗದತ್ತ ಹೋಗುತ್ತಿದ್ದುವು. ಅವು ಜೀವವುಳಿಸಿಕೊಳ್ಳಲು ನೈರುತ್ಯ ದಿಕ್ಕಿನಲ್ಲಿ ನೇರವಾಗಿ ಜೌಗು ಪ್ರದೇಶದತ್ತ ಧಾವಿಸುತ್ತಿದ್ದುವು.

ಶಿಬಿರದಲ್ಲಿ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ಕಡೆಗೆ ನಾವೊಂದು ದಾರಿಯನ್ನು ಸರಿಮಾಡಿದ್ದೆವು. ನಾನು ಮತ್ತು ನನ್ನ ಕಡೆಯವರು ಹೋರಾಡದೆ ಬಿಟ್ಟಿದ್ದ ಗುಜರಾತ್ ಸೇನೆಯ ಮೂರನೇ ಎರಡರಷ್ಟು ಯೋಧರನ್ನು ವಿಚಾರಿಸಿಕೊಳ್ಳುವುದನ್ನು ರಾವಲ್ ಉದಯಸಿಂಹ ಮತ್ತು ತೇಜ್ ಅವರಿಗೆ ಬಿಡಲಾಗಿತ್ತು. ಆದರೆ ಪಾಳೆಯದಲ್ಲಿ ಇನ್ನೂ ಪ್ರತಿರೋಧದ ತಂಡಗಳು ಬಹಳಷ್ಟು ಇದ್ದುವು. ನಾವು ಮೊದಲ ಧಕ್ಕೆ ಕೊಟ್ಟ ಒಂದು ಗಂಟೆಯೊಳಗೆ ನನ್ನ ಸಹವರ್ತಿಗಳು ಶತ್ರುಗಳ ಮೇಲೆ ಹಾದುಹೋಗಿದ್ದರು ಹಾಗೂ ಅವರನ್ನು ಜೋಡಿ ನದಿಗಳ ಮೂಲಕ ವಿಸ್ಮೃತಿಯ ಜೌಗು ಸರೋವರಕ್ಕೆ ಅಟ್ಟುತ್ತಿದ್ದರು. ಕೊಲ್ಲುವುದು ಅತ್ಯಂತ ಬಳಲಿಕೆಯನ್ನುಂಟು ಮಾಡುವ ಹಾಗೂ ಮೆಚ್ಚಿಕೆಯಾಗಲಿ, ಪ್ರತಿಫಲವಾಗಲಿ ತರದ ಕೆಲಸ. ಯಾವಾಗ ನಮ್ಮ ಶಕ್ತಿ ಸಡಿಲಗೊಂಡಿತೋ. ಆಗ ಶತ್ರು ಸೇನೆ, ನಾವು ಸಾಕಷ್ಟು ಮಾಡಿದ್ದಾಯಿತು ಮತ್ತು ಇನ್ನು ನಾವು ಮಾಡುವುದನ್ನು ಕೊನೆಗೊಳಿಸುವೆವು ಎಂದು ಭಾವಿಸಿತು. ಅವರು ತುರ್ತಾಗಿ ನಿಧಾನಿಸತೊಡಗಿದರು. ಅವರಲ್ಲಿ ಬಹಳಷ್ಟು ಜನ ನಿಲ್ಲಿಸಿದರು. ಅಲ್ಲದೆ ಕುಳಿತುಕೊಂಡರು ಇಲ್ಲವೆ ಮಲಗಿದರು. ಇದನ್ನು ಸಹಿಸುವುದು ಸಾಧ್ಯವಿರಲಿಲ್ಲ. ಅದರಿಂದ ನಮ್ಮ ಕೆಲಸ ಎರಡರಷ್ಟಾಯಿತು. ನಾವು ಕೊಚ್ಚುವುದು ತುಂಡರಿಸುವುದನ್ನು ಶ್ರದ್ಧಾಸಕ್ತಿಗಳಿಂದ ಮತ್ತೊಮ್ಮೆ ಮಾಡಬೇಕಾಯಿತು. ಯುದ್ಧ ಕೈದಿಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಸರಬರಾಜು ವಸ್ತುಗಳನ್ನು ಸಾಗಿಸುವ ಮಾರ್ಗಗಳಾಗಲೇ ಮುಚ್ಚಿದ್ದರಿಂದ, ಪುನಃ ಹೆಚ್ಚಿನ ಹೊರೆಯನ್ನು ಹೊರುವುದು ಆಗುತ್ತಿರಲಿಲ್ಲ. ಅದೂ ಅಲ್ಲದೆ ನಾವು ನೇರವಾಗಿ ಮಲ್ಲಿಕ್ ಅಯಾಜ್ ಮತ್ತು ಅವನ ದುರ್ದಮ ಸೇನೆಯ ಕೈವಶರಾಗಿ ಬಿಡುತ್ತೇವೆ. ಜೊತೆಗೆ ಕಾಲಾವಕಾಶ ಸಿಕ್ಕಿದ ಯೋಧನೆಂದರೆ

ಶತ್ರುವೊಬ್ಬ ಮತ್ತೊಮ್ಮೆ ಹುಟ್ಟಿಬಂದಂತೆ. ನಮ್ಮ ಕರುಣೆಯ ಗುಣ, ಸೋತ ಸೇನಾಪಡೆಗಳು ನಮ್ಮ ವಿಷಯದಲ್ಲಿ ಮೃದು ಭಾವನೆ ತಾಳುವಂತೆ ಮಾಡುತ್ತದೆ ಮತ್ತು ಮುಂದೆಂದೋ ಒಂದು ದಿನ ಅವರು, ನಮ್ಮ ಬಗ್ಗೆ ಉದಾರವಾಗಿ ನಡೆದುಕೊಳ್ಳುತ್ತಾರೆಂದು ಭಾವಿಸುವುದು ಮೂರ್ಖತನ. ಒಂದು ವೇಳೆ ಅದನ್ನು ಯಾರಾದರೂ ಕಾಣದೆ ಹೋದರೆ, ರಜಪೂತರಲ್ಲಿ ಆದರ್ಶ ವೀರ ಯುಗ ಸತ್ತು ಹೋಗಿದೆ ಹಾಗೂ ನಾವು ಸುಲಭವಾಗಿ ಮೋಸಹೋಗುವ ಮೂರ್ಖರು ಎಂದು ಇನ್ನೆಂದೂ ಯಾರೂ ತಿಳಿಯುವಂತಿಲ್ಲ ಎಂಬುದನ್ನು ಸಾಧಿಸಿ ತೋರಿಸುವುದೇ ಇದರ ಹಿಂದಿನ ಭಾವನೆ. ನನ್ನ ಉದ್ದೇಶ ಸರಳ ಮತ್ತು ಸ್ಪಷ್ಟ. ಗುಜರಾತ್ ಸೇನಾಪಡೆಗಳನ್ನು ಮತ್ತು ನಮ್ಮನ್ನು ಗಮನಿಸುತ್ತಿರುವ ನಮ್ಮ ನೆರೆಯವರನ್ನು ಭಯಭೀತರನ್ನಾಗಿಸಿಬಿಡುವುದು. ಎಷ್ಟರಮಟ್ಟಿಗೆ ಎಂದರೆ, ಅವರು ಇದಾರ್ ಅನ್ನಾಗಲಿ ಅಥವಾ ನಮ್ಮ ಬೇರಾವುದೇ ಆಳ್ವಿಕೆಯ ಪ್ರದೇಶವನ್ನಾಗಲಿ ಕೆಣಕುವ ಸಾಹಸ ಮಾಡುವುದಕ್ಕೆ ಮುಂಚೆ ಎರಡೆರಡು ಬಾರಿ ಯೋಚಿಸಬೇಕು. ಈಗಿನ ನಮ್ಮ ಸೇನಾ ಕಾರ್ಯಾಚರಣೆ ಅಷ್ಟು ಸೀಮಿತ ಗುರಿಯನ್ನು ಸಾಧಿಸಿತೆಂದರೆ, ನಮ್ಮ ಸಾಧನೆ ತೀರಾ ಕೆಟ್ಟದ್ದೇನಲ್ಲ ಎಂದು ನನ್ನ ಭಾವನೆ.

ಹಿಮ್ಮೆಟ್ಟುತ್ತಿರುವ ಸೈನಿಕರಲ್ಲೊಬ್ಬ ಎರಡೂ ಕೈಗಳಲ್ಲಿ ನನ್ನ ಬಲಗಾಲನ್ನು ಹಿಡಿದುಕೊಂಡು ಅವನ ಜೀವವನ್ನುಳಿಸಬೇಕೆಂದು ಬೇಡಿಕೊಂಡನು. ನಾನು ನನ್ನ ಕುದುರೆ ಬೇಫಿಕೀರ್ ಅನ್ನು ಸುತ್ತಲೂ ಜೋರಾಗಿ ಓಡಿಸಿದೆ. ಆದರೆ ಅವನು ನನ್ನನ್ನು ಹೋಗಲು ಬಿಡಲಿಲ್ಲ.

"ನನ್ನನ್ನು ಬದುಕಲು ಬಿಡಿ ರಾಜಕುಮಾರರೆ" ಎಂದು ಮೊರೆಯಿಟ್ಟನು. ಅವನ ಬೆಣಚುಕಲ್ಲಿನಂಥ ಮುಖ ಬಿಳಿಚಿಕೊಂಡಿತು. ಬೆವರಿನ ಕಣಗಳು ತೆಳುಗಾಳಿಗೆ ಚಲಿಸುವ ಸಾಬೂನಿನ ನೊರೆಯ ಗುಳ್ಳೆಗಳ ಗೊಂಚಲಿನ ಹಾಗೆ ಕಿವಿಯ ಹಾಲೆಯ ಮೇಲೆ ಸಾಲುಗಟ್ಟಿದ್ದುವು. ಗುಂಪಿನಲ್ಲಿದ್ದಾಗ ಮನುಷ್ಯರಿಗೆ ಏನಾಗುತ್ತದೆ? ಜನಸಂದಣಿಯಿಂದ ಅವರು ಸೂಚನೆಗಳನ್ನು ಪಡೆದುಕೊಳ್ಳುತ್ತಾರೆ. ಅವರ ಕಣ್ಣಿನ ಸಾಕ್ಷಿಯಿಂದಲ್ಲ. ಗಟ್ಟಿಯಾಗಿ ಹಿಡಿದುಕೊಂಡಿರುವಷ್ಟು ಶಕ್ತಿ ಅವನಲ್ಲಿತ್ತು. ನಾನು ಅವನನ್ನು ಪೂರ್ತಿ ವೃತ್ತಾಕಾರವಾಗಿ ಎಳೆದಾಡಿದೆ. ತೇಜನ ಪಡೆಗಳು ಬಿರುಗಾಳಿಯ ವೇಗದಲ್ಲಿ ಧಾವಿಸುತ್ತಿರುವುದನ್ನು ಮಂಜಿನ ತೆರವಿನಲ್ಲಿ ನೋಡಿದೆ. ಆಗ ನನ್ನ ಗಮನ ಚಂಚಲಗೊಂಡಿತು. ಹಾಗೆ ಗಮನ ಚಂಚಲ ಗೊಂಡಾಗ ಈ ಸೈನಿಕನೇಕೆ ನನ್ನನ್ನು ಎಳೆದುರುಳಿಸಲಿಲ್ಲ? ನನ್ನ ಕಾಲಮೇಲಿನ ಅವನ ಹಿಡಿತವನ್ನು ಸಡಿಲಗೊಳಿಸಲು ಕೆಳಕ್ಕೆ ಬಾಗಿದೆ. ಅವನು ಮಾತನಾಡದಿರಲಿ ಎಂದು ನನ್ನ ಹಾರೈಕೆ. ಈಗ ಅವನು ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳಿರುವ ಮನುಷ್ಯ. ಅವನಿಗೆ ಅವಕಾಶ ದೊರೆತರೆ ತನ್ನ ಮಕ್ಕಳ ಹೆಸರನ್ನು ಹೇಳಿಯಾನು. ಮೂರು ಹೆಣ್ಣು ಎರಡು ಗಂಡು ಎಂದೋ ಅಥವಾ ಎರಡು ಗಂಡು ಮೂರು ಹೆಣ್ಣು ಎಂದೋ ಹೇಳಿಯಾನು. ಈ ಮನುಷ್ಯನನ್ನು ನಾನು ಹೇಗೆ ತಾನೆ ಕೊಲ್ಲಲಿ? ಅವನ ಕೈ ಬೆರಳುಗಳ ಹಿಡಿತವನ್ನು ಸಡಿಲಗೊಳಿಸುವುದು ನನಗೆ ತುಂಬ ಕಷ್ಟವೆನಿಸಿತು. ನಾನು ಬಿಡಿಸಿಕೊಂಡ ಕೂಡಲೇ ತಿರುಗಿಕೊಂಡುತ್ವರೆಯಿಂದ ಕುದುರೆಯನ್ನು ಓಡಿಸಿಬಿಟ್ಟೆ. ಅಲ್ಲಿದ್ದ ಜನ, ಹಾಗೆಯೇ ನನ್ನ ಹಳೆಯ ಮಿತ್ರ ಪೂರಜೀ ಕೀಕಾ ಇವರುಗಳು ನನ್ನನ್ನು ಗಮನಿಸುತ್ತಿದ್ದರು. ಮೇವಾಡದ ಸೇನೆಯಲ್ಲಿರುವ ನನ್ನಂಥ ಇನ್ನೂ ಕೆಲವು ಮೂರ್ಖಭಾವನಾ ಜೀವಿಗಳು, ಹಾಗೂ ನಾವು ಒಳ್ಳೆ ಗೊಂದಲದಲ್ಲಿ ಸಿಕ್ಕಿಕೊಳ್ಳುವೆವು. ನಾನು ನಾಗಾಲೋಟದಲ್ಲಿ ಹಿಂದೆ ಬಂದೆ. ನಾನು ನನ್ನ ಖಡ್ಗವನ್ನು ಮೇಲೆತ್ತಿ ಕೆಳಕ್ಕೆ ತರುತ್ತಿದ್ದಂತೆ, ಆ ಯೋಧನು ದಿಗ್ಭ್ರಮೆಗೊಂಡು ನನ್ನತ್ತ ನೋಡಿದನು.

ಮೋಸ, ವ್ಯವಹಾರ ಚಾತುರ್ಯ, ಕಾರಸ್ಥಾನ ಇಂದ್ರಜಾಲ ಒಳಸಂಚು, ಇವೆಲ್ಲ ಹಾಗೂ ಇನ್ನೂ ಕೆಲವು ಅಲ್ಪ ಮತ್ತು ಮಹತ್ವದ ಸಂಗತಿಗಳು, ರಾಜಧರ್ಮದ ಮತ್ತು ವ್ಯಾಪಾರದ ತಂತ್ರಗಳು ಎಂಬುದನ್ನು ಕೃಷ್ಣನು ನನಗೆ ಕಲಿಸಿದ್ದನು. ಆದರೆ ಈ ಹುಡುಗಾಟದ ಕ್ರೌರ್ಯವನ್ನು ನಾನು ಯಾರಿಂದ ಪಿತ್ರಾರ್ಜಿತವಾಗಿ ಪಡೆದೆ?

ಮಹಾವೀರ ಅರ್ಜುನನಿಗೆ ಮತ್ತು ಕೆಲ ವರ್ಷಗಳವರೆಗೂ ನನಗೂ ಗುರುವಾಗಿದ್ದ ಶ್ರೀ ಕೃಷ್ಣನು ನಿಷ್ಕಾರಣವಾಗಿ ಮತ್ತು ಅಪ್ರಚೋದಿತವಾಗಿ ಇಡೀ ಖಾಂಡವವನ ಹಾಗೂ ಅಲ್ಲಿಯ ನಿವಾಸಿಗಳನ್ನೆಲ್ಲಾ ಅಗ್ನಿಗಾಹುತಿಮಾಡಿಬಿಟ್ಟನಲ್ಲಾ ಅದು ಹೇಗೆ ಎಂದು ನೆನಪಿಸಿಕೊಡೆ. ಅದು, ನಾನು ಎಷ್ಟೇ ಪ್ರಯತ್ನ ಪಟ್ಟರೂ ನನಗೇನೇನೂ ಅರ್ಥವಾಗದ ಮಹಾಭಾರತದ ಒಂದು ಅತ್ಯಂತ ವಿಚಿತ್ರ ಪ್ರಸಂಗಗಳಲ್ಲೊಂದು. ಬಹುಶಃ ಈ ಮಹಾಕಾವ್ಯ ನಮಗೆ ಹೇಳ ಹೊರಟಿರುವುದು ಜೀವನ ವಿವರಣೆಗೆ ಸಿಗುವಂಥದಲ್ಲ; ಅಥವ ಅದರಲ್ಲಿ ಎಲ್ಲವೂ ಅಲ್ಲದಿದ್ದರೂ ಕೆಲವೊಂದಾದರೂ ಅರ್ಥರಹಿತವಾದದ್ದು ಎಂಬ ತರ್ಕಕ್ಕೂ ಸಿಕ್ಕುವಂಥದ್ದಲ್ಲ ಎಂದು. ಎಂಥ ಸಂಸ್ಕೃತಿಯೂ ನಾಗರಿಕತೆಯೂ ಮನುಷ್ಯನ ಈ ಹುಡುಗಾಟದ ಹಿಂಸಾಪ್ರವೃತ್ತಿಯನ್ನು ಮುಚ್ಚಿಡಲಾಗಲಿ, ನಿಯಂತ್ರಿಸಲಾಗಲಿ ಸಾಧ್ಯವಿಲ್ಲ.

ಜೌಗಿಗೆ ಮಂಜು ಮತ್ತು ಕಾವಳವೆಂದರೆ ಯಾವಾಗಲೂ ಏಕೆ ಆಕರ್ಷಣೆ? ಜೌಗಿಗೂ, ಉಸುಬಿಗೂ ಆವಿಗೂ ಪರಸ್ಪರ ಸಂಬಂಧವಿದೆಯೆ? ಅಷ್ಟು ದೂರ ಸಾಗಿ ಬಂದೆವು. ಮುಂದೆ ಹೋಗುವಂತಿಲ್ಲ. ಶತ್ರುವನ್ನು ಕಠಿಣವಾಗಿ ಬೇದರಿಸುವ ಹಾಗೆ ಅವನನ್ನು ಸಮೀಪಿಸಿ ಅದರ ತುದಿಯಲ್ಲಿ ನಿಂತು ಹಿಂದೆಗೆಯದೆ ತಳ್ಳುವ ಸಮಯ.

ಮುಜಾಫರ್ ಷಾ ಮತ್ತು ಮಲ್ಲಿಕ್ ಅಯಾಜಿನ ಸಾವಿರಾರು ವೀರರು ಕಾವಳದಲ್ಲಿ ಕಾಣೆಯಾದರು. ಅವರೆಲ್ಲ ಸಂತೋಷದಿಂದಲೇ ಹೋದರು. ಬೆನ್ನಟ್ಟುವ, ಉದ್ರಿಕ್ತಗೊಳಿಸುವ ಕಗ್ಗೊಲೆ ಅಂತಿಮವಾಗಿ ಪೂರ್ತಿ ನಿಲ್ಲದಿದ್ದರೂ, ಕ್ಷೀಣಿಸುತ್ತಿದೆಯೆಂದು ನಿರಾಳಗೊಂಡು ಸಂತಸದಿಂದ ಹೊರಟು ಹೋದರು. ನಾವಲ್ಲಿದ್ದ ಇಪ್ಪತ್ತು, ಇಪ್ಪತ್ತೈದು ನಿಮಿಷಗಳಲ್ಲಿ ಕಾವಳ ಒಮ್ಮೆ ಮಾತ್ರ ತೆರವಾಯಿತು. ಒಂದೆರಡು ನಿಮಿಷ ಕಾಲ ಮಾತ್ರ ಸೂರ್ಯ ಹೊಳೆದು ಒಂದೆರಡು ಎಕರೆಗಳಷ್ಟು ವಿಸ್ತಾರದ ಜೌಗು ಪ್ರದೇಶಕ್ಕೆ ಬೆಳಕಾಯಿತು. ನಿಮ್ಮ ಪಾಪಗಳಿಗೆ ನಿಮ್ಮ ಮರಣಾನಂತರ ನೀವು ದಂಡ ಕೊಡಬೇಕಾಗುವುದಿಲ್ಲ. ಅವರಿಗಾಗಿ ಈಗಲೇ ಇಲ್ಲಿಯೇ ಪ್ರಾರ್ಥಿಸಿ. ತಗ್ಗಿನಲ್ಲಿದ್ದ ಮೋಡಗಳ ಪರದೆ ಹಿಂದೆ ಸರಿಯಲಿಲ್ಲ. ವಾಸ್ತವದ ಭಯದೊಂದಿಗೆ ಯಾವ ಕಲ್ಪನೆಯೂ ಸ್ಪರ್ಧಿಸಲಾರದು.

ಜೌಗು ಪ್ರದೇಶದ ಹತ್ತಿರ ಪೂರಾ ಚಳಿ ಇತ್ತು. ಅದರ ಒಳಗೆ ಹೋದವರು, ಅರಚಾಟ, ಕಿರಿಚಾಟ ಕೂಗಾಟಗಳ ಘೋರ ಕೋಲಾಹಲವನ್ನು ಪ್ರಾರಂಭಿಸಿಬಿಟ್ಟರು. ಶರೀರವಿಲ್ಲದ ಕೈಗಳು ಗಾಳಿಯಲ್ಲಿ ಚಲಿಸಿದವು. ಮೂಗಿನವರೆಗೂ ಹೂತು ಹೋಗಿದ್ದ ಮನುಷ್ಯನನ್ನು ನಾನು ಕಂಡೆ. ನೀರು ಮತ್ತು ಹೊಲಸು ಅವನ ಮೂಗಿನೊಳಕ್ಕೆ ಹೋಯಿತು. ಅವನಿಗೆ ಉಸಿರುಕಟ್ಟಿಹೋಯಿತೋ ಹೇಗೆ ಎಂದು ತಿಳಿದುಕೊಳ್ಳುವ ಉಪಾಯವಿರಲಿಲ್ಲ. ಅನಂತರ ಅವನು ಕಣ್ಣಿಗೆ ಕಾಣದಂತೆ ಕುಸಿದುಬಿಟ್ಟನು. ಬಹಳಷ್ಟು ಜನರು ಈಜಿ ದಡ ಸೇರಲು ಪ್ರಯತ್ನಿಸುತ್ತಿದ್ದಾರೇನೋ ಎಂಬಂತೆ ಸುತ್ತಲೂ ಕೈಕಾಲು ಬಡಿದರು. ಅದರಿಂದಲೇ ಅವರು ಕುಸಿದು ಕಣ್ಮರೆಯಾಗುವುದನ್ನು ಇನ್ನಷ್ಟು ತ್ವರೆಗೊಳಿಸಿತು. ಇಲ್ಲಿ ಯಾರೂ ಗೆಳೆಯರಿರಲಿಲ್ಲ. ಅದು ಹೇಗೆಂದರೆ ಗುಜರಾತೀ ಯೋಧರು ಪರಸ್ಪರರನ್ನು ನೋಡಿರಲಿಲ್ಲ ಮತ್ತು ಪರಸ್ಪರರಿಗೆ ಪರಿಚಯವಿರಲಿಲ್ಲ. ಅಲ್ಲದೆ ಎಲ್ಲರೂ ಎಂದೂ ಒಟ್ಟಾಗಿ ಸೇರಿ ಯುದ್ಧ ಮಾಡಿರಲಿಲ್ಲವೆಂಬಂತೆ. ಯಾರದ್ದಾದರೂ ಶ್ರಮವು ನೀರು ಹೀರುವ ಮತ್ತು

ಬುಸುಗುಟ್ಟುವ ಶಬ್ದವು ಅವರ ಕಾಲ ಕೆಳಗೆ ಬೇಗ ಸಾಗಿಹೋಗುವಂತೆ ಮಾಡಿದರೆ ಅಂಥವರನ್ನು ಅವರು ಶಪಿಸುತ್ತಿದ್ದರು.

ಇಬ್ಬರು ಸೈನಿಕರು ಪರಸ್ಪರ ಸೆಣಸುತ್ತ, ಜಾರುತ್ತ ಮುಳುಗಿಸುತ್ತ, ಕುತ್ತಿಗೆ ಹಿಸುಕುತ್ತಿರುವುದನ್ನು ನೋಡಿದೆ. ಕೊನೆಗೆ ಅದೃಷ್ಟವಂತನೊಬ್ಬ ಇನ್ನೊಬ್ಬನನ್ನು ಅದುಮಿ ಆ ಸತ್ತ ವ್ಯಕ್ತಿಯ ಮೇಲೆ ತನ್ನನ್ನು ಎಳೆದುಕೊಂಡನು. ತನ್ನಿಂದ ಹಿಂಸೆಗೊಳಗಾದವನ ಹೆಗಲ ಮೇಲೆ ಅತಂತ್ರವಾದ ಸ್ಥಿತಿಯಲ್ಲಿ ಹೇಗೋ ನೆಟ್ಟಗೆ ನಿಂತುಕೊಂಡಾಗ ಅವನು ಹಿಗ್ಗಿ ಬಿಟ್ಟನು. ವಿಲಕ್ಷಣವಾದವುಗಳನ್ನೆಲ್ಲ ಮೀರಿ ತಾನು ಸುರಕ್ಷಿತವಾಗಿ ಗಟ್ಟಿ ನೆಲದ ಮೇಲೆ ಕಾಲೂರುತ್ತೇನೆಂಬ ಖಾತರಿ ಇತ್ತವನಿಗೆ. ಜೋರಾಗಿ ವಿಜಯದ ಕೂಗು ಹಾಕಿದ. ಸತ್ತ ಮನುಷ್ಯನ ಹೆಗಲು ಇನ್ನೂ ಆಳಕ್ಕೆ ಕುಸಿದವು. ಮೇಲಿದ್ದವ ಆ ಸತ್ತವನ ತಲೆ ಮೇಲೆ ತನ್ನ ಬಲಗಾಲನ್ನಿಟ್ಟನು. ಬಹುಬೇಗನೆ, ತಲೆ ಇನ್ನು ಕಾಣದಾಯಿತು ತಾನು ಬಲಿಕೊಟ್ಟ ವ್ಯಕ್ತಿ ಕೆಳಕ್ಕಿಳಿದಂತೆ ತಾನು ಕೂಡ, ಕೆಳಕ್ಕಿಳಿಯ ಬೇಕಾಗುತ್ತದೆಂಬುದು ಅರಿವಾದ ಕೂಡಲೇ ನವೋತ್ಸಾಹ ಮತ್ತು ಸಂತಸ ಮಾಯವಾಯಿತು.

ಇತರೆಡೆಗಳಲ್ಲಿ ನೀರಿನ ಮೇಲೆ ಗುಳ್ಳೆಗಳು ಕಾಣಿಸಿಕೊಂಡರೆ, ಕೆಳಗೆ ಮುಳುಗಿರುವ ಮನುಷ್ಯ ದೇಹ ಇನ್ನೂ ಉಸಿರಾಡುತ್ತಿದೆ ಎಂದು ತಿಳಿಯುತ್ತೇವೆ. ಇಲ್ಲಿ ಜನ ಆಳಕ್ಕೆ ಇಳಿಯುತ್ತ ಹೋದಂತೆಲ್ಲ ಶಾಪ ಹಾಕಿದರು, ಆಣೆ ಇಟ್ಟರು, ಇಲ್ಲವೆ ಕ್ಷಮಿಸಲು ಮೊರೆಯಿಟ್ಟರು. "ಹೋದ ವರ್ಷ ನಾನು ಫಾತಿಮಾಳ ಕೈಮಲೆ ಬಿಸಿನೀರು ಸುರಿದು ಬೊಬ್ಬೆ ಬರಿಸಿದರೂ ಅವಳನ್ನು ಪ್ರೀತಿಸುತ್ತಿದ್ದೆ ಅಂತ ಹೇಳಿ." "ನಿನ್ನ ಮಗ ವೀರಮರಣವನ್ನಪ್ಪಿದ. ಅಂತ ಅಮ್ಮೀಜಾನ್‌ಗೆ ಹೇಳಿ. ಅವನು ಮೂರು ಯುದ್ಧಗಳಲ್ಲಿ ಹದಿನೇಳು ಜನ ಶತ್ರು ಸೈನಿಕರನ್ನು ಕೊಂದ. ಶತ್ರುಗಳೂ ನಮಗೆ ದ್ರೋಹ ಬಗೆದರೂ ನಾನು ಒಂದು ಸಲವೂ ಅವರ ದಯಾ ಭಿಕ್ಷೆ ಬೇಡಲಿಲ್ಲ. ಈಗ ಹುಟ್ಟಿರೋ ಮಗುವಿನ ಹೆಸರು" ಅಷ್ಟು ಹೊತ್ತಿಗೆ ಅವನು ಕಿಂಚಿತ್ತು ಉಸಿರಾಡುತ್ತ ಚೌಳುನೀರು ನುಂಗುತ್ತಾ ಇದ್ದ.

ಜಗತ್ತಿನಲ್ಲಿ ಸಾಯುತ್ತಿರುವ ಮನುಷ್ಯರ ಕೊನೆಯ ಮಾತುಗಳು ಅತ್ಯಂತ ಗಹನವೂ ಗಂಭೀರವೂ ಇಲ್ಲವೆ ಮನಕರಗಿಸುವಂಥವೂ ಆಗಿರುತ್ತದೆಂದೇ ನನ್ನೆಣಿಕೆ. ಆದರೆ ನಾನು ಹಾಗೆ ಅಂದುಕೊಂಡದ್ದು ಎಷ್ಟು ನಿರಾಧಾರವಾದ್ದು ಎಂಬುದು ಅರಿವಿಗೆ ಬಂತು. ನಾವು ಬದುಕಿನಲ್ಲಿ ಅಲ್ಪರು, ಖಾಲಿ ಖಾಲಿ ಇಲ್ಲವೆ ಪ್ರತೀಕಾರ ಮನೋಭಾವದವರು. ಸಾವಿನ ಎದುರಿನಲ್ಲೂ ನಾವು ಇದಕ್ಕಿಂತ ಭಿನ್ನವಾಗಿರುವ ಸಂಭವವಿಲ್ಲ. "ನೀನು ಇನ್ನೊಂದು ಮದುವೆ ಆಗೋದಿಲ್ಲ ಅಂತ ನನಗೆ ಭಾಷೆ ಕೊಡು ಅಂಜುಮಾನ್. ನೀನೇನಾದರೂ ಮದುವೆ ಆದರೆ ನೀನು ಸಾಯೋವರೆಗೂ ನಿನ್ನ ಕುತ್ತಿಗೆ ಮೇಲೆ ನಾನು" ಹೀಗೆಂದು ಅವರೆಲ್ಲ ಒಟ್ಟಿಗೇ ಬಡಬಡಿಸಿದರು. ಬೇರೆಯವರಿಗೆಲ್ಲ ಒಳ್ಳೆಯದಾಗಲಿ ಅಂತಲೋ, ಇಲ್ಲ ಕೆಟ್ಟದಾಗಲಿ ಅಂತಲೋ ಹಾರೈಸಿದರು. ಆದರೆ ಬಹಳ ಮಟ್ಟಿಗೆ ಎಲ್ಲರೂ ನೆರವಿಗಾಗಿ ಮೊರೆಯಿಟ್ಟರು ಮತ್ತು ತಮ್ಮ ದೇವರನ್ನು ಕಾಪಾಡು ಅಂತ ಕೇಳಿಕೊಂಡರು.

ಅವರನ್ನು ಉಳಿಸಲು ಸಾಧ್ಯವಿದ್ದವರು, ದಡದ ಮೇಲೆ ನಿಂತು, ಭೀತಿ ಮತ್ತು ಆಸೆಯಿಂದ ಅವರೆಡೆಗೆ ನೋಡಿದರು. ಕಾಲುಗಳೆರಡನ್ನೂ ಅತಿತ್ತ ಬಡಿದು, ಸೋತು ಹೋಗಿ, ಪೂಜ್ಯ ಭಾವದಿಂದ ತಲೆ ಬಾಗಿ, ಮಕ್ಕಾ ಕಡೆ ಮುಖಮಾಡಿ ತನ್ನ ಅಂತಿಮ ಪ್ರಾರ್ಥನೆಯನ್ನು ಸಲ್ಲಿಸಲು ಸಾಧ್ಯವಾಗದ್ದಕ್ಕೆ ಕ್ಷಮಿಸು ಎಂದು ಕೋರುತ್ತಿದ್ದನು. ಅತ್ಯಂತ ಕರುಣಾಜನಕ ಸ್ಥಿತಿಯೆಂದರೆ ಕುದುರೆಗಳದ್ದು. ತಮ್ಮ ಕಾಲ್ಗೆಳಗಿನ ನೆಲ ಜಾರುತ್ತಿರುವಂತೆ. ನಸುಕಿದ್ದ ಕಾರಣ, ದಿಕ್ಕು ತೋಚದಂತಾಗಿ, ಭಯಗೊಂಡು, ತಮ್ಮ ಕುತ್ತಿಗೆಯನ್ನು ಮೇಲೆ

ಚಾಚಿ, ಇದರಿಂದ ಮೇಲೆ ಬರಲು ಸಾಧ್ಯವೆ ಎಂದು ಒಂದೆರಡು ನಿಮಿಷ ತುಂಬ ಒದ್ದಾಡಿದುವು. ಕೊನೆಗೆ ವಿಧಿಯಿಲ್ಲದೆ. ಮೌನವಾಗಿ ಅಂತಿಮ ಕ್ಷಣಕ್ಕಾಗಿ ಕಾಯುತೊಡಗಿದವು. ನೇರವಾದ ಗೋಡೆಯನ್ನು ಹತ್ತಲೋ ಎಂಬಂತೆ ಆ ಕುದುರೆಗಳು ಮುಂಗಾಲು ಮುಂದೆ ಚಾಚಿದ್ದು ಈಗಲೂ ನನಗೆ ಕಾಣಿಸುತ್ತಿದೆ. ಬಹು ನಿಧಾನವಾಗಿ ಚಲಿಸುವ ನೀರು, ಪುಡಿ ಮಾಡಿದ ವಜ್ರದ ಪುಡಿ ಸೂರ್ಯನ ಬೆಳಕಿನಲ್ಲಿ ಹೇಗೋ ಹಾಗೆ ಗಾಳಿಯಲ್ಲಿ ಹರಡುತ್ತಿದೆ. ಅವುಗಳ ಕೇಸರಗಳು ಎಡದಿಂದ ಬಲಕ್ಕೆ ಅನಿಶ್ಚಿತವಾಗಿ ವೇಗವಾಗಿ ಚಲಿಸುತ್ತ ಆನಂತರ ಇಚ್ಛೆಯಿಲ್ಲದೆ ಕೆಳಗೆ ಹೋಗುತ್ತಿದ್ದುವು. ಅವುಗಳ ಸುಂದರವಾದ ತಲೆಗಳು ನಾವೇಕೆ ಅವಕ್ಕೆ ಸಹಾಯ ಮಾಡಲಿಲ್ಲ ಅಥವಾ ಅವುಗಳನ್ನು ಯಾತನೆಯಿಂದ ಪಾರುಮಾಡಲಿಲ್ಲ ಎಂದು ವಿಸ್ಮಿತವಾದವು. ನಾನು ಮತ್ತು ನನ್ನ ಕಡೆಯವರು ಮೌನವಾಗಿ ಇದೆಲ್ಲವನ್ನೂ ನೋಡಿದೆವು. ಮಾನವತೆಯ ವಿರುದ್ಧ ಅಪರಾಧಗಳಿವೆ. ಪ್ರಕೃತಿಯ ವಿರುದ್ಧ ಅಪರಾಧಗಳಿವೆ. ಹೆಸರಿಲ್ಲದ ಘೋರ ಅಪರಾಧಗಳು ಬೇಕಾದಷ್ಟು ಇವೆ. ನಾವಾದರೋ ಮೂರೂ ಥರದ ಅಪರಾಧಗಳನ್ನು ಮಾಡಿದ್ದೆವು. ಆಗ ಸಮಯ ಬೆಳಗಿನ ಏಳುಗಂಟೆ ಮೂವತ್ತೈದು ನಿಮಿಷ. ಅಂದರೆ ಅದು ಅಲ್ಲಿಂದ ಹೊರಡುವ ಸಮಯವಾಗಿತ್ತು.

ಅಧ್ಯಾಯ 19

> **ಯುದ್ಧದ ಪರಿಣಾಮ ಎಂದಾದರೂ ಅಷ್ಟೊಂದು ನಿಶ್ಚಿತವಿದ್ದಿತೆ? ಯುದ್ಧದಲ್ಲಿ ಏನಾದರೊಂದು ರೀತಿಯ ಸಾವು ನಿಶ್ಚಿತ ಎಂದಾದಾಗ ವ್ಯಕ್ತಿಯೊಬ್ಬನು ಧರಿಸುವಂಥ ಕೇಸರಿ ಪೇಟವನ್ನು ನಾನು ಧರಿಸುತ್ತೇನೆ. ಹಣೆಯ ಮೇಲೆ ಕೆಂಪು ತಿಲಕವನ್ನಿಟ್ಟುಕೊಳ್ಳುತ್ತೇನೆ. ದುಷ್ಟ ದೇವತಾ ನಾಶಕ್ಕಾಗಿ ಹೋರಾಡುವೆ. ಆದರೆ ಸಾವಿಲ್ಲ,**
>
> **ಇರುವುದು ಸೋಲು ಮಾತ್ರ, ದಿನವೂ ಗಂಟೆ ಗಂಟೆಗೂ ಸಂತತವಾದ ಸೋಲು.**

ಕೆಲವು ದಿವಸಗಳ ಹಿಂದೆ ಅವನು ಬೇಫಿಕೀರ್‌ನನ್ನು ಬಿಟ್ಟು ಬಿಟ್ಟಿದ್ದನು. ಅದು ಅಷ್ಟೇನೂ ಕೆಟ್ಟದ್ದಲ್ಲವೆನ್ನುವಂತೆ, ತನ್ನೊಂದು ಪಾದರಕ್ಷೆಯನ್ನು ಯಾವುದೋ ಬೇರೆ ಜಾಗದಲ್ಲಿಟ್ಟುಬಿಟ್ಟು ಎಲ್ಲಿ ಇಟ್ಟೆನೆಂಬುದನ್ನು ಅವನು ಈಗ ನೆನಪಿಸಿಕೊಳ್ಳಲಾರ. ಕೆಳಗೆ ಕುಳಿತು ಉಳಿದಿದ್ದ ಇನ್ನೊಂದು ಪಾದರಕ್ಷೆಯೊಳಕ್ಕೆ ಮರಳು ತುಂಬಿದನು. ಮರಳು ಗಡಿಯಾರದಲ್ಲಿ ಮರಳು ಕೆಳಕ್ಕೆ ಬೀಳಲು ತೆಗೆದುಕೊಳ್ಳುತ್ತಿದ್ದಷ್ಟೇ ವೇಗದಲ್ಲಿ ಅದನ್ನು ಹೊರಗೆ ಸುರಿದನು. ಅವನೆದುರಿನಲ್ಲಿ ಒಂದು ಅಡಿ ಎತ್ತರದ ದಿಬ್ಬವಿತ್ತು. ಅವನು ಮುದಿ ಕಾಲಪುರುಷನಂತೆ ಗಂಟೆಗಟ್ಟಲೆ ಅಭಿನಯಿಸುತ್ತಿದ್ದಿರಬೇಕು. ಒಂದೆರಡು ದಿನಗಳವರೆಗೂ ಅಭಿನಯಿಸಿದ್ದರಬಹುದು. ಅದಕ್ಕೆ ಮುಂಚೆ ಅವನು ಕೆಲವು ದಿನ ನಡೆದಾಡಿದ್ದನು. ಪ್ರತಿ ಹೆಜ್ಜೆಗೂ ಅವನ ಪಾದವು ಹಿಂತೆಗೆದುಕೊಳ್ಳಲಾಗದಂತೆ ಮರಳಿನೊಳಕ್ಕೆ ಇಳಿಯುತ್ತಿತ್ತು. ಅದನ್ನು ಹೊರಕ್ಕೆಳೆದುಕೊಳ್ಳಲು ಬಹಳ ಸೆಣಸುತ್ತಿದ್ದನು. ಆ ಎಲ್ಲ ಹುಚ್ಚು ವರ್ತನೆ ಕೇವಲ ಮರಳನ್ನು ಅಲ್ಲಿಂದ ಸರಿಯುವಂತೆ ಮಾಡಿತು. ಮೆಲ್ಲಗೆ ಬುಸ್ಸೆನ್ನುವ ಶಬ್ದ ಕೇಳಿ ಬಂತು. ಅಲ್ಲದೆ ಹೆಜ್ಜೆ ಇನ್ನಷ್ಟು ಒಳಕ್ಕೆ ಇಳಿಯುತ್ತ ಹೋಯಿತು. ಗುಜರಾತಿನ ಸೈನಿಕರನ್ನು ಯಾವುದಕ್ಕೆ ಗುರಿಮಾಡಿದ್ದನೋ ಅದರ ರುಚಿ ಅವನಿಗೂ ಹತ್ತ ತೊಡಗಿತ್ತೆ? ಇದು ಅವನ ತಪ್ಪು ಕೆಲಸಕ್ಕೆ ಆದ ಅಂತಿಮ ಶಿಕ್ಷೆಯೆ? ಹಾಗಿರಲಾರದು. ಅತ್ಯಂತ ಸುಲಭ ಮತ್ತು ಶೀಘ್ರ ಕೊನೆ ಅವನಿಗೆ ಬರುವ ಮಾರ್ಗವಿಲ್ಲ. ಅಷ್ಟಂತೂ ಅವನಿಗೆ ಖಾತರಿಯಾಗಿತ್ತು.

ಗಟ್ಟಿಯಾದದ್ದು ಏನೋ ಒಂದು ತೀವ್ರವಾಗಿ ಅವನ ಬೆನ್ನನ್ನು ತಿವಿಯುತ್ತಿತ್ತು. ಕೈಯನ್ನು ಬೆನ್ನ ಹಿಂದಕ್ಕೆ ಸರಿಸಿ ಹೊರಕ್ಕೆ ಚಾಚಿಕೊಂಡಿದ್ದ ವಸ್ತುವನ್ನು ಹೊರಕ್ಕೆಳೆದನು. ಅದು ಅವನನ್ನು ಹಿಂದಕ್ಕೆ ಅಂದರೆ ಗುಜರಾತಿಗೆ ಸೈನ್ಯವನ್ನು ತೆಗೆದುಕೊಂಡು ಹೋದ ಪ್ರಾರಂಭದ ಸಮಯಕ್ಕೆ ಗುಜರಾತಿನ ಪಡೆಗಳನ್ನು ಜೌಗು ಪ್ರದೇಶಕ್ಕೆ ಅಟ್ಟುವುದಕ್ಕೆ

ಹಿಂದಿನ ರಾತ್ರಿಗೆ ಕರೆದೊಯ್ದಿತು. ರಾಜಾ ಪೂರಜೀ ಕೀಕಾನ ಕಡೆಯವನೊಬ್ಬನು ಮರದ ಉರುಳೆಯನ್ನು ತಯಾರಿಸುತ್ತಿದ್ದನು. ಮಹಾರಾಜ್‌ಕುಮಾರ್ ಅದಕ್ಕೆ ಅತ್ಯಂತ ಆಕರ್ಷಿತನಾಗಿ ಗಮನಿಸಿದನು. ಅದು ಯಾವ ರೂಪು ತಳೆಯುತ್ತದೆಂಬ ಬಗ್ಗೆ ತೀವ್ರ ಕುತೂಹಲ ತಾಳಿದನು. ಆ ಸೈನಿಕನನ್ನೇನಾದರೂ ಆ ಬಗ್ಗೆ ಕೇಳಿದ್ದೇ ಆದರೆ ತಾನು ಹಾಳಾಗಿ ಹೋಗಲಿ ಅಂದುಕೊಂಡನು. ಕಾರಣ ಒಂದು ಸಲ ಮಹಾರಾಜ್ ಕುಮಾರ್ ಅಲ್ಲಿರುವುದನ್ನು ಗುರುತಿಸಿದ್ದರೂ ಅವನನ್ನು ಕಡೆಗಣಿಸಿದ್ದನು. ಆ ಮನುಷ್ಯ ತೀರ ಜಟಿಲವಾದ ಲೆಕ್ಕಾಚಾರಗಳನ್ನು ಮಾಡುತ್ತಿದ್ದನು. ಮತ್ತು ಮರದ ದೊಣ್ಣೆಯ ಮೇಲೆ ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ಇರುವ ದೂರವನ್ನು ಅಳೆಯುತ್ತಿದ್ದನು. ಅವನೇನು ಗಣಿತಜ್ಞನೆ? ರೇಖಾಗಣಿತದ ಮಾಂತ್ರಿಕನೆ? ಆ ಮಂತ್ರ ದಂಡದಿಂದ ನಕ್ಷತ್ರಗಳ ಚಲನೆಯ ಬಗ್ಗೆ ಕಣಿ ನುಡಿಯ ಬಲ್ಲನೆ? ಮಹಾರಾಜ್‌ಕುಮಾರ್‌ನ ಕುತೂಹಲ ಅವನನ್ನೇ ಸೋಲಿಸಿತು.

"ನಾನು ಮಧ್ಯೆ ತಲೆ ಹಾಕ್ತಿರೋದಕ್ಕೆ ನೀನು ತಪ್ಪು ತಿಳಿಯದೆ ಹೋದರೆ ನೀನು ಏನನ್ನು ತಯಾರಿಸುತ್ತಿದ್ದೀ?" ಅವನು ಆ ಕೋಲಿನತ್ತ ಬೊಟ್ಟು ಮಾಡಿ "ಇದೇ?" ಎಂದು ಕೇಳಿದನು. ಮಹಾರಾಜ್ ಕುಮಾರ್ ಹೌದು ಎಂದು ತಲೆಯಾಡಿಸಿದನು. "ಈಗ ಕಾಲುಗಂಟೆಯಿಂದಲೂ ತಾವು ನನ್ನನ್ನು ಗಮನಿಸುತ್ತಿದ್ದೀರಿ. ತಾವೇ ಏಕೆ ಹೇಳಬಾರದು".

ಬಹಳ ಬುದ್ಧಿವಂತ ಆಸಾಮಿ. ಮೊದಲಿಗೆ ಅವನಿಗೆ ಉತ್ತರ ಗೊತ್ತಿದ್ದರೆ ಅವನು ಯಾಕೆ ಕೇಳಬೇಕು? ಇತರೆ ಸೈನಿಕರು ಅವನ ಉತ್ತರದ ನಿರೀಕ್ಷೆಯಲ್ಲಿ ಕಾದಿದ್ದರು. ಆ ಕೆಲಸಗಾರನು ಆ ಕಡ್ಡಿಯ ಮೇಲೆ ಗುರುತು ಮಾಡುವ ಕೆಲಸಕ್ಕೆ ಮತ್ತೆ ತೊಡಗಿದನು. ಮಹಾರಾಜ್ ಕುಮಾರ್‌ಗೆ ಯಾವ ಉತ್ಸುಕತೆಯನ್ನೂ ತೋರದೆ ಮೌನವಾಗಿ ಹೋಗಿ ಬಿಡಬೇಕೆಂದಿತ್ತು. ಆದರೆ ಏನೋ ಒಂದು ಅವನನ್ನು ತಡೆದು ನಿಲ್ಲಿಸಿತು. ಅವನು ನಿರಾಳ ಮನಸ್ಸಿನ ಮುಖವಾಡವನ್ನು ತೊಡಲು ಯತ್ನಿಸಿದನು. ತನ್ನ ಬಿಗಿದ ತುಟಿಗಳ ಮೇಲೆ ಬಲವಂತದ ನಗೆಯನ್ನು ತಂದುಕೊಂಡು ಹೇಳಿದನು. "ಮಂತ್ರ ದಂಡ. ಬೇರೆ ಇನ್ನೇನು? ಮಾತುಗಳಿನ್ನೂ ಹೊರಬರುತ್ತಿದ್ದಂತೆ ಯಾವುದು ತನಗೆ ಇಷ್ಟವಿರಲಿಲ್ಲವೋ ಅದನ್ನೇ ಸಂಧಿಸಬೇಕಾಗಿದೆ ಎಂದು ಅವನಿಗೆ ಗೊತ್ತಾಯಿತು. ಅದೆಂದರೆ ಕೆಡಿಸಿಕೊಂಡ ಮನಸ್ಸು ಮತ್ತು ಶೀಘ್ರಕೋಪ. ತನ್ನ ತಿಳಿಗೇಡಿ ಉತ್ತರ ಹೊರಡಿಸಿದ ಸುದೀರ್ಘ ಚಪ್ಪಾಳೆಯ ಶಬ್ದ ಕೇಳಿ ಅವನಿಗೆ ದಿಗ್ಭ್ರಮೆಯಾಯಿತು. ಅನ್ಯಮನಸ್ಕನಾಗಿದ್ದ ಯೋಧ ಕುಶಲಕರ್ಮಿಯೂ ತನ್ನ ಭಿಲ್ ಟೋಪಿಯನ್ನು ತೆಗೆದೆಸೆದನು. ಬೇರೆ ಇನ್ನೇನಾದರೂ ಒಗಟುಗಳನ್ನು ಬಿಡಿಸಿದರೆಂದು ಹೇಳುವ ಮುಂಚೆಯೇ ಜಾಗ ಬಿಡುವುದು ಬುದ್ಧಿವಂತಿಕೆ ಎಂದು ಮಹಾರಾಜ್‌ಕುಮಾರ್ ಭಾವಿಸಿದನು.

* * *

ಮರುದಿನ ಬೆಳಿಗ್ಗೆ ನಸುಕಿಗೆ ಸ್ವಲ್ಪ ಮುಂಚೆ, ತಮ್ಮ ದಾರುಣವಾದ ವಿಶೇಷ ಕಾರ್ಯಕ್ಕೆ ಹೊರಡುವುದಕ್ಕೆ ಸ್ವಲ್ಪ ಮುಂಚೆ, ಭಿಲ್ ಯೋಧನು ಮಹಾರಾಜ್ ಕುಮಾರ್ ಬಳಿಗೆ ಹೋದನು. ಬಹು ವಿವೇಕಿಯೆಂದು ಸೋಗು ಹಾಕುವ ಈ ಮನುಷ್ಯನಿಗೆ ಈಗ ಏನು ಬೇಕಾಗಿದೆ. ತನ್ನ ಕೋಪವನ್ನವನು ನಿಯಂತ್ರಿಸಿಕೊಳ್ಳಲೇ ಆರ. ಅವನು ತುಂಬ ಆತಂಕದಲ್ಲಿದ್ದ. ತನ್ನ ಕಣ್ಣ ಮುಂದಿರುವ ದಿನವು ತಾನು ಊಹಿಸಿಕೊಳ್ಳಲೂ ಆರದ ರೀತಿಯಲ್ಲಿ ತನ್ನ ವೃತ್ತಿ ಜೀವನ ಮತ್ತು ಅದೃಷ್ಟವನ್ನು ಪ್ರಭಾವಿಸಲಿದೆ ಎಂದು ಊಹಿಸುವಷ್ಟು ಮುಂಗಾಣ್ಕೆ ಇರುವಂಥ ವ್ಯಕ್ತಿ.

ಭಿಲ್ ಯೋಧನು ತಲೆಬಾಗಿ ನಮಸ್ಕರಿಸಿ "ಮಹಾಸ್ವಾಮಿ ಏಕಲಿಂಗಜೀ ಶಿವನ ಕೃಪೆ ತಮ್ಮ ಮೇಲಿರಲಿ"

"ನಿಮ್ಮ ಮೇಲೂ; ನಮ್ಮ ಕಡೆಯ ಎಲ್ಲರ ಮೇಲೂ ಇರಲಿ" – ಎಂದು ಮಹಾರಾಜ್‌ಕುಮಾರ್ ಚುಟುಕಿನಲ್ಲಿ ಪ್ರತಿಕ್ರಿಯಿಸಿದನು.

"ಒಂದು ನಿಮಿಷ ತಮ್ಮ ಸಹನೆಯನ್ನು ಬೇಡುತ್ತೇನೆ"

"ಈಗಲ್ಲ ಭೀಮ ಆಮೇಲೆ, ಆಮೇಲೆ" ಎಂದು ಮಹಾರಾಜ್‌ಕುಮಾರ್ ಉತ್ತರಿಸುವ ಮುನ್ನ ರಾಜಾಪೂರಜೀ ಕೀಕಾ ಮಾತಾಡಿದನು.

ಮಹಾರಾಜ್‌ಕುಮಾರ್, ಆ ಮನುಷ್ಯನ ಮುಖಭಂಗ ಮಾಡಹೊರಟಿದ್ದು ಇದೇ ಶಬ್ದಗಳಿಂದಲೇ. ತನ್ನ ಬಾಯಲ್ಲಿ ಆ ಮಾತುಗಳು ಅದೆಷ್ಟು ಒರಟು ಮತ್ತು ಅನುಚಿತವಾಗುತ್ತಿದ್ದುವು ಎಂಬುದು ಅವನಿಗೆ ಅರ್ಥವಾಯಿತು. "ಆಯಿತು ರಾಜಾ. ಅವನು ನನಗೆ ಗೊತ್ತು. ಅದೇನು ಹೇಳು"

"ತಮಗೆ ನನ್ನದೊಂದು ಸಣ್ಣ ಕಾಣಿಕೆ ಮಹಾರಾಜ್‌ಕುಮಾರ್ ಅವರೇ" ಹಾಗೆಂದು ಹೇಳಿ ತನ್ನ ಬಲಗೈ ಮುಂದೆ ಚಾಚಿದನು.

"ಮಹಾಸ್ವಾಮಿ, ನಿನ್ನೆ ರಾತ್ರಿ ತಾವು ಬಹಳ ಜಾಗೃತ ಮನಸ್ಕರಾಗಿದ್ದಿರಿ." ಅದು ತೇಜೋವಧೆಯ ಮಾತುಗಳಂತೆ ಕೇಳಿಸಿತು. ಆದರೆ ಆ ಯೋಧನ ಮುಖ ದ್ವಂದ್ವಾರ್ಥದ ಪ್ರಯೋಗ ತಿಳಿಯದಷ್ಟು ಮುಗ್ಧವಿತ್ತು. "ಇದೊಂದು ಮಂತ್ರ ದಂಡ. ಅದರ ಶಕ್ತಿ ಸಾಮರ್ಥ್ಯವನ್ನು ಕಡಮೆ ಅಂತ ಲೆಕ್ಕಹಾಕಬೇಡಿ. ಅದಕ್ಕೆ ನೀವು ಉಸಿರನ್ನು ಬಿಡಿ. ಅದಕ್ಕೆ ಜೀವ ಬರುತ್ತದೆ. ನಿಮ್ಮ ಸುತ್ತಲಿನವರ ಮೇಲೆ ಅದು ತನ್ನ ಮೋಡಿಯನ್ನು ಬೀರುತ್ತದೆ. ಅದಕ್ಕಿಂತ ಮುಖ್ಯವಾಗಿ ಅದು ತಮ್ಮ ಮೇಲೆ ತನ್ನ ಮೋಡಿಯನ್ನು ಬೀರುತ್ತದೆ. ಅದು ನಿಮಗೆ ಸಾಂತ್ವನ ನೀಡಿ ನಿಮಗೆ ಮನಸ್ಸಿನ ನೆಮ್ಮದಿಯನ್ನು ತಂದುಕೊಡುತ್ತದೆ"

ಮಹಾರಾಜ್‌ಕುಮಾರ್ ಕಾಣಿಕೆಯನ್ನು ಸ್ವೀಕರಿಸಲೆಂದು ಅವನು ಕಾದನು. ರಾಜಕುಮಾರನಿಗೆ ಅದನ್ನು ತನ್ನ ಮಂಡಿಯ ಮೇಲಿಟ್ಟುಕೊಂಡು ಎರಡು ತುಂಡು ಮಾಡಿಬಿಡಬೇಕೆನಿಸಿತು. ಅಥವಾ ಆ ಹಾಳಾದ್ದನ್ನು ದೂರದ ಅಪರಿಚಿತ ಬಾಹ್ಯಾಕಾಶಕ್ಕೆ ಬೀಸಿ ಎಸೆದು ಬಿಡುವುದೆ? ಎಂದು ಯೋಚಿಸಿದನು. ಆದರೆ ಅದನ್ನು ಕೈಯಿಂದ ಸ್ಪರ್ಶಿಸುವ ಯೋಚನೆಯೇ ಅವನಿಗೆ ಅಸಹ್ಯವೆನಿಸಿತು. ಅದರ ಬದಲಿಗೆ ಬೇಕಾದರೆ ಅವನು ಕುಷ್ಠರೋಗಿಯೊಬ್ಬನ ಈಗ ತಾನೆ ಮುರಿದ, ರಕ್ತ. ಸೋರಿ ರಣವಾಗಿರುವ ದೇಹದ ಭಾಗಕ್ಕೆ ತನ್ನ ಕೈಯನ್ನು ತುರುಕಬಲ್ಲನು. ಅದನ್ನು ನನ್ನ ಕಣ್ಣೆದುರಿನಿಂದ ತೆಗೊಂಡು ಹೋಗು. ಹಾಳು ಮೂರ್ಖ ಅದನ್ನು ನನ್ನ ಕಣ್ಣೆದುರಿನಿಂದ ತಗೊಂಡು ಹೋಗು. ಅವನು ಶಕುನವನ್ನು ನಿರೀಕ್ಷಿಸುತ್ತಿರಲಿಲ್ಲ. ಆದರೂ ಒಂದು ಶಕುನವಾಯಿತು. ಈಗ ತನ್ನ ಕೈಯಲ್ಲಿ ಹಿಡಿದಿದ್ದುಕ್ಕಿಂತಲೂ ಹೆಚ್ಚು ಆಘಾತಕಾರಿಯಾದ ಶಕುನವನ್ನು ಸಾವಿರ ಜನ್ಮಗಳಲ್ಲೂ ಊಹಿಸಿರಲಾರ.

ವಿಧಿ. ವಿಧಿಯನ್ನು ಮೀರುವಂತೆಯೇ ಇಲ್ಲ. ರಾಜಾ ಪೂರಜೀ ಕೀಕಾ ಮಹಾರಾಜ್‌ಕುಮಾರ್‌ನನ್ನು ಬಚಾವ್ ಮಾಡಲು ಯತ್ನಿಸಿದ್ದನು. ಅವನು ಆ ಯೋಧ ಕುಶಲಕರ್ಮಿಗೆ, "ಈಗ ಬೇಡ ಭೀಮ, ಆ ಮೇಲೆ ಆಮೇಲೆ" ಎಂದು ಹೇಳಿದ್ದನು. ಆದರೆ ನಿಮಗೆ ಕಾಲ ಕೂಡಿ ಬಂದಿತು ಎಂದರೆ ವಿಧಿಯಿಂದ ನುಣುಚಿಕೊಳ್ಳುವ ಒಳ್ಳೆಯ ಅವಕಾಶವಿದ್ದದ್ದೇ ಆದರೆ, ಅವನ ಕುತ್ತಿಗೆಗೆ ಕೈ ಹಾಕಿ ವಾಪಸ್ ಕರೆದುಕೊಡು ಬರುತ್ತೀರಿ.

"ತಗೊಳ್ಳಿ ರಾಜಕುಮಾರರೆ, ಹಿಂದಿನ ದಿನ ರಾತ್ರಿ ಇದನ್ನು ಯಾರಿಗೆ ಮಾಡುತ್ತಿದ್ದೀನಿ ಅಂತ ನನಗೆ ಗೊತ್ತಿರಲಿಲ್ಲ, ಖಂಡಿತವಾಗಿಯೂ ಅದರ ಮೇಲೆ ನಿಮ್ಮ ಹೆಸರೇ ಬರೆದಿದೆ ಅಂತ ಕಾಣಿಸುತ್ತೆ" ಎಂದು ಆ ಭೀಮ ಎನ್ನುವ ವ್ಯಕ್ತಿ ಹೇಳಿದ.

ಅಷ್ಟಾದರೂ ಮಹಾರಾಜ್ ಕುಮಾರ್ ತೆಗೆದುಕೊಳ್ಳಲೊಲ್ಲ.

"ಇದರೊಳಕ್ಕೆ ಊದಿ. ರಾಜಕುಮಾರರೆ ಇದರೊಳಗಿರುವುದು ಬರೀ ಶೂನ್ಯ. ನೀವು ಅದನ್ನೊಂದು ಸ್ವರವಾಗಿ, ಜೊತೆಗೆ ಇನ್ನೊಂದು ಅದರ ಜೊತೆಗೆ ಮತ್ತೊಂದು. ಅವೆಲ್ಲ ಸೇರಿ ಅದೊಂದು ಶ್ರುತಿಯಾಗುವಂತೆ ಅನಂತರ ಒಂದು ಮಟ್ಟು ಆಗುವಂತೆ ಆಮೇಲೆ ದೇವತೆಗಳ ಮನವೊಲಿಸುವಂಥ ರಾಗವಾಗಿ ಪರಿವರ್ತಿಸಬಹುದು."

ಅದಾಗಲೇ ತಡವಾಗುತ್ತಿತ್ತು. ಅವನ ತುಕಡಿಗಳು ಕಾಯುತ್ತಿದ್ದವು. ಜೊತೆಗೆ ರಾಜಾಪೂರಜೀ ಕೀಕಾ ಕೂಡ ಏನು ಕಡಿಮೆ ದಿಗ್ಭ್ರಮೆಯಿಂದ ಅವನ ಕಡೆನೋಡುತ್ತಿರಲಿಲ್ಲ. ರಾಜಕುಮಾರನು ತನ್ನ ಕೈ ಮುಂದೆ ಚಾಚಿ ಕೊಳಲನ್ನು ತೆಗೆದುಕೊಂಡನು. ಅದನ್ನಿನ್ನೇನು ಸೊಂಟದ ಪಟ್ಟಿಗೆ ಸಿಕ್ಕಿಸಿಕೊಳ್ಳುತ್ತಿದ್ದನು. (ಅನಂತರ ಅವನು ಅದನ್ನು ಮುರಿದು ಚೂರು ಚೂರು ಮಾಡಿ ಎಸೆಯುವವನಿದ್ದ). ಅಷ್ಟು ಹೊತ್ತಿಗೆ ಅವನ ಬಾಲ್ಯ ಸಖನು ಅವನನ್ನು ತಡೆದನು. "ಮಹಾಸ್ವಾಮಿ ತಾವು ನೂತನವಾದ ಕೊಳಲನ್ನು ಕಾಣಿಕೆಯಾಗಿ ಪಡೆಯುವಾಗ ತಾವು ಅದನ್ನು ಯಾವಾಗಲೂ ಮೊದಲು ನುಡಿಸಬೇಕು"

"ನೀವು ಹಾಗೆ ಹೇಳುತ್ತೀರಾ ಪೂರಜೀ ಕೀಕಾ ? ನೀವು ನನ್ನ ಗೆಳೆಯ ಅಂತ ನಾನು ಅಂದುಕೊಂಡಿದ್ದೆ. ಇದನ್ನು ಹೇಗೆ ನುಡಿಸಬೇಕೆಂದು ನನಗೆ ಗೊತ್ತಿಲ್ಲ. ನನ್ನ ತುಟಿಗಳಿಂದ ಇದರ ತೂತಿನಲ್ಲಿ ಊದಿ ಶಬ್ದ ಹೊರಡಿಸುವುದು ಹೇಗೆಂದು ಕೂಡ ಗೊತ್ತಿಲ್ಲ."

"ಅದೇನೂ ಪರವಾಗಿಲ್ಲ. ಕೊಳಲು ಅತ್ಯಂತ ಸ್ನೇಹಿಯಾದ, ಬಹಳ ಬೇಗ ವಶವಾಗಬಲ್ಲ ಸಂಗೀತವಾದ್ಯ. ಅದರ ಮೊದಲನೇ ರಂಧ್ರದಲ್ಲಿ ಎಲ್ಲಿಯೋ ಒಂದು ಕಡೆ ಊದಿ." ಹಾಗೆಂದು ಭೀಮನು ಅವನಿಗೆ ಸೂಚನೆಕೊಡುತ್ತಿದ್ದನು. "ಆಮೇಲೆ ನೋಡಿ ನಿಮಗೊಂದು ಸುಸ್ವರ ಕೇಳಿ ಬರುತ್ತದೆ."

ಮಹಾರಾಜ್‌ಕುಮಾರ್ ದವಡೆಯನ್ನು ಬಿಗಿ ಮಾಡಿ ಕೊಳಲನ್ನು ಕೈಗೆತ್ತಿಕೊಂಡು, ಅದರ ಮೊದಲ ರಂಧ್ರದ ಮೇಲೆ ತನ್ನ ತುಟಿಗಳನ್ನೂರಿ, ಉಳಿದ ರಂಧ್ರಗಳ ಮೇಲೆ ತನ್ನ ಬೆರಳುಗಳಿಂದ ಮುಚ್ಚಿದನು. ದೀರ್ಘವಾಗಿ ಉಸಿರೆಳೆದುಕೊಂಡು, ನಂತರ ತನ್ನತುಟಿಗಳಿಂದ ಆ ಗಾಳಿಯನ್ನೆಲ್ಲ ಹೊರಬಿಟ್ಟನು. ಏನೂ ಶಬ್ದವೇ ಇಲ್ಲ. ಒಮ್ಮೆಲೇ ಕರ್ಕಶವಾದ ಕೀರಲು ಸ್ವರವೊಂದು ಹೊರ ಹೊಮ್ಮಿತು. ಆನಂತರ ಎರಡೆರಡು ಸ್ವರದ ಕರ್ಕಶ ಸದ್ದು ಹೊರಟಿತು. ತನ್ನ ಬೆರಳುಗಳು ಸರಿದಿವೆ ಎಂದು ಅರ್ಥವಾಯಿತು.

"ನಿಮಗೆ ಅದರ ಗುಂಗು ಹಿಡೀತಿದೆ ನೋಡಿ" ಭೀಮನು ಪ್ರೋತ್ಸಾಹದ ಮಾತುಗಳನ್ನಾಡಿದನು.

"ಇದನ್ನು ನೀನು ಸಂಗೀತ ಅಂತ ಕರೀತೀಯಾ" ತಾನು ಉಂಟುಮಾಡಿದ ಅಸಹ್ಯಕರ ಶಬ್ದಕ್ಕೆ ತನ್ನನ್ನು ಆಕ್ಷೇಪಿಸಬೇಕಾಗಿತ್ತು ಎನ್ನುವ ಅರ್ಥದಲ್ಲಿ ಮಹಾರಾಜ್‌ಕುಮಾರ್ ಅವನನ್ನು ಕೇಳಿದನು. "ಅದು ಬರುತ್ತೆ. ಸ್ವರಗಳೆಲ್ಲವೂ ಒಟ್ಟುಗೂಡಿ ಮೋಡಿ ಮಾಡುವಂಥ ಸಂಗೀತವನ್ನು ಹಾಡುತ್ತೀರಿ. ತಮಗೆ ಬೇಕಾಗಿರುವುದೇನಿದ್ದರೂ ಅಭ್ಯಾಸ ಅಷ್ಟೇ".

"ಖಂಡಿತ, ಅನುಮಾನವೇ ಇಲ್ಲ. ಆ ಹಾಳಾದ್ದು ಪೀಪಿಯನ್ನು ಜೌಗಿಗೆ ಎಸೆಯುತ್ತೇನೆ" ಎಂದು ರಾಜ ಕುಮಾರನು ತನಗೆ ತಾನೆ ಹೇಳಿಕೊಂಡನು.

* * *

ಅನೇಕ ವಾರಗಳ ನಂತರ ಅದೂ ಅನೇಕ ಅಲ್ಲೋಲ ಕಲ್ಲೋಲಗಳ ನಂತರ ಅವನು ಎಲ್ಲೋ ಮೂಲೆಯಲ್ಲಿ ಕುಳಿತಿದ್ದನು. ಕೊಳಲು ಇನ್ನೂ ಅವನ ಬಳಿ ಇತ್ತು. ಪಾಳೆಯದಲ್ಲಿ

ತಾನು ಕಾಣೆಯಾಗಿರುವ ಬಗ್ಗೆ ಅನಿವಾರ್ಯವಾಗಿ ಏಳುವ ಕೊಳಕು ಊಹಾ ಪೋಹಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಯತ್ನಿಸುವ ಸಲುವಾಗಿಯೇ ಮಂಗಳ್ ಎಲ್ಲ ಕಡೆ ತನಗಾಗಿ ಹುಡುಕಾಡುತ್ತಿದ್ದಾನೆಂದು ಅವನಿಗೆ ಗೊತ್ತಿತ್ತು. ಅವನು ಬಹಳ ಚುರುಕು. ಗಾಳಿಮಾತಿನ ಗಿರಣಿಗಳು ನಿಯಂತ್ರಣ ತಪ್ಪಿ ಅಪಾಯ ಉಂಟುಮಾಡುವ ಮುನ್ನ. ಅವನೇ ಮೊದಲನೇ ವದಂತಿಯನ್ನು ಹರಿಯ ಬಿಡುತ್ತಾನೆ. "ಸ್ಪಷ್ಟವಾಗಿ ಹೇಳುವುದಾದರೆ ಮಹಾರಾಜ್‌ಕುಮಾರ್ ಅವರ ಮದುವೆ, ಅಂಥಾ ಏನು ಸಂತೋಷಕರವಾದ ಮದುವೆಯಾಗಿರಲಿಲ್ಲ ಅಂತ ನಮಗೆಲ್ಲ ಗೊತ್ತಿದೆ. ಅವರಿಗೆ ಸಂತಸದ ಕಣ್ಣಿದೆ, ಅಲೆದಾಡುವ ಕೈ ಇದೆ. ನೀವು ಕರೆಯಲ್ಲ ಅಲ್ಲವೆ? ಇಲ್ಲ ಇಲ್ಲ, ಅವರನ್ನು ಬಡಪಾಯಿ ರಾಜಕುಮಾರ್ ಅಂತ ಕರೆಯಬೇಡಿ, ಕಡೇ ಪಕ್ಷ ನನ್ನ ಮುಂದಂತೂ ಕರೆಯಬೇಡಿ. ಇದು ನನ್ನ ನಿಮ್ಮ ಮತ್ತು ಆ ಶಿಬಿರದ ಕಂಬದ ಮಧ್ಯೆ ಇರಬೇಕಾದ ಮಾತು. ಆ ಮನುಷ್ಯ, ಆ ರಾಜಕುಮಾರನಿಗೆ ಈ ಸೂರ್ಯಮಂಡಲದ ಕೆಳಗೆ ಅತ್ಯಂತ ಪ್ರಚೋದನಕಾರಿಯಾದ ಶಿಶ್ನವಿದೆ. ಈಗ ನೇರವಾಗಿ ವಿಷಯಕ್ಕೆ ಬರೋಣ. ನಾನು ಅವರನ್ನು ದೂರುವುದಿಲ್ಲ. ನಿಮ್ಮ ಹೆಂಡತಿ ಒಂಥರಾ ಆಗಿ ಬಿಟ್ಟರೆ ನೀವೇನು ಮಾಡ್ತೀರಿ... ಎಲ್ಲರಿಗೂ ಗೊತ್ತಿರೋದನ್ನು ಮತ್ತೆ ಪುನರುಚ್ಚರಿಸುವುದರಲ್ಲಿ ಏನೂ ಅರ್ಥವಿಲ್ಲ. ನಾವು ಇಲ್ಲಿಗೆ ಬರುವುದಕ್ಕೆ ಸ್ವಲ್ಪ ಮುಂಚೆ ಷಹಜಾದಾ ಬಹಾದುರ್ ಚಂಪಾನೇರ್‌ನ ಈ ವೇಶ್ಯೆಯ ಬಗ್ಗೆ ಹೇಳಿದರು. ಅವರು ಹೇಳಿದರು "ಇವಳು ವೇಶ್ಯೆಯಲ್ಲ ಮಹಾರಾಜ್‌ಕುಮಾರ್, ಇವಳು ಸ್ವರ್ಗದ ಅಪ್ಸರೆ. ಇವಳು ದಿವ್ಯ ಸುಂದರಿ. ಅವಳ ಮುಖ ಶರತ್ಕಾಲದ ಚಂದಿರ. ಅವಳ ಕೇಶರಾಶಿಯಾದರೋ ಬಯಕೆಯ ರಾತ್ರಿಗಳು. ಅವಳ ಉಸಿರಾದರೋ ಬೆಳಗಿನ ಇಬ್ಬನಿಯ ಭಾರದಿಂದ ಕೆಳಗೆ ಬೀಳುತ್ತಿರುವ ಗುಲಾಬಿಯ ದಳಗಳು, ಅವಳ ಕಂಕುಳು ಸಾವಿರ ಮಲ್ಲಿಗೆಗಳ ಸುವಾಸನೆ. ಅವಳ ಸ್ತನಗಳಾದರೋ ಕಾಶ್ಮೀರದ ಚೆರ್ರಿ ಹಣ್ಣುಗಳಿಂದ ಕೂಡಿದ ಮಂಜಿನ ಶಿಖರಗಳು. ನೀವು ಬಯಸಿದಷ್ಟು ಕಾಲ ಕೊಂಚ ಕೊಂಚವಾಗಿ ಕಚ್ಚಬಹುದು. ಅವಳ ತೊಡೆಗಳ ನಡುವೆ" ಇಲ್ಲಿ ದೀರ್ಘವಾಗಿ ನಿಟ್ಟುಸಿರು ಬಿಟ್ಟು ಹೇಳಿದ. "ಅವಳ ತೊಡೆಗಳ ನಡುವೆ ಮಹಾರಾಜ ಸ್ವರ್ಗವೇ ಇದೆ. ಒಂದನೆಯದಲ್ಲ, ಎರಡನೆಯದಲ್ಲ ಏಳನೆಯ ಸ್ವರ್ಗವೇ ಇದೆ" ನಾವಿಲ್ಲಿಗೆ ಬಂದ ದಿನದಿಂದ, ಮಹಾರಾಜ್‌ಕುಮಾರ್ ಯೋಚಿಸುತ್ತಿರುವುದೆಲ್ಲಾ ಈ ಹೆಣ್ಣನ್ನು ನೋಡಲು ಚಂಪಾನೇರ್‌ಗೆ ಹೋಗುವ ವಿಷಯವೊಂದೇ, ಗುಜರಾತಿನ ಸೇನಾ ಪಡೆಗಳನ್ನು ಬಗ್ಗು ಬಡಿದ ಮೇಲೆ ಅವರನ್ನು ನಿಲ್ಲಿಸುವಂತೆಯೇ ಇಲ್ಲ. ಮಂಗಳನು ಇಂಥದೊಂದು ಕಥೆಯನ್ನು ಎಲ್ಲ ಕಡೆ ಹರಡುತ್ತಾನೆ ಹಾಗೆ ಮಾಡುವ ಮೂಲಕ ದಳಗಳ ಮಂದಿ ಅಸೂಯೆ ಮತ್ತು ಕಾಮತೃಷೆಯಿಂದ ಸಿಡಿಮಿಡಿಗುಟ್ಟುವ ಹಾಗೆ ಮಾಡುತ್ತಿದ್ದಾನೆ.

ಮಹಾರಾಜ್‌ಕುಮಾರ್‌ನನ್ನು ಮಂಗಳ್ ಎಲ್ಲಿ ಹುಡುಕಬೇಕು? ಅವನ ಕಡೆಯವರು ಪ್ರತಿಯೊಂದು ಹಳ್ಳಿಪಟ್ಟಣಗಳನ್ನು ಹುಡುಕುತ್ತಿದ್ದಾರೆ. ಮರುಭೂಮಿಯಲ್ಲಿ ಹುಡುಕಾಡುವುದನ್ನು ಮಂಗಳ್ ತಾನೇ ಮಾಡುವನು.

ಮಹಾರಾಜ್‌ಕುಮಾರ್ ಕೊಳಲನ್ನು ಮೇಲಕ್ಕೊಮ್ಮೆ ಎಸೆದು, ಅದೊಂದು ಅಧಿಕಾರದಂಡವೇನೋ ಎನ್ನುವ ಹಾಗೆ ಜೋರಾಗಿ ವೃತ್ತಾಕಾರದಲ್ಲಿ ತಿರುಗಿಸಿದನು. ಈ ಎಲ್ಲ ಕಸರತ್ತು ಬೇಕಾದಷ್ಟು ಮಾಡಿದ ಮೇಲೆ ಅದನ್ನು ತುಟಿಗಳ ಮೇಲಿಟ್ಟುಕೊಂಡು ಅದರೊಳಗೆ ಊದಿದನು. ಈಗ ಹೊಮ್ಮಿದ ಸ್ವರಗಳು ಸುಸ್ಪಷ್ಟವಾಗಿ ಸುಘಟಿತವಾಗಿದ್ದುವು. ಆದರೆ, ಧ್ವನಿಗಳು ಸಾಮರಸ್ಯದಿಂದ ಕೂಡಿರಲಿಲ್ಲ.

ಮೊದಲ ದಿನವೇ ಆ ಹಾಳು ಗಾಳಿ ವಾದ್ಯವನ್ನು ಗಾಳಿಗೆ ಎಸೆಯಬೇಕೆಂಬ ಉದ್ದೇಶವಿದ್ದಿತು. ಆದರೆ ಯುದ್ಧದ ಆವೇಶ, ಒತ್ತಡಗಳಲ್ಲಿ ಅದರ ವಿಚಾರವನ್ನು

ಮರೆತುಬಿಟ್ಟಿದ್ದನು. ಆ ರಾತ್ರಿ ಮಲಗಿಕೊಂಡಾಗ, ಅದು ಅಧಿಕ ಬೆನ್ನುಮೂಳೆಯಂತೆ ಅವನಿಗೆ ಒತ್ತಿತು. ಆಗೊಮ್ಮೆ ಈಗೊಮ್ಮೆ ಅದನ್ನು ಹೊರಗೆ ಪಕ್ಕಕ್ಕೆ ತೆಗೆದಿಡಬೇಕೆಂದಿದ್ದನು. ಆದರೆ ವಿಪರೀತ ಆಯಾಸವಾಗಿದ್ದರಿಂದ ಅದನ್ನು ಕಾರ್ಯಗತಗೊಳಿಸಲಾಗಿರಲಿಲ್ಲ. ಈ ಹೊತ್ತೋ ಅಥವಾ ಈ ದಿನಗಳಲ್ಲೇ ಯಾವತ್ತಾದರೂ ತಾನು ಅದರಿಂದ ಕಳಚಿಕೊಳ್ಳುತ್ತೇನೆ ಎಂದು ಅವನಿಗೆ ನಿಶ್ಚಿತವಾಗಿತ್ತು. ಆದರೆ ಅದು ಅವನಿಗೆ ಬೀದಿ ನಾಯಿಯ ಹಾಗೆ ಗಂಟುಬಿದ್ದಿತ್ತು.

ಕೆಲವು ದಿನಗಳ ನಂತರ ಚಿತ್ತೂರಿನಿಂದ ಓಲೆಕಾರನೊಬ್ಬ ಪತ್ರವನ್ನು ತಂದಿದ್ದನು. ರಾಣಾ ಅವರ ಕಡೆಯಿಂದ ಅಡಕವಾದೊಂದು ವೈಯಕ್ತಿಕ ಪತ್ರ ಹಾಗೂ ಇನ್ನೊಂದು ಅವನು ಗುರುತಿಸಲಾಗದ ಕೈಬರಹದಿಂದ ಕೂಡಿದ ಪತ್ರವೊಂದು.

ಜೈ ಶ್ರೀ ಏಕಲಿಂಗಜೀ

ಪ್ರೀತಿಯ ಮಗೂ,

ಏಕಲಿಂಗಜೀಯ ಕೃಪೆಯಿಂದ ನಿನಗೆ ಯಾವ ಕೆಡುಕೂ ಆಗದಿರಲಿ.

ನಿನ್ನ ಅರಮನೆಯಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಆದರೆ ನಿನ್ನ ಹೆಂಡತಿ ಸುರಕ್ಷಿತವಾಗಿದ್ದಾಳೆ ಎನ್ನುವುದನ್ನು ಕೇಳಿ ನಿನಗೆ ಸಮಾಧಾನವಾಗುತ್ತದೆ. ಬೆಂಕಿಗೆ ನಿಜವಾದ ಕಾರಣ ಏನು ಎಂದು ನಾವಿನ್ನೂ ಖಾತರಿಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಕಾವಲು ವಿಭಾಗದವರ ಪ್ರಾಥಮಿಕ ತನಿಖೆಗಳು ಸೂಚಿಸಿದ್ದು, ನಿನ್ನ ಹೆಂಡತಿಯ ಕೊಠಡಿಯಲ್ಲಿರುವ ಶ್ರೀ ಕೃಷ್ಣ ವಿಗ್ರಹದ ಮುಂದಿರುವ ದೀಪ ಹಠಾತ್ತಾಗಿ ಬೀಸಿದ ಗಾಳಿಯ ರಭಸಕ್ಕೆ ಬಿದ್ದದ್ದರಿಂದ ಬೆಂಕಿ ಹತ್ತಿಕೊಂಡಿರಬಹುದು ಎಂದು. ದುರದೃಷ್ಟವಶಾತ್ ಮೆರ್ತಾದಿಂದ ಬಂದಿದ್ದ ಅವಳ ದಾಸಿ ಕುಂಕುಮ್ ಕನ್ವರ್ ಈ ದುರ್ಘಟನೆಯಲ್ಲಿ ಸುಟ್ಟು ಹೋದಳು. ಒಂದೆರಡು ಸುಟ್ಟ ಗಾಯಗಳಾಗಿರುವುದು ಬಿಟ್ಟರೆ ರಾಜಕುಮಾರಿಗೆ ಏನೂ ಅನಾಹುತ ಆಗದೆ ಇರುವುದಕ್ಕೆ ನಾವೆಲ್ಲ ದೇವರಿಗೆ ಕೃತಜ್ಞರಾಗಿರಬೇಕು.

ನಿಮ್ಮ ತಾಯಿ ತನ್ನ ಪ್ರೀತಿ ಮತ್ತು ಆಶೀರ್ವಾದವನ್ನು ತಿಳಿಸಲು ಹೇಳಿದ್ದಾಳೆ. ನಮ್ಮ ಸೇನಾ ಪಡೆಗಳು ಮತ್ತು ನಿನ್ನಿಂದಾಗಿ ಯುದ್ಧ ಚೆನ್ನಾಗಿ ನಡೆಯುತ್ತಿದೆ ಎಂದು ನಂಬಿದ್ದೇವೆ. ಭಗವಾನ್ ಸೂರ್ಯದೇವನ ಬೆಳಕು ಸದಾ ನಿನ್ನ ಮೇಲಿರಲಿ.

ಇತಿ ನಿನ್ನ ತಂದೆ

ಜೈ ಶ್ರೀ ಏಕಲಿಂಗಜೀ

ಘನತೆವೆತ್ತ ಮಹಾರಾಜ್‌ಕುಮಾರ್ ಅವರಿಗೆ

ನಿಮ್ಮ ಸ್ನೇಹಿತೆ ಲೀಲಾವತಿ ನಾನು ಹೇಳಿದ್ದನ್ನು ಬರೆದುಕೊಳ್ಳುವುದಕ್ಕೆ ಒಪ್ಪಿ ಈ ಪತ್ರವನ್ನು ಬರೆದುಕೊಟ್ಟಿದ್ದಾಳೆ. ನಾನು ಸುತ್ತು ಬಳಸಿ ಮಾತನಾಡಲು ಹೋಗದೆ ನೇರವಾಗಿ ವಿಷಯಕ್ಕೆ ಬರುತ್ತೇನೆ. ಈ ತಿಂಗಳ

ಏಳನೆಯ ದಿನ ನಿಮ್ಮ ಪತ್ನಿ ರಾಜಕುಮಾರಿಯವರ ದಾಸಿ ಕುಂಕುಮ್ ಕನ್ವರ್ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತು. ಅದು ಮಧ್ಯರಾತ್ರಿಯ ನಂತರ ಶುರುವಾಯಿತು. ತನ್ನ ದಾಸಿಯ ಕಿರಿಚಾಟ ಮತ್ತು ಹೊಗೆಯ ವಾಸನೆಯಿಂದ ಎಚ್ಚತ್ತ ರಾಜಕುಮಾರಿ ಕುಂಕುಮ್ ಕನ್ವರ್‌ಳ ಕೊಠಡಿಗೆ ನುಗ್ಗಿದಳು. ರಾಜಕುಮಾರಿ ಅವಳನ್ನು ಉಳಿಸಲು ಯತ್ನಿಸಿದಳು. ಆದರೆ ಅಷ್ಟು ಹೊತ್ತಿಗಾಗಲೇ ತೀರಾ ತಡವಾಗಿತ್ತು. ತನ್ನನ್ನು ಉಳಿಸಲು ಸಾಧ್ಯವಿಲ್ಲ. ಆದ್ದರಿಂದ ತನ್ನ ಹತ್ತಿರ ಬರಬೇಡಿ ಎಂದು ತನ್ನ ಯಜಮಾನಿ ರಾಜಕುಮಾರಿಯನ್ನು ದೂರವಿಡಲು ಪ್ರಯತ್ನಿಸಿದಳು. ಆದರೆ ಅವರು ಅವಳಿಗೆ ಕಂಬಳಿಗಳನ್ನು ಸುತ್ತಿ ಬೆಂಕಿಯನ್ನು ನಂದಿಸುವುದನ್ನು ಮುಂದುವರೆಸಿದರು. ಬದುಕುವ ಭರವಸೆ ಇನ್ನೇನೇನೂ ಉಳಿದಿಲ್ಲ ಹಾಗೂ ಆಕೆ ಅಲ್ಲಿರುವುದರಿಂದ ರಾಜಕುಮಾರಿಯ ಜೀವಕ್ಕೆ ಅಪಾಯವಿದೆ ಎಂದು ಆ ದಿಟ್ಟ ಹುಡುಗಿಗೆ ಅರಿವಾದಾಗ ಅವಳು ಕಿಟಕಿಯಿಂದಾಚೆಗೆ ಜಿಗಿದು ಬಿಟ್ಟಳು. ಹಾಗೆ ಜಿಗಿದದ್ದರಿಂದ ಅವಳಿಗೆ ತಕ್ಷಣ ಸಾವು ಬಂದಿತು. ಬೆಂಕಿಯಂತೆ ಸತಾಯಿಸಲಿಲ್ಲ.

ರಾಜಕುಮಾರಿಗೆ ವಿಪರೀತ ಸುಟ್ಟಿದೆ. ಅದರಲ್ಲೂ ಆಕೆಯ ಕೈಗಳು ಮತ್ತು ಮುಂಗೈಗಳ ಮೇಲೆ. ಈ ದುರ್ಘಟನೆ ನಡೆದಾಗ ನಾನು ನನ್ನ ವ್ಯವಹಾರದ ಸಲುವಾಗಿ ಹಳ್ಳಿಗೆ ಹೋಗಿದ್ದೆ. ನಾನು ಹಿಂತಿರುಗಿ ಬಂದ ಕೂಡಲೇ ರಾಜವೈದ್ಯನ ಸೇವೆಯನ್ನು ನಿಲ್ಲಿಸಿದೆ ಮತ್ತು ಪೂರಜೀ ಕೀಕಾ ಅವರ ವೈದ್ಯ 'ಏಕ' ನಿಗೆ ಅವರನ್ನು ನೋಡಿಕೊಳ್ಳುವಂತೆ ಹೇಳಿದೆ. ಅದೃಷ್ಟವಶಾತ್, ಷಹಜಾದಾ ಬಹಾದುರ್ ಅವರ ಜೀವವನ್ನುಳಿಸಿದ್ದಕ್ಕೆ ಶ್ರೀ ಏಕ ಮಹಾಪ್ರಭುಗಳಿಂದ ಧನ್ಯವಾದ ಪಡೆಯಲು ಚಿತ್ತೂರಿನಲ್ಲೇ ಇದ್ದರು. ಗಿಡಮೂಲಿಕೆಗಳ ಪಟ್ಟಿಯನ್ನು ಕಟ್ಟುವುದರಿಂದ ಗಾಯಗಳು ಮಾಯುವುದಷ್ಟೇ ಅಲ್ಲದೆ, ಚರ್ಮದ ಮೇಲೆ ಯಾವ ಗುರುತೂ ಉಳಿಯದಂತೆ ಗುಣಪಡಿಸುತ್ತದೆಂದು ಅವರು ಭರವಸೆ ಕೊಟ್ಟರು. ಮೊದಲಿನ ನಾಲ್ಕು ದಿನ ತುಂಬ ನೋವಿತ್ತು. ಆದರೆ ಆಗಬಾರದ ದೊಡ್ಡ ಅನಾಹುತ ಈಗ ಮುಗಿದಿದೆ. ಈಗ ಆಕೆ ಅತ್ಯುತ್ತಮವಾಗಿ ಗುಣಮುಖವಾಗುತ್ತಿದ್ದಾರೆ ಎಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ.

ಆದರೆ ಬೆಂಕಿ ಕಾಣಿಸಿಕೊಂಡದ್ದರ ಬಗೆಗಿನ ಒಂದೆರಡು ಸಂಗತಿಗಳು ಒಗಟಾಗಿವೆ. ಕುಂಕುಮ್ ಕನ್ವರ್ ಎಂದಿನಂತೆ ಒಂಬತ್ತು ಗಂಟೆಗೆ ನಿದ್ದೆ ಹೋದಳು. ಅವಳಿಗೆ ಓದುವ ಅಭ್ಯಾಸವಿರಲಿಲ್ಲವಾದ್ದರಿಂದ ಮಲಗುವ ಮುನ್ನ ತನ್ನ ಕೊಠಡಿಯ ದೀಪ ಆರಿಸಿ ಬಿಡುತ್ತಿದ್ದಳು. ಆ ದಿನ ಕೂಡ ಬೇರೆ ಥರ ಆಗಿರಲು ಸಾಧ್ಯವಿಲ್ಲ. ಮೈಮೇಲೆ ಎಚ್ಚರವಿಲ್ಲದಂತೆ ನಿದ್ರೆ ಮಾಡುವ ಆಕೆ ದೀಪಗಳನ್ನೆಲ್ಲಾ ಆರಿಸಿದ ಹೊರತು ಹಾಗೇ ನಿದ್ರಿಸಲು ಸಾಧ್ಯವೇ ಇಲ್ಲ. ಅವಳ ಕೊಠಡಿಯಲ್ಲಿ ದೇವರ ವೇದಿಕೆ ಇರಲಿಲ್ಲವಾದ್ದರಿಂದ ಇಡೀ ರಾತ್ರಿ ನಂದಾದೀಪ ಹಚ್ಚುವ ಪ್ರಶ್ನೆಯೇ ಏಳುವುದಿಲ್ಲ. ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ ಅವಳ ಕೊಠಡಿಯಲ್ಲಿನ ಮರದ ಪೀಠೋಪಕರಣಳಾವುದಕ್ಕೂ ಏನೂ ಅಪಾಯವಾಗಿಲ್ಲ. ಬೆಂಕಿ ಅವಳ ಹಾಸಿಗೆ ಮತ್ತು ಕಂಬಳಿಯಿಂದ ಮಾತ್ರ ಪ್ರಾರಂಭವಾದಂತೆ ಕಾಣುತ್ತದೆ.

ಜೆಂಕಿ ಮೊತ್ತಿಕೊಳ್ಳಲು ಕಾರಣವೇನೆಂದು ತನಿಖೆ ಮಾಡುವ ಕಾರ್ಯ ಈಗ ಗೃಹ ವ್ಯವಹಾರಗಳ ಉಪಮಂತ್ರಿ ರಾಜಕುಮಾರ ಪಿಕ್ರಮಾದಿತ್ಯನ ಕೈಯಲ್ಲಿದೆ. ಈ ಪ್ರಕರಣದ ವಾಸ್ತವಾಂಶಗಳನ್ನು ತಿಳಿಯಲು ಅವರ ವರದಿಗಾಗಿ ನಾವು ಕಾಯಬೇಕು.

ನೀವು ಹಿಂತಿರುಗಿ ಬರುವವರೆಗೂ ನಾನು ಚಿತ್ತೂರು ಬಿಟ್ಟು ಕದಲುವುದಿಲ್ಲ ಮತ್ತು ರಾಜಕುಮಾರಿಯ ಮೇಲೆ ನಿಗಾ ಇಟ್ಟಿರುತ್ತೇನೆಂದು ತಮಗೆ ತಿಳಿಸಲಿಚ್ಛಿಸುತ್ತೇನೆ.

ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳಿ ಮಹಾರಾಜ್‌ಕುಮಾರ್ ಅವರೆ. ನಿಮ್ಮ ಜೀವ ನನ್ನ ಪಾಲಿಗೆ ತುಂಬ ಅಮೂಲ್ಯವಾದ್ದು. ಅದಕ್ಕಿಂತ ಹೆಚ್ಚಾಗಿ ಮೇವಾಡಕ್ಕೆ. ಎಂಥದೇ ಸಂದರ್ಭದಲ್ಲೂ ನಿಮ್ಮ ಬಗ್ಗೆ ನೀವು ಎಚ್ಚರವಹಿಸದೆ ಇರುವುದಾಗಲಿ, ಅನಗತ್ಯವಾಗಿ ನಿಮ್ಮ ಪ್ರಾಣಕ್ಕೆ ಗಂಡಾಂತರ ತಂದುಕೊಳ್ಳುವುದಾಗಲಿ ಮಾಡಲು ಸಾಧ್ಯವೇ ಇಲ್ಲ.

ಮೇವಾಡದ ಬಾವುಟ ಎತ್ತರಕ್ಕೆ ಹಾರಾಡಲಿ. ನೀವು ಮತ್ತು ನಿಮ್ಮ ಸೇನಾಪಡೆಗಳು ಈ ಯುದ್ಧದಲ್ಲಿ ಯಶಸ್ವಿಯಾಗಲಿ ಮತ್ತು ನೀವು ಸುರಕ್ಷಿತವಾಗಿ ನಮಲ್ಲಿಗೆ ಹಿಂತಿರುಗುವಂತಾಗಲಿ.

ಆಶೀರ್ವಾದಗಳೊಂದಿಗೆ

ನಿಮ್ಮ ವಿಧೇಯಳು
ಕೌಸಲ್ಯ

ಸೇರಿಸಿದ ಮಾತು : ಈ ತುಣುಕು ನಿಮ್ಮ ಪ್ರೀತಿಯ ಲೀಲಾವತಿಯಾದ ನನ್ನದು. ತಂದೆಯುವರು ನನ್ನ ಗಣಿತದ ಪಾಠಗಳನ್ನು ನಿಲ್ಲಿಸಿ ಬಿಡಬೇಕೆಂದಿದ್ದರು. ನಾನು ಬೇಕಾದರೆ ಸಂಸ್ಕೃತ, ಇತಿಹಾಸ, ಭೂಗೋಳ, ಸಂಗೀತ ಮತ್ತು ಚಿತ್ರ ಕಲಿಯುಬಹುದು. ಭಾವೀ ಗೃಹಿಣಿಗೆ ಗಣಿತದಿಂದೇನಾಗಬೇಕು? ನಾನು ಹೋಗಿ ತಾತನಿಗೆ ದೂರು ಹೇಳಿದೆ. ದೇವತೆಗಳ ಗಣಿತದಿಂದ ಭೂಮಿ ಸುತ್ತುತ್ತಾ ಇದೆ ಮತ್ತು ಹಣಧ ಗಣಿತ, ವಾಣಿಜ್ಯವ್ಯವಹಾರ ಮತ್ತು ದಿನ ನಿತ್ಯದ ಬದುಕಿನ ಸಮೀಕರಣವನ್ನು ಸರಿದೂಗಿಸುತ್ತದೆ ಎಂದು ಹೇಳಿದರು. ಗೃಹಿಣಿ ಕೂಡ ದಿನ ನಿತ್ಯದ ವ್ಯವಹಾರ ಮಾಡಬೇಕಾಗುತ್ತದೆ. ಅದೂ ಅಲ್ಲದೆ ನಿನಗಿಷ್ಟವಿರಲಿ ಬಿಡಲಿ, ಗಣಿತ ಅವಳ ರಕ್ತದಲ್ಲೇ ಇದೆ ಎಂದು ಅಪ್ಪನಿಗೆ ಹೇಳಿದರು. ಅವಳು ಬಡ್ಡಿಯ ಭಿನ್ನಾಂಕಗಳನ್ನು ನೀನು ಕಾಗದದ ಮೇಲೆ ಲೆಕ್ಕ ಹಾಕುವುದಕ್ಕಿಂತ ವೇಗವಾಗಿ ಮನಸ್ಸಿನಲ್ಲೇ ಲೆಕ್ಕಹಾಕಿ ಬಿಡ್ತಾಳೆ ಅಂತ ನಿನಗೆ ಭಯವೇನು? ಅವಳು ಗಣಿತ ಕಲಿಯಲಿ ಎಂದರು.

ನಿಮಗೆ ಕೊಡಬೇಕಾದ ಉಡುಗೊರೆಗಳ ಬಗ್ಗೆ ನಾನು ಈಗ ಕೆಲಸ ಮಾಡ್ತಿದ್ದೀನಿ. ನೀವೇನು ತರುತ್ತೀರಿ ನನಗೆ?

ಸದಾ ನಿಮ್ಮವಳಾದ, ನಿಮ್ಮ ಮತ್ತು ಕೇವಲ ನಿಮ್ಮ

ಲೀಲಾವತಿ

* * *

ತಾನು ಎಚ್ಚತ್ತಿದ್ದಾಗ ಮತ್ತು ರಾತ್ರಿಯ ವೇಳೆ ತನ್ನ ಹೆಂಡತಿ ಸಾಯಬೇಕು ಎಂದು ಬಯಸಿದ್ದನು. ಅವನ ಕಲ್ಪನೆ ಸಮೃದ್ಧವಾಗಿ ಬೆಳೆದು ಅದು ಅವಳಿಗೆ ಎಲ್ಲ ರೀತಿಯ ಸಾವಿನ ಸಂಚು ಹೂಡಿತ್ತು. ಮುಳುಗಿ ಸಾಯುವುದು, ಸಿಡುಬಿನಿಂದ ಸಾಯುವುದು, ಕುದುರೆಯಿಂದ ಬಿದ್ದು ಸಾಯುವುದು, ಪ್ರಪಾತದಿಂದ ಬಿದ್ದು ಸಾಯುವುದು, ಎಲ್ಲ ತರದ ಅಪಘಾತಗಳು: ಕುದುರೆಗಾಡಿ ತಲೆಕೆಳಗಾಗಿ ಬೀಳುವುದು, ಭೂ ಕುಸಿತದ ಪರಿಣಾಮವಾಗಿ, ದೊಡ್ಡ ಬಂಡೆ ಬಿದ್ದು ಅವಳ ಮೂಳೆ ಮುರಿಯಬೇಕು, ಆದರೆ ಒಂದೆರಡು ದಿನ ಜೀವಂತವಾಗಿರಬೇಕು. ಹಲಾಲ್‌ನಿಂದ ಸಾವು, ಚಾವಟಿ ಏಟಿನಿಂದ ಸಾವು ದಿನಕ್ಕೊಂದು ಮೂಳೆ ಮುರಿದು ಸಾಯಿಸುವುದು, ಇತ್ಯಾದಿ ಇತ್ಯಾದಿ. ಆದರೆ ಅವನ ಕನಸುಗಳಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ ಸಾವೆಂದರೆ, ಬೆಂಕಿಯಿಂದ ಸಾವು. ಅಷ್ಟಾದರೂ ಅವಳಿಗೆ ಸುಟ್ಟಗಾಯಗಳಾಗಿವೆ ಮತ್ತು ಬೆಂಕಿಯಿಂದ ಸಾಯುವ ಸಂಭವವಿತ್ತೆಂದು ತಿಳಿದಾಗ ಅವನು ವಿಪರೀತ ರೋಷದಿಂದ ಉನ್ಮತ್ತನಾದ. ತನ್ನ ಸೇನೆ, ಯುದ್ಧ, ಶತ್ರುವಿನ ಮುಂದಿನ ಹೆಜ್ಜೆ ಯಾವುದು ಎಂಬುದರ ತೀವ್ರ ನಿರೀಕ್ಷೆ ಇದೆಲ್ಲವನ್ನೂ ತ್ಯಜಿಸಲು ಅವನು ಸಿದ್ಧನಿದ್ದನು. ಅವನು ಚಿತ್ತೂರಿಗೆ ಹಿಂತಿರುಗಿ ಬಿಡುವನು. ತನ್ನ ಹೆಂಡತಿಯ ಬಳಿಗೆ ಓಡುವನು. ಹದಿನೈದು ಮೇಣದ ಬತ್ತಿಗಳನ್ನು ಒಟ್ಟಿಗೆ ಸೇರಿಸಿ ಅವುಗಳನ್ನು ಹಚ್ಚಿ ಚರ್ಮವನ್ನು ಸೀಯುವ ಹಾಗೆ ಆ ಉರಿಯ ಮೇಲೆ ತನ್ನ ಮುಂಗೈಯನ್ನು ಒಡ್ಡಿಕೊಳ್ಳುವನು. ಒಂದು ವೇಳೆ ಅವಳೇನಾದರೂ ಸತ್ತಿದ್ದರೆ ಅವನೇನು ಮಾಡುತ್ತಿದ್ದನು? ಇಲ್ಲ, ಅದನ್ನು ಒಪ್ಪಲು ಸಾಧ್ಯವಿಲ್ಲ; ಅವನು ಅದನ್ನು ಕಿವಿಯಿಂದಕೇಳಲಾರ. ತೀರಾ ಸರಳ, ಅವನು ಅದಕ್ಕೆ ಅನುಮತಿಸಲಾರ. ಅವಳಿಗೊಂದು ವೇಳೆ ಏನಾದರೂ ಆದರೆ, ಅವನು ತನ್ನ ಬದುಕಿಗೇ ಮುಕ್ತಾಯ ಹಾಡಬೇಕು. ಅವಳನ್ನು ಮದುವೆಯಾದ ರಾತ್ರಿಯೇ ಅವಳನ್ನು ರಕ್ಷಿಸುವುದಾಗಿ ಶಪಥ ಮಾಡಿರಲಿಲ್ಲವೆ? ಅವಳ ಕೊಠಡಿಯ ಎದುರು ಕಾವಲು ನಿಲ್ಲುವನು. ಅವನು ನಿದ್ದೆಯನ್ನೇ ಶಾಶ್ವತವಾಗಿ ತ್ಯಜಿಸುವನು. ಅವಳು ಬಾಗಿಲನ್ನು ತೆರೆದಿಟ್ಟಿರುತ್ತಾಳೆಂದು ಖಾತರಿಪಡಿಸಿಕೊಳ್ಳುವನು. ಆ ರಾತ್ರಿ ಚಿತ್ತೂರಿನಲ್ಲಿ ಬಂದ ಹಾಗೆ ಒಂದು ವೇಳೆ ಶ್ರೀ ಕೃಷ್ಣನು ರಾತ್ರಿ ಬಂದರೇನು ಮಾಡುವುದು? ಕೊಲ್ಲು. ಉರಿ ಅವಳನ್ನು ತುತ್ತುಗೊಳ್ಳಲಿ. ಸುಟ್ಟ ಮಾಂಸದ ವಾಸನೆಗಿಂತಲೂ ತೀಕ್ಷ್ಣವಾದ ಹಾಗೂ ಅಮಲೇರಿಸುವಂತಹ ವಾಸನೆ ಇರಲು ಸಾಧ್ಯವೇ? ಅವನಿಗೆ ಇನ್ನೊಂದು ಒಳ್ಳೆಯ ಯೋಚನೆ ಹೊಳೆಯಿತು. ತನ್ನ ಹೆಂಡತಿಗೂ ಆ ವೇಣು ಗೋಪಾಲನಿಗೂ ತಾನೇ ಬೆಂಕಿ ಹಚ್ಚಿಬಿಡುವನು. ಕಾಮದ ಬೆಂಕಿಯಂಥದು, ಹೇಗೆ?

ಯುದ್ಧ ವಿಚಾರದ ವಿವರಗಳನ್ನು ತಿಳಿಯುವ ಸಲುವಾಗಿ ವಿಶಾಲದೃಷ್ಟಿಯ ನೋಟವನ್ನು ಕಳೆದುಕೊಳ್ಳದೆ, ತನ್ನ ಎಂದಿನ ಕಣ್ಣಿನಿಂದಲೇ ಹೊರಟನು. ಯುದ್ಧ ಸಮಿತಿಯ ಸಭೆಗಳಿಗೆ, ಒಂದಾದ ಮೇಲೊಂದರಂತೆ ಬರುವ ಯೋಜಿತ ದೃಶ್ಯಾವಳಿಗಳಿಗೆ ಹಾಜರಾದನು. ಅವನು ಮಾಮೂಲಿನಂತೆ ನಡೆದು ಕೊಂಡನು. ಅವನು ಪೂರ್ತಿಯಾಗಿ ಎಂದಿನಂತೆ ಸಹಜವಾಗಿದ್ದನು. ಈ ಕೂಡಲೇ ತನ್ನನ್ನು ಸುರಕ್ಷಿತ ಸ್ಥಳದಲ್ಲಿ ಬಂಧನದಲ್ಲಿಡಬೇಕಾದ ಅಗತ್ಯವಿದೆಯೆಂದು ಅವನಿಗೆ ಗೊತ್ತಿತ್ತು.

ಅನೇಕ ವರ್ಷಗಳ ಕಾಲ ಅವನು ಸಣ್ಣ ವಿವಾದಗಳನ್ನು ವಿಚಾರಣೆ ಮಾಡುವ ನ್ಯಾಯಾಲಯದ ನ್ಯಾಯಾಧೀಶನಾಗಿದ್ದನು. ಎಲ್ಲ ಸಾಕ್ಷ್ಯಗಳೂ ದೊರೆತ ಹೊರತು, ಒಂದು ಪ್ರಕರಣದ ತೀರ್ಪು ಕೊಡುವುದು ಹಾಗಿರಲಿ, ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವ ಧೈರ್ಯ ಮಾಡಲೂ ಸಾಧ್ಯವಿಲ್ಲ. ಇಷ್ಟಾದರೂ ಬೆಂಕಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಣಾ ಹಾಗೂ ಕೌಸಲ್ಯ. ಈ ಇಬ್ಬರ ದೃಷ್ಟಿಯ ಹೇಳಿಕೆಗಳಲ್ಲಿ ಮನಸ್ಸನ್ನು

ಪ್ರಕ್ಷುಬ್ಧಗೊಳಿಸುವಷ್ಟು ಹೊಂದಾಣಿಕೆಯಿಲ್ಲದಿರುವುದು ತನಗೆ ಕಂಡು ಬಂದಿತೆಂದು ಒಪ್ಪಲೇ ಬೇಕಾಯಿತು. ಅವರಿಬ್ಬರಲ್ಲಿ ಯಾರೂ ಘಟನೆ ನಡೆದಾಗ ಆ ಸ್ಥಳದಲ್ಲಿರಲಿಲ್ಲ. ರಾಣಾ ಬಗ್ಗೆ ಅವನು ಏನೇ ಹೇಳಲಿ ಅಥವಾ ಅವನ ಬಗ್ಗೆ ಅವನ ಅಭಿಪ್ರಾಯ ಏನೇ ಆಗಿರಲಿ. ಆದರೆ ತನ್ನ ತಂದೆ ಬೇಕಂತಲೇ ಸುಳ್ಳು ಹೇಳುವುದಿಲ್ಲ ಎಂದು ಅವನಿಗೆ ತಿಳಿದಿತ್ತು. ಕೌಸಲ್ಯಳಾದರೂ ಅಷ್ಟೇ. ಸುಳ್ಳು ಹೇಳುವಂಥವಳಲ್ಲ. ಆದರೆ ರಾಣಾ ಹೇಳಿದ ಸುದ್ದಿ, ಮೂರನೆಯವರ ಕಡೆಯಿಂದ ಬಂದದ್ದು. ಕೌಸಲ್ಯ ಆ ಸ್ಥಳದಲ್ಲಿದ್ದು ವಿಚಾರಣೆ ನಡೆಸುತ್ತಿದ್ದಳೆಂಬುದು ಸ್ಪಷ್ಟವೇ ಇತ್ತು. ತನಿಖೆ ಮಾಡುವ ವ್ಯಕ್ತಿ ಸಮರ್ಥನೂ ನಿಷ್ಪಕ್ಷಪಾತಿಯೂ, ವಿಶ್ವಾಸಾರ್ಹನೂ ಆಗಿದ್ದಲ್ಲಿ ಇನ್ನೊಬ್ಬರಿಂದ ಕೇಳಿದ ವರದಿಯೂ ಒಳ್ಳೆಯದೇ. ಆತನ ತಮ್ಮ ವಿಕ್ರಮಾದಿತ್ಯನಿಗೆ ಮೇಲೆ ಹೇಳಿದವುಗಳಲ್ಲಿ ಯಾವುದೇ ಅರ್ಹತೆಯೂ ಇದ್ದದ್ದು ತಿಳಿದಿಲ್ಲ. ತನ್ನ ತಮ್ಮನ ಬಗ್ಗೆ ಮಹಾರಾಜ್ ಕುಮಾರ್‌ದು ಪೂರ್ವಾಗ್ರಹ ಪೀಡಿತ ದೃಷ್ಟಿ ಎಂದಿಟ್ಟುಕೊಂಡರೂ, ಕುಂಕುಮ್ ಕನ್ವರ್‌ಳ ಸಾವು ಹೇಗಾಯಿತೆಂದು ವಿವರಿಸುವುದು ಕಷ್ಟ. ಅವಳು ತನ್ನ ಯಜಮಾನಿಯ ಕೃಪಾಶ್ರಯದಲ್ಲಿದ್ದ ಪ್ರಾಣಿ. ಯಾರ ಬಗ್ಗೆಯೇ ಆಗಲಿ ಅಸೂಯೆಯನ್ನಾಗಲಿ ಬದ್ಧ ದ್ವೇಷವನ್ನಾಗಲಿ ಉಂಟು ಮಾಡಲಾರದಷ್ಟು ನಿಕೃಷ್ಟ ಜೀವಿ. ಇನ್ನೊಂದು ಸಾಧ್ಯತೆ ಎಂದರೆ, ಆತ್ಮಹತ್ಯೆಯದು. ಆದರೆ ಆ ಸಂಭಾವ್ಯತೆ ಇಲ್ಲ. ಆಕೆಯ ಯಜಮಾನಿ ಅವಳನ್ನು ತುಂಬ ಪ್ರೀತಿಸುತ್ತಿದ್ದಳು. ಅಲ್ಲದೆ ಎಂದಾದರೂ ಅಪರೂಪಕ್ಕೆ ಕುಂಕುಮ್ ಕನ್ವರ್ ಏನನ್ನಾದರೂ ಬಯಸಿದಾಗ, ಅವಳಿಗೆ ಹೆಚ್ಚು ಕಮ್ಮಿ ಆ ಕೂಡಲೇ ಅದು ಸಿಕ್ಕುತ್ತಿತ್ತು. ಅದೂ ಅಲ್ಲದೆ ಮಹಾರಾಜಾ ರಾಣಾ ಅವರ ಅಂಗರಕ್ಷಕ ಪಡೆಯಲ್ಲೊಬ್ಬ ಅಧಿಕಾರಿಯೊಂದಿಗೆ ಅವಳ ಮದುವೆಯ ನಿಶ್ಚಿತಾರ್ಥವಾಗಿತ್ತು ಮತ್ತು ಪ್ರಥಮ ಪ್ರಣಯದ ಹಿಡಿತದಲ್ಲಿದ್ದಳಾದ್ದರಿಂದ ಆತ್ಮಹತ್ಯೆಮಾಡಿಕೊಳ್ಳುವಂಥ ಸಮಯವಲ್ಲವೇ ಅಲ್ಲ. ತನಗೆ ತಾನೇ ಬೆಂಕಿ ಕಾಣಿಸಿಕೊಳ್ಳೋದಕ್ಕೆ ಸಾಧ್ಯವಿಲ್ಲ. ಇದಕ್ಕೆ ವಿಭಿನ್ನವಾಗಿ ಆಕಸ್ಮಿಕವಾಗಿ ಕಾಣಿಸಿಕೊಂಡ ಬೆಂಕಿ ಯಾವಾಗಲೂ ನಿಯಂತ್ರಣಕ್ಕೆ ಸಿಕ್ಕದ ಹಾಗೂ ಅವ್ಯವಸ್ಥೆಯದ್ದಾಗಿರುತ್ತದೆ ಮತ್ತು ಅದು ಒಬ್ಬ ವ್ಯಕ್ತಿಗೆ ಸೀಮಿತವಾಗಿರುವಂಥದೂ ಅಲ್ಲ. ಅರಮನೆಯಲ್ಲಿದ್ದ ಪೀಠೋಪಕರಣಗಳು ಮತ್ತು ಸಲಕರಣೆಗಳು ಬಹಳ ಬೇಗ ಹೊತ್ತಿ ಉರಿಯುವಂಥವು. ಅವು ಬೆಂಕಿಗಾಹುತಿಯಾಗದೆ ಉಳಿಯುವ ಸಾಧ್ಯತೆ ಇರಲಿಲ್ಲ. ಮಹಾರಾಜ್‌ಕುಮಾರ್ ಪ್ರಯತ್ನಿಸಬಹುದು. ಆದರೆ, ಇನ್ನು ಮುಂದೆ ಮಹಾರಾಜ್ ಕುಮಾರ್ ನಿಷ್ಪಕ್ಷಪಾತ ಹಾಗೂ ವಸ್ತುನಿಷ್ಠ ನ್ಯಾಯಶಾಸ್ತ್ರಜ್ಞನಾಗಿ ನಡೆದುಕೊಳ್ಳಲು ಸಾಧ್ಯವಿಲ್ಲ. ಯಾರೋ ರಾಜಕುಮಾರಿಯನ್ನು ಕೊಲ್ಲಲು ಪ್ರಯತ್ನಿಸಿದ್ದರು ಎಂದು ಆತನಿಗೆ ತಿಳಿದಿತ್ತು. ಅದು ಯಾರು ಎಂದು ಆತನಿಗೆ ಗೊತ್ತಿಲ್ಲದೆ ಇರಬಹುದು. ಆದರೆ ಆತನಿಗೆ ಈ ಬಗ್ಗೆ ಸರಿಸುಮಾರು ಒಂದು ಒಳ್ಳೆಯ ಯೋಚನೆ ಇದ್ದಿತು. ಏನೇ ಆಗಲಿ ತನ್ನ ಹೆಂಡತಿಯನ್ನು ಮುಟ್ಟುವ ಧೈರ್ಯ ತೋರಿಸಿದ್ದಕ್ಕೆ ಇಡೀ ಚಿತ್ತೂರನ್ನೇ ಒರೆಸಿಹಾಕಿ ವಿಧಿಯ ಬಳಿಗೈದಲು ಸಿದ್ಧನಿದ್ದನು.

ನಾಲ್ಕೂವರೆ ವಾರಗಳ ನಂತರ, ಕೌಸಲ್ಯಳಿಂದ ಇನ್ನೊಂದು ಪತ್ರ ಬಂದಿತು.

ಜೈ ಶ್ರೀ ಏಕಲಿಂಗಜೀ

ಘನತೆವೆತ್ತ ಮಹಾರಾಜ್‌ಕುಮಾರ್ ಅವರಿಗೆ.

ನಾನು ತಮಗೆ ಹೇಳಿದಂತೆ ಮಾಡುವಲ್ಲಿ ಸೋತಿದ್ದೇನೆ. ರಾಜಕುಮಾರಿಯ ಮೇಲೆ ನಿಗಾ ಇಡುವುದಾಗಿ ನಾನು ನಿಮಗೆ ಮಾತು ಕೊಟ್ಟಿದ್ದೆ. ಆದರೆ ನಾನು ಸಾಕಷ್ಟು ನಿಗಾವಹಿಸಲಿಲ್ಲ. ನನ್ನ ಹಳ್ಳಿ ರೊಹಾಲಾದಿಂದ ನಾನು ಹಿಂತಿರುಗಿದ ದಿನದಿಂದಲೂ ನಾನು ಇಮ್ಮಡಿ

ಎಚ್ಚರವಹಿಸಬೇಕೆಂದು ನಿರ್ಧರಿಸಿದೆ. ಆಹಾರವನ್ನು ರುಚಿನೋಡುವವನು ಎಲ್ಲ ತಿನಿಸನ್ನು ರುಚಿ ನೋಡಿದ ಮೇಲೆ ನಾನು ಆಹಾರ ತಿನ್ನುತ್ತಿದ್ದೆ. ಆ ನಂತರವೇ ರಾಜಕುಮಾರಿಗೆ ಬಡಿಸಲಾಗುತ್ತಿತ್ತು. ಒಂದು ವಾರದ ಹಿಂದೆ, ರಾಜಕುಮಾರಿ ಮತ್ತು ನಾನು ಊಟ ಮಾಡಿ ಪೂರ್ತಿ ಹನ್ನೆರಡು ಗಂಟೆಗಳ ನಂತರ ನಮ್ಮಿಬ್ಬರಿಗೂ ಅಸಾಧ್ಯವಾದ ಹೊಟ್ಟೆ ನುಲಿ, ನೋವು ಮತ್ತು ವಿಪರೀತ ಭೇದಿ ಶುರುವಾಯಿತು. ನಾನು ಭಿಲ್ ವೈದ್ಯ 'ಏಕ' ನಿಗೆ ಹೇಳಿ ಕಳುಹಿಸಿದೆ. ಆದರೆ ಎರಡು ಗಂಟೆಯೊಳಗಾಗಿ ಅತಿಸಾರದ ಪರಿಣಾಮವಾಗಿ ಜಲಾಂಶನಾಶದಿಂದ ಮತ್ತು ಆಹಾರದಲ್ಲಿ ವಿಷ ಪ್ರಯೋಗದಿಂದ ನಾವು ಎಚ್ಚರ ತಪ್ಪಿದ್ದೆವು. ಏಕಾಜಿಯ ಪ್ರಕಾರ, ನಮ್ಮ ಪರಿಸ್ಥಿತಿ ಮುಂದಿನ ನಲವತ್ತೆಂಟು ಗಂಟೆಗಳವರೆಗೂ ಇನ್ನಷ್ಟು ಹದಗೆಡುತ್ತಾಹೋಯಿತು. ಅದೃಷ್ಟವಶಾತ್, ಮೊದಲಿಗೇ ಅವನನ್ನು ಕರೆಸಲಾಗಿತ್ತು. ಹಾಗಾಗಿ ನಮ್ಮ ಮುಖದ ಬಣ್ಣ ಮತ್ತಿತರ ಚಿಹ್ನೆಗಳನ್ನೆಲ್ಲ ಚೆನ್ನಾಗಿ ಪರೀಕ್ಷಿಸಿ ಇದ್ದಕ್ಕಿದ್ದ ಹಾಗೆ ಶುರುವಾದ ನಮ್ಮ ಈಗಿನ ಮಾರಕ ರೋಗಕ್ಕೆ ಖಚಿತವಾದ ಕಾರಣವನ್ನು ಹೇಳಿದನು. ಏಕಾಜಿಯ ಪ್ರಕಾರ ಅದು ಮಾರಣಾಂತಿಕ ರೋಗ. ನಿಧಾನವಾಗಿ ಕೆಲಸ ಮಾಡುವಂಥ ವಿಷವನ್ನು ನಾವು ತಿನ್ನುವ ಆಹಾರಕ್ಕೆ ಬೆರೆಸಲಾಗಿತ್ತು. ಭಿಲ್ ವೈದ್ಯನಿಲ್ಲದೆ ಹೋಗಿದ್ದರೆ, ಇದುವರೆಗೆ ನಾವಿಬ್ಬರೂ ಸತ್ತು ಹೋಗಿರುತ್ತಿದ್ದೆವು.

ನಾವಿಬ್ಬರೂ ಈಗ ಅಪಾಯದಿಂದ ಪಾರಾಗಿ ಚೇತರಿಸಿಕೊಳ್ಳುತ್ತಿದ್ದೇವೆ. ಇನ್ನೇನೂ ಚಿಂತಿಸುವ ಕಾರಣವಿಲ್ಲ ಎಂದು ನಿಮಗೆ ಭರವಸೆ ಕೊಡುತ್ತೇನೆ. ಸದ್ಯಕ್ಕೆ ನನ್ನ ಸೊಸೆ ನಮ್ಮಿಬ್ಬರಿಗೂ ಅನ್ನದ ಗಂಜಿ ಮಾಡಿಕೊಡುತ್ತಿದ್ದಾಳೆ. ಕಳೆದ ಐದು ದಿನಗಳಿಂದ ಅವನ್ನು ಕುಡಿದೇ ನಾನು ಮತ್ತು ರಾಜಕುಮಾರಿ ಇಬ್ಬರೂ ಜೀವಿಸಿದ್ದೇವೆ. ನನಗೆ ಎದ್ದು ಕುಳಿತು ಕೊಳ್ಳುವಷ್ಟು ಶಕ್ತಿ ಬಂದ ಕೂಡಲೇ ನಿಮ್ಮ ಪತ್ನಿಗೂ ನನಗೂ ನಾನೇ ಅಡಿಗೆ ಮಾಡುತ್ತೇನೆ. ನಿಮ್ಮ ಮತ್ತು ರಾಜಕುಮಾರಿಯ ಅರಮನೆಯ ಕಾವಲು ಕಾಯಲು ನನ್ನ ಕಡೆಯ ಅತ್ಯಂತ ನಿಷ್ಠಾವಂತ ಹಾಗೂ ಸಮರ್ಥರಾದ ಹತ್ತು ಜನರನ್ನು ಇಪ್ಪತ್ತು ನಾಲ್ಕು ಗಂಟೆಯೂ ರಕ್ಷಣೆಗಾಗಿ ಕಾವಲಿರಲು ಹೇಳಿದ್ದೇನೆ. ನೀವು ಬರುವವರೆಗೂ ಅವರು ಇಲ್ಲೇ ಇರುತ್ತಾರೆ. ವೈದ್ಯರು ಮಹಾಪ್ರಭು ರಾಣಾ ಅವರಿಗೆ ನಮ್ಮನ್ನು ಸಾಯಿಸಲು ಮಾಡಿದ ಪ್ರಯತ್ನದ ಬಗ್ಗೆ ತಿಳಿಸಿದ್ದಾರೆ ಹಾಗೂ ಕುಂಕುಮ್ ಕನ್ವರ್‌ಳ ಸಾವು ಆಕಸ್ಮಿಕ ಘಟನೆಯಾಗಿರಲಾರದೆಂಬ ಸೂಚನೆಯನ್ನೂ ನೀಡಿದ್ದಾರೆ. ಮಹಾರಾಜರು ಈ ಪ್ರಕರಣವನ್ನು ರಾಜಕುಮಾರ ವಿಕ್ರಮಾದಿತ್ಯನ ಕಡೆಯಿಂದ ಲಕ್ಷ್ಮಣಸಿಂಹಜೀಯವರ ನ್ಯಾಯಾಧಿಕರಣ ವ್ಯಾಪ್ತಿಗೆ ಬರುವಂತೆ ವರ್ಗಾಯಿಸಿದ್ದಾರೆ. ಅವರು ಅಡಿಗೆಯವನನ್ನು ಮತ್ತು ಮೂರು ಜನ ಆಳುಗಳನ್ನು ಬಂಧಿಸಲು ಆದೇಶ ಮಾಡಿದ್ದಾರೆ. ಯಾವುದೋ ಕಾರಣಕ್ಕೆ ರಾಜಕುಮಾರಿಯ ಕಡೆಯಿಂದ ಮೊದಲಿಗಿಂತ ಹೆಚ್ಚು ಸುರಕ್ಷಿತವೆಂಬ ಭಾವನೆ ನನಗೆ ಉಂಟಾಗಿದೆ. ಆಕೆ ನಿಜಕ್ಕೂ ತುಂಬ ಧೈರ್ಯಗಾತಿ ಹೆಣ್ಣು ಮತ್ತು ನೀವು ಇಲ್ಲಿಂದ ತೆರಳಿದ ಮೇಲೆ ತನಗೆ ಬಂದೊಂದಗಿದ ವಿಪತ್ತುಗಳ ಬಗ್ಗೆ 'ಚ'ಕಾರ ಎತ್ತಿಲ್ಲ. ಮಹಾರಾಣಿಯವರಿಗೆ ನಾನು ಒಳ್ಳೆಯ ರಕ್ಷಕಿಯಾಗಿರಲಿಲ್ಲವೆಂದು ನನಗೆ ತುಂಬ ನಾಚಿಕೆಯಾಗಿದೆ. ನಾನು ಸುಳ್ಳು

ಆಶ್ವಾಸನೆಗಳನ್ನು ಕೊಡುವಂಥವಳಲ್ಲ ಎಂದು ನಿಮಗೆ ಗೊತ್ತಿದೆ. ಆದರೆ ಲಕ್ಷ್ಮಣ ಸಿಂಹಜೀಯವರು ಈ ಪ್ರಕರಣವನ್ನು ವಹಿಸಿಕೊಂಡಾಗಿನಿಂದ ಅರಮನೆಯ ವಾತಾವರಣದಲ್ಲಿ ನಾನು ಸಹಜವಾಗಿಯೇ ಒಂದು ಬದಲಾವಣೆಯನ್ನು ಗುರುತಿಸಿದ್ದೇನೆ. ನನ್ನನ್ನು, ರಾಜಕುಮಾರಿಯನ್ನು ನೋಡಲು, ಅವರು ದಿನವೂ ಬರುತ್ತಿದ್ದಾರೆ. ಇಷ್ಟು ದೀರ್ಘಕಾಲ ಇದ್ದದ್ದಕ್ಕಿಂತ ಈಗ ಭದ್ರತಾ ಕಾವಲನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ. ನಾನು ಮೊದಲೇ ಊಹಿಸಿದಂತೆ ಬಾಲ್ಯದಿಂದ ನಿಮ್ಮೊಂದಿಗಿದ್ದ ಅಡಿಗೆಯವನು ಈ ಪ್ರಕರಣದಲ್ಲಿ ಮುಗ್ಧನೆಂದು ತಿಳಿದು ಬಂದಿದೆ.

ನಿಮ್ಮ ವಿಧೇಯಳು

ಕೌಸಲ್ಯ

ಸೇರಿಸಿದ ಮಾತು : ನನ್ನ ಹಿಂದಿನ ಪತ್ರಕ್ಕೆ ನೀವು ಉತ್ತರ ಕೊಡುವ ಗೋಜಿಗೆ ಹೋಗಿಲ್ಲವಾದ್ದರಿಂದ ನಾನು ನಿಮ್ಮ ಜೊತೆ ಮಾತಾಡಲ್ಲ. ಕೌಸಲ್ಯ ಮಾ ನನಗೆ ಹೆಣಿಗೆ ಕಲಿಸಿದ್ದಾರೆ. ಹಾಗಾಗಿ ನಾನು ಹೆಸರು ಹೇಳದ ಒಬ್ಬರಿಗೆ ಒಂದು ಉಣ್ಣೆಯ ಹೆಣಿಗೆಯ ಅಂಗಿಯನ್ನು (ಸ್ವೆಟರನ್ನು) ಅರ್ಧ ಹೆಣೆದು ಮುಗಿಸಿದ್ದೇನೆ.

ಪ್ರೀತಿಯ

ಲೀಲಾವತಿ

* * *

ಮಹಾರಾಜ್‌ಕುಮಾರ್ ತುಂಬ ಅವಸರದಲ್ಲಿದ್ದನು. ಆತನಿಗೆ ಎಲ್ಲಿಗೂ ಹೋಗುವುದಿರಲಿಲ್ಲ. ಆತನಿಗಾಗಿ ಯಾರೂ ಕಾಯುತ್ತಿರಲಿಲ್ಲ. ಆದರೆ ಅವನು ಒಬ್ಬರನ್ನು ಭೇಟಿಯಾಗುವುದಿತ್ತು. ಮರುಭೂಮಿ ಬಹಳ ದೊಡ್ಡದಾಗಿತ್ತು. ಅದರಲ್ಲಿ ತಪ್ಪಿಸಿಕೊಳ್ಳುವ ಸಂಭವ ಇತ್ತು. ಅದು ಬಂಜರು ಬೇರೆ. ಅದು ಶೂನ್ಯದ ಇನ್ನೊಂದು ಹೆಸರು. ಅತ್ಯಂತ ಹತಾಶನಾಗಿ ಅವನು ಹಾತೊರೆಯುತ್ತಿದ್ದ ಮನಸ್ಸಿನ ಮತ್ತು ದೇಹದ ಸ್ಥಿತಿ ಅದಾಗಿತ್ತು. ಅವನು ಸುತ್ತಲೂ ತಿರುಗಾಡಿದನು. ಅವನು ಮಾಡುವುದು ಬಹಳ ಇತ್ತು. ನೀರಿನ ಮೇಲೆ ಹೆಪ್ಪುಗಟ್ಟಿದ ಅಲೆಗಳಂತೆ ಮರಳು ತೆರೆ ತೆರೆಯಾಗಿ ಹರಡಿತ್ತು. ಪ್ರತಿಯೊಂದು ಅಲೆಯ ಹೊರ ರೇಖೆಯೂ ಕರಾರುವಾಕ್ಕಾಗಿ ಆಕೃತಿಗೊಂಡಿತ್ತು. ಮರಳ ಪ್ರವಾಹದ ಪ್ರತಿ ಅಂಚೂ ಕೂದಲೆಳೆಯಷ್ಟು ಸೂಕ್ಷ್ಮವೂ ಅವಿಚ್ಛಿನವೂ ಆಗಿತ್ತು. ಅದು ಬೆರಗುಗೊಳಿಸುವಂತಿತ್ತು. ಮಹಾನ್ ಕುಶಲಕರ್ಮಿಯೊಬ್ಬನ ಮಹಾಕಲಾಕೃತಿಯಾದ ಇದನ್ನು, ಅನಂತದವರೆಗೂ ಹಬ್ಬಿ ನಿಂತಿದ್ದ ಪರಿಪೂರ್ಣತೆಯ ಈ ಅಮೂರ್ತ ಚಿತ್ರವನ್ನು ನಿರ್ಮಿಸುವಲ್ಲಿ ಆ ಕುಶಲ ಶಿಲ್ಪಿ ನೂರಾರು ವರ್ಷಗಳನ್ನು ಕಳೆದಿರಬಹುದು. ಅವನ ಬದುಕಿನ ಕೃತಿ ಅವನಿಗಾಗಿ ರೂಪಿತವಾಗಿತ್ತು. ಆ ಕಲಾಕೃತಿಯನ್ನವನು ವ್ಯವಸ್ಥಿತವಾಗಿ ಬಿಡಿಸಿ ತೆಗೆಯಬೇಕಿತ್ತು. ಗುರುತು ಹಿಡಿಯಲಾಗದಂತೆ ಅದನ್ನು ಕೆಡಿಸಬೇಕು. ಅನಾದಿಕಾಲದ ಆಕಾರವಿಲ್ಲದ ಶೂನ್ಯಕ್ಕೆ ತಿರುಗಿಸಬೇಕಿತ್ತು. ಅದರ ಮೊದಲ ಹೆಜ್ಜೆಯಾಗಿ ತನ್ನ ಅದೃಷ್ಟದ ಏರು ಅಲೆಯ ಮೇಲೆ ತನ್ನ ಪಾದದಿಂದ ಅಪ್ಪಳಿಸಿದನು. ಹೀಗೇ ದಿಗಂತದವರೆಗೂ ದಾರಿಮಾಡಿಕೊಂಡು ಮುಂದೆ ಸಾಗಿ ಮುಂದಿನ ಗುಂಡಿಯತ್ತ ನಡೆಯುವನು. ಅದು ಅತಿಕಷ್ಟದ ಕೆಲಸ. ಬೇಫಿಕೀರ್ ಅವನ್ನು ಲೋಲುಪತೆಯಿಂದ ನೋಡಿತು. ಸಣ್ಣ ಹೆಜ್ಜೆಗಳನ್ನಿಟ್ಟು ವೇಗವಾಗಿ ಸಾಗಿ ಹೋಯಿತು.

ಮಧ್ಯಾಹ್ನ ನಾಲ್ಕು ಗಂಟೆಗೆ ಉದ್ದ ಹಿಡಿ ಇರುವ ಭಾರವಾದ ಸುತ್ತಿಗೆಯಿಂದ ಅವನ ತಲೆಗೆ ಹೊಡೆತ ಬಿತ್ತು. ಅವನು ಕೆಳಗುರುಳಿದ. ಮರಳಿನ ಮೇಲೆ ಅವನ ತಲೆಯೊಡೆಯಿತು. ಅವನು ಹಿಂತಿರುಗಿದಾಗ, ರಾತ್ರಿಯಾಗಿತ್ತು. ಅವನು ಹಿಮಗಡ್ಡೆಯಾಗಿ ಬಿಡಬೇಕಿತ್ತು. ಆದರೆ ಅವನಿಗೆ ವಿಪರೀತ ಜ್ವರ ಬಂದಿತ್ತು. ಬೆವರು ಮತ್ತು ಮೈ ನಡುಕ ಒಂದಾದ ಮೇಲೊಂದು ಬರುತ್ತಿತ್ತು. ಇದುವರೆಗೂ ಬಿಸಿಲಿನ ಆಘಾತದ ಹೊಡೆತವೆಂದರೆ ನಿಜವಾದ್ದು ಹಾಗೂ ಭೌತಿಕವಾದದ್ದೆಂದು ಹಾಗೂ ಅಷ್ಟೊಂದು ಅಸಮಂಜಸ ಮತ್ತು ಅಷ್ಟೊಂದು ಪ್ರಚಂಡ ಶಕ್ತಿಯಿಂದ ಕೂಡಿದ್ದೆಂದು ಅವನಿಗೆ ಗೊತ್ತಾಗಿರಲಿಲ್ಲ. ಅವನಿಗೆ ಬಹಳ ಬಾಯಾರಿಕೆಯಾಗಿತ್ತು. ಆದರೆ ಬೇಫಿಕೀರ್ ಸುತ್ತಮುತ್ತ ಎಲ್ಲೂ ಇರಲಿಲ್ಲ. ಅವನು ಏಳಲು ಯತ್ನಿಸಿದನು. ಅವನ ಮಂಡಿಗಳು ಕುಸಿದು ಬಾಗಿದ್ದುವು.

ಅತ್ಯಂತ ತೀವ್ರವಾದ ಶೀತಲ ಗಾಳಿ ಬೀಸುತ್ತಿತ್ತು. ಮಸ್ಲಿನ್ ಬಟ್ಟೆಯಂತೆ ತೆಳುವಾದ ಮರಳಿನ ಹಾಳೆಗಳು ಹಿಂದಕ್ಕೂ ಮುಂದಕ್ಕೂ ತೊನೆದಾಡಿದವು. ಇಡೀ ಮರುಭೂಮಿ ಅತ್ಯಂತ ಪ್ರಕ್ಷುಬ್ಧಗೊಂಡಿತ್ತು. ಇಡೀ ಮರಳ ಪ್ರದೇಶವೇ ಬಲವಂತವಾಗಿ ಹೊರದೂಡಲ್ಪಟ್ಟು ಅಪರಿಚಿತ ಪ್ರದೇಶಕ್ಕೆ ವಲಸೆ ಹೋಗುತ್ತಿತ್ತು. ಮರಳಿನ ಪ್ರಚಂಡ ಬಿರುಗಾಳಿ ಭೂತದ ಹಾಗೆ ಆಕಾಶಕ್ಕೆ ಏರಿತು. ಒಂಟೆಗಳು, ಹಕ್ಕಿಗಳು, ಸ್ತ್ರೀಪುರುಷರು, ಕುದುರೆಗಾಡಿಗಳು, ಅರಮನೆಗಳು ಮತ್ತು ಆನೆಗಳು ಮೇಲೆ ಹಾರಿ ಒಂದಕ್ಕೊಂದು ಅಪ್ಪಳಿಸಿದವು.

ಬೆಳಕು ಚಿನ್ನದ ಬಣ್ಣತಾಳಿತ್ತು. ಹಾರುತ್ತಿರುವ ವಸ್ತುಗಳ ಜಂಗುಳಿಯ ನಡುವಿನಿಂದ ಚಿನ್ನದ ಬಣ್ಣದ ಹೆಂಗಸೊಬ್ಬಳು ದಾಪುಗಾಲು ಹಾಕುತ್ತ ಅವನತ್ತ ನುಗ್ಗಿದಳು. ಅವಳು ಅದೆಷ್ಟು ಲೋಲುಪಳಾಗಿ, ಹಾರುಗಾಲಿನ ಓಟದಿಂದ ಅವನತ್ತ ನುಗ್ಗಿದಳೆಂದರೆ, ಅವಳನ್ನು ಸ್ವಾಗತಿಸಲು ತನ್ನೆರಡೂ ಕೈಗಳನ್ನು ಮೇಲೆತ್ತಿದನು. ಅವಳು ಅವನನ್ನು ದಾಟಿ ಮುಂದೆ ಹೋದಳು. ಅವಳ ಹಳದಿಯ ಹೊದಿಕೆ ಇವನ ಕೈಯಲ್ಲಿತ್ತು. ಅವಳಿಗೆ ನಿಲ್ಲೆಂದು ಜೋರಾಗಿ ಬೊಬ್ಬೆ ಹಾಕಿದನು. ಆದರೆ ಸುತ್ತಲಿನ ಆ ಅಬ್ಬರದಲ್ಲಿ ಅವನಿಗೆ ತಾನು ಕೂಗಿದ್ದೇ ತನಗೆ ಕೇಳಿಸಲಿಲ್ಲ. ಅವಳು ಸುತ್ತ ತಿರುಗಿ ಮುಗುಳ್ನಕ್ಕಳು. ಅವಳ ಸೌಂದರ್ಯದಿಂದ ತಾನು ಸಾಯುವೆನೆಂದು ಭಾವಿಸಿದನು. ಅವಳು ಅವನ ಕಡೆಗೆ ಓಡೋಡಿಬಂದು ಅಂಗಾತವಾಗಿ ಮಲಗಿದ್ದ ಅವನ ದೇಹದ ಮೇಲೆ ಬಿದ್ದಳು. ತನ್ನ ಹಲ್ಲಿನಿಂದ ಅವನ ನಿಲುವಂಗಿಯ ಗುಂಡಿಗಳನ್ನು ಕಿತ್ತು ಹಾಕಿದಳು. ಅವಳನ್ನು ತಾನೆಲ್ಲಿ ಮುಂಚೆ ನೋಡಿದ್ದನು? ಒಂದು ಗುಂಡಿ ಅವಳ ಬಾಯಲ್ಲಿತ್ತು. ಅದನ್ನು ಅವನತ್ತ ಬೀಸಿ ಒಗೆಯುತ್ತ ನಕ್ಕಳು. ಅದು ಅವನ ತೆರೆದ ಎದೆಗೆ ತಾಕಿತು. ಅವನು ಅವಳ ರವಿಕೆಯನ್ನು ಥಟ್ಟನೆ ಕಡಿದೊಗೆದನು. ಅವನ ಷರಾಯಿಯನ್ನು ಬಿಚ್ಚುವ ಯತ್ನದಲ್ಲಿ ಅವಳ ಕೈಗಳು ಅವನ ಸೊಂಟದ ಮೇಲಿದ್ದುವು. ಉಲ್ಲಾಸ ಉಕ್ಕುತ್ತಿದ್ದಂತೆ ಅವಳನ್ನು ಬಿಗಿಯಾಗಿ ಅಪ್ಪಿದನು. ಅವನ ಷರಾಯಿಯನ್ನು ಆಲಿಂಗಿಸಿದ್ದ ಅವಳ ಶರೀರವನ್ನು ಬಿಡಿಸಿಕೊಳ್ಳಲಾಗಲಿಲ್ಲ. ಅವಳ ಎಡಗೈ ಷರಾಯಿಯನ್ನು ಜಾರಿಸಿದ ಕೂಡಲೆ ಅವಳು ನಕ್ಕಳು. ಅವಳು ಅವನ ನೆತ್ತಿಯ ಮೇಲೆ ಕುಳಿತಿದ್ದಳು. ಅವನ ಕೈಗಳು ಅವಳ ಮೊಲೆಗಳನ್ನು ಅಂಗೈನಲ್ಲಿ ಹಿಡಿದಿದ್ದುವು. ಯಾವುದೇ ಕ್ಷಣದಲ್ಲಾದರೂ ಅವಳು ಅವನನ್ನು ಜಾರಿಸಬಹುದು.

ಅವಳನ್ನು ಹಿಂದಕ್ಕೆ ಬೀಸಿ ಒಗೆಯುತ್ತ "ಅವಳನ್ನು ಕೊಲ್ಲಲು ಪ್ರಯತ್ನಿಸಿದವರು ಯಾರು? ನನ್ನ ತಮ್ಮ ವಿಕ್ರಮಾದಿತ್ಯನೋ, ರಾಣಿ ಕರ್ಮವತಿಯೋ, ಅಥವಾ ನೀನೋ?"

"ಅದರಿಂದೇನು ವ್ಯತ್ಯಾಸವಾಗುತ್ತೆ?"

ಅವಳ ಮೊಲೆಗಳು ಮತ್ತೆ ಒಂದು ಜೊತೆ ಹಳೆಯ ಕಾಲು ಚೀಲಗಳಂತಾದವು.

ಅವಳ ಕೂದಲು ವಿಷ ಸರ್ಪದ ಬಿಳಿಯ ಹುತ್ತದಂತಾದುವು. ಅವಳ ಹಲ್ಲಿಲ್ಲದ ಬಾಯಿ ಗಾಳಿಯನ್ನು ಅಗಿಯಿತು. ಬೂತಾನಿ ಮಾತಾಳ ಉದ್ದನೆಯ ಮೂಳೆಯ ಕೈ ಅವನ ಶಿಶ್ನದೊಂದಿಗೆ ಆಟವಾಡುತ್ತಿತ್ತು. ಕೇಳಿದಳು. "ಅವಳು ಸಾಯಬೇಕೆನ್ನುವುದು ನಿನ್ನ ಇಚ್ಛೆಯಾಗಿತ್ತಲ್ಲವೆ? ಆ ಕೆಲಸವನ್ನು ಯಾರು ಮಾಡಿದರೆನ್ನುವುದು ಅಷ್ಟು ಮುಖ್ಯವೆ?" ಅವನು ಅವಳನ್ನು ಬೀಸಿ ಒಗೆಯಬೇಕೆಂದಿದ್ದ, ಆದರೆ ಅವಳು ಅವನಿಗೆ ನೇರವಾಗಿ ಚಲಿಸದಂತೆ ಅಂಟಿಕೊಂಡಿದ್ದಳು.

"ಇಲ್ಲ ಅವಳು ಸಾಯುವುದು ನನಗೆ ಬೇಕಿಲ್ಲ. ನನಗೆ ಅವನು ಸಾಯುವುದು ಬೇಕಾಗಿದೆ"

"ನಾವು ನಮ್ಮ ಮನಸ್ಸು ಬದಲಾಯಿಸಿದ್ದೇವೆ ಹೌದೆ? ಕಳೆದ ಸಲ ನಾವು ವೃಂದಾವನಿ ದೇವಸ್ಥಾನದಲ್ಲಿ ಭೇಟಿಯಾದಾಗ, ಅವಳನ್ನು ನೀನು ಕೊನೆಗಾಣಿಸಬೇಕೆಂದಿದ್ದೆ. ನಾನು ಸ್ವಲ್ಪ ತಾಳ್ಮೆ ವಹಿಸಲು, ಯೋಚನೆ ಮಾಡಲು ಇನ್ನು ಸ್ವಲ್ಪ ದಿನ ತೆಗೆದುಕೊಳ್ಳಲು ಸಲಹೆ ಮಾಡಿದೆ. ಆದರೆ ನೀನು ನನಗೆ ಉಗುಳಿದೆ. ಬಹುಶಃ ಆ ಡೋಲಾಯಮಾನಸ್ಥಿತಿ ಬಹಳ ಹಿಂದೆಯೇ ಕಳೆದುಹೋಯಿತು."

"ಸೂಳೆ ಮುಂಡೆ ಅವಳನ್ನು ಮುಟ್ಟೋ ಧೈರ್ಯ ಮಾಡೀಯೇ, ಜೋಕೆ"

"ಅಯ್ಯಾ ಸಭ್ಯಸ್ತ, ನಿನ್ನ ನಾಲಿಗೆ ಹತೋಟಿಯಲ್ಲಿಟ್ಟುಕೋ." ಅವಳ ಬೆರಳುಗಳು ಉದ್ದವಾಗಿ, ಹರಿತವಾದ ಅಲಗಿನಂತಾದವು. ಅವು ಅವನ ಹೃದಯವನ್ನು ಭೇದಿಸಿ ಅವನನ್ನು ಮರಳಿಗೆ ಕಟ್ಟಿ ಹಾಕಿದವು. "ನೀನು ಬೇಡುತ್ತಾ ಇರೋನು ಅನ್ನುವುದನ್ನು ನಾವು ಮರೆಯದಿರೋಣ."

"ನೀನೊಬ್ಬಳು ಅಸಮರ್ಥ ನಿರರ್ಥಕ ಹಾಗೂ ಅಸಹ್ಯದ ಮುದುಕಿ. ನೀನು ಎಲ್ಲಾನೂ ಕುಲಗೆಡಿಸ್ತಿದ್ದೀ. ನಿನಗೆ ಮೊದಲನೇ ಸಲ ಸರಿಯಾದ ವ್ಯಕ್ತಿಯನ್ನು ಹುಡುಕಿಕೊಳ್ಳಲು ಸಾಧ್ಯವಾಗಲಿಲ್ಲ. ಆ ಬಡಪಾಯಿ ರೂಪ ಕನ್ವರ್‌ಳನ್ನು ಎತ್ತಿ ಒಗೆದೆ. ಎರಡನೇ ಸಲ ನನ್ನ ಹೆಂಡತಿಯ ಜೊತೆಗೆ ಕೌಸಲ್ಯ ದೊರೆತಳು. ಆದರೆ ಅವರಿಬ್ಬರೂ ನಿನ್ನ ಅದ್ಭುತ ಅವಿವೇಕದಿಂದ ಪಾರಾಗಿದ್ದಾರೆ. ಏ ಭೂತಾನಿ ಮಾತಾ ನೀನೊಬ್ಬಳು ರಕ್ತ ಪಿಪಾಸು, ಪ್ರತಿಷ್ಠೆಯ ಅಡ್ಡ ಕಸಬಿ." ಮಾತೆಯು ಅವನ ಕುತ್ತಿಗೆಯನ್ನು ಹಿಡಿದು ಅವನ ತಲೆ ಮುರಿಯುವವರೆಗೂ ಅಲುಗಾಡಿಸಿದಳು. "ಏ ಕೃತಘ್ನ ನಾನು ಯಾರ ವಿರುದ್ಧ ಇದ್ದೀನಿ ಅಂತ ನಿನಗೆ ಗೊತ್ತಾ?"

ಕುತ್ತಿಗೆ ಮುರಿದಿದ್ದರೂ, "ನಿನ್ನ ಸೋಲುಗಳಿಗೆ ನಾನು ನಿನಗೆ ಸಹಾನುಭೂತಿ ತೋರಿಸುತ್ತೀನಿ ಅಂತ ನೀನು ನಿರೀಕ್ಷಿಸಿದ್ದಿ ಅಂತ ನನಗೆ ಹೇಳಬೇಡ. ನೀನು ದೇವತೆ ಅಲ್ಲದೆ ಕೇವಲ ಮನುಷ್ಯಳಾಗಿದ್ದರೆ, ನಾನು ಯಾಕೆ ನಿನ್ನ ಹತ್ತಿರ ಬರುತ್ತಾ ಇದ್ದೆ?" ಎಂದು ಹೇಗೋ ಏನೋ ಕಷ್ಟಪಟ್ಟು ಹೇಳಿದ.

ಅವಳು ಹೊರಟು ಹೋದಳು.

"ಅವಳ ಪಾಡಿಗೆ ಅವಳನ್ನು ಬಿಡು. ಹೇಳಿದ್ದು ಕೇಳಿಸಿತೇ. ಅವಳ ಪಾಡಿಗೆ ಅವಳನ್ನು ಬಿಡು"

* * *

ಬಿಸಿಲಿನ ಆಘಾತದಿಂದ ಅವನು ಚೇತರಿಸಿಕೊಂಡಾಗ, ಆಗಲೇ ಎಷ್ಟು ದಿನಗಳಾದುವು ಎಂದು ಕಂಡುಕೊಳ್ಳುವ ದಾರಿ ಇರಲಿಲ್ಲ. ಅವನಿಗೆ. ತಾನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದದ್ದರಿಂದಲೋ ಅಥವಾ ಯೋಚನೆ ಮಾಡಲು ಸಾಧ್ಯವಾಗದಂಥ ಸ್ಥಿತಿಯಲ್ಲಿದ್ದದ್ದರಿಂದಲೋ ನೀರು ಕುಡಿಯದೆ ತಾನು ಬದುಕಿರಲು ಸಾಧ್ಯವಾಯಿತೆಂದು ಅವನಿಗೆ ಅರ್ಥವಾಯಿತು. ಬೇಫಿಕೀರ್ ಅವನ ಬಳಿಯೇ ನಿಂತಿತ್ತು. ಕುದುರೆ ಹೇಗೆ

ಬದುಕಿರಲು ಸಾಧ್ಯವಾಯಿತು? ಮರಳು ಗಾಡಿನ ಮಧ್ಯೆ ಅದಕ್ಕೇನಾದರೂ ತಂಪು ಜಾಗವೋ ಅಥವಾ ಒಂದು ಸಣ್ಣ ಗುಂಡಿಯೋ ಸಿಕ್ಕಿತೇನು? ಅದು ಆಯಾಸಗೊಂಡಂತಾಗಲಿ, ಶರೀರದ ಜಲಾಂಶವನ್ನು ಕಳೆದುಕೊಂಡಂತಾಗಲಿ ಕಾಣುತ್ತಿಲ್ಲ. ಮಹಾರಾಜ್‌ಕುಮಾರ್ ಕುದುರೆಯ ರಿಕಾಪನ್ನು ಆಧಾರವಾಗಿ ಹಿಡಿದುಕೊಂಡು ಮೇಲೆದ್ದನು. ಮಂಗಳ್ ಯಾವಾಗಲೂ, ನೀರು ತುಂಬಿದೆ ಎಂದು ಖಾತರಿಪಡಿಸಿಕೊಂಡು ಜೀನಿಗೆ ಕಟ್ಟಿರುತ್ತಿದ್ದ ಚರ್ಮದ ಚೀಲದ ಪಟ್ಟಿಯನ್ನು ಕಳಚಿದನು. ಅವನು ಒಂದು ಸಲಕ್ಕೆ ಕೆಲವೊಂದು ಗುಟುಕುಗಳನ್ನು ಮಾತ್ರ ಸೇವಿಸಲು ಸಾಧ್ಯವಾಯಿತು. ಭಯಂಕರವಾದ ಮರಳಿನ ಬಿರುಗಾಳಿ ಎದ್ದಿತ್ತೆಂಬುದು ಸ್ಪಷ್ಟವೇ ಇತ್ತು. ಈಗ ಮರಳು ಪೂರ್ವದಿಂದ ಪಶ್ಚಿಮಕ್ಕೆಗರಿ ಗಂಟಿಕ್ಕುವ ಬದಲು ಉತ್ತರದಿಂದ ದಕ್ಷಿಣಕ್ಕೆ ಗಂಟಿಕ್ಕಿತ್ತು. ಅವನ ನಿಲುವಂಗಿಯ ಒಂದು ಗುಂಡಿ ಕಾಣೆಯಾಗಿತ್ತು.

ಅದು ಬಹಳ ಸಮಯದ ಹಿಂದೆ. ಬೇಫಿಕೀರ್ ಎಲ್ಲಿಯೂ ಕಾಣಲಿಲ್ಲ. ತನ್ನ ಇನ್ನೊಂದು ಪಾದರಕ್ಷೆಯೂ ಇದೀಗ ಕಾಣದಾಯಿತು. ಸೂರ್ಯ ಬೇಗ ಅಸ್ತಮಿಸಿ, ಚಂದ್ರನ ಶೀತಲ ಬೆಳ್ಳಿ ಬೆಳಕಿನಲ್ಲಿ ಮತ್ತೊಮ್ಮೆ ಮರಗಟ್ಟಿ ಹೋಗುವನು. ಕೊಳಲನ್ನು ತನ್ನ ತುಟಿಗಳ ಮೇಲಿಟ್ಟುಕೊಂಡನು. ಅವನ ತುಟಿಗಳು ಅದೆಷ್ಟು ಮುರುಟಿಕೊಂಡು ಒಣಗಿ ಹೋಗಿದ್ದುವೆಂದರೆ, ಆ ತುಟಿಗಳ ನಡುವೆ ಕುಳಿ ಮಾಡುವುದು ತುಂಬ ಕಷ್ಟವಾಯಿತು. ನಿಧಾನವಾಗಿ ಉಸಿರನ್ನು ಎಳೆದು ಆಚೆಗೆ ಉಸಿರುಬಿಟ್ಟನು. ಮಂದ್ರ ಶ್ರುತಿಯಲ್ಲಿ ಸ್ಫುಟವಾಗಿ 'ಸಾ' ಎಂದು ನುಡಿಸಿದ್ದು, ಅದೆಷ್ಟು ಸ್ಪಷ್ಟವೂ ಆಳವೂ ಭಾವ ದೀಪ್ತವೂ ಆದ ಸ್ವರವಾಗಿತ್ತೆಂದರೆ, ಅದು ಆಕಾಶದ ಮೋಡಗಳನ್ನು ಹಾಗೂ ಮರಳಿನೊಳಗೆ ಮತ್ತು ಹೊರಗೆ ಕ್ರಿಯಾಶೀಲವಾಗಿದ್ದ ಕ್ಷುದ್ರ ಜಂತುಗಳನ್ನೆಲ್ಲ ನಿಶ್ಚಲಗೊಳಿಸುವಂತೆ ತೋರಿತು. 'ಸಾ'ಯಿಂದ ರೆ, ಗ, ಮ, ಪ, ಧ, ನಿ, ಸ ಹೀಗೆ ಆರೋಹಣ ಕ್ರಮದಲ್ಲಿ ಎಂಟು ಸ್ವರಗಳನ್ನು ನುಡಿಸಿ ಮತ್ತೊಮ್ಮೆ ಹಾಗೆಯೇ ಅವರೋಹಣಕ್ರಮದಲ್ಲಿ ಇಳಿಸಿದನು. ಪ್ರತಿಯೊಂದು ಸ್ವರವೂ ಪೂರ್ಣತೆಯಲ್ಲಿ, ಸಮೃದ್ಧಿಯಲ್ಲಿ ಒಂದು ಮುತ್ತು. ಈ ಭೂಮಿಯಲ್ಲಿ ಭಗವಂತನ ಪರಿಪೂರ್ಣತೆಯನ್ನು ಪ್ರತಿಬಿಂಬಿಸುವ ಏಕೈಕ ಕಲೆಯೆಂದರೆ ಸಂಗೀತ. ಅಲ್ಲದೆ ಸಂಗೀತದಲ್ಲಿ ಪ್ರತಿಯೊಂದು ಸ್ವರದಲ್ಲಿ ಅತಿಶ್ರೇಷ್ಠವೂ ಪೂರ್ಣವೂ ಆದ ದೈವತ್ವ ಅಡಗಿರುತ್ತದೆ. ಅದಕ್ಕೆ ಏನನ್ನಾದರೂ ಸೇರಿಸಲಾಗಲಿ ಅದರಿಂದ ಏನನ್ನಾದರೂ ತೆಗೆಯಲಾಗಲಿ ಸಾಧ್ಯವಿಲ್ಲ. ಅದಕ್ಕೆ ಯಾವುದೇ ತರ್ಕ ತಾರ್ಕಣೆಗಳಿಲ್ಲ. ಅದು ತನಗೆ ತಾನೇ ಪರ್ಯಾಪ್ತ. ಚಿಕ್ಕಂದಿನಲ್ಲಿ ಕಲಿತಿದ್ದ ರಾಗಗಳ ನೆನಪು ಅವನ ಕೈ ಬೆರಳುಗಳಲ್ಲಿ ಹರಿಯ ತೊಡಗಿತು. ಅವನ ಕಂಠದ ವ್ಯಾಪ್ತಿ ಸಂಕುಚಿತವೂ ಒರಟೂ ಆಗಿತ್ತು. ಮೂರು ಅಷ್ಟಮಸ್ವರಗಳ ಮೇಲಿನ ಅವನ ಸಂಚಾರವನ್ನಾಗಲಿ, ಗಾಳಿಯ ಮೇಲೆ ಮತ್ತು ಮರುಭೂಮಿಯ ಮರಳ ಮೇಲೆ ಅವನು ತಾನು ಅಲ್ಲಿ ತಂಗಿದ್ದರ ನೆನಪನ್ನು ಉಳಿಸಿಹೋಗುವುದನ್ನಾಗಲಿ ತಡೆಯುವಂಥದು ಈಗ ಯಾವುದೂ ಇಲ್ಲ. ಅವನು ಅಲ್ಲಿ ನುಡಿಸಿದ ಸಂಗೀತ ಮತ್ತು ಅವನ ಸಂಚಾರಗಳೂ, ಅವನ ಜರ್ಝರಿತಗೊಂಡ ಮನಸ್ಸು ಮತ್ತು ದಣಿದ ಆತ್ಮಕ್ಕೆ ನೆಮ್ಮದಿಯನ್ನು ನೀಡಿದ ಅಪ್ಯಾಯನವೂ, ಲೇಪನವೂ ಸಂಜೀವಿನಿಯೂ ಆದುವು.

ನಕ್ಷತ್ರಗಳು ಕಾಣಿಸಿಕೊಂಡಾಗ, ಮಂಗಳನು ಮಹಾರಾಜ್‌ಕುಮಾರನನ್ನು ಎದೆಗಪ್ಪಿಕೊಂಡು ಮತ್ತೆ ಮತ್ತೆ ಚುಂಬಿಸಿದನು. ರಾಜಕುಮಾರನು ಕೂಡ ತನ್ನ ಗೆಳೆಯನನ್ನು ತನ್ನಿಂದ ಹೋಗಗೊಡದಂತೆ ತೋಳುಗಳಲ್ಲಿ ಬಿಗಿದಪ್ಪಿ ಹಿಡಿದನು.

ಅಧ್ಯಾಯ 20

ಬಡಪಾಯಿ ಮಲ್ಲಿಕ್ ಅಯಾಝ್. ಅವಮಾನ ಮತ್ತು ಅನಾದರದಿಂದ ಅವನನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು. ಯುದ್ಧವೆಂಬುದು ರಾಜರು ಮತ್ತು ರಾಜಕುಮಾರರಿಗಿಂತ ಸೇನಾಧಿಕಾರಿಗಳಿಗೆ ಹೆಚ್ಚು ಗಂಡಾಂತರಕಾರಿಯಾದ ಮನರಂಜನೆ. ಯುದ್ಧದಲ್ಲಿ ಸೋತನೆಂಬ ಕಾರಣಕ್ಕೆ ಸಾರ್ವಭೌಮನು ಯಾವತ್ತೂ ಅಧಿಕಾರಚ್ಯುತನಾಗುವುದಿಲ್ಲ. ಸೇನಾಧಿಕಾರಿಯೊಬ್ಬ ಒಂದು ವೇಳೆ ಅದೃಷ್ಟವಂತನಾದರೆ ಕಾವಲು ಠಾಣೆಯ ಮುಖ್ಯಸ್ಥನನ್ನಾಗಿ ಮಾಡಲಾಗುತ್ತದೆ ಅಥವಾ ಅಗತ್ಯ ವಸ್ತುಗಳ ಸರಬರಾಜಿನ ಮೇಲ್ವಿಚಾರಕನನ್ನಾಗಿ ನೇಮಿಸಲಾಗುತ್ತದೆ. ಬಹುಮಟ್ಟಿನ ಸಂದರ್ಭಗಳಲ್ಲಿ ಅವನ ಉನ್ನತ ಪದವಿಯಿಂದ. ಉದ್ಯೋಗದಿಂದ ಅವನನ್ನು ಇಳಿಸಲಾಗುತ್ತದೆ. ಅವನನ್ನು ದೇಶಭ್ರಷ್ಟನನ್ನಾಗಿ ಮಾಡದೆ ಇರಬಹುದು. ಆದರೆ ಅವನು ತಾನು ಯಾರ ಗಮನಕ್ಕೂ ಬಾರದ ಹಾಗಿದ್ದು ತನ್ನ ಪೂರ್ವಜರ ಊರಿಗೆ ಹಿಂತಿರುಗಿ ಬಿಡಬೇಕು. ಅವನು ತನ್ನ ದೇಶವನ್ನು ಬಹಳವಾಗಿ ಪ್ರೀತಿಸುತ್ತಾನೆ. ಆದರೆ ಏಕೈಕ ಆಶಾಕಿರಣವೆಂದರೆ ತನಗಿಂತ ಕಳಪೆ ಸಾಧನೆಮಾಡುವ ತನ್ನ ಉತ್ತರಾಧಿಕಾರಿಯಾಗಿ ತನ್ನ ಸ್ಥಾನಕ್ಕೆ ಬರುವ ವ್ಯಕ್ತಿ, ಆಗ ಕಾಲಾಂತರದಲ್ಲಿ ಪುನಃ ಅವನನ್ನು ಕರೆಸಿಕೊಳ್ಳುವ ಒಂದು ಅವಕಾಶವಿರುತ್ತದೆ. ಅಷ್ಟೇ ಅಲ್ಲ. ಮತ್ತೊಮ್ಮೆ ಸೇನೆಯ ಮುಖಂಡತ್ವ ವಹಿಸಿಬೇಕೆಂದು ಹೇಳಬಹುದು.

ಶತ್ರುವೊಬ್ಬನನ್ನು ಒದ್ದೋಡಿಸುವ ಸರಿಯಾದ ಸಮಯವೆಂದರೆ, ಅವನು ಮಣಿದು ಶರಣಾದಾಗ. ಅವನು ಮುಖ ಮೇಲಾಗಿ ಚಪ್ಪಟೆಯಾಗಿ ಬಿದ್ದಿರುತ್ತಾನೆ ಮತ್ತು ಅದೃಷ್ಟವೂ ಕೈಕೊಟ್ಟಿರುವುದರಿಂದ, ಮತ್ತೆ ಕೆಲವು ಕಾಲ ಮೇಲೇಳಲು ಅಸಮರ್ಥನಾಗಿರುತ್ತಾನೆ. ನಾವು ಮನೆಗೆ ಹೋಗಿ ಬಿಡಬಹುದಿತ್ತು. ಆದರೆ ನನ್ನನ್ನೂ ಮೇವಾಡವನ್ನೂ ನಮ್ಮ ಸ್ಥಾನದಲ್ಲಿರಿಸುವ ಸಲುವಾಗಿ ನಿಯುಕ್ತನಾದ ಸೇನಾಧಿಕಾರಿ ಝಹೀರ್–ಉಲ್–ಮುಲ್ಕ್‌ನನ್ನು ಸ್ವಾಗತಿಸಲು ಯಾರಾದರೂ ಇರಬೇಕಾಗುತ್ತದೆ. ನನ್ನ ಬಳಿ ಇರುವ ಅವನನ್ನು ಕುರಿತ ದಸ್ತಾವೇಜಿನ ಆಧಾರದ ಮೇಲೆ, ಅವನೊಬ್ಬ ಬಹು ಎಚ್ಚರಿಕೆಯುಳ್ಳ ವ್ಯಕ್ತಿ ಎಂದು ನಾನು ತಿಳಿದಿದ್ದೆ. ಮಲ್ಲಿಕ್ ಅಯಾಝ್‌ನೊಂದಿಗೆ ನನಗೆ ನಿಗದಿಯಾದ ಕಾರ್ಯಕ್ರಮವಿದ್ದ ಕಾರಣದಿಂದ ಅವನು ಅತಿಯಾಗಿ ಜಾಗರೂಕನಾಗುವಂತಾಯಿತೋ ಅಥವಾ ಎಚ್ಚರಿಕೆಗೆ ಸಂಬಂಧಿಸಿದಂತೆ ತಪ್ಪು ಮಾಡಲು ಅವನ ದೊರೆಯಿಂದ ಅವನಿಗೆ ಸೂಚನೆ ದೊರೆತಿತ್ತೋ ನಾನು ಹೇಳಲಾರೆ. ಯಾವುದೇ ವಿಜಯದ ವಿನಾಶಕಾರಕ ಪರಿಣಾಮಗಳೆಂದರೆ ನಿರ್ಲಕ್ಷ್ಯ ಮತ್ತು ಅತಿಯಾದ ಆತ್ಮವಿಶ್ವಾಸ ಎಂದು ಪ್ರತಿ ಗಂಟೆಗೊಮ್ಮೆ ನನ್ನನ್ನು ನಾನೆ

ಎಚ್ಚರಿಸಿಕೊಳ್ಳುತ್ತಿದ್ದೆ. ಇದರರ್ಥ ಜ಼ಹೀರ್-ಉಲ್-ಮುಲ್ಕ್ ಮತ್ತು ನಾನು ಇಬ್ಬರೂ ಒಬ್ಬರ ಬಾಲವನ್ನೊಬ್ಬರು ಬೆನ್ನಟ್ಟುತ್ತಿರುವ ಎರಡು ನಾಯಿಗಳಂತೆ. ಆದರೆ ಎಂದೂ ಮುಖಾಮುಖಿಯಾದವರಲ್ಲ.

ನಾನು ಹೋರಾಟ ನಡೆಸಬೇಕೆಂದಿರುವ ಯುದ್ಧದ ರೀತಿ ಹಾಗೂ ಅದರಲ್ಲಿ ನಾನು ಅನುಸರಿಸಬೇಕೆಂದಿರುವ ಯುದ್ಧ ತಂತ್ರಗಳನ್ನು ಕುರಿತಂತೆ ನಾನು ಸೇನಾ ಕಾರ್ಯಾಚಾರಣೆ ಪ್ರಾರಂಭಿಸಿದಾಗ ಇದ್ದುದಕ್ಕಿಂತ ಈಗ ಸ್ಪಷ್ಟ ಪರಿಕಲ್ಪನೆ ಇತ್ತು. ಪೂರ್ತಿಯಾಗಿ ನಮಗೆ ಬೇರೆ ಇನ್ನೇನೂ ಪರ್ಯಾಯ ಮಾರ್ಗವೇ ಇಲ್ಲ ಎಂದು ಆದ ಹೊರತು, ನಾವು ಯುದ್ಧಕ್ಕೆ ತೊಡಗುವುದಿಲ್ಲ ಮತ್ತು ಸಾಧ್ಯವಾದರೆ, ಮುಖಾಮುಖಿ ಯುದ್ಧದಲ್ಲಿ ಎಂದೂ ತೊಡಗುವುದಿಲ್ಲ. ಈ ಮಧ್ಯೆ ನಾವು ಅಭ್ಯಾಸದಲ್ಲಿ ತೊಡಗುತ್ತೇವೆ. ನಾನೇನು ಜನಪ್ರಿಯ ಸೇನಾಧಿಪತಿಯಲ್ಲ: ಆದರೆ ಜನ ನನ್ನಲ್ಲಿ ವಿಶ್ವಾಸವಿಡತೊಡಗಿದ್ದಾರೆ. ಯುದ್ಧದಲ್ಲಿ ಸೋತು ತಮ್ಮ ಜೀವ ಉಳಿಸಿಕೊಳ್ಳಲು ಓಡಿ ಹೋಗುತ್ತಿದ್ದಾರೇನೋ ಎನ್ನುವಂತೆ ಅವರ ದಿನನಿತ್ಯದ ವ್ಯಾಯಾಮ ಮತ್ತು ತರಬೇತಿ ವೇಗದ ಕುದುರೆ ಸವಾರಿ ಹಾಗೂ ಪಲಾಯನ ಮಾಡುತ್ತಿರುವಾಗ ಆಕ್ರಮಣ ಮಾಡುವುದಾಗಿರುವುದಾದರೂ ಏಕೆ ಎಂದು ಅವರು ತಬ್ಬಿಬ್ಬಾಗಿದ್ದಾರೆ. ನಾವು ಕಾರ್ಯಾಚರಣೆಯನ್ನು ದಿನವೂ ಗೊತ್ತು ಮಾಡುತ್ತೇವೆ. ಅದರ ಹಿಂದಿರುವ ಆಲೋಚನೆ ಏನೆಂದರೆ ವ್ಯೂಹ ರಚನೆಯ ಸಲುವಾಗಿ ಅವರನ್ನು ಅತ್ಯಂತ ವೇಗದ ಕುದುರೆ ಸವಾರಿಗೆ ಅಣಿಗೊಳಿಸುವುದು. ನಮ್ಮ ತರಬೇತಿಯ ಸಮಾವೇಶದಲ್ಲಿ ಜನಪ್ರತೀತಿಯ ಪ್ರಮಾಣ ಯಾವಾಗಲೂ ಶತ್ರುವಿನ ಪರವಾಗಿಯೇ ಇರುತ್ತದೆ. ಐದು ನೂರು ಮೇವಾಡ ಸೈನಿಕರ ಒಂದು ಗುಂಪು ಒಂದು ಸಾವಿರದೈನೂರರಿಂದ ಎರಡು ಸಾವಿರ ಶತ್ರು ಪಡೆಗಳೊಂದಿಗೆ ಸೆಣಸಬೇಕಾಗುತ್ತದೆ. ಮುಂದಿನ ಹೆಜ್ಜೆ ಎಂದರೆ, ರಾತ್ರಿ ಹೊತ್ತಿನಲ್ಲಿ ವ್ಯಾಯಾಮಗಳನ್ನು ಏರ್ಪಡಿಸುವುದು. ರಾವ್ ವೀರಮ್‌ದೇವ್, ಷಫೀಖಾನ್ ಮತ್ತು ಉಳಿದ ಮುಖಂಡರುಗಳು ನನ್ನ ವಿಲಕ್ಷಣ ರೀತಿಗಳಿಗೆ ಹೊಂದಿಕೊಳ್ಳುತ್ತಿದ್ದಾರೆ. ಇಷ್ಟಾದರೂ ಅವರಲ್ಲಿ ಒಳಗೊಳಗೇ ತೀವ್ರ ಅಸಮಾಧಾನ ಹೊಗೆಯಾಡುತ್ತಿರುವುದನ್ನು ನಾನು ಪತ್ತೆ ಹಚ್ಚಬಲ್ಲೆ. ಅದಕ್ಕೆ ಕಾರಣ ನಾನು ಯುದ್ಧದಲ್ಲಿ ಧೈರ್ಯ ಮತ್ತು ಶೌರ್ಯಗಳನ್ನು ಕಳೆದುಹಾಕಿದ್ದೇನೆಂದು.

ಗುಜರಾತ್‌ನೊಂದಿಗೆ ನಾವು ಇನ್ನೊಂದು ಯುದ್ಧಕ್ಕೆ ಸಿದ್ಧರಾಗುವ ಸಂದರ್ಭದಲ್ಲಿ ನಾನು ಮನೆಯೊಂದಿಗೆ ನಡೆಸಬೇಕಾಗಿರುವ ಯುದ್ಧದಲ್ಲಿ ಹೋರಾಡಲು ನಾನು ಅದೆಷ್ಟು ಹೀನಾಯವಾದ ರೀತಿಯಲ್ಲಿ ಸಜ್ಜುಗೊಂಡಿದ್ದೇನೆ ಎಂದು ಯೋಚಿಸತೊಡಗುತ್ತೇನೆ. ನನ್ನ ತಮ್ಮ ವಿಕ್ರಮಾದಿತ್ಯನು ಮೋಸದ ಕೈವಾಡದಂಥ, ವಿಚಾರಣೆಯೂ ಇಲ್ಲದೆ ಸೆರೆಯಿಂದ ಬಿಡುಗಡೆ ಹೊಂದಿದ್ದಾನೆ. ನಮ್ಮ ತಂದೆಯವರಾದರೋ ಅಶೋಕ ವೃಕ್ಷದಷ್ಟೇ ನೇರವಾದ ಆಲೋಚನೆಗಳಿಂದ ಕೂಡಿರುವವರು ಹಾಗೂ ತನ್ನ ವಂದಿಮಾಗಧರ ಹುಲುಸಾಗಿಯೂ, ತೊಡಕಾಗಿಯೂ ಇರುವಂಥ ಕಾರಸ್ಥಾನಗಳ ಕುರುಚಲು ಕಾಡನ್ನು ಭೇದಿಸುವ ಸಾಮರ್ಥ್ಯವುಳ್ಳವರು. ಇಂಥ ನಮ್ಮ ತಂದೆಯವರು ಸಿಂಹಾಸನಕ್ಕಿರುವ ಅಪಾಯದ ಸೂಚನೆಯನ್ನೇಕೆ ಕಂಡುಕೊಳ್ಳಲಾಗುತ್ತಿಲ್ಲ ಅಥವಾ ಕಾಣುತ್ತಿಲ್ಲ ಹಾಗೂ ವಿಕ್ರಮಾದಿತ್ಯನಿಗೆ ಯಾವುದೇ ಶಿಕ್ಷೆ ನೀಡದೆ ಹಾಗೆಯೇ ನಿರಾಳವಾಗಿ ಬಿಟ್ಟು ಬಿಡುವ ಮೂಲಕ ನನ್ನ ಸೋದರರಿಗೂ, ಸಂಕೋಚ ಸ್ವಭಾವದ ನನಗೂ ಏಕೆ ಇಂಥ ಪೂರ್ವ ನಿದರ್ಶನವನ್ನು ಯೋಜಿಸುತ್ತಿದ್ದಾರೆಂದು ನನಗೆ ನಾನೇ ಕೇಳಿಕೊಳ್ಳುತ್ತೇನೆ.

ಹೆಣ್ಣಿನ ಬಗೆಗಿನ ಪ್ರೀತಿ ಎಂಬುದರ ಅರ್ಥ ಇದೇನೆ? ಈ ಬಗ್ಗೆ ರಾಣಿ ಕರ್ಮವತಿಯನ್ನು ಆಕ್ಷೇಪಿಸುವಂತಿಲ್ಲ. ಅದು ಅವಳ ಮೂರ್ಖ, ಭಾರ್ಯಾವ್ಯಾಮೋಹದಿಂದ ಕೂಡಿದ

ಗಂಡನನ್ನು ಆಕ್ಷೇಪಿಸಬೇಕು. ಆ ಮನುಷ್ಯ ತನ್ನ ಹೆಂಡತಿ ಮೇಲಕ್ಕೆ ಹಾರಿ ಎಂದಾಗ ಹಾರುವುದಷ್ಟೇ ಅಲ್ಲ, ಅವಳ ಅನುಗ್ರಹ ಸಂಪಾದನೆಗಾಗಿ ಹಲ್ಲುಗಿಂಜತ್ತ ಎಷ್ಟು ಎತ್ತರಕ್ಕೆ ಹಾರಬೇಕು ಎಂದು ಕೇಳುತ್ತಾನೆ. ಮಿತಿಮೀರಿ ಕಾನೂನು ಉಲ್ಲಂಘಿಸಿ ಅಪರಾಧ ಮಾಡಿದವನನ್ನೇ ಕಾನೂನು ಪಾಲಕನನ್ನಾಗಿ ನೇಮಿಸುವುದಕ್ಕಿಂತ ದೊಡ್ಡ ಅಣಕವನ್ನು ಊಹಿಸಲು ಸಾಧ್ಯವೆ? ಚಿತ್ತೂರಿನ ರಕ್ಷಣೆ ಮತ್ತು ಕಾನೂನು ಪಾಲನೆಗಳೆರಡೂ ವಿಕ್ರಮಾದಿತ್ಯನ ಕೈಯಲ್ಲಿವೆ. ಈಗ ಆ ಜಗತ್ತು ಹೇಗಿದೆ ಎಂದರೆ ಹವಾಲ್ದಾರ್, ಉಪಮುಖ್ಯ ಕಾವಲು (ಸಬ್‌ಇನ್ಸ್‌ಪೆಕ್ಟರ್) ಅಧಿಕಾರಿ ಮತ್ತು ಮುಖ್ಯಾಧಿಕಾರಿ ಹಾಗೂ ಪರವಾನಗಿ ನೀಡುವ ಗುಮಾಸ್ತ ಪ್ರತಿಯೊಬ್ಬರಿಗೂ ಅವರ ಕರ್ತವ್ಯ ಅವರು ಮಾಡಲು, ಮುಂಚೆ ಲಂಚ ಕೊಡಬೇಕಾಗುತ್ತದೆ.

ಈಗ ನನ್ನ ಮನಸ್ಸಿನಲ್ಲಿ ಎಲ್ಲಕ್ಕಿಂತ ಮೇಲಿರುವ ಪ್ರಶ್ನೆಗೆ ಬರುತ್ತೇನೆ. ನನ್ನ ವಿಷಯ ಏನು? ನಾನು ಹೇಳಿದ್ದನ್ನೆಲ್ಲ ಕೇಳಿದ್ದೀರಿ. ಸಕಲ ತಾರೆಗಳೆ ಸೂರ್ಯ ಚಂದ್ರರೆ, ಮರಗಳ ಮೇಲಿನ ಎಲೆಗಳೆ, ದೂರ ಸಾಗರದಲ್ಲಿನ ಅವಿಶ್ರಾಂತ ಅಲೆಗಳೆ, ಮರಳೆ, ಹಕ್ಕಿ ಪಕ್ಷಿಗಳೆ, ಪ್ರಾಣಿಗಳೆ, ಭೂಮಂಡಲದ ಎಲ್ಲ ಕ್ರಿಮಿ ಕೀಟಗಳೆ, ನೀವು ಹೇಳಿ, ಚಿತ್ತೂರಿನ ಖಚಿತ ಉತ್ತರಾಧಿಕಾರಿಯೂ, ಮಹಾರಾಜ ರಾಣಾರಿಗೆ ನಂತರದ ವ್ಯಕ್ತಿಯೂ, ಭಾವೀ ಮಹಾರಾಜನೂ ಆದ ನನ್ನ ಅವಕಾಶಗಳು ಯಃಕಶ್ಚಿತ್ ವ್ಯಕ್ತಿಯಿಂದಾಗಿ ಮಸುಕಾಗುತ್ತಿವೆಯಲ್ಲ ನನ್ನ ಗತಿ ಏನು? ಈಗ ಚಿತ್ತೂರಿನಲ್ಲಿ ನನ್ನ ಪರವಾಗಿ ವಾದಿಸುತ್ತಿರುವವರಾಗಲಿ, ನನ್ನ ಗುರಿಯನ್ನೀಡೇರಿಸಿಕೊಳ್ಳಲು ತೀವ್ರವಾಗಿ ಪ್ರೋತ್ಸಾಹ ಕೊಡುವಂಥವರಾಗಲಿ ಯಾರೂ ಇಲ್ಲ. ಇನ್ನು ನನ್ನ ತಾಯಿಯವರಿದ್ದಾರೆ, ಮಹಾರಾಣಿಯವರು, ಒಳ್ಳೆಯ ಮನೋಭಾವದ ವ್ಯಕ್ತಿ. ನಮ್ಮ ತಂದೆಗೆ ಅವರ ಮುದ್ದಿನ ಪ್ರಾಣಿಗಳು, ನಾಯಿಗಳು ಎಷ್ಟರ ಮಟ್ಟಿಗೆ ಪ್ರಿಯವೋ, ನಮ್ಮ ತಾಯಿಯವರೂ ಅಷ್ಟೇ ಪ್ರಿಯ. ಆಕೆಗೆ ತನ್ನ ಹಿರಿಯ ಮಗನಿಗೆ ಸಂಬಂಧಪಟ್ಟ ವಿಷಯವನ್ನು ತನ್ನ ಪತಿ ಮಹಾರಾಜರ ಹತ್ತಿರ ಹೇಗೆ ಪ್ರಸ್ತಾಪಿಸುವುದೆಂದು ತಿಳಿದಿಲ್ಲ. ಒಂದು ವೇಳೆ ಆಕೆ ಪ್ರಸ್ತಾಪಿಸಿದ್ದೇ ಆದರೆ, ತಂದೆಯವರು ಅವಳ ಕಡೆ ಛೇಡಿಸುವ ಹಾಗೆ ನೋಡುತ್ತ ಆಕೆಗೆ, ಜಾಗರೂಕವಾಗಿರಬೇಕೆಂದು ಹೇಳುತ್ತಾರೆ. ಕಾರಣ ಆಕೆ ಅವರಿಗಾಗಿ ಹೆಣೆಯುತ್ತಿರುವ ಒಂಬೈನೂರಾ ಎಪ್ಪತ್ತೇಳನೆಯ ಉಣ್ಣೆಯ ಕವಚದಲ್ಲಿ ಒಂದು ಹೆಣಿಗೆಯನ್ನು ಬಿಟ್ಟು ಬಿಟ್ಟಿದ್ದಾಳೆ. ಇನ್ನು ನನ್ನ ಹೆಂಡತಿ. ಅವಳು ತಂದೆಯವರ ಅಚ್ಚುಮೆಚ್ಚಿನ ಸೊಸೆ. ರಾಣಿ ಕರ್ಮವತಿಯ ವಿರುದ್ಧವಾಗಿ, ತನ್ನ ನಿಲುವಿಗೆ ಗಟ್ಟಿಯಾಗಿ ಅಂಟಿಕೊಂಡು, ತಂದೆಯವರು ತಮ್ಮ ಅಚ್ಚು ಮೆಚ್ಚಿನ ರಾಣಿಯ ಅಭಿಪ್ರಾಯಕ್ಕೆ ವಿರುದ್ಧವಾಗಿರುವ ಒಂದು ಅವಿಚಾರವನ್ನು ಅವರು ಪರಿಗಣಿಸುವಂತೆ ಮಾಡುವ ಒಬ್ಬ ವ್ಯಕ್ತಿ ಯಾರಾದರೂ ಇದ್ದರೆ ಅದು ನನ್ನ ಹೆಂಡತಿ. ಆಕೆ ರಾವ್ ವೀರಮ್ ದೇವ್ ಅವರ ಸೋದರ ಸೊಸೆ. ಅದೊಂದು ಅಂಶವೇ ಏನು ಕಡಿಮೆ ಮಹತ್ವದ ಅಂಶವಲ್ಲ. ಅವಳು ಅತ್ಯಂತ ಶಾಂತ ಮನಸ್ಕಳು. ಗೌರವ, ಬುದ್ಧಿವಂತಿಕೆ ಮತ್ತು ಸೌಂದರ್ಯ ಹೊಂದಿದ್ದ ಕಾರಣಕ್ಕೆ ಅವಳು ಚಿತ್ತೂರಿಗೆ ಮೊದಲು ಬಂದಾಗಿನಿಂದಲೂ, ತಂದೆಯವರ ಹೃದಯದಲ್ಲಿ ಅವಳಿಗೊಂದು ಗೌರವದ ಸ್ಥಾನವಿತ್ತು. ಆದರೆ ತಂದೆಯವರ ವಲಯದಲ್ಲೇ ಇದ್ದುಕೊಂಡು, ಅವರ ಬೆಂಬಲವನ್ನು ಗಳಿಸಲು ಬಹುವಾಗಿ ಶ್ರಮಿಸಿ, ಅವರ ಅನುಗ್ರಹ ಸಂಪಾದಿಸಲು ಉಪಾಯದಿಂದ ಅವರ ಅಂತರಂಗವಲಯಕ್ಕೆ ನುಸುಳಿಕೊಳ್ಳುವಂಥದು ಆಕೆಗೆ ಹೊಳೆಯುವುದಿಲ್ಲ. ಆದರೆ ದುರದೃಷ್ಟವಶಾತ್ ಮತ್ತೆ ತಂದೆಯವರ ವಿಶ್ವಾಸಕ್ಕೆ ಪಾತ್ರಳಾಗಲು ಈಗ ಆಕೆಯೇ ಪವಾಡ ಸದೃಶವಾದಂಥದ್ದೇನನ್ನಾದರೂ ಮಾಡಬೇಕಿದೆ. ಹಾಗೆ ಹೇಳಬೇಕೆಂದರೆ ಅವಳ ಗ್ರಹ

ಕೇವಲ ತೂಗು ಗುಂಡಾಗಿರುವದಷ್ಟೇ ಅಲ್ಲ, ಅದರೊಂದಿಗೆ ನನ್ನನ್ನೂ ಪಾತಾಳಕ್ಕೆಳೆದಿದೆ ಎಂದು ನನ್ನ ಊಹೆ. ನಮ್ಮ ಸಾಮ್ರಾಜ್ಯದ ಬೇರಾವ ರಾಜಕುಮಾರಿಯೂ ಅವಳ ಹಾಗೆ ಮೇವಾಡದ ಗೌರವವನ್ನು ಹಾಳುಮಾಡಿಲ್ಲ, ಅಪಕೀರ್ತಿಯನ್ನು ತಂದಿಲ್ಲ.

ಆದರೆ ಇನ್ನೊಂದು ಅಂಶವಿದೆ. ಅದು ಅವಳಿಗೆ ಅತ್ಯಂತ ವಿರುದ್ಧವಾಗಿ ನಿಲ್ಲುವ ಅಂಶ. ವಂಶದ ಉತ್ತರಾಧಿಕಾರವನ್ನು ಖಚಿತಪಡಿಸುವಂಥ ಪುತ್ರನನ್ನು ಆಕೆ ಹಡೆದು ಕೊಟ್ಟಿಲ್ಲವೆಂಬುದು. ಅದಕ್ಕಿಂತ ಹೆಚ್ಚಿನ ದುಃಖದ ಸಂಗತಿ ಎಂದರೆ, ಅಸಲು ಮಗುವನ್ನು ಹೆರಬಲ್ಲ ಸಾಮರ್ಥ್ಯವುಳ್ಳವಳೆಂದು ಸಿದ್ಧಮಾಡಿಯೂ ಇಲ್ಲ.

ಚಿತ್ತೂರಿನಲ್ಲಿ ರಾಜಮಾತೆಯೊಬ್ಬರನ್ನು ಹೊರತುಪಡಿಸಿ ನನ್ನ ಪರವಾಗಿ ವಾದಿಸುವವರು ಇನ್ನಾರೂ ಇಲ್ಲ. ಆಕೆ ನನ್ನ ಪರವಾಗಿ ಮಾತನಾಡುತ್ತಾಳೆಂದು ನನಗೆ ವಿಶ್ವಾಸವಿದೆ. ಆದರೆ ಮಕ್ಕಳಿಲ್ಲದಿರುವ ನನ್ನ ಸ್ಥಿತಿ ಮತ್ತು ನನ್ನ ತಮ್ಮಂದಿರ ಹುಲುಸಾದ ಸಂತಾನ ಮತ್ತು ಅವರ ಬಹುಪತ್ನಿಯರಿಗೆ ಹೋಲಿಸಿದಾಗ, ನಾನು ತಕ್ಕ ವೀರ್ಯವಂತ ಗಂಡೆ ಎಂದು ಆಕೆ ವಿಸ್ಮಯ ಪಡುವಂತಾಗಿದೆ. ನನ್ನ ಪುರುಷತ್ವವನ್ನು ಶಂಕಿಸಲು ಆಕೆಗೆ ಒಳ್ಳೆಯ ಕಾರಣವೇ ಇದೆ. ಏನೇ ಆದರೂ ನನ್ನ ಹೆಂಡತಿಯನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ನಾನು ಅಸಮರ್ಥ ಎಂದು ನಾನು ಋಜುವಾತು ಪಡಿಸಿದ್ದೇನೆ. ಅವಳು ತನ್ನ ವಿರೋಧಗಳನ್ನೆಲ್ಲಾ ಪಕ್ಕಕ್ಕಿಟ್ಟು ನನ್ನ ಹಕ್ಕುಗಳ ಬಗ್ಗೆ ತಂದೆಯವರ ಹತ್ತಿರ ಬಲವಾಗಿ ಮತ್ತು ಶಕ್ತಿಯುತವಾಗಿ ಪ್ರತಿಪಾದಿಸಿದರೂ, ಅದು ನನ್ನನ್ನು ಹೆಚ್ಚು ದೂರ ಕೊಂಡೊಯ್ಯಲಾರದು. ತಂದೆಯವರಿಗೆ ಅವಳ ಬಗ್ಗೆ ಗೌರವವಿದೆ. ಆದರೆ ವಿಕ್ರಮಾದಿತ್ಯನ ತಾಯಿ ರಾಣಿ ಕರ್ಮವತಿಗೆ ಆಕೆ ಸಮಜೋಡಿಯಲ್ಲ.

* * *

ಗುಜರಾತಿನೊಂದಿಗಿನ ನಮ್ಮ ಯುದ್ಧವೆಂಬುದು ಒಂದು ವರ. ನಾನು ಅದರ ಬಗ್ಗೆಯೇ ಯೋಚಿಸುತ್ತ ಕೂರಬಹುದು. ಆದರೆ ಕಡೇ ಪಕ್ಷ ನಾನು ಹದಿನಾರು ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆ. ಗೆರಿಲ್ಲಾ ಯುದ್ಧವನ್ನು ನಾನು ಹೊಸದಾಗಿ ಕಂಡು ಹಿಡಿಯುತ್ತಿಲ್ಲ. ಆದರೆ ಇದ್ದಕ್ಕಿದ್ದಂತೆ ಆಕ್ರಮಣ ಮಾಡುವುದು, ಸೈನ್ಯದ ಎಡಬಲ ಪಾರ್ಶ್ವಗಳ ಮೇಲೆ ಬರ್ಬರ ಆಕ್ರಮಣ, ಸಂಪರ್ಕ ಕಳೆದುಕೊಂಡ ಸೇನಾ ತುಕಡಿಗಳನ್ನು ಬೆದರಿಸಿ ಮಣಿಸುವುದು, ಮುಂಭಾಗದ ಸೈನ್ಯ ಹಿಮ್ಮೆಟ್ಟುವಾಗ, ಹಿಂಗಾಪು ಪಡೆಯ ಮಿಂಚಿನ ಕದನ ಮತ್ತು ಕೂಡಲೇ ಮಿಂಚಿನಂತೆ ಮಾಯವಾಗುವುದು ಇವುಗಳನ್ನೆಲ್ಲ ಹೊಸದಾಗಿ ಕಂಡು ಹಿಡಿದ ಮೊದಲನೇ ರಜಪೂತ ನಾನೇ ಎಂಬುದು ಸುನಿಶ್ಚಿತ. ಇದರ ಹಿಂದಿರುವ ಉದ್ದೇಶವೆಂದರೆ ಶತ್ರುವಿನ ಶರೀರವನ್ನು ಕೊಚ್ಚುತ್ತಲೇ ಶತ್ರುವಿನೊಂದಿಗೆ ಮುಖಾಮುಖಿ ಘರ್ಷಣೆಯನ್ನು ತಪ್ಪಿಸುವುದು, ಶತ್ರುವಿನ ಸೇನೆಯ ಸಾಮಾನ್ಯ ಯೋಧರಲ್ಲಿ, ಗೊಂದಲ ಮತ್ತು ಗಲಿಬಿಲಿಯನ್ನು ಹುಟ್ಟುಹಾಕುವುದು, ಒತ್ತಡವನ್ನು ಕಿಂಚಿತ್ತೂ ಸಡಿಲಿಸದೆ ಶತ್ರುವನ್ನು ಉದ್ವೇಗ ಮತ್ತು ಆತಂಕಕ್ಕೊಳಗಾಗುವಂತೆ ಮಾಡುವುದು. ಸಂಕ್ಷೇಪವಾಗಿ ಹೇಳಬೇಕೆಂದರೆ, ತನ್ನ ಪತ್ತೆ ಕೊಡದ ಹಾಗೆ ಕ್ರಮಕೈಗೊಳ್ಳುತ್ತಲೇ ಶತ್ರುದೈಹಿಕವಾಗಿ ಮತ್ತು ಮಾನಸಿಕವಾಗಿ ಆಘಾತಗೊಳ್ಳುವವರೆಗೂ ಕಾರ್ಯ ತಂತ್ರದ ಮೂಲಕ ಸೈನ್ಯದ ಮೂಲಕ ಮನೋ ವ್ಯಾಪಾರದ ಮೂಲಕ ಅವನೊಂದಿಗೆ ಕಾರ್ಯಾಚರಣೆ ನಡೆಸುವುದು.

ರಾಜಾ ಪುರಜೀ ಕೀಕಾ ನನ್ನ ಮಿತ್ರ ಮಾರ್ಗದರ್ಶಕ ಹಾಗೂ ಯೋಜನೆಯ ಮುಖ್ಯಸ್ಥ. ಅವರು ಹಾಗೂ ಅವರ ಕಡೆಯವರು ಅದನ್ನು ಬೇರೆ ಹೆಸರಿನಿಂದ ಕರೆಯಬಹುದು. ಆದರೆ ಗುಡ್ಡಗಾಡಿನ ಜನರಾಗಿ ಅವರು ಗೆರಿಲ್ಲಾ ಯುದ್ಧ ಕೌಶಲದಲ್ಲಿ ನಿಪುಣರು.

ಪೂರಜೀ ಕೀಕಾ ಮತ್ತು ನಾನು ಸೇರಿ ಇಪ್ಪತ್ತೈದು ಸಾವಿರ ಜನಸಂಖ್ಯೆಯ ನಮ್ಮ ಸೈನ್ಯವನ್ನು (ಬಾಕಿ ಸೇನೆಯನ್ನು ಊರಿಗೆ ಕಳಿಸಲಾಗಿದೆ) ಎರಡೂವರೆ ಸಾವಿರಕ್ಕೊಂದರಂತೆ ಹತ್ತು ಘಟಕಗಳಾಗಿ ವಿಭಾಗಿಸಿದ್ದೇವೆ. ಪ್ರತಿಯೊಂದು ಶಿಬಿರವೂ ತನ್ನದೇ ಆದ ಹರಿಕಾರ ಸೇವೆ, ಅಶ್ವಶಾಲೆಗಳು ಮತ್ತಿತರೆ ಅನುಕೂಲಗಳಿಂದ ಕೂಡಿಕೊಂಡು ಸ್ವಯಂಪೂರ್ಣವಾಗಿದೆ. ಯಾವುದೇ ಎರಡು ಶಿಬಿರಗಳ ನಡುವಿನ ದೂರ ಎರಡು ಅಥವಾ ಮೂರು ಮೈಲಿ. ತುರ್ತು ಸಂದರ್ಭವೊದಗಿದರೆ ಅಥವಾ ಇದ್ದಕ್ಕಿದ್ದಂತೆ ಶತ್ರು ಆಕ್ರಮಣವಾಯಿತೆಂದರೆ, ರವಾನೆ ರಾವುತನೊಬ್ಬ. ಹತ್ತು ನಿಮಿಷದಲ್ಲಿ ಆ ಎಲ್ಲ ಶಿಬಿರಗಳ ದೂರವನ್ನು ಹೊರಭಾಗದಲ್ಲಿ ಕ್ರಮಿಸಬಲ್ಲನು. ನಾವು ಪದೇ ಪದೇ ನಮ್ಮ ನೆಲೆಗಳನ್ನು ಬದಲಾಯಿಸುತ್ತಿರುತ್ತೇವೆ. ಯಾವುದೇ ಒಂದು ಜಾಗದಲ್ಲಿ ಹದಿನೈದು ದಿನಗಳಿಗಿಂತ ಹೆಚ್ಚು ದಿನ ಇರುತ್ತಿರಲಿಲ್ಲ. ನಿಶ್ಚಯವಾಗಿಯೂ, ಇದು ಜಹೀರ್-ಉಲ್-ಮುಲ್ಕ್ ನಮ್ಮ ಮೇಲೆ ಆಕ್ರಮಣ ಮಾಡುವುದನ್ನಂತೂ ತಡೆಯಲಾರದು. ಆದರೆ ಆಕ್ರಮಣದ ಅಪಾಯದ ಸಂಭಾವ್ಯತೆಯು ಹತ್ತರಲ್ಲಿ ಒಂದು ಭಾಗದಷ್ಟು ಕಡಿಮೆಯಾಗಿದೆ. ನಮ್ಮದು ಕೇವಲ ತೀವ್ರ ಸಂಚಾರಿ ಸೇನೆಯಲ್ಲ, ಸದ್ಯಕ್ಕೆ ನಾವು ಹತ್ತು ಸೇನಾ ತುಕಡಿಗಳು ಒಮ್ಮನಸ್ಸಿನಿಂದ ಕಾರ್ಯ ನಿರ್ವಹಿಸುತ್ತಿರುವಂಥವರು.

ತೇಜ್, ಷಫೀಖಾನ್ ಮತ್ತು ನಾನು ಈ ಮೂರು ಜನಕ್ಕಿಂತ ಉತ್ತಮ ವಿದ್ಯಾರ್ಥಿಗಳನ್ನು ರಾಜಾ ಪೂರಜೀ ಕೀಕಾ ಅಪೇಕ್ಷಿಸಿರಲಾರ. ನಾವು ಕಲಿಯಲು ತೀವ್ರ ಕುತೂಹಲವುಳ್ಳವರಾಗಿದ್ದೆವು. ಅಲ್ಲದೆ ಆಗ ಹೇಳಿಕೊಟ್ಟದ್ದನ್ನು ಹೆಚ್ಚು ಕಡಿಮೆ ಕೂಡಲೇ ಪ್ರಯೋಗಿಸಿ ಮತ್ತು ಪರೀಕ್ಷಿಸಿ ನೋಡುತ್ತಿದ್ದೆವು. ಗೆರಿಲ್ಲಾ ಯುದ್ಧ ತಂತ್ರದ ಸಾರಸತ್ವವೆಂದರೆ ವೇಗ ಮತ್ತು ಸುತ್ತು ಬಳಸಿನ ಹಾದಿ ಎಂಬುದು ಸಾಮಾನ್ಯ ನಂಬಿಕೆ. ಹಾಗಲ್ಲವೇ ಅಲ್ಲ ಎಂದು ಪುರಜೀ ಕೀಕಾ ನಮಗೆ ಹೇಳಿದರು. ವೇಗ ಮತ್ತು ಗಮನವನ್ನು ಬೇರೆ ಕಡೆಗೆ ತಿರುಗಿಸುವ ಸಾಧನ ತಂತ್ರಗಳಂತೂ ನಿಶ್ಚಿತವಾಗಿಯೂ ಗೆರಿಲ್ಲಾ ಯುದ್ಧ ತಂತ್ರದ ಸಾರಸತ್ವ ಅಂಶಗಳು. ಆದರೆ ಈ ರೀತಿಯ ಕದನಕ್ಕೆ ಅಗತ್ಯವಾದ ಬೀಗದ ಕೈ ಎಂದರೆ, ನಿಮ್ಮ ಮನಃಸ್ಥಿತಿ ಮತ್ತು ಓಡಲು ಒಪ್ಪಿಗೆ. "ಶತ್ರುವಿನಿಂದ ತಪ್ಪಿಸಿಕೊಳ್ಳಲು ನೀವು ಬಹಳ ದೂರ ದೂರಕ್ಕೆ ಓಡಬೇಕಾಗುತ್ತದೆ ಮತ್ತು ನೀವು ಆಯ್ಕೆ ಮಾಡಿದ ಜಾಗದಲ್ಲಿ ಮತ್ತು ವೇಳೆಯಲ್ಲಿ ನೀವು ಶತ್ರುವಿಗೆ ಭೀಕರವಾದ ಘಾತ ಉಂಟುಮಾಡಿ, ಕೂಡಲೇ ಬಿಸಿಲಿನಲ್ಲಿ ಮಂಜು ಇಲ್ಲವಾಗುವಂತೆ ಅಲ್ಲಿಂದ ಮಾಯವಾಗಿ ಬಿಡಬೇಕು. ಆದರೆ ಸಮಸ್ಯೆ ಯಾವಾಗಲೂ ಕಾಣಿಸಿಕೊಳ್ಳುತ್ತದೆ. ಕಾರಣ ಆ ಎಲ್ಲ ತೊಂದರೆಗಳು ಮತ್ತು ಮಾನಸಿಕ ಒತ್ತಡದ ನಂತರ, ನೀವು ಮತ್ತು ನಿಮ್ಮ ತಂಡ ನಿಗದಿತ ಸ್ಥಳದಲ್ಲಿ, ನಿಗದಿತ ಕಾಲಕ್ಕೆ ವಿಧಿಯನ್ನು ಭೇಟಿಯಾಗಬೇಕಾದ ಹೊಣೆಗೆ ನೀವು ಬಾಧ್ಯರು ಎಂದು ನೀವು ಭಾವಿಸುತ್ತೀರಿ. ಅಲ್ಲದೆ ಏನೋ ಒಂದು ತಪ್ಪಾಗಿದೆ ಎಂದು ನಿಮ್ಮ ಕರುಳಿಗೆ ಅರಿವಾದರೂ ನೀವು ಆಕ್ರಮಣ ಮಾಡುತ್ತೀರಿ. ನಿಮಗೆ ವಿರುದ್ಧವಾಗಿ ಪ್ರತಿಭಟನೆ ಶುರುವಾಗಿದೆ ಎಂಬ ಕಿಂಚಿತ್ ಅನುಮಾನ ಬಂದಿತು ಅಂದರೆ, ನೀವು ನಿಮ್ಮ ಕಾಲುಗಳ ಮಧ್ಯೆ ಬಾಲವನ್ನು ಅದುಮಿಕೊಂಡು ಓಡಿಹೋಗುವ ಧೈರ್ಯ ತೋರಬೇಕು"

ನಮ್ಮ ಯುದ್ಧ ತಂತ್ರಗಳಿಂದ ಜಹೀರ್-ಉಲ್-ಮುಲ್ಕ್ ತೀವ್ರ ಹತಾಶಸ್ಥಿತಿಗೆ ತಲುಪಿದನು. ಈಗ ಅವನು ಫಲಿತಾಂಶವನ್ನು ತೋರಿಸಬೇಕಿತ್ತು. ನಿರ್ಣಾಯಕ ಯುದ್ಧದಲ್ಲಿ ನಮ್ಮೊಂದಿಗೆ ಸೆಣಸಲೇಬೇಕಿತ್ತು. ಅವನು ನಮ್ಮನ್ನು ಬೆನ್ನಟ್ಟಿ ಬಂದದ್ದು, ನಾವು ಆ ಜಾಗದಿಂದ ಹೊರಟು, ಅವನ ಶಿಬಿರದ ಕಡೆ ಹೋಗುವ ಅಥವಾ ಅವನ ಸೇನಾಪಡೆಯ ಕಟ್ಟಕಡೆಯ

ದಳಗಳ ಮೇಲೆ ಆಕ್ರಮಣ ಮಾಡುವ ಸಂಭವವಿದೆಯೆಂಬುದನ್ನು ತಿಳಿಯುವುದಷ್ಟೇ ಆಯಿತು. ನಾವು ಎಲ್ಲ ಕಡೆ ಇದ್ದೆವು. ಆದರೆ ನಮ್ಮ ನೆಲೆಯನ್ನು ಎಂದಿಗೂ ಕಂಡು ಹಿಡಿಯಲಾಗುತ್ತಿರಲಿಲ್ಲ.

ನಮ್ಮ ಸೈನಿಕರು ನಾನು ಮತ್ತು ಪೂರಜೀ ಕೀಕಾ ಏನು ಮಾಡಲು ಹೊರಟದ್ದೆವು ಎಂಬುದರ ಮರ್ಮವನ್ನು ಗ್ರಹಿಸತೊಡಗಿದ್ದರು. ಜೊತೆಗೆ ಈ ಗಮನ ಸೆಳೆಯದ ಹೋರಾಟದ ರೀತಿ ಅವರಿಗೆ ಕೊಡಮಾಡಿದ್ದ ಅಧಿಕಾರ ಪ್ರಜ್ಞೆ ಮತ್ತು ನಿಯಂತ್ರಣವನ್ನು ಸವಿಯತೊಡಗಿದ್ದರು. ಚಲಿಸುತ್ತಿರುವ ಲಕ್ಷ್ಯಕ್ಕೆ ತಿರುಗಿಸಿ ಹೊಡೆಯುವುದು ಹೇಗೆಂದು ಗೊತ್ತಿಲ್ಲದ ಗುಜರಾತಿ ಪಡೆಗಳ ಅಸಹಾಯಕತೆ ಮತ್ತು ಹತಾಶೆಯನ್ನು ಅವರು ಆನಂದಿಸಿದರು. ಗುಟ್ಟಾಗಿ ಮಾಡುವುದನ್ನು ಮತ್ತು ನಿಶ್ಚಲತೆಯನ್ನು ಅವರು ಕಲಿತರು. ಅಲುಗಾಡದೆ ಅಥವಾ ಒಂದು ಮಾತನ್ನೂ ಆಡದೆ ಗಂಟೆಗಟ್ಟಲೆ ಕುಳಿತುಕೊಳ್ಳುವಂತಾದರು. ಕುದುರೆಯ ಬೆನ್ನ ಮೇಲೆ ಕುಳಿತೇ ತಮ್ಮ ಬುತ್ತಿಯನ್ನು ತಿನ್ನುವುದನ್ನು ಅಭ್ಯಾಸ ಮಾಡಿಕೊಂಡರು. ತಮ್ಮ ಕುದುರೆಗಳು ಕೆನೆಯುವುದನ್ನು ತಡೆಯುವ ಹಾಗೂ ಚಲಿಸದೆ ನಿಲ್ಲುವ ತರಬೇತಿ ನೀಡಿದರು. ಈ ರಹಸ್ಯ ಮುಖಾಮುಖಿಗಳ ಕಾಲದಲ್ಲಿ ಅವರು ಧೈರ್ಯ ಮತ್ತು ಹೆಮ್ಮೆಯನ್ನು ಕಂಡುಕೊಳ್ಳಬಹುದು.

ನಮ್ಮ ಪಾದರಸದಂಥ ಹಠಾತ್ ಧಾಳಿಯನ್ನು. ನಡೆಸಬೇಕೆಂದು ರಾವ್ ವೀರಮ್ ದೇವ್ ನಿರ್ಧರಿಸಿದ್ದ ದಿನ ನಮಗೆ ಚಿತ್ತೂರಿನಿಂದ ಟಪಾಲು ಬಂದಿತು. ಲೀಲಾವತಿಯ ಕೈಬರಹದ ಪತ್ರವೊಂದನ್ನು ಹೊರತುಪಡಿಸಿ ಉಳಿದೆಲ್ಲವೂ ಮಾಮೂಲಿ ಪತ್ರಗಳು. ಅವಳ ಪತ್ರಗಳೆಂದರೆ ಕೆಟ್ಟ ಅಥವಾ ಅತಿಕೆಟ್ಟ ವರ್ತಮಾನಗಳ ಹರಿಕಾರರೆಂದೇ ನಾನು ತಿಳಿಯ ತೊಡಗಿದ್ದೆ. ಅಂದರೆ ಗೊಂದಲವನ್ನು ದೂತನೆಂದೇ ತಪ್ಪಾಗಿ ಗ್ರಹಿಸುವ ಮಾಮೂಲಿ ಪ್ರಕರಣ. ಈ ಸಲ ಕೌಸಲ್ಯ ನನಗೆ ಇನ್ನೆಂಥ ಹಾಳು ಸುದ್ದಿಯನ್ನು ತಿಳಿಸಿದ್ದಾಳೋ ಇದರಲ್ಲಿ?

ಜೈ ಏಕಲಿಂಗಜೀ

ಘನತೆವೆತ್ತ ಮಹಾಸ್ವಾಮಿ ಮಹಾರಾಜ್‌ಕುಮಾರ್ ಅವರಿಗೆ

ಆಸ್ತಿಯ ವಿಷಯದಲ್ಲಿ ತನಗೆ ಅನುಭವವಿಲ್ಲದ ಕಾರಣ ಅಗಸರ ಸುನೇರಿಯಾಳು ಒಂದು ವರ್ಷದ ಹಿಂದೆ, ನೀವು ಅವಳಿಗೆ ಉಡುಗೊರೆಯಾಗಿ ಕೊಡಮಾಡಿದ್ದ ಎರಡು ಹಳ್ಳಿಗಳ ಮೇಲ್ವಿಚಾರಣೆ ನಡೆಸುವುದನ್ನು, ಒಂದು ಸಣ್ಣ ಸಂಭಾವನೆಯ ಮೇಲೆ ನನಗೆ ವಹಿಸಿಕೊಟ್ಟಿದ್ದಳು. ಈಗಿರುವ ಸ್ಥಿತಿಯಲ್ಲಿ ನನಗೂ ಕೈ ತುಂಬ ಕೆಲಸವಿರುವ ಕಾರಣ, ಅವಳಿಗೆ ನಾನು ಕೋಳಿ ಸಾಕಾಣಿಕೆಯ ಮತ್ತು ತೆರಿಗೆ ವಸೂಲಿ ಮಾಡುವ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಮೂಲಭೂತ ವಿಚಾರಗಳನ್ನು ಕಲಿಸಿಕೊಡುವುದಾಗಿ ಹೇಳಿದೆ. ಇದರಿಂದ ಆಕೆ ಯಾರನ್ನೂ ಅವಲಂಬಿಸಬೇಕಾಗಿ ಬರುವುದಿಲ್ಲ. ಅವಳು ವಾರ ಬಿಟ್ಟು ವಾರ ಬರುವ ಸೋಮವಾರಗಳಂದು ನಾಲ್ಕು ಗಂಟೆಗಳ ಕಾಲ ನನ್ನ ಜೊತೆ ಕಳೆಯುತ್ತಿದ್ದಳು. ಒಂದು ತಿಂಗಳ ಹಿಂದೆ, ಅವಳು ಕ್ರಮಾನುಗತವಾಗಿ ಬರುವ ಎರಡು ಸೋಮವಾರ ಬರಲಿಲ್ಲ. ತಾನು ಬಾರದೆ ಇರುವುದಕ್ಕೆ ಕಾರಣ ತಿಳಿಸಲು

ಯಾರನ್ನೂ ಕಳಿಸಲೂ ಇಲ್ಲ ಇದು ಅವಳ ರೀತಿ ಅಲ್ಲ. ಅವಳು ಯಾವಾಗಲೂ ಸ್ವತಂತ್ರವಾಗಿರಲು ಉತ್ಸುಕಳಾಗಿರುತ್ತಿದ್ದಳು. ಅಲ್ಲದೆ ಯಾವಾಗಲೂ ಸಕಾಲದಲ್ಲಿರುತ್ತಿದ್ದಳು. ನಾನು ಅವಳ ಮನೆಗೆ ಹೋದೆ. ಆದರೆ ಅವಳು ಹೊರಬರಲು ನಿರಾಕರಿಸಿದಳು. ನಾನು ಅವಳ ಗಂಡನೊಂದಿಗೆ ಮಾತನಾಡಿದೆ. ಅವನು ತುಂಬ ಪ್ರತಿಕೂಲನಾಗಿದ್ದ. ಅಲ್ಲದೆ ನುಣುಚಿಕೊಳ್ಳುತ್ತಿದ್ದ ಮತ್ತು ಅವಳೊಂದಿಗೆ ನನಗೇನು ಸಂಬಂಧ ಎಂದು ತಿಳಿಯಲಿಚ್ಛಿಸಿದನು. ನಾನು ಧೋಬಿಖಾನೆಯ ಹೊಸ ತನಿಖಾಧಿಕಾರಿ ಎಂದೂ ರಾಜ ಮಾತೆಯ ಕಾಣೆಯಾಗಿರುವ ಜರಿಯಂಚಿನ ಎರಡು ಪರಕಾರಗಳ ಸಂಬಂಧದಲ್ಲಿ ಬಂದಿರುವುದಾಗಿ ಹೇಳಿದೆ. ಅವನು ಮೇವಾಡದ ದೊರೆಗಳ ಕೆಲಸ ಮಾಡಿದ ಎಪ್ಪತ್ತು ವರ್ಷಗಳ ತನ್ನ ಸೇವಾವಧಿಯಲ್ಲಿ ಎಂದೂ ಕಳ್ಳತನದ ಆರೋಪ ಬಂದಿರಲಿಲ್ಲವೆಂದು ಹೇಳುತ್ತ ಸುದೀರ್ಘ ನಿಂದನೆಗೆ ತೊಡಗಿದ. ನಾನು ಅವನ ಬಗ್ಗೆ ಯಾವುದೇ ಆರೋಪ ಮಾಡುತ್ತಿಲ್ಲವೆಂದು ಹೇಳಿದೆ. ಅಲ್ಲದೆ ಅವನು ಈ ವಿಷಯದಲ್ಲಿ ಮುಗ್ಧನಾಗಿರಬಹುದು, ಅವನ ಹೆಂಡತಿಯ ವಿಷಯ ಏನು? ಅದರಿಂದ ಅವನು ಉಲ್ಲಸಿತನಾದ. ಅವನು ಅವಳಿಗೆ ಹೆಸರುಗಳ ಒಂದು ಸರಣಿಯನ್ನೇ ಲಗತ್ತಿಸಿ ಕರೆದ. ಅವಳನ್ನು ಹಾದರಗಿತ್ತಿ ಕಳ್ಳಿ ಎಂದೆಲ್ಲ ಆಣೆ ಮಾಡಿ ಹೇಳಿದ. ಅವಳ ಮೇಲೆ ಆರೋಪ ಮಾಡಬೇಕೆಂದು ತನ್ನ ಹತ್ತಿರ ಅನೇಕ ಜೀವಾವಧಿಗಳವರೆಗೆ ಅವಳನ್ನು ಬಂಧಿಸಿಡಲು ಆಗುವಷ್ಟು ಸಾಕ್ಷ್ಯಗಳು ತನ್ನ ಬಳಿ ಇವೆಯೆಂದು ಹೇಳಿದನು. ಅವನ ರೀತಿ ಮತ್ತು ಮನಃಸ್ಥಿತಿ ಬದಲಾದವು ಮತ್ತು ತನಗೆ ಗೊತ್ತಿರುವ ವಿಷಯದ ನಂತರ ಅವನ ಮಾತುಗಳನ್ನು ತುಂಡರಿಸಿ, ನಾನು ಅವನ ಹೆಂಡತಿಯನ್ನೊಬ್ಬಳನ್ನೇ ಪ್ರಶ್ನೆ ಕೇಳಬೇಕಾಗಿದೆಯೆಂದು ಹೇಳಿದೆ? ಅದರ ಅಗತ್ಯವಿಲ್ಲ. ತಾನಾಗಲೇ ಅವಳನ್ನು ಪ್ರಶ್ನಿಸಿರುವುದಷ್ಟೇ ಅಲ್ಲದೆ ಅವಳಿಗೆ ತೀವ್ರವಾದ ದೈಹಿಕ ಶಿಕ್ಷೆಯನ್ನು ನೀಡಿರುವುದಾಗಿ ತಿಳಿಸಿದನು. ಮಹಾಪ್ರಭುಗಳು ಮತ್ತು ನ್ಯಾಯಾಲಯಗಳಿಗೆ ಮಾತ್ರ ಶಿಕ್ಷಿಸುವ ಅಧಿಕಾರವಿರುದರಿಂದ ಅದು ಬಹಳ ದುರದೃಷ್ಟಕರ ಎಂದು ಹೇಳಿದೆ ಮತ್ತು ನನಗೆ, ಮಹಾರಾಜರಿಗೆ ಈ ಬಗ್ಗೆ ವರದಿ ನೀಡದೆ ಬೇರೆ ಮಾರ್ಗವೇ ಇಲ್ಲ ಎಂದು ಹೇಳಿದೆ. ಇಷ್ಟು ಹೊತ್ತಿಗೆ ಅವನ ಬಾಯಲ್ಲಿ ನೊರೆ ಬರಲು ಶುರುವಾದದ್ದೇ ಅಲ್ಲದೆ ತನ್ನ ಹಣೆಯನ್ನು ನನ್ನ ಕಾಲುಗಳ ಮೇಲೆ ಉಜ್ಜುತ್ತ ತನ್ನ ಅವಿವೇಕವನ್ನು ಲಕ್ಷ್ಯಕ್ಕೆ ತಂದುಕೊಳ್ಳಬಾರದೆಂದು ಕೋರಿದನು. ತನ್ನ ಹೆಂಡತಿಯನ್ನು ಇನ್ನೆಂದೂ ಮುಟ್ಟುವುದಿಲ್ಲವೆಂದು ಮಾತುಕೊಟ್ಟನು. ಅವನ ಹೆಂಡತಿಯೊಂದಿಗೆ ಏಕಾಂತದಲ್ಲಿ ಮಾತಾಡಬೇಕೆಂದು ಕೇಳಿದಾಗ, ಒಲ್ಲದ ಮನಸ್ಸಿನಿಂದ, ಅದೂ ಅವಳು ಹೇಳುವ ಕತೆಗಳನ್ನು ನಂಬಕೂಡದೆಂದೂ ಅವಳನ್ನೇನೂ ಉಳಿಸಬೇಕಾಗಿದ್ದಿಲ್ಲವೆಂದೂ ಹೇಳಿದ ಮೇಲೆಯೇ, ಅದಕ್ಕೆ ಅವಕಾಶಕೊಟ್ಟನು.

ನಾನು ಅತ್ಯಂತ ಕೆಟ್ಟದ್ದನ್ನು ನಿರೀಕ್ಷಿಸಿದ್ದೆ. ಆದರೆ ನನಗೆ ಎದುರಾದ ದೃಶ್ಯವನ್ನು ಕಾಣಲು ನಾನು ಸಿದ್ಧಳಿರಲಿಲ್ಲ ಎಂಬುದನ್ನು ಒಪ್ಪಬೇಕು. ಸುನೇರಿಯಾಳ ತಲೆಬುರುಡೆ ಮೇಲೆ ಅಗಲವಾದ ಸೀಳು

ಗಾಯಗಳಾಗಿದ್ದುವು. ಚರ್ಮದ ಪಟ್ಟಿಯಿಂದ ಅವಳ ಮೈ ಮೇಲೆ ಹೇಗೆ ಹೊಡೆಯಲಾಗಿತ್ತೆಂದರೆ ಅದರ ಮೇಲೆ ಚರ್ಮವೇನೂ ಉಳಿದಿರಲಿಲ್ಲ. ಅವಳನ್ನು ನನ್ನ ಮೇನಾದಲ್ಲಿ ಕೂರಿಸಿಕೊಂಡು ಇಲ್ಲಿಗೆ ಕರೆತಂದೆ. ರಾಜ ವೈದ್ಯರಿಗೆ ಅವಳನ್ನು ಪರೀಕ್ಷಿಸಿ ನೋಡಲು ಹೇಳಿದೆ. ತನ್ನ ಗಂಡ ತನ್ನನ್ನು ಹೆಚ್ಚು ಕಡಮೆ ಸಾಯುವ ಹಾಗೆ ಹೊಡೆದನೆಂಬುದನ್ನು ಎಂದೂ ಹೇಳಲಿಲ್ಲ. ಆದರೆ ನಾನು ವಿಚಾರಿಸಿದ್ದರಿಂದ ತಿಳಿದು ಬಂದದ್ದೆಂದರೆ ಅವಳಿಗೆ ಎರಡು ಹಳ್ಳಿಗಳು ಉಡುಗೊರೆಯಾಗಿ ಬಂದ ವಿಷಯ ಆ ಮುದುಕನಿಗೆ ಗೊತ್ತಾಗಿ ಅದು ಯಾರಿಂದ ಬಂದಿತೆಂದು ತಿಳಿಯಲಪೇಕ್ಷಿಸಿದನಂತೆ.

ಸುನೇರಿಯಾ ಬಹಳ ಗಟ್ಟಿ ಹೆಂಗಸು. ಹಾಗಾಗಿ ಬಹು ಬೇಗ ಚೇತರಿಸಿಕೊಂಡಳು. ನಿನ್ನೆ ಬೆಳಿಗ್ಗೆ ರಾಜಕುಮಾರಿಗೆ ನಾನು ಅಡುಗೆ ಸಿದ್ಧಪಡಿಸುತ್ತಿದ್ದಾಗ ನನಗೆ ಹೇಳದೆ ಅರಮನೆಯಿಂದ ಹೊರಟು ಹೋದಳು. ತನ್ನ ವಸ್ತುಗಳನ್ನು ತೆಗೆದುಕೊಂಡು, ತನ್ನ ಗಂಡನಿಗೆ ತಾನು ಅವನನ್ನು ಬಿಟ್ಟುಹೋಗುತ್ತಿರುವುದಾಗಿ ತಿಳಿಸಲು ಹೋಗಿದ್ದಳೆಂದು ತೋರುತ್ತದೆ. ಬಟ್ಟೆಗಳನ್ನು ಒಗೆಯಲು ಅವರು ಬಳಸುತ್ತಿದ್ದ ಮರದ ದೊಣ್ಣೆಯನ್ನು ಎತ್ತಿಕೊಂಡು ಜೋರಾಗಿ ಕಿರುಚುತ್ತ ಅವಳ ಮೇಲೆ ಆಕ್ರಮಣ ಮಾಡಲು ಅವನು ಹೋದದ್ದನ್ನು ನೆರೆಯವರು ಕಂಡರು. ಅವಳು ಪ್ರಜ್ಞೆ ತಪ್ಪಿ ಬೀಳುವವರೆಗೂ ಅವಳನ್ನು ಹೊಡೆದನು. ಎಚ್ಚರವಾದ ಮೇಲೆ ಬಟ್ಟೆ ಹೊಡೆಯುವ ಮರದ ಕೋಲನ್ನು ತೆಗೆದುಕೊಂಡು ತನ್ನ ಮೇಲೆ ಅವನು ಕೈ ಮಾಡುತ್ತಿರುವುದು ಇದೇ ಕೊನೆಯದು ಎಂದು ಹೇಳಿ, ಅವನ ತಲೆಯನ್ನು ಜಜ್ಜಿ ಹಾಕಿದಳು.

ಅವಳನ್ನು ಕೊಲೆಯ ಆಪಾದನೆಗೆ ಗುರಿಪಡಿಸಲಾಗಿದೆ. ಸದ್ಯಕ್ಕೆ ಚಿತ್ತೂರು ಜೈಲಿನಲ್ಲಿದ್ದಾಳೆ. ಅವಳೀಗ ತೀವ್ರ ಆಘಾತಗೊಂಡ ಸ್ಥಿತಿಯಲ್ಲಿದ್ದಾಳೆ ಮತ್ತು ತೀರಾ ಹತಾಶಳಾಗಿದ್ದಾಳೆ. ನಾನು ದಿನವೂ ಅವಳನ್ನು ಭೇಟಿ ಮಾಡಿ, ಅವಳ ಸ್ಥಿತಿಗತಿಯ ಬಗ್ಗೆ ಹಾಗೂ ಮುಂದಿನ ಎರಡು ವಾರಗಳಲ್ಲಿ ವಿಚಾರಣೆಗೆ ಬರಲಿರುವ ಈ ಪ್ರಕರಣದ ಪ್ರಗತಿಯ ಬಗ್ಗೆ ನಿಮಗೆ ತಿಳಿಸುತ್ತೇನೆ.

ಎಲ್ಲವೂ ಸರಿಯಾಗುತ್ತದೆಂದು ನನ್ನ ನಂಬಿಕೆ.

ಗೌರವ ಮತ್ತು ಆಶೀರ್ವಾದಗಳೊಂದಿಗೆ.

ಕೌಸಲ್ಯ

ಸೇರಿಸಿದ ಮಾತು : ಈ ದಿನ ರಾತ್ರಿ ಮತ್ತೆ ಅವಳಲ್ಲಿಗೆ ಹೋಗಿ ಅವಳನ್ನು ನೋಡಿದೆ ಮತ್ತು ಅವಳಿಗಾಗಿ ಸ್ವಲ್ಪ ಆಹಾರ ತೆಗೆದುಕೊಂಡು ಹೋಗಿದ್ದೆ.

ಸದುದ್ದೇಶಕ್ಕೆ ಅಷ್ಟು ಸಾಕು. ಸುನೇರಿಯಾಳ ಗಂಡನನ್ನೇಕೆ ನಾನು ಕರೆಸಲಿಲ್ಲ. ಅವನ ಬೆನ್ನ ಮೇಲೆ ತಟ್ಟಿ ಅವನೊಂದಿಗೆ ಏಕೆ ಪರಸ್ಪರ ನಂಬಿಕೆ ಇಟ್ಟು ಹರಟೆ ಹೊಡೆಯಲಿಲ್ಲ? "ಅನೇಕ ವರ್ಷಗಳ ಹಿಂದೆ ನಿನ್ನ ಹೆಂಡತಿಯನ್ನು ನನಗೆ ಎರವಲಾಗಿ ಕೊಟ್ಟದ್ದಕ್ಕೆ ಧನ್ಯವಾದಗಳು ಕಣಯ್ಯ. ಅವಳ ಪರಿಚಯ ಆದದ್ದು ತುಂಬ ಸಂತೋಷ. ಹಾಗೇ ನಿಂದೂ

ಎಂದು ಹೇಳಬೇಕಾದದ್ದೇ ಇಲ್ಲ. ನನ್ನನ್ನು ತಪ್ಪು ತಿಳಿಯ ಬೇಡಯ್ಯ. ಅವಳಿಗೆ ನಾನು ಏನನ್ನೋ ಒಂದು ಸ್ವಲ್ಪ ಕೊಡಬೇಕೆಂದಿದ್ದೆ ಅದು ಅವಳು ಸಲ್ಲಿಸಿದ ಸೇವೆಗೆ ಎಂದೇನಿಲ್ಲ. ಹಾಗೇ ಸುಮ್ಮನೆ ಮೆಚ್ಚುಗೆಯ ಸಂಕೇತವಾಗಿ ಒಂದು ಸಣ್ಣ ಉಡುಗೊರೆ. ಅದೂ ಬಹಳ ಮಳೆ ಬಂದ ದಿನಕ್ಕಾಗಿ. ಏನೇ ಆಗಲಿ ನೀನು ಈಗ ಯಾವತ್ತು ಬೇಕಾದರೂ ಗೊಟಕ್ ಅನ್ನಬಹುದು. ಹಾಗಾಗಿ ಬೇರೆ ಯಾರಾದರೂ ಅವಳನ್ನು ಪ್ರೀತಿಸುವುದಕ್ಕೆ ಮುಂಚೆ ನಾನು ಪ್ರೀತಿ..."

ಅದು ಭವಿಷ್ಯತ್ ಜ್ಞಾನವೆ ಅಥವಾ ನನ್ನೊಂದಿಗೆ ಕೊನೆಯ ಬಾರಿಗೆ ಮಾತಾಡಿದ ಮೇಲೆ ಸುನೇರಿಯ ನನ್ನ ಗಮನ ಸೆಳೆಯುವ ಸಲುವಾಗಿ ಆಶುಕವಿತೆ ರಚಿಸುತ್ತಿದ್ದಾಳೆಯೇ? ಯಾವುದನ್ನೂ ನಾನು ಊಹಿಸಲಾರೆ. ಅದು ಗೋಡೆ ಮೇಲಿನ ಬರಹದಷ್ಟೇ ಸ್ಪಷ್ಟವಾಗಿತ್ತು. ಆದರೆ ನಾನು ಅದನ್ನು ನೋಡಲಿಷ್ಟಪಡಲಿಲ್ಲ. ಎದೆಯ ಬಡಿತದಿಂದೇನೂ ಅನುಕೂಲವಾಗುವುದಿಲ್ಲ. ಕೌಸಲ್ಯಳ ವಿಳಾಸಕ್ಕೆ ಅವಳಿಗೊಂದು ಪತ್ರ ಬರೆದೆ. ಲೀಲಾವತಿ ಅದನ್ನು ಅವಳಿಗೆ ಓದಿ ಹೇಳಬೇಕಾಗುತ್ತದೆ.

ನನ್ನ ಪತ್ರ ಸಂಕ್ಷೇಪವಾಗಿತ್ತು.

> ಪ್ರೀತಿಯ ಸುನೇರಿಯಾ,
>
> ನಿನ್ನದು ತಪ್ಪು ಎಂದು ನಾನು ಸಾಧಿಸಿ ತೋರುವೆನು. ನಾನು ನಿನ್ನನ್ನು ಬಂದು ಕಾಣುತ್ತೇನೆ. ಬೇಗ, ಬಹು ಬೇಗ.
>
> ನಿನಗೆ ಹೆಚ್ಚಿನ ಹಣಸಹಾಯಕ್ಕೆ ಏರ್ಪಾಟು ಮಾಡುತ್ತಿದ್ದೇನೆ. ಕೌಸಲ್ಯ ನಿನಗೆ ನೆರವಾಗುವಳು. ಅತಿ ಶೀಘ್ರವಾಗಿ ನೀನು ಸೆರೆಯಿಂದ ಹೊರ ಬರುವೆ. ನೀನು ಮುಗ್ಧಳು ಎಂಬುದನ್ನು ಮರೆಯಬೇಡ. ಅಲ್ಲದೆ ಕಾನೂನು ನಿನ್ನ ಪರವಾಗಿದೆ. ಧೈರ್ಯ ತಂದುಕೋ.

ನಾನು ಆ ಪತ್ರದ ಮೇಲೆ ರಾಜ ಮುದ್ರೆಯನ್ನೊತ್ತಿದೆ. ಇನ್ನೇನು ಹರಿಕಾರನನ್ನು ಕರೆಯಬೇಕೆಂದಿದ್ದೆ. ನನ್ನಲ್ಲೇನೋ ವಕ್ರತೆ ಇರಬೇಕು. ನಾನು ಯಾವಾಗಲೂ ಜನರನ್ನೆಬ್ಬಿಸುತ್ತಿರುತ್ತೇನೆ. ಹಾಸಿಗೆಯಿಂದ ಎಳೆಯುತ್ತೇನೆ. ಬೆಳಗಿನ ಜಾವ ಒಂದು ಗಂಟೆಗೆ ವ್ಯಾಯಾಮಕ್ಕೆ ಏರ್ಪಾಟು ಮಾಡುತ್ತೇನೆ. ದಿನಕ್ಕೆ ಹದಿನಾರು ಗಂಟೆಗಳ ಕಾಲ ಸೈನ್ಯ ಪ್ರಯಾಣಿಸಲು ಒತ್ತಾಯಿಸುತ್ತೇನೆ. ಅನಿರೀಕ್ಷಿತವಾಗಿ ನಡೆಯಲಿರುವ ಯಾವುದೋ ಒಂದು ಸಂದರ್ಭಕ್ಕೆ ಸಿದ್ಧವಾಗಿರಬೇಕೆಂಬ ನೆಪದಲ್ಲಿ ಅವರನ್ನೆಲ್ಲ ಶಿಸ್ತಿಗೆ ಅಳವಡಿಸುತ್ತೇನೆ. ಒಮ್ಮೆಗೆ ಹರಿಕಾರನನ್ನು ಎಚ್ಚರಗೊಳಿಸಬೇಕಾಗುವುದಿಲ್ಲ. ಅವನ ಬಳಿ ಅಂಕೆಯಿಲ್ಲದ ಉತ್ಸಾಹದ ಒಂದು ಗೆಳೆಯರ ತಂಡವೇ ಇದೆ. ಅವರುಗಳು, ನಮ್ಮ ಶಿಬಿರಗಳನ್ನು ಕಾಲಿನಿಂದ ತುಳಿದು ಹರಿದು ಹಾಕುತ್ತಿದ್ದರು. ಆಗ ನನಗೆ ಪೂರಜೀ ಕೀಕಾ ಮತ್ತು ನನ್ನ ಅತ್ಯಂತ ಕೆಟ್ಟ ದುಃಸ್ವಪ್ನಗಳು ನಿಜವಾಗುತ್ತಿವೆ ಎಂದು ಅರ್ಥವಾಯಿತು.

ಅತಿಯಾದ ಎಚ್ಚರಿಕೆ ವಹಿಸುವುದನ್ನು ನಾನು ಹೆಚ್ಚು ಇಷ್ಟಪಡುವುದರಿಂದ, ವಾರದ ಪ್ರತಿ ದಿನದ ಉಸ್ತುವಾರಿ ಕಾರ್ಯಗಳನ್ನು ನೋಡಿಕೊಳ್ಳಲು ಪ್ರತಿಯೊಂದು ಶಿಬಿರದಲ್ಲೂ ಮಾಮೂಲಿಗಿಂತ ಎರಡರಷ್ಟು ಸಂಖ್ಯೆಯ ಕಾವಲು ಸಿಪಾಯಿಗಳು ಹಾಗೂ ಏಳು ಜನ ಸೇನಾಧಿಪತಿಗಳು ಇದ್ದರು. ಈ ರಾತ್ರಿ ರಾವ್ ರೈಮಲ್ ಮತ್ತು ಅವರ ಕಡೆಯವರ ಸರದಿ

ಇತ್ತು. ಅದೃಷ್ಟವಶಾತ್, ರಾವ್ ವೀರಮ್ ದೇವ್ ಮತ್ತು ಉಳಿದ ಮುಖಂಡರು ಹಿಂದಿನ ಅನಿರೀಕ್ಷಿತ ದಾಳಿಯ ಬಗ್ಗೆ ಸಂಕ್ಷೇಪವಾಗಿ ತಿಳಿಸಲು ಬಂದಿದ್ದರು. ಅದು ಮುಗಿದಾಗ ತಡವಾಗಿತ್ತು. ಜೊತೆಗೆ ಪಾಕ್ಷಿಕ ಸಮರ ಸಮಿತಿಯ ಸಭೆ ಮಾರನೇ ದಿನ ಬೆಳಿಗ್ಗೆ ನಿಗದಿಯಾಗಿದ್ದರಿಂದ, ನಾನು ಅವರಿಗೆ ಆ ರಾತ್ರಿಯನ್ನು ನನ್ನ ಶಿಬಿರದಲ್ಲೇ ಕಳೆಯಲು ಕೇಳಿದ್ದೆ. ನಿಜಕ್ಕೂ ಅದೇನು ಕೆಟ್ಟದ್ದಲ್ಲ; ಇದಾರ್‌ನ ರಾವ್ ಅವರನ್ನೂ ಒಳಗೊಂಡಂತೆ ಪ್ರತಿಯೊಬ್ಬ ಹಿರಿಯ ಮುಖಂಡರೂ ನನ್ನ ಶಿಬಿರದಲ್ಲಿ ರಾಜರಿದ್ದರು. ನಮ್ಮ ಮಧ್ಯೆ ಇಲ್ಲದೆ ಇದ್ದವರೆಂದರೆ ರಾವಲ್ ಉದಯ ಸಿಂಹ. ರಾವ್ ರೈಮಲ್ ಹಾಗೂ ಅವರ ಕಡೆಯವರು ಕರ್ತವ್ಯದಿಂದ ರಜೆ ಪಡೆದು ಹೋಗಿದ್ದಿರಬೇಕು. ಅಥವಾ ಅಂಥದ್ದೇನೋ ಆಗಿರಬೇಕು. ಝಹೀರ್-ಉಲ್-ಮುಲ್ಕ್ ನಮ್ಮನ್ನು ಭೇಟಿಯಾಗಲು ನಿರ್ಧರಿಸುವ ದಿನ ಅದೇ ಆಗಿರುತ್ತದೆ. ಇಲ್ಲಿ ವಿಪರೀತ ಕಾಕತಾಳೀಯಗಳು ಸೇರಿವೆ. ಗುಜರಾತಿನ ಗೂಢಚಾರರು ಈ ಶಿಬಿರವನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರಷ್ಟೇ ಅಲ್ಲ, ಎಲ್ಲ ತುಕಡಿಗಳ ರಜಪೂತ ಮುಖಂಡರನ್ನು ಹಿಂಬಾಲಿಸಿರಬೇಕು. ಝಹೀರ್-ಉಲ್-ಮುಲ್ಕ್ ಏನೂ ಮೂರ್ಖನಲ್ಲ. ಕಣ್ಣಾಮುಚ್ಚಾಲೆ ಆಟವನ್ನು ಆಡುತ್ತಿರುವ ಶತ್ರುವಿನ ಮೇಲೆ ಸೇಡು ತೀರಿಸಿಕೊಳ್ಳುವ ಏಕೈಕ ಮಾರ್ಗವೆಂದರೆ, ಅವನ ಆಟವನ್ನು ಕಲಿತು ಅವನ ಮೇಲೆಯೇ ಅದನ್ನು ತಿರುಗಿಸುವುದು. ನಾನು ನಿಶ್ಚೇಷ್ಟಗೊಂಡು ಕುಳಿತು ಬಿಟ್ಟೆ. ನಮ್ಮ ಎಷ್ಟು ಜನ ಸೈನಿಕರು ಈಗಾಗಲೇ ಸತ್ತಿದ್ದಾರೆ? ಗುಜರಾತಿ ಪಡೆಗಳು ನಾಯಕರ ಶಿಬಿರಗಳಿಗೆ ದಾಳಿಯಿಡುವುದಕ್ಕೆ ಕೆಲವೇ ನಿಮಿಷಗಳ ಸಂಗತಿ. ತೇಜ್, ಷಫಿ ರಾಜಾ ಪುರಜೀ ಕೀಕಾ ಮತ್ತು ರಾವ್ ವೀರಮ್ ದೇವ್ ಇವರುಗಳಿಗಿಂತ ತೀರಪ್ರಿಯರೂ ಅಮೂಲ್ಯ ವ್ಯಕ್ತಿಗಳು ಈ ಜಗತ್ತಿನಲ್ಲಿ ನನಗಿನ್ಯಾರೂ ಇಲ್ಲ. ಇಷ್ಟಾದರೂ ನಾನು ಚಲಿಸಲಿಲ್ಲ. ನಾನು ಆಲೋಚನೆಯನ್ನು ಎಲ್ಲೋ ಇಟ್ಟು ಬಿಟ್ಟಿದ್ದೇನೆ. ಅದು ಮುಖ್ಯವಾದ ಆಲೋಚನೆ. ಆದರೆ ಅದು ಏನು ಎಂಬುದರ ಕಲ್ಪನೆ ನನಗಿರಲಿಲ್ಲ.

ಮಂಗಳ್ ನನ್ನ ಶಿಬಿರಕ್ಕೆ ಧಾವಿಸಿ ಬಂದ. ಬೇಗ ಹೊರಡಿ ರಾಜಕುಮಾರರೆ, ಈಗ ಶತ್ರುಗಳು ನಮ್ಮ ಮೇಲೆ ಆಕ್ರಮಣ ಮಾಡಿದ್ದಾರೆ. ಬೇಫ಼ಿಕೀರ್ ಅನ್ನು ಹೊರಗಡೆ ನಿಲ್ಲಿಸಿದ್ದೇನೆ. ಅವನನ್ನು ಸುಮ್ಮನಿರಿಸಲು ನಾನು ಕೈ ಎತ್ತಿದೆ. ಅದು ಏನದು? ಹಾಳಾದ್ದು, ನಾನೇಕೆ ಶಿಲಾಮೂರ್ತಿಯಾದೆ? ನಾನು ಚಲಿಸಲಾರದ ಮತ್ತು ಚಲಿಸದ್ದು ಅದೇನು ಅಷ್ಟೊಂದು ಮುಖ್ಯವಾದದ್ದು? "ಏಳಿ ಮಹಾಸ್ವಾಮಿ. ನಾನು ಬೇರೆ ಮುಖಂಡರನ್ನೆಲ್ಲಾ ಎಬ್ಬಿಸಿ ಬಂದಿದ್ದೇನೆ. ಇನ್ನೊಂದು ನಿಮಿಷದಲ್ಲಿ ಅವರೆಲ್ಲಾ ಇಲ್ಲಿರುತ್ತಾರೆ. ಈಗ ನೀವು ಇಲ್ಲಿಂದ ತಪ್ಪಿಸಿಕೊಳ್ಳದೆ ಹೋದರೆ, ಎಲ್ಲ ಮುಗಿದು ಹೋಗುತ್ತೆ" ಮಂಗಲ್ ಇದು ಯಾಕೆ ಇಷ್ಟೊಂದು ಗಡಿಬಿಡಿ ಮಾಡ್ತಾ ಇದ್ದಾನೆ? ಅವನು ಹಾಗೂ ಉಳಿದವರು ಹೊರಡಬೇಕೆಂದಿದ್ದರೆ ಅದು ನನ್ನನ್ನು ಬಿಟ್ಟು ಆಗಬಹುದು? ನನಗೆ ಬೇರೆ ಕೆಲವು ಬಹು ಮುಖ್ಯವಾದ ಕೆಲಸಗಳನ್ನು ಮಾಡುವುದಿದೆ. ಅವನು ಈಗ ನನ್ನ ಹತ್ತಿರ ಜೋರಾಗಿ ಅರಚುತ್ತ ಇದ್ದಾನೆ. "ಏನಾಗಿದೆ ಮೂರ್ಖನಂತೆ ವೀರ ಮರಣವನ್ನಪ್ಪುವುದಕ್ಕಿಂತ, ಓಡಿಹೋಗಿ ತಪ್ಪಿಸಿಕೊಂಡು ಜೀವವುಳಿಸಿಕೊಂಡಿದ್ದು ಇನ್ನೊಮ್ಮೆ ಯುದ್ಧ ಮಾಡುವುದಕ್ಕೆ, ಬದುಕುಳಿಯುವುದು ಬಹಳ ಒಳ್ಳೆಯದು ಅಂತ ನೀವು ದಿನಕ್ಕೆ ಏಳು ಸಲ ನಮ್ಮ ತಲೆಗೆ ತುರುಕುತ್ತಿರಲಿಲ್ಲವೇನು? ನಿಮ್ಮನ್ನು ಏನು ತಡೆದು ನಿಲ್ಲಿಸಿದೆ?"

ತೂಕ, ಈಗ ತೂಕದ ಪ್ರಶ್ನೆ. ನನ್ನ ಸಂಗೀತದ ಗುರುಗಳು ನನಗೆ ಪಕ್ಕವಾದ್ಯದ ಪ್ರಾಥಮಿಕ ವಿಷಯಗಳನ್ನು ಕಲಿಸುವಾಗ, ತಬಲ, ಮೃದಂಗ ಮುಂತಾದ ತಾಳವಾದ್ಯ

ಉಪಕರಣವನ್ನು ಬಾಜಿಸುವಾಗ, ನಿಮ್ಮ ಜೊತೆಯ ಸಹಗಾಯಕನ ಜೊತೆ ಅದೇ ಸಮಯಕ್ಕೆ ಒಂದು ಸುತ್ತು ಬರಬೇಕೆಂದರೆ, ಪ್ರತಿಯೊಂದು ಹೊಡೆತದ ತೂಕವನ್ನು ನೀವು ತಿಳಿದಿರಬೇಕು. ಹೌದು, ಜೀವನದಲ್ಲೂ ಅಷ್ಟೇ. ಪ್ರತಿಯೊಂದು ಸಂಗತಿಗೂ ಎಷ್ಟು ಪ್ರಾಮುಖ್ಯತೆ ಕೊಡಬೇಕು ಎನ್ನುವುದನ್ನು ತಿಳಿದಿರಬೇಕು. ಈ ಹೊತ್ತು ಝಹೀರ್ ಉಲ್ ಮುಲ್ಕ್‌ನ ಉಚ್ಛ್ರಾಯದ ಕಾಲವಾಗಿದ್ದರೆ ನಾವು ಸಾಯುತ್ತೇವೆ ಇಲ್ಲವೆ ಯುದ್ಧ ಇನ್ನು ಕೆಲವು ತಿಂಗಳುಗಳವರೆಗೆ ಅಥವಾ ವರ್ಷಗಳವರೆಗೆ ಮುಂದುವರೆಯಬಹುದು. ಇದಾರ್ ಆಗಲಿ, ಗುಜರಾತ್ ಆಗಲಿ ಅಷ್ಟೊಂದು ಬೆಲೆ ಬಾಳುವಂಥವಲ್ಲ. ಊರಿನಲ್ಲಿ ಮಾಡಬೇಕಾದ ಕೆಲಸ ನಂಬಲಾರದಷ್ಟಿದೆ. ದೆಹಲಿ ಮತ್ತು ಮಾಳ್ವ ಎರಡೂ ಹೋರಾಟಕ್ಕೆ ಕಾಯುತ್ತಿದ್ದವು. ಈಗ ನನ್ನ ಪ್ರಮಾಣ ಪರಿಜ್ಞಾನ ಮತ್ತು ಆದ್ಯತೆಗಳು ಮರಳಿ ಪ್ರಾಪ್ತವಾಗಿವೆ.

ಆ ಕ್ಷಣದಿಂದ, ನಾನೇನು ಮಾಡಬೇಕೆಂದು ನನಗೆ ಗೊತ್ತಾಯಿತು.

"ಸೇನಾಧಿಪತಿ ಆಕ್ರಮಣದ ನಾಯಕತ್ವವಹಿಸಿದ್ದಾನೆಯೆ?

"ಹೌದು" ಮಂಗಳಸಿಂಹನು ಹೇಳಿದ.

ರಾವ್ ವೀರಮ್ ದೇವ್ ಇತರೆಯವರೊಂದಿಗೆ ಒಳಗೆ ಬಂದರು. "ಮಂಗಳ್ ನೀನು ರಾವಲ್ ಉದಯ ಸಿಂಹರ ಶಿಬಿರಕ್ಕೆ ಧಾವಿಸು, ನೇರವಾದ ದಾರಿ ಹಿಡಿ. ಗುಜರಾತಿನ ಮಂದಿ ಬಳಸು ದಾರಿಯಲ್ಲಿ ನಿನಗಾಗಿ ಕಾಯುತ್ತಿರುತ್ತಾರೆಯೇ ಹೊರತು ಹತ್ತಿರದ ದಾರಿಯಲ್ಲಲ್ಲ. ಕಾರಣ ನಮ್ಮ ಚಲನವಲನಗಳನ್ನು ಅವರು ನಿರೀಕ್ಷಿಸಿ ನಮಗಿಂತ ಚಾಣಾಕ್ಷರಾಗಲು ಯತ್ನಿಸುತ್ತಿದ್ದಾರೆ. ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಐದು ಶಿಬಿರಗಳಿಂದ ಯೋಧರನ್ನು ಒಟ್ಟುಗೂಡಿಸಿಕೊಂಡು, ಗುಜರಾತ್ ಪಾಳೆಯದ ಮೇಲೆ ಆಕ್ರಮಣ ಮಾಡಬೇಕೆಂದು ರಾವಲ್ ಉದಯಸಿಂಹರಿಗೆ ಹೇಳು. ದಯೆ, ಕರುಣೆಗಳೇನನ್ನೂ ತೋರಿಸುವಂತಿಲ್ಲ. ನಿನ್ನ ಕಡೆಯ ನಾಲ್ಕು ಜನರನ್ನು ಇದೇ ಸಂದೇಶದೊಂದಿಗೆ ಬೇರೆ ಶಿಬಿರಗಳಿಗೆ ಕಳಿಸಿಕೊಡು. ಉತ್ತರದ ಕಡೆಗಿರುವ ಎರಡು ಶಿಬಿರಗಳಿಂದ ಎರಡರಷ್ಟು ಜನ ನಮ್ಮನ್ನು ಬಂದು ಸೇರಿಕೊಳ್ಳಬೇಕೆಂದು ತಿಳಿಸು. ಅವರು ನಮ್ಮ ಹಿಂದೆ ಒಳಕ್ಕೆ ಬರಬೇಕು. ಪಶ್ಚಿಮದ ಎರಡು ಶಿಬಿರಗಳಿಂದ ಜಹೀರ್-ಉಲ್-ಮುಲ್ಕ್‌ನ ಗುಜರಾತ್ ಸೇನೆಯ ಮಹಾದಂಡನಾಯಕರು ನಮ್ಮನ್ನು ಹಿಡಿಯಲು ಬಲೆ ಹೆಣೆದಿರಬಹುದು. ಆದರೆ ಅವರು ಅದೆಷ್ಟು ಕರಾರುವಾಕ್ಕಾಗಿ ಮತ್ತು ಅಚ್ಚುಕಟ್ಟಾಗಿ ಕಾರ್ಯಶೀಲರಾಗಬೇಕೆಂದರೆ, ಇಲ್ಲಿಗೆ ಬರುವ ಹಾಗೆ ಮಾಡಿರುವವರು ತಾವಲ್ಲ; ಆದರೆ ನಾವು ಉದ್ದೇಶ ಪೂರ್ವಕವಾಗಿ ಅವರನ್ನೆಲ್ಲ ಮುಗಿಸಿ ಬಿಡಲು ಕರೆಸಿದ್ದೇವೆಂದು ಶತ್ರುವಿಗೆ ಮನದಟ್ಟಾಗಿ ಬಿಡಬೇಕು. ದೇವರು ಕಾಪಾಡಲಿ ಹಾಗೂ ಜೀವಂತವಾಗಿ ಹಿಂತಿರುಗಿ ಬನ್ನಿ. ಇಲ್ಲಿ ಕೆಲಸವಿದೆ." ಅವನು ಅಲ್ಲಿಂದ ಹೊರಟನು. "ತೇಜ್ ನಿನ್ನ ಕಡೆಯ ಯೋಧರನ್ನು ಒಟ್ಟುಗೂಡಿಸು ಮತ್ತು ಪೂರ್ವದ ಕಡೆಯಿಂದ ಆಕ್ರಮಣ ಮಾಡು. ರಾವ್ ವೀರಮ್‌ದೇವ್ ತನ್ನ ಕಡೆಯ ಸೈನಿಕರನ್ನು ಹಳೆಯ ಮಾಮೂಲಿ ರೀತಿಯಲ್ಲಿ ಮುನ್ನಡೆಸಿಕೊಂಡು ಬಂದು ಮಧ್ಯದಲ್ಲಿ ಮುಖಾಮುಖಿ ಆಕ್ರಮಣ ನಡೆಸುವರು. ಷಫಿ ನಿನ್ನ ಕಡೆ ಬಾಕಿ ಯಾರು ಯಾರು ಉಳಿದಿದ್ದಾರೆ ಅವರನ್ನೆಲ್ಲಾ ಒಟ್ಟುಗೂಡಿಸಿಕೊಂಡು ಪಶ್ಚಿಮದ ಕಡೆಯಿಂದ ಪ್ರಬಲವಾಗಿ ಆಕ್ರಮಣ ನಡೆಸು. ಇದು ಅತ್ಯಂತ ಸಾಹಸದ ಕಾದಾಟದ ಸಮಯವಲ್ಲ. ಕೇವಲ ಲೆಕ್ಕಾಚಾರದ ಅಪಾಯಗಳನ್ನು ಮಾತ್ರ ತೆಗೆದುಕೊಳ್ಳಿ. ಆದರೆ ಜೀವಕ್ಕೆ ಗಂಡಾಂತರಕಾರಿಯಾದದ್ದಾವುದನ್ನೂ ತೆಗೆದುಕೊಳ್ಳಬೇಡಿ. ನಾನು ಹಿಮ್ಮೆಟ್ಟಬೇಕೆಂಬ ಸಂಕೇತ ನೀಡಿದರೆ, ಷಫಿಖಾನ್‌ನ ಹಿಂಜರಿಕೆಯ ಯೋಜನೆ ಏಳರ ಮೇರೆಗೆ ತಕ್ಷಣ ಹಿಂದಕ್ಕೆ ತಿರುಗಿ.

ನಾವೆಲ್ಲ ಮತ್ತೆ ಮೂರನೇ ಬಿಡಾರದ ಬಳಿ ದಳಗಳನ್ನು ಪುನಾರಚಿಸಿಕೊಳ್ಳೋಣ ಹಾಗೂ ನಮ್ಮ ಮುಂದಿನ ಯುದ್ಧ ತಂತ್ರ ಹಾಗೂ ಮುಂದಿನ ಕಾರ್ಯ ವಿಧಾನವನ್ನು ಯೋಜಿಸೋಣ."

ಅವರೆಲ್ಲ ಅಲ್ಲಿಂದ ಹೊರಟ ಮೇಲೆ, ನಾನು ಮಣ್ಣಿನಿಂದ ನನ್ನ ಮುಖವನ್ನು ಸವರಿಕೊಂಡೆ ಮತ್ತು ಅಲ್ಲಿಂದ ಹೊರಟೆ. ಐದು ನಿಮಿಷಗಳಲ್ಲಿ ಸತ್ತ ಗುಜರಾತಿ ಸೈನಿಕನೊಬ್ಬನನ್ನು ಎಳೆದುಕೊಂಡು ಹಿಂದಕ್ಕೆ ಬಂದೆ. ಅವನ ಉಡುಪುಗಳನ್ನು ಕಳಚಿ ನಾನು ಧರಿಸಿಕೊಂಡೆ. ನನ್ನ ಖಡ್ಗದ ಒರೆ ತೀರಾ ಆಡಂಬರದ್ದೇನಲ್ಲ. ಹಾಗೆಂದು ಅದು ಸರಿಯಾಗಿ ಅನಾಮಧೇಯವೂ ಅಲ್ಲ. ನಾನು ಅವನ ಕತ್ತಿಯ ಅಲಗನ್ನು ಪರೀಕ್ಷಿಸಿ ನೋಡಿದೆ. ಝಹೀರ್-ಉಲ್-ಮುಲ್ಕ್ ವಿವರಗಳಿಗಾಗಿ ಒತ್ತಾಯಿಸುವ ಛಲವಾದಿ. ಅಲ್ಲದೆ ಅವನ ಕಡೆಯವರು ಮಾರಕ ಉಪಕರಣಗಳನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುತ್ತಿದ್ದರು. ನಾನು ಯೋಧನ ಖಡ್ಗದ ಪಟ್ಟಿಯನ್ನು ನನ್ನ ಸೊಂಟಕ್ಕೆ ಕಟ್ಟಿಕೊಂಡೆ. ಬೇಫ಼ಿಕೀರ್‌ನ ಜೀನನ್ನು ತೆಗೆದು ಅವನದನ್ನು ಹಾಕಿದೆ. ಶಿರಸ್ತ್ರಾಣ ನನಗೆ ಅಷ್ಟು ಸರಿಯಾಗಿ ಹೊಂದಿಕೊಳ್ಳಲಿಲ್ಲ. ಅದು ತೀರಾ ಅನನುಕೂಲಕರವಾದರೆ ನಾನು ಅದನ್ನು ಕಿತ್ತೆಸೆಯುವೆ. ಮುಖಕ್ಕೆ ಇನ್ನಷ್ಟು ಮಣ್ಣು ಸವರಿಕೊಳ್ಳಲು ಕೆಳಕ್ಕೆ ಬಗ್ಗಿದೆ. ರಾಜಾ ಪುರಜೀಕೀಕಾ ನನ್ನ ಮೇಲೆ ನಿಂತಿದ್ದರು. ಅವರು "ಜೋಪಾನ ಮಹಾರಾಜ್‌ಕುಮಾರ್ ನಿಮ್ಮ ಮೇಲೆ ನಾನೊಂದು ಕಣ್ಣಿಟ್ಟಿರುತ್ತೇನೆ" ಎಂದರು. ನಾನು ಅವರ ಮುಂಗೈಯನ್ನು ಮುಟ್ಟಿ ಅಲ್ಲಿಂದ ಮಾಯವಾದೆ. ಮಲ್ಲಿಕ್ ಅಯಾಝ್‌ನಂತಲ್ಲದೆ ಝಹೀರ್-ಉಲ್-ಮುಲ್ಕ್ ತನ್ನ ಸೈನಿಕರನ್ನು ಮುನ್ನಡೆಸುವುದರಲ್ಲಿ ವಿಶ್ವಾಸ ಹೊಂದಿದ್ದನು. ಅವನಿರುವ ಸ್ಥಳವನ್ನು ಪತ್ತೆ ಹಚ್ಚಲು ನನಗೆ ಕಿಂಚಿತ್ ಸಮಯ ಹಿಡಿಯಿತು. ನಮ್ಮ ಕಡೆಯ ಯೋಧರು ಎಲ್ಲ ಕಡೆ ಸಾಯುತ್ತಿದ್ದರು. ಊರಿಗೆ ವಾಪಸಾಗುವ ಹೊತ್ತಿಗೆ ಗುಜರಾತಿ ಸೇನಾಪಡೆಗಳ ಮೇಲೆ ಆ ಮೊದಲ ಬೆಳಿಗ್ಗೆ ನಾವು ಮಾಡಿದ ರಭಸದ ಆಕ್ರಮಣದ ಪುನರಭಿನಯವಾಗಿತ್ತು. ಮೇವಾಡದ ಯೋಧನೊಬ್ಬ, ಅಷ್ಟೇನೂ ಗಮನ ಸೆಳೆಯದಂತಿದ್ದು ಯುದ್ಧ ಮಾಡುವುದನ್ನು ತಪ್ಪಿಸುತ್ತಿದ್ದ ನನ್ನನ್ನು ಗುರುತಿಸಿದನು. ಅವನು ತನ್ನ ಕುದುರೆಯನ್ನು ಲಗಾಮಿನಿಂದ ನಿಯಂತ್ರಿಸುತ್ತ ನೇರವಾಗಿ ನನ್ನತ್ತ ಬಂದನು. ಕೆಲವು ಗುಜರಾತಿ ಯೋಧರು ನನ್ನನ್ನು ಎಡೆಬಿಡದೆ ಗಮನಿಸುತ್ತಿದ್ದರು. ಅವನ ಮೊದಲ ಹೊಡೆತ ನನ್ನ ಶಿರಸ್ತ್ರಾಣದ ಮೇಲೆ ಬಿತ್ತು. ಎರಡನೆಯದನ್ನು ನನ್ನ ಕುತ್ತಿಗೆಗೆ ಗುರಿಯಿಡಲಾಗಿತ್ತು. ಪ್ರಿಯ ಗೆಳೆಯಾ ನೀನು ಮೊದಲ ಸಲಕ್ಕೇ ನನ್ನನು ಹಿಡಿಯಬೇಕಿತ್ತು ಎಂದುಹೇಳುತ್ತ ನನ್ನ ಖಡ್ಗವನ್ನು ಅವನ ಹೊಟ್ಟೆಗೆ ತಿವಿದೆ. ಅವನು ಮುಂದಕ್ಕೆ ಬಿದ್ದನು. ಆದರೆ, ಹೇಗೋ ಏನೋ ತನ್ನ ಜೀನಿಗೇ ಅಂಟಿಕೊಳ್ಳುವುದರಲ್ಲಿ ಯಶಸ್ವಿಯಾದನು. ಕುದುರೆಯ ತಲೆಗೆ ಝಾಡಿಸಿ ಒದ್ದೆ. ಅದು ಅತ್ಯಂತ ವೇಗವಾಗಿ ಹಿಮ್ಮೆಟ್ಟುತ್ತಿರುವ ರಜಪೂತ ಸೇನಾ ದಳಗಳ ದಿಕ್ಕಿನಲ್ಲಿ ಓಡಿಬಿಟ್ಟಿತು.

ಸೇನೆಯ ದಳಪತಿಯ ಸಮೀಪಕ್ಕೆ ಹೋಗುವುದು ತುಂಬ ಕಷ್ಟದ್ದು. ಅವನ ಸುತ್ತಲೂ ಭಯಂಕರ ಹೋರಾಟ ನಡೆದಿತ್ತು. ನನಗೆ ಅದಾವುದೂ ಬೇಡವಾಗಿತು. ನನ್ನಿಂದ ಕೂಗಳತೆಯ ದೂರದಲ್ಲಿದ್ದಾಗಲೆಲ್ಲ ಝಹೀರ್-ಉಲ್-ಮುಲ್ಕ್ ನನ್ನಿಂದ ದೂರಕ್ಕೆ ಸರಿದು ಬಿಡುವಂತೆ ಕಂಡಿತು. ನಾನು ಗುಜರಾತಿ ಸೈನಿಕನ ಉಡುಪು ಧರಿಸಿರಬಹುದು ಆದರೆ ನಾನು ಪಕ್ಕಕ್ಕೆ ಸರಿಯುವ ರೀತಿ (ಪಾರ್ಶ್ವ ಮುನ್ನಡೆ) ಇಡೀ ಗುಜರಾತಿ ದಳದ ಸೇನಾದಳದ ಗಮನಸೆಳೆದಿತ್ತು. ನನಗಿದ್ದ ಒಂದೇ ಭರವಸೆ ಎಂದರೆ, ಸಿದ್ಧತೆಯಿಲ್ಲದ ಶತ್ರುವನ್ನು ಕೊಲ್ಲುವುದರಲ್ಲಿ ಇರುವ ಹಾಗೂ ಸೇಡು ತೀರಿಸಿ ಕೊಳ್ಳುವುದರಲ್ಲಿ ಇರುವ ಸಂತೋಷ

ಇವುಗಳು ಗುಜರಾತಿಗಳು ಅನ್ಯ ಮನಸ್ಕರಾಗುವಂತೆ ಮಾಡುತ್ತವೆ ಎಂಬುದು. ಇದು ಎಲ್ಲಿಯವರೆಗೂ ಹೋದೀತು? ರಾಜಾ ಪೂರಜೀ ಕೀಕಾ ನನಗೆ ಹೆಚ್ಚಿನ ಗಂಡಾಂತರವನ್ನು ತಂದುಕೊಟ್ಟಿದ್ದರೆಂದು ನನಗೆ ಗೊತ್ತಿತ್ತು. ನನ್ನ ಹಾಗೆ ಅವರಿಗೆ ಮಾರು ವೇಷವಿರಲಿಲ್ಲ ಮತ್ತು ನನ್ನನ್ನು ಹಿಂಬಾಲಿಸಿ ಬರುತ್ತಲೇ ತನ್ನ ಜೀವ ರಕ್ಷಿಸಿಕೊಳ್ಳಲು ಹೋರಾಡಬೇಕಾಗಿದೆ.

ನಾನು ಅಲ್ಲಿದ್ದೆ. ಶತ್ರುಸೈನ್ಯದ ಚಕ್ರವ್ಯೂಹವನ್ನು ಭೇದಿಸಿದ ಅಭಿಮನ್ಯುವಿಗೆ ಏನು ಅನ್ನಿಸಿರಬಹುದೆಂಬುದರ ಸುಳಿವು ನನಗೆ ಇದ್ದಿತು. ಇಲ್ಲಿಂದ ಹೇಗೆ ಹೊರಗೆ ಹೋಗಲಿ? ಇಷ್ಟಾದರೂ ನನ್ನ ಮುಂದೊಂದು ಕೆಲಸವಿತ್ತು.

"ಈ ಪೀಡೆಯನ್ನು ತೊಲಗಿಸಿ"

ನನ್ನ ಬಗ್ಗೆ ಝಹೀರ್-ಉಲ್-ಮುಲ್ಕ್ ಹೀಗೆ ಹೇಳುತ್ತಿದ್ದಾನೆಂದು ಕೊಂಡೆ. ನನ್ನ ಉಡುಪು ಮತ್ತು ವೇಷ ಅಷ್ಟೊಂದು ಸುವ್ಯಕ್ತವೇ? ಅಥವಾ ನಾನು ಗಹಗಹಿಸಿ ನಗಲು ಹೊರಟಿದ್ದೆನೆ, ಎಂಥ ಪ್ರಸಾಧನವೂ ಮುಚ್ಚಿಡಲಾರದಷ್ಟರ ಮಟ್ಟಿಗೆ, ನಂಬಲು ಸಾಧ್ಯವಾಗದಷ್ಟು ಸ್ಫುರದ್ರೂಪಿ ಮತ್ತು ವಿಶಿಷ್ಟ ವ್ಯಕ್ತಿ ನಾನೆ?

"ನಾನು ಅಲ್ಲಿ 'ರಾಜ'ನನ್ನು ನೋಡಿಕೊಳ್ಳುತ್ತೇನೆ. ಏ ಕತ್ತೆ ನೀನು ಇಲ್ಲಿ ಈ ಪೀಡೆಯನ್ನು ತೊಲಗಿಸು" ಎಂದು ಪೂರಜಿಕೇಕಾನ ಪಕ್ಕದಲ್ಲಿದ್ದ ಭಿಲ್ ಯೋಧನೊಬ್ಬನ ಕಡೆ ಬೆರಳು ಮಾಡಿ ತೋರುತ್ತ ಮತ್ತೆ ಅದನ್ನೇ ಹೇಳಿದನು.

'ಆಗಲಿ ಮಹಾಸ್ವಾಮಿ' ಎಂದು ನಾನು ಹೇಳಿ. ನನ್ನ ಖಡ್ಗವನ್ನು ಮೇಲೆತ್ತಿದೆ. ಸರಿಯಾಗಿ ಮಾಡು ಪೀಡೆ, ನಿನಗೆ ಸಿಕ್ಕುವ ಅವಕಾಶ ಇದೊಂದೇ. ಒಂದೇ ಹೊಡೆತಕ್ಕೆ ನಾನು ರುಂಡವನ್ನು ಮುಂಡದಿಂದ ಬೇರ್ಪಡಿಸಬೇಕು. ಹಾಗೆ ಮಾಡದೆ ಹೋದರೆ, ಕೆಲಸ ಅರ್ಧಂಬರ್ಧವಾಗುತ್ತದೆ. ಹೆಚ್ಚಿನ ಆಧಾರವನ್ನು ಪಡೆಯುವ ಸಲುವಾಗಿ ರಿಕಾಪಿನ ಮೇಲೆ ಕಾಲಿಟ್ಟು ನಾನು ಎದ್ದು ನಿಂತಾಗ, ನನ್ನ ಕೈನ ಮತ್ತು ಖಡ್ಗದ ಕೋನದಲ್ಲಿ ಏನೋ ಕ್ರಮ ತಪ್ಪಿದೆ ಎಂದು ಝಹೀರ್ ಉಲ್ ಮುಲ್ಕ್‌ಗೆ ಅರ್ಥವಾಗಿದ್ದಿರಬೇಕು. ಆದರೆ ಅಷ್ಟು ಹೊತ್ತಿಗೆ ಖಡ್ಗದ ಅಲಗು ತನ್ನ ದಾರಿಯಲ್ಲಿ ಕೆಳಗೆ ಬಂದು ಬಿಟ್ಟಿತ್ತು. ಕಾರ್ಯದ ಮಧ್ಯದಲ್ಲಿರುವಾಗಲೇ ನಾನು ಅವನನ್ನು ತಡೆದಿದ್ದೆ. ಅವನ ಶಿರಸ್ತ್ರಾಣದಿಂದ ನೇತಾಡುತ್ತಿದ್ದ, ಸರಪಳಿಯಿಂದ ಬಿಗಿಯಲ್ಪಟ್ಟಿದ್ದ ಉಕ್ಕಿನ ಕವಚವು, ಹಕ್ಕಿಯ ರೆಕ್ಕೆಗಳಂತೆ ಮೇಲಕ್ಕೆದ್ದಿತು. ಅದು ಯಾವಾಗೆಂದರೆ ಅವನು ರಾಜಾಪುರಜೀ ಕೀಕಾನತ್ತ ಹಾರಿ ಅವರನ್ನು ಖಡ್ಗದಿಂದ ಇನ್ನೇನು ಇರಿಯ ಬೇಕೆಂದಿದ್ದಾಗ. ಒಂದು ಕ್ಷಣಕಾಲ ಸೇನಾಧಿಪತಿಯ ಕೊರಳು ಹೊರಗೆ ಕಾಣಿಸಿಕೊಂಡಿತು. ಅವನನ್ನು ಘಾತಿಸಲು ಇಷ್ಟು ಸಮಯ ನನಗೆ ಸಾಕಿತ್ತು. ಅದೊಂದು ಸೂಕ್ಷ್ಮ ಕೌಶಲವಿಲ್ಲದ ಹೊಡೆತ. ಆದರೆ ಅದು ತನ್ನ ಕೆಲಸವನ್ನು ಮಾಡಿಬಿಟ್ಟಿತು. ಖಡ್ಗವು ಕೊರಳನ್ನು ತುಂಡರಿಸಿತು ಮತ್ತು ರುಂಡವು ಗುಜರಾತಿ ಸೈನಿಕನೊಬ್ಬನ ಹೆಗಲ ಮೇಲೆ ಹಾರಿ ಬಿದ್ದು ನಂತರ ರಾಜಾಪುರಜೀ ಕೀಕಾನಿಂದ ಒಂದೆರಡು ಗಜಗಳ ದೂರದಲ್ಲಿ ನೆಲದ ಮೇಲೆ ಬಿತ್ತು. ಅವನ ಶರೀರವು ಸ್ವಲ್ಪ ಸೊಟ್ಟಗಿತ್ತು. ಅಷ್ಟಾದರೂ ನೇರವಾಗಿತ್ತು. ಅವನ ಕೈಯಲ್ಲಿ ಒಂದು ತೀವ್ರ ಸೆಳೆತ ಕಾಣಿಸಿಕೊಂಡಿತು. ಆದರೆ ಖಡ್ಗ ಕೈಯಿಂದ ಕೆಳಗೆ ಬಿತ್ತು.

ಕತ್ತರಿಸಿದ ಭಾಗದ ಪಾರ್ಶ್ವ ನೋಟ ಕಾಣುತ್ತಿದೆ. ಕುತ್ತಿಗೆ ಎಡಭಾಗಕ್ಕಿಂತ ಬಲಭಾಗದಲ್ಲೇ ಹೆಚ್ಚು ಇತ್ತು. ಇನ್ನೂರು ವರ್ಷಗಳಷ್ಟು ಹಳೆಯದಾದ ಮರಗಳಿಗೆ ಕೊಡಲಿ ಹಾಕಿದಾಗ ಅವುಗಳಿಂದ ಥಟ್ಟನೆ ದ್ರವ ಉಕ್ಕಿ ಹರಿದು ಇಡಿಯಾಗಿ ಮರ ಗಲೀಜಾಗದೆ ಇರುತ್ತದಲ್ಲ ಅದು ಹೇಗೆ? ಅವನು ಧರಿಸಿದ ಕವಚದಿಂದ ರಕ್ತದ ಕೆಂಪು ತೊರೆಗಳು ಛಿಲ್ಲೆಂದು

ವೇಗವಾಗಿ ಹರಿಯತೊಡಗಿದ್ದುವು. ರಕ್ತದ ಸುಗಮ ಹರಿವಿಗೆ ದಾರಿ ಮಾಡಿಕೊಡಲು ಕುತ್ತಿಗೆಯನ್ನು ಕತ್ತರಿಸಲಾದ ಭಾಗದ ರಕ್ತ ನಾಳಗಳು ಹಿಗ್ಗಲಿಸಿದವು. ಕುತ್ತಿಗೆ ಕಂಬ ಎತ್ತರವಾಗಿದ್ದ ಕಡೆ; ರಕ್ತ ನಾಲ್ಕೈದು ಅಂಗುಲ ಎತ್ತರಕ್ಕೆ ಚಿಮ್ಮಿತು, ನಂತರ ಕೆಳಮುಖವಾಗಿ ಹರಿದು ಆಮೇಲೆ ತಗ್ಗಿತು. ಶರೀರ ತುಯ್ದಾಡಿದಾಗಲೆಲ್ಲ ಗಂಟಲಿನಲ್ಲಿ ಪಾರದರ್ಶಕವಾದ ಕೆಂಪು ಗುಳ್ಳೆ ಉಂಟಾಗುತ್ತಿತ್ತು. ಅದು ಒಡೆದಾಗ ಸಣ್ಣ ಕಣಗಳ ತುಂತುರು ಹನಿ ಸುತ್ತಲೂ ಬೀಳುತ್ತಿತ್ತು. ಕೆಳಗಿಳಿಯುತ್ತಿದ್ದ ರಕ್ತದ ತೆಳು ಗೆರೆಗಳು ಆಗಲೇ ಗಟ್ಟಿಯಾಗ ತೊಡಗಿದ್ದುವು. ನಾನು ಅಸಂಖ್ಯಾತ ಜನಗಳನ್ನು ಕೊಂದಿದ್ದೆ. ಆದರೆ, ಮುಂದೆ ನಾನು ಜ್ವರ ಹಿಡಿದು ನನಗೆ ನಾನೇ ಏನೇನೋ ಮಾತಾಡಿಕೊಳ್ಳುತ್ತಿರುವಾಗಲೆಲ್ಲ ನನಗೆ ಜೊತೆಗೊಡುವುದು ಸೇನಾಧಿಪತಿಯ ಕತ್ತರಿಸಿದ ಕುತ್ತಿಗೆಯೇ. ಗುಜರಾತಿ ಪಡೆಗಳು ತಮ್ಮವನೊಬ್ಬನಿಂದ ತಮ್ಮ ಮಹಾದಂಡನಾಯಕನ ಕೊಲೆಯಾದದ್ದನ್ನು ಗ್ರಹಿಸಲಾರದೆ ದಿಗ್ಭ್ರಮೆಗೊಂಡು ನಿಂತಿದ್ದವು. ಅವರಲ್ಲೊಬ್ಬ ದ್ರೋಹಿ ಎಂದು ಪಿಸುಗುಟ್ಟುತ್ತ ನನ್ನತ್ತ ಥಟ್ಟನೆ ಮುನ್ನುಗ್ಗಿದಾಗ ನಾನು ಬಂದೆ. ಸೇನಾಧಿಪತಿಯ ಎದೆಯ ಮೇಲಿನ ಉಕ್ಕಿನ ಕವಚದೊಳಕ್ಕೆ ಜೋರಾಗಿ ತಿವಿದೆ. ಅದರಿಂದ ಸೇನಾಧಿಪತಿಯ ದೇಹ ಅಡಿ ಮೇಲಾಗಿ ಉರುಳಿದ್ದನ್ನು ನೋಡಿದೆ. ಸೇನಾಧಿಪತಿಯನ್ನು ತುಳಿಯುವುದನ್ನು ತಪ್ಪಿಸಲು ಆ ಮನುಷ್ಯ ತನ್ನ ಕುದುರೆಯನ್ನು ಹಿಂದಕ್ಕೆಳೆಯ ಬೇಕಾಯಿತು. ರಾಜಾ ಪೂರಜೀ ಕೀಕಾ ನಮ್ಮ ಉಡುಪಿನ ಮೇಲೆ ಇದ್ದ ಸೇನಾಧಿಪತಿಯ ತಲೆಗೆ ಈಟಿಯಿಂದ ಚುಚ್ಚಿ ಅದನ್ನು ಮೇಲಕ್ಕೆ ಎತ್ತಿ ಹಿಡಿದು ಝಹೀರ್–ಉಲ್–ಮುಲ್ಕ್ ಮೃತನಾಗಿದ್ದಾನೆ, ಝಹೀರ್–ಉಲ್ಕ್–ಮುಲ್ಕ್ ಮೃತನಾಗಿದ್ದಾನೆ ಎಂದು ಜೋರಾಗಿ ಕೂಗುತ್ತ ವೇಗವಾಗಿ ಓಡುತ್ತಿದ್ದಂತೆ ನಾನು ನನ್ನ ಖಡ್ಗವನ್ನು ಒರಟಾಗಿ ಉನ್ಮತ್ತನಂತೆ ಬೀಸುತ್ತ ರಭಸದಿಂದ ಮುನ್ನುಗ್ಗಿದೆ.

ಗುಜರಾತಿ ಪಡೆಗಳ ಮೇಲೆ ಆ ಶಬ್ದಗಳುಂಟು ಮಾಡಿದ ಪರಿಣಾಮವನ್ನು ವಿವರಿಸಲಸಾಧ್ಯ. ಅವರು ಸತ್ತಂತೆ ನಿಂತರು. ನನ್ನ ಬೆನ್ನಟ್ಟಿ ಹೊರಟವರೂ ಅದೇ ರೀತಿ ಸತ್ತಂತಾಗಿ ಬಿಟ್ಟರು. ಇನ್ನು ಕೆಲವೇ ಕ್ಷಣಗಳಲ್ಲಿ ಅವರು ಜೀವ ತಳೆದು ನನ್ನನ್ನು ಅಟ್ಟಿಸಿಕೊಂಡು ಬರುವುದಕ್ಕೆ ಮುಂಚೆ, ನನ್ನ ಮುಖಕ್ಕೆ ಬಳಿದುಕೊಂಡಿದ್ದ ಮಣ್ಣನ್ನು ಒರೆಸಿಕೊಂಡೆ. ಹೊದಿಕೆಯನ್ನು ಹರಿದು ಹಾಕಿದೆ, ಪ್ರತಿಯೊಬ್ಬರನ್ನೂ ಕರೆತನ್ನಿ ಎಂದು ಸೈನಿಕರಿಗೆ ಜೋರಾಗಿ ಕೂಗು ಹಾಕಿದೆ. ರಾಜಾ ಪೂರಜೀ ಕೀಕಾ ಹಿಂದಕ್ಕೂ ಮುಂದಕ್ಕೂ ನಾಗಾಲೋಟದಲ್ಲಿ ಕುದುರೆ ಓಡಿಸಿದರು. ಝಹೀರ್–ಉಲ್–ಮುಲ್ಕ್ ಸತ್ತಿದ್ದಾನೆ. ಅವನ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಮಾತುಗಳು ಅವನ ಕಂಠದಿಂದ ಗಟ್ಟಿಯಾಗಿ ಪ್ರತಿಧ್ವನಿಸಲ್ಪಡುತ್ತಿದ್ದುವು. ಸೇನಾಧಿಪತಿಯ ತಲೆ ನಮ್ಮೆಲ್ಲರಿಗಿಂತ ಎತ್ತರದಲ್ಲಿ ಇದ್ದು ರಾಜಾ ಪೂರಜೀ ಕೀಕಾ ನನ್ನ ಪಕ್ಕದಲ್ಲಿ ಸ್ಥಿರವಾಗಿ ನಿಲ್ಲುವವರೆಗೂ ಅತ್ತ ಇತ್ತ ಒಲೆದಾಡುತ್ತಿತ್ತು. ತೇಜ್, ಷಫ್ಜಿ ಮತ್ತು ರಾವ್ ವೀರಮ್‌ದೇವ್ ನಮ್ಮನ್ನು ಕೂಡಿಕೊಂಡರು. ಕಾಲವನ್ನು ವ್ಯರ್ಥವಾಗಿ ಕಳೆಯುವಂತಿರಲಿಲ್ಲ. ಹೊರಡೋಣ, ಗುಜರಾತ್ ಶಿಬಿರವನ್ನು ವಶಪಡಿಸಿಕೊಳ್ಳೋಣ ಎಂಬ ನನ್ನ ಕಂಠಧ್ವನಿ ಸ್ವರ್ಗ ನರಕಗಳ ತುದಿಯವರೆಗೂ ಕೇಳಿಸಿರಬೇಕು.

ಅಧ್ಯಾಯ 21

ನಾವು ಮರುದಿನ ಬೆಳಿಗ್ಗೆ ಇದಾರ್‌ಗೆ ಹೊರಟೆವು. ನಾನೇಕೆ ಅಷ್ಟೊಂದು ಅವಸರದಲ್ಲಿದ್ದೇನೆಂದು ರಾವ್ ವೀರಮ್ ದೇವ್‌ಗೆ ಆಶ್ಚರ್ಯ. ಆದರೆ ಅವರು ಇಂಥ ತೀರ ವೈಯಕ್ತಿಕ ಪ್ರಶ್ನೆಯನ್ನು ಕೇಳದೆ ಇರುವಂಥ ಸಭ್ಯ ಮತ್ತು ಸುಸಂಸ್ಕೃತ ವ್ಯಕ್ತಿ. ರಾತ್ರಿಯ ಹೊತ್ತಿಗೆ ನಾವು ಈ ಸಣ್ಣ ಸಾಮ್ರಾಜ್ಯದ ಬಾಗಿಲಲ್ಲಿದ್ದೆವು. ಮೇವಾಡ ಮತ್ತು ಅದರ ಮಿತ್ರ ರಾಜ್ಯಗಳ ಯೋಧರು ಅಷ್ಟೊಂದು ಜನರು ಜೀವ ತೆರುವಂತೆ ಮಾಡಿದ ಮತ್ತು ನನ್ನ ಜೀವನದ ಪೂರ್ತಿ ಹದಿನೆಂಟು ತಿಂಗಳುಗಳನ್ನು ತಡೆದದ್ದು ಇದೇ ಇದಾರ್. ಇತ್ತೀಚೆಗೆ ತಾನೆ ಸಿಂಹಾಸನದಿಂದ ಇಳಿಸಲಾಗಿದ್ದ ಮಹಾರಾಜ ಮತ್ತು ಭಾವೀ ಮಹಾರಾಜ ಇಬ್ಬರೂ ನಮ್ಮೊಂದಿಗೆ ಇದ್ದರು. ನನ್ನ ಸಹಾನುಭೂತಿ ಇದ್ದುದು, ತಾತ್ಕಾಲಿಕವಾಗಿಯಾದರೂ ಸರಿ, ತನ್ನ ರಾಜ್ಯ ಕಳೆದುಕೊಂಡಿದ್ದ ವ್ಯಕ್ತಿಯೊಂದಿಗೆ, ಭರ್ಮಲ್ ನನಗೆ ಅಷ್ಟು ಚೆನ್ನಾಗಿ ಗೊತ್ತಿರಲಿಲ್ಲ, ಆದರೆ ಆತ ಕಾರ್ಯಪ್ರವೃತ್ತನಾಗಿ ನಾನು ಅವನನ್ನು ಏನು ಕಂಡಿದ್ದೆ ಅದು ನನಗೆ ಇಷ್ಟವಾಗಿತ್ತು. ಅವನು ಪಕ್ವವಾದ ವ್ಯಕ್ತಿಯಾಗಿದ್ದ. ಹಾಗಾಗಿ ತನ್ನ ಸೋಲನ್ನು ಮೌನ ಗಾಂಭೀರ್ಯದಿಂದ ಸಹಿಸಿದನು. ಅವನನ್ನು ನನ್ನ ಭಾವ ಮೈದುನನಿಗೆ ವಿನಿಮಯ ಮಾಡಿಕೊಂಡು ನಮ್ಮ ಮಿತ್ರನನ್ನಾಗಿ ಮಾಡಿಕೊಳ್ಳಬೇಕೆಂದಿದ್ದೆ. ಅವನು ಜೀವಂತವಾಗಿರುವವರೆಗೂ ರಾವ್ ರೈಮಲ್ ರಾಜಸಿಂಹಾಸನದ ಮೇಲೆ ಸ್ಥಿರವಾಗಿ ತಳವೂರಲಾಗುವುದಿಲ್ಲವೆಂದು ನನಗೆ ತಿಳಿದಿತ್ತು. ನನ್ನ ತಂಗಿಯ ಗಂಡನನ್ನು ಅದೆಷ್ಟು ಗಾಢವಾಗಿ ದ್ವೇಷಿಸುತ್ತಿದ್ದೆನೋ. ನಿನ್ನೆ ದಿನ ಅವನು ಹೆಚ್ಚು ಕಡಮೆ ನಮಗೆಲ್ಲರಿಗೂ ಅಷ್ಟೊಂದು ಹಾನಿ ಮಾಡಿದ್ದಕ್ಕೆ ನಾನು ಅವನನ್ನು ಅದೆಷ್ಟೇ ನಿಂದಿಸಿದರೂ, ದೊಡ್ಡ ಗಂಡಾಂತರವನ್ನು ತಂದುಕೊಂಡದ್ದಕ್ಕೆ ನನ್ನನ್ನು ನಾನೇ ನಿರಪರಾಧಿ ಎಂದು ತೀರ್ಮಾನಿಸಲಾರದಾದೆ.

ಅಂತಿಮವಾಗಿ ನಾನು ನಾಯಕನೆನಿಸಿದೆ, ಸರಿಯೆ. ಆ ದಿನ ಸಂಜೆ, ರಾವ್ ಭರಮಲ್ ಶರಣಾಗತಿಯ ಕಾಗದ ಪತ್ರಗಳಿಗೆ ಸಹಿಹಾಕಿದ ಮೇಲೆ, ನಾವು ಗುಜರಾತಿ ಪಡೆಯ ಸೈನಿಕರನ್ನೆಲ್ಲಾ ಶಸ್ತ್ರರಹಿತರನ್ನಾಗಿಸಿದ ಮೇಲೆ, ಮೇವಾಡದ ಸೇನೆ ಹಾಗೂ ಮೇವಾಡದ ಮಿತ್ರಸೇನೆಗಳು ನನ್ನನ್ನು ತಮ್ಮ ಭುಜದ ಮೇಲೆ ಕೂಡಿಸಿಕೊಂಡು, "ಮಹಾರಾಜ್‌ಕುಮಾರರಿಗೆ ಜಯವಾಗಲಿ" ಮತ್ತು ಮಹಾರಾಜ್‌ಕುಮಾರ್ ನೂರ್ಕಾಲ ಬಾಳಲಿ ಎಂದು ಅರ್ಧ ರಾತ್ರಿಯ ತನಕ ಜೋರಾಗಿ ಘೋಷಣೆಯನ್ನು ಕೂಗಿದವು. ಹೊಸರೀತಿಯ ಸಮರ ಕಲೆಯಲ್ಲಿ ನಾನು ಅವರನ್ನು ತರಬೇತಿಗೊಳಿಸಿದ್ದೆ; ಒಂದು ವರ್ಷಕ್ಕಿಂತ ಹೆಚ್ಚಿನ ಸಮಯದಿಂದ,

ಸ್ನೇಹದಿಂದ ಅವರನ್ನು ಒಲಿಸಿಕೊಳ್ಳಲು ಯತ್ನಿಸಿದ್ದೆ. ಈಗ ಒಂದು ಮೂರ್ಖ ನಡೆಯಿಂದ, ಅವರೆಲ್ಲರೂ ನನ್ನನ್ನು ಗಣನೆಗೇ ತೆಗೆದುಕೊಳ್ಳದ ಹಾಗೆ ಮಾಡಿಕೊಂಡಿದ್ದೆ. ಅವರೆಲ್ಲರೂ ನನ್ನ ಸೇವಕರಾಗಲು ಸಿದ್ಧರಿದ್ದರು. ನನ್ನ ಅಪ್ಪಣೆಯನ್ನು ಪಾಲಿಸಲು ಸಿದ್ಧರಿದ್ದರು. ಆ ರಾತ್ರಿಯೇ ಇಬ್ರಾಹಿಂಲೂದಿಯೊಂದಿಗೆ ಯುದ್ಧ ಮಾಡಲು ಆಗಿಂದಾಗಲೇ ದೆಹಲಿಗೆ ನಡೆದು ಬಿಡಲು ಸಿದ್ಧರಿದ್ದರು. ಇನ್ನೂ ಏನೇನೆಲ್ಲಾ ಮಾಡುವುದಾಗಿ ಆ ರಾತ್ರಿ ಅವರು ವಚನ ಕೊಟ್ಟರೋ ಆ ದೇವರಿಗೆ ಗೊತ್ತು. ಎಲ್ಲಿಯವರೆಗೆ ಇದು ನಡೆಯುತ್ತದೆಂದು ನನಗೆ ನಾನೇ ಕೇಳಿಕೊಂಡೆ. ಅವರೆಲ್ಲರ ಮನವೊಲಿಸಿಕೊಂಡು ಅವರನ್ನು ನನ್ನ ವಿರುದ್ಧ ಎತ್ತಿಕಟ್ಟಲು ವಿಕ್ರಮಾದಿತ್ಯನಿಗೆ ಎಷ್ಟು ಕಾಲ ಹಿಡಿಸೀತು? ಶತ್ರುವಿನೊಂದಿಗೆ ಮುಖಾಮುಖಿ ಯುದ್ಧಮಾಡುವ ತಮ್ಮ ಹಳೆಯ ವಿಧಾನಕ್ಕೆ ಅವರೆಷ್ಟು ಬೇಗ ವಾಪಸಾಗುವರೊ? ಆದರೆ ಅದು ಸ್ವಲ್ಪವೂ ಪ್ರಸ್ತುತವಲ್ಲದ ವಿಷಯ. ರಾವ್ ವೀರಮ್‌ದೇವ್ ಅವರನ್ನೂ ಒಳಗೊಂಡಂತೆ ಎಲ್ಲ ಮುಖಂಡರೂ, ನನ್ನ ಹೊರತು ಬೇರಾರೂ ಸದ್ಯದಲ್ಲೇ ಸನ್ನಿಹಿತವಾಗಲಿರುವ ಸಂಪೂರ್ಣ ಸೋಲನ್ನು ವಿಜಯದಲ್ಲಿ ಪರಿವರ್ತಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದ್ದರು. ಅವರೆಲ್ಲರೂ ಆಗಲೇ ಕೈಚೈಲ್ಲಿ ಕೂತಿದ್ದಾಗ, ನಾನೊಬ್ಬನೇ ಸ್ಪಷ್ಟವಾಗಿ ಸರಿಯಾಗಿ ಯೋಚಿಸಿತ್ತಿದ್ದು ನಾವು ಅಸಾಧಾರಣ ಕ್ರಮಗಳನ್ನು ತೆಗೆದುಕೊಳ್ಳದೆ ಬೇರೆ ಮಾರ್ಗವಿಲ್ಲ ಎಂದು ಗ್ರಹಿಸಿದ್ದುದಾಗಿ ತಿಳಿಸಿದರು. ಆದರೆ ಸ್ಪಷ್ಟವಾದ ಪರ್ಯಾಯ ಮಾರ್ಗವೊಂದಿತ್ತು. ಅದನ್ನು ನಾನು ಸ್ಪಷ್ಟವಾಗಿ ರೂಪಿಸಿ ನಿರಂತರವಾಗಿ ಮತ್ತೆ ಮತ್ತೆ ಒತ್ತಿ ಹೇಳಿದ್ದೆ. ಹಿಂಜರಿಕೆ. ನಮ್ಮ ಗುದಗಳನ್ನು ಉಳಿಸಿಕೊಂಡು ಜೀವ ಉಳಿಸಿಕೊಳ್ಳಲು ಓಡುವುದು. ಸಹಜವಾಗಿಯೇ ನಾನು ನನ್ನದೇ ಸೂತ್ರವನ್ನು ಕಡೆಗಣಿಸಿದ್ದೆ. ನನ್ನ ಪ್ರತಿನಿಧಿಯೇನಾದರೂ ನಾನು ಮಾಡಿದ ಹಾಗೆ ಮಾಡಿದ್ದರೆ, ಅವನನ್ನು ಅವನ ಪದವಿಯಿಂದ ಕಿತ್ತು ಹಾಕಿ, ಮೇವಾಡದಿಂದ ಗಡೀಪಾರು ಮಾಡಿಬಿಡುತ್ತಿದ್ದೆ. ನಮ್ಮನ್ನೇ ನಾವು ಕ್ಷಮಿಸಲು ಅದು ಹೇಗೆ ಸಿದ್ಧರಿರುತ್ತೇವೆ. ಹತಾಶೆಗೂ ಮೀರಿದ ಸನ್ನಿವೇಶದಲ್ಲಿ ನಾನು ನನ್ನ ಜೀವವನ್ನು ಅಪಾಯಕ್ಕೊಡ್ಡಿದ್ದೆ. ನಾನೊಂದು ವೇಳೆ ಕೊಲ್ಲಲ್ಪಟ್ಟಿದ್ದರೆ, ನನ್ನ ಸಹೋದ್ಯೋಗಿಗಳು, ನಮ್ಮ ಸೇನೆಯನ್ನು ಏನು ಮಾಡುತ್ತಿದ್ದರು.... ಅದಕ್ಕಿಂತಲೂ ಕೆಟ್ಟದ್ದೆಂದರೆ, ನನ್ನನ್ನು ಪತ್ತೆಹಚ್ಚಿ ಸೆರೆಹಿಡಿದು ಕೈದಿಯಾಗಿ ಮಾಡಿದ್ದರೆ ಏನಾಗುತ್ತಿತ್ತು? ಗುಜರಾತಿನ ದಂಡನಾಯಕನನ್ನು ನಾನು ಕೊಂದಾಗ, ಗುಜರಾತಿನ ಸೇನೆಗೆ ಯಾವ ದುರ್ಗತಿ ಸಂಭವಿಸಿತೋ ಅದೇ ದುರ್ಗತಿ ನಮ್ಮದೂ ಆಗುತ್ತಿತ್ತು. ನಾಯಕನಿಲ್ಲದ ಸೇನೆ ಆ ಕೂಡಲೇ ಕುಸಿದು ಬೀಳುತ್ತದೆ. ಅಂಥ ಒಂದು ಅಕ್ಷಮ್ಯವಾದ ಹದಿ ವಯಸ್ಸಿನ ನಡೆಯಿಂದ ರಜಪೂತರಲ್ಲಿ ಗೆರಿಲ್ಲಾ ಯುದ್ಧ ವಿಧಾನಕ್ಕೆ ಶತಮಾನಗಳವರೆಗೆ ಅಲ್ಲವಾದರೆ ಕೆಲವು ದಶಕಗಳವರೆಗೆ ಹಿನ್ನಡೆ ಉಂಟು ಮಾಡಿಬಿಡುತ್ತಿದ್ದೆ.

ನಾನು ಊರಿಗೆ ಹೋಗುವ ಅವಸರದಲ್ಲಿದ್ದೇನೆಂದು ಯೋಚಿಸಿದ್ದರೆ, ಸಿಂಹಾಸನವನ್ನೇರಲು ರಾವ್ ರೈಮಲ್ ತೋರಿಸುತ್ತಿದ್ದ ಆತುರ ನಗೆಪಾಟಲಿನ ಅಂಚನ್ನು ಮುಟ್ಟಿತ್ತು. ಬೆಳಗಿನ ಜಾವ ಐದೂವರೆ ಗಂಟೆಯ ಸಮಯದಲ್ಲಿ ಅವನು ನನ್ನ ಕೊಠಡಿಯ ಬಾಗಿಲು ತಟ್ಟಿ, ಉಡುಪು ಧರಿಸಿಕೊಂಡು. ತನ್ನ ಪಟ್ಟಾಭಿಷೇಕ ಸಮಾರಂಭಕ್ಕೆ ಕೆಳಗಿಳಿದು ಬರಬೇಕೆಂದು ಹೇಳಿದ್ದನು. ಆರಂಭದಲ್ಲಿ ಹದಿನೈದು ನಿಮಿಷಗಳ ನಂತರ, ಮತ್ತೆ ಬಂದಿದ್ದನು. ಆರೂ ಮುಕ್ಕಾಲರ ಹೊತ್ತಿಗೆ ಹತ್ತು ನಿಮಿಷಕ್ಕೊಮ್ಮೆ ಒಂದು ಸುತ್ತು ಬಂದು ಹೋಗುತ್ತಿದ್ದನು.

"ಮಹಾಸ್ವಾಮಿಯವರೆ, ಮುಹೂರ್ತ ಇರುವುದು ಬೆಳಿಗ್ಗೆ ಒಂಬತ್ತು ಗಂಟೆ ಹದಿನೇಳು ನಿಮಿಷಕ್ಕೆ. ಅದು ಈಗಿನಿಂದ ಇನ್ನೂ ಸುಮಾರು ನಾಲ್ಕು ಗಂಟೆಗಳಿವೆ"

"ಅದನ್ನು ನಾವು ಮುಂಚೆಯೇ ತರಿಸಲು ಸಾಧ್ಯವಿಲ್ಲವೆ?"

"ಮುಹೂರ್ತವನ್ನು ಗೊತ್ತು ಮಾಡುವ ಉದ್ದೇಶ ಶುಭದಿನವನ್ನು ಆಯ್ದುಕೊಳ್ಳುವುದು. ಅದು ಏಕೆಂದರೆ, ದೇವತೆಗಳು ನಿಮ್ಮ ಮೇಲೆ ಪ್ರಸನ್ನರಾಗಿ ನಿಮ್ಮನ್ನು ಬೇಗನೆ ಸಿಂಹಾಸನದಿಂದ ಪದಚ್ಯುತಗೊಳಿಸದಿರಲಿ ಎಂದು. ಇದಾರ್‌ನ ನಿಮ್ಮ ಆಳ್ವಿಕೆ ಅನೇಕ ವರ್ಷಗಳ ತನಕ ಉಳಿದಿರಲಿ ಎಂಬ ಭರವಸೆಯಿಂದ ಕೆಲವು ಗಂಟೆಗಳ ತನಕ ಕಾಯುವುದು ಫಲದಾಯಕ ಎಂದು ನನ್ನ ನಂಬಿಕೆ" ನನ್ನ ವಿವೇಚನೆಯ ಮಾತುಗಳು ಆತನ ಮನವೊಲಿಸಿದಂತೆ ಕಾಣಲಿಲ್ಲ. ಅಲ್ಲದೆ ಏನೋ ಹೇಳಬೇಕೆಂದು ಬಾಯಿ ತೆರೆದನು. ಆಗ ನಾನು ಮಧ್ಯೆ ತಡೆದೆ. "ರಾವ್ ರೈಮಲ್ ಅವರೆ ನಿಮ್ಮ ಕೊಠಡಿಗೆ ಹೋಗಿ. ಪಟ್ಟಾಭಿಷೇಕ ಸಮಾರಂಭದ ಸಭಾಮಂಟಪದಲ್ಲಿ ನಿಮ್ಮನ್ನು ನಾವು ಎಂಟೂ ಮುಕ್ಕಾಲು ಗಂಟೆಗೆ ಸರಿಯಾಗಿ ಸಂಧಿಸುತ್ತೇವೆ."

ಈ ನನ್ನ ಭಾವಮೈದುನ ಅತ್ಯಂತ ಉಲ್ಲಾಸದ ವ್ಯಕ್ತಿ. ನಾನು ಅದನ್ನು ಅವನಿಗೆ ವಹಿಸಿ ಕೊಡಬೇಕಿತ್ತು. ನಾನು ಅವನನ್ನು ಕುತ್ತಿಗೆ ಹಿಸುಕಿ ಸಾಯಿಸಬೇಕೆಂದು, ಸಾರ್ವಜನಿಕವಾಗಿ ಚಾಟಿ ಏಟು ಕೊಡಬೇಕೆಂದು, ಇಲ್ಲವೆ ರಾತ್ರಿಗಳ ಅಂತಿಮ ಆಕ್ರಮಣದ ನಂತರ, ಅಪಘಾತವೊಂದನ್ನು ವ್ಯವಸ್ಥೆಗೊಳಿಸಿ ಅದರಲ್ಲಿ ಅವನು ಕುತ್ತಿಗೆ ಮುರಿದುಕೊಳ್ಳುವ ಹಾಗೆ ಆಗಬೇಕು ಎಂದೆಲ್ಲ ಯೋಚಿಸಿದ್ದೆನು. ಹಿಂದಿನ ರಾತ್ರಿ, ರಾವ್‌ವೀರಮ್‌ದೇವ್‌ನ ಶಿಬಿರದಲ್ಲಿ ನಮ್ಮ ವಿಜಯೋತ್ಸವ ಆಚರಿಸಲು ಕುಳಿತಿದ್ದಾಗ "ನಿಮಗೂ ನಿಮ್ಮ ಪಡೆಗಳಿಗೂ ಏನಾಗಿದೆ? ನೀವು ಮತ್ತು ನಿಮ್ಮ ಕಡೆಯವರು ಶಿಬಿರದ ಪಹರೆ ಮಾಡುತ್ತಿರಲಿಲ್ಲವೆ?" ಎಂದು ಅವನನ್ನು ಕೇಳಿದ್ದೆ.

ಅವನು ಮೆರ್ತಾದ ಒಂದು ಮದ್ಯವನ್ನು ಕಂಠಪೂರ್ತಿ ಕುಡಿದಿದ್ದ. ಅದು ಎಂಥದೆಂದರೆ ಮೂರನೇ ಸಲದ ಕುಡಿತಕ್ಕೆ ಆನೆಯನ್ನೇ ಮಗ್ಗಾ ಮಲಗಿಸಿ ಬಿಡುವಂಥ ಮದ್ಯ ಅದು. ಅವನು ಮುಗುಳ್ನಕ್ಕು ಅಮಾಯಕವಾಗಿ ಕೇಳಿದ "ಏನಾಯಿತು? ಯಾವುದರ ಬಗ್ಗೆ?" ಅವನು ಗಂಭೀರವಾಗಿ ಈ ಮಾತನ್ನು ಹೇಳಿದನೆ? ನಾನು ಯಾವುದರ ಬಗ್ಗೆ ಮಾತನಾಡುತ್ತಾ ಇದ್ದೀನಿ ಎನ್ನುವುದು ಅವನಿಗೆ ನಿಜಕ್ಕೂ ಗೊತ್ತಿರಲಿಲ್ಲವೆ? ಅಥವಾ ಅವನು ಸೋಗು ಹಾಕುತ್ತಿದ್ದನೆ?

"ನೀವೂ ನಿಮ್ಮ ಕಡೆಯ ಸೈನಿಕರೂ ನಿನ್ನೆ ರಾತ್ರಿ ಎಲ್ಲಿದ್ದಿರಿ?"

"ಪಹರೆ ಕೆಲಸದ ಮೇಲೆ"

"ಜ಼ಹೀರ್-ಉಲ್-ಮುಲ್ಕ್‌ನ ಅನಿರೀಕ್ಷಿತ ಆಕ್ರಮಣದ ಬಗ್ಗೆ ನೀವು ಯಾಕೆ ನಮಗೆ ಎಚ್ಚರಿಕೆಯನ್ನೇ ಕೊಡಲಿಲ್ಲ?"

ಅವನು ನಕ್ಕನು. "ಅವನು ಆಕ್ರಮಣ ಮಾಡುವ ಸಂಭವವಿರಲಿಲ್ಲ"

"ಸೇನಾಧಿಪತಿಯು ನಿಮ್ಮೊಂದಿಗೆ ಈ ಬಗೆ ಮಾತನಾಡಿದ್ದನಲ್ಲವೆ?"

"ಅವರು ಮಾತಾಡಿರಲಿಲ್ಲ. ಆದರೆ, ನೇರವಾದ ಯುದ್ಧವನ್ನೆಂದಿಗೂ ಮಾಡದ ನಿಮ್ಮ ತಂತ್ರಗಳಿಂದ ರೋಸಿ ಹೋಗಿರುವ ಜ಼ಹೀರ್-ಉಲ್-ಮುಲ್ಕ್ ತನ್ನ ಗುಜರಾತಿ ಪಡೆಗಳನ್ನು ವಾಪಸ್ ತೆಗೆದುಕೊಂಡು ಹೋಗುತ್ತಿದಾನೆಂದು ಖಚಿತವಾದ ಮೂಲಗಳಿಂದ ನಮಗೆ ತಿಳಿದು ಬಂದಿತ್ತು"

"ಈ ಅಮೂಲ್ಯವಾದ ಗುಪ್ತಮಾಹಿತಿಯನ್ನು ನೀವೇಕೆ ನಮಗೆ ತಿಳಿಸಲಿಲ್ಲ?"

"ಮರುದಿನ ಬೆಳಿಗ್ಗೆ ತಿಳಿಸಬೇಕು ಎಂದು ಅಂದುಕೊಂಡಿದ್ದೆ. ಆದರೆ ಇದಾರ್‌ನ ಕೆಲವು ಜನ ಬಂದರು. ನಾವು ಇದಾರ್‌ಗೆ ಹಿಂತಿರುಗುವುದನ್ನು ಮತ್ತು ಭಾವೀ ಪಟ್ಟಾಭಿಷೇಕ ಸಮಾರಂಭವನ್ನು ಸಡಗರದಿಂದ ಆಚರಿಸಲು ತೀರ್ಮಾನಿಸಿದೆವು."

"ನೀವು ಸಿಂಹಾಸನವೇರುವುದರ ಬಗ್ಗೆ ಪೂರ್ಣ ವಿಶ್ವಾಸವಿತ್ತಲ್ಲವೆ"

"ಓಹೋ ಖಂಡಿತವಾಗಿಯೂ. ಆದರೆ ನಮಗೇ ನೂರಕ್ಕೆ ನೂರು ಖಾತರಿ ಇದ್ದಂಥ ಮೂಲವು ಕತೆಗಳನ್ನು ಕಟ್ಟುತ್ತ ಬೇಕೆಂದೇ ದಾರಿ ತಪ್ಪಿಸುತ್ತಿತ್ತು ಎಂದು ನಮಗೆ ಹೇಗೆ ಗೊತ್ತಾಗಬೇಕು."

ಇದುವರೆವಿಗೂ ಮೌನವಹಿಸಿದ್ದ ರಾವ್ ವೀರಮ್ ದೇವ್ ನನ್ನ ಮದ್ಯದ ಪಾತ್ರೆ ಕಡೆ, ಅದಕ್ಕಿಂತ ಹೆಚ್ಚಾಗಿ ಅದನ್ನು ಹಿಡಿದಿದ್ದ ಕೈ ಕಡೆ ನೋಡುತ್ತಿದ್ದರು. ಈಗ ಅವರು ಮದ್ಯದ ಪಾತ್ರೆಯ ಮೇಲಿನ ನನ್ನ ಕೈಯ ಹಿಡಿತವು ಅದು ರಾವ್ ರೈಮಲ್‌ನ ಕುತ್ತಿಗೆಯೇನೋ ಎಂಬಂತೆ ಬಿಗಿಗೊಳ್ಳುತ್ತಿದ್ದುದನ್ನು ನೋಡುತ್ತಿದ್ದರು.

"ನಿಮಗೆ ಇನ್ನೊಂದು ಗುಟುಕು ಮದ್ಯ, ಬೇಕೆ ಮಹಾರಾಜ್‌ಕುಮಾರ್" ರಾವ್ ವೀರಮ್‌ದೇವ್‌ಗೆ ನಾನು ಇನ್ನೇನು ನನ್ನ ಭಾವ ಮೈದುನನ್ನು ಹೊಡೆಯಲಿದ್ದೆ ಎಂಬುದು ಗೊತ್ತಿತ್ತೆ? "ಓಹ್! ನಾವೆಲ್ಲ ನಮ್ಮ ಮದ್ಯವನ್ನು ಗಟಗಟನೆ ಕುಡಿಯುತ್ತಿದ್ದರೆ, ನೀವು ನಿಮ್ಮದನ್ನು ಇನ್ನೂ ಮುಟ್ಟಿಯೇ ಇಲ್ಲವಲ್ಲ. ಬಹುಶಃ ನಿಮಗೆ ಇದು ಸ್ವಲ್ಪ ಕಳಪೆ ಗುಣ ಮಟ್ಟದ ಮದ್ಯ ಅಂತ ಅನ್ನಿಸಿರಬೇಕು" ಎಂದರು. ನನ್ನ ಕೈಯ ಹಿಡಿತ ನಿಧಾನವಾಗಿ ಸಡಿಲಗೊಂಡಿತು.

"ನನ್ನನ್ನು ಕ್ಷಮಿಸಿ ಮಹಾಸ್ವಾಮಿ. ನಿಮ್ಮ ಮಾತನ್ನು ಕೇಳುತ್ತ ನಾನು ಸ್ವಲ್ಪ ಉದ್ವೇಗಕ್ಕೆ ಒಳಗಾಗಿ ಬಿಟ್ಟಿದ್ದೆ. ಮೆರ್ತಾದ ಮದ್ಯ ಬಹಳ ವಿಶೇಷ ಗುಣಮಟ್ಟದ ಮದ್ಯ ಅಂತ ನನಗೆ ಗೊತ್ತಿದೆ. ವಿಶೇಷ ಸಂದರ್ಭಕ್ಕಾಗಿ ನೀವು ಅದನ್ನು ಉಳಿಸಿಟ್ಟಿದ್ದೀರಿ ಅಂತ ನನಗೆ ಗೊತ್ತು"

"ಆಹ್! ಮಹಾರಾಜ್‌ಕುಮಾರ್ ಅವರೆ ನೀವು ನಮ್ಮಗಳ ಮೇಲೂ ನಿಗಾ ಇಟ್ಟಿಲ್ಲ ಅಂತ ಅಂದುಕೊಂಡಿದ್ದೀನಿ" ಹಾಗೆಂದು ಹೇಳುತ್ತ ರಾವ್ ವೀರಮ್‌ದೇವ್ ತಮ್ಮ ಅದ್ಭುತವಾದ ಗೊಗ್ಗರು ನಗೆಯನ್ನು ನಕ್ಕರು. ನಾವೆಲ್ಲ ಅವರ ನಗೆಯಲ್ಲಿ ಸೇರಿಕೊಂಡೆವು.

"ನೀವು ತುಂಬಾ ನಗಬೇಕು ರಾಜಕುಮಾರ್" ಎಂದು ನನ್ನ ಭಾವಮೈದುನ ನನಗೆ ಸಲಹೆ ನೀಡಿದನು.

"ರಾಜಕುಮಾರ ಅಲ್ಲ ಮಹಾರಾಜ್‌ಕುಮಾರ್" ರಾವ್ ವೀರಮ್‌ದೇವ್ ಮಧ್ಯೆ ಬಾಯಿ ಹಾಕಿದರು. ರಾವ್ ರೈಮಲ್‌ನನ್ನು ಅನೇಕ ಬಾರಿ ಕ್ಷಮಿಸಲಾಗುತ್ತಿತ್ತು. ಅವನ ಕೊರತೆಗಳನ್ನು ಮತ್ತೆ ಮತ್ತೆ ಕಡೆಗಣಿಸಿ ಬಿಡಲಾಗುತ್ತಿತ್ತು. ಆದರೆ ಒಂದು ರೀತಿಯ ಸದರ ತೆಗೆದುಕೊಳ್ಳುವುದನ್ನು ರಾವ್ ವೀರಮ್ ದೇವ್ ಎಂದೂ ಒಪ್ಪುತ್ತಿರಲಿಲ್ಲವೆನಿಸುತ್ತದೆ.

"ಹೌದು, ಹೇಳಿ ಆತ ನನ್ನ ಸೋದರ ತಾನೆ?"

"ಇರಬಹುದು. ಆದರೆ, ಅದೆಲ್ಲಕ್ಕಿಂತ ಮೊದಲು ಅವರು ಎಲ್ಲರಿಗೂ ಮಹಾರಾಜ್‌ಕುಮಾರ್, ರಾಜ್ಯದ ಉತ್ತರಾಧಿಕಾರಿ"

ಈ ಮುಖಭಂಗದಿಂದ ರಾವ್ ರೈಮಲ್ ಅಸಮಾಧಾನಗೊಳ್ಳಲಿಲ್ಲ. "ಮಹಾರಾಜ್ ಕುಮಾರ್ ಅವರೆ, ನೀವು ನಿರಾಳವಾಗಿರುವುದನ್ನು ಕಲಿಯಬೇಕು ಆರಾಮವಾಗಿರಿ. ಅಷ್ಟೆಲ್ಲ ಮನಸ್ಸಿಗೆ ಘಾಸಿ ಮಾಡಿಕೊಂಡು ಉದ್ರೇಕಗೊಳ್ಳಬೇಡಿ. ನಿನ್ನೆ ರಾತ್ರಿ ನಾವು

ಸಂಭ್ರಮದಿಂದ ಆಚರಿಸಿದ್ದು ಸರಿ ಅಂತ ನೀವು ಒಪ್ಪಲೇಬೇಕು. ಏನೇ ಆದರೂ ಇನ್ನೇನು ನಾನು ನಾಳೆ ಇದಾರ್‌ನ ಮಹಾರಾಜನಾಗುತ್ತಿದ್ದೇನಲ್ಲವೆ?"

ಈ ಮನುಷ್ಯನ ಜೊತೆ ಸಿಟ್ಟು ಮಾಡಿಕೊಳ್ಳುವುದರಲ್ಲಿ ಏನು ಅರ್ಥವಿದೆ? ಯಾವಾಗಲೂ ನಮ್ಮ ಪಕ್ಕದ ಮುಳ್ಳಾಗಿರಲು ಅವನು ಪಟ್ಟು ಹಿಡಿದು ಪ್ರಯತ್ನಿಸುತ್ತಿರುತ್ತಾನೆ. ಅಲ್ಲದೆ ನಿಜ ಹೇಳಬೇಕೆಂದರೆ ಆ ಮನುಷ್ಯ ನಿಜಕ್ಕೂ ದುಷ್ಟನಾಗಲಿ, ನೀಚನಾಗಲಿ ಆಗಿರಲಿಲ್ಲ ಎಂದು ನಾನು ಅನುಮಾನಿಸ ತೊಡಗಿದ್ದೆ. ಆ ಮನುಷ್ಯ ಅದಕ್ಕಿಂತಲೂ ತುಂಬಾ ಅಪಾಯಕಾರಿಯಾಗಿದ್ದನು. ಜಗತ್ತಿಗೆ ತನ್ನನ್ನು ರಾಜನನ್ನಾಗಿ ಮಾಡುವ ಬಾಧ್ಯತೆ ಇದೆ ಎಂದು ನಂಬಿಸಲ್ಪಟ್ಟಿದ್ದ ಮೂರ್ಖ.

* * *

ನಾನು ಧಾಳಿ ಮಾಡುವ ತಂಡದ ನೇತೃತ್ವ ವಹಿಸಿ ಹೊರಟಾಗ ಆಗಲಿ; ಅಥವಾ ಪೂರ್ಣ ಪ್ರಮಾಣದ ಯುದ್ಧಕ್ಕೆ ಹೊರಟಾಗಲಾಗಲಿ, ಮಂಗಳನೋ ಇಲ್ಲವೇ ನನ್ನ ಸೇವಕನಾಗಲಿ ನಾನು ಕವಚವನ್ನು ಧರಿಸುವಲ್ಲಿ ನೆರವಾಗುತ್ತಾರೆ. ಈ ಒಂದೂವರೆ ವರ್ಷದಲ್ಲಿ ಮೊದಲನೇ ಸಲಕ್ಕೆ ನಾನು ರಾಜಲಾಂಛನಗಳನ್ನು ಧರಿಸಿಕೊಳ್ಳಬೇಕಾಗಿದೆ. ಕೌಸಲ್ಯ ಇಲ್ಲದೆ ನನಗೆ ಅದು ಸಾಧ್ಯವಿಲ್ಲ. ಕೌಸಲ್ಯಳ ಯೋಚನೆಯೇ ದಾಲ್ಚಿನ್ನಿಯೊಂದಿಗೆ ಅಕ್ಕಿಯ ಮದ್ಯ ಸವಿದಂತೆ ಅದು ನನ್ನ ಹೊಟ್ಟೆಯಲ್ಲಿ ಕುಳಿತು ಶರೀರಾದ್ಯಂತ ಬೆಚ್ಚನೆಯ ಭಾವಾವೇಶವನ್ನುಂಟು ಮಾಡುತ್ತದೆ. ಕೌಸಲ್ಯ, ನಾನು ಹಿಂತಿರುಗುವವರೆಗೂ ಸುನೇರಿಯಾ, ಲೀಲಾವತಿ ಮತ್ತು ನನ್ನ ಹೆಂಡತಿ ಎಂದು ಅವರೆಲ್ಲಾ ತಪ್ಪಾಗಿ ಕರೆಯುವ ಆ ಹೆಂಗಸು ಇವರನ್ನೆಲ್ಲಾ ಚೆನ್ನಾಗಿ ನೋಡಿಕೋ. ಜೊತೆಗೆ ನಿನ್ನನ್ನು ಚೆನ್ನಾಗಿ ನೋಡಿಕೋ. ಹತಾಶಳಾಗಬೇಡವೆಂದು ಸುನೇರಿಯಾಗೆ ಹೇಳು. ರಾವ್ ರೈಮಲ್ ಅವರ ಪಟ್ಟಾಭಿಷೇಕವಾದ ಕೂಡಲೇ ಶೀಘ್ರದಲ್ಲಿ ಚಿತ್ತೂರಿನಲ್ಲಿರುತ್ತೇವೆ.

ನನಗೇನಾಗಿದೆ. ಈ ಹೊತ್ತು ನನಗೆ ನನ್ನ ಪೇಟವನ್ನು ಕಟ್ಟಿಕೊಳ್ಳಲಾಗುತಿಲ್ಲ. ನಿನ್ನಲ್ಲಿ ನೀನೇ ಲೋಲುಪನಾಗಬೇಡ ಮಹಾರಾಜ್ ಕುಮಾರ್. ಹಾಗಲ್ಲದೆ ಹೋದರೆ ನೀನು ತಡಮಾಡುವೆ. ಯಾರೋ ಬಾಗಿಲನ್ನು ತಟ್ಟುತ್ತಿದ್ದಾರೆ. ಓ ದೇವರೆ ಮತ್ತೆ ರಾವ್ ರೈಮಲ್ ಆಗದೆ ಇರಲಿ. ಸೇವಕನು ಬರುತ್ತಾ ಇರುತ್ತಾನೆ. ಆದರೆ ನಾನು ಕೈಯಲ್ಲಿ ಖಡ್ಗ ಹಿಡಿದು ಅವನನ್ನು ದಾಟಿ ಮುಂದೆ ಓಡಿ ಬಾಗಿಲನ್ನು ತೆಗೆದು ಹಾರೊಡೆಯುತ್ತೇನೆ. 'ರಾವ್ ರೈಮಲ್ ನೀವು ಇನ್ನೊಂದು ಸಲ ಏನಾದರೂ ನನಗೆ ತೊಂದರೆ....' ಅಯ್ಯೋ! ಅಲ್ಲಿದ್ದದ್ದು ತೇಜ್. ಅವನು ನಗುತ್ತಿದ್ದಾನೆ. "ಅವರು ನಿಮಗೂ ಕಾಟ ಕೊಡುತ್ತಿದ್ದಾರಾ? ಅವರು ನನ್ನನ್ನು ನಾಲ್ಕು ಗಂಟೆಗೆ ಎಬ್ಬಿಸಿದರು."

"ತೇಜ್ ಪಟ್ಟಾಭಿಷೇಕ ಮಾಡಿಸಿಕೊಳ್ಳುವಷ್ಟು ನೀನು ಸೊಗಸಾಗಿ ಕಾಣಿಸ್ತಾ ಇದ್ದೀಯ' ಊರಿಗೆ ಹೋದ ಕೂಡಲೆ ಮೊದಲು ನಾವು ನಿನ್ನ ಮದುವೆ ಮಾಡಿ ಬಿಡುತ್ತೀವಿ. ನೀನು ಬ್ರಹ್ಮಚಾರಿಯಾಗಿದ್ದಷ್ಟು ಕಾಲವೂ ನಮ್ಮ ಹೆಂಗಸರ ಶೀಲ ಭಯಂಕರ ಅಪಾಯದಲ್ಲಿರುತ್ತೆ."

ಇನ್ನೊಮ್ಮೆ ಬಾಗಿಲು ತಟ್ಟಿದ ಶಬ್ದ. ಕೂಡಲೇ ಹೋಗಿ ಬಾಗಿಲು ತೆಗೆದ. ಖಡ್ಗ ಕೈಯಲ್ಲೇ ಇತ್ತು. ಬಾಗಿಲಲ್ಲಿದ್ದವರು ರಾವ್ ವೀರಮ್‌ದೇವ್.

"ನಿಮ್ಮ ಭಾವಮೈದುನರಿಗೆ ಏನಾದರೂ ಮಾಡೋದಕ್ಕೆ ಆಗೊಲ್ಲವೆ ಮಹಾಸ್ವಾಮಿ? ಆ ಮನುಷ್ಯ ಬೆಳಗಿನ ಜಾವ ನಾಲ್ಕುವರೆಯಿಂದ ನನ್ನ ಕೊಠಡಿಗೆ ಬಂದು ಹೋಗಿ ಮಾಡ್ತಾ ಇದ್ದಾನೆ. ಪಟ್ಟಾಭಿಷೇಕದ ಮುಹೂರ್ತವನ್ನು ಹಿಂದೂಡಲಾಗುವುದಿಲ್ಲವೆ ಎಂದು ವಿಸ್ಮಯಪಡುತ್ತಿದ್ದಾನೆ."

ಇನ್ನು ಒಂದೂವರೆ ಗಂಟೆಯೊಳಗೆ ಸಮಾರಂಭವೆಲ್ಲ ಮುಗಿದಿರುತ್ತದೆ. ಪುರೋಹಿತರು ಅತ್ಯಂತ ಸಾಂಗೋಪಾಂಗವಾಗಿ ಎಲ್ಲ ಪ್ರಕ್ರಿಯೆಗಳನ್ನು ನಡೆಸುತ್ತಿದ್ದಾರೆ. ದೇವರುಗಳನ್ನೆಲ್ಲಾ ಪ್ರಾರ್ಥಿಸುತ್ತ, ರಾವ್ ರೈಮಲ್ ಮತ್ತು ಅವನ ಪೂರ್ವಿಕರ ವಿರುದ್ಧ ಮುನಿದಿರುವ ದೇವತೆಗಳನ್ನೆಲ್ಲ ಶಾಂತಗೊಳಿಸುತ್ತ ಅವರಿಗೆಲ್ಲ ಕಾಣಿಕೆಗಳನ್ನು ಅರ್ಪಿಸುತ್ತಿದ್ದಾರೆ. ರಾವ್ ರೈಮಲ್ ಚಡಪಡಿಸುತ್ತ ಹೆಚ್ಚುಹೆಚ್ಚು ತಳಮಳಗೊಳ್ಳುತ್ತಿದ್ದಾನೆ. ಕೊನೆಗೂ ಪ್ರಧಾನ ಪುರೋಹಿತರು ರಾವ್ ರೈಮಲ್‌ನ ಶಿರಸ್ಸಿನ ಮೇಲೆ ರಾಜ ಕಿರೀಟವನ್ನು ಎತ್ತಿ ಹಿಡಿಯಲು ಸಮೀಪಿಸುತ್ತಿದ್ದಾರೆ. ಆದರೆ ಅದಿನ್ನೂ ಇಲ್ಲ. ಹೇಳಬೇಕಾದ ಶ್ಲೋಕಸ್ತೋಮವೇ ಇದೆ. ರಾವ್ ರೈಮಲ್, ಪುರೋಹಿತರ ಮುಂಗೈಗಳನ್ನು ಫಕ್ಕನೆ ಹಿಡಿದುಕೊಂಡು ಮಣಿ ಖಚಿತವಾದ ಪೇಟವನ್ನು ಕೆಳಗೆ ತರುತ್ತಾನೆ. ಕಿರೀಟ ಸೊಟ್ಟಗೆ ಕುಳಿತುಕೊಳ್ಳುತ್ತದೆ. ಆದರೆ ಅವನ ಮುಖದ ಮೇಲಿನ ಭಾವವಾದರೋ ಅತ್ಯಂತ ಸಂತಸದ್ದು. ವಿಚಿತ್ರವೆಂದರೆ ಈಗ ನನಗೆ ಅವನ ಅಸಹನೆ, ತಾಳ್ಮೆಗೇಡಿತನಕ್ಕೆ ಅಸಮಾಧಾನವಿಲ್ಲ. ಈ ದಿನಕ್ಕಾಗಿ ಅವನು ಬಹಳ ಕಾಲದಿಂದ ಕಾದಿದ್ದ. ಕಿರೀಟವೆಂಬುದು ಬಹಳ ಜಾರಿಕೆಯ ವಸ್ತು. ಅನೇಕ ರಾಜಕುಮಾರರು ಅದು ತಲೆಯನ್ನು ಅಲಕಂಕರಿಸಬೇಕೆಂದು ಜೀವನವೆಲ್ಲಾ ವ್ಯರ್ಥವಾಗಿ ಕಾಯುತ್ತಿರುತ್ತಾರೆ. ರಾಜರಾಗಲು ಯಶಸ್ವಿಯಾದ ಅದೃಷ್ಟ ಶಾಲಿಗಳು ಕೂಡ, ಯಾರಾದರೂ ಅದನ್ನು ಹಾರಿಸಿಬಿಟ್ಟಾರು ಎಂದು ನಿರಂತರವಾಗಿ ಜಾಗರೂಕರಾಗಿರುತ್ತಾರೆ. ನಿನ್ನ ಕಿರೀಟಕ್ಕೆ ಅಂಟಿಕೋ ಭಾವ. ನಿನ್ನ ಶಿರಸ್ಸಿಗೆ ಅದನ್ನು ಮೊಳೆ ಹೊಡೆದು ಭದ್ರಪಡಿಸಿಕೋ. ನಿನಗೆ ಒಳ್ಳೆಯದಾಗಲೆಂದು ಹಾರೈಸುತ್ತೇನೆ. ಅದರ ಪರಿಣಾಮವಾಗಿ ಪಕ್ವತೆ ಮತ್ತು ವಿವೇಕಗಳು ಪ್ರಾಪ್ತವಾಗಲಿ.

ಅಧ್ಯಾಯ 22

ಮರುದಿನ ಬೆಳಿಗ್ಗೆ ಅಲ್ಲಿಂದ ಹೊರಟೆವು. ಸಂಜೆಯ ಹೊತ್ತಿಗೆ ಷಫಿಖಾನ್ ಮತ್ತು ಮೇವಾಡದ ಪ್ರಧಾನ ಸೇನೆಯನ್ನು ಕೂಡಿಕೊಂಡೆವು. ಮೆರ್ತಾ, ದಂಗಾಪುರ್, ಮತ್ತಿತರೆ ಸೇನಾಪಡೆಗಳು ತಮ್ಮದೇ ದಾರಿಗಳನ್ನು ಹಿಡಿದು ಸಾಗಿವೆ. ರಾವ್ ವೀರಮ್‌ದೇವ್, ರಾವಲ್ ಉದಯ್‌ಸಿಂಹ ತಮ್ಮ ತಮ್ಮ ಊರುಗಳಿಗೆ ಹೋಗುವ ಮುನ್ನ, ಚಿತ್ತೂರಿಗೆ ಭೇಟಿ ನೀಡಬೇಕೆಂಬ ತಂದೆಯವರ ಆಹ್ವಾನವನ್ನು ಅಂಗೀಕರಿಸಿ, ನನ್ನ ಜೊತೆಗೂಡಿ ಬರುತ್ತಿದ್ದಾರೆ. ಮುಜ಼ಫರ್‌ಷಾ ಈಗ ಇದಾರ್‌ನ ಸೇನಾಪಡೆಯ ಉಗ್ರಾಣಾಧಿಕಾರಿ ಮತ್ತು ಅವನ ಕಾರವಾನ್ ಅನ್ನು ಆಕ್ರಮಣ ಮಾಡುವ ಸಂದರ್ಭಗಳು ಹೆಚ್ಚಿಲ್ಲ. ಗುಜರಾತಿನ ಒಂಟೆಗಳು, ಕುದುರೆಗಳು, ಆನೆಗಳು, ಆಹಾರ ಮತ್ತು ಪಾನೀಯಗಳ ಭಾರೀ ಪೂರೈಕೆಗಳು, ಹಾಗೂ ನಲವತ್ತ ಮೂರು ಸಾವಿರ ಸೈನಿಕರು ಇವೆಲ್ಲ ಅದರೊಂದಿಗೆ ಸೇರಿವೆ. ಆದರೆ ನಾನು ಅವನ್ನೆಲ್ಲ ರಕ್ಷಿಸಲು ಎರಡು ವಿಭಾಗಗಳನ್ನು ಅಲ್ಲಿಯೇ ಬಿಟ್ಟಿದ್ದೇನೆ. ಎಚ್ಚರಿಕೆಗೆ ಸಂಬಂಧಿಸಿದಂತೆ ನಾನು ತಪ್ಪು ಮಾಡುವುದನ್ನು ಇಷ್ಟಪಡುತ್ತೇನೆ. ಯುದ್ಧದಲ್ಲಿ ಆದ ನಷ್ಟ ಭರ್ತಿಗಾಗಿ ವಾಸ್ತವವಾಗಿ ನೀಡಬೇಕಾದ. ಪರಿಹಾರಕ್ಕೆ ಮುಂಚಿನ ಮಾತುಕತೆಗಳಲ್ಲಿ ತಂದೆಯವರು, ಸೆರೆ ಹಿಡಿಯಲಾದ ಗುಜರಾತಿ ಸೇನಾಪಡೆಗಳನ್ನು ಪ್ರಮುಖ ವ್ಯಾಪಾರದ ಅಂಶವಾಗಿ ಬಳಸಲಿದ್ದಾರೆ.

ನಾವು ಸಾಕಷ್ಟು ದೂರ ಕ್ರಮಿಸಿದ್ದೇವೆ. ಆದರೆ ಅಷ್ಟಾದರೆ ನನಗೆ ಸಾಲದು. ನನ್ನ ಪಾಡಿಗೆ ನಾನು ಚಿತ್ತೂರಿಗೆ ಹಾರಿ ಹೋಗಬೇಕಾಗಿತ್ತು. ಸುನೇರಿಯಾಳ ವಿರುದ್ಧ ಅವಳ ಗಂಡನು ಮಾಡಿದ ಆರೋಪಗಳನ್ನು ನಾನು ನ್ಯಾಯಾಧೀಶನಾಗಿದ್ದ ಸಣ್ಣ ವಿವಾದಗಳ ನ್ಯಾಯಾಲಯವು ವಿಚಾರಣೆ ನಡೆಸಿ ಅವೆಲ್ಲವೂ ಸುಳ್ಳೆಂದು ಕಂಡುಕೊಂಡಿತ್ತು. ಅದು ಆ ಸಂದರ್ಭಕ್ಕೇ ಆಗಿದ್ದಾಗ್ಯೂ ಆ ನ್ಯಾಯಾಲಯದ ನ್ಯಾಯಾಧೀಶನಾದ ನನ್ನ ಸಾಕ್ಷ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದು, ಅವಳ ಬಿಡುಗಡೆಗೆ ನೆರವಾಗಬಹುದು. ಹಾಗಾಗದೆ ಹೋದರೆ, ನಾನು ಮಾಡಬಹುದಾದ ಕನಿಷ್ಠದ್ದೆಂದರೆ ವಿಚಾರಣೆ ಮುಗಿದು, ಅವಳ ಬಿಡುಗಡೆಯಾಗುವ ಸಮಯಕ್ಕೆ ಅಲ್ಲಿದ್ದು ಅವಳು ಹೇಳಿದ್ದ ಭವಿಷ್ಯ ತಪ್ಪೆಂದು ಸಾಧಿಸುವುದು. ಆದರೆ ನಾನು ನನ್ನ ತಳಮಳವನ್ನು ಮರೆಮಾಚಿದೆ. ಮಹಾದಂಡನಾಯಕ, ಹಾಗೂ ರಾಜ್ಯದ ಖಚಿತ ಉತ್ತರಾಧಿಕಾರಿಯಾಗುವನಿಗೆ, ತನ್ನ ಸೇನೆಯನ್ನು ನಡುವೆಯೇ ಬಿಟ್ಟು ತನ್ನ ವೈಯಕ್ತಿಕ ಕೆಲಸದ ಸಲುವಾಗಿ ತನ್ನ ಪಾಡಿಗೆ ತಾನು ಹೋಗುವುದು ಯೋಗ್ಯವಲ್ಲ.

ರಾವ್ ವೀರಮ್‌ದೇವ್ ನನ್ನ ಭುಜವನ್ನು ತಟ್ಟಿದರು. "ನೀವೇಕೆ ಮುಂಚೆನೇ ಹೋಗಬಾರದು ಮಹಾರಾಜ್‌ಕುಮಾರ್? ನನ್ನ ಸೋದರ ಸೊಸೆ ನಿಮ್ಮನ್ನು ನೋಡಿ ತುಂಬ ಸಂತೋಷ ಪಡುತ್ತಾಳೆ. ಅವಳು ತೋರಿಕೆಯ ಸ್ವಭಾವದ ಹೆಂಗಸಲ್ಲ. ಆದರೆ ಆಕೆ ನಿಮ್ಮನ್ನು ಅದೆಷ್ಟೊಂದು ಪ್ರೀತಿಸುತ್ತಾಳೆಂದು ನನಗೆ ಗೊತ್ತಿದೆ. ಆಕೆ ನನಗೆ ಬರೆಯುವ ಪ್ರತಿಯೊಂದು ಪತ್ರದಲ್ಲೂ ನಿಮ್ಮ ಬಗ್ಗೆ ಎಷ್ಟೊಂದು ಪ್ರೀತಿ ಮತ್ತು ಅಪೇಕ್ಷೆಯನ್ನು ವ್ಯಕ್ತಪಡಿಸಿರುತ್ತಾಳೆ"

ತನ್ನ ಸೋದರ ಸೊಸೆ ಮತ್ತು ನನ್ನ ಹೆಂಡತಿಯ ವಿಷಯವನ್ನು ಈ ಹಿರಿಯರು ಪ್ರಸ್ತಾಪಿಸುತ್ತಾ ಇರುವುದು ಇದೇ ಮೊದಲನೇ ಸಲ. ಒಮ್ಮೆಲೇ ವ್ಯಕ್ತವಾದ ಈ ಕಟಕಿಯನ್ನು ನಾನು ಸರಿಯಾಗಿ ಅರ್ಥಮಾಡಿಕೊಳ್ಳಲಾಗಲಿಲ್ಲ. ನಾನು ಅವರ ಮನಃಸ್ಥಿತಿಯನ್ನು ಅಳೆಯಲು ಮತ್ತು ಅವರ ಮನಸ್ಸನ್ನು ಓದಲು ಅವರ ಮುಖದತ್ತ ನೋಡಿ ಗಾಬರಿಯಾದೆ. ಅವರು ಮುಚ್ಚು ಮರೆಯಿಲ್ಲದ ನೇರ, ಪ್ರಾಮಾಣಿಕ ವ್ಯಕ್ತಿ. ಖಂಡಿತವಾಗಿಯೂ ಅವಳ ಹುಚ್ಚು ನಡವಳಿಕೆಯ ವಿಷಯ ಹಾಗೂ ನಮ್ಮಿಬ್ಬರ ಮದುವೆ ಎಷ್ಟು ಚೆನ್ನಾಗಿ ಆಗಿದೆ ಎನ್ನುವುದು ಅವರಿಗೆ ಗೊತ್ತಿದೆ. ಇಂಥ ಒಂದು ಅದ್ಭುತ ಅಭಿನಯದ ಸೋಗು ಹಾಕುವುದರ ಹಿಂದೆ ಅವರಿಗೇನು ಕುತ್ಸಿತ ಉದ್ದೇಶವಿದ್ದೀತು? ನನ್ನ ಮೌನದಿಂದ ಅವರು ತಬ್ಬಿಬ್ಬುಗೊಂಡರು. ಆಗ ಸರಳ ಸತ್ಯ ಏನೆಂದು ನನಗೆ ಅರ್ಥವಾಗತೊಡಗಿತು. ಖಂಡಿತವಾಗಿಯೂ ಅವಳ ಹತ್ತಿರದ ಬಂಧು ಮತ್ತು ಅವರನ್ನು ಹೊರತುಪಡಿಸಿ, ಇಡೀ ಪ್ರಪಂಚಕ್ಕೆ ಸತ್ಯ ಏನೆಂದು ಗೊತ್ತು. ಅವರ ಸೋದರ ಸೊಸೆ ಸಾಮಾನ್ಯ ಕುಣಿತದ. ಹುಡುಗಿ ಮತ್ತು ತನ್ನ ಗಂಡನಲ್ಲಿ ನಿಷ್ಠೆ ಇಲ್ಲದವಳು ಎಂದು ಈ ಗೌರವಾನ್ವಿತ ಹಾಗೂ ಬಗ್ಗಿಸಲಾಗದ ಕಬ್ಬಿಣದ ಸರಳಿನಂಥ ನೇರ ಮನುಷ್ಯನಿಗೆ ತಿಳಿಸುವ ಧೈರ್ಯ ಮಾಡುವವರು ಯಾರು? ನಾನಂತೂ ಆ ಧೈರ್ಯ ಮಾಡಲಾರೆ.

ನನ್ನ ಕೈಯಲ್ಲಿ ಅವರ ಕೈಯನ್ನಿಟ್ಟುಕೊಂಡೆ. "ವಂದನೆಗಳು ಮಹಾಸ್ವಾಮಿಯವರೆ ನಾನೆಂದೂ ನಿಮ್ಮ ಕೃಪೆಯನ್ನು ಮರೆಯುವುದಿಲ್ಲ. ಆದರೆ ನನ್ನ ಸ್ಥಾನ ಏನಿದ್ದರೂ ನಿಮ್ಮ ಸೈನ್ಯದಲ್ಲಿ. 'ಗೈರು ಹಾಜರಿ... ವಾಕ್ಯ ಪೂರ್ತಿ ಮಾಡಲು ನನಗೆ ಸಾಧ್ಯವಾಗಲಿಲ್ಲ. ಎಷ್ಟೇ ಆದರೂ ಒಳ್ಳೆಯ ಮನುಷ್ಯರಲ್ಲವೆ ಅವರು. ನನಗಾಗಿ ಮಾಮೂಲಿಯಾದ ಸುಳ್ಳನ್ನು ಪೂರ್ತಿ ಮಾಡಿದರು. 'ಹೃದಯದ ಪ್ರೀತಿಯನ್ನು ಹೆಚ್ಚು ಮಾಡುತ್ತದೆ'

ಚಿತ್ತೂರಿನ ಕೋಟೆಯ ರಕ್ಷಣಾ ಗೋಡೆ ದೂರದಿಂದಲೇ ಕಾಣುತ್ತಿದೆ. ನಮ್ಮ ಸೇನಾಪಡೆಗಳ ಚಲನೆಯಲ್ಲಿ ನನಗೆ ಎದ್ದು ಕಾಣುವ ಹಾಗೆ ಕ್ಷೀಣವಾದ ಆದರೆ ಸ್ಪಷ್ಟವಾದ ವೇಗ ಕಂಡು ಬರುತ್ತಿದೆ. ನಾನು ತಿವಿಯದೆ ಬೇಫ್ಲಿಕೀರ್ ಕೂಡ ವೇಗವನ್ನು ಪಡೆದುಕೊಂಡಿದೆ. ನಮ್ಮನ್ನೆಲ್ಲ ಕ್ಷೇಮವಾಗಿ ಮತ್ತೆ ಊರಿಗೆ ಕರೆತಂದದ್ದಕ್ಕೆ ಆ ಏಕಲಿಂಗಜೀಗೆ ನನ್ನ ನಮಸ್ಕಾರಗಳು. ನಮ್ಮ ಭವಿಷ್ಯದ ಬಗ್ಗೆ ನಾವು ಯೋಚಿಸುವುದು ತೀರಾ ವಿರಳ ಎನ್ನುವುದು ಸುದೈವವೇ ಸರಿ. ತಾನು ಹಿಂತಿರುಗಿ ಬರದೇ ಇರುವುದೇ ತನ್ನ ವಿಧಿ ಅಂತ ತಿಳಿದಿದ್ದರೆ ಯಾರು ತಾನೆ ಯುದ್ಧ ಮಾಡುವ ಧೈರ್ಯ ಮಾಡ್ತಾನೆ? ಎಲ್ಲೋ ನಮ್ಮ ಅಂತರಾಳದಲ್ಲಿ ಸಾವು ಬೇರೆಯವರಿಗೆ ಮಾತ್ರ ಬರುತ್ತೆ ಅಂತಲೇ ನಂಬಬೇಕಾಗುತ್ತದೆ.

ಕೋಟೆಯ ಹತ್ತಿರ ಇದ್ದ ಕಾವಲುಗಾರರು ನಮ್ಮನ್ನು ನೋಡಿದ್ದಾರೆ ಮತ್ತು ಪಟ್ಟಣದ ಇತರೆ ಮಂದಿಯೊಂದಿಗೆ ನಮ್ಮನ್ನು ಬೇಗನೆ ಸೇರಿಕೊಳ್ಳುವರು. ನಾವೀಗ ಸ್ವಲ್ಪ ನಿಯಂತ್ರಣ ಮೀರಿ, ನಾಗಲೋಟದಲ್ಲಿ ಓಡಿಸುತ್ತಿದ್ದೇವೆ. ಈ ಕ್ಷಣಕ್ಕಾಗಿ ನಾವು ಹತ್ತಿರ ಹತ್ತಿರ ಒಂದೂವರೆ ವರ್ಷ ತಾಳ್ಮೆಯಿಂದ ಕಾದಿದ್ದೇವೆ. ನಾವು ಅಲ್ಲಿ ಅಷ್ಟು ಸಮೀಪ ಇದ್ದಾಗ, ನಮ್ಮ

ತಲೆಗಳನ್ನು ಕಳೆದುಕೊಳ್ಳುತ್ತೀವಿ ಅಂದರೆ ಅದಕ್ಕೇನೂ ಅರ್ಥವಿಲ್ಲ. ನಾವು ಕೆಲಸ ಮಾಡುವ ನಮ್ಮ ಕಛೇರಿಯಿಂದ ಮನೆಗೆ ಹಿಂತಿರುಗುತ್ತಿರಲಿ ಅಥವಾ ದೀರ್ಘಕಾಲದ ಸೈನಿಕ ಕಾರ್ಯಾಚರಣೆಯಿಂದ ಹಿಂತಿರುಗುತ್ತಿರಲಿ, ಹೆಚ್ಚಿನ ಅಪಘಾತಗಳು ಆಗುವುದು ಕೊನೆಯ ಐದು ನಿಮಿಷದಲ್ಲಿ. ಬೇಗನೆ ನಾವು ಗಂಭೀರಾ ನದಿಯ ಹತ್ತಿರ ಇರುತ್ತೇವೆ ಮತ್ತು ಇದೇ ಹುಚ್ಚು ವೇಗದಲ್ಲಿ ಮುಂದುವರಿದರೆ, ಆ ಸೇತುವೆಯ ಹತ್ತಿರ ಮುಂದೆ ಹೋಗಲಾಗದಂಥ ಹಾಳಾದ ಇಕ್ಕಟ್ಟಿನ ಜಾಗ ಬರುತ್ತೆ. ಯುದ್ಧರಂಗದಲ್ಲಿ ಸಾವಿನ ಪ್ರಮಾಣವನ್ನು ತೀವ್ರವಾಗಿ ತಗ್ಗಿಸಿದ್ದು ಈಗ ಶಾಂತಿಯ ಸಮಯದಲ್ಲಿ, ಅದೂ ಚಿತ್ತೂರಿನ ಹೊಸ್ತಿಲಿನಲ್ಲಿ ನೂರಾರು ಜನರು ಸಾಯುವುದಕ್ಕೆ ಮಾತ್ರವೇ ಎನ್ನುವುದು ಒಂದು ವಿಕಟ ವ್ಯಂಗ್ಯವೇ ಸರಿ.

ಆದರೆ ನಾವು ಆಗಲೇ ಸೂರಜ್‌ಪೋಲ್ ಹತ್ತಿರ ಇದ್ದೀವಿ. ನೂರಾರು ವರ್ಷಗಳಿಂದ ಚಿತ್ತೂರಿನ ಪಟ್ಟಣಿಗರು ಇಲ್ಲಿ ಒಟ್ಟುಗೂಡಿ ತಮ್ಮ ವಿಜಯೀ ಸೇನಾಪಡೆಗಳನ್ನು, ಬಾವುಟಗಳನ್ನು ಹಾರಿಸಿ, ಹೂಗಳನ್ನು ಎರಚಿ ಸಡಗರ ಸಂಭ್ರಮಗಳಿಂದ ಸ್ವಾಗತಿಸಿ ಒಂದು ವಾರದ ತನಕ ಸಮಾರಂಭಗಳನ್ನು ಆಚರಿಸುತ್ತಿದ್ದರು. ನಾವು ಅಲ್ಲಿಗೆ ಕುದುರೆಯೇರಿ ಧಾವಿಸಿದಾಗ ಶ್ಮಶಾನಮೌನವಿತ್ತು. ತಂದೆಯವರಾಗಲಿ, ಸಂಪುಟದ ಸಚಿವರಾಗಲಿ, ಗೌರವಾನ್ವಿತ ದೊಡ್ಡ ಮನುಷ್ಯರಾಗಲಿ ರಾಣಿಯರಾಗಲಿ, ಚಿತ್ತೂರಿನ ಸ್ತ್ರೀಯರಾಗಲಿ, ನಮ್ಮನ್ನು ಸ್ವಾಗತಿಸಲು ಅಲ್ಲಿ ಕಾದಿರಲಿಲ್ಲ. ಕಪ್ಪು ಬಾವುಟಗಳನ್ನು ಹಿಡಿದು ಚೆದರಿದಂತೆ ಓಡಾಡುತ್ತಿರುವ ಜನರ ಗುಂಪನ್ನು ದಾಟಿ ಮುಂದೆ ಸಾಗಿದೆವು. ಮನೆಗಳ ಕಿಟಕಿಗಳಿಂದಲೂ ಕಪ್ಪು ಬಾವುಟಗಳು ಇಳಿ ಬಿದ್ದಿದ್ದುವು. ಲಕ್ಷ್ಮಣ್ ಪೋಲ್ ಕಡೆ ತಿರುಗಿದಾಗ, ಸುಮಾರು ಒಂದು ಸಾವಿರ ಜನರ ಗುಂಪು ಕಪ್ಪು ಬಾವುಟಗಳನ್ನು ಆಡಿಸುತ್ತಿದ್ದುದು ಕಂಡು ಬಂದಿತು. ಅವರೆಲ್ಲ ವಿಷಣ್ಣರಾಗಿ ಹಿಂದಕ್ಕೆ ಬಾಗಿದರು. ಒಮ್ಮೆಲೇ ಒಬ್ಬ ಮನುಷ್ಯ ಜೋರಾಗಿ ಕಿರುಚಿದ 'ಕೊಲೆಗಡುಕನಿಗೆ, ಹೇಡಿಗೆ ಧಿಕ್ಕಾರ'. ಅದರಿಂದ ವಾತಾವರಣದಲ್ಲಿ ಒಂದು ಬಿಗುವು ಉಂಟಾಯಿತು. ಇನ್ಯಾರೋ 'ಮಹಾರಾಜ್‌ಕುವಾರ್‌ಗೆ ನಾಚಿಕೆಗೇಡು' ಮಹಾರಾಣಾ ಪ್ರಭುಗಳು ಚಿರಾಯುವಾಗಲಿ, ರಾಜಕುಮಾರ ವಿಕ್ರಮಾದಿತ್ಯರು ಚಿರಾಯುವಾಗಲಿ' ಎಂದು ಕಿರುಚಿದರು.

ತೇಜ್ ಸಾಲಿನಿಂದ ಹೊರಬಂದು ಮೌನವನ್ನು ಮುರಿದು ಜೋರಾಗಿ ಕಿರುಚಿದ ವ್ಯಕ್ತಿಯನ್ನು ಸಮೀಪಿಸಿದನು. ಗುಂಪು ಮತ್ತೆ ತನ್ನ ದನಿಯನ್ನು ನೀಗಿಕೊಂಡಿತು. ತೇಜ್ ಬಗ್ಗಿ ಕುತ್ತಿಗೆಯ ಹಿಂಭಾಗಕ್ಕೆ ಕೈ ಹಾಕಿ ಮೇಲೆತ್ತಿದನು. "ಯಾರಿಗೆ ನೀನು ಹೇಡಿ ಅಂತ ಹೇಳ್ತಾ ಇರೋದು? ನೀವು ಒಂದು ಸಾವಿರ ಜನರನ್ನು ಸೇರಿಸಿದರೂ, ಘನತೆವೆತ್ತ ಪ್ರಭು ಮಹಾರಾಜ್ ಕುಮಾರರಿಗೆ ಸಾಟಿಯಾಗಲು ಸಾಧ್ಯವಿಲ್ಲ."

"ನಿಶ್ಚಿತವಾಗಿಯೂ." ಹಿಂದಿನಿಂದ ಒಂದು ಕ್ಷೀಣ ದನಿ ಕೇಳಿ ಬಂತು. "ಮೋಸ, ಅವಮಾನ ಮತ್ತು ಗೆರಿಲ್ಲಾ ಯುದ್ಧ ತಂತ್ರಗಳಿಂದ ಯಾವ ಮೂರ್ಖತಾನೆ ಗೆಲ್ಲಲ್ಲ? ನಾವು ಇಲ್ಲಿರುವವರು ರಜಪೂತರು, ಹೇಡಿಗಳಲ್ಲ."

ಈಗ ತೇಜ್ ಕೈಗೆ ಕತ್ತಿ ತೆಗೆದುಕೊಂಡನು. ರಾವ್ ವೀರಮ್‌ದೇವ್ ತೇಜ್‌ನ ಮಣಿಕಟ್ಟಿಗೆ ಕೈ ಹಾಕಿ ದೂರಕ್ಕೆ ಎಳೆದುಕೊಂಡು ಹೋದರು. ಯುವತಿಯೊಬ್ಬಳು ನಮ್ಮ ಕಡೆಗೆ ದಾರಿ ಮಾಡಿಕೊಂಡು ಬರಲು ಯತ್ನಿಸುತ್ತಿರುವುದನ್ನು ಕಂಡು, ನಾನು ಉಸಿರು ಬಿಗಿ ಹಿಡಿದುಕೊಂಡೆ. ಆದರೆ ಗುಂಪು ಅವಳು ಮುಂದಕ್ಕೆ ಬರಲು ಬಿಡುತ್ತಿಲ್ಲ. ಅವಳು ದಾರಿಯಲ್ಲಿ ಏನನ್ನೋ ಹಿಡಿದುಕೊಂಡು ಬರುತ್ತಿರುವ ಹಾಗೆ ಕಾಣಿಸಿತು ಇಲ್ಲವೆ ಬಹುಶಃ ಅವಳು ತನ್ನ ಲಂಗ ರವಿಕೆ ಧರಿಸಿಕೊಂಡು ಬರುತ್ತಿದ್ದ ರೀತಿ ಸ್ವಲ್ಪ ಅಸ್ಪಷ್ಟವಾಗಿ ಪರಿಚಿತವಿದ್ದ. ಹಾಗೆ ಇತ್ತು. ಅವಳದು ಕೋಮಲವಾದ ಮೂಗು. ಕಣ್ಣುಗಳಾದರೋ ಒಳಗಿನಿಂದ

ಬೆಳಗಿದ ದೊಡ್ಡ ಸ್ಫಟಿಕಗಳಂತಿದ್ದುವು. ಒಂದು ಸಲಕ್ಕಾದರೂ ಬುದ್ಧಿವಂತಿಕೆ ಮತ್ತು ಸೌಂದರ್ಯ ಎರಡೂ ಬೇರೆ ಬೇರೆ ಅಲ್ಲ ಒಂದೇ ಎನಿಸತೊಡಗಿದವು. ಅವಳನ್ನು ನಾನು ನೋಡಿದ್ದು ಅದೆಷ್ಟು ಅಲ್ಪ ಸಮಯವೆಂದರೆ, ಸಹಜವಾಗಿಯೇ ಅವಳ ಆಕೃತಿಯನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಆಧುನಿಕ ಅಥವಾ ಈಗಿನ ಅರ್ಥದಲ್ಲಿ ಅವಳು ಸುಂದರಳಲ್ಲ. ಆ ಮುಖ ರಣಕುಂಭರ ಒಂದಾನೊಂದು ಸಚಿತ್ರ ಪುಸ್ತಕದಲ್ಲಿ ನಾನು ನೋಡಿದ್ದ ಮುಖದ ಹಾಗಿತ್ತು. ಆ ಮುಖ ಅಲ್ಲಿದ್ದ ಪ್ರತಿಯೊಂದನ್ನು, ಪ್ರತಿಯೊಬ್ಬರ ದೃಷ್ಟಿ ಕೇಂದ್ರವನ್ನು ತಿರುಗಿಸಿಬಿಟ್ಟಿತು.

ಇಡೀ ಚಿತ್ತೂರಿಗೆ ಚಿತ್ತೂರೇ ಲವಲವಿಕೆಯಿಂದ ಕೂಡಿದ ಸರಳ ಹಾಡುಗಳಿಂದ ಪ್ರತಿಧ್ವನಿಸುತ್ತಿತ್ತು. "ನಮ್ಮ ಮಹಾರಾಜ್‌ಕುಮಾರನೊಬ್ಬ ಸಣಕಲ ಇಲಿ. ಬೇಗ ಬನ್ನಿ, ಬೇಗ ಬನ್ನಿ. ಬಲಿತ ಬೆಕ್ಕೊಂದನು ತನ್ನಿರಿ. ಸಿಗ್ಗಿನ ಉಸುಕಲಿ ಹುಗಿಯಿರಿ ನಿಮ್ಮ ತಲೆಗಳನು. ಕೊಳೆತ ಇಲಿಯ ಪಾಕಗೊಳಿಸಿ ನೋಡಿ ನಮ್ಮ ವಿಕ್ರಮನ. ಬೆಕ್ಕುಗಳ ದೊರೆಯ. ಇಲಿಗಳ ವಂಶವ ತೊಡೆವುದನವಗೆ ಬಿಟ್ಟು ಬಿಡಿ." ಹಾಡಿನ ಪದಗಳನ್ನು ಗುನುಗುತ್ತಿದ್ದಂತೆಯೇ ಆ ಹೆಣ್ಣಿಗಾಗಿ ಹುಡುಕಾಡಿದೆ. ಮತ್ತೆಲ್ಲೂ ಅವಳನ್ನು ಪತ್ತೆ ಹಚ್ಚಲಾಗಲಿಲ್ಲ.

ಷಫಿ ತುಂಬ ತಲೆಕೆಡಿಸಿಕೊಂಡು ಬಿಟ್ಟಿದ್ದನು. "ಬೆಳಿಗ್ಗೆ ಹೊತ್ತಿಗೆ ಮುಂಚೆಯೇ ಜ಼ಹೀರ್-ಉಲ್-ಮುಲ್ಕ್ ಮತ್ತು ಗುಜರಾತಿ ಸೇನಾಪಡೆಗಳು ನಮ್ಮನ್ನೆಲ್ಲಾ ಸುತ್ತುವರಿದಿದ್ದಾಗ ನೀವು ಎಲ್ಲಿದ್ದಿರಿ? ಮಹಾರಾಜ್‌ಕುಮಾರ್ ಇಲ್ಲದಿದ್ದರೆ, ನಿಮ್ಮ ಬಹುತೇಕ ಮಕ್ಕಳು, ಸೋದರರು, ತಂದೆಯವರು ಈ ದಿನ ವಾಪಸ್ ಬರುತ್ತಿರಲಿಲ್ಲ."

ಜನರ ಗುಂಪು ಷಫಿಯ ಮಾತು ಕೇಳದಷ್ಟು ಗಟ್ಟಿಯಾಗಿ ಕೂಗಾಡುತ್ತ ಅವನನ್ನು ಸುತ್ತುವರಿಯಿತು. ಯಾವನೋ ಒಬ್ಬ ಹಿಂದಿನಿಂದ ಅವನ ಸೊಂಟದ ಪಟ್ಟಿಯನ್ನು ಹಿಡಿದುಕೊಂಡು ಕೆಳಕ್ಕೆ ಉರುಳಿಸಿದನು. ಅದು ನನ್ನ ತಮ್ಮ ವಿಕ್ರಮಾದಿತ್ಯನು ಹೂಡಿದ್ದ ಸಂಚಿನಲ್ಲಿ ಅವನ ಜೊತೆಗೂಡಿದ್ದ ಅವನ ಗೆಳೆಯ ಸಜ್ಜದ್ ಹುಸೇನ್. ಚಿತ್ತೂರಿನಾಚೆ ಇದ್ದ ಬಗೋಲಿ ಎಂಬ ಹಳ್ಳಿಯಲ್ಲಿ ಕಾಲಿ ಬಿಜಲಿ ಮತ್ತು ಇತರೆ ಒಂಬತ್ತು ಕುದುರೆಗಳೊಂದಿಗೆ ಮಂಗಳ್ ಹಿಡಿದಿದ್ದು ಇವನನ್ನೇ. ನಮಗೆ ಇಂಥ ಸ್ವಾಗತವನ್ನು ಯೋಜಿಸಿದವನು ಯಾರೇ ಆಗಿರಲಿ, ಆ ಮನುಷ್ಯನಿಗೆ ನಮ್ಮ ಸೈನ್ಯದಲ್ಲಿ ಅತ್ಯಂತ ಸುಲಭವಾಗಿ ಆಕ್ರಮಿಸಬಹುದಾದ ಜಾಗವನ್ನು ಕುರಿತು ತೀವ್ರ ಒಲವಿದೆ. ಆ ಒಲವಾದರೋ ಎಂದೂ ತಪ್ಪೇ ಮಾಡದ ಪುಡಾರಿಯೊಬ್ಬನ ಒಲವು. ರಾವಲ್ ಉದಯ ಸಿಂಹನ ಮರದ ಕಾಲು ಮಹಾರಾಜ್ ಕುಮಾರರು ಶಿಬಿರದಿಂದ ಇದ್ದಕ್ಕಿಂತ ಕಾಣೆಯಾದದ್ದು. ತೇಜನ ಪ್ರತಿಭಟನೆ ಮತ್ತು ಅಗ್ನಿ ಸ್ಪರ್ಶ. ಇವೆಲ್ಲವೂ ಈ ಕ್ಷುಲ್ಲಕ ಪದ್ಯಗಳೆಂಬ ಗಿರಣಿಗೆ ಆಹಾರ ಧಾನ್ಯಗಳಾದುವು. ಕಚ್ಚಾ ವಸ್ತುಗಳಾದುವು. ಆದರೆ ಅವುಗಳ ಕೇಂದ್ರ ವಸ್ತು ಹೇಡಿತನ. ಅಲ್ಲದೆ ಈ ವಿಷಯದ ಕುರಿತಂತೆ ಹತ್ತಾರು ಭಿನ್ನ ರೂಪಗಳಿದ್ದುವು. ಗುಜರಾತಿ ಪಡೆಗಳು ಮಲ್ಲಿಕ್ ಅಯಾಜ್ ಮೇಲೆ ಮಹಾರಾಜ್‌ಕುಮಾರ್ ಮಾಡಿದ್ದ ಅವಮಾನಕರ ಹಾಗೂ ಕೊಳಕು ತಂತ್ರಗಳು, ಜ಼ಹೀರ್-ಉಲ್-ಮುಲ್ಕ್‌ನ ಹತ್ಯೆ ಮತ್ತು ರಾತ್ರಿ ಹೊತ್ತು ನಡೆಸಿದ ರಹಸ್ಯ ಹಾಗೂ ಹೇಡಿತನದ ಆಕ್ರಮಣಗಳು ರಜಪೂತರ ಸೇನಾಪಡೆಗಳ ಪೌರುಷ ಹೀನತೆ, ರಾತ್ರಿ ಹೊತ್ತು ಅವನು ನಡೆಸಿದ ಒಂದೇ ಒಂದು ಹೊರದಾಳಿಗೆ ರಾವ್ ವೀರಮ್‌ದೇವ್ ಅವರನ್ನು ಕೂಡ ಬಿಡಲಿಲ್ಲ. ಕೈಕೈ ಮಿಲಾಯಿಸಿದ ಹೋರಾಟ ಶುರುವಾಯಿತು. ಅದರಲ್ಲಿ ಸಜ್ಜದ್ ಹುಸೇನ್ ಷಫಿಯನ್ನು ಕತ್ತಿಯಿಂದ ಇರಿದನು. ನಮ್ಮ ಪಡೆಗಳ ಯೋಧರು ತಮ್ಮ ಖಡ್ಗಗಳನ್ನು ಹೊರ ಸೆಳೆದಿದ್ದರು. ತೇಜನ ಬಲಗಾಲಿನ ಹೆಬ್ಬೆರಳು ಸಜ್ಜದ್ ಹುಸೇನನ ದವಡೆಗೆ ತಾಕಿತ್ತು. ಷಫಿಯ ಅಂಗಿಯ ಮುಂಭಾಗದಲ್ಲಿ ವಿಕಾರವಾದ ಕೆಂಪು ಹೂ ಅರಳುತ್ತಿತ್ತು.

ಚಿತ್ತೂರಿನ ಗೋಡೆಗಳ ನಡುವೆ, ಕತ್ತಿಗಳು ಗುರಾಣಿಗಳು ಮತ್ತು ಕವಚಗಳ ಖಣ ಖಣ ಧ್ವನಿ, ವಿಚಿತ್ರವೂ ಭಯಂಕರವೂ ಆಗಿ ಕೇಳಿಸುತ್ತಿತ್ತು. ಸ್ವಲ್ಪ ಸಮಯದ ಹಿಂದೆ ಇದು ಒಂದು ಕೇವಲ ಕೆಟ್ಟ ಘಟನೆಯಾಗಿತ್ತು; ಇಷ್ಟರಲ್ಲೇ ಅದೊಂದು ಯಾದವೀ ಕಲಹವೆಂಬಂತೆ ಕಂಡು ಬರುತ್ತದೆ. ಕೈ ಮೀರಿ ಹೋಗುತ್ತಿದ್ದ ಈ ಹುಚ್ಚುತನವನ್ನು ಅದು ಆಗುತ್ತಿರುವುದು ನನ್ನ ಜನಗಳಿಗಲ್ಲವೇನೋ, ಬೇರಾವುದೋ ಲೋಕದ ಅಪರಿಚಿತ ಜನಾಂಗಕ್ಕೇನೋ ಎಂಬಂತೆ ನಾನು ಎಚ್ಚರಿಕೆಯಿಂದ ಗಮನಿಸುತ್ತಿದ್ದೆ.

"ಈಗ ನೀವು ಇದನ್ನೆಲ್ಲ ನಿಲ್ಲಿಸಿ" ಒಂದು ಮೃದುವಾದ ಕ್ಷೀಣ ಧ್ವನಿ ಮಾತಾಡಿತು. ನಿಧ ನಿಧಾನವಾಗಿ ಗುಂಪು ಕರಗಿತು. ಐದು ಅಡಿ ಎರಡಂಗುಲ ಎತ್ತರದ ನನ್ನ ಹೆಂಡತಿ ಜನಗಳನ್ನು ಅತ್ತಿತ್ತ ಚದುರಿಸಿ ನನ್ನ ಹತ್ತಿರಕ್ಕೆ ಬಂದಳು. ಅವಳ ಕೈಗಳಲ್ಲೊಂದು ಚಿನ್ನದ ತಟ್ಟೆ, ಅದರಲ್ಲಿ ದೀಪ, ಕುಂಕುಮ ಮತ್ತು ಕರ್ಪೂರ ಇದ್ದವು. ಅವಳು ನನಗೆ ಆರತಿ ಎತ್ತಿ, ತಟ್ಟೆಯನ್ನು ಕೆಳಗಿಟ್ಟು ನನ್ನ ಕಾಲುಗಳಿಗೆ ನಮಸ್ಕರಿಸಿದಳು. "ಮನೆಗೆ ಸ್ವಾಗತ ಮಹಾರಾಜ್ ಕುಮಾರರಿಗೆ" ಎಂದಳು. ಅವಳ ದನಿ ಚಿತ್ತೂರಿನ ರಕ್ಷಣಾ ಕೋಟೆಯ ನಡುವೆ ಪುಟಿದೆದ್ದು ಅನುರಣಿಸಿತು. "'ಏಕಲಿಂಗಜೀ'ಯನ್ನು ಸ್ತುತಿಸಬೇಕು. ತಾವು ಮತ್ತು ನಮ್ಮ ಮಿತ್ರರು ಹಾಗೂ ನಮ್ಮ ಸೇನಾಪಡೆಗಳು ಮೇವಾಡ ಹಾಗೂ ಅದರ ಮಿತ್ರ ರಾಜ್ಯಗಳಿಗೆ ಗೌರವ ಮತ್ತು ವಿಜಯವನ್ನು ತಂದುಕೊಟ್ಟಿವೆ." ಅವಳು ತನ್ನ ಚಿನ್ನದ ಜರಿ ಹೊದಿಕೆಯನ್ನು ಕೈಯಿಂದ ಹರಿದು ಎರಡು ಭಾಗ ಮಾಡಿದಳು. ಒಂದನ್ನು ಹಲವಾರು ಮಡಿಕೆಗಳು ಮಾಡಿ ಸುತ್ತಿ ಷಫಿಯ ರಕ್ತ ಸೋರುತ್ತಿದ್ದ ಗಾಯದ ಮೇಲಿಟ್ಟು ಇನ್ನೊಂದು ಬಟ್ಟೆಯನ್ನು, ಮೊದಲಿನ ಗಾಯದ ಪಟ್ಟಿಯನ್ನು ಭದ್ರವಾಗಿಸಲು ಷಫಿಯ ಹೊಟ್ಟೆಯ ಸುತ್ತ ಸುತ್ತಿದಳು. ಅವರನ್ನು ಅರಮನೆಗೆ ಕರೆದುಕೊಂಡು ಹೋಗಿ. ರಾಜ ವೈದ್ಯರನ್ನು ಕರೆಯಿರಿ ಎಂದು ಹೇಳಿದಳು. ನನ್ನ ಕಡೆಯ ಜನಗಳು ಷಫಿಯನ್ನು ಡೋಲಿಯ ಮೇಲಿಟ್ಟು ಕೊಂಡೊಯ್ದರು. ತನ್ನ ಮಾವ ರಾವ್ ವೀರಮ್ ದೇವ್ ಅವರನ್ನು ರಾವಲ್ ಉದಯ್ ಸಿಂಹ, ರಾಜಾ ಪುರಜೀ ಕೀಕಾ ಮತ್ತು ತೇಜ್ ಇವರನ್ನೆಲ್ಲಾ ಸ್ವಾಗತಿಸಿ, ಆರತಿ ತಟ್ಟೆಯನ್ನು ಕಣ್ಣಿಗೊತ್ತಿಕೊಳ್ಳಲು ಅನುಕೂಲವಾಗುವಂತೆ ಎಲ್ಲರಿಗೂ ಮುಟ್ಟಿಸುವಂತೆ ಹೇಳಿದಳು. ಹೆಂಗಸರು ತಮ್ಮ ಮನೆಗಳಿಂದ ಹೊರಬಂದು, ಆಕೆಗೆ ಹಾರ ಹಾಕಿ, ಅವಳ ಕಾಲಿಗೆ ಬಿದ್ದರು. ಜನಗಳ ಈ ರೀತಿಯ ಆರಾಧನೆಯ ಪ್ರದರ್ಶನದಿಂದ ಆಕೆ ವಿಚಲಿತಳಾದಳು. ಅವಳು ಹಿಂಜರಿಕೆಯಿಂದ, ಪಾದಗಳನ್ನು ಹಿಂದೆ ಸರಿಸಿದಳು. 'ಸಂತ ರಾಜಕುಮಾರಿ ಚಿರಾಯುವಾಗಲಿ' ಎಂದು ಯಾರೋ ಹೇಳಿದರು. ಬಹುಬೇಗನೆ ಇಡೀ ಕೋಟೆಯಲ್ಲಿ ಅಪೂರ್ವ ಸಂಯಮ ಕಂಡುಬಂದಿತು. ಅತಿ ಶೀಘ್ರದಲ್ಲಿ ಬಹಳಷ್ಟು ಜನ ನಾಗರಿಕರು ಮತ್ತು ನಮ್ಮ ಸೇನಾ ಸಿಬ್ಬಂದಿ, ಒಬ್ಬರು ಮತ್ತೊಬ್ಬರ ಮೇಲ್ಪಂಕ್ತಿಯನ್ನನುಸರಿಸಿ ಅವಳ ಮುಂದೆ ಸಾಷ್ಟಾಂಗವೆರಗುತ್ತಿದ್ದರು.

ನನ್ನ ಹೆಂಡತಿಯನ್ನು ಜನಗಳ ಅತಿಯಾದ ಗೌರವ ಸ್ವೀಕರಿಸಲು ಅಲ್ಲೇ ಬಿಟ್ಟು, ನಾನು ರಾವ್ ವೀರಮ್ ದೇವ್, ರಾವ್ ಉದಯ್‌ಸಿಂಹ ಮತ್ತು ರಾಜಾ ಪೂರಜೀ ಕೀಕಾ ಇವರುಗಳನ್ನು ಅತಿಥಿ ಅರಮನೆಗೆ ಗೌರವದಿಂದ ಕರೆದೊಯ್ದೆ. ನಾನು ನನ್ನ ಹೆಂಡತಿಯ ಸೋದರ ಮಾವನ ಕಣ್ಣಲ್ಲಿ ನೇರವಾಗಿ ಕಣ್ಣಿಟ್ಟು ನೋಡದಾದೆ. ನಾನು ಮಾತಾಡುವ ಮುನ್ನ ಅವರು ಆರಾಮವಾಗಿ ನೆಲೆಗೊಂಡಿರುವುದನ್ನು ಖಚಿತಪಡಿಸಿಕೊಂಡು ಹೇಳಿದೆ. "ಈ ರೀತಿಯ ನಾಚಿಕೆಗೇಡಿನ ಸ್ವಾಗತ ನೀಡುತ್ತಿರುವುದಕ್ಕೆ ತಮ್ಮ ಕ್ಷಮೆ ಬೇಡುತ್ತೇನೆ ಮಹಾಸ್ವಾಮಿಯವರೆ. ತಂದೆಯವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ? ಈ ಹೊತ್ತು ಆದದ್ದರ ಬಗ್ಗೆ ಅವರಿಗೆ ಆಘಾತ ಉಂಟಾಗುತ್ತದೆ."

ತಂದೆಯವರು ಎಲ್ಲಿದ್ದರು? ತಾವೇ ಆಹ್ವಾನಿಸಿದ್ದ ಅತಿಥಿಗಳನ್ನು ಬರಮಾಡಿಕೊಳ್ಳಲು ಅವರೇಕೆ ಅಲ್ಲಿರಲಿಲ್ಲ? ಘಟನೆಗಳು ಅಷ್ಟೆಲ್ಲ ಪೂರ್ತಿ ಕೈಮೀರಿ ಹೋಗುತ್ತವೆಂದು ಅವರು ತಿಳಿದಿರಲಾರರು. ಆದರೆ ಅವರು ಎಲ್ಲಾದರು ಇರಲಿ, ಈ ಹೊತ್ತು ಘಟನೆಗಳು ಪಡೆದುಕೊಂಡ ತಿರುವುಗಳು, ಅವರಿಗೆ ಗೊತ್ತಿಲ್ಲದೆ ಇರಲು ಸಾಧ್ಯವಿಲ್ಲ ಎಂದು ನನಗೆ ತುಂಬ ಸಂದೇಹ. ನನ್ನ ಪ್ರೀತಿಯ ಸೋದರ ವಿಕ್ರಮಾದಿತ್ಯನಿಗೆ ತನ್ನನ್ನು ತಾನು ಪ್ರಚಾರ ಮಾಡಿಕೊಳ್ಳುವ, ಮೇಲ್ದರ್ಜೆಗೆ ಬಂಟರನ್ನು ಕೂಡಿಸುವ ಗುಂಪು ಪ್ರದರ್ಶನ ಏರ್ಪಡಿಸುವ ಅಸಾಧಾರಣ ಕೌಶಲ ಎಲ್ಲ ಕಡೆ ಕಂಡುಬರುತ್ತಿತ್ತು ಎಂಬುದನ್ನು ಒಪ್ಪಿದರೂ ನಾನು ಏಕೆ ಹೊರಬಂದು ಅವನ್ನೆಲ್ಲ ಹೇಳಬಾರದು ತಂದೆಯವರ ಮೌನ ಸಮ್ಮತಿಯಿಲ್ಲದೆ, ಈ ಹೊತ್ತಿನ ಈ ಆಭಾಸ ನಡೆಯಲು ಸಾಧ್ಯವಿಲ್ಲ. ಅದರ ಗುರಿ ನಾನು ಎನ್ನುವುದು ಕೂಡ ಸ್ಪಷ್ಟವೇ ಇತ್ತು. ನಾನು ಅವರೊಂದಿಗೆ ವಿರಸಮಾಡಿಕೊಂಡಿದ್ದೇನೆ ಎಂಬುದರ ಬಗ್ಗೆ ತಮ್ಮ ಮಿತ್ರ ರಾಜರುಗಳ ಮನಸ್ಸಿನಲ್ಲಿ ಯಾವುದೇ ಅನುಮಾನಕ್ಕೂ ಎಡೆಯಿಲ್ಲದಂತೆ ಮಾಡುವುದು ಎಂಬುದು ಇದೀಗ ಸ್ಪಷ್ಟವಾಗಿತ್ತು. ಜೊತೆಗೆ ಆ ಒಂದು ಸಂದೇಶವನ್ನು ಹರಡುವುದಕ್ಕೋಸ್ಕರ ಅವರು ಮೇವಾಡದ ಪರವಾಗಿ ನಿಂತು ಹೋರಾಟ ನಡೆಸಿದ ಮಿತ್ರರನ್ನೇ ದೂರ ಮಾಡಿಕೊಳ್ಳುವ ಅಪಾಯಕ್ಕಲ್ಲದೆ ಹೋದರೂ, ಈ ಅವಮಾನದ ಅಪಾಯಕ್ಕೆ ತಲೆಗೊಡಲು ಅವರು ಬಯಸಿದ್ದರು. ಎಡರನೆಯ ವಿಚಾರವನ್ನು ನನಗೆ ನಾನೇ ಸ್ಪಷ್ಟ ಪಡಿಸಿಕೊಂಡ ಕ್ಷಣವೆ ತಂದೆಯವರ ವಿವೇಚನಾ ಶಕ್ತಿ ನನಗೆ ಒಗಟಾಗಿ ಉಳಿಯಲೇ ಇಲ್ಲ. ನನ್ನ ಕೈಕೆಳಗೆ ಗುಜರಾತ್ ಸೈನಿಕ ಕಾರ್ಯಾಚರಣೆಯಲ್ಲಿ ಯಾರು ಯಾರೆಲ್ಲ ತೊಡಗಿಸಿಕೊಂಡಿದ್ದರೋ ಈಗ ಅದನ್ನು ಮತ್ತು ನನ್ನನ್ನು ನಿರಾಕರಿಸಿದರೆ, ವಿವೇಕಿಯಾಗುತ್ತಾನೆ ಹಾಗೂ ಅವನು ತಂದೆಯವರ ವಿಷಯಕ್ಕೆ ತನಗಿರುವ ನಿಷ್ಠೆಯನ್ನು ಹೊಸದಾಗಿ ರುಜುವಾತು ಪಡಿಸಬೇಕಾಗುತ್ತದೆ- ಎಂಬುದು.

"ಮಹಾರಾಜ್‌ಕುಮಾರ್ ಅದರ ವಿಷಯವನ್ನು ಇನ್ನು ಹೆಚ್ಚಿಗೆ ಏನೂ ಮಾತನಾಡಬೇಡಿ ಹಾಗೂ ನನ್ನನ್ನು ಪೇಚಿಗೆ ಸಿಕ್ಕಿಸಬೇಡಿ" ಎಂದು ರಾವ್ ವೀರಮ್‌ದೇವ್ ಅವರು ನನ್ನ ಯೋಚನಾ ಲಹರಿಯನ್ನು ತಡೆದರು. "ನಿಮಗಾಗಿರುವ ಹತಾಶೆಯನ್ನು ಕಡಮೆ ಮಾಡಲು ನಾನೇನೂ ಮಾಡಲಾರೆ. ನಾಚಿಕೆ ಎನ್ನುವುದೇನಾದರೂ ಇದ್ದರೆ ಅದು ಆ ಜನ ಜಂಗುಳಿಗೆ ಆಗಬೇಕು. ದೊಡ್ಡ ದೊಡ್ಡ ಯುದ್ಧಗಳಲ್ಲಿ ನಮಗೆ ಆಗುವಂಥ ಯೋಧರ ಸಾವು ಅಥವಾ ಗಾಯಕ್ಕಿಂತ ಕಡಿಮೆ ಯೋಧರ ಸಾವಿನೊಂದಿಗೆ ಅತ್ಯಂತ ಅಸಾಧಾರಣ. ಆದರೆ ಯಶಸ್ವೀ ಸೇನಾ ಕಾರ್ಯಾಚರಣೆಯನ್ನು ನೀವು ನಡೆಸಿದಿರಿ ಎನ್ನುವ ವಾಸ್ತವಾಂಶ ಅವರ ವಂಚನೆಯಿಂದ ಮಸುಕಾಗದಿರಲಿ, "ಅವನ ವಯಸ್ಸನ್ನು ನೋಡಬೇಡಿ" 'ನೀವು ಯೋಗ್ಯನ ಸುಪರ್ದಿನಲ್ಲಿದ್ದೀರಿ' ಎಂದು ರಾಣಾ ಅವರು ಸರಿಯಾಗಿಯೇ ಹೇಳಿದ್ದರು. "ನಾನು ನಮ್ಮ ಜೊತೆಗಾರರು ನಿಮ್ಮಿಂದ ಬಹಳಷ್ಟು ಕಲಿತಿದ್ದೇವೆ" ಅವರು ನಿಲ್ಲಿಸಿ, ನನ್ನ ಕಣ್ಣುಗಳತ್ತ ದೃಷ್ಟಿ ನೆಟ್ಟರು. "ಈಗ ನಾನು ಹೇಳಲು ಹೊರಟಿರುವ ವಿಷಯ ನಿಮಗೆ ಸಮಯೋಚಿತವಲ್ಲ. ಅಷ್ಟೇ ಅಲ್ಲ ಆಕ್ರಮಣಕಾರಿ ಅಂತಲೂ ಅನ್ನಿಸಬಹುದು. ಆದರೆ ಅನಾವಶ್ಯಕವಾದ ಬುದ್ಧಿವಾದ ಯಾವಾಗಲೂ ಹಿತಕರವಾದದ್ದೇ ಆಗಿದ್ದರೆ ಅದನ್ನು ಕೊಡುವುದು ನಿಷ್ಪ್ರಯೋಜಕ. ದುರದೃಷ್ಟಕರ ಎಂದು ಹೇಳಬಹುದಾದ, ಈ ವಿರೋಧವೂ ನಿಮ್ಮಲ್ಲಿರುವ ಉಕ್ಕನ್ನು ಹದಗೊಳಿಸುತ್ತದೆ. ತಂದೆಯ ಸಹಜ ಸಾವಿನ ನಂತರ (ರಾಣಾ ಸಂಗ ಅವರು ದೀರ್ಘಾಯುವಾಗಿರಲಿ) ಪಟ್ಟಕ್ಕೆ ಬರಬೇಕೆಂಬ ಮಹದಾಸೆಯಿಟ್ಟುಕೊಂಡಿರುವ ಸಹಜ ಉತ್ತರಾಧಿಕಾರಿ ಜೇಷ್ಠ ರಾಜಕುಮಾರನು, ಹಿಗ್ಗಿಸಬಹುದಾದ ಉಕ್ಕಿನ

ಮನೋಧರ್ಮವನ್ನು ಹೊಂದಿರಬೇಕು. ಎಲ್ಲದರಲ್ಲೂ ತಪ್ಪು ಹುಡುಕುವವನು ಹಾಗೂ ಅವಿವೇಕಿಯಾದ ಮನುಷ್ಯ ಇಬ್ಬರೂ ಪ್ರಶಂಸೆ ಮತ್ತು ಸುಯೋಗ ಎರಡನ್ನೂ ನಂಬುವುದಿಲ್ಲ. ವಿವೇಕವಂತನಾದ ಮನುಷ್ಯನು ಮಾತ್ರ ನಿಂದೆಯನ್ನೂ ಹಿನ್ನಡೆಗಳನ್ನು ನಂಬದೆ ಇರುವಂಥ ವಿವೇಚನೆಯನ್ನು ತೋರಬಲ್ಲ. ತನ್ನ ತೋಳಿಗೆ ಕಟ್ಟಿಕೊಂಡಿದ್ದ ರಕ್ಷಾಯಂತ್ರದಿಂದ ಭೀಮನು ಕಲಿತಂತೆ ಈ ಕಾಲವೂ ಕಳೆದು ಹೋಗುತ್ತದೆಂಬುದನ್ನು ನೆನಪಿಟ್ಟುಕೊಳ್ಳಿ."

ಹೌದು ಈ ಕಾಲವೂ ಕಳೆದು ಹೋಗುತ್ತದೆ' ನನಗೆ ನಾನೇ ಹೇಳಿಕೊಂಡೆ. ಆದರೆ ಅವುಗಳ ಹಿಂದೆಯೇ ಇನ್ನಾವ ಹೊಸ ಮತ್ತು ಆಶ್ಚರ್ಯಕರವಾದ ಅನಾಹುತಗಳು ಕಾದಿವೆಯೋ ಯಾರು ತಾನೆ ಹೇಳಬಲ್ಲರು? "ರಾವ್ ವೀರಮ್‌ದೇವ್ ಅವರೆ ತಾವು ತುಂಬ ಪ್ರಗಲ್ಭವಾದೊಂದು ಸಲಹೆಯನ್ನು ನಮಗೆ ನೀಡಬೇಕು. ಅದು ನನಗೆ ವಸ್ತುಗಳನ್ನು ಕುರಿತಂತೆ ನನ್ನ ನೋಟದ ಸಂವೇದನೆಯನ್ನು ಮತ್ತೆ ನನಗೆ ತಂದುಕೊಡುತ್ತದೆ ಎಂಬ ಭರವಸೆ ಇದೆ". ನಾನು ಇನ್ನೇನು ಹೊರಡಬೇಕೆಂದಿದ್ದೆ. ಆ ಸಮಯಕ್ಕೆ ತಂದೆಯವರ ಕಡೆಯಿಂದ ಹರಿಕಾರನೊಬ್ಬ ಬಂದು ರಾವ್ ಅವರಿಗೊಂದು ಟಿಪ್ಪಣಿಯನ್ನು ನೀಡಿದನು. ಅವರು ಅದನ್ನು ಗಟ್ಟಿಯಾಗಿ ಓದಿದರು. 'ಮಹಾಪ್ರಭು ಮಹಾರಾಣಾ ಅವರು ತಮಗೆ ಶುಭಾಶಯಗಳನ್ನು ಕಳಿಸುತ್ತಿದ್ದಾರೆ. ಅಲ್ಲದೆ ಅವರು ತಮ್ಮನ್ನು ಸ್ವಾಗತಿಸಲು ಚಿತ್ತೂರಿನಲ್ಲಿರಲು ಸಾಧ್ಯವಾಗದೆ ಹೋದದ್ದಕ್ಕೆ ಕ್ಷಮೆ ಕೋರುತ್ತಾರೆ. ಗುಜರಾತಿನ ವಿರುದ್ಧ ನಡೆದ ಯುದ್ಧದಲ್ಲಿ ಜಯ ಲಭಿಸಿದ್ದಕ್ಕೆ ಬ್ರಹ್ಮ ದೇವರಿಗೆ ಪ್ರಣಾಮಗಳನ್ನು ಅರ್ಪಿಸಲು ಪುಷ್ಕರ್‌ಗೆ ಹೋದೆವು. ಆ ಜಯಕ್ಕೆ ಬಹು ಮಟ್ಟಿಗೆ ನಾವು ತಮ್ಮ ನೇತೃತ್ವಕ್ಕೆ ಋಣಿಯಾಗಿದ್ದೇವೆ. ನಾವು ಹಿಂತಿರುಗಿ ಬರುವಾಗ ಮಾರ್ಗ ಮಧ್ಯದಲ್ಲಿ ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದೆವು. ಹಾಗಾಗಿ ನಮ್ಮ ಇಚ್ಛೆಗೆ ವಿರುದ್ಧವಾಗಿ ಅಜ್ಮೀರ್‌ನಲ್ಲಿ ಒಂದು ದಿನ ಪ್ರಯಾಣವನ್ನು ನಿಲ್ಲಿಸಬೇಕಾಯಿತು. ಶೀಘ್ರದಲ್ಲೇ ನಾವು ನಿಮ್ಮನ್ನು ಬಂದು ಸೇರಿಕೊಳ್ಳಲಾಶಿಸುತ್ತೇವೆ. ಆತಿಥೇಯರಾಗಿ ನಾವು ಕರ್ತವ್ಯ ಲೋಪವೆಸಗಿದ್ದಕ್ಕೆ ಪರಿಹಾರವನ್ನು ಕಲ್ಪಿಸಲಿದ್ದೇವೆ. ನಮ್ಮ ಅನುಪಸ್ಥಿತಿಯಲ್ಲಿ ರಾಜಕುಮಾರ್ ಮತ್ತು ಆತನ ಹೆಂಡತಿ ನಿಮ್ಮ ಸೋದರ ಸೊಸೆ ನಿಮ್ಮನ್ನು ನಿರಾತಂಕವಾಗಿ ಆರಾಮವಾಗಿರುವಂತೆ ಚೆನ್ನಾಗಿ ನೋಡಿಕೊಂಡು ನಿಮ್ಮೆಲ್ಲ ಅಗತ್ಯಗಳ ಕಡೆ ನಿಗಾವಹಿಸುವರೆಂಬ ಭರವಸೆ ನಮಗಿದೆ".

"ಮೇವಾಡದೊಂದಿಗಿನ ತಮ್ಮ ಅಚಲವಾದ, ಮತ್ತು ಮಹಾನ್ ಸೌಹಾರ್ದಕ್ಕಾಗಿ ಮೆರ್ತಾಕ್ಕೆ ನಾವು ಕೃತಜ್ಞರಾಗಿದ್ದೇವೆ. ವರ್ಷಗಳು ಕಳೆದಂತೆ, ನಮ್ಮ ಎರಡೂ ಸಾಮ್ರಾಜ್ಯಗಳ ನಡುವಿನ ಬಾಂಧವ್ಯ ಇನ್ನಷ್ಟು ಬಲಯುತವೂ, ನಿಕಟವೂ, ಆಗುತ್ತದೆಂದು ನಮಗೆ ದೃಢ ವಿಶ್ವಾಸವಿದೆ".

ಅದನ್ನು ನೀನು ತಂದೆಯವರಿಗೆ ಒಪ್ಪಿಸಬೇಕು. ಅವರು ದೋಷ ರಹಿತರು. ರಾವ್ ವೀರಮ್‌ದೇವ್ ಅವರಂಥ ಸ್ನೇಹಿತರನ್ನು ದಯಪಾಲಿಸಿದ ಕೀರ್ತಿಶಾಲಿ ದೇವತೆಗಳಿಗೆ ಪ್ರಣಾಮಗಳನ್ನರ್ಪಿಸುವ ಸಲುವಾಗಿ ತನ್ನ ಮನೆ ಬಿಟ್ಟು ಹೋಗುವುದಕ್ಕಿಂತ ಆತಿಥೇಯ ವ್ಯಕ್ತಿಗೆ ಬೇರಿನ್ನಾವ ಒಳ್ಳೆಯ ಕಾರಣಬೇಕು? ತಂದೆಯವರು ತಡವಾಗಿ ಕ್ಷಮೆ ಕೋರಿದ್ದಕ್ಕೆ ರಾವ್ ವೀರಮ್ ದೇವ್ ಅವರದೇನಾದರೂ ವಿರೋಧವಿದ್ದಿತೋ ಹೇಗೆ ಎಂದು ನಾನು ವಿಸ್ಮಿತನಾದೆ. ಅವರೇನೂ ಮೂರ್ಖರಲ್ಲ ... ಇಷ್ಟಾದರೂ ಅವರಿಗೆ ಈ ಇಡೀ ಕತೆಯನ್ನು ನುಂಗಿಕೊಳ್ಳದೆ ಬೇರೇನು ಮಾರ್ಗವಿತ್ತು. ಆದರೆ ತಂದೆಯವರ ಪತ್ರದಲ್ಲಿ ಮೆಚ್ಚಿಕೆಯಾಗುವ ಸಂಗತಿಗಳು ಬಹಳಷ್ಟಿದ್ದುವು. ಎಷ್ಟೊಂದು ಚಾತುರ್ಯದಿಂದ ಅವರು ನನ್ನ ಪತನವನ್ನು ಒತ್ತಿ ಹೇಳಿದ್ದರು ಮತ್ತು ನನ್ನನ್ನು ಖಚಿತ ಉತ್ತರಾಧಿಕಾರಿಯ ಸ್ಥಾನದಿಂದ ಕೇವಲ

ರಾಜಕುಮಾರನ ಸ್ಥಾನಕ್ಕೆ ಇಳಿಸಿಬಿಟ್ಟಿದ್ದರು..... ಒಂದು ವೇಳೆ ರಾವ್ ವೀರಮ್ ದೇವ್ ಅವರೇನಾದರೂ ಈ ಹೊತ್ತಿನ ಸ್ವಾಗತ ಸಮಾರಂಭದ ಬಹುಮುಖ್ಯ ಅಂಶವನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರೆ.

ನಾನು ಅತಿಥಿ ಅರಮನೆಯನ್ನು ಬಿಟ್ಟ ಮೇಲೆ ನಾನು ಮತ್ತು ನನ್ನ ಹೆಂಡತಿ ಇಬ್ಬರೂ ಪರಸ್ಪರ ಸಂಧಿಸಿದೆವು. ಅಷ್ಟೊಂದು ಸಮಯದಿಂದ ನಾವು ಅಪರಿಚಿತರಾಗಿದ್ದೇವೆ. ಇಷ್ಟಾಗಿಯೂ ಪ್ರತಿ ಬಾರಿ ಅವಳಲ್ಲಿಗೆ ಧಾವಿಸಿದಾಗಲೂ ನಾನು ಪೇಚಿಗೊಳಗಾಗುತ್ತೇನೆ, ಮುಜುಗರಕ್ಕೊಳಗಾಗುತ್ತೇನೆ ಮತ್ತು ಅಸಮಾಧಾನಕ್ಕೊಳಗಾಗುತ್ತೇನೆ. ಅವಳ ಉಪಸ್ಥಿತಿಯೇ ನನ್ನನ್ನು ಆತಂಕಕ್ಕೀಡುಮಾಡುತ್ತದೆ. ತಪ್ಪಿತಸ್ಥನ ಹಾಗಿರುವುದರಿಂದ, ಸಹಜವಾಗಿಯೇ ಅವಳು ಸಂದರ್ಭದ ಮೇಲ್ತುದಿಯಲ್ಲಿರುತ್ತಾಳೆ ಹಾಗೂ ಅತ್ಯಂತ ಸಮಚಿತ್ತದಿಂದಿರುತ್ತಾಳೆ. ಅವಳು ನಿರುದ್ವಿಗ್ನಳು. ಉಲ್ಲಾಸದಿಂದಿರುತ್ತಾಳೆ, ಮೇಲೆ ಬಿದ್ದು ತೋರಿಸಿಕೊಳ್ಳದಂತೆ– ಆದರೆ ದೃಢ ಆತ್ಮ ವಿಶ್ವಾಸದಿಂದ ತನ್ನ ಗಂಡನ ಬಗ್ಗೆ ಹೆಮ್ಮೆಯಿರುವ ವ್ಯಕ್ತಿ ಅವಳು. ಈ ದಿನ ತನ್ನ ಸೋದರಮಾವನನ್ನು ಭೇಟಿಯಾಗುತ್ತಿರುವುದರಿಂದ ಹೊಳೆಯುತ್ತಿದ್ದಾಳೆ. ನಾನು ಅದನ್ನು ಹಿಂತೆಗೆದುಕೊಳ್ಳುತ್ತೇನೆ. ಅವಳು ಯಾವಾಗಲೂ ಹೊಳೆಯುತ್ತಿರುತ್ತಾಳೆ. ಅವಳೊಂದು ಸೌಮ್ಯ ಪ್ರಕಾಶ, ಎಂದು ನನಗನ್ನಿಸುತ್ತದೆ. ಅವಳು ನನಗೆ ನಮಸ್ಕರಿಸಿ ಮುಗುಳ್ನಗುತ್ತಾಳೆ. ನನ್ನ ತಣ್ಣಗಿನ ಸ್ಥಿತಿ ಮತ್ತು ಕೋಪ ಎರಡೂ, ಅವಳೆದುರಿನಲ್ಲಿ ವ್ಯರ್ಥ. ಅವಳು ಅವನ್ನು ಕಡೆಗಣಿಸುವುದಿಲ್ಲ. ವಾಸ್ತವದ ಸಂಗತಿಯೆಂದರೆ, ಅವಳಿಗೆ ಅವುಗಳ ಅರಿವಿಲ್ಲ. ಪ್ರತಿಕ್ರಿಯೆ ವ್ಯಕ್ತಪಡಿಸುವುದು ಅವಳ ಸ್ವಭಾವದಲ್ಲಿಲ್ಲ. ಅವಳು ಧ್ವನಿ ಮತ್ತು ವೇಗವನ್ನು ಹೊಂದಿಸಿಕೊಳ್ಳುತ್ತಾಳೆ. ನೀವು ಪ್ರತಿಕ್ರಿಯಿಸುತ್ತಿರೋ ಇಲ್ಲವೋ, ಹೇಗೆ ಪ್ರತಿಕ್ರಿಯಿಸುತ್ತೀರಿ ಎಂಬುದು ಮುಖ್ಯವಲ್ಲ. ಚಿತ್ತೂರಿನಲ್ಲಾಗಲಿ, ಇಡೀ ಮೇವಾಡದಲ್ಲಾಗಲಿ, ಅವಳಿಗಿಂತ ಒಳ್ಳೆಯ ಸ್ವಭಾವದ ಪ್ರೀತಿಯ ಹಾಗೂ ಸಮಚಿತ್ತದ ಮಾನವ ವ್ಯಕ್ತಿ ಇದ್ದಾರೆಯೆ ಎಂದು ನನಗೆ ಸಂದೇಹ ಹಾಗೂ ಅವಳಿಗಿಂತ ಹೆಚ್ಚು ಮೋಸದ, ಎರಡು ಮುಖದ ಮತ್ತು ಅಪಾಯಕಾರಿ ವ್ಯಕ್ತಿಯೂ ಇರಲಾರ. ಒಂದು ವಿಷಯಕ್ಕೆ ನಾನು ಅವಳಿಗೆ ಋಣಿ. ಅವಳಿಲ್ಲದಿದ್ದರೆ ಈ ಬೆಳಿಗ್ಗೆ ಸಂಗತಿಗಳು ಯಾವ ರೀತಿಯಲ್ಲಿ ಮುಂದುವರಿಯುತ್ತಿದ್ದುವೋ. ನನಗೆ ಅದರ ಕಲ್ಪನೆ ಇಲ್ಲ. ಅವಳು ಅದನ್ನು ಪ್ರಜ್ಞಾಪೂರ್ವಕವಾಗಿ ಮಾಡಿದಳೆ, ಅಥವಾ ತನ್ನ ಸೋದರ ಮಾವನನ್ನು ಮತ್ತು ಅವರ ಜೊತೆಗಾರರನ್ನು ಕೇವಲ ಸ್ವಾಗತಿಸಲು ನಡೆದು ಬಂದಳೆ? ಸಂಗತಿಯ ಸತ್ಯಾಸತ್ಯತೆ ಏನಾದರೂ ಆಗಿರಲಿ, ಮೇವಾಡದ ಚರಿತ್ರೆಯಲ್ಲಿ ಅತ್ಯಂತ ಅಪಾಯಕರವೂ, ನಾಚಿಕೆಗೇಡಿನದೂ ಆದ ಬಿಕ್ಕಟ್ಟಿನ ಸಂದರ್ಭವನ್ನು ಏಕಾಂಗಿಯಾಗಿ ನಿವಾರಿಸಿದ್ದಳು. ನಮ್ಮ ಕಾಲಾನುಕ್ರಮದ ದಾಖಲೆಗಳಲ್ಲಿ ಪಿತೃಹಂತಕರು ಖಳನಾಯಕರು ಮತ್ತು ಬೇರೆ ಬೇರೆ ಥರದ ಅಪರಾಧಿಗಳಿಗೇನೂ ಕೊರತೆಯಿಲ್ಲ. ಆದರೆ, ಮಹಾರಾಜ್‌ಕುಮಾರ್ ಮತ್ತು ಸೇನೆಯೊಂದಿಗೆ ಜನಸಾಮಾನ್ಯರು ಸಂಘರ್ಷಕ್ಕಿಳಿಯುವುದು, ಅದರಲ್ಲೂ ಉದ್ದೇಶ ಪೂರ್ವಕವಾಗಿ ಎನ್ನುವುದು ವ್ಯವಸ್ಥಿತವಾಗಿ ಯೋಜಿಸಿದ ಘರ್ಷಣೆ, ಎಂದೂ ಕೇಳಿಲ್ಲದ್ದು. ನಾನು ಎಂದಾದರೂ ಹೇಗೆ ತಾನೆ ಅವಳ ಋಣವನ್ನು ತೀರಿಸಬಲ್ಲೆ?

ಕುಣಿತದ ಹುಡುಗಿಯಿಂದ ಸಂತಳವರೆಗಿನ ವಿಸ್ಮಯಗಳ ಕುರಿತಾದ ಮಾತುಗಳು ಒಬ್ಬರ ನಂಬುವ ಸ್ವಭಾವದ ಮೇಲೆ ಹೆಚ್ಚಿನ ಒತ್ತಡ ಹಾಕಿದಂತಾಗುತ್ತದಷ್ಟೇ ಅಲ್ಲದೆ ಮನುಷ್ಯನನ್ನು ಮೀರಿಸಿದ ಚಂಚಲ ಸ್ವಭಾವದ ಪ್ರಾಣಿ ಬೇರೆ ಯಾರೂ ಇಲ್ಲ ಎಂಬ

ಸ್ವಯಂ ವೇದ್ಯ ಸಂಗತಿಯನ್ನು ಮತ್ತೊಮ್ಮೆ ದೃಢಪಡಿಸುತ್ತದೆ. ವರ್ಷದಲ್ಲಿ ಒಮ್ಮೆ ಸಂತಳ ಪಾದ ಸ್ಪರ್ಶ ಮಾಡುವುದೇ ಬೇರೆ. ಅವಳನ್ನು ಮದುವೆಯಾಗುವುದೇ ಬೇರೆ. ಅಪರಿಚಿತಳೋ, ಸಂತಳೋ, ಹೆಂಡತಿಯೋ ನನಗೆ ಅದರಿಂದ ಏನು ವ್ಯತ್ಯಾಸ ಅನ್ನಿಸುತ್ತದೆ?

ನಾನಿನ್ನೂ ಮನೆಗೆ ಬಂದಿಲ್ಲ ಹಾಗೂ ನನ್ನ ತಾಳ್ಮೆ ಕರಗುತ್ತಿದೆ. "ರಾಜಾ ನಾನು ಆಮೇಲೆ ನಿಮ್ಮ ಜೊತೆ ಬಂದು ಸೇರಿಕೊಂಡರೆ ನೀವು ಕ್ಷಮಿಸುವಿರಾ?" ನಾನು ನಿಜವಾಗಿಯೂ ರಾಜಾಪುರಜೀ ಕೀಕಾನ ಅನುಮತಿಯನ್ನು ಕೇಳುತ್ತಿಲ್ಲ. ಅದು ಅವರಿಗೆ ಗೊತ್ತಿಲ್ಲ. ಅವರು ಮುಗುಳ್ನಕ್ಕು ಕೈಯಾಡಿಸಿದರು. ಹದಿನೆಂಟು ತಿಂಗಳು ದೂರ ಇರುವುದೆಂದರೂ ತುಂಬ ದೀರ್ಘವಾಯಿತು. ರಾಜೇಂದ್ರನ ಶವಸಂಸ್ಕಾರ ಮಾಡಿದ ಬೆಳಿಗ್ಗೆ ಅತ್ಯಂತ ಅವಸರವಾಗಿ ಮತ್ತು ಅತ್ಯಾಸೆಯಿಂದ ನಾನು ನನ್ನ ನೆನಪಿನ ಹಾಳೆಯಲ್ಲಿ ಗುರುತು ಮಾಡಿಕೊಂಡ ಚಿತ್ತೂರನ್ನು ಇವತ್ತಿನದರೊಂದಿಗೆ ಹೋಲಿಸಲು ಇಷ್ಟಪಡುತ್ತೇನೆ. ಸ್ಥೂಲ ರೇಖೆಗಳು ಮತ್ತು ಸೂಕ್ಷ್ಮಾತಿ ಸೂಕ್ಷ್ಮ ರೇಖೆಗಳೆರಡನ್ನೂ ಅನಂತರ ಪರೀಕ್ಷಿಸಲು ಸಾಕಷ್ಟು ಸಮಯವಿರುತ್ತದೆ. ನಾನು ಬೇಫಿಕೀರ್ ಅನ್ನು ಪ್ರಚೋದಿಸುವ ಅಗತ್ಯವಿರಲಿಲ್ಲ. ಊರಿಗೆ ಹಿಂತಿರುಗಲು ಅವನೂ ನನ್ನಷ್ಟೇ ಅವಸರದಿಂದಿದ್ದ. 'ಅವಳೆಲ್ಲಿ?' ಎಂದು ಹೇಳಿ ಕೌಸಲ್ಯಳ ಮುಖದ ಕಡೆ ನೋಡಿದೆ. ನನಗೆ ಉತ್ತರ ಗೊತ್ತಿತ್ತು. "ವಿಚಾರಣೆ ಇನ್ನೂ ಮುಗಿದಿಲ್ಲ. ಯಾತಕ್ಕೆ ಅವರು ಅಷ್ಟೊಂದು ಕಾಲ ತೆಗೆದುಕೊಳ್ತಿದ್ದಾರೆ?" ಕೌಸಲ್ಯ ನಿಧಾನವಾಗಿ ತಲೆ ಅಳ್ಳಾಡಿಸಿದಳು. ಕೌಸಲ್ಯಳ ಕಣ್ಣುಗಳು ಅದನ್ನು ತೆರೆಯಲಾಗುವುದಿಲ್ಲ. ಅವುಗಳು ಗಂಭೀರೆಯಷ್ಟೇ ಮನುಷ್ಯ ರಹಸ್ಯಗಳನ್ನು, ವೇದನೆಗಳನ್ನು ಮೂರ್ಖತನಗಳನ್ನು ಅಡಗಿಸಿಟ್ಟುಕೊಂಡಿವೆ.

ಆ ರಾತ್ರಿ ನಾನು ಹೋಗಿ ಗಂಭೀರಾ ನದಿಯಲ್ಲಿ ಸ್ನಾನ ಮಾಡಿದೆ. ನಾನು, ತಾಯಿ ನನ್ನ ಹೊರೆಯನ್ನು ಇಳಿಸು ಎಂದು ನಿಶ್ಶಬ್ದವಾಗಿ ಚೀರಿದೆ. ಅದರ ನೀರು ನನ್ನನ್ನು ತೊಳೆಯಲೂ ಇಲ್ಲ, ವಿಸ್ಮೃತಿಯನ್ನೂ ನೀಡಲಿಲ್ಲ. ನಾನು ಹಿಂತಿರುಗಿ ಹೋಗಿ ಕೌಸಲ್ಯಳನ್ನು ಕೂಡಿ ಹುಚ್ಚು ಹಿಡಿಯುವಷ್ಟು ಪ್ರೀತಿ ಮಾಡಿದೆ. ನಾನು ನಿಲ್ಲುವುದಿಲ್ಲ. ನಾನು ಸುನೇರಿಯಾಳ ನೆನಪನ್ನು ತೊಡೆದು ಹಾಕುತ್ತೇನೆ. ಕೌಸಲ್ಯ ನನ್ನನ್ನು ಹಿಡಿದುಕೊಂಡಳು ಮತ್ತು ನನ್ನ ಕೋಪ ದಿಗ್ಭ್ರಮೆ ಮತ್ತು ಹೃದಯ ಹೀನ ನೋವನ್ನು ತಾನು ಸ್ವಲ್ಪ ತೆಗೆದುಕೊಳ್ಳಬಹುದೆಂಬ ಆಸೆಯಿಂದ ನನ್ನ ಆಕ್ರಮಣಗಳನ್ನು ಸಹಿಸಿಕೊಂಡಳು. ಆದರೆ ಬಹುಶಃ ಯಾವುದೇ ಮಾನವ ಭಾವಗಳನ್ನಾಗಲಿ, ಶೋಕವನ್ನಾಗಲಿ, ಇನ್ನೊಬ್ಬರಿಗೆ ವರ್ಗಾಯಿಸುವುದು ಹಾಗಿರಲಿ, ಹಂಚಿಕೊಳ್ಳಲೂ ಸಾಧ್ಯವಿಲ್ಲ.

"ಏಳು ದಿನಗಳ ಹಿಂದೆ ಅವಳು ಹೋದದ್ದು ಒಳ್ಳೆಯದಾಯಿತು. ನೀವು ಬರುವುದಕ್ಕೆ ಕೇವಲ ಇಪ್ಪತ್ತು ನಾಲ್ಕು ಗಂಟೆಗಳ ಮುನ್ನ ಅದು ನಡೆದಿದ್ದರೆ, ಬೇಗ ಕುದುರೆಯೇರಿ ಧಾವಿಸಿ ಬರದೆ ಇದ್ದದ್ದಕ್ಕೆ ಇಲ್ಲವೆ ಯಾವುದಾದರೂ ಮಂತ್ರ ವಿದ್ಯೆ ಅಥವಾ ಇಂದ್ರಜಾಲದಿಂದ ದೂರವನ್ನು ತುಂಡಾಗಿಸಲಾಗದ್ದಕ್ಕೆ ನಿಮ್ಮನ್ನು ನೀವೇ ಎಂದೂ ಕ್ಷಮಿಸುತ್ತಿರಲಿಲ್ಲ" ಕೌಸಲ್ಯ ಕಹಿಯನ್ನು ಮುಚ್ಚಿಹಾಕುವ ಸಿಹಿ ಲೇಪನದವಳಲ್ಲ. ಸ್ವಲ್ಪ ಸಮಯದ ನಂತರ ಅವಳು ಕೇಳಿದಳು– "ತನ್ನನ್ನು ತಾನು ನೇಣು ಹಾಕಿ ಕೊಂಡ ದಿನ ಅವಳು ಏನು ಹೇಳಿದಳು ಗೊತ್ತೆ? ಮಹಾರಾಜ್ ಕುಮಾರರಿಗೆ ಪ್ರಪಂಚ ಏನೂಂತ ಗೊತ್ತಿಲ್ಲ. ನನ್ನ ಗಂಡ ನನ್ನನ್ನು ದೈಹಿಕವಾಗಿ ಹಿಂಸಿಸಿದ ಎನ್ನುವ ಕಾರಣಕ್ಕೆ ನ್ಯಾಯಾಲಯ ಕೊಲೆಯನ್ನು ಮನ್ನಿಸುತ್ತದೆ ಎಂದು ಅವರು ಭಾವಿಸಿದ್ದಾರೆ. ಮಾನವ ಜೀವಿಗಳು ಒಳ್ಳೆಯವರು ಮತ್ತು ತೀರಾ ಪ್ರಾಥಮಿಕವಾದ ಸರಳ ನ್ಯಾಯವೊಂದನ್ನು ಬಿಟ್ಟು ಉಳಿದೆಲ್ಲವನ್ನು ನ್ಯಾಯಾಲಯಗಳು

ನಿರ್ವಹಿಸಬಲ್ಲವು ಎಂದು ಅವರು ನಿಜಕ್ಕೂ ನಂಬುತ್ತಾರೆಯೆ? ಅಯುಕ್ತಳು ನಾನಲ್ಲ. ಆದರೆ ಮಹಾರಾಜ್‌ಕುಮಾರರೇ. ಈ ಜಗತ್ತಿನಲ್ಲಿ ಒಳ್ಳೆಯವರು ಮತ್ತು ನ್ಯಾಯವಾದ ವ್ಯಕ್ತಿಗಳಿಗೆ ಜಾಗ ಇಲ್ಲ ಎಂಬುದು ಅವರಿಗೆ ಗೊತ್ತಾಗುತ್ತೆ".

ನಾನು ಕೌಸಲ್ಯಳ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆನೆ? ಅವಳ ಸೌಮ್ಯವಾದ ಮಾತು ಮತ್ತು ದನಿಯ ಅರ್ಥ ನನಗೆ ಆಗಲಿಲ್ಲ. ಸುನೇರಿಯಾ ಮತ್ತೆ ಸಂದಿಗ್ಧವಾಗಿ ಮಾತಾಡಿದ್ದಳು. ಅವಳು ಒಳ್ಳೆಯ ಮತ್ತು ನ್ಯಾಯವಾದ ವ್ಯಕ್ತಿಯೆ ಅಥವಾ ನನ್ನನ್ನು ಕುರಿತು ಹೇಳುತ್ತಿದ್ದಾಳೆಯೇ? ಅವಳಲ್ಲಿ ಆ ಎರಡೂ ಗುಣಗಳು ಯಥೇಚ್ಛವಾಗಿದ್ದುವು. ನಿಜಕ್ಕೂ ನಿಮ್ಮವನಾಗಿ ಹೇಳಬೇಕೆಂದರೆ ಅತ್ಯಂತ ವಿಲಕ್ಷಣವಾದ ಯೋಚನೆ ನನಗೆಂದೂ ಹೊಳೆದಿರಲಿಲ್ಲ. ಚಿತ್ತೂರಿನ ಬದಲಾದ ವಾತಾವರಣದಲ್ಲಿ, ಕೌಸಲ್ಯಳನ್ನು ಬಿಟ್ಟು ಬೇರೆ ಯಾರಾದರೂ ನನ್ನನ್ನು ಸ್ವಲ್ಪ ಮಟ್ಟಿಗಾದರೂ ನ್ಯಾಯ ಮತ್ತು ಸಭ್ಯತೆಗೆ ಒಬ್ಬ ಅಭ್ಯರ್ಥಿ ಎಂದು ಪರಿಗಣಿಸುವರೆಂದು ನಾನು ಯೋಚಿಸಲಾರೆ. ನಾನು ನೇರವಾಗಿ ಯೋಚಿಸುತ್ತಿಲ್ಲ. ಪೂರ್ತಿಯಾಗಿ ಬೇರೆಯೇ ಆದ ಕಾರಣಗಳಿಗೆ ಹೊರತು, ಕೌಸಲ್ಯ ನನ್ನನ್ನು ಸಮರ್ಥಿಸುವುದೇ ಇಲ್ಲ. ಅವಳು ಮೌರ್ಯ ಸಾಮ್ರಾಜ್ಯದ ಮಹಾಪ್ರಧಾನಿಯಾಗಿದ್ದ ಕೌಟಿಲ್ಯನ ಸಿದ್ಧಾಂತಗಳ ನಿಜವಾದ ಉತ್ತರಾಧಿಕಾರಿ, ರಾಜಕುಮಾರನೊಬ್ಬನ ಅದರಲ್ಲೂ ಖಚಿತ ಉತ್ತರಾಧಿಕಾರಿಯಾದ ಮಹಾರಾಜ್‌ಕುಮಾರನ ಕೆಲಸವೇನಿದ್ದರೂ ರಾಜತಂತ್ರ ನೈಪುಣ್ಯ, ಅಲ್ಲದೆ ರಾಜತಂತ್ರದಲ್ಲಿ ಒಳ್ಳೆಯತನಕ್ಕಾಗಲಿ ನ್ಯಾಯಕ್ಕಾಗಲಿ ಸ್ಥಾನವಿಲ್ಲ.

ನಾನೆಷ್ಟೇ ಪ್ರಯತ್ನಿಸಿದರೂ, ಕೊಲೆಗಡುಕನೆಂಬ ಗೌರವ ಸೂಚಕ ಶಬ್ದ ಜೀವಮಾನ ಪರ್ಯಂತ ನನಗೆ ಗಂಟು ಬೀಳುತ್ತದೆಂಬ ಭಾವನೆ ಉಂಟಾಯಿತು. ನಾಗರಿಕ ಜನಜೀವನದ ಮತ್ತು ಯುದ್ಧ ಸಮಯದ ನೀತಿ ಎರಡು ಒಂದೇ ಎಂದು ನನ್ನ ಜನಗಳು ನಿಜಕ್ಕೂ ನಂಬಿದರೆ? ಯುದ್ಧವೆಂಬುದು ರಜಪೂತರ ಧರ್ಮ. ನನ್ನನ್ನು ನಿರಾಕರಿಸುವಾಗ ಯುದ್ಧವನ್ನೂ ಅವರು ನಿರಾಕರಿಸುತ್ತಾರೆಯೆ? ಯುದ್ಧವೆನ್ನುವುದು ಇರುವುದು ಅಧಿಕಾರ ಮತ್ತು ಪರಮಾಧಿಪತ್ಯಕ್ಕಾಗಿ. ಅದು ಪ್ರಾದೇಶಿಕ ಮಹತ್ವಾಕಾಂಕ್ಷೆ ಮತ್ತು ದುರಾಸೆ. ಯಾರನ್ನೂ ಸಾಯಿಸದೆ ಯುದ್ಧ ಮಾಡಲು ಸಾಧ್ಯವಿಲ್ಲ. ಯುದ್ಧವನ್ನು ಕಂಡು ಹಿಡಿದವನು ನಾನಲ್ಲ. ನಾನು ಕೇವಲ ಅದರ ವ್ಯಾಪ್ತಿಯನ್ನು ವಿಸ್ತರಿಸಿದ್ದೆ ಹಾಗೂ ಯುದ್ಧವನ್ನು ಅದರ ತಾರ್ಕಿಕ ತುದಿಗೆ ಕೊಂಡೊಯ್ದಿದ್ದೆ.

ಆದರೆ ಅದೆಲ್ಲವೂ ಮುಖ್ಯ ವಿಷಯಕ್ಕೆ ಸ್ವಲ್ಪವೂ ಸಂಬಂಧವಿಲ್ಲದ್ದು. ಕೌಸಲ್ಯ ಸುನೇರಿಯಾಳ ಕೊನೆಯ ಮಾತುಗಳನ್ನು ಹೇಳುವವರೆಗೂ, ಸುನೇರಿಯಾ ನನ್ನನ್ನು ನಂಬಿದ್ದರೆ ಮಾತ್ರ, ಅವಳು ಇನ್ನು ಸ್ವಲ್ಪ ಕಾಲ ಕಾದಿದ್ದರೆ ಮಾತ್ರ, ಎಲ್ಲವೂ ಸರಿ ಹೋಗುತ್ತಿತ್ತು ಎಂದು ನಾನು ನಂಬಿದ್ದೆನು. ನಾನು ಇನ್ನು ಮುಂದೆಂದೂ ಅಷ್ಟೊಂದು ನಂಬಲಿಲ್ಲ. ಇತ್ತೀಚೆಗೆ ಅಷ್ಟು ಚೆನ್ನಾಗಿ ಮನವರಿಕೆಯಾಗುವ ಹಾಗೆ ರುಜುವಾತುಮಾಡಿದಂತೆ, ನಾನು ಸಂಪರ್ಕ ಕಡಿದುಕೊಂಡಿದ್ದೆ. ಅದಕ್ಕಿಂತಲೂ ಕೆಟ್ಟದ್ದೆಂದರೆ 'ನನ್ನನ್ನು ನಾನೇ ವಂಚಿಸ ಬಯಸುತ್ತಿದ್ದೆ. ಬಹುಶಃ ಸುನೇರಿಯಾಳ ಪ್ರಾಪಂಚಿಕವಲ್ಲದ ರೀತಿಯು ಹೊರತಾಗಿಯೂ ಈ ಜಗತ್ತಿನ ಹಾಗೂ ಅದರ ದ್ವಿಪಾದಿ ನೆಲಸಿಗರಾದ ಮನುಷ್ಯರ ಬಗೆಗಿನ ಅವಳ ಗ್ರಹಿಕೆ ಅತ್ಯಂತ ವಾಸ್ತವದ್ದಾಗಿತ್ತು. ಕೋರ್ಟ್ ವಿಚಾರಣೆ ಅವಳಿಗೆ ವಿರುದ್ಧವಾಗಿ ನಡೆದು ಅವಳು ನೇಣು ಶಿಕ್ಷೆಗೋ ಇಲ್ಲ ಉಳಿದ ಜೀವಮಾನ ಪೂರ್ತಿ ಕಾರಾಗೃಹ ವಾಸದ ಶಿಕ್ಷೆಗೋ ಗುರಿಯಾಗುತ್ತಿದ್ದಳೇನೋ. ನಾನು ಕಾನೂನು ಮುರಿಯುತ್ತಿದ್ದೆನೆ? ಇಲ್ಲವೆ ಕಾನೂನನ್ನು ನನ್ನ ಕೈಗೆ ತೆಗೆದುಕೊಂಡು ಅವಳನ್ನು ಬಂಧಮುಕ್ತಳನ್ನಾಗಿಸಲು

ಅದನ್ನು ತಿರುಚಿ ಬಿಡುತ್ತಿದ್ದೆನೆ? ತನ್ನ ಜೀವವನ್ನು ಕೊನೆಗೊಳಿಸಿಕೊಳ್ಳುವುದರ ಮೂಲಕ, ಕಾನೂನಿನ ನಿಯಮಗಳನ್ನು ಕುರಿತಂತೆ, ನನ್ನ ಹೇಡಿತನ ಹಾಗೂ ನನ್ನ ನಂಬಿಕೆಗಳೊಂದಿಗೆ ಸಂಘರ್ಷಕ್ಕೆ ತೊಡಗುವ ವೇದನೆಯಿಂದ ನನ್ನನ್ನು ಅವಳು ಪಾರು ಮಾಡಿದ್ದಳು. ಘಟನೆ ನಡೆದ ಮೇಲೆ ಅದನ್ನು ತರ್ಕ ಸಮ್ಮತಗೊಳಿಸುತ್ತಿದ್ದೇನೆಯೆ? ಬದುಕಿನ ಬಗ್ಗೆ ನಿನಗೆ ಗೊತ್ತಿದ್ದು ನನಗೆ ಗೊತ್ತಿಲ್ಲದೆ ಇರುವಂಥದ್ದೇನೋ ಒಂದು ಇದೆಯೆ ಸುನೇರಿಯಾ? ಯಾರನ್ನೂ ನೀನು ನೆಚ್ಚಲಾರೆ, ಕಡೆಯ ಪಕ್ಷ ನಿನ್ನನ್ನೂ ಕೂಡ, ನಿಜವೆ? ಹಿಂತಿರುಗಿ ಬಂದು ಬಿಡು ಎಲೆ ಅಗಸರವಳೆ, ಬಂದು ಬಿಡು ಎಂದು ಅವಳಿಗೆ ಆಣೆ ಹಾಕಿದೆ. ನೀನೇ ಬಂದು ಎಲ್ಲವನ್ನೂ ವಿವರಿಸುವುದು ಒಳ್ಳೆಯದು. ಹದಿನೆಂಟು ತಿಂಗಳಿನಿಂದ ನಾನು ಗುಡ್ಡೆ ಹಾಕಿಟ್ಟಿರುವ ಒಗೆಯಬೇಕಾದ ಬಟ್ಟೆಗಳಿವೆ. ಬೇಗ ಕೆಲಸಕ್ಕೆ ಬಾ ಹೆಣ್ಣೆ. ನನ್ನ ಕೈಯಿನ ರಕ್ತವೆಲ್ಲದರಿಂದ ಅವು ಚೊಕ್ಕಟಗೊಳ್ಳಬೇಕಾಗಿದೆ. ಕುತ್ತಿಗೆ ಪಟ್ಟಿ ಮತ್ತು ಮಣಿ ಕಟ್ಟನ್ನು ಮತ್ತು ನನ್ನ ಆತ್ಮಸಾಕ್ಷಿಯನ್ನು ಮರೆಯಬೇಡ. ಅಪರಾಧದ ಒಂದೇ ಒಂದು ಕಲೆಯೂ ಇರಕೂಡದು. ನಾನು ಹೇಳಿದ್ದು ಕೇಳಿಸಿತೆ. ಒಂದು ದಿನ ನಸುಕಿನಲ್ಲಿಯೇ ಹತ್ತು ಸಾವಿರ ಜನರನ್ನು ನಾನು ಒರೆಸಿ ಹಾಕಿದೆ ಎಂದು, ತಿಂಗಳುಗಳು ಕಳೆದಂತೆಲ್ಲ ಇನ್ನೂ ಹಲವಾರು ಸಾವಿರ ಜನರನ್ನು ಕೊಂದೆ ಎಂದು ಯಾರೂ ನನ್ನನ್ನು ಅನುಮಾನಿಸುವುದು ಬೇಕಿಲ್ಲ. ಏಳು, ಹೊರಡು, ಅನೇಕ ವರ್ಷಗಳ ನಮ್ಮಿಬ್ಬರ ಲೈಂಗಿಕ ಸಂಭೋಗದ ಹೊರತಾಗಿಯೂ ನೀನು ಪರಿಶುದ್ಧ ಕನ್ಯೆಯಾಗಿರುವ ಹಾಗೆ, ನಾನು ಸಂಭೋಗದ ಅನುಭವವಿಲ್ಲದ ಪರಿಶುದ್ಧ ವ್ಯಕ್ತಿಯಾಗುವವರೆಗೂ ನನ್ನ ಬಟ್ಟೆಗಳು, ನನ್ನ ಮಿದುಳು, ನನ್ನ ದೇಹ ಎಲ್ಲಕ್ಕೂ ಜೋರಾಗಿ ಅಪ್ಪಳಿಸಿ ಹೊಡೆ. ತೆಳ್ಳನೆಯ ಉಕ್ಕಿನ ಹಾಳೆಯ ಹಾಗೆ ನಾನು ಗರಿಗರಿಯಾಗುವ ಹಾಗೆ ನನಗೆ ಗಂಜಿಹಾಕು. ಒಗಟುಗಳಲ್ಲಿ ನೀನು ಮಾತನಾಡುತ್ತ ಇರಲು ನಾನು ಬಿಡುವುದಿಲ್ಲ. ಕಾರಣ ನಾನು ನನ್ನ ಶೇಷಾಯುಷ್ಯವೆಲ್ಲ ಅವುಗಳನ್ನು ಬಿಡಿಸಲು ಯತ್ನಿಸುತ್ತ ಇದ್ದು ಬಿಡುತ್ತೇನೆ. ಹಿಂತಿರುಗಿ ಬಾ ಇಲ್ಲಿಗೆ ಸುನೇರಿಯಾ, ಈಗಲೇ ಈ ಕ್ಷಣವೇ.

* * *

ನಿದ್ದೆ ಮಾಡಲು ಪ್ರಯತ್ನಿಸುವುದರಲ್ಲಿ ಅರ್ಥವಿಲ್ಲ. ಎದ್ದು ಸ್ನಾನ ಮಾಡಿದೆ. ರಾತ್ರಿ ರಾಣಿ ಪುಷ್ಪಗಳು ಇನ್ನೂ ಮುದುಡಿಕೊಂಡಿರಲಿಲ್ಲ. ಆಗ ನನಗೆ ನಾನು ಮನೆಯಲ್ಲೇ ಇದ್ದೀನಿ ಎಂದು ಹೊಳೆಯಿತು. ಬಹುಶಃ ಆಯಾಸಕ್ಕೋ ಅಥವಾ ಹಿಂದಿನ ದಿನ ನಡೆದ ವಿಲಕ್ಷಣ ಘಟನೆಗಳಿಂದಾಗಿಯೋ ನಾನು ತುಂಬಾ ಘಾಸಿಗೊಂಡಿದ್ದೆ. ಹೂವುಗಳ ವಾಸನೆಯಿಂದ ನನ್ನ ತಲೆಸುತ್ತ ತೊಡಗಿತು. ಅದು ಎಷ್ಟೆಂದರೆ ನಾನು ಮದ್ಯ ಕುಡಿದು ಸರಿಯಾಗಿ ಅಮಲೇರಿದ ಭಾವ ಉಂಟಾಗುವಷ್ಟರ ಮಟ್ಟಿಗೆ. ನಿನ್ನೆಯ ಜನಸಂದಣಿಯ ಹಿಂದೆ ಮರೆಯಾಗಿದ್ದ ಹೆಂಗಸು ಮತ್ತೆ ನನ್ನಲ್ಲಿಗೆ ಹಿಂತಿರುಗಿದಳು. ಅವಳೆಲ್ಲಿ ಹೋಗಿ ಬಿಟ್ಟಳು? ಯಾರವಳು?

ನಾನು ನನ್ನ ಅಂಗರಕ್ಷೆಯ ಗುಂಡಿಹಾಕಿಕೊಳ್ಳುತ್ತಿದ್ದಾಗ ಕೌಸಲ್ಯ ಬಂದಳು. "ಇನ್ನೂ ಸರಿಯಾಗಿ ಗುಂಡಿಹಾಕಿಕೊಳ್ಳಕ್ಕೆ ಬರುತ್ತಾ ಇಲ್ಲವಾ? ಇಷ್ಟು ತಿಂಗಳೂ ಏನು ಮಾಡಿದಿರಿ?"

ನಾನು ಶಾಲಾ ಬಾಲಕನಾಗಿದ್ದೆ. ಕೌಸಲ್ಯ ಮತ್ತೆ ಗುಂಡಿ ಹಾಕತೊಡಗಿದ್ದಳು. ಅವಳ ಕೂದಲು ಹಿಡಿದು ಅಪ್ಪಿದೆ. ಅವಳು ನನ್ನ ಅತ್ಯಂತ ಹಳೆಯ ನೆನಪು. ಅಷ್ಟಾದರೂ ನಂಬಲೂ ಆಗದಷ್ಟು ಪ್ರಾಯದ ಹೆಣ್ಣು.

"ಈಗ ನೋಡಿ ಮಹಾರಾಜ್‌ಕುಮಾರ್ ಇಡೀ ಜಗತ್ತನ್ನೇ ಎದುರಿಸಲು ಸಿದ್ಧ" ಎಂದು ಮುಗುಳ್ನಕ್ಕಳು. ಈಗ ನಗುವ ಸರದಿ ನನ್ನದು. ನಾನು ಸಿದ್ಧನಿಲ್ಲದಿದ್ದರೂ, ನಾನು ನಗುವುದು ಒಳಿತೆಂದು ಎಂದು ತಿಳಿದಿರುವೆ.

ನಾನು ಅರಮನೆಯ ಮೆಟ್ಟಲುಗಳ ಏರಿಕೆಯ ತುತ್ತ ತುದಿಯಲ್ಲಿ ನಿಂತಿದ್ದೆ. ಆದಿನಾಥಜೀಯವರ ಮೊಮ್ಮಳಿಗೆ ಕೊಡಲು ನನ್ನ ಕೈಗಳ ತುಂಬ ಉಡುಗೊರೆಗಳೋ ಉಡುಗೊರೆಗಳು. ಆಗ ನಾನು ನಿನ್ನೆ ಪೌಳಿಗೋಡೆಯ ಹೊರಗಡೆ ಸೂರಜ್‌ಪೋಲ್ ಹತ್ತಿರ ಗುಂಪನ್ನು ದಾಟಿ ಬರಲಾಗದೆ ಇದ್ದ ಹೆಣ್ಣನ್ನು ಮತ್ತೆ ನೋಡಿದೆ. ತನ್ನ ತಲೆಯ ಮೇಲೆ ಮುಸುಕು ಧರಿಸಿದ್ದಳು. ದೃಢವಾದ ಹೆಜ್ಜೆ ಹಾಕುತ್ತ ವೇಗವಾಗಿ ನಡೆದು ಬರುತ್ತಿದ್ದಳು. ಅವಳು ಜರತಾರಿ ವಸ್ತ್ರದಲ್ಲಿ ಸುತ್ತಿದ್ದ ಒಂದು ಎತ್ತರದ ಕಟ್ಟನ್ನು ಹಿಡಿದಿದ್ದಳು. ಅದು ಅವಳ ಗಲ್ಲವನ್ನು ಮುಟ್ಟುವಂತಿತ್ತು. ಅವಳು ತಲೆ ಎತ್ತಿ ನೋಡಿದಳು. ಜೊತೆಗೆ ನಾನು ಕುತ್ತಿಗೆಯನ್ನು ಚಾಚಿದ್ದನ್ನು ನೋಡಿದಳು. ನಾನು ಕೂಡಲೇ ಕೆಲವು ಮೆಟ್ಟಲು ಕೆಳಗಿಳಿದು ನೆರಳಿನೊಳಕ್ಕೆ ಸರಿದುಕೊಂಡೆ.

ಈಗ ಅವಳು ಪ್ರವೇಶದ್ವಾರದಲ್ಲಿ ಬೆಳಕಿಗೆ ಎದುರಾಗಿ ನಿಂತಿದ್ದಳು. ಅವಳ ಹಣೆಯ ಮೇಲೆ ಮತ್ತು ಅವಳ ಮೇಲ್ತುಟಿಯ ಮೇಲೆ, ಬೆವರ ಹನಿಗಳು ಕಾಣಿಸಿಕೊಂಡುವು. ಜೊತೆಗೆ ಅವಳ ಏದುಸಿರಿನ ಸದ್ದು ಕೇಳಿಸುತ್ತಿತ್ತು. ತಾನು ಕೊಂಡೊಯ್ಯುತ್ತಿದ್ದ ಬೃಹತ್ ಭಾಂಗಿಯನ್ನು ನೆಲದ ಮೇಲಿಡಲು ಕೆಳಗೆ ಭಾಗಿದಾಗ, ಅವಳ ತೆಳ್ಳನೆಯ ಮುಖಪರದೆಯ ಮೂಲಕ ಅವಳ ಮುಖಾಕೃತಿಯ ಅಸ್ಪಷ್ಟವಾದೊಂದು ಇಣುಕು ನೋಟ ನನಗೆ ಸಿಕ್ಕಿತು. ಅದು ನನ್ನ ತಂಗಿ ಸುಮಿತ್ರ.

'ಮಹಾಸ್ವಾಮಿಯವರೆ' ಎಂದು ಹೇಳಿ ಮುಗುಳ್ನಕ್ಕು ಆ ಹೆಂಗಸು ನನ್ನತ್ತ ಜಿಗಿದಳು. ನಾನು ಅವಳನ್ನು ನನ್ನ ತೋಳಿನಿಂದ ಹಿಡಿದೆ. ನನ್ನ ಕೈಯಲ್ಲಿದ್ದ ಉಡುಗೊರೆಯ ವಸ್ತುಗಳು ಮೆಟ್ಟಿಲುಗಳ ಮೇಲೆ ಮತ್ತು ಹುಲ್ಲುಹಾಸಿನ ಮೇಲೆ ಚೆಲ್ಲಾಡಿದುವು. ನಾನು ಆಯ ತಪ್ಪಿ ಮೆಟ್ಟಿಲುಗಳನ್ನು ಎಡವಿಬಿದ್ದೆ. ನನ್ನ ಒಂದು ಬೆನ್ನು ಮೂಳೆಯು ಮೆಟ್ಟಲಿನ ಹರಿತವಾದ ಏಣಿಗೆ ಹೊಡೆಯಿತು. ಅದರ ಪರಿಣಾಮವಾಗಿ ನನ್ನ ಬಲಗಾಲಿನ ಹರಡು ಪೂರ್ತಿ ಒಂದು ಸುತ್ತು ಅಂದರೆ 180 ಕೋನಗಳಷ್ಟು ತಿರುಚಿಕೊಂಡಿತು. ನೋವಿನ ದೀರ್ಘ ಸೆಳಕು ಉಂಗುಷ್ಟದಿಂದ ಕಣ್ಣಿನವರೆಗೂ ವ್ಯಾಪಿಸಿತು. ಲೀಲಾವತಿಯಂತೂ ನಾವಿಬ್ಬರೂ ತೆಕ್ಕೆಹಾಕಿಕೊಂಡು ಬೆಸೆದುಕೊಳ್ಳಲೇಬೇಕೆಂದು ದೃಢ ನಿರ್ಧಾರ ಮಾಡಿಬಿಟ್ಟಿದ್ದಳು. ಅವಳ ತೋಳುಗಳು ಜೀರು ಗುಣಿಕೆಯಂತೆ ನನ್ನ ಕುತ್ತಿಗೆಯನ್ನು ಬಳಸಿದ್ದರೆ ಅವಳ ಮುಖ ಮಂಜಿನ ಹನಿಗಳಿಂದ ತುಂಬಿದ ಹೂವಿನಂತೆ ನನ್ನ ಮುಖವನ್ನು ಅಪ್ಪಿಕೊಂಡಿತ್ತು. ಬೆವರು, ಸೆಖೆ ಮತ್ತು ಶ್ರಮದ ಪರಿಣಾಮವಾದರೆ, ಸ್ಪರ್ಶಕ್ಕೇಕೆ ಅದು ತಂಪೆನಿಸಬೇಕು? ಲೀಲಾವತಿಯ ಪ್ರಾಯದ ಮೊಲೆಗಳು ನನ್ನ ಎದೆಯಲ್ಲಿ ಎರಡು ಉರಿವ ಕುಳಿಗಳನ್ನು ತೋಡಿದ್ದುವು. ಆ ಕುಳಿಗಳನ್ನೆಂದಿಗೂ ತುಂಬಲಾಗುವುದಿಲ್ಲ. ಆ ಉರಿಯಾದರೂ ಅಷ್ಟೇ, ಎಂದಿಗೂ ಆರುವುದಿಲ್ಲ. ಅವಳ ಕಣ್ಣ ಕಾಂತಿಯನ್ನು, ಅವಳ ನಡುವಿನ ಕೃಶತೆಯನ್ನು ಮತ್ತು ಅವಳ ಮನಸ್ಸಿನ ಲೋಲುಪತೆಯನ್ನು, ನಾನು ಅದೆಷ್ಟು ಮೆಚ್ಚಿದ್ದೆ. ಇಷ್ಟಾದರೂ ನನ್ನ ತೋಳುಗಳು ಜೋಮು ಹಿಡಿದಂತೆ ಭಾರವಾಗಿ, ಕೆಳಕ್ಕೆ ಕುಸಿದವು. ಲೀಲಾವತಿಯ ಅಷ್ಟೊಂದು ನಿಕಟ ಸಾಮೀಪ್ಯದಿಂದ ನಾನು ಮುಜುಗರ ಮತ್ತು ಕಿರಿಕಿರಿಗೆ ಒಳಗಾದೆ.

"ನೀವು ನನಗೆ ಉಡುಗೊರೆ ತರೋದಕ್ಕೆ ಮರೆತಿದ್ದೀರಿ ಅಂತ ನಾನು ಬೇಕಾದರೆ ಬಾಜಿ ಕಟ್ತೀನಿ" ನಾನು ತಪ್ಪು ಮಾಡಿದವನಂತೆ ಜೋಲು ಮುಖ ಮಾಡಿದೆ.

"ಓಹೋಹೋ" ನಿಂದ ಶುರುವಾಗಿ "ಆಹ್ಹಾಹ್ಹಾ" ಎಂದು ಅಟ್ಟಹಾಸದ ನಗೆ ನಕ್ಕಳು.

"ಇಷ್ಟೊಂದು ಬೇಜವಾಬ್ದಾರ ಹಾಗೂ ಜಡ ಮನಷ್ಯನನ್ನು ಮದುವೆಯಾದರೆ ಹೇಗಪ್ಪಾ ಅಂತ ನನಗೆ ಆಶ್ಚರ್ಯವಾಗುತ್ತೆ"

ನಾನು ಅವಳಿಗೆ ಸಹಾನುಭೂತಿ ತೋರುತ್ತ– "ನನ್ನ ಮಾತು ಕೇಳು ಅಂಥವನನ್ನು ಮದುವೆಯಾಗಬೇಡ."

ಅವಳು ನಂಬದವಳಂತೆ ನನ್ನ ಕಡೆ ನೋಡಿದಳು. ನಾನು ಅವಳನ್ನು ಕುಚೇಷ್ಟೆ ಮಾಡುತ್ತಿದ್ದೀನಿ ಎಂದು ಆಮೇಲೆ ಅವಳಿಗೆ ಅರ್ಥವಾಯಿತು.

"ಈಗ ಯಾವುದೂ ನಮ್ಮ ಮದುವೆಯನ್ನು ತಪ್ಪಿಸಲು ಸಾಧ್ಯವಿಲ್ಲ." ಎಂದು ಅವಳು ಮೊನಚಾಗಿ ಉತ್ತರಿಸಿದಳು.

ಆನಂತರ ಅವಳ ಕುತೂಹಲವೇ ಗೆದ್ದಿತು. "ಏನೇನಿದೆ ನಿಮ್ಮ ಹತ್ತಿರ ತೋರಿಸಿ ನನಗೆ ತೋರಿಸಿ ನನಗೆ ತೋರಿಸಿ" ಎಂದು ಕಾಡತೊಡಗಿದಳು.

ಲೀಲಾವತಿ ಇನ್ನೆಂದಿಗೂ ಹಾರಿ ನನ್ನ ತೋಳುಗಳಿಗೆ ತೆಕ್ಕೆ ಬೀಳುವುದಿಲ್ಲ ಎಂದು ಗೊತ್ತಾಯಿತು. ಈ ಹುಡುಗಾಟಿಕೆಯ ಆಟವನ್ನು ನಾವು ಆಡುತ್ತಿರುವುದಕ್ಕೆ ಇದೇ ಕೊನೆ ಅಂತ ಪಣ ಒಡ್ಡಬೇಕೆಂದಿದ್ದೆ. ಅವಳ ಬಾಲ್ಯದೊಂದಿಗೆ ನನ್ನ ಬಾಲ್ಯವೂ ಕೊನೆಯಾಗುತ್ತಿದೆ ಎಂದು ನಿಚ್ಚಯವಾಯಿತು. ಇನ್ನು ಆರು ತಿಂಗಳು ಅಥವಾ ಹೆಚ್ಚೆಂದರೆ ಒಂದು ವರ್ಷದಲ್ಲಿ ಅವಳ ಮದುವೆ ಆಗಿ ಬಿಡುತ್ತೆ.

"ನಿನಗೆ ಏನನ್ನೂ ತರಲಿಲ್ಲ ಅಂತ ಆಗಲೇ ಹೇಳಿದೆ. ತೋಟದ ಮಾಲಿಯ ಮಕ್ಕಳಿಗೆ ಒಂದು ಜೊತೆ ಹಳೆ ಹರಿದ ಬಟ್ಟೆಗಳನ್ನು ತಂದು ಹಾಕಿರಬಹುದು. ಅದನ್ನು ಒಂದು ಸಲ ನೋಡು"

ಅವಳು ಹೋಗಿ ಬಿಟ್ಟಳು. ನಾನು ಲೀಲಾವತಿಯನ್ನು ನೆನಪಿಸಿಕೊಳ್ಳುವುದು ಹೀಗೆ. ಅವಳು ಮುಖಪರದೆಯನ್ನು ತನ್ನ ತಲೆಯ ಸುತ್ತ ಮರೆಮಾಡಿಕೊಳ್ಳುತ್ತಾಳೆ ಮತ್ತು ಅದನ್ನು ಅದರ ಜಾಗದಿಂದ ಸರಿಯದಂತಿರಿಸಲು ಎಡಭುಜದ ಮೇಲೆ ಇಳಿಬಿಟ್ಟುಕೊಳ್ಳುತ್ತಾಳೆ. ತನ್ನ ಲಂಗವನ್ನು ಎತ್ತಿ ಹಿಡಿದುಕೊಂಡು ಓಡಿಬಿಡುತ್ತಾಳೆ. ಉಜ್ವಲವೂ ಕೋಮಲವೂ ಆದ ಧೂಮ್ರವರ್ಣದ ಗಾಳಿಯ ಬೀಸು, ಹಸಿರು ಹೊಲದ ಮೇಲೆ ಮಂದ ಬೆಳಕಿನಲ್ಲಿ ಸುಳಿದು ಹೋದಂತೆ. ಬೆಳಗಿನ ಬೆಳಕೆಂಬುದು ಶಿಲ್ಪಿಯ ಕೈನ ಉಳಿ. ಲೀಲಾವತಿ ಕೆಳಕ್ಕೆ ಬಾಗುತ್ತಾಳೆ. ತನ್ನ ತೋಳು ಚಾಚುತ್ತಾಳೆ. ಕೈಯಲ್ಲೊಂದು ಪಿಂಡಿಯನ್ನು ಹಿಡಿದು ಓಡಿ ಬಿಡುತ್ತಾಳೆ. ನಿಜಕ್ಕೂ ಲೀಲಾವತಿಯು ರೆಕ್ಕೆಯುಳ್ಳ ಅನಂತದ ಪಕ್ಷಿ. ಕೇವಲ ತನ್ನ ಸಂಕಲ್ಪ ಶಕ್ತಿಯ ಮೇಲೆ, ಸೂರ್ಯಾಸ್ತದವರೆಗೂ ತೇಲಬಲ್ಲ ನಿಸ್ಸಂದೇಹ ಲಾವಣ್ಯತಿ. ಜಂಬದ ಹೆಣ್ಣು ನವಿಲೊಂದು ನಿಧಾನವಾಗಿ ಹೆಜ್ಜೆ ಹಾಕುತ್ತ ಒಂದು ಕಟ್ಟಿಗೆಯನ್ನು ಕೊಕ್ಕಿನಿಂದ ಕುಕ್ಕುತ್ತದೆ. ಲೀಲಾವತಿಯು "ಉಶ್" ಎಂದು ಸದ್ದುಮಾಡಿ ಅದನ್ನು ನಿರ್ದಯವಾಗಿ ಓಡಿಸಿ ಬಿಡುತ್ತಾಳೆ ತನ್ನ ಪರದೆಯನ್ನು ತೆಗೆದು ಅಲ್ಲಿದ್ದ ಸಣ್ಣ ಮತ್ತು ದೊಡ್ಡ ಪಿಂಡಿಗಳನ್ನು ಸೇರಿಸಿ ಅದರಲ್ಲಿ ಕಟ್ಟಿ ತನ್ನ ಭುಜದ ಮೇಲೆ ಆ ಗಂಟನ್ನು ಬೀಸಿ ಎಸೆದುಕೊಂಡಳು. ಥೇಟು ಸುನೇರಿಯ ಒಗೆಯಬೇಕಾದ ಬಟ್ಟೆಗಳನ್ನು ತನ್ನ ಹೆಗಲ ಮೇಲಿಂದ ಬೆನ್ನು ಮೇಲಕ್ಕೆ ಎಸೆದುಕೊಳ್ಳುತ್ತಿದ್ದುದನ್ನು ನೆನಪಿಸುವ ಹಾಗೆ.

ಅವಳು ವಾಪಸ್ ಬಂದಾಗ, ತನ್ನ ತಾತ್ಕಾಲಿಕ ಉಡುಪುಗಳ ದೊಡ್ಡ ಚೀಲವನ್ನು ನೆಲದ ಮೇಲಿರಿಸಿ ಬಂದು ನನ್ನ ಕೈಗಳನ್ನು ಹಿಡಿದುಕೊಂಡಳು. ಕಾಲ ಬೆರಳುಗಳ ಮೇಲೆ ನಿಂತುಕೊಂಡು ನನ್ನ ಕಣ್ಣುಗಳನ್ನು ಮತ್ತು ಹಣೆಯನ್ನು ಮುತ್ತಿಟ್ಟಳು. ಅವಳೇನು ಬಾಲಕಿಯೋ ಅಥವಾ ಹೆಣ್ಣೋ? ಅವಳಲ್ಲಿರುವ ಆ ಕಟ್ಟಕ್ಕರೆಯೋ ಎದೆಗುಂದಿಸುವಂಥದು. ಆ ಕ್ಷಣದಲ್ಲಿ ನಾನು ಅವಳಿಗೆ ಹೆದರುತ್ತೇನೆ. ಬೇಕಿದ್ದೋ ಬೇಡದೆಯೋ, ಯಾರಾದರೂ ಅವಳಿಗೆ ತೀವ್ರ ಆಘಾತವನ್ನುಂಟುಮಾಡುತ್ತಾರೆ.

ತನ್ನ ಸೊಂಟಕ್ಕೆ ಕಟ್ಟಿಕೊಂಡಿದ್ದ ಬಟ್ಟೆಯ ಚೀಲವನ್ನು ಬಿಚ್ಚಿ, ಅದರಿಂದ ಬೀಜ ತೆಗೆದಿರುವ ನಾಲ್ಕು ಹುಣಿಸೆಕಾಯಿ ಮತ್ತು ಮಡಿಸಿದ ಉಪ್ಪಿನ ಪೊಟ್ಟಣವನ್ನು ಹೊರತೆಗೆದಳು. ಎರಡು ಹುಣಿಸೆ ಕಾಯನ್ನು ನನಗೆ ಕೊಟ್ಟು ಇನ್ನೆರಡನ್ನು ತಾನೇ ಇಟ್ಟುಕೊಂಡಳು. ಹುಣಿಸೇ ಕಾಯಿಯದು ಹಸಿರು ಮಿಶ್ರಿತ ಕಪ್ಪು ಬಣ್ಣ. ಉಪ್ಪಿನೊಂದಿಗೆ ಕಚ್ಚಿ ತಿಂದರೂ ಅದು ಎಷ್ಟು ಚುಳ್ ಎನ್ನುತ್ತಿತ್ತೆಂದರೆ ಅದರ ಹುಳಿಯ ತೀವ್ರತೆಯನ್ನು ಸಹಿಸಲು ಕಲ್ಲಿನ ಹಲ್ಲು ಬೇಕಾಗುತ್ತದೆನ್ನಿಸಿತು. ನನ್ನ ಮಿದುಳನ್ನು ಹುಳಿಯಿಂದ ಉಜ್ಜಿದಂತಾಗುತ್ತಿತ್ತು. ಇನ್ನು ಮುಂದಿನ ಎರಡು ದಿನಗಳು ಏನನ್ನೂ ಕಚ್ಚಲು ಸಾಧ್ಯವೇ ಇಲ್ಲ. ಈ ಹಾಳಾದವನ್ನು ಯಾರು ಕೊಟ್ಟರೋ ? ಆದರೆ ಹುಣಿಸೆಕಾಯಿಗೂ, ಮಾವಿನ ಕಾಯಿಗೂ ಭವಿಷ್ಯವೇ ಇಲ್ಲ.

"ನಿನ್ನ ಉಡುಗೊರೆಯನ್ನು ಮೊದಲು ತೆರೆಯೋಣವೋ ಅಥವಾ ನನ್ನದನ್ನೋ"

"ನಿಮ್ಮದನ್ನು"

"ಅದೇನು ರಕ್ತವೆ?" ತಾನೇ ಕೈಯಾರ ಕಸೂತಿ ಹಾಕಿ ಸಿದ್ಧಪಡಿಸಿ, ನನಗೂ ಸೇನಾ ಪಡೆಗಳಿಗೂ ಕಾಣಿಕೆಯಾಗಿ ನೀಡಿದ್ದ ಬಾವುಟವನ್ನು ಕಿಂಚಿತ್ ನಂಬಲಾಗದವಳಂತೆ ಒಂದೇ ಸಮನೆ ದಿಟ್ಟಿಸಿ ನೋಡುತ್ತ ಕೇಳಿದಳು.

"ಹೌದು, ಸೇನಾಧಿಪತಿ ಜಹೀರ್-ಉಲ್-ಮುಲ್ಕ್‌ನ ರಕ್ತ"

"ನೀವು ಅವರನ್ನು ಕೊಂದಿರಾ?"

ಬಾವುಟಗಳನ್ನು ಲೀಲಾವತಿಗೆ ಮತ್ತೆ ವಾಪಸ್ ಕೊಡುವುದು ಬಹುಶಃ ಅಷ್ಟೇನೂ ಬುದ್ಧಿವಂತಿಕೆಯ ವಿಚಾರವಲ್ಲ. ಅವಳು ಮತ್ತು ಅವರ ಕುಟುಂಬದವರು ಜೈ..ರು ಎಂಬುದನ್ನು ನಾನು ಮರೆತಿದ್ದೆ. "ಅದು ನಿನ್ನ ಮನಸ್ಸಿಗೆ ಆತಂಕ ಉಂಟು ಮಾಡುತ್ತದೆ ಅನ್ನುವುದಾದರೆ..."

"ತುಂಬ ನಸನಸೆಯಿಂದ ನಾನು ಇದನ್ನು ಕೇಳುತ್ತಿಲ್ಲ. ಆದರೆ ನಾನು ನಮ್ಮ ಮಕ್ಕಳ ಹಾಗೂ ಮುಂದಿನ ತಲೆ ಮಾರಿನ ಸಲುವಾಗಿ ಅದರ ಚರಿತ್ರೆಯನ್ನು ದಾಖಲಿಸಲಿಚ್ಛಿಸುತ್ತೇನೆ."

"ಹೌದು, ನಾನು ಮೋಸದಿಂದ ಝಹೀರ್-ಉಲ್-ಮುಲ್ಕ್‌ನನ್ನು ಕೊಂದೆ. ಸೋಲಿನಿಂದ ಕಂಗೆಟ್ಟಿದ್ದ ನಮ್ಮ ಸೇನೆಗೆ ಒಂದು ಸಂದರ್ಭ ಕೈವಶವಾಗುವಂತೆ ಮಾಡಿದೆ. ಮತ್ತು ಅದರಿಂದ ಮೇವಾಡಕ್ಕೆ ಅಪಕೀರ್ತಿಯನ್ನು ತಂದೆ. ನನ್ನ ಸಣ್ಣತನದಿಂದ ನಾನು ಆಘಾತಗೊಂಡೆ ಮತ್ತು ನನ್ನ ಭಾವನೆಗಳನ್ನು ಎಲ್ಲರಿಗೂ ತೋರಿಸಿಕೊಳ್ಳಬೇಕಾಯಿತು. ನಾನು ಏನನ್ನು ನಿರೀಕ್ಷಿಸುತ್ತಿದ್ದೆ? ನಾನು ಕೆಚ್ಚೆದೆಯವನು, ನನ್ನನ್ನು ಯಾರೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಮತ್ತು ಅಪವಾದಕ್ಕೆ ಗುರಿಯಾದ ವ್ಯಕ್ತಿ ಎಂದು ಲೀಲಾವತಿ ಗಾಢ ಪ್ರೀತಿಯಿಂದ ನನ್ನಲ್ಲಿ ಭರವಸೆ ತುಂಬಬೇಕೆಂದು ನಿರೀಕ್ಷಿಸಿದ್ದೆನೆ? ನನ್ನ

ಮನೋಭಾವದಲ್ಲಿ ಆಗಿರುವ ಬದಲಾವಣೆಯನ್ನು ಅವಳು ಗಮನಿಸಿದ್ದರೆ, ಅದನ್ನು ಕಡೆಗಣಿಸಲು ತೀರ್ಮಾನಿಸಿ, ಮುಂದಿನ ಕಾಣಿಕೆಯತ್ತ ಕೈ ಹಾಕಿದಳು.

"ಏನದು?"

"ಈಗ ತೊಳಲಾಡುತ್ತಿರುವ ನಿನ್ನ ಬದುಕಿಗೊಂದು ಮಾರ್ಗದರ್ಶನದ ಭಾವ ನೀಡುವಂಥ ಒಂದು ಮಾಂತ್ರಿಕ ಯಂತ್ರ ಸಾಧನ ಅದು. ನೈತಿಕ ದ್ವಂದ್ವಗಳ ಕೆಸರಿನಲ್ಲಿ ಕಳೆದು ಹೋದರೆ, ಸಿಲುಕಿಕೊಂಡು ಬಿಟ್ಟರೆ ಅದು ನಿನಗೆ ಅದರಿಂದ ಹೊರ ಬರುವ ದಾರಿಯನ್ನು ತೋರಿಸುತ್ತದೆ."

"ನನಗೇಕೆ ಬೇಕು ಅದು. ನನ್ನ ಮನಸ್ಸು ಏನೆಂದು ನನಗೆ ಯಾವಾಗಲೂ ಗೊತ್ತು?"

ನಾನು ಗಹಗಹಿಸಿ ನಕ್ಕೆ. "ಅದು ಹೇಗೆ ನನ್ನೆಲ್ಲ ಪ್ರತಿಷ್ಠೆಯನ್ನು ಠುಸ್ಸೆನ್ನಿಸಿ ಬಿಡುತ್ತೀ ಲೀಲಾವತಿ? ಅದೊಂದು ನಾವಿಕರ ದಿಕ್ಸೂಚಿ. ಮೋಡ ತುಂಬಿದ ಕತ್ತಲೆ ರಾತ್ರಿಯಲ್ಲಿ, ಆಕಾಶದಲ್ಲಿ ಒಂದೂ ನಕ್ಷತ್ರ ಕಾಣದೆ ಇದ್ದಾಗ, ನಿನಗೆ ಭೌಗೋಳಿಕವಾದ ಪೂರ್ವ ಪಶ್ಚಿಮ ಮೊದಲಾದ ದಿಕ್ಕುಗಳನ್ನು ತೋರಿಸುವಂಥದು."

"ನಿಜವಾಗಿಯೂ? ಪುಸ್ತಕಗಳಲ್ಲಿ ತಿಳಿಸಿರುವ ಹಾಗೆಯೇ ಅದು ಕೆಲಸ ಮಾಡುತ್ತದೆಯೆ?"

"ಹೌದು ನೀನೇ ಕಂಡುಕೋ."

ಪೂರ್ತಿ ಹತ್ತು ನಿಮಿಷಗಳ ತನಕ ಅವಳೇ ಅದನ್ನು ಬಳಸಿ ನೋಡಿದಳು. ಕ್ರೀಡಾ ಭವನದ ಹೊರಗೆ ನಡೆದಳು. ತೋಟದಲ್ಲಿ, ಅರಮನೆಯ ಹಿಂಭಾಗದ ಗೋಡೆಯ ಹತ್ತಿರ, ಕತ್ತಲೆಯ ಕಮಾನು ಗೂಡುಗಳಲ್ಲಿ ಆಲದ ಮರದ ಕೆಳಗೆ, ನಾನು ನಿಂತು ಅವಳನ್ನು ಗಮನಿಸುತ್ತಿದ್ದ ಮೆಟ್ಟಿಲುಗಳ ಮೇಲೆ, ಹೀಗೆ ಬೇರೆ ಬೇರೆ ಜಾಗಗಳಲ್ಲಿಟ್ಟು ನೋಡಿದಳು. ಬಹುಮಟ್ಟಿಗೆ ಅವಳ ಮನಸ್ಸು ಕೆಲಸ ಮಾಡುವ ರೀತಿಯನ್ನು ನಾನು ಕಂಡುಕೊಂಡೆ. ಅವಳು ಈಶಾನ್ಯಕ್ಕೆ ನೇರವಾಗಿ ನಿಂತಿದ್ದಾಗ, ಅದು ಪಶ್ಚಿಮವನ್ನು ತೋರಿಸುತ್ತಿದ್ದುದನ್ನು ಪತ್ತೆ ಹಚ್ಚಿ ಆಶ್ಚರ್ಯ ಹುಟ್ಟಿಸಿದಳು.

"ಎಲ್ಲಿ ಸಿಕ್ಕಿತು ನಿಮಗಿದು?"

"ಒಬ್ಬ ನಾವಿಕನಿಂದ. ಪ್ರಪಂಚನ್ನೆಲ್ಲಾ ಸುತ್ತಿ ಬಂದ, ವೆನಿಸ್‌ನಷ್ಟು ದೂರ ದೇಶಕ್ಕೆ ಹೋಗಿದ್ದ ಅನೇಕ ರಾತ್ರಿಗಳಂದು ಬಿರುಗಾಳಿ ಎದ್ದು ದಾರಿ ತಪ್ಪಿದ್ದ ಹಡಗಿನ ನಾವಿಕನಿಂದ".

"ನಾವು ಗಿರಿ ಕಾನನಗಳಿಗೆ ವನ ವಿಹಾರ ಕೈಗೊಳ್ಳುವುದು ಯಾವಾಗ? ಆಗ ನಾವು ತಪ್ಪಿಸಿಕೊಂಡು ಬಿಡುತ್ತೇವೆ. ಆದರೆ ನಾನು ನಿಮಗೆ ದಾರಿ ತೋರಿಸುತ್ತೇನೆ"

"ಮುಂದಿನ ಗುರುವಾರ ಹೋಗುವುದಾದರೆ ಹೇಗೆ?"

"ಆಗಬಹುದು. ಬೆಳಿಗ್ಗೆ ಏಳು ಗಂಟೆಗೆಲ್ಲ ನಾನು ಇಲ್ಲಿರುತ್ತೇನೆ?"

ನಾನು ಅವಳಿಗೆ ತಂದು ಕೊಟ್ಟಿದ್ದ ಪಚ್ಚೆಯ ಕಂಠಹಾರವನ್ನು ಆಗಲೇ ಕೊರಳಲ್ಲಿ ಧರಿಸಿದ್ದಳು. ದಿಕ್ಸೂಚಿಯೊಂದಿಗೆ ನನಗೆ ಆ ನಾವಿಕನು ಮಾರಿದ್ದ ಈಜಿಪ್ಟಿನ ಹತ್ತಿ ಬಟ್ಟೆಯ ಮೇಲು ಹೊದಿಕೆಯನ್ನು ಧರಿಸತೊಡಗಿದ್ದಳು.

"ಇಷ್ಟೇನಾ" ಇದ್ದಕ್ಕಿದ್ದಂತೆ ಅವಳೇಕೆ ಗಲಿಬಿಲಿಗೊಂಡಳು ಮತ್ತು ಸಿಡಿಮಿಡಿಗೊಂಡಳೆಂದು ನಾನು ಅರ್ಥಮಾಡಿಕೊಳ್ಳಲಾಗಲಿಲ್ಲ.

"ನೀನೊಬ್ಬಳು ಕೃತಘ್ನಳು ಲೀಲಾವತಿ, ನಾಚಿಕೆಗೆಟ್ಟ, ತೃಪ್ತಿಪಡಿಸಲಾಗದು ಕೃತಘ್ನಳು" ಎಂದು ಹೇಳಿ ಅವಳ ಸಿಟ್ಟನ್ನು ನಕ್ಕು ಕಳೆಯಲು ಯತ್ನಿಸಿದೆ.

"ನಿಮ್ಮ ಹಾಗೆ ನಾಚಿಕೆಗೆಟ್ಟ, ತಣಿಸಲಾಗದ, ಆಡಂಬರದ ವ್ಯಕ್ತಿ ಆಗಿರುವುದಕ್ಕಿಂತ ಇದು ಬಹಳ ಒಳ್ಳೆಯದು. ನೀವು ನನಗೆ ತಂದು ಕೊಡುವ ಉಡುಗೊರೆಗಳಿಗೆ ಕೊನೆಯೇ ಇರಲ್ಲ".

"ಹೋಗಲಿಬಿಡು. ನಿನಗೆ ಈಗ ಕೊಟ್ಟ ಕೊನೆಯ ಉಡುಗೊರೆಯನ್ನು ಮರೆತು ಬಿಡೋಣ"

"ನನಗದು ಬೇಕಿಲ್ಲ. ನಿಮಗಾಗಿ ನನ್ನ ಹತ್ತಿರ ಕೇವಲ ಎರಡು ಉಡುಗೊರೆಗಳಿವೆ."

"ನನಗೆ ನನ್ನ ಉಡುಗೊರೆಗಳು ಸಿಕ್ಕುತ್ತವಾ ಅಥವಾ ನೀನೇ ಇಟ್ಟುಕೊಂಡು ಬಿಡುವ ಯೋಜನೆ ಇದೆಯೋ ಹೇಗೆ?"

ಅವಳು ಬಹಳ ಗಂಭೀರವಾಗಿ ಯೋಚನೆ ಮಾಡಿದಳು. ಆದರೆ ನಿರ್ಧಾರಕ್ಕೆ ಬರಲಾಗಲಿಲ್ಲ. ಅವಳಿಗೆ ಸಂತೋಷ ಉಂಟುಮಾಡಬೇಕು ಅಂತ ಇದ್ದೆ. ಆದರೆ ವಸ್ತುಗಳನ್ನು ಬೇರೆಯವರಿಗೆ ಕೊಡುವುದರಲ್ಲಿ ಅವಳಿಗೆ ಎಷ್ಟು ಸಂತೋಷ ಸಿಕ್ಕುತ್ತೆ ಅನ್ನುವುದರ ಬಗ್ಗೆ ಚಿಂತಿಸಲು ನನ್ನ ಸ್ವಾರ್ಥ ನನಗೆ ಅನುವು ಮಾಡಿರಲಿಲ್ಲ.

"ಹೋಗಲಿ, ಅದನ್ನು ತೊಗೊಂಡು ಏನು ಮಾಡ್ತಿ?" ವಿಷಯವನ್ನು ಸರಿಪಡಿಸಲು ಯತ್ನಿಸುತ್ತ ಅವಳ ಕೈಯಿಂದ ಕಿನ್‌ಕಾಪಿನ ವಸ್ತ್ರದ ಗಂಟನ್ನು ಬಾಚಿಕೊಂಡೆ. 'ಅವು ನನ್ನವು' ಎಂದೆ.

ಅವಳ ಕಣ್ಣುಗಳಲ್ಲಿ ಬೆಂಕಿ ಮತ್ತು ಕೋಪ ಕಾಣಿಸಿಕೊಂಡವು. ಆದರೆ ಅವಳು ಹಠ ಬಿಟ್ಟು ಮೃದುವಾದಳು. "ತೊಗೊಳ್ಳಿ, ಅದನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ." ಅವಳು ಆ ಕಟ್ಟನ್ನು ನನ್ನ ಕೈಗಳಿಗೆ ತುರುಕಿ ನನ್ನ ಕಡೆಗೆ ಬೆನ್ನು ತಿರುಗಿಸಿದಳು. ನಾನು ಗಂಟು ಬಿಚ್ಚಿದೆ. ಸಪಾಟಾದ ಕಟ್ಟಿನ ಮೇಲೆ ಎತ್ತರವಾದ, ಹೊದಿಕೆ ಹಾಕಿದ್ದ ಒಂದು ಕಟ್ಟು ಇತ್ತು. ಸಪಾಟಾದ ಪಿಂಡಿಯನ್ನು ತೆರೆದೆ. ಅದೊಂದು ಪುಸ್ತಕ. ಅದರಲ್ಲೊಂದು ಟಿಪ್ಪಣಿ ಇತ್ತು.

"ದಾದಾಜಿ ಮತ್ತು ನಾನು ಈ ವರ್ಷ ಕೌಟಿಲ್ಯನ ಅರ್ಥಶಾಸ್ತ್ರವನ್ನು ಜೊತೆಯಾಗಿ ಓದಿದೆವು. ಅದರ ಬಗ್ಗೆ ಒಂದು ಸಂಕ್ಷಿಪ್ತ ವ್ಯಾಖ್ಯಾನ ಗ್ರಂಥವನ್ನು ಬರೆಯುವ ಹಾಗೆ ಮಾಡಿದರು ತಂದೆಯವರು. ಇದು ಯುವತಿಯರು ಓದುವ ಗ್ರಂಥವಲ್ಲ ಎಂದು ಅದನ್ನು ವಿರೋಧಿಸಿದರು. ಆದರೆ ದಾದಾಜಿಯವರು ಅದಕ್ಕೆ ಅವಳಿಗೆ ಒಂದು ಮನಸ್ಸು ಅಂತ ಇರುವುದಾದರೆ ಅದು ಗೊಡ್ಡು ಹರಟೆ ಇಲ್ಲವೆ ದಡ್ಡತನದಿಂದ ತುಂಬಿಕೊಳ್ಳುವ ಬದಲು ಜ್ಞಾನದಿಂದ ತುಂಬಿಕೊಂಡಿರಬೇಕೆಂದು ಬಯಸುವೆ ಎಂದರು. ಅದನ್ನು ನಿಮಗಾಗಿ ಪ್ರತಿ ಮಾಡುವ ಭರದಲ್ಲಿ ಅದನ್ನು ಆರೇಳು ಸಲ ಓದಿದ್ದೇನೆ."

ಅಷ್ಟೊಂದು ಎಚ್ಚರಿಕೆಯಿಂದ ಸಿದ್ಧಪಡಿಸಿದ್ದ ಅರ್ಥಶಾಸ್ತ್ರದ ಪ್ರತಿಯ ಪುಟಗಳನ್ನು ನಾನು ತಿರುವಿ ಹಾಕಿದೆ. ಅವಳು ಯಾವುದನ್ನೂ ಗೀಚಿರಲಿಲ್ಲ. ಮೂಲ ಸಂಸ್ಕೃತ ಪುಸ್ತಕವನ್ನು ಪ್ರತಿ ಮಾಡುವಾಗ ಒಂದು ವೇಳೆ ತಪ್ಪುಗಳೇನಾದರೂ ಆಗಿದ್ದರೆ, ಅವಳು ಇಡೀ ಪುಟವನ್ನೇ ಮತ್ತೆ ಬರೆದಿದ್ದಳು. ಲೀಲಾವತಿ ನನ್ನ ಕಡೆ ಕಳ್ಳ ನೋಟವನ್ನು ಬೀರುತ್ತಿದ್ದುದನ್ನು ಪತ್ತೆಹಚ್ಚಿದೆ. ನನ್ನ ಮುಖದಲ್ಲಿ ಏನನ್ನು ಕಂಡಳೋ ಅದರಿಂದ ಅವಳು ಸಂತಸಗೊಂಡದ್ದು ಸ್ಪಷ್ಟವೇ ಇತ್ತು. ನಾನು ಮತ್ತೆ ಅವಳ ವಿಶ್ವಾಸಕ್ಕೆ ಪಾತ್ರನಾಗಿದ್ದೆ.

"ನನ್ನ ಇನ್ನೊಂದು ಉಡುಗೊರೆಯೂ ನನಗೆ ಸಿಕ್ಕಿ ಬಿಡಲಿ"

ಅವಳು ಎಚ್ಚರಿಕೆಯಿಂದ ರತ್ನ ಖಚಿತವಾದ ವೀರ ವಿಜಯ ಪೇಟದ ಮೇಲಿನ ಬಟ್ಟೆಯ ಹೊದಿಕೆಯನ್ನು ಸರಿಸಿದಳು.

"ನಿನ್ನೆಯ ದಿನ ಅವರುಗಳು ನಿಮ್ಮನ್ನು ವಿಜಯದಿಂದ ವಂಚಿಸಿದಾಗ, ನಾನು ಮನೆಗೆ ಧಾವಿಸಿ ಈ ಹೊತ್ತಿನ ಬೆಳಗಿನವರೆಗೂ ಕೂತು ನಿಮಗಾಗಿ ಈ ವಿಜಯದ ರುಮಾಲನ್ನು ಸಿದ್ಧಪಡಿಸಿದೆ."

"ಈ ಎಲ್ಲಾ ರತ್ನಾಭರಣಗಳು ನಿನಗೆ ಎಲ್ಲಿ ಸಿಕ್ಕಿದುವು"

"ಅದೆಲ್ಲವೂ ನನ್ನದೇ"

ಅವಳು ಹೇಳಿದ್ದು ಸರಿ. ಅವನ್ನು ತುಂಬ ಹತ್ತಿರದಿಂದ ನೋಡಿದಾಗ, ಅದರಲ್ಲಿ ಬಹಳಷ್ಟು ಒಡವೆಗಳನ್ನು ಅವಳ ಮೇಲೆ ಒಂದಲ್ಲ ಒಂದು ಸಲ ನೋಡಿದ್ದೆ ಎಂದು ಗೊತ್ತಾಯಿತು. ಚಿನ್ನದ ಜರಿ ಹೊಂದಿರುವ ಬಟ್ಟೆ ಕೂಡ ಅವಳ ಮಾಮೂಲಿ ಮೇಲು ಹೊದಿಕೆಗಳಲ್ಲೊಂದೇ ಆಗಿತ್ತು. ಅದರ ಮಡಿಕೆಗಳಲ್ಲಿ ಲೀಲಾವತಿಯು ಮಾಣಿಕ್ಯ ವಜ್ರ, ಪಚ್ಚೆ, ನೀಲಿ, ಗೋಮೇಧಿಕ, ಪುಷ್ಯರಾಗ ಹಾಗೂ ಮುತ್ತಿನ ಹೊಳಪಿನ ಹರಳು ಇವೇ ಮೊದಲಾದುವುಗಳಿಂದ ಮಾಡಿದ ಏಳು ಜೊತೆ ಕಿವಿಯ ವಂಕಿಗಳನ್ನು ಹೊಲಿದಿದ್ದಳು. ಪಕ್ಕಗಳಲ್ಲಿ ಮೂರು ಜೊತೆ ಚಿನ್ನದ ಕಾಲಂದಿಗೆಗಳನ್ನು ಪೋಣಿಸಲಾಗಿತ್ತು. ಮುಂಭಾಗದಲ್ಲಿ ಮಡಿಕೆಗಳು ಅಡ್ಡಡ್ಡಲಾಗಿ ಸಾಗುವಲ್ಲಿ ಮಧ್ಯ ಭಾಗದಿಂದ ಸ್ವಲ್ಪ ಮುಂದಕ್ಕೆ, ಚಿನ್ನ ಮತ್ತು ಬೆಳ್ಳಿಯ ಕೆಲಸ ಮಾಡಿದ ಉತ್ಕೃಷ್ಟ ಕುಸುರಿ ಕೆಲಸದ ಕಮಲದ ಪದಕವೊಂದನ್ನು ಹೊಲಿದಿದ್ದಳು. ಅದರ ಮೇಲೆ, ಪಶ್ಚಿಮ ಕರಾವಳಿಯ ಮರಾಠಾ ಸ್ತ್ರೀಯರು ತಮ್ಮ ಮೂಗುಗಳಲ್ಲಿ ಧರಿಸುವ ಒಳ್ಳೆ ವಜನ್ನಿನ ನತ್ತು ಇದ್ದಿತು. ಅದು ಕಲಬೆರಕೆಯಾಗಿರಬೇಕಿತ್ತು. ಆದರೆ ಬಣ್ಣ ಮತ್ತು ವಿನ್ಯಾಸಗಳ ಕಡೆಗೆ ತುಂಬ ಲಕ್ಷ್ಯ ಕೊಟ್ಟು ಮಾಡಿದ್ದರಿಂದ ಘನತೆ ಮತ್ತು ಸೂಕ್ಷ್ಮತೆಗಳಿಗೆ ಎರವಾಗದ ರೀತಿಯಲ್ಲಿ ಅದರ ಪರಿಣಾಮವೂ ಅತ್ಯಂತ ಸಮೃದ್ಧವಾದುದಾಗಿತ್ತು.

"ಆಭರಣಗಳು ಇಲ್ಲದೆ ಇರುವುದನ್ನು ನೋಡಿದರೆ ನಿಮ್ಮ ಮನೆಯವರು ಏನು ಹೇಳುವರು?"

"ದಾದಾಜಿಗೆ ಗೊತ್ತಿದೆ"

"ನೀನು ಯಾತಕ್ಕೋಸ್ಕರ ಕಾಯುತ್ತಿದ್ದೀ?" ಒಮ್ಮೆಗೆ ಲೀಲಾವತಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಅದನ್ನು ನನ್ನ ತಲೆಗೆ ತೊಡಿಸು,

ಹಾಗಾದರೆ "ನೀವು ಅದನ್ನು ಧರಿಸುವಿರಾ." ಲೀಲಾವತಿ ಆಶ್ಚರ್ಯದಿಂದ ನಂಬದವಳಂತೆ ಕೇಳಿದಳು.

"ಅದನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿಟ್ಟು ಅವನ್ನು ದೂರದಲ್ಲೆಲ್ಲೋ ಅಟ್ಟದ ಕೋಣೆಯಲ್ಲಿಟ್ಟರೆ ನಿನಗೆ ಇಷ್ಟವಾಗುತ್ತ?"

ಆಗ ಅವಳ ಮುಗುಳುನಗೆ ಹೊರ ಹೊಮ್ಮಿತು.

ಹಾಗೆಯೇ ಅವಳ ವಯಸ್ಸು.

ನಾನು ತಲೆಯನ್ನು ಕೆಳಕ್ಕೆ ಬಾಗಿಸಿದೆ. ಅವಳು ನನ್ನ ತಲೆಗೂದಲನ್ನು ಹಿಂದಕ್ಕೆ ಸರಿಸಿ ಗಟ್ಟಿಯಾಗಿ ಒಂದು ನಿಮಿಷ ಅದುಮಿ ಹಿಡಿದುಕೊಂಡಳು. ಆನಂತರ ರುಮಾಲನ್ನು ಕೈಗೆತ್ತಿಕೊಂಡು ಎಚ್ಚರಿಕೆಯಿಂದ ಅದನ್ನು ತನ್ನ ತಲೆಯ ಮೇಲಿರಿಸಿದಳು. ನನ್ನ ತಲೆಯ ಮೇಲಿನ ರುಮಾಲನ್ನೊಮ್ಮೆ ನೋಡಿ ಥಟ್ಟನೆ ಹೇಳಿಬಿಟ್ಟಳು. "ಈಗ ನೀವು ಥೇಟು ಮಹಾರಾಜಕುಮಾರರಂತೆ ಕಾಣುತ್ತೀರಿ".

"ನಾನು ಮಹಾರಾಜಕುಮಾರನೇ. ನಾನಾಗಲಿ ನೀನಾಗಲಿ ಅದನ್ನು ಮರೆಯುವುದು ಬೇಡ. ನೀನು ವಾಪಸ್ ಮನೆಗೆ ಹೋಗುವಾಗ ಕೌಸಲ್ಯಳಿಗೆ ನನ್ನ ಪುಸ್ತಕವನ್ನು ಕೊಡುವೆಯಾ?"

ಅವಳು ತನ್ನೆಲ್ಲ ಉಡುಗೊರೆಯನ್ನೂ ಪುಸ್ತಕವನ್ನೂ ಒಟ್ಟುಗೂಡಿಸಿದಳು. "ಮುಂದಿನ ಗುರುವಾರ" ಎಂದಳು.

"ಆಗಬಹುದು." ಅವಳು ಹೋಗುತ್ತಾ ಇದ್ದಾಗ ನಾನು ಕೂಗಿ ಕರೆದೆ. "ಅಶ್ವಶಾಲೆಯವರೆಗೂ ನನ್ನ ಜೊತೆ ಬರುವುದಕ್ಕೆ ಮನಸ್ಸು ಮಾಡ್ತೀಯಾ?"

ನಾನು ಬೇಫ್ಲಿಕೀರ್‌ನನ್ನು ಕಟ್ಟಿ ಹಾಕಿದ್ದ ಕಡೆಗೆ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದಾಗ ಅವಳು ನನ್ನ ಕೈಹಿಡಿದಿದ್ದಳು. ಮಂಗಳನು ನನಗಾಗಿ ತವಕದಿಂದ ಕಾಯುತ್ತಿದ್ದನು. ಅವನು ನನ್ನ ವಿಜಯದ ಪೇಟದ ಕಡೆ ನೋಡುವುದನ್ನು ತಪ್ಪಿಸಲು ಶತಪ್ರಯತ್ನ ಪಡುತ್ತಿದ್ದನು. ಅವನು ತನ್ನ ಬಹುಮುಖ್ಯವಾದ ಸಮಾಚಾರವನ್ನು ನನಗೆ ತಿಳಿಸುವುದಕ್ಕೆ ಮುಂಚೆ ನಾನು ಹೇಳಿದೆ.

"ಹನ್ನೊಂದು ಗಂಟೆಗೆ ದರ್ಬಾರ್ ಸಭೆ ಇದೆ"

"ಮಹಾಪ್ರಭುಗಳು ಹಿಂತಿರುಗಿ ಬಂದಿರುವ ಹಾಗೂ ವಿಶೇಷ ದರ್ಬಾರ್ ಕರೆದಿರುವ ವಿಚಾರ ತಮಗೆ ಹೇಗೆ ಗೊತ್ತಾಯಿತು ಸ್ವಾಮಿ?"

"ಅವರು ತಮ್ಮ ಪರಿವಾರದೊಂದಿಗೆ ಮಧ್ಯರಾತ್ರಿಯ ಸುಮಾರಿಗೆ ಬಂದರು. ರಾವ್ ವೀರಮ್‌ದೇವ್ ಅವರಿಗೆ ಈ ದಿನ ನಮ್ಮ ಅತ್ಯುನ್ನತ ಪ್ರಶಸ್ತಿಯಾದ ಮೇವಾಡ ವಿಭೂಷಣ ಪ್ರಶಸ್ತಿಯನ್ನು, ಅದರ ಜೊತೆಗೆ ಇಪ್ಪತ್ತು ಹಳ್ಳಿಗಳು ಮತ್ತು ಮೂರು ಆನೆಗಳನ್ನು ಬಳುವಳಿಯಾಗಿ ನೀಡಲಾಗುವುದು. ರಾಜಾ ಪೂರಜೀ ಕೀಕಾ ಅವರಿಗೆ ಮೇವಾಡ ಗೌರವ ಪ್ರಶಸ್ತಿ ಮತ್ತು ಹತ್ತು ಹಳ್ಳಿಗಳು ಹಾಗೂ ಐವತ್ತು ಕುದುರೆಗಳು. ರಾವ್ ಉದಯ್ ಸಿಂಹರಿಗೆ ಮೇವಾಡ ಭೂಷಣ, ಏಳು ಹಳ್ಳಿಗಳು ಮತ್ತು ಮೂವತ್ತು ಕುದುರೆಗಳನ್ನು ನೀಡಲಾಗುತ್ತದೆ. ನಾನು ಹೀಗೇ ಹೇಳ್ತಾ ಹೋಗಲೇನು?"

ಮಂಗಳನು ಹುಬ್ಬುಗಂಟಿಕ್ಕಿದ. ಅವನ ಭದ್ರತಾ ಸಿಬ್ಬಂದಿ ಮತ್ತು ಗುಪ್ತಚರ ದಳದ ಸಿಬ್ಬಂದಿ ಅವನಿಗೆ ವಿಚಾರ ತಿಳಿಸುವುದರಲ್ಲಿ ಎಡವಿದರೆ? ನಾನು ಅವರಿಂದ ನುಣುಚಿಕೊಂಡೆನೆ?

"ಮಹಾಸ್ವಾಮಿ ತಾವು ತಮ್ಮ ತಂದೆಯವರನ್ನು ನಿನ್ನೆ ರಾತ್ರಿ ಹೋಗಿ ಕಂಡಿದ್ದಿರಾ ಅಥವಾ ಈ ಹೊತ್ತು ಬೆಳಿಗ್ಗೆ ಕಂಡಿದ್ದಿರಾ?"

"ನಾನು ಹೋಗಬೇಕಾಗಿಲ್ಲ ಮಂಗಳ್, ಯಾರೇ ಒಬ್ಬ ಎಳೆ ಹುಡುಗನೂ ಅಷ್ಟನ್ನು ನಿನ್ನೆಯೇ ಊಹಿಸಬಲ್ಲ."

"ಯಾವುದದು? ಬೇಫ್ಲಿಕೀರ್ ಜೊತೆ ಇದ್ದ ಇನ್ನೊಂದು ಎಳೆ ವಯಸ್ಸಿನ ಕುದುರೆಯನ್ನು ಕುರಿತು ಲೀಲಾವತಿ ಆ ಮಾತು ಆಡಿದ್ದು. ಯಾರೊಬ್ಬರನ್ನೂ ನಿಶ್ಚಿತವಾಗಿ ಸಂಬೋಧಿಸದೆ. "ಅದು ನಷಾ" ನಾನು ಹಾಗಿಂದ ಹಾಗೇ ಹೇಳಿದೆ.

"ಯಾವುದು?"

"ನಷಾ" ನನ್ನ ದನಿ ಒಮ್ಮೆಲೇ ತಣ್ಣಗೆ ಮತ್ತು ಕರ್ಕಶವಾಯಿತು.

"ನಿಮ್ಮ ತಂದೆ ನಿನಗೆ ಕುದುರೆ ಇಟ್ಟುಕೊಳ್ಳಲು ಅನುಮತಿ ಕೊಡುವುದಿಲ್ಲವಾದ್ದರಿಂದ ನನ್ನ ಜೊತೆ ನೀನು ಕುದುರೆ ಸವಾರಿ ಹೋಗಲು ಸಾಧ್ಯವಿಲ್ಲ ಅಂತ ನನಗೆ ಇನ್ನು ಮುಂದೆ ಹೇಳದೆ ಇದ್ದರೆ ಚೆನ್ನಾಗಿರುತ್ತೆ"

"ಆ ಕುದುರೆ ನನ್ನದೇನು?"

"ಒಂದು ಬೆಳಿಗ್ಗೆ ನಾನು ಎಷ್ಟು ಮೂಕ ಪ್ರಶ್ನೆಗಳಿಗೆ ಉತ್ತರ ಕೊಡಬೇಕು?"

ನನ್ನ ಇಂದಿನ, ಹಿಂದಿನ ಹಾಗೂ ನನ್ನ ಮುಂದಿನ ಎಲ್ಲ ಜನ್ಮಗಳ ದುರ್ವರ್ತನೆ ಅಪರಾಧಗಳು ಕರ್ತವ್ಯ ಲೋಪಗಳು ಆದೇಶಗಳು ಎಲ್ಲವನ್ನೂ ಕ್ಷಮಿಸಿ, ಕೂಡಲೇ ದಾಖಲೆಯಿಂದ ಅಳಿಸಿ ಹಾಕಲಾಯಿತು. ಸ್ತಂಭೀಭೂತನಾದ ಮಂಗಳ ಮತ್ತು ನಾನು ಇಬ್ಬರೂ ಗಾಢಾಲಿಂಗನದಲ್ಲಿ ಬಂಧಿತರಾದೆವು.

"ನಾನು ಅದನ್ನು ಮನೆಗೆ ಕೊಂಡೊಯ್ಯಲೆ?"

"ನಿಧಾನವಾಗಿ ಹಾಗೂ ಸಪನ್‌ಲಾಲ್ ಲಗಾಮು ಬಿಗಿಹಿಡಿಯಲು ಅನುಮತಿ ಕೊಟ್ಟರೆ."

ದ್ರಷ್ಟಾರನ, ಜ್ಯೋತಿಷ್ಕನ ದೇವವಾಣಿಯ, ಪ್ರವಾದಿಯ ಉಪವೃತ್ತಿಯನ್ನು ನಾನು ಕೈಗೊಳ್ಳಲು ಬಹುಶಃ ಇದು ಸಕಾಲವೆನಿಸುತ್ತದೆ. ಆದರೆ ನನ್ನ ಅತೀಂದ್ರಿಯ ಶಕ್ತಿ ಇನ್ನೂ ನೂರಕ್ಕೆ ನೂರು ಖಾತರಿಯಾಗಿಲ್ಲ. ಅದು ವಿಧಿಯ ಒಂದು ಸಣ್ಣ ತಿರುವನ್ನು ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ ಅಥವಾ ಅದನ್ನು ಹೆಜ್ಜೆಯ ತಿರುವು ಎನ್ನಲೆ? (ಶಬ್ದಗಳ ಮೇಲೆ ಆಟವಾಡುವುದನ್ನು ನಾನು ತೀರಾ ಕ್ಷುದ್ರವಾದ ಶಬ್ದದ ದೊಂಬರಾಟ ಎಂದು ತೀವ್ರವಾಗಿ ಟೀಕಿಸಬಹುದು. ಆದರೆ ಯಾವುದಾದರೂ ಒಂದು ಕೆಟ್ಟ ದಿನದಲ್ಲಿ ನೀವು ಹಿಡಿದರೆ ನಾನು ಅತ್ಯಂತ ಹೊಲಸಾದ ಮತ್ತು ಅಸಹ್ಯ ಹುಟ್ಟಿಸುವಂಥ ಶಬ್ದ ಶ್ಲೇಷೆಯಲ್ಲಿ ಮುಳುಗಿ ಹೋಗಿರುವುದನ್ನು ಕಾಣಬಹುದು.) ರಾಜದರ್ಬಾರು ಭರ್ತಿಯಾಗಿತ್ತು. ತಂದೆಯವರು ಸಂದರ್ಭವನ್ನು ಲಘುವಾಗಿ ತೆಗೆದುಕೊಂಡಿರಲಿಲ್ಲ. ಸಮಾರಂಭದಲ್ಲಿ ಹಾಜರಿರಬೇಕೆಂದು, ಸಾಮ್ರಾಜ್ಯದ ಎಲ್ಲ ಗಣ್ಯ ವ್ಯಕ್ತಿಗಳಿಗೂ ಅವರು ಆದೇಶವನ್ನು ಕಳುಹಿಸಿದ್ದರೆಂಬುದು ಸ್ಪಷ್ಟವೇ ಇತ್ತು. ಗೌರವ ಸ್ವೀಕರಿಸುವವರ ಪಟ್ಟಿಯಲ್ಲಿ ಯಾರೆಲ್ಲ ಇದ್ದಾರೆ ಮತ್ತು ಇಲ್ಲದಿರುವ ವ್ಯಕ್ತಿ ಯಾರೆಂಬುದು ಎಲ್ಲರಿಗೂ ತಿಳಿಯಬೇಕೆಂಬುದನ್ನು ಅವರು ದೃಢಪಡಿಸಿಕೊಂಡಿದ್ದರು.

ನಾನು ಸಭೆಯನ್ನು ಪ್ರವೇಶಿಸಿದ ಕೂಡಲೇ ಗೌರವಾನ್ವಿತ ವ್ಯಕ್ತಿಗಳ ಸಭೆಯಿಂದ ಸಣ್ಣ ಆದರೆ ಸ್ಪಷ್ಟವಾದೊಂದು ಏದುಸಿರು ಹೊಮ್ಮಿದ್ದು ಕೇಳಿಸಿತು. ಘನತೆವೆತ್ತ ಮಹಾಪ್ರಭುಗಳು ಮಾತ್ರ ಚಿನ್ನದ ವಿಜಯದ ರುಮಾಲಿನಿಂದ ನಿನ್ನನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡಬಲ್ಲರು. ವಿಶೇಷ ಖಾಸಗಿ ಸಮಾರಂಭವೇನಾದರೂ ಇದ್ದಿದ್ದರೆ? ಅಥವಾ ಮಹಾರಾಜ್ ಕುಮಾರ್‌ಗೆ ತನಗೆ ತಾನೇ ವಿಜಯ ಪ್ರಶಸ್ತಿಯನ್ನು ಕೊಟ್ಟುಕೊಳ್ಳುವ ಧಾರ್ಷ್ಟ್ಯವಿದೆಯೆ? ಈ ಸಾಧ್ಯತೆಯೇ ಹೆಚ್ಚು. ಯಾರಾದರೂ ವಂದಿ ಮಾಗಧರಿಗೆ ನೇರವಾದ ಪ್ರಶ್ನೆಯೊಂದಿಗೆ ನನ್ನೊಂದಿಗೆ ಸಂಘರ್ಷಕ್ಕಿಳಿಯುವ ಕೆಚ್ಚಿತ್ತೆ ಎಂದು ತಿಳಿಯುವುದು ಹೆಚ್ಚು ಕುತೂಹಲಕಾರಿಯಾಗುತ್ತಿತ್ತು. ಆದರೆ ಅದಕ್ಕೆ ಸಮಯವಿರಲಿಲ್ಲ. ಕಾರಣ ಶಿಷ್ಟಾಚಾರದ ಸಚಿವರು ತಂದೆಯವರು ಆಗಮಿಸುತ್ತಿರುವುದನ್ನು ಘೋಷಿಸಿದರು. ನಾವು ಎದ್ದು ನಿಂತು ನಮ್ಮ ಪ್ರಭುವಿಗೆ ತಲೆಬಾಗಿ ನಮಿಸಿದೆವು. ವಿಕ್ರಮಾದಿತ್ಯನು ಎದ್ದು ಹೋಗಿ ಯಜಮಾನ ರೀತಿಯಲ್ಲಿ ಗಲಿ ಬಿಲಿ ಮಾಡಿಕೊಂಡು ಅವರು ಕುಳಿತುಕೊಳ್ಳಲು ನೆರವಾದನು. ತಮ್ಮ ಅತ್ಯಂತ ಕಿರಿಯ ಮಗನ ಈ ವಿನೂತನ ವೈಯಕ್ತಿಕ ಆಸಕ್ತಿಗಾಗಿ ಹೇಗೆ ಪ್ರತಿಕ್ರಿಯೆ ತೋರಬೇಕೆಂದು ತಂದೆಗೂ

ಇನ್ನೂ ನಿಶ್ಚಿತವಿರಲಿಲ್ಲ. ಕಾರಣ ಇಷ್ಟೂ ವರ್ಷಗಳಿಂದ ಅವರು ಅದನ್ನು ಸ್ವತಃ ತಾವೇ ಸಾಕಷ್ಟು ಚೆನ್ನಾಗಿಯೇ ನಿರ್ವಹಿಸಿದ್ದರು. ಆದರೆ ಅವರು ಉಲ್ಲಾಸದ ಮನೋಭಾವದಲ್ಲಿದ್ದರು. ಹಾಗಾಗಿ, ಸ್ವಲ್ಪ ಅನಿಶ್ಚಿತವಾಗಿಯೇ ಆದರೂ ಕ್ಷಮಿಸುವ ರೀತಿಯಲ್ಲಿ ಮುಗುಳ್ನಕ್ಕರು.

ಚಿತ್ತೂರಿನಲ್ಲಿ ತೆರೆಯ ಹಿಂದೆ ಏನೆಲ್ಲ ನಡೆಯುತ್ತಿತ್ತು ಎಂದು ತಿಳಿದುಕೊಳ್ಳಬೇಕೆಂದರೆ, ತಂದೆಯವರ ಮೇಲೊಂದು ಕಣ್ಣಿಡುವುದರಲ್ಲಿ ಏನೂ ಅರ್ಥವಿಲ್ಲ. ಈ ನಾಟಕದ ಬೀಗದ ಕೈ ಇರುವುದು ಇತರೆ ನಟರನ್ನು ಗಮನಿಸುವುದರಲ್ಲಿ. ನನ್ನ ಚಿಕ್ಕ ತಮ್ಮ ರತನ್ ನನ್ನೇ ನೋಡಿ. ಅವನು ತಾನು ಎರಡನೆಯವನಾಗಿ ಹುಟ್ಟಿರುವುದಕ್ಕೆ ತನ್ನ ತಾಯಿಯನ್ನು, ನನ್ನನ್ನು, ಬೇರೆ ಶಕ್ತಿಗಳೇ ಆಗಿರಬಹುದು ಯಾವುದನ್ನೂ ಕ್ಷಮಿಸಿಲ್ಲ. ವಾಸ್ತವವಾಗಿ ಅವನು ಕೆಟ್ಟ ಮನುಷ್ಯರ ಪೈಕಿ ಅಲ್ಲ. ಅವನು ಬುದ್ಧಿವಂತ, ಲಕ್ಷ್ಯ ಕೊಡುವ, ಹಾಗೂ ಕಷ್ಟಪಟ್ಟು ಕೆಲಸ ಮಾಡುವ ವ್ಯಕ್ತಿ. ಆದರೆ ಸಂಖ್ಯೆಗಳ ಲೆಕ್ಕಾಚಾರದ ಆಟದಲ್ಲಿ ಆದ ಹಿನ್ನಡೆಯು ಅವನನ್ನು ಎಲ್ಲ ರೀತಿಯ ಅಸೌಜನ್ಯ ಮತ್ತು ಅವಮಾನಗಳಿಗೆ ಗುರಿಯಾಗುವಂತೆ ಮಾಡುತ್ತದೆ. ಆದರೆ ಅನೇಕ ಸಲ ಅದು ಉದ್ದೇಶಿತವಾಗಲಿ, ಮಾಡಿದ್ದಾಗಲಿ ಆಗಿರುವುದಿಲ್ಲ. ನಾವು ಪರಸ್ಪರ ಸಲಿಗೆ ಕೊಟ್ಟಿಲ್ಲ. ನಮ್ಮಿಬ್ಬರ ನಡುವೆ ಅಂಥ ನಿಜವಾದ ವೈರವೇನಿಲ್ಲ. ಬೇರೊಬ್ಬ ತಂದೆ ತಾಯಿಗಳು ಮತ್ತು ಬೇರೆ ಸಂದರ್ಭದಲ್ಲಿ ನಾವಿಬ್ಬರೂ ಸ್ನೇಹಿತರಾಗಿದ್ದಿರಬಹುದೆಂಬುದು ಊಹೆಗೆ ಬಿಟ್ಟದ್ದು. ಬಡಪಾಯಿ ರತನ್ ಸ್ವಲ್ಪ ತೊಡಕಿನಲ್ಲಿ ಸಿಕ್ಕಿಕೊಂಡಿದ್ದಾನೆ. ತಂದೆಯವರ ಜೊತೆ ಅವನು ಗುಜರಾತ್‌ನಲ್ಲಿ ಸೈನಿಕ ಕಾರ್ಯಾಚರಣೆಯಲ್ಲಿದ್ದಾಗ, ತಂದೆಯವರು ಅವನೊಬ್ಬನಿಗೇ ಪೂರ್ತಿಯಾಗಿ ತಂದೆಯಾಗಿ ಬಿಟ್ಟಿದ್ದರು. ಆದರೆ, ಅದೇ ಸಮಯಕ್ಕೆ ನಾನು ಮತ್ತು ಮಂತ್ರಿ ಮಂಡಲದ ಸದಸ್ಯರು, ವಿಕ್ರಮಾದಿತ್ಯನನ್ನು ಅವನ ದ್ರೋಹದ ಅಪರಾಧಕ್ಕಾಗಿ ಕುಂಭಲ್‌ಗರ್ ಸೆರೆಮನೆಗೆ ಕಳಿಸಿ ಬಿಡುವ ಏರ್ಪಾಟಿನಲ್ಲಿ ವ್ಯಸ್ತರಾಗಿದ್ದೆವು. ತಂದೆಯವರ ವಿಶ್ವಾಸಪಾತ್ರನಾಗಲು ಅವರ ಅಂತರಂಗದೊಳಕ್ಕೆ ಏಕೆ ನುಸುಳಿಕೊಂಡು ಅವರ ನೆಚ್ಚಿನ ಮಗನಾಗಬಾರದು? ಆದರೆ ಬಡಪಾಯಿ ರತನ್‌ಗೆ ವಿಕ್ರಮಾದಿತ್ಯನನ್ನು ತಂದೆಯವರ ಪ್ರೀತಿಪಾತ್ರ ಪುತ್ರನ ಸ್ಥಾನದಿಂದ ಚ್ಯುತಗೊಳಿಸುವುದು ಹೇಗೆಂಬ ಯೋಚನೆಯೇ ಇಲ್ಲ. ತನ್ನ ಬಗ್ಗೆಯೇ ಅಷ್ಟೊಂದೆಲ್ಲ ಕಾಠಿಣ್ಯ ಅವನಿಗೆ ತಗದು. ವಾಸ್ತವ ವಿಚಾರವೆಂದರೆ, ಅದೊಂದು ಅಸಮಾನ ಸ್ಪರ್ಧೆ. ವಿಕ್ರಮಾದಿತ್ಯನು ಸ್ಪರ್ಧೆಯಲ್ಲಿ ಇಲ್ಲ.

ಸ್ಪರ್ಧೆಯು ರಾಣಿಯ ಮೊಗಸಾಲೆಯಲ್ಲಿ ಅಡ್ಡಲಾಗಿ ಕುಳಿತಿತ್ತು. ತಂದೆಯವರು ವಿಕ್ರಮಾದಿತ್ಯನ ಕಿವಿಯಲ್ಲಿ ಏನನ್ನೋ ಪಿಸುಗುಟ್ಟಿದ ಕೂಡಲೇ ರಾಣಿ ಕರ್ಮವತಿಯು ಕುದಿಯುವ ಎಣ್ಣೆಯಲ್ಲಿ ಕರಿದ ಪೂರಿ ಉಬ್ಬುವಂತೆ ಉಬ್ಬಿದಳು. ನಾನು ಕಳೆದ ಬಾರಿ ನೋಡಿದ್ದಾಗಿನಿಂದ ಇಲ್ಲಿಯವರೆಗೂ ಪೂರ್ಣಗ್ರಹಣದಿಂದ ಉದಯ ಸೂರ್ಯನ ತನಕ ವಿಕ್ರಮಾದಿತ್ಯನು ಬಹುದೂರ ಸಾಗಿ ಬಂದಿದ್ದಾನೆ. ಆದರೆ ಅದೆಲ್ಲವೂ ಅತ್ಯುತ್ಕೃಷ್ಟವಾದ ಯೋಜನೆಯನ್ನು ಅಳವಡಿಸಿಮಾಡಿದ ತನ್ನ ಕಾರ್ಯ ಹಾಗೂ ತನ್ನ ವಿಶ್ವಾಸಪಾತ್ರನಾದ ಬೃಹನ್ನದನ ಸಹಾಯದಿಂದ ಆದದ್ದು ಎಂಬುದನ್ನು ಅವನ ತಾಯಿಯು ಮರೆಯಲಾರಳು. ರಾಣಿ ಕರ್ಮವತಿಯ ಪಕ್ಕದಲ್ಲಿ ನನ್ನ ತಾಯಿ, ಮಹಾರಾಣಿ ಕುಳಿತಿದ್ದಳು. ಆಕೆ ಹಿಗ್ಗಿ ಹೀರೇಕಾಯಿ ಆಗಿದ್ದಳು. ಆಕೆಯಾದರೋ ಸರಳ ವ್ಯಕ್ತಿ. ರಾಣಿ ಕರ್ಮವತಿ ಮತ್ತು ಅವಳ ಪುತ್ರ ವಿಕ್ರಮಾದಿತ್ಯನ ವಿಷಯಕ್ಕೆ ಅವಳು ಸಂತಸದಿಂದಿದ್ದಳು. ತನ್ನ ಸ್ವಂತ ಪುತ್ರ ಮತ್ತು ರಾಜ್ಯದ ಉತ್ತರಾಧಿಕಾರಿಯು ಸ್ಪರ್ಧೆಯಲ್ಲಿಯೇ ಇಲ್ಲವೆಂಬ ವಿಷಯಕ್ಕೆ ಆಕೆಗೆ ಇದ್ದದ್ದು ದಿವ್ಯ ಅಜ್ಞಾನ. ರಾಣಿ ಕರ್ಮವತಿಯು ಶತ್ರುಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶವನ್ನೆಲ್ಲಾ

ಹುಡುಕಾಡಿಸಿ, ರತನ್‌ನನ್ನು ಪತ್ತೆ ಹಚ್ಚಿಸಿದಳು. ಚಿಂತೆಗೇನೂ ಕಾರಣವಿಲ್ಲ. ಭಾರೀ ಪ್ರತಿಕೂಲ ಸನ್ನಿವೇಶಗಳ ವಿರುದ್ಧ ಆಕೆ ಗೆಲುವು ಸಾಧಿಸಿದ್ದಳು ಎಂಬುದಕ್ಕೆ ಅವನು ಇನ್ನೊಂದು ಪುರಾವೆ. ಅವಳ ಕಣ್ಣುಗಳು ನನ್ನತ್ತ ತಿರುಗಿದುವು ಅವಳ ಮುಗುಳ್ನಗೆ ಈ ಕಿವಿಯಿಂದ ಆ ಕಿವಿಯವರೆಗೂ ಹಿಗ್ಗಿತು. ನಮ್ಮ ತಂದೆಯಂಥವರಿಗೆ ಅವಳನ್ನು ಎದುರಿಸುವುದು ಅದೇಕೆ ಅಷ್ಟು ಕಷ್ಟ ಎಂದು ಮೊದಲ ಸಲಕ್ಕೆ ನನಗೆ ಅರಿವಾಯಿತು. ಅವಳದು ಒಂದು ರೀತಿಯ ಕಠೋರ ಸೌಂದರ್ಯ. ಆದರೆ ಅವಳ ಆಕರ್ಷಣೆಯ ಮೂಲವೆಂದರೆ ಕಾಮಪ್ರಚೋದಕವಾದ ಹಠಮಾರಿತನ. ಹೆಂಗಸರು ಒಪ್ಪಿಸಿಕೊಳ್ಳಬೇಕು ಇಲ್ಲವೆ ತ್ಯಜಿಸಬೇಕು ಎಂದು ಭಾವಿಸಲಾಗಿರುವಂಥದು. ಆಕೆ ಹಾಗೆಂದೂ ಮಾಡಿದವಳಲ್ಲ. ಅವಳು ನಮ್ಮೆಲ್ಲರಿಗಿಂತ ದೀರ್ಘಕಾಲ ಜೀವಿಸಿರುತ್ತಾಳೆ. ನಾನು ಅವಳಿಗೆ ಹೃತ್ಪೂರ್ವಕವಾಗಿ ತಲೆಬಾಗಿದೆನು.

ನನ್ನ ಚಿನ್ನದ ರುಮಾಲನ್ನು ತಂದೆಯವರು ನೋಡಿದಾಗ ಅವರ ಮುಖದ ಮೇಲೆ ನನಗೆ ಮುಗುಳ್ನಗೆ ಕಾಣಿಸಿತೆ? ನಾನು ಅದನ್ನು ಸಾರ್ವಜನಿಕವಾಗಿ ಧರಿಸುವಂತೆ ಮಾಡಿದ್ದಾವುದು? ಸ್ವತಃ ಲೀಲಾವತಿಯೆ ಆ ರುಮಾಲು ನಮ್ಮಿಬ್ಬರ ನಡುವಿನ ಒಂದು ಖಾಸಗಿ ಸಂಗತಿ ಎಂದು ಭಾವಿಸಿದ್ದಾಗ ನಾನು ಅದನ್ನು ನನ್ನ ತಲೆಯ ಮೇಲಿಡುವಂತೆ ಅವಳಿಗೆ ಏಕೆ ಹೇಳಿದೆ? ತಂದೆಯವರಾದಿಯಾಗಿ ಇಡೀ ಮೇವಾಡ ನನ್ನನ್ನು ಹೇಡಿ ಮತ್ತು ಕೊಲೆಗಡುಕ ಎಂದು ಪರಿಗಣಿಸಿದರೂ ಅದನ್ನು ಲಕ್ಷಿಸದೆ, ಗುಜರಾತಿನ ಮೇಲಿನ ವಿಜಯದ ರೂವಾರಿ ನಾನೇ ಎಂದು ಸಾರಿ ಹೇಳಬೇಕೆಂದು ಬಯಸಿದ್ದೆನೆ? ಅಥವಾ ಅವರೆಲ್ಲರಿಗೂ ನೀವೆಲ್ಲಾ ಹಾಳಾಗಿ ಹೋಗಿ ಎಂದು ಹೇಳ ಹೊರಟಿದ್ದೆನೆ? ರಾವ್ ವೀರಮ್‌ದೇವ್ ಅವರು ನಾನು ಏನು ಹೇಳುವೆನೋ ಎನ್ನುವ ನಿರೀಕ್ಷೆಯಲ್ಲಿ ನನ್ನ ಕಡೆಯೇ ನೋಡುತ್ತಿದ್ದರು. ದರ್ಬಾರ್ ಸಭಾಭವನದಲ್ಲಿ ಮೌನ ನೆಲಸಿತ್ತು. ತಂದೆಯವರೂ ತಾಳ್ಮೆಯಿಂದ ನಾನು ಹೇಳುವುದನ್ನೇ ಕಾಯುತ್ತಿದ್ದಾರೆನಿಸಿತು. ಈಗೇನು? ನಮ್ಮ ವಿಜಯ ಹಾಗೂ ರಾವ್ ರೈಮಲ್‌ನನ್ನು ಇದಾರ್‌ನ ಸಿಂಹಾಸನದ ಮೇಲೆ ಸ್ಥಾಪಿಸಬೇಕೆಂಬ ತಂದೆಯವರ ಇಚ್ಛೆಯನ್ನು ಪೂರೈಸಿದ್ದಕ್ಕಾಗಿ ಕ್ಷಮೆಕೋರಿ ನಾನು ಒಂದು ಸಣ್ಣ ಭಾಷಣ ಮಾಡಬೇಕೆಂಬ ನಿರೀಕ್ಷೆ ಇತ್ತೆ? ತಂದೆಯವರು ಇಪ್ಪತ್ತು ನಾಲ್ಕು ಗಂಟೆಗಳು ತಡವಾಗಿ ಆಗಮಿಸಿ ನಮ್ಮ ಸ್ನೇಹಿತರು ಮತ್ತು ಮಿತ್ರದೇಶಗಳವರನ್ನು ಅವಮಾನಿಸಿದ್ದಕ್ಕಾಗಿ ನಾನು ಮಂಡಿಯೂರಿಕೊಂಡು ಹೋಗಿ ತಂದೆಯವರಿಗೆ ಧನ್ಯವಾದಗಳನ್ನು ಸಮರ್ಪಿಸಬೇಕಿತ್ತೆ? ವಿಕ್ರಮಾದಿತ್ಯನನ್ನು ನನ್ನ ಹೆಗಲ ಮೇಲೇರಿಸಿಕೊಂಡು ಎಲ್ಲರಿಗೂ...

ನಾನು ಮುಂದೆ ಬಂದು ತಂದೆಯವರಿಗೆ ನನ್ನ ಗೌರವವನ್ನು ಸಲ್ಲಿಸುವವರೆಗೂ ಯಾರ‍್ಯಾರೂ, ರಾವ್ ವೀರಮ್ ದೇವ್ ಕೂಡಲ ಚಲಿಸುವಂತಿರಲಿಲ್ಲ. ನಾನು ಇನ್ನು ಮುಂದೆ ಖಚಿತ ಉತ್ತರಾಧಿಕಾರಿ ಆಗದೆ ಹೋಗಬಹುದು ಆದರೆ, ಜೇಷ್ಠ ಪುತ್ರ. ವಿಜಯಿಯಾಗಿ ಹಿಂತಿರುಗುತ್ತಿದ್ದ ಸೇನೆಯ ಮುಖ್ಯಸ್ಥ. ನಾನು ನೋವಿನಿಂದ ಕುಂಟುತ್ತ ನಡೆದೆ.

"ನಿನಗೇನೂ ಆಗಿಲ್ಲ ತಾನೆ ರಾಜಕುಮಾರ?" ತಂದೆಯವರ ದನಿಯಲ್ಲಿ ನನ್ನ ಬಗ್ಗೆ ಕಾಳಜಿ ಇದ್ದಿತು. "ನೀನು ಗಾಯಗೊಂಡಿದ್ದೀ ಎಂದು ನನಗೆ ಯಾರೂ ಯಾಕೆ ಹೇಳಲಿಲ್ಲ?"

ಅಷ್ಟೊಂದು ದೀರ್ಘ ಸಮಯದ ಸೈನಿಕ ಕಾರ್ಯಾಚರಣೆಯ ನಂತರ ಶ್ರಮಕ್ಕೆ ತಕ್ಕ ಫಲ ತೋರಿಸಲಾಗದೆ ಖಾಲೀ ಕೈಗಳಲ್ಲಿ ವಾಪಸಾಗುತ್ತಿರುವುದಕ್ಕೆ ನಾಚಿಕೊಂಡು, ನಾನು ಸಭೆಗೆ ಬರುವ ದಾರಿಯಲ್ಲಿ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ನನಗೊಂದು ಸಣ್ಣ ಅಪಘಾತವಾಗುವಂತೆ ನಾನೇ ಏರ್ಪಾಟು ಮಾಡಿದ್ದೆ ಎಂದು ಅವರಿಗೆ ಹೇಳಬೇಕೆಂದಿದ್ದೆ. ಆದರೆ ವಿಕ್ರಮಾದಿತ್ಯನು ಅದಕ್ಕೆ ಅವಕಾಶ ಕೊಡಲಿಲ್ಲ.

'ಅಂಥದ್ದೆಲ್ಲ ಏನಿಲ್ಲ ಮಹಾಸ್ವಾಮಿ' ನನ್ನ ಕಡೆ ಅಸಮ್ಮತಿ ಸೂಚಿಸುತ್ತ ಮುಗುಳ್ನಕ್ಕನು. ವಾಕ್ಯದ ಉಳಿದ ಭಾಗವನ್ನು ಹೇಳುವ ಮುನ್ನ, ಮುಂದಿನ ಶಬ್ದದ ಮೇಲೆಯೇ ಪೂರ್ತಿ ಹತ್ತು ಕ್ಷಣಗಳ ಕಾಲ ತಳಾಯಿಸುತ್ತಿದ್ದನು. ಸಭೆ ಅಷ್ಟೇ ಅಲ್ಲ, ನಾನು ಕೂಡ ವಿಕ್ರಮಾದಿತ್ಯನು ತನ್ನ ಪರಿಣಾಮಕಾರಿಯಾದ ವಾಕ್ಯವನ್ನು ಹೊರಹಾಕಲೆಂದು ಉಸಿರು ಬಿಗಿ ಹಿಡಿದು ಕಾದೆವು. "ಅವನು ಅತಿಥಿ ಅರಮನೆಯ ಉದ್ಯಾನದಲ್ಲಿ ಹುಲುಸಾಗಿ ಬೆಳೆದಿರುವ ಹುಲ್ಲು ಹಾಸಿನ ಮೇಲೆ ನಮ್ಮ ರಾಜ್ಯ ಭಂಡಾರದ ಹೆಸರಾಂತ ಹಣಕಾಸು ಸಚಿವರ ಕುಮಾರಿ ಚೆಲುವೆ ಲೀಲಾವತಿಯೊಂದಿಗೆ ಸಂತೋಷದಿಂದ ಕುಣಿದಾಡುತ್ತಾ ಇದ್ದ. ಆಗ ಜಾರಿ, ಕಿಂಚಿತ್ ಅವಿವೇಕದಿಂದ ಆದರೆ ಆನಂದದಿಂದ ಅವಳ ಮೇಲೆ ಬಿದ್ದ. ಅಂಥ ಒಂದು ಮಧುರ ಒಡನಾಟಕ್ಕಾಗಿ ತೆರಬೇಕಾಗಿ ಬಂದ ಒಂದು ಸಣ್ಣ ಬೆಲೆ ಅಷ್ಟೆ ಅದು ಎನ್ನುವುದನ್ನು ತಾವೆಲ್ಲ ಒಪ್ಪುತ್ತೀರಲ್ಲವೆ ಸ್ನೇಹಿತರೆ?" ಸಭಾಸದರು ಉಕ್ಕಿ ಬರುತ್ತಿರುವ ನಗುವನ್ನು ಬಲವಂತವಾಗಿ ತಡೆದುಕೊಂಡು ನಗುತ್ತಿರುವ ಶಬ್ದ ಕೇಳಿ ಬಂತು. "ಅವನು ಧರಿಸಿರುವ ವೀರ ವಿಜಯ ಪೇಟ ಆಕೆಯ ಕಾಣಿಕೆ"

ಏನೋ ಒಂದು ಕಾರಣಕ್ಕೆ ದರ್ಬಾರಿಗೆ ಈ ಕೊನೆಯ ಮಾತು ಕೋಲಾಹಲದ್ದಾಗಿ ಕಂಡಿತು. ಬಹುಶಃ ವಿನೋದವೆನ್ನುವುದು ನಿರೀಕ್ಷೆಯ ವಿಷಯ ಹಾಗೂ ಅದು ಅಳತೆಯ ಗೆರೆಗಳನ್ನು ಗುರುತು ಮಾಡಿದ ಮಾನದಂಡದ ಆಧಾರವನ್ನವಲಂಬಿಸಿದೆ. ಒಮ್ಮೆ ತಳಹದಿಯನ್ನು ಹಾಕಿದಿರೆಂದರೆ ಸೌಮ್ಯವಾದ ತಮಾಷೆಯ ಅಥವಾ ತೀರಾ ಯಃಕಶ್ಚಿತವಾದ ಸಾಲುಗಳೂ, ಹುರುಪಿನಿಂದ ಮತ್ತು ಸಾಮಾನ್ಯವಾದ ಬಿಸಾಕಿದಂಥ ದನಿಯಲ್ಲಿ ಹೇಳಿದರೂ ಅವು ನಗೆಯ ಅಲೆಗಳನ್ನು ಎಬ್ಬಿಸುತ್ತವೆ. ಎಂದಿನಂತೆ ನನ್ನ ತಮ್ಮ ವಿಕ್ರಮಾದಿತ್ಯನು ಒಂದು ಸರಳ ನಗೆಯ ಸಲುವಾಗಿ ಯಾರೋ ಬೇರೆಯವರು ಬೆಲೆ ತೆರಬೇಕೆಂದೇ ಇಚ್ಛಿಸುತ್ತಿದ್ದನು. ನನ್ನ ತಮ್ಮನು ನಿರಾತಂಕವಾದ ಮನಸ್ಸಿನಿಂದ ಮಹಾರಾಜ್‌ಕುಮಾರ್ ಮತ್ತು ಲೀಲಾವತಿ ಇಬ್ಬರೂ ಪ್ರಣಯ ಸಂಬಂಧ ಹೊಂದಿದ್ದರೆಂದು ಹಾಗೂ ಅದನ್ನು ಮರೆಮಾಚುವ ತೊಂದರೆಯನ್ನು ತೆಗೆದುಕೊಂಡಿರಲಿಲ್ಲವೆಂದು ಸೂಚಿಸಿ ಬಿಟ್ಟಿದ್ದನು. ಲೀಲಾವತಿಯು ಇಷ್ಟರಲ್ಲೇ ಮೇವಾಡದ ಅತ್ಯಂತ ಸುಂದರಿಯರಲ್ಲೊಬ್ಬಳಾಗಲಿದ್ದಾಳೆಂಬುದು ಅಷ್ಟೇನೂ ಮಹತ್ವದ್ದಲ್ಲ. ಇದರಿಂದ ಆದಿನಾಥ ಜೀಯವರಿಗೆ ಇದೀಗ ಲೀಲಾವತಿಯ ಮದುವೆ ಮಾಡುವುದು ಅಸಾಧ್ಯವಲ್ಲದಿದ್ದರೂ ಕಷ್ಟವಂತೂ ಆಗಿಯೇ ಆಗುತ್ತದೆ. ತಮ್ಮ ಮೊಮ್ಮಗಳ ಮದುವೆಯ ವರದಕ್ಷಿಣೆಯಾಗಿ ಅಪರಿಮಿತವಾದ ಹಣದ ಮೊತ್ತವನ್ನು ಕೊಡಬಲ್ಲರೆಂಬುದು ಲೆಕ್ಕಕ್ಕೆ ಬರುವುದಿಲ್ಲ. ಒಂದು ಅಪವಾದ ಎಷ್ಟೇ ಸುಳ್ಳಾಗಲಿ ಅಥವಾ ತಮಾಷೆಯದಾಗಲಿ, ಮೇವಾಡದಲ್ಲಿ ಮದುವೆಯ ವಯಸ್ಸಿನ ಹುಡುಗಿಯನ್ನು ಅನುಮಾನಿಸುವ ಹಾಗೆ ಮಾಡುವುದಿಲ್ಲ. ಬದಲಿಗೆ ಸಂಶಯಕ್ಕೆಡೆಗೊಡದಂತೆ ಅವಳ ಅಪರಾಧವನ್ನು ರುಜುವಾತು ಮಾಡಿ ಅವಳನ್ನು ಶಿಕ್ಷೆಗೆ ಗುರಿಮಾಡುತ್ತದೆ. ಸಚಿವರ ಭಾವರಹಿತ ಮುಖದಲ್ಲಿ ಒಂದೂ ಸುಕ್ಕು ಹೆಚ್ಚಾಗಲಿಲ್ಲ. ಆದರೆ ಅವರ ಅಕ್ಕಿ ಹಿಟ್ಟಿನಂಥ ಶುಭ್ರ ಬಿಳಿ ಮೊಗ ತೀರಾ ಕಪ್ಪಿಟ್ಟಿತು.

"ರಾಜ್ಯ ಖಜಾನಾ ಸಚಿವರ ಕ್ಷಮೆ ಕೋರಬೇಕೆಂದು ಸೂಚಿಸುತ್ತಿದ್ದೇನೆ" ನನ್ನ ಕಂಠ ತೀರಾ ಉತ್ಸಾಹ ಹೀನವಾಗಿತ್ತು.

ನನ್ನ ತಮ್ಮನು ದಾರಿತಪ್ಪಿದವನಂತೆ ಕಂಡನು. ಅವನು ನನಗೆ ಗಾಳವನ್ನು ಒಡ್ಡಿದ್ದನು ಹಾಗೂ ಹೆಚ್ಚೆಂದರೆ ನಾನು ಅವನು ಒಡ್ಡಿದ ಗಾಳಕ್ಕೆ ಬೀಳಬಹುದೆಂದು ನಿರೀಕ್ಷಿಸಿದ್ದನು. ಆದರೆ ನಾನಾದರೋ ಅವನ ನಿರೀಕ್ಷೆಗೆ ಬದಲಾಗಿ ಆಟದ ಷರತ್ತುಗಳನ್ನೇ ಬದಲಾಯಿಸಿಬಿಟ್ಟಿದ್ದೆ.

ವಿಕ್ರಮಾದಿತ್ಯನು ನಿಜಕ್ಕೂ ಅವಿವೇಕಿಯೇ ಆಗಿದ್ದನು ಹಾಗೂ ಈಗಲೂ ಅದನ್ನೊಂದು ಕುಚೋದ್ಯದ ಸಂಗತಿಯಾಗಿ ಮಾಡ ಹೊರಟನು. ಮತ್ತು ತನ್ನದೇ ಆದ ಅಭಿರುಚಿ ಹೀನ ಉಲ್ಲಾಸದಲ್ಲಿ ಮುಳುಗಿ ಬಿಟ್ಟನು.

"ನನಗೆ ಅದರಲ್ಲಿ ಆಸಕ್ತಿ ಇಲ್ಲ ಅಣಯ್ಯ, ಇಲ್ಲ. ನಿನಗೆ ವಿನೋದದ ಬುದ್ಧಿ ಇರುವುದಾದರೆ ನಮ್ಮ ಗೌರವಾನ್ವಿತ ಹಣಕಾಸು ಸಚಿವರ ಕ್ಷಮೆ ಕೋರಬೇಕಾಗಿರುವುದು ನೀನು".

ನಾನು ಒಂದು ಹೆಜ್ಜೆ ಮುಂದಿಟ್ಟೆ. ನನ್ನದು ಕಂಚಿನ ಕಂಠದ ಪಿಸುದನಿ. "ನಾನು ಹೇಳಿದ್ದು ಕೇಳಿಸಿತಲ್ಲ ರಾಜಕುಮಾರ ನೀನು ಆದಿನಾಥರ ಮತ್ತು ಅವರ ಮರಿಮಗಳ ಕ್ಷಮೆಯನ್ನು ಕೋರಬೇಕು."

ಶ್ರೋತೃಗಳು ಕುಳಿತಿದ್ದ ಸಭಾಂಗಣ ಮತ್ತು ಅದರಲ್ಲಿದ್ದವರೆಲ್ಲರೂ ಅವ್ಯಕ್ತ ಭೀತಿಯಿಂದ ಸ್ತಬ್ಧರಾದರು. ತಾನು ಇಷ್ಟು ವರ್ಷಗಳ ಕಾಲ ಅವನ ಸಲುವಾಗಿ ಅವಳು ಮಾಡಿದ ಪ್ರಯತ್ನವೆಲ್ಲವನ್ನೂ ಮಣ್ಣೂ ಗೂಡಿಸಲು ಹಟ ತೊಟ್ಟು ನಿಂತಿದ್ದ ತನ್ನ ಮೂರ್ಖ ಮಗನ ನಡತೆಯ ವಿಷಯಕ್ಕೆ ರಾಣಿ ಕರ್ಮವತಿಯ ಕೋಪ ನನಗೆ ಗೊತ್ತಾಗುತ್ತಿತ್ತು.

"ಮಹಾರಾಜ್ ಕುಮಾರ್," – ನನ್ನೆಲ್ಲ ನಿದ್ದೆ ಎಚ್ಚರಗಳ ವೇಳೆಯ ದಿಕ್ಸೂಚಿಯಾಗಿದ್ದ ಆ ಎರಡು ಶಬ್ದಗಳನ್ನು ಕೇಳಿ ಅದೆಷ್ಟು ಶತಮಾನವಾಗಿತ್ತೋ– "ಅಸಭ್ಯವಾಗಿ ವರ್ತಿಸಿ, ಇಂಥ ಸುಂದರವಾದ ದಿನವನ್ನು ಹಾಳು ಮಾಡಬೇಡ. ರಾಜಕುಮಾರ ವಿಕ್ರಮಾದಿತ್ಯನು ಕೇವಲ ತಮಾಷೆ ಮಾಡ್ತಾ ಇದ್ದ ಅಂತ ನನಗೆ ಖಾತರಿ ಇದೆ. ಅವನು ಮೇವಾಡದ ಹಕ್ಕಿ ಪಕ್ಷಿಗಳು, ದುಂಬಿಗಳು, ಮಕ್ಕಳು, ಹಿರಿಯರು ಮತ್ತು ಈ ಸಭೆಯ ಕ್ಷಮೆ ಕೋರುವನು. ನಮ್ಮ ಪ್ರೀತಿಯ ಹಣಕಾಸು ಸಚಿವರು ರಾಜಕುಮಾರನು ಕ್ಷಮೆ ಯಾಚಿಸುವುದನ್ನು ಹೇಗೆ ತಾನೆ ಒಪ್ಪಿಯಾರು?"

ಅದು ಉಜ್ವಲವಾಗಿರಲಿಲ್ಲವೆ? ಮಗ ಕತ್ತೆಯಾಗಿರಬಹುದು. ಆದರೆ ಆ ತಾಯಿಗೆ ನಾನು ಸಮನಲ್ಲವೇ ಅಲ್ಲ. ರಾಣಿ ಕರ್ಮವತಿ ನನ್ನನ್ನು ಕಟ್ಟಿಹಾಕಿದ್ದಷ್ಟೇ ಅಲ್ಲ, ಅರ್ಥ ಸಚಿವರಿಗೆ ಸಂಕೋಚವಾಗುವ ಹಾಗೆ ಮಾಡಿ ಸಂದರ್ಭವನ್ನು ಸರಿಪಡಿಸಿ ಬಿಟ್ಟಳು. ಆದರೆ ನನ್ನ ತಮ್ಮನಿಗೆ ಅದರ ತಂಟೆಗೆ ಹೋಗದೆ ಅದರ ಪಾಡಿಗೆ ಅದನ್ನು ಬಿಟ್ಟು ಬಿಡುವುದು ಗೊತ್ತಿರಲಿಲ್ಲ.

"ನಾನು ಕ್ಷಮೆ ಯಾಚಿಸುವುದೆ? ಆದರೆ, ಅಮ್ಮ ಏನು ನಿನಗೆ ತಲೆಕೆಟ್ಟಿದ್ದೆಯೆ? ಒಂದು ಸಾಮ್ರಾಜ್ಯದ ರಾಜಕುಮಾರನು ಯಃಕಶ್ಚಿತ್ ಒಬ್ಬ ಲೇವಾದೇವಿಗಾರನ ಕ್ಷಮೆ ಯಾವತ್ತೂ ಕೇಳುವುದಿಲ್ಲ"

"ನೀನು ಹೇಳ್ತಾ ಇರೋದು ಸರಿಯಾಗಿದೆ ರಾಜಕುಮಾರ. ಸಾಮಾನ್ಯ ಸಂದರ್ಭಗಳಲ್ಲಿ ನೀನು ಯಾರೊಬ್ಬರದ್ದೇ ಆಗಲಿ, ಅದು ಶ್ರೀ ಸಾಮಾನ್ಯನದೇ ಆಗಲಿ ಸಚಿವರಿಗೇ ಆಗಲಿ ಅಥವಾ ರಾಜಮನೆತನದ್ದೇ ಆಗಲಿ ಕ್ಷಮೆ ಯಾಚಿಸಬೇಕಾಗಿಲ್ಲ" ತಂದೆಯವರು ಅತ್ಯಂತ ವಿವೇಚನೆಯಿಂದ ಮಾತನಾಡಿದರು. ಅದು ಅವರ ಮಾತುಗಳಿಗೆ ಹೆಚ್ಚಿನ ಮಹತ್ವ ತಂದು ಕೊಟ್ಟಿತು "ಆದರೆ ನೀನು ಅತ್ಯಂತ ಅಸಹ್ಯವಾಗಿ ವರ್ತಿಸಿದ್ದೀ. ನೀನು ಈ ಗೌರವಾನ್ವಿತ ಸಭೆಗೆ ಹಾಗು ನಮ್ಮ ಮಿತ್ರ ಮಾರ್ಗದರ್ಶಿ ಮತ್ತು ಬೇರೆಲ್ಲವೂ ವಿಫಲವಾದಾಗ ಕಡೆಯ ಆಸರೆ ಎನ್ನುವಂಥ ಆರ್ಥಿಕ ವಿಚಕ್ಷಣನನ್ನು ಅವಮಾನಿಸಿದ್ದೀ. ನಮ್ಮ ಮೊಮ್ಮಗಳಷ್ಟೇ ಹತ್ತಿರವಾದಂಥ ಒಂದು ಹೆಣ್ಣು ಮಗುವಿಗೆ ಅವಮಾನ ಮಾಡಬಾರದು. ಇನ್ನು ಸ್ವಲ್ಪವೂ ತಡಮಾಡದೆ ಈ ಕೂಡಲೇ ನೀನು ಕ್ಷಮೆ ಯಾಚಿಸಬೇಕು ಅಂತ ನನ್ನ ಸೂಚನೆ".

ವಿಕ್ರಮಾದಿತ್ಯನು ಅಸಮಾಧಾನದಿಂದ ಸಿಡಿಮಿಡಿಗುಟ್ಟುತ್ತಿದ್ದ. ಆದರೆ ಕದಲಲಿಲ್ಲ. ಅವನ ತಾಯಿ ಕೆಳಗಿಳಿದು ಬಂದು ಅರ್ಥ ಸಚಿವರ ಹತ್ತಿರ ಮಾತನಾಡಿದಳು. "ಈ ಹೊತ್ತು ಹೊಸದಾಗಿ ಹಿಂತಿರುಗಿದ ರಾಜಕುಮಾರನು ಒಂದು ಲಘುವಾದ ತಮಾಷೆಯ ಪ್ರಸಂಗದಿಂದ ಇಷ್ಟೆಲ್ಲ ಸಿಡುಕಿನ ಗದ್ದಲ ಎಬ್ಬಿಸದೆ ಹೋಗಿದ್ದರೆ, ಈ ಸಂತಸದ ದಿನ ಈ ಒಂದು ಘಟನೆಯಿಲ್ಲದೆ ಹಾಗೇ ಕಳೆದು ಹೋಗಿ ಬಿಡುತ್ತಿತ್ತು. ಮೇವಾಡದ ಜನತೆ ಆತನ ಹೇಯ ಸಾಹಸ ಕೃತ್ಯಗಳ ಬಗ್ಗೆ ಈಗಾಗಲೇ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಆ ಕಾರಣಕ್ಕಾಗಿಯೇ ಹಳೆಯ ಸ್ನೇಹಿತರಾದ ನಮ್ಮ ನಮ್ಮಲ್ಲಿ ಮನಸ್ತಾಪದ ಬೀಜವನ್ನು ಬಿತ್ತಲು ಯತ್ನಿಸುತ್ತಿದ್ದಾನೆ. ಆದಿನಾಥಜೀಯವರೆ ನನ್ನ ಕ್ಷಮಾಪಣೆಯನ್ನು ಒಪ್ಪಿಕೊಳ್ಳಲು ತಮ್ಮನ್ನು ಬೇಡಿಕೊಳ್ಳುತ್ತೇನೆ. ಇಲ್ಲದೆ ಹೋದರೆ, ನಮ್ಮ ಅತ್ಯಂತ ಅಮೂಲ್ಯ ಮಿತ್ರರು ನಮಗೆ ಗೌರವ ತೋರಿಸಲು ಬಂದಿರುವಂಥ ಈ ಸಮಾರಂಭವನ್ನು ನಾವು ಹಾಳುಗೆಡವಿದಂತಾಗುತ್ತದೆ." "ಮಹಾರಾಣಿಯವರೆ, ನಾವು ಕ್ಷಮೆ ಕೋರಲು ಹೇಳಿದ್ದು ನಿಮ್ಮ ಮಗನಿಗೆ, ನಿಮಗಲ್ಲ" ತಂದೆಯವರು ತಮ್ಮ ಪಟ್ಟು ಬಿಟ್ಟು ಕೊಡಲಿಲ್ಲ. ಆದರೆ ಬಿಕ್ಕಟ್ಟು ಕೊನೆಗೊಂಡಿತ್ತು ಎಂಬುದು ಸ್ಪಷ್ಟ.

"ಘನತೆವೆತ್ತ ಮಹಾಸ್ವಾಮಿಯವರೆ, ಈಗ ಆಗಿಹೋದದ್ದು ಆಗಿಹೋದದ್ದಾಗಲಿ ಬಿಟ್ಟುಬಿಡಿ" ಆದಿನಾಥಜೀಯವರು ಲೆಕ್ಕಾಚಾರವನ್ನೆಲ್ಲಾ ಮುಗಿಸಿ, ಈಗ ಲೆಕ್ಕದ ಪುಸ್ತಕವನ್ನು ಮುಚ್ಚಿಡುವುದು ಬುದ್ಧಿವಂತಿಕೆ ಎಂದು ತೀರ್ಮಾನಿಸಿದ್ದರು. ಆಗಬೇಕಾದ ಹಾನಿ ಆಗಲೇ ಆಗಿ ಬಿಟ್ಟಿತ್ತು. ಈ ವಿಷಯವನ್ನು ಮತ್ತೆಯೂ ಮುಂದುವರೆಸಿಕೊಂಡು ಹೋಗುವುದರಿಂದ ಲೀಲಾವತಿಗೆ ಇನ್ನಷ್ಟು ಹಾನಿಯಾಗುತ್ತಿತ್ತು ಅಷ್ಟೆ. "ತಾವು ಅನುಮತಿಕೊಟ್ಟರೆ ಘನತೆವೆತ್ತ ಮಹಾಸ್ವಾಮಿಯವರಾದ ಮಹಾರಾಜ್‌ಕುಮಾರ್ ಅವರು ತಮ್ಮ ಪಯಣವನ್ನು ಮುಂದುವರೆಸಲಿ" (ಎಲ್ಲೆಡೆ ಮುಗುಳ್ನಗು). ಪ್ರಧಾನಿಯರು ಪ್ರಶಸ್ತಿ ಪಡೆದವರ ಪಟ್ಟಿಯನ್ನು ಓದಲೆಂದು ಆಹ್ವಾನಿಸಬೇಕೆಂದು ಕೋರುತ್ತೇನೆ".

ನಾನು ನನ್ನ ಆರಡಿ ಒಂದಂಗುಲ ದೇಹ ಮತ್ತು ಮುಂದೆ ಚಾಚಿದ ಕೈಗಳಿಂದ ದಿಂಡುಗೆಡೆದು ತಂದೆಯ ಪಾದಗಳಿಗೆ ದೀರ್ಘ ದಂಡ ನಮಸ್ಕಾರ ಮಾಡಿದೆ.

'ದೇವ ಏಕಲಿಂಗಜೀಯ ಕೃಪಾಶೀರ್ವಾದ ನಿನ್ನ ಮೇಲಿರಲಿ'

ನಾನು ನನ್ನ ಗಾಯಗೊಂಡ ಕಾಲಿನ ಹರಡನ್ನು ಮರೆತು ಮೇಲಕ್ಕೇಳುತ್ತಿದ್ದಂತೆಯೇ ಸಮತೋಲನವನ್ನು ಕಳೆದುಕೊಂಡು ಬಿಡುತ್ತಿದ್ದೆ. ಆದರೆ ತಂದೆಯವರು ಬಾಗಿ ನನ್ನನ್ನು ಬೀಳದಂತೆ ತಡೆದರು. ಇದಕ್ಕೆ ಪ್ರತಿಯಾಗಿ ನಾನು ದೃಢವಾಗಿ ಹೇಳಿಕೆ ನೀಡಿದ್ದರೆ, ಅದರರ್ಥ ನಾನು ನಿನ್ನೆಯ ಘಟನೆಗಳಿಗೆ ಸಂಬಂಧಿಸಿದಂತೆ ತಂದೆಯವರು ವಚನಭ್ರಷ್ಟರಾಗಿ ನನ್ನ ವಿಜಯಕ್ಕಾಗಿ ಪ್ರಶಸ್ತಿಯನ್ನು ಕೊಡಲೆಂದು ನಾನು ಈಗಲೂ ನಿರೀಕ್ಷಿಸಿದ್ದೆನೆ? ನನ್ನ ಹೆಸರನ್ನು ಪ್ರಕಟಿಸಿ, ವೀರ ವಿಜಯ ಪೇಟದಿಂದ ನನ್ನ ಶಿರಸ್ಸನ್ನು ಅಲಂಕರಿಸಲು ಅದನ್ನು ತಂದೆಯವರಿಗೆ ಪ್ರಧಾನಿಯವರು ನೀಡುವ ಸಮಯವಿದು. ಆ ನಂತರ, ಮಹಾರಾಜರಿಂದ ನನಗೆ ಕೊಡಮಾಡಲ್ಪಟ್ಟಿರುವ ಪ್ರಶಸ್ತಿಗಳು, ಗೌರವ, ಭೂಮಿ ಮತ್ತು ಇತರೆ ಕಾಣಿಕೆಗಳನ್ನು ಪ್ರಧಾನಿಯವರು ಓದಿ ಹೇಳುವರು. ನಾನು ಅಲ್ಲಿಯೇ ಠಳಾಯಿಸುತ್ತಿದ್ದಿರಬೇಕು. ಕಾರಣ, ರಾವ್ ವೀರಮ್‌ದೇವ್ ಅವರ ಮುಂದೆ ಬರಲು ಅವರ ಹೆಸರನ್ನು ಕರೆಯುವುದು ಪೂರಣ್ ಮಲ್‌ಜೀಯರವರಿಗೆ ಅನಿವಾರ್ಯವಾಯಿತು. ನಾನು ತಲೆ ಎತ್ತಿ ನೋಡಿ ನನ್ನ ಹೆಂಡತಿಯ ಸೋದರಮಾವನಿಗೆ ಮುಜುಗರ ಉಂಟು ಮಾಡಲಿಲ್ಲ. ರಾವ್ ವೀರಮ್ ದೇವ್ ಅವರ ನಡಿಗೆಯಲ್ಲಿನ ಆತಂಕ ಮತ್ತು ದಿಗ್ಭ್ರಮೆ ನನಗೆ ವೇದ್ಯವಾಗುತ್ತಿತ್ತು.

ಅವರ ಸೋದರ ಸೊಸೆಯ ಭವಿಷ್ಯ ಗಂಡಾಂತರದಲ್ಲಿತ್ತೆ? ಇನ್ನೆಂದೂ ಮೇವಾಡದ ಖಚಿತ ಉತ್ತರಾಧಿಯಾಗುವ ಸಂಭವವಿಲ್ಲದ ರಾಜಕುಮಾರನಿಗೆ ಮದುವೆಮಾಡಿಕೊಟ್ಟದ್ದು ತಪ್ಪು ಆಯ್ಕೆಯಾಗಿತ್ತೆ? ಅವರ ಅತ್ಯಂತ ಹಳೆಯ ಮಿತ್ರರಾದ ಘನತೆವೆತ್ತ ಮಹಾಪ್ರಭು ಮಹಾರಾಣಾ ಅವರ ಹೊಣೆಗಾರಿಕೆ ಏನು? ಈ ಹೊತ್ತಿನ ಈ ಸಮಾರಂಭ, ನನಗಿಂತಲೂ ಅವರಿಗೆ ಹೆಚ್ಚು ತ್ರಾಸದಾಯಕವಾದ್ದು. ನನ್ನ ನೆನಪು ಸರಿಯಾಗಿದ್ದರೆ, ಮೇವಾಡದ ಇತಿಹಾಸದಲ್ಲಿ ನಮ್ಮ ಸೇನಾಪಡೆಗಳನ್ನು ವಿಜಯದತ್ತ ಮುನ್ನಡೆಸಿದ್ದಕ್ಕೆ ವೀರ ವಿಜಯ ಪ್ರಶಸ್ತಿಯ ಗೌರವ ಲಭಿಸದೆ ಇರುವ ಮೊದಲ ಸೇನಾ ಮುಖ್ಯಸ್ಥ ನಾನೇ ಇರಬೇಕು.

ದಿನದ ಕಾರ್ಯಸೂಚಿ ಈಗ ಯಾವುದೇ ಅಡಚಣೆಯಿಲ್ಲದೆ ಮುಂದುವರಿಯಿತು. ಆದರೆ ಆ ದಿನದ ನನ್ನ ಶಾರೀರಿಕ ಮತ್ತು ಮಾನಸಿಕ ಯಾತನೆ ಇನ್ನೂ ಮುಗಿಯಲಿಲ್ಲ. ಯಾವಾಗಿನಂತೆ, ತಂದೆಯವರು ಸಣ್ಣ ಸಣ್ಣ ಸಂಗತಿಗಳಿಗೂ ಸೂಕ್ಷ್ಮ ಗಮನ ಕೊಡುವ ವ್ಯಕ್ತಿ. ಪ್ರತಿ ಕಾರ್ಯಕ್ರಮದ ನಂತರ, ಪ್ರತಿಯೊಬ್ಬ ದಳಪತಿಯೂ ಕರ್ತವ್ಯದ ಕರೆಯಾಚೆಗಿನ ಪ್ರತಿಯೊಬ್ಬರ ಕೊಡುಗೆಗೆ ಸಂಬಂಧಿಸಿದಂತೆ ಪಟ್ಟಿಯನ್ನು ಕಳಿಸಿಕೊಡಬೇಕಾಗಿತ್ತು. ಅದು ವಿಶೇಷ ಎಚ್ಚರಿಕೆಯಿಂದ ನಿರ್ವಹಿಸಬೇಕಾದ ತುಂಬ ಸೂಕ್ಷ್ಮವಾದ ಕೆಲಸವಾಗಿತ್ತು. ಕಾರಣ ಎದ್ದು ಕಾಣುವಂಥ ಧೈರ್ಯ ಮತ್ತು ಸಾಹಸಗಳು ಅಪವಾದವಾಗಿರದೆ, ನಿಯಮವಾಗಿದ್ದುವು. ಅದರ ಹೊಣೆಗಾರಿಕೆಯನ್ನು ವಹಿಸಿಕೊಂಡ ಅಧಿಕಾರಿಯು ತನ್ನ ಅಧೀನದಲ್ಲಿರುವ ಹಲವು ಯೋಧರಲ್ಲಿ ಯಾರೋ ಒಬ್ಬ ವ್ಯಕ್ತಿಯನ್ನು ಕುರಿತು ವಿಶೇಷವಾಗಿ ಹೆಸರಿಸಬೇಕಾಗಿ ಬಂದದ್ದೇಕೆ ಎಂದು ಸಮರ್ಥನೆ ನೀಡಬೇಕಾಗುತ್ತಿತ್ತು. ಒಟ್ಟಾರೆ ಇನ್ನೂರಾ ಇಪ್ಪತ್ತೇಳು ಅಧಿಕಾರಿಗಳು ಮತ್ತು ಯೋಧರು ಪ್ರಶಸ್ತಿಗಳನ್ನು ಸ್ವೀಕರಿಸಿದರು. ತೇಜನು ಮೂರು ಪ್ರಶಸ್ತಿಗಳನ್ನು ಪಡೆದುಕೊಂಡನು. ಒಂದು ತನಗೆ ಇನ್ನೊಂದು ತನ್ನ ಸ್ನೇಹಿತನ ಗೈರು ಹಾಜರಿಯಲ್ಲಿ ಅವನ ಪರವಾಗಿ, ಇನ್ನೊಂದು ಮರಣೋತ್ತರವಾಗಿ ರಾಜೇಂದ್ರನ ಪಾಲಿನದು.

ನನ್ನ ಮುಖದ ಮೇಲಿನ ಭಾವ, ಆಶ್ಚರ್ಯದಿಂದ ಅನುಮಾನ, ಅಸಹನೆ, ಕೋಪ, ಹತಾಶೆಗೆ ತಿರುಗಿದ್ದರೂ ನನ್ನ ತಂದೆಯ ಕಾಲುಮುಟ್ಟಿದ ತೇಜನನ್ನು ಎಚ್ಚರಿಸಲು ನಾನು ಏನೆಲ್ಲ ಸಂಜ್ಞೆಗಳನ್ನು ಮಾಡಿದಾಗ್ಯೂ, ಅವನು ನನ್ನೆಡೆಗೆ ನಡೆದು ಬಂದನು. ಈ ಗಳಿಗೆಯಲ್ಲಿ ನಾನು ಉಪಸ್ಥಿತನಿರುವುದನ್ನು ಗುರುತಿಸುವುದಕ್ಕಿಂತ ದೊಡ್ಡ ಅಪಕಾರ ಬೇರೆ ಇಲ್ಲ. ಅವನು ನಿಧಾನವಾಗಿ ಮತ್ತು ಎಚ್ಚರಿಕೆಯಿಂದ ನಡೆದು ಬಂದನು. ಅಯ್ಯಾ ಗೆಳೆಯ ದಯಮಾಡಿ ತಿಳಿದುಕೋ ನನ್ನ ವಿಷಯಕ್ಕೆ ನಿನ್ನ ಸ್ವಾಮಿನಿಷ್ಠೆಯನ್ನು ದೃಢಪಡಿಸುವ ಸಮಯವಿದಲ್ಲ. ನನಗೆ ಗೆಳೆಯನಾಗಿರುವುದಕ್ಕಿಂತಲೂ ಶತ್ರುವಾಗಿ ನಿನ್ನ ಉಪಕಾರ ದೊಡ್ಡದು. ಬೇಡ ಹೀಗೆ ಮಾಡಬೇಡ, ಬೇಡ ತೇಜ್. ನನ್ನ ಪಾದಗಳ ಮೇಲೆ ಅವನು ತನ್ನ ತಲೆಯಿಟ್ಟನು. ನಾನು ಅವನ ತಲೆಯನ್ನು ಎತ್ತುವವರೆಗೂ ಮೇಲೇಳಲಿಲ್ಲ.

ನನ್ನ ಮೈ ಬಣ್ಣ ಅಷ್ಟೊಂದು ತಿಳಿಯಾದ ಸುಂದರ ವರ್ಣದಿಂದ ಕೂಡಿರದೆ ಇದ್ದುದು ದೇವರ ಸೃಷ್ಟಿ. ಅಷ್ಟೆಲ್ಲ ವರ್ಷಗಳ ನನ್ನ ಸ್ವಯಂ ಶಿಸ್ತು ನನ್ನ ಪಾಲಿಗೆ ನಿಷ್ಪ್ರಯೋಜಕವಾಯಿತು. ತೇಜನ ಉದಾಹರಣೆಯನ್ನೇ ಉಳಿದೆಲ್ಲರೂ ಕುರಿಗಳೋಪಾದಿಯಲ್ಲಿ ನಿಷ್ಠೆಯಿಂದ ಅನುಕರಿಸಿದ್ದರಿಂದ ನನ್ನ ಮುಖ ನಾಚಿಕೆಯಿಂದ ಅದೆಷ್ಟು ಪಟ್ಟು ಕೆಂಪಾಗಿ ಬಿಟ್ಟಿತೋ ಹೇಳಲಾಸಲ್ಲ. ಎಷ್ಟೇ ಗಾಢವಾಗಿ ಅಭ್ಯಾಸ ಮಾಡಿದರೂ ನೃತ್ಯ ತರಬೇತಿ ನೀಡಿದರೂ ವಾದ್ಯಮೇಳದ ಅಭ್ಯಾಸ ಮಾಡಿಸಿದರೂ ಆ ಮಟ್ಟಿನ ಹಾಳಾದ ಹಾಗೂ ವಿನಾಶಕರವಾದ ಪರಿಣಾಮವನ್ನುಂಟುಮಾಡಲಾರದು. ಅದು ಕೇವಲ ಪೂರ್ವ ಯೋಜಿತವಾದ ತೇಜೋವಧೆಯ ಹಾಗೆ ಕಂಡು ಬಂದದ್ದಷ್ಟೇ ಅಲ್ಲ. ತಂದೆಯವರಿಗೂ

ದೇಶಕ್ಕೂ ಕಾಲಬದ್ಧವಾದ ಬಂಡಾಯದ ಸೂಚನೆಯೊಂದನ್ನು ನಾನು ನೀಡುವುದರ ಜೊತೆಗೆ, ನನ್ನ ನೇತೃತ್ವದಲ್ಲಿ ಅದನ್ನು ಮುನ್ನಡೆಸಬಹುದಾದ ಅಧಿಕಾರಿಗಳ ಮತ್ತು ಯೋಧರ ಪಟ್ಟಿಯೊಂದನ್ನು ನೀಡಿದಂತಿತ್ತು. ತಂದೆಯವರು ನನ್ನನ್ನು ಹೇಗೆ ತಾನೆ ನಂಬಿಯಾರು? ನಾನಿನ್ನೂ ಜೀವದಿಂದಿರುವಾಗ ಅವರು ಹೇಗೆ ತಾನೆ ತಾವು ಸುರಕ್ಷಿತರೆಂದು ಭಾವಿಸಿಯಾರು? ಇಂಥದೊಂದು ಘಟನೆಗಳ ಇಂಥ ಆಭಾಸಕರವಾದ ತಿರುವಿಗೆ ರಾಜ ಸಭೆ, ರಾಣಿಯರು ಮತ್ತು ಅತಿಥಿಗಳು ಯಾವ ರೀತಿ ಪ್ರತಿಕ್ರಿಯಿಸಿದರು ಎಂಬುದರ ಕಲ್ಪನೆ ನನಗಿಲ್ಲ. ಈ ಒಂದು ಪ್ರದರ್ಶನದಲ್ಲೊಂದು ಪ್ರದರ್ಶನದಿಂದ ಅವರು ತತ್ತರಗೊಂಡರೆ? ತಂದೆಯವರು ಮತ್ತು ಅವರ ಸಲಹೆಗಾರರು, ಸೇಸಾಪಡೆಗಳ ಮನಃಸ್ಥಿತಿ ಕುರಿತಂತೆ ತಪ್ಪು ಲೆಕ್ಕಾಚಾರ ಹಾಕಿ ತಮ್ಮ ಕೈವಾಡವನ್ನು ಅತಿಯಾಗಿ ಮೆರೆದಿದ್ದಾರೆಂದು ಅವರು ಭಾವಿಸಿದರೆ? ಜನರನ್ನು ಈ ಒಂದು ಮಟ್ಟದ ಹುಚ್ಚಿಗೆ ಏರಿಸಿದ್ದೇನೆಂದು ಅವರು ನಂಬಿದರೆ? ನನ್ನನ್ನು ಮತ್ತೆ ಬೀದಿಗಳಲ್ಲಿ ಓಡಾಡುವುದಕ್ಕೆ ಬಿಡುವುದು ತೀರಾ ಅಪಾಯಕಾರಿ ಎಂದು ಅವರು ಶಿಫಾರಸು ಮಾಡುವರೆ? ತಂದೆಯವರತ್ತ ನೋಡುವ ಧೈರ್ಯ ನನಗಾಗಲಿಲ್ಲ ಎಂಬುದಷ್ಟೇ ನನಗೆ ತಿಳಿದದ್ದು. ಆದರೆ ಅವರು ತಮ್ಮ ಒಂದು ಕಣ್ಣಿನಿಂದ ನನ್ನನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರು ಎಂಬುದನ್ನು ನನ್ನ ಸಹಜ ಪ್ರವೃತ್ತಿಯಿಂದ ಅರಿತೆನು. ಅವರು ನಮ್ಮ ಕಡೆ ತಿರಸ್ಕಾರದ ನೋಟದಿಂದ ನೋಡುತ್ತಿದ್ದಾರೆಯೆ, ತಮ್ಮದೇ ಯೋಚನೆಗಳಲ್ಲಿ ಮುಳುಗಿ ಹೋಗಿದ್ದಾರೆಯೆ, ತನ್ನ ನಿರ್ಜೀವ ಕಣ್ಣನ್ನು ಮತ್ತೆ ಕಾರ್ಯಪ್ರವೃತ್ತ ಗೊಳಿಸುತ್ತಿದ್ದಾರೆಯೆ; ಅಥವ ಎಂದಿನಂತೆ ನಿದ್ದೆ ಮಾಡುತ್ತಿದ್ದಾರೆಯೆ ಎಂಬುದನ್ನು ಯಾರೂ ಎಂದೂ ಖಚಿತವಾಗಿ ಹೇಳಲಾರರು. ಅವರು ಭದ್ರತಾ ಸಿಬ್ಬಂದಿಯನ್ನು ಕರೆದು, ನನ್ನನ್ನು ವಶಕ್ಕೆ ತೆಗೆದುಕೊಳ್ಳಲು ಹೇಳುತ್ತಾರೆಂದು ಕಾದೆನು.

ಅಧ್ಯಾಯ 23

ಗುರುವಾರ ಬೆಳಿಗ್ಗೆ ನಾನು ಎಂದಿನಂತೆ ನಾಲ್ಕು ಗಂಟೆಗೆ ಎದ್ದೆನು. ಸ್ನಾನ ಮಾಡಿ ಉಡುಪು ಧರಿಸುವಲ್ಲಿ ಕೌಸಲ್ಯ ನನಗೆ ನೆರವಾದಳು. ನನ್ನ ಪಾದಮಿತಿಮೀರಿ ಊದಿ ಬೆಳೆದ ಕುಂಬಳಕಾಯಿಗಿಂತಲೂ ದಪ್ಪವಾಗಿತ್ತು. ಅಫೀಮಿನ ಗುಳಿಗೆಗಳನ್ನು ಎಡದವಡೆಯಲ್ಲಿ ಒತ್ತಲಿಸಿಕೊಂಡು ನಾನು ನೋವನ್ನು ನೀಗಿಕೊಳ್ಳಬೇಕಾಯಿತು.

ಏಳಾಯಿತು, ಏಳೂಖಾಲು, ಏಳೂವರೆ, ಎಂಟಾಯಿತು. ನನ್ನ ಹೆಜ್ಜೆ ಕೀಳುತ್ತಿದ್ದರೂ ನನ್ನ ಕೊಠಡಿಯಲ್ಲಿ ಅಡ್ಡಾಡಿದೆ, ಉದ್ಯಾನದೊಳಕ್ಕೆ ಹೋದೆ ಮತ್ತೆ ಮಹಡಿಯ ಮೇಲಿನ ನನ್ನ ಕೊಠಡಿಯ ಸಂಕೀರ್ಣಕ್ಕೆ ಹತ್ತಿ ಹೋದೆ. ನನಗೆ 'ಇಲ್ಲ' ಎಂಬ ಉತ್ತರ ಬರುವಂತಿಲ್ಲ. ಅಲ್ಲದೆ, ಕಾರಣ ಏನಾದರೂ ಆಗಿರಬಹುದು, ಅದು ಎಷ್ಟೇ ಗಂಭೀರವಾದದ್ದಾಗಿರಬಹುದು ಲೀಲಾವತಿ ಎಂದಿಗೂ ಭೇಟಿಯನ್ನು ತಪ್ಪಿಸುವುದಿಲ್ಲ. ತಾಳ್ಮೆಯಿಂದ ಕಾಯಬೇಕಾದ್ದಷ್ಟೇ ನಾನು ಮಾಡಬೇಕಾದ್ದು. ಅವಳು ಬಂದೇ ಬರುತ್ತಾಳೆ.

ಕೌಸಲ್ಯ ಅರ್ಥ ಸಚಿವರ ಬಳಿಗೆ ಬೆಳಿಗ್ಗೆ ಎಂಟುಗಂಟೆಯಿಂದ ನಾಲ್ಕು ಸಲ ಹೋಗಿದ್ದಳು.

"ಎಲ್ಲಿ ಅವಳು?"

"ಅವರಿಗೆ ಗೊತ್ತಿಲ್ಲ ಅಥವಾ ನಾನು ಕೇಳಿದಾಗಲೆಲ್ಲ ಪ್ರತಿಸಲವೂ ಅವರು ಒಂದೊಂದು ಕಥೆ ಹೇಳುತ್ತಾರೆ ಅವಳು ನಿದ್ದೆ ಮಾಡುತ್ತಿದ್ದಾಳೆ" ಎಂದು ಹೇಳಿದರು. ಎರಡನೇ ಸಲ ನಾನು ಅವಳ ಚಿಕ್ಕಪ್ಪನ ಬಳಿಗೆ ಓಡಿದೆ. ಅವರು ತೀರಾ ಅಸ್ಪಷ್ಟವಾಗಿ. "ಮಕ್ಕಳು ಹೇಗೆ ಅಂತ ನಿಮಗೆ ಗೊತ್ತಲ್ಲ" ಅವಳು ಇಲ್ಲೇ ಎಲ್ಲೋ ಅಣ್ಣತಮ್ಮಂದಿರು ಮತ್ತು ಗೆಳತಿಯರ ಜೊತೆ ಆಡುತ್ತಾ ಇದ್ದಾಳೆ ಅಂತ ನನಗೆ ಖಾತರಿ ಇದೆ." ಇನ್ನೊಂದು ಸಲ ನಾನು ಅಡಿಗೆ ಮನೆಗೆ ಹೋದೆ. ಅಡಿಗೆಯವನು ತಲೆ ಅಲ್ಲಾಡಿಸುತ್ತ "ಆ ಹುಡುಗಿ ಅದೆಷ್ಟು ಹುಣಿಸೆಹಣ್ಣು ತಿನ್ನೋದು. ನಿಮಗೆ ನಂಬೋಕೆ ಸಾಧ್ಯವಿಲ್ಲ. ಕಳೆದ ಎರಡು ದಿನ ಅವಳಿಗೆ ಕಾಯಿಲೆ ಬಂದಿದ್ದರೆ ಆಶ್ಚರ್ಯವಿಲ್ಲ" "ಅದು ತುಂಬಾ ಆಕರ್ಷಕವಾದ ಕಥೆ, ಸಜ್ಜೋನಾಥ್. ಆದರೆ ನೀನು ನಿಜ ಹೇಳದೆ ಇದ್ದರೆ, ಈಗ ನೀನು ಬೇಳೆಕಾಳಿನ ತರಕಾರಿಯನ್ನು ಲಪಟಾಯಿಸಿ ಸಂಪಾದಿಸುತ್ತ ಇರುವ ವಿಶೇಷ ರಿಯಾಯಿತಿ ಮತ್ತು ಅದನ್ನು ಈ ಮನೇಲಿ ಇರುವ ಇತರೆ ಆಳು ಕಾಳುಗಳಿಗೆ ಅಧ್ವಾನದ ಬಡ್ಡಿ ಮೇಲೆ ಕೊಡುತ್ತಿರುವುದು ಇನ್ನು ಮುಂದೆ ಸಿಕ್ಕುವುದಿಲ್ಲ." ಅವನು "ನನಗೆ ಗೊತ್ತಿಲ್ಲ ಕೌಸಲ್ಯ ತಾಯಿ. ಆದರೆ ವಿಕ್ರಮಾದಿತ್ಯನು ಸಭೆಯಲ್ಲಿ ಆಕೆಯ ಬಗ್ಗೆ ಮಾತಾಡಿದಾಗಿನಿಂದ ನಾನು ಆಕೆಯನ್ನು

ನೋಡಿಲ್ಲ ಅಂತ ಆಣೆ ಮಾಡಿ ಹೇಳ್ತೀನಿ' ಎಂದನು. ನಾನು ಕಾವಲು ಸಿಪಾಯಿಯ ಹತ್ತಿರ ಹೋದೆ. "ನನ್ನನ್ನು ಕೇಳುವುದರಲ್ಲಿ ಏನು ಅರ್ಥ ಇದೆ ಮಾಯಿ? ಅವಳ ಸೋದರರು ಮತ್ತು ಬಂಧು ಬಾಂಧವರಿಗಾದರೂ ಅವಳು ಎಲ್ಲಿದ್ದಾಳೆ ಅನ್ನುವ ವಿಚಾರವನ್ನು ಅವರು ಗೊತ್ತಾಗುವ ಹಾಗೆ ಮಾಡುತ್ತಾರೆ ಅಂತ ನೀನು ಅಂದು ಕೊಂಡಿದ್ದೀಯಾ? ಚಿತ್ತೂರಿನಲ್ಲಿ ಹಣಕಾಸು ಸಚಿವರಿಗಿಂತ ಹೆಚ್ಚಿನ ಬಿಗಿದ ತುಟಿಗಳ ಮನುಷ್ಯರಿದ್ದಾರೆಯೆ? ಅವಳು ಅಬು ರಣಕ್‌ಪುರ್‌ನಲ್ಲಿ ಅಥವಾ ಅವಳ ಬಂಧುಗಳ ಜೊತೆ ಚಂಡೇರಿಯಲ್ಲಿ ಇರಬಹುದು. ನಿಮ್ಮ ಊಹೆಯ ಥರದ್ದೇ ನನ್ನ ಊಹೆಯೂ.

"ಅವರು ಮನೆಯಿಂದ ಆಚೆಗೆ ಕಳಿಸಿದ್ದಿದ್ದರೆ ಮಂಗಳನಿಗೆ ಗೊತ್ತಾಗುತ್ತಿತ್ತು. ಸಭೆಯಲ್ಲಿ ಘಟನೆ ನಡೆದ ದಿವಸದಿಂದ ನಗರದ ಹೆಬ್ಬಾಗಿಲುಗಳನ್ನು ಎಚ್ಚರಿಕೆಯಿಂದ ಗಮನಿಸಲು ಅವನಿಗೆ ತಿಳಿಸಿದ್ದೀನಿ. ಮಂಗಳನನ್ನು ಕರೆ"

"ಮಹಾಸ್ವಾಮಿ ಸ್ವಲ್ಪ ಕಾಲಾವಕಾಶ ಕೊಡಿ. ಸ್ವಲ್ಪ ಎಲ್ಲ ತಣ್ಣಗಾದ ಮೇಲೆ, ಅವಳು ಹೊರಕ್ಕೆ ಬಂದು ಕಾಣಿಸಿಕೊಳ್ತಾಳೆ"

"ಅವರು ಅವಳಿಗೆ ಏನಾದರೂ ಮಾಡಿಲ್ಲ ಅಂತ ಹೇಗೆ ಗೊತ್ತು ನಿನಗೆ? ಅವಳು ಬದುಕಿದ್ದಾಳೆ ಅಂತ ನಿನಗೆ ಹೇಗೆ ಗೊತ್ತು. ಆಳುಗಳಿಗೆ ಮಂಗಳನನ್ನು ಕರೆಯಲು ಹೇಳು".

ಪೂರ್ಣವಾಗಿ ಬೆಳೆದು ನಿಂತ ವೇದನೆಯ ಆಲದ ಮರ ನನ್ನ ಪಾದದೊಳಗೆ ಸಿಡಿದೊಡೆದು ಮಧ್ಯಾಹ್ನದ ಬಿಸಿಲಿನಲ್ಲಿ ನಾನು ಪ್ರಜ್ಞಾಹೀನನಾದೆ. ಕೌಸಲ್ಯ ನನ್ನ ಮೇಲೆ ಬಾಗಿ ನನ್ನ ತಲೆಯ ಮೇಲೆ ಒದ್ದೆ ಬಟ್ಟೆಯ ಪಟ್ಟಿ ಹಾಕುತ್ತಿದ್ದರೆ, ಅವಳ ಮಗ ಅವಳ ಹಿಂದೆ ನಿಂತಿದ್ದನು. ಎಂದಿನಂತೆ ತಾಯಿ ಮತ್ತು ಮಗ ಇಬ್ಬರೂ ಪರಸ್ಪರ ವಿಶ್ವಾಸರಹಿತರಾಗಿದ್ದರು.

"ರಾಜ ವೈದ್ಯರು ಬರುತ್ತಾ ಇದ್ದಾರೆ ಮಹಾರಾಜ್‌ಕುಮಾರ್"

"ಲೀಲಾವತಿ ಎಲ್ಲಿದ್ದಾಳೆ ಎಂದೇನಾದರೂ ಪತ್ತೆ ಮಾಡಿದಿರಾ ಅಥವಾ ನಿನಗೂ ನಿನ್ನ ಮುಂದಿನ ಪೀಳಿಗೆಗಳಿಗೂ ಶಾಶ್ವತವಾಗಿ ಕಡಮೆ ಕೆಲಸ ಕೈ ತುಂಬಾ ಸಂಬಳ ಅಂತ ಏನಾದರೂ ಪುರಸ್ಕಾರ ಕೊಟ್ಟು ಬಿಟ್ಟಿದೆ ಅಂತ ತಿಳಿದು ಕೊಂಡಿದ್ದೀಯೋ ಹ್ಯಾಗೆ?" ಇಂಥ ದಡ್ಡ ಪ್ರಶ್ನೆಗಳನ್ನು ಕೇಳುತ್ತ ಅದೇಕೆ ಮಂಗಳನ ಮೇಲೆ ನನ್ನ ಷಂಡ ಕೋಪವನ್ನು ಉಗುಳುತ್ತಿದ್ದೆ? ಒಂದು ವೇಳೆ ಲೀಲಾವತಿ ನನ್ನ ತಂಗಿಯೋ ಮಗಳೋ ಆಗಿದ್ದು, ಆಳುವ ರಾಜಪರಿವಾರದ ರಾಜಕುಮಾರನೊಬ್ಬ ಅವಳ ಸಚ್ಚಾರಿತ್ರ್ಯದ ಮೇಲೆ ಅಪವಾದ ಹೊರಿಸಿದ್ದರೆ, ಅದೇನಾದರೂ ಆಗಿರಲಿ, ಆದಿನಾಥಜೀಯವರು ಗುಟ್ಟಾಗಿ ಏರ್ಪಾಟು ಮಾಡಿದ ಹಾಗೆಯೇ ನಾನೂ ಮಾಡುತ್ತಿರಲಿಲ್ಲವೆ? ನನ್ನ ತಮ್ಮ ಮಾತಾಡಿದ ಕೂಡಲೇ ನಾನಿನ್ನೆಂದೂ ಲೀಲಾವತಿಯನ್ನು ಕಣ್ಣೆತ್ತಿ ನೋಡಲು ಸಾಧ್ಯವಾಗುವುದಿಲ್ಲ ಎಂದು ನನಗೆ ಗೊತ್ತಿರಲಿಲ್ಲವೆ?

"ನನ್ನ ಪ್ರಶ್ನೆಗೆ ಉತ್ತರ ಕೊಡು, ಎಲ್ಲಿದ್ದಾಳೆ ಅವಳು?" ಕೊಠಡಿಯಲ್ಲಿನ ಪಕ್ಕಾ ಹಗಲು ಬೆಳಕಿನಲ್ಲಿ ದಟ್ಟ ಮಂಜು ಸರಿದು ಹೋಗುತ್ತಿತ್ತು. ಆದರೆ ಮಂಗಳನನ್ನು ಬಿಟ್ಟುಕೊಡಲು ನನಗಿಷ್ಟವಿರಲಿಲ್ಲ.

"ನನಗೆ ಗೊತ್ತಿಲ್ಲ ಮಹಾಸ್ವಾಮಿ. ನಮ್ಮ ಕಡೆಯವರು ಮನೆಯ ಒಳಕ್ಕೆ ಹೋಗುವ ಮತ್ತು ಮನೆಯಿಂದ ಹೊರಹೋಗುವರೆಲ್ಲರ ದಾಖಲೆ ಇಟ್ಟಿದ್ದಾರೆ ನಾವು ವಿಚಾರಣೆಗಳನ್ನು ಮಾಡಿದ್ದೀವಿ. ಕೈಗಳನ್ನು ಬೆಚ್ಚಗೆ ಮಾಡಿದ್ದೀವಿ. ಅವಳೆಲ್ಲಿದ್ದಾಳೆ ಅಂತ ಯಾರಿಗೂ ಗೊತ್ತಿಲ್ಲ"

"ಮಾನ್ಯ ಆದಿನಾಥಜೀಯವರಿಗೂ ಅವಳೆಲ್ಲಿದ್ದಾಳೆ ಏನು ಕತೆ ಅಂತ ಗೊತ್ತಿಲ್ಲ ಎಂದು ಬಾಜಿ ಕಟ್ಟುವುದು ಎಷ್ಟು ಪ್ರಶಸ್ತವಾಗಿರುತ್ತದಲ್ಲವೆ?"

ಲೀಲಾವತಿಯನ್ನು ನಾನು ಶಾಶ್ವತವಾಗಿ ಕಳೆದುಕೊಂಡೆ ಎಂದು ಆಗ ನನಗೆ ಗೊತ್ತಾಯಿತು.

* * *

"ಕಪ್ಪೋ ಬಿಳುಪೋ?"

"ಕಪ್ಪು"

ಅವಳು ನನ್ನ ಹಾಸಿಗೆ ಪಕ್ಕ ಏಳು ದಿನಗಳಿಂದ ಕುಳಿತಿದ್ದಳು. ಏಳು ವರ್ಷಗಳಿಂದಲೂ ಇರಬಹುದು, ನನಗೆ ಲೆಕ್ಕ ಸಿಕ್ಕಿಲ್ಲ. ಆದರೆ ನಾನು ಅವಳಿಗೆ ಒಂದು ಮಾತೂ ಹೇಳಿಲ್ಲ. ಅವಳ ಜೊತೆ ಮಾತನಾಡಬೇಕೆಂಬ ಯಾವ ಉದ್ದೇಶವೂ ಇಲ್ಲದೆ, ಬಾಯಿ ತಪ್ಪಿ ನನ್ನಿಂದ ಆ ಶಬ್ದ ಹೊಮ್ಮಿತ್ತು. ಅದಕ್ಕೆ ಅವಳೂ ಪ್ರತಿಕ್ರಿಯಿಸಿದ್ದಳು. ಅವಳು ಅನನುಭವಿಯಾಗಿದ್ದಳು ಇಲ್ಲವೆ ಅತಿಯಾದ ಕುಟಿಲ ಮಾರ್ಗ ಹಿಡಿದ ನಟಿಯಾಗಿದ್ದಳು. ಹೊಸದೇನಪ್ಪಾ ಅಂದರೆ ಅದರ ಬಗ್ಗೆ ಯಾವತ್ತಾದರೂ ಅನುಮಾನವಿತ್ತೆ? ಖಂಡಿತವಾಗಿಯೂ ಅವಳು ಕುಟಿಲ ನಟಿಯಾಗಿದ್ದಳು. ನಾನು ಅವಳಿಗೆ ಪ್ರತ್ಯುತ್ತರ ಕೊಡುವಷ್ಟು ಮೂರ್ಖನಾಗಿಯೇ ಇದ್ದೆ. ನಾನು ಈಗಲೂ ರೇಗಾಡಿ ಮಾತಿಗೆ ತಪ್ಪಬಹುದು. ಏನೇ ಆಗಲಿ, ನಾನು ಬಾಲಿಶವಾಗಿ ಕಾಣಿಸಿಕೊಳ್ಳಲು ನನಗಿಷ್ಟವಿರಲಿಲ್ಲ. ಆದರೆ ನನಗೆ ನಟಿಸದೆ ಅನ್ಯಮಾರ್ಗ ಇರಲಿಲ್ಲ. ಅದೂ ಅಲ್ಲದೆ ಅವಳಾಡುವ ಆಟದಲ್ಲಿ ನನಗೆ ಕುತೂಹಲವಿತ್ತು. ಆದರೆ ಮಾತುಕತೆ ಅಂತೂ ಇನ್ನೆಂದೂ ಇಲ್ಲ ಅನ್ನುವುದಂತೂ ನಿಶ್ಚಯ. ಆದರೆ ಅವಳು ನನ್ನನ್ನು ಮತ್ತೆ ಮೂರ್ಖನನ್ನಾಗಿ ಮಾಡುವುದಿಲ್ಲ, ನಾನು ಅವಳ ಹತ್ತಿರ ಮಾತಾಡಿ ವರ್ಷಗಳಾಗಿತ್ತು. ನಾನು ಹಾಸಿಗೆ ಹಿಡಿದಿದ್ದೆ, ನನ್ನ ಪಾದ ಮತ್ತು ಕಾಲಿನ ಹರಡುಗಳು ಸೀಳಿದ್ದವು. ನನ್ನ ದೇಹದ ಉಳಿದ ಭಾಗಕ್ಕಿಂತ ಒಂಬತ್ತು ಅಂಗುಲ ಏರಿತ್ತು ಎಂಬ ಕಾರಣಕ್ಕಾಗಿಯೇ ನಾನು ಉಲ್ಲಾಸದಿಂದ ಸಂಭ್ರಮಿಸಲು ಕಾರಣವೇ ಇಲ್ಲ ಎನಿಸಿತು. ತಾನೇ ಊಟ ತಿಂಡಿ ತರುವುದಾಗಿ ನನ್ನ ಲೋಟಕ್ಕೆ ಮದ್ಯ ಇಲ್ಲವೆ ನೀರನ್ನು ತುಂಬುವುದಾಗಿ ನನ್ನ ತಲೆಕೆಳಗಿನ ಹಾಗೂ ನನ್ನ ಪಾದದ ಕೆಳಗಿನ ದಿಂಬನ್ನು ಸರಿಪಡಿಸುವುದಾಗಿ ಹಟಹಿಡಿಯುತ್ತಿದ್ದಳು. ತಾನು ನನ್ನ ಉಡುಪನ್ನು ಕಳಚಬೇಕೆಂದು ನನಗೆ ಸಾಬೂನು ಹಚ್ಚಿ, ಸ್ನಾನ ಮಾಡಿಸಬೇಕೆಂದು ಬಿಸಿಗಾಳಿಯಿಂದ ಒಣಗಿಸಿ, ನನ್ನ ಉಡುಪುಗಳನ್ನು ತೊಟ್ಟುಕೊಳ್ಳಲು ನೆರವಾಗಬೇಕೆಂದು ನನ್ನನ್ನು ಉಪಚರಿಸುತ್ತ ನನ್ನ ಬಳಿಯೇ ರಾತ್ರಿಗಳನ್ನು ಕಳೆಯಬೇಕೆಂದು ನನಗೆ ಸೂಚಿಸುವಷ್ಟು ಉದ್ಧಟತನ ತೋರಿದಳು. ಈಗಲೂ ಅದರಿಂದ ನಾನು ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ. ನಾನು ಖಡಾಖಂಡಿತವಾಗಿ ಹೇಳಿದ್ದೆ. ಆದರೆ ಅದನ್ನು ಅಕ್ಷರಶಃ ತೆಗೆದುಕೊಳ್ಳುವ ಅಗತ್ಯವಿಲ್ಲ. ವೀರನಾಗಿ, ದಿನದಿನವೂ ಸ್ವಲ್ಪ ಸ್ವಲ್ಪವಾಗಿ ಪ್ರಮಾಣವನ್ನು ಹೆಚ್ಚಿಸಿಕೊಂಡು ಹೋಗುವ ಅಫೀಮಿನ ನೆರವಿನಿಂದ ದೈನಂದಿನ ಚಟುವಟಿಕೆಗಳನ್ನು ಎಂದಿನಂತೆ ನಡೆಸಿಕೊಂಡು ಹೋಗುತ್ತ ಸಣ್ಣದೊಂದು ಕೂದಲೆಳೆಯಂಥ ಮೂಳೆಮುರಿತವನ್ನು ಗಂಭೀರವಾದ ಮೂಳೆ ಮುರಿತಕ್ಕೆ ತಿರುಗಿಸಿದ್ದೆ. ಆದರೆ ಒಂದನ್ನು ಹೊರತುಪಡಿಸಿ ಹೆಂಡತಿಯೊಬ್ಬಳು ಮಾಡಬೇಕಾದ ಎಲ್ಲ ಕರ್ತವ್ಯಗಳನ್ನು ಕಾಳಜಿಯಿಂದ ಮಾಡಿಕೊಂಡು ಹೋಗುವ ಹೆಂಡತಿಯೊಂದಿಗೆ ಮುಖಾಮುಖಿಯಾಗುವಂಥ ಅವಮಾನಕ್ಕೆ ನಾನು ಸಿದ್ಧನಿರಲಿಲ್ಲ. ಅದರ ಬದಲಿಗೆ

ಕೌಸಲ್ಯಳೊಂದಿಗೆ ಮೂರು ವ್ಯಕ್ತಿಗಳನ್ನೊಳಗೊಂಡ ಒಂದು ಅಸಂಗತ ಮಾತುಕತೆಯನ್ನು ಶುರುಮಾಡಿದ್ದೆ.

"ಕೌಸಲ್ಯ ಈ ಹೊತ್ತು ರಾತ್ರಿಯ ಕವಿಗೋಷ್ಠಿಗೆ ನೀನು ಹೋಗಲ್ಲ ಎಂದು ನಂಬಿದ್ದೇನೆ. ಅಷ್ಟೇ ಅಲ್ಲದೆ, ನಾನೇನಾದರೂ ಒಂದು ವೇಳೆ ಹಾಸಿಗೆಯಿಂದ ಕೆಳಕ್ಕೆ ಬೀಳುವಂತಿದ್ದರೆ, ಅಥವಾ ನನಗೆ ಮೊಲೆಯೂಡಿಸಬೇಕಾಗಿ ಬಂದರೆ ನನ್ನ ಹಾಸಿಗೆಯಿಂದ ಕೆಲವೇ ನೂರು ಅಡಿಗಳ ದೂರದಲ್ಲಿರುವ ಹಾಗೆ ನೀನು ಏರ್ಪಾಟು ಮಾಡಿಕೊಳ್ಳುವೆ ಅಂತಲೂ ನಂಬಿದ್ದೀನಿ".

ನೆಲದ ಮೇಲೆ ಹಾಸಿದ್ದ ಪರ್ಷಿಯಾದ ರತ್ನಗಂಬಳಿಯಲ್ಲಿನ ಟರ್ಕಿಯ ಗ್ರಹದ ಭವಿಷ್ಯದ ಕುರಿತಾದ ಸಂಕೇತವನ್ನು ಕೌಸಲ್ಯ ಕಂಡುಕೊಂಡಿರಲೇ ಬೇಕು. ಕಾರಣ ಅವಳು ನಟ್ಟ ದೃಷ್ಟಿಯಿಂದ ಅದರ ಹಕ್ಕಿಯ ಪುಕ್ಕಗಳತ್ತ ಒಂದೇ ಸಮನೆ ನೋಡಿದಳು. ಅದೇ ಸಮಯಕ್ಕೆ ನನ್ನ ನಾಚಿಕೆಗೆಟ್ಟ ಹೆಂಡತಿ ಬಿದ್ದು ಬಿದ್ದು ನಕ್ಕಳು.

"ಕೌಸಲ್ಯ ಮಾಯಿಯನ್ನು ಅದು ಹೇಗೆಲ್ಲಾ ನೀವು ತಬ್ಬಿಬ್ಬುಗೊಳಿಸುತ್ತೀರಿ. ಅವಳಷ್ಟು ನಿಮ್ಮನ್ನು ನಾನಾಗಲಿ, ಬೇರೆ ಯಾರೇ ಆಗಲಿ ಪ್ರೀತಿಸುತ್ತಾರೆಂದು ನಂಬಲು ಸಾಧ್ಯವಿಲ್ಲ. ಅಂಥದ್ದರಲ್ಲಿ ನಿಮ್ಮಿಂದ ಇಂಥ ಹುಚ್ಚು ಹುಚ್ಚು ಮಾತು ಕೇಳಬೇಕಾಗಿದೆ. ನೀವು ಖಚಿತವಾಗಿ ತಿಳಿದಿರುವಂತೆ ಹಸಿರು ಕಣ್ಣಿನವಳಿಗೆ ಮಧ್ಯವರ್ತಿಯ ಅಗತ್ಯವಿರಲಿಲ್ಲ.

ನಾನು ಚದುರಂಗದಾಟದಲ್ಲಿ ಗೆದ್ದಿದ್ದೆ. ಅವಳು ಎಂದೂ ಸೋಲುವ ಪೈಕಿಯವಳಲ್ಲ. ಅವಳು ರೂಢಿಯ ಆಟಗಾರರಂತಲ್ಲ. ಯಾವಾಗಲೂ ಇರುವುದಕ್ಕಿಂತ ಕಡಮೆ ಹೇಳುವಂಥವಳು. ಆಟದ ವಿಷಯಕ್ಕೆ ಅವಳದ್ದು ವಿಲಕ್ಷಣ ಉತ್ಸಾಹ. ಆಟದ ಮಧ್ಯದಲ್ಲಿ ತನ್ನ ಆಟದ ತಂತ್ರವನ್ನು ಬದಲಾಯಿಸಲು ಹಿಂಜರಿಕೆ ಇಲ್ಲದವಳು. ಅದು ಎದುರಾಳಿಯನ್ನು ಎಚ್ಚರ ತಪ್ಪಿಸುವ ಹಾಗೂ ತನ್ನ ಮನಸ್ಸಿನ ಸಹಜ ಪ್ರವೃತ್ತಿಯನ್ನು ತಪ್ಪಿಸುವ ಒಂದು ಅನುಕೂಲಕರ ತಂತ್ರ, ಅವಳು ದಿಗ್ಭ್ರಮೆಗೊಳಿಸುವಂಥ ಅಪಾಯಕ್ಕೆ ಆಹ್ವಾನವೀಯುತ್ತಿದ್ದಳು. ಬೇರೆ ಆಯ್ಕೆಗಳು ಬೇಕಾದಷ್ಟು ಇದ್ದಾಗ್ಯೂ, ಆನೆ, ಮಂತ್ರಿಯನ್ನು ಕೂಡ ಒಡ್ಡುತ್ತಿದ್ದಳು, ಸೋಲುವ ತುದಿಗೂ ಬರುತ್ತಿದ್ದಳು. ಆದರೆ ಎಂದೂ ನಿರ್ಲಕ್ಷ್ಯ ತೋರುತ್ತಿರಲಿಲ್ಲ. ಅವಳು ನಿಪುಣಳು, ಹಠಮಾರಿ ಮತ್ತು ತನ್ನದೇ ವಕ್ರ ರೀತಿಯಲ್ಲಿ ಶಿಸ್ತಿನವಳು. ನಾನು ಬಲ್ಲಂತೆ ಅತ್ಯಂತ ಕೆಟ್ಟದಾಗಿ ಕಳೆದುಕೊಳ್ಳುವವಳು.

"ನೀವು ಮೋಸ ಮಾಡಿದಿರಿ. ಅದು ಹೇಗೆ ಮಾಡಿದಿರಿ ಅಂತ ನನಗೆ ಗೊತ್ತಿಲ್ಲ. ಅದು ನಿಮ್ಮ ಹದಿನೇಳನೆಯದೋ ಹತ್ತೊಂಬತ್ತನೆಯದೋ ಚಲನೆಯ ಹತ್ತಿರ ಇತ್ತು' ಎಂದು ಹೇಳುತ್ತ ಚದುರಂಗದ ಪಟವನ್ನು ನನ್ನತ್ತ ಎಸೆದಳು. 'ನೀವು ಶಕುನಿ ಮಾವ ಅಂತ' ಒಪ್ಪಿಕೊಳ್ಳಿ. ನಿಮಗೆ ಸೋಲಿನ ಹೆದರಿಕೆ. ನೀವು ಆಟವನ್ನು ಮುಂಚೆನೇ ಎಲ್ಲ ನಿಗದಿಮಾಡಿಕೊಂಡಿದ್ದೀರಿ.

ಅವಳ ಈ ಕೋಪ ಅದೆಷ್ಟು ಅನಿರೀಕ್ಷಿತ ಹಾಗೂ ಸಾಚಾ ಆಗಿತ್ತೆಂದರೆ, ನಾನು ನಿಯಂತ್ರಣ ಕಳೆದುಕೊಂಡು ಪೆದ್ದ ನಗೆ ನಕ್ಕೆ. ಅವಳು ಕುದುರೆ, ರಾಜ, ಹೀಗೆ ಕೈಗೇನು ಸಿಕ್ಕತ್ತೋ ಆ ಚದುರಂಗದ ಕಾಯಿ ತೆಗೆದುಕೊಂಡು ನನಗೆ ಜೋರಾಗಿ ಎಸೆದಳು. ಮುಖದಲ್ಲಿ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು. ನಾನು ಕೈಗಳನ್ನು ಅಡ್ಡ ಇಟ್ಟುಕೊಂಡು ತಲೆಯನ್ನು ಮರೆಮಾಡಿದೆ. ಆದರೆ ಅವಳು ಕುದುರೆ ತೆಗೆದುಕೊಂಡು ನನ್ನ ಹಣೆಯ ಮೇಲೆ ನೇರವಾಗಿ ಕುಟ್ಟಿದಳು. ಅದರಿಂದ ಅವಳ ಕೋಪ ಕಡಿಮೆಯಾಗಲಿಲ್ಲ.

ನನ್ನ ಬಲಗಣ್ಣಿನ ಮೇಲುಗಡೆ, ಹಣೆಯ ಮೇಲೆ ಒಂದು ಅಂಗುಲದಷ್ಟು ದೊಡ್ಡದಾದ ಗಾಯವಾಗಿದೆ ಎಂದು ಅವಳ ಮನಸ್ಸಿನಲ್ಲಿ ಅಚ್ಚೊತ್ತಿ ಬಿಟ್ಟಿತ್ತು. ನಾನು ನಗುವುದನ್ನು ನಿಲ್ಲಿಸಬೇಕಾಗಿತ್ತು. ಆದರೆ ಅವಳ ಹಾರಾಡುತ್ತಿರುವ ಕೂದಲು, ಕಟ್ಟಿಕೊಂಡು ಸೊರಗುಟ್ಟುತ್ತಿದ್ದ ಅವಳ ಮೂಗು, ಅವಳ ಕಣ್ಣುಗಳಲ್ಲಿನ ಉತ್ಸಾಹದ ಮಿಂಚು ನನ್ನ ಸಂತೋಷಕ್ಕೆ ಪುಟಗೊಟ್ಟವು.

"ಚದುರಂಗದ ಪಟವನ್ನು ಮತ್ತು ಕಾಯಿಗಳನ್ನು ಕೊಠಡಿಯೊಳಕ್ಕೆ ತಂದವಳು ನೀನು. ನಾನು ಮುಂಚೇನೆ ಹೇಗೆ ಆಟವನ್ನು ನಿಗದಿಮಾಡಿಕೊಳ್ಳಲು ಸಾಧ್ಯ".

"ಆದರೇನಂತೆ? ಅವನ್ನೆಲ್ಲ ಮಾಡೋದು ಚಿತ್ತೂರಿನಲ್ಲಿ. ಅದನ್ನು ಮಾಡುವವನಿಗೆ ನೀವು ಲಂಚಕೊಟ್ಟಿರಬೇಕು: ಅದನ್ನು ನೀವು ಮಾಡಬೇಕಾದ್ದಿಲ್ಲ ಅಂತ ನನ್ನ ಊಹೆ; ಕಾರಣ ನೀವು ಮಹಾರಾಜ ಕುಮಾರ್. ಅವರು ಮಾಮೂಲಿಯಾಗೇ ಮಾಡ್ತಾರೆ ಅಂತ ನನಗೆ ನಿಶ್ಚಿತವಾಗಿ ಗೊತ್ತಿದೆ. ನೀವು ಕಾಯಿರಿ. ಮೆರ್ತಾದಿಂದ ಚದುರಂಗದ ಒಂದು ಸಲಕರಣೆ ತರಿಸುತ್ತೇನೆ. ಆಮೇಲೆ ನೀವು ಜೀವಮಾನದಲ್ಲಿ ಇನ್ನೆಂದೂ ಮರೆಯದೆ ಇರೋಂಥ ಹೊಡೆತ ಕೊಡ್ತೀನಿ"

"ಹೇಗೂ ನೀನು ಅದನ್ನು ತುಂಬ ಚೆನ್ನಾಗೇ ಮಾಡ್ತೀಯ. ಚದುರಂಗದ ಕಾಯಿಗಳನ್ನು ನಿನಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿ, ಕಳಿಸಿಕೊಡಲು ನಿಮ್ಮ ಮೆರ್ತಾದ ಕುಶಲ ಕಲೆಗಾರರನ್ನು ತಡೆಯೋ ರ‍್ಯಾರು?" ಅವಳ ಬಾಲಿಶ ಮಟ್ಟಕ್ಕಿಳಿಯಲು ನನಗೇನೂ ಕಷ್ಟಪಡಬೇಕಾಗಿ ಬರಲಿಲ್ಲ.

"ಮೆರ್ತಾದಲ್ಲಿ ಮೋಸಗಾರರು, ಸುಳ್ಳುಗಾರರು. ತುಂಬಿದ್ದಾರೆ ಅಂತ ನೀವು ಸೂಚಿಸುತ್ತಾ ಇದ್ದೀರೇನು? ನಿಮ್ಮ ಹಾಗಲ್ಲದೆ ನಾವು ಬಹಳ ಮರ್ಯಾದೆವಂತ ಜನ ಅನ್ನುವುದನ್ನು ನಿಮಗೆ ತಿಳಿಸುವೆ". ಅವಳು ಈಗ ನನ್ನ ಕಡೆಗೆ ಧಾವಿಸುತ್ತಿದ್ದಳು. ಅವಳ ಕೋಪ ಮತ್ತು ಬಿಕ್ಕಿ ಬಿಕ್ಕಿ ಅಳುವುದು ಎರಡೂ ಒಂದೇ ಆದುವು. ನಾಚಿದ ಆ ತೆಳ್ಳನೆಯ ಪುಟ್ಟ ಹೆಂಗಸು ನನ್ನದೆಗೊರಗಿದಳು. ಖಂಡಿತವಾಗಿಯೂ ನನ್ನನ್ನು ಕಿಟಕಿಯಿಂದಾಚೆಗೆ ಎಸೆದು ಬಿಡುವಳೆಂದು ಭಾಸಿದ್ದೆ. ಆದರೆ ಛಟ್ ಅಂತ ಕೈಯಿಂದ ಮೆಲ್ಲಗೆ ಒಂದೇಟು ಕೊಟ್ಟು ಹಾಸಿಗೆಯಿಂದ ತಳ್ಳಿದಳು.

"ಕುಂಕುಮ್ ಕನ್ವರ್‌ಳನ್ನು ನನಗೆ ವಾಪಸ್ ತಂದುಕೊಡಿ. ಅವಳನ್ನು ಯಾತಕ್ಕೆ ಕೊಂದರು? ಅವಳು ಮುಗ್ಧೆ ಮತ್ತು ನಿರಪಾಯಕಾರಿಯಾದ ಹೆಣ್ಣಾಗಿದ್ದಳು. ಅವಳಿನ್ನೇನು ಮದುವಣಗಿತ್ತಿಯಾಗ್ತಾಳೆ ಅನ್ನುವ ಸಮಯಕ್ಕೆ ಅವಳಿಗೆ ಬೆಂಕಿ ಹಚ್ಚಿದರು. ಸುಟ್ಟು ಕರಕಲಾದ ಕಾಗದದ ಹಾಗೆ ಅವಳು ಮುರುಟಿಕೊಂಡು ಕಪ್ಪಾಗಿದ್ದಳು. ಅವರು ಸುಡಬೇಕು ಎಂದಿದ್ದದ್ದು ನನ್ನನ್ನು ಎಂದು ತಿಳಿದಾಗ ಅವಳು ಅದೆಷ್ಟು ಅಸಹಾಯಕಳು ಮತ್ತು ಜೀವವಿಲ್ಲದವಳಂತಾದಳು. ಅಯ್ಯೋ ದೇವರೆ! ನಿಮ್ಮ ಮನೆಯಲ್ಲಿ ನಾನು ಅದೆಷ್ಟು ಏಕಾಂಗಿ ಮತ್ತು ಒಬ್ಬಂಟಿ!"

"ನನಗೆ ಹೆಜ್ಜೆ ಮುಂದಿಡೋದಕ್ಕೆ ಆಗ್ತಾ ಇಲ್ಲ. ನನ್ನ ಇನ್ನೊಂದು ಕಾಲಿಗೆ ಏನೋ ಆದ ಹಾಗೆ ಅನ್ನಿಸುತ್ತೆ. ವೈದ್ಯರನ್ನು ಕರೆತರಲು ಯಾರಿಗಾದರೂ ಹೇಳಿಕಳಿಸ್ತೀಯಾ?"

* * *

ಮಂಡಿಯನ್ನೇ ನೋಡಿ. ಈ ಮಣಿಯುವ ಮಂಡಿ ಕೀಲು ಇಲ್ಲದಿದ್ದರೆ ನಾವು ಕೂರಲಾಗಲಿ, ಮಂಡಿ ಊರಿ ಕೂರಲಾಗಲಿ, ಪದ್ಮಾಸನ ಹಾಕಲಾಗಲಿ ಸಾಧ್ಯವಾಗುವುದಿಲ್ಲ. ಆಗ ನಾವು ನೇರವಾಗಿ ನಿಲ್ಲುವುದೋ ಇಲ್ಲ ಸಮತಲದ ಸ್ಥಿತಿಯೋ ಯಾವುದೋ ಒಂದು ಸ್ಥಿತಿ ಮಾತ್ರ ಸಾಧ್ಯ. ಅಂದರೆ ನಿಲ್ಲಬಹುದು ಅಥವಾ ಮಲಗಬಹುದು. ಇವೆರಡರ ಹೊರತು

ಮಧ್ಯದ್ದು ಯಾವುದೂ ಸಾಧ್ಯವಾಗ್ತಿರಲಿಲ್ಲ. ಮಂಡಿ ಇಲ್ಲದೆ ಇದ್ದರೆ ನಾವು ಕುದುರೆಯನ್ನು ಅದು ಹೇಗೆ ಓಡಿಸುತ್ತಿದ್ದೆವೋ ನನಗಂತೂ ಅದರ ಕಲ್ಪನೆ ಇಲ್ಲ. ಮಂಡಿ ಇಲ್ಲದೆ ಹೋಗಿದ್ರೆ ಮೆಟ್ಟಲು ಹತ್ತುವುದು, ಮಹಡಿ ಮೆಟ್ಟಲು ಹತ್ತುವುದು, ಬಹು ಅಂತಸ್ತುಗಳನ್ನೇರುವುದು, ನೇರವಾಗಿ ಹೇಳಬೇಕೆಂದರೆ ಮೊದಲನೇ ಮಹಡಿಯೇ ಆಗಲಿ– ಇದನ್ನೆಲ್ಲ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಇಸ್ಲಾಂ ಧರ್ಮ ಆಗ ಪ್ರಾರ್ಥನೆ ಮಾಡಲು ಬೇರೆ ಯಾವುದಾದರೂ ಒಂದು ಭಂಗಿಯನ್ನು ಕಂಡುಹಿಡಿಯಬೇಕಾಗುತ್ತಿತ್ತು. ಕುಸ್ತಿಯ ಪ್ರಶ್ನೆಯೇ ಇರುತ್ತಿರಲಿಲ್ಲ. ಅದೇ ರೀತಿ ಇದ್ದಕ್ಕಿದ್ದ ಹಾಗೇ ಆಕ್ರಮಣ ಮಾಡಿದ ಯಾರಾದರೂ ಕಾಡುಗಳ್ಳನ ಅಥವಾ ಪುಂಡನ ತೊಡೆಗಳ ಸಂದಿಯಲ್ಲಿ ಮಂಡಿಯನ್ನಿಡುವುದೂ ಆಗುತ್ತಿರಲಿಲ್ಲ. ನನ್ನ ಅತ್ಯಂತ ಮೆಚ್ಚಿನ ಬಾಲ್ಯದ ಆಟವೂ ಸಾಧ್ಯವಿರುತ್ತಿರಲಿಲ್ಲ. ನನ್ನ ಸಹಪಾಠಿಯಾದರೂ ನೇರವಾಗಿ ನಿಂತಿದ್ದರೆ ಅಥವಾ ಕಾಲುಗಳನ್ನು ಅಗಲಿಸಿಕೊಂಡು, ಮೊಣಕೈ ಹೊರಕ್ಕೆ ಚಾಚಿಕೊಂಡು ಸೊಂಟದ ಮೇಲೆ ಕೈಯಿಟ್ಟುಕೊಂಡು ನಿಂತಿದ್ದರೆ, ಅವನ ಹಿಂದುಗಡೆ ಹೋಗಿ, ಅವನ ಮೊಣಕಾಲಿಗೆ ನನ್ನ ಮಂಡಿಯನ್ನು ಒರಟಾಗಿ ನೂಕ್ತಾ ಇದ್ದೆ. ಅದರಿಂದ ನನ್ನ ಉದ್ದೇಶ ಯಾವಾಗಲೂ ಈಡೇರುತ್ತಿತ್ತು. ಆಸಾಮಿ ತನ್ನ ಸಮತೋಲನವನ್ನು ಕಳೆದುಕೊಳ್ಳುತ್ತಿದ್ದ ಇಲ್ಲವೆ ಅರ್ಧಕ್ಕೆ ಕುಸಿಯುತ್ತಿದ್ದ. ನನಗೆ ನಾನೇ ಪೆದ್ದನ ಹಾಗೆ ನಗುತ್ತಾ ಇದ್ದೆ. ಇನ್ಯಾರಾದರೂ ಬಂದು ನನಗೂ ಹಾಗೆ ಮಾಡುವವರೆಗೂ ನಗತಾ ಇರ್ತಿದ್ದೆ.

ಲೀಲಾವತಿ ಇನ್ನೂ ಪತ್ತೆಯಾಗದೆ ಇರುವ ಇಂಥ ಸಂದರ್ಭದಲ್ಲಿ ಈ ಮಂಡಿಗಳನ್ನು ಹೊಗಳುವ ಈ ಪ್ರಶಂಸಾ ಪ್ರಾಗಾಥಕ್ಕೆ ಏನು ಸಂದರ್ಭ ಈಗ ಎಂದು ಕೇಳಬಹುದು. ನನ್ನ ಮಾತನ್ನು ನಂಬಿ. ನಾನೀಗ ಪೂರಾ ಹಾಸಿಗೆ ಹಿಡಿದಿದ್ದೇನೆ. ನನ್ನ ಬದುಕಿನ ಮಾಟಗಾತಿ ಮತ್ತು ಹೆಂಡತಿ, ಆ ಶಾಪಗ್ರಸ್ತ ಹೆಣ್ಣು; ಮಂಡಿಯು, ಕಡೇ ಪಕ್ಷ ನನ್ನದು ಸಿಡಿಯುವ ಬಂದೂಕಿನ ಕುದುರೆ ಎಂದು, ಅಲ್ಲದೆ ಅದು ಎಂಥ ಅಸಾಧಾರಣ ಅಳತೆಯ ಕಾಮೋತ್ತೇಜಕವೆಂದರೆ ಅಪಾರ ತಾಳ್ಮೆಯವಳೂ ಮತ್ತು ತೀವ್ರಲೋಲುಪಳೂ ಆದ ನನ್ನ ಗೆಳತಿ ಕೌಸಲ್ಯಳನ್ನು ನಾನು ತೀವ್ರ ಹತಾಶೆ ಮತ್ತು ತೀವ್ರ ಬಳಲಿಕೆಗೆ ಗುರಿ ಮಾಡಿದ್ದೇನೆ ಎಂದು ತೋರಿಸಿಕೊಟ್ಟಿದ್ದಾಳೆ. ನಾನೊಬ್ಬ ತಣಿಸಲಾಗದ ಕಾಮುಕ. ನಾನು ಹಾಸಿಗೆ ಹಿಡಿದು ಮಲಗಿದ್ದರೂ, ಗಂಟೆಗೊಮ್ಮೆ, ಅಲ್ಲ ಅರ್ಧಗಂಟೆಗೊಮ್ಮೆ ಲೈಂಗಿಕ ತೃಪ್ತಿ ಬೇಕೆಂದು ಒತ್ತಾಯಿಸುತ್ತೇನೆ. ಯಾವ ಪೈಶಾಚಿಕ ವಿಕೃತಿ, ನನ್ನ ಇನ್ನೊಂದು ಕಾಲನ್ನು ಮುರಿದು ಅನಂತರ ಬಿರಿದ ಮಂಡಿ ಚಿಪ್ಪಿನ ಮೇಲೆ ತನ್ನ ಒದ್ದೆ ತುಟಿಗಳನ್ನಿಟ್ಟು ತನ್ನನ್ನು ಕ್ಷಮಿಸಬೇಕೆಂದು ಕೋರುವಂತೆ ನನ್ನ ಹೆಂಡತಿಯನ್ನು ಅಡ್ಡ ದಾರಿಗೆಳೆದೊಯ್ದಿತು. ಬಹುಶಃ ನನ್ನ ಮೈಗಳ್ಳ ಮನಸ್ಸು, ಅಂಗಾತನಾಗಿ ಮಲಗಿರುವ ಸ್ಥಿತಿ ಮತ್ತು ಮುರಿದ ಕಾಲುಗಳೆರಡು ನನ್ನ ಅಗಾಧ ವ್ಯಭಿಚಾರಕ್ಕೆ ಕಾರಣವೆನಿಸುತ್ತದೆ. ಯಾವತ್ತೂ ನಮ್ಮ ಮನೆಯ ಮರ್ಯಾದೆಯನ್ನು ಪಾಲಿಸಿಕೊಂಡು ಕಾಪಾಡಿಕೊಂಡು ಬಂದಿರುವ ಕೌಸಲ್ಯ ಅಂತಿಮವಾಗಿ ರಾತ್ರಿಯ ಕ್ಷಣಿಕ ಸಂಗದ ಸಲುವಾಗಿ ಕಳ್ಳತನದಿಂದ ನುಸುಳಿ ಬಂದಳು. ಕಾರಣ ನಾನು ಚಂದ್ರ ಮಹಲ್‌ಗೆ ಹೋಗಲಾರೆ. ಬಾಡಿಗೆ ದೇಹದ ಮೇಲೆ ಒಂದೇ ಒಂದು ಉಕ್ಕೆ ಸಾಲನ್ನು ಉಳಬಲ್ಲೆನಾದರೆ ನಾನು ಸುಖ ಹೊಂದಬಲ್ಲೆ ಅಥವಾ ಕಡೇ ಪಕ್ಷ ನಾನೇ ಸುಖದ ನೋವಿನಿಂದ ನರಳಬಲ್ಲೆ. ಆದರೆ ನನ್ನದೇ ಮನೆಯಲ್ಲೂ, ನನ್ನದೇ ಖಾಸಗಿ ಕೋಣೆಯಲ್ಲೂ ನನಗೆ ನೆಮ್ಮದಿ ಇಲ್ಲ. ತನ್ನ ಮಿತಿಮೀರಿದ ಭಾವೋದ್ವೇಗಗಳು, ತುಂಡು ಲಂಗದ ಪೈಶಾಚಿಕ ಪರಿಭ್ರಮಣಗಳು ಮತ್ತು ಅನುರಾಗಭರಿತ ಹಾಡುಗಳು ಇವೆಲ್ಲವೂ ಮುಗಿದ ಮೇಲೆ ಆ ಹೆಣ್ಣು ತೀರಾ ಅವೇಳೆ ಹೊತ್ತಿನಲ್ಲಿ ಕಾಣಿಸಿಸಕೊಳ್ಳುತ್ತಾಳೆ. ನಾನು

ಮಾತನಾಡಬಾರದೆಂದು ನಿರ್ಧರಿಸುತ್ತೇನೆ. ನಾನು ನನ್ನ ಚಿತ್ತಸಮಾಧಾನವನ್ನು ಕಾಯ್ದುಕೊಳ್ಳುತ್ತೇನೆ ಹಾಗೂ ನನ್ನ ಶಿಲಾಮೌನಕ್ಕೆ ಮೊರೆ ಹೋಗುತ್ತೇನೆ. ಅದರಿಂದೇನೇನೂ ಪ್ರಯೋಜನವಿಲ್ಲ ಎಂದು ಹೇಳಬೇಕಾದ್ದೇ ಇಲ್ಲ.

ನಾನು ನನ್ನ ಬದುಕನ್ನು ಏನು ಮಾಡಬೇಕೆಂದಿದ್ದೇನೆ ಎಂದು ಯಾರಾದರೂ ಹೇಳಿಯಾರೆ? ನನ್ನ ಹಸರುಗಣ್ಣಿನ ಹೆಂಡತಿ ನಿಜವೆ? ಅವಳೊಬ್ಬ ದೊಡ್ಡ ನಟಿ ಅಷ್ಟೇನೆ. ಪೂರಾ ನಕಲಿಯೇ? ಅವಳು ಒಬ್ಬ ವ್ಯಕ್ತಿಯೋ; ಇಬ್ಬರೋ ಅಥವಾ ಇನ್ನೂ ಅನೇಕರೋ? ಅವಳು ಬೇರೆ ಯಾರನ್ನಾದರೂ ಪ್ರೀತಿಸುತ್ತಿದ್ದು ನನ್ನ ಪಾಲಿಗೆ ನೋವು ಮಾತ್ರವೆ? ಅವಳು ಸುಳ್ಳು ಹೇಳುತ್ತಿದ್ದಾಳೆಯೆ? ಇದರಲ್ಲಿ ಯಾವುದಕ್ಕಾದರೂ ಸರಿಯೆ; ಹಿಂದಿನದು, ಇಂದಿನದು ಹಾಗೂ ಬರಲಿರುವ ಯಾವುದಕ್ಕೇ ಆಗಲಿ ಏನಾದರೂ ಅರ್ಥವಿದೆಯೆ?

ಮುರಿದ ಕುದುರೆಯೂ ಸೇರಿದಂತೆ ಚದುರಂಗದ ಸಲಕರಣೆಗಳನ್ನೆಲ್ಲಾ ಮತ್ತೆ ತಂದು 'ನಾನು ನಿಮ್ಮನ್ನು ಸೋಲಿಸುವೆ' ಎಂದು ಹೇಳಿ ನೀವು ವಜ್ರ, ಮಾಣಿಕ್ಯಗಳ ಸಮೇತವಾಗಿ ನಿಮ್ಮ ಬಂಗಾರದ ಸೊಂಟಪಟ್ಟಿಯನ್ನು ಬಾಜಿಕಟ್ಟುವಿರಾ?

"ಇಲ್ಲ ನಿನಗೆ ನಮಸ್ಕಾರ"

"ಸೋತು ಹೋಗ್ತೀನಿ ಅಂತ ಹೆದರಿಕೆಯೆ?"

"ಭಯಂಕರ ಹೆದರಿಕೆ"

"ಹಾಗಾದರೆ ಏನನ್ನು ಪಣ ಇಡ್ತೀರಿ?" ಅವಳು ಒತ್ತಾಯಿಸಿದಳು.

"ಸೂಜಿಗಳು, ದಾರ ಮತ್ತು ಗುಂಡಿಗಳ ನನ್ನ ಪೆಟ್ಟಿಗೆಯನ್ನು" ಒಂದು ಕ್ಷಣ ಏನು ಅಂತ ಅರ್ಥವಾಗದೆ ಒಂದೇ ಸಮನೆ ದಿಟ್ಟಿಸಿ ನೋಡಿ, ಆಮೇಲೆ ಬಿದ್ದು ಬಿದ್ದು ನಕ್ಕಳು. ನನ್ನ ಬದುಕು ಇಂಥ ಒಂದು ವಿಚಿತ್ರ ಪರಿಸ್ಥಿತಿಗೆ ಬಂದು ಬಿಟ್ಟಿದೆ. ನನ್ನ ಮೂರನೇ ದರ್ಜೆ ಹಾಸ್ಯ ಅವಳಿಗೆ ತುಂಬ ವಿನೋದ ಪೂರ್ಣ ಅನ್ನಿಸುತ್ತದೆ.

"ನೀವು ತಾಳಿ, ಸ್ವಲ್ಪ ತಾಳಿ, ನಿಮ್ಮನ್ನು ಮನೆ ಮಠ ಬಿಟ್ಟು ಹೋಗೋ ಹಾಗೆ ಮಾಡ್ತೀನಿ." ನನ್ನ ಕಡೆ ಅವಿಧೇಯತೆಯಿಂದೆಂಬಂತೆ ನೋಡಿದಳು. 'ಆದರೆ ನಾನು ನ್ಯಾಯ ನಿಷ್ಠುರಿ. ನೀವು ಮುಂದುವರಿಯಿರಿ. ಏನು ಬೇಕಾದರೂ ಕೇಳಿ. ನಿಮಗೆ ಏನು ಬೇಕೋ ಅದು. ನಾನು ಗೆಲ್ಲದೆ ಹೋದರೆ ನೀವು ಆಟವನ್ನು ಗೆಲ್ಲುವಿರಿ

"ಏನು ಬೇಕಾದರೂ ಕೇಳಲೆ?"

"ಏನು ಬೇಕಾದರೂ, ನಾನು ನನ್ನ ಮಾತಿನಿಂದ ಹಿಂದಕ್ಕೆ ಸರಿಯಲ್ಲ".

ನಾನು ಅವಳಿಂದ ಬಯಸಿದ್ದು ಏನೋ ಇತ್ತು.

ಕಡೇ ಪಕ್ಷ ಬಹಳ ಹಿಂದೆಯೇ ಬಯಸಿದ್ದೆ ಅಂತ ನನಗೆ ನೆನಪಿದೆ. ಇಷ್ಟು ವರ್ಷಗಳಿಂದಲೂ ನಾನು ಯಾವುದಕ್ಕೋ ಹಂಬಲಿಸಿ ಹಾತೊರೆದು ಕಾದಿದ್ದೆ.

ನಾನು ಆಟದಲ್ಲಿ ಸೋತೆ. ನಾನೊಂದು ವೇಳೆ ಗೆದ್ದಿದ್ದರೆ, ನಾನು ಅವಳನ್ನು ಕೇಳುತ್ತಿದ್ದೇನೆ? ಅವಳು ನನ್ನ ಆಸೆಯನ್ನು ಈಡೇರಿಸುತ್ತಿದ್ದಳೆ?

ಅವಳೊಬ್ಬ ಎದುರಿಸಲಾಗದಂಥ ದ್ಯೂತವ್ಯಸನಿ. ನಾನು ಹಾಸಿಗೆಯ ಮೇಲೆ ಅಂಗಾತನಾಗಿ ಮಲಗಿಕೊಂಡಂತೆಯೇ ನಾವು ನೂರಾರು ಚದುರಂಗದಾಟಗಳನ್ನು ಆಡಿದ್ದೇವೆ. ಅವಳು

ಅನೇಕ ವಸ್ತುಗಳನ್ನು ಪಣವಾಗಿ ಒಡ್ಡಿದ್ದಳು. ಕೆಲವು ಸಲ ಅವಳು ಸೋತಳು. ಆದರೆ ಅವಳೆಂದೂ "ಏನು ಬೇಕಾದರೂ, ಏನಾದರೂ ಸರಿ ಕೇಳಿ. ನಾನು ನನ್ನ ಮಾತಿನಿಂದ ಹಿಂದೆ ಸರಿಯಲ್ಲ" ಎಂದು ಮತ್ತೆಂದೂ ಬಾಜಿಕಟ್ಟಲಿಲ್ಲ.

"ನಾವು ಕುಂಭಲ್ ಗರ್ಹ್‌ಗೆ ಹೋಗಲು ನೀವು ಮಹಾಪ್ರಭುಗಳ ಅನುಮತಿ ಕೇಳುವುದಕ್ಕೆ ಮುನ್ನ ಒಂದು ಕ್ಷಣ ಕಾಯುವುದು ಬಹುಶಃ ಒಳ್ಳೆಯದು ಅನ್ನಿಸುತ್ತೆ".

ಅವಳು ಯಾವುದರ ಬಗ್ಗೆ ಮಾತಾಡುತ್ತಿದ್ದಳು? ನಾವು ಒಂದು ಆಟದ ಮಧ್ಯದಲ್ಲಿದ್ದೆವು. ನನ್ನದೇ ಸ್ವಂತ ವಿಚಾರಗಳನ್ನೂ ಗುಟ್ಟಾಗಿಟ್ಟುಕೊಳ್ಳಲು ನನಗಿನ್ನೆಂದೂ ಅನುಮತಿ ಇಲ್ಲವೆ? ಕುಂಭಲ್‌ಗರ್ಹ್ ವಿಷಯವನ್ನು ನಾನು ಯಾರಿಗೂ ಹೇಳಿರಲಿಲ್ಲ. ವ್ಯವಹಾರದ ವಿಷಯ ನಾವು ಯಾವಾಗಲಾದರೂ ಮಾತಾಡಿದ್ದರೆ, ಒಂದೇ ಒಂದು ಸಲ ಮಾತ್ರ. ಉಳಿದಂತೆ ನಮ್ಮ ಆಟಗಳೆಂದರೆ ಏಕ ನಟ ನಾಟಕದ ಸ್ವಗತ ಭಾಷಣಗಳು– ಅವಳದ್ದೇ. ಹಾಗಾದರೆ ಅವಳಿಗೆ ಹೇಗೆ ಗೊತ್ತಾಯಿತು?

ಚಿತ್ತೂರಿನಲ್ಲಿ ನಾನು ನಿರ್ವಹಿಸಬೇಕಾದ ಪಾತ್ರ ಯಾವುದೂ ಇರಲಿಲ್ಲ. ತೋಟಗಳು ಮತ್ತು ಉದ್ಯಾನವನದ ಸಮಿತಿಯಲ್ಲಿ ನಾನೊಬ್ಬ ಸಾಮಾನ್ಯ ಸದಸ್ಯ ಕೂಡ ಅಲ್ಲ. ನಾನು ಪ್ರಾರಂಭಿಸಿದ ಯೋಜನೆಗಳಾದ ಒಳಚರಂಡಿ ನಿರ್ವಹಣೆ, ತಪ್ಪಿಸಿಕೊಳ್ಳುವ ಸುರಂಗಗಳು, ಸೈನಿಕ ತಂತ್ರಜ್ಞಾನದ ಆಧುನೀಕರಣ ಇವುಗಳನ್ನು ಅನಂತರ ಸಕ್ರಿಯವಾಗಿ ಮುಂದುವರಿಸಲಿಲ್ಲ. ಮನಸ್ಸಿಗೆ ಬಹುವಾಗಿ ನೋವುಂಟು ಮಾಡಿದ ಸಂಗತಿ ಎಂದರೆ, ಅವುಗಳನ್ನು ಅಲಕ್ಷಿಸಿದ್ದಲ್ಲ. ಆದರೆ ನಮ್ಮ ಮುಖವನ್ನು ದ್ವೇಷಿಸುವ ಸಲುವಾಗಿ ನಮ್ಮ ಮೂಗನ್ನು ಕತ್ತರಿಸಿಕೊಳ್ಳಲು ನಾವು ಬಯಸ್ಸಿದ್ದೇವೆ ಎಂಬುದು. ಆ ಯೋಜನೆಗಳೊಂದಿಗೆ ನನ್ನ ಹೆಸರು ಲಗತ್ತಾಗಿದೆ ಎಂಬ ಒಂದೇ ಕಾರಣಕ್ಕೆ ಚಿತ್ತೂರಿನ ಹಿತಾಸಕ್ತಿಯನ್ನು ತ್ಯಜಿಸಲಾಗಿದೆ. ಇಂಥ ಒಂದು ಸಂಕುಚಿತ ದೃಷ್ಟಿಯೊಂದಿಗೆ ಹೇಗೆ ವ್ಯವಹರಿಸುವುದು?

ಬಾಲ್ಯದಿಂದಲೂ ನನಗೆ ಯಾವತ್ತೂ ಹೆಚ್ಚು ಜನ ಸ್ನೇಹಿತರು ಇದ್ದಿರಲಿಲ್ಲ. ನನ್ನ ಮದುವೆಯ ನಂತರ ನಾನು ಬಹುಮಟ್ಟಿಗೆ ಯಾರನ್ನೇ ಆಗಲಿ ಹಚ್ಚಿಕೊಳ್ಳುವುದನ್ನು ಪೂರ್ತಿ ಬಿಟ್ಟುಬಿಟ್ಟೆ. ರಾಜಾಪುರಜೀ ಕೀಕಾ ಮತ್ತು ರಾವ್‌ವೀರಮ್‌ದೇವ್ ಅವರನ್ನು ಬಿಟ್ಟರೆ ನನ್ನನ್ನು ಭೇಟಿಮಾಡಲು ಯಾರೂ ಬರುತ್ತಿರಲಿಲ್ಲ. (ನಾನು ರಾಜ ಮಾತೆಯವರು ಮತ್ತು ನನ್ನ ತಾಯಿಯವರನ್ನು ಗಣನೆಗೆ ತೆಗೆದುಕೊಂಡಿಲ್ಲ) ಈಗ ಅವರಿಬ್ಬರೂ ತಮ್ಮ ತಮ್ಮ ರಾಜ್ಯಗಳಿಗೆ ವಾಪಸ್ ಹೋಗಿಬಿಟ್ಟಿದ್ದರಿಂದ, ಯಾವಾಗಲೂ ಏಕೈಕ ಅನಾಹ್ವಾನಿತ ಅತಿಥಿ ಎಂದರೆ ನನ್ನ ಹೆಂಡತಿ. ಬೇಕಿಲ್ಲದೆ ಇರುವ ಕಡೆ ಯಾಕೆ ಇರಬೇಕು? ಮನೆಯಲ್ಲಿ ನಾನು ಹೊರಗಿನವನು. ಬಹುಶಃ ಚಿತ್ತೂರಿನ ಹೊರಗಡೆ ಆರಾಮವಾಗಿ ನೆಮ್ಮದಿಯಿಂದ ಇರಬಹುದು.

"ನೀವಾಗಿ ನೀವೇ ಚಿತ್ತೂರಿನಿಂದ ದೂರ ಹೋದರೆ ನಿಮ್ಮನ್ನು ಯಾರೂ ಒಂದು ಬೆದರಿಕೆ ಎಂದು ಪರಿಗಣಿಸುವುದಿಲ್ಲ. ನಿಮ್ಮ ವಿರುದ್ಧ ಪಿತೂರಿ ಹೂಡಿರುವವರು ಬಯಸುತ್ತ ಇರುವುದು ಅದನ್ನೇ. ರಾಜಕೀಯ ಕ್ಷೋಭೆಗೆ ಇನ್ನಷ್ಟು ಕುಮ್ಮಕ್ಕು ಕೊಡುವುದಕ್ಕೋಸ್ಕರವೇ ನೀವು ಚಿತ್ತೂರನ್ನು ಬಿಡಬೇಕು ಅಂತಿದ್ದೀರಿ ಅಂತ ಅವರು ಹೇಳ್ತಾರೆ. ವಿಜಯದ ಪ್ರಶಸ್ತಿಗಳನ್ನು ಪ್ರಕಟಿಸಿದಾಗ ನಿಮಗೆ ತಲೆಬಾಗಿ ನಮಸ್ಕರಿಸಿದ ಬಿಸಿರಕ್ತದ ತರುಣರೆಲ್ಲ ಕುಂಭಲ್‌ಗರ್‌ನಲ್ಲಿ ನಿಮ್ಮ ಜೊತೆ ಸೇರಿಕೊಂಡು, ಎಲ್ಲರೂ ಒಟ್ಟಾಗಿ ಚಿತ್ತೂರಿನ ಮೇಲೆ

ಆಕ್ರಮಣ ಮಾಡಬೇಕು ಎಂದು ತೀರ್ಮಾನ ತೆಗೆದುಕೊಳ್ಳಬಹುದೇನೋ ಯಾರಿಗೆ ಗೊತ್ತು ಎಂದು ಅವರುಗಳು ಸುಳಿವು ಕೊಡುತ್ತಾರೆ."

ನಾನು ಮೌನ ತಾಳಿದೆ. ಕೃಷ್ಣನ ವಲ್ಲಭೆ ಯಾರ ಕಡೆ? ನನ್ನನ್ನು ಮೇವಾಡದ ವಿದೂಷಕನನ್ನಾಗಿ ಮಾಡಿದವಳಿಂದ ನಾನೀಗ ಪಾಠ ಹೇಳಿಸಿಕೊಳ್ಳಬೇಕೆ? ರಾಜತಂತ್ರದ ಕಲೆಯ ಮೊದಲ ಪಾಠವನ್ನು ನಾನು ಅಲಕ್ಷಿಸಿದ್ದೆ ಎಂದು ನಾನೀಗ ನನ್ನ ತಪ್ಪನ್ನು ಒಪ್ಪಿಕೊಳ್ಳಬೇಕು. ಬೇರೆಯವರೊಂದಿಗೆ ನಿಮ್ಮ ಸಂಬಂಧವಿರುವ ಯಾವುದೇ ವಿಷಯದಲ್ಲೇ ಆದರೂ ಅವರ ಸ್ಥಾನದಲ್ಲಿ ನಿಮ್ಮನ್ನು ಇಟ್ಟುಕೊಂಡು ನೋಡಿಕೊಳ್ಳಬೇಕು. ಅವರಿಗೆ ಬಹಳ ಮುಜುಗರ ಉಂಟುಮಾಡಬೇಕು. ಜಗತ್ತನ್ನು ಮತ್ತು ಸಂಗತಿಗಳನ್ನು ಅವರ ದೃಷ್ಟಿಕೋನದಿಂದ ನೋಡಬೇಕು. ಆಗ ಎಲ್ಲಿ ಏನು ತೊಂದರೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತೆ. ಈಗ ಒಮ್ಮೆಗೇ ಕೊಂದು ಬಿಡುವುದೋ, ನೋವನ್ನು ಪರಿಹರಿಸುವುದೋ ಅಥವಾ ಸಂದರ್ಭ ಯಾವ ತಿರುವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ನೋಡುವುದೋ ಎನ್ನುವುದನ್ನು ತೀರ್ಮಾನಿಸು.

"ಬುದ್ಧಿ ಹೇಳುವ ಸ್ಥಾನದಲ್ಲಿ ನಾನಿಲ್ಲ" ನನ್ನ ಮೌನ ಅವಳನ್ನೇನೂ ಹಿಂಜರಿಯುವಂತೆ ಮಾಡಲಿಲ್ಲ. ಮತ್ತೆಯೂ ಮುಂದುವರಿಸಿದಳು. "ಆದರೆ ಮಹಾಪ್ರಭುಗಳು ತುಂಬಾ ಒಳ್ಳೆಯ ವ್ಯಕ್ತಿ. ನಿಮ್ಮನ್ನು ಅಧಿಕಾರದಿಂದ ಬಿಡುಗಡೆಗೊಳಿಸಬೇಕೆಂದು ಅವರ ಮೇಲೆ ಭಾರೀ ಒತ್ತಡವಿತ್ತು. ಆದರೆ ಅವರು ಅದಕ್ಕೆ ಕಿವಿಗೊಡಲಿಲ್ಲ. ನಿಮ್ಮ ಅಸಾಧಾರಣವಾದ ವಿಚಾರಗಳನ್ನು ಪ್ರಯೋಗ ಮಾಡಿನೋಡಲು ಬಿಟ್ಟರು. ನೀವು ಮಲಿಕ್ ಅಯಾಜ್‌ನನ್ನು ವಂಚಿಸಿ ಜೌಗು ಪ್ರದೇಶದಲ್ಲಿ ಗುಜರಾತಿ ಸೇನಾಪಡೆಗಳನ್ನು ಬಲೆಗೆ, ಕೆಡವಿದಾಗ ನಿಮ್ಮನ್ನು ಕೂಡ. ವಾಪಸ್ ಕರೆಸಿಕೊಳ್ಳಬೇಕೆಂದು ಸಾರ್ವಜನಿಕರ ಕಡೆಯಿಂದ ಪ್ರದರ್ಶನಗಳಾದುವು. ಇವುಗಳ ಹಿಂದೆ ಯಾರಿದ್ದರು ಎಂದು ನಮ್ಮಿಬ್ಬರಿಗೂ ಗೊತ್ತಿತ್ತು. ಆದರೆ ಜನತೆಯ ಅಧೈರ್ಯ ಮತ್ತು ನಿರಾಶೆ ಸಾಚಾ ಆಗಿತ್ತು. ಮಹಾಪ್ರಭುಗಳು ಏನು ತಾನೆ ಮಾಡಬೇಕಾಗಿತ್ತು? ಯುದ್ಧತಂತ್ರದಲ್ಲಿ ನೀವು ತರುತ್ತಾ ಇರುವಂಥ ಬದಲಾವಣೆಗಳ ಬಗ್ಗೆ ಸ್ವತಃ ಮಹಾಪ್ರಭುಗಳಿಗೆ ಏನೂ ಗೊತ್ತಿಲ್ಲದೆ ಇರುವಾಗ ತನ್ನ ಜನಗಳಿಗೆ ಮತ್ತು ಮತ್ತಿತರ ರಾಜ್ಯಗಳಿಗೆ ಈ ಬಗ್ಗೆ ಹೇಗೆ ತಾನೆ ತಿಳಿಯ ಹೇಳಿಯಾರು? ಆಗ ನೀವು ಗುಜರಾತಿ ಸೈನಿಕರ ಹಾಗೆ ವೇಷ ಮರೆಸಿಕೊಂಡು, ಝಹೀರ್–ಉಲ್–ಮುಲ್ಕ್‌ನನ್ನು ಕೊಂದುಹಾಕಿದಿರಿ. ಆದಾದ ಮೇಲೆ ನಿಮ್ಮನ್ನು ವಾಪಸ್ ಕರೆಸಿಕೊಳ್ಳಬೇಕು ಎನ್ನುವ ಉತ್ತಾಯ ಇರಲಿಲ್ಲ. ನಿಮ್ಮಂದ ಅಧಿಕಾರ ಹಾಗೂ ಸ್ಥಾನಗಳನ್ನು ಕಿತ್ತುಕೊಳ್ಳಬೇಕೆಂದು ಬಯಸಿದರು."

"ನನ್ನಿಂದ ಕಿತ್ತುಕೊಳ್ಳಲಾಗಿದೆ"

ನನ್ನ ಆತ್ಮಾನುಕಂಪೆಯಲ್ಲಿ ಅವಳು ಆಸಕ್ತಿಯನ್ನು ತಾಳಲಿಲ್ಲ.

"ನಿಮ್ಮ ವಿರೋಧಿಗಳು ಯಶಸ್ವಿಯಾಗಿಲ್ಲ ಅಂತ ನಾನು ಸೂಚಿಸುತ್ತಿಲ್ಲ. ಮುಂದೇನಾಗುತ್ತೆ ಎನ್ನುವುದನ್ನು ಕಾದುನೋಡುವುದು ಬುದ್ಧಿವಂತಿಕೆ ಅಂತ ಅನ್ನಿಸುತ್ತೆ. ಕೆಲವು ಸಲ, ಕೆಲವು ಸಲ ಮಾತ್ರ, ಯಾವಾಗಲೂ ಅಲ್ಲ, ಕಾಲವೇ ಸಂಗತಿಗಳನ್ನು ತನ್ನ ಕೈಗೆ ತೆಗೆದುಕೊಂಡು ಸಮಸ್ಯೆಯನ್ನು ಪರಿಹರಿಸಿಬಿಡುತ್ತದೆ."

ಆ ರಾತ್ರಿ ಕೌಸಲ್ಯ ವಿಶೇಷವಾದೊಂದು ಚಿಕಿತ್ಸೆಗೆ ಏರ್ಪಾಟು ಮಾಡಿದಳು.

"ನನಗೆ ನೀನು ಬೇಕು. ಬಾಡಿಗೆಯ ನೆರವಲ್ಲ. ನನ್ನ ಕೊಳೆತ ಮೆದುಳು ಹೊರಕ್ಕೆ ಕಿತ್ತುಕೊಂಡು ಬರುವ ಹಾಗೆ ನನ್ನ ತಲೆಯನ್ನು ನಿನ್ನ ಮೊಲೆಗಳ ಮಧ್ಯೆ ಇಲ್ಲವೆ ತೊಡೆಗಳ ಮಧ್ಯೆ ಇಟ್ಟುಕೊಂಡು ಬಲವಾಗಿ ಅದುಮಬೇಕು.

"ಹಾಗೆ ಮಾಡಿದರೆ ಬಹುಶಃ ಈ ಭಯಂಕರ ಗೀಳಿನ ರೋಗದಿಂದ ನಾನು ಅಂತಿಮವಾಗಿ ಮುಕ್ತನಾಗಬಹುದು."

ಅವಳು ಸಮ್ಮತಿ ಸೂಚಕವಾಗಿ ತಲೆ ಆಡಿಸಿದಳು.

"ನನ್ನ ಬಗ್ಗೆ ನಿನಗೆ ತುಂಬ ಬೇಸರ ಹಿಡಿದಿದೆಯಾ?"

ನಾನು ಏನೋ ನಗೆಪಾಟಲಿನ ಮತ್ತು ಅಯೋಗ್ಯವಾದ ಮಾತನ್ನು ಹೇಳಿದೇನೋ ಎನ್ನುವ ಹಾಗೆ ಅವಳು ವಿಷಾದದ ಮುಗುಳ್ನಗೆ ಬೀರಿದಳು. "ನಾನು ನಿಮ್ಮ ಜೊತೇನೇ ಇರ್ತೀನಿ. ಎರಡು ಕೊಠಡಿಗಳಾಚೆಯಂತೂ ಅಲ್ಲ. ಮಹಾಸ್ವಾಮಿ ನಿಮ್ಮ ಖಾಯಿಲೆ ಏನು ಅಂದರೆ ಕಾಲ. ಇದೇ ಮೊದಲನೇ ಸಲ ನಿಮಗೆ ಜಗತ್ತಿನ ಎಲ್ಲ ಕಾಲ ನಿಮಗೆ ಸಿಕ್ಕಿದೆ. ಕಾಲ ಗುಣಪಡಿಸುವ ವೈದ್ಯನೂ ಹೌದು, ಹಂತಕನೂ ಹೌದು. ನಿಮಗೆ ಈಗ ಬೇಕಾಗಿರುವುದು ಒಂದು ಬದಲಾವಣೆ. ಮುಖಗಳ ಮತ್ತು ಸಂಗಾತಿಗಳ ಬದಲಾವಣೆ. ನಾನು ನಿಮ್ಮೆಲ್ಲಾ ಕಷ್ಟಗಳನ್ನು ನೆನಪಿಸುವವಳಾಗುತ್ತೇನೆ. ಇಬ್ಬರು ಹುಡುಗಿಯರು ಕೆಲವು ಗಂಟೆಗಳ ಕಾಲ ನಿಮ್ಮನ್ನೇ ನೀವು ಮರೆಯುವಂತೆ ಮಾಡುತ್ತಾರೆ".

"ಇಬ್ಬರೆ?"

"ಅವರು ಅವಳಿಗಳು. ಅವರು ಒಬ್ಬೊಬ್ಬರೇ ಕೆಲಸ ಮಾಡಲ್ಲ." "ನಾವು ಎರಡರಷ್ಟು ಮನರಂಜನೆ ನೀಡ್ತೀವಿ ಅಂತ ನನಗೆ ಹೇಳಿದರು".

ಅವರು ಹೆಚ್ಚು ವಯಸ್ಸಾದವರು ಆಗಿರಲಿಕ್ಕೆ ಸಾಧ್ಯವಿಲ್ಲ. ಲೀಲಾವತಿಯ ವಯಸ್ಸಿನವರು ಅಥವಾ ಹೆಚ್ಚೆಂದರೆ ಅವಳಿಗಿಂತ ಒಂದೆರಡು ವರ್ಷ ಹೆಚ್ಚಾಗಿದ್ದಿರಬಹುದು. ಅದರ ಬಗ್ಗೆ ವಿಶೇಷವಾದ್ದೇನಿಲ್ಲ. ಮೇವಾಡದಲ್ಲಿ ಬಹಳಷ್ಟು ಜನಕ್ಕೆ ಅವರು ಮಕ್ಕಳಾಗಿದ್ದಾಗಲೇ ಮದುವೆ ಆಗಿರುತ್ತೆ. ಅವಳು ಮೈ ನೆರೆದಾಗ ಗಂಡನ ಜೊತೆ ಅವಳಿಗೆ ಮಲಗಲು ಬಿಡಲಾಗುತ್ತದೆ. ರಾಜ ಪರಿವಾರ ಮತ್ತು ಅತ್ಯಂತ ಪ್ರತಿಷ್ಠಿತ ಮನೆತನದವರು ಯಾವಾಗಲೂ ಈ ಪದ್ಧತಿಯನ್ನು ಅನುಸರಿಸದೆ ಇರಬಹುದು. ರಾಜಕುಮಾರರು ಮತ್ತು ರಾಜಕುಮಾರಿಯರನ್ನು ಒಟ್ಟುಗೂಡಿಸುವ ಮುನ್ನ ಅವರುಗಳು ಹದಿವಯಸ್ಸಿನ ಕಡೆ ಕಡೆಗೆ ಬರುವವರೆಗೂ ಕಾಯುತ್ತಾರೆ. ತಂದೆಯವರಿಗೆ ಉಪಪತ್ನಿಯರಿದ್ದಾರೆ, ಹನ್ನೆರಡು ಅಥವಾ ಹದಿಮೂರರ ಹರೆಯದ ಹೆಂಡತಿಯಿರುವುದನ್ನಂತೂ ಹೇಳುವುದೇ ಬೇಕಾಗಿಲ್ಲ.

ಕೌಸಲ್ಯ ಕಳಿಸಿದ ಈ ಇಬ್ಬರಂತೂ ತೀರಾ ಅಪರೂಪದ ಹಕ್ಕಿಗಳು. ಅವರು ಹರೆಯದವರಂತೆ, ತೀರಾ ಉತ್ಸುಕರಂತೆ, ಚಂಚಲರಂತೆ ಕಂಡರು. ಅಷ್ಟಾದರೂ ಆಗೊಮ್ಮೆ ಈಗೊಮ್ಮೆ ಭೂತ ಭವಿಷ್ಯತ್ತುಗಳನ್ನು ಅದಲು ಬದಲು ಮಾಡುವಂಥ ಮಹರ್ಷಿಗಳನ್ನು ಮೀರಿಸುವಂತೆ ಜೀವನವನ್ನು ಬಹಳವಾಗಿ ಕಂಡವರು ಇವರು ಎಂಬ ಭಾವನೆ ಬರುತ್ತಿತ್ತು. ಅವರ ಹೆಸರು ರಾತ್ ಮತ್ತು ದಿನ್ ಎಂದು. ಅವರಿಬ್ಬರೂ ತದ್ವತ್ ಅವಳಿಗಳು. ಅವರಿಗೆ ಹೆಸರಿಟ್ಟವರು, ತಂದೆ, ತಾಯಿಗಳೋ, ತಲೆ ಹಿಡುಕರೋ, ಯಾರಾದರೂ ಆಗಿರಲಿ ಅವರಿಗೆ ಬಾಲ್ಯ ಸಹಜವಾದ ಕೊಂಕು ಮಾತಿನ ವ್ಯಂಗ್ಯದ ತಿರುವು ಅಥವಾ ಹಾಸ್ಯ ಪ್ರಜ್ಞೆ ಇದ್ದಿರಬೇಕು. ಸ್ವಲ್ಪ ಹೊತ್ತಿನ ನಂತರ, ನನ್ನೊಂದಿಗೆ ಯಾವುದೋ ಒಂದು ಥರದ ಆಟ ಆಡುತ್ತಿದ್ದಾರೆಂದು ನನಗೆ ಸಂದೇಹ ಬರ ತೊಡಗಿತು. 'ರಾತ್'ಳನ್ನು ಕರೆದು ಅವಳ ಕೈ ಹಿಡಿದುಕೊಂಡರೆ ಅವಳು ನಾಚಿ ಮುಗುಳ್ನಗುತ್ತ 'ಅವಳು ರಾತ್ ನಾನು ದಿನ್' ಎಂದಳು.

ಅವರಲ್ಲಿ ಒಬ್ಬಳು ನನ್ನ ಅಂಗಿಯ ಗುಂಡಿಗಳನ್ನು ಬಿಚ್ಚ ತೊಡಗಿದ್ದಳು. ಇನ್ನೊಬ್ಬಳು ನನ್ನ ಷರಾಯಿಯನ್ನು ಕಳಚತೊಡಗಿದಳು.

"ರಾತ್ ನಿಮ್ಮ ಜೊತೆ ರಮಿಸುತ್ತಿರುವಾಗ ನನ್ನ ಪಾಡಿಗೆ ನಾನು ಆಡಿಕೊಳ್ಳಲೆ ಅಥವಾ ನೀವು ಇಷ್ಟಪಟ್ಟರೆ ರಾತ್ ಜೊತೆ ರಮಿಸಬಹುದು ಆಗ ನಾನು ನಿಮಗೆ ಇದುವರೆಗೂ ಇದೆ ಅಂತ ತಿಳಿಯದೆ ಇರುವ ನಿಮ್ಮ ಅಂಗಗಳನ್ನು ಪತ್ತೆ ಹಚ್ಚಲು ನನ್ನ ನಾಲಿಗೆಯನ್ನು ಬಿಡಲೆ?"

ಅದು ನಾನು ಕಾಯಿಲೆ ಇದ್ದಾಗ ನನಗೆ ತಿನ್ನಲು ಪುಸಲಾಯಿಸುವುದಕ್ಕೋಸ್ಕರ ನನ್ನ ತಾಯಿ ತನಗೆ ನೆನಪಿರುವ ರುಚಿಕಟ್ಟಾದ ಪದಾರ್ಥಗಳು ಮತ್ತು ಸಿಹಿ ತಿಂಡಿಗಳ ಹೆಸರುಗಳನ್ನು ಹೇಳುತ್ತಾ ಹೋದ ಹಾಗಿತ್ತು.

"ನಮ್ಮಿಬ್ಬರ ಮಧ್ಯೆ ಮಲಗಿಕೊಳ್ಳಿ. ನಾವಿಬ್ಬರೂ ನಿಮಗೆ ನಮ್ಮ ಮೊಲೆತೊಟ್ಟಿನಿಂದ ಅಂಗಮರ್ದನ ಮಾಡಿಸುತ್ತೇವೆ. ನಿಮ್ಮ ಜೀವನದಲ್ಲಿ ಅಂಥದ್ದನ್ನು ಯಾವತ್ತೂ ನೀವು ಅನುಭವಿಸಿಲ್ಲ?"

ನಾನು ಸ್ವಲ್ಪಮಟ್ಟಿಗೆ ಹಗುರವಾಗಿ ನಂಬಿಕೆ ಬರದವನಂತೆ ನೋಡಿರಬೇಕು. "ತಾವು ಏನು ಯೋಚನೆ ಮಾಡ್ತಿದ್ದೀರಿ ಅಂತ ನನಗೆ ಗೊತ್ತು" ದಿನ್ ತಿಳಿದವಳಂತೆ ಮುಗುಳ್ನಕ್ಕಳು.

"ಮೊಲೆ ತೊಟ್ಟಿನ ಸ್ಪರ್ಶ ಸುಖದ ಅನುಭವವನ್ನು ನೀವು ಬೆರಳುಗಳ ನಡುವೆ, ಅಥವಾ ತುಟಿಗಳ ನಡುವೆ ಅಥವಾ ನಾಲಗೆಯಿಂದ ಮಾತ್ರ ಪಡೆಯಬಲ್ಲಿರಿ ಎಂದು. ಆದರೆ ನಿಮ್ಮ ಭಾವನೆ ತಪ್ಪು. ರಾತ್ ಮತ್ತು ನಾನು ಈ ವಿಶೇಷವಾದ ಉಪಚಾರವನ್ನು ಕಂಡುಹಿಡಿದಿದ್ದೇವೆ. ಅದರಿಂದ ನಿಮ್ಮ ಶರೀರದ ಚರ್ಮಕ್ಕೆ ಸ್ಫಟಿಕ ಸ್ಪರ್ಶದ ಹಾಗೆ ಜಿಡ್ಡನ್ನು ತೊಡೆದು ಹಾಕುವ ಸಾಮರ್ಥ್ಯ ಬರುತ್ತದೆ. ನಿಮ್ಮ ಹೆಬ್ಬಾತಿನಂಥ ಮೃದು ದೇಹವು ಚಾತಕ ಪಕ್ಷಿ ಹಾಡುತ್ತಿರುವಲ್ಲಿ ಮುಂಗಾರಿನ ರಭಸಕ್ಕೆ ಕಂಪಿಸುವ ಹುಲ್ಲಿನಂತಾಗುವುದು."

ಅವಳು ತನ್ನ ಮೈಮೇಲಿನ ಉಡುಪನ್ನು ಕೆಳಕ್ಕೆ ಜಾರಿಸಿದಳು. ಕನ್ನಡಿಯ ಎದುರುಗಡೆ ಕಣ್ಣಿಗೆ ಕಾಣುವಂತೆಯೇ ಅನಿಯಂತ್ರಿತವಾಗಿ ತನ್ನಿಂದ ತಾನೇ ಉಡುಪನ್ನು ಕಳಚುವುದನ್ನು ಅದೆಷ್ಟು ತಿಂಗಳುಗಳ ಕಾಲ ಅಭ್ಯಾಸ ಮಾಡಿದ್ದಳೋ? ರಾತ್ ತನ್ನಷ್ಟಕ್ಕೆ ತಾನೆ ಮುಂದಕ್ಕೆ ಧಾವಿಸಿದಳು.

"ಮಹಾಪ್ರಭು ನನ್ನನ್ನು ನಗ್ನಗೊಳಿಸುವ ತೊಂದರೆ ತೆಗೆದುಕೊಳ್ಳುವಿರಾ?"

ಅವಳ ಕೈ ಆಕಸ್ಮಿಕವಾಗಿ ಅವಳ ಸೋದರಿಯ ಮೊಲೆಗೆ ತಾಕಿತು. ಅದೊಂದು ಕೇವಲ ಕಲೆ. ಈ ಆಕಸ್ಮಿಕವೆಂಬಂಥ ಪೂರ್ವ ಯೋಜನೆ ಮತ್ತು ಈ ಕಾಮೋತ್ತೇಜಕ ಪ್ರಚೋದನೆ ಅದೊಂದು ಕೇವಲ ಕಲೆ. ನಾನು ಅವಳ ರವಿಕೆಯನ್ನು ಕಳಚುತ್ತಿದ್ದಂತೆ ದಿನ್‌ಳ ಬೆರಳುಗಳು ರಾತ್‌ಳ ಕಾಲುಗಳ ನಡುವೆ ಇರುವುದನ್ನು ಕಂಡೆ. ಅವಳ ಮೊಲೆತೊಟ್ಟುಗಳು ನಿದ್ದೆಯಿಂದೆಂಬಂತೆ ಎಚ್ಚತ್ತವು.

"ನನ್ನ ಮೊಲೆಗಳನ್ನು ಕೈಗಳಲ್ಲಿ ಹಿಡಿಯಿರಿ ಮಹಾರಾಜ್ ಕುಮಾರ್ ಅವರೆ" ಎಂದು ರಾತ್ ಹೇಳಿದಳು. "ಬೇಡಿ, ಬೇಡಿ ಅವುಗಳನ್ನು ಬಿಗಿಯಾಗಿ ಹಿಡಿಯಬೇಡಿ. ಅವುಗಳನ್ನು ಹಾಗೆಯೇ ಸುಮ್ಮನೆ ನಿಮ್ಮ ಅಂಗೈಗಳ ಮೇಲೆ ಇರಿಸಿಕೊಳ್ಳಿ."

ಅವಳ ದನಿ ಮೆಲ್ಲಗೆ ಕಂಪಿಸುತ್ತಿತ್ತು. ಅವಳ ಸೋದರಿಯ ಮೊಲೆಗಳ ಮೇಲಿನ ಅವಳ ಅಂಗೈಗಳ ಹಾಗೆ ಅದು ಮೈಥುನಕ್ಕೆ ನೀಡಿದ ಬಲವಾದ ಆಹ್ವಾನದಂತಿತ್ತು. "ಅವು ಪರ್ಷಿಯಾದ ಚಕ್ರವರ್ತಿಯ ಹಣ್ಣಿನ ತೋಟದ ಸೇಬಿನ ಹಣ್ಣುಗಳು. ಮಹಾರಾಷ್ಟ್ರದ ಕೊಂಕಣ ಸೀಮೆಯ ಮಾವಿನ ಹಣ್ಣುಗಳು ಹಾಗೂ ಕೆಂಪು ಕಪ್ಪು ದ್ರಾಕ್ಷಿಗಳು.

ಮಹಾಸ್ವಾಮಿಯವರೇ ತಾವು ಕಚ್ಚಿ ನೋಡದ ಹೊರತು ಅವು ಎಲ್ಲಿಯವು ಎಂಬುದು ಹೇಗೆ ತಾನೆ ತಿಳಿಯುತ್ತದೆ?"

ದಿನ್‌ಳ ಸೋದರಿ ರಾತ್, ದಿನ್‌ಳ ಬಾಯಲ್ಲಿ ತನ್ನ ನಾಲಿಗೆಯನ್ನಿರಿಸಿದ ಕೂಡಲೇ ನಿಧಾನಕ್ಕೆ ಹಿಡಿದು ಬಿಟ್ಟ ಸ್ನಾಯುವಿನಂತೆ ದಿನ್ ಕಂಪಿಸಿದಳು. ನನ್ನ ಕೈಗಳು ತಾವಾಗಿ ಪಕ್ಕಕ್ಕೆ ಬಂದವು. ಅವಳು ಹೇಳಿದ. ದ್ರಾಕ್ಷಿಯ ಹಣ್ಣುಗಳು ನನ್ನ ನಾಲಗೆಯನ್ನಾಗಲಿ ನನ್ನ ಶಿಶ್ನವನ್ನಾಗಲಿ ಉದ್ರಿಕ್ತಗೊಳಿಸಲಿಲ್ಲ. ಈ ತದ್ವತ್ ಪ್ರತಿಬಿಂಬಗಳಿಂದ ನಾನು ದಿಗ್ಭ್ರಮೆಗೊಂಡೆ. ಮುಜುಗರಗೊಂಡೆ. ನಟನೆ ಎಲ್ಲಿ ಪ್ರಾರಂಭವಾಯಿತು ಮತ್ತು ಸಹಜ ಪ್ರೇರಣೆ ಎಲ್ಲಿ ಕೊನೆಗೊಂಡಿತು ಎಂಬುದನ್ನು ಹೇಳುವುದು ಸಾಧ್ಯವೇ ಇಲ್ಲದ ಈ ತರಂಗಿತಗೊಳ್ಳುತ್ತಿರುವ ಪ್ರತಿಬಿಂಬಗಳ ನಡುವೆ ಹೊರಗಿನವರಿಗೆ ಜಾಗವೇ ಇರಲಿಲ್ಲ.

"ನಾವು ಇದನ್ನು ಸ್ವಲ್ಪ ಆಮೇಲೆ ಮಾಡೋಣವೆ?"

ನಾನು ಸ್ವಲ್ಪ ತಪ್ಪು ಮಾಡಿದವನಂತೆ ಕೇಳಿದೆ.

ಅವರು ನಿರುತ್ಸಾಹಗೊಂಡವರಂತೆ ಕಂಡರು. ಆದರೆ ಕೂಡಲೇ ನಿಲ್ಲಿಸಿದರು. ಅವರ ಮುಗುಳ್ನಗೆಯಲ್ಲಿ ಈಗ ಸ್ವಲ್ಪ ಸಂಕೋಚವಿತ್ತು. ನನ್ನ ಸೂಚನೆಗಳಿಗೆ ಕಾಯುತ್ತಿದ್ದರು.

"ನೀವು ಎಲ್ಲ ಕೆಲಸಗಳನ್ನು ಹಂಚಿಕೊಳ್ಳುವಿರಾ? ಅಂದರೆ ನಿಮ್ಮ ಎಲ್ಲ ಕೆಲಸಗಳನ್ನೂ ಸಮನಾಗಿ ಹಂಚಿಕೊಳ್ತೀರಾ?"

"ಹೌದು. ಹಾಗಂತ ನಾವು ಮುಂಚೆನೇ ಹೀಗೇ ಮಾಡಬೇಕು ಅಂತ ಏರ್ಪಾಟು ಮಾಡಿಕೊಂಡಿರುವುದಿಲ್ಲ. ಆದರೆ ನಾನು ಎಡಭಾಗವನ್ನು ನನ್ನ ವಶಕ್ಕೆ ತೆಗೆದುಕೊಂಡರೆ ಬಲಭಾಗವನ್ನು ಅವಳು ನಿರ್ವಹಿಸುತ್ತಾಳೆ. ಅವಳೊಂದು ವೇಳೆ ಮೇಲಿಂದ ಶುರುಮಾಡಿದರೆ, ನಾನು ಅದುವರೆಗೆ ಕೆಳಗಡೆ ಕಾಲ ಬೆರಳಿನಿಂದ ಪ್ರಾರಂಭಿಸಿ ಬಿಟ್ಟಿರುತ್ತೇನೆ."

ಅವರು ಒಂದೇ ಸಮನೆ ಮುಗುಳ್ನಗುತ್ತಲೇ ಇದ್ದರು. ಆದರೆ ಆ ನಗೆಯಲ್ಲಿ ವಿನೋದವಾಗಲಿ, ಉಲ್ಲಾಸವಾಗಲಿ ಇರಲಿಲ್ಲ.

ಅವರು ದಣಿವೇ ಆಗದವರಂತೆ ಶ್ರಮವಹಿಸುತ್ತಿದ್ದರು. ಅಪ್ಪಣೆಯನ್ನು ಪಾಲಿಸಲು ಸದಾ ತುದಿಗಾಲ ಮೇಲೆ ನಿಂತಿರುತ್ತಿದ್ದರು. ತೀರಾ ದಣಿದು ಸುಸ್ತಾದ ಮೇಲೂ ಪಟ್ಟು ಹಿಡಿದು ಮಾಡುತ್ತಿದ್ದರು. ಬಲವಂತವಾಗಿ ತಂದುಕೊಂಡ ಒಳ್ಳೆ ಸರಸ ಸ್ವಭಾವದ ಇವರುಗಳು ಗಿರಾಕಿಯನ್ನು ಸಂತೃಪ್ತಿಪಡಿಸಲು ಯಾವ ಮಟ್ಟಕ್ಕೆ ಬೇಕಾದರೂ ಹೋಗುವಂಥವರು.

ಒಂದು ವೇಳೆ ಅವರು ಗಿರಾಕಿಯುನ್ನು ಸಂತೃಪ್ತಿಪಡಿಸಲಸಮರ್ಥರಾದರೆ, ಅವರಿಗೇನಾದೀತು ಅಥವಾ ಅವರ ಸ್ವಪ್ರತಿಷ್ಠೆಗೇನಾದಿತೆಂದು ನಾನು ಯೋಚಿಸಲಾರದಾದೆನು. ಅವರು ಗಿರಾಕಿಯನ್ನು ಕೊಲ್ಲುವರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವರೆ? ಅವರು ಅದೆಷ್ಟು ಅತ್ಯಂತ ಸುಮಕೋಮಲೆಯರು. ಆದರೂ ಅದೆಷ್ಟು ಕಳಪೆ ದರ್ಜೆಯವರೆಂದರೆ ಅವರೊಂದಿಗೆ ಒಂದು ಸಂಜೆ ಕಳೆದದ್ದೇ ಆದರೆ, ಇವೆರಡರಲ್ಲಿ ಯಾವುದಾದರೂ ಒಂದು ರೀತಿ ಆಗಬಹುದು. ಯಾತನಾಮಯವಾದ ಬೇಸರ ಮತ್ತು ಶೂನ್ಯಕ್ಕೆ ಕುಗ್ಗಿಸಬಹುದು. ಇಲ್ಲವೆ ತದ್ವತ್ ವಿಶ್ವದಲ್ಲಿ ಅಮೂಲ್ಯ ಅನುಭವವಾದರೆ, ಆಭರಣವನ್ನು ಧರಿಸಿದಷ್ಟು ಆನಂದವಾಗಬಹುದು. ಕನ್ನಡಿಯೊಳಗಿನ ಪ್ರತಿಬಿಂಬಕ್ಕೆ ಬಿಂಬ ಮೂಲವು ಇಲ್ಲದೆ ಇರಲು ಸಾಧ್ಯವೆ ಎಂದು ನನಗೆ ನಾನೇ ಕೇಳಿಕೊಂಡೆ. ಪ್ರತಿಬಿಂಬಗಳಿಗೆ ಮಾತ್ರ ಜೀವವಿರುವಂಥ, ಜಗತ್ತು ಇದೆಯೆ? ವಸ್ತುವಲ್ಲದ್ದು ಮಾತ್ರ ಇರುವ, ನಮ್ಮದು ಮಿಥ್ಯಾ ಪ್ರಪಂಚವಾಗಿದ್ದು

ವಿಶ್ವ ಮತ್ತು ಸೃಷ್ಟಿಗಳು 'ಮಾಯೆ' ಅಥವಾ ಕಲ್ಪನೆಯ ಸೃಷ್ಟಿ ಅಲ್ಲದ, ಆದರೆ ಅದು ಒಂದು ಸಾಧ್ಯತೆ ಅಥವಾ ದೇವರಿಗೆ ಆಸಕ್ತಿ ಇಲ್ಲವಾದ್ದರಿಂದ ಆಯ್ಕೆ ಸಾಧ್ಯವಿಲ್ಲದ್ದೋ ಅಥವಾ ಯಾವುದೋ ಆಕಾಶಗಂಗೆಯ ಅಂಚಿನಲ್ಲಿ ಸತ್ತು ಬಿದ್ದಿರುವಂಥದೋ ಅಲ್ಲ ಎನ್ನುವಂಥ ಜಗತ್ತು ಇದೆಯೆ?

ಅವರಿಬ್ಬರೂ ಈಗ ಹಾಡುತ್ತಿದ್ದಾರೆ. ಇಲ್ಲ, ರಾತ್ ಹಾಡುತ್ತಿದ್ದಾಳೆ, ಮತ್ತು ದಿನ್ ನೃತ್ಯ ಮಾಡುತ್ತಿದ್ದಾಳೆ ಅಥವಾ ದಿನ್ ಹಾಡುತ್ತಿದ್ದಾಳೆ ಮತ್ತು ರಾತ್ ನೃತ್ಯ ಮಾಡುತ್ತಿದ್ದಾಳೆ. "ನಿಷಿದ್ಧವಾದದ್ದು ಒಂದೇ, ಅದು ದುಃಖ. ಆರೋಗ್ಯವಂತನಿಗೂ ರೋಗಿಗೂ ಇರುವ ಮದ್ದು ಒಂದೇ, ಅದು ಪ್ರೇಮ. ಕಾರಣ ಪ್ರೇಮವೊಂದು ರೋಗ. ಅದೇ ಜೀಗ ಮತ್ತು ಜೀಗದ ಕೈ, ಅದು ಬಿಡುಗಡೆಗೊಳಿಸುವ ಬಂಧನ" ಎಂದು ಆ ಹಾಡು ಸಾರಿ ಹೇಳುತ್ತಿದೆ.

ವಿರೋಧಾಭಾಸಗಳು ಮತ್ತು ವಿರೋಧಗಳು ಒಂದರ ಮೇಲೊಂದು ರಾಶಿಗೂಡುತ್ತವೆ. ಸಾಮಾನ್ಯವಾದವುಗಳು ನಮ್ಮ ಕವಿಗಳು ಮತ್ತು ಸಹೃದಯರನ್ನು ಆಕರ್ಷಿಸುವುದು ಎಂದೂ ನಿಂತಿಲ್ಲ. ಯಾವತ್ತೂ ಕೊನೆಗೊಂಡಿಲ್ಲ. ಇಷ್ಟಾದರೂ ಆಗೊಮ್ಮೆ ಈಗೊಮ್ಮೆ ಆ ಸಂಯೋಜಿತ ಭಾವದಲ್ಲಿ ಒಂದು ಜೀವಂತ ಪ್ರತಿಮೆ ಅಥವಾ ವ್ಯಂಗ್ಯೋಕ್ತಿ ನಿಮ್ಮನ್ನು ಹಿಡಿದಿರಿಸುತ್ತದೆ. ಹಾಗೂ ಯಾರದೇ ದೋಷೈಕ ದೃಷ್ಟಿಯ ಪ್ರಶಾಂತ ಮನೋನಿಶ್ಚಯಗಳನ್ನು ಕಲಕಿ ಬಿಡುತ್ತದೆ. ಹಾಡು ಮತ್ತು ನೃತ್ಯಗಳು ಅಸಾಧಾರಣ ಮಟ್ಟದವಲ್ಲದಿರಬಹುದು, ಆದರೆ ಅವು ಅತ್ಯಂತ ಕನಿಷ್ಠವಾದದ್ದನ್ನು ಹೇಳುವಷ್ಟು ಸಂಪನ್ನಗೊಂಡಿವೆ. ರಾಜೇಂದ್ರ ಮತ್ತು ನನ್ನ ಮಾವ ಲಕ್ಷ್ಮಣ ಸಿಂಹಜೀಯವರ ಮನೆಯಲ್ಲಿ ಕಳೆದ ಆ ರಾತ್ರಿ ನನಗೆ ನೆನಪಾಗುತ್ತಿದೆ. ಖಂಡಿತವಾಗಿಯೂ ಈ ಯಕ್ಷಿಯರು ಅಥವಾ ದುಬಾರಿಯಾಗಿ ಅಲಂಕೃತರಾದ ಈ ಪರದೇಶಿಗಳು ಸಜನೀ ಬಾಯಿ ಮತ್ತೆ ಮತ್ತೆ ಅದ್ಭುತವಾಗಿ ಅಂತರ್ನಿರೀಕ್ಷಣೆ ಮಾಡಿಕೊಂಡ ಹಾಗೆ ಮಾಡಿಕೊಳ್ಳಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಈ ಸೋದರಿಯರು ಬಹಳ ಸೂಕ್ಷ್ಮ ಗ್ರಾಹಕಗಳನ್ನು ಹೊಂದಿದ್ದಾರೆ. ಸದಾ ವೇಗವಾಗಿ ಓಡುತ್ತಿರುವ ಕಾಲದ ಅವಧಿಯನ್ನು ನನ್ನ ಗಮನಕ್ಕೆ ಬರುವ ಹಾಗೆ ಹಿಡಿದಿರಿಸುವರು.

"ನಮ್ಮ ಸಂಗೀತ ತಮಗೆ ತೃಪ್ತಿಯಾಗಲಿಲ್ಲವೆ ಮಹಾಸ್ವಾಮಿ"

"ತುಂಬ ತುಂಬ ತೃಪ್ತಿಯಾಯಿತು".

ಅವರು ನನ್ನ ಮಾತನ್ನು ನಂಬಲಿಲ್ಲ.

"ರಾಜಕುಮಾರ ಬಹದ್ದೂರ್ ನಮ್ಮೊಂದಿಗೆ ಆಡಿದ ಕಾಮದ ಆಟಗಳನ್ನು ಆಡೋಣವೆ?"

ರಾಜಕುಮಾರನ ಬಗ್ಗೆ ಯೋಚನೆ ಮಾಡಿಯೇ ಬಹಳ ಕಾಲವಾಯಿತು. ಎಲ್ಲಿದ್ದಾನವನು? ದೆಹಲಿಯಲ್ಲಿ ತಾನೇ ತಲೆ ಮರೆಸಿಕೊಂಡಿದ್ದಾನೋ ಅಥವ ವಾಪಸ್ ತಂದೆಯವರಲ್ಲಿಗೆ ಹಿಂತಿರುಗಿದ್ದಾನೋ ಅಥವಾ ಮಾಳ್ವದ ಸುಲ್ತಾನನಲ್ಲಿ ಆಶ್ರಯ ಪಡೆದಿದ್ದಾನೋ? ನೆನಪುಗಳನ್ನು ಚಿಮ್ಮಿಸುವಲ್ಲಿ ಕಾಲವು ವಿಲಕ್ಷಣವಾದ ಪಾತ್ರವನ್ನು ವಹಿಸುತ್ತದೆ. ಸ್ಪಷ್ಟವಾದ ಮತ್ತು ಖಚಿತವಾದ ಸಾಲುಗಳು ಮತ್ತು ಸಂಗತಿಗಳು ಕೆಲವೊಮ್ಮೆ ಹಿಂದೆ ಸರಿದು, ಕತ್ತಲೆ ತುಂಬಿದ ಗುಪ್ತಸ್ಥಾನಗಳು ಮುನ್ನೆಲೆಗೆ ಬರುತ್ತವೆ ಅಥವಾ ಸ್ಪಷ್ಟ ಅರ್ಥವನ್ನು ಪಡೆದುಕೊಳ್ಳುತ್ತವೆ ಬಹುಶಃ ಕಾಲವೊಂದು ಎಂದೂ ಪುನರಾವರ್ತನೆಯಾಗದ ವಿವಿಧ ಬಣ್ಣಗಳ ಚಿತ್ರದರ್ಶಕ. ಬಹದ್ದೂರ್‌ನನ್ನು ನಾನೀಗ ನೆನೆಸಿಕೊಳ್ಳುವುದು ನನಗಿದ್ದ ಕೆಲವೇ ಸ್ನೇಹಿತರಲ್ಲಿ ಅವನೊಬ್ಬ ಎಂದು. ಬದುಕು ಮತ್ತು ಸಾವುಗಳೆರಡರಿಂದಲೂ ನಾವು ಬದ್ಧರಾಗಿದ್ದೆವು. ಆದರೆ ಅದಕ್ಕಿಂತಲೂ ಹೆಚ್ಚಿನದಿತ್ತು.

“ತಾವು ನಮ್ಮಿಬ್ಬರನ್ನೂ ಒಬ್ಬರಾದ ಮೇಲೊಬ್ಬರಂತೆ ಕರೆದುಕೊಳ್ಳುವಿರಾ? ನಾವು ನಿಮ್ಮನ್ನು ಪರಾಕಾಷ್ಠೆಗೆ ಒಯ್ಯುತ್ತೇವೆ. ಅದು ಸಹಿಸಲಸಾಧ್ಯವೂ ತೀಕ್ಷ್ಣವೂ ಆಗಿರುತ್ತದಾದರೂ ನೀವು ತುತ್ತತುದಿಗೆ ಬರದಂತೆ ಖಾತರಿಪಡಿಸಿಕೊಳ್ಳುತ್ತೇವೆ.”

ಒಂದೊಂದು ಸಲ ಅವನನ್ನು ನನ್ನ ರಕ್ತ ಸಂಬಂಧಿ ಎಂದು ಭಾವಿಸುತ್ತೇನೆ. ಸೈನಿಕ ಕಾರ್ಯಾಚರಣೆಯ ಸಂದರ್ಭದಲ್ಲಿ ಅನೇಕ ವೇಳೆ ನಾನು ಅವನೊಂದಿಗೆ ಮಾತಿಗೆ ತೊಡಗಿಕೊಂಡಿದ್ದೇನೆ. ಅವನು ಕೇವಲ ಶತ್ರುವಲ್ಲ. ಬೇರೆಯವರಂತಲ್ಲದೆ ಆತನು, ವಿಷಯಗಳನ್ನು ಕೂಲಂಕಷವಾಗಿ ಆಲೋಚಿಸಿದ ನಂತರವೇ ತಾನೊಂದು ದೃಷ್ಟಿ ಕೋನಕ್ಕೆ ತಲುಪಿರುವುದಾಗಿ ಹೇಳುತ್ತಿದ್ದನು. ರಾಜ್ಯವನ್ನು ಕುರಿತಂತೆ, ರಾಜ್ಯಕ್ಕೆ ಸಂಬಂಧಿಸಿದಂತೆ ಅವನದ್ದೇ ಅದೊಂದು ದೃಷ್ಟಿ ಇತ್ತು. ಈಗಿನದು ತನ್ನ ಗುರಿಯನ್ನು ಸಾಧಿಸುವ ದಿಸೆಯಲ್ಲಿ ಆ ಕ್ಷಣದಲ್ಲಿ ಹೊಳೆದದ್ದು. ಅವನದು ಸಂಕುಚಿತ ದೃಷ್ಟಿ ಇರಬಹುದು. ಅವಿಚಾರಿತ ಅಭಿಮಾನಿ ಇರಬಹುದು, ಆದರೆ ಅವನಲ್ಲಿ ಬೆಳೆಯಲು ಬೇಕಾದ ಹಾಗೂ ಹೊಂದಾಣಿಕೆಗೆ ಅಗತ್ಯವಿರುವ ಅಂತಃಸತ್ವವಿತ್ತು.

“ನೀವು ನಮ್ಮನ್ನು ಕಟ್ಟಬಹುದು. ನಮ್ಮ ಬಳಿ ಚಾಟಿ ಇದೆ. ಕಟ್ಟುವುದಿಲ್ಲವೆ?”

ಸುಲ್ತಾನ್ ಮುಜಫರ್‌ಷಾನ ಅವಕೃಪೆಗೆ ಒಳಗಾಗಿದ್ದರೂ, ಒಂದು ದಿನ ಅವನು ಗುಜರಾತಿನ ಸಿಂಹಾಸನವನ್ನೇರುತ್ತಾನೆಂಬ ಬಗ್ಗೆ ನನಗೆ ಸಂಶಯವಿರಲಿಲ್ಲ. ಆ ಹೊತ್ತಿಗೆ ನಾನು ಮೇವಾಡದ ಮಹಾರಾಣಾ ಆಗಿದ್ದರೆ ನಮ್ಮೆರಡೂ ರಾಜ್ಯಗಳ ಮಧ್ಯೆ ಶಾಂತಿ ನೆಲಸಿರುವುದೆ? ನನಗೆ ಆ ಬಗ್ಗೆ ಸಂದೇಹ. ಮಾಳ್ವ ದೇಶವು ನಮ್ಮ ಗಡಿಗಳ ಆಗ್ನೇಯದ ಕಡೆಗಿತ್ತು. ಮತ್ತು ಅದರ ದೊರೆ ಎರಡನೇ ಮಹಮ್ಮದ್ ಖಾಲ್ಜಿಯು ತೀರಾ ಎಡ್ಡಾ ಬಿಡ್ಡಿಯೂ, ದುರ್ಬಲನೂ ಆದ ವ್ಯಕ್ತಿ. ಬಹದ್ದೂರ್ ಖಂಡಿತವಾಗಿಯೂ ಸ್ವಾಧೀನಪಡಿಸಿಕೊಳ್ಳುವನು. ಮಧ್ಯದಲ್ಲಿ ನಾವಿರುತ್ತೇವೆ ನಮ್ಮ ರಾಜ್ಯಕ್ಕೆ ಹೋಲಿಸಿದರೆ ಗುಜರಾತ್ ಒಂದು ಕಿರಿಯರಾಜ್ಯ. ನಮ್ಮ ಮೇಲೆ ಯುದ್ಧಕ್ಕೆ ಬರುತ್ತಾನೆ. ಕಡೇ ಪಕ್ಷ ಅವನು ನಾವು ಹೋರಾಟ ಮಾಡಲರ್ಹನಾದವನು. ಅವನ ವಿರುದ್ಧ ಗೆರಿಲ್ಲಾ ಯುದ್ಧ ತಂತ್ರವು ವಿಫಲವಾಗುತ್ತದೆ. ಅವನೂ ನನ್ನ ಹಾಗೆಯೇ ತನ್ನ ಶತ್ರುಗಳನ್ನೂ ಮಿತ್ರರನ್ನೂ ಅಧ್ಯಯನ ಮಾಡುತ್ತಿದ್ದ. ಅವನು ಕುತೂಹಲಿ. ಅಲ್ಲದೆ ತನ್ನ ಹಿಂದಿನ ಸೋಲುಗಳು ಮತ್ತು ತಪ್ಪುಗಳನ್ನು ಮರೆಯುತ್ತಿರಲಿಲ್ಲ.

“ಅವನು ಸುಡುವ ಕೆಂಡವನ್ನು ನನ್ನ ತೊಡೆಗೆ ಇಟ್ಟನು ಮತ್ತು ದಿನ್‌ಳ ತೋಳನ್ನು ಅವಳು ಪ್ರಜ್ಞಾಹೀನಳಾಗುವವರೆಗೂ ತಿರುಚಿದನು” ತರುಣಿಯರು ತೀರ ಅಪರೂಪದ ಸುಖದ ಸಂದರ್ಭಗಳನ್ನು ನನ್ನ ಕಲ್ಪನಾಲೋಕದ ತನ್ಮಯತೆಯಲ್ಲಿ ನಿರೂಪಿಸುತ್ತಿದ್ದರು. “ಅದು ನಿಮಗೆ ಇಷ್ಟವಾಗುತ್ತದೆಯೆ?” ನಾನು ಅವರನ್ನು ಕಳೆದುಕೊಂಡು ಬಿಟ್ಟಿದ್ದೆ. ಯಾವುದೋ ಒಂದು ಘಟ್ಟದಲ್ಲಿ ಅವರು ವಿಕ್ರಮಾದಿತ್ಯನ ವಿಷಯಕ್ಕೆ ತಿರುಗಿದರೆಂಬುದು ನನ್ನ ನೆನಪು. ಅವರು ಯಾತನೆಯನ್ನು ಬಯಸುತ್ತಿದ್ದರೆ ಅಥವಾ ಅವರ ಕಸುಬಿನೊಂದಿಗೇ ಅದು ಬಂದು ಬಿಡುತ್ತದೆಯೆ? ಅವರೊಂದು ವೇಳೆ ನನ್ನ ತಮ್ಮನ ಅಥವಾ ಬಹದ್ದೂರನ ತೋಳುಗಳನ್ನು ಮುರಿದು ಹಾಕಿದ್ದರೆ ಅಥವ ಅವರ ಮರ್ಮಾಂಗಗಳನ್ನು ಸುಟ್ಟಿದ್ದರೆ ಮಾತ್ರ. ಅವರ ತಪ್ಪೇನು ಎಂದು ನನಗೆ ಆಗ ತಿಳಿಯಿತು. ಅವರಿಗೆ ಸುಖ ನೀಡಬೇಕೆಂದರೆ, ಯಾರೇ ಆದರೂ ಅಪಾರ ತೊಂದರೆ ತೆಗೆದುಕೊಳ್ಳಲೇಬೇಕಾಗುತ್ತದೆಂಬುದು ಅವರಿಬ್ಬರಲ್ಲಿ ಯಾರಿಗೂ ತೋಚಿರಲೇ ಇಲ್ಲ. ಅಷ್ಟು ಹೊತ್ತಿಗೆ ಬಾಗಿಲು ತಟ್ಟಿದ ಶಬ್ದವಾಯಿತು.

"ನನ್ನನ್ನು ಕ್ಷಮಿಸಿ ಮಹಾಸ್ವಾಮಿ"

"ಒಳಗೆ ಬಾ"

ಕೌಸಲ್ಯ ತೀರ ಮೆಲ್ಲಗೆ ಬಾಗಿಲು ತೆರೆದಳು. ಅವಳು ನನ್ನ ಕಡೆಗೆ ಬೆನ್ನು ಮಾಡಿಕೊಂಡಿದ್ದಳೆಂದು ನನಗೆ ತಿಳಿದಿತ್ತು.

"ದಯವಿಟ್ಟು ಈ ಯುವತಿಯರನ್ನು ಕಳಿಸಿಕೊಡುವಿರಾ"

ನಾನು ಏನು, ಏಕೆ, ಎಲ್ಲಿಗೆ ಎಂದು ಕೇಳಲಿಲ್ಲ.

ಕೌಸಲ್ಯ ಇನ್ನೊಬ್ಬರ ಖಾಸಗಿ ಸಂದರ್ಭಗಳಲ್ಲಿ ತಲೆತೂರಿಸುವಂಥವಳಲ್ಲ.

"ಅವರಿಗಿನ್ನೆಷ್ಟು ಸಮಯವಿದೆ?"

"ಹೆಚ್ಚೆಂದರೆ ಒಂದೂವರೆ ನಿಮಿಷ ಅಷ್ಟೆ"

ಅವರು ಅಲ್ಲಿಂದ ಹೊರಡಲು ನನ್ನನ್ನು ಕೋರಲು ಇಲ್ಲವೆ ಆದೇಶಕ್ಕಾಗಿ ಕಾಯುವುದಾಗಲಿ ಮಾಡಲಿಲ್ಲ. ಗಿರಾಕಿಯ ಸಂತೃಪ್ತಿಯೊಂದೇ ಅಲ್ಲಿ ಪ್ರಧಾನವಾದ್ದು. ರಾತ್, ಬಹುಶಃ ಅದು ದಿನ್ನೇ ಆಗಿರಬಹುದು, ತನ್ನ ಮೊಲೆಗಳನ್ನು ರವಿಕೆಯೊಳಗೆ ಎಸೆದುಕೊಂಡು ಅವುಗಳನ್ನು ಆ ರಾತ್ರಿಗೆ ಭದ್ರ ಪಡಿಸಿಕೊಂಡಳು. ಅವಳ ಸೋದರಿ ರವಿಕೆಯ ದಾರಗಳನ್ನು ಕಟ್ಟಿದಳು. ತಾವು ತಂದಿದ್ದ ಸಂಗೀತದ ವಾದ್ಯಗಳನ್ನು ಕೊಠಡಿಯ ಮೂಲೆಯಲ್ಲಿರಿಸಲು ಪ್ರಯತ್ನಿಸಿದರು. "ಅವನ್ನಲ್ಲೇ ಬಿಡಿ. ನಿಮ್ಮಿಬ್ಬರ ಕ್ಷಮೆಕೋರುತ್ತೇನೆ. ಬಹುಶಃ ಇನ್ನಾವಾಗಲಾದರೂ ನೋಡೋಣ. ನಿಮಗೆ ನಿಮ್ಮ ಹಣ ಪೂರ್ತಿಸಿಗುತ್ತೆ."

ಅವರಿಬ್ಬರೂ ತಲೆ ಬಾಗಿ ನಮಿಸಿದರು. ಬಾಗಿಲ ಕಡೆಗೆ ಬೆನ್ನು ಮಾಡಿಕೊಂಡು ಹಿಂದಕ್ಕೆ ಹೆಜ್ಜೆ ಇಡುತ್ತಾ ಸಾಗಿದರು. ಕೌಸಲ್ಯ ಸರಿಯಾದ ಸಮಯಕ್ಕೆ ಪಕ್ಕಕ್ಕೆ ಎಳೆದುಕೊಂಡು, ತನ್ನ ಕೊಠಡಿಗೆ ಕರೆದೊಯ್ದಳು. ತಲೆತುಂಬಾ ಮುಸುಕು ಹಾಕಿದ ವ್ಯಕ್ತಿಯೊಬ್ಬ ನಾಲ್ಕು ಜನ ಅಂಗರಕ್ಷಕರೊಡನೆ ಒಳಗೆ ಬಂದನು. ಅದು ತಂದೆಯವರು.

ಮಹಾಪ್ರಭುಗಳು ವೇಷ ಮರೆಸಿಕೊಳ್ಳಲು ಯತ್ನಿಸುವುದೆಂದರೆ ಆನೆ ಛದ್ಮ ವೇಷಧಾರಿಯಾಗಿ ಓಡಾಡಲು ಯತ್ನಿಸಿದಂತೆ. ಅವರು ಕುಂಟುತ್ತ ಕಾಲು ಎಳೆದು ಹಾಕುವುದನ್ನು ಹಾಗೂ ಅವರ ಅಧಿಕಾರಯುತ ರೀತಿಯನ್ನು ಯಾರು ತಾನೆ ಪ್ರಭುಗಳಲ್ಲ ಬೇರೆ ವ್ಯಕ್ತಿ ಎಂದು ತಪ್ಪು ತಿಳಿಯಲು ಸಾಧ್ಯ?

"ನೀವು ಹೊರಡಿ"

ಅಂಗರಕ್ಷಕರು ಅಲ್ಲಿಂದ ಹೊರಟರು. ತಂದೆಯವರು ನನ್ನ ಪಕ್ಕಕ್ಕೊಂದು ಪೀಠವನ್ನೆಳೆದುಕೊಂಡು ಕುಳಿತರು. ನಾನು ಅವರ ಪಾದಗಳನ್ನು ಸ್ಪರ್ಶಿಸಲು ಪಕ್ಕಕ್ಕೆ ಹೊರಳಿದೆ. ಅವರು ತಮ್ಮ ಕುಂಟು ಕಾಲನ್ನು ಮೇಲಕ್ಕೆ ಎತ್ತಿಟ್ಟು ನನ್ನ ಕೈ ಅದನ್ನು ಸ್ಪರ್ಶಿಸಲು ಅನುವು ಮಾಡಿಕೊಟ್ಟು ಮತ್ತೆ ಕೆಳಕ್ಕೆ ಬಿಟ್ಟರು.

"ಏಕಲಿಂಗಜೀಯ ಕೃಪಾಶೀರ್ವಾದ ನಿನ್ನ ಮೇಲಿರಲಿ" ಅವರು ಸುತ್ತ ಒಮ್ಮೆ ಕಣ್ಣುಹಾಯಿಸಿದರು. ಕೊಠಡಿಯ ಗಾಳಿಯನ್ನೊಮ್ಮೆ ಎಳದುಕೊಂಡು ಆಘ್ರಾಣಿಸಿದರು. "ಯಾರೋ ಸಂಗಾತಿಯ ಜೊತೆಗಿದ್ದೆ ಅನ್ನಿಸುತ್ತೆ. ದೈಹಿಕ ಸುಖವನ್ನನುಭವಿಸಲಾರದಷ್ಟು ನಿನಗೆ ದೈಹಿಕ ದೌರ್ಬಲ್ಯ ಆಗಿಲ್ಲ ಎಂದು ತಿಳಿದು ನನ್ನ ಮನಸ್ಸಿಗೀಗ ನಿರಾಳವಾಗಿದೆ." ತಂದೆಯವರ ಕಣ್ಣಿಂದ ಯಾವುದೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರು ತಮ್ಮ ಅಣ್ಣ ತಮ್ಮಂದಿರಿಗಿಂತ ಹೆಚ್ಚು ಕಾಲ ಜೀವಿಸಿರುವುದೇನೂ ಆಶ್ಚರ್ಯವಲ್ಲ. "ಕಾಲು ಹೇಗಿದೆ?"

"ಸುಧಾರಿಸುತ್ತಾ ಇದೆ, ತುಂಬಾ ಧನ್ಯವಾದಗಳು"

"ಕೈಗಳು, ತೋಳುಗಳ ಸರದಿ ಆಮೇಲೇನು? ಅಥವಾ ನಿನ್ನ ಕುತ್ತಿಗೆ ಮೊದಲು ಮುರಿದುಕೊಳ್ಳಬೇಕು ಅಂತ ಯೋಚನೆ ಮಾಡಿದ್ದೀಯಾ?" ಅವರು ಮುಗುಳ್ನಕ್ಕರು. ನಾನು ಅವರ ನಗುವಿನಲ್ಲಾಗಲಿ, ಚತುರೋಕ್ತಿಯಲ್ಲಾಗಲಿ ಪಾಲ್ಗೊಳ್ಳುತ್ತಿರಲಿಲ್ಲ ಎಂದು ಅವರಿಗೆ ಗೊತ್ತಿತ್ತು.

"ಮಹಾಪ್ರಭುಗಳು ಈ ಮಧ್ಯರಾತ್ರಿ ಒಂದು ಗಂಟೆಯ ಹೊತ್ತಿನಲ್ಲಿ ನನ್ನನ್ನು ತಮಾಷೆ ಮಾಡಕ್ಕೆ ಬಂದಿಲ್ಲ"

"ನಿನ್ನ ಆರೋಗ್ಯವನ್ನು ವಿಚಾರಿಸಲು ಬಂದಿದ್ದೇನೆ. ನೀನು ನನ್ನ ಮಗ, ವಾಸ್ತವವಾಗಿ ಹಿರಿಯಮಗ." "ಒಂದು ಕ್ಷಣವೂ ನಾನದನ್ನು ಯಾವತ್ತೂ ಮರೆತಿಲ್ಲ"

ಅವರ ಮುಖ ಮ್ಲಾನವಾಯಿತು ಮತ್ತು ಇರಿಸು ಮುರಿಸಾದಂತೆ ಕಂಡರು. ಬಹುಶಃ ಪ್ರಾರಂಭದ ಕೆಲವು ಸುತ್ತು ಬಳಸು ಮಾತುಗಳ ನಂತರ, ಅವರು ತಮ್ಮ ಭೇಟಿಯ ವಿಷಯಕ್ಕೆ ಬರಬೇಕು ಅನ್ನುವುದು ಅವರ ಬಯಕೆಯಾಗಿತ್ತು ಅನ್ನಿಸುತ್ತದೆ. ಲಘು ಹಾಸ್ಯದ ಎಲ್ಲ ಸಾಧ್ಯತೆಗಳಿಗೆ ನಾನು ಮುಕ್ತಾಯ ಹಾಡಿದೆನೆನಿಸುತ್ತದೆ.

"ನಮ್ಮ ರಾಜ್ಯದಲ್ಲಿ ಯಾರೂ ಕೂಡ ಅದನ್ನು ಮರೆತಿಲ್ಲ ಅನ್ನಿಸುತ್ತೆ. ಅವರು ನಿನ್ನ ಸ್ಥಾನ ಮತ್ತು ಪದವಿಗಳನ್ನು ಕಿತ್ತು ಹಾಕಬೇಕೆಂದು ಮತ್ತು ಜೀವಮಾನವಿಡೀ ಸೆರೆಮನೆಗೆ ದೂಡಬೇಕೆಂದು ಕೇಳುತ್ತಿದ್ದಾರೆ"

"ತಾವು ನಮ್ಮ ಸಾಕ್ಷಾತ್ ಅಧಿದೈವ ಏಕಲಿಂಗಜೀಯ ರಾಜಪ್ರತಿನಿಧಿ, ಮೇವಾಡದ ದೈವದತ್ತ ಮಹಾಪ್ರಭುಗಳು. ನಮ್ಮ ಸಾಮ್ರಾಜ್ಯದಲ್ಲಿ ತಮ್ಮದೇ ಅತ್ಯುನ್ನತ ಅಧಿಕಾರವಾಗಿರುವಾಗ ಬೇರೆಯಾರ ಅಭಿಪ್ರಾಯ ತಾನೆ ಅಸ್ತಿತ್ವದಲ್ಲಿರಲು ಸಾಧ್ಯ?"

"ಅದು ಪ್ರಶ್ನಾತೀತವೆಂಬುದೇನೋ ಸರಿಯೆ ಮಗು. ಆದರೆ ಪರಮಾಧಿಕಾರಕ್ಕಿರುವ ಕೀಲಿಕೈ ಎಂದರೆ ಯಾವತ್ತೂ ಸಂದಿಗ್ಧ ಸಂಗತಿಯನ್ನು ಬಿಕ್ಕಟ್ಟಿಗೆ ಕೊಂಡೊಯ್ಯದಿರುವುದು. ಅದನ್ನು ಪರೀಕ್ಷೆಗೊಡ್ಡಿದ್ದರೆ ಆರ್ಥಿಕತೆ, ಸಾಂಸ್ಕೃತಿಕ ಅಂಶಗಳು, ಬರಗಾಲ, ಪ್ರವಾಹಗಳು, ಕ್ಷಾಮ, ವಿಧೇಯ ಅಥವಾ ಸಾಮಾನ್ಯಜನತೆ, ಜೋಡಿದಾರರು, ಪ್ರತಿಷ್ಠಿತ ಪುರೋಹಿತರು, ಜಮೀನುದಾರರು, ಕುಲೀನರು ಮುಂತಾದ ಅನಿರೀಕ್ಷಿತ ಸಂಗತಿಗಳು ನಿನ್ನ ವಿರುದ್ಧವಾಗಿ ಸಮತೋಲನವನ್ನು ಕೆಡಿಸಿಬಿಡಬಹುದು, ಬಹುಶಃ ನಿನ್ನನ್ನು ಉರುಳಿಸಲೂಬಹುದೆಂದು ಕಂಡುಕೊಳ್ಳುವೆ. ಇರುವ ವಿಚಾರವೆಂದರೆ ಪ್ರವಾಹದೊಂದಿಗೆ ಸಾಗುವುದು. ನೀನು ಒಳ ಹರಿವುಗಳನ್ನು ಸೃಷ್ಟಿಸಬಹುದು. ಮಾಮೂಲಿಯಾದ ಔಚಿತ್ಯಗಳನ್ನು ನೀನು ಕಾಪಾಡಿಕೊಂಡು ಬರುತ್ತಿರುವವರೆಗೂ ಕೆಲವೊಮ್ಮ ಪ್ರವಾಹದ ವಿರುದ್ಧ ಈಜಲೂಬಹುದು."

ಎಷ್ಟೊಂದು ಸೂಕ್ಷ್ಮವಾದ ತರ್ಕಬದ್ಧವಾದ ಮಾತುಗಳು ಹಾಗೂ ಎಂಥ ವ್ಯವಹಾರ ಚಾತುರ್ಯ. ರಾಜಾಸ್ಥಾನ ಮತ್ತು ಜನತೆ ನನ್ನನ್ನು ಬಂಧಿಸಬೇಕೆಂದು ಗದ್ದಲ ಮಾಡಿ ಒತ್ತಾಯ ಮಾಡುತ್ತಿದ್ದಾರೆ ಎನ್ನುವ ಅವರ ವಾದವೇನಿದ್ದರೂ ಬಲವಂತವಾಗಿ ಎಳೆದು ತಂದದ್ದು ಮತ್ತು ರಹಸ್ಯ ಉದ್ದೇಶದಿಂದ ಕೂಡಿದ್ದು. (ನಾನು ನಿಶ್ಶಕ್ತನಾಗಿ ಬೋರಲಾಗಿ ಮಲಗಿರಬಹುದು. ಆದರೆ ಕೌಸಲ್ಯ, ಮಂಗಳ್ ಹಾಗೂ ನನ್ನ ನೂತನ ಸಲಹೆಗಾರ್ತಿ ನನ್ನ ಹೆಂಡತಿ ಇವರಿಗೆಲ್ಲ ಅವರದ್ದೇ ಆದ ಜಾಲಗಳಿವೆ. ಅವು ಸಾರ್ವಜನಿಕ ಅಭಿಪ್ರಾಯದಲ್ಲೂ ತಂದೆಯವರ ವಂದಿಮಾಗಧರಿಂದ ಕೂಡಿದ ಆಪ್ತವಲಯಕ್ಕಿಂತ ಅತ್ಯಂತ ಹೆಚ್ಚು ಸೂಕ್ಷ್ಮವಾಗಿವೆ. ಅವರು ನನ್ನನ್ನು ಎಚ್ಚರಿಸುತ್ತಿದ್ದರು.)

ಒಂದು ವೇಳೆ ಈ ಸಂಗತಿಯನ್ನು ವೈಚಾರಿಕ ಉದ್ದೇಶದ ಚರ್ಚೆಗೆ ಬಿಟ್ಟುಕೊಟ್ಟರೂ, ಈ ಜನಾಭಿಪ್ರಾಯವೆಂಬ ಪ್ರವಾಹದ ದಿಕ್ಕನ್ನು ಸೃಷ್ಟಿಸಿದವರು ರಾಣಿ ಕರ್ಮವತಿ ಮತ್ತು ಆಕೆಯ ಪ್ರಿಯಪುತ್ರ ನನ್ನ ಸೋದರ ವಿಕ್ರಮಾದಿತ್ಯ ಎಂದು ಒಪ್ಪಿಕೊಳ್ಳುವ ಧೈರ್ಯ ಮತ್ತು ಮುಕ್ತ ಮನಸ್ಸಿದೆಯೆ?

"ಯಾವ ಆಪಾದನೆಗಳ ಮೇಲೆ ಅವರು ನನ್ನ ಮೇಲೆ ದೋಷಾರೋಪಮಾಡುತ್ತಿದ್ದಾರೆ?"

"ಸಿಂಹಾಸನದ ವಿರುದ್ಧ ಪಿತೂರಿ ಮತ್ತು ದ್ರೋಹ. ರಾಜ ಸಭೆಗೆ ಉದ್ದೇಶಪೂರ್ವಕವಾಗಿ ಅಗೌರವ ತೋರಿಸಿದ್ದು. ರಜಪೂತರ ಗೌರವ ಮತ್ತು ಕಾರ್ಯಗಳ ಅತ್ಯಂತ ಪವಿತ್ರ ಸಂಪ್ರದಾಯಗಳಿಗೆ ಅತ್ಯಂತ ಹೀನವಾಗಿ ಮತ್ತು ಅಪರಾಧಾತ್ಮಕ ರೀತಿಯಲ್ಲಿ ಪ್ರತಿಭಟನೆ ತೋರಿದ್ದು. ಸಮಾನಾಂತರ ಶಕ್ತಿ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ ನಮ್ಮ ಸೇನಾಪಡೆಗಳ ಕೆಳ ಹಂತದ ಅಧಿಕಾರಿಗಳನ್ನು ಮತ್ತು ಸೈನಿಕರನ್ನು ಪ್ರಚೋದಿಸಿದ್ದು. ಹೀಗೆ ಪಟ್ಟಿ ಮುಂದುವರಿಯುತ್ತದೆ"

"ಹಾಗಿದ್ದ ಮೇಲೆ ಮಹಾಪ್ರಭುಗಳು ಈ ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿ ಈ ಕೂಡಲೇ ಆರೋಪಿಯ ವಿರುದ್ಧ ವಿಚಾರಣಾ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು".

"ಅಯ್ಯಾ ರಾಜಕುಮಾರ" ಮಹಾರಾಜರು ತಮ್ಮ ದನಿಯನ್ನು ಏರಿಸಲಿಲ್ಲ. "ಸಾಮ್ರಾಜ್ಯದ ಆಡಳಿತ ವ್ಯವಹಾರವನ್ನು ಹೇಗೆ ನಡೆಸಬೇಕೆಂಬುದರ ಬಗ್ಗೆ ನನಗೆ ಬುದ್ಧಿ ಹೇಳುವ ಧಾರ್ಷ್ಟ್ಯ ತೋರಿಸಬೇಡ"

ಇದೇಕೆ ಈ ಮನುಷ್ಯನ ಮತ್ತು ನನ್ನ ಉದ್ದೇಶಗಳು ಪರಸ್ಪರ ವಿರುದ್ಧವಾಗಿವೆ? ಅವರು ನನ್ನ ತೇಜೋವಧೆ ಮಾಡಿದರೂ ನಾನು ಅವರ ವೈಭವಯುತವಾದ ಪ್ರಭುತ್ವದ ದರ್ಪವನ್ನು ಮತ್ತು ಅವರ ರಾಜ್ಯಾಧಿಕಾರದ ಗೌರವ ಪ್ರಜ್ಞೆಯನ್ನು ಗೌರವಿಸಿದ್ದೆ. ಮುಕ್ತತೆ ಅಥವಾ ತೆರೆದ ಮನಸ್ಸಿನ ಆತ್ಮೀಯವಾದ ಸಲ್ಲಾಪ ಎಂಬುದು ತಂದೆಯವರ ಸ್ವಭಾವಕ್ಕೆ ಹೊರತಾದ್ದು. ನನಗೂ ಅವು ಹೊರತಾದವೇ. ಇನ್ನೊಂದು ರೀತಿಯಲ್ಲಿ ನೋಡಿದರೆ, ನಾನು ಅಂದಾಜಿಸಿದ ಪ್ರಕಾರ ಅಪಾಯವನ್ನು ಮೈಮೇಲೆ ಎಳೆದುಕೊಳ್ಳಬಹುದು ಹಾಗೂ ಮನಃಪೂರ್ವಕವಾಗಿ ಅವರ ಕೃಪೆಗೆ ಒಪ್ಪಿಸಿಕೊಳ್ಳಬಹುದು.

ಆದರೆ ತಂದೆಯವರು ಅತ್ಯಂತ ಎಚ್ಚರಿಕೆಯಿಂದ ಒಡ್ಡಿರುವ ಬಲೆಗೆ ಬೀಳುವ ಉದ್ದೇಶ ನನಗಿರಲಿಲ್ಲ. ಯಾರನ್ನಾದರೂ ಮುಖಾಮುಖಿಯಾಗಿ ಎದುರಿಸುವ ಮುನ್ನ ಅವರು ತನ್ನ ಕಾರ್ಯ ತಂತ್ರವನ್ನು ಮುಂಚೆಯೇ ಸಿದ್ಧಪಡಿಸಿಕೊಂಡಿರುತ್ತಾರೆ. ಹಾಗಾಗಿ ನಾನು ಅವರನ್ನು ಯಾಮಾರಿಸಬಹುದೆಂಬುದನ್ನು ನಿಜಕ್ಕೂ ಮುಂಚೆಯೆ ಲೆಕ್ಕ ಹಾಕಿರುತ್ತಾರೆ. ಈಗ ನನಗೆ ಬಾಯಿ ಮುಚ್ಚಿಕೊಳ್ಳಲು ಹೇಳಿದ ಮೇಲೆ ಮುಂದಿನ ಮಾತಿನ ನಡೆ ಅವರದ್ದೇ ಆಗಿರಬೇಕು. ಅವರ ಕುರುಡುಗಣ್ಣು ನನ್ನನ್ನು ತದೇಕ ದೃಷ್ಟಿಯಿಂದ ಗಮನಿಸಿತು. ಬಹುಶಃ ಇನ್ನೆಂದೂ ಅವರು ನನ್ನೊಂದಿಗೆ ಮಾತನಾಡುವುದಿಲ್ಲ. ಬಹುಶಃ ಅವರು ಹೊರಡುತ್ತಾರೆ. ಅತ್ಯಂತ ಅಪರೂಪದ ಸಂದರ್ಭಗಳಿಗಾಗಿ ಕಾಯ್ದಿಟ್ಟಿದ್ದೇನೋ ಒಂದನ್ನು ಮಾಡುವುದನ್ನು ನೋಡಿದೆ. ಅದು ಅವರ ಬತ್ತಳಿಕೆಯಲ್ಲಿನ ಅತ್ಯಂತ ದಿಗ್ಭ್ರಮೆಗೊಳಿಸುವ ಮತ್ತು ಪರಿಣಾಮಕಾರಿಯಾದೊಂದು ತಂತ್ರ, ನನ್ನ ವಿಷಯಕ್ಕೆ ದಾಕ್ಷಿಣ್ಯಪರರೆಂಬ ರೀತಿಯಲ್ಲಿ ಅವರು ತಮ್ಮ ಕುರುಡುಗಣ್ಣಿನ ಕುಳಿಯೊಳಕ್ಕೆ ತಮ್ಮ ತೋರು ಬೆರಳನ್ನು ತೂರಿಸಿಕೊಂಡು, ಅದರೊಳಗೆ ತಮಗೆ ಬೇಕಾದುದಕ್ಕಾಗಿ ತಡಕಾಡಿದರು. ನಾನು ನಿರ್ವಿಕಾರ ಮುಖಭಾವದಿಂದಿರಲು ಪ್ರಯತ್ನಿಸಿದೆ. ನಾನು ತೀರಾ ಕೆಟ್ಟದಾಗೇನು ಮಾಡಿರಲಿಲ್ಲ.

ಆದರೆ ನಾನು ಕಿರಿಚಾಟ ಅಥವಾ ಬೊಬ್ಬೆ ಕೂಡ ಹಾಕಿರಬಹುದು. ಅವರು ನನ್ನ ಮೇಲೆ ತಾವು ಉಂಟುಮಾಡಿದ ಪ್ರಭಾವವನ್ನು ಸವಿಯುತ್ತಿದ್ದರು. ಅವರ ಈ ಹೊಸ ಉಪಾಯದ ಸಂಶೋಧನೆಯನ್ನು ತಪ್ಪಿಸಲು ನಾನು ನನ್ನ ಕಣ್ಣುಗಳನ್ನು ಕಿತ್ತು ಎಸೆಯಲು ಬಯಸಿದ್ದೇನೆಂದು ತಿಳಿದರು.

"ನನ್ನ ಹತ್ತಿರ ಒಂದು ಪತ್ರ ಇದೆ. ಅದಕ್ಕೆ ನೀನು ರುಜು ಮಾಡಿದರೆ, ದ್ರೋಹದ, ಅಥವಾ ಯಾರಿಂದಲೇ ಆಗಲಿ ಅಗೌರವ ಇತ್ಯಾದಿ ಮಾತೇ ಇರಲ್ಲ. ನಿನ್ನ ಎಲ್ಲ ಅಧಿಕಾರಗಳನ್ನು ನಿನಗೆ ಹಿಂತಿರುಗಿಸಲಾಗುವುದು. ನೀನು ಮತ್ತೆ ಯುದ್ಧ ಸಮಿತಿಗೆ ವಾಪಸ್ ಬರ್ತೀಯಾ ಮತ್ತು ಈ ನಮ್ಮ ದೇಶದ ಕ್ಷೇಮ ಮತ್ತು ಸುಭದ್ರತೆಯ ದೃಷ್ಟಿಯಿಂದ ಬಹಳ ಮುಖ್ಯವಾದ ಎಲ್ಲ ಯೋಜನೆಗಳಿಗೂ ನೀನು ಮಾರ್ಗದರ್ಶನ ಮಾಡುವೆ."

"ಅಪ್ಪಾಜಿ ನಾನು ಆ ದಾಖಲೆಯನ್ನು ನೋಡಬಹುದೆ?"

"ಖಂಡಿತವಾಗಿಯೂ, ಓದದೆ ಯಾವುದಕ್ಕೂ ನೀನು ರುಜು ಮಾಡಕೂಡದು ಅಂತ ನಾನು ಯಾವಾಗಲೂ ಹೇಳ್ತಾ ಇರಲಿಲ್ಲವೆ?"

ಅವರು ಪತ್ರ ಕೊಟ್ಟರು. ಅದರಲ್ಲಿ ನಾನು ಮಹಾರಾಜ್‌ಕುಮಾರ್ ಎನ್ನುವ ನನ್ನ ಮನ್ನಣೆಯನ್ನು ಮತ್ತು ಸಿಂಹಾಸನದ ಹಕ್ಕುಗಳನ್ನು ತ್ಯಜಿಸುತ್ತೇನೆ ಎಂದು ಹೇಳಲಾಗಿತ್ತು.

"ನನ್ನನ್ನು ನಂಬು ಮಗು ಅದು ಕೇವಲ ಒಂದು ಔಪಚಾರಿಕತೆ ಅಷ್ಟೆ. ಜನರ ನೆನಪು ತುಂಬ ಕ್ಷೀಣವಾದ್ದು. ಕಾಲಾಂತರದಲ್ಲಿ ಇದೆಲ್ಲ ಗೊಂದಲ ಗೋಜಲನ್ನು ಅವರು ಮರೆತು ಬಿಡುತ್ತಾರೆ. ಆಮೇಲೆ ನಾವು ಈ ಪತ್ರ ಹರಿದು ಹಾಕಬಹುದು?"

ಅದೊಂದು ವಿಚಿತ್ರ, ನನ್ನನ್ನು ತೀವ್ರವಾಗಿ ಪ್ರಲೋಭನೆಗೊಳಿಸಲಾಗಿತ್ತು. ಅವರು ಎಲ್ಲ ಬಗೆಯ ಕೃತಕವಾದ ಮಾತುಗಳನ್ನು ಬಳಸಿದ್ದರು. ಅವೆಲ್ಲವುಗಳ ಮೇಲೆ ಅಪಾಯ ಎಂದು ಬರೆಯಲಾಗಿತ್ತು. ಇಷ್ಟಾದರೂ ನಾನು ಅವರನ್ನು ನಂಬಿದೆ.

"ಒಂದು ವೇಳೆ ತಾತ, ನಿಮ್ಮ ತಮ್ಮಂದಿರಾದ, ಪೃಥ್ವಿರಾಜ್ ಚಿಕ್ಕಪ್ಪ ಜೈಮಲ್ ಚಿಕ್ಕಪ್ಪನವರ ಪರವಾಗಿ ನೀವು ಹಿಂದೆ ಸರಿಯಬೇಕೆಂದು ಸೂಚಿಸಿ ರುಜುಮಾಡಲು ಕೇಳಿದ್ದರೆ ನೀವು ಸಹಿ ಹಾಕುತ್ತಿದ್ದಿರಾ?"

"ಅದೊಂದು ತಾತ್ಕಾಲಿಕವಾದ ಕ್ರಮ. ಒಂದು ಸಣ್ಣ ಕೊಡುಗೆ ನನ್ನ ಮಾತು ಕೇಳು"

"ಆ ರೀತಿ ಅರ್ಥ ಬರುವ ಶಬ್ದಗಳಿಂದ ಕೂಡಿದ ಪತ್ರಕ್ಕೆ ನೀವು ಸಹಿ ಹಾಕುವಿರಾ?"

"ಅಹಂಕಾರ ತೋರಿಸಬೇಡ"

"ನೇರವಾಗಿ ಹೇಳ್ತೀನಿ. ನೀವು ಒಂದು ವೇಳೆ ಸಹಿ ಹಾಕಿದ್ದರೂ ನಾನು ಈ ಪತ್ರಕ್ಕೆ ರುಜುಹಾಕಲ್ಲ". ಅವರ ದನಿ ತಗ್ಗಿತ್ತು. ಆದರೆ ಅವರ ಸರಿಯಾಗಿದ್ದ ಕಣ್ಣಿನಲ್ಲಿ ಪ್ರತೀಕಾರದ ಬೆದರಿಕೆ ಇತ್ತು. "ಮಗನೆ ಇದು ನಿನ್ನ ಕೊನೆಯ ಅವಕಾಶ"

ಅವರು ನನಗೆ ಹೊಡೆಯಬಹುದು ಇಲ್ಲವೆ ತಮ್ಮ ಕತ್ತಿಯನ್ನು ನನ್ನತ್ತ ಬೀಸಬಹುದು ಎಂದು ಭಾವಿಸಿದೆ. ಅವರು ನಿಟ್ಟುಸಿರು ಬಿಟ್ಟು ಮೇಲೆದ್ದರು. ಕಣ್ಣುಗಳನ್ನು ಮುಚ್ಚಿಕೊಂಡು ನಿಂತರು. ಅದೆಂಥ ದೀರ್ಘ ರಾತ್ರಿಯಾಗಿತ್ತು! ಅದು ನನ್ನ ಸ್ವಾತಂತ್ರ್ಯದ ಕೊನೆಯ ರಾತ್ರಿಯೂ ಹೌದೆ? ಅವರ ಭುಜಗಳು ಕುಸಿದವು. ಹಾಗಾಗಿ ವಯಸ್ಸಾದವರಂತೆ ಕಂಡರು. ಬಾಗಿಲ ಬಳಿಗೆ ನಡೆದು ಹೋಗಿ ಬಾಗಿಲು ತೆಗೆದರು. ಅವರ ಅಂಗರಕ್ಷಕರು ಕರ್ತವ್ಯಮುಖರಾದರು. ಮತ್ತೆ ನನ್ನ ಬಳಿಗೆ ಬಂದರು. "ಏನಾಗಬೇಕೋ ಅದು ಆಗುತ್ತದೆ?

ಅವರು ನನ್ನ ಹಣೆಯನ್ನು ಮುಟ್ಟಿದರು. ನಿನ್ನ ದೇಹದ ಮುಂಭಾಗದಲ್ಲಿ ಏಳು ಕಡೆ ನಿನಗೆ ಗಾಯವಾಗಿದೆಯೆಂತೆ ನಿಜವೆ? ಹಾಗಾದರೂ ಅದರ ಬಗ್ಗೆ ರಾವ್ ವೀರಮ್‌ದೇವ್ ನನಗೆ ಬರೆದು ತಿಳಿಸುವುದು ಬೇಡ ಎಂದು ತಡೆದೆಯಂತೆ?

"ಸಣ್ಣ ಸೀಳು ಮತ್ತು ಕಚ್ಚು ಗಾಯಗಳು ಅಷ್ಟೇ ಮಹಾಪ್ರಭು"

"ಈಗ ನೀನು ನಿಮ್ಮ ತಂದೆಗೂ ಸುಳ್ಳು ಹೇಳ್ತೀಯ"

"ನಿಮ್ಮ ಗಾಯಗಳ ಬಗ್ಗೆ ನೀವು ಯಾವೊತ್ತಾದರೂ ಹೇಳಿಕೊಂಡಿದ್ದೀರಾ?"

"ತಾನು ಬರಬೇಕಾಗಿದ್ದ ಕಾಲಕ್ಕಿಂತ ಮುಂಚೆಯೇ ಬಂದ ಪ್ರವಾದಿ ನೀನು. ಮಧ್ಯರಾತ್ರಿ ಆದ ಸ್ವಲ್ಪ ಹೊತ್ತಿಗೇ ಜನಗಳನ್ನು ಎಚ್ಚರಿಸಲು ಬೇಗನೆ ಏಳುವ ವ್ಯಕ್ತಿ".

ಅಧ್ಯಾಯ 24

ಅದೊಂದು ಸ್ವಚ್ಛಸೌಂದರ್ಯದ ಮಂದ ಬೆಳಗು. ಗಂಭೀರಾ ನದಿ ಚಿತ್ತೂರಿನ ಕೆಳಗಿನ ಬಯಲುಗಳಲ್ಲಿ ಚಿನ್ನದ ಬಿರುಕನ್ನು ಕೊರೆಯುತ್ತಿತ್ತು. ಯಾರೋ ಆಕಾಶದ ಸೂರ್ಯಕಾಂತಿಯನ್ನು ಕಿತ್ತು ಅದರ ಎಸಳುಗಳನ್ನೆಲ್ಲಾ ತರಿದುಹಾಕಿ ಕೆಕ್ಕರಿಸಿ ನೋಡುತ್ತಿದ್ದ ನಡುವಿನ ಗೆಡ್ಡೆಯನ್ನು ಧ್ವಂಸಗೊಳಿಸಿದ್ದಾರೆ. ದಿಗಂತದಿಂದ ದಿಗಂತಕ್ಕೆ ಚೆದರುತ್ತಿದ್ದ ಮುನಿದ ಪರಾಗಗಳೇ ಬೆಳಕು. ಅದರದು ನಿರಂತರ ಪ್ರವಾಹದ ಸ್ಥಿತಿ. ಆದರೆ ಏರಲೂ ಇಲ್ಲ. ಇಳಿಯಲೂ ಇಲ್ಲ. ಶೀಘ್ರದಲ್ಲೇ ನಾನು ಹಳದಿ ಧೂಲಿನ ಕಿಲುಬಿನಲ್ಲಿ ಮುಚ್ಚಿಹೋಗುತ್ತೇನೆ. ಅದು ನನ್ನ ಶ್ವಾಸಕೋಶಗಳೊಳಕ್ಕೂ ಪ್ರವೇಶಿಸಿ, ಅವುಗಳಿಗೆ ಮೆರುಗು ನೀಡುತ್ತದೆ. ಒಳಗಿನ ಗಾಳಿಯಲ್ಲವೂ ಹೊರಕ್ಕೆ ಹೋಗುವವರೆಗೂ ಶ್ವಾಸನಾಳದ ಎರಡು ಕವಲುಗಳಲ್ಲಿರುವ ರಂಧ್ರಗಳಲ್ಲೆಲ್ಲಾ ತುಂಬಿ ನನ್ನ ವಂಶದ ಮೂಲ ಪುರುಷನಾದ ಸೂರ್ಯದೇವನ ಗೌರವಾರ್ಥವಾಗಿ ನಾನು ಚಿನ್ನದಲ್ಲೇ ಶಾಶ್ವತವಾಗಿ ಶಿಲೆಯಾಗಿ ನಿಂತು ಬಿಡುತ್ತೇನೆ. ನವಿಲುಗಳು ಹಿಂಡು ಹಿಂಡಾಗಿ ಹೊರಬಂದು, ಇದ್ದಕ್ಕಿದ್ದಂತೆ ಸುರಿಯ ತೊಡಗಿದ ಮುಂಗಾರಿನ ಮಳೆಯಲ್ಲಿ ನವಿಲು ಗಣ್ಣಿನ ಗರಿಗಳನ್ನು ಮಂದ ಬೆಳಕಿನಲ್ಲಿ ಅಲೆಯಲೆಯಾಗಿ ಕೆದರುತ್ತ ನರ್ತಿಸುತ್ತ ಸಂಭ್ರಮಪಟ್ಟವು. ಬೆದೆ ಹತ್ತಿದ ಹೆಣ್ಣು ನವಿಲುಗಳು ಕಿರಿದು ದೂರಕ್ಕೆ ಹಾರಿ ಕರ್ಕಶವಾಗಿ ಕಿರಿಚಿದುವು. ಅದೇ ಸಮಯಕ್ಕೆ ತಮ್ಮ ಭಾವಿ ಗೆಣೆಕಾರ ನವಿಲುಗಳ ಕಾಮೋದ್ರಿಕ್ತ ನೋಟದತ್ತ ಔದಾಸೀನ್ಯವನ್ನು ನಟಿಸುತ್ತಿದ್ದುವು.

ಮಳೆ ಎಂದೂ ಬರುವುದೇ ಇಲ್ಲವೇನೋ ಅನ್ನುವ ಹಾಗೆ ಆಗಿತ್ತು. ಕಣಜಗಳು ಅರ್ಧ ಖಾಲಿಯಾಗಿದ್ದುವು. ಗಂಭೀರಾ ನದಿಯ ಪಾತ್ರ ಕಲ್ಲುಗಳ, ಸಣ್ಣ ಸಣ್ಣ ಉರುಟುಕಲ್ಲುಗಳ ತುಕ್ಕುಹಿಡಿದ ನಾಣ್ಯಗಳ ಹಾಗೂ ಇನ್ನಿತರೆ ಸವೆದು ಹಾಳಾದ ವಸ್ತುಗಳಿಂದ ಇಡಿಕಿರಿದು ಬಿರಿದ ಒಡಲಾಗಿತ್ತು. ಎಲ್ಲರೂ ವರ್ಜಿಸಿದ, ಕುಗ್ಗಿದ ಅಸ್ತಿ ಪಂಜರವಾಗಿ ಅಲ್ಲೊಂದು ಇಲ್ಲೊಂದು ನೀರಿನ ಗುಂಡಿಗಳಿಂದ ತುಂಬಿಕೊಂಡ. ಬಿರಿದ ತಳದಿಂದ ಹನಿಹನಿ ನೀರು ಜಿನುಗುತ್ತಿರುವ ಪಾತ್ರವಾಗಿದೆ. ಕೋಟೆಯಲ್ಲಿ ಆಗಲೇ ನೀರು ಮತ್ತು ಆಹಾರದ ಪಡಿತರ ಪ್ರಾರಂಭವಾಗಿತ್ತು. ಮಳೆಯು ಬರುತ್ತದೆಂಬ ಭರವಸೆಯನ್ನು ಎಲ್ಲರೂ ಕೈಬಿಟ್ಟು ಆಗಲೇ ಎರಡೂವರೆ ತಿಂಗಳಾಗಿತ್ತು. ಆಕಾಶವೆಲ್ಲ ಡಾಂಬರು ಬಳಿದಂತಾಗಿತ್ತು. ಸೂರ್ಯದೇವ ಮರೆಯಾಗಿ ಬಿಟ್ಟಿದ್ದ. ಚಂದ್ರ, ನಕ್ಷತ್ರಗಳು ತೊಲಗಿ ಹೋಗಿ ಕೊನೆಯದಾಗಿ ಭೂಮಿಯನ್ನು ಕತ್ತಲೆ ಗಾಢವಾಗಿ ಕವಿದುಬಿಟ್ಟಿತು. ಉಸಿರಾಡಲು ಗಾಳಿಯಿಲ್ಲ, ಹಕ್ಕಿ ಪಕ್ಷಿಗಳು, ಕಾಣೆಯಾದವು ಮತ್ತು ಮಕ್ಕಳು ನೀರವವಾಗಿ ಗದ್ಗದಿತವಾದವು. ಮಳೆ ಇಲ್ಲ. ಮೇವಾಡದ ಮೇಲೆ

ದೇವತೆಗಳು ಮುನಿದಿರುವುದು ಸ್ಪಷ್ಟವೇ ಇತ್ತು. ಅದಕ್ಕಿದ್ದ ಪರಿಹಾರ ಒಂದೇ. ದೇವತೆಗಳ ಮನವೊಲಿಕೆ. ದೇವತೆಗಳ ಕೃಪೆ ಮತ್ತು ಮಳೆಗಾಗಿ ಮಹಾಯಜ್ಞವನ್ನು ನಡೆಸಲು ಪುರೋಹಿತರು ಒಂದು ಶುಭದಿನವನ್ನು ಆಯ್ಕೆ ಮಾಡಿದರು. ಒಂದು ವಾರದ ಭಯಂಕರ ಸಿದ್ಧತೆ ನಡೆಯಿತು. ಯಜ್ಞಕ್ಕೆ ಬೇಕಾದ ಇಂಧನ, ಸಮಿತ್ತು, ಘೃತ, ಹಾಲು, ತೆಂಗಿನಕಾಯಿಗಳು, ಅರಿಶಿನದ ಪುಡಿ, ಕರ್ಪೂರ ಮತ್ತು ಕುಂಕುಮ ಎಲ್ಲವನ್ನೂ ಯಾಗ ನಡೆಸುವ ಜಾಗಕ್ಕೆ ತಂದಿಟ್ಟು ಇನ್ನೇನು ಯಜ್ಞ ಕುಂಡವನ್ನು ಹೊತ್ತಿಸಿ ಕತ್ತಲೆಯನ್ನು ತೊಲಗಿಸಬೇಕೆನ್ನುವ ಸಮಯಕ್ಕೆ ಮಳೆ ಬೀಳಲು ಶುರುವಾಯಿತು. ಅದು ಒಂದೂವರೆ ತಿಂಗಳವರೆಗೂ ಮುಂದುವರೆಯಿತು. ದೇವತೆಗಳು ನಮಗೆ ಏನು ಹೇಳಲು ಹೊರಟಿದ್ದರು?

ನೀವು ನಿಮ್ಮ ಉಸಿರನ್ನು ಬಿಗಿ ಹಿಡಿಯುವುದಾದರೆ, ಇನ್ನೂ ಸರಿಯಾಗಿ ಹೇಳಬೇಕೆಂದರೆ, ಮತ್ತೆ ಉಸಿರೇ ಆಡದೆ ಇದ್ದರೆ, ಅದು ತುಂಬ ಸುಂದರವಾದ ಬೆಳಗು. ಕಾರಣ ಚಿತ್ತೂರನ್ನು ವಾಂತಿಭೇದಿ ರೋಗ (ಕಾಲರಾ) ಆಕ್ರಮಿಸಿತ್ತು. ಹೆಣಗಳ ಭಗ್ನಾವಶೇಷಗಳ ರಾಶಿಯ ಮತ್ತು ಮಲದ ದುರ್ನಾತ ಸಹಿಸಲಸಾಧ್ಯವಾಗಿತ್ತು. ನಾನು ನನ್ನದೇ ಮನೆಯಲ್ಲಿ ಏಳು ತಿಂಗಳಿಗೂ ಹೆಚ್ಚು ಕಾಲ ದೇಶಭ್ರಷ್ಟನಂತಿದ್ದೆ. ತಂದೆಯವರು ಹೇಳಿದ್ದು ಸರಿ, ಜನರ ನೆನಪು ಕ್ಷಣಿಕ. ನನ್ನನ್ನು ಉಪೇಕ್ಷಿಸಲಿಲ್ಲ. ಮರೆತೇ ಬಿಟ್ಟರು. ಯಾವುದು ಹೆಚ್ಚು ಅವಮಾನಕರ ಎಂದು ನನಗೆ ಖಚಿತವಾಗಿ ಗೊತ್ತಿಲ್ಲ. ಶಕ್ತಿ ಇದ್ದವರು, ಚಿತ್ತೂರನ್ನು ಬಿಟ್ಟು ಹೋಗಿದ್ದಾರೆ ಹಾಗೆ ಹೋದವರಲ್ಲಿ ಮಹಾರಾಜರು, ರಾಣಿ ಕರ್ಮವತಿ, ವಿಕ್ರಮಾದಿತ್ಯ ಮತ್ತು ಬಹುಪಾಲು ಸಭಾಸದರು. ಒಂದರ್ಥದಲ್ಲಿ ಮತ್ತೊಮ್ಮೆ ರಾಜಧಾನಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದೇ.

ರಸ್ತೆಗಳು ಕೆಸರುಮಯವಾಗಿ, ದಂಡಿಯಾದ ಮಳೆ ನೀರು ಮತ್ತು ಮಲದ ಮಿಶ್ರಣ ತೆರೆದ ಚರಂಡಿಗಳಲ್ಲಿ ಹರಿಯುತ್ತ ಅದರಲ್ಲಿ ಕಟ್ಟಿಕೊಂಡು ತ್ಯಾಜ್ಯಗಳು ತುಂಬಿ ಹೊರಚೆಲ್ಲುತ್ತಿವೆ. ಇದೇನೂ ಹೊಸದಲ್ಲ. ಬೇಸಗೆಯಲ್ಲಿ ಬಿಸಿಲು ಎಲ್ಲವನ್ನು ಗಟ್ಟಿಗೊಳಿಸಿ ಬಿಲ್ಲೆ ಮಾಡಿ ಕೂಡಲೇ ಎಲ್ಲ ಸೋಂಕನ್ನೂ ನಿವಾರಣೆ ಮಾಡುತ್ತದೆ. ಚಳಿಗಾಲದಲ್ಲಿ, ತುಟಿ ಬಿರಿಯುತ್ತದೆ. ಚರ್ಮ ಒಡೆಯುತ್ತದೆ, ಚರಂಡಿಯ ಹೊಲಸು ಮತ್ತು ನೀರು ಒಣಗುತ್ತದೆ. ಮಳೆಗಾಲದಲ್ಲಾದರೆ, ಕೆಸರು ಮಣ್ಣು ನೀರು, ಹೇಲು ಎಲ್ಲಾ ಒಟ್ಟಾಗಿ ಸೇರಿ ರುಬ್ಬಳಿಸಿದ ಹಾಗಿರುತ್ತೆ. ಇಷ್ಟಾದರು ಹದಿನೇಳು ಮುಂಗಾರುಗಳು ಕಳೆದು ಹೋಗಿವೆ. ಹೀಗಾದರೂ ಎರಡು ವರ್ಷ ಬರಗಾಲ ಇತ್ತು. ವಾಂತಿಭೇದಿ ರೋಗದ ಹೆಸರು ಮಾತ್ರ ಇರಲಿಲ್ಲ. ಸಾಂಕ್ರಾಮಿಕ ರೋಗಗಳು ಕೆಲವೊಂದು ವರ್ಷ ಬರುತ್ತವೆ. ಇನ್ನು ಕೆಲವೊಂದು ವರ್ಷ ಬರಲ್ಲ. ಅವು ಎಲ್ಲಿಂದ ಬರುತ್ತವೆ, ಅರ್ಧದಷ್ಟು ಜನರನ್ನು ಕೆಲವೊಮ್ಮೆ ಮುಕ್ಕಾಲು ಭಾಗ ಸಾಯಿಸಿದ ಮೇಲೆ ಅವು ಯಾಕೆ ಮಾಯವಾಗಿ ಬಿಡುತ್ತವೆ? ಇದುವರೆಗೆ ಮೂರು ಸಾವಿರದ ಏಳು ನೂರಾ ಹದಿನೆಂಟು ಜನ ಸತ್ತಿದ್ದಾರೆ. ಕಾಲರಾ ಕಾಲ್ತೆಗೆಯುವುದಕ್ಕೆ ಮುಂಚೆ ಇನ್ನೆಷ್ಟು ಜನ ಸಾಯಬೇಕು.

ಇಡೀ ರಾತ್ರಿಯೆಲ್ಲಾ ಅರಚಾಟ, ಕಿರಿಚಾಟ ಮತ್ತು ನರಳಾಟ ಇತ್ತು. ಈ ಕಾಲರಾ, ವಿಕ್ರಮಾದಿತ್ಯನು ಹೋಗುವಾಗ ನನಗೆ ಕೊಟ್ಟ ಉಡುಗೊರೆ. ಜನಗಳಲ್ಲಿ ಹಬ್ಬಿದ ವದಂತಿಯೆಂದರೆ, ನಸುಕಿನಲ್ಲಿ ಗುಜರಾತಿ ಸೈನಿಕರ ಮೇಲೆ ನಾನು ಮಾಡಿದ ಆಕ್ರಮಣಕ್ಕೆ ಇದು ಪ್ರತೀಕಾರ ಎಂದು. ಈ ಕತೆ ಜನಗಳಿಗೆ ಹಿಡಿಸಿತು. ಚಿತ್ತೂರಿನ ಜನತೆಗೆ ಅವರಿಗೆ ಬೇಕಿದ್ದ ಬಲಿಪಶು ಸಿಕ್ಕಿಬಿಟ್ಟಿದ್ದ. ತಂದೆಯವರು ಹೇಳಿದ್ದ 'ವೈಶಮ್ಯ' ಒಪ್ಪಿಗೆಯಾಗುವ ಹಂತಕ್ಕೆ ಬಂದಿತು. ಮೊದಲಿಗೆ ಅವರು ಒಳಕ್ಕೆ ಹೋಗಿ ಮುಚ್ಚಿದ್ದ ಬಾಗಿಲುಗಳನ್ನು

ಜೋರಾಗಿ ತಟ್ಟಿ ನಾನು ಕುದುರೆ ಹತ್ತಿ ಹೋಗಿ ಬಿಟ್ಟಿದ್ದೇನೇನೋ ಎಂದು ನೋಡಿದರು. ಎರಡು ಸಂದರ್ಭಗಳಲ್ಲಿ ನನ್ನ ಮೇಲೆ ಆಕ್ರಮಣ ಮಾಡಿದರು. ಮೊದಲನೆ ಸಲ, ಮಂಗಳನು ಬರುವವರೆಗೂ ನನ್ನ ಖಡ್ಗದಿಂದ ನಾನೇ ರಕ್ಷಿಸಿಕೊಂಡೆ. ಆ ಮೇಲೆ ಅವನು ಬಂದು ನನ್ನನ್ನು ಸೇರಿಕೊಂಡು ಎಲ್ಲರನ್ನೂ ಹೊಡೆದಟ್ಟಿದೆವು. ಇನ್ನೊಂದು ಸಲ, ನಾನು ಬೇಫ಼ಿಕೀರ್ ಮೇಲೆ ಕುಳಿತಿದ್ದವನು ಕೆಳಗೆ ಬಿದ್ದೆ. ಆಘಾತಗೊಂಡ ಮಂಗಳನೂ ಜೀನಿನ ಮೇಲೇರಿ ಕುದುರೆಯೇರಿ ಮನೆಗೆ ಹೋಗಿ ಬೆಂಬಲಕ್ಕೆ ಇನ್ನಷ್ಟು ಮಂದಿ ಯೋಧರನ್ನು ಕಳಿಸಿಕೊಡಬೇಕೆಂದೂ, ತಾನು ಜನರ ಗುಂಪನ್ನು ವಿಚಾರಿಸಿಕೊಳ್ಳುವುದಾಗಿಯೂ ತಿಳಿಸಿದನು. ನನ್ನನು ಅವರು ಪತ್ತೆ ಮಾಡಿದಾಗ, ಕೇವಲ ಒಂದಾರೇಳು ಜನರಿದ್ದರು. ಈಗ ಕಡೇಪಕ್ಷ ಇಪ್ಪತ್ತೈದು ಜನ ಇದ್ದರು. ಆದರೂ ಅವರವರಲ್ಲೇ ಗೊಣಗಾಡುತ್ತಿದ್ದ ಉಪದ್ರವಕಾರಿಗಳು, ಒಬ್ಬರು ಯಾರಾದರೂ ಮೊದಲು ಮುಂದೆ ಬರಲಿ ಎಂದು ಕಾಯುತ್ತಿರುವವರು. 'ರಕ್ತ ಮಾತ್ರ ರಕ್ತದ ದಾಹವನ್ನು ಹಿಂಗಿಸಬಲ್ಲುದು' ಎಂದು ಒಬ್ಬ ಕುಳ್ಳನು ಜೋರಾಗಿ ಕಿರುಚಿ ಒರೆಯಿಂದ ತನ್ನ ಕತ್ತಿಯನ್ನು ಸೆಳೆದನು. ಹನ್ನೆರಡು ವರ್ಷದ ಹುಡುಗನೊಬ್ಬನು ಎಸೆದ ಕಲ್ಲು ನನ್ನ ಎದೆಗೆ ತಾಕಿತು. ಅವರು ಗುಂಪಾಗಿ ನನ್ನ ಸುತ್ತ ತಿರುಗುತ್ತಿದ್ದರು. ಯಾವುದೇ ಒಂದು ಅಪರಾಧದ ಮತ್ತು ದ್ರೋಹದ ಕೃತ್ಯವು ಕಾರ್ಯಗತವಾಗಬೇಕಾದರೆ ಮೊದಲು ಅದು ರಭಸವನ್ನು ಪಡೆದುಕೊಳ್ಳಬೇಕಾಗುತ್ತದೆ. ಜನರ ಗಮನವನ್ನು ಬೇರೆಡೆ ಸೆಳೆಯಲು ಮಂಗಳನ ಖಡ್ಗವು, ಅವನಿಗೆ ತೀರ ಸನಿಹದಲ್ಲಿ ನಿಂತಿದ್ದ ವ್ಯಕ್ತಿಯ ಮೇಲೆ ಇನ್ನೇನು ಎರಗಬೇಕಿತ್ತು. ಆಗ ನಾನು ನನ್ನ ಕೈ ಎತ್ತಿದೆ. ಅವನು ತನ್ನ ಕೃತ್ಯವನ್ನು ನಿಲ್ಲಿಸಿದ. ಆದರೆ ಖಡ್ಗವನ್ನು ಒರೆಯಲ್ಲಿ ಇರಿಸಲಿಲ್ಲ.

ನಾನು ಹೇಳಿದೆ "ನನ್ನನ್ನು ಸಾಯಿಸಿ. ಚಿತ್ತೂರನ್ನು ಅದು ವಾಂತಿಭೇದಿ ರೋಗದಿಂದ ಮುಕ್ತ ಮಾಡುತ್ತದೆಂದಾದರೆ ನನ್ನನ್ನು ಈಗ ಸಾಯಿಸಿ. ನೀವು ದೇಶಕ್ಕೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ".

ಅವರು ಕಾದರು. ಅವರ ತೀರ್ಮಾನದಲ್ಲಿ ನಾನು ಸೇರುತ್ತೇನೆಂದು ಅವರು ನಿರೀಕ್ಷಿಸಿರಲಿಲ್ಲ. ನರೆತಕೂದಲಿನ, ಮೂವತ್ತೆರಡು ಹಲ್ಲುಗಳಲ್ಲಿ ಕಡೇ ಪಕ್ಷ ಹದಿನೈದು ಹಲ್ಲುಗಳು ಉದುರಿಹೋಗಿದ್ದ ಹೆಂಗಸೊಬ್ಬಳು, ಮುಂದೆ ಬಂದು ಮಾತನಾಡಿದಳು.

"ಏನೇ ಅಬದ್ಧ ಹೇಳಿದರೂ ಅದನ್ನು ನಂಬಲು ಸಿದ್ಧವಿರುವ ಒಂದೈವತ್ತು ಜನ ಮೂರ್ಖರು ಇಲ್ಲಿದ್ದಾರೆ ಅನ್ನುವುದರ ಅರ್ಥ ನೀವೂ ಅವರ ಮೇಲ್ಪಂಕ್ತಿಯನ್ನೇ ಅನುಸರಿಸಿ ಮೂರ್ಖರಾಗಬೇಕೆಂದಿಲ್ಲ ಮಹಾಸ್ವಾಮಿ". ತಾವು ಅನುಮತಿ ಕೊಡುವುದಾದರೆ, ಇಲ್ಲಿ ಸೇರಿರುವ ದೊಡ್ಡ ಮನುಷ್ಯರನ್ನು ಒಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನಾನಾಗಲಿ, ನನ್ನ ಭಾವೀ ಕೊಲೆಗಾರರಾಗಲಿ, ಮುದುಕಿಯ ಬಾಯಿ ಮುಚ್ಚಿಸಲಿಲ್ಲ. ಅವಳು ಮುಂದುವರೆಸಿದಳು "ಅವರೆಲ್ಲರೂ ತಮಗಿಂತ ಬುದ್ಧಿವಂತರು ಮಹಾರಾಜ್‌ಕುಮಾರ್ ಅವರೆ. ಹಾಗಾಗಿ ನಿಮ್ಮನ್ನು ಬಿಟ್ಟು ಅವರನ್ನು ಪ್ರಶ್ನೆ ಕೇಳಿದರೆ ತಾವು ಕ್ಷಮಿಸಬೇಕು. ಶತ್ರುವಿನೊಂದಿಗೆ ನಾವು ಹೇಗೆ ನಡೆದುಕೊಳ್ಳಬೇಕು? ವಿಷಸರ್ಪಗಳು ತಮ್ಮ ಮೊನಚಾದ ವಿಷ ಪೂರಿತ ಹಲ್ಲುಗಳನ್ನು ನಮ್ಮ ದೇಹದೊಳಕ್ಕೆ ಚುಚ್ಚಿ ನಮ್ಮನ್ನು ಒರೆಸಿ ಹಾಕಿ ಬಿಡಲಿ ಎಂದು ನಾವು ಅವಕ್ಕೆ ಎದೆ ಹಾಲೂಡಬೇಕೆ? ನಾನೂ ಒಂದು ಕಾಲದಲ್ಲಿ ಹೆಂಡತಿಯಾಗಿದ್ದು ಈಗ ಗಂಡನನ್ನು ಕಳೆದುಕೊಂಡ ವಿಧವೆ. ನಾನು ಒಂಬತ್ತು ಮಕ್ಕಳನ್ನು ಕಳೆದುಕೊಂಡ ಒಬ್ಬ ತಾಯಿ. ಹದಿನೇಳು ಜನ ಮೊಮ್ಮಕ್ಕಳನ್ನು ಕಳೆದುಕೊಂಡ ಅಜ್ಜಿ ನಾನು. ಅದೂ ಎಲ್ಲರನ್ನೂ ಯುದ್ಧಗಳಲ್ಲೇ. ನನಗೊಬ್ಬ ಮರಿಮಗ ಉಳಿದಿದ್ದ. ಅವನು ನಿಮ್ಮೊಂದಿಗೆ ಗುಜರಾತಿಗೆ

ಹೊರಟಾಗ, ನಾನೀಗ ನಿಜಕ್ಕು ಅನಾಥಳಾಗಿ ಬಿಡುವೆನೆಂದು ಭಾವಿಸಿದೆ. ಆದರೆ ಮಹಾಸ್ವಾಮಿ ನೀವು ಅವನನ್ನು ವಾಪಸ್ ಕರೆ ತಂದಿರಿ. ನೀವು ಇದಾರ್ ಅನ್ನು ವಾಪಸ್ ಪಡೆದುಕೊಂಡಿರಿ ಹಾಗೂ ಮೂರು ಸಾವಿರ ಸೈನಿಕರ ಮತ್ತು ರಾಜೇಂದ್ರ ಸಿಂಹನ ಸಾವಿಗೆ ಸೇಡು ತೀರಿಸಿಕೊಂಡಿರಿ. ಅದು ಗೌರವಾನ್ವಿತವಾದದ್ದಲ್ಲದೆ ಹೋದರೆ, ಯಾವುದು ಎಂದು ಈ ಮಹಾನ್ ದೊಡ್ಡ ಮನುಷ್ಯರು ನನಗೆ ಹೇಳ್ತಾರೇನು? 'ಇನ್ನು ಮಹಾರಾಜ್ ಕುಮಾರ್ ನೀವು' ಈಗ ತರಾಟೆಗೆ ಗುರಿಯಾಗುವ ಸರದಿ ನನ್ನದಾಗಿತ್ತು "ನಿಮ್ಮ ಕಷ್ಟ ಏನು ಅಂದರೆ ನೀವು ಸಾಮ್ರಾಜ್ಯದ ಹೊರಗಡೆ ಬಹಳ ಕಠೋರವಾಗಿರುತ್ತೀರಿ. ಆದರೆ ಇಲ್ಲಿ ಸ್ವಂತ ರಾಜ್ಯದ ಜನರ ಬಗ್ಗೆ ಮೃದುವಾಗಿರುತ್ತೀರಿ. ನಿಮ್ಮ ನಾಚಿಕೆಯ ಹಿಂದೆ ರಕ್ಷಣೆ ಪಡೆದುಕೊಳ್ಳಬೇಡಿ. ನಿಮ್ಮ ಸ್ಥಾನದಲ್ಲಿ ಅದೊಂದು ಗುಣವಲ್ಲ. ನೀವೇ ಒಂದು ತುತ್ತೂರಿ ತೆಗೆದುಕೊಂಡು ಊದಿ. ವೀರರ ಸಾಹಸ ಕೃತ್ಯಗಳನ್ನು ಹಾಡುತ್ತಿದ್ದ ಚಾರಣರು ಮತ್ತು ಕವಿಗಳು ಎಲ್ಲಿ ಹೋದರು? ಯಾರಾದರೂ ಒಂದು ವೇಳೆ ತಮ್ಮ ಉದ್ದೇಶ ಸಾಧನೆಗೆ ಅವರ ಬಾಯಿಗಳನ್ನು ಮುಚ್ಚಿಸಿದ್ದರೆ ಅವರ ಕೈಗಳನ್ನು ಸ್ವಲ್ಪ ಬೆಚ್ಚಗೆ ಮಾಡಿದರೆ ಅವರು ತಮ್ಮ ನಾಲಗೆಗಳನ್ನು ಸಡಿಲ ಬಿಡುತ್ತಾರೆ". ಅವಳು ಬೊಚ್ಚು ಬಾಯಿಂದ ಕಪಟ ಮುಗುಳ್ನಗೆ ಬೀರಿದಳು "ಜೋ ಹರಿಬಾಯಿ, ಅಂದರೆ ನನ್ನನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡರೆ ಹೇಗೆ?" ಇಲ್ಲೊಂದು ಅರ್ಥಪೂರ್ಣವಾದ ವಿರಾಮ. "ಈ ಹೊತ್ತಿನ ಹಾಗೇನಾ?" ಮಾತಿಗೆ ಮೊನಚಾದ ತಿರುವು ಕೊಡುವ ಅದ್ಭುತ ನಟಿ ಅವಳು. ಅಲ್ಲದೆ ಸ್ಪಷ್ಟವಾಗಿ ತಾನೇ ಅದನ್ನು ಸವಿಯುತ್ತಿದ್ದಳು. ಕೇಳುತ್ತಿದ್ದ ಜನರಂತೂ ಅವಳ ಬಗ್ಗೆ ಪ್ರೀತಿ ಅಭಿಮಾನ ತಾಳಿದರು ಮತ್ತು ಹೊಟ್ಟೆ ಹುಣ್ಣಾಗುವಂತೆ ನಕ್ಕರು.

ಅವಳು ತನ್ನ ಹಣೆಯನ್ನು ನನ್ನ ಪಾದಗಳಿಗೆ ಚಾಚಿದಳು. ನಾನು ಅವಳನ್ನು ಹಿಡಿದು ಮೇಲೆತ್ತಿ ಜನರ ಗುಂಪಿನ ಕಡೆ ಸುತ್ತಲೂ ಕಣ್ಣು ಹಾಯಿಸಿದಾಗ, ಅದು ಮೊದಲಿಗಿಂತ ನಾಲ್ಕರಷ್ಟು ಹೆಚ್ಚಾಗಿತ್ತು. "ಮಹಾರಾಜ್ ಕುಮಾರ್ ಈಗ ನಿಮ್ಮ ತಲೆ ಬಗ್ಗಿಸಿ. ಈ ಹಣ್ಣು ಹಣ್ಣು ಮುದುಕಿ, ಎಷ್ಟು ಮುದುಕಿ ಅಂದರೆ, ನಿಜ ಹೇಳಬೇಕು ಅಂದರೆ, ಯಾವತ್ತೂ ಸಾಯಲೇ ಬಾರದು ಅಂತ ಇರುವವಳು ನಿಮಗೆ ಆಶೀರ್ವಾದ ಮಾಡಬಹುದಲ್ಲ." ಅವಳು ನನ್ನ ಮುಖವನ್ನು ತನ್ನ ಕೈಗಳಲ್ಲಿ ತೆಗೆದುಕೊಂಡಳು. ಅವಳ ಅಂಗೈಗಳು ಇನ್ನೇನು ಈಗಲೋ ಆಗಲೋ ಹರಿದು ಹೋಗಬಹುದಾದಂಥ ಕಾಗದದ ಹಾಗೆ ಸುಕ್ಕುಗಟ್ಟಿದ್ದುವು. "ಭಗವಂತನ ಕೃಪೆ ನಿಮ್ಮ ಮೇಲಿರಲಿ ಮಹಾಸ್ವಾಮಿ".

ಸೂರ್ಯನು ಮೇಲು ಮೇಲಕ್ಕೇರಿ, ಹಗಲಿನ ಮೇಲಿನ ತನ್ನ ಹಿಡಿತವನ್ನು ಬಿಗಿಗೊಳಿಸಿದಂತೆಲ್ಲಾ ಗಂಭೀರಾ ನದಿ ತನ್ನ ಪ್ರಚಲನೆಯನ್ನು ಚಿನ್ನದಿಂದ ಬೆಳ್ಳಿಗೆ ಇಳಿಸುತ್ತಿದ್ದಾಳೆ. ಮಳೆಯಿಂದ ಬಿಡುಗಡೆ ಸಿಕ್ಕೀತೆ? ಗಂಭೀರೆಯ ಅನಿರೀಕ್ಷಿತ ಪ್ರವಾಹದಷ್ಟೇ ಸುಂದರವಾದ ಕೆಲವು ದೃಶ್ಯಗಳಿವೆ. ಗಂಭೀರೆಯೊಂದಿಗೆ ಹಿಂಸೆ ತಳುಕು ಹಾಕಿಕೊಂಡಿದೆ. ಅದು ಭಯಕಾರಕವೂ ಹೌದು. ಸ್ಫೂರ್ತಿದಾಯಕವೂ ಹೌದು. ಅವಳು ಅದಮ್ಯಳು, ಅಂಕೆ ಮೀರಿದವಳು, ಹಾಗೂ ಮಾರಕಳು. ಮುಂಗಾರು ಮಾರುತಗಳು ಅವಳ ಅಚ್ಚುಮೆಚ್ಚಿನ ಋತುಮಾನ. ಮೋಡಗಳಿಂದ ಇಡಿಕಿರಿದ ಆಗಸ ಅವಳನ್ನೇಕೆ ಚಚ್ಚಿ, ಗುದ್ದಿ ರಕ್ತ ಬರುವ ಹಾಗೆ ಮಾಡಿ, ತನ್ನ ವೀರ್ಯವನ್ನು ಅವಳಲ್ಲಿ ಏಕೆ ಸುರಿಯುತ್ತಿದ್ದಾನೆಂದು ನೋಡುವುದು ತುಂಬ ನಿರಾಳ. ಈಗ ಆದದ್ದು ಸಾಕುಬೇಕಾದಷ್ಟು ಆಯಿತು. ಇನ್ನೊಂದು ವಾರವೋ ಹತ್ತು ದಿನವೋ ಮಳೆ ಸುರಿಯುವುದು ನಿಂತರೆ ಮಾತ್ರ ನೆಲ ಒಣಗಿ ಕಾಲರಾ ಸ್ವಲ್ಪ ತಗ್ಗಬಹುದು.

ಅದು ಯಾವಾಗಲೂ ಹಾಗೆಯೇ ಮೊದಲೆರಡು ದಿನ ಗಂಡಸರು, ಹೆಂಗಸರು ಬೆಳೆದ ಮಕ್ಕಳು ಹೊರಗಡೆ ಕಕ್ಕಸ್ಸಿಗೆ ಹೋಗುತ್ತಾರೆ. ಮೂವತ್ತು ನಲವತ್ತು ಸಲ. ಕೆರಳಿದ ರೋಷ ಆವೇಶದಿಂದ ಹೊರ ಚಿಮ್ಮುವ ಹಾಗೆ ಭೇದಿ ಧಾರೆಧಾರೆಯಾಗಿ ಚಿಮ್ಮುತ್ತದೆ. ಅವರು ತಿಂದದ್ದನ್ನೆಲ್ಲ ವಾತಿ ಮಾಡುತ್ತಾರೆ. ನಿಯಂತ್ರಣಕ್ಕೇ ಸಿಕ್ಕದಿರುವ ವಿಲಿವಿಲಿ ನರಳಾಟದಿಂದ ಗಾಬರಿಗೊಂಡ ಅವರು ತಮ್ಮ ಹೊಟ್ಟೆ ಮತ್ತು ಕರುಳುಗಳನ್ನು ತಮ್ಮನ್ನು ನುಂಗುವ ಹೆಬ್ಬಾವೆಂದು ಭಾವಿಸಿದರು. ಒಂದೆರಡು ದಿನ ಮಲ ವಿಸರ್ಜನೆಗೆ ಮನೆಯಿಂದಾಚೆಗೆ ತೆವಳಿಕೊಂಡು ಹೋಗುತ್ತಾರೆ. ಆ ನಂತರ ಅವರು ಚಲಿಸಲಾರರು. ಅವರ ಭೇದಿ ತೀರಾ ತೆಳುವು. ಯೋಚಿಸಲೂ ಆರದಷ್ಟು ಆಯಾಸಗೊಂಡು ಮಲಗಿ ಬಿಡುತ್ತಾರೆ. ಬಾಯಿ ತೆರೆದುಕೊಂಡ ಕಾರಣ ಒಣಗಿ ಬಿಡುತ್ತದೆ. ಕಣ್ಣುಗಳು ಶೂನ್ಯದೃಷ್ಟಿಯಿಂದ ಎಲ್ಲೋ ಸೂರನ್ನು ನೋಡುತ್ತಿರುತ್ತವೆ. ಅವರ ಉಸಿರಾಟ ಅದೆಷ್ಟು ಕ್ಷೀಣಗೊಂಡಿರುತ್ತದೆಂದರೆ ಗಾಡಿ ಹೊಡೆಯುವವರು ನಾಲ್ಕಾರು ಸಲ ಇನ್ನೂ ಬದುಕಿರುವ ದೇಹಗಳನ್ನೇ ಗಾಡಿಗೆ ಹೇರಿದ್ದುಂಟು.

ಗಾಡಿಗಳ ಹಿಂದೆ ಹಿಂದೆಯೇ ಹೊಲಸು ತಿನ್ನುವ ಹಕ್ಕಿಗಳು ಇರುತ್ತವೆ. ಹದ್ದುಗಳು, ಅವುಗಳದೇ ಸ್ವಭಾವದ ಕತ್ತೆ ಕಿರುಬನಂಥ ಪ್ರಾಣಿಗಳನ್ನು ಅಷ್ಟೊಂದು ವಿಕಾರವಾಗಿ, ಕುರೂಪಿಗಳಾಗಿ ಮತ್ತು ಅಸಹ್ಯ ಹುಟ್ಟಿಸುವ ಹಾಗೆ ದೇವತೆಗಳು ಏಕಾದರೂ ಸೃಷ್ಟಿಸಿದರು? ಅವು ಸಾವಿನಿಂದಾಚೆ ಬದುಕುತ್ತವೆ ಎಂದೆ? ಆದರೆ ಅದಕ್ಕೆ ಒಂದು ಅಪವಾದವಂತೂ ಇದೆ. ಕಾಗೆಯನ್ನು ನೋಡಿದ್ದೀರಾ? ಕಾಗೆಯನ್ನು ಗಮನಿಸಿದ್ದೀರಾ? ಅದೊಂದು ಚಾಲಾಕಾದ, ತಂತ್ರಗಾರ ಪಕ್ಷಿ. ಅದರ ಕರಿ ಚರ್ಮ ಮಿರಮಿರ ಮಿಂಚುತ್ತ ನಾಜೂಕಾಗಿರುತ್ತೆ. ನಿಮಗೆ ಅದು ಇಷ್ಟವಾಗದೆ ಇರಬಹುದು. ಆದರೆ ಅದೊಂದು ಅಡಕವಾದ ಆತುರಗಾರ ಪಕ್ಷಿ. ಪ್ರಪಂಚದ ಎಲ್ಲೆಡೆ ಇರುವ ಪಕ್ಷಿ. ಹದ್ದುಗಳದ್ದು ಈಗ ಬೇರೆಯದೇ ಅದೊಂದು ಕಥೆ. ಅದಕ್ಕಿಂತ ಗಲೀಜು ಮಾಡುವ, ಕಳೆಗುಂದಿದ ಮತ್ತು ಒರಟಾದ ಇನ್ನೊಂದು ಪ್ರಾಣಿ ಸಿಕ್ಕುವುದು ಕಷ್ಟ. ಆಹಾರ ಕಣ್ಣಿಗೆ ಬೀಳುವುದು ಬಿಟ್ಟು ಬೇರೆ ಇನ್ಯಾವುದೂ ಅದನ್ನು ಎಬ್ಬಿಸುವುದಿಲ್ಲ. ಆಗಲೂ ಅದು ಮನಸ್ಸಿಲ್ಲದೆ ಮೇಲೆದ್ದು ಅತ್ಯಂತ ಜುಗುಪ್ಸೆಯ ಭಾವನೆಯಿಂದ ತಿನ್ನುತ್ತದೆ. ತನ್ನ ಇಚ್ಛೆಗೆ ವಿರುದ್ಧವಾಗಿ ತಿನ್ನುವುದು ತುಂಬ ಕಷ್ಟದ ಕೆಲಸ ಇರಬೇಕು. ಇದೊಂದು ಕೆಲಸದಲ್ಲಿ ಅದು ಮೈಗಳ್ಳತನ ತೋರಿಸುವುದಿಲ್ಲ. ಚೆನ್ನಾಗಿ ಹೊಟ್ಟೆ ಬಿರಿಯುವ ಹಾಗೆ ತಿಂದು ಭರ್ತಿಯಾಗಿದ್ದರೂ. ಎಂಥ ಕೊಳೆಯುತ್ತಿರುವ ಹೆಣವಾಗಿದ್ದರೂ, ಇನ್ನೊಂದು ಗಂಟೆಯಾದರೂ ಆಗಲಿ, ಅಥವಾ ಇಡೀ ದಿನವೇ ಆದರೂ ಸರಿ ಅದು ಮಾತ್ರ ಕುಕ್ಕಿ ತಿನ್ನುವ ತನ್ನ ಕೆಲಸವನ್ನು ಮುಂದುವರಿಸುತ್ತದೆ.

ಸೂರ್ಯನು ಮತ್ತೆ ಗೋಚರಿಸಿದ್ದಾನೆ. ಪೂರ್ವದಿಕ್ಕಿನ ಕಡೆಯಿಂದ ಕೊಳಕಾದ, ಮಸಿಯಿಂದ ಮಸಕು ಮುಸುಕಾದ ಮೋಡಗಳು, ಬೂದಿಯ ಬಣ್ಣ ತೂರಿ ಬರುತ್ತಿವೆ. ನಿಧಾನವಾಗಿ ಬೆಚ್ಚನೆಯ ಅಂಟಂಟಾದ ಮಳೆ ಹನಿಗಳು ಬೀಳಲು ಶುರುವಾಯಿತು. ಮಳೆಹನಿಗಳಾದರೋ ಮುಂದಕ್ಕೆ ಚಲಿಸಲಿಷ್ಟವಿಲ್ಲದ ಉಬ್ಬಿದ ಜಿಗಣೆಗಳು. ಅವು ಚರ್ಮಕ್ಕೆ ಅಂಟಿಕೊಳ್ಳುತ್ತವೆ ಬಲವಂತವಾಗಿ ಅವುಗಳನ್ನು ಕಿತ್ತೆಸೆದಾಗ ಅವು ನುಣುಪಾದ ಇದ್ದಲಿನ ಪುಡಿಯ ಪೊರೆಯೊಂದನ್ನು ಉಳಿಸುತ್ತದೆ. ಇದು ನಿಮ್ಮನ್ನು ಚೊಕ್ಕಟವಾಗಿ ತೊಳೆಯುವಂಥ ಮಳೆ ಅಲ್ಲ. ಅದು ಮನಸ್ಸಿಗೆ ಮಂಕು ಕವಿಸುತ್ತದೆ. ಅದು ಭಾವನೆಯನ್ನು ಕೊಳಕು ಗೊಳಿಸಿ ಹೋಗುತ್ತದೆ.

ಹೆಣ್ಣು ನವಿಲುಗಳು ಕುಣಿ ಕುಣಿದು ದಣಿದಿರಬಹುದು ಅಥವಾ ತಾವು ಮತ್ತೂ ಸೌಮ್ಯ ಗಾಂಭೀರ್ಯವನ್ನು ಮುಂದುವರಿಸಿದ್ದೇ ಆದರೆ, ಗಂಡು ನವಿಲುಗಳು ಹೊರಟು

ಹೋಗುತ್ತವೆಂದೂ, ಮತ್ತೆ ಇಂಥ ಮಳೆಗಾಲಕ್ಕೆ ಇನ್ನೊಂದು ವರ್ಷ ಕಾಯಬೇಕಾಗುತ್ತದೆಂಬುದನ್ನು ಅರ್ಥ ಮಾಡಿಕೊಂಡಿದ್ದವು. ಒಮ್ಮೆಗೇ ಚಟುವಟಿಕೆಗಳ ಸಂಭ್ರಮ ಶುರುವಾಯಿತು. ಸಿಡುಕು, ಸಿಗ್ಗು, ಬಿನ್ನಾಣದ ನಡೆ, ನನ್ನನ್ನು ಮುಟ್ಟಬೇಡ ಇವೆಲ್ಲವನ್ನು ಒಂದು ಕ್ಷಣ ಬಿಟ್ಟುಕೊಟ್ಟು ಗಂಡು ನವಿಲುಗಳೆಲ್ಲವೂ ತಮ್ಮ ಜೊತೆಗಾರ ಹೆಣ್ಣುಗಳ ಮೇಲೆ ಕುಳಿತವು. ಅರಮನೆಯ ಕಿಟಕಿಯಿಂದ ಅವುಗಳ ಪ್ರಣಯೋದ್ರೇಕದ ಚಟುವಟಿಕೆಯನ್ನು ನೋಡುತ್ತೇನೆ. ಪರಿಸ್ಥಿತಿಯ ಗಾಂಭೀರ್ಯದ ಅರಿವು ಅವಕ್ಕಿಲ್ಲವೆ? ಸುಳಿವು ಕೊಡದೆ ಸಾವು ರಾಜ್ಯದ ಬೇಟೆಗೆ ಬೆನ್ನು ಹತ್ತಿರುವುದು ಅವಕ್ಕೆ ಕಾಣುತ್ತಿಲ್ಲವೆ?

"ಲಕ್ಷ್ಮಣ ಸಿಂಹಜೀಯವರು ತಮಗೆ ಶುಭಾಶಯ ಸಂದೇಶವನ್ನು ಕಳಿಸಿದ್ದಾರೆ. ತಾವು ಈ ಕೂಡಲೇ ಅವರ ಕಛೇರಿಗೆ ಹೋಗುವ ಕೃಪೆ ಮಾಡುವಿರಾ?" ಸೇವಕನ ದನಿ ಕ್ಷಮಾಯಾಚನೆಯದಾಗಿತ್ತು.

ಗಂಡು ನವಿಲುಗಳು ತಮ್ಮ ಜೊತೆಗಾರ ಹೆಣ್ಣು ನವಿಲುಗಳಲ್ಲಿ ಲೀನವಾಗಿ ಆತ್ಮ ಸಂತೃಪ್ತಿಯ ಮತ್ತು ಸಾರ್ಥಕ್ಯದ ಭಾವದಿಂದ ತುಂಬಿ ತುಳುಕುತ್ತಿದ್ದುವು. ನಾನು ಕಿಟಕಿಯ ಕಡೆಯಿಂದ ಕಣ್ಣು ತಿರುಗಿಸಿ ಆ ಸೇವಕನ ಹಿಂದೆಯೇ ರಕ್ಷಣಾ ಸಚಿವರ ಕಛೇರಿಗೆ ಹೋದೆ.

"ನೀವು ಮತ್ತು ರಾಜಕುಮಾರಿ ಈ ಕೂಡಲೇ ಚಿತ್ತೂರನ್ನು ಬಿಡಬೇಕೆಂದು ನನ್ನ ಇಚ್ಛೆ" ಲಕ್ಷ್ಮಣ ಸಿಂಹಜೀಯವರು ನೇರವಾಗಿಯೇ ವಿಷಯಕ್ಕೆ ಬಂದರು.

"ಯಾವ ಕಾರಣಕ್ಕೆ ಮಾವ?"

"ಯಾವ ಕಾರಣಕ್ಕೆ" ನನ್ನ ಪ್ರಶ್ನೆಯಿಂದ ಅವರಿಗೆ ಸ್ವಲ್ಪ ತಬ್ಬಿಬ್ಬಾಯಿತು. ಸ್ವಲ್ಪ ಕೋಪವೂ ಬಂತು. "ಸ್ಪಷ್ಟವೇ ಇದೆಯಲ್ಲವೆ? ನಿಮ್ಮ ಜೀವಗಳು ಗಂಡಾಂತರದಲ್ಲಿವೆ. ಅದೇ ಕಾರಣಕ್ಕೆ."

"ಯಾರಿಂದ?"

"ಏನಾಗಿದೆ ನಿಮಗೆ ಮಹಾರಾಜ್‌ಕುಮಾರ್? ನಮ್ಮ ಯುವಕರಲ್ಲೆಲ್ಲಾ ಅತ್ಯಂತ ವಿವೇಕಿಗಳಲ್ಲಿ ನೀವೊಬ್ಬರು. ತನ್ನ ಜೀವನವನ್ನಾಗಲಿ, ಬೇರೆ ಯಾರ ಜೀವವನ್ನೇ ಆಗಲಿ ಎಂದೂ ಅನಗತ್ಯವಾಗಿ ಅಪಾಯದಲ್ಲಿ ಸಿಕ್ಕಿಸುವಂಥ ವ್ಯಕ್ತಿ ಅಲ್ಲ ಅಂತ ನಾನು ಯಾವತ್ತೂ ತಿಳಿದಿದ್ದೇನೆ." ಇನ್ನೂ ನನಗೆ ಅವರ ಅಭಿಪ್ರಾಯ ಅರ್ಥವಾಗಲಿಲ್ಲ. "ವಾಂತಿಭೇದಿ ರೋಗದಿಂದ ತಾನೆ? ಇನ್ನೇನು?" ನನ್ನ ಮುಖದ ಮೇಲಿನ ನಿರಾಳ ಭಾವವನ್ನು ನೋಡಿ ಅವರು ನಕ್ಕರು. "ನೀವೇನು ಯೋಚಿಸಿದ್ದಿರಿ?

"ಇನ್ನೇನು ಹೆಚ್ಚಿಗೆ ಯೋಚಿಸಬೇಕು ಅಂತ ನನಗೆ ಗೊತ್ತಿಲ್ಲ ಮಾವ"

"ಎಲ್ಲ ಕಡೆಯೂ ನಿಮಗೆ ಅಪಾಯವೇ ಕಾಣುತ್ತಿರುವುದು ನಿಷ್ಕಾರಣವೇನಲ್ಲ, ಹಾಗೆ ನೋಡಿದರೆ..." ಅವರು ವಾಕ್ಯ ಮುಗಿಸಲಿಲ್ಲ. "ನಿಮ್ಮ ಜಾಗದಲ್ಲಿ ಬೇರೆ ಯಾರೇ ಇದ್ದಿದ್ದರೂ ಹಿಂದು ಮುಂದು ನೋಡದೆ ಏನಾದರೂ ಒಂದು ಆತುರದ್ದನ್ನು ಆವೇಶದ್ದನ್ನು ಬಹುಮಟ್ಟಿಗೆ ಮಾಡಿಬಿಟ್ಟಿರುತ್ತಿದ್ದರು. ಈಗ ನೀವು ನಿಮ್ಮ ಹೆಂಡತಿ ಇಬ್ಬರೂ ನಾಳೆ ಬೆಳಿಗ್ಗೆ ಇಲ್ಲಿಂದ ಹೊರಡಬೇಕು ಎನ್ನುವುದು ಇತ್ಯರ್ಥ ಆಯಿತಲ್ಲವೆ?"

"ನನ್ನ ಹೆಂಡತಿಯ ಪರವಾಗಿ ನಾನು ಹೊಣೆ ಹೊರಲು ಸಾಧ್ಯವಿಲ್ಲ. ನೀವು ಅವಳ ಹತ್ತಿರ ಮಾತನಾಡಿ. ಅವಳು ಏನು ಹೇಳುತ್ತಾಳೆ ಎನ್ನುವುದನ್ನು ನೋಡಿ. ಆದರೆ ನನಗೆ ಇಲ್ಲಿ ಕೆಲಸವಿದೆ".

"ನೀವು ಹೊರಡದೆ ಹೋದರೆ, ರಾಜಕುಮಾರಿ ಕೂಡ ಹೊರಡುವುದಿಲ್ಲ ಎಂದು ನಿಮಗೇ ಗೊತ್ತಿದೆ".

"ನಾನೊಂದು ವೇಳೆ ಹೋದರೂ, ಆಕೆ ಬಹುಶಃ ಹೋಗುವುದಿಲ್ಲ. ಆದರೆ ನನಗೆ ಹೋಗುವ ಉದ್ದೇಶವಿಲ್ಲ ಆಕೆಗೇ ಹೊಣೆಗಾರಿಕೆಗಳಿವೆ."

"ಆರೋಗ್ಯಾಧಿಕಾರಿಗಳು ನಿಭಾಯಿಸಲು ಸಾಧ್ಯವಾಗುವುದಿಲ್ಲ ಎನ್ನುವಂಥ ಕೆಲಸ ಇಲ್ಲಿ ಯಾವುದೂ ಇಲ್ಲ".

"ಯಾವ ಆರೋಗ್ಯಾಧಿಕಾರಿಗಳು ಮಾವ? ಆರೋಗ್ಯ ಇಲಾಖೆಯ ಮಂತ್ರಿ ಹೋಗಲಿ, ಸಚಿವಾಲಯ ಕೂಡ ನಮ್ಮಲ್ಲಿ ಇಲ್ಲ. ಇಲ್ಲಿಗೆ ವರ್ಗವಾಗಿ ಬಂದಿರುವ ಐದು ಜನ ಅಧಿಕಾರಿಗಳು, ಕಂದಾಯ ಮತ್ತು ಕೃಷಿ ಇಲಾಖೆಗೆ ಸಂಬಂಧಪಟ್ಟವರು. ಅವರು ಕಳಂಕ ಹೊತ್ತವರಾಗಲಿ, ಯಾರದೇ ಪ್ರಚೋದನೆಗೊಳಗಾದವರಾಗಲಿ ಅಲ್ಲ. ಅವರಿಗೆ ಹೆಚ್ಚು ಅಧಿಕಾರವಾಗಲಿ, ಹಣವಾಗಲಿ ಇಲ್ಲ".

"ಅದು ನಿಜವಲ್ಲ. ಈ ಸಾಕ್ರಾಮಿಕ ಕಾಯಿಲೆಯನ್ನು ಎದುರಿಸುವ, ಸಲುವಾಗಿ, ನಾನು ಈ ವರ್ಷದ ರಕ್ಷಣಾ ವೆಚ್ಚದಲ್ಲಿ ಶೇಕಡಾ ಐದರಷ್ಟನ್ನು ತಡೆ ಹಿಡಿದಿದ್ದೇನೆ".

"ನಾನು ಇನ್ನೂ ಹೇಳಬೇಕಾದ್ದು ಇದೆ ಮಾವ. ಇಬ್ಬರು ಅಧಿಕಾರಿಗಳು ಸತ್ತಿದ್ದಾರೆ".

"ಅದೇನೇ. ಈ ಸಾಮ್ರಾಜ್ಯದ ಖಚಿತ ಉತ್ತರಾಧಿಕಾರಿಗೂ ಅದೇ ಗತಿ ಬರುವುದಿಕ್ಕೆ ಖಂಡಿತವಾಗಿಯೂ ಒಪ್ಪಿಗೆ ಕೊಡಲು ನನ್ನ ಅಂತಃಸಾಕ್ಷಿಗೆ ನನಗೆ ಸಾಧ್ಯವಿಲ್ಲ. ಚಿತ್ತೂರನ್ನು ಬಿಟ್ಟು ಹೊರಡಲು ಮಹಾಪ್ರಭುಗಳನ್ನು ಒಪ್ಪಿಸುವುದಕ್ಕೆ ನನಗೆ ಮೂರು ವಾರ ಬೇಕಾಯಿತು. ನೀವು ಇಲ್ಲಿಂದ ಹೊರಡುವುದನ್ನು ಪುಸಲಾಯಿಸಲು ನಾನು ಇನ್ನೂ ಮೂರು ವಾರದ ತನಕ ಪ್ರಯತ್ನಪಡಲು ಸಾಧ್ಯವಿಲ್ಲ". ಅವರು ಏದುಸಿರು ಬಿಡುತ್ತಿದ್ದರು. ಮಗುವಿನ ಕೆನ್ನೆಗಳಂತೆ ಉಬ್ಬಿದ ಕೆನ್ನೆಯ ಆ ಮುಖದಲ್ಲಿ ಏನು ಮಾಡಬೇಕೆಂದು ತೋಚದ ಬೆಪ್ಪಾದ ಭಾವವಿತ್ತು.

"ನಾವು ಕ್ಷೇಮದಿಂದಿರಬೇಕೆಂಬ ನಿಮ್ಮ ಕಾಳಜಿಯನ್ನು ನಾನು ಕಡಮೆಯಾಗಿ ಪರಿಗಣಿಸುತ್ತಿಲ್ಲ. ತಂದೆಯವರು ಇಲ್ಲಿಂದ ಹೊರಟು ಹೋಗಲು ಒತ್ತಾಯ ಪಡಿಸಿದ್ದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ನಾನು ಮಹಾಪ್ರಭುಗಳ ಏಕ ಮಾತ್ರ ಪುತ್ರನಾಗಿದ್ದಿದ್ದರೆ, ನನ್ನ ಪ್ರಾಣವನ್ನು ಕಾಪಾಡಿಕೊಂಡು ಮೇವಾಡದ ಭವಿಷ್ಯವನ್ನು ರಕ್ಷಿಸುವುದು ನನ್ನ ಕರ್ತವ್ಯವೆಂದು ಪರಿಗಣಿಸುತ್ತಿದ್ದೆ. ನಾನು ಮೃತಿಹೊಂದಿದ ಪಕ್ಷದಲ್ಲಿ ಉತ್ತರಾಧಿಕಾರಿಗಳ ಸರಣಿಯಲ್ಲಿ ರಾಜ ವಂಶಕ್ಕೆ ಸೇರಿದ ಆರು ಜನ ರಾಜಕುಮಾರರಿದ್ದಾರೆ. ನಮ್ಮ ಪ್ರಜೆಗಳು ನೈತಿಕ ಸ್ಥೈರ್ಯ ಮತ್ತು ಧೈರ್ಯವನ್ನು ಒಮ್ಮೆಗೇ ಕಳೆದುಕೊಂಡು, ತಮ್ಮನ್ನು ತೊರೆದು ಬಿಡಲಾಯಿತೆಂದು ಭಾವಿಸದೆ ಇರಬೇಕೆಂದರೆ ರಾಜವಂಶದ ಯಾರಾದರೊಬ್ಬರು ಚಿತ್ತೂರಿನಲ್ಲಿರಲೇ ಬೇಕಾಗುತ್ತದೆ".

"ನಾನು ರಾಜವಂಶಕ್ಕೆ ಸೇರಿದವನು", ಅವರ ದನಿ ಗುಡುಗಿನ ಸದ್ದಿನಂತೆ ಆತಂಕಕಾರಿಯಾಗಿತ್ತು. ಅವರು ತಮ್ಮನ್ನು ತಾವು ನೇರವಾಗಿ ದೃಢಪಡಿಸಿಕೊಂಡು, ತಮ್ಮ ಗೌರವವನ್ನು ಪೂರ್ಣವಾಗಿ ತಮ್ಮ ಸುಪರ್ದಿಗೆ ತಂದುಕೊಂಡರು.

"ಹೌದು ಮಾವ ನೀವು ಸರಿಯಾಗಿಯೇ ಹೇಳಿದಿರಿ. ಈ ರಾಜಧಾನಿ ಇನ್ನೂ ಕ್ರಿಯಾಶೀಲವಾಗಿ ನಡೆಯುತ್ತಿದೆ. ಎಂದರೆ, ಅದಕ್ಕೆ ಕಾರಣ ನಿಮ್ಮ ಉಪ್ಥಿತಿ ಮತ್ತು ನೇತೃತ್ವ. ಆದರೆ ನಾನು ಮಹಾಪ್ರಭುಗಳ ಮಗ. ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ ಹಿರಿಯ ಮಗ ಬೇರೆ. ಹಾಗಾಗಿ ನಾನು ಜನಗಳೊಂದಿಗೆ ಇರಲು ಇಚ್ಛಿಸುತ್ತೇನೆ ಅಲ್ಲದೆ ನೀವು

ಅನುಮತಿ ನೀಡಿದರೆ, ನಿಮ್ಮ ಕೈಕೆಳಗೆ ಕೆಲಸ ಮಾಡಲಿಚ್ಛಿಸುತ್ತೇನೆ". ತಂದೆಯವರೊಂದಿಗೆ ಅವರಿಗಿರುವ ಸಂಬಂಧದೊಂದಿಗೆ ನಾನು ರಾಜಿ ಮಾಡಿಕೊಳ್ಳಕೂಡದೆಂಬ ಕಾರಣಕ್ಕೆ ತಕ್ಷಣ ಸೇರಿಸಿದೆ "ಅನಧಿಕೃತವಾಗಿ ಮಾತ್ರ".

ನನ್ನ ಮಾತು ಸಹಜವಾಗಿಯೇ ಮಾವನವರ ಹೃದಯಕ್ಕೆ ತಾಕಿತು. ಹಾಗಾಗಿ ಮಾಮೂಲಿಗಿಂತ ಒರಟಾದರು. "ನೀನು ಯಾವಾಗಲೂ ಹೇಸರಗತ್ತೆ ಹಾಗೆ ಸದಾ ಮೊಂಡು. ಇನ್ನು ಈಗ ವಯಸ್ಸು ಮೀರಿದ ಮೇಲೆ ನಿನಗೆ ಮತ್ತೆ ಮತ್ತೆ ವಿವೇಕವನ್ನು ಹೇಳುವುದರಲ್ಲಿ ಅರ್ಥವಿಲ್ಲ".

* * *

ಪ್ರತಿಯೊಂದು ಬಿಕ್ಕಟ್ಟಿಗೂ ಒಬ್ಬ ರಕ್ಷಕನ ಅಗತ್ಯವಿದೆ. ನನ್ನ ಹೆಂಡತಿ ಈ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ತನ್ನ ಪಾತ್ರವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದಳು. ಅವಳಿಗೆ ಸಾಕಷ್ಟು ಅನುಯಾಯಿಗಳಾಗಲು ಶುರುವಾದರು. ಅವಳ ಸುತ್ತ ಸೇರಿದವರು ಕೇವಲ ಹೆಂಗಸರಷ್ಟೇ ಆಗಿರಲಿಲ್ಲ. ನಡೆದಾಡಲು ಶಕ್ತಿ ಇದ್ದ ರೋಗಿಗಳು ಸೇರಿದಂತೆ, ನಗರದಲ್ಲಿ ಜೀವದಿಂದ ಉಳಿದವರು ಬೃಂದಾವನಿ ದೇವಸ್ಥನದಲ್ಲಿ ಬೆಳಗಿನ ಮತ್ತು ಸಂಜೆಯ ಆರತಿಯ ಸಮಯದಲ್ಲಿ ಅವಳೊಂದಿಗೆ ಸೇರುತ್ತಿದ್ದರು. ಅವಳು ಹಗಲಿನ ಬಹಳಷ್ಟು ಸಮಯವನ್ನು ಹಾಗೂ ರಾತ್ರಿಯ ಸ್ವಲ್ಪ ಹೊತ್ತು ಕೃಷ್ಣನ ಎದುರಿನಲ್ಲಿದ್ದುಕೊಂಡು, ಚಿತ್ತೂರಿನ ರಕ್ಷಣೆಗಾಗಿ ಬರಬೇಕೆಂದು ಪ್ರಾರ್ಥಿಸುತ್ತಿದ್ದಳು. ಹಾಗಾಗಿ ನಾನು ಅವಳು ಭೇಟಿಯಾಗಲೇ ಇಲ್ಲ.

ಕೌಸಲ್ಯಳು, ಬೃಂದಾವನಿ ದೇವಸ್ಥಾನಕ್ಕೆ ತೀರ ಸನಿಹದಲ್ಲಿದ್ದ ಒಂದು ಹಳೆಯ ಆಸ್ತಿಯನ್ನು ಅಧಿಕಾರಯುತವಾಗಿ ಕೇಳಿ ಪಡೆದು ಮಕ್ಕಳ ಅನಾಥಾಲಯವಾಗಿ ಪರಿವರ್ತಿಸಿದ್ದಳು. ಅವಳು ಅದಕ್ಕೆ ನಂದನವನ ಎಂದು ಹೆಸರಿಟ್ಟಳು. ಯಾವತ್ತಿಗೂ ಅವಳು ಹಗುರವಾದ ಮಾತಿನವಳಲ್ಲ. ಹೆಚ್ಚು ಹೆಚ್ಚು ಮೌನಿಯಾದಳು. ಕೆಲವೊಮ್ಮೆ ಅವಳು ಮನೆಗೆ ಬಂದು, ನನ್ನ ಭುಜದ ಮೇಲೆ ತನ್ನ ತಲೆಯನ್ನು ಹುದುಗಿಸಿಕೊಳ್ಳುತ್ತಿದ್ದಳು. ಮಕ್ಕಳ ಅನಾಥಾಲಯದಲ್ಲಿ ಅಸಾಧಾರಣ ಸಂಖ್ಯೆಯಲ್ಲಿ ಮಕ್ಕಳು ಸತ್ತಿರಬೇಕು ಅಥವಾ ತಾನು ತುಂಬಾ ಹಚ್ಚಿಕೊಂಡ ಯಾವುದೋ ಮಗುವೊಂದನ್ನುಳಿಸಲು, ತಾನು ದಿನದ ಇಪ್ಪತ್ತ ನಾಲ್ಕು ಗಂಟೆಯೂ ಶ್ರಮಿಸಿಯೂ ಅದು ಯಶಸ್ವಿಯಾಗದೆ ಹೋದದ್ದನ್ನು ತಿಳಿಯಲು ನನಗಿದ್ದ ಮಾರ್ಗ ಅದೊಂದೇ. ಆಗಾಗ ನಾವು ಸೇರಿದ್ದೇವೆ. ಅವಳು ಯಾವತ್ತೂ ಬೇಡವೆನ್ನಲಿಲ್ಲ. ನನಗೆ ನೀಡಿದಂತೆಯೇ ಅವಳಿಗೂ ಅದು ಬಹುಶಃ ಯೋಚಿಸಲು ಬೇರೆನನ್ನೋ ನೀಡಿರಬೇಕು. ಗಂಡು ನವಿಲುಗಳಷ್ಟೆ ಅಲ್ಲ, ಅಳಲು, ಅಲಕ್ಷ್ಯ, ಸಾವು, ನೋವು, ಸಂತೋಷಗಳನ್ನು ಗಣನೆಗೆ ತಾರದೆಯೆ ನಾವು ಪ್ರೀತಿ ಮಾಡುತ್ತೇವೆ ಎಂದು ನನಗೆ ಅರಿವಾಯಿತು.

ಒಂದು ಗುರುವಾರ ಸಾಯಂಕಾಲ, ನಾನು ವಾಸ್ತು ಶಿಲ್ಪಿಯನ್ನು ನಂದನವನಕ್ಕೆ ಕರೆದೊಯ್ದೆ. ಅನಾಥಾಲಯದ ಸೂರು ಸುಮಾರು ಕಡೆ ಬಿರಿದಿದೆ ಎಂದೂ, ಸೂರಿಗೆ ಆಧಾರವಾದ ಕಂಬಗಳೂ ತೀರುಗಳು ಮತ್ತು ಸೂರಿಗೆ ಹಾಕಿದ ಚದರ ಬಿಲ್ಲೆಗಳು ಯಾವಾಗ ಬೇಕಾದರೂ ಕುಸಿದು ಬೀಳಬಹುದು ಎಂದು ಈಗ್ಗೆ ಕೆಲವು ರಾತ್ರಿಗಳ ಮುಂಚೆಯೇ ಕೌಸಲ್ಯ ನನಗೆ ತಿಳಿಸಿದ್ದಳು. ನಾವು ತಡವಾಗಿ ಹೊರಟಿದ್ದರೂ ಸೊಗಸಾದ ರೀತಿಯಲ್ಲಿ ಕುದುರೆಯೇರಿ ಸಾಗುತ್ತಿದ್ದೆವು. ಕಾರಣ ರಸ್ತೆಗಳೆಲ್ಲ ಬಹುಮಟ್ಟಿಗೆ ಖಾಲಿಯಾಗಿದ್ದುವು. ಈ ದಿನಗಳಲ್ಲಿ ಏಳುಗಂಟೆಯ ನಂತರ ಮನೆಬಿಟ್ಟು ಹೊರಡುವ ಧೈರ್ಯ ಯಾರಿಗೆ ತಾನೆ ಇದೆ ಎಂದು ನಾನು ಅಂದುಕೊಂಡಿದ್ದೆ. ಆದರೆ ನನ್ನ ಅನಿಸಿಕೆ

ತಪ್ಪಾಗಿತ್ತು. ಈ ಒಂದು ಸಂದರ್ಭದಲ್ಲಾದರೂ, ಜನ ಶೂನ್ಯವಾದ ರಸ್ತೆಗಳಿಗೂ ಸಾಂಕ್ರಾಮಿಕ ರೋಗಕ್ಕೂ ಏನೂ ಸಂಬಂಧವಿರಲಿಲ್ಲ. ಚಿತ್ತೂರಿನ ಎಲ್ಲರೂ; ಸತ್ತವರು, ಬದುಕಿರುವವರು, ಹುಡುಗರು, ಮುದುಕರು, ಸಾಮಾನ್ಯ ಜನರು, ಸೈನಿಕರು, ಸೂಳೆಯರು, ತಲೆ ಹಿಡುಕರು, ಗಂಡಸರು, ಹೆಂಗಸರು ಮತ್ತು ಮಕ್ಕಳು ಎಲ್ಲರೂ ಬೃಂದಾವನ ದೇವಸ್ಥಾನದಲ್ಲಿದ್ದರು. ಅದೇನು ಕೃಷ್ಣನ ಹಬ್ಬವೆ? ದೇವರ ವಿಗ್ರಹಗಳು ಕಳುವಾಗಿದ್ದವೆ? ಅಥವಾ ಏನಾದರೂ ಅಪಘಾತ ಸಂಭವಿಸಿತ್ತೆ? ಮುಂದೆ ಹೋಗಲು ಜಾಗವೇ ಇರಲಿಲ್ಲ. ದೇವಸ್ಥಾನ ಮತ್ತು ಮಹಾರಾಣ ಮಾರ್ಗ ಎಲ್ಲವೂ ಕಿಕ್ಕಿರಿದು ತುಂಬಿದ್ದವು. ಕೆಲವರು ನಡುಗುತ್ತಿದ್ದರು. ಆದರೆ ಮಳೆಯಲ್ಲಿ ನೆನೆಯುವುದಕ್ಕಾಗಲಿ, ಜ್ವರದಿಂದ ನರಳುವುದಕ್ಕಾಗಲೀ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಜನರ ಗುಂಪು ನನ್ನನ್ನು ಕಂಡಕೂಡಲೇ ಓಡಿ ಬಂದು ಬೇಫ಼ಿಕೀರ್‌ನ ಲಗಾಮನ್ನು ಹಿಡಿದುಕೊಂಡರು. ಈ ಬಾರಿ ನನ್ನ ರಕ್ಷಣೆಗೆ ಯಾವ ಜೋ ಹರಿ ಬಾಯಿಯೂ ಇರಲಿಲ್ಲ. ಸಾವಿರಾರು ಜನರ ಜನಜಂಗುಳಿಯಿಂದ ರಕ್ಷಿಸಲು ದಿಟ್ಟ ಮತ್ತು ಸ್ವಾಮಿನಿಷ್ಠ ಮಂಗಳ ಕೂಡ ಇಲ್ಲ. ನನ್ನ ಜೊತೆಗಾರನೂ ಕೆಳಗಿಳಿಯಬೇಕಾಯಿತು.

"ಅವನ ಪಾಡಿಗೆ ಅವನನ್ನು ಬಿಟ್ಟು ಬಿಡಿ. ನಾನು ಮಾತ್ರ ಹೊಣೆಗಾರ." ನನ್ನ ಮಾತನ್ನು ಯಾರೂ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನನಗೆ ದಾರಿಮಾಡಿಕೊಡಲಷ್ಟೇ ಅವರು ದೂರಕ್ಕೆ ಸರಿದರು. ಹುಟ್ಟು ಮತ್ತು ಸಾವಿನ ಚಕ್ರ ಒಂದೇ ಜನ್ಮದಲ್ಲಿ ಸಂಭವಿಸಬಹುದು ಅಂತ ನನಗೆ ಗೊತ್ತಿರಲಿಲ್ಲ. ನರಕ ಎನ್ನುವುದು ಬೇರೆಲ್ಲೋ ಇಲ್ಲ ಹಾಗೂ ಇನ್ನಾವುದೋ ಜನ್ಮದ್ದಲ್ಲ. ಅದು ಅದೇ ರೀತಿಯ ಭಯಂಕರ ಅನುಭವಗಳಿಗೆ ಮತ್ತೆ ಮತ್ತೆ ಒಳಗಾಗುವುದು. ನಾನು ಮೆಟ್ಟಿಲುಗಳ ಹತ್ತಿರ ಇದ್ದೆ. ನಾನು ವರ್ಷಗಳ ಹಿಂದೆ ಆ ದನಿಯನ್ನು ಕೇಳಿದ್ದೆ. ನಾವು ಮಹಾರಾಣಾ ಮಾರ್ಗಕ್ಕೆ ತಿರುಗಿ ನಾಗಾಲೋಟದಲ್ಲಿ ಕುದುರೆಯನ್ನೋಡಿಸುತ್ತಿದ್ದಂತೆ ಆ ದನಿಯನ್ನು ಈ ದಿನ ಕೇಳಿದ್ದೆ. ಆದರೆ ಆ ವಸ್ತು ಸಂಗತಿಯನ್ನು ನನ್ನ ಮನಸ್ಸು ಒಪ್ಪಿಕೊಳ್ಳಲಿಲ್ಲ. ಅದೇ ಹಾಡೆ? ನಿಜಕ್ಕೂ ನನಗೆ ನೆನಪಿರಲಿಲ್ಲ. ಹೌದು, ನಿನಗೆ ನೆನಪಿದೆ, ಅದರ ಪ್ರತಿಯೊಂದು ಶಬ್ದವೂ ನೆನಪಿದೆ, ಮತ್ತು ಇದು ಬೇರೆ ಅಂತ ನಿನಗೆ ತುಂಬ ಚೆನ್ನಾಗಿ ಗೊತ್ತಿದೆ. ಒಂದು ಸಲಕ್ಕೆ ಒಂದು ಮೆಟ್ಟಿಲು ಮಹಾರಾಜ್ ಕುಮಾರ್, ಒಂದು ಮೆಟ್ಟಿಲು ಮತ್ತು ಇನ್ನೊಂದೇ ಮೆಟ್ಟಿಲು. ನೀನು ಕೈಲಾಸ ಪರ್ವತದ ತುತ್ತ ತುದಿಯಲ್ಲಿರುವೆ. ಅಲ್ಲಿ ತನ್ನ ಬೆರಳುಗಳಿಂದ ಅವಳು ಏಕತಾರಿಯನ್ನು ಮೀಟುತ್ತಿದ್ದಳು. ಅವಳ ಕಣ್ಣುಗಳು ಮುಚ್ಚಿದ್ದುವು, ಅವಳು ಬಾಹ್ಯ ಪ್ರಜ್ಞೆಯಿಲ್ಲದೆ ಸಮಾಧಿ ಸ್ಥಿತಿಯಲ್ಲಿದ್ದಳು. ಅವಳ ಶರೀರ ಅತ್ತ ಇತ್ತ ತೂಗಾಡುತ್ತಿತ್ತು. ಅವಳು ಪಲ್ಲವಿಗೆ ಬಂದಾಗ, ಅಲ್ಲಿದ್ದ ಸಾವಿರಾರು ಜನರು ಅದನ್ನು ಅಲ್ಲಿಂದ ಎತ್ತಿಕೊಂಡು ತಾರಕಕ್ಕೇರಿದರು. ಅವರು ಮತ್ತೆ ಮತ್ತೆ ಅತಿಕಾಂಕ್ಷೆಯಿಂದ ಅದನ್ನೇ ಪುನರಾವರ್ತಿಸಿದರು. ಮತ್ತೆ ಪೂರ್ವ ನಿಶ್ಚಿತವಾದೊಂದು ಸಂಕೇತ ಸ್ಥಾನದಲ್ಲಿ ಅವಳು ಮುಂದಿನ ಹಾಡಿಗೆ ತಿರುಗಿದಳು.

ಅರಳದಿರೆ ಅದೆಂಥ ಅರಳು?
ಪುಪ್ಪಸವ ತುಂಬದಿರೆ ಅದೆಂಥ ಎಲರು?
ತೃಷೆಯ ತಣಿಸದಿರೆ ಅದೆಂಥ ಜಲ?
ತನುವ ಕಾಯಿಸದಿರೆ ಅದೆಂಥ ತಪನ?
ಸುಖವ ನೀಡದಿರೆ ಅದೆಂಥ ದೇಹ?

(ಅವಳನ್ನು ನಂಬು, ಐಂದ್ರಿಯಿಕ ಮತ್ತು ಆಧ್ಯಾತ್ಮಿಕಗಳೆರಡನ್ನೂ ಒಂದೇ ಎಂಬಂತೆ ಕಾಣಲು ಅವಳನ್ನು ನಂಬು)

ಸಗ್ಗಕ್ಕೆ ಏರದಿರೆ ಪ್ರಾರ್ಥನೆಯದೆಂತು?
ರಕ್ಷಣೆಯ ನೀಡದಿರೆ ರಕ್ಷಕನದೆಂತು?
ಓದೇವನೆ! ರಕ್ಷಿಸು, ರಕ್ಷಿಸು, ರಕ್ಷಿಸು
ಶಿಶುಪಾಲನ ಮೇಲೆ ಸುದರ್ಶನವನೆತ್ತೆ
ನೂರು ತಪ್ಪನೆಸಗಬೇಕಾಯ್ತುವನು
ನಾವಾದರೋ ನೂರೊಂದು ತಪ್ಪುನೆಸಗಿಹೆವು
ಎಲ್ಲಿರುವೆ ನೀನು?
ನೀನು ಕಾಣಿಸಿಕೊಳಲು ದ್ರೌಪದಿಯು
ನಿರ್ವಸ್ತ್ರಳಾಗಬೇಕಾಯ್ತು
ನಾವು ಹುಟ್ಟಿದ್ದು ಬೆತ್ತಲೆ
ಎಲ್ಲಿರುವೆ ನೀನು? ಎಲ್ಲಿರುವೆ ನೀನು?
ದೇವತೆಗಳೊಡೆಯ ಇಂದ್ರನ ಕೋಪ
ಭೀಕರ ಮಳೆಗರೆಯೆ
ನಿನ್ನ ಕಿರು ಬೆರಳಿಂದ
ಗೋವರ್ಧನ ಗಿರಿಯನೆತ್ತಿ
ಬೃಂದಾವನವ ರಕ್ಷಿಸಿದೆ
ಎಲ್ಲಿರುವೆ ನೀನು?
ಓ ದೇವರೆ, ರಕ್ಷಿಸೆಮ್ಮನು, ರಕ್ಷಿಸೆಮ್ಮನು, ರಕ್ಷಿಸೆಮ್ಮನು
ವಿಷೂಚಿಯಿಂದ, ಗಡ್ಡೆರೋಗದಿಂದ, ಕಷ್ಟಗಳಿಂದ
ಕಾಪಾಡು ನಮ್ಮನು
ರಕ್ಷಿಸದಿರೆ ರಕ್ಷಕನದೆಂತು?

ಕಡೆಯ ರಕ್ಷಿಸೆಮ್ಮನು, ರಕ್ಷಿಸೆಮ್ಮನು ಎಂಬ ಪಲ್ಲವಿಯ ಚರಣದ ನಡುವೆ ಅವಳು ಉನ್ಮಾದದ ಯಾವ ಎತ್ತರಕ್ಕೆ ಏರಿದಳೆಂದರೆ, ಅವಳು ನಿಶ್ಚೇಷ್ಟಿತಳಾಗಿ ಕುಸಿದು ಬಿದ್ದಳು. ಯಾರೊಬ್ಬರೂ ಚಲಿಸಲಿಲ್ಲ. ಆ ನಂತರ ಒಬ್ಬೊಬ್ಬರಾಗಿ ಹೋಗಿ ಅವಳ ಪಾದಗಳನ್ನು ಸ್ಪರ್ಶಿಸಿದರು. ಒಬ್ಬರ ಮೇಲೊಬ್ಬರು ನುಗ್ಗಿ ಗೊಂದಲವಾಗಬೇಕಿತ್ತು. ಆದರೆ ಅವರೆಲ್ಲರೂ ಒಬ್ಬರ ಹಿಂದೊಬ್ಬರು ಸರತಿಯ ಸಾಲಿನಲ್ಲಿ ನಿಂತರು. ಕಾಲ ಎಷ್ಟೆಲ್ಲ ಬದಲಾಗಿದೆ. ಕುಣಿತದ ಹುಡುಗಿ, ಹೊಲಸು ಹೆಂಗಸು, ರಾಜ ಸೂಳೆ, ಹೀಗೆ ಭಾಷೆಯಲ್ಲಿರುವ ಎಲ್ಲ ಹೊಲಸು ಹೆಸರಿನಿಂದ ಚಿತ್ತೂರಿನ ಜನ ಅವಳನ್ನು ಕರೆದಿದ್ದರು. ಅವೆಲ್ಲ ಮುಗಿದು ಹೋದ ಮೇಲೆ ಅವರು ಹೊಸವನ್ನು ಸೃಷ್ಟಿಸಿದರು. ಅಂತಿಮವಾಗಿ, ನನ್ನ ಹೆಸರು ನಿಷ್ಠೆಯಿಲ್ಲದ ಸತಿಯ ಗಂಡ ಎನ್ನುವುದಕ್ಕೆ ಪರ್ಯಾಯವಾದಂತೆ ಅವಳ ಹೆಸರು 'ನಿಷ್ಠೆಯಿಲ್ಲದ ಹೆಂಡತಿ' ಎನ್ನುವುದಕ್ಕೆ ಸಮಾನಾರ್ಥಕವಾಗಿದೆ. ಈಗ ಅವಳನ್ನು 'ಛೋಟೀ ಸಂತ್ ಮಾಯೀ' (ಕಿರಿಯ ಸಂತಮಾತೆ) ಎಂದು ಕರೆಯಲಾಗುತ್ತಿದೆ. ಬಹು ದೀರ್ಘ ಸಮಯದವರೆಗೆ ಪ್ರದರ್ಶನಕ್ಕೊಳಗಾದದ್ದೇ ಆದರೆ ಆಗ ಕಾಲವು ಯಾವುದಕ್ಕೇ ಆದರೂ ಒಗ್ಗಿಕೊಂಡು ಹೋಗುವಂತೆ ಮಾಡಿ ಬಿಡುತ್ತದೆ. ಹೊಟ್ಟೆ ತುಂಬಿರುವುದಕ್ಕೂ ಹೊಟ್ಟೆಗಿಲ್ಲದೆ ಇರುವುದಕ್ಕೂ ಸಾಮಾನ್ಯಕ್ಕೂ ಅಸಾಮಾನ್ಯಕ್ಕೂ, ನೆರವೇರಿದ್ದಕ್ಕೂ ನಿಷಿದ್ಧವಾದುದ್ದಕ್ಕೂ, ಶ್ರೀಮಂತಿಕೆಗೂ ದಾರಿದ್ರ್ಯಕ್ಕೂ, ಇರುವ ದೂರವೇನಿದ್ದರೂ ಕೇವಲ ರೂಢಿಗತವಾದ್ದು.

ಅವಳು ಹಾಡಿ, ನೃತ್ಯ ಮಾಡಿದಾಗ ನಾನು ಕನಲಿಕೆಂಡವಾಗಿ ಅವಳ ಕೈಯಲ್ಲಿದ್ದ ಊಟದ ತಟ್ಟೆಯನ್ನು ಒದೆದು ಬಿಟ್ಟಿದ್ದೆ. ಕಳೆದ ಸಲ ನಾನು ಇಲ್ಲಿದ್ದೆ. ನನ್ನ ಹೊಟ್ಟೆಯಲ್ಲಿನ ಹುಳಿ ಆಮ್ಲ ನನ್ನ ತಲೆಯನ್ನು ಕೊರೆದಿತ್ತು. ಅವಳನ್ನು ಅರಮನೆಯ ಕೊಠಡಿಯಲ್ಲಿ ಕೂಡಿ ಹಾಕಬೇಕೆಂದು ನಾನು ಆದೇಶ ಕೊಟ್ಟಿದ್ದೆ. ಈಗ ಅವಳು ಹಾಡಿದರೆ, ನನಗೆ ಕೋಪ ಬರುವುದಿಲ್ಲ ಅಥವಾ ಭುಜವನ್ನು ಕೂಡ ಕುಣಿಸುವುದಿಲ್ಲ. ನಾನು ಕಿವಿ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುತ್ತೇನೆ. ನಿಜ ಹೇಳಬೇಕೆಂದರೆ ನಾನು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನು ಬಿಟ್ಟಿದ್ದೇನೆ. ಅವಳು ಅವಳ ದಾರಿಯಲ್ಲಿ ಹೋಗುತ್ತಾಳೆ. ನಾನು ನನ್ನ ದಾರಿಯಲ್ಲಿ.

ಅವಳು ಎಚ್ಚೆತ್ತು ಮೊದಲಿನಂತಾದಳು. ಅವಳು ಅತ್ಯಂತ ದೀನಳಾದಳು. ಎದ್ದು ಕುಳಿತಳು. ನಂತರ ನಿಂತಳು. ಮೊದಲು ತನ್ನ ಪರಕಾರದಿಂದ ನಂತರ ತನ್ನ ಕೈಗಳಿಂದ ಪಾದಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದಳು. ಅದು ನಿಷ್ಫಲವಾಯಿತು. ಆ ಜನರು ತಟ್ಟೆಯಲ್ಲೊಂದು ನಾಣ್ಯವನ್ನು ಹಾಕಿ, ತಮ್ಮ ಕೈಗಳಿಂದ ಅವಳ ಕಾಲು ಮುಟ್ಟಿ ನಮಸ್ಕರಿಸುತ್ತಿದ್ದರು. ಇಲ್ಲವೆ ತಮ್ಮ ಹಣೆಯನ್ನು ಅವಳ ಪಾದಕ್ಕೆ ತಾಕಿಸುತ್ತಿದ್ದರು.

"ಬೇಡಿ, ಬೇಡಿ ನನ್ನ ಪಾದಗಳ ಬಳಿ ಅಲ್ಲ, ನೀವು ಪ್ರಾರ್ಥಿಸಬೇಕಾದ್ದು, ದೇವರ ಪಾದಗಳ ಬಳಿ ಕುಳಿತು ಪ್ರಾರ್ಥಿಸಬೇಕು."

ಅವರು ಮುಗುಳ್ನಕ್ಕು ಮುಂದೆ ನಡೆದರು. ಒಂದು ವೇಳೆ ಅವಳ ಪಾದಗಳನ್ನು ಸ್ಪರ್ಶಿಸಲಾಗದಿದ್ದರೆ, ಅವಳು ನಿಂತಿದ್ದ ಜಾಗವನ್ನೇ ಸ್ಪರ್ಶಿಸುತ್ತಿದ್ದರು. ಅವಳನ್ನು ಬಹಳವಾಗಿ ಪ್ರೀತಿಸಿ, ಅವಳಿಗೆ ಲೇಸಾಗಲಿ ಎಂದು ಬಯಸಿದ್ದ ರಾಣಿ ಕರ್ಮವತಿ ಮತ್ತು ವಿಕ್ರಮಾದಿತ್ಯರು ಇಲ್ಲಿ ಇದ್ದಿದ್ದರೆ ಹೇಗಿತ್ತು ಎಂದು ನನ್ನ ಮನಸ್ಸಿಗೆ ಅನ್ನಿಸಿತು. ಆ ಕೃಷ್ಣ ಜನ್ಮಾಷ್ಟಮಿಯ ಆ ನಿರ್ಧಾರಕ (ವಿಧಿನಿಶ್ಚಿತ) ದಿನದಂದೇ ಅವಳ ನಡೆವಳಿಕೆ ನಾಚಿಕೆಗೇಡಿನದು ಎಂದು ಅವರು ನಿರ್ಧರಿಸಿ ಬಿಟ್ಟಿದ್ದರು. ಆ ಹೊತ್ತು ಅವರು ಅವಳ ಬಗ್ಗೆ ಕುಹಕ ನಗೆ ನಕ್ಕು ತಿರಸ್ಕಾರದ ನೋಟ ಬೀರಿದ್ದರು. ಅವರೀಗ ಅವಳನ್ನು ದ್ವೇಷಿಸುತ್ತಿದ್ದರು. ನಾನು ದೇವಸ್ಥನದ ಪ್ರಧಾನ ಪೂಜಾರಿಯತ್ತ ನೋಡಿದೆ ಅವನ ಕಣ್ಣುಗಳಲ್ಲಿ ಭಯ ಮತ್ತು ಜುಗುಪ್ಸೆ ತುಂಬಿತ್ತು.

ಅವರೆಲ್ಲರೂ ಕಿರಿಯ ಸಂತಳು ಎಂದು ಕರೆಯುವ ಈ ನನ್ನ ಹೆಂಡತಿ ಇದೀಗ ಅವರ ದೇವಸ್ಥಾನವನ್ನು ಅಷ್ಟೇ ಅಲ್ಲ ಅವರ ಮಹತ್ವವನ್ನೂ ತಾನೇ ಆಕ್ರಮಿಸಿ ಬಿಟ್ಟಿದ್ದಳು. ಪ್ರಧಾನ ಮಹಂತರು ತಮ್ಮ ಕೈಯೆತ್ತಿದರು. ಒಳಗಿನ ಗುಂಪು ಮತ್ತು, ಹೊಂಗೂ ನಿಶ್ಶಬ್ದವಾಗಿರಬೇಕೆಂಬ ಮಾತು ಒಬ್ಬರಿಂದೊಬ್ಬರಿಗೆ ತಲುಪುತ್ತಿದ್ದಂತೆ, ಹೊರಗಿನ ಗುಂಪು ಮೌನತಾಳಿತು. "ಊಹಿಸಲೂ ಆಗದಷ್ಟು ಉತ್ಪಾತವನ್ನುಂಟು ಮಾಡಿದ ಭಯಂಕರ ಸಾಂಕ್ರಾಮಿಕ ಜಾಡ್ಯದಿಂದ ನಮ್ಮ ರಾಜಧಾನಿಯನ್ನು ಮುಕ್ತಗೊಳಿಸುವ ಸಲುವಾಗಿ ಒಂದು ತಿಂಗಳ ಕಾಲ ಸಂಕಟವಿಘ್ನ ಯಜ್ಞವನ್ನು ನಡೆಸಬೇಕೆಂದು ಚಿತ್ತೂರಿನ ಅರ್ಚಕ ವೃಂದವು ತೀರ್ಮಾನಿಸಿದೆ". "ಪುರೋಹಿತನ ಘಂಟಾ ಘೋಷವು ಇದನ್ನು ಯಾರು ವಿರೋಧಿಸುತ್ತಾರೋ ನೋಡೋಣ ಅದರಲ್ಲೂ ರಾಜಕುಮಾರಿ ಏನಾದರೂ ವಿರೋಧಿಸುವಳೇನೋ ನೋಡೋಣ ಎಂದು ಸವಾಲೆಸೆದಂತಿತ್ತು. 'ಪುರೋಹಿತ ಸಮುದಾಯವು ಅಹೋರಾತ್ರಿ ಪ್ರದಕ್ಷಿಣೆಗಳನ್ನು ಹಾಕುತ್ತ ದೇವತೆಗಳನ್ನು ಆಹ್ವಾನಿಸಿ, ಅವರನ್ನು ಸುಪ್ರೀತಗೊಳಿಸಿ ಅವರ ಕೃಪೆಗಾಗಿ ಮೊರೆಯಿಡುತ್ತದೆ. ನಮ್ಮ ಪ್ರಾರ್ಥನೆಗೆ ಅವರು ಅನುಕೂಲಕರವಾಗಿ ಓಗೊಡುವವರೆಗೂ, ನಾವು ವಿರಮಿಸುವುದಿಲ್ಲ. ಸಂಕಟವಿಘ್ನ ಯಜ್ಞ ಎಂಬುದು ದುಷ್ಟ ಶಕ್ತಿಗಳ ವಿರುದ್ಧ ಮನುಷ್ಯನಿಗೆ ಇರುವ ಅತ್ಯಂತ ಪ್ರಬಲ ಪ್ರತಿರೋಧ. ನಾವು ಆ ಬಗ್ಗೆ ಭರವಸೆ ನೀಡುತ್ತೇವೆ."

ಹೊರಗಡೆ ಇದ್ದ ಗುಂಪಿನಿಂದ ಕ್ಷೀಣ ದನಿಯೊಂದು ಕೇಳಿಬಂತು "ಕಿರಿಯ ಸಂತ ಅಮ್ಮನವರೇ ನಮ್ಮ ಯಜ್ಞ. ಈ ದೇಶವನ್ನೂ ನಿಮ್ಮೆಲ್ಲರನ್ನೂ ಪರಿಶುದ್ಧಗೊಳಿಸುವ ಅಗ್ನಿ ಆಕೆ".

ಆ ತೋರಿಕೆಯ ಪಂಡಿತ ದನಿಯಿಂದ ಬೃಂದಾವನಿ ದೇವಾಲಯವು ಕುಸಿದು ಬೀಳದಿದ್ದುದೇ ಒಂದು ದೊಡ್ಡ ಆಶ್ಚರ್ಯ. ಜನಗಳು ಬರಗೆಟ್ಟಂತೆ ಗಹಗಹಿಸಿ ನಕ್ಕರು.

"ನಮ್ಮಲ್ಲಿರುವ ಈ ದುಷ್ಟಶಕ್ತಿಯನ್ನು ನಾವು ಸೋಲಿಸುತ್ತೇವೆ" ಪ್ರಧಾನ ಮಹಂತರ ದನಿ ಆ ಅಬ್ಬರವನ್ನೂ ಮೀರಿಸಿತು.

ಅವರ ಮಾತು ಯಾರನ್ನು ಉದ್ದೇಶಿಸಿತ್ತು. ಅವರು ಯಾರನ್ನು ಕುರಿತು ಹೇಳಿದ್ದರು. ವಾಂತಿ ಭೇದಿ ರೋಗವನ್ನೆ ಅಥವಾ ಜನರ ನಗೆ ಪಾಟಲಿಗೆ ಗುರಿಯಾಗಿದ್ದ ಆ ಚಿಕ್ಕ ವ್ಯಕ್ತಿಯನ್ನೆ? ಅಥವಾ ದೈವ ಸಾನ್ನಿಧ್ಯಕ್ಕೆ ಹೋಗಲು, ಪುರೋಹಿತ ಪೂಜಾರಿ ಎಂಬ ಮಧ್ಯವರ್ತಿಗಳ ಅಗತ್ಯವಿರದವಳ ಹಾಗಿರುವ ಹಾಗೂ ಅವನೊಂದಿಗೆ ಇರುವ ಮೊದಲ ಹೆಸರೇ ಅವಳದು ಎನ್ನುವ ಹಾಗಿರುವ ನನ್ನ ಹೆಂಡತಿಯನ್ನೆ? ನನಗೂ ನನ್ನ ಹೆಂಡತಿಗೂ ಇದ್ದಂಥ ಶತ್ರುಗಳ ಥರದವರು ಹಾಗೂ ಅಷ್ಟೊಂದು ಸಂಖ್ಯೆಯ ಶತ್ರುಗಳು ಇನ್ನಾವ ರಾಜದಂಪತಿಗೂ ಇರಲಾರರು. ಚಿತ್ತೂರಿನ ಪುರೋಹಿತ ಪೂಜಾರಿಗಳನ್ನು ಅಂಥ ಶತ್ರುಗಳ ಪಟ್ಟಿಯಲ್ಲಿ ನಾವೀಗ ಸೇರಿಸಬಹುದು.

"ಕಿರಿಯ ಸಂತ ಅಮ್ಮನವರು ಚಿರಂಜೀವಿಗಳಾಗಲಿ" ಎಂದು ಹೆಂಗಸೊಬ್ಬಳು ಗಟ್ಟಿಯಾಗಿ ಕಿರುಚಿದಳು. ಎಲ್ಲರೂ ಅದಕ್ಕೆ ತಮ್ಮ ದನಿ ಸೇರಿಸಿದರು. ಅವರನ್ನು ತಡೆಯುವವರಾರೂ ಇರಲಿಲ್ಲ.

* * *

ನಾನು ಮತ್ತು ವಾಸ್ತುಶಿಲ್ಪಿ ಅನಾಥಾಶ್ರಮವನ್ನು ವಿವರವಾಗಿ ಪರಿಶೀಲಿಸಿದ ಮೇಲೆ "ಇದಕ್ಕೆ ಅಪಾರ ಹಣ ಖರ್ಚಾಗುತ್ತದೆ" ಎಂದು ಅವನು ಹೇಳಿದನು.

"ಆಗಲಿ ಬಿಡಿ. ಮಕ್ಕಳಿಗೆ ಇರಲು ಶಾಶ್ವತವಾದೊಂದು ಸೂರು ಬೇಕಾಗುತ್ತೆ ಕೇವಲ ಬಿಕ್ಕಟ್ಟಿನ ಸಮಯದಲ್ಲಷ್ಟೇ ಅಲ್ಲ. ನಾಳೆಯ ಹೊತ್ತಿಗೆ ಇದರ ಒಂದು ಅಂದಾಜು ಕೊಡುತ್ತೀರಾ?"

"ಖಂಡಿತಾ ಈ ಕಟ್ಟಡ ತೀರಾ ಹಾಳಾಗಿದೆ ಕೂಡಲೇ ಇದರ ನಿಗಾವಹಿಸಬೇಕಾಗಿದೆ"

"ಕೌಸಲ್ಯ ಈ ಅಂದಾಜಿನೊಂದಿಗೆ ಲಕ್ಷ್ಮಣಸಿಂಹಜೀಯವರನ್ನು ಕಾಣಲು ರಾಜಕುಮಾರಿಗೆ ಹೇಳ್ತೀಯಾ? ಇದಕ್ಕೆ ಬೇಕಾದ ಹಣ ಬೃಂದಾವನಿ ದೇವಾಲಯದ ಅವಳ ಆರತಿ ತಟ್ಟೆಯಿಂದ ಬರಬಹುದು ಎಂದು ಸೂಚಿಸಲು ಅವಳಿಗೆ ತಿಳಿಸು".

ನಾನು ಇದನ್ನು ಹೇಳುತ್ತಿದ್ದಾಗ ನನ್ನ ಮುಖದ ಮೇಲೆ ಮುಗುಳ್ನಗೆ ಇಲ್ಲದೆ ಇರಬಹುದು. ಆದರೆ ಒಂದು ಸಲಕ್ಕೆ ದೇವಾಲಯದ ಪೂಜಾರಿಗಳು ಒಂದು ಫಲಪ್ರದವಾದ ಕಾರ್ಯಕ್ಕೆ ತಮ್ಮದೇ ತಿಜೋರಿಯಿಂದ ಹಣವನ್ನು ಕೊಡುತ್ತಿದ್ದಾರಲ್ಲ ಎಂಬ ಕಾರಣಕ್ಕೆ ನನ್ನ ಅಂತರಾಳದಲ್ಲಿ ಕಾವ್ಯನ್ಯಾಯ ಸಂದಿತೆಂಬ ಸಂತಸದ ಭಾವ ಉಕ್ಕಿತು. ನನ್ನ ಸಂತೋಷವೆಂಬುದು ನೀವೇ ನೋಡಿದಂತೆ ತೀರಾ ಅಗ್ಗವಾದ್ದು. ಆದರೆ ಆ ಒಂದು ಸಣ್ಣ ಸಂತೃಪ್ತಿಯ ಬದಲಾವಣೆಗೋಸ್ಕರ ನಾನು ಮತ್ತು ಚಿತ್ತೂರು ಎಂಥ ಅಪಾರವಾದ ಬೆಲೆಯನ್ನು ತೆರಬೇಕಾಯಿತು, ಎಷ್ಟೊಂದು ಸಾವಿರಾರು ಮಣ ಗಟ್ಟಲೆ, ಹಾಲು, ಬೆಣ್ಣೆ, ತುಪ್ಪ, ಹಣ್ಣುಗಳು ಮತ್ತು ಆಹಾರವನ್ನೆಲ್ಲ ದೇವರಿಗಾಗಿ ಎಂದು ಯಜ್ಞಾಗ್ನಿಯಲ್ಲಿ

ಸುರಿಯಲಾಯಿತು. ಎಷ್ಟೆಲ್ಲ ಇಂಧನವನ್ನು ಸುಡಲಾಯಿತು. ಎಷ್ಟೆಲ್ಲ ಕುರಿಮರಿಗಳನ್ನು ಬಲಿಕೊಡಲಾಯಿತು, ಎಷ್ಟೊಂದು ಕೇಸರಿಯನ್ನು ಪುಡಿಮಾಡಿ ಅರ್ಪಿಸಲಾಯಿತು. ಎಷ್ಟೆಲ್ಲ ತೆಂಗಿನಕಾಯಿಗಳನ್ನು ಒಡೆಯಲಾಯಿತು. ಎಷ್ಟೊಂದು ಜನ ಅಡಿಗೆ ಭಟ್ಟರು ಹಗಲು ರಾತ್ರಿ ಇದಕ್ಕಾಗಿ ದುಡಿದರು ಎಂಬುವರ ಅಂದಾಜಿದೆಯೆ ನಿಮಗೆ? ಯಾರನ್ನು ಸಂತೃಪ್ತಿ ಪಡಿಸಲು ಹೊರಟಿದ್ದೇವೆ ಹಾಗೂ ಏತಕ್ಕಾಗಿ? ನಮ್ಮ ಅಪರಾಧಗಳೇನು ಅದನ್ನು ಮೊದಲು ಹೇಳಿಸ್ವಾಮಿ ಆ ಮೇಲೆ ಅದನ್ನು ರುಜುವಾತು ಪಡಿಸಿ ಶಿಕ್ಷೆಯೇನೆಂದು ಹೇಳಿ. ಎಲ್ಲವೂ ತಳಬುಡವಿಲ್ಲದ ಊಹೆ, ಅನುಮಾನ, ಕಲ್ಪನೆ, ಬರಗಾಲ, ಪ್ರವಾಹಗಳು, ಕ್ಷಾಮ, ಸಾಂಕ್ರಾಮಿಕ ರೋಗ ರುಜಿನಗಳು, ವೈಯಕ್ತಿಕ ಅಥವಾ ಸಾರ್ವತ್ರಿಕವಾದ ನೋವು ನರಳಿಕೆ, ಅತಿಯಾದ, ಅತ್ಯಲ್ಪವಾದ ಸೋಲು, ನಷ್ಟ. ಇದೆಲ್ಲಕ್ಕೂ ಯಾವಾಗಲೂ ಒಂದೇ ಥರದ ವಿವರಣೆ. ನಾವೇನೋ ಒಂದು ತಪ್ಪನ್ನು ಭಯಂಕರವಾದ ತಪ್ಪನ್ನು ಮಾಡಿರಬೇಕು. ತಪ್ಪೇನು ಎಂದು ಯಾರಿಗೂ ತಿಳಿದಿಲ್ಲ, ನನ್ನ ಹಾಗೆಯೇ ನೀವು ಊಹಿಸಿದ್ದೀರಿ. ತಪ್ಪೇನು ಎಂಬುದೇ ನಮಗೆ ಗೊತ್ತಿಲ್ಲದೆ ಇದ್ದರೆ, ನಾವು ಅದನ್ನು ಸರಿಪಡಿಸುವುದಾದರೂ ಹೇಗೆ? ನನ್ನ ತಂಗಿ ಸುಮಿತ್ರಾ ಏನು ಮಾಡಿದ್ದಳು, ಸುನೇರಿಯ ಸತ್ತದ್ದಾದರೂ ಏಕೆ, ಲೀಲಾವತಿ ಮಾಡಿದ ತಪ್ಪೇನು?

ದೇವರುಗಳನ್ನು ನಾವು ಕೊಳ್ಳಬಹುದೆಂಬ ಕಲ್ಪನೆಯೇ ನನಗೆ ಯಾವಾಗಲೂ ಅತ್ಯಂತ ಸಂದಿಗ್ಧವಾದ್ದೂ, ಅಸಹ್ಯಕರವಾದದ್ದೂ ಆಗಿ ಕಂಡಿದೆ. ಆ ವಿಚಾರದ ಬಗ್ಗೆ ಹೊಸದಾಗಿ ಹೇಳುವುದೇನೂ ಇಲ್ಲ. ಋಷಿಗಳು ಇದನ್ನು ಹಲವು ಬಾರಿ, ತುಂಬ ಸೊಗಸಾಗಿ ಈಗಾಗಲೇ ಹೇಳಿದ್ದಾರೆ ಎಂದು ನನಗೆ ಖಂಡಿತ ಗೊತ್ತು. ಆದರೂ ಇದಕ್ಕೆ ಲಕ್ಷ್ಯ ಕೊಡದೆ, ದೇವತೆಗಳನ್ನು ಶಾಂತಗೊಳಿಸುವ ಕಾರ್ಯವನ್ನು ನಾವು ಮುಂದುವರಿಸಿಯೇ ಇದ್ದೇವೆ.

ಚಿತ್ತೂರಿನ ಜನತೆ, ಕಿರಿಯ ಸಂತಳ ಭಾವೋದ್ರೇಕದಿಂದ ಕೂಡಿದ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸಿದರು. ಅವಳು ಹಾಡಿ ನರ್ತಿಸುತ್ತಿದ್ದಳು. ಅವರೂ ಅದರಲ್ಲಿ ಸೇರಬಹುದಾಗಿತ್ತು. ಆದರೆ ಅವಳು ತಾಮ್ರದ ನಾಣ್ಯವನ್ನು ಕೊಡಿ ಎಂದು ಕೇಳುತ್ತಿರಲಿಲ್ಲ. ಅವರೂ ಅವಳ ಮಾತುಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಹಾಡುಗಳು ಸರಳವೂ, ಆಕರ್ಷಕವೂ ಆಗಿದ್ದುವು. ಕೊಂಕು ಮಾತು ಹಾಗೂ ಒಳ ನೋಟಗಳಿಂದ ಹರಿತವೂ ಆಗಿದ್ದುವು. ನುಡಿಯ ತಿರುವುಗಳು ಪರಿಚಿತವೇ ಆಗಿದ್ದರೂ, ಅವುಗಳನ್ನು ಅಕ್ಕಪಕ್ಕದಲ್ಲಿಡುವ ರೀತಿಯಿಂದಾಗಿ ಅವು ವಿಸ್ಮಯಕಾರಿಯಾಗಿದ್ದುವು. ಆ ಗೀತಗಳಲ್ಲಿರುವ ಪ್ರಾಮಾಣಿಕತೆ ಭಾವ ಹಾಗೂ ಅವುಗಳಿಗೆ ಅಳವಡಿಸಿದ ರಾಗಗಳಿಂದಾಗಿ ಆ ಹಾಡುಗಳು ಎಲ್ಲರ ತುಟಿಯ ಮೇಲೆ ನಲಿಯುತ್ತಿದ್ದುವು. ಅವರು ಯಜ್ಞ ನಡೆಯುತ್ತಿದ್ದಲ್ಲಿಗೂ ಹೋದರು. ಅವರಿಗೆ ಆ ಸಂಸ್ಕೃತ ಮಂತ್ರಗಳ ಒಂದಕ್ಷರವೂ ಅರ್ಥವಾಗಲಿಲ್ಲ. ಒಂದು ವೇಳೆ ಅವರಿಗೆ ಅರ್ಥವಾದರೂ, ಬಹಳಷ್ಟು ಜನ ಋತ್ವಿಕರು ಮೂರು ನಾಲ್ಕು ಸಾಲುಗಳನ್ನು ಒಟ್ಟೊಟ್ಟಾಗಿ ಸೇರಿಸಿ ಉಚ್ಚರಿಸುತ್ತಿದ್ದುದರಿಂದ, ಅದೂ ಇಡೀ ಶ್ಲೋಕದ ಸಾಲನ್ನು ಒಂದೇ ಉಸಿರಿಗೆ ಹೇಳುತ್ತಿದ್ದುದರಿಂದ, ಅದೆಲ್ಲವು ಗೋಜಲು ಗೋಜಲಾಗಿ, ವೇಗವಾಗಿ ಅವರ ಬಾಯಿಂದ ಹೊರಹೊಮ್ಮುತ್ತಿದ್ದುದರಿಂದ ಬಹುಶಃ ದೇವರುಗಳಿಗೂ ಅವನ್ನು ಅರ್ಥೈಸಿಕೊಳ್ಳುವುದು ಕಷ್ಟವಾಗಿರಬೇಕು. ಆದರೆ ಚಿತ್ತೂರಿನ ಸಜ್ಜನರು ಆಗಾಗ್ಗೆ ಯಜ್ಞ ನಡೆಯುತ್ತಿದ್ದಲ್ಲಿಗೆ ಹೋಗುತ್ತಿದ್ದರು. ತಮ್ಮ ಕಾಣಿಕೆ ಸಲ್ಲಿಸುತ್ತಿದ್ದರು ಮತ್ತು ಅದರಿಂದ ತೃಪ್ತಿ ಪಡುತ್ತಿದ್ದರು. ಈ ಧಾರ್ಮಿಕ ಆಚರಣೆಯ ದೃಶ್ಯ ತುಂಬ ಭವ್ಯವಾಗಿತ್ತು. ಅಲ್ಲದೆ ಅದನ್ನು ಸುರಕ್ಷಿತವಾಗಿ ನಡೆಸುವುದೇ ಅತ್ಯುತ್ತಮ.

ಕಾಲಾಂತರದಲ್ಲಿ ಎಲ್ಲ ವಸ್ತುಗಳೂ ಮುಂದೆ ಸಾಗುತ್ತವೆ. ಆ ಸಾಗಬೇಕು ಎಂಬುದು ನಿಜಕ್ಕೂ ತುಂಬ ಪ್ರಿಯವಾದ ಹಾಗೂ ಸಂದಿಗ್ಧವಾದ ಶಬ್ದ. ಎಲ್ಲವೂ ಇರುವುದಾಗುತ್ತದೆಯೆ? ಅಥವಾ ಇಲ್ಲಿರುವ ವಸ್ತುಗಳೆಲ್ಲವೂ ಕ್ಷಣಿಕವಾಗಿದ್ದು ಅವು ಮರೆಯಾಗಿ ವಿನಾಶವನ್ನೈದುತ್ತವೆಯೆ? ಅಥವಾ ಎರಡೂ ರೀತಿಯ ವ್ಯಾಖ್ಯಾನಗಳು ಸರಿಯೆ?

ಕಾಲಾಂತರದಲ್ಲಿ ವಾಂತಿಭೇದಿ ರೋಗದ ಪ್ರಕೋಪ ತಗ್ಗಿತು. ಜನ ಇನ್ನೂ ಸಾಯುತ್ತಿದ್ದರು. ಆದರೆ ಸಾಯುವವರ ಸಂಖ್ಯೆ ಕಡಿಮೆಯಾಗುತ್ತ ಹೋಯಿತು. ಈ ಸಾಂಕ್ರಾಮಿಕ ರೋಗದ ಅಂತ್ಯ ಬಂದದ್ದು ಯಾವುದರಿಂದ? ಈ ದುಷ್ಟ ಶಕ್ತಿಗಳಿಗೂ ತಮ್ಮದೇ ಆದ ಜೀವನ ಚಕ್ರವುಂಟೆ? ಪೂಜಾರಿಗಳು ಹೇಳಿದಂತೆ, ಮೂವತ್ತು ದಿನಗಳ ತನಕ ನಡೆದ ಸಂಕಟ ವಿಘ್ನ ಯಜ್ಞವು ದೇವತೆಗಳ ಕೈಗಳನ್ನು ಒತ್ತಾಯಿಸಿತೆ? ಅಥವಾ ಅದನ್ನು ಆಗಗೊಳಿಸಿದ್ದು ನನ್ನ ಹೆಂಡತಿಯ ಪ್ರಾರ್ಥನೆಯೆ? ಚಿತ್ತೂರಿನ ಜನಗಳು, ಅವರು ಯಾರೇ ಆಗಿದ್ದರೂ, ಎರಡನೆಯದರಿಂದಲೇ ಎಂದು ತಿಳಿದಿದ್ದಾರೆ. ದೇವತೆಗಳು ತಮ್ಮ ಶಾಪವನ್ನು ಹಿಂತೆಗೆದುಕೊಂಡು ನಮ್ಮನ್ನು ಕಾಪಾಡಿರಬಹುದು. ಕಿರಿಯ ಸಂತಳು ಅವರನ್ನು ಕೋರಿದ್ದರಿಂದಲೇ, ಅದರಲ್ಲೂ ಶ್ರೀಕೃಷ್ಣನನ್ನು ಮಧ್ಯಪ್ರವೇಶಿಸಬೇಕೆಂದು ಕೇಳಿಕೊಂಡಿದ್ದರಿಂದಲೇ ಅವರು ಕಾಪಾಡಿದ್ದು. ಅದನ್ನು ಕೊನೆಗಾಣಿಸಿದವರು ಯಾರಾದರೂ ಆಗಿರಲಿ ಅಥವಾ ಏನಾದರೂ ಆಗಿರಲಿ, ಆ ದುಃಸ್ವಪ್ನವನ್ನು ಕೊನೆಗೊಳ್ಳುವಂತೆ ಮಾಡಿದ್ದಕ್ಕಾಗಿ, ಆ ಶಕ್ತಿಗಳಿಗೆ ನನ್ನ ಪ್ರಣಾಮಗಳನ್ನು ಅರ್ಪಿಸಲು ನಾನು ಮಂಡಿಯ ಮೇಲೆ ನಡೆದುಕೊಂಡು ಹೋಗ ಬಯಸಿದ್ದೆ.

ಅಧ್ಯಾಯ 25

ಪ್ರಿಯಕರನ ಬಗ್ಗೆ ಅತ್ಯಂತ ಜಾಗರೂಕವಾಗಿರಬೇಕು. ಸರಿಯಾದ ಸಮಯದಲ್ಲಿ, ಅಗತ್ಯತೆ ಇದ್ದಾಗ ನಿಮ್ಮ ಶತ್ರುಗಳಿಗಿಂತ ಅತ್ಯಂತ ತ್ವರಿತವಾಗಿ ನಿಮ್ಮನ್ನು ತ್ಯಜಿಸಿ ಬಿಡುತ್ತಾನೆ.

ಆ ಸಾಂಕ್ರಾಮಿಕ ರೋಗದ ಕೊನೆಕೊನೆಗೆ, ಹೆಚ್ಚು ಕಡಮೆ ಕೊನೆಯ ಹಂತದಲ್ಲಿ ಮಹಾರಾಜ್‌ಕುಮಾರ್‌ನ ಹೆಂಡತಿ, ರಾಜಕುಮಾರಿಗೆ ರೋಗದ ಸೋಂಕು ಹತ್ತಿತು. ಮೊದಲ ಕೆಲವು ದಿನ ಆಕೆ ಗುಟ್ಟನ್ನು ಬಿಟ್ಟು ಕೊಡಲಿಲ್ಲ. ಬಹುಶಃ ಅದು ಆಕೆಯ ಬಹಿರ್ದೆಶೆಯ ದಿನಗಳಿರಬೇಕೆಂದು ಕೌಸಲ್ಯ ಭಾವಿಸಿದಳು. ಅಥವಾ ಆಕೆ ತುಂಬ ಬಳಲಿರಬೇಕು. ಅವಳು ತುಂಬಾ ಸೂಕ್ಷ್ಮ ಎನ್ನುವುದೊಂದನ್ನು ಬಿಟ್ಟರೆ, ಅವರೆಲ್ಲರೂ ಅವಳ ಹಾಗೆಯೇ ಬಳಲಿದ್ದರು. ಇನ್ನು ಅದನ್ನು ಎಷ್ಟು ಮಾತ್ರವೂ ಗುಟ್ಟಾಗಿಟ್ಟಿರಲು ಸಾಧ್ಯವಿರಲಿಲ್ಲ. ಹಾಗಾಗಿ ಅವಳಿಗೆ ಚಿಕಿತ್ಸೆಯನ್ನು ನೀಡಲು ರಾಜ ವೈದ್ಯನನ್ನು ಕರೆಸಲಾಯಿತು. ಆಕೆಯ ಪತಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದೊಂದು ಕೇವಲ ಒಂದು ಔಪಚಾರಿಕತೆ ಅಷ್ಟೆ ಎಂಬುದು ಸ್ಪಷ್ಟ. ಏನೇ ಆದರೂ, ಅವಳ ಪ್ರಿಯಕರ ಮತ್ತು ದೇವರು ಅವಳನ್ನು ಸಾಯಗೊಡುವುದಿಲ್ಲ. ಇದು ಅವನದೇ ಕೃತ್ಯ ಎಂದು ಹೇಳುವವರ ಮಾತನ್ನು ನಂಬುವುದಾದರೆ ಕಿರಿಯ ಸಂತಳು ಕೋರಿದ್ದರಿಂದಾಗಿಯೇ ಚಿತ್ತೂರಿನ ಮಿತಿಮೀರಿದ ಸಾವಿಗೆ ಅವನು ಕೊನೆ ತಂದಿದ್ದು. ದಿನಗಳು ಉರುಳಿದುವು. ನೀರುಭೇದಿಯ ಗಬ್ಬು ವಾಸನೆ ಅವಳ ಕೊಠಡಿಯಿಂದ ಮಹಾರಾಜ್‌ಕುಮಾರ್‌ನ ನಿವಾಸದ ಕೊಠಡಿಗೆ ಸಾಗಿ ಬಂದಿತು. ಅವಳು ವಾಂತಿ ಮಾಡಲು ಯತ್ನಿಸುತ್ತಿದ್ದುದು ಕೇಳಿಸುತ್ತಿತ್ತು. ಈಗ ಆ ಶಬ್ದ ಹೆಚ್ಚು ಕಡಿಮೆ ಕೇಳಿಸುತ್ತಲೇ ಇರಲಿಲ್ಲ. ಆದರೆ ಚಿಂತೆಗೆ ಕಾರಣವಿರಲಿಲ್ಲ. ಕೊನೇ ಗಳಿಗೆಯಲ್ಲಷ್ಟೇ ಕಾಣಿಸಿಕೊಳ್ಳದ ಹೊರತು, ಅವರನ್ನು ದೇವರುಗಳು ಅಂತ ಯಾರು ಹೇಳುತ್ತಾರೆ ಎಂದು ಮಹಾರಾಜ್‌ಕುಮಾರ್ ಭಾವಿಸಿದ. ಕೌರವರು ದ್ರೌಪದಿಯನ್ನು ವಿವಸ್ತ್ರಗೊಳಿಸುವ ಕ್ಷಣದ ತನಕ ಶ್ರೀ ಕೃಷ್ಣನು ದ್ರೌಪದಿಯ ರಕ್ಷಣೆಗೆ ಧಾವಿಸಲಿಲ್ಲ ಎಂಬುದು ನಿಮಗೆ ನೆನಪಿರಬಹುದು. ದುಷ್ಟ ಕೌರವರ ನಾಚಿಕೆಗೇಡಿನ ವರ್ತನೆ, ಸಭೆಯಲ್ಲಿದ್ದ ಹಿರಿಯರೆಲ್ಲ ಮೌನವಾಗಿದ್ದುಕೊಂಡು, ದ್ರೌಪದಿಯ ವಸ್ತ್ರಾಪಹರಣವನ್ನು ತಣ್ಣಗೆ ನೋಡುತ್ತ ಕುಳಿತಿದ್ದುದೆಲ್ಲದರ ಸಂಪೂರ್ಣ ಅರಿವು ಆ ನೀಲ ಮೇಘ ಶ್ಯಾಮನಿಗೆ ಇತ್ತು ಎಂಬುದರ ಬಗ್ಗೆ ಅನುಮಾನವೇ ಇಲ್ಲ. ಆದರೆ ಜನಗಳ ಮೇಲೆ ಶಾಶ್ವತವಾದ ಪರಿಣಾಮವನ್ನುಂಟು

ಮಾಡಬೇಕೆಂದರೆ, ಕಾಣಿಸಿಕೊಳ್ಳುವ ಸಮಯವನ್ನು ಆಯ್ಕೆ ಮಾಡುವುದೇ ಬಹಳ ಮುಖ್ಯವಾದ್ದು. ಶ್ರೀ ಕೃಷ್ಣನು ಬಂದೇ ತೀರುತ್ತಾನೆ ನಿಜ, ಆದರೆ ಕಡೇ ಗಳಿಗೆಯಲ್ಲಿ, ಸರಿಯಾದ ಹೊತ್ತಿನಲ್ಲಿ.

ಈ ನಡುವೆ ನಗರದಲ್ಲಿ ವದಂತಿಗಳು ದಟ್ಟವಾಗಿ ಹಬ್ಬಿದ್ದುವು. ವಾಸ್ತವವಾಗಿ ಒಂದೇ ಕಿಂವದಂತಿ ವಿಭಿನ್ನ ರೂಪಗಳನ್ನು ತಾಳಿ ಬಿಟ್ಟಿತ್ತು. ಕಿರಿಯ ಸಂತಳು ದೇವತೆಗಳೊಂದಿಗೆ ಒಂದು ವ್ಯವಹಾರವನ್ನು ಕುದುರಿಸಿದ್ದಳು. ಚಿತ್ತೂರಿನ ಜನರ ಜೀವದ ಬದಲಿಗೆ ತನ್ನ ಜೀವವನ್ನು ಕೊಡುವುದು. ಒಂದೆರಡು ದಿನಗಳಲ್ಲೇ ಅದು ಬರೀ ಕಿಂವದಂತಿಯಾಗುಳಿಯಲೇ ಇಲ್ಲ. ಅದೊಂದು ನಿರುಪಾಧಿಕ, ದೃಢಪಟ್ಟ ಸತ್ಯವಾಗಿತ್ತು. ಅರ್ಧ ಗಂಟೆಗೊಮ್ಮೆ ಅವಳ ಆರೋಗ್ಯದ ಕುರಿತ ಅಧಿಕೃತ ಪ್ರಕಟಣೆಗಳಿಗಾಗಿ ಅರಮನೆಯ ಹೊರಗೆ ಇಪ್ಪತ್ತು ನಾಲ್ಕು ಗಂಟೆಯೂ ಜನ ಸಂದಣಿ ಕಾದು ನಿಂತಿತ್ತು. ಮಳೆ ನಿಂತಿತ್ತು. ಹದ್ದುಗಳು ಹೆಚ್ಚು ಕಡಿಮೆ ಮರೆಯಾಗಿ ಬಿಟ್ಟಿದ್ದುವು. ಆದರೆ, ರಾಜಕುಮಾರನು ಕಿಟಕಿಯ ಹೊರಗೆ ನೋಡಿದಾಗ, ಹಕ್ಕಿಗಳು ಅರಮನೆಯ ಹೊರಗಡೆ ಗುಂಪು ಸೇರಿರುವುದನ್ನು ಖಾತರಿಪಡಿಸಿಕೊಂಡನು. ವಾಸ್ತವ ಸಂಗತಿಯೆಂದರೆ, ಕಿರಿಯ ಸಂತಳ ಭಕ್ತರು ನಿಜವಾಗಿಯೂ ಕಾಯುತ್ತಿರಲಿಲ್ಲ. ಅವನ ಹೆಂಡತಿ ಸತ್ತೇ ತೀರುತ್ತಾಳೆಂದು ಅವರೆಲ್ಲ ತೀರ್ಮಾನಿಸಿ ಬಿಟ್ಟಿದ್ದರು. ಒಳ್ಳೆ ಕೊಳೆತ ಮಾಂಸಕ್ಕಾಗಿ ಕಾದಿರುವ ಹದ್ದು, ಕಾಗೆಗಳಂತೆ. ಆ ಮಹಾನ್ ಘಟನೆಯ ಸಂದರ್ಭದಲ್ಲಿ ಸಕಾಲದಲ್ಲಿರಬೇಕೆಂದು ಬಯಸಿದ್ದರು, ಆ ರಾತ್ರಿ ಕೌಸಲ್ಯಳು ಮಹಾರಾಜ್‌ಕುಮಾರರ ಕೊಠಡಿಯ ಬಾಗಿಲನ್ನು ತಟ್ಟಿ, ತಾನು ಒಳಗೆ ಬರಲು ಅನುಮತಿ ಕೇಳಿದಳು. ಅವಳ ಈ ಔಪಚಾರಿಕತೆಯನ್ನು ಸಹಿಸದಾದನು.

"ಏನದು?"

"ಇದೊಂದು ಸಲ ತಾವು ಆಕೆಯನ್ನು ಬಂದು ನೋಡುವಷ್ಟು ಕಾಳಜಿ ತೋರಿಸುವಿರಾ ಮಹಾಸ್ವಾಮಿ? ಇಪ್ಪತ್ತು ನಾಲ್ಕು ಗಂಟೆಗೂ ಹೆಚ್ಚು ಹೊತ್ತಿನಿಂದ ಆಕೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾರೆ. ಒಂದು ನಿಮಿಷ ಆಕೆಗೆ ಪ್ರಜ್ಞೆ ಬಂದಿದೆ. ತಮ್ಮನ್ನು ನೋಡಿದರೆ ಆಕೆಗೆ ತುಂಬಾ ಸಂತಸವಾಗುತ್ತೆ ಅಂತ ಅಂದುಕೊಂಡಿದ್ದೀನಿ?"

ಕೌಸಲ್ಯ ತನ್ನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವುದಿಲ್ಲ ಎನ್ನುವುದಿಲ್ಲದಿದ್ದರೆ, ಅವನು ಉಲ್ಲಾಸ ರಹಿತವಾದ ಕುಚೋದ್ಯದ ನಗೆ ಬೀರುತ್ತಿದ್ದನು.

"ನಾನು ಏನು ಮಾಡಬೇಕೆಂದು ನಿನ್ನ ನಿರೀಕ್ಷೆ?

"ನಾಳೆಯ ತನಕ ಆಕೆ ಬದುಕಿರುತ್ತಾಳೆಯೆ ಎಂದು ನನಗೆ ಅನುಮಾನ".

ತೀರಾ ಅತಿ ಮಾಡಬೇಡ ಎಂದು ಇನ್ನೇನು ಹೇಳಬೇಕೆಂದಿದ್ದನು. ಆಗ ಕೌಸಲ್ಯ 'ದಯವಿಟ್ಟು' ಎಂದು ಹೇಳಿದಳು. ಕೌಸಲ್ಯಳ ನಾಲಿಗೆಗೆ ಅಪರಿಚಿತ ಅನ್ನಿಸುವಂಥದ್ದೇನೋ ಒಂದು ಅವಳ ಧ್ವನಿಯಲ್ಲಿ, ಅವಳಾಡಿದ ಆ ಪದದಲ್ಲಿ ಕೇಳಿ ಬರುತ್ತಿತ್ತು. ಅವನು ಅವಳನ್ನು ಹಿಂದೆ ಹಾಕಿ ದಾಪು ಗಾಲಿಟ್ಟು ವೇಗವಾಗಿ ಮುನ್ನಡೆದ. ಓಡಿದ ಎಂದೇ ಹೇಳಬೇಕು. ಆದರೆ ಅವನಿಗೆ ನೆನಪಿರಲಿಲ್ಲ.

ಮರುಗಳಿಗೆಯಲ್ಲಿ ಅವನ ಹೆಂಡತಿಯ ಹಾಸಿಗೆಯ ಬಳಿ ಇದ್ದ. ಅವನು ಅವಳನ್ನು ಮೊದಲಿಗೆ ಕಂಡಾಗ ಇದ್ದುದಕ್ಕಿಂತಲೂ ಈಗ ಇನ್ನೂ ಚಿಕ್ಕವಳಾಗಿ ಕಂಡಳು. ಅವಳು ಅದೆಷ್ಟೊಂದು ತೂಕ ಕಳೆದುಕೊಂಡಿದ್ದಳೆಂದರೆ, ಅವಳೊಂದು ಪ್ರೇತವಾಗಿದ್ದಳು. ಈ ಬಗ್ಗೆ ಅವನ ಮನಸ್ಸಿನಲ್ಲಿ ಯಾವುದೇ ಸಂದೇಹವಿರಲಿಲ್ಲ. ಪ್ರೇತದಂಥ ಆಕೃತಿಯ ಅದು

ಇನ್ನೊಂದೆರಡು ಸಲ ಮಿಂಚಿ ದಿಕ್ಕಿಲ್ಲದ ಪರದೇಶಿಗಳು ಮರೆಯಾಗಿ ಹೋಗುವೆಡೆಗೆ ಹೋಗಿ ಬಿಡುತ್ತದೆ. ಅವಳು ಮುಗುಳ್ನಕ್ಕಳು, ಅಥವಾ ಅವನು ಹಾಗೆಂದು ಕಲ್ಪಿಸಿಕೊಂಡನೆ? ಅವಳ ಕೈ ಕಿಂಚಿತ್ ಮೇಲೆದ್ದಿತು. ಅವನು ಹಗಲುಗನಸು ಕಾಣುತ್ತಿದ್ದನು. ಅವನು ಅವಳ ಹಾಸಿಗೆಯ ಬಳಿ ಹೋಗಿ ಮಂಡಿಯೂರಿ ಕುಳಿತನು. ಅವಳ ಕೈಯನ್ನು ಎತ್ತಿಕೊಂಡು ತೊಟ್ಟಿಲಲ್ಲಿಡುವಂತೆ ಇಟ್ಟನು. ಅವಳ ತುಟಿಗಳು ಅಲುಗಿದವು. ಅವನು ಭ್ರಮಾಧೀನನಾಗಿದ್ದನೆಂಬುದು ಅಷ್ಟೊಂದು ಮುಖ್ಯವೆ? ಅವನು ಅವಳ ತೀರ ಸನಿಹಕ್ಕೆ ಹೋದನು. ಎಷ್ಟೆಂದರೆ ಅವನ ಎಡಗಿವಿ ಹೆಚ್ಚು ಕಡಿಮೆ ಅವಳ ತುಟಿಗಳಿಗೆ ತಾಗುತ್ತಿತ್ತು.

"ಕ್ಷಮಿಸಿ ಮಹಾಸ್ವಾಮಿಯವರೆ, ನಾನು ನಿಮಗೆ ಕೊಟ್ಟಷ್ಟು ನೋವು ಮತ್ತು ವ್ಯಥೆಯನ್ನು ಬೇರೆ ಯಾವುದೇ ಮನುಷ್ಯ ಅಥವಾ ದೇವರು ಕೊಟ್ಟಿರಲಾರ. ನಿಮಗಿರುವಂಥ ಮಾನಸಿಕ ದೃಢತೆ ಅಥವಾ ಘನತೆ ಬೇರೆ ಯಾವ ಮನುಷ್ಯನಿಗಾಗಲಿ ದೈವಕ್ಕಾಗಲಿ ಇಲ್ಲ. ನನ್ನಂಥ ಜಡಳೂ ಮತ್ತು ಕೃತಘ್ನಗಳು ನಿಮ್ಮಂಥವರಿಗೆ ಯೋಗ್ಯಳಲ್ಲ. ನೀವು ನನ್ನನ್ನಾಗಲಿ ನಿಮ್ಮ ವಿಧಿಯನ್ನಾಗಲಿ ತೊರೆಯಲಿಲ್ಲ. ನಿಮ್ಮ ದಯಾಳುತನವನ್ನು ನಾನೆಂದಿಗೂ ಮರೆಯಲಾರೆ. ನಿಮಗೆ ಇದೊಂದು ಕೆಟ್ಟ ನಗೆಚಾಟಿಕೆ ಎನಿಸಬಹುದು. ಆದರೆ ನಾನು ನನ್ನ ಆತ್ಮಪೂರ್ವಕವಾಗಿ, ನಿಮ್ಮನ್ನು ಪ್ರೀತಿಸಿದ್ದೇನೆ. ವಿಚಿತ್ರ ಪ್ರೇಮ. ಏನೇ ಆದರೂ ಪ್ರೇಮವೇ. ನಿಮಗೆ ಧನ್ಯವಾದಗಳು"."

ಅವಳ ದನಿ ಕ್ಷೀಣವಾಗುತ್ತ ಬಂದು ನಿಂತು ಹೋಯಿತು. ಅವಳ ಕಣ್ಣುಗಳು ಮಸುಕಾದವು. ಅವನು ಅವಳ ನಾಡಿಯನ್ನು ಹಿಡಿದು ನೋಡಿದನು. ಬಹಳ ಪ್ರಯಾಸದಿಂದ ಊಹಿಸಿಕೊಂಡರೆ, ಅದು ಹದಿನೈದು ಇಪ್ಪತ್ತು ಕ್ಷಣಗಳಿಗೊಮ್ಮೆ ಮಿಡಿಯುತ್ತಿದ್ದುದು ಅವನಿಗೆ ತಿಳಿಯುತ್ತಿತ್ತು. ಆದರೆ ಅವನಿಗೆ ನಾಡಿ ಮಿಡಿಯುತ್ತಿದ್ದಂತೆ ಅನ್ನಿಸಲಿಲ್ಲ. ಅವನ ಬೆರಳುಗಳ ನಡುವಿನ ವಿಶಾಲ ತೆರಪುಗಳಲ್ಲಿ, ಅವನ ಶ್ವಾಸಕೋಶದ ಕಿರುಜೇನು ಹುಟ್ಟಿನಂಥ ರಂಧ್ರಗಳಲ್ಲಿ ಅವನ ಹೃದಯಕೋಶಗಳಲ್ಲಿ, ಅವನ ಮೆದುಳಿನ ಕಿರು ಬ್ರಹ್ಮಾಂಡದಲ್ಲಿ ಎಲ್ಲೆಲ್ಲೂ ನೀರವ ಮತ್ತು ಶೂನ್ಯತೆ ತುಂಬಿತ್ತು. ಆನಂತರ ಮಬ್ಬು ಬೆಳಕಿನ ಅಲೆಯೊಂದು ಕಾಣಿಸಿಕೊಂಡಿತು. ಅದರ ನಂತರ ಇನ್ನೊಂದು, ಮತ್ತೊಂದು ಹೀಗೆ ಅವೆಲ್ಲ ಕೂಡಿಕೊಂಡು ಒಂದು ಭಾರೀ ಅಲೆಯಾಯಿತು. ಅದು ಕೋಪದ ತಳಹದಿಯ ಮೇಲೆ ಕಟ್ಟಿದ ಒಂದು ರಚನೆ. ಮೊದಲಿನದನ್ನು ಕೆಳಗೆ ಕೆಡವುವಂಥ ರಚನೆ. ಯಾರಿಗಾಗಿ ಅವನನ್ನು ನಿಷ್ಠೆ ಇಲ್ಲದ ಸತಿಯ ಗಂಡ ಎಂದು ನಗೆಪಾಟಲಿಗೆ ಗುರಿ ಮಾಡಿದ್ದಳೋ, ಅಂಥ ಆ ಪ್ರೇಮಿ ಅವಳನ್ನು ಹೇಗೆ ತಾನೆ ತೊರೆದಾನು? ಎಲ್ಲಿ ಹೋಯಿತು ಅವನ ಪವಾಡ? ಅವನ ನಾಟಕೀಯ ಪ್ರವೇಶದ ಕಾಲ ಆಗಲೇ ಹಿಂದೆ ಸರಿದು ಹೋಗಿತ್ತು. ಆ ಲಜ್ಜೆಗೇಡಿ ರಾವುತ, ಭಗವಾನ್ ಶ್ರೀಕೃಷ್ಣ ಸಹಸ್ರಾರು ಹೆಣ್ಣುಗಳನ್ನು ತೊರೆದಿದ್ದವನು, ಈಗ ತನ್ನ ಆಕೃತಿ ಮತ್ತು ತನ್ನ ಬಗೆಗಿನ ದಂತ ಕತೆಗೆ ತಕ್ಕಂತೆ, ತನ್ನ ಹೆಂಡತಿಯನ್ನು ತೊರೆಯಲಿದ್ದಾನೆಯೆ? ಒಂದು ಹೆಣ್ಣು ಕಡಮೆಯಾದರೆ ಅಥವಾ ಹೆಚ್ಚಾದರೆ ಅದರಿಂದ ಅವನಿಗೆ ಏನು ವ್ಯತ್ಯಾಸವಾಗುತ್ತೆ?

ವ್ಯತ್ಯಾಸವೇನೇ ಆಗುವುದಿದ್ದರೂ ಅದು ಈ ಜಗತ್ತಿನಲ್ಲಿ ನನಗೆ ಅಷ್ಟೆ ಎಂದು ಕೊಂಡ ಮಹಾರಾಜ್ ಕುಮಾರ್. ಕಾರಣ ನಿನ್ನ ಸಿಟ್ಟು ಎಂಥದೇ ಇರಲಿ, ನಿನ್ನ ಮನೋವ್ಯಥೆ ಎಷ್ಟೇ ದೊಡ್ಡದಿರಲಿ, ನಿನ್ನವರನ್ನು ನೀನು ಎಂದಿಗೂ ತೊರೆಯುವುದಿಲ್ಲ.

"ನೀರು, ನಿಂಬೆಹಣ್ಣು, ಉಪ್ಪು, ಜೇನುತುಪ್ಪ, ಮೂರು ಹೊದಿಕೆಗಳು?" ಅವನು ಪಿಸುಗುಟ್ಟಿದನೆ ಇಲ್ಲ ಜೋರಾಗಿ ಅರಚಿದನೆ? ಕೆಲವೇ ನಿಮಿಷಗಳಲ್ಲಿ ಸೇವಕರು ಆತ

ತರಬೇಕೆಂದು ಆಜ್ಞೆ ಮಾಡಿದ ವಸ್ತುಗಳನ್ನು ತಂದರು. ಅವಳ ತಣ್ಣನೆಯ ದೇಹದ ಮೇಲೆ ಹೊದಿಕೆಗಳನ್ನು ಹೊದಿಸಿ, ಮೂರು ಚಮಚೆ ತಾಜಾ ನಿಂಬೆಹಣ್ಣಿನ ಪಾನಕವನ್ನು ಅವಳ ಬಾಯಿಗೆ ಬಲವಂತವಾಗಿ ಕುಡಿಸಿದನು. "ಎಂಥದೇ ಪರಿಸ್ಥಿತಿಯಲ್ಲೂ ಆಕೆಗೆ ಯಾವುದೇ ಥರದ ಆಹಾರವನ್ನು ನೀಡಬಾರದೆಂದು ರಾಜವೈದ್ಯರು ಹೇಳಿದ್ದಾರೆ" ಎಂದು ಒಬ್ಬಾನೊಬ್ಬ ಸೇವಕಿ ಹೇಳುವ ಧೈರ್ಯ ಮಾಡಿದಳು.

"ನನ್ನ ಪಾಡಿಗೆ ಇಲ್ಲಿ ನನ್ನನ್ನು ಬಿಟ್ಟು ಬಿಡಿ. ನನ್ನ ಆದೇಶವಿಲ್ಲದೆ ಯಾರೂ ಈ ಕೊಠಡಿಗೆ ಬರಕೂಡದು. ಪ್ರತಿ ನಾಲ್ಕು ಗಂಟೆಗಳಿಗೊಮ್ಮೆ ಗಂಜಿ ಮತ್ತು ಪ್ರತಿ ಎರಡು ಗಂಟೆಗಳಿಗೊಮ್ಮೆ ಕಾಲು ಲೋಟ ಹಣ್ಣಿನ ರಸವನ್ನು ಕೊಡಬೇಕೆಂದು ಕೌಸಲ್ಯಮಾಯಿಯವರಿಗೆ ಹೇಳಿ. ಈ ಕೊಠಡಿಯಲ್ಲಿ ಇನ್ನೊಂದು ಹಾಸಿಗೆ ಸಿದ್ಧಪಡಿಸಿ. ಇಲ್ಲಿ ಎರಡು ಬಾನಿಗಳನ್ನು ಇಲ್ಲಿಡಿ. ಒಂದರಲ್ಲಿ ಬಿಸಿನೀರು ಮತ್ತು ಇನ್ನೊಂದರಲ್ಲಿ ಬಾಳದ ಬೇರಿನ ಹುಲ್ಲು ಇರಲಿ. ಜೊತೆಗೆ ಒಂದಷ್ಟು ಮೃದುವಾದ ಅಂಗವಸ್ತ್ರಗಳನ್ನು ತರುವುದನ್ನು ನೆನಪಿಡಿ."

ಅವಳಿಗೆ ಏನನ್ನಾದರೂ ಕುಡಿಸಿದಂತೆಲ್ಲ, ಅದರ ಎರಡರಷ್ಟನ್ನು ವಾಂತಿ ಮಾಡುತ್ತಿದ್ದಳೆನಿಸುತ್ತಿತ್ತು. ಒಂದು ಗಂಟೆಗೊಂದು ಸಲವೋ ಏನೋ, ಅವಳ ಹಾಸಿಗೆ ಬಟ್ಟೆ ಮತ್ತು ಮಗ್ಗಲು ಹಾಸಿಗೆಯ ಬಟ್ಟೆಗಳು ನೀರು ಭೇದಿಯಿಂದ ಒದ್ದೆಯಾಗುತ್ತಿದ್ದುವು. ಅದೇ ಕಾರಣಕ್ಕೆ ರಾಜವೈದ್ಯ ಅವರ ವೈದ್ಯಪದ್ಧತಿಯನ್ನನುಸರಿಸುವ ಬಹುಪಾಲು ವೈದ್ಯರುಗಳು ಯಾವುದೇ ಥರದ ದ್ರವಾಹಾರ, ರೋಗಿಯ ಸ್ಥಿತಿಯನ್ನು ಇನ್ನಷ್ಟು ತೀವ್ರಗೊಳಿಸಿ, ಶೀಘ್ರ ಸಾವು ಬರುವಂತೆ ಮಾಡುತ್ತದೆ ಎಂದು ನಂಬಿದ್ದರು. ರೋಗಿಗೆ ಬಲವಂತವಾಗಿ ದ್ರವಗಳನ್ನು ಕುಡಿಸುತ್ತಾ ಇದ್ದದ್ದು ವೈದ್ಯಕೀಯ ಚೂರ್ಣಗಳನ್ನು ನೀರು ಇಲ್ಲವೆ ಜೇನುತುಪ್ಪದೊಂದಿಗೆ ಕೊಡಬೇಕಾಗಿ ಬಂದಾಗ ಮಾತ್ರ.. ಇನ್ನು ಆಹಾರದ ವಿಷಯ ಘನ ಮತ್ತು ಅರೆ ಘನಾಹಾರ ಪದಾರ್ಥಗಳನ್ನು ರೋಗಿ ಸಾಮಾನ್ಯವಾಗಿ ಬಯಸುತ್ತಿರಲಿಲ್ಲ. ಅಲ್ಲದೆ ವೈದ್ಯರುಗಳು ಕೂಡ ಸಾಮಾನ್ಯವಾದ ಜ್ವರವಿದ್ದಾಗಲೂ, ಅಂಥವನ್ನು ತಿನ್ನಕೂಡದೆಂದೇ ಹೇಳುತ್ತಿದ್ದರು. ಬೆರಳಿಕೆಯಷ್ಟು ಸಂಖ್ಯೆಯ ಇನ್ನೊಂದು ವೈದ್ಯ ಪದ್ಧತಿಯ ಜನರು ಕಾಲವು ಅತ್ಯಂತ ಅನುಕೂಲಕರವಾಗಿದ್ದಾಗ, 'ಅಳ್ಳಕವಾದ' ಮತ್ತು ಅರೆ ಘನ ಪದಾರ್ಥಗಳಿಲ್ಲದೆ ಬದುಕುಳಿಯುವುದೇ ಸಾಧ್ಯವಿಲ್ಲ ಎಂದು ಭಾವಿಸಿದ್ದರು. ತೀರಾ ನಿಶ್ಶಕ್ತಸ್ಥಿತಿಯಲ್ಲಿದ್ದಾಗ, ರೋಗಿಯನ್ನು ನಿರಾಹಾರದಲ್ಲಿಡುವುದು ಆತ್ಮಘಾತುಕವೆಂದೇ ನಂಬಿದ್ದರು. ಕಾಯಿಲೆ ಹೇಗಿದ್ದರೂ ಮಾರಕವೇ ಎಂದು ಕಂಡು ಬಂದಾಗ, ಶರೀರಕ್ಕೆ ಆಹಾರ ಕೊಡದೆ ಹೋದರೆ ಕಾಯಿಲೆಯೊಂದಿಗೆ ಹೋರಾಡಲು ಅದಕ್ಕೆ ಶಕ್ತಿ ಯಾವುದರಿಂದ ಬರುತ್ತೆ ಎಂಬುದು ಮಹಾರಾಜ್‌ಕುಮಾರರ ಆಲೋಚನೆ.

ಅದು ಎರಡು ವಿಭಿನ್ನ ಪದ್ಧತಿಯ ವೈದ್ಯರುಗಳ ನಡುವಿನ ಅತ್ಯಂತ ವಾದಗ್ರಸ್ತ ವಿಷಯ ಮಾತ್ರವಾಗಿರಲಿಲ್ಲ. ಮಹಾಸ್ವಾಮಿಯವರ ಹಾಗೂ ಉಪವಾಸವಿರಿಸಬೇಕೆನ್ನುವವರ ನಡುವಿನ ತಕರಾರಿನ ವಿಷಯವಾಗಿತ್ತು. ಅದೃಷ್ಟವಶಾತ್, ಬಹಳಷ್ಟು ಸಂದರ್ಭಗಳಲ್ಲಿ ಬಡವರಿಗೆ ವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳುವ ಸಾಮರ್ಥ್ಯವಿರುತ್ತಿರಲಿಲ್ಲ; ಹಾಗಾಗಿ, ತಕರಾರಿನ ಬಗ್ಗೆ ಅವರಿಗೆ ಅರಿವಿಲ್ಲದಿದ್ದುದು ಅವರ ಸುದೈವ. ಅವರವರ ಮನಸ್ಥಿತಿ ಮತ್ತು ಅವರವರ ಚೈತನ್ಯಕ್ಕೆ ತಕ್ಕಂತೆ ಅವರು ನೀರನ್ನು ಕುಡಿಯುತ್ತಿದ್ದರು ಇಲ್ಲವೆ ಕುಡಿಯಕೂಡದೆಂದು ಅವರನ್ನು ನಿರ್ಬಂಧಿಸಲಾಗುತ್ತಿತ್ತು.

ಆಕೆ ಅರೆಸುಪ್ತಾವಸ್ಥೆಯಲ್ಲಿದ್ದು, ಏನು ಮಾಡಲೂ ಆಗದಷ್ಟು ದಣಿದಿದ್ದರೂ, ರಾಜಕುಮಾರಿಯು ಶಕ್ತಿ ಕೊಡುವ ಯಾವುದೇ ಅಹಾರವನ್ನು ಒಳಗಿಳಿಯಗೊಡುತ್ತಿರಲಿಲ್ಲ.

ಆದರೆ ಮಹಾರಾಜ್‌ಕುಮಾರ್ ತನ್ನ ಪ್ರಯತ್ನದಲ್ಲಿ ಬಹಳ ದೃಢವಾಗಿದ್ದು ಪಟ್ಟು ಹಿಡಿದನು. ಅನೇಕ ಸಲ ಆಕೆ ಬಾಯಿ ತೆರೆಯಲೇ ನಿರಾಕರಿಸಿದಳು. ಮಹಾರಾಜ್‌ಕುಮಾರ್ ಹಣ್ಣಿನ ರಸ ತುಂಬಿದ ಚಮಚೆಯನ್ನು ಆಕೆಯ ತುಟಿಗಳ ಮೇಲೆ ನಿಮಿಷಗಟ್ಟಲೆ ಒಂದೇ ಸಮನೆ ಹಿಡಿದಿರುತ್ತಿದ್ದನು. ಅವಳು ತನ್ನ ಮೊಂಡುತನವನ್ನೇ ಮುಂದುವರೆಸಿದಾಗ, ಅವನು ಅವಳಿಗೆ ಬೆದರಿಕೆ ಒಡ್ಡಿದನು.

"ನೀನು ನರಳುವುದರ ಬಗ್ಗೆ ನನ್ನ ಅಭ್ಯಂತರವಿಲ್ಲ, ಆದರೆ ನನ್ನ ಕೈಗಳು ಬಿದ್ದು ಹೋಗುವವರೆಗೂ ನಾನೇಕೆ ಚಮಚೆಯನ್ನು ಹಿಡಿದಿರಬೇಕೋ ನನಗೆ ಗೊತ್ತಾಗುತ್ತಿಲ್ಲ."

ಅವಳಿಗೆ ಸಾಧ್ಯವಾದರೆ ಕಣ್ಣುಗಳನ್ನು ತೆರೆದು ಅವನ ಕಡೆ ಕರುಣೆಯಿಂದ ಇಲ್ಲವೆ ಕೋಪ ಮತ್ತು ತಿರಸ್ಕಾರದಿಂದ ನೋಡುತ್ತಿದ್ದಳು. ಆದರೆ ಅದು ಅರ್ಥಹೀನವಾಗಿತ್ತು. ಆ ಹಾಳು ಹಣ್ಣಿನ ರಸ ಮತ್ತು ಜೇನು ತುಪ್ಪವನ್ನು ಅವಳ ಗಂಟಲಿನಿಂದ ಕೆಳಕ್ಕೆ ಬಲವಂತವಾಗಿ ಇಳಿಸಲು ಅವನು ಏನು ಮಾಡಲಿಕ್ಕೂ ಸಿದ್ಧನಿದ್ದನು. ಒಂದು ವಿಷಯವಂತೂ ಖಚಿತವಾಗಿತ್ತು. ಆ ಮೊದಲ ರಾತ್ರಿ ಅವಳು ಬದುಕುಳಿದ ಏಕೈಕ ಕಾರಣವೆಂದರೆ, ಅವನು ಅವಳಿಗೆ ಏನೆಲ್ಲವನ್ನೂ ಕುಡಿಸಿದ್ದನೋ ಅದನ್ನೆಲ್ಲಾ (ಕಕ್ಕಿ) ವಾಂತಿ ಮಾಡಲು ಎದ್ದಿದ್ದ ಕಾರಣದಿಂದ. ಅವನು ಅವಳನ್ನು ಪಕ್ಕಕ್ಕೆ ಮಲಗಿಸಿ ಬಾಯಿಂದ ಹೊಮ್ಮಿದ ವಾಂತಿ ಅವಳ ಕುಪ್ಪಸದ ಮೇಲೆಲ್ಲ ತೊಟ್ಟಿಕ್ಕಿ ಗಲೀಜಾದಾಗ, ಒದ್ದೆ ಬಟ್ಟೆಯಿಂದ ಅವಳ ಬಾಯಿ ಮತ್ತು ಮೈಯನ್ನು ಒರೆಸಿದನು. ಅವಳು ಮಲ ವಿಸರ್ಜನೆ ಮಾಡಿದಾಗ, ಮೃದುವಾಗಿ ಅವಳ ಆಸನದ್ವಾರವನ್ನು ಚೊಕ್ಕಟಗೊಳಿಸಿದನು. ಅವಳ ಉಡುಪುಗಳನ್ನು ಬದಲಾಯಿಸಿ, ಅವಳನ್ನು ಹಿಡಿದು ಮೇಲೆತ್ತಿದನು. ಇದು ಯಾವಾಗೆಂದರೆ, ಅವಳ ಉಡುಪುಗಳನ್ನು ಮತ್ತೆ ಬದಲಾಯಿಸುವ ಅಗತ್ಯವಿಲ್ಲವೆಂದು ಅರಿವಾದಾಗ. ಅವಳು ಅದೆಷ್ಟು ಹಗುರವಾಗಿದ್ದು. ಅವಳ ಉಸಿರಾಟ ತೀರ ಕಷ್ಟದಿಂದ ಆಗುತ್ತಿತ್ತೆಂದರೆ, ಅವಳು ಶಾಶ್ವತವಾಗಿ ಕಣ್ಮರೆಯಾಗಲು ಇನ್ನು ಒಂದೆರಡು ಗಂಟೆಗಳಷ್ಟೇ ಉಳಿದಿವೆ ಎನಿಸುತ್ತಿತ್ತು. ಅವನಿಗೆ ತೀವ್ರ ನಿರುತ್ಸಾಹದ ಮತ್ತು ನಿರಾಶೆಯ ಭಾವ ಉಂಟಾಯಿತು. ಶ್ರೀ ಕೃಷ್ಣನ ಬಗ್ಗೆ ಅವನಿಗಿದ್ದ ಅನಾರೋಗ್ಯಕರವಾದ ದ್ವೇಷವೇ ಅವನನ್ನು ಮುಂದುವರಿಯುವಂತೆ ಮಾಡಿತು. ಅವನು ಒಂದು ವೇಳೆ ಹಾಗೆ ಮಾಡದೆ ಇದ್ದಿದ್ದರೆ, ಅದರರ್ಥ ಅವಳ ಪ್ರೇಮಿ ಅವನನ್ನು ಮತ್ತೊಮ್ಮೆ ಸೋಲಿಸಿದ್ದಾನೆಂದಾಗುತ್ತದೆ. ಹಾಸಿಗೆ ಮತ್ತು ಅದರ ಕೆಳಗಿನ ಗೋಣಿ ತಟ್ಟನ್ನು ತೆಗೆಯುವ ಸಲುವಾಗಿ ಅವಳನ್ನು ಬೇರೊಂದು ಹಾಸಿಗೆಯ ಮೇಲೆ ಮಲಗಿಸಿದನು.

ಅನೇಕ ದಿನಗಳ ಕಾಲ ಅವಳು ಮುಸ್ಸಂಜೆಯ ಹೊತ್ತಿನಲ್ಲಿ ಅಲ್ಲಲ್ಲಿ ಸುಳಿದಾಡುತ್ತಿದ್ದಳು.

"ದಯವಿಟ್ಟು ನನಗೆ ಹೊಗಲು ಬಿಟ್ಟು ಬಿಡಿ" ಎಂದಳು.

ಅವನು ತನ್ನಲ್ಲಿಯೇ ನಕ್ಕನು. ಈಗ ಅನೇಕ ವರ್ಷಗಳಿಂದ, ಅವಳು ಅವನಿಗೆ ಮಾಡಿದ ದ್ರೋಹವೇ ಅವನನ್ನು ಜೀವಂತವಿರಿಸಿಕೊಂಡು ಬಂದಿರುವಾಗ ಅವನು ಹೇಗೆ ತಾನೆ ಅವಳನ್ನು ಬಿಟ್ಟಾನು? ಅವಳಿಲ್ಲದೆ ಅವನು ಏನು ಮಾಡುತ್ತಾನೆ?

"ಏಳು ಮೇಲಕ್ಕೆ. ನುಣುಚಿಕೊಂಡು ಹೋಗುವುದನ್ನು ನಿಲ್ಲಿಸು. ನಿನ್ನ ಸ್ವಾರ್ಥಕ್ಕೆ ಕೊನೆಯೇ ಇಲ್ಲವೆ? ನಿನ್ನಲ್ಲಿಯೇ ನೀನು ತೃಪ್ತಿ ಪಟ್ಟು ಕೊಂಡಿರಬೇಕೆಂದು ತೀರ್ಮಾನಿಸಿದ ಮೇಲೆ ನಾನು ಏನು ಕೆಲಸವನ್ನೂ ಮಾಡಿಲ್ಲ. ಅನಾಥಾಶ್ರಮದ ಮಕ್ಕಳು ಸಾಯುತ್ತಾ ಇದ್ದಾರೆ. ಹಾಗೆಯೇ ಕಾಯಿಲೆ ಹಿಡಿದ ಇತರರೂ ಸಾಯ್ತಾ ಇದ್ದಾರೆ. ನೀನು ಎಚ್ಚತ್ತುಕೊಂಡು ಅವರೆಲ್ಲರನ್ನೂ ನೋಡಿಕೊಳ್ಳಬೇಕಾದ ಸಮಯ ಇದು ಅಂತ ನಿನಗೆ ಅನ್ನಿಸಿಲ್ಲವೆ?"

ಅವಳು ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು. ಅವರ ಮದುವೆಯ ದಿನದ ಆ ರಾತ್ರಿ, ಅವನನ್ನು ಜಂಬದಿಂದ ತಿರಸ್ಕರಿಸಿದಾಗ, ಅವನೇಕೆ ಮನಸ್ಸಿನ ಮೇಲಿನ ಸ್ಥಿಮಿತವನ್ನು ಕಳೆದುಕೊಂಡಿದ್ದನು. ಸುನೇರಿಯಾ ಕೌಸಲ್ಯ ಅಥವಾ ಬೇರಾವುದೇ ಹೆಣ್ಣಿಗಿದ್ದಂತೆ ಅವಳಿಗೂ ಎದೆಯ ಉಬ್ಬುಗಳಿದ್ದುವು. ಅವು ಎತ್ತರಕ್ಕಿರಬಹುದು, ತಗ್ಗಿರಬಹುದು, ದೊಡ್ಡವಿರಬಹುದು, ಚಿಕ್ಕದಿರಬಹುದು, ಅಳ್ಳಕವಾಗಿ ಜೋತಾಡುತ್ತಿದ್ದಿರಬಹುದು, ಅಥವಾ ಗಟ್ಟಿಯಾಗಿ ಸ್ಥಿರವಾಗಿರಬಹುದು. ಆದರೆ ಅವೆಲ್ಲವೂ, ಮಧ್ಯದಲ್ಲೊಂದು ಸ್ಥಿತಿ ಸ್ಥಾಪಕ ಸಾಧನವನ್ನು ಹೊಂದಿರುವ ಸ್ತನಗಳು. ಮಧ್ಯದ ಕಣಿವೆಯೂ ಹಾಗೆಯೇ. ಕೌಸಲ್ಯಳು ಅವನಿಗೆ ಅನುಕೂಲಕರವಾಗಿ ತಕ್ಕವಳಾಗಿದ್ದವಳಲ್ಲವೆ? ಮಾಮೂಲಿ ಪರಿಸ್ಥಿತಿಯಲ್ಲಿ ಏನೇ ಆದರೂ ಇದುವರೆಗೆ ಅವನು ಇಬ್ಬರು ಮೂವರು ಇತರೆ ರಾಜಕುಮಾರಿಯರನ್ನು ಮದುವೆಯಾಗಿರುತ್ತಿದ್ದನು. ಸಾಕಷ್ಟು ಕಡೆಯಿಂದ ಅವನಿಗೆ ಮದುವೆಯ ಪ್ರಸ್ತಾಪಗಳು ಬಂದಿದ್ದುವು. ಎರಡು ಸಂದರ್ಭಗಳಲ್ಲಿ ಮಹಾರಾಣಾ ಸಹಜವಾಗಿಯೇ ತೀರ ಕ್ಷುಬ್ಧಗೊಂಡಿದ್ದನು. ಕಾರಣ ಅವು ರಾಜಕೀಯವಾಗಿ ಅತ್ಯಂತ ಪ್ರಮುಖ ವಿವಾಹ ಸಂಬಂಧಗಳಷ್ಟೇ ಅಲ್ಲ, ಆ ಹುಡುಗಿಯರು ಅಪರೂಪವೆನ್ನಿಸುವಂಥ ಸುಂದರಿಯರೂ ಪ್ರತಿಭಾವಂತರೂ ಆಗಿದ್ದರು. ರಾವ್ ವೀರಮ್‌ದೇವ್ ಸಹ, ರಾವ್ ಗಂಗಾನ ಮರಣದ ನಂತರ, ಅವರ ಮೊಮ್ಮಗಳನ್ನು ಮಹಾರಾಜ್‌ಕುಮಾರ್ ಮದುವೆಯಾಗಬೇಕೆಂದು ಸೂಚಿಸಿದ್ದರು. ಅದು ಕೀರ್ತಿಶೇಷ ರಾವ್ ಅವರು ಮೇವಾಡಕ್ಕೆ ಸಲ್ಲಿಸಿದ ಸೇವೆಗೆ ಕೃತಜ್ಞತಾ ಭಾವದ ದ್ಯೋತಕವಾಗುವುದು. ಅಷ್ಟೇ ಅಲ್ಲ ಅದು ಎರಡೂ ಸಾಮ್ರಾಜ್ಯಗಳ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಎಂದೂ ಸೂಚಿಸಿದ್ದರು. ಅದೂ ಅಲ್ಲದೆ ಆತನ ಹೆಂಡತಿಯ ಸೋದರಮಾವ ಆ ಹುಡುಗಿಯಲ್ಲಿ ಕಿಂಚಿತ್ತೂ ದ್ವೇಷವಾಗಲಿ, ಇಲ್ಲವೆಂದೂ ಅಪಾರವಾದ ಮಾಧುರ್ಯ ಮತ್ತು ಉಲ್ಲಾಸಗಳು ತುಂಬಿರುವ ಹುಡುಗಿಯೆಂದೂ ಭರವಸೆ ನೀಡಿದ್ದರು.

ಇಲ್ಲ, ಮಹಾರಾಜ್‌ಕುಮಾರ್ ಇದೆಲ್ಲ ಗೊಂದಲ ಗಡಿಬಿಡಿಯ ನೆಲೆ ಅರಿಯದಾದನು. ಉಬ್ಬುಹಲ್ಲು, ಮೆಳ್ಳೆಗಣ್ಣು ಮುಖದ ನರಗಳ ತೀವ್ರ ಸೆಳೆತ ಮುಂತಾದ ವಿಕೃತಿಯ ಅಲೆಗಳನ್ನೊಮ್ಮೆಗೆ ಗಣನೆಗೆ ತೆಗೆದುಕೊಳ್ಳದಿದ್ದರೆ ಕೆಲವರು ಗಂಡು, ಹೆಣ್ಣುಗಳು ಬೇರೆಯವರಿಗಿಂತ ಅದೇಕೆ ತುಂಬ ಇಷ್ಟವಾಗುವುದು ಹಾಗೂ ಅವರಿಗೆ ತುಂಬ ಬೇಡಿಕೆ ಇರುತ್ತದಲ್ಲ ಏಕೆ? ಅವಳು ಅವನಿಗೆ ಇಲ್ಲ ಎಂದಿದ್ದಳು ಎನ್ನುವುದನ್ನು ಬಿಟ್ಟರೆ, ಅವನ ಹೆಂಡತಿಯಲ್ಲಿ ಏನಂಥ ವಿಶೇಷವಿದೆ? ಈಗ ಅವಳನ್ನು ನೋಡಿ ಅವಳು ಒಣಗಿ ಸುಕ್ಕಾಗಿದ್ದಳು. ದಂತಕಥೆಯೆಂಬಂತಿದ್ದ ಅವಳ ಸ್ಫಟಿಕ ಸದೃಶ ಬಣ್ಣ ಅವನು ಬಾಲಕನಾಗಿದ್ದಾಗ ಬಳಸುತ್ತಿದ್ದ ಬರೆಯುವ ಹಲಗೆಯಂತಿತ್ತು ಈಗ ಮೈಯನ್ನೆಲ್ಲ ಮರೆಮಾಡುವಷ್ಟು ಚರ್ಮವೂ ಇರಲಿಲ್ಲ. ಅದು ಇನ್ನೇನು ಬಿರಿದು ಬಿಡುತ್ತದೇನೋ ಎನ್ನುವಂತಾಗಿತ್ತು. ಆ ದಿನ ರಾತ್ರಿ ಕಣ್ಣಿಗೆ ರಾಚುವಂತೆ ನ್ಯಾಯವನ್ನು ಉಲ್ಲಂಘಿಸಿ ಅವಳನ್ನು ಹಿಡಿದುಕೊಂಡಾಗ ಅವುಗಳನ್ನು ನೋಡಲೇಬೇಕೆಂಬಷ್ಟು ಲೈಂಗಿಕ ಹುಚ್ಚನ್ನು ಅವನಲ್ಲಿ ಕೆರಳಿಸಿದ ಆ ಸ್ತನಗಳು ಇಂದು ಸುಕ್ಕುಗಟ್ಟಿ ಕರುಣಾಜನಕವೆನ್ನಿಸುವಷ್ಟು ಸಣ್ಣಗಾಗಿದ್ದವು.

ಅವಳ ಬಾಯಿಂದ, ಕಣ್ಣು ಕೋರೈಸುವಂಥ ಹಸಿರು ಬಣ್ಣದ ಹಳಸಲು ದ್ರವವೊಂದು ಹೊರಚೆಲ್ಲಿತು. ಒಂದು ಬಟ್ಟೆಯ ತುಣುಕಿನಿಂದ ಅದನ್ನು ಒರೆಸಿದನು. ಅದು ಹುಳಿಹುಳಿವಾಸನೆ ಹೊಡೆಯುತ್ತಿತ್ತು. ಅರಮನೆಯ ನೆಲದಲ್ಲಿ ತೂತು ಕೊರೆಯುವಷ್ಟು ಘೋರ ವಿಷಕಾರಿಯ ಹಾಗೆ ಕಾಣುತ್ತಿತ್ತು. ಇದು ವಿಷೂಚಿಯೆ ಅಥವಾ ಅವಳ ಹೊಟ್ಟೆಯಲ್ಲಿ ಉಳಿದಿದ್ದ

ಅಂತಿಮ ಶೇಷಾಂಶವೋ? ಶ್ರೀ ಕೃಷ್ಣ ಇದನ್ನೆಲ್ಲ ಎಚ್ಚರಿಕೆಯಿಂದ ಗಮನಿಸುತ್ತಿದ್ದನೆ? ಈ ಹೆಣ್ಣನ್ನು ಅವನು ಮತ್ತೆ ಪ್ರೀತಿಸುವನೆ? ಅರಮನೆಯ ಎತ್ತರವಾದ ರಕ್ಷಣಾ ಗೋಡೆಯ ಆಚೆ, ಕೆಳಗಡೆ, ಭಕ್ತರ ಗುಂಪುಗಳು ಅವಳದೊಂದು ಹಾಡನ್ನು ಹಾಡುತ್ತಿದ್ದುವು.

ಸಾವು ಬದುಕುಗಳಲ್ಲಿ ನಿನ್ನವಳು ನಾನು ನಿನ್ನವಳು ಮಾತ್ರ
ಒಪ್ಪಿಸಿಕೊ ನನ್ನ. ನಿನ್ನ ಮನಕೆ ಬಂದಂತೆ ಮಾಡೆನ್ನ
ಶಿಲೆಯಾಗಿ ಬೀದಿನಾಯಾಗಿ ಜಿರಲೆಯೋ ಪುಷ್ಪವೋ ಮೀನೋ
ಮತ್ತೆಂಥ ಜನ್ಮವನೇ ನಾ ತಾಳಲಿ
ನಾನು ನಿನ್ನವಳು, ನಿನ್ನವಳು ಮಾತ್ರ
ಓ ನನ್ನ ಪ್ರಿಯನೆ, ನನ್ನ ದೈಹಿಕ ಸುಖದ
ಮತ್ತಾತ್ಮ ಸಂತೋಷದ ಕುರಿತು
ಎಚ್ಚರವಿರಲಿ
ನೀನು ನನ್ನವನು, ನನ್ನವನು ಮಾತ್ರ
ನಿನ್ನ ವಧು ನಾನು, ನಿನ್ನ ಒಡವೆ, ನಿನ್ನದಾಸಿ
ನಾನು ಕೇವಲ ಕೊಡುವವಳು
ನೀನೊ ಕೇವಲ ಕೊಳುವವನು
ಎಂಬುದು ನಿನ್ನ ಮನಕೆ ಬಂತೆ ದೇವ?
ನಿನ್ನ ಯಶಸ್ಸಿನ ಕಾಲವೊಂದಿತ್ತು.
ಈಗ ನಾ ಹೇಳಿದ್ದ ಕೇಳಿಸಿಕೊಳ್ಳುವ ಸಮಯ.
ಭಕ್ತನೊಬ್ಬನು ಬಂದು ಕುಂಕುಮವನಿಡುವತನಕ
ದೇವನು ಬರಿಯ ಕಲ್ಲೆ.
ಸಾವು ಬದುಕುಗಳಲಿ ನಿನ್ನವಳು ನಾನು
ನಿನ್ನವಳು ಮಾತ್ರ.
ಒಪ್ಪಿಸಿಕೊ ನನ್ನ
ನಿನ್ನ ಮನಕೆ ಬಂದಂತೆ ಮಾಡೆನ್ನ.

ಆ ಸಂದರ್ಭದ ಅಣಕ ಅವನಿಗೆ ನಗೆ ಬರಿಸಿತು. ತನ್ನ ಖಡ್ಗವನ್ನು ಅವಳ ಮೇಲೆ ಚಲಾಯಿಸುವಂತೆ ಮಾಡಿ, ತನ್ನ ಮೇಲೂ ಚಲಾಯಿಸಿಕೊಳ್ಳುವಂತೆ ಮಾಡುವಂಥ ಕಾಲವೊಂದಿತ್ತು. ಅವಳು ಅವನ ತೋಳಿನಲ್ಲಿದ್ದಳು. ಕೊನೆಯುಸಿರೆಳೆಯುವಾಗಲು ಬೇರಾರನ್ನೋ ಆಲಿಂಗಿಸುತ್ತಿದ್ದಳು. ಕೌಸಲ್ಯ ಅಕ್ಕಿಯ ಗಂಜಿಯನ್ನು ತಂದಳು. ದೇಹಪುಷ್ಟಿಗಾಗಿ ಕೋಳಿ ಮಾಂಸದ ತುಣುಕು ಮತ್ತು ಅಕ್ಕಿಯಗಂಜಿ. ಅವಳ ಕಡೆಯಿಂದ ಪಾತ್ರೆಯನ್ನು ಕೈಗೆತ್ತಿಕೊಳ್ಳುವಾಗ ಅವನ ಕೈ ನಡುಗಿತು.

"ಸ್ವಲ್ಪ ಹೊತ್ತು ನೀವು ನಿದ್ದೆ ಮಾಡಿ ಮಹಾಸ್ವಾಮಿ, ನಾನು ಅವಳಿಗೆ ತಿನ್ನಿಸುತ್ತೇನೆ"

"ನಾನು ನಿನಗಿಂತ ಮೊಂಡ. 'ನಾನು ಆಮೇಲೆ ಗಂಜಿ ಕುಡಿತೀನಿ' ಎನ್ನುವ ಅವಳ ಮನವಿಗಳಿಗೆ ನಾನು ಸೋಲಲ್ಲ."

ಈಗ್ಗೆ ಕೆಲ ದಿನಗಳಿಂದ, ಹೆಚ್ಚು ಉಸಿರು ತೆಗೆದುಕೊಳ್ಳಬೇಕು ಎನ್ನುವ ಕಾರಣಕ್ಕೆ ರಾಜಕುಮಾರಿಯ ಬಾಯಿ ಯಾವಾಗಲೂ ಅರ್ಧ ತೆರೆದೇ ಇರುತ್ತಿತ್ತು. ಅವನು ತೆಳ್ಳನೆಯ

ಗಂಜಿಯನ್ನು ಒಂದು ದೊಡ್ಡ ಚಮಚದಷ್ಟನ್ನು ತೆಗೆದುಕೊಂಡು. ತನ್ನ ಹೆಂಡತಿಯ ಬಾಯಿಗೆ ಹೊರಳಿಸಿದನು. ಹೇಗೋ ಏನೋ ಕಷ್ಟಪಟ್ಟು ನುಂಗಿಕೊಂಡು ಗಂಟಲೊಳಕ್ಕಿಳಿಸಿದಳು. ಅದನ್ನು ಪೂರ್ತಿ ನುಂಗಿ ಮುಗಿಸಿದ ಮೇಲೆ, ಅವನು ಮತ್ತೆ ಶುರು ಮಾಡಿದನು.

"ನಾನು ಅವಳ ಹತ್ತಿರ ದೃಢವಾಗಿ ಇರುತ್ತೀನಿ. ಏಳು ದಿನಗಳಿಂದ ನೀವು ಅವಳ ಜೊತೆಗೆ ಇದ್ದು ಹಗಲು ರಾತ್ರಿ ಉಪಚರಿಸಿದ್ದೀರಿ. ನೀವು ಏನಾದರೂ ಖಾಯಿಲೆ ಮಲಗಿ ಬಿಟ್ಟರೆ ನನಗೆ ಇಬ್ಬರು ರೋಗಿಗಳನ್ನು ನೋಡಿಕೊಳ್ಳಕ್ಕಾಗಲ್ಲ".

ಅವನು ತನ್ನ ಗದ್ದ ಮತ್ತು ಮುಖದ ಮೇಲೆ ಕೈಯಾಡಿಸಿಕೊಂಡನು. ಕುರುಚಲು ಗಡ್ಡ ಸಾಕಷ್ಟು ಬೆಳೆದಿತ್ತು. ತಾನು ಗಡ್ಡ ಬೆಳೆಸಬೇಕೆ?. ಅವನು ಕೌಸಲ್ಯಳ ಕಡೆ ನೋಡಿದ. ಅವಳು ಸೋಲುವವಳಲ್ಲ. ಅದು ಸರಿಯೂ ಹೌದು. ಅವಳ ಕೈಗೆ ಪಾತ್ರೆಯನ್ನು ಕೊಟ್ಟು, ಅಲ್ಲೇ ಇದ್ದ ಇನ್ನೊಂದು ಹಾಸಿಗೆಯ ಮೇಲೆ ಮಲಗಿಕೊಂಡನು. ಅವನ ಹೆಂಡತಿ ಸತ್ತಿದ್ದಳು. ತನ್ನ ಗಂಡನ ಕಣ್ಮುಂದೆ ಸಾಯಲು ಅವಳು ಪುಣ್ಯ ಮಾಡಿದ್ದಳು. ಹಾಗಾಗಿ ಕೌಸಲ್ಯ ಅವಳಿಗೆ ಸ್ನಾನ ಮಾಡಿಸಿ ಅವಳ ಮದುವೆಯ ಪರಕಾರವನ್ನು ಅವಳ ಮೈ ತುಂಬ ಹೊದಿಸಿದಳು, ಅವನು ಬೆಂಕಿಯ ಮಡಕೆಯನ್ನು ಕೈಯಲ್ಲಿ ಹಿಡಿದು ಚಟ್ಟದ ಮುಂದೆ ಹೋದನು. ಇಡೀ ಚಿತ್ತೂರಿಗೆ ಚಿತ್ತೂರೇ ಅಲ್ಲದೆ, ಬೃಂದಾವನಿ ದೇವಾಲಯದ ಅರ್ಚಕರು ಕೊನೆಯ ನಮಸ್ಕಾರವನ್ನು ಸಲ್ಲಿಸಲು ಬಂದಿದ್ದರು. ನದಿಯ ದಡದವರೆಗೂ ದಾರಿಯುದ್ದಕ್ಕೂ ಅವಳಿಂದ ಕಲಿತ ಭಜನೆಗಳನ್ನು ಹಾಡಿದರು. ಅವಳನ್ನು ಮೆಲ್ಲಗೆ ಚಿತೆಯ ಮೇಲೆ ಇಟ್ಟರು. ಯಾರನ್ನೋ ಕುತೂಹಲದಿಂದ ಕಾಯುತ್ತಿರುವಂತೆ ಆಕೆ ನಿಶ್ಶಬ್ದವಾಗಿ, ಶಾಂತವಾಗಿ ಮಲಗಿದ್ದಳು. ಅವನಿಗೆ ತನ್ನ ಮದುವೆಯ ದಿನ ನೆನಪಾಯಿತು. ಅದು ಅವಳನ್ನು ಮೊದಲ ಸಲ ನೋಡುತ್ತಿದ್ದುದು. ಅವಳಿಗೆ ಅನೇಕ ಬಗೆಯಾಗಿ ಮಾತುಕೊಟ್ಟದ್ದನು. ಆದರೆ ಇದುವರೆಗೂ ಅದೊಂದನ್ನೂ ಈಡೇರಿಸಿರಲಿಲ್ಲ. ಅವಳನ್ನು ಅವನು ಹಾಗೆಯೇ ಕಳಿಸುವಂತೆ ಇಲ್ಲ. ಮಡಕೆಯಲ್ಲಿದ್ದ ಬೆಂಕಿಯಿಂದ ಹತ್ತಿಸಿಕೊಂಡು, ಅವಳ ಪರಕಾರದ ತುದಿಗೆ ಅನಂತರ ಚಿತೆಯ ಮೇಲಿನ ಸೌದೆಗೆ ಬೆಂಕಿ ಹೊತ್ತಿಸಿದನು. ಆ ಕೂಡಲೆ ಬೆಂಕಿ ಧಗ್ಗೆಂದು ಹೊತ್ತಿಕೊಂಡು, ಮೇಲೇರಿತು. ಶ್ರೀ ಕೃಷ್ಣನು ಆ ಚಿತಾಗ್ನಿಯಿಂದ ಮೇಲೆದ್ದನು. ಅವನು ಮುಗುಳ್ನಕ್ಕನು. "ನನ್ನ ಮಿತ್ರಾ, ಹಾಗೆಂದು ನಿನ್ನನ್ನು ನಾನು ಕರೆಯಬಹುದೆ", ಎಂದು ಅವನು ಒಣ ಪ್ರತಿಷ್ಠೆಯಿಂದ ಮಹಾರಾಜ್‌ಕುಮಾರ್‌ನನ್ನು ಕೇಳಿದನು. ಪವಾಡಗಳಿಗೆ ಸರಿಯಾದ ಸಮಯ ಕೊನೇ ಗಳಿಗೆ ಅಲ್ಲ. ಅದೂ ಕಳೆದ ಮೇಲೆ'. ಬೆಂಕಿಯ ಜ್ವಾಲೆಗಳ ಮೇಲೆ ಅವನು ತನ್ನ ಕೈಯಾಡಿಸಿದ ಕೂಡಲೆ ಅವು ತಗ್ಗಿ ಆರಿ ಹೋದವು. ಅವನು ಅವಳ ತುಟಿಗಳನ್ನು ಚುಂಬಿಸಿದನು. 'ಎದ್ದೇಳು ನನ್ನ ಮುದ್ದಿನವಳೆ' ಎಂದನು. ಅವಳು ಅದನ್ನು ಕೊನೇ ಮೂರು ಸಲ ಕುಡಿಸಿದಾಗಲೂ ಅವಳು ಕಣ್ಣುಗಳನ್ನು ತೆರೆದಳು. ಅಪಾರ ಪ್ರೀತಿಯಲ್ಲಿ ಅವು ಮುಳುಗಿಹೋಗಿದ್ದುವು. ಅವನು ಅವಳನ್ನು ತನ್ನ ತೋಳುಗಳನ್ನು ಚಾಚಿ ಎತ್ತಿಕೊಂಡನು. ಅವರಿಬ್ಬರೂ ಗಗನದತ್ತ ಏರಿಬಿಟ್ಟರು.

"ಕೊನೇ ಮೂರು ಸಲ ಕುಡಿಸಿದಾಗಲೂ ಅವಳು ಅದನ್ನು ಕಿತ್ತೆಸೆಯಲಿಲ್ಲ" ಕೌಸಲ್ಯ ಅವನಿಗೆ ಹೇಳಿದಳು.

'ಎಷ್ಟು ಹೊತ್ತಾಯಿತು ನಾನು ಮಲಗಿ?'

"ಹನ್ನೊಂದು ಗಂಟೆಗಳು ಕಳೆದು ಹೋದುವು ಇಲ್ಲ ಇಲ್ಲ, ಇನ್ನೇನು ಹನ್ನೆರಡು ಗಂಟೆಗಳಾಗುತ್ತಾ ಬಂತು."

ಮೊನಚು ಅಲಗಿನ ಕತ್ತಿ ಅವನ ಕೈಯಿಂದ ಕೊನೇ ಪಕ್ಷ ಮೂರು ಸಲ ಜಾರಿಹೋಗಿ ಅವನಿಗೆ ತೀವ್ರವಾಗಿ ಗಾಯಮಾಡಿತು.

"ಅದು ನಿನ್ನ ಕುತ್ತಿಗೆಕೊಯ್ದು ಹೋಗುವುದಕ್ಕೆ ಬಿಡಬೇಕು ನಾನು." ಕೊಠಡಿಯಲ್ಲಿ ಬೇರೆ ಯಾರೂ ಇರಲಿಲ್ಲ. ಆದರೆ ಅದು ಯಾರು ಎಂದು ಅವನಿಗೆ ಗೊತ್ತಾಯಿತು. ಭೂತಾನಿ ಮಾತಾ ಖಡ್ಗದಿಂದ ಅವನ ದೇಹವನ್ನು ಬೀಸಿ ಹೊಡೆದು ಘಾಸಿಗೊಳಿಸುತ್ತಿದ್ದಳು. ದೊಡ್ಡ ದೊಡ್ಡ ಸೀಳು ಗಾಯಗಳಿಂದ ರಕ್ತ ಚಿಮ್ಮುತ್ತಿತ್ತು. "ಅದು ಅಷ್ಟು ಸುಲಭವಾದ ಕೆಲಸ ಅಲ್ಲ ಎಂದು ನಾನು ಮೊದಲೇ ನಿನಗೆ ಎಚ್ಚರಿಸಿದ್ದೆ. ಈ ವಿಶ್ವದ ಯೋಜನೆಯನ್ನೇ ನಾನು ತಲೆಕೆಳಗು ಮಾಡಬೇಕೆಂಬುದು ನಿನ್ನ ಬಯಕೆ. ಅಂದರೆ ದೇವತೆಗಳ ಖಾಸಗಿ ವ್ಯವಹಾರದಲ್ಲಿ ತಲೆಹಾಕಬೇಕೆಂಬುದು, ನಿನ್ನ ನಿರೀಕ್ಷೆ." ಮೊನಚು ಅಲಗಿನ ಕತ್ತಿ ಈಗ ಅವನ ಮುಖದ ಕಡೆ ಹೋಗುತ್ತಿತ್ತು. "ಆದರೆ ನೀನು ನನ್ನ ಮಾತು ಕೇಳಲಿಲ್ಲ. ನಿನಗೆ ಅದಕ್ಕೆ ತೆರಬೇಕಾಗಿ ಬರುವ ದಂಡ, ಅಥವಾ ಅದರ ಪರಿಣಾಮದ ಬಗ್ಗೆ ಲಕ್ಷ್ಯವೇ ಇರಲಿಲ್ಲ. ಕೆಲಸ ಆಗಬೇಕು ಅಷ್ಟೇ ಎಂಬುದು ನಿನ್ನ ನಿರೀಕ್ಷೆ. "ಯಾವುದೇ ನೆಪಗಳನ್ನು ಹೇಳಕೂಡದು ದಯವಿಟ್ಟು" ಎನ್ನುತ್ತಿದ್ದೆ. ನಾನು ಅನೇಕ ವರ್ಷಗಳು ಪ್ರಯತ್ನಪಟ್ಟೆ. ಆದರೆ ನಾನು ಏನೆಲ್ಲ ಪ್ರಯತ್ನ ಮಾಡಿದರೂ ಅದೆಲ್ಲವೂ ನಿಷ್ಫಲವಾಯಿತು. ಅವಳು ತಪ್ಪಿಸಿಕೊಂಡು ಬಿಟ್ಟಳು. ಈ ಸಲ ನಾನು ಏನಾಗುವುದೋ ನೋಡೋಣ ಎಂದು ಕೂರಲಿಲ್ಲ. ಬೇರೆ ಯಾರೋ ವ್ಯಕ್ತಿಯ ರಕ್ತದ ಕಲೆ ಇನ್ನೆಂದೂ ನನ್ನ ಕೈಗೆ ಹತ್ತಬಾರದೆಂದು ಇಚ್ಛಿಸಿದೆ. ನಾನು ಮೂರು ತಿಂಗಳು ಯೋಜನೆ ಹಾಕಿದೆ. ಪ್ರತಿಯೊಂದು ವಿವರವನ್ನೂ ಲೆಕ್ಕ ಹಾಕಿದೆ. ಎಲ್ಲೂ ತಪ್ಪಬಾರದು. ಅವಳಿಗೆ ವಾಂತಿ ಭೇದಿ ಕಾಯಿಲೆ ಬರುವ ಹಾಗೆ ಮಾಡಿದೆ. ಅವಳು ಕೊನೆಯುಸಿರೆಳೆಯಬಹುದೆಂದು ಕೊಂಡ ರಾತ್ರಿ ನೀನೇನು ಮಾಡಿದೆ? ನೀನು ಇದ್ದಕ್ಕಿದ್ದಂತೆ ರಂಗ ಪ್ರವೇಶ ಮಾಡಿದೆ. ನೀನು ವೈದ್ಯರ ಸೂಚನೆಗಳನ್ನು ರದ್ದು ಮಾಡಿ, ಅವಳಿಗೆ ಬಲವಂತವಾಗಿ ಆಹಾರ ತಿನ್ನಿಸಿದೆ. ಅವಳ ಬಾಯಿ ಒರೆಸಿದೆ. ಅವಳ ಗುದವನ್ನೊರೆಸಿದೆ. ಆ ವಿಷಕರವಾದ ಹಬೆಯಲ್ಲಿ ಆ ಕೊಠಡಿಯಲ್ಲಿ ಕೂತುಕೊಂಡು ಅವಳಿಗೆ ಉಪಚಾರ ಮಾಡಿದೆ. ನೀನು ನನ್ನ ಪ್ರಯತ್ನಗಳನ್ನೆಲ್ಲಾ ಹಾಳುಗೆಡವಿ ಅವಳನ್ನು ಸಾವಿನ ದವಡೆಯಿಂದ ಬದುಕಿಗೆ ವಾಪಸ್ ಕರೆ ತಂದೆ. ನಿನಗೆ ನಾನು ಹೇಲು ತಿನ್ನಿಸಬೇಕಾಗಿತ್ತು. ಅವಳಿಗಲ್ಲ. ಆ ರೀತಿಯಲ್ಲೇ ನಾನು ನನ್ನೆಲ್ಲಾ ಸಮಸ್ಯೆಗಳಿಂದ ಬಿಡುಗಡೆ ಪಡೆಯಬಹುದಾಗಿತ್ತು."

"ಬೇರೆ ಯಾರದೋ ತಪ್ಪು ವ್ಯಕ್ತಿಯ ರಕ್ತದ ಕಲೆ ನಿನ್ನ ಕೈಗೆ ಅಂಟಕೂಡದು ಎಂದು ಹೇಳಿದೆ. ಆದರೆ ನೀನು, ಒಬ್ಬ ನಿಸ್ಸಹಾಯಕ ಹೆಂಗಸನ್ನು ಮುಟ್ಟುವುದಕ್ಕೆ ಅರ್ಧ ಚಿತ್ತೂರನ್ನೇ ಸಾಯಿಸಿಬಿಟ್ಟೆ. ಕೊನೇ ಸಲ ಲೆಕ್ಕ ಹಾಕಿದಾಗ ಒಂಬತ್ತೂವರೆ ಸಾವಿರ ಜನ ಸತ್ತಿದ್ದಾರೆ. ಇಷ್ಟಾಗಿಯೂ ನೀನು ಅದನ್ನು ಗುರಿತಪ್ಪದ ಹೊಡೆತ ಎಂದು ಹೇಳುತ್ತೀಯಾ? ನಿನ್ನ ಈ ಕರಾರುವಾಕ್ಕಾದ ಲೆಕ್ಕಾಚಾರದಿಂದ ದೇವತೆಗಳೂ ನಮ್ಮನ್ನು ಕಾಪಾಡಲಾರರು."

"ಅವಳಿಗೆ ತನ್ನನ್ನು ಕಾಪಾಡೋ ಕಳ್ಳರು ಮೇಲಿನ ಆ ಸ್ವರ್ಗದಲ್ಲಿರಬಹುದು. ಆದರೆ ತೀರಾ ಅಲ್ಪನಾದ ನೀನು ನನ್ನ ಕೈಗೆ ಸಿಕ್ಕಿ ಬಿದ್ದಿದ್ದೀ. ಇಲ್ಲಿಯುವರಾಗಲಿ, ಆ ಸ್ವರ್ಗದಲ್ಲಿರುವವರಾಗಲಿ, ಯಾರೂ ನಿನ್ನನ್ನು ರಕ್ಷಿಸಲು ಇಚ್ಛಿಸುವುದಿಲ್ಲ. ಈಗಾಗಲೇ ತನ್ನ ಬಲ ತೋಳನ್ನು ಕಳೆದುಕೊಂಡಿರುವ ಮಹಾಪ್ರಭುಗಳನ್ನೂ ಒಳಗೊಂಡಂತೆ, ನಿನ್ನಿಂದ ಬಿಡಿಸಿಕೊಳ್ಳುವುದಕ್ಕೆ ಎಲ್ಲರೂ ತಮ್ಮ ಬಲತೋಳನ್ನು ಕೊಡಲು ಸಿದ್ಧರಿದ್ದಾರೆ ಅನ್ನುವುದರಲ್ಲಿ ಯಾವ ಮುಚ್ಚು ಮರೆಯೂ ಇಲ್ಲ. ಆದರೆ ಅದು ತೀರಾ ಸುಲಭ. ನೀನು ಅದೆಷ್ಟು

ಚತುರ ಮತ್ತು ಬುದ್ಧಿವಂತ ಅಂದರೆ, ನೀನು ಸ್ವತಃ ನಿನ್ನ ತಲೆಗೆ ತಂದುಕೊಳ್ಳುವಷ್ಟು ತೊಂದರೆಗಳನ್ನು ಬೇರೆ ಯಾರೂ, ನಿನ್ನ ಕಟು ಶತ್ರುವಿನ ಸೈನ್ಯ ಕೂಡ, ನಿನಗೆ ಹಾರೈಸಲಾರದು. ನಾನು ಹಿನ್ನೆಲೆಯಲ್ಲಿದ್ದುಕೊಂಡು ನೀನು ನಿನಗಾಗಿ ತಂದುಕೊಳ್ಳುವ ಎಲ್ಲ ಹಿನ್ನಡೆ ಅಪಮಾನಗಳನ್ನು ನೋಡಿ ಖುಷಿಪಡಲು ಸಿದ್ಧವಾಗಿರುತ್ತೇನೆ."

ಅಧ್ಯಾಯ 26

ಒಂದು ವಾರದೊಳಗಾಗಿ ಹಸಿರುಕಂಗಳ ಚೆಲುವೆ ಮನೆಯಲ್ಲೆಲ್ಲಾ ಓಡಾಡ ತೊಡಗಿದ್ದಳು ಹತ್ತನೇ ದಿನ ಅವಳು ಅನಾಥಾಶ್ರಮಕ್ಕೆ ಭೇಟಿಕೊಟ್ಟಳು. ಹಾಗೆ ನೋಡಿದರೆ ಅವಳೇ ಹೋಗಬೇಕೆಂದು ಉದ್ದೇಶಪಟ್ಟಿದ್ದಳು. ಕಿರಿಯ ಸಂತಳು ಮತ್ತೆ ಕಾಣಿಸಿಕೊಂಡು, ಬೃಂದಾವನಿ ದೇವಸ್ಥಾನದ ಹತ್ತಿರವೇ ಅವಳನ್ನು ನಿಲ್ಲಿಸಿದ್ದಳು ಎಂದು ಚಿತ್ತೂರಿನ ಜನತೆಗೆ ಸುದ್ದಿ ಸಿಕ್ಕಿತ್ತು. ಶ್ರೀ ಕೃಷ್ಣನ ಮೂರ್ತಿಯನ್ನು ಅಲ್ಲಿಂದ ಹೊರತರಬೇಕೆಂದು ಅವರು ಅರ್ಚಕರನ್ನು ಬಲವಂತ ಪಡಿಸಿ ಹೊರಗಡೆ ಅದನ್ನು ಪ್ರತಿಷ್ಠಾಪಿಸಿದ್ದರು. ಅಲ್ಲಿಂದ ಮುಂದೆಲ್ಲ, ಗೊಂದಲವೇ. ಕಿರಿಯ ಸಂತಳು ಹಿಂತಿರುಗಿದ್ದನ್ನು, ಆಚರಿಸಿದಷ್ಟು ಸಂಭ್ರಮದಿಂದ, ಯಾವ ದೀಪಾವಳಿಯನ್ನಾಗಲಿ, ಹಬ್ಬವನ್ನಾಗಲಿ, ಜನ್ಮದಿನವನ್ನಾಗಲಿ, ವಿಜಯೋತ್ಸವವನ್ನಾಗಲಿ ಯಾವತ್ತೂ ಆಚರಿಸಿರಲಿಲ್ಲ. ಅವಳಿಂದ ಹಾಡು ಹೇಳಿಸಿದರು, ನೃತ್ಯ ಮಾಡಿದರು. ಅವಳ ಹಾಡುಗಳನ್ನು ಹಾಡಿದರು. ಅವಳನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಊರೆಲ್ಲ ಮೆರವಣಿಗೆ ಮಾಡಿದರು. ಎಲ್ಲ ವಾಹನ ಸಂಚಾರವನ್ನು ನಿಲ್ಲಿಸಿದರು. ಎಲ್ಲವೂ ನಿಂತಿತು. ಕಛೇರಿಗಳನ್ನು ಮುಚ್ಚಲಾಯಿತು. ಅಂಗಡಿಗಳ ಬಾಗಿಲು ಹಾಕಲಾಯಿತು. ನಗರ ರಕ್ಷಣಾಧಿಕಾರಿ(ಪೊಲೀಸ್ ಆಯುಕ್ತರು) ಸೇರಿದಂತೆ ಎಲ್ಲರೂ, ಭದ್ರತಾ ಸಿಬ್ಬಂದಿಯವರು, ಅರ್ಚಕರು ಕೂಡ, ಅವಳ ಕಾಲಿಗೆ ಬಿದ್ದರು. ಒರಟ ನಿಷ್ಠುರ, ವ್ಯಾವಹಾರಿಕ ಮನುಷ್ಯ, ಕಠಿಣ ಎನಿಸಿದ ನನ್ನ ಸೋದರ ಮಾವ ಲಕ್ಷ್ಮಣಸಿಂಹಜೀ ಕೂಡ ಇನ್ನೇನು ಬಾಗಲು ಹೊರಟಿದ್ದರು. (ಹೇಗೆಂದು ನನ್ನನ್ನು ಕೇಳಬೇಡಿ. ಅವರ ಭಾರಕ್ಕೆ ಕೋಟೆಯೇ ಕುಸಿದು ಬಿಡುತ್ತಿತ್ತು, ಅವರನ್ನು ಹೇಗೆ ಮೇಲೆತ್ತ ಬೇಕೆಂದು ನಮಗೆ ತಿಳಿಯುತ್ತಿರಲಿಲ್ಲ. ಅಷ್ಟೇ ಅಲ್ಲ, ಅವರನ್ನು ಅಲ್ಲೇ ದೇವಸ್ಥಾನದ ಎದುರಿನಲ್ಲೇ ಹೂಳಬೇಕಾಗುತ್ತಿತ್ತು). ಆಗ ಚತುರೆಯಾದ ನನ್ನ ಹೆಂಡತಿ, ಅವರ ಪಾದಗಳನ್ನು ಸ್ಪರ್ಶಿಸಿ, "ಘನತೆವೆತ್ತ ಮಹಾಸ್ವಾಮಿಯವರೆ, ತಾವು ಕೂಡದು. ಇಷ್ಟೊಂದು ಜನಗಳ ಎದುರಿನಲ್ಲಿ ನನ್ನನ್ನು ಪೇಚಿಗೆ ಸಿಕ್ಕಿಸಬೇಡಿ" ವಿವೇಕ ಅಥವಾ ವಿವೇಚನೆ ಬಂದಿತು. ಆದರೆ ಕೇವಲ ಒಂದು ನಿಮಿಷ ಮಾತ್ರ, ಕಾರಣ ಈಗ ಇಡೀ ನಗರದ ಎದುರಿಗೆ ಸ್ಪರ್ಶಿಸಲು ಇದ್ದದ್ದು ಎರಡು ಜೊತೆ ಪಾದಗಳು. ಕಿರಿಯ ಸಂತಳದು ಹಾಗೂ ಲಕ್ಷ್ಮಣ ಸಿಂಹಜೀಯವರದು.

ಮುತ್ತೈದೆಯಿದ್ದ ಪ್ರತಿ ಮನೆಯ ಬಳಿಯೂ ಮೆರವಣಿಗೆ ನಿಲ್ಲಬೇಕಿತ್ತು. ಆ ಮನೆಯ ಮುತ್ತೈದೆಯು ದೀಪವನ್ನು ಬೆಳಗಿಸಿ ಆರತಿ ಮಾಡುತ್ತಿದ್ದಳು. ಪೂರ್ತಿ ಒಂದು ಸುತ್ತು ಬಂದು ಬೃಂದಾವನಿ ದೇವಾಲಯದ ಹಿಂಭಾಗಕ್ಕೆ ಬರುವ ಹೊತ್ತಿಗೆ ಸಂಜೆಯಾಗಿತ್ತು.

ಬೀದಿ ಬೀದಿಗಳಲ್ಲಿ ಮನೆ ಮನೆಗಳಲ್ಲಿ ಹಣತೆಗಳನ್ನು ಹಚ್ಚಿದ್ದರು, ಎಲ್ಲರೂ ಎಲ್ಲರಿಗೂ ಸಿಹಿ ಹಂಚುತ್ತಿದ್ದರು. ಯಾರೋ ಕಿರಿಯ ಸಂತಳಿಗೆ ಸುವರ್ಣ ತುಲಾಭಾರ ಮಾಡಿಸಬೇಕೆಂದು ಸೂಚಿಸಿದರು. ಕೆಲವೇ ನಿಮಿಷಗಳಲ್ಲಿ ಆಹಾರ ಧಾನ್ಯಗಳ ಉಗ್ರಾಣದಿಂದ ತರಿಸಿದ ತಕ್ಕಡಿಯ ಒಂದು ತಟ್ಟೆಯಲ್ಲಿ ನನ್ನ ಹೆಂಡತಿ ಕುಳಿತಿದ್ದಳು. ತಕ್ಕಡಿಯ ಇನ್ನೊಂದು ತಟ್ಟೆಯಲ್ಲಿ, ಚಿನ್ನದ ಬಳೆಗಳು, ಮೂಗು ಬಟ್ಟುಗಳು, ಕಿವಿಯ ಮತ್ತು ಮೂಗಿನ ವಂಕಿಗಳು, ಕಾಲಂದುಗೆಗಳು, ಡಾಬುಗಳು, ಸರಿಗೆಗಳು, ಕಂಠಹಾರಗಳು, ಬಿದ್ದವು. ನಿಧಾನವಾಗಿ, ಗೊತ್ತಾಗದ ಹಾಗೆಯೇ ನನ್ನ ಹೆಂಡತಿ ಮೇಲೇರ ತೊಡಗಿದಳು. ಕಿರಿಯ ಸಂತಳು ಮೇಲೇರುವುದನ್ನು ನೋಡುವುದು ನಿಜಕ್ಕೂ ಒಂದು ರೋಮಾಂಚಕ ಸನ್ನಿವೇಶ. ಸ್ವಲ್ಪವೇ ಹೊತ್ತಿಗೆ ತಕ್ಕಡಿಯ ಎರಡೂ ತಟ್ಟೆಗಳು ಸಮಕ್ಕೆ ಬಂದುವು. ಆದರೂ ಚಿನ್ನದ ಆಭರಣಗಳನ್ನು ಮತ್ತೆಯೂ ಪೇರಿಸತೊಡಗಿದರು. ನನ್ನ ಹೆಂಡತಿ ಈಗ ಮೇಲಿದ್ದಳು. ಇನ್ನು ಸಾಕು ನಿಲ್ಲಿಸಿ ಎಂದು ಕಿರುಚಿದಳು. ಆದರೆ ಯಾರೂ ಅವಳ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಇದ್ದಕ್ಕಿದ್ದಂತೆ ಪಟಾಕಿಗಳಿಂದ ಆಕಾಶವೆಲ್ಲ ಬೆಳಗಿತು. ಅದು ನಗರ ರಕ್ಷಣಾಧಿಕಾರಿಗಳ(ಪೊಲೀಸ್ ಆಯುಕ್ತರ) ಕೊಡುಗೆಯಾಗಿತ್ತು. ಪೂರ್ತಿ ಒಂದು ಗಂಟೆಯ ಕಾಲ ನಾನಾ ವಿನ್ಯಾಸಗಳು, ಬಣ್ಣ ಬಣ್ಣದ, ಬೆಳಕಿನ ಚಿಲುಮೆಗಳು ಆಕಾಶದಲ್ಲಿ ಸ್ಫೋಟಿಸಿದವು. ಈ ದೃಶ್ಯ ವೈಭವದ ನಂತರ, ಜನರ ಗುಂಪು ಎಲ್ಲಕ್ಕೂ ಮುಕ್ತಾಯ ಹಾಡಿ ಮನೆಗೆ ನಡೆದರೆಂದು ನೀವು ಭಾವಿಸಿದ್ದರೆ ಅದು ಶುದ್ಧ ತಪ್ಪು. ಆದರೆ ಸಂಭ್ರಮದ ಗದ್ದಲ ಮುಂದುವರೆಯಿತು. ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಹಾಡಿದರು, ಕುಣಿದರು, ಕುಪ್ಪಳಿಸಿದರು, ಭಂಗಿಯನ್ನು ಕುಡಿದರು. ಕಿರಿಯ ಸಂತಳಿಂದ ಮೆರ್ತಾದ ಜನಪದ ಗೀತೆಗಳನ್ನು ಹಾಡಿಸಿದರು. ಐಂದ್ರ ಜಾಲಿಕರು ನೌಟಂಕಿ ನಟ, ನಟಿಯರು, ದೊಂಬರಾಟದವರು, ಚಾರಣರು, ಅಲ್ಪಸ್ವಲ್ಪ ಪ್ರತಿಭೆಯಿದ್ದವರೆಲ್ಲರೂ ಇಡೀ ಪ್ರೇಕ್ಷಕ ಸಮುದಾಯದ ಮುಂದೆ ಐದು ಹತ್ತು ನಿಮಿಷಗಳ ಕಲಾ ಪ್ರದರ್ಶನ ನೀಡಿದರು. ಪ್ರತಿ ಕಲಾ ಪ್ರದರ್ಶನದ ನಂತರವೂ, ಆ ಪ್ರದರ್ಶನ ಎಷ್ಟೇ ಚೆನ್ನಾಗಿರಲಿ, ತಲೆ ಚಿಟ್ಟು ಹಿಡಿಸುವಂಥದಾಗಿರಲಿ ಅಥವಾ ಅವರಿಗೆ ಗೊತ್ತಿಲ್ಲದ ಹಾಗೆ ನಗೆಪಾಟಲಿಗೆ ಗುರಿಯಾದಂಥವರಾಗಿರಲಿ, ಜೋರಾಗಿ ಚಪ್ಪಾಳೆ ಹೊಡೆಯುತ್ತಿದ್ದರು. ನನ್ನ ಹೆಂಡತಿ ಹೋಗಲು ಬಿಡಿ ಎಂದು ಬೇಡಿಕೊಂಡಳು. ಶ್ರೀ ಕೃಷ್ಣನಿಗೆ ಬೆಳಗಿನ ಆರತಿ ಮಾಡಿದ ನಂತರವೇ ಅವಳನ್ನು ಹೋಗಲು ಬಿಟ್ಟಿದ್ದು.

ಮರುದಿನ, ಚಿತ್ತೂರು ಸುರಕ್ಷಿತವಾದ ಪ್ರದೇಶವೆಂದು ಅಧಿಕೃತವಾಗಿ ಘೋಷಿಸಲಾಯಿತು. ಎಲ್ಲ ಸಂಪರ್ಕಗಳನ್ನು ಕಡಿದುಕೊಂಡ ಅನೇಕ ತಿಂಗಳುಗಳ ನಂತರ, ನಗರದ ವಾಣಿಜ್ಯ ವ್ಯವಹಾರ ಎಂದಿನಂತೆ ನಡೆಯಲು, ಮುಕ್ತಗೊಳಿಸಲಾಯಿತು. ಗಂಭೀರಾನದಿಯ ಮೇಲಿನ ಸೇತುವೆ ಹಗಲು ರಾತ್ರಿ ಚಟುವಟಿಕೆಯಿಂದ ಕೂಡಿತ್ತು. ಸಾಂಕ್ರಾಮಿಕ ರೋಗ ವ್ಯಾಪಿಸಿದ್ದ ಕಾಲದಲ್ಲಿ ಅನೇಕ ಕುಟುಂಬಗಳು ಚಿತ್ತೂರನ್ನು ಬಿಟ್ಟು ತೆರಳಿದ್ದುವು. ಅವರಿಗೆ ಒಳ್ಳೆಯದಾಗಲಿ, ಕಾರಣ ಇನ್ನೊಂದಷ್ಟು ಸಾವಿರ ಜನಕ್ಕೆ ಆಹಾರ ಒದಗಿಸಿ ನೋಡಿಕೊಳ್ಳಬೇಕಾಗಿದ್ದರೆ, ನಾವು ಏನು ತಾನೆ ಮಾಡಬೇಕಿತ್ತು? ಈಗ ಆ ಕುಟುಂಬಗಳೆಲ್ಲ ಒಂದಾದ ನಂತರ ಮತ್ತೊಂದು ಊರಿಗೆ ಹಿಂತಿರುಗಿದವು. ಅನತಿಕಾಲದಲ್ಲೇ ತಂದೆಯುವರು ಮತ್ತು ನ್ಯಾಯಾಲಯವೂ ವಾಪಸಾದವು. ಜನಜೀವನ ಎಂದಿನಂತಾಯಿತು.

ಹತ್ತು ದಿನಗಳಲ್ಲಿ ನಾನು ಹೊರಡಬೇಕೆಂಬ ಆದೇಶ ಕೈ ಸೇರಿತು. ನಾನು ಪತ್ನಿ ಸಮೇತನಾಗಿ ಕುಂಭಲ್‌ಗರ್‌ಗೆ ಹೊರಡಬೇಕಿತ್ತು. ಪತ್ನೀ ಸಮೇತ ಎಂಬುದಕ್ಕೆ ಒತ್ತು

ನೀಡಲಾಗಿತ್ತು. ಕೋಟೆಯ ರಾಜ್ಯಪಾಲ ಸಮರ್ ಸಿಂಹರೊಂದಿಗೆ ಸಮಾಲೋಚಿಸಿ ಕೋಟೆಯನ್ನು ಬಲಪಡಿಸುವ ಕಾಮಗಾರಿಗಳ ಉಸ್ತುವಾರಿ ವಹಿಸಬೇಕಿತ್ತು.

ತಂದೆಯವರಿಗೆ ಹಾಸ್ಯ ಪ್ರಜ್ಞೆ ಇರಲಿಲ್ಲವೆಂದು ಈಗ ಯಾರು ತಾನೆ ಹೇಳಲು ಸಾಧ್ಯ? ನಮ್ಮ ಮುತ್ತಾತ ಮಹಾರಾಣಾ ಕುಂಭ ಅವರು ನಿರ್ಮಿಸಿದ ಕುಂಭಲ್‌ಗರ್ ಕೋಟೆ ಇಡೀ ಮೇವಾಡ ಸಂಸ್ಥಾನದಲ್ಲಿಯೇ ಅತ್ಯುತ್ತಮ ಕೋಟೆಗಳಲ್ಲಿ ಒಂದು. ಅದನ್ನು ಕಟ್ಟಿಸಿ ಇನ್ನೂ ಐವತ್ತು ವರ್ಷ ಕೂಡ ಆಗಿರಲಿಲ್ಲ. ಅಲ್ಲದೆ ಅದು ಅತ್ಯುತ್ತಮ ಸ್ಥಿತಿಯಲ್ಲಿತ್ತು. ಈ ಬಾರಿ ಇಲ್ಲಿಂದ ಕಳಿಸಿಕೊಡುತ್ತಿದ್ದುದು ಯಾರನ್ನು? ನನ್ನನ್ನೋ ನನ್ನ ಹೆಂಡತಿಯನ್ನೋ ಅಥವಾ ಇಬ್ಬರನ್ನೂ? ಕುಣಿತದ ಹುಡುಗಿಯ ಬದಲಾದ ಸ್ಥಾನಮಾನವನ್ನು ಕುರಿತ ಮಾತು ರಾಣಿ ಕರ್ಮವತಿ ಮತ್ತು ನನ್ನ ಸೋದರ ವಿಕ್ರಮಾದಿತ್ಯನಿಗೆ ತಲುಪಿದ್ದು ಸ್ಪಷ್ಟವೇ ಇತ್ತು. ತಕ್ಷಣ ಪರಿಹಾರೋಪಾಯಗಳನ್ನು ತೆಗೆದುಕೊಂಡದ್ದಕ್ಕೆ ತಾಯಿ ಮಗನನ್ನು ನಾನು ದೂಷಿಸಲಾರೆ ಎಂದು ಹೇಳಲೇಬೇಕು. ನೂಕಿ ತಳ್ಳುವ ಸಂದರ್ಭ ಬಂದರೆ ದ್ರೋಹಕ್ಕಾಗಿ ನನ್ನನ್ನು ವಿಚಾರಣೆಗೆ ಗುರಿಪಡಿಸಿ ಸೆರೆಮನೆಗೆ ದೂಡಬಹುದು, ಗಡೀಪಾರು ಮಾಡಬಹುದು. ನನ್ನ ಹೆಂಡತಿಯನ್ನು ಯಾವ ಅಪರಾಧಕ್ಕಾಗಿ ವಿಚಾರಣೆ ಮಾಡುತ್ತಾರೆ? ಅದೂ ಅಲ್ಲದೆ ಸಂತಳನ್ನು ಅಪರಾಧಿ ಎಂದು ಬಂಧಿಸುವುದಾಗಲಿ, ಸುಳ್ಳು ಆರೋಪ ಹೊರಿಸುವುದಾಗಲಿ ಕಷ್ಟ. ಕಿರಿಯ ಸಂತಳು ನಡೆಸುತ್ತಿದ್ದ ಸಾಯಂಕಾಲದ ಪ್ರಾರ್ಥನೆಗಳನ್ನು ನಿಷೇಧಿಸಬೇಕೆಂಬ ರಾಣಿ ಕರ್ಮವತಿಯ ಸೂಚನೆಯನ್ನು ಕಿರಿಯ ಸಂತಳ ಪರವಾಗಿಲ್ಲದಿದ್ದ ಅರ್ಚಕರು ಕೂಡ ಅದು ಅಪಾಯಕರವೆನ್ನುವ ಕಾರಣಕ್ಕೆ ವಿರೋಧಿಸಿದ್ದರು. ಅವಳನ್ನು ಕೊಂದು ಬಿಡಿ. ಅವಳು ದಿಢೀರ್ ಹುತಾತ್ಮಳಾಗಿ ಬಿಡುತ್ತಾಳೆ. ನನ್ನ ಅತಿಶಯ ಕೀರ್ತಿಗೆ ಅವಳ ಸಾವು ತಿರುಗು ಬಾಣವಾಗಿ ಬಿಡುವುದು. ಅವರು ಮಾಡಿರುವ ಚಾರಿತ್ರ್ಯ ಹನನದಂಥ ಅದ್ಭುತ ಕಾರ್ಯದ ಹೊರತಾಗಿಯೂ ನಾನು ಜನಪ್ರಿಯನಾಗುವ ಸಾಧ್ಯತೆ ತೀರ ದೂರವೇ ಆಗಿ ಬಿಡುತ್ತದೆ. ತತ್‌ಕ್ಷಣಕ್ಕೆ ಇದಕ್ಕಿರುವ ಪರಿಹಾರವೆಂದರೆ, ಆಗಲಿರುವ ಕೇಡಿನ ನಿಯಂತ್ರಣ ಮಾಡುವುದು. ಕಿರಿಯ ಸಂತಳನ್ನು ಚಿತ್ತೂರಿನಿಂದ ಹೊರಗೆ ಸಾಗಿಸುವುದು. ಜನ ಅವಳನ್ನು ಮರೆತೇ ಬಿಡಬಹುದು. ಏನಾದರೂ ಅಪಘಾತವಾಗಬಹುದು. ಕಣ್ಣೆದುರಿಗಿಲ್ಲದೆ ಇದ್ದಾಗ ಏನು ಬೇಕಾದರೂ ಆಗಬಹುದು.

ನಾನು ಚಿತ್ತೂರನ್ನು ಪ್ರೀತಿಸಿ ದಣಿಯಲಾರೆ. ಆದರೆ ಈ ಸಲ ಇದನ್ನು ಬಿಟ್ಟು ಹೊರಡುವುದು ನೆಮ್ಮದಿ ತಂದಿತ್ತು. ನನ್ನನ್ನು ಮೂಲೆಗೆ ತಳ್ಳುವುದಾದರೆ ಕ್ರಿಯಾಕೇಂದ್ರದಿಂದ ನಾನು ಹೊರಗೇ ಇರಬಹುದಲ್ಲವೆ? ನಾನು ಮತ್ತು ನನ್ನ ಹೆಂಡತಿ ಒಂದೇ ದಿನದಲ್ಲಿ ನಮ್ಮ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಂಡೆವು. ರಾತ್ರಿ ಊಟವಾದ ನಂತರ, ಮರು ದಿನ ಬೆಳಿಗ್ಗೆ ಹೊರಡುತ್ತಿದ್ದೇನೆಂದು ಹೇಳಲು ತಂದೆಯವರ ಕಡೆ ಹೋದೆ. ಅವರು ಬೇರೇನೋ ಯೋಚನೆಯಲ್ಲಿ ಮುಳುಗಿದ್ದರು, ಅಥವಾ ಹಾಗೆಂದು ನಟಿಸಿದರು.

"ನೀನೀಗ ಪೂರ್ತಿ ಗುಣವಾಗಿರುವ ಹಾಗೆ ಕಾಣುತ್ತೆ." ಕಳೆದ ಏಳೆಂಟು ತಿಂಗಳಿನಿಂದ ನಾನು ಸರಿಯಾಗೇ ಇದ್ದೀನಿ ಎಂದು ತಿಳಿಸುವ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. "ಸರಿ ಕುಂಭಲ್‌ಗರ್‌ನಲ್ಲಿ ಏನೆಲ್ಲ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೀಯಾ?"

"ತಮ್ಮ ಆಜ್ಞೆಯನ್ನು ಪಾಲಿಸುವುದು ಮಹಾಪ್ರಭು ಕುಂಭಲ್‌ಗರ್‌ನ ಕೋಟೆಯ ರಕ್ಷಣೋಪಾಯಗಳನ್ನು ಬಲಗೊಳಿಸುವುದು"

ನನ್ನ ಸಣ್ಣ ಅಪಹಾಸ್ಯವನ್ನವರು ಅಲಕ್ಷಿಸಿದರು.

"ನೀನು ಅದನ್ನು ಮಾಡು. ಆ ಕಡೆ ನಮಗೇನಾದರೂ ಕೆಲಸವಿದ್ದಾಗ ಅಲ್ಲಿಗೆ ಬಂದು ಕೋಟೆಯನ್ನು ಪರಿಶೀಲಿಸುತ್ತೇವೆ".

"ನಮಸ್ಕಾರ ಅಪ್ಪಾಜಿ"

ಯಾರೊಬ್ಬರಿಗೂ ನೋವಾಗದ ರೀತಿಯಲ್ಲಿ ಬೀಳ್ಕೊಡುಗೆ ಸಮಾರಂಭ ಮುಗಿದು ಹೋಯಿತು. ಮನೆಗೆ ಹಿಂತಿರುಗುವುದಕ್ಕೆ ಮುಂಚೆ ಒಂದು ಸ್ವಲ್ಪ ದೂರ ಕುದುರೆ ಬೆನ್ನೇರಿ ಹೋಗಿ ಬರಬೇಕೆಂದು ನಿಶ್ಚಯಿಸಿದೆ. ಅಶ್ವ ಶಾಲೆಗೆ ಹೋಗಿ ಬೇಷ್ಟಿಕೀರ್‌ನನ್ನು ತೆಗೆದುಕೊಂಡು ಹೊರಟೆ. ಲೀಲಾವತಿಗೆ ನಾನು ತಂದುಕೊಟ್ಟಿದ್ದ ಚೆನ್ನಾಗಿ ಬೆಳೆದ ಬೀಜದ ಕುದುರೆ 'ನಷಾ'ಗೆ ಏನಾದರೂ ಆಯಿತೆ? ಅವಳನ್ನು ಅಷ್ಟೊಂದು ಸಲ ಎಲ್ಲ ಎಲ್ಲ ನೆನಪಿಸಿಕೊಳ್ತೀನಿ ಆದರೆ, ಆ ಸುಂದರವಾದ ಕುದುರೆಯನ್ನು ಮರೆತೇ ಬಿಟ್ಟಿದ್ದೆನಲ್ಲ?

"ಮಂಗಳ್ ನಿನಗೆ ಕುಂಭಲ್‌ಗರ್‌ಗೆ ಬರುವುದಕ್ಕೆ ನಿಜವಾಗಿಯೂ ಇಷ್ಟವಿದೆಯೆ? ಅದು ನಿನಗೆ ಭಯಂಕರ ಬೇಸರ ತರಿಸುತ್ತೆ. ತಲೆಚಿಟ್ಟು ಹಿಡಿಸುತ್ತದೆ."

"ಹೌದು ಸ್ವಾಮಿ"

"ಹೌದು ಯಾತಕ್ಕೆ?"

"ನನಗೆ ತಮ್ಮ ಜೊತೆ ಬರಲು ಇಷ್ಟ."

"ನೀನು ನನ್ನ ಅತ್ಯಂತ ಆಪ್ತ ಜೊತೆಗಾರ ಮಂಗಳ್. ನಾವು ಎಂದೂ ಮಾತೇ ಆಡಲ್ಲ. ಅದು ಏಕೆ ಅಂದರೆ, ನನ್ನ ಎಲ್ಲ ಕೃತ್ಯಗಳ ರಹಸ್ಯ ನಿನಗೆ ಗೊತ್ತಿರುತ್ತೆ. ನೀನಿಲ್ಲದೆ ಹೋಗಿದ್ದರೆ ಇದುವರೆಗೆ ನಾನು ಎಷ್ಟೋ ಸಲ ಸತ್ತು ಹೋಗಬೇಕಾಗಿತ್ತು. ನಾನು ಹತಮಾರಿಯಾಗಿರಬಹುದು. ಅಂಥ ಎಲ್ಲ ಸಮಯದಲ್ಲಿ ನನಗೆ ನೀನು ತೋರಿದ ನಿನ್ನ ದೃಢವಾದ ಮತ್ತು ಮಿತಿಯಿಲ್ಲದ ನಿಷ್ಠೆಯ ಲಾಭವನ್ನು ಪಡೆದುಕೊಂಡಿದ್ದೇನೆ. ನಮ್ಮಿಬ್ಬರಿಗೂ ನಾನು ಯೋಜನೆಗಳನ್ನು ಹಾಕಿದ್ದೆ ಮಂಗಳ್. ನಮ್ಮ ನಾಡಿನ ಭವಿತವ್ಯವನ್ನು ಇನ್ನಷ್ಟು ನಿರಾತಂಕಗೊಳಿಸಬಹುದಾಗಿದ್ದಂಥ ಶ್ರೇಷ್ಠವೂ, ದೃಢವೂ ಪಂಥಾಹ್ವಾನಕರವೂ ಆದ ಯೋಜನೆಗಳನ್ನು ಹಾಕಿದ್ದೆ. ಆದರೆ ನೀನು ನನ್ನ ಜೊತೆ ಇದ್ದರೆ, ನಿನಗೆ ಯಾವ ಭವಿಷ್ಯವೂ ಇಲ್ಲ. ಕೊನೇ ಪಕ್ಷ ಸದ್ಯಕ್ಕೆ ಅಥವಾ ಶಾಶ್ವತವಾಗಿ ನನ್ನನ್ನು ಚಿತ್ತೂರಿನಲ್ಲಿ ಅವರು ಮುಗಿಸಿದ್ದಾರೆ. ಇದನ್ನೆಲ್ಲ ನಿನಗೆ ನಾನು ಹೇಳುವುದಕ್ಕೆ ಅರ್ಥವೇ ಇಲ್ಲ, ಕಾರಣ ನಿನಗೆ ವಿಷಯಗಳು ನನಗಿಂತ ತುಂಬ ಚೆನ್ನಾಗಿ ಮತ್ತು ನನಗಿಂತ ಸಾಕಷ್ಟು ಮುಂದಾಗಿ ಗೊತ್ತಿರುತ್ತವೆ. ನೀನು ಸಚಿವ ಸಂಪುಟದ ಯಾವುದೇ ಮಂತ್ರಿಗೆ ಒಂದು ಆಸ್ತಿ ಇದ್ದ ಹಾಗೆ. ನಾನು ನಾಳೆ ಇಲ್ಲಿಂದ ಹೊರಡುವುದಕ್ಕೆ ಮುಂಚೆ ಲಕ್ಷ್ಮಣ ಸಿಂಹಜೀಯವರ ಜೊತೆಯಲ್ಲಿ ಮಾತಾಡಬಹುದು. ನಿನ್ನನ್ನು ತಮ್ಮ ಜೊತೆ ಇಟ್ಟುಕೊಳ್ಳುವುದಕ್ಕೆ ಅವರಿಗೆ ತುಂಬ ಸಂತೋಷವಾಗುತ್ತದೆ ರಕ್ಷಣಾ ಸಿಬ್ಬಂದಿಯ ಆಯುಕ್ತರು(ಪೊಲೀಸ್ ಆಯುಕ್ತರು) ಇಲ್ಲಿಂದ ಬೇರೆ ಕಡೆಗೆ ವರ್ಗ ಆಗುವ ಸಾಧ್ಯತೆ ಇದೆ. ನಾನು ಮತ್ತೆ ಅಲ್ಲಿ ಹೋಗಿ ನಿನಗೆ ಗೊತ್ತಿರುವಂಥ ವಿಷಯಗಳನ್ನೇ ಹೇಳುತ್ತಿರುತ್ತೀನಿ. ಆ ಜಾಗಕ್ಕೆ ನಿನಗಿಂತ ಹೆಚ್ಚು ಸಮರ್ಥನೂ, ಪ್ರಾಮಾಣಿಕನೂ ಆದ ವ್ಯಕ್ತಿಯನ್ನು ನಾನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆ ಇಲಾಖೆಯನ್ನು ಇಡಿಯಾಗಿ ಸರಿಪಡಿಸಬೇಕಾಗಿದೆ. ಅಲ್ಲ ಅಲ್ಲ. ಹೊಸದಾಗೇ ನಿರ್ಮಿಸಬೇಕಾಗಿದೆ. ನೀನು ಅದನ್ನು ತುಂಬ ಅದ್ಭುತವಾಗಿ ಮಾಡ್ತೀಯಾ. ನಾನು ಮಾವನ ಹತ್ತಿರ ಮಾತಾಡಲೆ?"

"ಬೇಡ ಮಹಾಸ್ವಾಮಿ"

"ಮೂರ್ಖನಾಗಬೇಡ ಮಂಗಲ್. ನೀನು ನಿನ್ನ ವೃತ್ತಿ ಜೀವನದ ಬಗ್ಗೆ ಯೋಚನೆ ಮಾಡಬೇಕು. ಅದೂ ಅಲ್ಲದೆ ಚಿತ್ತೂರಿಗೂ ಮೇವಾಡಕ್ಕೂ ನಿನ್ನ ಅನುಭವ ಮತ್ತು ಪರಿಣತಿಯ ಪ್ರಯೋಜನ ದೊರೆಯುತ್ತದೆ. ಜೊತೆಗೆ ಅದೃಷ್ಟವೇನಾದರೂ ಖುಲಾಯಿಸಿದರೆ, ನಾನು ಮತ್ತೆ ಮಹಾರಾಜರ ಅನುಗ್ರಹ ಸಂಪಾದಿಸುವೆ. ಆಗ ಎಂದೂ ಬೇರ್ಪಡಿಸಲಾಗದ ಜೋಡಿಗಳಾದ ನಾವಿಬ್ಬರೂ ಮತ್ತೆ ಜೊತೆ ಸೇರುತ್ತೇವೆ. ನೀನು ಇಲ್ಲೇ ಇರು ಮಂಗಳ್, ನಿನ್ನ ಹೆಂಡತಿಯ ಬಗ್ಗೆ ಯೋಚನೆ ಮಾಡು. ಅದಕ್ಕಿಂತ ಹೆಚ್ಚಾಗಿ ನಿನ್ನ ಭವಿಷ್ಯದ ಬಗ್ಗೆ ಯೋಚನೆ ಮಾಡು."

"ನಾನು ಮನಸ್ಸು ಬಿಚ್ಚಿ ಖಡಾಖಂಡಿತವಾಗಿ ಮಾತನಾಡುತ್ತಿರುವುದಕ್ಕೆ ನನ್ನ ಬಗ್ಗೆ ತಾವು ತಪ್ಪು ತಿಳಿದುಕೊಳ್ಳಕೂಡದೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ ಮಹಾಸ್ವಾಮಿ. ಆದರೆ ನೀವು ನನಗೆ ಆಯ್ಕೆಗೆ ಅವಕಾಶವನ್ನೇ ಕೊಡುತ್ತಾ ಇಲ್ಲ. ನಾವಿಬ್ಬರೂ ಸರಿಸುಮಾರು ಒಂದೇ ಗಳಿಗೆಯಲ್ಲಿ ಹುಟ್ಟಿದವರು. ಹಾಗಾಗಿಯೇ ನಮ್ಮಿಬ್ಬರ ವಿಧಿಗಳು ಒಟ್ಟಿಗೆ ತಳುಕು ಹಾಕಿಕೊಂಡಿವೆ. ನಾವಿಬ್ಬರೂ ಒಬ್ಬಳೇ ತಾಯಿಯ ಹಾಲು ಕುಡಿದು ಬೆಳೆದಿದ್ದೇವೆ. ಆದ್ದರಿಂದ ನನ್ನ ಭವಿಷ್ಯವನ್ನು ತಮ್ಮದರಿಂದ ಬೇರ್ಪಡಿಸಲಾಗುವುದಿಲ್ಲ. ನೀವು ನನ್ನ ಬಗ್ಗೆ ಹಿತೈಷಿಗಳಾಗಿದ್ದೀರಿ. ಆದ್ದರಿಂದಲೇ ನಾನು ಬೇರೆಲ್ಲರಿಗಿಂತಲೂ ಬಹಳ ಬೇಗ ಮೇಲಕ್ಕೇರಿದೆ. ನಾನು ನಮ್ಮ ದೇಶಕ್ಕೆ ಪ್ರಯೋಜನಕರವಾಗಿರಬೇಕೆಂದಿದ್ದೇನೆ. ಯಾವುದೋ ಅಸ್ಪಷ್ಟವಾದ ರಂಜಕವಾದ ರೀತಿಯಲ್ಲಲ್ಲ, ಆದರೆ ಅತ್ಯಂತ ಸ್ಪಷ್ಟವೂ, ವ್ಯಾವಹಾರಿಕವೂ ಆದ ರೀತಿಯಲ್ಲಿ ಪ್ರಯೋಜನಕರವಾಗಿ. ನಾನು ನಿಮ್ಮಿಂದ ಕಲಿತಿರುವ ಅನೇಕ ಸಂಗತಿಗಳಲ್ಲಿ ಅದೂ ಒಂದು. ಯಾವ ಆಡಂಬರದ ನಡವಳಿಕೆ ಅಲ್ಲ, ನಮಗೆ ಸಾಧ್ಯವಿರುವಷ್ಟೂ ಹಾಳತವಾಗಿ, ಸಮರ್ಥವಾಗಿ ಒಳ್ಳೆಯದನ್ನು ಮಾಡುವುದು. ಆದರೆ ನಾನು ಅಪಾಯಕ್ಕೆ ಗುರಿಯಾಗಬಹುವಾದಂಥ ವ್ಯಕ್ತಿ. ಇರುವುದೊಂದೇ ಬೀಡು ಮತ್ತು ಅದು ಮೇವಾಡ ಎಂಬುದನ್ನು ನೀವು ನಂಬುತ್ತೀರಿ ಎಂದು ನಾನು ತಿಳಿದಿದ್ದೇನೆ. ಆದರೆ ಎಲ್ಲರೂ ನಿಮ್ಮ ದೃಷ್ಟಿಕೋನದಿಂದಲೇ ನೋಡುವುದಿಲ್ಲ. ನಾನು ನಿಮ್ಮ ಮನುಷ್ಯ ಅಂತ ಅವರು ತಿಳಿದಿದ್ದಾರೆ. ಹಾಗಾಗಿ ನಾನು ಸಹಜವಾಗಿಯೇ ಗುಮಾನಿಗೆ ಒಳಗಾದವನು. ನಾವು ಕುಷ್ಠರೋಗಿಗಳಂತೆ ಮಹಾಸ್ವಾಮಿ. ಬೇರೆ ಯಾರನ್ನೇ ನಮ್ಮ ಜೊತೆಯಲ್ಲಿ ನೋಡಿದರೂ ಅವರಿಗೆ ಕಳಂಕ ಹತ್ತುತ್ತೆ.

"ನಾನು ಯಾವತ್ತೂ ಗುಮಾನಿಗೆ ಒಳಗಾದವನು. ನಾನು ನಿಮ್ಮ ಕಾರ್ಯಭಾರಿಯೆಂದೇ ಯಾವಾಗಲೂ ಅನುಮಾನ. ನಿಮ್ಮ ಹಾಗೆ ಜನರು ಯಜಮಾನನನ್ನು ಕೆಲಸದಿಂದ ಬೇರೆಯಾಗಿ ನೋಡುವುದಿಲ್ಲ. ಯಾರೇ ಆಗಲಿ ತನ್ನ ಕೆಲಸಕ್ಕೆ ಮತ್ತು ಒಂದು ಸಂಸ್ಥೆಗೆ ನಿಷ್ಠನಾಗಿರುತ್ತಾನೆಂಯೇ ಹೊರತು ಒಬ್ಬ ವ್ಯಕ್ತಿಗಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳುವುದಿಲ್ಲ. ನಿಮ್ಮದೇನೂ ಅಭ್ಯಂತರವಿಲ್ಲದಿದ್ದರೆ, ನಾನು ನಿಮ್ಮ ಜೊತೆಯಲ್ಲಿ ನನ್ನ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುತ್ತೇನೆ."

ಅವನು ಮುಗುಳ್ನಕ್ಕನು. ಆದರೆ ಅದಕ್ಕೆ ಪ್ರತಿಯಾಗಿ ನಗುವ ಮನಸ್ಥಿತಿಯಲ್ಲಿ ನಾನಿರಲಿಲ್ಲ. ನಮ್ಮ ಇಡೀ ಜೀವಮಾನದಲ್ಲಿ ಅಷ್ಟೊಂದು ಸುದೀರ್ಘ ಸಂಭಾಷಣೆಯನ್ನು ಯಾವತ್ತೂ ನಡೆಸಿರಲಿಲ್ಲ. ಶಾಲೆಯಲ್ಲಿ ಓದುತ್ತಿದ್ದಾಗಲೂ, ನನ್ನ ಹಿತಾಸಕ್ತಿಗಳು ಅವನದಕ್ಕಿಂತ ಮುಂದಿರುತ್ತಿದ್ದುವು. ನಾನು ಅವನ ಹೊಣೆಗಾರಿಕೆಯಾಗಿದ್ದೆ. ಅವನು ಯಾವಾಗಲೂ ಹಿನ್ನೆಲೆಯಲ್ಲಿ ಇದ್ದು ಬಿಡುತ್ತಿದ್ದ. ಬಾಯಿ ಬಿಟ್ಟು ಹೇಳದೆಯೆ ಅವನನ್ನು ದಾಸ್ಯದಲ್ಲಿ ಇಟ್ಟದ್ದಕ್ಕೆ ಮೊದಲ ಸಲಕ್ಕೆ ನನಗೆ ಅಪರಾಧಿ ಭಾವವುಂಟಾಯಿತು. ನನ್ನ ಜೊತೆಯಲ್ಲಿ

ಕೆಲಸ ಮಾಡಿದ ತೇಜ, ಷಫಿ ಮತ್ತು ನನ್ನೊಂದಿಗೆ ಕಾರ್ಯ ನಿರ್ವಹಿಸಿದ ಎಲ್ಲರಿಗೂ ಮಂಗಳನಿಗೆ ಬಂದ ಗತಿಯೇ ಬರಲಿದೆಯೆ?

ನಾವು ಮತ್ತೆ ನಿರಾಯಾಸ ನಾಗಾಲೋಟಕ್ಕೆ ತೊಡಗಿದೆವು. ಆಕಾಶ, ಕೃಷ್ಣ ವರ್ಣ ತಾಳಿತ್ತು. ಹುಣ್ಣಿಮೆಯ ಪೂರ್ಣಚಂದ್ರ ಕಾಣಿಸಿಕೊಳ್ಳಲು ಇನ್ನೂ ಎರಡು ದಿನಗಳಿದ್ದುವು. ಅದೆಷ್ಟು ನಕ್ಷತ್ರಗಳು ಮಿಣುಕು ಹುಳುಗಳಂತೆ ಮಿನುಗುತ್ತಿದ್ದವೆಂದರೆ, ಆಕಾಶ ದುಂಬಿಗಳ ಝೇಂಕಾರದಿಂದ ಗಿಜಿ ಗುಟುತ್ತಿದ್ದಂತೆ ಕಾಣಿಸಿತು. ಚಿತ್ತೂರಿನ ಮುಕ್ಕಾಲು ಭಾಗ ಜನತೆ ಆಗಲೇ ನಿದ್ರಿಸುತ್ತಿತ್ತು. ಏಕಲಿಂಗಜೀ ದೇವಾಲಯದ ಬೆಳ್ಳಿಯ ಶಿಖರವು ಆಕಾಶ ದೀಪದ ಬೆಳಕಿನ ಪ್ರಭೆಯಂತೆ ಕಾಣಿಸುತ್ತಿತ್ತು. ಅರಮನೆಯ ಸಂಕೀರ್ಣಗಳು ನಗರ ಕೇಂದ್ರ, ಅಂಗಡಿಕಾರರ ಮತ್ತು ಕಾರ್ಮಿಕರ ಮನೆಗಳು, ಕಣ್ಣುಗಳನ್ನೆಲ್ಲ ದೋಚಿಕೊಂಡ ಮುಖಗಳ ಹಾಗೆ ಕಾಣಿಸುತ್ತಿದ್ದುವು. ನೀರಿನ ಕೊಳ್ಳಗಳು, ಚತುರಂಗ ಮಯೂರ ಕೆರೆ, ಸಾಸ, ಬಹೂ ಕುಂಡ, (ಅತ್ತೆ ಸೊಸೆ ಕುಂಡ), ಫತೇಹ್ ಸರೋವರ, ಎಲ್ಲವೂ ಮಂದ ಬೆಳಕಿನಲ್ಲಿ ಹೊಳೆಯುವ ಪಾದರಸದ ಹಾಳೆಗಳಂತೆ ಹೊಳೆಯುತ್ತ, ಕಣ್ಣು ಕುರುಡಾಗಿಸಿದುವು.

"ಝುಟ್ ಅಂತ ಒಂದು ಮುಳುಗು ಹಾಕಿದರೆ ಹೇಗೆ ಮಂಗಳ್? "

ನಾವು ಸೀದಾ ಗಂಭೀರಾ ನದಿಯ ಸಮೀಪಕ್ಕೆ ಕುದುರೆಗಳನ್ನು ವೇಗವಾಗಿ ಓಡಿಸಿದೆವು. ನದಿಯು ತಣ್ಣಗೆ ವೇಗವಾಗಿ ಹರಿಯುತ್ತಿತ್ತು. ನದಿಯಲ್ಲಿ ಅಪಾಯದ ಸೆಳೆತಗಳು ಎಲ್ಲೆಲ್ಲಿ ಎಂದು ನಮ್ಮಿಬ್ಬರಿಗೂ ಗೊತ್ತಿತ್ತು. ನದಿಯನ್ನು ಹಾಗೆಲ್ಲಾ ಸುಲಭವಾಗಿ ಮಾಮೂಲಿನಂತೆ ಎಂದು ತೆಗೆದುಕೊಳ್ಳಲು ಸಾಧ್ಯವಿಲ್ಲ. ಮುಂಗಾರಿನಲ್ಲಿ ಅಥವಾ ಮುಂಗಾರು ಮುಗಿದ ಕೂಡಲೇ ಈಜುವ ಮೂರ್ಖತನವನ್ನೇನಾದರೂ ತೋರಿದರೆ, ಅದು ವಿಶ್ವಾಸ ಘಾತುಕತನದ ಪಾಠವೊಂದನ್ನು ಕಲಿಸಿ ಬಿಡುತ್ತದೆ. ಪ್ರತಿವರ್ಷ ಐದಾರು ಜನ ಅದರಲ್ಲೂ ತುಂಬ ಚಾಲಾಕಿತನ ತೋರಿಸುತ್ತೇವೆಂದು ಹೋದ ಯುವಕರು ತಮ್ಮ ಜೀವ ಕಳೆದುಕೊಂಡಿದ್ದಾರೆ. ನಾವು ಒಂದು ದಡದಿಂದ ಇನ್ನೊಂದು ದಡಕ್ಕೆ ಮತ್ತೆ ಅಲ್ಲಿಂದ ಹಿಂದಕ್ಕೆ ಈಜಿದೆವು. ನೇರವಾಗಿ ಈಜಿಯೂ, ಹರಿವಿನಲ್ಲಿ ಎಳೆಸಿಕೊಂಡು ಹೋಗದೆ ಇರಲು ನಾವು ಸಾಕಷ್ಟು ಪ್ರಯಾಸ ಪಡಬೇಕಾಯಿತೆಂಬುದು ನಿಜಕ್ಕೂ ಸ್ಫೂರ್ತಿದಾಯಕವಾಗಿತ್ತು. ನಾವು ಮತ್ತೆ ಉಡುಪು ಧರಿಸಿದಾಗ ನಡುಗುತ್ತಿದ್ದೆವು.

"'ನಾಳೆ ಇಲ್ಲಿಂದ ಹೊರಡುವುದು ಎಷ್ಟು ಹೊತ್ತಿಗೆ ಸ್ವಾಮಿ?"

"ಏಳು ಗಂಟೆಗೆ. ನೀನು ನಿನ್ನ ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತಿದ್ದೀಯಾ?"

"ತಾವು ಕರೆದುಕೊಂಡು ಬರುವುದಾದರೆ ಮಹಾರಾಜ್‌ಕುಮಾರ್"

"ನನಗೆ ಅನ್ಯ ಮಾರ್ಗವೇ ಇಲ್ಲ"

ನಾನು ನನ್ನ ಮಲಗುವ ಕೋಣೆಯ ಬಾಗಿಲನ್ನು ತೆರೆದು ಒಳಗೆ ಪ್ರವೇಶಿಸಿದಾಗ, ಒಂದೇ ಒಂದು ಮಿಣುಕು ದೀಪ ಮಸುಕು ಮಸಕಾಗಿ ಉರಿಯುತ್ತಿತ್ತು. ಬಾಗಿಲು ಮುಚ್ಚಿ ದೀಪದ ಬತ್ತಿಯನ್ನು ದೊಡ್ಡದು ಮಾಡಲು ಹೆಜ್ಜೆ ಹಾಕಿದೆ ದೊಡ್ಡದು ಮಾಡಲಿಲ್ಲ.

'ಮಹಾರಾಜ್‌ಕುಮಾರ್'

ಆ ಧ್ವನಿಯ ಪರಿಚಯ ನನಗಿತ್ತು. ಆದರೆ ಅದು ಯಾವುದೋ ಜನ್ಮದ, ಯಾವುದೋ ಲೋಕದ ಧ್ವನಿಯಾಗಿತ್ತು. ಅದೇನು ವಿಕ್ರಮಾದಿತ್ಯನ ಕಡೆಯ ನಿಯೋಗಿಯೆ? ನನ್ನ

ಮೇಲೆ ಹೊಂಚು ಹಾಕಲು ಹೆಣ್ಣೊಬ್ಬಳನ್ನು ಕಳಿಸುವುದು ಒಂದು ಚಾಲಾಕಿ ನಡೆ. ನಾನು ಹೆಚ್ಚು ಎಚ್ಚರದಿಂದಿರಬೇಕಿತ್ತು. ನಾನು ಕೋಣೆಯೊಳಗೆ ಪ್ರವೇಶಿಸುತ್ತಿದ್ದ ಹಾಗೆಯೇ ಎಲ್ಲೋ ಏನೋ ಎಡವಟ್ಟಾಗಿದೆ ಎಂದು ನಾನು ಅರ್ಥಮಾಡಿಕೊಳ್ಳಬೇಕಿತ್ತು. ಯಾರ ಧ್ವನಿ ಅದು? ಒಂದು ವೇಳೆ ಅದು ಪರಿಚಿತವಾದದ್ದಾಗಿದ್ದರೆ, ಹಾಗೇಕೆ ಪರಕೀಯವೆಂದೆನಿಸಬೇಕು? ನಾನು ಸುತ್ತ ತಿರುಗಿ ಸ್ತಂಭೀಭೂತನಾದೆ. ನನ್ನ ಗೋಮಾಳೆಯ ಪ್ರತಿವರ್ತನೆಗಳು ತಮ್ಮ ಕ್ರಿಯಾಶೀಲತೆಯನ್ನು ನಿಲ್ಲಿಸಿದುವು. ನನಗೆ ನಂಬಲಾಗಲಿಲ್ಲ. ನನಗೆ ಚಲಿಸಲಾಗಲಿಲ್ಲ. ಸೂರ್ಯದೇವನ ಜೀವಾಧಾರಕವಾದ ಬೆಳಕು ಮತ್ತು ಶಾಖದಿಂದ ವಂಚಿತವಾಗಿ, ಬಣ್ಣವೆಲ್ಲವನ್ನೂ ಹೀರಿ ಬಿಟ್ಟಂತೆ ಅವಳು ಬಿಳಿಚಿಕೊಂಡಿದ್ದಳು. ಆ ಒಂದು ಪ್ರಕ್ರಿಯೆಯಲ್ಲಿ ಅವಳಲ್ಲಿದ್ದ ಹೆಣ್ಣು ಶಿಶುವನ್ನು ಕತ್ತು ಹಿಸುಕಿ ಕೊಲ್ಲಲಾಗಿತ್ತು. ಅವಳೊಬ್ಬ ಪೂರ್ಣವಾಗಿ ಬೆಳೆದು ನಿಂತ, ಮನಕಲಕುವ ಲಾವಣ್ಯವತಿ ಎಂದರೆ, ಮನಸ್ಸಿನ ಸ್ತಿಮಿತವನ್ನು ಕಾಯ್ದುಕೊಳ್ಳುವುದು ಕಷ್ಟವಾಯಿತು. ಲೀಲಾವತಿ ನಿಶ್ಚಲವಾಗಿ ನಿಂತಿದ್ದಳು. ಅವಳನ್ನು ತೋಳುಗಳಿಂದ ಬಾಚಿತಬ್ಬಿದೆ. ಅವಳ ಕುರುಳು, ಹಣೆ, ಕಿವಿಗಳು ಕಣ್ಣುಗಳು, ಕೆನ್ನೆಗಳು, ಗದ್ದ, ಕೊರಳು ಬಾಯೊಂದನ್ನು ಬಿಟ್ಟು ಎಲ್ಲವನ್ನೂ ಲೊಚಲೊಚನೆ ಚುಂಬಿಸಿದೆ. ಅದು ಆಲಿಂಗನವಾಗಿರಲಿಲ್ಲ. ಅವಳು ಕಾಣೆಯಾದ ದಿನದಿಂದ ನನ್ನ ಕರುಳಿನ ಆಳದಲ್ಲಿ ಮನೆ ಮಾಡಿಕೊಂಡಿದ್ದ ಕಂದರವನ್ನು ತುಂಬಿಕೊಳ್ಳುವ ಒಂದು ವ್ಯರ್ಥ ಪ್ರಯತ್ನ ಅದಾಗಿತ್ತು. ಪ್ರತಿಯಾಗಿ ಅವಳು ಚುಂಬಿಸಲಿಲ್ಲ. ಅವಳದೇನೂ ಮಾತೇ ಇಲ್ಲ. ಏನಾಗಿದೆ ನನಗೆ? ನಾನು ನನ್ನ ತಲೆ ಅಲುಗಿಸಿ ಆವೇಶದ ಅಪ್ಪುಗೆಯಿಂದ, ಅವಳನ್ನು ಕೊಲ್ಲಲೆತ್ನಿಸುತ್ತಿದ್ದೇನೆ. ಮತ್ತೆ ನಾನು ತಲೆಯಲುಗಿಸುತ್ತಿದ್ದೇನೆ. ನಿಲ್ಲಿಸು, ಇದನ್ನು ನನಗೆ ನಾನೇ ಹೇಳಿಕೊಳ್ಳುತ್ತೇನೆ. ಆದರೆ ಅವಳ ಮೃತ ಕಣ್ಣುಗಳೊಳಕ್ಕೆ ನನ್ನ ನೋಟವನ್ನು ಹರಿಸುತ್ತಲೇ ಇದ್ದೆ.

"ಅಲ್ಲಿಂದ ಕದಲಬೇಡ." ಎಂದು ಅವಳಿಗೆ ಹೇಳಿ, ದೀಪವನ್ನು ತಂದೆ. ಅವಳನ್ನು ಬೆಳಕಿನಲ್ಲಿಯೇ ಮೀಯಿಸುವ ಹಾಗೆ ಕೊಠಡಿಯ ಎಲ್ಲ ದೀಪಗಳನ್ನೂ ಬೆಳಗಿಸಿದೆ. ಅವಳನ್ನು ಹಾಸಿಗೆಯ ಬಳಿ ಕರೆದೊಯ್ದು ಅದರ ಮೇಲೆ ಕುಳ್ಳಿರಿಸಿದೆ ಅವಳು ವಿರೋಧಿಸಲಿಲ್ಲ. ಅವಳೇನು ಸೂತ್ರದ ಬೊಂಬೆಯಾಗಿ ಬಿಟ್ಟಿದ್ದಾಳೆಯೇ? ಅವಳು ಸತ್ತು ಹೋಗಿದ್ದಳೆ? ಅವಳ ಪಕ್ಕದಲ್ಲಿ ಕೂರುವುದರಲ್ಲಿ ಅರ್ಥವಿರಲಿಲ್ಲ. ನನ್ನನ್ನು ಸೆರೆ ಹಿಡಿದು ನಿಲ್ಲಿಸಿದ ಆ ಸುಟ್ಟ ಕಣ್ಣುಗಳತ್ತ ನಾನು ನೋಡಲಾರೆ. ನಾನು ನೆಲದ ಮೇಲೆ ಮಂಡಿಯೂರಿ ಕುಳಿತೆ. ಅವಳು ಏಳಲು ಯತ್ನಿಸಿದಳು. ಮಹಾರಾಣಾ ಮತ್ತು ಮಹಾರಾಣಿಯರನ್ನು ಬಿಟ್ಟರೆ, ಮಹಾರಾಜ್‌ಕುಮಾರ್, ಉಳಿದೆಲ್ಲರಿಗಿಂತ ಎತ್ತರದಲ್ಲಿ ಕುಳಿತುಕೊಳ್ಳಬೇಕೆಂದು ಸಂಪ್ರದಾಯ ಒತ್ತಾಯಿಸುತ್ತದೆ. ನಾನು ಅವಳನ್ನು ಒತ್ತಾಯ ಮಾಡಿಕೂಡಿಸಿದೆ.

"ನಾನು ಅನೇಕ ದಿನಗಳವರೆಗೆ, ವಾರಗಳ ತನಕ ನಿನಗಾಗಿ ಎಲ್ಲೆಡೆ ಹುಡುಕಿದೆ. ನೀನು ಮೃತಳಾದೆಯೆಂದು ಭಾವಿಸಿದೆ."

"ನಿಮ್ಮನ್ನು ಹುಡುಕಲು ನಾನು ಪ್ರಾಣಬಿಡುತ್ತಿದ್ದೆ" ಅದು ಆಕ್ಷೇಪಣೆಯ ಮಾತಾಗಿರಲಿಲ್ಲ. ವಸ್ತು ಸತ್ಯವನ್ನು ಹೇಳಿದ್ದಾಗಿತ್ತು ಅಷ್ಟೆ. "ನನ್ನನ್ನು ನೋಡಿಕೊಳ್ಳುತ್ತಿದ್ದ ದಾಸಿಯನ್ನು ನಾನು ಹೆಚ್ಚು ಕಡಿಮೆ ಕುತ್ತಿಗೆ ಹಿಸುಕಿ ಸಾಯಿಸಿ ಬಿಟ್ಟಿದ್ದೆ. ಅದು ಯಾವಾಗ ಅಂದರೆ ನಮ್ಮ ಮುತ್ತಾತ ನನ್ನನ್ನು ಕಟ್ಟಿ ಹಾಕಿದ್ದಾಗ"

"'ನೀನು ಎಲ್ಲಿದ್ದೆ?"

"ಚಿತ್ತೂರಿನಲ್ಲೇ. ಆದರೆ ಬೇರೆ ಯಾವುದೋ ಮನೆಯಲ್ಲಿ. ಕಳೆದ ವರ್ಷದ ಬಗ್ಗೆ ಮಾತಾಡಲು ನನಗೆ ಇಷ್ಟವಿಲ್ಲ."

ನಾನು ಅವಳ ಪಾದಗಳು ಮತ್ತು ಕಾಲಂದಿಗೆಯ ಕಡೆ ನೋಡಿದೆ. ಅವು ಕುಗ್ಗಿ ಹೋಗಿದ್ದವು. ಅವಳನ್ನು ಕುರ್ಚಿಯ ಕಾಲಿಗೋ ಮಂಚದ ಕಾಲಿಗೋ ಕಟ್ಟಿ ಹಾಕಿದ್ದ ರೇಷ್ಮೆ ಕಂಠವಸ್ತ್ರದ ಗುರುತನ್ನು ಅಲ್ಲಿ ಕಾಣಬಹುದಿತ್ತು. ಅವಳ ಕೈಗಳನ್ನು ನನ್ನ ಕೈಗಳಲ್ಲಿ ತೆಗೆದುಕೊಂಡೆ. ಅವಳ ಕೈಗಳ ಮಣಿಕಟ್ಟುಗಳು ಊದಿದ್ದವು ಮತ್ತು ಚರ್ಮ ನೀಲಿಯಾಗಿ ಕಾಣುತ್ತಿತ್ತು. "'ನಾನು ಆತ್ಮಹತ್ಯೆ ಮಾಡಿಕೊಳ್ಳಬಹುದಿತ್ತು. ಆದರೆ ನಿಮಗೆ ಏನಾಗುತ್ತೋ ಎಂದು ನಾನು ಯೋಚಿಸಿದೆ." ನಾನು ಅವಳ ಕಣ್ಣುಗಳನ್ನು ಹೆಚ್ಚು ಕಾಲ ಸಂಧಿಸಲಾಗಲಿಲ್ಲ.

"ನಿಮ್ಮನ್ನು ನಾಳೆ ಕುಂಭಲ್‌ಗರ್‌ಗೆ ಕಳುಹಿಸಲಾಗುತ್ತಿದೆ ಎಂದು ಕೇಳಿದೆ."

ನಾನು ಅವಳ ಕಾಲುಗಳನ್ನು ಅಪ್ಪಿಕೊಂಡು, ಅವಳ ಮೊಳಕಾಲುಗಳ ನಡುವೆ ನನ್ನ ತಲೆಯನ್ನು ಹುದುಗಿಸಿದೆ. "ತಲೆಯ ಮೇಲೆ ತೂಗುತ್ತಿರುವ ನಿಮ್ಮ ನಿರ್ಗಮನದ ಸಂಗತಿಯನ್ನು ತಿಳಿದ ಕ್ಷಣವೇ ನಮ್ಮ ಮುತ್ತಾತ ಆದಿನಾಥಜೀಯವರು ಮುಂದಿನ ಗುರುವಾರಕ್ಕೆ ನನ್ನ ಮದುವೆಯನ್ನು ನಿಗದಿಪಡಿಸಿದ್ದಾರೆ."

ಇದೇ ಕೊನೆಯ ಬಾರಿ. ಲೀಲಾವತಿಯನ್ನು ಮತ್ತೆಂದಿಗೂ ನಾನು ನೋಡಲಾರೆ. "ಅಭಿನಂದನೆಗಳು" ಎನ್ನುವಂಥ ಮೂರ್ಖವಾದದ್ದೇನನ್ನೋ ನಾನು ಹೇಳ ಹೊರಟಿದ್ದೆ. ನಾನೊಂದು ವೇಳೆ ಹಾಗೇನಾದರೂ ಹೇಳಿದ್ದರೆ, ಲೀಲಾವತಿ ಓಡಿ ಹೋಗಿ ಫಕ್ಕನೆ ಒಂದು ಚಾಕು ಹಿಡಿದುಕೊಂಡು ಬಂದು ಸರ‍್ರನೆ, ನನಗೆ ತಿವಿದು ಬಿಡುತ್ತಿದ್ದಳು.

ಆ ಸತ್ತ ಕಣ್ಣುಗಳು ಏನು ಮಾಡುತ್ತವೆಂದು ಹೇಳಲಾಗುವುದಿಲ್ಲ.

"'ನನ್ನನ್ನು ಮದುವೆಯಾಗಿ ಮಹಾರಾಜ್‌ಕುಮಾರ್"

ಗಲ್ಲಿಗೇರಿಸುವವನು ನನ್ನ ಕಾಲ ಕೆಳಗಿನ ಹಲಗೆಯನ್ನು ಒದ್ದಕೂಡಲೇ ಫಕ್ಕನೆ ನನ್ನ ಕುತ್ತಿಗೆ ಹಾರಿಹೋದಂಥ ಅನುಭವವಾಯಿತು ನನಗೆ.

"ಅದು ಕೇವಲ ಒಂದು ಶಾಸ್ತ್ರ ಸಂಪ್ರದಾಯ ಅಷ್ಟೆ. ನಾವಾಗಲೇ ಮದುವೆಯಾದವರು ಅಂತ ನಿನಗೆ ಗೊತ್ತಲ್ಲ."

ನಾನೇಕೆ ಅವಳಿಗೆ ಚೂರಿಯನ್ನು ಕೊಡಲಿಲ್ಲ ಅಥವಾ ಒರೆಯಿಂದ ಖಡ್ಗವನ್ನು ಸೆಳೆದುಕೊಟ್ಟು ನನ್ನನ್ನು ಕೊಲ್ಲೆಂದು ಹೇಳಲಿಲ್ಲ? ಅವಳಿಗೆ ಉತ್ತರ ಹೇಳುವುದನ್ನು ತಪ್ಪಿಸಲು ಈ ಸೂರ್ಯಮಂಡಲದ ಕೆಳಗಿನ ಯಾವುದಾದರೂ ಆಗಬಹುದಿತ್ತು.

"ಇಲ್ಲ, ನನ್ನಿಂದ ಸಾಧ್ಯವಿಲ್ಲ."

"ನಿಮ್ಮ ಜೊತೆ ನನ್ನನ್ನು ಕರೆದುಕೊಂಡು ಹೋಗಿ ಮಹಾರಾಜ್‌ಕುಮಾರ್"

ಮತ್ತೊಮ್ಮೆ ಹೇಳಿದೆ – "ಇಲ್ಲ ನನ್ನಿಂದ ಸಾಧ್ಯವಿಲ್ಲ"

ಆಗ ಅವಳು ಎದ್ದು ಬಂದು ನನ್ನ ತೊಡೆಯ ಮೇಲೆ ಕುಳಿತಳು. ಈ ಸಲ ಅವಳು ನನ್ನನ್ನು ತೋಳುಗಳಿಂದ ಬಳಸಿ, ನನ್ನ ಹಣೆಯ ಮೇಲೆ ಅನಂತರ ತುಟಿಗಳ ಮೇಲೆ ಚುಂಬಿಸಿದಳು. ನಾನು ಅದಕ್ಕೆ ಪ್ರತಿಕ್ರಿಯಿಸಲಿಲ್ಲ. ತಾನು ತೊಟ್ಟಿದ್ದ ಪರಕಾರದ ಜೇಬಿನಿಂದ ಸಣ್ಣ ಬೆಳ್ಳಿಯ ಭರಣಿಯೊಂದನ್ನು ಹೊರತೆಗೆದು ಅದನ್ನು ತೆರೆದಳು. ಅದರಲ್ಲಿ ರಕ್ತವರ್ಣದ ಕುಂಕುಮವಿತ್ತು. ಅದರಿಂದ ಒಂದು ಚಿಟಿಕೆಯಷ್ಟನ್ನು ತೆಗೆದು ನನ್ನ ಹಣೆಗೆ ಹಚ್ಚಿದಳು.

"ಈಗ ನಾನು ಮಕ್ಕಳನ್ನು ಹೆರಬಲ್ಲ ಸಾಮರ್ಥ್ಯವುಳ್ಳ ಮಹಿಳೆ" ತನ್ನ ತೋರು ಬೆರಳನ್ನು ಕುಂಕುಮದ ಭರಣಿಯಲ್ಲಿ ಹಾಕಿ, ತನ್ನ ಕಣ್ಣುಗಳ ನಡುವೆ, ಮೂಗಿನ ಮೇಲ್ಭಾಗದಲ್ಲಿ ಹುಬ್ಬುಗಳ ಮಧ್ಯೆ ಒಂದು ತಿಲಕವನ್ನಿಟ್ಟುಕೊಂಡಳು. ತನ್ನ ಬೈತಲೆಯ ಮೇಲೆ ಉದ್ದಕ್ಕೂ

ಕುಂಕುಮದ ಗೆರೆಯನ್ನು ರಚಿಸಿದಳು. "ನಾನು ಮುಂಚೆಯೂ, ಮತ್ತು ಯಾವತ್ತಿಗೂ ನಿಮ್ಮನ್ನು ಮದುವೆಯಾದವಳು, ನಿಮ್ಮನ್ನು ಮಾತ್ರವೇ. ಮೊದಲ ಸಲಕ್ಕೆ ಇದು ಎಲ್ಲರ ತಿಳುವಳಿಕೆಯ ಸಲುವಾಗಿ."

ಅತ್ಯಂತ ಸಣ್ಣದಾದ ಕಿವಿಯ ಓಲೆಗಳು ಮತ್ತು ಮೂಗಿಗೆ ಅಂಟಿಕೊಂಡ ಸಣ್ಣದೊಂದು ಮೂಗುತಿಯ ಹರಳು ಇಡೀ ಮುಖವನ್ನು ಹೇಗೆ ತಾನೆ ಎದ್ದು ಕಾಣುವಂತೆ ಮಾಡೀತು? ಸೊಂಟದ ಸುತ್ತ ಧರಿಸಿದ ಕಣ್ಣಿಗೆ ಕಾಣದ ದಾರದಂಥ ಒಂದು ಚಿನ್ನದ ಎಳೆ ಹೆಣ್ಣಿನಲ್ಲಿ ಪ್ರಚಂಡ ಕಾಮಾಸಕ್ತಿಯ ಕಿಡಿಯನ್ನು ಏಕೆ ತಾನೆ ಹೊತ್ತಿಸಬೇಕು? ಸರಳವಾದೊಂದು ಎದ್ದು ಕಾಣುವ ಕೆಂಪು ಬಿಂದು (ಕುಂಕುಮ) ಹೆಣ್ಣನ್ನು ಅರಸಿಯನ್ನಾಗಿ, ಸಾಮ್ರಾಜ್ಞಿಯನ್ನಾಗಿ ಮಾಡಿ ಅವಳ ಸೌಂದರ್ಯದ ಮೌಲ್ಯಗಳನ್ನೇ ಬದಲಾಯಿಸುವುದು ಹೇಗೆ ಸಾಧ್ಯವಾಗುತ್ತದೆ. ಲೀಲಾವತಿ ನನ್ನ ಪಾದಗಳ ಮೇಲೆ ತನ್ನ ಶಿರಸ್ಸನ್ನಿಟ್ಟಳು. 'ನನ್ನನ್ನು ಆಶೀರ್ವದಿಸಿ ಮಹಾರಾಜ್‌ಕುಮಾರ್' ಎಂದಳು. ನನಗಿಂತಲೂ ಪ್ರಿಯಳಾದ ಈ ಹೆಣ್ಣಿಗೆ ನಾನು ಒಂದು ಮಾತನ್ನೂ ಹೇಳಲಿಲ್ಲ. ಲೀಲಾವತಿಯ ಬಗೆಗಿನ ನನ್ನ ತಿರುವು ಮುರುವಾದ ಹಾಗೂ ವಿಚಿತ್ರವಾದ ಈ ಪ್ರೀತಿಗೆ ಯಾವ ಹೋಲಿಕೆ ತಾನೆ ನ್ಯಾಯ ಸಲ್ಲಿಸಬಲ್ಲುದು?

ಈಗ ತಲೆಯೆತ್ತಿ ನಿಂತಳು. "ನಾನೂ ಈಗ ನಿಮ್ಮನ್ನು ಹರಸುತ್ತೇನೆ. ನನ್ನ ಯಜಮಾನರೆ ಮತ್ತು ಮಹಾಸ್ವಾಮಿಯವರೆ, ಯಾವತ್ತೂ ನೀವು ಅಪಾಯದ ಹಾದಿಯಿಂದ ಆಚೆ ಇರುವಂತಾಗಲಿ. ನೀವು ಮೇವಾಡಕ್ಕೆ ಕೀರ್ತಿ ತರುವಂತಾಗಲಿ ಮತ್ತು ಬಹುಬೇಗನೆ ನೀವು ನನ್ನ ತೋಳುಗಳಿಗೆ ಹಿಂತಿರುಗುವಂತಾಗಲಿ."

ಅವಳ ಮುಖದ ಮೇಲೊಂದು ಮುಗುಳ್ನಗೆ ಸುಳಿದಾಡಿತು. ತನ್ನ ಮನಸ್ಸಿನಿಂದಲ್ಲದಿದ್ದರೂ, ಒಂದು ವರ್ಷದ ಏಕಾಂತದ ಬಂಧನವನ್ನು ಹಾಗೂ ಬಂಧಿತ ಕೈಗಳು ಮತ್ತು ಕಾಲಿನ ಹರಡನ್ನು ತನ್ನ ಮುಖದಿಂದಂತೂ ತೊಡೆದು ಹಾಕಿದ್ದಳು.

ಅಧ್ಯಾಯ 27

ಕುಂಭಲ್‌ಗರ್‌ನ ರಾಜ್ಯಪಾಲರಾದ ರಾವತ್ ಸಮರ್ ಸಿಂಹ ಅವರು ನನ್ನ ಹಾಗೂ ನನ್ನ ಪರಿವಾರವರ್ಗದ ನಿಗಾ ವಹಿಸುವುದರ ಕುರಿತು ನನಗೇನೂ ಅಸೂಯೆಯಾಗಲಿಲ್ಲ. ಅವರು ತುಂಬ ಸೂಕ್ಷ್ಮವೂ, ಸಂದಿಗ್ಧವೂ ಆದ ಹಾದಿಯಲ್ಲಿ ಹೆಜ್ಜೆ ಹಾಕಬೇಕಿತ್ತು. ನಾನು ಅವಮಾನಕ್ಕೆ ಗುರಿಯಾಗಿದ್ದೆ. ರಾಜ್ಯಪಾಲರು ನನ್ನ ಮೇಲೊಂದು ಕಣ್ಣಿಟ್ಟಿರಬೇಕಿತ್ತು. ಹಾಗೂ ನಾನು ಬೇರಾವುದೇ ಉಪದ್ವ್ಯಾಪದಲ್ಲಿ ತೊಡಗಿಕೊಂಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿತ್ತು. ಸಮಸ್ಯೆಯೇನೆಂದರೆ, ನಾನು ರಾಜಮನೆತನಕ್ಕೆ ಸೇರಿದ ರಾಜಕುವರ; 'ಮಹಾರಾಜ್‌ಕುಮಾರ್' ಎಂಬ ನನ್ನ ಸ್ಥಾನಮಾನಕ್ಕೆ ವಿರುದ್ಧವಾದ ಯಾವುದೇ ಅಧಿಕೃತ ನಿರ್ದೇಶನ ಜಾರಿಯಾಗದೆ ಇದ್ದುದರಿಂದ ನಾನು ಇನ್ನೂ ಮಹಾರಾಜ್‌ಕುಮಾರ್ ಆಗಿದ್ದೆ. ಕುಂಭಲ್‌ಗರ್ ಪ್ರಾಂತದ ಆಡಳಿತದಲ್ಲಿ ನಾನು ಮೂಗು ತೂರಿಸುವೆನೆಂಬುದು ಅವರ ಮುಖ್ಯವಾದ ಆತಂಕಗಳಲ್ಲೊಂದಾಗಿತ್ತೆಂದು ನನ್ನ ಊಹೆ. ಅವರ ವ್ಯವಹಾರಗಳಲ್ಲಿ, ನಾಗರಿಕ, ಸೈನಿಕ, ಆಡಳಿತಾತ್ಮಕ ಅಥವಾ ಇನ್ನಿತರೆ ವ್ಯವಹಾರಗಳಲ್ಲಿ ನನಗೆ ಆಸಕ್ತಿಯಿರಲಿಲ್ಲ ಎಂಬುದನ್ನು ಒಂದು ತಿಂಗಳೊಳಗೇ ಅವರು ಅರ್ಥಮಾಡಿಕೊಂಡರು. ನಾನು ಒಂದು ಸಲವೂ ಅವರ ಕಛೇರಿಗೆ ಹೋಗುವುದೇ ಆಗಲಿ, ಅವರ ಯಾವುದೇ ಅಧಿಕೃತ ಕಾರ್ಯಕ್ರಮಗಳಲ್ಲಿ ಹಾಜರಿರುವುದಾಗಲಿ ಮಾಡಲಿಲ್ಲ. ಅವರ ಕಣ್ಣಿನಲ್ಲಿ ನಾನು ಭೋಗಾಸಕ್ತನೆಂದಾಗಲಿ, ವಿಲಾಸಿ ಜೀವನ ನಡೆಸುವವನೆಂದಾಗಲಿ ಕರೆಸಿಕೊಳ್ಳಲು ಅರ್ಹನಾಗಲಿಲ್ಲ. ಆಗಾಗ್ಗೆ ಅವರು ನನಗಾಗಿ ಯಾರಾದರೂ ಸಂಗಾತಿಯ ಏರ್ಪಾಟು ಮಾಡಬಹುದೆಂದು ಸುಳಿವು ನೀಡಿದರು.

"ಪಟ್ಟಣದ ಜನಗಳಾದ ನಿಮಗೆ ಇದು ಹಿನ್ನೀರಿನ ಹಾಗೆ ಕಾಣಿಸಬಹುದು. ಆದರೆ ಅತ್ಯಂತ ಸಂವೇದನಾಶೀಲ ಮತ್ತು ತೀರ ದಣಿದ ಅಭಿರುಚಿಯವರಿಗೂ ಕುಂಭಲ್‌ಗರ್ ಒದಗಿಸುವಂಥ ಸಂತಸ ಮತ್ತು ಖುಷಿಗಳನ್ನು ನೀವು ತಿಳಿದರೆ –ಆಶ್ಚರ್ಯ ಪಡುವಿರಿ" ಎಂದು ಗೊತ್ತಿದ್ದೂ ಓರೆ ನೋಟದಿಂದ ನೋಡಿದರು.

ಬಹುಶಃ ಒಂದು ಸಂಗೀತ ಕಛೇರಿ ಇರಬಹುದೆ? ಕಾಡಿನಲ್ಲಿ ಬೇಟೆಯಾಡುವುದು ತುಂಬಾ ಅದ್ಭುತ. ನಾನು ಬೇಟೆಗೆ ಹೊರಡಲೆ?

"ನನ್ನ ಯೋಚನೆಗಳ ದಾಸ್ತಾನೆಲ್ಲ ಖಾಲಿಯಾಗಿ ಬಿಟ್ಟಿದೆ ಅಂತ ಅನ್ನಿಸುತ್ತಾ ಇದೆ ನಿಮಗೆ ಏನು ಮಾಡುವುದಕ್ಕೆ ಇಷ್ಟ ಅಂತ ಯಾಕೆ ಹೇಳಬಾರದು?"

"ಏನೂ ಇಲ್ಲ".

"ಏನೂ ಇಲ್ಲವೆ?"

ಅವರು ಗೊಂದಲದಲ್ಲಿದ್ದರು. ನಾನು ಖಿನ್ನತೆಯಿಂದ ನರಳುತ್ತಿದ್ದೆನೆ? ನಾನು ಲೌಕಿಕ ಬದುಕನ್ನು ತ್ಯಜಿಸಿದ್ದೆನೆ? ಅಥವಾ ಅದು ಸಿಂಹಾಸನ ಇಲ್ಲವೆ ದೇಶದ ವಿರುದ್ಧದ ಬಾರೀ ದುಷ್ಟ ಯೋಜನೆಯನ್ನು ಮುಚ್ಚಿಹಾಕಲು ಹೂಡಿದ ಒಂದು ವಿಸ್ತೃತ ರಂಗವೆ? ರಕ್ಷಣೆ ಇಲ್ಲದೆ ಸಿಕ್ಕಿಹಾಕಿಕೊಳ್ಳುವುದು. ಅವರಿಗೆ ಇಷ್ಟವಿರಲಿಲ್ಲವಾದ್ದರಿಂದ, ಅದೊಂದು ಬೆಂಬತ್ತಿ ಹೋಗಲರ್ಹವಾದ ಒಂದು ಪ್ರಮೇಯವಾಗಿತ್ತು. ಆದರೆ ಅವರು ಮುಂದುವರಿಯಲು ಸಾಧ್ಯವಿಲ್ಲದ ಒಂದು ಬಿಂದುವಿಗೆ ಬಂದು ಬಿಟ್ಟಿರಬೇಕು. ನನ್ನನ್ನು ಭೇಟಿಯಾಗಲು ಬರುವವರು ಯಾರೂ ಇರಲಿಲ್ಲ. ಷಫ್ಲಿ ತೇಜ್ ಹಾಗೂ ನನ್ನ ಇತರೆ ಸೇನಾಧಿಕಾರಿಗಳಿಗೆ ಅವರು ನನ್ನ ಕೊಠಡಿಯ ಸಮೀಪದಲ್ಲೇ ಇರುವ ಸಂದರ್ಭ ಇದ್ದರೂ, ನನ್ನನ್ನು ಭೇಟಿಮಾಡಕೂಡದೆಂದು ಅವರಿಗೆ ಕಟ್ಟುನಿಟ್ಟಾಗಿ ಸೂಚಿಸಿದ್ದೆನು. ನಾನು ಯಾರಿಗೂ ಪತ್ರ ಬರೆಯಲಿಲ್ಲ. ಒಂದು ಪತ್ರವನ್ನು ಬಿಟ್ಟರೆ ಬೇರಾವ ಪತ್ರವೂ ಬರಲಿಲ್ಲ. ಹಾಗೆ ಬಂದ ಪತ್ರ ಲೀಲಾವತಿಯ ಮದುವೆಯ ಲಗ್ನಪತ್ರಿಕೆ. ಅದು ಮದುವೆಯ ಹಿಂದಿನ ದಿನ ರಾತ್ರಿ ನನ್ನ ಕೈ ಸೇರಿತು. ಅತ್ಯಂತ ತುರ್ತಾಗಿ ಮದುವೆ ನಿಶ್ಚಿತವಾದ್ದು ವಿಷಾದ ಎಂದು ಹೇಳುವ ಆದಿನಾಥಜೀಯವರ ಒಂದು ಸೌಜನ್ಯದ ಷರಾ ಇತ್ತು. ಏನೇ ಆದರೂ ನಾನು ಮದುವೆಗೆ ಹಾಜರಾಗುತ್ತೇನೆಂಬ ಭರವಸೆ ತಾಳಿರುವುದಾಗಿ ತಿಳಿಸಿದ್ದರು.

ಕೋಟೆಯ ಹೊರಗಾಗಲಿ, ಒಳಗಾಗಲಿ ನಾನು ಯಾರೊಂದಿಗೂ ಬೆರೆಯುತ್ತಿರಲಿಲ್ಲ. ರಾಜ್ಯಪಾಲರು ನನ್ನನ್ನೂ, ನನ್ನ ಹೆಂಡತಿಯನ್ನೂ ಯಾವುದಾದರೂ ಖಾಸಗಿ ಭೋಜನಕ್ಕೆ ಆಹ್ವಾನಿಸಿದ್ದರೆ, ನಾನು ಅದನ್ನು ಎಂದೂ ತಿರಸ್ಕರಿಸುತ್ತಿರಲಿಲ್ಲ ಹಾಗೂ ಅವರ ಆಹ್ವಾನಕ್ಕೆ ಪ್ರತಿಯಾಗಿ ನಾನು ಕೂಡ ಭೋಜನಕ್ಕೆ ಆಹ್ವಾನಿಸುತ್ತಿದ್ದೆ. ಉಳಿದ ಸಮಯದಲ್ಲಿ, ನಾನು ಬರೆಯುವುದು, ಓದುವುದು ವಾಯುವಿಹಾರ, ಕುದುರೆ ಸವಾರಿ ಇತ್ಯಾದಿಗಳನ್ನು ಮಾಡುತ್ತಿದ್ದೆ. ನಾನೊಬ್ಬ ಎಲ್ಲ ರೀತಿಯ ದಿಕ್ಕು ದೆಸೆಗಳ ವಿವೇಚನೆಗಳನ್ನು ನೀಗಿಕೊಂಡ ವ್ಯಕ್ತಿಯೆಂದೂ, ಬಹು ಬೇಗ ನಾನು ಬದುಕಿದ್ದೂ ಯಾವುದೇ ಚಟುವಟಿಕೆಯನ್ನು ಹೊಂದಿಲ್ಲದ ಮನುಷ್ಯನಾಗುತ್ತಿದ್ದೇನೆ ಎಂಬುದಕ್ಕೆ ರಾವತ್ ಸಮರ್ ಸಿಂಹರಿಗೆ ಸಾಕ್ಷ್ಯ ಸಿಕ್ಕಿರಬೇಕು. ಅವರ ತೀರ್ಮಾನ ಸರಿಯಾಗಿಯೇ ಇತ್ತು. ನನ್ನ ಕಡೆಗೆ ಯಾರದ್ದೇ ಗಮನ ಸೆಳೆದುಕೊಳ್ಳುವುದು ನನಗಿಷ್ಟವಿರಲಿಲ್ಲ. ನನಗೆ ನನ್ನ ಪಾಡಿಗೆ ನನ್ನನ್ನು ಬಿಟ್ಟು ಮರೆತು ಬಿಡುವುದು ಬೇಕಾಗಿತ್ತು.

ನನ್ನ ಮುತ್ತಾತ ಕುಂಭ ತನ್ನ ಉಚ್ಛ್ರಾಯ ಕಾಲದಲ್ಲಿ ಉಚ್ಛೃಂಖಲವಾದ ಮೋಜಿನಲ್ಲಿ ಮೂವತ್ತೈದು ಅತ್ಯಂತ ಭವ್ಯವಾದ ರಕ್ಷಣಾ ಕೋಟೆಗಳನ್ನು ಚುಕ್ಕಿಗಳಂತೆ ದೇಶದಲ್ಲಿ ಅಲ್ಲಲ್ಲಿ ನಿರ್ಮಿಸಿದ್ದನು. ಆದರೆ ಕುಂಭಲ್‌ಗರ್ ಮಾತ್ರ ಒಂದೇ ಒಂದು. ಅದು ಏಕೆ ಎಂದು ನೋಡಬಹುದು. ಕಳೆದ ಕೆಲವು ಶತಮಾನಗಳಲ್ಲಿ ನಿರ್ಮಿಸಲಾದ ಅತ್ಯಂತ ದೊಡ್ಡ ರಕ್ಷಣಾ ದುರ್ಗಗಳಲ್ಲಿ ಅದು ಒಂದು. ಕಪ್ಪು ಕಲ್ಲಿನಿಂದ ಕಟ್ಟಿದ, ಅಜೇಯವಾದ, ವಿಶ್ವಾಸ ಘಾತಕ ಮಾಡಿದ ಹೊರತು ಭೇದಿಸಲಾಗದ ದುರ್ಗ ಅದು. ಕೋಟೆಯ ಗೋಡೆಗಳು ರಸ್ತೆಗಳಷ್ಟು ಎತ್ತರ ಮತ್ತು ಅಗಲವಾದವು. ಮುಂಗಾರಿನ ಸಮಯದಲ್ಲಿ ಕೊಳಕು ರಸ್ತೆಯಲ್ಲಿ ಕುದುರೆಗಳಿಗೆಲ್ಲ ಕೆಸರು ಮೆತ್ತಿಸಿಕೊಂಡು ಸಾಗುವುದಕ್ಕಿಂತ ದುರ್ಗದ ಮೇಲಿನ ಸಮತಲವಾದ ಕೈಪಿಡಿಯ ಗೋಡೆಯ ಕಡೆಯಿಂದ ಆಹಾರ ಸಾಮಗ್ರಿ ಸರಂಜಾಮುಗಳನ್ನು ಸಾಗಿಸುವುದು ಹೆಚ್ಚು ವಿವೇಕದಿಂದ ಕೂಡಿದ್ದು ಎನಿಸುತ್ತದೆ. ಕಪ್ಪು ಕಲ್ಲುಗಳನ್ನು ಅತ್ಯಂತ ಸೊಗಸಾಗಿ ಕತ್ತರಿಸಿ, ಕರಾರು ವಾಕ್ಕಾಗಿ ಜೋಡಿಸಲಾಗಿದೆ.

ಆಕ್ರಮಣಕಾರರ ಹಗ್ಗಗಳಿಗೆ ಅದು ಕೈ ಹತ್ತುವುದಿಲ್ಲ. ಅಥವಾ ಪಾರ್ಶ್ವಗಳಲ್ಲಿ ಥಟ್ಟನೆ ಅನಿರೀಕ್ಷಿತವಾಗಿ ಮುಂದಕ್ಕೆ ಹಾಯಲು ತರಬೇತಿ ಪಡೆದಿರುವ ಕಪಿ ಸೈನಿಕರಿಗೂ ಅದು ವಶವಾಗುವುದಿಲ್ಲ. ಅದೇ ಸಮಯಕ್ಕೆ ಸೇನೆಯ ಬಹುಭಾಗ ಪ್ರಧಾನ ದ್ವಾರವನ್ನು ಜಜ್ಜುವ ಸೋಗು ಹಾಕುತ್ತಿರುತ್ತದೆ. ಕುಂಭಲ್‌ಗರ್ ಯಾವುದೇ ಸಾಮಗ್ರಿಗಳ ಕೊರತೆಯ ಸಮಸ್ಯೆಯಿಲ್ಲದೆ ಒಂದು ಅಥವಾ ಎರಡು ವರ್ಷಗಳವರೆಗೂ ಆಕ್ರಮಣವನ್ನು ತಡೆದುಕೊಳ್ಳಬಲ್ಲುದು. ಅದರ ಭೂ ವಿಸ್ತಾರ ಯಾವುದೇ ಒಂದು ಮಧ್ಯಮ ಗಾತ್ರದ ನಗರದಷ್ಟಿದೆ. ಅದು ವಿಸ್ತಾರವಾದ ಬೇಸಾಯ ಪ್ರದೇಶವನ್ನು ಹೊಂದಿದ್ದು ಅದರಲ್ಲಿ ನಮಗೆ ಬೇಕಾದ್ದೆಲ್ಲವನ್ನೂ ಬೆಳೆದುಕೊಳ್ಳಬಹುದು. ಇದೇ ಕಾರಣಕ್ಕೆ ಆ ದುರ್ಗಕ್ಕೆ ಇದುವರೆಗೂ ಯಾರೂ ಮುತ್ತಿಗೆ ಹಾಕಿಲ್ಲ.

ರಣಕುಂಭ ಒಬ್ಬ ದೈತ್ಯ ವ್ಯಕ್ತಿ ಎಂದು ಹೇಳುತ್ತಾರೆ. ಚಾರಣರು ತಮ್ಮ ವೀರ ಮತ್ತು ಪ್ರಶಂಸಾಪರ ಕಾವ್ಯದಲ್ಲಿ ಅವನು ಆಲದ ಮರದಷ್ಟು ಎತ್ತರವಾಗಿ ಹಾಗೂ ಬೃಹತ್ತಾಗಿದ್ದನು ಎಂದು ನಮ್ಮನ್ನು ನಂಬಿಸುತ್ತಾರೆ. ಉಪಾಹಾರಕ್ಕೆ ಮುವ್ವತ್ತಾರು ಮೊಟ್ಟೆಗಳ ಆಮ್ಲೇಟನ್ನು ತಿನ್ನುತ್ತಿದ್ದನಂತೆ. ಮಧ್ಯಾಹ್ನದ ಊಟಕ್ಕೆ ಹನ್ನೆರಡು ತಂದೂರಿ ಕೋಳಿಗಳು. ಪೂರಾ ಒಂದು ಜಿಂಕೆ, ಇಲ್ಲವೆ ಕಾಡು ಹಂದಿ, ಐದು ಸೇರು ರಬದಿ, ಎಪ್ಪತ್ತೆರಡು ಗೋಧಿಯ ರೊಟ್ಟಿಗಳು, ಅರುವತ್ತ ನಾಲ್ಕು ಜಿಲೇಬಿ, ಜೊತೆಗೆ ಏಳು ಬಗೆಯ ತರಕಾರಿಗಳು ಮತ್ತು ನಾಲ್ಕು ವಿಧವಾದ ದ್ವಿದಳ ಧಾನ್ಯಗಳು ಇರುತ್ತಿದ್ದುವೆಂಬುದನ್ನು ಹೇಳಲೇ ಬೇಕಿಲ್ಲ. ಅವನು ಧರಿಸುತ್ತಿದ್ದ ನಿಲುವಂಗಿಗೆ ಹದಿನೇಳು ಗಜ ಬಟ್ಟೆಬೇಕಾಗುತ್ತಿತ್ತು. ಮಂಡಿಯನ್ನು ಮುಟ್ಟುತ್ತಿದ್ದ ಷರಾಯಿಗೆ ಮೀನ ಖಂಡದ ಬಳಿ ಗುಂಡಿಗಳನ್ನು ಅಳವಡಿಸಲಾಗಿತ್ತು. ಬಿಚ್ಚಿದಾಗ ಅದರ ಸೊಂಟಪಟ್ಟಿಯ ಅಳತೆಯೇ ಹದಿನಾಲ್ಕು ಗಜಗಳಿತ್ತು. ಮುಸ್ಲಿಮರು ಧರಿಸುವ ಅಂಗರಕ್ಷೆಯು ಇದರದ್ದೇ ವಿಸ್ತೃತ ಆಕೃತಿ. ಕುಂಭಲ್‌ಗರ್ ಪ್ರತಿಯೊಂದೂ ಅವರ ಗಾತ್ರ ಮತ್ತು ಎತ್ತರದಿಂದ ಪ್ರಭಾವಿತಗೊಂಡಿತ್ತೆನಿಸುತ್ತದೆ. ಅರಮನೆ ಅದರಲ್ಲಿರುವ ನಮ್ಮ ಕೊಠಡಿಗಳು, ಬಚ್ಚಲು ಮನೆ, ಮೆಟ್ಟಿಲುಗಳು ಕೂಡ, ಎಲ್ಲವನ್ನೂ ಸಾಮಾನ್ಯ ಮನುಷ್ಯ ಪ್ರಮಾಣಗಳಿಗಿಂತ ದೊಡ್ಡವರಾದವರಿಗಾಗಿ ವಿನ್ಯಾಸಗೊಳಿಸಲಾಗಿದೆ. ನನ್ನ ಕೊಠಡಿಗಳಿಂದ ಅರಾವಳಿ ಪರ್ವತ ಶ್ರೇಣಿಯನ್ನು ನೋಡಬಹುದು. ಮೇವಾಡದ ಬಹು ಭಾಗಕ್ಕೆ ಅದು ಲಗತ್ತಾಗಿದೆ. ಆದರೆ ದಿಗಂತದ ನಮ್ಮ ಅರಿವನ್ನು ಬೇರೆ ರೀತಿಯಲ್ಲಿ ನಮಗೆ ತಿಳಿಸುವುದು ಇಲ್ಲಿಯ ಸಮತಲ ಪ್ರದೇಶಗಳು. ಮೋಡಗಳಿಲ್ಲದ ದಿನದಂದು, ಯಾವತ್ತೂ ನೋಡಬಹುದೆಂದು ನಂಬಲೇ ಬೇಕು ಎನ್ನಿಸುವಂತಿರುತ್ತದೆ. ಕಾರಣ ದಿಗಂತವನ್ನು ಕುರಿತಾದ ನಮ್ಮ ಪರಿಕಲ್ಪನೆ ಹೆಚ್ಚು ಕಡಮೆ ಸೋಲುತ್ತದೆ. ನನ್ನ ಕೊಠಡಿಯಲ್ಲಿರುವ ಕಿಟಕಿಯ ಬಳಿ ಕುಳಿತುಕೊಂಡು, ಜಗತ್ತಿನ ಅತ್ಯಂತ ದೊಡ್ಡ ಮರಳುಗಾಡಿನ ಮಧ್ಯೆ ಕುಳಿತಿದ್ದೇವೆಂದು ಅಥವಾ ಸಾಗರದ ಮಧ್ಯೆ ಇದ್ದೇನೆಂದು ನಂಬುವಂತೆ ಮಾಡುತ್ತವೆ. ಅರಮನೆಯ ಇನ್ನೊಂದು ಪಕ್ಕಕ್ಕೆ ಹೊರಳಿದರೆ, ಮುಖ್ಯದ್ವಾರವನ್ನು ಪ್ರವೇಶಿಸುತ್ತಿರುವ ಮತ್ತು ಅಲ್ಲಿಂದ ಹೊರಡುತ್ತಿರುವ ವಾಹನಗಳ ಮೇಲೆ ಕಣ್ಣಿಡಬಹುದು. ರಣಕುಂಭ ಮಾಡಿದ್ದು ಅದನ್ನೇ. ಕಾವಲುಗಾರರ ಮೇಲೆ ಕಣ್ಣಿಟ್ಟು, ಅವರು ಶತ್ರುವಿನಿಂದ ಕೋಟೆಯನ್ನು ರಕ್ಷಿಸುತ್ತಿದ್ದಾರೆಯೆ ಎಂದು ಖಚಿತಪಡಿಸಿಕೊಳ್ಳುತ್ತಿದ್ದನು. ಏಳುನೂರು, ಎಂಟು ನೂರು ಗಜಗಳ ದೂರದಲ್ಲಿ ಏಕಲಿಂಗ ದೇವರ ದೇವಸ್ಥಾನವಿದೆ. ನಮ್ಮ ಮುತ್ತಾತ ಕುಳಿತು ಪ್ರಾರ್ಥಿಸುತ್ತಿದ್ದು ಇಲ್ಲಿಯೇ. ಅರಮನೆಯ ಮೂಲೆ ಮೂಲೆಯೂ ಮರಮರವೂ, ಹಾದಿಬದಿಯ ಪ್ರತಿಯೊಂದು ದೇವಸ್ಥಾನ ಅಥವಾ ಪುಣ್ಯಕ್ಷೇತ್ರವೂ, ನದಿ

ಅಥವಾ ಕೆರೆಯೂ ದುರ್ಗವನ್ನು ಕಟ್ಟಿಸಿದವನ ನೆನಪನ್ನು ಹೊತ್ತಿದ್ದಿತು. ನನ್ನ ಕೊಠಡಿಯಲ್ಲಿ ಒಂದು ವ್ಯಾಸ ಪೀಠವಿದೆ. ಇಲ್ಲಿ ಕುಳಿತು ರಾಣಾ ಸಂಗೀತದ ಕೈಪಿಡಿಗಳನ್ನು ರಚಿಸಿದನು. ತಾನು ನಿರೂಪಿಸುತ್ತಿದ್ದ ಅಥವಾ ನಿದರ್ಶಿಸುತ್ತಿದ್ದ ತತ್ತ್ವ ಅಥವಾ ಸೂತ್ರಗಳನ್ನು ಪರೀಕ್ಷಿಸಬೇಕೆನ್ನಿಸಿದರೆ, ವೀಣೆಯನ್ನು ಕೈಗೆತ್ತಿಕೊಂಡು ಗಂಟೆಗಟ್ಟಲೆ ನುಡಿಸಿ, ಆ ಸಂಗೀತ ವಾದ್ಯದ ವ್ಯಾಪ್ತಿ ಮತ್ತು ಶಬ್ದ ಸಂಪತ್ತನ್ನು ಸಾಕಷ್ಟು ವಿಸ್ತರಿಸಿದನು. ಈಗ ಅದೇ ವೀಣೆ ಇಲ್ಲಿ ಒಂದು ಗಾಜಿನ ಗೂಡಿನಲ್ಲಿದೆ. ಏಕಲಿಂಗ ದೇವರ ಗುಡಿಯಿಂದ ಮುಕ್ಕಾಲು ಮೈಲಿ ದೂರದಲ್ಲೊಂದು ಹುಣಿಸೆ ಮರವಿದೆ. ರಾಣಾ ಪ್ರಕಾರ ಅದು ವಿಶೇಷ ಮಹಿಮೆಯುಳ್ಳ ಮರ. ಇದು ತುಂಬ ಗಮನಿಸಬೇಕಾದದ್ದು ಎಂದು ನನ್ನೆಣಿಕೆ. ಕಾರಣ ಹಿಂದೂ ಸಂಪ್ರದಾಯದಲ್ಲಿ ಯಾರಿಗೇ ಆದರೂ ಜ್ಞಾನೋದಯವಾಗುವುದು ಆಲ ಅಥವಾ ಅರಳಿ ಮರದಡಿಯಲ್ಲಿ ಹಾಗೂ ಅದು ಪೂಜ್ಯಸ್ಥಾನ ಮತ್ತು ಧ್ಯಾನಕ್ಕೆ ಪ್ರಶಸ್ತವಾದ ಸ್ಥಳ ಮತ್ತು ಅವು ವರಗಳನ್ನು ನೀಡುವ ಮರಗಳು. ರಾಣಾ ಕುಂಭ ಸಂಪ್ರದಾಯವನ್ನು ಬಹುವಾಗಿ ಗೌರವಿಸುತ್ತಿದ್ದ ವ್ಯಕ್ತಿ. ಆದರೆ ಸಂಪ್ರಾಯವೆಂದರೆ ಅವರಿಗೆ ಅದು ಹರಿಯುವ ನದಿಯಂತೆಯೇ ಹೊರತು ನಂಬಿಕೆಗಳ ಕೊಳಕು ಮಡುವಲ್ಲ. ಪ್ರತಿಯೊಂದು ಚಿಲುಮೆ. ತೊರೆ ಮತ್ತು ಉಪನದಿ, ನದಿಯ ವಿಸ್ತಾರ ಮತ್ತು ಅದರ ಜಲಸಂಪತ್ತಿಗೆ ತನ್ನ ಕೊಡುಗೆ ನೀಡುತ್ತದೆ. ಹಾಗಾಗಿ ತನಗೆ ಏನೇ ಆಕರ್ಷಕವಾಗಿ ಕಂಡರೂ, ಜನರಿಗೆ ಪ್ರಯೋಜನಕರ ಎಂದು ಅನ್ನಿಸಿದರೂ ಅಥವಾ ಔಷಧೀಯ ಉಪಯೋಗವಿದೆ ಎಂದು ಗೊತ್ತಾದರೂ, ಕಣ್ಣಿಗೆ ನೋಡಲಿಕ್ಕೆ ಕೇವಲ ಸುಂದರವಾಗಿದ್ದರೂ ಅದನ್ನು ಮೇವಾಡದ ಸಂಪ್ರದಾಯದೊಳಕ್ಕೆ ಸೇರಿಸುತ್ತಿದ್ದನು. ಈ ಹುಣಿಸೆ ಮರ ಅವನು ಧ್ಯಾನ ಮಾಡಿದ ಸ್ಥಳ, ಅದು ಅತ್ಯಂತ ತಂಪಾದದು. ಹಾಗೂ ಮನಸ್ಸಿಗೆ ಸಾಂತ್ವನವನ್ನು ನೀಡುವಂಥದೆಂಬುದನ್ನು ಹಾಗೂ ಮರದ ಎಲೆಗಳು ತುಂಬ ಸುಂದರವಾದದ್ದೆಂಬುದನ್ನು ಆತನು ಕಂಡುಕೊಂಡನು. ಈ ಮರದ ಕೆಳಗೆ ಗಂಟೆಗಟ್ಟಲೆ ಪದ್ಮಾಸನದಲ್ಲಿ ಕುಳಿತು ಎರಡು ಕಣ್ಣುಗಳನ್ನು ಮುಚ್ಚಿಕೊಂಡು, ಆದರೆ ಮನಸ್ಸಿನ ಮೂರನೇ ಕಣ್ಣನ್ನು ತೆರೆದುಕೊಂಡು ಕೂತಿರುತ್ತಿದ್ದನು. ಧ್ಯಾನಕ್ಕೆ ಮುನ್ನ ಮತ್ತು ಧ್ಯಾನಾನಂತರ, ಹತ್ತಿರದ ಬಾವಿಯಲ್ಲಿ ಸ್ನಾನ ಮಾಡಿ, ಅಲ್ಲೇ ಶತಪಥ ತಿರುಗುತ್ತ ಅಲ್ಲಿ ಓಡಾಡುತ್ತಿದ್ದವರೊಂದಿಗೋ ಅಪರಿಚಿತರೊಂದಿಗೋ ಮಾತಾಡುತ್ತ ಅವರ ಆರೋಗ್ಯ ಮಳೆಬೆಳೆಗಳ ಬಗ್ಗೆ ವಿಚಾರಿಸುತ್ತ, ಹೊಸ ತೆರಿಗೆಗಳ ಬಗ್ಗೆ ಮತ್ತು ದೇಶದ ಸ್ಥಿತಿಗತಿಯ ಬಗ್ಗೆ ಅವರೇನು ಹೇಳುತ್ತಾರೆಂದು ಕೇಳುತ್ತಿದ್ದನು. ಮೇವಾಡದ ಇತಿಹಾಸದಲ್ಲಿಯೇ ಎಲ್ಲ ದೊರೆಗಳಿಗಿಂತ ನಿಜಕ್ಕೂ ಹೆಚ್ಚು ವಿದ್ವಾಂಸನಾಗಿದ್ದರೂ ಎಲ್ಲರೂ ಅವನನ್ನು ಇಷ್ಟ ಪಡುತ್ತಿದ್ದುದೇಕೆಂದರೆ ಅವನು ಒಣಪಂಡಿತನಲ್ಲ, ತನ್ನ ಶಕ್ತಿಮೂಲವಾದ ತನ್ನ ಜನಗಳ ಸಂಪರ್ಕವನ್ನು ಎಂದಿಗೂ ಕಳೆದುಕೊಳ್ಳಲಿಲ್ಲ.

ರಾಣಾ ಹುಣಿಸೆ ಮರದ ಕೆಳಗೆ ಧ್ಯಾನ ಮಾಡುತ್ತಿದ್ದಾಗ, ಉದಾನು ಅವನ ಹೃದಯಕ್ಕೆ ಮೂರು ಸಲ ಇರಿದನು ಎಂದು ಜನ ಹೇಳುತ್ತಾರೆ. ಇನ್ನು ಕೆಲವರು, ಮರದ ಪಕ್ಕದಲ್ಲಿದ್ದ ಬಾವಿಯತ್ತ ಗಮನ ಸೆಳೆದು, ರಾಣಾ ಕಣ್ಣು ಮುಚ್ಚಿ ಕೂರುವುದನ್ನೇ ಮಗನು ಕಾದಿದ್ದು ಆ ನಂತರ ಅವನ ತಲೆಯ ಮೇಲೊಂದು ಬಿಂದಿಗೆ ನೀರನ್ನು ಸುರಿಯುವ ವ್ಯತಿಕರದಲ್ಲಿ ಬಾವಿಯ ಉದ್ದವಾದ ದಡದ ಮೇಲಿನಿಂದ ಹೇಗೆ ತಂದೆಯನ್ನು ತಳ್ಳಿ ಅದನ್ನು ಹೇಗೆ ಅವರ ಮೇಲೆ ಮುಚ್ಚಿ ಹಾಕಿದನು ಎಂಬುದರ ಕಡೆಗೆ ಗಮನ ಸೆಳೆಯುತ್ತಾರೆ. ಕೈಕಾಲು ಮುರಿದ ರಾಣಾ ಇನ್ನೂ ಹೆಚ್ಚು ಗಲಾಟೆ ಮಾಡುವಂಥ ವ್ಯಕ್ತಿ ಎನ್ನುವುದೇ ಅದಕ್ಕೆ ಕಾರಣ. ಅವನೊಬ್ಬ ಮಹಾ ಈಜುಗಾರನಾಗಿದ್ದರಿಂದ ಎಂದೆಂದೂ ಸಾಯದಿರಬಹುದು.

ಬಿದಾ ತಂತ್ರಗಾರಿಕೆ ಮಾಡಿ ಹೇಗೆ ಅವನು ತನ್ನ ತಂದೆಯನ್ನು ಕೊಂದನೆಂಬ ಬಗ್ಗೆ ಅಥವಾ ಆ ಕೆಲಸಕ್ಕೆ ಬೇರಾರನ್ನೋ ಗೊತ್ತು ಮಾಡಿದ ಬಗ್ಗೆ ಬೇರೆ ಕಥೆಗಳಿವೆ. ನಮಗೆ ಗೊತ್ತಿರುವ ಒಂದೇ ಒಂದು ಖಚಿತವಾದ ಉತ್ತರವೆಂದರೆ ರಾಣಾನನ್ನು ಕೊಂದವನು ರಾಣಾನ ಸ್ವಂತ ಮಗನೇ ಎಂದು. ಅವನು ಹೇಗೆ ಕೊಂದನು ಎನ್ನುವುದು ಅಷ್ಟು ಮುಖ್ಯವೆ?

ತಂದೆಯವರು ನನ್ನನ್ನೂ ಮತ್ತು ನನ್ನ ಹೆಂಡತಿಯನ್ನು ಕುಂಭಲ್‌ಗರ್‌ಗೆ ಕಳಿಸಿದ್ದು, ನನ್ನನ್ನು ತಮ್ಮ ದಾರಿಯಿಂದ ಆಚೆಗೆ ಸರಿಸಲು. ಆದರೆ ಅವರು ನನಗಾಗಿ ಗೊತ್ತು ಪಡಿಸಿದ ನಿಶ್ಚಿತ ಕಾರ್ಯವನ್ನು ಉಪೇಕ್ಷಿಸುವುದರಲ್ಲಿ ಅರ್ಥವಿರಲಿಲ್ಲ. ಗೋಡೆಯನ್ನು ಪರಿಶೀಲಿಸಿ, ಹೊರಗಿನ ದುರಸ್ತಿಗಳ ಬಗ್ಗೆ ಕಲ್ಲುಕುಟಿಕರಿಗೆ ಮತ್ತು ಕಟ್ಟಡ ಕೆಲಸಗಾರರಿಗೆ ನಿರ್ದೇಶನಗಳನ್ನು ಕೊಡುವುದಕ್ಕೆ ನನಗೂ ಮಂಗಳನಿಗೂ ಪೂರ್ತಿ ಒಂದು ವಾರ ಹಿಡಿಸಿತು. ನಾನು ಪೂರ್ತಿಯಾಗಿ ಏಕಾಂತವಾಸಕ್ಕೆ ಹೋಗುವ ಮುನ್ನ ಇನ್ನೊಂದು ಕೆಲಸ ಮಾಡಿದೆ. ಶತ್ರು ಯಾವಾಗ ಆಕ್ರಮಣ ಮಾಡುವ ಪ್ರಯತ್ನಕ್ಕೆ ಕೈ ಹಾಕಿದರೂ, ಅವನು ಮುಂಬಾಗಿಲನ್ನು ತಟ್ಟುವಷ್ಟು ಕೃಪೆ ತೋರುತ್ತಾನೆಂದು ನಂಬುವುದು ದೂರದೃಷ್ಟಿ ಇಲ್ಲದ ಮತ್ತು ಹುಚ್ಚು ಸಾಹಸದ ಮಾತು. ದೂರದ ಒಂದು ಮೂಲೆಯ ಕಡೆಯಿಂದ ಯಾರಿಗೂ ಗೊತ್ತಾಗದ ಹಾಗೆ ದುರ್ಗದ ಒಳಗೆ ನುಸುಳಿ ಒಳಗಿನಿಂದ ಒಂದೆರಡು ಬಾಗಿಲುಗಳನ್ನು ತೆರೆಯುವುದು, ಏಳೆಂಟು ಜನ ಚುರುಕಾಗಿರುವ ಯೋಧರ (ಕಮ್ಯಾಂಡೋಗಳ) ಪಡೆಗೆ ತುಂಬ ಸುಲಭದ ಕೆಲಸ. ದುರ್ಗ ಎಷ್ಟು ದೊಡ್ಡದೆಂಬುದನ್ನು ತಿಳಿದುಕೊಳ್ಳಲು ನೀವು ನಿಮ್ಮ ಕಣ್ಣಿನಿಂದ ಕೋಟೆಯನ್ನು ನೋಡಿದಾಗಲೇ ಸಾಧ್ಯ. ಕೋಟೆಯ ಗೋಡೆಯ ಉದ್ದಕ್ಕೂ ಎತ್ತರವಾದ ಎಂಟು ಕಾವಲು ಗೋಪುರಗಳನ್ನು ನಿರ್ಮಿಸುವ ಯೋಜನೆಯನ್ನು ನಾನು ಹಾಕಿದೆ. ಅದು ಕುಂಭಲ್‌ಗರ್ ಅನ್ನು ಎಲ್ಲ ಕಡೆಯಿಂದಲೂ ವ್ಯಾಪಿಸುತ್ತ ಅದನ್ನು ಇನ್ನಷ್ಟು ಸುರಕ್ಷಿತವಾಗಿ ಮಾಡುತ್ತದೆ. ಇದರಲ್ಲೇನಾದರೂ ವಂಚನೆ ಇರಬಹುದೆ ಎಂದು ರಾಜ್ಯಪಾಲರು ಮನಸ್ಸಿನಲ್ಲಿಯೇ ಚಿಂತಿಸಿ ಅದನ್ನು ನಿಲ್ಲಿಸಿದರು. ತಂದೆಯವರ ಉತ್ತರ ಬರಲು ಸುಮಾರು ಆರು ವಾರಗಳಾಗಬಹುದೆಂದು ನಾನು ಊಹಿಸಿದೆ. ಒಂದು ತಿಂಗಳೊಳಗೆ ನನಗೆ ಅವರ ಅನುಮೋದನೆ ದೊರಕಿತು. ನಾನು ವಾರಕ್ಕೊಮ್ಮೆ ಅದರ ಕಾಮಗಾರಿಯನ್ನು ಉಸ್ತುವಾರಿ ಮಾಡಿದೆ. ಆ ಸಣ್ಣ ಪ್ರಯತ್ನದ ಬಳಿಕ ಒಂದು ಬೆರಳೆತ್ತಿ ಕೂಡ ತೋರಲಿಲ್ಲ.

ನನ್ನ ಹೆಂಡತಿ ತನ್ನನ್ನು ಹೇಗೆ ತೊಡಗಿಸಿಕೊಂಡಿದ್ದಳು ಎನ್ನುವುದರ ಕಲ್ಪನೆ ನನಗಿಲ್ಲ. ಶ್ರೀ ಕೃಷ್ಣನ ದೇವಾಲಯದಲ್ಲಿ ಸಂಜೆ ಆರು ಗಂಟೆಗೆ ಆರತಿ ಇರುತ್ತಿತ್ತು. ಮುಂಚೆಯೇ ಭೇಟಿ ಗೊತ್ತು ಮಾಡಿಕೊಳ್ಳದೆ ಅವಳನ್ನು ನೀವು ಭೇಟಿಮಾಡಬೇಕೆಂದಿದ್ದರೆ, ಐದೂವರೆ ಅಥವಾ ಐದೂ ಮುಕ್ಕಾಲರ ಸುಮಾರಿಗೆ ಅಲ್ಲಿಗೆ ಹೊದರೆ ಸಾಕು, ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಂತಾಗುತ್ತದೆ. ಶ್ರೀಕೃಷ್ಣನ ದರ್ಶನ ಮತ್ತು ಕಿರಿಯ ಸಂತಳ ಭೇಟಿ ಎರಡೂ ಆಗುತ್ತವೆ. ರಾಜಕುಮಾರಿ ಉಂಟುಮಾಡಬಹುದಾದ ಹಗರಣದ ಕುರಿತು ನನಗೆ ಕಿಂಚಿತ್ ಆತಂಕವುಂಟಾಗಿತ್ತು. ಆದರೆ ನಾನು ಚಿಂತೆ ಮಾಡುವ ಅಗತ್ಯವಿರಲಿಲ್ಲ. ಕಿರಿಯ ಸಂತಳ ಹಿಂದೆ ಅವಳ ಕೀರ್ತಿ ಇತ್ತು. ಹಾಗಾಗಿ ಕೋಟೆಯ ಒಳಗಡೆಯಿಂದ ಮತ್ತು ಹತ್ತಿರದ ಹಳ್ಳಿಗಳಿಂದ ಗುಂಪುಗಟ್ಟಲೆ ಜನ ಐದು ಗಂಟೆಯಿಂದಲೇ ಸೇರಲು ಪ್ರಾರಂಭಿಸುತ್ತಿದ್ದರು. ಅಂತಿಮವಾಗಿ, ಹಸಿರುಗಣ್ಣಿನ ಈ ರಾಜಕುಮಾರಿ ಇನ್ನೆಂದೂ ಸ್ಥಳಿಯ ವ್ಯಕ್ತಿಯಾಗುಳಿಯಲಿಲ್ಲ, ಬಹು ಮಟ್ಟಿಗೆ ಮೇವಾಡದ ನಾಯಕಿಯಾಗಿ ಬಿಟ್ಟಿದ್ದಾಳೆಂದು ನನಗೆ ಅರ್ಥವಾಗತೊಡಗಿತು. ಅವಳ ಹಾಡುಗಳು ಮತ್ತು ಕೀರ್ತಿ ನಮ್ಮ ಸಂಸ್ಥಾನದ

ಗಡಿಯನ್ನೂ ದಾಟಿ ಹೊರ ರಾಜ್ಯಗಳಿಗೂ ಹರಡ ತೊಡಗಿತ್ತು. ಇಲ್ಲಿಯ ಜನರು, ಅವಳ ಬಾಯಿಂದಲೇ ಹಾಡುಗಳನ್ನು ಕೇಳುವುದಕ್ಕೆ ಮುಂಚಿನಿಂದಲೇ ಅವಳ ಹಾಡುಗಳನ್ನು ಹಾಡುತ್ತಿದ್ದರು. ಇನ್ನು ಕೆಲವು ವರ್ಷಗಳಲ್ಲಿ ನಮ್ಮ ಸೇನಾ ಪಡೆಗಳ ಮುಖಂಡತ್ವವನ್ನು ತಂದೆಯವರು ಅವಳಿಗೆ ಒಪ್ಪಿಸಬೇಕು. ಅವಳು ಹಾಡಿ, ನೃತ್ಯ ಮಾಡುತ್ತಾಳೆ. ಗುಜರಾತ್, ಮಾಳ್ವ, ವಿಜಯನಗರ ಮತ್ತು ದೆಹಲಿಯ ಜನತೆ ಅದರ ಹುಚ್ಚು ಹತ್ತಿ ತಮ್ಮ ರಾಜರುಗಳನ್ನು ತ್ಯಜಿಸಿ, ಅವಳು ಎಲ್ಲೇ ಹೋದರು, ಅವಳನ್ನೇ ಹಿಂಬಾಲಿಸಿ ಹೋಗುವರು. ಸಮಾಧಾನದ ಸಂಗತಿಯೆಂದರೆ, ನಮ್ಮ ದೇವರುಗಳು ಸರ್ವಸಮಾನತಾವಾದಿಗಳು ಹಾಗಾಗಿ ಅಸೂಯಾಪರರಲ್ಲ ಮತ್ತು ಭರವಸೆ ಕಳೆದುಕೊಂಡವರಲ್ಲ. ನನ್ನ ಹೆಂಡತಿಯನ್ನು ಸಂತಳೆಂದು ಘೋಷಿಸಲಾಗಿರುವುದರಿಂದ, ಶ್ರೀಕೃಷ್ಣನ ಕಡೆಗೆ ತಮ್ಮ ಭಕ್ತಿಯನ್ನು ವರ್ಗಾಯಿಸಿರುವ ಪ್ರಮಾಣವನ್ನು ಅಳೆದು ನೋಡುವುದಾದರೆ, ಮೇವಾಡದ ಅಧಿದೈವವಾದ ಏಕಲಿಂಗ ದೇವರೂ ಸೇರಿದಂತೆ, ಶ್ರೀ ಕೃಷ್ಣನು ಇತರೆ ಎಲ್ಲಾ ದೊಡ್ಡ ದೊಡ್ಡ ದೇವರುಗಳಿಗಿಂತಲೂ ಕಡೇ ಪಕ್ಷ ಶೇಕಡಾ ಐವತ್ತರಷ್ಟು ಹೆಚ್ಚು ಜನಪ್ರಿಯ ದೇವರು. ಅದೃಷ್ಟವಶಾತ್ ನಾವು ಬಹುದೇವತಾರಾಧಕರು. ಹಾಗಾಗಿ ಯಾವಾಗಲಾದರೊಮ್ಮೆ ಎಲ್ಲ ದೇವಸ್ಥಾನಗಳಿಗೂ ಹೋಗುವ ಮೂಲಕ ನಾವು ಕ್ಷೇಮಕರವಾದ ಸ್ಥಿತಿಯಲ್ಲಿದ್ದೇವೆ. ಅದರಲ್ಲೂ, ಸದ್ಯಕ್ಕಂತೂ, ಶ್ರೀ ಕೃಷ್ಣನ ಭವಿಷ್ಯ ನನ್ನ ಹೆಂಡತಿಯ ಅದೃಷ್ಟ ಮತ್ತು ಪ್ರಭಾವದೊಂದಿಗೆ ತಳುಕು ಹಾಕಿಕೊಂಡಿದೆ.

ಕುಂಭಲ್‌ಗರ್‌ನಲ್ಲಿ, ರಾಜ್ಯಪಾಲರ ಕುಟುಂಬದವರು ಕಿರಿಯ ಸಂತಳ ಭಕ್ತರಾಗಿ ಪರಿವರ್ತಿತರಾಗಲು ಕಡೇ ಪಕ್ಷ ಮೂರು ತಿಂಗಳು ಹಿಡಿದೆ. ರಾಜ್ಯಪಾಲರಿಗೆ ಅಗೌರವದ ಭಾವನೆಯಿಲ್ಲದೆ ಹೇಳಬೇಕೆಂದರೆ, ಅವರ ದೊಡ್ಡ ಮತ್ತು ನಿಜವಾದ ಸ್ನೇಹ ಭಾವ ಹೊಂದಿರುವ ಅವರ ಹೆಂಡತಿ ಅಥವಾ ಇನ್ನಿತರೆ ಹಿರಿಯ ಮತ್ತು ಕಿರಿಯ ವ್ಯಕ್ತಿಗಳು ಸೇರಿದಂತೆ ಯಾರೇ ಆದರೂ, ಕಿರಿಯ ಸಂತಳ ಅನುಮತಿ ಇಲ್ಲದೆ ಅವರು ಶೌಚ ಕ್ರಿಯೆ, ಸ್ನಾನ. ಮಗುವಿನ ನಾಮಕರಣ, ಸುಳ್ಳು ಹೇಳುವುದು, ಪ್ರಣಯ ವ್ಯವಹಾರ ಐಶ್ವರ್ಯ ಸಂಪಾದಿಸುವುದು, ಪ್ರಯಾಣ, ಪ್ರೀತಿಯ ವ್ಯವಹಾರ ಅಥವಾ ಹಳೆಯ ರೀತಿಯ ಮನೆ ಜಗಳ ಇದಾವುದನ್ನೂ ಮಾಡಲಾರರೇನೋ ಎಂಬಂತಾಗಿ ಬಿಟ್ಟಿತ್ತು. ನಾನು ಸ್ವಲ್ಪ ಉತ್ಪ್ರೇಕ್ಷಿಸಿರಬಹುದು ಅಷ್ಟೆ. ಆದರೆ ಸ್ವಲ್ಪ ಮಾತ್ರ. ಅನೇಕ ವೇಳೆ ತನ್ನ ಸುತ್ತ ಮುತ್ತ ನಡೆಯುವ ವಿದ್ಯಮಾನಗಳ ಅರಿವು ಅವಳಿಗಿರುವುದಿಲ್ಲ. ಇಲ್ಲವೆ ಹಾಗೆಂದು ತೋರಿಸಿಕೊಳ್ಳುತ್ತಿರುವಾಗ ಆ ಜನರು ಅವಳು ಬೇಡ ಬೇಡವೆಂದು ಕೇಳಿಕೊಂಡರೂ ಪಾದಸ್ಪರ್ಶ ಮಾಡುತ್ತಿದ್ದರು. ತನ್ನ ದೇಹದತ್ತ ಗಮನಹರಿಸಲು ಅವಳು ನಿರಾಸಕ್ತಳಾಗಿದ್ದಳು ಮತ್ತು ತನ್ನೆಲ್ಲ ಗಮನವನ್ನು ಸೆಳೆದುಕೊಂಡಿದ್ದ ಶ್ರೀ ಕೃಷ್ಣನ ಕಡೆಗೆ ಅವರು, ಇವರು ಎಲ್ಲರನ್ನೂ ತಿರುಗಿಸುತ್ತಿದ್ದಳು. ವಿಚಿತ್ರವೆಂದರೆ, ಅವರೆಲ್ಲ ಅವಳಿಗಾಗಿ ಅತ್ಯಂತ ಅಕ್ಕರೆ ತೋರುತ್ತಿದ್ದರು. ಅವಳು ಬರುವುದನ್ನೇ ನಿರೀಕ್ಷಿಸುತ್ತ ಮಳೆಯಲ್ಲಿ ಗಂಟೆಗಟ್ಟಲೆ ಕಾಯುತ್ತಿದ್ದರು. ಚಳಿಯಲ್ಲಿ ಮರಗಟ್ಟುತ್ತಿದ್ದರು. ಇಷ್ಟಾದರೂ ಅವಳು ಹೇಳಿದ್ದಕ್ಕೆ ಅವರೆಂದೂ ಕಿವಿಗೊಟ್ಟಂತಿರಲಿಲ್ಲ. ಅವಳನ್ನು ಆರಾಧಿಸುವುದರಲ್ಲೇ ವ್ಯಸ್ತರಾಗಿರುವಲ್ಲಿ ಅವಳು ಏನು ಹೇಳುತ್ತಾಳೆಂಬುದನ್ನು ಗಮನವಿಟ್ಟು ಕೇಳಿಸಿಕೊಳ್ಳುವಷ್ಟು ವ್ಯವಧಾನ ಯಾರಿಗಿತ್ತು?

ಇನ್ನು ನನ್ನ ವಿಷಯ ಹೇಗೆ? ಎಲ್ಲರ ಹಾಗೆ ಮಲವಿಸರ್ಜನೆ ಮಾಡುವ, ದೇವರ ಮಣ್ಣಿನ ಮೂರ್ತಿಗಳನ್ನು ಪೂಜಿಸಿದರೂ, ನನ್ನ ಯೌಗಿಕ ಧ್ಯಾನದ ಮೂಲಾಧಾರವಾದ, ಉಪನಿಷತ್ ಪರಿಕಲ್ಪನೆಯಾದ 'ಸೋಹಂ' ನ ಅಗಾಧತೆಯನ್ನು ಅನುಭವಕ್ಕೆ

ತಂದುಕೊಳ್ಳುವಂಥವನು ನಾನು. ಸರ್ವಶಕ್ತನಾದ ಆ ಭಗವಂತನೂ ಒಬ್ಬ ಜೀವಂತ ಪ್ರಾಣಿಯೂ ಬೇರೆ ಬೇರೆಯಲ್ಲ, ಅವನೇ ನಾನು, ನಾನೇ ಅವನು, ಎಂಬ ಅಭೇದ ಭಾವ ತಾಳುವುದು ಅಥವಾ ಸಂಕ್ಷೇಪದಲ್ಲಿ ಹೇಳಬೇಕೆಂದರೆ ಬ್ರಹ್ಮಾಂಡ ಅಥವಾ ಸರ್ವ ಶಕ್ತದೇವನೊಂದಿಗೆ ತಾಳುವ ಏಕೋಭಾವ ಅಥವಾ ಉನ್ನತ ಪ್ರಜ್ಞೆ ಅಥವಾ ಸೃಷ್ಟಿ ಶಕ್ತಿಯೊಂದಿಗೆ ಏಕೋ ಭಾವನೆಯನ್ನು ತಂದುಕೊಳ್ಳುವುದಿದೆಯಲ್ಲ ಅದು ನಿಜಕ್ಕೂ, ತತ್ತರಿಸುವಂತೆ ಮಾಡುವ, ಅದ್ಭುತ ಕೆಚ್ಚೆದೆಯ ಚಿಂತನೆ. ಈ ಉನ್ನತವಾದ ಹಳಸಲು ನುಡಿಗಳಿಂದ ಸಮಾಧಾನ ತಾಳದೆ ಅದನ್ನಿನ್ನೂ ಆಳಕ್ಕೆ ಬಗೆದು ನೋಡುವುದಾದರೆ, 'ಸೋಹಂ' ನಲ್ಲಿ 'ಸೋ' 'ಅವನು' ಎನ್ನುವುದರ ಅರ್ಥವೇನು? ಯಾರಿಗೆ ಗೊತ್ತು; ನಾವು ಪ್ರತಿಯೊಬ್ಬರೂ, ಅವರವರ ಸಾಮರ್ಥ್ಯಕ್ಕನುಗುಣವಾಗಿ ಸ್ವತಂತ್ರವಾಗಿ ಆ ಶಬ್ದವನ್ನು ಅನುಸಂಧಾನ ಮಾಡಬೇಕಾಗುತ್ತದೇನೋ. ಪ್ರತಿಯೊಂದನ್ನೂ ಚೇತನಗೊಳಿಸುವವನು ದೇವರೇ ಅಥವಾ ಉನ್ನತ ಪ್ರಜ್ಞೆಯೇ ಅನ್ನುವುದಾದರೆ, ಆಗ ಏನೊಂದೂ ಅರ್ಥವಿಲ್ಲದ ಒಂದು ಮಗುವಿನ ಸಾವೂ, ಇನ್ನೇನು ಅರಳಲಿರುವ ಹೂವೂ ಒಂದೇ ಎಂದು ನನಗೆ ಕೆಲವೊಮ್ಮೆ ಯೋಚಿಸುವಂತಾಗುತ್ತದೆ. ಶ್ರೀ ಕೃಷ್ಣನನ್ನು ಕುರಿತಂತೆ ನನ್ನ ಹೆಂಡತಿಯ ಭೌತಿಕ ಮತ್ತು ಆಧ್ಯಾತ್ಮಿಕ ಗಾಢಾನುರಾಗವು 'ಅದು : ಸೋ'. ಅದೇ ರೀತಿ ಐದು ದಿನಗಳವರೆಗೂ ಏನನ್ನೂ ತಿನ್ನದಿರುವ ಮನುಷ್ಯನ ಹಸಿವು ಅಥವಾ ಯಾತನೆ, ಸಹಿಸಲಸಾಧ್ಯವಾದ, ಅಥವಾ ನಿಯಂತ್ರಿಸಲಾಗದ ದುರ್ಮಾಂಸದ ನೋವು, ರಾಣಿ ಕರ್ಮವತಿಯು ನನ್ನ ಅಥವಾ ಕಿರಿಯ ಸಂತಳ ವಿರುದ್ಧ ಮಾಡಿರುವ ಅಪರಾಧಗಳನ್ನು ಬೇಕೆಂದೆ ಅಲಕ್ಷಿಸುತ್ತಿರುವುದು, ಅದೇ ರೀತಿ ಸಾವಿರಾರು ಯೋಧರನ್ನು ಕೆಸರಿನಲ್ಲಿ ನಾನು ಬೀಳಿಸಿದ್ದು ಇದೆಲ್ಲವೂ 'ಅದೇ'. 'ಅದು ಎಷ್ಟರ ಮಟ್ಟಿಗೆ ದುಃಖವೋ ಅಷ್ಟರಮಟ್ಟಿಗೆ ಆನಂದವೂ. ದುಃಖವೂ ಅದೇ ಸಂತೋಷವೂ ಅದೇ, ನಾನು 'ಅದು' ಆದರೆ ಆಗ ಇವೆಲ್ಲವೂ ನಾನೇ ಹಾಗೂ ವಿಶ್ವದ ಪ್ರತಿಯೊಂದು ವಸ್ತು, ಭಾವ, ಅನುಭವ ಮತ್ತು ನೆನಪು 'ನಾನೇ'. ಅದು ಜಗತ್ತಿನ ಅತ್ಯಂತ ವಿಸ್ತಾರವಾದ ಮನಸ್ಸಿನಷ್ಟೇ ಉನ್ನತವಾದ ಒಂದು ಸುಂದರವಾದ ಆಲೋಚನೆ. ಹಾಗಾದರೆ 'ಒಳಿತು' ಮತ್ತು 'ಕೆಡುಕು'ಗಳ ವಿಚಾರವೇನು? ನನ್ನ ವೈಯಕ್ತಿಕ ಕ್ರಿಯೆಗಳು 'ಅದರ' ಸ್ವರೂಪವನ್ನು ಪ್ರಭಾವಿಸಿ, ಬದಲಾಯಿಸಬಲ್ಲವು ಎನ್ನುವುದಾದರೆ ಆಗ ಬ್ರಹ್ಮಾಂಡ ಅಥವಾ ವಿಶ್ವ ಪ್ರಜ್ಞೆಗೆ ನಾನು ಹೊಣೆಗಾರನಾಗುತ್ತೇನೆ. ನನ್ನಿಂದ ಪ್ರಾರಂಭವಾಗಿ ನಾವೆಲ್ಲರೂ, ನಾವು ಮಾಡಲು ಅನಾವುದನ್ನು ಆಯ್ಕೆಮಾಡಿಕೊಳ್ಳುತ್ತೇವೆಂಬುದರ ಬಗ್ಗೆ ನಾವು ಅತ್ಯಂತ ಜಾಗರೂಕರಾಗಿರಬೇಕು. ಅದು ಭ್ರಮಾಧೀನವಾದ ಸ್ವಾತ್ಮೈಕವಾದ ಮತ್ತು ಅಹಂಭಾವದ ಹೊರಗಿನ ಮಿತಿಯೆ ಅಥವಾ ಅದು ಧರ್ಮದ ಅತ್ಯುನ್ನತ ಮತ್ತು ಅತ್ಯುದಾತ್ತ ಪರಿಕಲ್ಪನೆ ಹಾಗೂ ಬದುಕಿನಲ್ಲಿ ನಾವು ನಿರ್ವಹಿಸಬೇಕಾದ ಪಾತ್ರಗಳೆ?

ದೇವರುಗಳ ವಿಷಯವೇನು? ಅವರ ಕಾರ್ಯವೇನು? ನಮ್ಮೊಂದಿಗೆ ಪ್ರತಿಸ್ಪಂದಿಸ ಬೇಕಾಗಿರುವುದರಿಂದ, 'ಸರ್ವಶಕ್ತ'ನ ಅರ್ಥ ವ್ಯತ್ಯಾಸಗೊಂಡಿದೆಯೆ? ಇಷ್ಟಾದರೂ 'ಅದು' ಎನ್ನುವುದು, ದೇಶ ಕಾಲಗಳ ನಿರಂತರತೆಯನ್ನೂ ಒಳಗೊಂಡಂತೆ 'ಇವು' ಹಾಗೂ ಇತರ ಏಕಕಾಲದಲ್ಲಿ ಸಂಭವಿಸುವ ಪ್ರತಿಯೊಂದೂ ಎನ್ನುವುದಾದರೆ ಅದು, ಯಾವ ಮಹತ್ವವೂ ಇರದ ಕೇವಲ ಅಹಂಕಾರವೆ? ನನಗೆ ಗೊತ್ತಿಲ್ಲ. ಅದಕ್ಕೆ ಉತ್ತರಗಳಿಲ್ಲ. ಅಥವಾ ಪ್ರತಿಯೊಬ್ಬನೂ ಕಂಡುಕೊಳ್ಳಬೇಕು, ಅಥವಾ ತನ್ನದೇ ಆದದ್ದೊಂದನ್ನು ಹೊಸದಾಗಿ ಆವಿಷ್ಕರಿಸಬೇಕು.

ಬಹುಶಃ ಅದೇ ಕಾರಣಕ್ಕೆ ನಾನು ಸಂಗೀತಕ್ಕೆ ಮರಳಿದೆ. ಯಾವುದೇ ತಾರ್ಕಿಕ ಸಮರ್ಥನೆ, ಕಾರಣ ವಿವರಣೆಗಳಿಲ್ಲದ ವಾಸ್ತವ ಈಗ ಅದೇ ಆಗಿದೆ.

* * *

ನನ್ನ ವ್ಯಾಸ ಪೀಠದ ಬಳಿ ಕುಳಿತು, ಕಾಗದಗಳ ಕಟ್ಟನ್ನು ಎತ್ತಿಟ್ಟು ವ್ಯಾಸ ಪೀಠದ ಮೇಲೆ ಇಟ್ಟುಕೊಂಡೆ. ಕಾಗದವೆಂದರೆ ನಮಗೆ ವಿದ್ಯೆಯನ್ನು ದಾಟಿಸುವಂಥದು. ಜ್ಞಾನಕ್ಕೆ ಸಂಬಂಧಿಸಿದ ಯಾವುದೇ ಆದರೂ ಅತ್ಯುನ್ನತ ಗೌರವಕ್ಕೆ ಅರ್ಹವಾದ್ದು. ನನ್ನ ಕಾಲ ಬೆರಳು ಅಕಸ್ಮಾತ್ ಯಾವಾಗಲಾದರೂ ಪುಸ್ತಕಕ್ಕೆ ತಾಕಿತೆಂದರೆ ಸಾಕು ನನ್ನ ಗುರುಗಳು ನನ್ನ ಮೊಳಕಾಲಿನ ಮೂಳೆಯ ಮೇಲೆ ಜೋರಾಗಿ ಪೆಟ್ಟು ಕೊಡುತ್ತಿದ್ದರು. ನಾನೇನಾದರೂ ತಂದೆಯಾದರೆ ನನ್ನ ಮಗು ವಿದ್ಯೆಗೆ ಸಂಬಂಧಿಸಿದ ಯಾವುದರ ಬಗ್ಗೆಯಾದರೂ ಅಗೌರವ ತೋರಿದರೆ, ನಾನೀಗ ಅದನ್ನೇ ಮಾಡುವೆ. ಅಹಮದಾಬಾದಿನಿಂದ ಬರುತ್ತಿದ್ದ ಮಾಸಲು ಕಾಗದದ ಕಟ್ಟನ್ನು ಮೂಗಿನ ಹತ್ತಿರ ಇಟ್ಟುಕೊಂಡು ದೀರ್ಘವಾಗಿ ಉಸಿರೆಳೆದುಕೊಳ್ಳುತ್ತಿದ್ದೆ. ಅದೆಷ್ಟೊಂದು ಸೊಗಸಾಗಿರುತ್ತಿತ್ತು. ಯದ್ವಾತದ್ವಾ ಟೀಕೆ ಮಾಡಬಾರದೆಂದಿದ್ದರೆ ಹೆಚ್ಚು ಕಡಿಮೆ ಅಪಾರದರ್ಶಕವಾಗಿದ್ದರೂ, ದೀರ್ಘಕಾಲ ಬಾಳಿಕೆ ಬರುವಂಥ ಕಾಗದ ಅದು. ನಾನು ಕಾಗದವನ್ನು ಸರಿಯಾಗಿ ಎರಡು ಭಾಗ ಮಾಡಿ ಉಪಾಧ್ಯಾಯರು ಶಾಲೆಯಲ್ಲಿ ಮೊದಲನೇ ದಿನ ಪ್ರತಿಯೊಬ್ಬ ವಿದ್ಯಾರ್ಥಿಯ ಹಲಗೆಯ ಮೇಲೆ ಬಿಡಿಸುತ್ತಿದ್ದ ಚಿತ್ರವನ್ನು ಬಿಡಿಸುತ್ತಿದ್ದೆ. ಒಂದು ವೃತ್ತವನ್ನೆಳೆದು ಆ ರೇಖೆಯನ್ನು ಹಾಗೇ ಎಡಭಾಗದಲ್ಲಿ ಕೆಳಗಿನವರೆಗೂ ವಿಸ್ತರಿಸಿ ಮೇಲ್ಮುಖವಾಗಿ ಅಲಂಕಾರದ ರೀತಿಯಲ್ಲಿ ಕೊನೆಗೊಳಿಸುವುದು, ಅಡ್ಡಗೆರೆಗಳನ್ನು ಸರಸ್ವತಿಯ ಸಾಂಕೇತಿಕ ಆಕೃತಿಯ ರೂಪದಲ್ಲಿ ವಿನ್ಯಾಸಗೊಳಿಸುವುದು. ವಿದ್ಯಾಧಿದೇವತೆಯನ್ನು ಚಿತ್ರಿಸಿದ ಮಸಿ ಆರುವ ಹೊತ್ತಿಗೆ ನಾನು ಅವಳ ಕೃಪೆಗಾಗಿ ಪ್ರಾರ್ಥಿಸುತ್ತಿದ್ದೆ.

ನನ್ನ ಮುಂದೆ ಇದ್ದ ಕಾರ್ಯ ಎರಡು ಗ್ರಂಥಗಳನ್ನು ರಚಿಸುವುದು. ದಿನ ಬಿಟ್ಟು ದಿನ ನನ್ನ ಆತ್ಮ ಚರಿತ್ರೆಯನ್ನು ಬರೆದೆ. ಸಮಸಂಖ್ಯೆಯ ದಿನಗಳಲ್ಲಿ ಷಷ್ಠಿ ಬರೆದಿದ್ದ 'ಯುದ್ಧದಿಂದ ಹಿಮ್ಮೆಟ್ಟುವ ಕಲೆ ಮತ್ತು ವಿಜ್ಞಾನ' ಎಂಬ ಪುಸ್ತಕಕ್ಕೆ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದೆ. ಎರಡನೆಯದು ಯುದ್ಧಕಲೆಯನ್ನು ಕುರಿತ ಪ್ರಸ್ತುತ ಚಿಂತನೆಗೊಂದು ಮಹತ್ವದ ಕೊಡುಗೆಯಾಗಲಿದೆಯೆಂದು ನನಗೆ ತಿಳಿದಿತ್ತು. ಷಷ್ಠಿಯು ವಿವರಗಳ ಆಳಕ್ಕಿಳಿದು ಯುದ್ಧದಿಂದ ಕಾಲ್ತೆಗೆಯುವ ಎಪ್ಪತ್ತು ಸಂದರ್ಭಗಳ ಸಾಧ್ಯತೆಯನ್ನು ವಿವರಿಸಿದ್ದನು. ಪುಸ್ತಕಕ್ಕೆ ಅಗತ್ಯವಿದ್ದದ್ದು ಸೋಲಿನ ಮತ್ತು ಹಿಂಜರಿಕೆಯ ತತ್ತ್ವದ ಪೂರ್ಣ ಪ್ರಮಾಣದ ಪ್ರತಿಪಾದನೆ. ಯಾವ ದೊರೆಯೇ ಆದರೂ ತನ್ನ ಜನತೆ ಹಾಗೂ ಸೇನಾ ಸಿಬ್ಬಂದಿಯನ್ನು ಅಪಜಯದ ದೂರಗಾಮೀ ಉದ್ದೇಶಗಳನ್ನು ಕುರಿತು ಯೋಚಿಸುವ ಹಾಗೆ ಪರಿಣಾಮಕಾರಿಯಾಗಿ ಸಿದ್ಧಗೊಳಿಸದ ಹೊರತು, ಯುದ್ಧದಲ್ಲಿ ಸೋಲುವ ಹಾಗೂ ಸಮರದಲ್ಲಿ ಗೆಲ್ಲುವ ತಂತ್ರವಾಗಿ ಅಪಜಯವನ್ನು ಬಳಸಿಕೊಳ್ಳಲಾರ. 'ಪಲಾಯನ' ಶಬ್ದದಿಂದ ಹಾಗೂ ಆನಂತರ 'ಪಲಾಯನ' 'ಕೃತ್ಯ' ದಿಂದಲೇ ಅವಕ್ಕೆ ಅಂಟಿರುವ 'ಕಳಂಕ'ವನ್ನು ತೊಡೆದು ಹಾಕುವುದು ನನ್ನ ಮೊದಲ ಕೆಲಸವಾಗಿತ್ತು. ಆದರೆ ಬಹುಶಃ ಅದು ಪ್ರಾರಂಭದಿಂದಲೇ ಹಾಳಾಯಿತು.

ಅತ್ಯಂತ ವಿವಾದಾತ್ಮಕ ವಿಷಯವಾಗಿದ್ದರೂ ಷಷಿಯ ಪುಸ್ತಕ ನಿಜವಾಗಿ ಅಗತ್ಯವಿತ್ತು ಎಂದೇ ನನಗೆ ಖಚಿತವಾಗಿತ್ತು. ಜನ ಅದನ್ನು ಓದುತ್ತಾರೆ. ಅದರ ಬಗ್ಗೆ ವಾದಗಳನ್ನು ಮಾಡುತ್ತಾರೆ. ಅಲ್ಲದೆ ಬಹುಶಃ ಅದನ್ನು ಗಂಭೀರವಾಗಿಯೂ ತೆಗೆದುಕೊಳ್ಳುತ್ತಾರೆ. ನನ್ನ ನೆನಪುಗಳನ್ನು ಕುರಿತು ಬರೆಯುವ ಬಗ್ಗೆ ನನಗೇ ಅಷ್ಟೊಂದು ಖಾತರಿ ಇರಲಿಲ್ಲ. ನನ್ನನ್ನು ನಾನು ಸಮರ್ಥಿಸಿಕೊಳ್ಳಬೇಕಾದ ಅಗತ್ಯವಿರುವಷ್ಟು ನಾನು ಹತಾಶನಾಗಿದ್ದೆನೆ

ಎಂದು ನನ್ನನ್ನು ನಾನೇ ಕೇಳಿಕೊಂಡೆ. ಮಹಾರಾಜ್‌ಕುಮಾರ್ ಸ್ಥಾನದಿಂದ ಒಬ್ಬ ಯಃಕಶ್ಚಿತ್ ಮನುಷ್ಯನಾಗಿ ಆದ ಮಾರ್ಪಾಟು ಈಗ ಹೆಚ್ಚು ಕಡಿಮೆ ಮುಗಿದ ಹಾಗೇ. ನಾನು ಮತ್ತೆ ಸ್ಪರ್ಧೆಯಲ್ಲಿರಬೇಕೆಂದರೆ, ವಿಧಿ ಎಂಬ ಇಸ್ಪೀಟ್ ಎಲೆಗಳ ಕಟ್ಟನ್ನು ವಿಲಕ್ಷಣವಾದ ಅಂಕಿಗಳು ಬರುವ ಹಾಗೆ ಕಲಸಬೇಕು. ಆದರೆ ಅದಕ್ಕೂ ಆತ್ಮ ಗೌರವಕ್ಕೂ ಸಂಬಂಧವಿಲ್ಲ. ಸಾವಮಾನ್ಯದರ್ಜೆಯ ಜನ ಬಲಿಪಶುವೊಬ್ಬನನ್ನು ಗುರುತಿಸುವಷ್ಟಕ್ಕೇ ಸಮಾಧಾನಪಟ್ಟುಕೊಳ್ಳುವರು, ತಮ್ಮ ಕಡೆಗೇ ಬೊಟ್ಟುಮಾಡಿ ತೋರಿಸುವಂತಾದರೂ ಸರಿಯೆ. ನಾನೀಗ ಕೆಳಕ್ಕಿಳಿದಿರಬಹುದು, ಆದರೆ ಈಗಾಗಲೇ ಹೆಚ್ಚು ಕಡಿಮೆ ಇಲ್ಲವಾಗಿರುವ ಮಹಾರಾಜ್‌ಕುಮಾರ್‌ಗೆ ಅದನ್ನು ಬಿಟ್ಟು ಕೊಡುವ ಉದ್ದೇಶವಿರಲಿಲ್ಲ. ಒಂದು ವೇಳೆ ಅವಕಾಶ ತಾನಾಗಿ ಒದಗಿ ಬಂದರೆ ಆ ಇಸ್ಪೀಟ್ ಎಲೆಗಳ ಕಟ್ಟನ್ನು ನನ್ನ ಪರವಾಗಿ ನೆಲೆಗೊಳಿಸಿಕೊಳ್ಳುತ್ತೇನೆ. ಮಹಾಪ್ರಭುಗಳು ಸೂಚಿಸಿದಂತೆ ಖಚಿತ ಉತ್ತರಾಧಿಕಾರಿ (ಮಹಾರಾಜ್‌ಕುಮಾರ್) ತನ್ನ ಕಾಲಕ್ಕಿಂತ ಮುಂದಿರುವುದಾದರೆ, ನಾನು ನಿಧಾನವಾಗಿ ನನ್ನ ದೇಶಬಾಂಧವರನ್ನು ಅವಸರಿಸುವ ಕಲೆಯನ್ನು ಕಲಿಯಬೇಕು. ನಾನು ನನ್ನ ಬದುಕನ್ನು ನಿರುದ್ವಿಗ್ನ ದೃಷ್ಟಿಯಿಂದ ನೋಡಿ, ನಾನೆಲ್ಲಿ ತಪ್ಪಿದ್ದೇನೆಂಬುದನ್ನು ಕಂಡುಕೊಂಡು, ಹೇಗೆ ನಾನು ವಿಭಿನ್ನವಾದ ಆದರೆ ಅನುಕೂಲಕರವಾದ ಹೆಜ್ಜೆಗಳನ್ನು ಹಾಕಬೇಕೆಂದು ಲೆಕ್ಕಹಾಕಬೇಕು.

ಜೀವನದಲ್ಲಿ ಪೋಷಾಕುಗಳ ತಾಲೀಮುಗಳು ಇರುವುದಿಲ್ಲ. ಆದರೆ ಲಕ್ಷ್ಯವಿಟ್ಟು ನೋಡುವವರಾದರೆ, ಹಾಗೂ ಅವರು ಅದೃಷ್ಟಶಾಲಿಯಾಗಿದ್ದರೆ ಅದರಲ್ಲಿ ವಿವಿಧ ನಮೂನೆಗಳನ್ನು ಪತ್ತೆ ಹಚ್ಚಬಹುದು. ಅದರ ಹಿಂದಿರುವ ವಿಚಾರವೆಂದರೆ ಮಾಡಿದ ತಪ್ಪನ್ನೇ ಮತ್ತೆ ಮಾಡದೆ ಬೇರೆ ಯಾರಾದರೂ ಅದನ್ನು ಮಾಡಲು ಬಿಡುವುದು. ನಾನು ಈ ದಿನ ವಿಕ್ರಮಾದಿತ್ಯನ ವಿಶ್ವಾಸಘಾತುಕತನದ ವಿಚಾರಣೆಯನ್ನು ಒಂದೇ ಗುರಿಯಲ್ಲಿ ಮನಸ್ಸಿಟ್ಟು ನಡೆಸಲೆ ಅಥವಾ ರಾಣಿ ಕರ್ಮವತಿ ಎಂದೂ ಮರೆಯಲಾಗದಂಥ ಒಂದು ಉಪಕಾರವನ್ನು ಮಾಡಲೆ? ಅರ್ಥಾತ್ ಶತ್ರುವಿನೊಂದಿಗೆ ನಿರರ್ಥಕವಾಗಿ ಕೈ ಜೋಡಿಸುತ್ತ ತನ್ನದೇ ನಾಡಿನ ವಿರುದ್ಧ ಸಂಚು ಮಾಡಿದ ತನ್ನ ಮಗನನ್ನು ಅವಳೇ ನಿಭಾಯಿಸಲು ಬಿಡಲೆ? ದೇಶದಲ್ಲಿ ರಾಣಿಗಿಂತ ಕೆಟ್ಟ ಶತ್ರುಗಳು ಯಾರೂ ಇಲ್ಲ ಎಂಬುದು ಈಗಾಗಲೇ ಅಂಗೀಕೃತವಾದದ್ದೇ. ಆದರೆ ನೆರವು ನೀಡುವ ವ್ಯಕ್ತಿಯಾಗಿ, ನಂಬಲರ್ಹವಲ್ಲದ ಸ್ನೇಹಿತಳೇ ಆದರೂ, ಅವಳನ್ನು ವಿರಳವಾಗಿಯಾದರೂ ಯಾಮಾರಿಸುವಂತಿಲ್ಲ, ಅಂದಾಜು ತಪ್ಪಿಸಲು ಸಾಧ್ಯವಿಲ್ಲ ಅಥವಾ ಅವಳೊಂದಿಗೆ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗುವುದಿಲ್ಲ. ಬಹುಶಃ ಅವಳೊಂದಿಗೆ ಸಂಧಾನ ನಡೆಸಲು ಈಗ ಕಾಲ ಮೀರಿದೆ. ಇಷ್ಟಾದರೂ ಎಂದೂ ಬದಲಾಗದ ದೃಢ ವಿಕ್ರಮಾದಿತ್ಯನಿದ್ದಾನೆ. ಅವನ ಸ್ವಂತ ಹಿತಾಸಕ್ತಿ ಯಾವುದರಲ್ಲಿದೆ ಎಂಬುದನ್ನು ಯಾವಾಗಲೂ ತಿಳಿದುಕೊಳ್ಳದೆ ಯಾರು ಬೇಕಾದರೂ ಅಡ್ಡ ಮಾರ್ಗ ಹಿಡಿಯಲು ಅವನನ್ನು ಅವಲಂಬಿಸಬಹುದು.

ಇಲ್ಲಿ ನಿಜಕ್ಕೂ ಒಂದು ಫಲವತ್ತಾದ ಕ್ಷೇತ್ರವಿತ್ತು. ಅದು ನಾನು ಸಂಪೂರ್ಣವಾಗಿ ಮುಟ್ಟದೆ ಹಾಗೆಯೇ ಬಿಟ್ಟಿದ್ದಂಥ ಒಂದು ಆಕರ. ಆದರೆ ಆತ್ಮಕಥೆ ಬರೆಯಲು ಇದ್ದ ಪ್ರಚೋದನೆಯು, ಕಳೆದು ಹೋದ ಹಾಗೂ ಹೊಸ ಅವಕಾಶಗಳ ಶೋಧವನ್ನೂ ಮೀರಿ ಅಥವಾ ಆತ್ಮ ನಿರೀಕ್ಷಣೆಯನ್ನೂ ಮೀರಿ ಸ್ವಲ್ಪ ಮುಂದೆ ಸಾಗಿತು. ನನ್ನ ದೇಶವಾಸಿಗಳಿಗೆ ಭೂತವೆಂದರೆ, ಅವರ ಬದುಕಿನ ಪ್ರತಿಯೊಂದು ಕ್ಷಣ ಎಂದರ್ಥ. ಚರಿತ್ರೆ ಎಂದರೆ ಅವರ ಪಾಲಿಗೆ ಎರಡನೇ ಅವಕಾಶವನ್ನು ಕಟ್ಟಿಕೊಟ್ಟದ್ದು. ಅವರು ಭೂತವನ್ನು ಮತ್ತೆ

ಕಟ್ಟೆ ಈ ಸಲ ಸರಿಪಡಿಸಿಕೊಳ್ಳಬಹುದು. ಅದೊಂದು ನಂಬಿಕೆಯ ಹಾಗೂ ಹೊಸದಾಗಿ ಕಂಡುಕೊಳ್ಳುವ ಕ್ರಿಯೆ. ಅಲ್ಲಿ ಸೋಲುಗಳು ಯಶಸ್ಸುಗಳಾಗಿ ಪರಿವರ್ತಿತವಾಗುತ್ತವೆ. ಧೈರ್ಯ ಸಾಹಸ ಮತ್ತು ಕಲಿತನಗಳನ್ನು ಕನಸುಗಳು ಅಥವಾ ದೀರ್ಘ ಕಾಲದ ಲಾಭಗಳಿಗಿಂತ ಹೆಚ್ಚಿನ ಆದ್ಯತೆ ನೀಡಿ ಆಯ್ದುಕೊಳ್ಳಲಾಗುತ್ತದೆ. ಮೈತ್ರಿಗಿಂತ ಶತ್ರುತ್ವವೇ ಹೆಚ್ಚು ಅಮೂಲ್ಯವಾದ್ದು. ಇವೆಲ್ಲದಕ್ಕಿಂತ ಅತ್ಯುತ್ತಮವಾದದ್ದೆಂದರೆ, ಲೆಕ್ಕಗಳನ್ನು ಕೂಡುತ್ತ, ನಿಮ್ಮ ಭ್ರಾಂತಿಯ ವೈಭವಕ್ಕೆ ಅಥವಾ ನಿಮ್ಮ ತಪ್ಪುಗಳಲ್ಲಿನ ಶೂನ್ಯತೆಗೆ ನೀವು ದಂಡತೆರಬೇಕಾಗಿ ಬರದೆ ಇರುವುದು. ಅವರಿಗೆ ಐನೂರು ವರ್ಷಗಳ ಹಿಂದಿನದು ಮತ್ತು ನಿನ್ನೆ ಎರಡೂ ಒಂದೇ; ಅಂದರೆ ಕಾಲದ ಪರಿಧಿಯಾಚೆಗಿನ ಪ್ರಸಂಗ. ಭೂತ ಕಾಲ ಎಂದೂ ನಿಮ್ಮ ಹೊಣೆಗಾರಿಕೆಯಾಗಿರಲಿಲ್ಲ. ಅದು ಮನುಕುಲದ ವಿವೇಕ, ತಪ್ಪುಗಳು ಮತ್ತು ಒಳನೋಟಗಳ ಮೊತ್ತವಲ್ಲ. ಅದು ಇಂದಿನ ಅಂಧಕಾರ ಮತ್ತು ಆಯ್ಕೆಗಳನ್ನು ಬೆಳಗಿದ ಜ್ಯೋತಿಯಲ್ಲ. ನನ್ನ ನೆನಪುಗಳು ಸ್ವಭಾವಕ್ಕೆ ವಿರುದ್ಧವಾಗಿ ಸಾಗಿ ಸಂಪ್ರದಾಯದೊಂದಿಗೆ ಸಂಬಂಧ ಕಡಿದುಕೊಳ್ಳುವುವು. ಒಂದು ವೇಳೆ ವೈಯಕ್ತಿಕ ಇತಿಹಾಸವೆಂಬುದು ನನ್ನ ಪೂರ್ವಿಕರಿಂದ ಪಿತ್ರಾರ್ಜಿತವಾಗಿ ಪಡೆದುಕೊಂಡದ್ದು ಎನ್ನುವುದಾದರೆ ನಾನೊಂದು ದಾಖಲೆಯನ್ನುಳಿಸಿ ಹೋಗಲಿಚ್ಛಿಸುತ್ತೇನೆ. ಅದು, ನನ್ನ ಮಕ್ಕಳನ್ನೂ ಒಳಗೊಂಡಂತೆ ಮುಂದಿನ ಪೀಳಿಗೆಗೆ ಅವರ ಪಿತೃಗಳು ಮತ್ತು ಪೂರ್ವಜರು ರಾಯಭಾರದ ತಿರುವು ಮುರಿಗಳನ್ನು ರಾಜ್ಯದ ವ್ಯವಹಾರಗಳನ್ನು ಹೇಗೆ ಅನುಸಂಧಾನ ಮಾಡಿಕೊಂಡರೆಂಬುದನ್ನು, ಅವರು ಸೋತದ್ದು ಹೇಗೆ, ಅವರು ಮಾಡಿದ ತಪ್ಪುಗಳೇನು, ತುಣುಕುಗಳನ್ನು ಎತ್ತಿಕೊಂಡು ಮತ್ತೆ ಹೊಸದಾಗಿ ಹೇಗೆ ಪ್ರಾರಂಭಿಸಿದರು ಎಂಬುದನ್ನು ಅರ್ಥೈಸಿಕೊಳ್ಳಲು ಅನುವುಮಾಡಿಕೊಡುತ್ತದೆ.

ನಾನು ಎಂದಿನಂತೆ ಸ್ಫುಟವಾದ, ಅಂದವಾದ ಸಾಧಾರಣ ಲಿಪಿಯಲ್ಲೇ ಬರೆದೆ. ನನ್ನ ಪ್ರಜ್ಞಾ ಪೂರ್ವಕವಾದ ಯಾವುದೇ ಉದ್ದೇಶವಿಲ್ಲದೆ ಎರಡೂ ಪಾಠಗಳ ಭಾಷೆ ಮತ್ತು ಆಲೋಚನಾ ಪ್ರಕ್ರಿಯೆಗಳು ವಿಭಿನ್ನವಾಗಿದ್ದುವು. 'ಹಿಮ್ಮೆಟ್ಟುವುದು' ನ ಗದ್ಯವು ಸಾಂಪ್ರದಾಯಿಕ ಹಾಗೂ ನಿಖರವಾಗಿತ್ತು. ಇಡೀ ವಾಕ್ಯ ಖಂಡಗಳನ್ನು, ಕೆಲವೊಮ್ಮೆ ಅನೇಕ ಪುಟಗಳನ್ನು ನನ್ನ ಮಿದುಳಿನಲ್ಲಿ ರಚಿಸಿ, ಆ ಮೇಲೆ ಹಾಳೆಗೆ ವರ್ಗಾಯಿಸುತ್ತಿದ್ದೆ. ನಾನು ತಿಂಗಳಗಟ್ಟಲೆ ಹಾಸಿಗೆ ಹಿಡಿದು ಮಲಗಿದ್ದ ಕಾಲದಲ್ಲಿ ಇಡೀ ಪುಸ್ತಕದ ಆಕೃತಿ ಮತ್ತು ಶೈಲಿಯನ್ನು ಮುಂದಾಗಿಯೇ ಲೆಕ್ಕ ಹಾಕಿದ್ದೆ. ನಾನು ಬರೆಯ ಹೊರಟಿದ್ದು ನಿಷಿದ್ಧ ವಿಷಯದ ಬಗ್ಗೆ. ಸಂಪ್ರದಾಯ ಶರಣರ ಮತ್ತು ಶಾಸ್ತ್ರಾಂಧರ, ಉಗ್ರ ಪ್ರತಿಕ್ರಿಯೆಯ ಒತ್ತಡವನ್ನು ತಡೆದುಕೊಳ್ಳಬೇಕಾಗಿದ್ದ ಕಾರಣದಿಂದ, ತಳಹದಿಯನ್ನು ಸದೃಢಗೊಳಿಸುವುದಕ್ಕೆ ಅಥವಾ ಅತಿಯಾಗಿ ತಾಂತ್ರಿಕಗೊಳಿಸುವುದಕ್ಕೆ ಹಾಗೂ ನಗರ ಯೋಜನಾ ಶಿಲ್ಪಿಯ ತಾಂತ್ರಿಕ ಶಬ್ದ ಭಂಡಾರವನ್ನು ಬಳಸುವುದಕ್ಕೆ ಅತಿ ಹೆಚ್ಚು ಸಮಯವನ್ನು ವ್ಯಯಿಸಬೇಕಾಯಿತು. ಹೆಚ್ಚು ಭಾರ ಹೊರಬೇಕಾಗಿರುವ ಅಧ್ಯಾಯಗಳು ಯಾವುವೆಂದು, ನನ್ನ ಸಿದ್ಧಾಂತದ ಆಧಾರಗಳಾವುವೆಂದು ನನಗೆ ಗೊತ್ತಿತ್ತು. ಹಾಗಾಗಿ ನೋಟ ಮತ್ತು ಗುರಿಗಳು ಎಲ್ಲ ಕೋನಗಳಿಂದಲೂ, ಗವಾಕ್ಷಿಗಳಿಂದಲೂ, ಉಪ್ಪರಿಗೆಗಳಿಂದಲೂ ಕಾಣುತ್ತವೆಂದು ಖಾತರಿಪಡಿಸಿಕೊಂಡೆನು. ಹಿಮ್ಮೆಟ್ಟುವುದು ಎಂಬುದು, ಜೀವಗಳನ್ನು ರಕ್ಷಿಸುವ ಹಾಗೂ ಇನ್ನೊಂದು ದಿನ ಹೋರಾಡಿಗೆಲ್ಲುವ ಸಲುವಾಗಿ ಬದುಕುಳಿಯುವ ಒಂದು ಯುದ್ಧ ತಂತ್ರಶಾಸ್ತ್ರ. ಹೆಚ್ಚಿನ ಸೈನ್ಯಗಳಿಗಾಗಿ ಕಾಯುವ ಅಥವಾ ಸಂಪನ್ಮೂಲಗಳನ್ನು ಪುನರ್ವರ್ಗೀಕರಿಸುವ ಒಂದು ಕ್ಷೀಣ ಪ್ರಯತ್ನ ಅದು. ಅಥವಾ ಒಂದು ಗೌಣ ಪ್ರದರ್ಶನ. ನಿಜವಾದ ಕ್ರಿಯೆ ಬೇರೆಲ್ಲೋ ನಡೆಯಲಿದೆ. ಅದು ಸ್ವಲ್ಪದರಲ್ಲಿ ಅಪಾಯದಿಂದ ಪಾರಾಗುವ ಮಾರ್ಗವಿದ್ದೀತು. ಆಗ ಬಾಲ ಅದುಮಿಕೊಂಡು, ಶರೀರವನ್ನೆಲ್ಲ ಕುಗ್ಗಿಸಿಕೊಂಡು ಅಲ್ಲಿಂದ

ಅತ್ಯಂತ ವೇಗವಾಗಿ, ಪರಿಣಾಮಕಾರಿಯಾಗಿ ಕಾಲ್ತೆಗೆಯಲನುವಾಗುವಂತೆ ಶರೀರವನ್ನು ಅಣಿಗೊಳಿಸಿಕೊಳ್ಳುವುದೊಂದೇ ಬದುಕುಳಿಯಲು ಇರುವ ಏಕೈಕ ಮಾರ್ಗವಾಗಿರಬಹುದು.

ನನ್ನ ನೆನಪುಗಳನ್ನು ಬರವಣಿಗೆಗಿಳಿಸುವ ಯೋಜನೆ ಇರಲಿಲ್ಲ. ಆದರೆ ಅದರ ಭಾಷೆ ನನಗೆ ಆಘಾತವನ್ನುಂಟು ಮಾಡುವ ರೀತಿಯಲ್ಲಿತ್ತು. ನಾನು ಅದನ್ನು ತಡೆಯಲೆತ್ನಿಸಿದೆ. ಕೆಲವೊಮ್ಮೆ ಒಂದರ ನಂತರ ಇನ್ನೊಂದು ಪುಟಗಳನ್ನು ಹರಿದು ಹಾಕಿದೆ. ಆದರೆ ಕೊನೆಗೆ ನಾನು ನಿರ್ವಾಹವಿಲ್ಲದೆ ಸೋತೆ. ನನ್ನ ಮನಸ್ಸೊಂದು ಇರ್ಬಾಯ ಖಡ್ಗ, ತರ್ಕದ ಉದ್ದೇಶಕ್ಕಾಗಿ ಇರುವ ಕಟ್ಟು ನಿಟ್ಟಾದ, ಮೀರಿಸಿದ, ಜಾಗರೂಕತೆಯಿಂದ ಕೂಡಿದ ಉಚ್ಚ ಮೇವಾರಿ ಎಂದು ನನಗೆ ಮೊದಲ ಸಲಕ್ಕೆ ಅರ್ಥವಾಯಿತು. ಅಲ್ಲದೆ ನ್ಯಾಯಾಲಯದ ಭಾಷೆ ಮತ್ತು ಅರಮನೆಯ ಹಿಜಡಾಗಳ ಆಳುಕಾಳುಗಳ ಮತ್ತು ಸೇವಕಿಯರ ವರ್ಣರಂಜಿತವಾದ ಮಿಂಚಿನಂತೆ ಹೊಳೆಯುವ ಮೊನಚಾದ ಉಪಭಾಷೆಗಳ ನಡುವಣ ಸಂಕರ ತಳಿ ಎಂದು ಅರ್ಥವಾಯಿತು. ನಿರುದ್ವೇಗಕರವಾದ, ಜಡ ಮತ್ತು ವೈದ್ಯಕೀಯ ಉದ್ದೇಶದ ಕರಾರು ವಾಕ್ಕಾದ ಭಾಷೆ ನನ್ನ ಉದ್ದೇಶವಲ್ಲ. (ಆ ರೀತಿಯ ಪ್ರಾಮಾಣಿಕತೆ ಮೋಸದ್ದು ಹಾಗೂ ಅದರ ಪ್ರಯೋಜನ ಪಡೆದುಕೊಳ್ಳಲಾಗದಷ್ಟು ಮಟ್ಟಿಗೆ ಅದು ಓದಲಾಗದ್ದು ಎಂದು ನನಗೆ ಚೆನ್ನಾಗಿ ತಿಳಿದಿತ್ತು). ಆದರೆ ನನ್ನ ಕಥನದಲ್ಲಿ ಅಂಥದೊಂದು ಪ್ರಬಲವಾದ ವೈಯಕ್ತಿಕ ದನಿ ಇರುವುದನ್ನು ಕಂಡು ಅತ್ಯಾಶ್ಚರ್ಯವಾಯಿತು. ಯಾವುದೇ ಸಂದರ್ಭವಿರಲಿ, ಎಂಥದೇ ಪ್ರಚೋದನೆಯಿರಲಿ, ನನ್ನ ರಕ್ಷಕನನ್ನು ನಾನು ಬಿಟ್ಟು ಕೊಡುವಂಥವನಲ್ಲ. ನಿರಾಶೆ ಉಂಟು ಮಾಡುವವನಲ್ಲ ಅಥವಾ ಹಾಗೆಂದು ನಾನು ಭಾವಿಸಿದೆ. ಅದರ ಬದಲಿಗೆ ಇಲ್ಲಿ ನಾನು, ನನ್ನ ಆತ್ಮವನ್ನು ಹೊರತುಪಡಿಸಿ ಅಲ್ಲದೆ ಹೋದರೂ, ನನ್ನ ಎಂದಿನ ಸಾಮಾನ್ಯ ನಡೆವಳಿಕೆ ಮತ್ತು ಎಚ್ಚರಿಕೆಯ ಮುಖವಾಡವನ್ನು ಖಂಡಿತವಾಗಿಯೂ ಗಾಳಿಗೆ ತೂರುತ್ತಿದ್ದೆ. ತಂದೆಯವರನ್ನೂ ಒಳಗೊಂಡಂತೆ, ನನ್ನೆಲ್ಲ ಬಂಧು ಬಾಂಧವರಿಗೂ, ನನಗೂ ಕುಟ್ಟಿ ಬಜಾಯಿಸುತ್ತ, ಶಿಸ್ತುಬದ್ಧವಾಗಿ ಮುಂದುವರಿಯುವುದು ಆಳವಾಗಿ ಬೇರು ಬಿಟ್ಟ ಅಭ್ಯಾಸವಾಗಿದ್ದಾಗ್ಯೂ, ಧ್ಯಾನ ಮಾಡುತ್ತ ವಿಷಯಾಂತರಗೊಳಿಸುತ್ತ ಎಲ್ಲವನ್ನೂ ಹೇಳುತ್ತಿದ್ದೆ. ಈ ಮುಕ್ತತೆ ಹಾಗೂ ಯಾವುದೇ ಹಾಗೂ ಎಲ್ಲ ವಿಷಯಗಳ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂಬ ನನ್ನ ಇಚ್ಛೆಯಿಂದ ನಾನು ಗಾಬರಿಗೊಂಡೆ. ನಾನು ಯೋಜನೆಯನ್ನೇ ತ್ಯಜಿಸಬೇಕೆ? ಅದು ನನ್ನ ಕೈ ಮೀರಿ ಹೋಗುತ್ತಿದೆಯೆ? ಅದು ಹಾಗೆ ನನ್ನ ನಿಯಂತ್ರಣ ತಪ್ಪಿ ಹೋಗುತ್ತಿದೆಯೆಂದು ನಾನು ಒಪ್ಪಿಕೊಳ್ಳಲೇಬೇಕು. ಆದರೆ ಅದನ್ನು ಪೂರ್ವ ಪರೀಕ್ಷೆಗೆ ಒಳಪಡಿಸುವುದೆಂದರೆ, ಪರಿಣಾಮದಲ್ಲಿ ಮೋಸದಿಂದ ತಿದ್ದುವುದಾಗಿ ಬಿಡುತ್ತದೆ. ಚಾರಣರು ಮತ್ತು ಅವರ ಪಂಗಡದವರು, ಭೂತಕಾಲಕ್ಕೆ ವಾಡಿಕೆಯ ರೂಪವನ್ನು ಕೊಟ್ಟಂಥ ತಪ್ಪು ನನ್ನದೂ ಆಗುತ್ತದೆ. ಏನೂ ಬರೆಯದೇ ಇರುವುದೆಂದರೆ, ಸತ್ಯ ಒಂದು ಒಳ್ಳೆಯ ಘೋಷಣೆ, ಆದರೆ ನಿಜ ಜೀವನದ ಓಣಿಗಳಲ್ಲಿ ಅದಕ್ಕೆ ಮುಖಾಮುಖಿಯಾಗಕೂಡದು ಎಂಬುದನ್ನು ನಾನೂ ನಂಬುತ್ತೇನೆಂದು; ನಮಗೆ ಹೆಚ್ಚಿನ ಬೆಳಕು ಚೆಲ್ಲಿ ವಿವರಗಳಿಗೆ ಸೂಕ್ಷ್ಮಗಮನ ನೀಡಿ, ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ ಗುಣವನ್ನು ನೀಡುವುದರ ಬದಲು ಅದು ನಮ್ಮ ಸತ್ವ ಗುಂದಿಸುತ್ತದೆಂಬುದನ್ನು ನಾನೂ ನಂಬುತ್ತೇನೆಂದು, ನಾನು ವಕ್ರ ನಗೆ ಬೀರಿ, ಮುಂದುವರಿಯಲು ನಿರ್ಧರಿಸಿದೆ. ಬರವಣಿಗೆಯನ್ನು ನಿಲ್ಲಿಸದೆ ಇರುವುದು ಬಹುಶಃ ನನಗೆ ಹೆಚ್ಚಿನ ಸಂತೋಷ ನೀಡುತ್ತಿದ್ದಿರಬಹುದು.

ಅಧ್ಯಾಯ 28

ದೇವರೊಂದಿಗೆ ಹೋರಾಡಬೇಕೆಂದರೆ ಯಾರೇ ಆದರೂ ದೇವರೇ ಆಗಬೇಕು ಅಥವಾ ಕೊನೇಪಕ್ಷ ದೇವರ ಮುಖವಾಡ ಧರಿಸಬೇಕು.

ದುರ್ಗದ ಕೈಪಿಡಿಯ ಉದ್ದಕ್ಕೂ ಗೋಡೆಯ ಪಕ್ಕದಲ್ಲಿ ರಾತ್ರಿ ಹನ್ನೊಂದು ಗಂಟೆಯ ಹೊತ್ತಿನಲ್ಲಿ ಏಳು ಮೈಲಿಯ ಕಾಲ್ನಡಿಗೆಯಿಂದ ಅವನು ಹಿಂತಿರುಗುತ್ತಿದ್ದನು. ಆಗ ತನ್ನ ಹೆಂಡತಿ ಶ್ರೀ ಕೃಷ್ಣ ದೇವಾಲಯದಲ್ಲಿ ಕುಳಿತಿದ್ದನ್ನು ಕಂಡನು. ಅವನು ಅರಮನೆಯ ಕಡೆಗೆ ತಿರುಗಿದನು. ಆದರೆ ಅವಳ ಬಗೆಗಿನ ಯಾವುದೋ ಒಂದು ಅವನು ಹಿಂತಿರುಗುವಂತೆ ಮಾಡಿತು. ಅವಳಿನ್ನೂ ಅಲ್ಲೇ ಕಣ್ಣು ಮುಚ್ಚಿ ಕುಳಿತಿದ್ದಳು. ಉತ್ಪ್ರೇಕ್ಷೆ ಮಾಡದೆ ಹೇಳಬೇಕೆಂದರೆ, ಇದು ತೀರಾ ಅಸಾಧಾರಣವಾದ್ದು. ಅವಳ ಬಗೆಗಿನ ಒಂದು ಕಥೆ ಏನೆಂದರೆ ಕೇವಲ ಅವಳ ಪಾದಗಳಷ್ಟೇ ಅಲ್ಲ, ಅವಳ ಲಂಗ ಮತ್ತು ಜಡೆಕೂಡ ಯಾವತ್ತೂ ವಿಶ್ರಾಂತಿ ತೆಗೆದುಕೊಳ್ಳುತ್ತಿರಲಿಲ್ಲ ಎಂದು. ಅವಳ ಮುಖದ ಮೇಲೆ ಒಂದು ವಿಲಕ್ಷಣ ಭಾವನೆ ಇರುತ್ತಿತ್ತು. ಅದೇನೆಂದು ಅವನಿಗೆ ಅರ್ಥವಾಗಲಿಲ್ಲ ಎಂದು ಗೊತ್ತಾಯಿತು. ಆದರೆ, ಅದೊಂದು ಆನಂದದ, ಅತ್ಯಾನಂದದ ಪ್ರಶಾಂತ ಸ್ಥಿತಿ ಎಂದು ಮಾತ್ರ ಹೇಳಬಲ್ಲ ಅವಳು ಇನ್ನೆಂದೂ ಈ ಭೂಮಿಗೆ ಅಥವಾ ಈ ಜಗತ್ತಿಗೆ ಸೇರಿದವಳಲ್ಲ.

ಒಂದೇ ಒಂದು ದೀಪದ ಬೆಳಕು ಅವಳ ಮುಖದೊಂದಿಗೆ ಹುಡುಗಾಟವಾಡುತ್ತಿತ್ತು ಎಂದು ಅವನಿಗೆ ಖಾತರಿಯಾಯಿತು. ಅವಳ ತೀರ ಸನಿಹಕ್ಕೆ ಹೋದನು. ಅವಳ ಕಡೆಯಿಂದ ಬೆಳಕು ಹೊರಸೂಸುತ್ತಿತ್ತು. ಈಗಾಗಲೇ ಮುಚ್ಚಿಕೊಂಡಿದ್ದ ಕಣ್ಣುಗಳಿಂದಷ್ಟೇ ಅಲ್ಲ; ಅವಳ ಇಡೀ ಶರೀರದಿಂದ ಹೊರ ಹೊಮ್ಮುತ್ತಿತ್ತು. ಅದು ಒಳಗಿನಿಂದ ಅವಳನ್ನು ಬೆಳಗಿತ್ತು. ಹಾಗಾಗಿ ಅವಳು ಪಾರದರ್ಶಕವಾಗಿ ಬಿಟ್ಟಿದ್ದಳು. ತಾನು ನೋಡಿದ್ದನ್ನು ನಂಬುವುದಕ್ಕೂ ನಂಬದೆ ಇರುವುದಕ್ಕೂ ಏನೂ ವ್ಯತ್ಯಾಸವಿಲ್ಲ ಎಂದು ಅರ್ಥವಾಯಿತು. ಯಾವುದೂ ಅವಳನ್ನು ಸೋಕದು. ಅವಳೊಂದು ವೃತ್ತ ಹಾಗೂ ಸಂಪೂರ್ಣಳು. ಬೇರೆಲ್ಲವೂ ಹೊರಗಿನದು. ನಮ್ಮ ಗ್ರಹಿಕೆಗೆ ಮೀರಿದ ಯಾವುದೋ ಒಂದರೊಂದಿಗೆ ಭಾವೈಕ್ಯಳಾಗಿದ್ದಳು. ದೈವ ಸ್ಪರ್ಶವಾದವರು ಮಾತ್ರ ಅಷ್ಟರ ಮಟ್ಟಿಗೆ ತನ್ನಲ್ಲೇ ತನ್ಮಯವಾಗಿರಲು ಮತ್ತು ಮೈಮರವೆಯಿಂದಿರಲು ಸಾಧ್ಯ. ಏನನ್ನು ಕುರಿತು ಚಿಂತಿಸುತ್ತಿದ್ದಳು ಅವಳು ಎಂಬುದೊಂದು ಮೂರ್ಖ ಪ್ರಶ್ನೆ. ಚಿಂತನೆಯನ್ನು ಮೀರಿದಂತೆ ಕಂಡಳು. ಅವಳ ಅಸ್ತಿತ್ವದ ಕೇಂದ್ರದ ರಹಸ್ಯವನ್ನೆಂದಿಗೂ ಅವನು ಭೇದಿಸಿ ತಿಳಿಯಲಾರ. ಆದರೆ ಆಧ್ಯಾತ್ಮಿಕ

ಅನುಭವದ ಸ್ವರೂಪವೇ ಹಾಗೆಂದು ಅವನು ಊಹಿಸಿದ. ಅದು ಪರಸ್ಪರ ಒಮ್ಮನದ ಸಂಬಂಧ. ಬಾಕಿ ಜಗತ್ತು ವಿಧಿಯಿಲ್ಲದೆ ಮುಚ್ಚಿಹೋಗಿತ್ತು. ಹೊರಗಿನ ವ್ಯಕ್ತಿಗೆ ಸಂತರ ಜಗತ್ತೆಂದರೆ ಅದು ಪ್ರಧಾನವಾಗಿ ಸ್ವಾತ್ಮೈಕವಾದಿ; ಆದರೆ ಅದು ಬಹುಮುಖ್ಯ ಅಂಶವನ್ನು ನೀಗಿಕೊಂಡಿತ್ತು. ಅವಳ ಪಾಲಿಗೆ ಹೊರಗಿನ ವ್ಯಕ್ತಿ ಇರಲಿಲ್ಲ.

ಅವನಿಗೊಂದು ವಿಚಿತ್ರ ಬಯಕೆ ಉಂಟಾಯಿತು. ತನ್ನ ಕೈಗಳನ್ನು ಬಟ್ಟಲು ಮಾಡಿ ಅದರಲ್ಲಿ ಅವಳಿಂದ ಹೊರಹೊಮ್ಮುತ್ತಿದ್ದ ಬೆಳಕನ್ನು ಹಿಡಿದಿಡುವ ಬಯಕೆಯಾಯಿತು.

* * *

ಆ ರಾತ್ರಿ ತೀರ ಹೊತ್ತಾದ ಮೇಲೆ, ತನ್ನ ಬಟ್ಟೆಗಳನ್ನೆಲ್ಲಾ ಕಳಚಿಹಾಕಿ ನಿಲುವುಗನ್ನಡಿಯ ಮುಂದೆ ನಿಂತುಕೊಂಡನು. ಐದು ಚಮಚೆಯಷ್ಟು ನೀಲಿಯನ್ನು ಒಂದು ಅಗಲವಾದ ಬಟ್ಟಲಿನಲ್ಲಿ ಎಚ್ಚರಿಕೆಯಿಂದ ಹಾಕಿ ಅದಕ್ಕೆ ಎರಡು ಲೋಟದಷ್ಟು ನೀರು ಸುರಿದು ಕಲಸಿದನು. ಅದು ಕೊಠಡಿಯ ಮಧ್ಯಭಾಗದಲ್ಲಿ ನಾಕು ದೊಡ್ಡ ಗೋಣಿ ತಾಟುಗಳನ್ನು ಹರಡುವ ಸಮಯ. ನೆಲಕ್ಕಾಗಲಿ, ಗೋಡೆಗಾಗಲಿ ಅದರ ಕಲೆ ತಾಗದ ಹಾಕೆ ಎಚ್ಚರಿಕೆ ವಹಿಸಬೇಕು. ತಾನು ಕೊಂಡು ತಂದಿದ್ದ ದಟ್ಟವಾದ ಕುಂಚವನ್ನು ಆ ನೀಲಿಯ ದ್ರಾವಣದಲ್ಲಿ ಅದ್ದಿದನು. ಕುಂಚದ ಮೋಟು ಕೂದಲನ್ನು ಬಟ್ಟಲಿನ ಅಂಚಿಗೆ ಒತ್ತಿ ಹೆಚ್ಚಿನ ನೀರು ಇಳಿದು ಹೋಗುವಂತೆ ಮಾಡಿದನು. ಕನ್ನಡಿಯ ಎದುರಿನಲ್ಲಿ ನಿಂತು, ಹೆಚ್ಚು ಕುತೂಹಲವಿಲ್ಲದೆ ತನ್ನ ಪ್ರತಿಬಿಂಬವನ್ನು ಸೂಕ್ಷ್ಮವಾಗಿ ನೋಡಿಕೊಂಡನು. ಕುಂಚದಿಂದ ಮೊದಲನೇ ಚಲನೆಯನ್ನು ಮೂಡಿಸಿಕೊಂಡನು. ತಣ್ಣಗಿದೆ ಎನಿಸಿದ್ದು ಯಾವುದು? ನೀರೋ ಅಥವಾ ಚರ್ಮಕ್ಕೆ ತಾಕಿದ ನೀಲಿಯೋ? ಪ್ರಸಾಧನದಿಂದ ಅಲಂಕರಿಸಿಕೊಳ್ಳುತ್ತಿರುವ ನಟನ ಭಾವವುಂಟಾಯಿತು ಅವನಿಗೆ. ಅದು ಸಾವಧಾನವಾಗಿ ನಡೆಯುವ ಪ್ರಕ್ರಿಯೆ. ಅವನಿಗೇನೂ ಅವಸರವಿರಲಿಲ್ಲ. ಅದನ್ನು ಸರಿಯಾಗಿ ಮಾಡಿಕೊಳ್ಳಬೇಕೆಂಬುದು ಅವನ ಇಚ್ಛೆ. ಕಂಕುಳ ಕೆಳಗೆ, ಕಿವಿಗಳ ಹಿಂದೆ, ಅಂಡುಗಳ ನಡುವೆ, ತೊಡೆಗಳ ಸಂಧಿ ಮೇಲೆ ಬೆನ್ನು ಮೂಳೆಯ ಉಬ್ಬು ತಗ್ಗುಗಳಲ್ಲಿ, ತನ್ನ ಕಣ್ತಪ್ಪಿಸಿ ತನ್ನ ಶರೀರದ ಒಂದು ಕಣ, ಒಂದು ಗೆರೆಯೂ ಹಾಗೆಯೇ ಉಳಿಯ ಬಾರದೆಂಬುದು ಅವನಿಚ್ಛೆ. ಕನ್ನಡಿಯಲ್ಲಿ ತನ್ನ ಶರೀರವನ್ನು ನೋಡಿ ಪರೀಕ್ಷಿಸಿಕೊಂಡನು. ಕಾಲಿನ ಕೊನೆಯ ಬೆರಳು ಮತ್ತು ಅದರ ಪಕ್ಕದ ಬೆರಳಿನ ಮಧ್ಯೆ ಬೆಳ್ಳಗೆ ಕಾಣಿಸಿತು. ಕುಂಚದಿಂದ ಒಂದು ಸಲ ಬಳಿದು ಕೊಂಡ ಮೇಲೆ ಸರಿ ಹೋಗಿ ಬಿಟ್ಟಿತು. ಸುತ್ತಲೂ ಒಮ್ಮೆ ತಿರುಗಿ ನೋಡಿಕೊಂಡನು. ಬೆನ್ನು, ಬಲತೋಳಿನ ಕೆಳಗಿನ ಮೂರು ಪಕ್ಕೆಲುಬುಗಳ ಮೇಲೆ ಬಳಿದುಕೊಳ್ಳುವುದು ತುಂಬ ಕಷ್ಟವಾಯಿತು. ಆದರೆ ಅಷ್ಟೆಲ್ಲಾ ವಿವರಗಳಿಗೆ ಗಮನ ಕೊಟ್ಟು ಮಾಡಿದ ಪ್ರಯತ್ನ ಫಲಪ್ರದವಾಯಿತು. ಹತ್ತು ನಿಮಿಷಗಳ ಕಾಲ ಅಲ್ಲಾಡದೆ, ಸ್ಥಿರವಾಗಿ ನಿಂತುಕೊಂಡನು. ಬಣ್ಣವೆಲ್ಲ ಒಣಗಿತ್ತು. ಆದರೆ ತನಗೆ ತಾನೇ ಖಾತರಿಪಡಿಸಿಕೊಳ್ಳಬೇಕೆಂದುಕೊಂಡನು. ಹಳದಿಯ ಪೀತಾಂಬರವನ್ನು ಕೈಗೆತ್ತಿಕೊಂಡನು ಅದು ಅತ್ಯಂತ ನಯವಾಗಿ ಮೃದುವಾಗಿ ಹಾಗೂ ಸೊಗಸಾಗಿದೆ, ಎನ್ನಿಸಿತು. ತನ್ನ ಸೊಂಟಕ್ಕೆ ಕಟ್ಟಿಕೊಂಡನು. ಸಣ್ಣ ಸಣ್ಣ ರಂಧ್ರಗಳಿರುವ ಚಿನ್ನದ ಸೊಂಟಪಟ್ಟಿಯನ್ನು ಅದರ ಮೇಲೆ ಧರಿಸಿದನು. ಇನ್ನು ತಲೆ ಪಟ್ಟಿ, ಕೂದಲುಗಳನ್ನೆಲ್ಲ ಜೋಕೆಯಿಂದ ಅದರ ಕೆಳಗೆ ಒಟ್ಟಾಗಿ ಸೇರಿಸಿ ಕಟ್ಟಿ ಅದರಲ್ಲಿ ಮಧ್ಯದಿಂದ ಆಚೆ ಎಡಗಣ್ಣಿನ ಮೇಲೆ ಬರುವ ಹಾಗೆ ನವಿಲು ಗರಿಯುನ್ನು ಸೆಕ್ಕಿಸಿಕೊಂಡನು. ರಾಜಾಪೂರಜೇಕೀಕಾ ಅವರ ಕಡೆಯ ಭಿಲ್ ಯೋಧನು ಕಾಣಿಕೆಯಾಗಿ ನೀಡಿದ್ದ. ಕೊಳಲನ್ನು ಕೈಗೆತ್ತಿಕೊಂಡನು. ಇಷ್ಟೆಲ್ಲಾ ಅಲಂಕರಿಸಿಕೊಂಡು ಅಲ್ಲಿಂದ ಹೊರಟನು.

ಅವಳ ಕೊಠಡಿಯ ಬಾಗಿಲನ್ನು ಸುಳಿವು ಕೊಡದ ಹಾಗೆ ತೆರೆದನು. ಅವಳು ನಿದ್ರಿಸುತ್ತಿದ್ದಳು. ಕೊಳಲನ್ನು ಹಿತವಾಗಿ ನುಡಿಸಲಾರಂಭಿಸಿದನು. ಮನಸ್ಸಿನಲ್ಲಿ ಯಾವುದೇ ರಾಗ ಇಲ್ಲವೆ ಧಾಟ ಇರಲಿಲ್ಲ. ಶ್ರುತಿ ಸ್ವರಗಳು, ಯಾವುದೇ ಪ್ರಯತ್ನವಿಲ್ಲದೆ ಸರಾಗವಾಗಿ ಬಂದುವು. ಹೃದಯ, ಆತ್ಮ, ಮನಸ್ಸು ಹಾಗೂ ಕೊಳಲು ಎಲ್ಲವೂ ಒಂದೇ ಆದುವು. ನುಡಿಸುವುದನ್ನು ಮುಂದುವರೆಸಿದನು. ಕೊಳಲಿನ ದಂಟಿನಿಂದ ಹೊರಟ ದನಿ ಅತ್ಯಂತ ಆಳವೂ, ಸಮೃದ್ಧವೂ, ಆದ ಸೂಕ್ಷ್ಮ ಎಳೆಗಳಿಂದಾದ ನೆಯ್ಗೆಯಿಂದ ಕೂಡಿತ್ತು. ಸಂಗೀತವು ಧೂಪದ ಕಡ್ಡಿಯಿಂದ ಹೊಮ್ಮಿದ ಹೊಗೆಯಾಗಿತ್ತು. ಅದರ ಗೆರೆಗಳು ಸುರುಳಿ ಸುರುಳಿಯಾಗಿ ರಹಸ್ಯ ಪೂರ್ಣವಾಗಿ ಮೇಲೇರುತ್ತಿದ್ದುವು. ಅವಳು ಅರೆ ಎಚ್ಚರಗೊಂಡು ಪಕ್ಕಕ್ಕೆ ಹೊರಳಿ ಮತ್ತೆ ನಿದ್ರೆಗೆ ಜಾರಿದಳು. ಶ್ರುತಿ ಸ್ವರಗಳು ಅವಳ ಪ್ರಜ್ಞೆಯೊಳಗಿನಿಂದ, ಮತ್ತು ಪ್ರಜ್ಞೆಯೊಳಕ್ಕೆ ಹೋಗುತ್ತಿರುವಂತೆ ತೋರಿದವು. ಅವಳು ಅಂಗಾತನಾಗಿ ಮಲಗಿ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡಿದ್ದಳು. ಅವನು ನುಡಿಸುತ್ತಿದ್ದ ಹಾಡಿನಷ್ಟೇ ಪಾರದರ್ಶಕವಾದ, ಆಲಸಿ ಮುಗುಳ್ನಗೆಯೊಂದು ಅವಳ ತುಟಿಗಳಿಂದ ಹೊಮ್ಮಿತು. ಈಗ ಅವಳು ಪೂರ್ತಿ ಎಚ್ಚರವಾಗಿದ್ದಳು. ಅವಳ ಕಣ್ಣುಗಳ ಸುತ್ತ ತುಂಟ ಮುಗುಳ್ನಗೆ ಆವರಿಸಿತು. ಆದರೆ ಕಣ್ಣುಗಳನ್ನು ತೆರೆಯಲಿಲ್ಲ.

"ನಾನು ಮನೆಯಲ್ಲಿಲ್ಲ. ನಿನ್ನ ಉಳಿದೆಲ್ಲ ಹೆಣ್ಣುಗಳ ಹತ್ತಿರಕ್ಕೆ ನೀನು ಮರಳಬಹುದು. ನನಗೆ ಜ್ವರ ಬಂದು, ಸ್ವಲ್ಪ ಭೇದಿ ಆಗಿ, ನನ್ನ ಭೌತಿಕ ದೇಹವನ್ನು ಉಳಿಸಿ ಹೋಗುವುದು ನನಗಿಷ್ಟವಿಲ್ಲವೇನೋ ಎಂಬಂತೆ, ವಾಂತಿ ಮಾಡಿಕೊಳ್ಳ ತೊಡಗಿದ್ದು ಹಾಸಿಗೆ ಹಿಡಿದಿದ್ದಾಗ ಬಂದು ನನ್ನನ್ನು ನೋಡಿಕೊಂಡು ಹೋಗಲು ನಿನಗೆ ಪುರಸತ್ತು ಇರಲಿಲ್ಲವೆಂಬುದನ್ನು ಊಹಿಸಿಕೋ. ದಯಮಾಡಿ ನನಗೊಂದು ಉಪಕಾರ ಮಾಡು ನಿನ್ನ ವಿಶ್ವದ ಕಾರಣಗಳನ್ನು, ನಿನ್ನ ರಾಜ್ಯದ ಹಾಗೂ ಇನ್ನಿತರೆ ಸಬೂಬುಗಳ ಅಪ್ರಿಯವಾದ ಅನುಭವಗಳಿಗೆ ಒಳಗಾಗುವುದರಿಂದ ನನ್ನನ್ನು ತಪ್ಪಿಸು. ಅದನ್ನು ಕಟ್ಟಿಕೊಂಡು ನನಗೇನೂ ಆಗಬೇಕಾಗಿದ್ದಿಲ್ಲ. ಅದು ಬೇರೆ ಇನ್ನೇನೂ ಅಲ್ಲ. ನಾನು ಮರಣ ಶಯ್ಯೆಯಲ್ಲಿದ್ದೆ. ಎಲ್ಲರೂ ನಾನು ಬದುಕುಳಿಯುವ ಆಸೆಯನ್ನು ಕೈ ಬಿಟ್ಟಿದ್ದರೂ ಆ ಬಡಪಾಯಿ ಪ್ರಿಯ ಮನುಷ್ಯನಿಗೆ ಮಾತ್ರ ನಾನು ಬದುಕುತ್ತೇನೆಂಬ ಭರವಸೆ ಖಂಡಿತಾ ಇತ್ತು. ಹಗಲು ರಾತ್ರಿ ನನ್ನನ್ನು ಎಷ್ಟೆಲ್ಲ ಚೆನ್ನಾಗಿ ನೋಡಿಕೊಂಡ. ನನ್ನ ಗಲೀಜನ್ನೆಲ್ಲ ಚೊಕ್ಕಟ್ಟ ಮಾಡುತ್ತಿದ್ದನು. ಒಂದು ನಿಮಿಷವೂ ಬಿಟ್ಟು ಕದಲುತ್ತಿರಲಿಲ್ಲ. ನಿದ್ದೆಯನ್ನೂ ಮಾಡಲಿಲ್ಲ. ಆದರೆ ಒಂದು ಧ್ಯೇಯದ ಕಡೆಗೆ ಸಾಗುವಲ್ಲಿ ಅದೇನೂ ಅಲ್ಲ, ಅಲ್ಲವೇ? ನಾನು ಸತ್ತು ಹೋಗಬಹುದಾಗಿತ್ತು. ಆದರೆ ನಾನು ಸಾಯಲಿಲ್ಲ. ಹಾಗೆಂದು ನೀನು ಇನ್ನೇನು ಹೇಳಲು ಹೊರಟಿದ್ದೀ. ಅಂದ ಮೇಲೆ ಏನಿದೆಲ್ಲ ರಂಪ? ದಯವಿಟ್ಟು ನಾವಿಲ್ಲಿ ರಂಪ ಮಾಡುವುದು ಬೇಡ. ನಾವು ಸಭ್ಯ, ಗೌರವಾನ್ವಿತ ನಾಗರಿಕ ಜನ. ನೀನು ಮಾಡಿದ್ದು ಸರಿಯೇ ಇದೆ. ಇನ್ನು ಇದೆಲ್ಲ ನಿಲ್ಲಿಸಿಬಿಡೋಣ. ನಾವು ಆನಂದದಿಂದ ಇದ್ದೆವು. ಕೆಲವಂತೂ ಅತ್ಯಂತ ಖುಷಿಯ ಸಂದರ್ಭಗಳು. ಆದರೆ ಇನ್ನು ಅದೆಲ್ಲ ಮುಗಿಯಿತು. ನಿನ್ನ ದಾರಿ ನೀನು ಹಿಡಿ, ನನ್ನ ದಾರಿ ನಾನು ಹಿಡೀತೀನಿ. ಮತ್ತೆ ನಾವಿಬ್ಬರೂ ಯಾವತ್ತೂ ಭೇಟಿಯಾಗುವುದು ಬೇಡ."

ಅವನು ಕೊಳಲನ್ನು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡನು. ಹಿಂತಿರುಗಿ ಹೊರಡಲಣಿಯಾದನು. ಅವಳು ತನ್ನ ಮಾಮೂಲಿ ಕೋಪ ಪ್ರದರ್ಶನಕ್ಕೆ ಕ್ರಮೇಣ ಸಿದ್ಧವಾಗುತ್ತಿದ್ದಳು. ಇನ್ನು ಯಾವ ಕ್ಷಣದಲ್ಲಾದರೂ ಕೈಗೆ ಸಿಕ್ಕಿದ ಸಾಮಾನುಗಳನ್ನು ಎಸೆಯುವುದನ್ನು ಅವನು ನಿರೀಕ್ಷಿಸಬಹುದು.

"ನಾನು ಹೇಳುವುದು ಕೇಳಿಸ್ತಾ ಇದೆಯಾ? ನಿನ್ನ ನಾಲಿಗೆ ಸೇದಿಹೋಗಿದೆಯೆ? ನೀನು ಮಾಡಿದ್ದನ್ನು ಸಮರ್ಥಿಸಿಕೊಂಡು ನನಗೆ ಹೇಳುವುದೇನೂ ಇಲ್ಲವೆ? ಅದರ ಒಂದು ಅಕ್ಷರವೂ ನಿಜವಾಗಿಲ್ಲದೆ ಇದ್ದರೂ ಚಿಂತೆಯಿಲ್ಲ. ನಿನಗೆ ನಾಚಿಕೆ ಅನ್ನೋದೇ ಇಲ್ಲವೆ? ಕಿಂಚಿತ್ತಾದರೂ ಮಾನವೀಯ ಭಾವಗಳಿಲ್ಲವೆ? ಆ ಎಲ್ಲ ಕತೆಗಳನ್ನು ಕಟ್ಟಿ ನನ್ನನ್ನು ನಂಬಿಸಬಲ್ಲೆ ಎಂದು ನಿರೀಕ್ಷಿಸಿರುವೆಯಾ? ಮರೆತುಬಿಡು ಅದನ್ನು. ನಾನು ನಿನ್ನನ್ನು ಶಾಶ್ವತವಾಗಿ ಬಿಟ್ಟಿದ್ದೇನೆ."

ಅವನು ಹೊಸಿಲು ದಾಟಿ ಆಚೆ ಇದ್ದಾಗ ಅವಳು ಅವನನ್ನು ಹಿಂಬಾಲಿಸಿ ಹೋದಳು.

"ನನ್ನನ್ನು ಹಿಡಿದುಕೋ ಹಿಡಿದುಕೋ ಮಾತಾಡಬೇಡ, ಒಂದು ಶಬ್ದವನ್ನೂ ಆಡಬೇಡ" ಎಂದಳು.

ಮರುದಿನ ಸಂಜೆ ಎಂಟು ಗಂಟೆಯ ಹೊತ್ತಿಗೆ, ವಸ್ತುಶಃ ರಾತ್ರಿ, ಕಾರಣ ಆರು ಗಂಟೆಗೆಲ್ಲ ಕಾಡಿಗೆಯ ಹಾಗೆ ಕತ್ತಲಾಗಿ ಬಿಡುತ್ತಿತ್ತು– ಕನ್ನಡಿಯ ಮುಂದೆ ನಿಂತು ನೀಲಿ ಬಣ್ಣವನ್ನು ಮೈಗೆಲ್ಲಾ ಹಚ್ಚಿಕೊಳ್ಳುತ್ತಿದ್ದನು.

* * *

"ಅದರಲ್ಲಿ ನಿಂತುಕೋ"

ಅವಳ ಮಾತಿನ ಅರ್ಥವೇನೆಂದು ಅವನಿಗೆ ಖಚಿತವಾಗಲಿಲ್ಲ.

"ಹೊರಡು ಮೂರ್ಖನೇ ಇಡೀ ರಾತ್ರಿಯೆಲ್ಲಾ ನಾನು ಕಾಯಲಾರೆ. ನೀನೇಕೆ ಕೊಳಲು ನುಡಿಸುವುದನ್ನು ನಿಲ್ಲಿಸಿದ್ದೀ?"

ಎಂದಿನಂತೆ ಅವಳು ಯಾವುದೇ ದೀಪವನ್ನು ಹಚ್ಚಿರಲಿಲ್ಲ. ದೊಡ್ಡ ಚಿನ್ನದ ಹರಿವಾಣದ ಅಂಚಿನ ಮೇಲೆ ಕಾಲನ್ನಿಟ್ಟನು. ಬೀಳದಂತೆ ದೃಢವಾಗಿ ನಿಂತು ತಾನು ಹೊರಟಲ್ಲಿಂದ ಭಿಲ್ ವಾತಾವರಣವನ್ನು ಉಸಿರಾಡಿದನು. ಉದ್ದನೆಯ ಚಿಮ್ಮುವ ಕೊಳವೆಯಿರುವ ಚಿನ್ನದ ಲೋಟವನ್ನು ಅವನಿಗೆ ನೀಡಿದಳು.

"ಏನಾಗಿದೆ ನಿನಗೆ ಈ ಹೊತ್ತು ಕೊಳಲು ನುಡಿಸುವಾಗ ನೀನು ಯಾವಾಗ ನಿಲ್ಲುವ ಭಂಗಿಯನ್ನು ಮರೆತು ಬಿಟ್ಟಿದ್ದೀಯಾ?"

ಅವನು ಅವಸರವಸರವಾಗಿ ಬಲಗಾಲನ್ನು ಎಡಗಾಲ ಮೇಲಿನಿಂದ ತಂದು ನಿಂತು ಕತ್ತರಿ ಮಾಡಿ ನಿಂತುಕೊಂಡನು. ಅವನು ದಿಗ್ಭ್ರಮೆಗೊಳ್ಳುವ ಹಾಗೆ ಅವಳು ನೀರು ಸುರಿದು ಅವನ ಪಾದಗಳನ್ನು ತೊಳೆಯ ತೊಡಗಿದಳು. 'ಲೀಲೆ ಪ್ರಾರಂಭವಾಗಿದೆ' ಎಂದು ತನಗೆ ತಾನೇ ಅಂದುಕೊಂಡನು. ಅವನ ಹೃದಯ ಅವನ ಹತೋಟಿ ಮೀರಿ ಸೂಕ್ಷ್ಮ ತಂತುಗಳಾಯಿತು. ಮಂತ್ರ ಮುಗ್ಧನಂತೆ ಅದನ್ನು ನೋಡುತ್ತಿದ್ದಂತೆ, ಅವನ ಎಡಪಾದಕ್ಕೆ ಹಚ್ಚಿಕೊಂಡಿದ್ದ ನೀಲಿ ಕರಗಿ ಹರಿಯ ತೊಡಗಿತು.

"ಈಗ ಬಲಗಾಲು ಜೋಕೆ, ತಟ್ಟೆಯನ್ನು ಉರುಳಿಸಬೇಡ. ನಿನ್ನ ಸೊಂಟ ಹೊರಳಿದರೆ ನನಗೆ ಕಾಟ ಕೊಡಬೇಡ" ಎಂದು ಅವನ ಕಡೆ ನೋಡಿ ನಕ್ಕಳು. "ಆದರೆ ನನ್ನ ಕುತ್ತಿಗೆ ಮುರಿಯುವುದು ನನಗಿಷ್ಟವಿಲ್ಲ"

ಅವನಾರೆಂದು ಅವಳಿಗೆ ನಿಜಕ್ಕೂ ತಿಳಿಯಲಿಲ್ಲವೆ? ಅವಳು ಅವನನ್ನು ತಣಿಸುತ್ತಿದ್ದಳೆ ಅಥವಾ ತನಗೆ ತಾನು ಇಚ್ಛಾ ಪೂರೈಕೆ ಮಾಡಿಕೊಳ್ಳುತ್ತಿದ್ದಳೆ? ಅದು ನಟನೆಯೆ, ಇಬ್ಬರೂ ಪಾಲ್ಗೊಳ್ಳಬೇಕೆಂದು ತೀರ್ಮಾನಿಸಿರುವ ರಹಸ್ಯ ಸ್ತಬ್ಧ ದೃಶ್ಯವೆ? ಖಂಡಿತವಾಗಿಯೂ ಅವಳಿಗೆ ಗೊತ್ತಿತ್ತು.

"ಹೊರಗೆ ಬಾ". ತನ್ನ ಸೆರಗಿನಿಂದ ಅವನ ಪಾದಗಳನ್ನು ಒರೆಸಿದಳು. "ಬೆಳಿಗ್ಗೆ ಈ ಪವಿತ್ರ ಜಲವನ್ನು ತುಳಸಿ ಗಿಡಕ್ಕೆ ಹಾಕುತ್ತೇನೆ. ಅವಳು ಸಂತೃಪ್ತಳಾಗಿ ವಸಂತ ಋತುವಿನಲ್ಲೆಂತೋ ಅಂತೆಯೇ ಹೂ ಬಿಡುವಳು" ಅವನ ಪಾದದ ಮೇಲೆ ತನ್ನ ತಲೆಯನ್ನಿಟ್ಟು, ಅವನ ಪಾದದ ಹರಡು ಹಿಡಿದು ದೀರ್ಘ ದಂಡ ನಮಸ್ಕಾರ ಮಾಡಿದಳು. "ನನ್ನನ್ನು ಆಶೀರ್ವದಿಸು ಹೇ ಪ್ರಭು. ನಿನಗೆ ನಾನು ತಕ್ಕವಳೆಂದು ನಾನೆಂದೂ ಭಾವಿಸುವ ಧೈರ್ಯ ತಾಳಲಿಲ್ಲ. ನನ್ನನ್ನು ನಿನ್ನ ಪ್ರಿಯತಮೆಯೆಂದು ವರಿಸುವೆಯೆಂದು ನಾನೆಂದೂ ಕಲ್ಪಿಸಿರಲೂ ಇಲ್ಲ. ಅದೆಲ್ಲ ಒಂದು ಕನಸೆ? ಅವಳು ತನ್ನ ಕೊರಳನ್ನು ಮುಂದೆ ಮಾಡಿದಳು. ಅವಳ ಕಣ್ಣುಗಳು ಆರಾಧನೆಯ ಭಾವದಿಂದ ಅವನ ಕಣ್ಣುಗಳಲ್ಲಿ ನೋಡುತ್ತಿದ್ದುವು. ನಿನ್ನನ್ನು ಜಿಗುಟಿ, ನೀನು ನಿಜವಾದ ಕೃಷ್ಣನೇ ಹೌದೆಂದು ಖಚಿತಪಡಿಸಿಕೊಳ್ಳುವೆ" ಎಂದು ಹೇಳಿ ಬಲಗೈ ಎತ್ತಿ ಅವನ ಮೀನ ಖಂಡಕ್ಕೆ ತನ್ನ ಉಗುರುಗಳಿಂದ ಜೋರಾಗಿ ಚುಚ್ಚಿ, ಅವನು ನೋವಿನಿಂದ ಕಿರುಚಿದ ಮೇಲೆಯೇ ಹಿಂದಕ್ಕೆಳೆದುಕೊಂಡಳು. "ನೋವಾಯಿತೆ" ಎಂದು ನಿಜಕ್ಕೂ ಆಶ್ಚರ್ಯಚಕಿತಳೆಂಬಂತೆ ನೋಡಿಳು. "ಎಂಥಾ ಆಶ್ಚರ್ಯ! ಅಂದ ಮೇಲೆ ನೀನು ನಿಜವಾದ ಕೃಷ್ಣನೇ. ರಾಧೆಯ ಸಲುವಾಗಿಯೋ ಅಥವಾ ಇನ್ನಾವ ಹೆಣ್ಣಿನ ಸಲುವಾಗಿಯೋ, ನನ್ನನ್ನೆಂದಿಗೂ ತ್ಯಜಿಸದಿರುವಂತೆ ನಿನಗೆ ಇದು ಪಾಠ ಕಲಿಸುವುದು."

ಅವನ ತಲೆಯಪಟ್ಟಿಯಿಂದ ನವಿಲುಗರಿಯನ್ನು ಕಿತ್ತಳು. ಈಗಿನ್ನೇನು ಎಂದು ಅವನು ವಿಸ್ಮಿತನಾದ. ಅದನ್ನು ಕಂಡುಕೊಳ್ಳಲು ಅವನು ಹೆಚ್ಚು ಹೊತ್ತು ಕಾಯಬೇಕಾಗಲಿಲ್ಲ. ಅದು ಅವಳ ಢಾಕಾ ರೇಶಿಮೆಯ ಮೇಲು ಹೊದಿಕೆಯ ಹಾಗೆ ನಯವಾಗಿ ಗಾಳಿಯ ಹಾಗೆ ಹಗುರವಾಗಿತ್ತು. ಬಹುಶಃ ಅದು ನಿಜಕ್ಕೂ ಮಧ್ಯಸಾರದ ಚರಟ, ಸಾಂದ್ರತೆ ಇಳಿಸಿದ ಮಧ್ಯಸಾರದ ಒಳ ಪ್ರವಾಹವೇ. ನವಿಲ ಗರಿ ಅಲ್ಲವೇ ಅಲ್ಲ. ಅವನ ದೇಹದ ಮೇಲೆ ಗೀರಿಕೊಳ್ಳಲು ಉಕ್ಕಿನ ಹಲ್ಲುಗಳ ಕುಂಟೆಯನ್ನೇ ಅವನು ಇಷ್ಟಪಡುತ್ತಿದ್ದನು. ಅದರ ಮೇಲೆ ಕೈಯಾಡಿಸುವುದೊಂದು ವಿಲಕ್ಷಣ ಅನುಭವ. ಅವನ ಸಹನೆಯ ಮಿತಿಯನ್ನು ಪರೀಕ್ಷೆಗೊಡ್ಡಿದ ಅಸಹನೀಯವಾದ ಪ್ರೀತಿಯ ಸ್ಪರ್ಶವಾಗಿತ್ತು. ನವಿಲುಗರಿಯ ಕಣ್ಣು ತನಗೆ ಸೋಕಿತೆ ಇಲ್ಲವೆ ಎಂಬುದು ಖಚಿತವಿರಲಿಲ್ಲ. ಅದು ಉಂಟು ಮಾಡಿದ ತಲ್ಲಣ ಒಳಗೆ ನುಸುಳಿ ಅವನ ಚರ್ಮದೊಳಗೆ ಸುಳಿದಾಡಿ ಗುದ್ದಿ ಮಾಯದ ಗಾಯವನ್ನುಂಟು ಮಾಡಿತು. ಈ ದಿನ ಅವನ ದೇಹದ ಮೇಲೆ ಅವುಗಳು ಉಂಟು ಮಾಡಿದ ಬಿರುಕು ಹಾಗೂ ವಾಂತಿ ಭೇದಿಯ ಸೋಂಕು ರೋಗದ ಸಮಯದಲ್ಲಿನ ನವಿಲುಗಳ ಕಾಮೋದ್ರೇಕದ ನಡುವಿನ ವೈರುಧ್ಯಗಳ ನಡುವೆ ಅವನು ಹೇಗೆ ತಾನೆ ಹೊಂದಾಣಿಕೆ ಮಾಡಿಕೊಳ್ಳಬಲ್ಲನು?

ಕೆಲವೊಮ್ಮೆ ಅವರು ಇಸ್ಪೇಟಾಡುತ್ತಿದ್ದರು. ಇಲ್ಲವೆ ಮಮತ ಬಹುವರ್ಣದ ಚದುರಂಗದ ಹಾಸನ್ನು ಹಾಸುತ್ತಿದ್ದಳು. ಮಹಾಸ್ವಾಮಿಯವರಿಗೇನೋ ಯಾವುದೇ ಪಣವಿಲ್ಲದೆ ಆಡುವುದೇ ಹೆಚ್ಚು ಇಷ್ಟ, ಆದರೆ ಆಟಕ್ಕೆ ವಿನೋದ ಮತ್ತು ರೋಚಕತೆಯನ್ನು ತರುವುದು ಹಣವೇ ಎಂದು ಆತನ ಹೆಂಡತಿ ಹಣ ಇರಬೇಕೆಂದು ಒತ್ತಾಯಿಸಿದಳು. ಅವರೆಂದೂ ಆ ಬಗ್ಗೆ ಚರ್ಚಿಸುವುದಾಗಲಿ ತಮ್ಮ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುವುದಾಗಲಿ ಮಾಡಲಿಲ್ಲ. ಆದರೆ ಕುಂಭಲ್‌ಗರ್‌ಗೆ ಬಂದ ಕೂಡಲೇ ದಂಪತಿಗಳು ಅದಕ್ಕೆ ಅಂಟಿಕೊಂಡು ಬಿಟ್ಟರು. ರಾಜಕುಮಾರಿ ಮತ್ತು ಮಂಗಳ್ ಜೋಡಿ ಮಹಾರಾಜ್‌ಕುಮಾರ್ ಮತ್ತು ಮಮತಾ ಜೋಡಿಯ ವಿರುದ್ಧ ಸೆಣಸುತ್ತಿತ್ತು. ದಿನಗಳು ಉರುಳಿದಂತೆ ಒಂದಂತೂ ಸ್ಪಷ್ಟವಾಯಿತು.

ಅದೆಂದರೆ ರಾಜಕುಮಾರಿ ತಮ್ಮ ಮೂರೂ ಜನರನ್ನು ಮೀರಿಸುತ್ತಾಳೆ ಹಾಗೂ ಕುಟಿಲ ತಂತ್ರದಲ್ಲಿ ತಮ್ಮನ್ನು ಹಿಂದೆ ಹಾಕುತ್ತಾಳೆಂಬುದು. ಅವಳು ಕಾಣುತ್ತಿದ್ದುದೇನೋ ತಾನಿರುವಂತೆಯೇ ಹೊಳೆಯುವ ಕವಚದ ಹಾಗೆ, ಮುಗ್ಧತೆಯಿಂದ ಕಂಗೊಳಿಸುವ ಕಿರಿಯ ಸನ್ಯಾಸಿನಿಯ ಹಾಗೆ. ಆದರೆ ಅದೇ ಸಮಯದಲ್ಲಿ ತಾನು ಎಲ್ಲರನ್ನು ಮೀರಿಸಿ ಮುಂದೆ ಸಾಗುವ ಕುಟಿಲೋಪಾಯದ ಪ್ರತಿಯೊಂದು ಯೋಜನೆಯನ್ನು, ಪ್ರತಿ ಗಂಡು ಹೆಣ್ಣಿಗೆ ಗೊತ್ತಿರುವ ದುಡುಕು ಸಾಹಸ ಮತ್ತು ಲಾಭಕೋರತನ ಮತ್ತು ಇಬ್ಬರಿಗೂ ಗೊತ್ತಿಲ್ಲದ ಇನ್ನೂ ಅನೇಕವನ್ನು ಮೊದಲೇ ಅತ್ಯದ್ಭುತವಾಗಿ ಯೋಜಿಸಿರುತ್ತಿದ್ದಳು.

ಅವಳ ಸುಳ್ಳುಗಳ ಅಗಾಧತೆಯನ್ನು, ಅವಳ ಕೈ ಚಳಕದ ಸೂಕ್ಷ್ಮತೆಯನ್ನು, ಅಪರಾಧ ಮಾಡುತ್ತಿದ್ದಾಗಲೇ ಸಿಕ್ಕಿ ಬಿದ್ದ ಸಂದರ್ಭದಲ್ಲಿ, ತಾನು ಅನ್ಯಾಯಕ್ಕೊಳಗಾದೆನೆಂಬ ಕ್ರೌರ್ಯಪ್ರಜ್ಞೆಯನ್ನು ಗ್ರಹಿಸುವುದೇ ಅಸಾಧ್ಯ. ಅವಳ ದುರಾಸೆಯೆಂಬುದು, ಅವಳ ಅಪಾರವಾದ ಚೆಲುವಿನಷ್ಟೇ ಅತಿಶಯವಾದ್ದು. ಅವಳಿಗೆ ಬಿದ್ದ ಇಸಪೇಟಿನ ಎಲೆಗಳು ಎಷ್ಟೇ ಕೆಟ್ಟದಾಗಿದ್ದರೂ, ಕಳೆದ ನಾಲ್ಕು ಗಂಟೆಗಳಿಂದ, ದಾಳ ಹಾಕಿದಾಗ ಬಿದ್ದಗರ ಒಂದೂ ಅನುಕೂಲಕರವಾಗಿಲ್ಲದೆ ಹೋದರೂ, ಯಾವಾಗಲೂ ಅವಳು ಎಲ್ಲರಿಗಿಂತ ಮುಂದಿರುತ್ತಿದ್ದಳು. ಅವಳ ಮಾಮೂಲಿ ಉಪಾಯವೆಂದರೆ ಎಲ್ಲರ ಗಮನವನ್ನೂ ಬೇರೆಡೆಗೆ ತಿರುಗಿಸುವ ಕೌಶಲ. ತನ್ನ ಮೇಲು ಹೊದಿಕೆಯನ್ನು ಕೆಳಗೆ ಹಾಕುವುದು, ಓಲೆಯ ತಿರುಪನ್ನು ಕಳಚಿ ಕೆಳಗೆ ಬೀಳಿಸಿ ಶಬ್ದ ಮಾಡುವುದು, ಕಣ್ಣಿಗೆ ಏನೋ ಬಿದ್ದಿದೆ, ಯಾರಾದರೂ ಕರವಸ್ತ್ರದ ಅಂಚಿನಿಂದ ಅದನ್ನು ತೆಗೀತೀರಾ ಎಂದು ಕೇಳುವುದು ತನ್ನ ಮೇಲು ಹೊದಿಕೆಯನ್ನು ಸರಿಪಡಿಸಿಕೊಳ್ಳುವ ಹೊತ್ತಿಗೆ, ಕಿವಿಯ ಓಲೆಯ ತಿರುಪನ್ನು ಸರಿಪಡಿಸಿಕೊಳ್ಳುವ ಹೊತ್ತಿಗೆ ಅಥವಾ ಯಾರಾದರೂ ಅವಳ ಕಣ್ಣರೆಪ್ಪೆಯಲ್ಲಿ ಸಿಕ್ಕಿಕೊಂಡಿರುವ ಹರಳನ್ನು ಪತ್ತೆ ಮಾಡುವ ಹೊತ್ತಿಗೆ, ಗುರುತು ಹಿಡಿಯಲಾಗದಷ್ಟು ಮಟ್ಟಿಗೆ ಆಟದ ಚಹರೆಯೇ ಬದಲಾಗಿ ಹೋಗಿರುತ್ತಿತ್ತು. ಅವಳು ಇಸ್ಪೀಟಿನಲ್ಲಿ ಗೆದ್ದು ಎಲ್ಲರ ಕಡೆಯಿಂದ ಹಣ ವಸೂಲಿ ಮಾಡುವ ಮಟ್ಟಿಗೆ ಅವಳ ಇಸಪೇಟಿನ ಕೈ ಬದಲಾಗಿ ಬಿಟ್ಟಿರುತ್ತಿತ್ತು ಅಥವಾ ಅವಳ ಕಾಯಿಗಳು ಬೇರೆಯವರದ್ದಕ್ಕಿಂತ ಮುಂದಿರುತ್ತಿದ್ದುವು. ಎಲ್ಲೋ ಕೆಲವು ಅಪರೂಪದ ಸಂದರ್ಭಗಳಲ್ಲಿ ಯಾವುದೇ ತಂತ್ರ ಫಲಿಸದೆ ಎಲ್ಲ ಮುಗಿದು ಹೋಯಿತು ಎನ್ನುವಂಥ ಸ್ಥಿತಿಯಲ್ಲಿ ಅವಳಿಗೆ ಬಿಕ್ಕಳಿಕೆಗಳೋ ಇಲ್ಲ ಸೀನುಗಳೋ ಬಂದು ಬಿಡುತ್ತಿತ್ತು. ಹಾಗಾಗಿ ಆಕಸ್ಮಿಕವಾಗಿ, ಹಾಸಿನ ಮೇಲೆ ಕಾಯಿಗಳನ್ನು ಚೆದರಿ ಬಿಡುತ್ತಿದ್ದಳು.

"'ಆ ಹಾಳು ನೊಣ ನೆಗೆದು ಬೀಳಲಿ" ಎಂದು ಹೇಳಿ ಜೋರಾಗಿ ತನ್ನ ಎದೆ ಬಡಿದುಕೊಳ್ಳುವಳು. "ನಾವು ಆಟ ಆಡೋಕೆ ಶುರು ಮಾಡಿದಾಗಿನಿಂದಲೂ ಈ ಹಾಳಾದ್ದು ನನ್ನನ್ನು ಪೀಡಿಸ್ತಾ ಇದೆ" ಎನ್ನುವಳು.

ಮಹಾರಾಜ್‌ಕುಮಾರ್ ಸ್ವಲ್ಪ ಅವಳ ಪಕ್ಕಕ್ಕೆ ಒರಗಿ ಅವಳ ಕೈ ಹಿಡಿದು ಕೊಳ್ಳುತ್ತಿದ್ದನು. ಆಗ ಅವನ ಮಣಿಕಟ್ಟಿನ ಪಾರ್ಶ್ವ ಅವಳ ಸ್ತನಗಳ ಮೇಲಿರುತ್ತಿತ್ತು.

"ಅಯ್ಯೋ ದೇವರೆ? ಇದೇನು ಮಾಡುತ್ತಿದ್ದೀರಿ ಮಹಾಸ್ವಾಮಿ ನೀವು?"

"ಆ ನೊಣ ಹಿಡಿದುಕೊಳ್ಳೋಕೆ ನಿನಗೆ ಸಹಾಯ ಮಾಡ್ತಿದ್ದೀನಿ ಅಷ್ಟೆ." ಅವನು ಅವಳ ಕೈಯನ್ನು ಹಿಸುಕುತ್ತಿದ್ದನು. ಅವಳ ಮೇಲ್ತುಟಿಯ ಮೇಲೆ ಸ್ವೇದ ಕಣಗಳು ಸಾಲುಗಟ್ಟುತ್ತಿದ್ದುವು.

"ನನ್ನ ಕೈ ಬಿಡಿ ಮಹಾಸ್ವಾಮಿ"

"ಬಿಡ್ತೀನಿ ಆ ನೊಣ ನನ್ನ ಕೈಗೆ ಸಿಗುವ ಹಾಗೆ ಮಾಡು"

ಅವಳ ಕೈಗಳ ನೆಟಿಗೆ ಮುರಿದನು. ಅವುಗಳ ಚಟಪಟ ಸದ್ದು ಒಂದು ಮೈಲಿಯವರೆಗೂ ಕೇಳಿಸುತ್ತಿತ್ತು. ಅವಳ ಕಣ್ಣು ಸಿಟ್ಟು ಮತ್ತು ನೋವಿನಿಂದ ಭಗ್ಗೆಂದು ಉರಿಯ ಹತ್ತಿದವು. ಆದರೆ ಅವಳ ಕೈ ಮುಷ್ಟಿ ಮಾತ್ರ ಭದ್ರವಾಗಿ ಮುಚ್ಚಿಕೊಂಡೇ ಇತ್ತು. ಮಂಗಳನೂ ಅವನ ಹೆಂಡತಿಯೂ ಈ ಗಂಡ ಹೆಂಡಿರ ಕಲಹವನ್ನು ಗಾಬರಿಯಿಂದ ನೋಡುತ್ತಿದ್ದರು. ಮಹಾರಾಜ್‌ಕುಮಾರ್ ಇಷ್ಟೊಂದು ಮೊಂಡು ಹಟ ಹಿಡಿದದ್ದನ್ನು ನೋಡಿಯೇ ಇರಲಿಲ್ಲ. ಮಹಾರಾಜ್‌ಕುಮಾರ್ ಅವಳನ್ನು ನೋಯಿಸುತ್ತಿದ್ದನೆಂಬುದಂತೂ ಸ್ಪಷ್ಟವಿತ್ತು.

ಮಹಾರಾಜ್‌ಕುಮಾರ್ ಮನಸ್ಸಿನಲ್ಲೇ ಯೋಚಿಸುತ್ತಿದ್ದನು. ಒಂದು ವೇಳೆ ನನ್ನ ಮಣಿಕಟ್ಟಿನ ಹಿಂಭಾಗವು ಮೆಲ್ಲಗೆ ಏರಿಳಿಯುತ್ತಿರುವ ಅವಳ ಮೊಲೆಗಳನ್ನು ತಾಕಿತೆಂದರೆ, ಖಂಡಿತವಾಗಿಯೂ ರಾತ್ರಿಯ ವೇಳೆ ಅವಳ ಕೊಠಡಿಯಲ್ಲಿ ಅವಳನ್ನು ಸಂಧಿಸುವವನ ಗುರುತು ಅವಳಿಗೆ ಹತ್ತುತ್ತದೆ. ಸಹಜವೆಂಬಂತೆಯೇ ಕಾಣುವುದು, ಕ್ಷಣಗಳ ಹಿಂದೆ ಒಬ್ಬರು ಇನ್ನೊಬ್ಬರ ತೋಳಿನಲ್ಲಿ ಬಂದಿತರಾಗಿದ್ದ ದಂಪತಿಗಳು ಅದರ ನೆನಪೇ ಇಲ್ಲದಂತೆ ನಟಿಸುವುದು. ಇದು ಮಾನವರ ಬಹುಮುಖ್ಯ ವಂಚನೆ ಎಂದು ಅವನಿಗೆ ಯಾವಾಗಲೂ ಅನಿಸಿತ್ತು.

ಇಸ್ಪೀಟಿನ ಎಲೆ ಅವಳ ಕೈಯಿಂದ ಕೆಳಕ್ಕೆ ಬಿತ್ತು. ಅದು ನಿಜವಾದ ಕಾಗದ, ತನ್ನ ಕಣ್ಣುಗಳು ತನಗೆ ಮಾಡುತ್ತಿರುವ ಮೋಸವಲ್ಲ ಎಂದು ತನಗೆ ತಾನೇ ಖಾತರಿಪಡಿಸಿಕೊಳ್ಳಲು ಮಂಗಳನು ಅದನ್ನು ಕೈಗೆತ್ತಿಕೊಂಡನು. ಗಂಡ, ಹೆಂಡತಿ, ಮಹಾರಾಜ್‌ಕುಮಾರ್ ಎಲ್ಲರೂ ಬಿದ್ದು ಬಿದ್ದು ನಕ್ಕರು. ರಾಜಕುಮಾರಿಗೆ ನಗು ಬರಲಿಲ್ಲ.

"ಮಹಾಸ್ವಾಮಿಯವರೆ, ಆ ಇಸ್ಪೇಟಿನ ಎಲೆಯನ್ನು ನನ್ನ ಕೈಯಲ್ಲಿಟ್ಟಿದ್ದು ನೀವೇ. ನೀವೊಬ್ಬ ಅಸಹ್ಯ ವಂಚಕರು."

ತನ್ನ ಕೈಯಲ್ಲಿದ್ದ ಎಲೆಗಳನ್ನು ಕೆಳಕ್ಕೆಸೆದು ಬಿರುಗಾಳಿಯಂತೆ ಹೊರ ನಡೆದಳು. ಮಮತ ಅವಳ ಹಿಂದೆ ಹೋಗಿ ಬಹಳಷ್ಟು ಒಪ್ಪಿಸಿ, ಮನವೊಲಿಸಿ ಹಿಂದೆ ಕರೆತಂದಳು. ಮತ್ತೆ ಅವರೆಲ್ಲರೂ ಆಟಕ್ಕೆ ಕುಳಿತರು. ಸ್ವಲ್ಪ ಮಟ್ಟಿನ ಈ ಬಳಸು ದಾರಿ ಅವಳ ಇಸ್ಪೀಟೆಲೆಗಳ ಗುಣಮಟ್ಟವನ್ನು ಅಪಾರವಾಗಿ ಹೆಚ್ಚಿಸಿದಂತೆ ಕಂಡಿತು.

ಅಧ್ಯಾಯ 29

ತವರೂರಿನಿಂದ ಬಂದ ಸುದ್ದಿಗಳು ಮತ್ತು ರಾಜ್ಯದ ಉಳಿದ ಭಾಗದ ಸುದ್ದಿಗಳು ಎಲ್ಲ ಒಟ್ಟಾಗಿ ಸೇರಿಕೊಂಡು ಬಿಟ್ಟಿವೆ. ಕಳೆದ ವರ್ಷದ ವಿಲಕ್ಷಣ ಮುಂಗಾರು ಮತ್ತು ಅಕಾಲದಲ್ಲಿ ಉಂಟಾದ ಪ್ರವಾಹಗಳು ಬೆಳೆಗಳನ್ನು ನಾಶಮಾಡಿವೆ. ಆರ್ಥಿಕತೆ ಹದಗೆಟ್ಟಿದೆ ಮತ್ತು ದೇಶದಲ್ಲಿ ಆರ್ಥಿಕ ಹಿಂಜರಿತ ಶುರುವಾಗಿದೆ. ರೈತರಿಗೆ ಬೀಜಕೊಳ್ಳಲು ಹಣಬೇಕು, ಆದರೆ ಖಜಾನೆ ಹೆಚ್ಚು ಕಡಿಮೆ ಖಾಲಿಯಾಗಿದೆ. ಹಾಗಾಗಿ ಅರ್ಥ ಮಂತ್ರಿ ಆದಿನಾಥಜೀಯವರು, ಯಾವುದೇ ಸಾಲಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಜಗತ್ತಿನ ಬಹುತೇಕ ರಾಜರುಗಳು ಮಾಡುವುದನ್ನೇ ತಂದೆಯವರೂ ಮಾಡಿದರು. ನೆರೆ ಹೊರೆಯ ಭೂಮಿಗಳನ್ನು ಒತ್ತುವರಿಮಾಡಿದರು, ಕೊಳ್ಳೆ ಹೊಡೆದರು, ಲೂಟಿ ಮಾಡಿದರು, ಏನೇನು ಸಾಧ್ಯವಾಗುತ್ತೋ ಅದೆಲ್ಲಾ ಮಾಡಿದರು. ಬೇರೆ ಆಡಳಿತಕ್ಕೊಳಪಟ್ಟ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡರು. ಆಯ್ಕೆ ಇದ್ದದ್ದು ದೆಹಲಿ ಮತ್ತು ಮಾಳ್ವದ ಸುಲ್ತಾನರಿಗೆ ಸೇರಿದ ಭೂಪ್ರದೇಶಗಳು. ತಂದೆಯವರು, ತಮ್ಮ ಎಂದಿನ ವಾಡಿಕೆಯಂತೆ ಸಾಧಕ ಬಾಧಕಗಳನ್ನು ತೂಗಿ ನೋಡಿ ಚತುರ ತೀರ್ಮಾನವನ್ನು ತೆಗೆದುಕೊಂಡರು. ಅವರು ಮೊದಲನೆಯದನ್ನು ಆಯ್ಕೆ ಮಾಡಿಕೊಂಡರು. ದೆಹಲಿ ಮತ್ತು ಮಾಳ್ವ ಎರಡೂ ಸಾಮ್ರಾಜ್ಯಗಳು ತಮ್ಮ ಶಕ್ತಿ ಮತ್ತು ಸತ್ವವನ್ನು ನೀಗಿಕೊಂಡು ಸಾವಿನ ಹೊಸ್ತಿಲಿನಲ್ಲಿದ್ದುವು. ದೆಹಲಿಯ ಇಬ್ರಾಹಿಂ ಲೂದಿ ಮತ್ತು ಮಾಳ್ವದ ಮಹಮ್ಮದ್ ಖಾಲ್ಜಿ ಇಬ್ಬರೂ ಯಾವುದೇ ಆಲೋಚನೆಗಳಿಲ್ಲದವರಾಗಿದ್ದರು. ಹಾಗಾಗಿ ತಮ್ಮ ಶ್ರೀಮಂತರು ಮತ್ತು ಸಾಮಂತರನ್ನು ನಿಯಂತ್ರಿಸಲು ಅಸಮರ್ಥರಾಗಿದ್ದರು. ಮಹಮದ್ ಖಾಲ್ಜಿಯವರಿಗೊಬ್ಬ ಪ್ರಧಾನಿ ಇದ್ದ, ಆ ಮನುಷ್ಯನನ್ನು ಸುಲ್ತಾನ್ ನಂಬುತ್ತಿರಲಿಲ್ಲ. ಆದರೆ ಅವನೊಬ್ಬ ರಜಪೂತ ಮತ್ತು ಅತ್ಯಂತ ಸಮರ್ಥನೂ ಆಗಿದ್ದನು. ಇದೊಂದನ್ನು ಹೊರತು ಪಡಿಸಿದರೆ ಮಾಳ್ವದ ಮೇಲೆ ಅತ್ಯಂತ ಸುಲಭದಲ್ಲಿ ಜಯ ಸಂಪಾದಿಸಬಹುದು. ಆತನ ಹೆಸರು ಮೇದಿನಿರಾಯ್. ನಾನು ಆಗಲೇ ಹಲವಾರು ಬಾರಿ ಹೇಳಿದಂತೆ, ತನ್ನ ಹಿಂದಿನವರಂತಲ್ಲದೆ, ರಜಪೂತರೊಂದಿಗೆ ಯುದ್ಧ ಶುರುಮಾಡುವುದು ಹಾಗಿರಲಿ, ಯಾರ ವಿರುದ್ಧವೂ ವೈರತ್ವದ ಕೃತ್ಯಗಳಲ್ಲಿ ತೊಡಗದೆ ಇರುವುದು ತಂದೆಯವರ ದೊಡ್ಡತನ. ಇದರ ಪರಿಣಾಮವಾಗಿ, ಕಳೆದ ಕೆಲವು ತಿಂಗಳುಗಳಿಂದ ಇಬ್ರಾಹಿಂ ಲೂದಿಯವರಿಗೆ ಸೇರಿದ ದೊಡ್ಡ ದೊಡ್ಡ ಭೂಪ್ರದೇಶಗಳನ್ನು ರಾಣಾ ಕಬಳಿಸುತ್ತಿದ್ದಾನೆಂಬ ವರ್ತಮಾನ ದೆಹಲಿ ಸುಲ್ತಾನರಿಗೆ ಬರುತ್ತಿದೆ.

ಸುಲ್ತಾನ್ ತುಂಬ ಅನುಮಾನದ ಪ್ರಾಣಿ. ಹಾಗಾಗಿ ತನ್ನದೇ ರಾಜ್ಯದ ಉನ್ನತ ಸ್ಥಾನಗಳಲ್ಲಿರುವ ಬಹುತೇಕ ಎಲ್ಲರನ್ನೂ ಗುಪ್ತ ಶತ್ರುಗಳೆಂದು ಭಾವಿಸಿದ್ದನು. ಅದು ಅವನಿಗೂ ಮತ್ತು ಅವನಿಗೆ ಯಾರ ಮೇಲೆ ಅನುಮಾನವಿತ್ತೋ ಅವರಿಗೂ ಇಬ್ಬರಿಗೂ ಕೂಡಿಯೇ ಪರೀಕ್ಷೆಯ ಕಾಲ. ಅವನ ಅಪನಂಬಿಕೆಗೆ ಒಳಗಾದವರು ತಮ್ಮ ಜಮೀನುಗಳನ್ನು, ಕುಟುಂಬಗಳನ್ನು ಮತ್ತು ಕುಟುಂಬದ ಮುಖ್ಯಸ್ಥರನ್ನು ಕಳೆದುಕೊಂಡರು. ಆದರೆ ಅವರನ್ನು ಹೀಗೆ ಸಂಕಷ್ಟಕ್ಕೆ ಗುರಿಮಾಡಿದ ಸುಲ್ತಾನನೂ ಭಯಂಕರ ಬೆಲೆಯನ್ನೇ ತೆರಬೇಕಾಗುತ್ತದೆ. ಸ್ವಂತ ಊರಿನಲ್ಲಿ ಅವನ ಬೆಂಬಲ ಕುಸಿಯುತ್ತದೆ. ಅವನ ವಿಶಿಷ್ಟ ಅನುಮಾನಗಳು, ಧನ್ಯಭಾವವನ್ನು ತಂದುಕೊಡುತ್ತವೆ. ಹಾಗಾಗಿ ಅಭದ್ರತೆಯ ವಿಷ ಖಂಡಿತ ಅವನ ಆತ್ಮವನ್ನೇ ತಿಂದು ಹಾಕುತ್ತವೆ. ಒಂದು ವೇಳೆ 'ನಂಬಿಕೆ ನಂಬಿಕೆಯನ್ನು ಹುಟ್ಟಿಸುತ್ತದೆ' ಎಂಬ ಬಳಕೆಯ ಮಾತನ್ನು ಅರ್ಧ ನಂಬ ಬಹುದಾದರೂ ಅದರ ವಿರುದ್ಧವಾದುದೂ ನಿಜವಿರಲೇಬೇಕು. ಒಂದು ವೇಳೆ ಇಬ್ರಾಹಿಂ ಲೂದಿ ತಂದೆಯವರು ಮಾಡಿದ ವಿನಾಶಗಳನ್ನು ಕಡೆಗಣಿಸಿದ್ದಾನೆಂದರೆ, ಅದಕ್ಕೆ ಕಾರಣ, ರಾಜಧಾನಿಯಿಂದ ದೂರವಿರುವ ಪ್ರಾಂತಗಳಲ್ಲಿನ ಅವನ ಪ್ರತಿನಿಧಿಗಳ ಸರಣಿ ಬಂಡಾಯವನ್ನು ಅಡಗಿಸುವುದರಲ್ಲಿ ತೀರ ವ್ಯಸ್ತನಾಗಿದ್ದನು. ಅಂತಿಮವಾಗಿ ಅವನು ತನ್ನ ಸಿಂಹಾಸನಕ್ಕಿದ್ದ ಆಂತರಿಕ ಬೆದರಿಕೆಗಳನ್ನು ಅಡಗಿಸಲು ಸಾಧ್ಯವಾಯಿತು ಅಥವಾ ಅವುಗಳನ್ನು ತಡೆಗಟ್ಟಿ, ರಾಣಾನನ್ನು ಎದುರಿಸಲು ಅತ್ಯಂತ ವೇಗವಾಗಿ ಧಾವಿಸಲು ಸಾಧ್ಯವಾಯಿತು.

ವಿಕ್ರಮಾದಿತ್ಯನನ್ನು ಚಿತ್ತೂರಿನ ರಾಜ್ಯಪಾಲನನ್ನಾಗಿ ನೇಮಿಸುವಂತೆ, ತಂದೆಯವರು ಚಿತ್ತೂರನ್ನು ಬಿಟ್ಟು ಹೊರಡುವ ದಿನದವರೆಗೂ ರಾಣಿ ಕರ್ಮವತಿ ಒಂದೇ ಸಮನೆ ಅವರನ್ನು ಪೀಡಿಸಿ ಬೆಂಬತ್ತಿದ್ದಳು. ಆದರೆ ತಂದೆಯವರು ಕದಲಲಿಲ್ಲ. ಅವರು ನನ್ನ ಕಿರಿಯ ಸಹೋದರ ರತ್ತನ್‌ನನ್ನು ರಾಜ್ಯಪಾಲನನ್ನಾಗಿ ನೇಮಿಸಿ ವಿಕ್ರಮಾದಿತ್ಯನನ್ನು ತಮ್ಮೊಂದಿಗೆ ಯುದ್ಧಭೂಮಿಗೆ ಕರೆದೊಯ್ದರು. ರಾಜಸಭೆಯಲ್ಲಿ ಹಬ್ಬಿದ ವದಂತಿಯೆಂದರೆ, ರಾಣಿ ಕರ್ಮವತಿ ಮಹಾರಾಜರ ಅನುಗ್ರಹವನ್ನು ಕಳೆದುಕೊಂಡಿದ್ದಾಳೆ ಮತ್ತು ರತ್ತನ್‌ನನ್ನು ಈಗ ಮುಂದಿನ ಅಗ್ರಪಟ್ಟಾಧಿಕಾರಿಯಾಗಿ ರೂಪಿಸಲಾಗುತ್ತಿದೆ ಎಂದು. ತಂದೆಯವರ ನಂತರ, ರತ್ತನ್ ಸಿಂಹಾಸನವನ್ನೇರುವುದು ನೆರವೇರಬಹುದು. ಆದರೆ ರಾಣಿಯ ಶಕ್ತಿ ಮತ್ತು ಪ್ರಭಾವಗಳನ್ನು ಕಡಮೆಯಾಗಿ ಎಣಿಸುವುದು ಅದೂರದೃಷ್ಟಿಯಾಗುತ್ತದೆ. ಚಿತ್ತೂರಿನಲ್ಲಿ ಏನಾದರೂ ಕಿತಾಪತಿ ಮಾಡುವುದರಿಂದ ದೂರವಿರಿಸುವ ಹಾಗೂ ನಿಜವಾದ ಯುದ್ಧಕ್ಕೆ ತನ್ನನ್ನು ಒಡ್ಡಿಕೊಳ್ಳಲಿ ಎಂಬ ಉದ್ದೇಶದಿಂದ ತಂದೆಯವರು ವಿಕ್ರಮಾದಿತ್ಯನನ್ನು ತಮ್ಮೊಂದಿಗೆ ಕರೆದೊಯ್ದಿರುವ ಸಂಭವವೇ ಹೆಚ್ಚು. (ಇದಕ್ಕೆ ಸಂಬಂಧಿಸಿದಂತೆ ಮಂಗಳನ ಕಡೆಯ ಮೂಲಗಳು ಹೇಳುವುದೆಂದರೆ, ತಂದೆಯವರು ರಾಣಿಯೊಂದಿಗೆ ಯಾವುದೋ ಒಂದು ಥರದ ಒಪ್ಪಂದ ಮಾಡಿಕೊಂಡ ಮೇಲೆಯೇ ರಾಣಿ ಒಪ್ಪಿದ್ದು ಎಂದು. ಆದರೆ ಒಪ್ಪಂದದ ಷರತ್ತುಗಳೇನೆಂದು ಯಾರಿಗೂ ಗೊತ್ತಿರಲಿಲ್ಲ. ನಾನು ಎರಡು ವಿಷಯಗಳನ್ನು ಮಾತ್ರ ದಯಪಾಲಿಸಬಲ್ಲೆ. ಮೊದಲನೆಯದು ನನ್ನನ್ನು ಅಗ್ರಪಟ್ಟಾಧಿಕಾರಿಯಾಗಿ ಮಾಡುವ ಬಗ್ಗೆ ಅವಳು ನನ್ನ ಪರವಾಗಿ ವಾದಿಸಲಿಲ್ಲ. ಎರಡನೆಯದು, ಇಷ್ಟರಲ್ಲೇ ನಾವು ಒಪ್ಪಂದದ ಮಥಿತಾರ್ಥವನ್ನು ಕಂಡು ಹಿಡಿದೇ ತೀರುತ್ತೇವೆ)

ಹಾರವತಿಯ ಗಡಿಗಳಲ್ಲಿ, ಖಟೋಲಿ ಎಂಬ ಹಳ್ಳಿಯ ಹತ್ತಿರ, ದೆಹಲಿ ಮತ್ತು ಮೇವಾಡದ ಸೇನಾ ಪಡೆಗಳು ಮುಖಾಮುಖಿಯಾಗಿ ಸೆಣಸಿದವು. ಯುದ್ಧ ಐದು ಗಂಟೆಗಳ ಕಾಲ ನಡೆಯಿತು. ಕೊನೆಯಲ್ಲಿ ಪರಾಕ್ರಮದ ಹೆಚ್ಚು ಭಾಗ ಪಲಾಯನವೇ

ಎಂದು ದೆಹಲಿ ಸೇನೆ ನಿರ್ಧರಿಸಿ ಕಾಲ್ತೆಗೆಯಿತು. ತಂದೆಯವರು ಇಬ್ರಾಹಿಂ ಲೂದಿಯ ರಾಜಕುಮಾರನೊಬ್ಬನನ್ನು ಕೈದಿಯಾಗಿ ಸೆರೆಹಿಡಿಯುವಷ್ಟು ವ್ಯಾವಹಾರಿಕ ಜಾಣ್ಮೆ ತೋರಿಸಿದ್ದರು. ಸುಲ್ತಾನನು ಖೈದಿಯ ಬಿಡುಗಡೆಗಾಗಿ ಸ್ವಲ್ಪ ಹಣವನ್ನು ತೆತ್ತ ಮೇಲೆ ರಾಜಕುಮಾರನನ್ನು ಬಿಡುಗಡೆಗೊಳಿಸಲಾಯಿತು. ಅದರಿಂದ ಮೇವಾಡವು ಉಳಿಕೆ ವರ್ಷದಲ್ಲಿ ಹಬ್ಬದ ಸಂಭ್ರಮವನ್ನು ಆಚರಿಸದೆ ಇರಬಹುದು, ಆದರೆ ಕಾಲ ಕಾಲಕ್ಕೆ ನಾವು ನೆಮ್ಮದಿಯಿಂದ ಉಣ್ಣಬಹುದೆಂಬ ಭರವಸೆ ಉಂಟಾಯಿತು.

* * *

ಷಫಿಯ ಗ್ರಂಥಕ್ಕೆ ನಾನು ಬರೆಯುತ್ತಿದ್ದ ಇನ್ನೂರಾ ಏಳು ಪುಟಗಳ ಪ್ರಸ್ತಾವನೆಗೆ ಅಂತಿಮ ರೂಪುಕೊಡುತ್ತಿದ್ದೆ. ಆಗ ಯಾರೋ ಬಾಗಿಲು ತಟ್ಟಿದರು. ಯಾವ ಸೇವಕ ಬಾಗಿಲು ತಟ್ಟುತ್ತಿದ್ದನೋ ಅವನು ನಿಜಕ್ಕೂ ತನ್ನ ಜೀವಮಾನದ ಕೊನೆಯ ಚೀರಾಟಕ್ಕೆ ಸಿದ್ಧನಾಗಿರಬೇಕಿತ್ತು.

'ಒಳಗೆ ಬಾ' ಬಾಗಿಲು ತೆರೆದುಕೊಂಡಿತು. "ಏನಂದರೆ"

ಹಾಗೆ... ಒಳಗೆ ಬಂದವಳು, ಸ್ನಾನಾನಂತರ ಅತ್ಯಂತ ಉಲ್ಲಸಿತಳಾಗಿ ಕಾಣುತ್ತಿದ್ದ ನನ್ನ ಹೆಂಡತಿ. ಅವಳ ಕಣ್ಣುಗಳು ಹೊಳೆಯುತ್ತಿದ್ದುವು. ಇನ್ನೇನು ಭಯಂಕರವಾದ ತುಂಟತನ ಮಾಡಲು ಹೊರಟಿದ್ದಾಳಿವಳು?

"ನಿಮ್ಮ ಸಲುವಾಗಿ ನಾನು ಹೇಳ ಹೊರಟಿದ್ದ ವಾಕ್ಯವನ್ನು ಪೂರ್ತಿ ಮಾಡಲೆ?"

"ಬೆಳಗಿನ ಏಳೂವರೆಯಿಂದ ಹನ್ನೆರಡೂವರೆಯುವರೆಗೂ ನನಗೆ ತೊಂದರೆ ಕೊಡಬಾರದೆಂದು ನಿನಗೆ ಚೆನ್ನಾಗಿ ಗೊತ್ತಿದೆ"

"ತುರ್ತು ಸಮಯದಲ್ಲಿ ಕೂಡ ತೊಂದರೆ ಕೊಡಕೂಡದೆ?"

"ಏನಾಗಿದೆ?"

"ನಿಮಗೆ ಸಿಕ್ಕಿತು, ನನಗೆ ಸಿಕ್ಕಲಿಲ್ಲವೆ? ನೀವು ಅಂಥಾ ವಿಘ್ನ ಸಂತೋಷಿಯೆ. ಹದಿನೆಂಟು ತಿಂಗಳಿಗೊಮ್ಮೆ ನಿಮ್ಮ ದಿನ ನಿತ್ಯದ ಕಾರ್ಯಕಲಾಪವನ್ನು ಹಾಳುಗೆಡವಲು ನನಗೆ ಅವಕಾಶ ನೀಡಲಾಗುತ್ತದೆ"

"ಸಾಧ್ಯವಿಲ್ಲ".

"ಏಳಿ ಹೊರಡಿ ನಿಮ್ಮೊಂದಿಗೆ ನಾನು ರಣಕ್‌ಪುರಕ್ಕೆ ಧಾವಿಸುವೆ"

"ನಾನು ನಾಗಾಲೋಟದಲ್ಲಿ ಸ್ಪರ್ಧೆ ನೀಡುತ್ತೇನೆ"

"ಬಹಳ ತಮಾಷೆಯಾಗಿದೆ. ಏಳಿ ಹಾಗಿದ್ದರೆ ಮಂಗಳ್ ಮತ್ತು ಮಮತಾ ಇಬ್ಬರೂ ಅಂಗಳದಲ್ಲಿ ಕಾಯ್ತಿದ್ದಾರೆ"

'ನೀನು....' ನಾನು ಮತ್ತೆ ಅಲ್ಲಿಗೆ ಮೊಟಕುಗೊಳಿಸಿದೆ. ನಾನು ಏಕ ಪ್ರತ್ಯುತ್ತರವಾದಿಯಾಗಿದ್ದೆ. ಪ್ರತಿ ಸಲವೂ ನನ್ನ ಹೆಂಡತಿ ಅವಳ ಆಶು ಯೋಜನೆಗಳಲ್ಲೊಂದನ್ನು ಹೇಳುತ್ತಿದ್ದಳು. ಬೇರಾವುದೂ ಅವಳ ಬಳಿ ಇರುತ್ತಿರಲಿಲ್ಲ. ನನ್ನ ಪ್ರತಿಕ್ರಿಯೆ, ನಿನಗೇನು ಹುಚ್ಚು ಹಿಡಿದಿದೆಯೆ ಎಂದು. ಅವಳು ಹುಟ್ಟಿರುವುದೇ ಹಾಗೆ ಎಂದು ಇದುವರೆಗೆ ನನಗೆ ಗೊತ್ತಾಗಿರಲಿಲ್ಲವೆ? ಇವಳಿಗೆ ಹುಚ್ಚು ಹಿಡಿದಿದೆ ಎಂದು ಅಧಿಕೃತವಾಗಿ ಒಪ್ಪಬಹುದಾದವಳು. ಅದೊಂದು ರೀತಿಯಲ್ಲಿ ಒಬ್ಬರಿಂದ ಒಬ್ಬರಿಗೆ ಅಂಟುವಂಥ ಹುಚ್ಚುತನ. ಮಂಗಳ್, ನಾನು ಮಮತಾ ಮೂವರೂ ಅದರ ಮುಂದುವರಿದ ಲಕ್ಷಣಗಳಿಂದ ನರಳುತ್ತಿದ್ದೆವು.

"ನಾವು ಹೇಗೆ ಹೋಗುತ್ತಿದ್ದೇವೆ"

"ಕುದುರೆಯ ಬೆನ್ನೇರಿ. ಇನ್ನು ಯಾವ ರೀತಿ ?"

"ನೀವು ಕುದುರೆ ಓಡಿಸ್ತೀರಾ?"

"ಇಲ್ಲ. ನೀನು ಓಡಿಸ್ತೀಯಾ?"

"ಅದರಲ್ಲಿ ನಿಮ್ಮನ್ನು ಮೀರಿಸ್ತೀನಿ"

"ನೀನು ಸೋತರೆ ನನಗೇನು ಸಿಕ್ಕುತ್ತೇ?"

"ನನ್ನ ಬಳೆಗಳು"

"ಅವು ನನ್ನ ಹತ್ತಿರ ಇವೆ. ಇಸ್ಪೀಟಾಟದಲ್ಲಿ ಅವುಗಳನ್ನು ನೀನು ನನಗೆ ಸೋತೆ. ನೆನಪಿದೆಯಾ?"

"ನೀವು ಮೋಸ ಮಾಡಿದಿರಿ"

"ನೀನು ಮಾತಾಡಬೇಕು"

ಎಂದಿನಂತೆ ಅವಳು ಪ್ರಶ್ನೆಯನ್ನು ಮತ್ತೆ ನನ್ನ ಕಡೆ ತಿರುಗಿಸಿದಳು.

"ನೀವೇನು ಪಣ ಇಡುತ್ತಿದ್ದೀರಿ?"

ನಾನು ಕಿಟಕಿಯ ಆಚೆ ನೋಡಿದೆ. 'ಪಾರಿಜಾತದ ಹೂಗಳು'.

ಅವಳು ಬಹಳ ಹೊತ್ತು ನನ್ನ ಕಡೆ ಪ್ರಶ್ನಾರ್ಥಕವಾಗಿ ಒಂದೇ ಸಮನೆ ನಿಟ್ಟಿಸಿ ನೋಡಿದಳು. ಆಮೇಲೆ ಮರದ ಕಡೆ ನೋಡಿದಳು. ಆ ಮರ ಪ್ರತಿ ದಿನವೂ ಬೆಳಿಗ್ಗೆ ಕೆಂಪು ತೊಟ್ಟಿನ ಹೂಗಳನ್ನು ನೆಲದ ಮೇಲೆಲ್ಲಾ ಉದುರಿಸುತ್ತಿತ್ತು.

"ನನಗೆ ತಿಳಿದಿರುವ ಅತ್ಯಂತ ಉದಾರಿ ಮನುಷ್ಯರು ನೀವು. ಕದಲಬೇಡಿ. ನಿಮಗೆ ದೃಷ್ಟಿ ತೆಗೀತೀನಿ. ಅಲ್ಲಾಡದೆ ಕೂತುಕೊಳ್ಳಿ ಅಂತ ನಾನು ಹೇಳಿದೆ. ಯಾರಾದರೂ ನಿಮ್ಮ ಮೇಲೆ ತಮ್ಮ ಕೆಟ್ಟ ದೃಷ್ಟಿ ಬೀರುವುದು ನನಗಿಷ್ಟವಿಲ್ಲ"

ಬಹಳ ದೀರ್ಘ ಸಮಯದಿಂದ ನನ್ನ ಹೆಂಡತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನಾನು ನಿಲ್ಲಿಸಿದ್ದೇನೆ. ಅವಳು ಎರಡು ತಟ್ಟೆಗಳನ್ನು ತಂದಳು. ಒಂದರಲ್ಲಿ ಉರಿಯುವ ಕೆಂಡ, ಇನ್ನೊಂದರಲ್ಲಿ ಉಪ್ಪು, ಕೆಂಪು ಮೆಣಸಿನ ಕಾಯಿ ಹಾಗೂ ಇನ್ನಿತರೆ ಸಲಕರಣೆಗಳಿದ್ದುವು. ನನಗೆ ಕಣ್ಣು ಮುಚ್ಚಿಕೊಳ್ಳಲು ಹೇಳಿದಳು. ಅವಳು ತನ್ನ ಬಿಗಿದ ಮುಷ್ಟಿಯನ್ನು ನನ್ನ ತಲೆಯ ಬಳಿ ಹಿಂದಕ್ಕೂ ಮುಂದಕ್ಕೂ ಆಡಿಸಿದಂತೆ ಗಾಳಿ ನನ್ನ ಮುಖದ ಬಳಿ ಸುಂಯ್ ಗುಟ್ಟುವ ಲೊಚಗುಟ್ಟುವ ಸದ್ದು ಕೇಳಿಸಿತು. ಬಾಯಲ್ಲಿ ಏನೋ ಮಣಮಣ. ಅಂತ ಗೊಣಗಿದಳು. ತನ್ನ ಮುಷ್ಟಿಯನ್ನು ತೆರೆದು ಅದರಲ್ಲಿದ್ದುದನೆಲ್ಲ ನೆಲದ ಮೇಲಿಟ್ಟಿದ್ದ ತಟ್ಟೆಯಲ್ಲಿ ಹಾಕಿದಳು. ಅವು ಜೋರಾಗಿ ಕೋಪದಿಂದ ಚಟಚಟ ಎಂದು ಬಿರಿದು ಸಿಡಿದವು.

"ನಾನು ಕಣ್ಣು ತೆರೆಯಬಹುದೆ?"

"ನಿಮ್ಮ ಶತ್ರುಗಳಿಗೆ ಭಯಂಕರ ಮರಣ ಬರಲಿ" ಅವಳು ಸಿಟ್ಟಿನಲ್ಲಿದ್ದಳು. ಕೆಂಡದ ಮೇಲೆ ಹಾಕಿದ ವಸ್ತುಗಳು ಇನ್ನೂ ಜೋರಾಗಿ ಸಿಡಿಯುತ್ತಲೇ ಇದ್ದುವು. "ನೋಡಿ ನೋಡಿ ನಿಮಗೆ ಎಷ್ಟೆಲ್ಲ ಕೆಟ್ಟದ್ದಾಗಲಿ ಅಂತ ಅವರು ಬಯಸುತ್ತಿದ್ದಾರೆ. ನನ್ನನ್ನೇ ನಾನು ಬಯ್ದುಕೊಳ್ಳಬೇಕು. ನಾನು ತುಂಬ ಹಿಂದೆಯೇ ಉಗ್ರವಾಗಿ ಕ್ರಮ ಕೈಗೊಳ್ಳಬೇಕಾಗಿತ್ತು.

ನೀವು ನೋಡ್ತಾ ಇರಿ ಮಹಾಸ್ವಾಮಿ, ಇನ್ನು ಮೇಲೆ ಮಹಾರಾಜರಿಗೂ ನಿಮ್ಮಗೂ ಮಧ್ಯೆ ಯಾರೂ ಬರೋದಿಲ್ಲ. ನಾನು ನಿಮ್ಮ ನಿಗಾ ವಹಿಸ್ತೀನಿ. ನಿಮ್ಮ ಶತ್ರುಗಳನ್ನೆಲ್ಲಾ ನಿರ್ನಾಮ ಮಾಡ್ತೀನಿ."

ಓ ದೇವರೆ, ತಾನು ಯಾರನ್ನು ಮೊದಲು ನಿರ್ನಾಮ ಮಾಡಬೇಕಾಗಿದೆ ಅಂತ ಅವಳಿಗೆ ಗೊತ್ತಿತ್ತೇ?

* * *

ನಾವು ವೇಷ ಮರೆಸಿಕೊಂಡು ಪ್ರಯಾಣಿಸುತ್ತಿದ್ದೆವು. ಹಸುರು ಕಣ್ಣಿನ ಚೆಲುವೆ ರಾಜಕುಮಾರಿ, ನಮಗೆಲ್ಲ ಪಯಣದ ಬುತ್ತಿಯನ್ನು ಕಟ್ಟಿಕೊಂಡಿದ್ದಳು. ರಾಜ್ಯಪಾಲನಿಗೆ ನಮ್ಮ ಕೊನೇಗಳಿಗೆಯ ಹಂಚಿಕೆಯನ್ನು ತಿಳಿಸಿದ್ದೆನು. ಅವನು ಕಿಂಚಿತ್ ವಿಚಲಿತನಾದನು. ತಂದೆಯವರು ಇದನ್ನು ಒಪ್ಪುವರೆ? ನಮ್ಮ ಪ್ರವಾಸ, ನಾವು ಹೊರಗೆ ತೋರಿಸಿಕೊಂಡಷ್ಟು ಭೋಳೆಯಾಗಿತ್ತೆ? ನಮಗೇನಾದರೂ ಆದರೇನು ಗತಿ? ಗುಪ್ತ ವೇಷವೇಕೆ? ರಾಜಕುಮಾರಿ ಮತ್ತು ಮಮತಾ ನಮ್ಮೊಂದಿಗೆ ಕುದುರೆಯೇರಿ ಬರುತ್ತಿರುವ ಬಗ್ಗೆ ಅವನು ಸಂದಿಗ್ಧದಲ್ಲಿದ್ದನು. ನಾವು ನಮ್ಮ ಪತ್ನಿಯರೊಂದಿಗೆ ಹೋಗುತ್ತಿರುವುದರಿಂದ, ನಾವು ಹೆಚ್ಚು ಹಾವಳಿ ಮಾಡಲಾರೆವು ಎನ್ನುವುದು ಅವನಿಗೆ ಧೈರ್ಯ ಉಂಟು ಮಾಡುತ್ತಿತ್ತು. ಆದರೆ ಹೀಗೆ ಒರಟೊರಟಾಗಿ ಯಾವುದೇ ಸೌಕರ್ಯಗಳಿಲ್ಲದೆ ಹೋಗುವ ಬದಲು ಪಲ್ಲಕ್ಕಿಗಳಲ್ಲಿ ಕರೆದೊಯ್ಯುವುದಂತಿದ್ದರೆ ಚೆನ್ನಿತ್ತು. ಅವನ ಮನಸ್ಸಿಗೆ ನಿರಾತಂಕವುಂಟು ಮಾಡಿದ ಸಂಗತಿಯೆಂದರೆ ಅವನ ಕಡೆಯ ನಾಲ್ಕು ಮಂದಿ ನಮಗಿಂತ ಮುಂದಾಗಿಯೇ ಹೋಗಿ ನಮಗೆ ಶಿಬಿರಗಳನ್ನು ಸಿದ್ಧಪಡಿಸಬೇಕೆಂದು ನಾನು ಕೋರಿದ್ದು. ಹೇಗೇ ಆದರೂ ನಮ್ಮ ಮೇಲೆ ನಿಗಾವಹಿಸಲು ಯಾರನ್ನಾದರೂ ಕಳಿಸಲೇಬೇಕಾಗಿತ್ತು. ಅವರನ್ನೇ ಸಣ್ಣ ಪುಟ್ಟ ಕೆಲಸಕ್ಕೆ ಬಳಸಿಕೊಳ್ಳಬಹುದು ಎಂಬುದು ನನ್ನ ಸರಳ ತರ್ಕ.

ಕುಂಭಲ್‌ಗರ್ ಮತ್ತು ರಣಕ್‌ಪುರಗಳ ನಡುವಿನ ಹಾದಿ ಗುಡ್ಡಗಾಡು ಪ್ರದೇಶದಿಂದ ಕೂಡಿದ್ದು, ದಟ್ಟ ಕಾಡಿನಿಂದ ತುಂಬಿತ್ತು. ವೈಶಾಖಕ್ಕೆ ಇನ್ನೂ ಹಲವಾರು ತಿಂಗಳುಗಳೇ ಇದ್ದರೂ ಸೂರ್ಯನು ತನ್ನ ಪೂರ್ಣ ಪ್ರಖರತೆಯಿಂದ ಬೆಳಗುತ್ತಿದ್ದನು. ಅದು ಅರಾವಳಿ ಪರ್ವತಗಳ ಬಂಡೆಗಳು, ಕಾವಲಿಯ ಮೇಲಿನ ಕೊಬ್ಬು ಕಾಯುವಂತೆ ಕಾಯುವ ಸಮಯ. ನಾವು ಸುಮಾರು ಎರಡು ಗಂಟೆಗಳ ಕಾಲ ಸಾಗಿರಬಹುದು. ಬೇಫಿಕೀರ್‌ನನ್ನು ನಾನು ಈ ದಿನವೇ ಏಕೆ ಆಯಾಸಗೊಳಿಸಲಿ, ಅವನ ಶಕ್ತಿಯನ್ನು ಅಂತಿಮ ಮಹಾ ಸಾಹಸಕ್ಕೆ ಕಾಪಿಡುವೆನು. ಕಾರಣ ರಾಜಕುಮಾರಿಯ ಕುದುರೆ ನಮ್ಮ ಕುದುರೆಗಿಂತ ಮುಂದೆ ಸಾಗುತ್ತಿತ್ತು. ಆಗ ರಾಜಕುಮಾರಿ ತನ್ನ ಬಲಗೈ ಮೇಲೆತ್ತಿ ನಮ್ಮನ್ನು ನಿಲ್ಲುವಂತೆ ಮಾಡಿದಳು. ಎಲ್ಲರಿಗೂ ಆಶ್ಚರ್ಯವಾಗುವಂತೆ ಆಕೆ ಮಂಗಳನ ಕಡೆಯಿಂದ ಬಿಲ್ಲು ಮತ್ತು ಬಾಣವನ್ನು ಪಡೆದುಕೊಂಡಳು. ತನ್ನ ಕುದುರೆಯ ಕುತ್ತಿಗೆಯ ಮೇಲೆ ತಟ್ಟುತ್ತಾ ಅದನ್ನು ಶಾಂತಗೊಳಿಸಿದಳು. ಹುಲಿಯೋ ಸಿಂಹವೋ ಅವಳ ಕಣ್ಣಿಗೆ ಬಿದ್ದಿತ್ತೆ? ಈ ಹೊತ್ತಿನಲ್ಲಿ ಅದು ಅಸಂಭವ. ಅಸಾಧ್ಯವಂತೂ ಅಲ್ಲ. ಹಾಗೆ ನೋಡಿದರೆ, ಈ ಪ್ರದೇಶ ಬೇಟೆಯ ನಾಡು. ಮಂಗಳನು ತನ್ನ ಭಲ್ಲೆಯನ್ನು ಸಿದ್ಧವಾಗಿಟ್ಟುಕೊಂಡನು. ನಾನು ನನ್ನ ಬಿಲ್ಲು ಮತ್ತು ಬಾಣವನ್ನು ಸಿದ್ಧವಾಗಿಟ್ಟುಕೊಂಡೆನು. ರಾಜಕುಮಾರಿ ನೇರವಾಗಿ ಮತ್ತು ಸ್ಥಿರವಾಗಿ ಕುಳಿತಳು. ಅನಂತರ, ಬಿಲ್ಲಿಗೆ ಬಾಣವನ್ನು ಹೂಡಿ ಬಿಟ್ಟಳು. ರಸ್ತೆಯ ಎಡ ಭಾಗದಲ್ಲಿ ಮುಂದೆ, ಹುಲ್ಲು ಹಸಲೆಯ ಮೇಲೆ ಕಡವೆಗಳ ಒಂದು ಹಿಂಡು ಮೇಯುತ್ತಿತ್ತು. ಗಂಡು ಜಿಂಕೆಯೊಂದು ಎಷ್ಟು ತೂಕವಿರುತ್ತದೆಂದು ಅವಳಿಗೆ ತಿಳಿದಿತ್ತೆ? ಒಂದು ವೇಳೆ

ಗಂಡು ಜಿಂಕೆ ಗಾಯಗೊಂಡು, ಸಾಯದೆ ಉಳಿದರೆ, ಅದು ಅವಳ ಮೇಲೆ ನುಗ್ಗಿ ಅವಳನ್ನೂ ಅವಳ ಕುದುರೆಯನ್ನೂ ನೇರವಾಗಿ ಸ್ವರ್ಗಕ್ಕೆ ಕಳಿಸಬಹುದು.

ಅವಳು ಯಾಕಾಗಿ ಕಾಯುತ್ತಿದ್ದಾಳೆ.

ಅದು ಬಹಳ ಬೇಗನೆ ಸ್ಪಷ್ಟವಾಯಿತು. ಅವಳು ಹೆಚ್ಚು ಕಡಮೆ ಇಲ್ಲದಂತೆ ಆಗಬೇಕೆಂದು ಬಯಸಿದ್ದಳು. ಅವಳಿಗೆ ಅದನ್ನು ಗಾಯಗೊಳಿಸುವ ಅಥವಾ ಕೊಲ್ಲುವ ಅವಕಾಶ ಇದ್ದಲ್ಲಿ ಮಾತ್ರ ಅವಳು ಅದರ ಮೇಲೆ ಬಾಣ ಬಿಡುವಳು. ಜಿಂಕೆಗಳ ಜಾತಿಯಲ್ಲೆಲ್ಲಾ ಗಂಡು ಜಿಂಕೆಯೇ (ಬಾರಾಸಿಂಗ) ನನಗೆ ತುಂಬ ಪ್ರಿಯವಾದ್ದು. ಅದನ್ನೊಮ್ಮೆ ನೋಡಿದರೆ ಸಾಕು. ರಾಜಕುಮಾರಿ ಅದೇ ಕಾರಣಕ್ಕೆ ಅದನ್ನು ಆಯ್ಕೆ ಮಾಡಿದಳು. ಹನ್ನೆರಡು ಕೊಂಬುಗಳ, ಆ ಕಡವೆ, ತನ್ನ ಗುಂಪಿನ ಇತರೆ ಎಲ್ಲಾ ಜಿಂಕೆಗಳಿಗಿಂತ, ತನ್ನ ತಲೆ ಮತ್ತು ಭುಜವನ್ನು ಅಕ್ಷರಶಃ ಮೇಲೆತ್ತಿ ನಿಂತು ಕೊಂಡಿತು. ಅದರ ಬಣ್ಣವಾದರೋ ಕೆಂಗಂದಿನ ಸುವರ್ಣವರ್ಣ. ಕತ್ತಲಲ್ಲೂ ಅದು ಒಂದು ಪ್ರಭಾವಲಯದ ಹಾಗೆ ಆ ಜಿಂಕೆಯ ಸುತ್ತ ಹೊಳೆಯುತ್ತಿರುತ್ತದೆ. ಅದು ಕೊಂಬುಗಳನ್ನು ಬಿಟ್ಟು ಕಡೇ ಪಕ್ಷ ಐದು ಅಡಿ ಎತ್ತರವಿತ್ತು. ಅದು ಸಪೂರವಾಗಿ, ದೃಢವಾಗಿ, ಕಿಂಚಿತ್ತೂ ಕೊಬ್ಬಿಲ್ಲದ ಪ್ರಾಣಿ. ಅದರ ಕಾಲಿನ ಸ್ನಾಯು ರಜ್ಜುಗಳು, ಉಕ್ಕಿನ ತಂತಿಗಳಿಂದ ಆಗಿದ್ದುವು. ಅವಕ್ಕೆ ಮೂರು ನಿರ್ದಿಷ್ಟವಾದ ಕೆಲಸಗಳಿದ್ದುವು. ಹಠಾತ್ ಧಾಳಿ ಮಾಡುವುದು, ತನ್ನ ಗುಂಪು ಅಪಾಯದಲ್ಲಿದ್ದರೆ, ತನ್ನ ಬಳಗವನ್ನೆಲ್ಲ ಒಟ್ಟು ಗೂಡಿಸಿಕೊಂಡು ಹಿಮ್ಮೆಟ್ಟುವುದು ಮತ್ತು ತನ್ನ ಅಧಿಕಾರವನ್ನು ಕಸಿಯುವ ಸ್ಪರ್ಧಿ ಯಾರಾದರೂ ತನ್ನೊಂದಿಗೆ ಘರ್ಷಣೆಗೆ ಇಳಿದಾಗ ನೆಲಕ್ಕೆ ಭದ್ರವಾಗಿ ಕಚ್ಚಿಕೊಳ್ಳುವುದು. ಅದಕ್ಕೆ ಗುಜರಾತಿ ಕುಸ್ತಿಪಟುವಿನಂತೆ ಜೋಡು ಕೊಳವೆಯ ತೊಡೆಗಳಿವೆ. ತನ್ನ ಮೈ ಮೇಲೆ ಕುಳಿತುಕೊಂಡಿರುವ ನೊಣವನ್ನು ಓಡಿಸಲು, ಪ್ರತಿ ಆಗೊಮ್ಮೆ ಈಗೊಮ್ಮೆ ತನ್ನ ಮೈ ಚರ್ಮವನ್ನು ಜಗ್ಗುವುದು. ಬೇರೆಲ್ಲದರಿಂದಲೂ ಅದನ್ನು ಬೇರೆಯಾಗಿಟ್ಟಿರುವುದೆಂದರೆ ಅದರ ಕಣ್ಣುಗಳು. ಅವು ತೀಕ್ಷ್ಣವಾದ ಬುದ್ಧಿ ಉಳ್ಳವು. ಎಂದಿನ ಆದರೆ, ಅತ್ಯಂತ ಜಾಗರೂಕವಾದ ಪಹರೆ ಮಾಡುತ್ತಿದ್ದುವು. ಅವು ಪ್ರತ್ಯೇಕವಾಗಿ ಮತ್ತು ಸೊಕ್ಕಿನಿಂದಿರುತ್ತಿದ್ದವು. ಅವು ಅಷ್ಟೆಲ್ಲ ಹೇಳುತ್ತಿದ್ದವು. ಹೆಚ್ಚೇನೂ ಇಲ್ಲ. ಅವುಗಳ ಸಂದೇಶವಂತೂ ಸ್ಪಷ್ಟ, ನನ್ನೊಂದಿಗೆ ಹಗುರವಾಗಿ ನಡೆದುಕೊಳ್ಳಬೇಡ.

ಅದು ರಾಜಕುಮಾರಿಯತ್ತ ಬಹಳ ಹೊತ್ತಿನ ತನಕ ಒಂದೇ ಸಮನೆ ದಿಟ್ಟಿಸಿ ನೋಡಿತು. ಆಮೇಲೆ ಇದನ್ನು ಮನಸ್ಸಿನಿಂದ ತೆಗೆದು ಹಾಕಿದ್ದೇನೆ ಎನ್ನುವ ಹಾಗೆ ತಲೆಯನ್ನು ಅಲ್ಲಾಡಿಸಿತು. ನನ್ನವರನ್ನು ಅವರ ಪಾಡಿಗೆ ಅವರನ್ನು ನೀನು ಬಿಟ್ಟಿರುವರೆಗೂ ನೀನೇನು ಮಾಡುವೆಯೋ ಅದು ನಿನ್ನ ಕೆಲಸ. ಒಂದು ನಿಮಿಷ ಹುಲ್ಲನ್ನು ಮೆಯ್ದು ಮತ್ತೆ ತಲೆ ಎತ್ತಿ ನೋಡಿತು. ಈ ಬಾರಿ ಅದಕ್ಕೆ ದಾರಿಯ ಮಧ್ಯೆ ಆ ಹೆಂಗಸು ತನಗಾಗಿ ಕಾಯುತ್ತಿದ್ದಾಳೆ ಎಂಬುದು ಗೊತ್ತಾಯಿತು. ಭಯಂಕರ ಸಿಟ್ಟಿನಿಂದ, ತನ್ನ ಶಕ್ತಿ ಪ್ರದರ್ಶನದ ದ್ಯೋತಕವಾಗಿ ಅದು ತನ್ನ ಪಂಜದಿಂದ ನೆಲವನ್ನು ಕೆರೆಯಿತು. ಈಕೆಗೆ ಬುದ್ಧಿ ಬಂದು ತನ್ನ ಪಾಡಿಗೆ ತನ್ನನ್ನು ಬಿಟ್ಟು ಹೋದಾಳು ಎಂಬುದೂ ಅದರ ನಿರೀಕ್ಷೆಯಾಗಿತ್ತು. ಇದರಿಂದ ತಾನು ಮುಂದೆ ಏನು ಮಾಡಬೇಕು ಎಂದು ತೀರ್ಮಾನಿಸುವುದಕ್ಕೂ ಅದಕ್ಕೆ ಒಂದೆರಡು ಕ್ಷಣ ಕಾಲಾವಕಾಶ ಸಿಕ್ಕಿತು. ಅವಳು ಈಗಲೂ ಅದರ ಪ್ರತಿಯೊಂದು ಚಲನವಲನವನ್ನು ಎಚ್ಚರದಿಂದ ಗಮನಿಸುತ್ತಿದ್ದಳು. ತಾನೇ ಅವಳ ಗುರಿ ಎಂಬುದು ಅದಕ್ಕೀಗ ಸ್ಪಷ್ಟವಾಯಿತು. ಅದು ಮಾಡಬಹುದಾದ ಕನಿಷ್ಠ ಕಾರ್ಯವೆಂದರೆ, ತಾನು ಅಲ್ಲಿಂದ ಚಲಿಸುವುದು. ಅದು ಮಿತಿಮೀರಿ ಓಡಲು ಪ್ರಾರಂಭಿಸಿತು. ಮುಂಗಾಲುಗಳನ್ನು ಮಡಿಸಿಕೊಂಡು, ಇಡೀ

ದೇಹ ಸಮೇತ ಹಿಂಗಾಲುಗಳನ್ನು, ತಾನು ತಪ್ಪಿಸಿಕೊಳ್ಳಲೆಳಸಿದ ಬಾಣದ ಹಾಗೆ ನೇರಮಾಡಿಕೊಂಡು ಅದು ಓಡ ತೊಡಗಿದ್ದೊಂದು ತುಂಬ ಮನೋಹರ ದೃಶ್ಯವಾಗಿತ್ತು. ಅದೊಂದು ತುಂಬ ಚುರುಕಾದ ಓಟ. ಸದ್ಯ ಸನ್ನಿಹಿತವಾಗಿರುವ ಅಪಾಯದ ಬಗ್ಗೆ ತನ್ನವರನ್ನೆಲ್ಲಾ ಎಚ್ಚರಿಸಿತ್ತು. ಈಗ ಅವು ಎಡದಿಂದ ಬಲಕ್ಕೆ ಮುನ್ನುಗ್ಗಿದುವು. ವೇಗವಾಗಿ ಓಡುತ್ತಿರುವ ಆ ಜಿಂಕೆಯನ್ನು ಸರಿಯಾಗಿ ತನ್ನ ನೋಟದ ಕೇಂದ್ರದಲ್ಲಿಟ್ಟುಕೊಂಡು ನನ್ನ ಹೆಂಡತಿ ನಿಂತ ಜಾಗದಲ್ಲೇ ನೂರೆಂಬತ್ತು ಕೋನಗಳೆಷ್ಟು ತಿರುಗಿದರೂ ಅವಳು ನಿಶ್ಚಲಳಾಗಿದ್ದಂತೆ ಕಂಡಿತು. ಅವಳ ಬೆನ್ನು ಮೂಳೆಯಲ್ಲಾಗಲಿ, ಕುತ್ತಿಗೆಯಲ್ಲಾಗಲಿ ಅವಳ ತೋಳಿನ ಮಾಂಸಖಂಡಗಳಲ್ಲಾಗಲಿ ಜಡತ್ವವಿರಲಿಲ್ಲ. ಕಿವುಡುಗೊಳಿಸುವಂಥ ಗುಡುಗು ಮತ್ತು ಧೂಳೆಬ್ಬಿಸಿದ ಬಿರುಗಾಳಿ ನೋಟವನ್ನು ಮಸುಕುಗೊಳಿಸಿತು. ಈಗ ಅದು ದೃಷ್ಟಿಗೆ ಅತೀತವಾಗಿತ್ತು. ಅವಳು ಕಾದಳು. ಅದು ತಾನು ಹಿಂದಿರುವುದಕ್ಕೆ ಮೂರು– ಕಾಲು ತಿರುವುಗಳನ್ನು ತೆಗೆದುಕೊಂಡಿತು. ಅದು ತನ್ನ ವೇಗವನ್ನು ಮತ್ತೂ ಹೆಚ್ಚಿಸಿತು. ಬಿಲ್ಲಿನ ಹೆದೆಯನ್ನೆಳೆದ ಸದ್ದು ಕೇಳಿಸಿಯೂ ಕೇಳಿಸದಂತಿತ್ತು. ಬಾಣವಂತೂ ಕಣ್ಣಿಗೆ ಕಾಣಿಸಲೇ ಇಲ್ಲ. ಸುಮಾರು ಇನ್ನೂರು ಜಿಂಕೆಗಳ ಇಡೀ ಗುಂಪು ಅಲ್ಲಿಂದ ಕಣ್ಮರೆಯಾಗಿ ದೂಳು ತಗ್ಗುವವರೆಗೂ ಕಾದೆವು. ಜಿಂಕೆ ಪಕ್ಕಕ್ಕೊರಗಿ ಮಲಗಿತ್ತು. ರಾಜಕುಮಾರಿ ಬಿಟ್ಟ ಬಾಣ ಅದರ ಹೃದಯವನ್ನು ಭೇದಿಸಿತ್ತು. ಅದು ಕೂಡಲೇ ಪ್ರಾಣ ಬಿಟ್ಟಿತ್ತು.

"ಆ ರೀತಿ ಬಾಣ ಬಿಡುವುದನ್ನು ಎಲ್ಲಿ ಕಲಿತಿರಿ ಮಹಾರಾಣಿಯವರೆ" ರಾಜಕುಮಾರಿ ಜಿಂಕೆಯ ಮೈಗೆ ನಾಟಿದ್ದ ಬಾಣವನ್ನು ಕೀಳುತ್ತಿರುವಾಗ ಮಂಗಳನು ಕೇಳಿದನು. "ಅಯ್ಯೋ ಅದೆಲ್ಲೋ ಅಕಸ್ಮಾತ್ತಾಗಿ ಬಂತು". ರಾಜಕುಮಾರಿ ತನ್ನನ್ನು ತಾನೆ ಕಡೆಗಣಿಸಿಕೊಳ್ಳುತ್ತ ಹೇಳಿದಳು.

"ಇದು ಅಕಸ್ಮಾತ್ತಾಗಿ ಬಂದದ್ದಲ್ಲ"

"ನನ್ನ ಮಾವ ಕಲಿಸಿಕೊಟ್ಟರು". ಎಲ್ಲರ ಗಮನ ತನ್ನ ಕಡೆ ಹರಿದದ್ದಕ್ಕೆ ಆಕೆ ಸಂಕೋಚಗೊಂಡಳು.

"ನಾವು ಇದರ ಒಂದು ಕಾಲನ್ನುಳಿಸಿಕೊಂಡು ಉಳಿದದ್ದನ್ನು ಹತ್ತಿರದ ಹಳ್ಳಿಯವರಿಗೆ ಕೊಟ್ಟು ಬಿಡೋಣ"

ಯಾರನ್ನೇ ಆಗಲಿ ಭೇಟಿಯಾಗಲು, ನನಗೆ, ಹೆಚ್ಚಿನ ಉತ್ಸಾಹವಿರಲಿಲ್ಲ. ಹಳ್ಳಿಯವರು ನನ್ನನ್ನು ಗುರುತು ಹಿಡಿಯುವರೆಂದಲ್ಲ. ಅವರಲ್ಲಿ ಯಾರಾದರೂ, ಕುಂಭಲ್‌ಗರ್‌ನಲ್ಲೋ ಚಿತ್ತೂರಿನಲ್ಲೋ ಕಿರಿಯ ಸಂತಳ ಪಾದ ಸ್ಪರ್ಶ ಮಾಡಿರುವ ಇಲ್ಲವೆ ಅವಳೊಂದಿಗೆ ನೃತ್ಯ ಮಾಡಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ. ಅದು ರಾಜ್ಯಪಾಲರ ಮೇಲೆ ಅನಗತ್ಯ ಒತ್ತಡವನ್ನು ಹೇರುತ್ತದೆ. ಅಲ್ಲದೆ ಅದರಿಂದ, ಪ್ರತಿಯೊಂದು ಹಳ್ಳಿಯಲ್ಲೂ ನಮಗಾಗಿ ಸ್ವಾಗತ ಸಮಾರಂಭಗಳು ಕಾದಿರುತ್ತವೆ. ರಣಕಪುರದವರೆಗೂ, ಸಾವಿರಗಟ್ಟಲೆ ಅಲ್ಲದಿದ್ದರೂ, ನೂರಾರು ಜನ ನಮ್ಮ ಜೊತೆ ಬಂದು ಬಿಡುತ್ತಾರೆ. ಆದರೆ ಜಿಂಕೆಯನ್ನಾಗಲೇ ಕೆಳಗಿಳಿಸಲಾಗಿತ್ತು. ಎಪ್ಪತ್ತು ಎಂಬತ್ತು ಜನರಿಗಾಗುವಷ್ಟು ಮಾಂಸವಿತ್ತು. ಅತ್ಯಂತ ಹತ್ತಿರದ ಹಳ್ಳಿಯನ್ನು ಪತ್ತೆ ಮಾಡುವುದೊಂದೇ ಈಗ ಉಳಿದಿದ್ದ ಮಾರ್ಗ. ಹೆಂಗಸರಿಬ್ಬರನ್ನು ಅವರಷ್ಟಕ್ಕೆ ಬಿಟ್ಟಿರಲೂ ನನಗೆ ಮನಸ್ಸಿರಲಿಲ್ಲ. ಆದರೆ ನನ್ನ ಹೆಂಡತಿಯದೇ ಕಡೆಯ ಮಾತಾಯಿತು.

"ನಾನು ನನ್ನನ್ನೂ ಮಮತಳನ್ನೂ ನೋಡಿಕೊಳ್ಳಬಲ್ಲೆ"

ಎಂದಳು. ಮುಕ್ಕಾಲು ಮೈಲಿದೂರದಲ್ಲಿದ್ದ ಒಂದು ಹಳ್ಳಿಯನ್ನು ಪತ್ತೆ ಮಾಡಿದೆವು. ಆ ಹಳ್ಳಿಯ ಮುಖ್ಯಸ್ಥನೊಂದಿಗೂ ಅವನ ಗೆಳೆಯರೊಂದಿಗೂ ಮಾತಾಡಿದೆವು. ಜಿಂಕೆಯ ಮಾಂಸದ ಊಟವೆಂಬುದು ಹಬ್ಬದ ದಿನಗಳಿಗಾಗಿ ಮೀಸಲಿಡುವಂಥ ಅಪರೂಪದ ಔತಣ. ನಮ್ಮ ಕೊಡುಗೆಯಿಂದ ಹಳ್ಳಿಗರು ಅತ್ಯಂತ ಸಂತೋಷಪಟ್ಟರು ಮತ್ತು ಸಂತೋಷದಿಂದ ಅದನ್ನು ಅವರ ಊರಿಗೆ ಸಾಗಿಸಲು ನೆರವಾದರು. ಅತ್ಯಂತ ಎತ್ತರದ ಎರಡು ಎತ್ತುಗಳನ್ನು ನಮಗೆ ಗೊತ್ತು ಮಾಡಿದರು. ಅವರ ಕಡೆಯ ಆರು ಮಂದಿ ಯುವಕರೊಂದಿಗೆ ನಾವಿನ್ನೇನು ಕುದುರೆಯೇರಿ ಹೊರಡಲಿದ್ದೆವು. ಆಗ ಅವರ ಮುಖ್ಯಸ್ಥನು ಅವರು ನೀಡುವ ದಿಢೀರ್ ಔತಣಕ್ಕೆ ನಾವು ಉಳಿಯಲು ಸಾಧ್ಯವೆ ಎಂದು ಕೇಳಿದನು. ಅದು ನಾನು ನನ್ನ ಮರಣ ಶಯ್ಯೆಯಲ್ಲೂ ನಿರಾಕರಿಸುವ ಸಾಧ್ಯತೆ ಇಲ್ಲದಂಥ ಆಹ್ವಾನ.

ಪಾಂಕ್ ಸಾಧಾರಣವಾದ ಭಕ್ಷ್ಯವೇನಲ್ಲ. ಅದು ಅಮೃತವೂ ಹೌದು, ಒಗಟೂ ಹೌದು. ಕಡಲೆ ಹಿಟ್ಟಿನಿಂದಾದ ಗರಿಗರಿಯಾದ ರುಚಿಕಟ್ಟಾದ ಶಾವಿಗೆಯನ್ನು, ಹೊಲದಿಂದ ಆಗ ತಾನೆ ಬಿಡಿಸಿತಂದು ಹಗುರವಾಗಿ ಹುರಿದ, ರುಚಿಕಟ್ಟಾದ ಹಸಿರು ಜೋಳದ ಕಾಳಿಗೆ ಕಣಕವಾಗಿ ಬಳಸುವುದನ್ನು ಅದ್ಯಾವ ಮನುಷ್ಯ ಕಂಡುಕೊಂಡಿದ್ದನೋ? ಅದನ್ನು ನಿಧಾನವಾಗಿ ಕಟುಂಕುಟುಂ ಎಂದು ಕಡಿಯುತ್ತಾ ತಿನ್ನುವಾಗ ಅದರ ರುಚಿಯನ್ನು ಹೀಗೆ ಎಂದು ಹೇಳಲು ಸಾಧ್ಯವೇ ಇಲ್ಲ; ಆದರೆ ನಿಂಬೆಹಣ್ಣಿನ ರಸ ಹಾಕಿಕೊಂಡು ತಿಂದರೆ, ಸಿಹಿ, ಹುಳಿ ಮತ್ತು ಉಪ್ಪಿನ ಸಮ್ಮಿಶ್ರ ರುಚಿ ಸಿಗುತ್ತದೆ. ಆಗ ಅದು ನಿಜಕ್ಕೂ ಯಾರ ಜೀವನದಲ್ಲೇ ಆದರೂ ಅತ್ಯಂತ ಸಾರವತ್ತಾದ ಅಂಶವಾಗಿ ಉಳಿದು ಬಿಡುತ್ತದೆ.

ಪಾಂಕ್ ನನ್ನ ಜನಗಳನ್ನು ನಾನು ಅರ್ಥಮಾಡಿಕೊಳ್ಳುವುದು ಯಾವಾಗ? ಗಂಡಸರೆಲ್ಲ ಎತ್ತರವಾಗಿ, ನೇರವಾಗಿ ಮತ್ತು ಸ್ಫುರದ್ರೂಪಿಗಳಾಗಿದ್ದರು. ಹೆಂಗಸರೆಲ್ಲ ಲಜ್ಜಾನ್ವಿತೆಯರೂ, ಚೆಲುವೆಯರೂ ಆಗಿದ್ದರು. (ಇದು ಅವರು ನೀಡಿದ ಪಾಂಕ್ ಆತಿಥ್ಯ ಸವಿದು ಆಡುತ್ತಿರುವ ಮಾತು ಎಂದು ಗೊತ್ತು. ಆದರೆ ಅದು ನಿಜವೂ ಹೌದು). ಅವರೆಲ್ಲ ಒಳ್ಳೆಯ ಆತಿಥೇಯರು ಮತ್ತು ಅವರಿಗೆ ಜನರ ಸ್ನೇಹ ಸೌಹಾರ್ದಗಳು ತುಂಬ ಪ್ರಿಯವಾದವು. ನಾವು ಬಯಲಿನಲ್ಲಿ ಗಾಡಿಯ ಕೀಲಿನ ಮೇಲೆ ಕುಳಿತೆವು. ನಾವೆಲ್ಲಿಂದ ಬಂದೆವು ಎನ್ನುವುದನ್ನು ಅವರು ತಿಳಿಯಲಿಚ್ಛಿಸಿದರು.

"ಚಿತ್ತೂರಿನಿಂದ" ಎಂದು ನಾವು ಹೇಳಿದೆವು.

ಅವರು ಹೇಳಿದರು– "ನಮಗದು ಗೊತ್ತಿತ್ತು. ನಮಗೆಲ್ಲಾ ತಿಳಿದಿರೋ ಹಾಗೆ ನಿಮಗೆ ಏನೂ ಅಧಿಕಾರವಿಲ್ಲದೆ ಇದ್ದರೂ ನೀವೆಲ್ಲಾ ಅಧಿಕಾರ ಕೇಂದ್ರದಿಂದಲೇ ಬಂದಿರೋ ಹಾಗೆ ಕಾಣಿಸ್ತೀರಿ. ಆದರೆ ಚಿತ್ತೂರು ಅಂದರೆ ಹಾಗೇ ಸದಾ ಚಟುವಟಿಕೆಯಿಂದ ಕೂಡಿರುವ, ಧ್ಯೇಯ ಪೂರ್ಣ ನೋಟವೇ ಚಿತ್ತೂರು. ಅದರ ಬಗ್ಗೆ ಕೇಳಬೇಕಾದ್ದೇ ಇಲ್ಲ. ಮೇಲೇರುವುದಂತೂ ಸದಾ ಕೊಟ್ಟು ಬಿಟ್ಟಂತೆಯೇ ಲೆಕ್ಕ."

"ಅಂದ ಹಾಗೆ ನಿಮ್ಮ ಹೆಸರೇನು?"

"ಸಿಸೋದಿಯ"

"ರಾಜಮನೆತನಕ್ಕೆ ಸಂಬಂಧಿಸಿದವರಲ್ಲ ಎಂದು ನಮ್ಮ ನಂಬಿಕೆ. ಒಂದು ವೇಳೆ ನೀವು ರಾಜಮನೆತನಕ್ಕೆ ಸೇರಿದವರಾಗಿದ್ದರೆ, ನಮ್ಮ ಇಷ್ಟಗಳನ್ನು ಕಟ್ಟಿಕೊಂಡು ನೀವೇನು ಮಾಡುತ್ತಿದ್ದಿರಿ? ಕೆಲವು ರಾಜಕುಮಾರರು ಮಾರುವೇಷದಲ್ಲಿ ಪ್ರಯಾಣ ಮಾಡುತ್ತ ತಮ್ಮ ಪ್ರಜೆಗಳ ಮೇಲೆ ಕಣ್ಣಿಡಲು ಬಯಸುತ್ತಾರೆ ಎನ್ನುವುದು ನಿಮಗೆ ಗೊತ್ತೇ ಇಲ್ಲ. ನೀವುಗಳು ಅವರಲ್ಲಿ ಸೇರಿಲ್ಲ ಅಂತ ನಂಬಿದ್ದೀವಿ."

“ಖಂಡಿತವಾಗಿಯೂ ನಾವು ಅವರೇ. ನಮ್ಮ ಪ್ರತಿಷ್ಠೆಯ ವರ್ತನೆ ನೋಡಿ ಅದನ್ನು ನೀವು ಹೇಳೋಕ್ಕಾಗೋಲ್ವೆ, ನೀವು ಏನು ಹೇಳಿದಿರಿ ಅದನ್ನು ಸ್ವಲ್ಪ ಗಮನಿಸಿ”

ನನ್ನ ಹೆಂಡತಿ ನನ್ನ ಕಡೆಗೆ ಸನ್ನೆ ಮಾಡಿ ತೋರಿಸುತ್ತ “ಆ ಮನುಷ್ಯ ನೀವು ಹೇಳಿದ್ದನ್ನೆಲ್ಲ ತನ್ನ ಮನಸ್ಸಿನಲ್ಲಿ ಹಿಡಿದಿಟ್ಟು ಕೊಳ್ಳುತ್ತಿದ್ದಾರೆ. ಯಾಕೆ ಅಂದರೆ ಅವರು ಮಹಾರಾಜ್‌ಕುಮಾರ್ ಮತ್ತು ನಾನು ರಾಜಕುಮಾರಿ”

ಅವರಿಗೆಲ್ಲ ಇದು ಬಹಳ ತಮಾಷೆಯಾಗಿ ಕಾಣಿಸಿತು. ಅವರು ಪ್ರತಿಯೊಬ್ಬರೂ ಒಬ್ಬರು ಇನ್ನೊಬ್ಬರ ಬೆನ್ನ ಮೇಲೆ ಗುದ್ದಿದರು. ಅಲ್ಲಿ ಸೇರಿದ್ದ ಹೆಂಗಸರು ಕಿಲಕಿಲನೆ ನಕ್ಕು ನನ್ನ ಹೆಂಡತಿಯ ಭುಜವನ್ನು ತಿವಿದರು. ಅವರು ನಮಗೆ ತಲೆಬಾಗಿದರು. ಬೀಸಣಿಗೆಯಿಂದ ಗಾಳಿಬೀಸಿ, ಆ ಸಂದರ್ಭದ ಉತ್ಸಾಹದಲ್ಲಿ ಅವರೂ ಸೇರಿಕೊಂಡರು.

“ಮಹಾಸ್ವಾಮಿಯರೆ, ನನ್ನ ಮಗಳಿಗೊಬ್ಬ ಗಂಡ ಬೇಕಾಗಿದ್ದಾನೆ, ನಾವು ನಿಮಗೆ ಮೂರು ಹಸುಗಳನ್ನು ಮತ್ತು ಹನ್ನೆರಡು ಕೋಳಿಗಳನ್ನು ಕೊಡುತ್ತೇವೆ. ತಾವು ಏನು ಹೇಳ್ತೀರಿ. ನೀವು ನಮ್ಮ ಕಡೆಯಿಂದ ಅವಳನ್ನು ಕರೆದುಕೊಂಡು ಹೋಗಿ, ತಾವು ಮಹಾರಾಜರಾದಾಗ– ಮಹಾರಾಜರು ದೀರ್ಘಾಯುಗಳಾಗಲಿ– ಅವಳನ್ನು ಮಹಾರಾಣಿ ಮಾಡ್ತೀರಾ? ಮೊದಲನೇ ಹೆಂಡತಿ ಸಂತಳೇ ಹೊರತು ಮಹಾರಾಣಿ ಅಂತೂ ಅಲ್ಲ ಅಂತ ನಾವು ನಂಬಿದ್ದೀವಿ.”

“ಸಂತಳೆಂದೆ?” ಅದು ಮತ್ತೆ ನನ್ನ ಹೆಂಡತಿ ಮಾತಾಡಿದ್ದು “ಅವಳೊಬ್ಬಳು ವೇಶ್ಯೆ ಕುಣಿತದ ಹೆಣ್ಣು ಅಂತೆಲ್ಲಾ ಹೇಳ್ತಾರಲ್ಲ ಆ ಜನ.”

“ನಿಜವಾಗಿಯೂ? ನಮ್ಮ ಮುದ್ದಿನ ಮಗಳು ನೃತ್ಯ ಮಾಡ್ತಾಳೆ ಹಾಡ್ತಾಳೆ ಅಂತೆಲ್ಲ ಮಹಾರಾಜ್‌ಕುಮಾರ್ ಚಿಂತೆ ಮಾಡಬೇಕಾದ್ದಿಲ್ಲ. ಅವಳಿಗೆ ಸಂಗೀತದ ಗಂಧ ಗಾಳಿಯೂ ಇಲ್ಲ. ಮತ್ತು ಕುಣಿತದ ಆಸಕ್ತಿಯೂ ಇಲ್ಲ. ಅವಳು ಹಸುವಿನಂಥ ಸಾಧು. ಒಳ್ಳೆ ಅಡಿಗೆ ಮಾಡ್ತಾಳೆ. ಬಟ್ಟೆ ಒಗೀತಾಳೆ. ಬೆನ್ನು ಮೂಳೆ ಮುರಿಯೋ ಹಾಗೆ ಅಂಗಮರ್ದನ ಮಾಡಿ ಕೆಲವೇ ನಿಮಿಷಗಳಲ್ಲಿ ನಿಮ್ಮನ್ನು ಸರಿಪಡಿಸಿಬಿಡುತ್ತಾಳೆ. ಅಲ್ಲಿ ನಿಂತಿದ್ದಾಳೆ ನೋಡಿ, ಅವರ ಅಮ್ಮನ ಪರದೆಯನ್ನು ತಲೆ ಮೇಲೆ ಹಾಕಿಕೊಂಡಿದ್ದಾಳಲ್ಲ ಅವಳೇ” ಹಾಗೆ ಹೇಳಿದ ಕೂಡಲೆ ಹುಡುಗಿ ಮತ್ತಷ್ಟು ಅವರ ಅಮ್ಮನ ಹಿಂದಕ್ಕೆ ಸರಿದು ಮುಖ ಪರದೆಯ ಅಂಚನ್ನು ಅಗಿಯ ತೊಡಗಿದಳು. “ಇಲ್ಲ, ನಾನು ಖಂಡಿತವಾಗಿಯೇ ಕೇಳುತ್ತಾ ಇದ್ದೀನಿ. ನಿಮ್ಮ ತಂದೆ ತಾಯಿ ಏನು ಮಾಡ್ತಾರೆ. ಬಹುಶಃ ಅವಳನ್ನು ಇಷ್ಟಪಡುವಂಥ ತಮ್ಮ ಇರಬಹುದು ನಿಮಗೆ”

ನೀವು ಎಷ್ಟು ಸಂಪಾದನೆ ಮಾಡ್ತೀರಿ? ನಿಮ್ಮ ತಂದೆ ತಾಯಿಗಳು ಎಷ್ಟು ಸಂಪಾದನೆ ಮಾಡ್ತಾರೆ? ಮಕ್ಕಳೆಷ್ಟು ಜನ? ಹದಿನಾಲ್ಕು ಜನ ಅಕ್ಕ ತಂಗಿಯರಾ? ನಮಗೆ ಒಬ್ಬಳನ್ನೇ ತಟಾಯಿಸೋಕೆ ಆಗ್ತಾ ಇಲ್ಲ. ನಿಮ್ಮ ತಾಯಿ ಯಾರನ್ನೂ ಮರಳಿನಲ್ಲಿ ಹೂತು ಹಾಕಲಿಲ್ಲವೆ? ಅವೆಲ್ಲ ನಂಬಲಾಗದಂಥವು. ಅಪರಿಚಿತರನ್ನು ಅವರ ತಂದೆ ತಾಯಿಗಳ ಬಗ್ಗೆ, ಅವರ ಆಸ್ತಿ ಪಾಸ್ತಿ ಬಗ್ಗೆ, ಅವರ ಕಷ್ಟಗಳು, ಹಾಗೂ ಅವರ ಜೀವನದ ಅತ್ಯಂತ ಖಾಸಗಿ ವಿವರಗಳನ್ನು ಕೇಳುವುದರಲ್ಲಿ ಅವರಿಗೇನೂ ಸಮಸ್ಯೆಯೇ ಇರಲಿಲ್ಲ.

“ನೀವು ಇದುವರೆಗೂ ನಿಮ್ಮ ಮಗಳಿಗೆ ಯಾತಕ್ಕೆ ಮದುವೆ ಮಾಡಿಲ್ಲ” ರಾಜಕುಮಾರಿ ಮುಖ್ಯಸ್ಥನನ್ನು ಕೇಳಿದಳು.

“ಕಳೆದ ವರ್ಷ ಅವಳಿಗೊಬ್ಬ ಒಳ್ಳೆ ಹುಡುಗನನ್ನು ಹುಡುಕಿದ್ದೆವು. ಆದರೆ ಬೆಳೆ ಕೈ

ಕೊಟ್ಟಿತು. ಮತ್ತೆ ಕಂದಾಯ ವರದಕ್ಷಿಣೆ ಕೊಡಲಾಗಲಿಲ್ಲ. ಹುಡುಗನ ತಂದೆ ತಾಯಿಗಳು ಕಾಯಲು ಸಿದ್ಧರಿರಲಿಲ್ಲ. ಬೇರೆ ಯಾವುದೋ ಹುಡುಗಿ ಜೊತೆ ಮದುವೆ ಮಾಡಿಬಿಟ್ಟರು."

"ಸರಿಯಾಗಿ ಮಳೆ ಆಗದೆ ಇರುವ ವರ್ಷಕ್ಕೆ ನೀವು ಹಣವನ್ನು ಮೀಸಲಾಗಿ ಇಟ್ಟಿರೋಲ್ಲವೆ?" ನಾನು ಕೇಳಿದೆ.

"ನಾವು ಇಟ್ಟಿರುತ್ತೇವೆ ಆದರೆ ಅದನ್ನೆಲ್ಲ ಕಂದಾಯಕ್ಕೆ ಕೊಟ್ಟು ಬಿಟ್ಟರೆ, ಇಡೀ ವರ್ಷವೆಲ್ಲಾ ನಾವು ಏನು ತಿನ್ನೋಣ? ಪ್ರಭು ಮಹಾರಾಣಾ ಅವರಿಗೂ ಅವರದ್ದೇ ಆದ ಸಮಸ್ಯೆಗಳಿರುತ್ತವೆ. ಆದರೆ ಕಂದಾಯ ಕೊಡಲು ಈಗ ಇರುವುದಕ್ಕಿಂತ ಹೆಚ್ಚು ನ್ಯಾಯ ಸಮ್ಮತವಾದ ಕಂದಾಯ ವಿಧಿಸುವ ವಿಧಾನವನ್ನು ಸಿದ್ಧಪಡಿಸಿದರೆ ನಮಗೆ ಸ್ವಲ್ಪ ಅನುಕೂಲವಾಗುತ್ತೆ. ಚೆನ್ನಾಗಿ ಮಳೆ ಬೆಳೆ ಆದ ವರ್ಷದಲ್ಲಿ ಹೆಚ್ಚಾಗಿ ತೆರಿಗೆ ಹಾಕಿ ಹಾಗೆ ಆಗದೆ ಇರುವ ವರ್ಷಗಳಲ್ಲಿ ಕಡಮೆ ತೆರಿಗೆ ಹಾಕುವುದು."

"ಹಾಗೆ ಮಾಡಿದರೆ ನೀವು ನಿಮ್ಮ ಸಾಲಗಳನ್ನೆಲ್ಲಾ ತೀರಿಸಿ ನೆಮ್ಮದಿಯಿಂದ ಇರುತ್ತೀರಿ ಅಂತ ಅನ್ನಿಸುತ್ತಾ?" ಎಂದು ನಗುತ್ತ ಕೇಳಿದೆ.

"ಖಂಡಿತಾ ಇಲ್ಲ. ಮೂಕ ಪ್ರಾಣಿಗಳು ಮಾತ್ರ ದೂರಲ್ಲ. ಮನುಷ್ಯರಿಗೆ ಯಾವಾಗಲೂ ದೂರು ಹೇಳಲು ಒಂದಲ್ಲ. ಒಂದು ಕಾರಣ ಇದ್ದೇ ಇರುತ್ತೆ."

ನಾವು ಹೊರಡುವ ಸಮಯ ಬಂದಿತು. ಝಜೋರಾದಲ್ಲಿ ನಮ್ಮ ಗುಡಾರಗಳನ್ನು ಹಾಕಿದ ಮೇಲೆ ರಾಜ್ಯಪಾಲರ ಕಡೆಯವರು ನಮಗಾಗಿ ಕಾಯುತ್ತಿರುತ್ತಾರೆ. ನಾವು ಒಂದೆರಡು ನಿಮಿಷಗಳಲ್ಲಿ ಅಲ್ಲಿ ಇರದಿದ್ದರೆ, ನಾವು ಶಿಬಿರಗಳನ್ನು ಖಾಲಿ ಮಾಡಿಕೊಂಡು ಹೋಗಿ ಬಿಟ್ಟಿದ್ದೇವೆ ಎಂದು ಖಂಡಿತಾ ತೀರ್ಮಾನಿಸಿ, ರಾಜ್ಯಪಾಲರಿಗೆ ತಿಳಿಸಲು ಕುಂಭಲ್‌ಗರ್‌ಗೆ ಹೊರಟು ಬಿಡುವರು.

* * *

ನಾನು ಎಲ್ಲರನ್ನೂ ಒಂದೂವರೆಗೆ ಎಬ್ಬಿಸಿದೆ. ಕುಂಭಲ್‌ಗರ್‌ನಿಂದ ಬಂದ ಜನರು ಗುಡಾರಗಳನ್ನು ತೆಗೆದು ಹಾಕಿದ ಸುಮಾರಿನಲ್ಲೇ ಕೂಡಲೇ ನಾವೂ ಅಲ್ಲಿಂದ ಹೊರಟೆವು. ನಾನು ರಣಕ್‌ಪುರವನ್ನು ಈ ಮುಂಚೆ ನೋಡಿರಲಿಲ್ಲ. ಹಾಗಾಗಿ ನಾನು ಮರುದಿನ ಬೆಳಿಗ್ಗೆ ಬೆಳಕಿನ ಮೊದಲ ಕಿರಣಗಳು ಬೀಳುವ ಸಮಯದಲ್ಲೇ ಕಾಣಲು ಬಯಸಿದ್ದೆ. ಬೆಟ್ಟ ಗುಡ್ಡಗಳ ಮೂಲಕವಾಗಿ ದಾರಿ ಹಾದು ಹೋಗಿತ್ತು ಮತ್ತು ದಟ್ಟ ಕಾನನದಿಂದ ಕೂಡಿತ್ತು. ಐದು ಗಂಟೆಯ ಹೊತ್ತಿಗೆಲ್ಲಾ ನಾವು ನಗರದ ಹೊರವಲಯದಲ್ಲಿದ್ದೆವು. ಬೇಸಗೆಯ ಪ್ರಾರಂಭದಲ್ಲೇ ಬತ್ತಿ ಹೋಗುವ, ಧುಮ್ಮಿಕ್ಕುವ ತೊರೆಯೊಂದರಲ್ಲಿ ನಾವು ಸ್ನಾನ ಮಾಡಿದೆವು. ಶರೀರಕ್ಕೆ ಆಘಾತವುಂಟು ಮಾಡುವ ನೀರಾಗಿತ್ತು. ನನ್ನ ದೇಹದಲ್ಲಿನ ರಕ್ತ ಹಿಂದಕ್ಕೂ ಮುಂದಕ್ಕೂ ಧಾವಿಸುವುದು, ಕಡಿದಾದ ತಿರುವುಗಳಲ್ಲಿ ಚಲಿಸುವುದು ನನ್ನ ನೆತ್ತಿಗೆ ನುಗ್ಗುವುದು ಹಾಗೂ ನನ್ನ ಶರೀರವನ್ನು ಬೆಚ್ಚಗೆ ಮಾಡಲು ಕಾಲ್ಬೆರಳುಗಳ ಕಡೆಗೆ ಸಾಗುತ್ತಿರುವುದು ನನಗೆ ಕೇಳಿಸುತ್ತಿತ್ತು. ನಾವು ಶುಭ್ರ ವಸ್ತ್ರಗಳನ್ನು ಧರಿಸಿ, ದೇವಸ್ಥಾನದ ಬುಡದಲ್ಲಿ ನಿಂತಿದ್ದೆವು.

ರಣಕ್‌ಪುರವನ್ನು ತೀರ್ಥಂಕರನಿಗೆ ಮೀಸಲಿಡಲಾಗಿತ್ತು. ಆ ತೀರ್ಥಂಕರನ ಹೆಸರನ್ನೇ ಲೀಲಾವತಿಯ ಮುತ್ತಾತ ಆದಿನಾಥಜೀಯವರಿಗೆ ಇಡಲಾಗಿತ್ತು. ಮೇವಾಡದ ವಾಸ್ತುಶಿಲ್ಪದ ಸುವರ್ಣ ಯುಗದಲ್ಲಿ ಅದನ್ನು ನಿರ್ಮಿಸಲಾಗಿತ್ತು. ಆದರೆ ಅದನ್ನು ನಿರ್ಮಿಸಿದ್ದು ನನ್ನ ಮುತ್ತಾತ ಕುಂಭ ಅಲ್ಲ. ದೇವಾಲಯ ಕಟ್ಟಡ ನಿರ್ಮಾಣ ಪೂರ್ತಿ ಆದ ಮೇಲೆ ರಾಣಾ

ಕುಂಭ, ದೇವಾಲಯಕ್ಕೆ ಭೇಟಿ ನೀಡಿದ್ದನು. ಅದು ಅಭೂತರ್ಪವಾದ ಸುಂದರ ದೇವಾಲಯವೆಂದು ಭಾವಿಸಿದನು. ತಾನು ದೇವಸ್ಥಾನವನ್ನು ನಿರ್ಮಿಸದೆ ತನ್ನ ಕೈ ಕೆಳಗೆ ಕೆಲಸ ಮಾಡುವ ವ್ಯಕ್ತಿಯೊಬ್ಬರು, ಜೈನ ಅರ್ಥಮಂತ್ರಿ ಅದನ್ನು ನಿರ್ಮಿಸಿದ ಬಗ್ಗೆ ಅವನಿಗೆ ಬೇಸರವಿತ್ತು. ಆದರೆ ಎಲ್ಲವೂ ಏನು ಮುಗಿದಿರಲಿಲ್ಲ. ಅವನು ದೇವಸ್ಥಾನದ ಒಳಗಡೆ, ಅರ್ಥಮಂತ್ರಿಯ ನಿರ್ಮಿತಿಯಾದ ಈ ದೇವಸ್ಥಾನವನ್ನು ಮೀರಿಸುವಂಥ, ಅಮೃತ ಶಿಲೆಯ ವಿಜಯ ಸ್ತಂಭವನ್ನು ನಿರ್ಮಿಸುವನು. ಈ ವಿಕೃತ ಸಲಹೆಗೆ ಮಂತ್ರಿಯ ಪ್ರತಿಕ್ರಿಯೆ ಕುರಿತು ಜೈನ ಕವಿಗಳು ಒಬ್ಬೊಬ್ಬರೂ ವಿಭಿನ್ನವಾಗಿದ್ದಾರೆ. ಅವನ ವೈಯಕ್ತಿಕವಾದ ಭಾವನೆಗಳು ಏನೇ ಇರಲಿ ಅರ್ಥಮಂತ್ರಿ ತನ್ನ ಸಾರ್ವಭೌಮನ ಮಾತಿಗೆ 'ಇಲ್ಲ' ಎಂದು ಹೇಳುವಂತಿಲ್ಲ. ಅದರ ನಕ್ಷೆ ಅದರ ಪಾರ್ಶ್ವ ಮತ್ತು ಮುಂಭಾಗದ ಉನ್ನತಿ ನಕ್ಷೆಗಳು, ಒಂದಕ್ಕೊಂದು ಹೆಣೆದುಕೊಂಡ, ಗಹನವಾದ ಕೆತ್ತನೆಗಳು, ಎಲ್ಲವನ್ನೂ ಸಿದ್ಧಪಡಿಸಲಾಯಿತು. ರಾಣಾ ಅದೆಲ್ಲವನ್ನೂ ಅನುಮೋದಿಸಿದ್ದೂ ಆಯಿತು. ಕೆಲಸವೂ ಪ್ರಾರಂಭವಾಯಿತು. ಆದರೆ ಅವನು ಎಷ್ಟೇ ಪ್ರಯತ್ನಿಸಿದರೂ, ಭಾರೀ ಶಕ್ತಿವಂತನೇ ಆದರೂ, ವಿಜಯ ಸ್ತಂಭ ಮಾತ್ರ ಪೂರ್ಣಗೊಳ್ಳಲಿಲ್ಲ. ವಾಸ್ತವವಾಗಿ ಈ ಹೊತ್ತಿಗೂ ನನ್ನ ಕಣ್ಣಿಗೆ ಅದು ಕಾಣುವುದು, ಮೊದಲನೇ ಉಪ್ಪರಿಗೆಯ ಭಾವಣಿಯ ಸಮಕ್ಕೂ ಬರದಿರುವಂಥ ಒಂದು ಚೌಕಾಕೃತಿಯ ಅಗಾಧವಾದ ಅವಲಕ್ಷಣದ ಆಕೃತಿಯಂತೆ.

ನಾವು ನಮ್ಮ ಪಾದರಕ್ಷೆಗಳನ್ನು ವಿಶಾಲವಾದ ಮೆಟ್ಟಿಲುಗಳ ಸಾಲಿನ ಕೆಳಗಡೆ ಕಳಚಿಬಿಟ್ಟೆವು. ಮೆಟ್ಟಿಲುಗಳು ಚಿತ್ತೂರಿನ ಮಧ್ಯಮ ಬೀದಿಯಷ್ಟು ವಿಸ್ತಾರವಾಗಿದ್ದುವು ಮತ್ತು ಅವು ದೇವಾಲಯದ ಮೇಲು ಪಾಯದವರೆಗೂ ಸಾಗಿದ್ದುವು. ಸೂರತ್‌ನ ಸಮೀಪದ ಸಾಗರದ ಮೊದಲ ಅಲೆಯ ಹಾಗೆ ಇದ್ದಕ್ಕಿದ್ದಂತೆ ಬಿಸಿಲು ಹೊಳೆದು ಒಳಗೆ ಸುಳಿಯಿತು. ದಿಗಂತದ ಕೆಳಗೆ, ಆಗ ತಾನೆ ಉದಯಿಸಿದ ಸೂರ್ಯನ ಪಥದಲ್ಲಿ ಮೋಡದ ತೆಳ್ಳಗಿನ ಗೆರೆಯೊಂದು ಮುಸುಕಿದಂತೆ ಸೂರ್ಯನ ಬಿಸಿಲು ಅಮೃತ ಶಿಲೆಯೊಳಕ್ಕೆ ಜಿನುಗಿ ಹಿಂದಕ್ಕೆ ಸರಿಯಿತು. ಆ ಹೊತ್ತಿನಲ್ಲಿ ಅಲ್ಲಿ ಯಾರೊಬ್ಬರೂ ಇರಲಿಲ್ಲ. ಕೆಲವೇ ನಿಮಿಷಗಳಲ್ಲಿ ಉಕ್ಕಿ ಹರಿಯುತ್ತಿರುವ ನದಿಯ ಹಾಗೆ ಸೂರ್ಯನ ಬೆಳಕು ಒಳಕ್ಕೆ ಹರಿಯಿತು. ಕಟ್ಟದ ಅಂಚಿನಲ್ಲಿ ಯಾವುದೇ ಕೋಟೆಯಲ್ಲಿರುವಂತೆ ಗುಂಡನೆಯ ಆಕಾರದ ರಕ್ಷಕ ಗೋಡೆಗಳಿವೆ. ಒಂದೇ ವ್ಯತ್ಯಾಸವೆಂದರೆ, ಇವು ಅವಕ್ಕಿಂತ ತೀರಾ ಕಡಿಮೆ ಎತ್ತರದವು. ಇಡೀ ಪಾಯದ ಉದಕ್ಕೂ ಸಾಲಾಗಿ ಕೈ ಸಾಲೆಯ ಗೋಡೆಗಳಿವೆ. ಅವು ವಾಸ್ತವವಾಗಿ, ಜೈನ ಪರಿವಾರದ ದೇವತೆಗಳಿಗಾಗಿ ಇದ್ದ ಸಣ್ಣ ಸಣ್ಣ ದೇವಾಲಯಗಳು. ದೇವಾಲಯದ ನಾಲ್ಕೂ ದಿಕ್ಕಿನಲ್ಲಿ ಅತ್ಯಂತ ಸುಂದರವಾದ ಪ್ರಮಾಣ ಬದ್ಧ, ಕೇಂದ್ರೀಯ ಹೆಬ್ಬಾಗಿಲುಗಳಿವೆ. ದೇವಾಲಯದ ಮಧ್ಯಭಾಗಕ್ಕೆ ಬರದೆ ಹೋದರೆ ದೇವಾಲಯ ಅದೆಷ್ಟು ಬೃಹದಾಕಾರದ್ದು ಮತ್ತು ಸಂಕೀರ್ಣವಾಗಿದೆ ಎಂಬುದರ ಕಲ್ಪನೆಯೇ ನಮಗೆ ಬರುವುದಿಲ್ಲ. ಇಷ್ಟಾದರೂ ಅದೂ ಕೂಡ ಕೇವಲ ಸೀಮಿತವಾದ ಮತ್ತು ಆಂಶಿಕ ನೋಟ ಮಾತ್ರ, ಕಾರಣ ಯಾರೂ ಇನ್ನೂ ಮೊದಲನೆಯ ಹಾಗೂ ಎರಡನೆಯ ಅಂತಸ್ತಿಗೆ ಹತ್ತಿಲ್ಲ.

ಅಂಕಣದಲ್ಲಿರುವ ಜೈನ ದೇವತೆಗಳು ನಿಂತಿರಲಿ, ಕುಳಿತಿರಲಿ, ಅವು ಭದ್ರವಾಗಿ ನೇರವಾಗಿದ್ದು, ತಮ್ಮ ವಿಶಾಲವಾದ ಹೊಳೆಯುವ ಸ್ತಬ್ಧ ಕಣ್ಣುಗಳತ್ತ ಜನರ ಗಮನವನ್ನು ಸೆಳೆಯುತ್ತಿವೆ. ಅತ್ಯಂತ ಎತ್ತರದಲ್ಲಿ ಮಧ್ಯದ ದೇವಾಲಯದಲ್ಲಿರುವ ನಾಲ್ಕಾಳೆತ್ತರದ ಆದಿನಾಥನ ಮೂರ್ತಿ ಕೂಡ ಇದಕ್ಕೆ ಅಪವಾದವಲ್ಲ. ನೀವು ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬಹುದು, ಆದರೆ, ತೀರ್ಥಂಕರನ ಕಣ್ಣುಗಳು ಯಾವಾಗಲೂ ನಿಮ್ಮೊಳಗೇ ಇವೆಯೇ ಹೊರತು ಹೊರಗಲ್ಲ ಎಂದು ತಿಳಿಯುತ್ತದೆ.

ರಣಕ್‌ಪುರ್ ದೇವಾಲಯ ದಿವ್ಯದರ್ಶನ ಮಾಡಿಸಿತು. ಅದುವರೆಗೂ ನನಗೆ ಗೋಚರಿಸದಿದ್ದ ಸಾಧ್ಯತೆಗಳಿಗೆ ನನ್ನ ಕಣ್ಣು ತೆರೆಸಿತು. ಹಿಂದೂ ದೇವಾಲಯಗಳು ಅನೇಕ ಆಕೃತಿಗಳು ಮತ್ತು ಅಳತೆಗಳಲ್ಲಿ ಕಾಣಸಿಗುತ್ತವೆ. ದೇವಾಲಯದ ಗೋಪುರ ಚಿಕ್ಕದಿರಬಹುದು, ದೊಡ್ಡದಿರಬಹುದು, ಅಥವಾ ಕೆಲವೊಂದು ಸಲ ಗೋಪುರವೇ ಇಲ್ಲದೆ ಇರಬಹುದು, ಆದರೆ ದೇವತಾ ಮೂರ್ತಿಯನ್ನು ಪ್ರತಿಷ್ಠಾಪಿಸಿರುವ ಗರ್ಭಗೃಹ ಯಾವಾಗಲೂ ಬಹು ಮಟ್ಟಿಗೆ ಅಂಧಕಾರದ ಹೃದಯವಾಗಿರುತ್ತದೆ. ಅದು ದೈವದ ಅಭೇದ್ಯ ರಹಸ್ಯದ ಸಂಕೇತ. ಅದೊಂದು ಅನಾದಿ ಗರ್ಭ. ದುರ್ಭೇದ್ಯವಾದ ಕಪ್ಪು, ಅತ್ಯಂತ ಭಯ ಭೀತಿಯನ್ನುಂಟು ಮಾಡುವ, ಕಿರಿದಾದ ಸ್ಥಳ. ಸಾಮಾನ್ಯ ಮನುಷ್ಯರಿಗೂ ದೇವತೆಗೂ ಮಧ್ಯವರ್ತಿಗಳಾದ ಬ್ರಾಹ್ಮಣರು ಮಾತ್ರ ವ್ಯವಹರಿಸುವಂಥ ಸ್ಥಳ, ರಣಕ್ ಪುರದಲ್ಲಿಯ ಜೈನ ದೇವಾಲಯವು ತನ್ನ ತಲೆಯ ಮೇಲಿನ ಹಿಂದೂ ಗರ್ಭಗೃಹದ ಪರಿಕಲ್ಪನೆಯನ್ನು ಮಾರ್ಪಡಿಸಿತು. ಅದು ಎಲ್ಲವನ್ನೂ ಬಹಿರಂಗಪಡಿಸಿತು. ಗುಟ್ಟಾಗಿ ಅಡಗಿಸಿಡುವ ಬದಲು, ಗಾಳಿ ಮತ್ತು ಬೆಳಕುಗಳು ಇಲ್ಲಿಯ ದೈವದ ಧಾತುಗಳಾದುವು. ಬಿಳಿಯ ಅಮೃತಶಿಲೆ ಆ ಮುಕ್ತತೆಯ ಒಂದು ಭಾಗವಾಗಿತ್ತು. ಹಾಲು ಸುರಿದರೆ ಉಂಟಾಗಬಹುದಾದ ವೇಗ ಮತ್ತು ಪರಿಭ್ರಮಣ ಅದಕ್ಕೆ ಬಂದಿತ್ತು.

ರಣಕ್‌ಪುರ್ ದೇವಾಲಯವನ್ನು ಮೊದಲ ತೀರ್ಥಂಕರನಾದ ಆದಿನಾಥನಿಗೆ ಮೀಸಲಿಟ್ಟಿರಬಹುದು. ಆದರೆ ನನ್ನನ್ನು ಕೇಳಿದರೆ ಅದು ಸೂರ್ಯದೇವನ ಉತ್ಸವ. ಅದರ ಒತ್ತು ಮತ್ತು ಒಲವು ಇರುವುದು ಬೆಳಕಿನತ್ತ ಮತ್ತು ಜ್ಞಾನೋದಯವೇ ಅದರ ಗುರಿ. ನನಗೆ ಗೊತ್ತಿರುವ ಬೇರಾವುದೇ ದೇವಾಲಯದಂತಲ್ಲ ಅದು. ನಂಬಲಸಾಧ್ಯವಾದ, ಅವಲಕ್ಷಣವಾದ ಅದರ ಅಮೃತಶಿಲೆಯ ರಾಶಿಯಾಗಲಿ, ದೇವಾಲಯ ಪರಿಕಲ್ಪನೆಯ ಕೇಂದ್ರವಾದ ಅದರ ಮನೋಹರವಾದ ಕೆತ್ತನೆಯ ಕೆಲಸವಾಗಲಿ ಅಲ್ಲ ಅದು. ಅಂತಸ್ತಿನ ಮೇಲೆ ಅಂತಸ್ತಿನ ಹಾಗೆ ದೇವಾಲಯ ಮೇಲಕ್ಕೆ ಹೋದಂತೆಲ್ಲ ಗೋಡೆಗಳಿಲ್ಲ. ಗಾಳಿ ಮತ್ತು ಬೆಳಕು ದೇವಾಲಯದ ಕಟ್ಟಡ ಮತ್ತು ಕಲ್ಲುಗಳೊಂದಿಗೆ ಬೆರೆಯುವಂತೆ ಮಾಡಲು ಇರುವುದು ಕಂಬಗಳು. ದೇವಾಲಯದ ಕಟ್ಟಡ ಮತ್ತು ಕಲ್ಲುಗಳು ತಮ್ಮಷ್ಟಕ್ಕೆ ದೇವಾಲಯವನ್ನು ದೃಢವಾಗಿ ಮತ್ತು ಗಡುಸಾಗಿ ಮತ್ತು ನೆಲದ ಮೇಲೆ ಸ್ಥಿರವಾಗಿ ನಿಲ್ಲುವಂತೆ ಮಾಡಬಲ್ಲುವು. ಅದರ ಬದಲಿಗೆ ನಾನು ಕಂಡುಕೊಂಡದ್ದೆಂದರೆ, ಅಮೃತ ಶಿಲೆಯನ್ನು ಬೆಳಕನ್ನಾಗಿ ಮಾರ್ಪಡಿಸಿದ ವಸ್ತು ಪರಿವರ್ತನೆ. ಬೆಳಕನ್ನು ನಿರ್ಮಾಣದ ವಾಸ್ತು ರಚನೆಯ ಅವಿಭಾಜ್ಯ ಅಂಗವಾಗಿ ಮಾಡುವ ಮೂಲಕ, ಆದಿನಾಥ ದೇವಾಲಯವು ಬೆಳಕಿನ ತೊಲೆಗಳು, ಕಂಬಗಳು ಮತ್ತು ಗೋಡೆಗಳನ್ನು ಒಳಗೊಂಡು, ಗಾಳಿಯಲ್ಲಿ ತೇಲುತ್ತಿತ್ತು.

ನಾನು ಶೋಧಿಸಬೇಕಾಗಿದ್ದ ಆದಿನಾಥ ದೇವಾಲಯವು ಒಂದಲ್ಲ, ಒಂದು ನೂರು, ಒಂದು ಸಾವಿರ, ಮತ್ತು ಲಕ್ಷಾಂತರ ದೇವಾಲಯಗಳು. ನಸುಕಿನಲ್ಲಿ ಮಧ್ಯಾಹ್ನದಲ್ಲಿ, ಮುಸ್ಸಂಜೆಯಲ್ಲಿ, ಒಂದು ಗಂಟೆಯ ಹೊತ್ತಿಗೆ, ಒಂದು ನಿಮಿಷದಲ್ಲಿ ಹುಣ್ಣಿಮೆಯಲ್ಲಿ ಮತ್ತು ಚಂದ್ರನ ಇತರೆ ಅವಸ್ಥಾಂತರಗಳಲ್ಲಿ, ಆದಿನಾಥ ದೇವಾಲಯ ಬೇರೆಯೇ ಆಗುತ್ತದೆ. ಮೋಡದ ವೇಗ, ತೂಕ ಮತ್ತು ಆಕಾರವು ಅದನ್ನು ಬದಲಿಸಬಲ್ಲುದು. ಮಳೆ, ನೆರಳು, ಮಿಂಚು ಮತ್ತು ಗುಡುಗುಗಳು ಅದನ್ನು ಮತ್ತೆ ಕಲೆಸಬಹುದು, ಹೊಸದಾಗಿ ಶೋಧಿಸಬಹುದು. ಅದು ವಿಜಯವನ್ನಾಗಲಿ, ಗೆಲುವನ್ನಾಗಲಿ ಸಡಗರದಿಂದ ಆಚರಿಸುವುದಿಲ್ಲ. ರಣಕುಂಭನ ಹಣಕಾಸು ಸಚಿವ ಧನಶಕ್ತಿಯನ್ನು ಕುರಿತು ವಿಜಯ ಸ್ತುತಿಯನ್ನು ಹಾಡುತ್ತಿದ್ದಾನೆ

ಅಥವಾ ಕಾಲದ ಅಖಂಡಂತೆಯ ಮೇಲೆ ತನ್ನ ಹೆಸರನ್ನು ಕೆತ್ತಿಸಲಾಶಿಸಿದ್ದಾನೆ ಎಂಬುದು ನನಗೆ ತಿಳಿಯದು. ಅದು ಅಷ್ಟು ಮುಖ್ಯವಲ್ಲ. ಅದು ಮುಕ್ತತೆ ಮತ್ತು ಸ್ವಾತಂತ್ರ್ಯದ ಕುರಿತಾದ ಹಂಬಲ ಮತ್ತು ಹೋರಾಟ. ಅದೊಂದು ಹಾರುವಿಕೆ ಮತ್ತು ಮೇಲೇರುವಿಕೆ. ಅದು ಅಜ್ಞಾತವನ್ನು ಒರೆ ಹಚ್ಚಲು ಮತ್ತು ನಿಮ್ಮನ್ನೂ ಮೀರಿದ್ದನ್ನು ತಲುಪಲು ನಿಮಗೆ ಸವಾಲು ಹಾಕುತ್ತದೆ.

ನಾನು ಪದ್ಮಾಸನದಲ್ಲಿ ಕುಳಿತುಕೊಂಡೆನು. ನಾನೇನು ಮಾಡುತ್ತಿದ್ದೇನೆಂಬುದರ ಅರಿವು ನನಗಿದ್ದಿತೆ ಎಂದು ನನಗೆ ಅನುಮಾನವಿದೆ. ನನ್ನ ಪೂರ್ವಜನಾದ ಸೂರ್ಯದೇವನ ಬೆಳಕು ನನ್ನನ್ನು ಮುಚ್ಚಿಹಾಕಿತು. 'ಸೋಽಹಂ'. ನಾನು ಅವನಾಗಿದ್ದೇನೆ ನಾನು 'ಸೋ' ಎಂದು ಹೇಳುತ್ತಾ ಉಸಿರೆಳೆದುಕೊಂಡು 'ಹಂ' ಎಂದು ಉಸಿರುಬಿಟ್ಟೆ. ನಾನು ಕೂಡ ಪರಿವರ್ತಿತನಾಗಿ ಬಿಟ್ಟಿದ್ದೆ. ನಾನು ಅಮೃತಶಿಲೆ ಬೆಳಕು ಮತ್ತು ಗಾಳಿಯಾಗಿದ್ದೆ. ದೇವಸ್ಥಾನವು ತನ್ನ ಗೋಡೆಗಳನ್ನು ಕಳೆದುಕೊಂಡಿತು. ಉಳಿದದ್ದೇನಿದ್ದರೂ ಪ್ರಜ್ಞೆ, ಎಲ್ಲ ಚೇತನಾ ಚೇತನಗಳೊಂದಿಗೆ ಅಖಂಡವಾಗಿರುವ ಭಾವ. ಅಭೇದ್ಯವಾಗಿರುವ ಭಾವ.

ಜೈನ ದೇವಾಲಯವೊಂದರಲ್ಲಿ ನಾನೇನು ಮಾಡುತ್ತಿದ್ದೇನೆ? ಜೈನ ಧರ್ಮ ಸಂಸ್ಥಾಪಕನಾದ ಮಹಾವೀರ ಮತ್ತು ಬುದ್ಧ ಇವರುಗಳಿಗೆ ಏಕೆ ಹಿಂದೂ ಧರ್ಮ ಅಸಮರ್ಪಕವೆನಿಸಿತು? ಹಾಗೂ ಅವರೇಕೆ ಬುದ್ಧಹೇಳಿದ ನಿರ್ವಾಣ ಅಥವಾ ಮೋಕ್ಷವನ್ನು ಕಂಡುಕೊಳ್ಳಲು ಅನ್ಯಮಾರ್ಗಗಳನ್ನು ಹಿಡಿದರು? ಹಿಂಸೆಯನ್ನು ಅವರೇಕೆ ಸಂಪೂರ್ಣವಾಗಿ ತ್ಯಜಿಸಿದರು? ಅದು ಅತ್ಯಂತ ಆಳವಾದ ಮನುಷ್ಯ ಪ್ರವೃತ್ತಿಯನ್ನೇ ಪೂರ್ತಿ ನಿರಾಕರಿಸಿದಂತಾಗುವುದಿಲ್ಲವೆ? ನಮ್ಮ ದೇಶದಲ್ಲೇ ಹಿಂದೂ ಧರ್ಮ ಮತ್ತೊಮ್ಮೆ ತನ್ನನ್ನು ಪುನಃ ದೃಢವಾಗಿ ಸ್ಥಾಪಿಸಿಕೊಂಡದ್ದಕ್ಕೆ ಹಾಗೂ ಶ್ರೀಲಂಕಾದಲ್ಲಿ ಮಾತ್ರ ಬೌದ್ಧ ಧರ್ಮದ ಒಂದೇ ಒಂದು ಹನಿಯಷ್ಟು ಮಾತ್ರ ಉಳಿಸುವಷ್ಟಕ್ಕೆ ಅದನ್ನು ಹಿಂಡಿ ಬಿಡಲು ಕಾರಣವಾದವುಗಳಲ್ಲಿ ಅದು ಒಂದೆ? ಜೈನಧರ್ಮ ಉಳಿದಿದೆ ನಿಜ, ಆದರೆ ಕೇವಲ ಅಂಚಿನಲ್ಲಿ ಮಾತ್ರ.

ಅಧಿಕಾರಕ್ಕೆ ಸಂಬಂಧಿಸಿದ ಹಾಗೆ ಹಿಂಸೆಯೇ ಮೊದಲಿನದು ಹಾಗೂ ಕೊನೆಯದು. ಎರಡು ಜೊತೆ ಕೃಷ್ಣ ಮೃಗಗಳು ಪರಸ್ಪರ ಕೊಂಬುಗಳನ್ನು ತೊಡರಿಸಿಕೊಂಡು ಕದನಕ್ಕೆ ನಿಲ್ಲುವುದು ಅದು, ಯಾರು ಅಧಿಕಾರವನ್ನು ಹತೋಟಿಗೆ ತೆಗೆದುಕೊಳ್ಳುತ್ತಾರೆಂಬುದನ್ನು ತೀರ್ಮಾನಿಸುವ ಸಲುವಾಗಿಯೇ. ಹಿಂಸೆಗೆ ಸಂಬಂಧಿಸಿದಂತೆ, ಜೈನಧರ್ಮದ ನಿಲುವು ಬೌದ್ಧಧರ್ಮಕ್ಕಿಂತ ತೀವ್ರವಾದ್ದು. ಅದರ ಸನ್ಯಾಸಿಗಳು ಮತ್ತು ಸನ್ಯಾಸಿನಿಯರು (ಕಂತಿಯರು) ಗಾಳಿಯಲ್ಲಿ ಸೇರಿಕೊಂಡಿರುವ ಸೂಕ್ಷ್ಮಾತಿ ಸೂಕ್ಷ್ಮ ಜೀವಿಗಳನ್ನು ಕೊಲ್ಲುವುದನ್ನು ತಪ್ಪಿಸುವ ಸಲುವಾಗಿ ಅನೇಕ ವೇಳೆ ತಮ್ಮ ಮೂಗು ಮತ್ತು ಬಾಯಿಗಳಿಗೆ ಬಿಳಿಯ ಬಟ್ಟೆಗಳನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಕೆಲವೊಂದು ಸಲ ನನಗೆ, ಅವರು ಹಿಂಸೆಯ ಬದಲಿಗೆ ಹಣಕಾಸನ್ನು ಇಟ್ಟುಕೊಂಡಿದ್ದಾರೆಂದು ಅನ್ನಿಸಿದೆ. ಅದು ಕೂಡ ಬಹು ಮಟ್ಟಿಗೆ ಅಧಿಕಾರದ ಬೆನ್ನಟ್ಟಿ ಹೋಗುವುದೇ ಆಗಿದೆ. ಇಷ್ಟಾದರೂ, ಇತಿಹಾಸದಲ್ಲಿ ಅತ್ಯಂತ ಬರ್ಬರವಾಗಿ ಸಾಮೂಹಿಕ ಹತ್ಯೆಗಳನ್ನು ಮಾಡಿದವರಲ್ಲೊಬ್ಬನಾದ ನಾನು, ಹಿಂಸೆಯನ್ನು ವರ್ಜಿಸುವುದರಿಂದ ಬರುವ ಮಾನಸಿಕ ನೆಮ್ಮದಿಯೇ ನೆಮ್ಮದಿಯ ಆಕರ್ಷಣೆ ಎಂದು ಒಪ್ಪಲೇಬೇಕು.

ಬುದ್ಧ ಮತ್ತು ಕೃಷ್ಣರ ಮಾನವ ಸಂದರ್ಭದ ವಿಶ್ಲೇಷಣೆಯನ್ನು ನಿರಾಕರಿಸುವಂತೆಯೇ ಇಲ್ಲ. ನಮ್ಮನ್ನು ದುಃಖದ, ಅಸಂತೋಷದ ಹಾಗೂ ಇನ್ನಷ್ಟು ಆಶೆಗಳ ಕೆಸರಿನ ಅತ್ಯಂತ ಆಳಕ್ಕೆ ತಳ್ಳುವಂಥವೆಂದರೆ, ಇಂದ್ರಿಯಗಳ ಜೀವವಾದ ಆಶೆ, ಮೋಹ ಮತ್ತು ಅಜ್ಞಾನಗಳು.

ಹಾಗೆ ಮಾಡುವ ಮೂಲಕವೇ ಅವು ಪುನರ್ಜನ್ಮದ ಚಕ್ರವನ್ನು ನಿರಂತರವಾಗಿ ಚಾಲನೆಯಲ್ಲಿಟ್ಟಿರುತ್ತವೆ. ಆದರೆ ಬುದ್ಧನ ಕರುಣೆ, ದರ್ಶನ ಮತ್ತು ಸಹಾನುಭೂತಿಗಳು ಅತ್ಯಂತ ಅಸಾಧಾರಣವಾದವು. ಕಾರಣ ತನಗೆ ಜ್ಞಾನೋದಯವಾದ ಮೇಲೂ ತನ್ನದೊಂದೇ ಸರಿಯಾದ ಏಕೈಕ ಮಾರ್ಗ. ಅದನ್ನು ಅನುಸರಿಸಿ ಎಂದು ಹೇಳ ಹೋಗಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ತಿಳಿಯಲು ಆಸಕ್ತಿ ಇದ್ದವರಿಗೆ ಅವನು ಹೇಳುತ್ತಿದ್ದುದು, ಸುವರ್ಣ ಮಾಧ್ಯಮ ಮತ್ತು ಕಟ್ಟುಪಾಡು ತನಗೆ ಉಪಯೋಗಕ್ಕೆ ಬಂದವು, ಅವು ನಮಗೂ ಉಪಯೋಗಕ್ಕೆ ಬರುತ್ತವೆಯೆ ಹೇಗೆ ಎಂದು ನಾವು ಪ್ರತಿಯೊಬ್ಬರೂ ನಾವು ನಾವೇ ಕಂಡುಕೊಳ್ಳಬೇಕು. ಹಾಗಲ್ಲದೆ ಹೋದರೆ, ನಾವೇ ಹುಟ್ಟು, ಸಾವು ಮತ್ತು ಮರು ಹುಟ್ಟುಗಳ ಚಕ್ರಭೀಮನ ಕೋಟೆಯಿಂದ ಹೊರಬರುವುದನ್ನು ನಾವೇ ಹುಡುಕಿಕೊಳ್ಳಬೇಕು. ಬೇರೆ ಎಲ್ಲ ಉಪದೇಶಗಳ ಹಾಗೆಯೇ ಬುದ್ಧನು ಉಪದೇಶಿಸಿದ 'ನಿರ್ಲಿಪ್ತತೆ'ಯನ್ನು ಕೂಡ ಹಲವು ರೀತಿಯ ವ್ಯಾಖ್ಯಾನಗಳಿಗೆ ಒಳಪಡಿಸಬಹುದು. ಮನೆಯಿಂದ ಹೊರಗೆ ಹೋಗದೆ ಇದ್ದರೆ ರಸ್ತೆಯನ್ನು ದಾಟದಿದ್ದರೆ ಸೈನ್ಯಕ್ಕೆ ಸೇರಿ, ಯುದ್ಧ ಮಾಡಲು ತೆರಳದಿದ್ದರೆ, ನಮಗೆ ಅಪಘಾತವುಂಟಾಗುವ ಸಂಭವಗಳು ಕಂಡ ಹಾಗೆಯೇ ಇಲ್ಲವಾಗುತ್ತವೆ ಎಂಬುದು ನಿಜ. ಒಂದು ವೇಳೆ ಆತ್ಮಹತ್ಯೆ ಮಾಡಿಕೊಂಡು ಬಿಟ್ಟರೆ, ಆ ಅಪಘಾತಕ್ಕೊಳಗಾಗದಿರುವ ಸಂಭವಗಳೇನು ನಾಟಕೀಯವಾದ ರೀತಿಯಲ್ಲಿ ಸುಧಾರಿಸಿ ಬಿಡುವುದಿಲ್ಲ. ಬದಲಿಗೆ ಅವು ತಪ್ಪಾಗಲು ಅಥವಾ ಸೋಲಲು ಸಾಧ್ಯವೇ ಇಲ್ಲದಾಗಿ ಬಿಡುತ್ತವೆ. ಆದರೆ ಒಂದು ವೇಳೆ ನಿರ್ಲಿಪ್ತತೆ ಎನ್ನುವುದು ನಿಜಕ್ಕೂ ಸೋಲಿನ ಹೆದರಿಕೆ; ಹಾಗಾಗಿ ತನ್ನನ್ನು ತಾನು ಯಾವತ್ತೂ ಪರೀಕ್ಷೆಗೊಡ್ಡಿಕೊಳ್ಳದಿರುವುದು ಎಂದಾದರೆ ಅಥವಾ ಅದು ಬೇರೆಯುವರಿಂದ ನೋವಿಗೊಳಗಾಗುವುದೋ, ಅಪಮಾನಕ್ಕೊಳಗಾವುದೋ ಅಥವಾ ಬೇರೆಯವರ ತಿರಸ್ಕಾರಕ್ಕೊಳಗಾಗುವುದೋ ಎನ್ನುವುದಾದರೆ, ಆಗ ಅಂಥವರು ಬದುಕಿಗೆ, ಸಂತಸದ ಸಾಧ್ಯತೆಗಳಿಗೆ, ನೋವು, ವಿಷಾದ, ಸಾಧನೆ ಮತ್ತು ಅನುಭವಗಳಿಗೆ ಎಲ್ಲ ಬಾಗಿಲುಗಳನ್ನು ಮುಚ್ಚಿಕೊಂಡಂತೆಯೇ. ನಮ್ಮಲ್ಲಿ ಬಹುತೇಕ ಜನರಿಗೆ ಪುನರ್ಜನ್ಮವೊದಗುವ ಸಂಭಾವ್ಯತೆ ಇರಬಹುದು. ಆದರೆ ಈಗಿನ ಈ ಬದುಕು, ಮಾಯೆಯೋ ಮತ್ತೀನ್ನೇನೇ ಆಗಿದ್ದರೂ ನಾವು ಇದನ್ನು ಒಮ್ಮೆಗೆ ಮಾತ್ರ ಬದುಕುತ್ತೇವೆ. ಇದರಲ್ಲಿ ತೊಡಗಿಸಿಕೊಳ್ಳಲು ನಮಗಿರುವ ಏಕೈಕ ಅವಕಾಶ.

ಎಲ್ಲದರಲ್ಲೂ 'ಅತಿ'ಯೇ ಹದಿಹರೆಯದ ಭಾಷೆ. ಜೀವನವೆಂದರೆ ಅತಿಗಳ ಪರಸ್ಪರ ವಿರುದ್ಧ ಧ್ರುವಗಳೆಂದು ಅಥವಾ ಶೂನ್ಯಕ್ಕೆ ಹತ್ತಿರವಾದ್ದೆಂದಾಗಲಿ ಅಥವಾ ಸಮೃದ್ಧವೆಂದಾಗಲಿ ಭಾವಿಸಬೇಕಾದ್ದಿಲ್ಲ. ಮರಣಾನಂತರದ ಬದುಕಿನ ಅಥವಾ ಬದುಕುಗಳ ಬಗ್ಗೆ ಅಥವಾ ನಿರ್ವಾಣದ ಬಗ್ಗೆಯಾಗಲಿ ಚಿಂತಿಸುವುದೆಂದರೆ, ನಾವು ಬದುಕಿನಿಂದ ಮರೆಯಾಗಬೇಕೆಂದಲ್ಲ.

* * *

ಮರುದಿನ ಬೆಳಿಗ್ಗೆ ನಾನು ಒಂದು ಹಾಡಿನೊಂದಿಗೆ ಎಚ್ಚತ್ತೆ. ಅದು ನನ್ನ ತುಟಿಗಳ ಮೇಲೆ ನಲಿಯುತ್ತಿದ್ದುದಲ್ಲ; ನನ್ನ ಹೆಂಡತಿಯ ತುಟಿಗಳ ಮೇಲೆ. ಅವಳಿಗಾಗಿ ನಾನು ಸುತ್ತಲೂ ನೋಡಿದೆ ಆದರೆ ಅವಳು ಕೊಠಡಿಯಲ್ಲಿರಲಿಲ್ಲ.

ಹೊರಗಡೆ ಕತ್ತಲಿತ್ತು. ತೆಳ್ಳನೆಯ ಗಾಳಿ, ಗಿಡಗಳ ಮೇಲಿನಿಂದ ತೂರಿ ಬಂದಿತು. ನಾನು ಒಂದೇ ಉಸಿರಿಗೆ ದೇವಾಲಯದ ಮೆಟ್ಟಿಲುಗಳನ್ನು ಓಡುತ್ತ ಹತ್ತಿ ಒಂದು ಕಂಬವನ್ನೊರಗಿ ಕುಳಿತೆ. ಒಳಗಿನಿಂದ ತೀರಾ ತಣ್ಣನೆಯ ಬೆಳಕು ಹರಿದು ಬಂತು.

ಅಮೃತ ಶಿಲೆಯೆಂದರೆ ಹೆಪ್ಪುಗಟ್ಟಿದ ಬೆಳುದಿಂಗಳೆಂದು ಆಗ ನನಗೆ ಹೊಳೆಯಿತು. ನನ್ನ ದೈಹಿಕ ಕ್ರಿಯೆಗಳು ನಿಧಾನಗೊಂಡವು. ನನ್ನ ದೇಹದ ಉಷ್ಣತೆ ಕಡಿಮೆಯಾಯಿತು. ನನ್ನ ಉಸಿರಾಟ ಎಂದಿಗಿಂತಲೂ ನಿಧಾನವಾಯಿತು. ನಾನೇ ಹಿಂದೆ ಸರಿಯುತ್ತಿರುವಂತೆ ಅನ್ನಿಸಿತು. ಅಥವಾ ಇನ್ನೂ ಸರಿಯಾಗಿ ಹೇಳಬೇಕೆಂದರೆ ನನ್ನನ್ನು ಅಷ್ಟೆಲ್ಲ ಅತಿಯಾಗಿ ಆತಂಕಕ್ಕೀಡು ಮಾಡಿದ ನನ್ನ ಬದುಕಿನ ಪರಿಳಿತಗಳಿಂದ ನನ್ನ ಕುಟುಂಬ ನನ್ನ ತಂದೆ, ಹೆಂಡತಿ, ರಾಣಿ ಕರ್ಮವತಿ ಇವರುಗಳಿಂದ ನಾನು ದೂರಾಗುತ್ತಿದ್ದೇನೆಂದು ಅನ್ನಿಸಿತು.

ನನ್ನ ಹೆಂಡತಿಯ– ಅರ್ಪಣೆ, ಕಾಣಿಕೆ ಅಥವಾ ಸಂಗೀತ– ಅದನ್ನು ಯಾರು ಹೇಗಾದರೂ ಹೇಳಲಿ ಹೇಗೆ ವಿವರಿಸಬೇಕೆಂದು ನನಗೆ ತಿಳಿಯುತ್ತಿಲ್ಲ. ಅದು ಭಗವಾನ್ ಸೂರ್ಯ ದೇವನನ್ನು ಕುರಿತಾದ ಸ್ತೋತ್ರ ಮತ್ತು ಆಹ್ವಾನವಿರಬೇಕೆಂದು ನನ್ನೆಣಿಕೆ. ಅದು ಪೂರ್ತಿಯಾಗಿ ಶಬ್ದರಹಿತವೇನಲ್ಲ, ಆದರೆ ಬಹುಮಟ್ಟಿಗೆ ಅದು ಹಾಗೆಯೇ ಇತ್ತು.

ಇದು ಮಾಮೂಲಿನ ರೀತಿಯಲ್ಲ. ಕಾರಣ, ನನ್ನ ಹೆಂಡತಿ ತನ್ನ ಧಾರ್ಮಿಕ ಅನುರಕ್ತಿಯನ್ನು ವ್ಯಕ್ತಪಡಿಸಲು ಆಯ್ಕೆ ಮಾಡಿಕೊಳ್ಳುವುದು ಕಾವ್ಯದ ಮಾರ್ಗವನ್ನು. ಅವಳ ಹಾಡು ಮತ್ತು ನೃತ್ಯಗಳು ಅವಳ ಹಾಡುಗಳ ರೂಪಾಂತರಗಳು. ಸಂಗೀತದ ಪರಿಶುದ್ಧ ರೂಪ, ಅದರ ಸಾರ ಅದರ ಅರ್ಕ ಹಾಡುವ ಮಾನವ ಕಂಠ ಎನ್ನುವುದಾದರೆ, ನಾವೇಕೆ ಶಬ್ದಗಳಿಂದ ಅದನ್ನು ಅಪಮೌಲ್ಯಗೊಳಿಸಬೇಕು? ನಾನು ಹಾಡುಗಾರನಲ್ಲವಾದ್ದರಿಂದ ಹಾಗೂ ನನ್ನದೇ ಆದ ಶಾಸ್ತ್ರೀಯ ಸಂಗೀತ ಪದ್ಧತಿ (ಘರಾನಾ) ಯನ್ನೇನೂ ಪ್ರಾರಂಭಿಸುವ ಸಾಧ್ಯತೆ ಇಲ್ಲವಾದ್ದರಿಂದ, ಆಲಾಪನೆಯು ಎಂದಾದರೂ ಹಾಡುಗಾರಿಕೆಯ ಕೇಂದ್ರ ವಸ್ತು ಆಗಲು ಸಾಧ್ಯವೆ ಎಂಬ ಬಗ್ಗೆ ನನಗೆ ಅನುಮಾನವಿದೆ. ನನ್ನ ಆಲಾಪದ ಪರಿಕಲ್ಪನೆಯನ್ನು ಕುರಿತಂತೆ ನನ್ನ ಹೆಂಡತಿಯೊಂದಿಗೆ ಚರ್ಚಿಸಿರಲಿಲ್ಲವಾದರೂ, ಇಲ್ಲಿ ಆಕೆ ಅದನ್ನು ವಿವರಿಸುತ್ತಿರಲಿಲ್ಲ, ಹಾಡುತ್ತಿದ್ದಳು. ಅದು ರಣಕ್‌ಪುರ್ ದೇವಾಲಯವೆ? ಅಥವಾ ಈ ಒಂದು ವಿಷಯದ ಬಗ್ಗೆ ನಮ್ಮಿಬ್ಬರ ಆಲೋಚನೆಯೂ ಒಂದೇ ಆಗಿದೆಯೆ?

ಈ ಋತುವಿನಲ್ಲಿ ಇಂಥ ಹವೆ ಇರುವುದು ಆಶ್ಚರ್ಯ. ತೆರೆದ ರಂಧ್ರಗಳ ಮೂಲಕ ದೇವಸ್ಥಾನದ ಅಂತಸ್ತುಗಳನ್ನು ನೋಡಿದಾಗ ಕಾರ್ಮೋಡಗಳು ತಮ್ಮ ಹಲ್ಲು ಮಸೆಯುತ್ತ ಯುದ್ಧಕ್ಕೆ ಕಾಲು ಕೆರೆದು ನಿಂತಿದ್ದುವು. ಆಗಿಂದಾಗ್ಗೆ ಭಯಂಕರ ಗುಡುಗುಗಳು ಸದ್ದು ಮಾಡುತ್ತಿದ್ದವು. ಅದು ಮಳೆಯ ಹಾಗೆ ಕಾಣುತ್ತಿತ್ತು. ಆದರೆ, ಒಂದರ ಮೇಲೊಂದು ಪೇರಿಸಿಟ್ಟ ಅಸ್ಥಿರವಾದ ದೊಡ್ಡ ಬಂಡೆಗಳ ಹಾಗೆ ಮೋಡಗಳ ದಂಡೆಗಳು ಬಿಸಿಲು ಮಿಂಚು ಮತ್ತು ಮಳೆ ಏನನ್ನೂ ಒಳಗೆ ಬಿಡುತ್ತಿರಲಿಲ್ಲ. ನನ್ನ ಹೆಂಡತಿ ಧಾವಂತವಿಲ್ಲದ, ಶಾಂತ ಆಲೋಚನಾ ಮಗ್ನ ಮನಸ್ಸಿನೊಂದಿಗೆ ಹೊರ ಹೊರಟಳು. ಅದೊಂದು ವೈವಿಧ್ಯ ಪೂರ್ಣವಾದ, ಅಸಮ ಪ್ರಮಾಣದ ಭೂದೃಶ್ಯ. ಆದರೆ ಗೊಂದಲಕರವಲ್ಲ. ತಣ್ಣನೆಯ ಖಾಲಿ ಸಾಗರಗಳು ಅಪಾರವಾಗಿ ಹಬ್ಬಿ ನಿಂತಿವೆ. ಆದರೂ ಕೈಗಳನ್ನು ಬೆಚ್ಚಗೆ ಮಾಡಿಕೊಳ್ಳಬಹುದಾದ ಸೌಮ್ಯವಾದ ಜ್ವಾಲೆಗಳನ್ನು ಹೊಮ್ಮಿಸಿದುವು. ಹಂಬಲಗಳ ಮತ್ತು ಕೈಗೂಡದ ಆಸೆಗಳ ಸಂದೇಶಗಳನ್ನು ಹೊತ್ತು ತಂದ ಭಯಂಕರ ಮಾರುತಗಳು ಮೃತ ನಗರಗಳ ಮೇಲೆ ಬೀಸಿದುವು. ಆದರೆ ಇಲ್ಲೂ ಕೂಡ ಒಂದು ಗಂಟೆ ಅಥವಾ ಒಂದೆರಡು ರಾತ್ರಿಗಳ ಕಾಲ ವಿರಮಿಸಬಹುದಾದ ಪಾರದರ್ಶಕವಾದ ನೀಲ ಕೊಳಗಳು ಅಲ್ಲಿದ್ದುವು.

ಭವಿತವ್ಯವೆನ್ನುವುದು ಮರೆತು ಬಹುಕಾಲವಾಗಿರುವ ಭೂತದಲ್ಲಿ ಕಾಣಿಸಿಕೊಂಡಿದ್ದಾಗಿತ್ತಾದ್ದರಿಂದ ಒಂದು ವೇಳೆ ನಾವು ಬೆಟ್ಟಗಳನ್ನು ಏರಿದರೆ ದಿಗಂತ

ನಮ್ಮ ಹೆಜ್ಜೆಯ ಕೆಳಗೆ ಜಾರಿ ನಮ್ಮ ಬೆನ್ನ ಹಿಂದೆ ಸರಿದು ಹೋಗುತ್ತಿತ್ತು. ಇದೀಗ ಮಂಜಿನ ತೆರೆ ಗಾಳಿಯಲ್ಲಿ ತೇಲಿ ಬಂತಾದ ಕಾರಣ ವರ್ತಮಾನವನ್ನು ನೋಡಲಾಗಲಿಲ್ಲ. ಆದರೆ ತಲ್ಲಣಗೊಳ್ಳಲು ಕಾರಣವಿಲ್ಲ. ಕಾರಣ ಈ ವಿಶ್ವದಲ್ಲಿ ಯಾವುದಾದರೂ ಒಂದು ಧ್ರುವ ನಕ್ಷತ್ರವಿದೆಯೆಂದಾದರೆ ಅದು ನಿಷ್ಠೆ ಮತ್ತು ಭರವಸೆ.

ನನ್ನ ಹೆಂಡತಿ ಸೂರ್ಯನಿಗೆ ಮೊರೆಯಿಟ್ಟಳು. ಅವಳ ಹಾಡು ಅಸಹನೆಯಿಂದ ಮತ್ತು ದರ್ಪದಿಂದ ಕೂಡಿತ್ತು. ಆದರೆ ಬಂಡೆ ಮೋಡಗಳನ್ನು ಪಕ್ಕಕ್ಕೆ ಸರಿಸಲು, ಅದು ಕಳಕಳಿಯಿಂದ ಬೇಡಿಕೊಳ್ಳಬಹುದು, ಪ್ರಾರ್ಥಿಸಬಹುದು, ಯಾವುದೇ ವಿಧವಾದ ಕುಯುಕ್ತಿಯನ್ನೂ ಬಳಸಬಹುದು. ನಾನು ಕಣ್ಣುಗಳನ್ನು ಮುಚ್ಚಿಕೊಂಡೆನು.

ಅವಳು ತನ್ನ ಕಾರ್ಯತಂತ್ರಗಳನ್ನು ಬದಲಿಸಿದಳು. ಅವಳ ದನಿ ಮಿದುವಾಯಿತು. ಆಕರ್ಷಕ ಬಾಗುಗಳು ಸೇರಿಕೊಂಡವು. ರಹಸ್ಯ ಭೇಟಿಗಳತ್ತ ಇಂಗಿತ ಮಾಡಿತು. ಅದು ಸಂದು ಬಿರುಕುಗಳೊಂದಿಗೆ ಒಲವು ಬೆಳೆಸಿತು. ಕುಣಿದಾಡುತ್ತ ಆಪ್ತವಾಯಿತು. ಆಕಾಶದ ಬಂಡೆಯ ಪ್ರಪಾತದೊಳಕ್ಕೆ ನುಸುಳಿ ಹೊರಬಂದಿತು. ಅದು ನೆಲದಾಳದ ಜಗತ್ತುಗಳೊಳಕ್ಕೆ ಮತ್ತು ನೆಲಮಾಳಿಗೆಗಳೊಳಕ್ಕೆ ತನ್ನನ್ನು ಎಳೆದುಕೊಂಡಿತು. ಮಂಜಿನ ಹಾಗೆ ಅಂಟಿಕೊಂಡಿತು. ಮತ್ತೆ ಹಿಂದೆ ಸರಿಯ ತೊಡಗಿತು. ಅದು ಬಹುಬೇಗನೆ ರಭಸವನ್ನು ತಾಳಿತು. ಅಲೆ ತ್ವರಿತ ಅಲೆಯಾಗಿ ಸುತ್ತಿಕೊಂಡಿತು. ದಾರಿ ಮಾಡಿಕೊಂಡು ಬಹಿರಂಗಕ್ಕೆ ಬರಲು ಸೆಣಸಿತು. ಯಾವುದೇ ಅಡಚಣೆಗೆ ಸಗ್ಗದ, ಜೋರಾಗಿ ಮೊರೆಯುವ ನೀರಿನ ಗೋಡೆಯಾಗಿ ಮಾರ್ಪಟ್ಟು ಎಲ್ಲ ಆಕ್ರಮಣಗಳನ್ನು ತಡೆಯಬಲ್ಲ ಅಭೇದ್ಯ ಕಪ್ಪು ಗುಮ್ಮಟಕ್ಕೆ ಬಂದು ತಾಗಿತು. ಏನೂ ಆಗಲಿಲ್ಲ. ಆನಂತರ ಭಯಂಕರವಾದ ಕರ್ಕಶ ಶಬ್ದವುಂಟಾಗಿ, ತಟ್ಟಾಡುತ್ತ ನುಜ್ಜು ಗುಜ್ಜಾಗಿ ಕುಸಿಯಿತು. ಸೂರ್ಯನು ದೇವಾಲಯದೊಳಕ್ಕೆ ಮುನ್ನುಗ್ಗಿದನು. ಆಗ ತಾನೆ ಮೂಡಿದ ಸದ್ಯದ ಸೂರ್ಯನಲ್ಲ, ಆದರೆ ಪೂರ್ತಿಯಾಗಿ ಅರಳಿದ, ತಡೆದು ನಿಲ್ಲಿಸಲಾಗದ ಸುವರ್ಣ ಆಕಾಶಕಾಯ.

ದೇವಾಲಯದ ಕೆತ್ತನೆಗಳು, ಸ್ತಂಭಗಳು, ಮಂಟಪಗಳು ಹಾಗೂ ಸ್ತಂಭೀಭೂತಗೊಳಿಸುವ ದೇವಾಲಯದ ವಿವಿಧ ಹಂತಗಳು ಇಡಿಯಾದ ಅಮೃತ ಶಿಲಾ ನಿರ್ಮಿತಿ ಮತ್ತು ಒಳಗಿದ್ದ ನಾವಿಬ್ಬರು ಎಲ್ಲರೂ ತೇಜೋಪೂರ್ಣವಾದೆವು. ನನ್ನ ಹೆಂಡತಿಯ ಹಾಡು ಪರಿಶುದ್ಧವಾದ ನಲಿವು. ದೇವಾಲಯ ವಾಲಿತು. ಹಾಗಾಗಿ ನಾವು ಗಾಳಿಯಲ್ಲಿ ಸಾಗುತ್ತಿದ್ದೆವು. ನಾವು ಬೆಳಕಿನ ವೇಗದಲ್ಲಿ ಸಾಗಿ ನಿಶ್ಚಲತೆಯ ಹೃದಯವೇ ಆದ ವಿಶ್ವದಲ್ಲಿದ್ದೆವು.

* * *

ಚಿತ್ತೂರಿನಿಂದ ಬಂದಿದ್ದ ಹರಿಕಾರರು ದೇವಾಲಯದ ಮೆಟ್ಟಿಲ ಕೆಳಗೆ ನಮಗಾಗಿ ಕಾಯುತ್ತಿದ್ದರು. ದೆಹಲಿಯ ಸುಲ್ತಾನನು ಮೇವಾಡದ ಪಡೆಗಳ ಮೇಲೆ ಎರಡನೇ ಬಾರಿಗೆ ಆಕ್ರಮಣ ಮಾಡಿ, ಸೋತು ಮತ್ತೊಮ್ಮೆ ಪಲಾಯನ ಗೈದಿದ್ದನು. ನಾವು ಕೂಡಲೇ ರಾಜಧಾನಿಗೆ ವಾಪಸಾಗಬೇಕಿತ್ತು. ನಾವು ಬಹಳ ಶ್ರಮವಹಿಸಿ ಕುದುರೆಯ ಬೆನ್ನೇರಿ ಕುಂಭಲ್‌ಗರ್ ತಲುಪಿ ಮರುದಿನ ರಾತ್ರಿಯನ್ನು ಅಲ್ಲಿ ಕಳೆದೆವು. ನಾನು ನಸುಕಿನಲ್ಲಿ ಉದ್ಯಾನವನಕ್ಕೆ ಹೋಗಿ, ಐದು ನೂರು ಪಾರಿಜಾತ ಪುಷ್ಪಗಳನ್ನು ನನ್ನ ಪೇಟದಲ್ಲಿ ಹಾಕಿಕೊಂಡು ಬಂದು, ರಾಜಕುಮಾರಿಯ ಮೇಲೆ ಸುರಿದೆನು. ಅವಳು ಎಚ್ಚತ್ತು, ತನ್ನ ಶರೀರದ ಮೇಲೆ ಹಾಗೂ ನೆಲದ ಮೇಲೆಲ್ಲಾ ವಿಪುಲವಾಗಿ ಹರಡಿದ್ದ ಹೂಗಳನ್ನು ವಿಸ್ಮಯದಿಂದ ನೋಡಿದಳು. ಅವುಗಳನ್ನು ಮತ್ತೆ ಮತ್ತೆ ತನ್ನ ಅಂಗೈಗಳಲ್ಲಿ

ತುಂಬಿಕೊಳ್ಳುತ್ತ, ತನ್ನ ಶಿರವನ್ನು ಹಿಂದಕ್ಕೊಲೆದು ತನ್ನ ಮುಖ, ಪಾರದರ್ಶಕವಾದ ಕೊರಳು, ಸ್ತನಗಳು ಹಾಗೂ ತನ್ನ ದೇಹದ ಉಳಿದ ಭಾಗದ ಮೇಲೆಲ್ಲ ಜೀಳುವ ಹಾಗೆ ಸುರುವಿ ಕೊಂಡಳು.

"ನಾವು ಇಲ್ಲಿಂದ ಹೊರಡದೆ ಇರುವಂತಾಗಿದ್ದರೆ ಒಳಿತಿತ್ತೆಂದು ಹಾರೈಸುವೆ. ನೀವು ಮತ್ತಿನ್ನೆಂದೂ ಪಾರಿಜಾತದ ಹೂಗಳನ್ನು ತರುವುದಿಲ್ಲ".

"ನಾನು ತರುವೆ. ಇಲ್ಲಿಂದ ಅದರದೊಂದು ಕೊಂಬೆಯನ್ನು ತೆಗೆದುಕೊಂಡಿದ್ದೇನೆ".

ಅಧ್ಯಾಯ 30

ಪರಿಸ್ಥಿತಿಗಳು ಹೆಚ್ಚೇನೂ ಬದಲಾಗಿರಲಿಲ್ಲ. ನಾನು ತಂದೆಯವರ ಪಾದಕ್ಕೆ ನಮಿಸುವ ಸಲುವಾಗಿ ಅವರನ್ನು ಭೇಟಿಯಾಗಲು ಅವಕಾಶ ನೀಡಬೇಕೆಂದು ಕೇಳಿದಾಗ ತಂದೆಯವರು ತಮ್ಮ ಅನಾರೋಗ್ಯದ ಕಾರಣವನ್ನು ಮುಂದಿಟ್ಟರು. ನನ್ನನ್ನು ಅವರು ವಾಪಸ್ ಕರೆಸಿಕೊಂಡದ್ದೇಕೆ?

ಸಾಯಂಕಾಲ ನಾನು ವಿಜಯ ಸಭಾಂಗಣಕ್ಕೆ ಹೋದಾಗ, ಮನುಷ್ಯರ ಹಾಗೆ ವೇಷ ಮರೆಸಿಕೊಂಡ, ಪಟ್ಟಿಯನ್ನು ಕಟ್ಟಿಕೊಂಡ ಪ್ರತಿಕೃತಿಯೊಂದು ಸಿಂಹಾಸನದತ್ತ ಪ್ರಯಾಸದಿಂದ ಎಳೆದುಕೊಂಡು ಹೋಯಿತು. ಅವರ ಮುಖವನ್ನು ಹೊಲಿಯಲಾಗಿತ್ತು. ದೆಹಲಿಯ ಕೆಲವು ಸೈನಿಕರು ಅವರ ನಿಶ್ಚೇಷ್ಟ ತೋಳನ್ನು ಕತ್ತರಿಸಲು ಯತ್ನಿಸಿದ್ದರು ಹಾಗೂ ಸುಸ್ಥಿತಿಯಲ್ಲಿದ್ದ ಒಂದು ಕಾಲನ್ನು ತೊಡೆಯ ಬಳಿ ಕತ್ತರಿಸಿ ಗಾಯ ಮಾಡಿದ್ದರು. ನಾವೆಲ್ಲರೂ ಎದ್ದು ತಲೆ ಬಾಗಿದೆವು. ಅಪರಿಚಿತನೊಬ್ಬನು ಒಕ್ಕಣ್ಣಿನ ತಿರಸ್ಕಾರದ ನೋಟವೆಂದು ಹೇಳಬಹುದಾದ ನೋಟದಿಂದ ಅವರು ನಮ್ಮ ಕಡೆ ನೋಡಿದರು ಮತ್ತು ಎಲ್ಲರೂ ದಿಗ್ಭ್ರಮೆಗೊಳ್ಳುವ ಹಾಗೆ ತಮ್ಮ ಸುಸ್ಥಿತಿಯಲ್ಲಿದ್ದ ಕೈಯನ್ನು ಭುಜದ ಮೇಲೆ ಎತ್ತಿ ನಮ್ಮೆಲ್ಲರಿಗೂ ಹೃತ್ಪೂರ್ವಕವಾಗಿ ನಮಸ್ಕರಿಸಿದರು. ಯಾವ ರಾಣಾನೂ ನಮಿಸುವ ಸಲುವಾಗಿ ತಮ್ಮ ಕೈಯನ್ನು ಭುಜದ ಮೇಲೆ ಎತ್ತುವುದಿಲ್ಲ ಎಂದ ಮೇಲೆ ಮಹಾಪ್ರಭುಗಳು ತಮ್ಮ ಪ್ರಜೆಗಳು ಮತ್ತು ಕೈ ಕೆಳಗಿನವರಿಗೆ ಹೇಗೆ ತಾನೆ ನಮಸ್ಕರಿಸಿ ಯಾರು? ಇದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಸಭೆ ಮುಜುಗರಕ್ಕೊಳಗಾಗಿ ನಿಂತಿತ್ತು. ಆದರೆ ವಿಸ್ಮಯಗಳು ಆಗತಾನೆ ಆರಂಭವಾಗಿದ್ದವು. ನಮ್ಮ ವಾಡಿಕೆಯ ಪೀಠಗಳಲ್ಲಿ ಕುಳಿತುಕೊಳ್ಳಲು ನಮಗೆ ಆಜ್ಞಾಪಿಸಿದರು. ಆನಂತರ ಇತರೆ ಎಲ್ಲಾ ಕುಲೀನ ವರ್ಗದವರಂತೆ, ಸಿಂಹಾಸನದ ಪಕ್ಕದ ಮೇಲಿನ ನೆಲದ ಮೇಲೆ ಆಸೀನರಾದರು.

ಆಸ್ಥಾನಿಕರಿಗೆ ಮತ್ತು ಜೋಡಿದಾರರಿಗೆ ತಮ್ಮ ಭಾವನೆಗಳನ್ನು ನಿಯಂತ್ರಿಸಲಾಗಲಿಲ್ಲ. ಮಹಾಪ್ರಭುಗಳ ಮಾನಸಿಕ ಆರೋಗ್ಯ ಹಾಗೂ ರಾಜ್ಯವಾಳಲು ಅವರಿಗಿರುವ ದೈಹಿಕ ಆರೋಗ್ಯ ಕುರಿತು ಅವರವರಲ್ಲೇ ಪಿಸುಗುಟ್ಟ ತೊಡಗಿದರು. ನಾನು ಹೊರ ನಡೆದು ತಂದೆಯವರಿಗೆ ದೀರ್ಘ ದಂಡ ನಮಸ್ಕಾರ ಮಾಡಿದೆ. ಸಭೆಯ ಗಮನವನ್ನು ಬೇರೆಡೆಗೆ ತಿರುಗಿಸಲು ನನಗಿದ್ದ ಮಾರ್ಗ ಅದೊಂದೇ. ಥಟ್ಟನೆ ಏನನ್ನಾದರೂ ಆಡಿಬಿಡುವುದು ಅವರ ರೀತಿ. "ಭಗವಾನ್ ಏಕಲಿಂಗಜೀಯ ಕೃಪಾಶೀರ್ವಾದ ನಿನ್ನ ಮೇಲಿರಲಿ" ಎಂದು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ನನ್ನ ಹೆಂಡತಿ ನನ್ನ ಜೊತೆಗೂಡಿ ನಾನು

ಮಾಡಿದಂತೆಯೇ ಮಾಡಿದಳು. ಬಹಿರಂಗ ಸಭೆಯಲ್ಲಿ ಹಾಗೆಲ್ಲಾ ಮಹಾ ಪ್ರಭುಗಳಿಗೆ ರಾಜಕುಮಾರಿ ಗೌರವ ತೋರುವುದು ವಾಡಿಕೆಯಲ್ಲ. ಆದರೆ ಅದೊಂದು ನೆನಪಿಡಬೇಕಾದಂಥ ಅಸಾಂಪ್ರದಾಯಿಕ ದಿನವಾಗಿ ಪರಿವರ್ತಿತವಾಗುವುದರಲ್ಲಿತ್ತು. ತಂದೆಯವರು ನನ್ನ ಹೆಂಡತಿಯೊಂದಿಗೆ ಹರಟುತ್ತಿದ್ದರು.

"ನಾನೆಂದೂ ಇದಕ್ಕೆ ಮುಂಚೆ ದೆವ್ವ ನೋಡಿರಲಿಲ್ಲ, ರಾಜಕುಮಾರಿ, ನೀನು ನೋಡಿದ್ದೀಯಾ"

"ನಾನು ಇನ್ನೂ ಕೆಟ್ಟದನ್ನು ನೋಡಿದ್ದೀನಿ. ನಾಳೆಯಿಂದ ನಾನು ನಿಮಗೆ ಅಡಿಗೆ ಮಾಡಿ ಹಾಕ್ತೀನಿ ಮತ್ತು ಹದಿನೈದು ದಿನದಲ್ಲಿ ನಿಮ್ಮನ್ನು ಗುಣಪಡಿಸ್ತೀನಿ"

"ಕಿರಿಯ ಸಂತಳಿಗೆ ಅಡಿಗೆ ಮಾಡೋದೇನು ಗೊತ್ತು"

"ನನ್ನಿಂದ ಮೆರ್ತಾದ ಊಟ ಸವಿಯಲು ದೇವತೆಗಳು ಕೂಡ ಬರುತ್ತಾರೆ ಮಹಾಸ್ವಾಮಿ"

"ಇದರ ಮೇಲೆ ಈ ನಿನ್ನ ಮಾತನ್ನು ನಾನು ಒಪ್ಪಬಹುದು ರಾಜಕುಮಾರಿ"

"ನಿಮಗೆ ಅನ್ಯಮಾರ್ಗವಿಲ್ಲ ಮಹಾಪ್ರಭು" ಮತ್ತೆ ಮೃದುವಾಗಿ "ತಾವು ಸಿಂಹಾಸನದ ಮೇಲೆ ಕುಳಿತುಕೊಳ್ಳಲು ನಾನು ಸಹಾಯ ಮಾಡಲೆ" ಎಂದು ಕೇಳಿದಳು.

ಅವರು ಮುಗುಳ್ನಕ್ಕು ತಲೆ ಆಡಿಸಿದರು.

ಪಿಸು ಮಾತಿನ ಹರಟೆಯೆಲ್ಲಾ ಮುಗಿದ ಮೇಲೆ ತಂದೆಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

"ನನ್ನ ಸಾಮ್ರಾಜ್ಯದ ಶ್ರೀಮಂತರೆ, ರಾವ್‌ಗಳೆ ರಾವತರೆ, ರಾಜರುಗಳೆ, ಈ ರಾಜ್ಯದಲ್ಲಿರುವ ಅತ್ಯುನ್ನತರು ಹಾಗೂ ಅತಿ ಸಮರ್ಥರೆ, ಸ್ನೇಹಿತರೆ ಮತ್ತು ಮೇವಾಡದ ಪ್ರಭುಗಳೆ," ಅವರ ದನಿ ತಗ್ಗಿತ್ತು ಮತ್ತು ಅತ್ಯಂತ ಭಾವುಕವಾಗಿತ್ತು. "ನಿಮಗೆ ನಮ್ಮ ಸ್ವಾಗತ. ಈ ಮಹಾನ್ ಹಾಗೂ ಸಂತಸದ ವಿಜಯವನ್ನು ನಮ್ಮೊಂದಿಗೆ ಹಂಚಿಕೊಳ್ಳುವ ಸಲುವಾಗಿ ನಮ್ಮೊಂದಿಗೆ ನೀವಿರುವುದು ನಮಗೆ ತುಂಬ ಗೌರವದ ವಿಷಯ. ದೆಹಲಿಯ ಸುಲ್ತಾನರಿಗೆ ನಾವು ಭಾರೀ ಸೋಲುಂಟು ಮಾಡುತ್ತಿರುವುದು ಇದು ಎರಡನೆಯ ಬಾರಿ. ಇಬ್ರಾಹಿಂ ಲೂದಿಯವರು ಶಾಂತಿ ಒಪ್ಪಂದಕ್ಕೆ ಕೋರಿರುವುದಷ್ಟೇ ಅಲ್ಲ, ನಮ್ಮೆಲ್ಲಾ ನಿಯಮ ನಿರ್ಬಂಧಗಳಿಗೆ ಒಪ್ಪಿಗೆ ನೀಡಿದ್ದಾರೆ. ನಿಮ್ಮ ನೆರವು, ಸಹಕಾರ ಮತ್ತು ಮೇವಾಡದ ಬಗ್ಗೆ ನಿಮ್ಮ ನಿಷ್ಠೆ ಇಲ್ಲದಿದ್ದರೆ, ನಾವು ಇದನ್ನು ಸಾಧಿಸಲಾಗುತ್ತಿರಲಿಲ್ಲ. ನಾವು ನಿಜಕ್ಕೂ ನಿಮ್ಮೆಲ್ಲರಿಗೆ ಆಭಾರಿಗಳಾಗಿದ್ದೇವೆ. ನಾವು ಸಮ್ಮೇಳನ ಸಭಾಂಗಣ. ಅನಂತರ ಕವಿಗೋಷ್ಠಿ ಹಾಗೂ ಪಟಾಕಿಗಳ ಪ್ರದರ್ಶನವೂ ಸೇರಿರುವ ವಿಜಯದ ಸಮಾರಂಭಕ್ಕೆ ಹೋಗುವ ಮುನ್ನ ಒಂದು ಸಣ್ಣ ಪ್ರಕಟಣೆಯನ್ನು ಮಾಡಬೇಕಾಗಿದೆ."

"ನನ್ನ ರಾಜ್ಯದ ಶ್ರೀಮಂತರೆ ತಮಗೆಲ್ಲಾ ನಮ್ಮ ಹಿಂದೂ ಪದ್ಧತಿ ಮತ್ತು ಸಂಸ್ಕೃತಿಗಳ ಪರಿಚಯವಿದೆ." ಧ್ವನಿ ಒಮ್ಮೆಲೇ ಬದಲಾಗಿ ಬಿಟ್ಟಿತ್ತು. ಎರಡು ಮೈಲಿ ದೂರದಲ್ಲಿರುವ ಪ್ರಾಚೀನ ಪಟ್ಟಾಭಿಷೇಕ ಸಮಾರಂಭದ ಮೈದಾನದ ತನಕ ಕೇಳಬಹುದಿತ್ತು. "ನಾವು ಭಿನ್ನವಾದ ಮೂರ್ತಿಯನ್ನು ಪೂಜಿಸುವುದಿಲ್ಲ." ಅವರು ಸ್ವಲ್ಪ ತಡೆದರು. ಎಲ್ಲರ ಹಾಗೆ ನಾನು ಕೂಡ ಅವರು ಅದೇನು ಹಾಳಾದ್ದು ಹೇಳುವುದಕ್ಕೆ ಹೊರಟಿದ್ದಾರೋ ಎಂದು ವಿಸ್ಮಿತನಾದೆ. "ಒಂದು ಸಣ್ಣಗೀಚು, ಒಂದು ಸಣ್ಣ ಚೂರು ಎದ್ದರೂ ಪವಿತ್ರ ಮೂರ್ತಿ ಪವಿತ್ರವಾಗುಳಿಯುವುದಿಲ್ಲ. ನಾವದಕ್ಕೆ ಪೂಜೆ ಸಲ್ಲಿಸುವುದಿಲ್ಲ. ಅದಕ್ಕೆ ಹಾರ ಹಾಕುವುದಿಲ್ಲ.

ಅದಕ್ಕೆ ಅಡ್ಡ ಬೀಳುವುದಿಲ್ಲ. ಅದರ ದೈವತ್ವ ಹೋಗಿ ಬಿಡುತ್ತದೆ. ಆಗ ಅದರ ಬದಲಿಗೆ ನೂತನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತೇವೆ. ನನ್ನ ಗೌರವಾನ್ವಿತ ಮಿತ್ರರೆ, ನಾನಿಂದು ನಿಮ್ಮೆದುರಿಗೆ ಭಗ್ನ ಹಾಗೂ ಅಪವಿತ್ರಗೊಂಡ ಪ್ರತಿಮೆಯ ಹಾಗೆ ನಿಂತಿದ್ದೇನೆ. ವಿಜಯ ಬಹಳ ದೊಡ್ಡ ನಷ್ಟವನ್ನು ತಂದಿದೆ. ನಾನು ಅಡಿಯಿಂದ ಮುಡಿಯವರೆಗೆ ಭಗ್ನಗೊಂಡಿದ್ದೇನೆ ಮತ್ತು ಗಾಯಗೊಂಡಿದ್ದೇನೆ. ಇಷ್ಟು ವರ್ಷಗಳವರೆಗೂ ಮೇವಾಡವನ್ನು ಮುನ್ನಡೆಸಿದ್ದೇ ನನಗೊಂದು ಮಹಾಗೌರವ. ಆದರೆ ಯಾವಾಗ ನಿವೃತ್ತಿ ಪಡೆಯಬೇಕೆಂದು ಅರಿತವನೇ ವಿವೇಕಿಯಾದ ದೊರೆ. ನನ್ನ ಮಹಾರಾಜ ಪದವಿಯನ್ನು ಬಿಟ್ಟು ಕೊಡಲು ತಾವು ಅನುಮತಿ ನೀಡಬೇಕೆಂದು ಕೋರುತ್ತೇನೆ. ನನ್ನ ರಾಜತ್ವದ ಕಾರ್ಯಗಳಿಂದ ನನ್ನನ್ನು ಬಿಡುಗಡೆಗೊಳಿಸಿ, ನನ್ನ ಬದಲಿಗೆ ನೂತನ ಮತ್ತು ಕಳಂಕರಹಿತ ಸಾರ್ವಭೌಮನೊಬ್ಬನನ್ನು ತಾವು ನಿಯುಕ್ತಿ ಮಾಡಿ. ದೇಹ ಮತ್ತು ಪ್ರಾಣವನ್ನು ಕಾಪಾಡಿಕೊಂಡು ಹೋಗಲಗತ್ಯವಾದಷ್ಟು ಮಾತ್ರ, ತೀರ ಸಮೃದ್ಧವಾದ ಜೀವನ ನಿರ್ವಹಣೆ ಅಲ್ಲ, ನೀಡಬೇಕೆಂದಷ್ಟೇ ನಾನು ಕೇಳುವುದು. ಅಲ್ಲದೆ ನನ್ನ ಉಳಿದ ಬದುಕಿನಲ್ಲಿ ಬೇರೆ ಯಾವುದೇ ಒಬ್ಬ ಯೋಧ ಮತ್ತು ಕುಲೀನ ಶ್ರೀಮಂತನ ಹಾಗೆ ನಮ್ಮ ನಾಡಿನ ಸೇವೆ ಸಲ್ಲಿಸಲು ಈ ಸಭೆ ನನಗೆ ಅವಕಾಶ ಮಾಡಿಕೊಡಬೇಕು."

ನಾನು ಬಾಯಿ ಬಿಗಿದುಕೊಂಡು ಸುಮ್ಮನಿರಬಹುದಾಗಿತ್ತು ಭಲೇ! ಭೇಷ್! ಜಯಕಾರ ಹೇಳಬಹುದಿತ್ತು. ಅದು ಅಂಥ ಉತ್ಕೃಷ್ಟ ರಂಗಮಂದಿರವಾಗಿಲ್ಲದೆ ಹೋದರೆ ನನಗಂತೂ ಇದಕ್ಕಿಂತ ಹೆಚ್ಚಿನ ನಟನೆಯ ವಿಷಯ ಏನೇನೂ ತಿಳಿದಿಲ್ಲ. ಅದೇನು ಮನುಷ್ಯನ ಮಹಾ ನಮ್ರತೆ, ವಿನಯ ಮತ್ತು ಘನತೆ! ರಜಪೂತ ಯುವಕರ ಹಾಗೂ ಹಿರಿಯರ ಕಣ್ಣಿನಲ್ಲಿ ನೀರಿತ್ತು. ನಿಮ್ಮ ಹತ್ತಿರ ಬೇಕಾದ ಹಾಗೆ ಯೋಜನೆಗಳು ಇರಬಹುದು. ಆದರೆ ತಂದೆಯವರ ಹತ್ತಿರ ಬೇರೆ ಎಲ್ಲಾ ಯೋಜನೆಗಳು ವಿಫಲವಾದರೆ ಬಳಸಬಹುದಾದ ರಹಸ್ಯ ಯೋಜನೆ ಇರುತ್ತೆ. ನಿಮ್ಮನ್ನು ಒರೆಸಿ ಹಾಕುವುದು ಖಂಡಿತ. ಸಭೆಯಲ್ಲಿದ್ದವರ ಗೊಣಗಾಟ ಇನ್ನೂ ಹೆಚ್ಚಾಗುತ್ತಿರುವುದು ಕೇಳಿಸುತ್ತಿತ್ತು. ಬಹಳ ಸುಲಭವಾಗಿ ಮೋಸ ಹೋಗಿ ಬಿಡುವಂಥ ಮೂರ್ಖರು, ಇಷ್ಟೆಲ್ಲ ವರ್ಷಗಳ ವಿಜಯಗಳ ಮತ್ತು ದೈಹಿಕ ಗಾಯಗಳ ನಂತರ, ಮಹಾ ಪ್ರಭುಗಳು, ರಾಜೀನಾಮೆ ಕೊಡಲು ಈ ಸಂದರ್ಭವನ್ನೇಕೆ ಆಯ್ಕೆ ಮಾಡಿಕೊಂಡಿದ್ದಾರೆಂದು ತಮ್ಮಲ್ಲೇ ಒಂದು ಪ್ರಶ್ನೆ ಕೇಳಿಕೊಳ್ಳಲಾದರೂ ನಿಧಾನಿಸಲಿಲ್ಲ. ಅವರು ಏನು ಮಾಡಲಿಕ್ಕೆ ಹೊರಟಿದ್ದರು? ಅವರು ಏನು ಆಟ ಆಡುತ್ತಿದ್ದರು? ಮೇವಾಡದ ಈ ಮಹಾಮೂರ್ತಿಗೆ ಏನು ಬೇಕಾಗಿದೆ ಎಂಬುದನ್ನು ಸರಳ ಭಾಷೆಯಲ್ಲಿ ಏಕೆ ಹೇಳಬಾರದು? ಆದರೆ ನಾನು ಏಕೆ ವಿಷಯಗಳನ್ನು ಇಷ್ಟೊಂದು ಆತುರ ಪಡಿಸುತ್ತಿದ್ದೇನೆ? ಕೆಲವೇ ನಿಮಿಷಗಳಲ್ಲಿ ಬೆಕ್ಕು ಚೀಲದಿಂದ ಹೊರಕ್ಕೆ ಬರಲೇಬೇಕು. ಒಂದು ವೇಳೆ ತಂದೆಯವರು ತಮ್ಮ ಜನಪ್ರಿಯತೆಯನ್ನು ರುಜುವಾತುಪಡಿಸುವ ಪ್ರಯತ್ನದಲ್ಲಿದ್ದರೆ ಅವರು ಅದನ್ನು ಮನದಟ್ಟುಮಾಡಿಕೊಟ್ಟಿದ್ದಾರೆ. ತಮ್ಮ ರಾಜನಿಷ್ಠೆಯನ್ನು ಪ್ರದರ್ಶಿಸಲು ಚೀರಿ ಗದ್ದಲ ಎಬ್ಬಿಸಿ ಒಬ್ಬರು ಇನ್ನೊಬ್ಬರೊಂದಿಗೆ ಸ್ಪರ್ಧಿಸುತ್ತಿದ್ದರು. ಈಗ್ಗೆ ಕೆಲವೇ ವರ್ಷಗಳ ಹಿಂದೆ ತಂದೆಯವರನ್ನು ಸಿಂಹಾಸನದಿಂದ ಇಳಿಸಲು ಪ್ರಯತ್ನಿಸಿದ್ದ ನನ್ನ ತಮ್ಮ ವಿಕ್ರಮಾದಿತ್ಯನು ಈಗ ತನ್ನ ಹುಚ್ಚು ಪಿತೃ ಪ್ರೇಮ ಪ್ರದರ್ಶನದ ಸ್ಪರ್ಧೆಯಲ್ಲಿ ಎಲ್ಲರನ್ನೂ ಹಿಂದೆ ಹಾಕಿದ್ದಾನೆ ಹಾಗೂ ಒಂದು ವೇಳೆ ತಂದೆಯವರೇನಾದರೂ ಸಿಂಹಾಸನದಿಂದ ಕೆಳಗಿಳಿದದ್ದೇ ಆದರೆ ತನ್ನ ಕೊರಳು ಕೊಯ್ದುಕೊಳ್ಳುವುದಾಗಿ ಪ್ರತಿಜ್ಞೆ ಮಾಡುತ್ತಿರುವುದನ್ನು ನೋಡುವುದೇ ಒಂದು ಕೌತುಕ.

ನಾನಾಗಿ ನಾನೇ ಯಾರ ಕಣ್ಣಿಗೂ ಬೀಳದಂತಿದ್ದುಬಿಟ್ಟಿದ್ದೆನೆಂಬುದನ್ನು ಹೇಳಬೇಕಾದ್ದೇ ಇಲ್ಲ. ಇದಕ್ಕೆ ನನ್ನನ್ನು ನಾನೇ ದೂಷಿಸಿಕೊಳ್ಳಬೇಕೇ ಹೊರತು ಬೇರೆ ಯಾರನ್ನೂ ಅಲ್ಲ. ನೀವೊಂದು ವೇಳೆ ಸಾರ್ವಜನಿಕ ವ್ಯಕ್ತಿಯಾಗಿದ್ದು ಹಾಗಿರಬೇಕೆಂದಿದ್ದರೆ, ನೀವು ಪ್ರದರ್ಶನ ಕೌಶಲಕ್ಕೆ ನಾಚುವಂತಿಲ್ಲ. ಪ್ರಾಮಾಣಿಕ ಹಾಗೂ ನಿಷ್ಠನಾಗಿದ್ದರಷ್ಟೇ ಸಾಲದು. ನಿಜ ಹೇಳಬೇಕೆಂದರೆ, ನಿಮ್ಮನ್ನು ಹಾಗೆಂದು ತಿಳಿದಿರುವವರೆಗೂ ನೀವು ಹಾಗಿಲ್ಲದೆ ಹೋದರೂ ಏನೂ ಚಿಂತೆಯಿಲ್ಲ. ನಾನೇಕೆ ನನ್ನ ಬಾಯಿ ಕಟ್ಟಿದ್ದೆ? ಅವರೆಲ್ಲರ ಜೊತೆ ಸ್ಪರ್ಧಿಸಿ, ಸತ್ಯ ಸತ್ಯವೇ ಆಗಿರುವ ಅವರು ಸಿಂಹಾಸನವನ್ನು ತೊರೆಯುಲು ನಾನು ಅವರಿಗೆ ಅನುಮತಿಸುವುದಿಲ್ಲ ಎಂದು ತಂದೆಯವರಿಗೇಕೆ ಹೇಳಲಿಲ್ಲ.?

ನೀವು ಬಯಸುವುದಾದರೆ ಹೆಚ್ಚು ನಿಷ್ಠುರವಾದ ದೃಷ್ಟಿಯಿಂದ ನೋಡೋಣ. ಎಲ್ಲವನ್ನೂ ಕಿತ್ತೊಗೆದು ಅವರು ಹೊರನಡೆದು ಬಿಟ್ಟರೆ ಏನಾದೀತು? ಅವರ ಕೋರಿಕೆಯಂತೆ, ಆಸ್ಥಾನಿಕರು ವಿಕ್ರಮಾದಿತ್ಯನನ್ನು ಅವರ ಉತ್ತರಾಧಿಕಾರಿಯೆಂದು ನೇಮಿಸಿದರೆ ಏನಾಗುತ್ತದೆ? ನೀವು ನೋಡಿದ ಹಾಗೆ ಅವರೆಲ್ಲರೊಂದಿಗೆ ನಾನೂ ಕತ್ತೆಯ ಹಾಗೆ ಅರಚುವುದು ಬಿಟ್ಟು ನನಗೆ ಬೇರಾವ ಆಯ್ಕೆಯೂ ಇರುವುದಿಲ್ಲ. ಈಗ ತೀರಾ ತಡವಾಗಿದೆ. ನನ್ನ ಅರುಚಿ ಮತ್ತು ಸಂಕೋಚಗಳು ಪ್ರದರ್ಶಕ ಪ್ರವೃತ್ತಿಯನ್ನು ಸೋಲಿಸಿ, ನನ್ನಲ್ಲಿ ನೆಲಸಲು ನಾನು ಅವಕಾಶ ಮಾಡಿಕೊಟ್ಟಿದ್ದೆ. ಜೊತೆಗೆ ಮೇವಾಡದ ಜಮೀನುದಾರರು ಮತ್ತು ಸ್ನೇಹಿತರ ವಿಷಯಕ್ಕೆ ನ್ಯಾಯವಾಗಿ ನಡೆದುಕೊಂಡಿರಲಿಲ್ಲ. ಅವರ ಖಾಸಗಿ ಮಹಾತ್ವಾಕಾಂಕ್ಷೆಗಳು ಏನೇ ಇರಲಿ, ಅವರು ತಂದೆಯಪರನ್ನು ಗೌರವಿಸುತ್ತಿದ್ದರು ಹಾಗೂ ಅವರಲ್ಲಿ ಮತ್ತು ಅವರ ನಾಯಕತ್ವದಲ್ಲಿ ಅವರಿಗೆ ನಂಬಿಕೆ ಇತ್ತು. ನನ್ನ ಮಾವ ಲಕ್ಷ್ಮಣ ಸಿಂಹಜೀಯವರು ನನ್ನ ಕಡೆ ಛೇಡಿಸುವ ಹಾಗೆ ನೋಡುತ್ತಿರುವುದನ್ನು ಗಮನಿಸಿದೆ. ಅವರು ನನ್ನ ತಂದೆಯವರ ಸಹೋದ್ಯೋಗಿ ಮತ್ತು ಸಮಕಾಲೀನ. ಅವರು ತಮ್ಮ ನಾಲಿಗೆಯನ್ನು ಬಿಗಿ ಹಿಡಿಯಲು ಸಾಧ್ಯವಾಯಿತು. ಅವರ ಉದ್ದೇಶಗಳನ್ನು ಯಾರೊಬ್ಬರೂ ಪ್ರಶ್ನಿಸಲಾರರು.

ಎರಡು ನಿಮಿಷಗಳ 'ಆಗುವುದಿಲ್ಲಗಳು' ಎಲ್ಲರಿಗೂ ಮನದಟ್ಟು ಮಾಡಿ ಬಿಡುತ್ತಿದ್ದುವು. ಆದರೆ ಮಹಾಪ್ರಭುಗಳು ಐದು ನಿಮಿಷಗಳ ತನಕವೂ ಅವರೆಲ್ಲ ಮುಂದುವರಿಯಲು ಬಿಟ್ಟರು. ಮಹಾಪ್ರಭುಗಳು ಯಾವ ಮುಚ್ಚು ಮರೆಯೂ ಇಲ್ಲದೆ ಪ್ರಕಟವಾಗಿಯೇ ಮಾಡಿದ್ದ ಭಾವಾವೇಶದ ವಾದವನ್ನು ತಪ್ಪೆಂದು ಖಂಡಿಸುವ ಹೊಣೆ ಪಾಲಂಬರ್‌ನ ರತನ್ ಸಿಂಹ ಅವರ ಮೇಲೆ ಬಿದ್ದಿತು. ಅವರು ಅದೆಷ್ಟು ಉತ್ಸಾಹ ಮತ್ತು ಮನಃಪೂರ್ವಕವಾಗಿ ಈ ಕಾರ್ಯವನ್ನು ನಿರ್ವಹಿಸಿದರು. ಆ ಸಜ್ಜನ ಮನುಷ್ಯನಲ್ಲಿ ಮೋಸ ಅಥವಾ ನಟನೆಯ ನೆರಳೂ ಇರಲಿಲ್ಲ. ಇತರೆ ನಮ್ಮ ಎಲ್ಲ ಹಿರಿಯರ ಹಾಗೆ ಅವರ ಸ್ವಾಮಿ ನಿಷ್ಠೆ ಎಂದರೆ ತಾವಾಡಿದ ಒಂದೊಂದು ಮಾತೂ ಎಂದು ಅವರ ನಂಬಿಕೆ ಹಾಗೂ ರಾಜರು ನೀಡಿದ ಬಿರುದು ಹಾಗೂ ಕಾರ್ಯ ಎರಡನ್ನೂ ತ್ಯಜಿಸುವುದಾಗಿ ತಿಳಿಸಿದರು. ತಮ್ಮ ಜಮೀನುದಾರರು ಮತ್ತು ಆಸ್ಥಾನಿಕರನ್ನು ಎಷ್ಟೊಂದು ನಯವಾಗಿ ತಮಗೆ ಬೇಕಾದ ರೀತಿಯಲ್ಲಿ ಕುಶಲಪೂರ್ವಕವಾಗಿ ನಿಭಾಯಿಸಿದ್ದರು.

ನಾವು ದೈವದತ್ತವಾಗಿ ರಾಜರಾಗಿದ್ದೆವು. ಸಾಕ್ಷಾತ್ ಮಹಾಶಿವನೇ ಆದ ಏಕಲಿಂಗಜೀ ದೇವರ ಈ ಲೋಕದ ಪ್ರತಿನಿಧಿಗಳಾಗಿದ್ದೆವು. ಕೇವಲ ಒಂದು ಸರಳ ಸಾಧನವಾದ ಉಪಮಾನದಿಂದ ತಂದೆಯವರು ಅತ್ಯಂತ ಅಪಾಯಕಾರಿಯೂ ಸಂದಿಗ್ಧವೂ ಆದ ಹಂತವನ್ನು ತಲುಪಿದ್ದರು ಮತ್ತು ತಮಗೆ ದೈವತ್ವವನ್ನು ಆರೋಪಿಸಿಕೊಂಡಿದ್ದರು. ಇಷ್ಟಾದರೂ ಅವರೇಕೆ ಸಿಂಹಾಸನದಲ್ಲಿಯೇ ಮುಂದುವರಿದು ಮಹಾರಾಣಾ ಅವರ ಪಾಲಿಗೆ ಬರುವ

ಕರ್ತವ್ಯಗಳನ್ನು ಅವರು ನಿರ್ವಹಿಸಿಕೊಂಡು ಹೋಗಬೇಕೆಂದು ರಾವತ್ ರತ್ತನ್ ಸಿಂಪ ಮತ್ತು ಇತರೆ ಹಿರಿಯರು ಒಬ್ಬರ ಮೇಲೊಬ್ಬರು ಬಿದ್ದು ಜಟಿಲವಾದ ವಾದ ಪ್ರಕ್ರಿಯೆಯಿಂದ ಅದನ್ನು ವಿವರಿಸಲು ಪ್ರಯತ್ನಿಸುತ್ತಿದ್ದರು.

"ತಮ್ಮದು ಅಪಾರವಾದ ವಿನಯ ಪ್ರಜ್ಞೆ. ಬೇರೆಲ್ಲದಕ್ಕಿಂತ ಹೆಚ್ಚಾಗಿ ರಾಜ್ಯದ ಹಿತಾಸಕ್ತಿಯನ್ನು ಪ್ರಧಾನವೆಂದು ಪರಿಗಣಿಸುವ ಸಲುವಾಗಿ ತಾವು ಅವಿಶ್ರಾಂತವಾಗಿ ಮತ್ತು ನಿರಂತರವಾಗಿ ಪ್ರಯತ್ನಗಳನ್ನು ನಡೆಸುತ್ತಲೇ ಇರುವಿರಿ. ರಾಜಸಭೆಗೆ ತಾವು ತೋರುವ ಗೌರವ ಕಣ್ಣಿಗೆ ಕವಿದಿರುವ ಪೊರೆಯ ಹಾಗೆ ನಿಮ್ಮ ಮನಸ್ಸನ್ನು ಆವರಿಸಿಕೊಂಡಿದೆ. ಹಾಗೂ ಆ ಕಾರಣದಿಂದಾಗಿ ಅತ್ಯಂತ ಸೂಕ್ಷ್ಮವಾದ ತಪ್ಪು ಗ್ರಹಿಕೆಗಳನ್ನು ಮತ್ತು ಮಿಥ್ಯಾ ಆತಂಕಗಳನ್ನು ಅದರಲ್ಲಿ ಹುಟ್ಟುಹಾಕಿದೆ ಎಂದು ನಾವು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇವೆ ಮಹಾಪ್ರಭು. ತಮ್ಮ ಕಣ್ಣಿಗೆ ಹತ್ತಿರುವ ಪೊರೆಯನ್ನು ಕಳಚಿ ಹಾಕಲು ನಮಗೆ ಅನುಮತಿ ನೀಡಬೇಕೆಂದು ಕೋರುತ್ತೇವೆ. ಮಹಾಸ್ವಾಮಿಯವರಿಗೆ ಆಗಿರುವ ಗಾಯಗಳು ಪುರಾಣ ಕಾಲದ ವೀರರ ಶೌರ್ಯದ ಸಂಕೇತಗಳಾಗಿವೆ ಹಾಗೂ ತಮ್ಮ ಪರಾಕ್ರಮ ಪ್ರತಿಯೊಬ್ಬ ರಜಪೂತನೂ ಹಂಬಲಿಸುವಂಥದು. ರಾಜ್ಯಕ್ಕೆ ಅತ್ಯುನ್ನತವಾದ ಸೇವೆಯನ್ನು ಸಲ್ಲಿಸುವ ಹಾಗೂ ವೈರಿಯನ್ನು ಪರಾಭವಗೊಳಿಸಿ ಮೇವಾಡ ಮತ್ತು ಅದರ ಮಿತ್ರರಾಜ್ಯಗಳಿಗೆ ಶ್ಲಾಘನೀಯವಾದ ವಿಜಯವನ್ನು ಖಾತರಿಪಡಿಸಿಕೊಳ್ಳುವ ಸಂದರ್ಭದಲ್ಲಿ ಆದವು ಇವು. ಕೈಕಾಲು ಕಳೆದುಕೊಂಡ ಕಾರಣದಿಂದ ಅಥವಾ ಗಾಯಗಳಿಂದ ನಿಮಗೆ ಯಾವ ಕುಂದೂ ಆಗಿಲ್ಲ. ನಿಮ್ಮ ಕೀರ್ತಿ ಮತ್ತು ಪ್ರತಿಷ್ಠೆಗಳನ್ನು ಕಡಿಮೆಗೊಳಿಸುವುದಕ್ಕೆ ವಿರುದ್ಧವಾಗಿ ಅವು ನಿಮ್ಮನ್ನು ಅತ್ಯಂತ ಸಾಹಸದ ಮನ್ನಣೆಗಳಿಂದ ಅಲಂಕರಿಸಿ ಮೇವಾಡದ ಯಶಸ್ಸು ಮತ್ತು ಕೀರ್ತಿಯನ್ನು ಹೆಚ್ಚಿಸಲಿವೆ. ಹಿಂದೆಂದಿಗಿಂತಲೂ ತಾವೀಗ ದೈವತ್ವದ ಮಾದರಿ ನಿದರ್ಶನವಾಗಿದ್ದೀರಿ".

ಪ್ರಶಂಸೆಯ ಈ ವಾಗಾಡಂಬರ ಕ್ಷಮ್ಯ. ಸಾಲಂಬಾರ್‌ನ ಜಮೀನುದಾರನಿಗೊಂದು ಪ್ರಯಾಸದ ಕೆಲಸವಿತ್ತು. ಆತ ತನ್ನ ಸ್ವಾಮಿನಿಷ್ಠೆಯನ್ನು ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದ್ದನು. ಶಬ್ದಗಳಿಗೆ ಹೇಗೆ ನಾವು ಮರುಳಾಗಿ ಬಿಡುತ್ತೇವೆ. ಮನುಷ್ಯರನ್ನು ದೇವರುಗಳನ್ನಾಗಿ ಮಾಡುವ ನಮ್ಮ ಅತ್ಯುತ್ಸಾಹದಲ್ಲಿ, ಸ್ವಯಿಚ್ಛೆಯಿಂದಲೇ ನಾವು ಕೊಡಮಾಡುವ ಹಕ್ಕು ಮತ್ತು ಸವಲತ್ತುಗಳ ಲೆಕ್ಕವಿಟ್ಟವರಾರು? ಮತ್ತಷ್ಟು ಜಯಘೋಷದ ಗದ್ದಲಗಳು ಕೇಳಿಬಂದುವು. ಅಂತಿಮವಾಗಿ ರಾವ್ ವೀರಮ್ ದೇವ್ ಅವರು ಮುಂದೆ ಬಂದು ತಮ್ಮ ಕೈ ಎತ್ತಿದರು. ಕೊನೆಯ ದನಿ ನಿಲ್ಲುವವರೆಗೂ ಅವರು ಕಾದರು.

"ಮಹಾಸ್ವಾಮಿ, ತಾವು ಮೇವಾಡದ ಜನತೆಯ, ರಾವ್‌ಗಳು ಮತ್ತು ರಾವತ್‌ಗಳ ರಾಜಕುಮಾರರ, ಆಸ್ಥಾನದ ಅಧಿಕಾರಿಗಳ ನಿರ್ಣಯವನ್ನು ಕೇಳಿದ್ದೀರಿ. ನಾವಿಲ್ಲಿ ಸೇರಿರುವುದು ದೆಹಲಿ ಸುಲ್ತಾನರ ಮೇಲೆ ನಾವು ಸಾಧಿಸಿದ ವಿಜಯದ ಆಚರಣೆಗಾಗಿ, ಅದನ್ನು ದುಃಖದಾಯಕವಾದ ಸೋಲಾಗಿ ಪರಿವರ್ತಿಸಬಾರದೆಂದು ನನ್ನ ಪ್ರಾರ್ಥನೆ" ಆನಂತರ, ರಾವ್ ವೀರಮ್‌ದೇವ್ ಹಾಗೂ ರಾಜಾ ಪೂರಜೀಕೀಕಾ ಅವರನ್ನು ಒಳಗೊಂಡಂತೆ ಇತರೆ ಬಣದ ಮುಖ್ಯಸ್ಥರು, ಮೇಲಕ್ಕೆದ್ದು ಮಹಾರಾಜರ ಕೈ ಹಿಡಿದು ಅದುವರೆಗೂ ಶೂನ್ಯವಾಗಿದ್ದ ಸಿಂಹಾಸನದ ಮೇಲೆ ಕುಳ್ಳಿರಿಸಿದರು.

ತಂದೆಯವರು ಆಕ್ಷೇಪಿಸಿದರು, ಪ್ರತಿಭಟಿಸಿದರು. ತನಗೆ ಒಪ್ಪಿಗೆ ಇಲ್ಲದಿದ್ದರೂ ಮೌನವಾಗಿ ಸಮ್ಮತಿಸಿದರು.

"ಈಗ ನಾನು ಏನು ತಾನೆ ಹೇಳಲಿ? ಇದನ್ನು ನಿರಾಕರಿಸುವುದೆಂದರೆ, ನನ್ನಲ್ಲಿ ಮತ್ತು ನನ್ನ ಅಧಿಕಾರದಲ್ಲಿ ನೀವಿಟ್ಟಿರುವ ಭರವಸೆಯನ್ನು ಅಪಮಾನಗೊಳಿಸಿದಂತೆ. ಯಾವುದೇ ಪ್ರಭುತ್ವವನ್ನು ಎತ್ತಿ ಹಿಡಿಯುವ ಅಂಶವೆಂದರೆ, ಜನತೆಯ ನಂಬಿಕೆ ಮತ್ತು ವಿಶ್ವಾಸ. ನನ್ನ ವಿಷಯಕ್ಕೆ ತಾವು ತೋರುತ್ತಿರುವ ಗೌರವಕ್ಕೆ ನನ್ನ ಮನಸ್ಸು ತುಂಬಿ ಬಂದಿದೆ. ನಾನು ತಮಗೆ ಕೃತಜ್ಞನಾಗಿದ್ದೇನೆ. ತಾವು ನನ್ನಲ್ಲಿ ಇಟ್ಟಿರುವ ಅಪಾರ ಭರವಸೆಗೆ ತಗುವಂತೆ ಇರುವೆನೆಂಬ ವಿಶ್ವಾಸವಿದೆ" ಶ್ಲಾಘನೆಯ ಚಪ್ಪಾಳೆ ನಿಂತ ಮೇಲೆ ತಂದೆಯವರು ಮೆಲುದನಿಯಲ್ಲಿ ಮಾತನಾಡಿದರು. "ನನ್ನದೊಂದು ಸಣ್ಣ ಕೋರಿಕೆ ಇದೆ' ಆಸ್ಥಾನಿಕರು ಮತ್ತು ಇಡೀ ಸಭೆ 'ಆಗಬಹುದು, ಆಗಬಹುದು,' ಎಂದು ಒಕ್ಕೊರಲಿನಿಂದ ದನಿ ಮಾಡಿತು. "ತಮಗಾಗಿ ನಾವು ನಮ್ಮ ಪ್ರಾಣಗಳನ್ನು ಅರ್ಪಿಸುತ್ತೇವೆ ಮಹಾಪ್ರಭು." ಮಹಾಪ್ರಭುಗಳ ಮನಸ್ಸಿನಲ್ಲಿ ಈ ಕೇವಲ ಪ್ರಾಣಾರ್ಪಣೆಗಿಂತ ಕಿಂಚಿತ್ ಕಡಿಮೆಯಾದದ್ದೇನೋ ಒಂದು ನೇರ ಮತ್ತು ಸ್ಪಷ್ಟವಾದ ವಿಚಾರವಿತ್ತು. ಇಷ್ಟೆಲ್ಲಾ ಕಸರತ್ತಿನ ಬಹು ಮುಖ್ಯ ಅಂಶಕ್ಕೆ ನಾವೀಗ ಬಂದಿದ್ದೆವು. "ರಣಥಂಬೂರ್‌ನ ಕೋಟೆ ಮತ್ತು ಪ್ರಾಂತವನ್ನು ರಾಜಕುವರಾರ ವಿಕ್ರಮಾದಿತ್ಯನಿಗೆ, ಅವನ ತಮ್ಮ ರಾಜಕುವರಾರ ಉದಯಸಿಂಹನಿಗೆ ಜಹಗೀರಾಗಿ ಕೊಡಮಾಡಬೇಕೆಂಬುದು ನಮ್ಮ ಅಭಿಲಾಷೆ."

'ಉಘೇ! ಭಲಾ! ಶಹಬ್ಬಾಷ್' ಇತ್ಯಾದಿ ಘೋಷಣೆ ಗದ್ದಲಗಳು ಹಾಗೂ ಏನು ಬೇಕಾದರೂ ಆಗಲಿ ಏನಾದರೂ ಸರಿ ಕೇಳುವುದು ತಮ್ಮದು, ಕೊಡುವುದು ನಮ್ಮದು ಎಂಬ ಮಾತುಗಳೆಲ್ಲ ಎಲ್ಲಿ ಮಾಯವಾದುವು? ಇಡೀ ಆಸ್ಥಾನ ಗರ ಬಡಿದಂತಾಗಿತ್ತು. ನೂರಾರು ವರ್ಷಗಳಿಂದ ಸಾವಧಾನವಾಗಿ ವಿಚಾರಮಾಡಿ ರೂಢಿಸಿಕೊಂಡು ಬಂದಿದ್ದ ಶಿಷ್ಟಾಚಾರಕ್ಕೆ ಹೊಂದಿಕೊಂಡಿದ್ದ ಸಂಪ್ರದಾಯ ಮತ್ತು ಪಾವಿತ್ರ್ಯವನ್ನು ಮಹಾಪ್ರಭುಗಳು ತ್ಯಜಿಸಿ ಬಿಡುತ್ತಿದ್ದರು. ಅದನ್ನವರು ಬಿಟ್ಟು ಬಿಡುತ್ತಾರೆ. ಅದರಲ್ಲಿ ಅನುಮಾನವೇ ಇಲ್ಲ. ಆದರೆ ತಮ್ಮ ವಿಜಯದ ಸಂದರ್ಭದಲ್ಲಿ ತಂದೆಯವರು ಅತಿಯಾಗಿ ಕೈವಾಡನಡೆಸಿದ್ದರು. ಅವರು ಆಸ್ಥಾನದ ಮನಃಸ್ಥಿತಿಯನ್ನು ತಪ್ಪಾಗಿ ಲೆಕ್ಕ ಹಾಕಿದ್ದರು. ಅವರ ಶ್ರೀಮಂತರು, ಕುಲೀನರು, ಮತ್ತು ಸಾಮಂತ ರಾಜರುಗಳು ಅವರನ್ನು ಸಂಪೂರ್ಣವಾಗಿ ಬೆಂಬಲಿಸ ಬಯಸುತ್ತಿದ್ದರು. ಆದರೆ ಉದ್ಧಟಳೂ, ಅತಿ ಲೋಲುಪಳೂ ಆದ ರಾಣಿಯ ಮನಸ್ವೀ ನಡತೆ ಮತ್ತು ಸ್ವಜನ ಪಕ್ಷಪಾತವನ್ನಲ್ಲ. ಅವಳಿಗೆ ಸೋಲುವ ಮೂಲಕ ತಂದೆಯವರು ತಮ್ಮ ಅತ್ಯಂತ ಆತ್ಮೀಯರನ್ನು ದೂರ ಮಾಡಿಕೊಳ್ಳುವ ಗಂಡಾಂತರವನ್ನು ಮೈಮೇಲೆ ಎಳೆದುಕೊಳ್ಳ ಬಯಸಿದ್ದರು. ಆದರೆ ಆಗಬೇಕಾದದ್ದು ಇನ್ನೂ ಇತ್ತು. ರಾಣಿ ಕರ್ಮವತಿಯ ಇಬ್ಬರು ಮಕ್ಕಳಿಗೆ ಒಂದು ಆಧಾರವನ್ನು ಪಡೆದಾದ ಮೇಲೆ. ಚಿಕ್ಕವನು ಇನ್ನೂ ಮಗುವಾದ ಕಾರಣ, ವಿಶೇಷ ಮತ್ತು ಅಸಾಮಾನ್ಯವಾದೊಂದು ವ್ಯವಸ್ಥೆ ಬೇಕೆಂದು ಕೇಳಿದರು. ತಂದೆಯವರು ಅವರ ಹಿತಾಸಕ್ತಿಯನ್ನು ಕಾಪಾಡುವ ಅನಿವಾರ್ಯತೆಗೊಳಗಾದರು. ರಾಣಿ ಕರ್ಮವತಿ ಮೂರ್ಖರಾಣಿಯಾಗಿದ್ದಿರಬಹುದು, ಆದರೆ ಅವಳು ಮೂರ್ಖಳಲ್ಲ. ರಣಥಂಬೂರ್‌ನ ಜಹಗೀರು ಗಣನೀಯವಾದ ಭೂಪ್ರದೇಶವಷ್ಟೇ ಅಲ್ಲ, ಅದು ನಮ್ಮ ಅತ್ಯಂತ ಪ್ರತಿಷ್ಠೆಯ ಪ್ರಾಂತಗಳಲ್ಲೊಂದಾಗಿತ್ತು. ಅವಳ ಪ್ರೀತಿಯ ಪುತ್ರ ವಿಕ್ರಮಾದಿತ್ಯನು ಆ ಸುಭದ್ರ ನೆಲೆಯನ್ನು ರಕ್ಷಿಸುವ ಕಾರ್ಯಕ್ಕೆ ತಕ್ಕವನಲ್ಲವೆಂಬ ಅನುಮಾನ ಬಂದಿರಬೇಕು.

"ಹಾಡಾ ಸೂರಜ್‌ಮಲ್ ಮಹಾಸ್ವಾಮಿಯವರು ರಣಥಂಬೂರ್‌ನಲ್ಲಿ ಇಬ್ಬರೂ ರಾಜಕುಮಾರರ ಪೋಷಕರಾಗಿರಬೇಕೆಂದು ಕೇಳಲಿಚ್ಛಿಸುತ್ತೇನೆ."

ಹಾಡಾ ಸೂರಜ್ ಮಲ್ ನಿರ್ವಿಕಾರ ಭಾವದಿಂದ ಕುಳಿತಿದ್ದರು. ತಂದೆಯವರ ಕೋರಿಕೆಯಿಂದ ಅವರಿಗಾದ ವಿಸ್ಮಯ ಕೋಪ ಮತ್ತು ಮುಜುಗರವನ್ನು ವ್ಯಕ್ತಪಡಿಸುತ್ತಿರುವ

ಬಿಗಿಯಾಗಿ ಕಚ್ಚಿ ಹಿಡಿದ ಅವರ ದವಡೆಗಳು ಹೊರಗೆಡಹುತ್ತಿದ್ದುವು. ರಾಣಿ ಕರ್ಮವತಿ ಮತ್ತು 'ಹಾಡಾ' ಇವರಲ್ಲಿ ಪರಸ್ಪರ ಹೋಲಿಸಬಹುದಾದ ಸಮಾನ ಅಂಶಗಳು ಒಂದೂ ಇರಲಿಲ್ಲ. ಆದರೆ ವಾಸ್ತವಾಂಶವೆಂದರೆ ಅವರಿಬ್ಬರೂ ಸೋದರ ಸೋದರಿಯರಾಗಿದ್ದರು. ಹಾಡಾ ಸೂರಜ್‌ಮಲ್ ಅತ್ಯಂತ ಬಿಗುವಿನ, ಅತಿಗರ್ವದ, ತನಗೆ ತಾನೇ ನೋವು ತಂದುಕೊಳ್ಳುವ, ನೇರನಡೆಯ ಮನುಷ್ಯ. ಅಲ್ಲದೆ ತನಗೆ ದೊರೆತಿರುವ ಸ್ಥಾನಮಾನಗಳು ಮತ್ತು ಸವಲತ್ತುಗಳು ಮಹಾಪ್ರಭುಗಳಿಗೆ ತನ್ನ ತಂಗಿಯನ್ನು ಮದುವೆ ಮಾಡಿಕೊಟ್ಟದ್ದರ ಪರಿಣಾಮವೆಂದು ತಿಳಿಯುವಷ್ಟು ಸಂವೇದಿಯಾಗಿದ್ದರು. ಅವರು ತನ್ನ ಸೋದರಳಿಯ ವಿಕ್ರಮಾದಿತ್ಯನನ್ನು ದ್ವೇಷಿಸುತ್ತಿದ್ದರು. ಆತನಿಗೆ ಸಾಧ್ಯವಿದ್ದರೆ ಎಂದೂ ಚಿತ್ತೂರಿಗೆ ಬರುತ್ತಿರಲಿಲ್ಲ. ಆತ ಎಂದೂ ಅರಮನೆಯಲ್ಲಿ ಉಳಿದುಕೊಳ್ಳುತ್ತಿರಲಿಲ್ಲ. ಆದರೆ ರಾಜಧಾನಿಯಲ್ಲಿನ ತನ್ನ ಸ್ನೇಹಿತರಲ್ಲಿ ಉಳಿಯುತ್ತಿದ್ದರು. ಆತ ನಮ್ಮ ಅತ್ಯಂತ ಪ್ರಮುಖ ಮತ್ತು ಅಮೂಲ್ಯ ಮಿತ್ರನಾಗಿದ್ದರು. ತಂದೆಯವರ ಸಮಕ್ಕೆ ನಿಲ್ಲಬಲ್ಲ ಚಿತ್ತೂರಿನ ಮೂರು ನಾಲ್ಕು ಜನರಲ್ಲಿ ಅವರೂ ಒಬ್ಬರು.

"ಮಹಾಪ್ರಭುಗಳ, ಮೇವಾಡದ ಹಿತ ನನಗೆ ಎಲ್ಲಕ್ಕಿಂತ ಅತ್ಯಂತ ಮುಖ್ಯವಾದದ್ದು" ಆತ ಅನಂತರ ನನ್ನ ಕಡೆ ಹರಿತ ನೋಟ ಬೀರಿದರು. "ಹೀಗಿರುವಾಗ ಮುಂದೆ ಪರಸ್ಪರ ಹಿತಾಸಕ್ತಿಗಳ ಸಂಘರ್ಷಕ್ಕೆ ಎಡೆ ಮಾಡಿಕೊಡಬಹುದಾದ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಲು ಸಿಂಹಾಸನದ ಬಗೆಗಿನ ನನ್ನ ನಿಷ್ಠೆ ನನ್ನನ್ನು ತಡೆಯುತ್ತಿದೆ", ಹಾಡಾ ನನ್ನ ಕಡೆಗೆ ದುರುಗುಟ್ಟಿಕೊಂಡು ನೋಡಿದ್ದು ತುಂಬ ತಮಾಷೆಯೆನಿಸಿತು. ಉತ್ತರಾಧಿಕಾರದ ಶ್ರೇಣಿಯಲ್ಲಿ ನಾನು ಇರಲೇ ಇಲ್ಲವಾದ್ದರಿಂದ ಅವರ ಸೋದರಳಿಯಂದಿರಿಗೂ, ಅದರಲ್ಲೂ ಮುಖ್ಯವಾಗಿ ವಿಕ್ರಮಾದಿತ್ಯನಿಗೂ ನನಗೂ ಹಿತಾಸಕ್ತಿಯ ಸಂಘರ್ಷ ಖಂಡಿತಾ ಇರುವುದಿಲ್ಲ.

ತಂದೆಯವರು ವಾಡಿಕೆಗಿಂತ ವಿಭಿನ್ನವಾದ ಸಾಂತ್ವನದ ದನಿಯಲ್ಲಿ– "ಮಹಾಸ್ವಾಮಿಯವರೆ ಅಂಥ ಒಂದು ತೀವ್ರವಾದ ಬಿಕ್ಕಟ್ಟಿನ ಸಂದರ್ಭ ಉದ್ಭವವಾಗುವುದು ಅನುಮಾನ ಅಂತ ನನಗನ್ನಿಸುತ್ತದೆ." ಹಾಗೊಂದು ವೇಳೆ ರಾಜ್ಯದ ಹಿತಾಸಕ್ತಿಗಿಂತ ವಿಭಿನ್ನವಾದ ಹಿತಾಸಕ್ತಿಗಳು ಕಂಡು ಬಂದದ್ದೇ ಆದರೆ ಮೇವಾಡದ ಹಿತವೇ ಬೇರೆ ಎಲ್ಲದಕ್ಕಿಂತ ಅಗ್ರಸ್ಥಾನದಲ್ಲಿರುತ್ತದೆ ಎಂಬ ಬಗ್ಗೆ ಮತ್ತೊಮ್ಮೆ ನಿಮಗೆ ಭರವಸೆಕೊಡುತ್ತೇನೆ" ಎಂದರು.

ಹಾಡಾ ಸೂರಜ್ ಮಲ್‌ಗೆ ವಹಿಸಿದ ಕಾರ್ಯವನ್ನು ಒಪ್ಪಿಕೊಳ್ಳದೆ ಬೇರೆ ಮಾರ್ಗವಿರಲಿಲ್ಲ. "ತಾವು ಇಚ್ಛಿಸಿದಂತೆಯೇ ಆಗಲಿ ಮಹಾಪ್ರಭು" ಎಂದರು. ಆದರೆ ವಿರೋಧವಿಲ್ಲದೆ ಒಪ್ಪುವಂಥವರಲ್ಲ. "ಸಮರ್ಥನೀಯವಲ್ಲದ ಸ್ಥಾನದಲ್ಲಿ ಇರುವುದು ಅಂದರೆ ನನಗೆ ಸಹಿಸಲಿಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಅತ್ಯಂತ ಸೂಕ್ಷ್ಮವಾಗಿ ಆಗಲೇ ಹೇಳಿ ಬಿಟ್ಟಿದ್ದೀನಿ ಅಂತ ನಂಬಿದ್ದೀನಿ".

ತಂದೆಯವರು ಮುಗುಳ್ನಕ್ಕರು ಮತ್ತು ಅದಕ್ಕೇನೂ ಪ್ರತಿಕ್ರಿಯಿಸಲಿಲ್ಲ. "ಇನ್ನೊಂದು ಕಡೇ ವಿಷಯ. ಆಮೇಲೆ ನಾವು ಸಂತೋಷ ಸಮಾರಂಭಗಳನ್ನು ಪ್ರಾರಂಭಿಸೋಣ. ನಮ್ಮ ಹಿರಿಯ ಮಗನನ್ನು ನಾವು ಕುಂಭಲಗರ್‌ನಿಂದ ವಾಪಸ್ ಕರೆಸಿಕೊಂಡಿದ್ದೇವೆ. ನಾಳೆಯಿಂದ ಆತನನ್ನು ಚಿತ್ತೂರಿನ ರಾಜ್ಯಪಾಲನನ್ನಾಗಿ ನೇಮಿಸಲಾಗುವುದು. ಸಮರ ಸಮಿತಿಯಲ್ಲಿ ಆತ ನನಗೆ ನೆರವು ನೀಡುವನು."

ರಾಣಿಯ ಆವರಣದ ಕಡೆಯಿಂದ ಎಲ್ಲರಿಗೂ ಕೇಳುವಂತೆ ಒಂದು ಏದುಸಿರು ಹೊರಹೊಮ್ಮಿತು. ನನ್ನ ತಾಯಿಯ ವಿಶ್ವಾಸ ಪಾತ್ರ ವ್ಯಕ್ತಿಯಾದ ಬೃಹನ್ನದಾ ಎಂಬ ಹಿಜಡಾ ನಿರ್ವಿಕಾರವಾದ ಭಾವವನ್ನು ತೋರಿದನು. ಆದರೆ ಆಕೆ ತನ್ನನ್ನು

ನಿಯಂತ್ರಿಸಿಕೊಳ್ಳಲಾಗಲಿಲ್ಲ. ಆಸ್ಥಾನದ ಕಡೆಯಿಂದ ಅದಕ್ಕೆ ಸಾಕಷ್ಟು ಚಪ್ಪಾಳೆ ಮತ್ತು ಮೇಜುಗಳನ್ನು ಗುದ್ದಿದ ಸದ್ದು ಬಂತು. ಶ್ರೀಸಾಮಾನ್ಯನ ಸ್ವಭಾವ ಸಹಜವಾದ ವಿವೇಕದ ಬಗ್ಗೆ ಅನೇಕ ಸಲ ಅತ್ಯಂತ ಉತ್ಸಾಹ ಭರಿತವಾದ ಮಾತುಗಳ ಉಪನ್ಯಾಸವನ್ನು ಕೇಳಿದ್ದೇನೆ. ತಾತ್ಕಾಲಿಕವಾಗಿ ಆಗುವ ತಪ್ಪುಗಳ ಹೊರತಾಗಿಯೂ ಅದು ಸುಭದ್ರವಾದ ವ್ಯಾವಹಾರಿಕತೆ, ನಿರ್ದಾಕ್ಷಿಣ್ಯವಾದ ವಿವೇಚನೆ ಮತ್ತು ಸಮುದಾಯದ ಹಿತ ಎಂಬ ತಳಹದಿಯನ್ನಾಧರಿಸಿರುತ್ತದೆ ಎಂದು ನಮ್ಮ ಗಮನಕ್ಕೆ ತಂದಿರುತ್ತಾರೆ. ಅದೊಂದು ಸೊಗಸಾದ ಸಿದ್ಧಾಂತ. ಆದರೆ ಅದು ಸ್ಪಷ್ಟವಾಗಿಯೇ ಸುಳ್ಳು. ಶ್ರೀ ಸಾಮಾನ್ಯನೆಂಬುವನು ಈ ಆಸ್ಥಾನದಲ್ಲಿ ಸೇರಿರುವ ಶ್ರೀಮಂತರಷ್ಟೇ ಚಂಚಲ, ದೂರದೃಷ್ಟಿ ಇಲ್ಲದ, ವಿವೇಚನೆ ಉಳ್ಳ ಅಥವಾ ವಿವೇಚನೆಯಿಲ್ಲದವನಾಗಿರುತ್ತಾನೆ. ಮನುಷ್ಯನೊಬ್ಬ ವಿಚಾರಶೀಲ ಪ್ರಾಣಿ ಎಂದು ಹೇಳುವಾಗ ನಮಗೆ ನಾವೇ ಮೋಸ ಮಾಡಿಕೊಳ್ಳುತ್ತಿರುತ್ತೇವೆ. ಮನುಷ್ಯನನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ ಅದಕ್ಕಿಂತ ಹೆಚ್ಚಾಗಿ ನಮ್ಮನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ ಮನಸ್ಸಿನ ಆವೇಗ, ಆಕ್ಷಣದ ಮನಃಸ್ಥಿತಿ, ಗುಂಪಿನ ಮನೋಭಾವ (ಸ್ವಂತ ವಿವೇಚನೆಯಿಲ್ಲದೆ ಇತರರನ್ನು ಹಿಂಬಾಲಿಸುವುದು), ನಮ್ಮ ಕಾರ್ಯಗಳ ಪರಿಣಾಮವನ್ನು ತೂಗಿ ನೋಡುವುದರ ಬಗೆಗಿನ ಹಾಳಾದ ಅನಿಚ್ಛೆ ಇವುಗಳನ್ನು ನಾವು ನೋಡಬೇಕಾಗುತ್ತದೆ. ನನ್ನ ಬಗೆಗಿನ ಈ ದಿಢೀರ್ ಪ್ರೀತಿಗೆ ನಿಜಕ್ಕೂ ಒಂದು ಸರಳ ವಿವರಣೆ ಇದೆ. ಕೆಟ್ಟ ಸುದ್ದಿಗಳ ಹಿಂದೆಯೇ ಸುಮಾರಾದ ಸುದ್ದಿಗಳು ಬಂದರೆ, ಜೀವನದ ಪ್ರತಿಗಂಟೆಯೂ ಹಂಬಲಿಸಿ ಪ್ರಾರ್ಥಿಸಿದ್ದ ಶುಕ್ರದೆಸೆ ಇದೀಗ ಕೂಡಿ ಬಂದಿತೋ ಎನ್ನುವಂತೆ ಅವುಗಳನ್ನು ಬರಮಾಡಿಕೊಳ್ಳಲಾಗುತ್ತದೆ.

ನನ್ನ ವಿಷಯಕ್ಕೆ ಆಸ್ಥಾನಿಕರು ಹೊಸದಾಗಿ ಉತ್ಸಾಹ ತಾಳಲು ಕಾರಣವಾದದ್ದಕ್ಕೆ ಮತ್ತು ನನ್ನ ಗಮನವನ್ನು ಸೆಳೆದು ಅಭಿನಂದನೆ ಸಲ್ಲಿಸುವ ಅವರ ಪ್ರಯತ್ನಕ್ಕೆ ನಾನೀಗ ಸ್ವಪ್ರತಿಷ್ಠೆಯ ಮುಂಗೋಪದ ವ್ಯಕ್ತಿಯಾಗಬೇಕು. ನಾನು ಅವರ ಕಡೆನೋಡಿ ಮುಗುಳ್ನಕ್ಕೆ. ಆದರೆ ನನ್ನ ಯೋಚನೆಗಳು ಬೇರೆಲ್ಲೋ ಇದ್ದುವು. ಆ ಮುದಿ ನರಿ ಮಹಾರಾಜರು ಸದೃಢವಾಗಿಯೇ ಇದ್ದರು ಮತ್ತು ತಮ್ಮ ವಕ್ರ ಮಾರ್ಗದಲ್ಲಿ ಅತ್ಯುತ್ತಮವಾಗಿಯೇ ಇದ್ದರು. ನೀವದನ್ನು ಅವರಿಗೆ ನೀಡಬೇಕಾಗಿತ್ತು ಅಷ್ಟೆ. ರಣಥಂಬೂರ್‌ನ ರಾಜ್ಯ ಮತ್ತು ಖಜಾನೆಯನ್ನು ಅವಳ ಸ್ವಂತ ಮಕ್ಕಳಿಗೇ ಉಡುಗೊರೆಯಾಗಿ ನೀಡುವಂತೆ ತನ್ನನ್ನು ಹುರಿದುಂಬಿಸಿದ್ದ ಅತ್ಯಂತ ಪ್ರೀತಿ ಪಾತ್ರಳಾದ ರಾಣಿಯನ್ನು ಅವರು ಮೂರ್ಖಳನ್ನಾಗಿ ಮಾಡಿಬಿಟ್ಟಿದ್ದರು. ಅವಳ ಆ ಆಶ್ಚರ್ಯದ ಉದ್ಗಾರ ನಾಟಕೀಯ ಪರಿಣಾಮಕ್ಕಲ್ಲ. ಆ ಉದ್ಗಾರದ ಸರಕು ಸಾಚಾ ಆಗಿತ್ತು. ಅವಳು ತಾನು ಬಯಸಿದ್ದನ್ನು ಪಡೆದಿದ್ದಳು. ಆದರೆ ತಂದೆಯವರು ತಾನು ಚಿಕ್ಕಟ್ಟಿನ ಪ್ರಭು ಎಂಬುದನ್ನು ಇನ್ನೊಮ್ಮೆ ಸಾಧಿಸಿ ತೋರಿಸಿದ್ದರು. ತನ್ನ ಈ ಹೊಸ ನಡೆಯ ಹಂಚಿಕೆಗೆ ಸಂಬಂಧಿಸಿದಂತೆ ರಾಣಿ ಕರ್ಮವತಿಯನ್ನು ಅವರು ಕತ್ತಲೆಯಲ್ಲಿ ಇಟ್ಟುಬಿಟ್ಟಿದ್ದರೆಂಬುದು ಸ್ಪಷ್ಟವೇ ಇತ್ತು. ಅಷ್ಟೇ ಅಲ್ಲದೆ ನನ್ನನ್ನೂ ವಿಕ್ರಮಾದಿತ್ಯನನ್ನೂ ಯಶಸ್ವಿಯಾಗಿ ವಿಫಲಗೊಳಿಸಿದ್ದರು. ನಮ್ಮ ಅದೃಷ್ಟಗಳು ಸ್ವಲ್ಪ ಸುಧಾರಿಸಿದ್ದುವು. ಆದರೆ ನಾವು ಮೊದಲು ಇದ್ದದಕ್ಕಿಂತ ಏನೂ ಉತ್ತಮವಾಗಿರಲಿಲ್ಲ. ನೀನು ಎಲ್ಲರನ್ನೂ ತೃಪ್ತಿಪಡಿಸಲು ಸಾಧ್ಯವಿಲ್ಲ. ಅದರಲ್ಲೂ ದೊರೆಯಾದವನನ್ನಂತೂ ಸಾಧ್ಯವೇ ಇಲ್ಲ ಎಂದು ನಾನು ಬಾಲಕನಾಗಿದ್ದಾಗ ತಂದೆಯವರು ಹೇಳಿದ್ದರು. ಆ ಹೇಳಿಯ ಉತ್ತರಾರ್ಧವನ್ನು ಹೇಳಲು ಅವರು ಮರೆತಿದ್ದರು. ಎಲ್ಲರನ್ನೂ ಅತೃಪ್ತಗೊಳಿಸಿ, ನೀನು ಸ್ವಲ್ಪ ಮಟ್ಟಿನ ನೆಮ್ಮದಿಯನ್ನು ಹೊಂದಬಹುದು. ರಾಣಿಯನ್ನೂ ಒಳಗೊಂಡಂತೆ,

ಇಡೀ ಆಸ್ಥಾನ, ತಂದೆಯುವರು ತಮ್ಮ ಉತ್ತರಾಧಿಕಾರಿಯಾಗಿ ಯಾರನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆಂದು ಊಹೆಮಾಡುತ್ತಾ ಕೂರಲು ಸ್ವತಂತ್ರರು. ಅದೇ ಹೊತ್ತಿನಲ್ಲಿ ರಾಜಕುಮಾರರೂ ಒಬ್ಬರ ವಿರುದ್ಧ ಇನ್ನೊಬ್ಬರು ಕುಯುಕ್ತಿಯ ಉಪಾಯಗಳನ್ನು ಮಾಡುವುದರಲ್ಲಿ, ಸಂಚುಗಳನ್ನು ಹೂಡುವುದರಲ್ಲಿ, ಯಾವುದಾದರೊಂದು ಸುಯೋಗದಿಂದ ಒಬ್ಬರನ್ನೊಬ್ಬರು ಸಾಯಿಸುವುದರಲ್ಲಿ ವ್ಯಸ್ತರಾಗಿದ್ದರು.

* * *

ಇದುವರೆಗೂ ನನ್ನ ಹತ್ತಿರ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಆಡಳಿತಾಧಿಕಾರಿಗಳು, ಅವರು ಬೇರೆಯದೇ ಆದ ರೀತಿಯಲ್ಲಿ ಕೆಲಸ ಮಾಡುತ್ತೇವೆಂದು ಅದರ ಹೊಣೆಯನ್ನು ಹೊತ್ತುಕೊಂಡಿದ್ದಾರೆ. ಸಂಗತಿಗಳು ಏನೂ ಬದಲಾಗಿಲ್ಲ, ಅವು ಮೊದಲಿದ್ದಲ್ಲಿಗೇ ಬಂದಿವೆ ಎಂದು ನಾನು ಶಾಂತವಾಗಿ ಅರ್ಥಗಂಭೀರವಾಗಿ ಅವರಿಗೆ ನೆನಪಿಸಿದ್ದೇನೆ. ನನ್ನ ಶೈಲಿ ಬದಲಾಗದೆ ಇರಬಹುದು. ಆದರೆ ನನ್ನ ಕೆಲಸದ ಗಂಟೆಗಳಂತೂ ಬದಲಾಗಿವೆ. ಅವರನ್ನು ಹಿಡಿಯುವ ತನಕ ಅಷ್ಟೇ ಇದೆಲ್ಲ ಎಂದು ನಾನು ಆಶಿಸುತ್ತೇನೆ. ಹಾಗಲ್ಲದೆ ಹೋದರೆ, ನೀವು ಎಂಟು ಗಂಟೆ ಕೆಲಸ ಮಾಡಿ ಅಥವಾ ಇಪ್ಪತ್ತು ಗಂಟೆ ಕೆಲಸ ಮಾಡಿ, ಮಾಮೂಲಿ ಒಂದು ದಿನದಲ್ಲಿ ಮಾಡುವ ಕೆಲಸದ ಪ್ರಮಾಣ ಅಷ್ಟೇ ಇರುತ್ತದೆ ಎಂಬ ನನ್ನ ಸಿದ್ಧಾಂತ ಸುಳ್ಳಾಗುತ್ತದೆಂದು ಹೇಳಿಬಿಡುತ್ತಿದ್ದೆ. ವಿಕ್ರಮಾದಿತ್ಯನು, ತಾನು ಯೋಜಿಸಿದ ಆಡಳಿತ ಸೇವೆಯ ಎರಡನೇ ತಂಡದೊಂದಿಗೆ ತನ್ನೆಲ್ಲಾ ವೇಳೆಯನ್ನು ಕಳೆದಿದ್ದನು. ಅವು ಸಮಾನಾಂತರ ಆರ್ಥಿಕತೆ, ಸಮಾನಾಂತರ ಆರಕ್ಷಕ ಪಡೆ, ಸಮಾನಾಂತರ ಆಹಾರ ಮತ್ತು ಕೃಷಿ ಇಲಾಖೆ ಸಮಾನಾಂತರ ವಾಣಿಜ್ಯ ಸಚಿವಾಲಯ ಇತ್ಯಾದಿ. ಅದು ಮೊದಲಿನ ಮೂಲ ಸೌಕರ್ಯಗಳನ್ನೆಲ್ಲ ಅಸ್ತವ್ಯಸ್ತಗೊಳಿಸಿ ಬಿಟ್ಟಿತ್ತು. ತಂದೆಯವರು ದೆಹಲಿಯ ಸುಲ್ತಾನ್ ಇಬ್ರಾಹಿಂ ಲೂದಿಯ ವಿರುದ್ಧದ ಸೈನಿಕ ಕಾರ್ಯಾಚರಣೆಗಳ ಕಾರಣದಿಂದ ರಾಜಧಾನಿಯ ಹೊರಗಡೆ ಇದ್ದಾಗ ಚಿತ್ತೂರಿನ ಆಡಳಿತದ ಪ್ರಭಾವವನ್ನು ವಹಿಸಿಕೊಂಡಿದ್ದ ನನ್ನ ಕಿರಿಯ ಸೋದರ ರತ್ತನ್ ಸನ್ನಿವೇಶವನ್ನು ಕಲಕಿ ಸಮಸ್ಯೆಗಳನ್ನುಂಟು ಮಾಡಲು ಇಷ್ಟಪಡಲಿಲ್ಲ. ಅವನ ಕೆಲಸದ ಪರಿಕಲ್ಪನೆ ಮಧ್ಯಂತರದ್ದು. ತಂದೆಯವರು ಹಿಂತಿರುಗುವವರೆಗೂ ಕಾರ್ಯವನ್ನು ಚಾಲ್ತಿಯಲ್ಲಿಟ್ಟಿರುವುದು. ಅವನ ಮುಖ್ಯವಾದ ಕಾಳಜಿಯೆಂದರೆ, ರಾಜ್ಯದ ಆಡಳಿತ ವ್ಯವಸ್ಥೆ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು.

ನಾನು ನೇರವಾಗಿ ತಂದೆಯವರ ಕಣ್ಣೆದುರೇ ಕೆಲಸ ಮಾಡಬೇಕೆಂದಾಗಿತ್ತು. ಅದು ನನ್ನನ್ನು ನಿಶ್ಶೇಷ್ಟಗೊಳಿಸಬೇಕಿತ್ತು. ಆದರೆ ಅದು ನನಗೆ ಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆಂದು ಯೋಚಿಸುವುದೇ ನನಗೆ ಇಷ್ಟ. ಹಾಗೆ ನೋಡಿದರೆ ಅವರು ನನ್ನ ಮೇಲೊಂದು ಕಣ್ಣಿಟ್ಟೇ ಇರುತ್ತಾರೆಂದು ಅವರ ಪ್ರಜೆಗಳು ಭಾವಿಸಿಯೇ ತೀರುತ್ತಾರೆ.

ಸಮಾನಾಂತರ ಸರ್ಕಾರವನ್ನು ನಡೆಸಿದ ಹಾಗೂ ತಮ್ಮ ಕರ್ತವ್ಯ ನಿರ್ಲಕ್ಷ್ಯತೆಯಿಂದಾಗಿ ಇತಿಹಾಸದಲ್ಲಿ ಪೂರ್ವ ನಿದರ್ಶನಗಳನ್ನು ಸೃಷ್ಟಿಸಿರುವವರ ಕರ್ತವ್ಯ ನಿರ್ಲಕ್ಷತೆಯ ವಿರುದ್ಧವಾಗಿ ನಾನು ಕ್ರಮತೆಗೆದುಕೊಳ್ಳ ಬೇಕೆ ಹೇಗೆ ಎಂಬ ಬಗ್ಗೆ ಇಡೀ ಒಂದು ತಿಂಗಳು ಸುದೀರ್ಘವಾಗಿ ನಾನು ಚರ್ಚಿಸಿದೆ. ಅವರುಗಳ ವಿರುದ್ಧ ಅದರಲ್ಲೂ ಹಿರಿಯ ಅಧಿಕಾರಿಗಳ ವಿರುದ್ಧ ಕೊನೇ ಪಕ್ಷ ಅವರುಗಳನ್ನು ಒಂದೆರಡು ಜೀವಾವಧಿಯವರೆಗೆ ಸೆರೆಮನೆಯಲ್ಲಿರಿಸ ಬಹುದಾದಷ್ಟು ಲಿಖಿತ ದಾಖಲೆಗಳ ಸಾಕ್ಷ್ಯ ಷಫಿ ಮತ್ತು ತೇಜ್ ಬಳಿ ಇತ್ತು. ಒಂದು ಪೂರ್ವ ನಿದರ್ಶನವನ್ನು ಸೃಷ್ಟಿಸುವುದು, ಹಾಗೂ ಇದಕ್ಕೆ ತಡೆಯೊಡ್ಡುವಂತೆ ಮಾಡುವುದು ಇದೇ ಸರಿಯಾದ್ದು ಎಂದು ನನಗೆ ತಿಳಿದಿತ್ತು. ಆದರೆ ಈ ಸಂದರ್ಭದಲ್ಲಿ ಶಿಕ್ಷೆ ನೀಡುವಂಥ

ಕ್ರಮ ತೆಗೆದುಕೊಳ್ಳುವುದು ವಿವೇಕವಲ್ಲ ಎಂದು ನನಗೆ ಅನ್ನಿಸಿತು. ನೂರಾರು ಹಳೆಯ ಪ್ರಕರಣಗಳನ್ನು ಕೆದಕಿ ಇಡೀ ಆಡಳಿತ ವ್ಯವಸ್ಥೆ ಆತಂಕಗೊಳ್ಳುವಂತೆ ಮಾಡ ಹೊರಟಿದ್ದೆ. ಅದನ್ನು ಅತ್ಯಂತ ನ್ಯಾಯಯುತ ಹಾಗೂ ನಿಷ್ಪಕ್ಷಪಾತವಾದದ್ದು ಎಂದು ತಿಳಿಯುವ ಬದಲು ಪ್ರತೀಕಾರದ ಕ್ರಮವೆಂದೇ, ನಾನು ಆಡಳಿತ ಸೇವೆಯನ್ನು ನಿರ್ಲಕ್ಷ್ಯಗೊಳಿಸುತ್ತಿದ್ದೇನೆಂದೇ ತಿಳಿಯಲಾಗುತ್ತದೆ. ಬಹುಶಃ ನಾನು ಕೆಡುಕರನ್ನು ಕೆಣಕದೆ ಇರುವ ಸುಲಭದ ದಾರಿಯನ್ನು ಹಿಡಿಯುತ್ತಿದ್ದೆ. (ಉನ್ನತ ಸ್ಥಾನಗಳಲ್ಲಿರುವವರು ಸೇರಿರುವ ಬಹಳಷ್ಟು ಪ್ರಕರಣಗಳಲ್ಲಿ ಆಗುವಂತೆ ರಾಜ್ಯದ ಭಾರೀ ಭ್ರಷ್ಟಾಚಾರದ ಹಿಂದಿರುವ ಚಾಲಕ ಶಕ್ತಿಗಳು ಶಿಕ್ಷೆ ಇಲ್ಲದೆ ತಪ್ಪಿಸಿಕೊಂಡು ಬಿಡುತ್ತವೆ) ಅವರು ಇವರು ಎಲ್ಲರಿಗೂ ನಾನು ನನ್ನ ಮನಸ್ಸಿನಲ್ಲಿ ಕ್ಷಮಾದಾನವನ್ನು ಘೋಷಿಸಿದೆ. ಆದರೆ ಇನ್ನು ಮುಂದೆ ನಿರ್ಲಕ್ಷ್ಯದಿಂದ ತಪ್ಪು ಮಾಡುವವರು, ತಮ್ಮ ಹಿಂದಿನ ಮತ್ತು ಈಗಿನ ತಪ್ಪುಗಳಿಗೆ ಭಾರೀ ಬೆಲೆ ತೆರಲಿದ್ದಾರೆ.

ಕೆಲಸ ಮತ್ತು ದಿನ ನಿತ್ಯದ ಕಾರ್ಯಕಲಾಪಗಳಂಥ ದುರ್ವ್ಯಸನ ಇನ್ನೊಂದಿಲ್ಲ. ಚಿತ್ತೂರಿನಲ್ಲಿ ಸರಿಯಾಗಿ ಐದು ವಾರ ಕೂಡ ಆಗಿಲ್ಲ. ಅಷ್ಟು ಹೊತ್ತಿಗೆ ನಾನು ಚಿತ್ತೂರಿನಲ್ಲಿ ಒಂದು ವರ್ಷ ಮತ್ತು ಕುಂಭಲ್‌ಗರ್‌ನಲ್ಲಿ ಹತ್ತಿರ ಹತ್ತಿರ ಎರಡು ವರ್ಷ ಹೀಗೆ ಹೆಚ್ಚು ಕಡಿಮೆ ಮೂರು ವರ್ಷ ಚಲಾವಣೆಯಲ್ಲಿರಲಿಲ್ಲ ಎನ್ನುವುದನ್ನು ನೆನಪಿಸಿಕೊಳ್ಳುವುದು ಕಷ್ಟವಾಯಿತು. ನನ್ನನ್ನು ಮೂಲೆಗುಂಪು ಮಾಡುವ ಮತ್ತು ನಿಷ್ಕ್ರಿಯಗೊಳಿಸುವ ಈ ವಿಸ್ತರಿಸಿದ ಅವಧಿಯನ್ನು ನನ್ನ ಮೇಲೆ ಬಲವಂತವಾಗಿ ಹೇರಲಾಗಿದೆ.

ಇದು ನನ್ನ ಮೇಲೆ ಹೇಗೆ ಪರಿಣಾಮ ಬೀರಿದೆ ಎಂದು ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ. ಮನುಷ್ಯರು ಎಂದಾದರೂ ಬದಲಾಗುತ್ತಾರೆಯೆ? ವಿಪತ್ತುಗಳು, ವಿಷಮ ಪರಿಸ್ಥಿತಿಗಳು, ಇದ್ದಕ್ಕಿದ್ದಂತೆ ಆತ್ಮಾಭಿಮಾನ ನಾಶವಾಗುವುದು, ಒಬ್ಬರ ಬದುಕಿನ ಅರ್ಥ, ಅತ್ಯಂತ ಆತ್ಮೀಯ ಮಿತ್ರರ ಅಥವಾ ಬಂಧುಗಳ ಸಾವು, ಇವುಗಳು ಸ್ಪಷ್ಟವಾಗಿಯೆ ಅಥವಾ ಸೂಕ್ಷ್ಮ ರೀತಿಯಲ್ಲಿ ವ್ಯಕ್ತಿಯಲ್ಲಿ ಪರಿವರ್ತನೆಯನ್ನುಂಟು ಮಾಡುತ್ತವೆಯೆ? ನಮ್ಮ ಗುರಿಗಳು ಬದಲಾಗುತ್ತವೆಯೆ? ಬದುಕಿಗೊಂದು ವಿಸ್ತೃತ ಕಾಣ್ಕೆ ಇದೆಯೆ? ನಮ್ಮ ಅಹಿತಕರ ಅನುಭವಗಳು, ಜನಗಳನ್ನು ಮತ್ತು ಅವರ ದೌರ್ಬಲ್ಯಗಳನ್ನು ಚೆನ್ನಾಗಿ ಅರ್ಥಮಾಡಿಸುತ್ತವೆಯೆ? ಸಾಧ್ಯತೆಗಳ ಪಟ್ಟಿಯನ್ನು ಒಂದೆರಡು ಪುಟಗಳವರೆಗೂ ಬರೆದಿಡುತ್ತಾ ಹೋಗಬಹುದು. ಆದರೆ ಒಂದು ಪ್ರಶ್ನೆಯಷ್ಟೇ ಸಾಕು. ಅವು ನಮ್ಮನ್ನು ಉತ್ತಮ ವ್ಯಕ್ತಿಗಳನ್ನಾಗಿ ಮಾಡುತ್ತವೆಯೆ? ಸತ್ಯ ಇರುವುದೇ ಇಲ್ಲಿ ಎಂದು ನಾನು ಅನುಮಾನಿಸಿದರೂ, ವಿರುದ್ಧವಾದದ್ದನ್ನು, ವಿನಾಶವನ್ನು ನಾವು ಪ್ರತಿಭಟಿಸುತ್ತಿದ್ದಂತೆ, ಮಹಾನ್ ಅಲ್ಲೋಲ ಕಲ್ಲೋಲಗಳು ಮತ್ತು ಆಘಾತಗಳು ನಮ್ಮ ಅಸ್ತಿತ್ವದ ಕೇಂದ್ರವನ್ನು ಸ್ಪರ್ಶಿಸದೆ ಹಾಗೇ ಬಿಟ್ಟುಬಿಡಬಹುದೆಂಬ ಯೋಚನೆ ಸುಳಿಯುತ್ತದೆ. ನಾನು ದೊಡ್ಡ ದೊಡ್ಡ ಸಾಧಾರಣೀಕೃತ ಹೇಳಿಕೆಗಳನ್ನು ಮಾಡುತ್ತಿಲ್ಲ, ಅಥವಾ ಈ ವಿಷಯದ ಆಳವಾದ ಅಧ್ಯಯನ ಮಾಡಿದ್ದೇನೆಂದೂ ಸಾಧಿಸುತ್ತಿಲ್ಲ. ನಾನು ಕೇವಲ ನನ್ನ ಪರವಾಗಿ ಮಾತನಾಡಬಹುದು ಅಷ್ಟೆ. ನಾನು ಯಾವತ್ತಿನ ಮಹಾರಾಜ್‌ಕುಮಾರ್ ಆಗಿಯೇ ಉಳಿದಿರಬೇಕೆಂದು ಈಗಲೂ ಬಯಸುತ್ತೇನೆ. ಎಲ್ಲಕ್ಕಿಂತ ನಾನು ಇಚ್ಛಿಸುವುದೊಂದೇ. ಅದು ತಂದೆಯವರ ನಂತರ ಸಿಂಹಾಸನ ನನ್ನದಾಗಬೇಕೆಂದು. ಎರಡನೆಯದು ಸಮುದ್ರವೇ ಮೇರೆಯಾಗುವ ಮಟ್ಟಿಗೆ ನಮ್ಮ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಲೌಕಿಕ ಮಹತ್ವಾಕಾಂಕ್ಷೆ ನನ್ನ ಬದುಕಿನ ಅತ್ಯಂತ ಅವಿಭಾಜ್ಯ ಅಂಗವಾಗಿದೆ. ನನ್ನ ಅತ್ಯಂತ ಕನಿಷ್ಠ ಗುರಿ ಅದೇ

ಆಗಿದೆ. ಅವೆರಡನ್ನೂ ನನ್ನಿಂದ ಕಳಚಿ ಹಾಕಿದರೆ ನನ್ನಲ್ಲಿ ಉಳಿಯುವುದಾದರೂ ಏನು? ನನ್ನ ಹೆಂಡತಿ, ಕೌಸಲ್ಯ, ಲೀಲಾವತಿ. ನನ್ನ ಒಳ್ಳೆಯ ಸ್ನೇಹಿತರಾದ ರಾಜಾ ಪೂರಜೀ ಕೀಕಾ, ತೇಜ್ ಮತ್ತು ಷಫಿ ನನಗೆ ಮುಖ್ಯರೇ. ಆದರೆ ನನ್ನ ಬದುಕಿನ ಅರ್ಥ ಅವರನ್ನು ಸುತ್ತುವರಿದದ್ದಲ್ಲ.

ನನ್ನ ಹಿತೈಷಿಗಳು, ಅನಿವಾರ್ಯವಾಗಿ ಒಪ್ಪಿಕೊಳ್ಳುವಂತೆ ನಾನು, ಒಂದಲ್ಲ ಆದರೆ ಅಸಂಖ್ಯಾತವಾದ ಪ್ರಿಯವಾದ ಯೋಜನೆಗಳನ್ನು ಹೊಂದಿರುವ ಮನುಷ್ಯ. ಈ ಮಧ್ಯೆ ಸಂದುಹೋದ ವರ್ಷಗಳು ನನ್ನಲ್ಲಿ ತುರ್ತಿನ ನವ ಸಂವೇದನೆಯನ್ನು ತಂದುಕೊಟ್ಟಿವೆ. ಹಾಗಾಗಿ ಈಗ ಏಕಕಾಲದಲ್ಲಿ ಅವೆಲ್ಲವುಗಳ ಮೇಲೆ ಕಾಲು ಹಾಕಿಕೊಂಡು ಸವಾರಿ ಮಾಡಲೆತ್ನಿಸುತ್ತಿದ್ದೇನೆ. ಪ್ರತಿಯೊಂದಕ್ಕೂ ಒಂದು ಲಯ ಮತ್ತು ಆವೇಗವಿದೆ. ಸ್ವಲ್ಪ ಮಟ್ಟಿಗೆ ತೀರಾ ಮುಂಚೆಯಾದರೆ ಅಥವಾ ತೀರಾ ತಡಮಾಡಿದರೆ ಮುಖ ಅಡಿಯಾಗಿ ಬೀಳುವುದೇ. ಶುಭ ಮುಹೂರ್ತದ ಪ್ರಾಮುಖ್ಯತೆಯನ್ನು ನಾನು ಬರುಬರುತ್ತಾ ಹೆಚ್ಚು ಮೆಚ್ಚುತ್ತಿದ್ದೇನೆ. ಯಾವುದೇ ಒಂದು ಯೋಜನೆಗೆ ಸಮಯವನ್ನು ನಿಗದಿಪಡಿಸುವುದು ಏಕೆ ಅಷ್ಟೊಂದು ಮುಖ್ಯವಾಗುತ್ತದೆ? ಕಾರಣ, ಬೀಜವನ್ನು ಬಿತ್ತುವ ಮುನ್ನ ಮರವು ಹಣ್ಣು ಬಿಡಬೇಕೆಂದು ಮನುಕುಲ ಬಯಸುತ್ತದೆ. ಸುಭದ್ರವಾದ ಮತ್ತು ಆಳವಾದ ತಳಹದಿ ಹಾಕದೆಯೆ ವಿಜಯ ಸ್ತಂಭಗಳು ನಮಗೇ ಅರ್ಪಿತವಾಗಬೇಕೆಂದು ನಾವೆಲ್ಲ ಬಯಸುತ್ತೇವೆ. ಶುಭ ಮುಹೂರ್ತವೆಂಬುದು ಮರುಕ್ಷಣವೋ ಮರುದಿನವೋ ಆಗಿರುವುದು ಅತಿವಿರಳ. ಅದು ವಾರವೋ, ತಿಂಗಳುಗಳೋ ಅಥವಾ ವರ್ಷಗಳಷ್ಟು ಕೂಡಾ ದೂರವಿರಬಹುದು. ಅದು ನಮ್ಮೆಲ್ಲಾ ಬುದ್ಧಿವಂತಿಕೆಯನ್ನು ಒಟ್ಟುಗೂಡಿಸಿಕೊಂಡು, ದತ್ತಾಂಶಗಳನ್ನು ವಿಶ್ಲೇಷಿಸಲು, ಗೆಲುವಿನ ಅವಕಾಶಗಳೆಷ್ಟೆಂದು ಲೆಕ್ಕ ಹಾಕಲು, ನಮಗೆ ದೊರಕಿರುವ ವಸ್ತು ಸಂಗತಿಗಳು ಸರಿಯಿವೆಯೆ ಎಂದು ಪರೀಕ್ಷಿಸಿಕೊಳ್ಳಲು ಒತ್ತಾಯಿಸುತ್ತದೆ. ಅಲ್ಲದೆ ನಮ್ಮೊಂದಿಗೆ ಬರಬಹುದಾದವರು ಯಾರು, ನಮಗೆ ವಿರುದ್ಧವಾಗಿರುವವರು ಯಾರು, ಅಡ್ಡಗೋಡೆಯ ಮೇಲೆ ಇರುವವರು ಯಾರು ಎನ್ನುವುದನ್ನೆಲ್ಲ ಒಮ್ಮೆ, ಮತ್ತೊಮ್ಮೆ ಪರೀಕ್ಷಿಸಲು ಒತ್ತಾಯಿಸುತ್ತದೆ. ನಮ್ಮ ವ್ಯೂಹತಂತ್ರವನ್ನು ಯಾವುದನ್ನೂ ಬಿಡದ ಹಾಗೆ ಕೊನೆಯ ವಿವರದವರೆಗೂ ಯೋಜಿಸಿ, ಶುಭ ಮುಹೂರ್ತವನ್ನು ಯಾವಾಗ ಹಿಡಿದಿಟ್ಟುಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಬೇಕು. ಮಾಗುವುದೇ ಎಲ್ಲವೂ. ಅಥವಾ ಅದನ್ನು ಇನ್ನಷ್ಟು ಕಾರ್ಯಸಾಧ್ಯವಾದ ಮತ್ತು ವೈಯಕ್ತಿಕವಾಗಿ ಹೇಳಬೇಕೆಂದರೆ, ತಂದೆಯವರನ್ನೂ ಅವರ ಹಿರಿಯ ಸಲಹೆಗಾರರನ್ನೂ ಸರಿಯಾದ ಸಮಯದಲ್ಲಿ ಹಿಡಿಯಬೇಕು. ರಾಜ್ಯಾಡಳಿತಕ್ಕೆ ಸಂಬಂಧಿಸಿದ ವಿಷಯಗಳಲ್ಲೂ, ರಾಜ್ಯಾಡಳಿತ ವ್ಯವಸ್ಥೆಯೇ ಗಂಡಾಂತರದಲ್ಲಿದ್ದಾಗಲೂ ಅನುಕೂಲಕರವಾದ ಗಳಿಗೆಯ ಪರಿಣಾಮವನ್ನು ಎಂದಿಗೂ ತಪ್ಪಾಗಿ ಲೆಕ್ಕಹಾಕಬೇಡ. ಉದ್ದೇಶ ರಹಿತವಾದ ಅವಸರ ಮತ್ತು ಕಾಲಹರಣಗಳ ಹಾಗೆಯೇ, ಸರಿಯಾಗಿ ಲೆಕ್ಕ ಹಾಕದಿದ್ದರೆ, ಎಲ್ಲವೂ ಶೂನ್ಯವಾಗಿ ಬಿಡುತ್ತದೆ.

ನಾನು ಕುಂಭಲ್‌ಗರ್‌ನಿಂದ ಹಿಂತಿರುಗಿದ ನಂತರದ ಮೂರನೇ ಸಚಿವ ಸಂಪುಟದ ಸಭೆಯಲ್ಲಿ, ನಗರ ಯೋಜಕ ಸಾಹಸ್ ಮಲ್ ಮತ್ತು ನಾನು ವಿಶೇಷವಾದ ಮನವೊಲಿಕೆಯ ತಂತ್ರಗಳ ಅಗತ್ಯವೇ ಇಲ್ಲದೆ, ನೀರಿನ ಮತ್ತು ಒಳಚರಂಡಿಯ ಯೋಜನೆಗಳನ್ನು ಅಂತೂ ಕೊನೆಗಾಣಿಸಿದೆವು. ಸಾಹಸಮಲ್ ಸುರಂಗದ ಮಾರ್ಗಗಳಲ್ಲಿ ಸರ್ವ ರೀತಿಯಲ್ಲೂ ಸರಿಯಾಗಿರುವ ವಾತಾಯನ ವ್ಯವಸ್ಥೆಯನ್ನು ಯೋಜಿಸಿದ ಮೇಲಷ್ಟೇ ನಾನು ಸುರಂಗ ಯೋಜನೆಯನ್ನು ಪ್ರವರ್ತನ ಮಾಡುವೆನು.

ಅದು ನಾನು ನನ್ನ ಮೇಲೆ ಹೇರಿಕೊಂಡಂಥ ಕಾರ್ಯಗಳಲ್ಲಿ ಮೂರನೆಯ ಮತ್ತು ಅತ್ಯಂತ ತುರ್ತಿನ ಕಾರ್ಯಕ್ಕೆ ನನ್ನನ್ನು ತಂದು ನಿಲ್ಲಿಸಿತು. ಅದೆಂದರೆ, ಆಯುಧಗಳ ಮತ್ತು ಶಸ್ತ್ರಾಸ್ತ್ರಗಳ ಜ್ಞಾನಕ್ಕೆ ಸಂಬಂಧಿಸಿದ ಹಾಗೂ ಇತ್ತೀಚಿನ ಸೈನಿಕ ಕಾರ್ಯಾಚರಣೆಗೆ ಸಂಬಂಧಿಸಿದ ನಂಬಲರ್ಹವಾದ ಸುದ್ದಿ. ಗುಪ್ತ ಮಾಹಿತಿಯ ಶೀರ್ಷಿಕೆಯ ಅಡಿಯಲ್ಲಿ ಎಲ್ಲ ಸಮಸ್ಯೆಗಳನ್ನು ಒಂದೆಡೆ ಸೇರಿಸುವ ಮೂಲಕ ನಾನು ತಾತ್ಕಾಲಿಕವಾಗಿ ಉಪಾಯದಿಂದ ಅವುಗಳನ್ನು ತಪ್ಪಿಸಿಕೊಂಡಿದ್ದೆ. ಮಂಗಳನನ್ನು ಗುಪ್ತಚರ ವಿಭಾಗದ ಮುಖ್ಯಸ್ಥನನ್ನಾಗಿ ನೇಮಕ ಮಾಡುವುದಕ್ಕೆ ತಂದೆಯವರ ಒಪ್ಪಿಗೆಯನ್ನು ಪಡೆದುಕೊಂಡದ್ದಷ್ಟೇ ನಾನು ಮಾಡಿದ್ದು. ಮೇವಾಡದ ಪ್ರಾಂತಗಳ ಸಂಖ್ಯೆ ಹೆಚ್ಚಾದಂತೆ, ಹೆಚ್ಚು ಜನ ನಿಯೋಗಿಗಳನ್ನು ನೇಮಿಸಬೇಕಾಗುತ್ತದೆ ಎಂಬುದು ತಂದೆಯವರ ವಿಚಾರವಾಗಿತ್ತು ಹಾಗೂ ಆ ವಿಭಾಗಕ್ಕೆ ಸಾಕಷ್ಟು ಹಣಕಾಸಿನ ನೆರವನ್ನು ಹೆಚ್ಚಿಸಬೇಕೆಂಬುದಾಗಿತ್ತು. ರಾಜ್ಯದ ಭದ್ರತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ ಇರುವವರೆಗೂ ನಾನು ಮತ್ತು ಮಂಗಳ್ ಹಣಕಾಸಿನ ವಿಚಾರದಲ್ಲಿ ಮಾಡಿದ್ದೆಂದರೆ ನನ್ನ ಹೊಣೆಗಾರಿಕೆ ಮತ್ತು ಕರ್ತವ್ಯ ನಿರ್ವಹಣೆ.

ಮೇವಾಡದ ಗುಪ್ತಚರ ಸೇವೆಗಳು ಯಾವ ಕಾಲದಲ್ಲೂ ಇಲ್ಲದೆ ಇರುವಷ್ಟು ಕೆಳಮಟ್ಟದಲ್ಲಿದ್ದವು. ಅದನ್ನು ಇನ್ನಷ್ಟು ಸರಿಯಾದ ಶಬ್ದಗಳಲ್ಲಿ ಹೇಳುವೆನು. ಬೇರೆ ಬೇರೆ ಪ್ರತಿನಿಧಿಗಳಿಂದ ವರದಿಗಳು ಕ್ರಮವಾಗಿ ಬರತೊಡಗಿದವು. ಕ್ರಿಯಾಶೀಲವಾದ ಕೇಂದ್ರೀಯ ಮಾರ್ಗದರ್ಶನ ಪ್ರಾಧಿಕಾರವಿಲ್ಲದೆ ಇದ್ದಾಗ, ಗುರಿಗಳ ಮತ್ತು ಆಸಕ್ತಿಯ ವಿಶೇಷ ವಿಷಯಗಳನ್ನು ಸ್ಪಷ್ಟವಾಗಿ ಘೋಷಿಸದೆ ಇದ್ದಾಗ, ನಮ್ಮ ನಿಯೋಗಿಗಳು ಎಂದಿನ ಸಾಂಪ್ರದಾಯಿಕ ರೀತಿಯಲ್ಲಿ ಲಕ್ಷ್ಯವಿಟ್ಟು ನೋಡುವುದು, ವಿಚಾರಣೆ ಮಾಡುವುದು, ನುಸುಳುವಿಕೆ ಮತ್ತು ವರದಿ ಸಲ್ಲಿಸುವುದು ಇವುಗಳಿಗೇ ಕಟ್ಟು ಬೀಳುತ್ತಾರೆ. ವರದಿಗಳ ಮೌಲ್ಯವನ್ನಳೆಯಲು ಸರಿಯಾದ ಯಾವುದೇ ಒಂದು ವ್ಯವಸ್ಥೆ ಇರಲಿಲ್ಲ. ಶತ್ರುವು ಸುಳ್ಳು ಸುದ್ದಿಯನ್ನು ಬಿತ್ತುವುದರಲ್ಲಿ ನಮ್ಮಷ್ಟೇ ವ್ಯಸ್ತನಾಗಿದ್ದುದಷ್ಟೇ ಅಲ್ಲ. ಅವುಗಳನ್ನು ಕೂಡಲೇ ತಾಳೆ ನೋಡುವ ಸಾಧನಗಳು ಅನೇಕ ಕಡೆ ಇರುತ್ತಿರಲಿಲ್ಲವಾದ್ದರಿಂದ ನಿಯೋಗಿಯಾದವನಿಗೆ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳಲು ಇದ್ದ ಏಕೈಕ ಮಾರ್ಗವೆಂದರೆ ಅಪಾಯಗಳು ಮತ್ತು ಬೆದರಿಕೆಗಳನ್ನು ಕೃತಕವಾಗಿ ಹೆಚ್ಚಿಸುವುದು. ಇನ್ನೂ ಉತ್ತಮವಾದ ವಿಧಾನವೆಂದರೆ ಅಂಥವುಗಳನ್ನು ಹುಟ್ಟುಹಾಕುವುದು. ಪದೇ ಪದೇ ಒತ್ತಿ ಹೇಳಿ ಬಿಕ್ಕಟ್ಟಿನ ಮನೋಭಾವವನ್ನು ಶಾಶ್ವತವಾಗಿ ಬೇರೂರಿಸುವುದು. ಗೂಢಚರ್ಯೆ ಪ್ರಕರಣದೊಂದಿಗೆ ಸ್ಪರ್ಧಾತ್ಮಕ ಅಂಶವೊಂದನ್ನು ಸೇರಿಸಿದಾಗ ಸಂಗತಿಗಳೆಲ್ಲವೂ ತೀರಾ ಕೈ ಮೀರಿ ಹೋದವು ಹಾಗೂ ಅವು ಬಿಡಿಸಲು ಸಾಧ್ಯವಿಲ್ಲದಷ್ಟು ಸಂಕೀರ್ಣವೂ ಗೋಜಲೂ ಆದುವು.

ಗುಪ್ತಚರ ಸೇವೆಯಲ್ಲೇ ಕಾರ್ಯನಿರ್ವಹಿಸುತ್ತಿರುವ ಇತರೆ ಸದಸ್ಯರು ಸಲ್ಲಿಸಿದ ವಿಷಯಗಳ ಒಳ ತಿರುಳನ್ನು ನಿಯೋಗಿಗಳು ತಿಳಿದಿರುತ್ತಿದ್ದುದು ವಿರಳ. ಆದರೆ ಅವರು ತಮ್ಮ ಅದೃಷ್ಟ ಪರೀಕ್ಷೆಗೆ ಸಿದ್ಧರಿರಲಿಲ್ಲ. ಅವರೆಲ್ಲ ಭಯಂಕರ ಕತೆ ಕಟ್ಟುವವರಾಗಿ ಬಿಟ್ಟರು. ಬಹಳಷ್ಟು ವರದಿಗಳಲ್ಲಿ, ತೀರ ನೀರಸವೆಂಬಂಥ ಶತ್ರುವಿನ ಬೆಳೆ ಪರಿಸ್ಥಿತಿ ಅಥವಾ ಸೈನಿಕ ಪಾಳಯದಲ್ಲಿರುವ ಸೈನಿಕರ ಸಂಖ್ಯೆಯಂಥ ವಿಷಯಗಳಲ್ಲೂ ಅವರು ತಮಗೆ ತಾವೇ ಭಾರೀ ವೀರರಾಗಿ ಬಿಟ್ಟರು. ದೆಹಲಿ, ಗುಜರಾತ್, ಮಾಳ್ವ ಅಥವಾ ನಮ್ಮ ಬೇರೆ ಯಾರೇ ಶತ್ರುಗಳನ್ನು ಅವರು ಏಕಾಂಗಿಯಾಗಿ ಸೆಣಸಿದರೂ ಸಾವಿರದಲ್ಲಿ ಒಬ್ಬರಂತೆ ವಿಲಕ್ಷಣವಾದವರನ್ನು ಒಗ್ಗೂಡಿಸಲಾಗುವುದು. ಆದರೆ ಅವರು ಅವರಿಗೆ ಬೇಕಾದ ಸುದ್ದಿಯನ್ನು ಪಡೆದುಕೊಂಡು ಜೀವಂತವಾಗಿ ಹೊರಬಂದರು.

ಆದರೆ ನಿಯೋಗಿಗಳನ್ನು ನಾವು ದೂರಲಾಗುವುದಿಲ್ಲ. ಅದಕ್ಕೆ ನಮ್ಮ ತಪ್ಪು ವ್ಯವಸ್ಥೆಗಳೇ ಕಾರಣ. ಮಂಗಳ್ ಅಧಿಕಾರ ವಹಿಸಿಕೊಂಡ ಮೇಲೆ ಸ್ವಲ್ಪ ಕಾಲ, ಪರಿಸ್ಥಿತಿ ಇನ್ನೂ ಕೆಟ್ಟದಾಗುವಂತೆ ಕಂಡಿತು. ಅವನನ್ನು ಆಯ್ಕೆ ಮಾಡಿ ನಾನು ತಪ್ಪು ಮಾಡಿದೆನೆ? ಮಹಾರಾಜ್‌ಕುಮಾರ್ ಅವರ ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಂಡು. ಏನೇನು ವದಂತಿಗಳು, ಗುಸುಗುಸು ಪಿಸು ಪಿಸು ಹಬ್ಬಿದೆ ಅದೆಲ್ಲವನ್ನೂ ಎಷ್ಟು ಸಾಧ್ಯವಾಗುತ್ತೋ ಅಷ್ಟೆಲ್ಲಾ ಸಂಗ್ರಹಿಸಿಕೊಂಡು, ತನ್ನ ಮಹಾಸ್ವಾಮಿಯರನ್ನು ರಕ್ಷಿಸುವುದು ಬೇರೆ, ಧೃತಿಗೆಟ್ಟ ಗುಪ್ತಚರ ವಿಭಾಗದ ಆಡಳಿತ ಸೂತ್ರವನ್ನು ಕೈಗೆ ತೆಗೆದುಕೊಂಡು ಅದರ ಸೇವೆಯಲ್ಲಿರುವವರಲ್ಲಿ ಉತ್ಸಾಹವನ್ನು ತುಂಬುತ್ತಲೇ, ಯಾವಾಗಲೂ ಶಿಸ್ತು ಕ್ರಮದ ಬೆದರಿಕೆಯನ್ನು ಜೀವಂತವಾಗಿಟ್ಟಿರುವುದು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಂಬಲರ್ಹವಾದ ಮತ್ತು ಅಮೂಲ್ಯವಾದ ಸುದ್ದಿಯನ್ನು ನೀಡುವುದು ಬೇರೆ. ಬಹುಶಃ ಮಂಗಳ್ ತನ್ನ ಶಕ್ತಿಗೆ ಮೀರಿದ್ದನ್ನು ಮಾಡುತ್ತಿದ್ದಿರಬೇಕು. ಮುಖ್ಯಸ್ಥನ ಹುದ್ದೆಗೆ ಬಂದು ಎರಡು ತಿಂಗಳಾಗಿತ್ತು. ಅವನ ಕಡೆಯ ನಿಯೋಗಿಗಳ ಕಡೆಯಿಂದ ಬರಬೇಕಾದ ವರದಿಗಳೆಲ್ಲ ನಿಂತು ಹೋಗಿದ್ದವು. ಆನಂತರ ಪ್ರತಿ ಯಾವಾಗಲಾದರೊಮ್ಮೆ ಟರ್ಕಿಯಲ್ಲಿ ಬರೆದ ಪುಟಗಳನ್ನು ಕಳಿಸಲು ಶುರು ಮಾಡಿದನು. ಅದರಲ್ಲಿ ಕೆಲವು ಮಕ್ಕಳ ಬರಹದಲ್ಲಿ, ಕೆಲವಂತೂ ತುಂಬ ಸುಂದರವಾದ ಕೈ ಬರಹದಲ್ಲಿರುತ್ತಿದ್ದವು. ಅದರ ಜೊತೆ ಅದರ ಟರ್ಕಿ ಅನುವಾದ ಎಂದು ಹೇಳಲಾದ ಬರಹ ಇರುತ್ತಿತ್ತು. ಆದರೆ ಅದು ಅತ್ಯಂತ ಜುಗುಪ್ಸೆ ಬರಿಸುವಂಥ ಮತ್ತು ಓದಲಾಗದಂಥ ಗೀಚು ಗೀಚು ಬರಹದಲ್ಲಿರುತ್ತಿತ್ತು. ಬೇರೆ ಯಾರದ್ದೋ ದಿನಚರಿಯಾಗಿದ್ದಿರಬಹುದಾದಂಥದ್ದರ ಚೂರುಗಳಿಂದ ಅರ್ಥವನ್ನು ಹೊರತೆಗೆಯಲು ನನಗೆ ಕಿಂಚಿತ್ತೂ ಆಸಕ್ತಿಯಾಗಲಿ, ತಾಳ್ಮೆಯಾಗಲಿ ಇರಲಿಲ್ಲ. ಅವು ಒಂದಕ್ಕೊಂದಕ್ಕೆ ಸಂಬಂಧ ಹೊಂದಿರುತ್ತಿದ್ದುದು ತೀರಾ ಅಪರೂಪ. ಹಾಗಾಗಿ ನನಗೆ ಆ ದಿನಚರಿ ಬರೆದವರ ಬಗ್ಗೆ ಯಾವುದೇ ಸಹಾನುಭೂತಿಯಾಗಲಿ, ಅಥವಾ ಆ ವ್ಯಕ್ತಿಯ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದರ ಬಗ್ಗೆಯಾಗಲಿ ನನಗೆ ಏನೂ ಅನ್ನಿಸಲಿಲ್ಲ. ಅದೂ ಅಲ್ಲದೆ, ನಾನು ಇದರ ಓದನ್ನು ಮುಂದುವರಿಸಿದ್ದೇ ಆದರೆ ನಾನು ಒಬ್ಬ ಲೈಂಗಿಕದರ್ಶನತೃಪ್ತನಾಗಿಬಿಡುತ್ತೇನೆಂಬ ವಿಚಿತ್ರ ಭಾವವುಂಟಾಯಿತು. ದಿನಚರಿ ಎಂದರೇನೆ ಗತಸಂಗತಿಗಳ ಕಾಲಾನುಕ್ರಮದ ಬರವಣಿಗೆ. ಅದು ಹೂವು ಮತ್ತು ಹಣ್ಣುಗಳ ಬಗೆಗಿನ ವರ್ಣನಾತ್ಮಕ ಬರಹಗಳು. ರಾತ್ರಿ ವೇಳೆಯ ದಾಳಿಗಳು ಎಂದರೆ ಸರಳವಾದ ಮಾತಿನಲ್ಲಿ ಹೇಳುವುದಾದರೆ ಠಕಾಯಿತಿಗಳು, ಒಂದು ಕಾಲದ ನನ್ನ ವ್ಯಥೆಗೆ ಕಾರಣವಾದ ಕಾವ್ಯ, ಇವೆಲ್ಲ. ನನ್ನ ಬದುಕಿನ ಕಳೆದ ಒಂದೆರಡು ವರ್ಷಗಳಲ್ಲಿ ಅದಕ್ಕೆ ನಿರಂತರವಾಗಿ ತೆರೆದುಕೊಂಡದ್ದರಿಂದ ನಾನು ಅದನ್ನು ಸ್ವೀಕರಿಸುವ, ಅಷ್ಟೇ ಅಲ್ಲ ಅದಕ್ಕಾಗಿ ಕೆಲವೊಮ್ಮೆ ಆಸೆಯಿಂದ ಕಾಯುವಷ್ಟರ ಮಟ್ಟಿಗೆ ಅಭ್ಯಸ್ತನಾಗಿ ಬಿಟ್ಟಿದ್ದೇನೆ ಎಂದು ಒಪ್ಪುತ್ತೇನೆ. ಆದರೆ ಟರ್ಕಿ ಭಾಷೆಯಲ್ಲಿ ಶಬ್ದಗಳಿಗಿರುವ ಧ್ವನಿ ಸಾಮ್ಯ ಹಾಗೂ ಶಬ್ದ ಚಮತ್ಕಾರಗಳ ಬಳಕೆ ಬಹಳ ವಿಪುಲ. ಹಾಗಾಗಿ ಅನುವಾದಕನಿಗೆ ಅರ್ಥದ ವಿವಿಧ ಪದರುಗಳನ್ನು ಅನುವಾದದಲ್ಲಿ ತರಲು ಎಲ್ಲ ಸಮಯದಲ್ಲೂ ಸಾಧ್ಯವಾಗುವುದಿಲ್ಲ ಅಲ್ಲವೆ? ಬೇಡ. ನಿನಗೆ ನಮಸ್ಕಾರ. ದೊಡ್ಡಪ್ಪ ಚಿಕ್ಕಪ್ಪಂದಿರು, ದಾಯಾದಿಗಳು ಮಲತಮ್ಮಂದಿರುಗಳು ಯಾವಾಗ ನೋಡಿದರೂ ಇವರುಗಳ ಕಾಟವೇ! ನನಗೆ ಇಂಥವು ಸಾಕು ಬೇಕಾದಷ್ಟು ಇಲ್ಲವೇನೋ ಎನ್ನುವ ಹಾಗೆ. ಮದ್ಯದ ಮೋಜಿನ ಮೇಜವಾನಿಗಳು ಅನಂತರ ಅವುಗಳನ್ನು ರೂಢಿಸಿಕೊಂಡದ್ದಕ್ಕೆ ತೀವ್ರವಾದ ಪಶ್ಚಾತ್ತಾಪ ಎಲ್ಲ ಇದೇ ಆ ಬರಹಗಳಲ್ಲಿ.

ಯಾವುದೋ ದೂರದ ದೇಶದಲ್ಲಿರುವ, ಲೂಟಿಗಾರನಾಗಿದ್ದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅಭಿರುಚಿಯುಳ್ಳ ಬಡವನೊಬ್ಬನ ವಿಷಯದಲ್ಲಿ ತಂದೆಯವರಿಗೆ ಏನಂಥ ಆಸಕ್ತಿ ಇರುತ್ತೆ? ಆ ತುಣುಕು ಕಾಗದಗಳನ್ನು ಓದುವುದು ನಿಲ್ಲಿಸಿದೆ. ಈಗ ನನ್ನ ಹತ್ತಿರ ಅಂಥವು ಏಳೆಂಟಿದ್ದವು. ಕೆಲವು ಎರಡು ಸಾಲಿನಷ್ಟು ಉದ್ದ ಇನ್ನು ಕೆಲವು ವಾಕ್ಯ ಖಂಡಗಳಷ್ಟು, ಕೆಲವೊಂದೆರಡಂತು ಒಂದು ಪುಟದವರೆಗೂ ಇದ್ದವು. ನಾನು ಅವುಗಳನ್ನೆಲ್ಲ ಇಳಿ ಮೇಜಿಗೆ ಇಳಿಸಿದೆ. ಮಂಗಳನನ್ನು ಕರೆದು, ಈ ಟರ್ಕಿಯ ದಿನಚರಿಯನ್ನು ಕಳಿಸಿಕೊಟ್ಟು ನನ್ನ ಸಮಯವನ್ನೇಕೆ ಹಾಳುಮಾಡುತ್ತಿದ್ದೀಯೆ ಎಂದು ಕೇಳಲು ತೀರ್ಮಾನಿಸಿದೆ. ಅಷ್ಟೇ ಅಲ್ಲ, ದೆಹಲಿ, ಮಾಳವ, ಗುಜರಾತ್ ಮತ್ತು ಇತರೆ ಎಲ್ಲಾ ಕಡೆಯಿಂದ ವರದಿಗಳು ಬರುವುದು ನಿಂತು ಹೋಗಿರುವಾಗ, ಇನ್ನು ಮೂರು ವಾರದ ನಂತರ ನಡೆಯಲಿರುವ ಸಮರ ಸಮಿತಿಗೆ ಮತ್ತು ಮಹಾಸ್ವಾಮಿಯವರಿಗೆ ನಾನು ವಿಷಯಗಳನ್ನೆಲ್ಲ ಹೇಗೆ ತಾನೆ ವಿವರಿಸಬೇಕು ಎಂದು ನಿರೀಕ್ಷಿಸಿದ?

ಮಂಗಳನ ವಿಷಯಕ್ಕೆ ನನ್ನ ಸಿಟ್ಟು ಏರುತ್ತಾ ಹೋಯಿತು. ಆದರೆ ಯಾವುದೋ ಕಾರಣಕ್ಕೆ ಅವನನ್ನು ಕರೆಸುವುದಕ್ಕೆ ನಾನು ಇಷ್ಟಪಡಲಿಲ್ಲ. (ಟರ್ಕಿ ಭಾಷೆಯ ತುಣುಕುಗಳು ಮತ್ತು ಅವುಗಳ ಅನುವಾದ ಇಷ್ಟು ಹೊತ್ತಿಗೆ ಇಪ್ಪತ್ತೊಂದಕ್ಕೆ ಹೋಗಿತ್ತು). ಈಗ ನನಗೆ ಮಾಡುವುದಕ್ಕೆ ಉಳಿದದ್ದು ಒಂದೇ. ನನಗೆ ಲಿಖಿತ ವರದಿಯ ಹುಚ್ಚು ಹಿಡಿದರೆ ಒಂದು ಲೇಖನಿ ಕೈಗೆತ್ತಿಕೊಂಡು ಕುಳಿತುಕೊಳ್ಳುತ್ತೇನೆ. ವರದಿಯ ಪಾಠದ ವಾಕ್ಯ ವಾಕ್ಯವನ್ನೂ ಓದಿ, ಅದನ್ನು ರಚಿಸಿದವನು ತಿಳಿಸಿರುವ ವಾಸ್ತವಾಂಶಗಳನ್ನು ಮತ್ತು ಅವನ ಅಭಿಪ್ರಾಯವನ್ನು, ಅವನ ಆಸಕ್ತಿಯ ಕೊರತೆ ಮತ್ತು ಅವನ ಅಸ್ಪಷ್ಟ ಭಾಷೆ ಇವುಗಳನ್ನು ಬೇರ್ಪಡಿಸುತ್ತೇನೆ. ಒಂದೆರಡು ದಿನಗಳಲ್ಲಿ ವರದಿಯನ್ನು ಪುನರ್‌ರಚಿಸಲು ಹೇಳುತ್ತೇನೆ. ನಾನು ಕಾಗದ ಮತ್ತು ನವಿಲುಗರಿಯ ಕಾಂಡದಿಂದ ಮಾಡಿದ ಲೇಖನಿ ಹಿಡಿದು ಉದ್ಧೃತ ಭಾಗಗಳನ್ನು ಮುಂದಿಟ್ಟು ಕೊಂಡು ಕುಳಿತೆ ಮತ್ತು ಅವನನ್ನು ತರಾಟೆಗೆ ತೆಗೆದುಕೊಳ್ಳಲು ಸಿದ್ಧನಾದೆ. ನಾವಿಬ್ಬರೂ ಬಾಲ್ಯದಿಂದಲೂ ಜೊತೆ ಜೊತೆಯಲ್ಲೇ ಬೆಳೆದವರು ಮತ್ತು ನಾನು ಅವನನ್ನು ಅವಲಂಬಿಸಿದ್ದೇನೆಂಬುದೊಂದೇ ಕಾರಣಕ್ಕೆ ನಾನು ಅವನು ಏನು ಹೇಳಿದರೂ ಒಪ್ಪುತ್ತೀನಿ ಎಂದು ತನಗೆ ತಾನೇ ಭಾವಿಸಿಕೊಂಡು ಬಿಟ್ಟರೆ ಅವನು ತಪ್ಪು ಮಾಡುತ್ತಾ ಇದ್ದಾನೆ.

ನಮ್ಮಲ್ಲಿ ಯಾರಾದರೂ ತಪ್ಪು ತಿಳಿದುಕೊಂಡಿದ್ದರೆ ಅದು ಮಂಗಳನೇ ಹೊರತು ನಾನಲ್ಲ. ನಾನು ರೋಷದಿಂದ, ತುಂಬ ಕಟುವಾಗಿ ಬರೆದೆ. ಏಳನೇ ಟಿಪ್ಪಣಿಯನ್ನೋದುವ ಸಮಯಕ್ಕೆ ಒಂದು ಮಾದರಿ ಹೊರಹೊಮ್ಮಲು ಪ್ರಾರಂಭವಾಯಿತು. ಹನ್ನೊಂದನೆಯ ಉದ್ಧೃತ ಭಾಗಕ್ಕೆ ಬರುವ ಹೊತ್ತಿಗೆ ನಾನು ಅದರ ಹಿಡಿತಕ್ಕೆ ಸಿಕ್ಕಿದ್ದೆ. ನನಗೆ ಇನ್ನೂ ಹೆಚ್ಚು ಬೇಕಾಗಲಿಲ್ಲ.

"ದಯಾವಂತನಾದ, ಕರುಣಾಳುವಾದ ಭಗವಂತನ ಹೆಸರಿನಲ್ಲಿ

1494ನೇ ವರ್ಷದ ರಂಜಾನ್ ಮಾಸದಲ್ಲಿ, ನನ್ನ ಹನ್ನೆರಡನೇ ವಯಸ್ಸಿನಲ್ಲಿ ಫರ್ಘಾನಾದೇಶದಲ್ಲಿ ನಾನು ದೊರೆಯಾದೆ.

ಫರ್ಘಾನಾ ಐದನೇ ವಾಯುಗುಣ ಪರಿಸರದಲ್ಲಿ, ಜನವಸತಿ ನೆಲೆಗೊಂಡಿರುವ ಪ್ರದೇಶದಲ್ಲಿದೆ. ಪೂರ್ವಕ್ಕೆ ಕಶ್‌ಘರ್, ಪಶ್ಚಿಮಕ್ಕೆ ಸಮರ್ ಖಂಡ್, ದಕ್ಷಿಣಕ್ಕೆ ಬಾದಖ್ ಆನ್ ಪರ್ವತಗಳ ಗಡಿ, ಉತ್ತರಕ್ಕೆ ಹಿಂದಿನ ಕಾಲದಲ್ಲಿ ಅಲ್ಮಾಲಿಘ್, ಅಲ್ಮಟು ಮತ್ತು

ಯಾಂಗಿ ಎನ್ನುವ ಪಟ್ಟಣಗಳಿದ್ದಿರಬೇಕು. ಆದರೆ ಪುಸ್ತಕಗಳಲ್ಲಿ ತಾರಜ್ ಎಂದು ಬರೆಯುತ್ತಾರೆ. ಈಗಂತೂ ಅದು ಮೊಗಲರು ಮತ್ತು ಔಝ್‌ಬೇಗ್‌ರಿಂದಾಗಿ ಜನವಸತಿಯಿಲ್ಲದ ಹಾಳು ಬಿದ್ದ ಪ್ರದೇಶವಾಗಿದೆ.

"ಫರ್ಘಾನಾ ಏಳು ಪ್ರತ್ಯೇಕ ಪಟ್ಟಣಗಳನ್ನು ಹೊಂದಿದೆ; ಸೈಹುನ್ ನದಿಯ ದಕ್ಷಿಣಕ್ಕೆ ಐದು ಮತ್ತು ಅದರ ಉತ್ತರಕ್ಕೆ ಎರಡು."

ದಕ್ಷಿಣಕ್ಕಿರುವ ಪಟ್ಟಣಗಳಲ್ಲಿ ಅಂದಿಜಾನ್ ಎನ್ನುವುದು ಒಂದು. ಅದು ಕೇಂದ್ರಸ್ಥಾನದಲ್ಲಿದೆ ಮತ್ತು ಅದು ಫರ್ಘಾನಾ ದೇಶದ ರಾಜಧಾನಿ. ಅಲ್ಲಿ ಹೇರಳವಾಗಿ ಧಾನ್ಯಗಳು, ಉತ್ಕೃಷ್ಟವಾದ ದ್ರಾಕ್ಷಿಗಳು ಮತ್ತು ಕಲ್ಲಂಗಡಿ, ಕರಬೂಜ ಮೊದಲಾದ ಹಣ್ಣುಗಳು ಹೇರಳವಾಗಿ ಬೆಳೆಯುತ್ತವೆ. ಕಲ್ಲಂಗಡಿ, ಕರಬೂಜಗಳು ಹಣ್ಣಾದ ಕಾಲದಲ್ಲಿ ಅವುಗಳನ್ನು ಹೊಲಗಳಲ್ಲಿಯೇ ಮಾರುವ ಪರಿಪಾಟವಿಲ್ಲ. ಅಂದಿಜಾನ್‌ಗಿಂತ ಉತ್ತಮವಾದ್ದು ಯಾವುದೂ ಇಲ್ಲ. ಟ್ರಾನ್ಸೋಕ್ಸಿಯಾನಾದಲ್ಲಿ, ಸಮರ್‌ಖಂಡ್ ಮತ್ತು ಕೇಶ್‌ನ ನಂತರ ಅಂದಿಜಾನ್ ಕೋಟೆಯೇ ಬಹಳ ದೊಡ್ಡದು. ಅದಕ್ಕೆ ಮೂರು ಬಾಗಿಲುಗಳಿವೆ. ಅದರ ದುರ್ಗವು ದಕ್ಷಿಣ ಭಾಗಕ್ಕಿದೆ. ಮೂರು ಕಾಲುವೆಗಳಿಂದ ನೀರು ಅದಕ್ಕೆ ಹೋಗುತ್ತದೆ. ವಿಚಿತ್ರವೆಂದರೆ, ಅದರಿಂದ ಯಾವುದೊಂದೂ ಒಂದು ಜಾಗದಿಂದ ಕೂಡ ಹೊರಬರುವುದಿಲ್ಲ. ಕಾಲುವೆಯ ಹೊರ ಅಂಚಿನ ಉದ್ದಕ್ಕೂ ಒಂದು ಜಲ್ಲಿಕಲ್ಲಿನ ಹೆದ್ದಾರಿ ಇದೆ. ಕೋಟೆಯನ್ನು ಸುತ್ತುವರಿದಿರುವ ಉಪನಗರಗಳಿಂದ ಅದನ್ನು ಬೇರ್ಪಡಿಸುವುದು ಈ ಹೆದ್ದಾರಿಯ ಅಗಲ.

ಅಂದಿಜಾನ್‌ನಲ್ಲಿ ಸಾಕಷ್ಟು ಬೇಟೆಯ ಮೃಗಗಳು ಮತ್ತು ಆಹಾರಕ್ಕಾಗಿ ಸಾಕುವಂಥ ಪಕ್ಷಿಗಳಿವೆ. ಅದರ ಬೇಟೆಯ ಹಕ್ಕಿಗಳು ಆಶ್ಚರ್ಯಕರವೆನ್ನಿಸುವಷ್ಟು ದಪ್ಪನಾಗಿ ಕೊಬ್ಬಿ ಬೆಳೆಯುತ್ತವೆ. ನಾಲ್ಕು ಜನರ ಕೈಯಲ್ಲೂ ಅದರಿಂದ ಮಾಡಿದ ಆಹಾರವನ್ನು ಮುಗಿಸಲಾಗಲಿಲ್ಲ ಎನ್ನುವ ವದಂತಿ ಇದೆ.

'ಮನೆ ಮಠಗಳನ್ನು ತೊರೆದು ಪರ್ವತದಿಂದ ಪರ್ವತಕ್ಕೆ ಅಲೆದಾಡಬೇಕಾದರೆ ಅದನ್ನು ಬಿಟ್ಟು ಶಿಫಾರಸು ಮಾಡಲು ಬೇರೆ ಯಾವುದೂ ಬೇಡ ಎಂದು ನನ್ನ ಮನಸ್ಸಿಗೆ ಹೊಳೆಯಿತು.'

"ದೂರು ಹೇಳುವುದಕ್ಕಾಗಿ ನಾನು ಇದನ್ನು ಬರೆಯುತ್ತಿಲ್ಲ ನಾನು ಸರಳ ಸತ್ಯವನ್ನು ಬರೆದಿದ್ದೇನೆ. ನನ್ನದೇ ಮರುಭೂಮಿಗಳನ್ನು ಪರಿಚಯಿಸಲು ನಾನು ಇದನ್ನು ಇಲ್ಲಿ ದಾಖಲಿಸುತ್ತಿಲ್ಲ. ಏನು ನಡೆದಿದೆಯೋ ಅದನ್ನು ಮಾತ್ರ ದಾಖಲಿಸುತ್ತಿದ್ದೇನೆ. ಪ್ರತಿಯೊಂದು ವಿಷಯದಲ್ಲಿಯೂ ಸತ್ಯವನ್ನು ಗೊತ್ತು ಹಚ್ಚಬೇಕು ಎನ್ನುವುದಕ್ಕೆ ನಾನು ಈ ಇತಿಹಾಸದಲ್ಲಿ ಭದ್ರವಾಗಿ ಅಂಟಿಕೊಂಡಿದ್ದೇನೆ. ಅಲ್ಲದೆ ಪ್ರತಿಯೊಂದು ಕ್ರಿಯೆಯನ್ನು ಅದು ನಡೆದ ರೀತಿಯಲ್ಲೇ ದಾಖಲಿಸಬೇಕು ಎಂಬುದಕ್ಕೆ ಕಟ್ಟು ಬಿದ್ದಿದ್ದೇನೆ. ತಂದೆ, ಹಿರಿಯಣ್ಣ ಇವರುಗಳಿಗೆ ಸಂಬಂಧಿಸಿದ, ತಿಳಿದು ಬಂದ ಒಳ್ಳೆಯದು, ಕೆಟ್ಟದ್ದು ಎಲ್ಲವನ್ನೂ, ನಾನು ದಾಖಲಿಸಿದ್ದೇನೆಂದು ಇದರಿಂದ ತಿಳಿದುಬರುತ್ತದೆ. ಅವರೆಲ್ಲರ ಬಗೆಗಿನ, ತಿಳಿದು ಬಂದ ಗುಣಗಳು, ದೋಷಗಳನ್ನು ಎಚ್ಚರಿಕೆಯಿಂದ ದಾಖಲಿಸಿದ್ದೇನೆ. ಇದರ ಓದುಗನು ನನ್ನ ಸಬೂಬನ್ನು ಒಪ್ಪಿಕೊಳ್ಳಲಿ. ಓದುಗನು ಕಾಠಿಣ್ಯದ ಸ್ಥಳದಿಂದ ಮುಂದೆ ಸಾಗಿಹೋಗಲಿ".

ನನ್ನ ತಂದೆ ಉಮರ್ ಶೇಖ್ ಮಿರ್ಜಾ. ಕುಳ್ಳನೆಯ. ಸ್ಥೂಲ ಕಾಯದ. ದುಂಡಗೆ ಗಡ್ಡ ಬಿಟ್ಟಿದ್ದ, ಮಾಂಸಲ ಮೊಗದ ವ್ಯಕ್ತಿ. ಅವರು ಮಂಡಿಯವರೆಗೂ ಬರುತ್ತಿದ್ದ ಮೋಟು ತೋಳಿನ ಜುಬ್ಬವನ್ನು ತುಂಬ ಬಿಗಿಯಾಗಿ ಕಟ್ಟಿ ಕೊಳ್ಳುತ್ತಿದ್ದರು. ಅದಕ್ಕಾಗಿ ಹೊಟ್ಟೆಯನ್ನು ಒಳಕ್ಕೆಳೆದುಕೊಂಡು ದಾರಗಳನ್ನು ಕಟ್ಟಿಕೊಂಡು ನಂತರ ಮಾಮೂಲು ಸ್ಥಿತಿಗೆ ಬಂದಾಗ, ಅವು ಬಹಳಷ್ಟು ಸಲ ತುಂಡಾಗುತ್ತಿದ್ದುವು. ಉಡುಪಿನಲ್ಲಾಗಲಿ ಊಟದಲ್ಲಾಗಲಿ ಆಯ್ಕೆ ಮಾಡಲು ಅವರೊಂದು ಮಾದರಿಯಲ್ಲ.

"ಅವರು ತುಂಬ ಉದಾರಿ. ನಿಜ ಹೇಳಬೇಕೆಂದರೆ ಅವರ ವ್ಯಕ್ತಿತ್ವ ಔದಾರ್ಯದ ಔನ್ನತ್ಯಕ್ಕೇರಿತು. ಅವರೊಬ್ಬ ಸೌಜನ್ಯ ಶೀಲ, ವಾಚಾಳಿ ಮತ್ತು ಪ್ರಿಯವಾಗಿ ಮಾತನಾಡುವ ಧೀರ ಮತ್ತು ಕೆಚ್ಚಿನ ವ್ಯಕ್ತಿ. ಅವರೊಬ್ಬ ಸಾಮಾನ್ಯ ಬಿಲ್ಲಾಗರ. ಮುಷ್ಟಿಯಲ್ಲಿ ಅವರು ಗಟ್ಟಿಗರೇ. ಅವರ ಏಟಿಗೆ ಬೀಳದಿರುವ ಮನುಷ್ಯನೇ ಇಲ್ಲ.

ತಮ್ಮ ಮಹತ್ವಾಕಾಂಕ್ಷೆಯಿಮದಾಗಿ, ಅನೇಕ ವೇಳೆ ಯುದ್ಧಕ್ಕೆ ಬದಲಾಗಿ ಶಾಂತಿಯನ್ನು, ದ್ವೇಷಕ್ಕೆ ಬದಲು ಸ್ನೇಹವನ್ನು ಅವರು ವಿನಿಮಯ ಮಾಡಿಕೊಂಡರು.

ಅಖ್‌ಸಿ ಕೋಟೆಯನ್ನು ಆಳವಾದ ಕಮರಿಯ ಮೇಲೆ ಕಟ್ಟಲಾಗಿದೆ ಎಂಬುದನ್ನು ಆಗಲೇ ಹೇಳಿದೆ. ಈ ಕಮರಿಯ ಉದ್ದಕ್ಕೂ ಅರಮನೆಯ ಕಟ್ಟಡಗಳು ನಿಂತಿವೆ. ರಂಜ಼ಾನಿನ ನಾಲ್ಕನೇ ದಿನ ಸೋಮವಾರ ಉಮರ್ ಶೇಖ್ ಮಿರ್ಜಾ ಅವರು ತಮ್ಮ ಪಾರಿವಾಳಗಳು ಮತ್ತು ಅವುಗಳ ಗೂಡಿನೊಂದಿಗೆ ಹಾರಿ ತಾವೊಬ್ಬ ಗಿಡುಗನಾದರು.

"ನಮ್ಮ ಕಡೆಯುವರು ತೀರ ಕಮ್ಮಿ ಇರುವುದನ್ನು ಗಮನಿಸದೆ, ನಗಾರಿಗಳನ್ನು ಬಾರಿಸಿದೆವು. ದೇವರಲ್ಲಿ ಭರವಸೆ ತಾಳಿ, ನಮ್ಮ ಶತ್ರು ಮಕ್ಕಿಮ್‌ನ ಕಡೆಗೆ ಮುಖ ಮಾಡಿದೆವು."

"ಕೆಲವರಿಗಾಗಲಿ, ಹಲವರಿಗಾಗಲಿ, ದೇವರೇ ಪೂರ್ಣ ಶಕ್ತಿ.
ಅವನ ಆಸ್ಥಾನದಲ್ಲಿ ಯಾವ ಮನುಷ್ಯನಿಗೂ ಶಕ್ತಿ ಇಲ್ಲ."

ಎಷ್ಟೋ ಸಲ ದೇವರು ಮನಸ್ಸು ಮಾಡಿದಾಗ ಸಣ್ಣ ಸೈನ್ಯ ದೊಡ್ಡ ಸೈನ್ಯವನ್ನು ಸವರಿ ಹಾಕಿದೆ ! ನಗಾರಿಗಳ ದನಿ ಕೇಳಿ, ನಾವು ಬರುತ್ತಿದ್ದೇವೆಂದು ತಿಳಿದು ಮಕ್ಕಿಮ್ ತನ್ನ ಮೊದಲು ನಿರ್ಧರಿಸಿದ ಯೋಜನೆಯನ್ನು ಮರೆತು ಪಲಾಯನ ಗೈದನು. ದೇವರು ಸರಿಯಾಗಿಯೇ ಮಾಡಿದ.

"ಬಜೌರಿಗಳು ಬಂಡುಕೋರರಾಗಿದ್ದರು ಮತ್ತು ಮುಸ್ಲಿಮರ ಶತ್ರುಗಳಾಗಿದ್ದರು. ಅನಾಗರಿಕವಾದ ಮುಸ್ಲಿಮೇತರ, ಹಾಗೂ ವಿರುದ್ಧ ಸಂಪ್ರದಾಯಗಳನ್ನು ತಮ್ಮಲ್ಲಿ ಆಚರಿಸುತ್ತಿದ್ದುದರಿಂದಾಗಿ ಅವರ ಬುಡಕಟ್ಟಿನಲ್ಲಿ ಇಸ್ಲಾಂ ಎಂಬ ಹೆಸರನ್ನೇ ನಿರ್ಮೂಲಗೊಳಿಸಿದ್ದರು. ಈ ಕಾರಣಗಳಿಂದ ಅವರನ್ನು ಸಾಮೂಹಿಕವಾಗಿ ಕಗ್ಗೊಲೆ ಮಾಡಿ, ಅವರ ಹೆಂಡಿರು ಮಕ್ಕಳನ್ನು ಸೆರೆಯಾಳುಗಳನ್ನಾಗಿ ಮಾಡಿಕೊಳ್ಳಲಾಯಿತು. ಮೂರು ಸಾವಿರ ಮಂದಿ ಅಂತ್ಯ ಕಂಡರೆಂದು ಒಂದು ಅಂದಾಜು. ಕೋಟೆಯ ಪೂರ್ವಭಾಗಕ್ಕೆ ಯುದ್ಧ ವಿಸ್ತರಿಸಲಿಲ್ಲವಾಗಿ, ಕೆಲವರು ಅಲ್ಲಿಗೆ ಓಡಿಹೋಗಿ ತಪ್ಪಿಸಿಕೊಂಡರು.

ಕೋಟೆಯನ್ನು ವಶಪಡಿಸಿಕೊಳ್ಳಲಾಯಿತು, ನಾವು ಒಳಹೊಕ್ಕು ಪರಿಶೀಲಿಸಿದೆವು. ಗೋಡೆಗಳ ಮೇಲೆ ಮನೆಗಳೊಳಗೆ, ಬೀದಿಗಳಲ್ಲಿ, ಸಂದುಗೊಂದುಗಳಲ್ಲಿ, ಅದೆಷ್ಟು ಸಂಖ್ಯೆಯಲ್ಲಿ

ಸತ್ತು ಬಿದ್ದಿದ್ದರು! ಹೋಗುವವರು, ಬರುವವರು ಎಲ್ಲರೂ ಹೆಣಗಳ ಮೇಲೇ ನಡೆದುಹೋಗುತ್ತಿದ್ದರು"

"ಬಜೌರ್ ಅನ್ನು ಎರಡು ಮೂರು ಕಡೆ ಇದ್ದಕ್ಕಿದ್ದಂತೆ ಆಕ್ರಮಣ ಮಾಡಿ ವಶಪಡಿಸಿಕೊಂಡು, ಅಲ್ಲಿಯ ಜನಗಳನ್ನು ಸಾಮೂಹಿಕವಾಗಿ ಕಗ್ಗೊಲೆ ಮಾಡಿದ ಮೇಲೆ, ನಾವು 'ಭಿರಾ' ದತ್ತ ಮುಂದುವರಿದೆವು. 'ಭಿರಾ' ಮೇಲೆ ನಾವು ಸೈನ್ಯವನ್ನು ನುಗ್ಗಿಸಲೂ ಇಲ್ಲ. ಕೊಳ್ಳೆ ಹೊಡೆಯಲೂ ಇಲ್ಲ, ಆ ಜನಗಳಿಂದ ಬಂಧ ಮುಕ್ತಿಗಾಗಿ ಹಣ ನೀಡಬೇಕೆಂದು ವಿಧಿಸಿ, ಅದರಂತೆ ಹಣ ಮತ್ತು ವಸ್ತುಗಳ ರೂಪದಲ್ಲಿ ಸುಮಾರು ನಾಲ್ಕು ಲಕ್ಷದಷ್ಟು ಶಹ್ರುಖಿಗಳನ್ನು ವಸೂಲಿ ಮಾಡಿ, ಸೇನೆ ಮತ್ತು ಅದರ ಸಹಾಯಕದಳಗಳಿಗೆ ಹಂಚಿ ಕಾಬೂಲಿಗೆ ಹಿಂತಿರುಗಿದೆವು."

ಅದರಲ್ಲಿನ್ನೂ ಬೇಕಾದಷ್ಟಿದ್ದವು. ಎಲ್ಲವೂ ಕೋಚು ಕೋಚಾಗಿ ಹರಿದಂಥವು ಮತ್ತು ತುಣು ತುಣುಕಾದವು. ಆ ದಿನಚರಿಯಲ್ಲಿ ಸೋಲುಗಳಿಗೆ ಸಂಬಂಧಿಸಿದ ಉಲ್ಲೇಖಗಳು, ತಾತ್ಕಾಲಿಕ ಆಶ್ರಯಗಳೆನಿಸಿದ್ದ ಯಾವ್ಯಾವುದೋ ಜಾಗಗಳಿಂದ ಮಾಡಿದ ಅವಮಾನಕರವಾದ ಪಲಾಯನಗಳಿಗೆ ಸಂಬಂಧಿಸಿದ ಅನೇಕ ಸೂಚನೆಗಳು ಎಂಥದೇ ಹವೆಯಲ್ಲೂ ಈಜುವುದರಲ್ಲಿ ಅಪಾರ ಸುಖವನ್ನು ಕಾಣುತ್ತಿದ್ದ ಬಗ್ಗೆ ಮತ್ತೆ ಮತ್ತೆ ದಿನಚರಿ ಬರೆದಾತ ಹೇಳಿಕೊಳ್ಳುವುದು ಇವೆಲ್ಲ ಇದ್ದುವು. ಆತ ಸದಾ ಸಮರ್‌ಖಂಡದಿಂದ ಕಾಬೂಲ್‌ಗೆ ಅಲ್ಲಿಂದ ಕಂಧಹಾರ್‌ಗೆ, ಮತ್ತೆ ಸಮರ್ ಖಂಡ್‌ಗೆ ಮತ್ತು ಇತರೆ ಜಾಗಗಳಿಗೆ ಹೀಗೆ ಸಂಚಾರದಲ್ಲಿರುತ್ತಿದ್ದ. ಅವನನ್ನು ಹಿಂಬಾಲಿಸಿ ಹೋಗುತ್ತಿದ್ದ ಜನಗಳ ಗುಂಪು ಇನ್ನೂರಕ್ಕಿಂತ ಕಡಿಮೆ ಇದ್ದ ಸಂದರ್ಭಗಳೂ ಇದ್ದವು.

ಈ ಬರಹರೂಪದ ದಾಖಲೆಗಳನ್ನು ನಾನು ನೋಡಬೇಕೆಂದು ಮಂಗಳ್ ಏಕೆ ಬಯಸಿದನೆಂಬುದಕ್ಕೆ ಎರಡು ಕಾರಣಗಳಿದ್ದುವೆಂದು ನನ್ನ ಊಹೆ. ಮೊದಲನೆಯದು ಈ ದಿನಚರಿ ಬರೆದಾತ ಎಂದಿಗೂ ತನ್ನ ಪ್ರಯತ್ನವನ್ನು ಬಿಡುತ್ತಿರಲಿಲ್ಲ; ಶರಣಾಗುತ್ತಿರಲಿಲ್ಲ. ಸೋಲು ಪುನರ್ಯೌವನ ತಂದುಕೊಡುತ್ತಿತ್ತು. ಮತ್ತೆ ಮತ್ತೆ ಆಗುತ್ತಿದ್ದ ಸೋಲುಗಳು, ಅಸಫಲತೆಗಳು, ಅಧಿಕಾರಚ್ಯುತಿ ಹೊರತಾಗಿಯೂ, ಜನಗಳನ್ನು ಅವನತ್ತ ಸೆಳೆಯುವಂಥದ್ದೇನೋ ಒಂದು ಅವನ ಸ್ವಭಾವದಲ್ಲಿತ್ತು. ಎರಡನೆಯ ಲಕ್ಷಣಕ್ಕೂ, ಮೇವಾಡಕ್ಕೂ ನೇರ ಸಂಬಂಧವಿದೆ. ಆ ಮನುಷ್ಯ ಆಗಲೇ ಸಿಂಧೂ ನದಿಯನ್ನು ದಾಟಿದ್ದನು. ಬಜೌರಾ ಮೇಲೆ ಇದ್ದಕ್ಕಿದ್ದಂತೆ ಮಾಡಿದ ಧಾಳಿ, ಮೇಲ್ನೋಟಕ್ಕೆ ಧಾರ್ಮಿಕ ಕಾರಣಗಳು, ಭಿರಾದ ಜನತೆಯಿಂದ ಸಾಕಷ್ಟು ಬಿಡುಗಡೆಯ ಹಣ ಪಡೆಯುವುದು ಎನ್ನಿಸಿದರೂ, ಅದು ಹೆಚ್ಚಾಗಿ ಅವನ ದುಸ್ಸಾಹಸ ಪ್ರವೃತ್ತಿಯ ಧಾಳಿಯೇ ಆಗಿತ್ತು. ಈಗಾಗಲೇ ಹಿಂದೂಸ್ತಾನದ ನೀರನ್ನು ರುಚಿ ನೋಡಿದ್ದು ಅದು ಆಕರ್ಷಕವಾಗಿ ಕಂಡದ್ದರಿಂದ, ಕಾಬೂಲ್ ಅನ್ನು ನೆಲೆಯಾಗಿಟ್ಟುಕೊಂಡು ಎರಡನೇ ಬಾರಿಗೆ ಹಠಾತ್ ಧಾಳಿ ಮಾಡಿದ್ದಾನೆ.

ಬಹುಶಃ ತಂದೆಯವರಿಗೆ ಅವನ ಧಾಳಿಗಳ ವಿಷಯ ತಿಳಿದಿತ್ತು. ನನಗೆ ಅವನೊಂದು ಸುದ್ದಿಯಾಗಿದ್ದ ಕಾರಣ ನಾನು ಕುಂಭಲ್‌ಗರ್‌ನಲ್ಲಿದ್ದುದರಿಂದ ಜಗತ್ತಿನ ಪಾಲಿಗೆ ಸತ್ತಿದ್ದೆ. ಅಸಂಖ್ಯಾತ ಮುಸ್ಲಿಂ ದಳವಾಯಿಗಳು, ರಾಜರುಗಳು, ಬಾದಷಹರು, ಖೈಬರ್ ಕಣಿವೆಯ ಮೂಲಕ ಬಂದಿದ್ದಾರೆ, ಸಿಂಧೂ ನದಿಯ ಸುತ್ತ ಮುತ್ತ ಇನ್ನು ಕೆಲವು ಸಲ ದೂರದ ದೆಹಲಿಯವರೆಗೂ ಬಂದು ಸೂರೆ ಮಾಡಿದ್ದಾರೆ. ದೇವಾಲಯಗಳನ್ನು ಹಾಳುಗೆಡವಿದ್ದಾರೆ, ನೂರಾರು, ಸಾವಿರಾರು ಜನರ ಕಗ್ಗೊಲೆಮಾಡಿದ್ದಾರೆ. ಆದರೆ ಬಹಳಷ್ಟು ಜನರು ತಮ್ಮ

ದೇಶಕ್ಕೆ ಹಿಂತಿರುಗಿ ಹೋಗಿದ್ದಾರೆ. ಬಹಳ ಸರಳವಾದ ಕಾರಣ ಅವರು ತಾತ್ಕಾಲಿಕವಾಗಿ ಲೂಟಿ ಕೋರರಾಗಿದ್ದರು. ಅವರ ಏಕೈಕ ಉದ್ದೇಶ ಕೊಳ್ಳೆ ಮತ್ತು ನಗನಾಣ್ಯಗಳ ಲೂಟಿ. ಕೆಲವರು ಮಾತ್ರ ಉಳಿದುಕೊಂಡರು. ದೆಹಲಿಯಂತೂ ಅನೇಕ ತಲೆಮಾರುಗಳಿಂದ ಆಫ್‌ಘನ್ನರ ಆಡಳಿತದಲ್ಲಿದೆ. ಭಾರತದಲ್ಲಿ ನೆಲೆಸುತ್ತೇವೆಂಬ ಸ್ಪಷ್ಟವಾದ ಯಾವುದೇ ಯೋಚನೆ ಇಲ್ಲದೆ ಅವರ ಪೂರ್ವಿಕರು ಹಿಂದೂ ಕುಶ್ ಪರ್ವತಗಳ ಎತ್ತರದ ಕಣಿವೆಗಳನ್ನು ದಾಟಿ ಬಂದರೆಂದು ಯಾರೊಬ್ಬರೂ ನೆನಪಿಟ್ಟಿಲ್ಲ. ಈ ಮನುಷ್ಯನನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. (ಮಂಗಳ್ ಅವನ ಹೆಸರನ್ನೇಕೆ ರಹಸ್ಯವಾಗಿಟ್ಟಿದ್ದಾನೆ?)

ಏನೇ ಆದರೂ ಇನ್ನೊಂದು ಕಾರಣವಿದೆ. ಬೇಕಾದರೆ ಅದನ್ನು ತಿಳಿಯಲಾಗದ್ದು ಎನ್ನಿ, ವಿಲಕ್ಷಣ ಎನ್ನಿ ಅಥವಾ ಅಸಂಗತ ಎನ್ನಿ. ನಾನೇಕೆ ಈ ದಿನಚರಿಕಾರನತ್ತ ಆಕರ್ಷಿತನಾದೆ? ಅವನಲ್ಲಿ ನಾನು ನನ್ನನ್ನೇ ಕಾಣುತ್ತೇನೆ. ನಾನು ಕೂಡ ಟಿಪ್ಪಣಿ ಮಾಡಿಕೊಳ್ಳುತ್ತೇನೆ. ಕುಂಭಲ್‌ಗರ್‌ನಲ್ಲಿದ್ದಾಗಿನಿಂದ ಅದಕ್ಕೊಂದು ರೀತಿಯ ಆತ್ಮಕಥೆಯ ರೂಪವನ್ನು ನೀಡುತ್ತಿದ್ದೇನೆ. ಯಾರು ಹೇಗೆ ಇದನ್ನು ನೋಡುತ್ತಾರೆಂಬುದರ ಪರಿವೆ ಇಲ್ಲದೆ ಅವನು ಸತ್ಯದ ಬಗ್ಗೆ ಬರೆದಿರುವ ಭಾಗಗಳನ್ನು ನೀವು ಕಾಣುತ್ತೀರಿ. ಅವು ನನ್ನದೇ ನೆನಪುಗಳ ಸಂಪುಟದ ಮೊದಲ ಮತ್ತು ಕೊನೆಯ ಹಾಳೆಯ ಮೇಲೆ ಬರೆದಂತಿರುತ್ತವೆ. ಭಾಷೆ ಮತ್ತು ನಿರ್ದಿಷ್ಟ ವಿಷಯಗಳಲ್ಲಿ ವ್ಯತ್ಯಾಸವಿರಬಹುದು ನಿಜ. ಆದರೆ ಭಾವ ಮಾತ್ರ ಅದೇ. ನದಿಗಳಲ್ಲಿ ಈಜುವಲ್ಲಿ ಅವನು ಪಡುವ ಸುಖದ ಬಗ್ಗೆ ಓದಿದಾಗ ಅಲ್ಲಿ ನನ್ನನ್ನೇ ಕಾಣುತ್ತೇನೆ. ಅವನಿಗೆ ತಂದೆಯ ಬಗ್ಗೆ ತುಂಬ ಮಮಕಾರ. ಆದರೆ ಬರವಣಿಗೆಯಲ್ಲಿ ಮೂಡಿ ನಿಲ್ಲುವ ವ್ಯಕ್ತಿಚಿತ್ರ ಯಾವಾಗಲೂ ಪ್ರಶಂಸಾತ್ಮಕವಾಗಿರದಿದ್ದರೆ, ಅದರ ಬಗ್ಗೆ ಅವನಿಗೆ ಚಿಂತೆ ಇಲ್ಲ. ಆದರೆ ಬೇರೊಂದೇನೋ ಇದೆ. ಏನೋ ಒಂದು ನಿಷ್ಠುರವಾದ, ಘೋರವಾದ ಕಲಕುವಂಥದ್ದೇನೋ ಇದೆ. ಅವನು ಸಾಮೂಹಿಕ ಹತ್ಯೆ ಮಾಡಿದಾಗ, ಅವನು ತನ್ನ ಅಂತಃ ಸಾಕ್ಷಿಯನ್ನು ಮತ್ತು ಭಾವನೆಗಳನ್ನು ನಿರೂಪಣೆಯ ಮತ್ತು ದಿನಚರಿಯ ಹೊರತಾಗಿ ವ್ಯಕ್ತಪಡಿಸುತ್ತಾನೆ. ಆ ಮನುಷ್ಯನ ಮನಸ್ಸು ನನಗೆ ಸುಪರಿಚಿತವೆಂದು ಅನಿಸತೊಡಗಿದಾಗ ನಾನು ಆ ಮನುಷ್ಯನಿಗೆ ತೀರ ಸನಿಹ, ಆಪ್ತನೆಂಬ ಭಾವವುಂಟಾಗುತ್ತದೆ. ನಮಗೆಲ್ಲಾ ತಿಳಿದಿರುವಂತೆ, ಅಥವಾ ಕಡೇ ಪಕ್ಷ ನಾವು ತಿಳಿದಿರಬೇಕಾದ್ದು, ಸೇನಾಧಿಪತಿಯಾದವನು ಸೋಲನ್ನು ಮತ್ತು ಸರ್ವನಾಶವನ್ನು ತಾನು ಖಾತರಿಪಡಿಸಿಕೊಳ್ಳುವ ಒಂದು ಸರಳ ಮಾರ್ಗವೆಂದರೆ ತನ್ನ ಅಂತರ್ದೃಷ್ಟಿಗನುಸಾರವಾಗಿ ಹೋಗುವುದು.

ಇಷ್ಟನ್ನು ಹೇಳಿದ ಮೇಲೆ, ನಮ್ಮಿಬ್ಬರ ನಡುವೆ ಇರುವ, ತೀವ್ರವಾದ ಮತ್ತು ಬೆಸುಗೆ ಹಾಕಲಾರದ ಭಿನ್ನಾಭಿಪ್ರಾಯಗಳ ಮಹತ್ವವನ್ನು ಕಡಿಮೆ ಮಾಡಬೇಕಿಲ್ಲ. ಅವನ ಬರಹದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ. ಹೆದರಿಕೆ ಉಂಟು ಮಾಡುವ ಒಂದು ವಾಕ್ಯವೆಂದರೆ 'ದೇವರು ಅದನ್ನು ಸರಿಪಡಿಸಿದನು' ಎಂಬುದು. ನಮ್ಮ ದೇವರುಗಳಲ್ಲಿ ನನಗೆ ನಂಬಿಕೆ ಇದೆ. ಕೃಷ್ಣನೊಂದಿಗೆ ಮುಂದೆಂದೂ ಗಂಭೀರವಾದ ಸಂವಾದವನ್ನೋ ಅಥವಾ ವ್ಯವಹಾರವನ್ನೋ ನಡೆಸದೆ ಇರಬಹುದು, ಆದರೆ ಏಕಲಿಂಗಜೀಯನ್ನು ಸ್ತುತಿಸದೆ ದಿನವನ್ನು ಆರಂಭಿಸುವುದನ್ನಾಗಲಿ ಅಥವಾ ಕೊನೆಗೊಳಿಸುವುದಾಗಲಿ ಊಹಿಸಲೂ ಆರೆ. ಇಷ್ಟಾದರೂ ದೇವರೊಂದಿಗಿನ ನನ್ನ ಸಂಬಂಧ ದೂರದ್ದೇ, ಔಪಚಾರಿಕವೇ ಹಾಗು ಬಹುಮಟ್ಟಿಗೆ ಶಿಷ್ಟಾಚಾರಬದ್ಧ ಮತ್ತು ರೂಢಿಗತವಾದ್ದು, ಅದೇ ದಿನಚರಿಕಾರನಾದರೋ ದೇವರಲ್ಲಿ ಅಸಾಧಾರಣವಾದ ನಂಬಿಕೆಉಳ್ಳವನು. ಅದು ದೇವರನ್ನು ಮಣಿಸುವಂಥ ತನ್ನ ನಿರೀಕ್ಷೆಗೆ

ತಕ್ಕಂತೆ ದೇವರು ಒದಗಿ ಬರಬೇಕೆಂದು ಒತ್ತಾಯಿಸುವ, ಬಲವಂತ ಪಡಿಸುವಂಥ ರೀತಿಯ ನಂಬಿಕೆ. ನನ್ನ ಮಾತನ್ನು ಅಕ್ಷರಶಃ ತೆಗೆದುಕೊಳ್ಳಬೇಕಿಲ್ಲ. ಈ ಅಲೆಮಾರಿ ದಿನಚರಿಕಾರನಿಗೆ ಇದು ತೀವ್ರವಾದ ದೈವ ದೂಷಣೆಯಾಗಿ ಕಂಡು ಬರುತ್ತದೆ. ಆದರೆ ಅವನ ದನಿಯ ಬಗ್ಗೆ ಹಾಗೂ ದೇವರ ಬಗೆಗಿನ ಅಚಲವಾದ ಹಾಗೂ ಪೂರ್ಣವಾದ ನಿಷ್ಠೆಯ ಬಗ್ಗೆ ಏನೋ ಒಂದು ವಿಶೇಷವಿದೆ. ಅದು ಆ ಸರ್ವಶಕ್ತನನ್ನೂ ಖಂಡಿತ ಒಂದು ಕ್ಷಣ ಹಿಡಿದು ನಿಲ್ಲಿಸಬಹುದು.

ಈ ನಂಬಿಕೆಯ ಅಡ್ಡ ಪರಿಣಾಮವೂ ಉಂಟು. ಅದು ನಮ್ಮ ಮೇಲೆ ಅತ್ಯಂತ ಗಂಭೀರ ಪರಿಣಾಮವನ್ನುಂಟು ಮಾಡಬಹುದು. ಅವನು ಹಿಂದೂಸ್ತಾನದಲ್ಲೇ ನೆಲೆಸುವಂಥ ದೀರ್ಘಕಾಲೀನ ಯೋಜನೆ ಇಟ್ಟುಕೊಂಡು ಇಲ್ಲಿಗೆ ಎಂದಾದರೂ ಬಂದದ್ದೇ ಆದರೆ, ಅವನೊಬ್ಬ ಮಹಮ್ಮದೀಯ ಧರ್ಮಾಂಧನಾಗಿ, ಮೇವಾಡದಲ್ಲಿ ನಮ್ಮಂಥ ನಾಸ್ತಿಕರು ಮತ್ತು ಮಹಮ್ಮದೀಯ ಯಹೂದಿ ಅಥವಾ ಕ್ರೈಸ್ತರಲ್ಲದ ಅನಾಗರಿಕರ ವಿರುದ್ಧ ಹೋರಾಡುವ ದೇವರ ಪವಿತ್ರ ಯೋಧನಾಗಬೇಕೆಂದು ಇಚ್ಛಿಸುತ್ತಾನೆ. ಮುಸ್ಲಿಂ ರಾಜ್ಯಗಳಾದ ಮಾಳ್ವ ಮತ್ತು ಗುಜರಾತ್‌ಗಳನ್ನು ಬಿಟ್ಟು ಬಿಡುತ್ತಾನೆಯೋ? ಅಥವಾ ರಾಜ್ಯಗಳನ್ನು ಕಬಳಿಸಬೇಕೆಂಬ ಅವನ ಮಹತ್ವಾಕಾಂಕ್ಷೆಯು ಅವುಗಳ ಮೇಲೆಯೂ ಆಕ್ರಮಣ ಮಾಡುತ್ತದೋ? ಇದೊಂದು ಊಹೆ. ಆದರೆ ಕೇವಲ ಮೂರ್ಖ ಊಹೆಗಳಿಗಿಂತ ಹೆಚ್ಚಾದ್ದು ಅದರಲ್ಲಿ ಸೇರಿದೆ. ನಾನು ಹಿಂತಿರುಗಿ ಬಂದಾಗಿನಿಂದ, ಹಿಂದೂ ಮುಸ್ಲಿಮರ ಮಧ್ಯದ ಈ ಕಂದರದ ಬಗೆಗೇ ಯೋಚಿಸುತ್ತಿದ್ದೇನೆ. ಮೇವಾಡ ಬೆಳೆದು ವಿಸ್ತಾರವಾಗಿ ಹಬ್ಬಬೇಕೆಂದರೆ, ಮುಸ್ಲಿಮರಿಗೆ ಹಿಂದೂ ಸಾಮ್ರಾಜ್ಯದಲ್ಲಿ ತಾವು ಸುರಕ್ಷಿತವೆಂಬ ಭಾವ ಬರುವಂತೆ ಮಾಡುವುದು ನಾವು ಮಾಡಬೇಕಾಗಿರುವ ಬಹುಮುಖ್ಯ ಕಾರ್ಯಗಳಲ್ಲೊಂದಾಗಬೇಕು. ಮೇವಾಡದ ಭವಿಷ್ಯ ನಿರ್ಮಾಣದಲ್ಲಿ ಜೈನರು ಅಥವಾ ಹಿಂದೂಗಳಿಗಿರುವಷ್ಟೇ ಬಾಧ್ಯತೆ ಅವರಿಗೂ ಇರಬೇಕು. ದೇವರು ಮತ್ತು ನಮ್ಮ ನಂಬಿಕೆಯನ್ನು ಮನೆಗೆ ಸೀಮಿತಗೊಳಿಸಿ, ಸಾರ್ವಜನಿಕ ಬದುಕಿನಲ್ಲಿ ದೇಶಕ್ಕೆ ಮೊದಲ ಆದ್ಯತೆ ನೀಡುವಂಥ ಒಂದು ದ್ವೈಧವನ್ನು ನಾವು ಖಾತರಿಪಡಿಸಲು ಸಧ್ಯವೆ ಎಂದು ನಾನದೆಷ್ಟು ವಿಸ್ಮಯ ಪಡುತ್ತಿರುತ್ತೇನೆ.

ಆ ಸಂಜೆ ಮಂಗಳನು 'ಅತ್ಯಂತ ಗೌಪ್ಯ ಹಾಗೂ ರಹಸ್ಯ' ಕಡತವನ್ನು ನನ್ನ ಬಳಿಗೆ ಕಳಿಸಿಕೊಟ್ಟನು.

ಘನತೆವೆತ್ತ ಮಹಾಸ್ವಾಮಿಯವರೆ,

ಕಳೆದ ಕೆಲವು ತಿಂಗಳುಗಳ ಅವಧಿಯಲ್ಲಿ ನಾನು ಕಳಿಸಿಕೊಡುತ್ತಿರುವ ಟಿಪ್ಪಣಿಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿರುತ್ತೀರಿ (ಇಪ್ಪತ್ತ ನಾಲ್ಕು ಗಂಟೆಯೂ ಆ ಮನುಷ್ಯ ನನ್ನ ಬೆನ್ನು ಹತ್ತಿದ್ದಾನೆ. ಅವನ ಕಡೆಯ ಯಾವನಾದರೂ ವ್ಯಕ್ತಿಯ ಗಮನಕ್ಕೆ ಬಾರದ ಹಾಗೆ ನಾನು ಮೂತ್ರ ಕೂಡ ಮಾಡಲು ಸಾಧ್ಯವಿಲ್ಲ. ಕಾರಣ ಯಾರಾದರೊಬ್ಬ ಮೂತ್ರಕ್ಕೆ ಹೋದ ಸಮಯ ಜಾಗ ಮತ್ತು ಅದರ ಬಣ್ಣ ಎಲ್ಲ ಗುರುತು ಹಾಕಿಕೊಂಡಿರುತ್ತಾನೆ.) ಈಗ ನನಗೆ ನನ್ನ ವರದಿಯನ್ನು ಸಲ್ಲಿಸಬೇಕೆನಿಸಿದೆ. ಮುಂದಿನ ಸಚಿವ ಸಂಪುಟದ ಸಭೆಗೆ ನಾನು ನನ್ನ ಮೊದಲನೆಯ ವರದಿಯನ್ನು ಸಲ್ಲಿಸದೆ, ನಿಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದೆ. ಹಾಗೂ ನಿಮ್ಮನ್ನು ಸಂಕಷ್ಟಕ್ಕೆ ಈಡು ಮಾಡಿದ್ದೆ ಎಂದು ನನಗೆ ತಿಳಿದಿದೆ.

ನಿಮ್ಮನ್ನು ಭೇಟಿ ಮಾಡುವುದನ್ನು ತಪ್ಪಿಸುತ್ತಿದ್ದೆ ಎನ್ನುವುದೂ ನಿಜ. ನಾನು ಕಳಿಸಿರುವ ಟಿಪ್ಪಣಿಗಳ ಉದ್ಧೃತ ಭಾಗಗಳ ಬಗ್ಗೆ ನೀವು ಸ್ವತಂತ್ರವಾದ ತೀರ್ಮಾನ ತೆಗೆದುಕೊಳ್ಳುವವರೆಗೂ ನಿಮ್ಮೊಂದಿಗೆ ಮಾತುಕತೆಯಾಡುವುದು ನನಗೆ ಬೇಕಿರಲಿಲ್ಲ.

ವರದಿಯ ವಿಷಯಕ್ಕೆ ಬರುವುದಕ್ಕೆ ಮೊದಲು ಒಂದು ಮಾತು. ನಮ್ಮ ಪ್ರತಿನಿಧಿಗಳ ಕಡೆಯಿಂದ ಬಹಳಷ್ಟು ವರದಿಗಳನ್ನು ನಾನೇಕೆ ಸಲ್ಲಿಸಿಲ್ಲವೆಂದು ತಮಗೆ ಆಶ್ಚರ್ಯವಾಗುತ್ತಿದೆ ಎಂದು ನನಗೆ ಗೊತ್ತು. ನೇರವಾಗಿ ಹೇಳಬೇಕೆಂದರೆ, ಅವುಗಳ ಸತ್ಯಸಂಧತೆ ಸಂಶಯಾಸ್ಪದವಾಗಿಯೇ ಇತ್ತು. ನಾನು ಪ್ರತಿಯೊಬ್ಬ ಪ್ರತಿನಿಧಿಯೊಂದಿಗೂ ಸ್ವಲ್ಪ ಸಮಯ ಕಳೆದು ಅವನ ಬಗ್ಗೆ ಸಹಾನುಭೂತಿಪರವಾದ ಭಾವವನ್ನು ಬೆಳೆಸಿಕೊಂಡು, ಅವನ ವೈಚಿತ್ರ್ಯಗಳು, ಅವನ ಅಭದ್ರತೆಯ ಮಟ್ಟ ಯಾವ ಮಟ್ಟಿನದು, ತನ್ನ ದೇಶ ಭಕ್ತಿಯನ್ನು ಋಜುವಾತುಪಡಿಸಬೇಕಾದ ಅಗತ್ಯತೆ ಇತ್ಯಾದಿಗಳನ್ನೆಲ್ಲ ತಿಳಿದುಕೊಳ್ಳಬೇಕೆಂದಿದ್ದೆ. ಅವರ ಸಾಹಸಗಳನ್ನು ಪ್ರೋತ್ಸಾಹಿಸಿ, ಸಮಾನಾಂತರ ಸತ್ಯಗಳೆಂದು ಹೇಳಲಾದವುಗಳ ಬಗ್ಗೆ ಅವರನ್ನು ವಿಮುಖಗೊಳಿಸಬೇಕೆಂದಿದ್ದೆ. ಅನೇಕ ಸರಣಿ ಸಭೆಗಳನ್ನು ಕರೆದು ಅವರಿಗೆ ಮುಖಾಮುಖಿಯಾಗುತ್ತ ಅವರನ್ನು ನಿರಾತಂಕ ಗೊಳಿಸುವ ಮೂಲಕ ಅವರ ವಿಶ್ವಾಸವನ್ನು ಗಳಿಸಿಕೊಂಡೆನು. ಆನಂತರ ಅವರ ಹಿಂದಿನ ವರದಿಗಳನ್ನು ಓದಿದೆ. ಆ ವರದಿಗಳ ಸತ್ಯತೆ ಮತ್ತು ಕಟ್ಟುಕತೆಗಳ ಅನುಪಾತ ಕುರಿತಂತೆ ನನ್ನ ತೀರ್ಮಾನವನ್ನು ಹೇಳಿದೆ. ತಮ್ಮ ಕತೆಗಳಿಗೆ ಸಮರ್ಥನೆಯನ್ನು ಒದಗಿಸುವುದಾದಲ್ಲಿ ನನ್ನ ತೀರ್ಮಾನವನ್ನು ವಿರೋಧಿಸುವ ಸ್ವಾತಂತ್ರ್ಯವೂ ಅವರಿಗುಂಟೆಂದು ಹೇಳಿದೆ. ಇನ್ನು ಹತ್ತು ದಿನಕ್ಕೆ ಮತ್ತೊಮ್ಮೆ ತಮ್ಮ ಮೇಜಿನ ಮೇಲೆ ಗುಪ್ತಚರ ವರದಿಗಳು ಕಾಣಿಸಿಕೊಳ್ಳುತ್ತವೆಂದು ನಾನು ನಂಬಿದ್ದೇನೆ. ಪ್ರತಿಯೊಂದರ ಆದ್ಯತೆಯ ಮೌಲ್ಯವನ್ನು ಹಾಗೂ ಅವುಗಳ ಸತ್ಯಸಂಧತೆಯ ಮೌಲ್ಯವನ್ನು ಗುರುತು ಹಾಕಿಯೆ ಕಳಿಸಲಾಗುವುದು. ಈ ಎರಡು ಎಲ್ಲೆಕಟ್ಟುಗಳಿಗಿಂತ ಮಿಗಿಲಾಗಿ, ಪ್ರತಿ ಆಗೊಮ್ಮೆ ಈಗೊಮ್ಮೆ, "ನಂಬಲರ್ಹವಲ್ಲದ ವಾಸ್ತವಾಂಶಗಳು ಮತ್ತು ಮಾಹಿತಿ, ಆದರೆ ಪರಿಸ್ಥಿತಿ ಕುರಿತಂತೆ ಪ್ರತಿನಿಧಿಗಳ ಅನಿಸಿಕೆ ಒಳನೋಟದಿಂದ ಕೂಡಿದೆ, ಹಾಗಾಗಿ ಕಡೆಗಣಿಸಬಾರದು" ಎಂಬಂಥ ಟಿಪ್ಪಣಿಗಳನ್ನು ತಾವು ನೋಡುವಿರಿ. ಯಾವುದರ ಬಗ್ಗೆಯೂ ಖಾತರಿಯಾಗಿ ಹೇಳಲಾಗುವುದಿಲ್ಲ, ಅವನ ಸುಳ್ಳುಗಳನ್ನು ಕೂಡ' ಎಂಬುದು ಗುಪ್ತಚರನ ಕಾರ್ಯಸ್ವರೂಪದಲ್ಲೇ ಇದೆ. ಕಾರಣ ಒಂದೊಂದು ಸಲ, ಅನಂತರದಲ್ಲಿ ಪರಿಸ್ಥಿತಿಯ ಬದಲಾವಣೆಯಿಂದ ಅವನ ಕಲ್ಪಿತ ಕಥೆಗಳಿಗೆ ಸಮರ್ಥನೆ ಸಿಕ್ಕಿರುವುದು ನಿಮಗೆ ಗೊತ್ತಾಗುತ್ತದೆ. ಈಗ ವರದಿಯ ಕಡೆ ನೋಡೋಣ.

ವ್ಯಕ್ತಿಯ ಹೆಸರು: ಝಹೀರುದ್ದೀನ್ ಮೊಹಮ್ಮದ್ ಬಾಬರ್

ಹುದ್ದೆ : ಕಾಬೂಲಿನ ದೊರೆ

ಆಕರಗಳು : ಬಾಬರನು ತನ್ನ ಸೋದರ ಸಂಬಂಧಿ ಒಂಬತ್ತು ವರ್ಷದ ಹೈದರ್‌ಗೆ ಹೇಳಿ ಬರೆಸಿದ್ದು ಇಲ್ಲವೆ ಪ್ರತಿಗಳನ್ನು ತೆಗೆಸುವ ಅಭ್ಯಾಸಗಳು. ಬಾಬರನ ಮೇಲ್ವಿಚಾರಣೆಯಲ್ಲಿ ದಿನಚರಿಯನ್ನು ಪ್ರತಿಮಾಡುವ ಮುಂಚೆ, ಅವನು ಹೇಳಿದ್ದನ್ನು ಬರೆದುಕೊಳ್ಳುವವನು ಬರೆಯುವ ಲೇಖನಿ, ಮಸಿ, ತನ್ನ ಕೈ ಬರಹ ಇವೇ ಮೊದಲಾದುವುಗಳನ್ನು ಪರೀಕ್ಷೆ ಮಾಡಿದ್ದ ಕಾಗದದ ತುಣುಕುಗಳು ಅಥವಾ ಪ್ರತಿ ತೆಗೆಯುವ ಸಂದರ್ಭದಲ್ಲಿ ಕಾಗುಣಿತವೇ ಮೊದಲಾದ ತಪ್ಪುಗಳಾದ ಕಾರಣಕ್ಕೆ ಕಸದ ಬುಟ್ಟಿಗೆ ಎಸೆಯಲಾಗಿದ್ದ ಹಾಳೆಗಳು.

ಪೂರ್ವಜರು (ವಂಶಪರಂಪರೆ)

ತಂದೆಯ ಕಡೆಯಿಂದ ಬಾಬರ್, ಕುಂಟ ತೈಮೂರನ ಮರಿ ಮೊಮ್ಮಗ. ತಾಯಿಯ ಕಡೆ, ಮಂಗೋಲ್ ಅನ್ನು ಗೆದ್ದ ಜೆಂಘೀಸ್‌ಖಾನನ ಎರಡನೇ ಮಗ ಛಘತಾಯ್ ಖಾನ್ ವಂಶಸ್ಥ.

ರಜಪೂತರು ಮತ್ತು ದೆಹಲಿಯ ಲೂದಿಗಳು ಕೂಡ ತೈಮೂರ್ ಮತ್ತು ಜೆಂಘೀಸ್‌ಖಾನನನ್ನು ಅನಾಗರಿಕರೆಂದು ಪರಿಗಣಿಸಬಹುದು. ಆದರೆ ಅದು ಹೊರಗಿನವರ ದೃಷ್ಟಿಯಲ್ಲಿ. ಆದರೆ ಬಾಬರನಿಗೆ ಈ ಇಬ್ಬರು ಆಕ್ರಮಣಕಾರಿಗಳ ರಕ್ತವೇ ತನ್ನ ನರನಾಡಿಗಳಲ್ಲೂ ಹರಿಯುತ್ತಿದೆ ಎನ್ನುವ ಕಾರಣಕ್ಕೆ ಅದು ಅತ್ಯಂತ ಹೆಮ್ಮೆಯ ಸಂಗತಿ.

ತನ್ನ ಬದುಕಿನ ಬಹಳಷ್ಟು ವರ್ಷಗಳನ್ನು ಪಲಾಯನದಲ್ಲೇ ಕಳೆದಿದ್ದಾನೆ. ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ 1497ರಲ್ಲಿ (ವಿ.ಸಂ....) ತನ್ನ ಪಿತ್ರಾರ್ಜಿತ ರಾಜ್ಯ ಸಮರ್‌ಖಂಡ್ ಅನ್ನು ವಶಪಡಿಸಿಕೊಂಡನು. ಕೇವಲ ಒಂದು ನೂರು ದಿನಗಳಲ್ಲೇ ತನ್ನದೇ ಸಾಮ್ರಾಜ್ಯವಾದ ಫರ್ಘಾನಾ ಮತ್ತು ಸಮರ್‌ಖಂಡ್ ಎರಡನ್ನೂ ಕಳೆದು ಕೊಂಡನು. ಹಾಗಾಗಿ ಈ ಪ್ರಯಾಣ ಅತ್ಯಂತ ದುಬಾರಿಯಾಯಿತು.

1499ರಲ್ಲಿ ಬಾಬರನು ಫರ್ಘಾನಾವನ್ನು ಮರಳಿ ಪಡೆದುಕೊಂಡನು. ಆದರೆ ಒಂದು ವರ್ಷದ ನಂತರ ತನ್ನ ಸೋದರ ಜಹಾಂಗೀರನೊಂದಿಗೆ ಅದನ್ನು ಹಂಚಿಕೊಳ್ಳಬೇಕಾಯಿತು.

1500ರಲ್ಲಿ ಬಾಬರ್ ಸಮರ್‌ಖಂಡ್ ಅನ್ನು ಮತ್ತೆ ವಶಪಡಿಸಿಕೊಂಡನು. ಕೆಲವೇ ತಿಂಗಳಲ್ಲಿ ಮತ್ತೊಮ್ಮೆ ಅದನ್ನು ಕಳೆದುಕೊಂಡನು. ಮೂರು ವರ್ಷಗಳ ಕಾಲ ನೆಲೆಯಿಲ್ಲದೆ, ಇದ್ದು 1504ರಲ್ಲಿ ಬಾಬರ್ ಕಾಬೂಲ್ ಅನ್ನು ತನ್ನ ವಶಕ್ಕೆ ತಂದುಕೊಂಡು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. 1511ರಲ್ಲಿ ಬಾಬರ್ ಮತ್ತೆ ಸಮರ್‌ಖಂಡದ ಸಿಂಹಾಸವನ್ನೇರಿದನು. ಆದರೆ 1512ರ ವೈಶಾಖ ಮಾಸದಲ್ಲಿ ಅದನ್ನು ಮತ್ತೆ ತೆರವುಗೊಳಿಸಬೇಕಾಯಿತು. 1519ರಲ್ಲಿ ಬಾಬರ್ ಮೊದಲ ಬಾರಿಗೆ ಸಿಂಧೂ ನದಿಯನ್ನು ದಾಟಿ ಬಜೌರ್ ಕೋಟೆಯನ್ನು ವಶಪಡಿಸಿಕೊಂಡನು. 1520ರಲ್ಲಿ ಮೂರನೇ ಬಾರಿಗೆ ಭಾರತದ ಮೇಲೆ ಧಾಳಿ ಮಾಡಿ, ಗಕ್ಕಾಮ್ ಬುಡಕಟ್ಟಿನ ಮೇಲೆ ಆಕ್ರಮಣ ಮಾಡಿ, ಭಿರಾದಲ್ಲಿ ತನ್ನನ್ನು ಎದುರಿಸಿದವನನ್ನು ಸಂಹರಿಸಿ, ಸಿಯಾಲ್ ಕೋಟನ್ನು ತಲುಪಿದನು.

ಸ್ಪಷ್ಟವಾಗಿ ಇಲ್ಲೊಂದು ಮಾದರಿ ಇದೆ. ಬಾಬರ್ ತನ್ನ ದಿನಚರಿಯಲ್ಲಿ, ತೈಮೂರ್ ತನ್ನ ಮೂಲ ನೆಲೆಯನ್ನಾಗಿ ಮಾಡಿಕೊಂಡಿದ್ದ ಸಮರ್‌ಖಂಡ್ ಹಾಗೂ 1398ರಲ್ಲಿ ಅವನು ಧಾಳಿ ಮಾಡಿದ ದೆಹಲಿಗಳನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾನೆ.

ತೈಮೂರನಿಗೆ ವಾಪಸಾಗಲು ಸದಾ ಸಮರ್‌ಖಂಡ್ ಇರುತ್ತಿತ್ತು. ಬಾಬರ್ ಮೂರು ಬಾರಿ ಸಮರ್‌ಖಂಡ್ ಅನ್ನು ವಶಪಡಿಸಿಕೊಂಡನು. ಮತ್ತು ಮೂರು ಸಲ ಅದನ್ನು ಬಿಟ್ಟುಕೊಡಬೇಕಾಯಿತು. ಈ ಮಧ್ಯೆ ಎಂದಾದರೂ ಕಾಬೂಲ್ ಅನ್ನೂ ಅವನು ಕಳೆದುಕೊಳ್ಳಬಹುದು. ಹಿಂದೂಸ್ತಾನವಂತೂ ತುಂಬ ದೊಡ್ಡ ದೇಶ. ಅಪಾರವಾದ ಶ್ರೀಮಂತಿಕೆಯುಳ್ಳ ದೇಶ. ಅದಕ್ಕಿರುವ ಇನ್ನೊಂದು ಆಕರ್ಷಣೆ ಎಂದರೆ ಅದು ಕಾಫಿರರಿಂದ ತುಂಬಿದ ದೇಶ. ದೆಹಲಿಯನ್ನು ವಶಪಡಿಸಿಕೊಳ್ಳಬೇಕೆಂದು ಅವನು ಇಚ್ಛಿಸಿದ್ದಲ್ಲಿ ಆಗ ತನ್ನ ಮತ್ತು ಅಲ್ಲಾಹ್ ಇಬ್ಬರ ಉದ್ದೇಶಗಳನ್ನು ಈಡೇರಿಸಿದಂತಾಗುತ್ತದೆ.

ತೀರ್ಮಾನ : ವಿಪತ್ತುಗಳು ಬಾಬರನನ್ನು ಗೊಂದಲಕ್ಕೀಡು ಮಾಡುವುದಿಲ್ಲ. ಸಮರ್‌ಖಂಡ್, ಕಂಧಹಾರ್ ಅಥವಾ ಕಾಬೂಲ್ ಹೀಗೆ ಅವನು ಎಲ್ಲಿಗೇ ಹೋಗಲಿ, ಅಲ್ಲಿ ಅವನು ಕೂಡಲೇ ಆಸ್ಥಾನವನ್ನು ಸ್ಥಾಪಿಸಿಬಿಡುತ್ತಾನೆ. ತನ್ನ ಸುತ್ತ ಕವಿಗಳು

ಕಲಾಪಿದರನ್ನೂ ಕಲೆಹಾಕಿಕೊಳ್ಳುತ್ತಾನೆ. ಅವನು ಯಾವತ್ತೂ ತನ್ನ ಮಾತಿಗೆ ತಪ್ಪದ ಮನುಷ್ಯನಾದ್ದರಿಂದ, ತನ್ನ ಜನಗಳಲ್ಲಿ ತೀವ್ರವಾದ ಸ್ವಾಮಿನಿಷ್ಠೆಯನ್ನು ಜಾಗ್ರತಗೊಳಿಸುತ್ತಾನೆ. ಅವನು ಆಕ್ರಮಣ ಮಾಡುವುದೂ ಬೇಗ, ಹಿಮ್ಮೆಟ್ಟುವುದೂ ಬೇಗ. ಅವನ ಕೆಲವೊಂದು ಅತ್ಯಂತ ಪ್ರಭಾವೀ ಗೆಲುವುಗಳನ್ನು ಸಾಧಿಸಿರುವುದು ಕೇವಲ ಒಂದು ಸಾವಿರ ಇಲ್ಲವೆ ಸಾವಿರದಿನ್ನೂರು ಜನಗಳನ್ನು ಜೊತೆಗೂಡಿಸಿಕೊಂಡು. ಕೇವಲ ಇನ್ನೂರು ಜನರನ್ನು ಜೊತೆಮಾಡಿಕೊಂಡು ಯುದ್ಧಕ್ಕೆ ಹೋದರೂ ಜಯಶಾಲಿಯಾಗಿ ಹಿಂತಿರುಗುತ್ತಾನೆಂಬುದನ್ನು ಕಲ್ಪಿಸಿಕೊಳ್ಳುವುದೇ ಸಾಧ್ಯವಿಲ್ಲ. ಶಸ್ತ್ರಾಸ್ತ್ರಗಳ ತಂತ್ರಜ್ಞಾನದಲ್ಲಿ ಅವನಿಗೆ ತೀವ್ರವಾದ ಆಸಕ್ತಿ ಇದೆ ಹಾಗೂ ಅದನ್ನು ಪಡೆದುಕೊಳ್ಳಲು ಹಾಗೂ ತನ್ನ ಸಮರ ಕಾರ್ಯಾಚರಣೆಯಲ್ಲಿ ಅದನ್ನು ಅಳವಡಿಸಿಕೊಳ್ಳಲು ಸದಾ ಯತ್ನಿಸುತ್ತಿರುತ್ತಾನೆ. ಅವನು ಫಿರಂಗಿ ಎಂಬ ಹೊಸ ರೀತಿಯ ಅಸ್ತ್ರವನ್ನು ಕಂಡುಕೊಂಡಿದ್ದಾನೆಂದು ಹೇಳಲಾಗುತ್ತದೆ. ಅಲ್ಲದೆ ಅವುಗಳನ್ನು ತಯಾರಿಸುವ ಉಸ್ತಾದ್ ಆಲಿ ಎಂಬ ಫಿರಂಗಿ ದಳದ ವ್ಯಕ್ತಿಯೊಬ್ಬನನ್ನು ತನ್ನ ಬಳಿ ಇಟ್ಟುಕೊಂಡಿದ್ದಾನಂತೆ. ಈ ಮದ್ದು ಗುಂಡುಗಳ ಶಸ್ತ್ರಾಸ್ತ್ರಗಳ ಬಗ್ಗೆ ಹೆಚ್ಚಿನ ಸಮಾಚಾರಕ್ಕಾಗಿ ಕಾಯುತ್ತಿದ್ದೇನೆ.

ಶಿಫಾರಸು ಮಾಡಲಾದ ಕ್ರಮ

1. ನಿಮ್ಮದೇ ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಬೇಕೆಂದರೆ ಬಾಬರನನ್ನು ಎಚ್ಚರಿಕೆಯಿಂದ ಗಮನಿಸುವ ಅಗತ್ಯವಿದೆ.
2. ಹೊಸರೀತಿಯ ಶಸ್ತ್ರಾಸ್ತ್ರಗಳ ನಮೂನೆಗಳನ್ನು ಪಡೆದುಕೊಳ್ಳಲು ನಿಮ್ಮ ಸರ್ವಶಕ್ತಿಯನ್ನೂ ಬಳಸಿಕೊಳ್ಳಿ.
3. ಈ ಹೊಸರೀತಿಯ ಶಸ್ತ್ರ ಹೇಗೆ ಕೆಲಸ ಮಾಡುತ್ತದೆಂಬುದನ್ನು ನೀವು ಮಹಾಪ್ರಭುಗಳಿಗೆ ಪ್ರಯೋಗಿಸಿ ತೋರಿಸಬೇಕು.
4. ಬಂದೂಕುಗಳು ಮತ್ತು ಫಿರಂಗಿಗಳನ್ನು ಸರಬರಾಜು ಮಾಡಲು ಆದೇಶ ನೀಡುವ ಸಲುವಾಗಿ ದೊಡ್ಡ ಮೊತ್ತದ ಹಣವನ್ನು ಮಂಜೂರು ಮಾಡಿಸಿಕೊಳ್ಳಿ.
5. ಈ ಶಸ್ತ್ರಾಸ್ತ್ರಗಳನ್ನಿಟ್ಟಿರುವೆಡೆ ನಮ್ಮ ರಕ್ಷಣಾತ್ಮಕ ಮತ್ತು ಆಕ್ರಮಣಾತ್ಮಕ ಕಾರ್ಯಾಚರಣೆಗಳನ್ನು ಏರ್ಪಡಿಸುವುದು.
6. ಈ ಫಿರಂಗಿ ಮತ್ತು ಬಂದೂಕುಗಳ ಬಳಕೆಯ ಬಗ್ಗೆ ನಮ್ಮ ಸೇನಾ ಯೋಧರಿಗೆ ತರಬೇತಿ ನೀಡುವುದು.
7. ತಂತ್ರಜ್ಞಾನಕ್ಕಾಗಿ ನಾವು ತೊಡಗಿಸಿರುವ ಹಣ ಒಂದು ಸಲದ್ದು ಮಾತ್ರ ಆಗದೆ ನಿರಂತರವಾಗಿ ಆಗಬೇಕಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಹಾಗೆ ಮಾಡುವುದರಿಂದ ಪ್ರತಿಯೊಂದು ಸಂದರ್ಭದಲ್ಲೂ ನಮ್ಮ ಶತ್ರುವೂ ಪ್ರತಿಕೂಲ ಪರಿಸ್ಥಿತಿಯಲ್ಲಿರುತ್ತಾನೆಯೇ ಹೊರತು ನಾವಲ್ಲ.
8. ಪ್ರಾರಂಭದಲ್ಲಿ ಸೈನ್ಯಕ್ಕೆ ಅಗತ್ಯವಾದ ಶಸ್ತ್ರಾಸ್ತ್ರಗಳ ತಿಳಿವನ್ನು ವಿದೇಶೀ ಮೂಲದಿಂದ ತಿಳಿದು ಕೊಳ್ಳುವುದೇನೋ ಒಳ್ಳೆಯದು. ಆದರೆ ಅಂತಿಮವಾಗಿ ಹೊಸ ತಿಳಿವಿನಲ್ಲಿ ನಾವು ಆಳವಾಗಿ ತೊಡಗಿಸಿಕೊಂಡು ನಮ್ಮ ಕಾಲುಗಳ ಮೇಲೆ ನಾವು ನಿಲ್ಲುವುದನ್ನು ಕಲಿಯಬೇಕಾಗುತ್ತದೆ. ಉದ್ದೇಶವೇನೆಂದರೆ, ನೂತನ ಶಸ್ತ್ರಾಸ್ತ್ರಗಳ ಕ್ಷೇತ್ರದಲ್ಲಿ ಭಾವೀ ಮುನ್ನಡೆಗಳು ನಮ್ಮ ಕಡೆಯಿಂದ ಆಗಲೆಂಬುದು.

* * *

ನೀವು ಅವನ ವರದಿಯನ್ನು ಓದಿದ ಮೇಲೆ, ನಾನು ಮತ್ತು ಮಂಗಳ್ ಒಂದೇ ಮೊಲೆ ಹಾಲು ಕುಡಿದು ಬೆಳೆದವರೆಂಬುದರಲ್ಲಿ ಏನಾದರೂ ಸಂಶಯವಿರಲು ಸಾಧ್ಯವೆ? ಅವನು ನನಗಿಂತಲೂ ಬಿಗುವಿನ, ಮಿತ ಭಾಷೆಯ ವ್ಯಕ್ತಿಯಾಗಿರಬಹುದು. ಅದಕ್ಕೆ ಕಾರಣ ಮಾಹಿತಿಯ ಕ್ರಮವು ಸಂಕ್ಷಿಪ್ತತೆ, ಸ್ಪಷ್ಟತೆ, ತೀರ್ಮಾನ ಮತ್ತು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಒಂದು ಸಾಲು ಇವೆಲ್ಲವನ್ನೂ ಬಯಸುತ್ತದೆ. ತಂದೆಯವರಿಗೆ ಮಂಗಳನ ವರದಿಯನ್ನು ಸಲ್ಲಿಸುವ ಮುಂಚೆ ನಾನು ಎಂದಾದರೂ ಅದನ್ನು ಪರಿಷ್ಕರಿಸಬೇಕಾಗುತ್ತದೆಯೆ ಎಂಬುದರ ಬಗ್ಗೆ ನನಗೆ ತೀವ್ರ ಸಂದೇಹವಿದೆ. ಮಂಗಳನ ಶಿಫಾರಸುಗಳು ತಂದೆಯವರ ಮೇಲೆ ಅಪೇಕ್ಷಿತ ಪರಿಣಾಮವನ್ನು ಉಂಟುಮಾಡುತ್ತವೆಯೆ? ಹಾಗೆ ನೋಡಿದರೆ, ಮಹಾಪ್ರಭುಗಳಿಗೆ ಕಳೆದ ಏಳೆಂಟು ವರ್ಷಗಳಿಂದ ಇದೇ ವಿಷಯಗಳನ್ನು ಹೇಳುತ್ತಲೇ ಇದ್ದೇನೆ. ಮಂಗಳನ ಕಾರ್ಯವಿವರಗಳು ವಾಸ್ತವಿಕ ಸಂದರ್ಭಗಳನ್ನು ಒಂದು ತಂಡದ ಹಂತಕ್ಕೆ ತಂದು ನಿಲ್ಲಿಸಿದ್ದು ಎನ್ನುವುದಾದರೆ, ನಾನು ಹೇಳುತ್ತಿದ್ದದ್ದು ವಾಸ್ತವವಾಗಿ ಒಂದು ನೀತಿಗೆ ಸಂಬಂಧಪಟ್ಟದ್ದು ಎಂಬುದನ್ನು ಅಲ್ಲಗಳೆಯುವಂತೆಯೇ ಇಲ್ಲ. ಸಮರ ಸಮಿತಿಯ ಸಭೆಗಳು ಮಂಗಳನ ಸಲಹೆಗಳು ಗ್ರಹಿಕೆಗಳ ಒಂದು ಸರಣಿಯ ಸುತ್ತ ಹೇಗೆ ಸುತ್ತುತ್ತಿವೆ. ಎಂಬ ಚರ್ಚೆಯಲ್ಲಿ ಸಿಕ್ಕಿ ಹಾಕಿಕೊಳ್ಳುವುದಿಲ್ಲವೆಂಬ ಭರವಸೆ ನನಗಿದೆ. ಆ ಗ್ರಹಿಕೆಗಳೆಂದರೆ 1) ಕಾಬೂಲಿನ ದೊರೆ ಮತ್ತೊಮ್ಮೆ ಭಾರತಕ್ಕೆ ಬರುವ ಹಂಚಿಕೆ ಹಾಕಿದ್ದಾನೆ. 2) ಇಷ್ಟರಲ್ಲೇ ಯಾವಾಗಲೋ ಅವನು ದೆಹಲಿಯ ಸುಲ್ತಾನನ ಮೇಲೆ ದಂಡೆತ್ತಿ ಬರುತ್ತಾನೆ. ಮತ್ತು 3) ಆಗ ನಮ್ಮ ರಾಜ್ಯಗಳು ಮತ್ತು ಗಡಿಗಳಿಗೆ ಅವನಿಂದ ಬೆದರಿಕೆ ಇದೆ.

ಇನ್ನೊಂದು ಕಡೆ ಬಾಬರ್ ಒಂದು ವೇಳೆ ಭಾರತದ ಮೇಲೆ ದಂಡೆತ್ತಿ ಬರುವ ಸಾಹಸಕ್ಕೆ ಕೈಹಾಕಿದರೂ, ಅದು ಮತ್ತೊಮ್ಮೆ ದಿಢೀರ್ ಧಾಳಿ ಮಾಡಿ ಹಣದೋಚುವ ಆಕ್ರಮಣದ ಉದ್ದೇಶದ್ದಾಗಿರುತ್ತದೆಂಬುದನ್ನು ನಿರಾಕರಿಸುವಂತೆಯೇ ಇಲ್ಲ ಅಥವಾ ಅವನು ದೆಹಲಿಯನ್ನೇ ಬಿಟ್ಟು ಮತ್ತೊಮ್ಮೆ ಸಮರ್‌ಖಂಡದ ಮೇಲೆ ಧಾಳಿ ಯತ್ನಕ್ಕೆ ತೀರ್ಮಾನಿಸಬಹುದು. ಕಾರಣ ಅದು ಅವನನ್ನೊಂದು ಗೀಳಾಗಿ ಕಾಡುತ್ತಿರುವ ಕಾನೂನು ಬದ್ಧವಾದದ್ದರ ಸಂಕೇತ ಹಾಗೂ ಹಳವಂಡವಾಗಿದೆ. ಅಲ್ಲದೆ ಅಕ್ಷರಶಃ ಅವನು ತನ್ನ ತಲೆಯನ್ನು ತೀವ್ರವಾಗಿ ಕೆಡಿಸಿಕೊಳ್ಳಬಹುದು.

ಬಾಬರ್ ಈಗಾಗಲೇ ಎರಡು ಸಲ ಭಾರತಕ್ಕೆ ಬಂದಿದ್ದಾನೆ. ಮಂಗಳನ ಖಚಿತವಾದ ಊಹೆಯೆಂದರೆ, ಬಾಬರನು ಎಂದು ಬೇಕಾದರೂ ಮತ್ತಷ್ಟು ಹಠಾತ್ ಧಾಳಿಗಳನ್ನು ಮಾಡಬಹುದು. ಮಂಗಳನು ಏನನ್ನಾದರೂ ಹೇಳುವುದಕ್ಕೆ ಮುಂಚೆ ತನ್ನ ಮಾತುಗಳನ್ನು ಎಚ್ಚರಿಕೆಯಿಂದ ತೂಗಿನೋಡುತ್ತಾನೆಂಬ ಸರಳವಾದ ಕಾರಣಕ್ಕೆ ನಾನು ಅವನ ವಿಶ್ಲೇಷಣೆಯನ್ನು ಒಪ್ಪುತ್ತೇನೆ. ಬಾಬರನ ಮಹತ್ವಾಕಾಂಕ್ಷೆಯನ್ನು ಕಾಬೂಲ್ ನಿಯಂತ್ರಿಸುತ್ತದೆಯೋ ಹೇಗೆ ಎಂಬ ಬಗ್ಗೆ ನನಗೆ ಸಂದೇಹವಿದೆ. ಭಾರತದ ಪ್ರಲೋಭನೆಯನ್ನು ನಿಗ್ರಹಿಸುವುದು ಅಸಾಧ್ಯವಲ್ಲದಿದ್ದರೂ, ಕಷ್ಟವಾಗುತ್ತದೆ. ಭಾರತದ ಮೇಲೆ ಧಾಳಿ ಮಾಡಬೇಕೆಂಬ ಒಬ್ಬ ಶತ್ರುವಿನ ಯೋಜನೆಗಳ ಸಂಭಾವ್ಯತೆಯ ಮೇಲೆ ನಾವು ನಮ್ಮ ಸಮರಸಾಧನಗಳ ಕಾರ್ಯಾಚರಣೆಯನ್ನು ಯೋಜಿಸಬೇಕೆಂದಿದ್ದೇವೆಯೆ ಎಂಬುದು ಈಗ ಕೇಳಿಕೊಳ್ಳಬೇಕಾಗಿರುವ ಪ್ರಶ್ನೆ. ವಾಯವ್ಯದ ಕಡೆಯಿಂದ ಧಾಳಿಯೂ ಸೇರಿದಂತೆ ಯಾವುದೇ ರೀತಿಯ ಸಂಭಾವ್ಯತೆಗೂ ನಾವು ಸಿದ್ಧವಾಗಿರಬೇಕಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳಬೇಕಾದ ಹೆಚ್ಚಿನ ವಿಚಾರವೆಂದರೆ, ನಮಗೇ ಸಾಮ್ರಾಜ್ಯದ ಮಹತ್ವಾಕಾಂಕ್ಷೆಯಿರುವುದರಿಂದ, ನಮ್ಮನ್ನೇ ನಾವು ಉತ್ತಮ ರೀತಿಯಲ್ಲಿ ಸಜ್ಜುಗೊಳಿಸಿಕೊಂಡು ಉತ್ತಮ ರೀತಿಯಲ್ಲಿ ಸಿದ್ಧವಾಗಬೇಕಾಗುತ್ತದೆ.

ಫರ್ಘಾನಾದಲ್ಲೋ, ಸಮರ್‌ಖಂಡದಲ್ಲೋ, ಕಂಧಹಾರ್‌ನಲ್ಲೋ ಅಥವಾ ಕಾಬೂಲ್‌ನಲ್ಲೋ ಎಲ್ಲಿ ಅಂತ ದೇವರಿಗೇ ಗೊತ್ತು, ವಿಚಾರಗಳನ್ನು ಬರೆದ ಹಾಳೆಗಳನ್ನು ನಿಜಕ್ಕೂ ನನ್ನ ಕೈಯಲ್ಲಿ ಹಿಡಿದುಕೊಂಡಿದ್ದೇನೆಂಬ ಸಂಗತಿಯನ್ನು ನಂಬಲೇ ಆಗುತ್ತಿಲ್ಲ. ಅಲ್ಲದೆ ದೂರದ ಟರ್ಕಿ ಸಾಮ್ರಾಜ್ಯವವರನ್ನು ಪೂರ್ವಿಕರನ್ನಾಗುಳ್ಳ ರಾಜನೊಬ್ಬನ ಶಬ್ದಗಳಿವು ಎಂಬುದನ್ನು ಕೂಡ ನಂಬಲಾಗುತ್ತಿಲ್ಲ. ಇವು ಅಷ್ಟು ದೂರ ಹೇಗೆ ಪ್ರಯಾಣ ಮಾಡಿ ಬಂದುವು? ಅದೊಂದು ದೊಡ್ಡ ವಂಚನೆಯೆ? ಈ ದಾಖಲೆಗಳು ಅಧಿಕೃತವೆಂಬುದನ್ನು ಸಂಶಯಾತೀತವಾಗಿ ಪ್ರಮಾಣೀಕರಿಸುವ ವಿಧಾನವಾವುದೂ ಇಲ್ಲ. ಕಾಬೂಲಿನ ಈಗಿನ ದೊರೆಯ ಬಳಿಗೆ ನನ್ನ ಪ್ರತಿನಿಧಿಯೊಬ್ಬನನ್ನು ಕಳಿಸಿ ನನ್ನೆದುರುಗಡೆ ಇರುವ ಈ ಟಿಪ್ಪಣಿಗಳು ಅವನದ್ದೇ ಎಂಬುದನ್ನು ವಿಚಾರಿಸದ ಹೊರತು ಸಾಧ್ಯವಿಲ್ಲ. ಇಷ್ಟಾದರೂ ಈ ಶಬ್ದಗಳು ನಿಜವಾದ್ದು ಹಾಗೂ ಇವು ದೃಢ ನಿರ್ಧಾರದ ಹಾಗೂ ಕಾಣ್ಕೆಯ ಮತ್ತು ಯಾರ ಆತ್ಮಪ್ರಜ್ಞೆ ದುರಹಂಕಾರದ್ದಾಗಲಿ, ವಿನಯದ್ದಾಗಲಿ, ಆಗಿರದೆ ಅತ್ಯಂತ ವಾಸ್ತವ ಸ್ವರೂಪದ್ದಾಗಿರುವಂಥ ವ್ಯಕ್ತಿಯ ಶಬ್ದಗಳಾಗಿವೆ.

ಯಾವುದೋ ಕಾರಣಕ್ಕೆ ನಾನು ಹಿಂದಿನ ಎರಡು ಪುಟಗಳಿಗೆ ಹೋಗುತ್ತಿದ್ದೇನೆ. ಒಂದು ಫರ್ಘಾನಾದ ಅಂದಿಜಾನ್‌ಗೆ ಸಂಬಂಧಿಸಿದ್ದರೆ, ಇನ್ನೊಂದು ಅವನ ತಂದೆಗೆ ಸಂಬಂಧಿಸಿದ್ದು. ಆ ಬರವಣಿಗೆಯ ಧಾಟಿಯಲ್ಲಿ ನಿಶ್ಚಿತವಾಗಿಯೂ ಒಂದು ಬೆಚ್ಚನೆಯ ಪ್ರೀತಿ ಇದೆ. ಇದು ತನ್ನ ದೇಶದೊಂದಿಗೆ ಗಾಢವಾದ ನಂಟುಳ್ಳ ವ್ಯಕ್ತಿಯಿಂದ ಮಾತ್ರ ಬಂದಿರಲು ಸಾಧ್ಯ. ಇಷ್ಟಾದರೂ ತನ್ನ ತಾಯ್ನಾಡಿನಿಂದ ದೂರವಾಗಿ ದೇಶಾಂತರದಲ್ಲಿರುವ ವ್ಯಕ್ತಿಯೊಬ್ಬ ತನ್ನ ತಾಯ್ನಾಡಿನ ಬಗ್ಗೆ ಬರೆದ ಬರಹದಲ್ಲಿರುವಂಥ ಭಾವಾತಿರೇಕವಿಲ್ಲದ ಬರಹ ಇದು. ಓದುಗನಾದವನು ತಾನೇ ಹೋಗಿ ಶೋಧಿಸಬೇಕೆನ್ನುವಂತೆ ಅದು ಮಾಡುತ್ತದೆ. 'ಅಂದಿಜಾನ್‌ನಲ್ಲಿ ದುರ್ಗದೊಳಕ್ಕೆ ಒಂಬತ್ತು ಕಾಲುವೆಗಳ ಮೂಲಕ ನೀರು ಒಳಹೋಗುತ್ತದೆ. ಅದರಲ್ಲಿ ಯಾವುದೊಂದೂ ಯಾವೊಂದು ಜಾಗದಿಂದಲೂ ಹೊರಬರದೆ ಇರುವುದೊಂದು ವಿಚಿತ್ರ', ನೀರಿಗೆ ಏನಾಗುತ್ತದೆ? ನೀರು ಎಲ್ಲಿಗೆ ಹೋಗುತ್ತದೆ? ವರ್ಷಗಟ್ಟಲೆಯಿಂದ ನೀರು ಭೂಮಿಯ ತಳಕ್ಕೆ ಸೇರಿದೆಯೆ? (ತಲೆಯ ಮೇಲಿನ ಉಬ್ಬಿನ ಹಾಗೆ, ದುರ್ಗವು ಏರುತ್ತ ಹೋಗುತ್ತದೇನು? ಇದುವರೆಗೆ ಸೇರಿರುವ ನೀರಿನ ಒತ್ತಡದಿಂದ, ಅಂದಿಜಾನ್ ಇಷ್ಟರಲ್ಲೇ ಯಾವಾಗಲಾದರೂ ಬೀಜಕೋಶದ ಕಾಯಿಯ ಹಾಗೆ ಸ್ಫೋಟಗೊಂಡೀತೆ?) ಉಮರ್ ಶೇಖ್ ಮಿರ್ಜಾ ಹಾಗೂ ಅಖ್ಸಿಕೋಟೆಯಲ್ಲಿನ ಅವನ ಪಾರಿವಾಳಗಳ ಬಗೆಗಿನ ಒಗಟಿನಂಥ ಉಲ್ಲೇಖಿತ ಭಾಗವನ್ನು ಕೈಗೆತ್ತಿಕೋ. ಬಾಬರನ ತಂದೆಯು. ಗೂಡಿನಲ್ಲಿದ್ದ ಪಾರಿವಾಳಗಳನ್ನು ನೋಡಲು ಹೋಗಿದ್ದಾಗ, ಪರ್ವತದ ಪಾರ್ಶ್ವದ ಜಾಚು ಬಂಡೆಯು ಕುಸಿದು ಬಿದ್ದಿರಬೇಕು, ಹಾಗೂ ಸಾವಿನಲ್ಲಿ ಉಮರ್‌ಶೇಖನು ಗಿಡುಗನಾಗಿರಬೇಕೆಂಬುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮುಂಚೆ ನಾನು ಆ ಉಲ್ಲೇಖಿತ ಭಾಗವನ್ನು ಕೊನೇ ಪಕ್ಷ ಒಂದು ಹನ್ನೆರಡು ಸಲ ಓದಿರಬೇಕು.

ಬೇಟೆಯ ಬಗೆಗಿನ ನನ್ನ ಅರುಚಿಯ ಬಗ್ಗೆ ಹೇಳದಿರುವುದೇ ಒಳಿತು. ಅಲ್ಲಿರಬಹುದಾದ ಬೇಟೆಯ ಹಕ್ಕಿಗಳ ತಪಾಸಣೆ ಮಾಡಲು ಅಂದಿಜಾನ್‌ಗೆ ಹೋಗಬೇಕೆಂದಿದ್ದೇನೆ ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ವಾಸ್ತವ ಸಂಗತಿಗಳನ್ನು ತಿಳಿಯುವ ಸಲುವಾಗಿ ಬಾಬರ್ ಸಾಕಷ್ಟು ಹಕ್ಕಿ ಬೇಟೆಯನ್ನಾಡಿರುವುದು ಅತ್ಯಂತ ಸ್ಪಷ್ಟವೇ ಇರುವಾಗ, ಅವನು ಏಕೆ ವದಂತಿಗಳ ಕಡೆಗೆ ಜಾರಿದ? ಅದೇಂದರೆ, ಕೊಬ್ಬಿದ ಹಕ್ಕಿಯಿಂದ ತಯಾರಿಸಿದ ಆಹಾರವನ್ನು ನಾಲ್ಕು ಜನರು ಸೇರಿ ಮುಗಿಸಲಾಗದ ಕಟ್ಟು ಕಥೆ ಹೇಳಿ ನಮ್ಮನ್ನು ಮೂರ್ಖರನ್ನಾಗಿಸುವುದರ

ಹೊರತು ಅದಕ್ಕೆ ಬೇರೆ ಉದ್ದೇಶವಿಲ್ಲ. ನನಗೆ ಹಾಸ್ಯವೆಂದರೆ ಯಾವಾಗಲೂ ತುಂಬ ಇಷ್ಟ. ಆದರೆ ನಿಜಕ್ಕೂ ನನಗೆ ಹಿಡಿಸುವ ಹಾಸ್ಯಪ್ರಕಾರವೆಂದರೆ, ತಮಾಷೆ ಎಂದು ತಿಳಿದು ಬಂದರೂ. ಮುಗುಳ್ನಗೆ ಇಲ್ಲದ ಗಂಭೀರ ಮುಖದ ಹಾಸ್ಯಪ್ರಕಾರ. ಇದರಲ್ಲಿ ನೀವು ಎಚ್ಚರವಾಗಿಲ್ಲದೆ ಹೋದರೆ ಮಾತಿನಲ್ಲಿರುವ ವ್ಯಂಗ್ಯಗಳನ್ನು ಕಂಡುಕೊಳ್ಳಲಾಗುವುದಿಲ್ಲ.

ಉದಾಹರಣೆಗೆ, ಮೇವಾಡದ ಯಾವುದೇ ಚಾರಣ, ಕವಿ ಅಥವಾ ಚರಿತ್ರಕಾರನೇ ಆಗಲಿ, ಘನತೆವೆತ್ತ ಮಹಾರಾಣಾ ಅವರ ಬಗ್ಗೆ ಅಷ್ಟೊಂದು ಮುಕ್ತವಾಗಿ ವಸ್ತುನಿಷ್ಠವಾಗಿ ಮತ್ತು ಪ್ರೀತಿ ತುಂಬಿ, ಬರೆಯುವುದನ್ನು ನೀವು ಊಹಿಸಿಕೊಳ್ಳಲು ಸಾಧ್ಯವೆ? ನೇರವಾಗಿ ಹೇಳಬೇಕೆಂದರೆ, ನನ್ನ ಯಾರೇ ತಮ್ಮಂದಿರಾಗಲಿ, ಸೋದರ ಸಂಬಂಧಿಗಳಾಗಲಿ ಸೋದರ ಮಾವಂದಿರಾಗಲಿ ಅದನ್ನು ಮಾಡುವ ಸಾಮರ್ಥ್ಯ ಹೊಂದಿದವರಲ್ಲ. ದೋಷಗಳನ್ನು ಮುಚ್ಚಿಹಾಕುವುದಾಗಲಿ, ಮಂಡಿ ಊರುವುದಾಗಲಿ ದೀನವಾಗಿ ಭಟ್ಟಂಗಿತನ ತೋರುವುದಾಗಲಿ ಇಲ್ಲದೆ, ಮಹಾನ್ ಆತ್ಮ ಪ್ರತ್ಯಯದಿಂದ ದಿಢೀರನೆ ರಚಿಸಿದ ಒಂದು ಚಿತ್ರ. ಟೀಕೆ ಮಾಡಲು ಅವನು ಹೆದರುವುದಿಲ್ಲ ಎಂಬುದು ಸ್ಪಷ್ಟವೇ ಇದೆ ಕಾರಣ, ಯಾರದ್ದಾದರೂ ಮೌಲ್ಯ ನಿರ್ಧಾರ ಮಾಡುವ ಕಾರ್ಯವಾಗಲಿ, ಅಥವಾ ನಿರ್ಣಯ ನೀಡುವ ಕೃತ್ಯವಾಗಲಿ ಪ್ರೀತಿ ಮತ್ತು ವಿಪರೀತ ಗೌರವವನ್ನು ಕಡೆಗಣಿಸುತ್ತದೆ ಎಂದು ಅವನು ನಂಬುವುದಿಲ್ಲ.

ಅದೆಷ್ಟು ಸಲ ನಮ್ಮ ಅತ್ಯಂತ ಹಿರಿಯ ಅಧಿಕಾರಿಗಳು ಕೂಡ ತಮ್ಮ ಅಭಿಪ್ರಾಯಕ್ಕೆ ಪೀಠಿಕೆಯಾಗಿ "ದಯವಿಟ್ಟು ನನ್ನನ್ನು ತಪ್ಪು ತಿಳಿಯಬೇಡಿ. ನನಗೆ ಇಷ್ಟವಿಲ್ಲದೆ ಇರುವುದು ಎಂದರೆ, ತೀರ್ಮಾನಕೊಡುವುದು" ಎಂದು ಹೇಳುವುದನ್ನು ಕೇಳಿಲ್ಲ. ಸಂದರ್ಭ ಸನ್ನಿವೇಶಗಳನ್ನು ಮತ್ತು ವ್ಯಕ್ತಿಗಳನ್ನು ಅತ್ಯಂತ ಕಠಿಣವಾಗಿ ಮತ್ತು ನಿರ್ದಯವಾಗಿ ವಿಶ್ಲೇಷಿಸಿ, ಅಧಿಕಾರಿಗಳು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಅವರುಗಳ ಬಗ್ಗೆ ಅಂಥ ನಿರೀಕ್ಷೆ ಇಟ್ಟುಕೊಳ್ಳದಿದ್ದರೆ ಏಕಾದರೂ ಅವರನ್ನು ಅಂಥ ಉನ್ನತ ಹುದ್ದೆಗಳಿಗೆ ನೇಮಿಸಬೇಕು ಮತ್ತು ಅಷ್ಟೆಲ್ಲ ಜನ ಅವರಿಗೇಕೆ ವರದಿ ಮಾಡಿಕೊಳ್ಳಬೇಕು? ಕಾಠಿಣ್ಯ ಮತ್ತು ನಿರ್ದಯತೆ, ಇನ್ನೊಬ್ಬರ ವಿಚಾರದೊಂದಿಗೆ ಸಹಾನುಭೂತಿರಹಿತವಾಗಿರುವುದಿಲ್ಲ. ತಮ್ಮ ಹಾಗೂ ತಮ್ಮ ಶತ್ರುಗಳು, ಮಿತ್ರರು ಸರಿಸಮಾನರು, ಕಿರಿಯರು, ಹಿರಿಯರು ಅಥವಾ ಹೆಂಡತಿ, ಮಕ್ಕಳು ಇವರುಗಳ ಶಕ್ತಿ ಸಾಮರ್ಥ್ಯಗಳು ದೌರ್ಬಲ್ಯಗಳು ಮತ್ತು ಅಜ್ಞಾತ ವಿಷಯಗಳ ಮೌಲ್ಯ ನಿರ್ಣಯ ಮಾಡಲಾಗದಿದ್ದರೆ, ತೀರ್ಮಾನಗಳನ್ನು; ಕೆಲವೊಮ್ಮೆ ಸಂದಿಗ್ಧವೆನ್ನುವಂಥ ವಿಷಮವೆನ್ನುವಂಥ ತೀರ್ಮಾನಗಳನ್ನು ಕೈಗೊಳ್ಳುವುದು ಅಥವಾ ಅವರುಗಳೊಂದಿಗೆ ವ್ಯವಹರಿಸುವುದು ಅಸಾಧ್ಯವಾಗುತ್ತದೆ.

* * *

"ಒಂದು ವೇಳೆ ಮುಂದಿನ ಹತ್ತು ದಿನಗಳಲ್ಲಿ ನಿನ್ನ ವರದಿ ನನ್ನ ಕೈಗೆ ಬರದೇ ಹೋದರೆ ಹೇಗೆ?" ಮಂಗಳನ ಉತ್ತರ ಏನಾಗಿರುತ್ತಿತ್ತೆಂದು ನನಗೆ ಗೊತ್ತಿತ್ತು. ಆದರೆ ಅವನು ಸಂಕೋಚದಿಂದ ಒದ್ದಾಡುವಂತೆ ಮಾಡಲು ನಾನು ಬಯಸಿದ್ದೆ. ಸಚಿವ ಸಂಪುಟ ಸಭೆಗೆ ಮತ್ತು ನೆರೆಯ ಮಿತ್ರ ರಾಜ್ಯಗಳಿಗೆ ನಾನು ಏನು ಹೇಳಲಿ? ಮಂಗಳನು ಭದ್ರತಾ ಸಮಿತಿಗೆ ವಿವರವಾದ ಮಾಹಿತಿಯನ್ನು ನೀಡಲು ಇನ್ನೂ ಸಿದ್ಧನಿಲ್ಲವಾದ್ದರಿಂದ ಮೇವಾಡ ಸಂಸ್ಥಾನದ ಆಡಳಿತ ವ್ಯವಹಾರದ ವಿಷಯವನ್ನು ಮುಂದಕ್ಕೆ ಹಾಕಿ ಎಂದು ಸಚಿವ ಸಂಪುಟಕ್ಕೆ ತಿಳಿಸಲೆ ಹಾಗೂ ನಮ್ಮ ನೆರೆಯ ಮಿತ್ರರಾಜರುಗಳಿಗೆ, ನೀವು ಮೇವಾಡದ ಮೇಲೆ ಆಕ್ರಮಣ ನಡೆಸಬೇಕೆಂದು ಯೋಜಿಸಿದ್ದರೆ ಅದನ್ನು ಮುಂದೆ ಹಾಕಿ ಎಂದು ಹೇಳಲೆ?

"ಮುಂದಿನ ಹತ್ತು ದಿನಗಳೊಳಗೆ ಅದು ನಿಮಗೆ ತಲುಪಿರುತ್ತದೆ ಮಹಾಸ್ವಾಮಿ". ಅವನು ಬಿಳಿಚಿಕೊಳ್ಳಲಿಲ್ಲ. ಅದೂ ನನಗೆ ತಿಳಿದಿರಬೇಕಿತ್ತು.

"ನಾನು ನಿನಗೆ ತುಂಬ ಋಣಿಯಾಗಿದ್ದೇನೆ" ಅದು ಅಯೋಗ್ಯದ್ದೂ ಅಧಿಕ ಪ್ರಸಂಗಿತನವದೂ ಆಗಿತ್ತು. ಆದರೆ ಅದೊಂದು ಚಮತ್ಕಾರವನ್ನೇ ಮಾಡಿತು. ಒಂದರೆಕ್ಷಣ ಆ ಶಿಲಾಮುಖದಲ್ಲಿ ಬಿರುಕು ಕಾಣಿಸಿಕೊಂಡಿತು. ಬಹುಶಃ ಅದರಡಿಯಲ್ಲಿ ಆ ಮನುಷ್ಯ ನಿಜವಾಗಿಯೂ ಅಳುಕಿರಬೇಕು. "ಅದೆಲ್ಲ ಆಗುತ್ತದೆ"

ನನ್ನ ಬಾಲಿಶವಾದ ಮುಖಮುರಿಯುವ ಮಾತುಗಳಿಗೆ ಪ್ರತಿಕ್ರಿಯೆ ತೋರದೆ ಅವನು ಹೊರಡಲು ಸಿದ್ಧನಾದ.

"ಮಂಗಳ್ ಅದು ಅತ್ಯಂತ ಉತ್ಕೃಷ್ಟವಾದ ಕೆಲಸ." ಆ ಸರಕನ್ನೆಲ್ಲ ನೀನು ಹೇಗೆ ಗಿಟ್ಟಿಸಿಕೊಂಡೆ?

ಮಂಗಳನು ಮುಗುಳ್ನಕ್ಕ. "ಒಬ್ಬ ಕಸಗುಡಿಸುವವನಿಂದ"

ನಾನು ನಕ್ಕೆ. "ಭೇಷ್! ಈಗ ನಗಬೇಕಾದ್ದು ನಾನು. "ನಿಜ ಏನು ಈಗ ಹೇಳು"

"ಅದೇ ನಿಜ ಮಹಾಸ್ವಾಮಿ"

"ಎಲ್ಲ ಹೇಳಿ ಬಿಡು" ಅವನು ತಮಾಷೆ ಮಾಡುತ್ತಿಲ್ಲ ಎಂದು ಅರ್ಥವಾಯಿತು.

"ಅಲ್ಲಿಯ ಸ್ಥಳೀಕನೊಬ್ಬ ಬೆಳಿಗ್ಗೆ ಕಡುಬು ತಿನ್ನುತ್ತಿರಬೇಕಾದರೆ, ನಗುತ್ತ ಕಾಲ ಬದಲಾಗಿದೆ" ಎಂದು ಹೇಳಿದ. "ಕಸಗುಡಿಸುವವರು ಜಹಗೀರುದಾರರಗಿಂತ ಚೆನ್ನಾಗಿ ಕಾರ್ಯನಿರ್ವಹಿಸುತ್ತಾರೆ" ಎಂದು ಅವನು ಹೇಳಿದ. 'ಅದು ಹೇಗೆ?' ಎಂದು ನಾನು ಕೇಳಿದೆ. "ಹೊರದೇಶದಿಂದ ನಿಮಗೆ ಯಾವತ್ತಾದರೂ ಒಂದು ಭಾಂಗಿ ಬಂದಿದೆಯೆ" ಎಂದು ಅವನು ವ್ಯಂಗ್ಯವಾಗಿ ಕೇಳಿದ. ನಾನು ತಲೆ ಅಲ್ಲಾಡಿಸಿದೆ. "ಪ್ರಧಾನಮಂತ್ರಿ ಪೂರಣ್‌ಮಲ್‌ಜೀಯವರ ಮನೆಯಲ್ಲಿರುವ ಕಸಗುಡಿಸುವವನಾದ ಶ್ಯಾಮ್‌ದುಲಾರೆಗೆ ಅವು ಬರುತ್ತವೆ" "ಎಲ್ಲಿಂದ" "ನನಗೆ ಹೇಗೆ ಗೊತ್ತಾಗಬೇಕು?" "ದಾರಿ ಹೋಕ ಭಿಕ್ಷುಕನೊಬ್ಬ ಅವನ್ನು ತಂದುಕೊಡುತ್ತಾನೆ" ಮಹಾಸ್ವಾಮಿಯವರು ಉಳಿದದ್ದನ್ನು ಊಹಿಸಿದ್ದಾರೆ ಎಂದು ಅಂದುಕೊಂಡಿದ್ದೇನೆ."

"ನಾನು ಊಹಿಸಿರಬಹುದು. ನೀನು ಎಲ್ಲ ವಿವರಗಳನ್ನೂ ಹೇಳಿದರೆ, ನಾನೇನು ಬೇಸರ ಮಾಡಿಕೊಳ್ಳುವುದಿಲ್ಲ. ಕಾಬೂಲ್‌ನ ಆಸ್ಥಾನಕ್ಕೆ ಶ್ಯಾಮ್‌ದುಲಾರೆಗೆ ಪ್ರವೇಶ ಸಿಕ್ಕಿತು?"

"ಶ್ಯಾಮ್‌ದುಲಾರೆಗೆ ಪ್ಯಾರೇಲಾಲ್ ಎಂಬ ಸೋದರ ಸಂಬಂಧಿ ಇದ್ದಾನೆ. ಅವನು ಬಜೌರ್‌ನಲ್ಲಿ ಕೆಲಸ ಮಾಡುತ್ತಿದ್ದನು. ಬಜೌರ್ ಅನ್ನು ಸೋಲಿಸಿದಾಗ, ಪ್ಯಾರೇಲಾಲ್ ಮತ್ತು ಅವನ ಕುಟುಂಬದವರನ್ನು ಜೀವ ಸಹಿತ ಉಳಿಸಲಾಯಿತು. ಕಾರಣ ಬಜೌರ್ ಅನ್ನು ವಶಪಡಿಸಿಕೊಂಡ ಸೇನೆಯ ಮುಖ್ಯಸ್ಥನಿಗೆ ಪ್ಯಾರೇಲಾಲ್, 'ದಯಾಳುವಾದ, ಕರುಣಾಮಯಿಯಾದ ದೇವರ ಮೇಲೆ ಆಣೆಯಿಟ್ಟು ಕೇಳುತ್ತಿದ್ದೇನೆ. ಸತ್ಯವಂತನಾದ ದೇವ ಅಲ್ಲಾಹ್‌ನನ್ನು ಅರಿತ ಜೆಂಟೈಲರು ಮತ್ತು ಮುಸ್ಲಿಮರಲ್ಲದವರನ್ನು, ಅಲ್ಲಾಹನ ಭಕ್ತ ಕೊಲ್ಲಕೂಡದೆಂದು ಹೇಳಿದ್ದಾನಲ್ಲವೆ?' ಎಂದು ಕೇಳಿದನು. ಸೇನಾಧಿಕಾರಿ ಮುಗುಳ್ನಕ್ಕು ಕೇಳಿದನು "ನೀನು ಈ ವಿಶ್ವದ ಪ್ರಭುವನ್ನು ಕಂಡುಕೊಂಡಿದ್ದೀಯೋ ಅಥವಾ ಪ್ರವಾದಿಯ ಧರ್ಮದ ಹಾಗೂ ಝಹೀರುದ್ದೀನ್ ಮಹಮ್ಮದ್ ಬಾಬರ್‌ನ ಧರ್ಮವನ್ನು ಅನುಸರಿಸದಿದ್ದರೆ, ನಿನ್ನ ಜೀವಕ್ಕೆ ಬೆಲೆಯೇ ಇಲ್ಲವೆಂದು ಕಂಡುಕೊಂಡೆಯೋ?" ಕಸಗುಡಿಸುವವನ ಸೋದರ

ಸಂಬಂಧಿ ಅಧಿಕ ಪ್ರಸಂಗತನ ಮಾಡಿದ "ಒಂದು ವೇಳೆ ಎರಡನೆಯದೇ ಸತ್ಯವಾಗಿದ್ದರೆ, ಕುರುಡನು ನೋಡಲು ಸಾಧ್ಯವಾಗುವಂತೆ ಕಿವುಡನು ಕೇಳಲು ಸಾಧ್ಯವಾಗುವಂತೆ, ಮೂಕನು ಮಾತನಾಡಲು ಸಾಧ್ಯವಾಗುವಂತೆ ಹಾಗು ಅಜ್ಞಾನಿಗೆ ಜ್ಞಾನವನ್ನು, ಮೋಸಕ್ಕೊಳಗಾದವನು ತನ್ನ ಮೋಸವನ್ನು ತ್ಯಜಿಸುವಂತೆ ಮತ್ತು ಕಪಟ ತನ್ನ ಕಪಟತನವನ್ನು ತ್ಯಜಿಸುವಂತೆ ಮಾಡುವ ಅಲ್ಲಾಹನ ಅಸಂಖ್ಯ ಹಾಗೂ ವಿವಿಧ ಮಾರ್ಗಗಳನ್ನು ನೀವು ಪ್ರಶ್ನಿಸುವಿರಾ? ಒಂದು ವೇಳೆ ನೀವು ಪ್ರಶ್ನಿಸುತ್ತೀರಾದರೆ, ನೀವು ನಿಮ್ಮನ್ನು ಸ್ವಯಂ ಪ್ರಭು ಅಲ್ಲಾಹ್‌ಗಿಂತ ಬುದ್ಧಿವಂತರೆಂದು ಪರಿಗಣಿಸುತ್ತೀರೆಂಬುದು ಸ್ಪಷ್ಟವೆ ಇದೆಯಲ್ಲವೆ? ಅಲ್ಲದೆ ಈ ಜಗತ್ತನ್ನು ಹಾಗೂ ಇಲ್ಲಿಯ ಚೇತನಾಚೇತನಗಳನ್ನು ಸೃಷ್ಟಿಸಿದ, ಸಾಗರಕ್ಕೆ ಅಲೆಗಳನ್ನು ಪಕ್ಷಿಗಳಿಗೆ ಬಣ್ಣಗಳನ್ನು, ಆಕಾಶಕ್ಕೆ ಗೋಳಾಕಾರವನ್ನು, ಭೂಮಿಯನ್ನು ಉಣಿಸುವ, ನಮ್ಮ ಬಾಯಾರಿಕೆಯನ್ನು ತಣಿಸುವ ಮಳೆಯನ್ನು, ಒಂದು ಬೀಜದಿಂದ ಸಹಸ್ರ ಪ್ರಮಾಣದಷ್ಟು ಧಾನ್ಯವನ್ನು ಸೃಷ್ಟಿಸಿದಂಥ ಸರ್ವಜ್ಞನೂ, ಸರ್ವದ್ರಷ್ಟುವೂ ಆದ ಅಲ್ಲಾಹುವಿಗಿಂತ ನೀವು ದೊಡ್ಡವರೆಂದು ತಿಳಿಯುವುದಕ್ಕಿಂತ ಮಿಗಿಲಾದ ಅಪರಾಧವಿದೆಯೆ? ಪ್ಯಾರೇಲಾಲನನ್ನು ಕೊಚ್ಚಿಹಾಕಲೆಂದು ಹಿಡಿದಿದ್ದ ಖಡ್ಗವನ್ನು ಹಾಗೆಯೇ ತಡೆದು ತನ್ನ ದೊರೆ ಬಾಬರನ ಬಳಿಗೆ ಕರೆದೊಯ್ದನು. ಕಸಗುಡಿಸುವವನ ಬಾಯಿಂದ, ಪವಿತ್ರ ಕುರಾನೇ ಮಾನ್ಯ ಮಾಡಿ ಗೌರವಿಸುವಂಥ ಶಬ್ದಗಳು ಹೊರ ಹೊಮ್ಮುತ್ತಿರುವ ಪವಾಡದ ಬಗ್ಗೆ ಹೇಳಿದನು. ಆಗ ಬಾಬರನು, ಆ ಕಸಗುಡಿವವನನ್ನು ತನ್ನ ಕೈಗಳಿಂದ ಮೇಲೆತ್ತಿ "ಈ ಹೊತ್ತಿನಿಂದ ಈ ಮನುಷ್ಯನು ಧರ್ಮ ನಿಷ್ಠೆಯಲ್ಲಿ ಈ ಮನೆಯಲ್ಲಿ ನನ್ನ ತಮ್ಮನಾಗಿರುವನು" ಎಂದು ಹೇಳಿದನು. ಇದು ಹೀಗಾಯಿತು.

"ಮಂಗಳ್ ಈ ಆರ್ಷೇಯ ಭಾಷೆಯಿಂದ ನಮಗೆ ಬಿಡುಗಡೆ ಕೊಡಿಸ್ತೀಯಾ?"

"ಶ್ಯಾಮ್‌ದುಲಾರೆ, ಈ ಸುದೀರ್ಘವಾದ ಕಥನವನ್ನು ನನಗೆ ಹೇಳಿದ್ದು ಈ ಭಾಷೆಯಲ್ಲಿ"

"ಬಹುಶಃ ಶ್ಯಾಮದುಲಾರೆಯನ್ನಿನ್ನೂ ಇಸ್ಲಾಂಗೆ ಮತಾಂತರ ಗೊಳಿಸಿಲ್ಲವೆಂದು ಕಾಣಿಸುತ್ತೆ"

"ಈಗ ಕರೀಮುದ್ದೀನ್ ಎಂದು ಕರೆಯಲಾಗುವ ಪ್ಯಾರೇಲಾಲ್ ಅದೇ ಏರ್ಪಾಟು ಮಾಡುತ್ತಿದ್ದಾನೆ"

"ಎರಡೂ ಕಡೆಯ ಅಕ್ರಮ ವ್ಯವಹಾರ, ಪ್ಯಾರೇಲಾಲನ ಮತಾಂತರದ ನಂತರ ಆಯಿತೋ ಅಥವಾ ಶ್ಯಾಮ್‌ದುಲಾರೆಯು ಬಹಳ ಮುಂಚೆಯಿಂದಲೂ ಪ್ರಧಾನಿ ಪೂರಣ್ ಮಲ್ ಜೀಯುವರ ಮನೆಯಿಂದ ದಾಖಲೆಗಳು ಮತ್ತು ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದನೆ?"

ಮಂಗಳನಿಗೆ ಈ ಕಥೆ ಹೇಳುವವನ ಕೆಲಸ ಇನ್ನು ಸಂತಸ ಕೊಡುವಂಥದಾಗಿ ಉಳಿಯಲಿಲ್ಲ. "ಈ ಶ್ಯಾಮ್ ದುಲಾರೆಯ ಸಂಪರ್ಕಸೇತು ಬಹಳ ಕಾಲದಿಂದ ಕಾರ್ಯ ನಿರ್ವಹಿಸುತ್ತಾ ಇದೆ ಮಹಾಸ್ವಾಮಿ. ಮಾಹಿತಿಯು ದೆಹಲಿ, ಗುಜರಾತ್ ಮತ್ತು ಬಜೌರ್ ಆಸ್ಥಾನಗಳಿಗಷ್ಟೇ ಅಲ್ಲದೆ ಮಾಳ್ವದ ಮೇದಿನೀ ರಾಯ್‌ಗೂ ಹೋಗುತ್ತಿದೆ'.

'ಸದ್ಯ ಅದೊಂದು ಸಮಾಧಾನ, ಶ್ಯಾಮ್‌ದುಲಾರೆಯು ಕೊನೇ ಪಕ್ಷ ಹಣ ಮತ್ತು ಅವರ ಧರ್ಮದ ಬಣ್ಣಕ್ಕೆ ನಿಷ್ಪಕ್ಷಪಾತಿಯಾಗಿದ್ದಾನೆ ನಮ್ಮ ಪ್ರಧಾನಿ ಪೂರಣ್ ಮಲ್‌ಜೀಯವರು ಈ ಹಗರಣದಲ್ಲಿ ಸೇರಿದ್ದಾರೇನು?"

"ಅದನ್ನು ಸಮರ್ಥಿಸುವ ಯಾವ ಸಾಕ್ಷ್ಯವೂ ಇನ್ನಿದುವರೆಗೂ ನನಗೆ ದೊರೆತ್ತಿಲ್ಲ"

"ಇನ್ನಿದುವರೆಗೂ ಎನ್ನುವ ಮಾತು ಮುಂದೆ ಕಂಡು ಬರಬಹುದಾದ್ದಕ್ಕೆ ಒಂದು ತಡೆಗೋಡೆಯೆ? ಅಥವಾ ನೀನು ಏನಾದರೂ ಮುಚ್ಚಿಡುತ್ತಿದ್ದೀಯೋ?"

"ನನ್ನ ಉದ್ಧಟತನವನ್ನು ದಯವಿಟ್ಟು ಕ್ಷಮಿಸಬೇಕು ಮಹಾಸ್ವಾಮಿ. ನಾನು ಗುಪ್ತಚರ ವಿಭಾಗದ ಮುಖ್ಯಸ್ಥನ ಹೊಣೆ ಹೊತ್ತಿರುವವರೆಗೆ, ತಮ್ಮ ಬಗ್ಗೆನೇ ತನಿಖೆ ನಡೆಸಬೇಕಾಗಿ ಬಂದರೂ, ನಾನು ತಮ್ಮ ಸಂದರ್ಭದಲ್ಲೂ 'ಇನ್ನಿದುವರೆಗೂ' ಎನ್ನುವ ಮಾತನ್ನು ಬಳಸಿಯೇ ತೀರುತ್ತೇನೆ"

"ನೀನು ಖಂಡಿತಾ ಬಳಸುವೆ ಎಂದು ನನಗೆ ನಂಬಿಕೆ ಇದೆ. ಮಂಗಳ್ ಬೇರೆ ಯಾರನ್ನೂ ನೇಮಿಸದೆ ನಿನ್ನನ್ನೇ ಆ ಕೆಲಸಕ್ಕೆ ನೇಮಿಸಿರುವುದರ ಕಾರಣಗಳಲ್ಲಿ ಅದೂ ಒಂದು. ಶ್ಯಾಮ್ ದುಲಾರೆಗೆ ಹ್ಯಾಗೆ ಮಾಡ್ತಿದ್ದೀವಿ ನಾವೀಗ?"

"ಅವನಿಗೆ ಹಣಕೊಟ್ಟು ಮಾಹಿತಿಯನ್ನೂನೀಡಿ ಅವನ ಮೇಲೆ ಸೂಕ್ಷ್ಮನಿಗಾ ಇಡಲಾಗಿದೆ"

"ಮುಂದಿನ ಕಂತಿನಲ್ಲಿ ಅವನು ನೀಡುವ ಈ ಕಾಗದದ ತುಣುಕುಗಳಿಗೆ ಬೆಲೆಯನ್ನು ಹೆಚ್ಚಿಸಲಾರ ಎಂದು ನಮಗೆ ಹೇಗೆ ಗೊತ್ತಾಗಬೇಕು?"

"ಹಾಗೆ ಮಾಡುವುದಿಲ್ಲ ಎಂದು ನಮಗೆ ನಿಶ್ಚಿತವಾಗಿ ಗೊತ್ತು. ಅವನು ಈಗಾಗಲೇ ಬೆಲೆ ಏರಿಸಿದ್ದಾನೆ"

"ಅವನು ದ್ರೋಹವೆಸಗುತ್ತಿರುವದರ ಹೊರತಾಗಿಯೂ?"

"ಅವನಿಂದ ಇನ್ನು ಮುಂದೆಯೂ ಮಾಹಿತಿ ಪಡೆಯುವುದನ್ನು ಮುಂದುವರಿಸಬೇಕೆಂದರೆ ಅವನು ಬದುಕಿರುವ ಅಗತ್ಯ ನಮಗಿದೆ"

"ನಮ್ಮನ್ನು ದಾರಿತಪ್ಪಿಸಲು ಬೇಕೆಂದೇ ಬಾಬರ್ ಈ ಮಾಹಿತಿಯನ್ನು ಪ್ಯಾರೇಲಾಲನಿಗೆ ಒದಗಿಸುತ್ತಿಲ್ಲವೆಂದು ನಮಗೆ ಹೇಗೆ ಗೊತ್ತು?"

"ಆ ಸಾಧ್ಯತೆಯನ್ನೂ ನಾನು ಪರಿಗಣಿಸಿದ್ದೇನೆ. ಆದರೆ ಅದರ ಬಗ್ಗೆ ನಾವು ಅತಿಯಾಗಿ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಏನೇ ಆದರೂ ಭೌಗೋಳಿಕವಾಗಿ ನಮಗೆ ತೀರ ಹತ್ತಿರ ಬಾರದ ಹೊರತೂ, ಅವನನ್ನು ಕುರಿತ ಹಾಗೂ ಅವನ ಹಂಚಿಕೆಗಳನ್ನು ಕುರಿತ ಈಗಿನ ಗುಪ್ತ ಮಾಹಿತಿ ನಮಗೆ ದೊರೆಯುವ ಸಂಭವವಿಲ್ಲ', ಮಹಾಸ್ವಾಮಿಗಳೆ, ನಿಮ್ಮನ್ನು ಬಿಟ್ಟರೆ ಬೆರೆ ಯಾರಿಗೂ ಬಾಬರನಿಗೆ ಆಂತ್ರವೃದ್ಧಿ ಆಗಿದೆಯೆ ಅಥವಾ ಅವನು ತಡವಾಗಿ ನಿದ್ರೆ ಹೋಗುತ್ತಾನೆಯೆ ಮತ್ತು ಅವನ ಕುಡಿತದ ಮಂಪರು ಎಷ್ಟು ಹೊತ್ತು ಇರುತ್ತದೆ ಎಂದು ತಿಳಿದುಕೊಳ್ಳಲು ಆಸಕ್ತಿ ಇರುವುದಿಲ್ಲ. ಅವನ ವಂಶದ ಪೂರ್ವಜರಾದ ತೈಮೂರ್ ಮತ್ತು ಜೆಂಗೀಸ್‌ಖಾನ್ ಇವರುಗಳ, ಸೇನಾವ್ಯೂಹ ತಂತ್ರಗಳ ಬಗ್ಗೆ ಸಂಶೋಧನೆ ಮಾಡಿರೆಂದು ಹೇಳುತ್ತೀರೆಂದೂ ನನಗೆ ಗೊತ್ತು"

"ಮಂಗಳ್ ನೀನು ಎಲ್ಲಾ ಮಾತುಗಳನ್ನು ಈಗ ಅನಗತ್ಯನೆನಿಸಿದ ಮಹಾರಾಜ್ ಕುಮಾರ್ ಕಡೆಯಿಂದ ಆಡಿ ಬಿಡಬೇಕೆಂದು ಹಂಚಿಕೆ ಹಾಕಿದ್ದೀಯಾ? ನಾನು ಅದನ್ನು ಸಹಿಸುವುದಿಲ್ಲ ಎಂದು ನಿನ್ನನ್ನು ಎಚ್ಚರಿಸುತ್ತಿದ್ದೇನೆ. ಶ್ಯಾಮ್ ದುಲಾರೆ ಬಗ್ಗೆ ನಿನಗೆ ಇನ್ನೇನಾದರೂ ಹೇಳುವುದಿದೆಯೆ?"

"ಮಹಾರಾಜ್‌ಕುಮಾರ್" ಮಾತುಗಳು ನನ್ನ ಬಾಯಿಂದ ಜಾರಿ ಹೊರಬಂದುಬಿಟ್ಟಿದ್ದುವು. ನಾನು ಹಾಸ್ಯಾಸ್ಪದನಾಗುವೆನೆಂದು ಭಾವಿಸಿದೆ. ಆದರೆ ಅದರ ಬದಲಿಗೆ ನನ್ನ ಮನಸ್ಸಿನಲ್ಲಿ ಎಲ್ಲೋ ಒಂದು ಕಡೆ, ಉತ್ತರಾಧಿಕಾರದ ಶ್ರೇಣಿಯಲ್ಲಿ ಮುಂದಿನವನು ನಾನೇ ಆಗಲು ಆಶಿಸಿರುವುದು ತಿಳಿದು ದಿಗ್ಭ್ರಮೆಗೊಂಡೆ.

"ನಮ್ಮ ಹತ್ತಿರ ಇರುವಂಥದ್ದೇನಿದ್ದರೂ ಸ್ವಲ್ಪ ತಡೆ ಒಡ್ಡುವಂಥದ್ದು" ಎಂದು ಮಂಗಳನು ಬೇಕೆಂದೇ ವಿಷಯಾಂತರ ಮಾಡಿದನು.

ಮಂಗಳ್ ತುಂಟತನಕ್ಕೆ ತಿರುಗಿದನೋ ಹೇಗೆ ಎಂದು ಆಶ್ಚರ್ಯವಾಯಿತು. 'ಅದು ಏನು ಹಾಗಾದರೆ?'

"ನಾವು ಅವನ ಒಬ್ಬ ಮಗನನ್ನು ವಶಕ್ಕೆ ತೆಗೆದುಕೊಂಡಿದ್ದೇವೆ"

"ನಮ್ಮದು ಸರ್ವಾಧಿಕಾರಿ ಆಳ್ವಿಕೆಯ ರಾಜ್ಯವಲ್ಲ" ನನಗೆ ನಿಜಕ್ಕೂ ಗಾಬರಿಯಾಯಿತು.

"ನಮಗೆ ಎರಡೂ ಆಗಬೇಕು ಅಂದರೆ ಆಗಲ್ಲ ಮಹಾಸ್ವಾಮಿ" ಆ ಮಾತು ನನ್ನನ್ನೂ ನನ್ನ ಕಪಟತನವನ್ನು ಬಲವಾಗಿ ಕಟ್ಟಿ ಹಾಕಿತು. ಒಬ್ಬ ಕಸಗುಡಿಸುವವನ ಮಗನಿಗೆ ಕಲ್ಪಿಸಿಕೊಳ್ಳಲೂ ಸಾಧ್ಯವಾಗದಂಥ ಶಿಕ್ಷಣವನ್ನು ಕೊಡಿಸಲಾಗುತ್ತಿದೆ. ಅದೂ ಅಲ್ಲದೆ, ಆ ಹುಡುಗನೇನೂ ನಮಗೆ ಖಾತ್ರಿ ಅಲ್ಲ. ಶ್ಯಾಮ್‌ದುಲಾರೆ ಯಾವತ್ತಾದರೂ ಬಂದು ನಿಮ್ಮ ಕೆಲಸ ಮುಂದುವರೆಸಿ, ಅವನನ್ನು ಸಾಯಿಸಿ ಬಿಡಿ. ಇನ್ನಷ್ಟು ಮಕ್ಕಳನ್ನು ಪಡೆಯುವಷ್ಟು ವಯಸ್ಸಿದೆ. ನನಗೆ ಎಂದು ಹೇಳಬಹುದು.

"ಟರ್ಕಿ ಭಾಷೆಯಿಂದ ತರ್ಜುಮೆ ಮಾಡುತ್ತಿರುವುದು ಯಾರು?"

"ಪ್ಯಾರೇಲಾಲ್. ಈಗ ಅವನಿಗೇ ಕರೀಮ್ ಮಹಮ್ಮದ್ ಎಂದು ಹೇಳುತ್ತಾರೆ"

"ಮಂಗಳ್ ಮೂಲ ಭಾಷೆ ನಿಜಕ್ಕೂ ಟರ್ಕಿಯೋ ಅಥವಾ ಬರೀ ಕಿಚಪಿಚ ಶಬ್ದಗಳೋ?"

"ಅದು ಟರ್ಕಿ ಭಾಷೆ ಮಹಾಸ್ವಾಮಿ. ಅಲ್ಲದೆ ತಮಗೇ ತಿಳಿದಿರುವಂತೆ ಕರೀಮ್ ಮೊಹಮ್ಮದ್ ಅಷ್ಟೇನೂ ಕೆಟ್ಟ ಅನುವಾದಕನಂತೂ ಅಲ್ಲ."

* * *

"ಎಲ್ಲಿಯವರೆಗೆ ನೀನು ನನ್ನನ್ನು ತಪ್ಪಿಸಬೇಕು ಅಂತ ಹಂಚಿಕೆ ಹಾಕಿದ್ದೀ?"

"ದಿವಸಕ್ಕೆ ನಾವಿಬ್ಬರೂ ನಾಲ್ಕಾರು ಸಲ ಭೇಟಿ ಮಾಡ್ತಿದ್ದೀವಲ್ಲ"

"ಇನ್ನು ಮುಂದೆ ನನ್ನನ್ನು ನೋಡಲು ನಿನಗೆ ಇಷ್ಟವಿಲ್ಲವೆ ಕೌಸಲ್ಯ?"

"ನಿಮಗೆ ಈಗ ಇನ್ನೂ ಬೇರೆ ಬೇರೆ ಜವಾಬ್ದಾರಿಗಳಿವೆಯಲ್ಲಾ ಮಹಾಸ್ವಾಮಿ"

"ನಿನ್ನನ್ನು ಒಂದು ಸಲ ಕಳೆದುಕೊಂಡು ಮೂರ್ಖನಾಗಿದ್ದೀನಿ. ಅದೇ ತಪ್ಪನ್ನು ಇನ್ನೊಂದು ಸಲ ಮಾಡೋಕೆ ನನಗಿಷ್ಟವಿಲ್ಲ"

ಅವಳ ಮಣಿಕಟ್ಟನ್ನು ಹಿಡಿದಿದ್ದ ನನ್ನ ಕೈಬೆರಳುಗಳನ್ನು ಬಲವಂತವಾಗಿ ತೆರೆಯುವ ಪ್ರಯತ್ನವನ್ನವಳು ಮಾಡಲಿಲ್ಲ. ಆದರೆ ಅವಳ ಕಣ್ಣುಗಳಲ್ಲಿ ದೂರದ ನೋವಿತ್ತು. ಸುಳ್ಳು ಭರವಸೆಯ ಮೇಲಿದ್ದುಕೊಂಡು, ಸಾಮೀಪ್ಯತೆ ಮತ್ತು ಆಪ್ತತೆಯ ನಷ್ಟವನ್ನು ಮುಂದೂಡುವುದಕ್ಕಿಂತ, ಅಗಲಿಕೆಯ ನೋವನ್ನು ಸಹಿಸುವ ದೃಢ ನಿರ್ಧಾರವಿತ್ತು. ನಾನು ಬಯಸಿದ್ದರೆ, ಹಲವಾರು ತಿಂಗಳುಗಳಿಗೆ ಮುಂಚೆಯೇ ಅವಳ ಕೊಠಡಿಗೆ ನಾನು ಹೋಗಿಬಿಡಬಹುದಿತ್ತೆಂದು ಹೇಳಲಾರದಷ್ಟು ಹೆಮ್ಮೆ ಅವಳಿಗೆ. ಅರಮನೆಯಲ್ಲಿ ತಮ್ಮ ಗಂಡಂದಿರಿಗೆ ಅಥವಾ ಪ್ರಿಯಕರರಿಗಾಗಿ ಕಾದು ಕುಳಿತಿರುವ ನೂರಾರು ಹೆಂಗಸರನ್ನು ನೆನಪಿಸಿಕೊಂಡೆ. ಅದೆಷ್ಟು ತಿಂಗಳು ಮತ್ತು ವರ್ಷಗಳು ಅವರುಗಳು ಜಾಗರಣೆಯಿಂದಿದ್ದಾರೆ? ಅವರ ಒಂಟಿತನವನ್ನು ನೀಗಿಸುವವರಾರು? ಅವರ ಗಂಡಂದಿರು ರಾತ್ರಿಯನ್ನು ಯಾರೊಂದಿಗೆ

ಕಳೆಯುತ್ತಾರೆಂದು ಅವಳಿಗೆ ಬಹುಶಃ ಗೊತ್ತಿರುತ್ತಿತ್ತು. ಅಂತಃಪುರದವರ ಕಠೋರ ವೇದನೆ ಮತ್ತು ಹೃದಯವೇಧಕವಾದ ಯಾತನೆ ಆಳತೆಗೆ ಮೀರಿದ್ದು. ದಿನವೂ ತಿರಸ್ಕಾರಕ್ಕೊಳಗಾಗುವುದೆಂದರೆ ಹೇಗನಿಸಬೇಡ? ಸಾವೊಂದೇ ಅವಳಿಗೆ ಉಳಿದಿರುವ ಮಾರ್ಗವೆ?

"ಮಹಾಸ್ವಾಮಿ ಒಂದು ಕೋರಿಕೆ. ದಯಪಿಟ್ಟು 'ಕರುಣೆ ತೋರಿಸಬೇಡಿ. ಕರ್ತವ್ಯ ಪ್ರಜ್ಞೆಯಿಂದ ನೀವು ಬರುವುದೂ ಬೇಡ"

ಕೌಸಲ್ಯ ಎಲ್ಲೆ ಕಟ್ಟಿನ ಗೆರೆಗಳನ್ನು ಮತ್ತೆ ಹಾಕಿಬಿಟ್ಟಿದ್ದಳು. ಅವುಗಳನ್ನು ದಾಟುವಂತೆಯೆ ಇಲ್ಲ. ನಾನಾಗಲಿ ಅವಳಾಗಲಿ ಗಮನಿಸದೆಯೇ ನಮ್ಮಿಬ್ಬರ ನಡುವಣ ಬಿಗಿ ಇಲ್ಲವಾಗಿತ್ತು.

"ನೀನು ಯಾಕೆ ಕುಳಿತುಕೊಂಡು ನಿನ್ನ ತೊಡೆಯ ಮೇಲೆ ನನ್ನ ತಲೆ ಇಟ್ಟುಕೊಂಡು ನಾನು ಚಿಕ್ಕವನಾಗಿದ್ದಾಗ ನನ್ನ ತಲೆಯಿಂದ ಸಾವಿರಾರು ಹೇನುಗಳನ್ನು ಹೆಕ್ಕಿ ತೆಗೆಯುತ್ತಿದ್ದ ಹಾಗೆ ಈಗಲೂ ತೆಗೆಯಬಾರದು. ಹಾಗೂ ನನ್ನ ತಲೆಯೊಳಕ್ಕೊಂದಿಷ್ಟು ವಿವೇಕವನ್ನು ಗಿಡಿಯಬಾರದು?"

ನಾಯಿಗಳಿಗೂ ಮನುಷ್ಯರಿಗೂ ಏನೂ ವ್ಯತ್ಯಾಸವಿಲ್ಲ. ನಾವಿಬ್ಬರೂ ಲಕ್ಷಗಟ್ಟಲೆ ಸಲ ಸುತ್ತು ಬಳಸಿ, ಕಳೆದ ಹನ್ನೊಂದು ವರ್ಷಗಳಿಂದ ಮಾಡಿದಂತೆ ನಾವು ಹೋಗಿ ಅಡಗಬೇಕೆಂದಿರುವ ಜಾಗ ಯಾವುದೆಂದು ಗೊತ್ತು ಮಾಡಿಕೊಂಡು ಅಲ್ಲಿ ನಿಶ್ಚಿಂತೆಯಿಂದ ವಿರಮಿಸೋಣ. ಕೌಸಲ್ಯಳ ಬಲ ಮೊಲೆಯ ಇಳಿಜಾರಿನಲ್ಲಿ ಖಂಡಿತವಾಗಿಯೂ ನನ್ನ ಹೆಡತಲೆಯ ಅಳತೆಯ ಗುಳಿ ಇದೆ. ನನಗೆ ಈ ಜಾಗ ಅತ್ಯಂತ ಚಿರಪರಿಚಿತ. ನಾನು ಇಲ್ಲಿದ್ದುಕೊಂಡು ಗಲ್ಲದ ಕೆಳಭಾಗದ ಕಡೆ ನೋಡುತ್ತ ಗಂಟೆಗಟ್ಟಲೆ ಸಲ್ಲಾಪ ನಡೆಸಿದ್ದೇನೆ. ಅವಳ ಮೈ ತ್ವಚೆ ಹುಟ್ಟಾ ಕಲಂಕ ರಹಿತವೊ ಅಥವಾ ಅಲ್ಲೊಂದು ಇಲ್ಲೊಂದು ಮೂಡಿರಬಹುದಾದ ಕೂದಲು ಕಾಣಿಸಿಕೊಳ್ಳುವುದಕ್ಕೆ ಮುನ್ನವೇ ಬುಡ ಸಹಿತ ಅದನ್ನು ತೊಡೆದು ಹಾಕುವ ನಿಗೂಢ ಮುಲಾಮನ್ನೇನಾದರೂ ಆಕೆ ಹೊಂದಿದ್ದಾಳೆಯೆ? ನನ್ನ ಸಲುವಾಗಿ ಕೌಸಲ್ಯ ಯಾರೋ ರಾವ್ ಅಥವಾ ಸುಲ್ತಾನನ ವಂಶವೃಕ್ಷವನ್ನು ಪತ್ತೆ ಹಚ್ಚುವುದರಲ್ಲೋ ಅಥವಾ ಮೂಲದೂರಿನ ಗಂಧಗಾಳಿಯೂ ಇಲ್ಲದೆ, ಇಂದಿಗೂ ಒಬ್ಬರು ಇನ್ನೊಬ್ಬರನ್ನು ಕೊಲ್ಲಹೊರಟಿರುವ ಎರಡು ರಜಪೂತ ಕುಟುಂಬಗಳ ನಡುವಿನ ವೈರತ್ವದ ಕಹಿಬೇರನ್ನು ಅನಾವರಣಗೊಳಿಸುವುದರಲ್ಲೋ ವ್ಯಸ್ತಳಾಗಿದ್ದಾಗ ನಾನು ಆ ಕಣಿವೆಯಲ್ಲಿ ಮಲಗಿ ನಿದ್ರಿಸಿದ್ದೇನೆ.

ವೃಂದಾವನಿ ದೇವಾಲಯದ ಘಂಟೆಗಳ ನಿನಾದ ಜೋರಾಗಿ ಮೊಳಗುತ್ತಿದೆ.

ದೇವರುಗಳು ಭೂಮಿಯ ಮೇಲೆ ಮೂರ್ತರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಎಲ್ಲ ಯುಗಗಳಿಗಿಂತ ನೈತಿಕವಾಗಿ ಪತನಗೊಂಡಿರುವ ಈ ಕಲಿಯುಗದಲ್ಲಂತೂ ಕಾಣಿಸಿಕೊಳ್ಳುವುದಿಲ್ಲ. ದೇವತೆಗಳು ಮನುಷ್ಯರ ವ್ಯವಹಾರದಲ್ಲಿ ಮಧ್ಯೆ ಪ್ರವೇಶಿಸುತ್ತಾರೆಂಬುದು ಕೇವಲ ವದಂತಿಯ, ನಂಬಿಕೆಯ ಹಾಗೂ ಎಲ್ಲವನ್ನೂ ಸುಲಭವಾಗಿ ನಂಬಿ ಬಿಡುವ ಸ್ವಭಾವದ ವಿಷಯವಷ್ಟೇ ಆಗಿರುವಂತೆ ಕಾಣುತ್ತದೆ. ಜೀವನದಲ್ಲಾಗುವ ಪವಾಡಗಳೇನಿದ್ದರೂ ಕಾಲದಿಂದ ಆಗುವಂಥವು ಮಾತ್ರ. ನನ್ನ ಹೆಂಡತಿ ಪ್ರತಿ ದಿನ ಸಂಜೆ ಆರುಗಂಟೆಗೆ ಹಾಡಿ ನರ್ತಿಸುತ್ತಾಳೆ. ಅವಳ ಪ್ರಾರ್ಥನಾ ಸಭೆಗಳಿಗೆ ಸ್ವಯಂ ಮಹಾರಾಜರೇ ಹಾಜರಾಗುತ್ತಾರೆ. ಐವತ್ತು ಸಾವಿರ ಜನ ಹಿಡಿಸಲನುವಾಗುವಂತೆ ದೇವಸ್ಥಾನದ ಸಂಕೀರ್ಣವನ್ನು ಮತ್ತು ಅದರ ಆವರಣವನ್ನು ವಿಸ್ತಾರಗೊಳಿಸುವ ಯೋಜನೆ ಹಾಕಲಾಗಿದೆ. ಚಿತ್ತೂರು ಬೆಳ್ಳಿಯ

ಒಡವೆಗಳ ಕುಸುರಿ ಕೆಲಸಕ್ಕೆ ಹೆಸರಾಗಿದೆ. ಅದನ್ನು ಹೋಲುವಂಥ ಉತ್ಕೃಷ್ಟದರ್ಜೆಯ ಅಮೃತ ಶಿಲೆಯ ಚದರ ಜಿಲ್ಲೆಗಳು ಅದನ್ನು ಅಲಂಕರಿಸಿವೆ. ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ನನ್ನ ಹೆಂಡತಿ ನರ್ತಿಸುವಾಗ ಅವಳ ಲಂಗದ ಹಾರಾಟದಿಂದೆದ್ದ ಗಾಳಿಯನ್ನು ಅವು ಈಗ ತಡೆಯುತ್ತವೆ. ನಿಜ ಹೇಳಬೇಕೆಂದರೆ, ಚಿತ್ತೂರಿಗೆ ದೂರಲು ಕಾರಣವೇ ಇಲ್ಲ.

ನಾವು ಕುಂಭಲ್‌ಗರ್‌ನಿಂದ ಹಿಂತಿರುಗಿದಾಗಿನಿಂದ ದುರ್ಗದಲ್ಲಿ ಯಾತ್ರಾರ್ಥಿಗಳ ಮತ್ತು ಪ್ರವಾಸಿಗರ ಸಂಖ್ಯೆ ಶೇಕಡಾ ನೂರೈವತ್ತರಷ್ಟು ಹೆಚ್ಚಾಗಿದೆ ಮತ್ತು ಅದು ಕಡಿಮೆಯಾಗುವ ಸೂಚನೆಗಳೇ ಕಾಣುತ್ತಿಲ್ಲ. ಚಂಡೇರಿ, ಚಂಪಾನೇರ್, ಜೈಪುರ್, ದೆಹಲಿ, ಆಗ್ರಾ, ಮಥುರಾ, ಅಹಮದಾಬಾದ್, ರಾಯ್‌ಸೇನ್, ದೌಲತಾಬಾದ್, ಪುಣೆ ವಿಜಯನಗರ ಹಾಗೂ ಕಾಶ್ಮೀರ ಕಣಿವೆಯಿಂದಲೂ ಯಾತ್ರಿಕರ ತಂಡಗಳು, ಎತ್ತಿನಗಾಡಿ ಮತ್ತು ಒಂಟಿಗಾಡಿಗಳಲ್ಲಿ, ಪಲ್ಲಕ್ಕಿಗಳಲ್ಲಿ ಮತ್ತು ಕುದುರೆಗಳ ಮೇಲೆ ಬರುತ್ತವೆ. ದುಬಾರಿಯ ವಾಹನದ ಖರ್ಚನ್ನು ನಿಭಾಯಿಸಲಾರದವರು ತಮ್ಮ ಹಾಸಿಗೆ ಮತ್ತು ಒಂದೆರಡು ಪಾತ್ರೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಚಿತ್ತೂರಿಗೆ ದೀರ್ಘ ಪ್ರಯಾಣವನ್ನು ಕಾಲ್ನಡಿಗೆಯಲ್ಲೇ ಪೂರೈಸುತ್ತಾರೆ. ಅರ್ಥ ಸಚಿವರು ಕಂಡುಕೊಂಡಂತೆ ನನ್ನ ಹೆಂಡತಿ ಕೇವಲ ಅಪರೂಪದ ಜೀವಂತ ಬೊಕ್ಕಸವಷ್ಟೇ ಅಲ್ಲ. ಆಕೆ ಚಿತ್ತೂರಿನ ದೊಡ್ಡ ಸಂಪದ್ಭರಿತ ಆಸ್ತಿ. ಇಷ್ಟು ವರ್ಷಗಳು ರಜಪೂತರ ಅಪೂರ್ವವಾದ ಭೌಗೋಳಿಕ ಮತ್ತು ಐತಿಹಾಸಿಕ ಆಸಕ್ತಿಗಳನ್ನು ಒಂದೆಡೆ ತರುವಂತೆ ಮಾಡಿದ್ದು ತಂದೆಯವರ ಕಾಣ್ಕೆ ಮತ್ತು ಚಾಣಾಕ್ಷತನದ ಪ್ರಯತ್ನವೇ. ಕೆಲವು ವರ್ಷಗಳ ಹಿಂದೆ ಊಹಿಸಲೂ ಆಗದಂಥ ರೀತಿಯಲ್ಲಿ ರಜಪೂತರೂ, ಬಿಲ್ಲರು ಹಿಂದೂಗಳು ಜೈನರು ಮತ್ತು ಮುಸ್ಲಿಮರನ್ನು ಹಿಡಿದಿಟ್ಟಿರುವುದು, ಕಿರಿಯ ಸಂತಳು, ಕೃಷ್ಣ ಮತ್ತು ಮಹಾಪ್ರಭುಗಳ ನಡುವಣ ನಂಟು.

ಅತ್ತ ಕಿರಿಯ ಸಂತಳು ಶ್ರೀ ಕೃಷ್ಣನ ಆರಾಧನೆಯಲ್ಲಿ ಮುಳುಗಿ ಹೋಗಿದ್ದರೆ ಅಥವಾ ಮನೆಯ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರೆ, ಇತ್ತ ಚಿತ್ತೂರು, ಅಷ್ಟೇ ಏಕೆ ಇಡೀ ಮೇವಾಡ ಅವಳನ್ನು ಪುರಾಣೀಕರಣಗೊಳಿಸುವುದರಲ್ಲಿ ವ್ಯಸ್ತವಾಗಿದೆ. ಅವಳ ನಿರ್ಮಲತೆ, ದೈವಭಕ್ತಿಗಳನ್ನು ಕುರಿತಂತೆ, ನೀಲಮೇಘಶ್ಯಾಮನೊಂದಿಗಿನ ಅವಳ ಸಂವಾದ ಕುರಿತಂತೆ ಅವಳ ಮೇಲಾದ ಕೊಲೆ ಪ್ರಯತ್ನಗಳಿಂದ ಅವಳು ಪವಾಡ ಸದೃಶ ರೀತಿಯಲ್ಲಿ ಪಾರಾದ ಬಗ್ಗೆ ಹಲವಾರು ಸಂಪುಟಗಳಿಗಾಗುವಷ್ಟು ಕತೆಗಳು ಹುಟ್ಟಿಕೊಂಡಿವೆ. ಅದಕ್ಕೆ ಇತ್ತೀಚಿನ ಸೇರ್ಪಡೆಯೆಂದರೆ, ಸ್ವಾಮಿ ರೂಪಾ ಗೋಸ್ವಾಮಿಗೆ ಸಂಬಂಧಿಸಿದ್ದು. ಆತ ಅತ್ಯಂತ ಹೆಸರಾಂತ ಸನ್ಯಾಸಿ ಹಾಗೂ ಶ್ರೀಕೃಷ್ಣನ ಉಪಾಸಕರು ಮತ್ತು ಬಹುದೊಡ್ಡ ಸಂತ ಕವಿ ಎಂದು ಪ್ರಸಿದ್ಧರಾಗಿದ್ದ ದಿವಂಗತ ಚೈತನ್ಯ ಮಹಾಪ್ರಭುವಿನ ಶಿಷ್ಯ.

ಈಗ್ಗೆ ಕೆಲವು ತಿಂಗಳ ಹಿಂದೆ, ರೂಪಾ ಗೋಸ್ವಾಮಿಯವರು ಚಿತ್ತೂರಿನ ಮುಖಾಂತರ ಸಾಗಿಹೋಗುತ್ತಿದ್ದಾಗ, ಬಹುಪಾಲು ವೈಷ್ಣವ ಸನ್ಯಾಸಿಗಳು ಮಾಡುವಂತೆ ಅವರೂ ಬೃಂದಾವನಿ ದೇವಸ್ಥಾನದಲ್ಲಿ ತಂಗಿದರು. ಜ್ಞಾನೋದಯವನ್ನು ಹೊರತುಪಡಿಸಿದರೂ, ಅರಿವು ಮತ್ತು ಮೋಕ್ಷಗಳೆರಡೂ ಗುರುಮುಖೇನ ಇಲ್ಲವೆ ಋಷಿಗಳ ಸತ್ಸಂಗದಿಂದಲೇ ಪ್ರಾಪ್ತವಾಗತಕ್ಕವು ಎಂಬುದರಲ್ಲಿ ನನ್ನ ಹೆಂಡತಿಗೆ ನಂಬಿಕೆ. ಹಾಗಾಗಿ ಆಕೆ ಮರುದಿನ ಗೋಸ್ವಾಮಿಯನ್ನು ಕಾಣಲು ಹೋದಳು. ಅವರೊಬ್ಬ ಕಠೋರ ಸನ್ಯಾಸಿಯೂ, ಸ್ತ್ರೀ ಸಂಗವನ್ನು ವರ್ಜಿಸಿದವರೂ ಆಗಿದ್ದರಿಂದ, ಈ ಕಿರಿಯ ಸಂತಳನ್ನು ಭೇಟಿಯಾಗಲು ನಿರಾಕರಿಸಿದರು. ಆಕೆ ಕೇವಲ ಲೋಲುಪಳಾದ ರಾಜಕುಮಾರಿಯಲ್ಲ, ಬಹುಮಟ್ಟಿಗೆ ಅವಳೊಬ್ಬ ಸೋಗುಗಾರ್ತಿ ಎಂದೂ, ಅವಳ ಭಕ್ತಿಯ ಬಹಿರಂಗ ಪ್ರದರ್ಶನಗಳು ಹಾಗೂ

ಅವಳ ಕುಣಿತ ಮತ್ತು ಹಾಡುಗಳ ವೈಚಿತ್ರ್ಯಗಳೇನಿದ್ದರೂ ಅವೆಲ್ಲ ಜನರ ಗಮನವನ್ನು ತನ್ನತ್ತ ಸೆಳೆದುಕೊಳ್ಳುವ ತಂತ್ರಗಳು ಎಂಬುದು ಅವರ ಖಚಿತ ತೀರ್ಮಾನವಾಗಿತ್ತು. ರೂಪಾ ಗೋಸ್ವಾಮಿಯವರು ಅಸಾಧಾರಣವಾದ ಖ್ಯಾತಿಯನ್ನು ಹೊಂದಿದ್ದರು. ಆದರೆ ರಾಜಕುಮಾರಿ ಕೂಡ ತನ್ನ ಮನಸ್ಸಮಾಧಾನವನ್ನು ಕಳೆದುಕೊಳ್ಳಲೂ ಇಲ್ಲ, ನಿರುತ್ಸಾಹಗೊಳ್ಳಲೂ ಇಲ್ಲ. ಆತ ಒಬ್ಬ ಪುರುಷನೆ? ಎಂದು ಆಕೆ ಕೇವಲ ಆಶ್ಚರ್ಯವನ್ನು ವ್ಯಕ್ತಪಡಿಸಿದಳು. ಒಂದು ವೇಳೆ ಆತ ಪುರುಷನೇ ಆಗಿದ್ದರೆ ಬೃಂದಾವನವನ್ನು ಪ್ರವೇಶಿಸಲು ಆತನಿಗೇನು ಅಧಿಕಾರವಿದೆ? ಇಡೀ ವಿಶ್ವದಲ್ಲಿರುವುದು ಒಬ್ಬನೇ ಪುರುಷ ಹಾಗೂ ಆ ಪುರುಷ ಶ್ರೀ ಕೃಷ್ಣನಲ್ಲದೆ ಬೇರಾರೂ ಅಲ್ಲ, ಹಾಗೂ ಈ ವಿಶ್ವದಲ್ಲಿರುವ ಉಳಿದೆಲ್ಲರೂ ಸ್ತ್ರೀಯರು ಎಂಬುದು ಗೋಸ್ವಾಮಿಗೆ ಗೊತ್ತಿಲ್ಲವೆ?

ಕಿರಿಯ ಸಂತಳು ಏನು ಹೇಳುತ್ತಿದ್ದಳು? ನನ್ನ ಹೆಂಡತಿ ಈ ರೀತಿಯ ನಿಗೂಢ ಸಾಂಕೇತಿಕತೆಗೆ ತಿರುಗಿ ಬಿಟ್ಟಾಗ, ಅದನ್ನು ಅರ್ಥೈಸಿಕೊಳ್ಳುವುದು ನನ್ನ ಅಳವಿಗೆ ಮೀರಿದ್ದು. ಆದರೆ ಗೋಸ್ವಾಮಿ ಅವಳ ಇಂಗಿತವನ್ನು ಅರ್ಥಮಾಡಿಕೊಂಡರು. ಅವಳು ತಮ್ಮ ಮುಖಭಂಗ ಮಾಡಿದ್ದಕ್ಕೆ ಕಿಡಿಕಿಡಿಯಾಗುವ ಬದಲಿಗೆ ಅವರು ಇಲ್ಲೊಬ್ಬ ಪರಮಾತ್ಮಸ್ವರೂಪವನ್ನರಿತ ದಿವ್ಯಜ್ಞಾನಿಯಾದ ಭಕ್ತೆಯಿದ್ದಾಳೆಂದು ಅರಿತುಕೊಂಡರು. ರಾಜಕುಮಾರಿಯನ್ನು ಭೇಟಿಯಾಗಲು ಅವರು ಒಪ್ಪಿದರು.

ನನ್ನ ಹೆಂಡತಿಯ ಅದೃಷ್ಟ ಖುಲಾಯಿಸುತ್ತಿರುವುದರ ಕುರಿತು ರಾಣಿ ಕರ್ಮವತಿಗೆ ಏನು ಹೇಳುವುದಿದೆ? ರಣಥಂಬೂರ್ ಮತ್ತು ಅದರ ಸುತ್ತಣ ಪರಿಸರದಲ್ಲಿ ವಿಕ್ರಮಾದಿತ್ಯನ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಮೂಲಕ ಅವಳು ಖಂಡಿತವಾಗಿಯೂ ಅವನನ್ನು ಮೇವಾಡದ ಸಿಂಹಾಸನಕ್ಕೆ ಬಲವಾದ ಪ್ರತಿಸ್ಪರ್ಧಿಯನ್ನಾಗಿ ಮಾಡಿದ್ದಾಳೆ. ಚಿತ್ತೂರಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾರೇ ಆದರೂ, ಅವಳ ಉಪಸ್ಥಿತಿಯನ್ನು ಮತ್ತು ಅವಳ ಹಸ್ತಕೌಶಲವನ್ನು, ಹೊಸ ರೂಪ ನೀಡುತ್ತಿರುವುದನ್ನು, ಅವಳ ಮಧ್ಯಪ್ರವೇಶವನ್ನು ಹೆಚ್ಚು ಕಡಿಮೆ ಪ್ರತಿದಿನವೂ ಅನುಭವಕ್ಕೆ ತಂದುಕೊಳ್ಳಬಹುದು. ಆಕೆಯ ದೂರದ ಕೈಚಾಚು ಎಷ್ಟೇ ಪ್ರಬಲವಾದ್ದಾದರೂ, ಅದು ನನ್ನ ಹೆಂಡತಿ ನಮ್ಮ ತಂದೆಗೆ ಬಹುಮಟ್ಟಿಗೆ ಅನಿವಾರ್ಯವಾಗಿ ಬಿಟ್ಟಿರುವುದನ್ನು ತಡೆಯಲು ಸಾಧ್ಯವಾಗಿಲ್ಲ. ಉಗ್ರಾಣದ, ಅರಮನೆಯ ಒಡವೆಗಳ ಖಜಾನೆಯ, ಮಹಾಪ್ರಭುಗಳ ಬೀರುಗಳ, ಉಡುಪುಗಳ ಬೀರುಗಳ, ಪಾದರಕ್ಷೆಗಳ, ಶಿರಸ್ತ್ರಾಣಗಳ ಬೀಗದ ಕೈಗಳು, ಸಂಕ್ಷೇಪದಲ್ಲಿ ಹೇಳಬೇಕೆಂದರೆ, ಇಡೀ ಅರಮನೆಯೇ ಅವಳು ತನ್ನ ಪರಕಾರದ ಸೊಂಟಪಟ್ಟಿಗೆ ಹೊಲಿದುಕೊಂಡಿದ್ದ ಬೆಳ್ಳಿಯ ಕೊಕ್ಕೆಗೆ ಸಿಕ್ಕಿಕೊಂಡು ನೇತಾಡುತ್ತಿತ್ತು. ಅವಳು ಕಿಂಚಿತ್ ಗಲಿಬಿಲಿಗೊಂಡಂತೆ, ಪಾರಲೌಕಿಕ ವ್ಯಕ್ತಿಯೆಂಬಂತೆ ಹಾಗೂ ಮರ್ತ್ಯರಾದ ನಮಗಿಂತ ಪೂರ್ತಿ ಬೇರೆಯೇ ಆದ ಉನ್ನತ ಆಧ್ಯಾತ್ಮಿಕ ನೆಲೆಯಲ್ಲಿರುವಂತೆ ಕಾಣಬಹುದು; ಆದರೆ, ಇಡೀ ಹಿಜಡಾಗಳ ಶ್ರೇಣೀ ಬದ್ಧ ವ್ಯವಸ್ಥೆ, ಅರಮನೆಯ ಅಧಿಕಾರಶಾಹಿ, ಸಿಬ್ಬಂದಿ, ಸೇವಕರು ಮತ್ತು ಇಡೀ ಜನಾನಾ ಕಂಡುಕೊಂಡಂತೆ, ಆಕೆಯ ಕಣ್ಣಿಂದ ತಪ್ಪಿಸಿಕೊಳ್ಳುತ್ತಿದ್ದದ್ದು ತೀರಾ ಕಡಿಮೆ. ಪ್ರಸನ್ನ ಮನೋಭಾವ ಪ್ರಯೋಜನಕ್ಕೆ ಬರುವುದಿಲ್ಲ ಎಂದಾದರೆ, ಆಕೆ ತುಂಬ ಕಠಿಣಳೂ ಮೊಂಡೂ ಆಗುತ್ತಿದ್ದಳು. ಕಠಿಣವಾದ ಅಥವಾ ವೈಯಕ್ತಿಕವಾದ ವಿಷಯಗಳನ್ನು ಎದುರಿಸುವಲ್ಲಿ ಹೆಣ್ಣಿನ ಮಾರ್ದವತೆ ಅಡ್ಡಿ ಬರುತ್ತದೆಂದು ಯಾರಾದರೂ ಭಾವಿಸಿದಲ್ಲಿ ಅದು ತಪ್ಪಾಗುತ್ತಿತ್ತು. ದೈಹಿಕ ಕ್ರಿಯೆಗಳಾಗಬಹುದು, ಕಾಯಿಲೆ, ವಿಚಿತ್ರವಾದ ಲೈಂಗಿಕ ಪ್ರವೃತ್ತಿಗಳಾಗಬಹುದು, ಸಾಲಕ್ಕೆ ಅತಿ ಬಡ್ಡಿ ವಸೂಲು ಮಾಡುವಂಥದಾಗಬಹುದು,

ಅಥವಾ ಬೆದರಿಸಿ ಹಣ ವಸೂಲಿ ಮಾಡುವುದಾಗಬಹುದು, ಕುಟುಂಬಗಳ ಅಥವಾ ಬಣಗಳ ನಡುವಿನ ಬದ್ಧ ದ್ವೇಷವಾಗಬಹುದು, ಅಥವಾ ಕಾರಸ್ಥಾನಗಳಾಗಬಹುದು ಆಕೆಯ ನಿಷ್ಕಪಟ ಮನೋಭಾವ, ನೇರವಾಗಿ ವಿಷಯಕ್ಕೆ ಬರಲು ನೆರವಾಗುತ್ತದೆ. ಅಲ್ಲದೆ ಅಗತ್ಯ ಬಿದ್ದಾಗ ಬಾಯಲ್ಲಿ ಯಾವ ಕಹಿಯೂ ಉಳಿಯದಂತೆ ಯಾವುದೇ ವ್ಯಕ್ತಿಯನ್ನು ತರಾಟೆಗೆ ತೆಗೆದುಕೊಳ್ಳಲು ಅವಳ ನಿಷ್ಕಾಪಟ್ಯ ಅನುವು ಮಾಡಿಕೊಡುತ್ತದೆ.

ನಾವ್ಯಾರೂ ಕಡಮೆ ತಿನ್ನುತ್ತಾ ಇಲ್ಲ. ಅಡಿಗೆಯ ಗುಣಮಟ್ಟವೇನೂ ಕುಸಿದಿಲ್ಲ. ಅರಮನೆಯ ವ್ಯವಸ್ಥಾಪನೆಯಲ್ಲೇನೂ ಕಾರ್ಪಣ್ಯವನ್ನು ತೋರಿಲ್ಲ. ಆದರೂ ಖರ್ಚು ವೆಚ್ಚಗಳು ಹತ್ತಿರ ಹತ್ತಿರ ಮೂರನೇ ಒಂದು ಭಾಗದಷ್ಟು ಕಡಿಮೆಯಾಗಿವೆ. ಅಷ್ಟೊಂದು ಕಾರ್ಯಬಾಹುಳ್ಯದ ನಡುವೆ ಅರಮನೆಯ ವ್ಯವಹಾರಗಳನ್ನು ನೋಡಿಕೊಳ್ಳುವುದು, ತಂದೆಯವರಿಗೆ ಊಟ ಬಡಿಸುವುದು, ಅವರ ಬಟ್ಟೆಗಳನ್ನು ಅಣಿಗೊಳಿಸುವುದು, ಅವರಿಗೆ ಒಂದೇ ಸಮನೆ ನೋವು ಕೊಡುತ್ತಿರುವ ಜಜ್ಜಿಹೋದ ಅವರ ಶರೀರದ ಆ ಭಾಗವನ್ನು ನೀವುವುದು. ಅವರಿಗೆ ತನ್ನ ಬಾಲ್ಯದ, ತನ್ನ ತಾತ ರಾವ್ ಡೂಡಾನ ಹಾಗೂ ಅವಳ ಸೋದರ ಮಾವ ರಾವ್ ವೀರಮ್ ಅವರುಗಳಿಗೆ ಸಂಬಂಧಿಸಿದ ಕತೆಗಳನ್ನು ಹೇಳಿ ಅವರ ಬೇಸರ ನೀಗುವುದು, ಅವರ ಆರೋಗ್ಯ ಅಷ್ಟು ಸರಿ ಇಲ್ಲದೆ ಇರುವಾಗ, ಅವರ ಮುಂದೆ ಹಾಡುವುದು ಅಥವಾ ಅವರೊಂದಿಗೆ ಇಸ್ಪೀಟಾಡುವುದು, ಇವುಗಳಿಗೆಲ್ಲಾ ಅದು ಹೇಗೆ ಆಕೆ ಸಮಯವನ್ನು ಹೊಂದಿಸಿಕೊಳ್ಳುತ್ತಾಳೆಂಬುದು, ಅಲ್ಲದೆ ಸ್ವಲ್ಪವೂ ಗೋಳಾಡದೆ, ಅವಸರಪಡದೆ ಇರುವುದು, ಅಥವಾ ಬೇಗ ಸಿಟ್ಟು ಮಾಡಿಕೊಳ್ಳದೆ ಇರುವುದು, ಇವೆಲ್ಲ ನಾನು ಹಾಗೂ ನನ್ನಂಥವರಿಗೆ ಬರೀ ನಿಗೂಢವಷ್ಟೇ ಅಲ್ಲ, ಆತಂಕಕ್ಕೆ ಕಾರಣವಾಗಿದೆ. ನಾವು ಕಾಲವನ್ನು ಬಳಸುವ ರೀತಿ ನೋಡಿದರೆ ಅವಳ ಸಾಮರ್ಥ್ಯದ ಕಾಲುಭಾಗಕ್ಕೂ ನಾವು ಬರುತ್ತೇವೆ ಎಂದು ಎಂದಿಗೂ ಆಶಿಸಲು ಸಾಧ್ಯವಿಲ್ಲ. ಆಕೆ ತಾನು ಮೇಲೆ ಬಿದ್ದು ಹೋಗದೆ ನಿರಾಳವಾಗಿ ರಾಜಕೀಯ ಅಥವಾ ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತನ್ನದೊಂದು ಅಭಿಪ್ರಾಯವನ್ನು ನುಸುಳಿಸಬಲ್ಲಳು. ಆದರೆ ಕರ್ಮವತಿಯಂತಲ್ಲದೆ ಈ ವಿಚಾರ ಮೂಲತಃ ತಂದೆಯವರಿಂದಲೇ ಬಂದದ್ದೆಂದು ಅವರಿಗೆ ಯೋಚಿಸಲು ಅನುವು ಮಾಡಿಕೊಡುತ್ತಾಳೆ.

ಆ ದಿನ ನನ್ನ ಹೆಂಡತಿಯ ಮೊದಲನೆ ಭಜನೆಯ ಸಾಮೂಹಿಕ ಗಾಯನದಲ್ಲಿ ತಂದೆಯವರ ಆಳವಾದ ಗುಡುಗಿನಂಥ ದನಿಯೂ ಸೇರಿಕೊಂಡಿದ್ದುದನ್ನು ನಾನು ಗುರುತಿಸಿದೆನೆ? ಅವರು ದೊರೆಯೇ ಆಗಿದ್ದರೂ, ಬೃಂದಾವನಿ ಮಂದಿರದಲ್ಲಿ ಭಕ್ತಾದಿಗಳಿಗೆ, ಮಹಾಪ್ರಭುಗಳ ದನಿಯನ್ನು ಮುಳುಗಿಸಿ ಬಿಡುವಂತೆ ಮಾಡಲು ಯಾವ ಹಿಂಜರಿಕೆಯೂ ಇರುವುದಿಲ್ಲ. ನನ್ನ ಮತ್ತು ಕೌಸಲ್ಯಳ ಪಾಲಿಗೆ ಆ ಇಡೀ ಸಂಜೆಯೇ ಸಿಕ್ಕಿಬಿಟ್ಟಿತು. ಶ್ರೀಕೃಷ್ಣನ ಭಕ್ತಿಗೀತಗಳ ಸಮರ್ಪಣೆ ಮತ್ತು ಆರತಿ, ಏನಿಲ್ಲವೆಂದರೂ ಇನ್ನೂ ಒಂದು ಗಂಟೆಯ ಕಾಲ ನಡೆಯುತ್ತದೆ. ತಂದೆಯವರಿಗೆ ರಾತ್ರಿಯ ಊಟವನ್ನು ಬಡಿಸಿ ಆದ ಮೇಲೆ ಭಗವದ್ಗೀತೆಯಿಂದ ಒಂದೆರಡು ಅಧ್ಯಾಯಗಳನ್ನು ಓದಿ ಮುಗಿಸಿ ರಾಜಕುಮಾರಿ ಬರುವ ಹೊತ್ತಿಗೆ ಒಂಬತ್ತೂವರೆ, ಹತ್ತು ಗಂಟೆ ಆಗುತ್ತದೆ.

ಅದೆಷ್ಟು ಬೇಗ ಹಳೆಯ ಪದ್ಧತಿಗಳಿಗೆ ಜನ ಮರಳುತ್ತಾರೆ ಹಾಗೂ ಹಳೆಯ ಚಾಳಿಗಳ ಸುಕ್ಕು ಮತ್ತು ತೆರೆಗಳು ತಿರುಗಿ ಬಂದು ಬಿಡುತ್ತವೆ. ಕಾಲದಲ್ಲಿ ನಡುವೆ ಒಂದು ಬಿಡುವು ಉಂಟಾಗಿದ್ದು, ಆ ಕಾರಣದಿಂದಾಗಿ ನಾನು ನನ್ನ ವಿವಾಹ ಪೂರ್ವದ ರೀತಿಗೆ

ಜಾರಿಕೊಂಡಿದ್ದೆ. ಕೌಸಲ್ಯಳಿಗೆ ನನ್ನ ಆ ದಿನದ ಕಾರ್ಯಕ್ರಮಗಳ ಬಗ್ಗೆ ಹೇಳಿದೆ. ಭದ್ರತಾ ಸಮಿತಿಯ ಸಭೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಏರ್ಪಾಟಾಗಿತ್ತು. ಆದರೆ ತಂದೆಯವರು ನನಗೆ ಹತ್ತು ಗಂಟೆಗೆ ಹೇಳಿಕಳುಹಿಸಿದರು. ಆ ದಿನ ವಿದೇಶದಿಂದ ಅಂದರೆ ದೂರದ ಪೋರ್ಚುಗಲ್‌ನಿಂದ ಅತಿಥಿಯೊಬ್ಬರು ಬಂದಿದ್ದರು. ನಾನು ಹೋದಾಗ ಮಹಾಪ್ರಭುಗಳು ಒಂದು ಭಾವಚಿತ್ರಕ್ಕಾಗಿ ಚಿತ್ರಕಾರನ ಮುಂದೆ ಕುಳಿತಿದ್ದರು. ಭಾವಚಿತ್ರಕಲೆಯೆಂಬುದು ನಮಗೆ ವಿದೇಶದಿಂದ ಬಂದ ಕಲಾ ಪ್ರಕಾರ, ನಮ್ಮ ಕಲೆಗಳ ಪ್ರವೃತ್ತಿ ಏನಿದ್ದರೂ ನಮೂನೆಗಳು ಮತ್ತು ಸಾಂಪ್ರದಾಯಿಕ ವಿಷಯಗಳ ಕಡೆಗಿದೆ. ಕಳೆದ ದಶಕದಲ್ಲೋ ಏನೋ ಫ್ರಾನ್ಸ್ ಮತ್ತು ಇಟಲಿಯಿಂದ ಬಂದ ಸಂದರ್ಶಕರು ತಮ್ಮ ದೊರೆಗಳ ಮತ್ತು ದಂಡಾಧಿಕಾರಿಗಳ ಚಿತ್ರಗಳನ್ನು ತಮ್ಮೊಂದಿಗೆ ತಂದರು. ಈಗ ನಮ್ಮ ಕೆಲವು ಕಲಾವಿದರೂ ಚಿತ್ರಕಲೆಯ ಈ ಶೈಲಿಯನ್ನು ಅಳವಡಿಸಿಕೊಳ್ಳಲಾರಂಭಿಸಿದ್ದಾರೆ. ಪರಿಣಾಮವೆಂದರೆ ಒಂದು ವಿಲಕ್ಷಣ ಸಂಕರ ತಳಿ ಹುಟ್ಟಿಕೊಂಡಿತು. ಕೆಲವೊಮ್ಮೆ ಅದು ಸಾಕಷ್ಟು ಸಂತಸ ನೀಡಬಲ್ಲುದು.

ಚಿಕಣಿ ಚಿತ್ರ ಕಲಾವಿದ ಚಾಂದ್‌ರಾಯ್, ತಂದೆಯವರಿಗೆ ಒಂದು ಕಣ್ಣು ಇಲ್ಲದಿರುವುದನ್ನು ನಿವಾರಿಸುವ ಸಲುವಾಗಿ, ಅವರ ಮುಖವನ್ನು ಪಾರ್ಶ್ವಭಂಗಿ ಇರುವ ಹಾಗೆ ಮಾಡಿಸಿದ್ದನು. ತಂದೆಯವರು ಭಯ ಹುಟ್ಟಿಸುವ ಹಾಗೂ ಸೊಕ್ಕಿನ ವ್ಯಕ್ತಿಯ ಹಾಗೆ ಕಂಡರು. ಅವರು ಒಂದು ಮರದ ಮುನ್‌ಚಾಚಿನ ಮೇಲೆ ಅತ್ತ ಇತ್ತ ಕಾಲು ಹಾಕಿಕೊಂಡು ಕುಳಿತಿದ್ದರು. ಆ ಮರದ ಮುನ್‌ಚಾಚನ್ನು ದಪ್ಪ ಕಿನ್‌ಕಾಪಿನ ವಸ್ತ್ರದಿಂದ ಮತ್ತು ರಾಜಾಶ್ವದ ಜೀನಿನಿಂದ ಮರೆ ಮಾಡಲಾಗಿತ್ತು. ಅವರ ಬಲಗೈಯನ್ನು ಚರ್ಮದ ಗವುಸಿನಿಂದ ಮುಚ್ಚಲಾಗಿತ್ತು ಮತ್ತು ಅದನ್ನು ಏಳನೇ ಪಕ್ಕೆಲುಬಿನ ಮಟ್ಟಕ್ಕೆ ಏರಿಸಲಾಗಿತ್ತು. ಮಹಾಪ್ರಭುಗಳ ಕುದುರೆ ಸಾಥೀ ಹಾಗೂ ಅವರ ಡೇಗೆ (ಗಿಡುಗ ಪಕ್ಷಿ) ಹಕ್ಕಿ ಆಕಾಶ್‌ಗಳನ್ನು ಅನಂತರ ಚಿತ್ರಿಸಲಾಗುವುದು. ಈ ಕ್ಷಣದಲ್ಲಿ ಕಲಾವಿದನು ತಂದೆಯವರ ನಿಲುವಂಗಿಯ ಬಲಭಾಗದ ಮೇಲೆ ಹೂಗಳನ್ನು ಚಿತ್ರಿಸುವುದರಲ್ಲಿ ಮಗ್ನನಾಗಿದ್ದನು. ತಂದೆಯವರು ಚಿತ್ರಕಾರನೊಬ್ಬನ ಆದರ್ಶ ಮಾದರಿ. ಅವರು ಗಂಟೆಗಟ್ಟಲೆ ಚಲಿಸದೆ, ಅದಕ್ಕಿಂತ ಹೆಚ್ಚು ಕಷ್ಟಕರವಾದ, ಮಾತಾಡದೆ ಕುಳಿತು ಕೊಳ್ಳಬಲ್ಲರು. ಕಾರಣ ನಮ್ಮ ಕಲಾವಿದ ಬಹಳಷ್ಟು ಸಲ ಹೇಳಿದ ಹಾಗೆ, ತುಟಿಯ ಚಲನೆಗಳು, ಮುಖದ ಲಕ್ಷಣಗಳನ್ನು, ಆಕೃತಿಯನ್ನು ಮತ್ತು ಮುಖಭಾವಗಳನ್ನು ನಿರಂತರವಾಗಿ ಬದಲಿಸುತ್ತ ಹೋಗುವುದಷ್ಟೇ ಅಲ್ಲದೆ ಶರೀರದ ಭಂಗಿಯ ಮೇಲೂ ಪರಿಣಾಮ ಬೀರುತ್ತವೆ.

ಭಾವಚಿತ್ರ ರಚನೆಯ ಕಾರ್ಯ ಕಳೆದ ಏಳು ವರ್ಷಗಳಿಂದಲೂ ನಡೆಯುತ್ತಲೇ ಇದೆ ಎಂದು ನಾನು ಹೇಳಬೇಕು. ಅದನ್ನು ತುಂಬ ಹತ್ತಿರದಿಂದ ನೋಡಿದರೆ, ತಂದೆಯವರು ಧರಿಸಿರುವ ನಿಲುವಂಗಿ ನೀಲಿಯ ಬಣ್ಣದ್ದಲ್ಲ, ಹಳದಿಯದು, ಹಾಗೂ ಅದರ ಮೇಲಿರುವ ಹೂಗಳು ಮಲ್ಲಿಗೆ ಹೂಗಳಲ್ಲ, ಸಂಪಿಗೆ ಹೂಗಳು ಎಂದು ತಿಳಿಯುತ್ತದೆ. ಭಾವಚಿತ್ರವೇನಿದ್ದರೂ ನೀವು ಊಹಿಸಿದಂತೆ ಮರುಳುಗೊಳಿಸುವಂಥದ್ದೇ. ತಂದೆಯವರು ಆಸ್ಥಾನಕ್ಕೆ ಭೇಟಿಕೊಡುವ ಹೊರಗಿನವರು ಅಳೆದು ನೋಡುವುದನ್ನು ಇಷ್ಟಪಡುತ್ತಾರೆ. ಕಾಲವು ಅತ್ಯಂತ ಅನುಕೂಲವಾಗಿದ್ದಾಗ ಮಾತಾಡುವುದು ಅವರಿಗೆ ಹಿಡಿಸುವುದಿಲ್ಲ. ಆದರೆ ನಿರ್ಧಾರ ಪೂರ್ವಕವಾಗಿ ಬಾಯಿ ಹೊಲಿದುಕೊಂಡು ಕುಳಿತಿರುತ್ತಾರೆ. ಅಂಥ ಸಂದರ್ಭಗಳಲ್ಲಿ ಅವರು ವಿವಿಕ್ತವಾಗಿದ್ದು ಬಿಡುತ್ತಾರೆ. ಆದರೆ ಆಸ್ಥಾನಿಕರು, ಬಂದಿರುವ ವ್ಯಕ್ತಿ ತನ್ನ ಇಡೀ ಬದುಕಿನ ಕಥೆಯನ್ನೇ ತೆರೆದು ಮುಂದಿಡುವಷ್ಟರ ಮಟ್ಟಿಗೆ ಅವನೊಂದಿಗೆ ಹರಟುತ್ತಾರೆ. ಅಷ್ಟೇ ಅಲ್ಲ, ತನ್ನ ಸಾರ್ವಭೌಮನ ಇರುಳಿನ ಹುಚ್ಚಾಟಗಳ ಪೂರ್ಣ ವಿವರಗಳು,

ಹಾಗೂ ಅವನ ಪ್ರಯಾಣ ಮತ್ತು ಯುದ್ಧದ ಹಂಚಿಕೆಗಳ ವಿಸ್ತೃತ ಯೋಜನೆಗಳನ್ನು ನೀಡುವವರೆಗೂ ಹರಟುತ್ತಾರೆ. ಶಿಕ್ಷೆಯ ಭಯವಿಲ್ಲದೆ, ತನ್ನ ಪ್ರಭುವಿಗೆ ಬಾಯಿ ಮುಚ್ಚಿ ಎಂದು ಹೇಳುವ ವ್ಯಕ್ತಿ ಮೇವಾಡದಲ್ಲಾಗಲಿ ಬೇರೆಲ್ಲೋ ಆಗಲಿ ಚಾಂದ್‌ರಾಯ್ ಒಬ್ಬನೇ.

"ತಮ್ಮ ವಿನೀತ ಸೇವಕ ಚಾಂದ್‌ರಾಯ್, ತನ್ನ ಮಾತಿನ ಉದ್ಧಟತನಕ್ಕೆ ತಮ್ಮ ಕ್ಷಮೆ ಬೇಡುತ್ತಾನೆ. ತಮ್ಮ ನಾಲಿಗೆ ಬಿಗಿ ಹಿಡಿದು ಈ ಭಾವಚಿತ್ರವನ್ನು ಮುಂದುವರಿಸಲು ಅವಕಾಶ ನೀಡಿದ್ದೇ ಆದರೆ, ಮಹಾಪ್ರಭುಗಳು ಮುಂದಿನ ಪೀಳಿಗೆಯವರಿಗೊಂದು ಸಾಂಕೇತಿಕ ಸೇವೆ ಮಾಡಿದಂತಾಗುತ್ತದೆ."

ಎರಡು ಮೂರು ವರ್ಷಗಳಿಗೊಮ್ಮೆ ಇಟಲಿ, ಟರ್ಕಿ, ಸ್ಪೈಯಿನ್, ಪೋರ್ಚುಗಲ್ ಅಥವಾ ಇಂಗ್ಲೆಂಡಿನಿಂದ ಯಾವನಾದರೊಬ್ಬ ಅಲೆಮಾರಿಯೋ, ವ್ಯಾಪಾರಿಯೋ ಚಿತ್ತೂರಿನಲ್ಲಿ ತಂಗಿ ಒಂದು ಅಥವ ಎರಡು ವಾರ, ಕೆಲವೊಮ್ಮೆ ಒಂದು ತಿಂಗಳ ತನಕ ನಮ್ಮೊಂದಿಗೆ ಇರುತ್ತಿದ್ದನು. ಅವನೊಂದಿಗೆ ಮಾತುಕತೆ ಅಷ್ಟು ಸಲೀಸಲ್ಲ, ಆದರೆ ನಾವೆಲ್ಲರೂ ಭಾಗಿಯಾಗುವ ವಿಶ್ವಭಾಷೆಯೊಂದುಂಟು. ಅದೇ ವಾಣಿಜ್ಯ ವ್ಯಾಪಾರಸ್ಥರು ವಿದೇಶಗಳಿಂದ ಚಿನ್ನವನ್ನು ಪಡೆದು, ಅದಕ್ಕೆ ವಿನಿಮಯವಾಗಿ, ಜವುಳಿ, ಮೆಣಸು, ದಾಲ್ಚಿನ್ನಿ ಅಥವಾ ಸ್ವದೇಶದಲ್ಲಿ ಬೇಡಿಕೆಯುಳ್ಳ ಯಾವುದಾದರೊಂದನ್ನು ನೀಡುತ್ತಿದ್ದರು. ಈ ಬಾರಿಯ ನಮ್ಮ ಅತಿಥಿ ಸ್ವಲ್ಪ ಬೇರೆ ಥರದವನು. ಮ್ಯಾನ್ಯುಯಲ್ ಡಿ ಪೈವ ಡ ಕಾಸ್ಟ ಒಂದು ಅರೆ ಸರ್ಕಾರೀ ಕೆಲಸದ ಮೇಲೆ ಇಲ್ಲಿಗೆ ಬಂದಿದ್ದನು. ಕಳೆದ ಶತಮಾನದ ಕೊನೆಯಲ್ಲಿ ಬಹುಶಃ 1498ರಲ್ಲಿ ಪೋರ್ಚುಗಲ್ ನೌಕಾ ದಳದ ಮುಖ್ಯಸ್ಥ ವಾಸ್ಕೋಡಗಾಮನು ಗುಡ್ ಹೋಪ್ ಭೂಶಿರವನ್ನು ಸುತ್ತು ಹಾಕಿ ಯೂರೋಪ್‌ನಿಂದ ಭಾರತಕ್ಕೆ ಸಮುದ್ರಮಾರ್ಗವನ್ನು ಕಂಡು ಹಿಡಿದನು. ಅಲ್ಲಿಂದೀಚೆಗೆ, ಪೋರ್ಚ್‌ಗೀಸರು ತಪ್ಪದೆ ಈ ದೇಶಕ್ಕೆ ಬರುತ್ತಲೇ ಇದ್ದಾರೆ. ಅಷ್ಟೇ ಅಲ್ಲ ಪಶ್ಚಿಮ ಕರಾವಳಿಯಲ್ಲಿ ಸಣ್ಣ ನೆಲೆಗಳನ್ನು ಸ್ಥಾಪಿಸಿಬಿಟ್ಟಿದ್ದಾರೆ ಈ ವರ್ಷವಂತೂ ವಿಚಿತ್ರವೆಂದರೆ ಡಾರ್ಟೆಡಿ ಮೆನ್ಸೆಸ್, ವಾಸ್ಕೋಡಗಾಮ ಮತ್ತು ಹೆನ್ರಿಕ್ ಡಿಮೆನ್ಸೆಸ್ ಎಂಬ ಮೂರು ಜನ ರಾಜ್ಯಪಾಲರು ಬಂದಿದ್ದಾರೆ. (1498ರಲ್ಲಿ ಕಲ್ಲಿಕೋಟೆಗೆ ಬಂದಿಳಿದ ವಾಸ್ಕೋಡಗಾಮನು ಇವನೆಯೇ ಎಂದು ಡಕಾಸ್ಟನನ್ನು ನಾನು ಕೇಳಬೇಕು) ಈ ದಿನ ಬಂದಿರುವ ಅತಿಥಿ ಪ್ರವಾಸಿಯನ್ನು ಕಳಿಸಿದವನು ಪೋರ್ಚುಗಲ್ ರಾಜ್ಯಪಾಲ ಹೆನ್ರಿಕ್ ಡಿಮೆನ್ಸೆಸ್. ಭಾರತದ ಸಾಮ್ರಾಜ್ಯಗಳೊಂದಿಗೆ ವ್ಯಾಪಾರ – ವಾಣಿಜ್ಯ ಸಂಬಂಧಗಳ ಸಾಧ್ಯತೆಯ ಬಗ್ಗೆ ಪರಿಶೀಲಿಸಿ ನೋಡಲು ಸಂಚಾರೀ ರಾಯಭಾರಿಯನ್ನಾಗಿ ಈತನನ್ನು ಕಳಿಸಲಾಗಿದೆ. ಅಥವಾ ಕಡೇ ಪಕ್ಷ ಅದು ಅವನ ಕಥೆ.

ಪೋರ್ಚುಗೀಸರೊಂದಿಗೆ ವಾಣಿಜ್ಯ ವ್ಯವಹಾರ ನಡೆಸಲು ಮೇವಾಡಕ್ಕೆ ಖಂಡಿತ ಆಸಕ್ತಿ ಇತ್ತು. ಸಾಧ್ಯವಾದರೆ, ಅವರಿಂದ ನಾವು ಕೊಳ್ಳುವುದಕ್ಕಿಂತ ಅವರಿಗೆ ನಾವು ಮಾರುವ ವಿಷಯದಲ್ಲಿ ವ್ಯಾಪಾರ ಮಳಿಗೆಗಳನ್ನು ಅಥವಾ ಅವರು ಕಾರ್ಖಾನೆ ಎಂದು ಕರೆಯುವಂಥವನ್ನು ಸ್ಥಾಪಿಸುವ ಬದಲು ಅವರು ಸೈನ್ಯವನ್ನು ಬಳಸುತ್ತಿದ್ದಾರೆ ಮತ್ತು ಕೋಟೆಗಳನ್ನು ನಿರ್ಮಿಸುತ್ತಿದ್ದಾರೆ. ಮೊದಲನೆಯದು ಕೊಚ್ಚಿನ್‌ನಲ್ಲಿ ಎರಡನೆಯದು ಕಣ್ಣಾನೂರಿನಲ್ಲಿ. ಕ್ರಿ.ಶ. 1510ರಲ್ಲಿ ಅವರು ಗೋವೆಯನ್ನು ವಶಪಡಿಸಿಕೊಂಡರು. ನಿಖರವಾಗಿ ವ್ಯಾಪಾರ ವಾಣಿಜ್ಯ ಚಟುವಟಿಕೆಯಲ್ಲ ಎಂಬುದನ್ನು ಒಪ್ಪುವಿರಲ್ಲವೆ? ಅದು ನಿಮ್ಮನ್ನು ತಡೆಯದಿದ್ದರೆ, ಇದಕ್ಕಿಂತಲೂ ಹೆಚ್ಚು ಮನಕಲಕುವ ವಾರ್ತೆಯೊಂದಿದೆ. ಅದು ಪೋರ್ಚುಗಲ್ ದೊರೆಯ ಬಿರುದಿನಲ್ಲಿ ಸೇರಿಕೊಂಡಿರುವುದು. ಪೋರ್ಚುಗಲ್‌ನ ಒಂದನೇ ಡಾಮ್ ಮ್ಯಾನ್ಯುಯಲ್ ಗೆಲುವಿನ, ಸಮುದ್ರಯಾನದ ಹಾಗೂ ಇಥಿಯೋಪಿಯ,

ಅರೇಬಿಯಾ ಮತ್ತು ಭಾರತದ ವಾಣಿಜ್ಯ ವ್ಯಾಪಾರಗಳ ಪ್ರಭು ಎಂಬ ಬಿರುದು ಪಡೆದುಕೊಂಡಿದ್ದಾನೆ. ಅದೂ ಹೆಚ್ಚು ಕಡಿಮೆ ವಾಸ್ಕೋಡಗಾಮನು ಭಾರತಕ್ಕೆ ಸಮುದ್ರಮಾರ್ಗವನ್ನು ಕಂಡು ಹಿಡಿದ ಕೂಡಲೇ ಪಡೆದಿರುವ ಬಿರುದು. ಪೋರ್ಚುಗಲ್ಸ್‌ನ ಈಗಿನ ದೊರೆ ಮೂರನೆಯ ಜೋವಾ, ಭಾರತವನ್ನು ಗೆದ್ದು ನಾಲ್ಕು ಸಾವಿರ ಮೈಲಿಗಳಷ್ಟು ದೂರದಿಂದ ಇದನ್ನು ಆಳಲಿಚ್ಛಿಸಿದ್ದಾನೆಂದು ತೋರುತ್ತದೆ. ಇಲ್ಲಿಯವರೆಗೂ ಮೂಲತಃ ಹಿಂದೂ ಮಹಾಸಾಗರದ ಪಶ್ಚಿಮ ತೀರಕ್ಕೆ ಪೋರ್ಚುಗೀಸರ ಉಪಸ್ಥಿತಿಯು ಅನುಭವವಾಗುತ್ತಿತ್ತು. ಆದರೆ ನಾವೇನೂ ಪೂರ್ತಿಯಾಗಿ ಅದರಿಂದ ಮುಕ್ತವಾಗಿಲ್ಲ. ಏಷಿಯಾದಲ್ಲಿ ಸಮುದ್ರದ ಅಧಿಪತಿಯಾಗಿ ಮೂರನೇ ಜೋವಾ ಅಥವಾ ಅವನ ಕಡೆಯ ರಾಜ್ಯಪಾಲ ಹೆನ್ರಿಕ್ ಮೆನ್ಸಸ್, ಸಮುದ್ರಗಳ ಮೇಲೆ ಪಹರೆ ಮಾಡುತ್ತ, ಸಮುದ್ರದ ಮೇಲೆ ಸಂಚರಿಸುವ ಭಾರತೀಯ ಇಲ್ಲವೆ ವಿದೇಶೀಯ ಯಾವುದೇ ಆದರೂ ಸರಿ ಹಡಗಿನ ಮೇಲೆ ಸುಂಕವನ್ನು ಹಾಕುತ್ತಿದ್ದಾನೆ. ಅಂದರೆ ನಾವೂ ಸೇರಿದಂತೆ, ಈ ಹಡಗುಗಳಲ್ಲಿ ಸಾಮಾನು ಸರಂಜಾಮುಗಳನ್ನು ಹೊಂದಿರುವ ಯಾರೇ ಆದರೂ, ಹಡಗಿನ ಮಾಲೀಕರಿಗೆ ಮೇಲುಕರವನ್ನು ಕೊಡಬೇಕಾಗುತ್ತದೆ. ಅನಂತರ ಆ ಹಡಗಿನ ಮಾಲೀಕರು ಮೇಲುಕರವನ್ನು ಪೋರ್ಚುಗೀಸರಿಗೆ ತಲುಪಿಸಬೇಕು.

ಪೋರ್ಚುಗೀಸರು ಅಸಾಧಾರಣ ನಿಪುಣರು ಅಥವಾ ಭಾರತದಲ್ಲಿನ ತಮ್ಮ ಆತಿಥೇಯರನ್ನು ಕುರಿತಂತೆ ತೀರಾ ಕೀಳು ಅಭಿಪ್ರಾಯವನ್ನು ಹೊಂದಿದ್ದಾರೆ. ಮ್ಯಾನ್ಯುಯಲ್ ಡಿಪೈವ ಬೊಬೇಲಾ ಡ ಕಾಸ್ಟನು ಮಹಾಪ್ರಭು ರಾಣಾ ಅವರಿಗೆ ತಮ್ಮ ಮಗುವಿನ ರೂಪದ ತಮ್ಮ ದೇವರನ್ನು ಅದರ ತಾಯಿ ತನ್ನ ತೋಳುಗಳಲ್ಲಿ ಎತ್ತಿಕೊಂಡಿರುವ ಚಿತ್ರವೊಂದನ್ನು ತಂದುಕೊಟ್ಟನು. ಆ ಚಿತ್ರದಲ್ಲಿರುವ ತಾಯಿ ತೆಳ್ಳನೆಯ ಕೋಲು ಮುಖದ, ಉಪಶಮನಗೊಳ್ಳಲಾಗದಂಥ ವಿಷಾದದ ವ್ಯಕ್ತಿಯಾದರೆ, ಆಕೆಯ ಮಗನು ಮಗುವಿನ ತುಂಬುಗೆನ್ನೆ ಮತ್ತು ದಟ್ಟವಾದ ಗುಂಗುರು ಕೂದಲಿನ ಜೊಂಪೆ ಮತ್ತು ವಿಲಕ್ಷಣವಾದ, ಮನಸ್ಸನ್ನು ತಬ್ಬಿಬ್ಬುಗೊಳಿಸುವಂಥ ಒಬ್ಬ ವಯಸ್ಕನ ಮುಖವನ್ನು ಹೊಂದಿದ್ದನು. ಅವನ ಬಲಗೈಯಲ್ಲೊಂದು ಗೋಳವೂ ಅದರ ಮೇಲೆ ವಜ್ರ ಖಚಿತವಾದ ಶಿಲುಬೆಯೂ ಇತ್ತು. ಚಿತ್ರದ ಮೇಲುಭಾಗದಲ್ಲಿ ಎಡ ಮತ್ತು ಬಲ ಮೂಲೆಗಳಲ್ಲಿ ರೆಕ್ಕೆಗಳನ್ನು ಹೊಂದಿದ್ದ ದೇವದೂತರೆಂಬ ಜೀವಿಗಳಿದ್ದವು. ಅದರ ಮಧ್ಯಭಾಗದಿಂದ ಸ್ವಲ್ಪದೂರದಲ್ಲಿ ಬಲಭಾಗದಲ್ಲಿ ಶಿಲುಬೆಯ ಮೂಲ ಆಕೃತಿಯ ಛಾಯೆಯಿತ್ತು. ಆದರೆ ಅದು ಮರದ್ದಾಗಿತ್ತು ಅದರ ಮೇಲೆ ದಪ್ಪ ಮೊಳೆಗಳನ್ನು ಜಡಿದು ಸೊರಗಿದ ಮನುಷ್ಯನೊಬ್ಬನನ್ನು ಶಿಲುಬೆಗೇರಿಸಲಾಗಿತ್ತು. ಆ ಮನುಷ್ಯನ ಒಂದೊಂದು ಮೂಳೆಯೂ ನೋವನ್ನುಣ್ಣುತ್ತ ಎದೆಗೆ ಅಂಟಿಕೊಂಡಿತ್ತು. ಈ ಮನುಷ್ಯನು ಬೇರಾರೂ ಆಗಿರದೆ, ಆ ಹೆಂಗಸಿನ ಬೆಳೆದ ಮಗ ಎಂದು ರಾಯಭಾರಿಯು ನಮಗೆ ತಿಳಿಸಿದನು. ಅವನ ಮುಖವಾದರೋ ಅವನ ತಾಯಿಯ ಮುಖಕ್ಕಿಂತಲೂ ವಿಷಾದದಿಂದ ಕೂಡಿತ್ತು. ಅವನು ಮುಳ್ಳಿನ ಕಿರೀಟವನ್ನು ಧರಿಸಿದ್ದನು. ಅವನ ಎದೆಯ ಮಧ್ಯಭಾಗದಲ್ಲಿ ಅತ್ಯಂತ ಸೂಕ್ಷ್ಮವಾದ ಜಾಜ್ವಲ್ಯಮಾನವಾದ ಹೃದಯವಿದೆ. ಕೆಲವೇ ಮಾತಿನಲ್ಲಿ ಹೇಳಬೇಕೆಂದರೆ, ತುಂಬ ವಿಲಕ್ಷಣವಾದ ದೇವರ ಕಲ್ಪನೆ. ದೇವರುಗಳೆಂದರೆ, ಸರ್ವಶಕ್ತರೆಂದೇ ನನ್ನ ಯಾವತ್ತಿನ ಭಾವನೆ. ಈ ದೇವರಾದರೋ ನೆರವು, ಅದರಲ್ಲೂ ಉಗ್ರವಾದ ರೀತಿಯಲ್ಲಿ ಸಕಾಲದ ನೆರವನ್ನು ಬಯಸುತ್ತದೆ. ನಿರಂತರವಾಗಿ ನೋವಿನಲ್ಲಿ ಮುಳುಗಿರುವ ದೇವರ ಹೊರತಾಗಿ, ಈ ಕಂಬನಿ ಕರೆಯುವ, ವಿಷಾದ ಪೂರ್ಣ ಮುಖದ ತಾಯಿಯೊಂದಿಗೆ ಇರಬೇಕೆಂದರೆ ನಿಮಗೆ ಗಟ್ಟಿ ಧೈರ್ಯವಿರಬೇಕಾಗುತ್ತದೆ.

ಚಿತ್ರವನ್ನು ತಂದೆಯವರಿಗೆ ತೋರಿಸಲಾಯಿತು. ಆಮೇಲೆ ನನ್ನ ಕಡೆಗೆ ಬಂದಿತು. ನಾನು ಅದನ್ನು ಪ್ರಧಾನಿ ಪೂರಣ್ ಮಲ್‌ಜೀಯವರಿಗೆ ನೀಡಿದೆ. ಆ ಚಿತ್ರದ ಬಗ್ಗೆ ನಾನೇನೂ ಟೀಕೆ ಮಾಡಲು ಹೋಗಲಿಲ್ಲ. ಆದರೆ ಪೂರಣ್ ಮಲ್‌ಜೀಯವರು ತುಂಬ ವ್ಯವಹಾರ ಜ್ಞಾನವಿರುವ ಮನುಷ್ಯ. ಕಟ್ಟು ಹಾಕಿದ ಚಿತ್ರವನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಅದನ್ನು ಗಮನವಿಟ್ಟು ವೀಕ್ಷಿಸಿ, ಸಾಂಕೇತಿಕತೆ ಮತ್ತು ಕಾವ್ಯವನ್ನು ಕ್ರಮೇಣ ಗ್ರಹಿಸಿ ಬಿಟ್ಟಿದ್ದಾರೇನೋ ಎನ್ನುವಂತೆ ತನ್ನ ತಲೆಯನ್ನು ಆಡಿಸಿದರು. ಅವರು ಆಸ್ಥಾನದ ಕರಣಿಕನಿಗೆ ಕೊಟ್ಟು, ಮಹಾರಾಜರ ಅರಮನೆಗೆ ತಲುಪಿಸುವಂತೆ ತಿಳಿಸಿದರು. “ಜೋಪಾನ, ಬಹಳ ಜೋಪಾನ, ಅದು ಈ ಆವರಣದಿಂದ ಹೊರಗೆ ಹೋಗುವುದಕ್ಕೆ ಮುಂಚೆ ಅದನ್ನು ಸರಿಯಾಗಿ ಕಟ್ಟಿದೆಯೆ ಎಂದು ಖಾತರಿ ಪಡಿಸಿಕೊಳ್ಳಿ. ಮಹಾಪ್ರಭುಗಳಾದ ಮಹಾರಾಣಾ ಸಂಗ್ರಾಮಸಿಂಹರಿಗೆ ಉತ್ಕೃಷ್ಟವಾದ ಉಡುಗೊರೆಯನ್ನು ನೀಡಿದ್ದಕ್ಕಾಗಿ ಘನತೆವೆತ್ತ ಮಹಾಪ್ರಭು ಜಾವೋ ಅವರಿಗೆ ವಂದನೆಗಳನ್ನು ತಿಳಿಸಿ. ನನ್ನ ಆತಂಕವೆಂದರೆ ನಮ್ಮ ಹತ್ತಿರ ಇರುವುದು ತೀರಾ ನಿಕೃಷ್ಟವಾದಂಥ ಉಡುಗೊರೆ. ತಾವು ನೀಡಿದಂಥ ಉತ್ಕೃಷ್ಟವಾದ ಕಲಾಕೃತಿಯೊಂದಿಗೆ ಹೋಲಿಸುವಂಥದೇ ಅಲ್ಲ. ಇನ್ನು ತಾವು ನೀಡಿದ ಕಲಾಕೃತಿಯ ಪಾವಿತ್ರ್ಯತೆಯ ಬಗ್ಗೆಯಂತೂ ಹೇಳುವಂತೆಯೇ ಇಲ್ಲ”.

ಆ ದನಿಯಲ್ಲಿನ ಅಭಿಪ್ರಾಯ ನನಗೆ ಚೆನ್ನಾಗಿ ತಿಳಿದಿತ್ತು. ಪ್ರಧಾನಮಂತ್ರಿಯವರು ಪೋರ್ಚುಗಲ್ ದೊರೆ ಮತ್ತು ಅವರ ಭಾರತದ ಪ್ರತಿನಿಧಿಯಿಂದ ನಿರೀಕ್ಷಿಸಿದ್ದು ಒಂದು ಕೃಪಣವಾದ ಉಡುಗೊರೆಯನ್ನು. ಲಿಸ್ಬನ್ನಿನ ಒಂದು ಕಲಾಶಾಲೆಯೊಂದರಲ್ಲಿ ಇತರೆ ಸಾವಿರಾರು ಕಲಾಕೃತಿಗಳ ಹಾಗೆ ತಯಾರಿಸಲಾದದ್ದು ಎಂದು ಭಾವಿಸಿ, ಅತಿಯಾದ ಮೇಲರಿಮೆಯ ಕೌಶಲದಿಂದ, ರಾಯಭಾರಿಯನ್ನು ಆತನ ಸಾರ್ವಭೌಮನನ್ನೂ ಇನ್ನೇನು ಮುಖಭಂಗ ಮಾಡಲು ಹೊರಟಿದ್ದರು. ಅವರು ಬಟ್ಟೆಯ ಹೊದಿಕೆಯಿಂದ ಹೊರತೆಗೆದದ್ದು ಒಂದು ನಯವಾದ ಬಿಳಿಯ ಶಾಲು. ಆ ಬಟ್ಟೆಯ ಹೊದಿಕೆಯೇ ಅವರು ನೀಡಿದ ಚಿತ್ರದ ನೂರರಷ್ಟು ಬೆಲೆ ಉಳ್ಳದ್ದಾಗಿತ್ತು. ಅದನ್ನು ನೇಯಲು ಒಂದೂವರೆ ವರ್ಷ ತೆಗೆದುಕೊಂಡಿದ್ದಿರಬೇಕು.

“ಇದನ್ನು ನಿಮ್ಮ ಭುಜದ ಸುತ್ತಲೂ ಹೊದೆದುಕೊಳ್ಳಿ ಮಹಾಸ್ವಾಮಿ” – ಎಂದು ಹೇಳಿ ಪೂರಣ್ ಮಲ್‌ಜೀಯವರು ಸಂದರ್ಶಕನ ಕೈಗೆ ಒಪ್ಪಿಸಿದರು. ಆ ಶಾಲು ತುಂಬ ಹಗುರವಾಗಿದ್ದದ್ದು ನೋಡಿ, ರಾಯಭಾರಿಗೆ ಸ್ವಲ್ಪ ತಬ್ಬಿಬ್ಬಾಯಿತು. ಆದರೆ ಪೂರಣ್ ಮಲ್‌ಜೀಯವರ ಕೋರಿಕೆಗೆ ಮೌನವಾಗಿ ಸಮ್ಮತಿಸಿದನು. “ಯಾರಾದರೂ ಅಲ್ಲಿ ಮಹಾಸ್ವಾಮಿಯವರಿಗೆ ಒಂದು ಕನ್ನಡಿಯನ್ನು ಕೊಡುವಿರಾ?”

ನಾವಾಗ ಚಳಿಗಾಲದ ಮಧ್ಯದಲ್ಲಿದ್ದೆವು. ಆ ಶಾಲು ಚಾಂಡೇರಿ ಹೊದಿಕೆಗಿಂತ ಸ್ವಲ್ಪ ಭಾರವಾಗಿತ್ತು. ಆದರೆ ಕನ್ನಡಿಯೊಂದನ್ನು ಕೊಡುವ ಹೊತ್ತಿಗೆ ರಾಯಭಾರಿಯು ಬೆವರಿಬಿಟ್ಟಿದ್ದನು. “ಒಂದು ವೇಳೆ ಮಂಜು ಸುರಿಯುತ್ತಿದ್ದರೂ, ಇದೊಂದು ಶಾಲು ಜೋವಾ ಮಹಾಪ್ರಭುಗಳನ್ನು ಬೆಚ್ಚಗಿಡಬಲ್ಲುದು” ಎಂದನು.

ರಾಯಭಾರಿಯು ತನ್ನ ಹೆಗಲ ಮೇಲಿದ್ದ ಶಾಲನ್ನು ತೆಗೆದು ಅನ್ಯಮನಸ್ಕನೆಂಬಂತೆ ಅದನ್ನು ಮಡಿಸುತ್ತಿದ್ದಾಗ, ಪೂರಣ್ ಮಲ್‌ಜೀಯವರು ತಮಗಿರುವ ಅನುಕೂಲವನ್ನು ಪ್ರಬಲವಾಗಿಯೇ ಬಳಸಿಕೊಂಡರು.

“ತಾಳಿ ತಾಳಿ, ನಾನೇ ಅದನ್ನು ತೆಗೆಯುವೆ ಮಹಾಸ್ವಾಮಿ” ಎಂದು ಹೇಳಿ ಪ್ರಧಾನಿಯವರು ಸಂದರ್ಶಕನ ಕೈಗಳಿಂದ ಅದನ್ನು ಸಡಿಲಿಸಿದರು. ‘ನಾವು ಆಮದು

ಮಾಡಿಕೊಂಡ ಎಲ್ಲ ವಸ್ತುಗಳ ಮೇಲೂ ಸುಂಕ ಹೇರಬೇಕಾದ ಒತ್ತಡದಲ್ಲಿ ನಾವಿದ್ದೇವೆ ಮಹಾಸ್ವಾಮಿ. ಅಂಥ ಎಲ್ಲ ಕೋರಿಕೆಗಳನ್ನೂ ಇದುವರೆಗೂ ನಾವು ತಡೆದಿಟ್ಟಿದ್ದೇವೆ. ಆದರೆ ನನ್ನ ಆತಂಕವೆಂದರೆ...."

ಪ್ರಧಾನಿಯವರಿಗೆ ವಾಕ್ಯವನ್ನು ಪೂರ್ಣಗೊಳಿಸುವ ಉದ್ದೇಶವಿರಲಿಲ್ಲ. ತಂದೆಯವರು ಈ ಒಂದು ವಿಶಿಷ್ಟವಾದ ದರ್ಬಾರಿನ ಅಧಿವೇಶನಕ್ಕೆ ನಾನು ಹಾಜರಾಗಬೇಕೆಂದು ಅದೇಕೆ ಹೇಳಿದರೆಂದು ನಾನು ವಿಸ್ಮಿತನಾಗಿದ್ದೆ. ಬಹುಶಃ ಅವರು ತಮ್ಮ ಹಿರಿಯ ಮಗನ ವಿದ್ಯಾಭ್ಯಾಸದಲ್ಲಿ ಉಳಿದು ಹೋಗಿರುವ ಕೊರತೆಗಳನ್ನು ತುಂಬ ಬಯಸಿದ್ದರೆನಿಸುತ್ತದೆ. ರಾಜ ತಾಂತ್ರಿಕ ಮಾತುಕತೆಗಳು, ಅದರ ಸಾಂಕೇತಿಕ ಹಾಗೂ ಯುದ್ಧ ತಾಂತ್ರಿಕ ಹಿಂತೆಗೆತಗಳು ಕೊಂಕು ಮಾತುಗಳು ಮತ್ತು ತೂಕಗಳು ಹಾಗೂ ಹೇಳದೆ ಇರುವ ಸಂಗತಿಗಳು ನನ್ನನ್ನು ಗಾಢವಾಗಿ ಆಕರ್ಷಿಸಿದ್ದುವು ಹಾಗೂ ನನ್ನ ಕುತೂಹಲವನ್ನು ಕೆರಳಿಸಿದ್ದವು. ನನಗೆ ಆ ವಿಷಯದಲ್ಲಿ ನೈಪುಣ್ಯವಿಲ್ಲ ಎಂದು ಗೊತ್ತಿತ್ತು. ಆದರೆ ಪೂರಣ್ ಮಲ್‌ಜೀಯಂಥ ನಿಷ್ಣಾತರಿಂದ ಕಲಿಯಲು ಇಷ್ಟವಿಲ್ಲದಿರುವ ವ್ಯಕ್ತಿಯಲ್ಲ.

ಪ್ರಧಾನಿಗಳು ಯಾರನ್ನು ಮೂರ್ಖರನ್ನಾಗಿಸಲು ಹೊರಟಿದ್ದಾರೆ? ಅವರ ಮೇಲೆ ಒತ್ತಡ ಹಾಕುತ್ತಿರುವವರು ಯಾರು? ಮೇವಾಡದ ಜನತೆ, ವ್ಯಾಪಾರಿಗಳು, ಅರ್ಥಮಂತ್ರಿ, ಮಹಾಪ್ರಭುಗಳು? ತಂದೆಯವರು, ವ್ಯಾಪಾರದ ನೀತಿಯಲ್ಲಿ ಹಾಗೂ ಹಣಕಾಸಿನ ವಿಷಯದಲ್ಲಿ ಆದಿನಾಥಜೀಯೊಂದಿಗೆ ಯಾವತ್ತೂ ಮೂಗು ತೂರಿಸಿದವರೇ ಅಲ್ಲ. ಮಾತುಕತೆ ಅಗತ್ಯವಾಗುವಂಥ ಅಥವಾ ಬಾಯಿ ಬಿಟ್ಟು ಹೇಳಬೇಕಾದಂಥ, ಹಲವು ಅಂಶಗಳನ್ನು ಪರಿಗಣಿಸುವುದು ಅಗತ್ಯವಾಗುವಂಥ ಸನ್ನಿವೇಶಗಳು ಪ್ರಧಾನಿಯವರಿಗಿರಲಿಲ್ಲ. ಪೂರಣ್ ಮಲ್‌ಜೀಯವರು ಅಸಮಯದಲ್ಲಿ ಮನಸ್ಸಿಗೆ ಹೊಳೆದಂತೆ ಆಶುಭಾಷಣ ಮಾಡುತ್ತಿದ್ದಾರೆಂದು ಊಹಿಸಿದೆ. ಆದರೆ ಆ ವಿಷಯದಲ್ಲಿ ನಾನು ಪಣವೊಡ್ಡುವುದಿಲ್ಲ. ಇಷ್ಟೆಲ್ಲ ವರ್ಷಗಳ ನಂತರವೂ ಪ್ರಧಾನಿಯವರ ಲೆಕ್ಕಾಚಾರದ ಹಾಗೂ ಅವರ ಮನಸ್ಸಿನ ಮರ್ಮವನ್ನರಿಯಲು ನಾನು ಸಮರ್ಥನಾಗಿರಲಿಲ್ಲ. ಅದು ನಿಜವಾದ ರಾಜತಾಂತ್ರಿಕನ ಹಾಗೂ ಮುತ್ಸದ್ದಿಯ ಗುಣ.

ಪೋರ್ಚುಗಲ್ ರಾಯಭಾರಿಯು ಪೂರಣ್ ಮಲ್‌ಜೀಯವರು ಬಿಟ್ಟಲ್ಲಿಂದ ಮಾತಿನ ತುಣುಕನ್ನು ಎತ್ತಿಕೊಂಡು "ಮಹಾಸ್ವಾಮಿ, ನಮ್ಮ ಕಡೆಯ ತನಿಖಾಧಿಕಾರಿಗಳು ಆಗಿಂದಾಗ್ಗೆ ವಿಧಿಸುವ ಸುಂಕಕ್ಕೆ ಇದು ಪ್ರತೀಕಾರವಲ್ಲವೆಂದು ನಾನು ನಂಬಿದ್ದೇನೆ"

"ಅವರು ಸುಂಕ ವಿಧಿಸುತ್ತಿದ್ದಾರೆಯೆ? ನನಗೆ ವಯಸ್ಸಾಗುತ್ತಿದೆ ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಇತ್ತೀಚಿನ ಕೆಲವು ಅಲ್ಪ ಸಂಗತಿಗಳ ವಿಷಯ ನನಗೆ ತಿಳಿದಿಲ್ಲ. ಆದರೆ ಘನತೆವೆತ್ತ ದೊರೆ ರಾಣಾ ಸಂಗ್ರಾಮ ಸಿಂಹರು ಯಃಕಶ್ಚಿತ್ ಪ್ರತೀಕಾರದಲ್ಲಿ ನಂಬಿಕೆ ಇಟ್ಟವರಲ್ಲ" ಪ್ರಧಾನಿಯವರ ಮಾತು ಅವರ ಭುಜದ ಮೇಲಿನ ರೇಷ್ಮೆ ಶಲ್ಯದಷ್ಟೇ ನಯವಾಗಿತ್ತು. "ನನಗೆ ಅದನ್ನು ಪರೋಕ್ಷವಾಗಿ ಸೂಚಿಸುವ ಉದ್ದೇಶವೇ ಇರಲಿಲ್ಲ" ರಾಯಭಾರಿಯು ತೊದಲುತ್ತಿದ್ದನು. "ನನಗೆ ಖಂಡಿತಾ ಗೊತ್ತಿತ್ತು ನಿಮಗೆ ಆ ಉದ್ದೇಶವಿರಲಿಲ್ಲ ಎಂದು".

"ನಾನು ಗೌರವಾನ್ವಿತ ರಾಜ್ಯಪಾಲರೊಂದಿಗೆ ಮಾತನಾಡಿ ಮೇವಾಡದ ಸರಕುಗಳ ಮೇಲೆ ಸುಂಕವನ್ನು ವಿಧಿಸಕೂಡದೆಂದು ನಿಷ್ಠುರವಾಗಿ ಸೂಚಿಸುತ್ತೇನೆ".

"ಅದು ನಿಜಕ್ಕೂ ತಮ್ಮ ಅಪಾರ ದಯೆ ಮಹಾಸ್ವಾಮಿ. ಈಗ ತಮ್ಮ ದೇಶದ ಬಗ್ಗೆ ಮತ್ತಷ್ಟು ತಿಳಿಸಿಕೊಡಿ. ತಮ್ಮ ಸ್ನೇಹಿತರ ಮನೆಯಲ್ಲೆಲ್ಲಾದರೂ ಊಟಕ್ಕೆ ನಿಮ್ಮನ್ನು ಆಹ್ವಾನಿಸಿದ

ಸಂದರ್ಭದಲ್ಲಿ ನೀವು ಊಟದ ಸಲಕರಣೆ ಇದೆಯಲ್ಲಾ 'ಮುಳ್ಳು ಚಮಚೆ' ಅದನ್ನು ನೀವೇ ತೆಗೆದುಕೊಂಡು ಹೋಗಬೇಕೆ?" ರಾಯಭಾರಿಯ ಕಿವಿಯ ಹಾಲೆಗಳು ಬಿಸಿಯಿಂದ ಕೆಂಪಾದವು. ಅವರು ಭೇಟಿಯನ್ನು ಮುಗಿಸುವ ಇರಾದೆ ಹೊಂದಿರಬೇಕೆಂದು ನಾನು ಭಾವಿಸಿದೆ "ಅಯ್ಯೋ! ಅದೇನಿದ್ದರೂ ಬಡವರಲ್ಲಿ ಮಾತ್ರ. ಮನೆಯ ಗಂಡಸು ತನ್ನ ಜೊತೆ ಮುಳ್ಳು ಚಮಚೆಯನ್ನು ಕೊಂಡೊಯುತ್ತಾನೆ ಅಷ್ಟೆ".

"ಹಾಗಾದರೆ ಹೆಂಡತಿ ಮಕ್ಕಳು ಅತಿಥಿಗಳಾಗಿ ಊಟ ಮಾಡುವುದಿಲ್ಲವೆ?"

"ಓಹ್ ಮಾಡುತ್ತಾರೆ, ಖಂಡಿತಾ ಮಾಡುತ್ತಾರೆ. ಆದರೆ ಕೈ ಬೆರಳುಗಳಿಂದಲೇ ಮಾಡುತ್ತಾರೆ. ಕಾರಣ ಮುಳ್ಳು ಚಮಚೆಗಳು ಅವರಿಗೆ ಭೋಗವಸ್ತುಗಳು"

ವಿದೇಶಿ ಸಂದರ್ಶಕ ಎಲ್ಲರಿಗೂ ತನ್ನ ಧನ್ಯವಾದಗಳನ್ನು ಹೇಳುತ್ತಾ ಬೀಳ್ಕೊಳ್ಳಹತ್ತಿದ. ಆಗ ನಾನು ಮಧ್ಯೆ ಬಾಯಿ ಹಾಕಿದೆ – "ಮಹಾಸ್ವಾಮಿ ತಮಗೇ ತಿಳಿದಿರುವ ಹಾಗೆ ನಾವೇನಿದ್ದರೂ ಈ ನೆಲದ ದಾಂಡಿಗರು ಮತ್ತು ಸಮುದ್ರಯಾನದ ಬಗ್ಗೆಯಾಗಲಿ, ಹಡಗುಗಳ ಬಗ್ಗೆಯಾಗಲಿ ನಮಗೇನೇನೂ ಗೊತ್ತಿಲ್ಲ. ಪ್ರಪಂಚದಲ್ಲೇ ಅತ್ಯಂತ ಮುಂದುವರಿದ, ಒಂದು ಸಾವಿರ ಟನ್‌ಗಳಷ್ಟು ಸಾಗಾಣಿಕೆಯ ಸಾಮರ್ಥ್ಯವುಳ್ಳ ಕೆಲವು ಹಡಗುಗಳನ್ನು ತಾವು ಹೊಂದಿದ್ದೀರೆಂದು ನಾವು ನಂಬಿದ್ದೇವೆ."

"ಖಂಡಿತ ಅಂಥಾ ಹಡಗುಗಳು ನಮ್ಮಲ್ಲಿವೆ ಮಹಾಪ್ರಭು" ಡಿ ಪೈವಾ ಬೋಬೇಲಾ ಡ ಕಾಸ್ಟ ಆ ದಿನ ಮೊದಲ ಸಲಕ್ಕೆ ಸ್ವಲ್ಪ ನಿರಾತಂಕಗೊಂಡ. "ತಮಗೆ ಹಡಗುಗಳನ್ನು ಒದಗಿಸುವುದು ನಮಗೆ ತುಂಬಾ ಸಂತಸದ ಸಂಗತಿ".

"ಅವುಗಳನ್ನು ನಾವು ಎಲ್ಲಿ ಓಡಾಡಿಸೋಣ ಮಹಾಸ್ವಾಮಿ?"

ಆ ಮನುಷ್ಯ ಒಂದು ಒಳ್ಳೆಯ ವ್ಯಾಪಾರೀ ಅವಕಾಶವನ್ನು ಕೈಯಿಂದ ಕಳೆದುಕೊಳ್ಳಲು ತಯಾರಿರಲಿಲ್ಲ. "ಕರಾವಳೀ ವ್ಯಾಪಾರಿಗಳಿಗೆ ಅವನ್ನು ನೀವು ಬಾಡಿಗೆಗೆ ಕೊಡಬಹುದು. ಅದರಲ್ಲಿ ಹಣ ಸಿಗುತ್ತೆ ಅಂತ ನನಗೆ ಪೂರ್ತಿ ಭರವಸೆ ಇದೆ?"

"ಅದೊಂದು ತುಂಬಾ ಆಸಕ್ತಿಯುತವಾದ ಸಲಹೆ. ನಾವು ಅದನ್ನು ಪರಿಶೀಲಿಸಬೇಕಾಗಿದೆ. ಬಹುಶಃ ಮಹಾಪ್ರಭು ರಾಣಾ ಅವರು ಒಂದು ವರದಿಯನ್ನು ಸಿದ್ಧಪಡಿಸಲು ಆಯೋಗವೊಂದನ್ನು ನೇಮಿಸಬಹುದು. ನಿಮ್ಮ ಹಡಗುಗಳಲ್ಲಿ ಯಾವ ರೀತಿಯ ಬಂದೂಕುಗಳನ್ನು ಅಳವಡಿಸಿದ್ದೀರಿ ಎಂದು ನನಗೆ ವಿಸ್ಮಯವಾಗಿತ್ತು".

"ಫಿರಂಗಿಗಳು ಮಹಾಸ್ವಾಮಿ. ಬಂದರಿನಿಂದ ಹಡಗಿನ ಬಲಪಕ್ಕದವರೆಗೆ ಸುಮಾರು ಎಂಟರಿಂದ ಹನ್ನೆರಡನ್ನು ಅಳವಡಿಸಲಾಗಿದೆ. ಇದಕ್ಕಿಂತ ಹೆಚ್ಚಿನ ವಿವರಗಳನ್ನು ನಾನು ನೀಡಲಾರೆ ಎಂಬುದೇ ನನ್ನ ಆತಂಕ. ಕಾರಣ ನಮ್ಮ ದೇಶದಲ್ಲಿ ಆ ಸಂಗತಿಗಳೆಲ್ಲವನ್ನೂ ನಾವಿಕರಿಗೆ ಬಿಟ್ಟು ಬಿಡಲಾಗಿದೆ."

"ಅದೇನೂ ಅಂಥ ಅಪರಾಧವಲ್ಲ ಮಹಾಸ್ವಾಮಿ. ಆದರೆ ತಾವು ಇದೇ ರೀತಿಯ ಫಿರಂಗಿಗಳನ್ನು ನೆಲದ ಮೇಲೆ ಮಾಡುವ ಯುದ್ಧದಲ್ಲಿ ಬಳಸುವಿರಾ?"

"ಅವನ್ನೇ ಅಲ್ಲಾ ಮಹಾಸ್ವಾಮಿ, ಇನ್ನೂ ಹೆಚ್ಚು ದೊಡ್ಡ ಫಿರಂಗಿಗಳನ್ನು".

"ಅಂದರೆ, ಅವುಗಳ ಮೂಲಭೂತಕಾರ್ಯವೇನಿದ್ದರೂ ನಿಮ್ಮ ಕೋಟೆಗಳು ಮತ್ತು ದುರ್ಗಗಳನ್ನು ರಕ್ಷಿಸುವುದು ತಾನೆ?"

"ಯಾವ ಉಪಯೋಗಕ್ಕೆಂದು ಅವನ್ನು ಅಳವಡಿಸಲಾಗಿರುತ್ತದೋ, ಅದು ಅವುಗಳ ಕೆಲಸ. ನಿಮಗೇ ಚೆನ್ನಾಗಿ ಗೊತ್ತಿರುವ ಹಾಗೆ, ಅವು ನಮ್ಮ ಆಕ್ರಮಣದ ಹಾಗೂ

ರಕ್ಷಣೆಯ ಮುಂಚೂಣಿಯಲ್ಲಿರುವಂಥವು ಎಂದು ನನ್ನ ಖಚಿತವಾದ ತಿಳುವಳಿಕೆ. ನಾವೆಲ್ಲೇ ಯುದ್ಧ ಮಾಡಬೇಕಾಗಿ ಬಂದರೂ ಅವನ್ನು ಕೊಂಡೊಯ್ಯುತ್ತೇವೆ"

"ಅದು ನಿಜವೇ. ನಿಮ್ಮ ಹಡಗುಗಳನ್ನು ಮಾರುವುದರಲ್ಲಿ ನಿಮಗಿರುವಷ್ಟೇ ಆಸಕ್ತಿ ಈ ಫಿರಂಗಿಗಳನ್ನು ಮಾರುವುದರಲ್ಲಿಯೂ ನಿಮಗುಂಟೆ?"

"ಇದೇ ಮೊದಲನೇ ಸಲ ಈ ವಿಷಯ ನನ್ನೊಂದಿಗೆ ಪ್ರಸ್ತಾಪಕ್ಕೆ ಬರುತ್ತಿರುವುದು ಭಾರತದ ರಾಜ್ಯಪಾಲ ಅರ್ಥಾತ್ ಭಾರತೀಯ ನೆಲೆಗಳ ಅಧಿಕಾರಿಯು ಇಂಥ ಸಲಹೆಗಳ ಉಸ್ತುವಾರಿ ನೋಡಿಕೊಳ್ಳುವುದರಲ್ಲಿ ಆಸಕ್ತಿ ಹೊಂದಿರುತ್ತಾರೆ".

"ಅವರೊಂದಿಗೆ ಸಮಾಲೋಚಿಸಿ ನನಗೆ ವಿಷಯ ತಿಳಿಸುವಿರಾ?"

ರಾಜ್ಯಪಾಲ ಹೆನ್ರಿಕ್ ಡಿ ಮೆನ್ಸಸ್ ತನ್ನ ಪ್ರಭುವಿನೊಂದಿಗೆ ಸಮಾಲೋಚಿಸದೆ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾರನೆಂದು ನನಗೆ ಖಂಡಿತಾ ಗೊತ್ತು. ಅದೊಂದು ದೂರ ಗುರಿಯ ಪ್ರಯತ್ನ ಮತ್ತು ಅದಕ್ಕೆ ಉತ್ತರ ಬರಲು ಒಂದು ಒಂದೂವರೆ ವರ್ಷ ತೆಗೆದುಕೊಳ್ಳಬಹುದು. ಆದರೆ ಚೆಂಡು ಉರುಳುತ್ತಾ ಹೋಗುವಂತೆ ಮಾಡುವುದರಲ್ಲೇನೂ ತಪ್ಪಿಲ್ಲವೆಂದು ನನ್ನೆಣಿಕೆ.

* * *

ಗುಪ್ತಚರ ವಿಭಾಗದ ಮುಖ್ಯಸ್ತನಾಗಿ ಮಂಗಳ್, ಮಹಾಪ್ರಭುಗಳಿಗೆ ಮತ್ತು ಸಮಿತಿಗೆ ಅದೇ ಮೊದಲ ಬಾರಿಗೆ ವಿಷಯಗಳನ್ನು ತಿಳಿಸುತ್ತಿದ್ದನು. ಸಂದರ್ಭದ ಗಾಂಭೀರ್ಯತೆಯಿಂದ ಅವನು ಗೊಂದಲಕ್ಕೊಳಗಾಗಿರಲಿಲ್ಲ. ಅಲ್ಲದೆ ನನ್ನೊಂದಿಗೆ ಮಾತಾಡುವಾಗ ಹೇಗೆ ವಿಷಯಕ್ಕೆ ತಕ್ಕಂತೆ ಎಷ್ಟು ಬೇಕೋ ಅಷ್ಟನ್ನು ಸಂಕ್ಷಿಪ್ತವಾಗಿ ನಿರೂಪಿಸುತ್ತಿದ್ದನೋ ಹಾಗೆಯೇ ನಿರೂಪಿಸುತ್ತಿದ್ದನು. ಅವನು ನಮ್ಮ ನೆರೆಯವರ, ಶತ್ರುಗಳು ಮತ್ತು ಮಿತ್ರರ, ದಿಢೀರ್ ಸಮೀಕ್ಷೆಯನ್ನು ಪ್ರಸ್ತುತ ಪಡಿಸಿದನು. ಅವರು ಏನೆಲ್ಲ ಮಾಡಿಕೊಂಡಿದ್ದಾರೆ. ಅವರ ರಾಜ್ಯದಲ್ಲಿ ಸ್ಥಿರತೆ ಇದೆಯೋ, ಇಲ್ಲವೋ ಮತ್ತು ಮೇವಾಡಕ್ಕೆ ಅವರ ಕಡೆಯಿಂದಿರುವ ಬೆದರಿಕೆ ಇದೆಲ್ಲವನ್ನೂ ಚಿತ್ರಿಸಿದನು.

ಆ ಮೇಲೆ ಮಂಗಳ್ ಹೇಳಿದ್ದು ಕಾಬೂಲ್‌ನ ಮಹಾರಾಜ ಜಹೀರುದ್ದೀನ್ ಮಹಮ್ಮದ್ ಬಾಬರ್ ಹತ್ತಿರ ಹತ್ತಿರ ನಾಲ್ಕು ವರ್ಷಗಳ ನಂತರ ಹಿಂದೂಸ್ತಾನದ ಮೇಲೆ ಆಕ್ರಮಣ ಮಾಡಿದ್ದಾನೆ. ಲಾಹೋರ್ ಮತ್ತು ಪಂಜಾಬ್‌ಗಳನ್ನು ಬಂದೋಬಸ್ತು ಮಾಡಿಕೊಂಡು ತನ್ನೂರಿಗೆ ಹಿಂತಿರುಗಿದ್ದಾನೆ. ಇನ್ನು ನಮ್ಮ ನಾಡಿನ ವಿಷಯಕ್ಕೆ ಬಂದರೆ, ಗುಜರಾತಿನ ಮುಜ಼ಫರ್ ಷಾಹ್‌ನಿಂದ ಪ್ರೇರಿತನಾಗಿ, ಮಾಳ್ವದ ಎರಡನೇ ಸುಲ್ತಾನ್ ಮೊಹಮ್ಮದ್ ಖಾಲ್‌ಜಿಯು ಇನ್ನು ಕೆಲವೇ ತಿಂಗಳಲ್ಲಿ ತನ್ನ ಹಿಂದಿನ ಪ್ರಧಾನಿ ಮೇದಿನಿ ರಾಯ್‌ನೊಂದಿಗೆ ಯುದ್ಧ ಮಾಡುವ ಸಲುವಾಗಿ ತನ್ನ ಸೇನಾ ಪಡೆಗಳನ್ನೆಲ್ಲಾ ಒಗ್ಗೂಡಿಸುವ ಕ್ರಮಗಳಿಗೆ ಮುಂದಾಗಿದ್ದಾನೆ.

ತಂದೆಯವರು ಸಮಿತಿಯ ಇತರೆ ಸದಸ್ಯರೊಂದಿಗೆ ಮಾತಾಡುವುದಕ್ಕಿಂತ ಹೆಚ್ಚಾಗಿ ತನಗೇ ಹೇಳಿಕೊಳ್ಳುತ್ತಿದ್ದಾರೆನ್ನುವಂತೆ – "ಸುಲ್ತಾನ್ ಇಬ್ರಾಹಿಂ ಲೂದಿ ದೆಹಲಿಯನ್ನು ಆಳುತ್ತಿರುವವರೆಗೂ ನಾವು ನಿಶ್ಚಿಂತೆಯಿಂದ ಕಾಬೂಲ್‌ನ ದೊರೆಯನ್ನು ಅಲಕ್ಷಿಸಿಬಿಡಬಹುದು. ಅಡ್ಡಲಾಗಿರುವ ದೆಹಲಿಯನ್ನು ಮೊದಲಿಗೆ ಅಪ್ಪಳಿಸಿದಲ್ಲದೆ, ನಮ್ಮ ಸಮೀಪಕ್ಕೆ ವಿದೇಶೀ ಬಾಬರ್ ಬರಲಾರ. ಆದರೆ ಮಾಳ್ವದ ಸುಲ್ತಾನನ ಬಗ್ಗೆ ನಾವೇನು ಮಾಡಬೇಕೆಂದು ನೀವು ಸಲಹೆ ಕೊಡುತ್ತೀರಿ ಪ್ರಧಾನಿಗಳೆ?"

"ಮಹಮ್ಮದ್ ಖಾಲ್‌ಜೀ ಈ ಭೂಮಿಯ ಮೇಲಿಂದಲೇ ಮೇದಿನೀರಾಯ್‌ನ ಎಲ್ಲ ಕುರುಹುಗಳನ್ನು ಅಳಿಸಿ ಹಾಕಬಯಸುತ್ತಾನೆ. ನಾವು ಹಿಂದೆ ಕುಳಿತು ಇದರ ಫಲಿತಾಂಶ ಏನಾಗುತ್ತೆ ಎಂದು ನಿರ್ಲಿಪ್ತ ಮನಸ್ಸಿನಿಂದ ಕಾಯುತ್ತಾ ಕೂತಿರೋಣ"

ಎಂದಿನಂತೆ ಪ್ರಧಾನಿಯವರ ಗಾಳಕ್ಕೆ ಸುಲಭ ಬಲಿಪಶುವಾದವರು, ಲಕ್ಷ್ಮಣ ಸಿಂಹಜೀ. "ನಾವಿಲ್ಲದೆ ಮೇದಿನೀರಾಯ್‌ಗೆ ಯಾವ ಅವಕಾಶವೂ ಇಲ್ಲ ಎಂಬುದು ನಿಮಗೆ ಚೆನ್ನಾಗಿ ಗೊತ್ತಿದೆ".

"ಅಂಥ ಸಂದರ್ಭದಲ್ಲಿ ನಾವು ಮಾಡುವ ಸಹಾಯಕ್ಕೆ ಏನು ಬೆಲೆಕೊಡಬೇಕೆಂದು ಹೇಳುತ್ತೇವೋ ಅದನ್ನು ತೆರಲು ಮೇದಿನೀ ರಾಯ್ ಕೊಡಲು ಒಪ್ಪಬೇಕಾಗುತ್ತದೆ".

"ಮೇದಿನಿರಾಯ್ ವಿರುದ್ಧವಾಗಿ ಸುಲ್ತಾನ್‌ಗೆ ಒಂದು ದೂರು ಇದೆ. ಆದರೆ ಈ ಸಂದರ್ಭದಲ್ಲಿ ರಾಯ್ ಕೇವಲ ಒಂದು ನೆಪ. ತಪ್ಪು ತಿಳಿಯಬೇಡಿ. ಮಹಮ್ಮದ್ ಖಾಲ್‌ಜೀ ನಮ್ಮನ್ನು ಹಿಂಬಾಲಿಸಿ ಬರುತ್ತಾನೆ ಈ ಸಲ ನಾವು ರಾಯ್‌ನನ್ನು ಬಿಟ್ಟುಕೊಟ್ಟರೆ, ನಾವೊಬ್ಬ ಮಿತ್ರನನ್ನು ಕಳೆದುಕೊಳ್ಳುವುದಷ್ಟೇ ಅಲ್ಲ. ಆ ಕಾರಣದಿಂದಾಗಿ ನಾವು ದುರ್ಬಲರೂ ಆಗಿ ಬಿಡುತ್ತೇವೆ. ನಮ್ಮ ಸ್ನೇಹಿತರು ಮತ್ತೆ ನಮ್ಮನ್ನೆಂದಿಗೂ ನಂಬುವುದಿಲ್ಲ".

"ಕಳೆದ ಸಲ ನಮ್ಮ ಪಡೆಗಳು ರಾಯ್ ಸಹಾಯಕ್ಕೆ ಧಾವಿಸಿದಂದು ಹಣ ಕೊಟ್ಟವರಾರು?"

"ಕಾರಣಗಳು ಏನೇ ಇರಲಿ, ನಾವು ತಡವಾಗಿ ಹೋಗಿದ್ದರಿಂದ, ನಮ್ಮಿಂದೇನೂ ಅವರಿಗೆ ಉಪಯೋಗವಾಗಲಿಲ್ಲ. ಮುಝಾಫರ್ ಷಾನ ಮತ್ತು ಮಹಮ್ಮದ್ ಖಾಲ್‌ಜೀಯ ಒಟ್ಟು ಸೇನೆ ಮಂಡು ಕೋಟೆಯನ್ನಾಕ್ರಮಿಸಿಕೊಂಡು ಕಗ್ಗೊಲೆಗೆ ಆದೇಶಿಸಿದಾಗ ಅವನು ಇಪ್ಪತ್ತು ಸಾವಿರ ಜನರನ್ನು ಕಳೆದುಕೊಂಡನೆನ್ನುತ್ತಾರೆ. ಅದು ನಲವತ್ತು ಸಾವಿರವೂ ಇರಬಹುದು".

"ಒಂದು ವೇಳೆ ಮೇದಿನೀ ರಾಯ್ ನಮ್ಮ ಸಹಾಯದೊಂದಿಗೆ ಅವನನ್ನು ಸೋಲಿಸಿದರೆ ಮಹಮದ್ ಖಾಲ್‌ಜೀ ಎಲ್ಲ ಖರ್ಚನ್ನೂ ತೆರಬೇಕಾಗುತ್ತದಲ್ಲವೆ?" ಅದೆಂದರೆ ಆದಿನಾಥ್‌ಜೀ ಒಂದು ಸಣ್ಣ ಪ್ರಶ್ನೆ ಹಾಕುವ ಮೂಲಕ ಪ್ರಧಾನ ಮಂತ್ರಿ ಮತ್ತು ಲಕ್ಷ್ಮಣ ಸಿಂಹಜೀಯರ ನಡುವಿನ ವಾಗ್ವಾದವನ್ನು ಅನಗತ್ಯ ಮಾಡಿಬಿಟ್ಟಿದ್ದರು ಹಾಗೂ ನೇರವಾಗಿ ವಿಷಯದ ಕೇಂದ್ರಕ್ಕೆ ಪ್ರವೇಶಿಸಿ ಬಿಟ್ಟಿದ್ದರು.

"ನಮ್ಮ ಮಿತ್ರ ದೇಶಗಳವರನ್ನು ಎಚ್ಚರಿಸಿ ಅವರೊಂದಿಗೆ ಸಮರ ಸಮಿತಿಯ ಸಭೆಗೆ ದಿನಾಂಕ ನಿಗದಿಪಡಿಸೋಣವೆ" ಎಂದು ಲಕ್ಷ್ಮಣ ಸಿಂಹಜೀ ತಂದೆಯವರನ್ನು ಕೇಳಿದರು.

"ಅದಕ್ಕಿನ್ನೂ ಕಾಲ ಪಕ್ವವಾಗಿಲ್ಲ. ಮೊದಲು ಮೇದಿನೀರಾಯ್ ನಮ್ಮ ಸಹಾಯಕ್ಕೆ ಮೊರೆ ಇಡಲಿ" ಮಹಾಪ್ರಭುಗಳು ಅನಂತರ ತನ್ನ ಇಂಗಿ ಹೋದ ಕಣ್ಣನ್ನು ನನ್ನತ್ತ ತಿರುಗಿಸಿದರು. "ಆದರೆ ಪ್ರಾಯಶಃ ರಾಜಕುಮಾರನ ಅಭಿಪ್ರಾಯ ಈ ವಿಷಯದಲ್ಲಿ ಬೇರೆ ಇರಬಹುದು".

ನಾನು ನಾಲಿಗೆಯ ಮೇಲೆ ಹತೋಟಿ ಇಟ್ಟುಕೊಂಡು, ಹಿರಿಯರು ಏನು ತೀರ್ಮಾನ ಮಾಡುತ್ತಾರೋ ಅದಕ್ಕನುಗುಣವಾಗಿ, ಯಾರ ಗಮನಕ್ಕೂ ಬೀಳದ ಹಾಗೆ ಒಳ್ಳೆ ಹುಡುಗನ ಥರ ಇದ್ದು ಬಿಡುವುದು ಎಂದುಕೊಂಡೆ.

"ಇಲ್ಲ, ಇಲ್ಲ ನನ್ನದೇನೂ ಅಭಿಪ್ರಾಯ ಇಲ್ಲ ಮಹಾಪ್ರಭು".

ಪ್ರಧಾನಮಂತ್ರಿ ಪೂರಣ್ ಮಲ್‌ಜೀಯವರು, ತಮ್ಮ ಪ್ರಧಾನಮಂತ್ರಿತ್ವದ ಸದರದ ಮುಗುಳ್ನಗೆಯನ್ನು ಕಳೆದುಕೊಳ್ಳದೆ, ತಮ್ಮ ತುಟಿಗಳನ್ನು ಕಿಂಚಿತ್ ಕೆಣಕುವ ಹಾಗೆ ತಿರುಗಿಸಿಕೊಂಡು ಹೇಳಿದರು. "ತಮ್ಮಂಥ ಹರಿತ ಬುದ್ಧಿಯ ಯುವಕರಿಗೆ, ನಮ್ಮ ನೆರೆಯ

ನಾಡುಗಳೊಂದಿಗೆ ಯುದ್ಧ ಸಂಭಾವ್ಯತೆಯಂಥ ಮಹತ್ವದ ವಿಷಯದ ಬಗ್ಗೆ ಏನೂ ಹೇಳುವಂಥದ್ದಿಲ್ಲ ಎಂದು ಹೇಳಿದರೆ ನಾವು ನಂಬಬೇಕೆಂದು ನಿಮ್ಮ ನಿರೀಕ್ಷೆಯೆ ಮಹಾಸ್ವಾಮಿ?"

"ಮಹಾಸ್ವಾಮಿ ಬಹುಶಃ ನನ್ನ ಮಾತುಗಳು ಸ್ವಲ್ಪ ಅಸ್ಪಷ್ಟವಾಗಿತ್ತು ಅನ್ನಿಸುತ್ತೆ. ನನ್ನ ಮಾತಿನ ಅರ್ಥ ಭದ್ರತಾ ಸಮಿತಿಯ ವಿಚಾರಗಳು ನನಗೆ ಒಪ್ಪಿಗೆ ಎಂದು 'ಮಹಾಸ್ವಾಮಿ"

ಆದಿನಾಥಜೀಯವರು ನನ್ನ ಕಣ್ಣುಗಳತ್ತ ನೋಡುತ್ತ ಹಗುರವಾಗಿ ನಗಲಿಲ್ಲ. "ನಮ್ಮೆಲ್ಲರ ಹಾಗೆ ನೀವು ಕೂಡ ಭದ್ರತಾ ಸಮಿತಿಯ ಒಂದು ಭಾಗವೇ ಆಗಿದ್ದೀರಿ".

ಲಕ್ಷ್ಮಣ ಸಿಂಹಜೀಯವರು ನನ್ನ ಬೆನ್ನು ತಟ್ಟಿ ಜೋರಾಗಿ ಗಹಗಹಿಸಿ ನಗುತ್ತಾ "ಮಹಾಪ್ರಭುಗಳು ತಪ್ಪು ತಿಳಿಯಬಾರದು, ಮಹಾಸ್ವಾಮಿ ನಾವೆಲ್ಲ ಮೂರ್ಖ ಮುದುಕರ ಗುಂಪು ಅಂತ ನೀವು ತಿಳಿದು ಕೊಂಡಿದ್ದೀರಿ ಅಂತ ನಮಗೆ ಗೊತ್ತು. ಮತ್ತದು ಅನೇಕ ವೇಳೆ ಸಕಾರಣವಾಗಿಯೇ ಇದೆ" ಆಗ ತಂದೆಯವರೂ ಮುಗುಳ್ನಕ್ಕರು. ನನ್ನ ಮಾವ ಮಾತ್ರ ಇಂಥ ಅಧಿಕ ಪ್ರಸಂಗಿತನ ಮಾಡಿ ಬಚಾವಾಗಬಹುದು. ಅವರು ಮುಂದುವರಿದು "ಆದರೆ ನಿಮ್ಮ ವಿಚಾರಗಳ ಫಲವನ್ನು ನಮಗೆ ನೀಡುವುದಕ್ಕೆ ಭದ್ರತಾ ಸಮಿತಿ ಮತ್ತು ಮೇವಾಡಕ್ಕೆ ನೀವು ಋಣಿಯಾಗಿದ್ದೀರಿ".

ನಾನು ನನ್ನ ಪ್ರತಿಭಟನೆಯನ್ನು ಮುಂದುವರಿಸುವುದೇ ಅಥವಾ ನನ್ನ ಮನಸ್ಸಿನಲ್ಲಿರುವ ವಿಚಾರ ಹೇಳುವುದೆ?

"ಭದ್ರತಾ ಸಮಿತಿ ಅತ್ಯಂತ ವಿವೇಕದ ಕ್ರಮವನ್ನು ಅನುಸರಿಸಿದೆ ಎಂದು ನನಗೆ ಅನ್ನಿಸುತ್ತದೆ. ಕಾರಣ, ಬೇರೆ ಯಾವುದೇ ರೀತಿಯ ಪ್ರತಿಕ್ರಿಯೆ ಕೂಡ ಯೋಚನೆ ಮಾಡಲೂ ಸಾಧ್ಯವಾಗದಷ್ಟು ಅಸಾಂಪ್ರದಾಯಿಕವೆನಿಸುತ್ತದೆ".

"ಮಹಾಸ್ವಾಮಿ, ನಿಮ್ಮ ವಯಸ್ಸಿನಲ್ಲಿ ನೀವು ಯೋಚನೆ ಮಾಡಲಾಗದ್ದನ್ನು ಯೋಚಿಸದಿದ್ದರೆ, ನನ್ನ ವಯಸ್ಸಿನಲ್ಲಿ ನೀವು ಖಂಡಿತಾ ಯೋಚನೆ ಮಾಡಲಾರಿರಿ. ಮಹಾಪ್ರಭುಗಳು ಕೆಲವೊಂದು ಸಲ ತಮ್ಮ ಹಾಗೂ ನಮ್ಮ ವಿಚಾರಗಳಿಗಿಂತಲೂ ಮೂಲಭೂತವಾಗಿಯೇ ವಿಭಿನ್ನವಾದ ವಿಚಾರದೊಂದಿಗೆ ಮುಖಾಮುಖಿಯಾಗುವ ಉದ್ದೇಶವಿಲ್ಲದಿದ್ದರೆ, ನಿಮ್ಮನ್ನು ಏಕಾದರೂ ಸಮಿತಿಗೆ ನೇಮಕ ಮಾಡುತ್ತಿದ್ದರು?"

ತಂದೆಯವರು ನಿಜಕ್ಕೂ ನನ್ನ ಅರೆಬೆಂದ ಹಾಗೂ ಒರಟು ಅಭಿಪ್ರಾಯಗಳನ್ನು ಕೇಳಲಿಚ್ಛಿಸುವರೇ? ಅವರು ನನ್ನನ್ನು ಸಂಕೋಚಕ್ಕೆ ಗುರಿಮಾಡಿದ್ದರು. ಅಲ್ಲದೆ ಲಕ್ಷ್ಮಣ ಸಿಂಹಜೀಯವರು ಅವರಿಗೆ ತೆರೆದ ಮನಸ್ಸಿನವರು ಎಂಬ ಗುಣವನ್ನು ಆರೋಪಿಸಿದ್ದರು. ಆದರೆ ಅದಕ್ಕೆ ತಕ್ಕಂತೆ ಇರುವುದು ಅವರಿಗೆ ಬೇಕಿಲ್ಲದಿರಬಹುದು. ಈಗ ಅವರಿಗೆ ಬೇರೆ ಉಪಾಯವಿಲ್ಲ. ತಣ್ಣಗೆ ಕುಳಿತು ಅವರ ಮಗನ ವಿಲಕ್ಷಣ ವಿಚಾರಗಳನ್ನು ಕೇಳಬೇಕು.

"ಮಹಮ್ಮದ್ ಖಾಲ್‌ಜೀಯು ಗುಜರಾತಿನ ಮುಜ಼ಫರ್‌ಷಾನನ್ನು ನಮ್ಮ ಮೇಲೆ ಯುದ್ಧಕ್ಕೆ ಪುಸಲಾಯಿಸುತ್ತಿದ್ದಾನೆಂದು ಮಂಗಳ್ ಹೇಳಿದ. ಈ ಬಾರಿ, ಗುಜರಾತಿನ ಸುಲ್ತಾನನು ಮಾಳ್ವದ ಯುದ್ಧ ಪ್ರಯತ್ನಗಳಿಗೆ, ಪ್ರೋತ್ಸಾಹದ ಮಾತುಗಳನ್ನಾಡುವುದರ ಹೊರತಾಗಿ ಬೇರಾವ ರೀತಿಯಲ್ಲೂ ನೆರವಾಗಲಾರನೆಂದು ನನ್ನ ಊಹೆ. ಹಾಗಾದರೆ, ಹೆಚ್ಚು ಲಾಭಕರವಾದ ಸಾಹಸಕ್ಕೆ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯಯಿಸಲು ಸಾಧ್ಯವೆ?"

"ಹಾಗಾದರೆ ಅದು ಯಾವುದು?" ಪ್ರಧಾನಿಯವರು ತಮ್ಮ ತಿರಸ್ಕಾರವನ್ನು ಮುಚ್ಚಿಡುವ ಗೊಡವೆಗೆ ಹೋಗಲಿಲ್ಲ.

"ಝಹೀರುದ್ದೀನ್ ಮೊಹಮ್ಮದ್ ಬಾಬರನು ಇಲ್ಲಿಯವರೆಗೆ ಪಂಜಾಬಿನ ಮೇಲೆ ನಾಲ್ಕು ಹೊರದಾಳಿಗಳನ್ನು ಮಾಡಿದ್ದಾನೆ. ಹಿಂದಿನದಕ್ಕಿಂತ ಅಮೇಲಿನದು ಹೆಚ್ಚು ಗಾಢವಾದ್ದು. ಅವನ ಮುಂದಿನ ನಿಲುಗಡೆ ದೆಹಲಿಯಾಗಿರುತ್ತದೆಂಬುದು ತರ್ಕಬದ್ಧ. ಅವನ ಟರ್ಕಿಯ ಪೂರ್ವಜ ತೈಮೂರ್ ಮತ್ತು ವಾಯವ್ಯ ದಿಕ್ಕಿನಿಂದ ಬಂದ ಇತರೆ ಧಾಳಿಕಾರರಂತೆ ಅವನೂ ಕ್ಷಿಪ್ರಧಾಳಿ ಮಾಡಿ, ನಗರವನ್ನು ಕೊಳ್ಳೆ ಹೊಡೆದು ವಾಪಸಾಗಬಹುದೆಂದು ವಾದಿಸಲು ಸಾಧ್ಯ. ಪ್ರಶ್ನೆ ಇರುವುದು, ಅವನಿಗೆ ಈ ವಿಷಯದ ಬಗ್ಗೆ ಬೇರೆಯದೇ ಆದ ಆಲೋಚನೆ ಇದ್ದರೆ ಹೇಗೆ ಎಂದು. ಕಾಬೂಲ್ ಅವನ ರಾಜಧಾನಿ ನಿಜ. ಆ ಶೀತಲ ಪರ್ವತ ಪ್ರದೇಶದ ಒಂದು ಸಣ್ಣ ಸಂಸ್ಥಾನದ ಆಕರ್ಷಣೆಗಳೇನೇ ಇರಲಿ, ಅದು ಅಧಿಕಾರದ ಕೇಂದ್ರಸ್ಥಾನವೂ ಅಲ್ಲ; ಹಿಂದೂಸ್ತಾನದಷ್ಟು ಸಂಪದ್ಭರಿತವಾದುದೂ ಅಲ್ಲ. ನಾವು ಅವನು ದೆಹಲಿಯನ್ನು ಗುರಿಮಾಡಿಕೊಳ್ಳಲು ಬಿಡುವುದೋ ಅಥವಾ ದೆಹಲಿಗೆ ಧಾಳಿಯಿಟ್ಟು, ಕುಸಿಯುವ ಸ್ಥಿತಿಯಲ್ಲಿರುವ ಲೂದಿ ಸಾಮ್ರಾಜ್ಯವನ್ನು ವಶಮಾಡಿಕೊಂಡು ಹತೋಟಿಗೆ ತೆಗೆದುಕೊಳ್ಳುವುದೋ?"

ನಾನೀಗ ಆ ಹಳಸಲು ಶಬ್ದವಾದ 'ದಿಗ್ಭ್ರಮೆ ಹಿಡಿಸುವ ಮೌನ' ಎಂಬುದನ್ನು ಬಳಸುವುದಿಲ್ಲ. ಆದರೆ ಅದರ ಹೊರತು ಬೇರೆ ಇನ್ನಾವುದೂ ಸರಿಹೊಂದುವುದಿಲ್ಲ. ಕೊನೆಗೆ ಆ ಮೌನವನ್ನು ಮುರಿದವರು ತಂದೆಯವರು.

"ಹಾಗಾದರೆ ಈ ಮಧ್ಯದಲ್ಲಿ ನಾವು ಮಹಮ್ಮದ್ ಖಾಲ್ಜೀಯನ್ನು ಚಿತ್ತೂರಿನೊಳಗೆ ಪ್ರವೇಶಿಸಲು ಬಿಡಬೇಕೆ?"

"ಇಲ್ಲ ಮಹಾಪ್ರಭು. ತಾವು ದೆಹಲಿ ಕಿರೀಟವನ್ನು ಧರಿಸುತ್ತಿರುವಾಗ, ಮೇದಿನೀ ರಾಯ್ ಮತ್ತು ನಾನು ಇಬ್ಬರೂ ಮಾಳ್ವದ ಸೇನಾಪಡೆಗಳನ್ನು ಪಾದರಸದಷ್ಟು ವೇಗವಾದ ಆಕ್ರಮಣಗಳಿಂದ ಪೀಡಿಸಿ ನಾಶಮಾಡಿ ಬಿಡುತ್ತೇವೆ."

"ಯುದ್ಧದ ಪ್ರಾಥಮಿಕ ತತ್ವಗಳಲ್ಲೊಂದಾದ – ಏಕಕಾಲದಲ್ಲಿ ಎರಡು ಕಡೆ ಯುದ್ಧ ನೆಲೆಗಳನ್ನು ಪ್ರಾರಂಭಿಸಕೂಡದು" ಎಂಬುದನ್ನು ನೀನು ಮರೆಯುತ್ತಾ ಇಲ್ಲವೆ?

ಲಕ್ಷ್ಮಣಸಿಂಹಜೀಯವರಿಗೆ ಹೇಳಿದೆ "ಹಾಗೆ ಮಾಡುವ ಉದ್ದೇಶ ನನಗಿಲ್ಲ ಮಹಾಸ್ವಾಮಿ". ಒಂದೇ ಒಂದು ಯುದ್ಧ ನೆಲೆ ಮಾತ್ರ ಇರುತ್ತದೆ, ದೆಹಲಿ ಸುಲ್ತಾನನ ವಿರುದ್ಧ ನಾವು ಆಯ್ಕೆ ಮಾಡುವ ಯುದ್ಧ ನೆಲೆ. ಮಾಳ್ವದಲ್ಲಿ ನಮ್ಮ ಉದ್ದೇಶಗಳು ಸೀಮಿತವಾದವು. ಉನ್ನತ ತರಬೇತಿ ಹೊಂದಿದ, ಸಂಚಾರಿ ಸೇನೆಯನ್ನೊಯ್ದು, ಮಾಳ್ವದ ಸೇನಾಪಡೆಗಳನ್ನು ಮೊದಲಿಗೇ ಆಕ್ರಮಿಸಿ, ಸ್ಥಿರತೆ ತಪ್ಪುವ ಹಾಗೆ ಮಾಡುವುದು. ತಾವು ದೆಹಲಿಯನ್ನು ವಶಪಡಿಸಿಕೊಂಡ ಮೇಲೆ, ಇಲ್ಲಿ ಯುದ್ಧ ಪ್ರಾರಂಭ ಮಾಡುವ ಅಧಿಕಾರ ನಮಗೆ ಬಂದಿರುತ್ತದೆ. ಹಾಗಾಗಿ ಮಾಳ್ವದಲ್ಲಿ ನಾವು ನಮ್ಮ ಯುದ್ಧ ತಂತ್ರದ ವ್ಯಾಪ್ತಿಯನ್ನು ವಿಸ್ತರಿಸುತ್ತೇವೆ."

"ದೆಹಲಿಯನ್ನು ವಶಪಡಿಸಿಕೊಳ್ಳುವುದು ಅಷ್ಟೊಂದು ಸುಲಭದ ಕೆಲಸ ಅಂತ ನೀನು ನಂಬಿದ್ದೀಯಾ?"

"ಇಲ್ಲ ಮಹಾಪ್ರಭು. ಸಾಯುತ್ತಿರುವ ರೋಗಿ ಬದುಕಿಗೆ ದೃಢವಾಗಿ ಜೋತು ಬೀಳುವ ಹಾಗೆ ಬೇರೆ ಯಾರೂ ಜೋತು ಬೀಳುವುದಿಲ್ಲ. ನಾವೊಂದು ವೇಳೆ ದೆಹಲಿಯನ್ನು ವಶಪಡಿಸಿಕೊಳ್ಳದಿದ್ದರೆ, ಬೇರೆ ಯಾರಾದರೂ ವಶಪಡಿಸಿಕೊಂಡು ಬಿಡುತ್ತಾರೆ. ಜೊತೆಗೆ ತಮ್ಮ ನಾಯಕತ್ವದಲ್ಲಿ ನಮ್ಮ ಪಡೆಗಳಿಗೆ ಇಬ್ರಾಹಿಂ ಲೂದಿಯನ್ನು ಸೋಲಿಸಲು ಕಷ್ಟವಾಗುತ್ತದೆಂದು ನನಗನ್ನಿಸುವುದಿಲ್ಲ".

"ಒಂದು ವೇಳೆ ಆ ಕೊನೆಯ ಭಾವನೆಯನ್ನು ಬೇರೆ ಯಾರಾದರೂ ವ್ಯಕ್ತ ಪಡಿಸಿದ್ದರೆ, ನಾನು ಅವರಿಗೆ 'ಭಟ್ಟಂಗಿತನ ನಿಮ್ಮನ್ನೆಲ್ಲಿಗೂ ಮುಟ್ಟಿಸುವುದಿಲ್ಲ' ಎಂದು ಹೇಳಿಬಿಡುತ್ತಿದ್ದೆ. ನೀನಾದರೆ ಕಾರ್ಯಶ್ರದ್ಧೆ ಉಳ್ಳವನು ಎಂದು ನಾನು ನಂಬಿದ್ದೇನೆ. ರಾಜಕುಮಾರನ ಸಲಹೆಗಳ ಬಗ್ಗೆ ಯೋಚಿಸೋಣ, ಯೋಚಿಸೋಣವೆ?"

ತಂದೆಯವರು ನಿಜಕ್ಕೂ ನನ್ನ ಪ್ರಸ್ತಾವಗಳ ಬಗ್ಗೆ ಯೋಚಿಸುವರೆ?

* * *

ಕೌಸಲ್ಯ ಬೇರೆಯೇ ಅದೊಂದು ರೀತಿಯಲ್ಲಿ ನನಗೆ ಶಿರೋಮರ್ದನ ಮಾಡುತ್ತಿದ್ದಳು. ನನ್ನದು ಕೇವಲ ಸಾಂಕೇತಿಕ ರೂಪದ ಭೇಟಿಯಾಗಿರಲಿಲ್ಲ ಎಂಬ ಕಾರಣ ಅವಳಿಗೆ ಸಂತೋಷವಾಗಿತ್ತು. ನನ್ನ ತಲೆಗೂದಲೊಳಕ್ಕೆ ಕೈ ಹಾಕಿ ಅವನ್ನು ನಿಧಾನವಾಗಿ, ಆದರೆ ಉದ್ದಕ್ಕೆ ಎಳೆದು ಬಿಡುತ್ತಿದ್ದಳು. ಅದು ನನ್ನ ಶೈಶವದ ನೆನಪುಗಳನ್ನು ಮರುಕಳಿಸುತ್ತಿತ್ತು. ನನ್ನ ಕೂದಲುಗಳೊಂದಿಗೆ ಆಟವಾಡುತ್ತ ಅವಳು ನನಗೆ ನಿದ್ದೆ ಬರುವಂತೆ ಮಾಡುತ್ತಿದ್ದಳು. ತಲೆಬುರುಡೆಯನ್ನು ಕೆದಕಾಡುವ ಕಿಂಚಿತ್ತೂ ಕೆಡುಕಿಲ್ಲದ ಈ ಕ್ರಿಯೆ ಅದೆಂಥ ರೀತಿಯಲ್ಲಿ ಹಾಯೆನಿಸುವಂತೆ ಮಾಡಿ, ಕಣ್ಣುಗಳಿಗೆ ನಿದ್ರೆ ಬರಿಸುವಂತಿರುತ್ತದೆ ಎನ್ನುವುದು ನಿಜಕ್ಕೂ ಆಶ್ಚರ್ಯ.

"ಮಹಾಸ್ವಾಮಿ ನೀವು ರಾಜಾಸ್ತಾನದಲ್ಲಿ ನಡೆದ ವ್ಯವಹಾರಗಳನ್ನು ತಿಳಿಸಿದಾಗ, ಅದರಲ್ಲೂ ಜನಗಳ ಬಗೆಗಿನ ನಿಮ್ಮ ಟೀಕೆಯನ್ನು ಕೇಳಿದಾಗ ಅದೆಷ್ಟು ಸಂತೋಷಪಟ್ಟೆನೆಂದು ಹೇಳುವುದೇ ಬೇಕಿಲ್ಲ. ಆದರೆ ಈ ಪೋರ್ಚುಗಲ್‌ನಿಂದ ಬಂದಿದ್ದ ಸಂದರ್ಶಕನ ವಿಷಯವನ್ನು ನನಗೆ ತಿಳಿಸಲು ನೀವು ಬರಲೇ ಇಲ್ಲ".

ನಾನು ಗಾಬರಿಗೊಂಡು "ಏನು ಕೌಸಲ್ಯ ನೀನು ನನ್ನನ್ನು ರಹಸ್ಯ ಉದ್ದೇಶವಿಲ್ಲದೆ ಎಂದೂ ಏನನ್ನೂ ಮಾಡದ, ಹಣಕ್ಕಾಗಿ ಕೆಲಸ ಮಾಡುವ ಒಬ್ಬ ಕೂಲಿಯವನು ಎಂದು ಹೇಳಲು ಪ್ರಯತ್ನಿಸುತ್ತಿದ್ದೀಯಾ? ನನಗೆ ನಿಜಕ್ಕೂ ನೋವಾಗಿದೆ".

"ಅಂಥದ್ದೇನನ್ನೂ ನಾನು ಸೂಚಿಸುತ್ತಾ ಇಲ್ಲ ಮಹಾಸ್ವಾಮಿ". ಕೌಸಲ್ಯಳನ್ನು ಈ ರೀತಿಯ ಛೇಡಿಸುವ ಮನೋಭಾವದಲ್ಲಿ ನೋಡುವುದು ಎಷ್ಟೊಂದು ಅಪರೂಪದ್ದು. "ನೀವು ನಿಸ್ವಾರ್ಥವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾಗ ಸಿಕ್ಕಿ ಹಾಕಿಕೊಂಡರೆ ಅಥವಾ ಅದರಿಂದ ಕೇವಲ ವಿನೋದ ಹೊಂದುವುದಕ್ಕಾಗಿ ಏನಾದರೂ ಮಾಡುತ್ತಿದ್ದಾಗ ಪತ್ತೆಯಾದರೆ ಅದು ನಿಮಗೇನೂ ಮಾಡಲಾರದು ಎಂದು ನನಗೆ ನಂಬಿಕೆ ಇದೆ."

ನಾನು ಅಲ್ಲಿಂದ ಹೊರಡುವಾಗ ಅವಳನ್ನು ಕೇಳಿದೆ – "ಮಹಮ್ಮದ್ ಖಾಲ್‌ಜೀ" ಮತ್ತು ಮೇದಿನೀ ರಾಯ್ ಬಗ್ಗೆ ಹೇಳು".

ರಜಪೂತರಲ್ಲಿ ಮೇದಿನೀ ರಾಯ್‌ಗಿಂತ ದೊಡ್ಡ ಜೀವಂತ ನಾಯಕರು ಯಾರೂ ಇಲ್ಲ. (ಆತನ ನಿಜವಾದ ಹೆಸರೇನೆಂದು ಯಾರಿಗಾದರೂ ನೆನಪಿದೆಯೆ ಎಂದು ನನಗೆ ಅನುಮಾನ. ಕಾರಣ ಮಾಳ್ವದ ಸುಲ್ತಾನನು ನೀಡಿದ ಮೇದಿನಿ ಎಂಬುದು ಆತನ ಹೆಸರಿಗೆ ಶಾಶ್ವತವಾಗಿ ಅಂಟಿಕೊಂಡಂತಿದೆ) ತಂದೆಯವರಿಗೆ ಹೆಚ್ಚು ಗೌರವ ಸಿಗುತ್ತಿರಬಹುದು. ಅವರ ಮಾತುಗಳಿಗೆ ಖಂಡಿತವಾಗಿಯೂ ಇನ್ನೂ ಹೆಚ್ಚು ಬೆಲೆ ಇದೆ. ಮೇದಿನೀ ರಾಯ್ ಹೊರತು ರಾಜರು ಮತ್ತು ರಾವ್‌ಗಳು ಸಹ ಅವರ ಮಾತನ್ನು ಮೀರಬೇಕೆಂದರೆ ಹತ್ತು ಸಲ ಯೋಚನೆ ಮಾಡುತ್ತಾರೆ. ಅಧಿಕಾರಚ್ಯುತನಾಗಿದ್ದರೂ ಆತ ಒಂದು ದಂತಕತೆ. ಆಗ ನನಗೆ ಹದಿನಾಲ್ಕು ವರ್ಷವಾಗಿದ್ದ ಸಂದರ್ಭ. ನನ್ನ ಎಡಗೆನ್ನೆಯ ಮೇಲೆ ಮೂರು

ಮೊಡವೆಗಳಾಗಿದ್ದು, ನಾನು ಅದರಿಂದ ವ್ಯಥೆ ಪಡುತ್ತಿದ್ದೆ. ಕೌಸಲ್ಯ ತನ್ನೊಬ್ಬ ಸೋದರ ಸಂಬಂಧಿಯನ್ನು ಕಾಣಲು ಮಂಡೂಗೆ ಹೋಗಿದ್ದು. ಅಲ್ಲಿಂದ ಹಿಂತಿರುಗುತ್ತಿದ್ದಾಗ, ಆಕೆ ನನಗೆ "ಮಹಾರಾಜ್‌ಕುವಾರ್ ನಿಮಗೆ ಅಂಥ ಇನ್ನಷ್ಟು ಮೊಡವೆಗಳಾಗಲಿ. ಮೇದಿನಿರಾಯ್‌ಗಿರುವ ಸ್ಫುರದ್ರೂಪದ ಬಗ್ಗೆ ನಿರಂತರವಾಗಿ ಅರಿವಿರುವ ಹಾಗೂ ಅದು ತನಗಿಲ್ಲದಿರುವ ಬಗ್ಗೆ ಕಲ್ಪಿಸಿಕೊಳ್ಳಿ" ಎಂದು ಹೇಳುತ್ತಿದ್ದದ್ದು ನೆನಪಾಗುತ್ತದೆ.

ಅಷ್ಟೆಲ್ಲ ವರ್ಷಗಳಾದ ಮೇಲೆ, ನಾನು ಮೇದಿನಿ ರಾಯ್ ಬಗ್ಗೆ ಮತ್ತೊಮ್ಮೆ ಅಧ್ಯಯನ ಮಾಡಬೇಕಾಯಿತು. ಎಲ್ಲಿಂದಲೋ ಕಾಣಿಸಿಕೊಂಡ, ಎಲ್ಲರೂ ಕೈ ಬಿಟ್ಟಿದ್ದ ಮಹಮ್ಮದ್ ಖಾಲ್‌ಜೀಗೆ ತನ್ನ ಅದೃಷ್ಟವನ್ನು ತಂದು ಸೇರಿಸಿದ್ದ, ತನ್ನ ದೊರೆಯ ಅದೃಷ್ಟವನ್ನು ತಲೆಕೆಳಗು ಮಾಡಿದ್ದ, ಮಾಳ್ವದ ಪ್ರಧಾನಿಯಂಥ ಅತ್ಯುನ್ನತ ಸ್ಥಾನಕ್ಕೇರಿದ್ದ ಮತ್ತು ಅನಂತರ, ತಾನು ಸಿಂಹಾಸನಕ್ಕೆ ತಂದ ಮನುಷ್ಯನಿಂದಲೇ ಸಾಮ್ರಾಜ್ಯದಿಂದ ಅಟ್ಟಲ್ಪಟ್ಟಿದ್ದ ಈ ರಜಪೂತನಾರು? ಮೇದಿನಿರಾಯ್ ಮತ್ತು ಮಹಾಪ್ರಭುಗಳ ನಡುವಣ ಕಲಹದ ಕಾರಣವೇನು? ಮೇದಿನಿ ರಾಯ್‌ನ ಪತನದ ಹೊರತಾಗಿಯೂ ಮಹಮ್ಮದ್ ಖಾಲ್‌ಜೀ ರಾಯ್‌ನನ್ನು ಒಂದು ಬೆದರಿಕೆ ಎಂದೇಕೆ ಪರಿಗಣಿಸಿದ್ದನು? ಕಳೆದ ಸಲ ಮೇದಿನೀರಾಯ್ ನಮ್ಮ ಸಹಾಯವನ್ನು ಕೇಳಿದ್ದು, ನಾವು ಸರಿಯಾದ ಸಮಯದಲ್ಲಿ ಅವರ ನೆರವಿಗೆ ಬರಲು ಅಸಮರ್ಥವಾಗಿದ್ದೆವು. ಈಗ ಅವರು ನಮ್ಮ ಸಹಾಯವನ್ನು ಕೇಳುವರೆ?

"ನಿಮಗೆ ಲಂಬಿಸಿದ ರೂಪ ಬೇಕೋ ಅಥವಾ ಮುಖ್ಯವಾದ ಅಂಶಗಳನ್ನೊಳಗೊಂಡ ಒಂದು ಅವಸರದ ಚಿತ್ರಣ ಬೇಕೋ?" ಎಂದು ಕೌಸಲ್ಯ ನನ್ನನ್ನು ಕೇಳಿದಳು.

"ಸದ್ಯಕ್ಕೆ ಕೆಲವು ವಿವರಗಳೊಂದಿಗೆ ಸಂಕ್ಷಿಪ್ತವಾದದ್ದೇ ಸಾಕು. ಮೇದಿನೀ ರಾಯ್ ರಂಗಕ್ಕೆ ಬಂದ ನಂತರ ಸ್ವಲ್ಪ ಬಣ್ಣ ಬೆರೆಸು".

ನನಗೆ ಕೌಸಲ್ಯ ಹೇಳಿದ್ದಿದು. ಅದು ಪದಶಃ ಅಲ್ಲ. ಅಲ್ಲದೆ ಅದಕ್ಕೆ ನನ್ನ ಕಡೆಯ ಪಾರ್ಶ್ವ ಟಿಪ್ಪಣಿಗಳಿವೆ. ಆದರೆ ಅದಕ್ಕೆ ತುಂಬ ಹತ್ತಿರವಾದ್ದು.

ಎರಡನೆಯ ಮಹಮ್ಮದ್ ಖಾಲ್‌ಜೀಯ ತಾತನ ಹೆಸರು ಘಿಯಾತ್ ಉದ್ದೀನ್ (ಅವನ ರಾಣಿವಾಸದಲ್ಲಿ ಹದಿನೈದು ಸಾವಿರ ಜನ ಹೆಂಗಸರಿದ್ದರೆಂಬ ಖ್ಯಾತಿಗೆ ಒಳಗಾಗಿದ್ದವನು ಎಂದು ಹೇಳುವುದನ್ನು ಹತ್ತಿಕ್ಕಲಾರೆ. ಅದರಲ್ಲಿನ ಒಂದು ಸಾವಿರ ಜನರು ಅವನ ವೈಯಕ್ತಿಕ ಅಂಗರಕ್ಷಕರು. ನಾನು ಅಂಕೆಗಳನ್ನು ಅಕ್ಷರದಲ್ಲಿ ಬರೆದಿರುವುದಕ್ಕೆ ಕಾರಣ, ನಾನು ಅಲಕ್ಷ್ಯದಿಂದ ಪರಿಣಾಮಕಾರಿ ಮಾಡಲು, ಒಂದೆರಡು ಸೊನ್ನೆಗಳನ್ನು ಸೇರಿಸಿರಬಹುದೆಂದು ನೀವು ತಿಳಿಯುವಿರಿ ಎಂದು ನನಗೆ ಖಚಿತವಿತ್ತು.)

ತನ್ನ ತಾತನಂತಲ್ಲದೆ, ಎರಡನೇ ಮಹಮ್ಮದ್ ಖಾಲ್‌ಜೀಯು ದುರ್ಬಲ ಮತ್ತು ಬಾಲಿಶ ವ್ಯಕ್ತಿ. ಅವನು ತನ್ನದೇ ಆದ ಅಭಿಪ್ರಾಯವನ್ನು ಹೊಂದಲು ಅಥವಾ ನಿರ್ಣಾಯಕವಾಗಿ ನಡೆದುಕೊಳ್ಳಲು ಅಸಮರ್ಥನಾಗಿದ್ದ. ಅವನು ಪ್ರತಿಯೊಂದು ಕತೆ, ವದಂತಿ ಅಥವಾ ಗಾಳಿಯಲ್ಲಿ ತೇಲುತ್ತಿದ್ದ ವದಂತಿಯನ್ನು ನಂಬಿದನು. ಅಲ್ಲದೆ ಉಚ್ಚ ಅಥವಾ ಕೆಳಮಟ್ಟದ ಕಾರಸ್ಥಾನದ ಒಲವುಳ್ಳ ಯಾವುದೇ ಕುಲೀನ ಅಥವಾ ಅಮೀರನಿಗೆ ಕಿವಿಗೊಡಲು ಅವನು ಅತ್ಯುತ್ಸಾಹ ತೋರುತ್ತಿದ್ದನು.

ಬಹಳ ಬೇಗನೆ, ಮಹಮ್ಮದ್ ಖಾಲ್‌ಜೀಯು ರಾಜ್ಯವಿಲ್ಲದ ರಾಜನಾದನು. ಅವನ ತಮ್ಮನು 'ಮಂಡು'ವನ್ನು ವಶಪಡಿಸಿಕೊಂಡು ಸಿಂಹಾಸನವನ್ನು ಅತಿಕ್ರಮಿಸಿದನು. ಸುಲ್ತಾನನ

ಅನುಯಾಯಿಗಳು ಅವನನ್ನು ತೊರೆದುಬಿಟ್ಟರು ಮತ್ತು ಅವನು ಇನ್ನೆಂದಿಗೂ ಅಧಿಕಾರವನ್ನು ಮರಳಿ ಪಡೆಯಲಾರನೆನಿಸಿತು.

ಆಗ ಪೂರ್ವದ ಕಡೆಯಿಂದ ರಾಯ್‌ಚಂದ್ ಪೂರಬಿಯ ಎಂಬ ರಜಪೂತನ ಪ್ರವೇಶವಾಯಿತು. ಅವನ ಹಿಂದಿನ ಕತೆ ಒಂದು ರಹಸ್ಯವಾಗಿತ್ತು. ಸರಿಪಡಿಸಲಾಗದಷ್ಟು ತೀವ್ರ ನಿರಾಶೆಯ ಸ್ಥಿತಿಯನ್ನು ತಲುಪಿದ್ದ ರಾಜನ ಅದೃಷ್ಟದೊಂದಿಗೆ ಯಾವ ಮನುಷ್ಯತಾನೆ ತನ್ನ ಅದೃಷ್ಟವನ್ನು ಜೊತೆಗೂಡಿಸಲಿಚ್ಛಿಸುತ್ತಾನೆ? ಮಹಮ್ಮದ್ ಖಾಲ್‌ಜಿಯ ದುರದೃಷ್ಟವನ್ನು ತಿರುಗು ಮುರುಗು ಮಾಡಿ, ಮಂಡುವಿನ ಸಿಂಹಾಸನದ ಮೇಲೆ ಅವನನ್ನು ಪ್ರತಿಷ್ಠಾಪಿಸಬಲ್ಲೆನೆಂದು, ಮೇದಿನಿ ರಾಯ್ ಭಾವಿಸಲು ಕಾರಣವಾದ್ದು ವಿಧಿಯಲ್ಲಿನ ಅವನ ನಂಬಿಕೆಯೋ, ಅಥವಾ ನಿರ್ಲಕ್ಷ್ಯವೋ ಇಲ್ಲ ಮಿತಿಮೀರಿದ ಅಹಂಕಾರವೊ? ಅವನ ಬಳಿ ಇದ್ದ ಸೇನಾಪಡೆಗಳೆಷ್ಟು? ಕೌಸಲ್ಯಳ ಬಳಿ ಈ ಪ್ರಶ್ನೆಗಳಿಗೆಲ್ಲ ಉತ್ತರವಿರಲಿಲ್ಲ. ನನ್ನ ಬಳಿಯಾದರೂ ಖಂಡಿತಾ ಉತ್ತರವಿರಲಿಲ್ಲ ಮತ್ತು ಮೇವಾಡದ ಅಥವಾ ಮಾಳ್ವದ ಬಹಳಷ್ಟು ಜನಗಳಿಗೇ ಆದರೂ ಆ ವಿಷಯದಲ್ಲಿ ಏನೂ ಸುಳಿವು ಸೂಚನೆಗಳಿದ್ದಿರಲಿಲ್ಲ. ಅದು ಹೇಗಾದರೂ ಇರಲಿ. ಮಹಮ್ಮದನ ಮೇಲೆ ಕವಿದಿದ್ದ ಕಾರ್ಮೋಡ ರಾತ್ರೋ ರಾತ್ರಿಯಲ್ಲಿ ಸರಿದು ಹೋಯಿತು.

ರಾಯ್ ಚಂದ್ ಪೂರಬಿಯಾ ಮಾಟ ಮಂತ್ರ ಮಾಡುವವನಲ್ಲ. ನರ್ಮದೆಯ ಈ ಬದಿಯ ಅತಿದೊಡ್ಡ ಸೇನಾಧಿಪತಿ ಎಂಬ ಹೆಸರು ಅವನಿಗಿರಲಿಲ್ಲ. ಆದರೆ ರಾಶಿ ಚಕ್ರದಲ್ಲಿರುವ ಗ್ರಹಗಳನ್ನೆಲ್ಲ ಅತ್ಯಂತ ಶುಭಪ್ರದವಾದೊಂದು ಮುಹೂರ್ತದಲ್ಲಿ ಒಂದೆಡೆ ಸಂಧಿಸುವಂತೆ ಮಾಡಲು ಅವನಿಗೆ ಸಾಧ್ಯವಾಗಿತ್ತು. ಮಾಳ್ವದ ಇಬ್ಬರು ಪರಸ್ಪರ ಶತ್ರು ಸುಲ್ತಾನರ ಸೈನ್ಯಗಳು ಅಂತಿಮವಾಗಿ ಸಂಧಿಸಿದಾಗ ರಾಯ್ ಚಂದ್, ಆಕ್ರಮಣಕಾರನನ್ನು ಪಲಾಯನ ಗೈಯುವಂತೆ ಮಾಡಿದನು.

ತನ್ನ ಅದೃಷ್ಟ ಅತ್ಯಂತ ಅಧಃಪತನದ ಆಳವನ್ನು ಮುಟ್ಟಿದ್ದಾಗ, ತನ್ನನ್ನು ಪಾರು ಮಾಡಿದ್ದ ಮನುಷ್ಯನಿಗೆ ಮಹಮ್ಮದ್ ಖಾಲ್ಜಿ ಅತ್ಯಂತ ಕೃತಜ್ಞನಾಗಿದ್ದನು. ಅವನು ಆತನನ್ನು ತನ್ನ ಮಂತ್ರಿಯನ್ನಾಗಿ ನೇಮಿಸಿಕೊಂಡು ಅವನಿಗೆ, ಇಡೀ ದೇಶದಲ್ಲೆಲ್ಲಾ ಈ ಪ್ರಖ್ಯಾತವಾಗಿರುವ ಮೇದಿನಿರಾಯ್ ಎಂಬ ಬಿರುದನ್ನು ನೀಡಿದನು. ಬಹುಶಃ ಅಕಾಲದ ಸ್ನೇಹಿತರ ಹೊರತು ಬೇರೆ ಸ್ನೇಹಿತರನ್ನು ಹೊಂದಲು ಸುಲ್ತಾನನು ಅಸಮರ್ಥನಾಗಿದ್ದನು. ಮಂತ್ರಿ ತಪ್ಪು ಮಾಡಲಾರ. ರಾಯ್ ಬಗೆಗಿನ ಮಹಮದ್ ಖಾಲ್‌ಜೀಯ ಅವಲಂಬನೆ ಮತ್ತು ಮೆಚ್ಚುಗೆ ಯಾವುದೇ ಅಡ್ಡಿ ಇಲ್ಲದೆ ಹೆಚ್ಚುತ್ತಾ ಹೋಯಿತು.

ಮೇದಿನಿ ರಾಯ್ ಕೂಡ ತನ್ನ ಹಿಂದಿನವರಿಂದ ಯಾವುದೇ ಪಾಠವನ್ನ ಕಲಿತಂತೆ ಕಾಣುವುದಿಲ್ಲ. ಬಹುಶಃ ಅಧಿಕಾರ ಮಾಡುವುದು ಅದನ್ನೇ; ಅತ್ಯಂತ ಸ್ಪಷ್ಟವಾಗಿರುವುದನ್ನು ಕಾಣದಂತೆ ಕುರುಡಾಗಿಸುತ್ತದೆ. ತನ್ನದೇ ಅವನತಿ ಮತ್ತು ಅಧಃಪತನದ ಮುನ್ಸೂಚನೆಗಳನ್ನು ಅವರು ಕಾಣದಾದರು. ಮಹಮ್ಮದ ಖಾಲ್‌ಜೀಯು ತಾನು ಕೇವಲ ಒಂದು ಆಟಿಕೆಯಾಗಿದ್ದೇನೆಂದು ಅರ್ಥಮಾಡಿಕೊಳ್ಳುವುದಿಲ್ಲವೆಂದು ರಾಯ್ ನಿಜಕ್ಕೂ ನಂಬಿದರೆ? ಅದರಲ್ಲೂ ತಮ್ಮ ಪ್ರಭುವನ್ನು ಪ್ರಕ್ಷುಬ್ಧ ಸ್ಥಿತಿಯತ್ತ ದೂಡುವ ಅತೃಪ್ತ ಮತ್ತು ಹತಾಶ ಕುಲೀನ ವರ್ಗದವರಿಗೇನೂ ಕೊರತೆಯಿಲ್ಲದೆ ಇದ್ದಾಗ? ಸುಲ್ತಾನನ ಕೆಲವು ಅಚ್ಚು ಮೆಚ್ಚಿನವರು, ಅವನ ಸೂಚನೆಯ ಮೇರೆಗೆ ಅವನ ಮಂತ್ರಿಯನ್ನು ಕೊಲ್ಲುವ ಯತ್ನ ಮಾಡಿದಾಗ, ಘಟನೆಗಳು ಒಂದು ಸುತ್ತು ಬಂದುವು. ಮೇದಿನಿರಾಯ್ ತೀವ್ರವಾಗಿ ಗಾಯಗೊಂಡರು, ಆದರೆ ಬದುಕುಳಿದರು. ಸಿಟ್ಟಿಗೆದ್ದ ರಜಪೂತರು, ಮೇದಿನೀ ರಾಯ್

ಮಗನ, ನೇತೃತ್ವದಲ್ಲಿ ಅರಮನೆಯ ಮೇಲೆ ಆಕ್ರಮಣ ಮಾಡಿದರು. ರಾಜ ಮತ್ತು ಅವನ ರಕ್ಷಕರು ಅರಮನೆಯನ್ನು ಬಲವಾಗಿ ರಕ್ಷಿಸಿದರು ಮತ್ತು ರಜಪೂತರನ್ನು ಓಡಿಸಿದರು. ಆಗ ಆದ ಹೊಡೆದಾಟದಲ್ಲಿ ಮೇದಿನೀರಾಯ್‌ನ ಮಗನು ಕೊಲ್ಲಲ್ಪಟ್ಟನು. ವೈಯಕ್ತಿಕವಾದ ಈ ಘೋರ ನಷ್ಟದ ಹೊರತಾಗಿಯೂ– ಇನ್ನು ಅವನ ದೇಹಕ್ಕಾದ ಗಾಯದ ಬಗ್ಗೆ ಹೇಳುವುದೇ ಬೇಡ– ಮೇದಿನೀ ರಾಯ್ ಸುಲ್ತಾನನಿಗೆ ಹೀಗೆ ಪತ್ರ ಬರೆದನು: "ನಾನು ನನ್ನ ಇಡೀ ಜೀವನ ಪರ್ಯಂತವೂ ನಿಮ್ಮ ಅಭ್ಯುದಯವನ್ನು ಹಾರೈಸುವುದೊಂದನ್ನು ಬಿಟ್ಟು ಬೇರೇನನ್ನೂ ಮಾಡಿಲ್ಲದಿರುವುದರಿಂದ, ಹಾಗೂ ಉಪ್ಪಿನ ಋಣಕ್ಕೆ ತಕ್ಕಂತೆ ನಡೆದುಕೊಂಡಿರುವುದರಿಂದ, ಗಾಯಗಳಿಂದ ನನ್ನ ಜೀವವನ್ನು ಸುರಕ್ಷಿತವಾಗಿ ಕಾಯ್ದುಕೊಂಡಿದ್ದೇನೆ. ನನ್ನನ್ನು ಸಾಯಿಸುವುದರಿಂದ ನಿಜಕ್ಕೂ ಸಾಮ್ರಾಜ್ಯದ ವ್ಯವಹಾರಗಳನ್ನು ಇನ್ನೂ ಚೆನ್ನಾಗಿ ನಡೆಸಬಹುದೆನ್ನುವುದಾದರೆ, ಅದಕ್ಕೂ ನನ್ನ ಅಭ್ಯಂತರವಿಲ್ಲ." ಅದು ಎಂಥ ಕೋರಿಕೆಯ ಪತ್ರವಾಗಿತ್ತೆಂದರೆ ತಮ್ಮ ಧಣಿಗೆ ನೋವುಂಟು ಮಾಡಿದ್ದ ಬಹುಪಾಲು ಕುಲೀನರು ಅವನ ಕ್ಷಮೆ ಕೋರಿ ಪತ್ರ ಬರೆದರು. ಮೇದಿನೀ ರಾಯ್‌ಗೆ ತಾನು ಪತ್ರದಲ್ಲಿ ಬರೆದಿದ್ದಂತೆ ನಡೆಯುವ ಉದ್ದೇಶವಿತ್ತೆ? (ತಾನು ಅವನ ತರುವಾಯದಲ್ಲಿ ಅದನ್ನಿಡುವುದಿಲ್ಲ ಎಂದು ಕೌಸಲ್ಯ ಹೇಳಿದಳು.)

ದೊರೆ ಮತ್ತು ಆತನ ಮಂತ್ರಿಯ ನಡುವೆ ಮತ್ತೆ ಸ್ನೇಹ ಸಂಬಂಧ ಸ್ಥಾಪಿತವಾಯಿತು. ಆದರೆ ಅದು ಉಳಿಯುವಂಥದಲ್ಲವೆಂದು ಕಂಡುಕೊಳ್ಳಲು ಅತೀಂದ್ರಿಯ ದೃಷ್ಟಿ ಹೊಂದಿರುವವನೇನೂ ಬೇಕಾಗಲಿಲ್ಲ. ಮೇದಿನಿರಾಯ್ ರಾಜನನ್ನು ರಕ್ಷಿಸಿದ್ದು ಅವನು ಪಲಾಯನ ಮಾಡುತ್ತಿದ್ದಾಗ. ಇದೀಗ ಅದೇ ಮನುಷ್ಯನಿಂದ ದೊರೆ ಪಲಾಯನ ಮಾಡುತ್ತಿದ್ದನು. ಅವನು ಒಂದು ರಾತ್ರಿ ಮಂಡುವನ್ನು ಬಿಟ್ಟು ಗುಜರಾತಿನ ಮುಝಾಫರ್ ಷಾನಲ್ಲಿ ಆಶ್ರಯಪಡೆದನು.

ಮಹಮ್ಮದ್ ಖಾಲ್ಜಿ ಮತ್ತು ಮುಝಫರ್ ಷಾರ ಸೈನ್ಯಗಳು ಒಟ್ಟುಗೂಡಿ ಮಂಡೂವಿನತ್ತ ಮುನ್ನುಗ್ಗುತ್ತಿವೆ ಎಂದು ಮೇದಿನೀ ರಾಯ್‌ಗೆ ತಿಳಿದು ಬಂದಾಗ, ಅವರು ರಾಜಧಾನಿಯನ್ನು ತನ್ನ ನಿಯೋಗಿಯ ರಕ್ಷಣೆಗೆ ಬಿಟ್ಟು, ತಂದೆಯವರ ನೆರವನ್ನು ಕೋರಲು ಮೇವಾಡದ ಆಸ್ಥಾನದತ್ತ ಹೊರಟರು. ಆದರೆ ತಂದೆಯವರು ಮತ್ತು ಮೇದಿನೀರಾಯ್ ಮಾಳ್ವದ ರಾಜಧಾನಿಯನ್ನು ತಲುಪುವ ಮುನ್ನ, ಮಂಡೂ ಕೋಟೆಯನ್ನು ನಾಶಪಡಿಸಲಾಗಿದೆ ಹಾಗೂ ಮುಝಫರ್ ಷಾ ಕಗ್ಗೊಲೆಗೆ ಆದೇಶಿಸಿದ್ದು, ಅದರಲ್ಲಿ ಇಪ್ಪತ್ತು ಸಾವಿರ ಸೈನಿಕರು, ಕೆಲವು ಅಂದಾಜಿನ ಪ್ರಕಾರ ನಲವತ್ತು ಸಾವಿರ ಸೈನಿಕರು ಕೊಲ್ಲಲ್ಪಟ್ಟರು ಎಂಬ ಸುದ್ದಿ ಅವರಿಗೆ ಸಿಕ್ಕಿತು.

ಅದು ಸ್ವಲ್ಪ ಸಮಯದ ಹಿಂದೆ. ಗುಜರಾತಿನ ಸುಲ್ತಾನ್ ಮುಝಫರ್ ಷಾ ಇನ್ನು ಮುಂದೆ ಮಹಮ್ಮದ್ ಖಾಲ್ಜಿಯ ನೆರವಿಗೆ ನಿಲ್ಲಲಿಲ್ಲ. ಆದರೆ ಗಾರ್‌ಗೋನ್‌ಗೆ ಹೋಗಿದ್ದ. ಮೇದಿನಿರಾಯ್‌ನನ್ನು ತಾನು ಬೇಗನೆ ನಾಶಪಡಿಸದಿದ್ದರೆ ತೀರಾ ತಡವಾಗಿ ಬಿಡುತ್ತದೆಂದು ಅರಿತನು.

ಅಧ್ಯಾಯ 31

ತದ್ರೂಪಿಗಳಾದ ಅವಳಿಗಳು ತುಂಬ ನಿಕಟವಾಗಿರುತ್ತಾರೆ. ಆದರೆ ನಿಜವಾದ ಶತ್ರುಗಳು ನಿಕಟತರವಾಗಿರುತ್ತಾರೆ.

ಮಂಗಳ್, ಮಮತಾ ಮತ್ತು ರಾಜಕುಮಾರಿಯೊಂದಿಗೆ ಮಹಾರಾಜ್‌ಕುಮಾರ್ ಚಿತ್ತೂರಿಗೆ ಬಂದ ಕೂಡಲೇ ಮಾಡಿದ ಮೊತ್ತ ಮೊದಲ ಕೆಲಸಗಳಲ್ಲೊಂದು, ಅರಮನೆಯ ತನಗೆ ಸೇರಿದ ವಿಶಾಲವಾದ ಆವರಣದಲ್ಲಿ ಪಾರಿಜಾತದ ಸಸಿಯೊಂದನ್ನು ನೆಟ್ಟಿದ್ದು. ಆ ಜಾಗದ ಮಧ್ಯಕ್ಕೆ ಸರಿಯಾಗಿ ಗುಣಿಯೊಂದನ್ನು ತೆಗೆಸುವ ಇಚ್ಛೆ ಅವನಿಗಿತ್ತು. ಆದರೆ ಆ ಭಾಗ ತುಳಸೀ ಗಿಡಕ್ಕೆ ಸೇರಿತ್ತಾದ್ದರಿಂದ ಅದು ಸಾಧ್ಯವಾಗಲಿಲ್ಲ. ತುಳಸಿಯಷ್ಟು ಉತ್ಕಟವಾದ ಪತಿನಿಷ್ಠೆ ಹೊಂದಿರುವ ಬೇರೊಬ್ಬ ಹೆಣ್ಣಿಲ್ಲವಾದ ಕಾರಣ, ಪ್ರತಿಯೊಬ್ಬ ಗೃಹಿಣಿಯೂ ತುಳಸಿಯನ್ನು ಪೂಜಿಸುತ್ತಾಳೆ. ಪಾರಿಜಾತವು ತನ್ನ ರೆಂಬೆಗಳನ್ನು ಚಾಚಲು ಸಾಕಷ್ಟು ಸ್ಥಳಾವಕಾಶವಿರಲನುಕೂಲವಾಗುವಂತೆ ಗೋಡೆಗೆ ತೀರ ನಿಕಟವಲ್ಲದ ಜಾಗವನ್ನು ಆಯ್ಕೆ ಮಾಡಿದನು. ಪ್ರತಿ ಬೆಳಿಗ್ಗೆಯೂ ಸ್ನಾನ ಮಾಡಿ ಸ್ತೋತ್ರಗಳನ್ನು ಹೇಳಿದ ಕೂಡಲೇ ನೀರಿನ ಬಿಂದಿಗೆಯನ್ನು ತೆಗೆದುಕೊಂಡು, ಬೇರು ಬಿಡುತ್ತದೆ ಮತ್ತು ಹೂವು ಮೂಡುತ್ತದೆ ಎಂದು ತನಗೆ ಅನ್ನಿಸಿದ ಪಾರಿಜಾತದ ಆ ಟೊಂಗೆಗೆ ನೀರುಣಿಸುತ್ತಿದ್ದನು. (ಅರಮನೆಯ ಹಿಜಡಾಗಳು ಮತ್ತು ಹೆಣ್ಣಾಳುಗಳು ಅವನನ್ನು ನೋಡಿ ಕಿಸಿಕಿಸಿ ನಗುತ್ತಾ ರಾಜಮಾಲಿ ಎಂದು ಕರೆಯುತ್ತಿದ್ದುದು ಅವನಿಗೆ ಕೇಳಿಸುತ್ತಿತ್ತು).

ಹತ್ತಿರ ಹತ್ತಿರ ಒಂದು ತಿಂಗಳಾಯಿತು. ಆದರೆ, ಹಸಿರು ಚಿಗುರು ಮೂಡುವ ಬದಲು ಗಿಡ ರಾಜಕುಮಾರನಿಗಾಗಿ ಸಾಯುವಂತೆ ಕಂಡು ಬಂದಿತು. ಅವನು ಅದನ್ನು ಅಗೆದು ಕಿತ್ತು ಹಾಕಿ ಮಣ್ಣನ್ನು ತಿರುವಿ ಹಾಕಿದನು. ಏಳು ದಿನಗಳ ನಂತರ ಅದು ಉಳಿಯುವ ಭರವಸೆಯಿಲ್ಲವೆಂದು ಅವನಿಗೆ ಗೊತ್ತಿತ್ತು. ಕೆಲವರಿಗೆ ಹಸುರು ಹೆಬ್ಬೆರಳಿದ್ದರೆ, ಇನ್ನು ಕೆಲವರಿಗೆ ಸಾವಿನ ವರವಿರುತ್ತದೆ ಎಂದು ತನಗೆ ತಾನೇ ಹೇಳಿಕೊಂಡನು. ಅದೊಂದು ಕಟು ಹಾಸ್ಯದ ಉಕ್ತಿ ಎಂದು ಭಾವಿಸಿದ್ದನು. ಆದರೆ ಯಾರೋ ಆ ಮುರುಟಿದ ಟೊಂಗೆಯನ್ನು ತನ್ನ ಹೃದಯಕ್ಕೆ ನಾಟಿಸಿಬಿಟ್ಟಂತೆ ಅವನಿಗನ್ನಿಸಿತು.

ತೋಟದ ಮಾಲಿಯು ಅವನನ್ನು ಹಲವಾರು ದಿನಗಳಿಂದ ಗಮನಿಸುತ್ತಿದ್ದನು. ಆದರೆ ಹೀಗಲ್ಲ ಹೀಗೆ ಎಂದು ತಿಳಿಹೇಳಲು ಮುಂದೆ ಬರುವುದನ್ನು ತಡೆದುಕೊಂಡಿದ್ದನು.

ಅವನು ತನ್ನ ಪಾಡಿಗೆ ತನ್ನನ್ನು ಬಿಟ್ಟದ್ದಕ್ಕೆ ರಾಜಕುಮಾರನಿಗೆ ಸಂತೋಷವೇ ಆಯಿತು. ಆದರೆ ತನಗೆ ಅಷ್ಟೊಂದು ಮುದವೆನಿಸಿದ ಆ ಒಣ ಕಡ್ಡಿಯನ್ನು ಮತ್ತೆ ಚಿಗುರುವಂತೆ ಮಾಡಬೇಕೆನ್ನುವಷ್ಟು ಸಭ್ಯತೆ ಆ ಮನುಷ್ಯನಿಗಿರಲಿಲ್ಲವಲ್ಲ ಎಂದು ಅಸಮಾಧಾನವೂ ಆಯಿತು.

ಮಹಾರಾಜ್‌ಕುಮಾರ್‌ಗೆ ತನ್ನ ಸೋಲನ್ನು ಒಪ್ಪಿಕೊಳ್ಳಲು ಇಷ್ಟವಿರಲಿಲ್ಲ. ಆದರೂ ಆ ನುರಿತ ವ್ಯಕ್ತಿಯ ಬಳಿ ಹೋಗಿ ಅವನ ಅಭಿಪ್ರಾಯವನ್ನು ಕೇಳದೆ ಗತ್ಯಂತರವಿರಲಿಲ್ಲ. ಹಾಗಾಗಿ "ಈ ಗಿಡಕ್ಕೆ ಮರುಜನ್ಮ ನೀಡುವಂಥ ಗೊಬ್ಬರವೇನಾದರೂ ಇದೆಯೆ? ಒಂದು ರೀತಿಯ ಸಂಜೀವಿನಿಯಂಥದ್ದು?" ಎಂದು ಕೇಳಿದನು.

"ಸತ್ತು ಹೋಗಿರುವುದನ್ನು ಬದುಕಿಸುವಂಥ ಯಾವ ಸಂಜೀವಿನಿಯೂ ಇಲ್ಲವೆಂಬುದೇ ನನ್ನ ಆತಂಕ. ಬದುಕಿರುವುದಕ್ಕೆ ಮಾತ್ರ ಅದು ಅಮರತ್ವವನ್ನು ತಂದುಕೊಡಬಹುದು. ಆದರೆ ಆ ಸಸ್ಯಕ್ಕೆ ಯಾವುದೇ ಗೊಬ್ಬರ ಬೇಕಿಲ್ಲ. ತಾವು ತಮ್ಮ ಅತಿಯಾದ ಮುತುವರ್ಜಿ ಮತ್ತು ಲಕ್ಷ್ಯದಿಂದ ಅದನ್ನು ಸುಟ್ಟುಬಿಟ್ಟಿದ್ದೀರಿ. ಮರಗಳೊಂದಿಗೆ ಮಾತಾಡುವುದೇನೋ ತುಂಬ ಒಳ್ಳೆಯದೇ. ಆದರೆ ಎಳೆಯ ಸಸಿಗೆ ತಾವು ಒಂದು ರಾತ್ರಿಗೆ ಮೂರು ನಾಲ್ಕು ಸಲ ನೀರು ಹಾಕುವುದಾಗಲಿ, ಅದನ್ನು ತಬ್ಬಿಕೊಳ್ಳುವುದಾಗಲಿ, ಮುದ್ದು ಮಾಡುವುದಾಗಲಿ ಹಾಗೂ ತಕ್ಷಣ ಚಿಗುರಿ ಬೆಳೆಯದೆ ಹೋದರೆ ಅದರ ಪರಿಣಾಮ ನೆಟ್ಟಗಾಗುವುದಿಲ್ಲ ಎಂದು ಬೆದರಿಕೆ ಹಾಕುವುದಾಗಲಿ ಮಾಡುವಂತಿಲ್ಲ."

ರಾಜಕುಮಾರನಿಗೆ ಅವನ ಕುತ್ತಿಗೆ ಹಿಸುಕಿ ಸಾಯಿಸಬೇಕೆಂದು ಆಸೆ. ಏನೇ ಆದರೂ ಮಾಲಿಯು ತನ್ನ ತಲೆಚಿಟ್ಟು ಹಿಡಿಸುವ ಉಪದೇಶವನ್ನಿನ್ನೂ ಮುಗಿಸಿರಲಿಲ್ಲ "ಆಗಾಗ್ಗೆ ಒಂದಿಷ್ಟು ಆರೈಕೆ ಮಾಡಿ, ಪ್ರಕೃತಿಯನ್ನು ಅದರ ಪಾಡಿಗೆ ಅದನ್ನು ಬಿಟ್ಟು ಬಿಡುವುದನ್ನು ಕಲಿತುಕೊಳ್ಳಿ. ಬಹುಶಃ ಅದು ಧೈರ್ಯ ತಂದುಕೊಂಡು, ಈಗಲೂ ಅದರ ಬೂದಿಯಿಂದ ಎದ್ದರೂ ಏಳಬಹುದು" ಎಂದನು.

ಈಗಲಾದರೂ ಅವನು ಪಾರಿಜಾತದ ಗಿಡವನ್ನು ಪುನಶ್ಚೇತನಗೊಳಿಸುವ ಕೆಲಸವನ್ನು ಕೈಗೆತ್ತಿಕೊಂಡಾನೆಂದು ಮಹಾರಾಜ್‌ಕುಮಾರ್ ನಿರೀಕ್ಷೆ. ಆದರೆ ಅಂಥದ್ದೇನೂ ಅವನ ಬಾಯಿಂದ ಬರಲಿಲ್ಲ.

"ನನಗೋಸ್ಕರ ಈ ಗಿಡವನ್ನು ಜೋಪಾನವಾಗಿ ನೋಡಿಕೊಳ್ಳುವಷ್ಟು ಕೃಪೆ ಮಾಡ್ತೀಯಾ?"

"ಖಂಡಿತ ಮಹಾಸ್ವಾಮಿ. ಅದಕ್ಕೋಸ್ಕರವೇ ನನಗೆ ಸಂಬಳ ಕೊಡ್ತಾ ಇರೋದು ಅಂತ ನಂಬಿದ್ದೀನಿ"

ಪಾರಿಜಾತವು ಮುಂದಿನ ವಾರವೇ ಸತ್ತು ಹೋಯಿತು ಅಂತ ಆದರೆ, ಈ ಕೊಳಕು ಮನುಷ್ಯನನ್ನು ನಾನು ನಿಶ್ಚಿಂತೆಯಿಂದ ಕೆಲಸದಿಂದ ವಜಾಮಾಡಿ ಮನೆಗೆ ಕಳಿಸಬಹುದು ಅಥವಾ ಬಹಿರಂಗವಾಗಿ ಅವನ ತಲೆಯನ್ನು ತೆಗೆಸಬಹುದು ಎಂದು ರಾಜಕುಮಾರನು ಯೋಚಿಸಿದನು. ಆದರೆ ಒಂದೆರಡೇ ದಿನಗಳಲ್ಲಿ ಆ ಕಡ್ಡಿಗೆ ಅದರ ಮೊದಲಿನ ಬಣ್ಣ ಬಂದಿತ್ತು. ಒಂದೇ ವಾರದಲ್ಲಿ ಏಳು ಚಿಗುರಿದ ಎಲೆಗಳೊಂದಿಗೆ ನಳ ನಳಿಸುತ್ತಿತ್ತು, ಹಾಗೂ ಏಳು ತಿಂಗಳಲ್ಲಿ ಇಡೀ ಪ್ರಾಂಗಣ ಪಾರಿಜಾತದ ಹೂಗಳ ರಾಶಿಯಿಂದ ತುಂಬಿತ್ತು. ಪ್ರತಿದಿನ ಬೆಳಿಗ್ಗೆ ಹೂಗಳನ್ನು ಬಿಡಿಸಿಕೊಂಡು ಬಂದು ಅರೆ ನಿದ್ರಾವಸ್ಥೆಯಲ್ಲಿದ್ದ ರಾಜಕುಮಾರಿಯ ಮೇಲೆ ಅವುಗಳನ್ನು ಸುರಿಯುತ್ತಿದ್ದನು. ಕೆಲವೊಮ್ಮೆ ಅವನ್ನು ಅವಳ

ಜಡೆಗೆ ಮುಡಿಸುತ್ತಿದ್ದನು ಇಲ್ಲವೆ ಅವನ್ನೆಲ್ಲಾ ಹಾರವಾಗಿ ಪೋಣಿಸಿ ಅವಳ ಕೊರಳಿಗೆ ಹಾಕುತ್ತಿದ್ದನು.

* * *

ಆ ಕೊಠಡಿಯೊಂದು ಕತ್ತಲೆಯ ಅಭೇದ್ಯ ಕೋಟೆಯಾಗಿತ್ತು. ಅವಳು ಅಲ್ಲಿರಲಿಲ್ಲವೆಂದು ಅವನಿಗೆ ಗೊತ್ತಿತ್ತು. ಪ್ರಬಲವಾದ ಮತ್ತು ಅಗಾಧವಾದ ಭಯ ಅವನನ್ನು ಆವರಿಸಿಬಿಟ್ಟಿತ್ತು. ಬೋರಲಾಗಿ ಬಿದ್ದು ಹಾಸಿಗೆಯನ್ನು ಮುಟ್ಟುವವರೆಗೂ ಕೈಗಳಿಂದ ತಡಕಾಡುತ್ತಿದ್ದನು. ಅವಳು ಅದರ ಮೇಲೆ ಮಲಗಿರಲಿಲ್ಲ. ಅವನು ಅದರ ಕೆಳಕ್ಕೆ ಜಾರಿಕೊಂಡು ತನ್ನ ಹೊಟ್ಟೆಯ ಮೇಲೆ ಅಲುಗಾಡದೆ ಮಲಗಿ ಭದ್ರವಾಗಿ ಕಣ್ಣುಗಳನ್ನು ಮುಚ್ಚಿಕೊಂಡನು. ಮಿತಿಮೀರಿ ರೇಗಾಡಿಬಿಟ್ಟು ಮತ್ತೆಂದಿಗೂ ವಿವೇಚನೆಗೆ ಕಿವಿಗೊಡದಂತಾಗಿ ಬಿಡಬೇಕೆಂಬ ಅತ್ಯಂತ ಬಲವತ್ತರವಾದ ಬಯಕೆ ಅವನಿಗುಂಟಾಯಿತು. ಬೋರಲಾಗಿ ಮಲಗಿದ್ದು ಏಳುವಾಗ ಹಾಸಿಗೆಯನ್ನು ಬೆನ್ನ ಮೇಲೇರಿಕೊಂಡೇ ಮೇಲೆತ್ತಿದನು. ಕೊನೆಗೂ ಭೂತಾನಿ ಮಾತೆಯೇ ಗೆದ್ದು ಬಿಟ್ಟಳೆ? ಅವಳು ಅವನ ಹೆಂಡತಿಯನ್ನು ಮುಗಿಸಿಬಿಟ್ಟಳೆ? ಅವನು ನೆಲದ ಮೇಲೆ ಪ್ರಾಣಿಯಂತೆ ತೆವಳುತ್ತಿದ್ದನು. ಹಾಸಿಗೆಯೆನ್ನುವುದು ಕೋಣೆಯ ಗೋಡೆಗಳಿಗೆ ಅಪ್ಪಳಿಸುವ ಮರದ ದಿಮ್ಮಿಯಂತಾಯಿತು. ಆಗ ಇನ್ನೂ ಭಯಂಕರವಾದೊಂದು ಆಲೋಚನೆ ಅವನಿಗೆ ಹೊಳೆಯಿತು. ಯಾರೊಂದಿಗೋ ಅವಳು ಓಡಿ ಹೋಗಿದ್ದಾಳೆ. ಹಾಸಿಗೆಯನ್ನು ಕೆಳಕ್ಕೆ ಬೀಳಿಸಿ ಅದರ ಮೇಲೆ ಅಲುಗಾಡದೆ ಮಲಗಿದನು. ಅವನು ಮೇಲಕ್ಕೇಳುವುದಿಲ್ಲ, ಈಗಾಗಲಿ ಇನ್ನೆಂದೇ ಆಗಲಿ, ಮರುದಿನ ಬೆಳಿಗ್ಗೆ ಭಯಂಕರವಾದ ಹಸಿಮಾಂಸದ ಬಣ್ಣದ ತುಟಿಗಳ, ಮಟ್ಟಸವಾಗಿ ಬಣ್ಣ ಬಳಿಯದ ನೀಲಿ ಹೆಣವಾಗಿ ಅವನನ್ನು ಅವರು ಕಾಣುವರು. ಇನ್ನು ಅವಳ ಸಮಾಚಾರವೇನು? ಅದರೊಂದಿಗೆ ಹೊರಟು ಹೋಗಲು ಅವನು ಅವಳನ್ನು ಬಿಡುವನೆ?

ಕೆಂಪನೆಯ ಬೆಳಕನ್ನು ಸ್ಫುರಿಸುವ ಹೆಜ್ಜೆ ಗುರುತುಗಳನ್ನು ಅವನು ಕಂಡನು. ಅವನು ಅದೆಷ್ಟು ಭಯದಲ್ಲಿದ್ದನೆಂದರೆ, ಅವುಗಳನ್ನವನು ಗಮನಿಸಿರಲಿಲ್ಲ. ಅಲ್ಲಿ ಅಜ್ವೋತ್ತಿದ್ದ ಕೋಮಲ ಕಿರುಹೆಜ್ಜೆಗಳನ್ನವನು ಗುರುತಿಸಿದನು. ದೊಡ್ಡ ಚಿಕ್ಕೆಯೇ ಹೆಬ್ಬೆರಳು. ಅದಕ್ಕಿಂತ ಅಳತೆಯಲ್ಲಿ ಕಿರಿದಾಗುತ್ತ ಹೋಗಿದ್ದ. ಇತರ ಬೆರಳುಗಳು. ಸ್ಪಷ್ಟವಾಗಿ, ಬಿಡಿಸಿದ ಹೆಜ್ಜೆಯ ಗೋಳಾಕೃತಿ ಘನಾಕೃತಿಯಾಗಿ ರೂಪುಗೊಂಡು, ಮೇಲ್ಪಾದದ ಕೊಂಕು ಗೆರೆಯಾಗಿ ಹಿಂದುಗಡೆಗೆ ಸಾಗಿ ಹಿಮ್ಮಡಿಯಾಕಾರ ತಾಳಿತ್ತು.

ಅಂಗಳದೊಳಕ್ಕೆ ಅವನು ನಡೆದುಹೋಗುತ್ತಿದ್ದಂತೆ, ಇದ್ದಕ್ಕಿದಂತೆ ಭಾರೀ ಶಬ್ದ ಕೇಳಿ ಬಂತು. ಏಟು ಬೀಳುವ ಸಂಭಾವ್ಯತೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ವೇಗವಾಗಿ ಪಕ್ಕಕ್ಕೆ ತಿರುಗಿದನು. ಗಾಳಿ ತುಂಬಿದ ಕಾಗದದ ಪೊಟ್ಟಣವೊಂದನ್ನು ಸ್ಫೋಟಿಸಿದ್ದಲ್ಲದೆ ತನ್ನ ಜೋರು ನಗೆಯಿಂದ ಅದನ್ನು ದ್ವಿಗುಣಗೊಳಿಸಿದ್ದಳು. ಎಲ್ಲರೂ ಕಿರಿಯ ಸಂತಳೆಂದು ಕರೆಯುತ್ತಿದ್ದದ್ದು ಇವಳನ್ನೇ ಏನು? ಅವಳೊಬ್ಬ ಬಾಲಿಕೆ, ಅದೇ ನಿಜ. ತೀರ ಸಣ್ಣ ಹಾಗೂ ಕೆಲವೊಮ್ಮೆ ಹುಡುಗಾಟಿಕೆಯ ಕೆಲಸಗಳು ಆಕೆಗೆ ಖುಷಿ ಕೊಡುತ್ತಿದ್ದವು. ತನ್ನ ಸಂತೋಷವನ್ನು ಬೇರೆಯವರಿಗೆ ಮುಟ್ಟಿಸುವ, ಬೇರೆಯವರನ್ನೂ ಮಕ್ಕಳನ್ನಾಗಿಸಿಬಿಡುವ ದೈವೀ ಉನ್ಮಾದದಿಂದ ಮೈದುಂಬಿ ಓಲಾಡುವ ನರ್ತಕರನ್ನಾಗಿಸಿಬಿಡುವ ಅಥವಾ ತೀವ್ರ ಶ್ರದ್ಧಾಳುಗಳಾದ ಪೂರ್ಣಭಕ್ತರನ್ನಾಗಿಸಿಬಿಡುವ ಅವಳ ಈ ಅಪೂರ್ವ ದೈವ ದತ್ತವಾದ ಶಕ್ತಿಯೇ ಆತಂಕಕ್ಕೀಡು ಮಾಡಿಸುವ ಸಂಗತಿಯಾಗಿತ್ತು.

ಅವಳು ಅವನ ಕೈಯನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು ಅದನ್ನು ತನ್ನ ರವಿಕೆಯಲ್ಲಿಟ್ಟುಕೊಂಡಳು. ಕಾಲ ಮತ್ತು ಗಾಳಿ ಎರಡೂ ಮುಗಿದು ಹೋಗುತ್ತಿವೆಯೇನೋ ಎಂಬಂತೆ ಅತ್ಯಂತ ವೇಗವಾಗಿ "ಮತ್ತೆ ಮತ್ತೆ ಪ್ರತಿದಿನವೂ ಅದೇ ವ್ಯಕ್ತಿಯನ್ನು ಪ್ರೀತಿಸಲು ಎಲ್ಲಾದರೂ ಸಾಧ್ಯವೆ. ಸಾಧ್ಯವೆ? ಬೇರಾವ ಹೆಂಗಸಿಗಿಂತ ನಾನು ತುಂಬ ಅದೃಷ್ಟವಂತಳಲ್ಲವೆ? ನುಡಿಸು, ನುಡಿಸು ಕೊಳಲು ನುಡಿಸಿ, ಓ ದೇವನೆ ನನ್ನ ನಾಡಿಯನ್ನು ಸ್ತಬ್ಧಗೊಳಿಸು ಹಾಗೂ ನಿನಗೂ ನನ್ನ ಒಲವು ನೀಡಬೇಕಾಗಿರುವ ಕಾರಣದಿಂದ ನನ್ನ ಹೃದಯವನ್ನು ವಿಶಾಲಗೊಳಿಸು. ವಿಶ್ವದಷ್ಟು ವಿಶಾಲವಾಗಿಸು ನನ್ನ ಹೃದಯವನ್ನು; ಅಲ್ಲ ಅಲ್ಲ ಹನ್ನೆರಡು ವಿಶ್ವಗಳಷ್ಟು ವಿಶಾಲವಾಗಿಸು. ಕೊಳಲ ನುಡಿಸು ಪ್ರಿಯತಮ" ಎಂದು ಎಲ್ಲವನ್ನೂ ಒಂದೇ ಉಸಿರಿಗೆ ಹೇಳಿಬಿಟ್ಟಳು.

ವಿಶ್ವದಷ್ಟು ವಿಶಾಲವಾಗಿ? ಅದೂ ಹನ್ನೆರಡು ವಿಶ್ವಗಳಷ್ಟು ವಿಶಾಲವಾಗಿ? ಪ್ರಿಯತಮ? ಈ ಓಬೀರಾಯನ ಕಾಲದ, ವಿಲಕ್ಷಣವಾದ, ಅದಕ್ಕಿಂತಲೂ ಕಡೆಯಾದ, ಈ ಮಾತುಗಳನ್ನು ಸಾರ್ಥಕವಾಗಿಸಿಕೊಂಡು ತಾನು ಯಶಸ್ವಿಯಾಗಿ ನಿಭಾಯಿಸಿಕೊಂಡು, ಬೇರೆಯವರೂ ಅದನ್ನೆಲ್ಲ ನಂಬುವ ಹಾಗೆ ಮಾಡುತ್ತಿದ್ದಾಳಲ್ಲ ಅದು ಹೇಗೆ? ಅವನು ವಸಂತವನ್ನುದ್ದೇಶಿಸಿ ಬಸಂತ್ ಬಹಾರ್ ಅನ್ನು ನುಡಿಸಿದನು.

'ಇಲ್ಲಿ ನೋಡಿ' ಎಂದಳು. ಅವಳ ಕೈಯಲ್ಲಿ ಎರಡು ದಂಡಗಳಿದ್ದುವು (ಕೋಲುಗಳು).

"ಇವನ್ನು ತೆಗೆದುಕೊಂಡು ಏನು ಮಾಡಬೇಕು ನಾನು?"

"ನೀನು ಕೇಳಬೇಕು. ಬೇರೆಲ್ಲರಿಗಿಂತಲೂ ನಿನಗೆ ಅದು ಚೆನ್ನಾಗಿ ಗೊತ್ತಿದೆ."

"ಇಲ್ಲ, ನನಗೆ ನೃತ್ಯ ಮಾಡುವುದು ಗೊತ್ತಿಲ್ಲ. ಅಲ್ಲದೆ ಸ್ಪಷ್ಟವಾಗಿ ಹೇಳಬೇಕೆಂದರೆ ಮೇವಾಡದ ರಾಜಕುಮಾರಿಯೊಬ್ಬಳು ಅದರಲ್ಲೇ ಮುಳುಗುವುದಲ್ಲ ಎಂದು ನನ್ನ ಅನಿಸಿಕೆ...?" ಎಂದು ಇನ್ನೇನು ಹೇಳಿಬಿಡಬೇಕೆಂದಿದ್ದನು. ಆದರೆ ಅದೃಷ್ಟವಶಾತ್, ಹಾಗೆ ಹೇಳುವುದು ಅದೆಂಥ ಆಭಾಸಕರವಾದ್ದು ಎಂದು ಅವನಿಗೆ ಅರ್ಥವಾಯಿತು. ಮಹಾರಾಣಾ ಕುಂಭನ ಹಿರಿಯ ಮಗ ಮತ್ತು ಮೇವಾಡದ ಮುಂದಿನ ಉತ್ತರಾಧಿಕಾರಿಯಾಗಬೇಕಾದ ಅವನೇ ಅದರಲ್ಲಿ ಸಾಕು ಬೇಕಾದಷ್ಟು ಮುಳುಗಿಬಿಟ್ಟಿದ್ದನು. ಬಹಳಷ್ಟು ಜನ ರಾಜಕುಮಾರರು ಕೂಡಲೇ ನಿರಾಕರಿಸಿ ಬಿಡುವಂಥ ಬಹಳಷ್ಟನ್ನು ಅವನು ಮಾಡಿಬಿಟ್ಟಿದ್ದನು. ಅಲ್ಲದೆ ಅವನ ಹೆಂಡತಿಯಾದರೆ, ಒಂದು ಸಲ ತಾನು ಮಾಡಬೇಕೆಂದುಕೊಂಡದ್ದನ್ನು ಮಾಡದಿರುವ ತೀರ್ಮಾನ ತೆಗೆದುಕೊಳ್ಳುವಂಥವಳೇ ಅಲ್ಲ. ಅವಳ ಕೈಯಲ್ಲಿದ್ದ ಎರಡು ದಂಡಗಳನ್ನು ತನ್ನ ಕೈಗಳಿಗೆ ತೆಗೆದುಕೊಂಡನು. ಅವುಗಳ ಮೇಲೆ ಹೊಳೆಯುವ ಕಪ್ಪು ಅರಗಿನ ಲೇಪವನ್ನು ತೊಡೆಯಲಾಗಿತ್ತು. ಅವುಗಳೊಳಗೆ ಚಿನ್ನದ ಬಣ್ಣದ ದ್ರಾಕ್ಷಿಯ ಬಳ್ಳಿಗಳು ಮತ್ತು ಎಲೆಗಳು ಹಾಗೂ ಕೆಂಪು ಹೂಗಳು ಕತ್ತಲೆಯಲ್ಲಿ ಫಳ ಫಳ ಹೊಳೆಯುತ್ತಿದ್ದವು. ತನ್ನ ಬಲಗೈಯನ್ನು ತನ್ನ ಲಂಗದ ಮೇಲಿನ, ಜೇಬಿನೊಳಗೆ ಇಳಿಬಿಟ್ಟಳು. ಅಲ್ಲಿಂದ ಇನ್ನೊಂದು ಜೊತೆ ಕೋಲುಗಳನ್ನು ಹೊರತೆಗೆದಳು. ಇದರ ಮೇಲಿನ ವಿನ್ಯಾಸ ಅವನ ಕೈಯಲ್ಲಿನ ಕೋಲುಗಳ ಮೇಲಿನ ವಿನ್ಯಾಸಕ್ಕೆ ತದ್ವಿರುದ್ಧವಾದುದಾಗಿತ್ತು. ಚಿನ್ನದ ಲೇಪನದ ಮೇಲೆ ಕಪ್ಪು ದ್ರಾಕ್ಷಿಯ ಬಳ್ಳಿಗಳು ಒಂದರೊಳಗೊಂದು ಹೆಣೆದುಕೊಂಡು ಹೂ ಬಿಟ್ಟಂತಿದ್ದವು.

ತನ್ನ ಕೈಗಳಲ್ಲಿದ್ದ ಕೋಲುಗಳನ್ನು ಮೇಲೆತ್ತಿ ಒಂದಕ್ಕೊಂದು ತಾಗಿಸಿ ಲಯಕ್ಕೆ ತಕ್ಕಂತೆ ಬಡಿಯುತ್ತ ಒಂದು ಸಾಂಪ್ರದಾಯಿಕ ಹಾಡೊಂದನ್ನು ಹಾಡ ತೊಡಗಿದಳು. ಅವನೂ ಅವಳ ಸೂಚನೆಯನ್ನನುಸರಿಸಿದ. ಆದರೆ ಸ್ವಲ್ಪ ಎಡವಟ್ಟಾಗಿ ಅವನು ಅವನ ಕೈಗಳಲ್ಲಿನ

ಕೋಲುಗಳನ್ನು ತನ್ನ ಕೈಗಳಲ್ಲಿರುವ ಕೋಲುಗಳಿಗೆ ತಾಗಿಸುವನೆಂದು ಅವಳು ಕಾದಳು. ಆದರೆ ಅವನು ತಾಗಿಸುವ ಹೊತ್ತಿಗೆ ಸಮಯ ಮೀರಿತ್ತಾಗಿ ಅವನ ಸ್ಥಾನವೂ ಜಾಡು ತಪ್ಪಿತ್ತು.

"ಈ ಅಬದ್ಧವಾಗಿ ಆಡುವುದನ್ನು ದಯವಿಟ್ಟು ನಿಲ್ಲಿಸುತ್ತೀಯಾ?" ಎಂದು ಹೇಳುತ್ತಾ ಅವನನ್ನು ಕೂಡಲೇ ನಿಲ್ಲಿಸಿದಳು. "ನಾನು ಬಲಗಡೆಯಿಂದ ಬಂದಾಗ, ನೀನು ಅದೇ ಥರ ಬರಕೂಡದು. ನೀನು ಎಡಗಡೆಯಿಂದ ಬರಬೇಕು" ಅವಳು ಅವನ ಮುಖದಲ್ಲಿದ್ದ ಗಾಬರಿಯನ್ನು ನೋಡಿ, ದನಿಯನ್ನು ಮಿದುಗೊಳಿಸಿದಳು. ಅದು ಹೇಗೆ ನೀನು ಕೋಲಾಟದ ರಾಸಲೀಲೆಯನ್ನು ಮರೆತೆ? ಅದು ನಿನ್ನದೇ ನೃತ್ಯ. ಅದರ ಜನಕ ನೀನೇ."

ಅವನು ನಾಚಿ ತಲೆಬಾಗಿಸಿದನು.

"ಈಗ ಹೇಳಿಕೊಡ್ತೀನಿ ತಾಳು. ಒಂದು, ಎರಡು, ಮೂರು, ನಿನ್ನ ಕೋಲುಗಳನ್ನು ಬಲಗಡೆ ಮೇಲಕ್ಕೆತ್ತು. ಹೊಡಿ ಹೊಡಿ, ಹೊಡಿ ಒಂದು, ಎರಡು, ಮೂರು, ಕೋಲುಗಳು ಎಡಕ್ಕೆ. ಹೊಡಿ ಹೊಡಿ ಹೊಡಿ, ಒಂದು ಎರಡು ಮೂರು ಈಗ ನಮ್ಮಿಬ್ಬರ ಕೋಲುಗಳು ತಾಗುತ್ತವೆ. ಹೊಡಿ ಹೊಡಿ ಹೊಡಿ. ಈಗ ಕೋಲುಗಳನ್ನು ತಗ್ಗಿಸಿ, ಅದೇ ನಮೂನೆಯನ್ನು ಪುನರಾವರ್ತಿಸು. ಈಗ ಒಂದು ಸಾರಿ ನಾವು ಮಾಡಿನೋಡೋಣ. ನೋಡು ಈಗ ನಿನಗೆ ಬರುತ್ತಾ ಇದೆ. ನೀನು ನಿನಗೆ ಗೊತ್ತಿಲ್ಲದಹಾಗೆ ನಟಿಸಿದೆ. ಅದೆಷ್ಟು ಚೆನ್ನಾಗಿ ನೀನು ಕೋಲಾಟದ ರಾಸಲೀಲೆ ಆಡುತ್ತೀಯಾ. ಆ ಹೆಣ್ಣು ನರಿ ರಾಧಾ ಮತ್ತು ಮಥುರೆಯ ಇತರೆ ಗೋಪಿಕೆಯರು, ನಿನ್ನನ್ನು ಬಿಟ್ಟು ದೂರವಿರಲು ಸಾಧ್ಯವಿಲ್ಲದಿರುವುದು ಆಶ್ಚರ್ಯವಲ್ಲ. ಆದರೆ ನನ್ನ ಗೆಳೆಯ ನನ್ನ ಬೆನ್ನ ಹಿಂದೆ ನೀನೇನಾದರೂ ವಿಚಿತ್ರವಾದದ್ದು ಮಾಡುವುದಕ್ಕೆ ಹೋದರೆ, ಇದೇ ಕೋಲಿನಿಂದ ನಿನ್ನ ಕಾಲು ಮುರೀತೀನಿ".

ಆ ಹಾಡನ್ನು ಕೇಳಿಸಿಕೊಳ್ಳದೆ ಇರಲು ಅವನು ಯತ್ನಿಸಿದನು. ಗೋಪಿಯರು ಎಂದಿನಂತೆ ಯಮುನೆಯ ದಡದಲ್ಲಿ ತಮ್ಮ ಗಡಿಗೆಗಳಿಗೆ ನೀರನ್ನು ತುಂಬಿಕೊಳ್ಳುತ್ತಿದ್ದರು. ಸಾಸಿರ ನಾಮದ ದೇವನು ಕವಣೆ ಬೀಸಿ ಅವರ ತಲೆಯ ಮೇಲಿದ್ದ ಗಡಿಗೆಗಳನ್ನು ಒಂದೊಂದಾಗಿ ಒಡೆದು ಹಾಕಿ ನೀರಿನಿಂದ ತೊಯ್ದು ನೀರೆಯರತ್ತ ಪ್ರಣಯದ ನೋಟ ಬೀರಿದನು. ದೇಹದ ಉಬ್ಬು ತಗ್ಗುಗಳನ್ನೆಲ್ಲ ಬಯಲು ಮಾಡುತ್ತಿದ್ದ ಈ ಒದ್ದೆ ಪಾರದರ್ಶಕ ವಸ್ತ್ರಗಳನ್ನು ಉಟ್ಟು ಅವರು ಹೇಗಾದರೂ ಮನೆಗೆ ಹೋಗಲು ಸಾಧ್ಯ? ಈ ಮಧುಸೂದನ, ಕೃಷ್ಣನಾದರೋ ಲಜ್ಜೆಗೆಟ್ಟವನೆಂದು ಅವರಿಗೆಲ್ಲ ಗೊತ್ತೇ ಇತ್ತು. ಆದರೆ ಅವರೆಲ್ಲರೂ ಸಭ್ಯ ಕುಲನಾರಿಯರು. ಕೆಲವರಂತೂ ಗಂಡ ಮಕ್ಕಳಿರುವವರು. ಎಲ್ಲರೂ ಕಿಂಚಿತ್ತೂ ಕುಂದಿಲ್ಲದ ಗೌರವಾನ್ವಿತೆಯರು. ಅವರು ಹೇಗೆ ತಾನೆ ತಮ್ಮ ಮನೆಯವರನ್ನು ಎದುರಿಸಿಯಾರು? ಅವರುಗಳು ಏನಿದೆಲ್ಲ ಎಂದು ಕೇಳಿದರೆ ಏನೆಂದು ತಾನೆ ಹೇಳಿಯಾರು?

ಈ ಹಾಡುಗಳೆಂದರೆ ಅವನೆಷ್ಟು ಅಸಹ್ಯಪಡುತ್ತಿದ್ದನು. ಭಾರತದ ಚಾರಣರಿಗೆ ಇವುಗಳ ಬಗ್ಗೆ ಬರೆಯಲು ಇನ್ನೇನೂ ಇರಲಿಲ್ಲವೆ? ಹೆಣ್ಣುಗಳನ್ನು ಕೀಟಲೆ ಮಾಡುವ ಆ ದೇವನ ಬಗ್ಗೆ ಸಹಸ್ರಾರು ಹಾಡುಗಳಿದ್ದುವು. ಅಲ್ಲದೆ ಪ್ರತಿದಿನವೂ ಒಬ್ಬರಲ್ಲ ಒಬ್ಬರು ಈ ಪ್ರಕಾರಕ್ಕೆ ತಮ್ಮದೇನಾದರೂ ಒಂದಷ್ಟು ಸೇರಿಸುತ್ತಲೇ ಇರುತ್ತಿದ್ದರು. ವಿಷಾದದ, ಕೋಪದ, ಹುಸಿ ಮುನಿಸಿನ ದನಿಗಳಲ್ಲಿ ಲಲನೆಯವರು ಅವನನ್ನು ದೂರುತ್ತಿದ್ದರು. ತಮ್ಮ ವಸ್ತ್ರಗಳನ್ನು ಕದಿಯುವುದನ್ನು, ಎಲ್ಲರಿಗೂ ಕಾಣುವಂತೆ ತಮ್ಮೊಂದಿಗೆ ಲಲ್ಲೆವಾಡಕೂಡದೆಂದು, ಹೋಳಿಯ ದಿನದಂದು ತಮ್ಮ ಮೇಲೆ ರಂಗೆರಚುವುದನ್ನು ನಿಲ್ಲಿಸಬೇಕೆಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದರು. ಅಂತಿಮವಾಗಿ ಕೃಪೆಮಾಡಿ ತಮ್ಮನ್ನು ಅವನು ಬಿಟ್ಟು ಬಿಡಬಾರದೆ?

ಇನ್ನೂ ಬೇಕು, ಇನ್ನೂ ಬೇಕು, ಇನ್ನೂ ಬೇಕು ದಯಮಾಡಿ ನಿಲ್ಲಿಸಬೇಡಿ ಎಂದು ಹೇಳಬೇಕೆನಿಸಿದಾಗೆಲ್ಲ ಇನ್ನು ಬೇಡ, ಇನ್ನು ಬೇಡ, ಇನ್ನು ಬೇಡ ಎನ್ನುತ್ತಿದ್ದರು. ಅವನು ಅವರಿಗೆ ಬೆನ್ನು ತಿರುಗಿಸಿದ್ದೇ ಆದರೆ ಸಂತಸ ಪಡುವುದರ ಬದಲು ಅವರೆಲ್ಲ ದುಃಖದಿಂದ ಕೋಪಗೊಳ್ಳುತ್ತಿದ್ದರು, ಅವನಿಗಾಗಿ ಹಂಬಲಿಸುತ್ತಿದ್ದರು, ಸಿಡಿಮಿಡಿಗೊಳ್ಳುತ್ತಿದ್ದರು, ಮಾನಸಿಕವಾಗಿ ಕ್ಷುಬ್ಧಗೊಳ್ಳುತ್ತಿದ್ದರು. ವಾಸ್ತವವಾಗಿ ಅವರು ದುಃಖಪೀಡಿತರಾಗಿದ್ದಾಗ, ವಿವೇಚನಾರಹಿತರಾಗಿದ್ದರೆ, ವಿರಹ ಪೀಡಿತರಾಗಿ ರೋದಿಸುತ್ತಿದ್ದಾಗ ಅವರನ್ನು ತಡೆಯಲಾಗುತ್ತಿರಲಿಲ್ಲ.

ಈ ನಯವಾದ ಕಾಮ ಪ್ರಚೋದಕ, ಅಸಭ್ಯವಾದದ್ದನ್ನು ಧ್ವನಿಸುವ ಹಾಡುಗಳನ್ನು ಬರೆದವರಾರು? ಈ ಹಾಡುಗಳು ಒಂದು ರೀತಿಯಲ್ಲಿ ಬೀಗದ ಕೈ ಕಿಂಡಿಗಳಿದ್ದಂತೆ. ಇವುಗಳ ಮೂಲಕ ಇಣುಕಿ ನೋಡುತ್ತ ಗಂಡು ಪ್ರಾಣಿಗಳು ಅರ್ಥಾತ್ ಬಹುಮಟ್ಟಿಗೆ ಇಡೀ ಗಂಡು ಜಾತಿ ಭ್ರಮಾತ್ಮಕವಾದ ಇಬ್ಬಗೆಯ ಬದುಕು ಬದುಕುತ್ತಿವೆ. ಈ ಭಾವಗೀತಗಳ ವ್ಯಕ್ತಿ ದನಿ ಹೆಂಗಸಿನದಾದರೂ ಬಹುಪಾಲು ರಚನಕಾರರು ಗಂಡಸರು. ಇಷ್ಟಾದರೂ ಅರ್ಧದಷ್ಟು ಅವಕಾಶ ದೊರೆತರೂ ಸಾಕು, ಪ್ರಾಸವನ್ನು ಹೊಂದಿಸುವ ಸಾಮರ್ಥ್ಯವುಳ್ಳ ಯಾವುದೇ ಗೃಹಿಣಿ 'ನೋಡಮ್ಮ, ಈ ಕೃಷ್ಣ ಹೇಗೆ ನನ್ನ ಜಡೆಯನ್ನು ಕೆದರುತ್ತ ನನ್ನ ಸೆರಗನ್ನೆಳೆಯುತ್ತಿದ್ದಾನೆ' ಎಂಬ ಬಗ್ಗೆ ಹಾಡೊಂದನ್ನು ಗೀಚಿಹಾಕಬಹುದು. ಖಂಡಿತಕ್ಕೂ ಅದೊಂದು ಸಂಪ್ರದಾಯವೇ ಆಗಿ ಬಿಟ್ಟಿತ್ತು. ಕವಿಗಳು ಒಂದು ಚೌಕಟ್ಟಿನಲ್ಲಿ ಗೀತರಚನೆ ಮಾಡುತ್ತಿದ್ದರು. ಶಬ್ದಗಳು ಮತ್ತು ರೂಪಕಗಳು ಗಾಢವಾದ ಆಧ್ಯಾತ್ಮಿಕ ಮಹತ್ವದಿಂದ ಕೂಡಿದ್ದವು. (ಅವನು ಕೇಳಿದ್ದಿರಬಹುದಾದ ಸಂಭವನೀಯ ಕಥೆಯನ್ನು ನಂಬಬಹುದಾದರೆ) ಆದರೆ ಈ ಗೀತೆಗಳನ್ನು ಹಾಡುವ ಬಹುಮಟ್ಟಿನ ಸಂಖ್ಯೆಯವರು ಸ್ತ್ರೀಯರು ಎನ್ನುವುದೇ ಒಂದು ಚೋದ್ಯದ ಸಂಗತಿ. ಅವರು ಕೂಡ ಗಂಡಸರಷ್ಟೇ ತುಳಿತಕ್ಕೊಳಗಾದವರೆ? ಈ ದೇವನ ಆಕರ್ಷಣೆಯೇನು? ಅವನ ಬಗ್ಗೆ ಕಲ್ಪನೆಗಳನ್ನು ಕಟ್ಟಿದವರು ಬರೀ ಸ್ತ್ರೀಯರಷ್ಟೇ ಅಲ್ಲ, ದೇಶದ ಇಡೀ ಜನತೆ ಅವನೊಂದಿಗೆ ಪ್ರಣಯ ಭಾವವನ್ನು ಬೆಳೆಸಿಕೊಂಡು ಬಂದಿತು. ರಾಮ ವಿಷ್ಣು ಅಥವಾ ಶಿವನ ಬಗ್ಗೆ ಯಾರೊಬ್ಬರೂ ಭಾವಾತಿರೇಕದಿಂದ ಕೂಡಿದ ಹಾಡುಗಳ ಹೊಳೆಯನ್ನು ಹರಿಸಲಿಲ್ಲ. ನವಿಲುಗರಿಯನ್ನು ಧರಿಸಿದ ಈ ದೇವನ ಬಗೆಗಿನ ಅದಮ್ಯವಾದ ಆಕರ್ಷಣೆಯ ಮೂಲವೇನು? ಬೇರಾವುದೇ ವ್ಯಕ್ತಿಯನ್ನಾದರೂ ಜೀವನವಿಡೀ ಸೆರೆಮನೆಯಲ್ಲಿ ಬಂಧಿಸಿಡಬಹುದಾದಂಥವೇ ಹಾಡುಗಳ ಹೊರತಾಗಿಯೂ ಅವನು ಹೇಗೆ ಪಾರಾಗಿ ಬಿಟ್ಟನು? ಸ್ತ್ರೀಯರು ತಮ್ಮ ಹೃದಯದಾಳದಲ್ಲಿ ಪಾರದರ್ಶಕವಾದ ಮೈ ಅಂಟುವ ಒದ್ದೆ ಸೀರೆ ರವಿಕೆಗಳನ್ನುಟ್ಟು ಬೀದಿಗಳಲ್ಲಿ ನಡೆದು ಹೋಗಲು ಬಯಸುವರೆ ಹಾಗೂ ಪೇಟದ ಮೇಲೆ ನವಿಲುಗರಿಯನ್ನು ಧರಿಸಿದ ದಿಟ್ಟ ಯುವಕನೊಬ್ಬನು ತಮ್ಮ ತಲೆಯ ಮೇಲಿನ ಮುಸುಕನ್ನು ಸರಿಸಲೆಂದು ಕಾದು ಕೂರುವರೆ?

ವ್ಯಂಗ್ಯಗಳು, ವಿರೋಧಾಭಾಸಗಳು ಏನೇ ಇರಲಿ, ಶ್ರೀ ಕೃಷ್ಣನು ಗಂಡು ಹೆಣ್ಣುಗಳಿಬ್ಬರ ಹಂಬಲವೂ ಆಗಿದ್ದನೆಂದು ಅವನಿಗೆ ಮನವರಿಕೆಯಾಯಿತು.

ಶ್ರೀ ಕೃಷ್ಣನನ್ನು ಕುರಿತಾದ ಹುಚ್ಚು ಹಿಡಿಸುವ ಪ್ರಣಯ ಗೀತೆಗಳ ನಿಸ್ಸಾರವನ್ನೆಲ್ಲ ಉಜ್ಜಿ ತೊಡೆದು ಹಾಕಿದ ನಂತರವೂ ಆ ಹಾಡುಗಳ ತಾಲ-ಲಯಗಳು ಅವನನ್ನು ಬಲವಾಗಿ ಸೆಳೆದುವು. ಅವನ ಹೆಂಡತಿ ಅವಳ ಎಂದಿನ ರೂಢಿಯಂತೆ ಹಾಡಿಗೆ ತನ್ನೆಲ್ಲ ಚೈತನ್ಯ ಮತ್ತು ವಿಸ್ಮಯಕರವಾದ ಕಂಠವನ್ನು ತುಂಬುತ್ತಿದ್ದಳು. ಅವಳು ಹಾಡುತ್ತಿರುವಾಗ ಅತ್ಯಂತ ಪರಿಚಿತವಾದ ಹಾಡಿನಿಂದಲೂ ಏನನ್ನು ನಿರೀಕ್ಷಿಸಬೇಕೆಂದು ನಿಮಗೆ ಎಂದೂ ಗೊತ್ತೇ

ಇರಲಿಲ್ಲವಾದ್ದರಿಂದ ಅವಳು ನಿಮ್ಮ ಮನಸ್ಸಿನ ತೋಲ ತಪ್ಪುವಂತೆ ಮಾಡುತ್ತಿದ್ದಳು. ಅವಳ ಕಂಠದಲ್ಲಿ ಉಗ್ರತೆ ಮತ್ತು ರೌದ್ರತೆ ಇತ್ತು. ಇದ್ದಕ್ಕಿದ್ದಂತೆ ಅದು ಅಂತರಂಗದ ಪಿಸುದನಿಯ ಹಾಗೂ ಗಾಢಾನುರಕ್ತಿಯ ಮೊರೆಗೆ ಇಳಿದು ಬಿಡುತ್ತಿತ್ತು. ಅವನಿಗೆ ತಾನು ಚಿಕ್ಕಂದಿನಿಂದಲೂ ನೋಡಿದ್ದ ಪಿಚ್‌ವಾಯ್ ಚಿತ್ರ ಕಲೆಯ ನೆನಪು ಬಂದಿತು. ಅವುಗಳ ವಸ್ತು ಯಾವಾಗಲೂ ಬಹುಮಟ್ಟಿಗೆ ಶ್ರೀಕೃಷ್ಣ ನರ್ತನವಾಗಿರುತ್ತಿತ್ತು; ಒಬ್ಬನೇ ಅಂತೂ ಅಲ್ಲ. ನೂರಾರು ಇಲ್ಲವೇ ಸಾವಿರಾರು ಗೋಪಿಕಾ ಸ್ತ್ರೀಯರೊಂದಿಗೆ. ಅವರು ತಮ್ಮ ಸರದಿಗಾಗಿ ಕಾದು ನಿಲ್ಲುವ ಅಥವಾ ತಮ್ಮ ಪ್ರಿಯಕರನನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಬೇಕಾದ ಅಗತ್ಯವಿರಲಿಲ್ಲ. ತನ್ನ ಸಮಯವನ್ನು ಅವರಿಗೆ ಹಂಚಿಕೊಡಬೇಕಾದ ಅಗತ್ಯವೇ ಇಲ್ಲದೆ ಅವನು ಅವರೆಲ್ಲರಿಗೂ ಬೇಕಾದ ಹಾಗೆ ಲಭ್ಯವಿರುತ್ತಿದ್ದನು. ಚಿತ್ರದಲ್ಲಿ ಅದೆಷ್ಟು ಜನ ಗೋಪಿಯರಿರುತ್ತಿದ್ದರೋ ಅಷ್ಟೇ ಜನ ಕೃಷ್ಣರು ಇರುತ್ತಿದ್ದರು. ತಾನು ಕೂಡ ಪಿಚ್‌ವಾಯ್ ಚಿತ್ರ ಕಲೆಯೊಳಕ್ಕೆ ಪ್ರವೇಶಿಸಿದ್ದೇನೆಂದು ಅವನಿಗೆ ಖಾತರಿಯಾಗಿತ್ತು. ಆದರೆ ಒಂದೇ ಅಪವಾದವೆಂದರೆ, ರಾಜಕುಮಾರಿಯು ಸ್ಪರ್ಧೆಯನ್ನು ಪೂರ್ತಿಯಾಗಿ ತೆಗೆದುಹಾಕುವ ಎಚ್ಚರ ವಹಿಸಿದ್ದಳು.

ರಾಸನೃತ್ಯವೆಂಬುದು, ವೃತ್ತ ಗತಿಯ, ಇಂದ್ರಿಯಗಳಿಗೆ ಸಂತಸ ನೀಡುವ ನೃತ್ಯ. ಮೊದಲ ಅರ್ಧ ಗಂಟೆಯ ನಂತರ ನಿಮಗೆ ತಪ್ಪದೆ ಬೇಸರ ತರಿಸುವ ನೃತ್ಯ. ನೀವು ಬೇಗ ಹೆಜ್ಜೆ ಹಾಕುವಿರಿ ಇಲ್ಲ ನಿಧಾನಿಸುವಿರಿ. ಆದರೆ ಹೇಗೇ ಆದರೂ ನೀವು ನೆನಪಿಸಿಕೊಳ್ಳುವ ಅತ್ಯಂತ ನೀರಸ ಮತ್ತು ಮತ್ತೆ ಮತ್ತೆ ಪುನರಾವರ್ತಿಸುವ ನೃತ್ಯ. ಕುರುಡು ಪಾಠದ ಹಾಗೆ ವೃತ್ತಾಕಾರವಾಗಿ ಹೆಜ್ಜೆ ಹಾಕುತ್ತಾ ಸಾಗುತ್ತಾನೆ ಅಂದರೆ ಅವನಿಗಿಂತ ದರಿದ್ರದವರು ಇನ್ಯಾರು? ಆ ತಕ್ಷಣ ಮನಸ್ಸಿಗೆ ಹೊಳೆದ ಹಾಗೆ ಮಾಡುವುದು ಬಿಟ್ಟರೆ ಅವನಿಗೆ ಗತ್ಯಂತರವಿಲ್ಲ. ಪಕ್ಕವಾದ್ಯವಾದ ಮೃದಂಗವನ್ನು ಬಾರಿಸುವುದರಲ್ಲಿ ಅನುಸರಿಸುವ ತತ್ತ್ವವನ್ನೇ ಅವನು ಇಲ್ಲಿಯೂ ಅಳವಡಿಸಿಕೊಂಡನು. ತಾಳಕ್ಕೆ ಹನ್ನೆರಡು ಅಥವಾ ಹದಿನಾರು ಬಡಿತಗಳಿದ್ದುವು. ಮೇಲ್ನೋಟಕ್ಕೇ ಒಮ್ಮೆ ತಾಳವನ್ನು ಆಯ್ಕೆ ಮಾಡಿ ಬಿಟ್ಟರೆ ಕೊನೆಯವರೆಗೂ ಸ್ವಾತಂತ್ರ್ಯವನ್ನು ಮಿತಿಗೊಳಿಸುವ ಅದರ ಯೋಜನೆಯಿಂದ ಬಿಡುಗಡೆಯಿಲ್ಲ. ಇಷ್ಟಾದರೂ, ತಾಳವು ಬಹುಮಟ್ಟಿಗೆ ಊಹಿಸಲೂ ಆಗದಷ್ಟು ಅಗಾಧವಾದ ಸ್ವಾತಂತ್ರ್ಯವನ್ನು ನೀಡುತ್ತದೆ. ಪ್ರತಿ ಹನ್ನೆರಡು ಅಥವಾ ಹದಿನಾರು ಹೊಡೆತಕ್ಕೆ ಸರಿಯಾಗಿ ಮೂಲ ನೆಲೆಯನ್ನು ಸ್ಪರ್ಶಿಸಿ ಬಿಟ್ಟರೆ ನೀವು ಏನೆಲ್ಲ ಬಯಸಿದ್ದಿರೋ ಅದೆಲ್ಲವನ್ನೂ ಮಾಡಲು ಸಾಧ್ಯ.

ಅವನು ನೃತ್ಯದ ಸ್ಥಾನ ನಿರ್ದೇಶಕಗಳನ್ನು ಬದಲಿಸಿ, ಪಥ ಬದಲಿಸಿದಂತೆಲ್ಲಾ, ರಾಜಕುಮಾರಿಯು ಶಾಂತವಾಗಿ, ಮಾಮೂಲಿನಂತೆ ಮುಂದುವರಿಯುತ್ತಿದ್ದಳು. ತನ್ನ ಹೆಂಡತಿ ದಿಗ್ಭ್ರಮೆಗೊಂಡವಳಂತೆ ಕಾಣುತ್ತಾಳೆಂದು ಹಾಗು ತಾಳತಪ್ಪುತ್ತಾಳೆಂದು ಅವನು ಅಂದುಕೊಂಡಿದ್ದನು, ಆದರೆ ಅವಳಿಗೆ ಅವನ ಅಭಿಪ್ರಾಯ ತಿಳಿದಿತ್ತು.

"ನಿನಗೆ ಹೋರಾಟ ಬೇಕಾಗಿದೆಯಾ ಗೆಳೆಯ" ಎಂದು ಅವಳು ಪಿಸುಗುಟ್ಟಿದಳು. "ಆದರೆ ಅದಕ್ಕೆ ನೀನು ವಿಷಾದ ಪಡಬೇಕಾಗುತ್ತೆ." ಅವಳು ಮುಗುಳ್ನಕ್ಕಳು. ಅವಳ ಶರೀರ ಭಾಷೆ ಬದಲಾಯಿತು. ಅವಳೊಂದು ಚುರುಕಾದ ಮಿಂಚು, ಕೂಡಲೇ ಕಾರ್ಯಪ್ರವೃತ್ತಳಾಗಲು ತುದಿಗಾಲಲ್ಲಿ ನಿಂತಿದ್ದಳು. ಅವಳ ಅವಯವಗಳು ಸಡಿಲವಾಗಿದ್ದುವು. ಬಹುಮಟ್ಟಿಗೆ ಯಾರ ಅರಿವಿಗೂ ಬಾರದ ಹಾಗೆ ಒಮ್ಮೆ ತೂಗಾಡಿದಳು. ಅದೇ ಸಮಯಕ್ಕೆ ತನ್ನ ಜೊತೆಯ ಎದುರಾಳಿಯ ಮುಂದಿನ ನಡೆಯನ್ನು ಲೆಕ್ಕಹಾಕುತ್ತಿದ್ದಳು. ಅವಳ ಕಣ್ಣುಗಳಲ್ಲೊಂದು ಸಂತಸ ಮಿನುಗಿತು. ತನ್ನ ಬೇಟೆಯ ಮಿಕವನ್ನು ನುಂಗಿ ಬಿಡುವ

ಮುನ್ನ ಅದರೊಂದಿಗೆ ಚಲ್ಲಾಟವಾಡುವ ಬೆಕ್ಕಿನಂತೆ ಅವಳು ಕಂಡು ಬಂದಳು. ತನ್ನ ಕೈಯಲ್ಲಿನ ಕೋಲುಗಳಿಂದ ಒಮ್ಮೆ ಜೋರಾಗಿ ತಟ್ಟಿ ತಾನು ಕೂಡ ಸ್ಪರ್ಧಾಕಣವನ್ನು ಪ್ರವೇಶಿಸುತ್ತಿರುವುದಾಗಿ ಸೂಚನೆ ಕೊಟ್ಟಳು.

ಯಾರಾದರೂ ಅವನನ್ನು ನೋಡಿಬಿಟ್ಟರೆ ಏನು ಗತಿ? ಪರಟೆಮಲ್ಲರ ಬಾಯಿಗೆ ಅವನೊಂದು ಸೊಗಸಾದ ಎಲೆ ಅಡಿಕೆ ಆಗಿ ಬಿಡುವನು. ಅವನ ಕಣ್ಣುಗಳು ಥಟ್ಟನೆ ಅತ್ತ ಇತ್ತ ಹರಿದು, ಅರಮನೆಯ ಕಿಟಕಿಗಳು ಮತ್ತು ಕಪ್ಪು ಮೂಲೆಗಳಲ್ಲಿ ನೆಟ್ಟವು. ಸೇವಕರು, ತೋಟದ ಮಾಲಿಗಳು, ತನ್ನನ್ನು ಗಮನಿಸುತ್ತಿರಲೇಬೇಕು, ಇನ್ನು ರಾಣಿ ಕರ್ಮವತಿಯ ತೊತ್ತುಗಳು ಮತ್ತು ಗೂಢಚಾರರ ಬಗ್ಗೆಯಂತೂ ಹೇಳಲೇ ಬೇಕಿಲ್ಲ. ಒಂದು ನೆರಳು ಅತ್ತ ಸರಿದು ಹೋದದ್ದನ್ನು ತಾನು ಕಂಡೆನೆಂದು ತಿಳಿದನು. ತನಗೆ ತಾನೆ ಏಕೆ ಅವನು ಸುಳ್ಳು ಹೇಳಿಕೊಳ್ಳುತ್ತಿದ್ದಾನೆ? ಅವನು ಕುಂಭಲ್‌ಗರ್‌ನಿಂದ ಹಿಂತಿರುಗಿದಾಗಿನಿಂದ ಈ ಎಲ್ಲ ವಾರಗಳಲ್ಲಿ ಮತ್ತು ತಿಂಗಳುಗಳಲ್ಲಿ ಸುತ್ತ ಮುತ್ತ ಯಾರ‍್ಯಾರೂ ಇರುತ್ತಿರಲಿಲ್ಲ. ಕಾರಣ, ಪ್ರತಿ ರಾತ್ರಿ ಎಲ್ಲದಾಸಿಯರು, ಹಿಜಡಾಗಳು ಇತರೆ ಅಸಂಖ್ಯಾತ ಅಧಿಕ ಪ್ರಸಂಗಿಗಳೆಲ್ಲರನ್ನೂ ಅಲ್ಲಿಂದ ಹೊರಗಟ್ಟಿ, ಅರಮನೆಯ ಬೇರಡೆಗಳಲ್ಲಿ ಅವರನ್ನು ಕೆಲಸಕ್ಕೆ ಹಚ್ಚಲಾಗಿತ್ತೆಂದು ಕೌಸಲ್ಯ ಖಚಿತಪಡಿಸಿಕೊಂಡಿದ್ದಳು.

"ನನಗೆ ನಿನ್ನ ಬಗ್ಗೆಯೇ ಚಿಂತೆ ಮಹಾರಾಜ್‌ಕುಮಾರ್. ನಿನ್ನ ಕಣ್ಣುಗಳ ಸುತ್ತ ಉಂಟಾಗಿರುವ ಕಪ್ಪನೆಯ ವರ್ತುಲಗಳನ್ನು ನೋಡಿಕೋ" ಭೂತಾನಿ ಮಾತಾ ಅರಮನೆಯ ಛಜ್ಜಾದ ಸೂರಿನಿಂದ ಜೋತು ಬಿದ್ದ ಬಾವಲಿಯಂತಿದ್ದಳು. ಅವಳ ಬೆರಳುಗಳಿಗೆ ಬಲವಾದ ಹಿಡಿತವಿರಲಿಲ್ಲ. ಆದರೆ ಅವಳು ಅಲ್ಲಿಂದ ನಿರಾತಂಕವಾಗಿ ನೇತು ಬಿದ್ದಂತೆ ಕಾಣುತ್ತಿದ್ದಳು. "ಹೇಗೆ ನೀನು ರಾತ್ರಿ ಬಹಳ ಹೊತ್ತಿನವರೆಗೆ ಕೆಲಸ ಮಾಡುತ್ತಿರುವೆ. ಒಂದರಲ್ಲಿ ತೀರ ಕೆಟ್ಟ ಹಳಸಲು ಮಾತುಗಳನ್ನೆಲ್ಲಾ ಹೊರಹಾಕುವೆ. ಎಲ್ಲರೂ ಎಲ್ಲಿ ಹೋದರು ದಯವಿಟ್ಟು ಹೇಳು. ಅರಮನೆಯಲ್ಲಿ ಶೀತದ ಗಡ್ಡೆ ರೋಗ (Plague) ಶುರುವಾಗಿದೆಯಾ? ನಿನ್ನ ಆ ಹಳೆಯ ನಿಷ್ಠಾವಂತ ದಾದಿಯನ್ನು ಬಿಟ್ಟರೆ ಇಲ್ಲಿ ಸುತ್ತ ಮುತ್ತ ಇನ್ನೊಂದು ನರಪ್ರಾಣಿ ಇಲ್ಲ. ಅವಳ ಹೆಸರನ್ನು ನಾನು ಮರೆತಿದ್ದೀನಿ. ಅವಳು ನಿನ್ನ ದಾದಿಯೋ ಅಥವಾ ನಿನ್ನ ಇಂದ್ರಿಯವನ್ನು ತನ್ನ ತೊಡೆಗಳ ಮಧ್ಯೆ ತುರುಕಿಸಿಕೊಂಡವಳೋ? ಏನವಳ ಹೆಸರು? ಅದು ನನ್ನ ನಾಲಿಗೆಯ ತುದಿಯಲ್ಲಿದೆ?"

"ನಿನಗೆ ಅವಳ ಹೆಸರು ಚೆನ್ನಾಗಿ ಜ್ಞಾಪಕ ಇದೆ. ನೀನು ಮರೆಯಲೇ ಬೇಕಾದ ಹಾಳು ದರಿದ್ರ ಸಂಗತಿಗಳನ್ನೆಲ್ಲಾ ನೀನು ಜ್ಞಾಪಕ ಇಟ್ಟುಕೊಂಡಿರುವಷ್ಟೇ ಚೆನ್ನಾಗಿ ಜ್ಞಾಪಕ ಇಟ್ಟುಕೊಂಡಿದ್ದೀ. ಅವಳ ಗೊಡವೆ ಬಿಟ್ಟು ಬಿಡು ನೀನು".

'ಬ್ಬೆ ಬ್ಬೆ ಬ್ಬೆ ಕೌಸಲ್ಯಳ ವಿಷಯಕ್ಕೆ ಈ ಹೊತ್ತಿಗೂ ನಾವು ಸೂಕ್ಷ್ಮವಾಗಿ ಸ್ಪಂದಿಸುತ್ತೇವೆ. ಆದರೆ ಅವಳು ಯಾಕೆ ಹೀಗೆ ಸರ್ಪಗಾವಲು ಮಾಡುತ್ತಿದ್ದಾಳೆ ಏನಾಗ್ತಾ ಇದೆ ಇಲ್ಲಿ?"

"ನಿನ್ನ ವ್ಯವಹಾರ ನೀನು ಯಾಕೆ ನೋಡಿಕೊಳ್ಳಬಾರದು?"

"ನೀನೇ ನನ್ನ ವ್ಯವಹಾರ. ಸದ್ಯಕ್ಕೆ ನನ್ನ ಏಕೈಕ ವ್ಯವಹಾರ ನೀನು ಮಾತ್ರ". ಅವಳು ರಾಜಕುಮಾರಿಯತ್ತ ನೋಡಿ ಅನಂತರ ಅವನತ್ತ ತಿರುಗಿದಳು "ಇದು ಬಹಳ ರಂಜಕವಾಗಿದೆಯಲ್ಲವೆ? ತನ್ನ ಶತ್ರುವಿನ ಬಗ್ಗೆ ಅಷ್ಟೊಂದು ಹುಚ್ಚು ಹಿಡಿಸಿಕೊಂಡವರನ್ನು ಎಂದೂ ಕಂಡಿಲ್ಲ. ನಾನು ಆ ಹೆಣ್ಣಿನೊಂದಿಗೆ ಜಾಗವನ್ನು ಅದಲು ಬದಲು ಮಾಡಿಕೊಳ್ಳುವುದಿಲ್ಲವೆ?" ಎಂದು ಹೇಳುತ್ತ ಭೂತಾನಿ ಮಾತಾ ತನ್ನ ಜನನೇಂದ್ರಿಯದ

ಸಂದನ್ನು ತೆರೆದಳು. "ಮಹಾರಾಜ್ ಕುಮಾರ್ ಈ ಶೂನ್ಯದತ್ತ ಒಮ್ಮೆ ಇಣುಕಿ, ಬ್ರಹ್ಮಾಂಡದತ್ತ ಒಮ್ಮೆ ಕಣ್ಣು ಹಾಯಿಸು. ಈ ಲೋಕದ ಮತ್ತು ಇತರೆ ಲೋಕಗಳ ಎಲ್ಲ ಸುಖಗಳು ಮತ್ತು ಭಂಡಾರಗಳು ನಿನಗಾಗಿ ಕಾದಿವೆ. ಆ ಒಳ ಪ್ರಾಸ ನಿನಗಿಷ್ಟವೆ? ಖಂಡಿತವಾಗಿಯೂ ನೀನು ಬಯಸುವುದಿಲ್ಲ. ನೀನು ಕಾವ್ಯಕ್ಕೆ ಕಿವಿ ಕೊಡುವವನಲ್ಲ, ಕೆಟ್ಟ ಕಾವ್ಯಕ್ಕೆ ಸಹ."

ಆ ಕಪ್ಪು ಕುಹರಕ್ಕೆ ಉಗುಳಿದನು. "ನೀನು ಇಲ್ಲೇನು ಮಾಡುತ್ತಿದ್ದೀ?"

"ಎಲ್ಲರಿಗೂ ಚಿರಪರಿಚಿತವಾದ ಕೆಟ್ಟ ಕಣ್ಣನ್ನು ಬೀರುತ್ತಿದ್ದೇನೆ." ಅವಳು ನಕ್ಕಳು. ಅದೊಂದು ಕೆಟ್ಟ ಶಬ್ದ, ಎಂಥದೋ ಒಂದು, ಹೃದಯದಿಂದ ನೇರವಾಗಿ ಬಂದಂಥ ದುಷ್ಟ ಶಬ್ದ. "ನಿನಗೊಂದು ಆಶೀರ್ವಾದ ಮಾಡುವೆ. ನೀನು ಮುಟ್ಟಿದ್ದೆಲ್ಲವೂ ಬೂದಿಯಾಗಲಿ. ನಿನಗೆ ಪ್ರಿಯರಾದವರೆಲ್ಲರೂ ನಿನ್ನ ಪರಿಧಿಯೊಳಗೆ ಬಂದ ದಿನ ವ್ಯಥೆ ಪಡುವಂತಾಗಲಿ".

ಅಧ್ಯಾಯ 32

ರಾಜಾಪುರಜೀ ಕೀಕಾ ಮತ್ತು ನಾನು ಇಬ್ಬರೂ ಜೀವದ ಗೆಳೆಯರಿರಬಹುದು. ಆದರೆ ಅದೇನಿದ್ದರೂ ಬಹುಮಟ್ಟಿಗೆ ದೂರದ ಆಪ್ತತೆ. ಅದೂ ಅಲ್ಲದೆ ನಾವು ಜೊತೆಯಲ್ಲಿದ್ದಾಗಲೂ ನಮ್ಮಲ್ಲಿ ಯಾರೊಬ್ಬರೂ ಭಾರೀ ಮಾತುಗಾರರೇನಲ್ಲ. ನಮ್ಮಿಬ್ಬರಿಗೂ ಸಮಾನವಾದ್ದರೆಂದರೆ ಮಿತ ಭಾಷೆ ಮತ್ತು ಮೌನ. ಸ್ನೇಹಿತರನ್ನು ಮಾಡಿಕೊಳ್ಳುವಲ್ಲಿ ಮತ್ತು ಸ್ನೇಹಿತರನ್ನು ಉಳಿಸಿಕೊಳ್ಳುವಲ್ಲಿ ನಾನು ಅಸಮರ್ಥನೆ ಎಂದು ಅನೇಕ ವೇಳೆ ನನ್ನನ್ನೇ ನಾನು ಕೇಳಿಕೊಂಡಿದ್ದೇನೆ. ಅಷ್ಟಾದರೂ ಒಟ್ಟಾರೆ ಸ್ನೇಹಿತರನ್ನೇ ಹೊಂದಿಲ್ಲದ ನನ್ನ ಸ್ಥಿತಿ ಬಹುಶಃ ಪ್ರಭುತ್ವಕ್ಕೆ ಒಳ್ಳೆಯ ತರಬೇತಿಯೇ. ರಾಜನಿಗೆ ಅನೇಕ ಸಂಗಾತಿಗಳಿರಬಹುದು. ಆದರೆ ಸ್ನೇಹಿತರಿರುವುದಿಲ್ಲ. ಕವಿಗಳು ಮತ್ತು ಭಾವುಕರು ಎಷ್ಟೇ ವಿರೋಧಿಸಿದರೂ, ಸ್ನೇಹ ಮತ್ತು ಸ್ವಪಕ್ಷಪಾತ ಜೊತೆ ಜೊತೆಯಲ್ಲಿ ಸಾಗುತ್ತವೆ. ಸ್ವ ಪಕ್ಷಪಾತವಿದ್ದೆಡೆ, ಒಬ್ಬ ರಾಜ ಮತ್ತು ರಾಜವಂಶಗಳೆರಡೂ ಅಧಃಪತನದತ್ತ ಸಾಗಲು ಹೆಚ್ಚು ಸಮಯ ಬೇಕಿಲ್ಲ. ತಂದೆ ಮತ್ತು ಮಗನ ನಡುವೆ ಇರಬೇಕಾದ ಅತ್ಯುತ್ತಮವಾದ ಸಂಬಂಧವೆಂದರೆ ಸ್ನೇಹದ ಸಂಬಂಧ ಎಂದು ಜನ ಹೇಳುವುದನ್ನು ಕೇಳಿದ್ದೇನೆ. ಅದರ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ಆದರೆ ನಮ್ಮ ತಂದೆಯವರು ತಮ್ಮ ಎಲ್ಲ ಗಂಡು ಮಕ್ಕಳನ್ನು ದೂರದಲ್ಲೇ ಇಡುವಷ್ಟು ಬುದ್ಧಿವಂತರು. ಅನೇಕ ವೇಳೆ ಅತಿಯಾದ ಪ್ರೀತಿ ಮೂರ್ಖತನವೇ ಆಗುತ್ತದೆ. ಭಾವುಕವಾಗಿ ಬೆದರಿಕೆ ಹಾಕಲಾರದಂಥವರಿಗೆ ಮಾತ್ರ ನೀವು 'ಆಗುವುದಿಲ್ಲ' ಎಂದು ಹೇಳಬಹುದು. ಅಲ್ಲದೆ ದೊರೆಯಾದವನು ದಿನದಲ್ಲಿ ಅನೇಕ ಬಾರಿ 'ಇಲ್ಲ' ಎಂದು ಹೇಳಬೇಕಾಗುತ್ತದೆ. ಉದಾಹರಣೆಗೆ ನೌಕರಿಯ ವಿಷಯಕ್ಕೆ ಬಂದರೆ ಅದಕ್ಕೊಂದು ಮಿತಿ ಇದೆ. ಇಬ್ಬರು ಪ್ರಧಾನಿಗಳನ್ನು ಇಬ್ಬರು ದಂಡನಾಯಕರನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದಂತೂ ಸ್ಪಷ್ಟವೇ ಇದೆ. ಹುದ್ದೆಗಳ ಮಿತಿ ಅಷ್ಟೇನೂ ಇಲ್ಲದೆ ಇರುವ ಸೇನೆಯ ಕೆಳಮಟ್ಟದ ವ್ಯವಸ್ಥೆಯಲ್ಲಿ ಒಂದು ಮಿತಿಗೊಳಪಟ್ಟಂತೆ ಮಾತ್ರ ಜನರನ್ನು ನೇಮಕ ಮಾಡಬಹುದು. ಹಾಗಲ್ಲದೆ ಹೋದರೆ, 'ಸೇನಾಧಿಕಾರಿ' ಮತ್ತು 'ಆಜ್ಞಾಸರಣಿ' ಎಂಬ ಪರಿಕಲ್ಪನೆಗಳಿಗೆ ಅರ್ಥವೇ ಇರುವುದಿಲ್ಲ. ಅಲ್ಲದೆ ರಾಜ್ಯದ ಬೊಕ್ಕಸಕ್ಕೆ ಆಗುವ ಭಾರವಂತೂ ಅಸದಳ.

ಅದಕ್ಕೆ ಮಂಗಳನು ಅಪವಾದ. ನನ್ನ ವೃತ್ತಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ನನ್ನೊಂದಿಗೆ ಇರುವ ಸಂಗಾತಿ ಅವನೊಬ್ಬನೇ ಹಾಗೂ 'ಸ್ನೇಹಿತ' ಎಂಬ ಮಾತಿಗೆ ತೀರ ಹತ್ತಿರವಾದವನು. ಸ್ನೇಹದ ಪರಿಕಲ್ಪನೆಯನ್ನು ಕೆಳದರ್ಜೆಗೆ ಇಳಿಸಿದೆನೇನೋ ಎಂದು

ನನಗೆ ವಿಸ್ಮಯ. ಯೋಗ್ಯತೆಗೆ ಗೌರವ ನೀಡುವುದು, ಬುದ್ಧಿವಂತಿಕೆಯಿಂದ ಗುರಿಯೊಂದನ್ನು ಬೆನ್ನಟ್ಟಿ ಹೋಗುವ ಇಚ್ಛಾ ಶಕ್ತಿ, ಸ್ವೋಪಜ್ಞತೆ ಮತ್ತು ಮಿತವ್ಯಯ ಇವೆಲ್ಲ ಮುಖ್ಯವಾದ ಅಂಶಗಳೆಂದು ನನ್ನ ಅನಿಸಿಕೆ. ಒಂದು ಕೆಲಸವನ್ನು ಅಚ್ಚುಕಟ್ಟಾಗಿ ಕಲಾತ್ಮಕ ಎನ್ನುವ ಮಟ್ಟಿಗೆ ಮಾಡುವುದರಲ್ಲೊಂದು ವಿಶೇಷತೆ ಇದೆ. ತನ್ನ ಕಾರ್ಯ ಪ್ರಪಂಚದಲ್ಲಿ ಮಂಗಳ್ ನಿಜಕ್ಕೂ ಒಬ್ಬ ಕಲಾವಿದ. ಹಾಗಿದ್ದಾಗ್ಯೂ ಕಾಬೂಲ್‌ನ ಆಸ್ಥಾನದಿಂದ ಬರುತ್ತಿರುವ ಕಾಗದದ ತುಣುಕುಗಳ ಬಗೆಗಿನ ನನ್ನ ಭಯಗಳಲ್ಲೊಂದು ಅವುಗಳ ಅಧಿಕೃತತೆ ಕುರಿತಂತೆ. ನನ್ನ ಮನಸ್ಸಿನ ಹಿಂದೆ ಇರುವುದು ನನ್ನ ಹೆಂಡತಿ ಸಂತಳ ಸ್ಥಾನಕ್ಕೆ ಏರಿದ ಅನಂತರದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಮೇವಾಡದಲ್ಲಿ ಸಣ್ಣ ಆಕಾರದ ಮಾದರಿಗಳ ಹಾಗೂ ಪ್ರಾಚೀನ ಅವಶೇಷಗಳ ನಕಲಿಗಳ ತಯಾರಿಕೆ ಆಘಾತ ಉಂಟುಮಾಡುವ ಪ್ರಮಾಣದಲ್ಲಿ ಹೆಚ್ಚುತ್ತಿರುವುದು. ಅಜೀತ್ ಸೋಲಂಕಿ ಮತ್ತು ಷರಾಫತ್ ಆಲಿ ಇವರಿಬ್ಬರೂ ನಮ್ಮ ಅತ್ಯಂತ ಪ್ರಸಿದ್ಧರಾದ ಸೂಕ್ಷ್ಮ ಕಲೆಗಳ ಕಲಾವಿದರು. ಕಿರಿಯ ಸಂತಳು ಹಾಡುತ್ತಿರುವ, ಏಕತಾರಿಯನ್ನು ನುಡಿಸುತ್ತಿರುವ, ಕೃಷ್ಣನೊಂದಿಗೆ ನರ್ತಿಸುತ್ತಿರುವ ಚಿತ್ರಗಳು ಅಂದಾಜು ಸರಾಸರಿ ದಿನಕ್ಕೆ ಇಪ್ಪತ್ತರಿಂದ ನಲವತ್ತು, ಬೃಂದಾವನಿ ಮಂದಿರದ ಹೊರಗಡೆ ಮಾರಾಟವಾಗುತ್ತವೆ. ಎಲ್ಲ ಚಿತ್ರಗಳ ಮೇಲೆ ಅಜೀತ್ ಇಲ್ಲವೆ ಷರಾಫತ್‌ನ ಸಹಿ ಇರುತ್ತದೆ. ಆದರೆ ಪ್ರಾಚೀನ ಅವಶೇಷಗಳ ವಹಿವಾಟಿನ ಒಂದು ಸಣ್ಣ ಭಾಗ ಈ ಚಿಕಣಿ ಚಿತ್ರ ಕಲೆಗಳ ಉದ್ಯಮದ್ದು. ರಾಜಕುಮಾರಿಯು ಕೂದಲು ದಿನವೂ ಅದೆಷ್ಟು ಮಾರಾಟವಾಗುತ್ತದೆಂದರೆ, ಇದುವರೆಗೆ ಆಕೆ ಏಳು ಸಲವಾದರೂ ಪೂರ್ತಿ ಬೋಕ್ಕ ತಲೆಯವಳಾಗಿರಬೇಕಿತ್ತು.

ಟರ್ಕಿ ಭಾಷೆಯನ್ನು ಚೆನ್ನಾಗಿ ಬಲ್ಲ ಯಾರೋ ಚಾಣಾಕ್ಷ ವ್ಯಾಪಾರಿಯೊಬ್ಬ ಶ್ಯಾಮ್‌ದುಲಾರೆ ಮತ್ತು ಪ್ಯಾರೇಲಾಲ್‌ರೊಂದಿಗೆ ಒಪ್ಪಂದ ಮಾಡಿಕೊಂಡು ಈ ನಕಲಿ ಸಹಿ ಮತ್ತು ಸುಳ್ಳು ದಾಖಲೆ ಪತ್ರಗಳ ಮಾರಾಟದಿಂದ ತನ್ನ ಅದೃಷ್ಟ ಖುಲಾಯಿಸಿಕೊಳ್ಳುತ್ತಾ ಇದ್ದಾನೆ ಅನ್ನುವುದು ಬಾಬರ್‌ನ ಟಿಪ್ಪಣಿಗಳ ಬಗೆಗಿನ ನನ್ನ ಆತಂಕ. ಮಂಗಳ್ ಮೂಲದಲ್ಲೇ ಎರಡೆರಡು ಸಲ ತಾಳೆ ಮಾಡಿ ನೋಡಲು ನಿರ್ಧರಿಸಿದ್ದನು. ಅದಕ್ಕೆ ಅಪಾರವಾದ ಕೌಶಲ್ಯ, ಸುತ್ತು ಬಳಸು ಹಾಗೂ ಸತತ ಪರಿಶ್ರಮ ಬೇಕಾಗಿದ್ದಿರಬಹುದು. ಆದರೆ ಅವನು ನಿಧಾನವಾಗಿ ಕಾಬೂಲ್‌ವರೆವಿಗೂ ವಿಸ್ತರಿಸುವ ಹಾಗೆ ತನ್ನ ಜಾಲವನ್ನು ದೊರೆಯ ನೆಲೆಗೂ ನುಸುಳಿ ಬಿಟ್ಟಿದ್ದಾನೆ. ಈಗ ತಿಳಿದು ಬಂದ ವಿಷಯವೆಂದರೆ, ಬಾಬರನಿಗೆ ಹೈದರ್ ಎಂಬ ಚಿಕ್ಕವಯಸ್ಸಿನ ಅತ್ಯಂತ ನೆಚ್ಚಿನ ಸೋದರಸಂಬಂಧಿಯೊಬ್ಬನಿದ್ದಾನಂತೆ. ಭಾರತಕ್ಕೆ ಅವನು ಹಲವಾರು ಸಲ ಬಂದು ತಂಗಿದ್ದು, ತನ್ನ ನೆರೆಯವರೊಂದಿಗೆ ತನ್ನ ವಿರುದ್ಧ ಬಂಡೆದ್ದವರೊಂದಿಗೆ ಮಾಡಬೇಕಾಗಿ ಬಂದ ಯುದ್ಧಗಳು, ಇನ್ನು ನಾಗರಿಕ ಮತ್ತು ಆಡಳಿತಾತ್ಮಕ ವಿಷಯಗಳನ್ನು ಕುರಿತು ಹೇಳುವಂತೆಯೇ ಇಲ್ಲ, ಇವೆಲ್ಲ ಸಂಗತಿಗಳ ಹೊರತಾಗಿಯೂ ತನ್ನ ಈ ಕಿರಿಯ ಸೋದರ ಸಂಬಂಧಿಯ ವಿದ್ಯಾಭ್ಯಾಸದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿದ್ದಾನೆ ಹಾಗೆ ನೋಡಿದರೆ, ಕೈಬರಹದ ಕಲೆ, ಓದುವುದು ಪತ್ರರಚನಾ ಕಲೆ, ಮತ್ತು ಕಾವ್ಯವೇ ಮೊದಲಾದ ವಿಷಯಗಳಿಗೆ ಸ್ವತಃ ಬಾಬರನೇ ಗುರು. ನಿಷ್ಕೃಷ್ಟವಾದ ಸಾಕ್ಷಿ ಬೇಕೆಂದರೆ ಮಂಗಳ್ ಅದನ್ನೂ ನೀಡಿದ್ದಾನೆ. ಹೈದರನಿಗೆ ಬಾಬರನಿಂದ ಉಡುಗೊರೆಯಾಗಿ ಬಂದ, ಹೈದರನ ರತ್ನ ಖಚಿತವಾದ ಮಸಿ ಕುಡಿಕೆಯ ಒಳಗಿನ ಪಿಂಗಾಣಿ ಪಾತ್ರೆ ಹಾಗೂ ಹೈದರ್ ಬಳಸುತ್ತಿದ್ದ ಗರಿಯ ಲೇಖನಿ ಎರಡನ್ನೂ ಹೇಗೋ ಏನೋ ಪಡೆದುಕೊಳ್ಳುವಲ್ಲಿ : 'ಕದಿಯುವಲ್ಲಿ' ಎಂದು

ಹೇಳುವುದೇ ಹೆಚ್ಚು ಸರಿಯಾದ್ದು, ಸಮರ್ಥನಾಗಿದ್ದಾನೆ. ಮಸಿ, ಲೇಖನಿಯ ಗೆರೆಗಳು, ಗರಿಯ ಅಗಲ ಮತ್ತು ಅದರ ಕೋನಗಳು ಕದ್ದ ದಿನಚರಿಯಲ್ಲಿನ ನಮೂದುಗಳಿಗೆ ತಾಳೆಯಾಗುತ್ತವೆ.

ಕಳೆದ ವರ್ಷದಿಂದಲೋ ಏನೋ, ಶ್ಯಾಮ್ ದುಲಾರೆಯು ಮಂಗಳನಿಗೆ ಕಳಿಸಿಕೊಟ್ಟಿರುವ ಬರಹದ ಕೆಲವು ಅತಿ ಪ್ರಮುಖ ಅಂಶಗಳನ್ನು ಉದ್ಧೃತ ಗೊಳಿಸುತ್ತೇನೆ. ಅವು ಹೆಚ್ಚು ದೀರ್ಘವಾಗಿವೆ ಮತ್ತು ಮೊದಲು ಕಳುಹಿಸದವುಗಳಿಗಿಂತ ಅತ್ಯಂತ ಹೆಚ್ಚು ಸತ್ವವುಳ್ಳವಾಗಿವೆ.

ಅವನಿಗೆ ಹದಿನಾರನೇ ವಯಸ್ಸಿನಲ್ಲಿ ಆದ ಮದುವೆಯ ಬಗೆಗಿನ ಒಂದು ನಮೂದು ಇಲ್ಲಿದೆ.

"ನಮ್ಮ ತಂದೆ ಮತ್ತು ನನ್ನ ಮಾವ ಅರ್ಥಾತ್ ಆಯಿಷಾಳ ತಂದೆ. ಆಲ್ ಅಹಮದ್ ಮಿರ್ಜಾ ಆಯಿಷಾಳೊಂದಿಗೆ ನನ್ನ ನಿಶ್ಚಿತಾರ್ಥ ಮಾಡಿಕೊಟ್ಟಿದ್ದರು. ಅವಳು ಖುಜಂದ್‌ಗೆ ಬಂದಳು ಮತ್ತು ನಾನು ಅವಳನ್ನು ಷಾಬಾನ್ ತಿಂಗಳಲ್ಲಿ ಬರಮಾಡಿಕೊಂಡೆನು. ನಾನು ಅವಳ ವಿಷಯಕ್ಕೆ ಪ್ರತಿಕೂಲವಾಗಿರದೆ ಇದ್ದರೂ, ಇದು ನನ್ನ ಮೊದಲನೇ ಮದುವೆಯಾದ್ದರಿಂದ, ವಿನಯ ಮತ್ತು ಸಂಕೋಚದಿಂದ, ನಾನು ಹತ್ತು, ಹದಿನೈದು ಅಥವಾ ಇಪ್ಪತ್ತು ದಿನಗಳಿಗೊಮ್ಮೆ ಅವಳನ್ನು ನೋಡಲು ಹೋಗುತ್ತಿದ್ದೆ. ಆನಂತರ ನನ್ನ ಪ್ರಥಮ ಪ್ರಣಯವೇ ಇನ್ನೂ ಮುಗಿಯದಿದ್ದಾಗ, ನನ್ನ ನಾಚಿಕೆ ಹೆಚ್ಚಾಯಿತು. ಆಮೇಲೆ ನನ್ನ ತಾಯಿ ಖಾನಿಮ್, ತಿಂಗಳಿಗೊಮ್ಮೆ ಅಥವಾ ನಲವತ್ತು ದಿನಗಳಿಗೊಮ್ಮೆ ಬಲವಂತದಿಂದ ದಬ್ಬಿದಬ್ಬಿ ಪೀಡಿಸಿ, ಪೀಡಿಸಿ, ತಲೆತಿಂದು ತಿಂದು ಕಳಿಸಿಕೊಡುತ್ತಿದ್ದಳು".

ಬಾಬರ್ ತನ್ನ ಹದಿಹರೆಯದ, ಆದರೆ ಆಳವಾದ ಪ್ರಣಯದಲ್ಲಿ ಸಿಲುಕಿ ಗಾಢವಾಗಿ ಮೋಹ ಪರವಶನಾಗಿದ್ದನು. ಅವನ ಇಡೀ ಬದುಕಿನಲ್ಲಿ ಈ ಥರದ್ದು ಇದು ಒಂದೇ ಒಂದು ಎಂದು ಕಾಣಿಸುತ್ತದೆ.

"ಆ ವಿರಾಮದ ದಿನಗಳಲ್ಲಿ ನನ್ನಲ್ಲೇ ನಾನು ವಿಚಿತ್ರವಾದೊಂದು ಒಲವನ್ನು ಕಂಡುಕೊಂಡೆನು. ಅಲ್ಲ. ನಮ್ಮ ಶಿಬಿರದ ಬಜಾರಿನಲ್ಲಿ ಕಾಣಿಸಿದ ಬಾಬುರಿ ಎಂಬ ತಕ್ಕ ಹೆಸರಿನ ಹುಡುಗನೊಬ್ಬನ ವಿಷಯಕ್ಕೆ ಕಾವ್ಯದಲ್ಲಿ ಹೇಳಿದಂತೆ ನಾನು ವಸ್ತುಶಃ 'ಹುಚ್ಚನಾದೆ, ಪೀಡಿತನಾದೆ'. ಅಲ್ಲಿಯ ತನಕ ಯಾರ ವಿಷಯಕ್ಕೂ ನನಗೆ ಒಲವಾಗಲಿ, ಇಷ್ಟವಾಗಲಿ, ಇರಲಿಲ್ಲ. ಪ್ರಣಯ ಮತ್ತು ಬಯಕೆಯ ಬಗ್ಗೆ ವದಂತಿರೂಪದಲ್ಲಾಗಲಿ, ಅನುಭವದಿಂದಾಗಲಿ, ನಾನು ಕೇಳಿರಲೂ ಇಲ್ಲ, ಯಾರೊಂದಿಗೂ ಮಾತೂ ಆಡಿರಲಿಲ್ಲ. ಆ ಕಾಲದಲ್ಲಿ ನಾನು ಪರ್ಷಿಯನ್ ದ್ವಿಪದಿಗಳನ್ನು, ಒಂದು ಸಲಕ್ಕೆ ಒಂದೋ ಎರಡೋ ರಚಿಸುತ್ತಿದ್ದೆ. ಇದು ಅವುಗಳಲ್ಲೊಂದು

ನನ್ನಂತೆ ದೀನರು, ದುಃಖಾರ್ತರು ಪ್ರೇಮ ಜ್ವರ ಪೀಡಿತರು ಇನ್ನಾರೂ ಆಗದಿರಲಿ
ನಿನ್ನಷ್ಟು ಪ್ರಿಯರು ನನಗಿನ್ನಾರು ಇಲ್ಲವು ಓ ಕ್ರೂರಿಯೆ, ಉದಾಸೀನನೆ

ಆಗಿಂದಾಗ್ಗೆ ಬಾಬುರಿ ನಾನಿರುವಲ್ಲಿಗೆ ಬರುತ್ತಿದ್ದನು. ಆದರೆ ಲಜ್ಜೆ ಮತ್ತು ಸಂಕೋಚದಿಂದ ನಾನೆಂದೂ ಅವನತ್ತ ನೇರವಾಗಿ ನೊಡಲಾಗುತ್ತಿರಲಿಲ್ಲ. ಹಾಗಿದ್ದ ಮೇಲೆ ಅವನೊಂದಿಗೆ ಹೇಗೆ ತಾನೆ ಮಾತುಕತೆಯಾಡುವುದಾಗಲಿ ಕವನ ಓದುವುದಾಗಲಿ ಸಾಧ್ಯ? ನನ್ನ ಸಂತೋಷ ಮತ್ತು ತಳಮಳದಿಂದಾಗಿ ಅವನು ಬಂದದ್ದಕ್ಕೆ ವಂದನೆಯನ್ನು ತಿಳಿಸಲಾಗಲಿಲ್ಲ. ಹಾಗಿದ್ದ ಮೇಲೆ ಅವನು ಹೊರಟು ಹೋದದ್ದಕ್ಕೆ ಅವನನ್ನು ಆಕ್ಷೇಪಿಸಲು ತಾನೆ ನನಗೆ ಹೇಗೆ

ಸಾಧ್ಯ? ಅವನ ಸೇವಾಕರ್ತವ್ಯವನ್ನು ನಾನು ಪಡೆದುಕೊಳ್ಳಲು ಆಜ್ಞೆ ಮಾಡುವ ಅಧಿಕಾರ ತಾನೆ ನನಗೆ ಎಲ್ಲಿತ್ತು? ಬಯಕೆ ಮತ್ತು ಕಾಮೋದ್ರೇಕ ಪೀಡಿತನಾಗಿದ್ದ ಕಾಲದಲ್ಲಿ ಒಂದು ದಿನ ಸಂಗಾತಿಗಳೊಂದಿಗೆ ಒಂದು ಓಣಿಯಲ್ಲಿ ಹೋಗುತ್ತಿದ್ದಾಗ, ಇದ್ದಕ್ಕಿದ್ದಂತೆ ಅವನೊಂದಿಗೆ ಮುಖಾಮುಖಿಯಾದೆ. ನಾನು ಅದೆಂಥ ಗೊಂದಲಕ್ಕೊಳಗಾಗಿದ್ದೆನೆಂದರೆ, ನಾನು ಹೆಚ್ಚು ಕಡಿಮೆ ಅವನಿಗೆ ನೇರವಾಗಿ ಹೋಗಿಬಿಟ್ಟೆ. ಅವನತ್ತ ನೇರವಾಗಿ ದಿಟ್ಟಿಸಿ ನೋಡಲಾಗಲಿ, ಮಾತುಗಳನ್ನು ಹೊಂದಿಸಿಕೊಂಡು ಹೇಳಲಾಗಲಿ ಆಗಲಿಲ್ಲ. ನೂರಾರು ಥರದ ನೋವು ಮತ್ತು ನಾಚಿಕೆಗಳಿಂದ ನಾನು ಮುಂದೆ ನಡೆದೆ. ಮಹಮ್ಮದ್ ಸಾಹೇಬರ ಪಾರ್ಸಿ ದ್ವಿಪದಿ ನನಗೆ ನೆನಪಾಯಿತು.

ನನ್ನ ಗೆಳೆಯನನು ಕಂಡಂದು ನಾಚಿ ಮುದುಡಿದೆನು ನಾನಾಗ;

ನನ್ನತ್ತ ನೋಡುವರು ನನ್ನ ಸಂಗಾತಿಗಳು. ನಾನು ಹಿಡಿದೆನು ಬೇರೆ ದಾರಿಯನ್ನು.

ಆ ದ್ವಿಪದಿ ನನ್ನ ಪರಿಸ್ಥಿತಿಗೆ ಅತ್ಯಂತ ಆಶ್ಚರ್ಯಕರವಾಗಿ ಹೊಂದುತ್ತಿತ್ತು. ಉಕ್ಕಿ ಬರುತ್ತಿದ್ದ ಆ ಬಯಕೆ ಮತ್ತು ಕಾಮೋದ್ರೇಕದಲ್ಲಿ, ಯೌವನದ ಹುಂಬ ಒತ್ತಡದಲ್ಲಿ ನಾನು ಬರಿಗಾಲಿನಲ್ಲಿ, ತಲೆಯ ಮೇಲೆ ಏನೂ ಧರಿಸದೆ ಬೀದಿಗಳಲ್ಲಿ, ಗಲ್ಲಿಗಳಲ್ಲಿ ಹಣ್ಣಿನ ತೋಟಗಳಲ್ಲಿ, ದ್ರಾಕ್ಷಿಯ ತೋಟಗಳಲ್ಲಿ ಅಲೆದಾಡುತ್ತಿದ್ದೆ. ನಾನು ಸ್ನೇಹಿತನಿಗಾಗಲಿ, ಅಪರಿಚಿತನಿಗಾಗಲಿ, ಸೌಜನ್ಯ ತೋರಲಿಲ್ಲ, ನನ್ನ ಬಗ್ಗೆಯಾಗಲಿ, ಇತರರ ಬಗ್ಗೆಯಾಗಲಿ ಆಗ ನನಗೆ ಲಕ್ಷ್ಯವಿರಲಿಲ್ಲ.

ನನಗೇ ಅರಿವಿಲ್ಲದೆ ನನ್ನೊಳಗಿಂದ ಉಕ್ಕಿ ಹರಿಯಿತು ಬಯಕೆಯು

ಕಿನ್ನರಿಯ ನೊಲಿದವನಿಗಿದೆ ಗತಿಯು

ಕೆಲವೊಮ್ಮೆ ಹುಚ್ಚನಂತೆ ನಾನೊಬ್ಬನೇ ಗುಡ್ಡ, ಬಯಲುಗಳಲ್ಲಿ ಅಲೆದಾಡುತ್ತಿದ್ದೆ. ಕೆಲವು ಸಲ ಉದ್ಯಾನವನಗಳ, ಹೊರವಲಯಗಳ, ಗಲ್ಲಿ ಓಣಿಗಳ ಹಾದಿ ಹಿಡಿಯುತ್ತಿದ್ದೆ, ನನ್ನ ಅಲೆದಾಟ ನನ್ನ ಆಯ್ಕೆಯದ್ದಾಗಿರಲಿಲ್ಲ. ಹೋಗಬೇಕೋ ತಂಗಬೇಕೋ ಎಂಬುದನ್ನು ನಿರ್ಧರಿಸುತ್ತಿದ್ದವನೂ ನಾನಲ್ಲ.

ತೆರಳುವ ಶಕ್ತಿಯೂ ನನ್ನದಾಗಿರಲಿಲ್ಲ ತಂಗುವ ಶಕ್ತಿಯೂ

ಓ ಎನ್ನ ಹೃದಯ ಕದ್ದವನೆ ಕೇವಲ ನೀ ಮಾಡಿದಂತೆ ನಾನು

ಬಾಬರ್‌ನಂತೆಯೇ ಯೋಧನಾದ ನಾನು, ನನ್ನ ಖಾಸಗಿ ದಿನಚರಿಯಲ್ಲಾದರೂ ಸರಿ, ಸಲಿಂಗ ಕಾಮಾಸಕ್ತಿಯ ಬಗ್ಗೆ, ಬಿಚ್ಚು ಮನಸ್ಸಿನಿಂದ, ಸ್ಪಷ್ಟವಾಗಿ ವ್ಯಕ್ತಪಡಿಸುವೆನೆ? ಬಾಬರನ ಮಾತುಗಳನ್ನು ನಾನು ಎಂದಾದರೂ ಸಂದೇಹದಿಂದ ನೋಡುತ್ತೇನೆಯೆ ಎಂಬುದು ಅನುಮಾನ.

ನಾನೊಬ್ಬ ಕದ್ದು ನೋಡುವ ಕಾಮ ಕುತೂಹಲಿ ಎನ್ನಿಸುತ್ತದೆ. ನನ್ನ ಕ್ರಿಯೆಗಳಷ್ಟೇ ಅಲ್ಲ, ನನ್ನ ಆಲೋಚನೆಗಳು ಮತ್ತು ಬರಹಗಳ ಗುಟ್ಟನ್ನು ಬೇರಾರೋ ಅರಿತಿದ್ದಾರೆಂದರೆ, ಆಗ ನನ್ನ ಪ್ರತಿಕ್ರಿಯೆಯೇನಾದೀತು (ಅರಮನೆಯಲ್ಲಿದ್ದುಕೊಂಡು ಗೋಪ್ಯತೆಯನ್ನು ನಿರೀಕ್ಷಿಸುವಂತಿಲ್ಲ)? ಕಡೇ ಪಕ್ಷ ರಹಸ್ಯವಾದ ಉದ್ದೇಶವಿಲ್ಲದೆ, ಅಪಮಾರ್ಗವನ್ನು ಹಿಡಿಯದೆ, ಸಾರ್ವಜನಿಕ. ಉಪಯೋಗಕ್ಕೆಂದು ರಚಿತವಾದ ದಿನಚರಿಗಳು, ಮುಖಾಮುಖಿ ಭೇಟಿಗಿಂತ, ಅಥವಾ ವ್ಯಕ್ತಿಯೊಂದಿಗಿನ ದೀರ್ಘಕಾಲದ ಪರಿಚಯಕ್ಕಿಂತ ಹೆಚ್ಚು ಚೆನ್ನಾಗಿ ವಿಷಯಗಳನ್ನು ಹೊರಗೆಡಹುತ್ತವೆ. ಒಂದಂತೂ ಖಚಿತ. ನನಗೆ ಬಾಬರನ ಬಗ್ಗೆ ಹೆಚ್ಚು ತಿಳಿಯುತ್ತಿದ್ದಂತೆ,

ಅವನ ಬಗ್ಗೆ ಇನ್ನಷ್ಟು ಹೆಚ್ಚು ತಿಳಿಯಬೇಕೆನಿಸುತ್ತಿದೆ. ಧರ್ಮವೆಂಬುದು ಅಂಥ ಒಂದು ಬೆಸುಗೆ ಹಾಕಲಾರದ ವಿಭಾಜಕವಾಗಬೇಕೆ? ನಾನವನನ್ನು ಭೇಟಿಯಾಗಲಿಚ್ಛಿಸುತ್ತಿದ್ದೆ. ಬಹುಶಃ ಅವನ ಸ್ನೇಹಿತನಾಗಿರಲೂ ಬಯಸುತ್ತಿದ್ದೆ.

ನನ್ನ ಆಲೋಚನಾ ಸರಣಿ ತುಂಡಾಯಿತು. ಭಾರವಾಗಿ ಎಳೆದು ಹಾಕುವ ಹೆಜ್ಜೆಗಳ ಸಪ್ಪಳ ಹಾಗೂ ಸೇವಕರು ಆತುರಾತುರವಾಗಿ ಓಡುವುದು ಕೇಳಿಸಿತು. ಅದು ಮಹಾಪ್ರಭುಗಳಾಗಿರಲಾರದು. ಆಗಲೇ ಅದು ತೀರ ವೇಳೆಯಾಗಿತ್ತು. ತಂದೆಯವರು ಅವಸರವಸರವಾಗಿ ತಮ್ಮ ಭುಜಗಳ ಮೇಲೆ ನಿಲುವಂಗಿಯನ್ನು ಅಸ್ತವ್ಯಸ್ತವಾಗಿ ಎಳೆದುಕೊಂಡಿದ್ದರು. ನಾನು ಅವರ ಪಾದಗಳಿಗೆ ತಲೆಬಾಗಿ ನಮಿಸಿದ್ದೆ. ಅವರು ಬಲಗೈಯನ್ನು ಇಳಿಬಿಟ್ಟು ನನ್ನ ಕೂದಲುಗಳನ್ನು ನೇವರಿಸುತ್ತಿದ್ದರು. ಸ್ವಲ್ಪದರಲ್ಲೇ ಹೇಳಬೇಕೆಂದರೆ, ಅದೊಂದು ತಂದೆಯವರ ಅಪರೂಪದ ನಡೆ. ಕಡೆಗೂ ನಾನು ಪ್ರಾಯಕ್ಕೆ ಬಂದ ಮಗನಾಗಿದ್ದೆನೆ? ತನ್ನ ಹಿರಿಯ ಮಗ, ಏನೇ ಆದರೂ ಕೆಟ್ಟವರ ಪೈಕಿ ಅಂತೂ ಅಲ್ಲ ಎಂದು ತಂದೆಯವರು ಕಂಡುಕೊಂಡರೆ? ಕಿರಿಯ ಸಂತಳ ಮೇಲಿನ ಅಕ್ಕರೆಯಿಂದಾಗಿ ಅವರು ನನ್ನ ವಿಷಯಕ್ಕೆ ಅನುಕೂಲರಾದರೆ?

ನನ್ನ ಹೆಂಡತಿ ಒಳಗಿನಿಂದ ಒಂದು ಬೆಳ್ಳಿ ಲೋಟದಲ್ಲಿ ನೀರು ಹಾಕಿಕೊಟ್ಟಳು.

"ಮೇದಿನೀ ರಾಯ್ ಕಡೆಯಿಂದ ಈಗ ತಾನೆ ಒಂದು ಪತ್ರ ಬಂದಿದೆ. ಅವರು ಹಿಂದೆ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದ. ಅವನ ಪ್ರಭು ಮಾಳ್ವದ ಸುಲ್ತಾನನು ನಲವತ್ತು ಸಾವಿರ ಸೈನಿಕರ ಸೇನಾ ಪಡೆ ಹಾಗೂ ಮುನ್ನೂರು ಆನೆಗಳೊಂದಿಗೆ ಗಾಗ್ರೋನ್‌ಗೆ ಮುತ್ತಿಗೆ ಹಾಕಿದ್ದಾನೆ. ಕೋಟೆ ಈಗ ರಾಯ್‌ನ ಪುತ್ರ ಹೇಮಕರಣನ ನಿಯಂತ್ರಣದಲ್ಲಿದೆ. ಸಾಮಾನು ಸರಂಜಾಮುಗಳು ಮುಗಿಯುತ್ತ ಬಂದಿವೆ ಹಾಗೂ ಅವನ ಬಳಿ ದುರ್ಗವನ್ನು ರಕ್ಷಿಸಲು ಬೇಕಾದಷ್ಟು ಸಂಖ್ಯೆಯ ಯೋಧರು ಇಲ್ಲ."

"ಮೇದಿನಿರಾಯ್ ಎಲ್ಲಿದ್ದಾರೆ?" ನಾನು ಕೇಳಿದೆ.

"ನಮ್ಮ ಸಹಾಯವನ್ನು ನಿರೀಕ್ಷಿಸುತ್ತಾ ಧರಮ್ ಪುರದಲ್ಲಿದ್ದಾರೆ. ಸೇನಾದಂಡನಾಯಕನನ್ನಾಗಿ ನಾವು ಯಾರನ್ನು ನೇಮಿಸಬೇಕು ಮತ್ತು ಅಲ್ಪ ಸಮಯದಲ್ಲಿ ನಾವು ಎಷ್ಟು ಸೇನಾಪಡೆಗಳನ್ನು ಒಟ್ಟುಗೂಡಿಸಬಹುದು?"

ಗಾಗ್ರೋನ್‌ನಲ್ಲಿ ಹೇಮಕರಣನು ಎಲ್ಲಿಯವರೆಗೂ ತಡೆದುಕೊಳ್ಳಬಲ್ಲ? ಈ ಕಾರ್ಯಕ್ಕೆ ಅತ್ಯಂತ ತಕ್ಕನಾದ ವ್ಯಕ್ತಿ ಯಾರು ಎಂದು ನಾನು ಭಾವಿಸಿದ್ದೇನೆಂದು ನಿಜಕ್ಕೂ ನನ್ನೊಂದಿಗೆ ಸಮಾಲೋಚಿಸಲು ತಂದೆಯವರು ಬಂದಿದ್ದಾರೆಯೆ? ಹಿಂದೆಂದೂ ಅವರು ಹಾಗೆ ಮಾಡಿರಲಿಲ್ಲ ಅಥವಾ ಅವರ ಮನಸ್ಸಿನಲ್ಲಿ ಬೇರಿನ್ನೇನಾದರೂ ಇದೆಯೆ?

"ಏಳು ಅಥವಾ ಎಂಟು ದಿನದವರೆಗೂ ತಡೆದುಕೊಳ್ಳಬಹುದು. ಆನಂತರ ಕೇಸರಿ ಬಾವುಟ ಹಾರಿಸುತ್ತ ದುರ್ಗದ ಬಾಗಿಲುಗಳನ್ನು ತೆರೆದು, ತನ್ನವರೊಂದಿಗೆ ಅವನು ನಿಶ್ಚಿತವಾಗಿ ಮೃತ್ಯುವಿನ ಮನೆಯತ್ತ ಹೆಜ್ಜೆ ಹಾಕಬೇಕು. ನಮ್ಮ ಕಡೆಯ ಸೇನಾನಾಯಕ ಯಾರಾಗಬೇಕು ಮಗೂ?"

"ಅಂಥ ಒಬ್ಬನೇ ಒಬ್ಬ ವ್ಯಕ್ತಿ ಇದ್ದಾನೆ ಅಂತ ನನ್ನ ಅನಿಸಿಕೆ"

ನನ್ನ ಹೆಂಡತಿ ಇದೀಗ ಮಹಾಪ್ರಭುಗಳ ಸೈನಿಕ ಸಲಹೆಗಾರಳೆಂದು ನನಗೆ ತಿಳಿದಿರಲಿಲ್ಲ. ತಂದೆಯವರಿಗೂ ಕೂಡ ಅದು ಗೊತ್ತಾಗಿರಲಿಲ್ಲ. ಕಾರಣ ಅವರೂ ನನ್ನಷ್ಟೇ ವಿಸ್ಮಿತರಾದಂತೆ ಕಂಡು ಬಂದಿತು.

"ಹಾಗಾದರೆ ಯಾರದು ರಾಜಕುಮಾರಿ?" ತಂದೆಯವರು ರಾಜಕುಮಾರಿಯನ್ನು ಸಂತೃಪ್ತಗೊಳಿಸಲೆಂದು ನಿರ್ಧರಿಸಿದ್ದರೆಂಬುದು ಸ್ಪಷ್ಟವೇ ಇತ್ತು. ಆದರೆ ಆಕೆ ಅವರ ಸಹನೆಯನ್ನು ಪರೀಕ್ಷಿಸುತ್ತಿದ್ದಾಳೆಂದು ನನಗನ್ನಿಸಿತು.

"ಮಹಾಪ್ರಭುಗಳೆ ನನ್ನನ್ನು ಕಡಮೆ ಎಂದು ಪರಿಗಣಿಸಬೇಡಿ" ನನ್ನ ಹೆಂಡತಿಯ ಮುಖದಲ್ಲೊಂದು ಮುಗುಳ್ನಗೆ ಕಾಣಿಸಿತು. ಅದೇ ಸಮಯಕ್ಕೆ ಯಾರಾದರೂ ಅವಳನ್ನು ಹಗುರವಾಗೆಣಿಸಿದರೆ, ಸಹಿಸುವುದಿಲ್ಲ ಎಂಬುದರ ಸೂಚನೆಯನ್ನೂ ನೀಡಿದಳು. "ರಾಜಕುಮಾರ ವಿಕ್ರಮಾದಿತ್ಯ. ಅವನು ಮುನ್ನುಗ್ಗುವ ಪ್ರವೃತ್ತಿಯವನು ಮತ್ತು ಕೆಲಸಗಾರ. ಅಲ್ಲದೆ ಎಲ್ಲದಕ್ಕಿಂತ ನಿರ್ಣಾಯಕವಾದ್ದೆಂದರೆ, ಕೊಲ್ಲುವುದು ಅವನ ಸಹಜ ಪ್ರವೃತ್ತಿ. ಏನೇ ಆದರೂ ಅವನು ರಾಜಕುಮಾರ ಹೇಮಕರಣನನ್ನು ಮತ್ತು ಅವನ ಕಡೆಯವರನ್ನು ಅಪಾಯದಿಂದ ಪಾರು ಮಾಡಿಯೇ ತೀರುತ್ತಾನೆ".

"ಅವನು ನೀನು ಹೇಳಿದಂಥ ವ್ಯಕ್ತಿಯೇ ಹೌದು ರಾಜಕುಮಾರಿ. ಆದರೆ ಅವನು ಅತ್ಯಂತ ಆತುರದ ಮನುಷ್ಯನೂ ಹೌದು. ಅತ್ಯಂತ ತಿಳಿಯಾಗಿ ಆಲೋಚಿಸಿ, ಆದರೆ ಅತಿ ಶೀಘ್ರವಾಗಿ ಮತ್ತು ನಿರ್ಣಾಯಕವಾಗಿ ಕಾರ್ಯ ಮಾಡಬೇಕಾಗಿರುವಂಥ ಸಂದರ್ಭದಲ್ಲಿ, ಈ ಆವರಣದಲ್ಲಿ ಅವನಂಥ ಗುಣದ ವ್ಯಕ್ತಿ ಬೇಕಿಲ್ಲ."

"ಅದು ರತನ್ ಸಿಂಹನ ಕಿರುಪರಿಚಯದಂತೆ ಕೇಳಿ ಬರುತ್ತಿದೆ" ರಾಜಕುಮಾರಿ ಸುಮ್ಮನಿರುವ ವ್ಯಕ್ತಿಯಲ್ಲ ಎಂಬುದು ಸ್ಪಷ್ಟವಾಗುತ್ತ ಹೋಯಿತು. "ಅವನು ಚೆನ್ನಾಗಿ ಯೋಚಿಸಬಲ್ಲ, ನಂಬಲರ್ಹವಾದ ವ್ಯಕ್ತಿ ಮತ್ತು ಅನುಭವಶಾಲಿ. ಅವನು ಗಾಗ್ರೋನ್ ಅನ್ನು ಬಿಡುಗಡೆಗೊಳಿಸುತ್ತಾನೆ".

ಕಿರಿಯ ಸಂತಳು ಏನು ಹೇಳ ಹೊರಟಿದ್ದಳು. ಅವಳು ನಿಜಕ್ಕೂ ನನ್ನ ತಮ್ಮಂದಿರನ್ನು ಬೆಂಬಲಿಸುತ್ತಿದ್ದಾಳೆಯೆ? ಅವಳು ಹೆಚ್ಚು ಗಂಭೀರಳಾಗಿ ಕಂಡಷ್ಟು ಅವಳನ್ನು ಹೆಚ್ಚು ನಂಬುವಂತಿಲ್ಲ. ತಂದೆಯುವರನ್ನು ಅವಳು ಮುನ್ನಡೆಸುತ್ತಿದ್ದಾಳೆಯೆ ಅಥವಾ ಮಹಾಪ್ರಭುಗಳು ನಟಿಸುತ್ತಿದ್ದಾರೆಯೆ? ಕಾರಣ ಅವರಿಗೂ ಅವರದೇ ಆದ ರಹಸ್ಯ ಕಾರ್ಯ ಯೋಜನೆ ಇದೆ.

"ನೀನು ನಿನ್ನ ಯಜಮಾನರನ್ನು ಈ ಕೆಲಸಕ್ಕೆ ಶಿಫಾರಸು ಮಾಡುವುದಿಲ್ಲವೆ?"

"ಮಹಾಸ್ವಾಮಿಯವರೆ? ಇಲ್ಲ. ಅವರು ಒಳ್ಳೆಯವರೇ. ಆದರೆ ಅವರ ಬಹಳಷ್ಟು ಆಲೋಚನೆಗಳು ಅಸಾಂಪ್ರದಾಯಿಕವಾದವು. ಒಂದು ವೇಳೆ ಮೇವಾಡದ ಸೇನಾ ದಂಡನಾಯಕರಿಗೆ, ಅವರ ಕಾರ್ಯವಿಧಾನ ಅನುಕೂಲಕರವೆನ್ನಿಸದಿದ್ದರೆ ಆಗ ಆ ಬಡಪಾಯಿ ಮೇದಿನಿರಾಯ್ ಅವರ ಪ್ರತಿಕ್ರಿಯೆ ಹೇಗಿರಬಹುದುದೆಂದು ಊಹಿಸಿಕೊಳ್ಳಿ. ನಾವು ಮತ್ತೊಮ್ಮೆ ಅವರ ಕೈ ಬಿಡುತ್ತಿದ್ದೇವೆ ಎಂದು ಅವರು ಭಾವಿಸುತ್ತಾರೆಂದು ನನ್ನ ಅನಿಸಿಕೆ."

"ಅದು ತುಂಬ ಕುತೂಹಲಕರವಾಗಿದೆ. ನಾನೂ ಅದನ್ನೇ ಯೋಚನೆ ಮಾಡುತ್ತಿದ್ದೇನೆ. ಆದರೆ ನಿನ್ನ 'ಯಜಮಾನರು ಬೇಕು' ಅಂತ ಕೇಳಿರುವುದು ಮೇದಿನೀರಾಯ್".

ನಮ್ಮ ತಂದೆಯವರು ಮಾಳ್ವದ ವಿರುದ್ಧ ಮೇವಾಡದ ಸೈನ್ಯವನ್ನು ಮುನ್ನಡೆಸಲು, ತಂದೆಯವರು ನನ್ನನ್ನು ಹೆಸರಿಸಲೆಂದು ಪ್ರಯತ್ನಿಸುವ ಸಲುವಾಗಿ ನನ್ನ ಹೆಂಡತಿ ಇಷ್ಟೆಲ್ಲಾ ದೀರ್ಘವಾದ ಸೋಗು ಹಾಕಿದ್ದಳೆಂಬುದು ಇದೀಗ ಸ್ಪಷ್ಟವಾಯಿತು. ಆದರೆ ಎಂದಿನಂತೆ ಮಹಾಪ್ರಭುಗಳು ಅದಾಗಲೇ ತಮ್ಮ ಮನಸ್ಸು ಮಾಡಿಯಾಗಿತ್ತು. "ಹಾಗಾದರೆ

ಅದು ತೀರ್ವಾನವಾದಂತಾಯಿತು ಬಿಡಿ. ದಯವಿಟ್ಟು ಮಹಾಪ್ರಭು ನಾನು ಮಹಾಸ್ವಾಮಿಯವರ ಸಲಕರಣೆಗಳನ್ನೆಲ್ಲಾ ಕಟ್ಟಿಡುತ್ತೇನೆ".

"ನಿನ್ನ ಗಂಡ ಯುದ್ಧಕ್ಕೆ ಹೋಗುತ್ತಾ ಇದ್ದಾನೆ ಅನ್ನುವ ಕಾರಣಕ್ಕಷ್ಟೇ, ನಿನ್ನ ಪ್ರೀತಿಯಲ್ಲಿ ನನಗೆ ಎರಡನೇ ಸ್ಥಾನವೋ? ಹಾಗಾದರೆ ಈ ಹೊತ್ತು ನನ್ನ ಊಟ ನಾನೊಬ್ಬನೇ ಕೂತುಕೊಂಡು ಮಾಡಬೇಕೋ?" ಎನ್ನುತ್ತ ತಂದೆಯವರು ನಕ್ಕರು. ನಾನು ಯಾವೊತ್ತಾದರೂ ಅರ್ಥಮಾಡಿಕೊಳ್ಳಬಹುದಾದ್ದಕ್ಕಿಂತಲೂ ಚೆನ್ನಾಗಿ ನನ್ನ ಹೆಂಡತಿ ನಮ್ಮ ತಂದೆಯವರನ್ನು ಅರ್ಥಮಾಡಿಕೊಂಡಿದ್ದಾಳೆ ಎನ್ನುವುದು ಸ್ಪಷ್ಟವಾಯಿತು.

"ಅಂಥ ಅವಕಾಶ ನಿಮಗೆ ಸಿಗುವುದಿಲ್ಲ ಬಿಡಿ. ನಿನ್ನೆ ರಾತ್ರಿ ಇಸ್ಪೀಟಾಟದಲ್ಲಿ ಮೋಸ ಮಾಡಿ ನನ್ನಿಂದ ಗಿಟ್ಟಿಸಿಕೊಂಡಿರುವ ದುಡ್ಡನ್ನೆಲ್ಲಾ ಖರ್ಚುಮಾಡಿ ಬಿಡುವುದಕ್ಕೆ ಹೊಂಚು ಹಾಕುತ್ತಿದ್ದೀರಿ ಅಂತ ನನಗೆ ಗೊತ್ತು. ಆದರೆ ನಾನು ಸೋತಿರುವುದನ್ನೆಲ್ಲ, ಚಕ್ರ ಬಡ್ಡಿ ಸಮೇತ ಗೆದ್ದುಕೊಳ್ಳಬೇಕೆಂದಿದ್ದೀನಿ".

"ನಿನ್ನ ಹೆಂಡತಿಗೆ ಹೇಳುತ್ತಲೇ ಇದ್ದೀನಿ ಅವಳನ್ನು ತಪ್ಪಿ ನಮ್ಮ ಕುಟುಂಬಕ್ಕೆ ಮದುವೆ ಮಾಡಿಕೊಟ್ಟು ಬಿಟ್ಟಿದ್ದಾರೆ ಅಂತ. ರಾವ್ ವೀರಮ್ ದೇವ್ ಅವರು ಅವಳನ್ನು ಆದಿನಾಥರ ಮೊಮ್ಮಕ್ಕಳಿಗೆ ಯಾರಿಗಾದರು ಮದುವೆ ಮಾಡಿಕೊಡಬೇಕಾಗಿತ್ತು. ಈ ಹೆಣ್ಣು ಸಂತಳು ಗಿಂತಳು ಏನೂ ಅಲ್ಲ. ಪಕ್ಕ ಮಾರವಾಡಿ ಹೃದಯ. ಮನಸ್ಸು ಮತ್ತು ಆತ್ಮ ಅವಳದ್ದು".

ಹಸಿರು ಕಣ್ಣಿನ ಚೆಲುವೆ ಭಾವೋದ್ರೇಕದಿಂದ ಗಹಗಹಿಸಿ ನಕ್ಕಳು.

ಸೊಸೆಯ ಭಾವಾತಿರೇಕದ ನಡೆಯಿಂದ ತಂದೆಯವರು ಬಹಳಷ್ಟು ಖುಷಿಪಟ್ಟರು ಎಂಬುದನ್ನು ಹೇಳಬೇಕಾದ್ದೇ ಇಲ್ಲ.

ತಂದೆಯವರು ಮತ್ತೆ ವಿಷಯಕ್ಕೆ ಬಂದರು "ಮೇದಿನೀ ರಾಯ್ ಸೈನ್ಯದ ಸಂಖ್ಯೆ ಎಷ್ಟು?"

"ಹತ್ತು ಸಾವಿರದ ಹತ್ತಿರ ಹತ್ತಿರ ಇರಬೇಕು ಅಂತ ಅಂದುಕೊಂಡಿದ್ದೀನಿ ಮಹಾಪ್ರಭು. ಪೂರ್ವದ ಕಡೆಯಿಂದ ರಾಯ್‌ಗಳು ಬಂದು ಅವರ ಜೊತೆ ಸೇರಿಕೊಂಡರೆ ಹಾಗೂ ಸಿಲ್ಹಾದಿ ತನ್ನ ಪಡೆಗಳನ್ನು ತಂದರೆ, ಅವೆರಡೂ ಸೇರಿ ಇನ್ನೊಂದು ಹತ್ತು ಸಾವಿರ ಜಾಸ್ತಿ ಆಗುತ್ತೆ. ಆದರೆ ಮಹಮದ್ ಖಾಲ್ಜಿ ಸರಿಯಾದ ಸಮಯ ಆಯ್ಕೆ ಮಾಡಿಕೊಂಡಿದ್ದಾನೆ. ನನ್ನ ಊಹೆ ಏನಂದರೆ, ಸಿಲ್ಹಾದಿ ಮತ್ತಿತರರು ಅವರ ಪರವಾಗಿಯೇ ಒಲವಿದ್ದರೂ, ಕಾದು ನೋಡುವ ತಂತ್ರ ಅನುಸರಿಸುತ್ತಾರೆಯೇ ಹೊರತು, ತಮ್ಮ ಸೈನ್ಯವನ್ನು ಅವರಾಗಿಯೇ ಯುದ್ಧಕ್ಕೆ ದೂಡುವುದಿಲ್ಲ. ಸುಲ್ತಾನನ ಕೈಯಿಂದ ಇನ್ನೊಮ್ಮೆ ಸೋಲಬೇಕಾಗುತ್ತೆ ಅನ್ನುವ ಭಯವೇ ಅದಕ್ಕೆ ಕಾರಣ".

"ಕಳೆದ ಸಲ ಮಹಮದ್ ಖಾಲ್ಜಿ ಒಬ್ಬನೇ ಸೋಲಿಸಲಿಲ್ಲ ಅವರನ್ನು. ಗುಜರಾತಿನ ಮುಜಫರ್‌ಷಾ ಮುಂದಾಳತ್ವ ವಹಿಸದಿದ್ದರೆ ಮೇದಿನೀರಾಯ್ ಮಹಮ್ಮದ್ ಖಾಲ್ಜಿಯನ್ನು ಸೋಲಿಸಿ ಬಿಡುತ್ತಿದ್ದ ಅಂತ ನನಗೆ ಖಾತರಿ ಇದೆ".

"ಆ ಸಂಭಾವ್ಯತೆ ಹೆಚ್ಚು ಇತ್ತು. ಈಗ ಅದೊಂದು ಬರಿಯ ಜಿಜ್ಞಾಸೆಯ ಪ್ರಶ್ನೆ ಅಷ್ಟೆ. ರಾಯ್ ಮತ್ತು ಅವನ ಕಡೆಯ ರಜಪೂತರು ಕಳೆದುಕೊಂಡಿದ್ದು ಇಪ್ಪತ್ತು ಸಾವಿರ ಸೈನಿಕರನ್ನಲ್ಲ. ಬಹಳಷ್ಟು ಜನ ಹಿರಿಯ ಸೇನಾಪತಿಗಳೂ ಸೇರಿದಂತೆ ಹತ್ತಿರ ಹತ್ತಿರ ನಲವತ್ತು ಸಾವಿರ ಎಂದು ಮಂಗಳ್ ನನಗೆ ಹೇಳುತ್ತಾನೆ.

'ನೀನು ಎಷ್ಟು ಸೇನಾಪಡೆಗಳನ್ನು ನಿನ್ನೊಂದಿಗೆ ಕರೆದೊಯ್ಯ ಬೇಕೆಂದಿದ್ದೀ?"

"ಮೂರು ಸಾವಿರ. ಎಲ್ಲ ರಾವುತ ಪಡೆ"

"ನಿನ್ನ ಈ ಅತಿಯಾದ ಅಹಂಕಾರ ಒಳ್ಳೆಯದಲ್ಲ ಅಂತ ನಾನು ಎಚ್ಚರಿಸುತ್ತಿದ್ದೀನಿ ಮಗು"

"ಈ ಸಂದರ್ಭದಲ್ಲಿ ಸಮಯವೇ ಎಲ್ಲಕ್ಕಿಂತ ಬಹಳ ಮುಖ್ಯವಾದ ಅಂಶ ಅಂತ ನನ್ನ ಭಾವನೆ. ಇಪ್ಪತ್ತು ಅಥವಾ ಮೂವತ್ತು ಸಾವಿರ ಸೈನಿಕರನ್ನು ಒಟ್ಟುಗೂಡಿಸಿ ನಾವು ಕೊಂಡೊಯ್ಯಬೇಕೆಂದರೆ ಆಗ ಕಡೇ ಪಕ್ಷ ಹತ್ತರಿಂದ ಹನ್ನೆರಡು ದಿನ ತೆಗೆದುಕೊಳ್ಳುತ್ತೆ ಹಾಗೂ ಸಾಮಗ್ರಿ ಸರಂಜಾಮು ಏರ್ಪಾಟು ಮಾಡಲು ಇನ್ನೊಂದು ವಾರ ತೆಗೆದುಕೊಳ್ಳುತ್ತೆ. ಅಷ್ಟು ಹೊತ್ತಿಗೆ ಹೇಮಕಿರಣ್‌ಗಾಗಲಿ, ಮೇದಿನಿರಾಯ್‌ಗಾಗಲಿ ನೆರವು ನೀಡಲು ತೀರ ತಡವಾಗಿ ಬಿಟ್ಟಿರುತ್ತೆ.

"ತೇಜ್ ಮತ್ತು ಷಫಿ ಇಬ್ಬರೂ ಕಳೆದ ಒಂದೂ ಕಾಲು ವರ್ಷದಿಂದ 'ದಿಥೀರ್ ಸೈನ್ಯ' ಎಂಬುದಕ್ಕೆ ಸಂಬಂಧಿಸಿದ ಹಾಗೆ ಕೆಲಸ ಮಾಡುತ್ತಿದ್ದಾರೆ. ಬಹಳಷ್ಟು ಮಂದಿ ಸೈನಿಕರು, ಹಿಂದೆ ನನ್ನ ಜೊತೆ ಜೊತೆಯಲ್ಲೇ ಇದ್ದುಕೊಂಡು ಯುದ್ಧ ಮಾಡಿದ್ದಾರೆ. ಬೇರೆಯದೇ ರೀತಿಯ ಒಂದು ಶೈಕ್ಷಣಿಕ ಶಿಸ್ತಿನಲ್ಲಿ ಅವರನ್ನು ತರಬೇಕುಗೊಳಿಸುವ ಅವರದೊಂದು ಕಾರ್ಯಪಡೆಯನ್ನು ರಚಿಸುವುದು ಉದ್ದೇಶ. ಅದೆಷ್ಟು ದೃಢವಾಗಿ ಒಂದು ಗೂಡಿಸಿದ ಕಾರ್ಯಪಡೆ ಎಂದರೆ, ಅವರೆಲ್ಲರೂ ಅತ್ಯುನ್ನತವಾಗಿ ತರಬೇತಿ ಹೊಂದಿದವರ ಹಾಗೆ ಆಲೋಚಿಸಿ ಕಾರ್ಯವೆಸಗುವಂಥ ಅನಿರೀಕ್ಷಿತ ದಾಳಿ ನಡೆಸುವ ಪಡೆ. ಅಷ್ಟೇ ಅಲ್ಲ ಹೆಚ್ಚು ಕಡಿಮೆ ಅಭೇದ್ಯವೆನಿಸುವಂಥ ಪಡೆ. ಇದುವರೆಗೂ ಅವರುಗಳು ಅಣಕು ಯುದ್ಧಗಳನ್ನು ಮಾಡುತ್ತಿದ್ದರು. ಅವರ ನೈಪುಣ್ಯವನ್ನು ಒರೆಹಚ್ಚಿ ನೋಡಲು ಅತ್ಯಂತ ಸೂಕ್ತವಾದ ಸಮಯ. ಅದೂ ಅಲ್ಲದೆ, ಮೇವಾಡದ ಸೈನಿಕರು, ಮೇದಿನೀ ರಾಯ್ ಜೊತೆ ಗೂಡುತ್ತಿರುವ ಸುದ್ದಿಯು, ಅವನ ಮಿತ್ರ ರಾಜರುಗಳ ಅನಿಶ್ಚಯತೆಯನ್ನು ಕೊನೆಗೊಳಿಸಿ, ಅವರು ನೇರವಾಗಿ ಗಾಗ್ರೋನ್ ಕಡೆಹೋಗಲು ಹುರಿದುಂಬಿಸುತ್ತದೆ."

"ನೀನು ಏನು ಮಾಡುತ್ತಿದ್ದೀಯೆ ಎನ್ನುವುದು ನಿನಗೆ ತಿಳಿದಿರುತ್ತೆ ಅಂತ ನಾನು ನಂಬಿದ್ದೇನೆ. ನಿನಗೆ ಜಯಸಿಗಲಿ ಅಂತ ಹಾರೈಸುತ್ತೇನೆ. ನೀನು ಯಾವಾಗ ಹೊರಡುವೆ?"

"ಏಳು ನೂರಾ ಐವತ್ತು ಜನ ಈ ರಾತ್ರಿ ಹೊರಡುವರು. ತೇಜ್ ಮತ್ತು ಷಫಿ ಜೊತೆ ಈಗಲೇ ಮಾತಾಡ್ತೀನಿ. ಅವರೆಲ್ಲ ಒಬ್ಬೊಬ್ಬರಾಗಿ, ಯಾರ ಗಮನಕ್ಕೂ ಬಾರದ ಹಾಗೆ ಹೊರಡುತ್ತಾರೆ. ಅವರು ತಮ್ಮ ಆಯುಧಗಳನ್ನು ಅಡಗಿಸಿಕೊಂಡು, ರೈತರ ವೇಷದಲ್ಲೋ ಅಥವಾ ಕಿರಿಯ ಸಂತಳ ದರ್ಶನ ಮಾಡಿಕೊಂಡು ವಾಪಸ್ ಹೋಗುತ್ತಿರುವ ಯಾತ್ರಿಕರ ವೇಷದಲ್ಲೋ ಹೋಗುವರು. ಒಂದೂವರೆ ಸಾವಿರ ಸೈನಿಕರು ನಾಳೆ ಹಗಲು ಹೊತ್ತಿನಲ್ಲಿ ನಡೆದು ಹೋಗುತ್ತಾರೆ. ಉಳಿದವರು ನಾಳೆ ರಾತ್ರಿ ಹೊರಡುವರು ನಾವೆಲ್ಲರೂ ಧರಮ್ ಪುರದಲ್ಲಿ ಸಂಧಿಸುತ್ತೇವೆ."

"ನೀನು ಮುಂಚೆನೇ ಇದೆಲ್ಲದರ ಯೋಜನೆ ಹಾಕಿದ್ದೆ. ಹೌದು ತಾನೆ?"

"ಕೆಲವು ವಾರಗಳ ಹಿಂದೆ ಭದ್ರತಾ ಸಮಿತಿಯ ಸಭೆಯಲ್ಲಿ ಮಂಗಳನು, ಮಂಡೂವಿನಲ್ಲಿ ಅದರ ಸುತ್ತಮುತ್ತ ಬಹಳ ಸೇನಾ ಚಲನವಲನ ನಡೀತಾ ಇದೆ ಎಂದು ತಿಳಿಸಿದಾಗ, ಮಹಮದ್ ಖಾಲ್ಜಿಯು ಇದ್ದಕ್ಕಿದ್ದಂತೆ ಆಕ್ರಮಣದ ಸಂಚು ನಡೆಸುತ್ತಿರಬಹುದೆಂದು ನಾನು ಭಾವಿಸಿದೆ. ತೇಜ್ ಮತ್ತು ಷಫಿಯ ಕಾರ್‍ಯ ಪಡೆ ಸದಾಕಾಲ ಸನ್ನದ್ಧ ಸ್ಥಿತಿಯಲ್ಲಿರಬೇಕಾದ ಕಾರ್ಯಪಡೆ".

"ನನಗೆ ಸಲ್ಲಿಸುವ ವರದಿಗಳನ್ನೆಲ್ಲ ಮಂಗಳನು ನಿನಗೂ ಹೇಳಿಬಿಡುತ್ತಿದ್ದನೇನು?" ತಂದೆಯವರ ಮುಖದ ಮೇಲೆ ಮುಗುಳು ನಗೆ ಕಾಣಿಸಿಕೊಂಡಿತು. ಆದರೆ ನಾವೀಗ

ನಮ್ಮ ಭೇಟಿಯ ಅತ್ಯಂತ ನಾಜೂಕಾದ ಸಂದರ್ಭಕ್ಕೆ ಬಂದಿದ್ದೇವೆಂದು ನನಗೆ ತಿಳಿಯಿತು. ಖತನ್ ರಾಣಿಯ ಅರಮನೆಯ ಹಿಂಭಾಗದ ತರಬೇತಿ ಮೈದಾನದಲ್ಲಿ ತೇಜ್ ಮತ್ತು ಷಫಿ ಇಬ್ಬರೂ ನಮ್ಮ ಸೇನಾ ಪಡೆಗಳಿಗೆ ತರಬೇತಿ ನೀಡುತ್ತಿದ್ದರೆಂಬ ಸಂಗತಿ ಅವರಿಗೆ ಮೊದಲ ದಿನದಿಂದಲೂ ಗೊತ್ತಿದ್ದಿರಬೇಕು.

"ಮಹಾಪ್ರಭು ಮಂಗಳನ ನಿಷ್ಠೆಯೇನಿದ್ದರೂ ರಾಣಾ ಮತ್ತು ಮೇವಾಡಕ್ಕೆ. ಭದ್ರತಾ ಸಮಿತಿಗೆ ತಿಳಿಯದೆ ಇರುವ ಯಾವ ರಹಸ್ಯವನ್ನೂ ಮಂಗಳ್ ನನಗೆ ಬಿಟ್ಟುಕೊಟ್ಟಿಲ್ಲ."

"ಮಂಗಳ್ ಇಲ್ಲದೆ ನಾವು ಏನು ತಾನೆ ಮಾಡೋಣ?"

"ಅವನಿಲ್ಲದೆ ನಾವು ಏನನ್ನೂ ಮಾಡಬೇಕಾಗಿ ಬರಲ್ಲ ಅಂತ ನನ್ನ ನಂಬಿಕೆ".

"ಒಂದು ಸಣ್ಣ ವಿಷಯ ಮಗೂ, ಮಾಳ್ವದ ಸುಲ್ತಾನನು ಯುದ್ಧದಲ್ಲಿ ಬದುಕುಳಿಯುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು ಅಂತ ನನ್ನ ಸಲಹೆ".

ತಂದೆಯವರನ್ನು ಯಾವತ್ತೂ ನಂಬುವಂತಿಲ್ಲ ಅಥವಾ ಆದಿನಾಥಜೀಯವರ ಪೈಕಿಯವರು ಹೇಳಲು ಹಾತೊರೆಯುವಂತೆ ಅವರನ್ನು ನೂರಕ್ಕೆ ನೂರಾ ಏಳರಷ್ಟು ನಂಬಬಹುದು. ತಂದೆಯವರು ಈ ಮುಂಚೆಯೂ ನನ್ನ ಮೇಲೆ ಇದೇ ಒಂದು ಚಾತುರ್ಯದ ಪ್ರಯೋಗ ಮಾಡಿದ್ದರು. ಆದರೆ ನಾನು ಮಾತ್ರ ಅದರಿಂದ ಪಾಠ ಕಲಿತಂತೆ ಕಾಣಲಿಲ್ಲ. ನನ್ನನ್ನು ತಮ್ಮ ಹತ್ತಿರಕ್ಕೆ ಕರೆಸಿಕೊಳ್ಳುವ ಬದಲು, ತಾವೇ ಖುದ್ದಾಗಿ ನನ್ನ ಬಳಿಗೆ ಬಂದಿದ್ದರು. ರಾಜಕುಮಾರಿಯೊಂದಿಗೆ ತಮಾಷೆಯಾಗಿ ಮಾತಾಡುವ ಮೂಲಕ ನಾನು ನಿರಾಳವಾಗಿರುವಂತೆ ಮಾಡಿದ್ದರು. ನನಗೆ ಪ್ರಾಮಾಣಿಕವಾದ ತನಿಖಾ ರೂಪದ ಪ್ರಶ್ನೆಗಳನ್ನು ಹಾಕಿದರು. ನನ್ನ ಮತ್ತು ಮಂಗಳನ ಋಜುತೆಗೆ ಸಂಬಂಧಿಸಿದಂತೆ ನನ್ನನ್ನು ಕಟಕಟೆಯಲ್ಲಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ನನ್ನ ಮೇಲೆ ಒಂದು ರೀತಿಯಲ್ಲಿ ದಾಳಿಮಾಡಿದ್ದರು. ನಾನು ಸಂದರ್ಭವನ್ನು ಸಮರ್ಥವಾಗಿ ಎದುರಿಸಿ ನಿಂತು, ಅಗತ್ಯವಾದ ಮಟ್ಟವನ್ನು ಮುಟ್ಟಿದ್ದಕ್ಕೆ ನಾನು ಬಹಳಷ್ಟು ನಿರಾಳಗೊಂಡಾಗ ಅವರು ಪ್ರಾಸಂಗಿಕವಾಗಿ, ತಾವು ನನ್ನಲ್ಲಿಗೆ ಬಂದದ್ದಕ್ಕೆ ಕಾರಣವನ್ನು ಹೊರಗೆಡಹಿದ್ದರು.

ಮೇದಿನೀ ರಾಯ್ ನಿಜಕ್ಕೂ ನನ್ನ ಸೇವೆಯನ್ನು ಕೇಳಿದ್ದರೆ? ಬಹುಶಃ ಕೇಳಿದ್ದಿರಬಹುದು. ತಂದೆಯವರು ಅದಕ್ಕೆ ಅವರನ್ನು ಪ್ರಚೋದಿಸಿರಬಹುದು. ಅದು ಪರವಾಗಿಲ್ಲ.. ಮಹಾಪ್ರಭುಗಳು ತಮ್ಮ ಎಂದಿನ ವಾಡಿಕೆಯಂತೆ ಎರಡು ಮೂರು ಆಟಗಳನ್ನು ಒಟ್ಟೊಟ್ಟಿಗೇ ಆಡುತ್ತಾ ಇದ್ದರು. ರಾಣಿ ಕರ್ಮವತಿ, ಕಳೆದ ಆರು ತಿಂಗಳಿಂದ ಚಿತ್ತೂರಿಗೆ ವಾಪಸ್ ಬರಬೇಕು ಅಂತ ಗದ್ದಲ ಎಬ್ಬಿಸುತ್ತಿದ್ದಳು. ಮಹಾಪ್ರಭುಗಳು ತನ್ನ ಆಜ್ಞಾನುವರ್ತಿಯಾಗಿ ಕೆಲಸ ಮಾಡುವ ಹಾಗೆ ತಾನು ಮನವೊಲಿಸಿದ್ದೇನೆ ಎಂದು ಆಕೆ ಅಂದುಕೊಂಡಿದ್ದಾಗ, ತಂದೆಯವರು, ಪ್ರೀತಿಯ ತಂದೆಯವರು ಅವಳ ಪ್ರಾಮುಖ್ಯತೆಯನ್ನು ಗೌಣಗೊಳಿಸಿದ್ದರು ಎಂಬುದು ಆಕೆಗೆ ಅರ್ಥವಾಗಿತ್ತು. ಈ ಮಧ್ಯೆ ನನ್ನ ಪತ್ನಿ ಮತ್ತು ತಂದೆಯವರು ಆತ್ಮೀಯರಾಗಿ ಬಿಟ್ಟಿದ್ದರು. ಇದು ಅವರಿಬ್ಬರಲ್ಲಿ ಯಾರೊಬ್ಬರೂ ಪ್ರಜ್ಞಾಪೂರ್ವಕವಾಗಿ ನಡೆದುಕೊಂಡು ಆದದ್ದು ಅಂತ ನನಗನ್ನಿಸುವುದಿಲ್ಲ. ಆದರೆ ಒಮ್ಮೆ ಹಾಗಾದ ಮೇಲೆ, ತನ್ನ ಉದ್ದೇಶ ಸಾಧನೆಗಾಗಿ ಸ್ನೇಹವನ್ನು ಬಲವಂತವಾಗಿ ಮಣಿಸಲು ತಂದೆಯವರು ವಿರುದ್ಧವಾಗಿರಲಿಲ್ಲ. ಮಹಾರಾಣಿಯನ್ನು ಮತ್ತೆ ಕರೆಸಿಕೊಳ್ಳಲಾಗುವುದು. ಆದರೆ ಅವಳು ರಾಜಕುಮಾರಿಯ ನಿಯಂತ್ರಣದಲ್ಲಿರುವಳು. ನನ್ನನ್ನು ಈ ಸ್ಥಳದಿಂದ ದೂರ ಮಾಡಿ, ಬಹಳ ಪ್ರಮುಖವಾದ ಕಾರ್ಯವನ್ನು ನೀಡುವುದು, ಬಹುಶಃ ನನ್ನ ಅಸಾಂಪ್ರದಾಯಿಕ

ಆಲೋಚನೆಗಳನ್ನು ಪ್ರಯೋಗ ಮಾಡಿನೋಡಲು ಎರಡನೇ ಅವಕಾಶ ನೀಡುವುದು. ಆದರೆ ಸ್ಪಷ್ಟವಾಗಿ ಕಿಂಚಿತ್ ನಿಯಂತ್ರಣದಲ್ಲಿಟ್ಟು, ಆದರೆ ಈ ಎಲ್ಲ ಕಸರತ್ತಿನ ಗುರಿ ಎಂದು ಯಾವುದನ್ನು ನಾನು ತಿಳಿದಿದ್ದೇನೋ ಅದರಿಂದ ದೂರವುಳಿಯಬೇಕೆಂದು ನನಗೆ ದೃಢವಾಗಿ ಹೇಳಲಾಯಿತು. ಅದೆಂದರೆ ಮಹಮದ್ ಖಾಲ್ಜಿಯನ್ನು ಇಲ್ಲವಾಗಿಸಿ ಮಾಳ್ವವನ್ನು ವಶಕ್ಕೆ ತೆಗೆದುಕೊಳ್ಳುವುದು.

ಮಹಾಪ್ರಭುಗಳು ಒಂದು ರಾಜವಂಶವನ್ನು ಪೂರ್ತಿ ತೊಡೆದು ಹಾಕಿ ನೂತನ ಸಾಮ್ರಾಜ್ಯವನ್ನು ವಶಕ್ಕೆ ತೆಗೆದುಕೊಳ್ಳಲು ಸಿದ್ಧರಿರಲಿಲ್ಲ; ಕಡೇಪಕ್ಷ ಸದ್ಯದಲ್ಲಿ. ಬಹುಶಃ ಅವರಿಗೆ ಪ್ರಬಲವಾದ ಕಾರಣಗಳಿವೆ. ಪ್ರಾಯಶಃ ಮೊದಲಿಗೆ ಅವರು ಬಲವಾದ ರಜಪೂತ ರಾಜ್ಯಗಳ ಮೈತ್ರಿಕೂಟವನ್ನು ಕಟ್ಟಿ ಒಂದುಗೂಡಿಸಬೇಕೆಂದು ಬಯಸಿದ್ದಾರೆನಿಸುತ್ತದೆ. ಪ್ರಾಯಶಃ ನೂತನ ಅಧಿಕಾರ ವರ್ಗಕ್ಕೆ ಹಾಗೂ ಅತ್ಯುನ್ನತ ಹುದ್ದೆಗಳಿಗೆ ಸಿಬ್ಬಂದಿಯ ನೇಮಕಾತಿ ಮಾಡಲು ಅದರಲ್ಲೂ ಮುಖ್ಯವಾಗಿ ನೂತನ ರಾಜ್ಯವನ್ನು ಹತೋಟಿಯಲ್ಲಿಟ್ಟು ದಂಗೆಗಳನ್ನು ಮತ್ತು ದಂಗೆ ಕೋರರನ್ನು ಹತ್ತಿಕ್ಕಲು ಅಗತ್ಯವಾದ ತರಬೇತಾದ ಮಾನವ ಶಕ್ತಿ ನಮ್ಮಲ್ಲಿದೆ ಎಂದು ಅವರಿಗೆ ಅನ್ನಿಸಿಲ್ಲ. ಬಹುಶಃ ಅವರು ಸರಿ ಎನ್ನಿಸುತ್ತದೆ. ದೊರೆಯಾದವನು ಅನುಕೂಲಕರವಾದ ಗಳಿಗೆಗೆ ಬಹಳ ದೀರ್ಘ ಸಮಯದವರೆಗೂ ಕಾಯಬಹುದೆಂದು ನನ್ನ ನಂಬಿಕೆ. ಕಾಲ ಪಕ್ವವಾದಾಗ, ತೀರ ತಡವಾಗಿ ಬಿಟ್ಟು ಒಟ್ಟಾರೆಯಾಗಿ ಒಂದು ಅವಕಾಶವನ್ನೇ ನೀಗಿಕೊಂಡು ಬಿಡಬಹುದು.

ಅಧ್ಯಾಯ 33

ಮೇದಿನೀ ರಾಯ್ ನನ್ನತ್ತ ವೇಗವಾಗಿ ನಡೆದು ಬಂದರು. ಆತ ತನ್ನ ರುಮಾಲನ್ನು ಧರಿಸಲು ಸಮಯ ಸಿಗದೆ ಕೈಗಳಲ್ಲಿ ಅದನ್ನು ಹಿಡಿದುಕೊಂಡಿದ್ದರು. "ಮಹಾಸ್ವಾಮಿ ನಿಮ್ಮನ್ನು ಬರಮಾಡಿಕೊಳ್ಳಲು ನಾನು ಬರಲಾಗದ್ದಕ್ಕೆ ದಯಮಾಡಿ ಕ್ಷಮಿಸಬೇಕು. ಇನ್ನೂ ಒಂದು ವಾರದವರೆಗೂ ತಮ್ಮ ಆಗಮನದ ನಿರೀಕ್ಷೆ ನಮಗಿರಲಿಲ್ಲ. ತಾವು ಬರುವುದಕ್ಕೆ ಮುನ್ನ ಹರಿಕಾರನನ್ನೊಬ್ಬನನ್ನು ಅಟ್ಟಿದ್ದರೆ ಕುದುರೆಯ ಬೆನ್ನೇರಿ ಬೇಗ ಬಂದು ಗಡಿಯಲ್ಲಿ ತಮ್ಮನ್ನು ಭೇಟಿಯಾಗುತ್ತಿದ್ದೆ".

ಅವರ ತಲೆಯ ಸುತ್ತಲೂ ಸ್ವಲ್ಪ ಅಸ್ತವ್ಯಸ್ತವಾಗಿ ಕೆದರಿದ ಕೂದಲ ಉದ್ದಕ್ಕೂ, ಮಧ್ಯಾಹ್ನದ ಸೂರ್ಯನ ಸುತ್ತ ಅಭ್ರಕದ ಗೆರೆ ಎಳೆದ ಹಾಗೆ ಬೆಳ್ಳಿಯ ಗೆರೆಯೊಂದು ಕಾಣುತ್ತಿತ್ತು. ತನ್ನ ತಲೆಯ ಮೇಲೆ ರುಮಾಲನ್ನು ಏರಿಸಿಕೊಳ್ಳುತ್ತಾ ಒರಟಾದ ದಟ್ಟ ಕೂದಲ ಮೇಲೆ ತನ್ನ ಕೈಯಾಡಿಸುತ್ತ ಅದನ್ನು ಹಿಂದಕ್ಕೆ ತಳ್ಳಿದರು. ಆತ ನನ್ನೆದುರು ಸೋಗು ಹಾಕುತ್ತಿರಲಿಲ್ಲ ಅಥವಾ ನನ್ನ ಮುಖಸ್ತುತಿಗಾಗಿ ಹೇಳಿದ್ದಲ್ಲ, ಆತ ನನ್ನನ್ನು ಬರಮಾಡಿಕೊಳ್ಳಲು ಖಂಡಿತ ಎಪ್ಪತ್ತು ಮೈಲಿ ಕುದುರೆಯ ಬೆನ್ನೇರಿ ಬರುತ್ತಿದ್ದರು.

"ಮಹಾಪ್ರಭು ರಾಣಾ ಅವರ ಶುಭಕಾಮನೆಗಳು ಹಾಗೂ ಒಂದು ವಿವರವಾದ ಪತ್ರವನ್ನು ನಾನು ತರುತ್ತಿದ್ದೇನೆ. ನನ್ನೊಂದಿಗೆ ಮೇವಾಡದ ನನ್ನ ಪ್ರತಿನಿಧಿಗಳಾಗಿ ತೇಜ್ ಸಿಂಹ ಮತ್ತು ಷಫಿಖಾನ್ ಅವರುಗಳು ಬಂದಿದ್ದಾರೆ. ಈ ಹೊತ್ತು ಬೆಳಗಿನಿಂದಲೇ ನಮ್ಮ ಎಲ್ಲ ಮೂರು ಸಾವಿರ ಯೋಧರೂ ಧರ್ಮಪುರದಲ್ಲಿದ್ದಾರೆ ಎಂದು ನಾನು ನಂಬಿದ್ದೇನೆ".

"ಅವರುಗಳು ಬಂದಿರುವ ಸಂಭವ ಇದ್ದಂತಿಲ್ಲ ಮಹಾರಾಜ್‌ಕುಮಾರ್. ಮೇವಾಡದ ಪಡೆಗಳು ಬಂದಿದ್ದರೆ, ನನ್ನ ಸೇನಾಧಿಪತಿಗಳು ಆ ಸುದ್ದಿಯನ್ನು ನನಗೆ ತಿಳಿಸಿರುತ್ತಿದ್ದರು. ಅಥವಾ ಬಹುಶಃ ತಿಳಿಸಿಲ್ಲ." ನಮ್ಮ ಉಡುಪುಗಳನ್ನು ನೋಡಿ, ಅದನ್ನು ಸಮ್ಮತಿಸದ ರೀತಿಯಲ್ಲಿ ಮುಗುಳ್ನಕ್ಕರು. "ಅವರೂ ಕೂಡ ಹಳ್ಳಿಗರ ಹಾಗೆ ವೇಷ ಮರೆಸಿಕೊಂಡು ಪ್ರಯಾಣ ಮಾಡುತ್ತಿದ್ದಾರೇನು?"

"ಹೌದು ಅಂತ ನನ್ನ ಆತಂಕ. ಸುಲ್ತಾನ್ ಮಹಮದ್ ಖಾನನ ಸಂದೇಹಗಳನ್ನು ಕೆರಳಿಸಲು ನಮಗಿಷ್ಟವಿರಲಿಲ್ಲ. ಇನ್ನಷ್ಟು ಎಚ್ಚರವಹಿಸುವ ಸಲುವಾಗಿ ಅವರೆಲ್ಲರೂ ಆಗ್ನೇಯಕ್ಕೆ ತಿರುಗುವ ಮುನ್ನ ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕಿನತ್ತ ಪ್ರಯಾಣ ಬೆಳೆಸಿರಬೇಕು. ಧರ್ಮಪುರದತ್ತ ತಿರುಗಿ ಅಲ್ಲಿ ನಮ್ಮನ್ನು ಎದುರಿಸಲು ಸುಲ್ತಾನನು ಎಷ್ಟು ದಿವಸಗಳನ್ನು ತೆಗೆದುಕೊಳ್ಳಬಹುದು?"

"ತನ್ನ ಸೇನೆಯೊಂದಿಗೆ ಹೊರಟು ಬರುವುದಾದರೆ, ನಾಲ್ಕರಿಂದ ಏಳು ದಿನ. ಆದರೆ ಕೈಯಲ್ಲಿರುವ ಹೊನ್ನನ್ನು ಬಿಟ್ಟು ಕೊಟ್ಟು ನಮ್ಮನ್ನು ನೋಡೋಕೆ ಯಾಕೆ ಬರುತ್ತಾನೆ ಅವನು?"

"ನಾನು ಹೇಳುತ್ತಿರೋದು ತಪ್ಪಿರಬಹುದು. ಆದರೆ, ಒಮ್ಮೆ ಮೇವಾಡದ ಸೇನಾಪಡೆಗಳು ನಿಮ್ಮನ್ನು ಬಂದು ಸೇರಿಕೊಂಡಿವೆ ಎಂದು ಸುಲ್ತಾನನಿಗೆ ಗೊತ್ತಾದರೆ, ಗಾಗ್ರೋನ್ ತನ್ನ ವಶದಲ್ಲಿರುವ ಸಂಭವ ತೀರಾ ಅಲ್ಪಕಾಲದ್ದು ಎಂದು ಗ್ರಹಿಸುತ್ತಾನೆಂದು ನನ್ನ ಊಹೆ. ಅವನು ಅದನ್ನು ತೆಗೆದುಕೊಂಡರೆ, ಒಂದೆರಡು ದಿನಗಳಲೇ ನಾವು ಅವನನ್ನು ಮುತ್ತಿಗೆ ಹಾಕುವುದನ್ನು ಅವನು ಕಾಣಬಹುದು. ರಾಜಕುಮಾರ ಹೇಮಕರಣ ಮತ್ತು ಅವನ ಕಡೆಯವರು ಆಹಾರ ಮತ್ತು ಇನ್ನಿತರ ಸಾಮಗ್ರಿಗಳ ದಾಸ್ತಾನನ್ನು ಪೂರ್ತಿಯಾಗಿ ಮುಗಿಸಿ ಬಿಟ್ಟಿರುವುದರಿಂದ, ಅದು ಹೆಚ್ಚು ವೇದನಾಕಾರಿಯಾಗಬಹುದು. ಅಲ್ಲದೆ ಸುಲ್ತಾನನು, ಆಹಾರ ಧಾನ್ಯಗಳನ್ನು ಮತ್ತೆ ಶೇಖರಿಸಿಡಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಏನೇ ಆಗಲಿ ನೀವೇನಾದರೂ, ಒಂದು ವೇಳೆ ನಾವು ಈ ಕೂಡಲೇ ಗಾಗ್ರೋನ್‌ಗೆ ಹೋಗಿ ಮುತ್ತಿಗೆಯನ್ನು ತೆರವು ಗೊಳಿಸಿ, ರಾಜಕುಮಾರನನ್ನು ಬಿಡುಗಡೆ ಗೊಳಿಸಬೇಕೆಂದಿಚ್ಛಿಸಿದರೆ, ನಾವು ಇನ್ನೊಂದು ಗಂಟೆಯೊಳಗೆ ಇಲ್ಲಿಂದ ಹೊರಡಬಹುದು".

ನಾನು ಹೇಳಿದ ಎರಡು ಸನ್ನಿವೇಶಗಳನ್ನು ಕುರಿತು ಅವರು ಬಹಳ ಹೊತ್ತು ಪರ್ಯಾಲೋಚಿಸಿದರು. "ರಾಜಕುಮಾರ ಹೇಮಕರಣ ಮತ್ತು ನನ್ನ ಕಡೆಯವರ ವಿಷಯದಲ್ಲಿ ನನಗೆ ತುಂಬ ಆತಂಕವುಂಟಾಗಿದೆ. ಆದರೆ ಆ ಒಂದು ಪರಿಗಣನೆ ನಾನು ಅವಿವೇಕದ ಹೆಜ್ಜೆ ತುಳಿಯಲು ಕಾರಣವಾದರೆ ಅದು ಅಕ್ಷಮ್ಯವಾಗುತ್ತದೆ. ನಿಮ್ಮ ಮುಂಗಾಣ್ಕೆ ಅತ್ಯಂತ ದೃಢವಾಗಿರುವ ಒಂದು ತೀರ ಲಘು ಸಾಧ್ಯತೆ ಇದೆ. ಏನೇ ಆದರೂ ಆಕಸ್ಮಿಕ ಆಕಸ್ಮಿಕವಷ್ಟೇ. ಅದೂ ಅಲ್ಲದೆ ಹದಿಮೂರು ಸಾವಿರ ಸಂಖ್ಯೆಯ ಸೇನಾಪಡೆಗಳು ಗಾಗ್ರೋನ್ ಅನ್ನು ಮುಕ್ತಗೊಳಿಸಲು ಸಾಕಾಗುತ್ತದೆಂಬ ಬಗ್ಗೆ ನನಗೆ ಸಂದೇಹವಿದೆ".

"ಅಂಥ ಸಂದರ್ಭದಲ್ಲಿ ನಿಮ್ಮೊಂದಿಗೆ ಹಾಗೂ ಸೈನ್ಯದ ಮುಖ್ಯಸ್ಥರೊಂದಿಗೆ ಸಮಾಲೋಚಿಸುವ ಮುನ್ನ ನಮಗೊಂದು ದಿಢೀರ್ ಸ್ನಾನ ಮಾಡುವಷ್ಟು ಸಮಯವಿರುತ್ತದೆ. ಮಹಾಸ್ವಾಮಿ, ನಾನು ತಮಗೊಂದು ದಿಟ್ಟ ಹಾಗೂ ನೇರವಾದೊಂದು ಪ್ರಶ್ನೆಯನ್ನು ಕೇಳಲೆ? ಮಹಾಪ್ರಭುಗಳ ನೆರವು ಕೋರಿ ತಾವು ಯಾವಾಗ ಪತ್ರ ಬರೆದಿರಿ, ನಾನು ಬೇಕೆಂದು ಏಕೆ ಕೇಳಿದಿರಿ?"

"ತಮ್ಮ ಪ್ರಶ್ನೆಗೆ ಉತ್ತರಿಸುವ ಮುನ್ನ ನಿಮ್ಮಷ್ಟೇ ಪ್ರಾಮಾಣಿಕವಾಗಿ, ನಿಮ್ಮಷ್ಟೇ ನೇರವಾಗಿ ನಿಮ್ಮನ್ನು ಪ್ರಶ್ನಿಸಿದರೆ ನನ್ನನ್ನು ತಪ್ಪು ತಿಳಿಯಬೇಡಿ ಎಂದು ಕೋರುತ್ತೇನೆ. ನಾನು ನೀವು ಬೇಕೆಂದು ಏಕೆ ಕೇಳಿದೆನೆಂದರೆ, ನೀವೊಬ್ಬ ಅವಿವೇಕದ ಮನುಷ್ಯ ಎಂದು ಜನ ಹೇಳುತ್ತಾರೆ. ಸಾಧ್ಯವಾದರೆ, ನೀವು ನಮ್ಮ ಯಾವೊಬ್ಬ ಸೈನಿಕನನ್ನೂ ಕಳೆದುಕೊಳ್ಳದ ರೀತಿಯಲ್ಲಿ ಸಮರವನ್ನು ಗೆಲ್ಲಬಯಸುತ್ತೀರಿ. ನೀವು ನೈತಿಕ ವಿವೇಚನೆಯಿಲ್ಲದ ಮನುಷ್ಯ. ನೀವು ಹಿಂದಿನಿಂದ ಮತ್ತು ರಾತ್ರಿಯ ಕತ್ತಲಿನಲ್ಲಿ ಯಾವುದೇ ಅಳುಕಿಲ್ಲದೆ ಶತ್ರುವಿನ ಮೇಲೆ ಆಕ್ರಮಣ ಮಾಡುತ್ತೀರಿ ಎಂದು ಹೇಳುತ್ತಾರೆ. ನೀವು ನಿಮ್ಮ ಯೋಜನೆಗಳನ್ನು ಅದೆಷ್ಟು ಗುಟ್ಟಾಗಿಟ್ಟಿರುತ್ತೀರೆಂದರೆ, ನಿಮ್ಮ ಸೇನಾ ಮುಖ್ಯಸ್ಥರಿಗೆ ಕೂಡ, ಪ್ರಮುಖ ಕದನಗಳ ವಿಚಾರ ತಿಳಿಯುವುದು ಅವು ನಡೆಯುವುದಕ್ಕೆ ಕೆಲವೇ ಗಂಟೆಗಳ ಮುಂಚೆ ಎಂದು ಹೇಳುತ್ತಾರೆ. ನೀವು ಯಾವಾಗಲೂ ಹೆದರಿ ಬಾಲ ಅದುಮಿಕೊಂಡು ಓಡಾಡುತ್ತೀರಿ, ಯಾವುದೋ ಒಂದು ಸಣ್ಣ ನೆಪ ತೆಗೆದು ಯುದ್ಧದಿಂದ ಹಿಮ್ಮೆಟ್ಟುತ್ತೀರಿ ಎಂದು ಹೇಳುತ್ತಾರೆ. ನಿಮ್ಮ ಬಗ್ಗೆ ಹೀಗೆ ಅಂತ ಮುಂಚೆ ಹೇಳಲು ಸಾಧ್ಯವೇ ಇಲ್ಲದ ವ್ಯಕ್ತಿ ಹಾಗೂ ಯಾವುದೇ ಮುನ್‌ಸೂಚನೆ ಕೊಡದೆ ನಿಮ್ಮ ಯೋಜನೆಗಳನ್ನು ಬದಲಾಯಿಸಿ ಬಿಡುತ್ತೀರಿ ಎಂದು

ಹೇಳುತ್ತಾರೆ. ನೀವೊಬ್ಬ ಸುಳ್ಳುಗಾರ, ಹಾಗೂ ನಿಮ್ಮ ಶತ್ರುಗಳು ಎಂದಿಗೂ ನಿಮ್ಮನ್ನು ನಂಬುವಂತಿಲ್ಲ ಹಾಗೂ ಒಂದು ವೇಳೆ ನಿಮಗೆ ಯಾರಾದರೂ ಸ್ನೇಹಿತರಿದ್ದರೆ, ಅವರು ನಿಮ್ಮನ್ನು ಒಂದು ಮಾರು ದೂರ ಇರಿಸುವಷ್ಟು ವಿವೇಕವನ್ನು ತೋರಿಸುತ್ತಾರೆ ಎಂದೂ ಹೇಳುತ್ತಾರೆ. ಈ ಕಾರಣಕ್ಕೋಸ್ಕರವೇ ನಾನು ನಿಮ್ಮನ್ನು ಆಯ್ಕೆ ಮಾಡಿಕೊಂಡೆ ಮಹಾರಾಜ್‌ಕುಮಾರ್".

ನಾವು ಮತ್ತೆ ಭೇಟಿಯಾದಾಗ, ನಾನು ಬರೆದಿದ್ದ ಪತ್ರವನ್ನು ಮೇದಿನೀರಾಯ್‌ಗೆ ನೀಡಿ, ಅತ್ಯಂತ ವೇಗವಾಗಿ ಧಾವಿಸುವ ಹರಿಕಾರರ ಮೂಲಕ ಸುಲ್ತಾನನಿಗೆ ತಲುಪಿಸಲು ತಿಳಿಸಿದೆ.

ಅದೊಂದು ಸ್ನೇಹಪರವಾದ ಪತ್ರ.

> ಘನತೆವೆತ್ತ ಮಾಳ್ವದ ಸುಲ್ತಾನ್, ಮಹಮದ್ ಖಾಲ್ಜಿಯವರ ಸನ್ನಿಧಾನಕ್ಕೆ.
>
> ಘನತೆವೆತ್ತ ಮಹಾಪ್ರಭು ರಾಣಾ ಸಂಗ್ರಾಮಸಿಂಹರು, ಮೇವಾಡದ ಹಿಂದೂ, ಮುಸ್ಲಿಂ ಮತ್ತು ಜೈನ ನಾಗರಿಕರು ಹಾಗೂ ಮೇವಾಡದ ಮಹಾರಾಜ್‌ಕುಮಾರ್ ಆದ ನಾನು, ತಮಗೂ, ಮಾಳ್ವದ ಜನತೆಗೂ ನಮ್ಮ ಶುಭಾಶಯಗಳನ್ನು ಕೋರುತ್ತಿದ್ದೇವೆ. ನಾವು ತಮಗೆ ಸಂತಸದಾಯಕವೂ, ಸ್ವಸ್ಥವೂ ಸುದೀರ್ಘವೂ ಆದ ರಾಜ್ಯಾಡಳಿತವನ್ನು ಕೋರುತ್ತೇವೆ.
>
> ಮೇವಾಡದ ಐವತ್ತು ಸಾವಿರ ಸೈನಿಕರು ಧರಮ್‌ಪುರದಿಂದ ಹದಿನೈದು ಮೈಲಿ ದೂರದಲ್ಲಿ ಬೀಡು ಬಿಟ್ಟಿದ್ದು, ಅತ್ಯಂತ ಹೆಚ್ಚಿನ ತವಕದಿಂದ ನಿಮ್ಮ ಆಗಮನಕ್ಕಾಗಿ ಕಾಯುತ್ತಿದ್ದಾರೆ ಎಂದು ತಮ್ಮ ಸುದ್ದಿ ಮೂಲಗಳು ಈಗಾಗಲೇ ತಮಗೆ ತಿಳಿಸಿವೆ ಎಂದು ನನಗೆ ಖಾತರಿ ಇದೆ. ಘನತೆವೆತ್ತ ರಾವ್ ಮೇದಿನೀ ರಾಯ್, ಘನತೆವೆತ್ತ ಸಿಲ್ಹಾದಿ ಮಹಾರಾಜರು, ಚಾಂದ್ ರಾಯ್ ಮಹಾರಾಜರು, ಅರ್ಜುನ್‌ರಾಯ್, ಜಯ್ ರಾಯ್, ರಾಯ್ ಪಿಥೋರಾ ಅವರ ಪುತ್ರ ಇಂದ್ರ ಸೇನಾರಾಯ್ ಹಾಗೂ ಇತರೆಯವರ ಸೇನಾಪಡೆಗಳು ಶೀಘ್ರದಲ್ಲೇ ಬಂದು ನಮ್ಮ ಸೇನಾಪಡೆಗಳನ್ನು ಕೂಡಿಕೊಳ್ಳುತ್ತವೆ. ನಮ್ಮೊಂದಿಗೆ ಸೇರಿಕೊಳ್ಳಲು ತಮ್ಮನ್ನು ಸ್ವಾಗತಿಸುವ ಸಲುವಾಗಿ ಒಟ್ಟು ಎಲ್ಲಾ ಎಪ್ಪತ್ತು ಸಾವಿರಕ್ಕೂ ಅಧಿಕ ಸೈನಿಕರು ಒಟ್ಟುಗೂಡಲಿದ್ದಾರೆ.
>
> ಶಾಂತಿಯೊಂದೇ ನಮ್ಮ ಬಯಕೆ. ಮಾಳ್ವದ ಪ್ರಜೆಗಳಿಗೆ ನಮ್ಮ ಏಕೈಕ ಕೊಡುಗೆ ಎಂದರೆ ಸ್ನೇಹ ಹಸ್ತವೊಂದೇ. ತಾವು ಕೂಡ ಮಾಳ್ವದೊಳಗಿನ ಅಂತಃಕಲಹಗಳು ಮತ್ತು ಸಣ್ಣಪುಟ್ಟ ಜಗಳಗಳಿಂದ ಬಳಲಿದ್ದೀರಿ ಹಾಗೂ ಮೇದಿನೀರಾಯ್ ಪ್ರಭು, ಮೇವಾಡದ ಮತ್ತು ಪೂರ್ವ ದೇಶಗಳ ಇತರೆ ರಾಯ್‌ಗಳೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಲು ನಮ್ಮಷ್ಟೇ ಕಾತರರಾಗಿದ್ದೀರಿ ಎಂದು ನಾವು ನಂಬಿದ್ದೇವೆ. ಇನ್ನು ಮುಂದೆ ಮಾಳ್ವದ ಅಥವಾ ಮೇವಾಡದ ರಕ್ತಪಾತವಾಗದಿರಲಿ. ನಮ್ಮ ಮಕ್ಕಳು ಸೋದರರಂತೆ ಬೆಳೆದು ದೊಡ್ಡವರಾಗಲಿ.
>
> ನಮ್ಮ ವಿಷಯದಲ್ಲಿ ಕರುಣಾಳುವಾಗಿರಿ ಮಹಾಪ್ರಭು.
>
> ಸದಾ ತಮ್ಮ ಸೇವೆಯಲ್ಲಿ
>
> ಮಹಾರಾಜ್‌ಕುಮಾರ್

ಅನಂತರ ಸೇರಿಸಿದ್ದು: ಮಹಾರಾಜ್ ಮೇದಿನೀ ರಾಯ್ ಅವರ ಗುಪ್ತಚರ ವಿಭಾಗದ ಮುಖ್ಯಸ್ಥ ಅಜಿತ್‌ಸಿಂಹನು ಹೇಳುವುದೆಂದರೆ, ಗ್ಯಾಗ್ರೋನ್‌ಗೆ ತಾವು ಭೇಟಿ ನೀಡುವ ಉದ್ದೇಶ ರಣೋತ್ಸಾಹದ್ದು ಎಂದು. ಅದು ಹೇಗೆ ಸಾಧ್ಯ? ಅವನನ್ನು ಲೇವಡಿ ಮಾಡುತ್ತಲೇ, ತಾವು ವಿವೇಕಿಗಳೂ, ಶಾಂತಿಪ್ರಿಯರೂ ಆದ ವ್ಯಕ್ತಿ ಎಂಬುದು ಅವನಿಗೆ ಗೊತ್ತಿಲ್ಲವೆ ಎಂದು ಕೇಳುತ್ತೇವೆ. ಮೇವಾಡದೊಂದಿಗೆ ಸಂಘರ್ಷವೆಂದರೆ, ಗುಜರಾತಿನ ಸುಲ್ತಾನರಾದ ಮುಜಾಫರ್ ಸುಲ್ತಾನರಿಗೆ ಅವರ ಕಡೆಯ ಹತ್ತಾರು ಸಾವಿರ ಸೈನಿಕರ ಪ್ರಾಣ ತೆರಬೇಕಾಗುತ್ತದಷ್ಟೇ ಅಲ್ಲದೆ, ಮಾಳ್ವ ಸಾಮ್ರಾಜ್ಯದ ಹಲವಾರು ಪ್ರಾಂತಗಳನ್ನು ಕಳೆದುಕೊಳ್ಳಬೇಕಾಗುತ್ತದೆಂಬುದು ಅವನಿಗೆ ಗೊತ್ತಿಲ್ಲವೆ ಎಂದು ಮತ್ತೆ ಕೇಳುತ್ತೇವೆ. ಕಾರಣ, ಸ್ನೇಹದಲ್ಲಿ ನಾವು ಅದೆಷ್ಟು ಅತಿ ಉದಾರಶಾಲಿಗಳೋ, ನಮ್ಮ ಶತ್ರುಗಳ ವಿಷಯಕ್ಕೆ ನಾವು ಅಷ್ಟೇ ನಿಷ್ಕರುಣಿಗಳು. ಆದರೆ ಅಜಿತ್ ಸಿಂಹನೊಬ್ಬ ಮೂರ್ಖನೆಂದೂ ಹಾಗೂ ತಾವು ಮೂರ್ಖರನ್ನು ಸಹಿಸುವುದಿಲ್ಲವೆಂದು ನಮಗೆ ತಿಳಿದಿದೆ.

ಆ ಮನುಷ್ಯ ಇದಕ್ಕೊಪ್ಪಿದರೆ ಏನಾಗುತ್ತದೆ ಪ್ರಭು?

"ಹಾಗೊಂದು ವೇಳೆ ಒಪ್ಪಿದ್ದೇ ಆದರೆ, ಮಾಳ್ವ ದೇಶ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಉತ್ಸವವನ್ನೇರ್ಪಡಿಸಿ ಅವನೊಂದಿಗೆ ಕುಡಿದು ತಿಂದು ಸಂಭ್ರಮಿಸಿ, ಶಾಂತಿ ಒಪ್ಪಂದವನ್ನು ಮಾಡಿಕೊಳ್ಳೋಣ ಮಹಾಸ್ವಾಮಿ. ಆ ಒಪ್ಪಂದದ ಪ್ರಕಾರ ಚಂಡೇರಿಯನ್ನು ನಿಮಗೆ ಜಹಗೀರಾಗಿ ನೀಡಬೇಕಾಗುತ್ತದೆ. ಒಪ್ಪಂದದ ಕರಾರನ್ನು ಮುರಿಯುವ ಧೈರ್ಯ ಮಾಡುವವರು ತನ್ನ ಇಡೀ ಸಾಮ್ರಾಜ್ಯವನ್ನೇ ಕಳೆದುಕೊಳ್ಳುವರು. ಸುಲ್ತಾನನಿಗೆ ಸದ್ಬುದ್ಧಿ ಬರಲಿ ಎಂದು ಪ್ರಾರ್ಥಿಸುತ್ತಲೇ ನಾನು ಅನುಮಾನಿಸುವುದೆಂದರೆ, ಇಷ್ಟು ದೂರ ಸಾಗಿ ಬಂದಿರುವ ಕಾರಣ ನಿಮ್ಮೊಂದಿಗೆ ಯುದ್ಧ ಮಾಡುವುದೇ ತನಗೆ ಗೌರವ ಎಂದು ಭಾವಿಸುತ್ತಾನೆ.

"ಒಂದು ವೇಳೆ ಅವನು ಗೆದ್ದರೆ? ಮಹಾರಾಜ ಸಿಲ್ಹಾದಿಯಾಗಲಿ, ಇತರೆ ರಾಯ್‌ಗಳಾಗಲಿ ನಮ್ಮೊಂದಿಗೆ ಸೇರಿಕೊಳ್ಳಲು ಹೆಚ್ಚು ಉತ್ಸಾಹವನ್ನೇನೂ ತೋರಿಸಿಲ್ಲ. ನನ್ನ ಆತಂಕವೆಂದರೆ, ಈ ಗಳಿಗೆಯವರೆಗೂ ನಿಮ್ಮ ಸೇನಾಬಲ ಮೂರು ಸಾವಿರಕ್ಕಿಂತ ಸ್ವಲ್ಪವೇ ಜಾಸ್ತಿ ಇದೆ, ಐವತ್ತು ಸಾವಿರವಂತೂ ಇಲ್ಲ".

"ನಾವೊಂದು ವೇಳೆ ಸೋತದ್ದೇ ಆದರೆ, ನಿಮ್ಮನ್ನು ಕೈ ಬಿಟ್ಟದ್ದಕ್ಕೆ ನಮ್ಮ ತಂದೆ ರಾಣಾ ನನ್ನನ್ನು ಕ್ಷಮಿಸುವುದಿಲ್ಲ. ಇನ್ನೊಂದು ಕಡೆ, ನಾನೊಂದು ವೇಳೆ ಮೂವ್ವತ್ತು ಸಾವಿರ ಯೋಧರನ್ನು ನನ್ನೊಂದಿಗೆ ಕರೆ ತರಬೇಕೆಂದು ನಿರ್ಧರಿಸಿದ್ದರೆ, ಅದಕ್ಕೆ ಕಡೇ ಪಕ್ಷ ಇಪ್ಪತ್ತರಿಂದ ಇಪ್ಪತ್ತೈದು ದಿನಗಳು ಬೇಕಾಗುತ್ತಿತ್ತು ಅಷ್ಟೊಂದು ತಡಮಾಡಿದ್ದರೆ, ನೀವು ಗಾಗ್ರೋನ್ ಮತ್ತು ನಿಮ್ಮ ಮಗ ಹೇಮಕಿರಣ್ ಇಬ್ಬರನ್ನೂ ಬೆಲೆ ತೆರಬೇಕಾಗುತ್ತಿತ್ತು. ಆ ಗಂಡಾಂತರವನ್ನು ಎದುರಿಸಲು ನಾನು ಇಷ್ಟಪಡಲಿಲ್ಲ."

"ಹಾಗಿದ್ದ ಮೇಲೆ, ನಾನು ಮತ್ತು ನಮ್ಮ ಜನರು ನಿಮ್ಮ ಆಜ್ಞೆಯನ್ನು ಪಾಲಿಸುತ್ತಲೇ ಅದೇ ಸಮಯಕ್ಕೆ ಗೆಲುವು ಮತ್ತು ಸೋಲು ಎರಡಕ್ಕೂ ನಿಮ್ಮನ್ನೇ ಹೊಣೆ ಮಾಡುತ್ತೇವೆ".

* * *

ಮೇದಿನೀ ರಾಯ್‌ನ ಸೇನಾಧಿಕಾರಿಗಳೊಂದಿಗಿನ ಭೇಟಿ ತುಂಬ ಹಿತಕರವಾಗೇನಿರಲಿಲ್ಲ. ಆದರೆ ಅತೃಪ್ತಿಕರವೂ ಆಗಿರಲಿಲ್ಲ. ರಾಯ್ ನನ್ನ ಅಭಿಪ್ರಾಯವನ್ನೊಪ್ಪಲಿ ಬಿಡಲಿ,

ನಾನೊಬ್ಬ ಅಪಾಯಕಾರಿ ಅಥವಾ ತಲೆಕೆಟ್ಟವನೆಂದು ನಂಬಲಿ, ಬಿಡಲಿ, ತನ್ನ ಮಂತ್ರಾಲೋಚನಾ ಸಭೆಯನ್ನೇರ್ಪಡಿಸಿ, ನನ್ನ ವಿಚಿತ್ರವಾದ ಪ್ರತಿಪಾದನೆಗಳನ್ನು ಯಾವುದೇ ರೀತಿಯಲ್ಲಿ ಪ್ರಶ್ನಿಸದೆ ಇಲ್ಲವೆ ಪ್ರತಿರೋಧವನ್ನು ಒಡ್ಡದೆ, ಸಭೆಯನ್ನು ನಡೆಸಲು ನನಗೆ ಅನುವುಮಾಡಿಕೊಟ್ಟರು. ಅರಾವಳಿ ಪರ್ವತಗಳ ಶಾಖೆಗಳ ಶಿಖರಗಳ ಹಿಂಭಾಗದಲ್ಲಿರುವ ಧೋಲಾ ಮಾರು ಎಂಬ ಬಲವಾದ ಶಿಖರಗಳಲ್ಲಿ ಐವತ್ತು ಸಾವಿರ ಸೈನಿಕರು ಬೀಡು ಬಿಡಲು ಏರ್ಪಾಟು ಮಾಡಿದ್ದೇವೆಂಬ ಸುದ್ದಿಯನ್ನು ಹಬ್ಬಿಸಿ ಜನರು ಅದನ್ನು ನಂಬುವಂತೆ ಮಾಡುವುದು ನಮ್ಮ ಮೊದಲ ಕೆಲಸವಾಗಿತ್ತು. ಧರಮ್‌ಪುರ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿರುವ ಗುಡಾರಗಳವರನ್ನು ಕರೆಸಿಕೊಂಡು, ಇನ್ನೊಂದು ನೂರು ಗುಡಾರಗಳಿಗೆ ಬೇಡಿಕೆ ಸಲ್ಲಿಸಿ ಇನ್ನೆರಡು ದಿನದಲ್ಲಿ ಅವುಗಳನ್ನು ಒದಗಿಸಬೇಕೆಂದು ಆದೇಶಿಸಿದೆವು. ಅನಂತರ ನಾವು ಕಣ್ಣಿಗೆ ಕಾಣುವ ಎಲ್ಲ ನಾಯಿಗಳನ್ನು ಒಟ್ಟಿಗೆ ಸೇರಿಸಿ, ಅವನ್ನೆಲ್ಲ ಸೇನಾ ಶಿಬಿರದಲ್ಲಿ ಕೂಡಿ ಹಾಕಿದೆವು. ಧರಮ್‌ಪುರವು ಅಸಂಖ್ಯಾತವಾದ ಕೋತಿಗಳಿಗೆ ಹೆಸರಾದ್ದು. ಅವು ಸಾವಿರಾರು ಇದ್ದುವು. ಒಳ್ಳೆ ಬೆಳೆಯಾದ ವರ್ಷದಲ್ಲಿ, ಮೂರನೇ ಒಂದು ಭಾಗದಷ್ಟು ಬೆಳೆಯನ್ನು ಅವು ತಿಂದುಬಿಡುತ್ತಿದ್ದವು. ಜನಕ್ಕೆ ಅವುಗಳನ್ನು ಕಂಡರೆ ಏನೇನೂ ಆಗುತ್ತಿರಲಿಲ್ಲ. ಅವುಗಳನ್ನು ಕೊಲ್ಲಕೂಡದೆಂದು ಯಾವುದೇ ಆದೇಶವಿಲ್ಲದಿದ್ದರೂ ಯಾರೂ ಕೊಲ್ಲುವುದಿಲ್ಲ. ಕಾರಣ ಅವನ್ನು ಹನುಮಂತನ ಅವತಾರವೆಂದೇ ಹೇಳಲಾಗುತ್ತದೆ. ಸೇನೆಯ ಉಗ್ರಾಣಕ್ಕೆ ಹತ್ತು ನಾಯಿ ಅಥವಾ ಹತ್ತು ಕೋತಿಗಳನ್ನು ಯಾರೇ ತಂದುಕೊಟ್ಟರೂ ಮಹಾರಾಜ್‌ಕುಮಾರ್ ಅವರು ಒಂದು ವರಹವನ್ನು ನೀಡುವರೆಂದು ಎಲ್ಲ ಹಳ್ಳಿಗಳಲ್ಲೂ ಪ್ರಕಟಣೆಗಳನ್ನು ಹಾಕಲಾಯಿತು.

"ಸೇನಾ ಉಗ್ರಾಣಕ್ಕೆ ?" ಎರಡನೇ ದಂಡನಾಯಕ ಸ್ಥಾನದಲ್ಲಿದ್ದ ಮಹಾರಾಜಾ ಕರಣ್‌ರಾಯ್ ಏನೂ ಅರ್ಥವಾಗದವನಂತೆ ಪ್ರಶ್ನಿಸಿದನು. "ಅವನ್ನು ತೆಗೆದುಕೊಂಡು ನೀವೇನು ಮಾಡುತ್ತೀರಿ?"

"ಸೈನಿಕರು ಎಂದಿನಂತೆ ತಾವೇ ಅಡಿಗೆ ಮಾಡಿಕೊಳ್ಳುತ್ತಾರೆ. ಆದರೆ ಐವತ್ತು ಸಾವಿರ ಸೈನಿಕರು ಹೊಟ್ಟೆಗೇನು ತಿನ್ನಬೇಕು? ಕಳೆದ ವರ್ಷದ ಬರಗಾಲದ ಬಳಿಕ ಈ ಪ್ರದೇಶದಲ್ಲಿ ಬೇರೆ ಇನ್ನೇನೂ ಉಪಾಯವಿಲ್ಲವಲ್ಲ ಎನ್ನುವುದೇ ನನ್ನ ಆತಂಕ".

"ಕೋತಿಗಳನ್ನು ತಿಂದುಕೊಂಡೆ ಮಹಾರಾಜ್‌ಕುಮಾರ್?" ಕರಣ್ ರಾಯ್ ಸಹಜವಾಗಿಯೇ ಗಾಬರಿಗೊಂಡಂತೆ ಕಂಡನು.

"ಚೀಣಾದಲ್ಲಿ ಕೋತಿಗಳ ಮೆದುಳು ಒಂದು ಅಪರೂಪದ ರುಚಿಕರವಾದ ಆಹಾರವೆಂದು ಪರಿಗಣಿಸಲ್ಪಡುತ್ತದೆ ಕರಣ್‌ಜೀ".

"ತೀರಾ ಕಡಿಮೆ ಹೇಳಬೇಕೆಂದರೆ, ನಿಮ್ಮ ಆಹಾರದ ಅಭಿರುಚಿ ತೀರಾ ವಿಲಕ್ಷಣವಾಗಿದೆ. ನಮ್ಮ ಸೇನಾಪಡೆಗಳು ಖಂಡಿತಾ ಅವುಗಳನ್ನು ಮುಟ್ಟುವುದೂ ಇಲ್ಲ" ಅವನು ಪ್ರತಿಭಟಿಸುವಂತೆ ಕಂಡನು.

"ಮೇವಾಡದ ಸೇನಾಪಡೆಗಳಿಗೆ ಆಯ್ಕೆಯಿರುವುದಿಲ್ಲವೆಂಬುದೇ ನನ್ನ ಆತಂಕ. ಸೇನಾ ಕಾರ್ಯಾಚರಣೆಯಲ್ಲಿದ್ದಾಗ ಸಂದರ್ಭ ಬಂತು ಅಂದರೆ ಆನೆಗಳ ಮಾಂಸವನ್ನೋ ಅಥವಾ ಇಲಿಗಳನ್ನೋ ತಿನ್ನುವರು. ಗುಜರಾತ್ ಸೈನಿಕ ಕಾರ್ಯಾಚರಣೆಯಲ್ಲಿ ಬರಗಾಲದ ಕಾರಣದಿಂದ ತೀವ್ರ ಆಹಾರದ ಕೊರತೆ ಉಂಟಾದಾಗ, ನಮ್ಮ ಸೇನಾ ಪಡೆಗಳು ಮತ್ತು ನಾನು ಹಾವುಗಳನ್ನು, ಮುಂಗುಸಿಗಳನ್ನು ಹುರಿದ ಕೆಂಜಿಗಗಳನ್ನು ಒಂದು ವಾರ ತಿಂದೆವು".

ಕರಣ್ ರಾಯ್ ನನಗೆ ಗಂಟು ಮೂಟೆಕಟ್ಟಿ ಹೊರಡಲು ಹೇಳಬೇಕೆಂದು ಬಯಸುತ್ತಿದ್ದನೆಂದು ನನ್ನ ನಂಬಿಕೆ. ಆದರೆ ಮೇದಿನಿರಾಯ್ ಯಾವುದೇ ಭಾವನೆಗಳೇ ಇಲ್ಲದಂಥ ನಿರ್ವಿಕಾರ ಮುಖಭಾವ ತೋರಿದ್ದರಿಂದ, ಅವನಿಗೆ ತನ್ನ ಬಾಯಿ ಮುಚ್ಚಿಕೊಂಡಿರದೆ ಗತ್ಯಂತರವಿಲ್ಲದಾಯಿತು. ಸೈನಿಕ ಕಾರ್ಯಾಚರಣೆಯ ಸಂದರ್ಭಕ್ಕಾಗಿ, ಮಂಗಳನು ಗುಪ್ತಚರ ಅಧಿಕಾರಿಯಾಗಿ ನಿಯೋಜಿಸಿದ್ದ ಶಿರಾಜ್ ಆಲಿಯ ಕಡೆ ತಿರುಗಿ, ಕೈದಿಯಾಗಿ ಸೆರೆಹಿಡಿದ ಯಾವುದೇ ಯೋಧರನ್ನು ಅಂಧರನ್ನಾಗಿಸಿ, ಎಣ್ಣೆಗಾಣಗಳಲ್ಲಿ ಅಥವಾ ಹಿಟ್ಟಿನ ಗಿರಣಿಗಳಲ್ಲಿ ಎತ್ತುಗಳ ಬದಲಿಗೆ, ಕೆಲಸಕ್ಕೆ ಹಾಕಲಾಗುವುದು ಎಂಬ ಸುದ್ದಿಯನ್ನು ಖಾಲ್ಜಿಯ ಶಿಬಿರದಲ್ಲಿ ಹರಡುವಂತೆ ತಿಳಿಸಿದೆನು. ಇದಕ್ಕೆ ಪರ್ಯಾಯವಾಗಿ, ಅವರನ್ನು ನಿರ್ವೀರ್ಯಗೊಳಿಸಿ, ಕಲ್ಲಿದ್ದಲು ಗಣಿಗಳಲ್ಲಿ ಕೆಲಸಕ್ಕೆ ದೂಡಲಾಗುವುದು. ಅಲ್ಲಿಂದ ಯಾರೂ ಎಂದೂ ಜೀವಂತವಾಗಿ ಹೊರಬಂದಿಲ್ಲವೆಂಬುದು ಎಲ್ಲರಿಗೂ ತಿಳಿದಿದೆ. ಅವರ ತಾಯಂದಿರು, ಹೆಂಡತಿಯರು ಮತ್ತು ಮಕ್ಕಳನ್ನು ವೇಶ್ಯವಾಟಿಕೆಗೆ ತಳ್ಳಲಾಗುವುದು. ಅವರುಗಳನ್ನು ಅಸಹಜವಾದ ಮತ್ತು ಮೃಗೀಯ ಕೃತ್ಯಗಳಲ್ಲಿ ತೊಡಗಿಸಿ, ಅವರು ಇನ್ನಾವ ಕೆಲಸಕ್ಕೂ ಬರುವುದಿಲ್ಲವೆನಿಸಿದಾಗ, ಸಾಯಿಸಿಬಿಡಲಾಗುವುದು. ಅವರ ಜಮೀನುಗಳನ್ನು ನಾವು ಮುಟ್ಟುಗೋಲು ಹಾಕಿಕೊಂಡು, ಹರಾಜಿನಲ್ಲಿ ಅತ್ಯಧಿಕ ಹಣವನ್ನು ಸವಾಲು ಮಾಡಿದವನಿಗೆ ನೀಡಲಾಗುವುದು.

ಹಾಗಲ್ಲದೆ ಇನ್ನೊಂದು ಕಡೆ, ಖಾಲ್ಜಿ ಕಡೆಯ ಸೈನಿಕನೇನಾದರೂ ಮೇವಾಡದ ಸೈನ್ಯಕ್ಕೆ ಸೇರಲು ಧರಮ್‌ಪುರದ ಸಮರ ಕಛೇರಿಗೆ ಬಂದ ಕೂಡಲೇ ಅಥವ ಮನೆಗೆ ತೆರಳಿದ್ದೇ ಆದರೆ ಅತ್ಯಂತ ಆಕರ್ಷಕವಾದ ಇನಾಮು ನೀಡಲಾಗುವುದು. ಎರಡು ತಿಂಗಳ ಸಂಬಳವನ್ನು ಮುಂಗಡವಾಗಿ ನೀಡಲಾಗುವುದು. ಅದರ ಜೊತೆಗೆ, ಭಾರ ಹೊರುವ ಒಂದು ಸಾಕು ಪ್ರಾಣಿ, ಅಥವಾ ಒಂದು ಹಸು, ಅವನು ಯಾವುದನ್ನು ಇಷ್ಟಪಡುತ್ತಾನೋ ಅದನ್ನು ಯುದ್ಧ ಮುಕ್ತಾಯವಾದ ನಂತರ ನೀಡಲಾಗುವುದು.

"ಮಹಾಸ್ವಾಮಿ ನಿಜಕ್ಕೂ ಸೈನಿಕರ ಮುದಿ ತಂದೆ ತಾಯಿಗಳು ಮತ್ತು ಅವರ ಪತ್ನಿಯರು ಮತ್ತು ಮಕ್ಕಳನ್ನು ವೇಶ್ಯಾವಾಟಿಕೆಗೆ ತಳ್ಳುವುದು ನಿಮ್ಮ ಉದ್ದೇಶವಲ್ಲ ಅಲ್ಲವೆ, ಅಥವಾ ಹೌದೋ? ಅದೂ ಅಲ್ಲದೆ ಅಸಹಜವಾದ ಮೃಗೀಯ ವರ್ತನೆಗಳ ವಿಷಯ" ಎಂದು ಕರಣ್‌ಜೀಯ ಸೇನಾಧಿಕಾರಿಯೊಬ್ಬನು ಸದರವಾಗಿ ನಗುತ್ತ ನನ್ನನ್ನು ತಮಾಷೆ ಮಾಡಲು ಯತ್ನಿಸಿದನು.

"ಯಾಕಾಗಬಾರದು?" ನಾನು ಒರಟಾಗಿ ಕೇಳಿದೆ.

"ಏಕೆ ಅಂದರೆ ನಾವು ಅವರ ಥರ ಅಲ್ಲ. ನಾವು ನಾಗರಿಕ ಜನ."

"ಇಲ್ಲ ನೀವು ಹೇಳಿದ್ದು ಸರಿ ನಾವು ಅವರ ಹಾಗೇ ಅಲ್ಲ. ನಾವು ಮಾಡದೆ ಇರುವಂಥ ಅತ್ಯಂತ ನೀಚವೂ ಹೇಯವೂ ಆದ ಕಾರ್ಯ ಯಾವುದೂ ಇಲ್ಲ ಎಂದು ಇಷ್ಟರಲ್ಲೇ ಅವರಿಗೆ ಗೊತ್ತಾಗುತ್ತೆ. ಈಗ ನನ್ನ ಲೆಕ್ಕಾಚಾರ ಏನು ಅಂತ ವಿವರಿಸುವೆ. ಈಗ ನಮ್ಮ ಬಡ್ಡಿದರ ಶೇಕಡಾ ಮುನ್ನೂರು. ನಿಮಗೆ ತಿಳಿದಿರುವ ಹಾಗೆ ಬಹಳ ಹಿಂದೆ ಗುಜರಾತಿನ ಸೈನ್ಯಕ್ಕೆ ಮೇವಾಡವು ಮೂರು ಸಾವಿರ ಸೈನಿಕರನ್ನು ಕಳೆದುಕೊಂಡಿತು. ಕೆಲವು ವರ್ಷಗಳ ನಂತರ ಮೇವಾಡವು ಒಂದೇ ಬೆಳಿಗ್ಗೆಯೆ ಗುಜರಾತಿನ ಹತ್ತು ಸಾವಿರ ಸೈನಿಕರನ್ನು ಒರೆಸಿ ಹಾಕಿತು. ಮಹಾರಾಜಾ ಮೇದಿನಿರಾಯ್ ಅವರು ಮಂಡುವಿನಲ್ಲಿ 39771 ಸೈನಿಕರನ್ನು ಕಳೆದುಕೊಂಡರು. ಮಹಮದ್ ಖಾಲ್ಜಿಯು ಒಂದಲ್ಲ ಒಂದು ವಿಧದಲ್ಲಿ ಅದರ ಮೂರರಷ್ಟು ಸಂಖ್ಯೆಯ ನಾಗರಿಕರು, ಸೇನೆ ಅಥವ ಪುರುಷ ಅಥವಾ ಸ್ತ್ರೀಯರು ತನ್ನ ಸಾಮ್ರಾಜ್ಯದಿಂದ ಒರಸಿ ಹಾಕಲ್ಪಡುವುದನ್ನು ಇಷ್ಟರಲ್ಲೇ ಕಾಣುವನು'.

ರಾಯ್‌ನ ಸಮರ ಸಮಿತಿಯು ಗರಬಡಿದಂತೆ ಮೌನವಾಗಿ ಈ ಸುದ್ದಿಯನ್ನು ಮೆಲುಕು ಹಾಕುತ್ತ ಕುಳಿತಿತು.

"ಒಂದು ಕೊನೆಯ ಪ್ರಶ್ನೆ ಮಹಾಸ್ವಾಮಿ" ಕರಣ್ ರಾಯ್ ಅಷ್ಟು ಸುಲಭವಾಗಿ ನನ್ನನ್ನು ಬಿಟ್ಟುಬಿಡುವಂತೆ ಕಾಣಲಿಲ್ಲ. "ನಿಮ್ಮ ಕಡೆಯ ಉಳಿದ ಐವತ್ತು ಸಾವಿರ ಸೈನಿಕರು ಯಾವಾಗ ಬರುತ್ತಾರೆ?"

"ಒಂದು ವಾರದೊಳಗೆ ಶಿರಾಜ್ ಆಲಿ ಮತ್ತು ಅವರ ಕಡೆಯವರು, ನಾಗರಿಕರ ಶಾಂತಿ ಕದಡಬಾರದೆಂಬ ಕಾರಣಕ್ಕೆ ಅವರನ್ನು ನೀಲಕಂಠ ಉಪಮಾರ್ಗದಿಂದ ನೇರವಾಗಿ ಸೇನಾ ಶಿಬಿರಕ್ಕೆ ಕರೆತರುತ್ತಾರೆ. ಅವರೆಲ್ಲರೂ ತುಂಬ ಒಳ್ಳೆಯವರು ಕರಣ್‌ಜೀ. ನಾನು ಅವನ ಮಾತಿಗೆ ಅಸಮ್ಮತಿ ಸೂಚಿಸುತ್ತ ಮುಗುಳ್ನಕ್ಕೆ. "ಆದರೆ ಬೇರೆ ಯಾವುದೇ ಸೇನಾ ಪಡೆಯ ಹಾಗೆ ಅವರು ಸ್ವಲ್ಪ ಎಗರಾಡ್ತಾರೆ."

ಕೊನೆಯಲ್ಲಿ ಕರಣ್‌ರಾಯ್ ಮತ್ತು ಅವನ ಪ್ರತಿನಿಧಿಗಳು ಯಾವುದೇ ಸಾವಿನ ಸುದ್ದಿಗಿಂತ ಅಥವಾ ಮಿಥ್ಯಾ ಗುಪ್ತಚಾರ ಸೇವೆಗಿಂತ ಪರಿಣಾಮಕಾರಿಯಾಗಿ ನಮ್ಮ ಹೆಸರು ಕೆಡಿಸುವ ಕೆಲಸವನ್ನು ಮಾಡಿದರು. ಕೆಲವೊಂದು ಸಂದರ್ಭದಲ್ಲಿ ನಮ್ಮ ಕಡೆಯವರನ್ನು ನಿಂದಿಸಿದಾಗ, ಮತ್ತು ಕಲ್ಲು ತೂರಿದ ಒಂದು ಘಟನೆ ನಡೆದಾಗ, ನಗರದಲ್ಲಿ ಪ್ರತಿರೋಧದ ಅಲೆ ಎದ್ದಿತು. ದುಷ್ಕರ್ಮಿಗಳಿಗೆ ಛಡಿಯೇಟು ನೀಡಬೇಕೆಂದು ಮೇದಿನೀರಾಯ್ ಆದೇಶಿಸಿದನು. ಆದರೆ ಅಲ್ಲಿಂದ ಮುಂದೆ ನಾವುಗಳು ಶಿಬಿರದ ವ್ಯಾಪ್ತಿಯೊಳಗೇ ಇರುವುದು ವಿವೇಕವೆಂದು ಹಾಗೂ ತೀರಾ ಜರೂರಾದ್ದೇನಾದರೂ ನಡೆದು ನಗರದಲ್ಲಿ ನಮ್ಮ ಉಪಸ್ಥಿತಿ ತೀರಾ ಅನಿವಾರ್ಯವೆನ್ನುವಂಥ ಪರಿಸ್ಥಿತಿ ಬಾರದ ಹೊರತು ಶಿಬಿರದಿಂದ ಹೊರಹೋಗುವ ಅಪಾಯಕ್ಕೆ ಒಡ್ಡಿಕೊಳ್ಳಕೂಡದೆಂದು ಅಂದುಕೊಂಡೆವು. ನನ್ನ ತಮ್ಮ ವಿಕ್ರಮಾದಿತ್ಯ ಕೂಡ ನಮಗೆ ಉಪಯೋಗಕ್ಕೆ ಬರುತ್ತಾನೆಂದು ನಾನು ಒಪ್ಪಿಕೊಳ್ಳಲೇ ಬೇಕು. ಅವನಿಲ್ಲದೆ ಹೋಗಿದ್ದರೆ, ಕೊಂಕು ಮಾತು ಮತ್ತು ವದಂತಿಗಳಿಗಿರುವ ಅಂತಃಶಕ್ತಿ ಏನೆಂದು ನನಗೆಂದೂ ತಿಳಿಯುತ್ತಿರಲಿಲ್ಲ. ಮೂರನೇ ದಿನದ ಹೊತ್ತಿಗೆ ಧರಮ್‌ಪುರದ ಬೀದಿಗಳಲ್ಲಿ ಒಂದೇ ಒಂದು ನಾಯಿಯೂ ಇರಲಿಲ್ಲ. ಇಲ್ಲ, ನಾವಿನ್ನೂ ಅವೆಲ್ಲವುಗಳನ್ನು ತಿಂದಿರಲಿಲ್ಲ. (ರಾತ್ರಿ ಹೊತ್ತು ಶಿಬಿರದಲ್ಲಿ ಅವು ಅದೆಂಥ ಕೆಟ್ಟ ಕರ್ಕಶವಾದ ಸದ್ದುಗಳನ್ನು ಮಾಡುತ್ತಿದ್ದುವೆಂದರೆ ಅಥವಾ ಅದಕ್ಕಿಂತ ಕೆಟ್ಟದ್ದೆಂದರೆ, ಬದ್ರಿನಾಥದಲ್ಲೋ, ಬಜೌರ್‌ನಲ್ಲೋ ಇದ್ದ ಯಾರೋ ಸಂಗಾತಿಗಾಗಿ ಅವು ಗೋಳಿಡುತ್ತಿದ್ದುವೆಂದರೆ, ನನಗೆ ಹಾಗೆ ಮಾಡಲು ಬಹಳಷ್ಟು ಇಷ್ಟವಿದ್ದರೂ.) ಆ ದುಷ್ಟ ಮೇವಾಡಿ ಸೈನಿಕರು ಅವುಗಳ ಹತ್ತಿರ ಹೋಗದಿರಲೆಂದು ನಗರದ ಜನ ಅವುಗಳನ್ನು ಒದ್ದು ಅಟ್ಟಿ ಬಿಟ್ಟಿದ್ದರು. ಇಲ್ಲವೆ ತಮ್ಮ ಮನೆಯ ಅಂಗಳದಲ್ಲೋ ಮನೆಗಳಲ್ಲೋ ಕೂಡಿ ಹಾಕಿದ್ದರು.

* * *

ನಾವು ಅಲ್ಲಿಗೆ ಹೋದ ನಾಲ್ಕನೆಯ ದಿನ, ಇರಬೇಕು ಅಂತ ಅನ್ನಿಸುತ್ತೆ. ತಡರಾತ್ರಿಯಲ್ಲಿ ಮೇದಿನೀ ರಾಯ್ ನಮ್ಮ ಶಿಬಿರಕ್ಕೆ ಬಂದರು. ಅವರೊಂದಿಗೆ ಇನ್ನೊಬ್ಬ ವ್ಯಕ್ತಿ ಇದ್ದನು. ರಾಯ್ ಬಹಳ ಭಾವೋದ್ರೇಕದಲ್ಲಿದ್ದ ಕಾರಣ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಓ ದೇವರೆ, ಅದು ಕೆಟ್ಟ ಸುದ್ದಿ ಆಗದಿರುವಂತೆ ಕೃಪೆ ಮಾಡು. ರಾಜಕುಮಾರ ಹೇಮಕರಣವನ್ನು ಸಾಯಗೊಡಬೇಡ. ಗಾಗ್ರೋನ್ ಕೋಟೆ ಶತ್ರುವಶವಾಯಿತೆ? ಒಬ್ಬ ಸೇನಾಧಿಪತಿಯಾಗಿ ಅತಿಯಾದ ಆತ್ಮವಿಶ್ವಾಸವೆಂಬ ಅಕ್ಷಮ್ಯ ಅಪರಾದ ಮಾಡಿಬಿಟ್ಟೆನೆ? ನಾನೇಕೆ ಅಪಾಯದ

ಸಾಧ್ಯತೆ ಇಲ್ಲದ ಹಾಗೆ ಸುರಕ್ಷಿತವಾಗಿ ನಡೆದುಕೊಳ್ಳಲಿಲ್ಲ? ಹಾಗೂ ರಾಯ್ ಜೊತೆ, ಕುದುರೆಯೇರಿ ಗಾಗ್ರೋನ್‌ಗೆ ಹೋಗಿ ಕೋಟೆಯ ಮೇಲಿನ ಒತ್ತಡವನ್ನು ಕಡಮೆ ಮಾಡಿ ಮುತ್ತಿಗೆಯನ್ನು ತೆಗೆಸಲಿಲ್ಲ?

"ಮಹಾಪ್ರಭು, ಕೆಲವೊಂದು ಯಾವತ್ತೂ ತೀರಿಸಲಾಗದ ಋಣಗಳಿರುತ್ತವೆ" ಇಷ್ಟು ಹೊತ್ತಿಗೆ ಮೇದಿನೀರಾಯ್ ಶಿಬಿರದೊಳಕ್ಕೆ ಪ್ರವೇಶ ಮಾಡಿಯಾಗಿತ್ತು. "ಇದು ನಾನೆಂದೂ ತೀರಿಸಲಿಚ್ಛಿಸದಂಥ ಋಣ. ನಾನು ಸಾಯುವ ದಿನದವರೆಗೂ ನಿಮಗೆ ಉಪಕೃತನಾಗಿರುತ್ತೇನೆ. ನೀವು ನನ್ನ ಮಗನನ್ನು ಮತ್ತು ಗಾಗ್ರೋನ್‌ನಲ್ಲಿ ಶತ್ರುಗಳ ಬಂಧನದಲ್ಲಿದ್ದ ನನ್ನವರನ್ನೆಲ್ಲ ನನಗೆ ವಾಪಸ್ ತಂದುಕೊಟ್ಟಿದ್ದೀರಿ."

ಐವತ್ತು ಸಾವಿರ ಸೇನಾಪಡೆಗಳನ್ನು ಕುರಿತ ನನ್ನ ಕಟ್ಟು ಕತೆಯನ್ನು ಸುಲ್ತಾನನು ನಂಬಿದನಲ್ಲ ಎಂದು ನಾನು ನಮ್ಮ ಕುಲದೇವರಾದ ಏಕಲಿಂಗಜೀಗೆ ವಂದನೆಗಳನ್ನರ್ಪಿಸಿದೆ. ಆತನೀಗ ಯಾವ ಕ್ಷಣವಾದರೂ ಇಲ್ಲಿಗೆ ಬರಬಹುದು. ಆದರೆ ಅದರಿಂದ ನನಗೆ ಒಳ್ಳೆಯದೇ. ನಾನು ಕರಣ್‌ನನ್ನು ಅದೆಷ್ಟು ಹೊತ್ತು ಆಲಿಂಗಿಸಿಕೊಂಡಿದ್ದೇನೋ ನನಗೆ ತಿಳಿಯದು. ಅವನನ್ನು ನನ್ನ ಪಕ್ಕದಲ್ಲಿ ಕೂಡಿಸಿಕೊಂಡೆನು. ಆದರೆ ಕೆಲವೇ ನಿಮಿಷಗಳಲ್ಲಿ ಅವನು ಗಾಢವಾಗಿ ನಿದ್ರೆ ಹೋದನು.

"ಮಹಾರಾಜ್ ಕುಮಾರ್ ಅವನಿಗೆ ನೀವು ನೆರವು ನೀಡಿ ರಕ್ಷಿಸಿ. ನೀವು ಅವನ ಪಾಲಿಗೆ ಆರಾಧ್ಯ ವ್ಯಕ್ತಿ. ನಿಮ್ಮ ಹೆಜ್ಜೆ ಗುರುತಿನಲ್ಲಿ ಹೆಜ್ಜೆಯಿಟ್ಟು ನಡೆಯುವುದು ಅವನಿಗೆ ಬಹಳ ಇಷ್ಟ".

ದೇವರ ದಯೆಯಿಂದ ಹಾಗಾಗದೆ ಇರಲಿ. ಇಂದಿನ ನಾಯಕರು ನಾಳಿನ ಖಳನಾಯಕರು. ಇಡೀ ಬದುಕೆಲ್ಲವು ಸಾಯುವ ಕಲೆಯಲ್ಲ ಎಂದು, ತಿಳಿದವನು ತೇಜ್ ಮತ್ತು ಷಫಿಯ ಹೊರತಾಗಿ ಇನ್ನೊಬ್ಬ ರಜಪೂತನಿದ್ದಾನೆಂದರೆ ನನಗದು ಸಂತಸದ ವಿಷಯ.

ಮಾಳ್ವದ ಸುಲ್ತಾನನು ಏನು ಮಾಡಲು ಹೊರಟಿದ್ದನು? ಗ್ಯಾಗ್ರೋನ್‌ನ ಮುತ್ತಿಗೆಯನ್ನು ಅವನು ತೆರವುಗೊಳಿಸಿ ಆಗಲೇ ಹತ್ತಿರ ಹತ್ತಿರ ಮೂರು ವಾರವಾಗಿತ್ತು. ಆದರೆ ಇನ್ನೂ ಅವನ ಸುಳಿವಿರಲಿಲ್ಲ. ರಾಜಕುಮಾರ ಹೇಮಕರಣನ ಬೆನ್ನಿಗೇ ಬಂದು ನಮ್ಮ ಮೇಲೆ ಸೈನ್ಯ ನುಗ್ಗಿಸಬೇಕಿತ್ತು. ಸೈನ್ಯವನ್ನು ಬಲಪಡಿಸುವ ಸಲುವಾಗಿ ಕಾದಿದ್ದಾನೆಯೇ? ನಾನು ಭಾವಿಸಿದ್ದಕ್ಕಿಂತಲೂ ಹೆಚ್ಚು ಚತುರನೆ? ನಮ್ಮ ಭಯವನ್ನೇ ಅವಲಂಬಿಸಿ ನಮ್ಮ ಜೊತೆ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲಿದ್ದಾನೆಯೆ? ಹಾಗೊಂದು ವೇಳೆ ಮಾಡುವುದಾದರೆ, ಅವನು ಅದರ ಸದುಪಯೋಗ ಮಾಡುತ್ತಿದ್ದಾನೆ. ಮೇದಿನೀ ರಾಯ್, ಹೇಮಕಿರಣ್, ಷಫಿ ತೇಜ್, ನಮ್ಮೆಲ್ಲ ಜನರನ್ನು ಮತ್ತು ನನ್ನನ್ನು ಅನುಮಾನ, ಮತ್ತು ಸಂದೇಹಗಳ ಹಾಗೂ ಭಯದ ಅಂಬಲಿಯಲ್ಲಿ ಬೇಯುವಂತೆ ಮಾಡಿ, ಅವನ ಮುಂದಿನ ನಡೆ ಏನಿರಬಹುದೆಂದು ನಾವು ವಿಸ್ಮಯ ಗೊಳ್ಳುವಂತೆ ಮಾಡಿದ್ದಾನೆ.

ಇದೀಗ ಯೋಜನೆಯನ್ನು ಕಾರ್ಯಗತಗೊಳಿಸುವ ಮುನ್ನ ಸನ್ನಿವೇಶದ ಅಧ್ಯಯನ ಮಾಡಲು, ಸಾಧ್ಯವಾದರೆ ಸುಲ್ತಾನನ ನರವನ್ನು ಬಡಿದು ನೋಡಿ ಅವನ ಪ್ರತಿಕ್ರಿಯೆಯೇನೆಂದು ತಿಳಿದುಕೊಳ್ಳಲು ಇದು ಸರಿಯಾದ ಸುಸಂಧಿ ಎನ್ನಿಸಿತು. ನಾವು ಅವನ ಜೊತೆ ಬೆಕ್ಕು ಇಲಿ ಆಟ ಆಡುವೆವು. ಅವನು ಬೆಕ್ಕಿನ ಪಾತ್ರ ವಹಿಸುವನೆಂಬ ಭರವಸೆ ಇದೆ. ನಾವು ಮೇದಿನಿ ರಾಯ್ ಕಡೆಯ ಮೂರು ಸಾವಿರ ಯೋಧರನ್ನು

ಆಯ್ದುಕೊಂಡು, ನಮ್ಮ ಪಡೆಗಳೊಂದಿಗೆ ಅವರನ್ನು ಒಟ್ಟುಗೂಡಿಸಿ, ಒಂದು ಸಾವಿರದೈನೂರು ಸೈನಿಕರ ನಾಲ್ಕು ಗುಂಪುಗಳಾಗಿ ವಿಂಗಡಿಸಿದೆವು. ಯಾವುದೇ ಸಮಯದಲ್ಲೂ ಎರಡಕ್ಕಿಂತ ಹೆಚ್ಚು ಕಾರ್ಯಪಡೆಗಳು ಹೊರಗಿನಿಂದ ದಾಳಿಮಾಡುವಂತಿಲ್ಲ. ತೇಜ್ ಮತ್ತು ಷಫಿಗೆ ಅದರ ಮುಂದಾಳ್ತಾನವನ್ನು ನೀಡಲಾಯಿತು. ರಾಜಕುಮಾರ ಹೇಮಕರಣ್ ಮತ್ತು ಕರಣ್ ರಾಯ್ ಇಬ್ಬರೂ ಕೆಲಸ ಮಾಡುವ ರೀತಿಯನ್ನು ತಿಳಿದುಕೊಳ್ಳುವವರೆಗೂ ತೇಜ್ ಮತ್ತು ಷಫಿಗೆ ನೆರವು ನೀಡವುದು ಎಂದಾಯಿತು. ಆನಂತರ ಅವರಿಗೆ ಸ್ವತಂತ್ರವಾದ ಅಧಿಕಾರವನ್ನು ನೀಡಲಾಗುವುದು.

ನಾಲ್ಕೂ ಜನಕ್ಕೆ ನಾನು ಹೇಳಿದೆ– "ನಿಮ್ಮ ಪಾಡಿಗೆ ನೀವು ಸ್ವತಂತ್ರರು. ನಾನು ಹೇಗೆ ಕಾರ್ಯನಿರ್ವಹಿಸುತ್ತೇನೆಂದು ಪ್ರಯತ್ನಪಟ್ಟು ತಿಳಿಯಲು ಹೋಗಬೇಡಿ ಅಥವಾ ನಿಮ್ಮ ಕಾರ್ಯಗಳನ್ನು ನಾನು ಒಪ್ಪುತ್ತೇನೋ ಇಲ್ಲವೋ ಎಂದು ಯೋಚಿಸಿ ನಿರ್ಧಾರ ಮಾಡಬೇಡಿ. ನೀವು ಕಾರ್ಯದ ಸ್ಥಳದಲ್ಲಿರುತ್ತೀರಿ. ಹಾಗಾಗಿ ಏನುಮಾಡಬೇಕೆಂಬುದನ್ನು ನಿರ್ಧರಿಸುವ ಅತ್ಯುತ್ತಮ ತೀರ್ಪುಗಾರರು ನೀವೇ ಆಗಿರುತ್ತೀರಿ. ಎರಡು ನಿಯಮಗಳು. ಶತ್ರುವಿನೊಂದಿಗೆ ಮುಖಾಮುಖಿಯಾಗಬೇಡಿ. ಸಾಧ್ಯವಾದಾಗಲೆಲ್ಲ, ಎಲ್ಲರೂ ಏಕಕಾಲಕ್ಕೆ, ಆದರೆ ಬೇರೆ ಬೇರೆ ಪ್ರದೇಶಗಳಲ್ಲಿ ದಾಳಿಮಾಡಿ, ಶತ್ರುಗಳಲ್ಲಿ ಗೊಂದಲ ಮತ್ತು ಭಯವನ್ನು ಬಿತ್ತಿ ಬಿಡಿ. ಅದರ ಉದ್ದೇಶ ಅವರ ಬಹಳಷ್ಟು ಜನರನ್ನು ಬಲಿ ತೆಗೆದುಕೊಳ್ಳುವುದು. ಸರಿಯಾದ ಕಾರಣವಿಲ್ಲದೆ, ನಮ್ಮಲ್ಲಿ ಯಾರಾದರೊಬ್ಬನನ್ನು ನೀವು ಕಳೆದುಕೊಂಡರೂ, ದಂಡಾರ್ಹವಾದ ನರಹತ್ಯೆಯ ಅಪರಾಧಕ್ಕೆ ನೀವು ಗುರಿಯಾಗುವಿರಿ. ದೇವರು ಕಾಪಾಡಲಿ."

ಅಧ್ಯಾಯ 34

ಊರಿನಿಂದ ನನಗೊಂದು ಸುದ್ದಿ ಬಂತು. ಬಹುಪಾಲು ಮಂಗಳನಿಂದ ಇರಬೇಕು. ನೀರಿನ ಮತ್ತು ಒಳಚರಂಡಿ ವ್ಯವಸ್ಥೆಯ ಮೊದಲ ಹಂತ ಸೊಗಸಾಗಿ ರೂಪುಗೊಳ್ಳುತ್ತಿತ್ತು. ಲಕ್ಷ್ಮಣ ಸಿಂಹಜೀಯವರು ಪಾರ್ಶ್ವವಾಯುವಿಗೆ ತುತ್ತಾಗಿ ಬಹಳ ಬೇಗ ಚೇತರಿಸಿಕೊಳ್ಳುತ್ತಿದ್ದರು. ಅರಮನೆಯ ಕ್ಷೌರಿಕನ ಹೆಂಡತಿ ಅವನ ಕ್ಷೌರದ ಕತ್ತಿಯೊಂದರಿಂದ ಅವನ ಇಂದ್ರಿಯವನ್ನು ಕತ್ತರಿಸಿ ಹಾಕಲು ಯತ್ನಿಸಿದ್ದಳು. ಅದಕ್ಕೆ ಕಾರಣ, ಅವನಿಗೊಬ್ಬ ಉಪಪತ್ನಿಯಿದ್ದಳು. ಕ್ಷೌರಿಕ ಮದನಲಾಲನಿಗೆ ತನ್ನ ಹೆಂಡತಿಯ ವಿಷಯಕ್ಕೆ ಅತಿಯಾದ ಹೆಮ್ಮೆ. ಹಾಗಾಗಿ ಅವನಿಗೆ ತನ್ನ ವಿಚ್ಛೇದಿತ ಪುರುಷಾಂಗವನ್ನು, ಮಹಾರಾಜರನ್ನೂ ಒಳಗೊಂಡಂತೆ ಎಲ್ಲ ಚಿಲ್ಲರೆ ಪಲ್ಲರೆ ಜನಕ್ಕೂ ತೋರಿಸಲು ಬಹಳಷ್ಟು ಆಸೆ. ಬೃಂದಾವನಿ ದೇವಸ್ಥಾನದ ವಿಸ್ತರಣಾ ಕಾರ್ಯ ಮುಗಿದಿತ್ತು. ಮಹಾಪ್ರಭುಗಳು ದೇವಸ್ಥಾನದಲ್ಲಿ ನಡೆಯುತ್ತಿದ್ದ ಸಂಜೆಯ ಆರತಿ ಕಾರ್ಯಕ್ರಮಕ್ಕೆ ಹೋಗುತ್ತಿದ್ದುದನ್ನು ಅರಮನೆಯ ಕೆಲವು ಮೂಲಗಳು ಬಹಳವಾಗಿ ವಿರೋಧಿಸಿದರೂ, ಅವರು ತಮ್ಮ ಭೇಟಿಯನ್ನು ಮುಂದುವರಿಸಿದ್ದರು. ಕಾಬೂಲ್ ದೊರೆ ಜಹೀರುದ್ದೀನ್ ಮಹಮ್ಮದ್ ಬಾಬರ್, ಪಂಜಾಬಿನಲ್ಲಿ ಶಾಂತಿಯನ್ನು ಮತ್ತೆ ವ್ಯವಸ್ಥೆಗೊಳಿಸುವ ತೋರಿಕೆಯ ಉದ್ದೇಶದಿಂದ ಹಿಂದೂಸ್ತಾನದತ್ತ ಬಹಳ ಕಷ್ಟದಿಂದ ಧಾವಿಸುತ್ತಿದ್ದನು. ಮಂಗಳನು ತನ್ನ ಇನ್ನಷ್ಟು ಟಿಪ್ಪಣಿಯನ್ನು ಕಳುಹಿಸಿದನು. ಮಂಗಳನು ಹೀಗೆ ಬರೆದಿದ್ದನು– "ಅವು ಎಲ್ಲ ಸಮಯದಲ್ಲೂ ಅರ್ಥವಾಗುವುದಿಲ್ಲ. ಅದು ಏಕೆ ಹಾಗೆ ಎಂದರೆ, ಅಲ್ಲಿರುವ ನಮ್ಮ ಕಡೆಯ ವ್ಯಕ್ತಿಯು ತನಗೆ ಯಾವುದು ಸಾಧ್ಯವೋ ಅದನ್ನು ತೆಗೆದುಕೊಳ್ಳುತ್ತಾನೆ. ಅಲ್ಲದೆ ಅವು ತಪ್ಪದೆ, ಸಂದರ್ಭದಿಂದ ಬೇರ್ಪಟ್ಟವಾಗಿರುತ್ತಿದ್ದವು. ಈ ದಿನಗಳಲ್ಲೇ ಯಾವೊತ್ತಾದರೂ ಒಂದು ಸಂಜೆ ಅವನ ಶಿಬಿರದ ಹೊರಗೆ ಒಟ್ಟಾಗಿ ಕುಳಿತು ತಾನು ಬಿಟ್ಟು ಬಿಡಬೇಕು ಎಂದು ಆಗಾಗ್ಗೆ ಅವನು ಹೇಳುತ್ತಿದ್ದ ದ್ರಾಕ್ಷಾರಸವನ್ನು ಕುಡಿಯುತ್ತ ಕುಳಿತಾಗ, ಬಾಬರನಿಂದಲೇ ಈ ಬಗ್ಗೆ ಸ್ಪಷ್ಟೀಕರಣ ಮತ್ತು ವಿವರಗಳನ್ನು ಕೇಳಿ ತಿಳಿದುಕೊಳ್ಳಲು ಕೆಲವೊಮ್ಮೆ ತೀರ್ಮಾನಿಸುತ್ತೇನೆ.

"ಆ ನೆಲೆಯಿಂದ ಹೊರಟು, ನಾವು ಕಹ್‌ರಾಜ್ ಮತ್ತು ಪೇಶ್‌ಗ್ರಾಮ್ ಕಣಿವೆಗಳ ಮುಖಭಾಗದ ಮುಂದೆ ಕುದುರೆಯಿಂದ ಇಳಿದೆವು. ನಾವು ಅಲ್ಲಿ ನೆಲದ ಮೇಲೆ ನಿಂತಿದ್ದಾಗ ಕಾಲಿನ ಹರಡು ಹೂತು ಹೋಗುವವರೆಗೂ ಹಿಮಪಾತವಾಯಿತು. ಆ ಪ್ರದೇಶದಲ್ಲಿ ಅಷ್ಟೊಂದು ಪ್ರಮಾಣದಲ್ಲಿ ಹಿಮಪಾತವಾಗುವುದು ಅಪರೂಪವೆಂದು ತೋರಿತು. ಕಾರಣ ಜನರು ತುಂಬ ಆಶ್ಚರ್ಯಪಟ್ಟರು. ಸವದ್‌ನ ಸುಲ್ತಾನ್ ವಾಯಸ್,

ಅವರೊಂದಿಗೆ ಆದ ಒಪ್ಪಂದದ ಪ್ರಕಾರ ಸೇನೆಯ ಬಳಕೆಯ ಸಲುವಾಗಿ ಕಹರಾಜ್‌ನ ಜನತೆಯ ಮೇಲೆ ನಾಲ್ಕು ಸಾವಿರ ಕತ್ತೆಗಳ ಹೇರಿನ ತೆರಿಗೆಯ ಭಾರವನ್ನು ಹಾಕಲಾಯಿತು. ಅದರ ವಸೂಲಿಗೆ ಅವನನ್ನೇ ಕಳಿಸಲಾಯಿತು. ಇದಕ್ಕೆ ಮುಂಚೆ ಯಾವತ್ತೂ ಆ ಪರ್ವತ ಪ್ರದೇಶದ ಆ ಒರಟು ಜನರ ಮೇಲೆ ಅಷ್ಟೊಂದು ಭಾರವನ್ನು ಹೇರಲಾಗಿರಲಿಲ್ಲ. ತಮ್ಮ ಮೇಲೆ ಹೊರಿಸಲಾದ ತೆರಿಗೆಯ ಅಷ್ಟೂ ಧಾನ್ಯವನ್ನು ಅವರಿಗೆ ಕೊಡಲಾಗಲಿಲ್ಲ. ಹಾಗಾಗಿ ಅವರನ್ನು ನಾಶಮಾಡಲಾಯಿತು."

ಇದೊಂದು ಕುತೂಹಲಕರವಾದ ಉಲ್ಲೇಖ. ಬಾಬರನ ಪೂರ್ವಜರು ಅಲೆಮಾರಿ ಬುಡಕಟ್ಟಿಗೆ ಸೇರಿದವರು ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಧಾವಿಸುವ ದಾಳಿಕಾರರು. ಧಾನ್ಯ, ಸ್ತ್ರೀಯರು ಮತ್ತು ಸಂಪತ್ತಿನ ರೂಪದಲ್ಲಿ ಕುದುರೆಗಳು, ಒಂಟೆಗಳು, ದನಕರುಗಳು, ಒಡವೆಗಳು ಮೊದಲಾದುವನ್ನು ಅಪಹರಿಸುವುದಷ್ಟೇ ಅಲ್ಲದೆ, ಸಾಮೂಹಿಕ ಕಗ್ಗೊಲೆಗಳ ನಂತರ ಸಮಯವಿದ್ದರೆ ನಗರ ಪ್ರದೇಶಕ್ಕೆ ಅಥವಾ ಶಿಬಿರಕ್ಕೆ ಬೆಂಕಿ ಹಚ್ಚುವುದು ಅವರ ಎಂದಿನ ವಾಡಿಕೆ. ಆದರೆ ಬಾಬರ್ ಸ್ವಭಾವತಃ ತುಂಬ ಎಚ್ಚರಿಕೆಯುಳ್ಳ ಯೋಗ್ಯ ಮನುಷ್ಯ. ಅವನು ಸುಮ್ಮ ಸುಮ್ಮನೆ ತಪ್ಪು ಮಾಡುವವನಲ್ಲ ಹಾಗೂ ಅನಗತ್ಯವಾಗಿ ಜನಗಳನ್ನು ಎದುರು ಹಾಕಿಕೊಳ್ಳದೆ ಇರುವುದನ್ನು ಇಷ್ಟಪಡುವಂಥ ವ್ಯಕ್ತಿ. ಅವನ ತಪ್ಪು ಲೆಕ್ಕಾಚಾರದಿಂದ ಆಹಾರ ಸಾಮಗ್ರಿಗಳ ಕೊರತೆ ಉಂಟಾಯಿತೆ? ಒಂದು ವೇಳೆ ಹಾಗೆ ತಪ್ಪು ಲೆಕ್ಕ ಹಾಕಿದ್ದರೂ ಚಾಲ್ತಿಯಲ್ಲಿರುವ ಧಾನ್ಯದ ಬೆಲೆಯನ್ನು ಕೊಟ್ಟು ಈ ಗುಡ್ಡಗಾಡಿನ ರೈತಾಪಿಗಳು ಮತ್ತು ಅವರ ಕುಟುಂಬಗಳು ಕೂಡ ಉಪವಾಸ ಸಾಯದ ಹಾಗೆ ಏಕೆ ಖಾತರಿ ಪಡಿಸಿಕೊಳ್ಳಬಾರದು?

ಆಖೈರಾಗಿ ನನ್ನ ನಿದ್ರೆಯನ್ನು ನಾಶ ಮಾಡಿಬಿಡುವಂಥ ನಮೂದೆಂದರೆ ಮುಂದಿನದು. ಅದು ನನ್ನ ಮತ್ತು ಮಂಗಳನ ಅತ್ಯಂತ ಕೆಟ್ಟ ಆತಂಕಗಳನ್ನು ನಿಜಮಾಡಿತು.

"ಹಳ್ಳಿಗಾಡಿನ ಜನರಿಗೆ ಸೇರಿದ, ದನಗಳು ಮತ್ತು ಕುರಿಗಳ ವಿವಿಧ ಮಂದೆಗಳು ನಮ್ಮ ಶಿಬಿರದ ಸನಿಹದಲ್ಲೇ ಇದ್ದುವು. ಹಿಂದೂಸ್ಥಾನವನ್ನು, ಅದೇ ರೀತಿ ಒಂದು ಕಾಲಕ್ಕೆ ಟರ್ಕರ ವಶದಲ್ಲಿದ್ದ ಭಿರಾ, ಖುಷಬ್, ಚೇನಾಬ್ ಮತ್ತು ಚಿಮಟ್ ಇವೇ ಮೊದಲಾದ ದೇಶಗಳನ್ನು ವಶಪಡಿಸಿಕೊಳ್ಳಬೇಕೆಂಬುದು ನನ್ನ ಹೃದಯದಲ್ಲಿ ಬೇರೂರಿತ್ತು. ಅವುಗಳನ್ನು ನನ್ನವೇ ಎಂದು ಚಿತ್ರಿಸಿಕೊಂಡು, ಅವುಗಳನ್ನು ಶಾಂತಿಯುತವಾಗಿಯಾಗಲಿ, ಬಲಪ್ರಯೋಗ ಮಾಡಿಯಾಗಲಿ, ನನ್ನ ಸುಪರ್ದಿಗೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆ. ಈ ಕಾರಣಗಳಿಗಾಗಿಯೇ ಈ ಗುಡ್ಡಗಾಡಿನ ಜನಗಳನ್ನು ಒಳ್ಳೆಯ ರೀತಿಯಲ್ಲಿ ಕಾಣುವುದು ತೀರ ಅತ್ಯಗತ್ಯವಾದ ಕಾರಣ, 'ಈ ಜನಗಳ ದನಗಳು ಮತ್ತು ಕುರಿಗಳ ಮಂದೆಗಳಿಗೆ ಯಾವುದೇ ರೀತಿಯ ತೊಂದರೆ ಮಾಡಕೂಡದು. ಅಷ್ಟೇ ಅಲ್ಲ ಅವರ ದಾರಗಳು ಮತ್ತು ಸೂಜಿಗಳನ್ನು ಕೂಡ ಹಾಳು ಮಾಡಕೂಡದು' ಎಂಬ ಆದೇಶವನ್ನು ಹೊರಡಿಸಲಾಯಿತು."

ಆನಂತರ ನಡೆದದ್ದು ಇನ್ನೂ ಹೆಚ್ಚು ಸ್ಪಷ್ಟವಾಗಿ ತೆರೆದು ತೋರುವಂತಿತ್ತು.

"ಒಂದು ಕಾಲದಲ್ಲಿ ತುರ್ಕರ ವಶದಲ್ಲಿದ್ದ ದೇಶಗಳಿಗೆ ಶಾಂತಿಯ ಸಲುವಾಗಿ ಒಬ್ಬ ದೂತನನ್ನು ಕಳುಹಿಸುವುದರಲ್ಲೇನೂ ತಪ್ಪಿಲ್ಲ" ಎಂದು ಜನರು ಸದಾ ಹೇಳುತ್ತಿದ್ದರು. ಆ ಪ್ರಕಾರ, ಗುರುವಾರ ದೆಹಲಿಯ ಸುಲ್ತಾನ್, 'ಇಬ್ರಾಹಿಂ ಲೂದಿಯಲ್ಲಿಗೆ ಹೋಗಲು ಮುಲ್ಲಾಗಳಲ್ಲಿ ಮೊದಲನೆಯವನಾದ, ಯು ಲಾವಲ್, ಮುಲ್ಲಾ ಮುರ್ಷದ್‌ನನ್ನು ನಿಯುಕ್ತಿ ಮಾಡಲಾಯಿತು. (ಮುಂದಿನ ಒಂದೂವರೆ ಸಾಲು ಓದಲಾರದಷ್ಟು ಅಸ್ಪಷ್ಟವಾಗಿದೆ.) ನಾನು ಅವನ ಬಳಿಗೆ ಒಂದು ಡೇಗೆ ಹಕ್ಕಿಯೊಂದಿಗೆ 'ತುರ್ಕರ ವಶದಲ್ಲಿದ್ದ ಹಳೆಯ

ದೇಶಗಳನ್ನು ಮತ್ತೆ ನೀಡುವಂತೆ' ಸಂದೇಶ ಕಳಿಸಿದೆನು. ದೌಲತ್ ಖಾನನ ಬರಹಗಳು ಮತ್ತು ಸುಲ್ತಾನ್ ಇಬ್ರಾಹಿಂ ಅವರ ಬರಹಗಳ ಉಸ್ತುವಾರಿಯ ಹೊಣೆಯನ್ನು ಮುಲ್ಲಾ ಮುರ್ಷದ್‌ಗೆ ವಹಿಸಿಕೊಡಲಾಯಿತು. ವಮೌಖಿಕವಾಗಿ ಕೂಡ ವಿಷಯವನ್ನು ತಲುಪಿಸಿದ್ದಾಯಿತು ಮತ್ತು ಅಲ್ಲಿಗೆ ಹೋಗಲು ಅನುಮತಿ ನೀಡಲಾಯಿತು. ಹಿಂದೂಸ್ತಾನದ ಜನರು ಅದರಲ್ಲೂ ಎಲ್ಲಕ್ಕಿಂತ ಹೆಚ್ಚಾಗಿ ಆಫ್‌ಘನ್ನರು ವಿವೇಕ ಮತ್ತು ವಿವೇಚನೆಗಳಿಂದ ದೂರವಾಗಿ, ನ್ಯಾಯ ತೀರ್ಮಾನ ಮತ್ತು ಸಲಹೆಗಳಿಗೆ ಮುಖತಿರುವಿದವರಾಗಿರಬೇಕು, ಕಾರಣ ಅವರು ಎಲ್ಲಿಗೂ ಹೋಗಲಾರರು ಮತ್ತು ಶತ್ರುವಿನಂತೆ ಎದ್ದು ನಿಲ್ಲಲಾರರು ಅಥವಾ ಸ್ನೇಹದ ರೀತಿ ರಿವಾಜುಗಳನ್ನು ಅರಿಯದವರು. ದೌಲತ್ ಖಾನನು ನನ್ನ ಕಡೆಯ ವ್ಯಕ್ತಿಯನ್ನು, ತಾನೂ ನೋಡದೆ ಅಥವಾ ಸುಲ್ತಾನ್ ಇಬ್ರಾಹಿಂ ಕಡೆಗೆ ಅವನನ್ನು ತ್ವರಿತವಾಗಿ ಕಳಿಸಿಯೂ ಕೊಡದೆ, ಲಾಹೋರಿನಲ್ಲೇ ಅನೇಕ ದಿವಸಗಳವರೆಗೂ ಇಟ್ಟುಕೊಂಡನು. ಕೆಲವು ತಿಂಗಳುಗಳ ನಂತರ, ಒಂದು ಉತ್ತರವನ್ನೂ ತರದೆ ಹಾಗೆಯೇ ಕಾಬೂಲಿಗೆ ಹಿಂತಿರುಗಿದನು".

ಅದೊಂದು ಮೇಲ್ನೋಟಕ್ಕೆ ಸರಿ ಎಂದು ಕಾಣುವ ವಾದ. ಆದರೂ ಪ್ರಬಲವಾದ ವಾದ. ಆಡಳಿತದ ಸಾರಸತ್ವವನ್ನು ಬಾಬರ್ ಗ್ರಹಿಸಿದ್ದನು. ನಾಗರಿಕ ಬದುಕಿನ ಹೃದಯ ಭಾಗದಲ್ಲಿ ಒಂದು ಒಡಂಬಡಿಕೆ ಇತ್ತು. ವಾಸ್ತವವೋ, ಕಲ್ಪಿತವೋ, ಸ್ಪಷ್ಟವಾಗಿ ಹೇಳಿದ್ದೋ. ಇಲ್ಲ ಅಡಗಿಸಿಟ್ಟದ್ದೋ ಎಂಬುದು ಅಷ್ಟು ಮುಖ್ಯವಲ್ಲ. ಅದರ ಆಕೃತಿಯೇ ಸರ್ವಸ್ವವೂ. ರಾಜ್ಯದಲ್ಲಿ ಅದರ ಒಂದು ಗ್ರಹಿಕೆಯೇ. ಎಲ್ಲ ಅಧಿಕಾರದ ಹಾಗೂ ಶಿಸ್ತಿನ ಮೂಲ. ಅದು ಅನಾಯಕತ್ವವನ್ನು ದೂರವಿಟ್ಟಿರುತ್ತಿತ್ತು. ಅದು ರಾಜಪ್ರಭುತ್ವದ ಅಥವಾ ಬೇರಾವುದೇ ಆಡಳಿತ ವ್ಯವಸ್ಥೆಯ ಗಾರೆಗಚ್ಚಿನ ಅಡಿಪಾಯದಂತೆ. ಕೆಲವರ ಆದೇಶಗಳನ್ನು ಹಲವರು ಪಾಲಿಸುತ್ತಾರೆ.

ನಿಮಗೆ ತಿಳಿದಿರುವಂತೆ ನಾವು ಸಿಸೋದಿಯರು, ಸರ್ವಶಕ್ತನಾದ ಶಿವನ ಪ್ರತಿನಿಧಿಗಳು. ನನ್ನ ಕುಟುಂಬಕ್ಕೆ ದತ್ತವಾಗಿರುವ ಅಧಿಕಾರ ಅದೇ. ಕಳ್ಳತನವನ್ನೋ ಕೊಲೆಯನ್ನೋ ಮಾಡಿದ ಆರೋಪಕ್ಕೆ ಗುರಿಯಾದ ವ್ಯಕ್ತಿಯನ್ನು ಬಂಧಿಸಲು ಮನೆಯ ಬಾಗಿಲಲ್ಲಿ ಕೊತ್ವಾಲನೋ, ತಳವಾರನೋ, ಸಾಮಾನ್ಯ ಪೊಲೀಸನೋ ಕಾಣಿಸಿಕೊಂಡಾಗ, ಜನರೇಕೆ ಕೋಳಕ್ಕೆ ತಮ್ಮ ಮಣಿಕಟ್ಟನ್ನು ಮುಂದೊಡ್ಡುತ್ತಾರೆ ಇಲ್ಲವೆ ತೆರಿಗೆಗಳನ್ನು ತೆರುತ್ತಾರೆ. ಕಾರಣ ತೆರಿಗೆ ವಸೂಲು ಮಾಡುವ ಮತ್ತು ಕಾನೂನಿನ ಅಧಿಕಾರ ಸ್ಥಾನಗಳು ಮತ್ತು ಎಲ್ಲ ಸರ್ಕಾರೀ ಸಾಧನೆಗಳು, ಅಧಿಕಾರದ ನಲಿಕೆಗಳು. ಆ ಅಧಿಕಾರವೆಂಬುದು ಒಡಂಬಡಿಕೆ ಅಥವಾ ಒಪ್ಪಂದ ಎಂದು ಏನು ಬೇಕಾದರೂ ಕರೆಯಿರಿ, ಅದರಿಂದ ಹರಿದು ಬರುತ್ತದೆ. ಬಾಬರನು, ತನ್ನ ಪೂರ್ವಜ ತೈಮೂರನ ಮೂಲಕ ದೆಹಲಿ ಸಿಂಹಾಸನದತ್ತ ತನ್ನ ನ್ಯಾಯ ಸಮ್ಮತವಾದ ಹಕ್ಕು ಬಾಧ್ಯತೆಯನ್ನು ಸ್ಥಾಪಿಸಲು ದೃಢ ನಿಶ್ಚಯ ಮಾಡಿದ್ದಾನೆ. ಆ ಒಂದು ಪ್ರತಿಷ್ಠಿತ ಅಧಿಕಾರದ ಕೊಂಡಿಯ ಕಾರಣದಿಂದಾಗಿಯೇ ಬಾಬರ್ ಹಾಗೆ ಮಾಡಹೊರಟಿವುದು. ಆ ಹಕ್ಕಿನ ಕಾನೂನುಮಾನ್ಯತೆಯೂ ತೀರಾ ಸಂದೇಹಾಸ್ಪದ ಹಾಗೂ ಹೆಚ್ಚೆಂದರೆ, ತೀರ ಎಳೆದು ತಂದದ್ದು ಎಂಬುದು ಅಷ್ಟು ಮುಖ್ಯವಾಗಿರಲಿಲ್ಲ. ಕುಂಟ, ತುರ್ಕ ತೈಮೂರನು ಈ ಭಾಗಗಳಲ್ಲಿ ರಾಜನಾಗಿದ್ದಕ್ಕಿಂತಲೂ ಹೆಚ್ಚಾಗಿ ಸುಂಟರಗಾಳಿಯಂಥ ಡಕಾಯಿತ ಹಾಗೂ ಧಾಳಿ ಮಾಡಿ ನಿಲ್ಲದೆ ಪರಾರಿಯಾಗುವ ಲೂಟಿ ಕೋರನಾಗಿದ್ದನು. 1399ರಲ್ಲಿ ದೆಹಲಿಯನ್ನು ಗುಡಿಸಿ ಹಾಕಿ ಬಿಟ್ಟಿದ್ದನು. ದೆಹಲಿಯ ಮೇಲೆ ತನ್ನ ಹಕ್ಕು ಸಾಧಿಸಲು ಬಾಬರನಿಗೆ ನೆವವೊಂದು ಬೇಕಿತ್ತು. ನೂರು ವರ್ಷಗಳ ಹಿಂದೆ, ದೆಹಲಿಗೆ ತೈಮೂರನು ನೀಡಿದ್ದ ಅವಸರದ ಭೇಟಿ ಸಾಕಷ್ಟು ಸಕಾರಣವಾಗಿತ್ತು.

ತೈಮೂರನೊಂದಿಗಿನ ದೂರದ ಸಂಬಂಧದ ಸರಳ ಸಾಧನದ ಮೂಲಕ ಮುಂದೊಂದು ದಿನ, ಹಿಂದೂಸ್ತಾನವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದ ಬಾಬರನು ಇಬ್ರಾಹಿಂ ಲೂದಿಯೊಂದಿಗೆ ಉದಾರವಾಗಿ ನಡೆದುಕೊಳ್ಳಲು ಬಯಸಿ ಅವನೊಂದಿಗೆ ಒಂದು ವ್ಯವಹಾರವನ್ನು ಕುದುರಿಸಿಕೊಳ್ಳಲು ಇಷ್ಟಪಟ್ಟನು. ದೆಹಲಿಯ ಸುಲ್ತಾನಿಯತ್‌ಗೆ ವಿನಿಮಯವಾಗಿ ಒಂದು ಡೇಗೆ ಹಕ್ಕಿ ಮತ್ತು ತೈಮೂರನು ಧಾಳಿ ಮಾಡಿದ್ದ ಎಲ್ಲ ಪ್ರಾಂತಗಳು. (ಕುಂಟ ಪೀಡಕನಿಗೆ ಹಾಗೆ ನೋಡಿದರೆ, ಅನೇಕ ಮಕ್ಕಳು, ಮೊಮ್ಮಕ್ಕಳು ಮತ್ತು ಬಹುದೊಡ್ಡ ಸಂಖ್ಯೆಯ ಮರಿ ಮಕ್ಕಳಿದ್ದರು. ಐದನೇ ತಲೆಮಾರಿನ ಸೋದರ ಬಂಧುಗಳಲ್ಲಿ ಈಗಿನ ಯಾವ ಸಂತಾನವು ದೆಹಲಿ ಸಿಂಹಾಸನಕ್ಕೆ ನ್ಯಾಯ ಬದ್ಧ ಉತ್ತರಾಧಿಕಾರಿ ಎಂದು ಯಾರು ಹೇಳಬಲ್ಲರು?) ಯಾವ ಲೆಕ್ಕಾಚಾರದಿಂದ ನೋಡಿದರೂ ಇದೊಂದು ತೀರ ನ್ಯಾಯಪರವೂ, ನಿಷ್ಕೃಷ್ಟವೂ ಆದ ವ್ಯಾಪಾರದ ವಿನಿಮಯವಾಗಿತ್ತೆಂದು ನೀವು ಒಪ್ಪುತ್ತೀರಲ್ಲವೆ?

ಕಾಬೂಲ್ ದೊರೆಯ ಧೈರ್ಯ, ಉದ್ಧಟತನ, ರಾಕೀಯ ತೀಕ್ಷ್ಣತೆ ಮತ್ತು ಕುಯುಕ್ತಿಯ ಬಗ್ಗೆ ನಾನು ವಿಸ್ಮಯ ಪಡುತ್ತ ನನ್ನಷ್ಟಕ್ಕೆ ನಾನೇ ಒಳಗೊಳಗೇ ನಗುತ್ತಿದ್ದೆ. ಆ ಸಮಯಕ್ಕೆ ಭದ್ರತಾ ಪಡೆಯ ಮುಖ್ಯಸ್ಥನು ಒಳಕ್ಕೆ ಬಂದನು.

"ನನ್ನನ್ನು ದಯಮಾಡಿ ಕ್ಷಮಿಸಿ ಮಹಾಪ್ರಭು, ಆದರೆ..." ಈ ಪೀಠಿಕೆಯನ್ನೆಲ್ಲ ನಿಲ್ಲಿಸೆಂದು ಹೇಳಲು ನಾನು ಕೈಯನ್ನು ಮೇಲೆತ್ತಿದೆ. ನನಗೇನೂ ತೊಂದರೆಪಡಿಸಕೂಡದೆಂದು ಆದೇಶಿಸಿದ್ದರೆ, ತೊಂದರೆಪಡಿಸುವಷ್ಟು ಉದ್ಧಟತನವನ್ನು ಅವನು ತೋರಿಸುತ್ತಲೇ ಇದ್ದ. ಅದಕ್ಕೆ ಅವನಿಗೆ ಸರಿಯಾದ ಕಾರಣವೂ ಇದ್ದಿರಬೇಕು. "ತಮ್ಮನ್ನು ನೋಡಲು ಒಬ್ಬ ಮಹಿಳೆ ಬಂದಿದ್ದಾಳೆ" ಎಂದನು.

ನಾನು ಮುಗುಳ್ನಕ್ಕೆ, ರಣರಂಗಕ್ಕೆ ಸಮೀಪದ ಶಿಬಿರಕ್ಕೆ ಭೇಟಿ ನೀಡುವ ಹೆಣ್ಣು ಅಂದರೆ ಅದು ಒಂದೇ. "ನನ್ನ ಬಗೆಗಿನ ನಿನ್ನ ಕಾಳಜಿ ನನ್ನ ಮನತಟ್ಟಿದೆ. ಆದರೆ ನನಗೆ ಹೆಣ್ಣಿನ ಸಂಗ ಬೇಕೆನಿಸಿದಾಗ, ನಿನಗೆ ಹೇಳ್ತೇನೆ".

"ಮಹಾಸ್ವಾಮಿ, ಆಕೆ ತಮ್ಮ ಸಂಬಂಧಿಕಳು ಎಂದು ಹೇಳುತ್ತಾಳೆ. ಅದೂ ತೀರ ಹತ್ತಿರದ ಸಂಬಂಧಿ.

ನನ್ನ ಮನಸ್ಸಿನಲ್ಲಿ ಮೂರು ಊಹೆಗಳು ಸುಳಿದವು ಎಂದು ನನಗೆ ನಾನೇ ಅಂದುಕೊಳ್ಳಲು ಸಮಯವಿರಲಿಲ್ಲ. ಮೊದಲನೆಯದು ರಾಣಿ ಕರ್ಮವತಿ ಎಂದು, ಎರಡನೆಯದು ರಾಜಕುಮಾರಿ, ಮೂರನೆಯದು ಅಯ್ಯೋ! ಆಕೆಯೇ ನನ್ನ ಮುಂದೆ ನಿಂತಿದ್ದಳು.

ನನಗೆ ಭ್ರಾಂತಿ ಕವಿದಿತ್ತೆಂದು ನನಗೆ ಗೊತ್ತಿತ್ತು. ಹತ್ತಿರ ಹತ್ತಿರ ನಾಲ್ಕು ವರ್ಷಗಳ ಕಾಲ ನಾನು ಒಂದು ಆಲೋಚನೆಯನ್ನು ಅದುಮಿಟ್ಟುಕೊಂಡಿದ್ದೆ. ಮನುಷ್ಯ ಜಾತಿ ಮಾಡಬಹುದಾದ ಅತ್ಯಂತ ಹೇಡಿ ಕೃತ್ಯವೆಂದು ನಾನು ಪರಿಗಣಿಸಿದ ಕೃತ್ಯವನ್ನು ಮಾಡಿದ್ದೆ. ಅದೆಂದರೆ ನನ್ನ ಪ್ರೇಮಿನಿಯನ್ನು ತಿರಸ್ಕರಿಸಿದ್ದು. ನಾನವಳನ್ನು ಕೊಂದಿದ್ದರೆ, ಅದೊಂದು ಕರುಣೆ ತೋರಿದಂತಾಗುತ್ತಿತ್ತು. ಅದರ ಬದಲಿಗೆ ಅವಳನ್ನು ಜೀವದಿಂದಿರಲು ಬಿಟ್ಟು ಅವಳ ಚೇತನವನ್ನು ಕೊಂದು ಬಿಟ್ಟಿದ್ದೆ.

ಅವಳು ನನ್ನ ಪಾದಗಳನ್ನು ಸ್ಪರ್ಶಿಸಿದಳು. "ನನ್ನನ್ನು ಆಶೀರ್ವದಿಸಿ ನನ್ನ ಸ್ವಾಮಿ" ಎಂದಳು.

ನಾನು ಅವಳನ್ನು ಮೇಲೆತ್ತಿದೆ "ಧರಮ್ ಪುರದಲ್ಲಿ ನೀನೇನು ಮಾಡುತ್ತಿದ್ದೀ ಲೀಲಾವತಿ?"

ಓಹ್ ಎಲ್ಲ ರಾಜಕುಮಾರಿಯ ತದ್ವಿರುದ್ಧ. ನನ್ನ ಅಪರಿಮಿತವಾದ ಸಣ್ಣ ಮಾತಿನ ಕಣಜದಿಂದ ನಾನು ಮಾತನ್ನು ಸಿಂಪಡಿಸಕೂಡದೆಂದೇನಾದರೂ ನಿಷೇಧಿಸಲಾಗಿದೆಯೆ?

"ತೀರ ತ್ವರಿತವಾದ ಒಂದು ಸಾಲದ ವಿಷಯದಲ್ಲಿ ಚರ್ಚಿಸುವ ಸಲುವಾಗಿ ನಮ್ಮ ಮನೆಯಿಂದ 'ಮಂಡು'ಗೆ ಬರಬೇಕೆಂದು ಮಹಮದ್ ಖಾಲ್ಜಿಯು ನನ್ನ ಗಂಡನಿಗೆ ಹೇಳಿದ್ದನು. ನಾನು ಅವರ ಜೊತೆ ಬಂದು, ಒಂದು ಸಣ್ಣ ಬಳಸು ದಾರಿಯಿಂದ ನಿಮ್ಮನ್ನು ಭೇಟಿಯಾಗೋಣವೆಂದು ಯೋಚಿಸಿದೆ".

"ನಿನ್ನ ಗಂಡ ಎಲ್ಲಿಗೆ ಹೋದರೂ ಅವರ ಜೊತೆ ನೀನು ಹೋಗುವಿಯೇನು?"

"ಅವರೊಬ್ಬ ಲೇವಾದೇವಿಗಾರ" ಎಂದು ಮುಗುಳ್ನಕ್ಕಳು. "ನಾನೊಬ್ಬ ರಾಜನೀತಿಜ್ಞಳ ಮೆದುಳುಳ್ಳ ಲೇವಾದೇವಿಗಾರಳು. ಪ್ರಮುಖ ಮತ್ತು ಸಂಕೀರ್ಣ ವಿಷಯಗಳಲ್ಲಿ ನನ್ನೊಂದಿಗೆ ಸಮಾಲೋಚಿಸುವುದರಿಂದ ಅವರಿಗೆ ಲಾಭವಿದೆ ಎಂದು ಕಂಡುಕೊಂಡಿದ್ದಾರೆ"

"ಹಾಗಾದರೆ ಅವರಿಗೇನು ಸಲಹೆ ನೀಡಿದೆ?"

"ನಿಮ್ಮ ವಿಶೇಷ ಸಾಮರ್ಥ್ಯವೆಂದರೆ, ಮಿಂಚಿನ ಧಾಳಿ ಮಾಡುವುದು ಎಂದು ಸುಲ್ತಾನನು ನಂಬಿದ್ದಾನೆ. ಅದು ಗಾಯಗೊಳಿಸಿ ನಿತ್ರಾಣಗೊಳಿಸುತ್ತದೆ. ಆದರೆ ನಾಶ ಮಾಡುವುದಿಲ್ಲ ಹಾಗೂ ದೀರ್ಘಾವಧಿಯಲ್ಲಿ ಮಾತ್ರ ಪರಿಣಾಮಕಾರಿಯಾಗುತ್ತದೆ. ಈ ಸಲ ಅವನು ನಿಮಗೆ ತಾಳಿಕೆಯ ಶಕ್ತಿ ಇಲ್ಲದ್ದನ್ನು ಅವಲಂಬಿಸಿದ್ದಾನೆ. ಹಾಗಾಗಿ ಏತಕ್ಕಾದರೂ ನೀವು ಐವತ್ತು ಸಾವಿರ ಯೋಧರ ಸೈನ್ಯ ತರುವಿರಿ?"

"ಬೆಟ್ಟ ಗುಡ್ಡಗಳಿಂದ ಕೂಡಿದ ಹಾಗೂ ಆಳ ಕಮರಿಗಳುಳ್ಳ ನೆಲದ ಮೇಲೆ ನಿಮ್ಮೊಂದಿಗೆ ಅವನು ಯುದ್ಧ ಮಾಡುವುದಿಲ್ಲ. ಮಟ್ಟಸಭೂಮಿಯ ಮೇಲೆ, ಇದಾರ್‌ನ ಬಳಿ ಮೊದಲ ಮುಖಾಮುಖಿಯಲ್ಲಿ ಮಲಿಕ್ ಅಯಾಜ್ ಮಾಡಿದಂತೆ, ನಿಮ್ಮನ್ನು ಅವನು ಸೋಲಿಸಬಲ್ಲನೆಂದು ಅವನಿಗೆ ಮನವರಿಕೆ ಮಾಡಿಕೊಡಲಾಗಿದೆ. ಅದೊಂದು ಸುಲ್ತಾನನ ಚಾಲಾಕುತನದ ಆಲೋಚನೆ. ಸಮಸ್ಯೆ ನೀವೇ ಹೊರತು ಸುಲ್ತಾನರಲ್ಲ ಎಂದು ನಾನು ನನ್ನ ಗಂಡನಿಗೆ ಹೇಳಿದೆ. ರಾಜ್ಯದ ಹಣಕಾಸು ಮತ್ತು ಮಾನವಶಕ್ತಿಯ ವಿಷಯಕ್ಕೆ ಬಂದಾಗ, ದೇಶದಲ್ಲಿ ನೀವು ಅತ್ಯಂತ ಜಿಪುಣ ರಾಜಮನೆತನದವರು. ಅಷ್ಟೊಂದು ಅಲ್ಪ ಸಮಯದಲ್ಲಿ ಅಷ್ಟೊಂದು ದೊಡ್ಡ ಸೈನ್ಯವನ್ನು ಕಲೆ ಹಾಕಿ. ಕರೆದೊಯ್ಯಲು ನಿಮಗೆ ಸಾಧ್ಯವಾಯಿತೆಂಬುದನ್ನು ನಂಬುವುದೇ ನನಗೆ ಕಷ್ಟವಾಗಿದೆ. ಒಂದು ವೇಳೆ ನಿಮಗೆ ಸಾಧ್ಯವೇ ಆಗಿದ್ದರೂ, ಸುಲ್ತಾನನ ವಿರುದ್ಧ ನೀವು ಅಷ್ಟೊಂದು ಹಣ ಮತ್ತು ಸಮಯವನ್ನು ವ್ಯಯಿಸಲು ಬದ್ಧರಾಗಿರುತ್ತೀರಿ ಎಂಬುದು ನನಗೆ ನಂಬಲಸಾಧ್ಯ. ಒಂದು ವೇಳೆ ನಿಮ್ಮ ಮಡಿಲಿಗೆ ಬಂದು ಬೀಳುತ್ತದೆ ಎನ್ನುವುದಾದರೆ, ಮಾಳ್ವವನ್ನು ವಶಪಡಿಸಿಕೊಳ್ಳುವುದು ಒಳ್ಳೆಯದೇ. ಆದರೆ ನೀವು ಕಣ್ಣಿಟ್ಟಿರುವುದು 'ದೆಹಲಿಯ' 'ಸೂರೆ'ಯ ಮೇಲೆ'.

"ಈ ಸೈನಿಕ ಕಾರ್ಯಾಚರಣೆಯಲ್ಲಿ ನನ್ನ ಸಂಚು ಏನಿರಬಹುದೆಂದು ನೀನು ಅಂದುಕೊಂಡಿದ್ದೀ?"

"ನನಗೆ ಅದರ ಕಲ್ಪನೆ ಇಲ್ಲ ಮಹಾಸ್ವಾಮಿ. ಹೀಗೇ ಮಾಡಬೇಕು ಎನ್ನುವಂಥ ಖಚಿತವಾದದ್ಯಾವೂದೂ ನಿಮ್ಮ ಮನಸ್ಸಿನಲ್ಲಾದರೂ ಇದೆ ಎಂದು ನನಗೆ ಖಾತರಿ ಇಲ್ಲ."

ನಾನು ಯಾವ ಒಂದು ಭಾವವನ್ನೂ ತೋರಿಸದ ಮುಖ ಮುದ್ರೆಯಿಂದ ಕುಳಿತಿದ್ದೆ ಅಥವಾ ಹಾಗೆ ಕುಳಿತಿದ್ದೆನೆಂದು ಭಾವಿಸಿದ್ದೆ. ಆದರೆ ನನಗೆ ನನ್ನನ್ನು ಬೆತ್ತಲೆಗೊಳಿಸಲಾಗುತ್ತಿದೆ ಎಂಬ ಭಾವವುಂಟಾಯಿತು. ಕೇವಲ ಶರೀರವಷ್ಟೇ ಅಲ್ಲ; ನನ್ನ ಮನಸ್ಸಿನ ತೀರ ರಹಸ್ಯ ಸ್ಥಾನಗಳನ್ನು ಕೂಡ ಬಟಾ ಬಯಲು ಮಾಡಲಾಗುತ್ತಿದೆ ಎಂದು ಅನ್ನಿಸಿತು.

"ಒಂದು ವಿಷಯವಂತೂ ನನಗೆ ಖಚಿತವಾಗಿ ಗೊತ್ತು. ನೀವು ಯಾವುದೇ ಒಂದು ಗೊತ್ತಾದ ಸೈನಿಕ ಸಿದ್ಧಾಂತಕ್ಕೆ ಪೂರ್ಣ ನಿಷ್ಠರಾಗಿಲ್ಲ. ನಿಮ್ಮನ್ನು ಅಷ್ಟೊಂದು ಅಪಾಯಕಾರಿಯನ್ನಾಗಿ ಮಾಡಿರುವುದು ಹಾಗೂ ನಿಮ್ಮ ಬಗ್ಗೆ ಏನನ್ನೂ ಮುಂಚೆಯೇ ಹೇಳಲು ಸಾಧ್ಯವಾಗದಂತೆ ಮಾಡಿರುವುದು ಅದೇ."

"ಹಾಗಿದ್ದರೆ, ನಿನ್ನ ಯಜಮಾನರು, ಸುಲ್ತಾನರ ಮೇಲೆ ತನ್ನ ಹಣವನ್ನು ಪಣವಾಗಿ ಒಡ್ಡಬೇಕೋ ಬೇಡವೋ?"

"ಮಹಾಸ್ವಾಮಿ ನಾವು ರಜಪೂತರಲ್ಲ" ಎಂದು ಹೇಳಿ ಅತ್ಯಂತ ಸಹಜವೂ, ದ್ವೇಷರಹಿತವೂ ಆದ ನಗೆಯನ್ನು ನಕ್ಕಳು. "ನಮಗೆ ಅದೇ ಸರ್ವಸ್ವವೂ ಅಲ್ಲ, ಅಥವಾ ಅದು ಏನೂ ಅಲ್ಲ. ನಾವು ಯಾವಾಗಲೂ ನಮ್ಮ ಪಣವನ್ನು ರಕ್ಷಿಸಿಕೊಳ್ಳುತ್ತೇವೆ ಹಾಗೂ ಸದಾ ನಮ್ಮ ಅಪಾಯದ ಸಾಧ್ಯತೆಗಳನ್ನು ಕಾಪಾಡಿಕೊಳ್ಳುತ್ತೇವೆ. ನಿಮಗೇ ತಿಳಿದಿರುವಂತೆ, ಸುಲ್ತಾನರು ಹಣವಿಲ್ಲದೆ ತೀರ ಬರಿಗೈಯಾಗಿದ್ದಾರೆ. ಅಲ್ಲದೆ ಈಗಾಗಲೇ ಸಾಲದಲ್ಲಿ ಮುಳುಗಿದ್ದಾರೆ"" ಎಂದು ಅವಳು ತುಂಟತನದ ನಗೆ ಬೀರಿದಳು. "ಮಂಗಳ ಹಾಗೂ ಅವನ ಕಡೆಯವರು, ಹಣದ ಮೊತ್ತವನ್ನು ನಿಖರವಾಗಿ ನಿಮಗೆ ತಿಳಿಸಿದ್ದಾರೆ. ಈಗ ಶತಾಂಶದ ಸಲ್ಪಂಶವನ್ನು ಬಲವಂತದಿಂದ ವಸೂಲು ಮಾಡಿಕೊಳ್ಳಲು ಸರಿಯಾದ ಸಮಯ. ಆದರೆ ಅದೆಲ್ಲ ಅಸಂಬದ್ಧವಾದ್ದು. ಅತ್ಯಂತ ಪ್ರಸ್ತುತವಾದ ಒಂದೇ ಒಂದು ಪ್ರಶ್ನೆ ಎಂದರೆ, ಸುಲ್ತಾನರನ್ನು ಸೋಲಿಸುವಷ್ಟರಿಂದಲೇ ಮೇವಾಡಕ್ಕೆ ತೃಪ್ತಿಯಾಗುತ್ತದೋ, ಅಥವಾ ಈ ಸಲ ಅದು ಇಡೀ ಮಾಳ್ವವನ್ನೇ ಕಸಿದುಕೊಳ್ಳುತ್ತದೋ? ಕಾರಣ, ಒಂದು ವೇಳೆ ಎರಡನೆಯದೇ ನಿಜವಾದರೆ, ನಾವು ಹಿಂದಿನ ಸಾಲದ ಹಣ, ಅಷ್ಟೇ ಅಲ್ಲ, ಈಗ ನಾವು ನೀಡಬೇಕೆಂದು ಉದ್ದೇಶಿಸಿರುವ ಸಾಲದ ಹಣ ಎಲ್ಲವನ್ನೂ ಕಳೆದುಕೊಂಡು ಬಿಡುತ್ತೇವೆ. ಈ ಸಮಸ್ಯೆಯ ತಿರುಳನ್ನು ಹೀಗೆ ರೂಪಿಸುತ್ತೇನೆ. ಮೇವಾಡದ ಸೈನಿಕ ಕಾರ್ಯಾಚರಣೆಯ ಉದ್ದೇಶವೇನು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಅದನ್ನು ರೂಪಿಸಿದವರು ಯಾರು? ಮಹಾಪ್ರಭು ರಾಣಾ ಅಥವಾ ನೀವು?" ಅವಳು ನನ್ನ ಮೇಲಿನಿಂದ ತನ್ನ ಕಣ್ಣುಗಳನ್ನು ಕದಲಿಸಲಿಲ್ಲ. "ನಾನು ನನ್ನ ಹಣವನ್ನು ಮಹಾಪ್ರಭುಗಳ ಮೇಲೆ ಪಣವೊಡ್ಡಿದ್ದೇನೆ. ಹಾಗೆಂದೇ ನಾನು ನನ್ನ ಪತಿಗೆ, ಗುಜರಾತ್, ವಿಜಯನಗರ ಮತ್ತು ಪೂರ್ವಭಾಗದ, ಸಾಲ ನೀಡುವ ಬಂಡವಾಳಗಾರರನ್ನೆಲ್ಲ ಒಟ್ಟುಗೂಡಿಸಿ ಅವರ ಒಂದು ಸಂಘವನ್ನು ಸ್ಥಾಪಿಸಿ ಸುಲ್ತಾನರಿಗೆ ಹಣ ಸಾಲ ಕೊಡಲು ಹೇಳಿಬಿಟ್ಟಿದ್ದೇನೆ. ಆ ರೀತಿಯಲ್ಲಿ ನಾವು ಅನಗತ್ಯ ಅಪಾಯಗಳನ್ನು ಮೈಮೇಲೆ ಎಳೆದುಕೊಳ್ಳಬೇಕಾಗಿ ಬರುವುದಿಲ್ಲ. ಅಲ್ಲದೆ ಸಂಸ್ಥೆ ನೀಡಿದ ಸಾಲದ ಮೇಲಿನ ದಳ್ಳಾಳಿ ಹಣವನ್ನು ವಸೂಲು ಮಾಡಿಕೊಳ್ಳುತ್ತೇವೆ. ಈಗ ನನ್ನ ಯಜಮಾನರ ಮನೆಯವರ ಸಾಲ ನೀತಿ ಕುರಿತಂತೆ ನಿಮ್ಮ ತೀರ್ಮಾನಗಳೇನು ಎನ್ನುವುದು ಖಚಿತವಾಯಿತೆ?"

ನನಗೆ ಈಗಾಗಲೇ ತಿಳಿದಿಲ್ಲದೆ ಇರುವುದಕ್ಕಿಂತ ಅಥವಾ ಇನ್ನೊಂದೆರಡು ದಿನಗಳಲ್ಲಿ ಕಂಡುಕೊಳ್ಳಬಹುದಾದುದಕ್ಕಿಂತ ಬೇರೇನನ್ನೂ ಅವಳು ತಿಳಿಸಿರಲಿಲ್ಲ. ಅವಳು ಮೇವಾಡದಲ್ಲಿ ಅತ್ಯಂತ ಚುರುಕಾದ ಮೆದುಳು ಹೊಂದಿದವರಲ್ಲೊಬ್ಬಳೆಂಬುದನ್ನು ನಾನು ಮರೆತಿರಲಿಲ್ಲ. ಆದರೆ ಸಮಸ್ಯೆಯೊಂದನ್ನು ಅನೇಕ ಖಂಡಗಳನ್ನಾಗಿ ವಿಭಾಗಿಸಿ, ಅವುಗಳಲ್ಲಿ ಪ್ರತಿಯೊಂದರಲ್ಲೂ ತೊಡಗಿಸಿಕೊಂಡು ಎಲ್ಲಕ್ಕೂ ಒಟ್ಟಾಗಿಯೇ ಪರಿಹಾರ ಹುಡುಕುವ ಮೂಲಕ ಅವೆಲ್ಲವನ್ನೂ ಪೂರ್ಣವಾಗಿ ತೊಡೆದುಹಾಕುವುದನ್ನು ನೋಡುವುದಿದೆಯಲ್ಲ ಅದು. ಗಾಢವೂ, ಜಟಿಲವೂ ಆದ ಚದುರಂಗದಾಟದಲ್ಲಿ ಪರಿಣತನಾದವನೊಬ್ಬನು ಕಾಯಿಗಳನ್ನು ನಡೆಸುವುದನ್ನು ನೋಡುವಂತಿತ್ತು.

ನಾನು ನಿಧಾನವಾಗಿ ತಲೆ ಅಲುಗಾಡಿಸುತ್ತ. "ಒಂದು ವೇಳೆ ನಿಮ್ಮ ತಾತ, ನಿನ್ನನ್ನು ಸುಲ್ತಾನರ ಊರಿನವರಿಗೆ ಕೊಡುವ ಬದಲು ಮೇವಾಡ, ಚಿತ್ತೂರಿನ ಯಾರಿಗಾದರೂ ಮದುವೆ ಮಾಡಿಕೊಟ್ಟಿದ್ದಿದ್ದರೆ, ಆಗ ಯಾವುದನ್ನೂ ಅದೃಷ್ಟಕ್ಕೆ ಬಿಡದಿರುವ ನಿನ್ನ ತೀಕ್ಷ್ಣವೂ, ಚುರುಕೂ ಆದ ಮೆದುಳಿನಿಂದ ಮೇವಾಡಕ್ಕೆ ಅಪಾರವಾದ ಪ್ರಯೋಜನ ಆಗುತ್ತಾ ಇತ್ತು".

"ನನ್ನನ್ನು ಮೇವಾಡಕ್ಕೆ ಮದುವೆ ಮಾಡಿಕೊಡಲಾಗಿದೆ ಮಹಾರಾಜ್‌ಕುವಾರ್. ಅದು ನಿಮಗೆ ನೆನಪಿಲ್ಲದೆ ಇರಬಹುದು. ಆದರೆ ಅದನ್ನು ನಾನೆಂದಿಗೂ ಮರೆಯುವ ಹಾಗೆಯೇ ಇಲ್ಲ". ಅವಳು ಅದನ್ನು ನನ್ನೊಳಕ್ಕೆ ಇಳಿಯ ಬಿಟ್ಟಳು. "ಈಗ ಕಟ್ಟ ಕಡೆಯ ಬಾರಿಗೆ ನಾನು ಹಿಂತಿರುಗಿ ಬಂದಿದ್ದೀನಿ".

"ಖಂಡಿತ ಇದು ತಮಾಷೆ ಮಾಡುವ ಸಮಯವಲ್ಲ ಲೀಲಾವತಿ"

"ನಾನು ಬಹಳ ಗಂಭೀರವಾಗಿ ಹೇಳ್ತಿದ್ದೀನಿ ಮಹಾಸ್ವಾಮಿ". ಸಾವಧಾನವಾಗಿ, ಆದರೆ, ಕಣ್ಣಿಗೆ ಕಾಣದೆ ಅಡಗಿರುವ ಹಾದಿಗಳು ಮತ್ತು ನೋಟಗಳನ್ನು ತೆರೆಯುವ ಸಲುವಾಗಿ, ಮೀಟು ಗೋಲನ್ನು ಒತ್ತುವಷ್ಟು ಹಾಳತವಾದ ನಡೆಯಿಂದ, ಅವಳು ತನ್ನೆಲ್ಲ ಉಡುಪನ್ನು ಕಳಚಿ ನಗ್ನಳಾಗಿ ನಿಂತಳು. "ನನ್ನನ್ನು ಒಪ್ಪಿಸಿಕೊಳ್ಳಿ ಸ್ವಾಮಿ" ಎಂದಳು.

ಅವಳು ತನ್ನ ನಿರ್ವಾಣ ಸ್ಥಿತಿಯಲ್ಲಿ ಅವರ ತಾತ ಆದಿನಾಥಜೀಯವರ ಮನೆಯಂಗಳದಲ್ಲಿ ನಿಂತಿರುವ ಆಳೆತ್ತರಕ್ಕಿಂತಲೂ ಬೃಹತ್ತಾದ, ಮಹಾವೀರಸ್ವಾಮಿಯ ಅಲೌಕಿಕವಾದ ಪ್ರಶಾಂತ ಮೂರ್ತಿಗಿಂತಲೂ, ಪ್ರಶಾಂತಳೂ ನಿರುದ್ವಿಗ್ನಳೂ ಆಗಿದ್ದಳು. ನಾನು ನನ್ನ ಕಣ್ಣುಗಳನ್ನು ಮುಚ್ಚಿಕೊಂಡೆ. ಅವಳು ಕಣ್ಣುಗಳೊಳಗೆ ನಿಂತಳು.

ಲಕ್ಷ್ಮಣ ಸಿಂಹಜೀಯರ ಪುಸ್ತಕ ಭಂಡಾರದಲ್ಲಿ ಅಮೂಲ್ಯವಾದ ಸಚಿತ್ರ ವಾತ್ಸ್ಯಾಯನನ ಕಾಮಸೂತ್ರ ಪುಸ್ತಕವಿದೆ. ಅದರಲ್ಲೊಂದು ಹೆಣ್ಣಿನ ಮುಖದ ಚಿತ್ರವಿದೆ. ತಲೆಯನ್ನು ಹಿಂದಕ್ಕೆ ಒಗೆಯಲಾಗಿದೆ. ನಿರೀಕ್ಷೆಯ ಸಂತಸದಲ್ಲಿ ಅವಳ ಕಣ್ಣುಗಳು ಮುಚ್ಚಿವೆ. ಅವಳ ತುಟಿಗಳು ಆರ್ದ್ರಗೊಂಡು ನಸುವೇ ತೆರೆದಿವೆ. ಅವಳ ನಿರೀಕ್ಷೆಯ ಹಂಬಲದ ಕೊನೆಗೆ ಪುರುಷನೊಬ್ಬನ ತೋರು ಬೆರಳಿದೆ, ಬಹುಶಃ ಅದು ಹೆಣ್ಣಿನದು. ತುಟಿಗಳು ಆ ಬೆರಳುಗಳನ್ನು ಬಂಧಿಸುತ್ತವೆ. ನಾಲಿಗೆ ಅದನ್ನು ಎಂಜಲಿಸುತ್ತ ಅಲುಗಾಡುತ್ತ ಅದರ ಸುತ್ತ ಸುಳಿದಾಡುತ್ತದೆ. ತುಟಿಗಳು ಮೃದುವಾಗಿ ತುದಿಯನ್ನು ಹೀರಿಕೊಂಡು, ಒಳಕ್ಕೆಳೆದುಕೊಂಡು ನಂತರ ಬಿಡುತ್ತವೆ.

ಆದರೂ, ಆದರೂ ವಾತ್ಸ್ಯಾಯನ ಮತ್ತು ಅವನ ಕಲಾವಿದ ಲೀಲಾವತಿಯ ಕಾಲ್ಬೆರಳುಗಳನ್ನು ನೋಡಿಲ್ಲ.

ಇಂಥದ್ದು ಇಲ್ಲದೆ ಹೋದರೆ, ಇರಲಿಕ್ಕೆ ಸಾಧ್ಯವಿಲ್ಲ ಅನ್ನುವಂಥದ್ದು ಯಾವುದೂ ಇಲ್ಲ. ತಾನೇ ಗೈರುಹಾಜರಾಗುವ ತನಕ ಎಲ್ಲ ಅಗತ್ಯಗಳೂ ವರ್ಜಿಸಬಹುದಾದವು. ಒಂದು ವೇಳೆ ನೀನು ನಿನ್ನ ಎದೆಯಲ್ಲಿ ಮುಂಭಾಗದಿಂದ ಹಿಂಭಾಗದ ತನಕ ವ್ಯಾಪಿಸಿರುವ ಅಜ್ಞಾತವೂ ತುರ್ತೂ ಆದ ಹಂಬಲವೊಂದು ಅವಿತಿದೆ ಎಂದು ಕಂಡುಕೊಂಡರೆ ನಿನ್ನ ಉಳಿದ ಬದುಕು, ಸಾಮ್ರಾಜ್ಯದ ಕೆಲಸಗಳು, ಪ್ರಣಯ, ಚಿತ್ತೂರಿನ ನೆಲದೊಳಗಿನ ಸುರಂಗಗಳು, ದಿನಚರಿಗಳನ್ನು ಮತ್ತು ಸೈನಿಕ ಕೈ ಪಿಡಿಗಳನ್ನು ಬರೆಯುವುದು, ಯುದ್ಧಗಳು, ಯುದ್ಧ ಸಮಿತಿಗಳು, ಇವುಗಳಿಂದ ಗಿಡಿದು ತುಂಬಿದರೂ, ಮುಚ್ಚಲಾಗದ ರಂಧ್ರ ಎಂದು ಕಂಡುಕೊಂಡಾಗ ಏನಾಗುತ್ತದೆ? ರಂಧ್ರ ಹಾಗೆಯೇ ಉಳಿಯುತ್ತದೆ. ನೀನೆಲ್ಲಿ ಹೋದರೂ ಅದನ್ನು ನೀನು ಕೊಂಡೊಯ್ಯುವಿ. ಹೆಚ್ಚಿನ ನೋವೇನಲ್ಲ, ಕೇವಲ ಒಂದು ಖಾಲಿತನ ಹಾಗೂ ನೀನು ನಿನಗೆ ಮತ್ತು ಲೀಲಾವತಿಗೆ ಇಬ್ಬರಿಗೂ ವಂಚಿಸಿದ್ದೀಯೆ ಎಂಬ ನೋವನ್ನು.

ಅದು ರಾಜಕೀಯವೆಂದಾಗಿದ್ದರೆ, ನನಗೆ ಗಂಭೀರವಾದ ಮುಖದಿಂದ ಸುಳ್ಳು ಹೇಳಲು ಯಾವ ಸಮಸ್ಯೆಯೂ ಆಗುವುದಿಲ್ಲ. ಆದರೆ ನನಗೆ ನಾನೇ ಸುಳ್ಳು ಹೇಳಿಕೊಳ್ಳುವ ಅಭ್ಯಾಸವಿಲ್ಲ, ಕೊನೇ ಪಕ್ಷ ಪ್ರಜ್ಞಾ ಪೂರ್ವಕವಾಗಿ. ಇಷ್ಟಾದರೂ, ಈ ನಡುವಿನ ವರ್ಷಗಳಲ್ಲೆಲ್ಲ, ಲೀಲಾವತಿಯನ್ನು ಕುರಿತಾದ ಯೋಚನೆಯನ್ನು ಅಳಿಸಿ ಹಾಕಿ ಬಿಡಬೇಕೆಂದು ಹೆಣಗಿದಾಗಲೆಲ್ಲ ಅವಳು ನನಗೇನಾಗಬೇಕು, ನಮ್ಮ ನೆಲೆಗಳು ಮತ್ತು ಪಾತ್ರಗಳು, ಬದುಕಿನಲ್ಲಿ ಅನುಮತಿಸುವ ನಮ್ಮ ಸಂಬಂಧ ಯಾವ ರೀತಿಯದು ಎಂದು ನನ್ನನ್ನು ಕೇಳಿಕೊಂಡಿದ್ದೇನೆ. ಕೆಲವು ಪ್ರಶ್ನೆಗಳು ನಾನು ಉತ್ತರಿಸಬಹುದಾದಂಥವು. ಇನ್ನು ಕೆಲವು ನಾನು ಏನೂ ಮಾಡಲಾರದಂಥವು. ಆದರೆ ಸಂದಿಗ್ಧವಾದ ಸಂಗತಿ ಹೊಣೆಗಾರಿಕೆ ಮತ್ತು ಕಟುವಾಸ್ತವವೂ ನ್ಯಾಯವೂ ಆದ; ತಿದ್ದಲಾಗದ ದಾಖಲೆ ಎನಿಸಿದ ವಸ್ತು ಸತ್ಯ– ಇವುಗಳ ನಡುವಿನ ಗಡಿಗಳನ್ನು ಸರಿಯಾಗಿ ವ್ಯವಸ್ಥೆಗೊಳಿಸಲು ನನಗೆ ಸಾಧ್ಯವಾಗದಿರುವಂಥ ಕೆಲವು ಕ್ಷೇತ್ರಗಳೂ ಇವೆ.

ಲೀಲಾವತಿ ಚಿಕ್ಕವಳಾಗಿದ್ದಾಗ ನಾನು ಅವಳನ್ನು ಪ್ರೀತಿಸಿದೆ. ಅವಳು ತನ್ನ ವಯಸ್ಸಿಗೆ ಮೊದಲೇ ಪ್ರೌಢಳು, ಅತ್ಯಂತ ಸುಂದರಳು, ಹಾಗೂ ತುಂಬ ಲವಲವಿಕೆಯ ಹುಡುಗಿ. ನನ್ನನ್ನು ಕಂಡರೆ ಅವಳಿಗೆ ತುಂಬ ಇಷ್ಟ. (ಅದು ಯಾವತ್ತೂ ನೆರವಾಗುವಂಥದು) ಅವಳ ವಿಷಯದಲ್ಲಿ ನನಗೆ ಗಾಢವಾದ ಒಲವಿದ್ದಾಗ್ಯೂ ಬಹುಶಃ ನಾನು ವಯಸ್ಕನ ವಾಡಿಕೆಯಂತೆ ಅವಳ ವಿಷಯಕ್ಕೆ ಅನುಗ್ರಹ ತೋರುತ್ತಿದ್ದೆನು. ಅವಳು ನನ್ನನ್ನು ತೀವ್ರವಾಗಿ ಹಚ್ಚಿಕೊಂಡಿದ್ದಳೆಂಬುದರ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ಆದರೆ ನಾನದನ್ನು ದೊಡ್ಡವರು ಗಂಭೀರವಾಗಿ ಪರಿಗಣಿಸದ ಹದಿಹರೆಯದ ಪ್ರಣಯವೆಂದು ತಿಳಿದೆ. ನನ್ನ ತಮ್ಮ ವಿಕ್ರಮಾದಿತ್ಯನು ನನ್ನನ್ನು ತಲುಪುವವರೆಗೂ ಲೀಲಾವತಿಯ ಹೆಸರು ಮತ್ತು ಭವಿಷ್ಯವನ್ನು ನಾಶಮಾಡಲು ಹಿಂಜರಿಯಲಿಲ್ಲ. ನನ್ನ ಮತ್ತು ಲೀಲಾವತಿಯ ನಡುವಿನ ಸಂಬಂಧಕ್ಕೆ ಅದು ಶಾಶ್ವತವಾದ ಕೊನೆ ತಂದಿತು. ವಿಕ್ರಮಾದಿತ್ಯನು ಒಂದು ವೇಳೆ, ನಡುವೆ ತಲೆ ಹಾಕದಿದ್ದರೂ ಅದರಿಂದ ನನ್ನ ಮತ್ತು ಲೀಲಾವತಿಯ ನಡುವಿನ ಸಂಬಂಧ ಬೇರೆ ಇನ್ನೇನಾದರೂ ಆಗಲು ಸಾಧ್ಯವಿತ್ತೆ? ಅವಳ ಅದೃಷ್ಟಕ್ಕೆ ನಾನು ಎಷ್ಟರ ಮಟ್ಟಿಗೆ ಹೊಣೆ? ನಾವು ರಜಪೂತರು, ಹಾಗೂ ಅವಳು ಜೈನ ಕುಟುಂಬಕ್ಕೆ ಸೇರಿದವಳು, ಹಾಗೂ ಅವಳ ಮುತ್ತಾತ ಕೇವಲ. ಹಣಕಾಸು ಸಚಿವರಷ್ಟೇ ಅಲ್ಲ, ನಮ್ಮ ಸಾಮ್ರಾಜ್ಯದ ಅತ್ಯಂತ ದೊಡ್ಡ ಲೇವಾದೇವಿಗಾರ ಎಂಬ ವಾಸ್ತವಾಂಶಗಳ ಸಂದರ್ಭದಲ್ಲಿ ಅವಳು ಬೆಳೆದು ದೊಡ್ಡವಳಾದ ಮೇಲೆ, ನಾವು ಔಪಚಾರಿಕವಾದ ಹಾಗೂ ದೂರದ ಸ್ನೇಹಿತರ ಹೊರತಾಗಿ ಬೇರೆ ರೀತಿಯಲ್ಲಿ ಮುಂದುವರಿಯಲು ಸಾಧ್ಯವಿತ್ತೆ? ಮೇವಾಡದ ನಮ್ಮ ಸಮಾಜ, ಮುಚ್ಚಿದ ಸಮಾಜವಲ್ಲ ದಬ್ಬಾಳಿಕೆಯ ಸಮಾಜವಲ್ಲ, ಪರಸ್ಪರ ಮದುವೆಯಾಗದ ಸ್ತ್ರೀ ಪುರುಷರು, ಸಾಮಾಜಿಕ ಸನ್ನಿವೇಶಗಳಲ್ಲಿ ಹೊರತು ಪರಸ್ಪರ ಸಂಧಿಸುವುದಿಲ್ಲ.

"ಅಂದ ಹಾಗೆ ನಿಮ್ಮ ಯಜಮಾನರು ಹೇಗೆ?"

ನಮ್ಮ ವಂಶದ ಪೂರ್ವಜ ಸೂರ್ಯದೇವ ಎಲ್ಲಿದ್ದ? ಅವನು ತನ್ನ ಉರಿಯುವ ನೆಟ್ಟ ನೋಟವನ್ನು ನನ್ನತ್ತ ಏಕೆ ತಿರುಗಿಸಬಾರದು? ಅಲ್ಲದೆ ಲೀಲಾವತಿಗೆ ಆಜ್ಞೆಮಾಡುವ ಬದಲು, ದಡ್ಡರನ್ನು ಉಗ್ಗುವ ಹಾಗೆ ಮಾಡುವ ವ್ಯಕ್ತಿಯಿಂದ ಅವಳನ್ನೇಕೆ ದೂರ ಮಾಡಬಾರದು?

"“ನಾನು ಕನ್ಯೆ ಮಹಾರಾಜ್‌ಕುಮಾರ್”.

ನನ್ನ ಮುಖ ಕಿಂಚಿತ್ ಮಾನವೀಯತೆಯ ಕುರುಹನ್ನು ತೋರಿಸಿರಲೇಬೇಕು. ಬಹುಶಃ ಆಶ್ಚರ್ಯವನ್ನು ಕೂಡ.

"ಅವರದ್ದೇನೂ ತಪ್ಪಿಲ್ಲಸ್ವಾಮಿ. ಅವರು ಪೂರ್ಣ ಪುರುಷರು. ದುರದೃಷ್ಟದ ಸಂಗತಿಯೆಂದರೆ ಅವರು ಜೈನ ಧರ್ಮದ ಸಿದ್ಧಾಂತಗಳಲ್ಲಿ ಅಚಲವಾದ ನಿಷ್ಠೆ ಉಳ್ಳವರು. ನಮ್ಮ ಮದುವೆಯ ಪ್ರಾರಂಭದ ವರ್ಷಗಳಲ್ಲಿ, ಅವರು ಬಲವಂತವಾಗಿ ನನ್ನ ಮೇಲೆ ತಮ್ಮ ಆಸಕ್ತಿ ಹರಿಸಿದಾಗ, ಅವರು ನನ್ನನ್ನೇನಾದರೂ. ಸ್ಪರ್ಶಿಸಿದ್ದೇ ಆದರೆ, ಅವರು ದಿನವೂ ತಮ್ಮ ಕೈಗಳಿಂದಲೇ ಕಾಳುಗಳನ್ನು ಉಣಿಸುವ ಅವರ ಅತ್ಯಂತ ಪ್ರೀತಿ ಪಾತ್ರವಾದ ಮೈನಾ ಹಕ್ಕಿಯನ್ನು ಕೊಂದು ಬಿಡುವೆನೆಂದೂ, ಅದರ ರಕ್ತ ಅವರ ತಲೆಯ ಮೇಲಿರುವುದೆಂದೂ ಹೇಳುತ್ತಿದ್ದೆ. ಅವರಿಗೆ ನನ್ನ ಅಮಲೇರಿದೆ ಮಹಾರಾಜ್‌ಕುಮಾರ್, ಆದರೆ ಅವರೊಬ್ಬ ನಿಷ್ಠಾವಂತ ಜೈನ ಹಾಗೂ ನನ್ನ ಮೇಲಿನ ಪ್ರೀತಿಗಾಗಿಯೂ ಅವರು ರಕ್ತ ಚೆಲ್ಲುವವರಲ್ಲ."

"ನಿನ್ನ ಗಂಡನಲ್ಲಿಗೆ ಹೋಗು ಲೀಲಾವತಿ" ನಾನು ಸಾಕು ಸಾಲದಂತೆ ಪಿಸುಗುಟ್ಟಿದೆ.

"ಅವರನ್ನು ಸಂತೋಷಪಡಿಸು".

"ನಾನು ನಿಮ್ಮವಳು. ಬೇರಾರವಳೂ ಅಲ್ಲ".

"ನಿಜಕ್ಕೂ ನಿನ್ನ ಮಾತು ನನ್ನ ಹೃದಯವನ್ನು ತಟ್ಟಿದೆ ಲೀಲಾವತಿ, ಇನ್ನಾರೂ ನನಗೆ ಇದಕ್ಕಿಂತ ಹೆಚ್ಚಿನ ಶ್ಲಾಘನೆಯನ್ನು ನೀಡಿಲ್ಲ." ನಾನು ನನ್ನ ಮಾತುಗಳನ್ನು ಎಚ್ಚರಿಕೆಯಿಂದ ಆಯ್ಕೆಮಾಡಿ ಆಡುತ್ತಿದ್ದೆ. ಉದ್ದೇಶ, ಅವು ಹಿತಕರವಾದ ಅನಾಮಕತ್ವದ ಸರಿಯಾದ ತಿರುವನ್ನು ಪಡೆದುಕೊಳ್ಳಲಿ ಎನ್ನುವುದು. ವಂಚನೆಯ ಮರಳು ಹಾಗೂ ಅತಿಬುದ್ಧಿವಂತಿಕೆಯ ಮಾತು. ನನ್ನ ಬಾಯಿ ಕಟ್ಟಿದ್ದುವು. ನಾನೆಷ್ಟೇ ಪ್ರಯತ್ನಿಸಿದರೂ ಅದರಿಂದ ಮುಕ್ತನಾಗಲು ಸಾಧ್ಯವಾಗಲಿಲ್ಲ. "ನಿನ್ನ ಕ್ರೌರ್ಯ ಮತ್ತು ತಿರಸ್ಕಾರ ಒಬ್ಬ ಮನುಷ್ಯನನ್ನು ಕೊಲ್ಲಬಹುದು ಲೀಲಾವತಿ. ನೀನು ನಿನ್ನ ಮೂರ್ಖತನವನ್ನು ನಿಲ್ಲಿಸಲೇಬೇಕು".

"ನಿಮಗೊಬ್ಬ ಉತ್ತರಾಧಿಕಾರಿಯ ಆವಶ್ಯಕತೆ ಇದೆ ಮಹಾಸ್ವಾಮಿ. ಕಿರಿಯ ಸಂತಳು ಅಂಥ ಉತ್ತರಾಧಿಕಾರಿಯನ್ನು ಕೊಡದಿರುವಷ್ಟು ಸ್ವಾರ್ಥಿ. ನಾವು ಹೆಣ್ಣು, ಗಂಡು ಮಕ್ಕಳನ್ನು ಪಡೆಯೋಣ. ನಾನು ನಿಮಗೊಬ್ಬ ಉತ್ತಮ ಹೆಂಡತಿಯೂ ಸಂಗಾತಿಯೂ ಆಗಬಲ್ಲೆ". ಅವಳು ನನ್ನ ಕೈಗಳನ್ನು ಹಿಡಿದುಕೊಂಡು ಮುಷ್ಟಿಯನ್ನು ಬಿಗಿಗೊಳಿಸಿದಳು. "ನಾನು ನಿಮ್ಮ ಮೊದಲ ಮದುವೆಯ ಯಾತನಾಮಯ ವರ್ಷಗಳನ್ನೆಲ್ಲ ತೊಡೆದು ಹಾಕಿ ಬಿಡುತ್ತೇನೆ. ನಾನು ನಿಮ್ಮನ್ನು ಸಂತೃಪ್ತಗೊಳಿಸುವೆ."

ನಾನು ಅವಳನ್ನು ಸಂದೇಹಿಸಲೇ ಇಲ್ಲ. ಆದರೆ ನಾನು ನನ್ನ ಮೊಂಡು ಮೌನವನ್ನು ಮುರಿಯಲಿಲ್ಲ.

"ನೀವು ನನ್ನ ಗಂಡನಿಗೆ ಶಾಪ ಹಾಕುತ್ತಿಲ್ಲ. ಅದು ರಾಜಕುಮಾರಿಯ ಸಲುವಾಗಿಯೆ? ಅವಳು ಬೇರೆ ಯಾರನ್ನೋ ಪ್ರೀತಿಸುತ್ತಿದ್ದಾಳೆ ಎಂದು ನಿಮಗಿನ್ನೂ ಗೊತ್ತಿಲ್ಲವೆ? ಅಷ್ಟೇ ಅಲ್ಲ ಅವಳು ಯಾವಾಗಲೂ ಬೇರೆ ಯಾರನ್ನೋ ಪ್ರೀತಿಸುತ್ತಿದ್ದಳೆಂದು ನಿಮಗೆ ತಿಳಿದಿಲ್ಲವೆ?"

ನೀನು ಸರಿಯಾಗಿಯೇ ಮಾಡುತ್ತಿದ್ದೀಯಾ ನನ್ನ ಗೆಳೆಯ. ಕಲ್ಲಾಗಿರುವುದನ್ನು ನಟಿಸುವುದನ್ನು ನೀನು ಇನ್ನು ಮುಂದೆ ಕನ್ನಡಿಯ ಮುಂದೆ ಅಭ್ಯಾಸ ಮಾಡಬೇಕಾದ್ದಿಲ್ಲ ನೀನಾಗಲೇ ಕಲ್ಲಾಗಿದ್ದೀಯೆ.

"ಹಾಗಾದರೆ ಏಕೆ ಮಹಾರಾಜ್‌ಕುಮಾರ್? ಏಕೆ?"

ಅಧ್ಯಾಯ 35

ತೇಜ್, ಷಫ್ಲಿ ಮತ್ತು ಹೇಮ್ ಅವರುಗಳಿಂದ ಬಂದ ಸುದ್ದಿ ಉತ್ತೇಜನಕಾರಿಯಾಗಿತ್ತು. ಅವರು ಎಲ್ಲೆಡೆಯೂ ಇದ್ದರು. ಆದರೆ ಎಲ್ಲಿಯೂ ಇರಲಿಲ್ಲ. ಮಂಡು ಎಷ್ಟರಮಟ್ಟಿಗೆ ಮಾಳ್ವದ ಭಾಗವಾಗಿತ್ತೋ ಹಾಗೆಯೇ ಪೂರ್ವ ಮತ್ತು ಉತ್ತರ ಭಾಗಗಳೂ ಸುಲ್ತಾನ್ ಮಹಮ್ಮದರ ಆಡಳಿತಕ್ಕೊಳಪಟ್ಟ ಪ್ರದೇಶಗಳಾಗಿದ್ದುವು. ಆದರೆ ಈ ಭಾಗಗಳಲ್ಲಿ ಕಂಡ ಹಾಗೆಯೇ ಸುಲ್ತಾನರಿಗೆ ಅತ್ಯಂತ ಪ್ರತಿಕೂಲ ಪರಿಸ್ಥಿತಿ ಇತ್ತು. ಮೇದಿನಿರಾಯ್ ಹಾಗೂ ಇನ್ನಿತರೆ ರಾಯ್‌ಗಳು ಸ್ಥಳೀಯವಾಗಿದ್ದು ಜನರ ಹೃದಯಕ್ಕೆ ಹತ್ತಿರವಾಗಿದ್ದರು. ಹುಡುಗರ ವ್ಯವಸ್ಥಿತವಾದ ಕಿರುಕುಳದ ಆಂದೋಲನ ನಿಧಾನವಾಗಿ ಶತ್ರುವಿನ ಮೇಲೆ ನಿರಂತರ. ಒತ್ತಡ ಹಾಕಿ ಮಣಿಸ ತೊಡಗಿತ್ತೆಂಬುದನ್ನು ಅಲ್ಲಗಳೆಯುವಂತೆಯೇ ಇಲ್ಲ. ಮಾರುಕಟ್ಟೆಯಿಂದ ಆಹಾರ ಪದಾರ್ಥಗಳೆಲ್ಲ ಬಹುಬೇಗನೆ ಮಾಯವಾಗತೊಡಗಿದ್ದುವು. ಮಾಳ್ವದ ಸೇನಾ ಪಡೆಗಳು, ಧಾನ್ಯ ವ್ಯಾಪಾರಿಗಳು ಮತ್ತು ಗ್ರಾಮಸ್ಥರಿಂದ ಬಲವಂತವಾಗಿ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು ಅಥವಾ ಉಪ್ಪನ್ನು ವಸೂಲು ಮಾಡತೊಡಗಿದಾಗ, ತೇಜ್ ಅಥವಾ ಹೇಮ್ ಅವರ ಕಡೆಯಿಂದ ಬಂದ ಪ್ರತೀಕಾರದ ಕ್ರಮಗಳು ಶೀಘ್ರವೂ, ತೀವ್ರವೂ ಆಗಿದ್ದುವು. ಕೆಲವೊಮ್ಮೆ ಸೈನಿಕರು ತಮ್ಮ ಶಿಬಿರಕ್ಕೆ ಹಿಂತಿರುಗುತ್ತಿದ್ದಾಗಲೂ ಅವರ ಮೇಲೆ ಹರಿಹಾಯಲಾಗುತ್ತಿತ್ತು.

ಒಟ್ಟಾರೆ ಹೇಳುವುದಾದರೆ, ನಾನು ತುಂಬ ಸಂತುಷ್ಟ ವ್ಯಕ್ತಿಯಲ್ಲದಿದ್ದರೂ ತೃಪ್ತ ಮನುಷ್ಯನಂತೂ ಆಗಿರಬೇಕಾಗಿತ್ತು. ಅದರ ಬದಲಿಗೆ ನನಗೆ ಹೆಚ್ಚು ಹೆಚ್ಚು ಆತಂಕವಾಗತೊಡಗಿತ್ತು. ನಮ್ಮ ವಿರುದ್ಧವಾಗಿ ಹಣಕಾಸಿನ ಹಾಗೂ ಸೇನಾ ನೆರವು ಕೇಳಿ, ಮುಹಮದ್ ಖಾಲ್ಜಿಯು ದೆಹಲಿಯ ಸುಲ್ತಾನನಿಗೆ ಒಂದು ತ್ವರಿತ ಪತ್ರವನ್ನು ಕಳಿಸಿದ್ದನು. ದೆಹಲಿಯ ಇಬ್ರಾಹಿಂಲೂದಿಗೆ ನಾನು ಹೆದರಲು ಕಾರಣವಿಲ್ಲವೆಂದು ನನಗೆ ಗೊತ್ತಿತ್ತು. ಪ್ರತಿಕ್ರಿಯಿಸಲು ಅವರಿಗೆ ಸಮಯವಿದ್ದಲ್ಲಿ, ಅದೇನಿದ್ದರೂ ಬೇಡುವುದಕ್ಕೆ ಮಾತ್ರ ಅಷ್ಟೆ. ನನ್ನ ಇಷ್ಟೆಲ್ಲಾ ದುಗುಡ ಆತಂಕ, ಅಧೈರ್ಯ, ಅಸಹಾಯಕತೆಗಳ ಮೂಲ ಯಾವುದು? ಇಷ್ಟು ಹೊತ್ತಿಗೆ ಬಾಬರ್ ಭಾರತದೊಳಕ್ಕೆ ಎಷ್ಟು ದೂರ ಬಂದಿರಬಹುದು? ದೆಹಲಿಯ ಸುಲ್ತಾನನು ಅವನನ್ನು ಧೈರ್ಯವಾಗಿ ಎದುರಿಸಬಲ್ಲನೆ? ನಾನಿಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆನಿಸಿ, ಚಿತ್ತೂರಿಗೆ ವಾಪಸಾಗುವ ಅವಸರದಲ್ಲಿದ್ದೆ. ನಿರ್ಣಾಯಕವಾದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗದಂಥ ಹಾಗೂ ನಮ್ಮ ಸೇನಾ ಬಲಕ್ಕಿಂತ ಮೂರು ಪಟ್ಟು ದೊಡ್ಡ ಸಂಖ್ಯೆಯ ಸೇನೆಯನ್ನು ಹೊಂದಿರುವ ಶತ್ರುವಿನೊಂದಿಗೆ ಸೆಣಸಲಾರದಂಥ ಕೆಟ್ಟ ಮನಸ್ಥಿತಿ.

ಆಗ ಮಂಗಳನ ಬಲಗೈ ಬಂಟ ಶಿರಾಜ್ ಆಲಿ ಸುಲ್ತಾನ್ ಮುಜಫರ್ ಷಾ ಕಡೆಯಿಂದ ಬಂದ ಒಂದು ಪತ್ರವನ್ನು ತಡೆದನು. ಹತ್ತು ಸಾವಿರ ಸೈನಿಕ ಸಾಮರ್ಥ್ಯದ ಗುಜರಾತಿ ಸೇನೆಯೊಂದು ಧರಮ್ ಪುರದ ಕಡೆ ತೀವ್ರ ವೇಗದಲ್ಲಿ ಸಾಗುತ್ತಿತ್ತು. ಅದು ನಿಜಕ್ಕೂ ನಾನು ಮೊಗಲರನ್ನೂ ಮರೆತು ಬಿಡುವಂತೆ ಮಾಡಿತು. ನಾವು ಮಾಳ್ವ ಮತ್ತು ಗುಜರಾತಿ ಸೇನೆಗಳ ನಡುವೆ ಸಿಕ್ಕಿಕೊಂಡ ಸೊಗಸಾದ ಲಕ್ಷ್ಯವಾಗಿ ಬಿಡುವೆವು. ಈಗ ಹೋರಾಡಲೊಂದು ಸಮಯ ಹಾಗೂ ಪಲಾಯನ ಮಾಡಲೊಂದು, ಸಮಯವಿದೆ. ನಮ್ಮ ಬಳಿ ಇದ್ದ ಗಂಟು ಮೂಟೆಯಲ್ಲಿ ಎಷ್ಟು ಸಾಧ್ಯವಾಗುತ್ತೋ ಅಷ್ಟನ್ನು ಒಟ್ಟುಗೂಡಿಸಿಕೊಂಡು ನೇರವಾಗಿ ಮೇವಾಡ ಅಥವಾ ಬಹುಶಃ ಚಿತ್ತೂರಿಗೇ ಪಲಾಯನ ಮಾಡಿಬಿಡುವುದೊಂದೇ ನಮಗಿದ್ದ ಭರವಸೆ.

ನಾನು ರಾಯ್ ಅರಮನೆಗೆ ಹೋದೆ. ಅಂಥ ಹಿರಿಯ ನಾಯಕರೊಂದಿಗೆ ಅದೇ ಮೊದಲು ಅತ್ಯಂತ ಕಡಿಮೆ ಕಾಲಾವಧಿಯ ಅಂದರೆ ಕೇವಲ ಐದು ನಿಮಿಷಗಳ ಕಾಲ ಭೇಟಿ ಮಾಡಿ, ಮಾತುಕತೆಯಾಡಿ ಹೊರಬಂದೆ. ಅಲ್ಲಿ ಸ್ಥಾಪಿಸಿದ್ದ ಎಲ್ಲ ಶಿಬಿರಗಳನ್ನೂ ಸಾಯಂಕಾಲ ನಾಲ್ಕುಗಂಟೆಗಯೊಳಗೆ ತೆಗೆಸಿಬಿಡಲು ಆದೇಶಿಸಿದೆ. ಷಫಿ, ತೇಜ್ ಮತ್ತು ಹೇಮ್ ಅವರುಗಳ ಬಳಿಗೆ ಹರಿಕಾರನೊಬ್ಬನನ್ನು ಅಟ್ಟಿ ಬಾಕಿ ಎಲ್ಲ ಔಪಚಾರಿಕತೆಗಳನ್ನು ಬದಿಗೊತ್ತಿ, ಅಲ್ಲಿಂದ ಹೊರಟು ಬಿಡುವಂತೆ ಸುದ್ದಿ ಕಳುಹಿಸಿದೆ.

ನಾನು ಮತ್ತು ಮೇದಿನೀ ರಾಯ್ ಅಷ್ಟೊಂದು ಅನುಚಿತವಾದ ಅವಸರದಲ್ಲಿ ನಮ್ಮ ಸೇನಾಪಡೆಗಳನ್ನು ಮುನ್ನಡೆಸಿಕೊಂಡು ಧರಮ್ ಪುರದಿಂದ ಹೊರುಡವ ಮುನ್ನ ಗೈರು ಹಾಜರಾಗಿರುವ ಸುಲ್ತಾನರನ್ನು ಕಾಣುವ ಸಲುವಾಗಿ ನಾವು ಮಂಡೂಗೆ ಹೋಗುತ್ತಿದ್ದೇವೆಂಬ ಸಂದೇಶ ಎಲ್ಲ ಕಡೆ ಹಬ್ಬಿದ ಬಗ್ಗೆ ಖಚಿತಪಡಿಸಿಕೊಂಡೆವು.

ಸೇನೆಯೊಂದು ಶೋಧಕ ತಂಡದ ಹಾಗೆ ದೆವ್ವದಂತೆ ಅಥವಾ ವ್ಯಕ್ತಿಗಳ ಸಣ್ಣದೊಂದು ಗುಂಪಿನಂತೆ ಪಯಣಿಸಲು ಸಾಧ್ಯವಿಲ್ಲ. ಆದರೆ ನಾವು ಮಧ್ಯಮ ಮಾರ್ಗವನ್ನನುಸರಿಸಿದೆವು. ನಾವು ಮೂರು ರಾತ್ರಿಗಳು ಪಯಣಿಸಿದೆವು. ಗುಪ್ತ ಯೋಧರು (ಗೆರಿಲ್ಲಾ ಯೋಧರು) ಎರಡನೇ ರಾತ್ರಿ ನಮ್ಮನ್ನು ಬಂದು ಸೇರಿಕೊಂಡರು. ನಾಲ್ಕನೇ ದಿನ ರಾಯ್ ಮತ್ತು ನಾನು ಆ ಪ್ರದೇಶದಲ್ಲಿ ಬೇಹುಗಾರರಾಗಿ ಸುತ್ತಾಡಿ ಮಾಹಿತಿ ಸಂಗ್ರಹಿಸಿದೆವು. ಅನುಕೂಲಕರವಾದ ಗಾತ್ರದ ಪರ್ವತಗಳಿಂದ ಸುತ್ತುವರಿಯಲ್ಪಟ್ಟ ಸಮತಟ್ಟಾದ ಒಂದು ಪ್ರದೇಶವನ್ನು ಆ ಕಣಿವೆಯಲ್ಲಿ ಆಯ್ಕೆ ಮಾಡಿದೆವು. ಕುದುರೆಯ ಬೆನ್ನೇರಿ ಅರ್ಧಗಂಟೆಯಲ್ಲಿ ಏರಿಬಿಡಬಹುದಾದ ಪರ್ವತಗಳು ಅವು. ಮರುದಿನ ಬೆಳಿಗ್ಗೆ ಮೇದಿನಿರಾಯ್ ಅವರ ಅನಿಶ್ಚಿತ ಮಿತ್ರ ರಾಜರಲ್ಲೊಬ್ಬರಾಗಿದ್ದ ಸೂರಜ್‌ರಾಯ್ ಅವರು ಐದು ಸೇನಾಪಡೆಗಳೊಂದಿಗೆ ನಮ್ಮನ್ನು ಸೇರಿಕೊಳ್ಳಲಿದ್ದಾರೆಂದು ಸುದ್ದಿಯನ್ನು ಕೇಳಿದೆವು. ಈ ಸಂದರ್ಭದ ಹೊರತಾಗಿ ನಾನೆಂದಾದರೂ ಇದಕ್ಕಿಂತ ಹೆಚ್ಚು ಕಪಟಿಯಾಗಿದ್ದೆನೆ ಎಂದು ನನಗೇ ಅನುಮಾನವಿದೆ. ನಾನು ಅವರ ಬಳಿಗೆ ಧಾವಿಸಿ, ಅವರು ನನ್ನ ಗೆಳೆಯ ರಾಜಾಪೂರಜೀಕೀಕಾನೋ ಎಂಬಂತೆ ಓಡಿ ಹೋಗಿ ಅವರನ್ನು ಆಲಿಂಗಿಸಿಕೊಂಡು ಬಿಡುವಷ್ಟು ನನಗೆ ನೆಮ್ಮದಿಯ ಭಾವವುಂಟಾಯಿತು. ಅದಕ್ಕೆ ಬದಲಾಗಿ ಸಭ್ಯ ಮತ್ತು ಸೌಜನ್ಯದಿಂದ ನಡೆದುಕೊಂಡು ದೂರವೇ ಉಳಿದೆ. ತೆರೆದ ಬಾಹುಗಳಿಂದ ಅವರನ್ನು ಆಹ್ವಾನಿಸಿ ತನ್ನದೇ ಆದ ಸಮಯವನ್ನು ತೆಗೆದುಕೊಂಡದ್ದಕ್ಕೆ ಅವರಿಗೆ ಧನ್ಯವಾದ ಸಮರ್ಪಿಸ ಹೋಗಲಿಲ್ಲ.

ಸಂಜೆ ಶಿಬಿರಾಗ್ನಿಯ ಮುಂದೆ ಕುಳಿತಿದ್ದಾಗ, ಇಡೀ ದಿನ ಆ ಮನುಷ್ಯನ ಮನಸ್ಸಿನಲ್ಲಿ ತೂಗುಯ್ಯಾಲೆಯಾಡುತ್ತಿದ್ದ ಪ್ರಶ್ನೆಯನ್ನು ಕೇಳಿದನು.

"ಉಳಿದ ಸೇನಾಪಡೆಗಳೆಲ್ಲಿ?" ಅವನು ಪ್ರಶ್ನೆಯನ್ನು ಎಷ್ಟು ಸಾಧ್ಯವೋ ಅಷ್ಟು ಮಾಮೂಲಿ ಎನ್ನಿಸುವಂತೆ ಮಾಡಲು ಯತ್ನಿಸಿದನು.

ನಾನು ಮೌನವಾಗಿದ್ದೆ. ಮೇದಿನಿರಾಯ್ ಥಟ್ಟನೆ ನಮ್ಮ ಹಿಂದುಗಡೆಯಿದ್ದ ಪರ್ವತಗಳತ್ತ ನೋಡತೊಡಗಿದನು.

"ಅವು ಸರಿಯಾದ ಸಮಯಕ್ಕೆ ಬರುತ್ತವೆ."

ನಾವು ರಾತ್ರಿ ಊಟ ಮಾಡುತ್ತಿದ್ದ ಸಮಯದಲ್ಲಿ ರಾಯ್ ಹಾಗೂ ಮೇವಾಡದ ಮಹಾರಾಜ್‌ಕುಮಾರನೊಂದಿಗೆ ಸಿಲ್ಹಾದಿಯು ಔಪಚಾರಿಕ. ಭೇಟಿಗೆ ಅನುಮತಿ ಕೋರಿದನು.

"ಇದೊಂದು ಅಪರೂಪದ ಮನ್ನಣೆ ಮಹಾಸ್ವಾಮಿ. ನಾವಿಬ್ಬರೂ ಮಹಾಪ್ರಭು ರಾಣಾ ಅವರೊಂದಿಗೆ ಅಕ್ಕ ಪಕ್ಕದಲ್ಲಿ ನಿಂತು ಹೋರಾಡಿದ್ದೇವೆ. ಆದರೆ, ಅವರ ಪುತ್ರರು ಪ್ರತಿಹಂತದಲ್ಲೂ ಅಪ್ಪನಿಗೆ ಸರಿಸಾಟಿಯೆಂಬಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಕೇಳಿದ್ದೇವೆ." ಸಿಲ್ಹಾದಿಯ ದನಿ ಚೀಣಾದ ರೇಷ್ಮೆಯಂತೆ ಫಳಪಳ ಹೊಳೆಯುತ್ತಿತ್ತು. ಆದರೆ ಅದರಲ್ಲಿ ಪ್ರಾಮಾಣಿಕತೆಯಾಗಲಿ ಸನ್ನಡತೆಯಾಗಲಿ ಇರಲಿಲ್ಲ.

"ಹಾಗಿದ್ದ ಮೇಲೆ ನಮ್ಮ ಮೆಚ್ಚಿಗೆ ಪರಸ್ಪರವಾದದ್ದು. ಮಹಾಸ್ವಾಮಿಯವರು, ಅನೇಕ ವೇಳೆ ತಮ್ಮ ಬಗ್ಗೆ ಹೇಳಿದ್ದಾರೆ. ಆದರೆ ಇಷ್ಟು ತಿಂಗಳುಗಳ ನಂತರ ತಾವು ನಮ್ಮನ್ನು ಭೇಟಿಯಾಗುವ ಗೌರವ ತೋರಿದ್ದೀರಿ".

ನಾನು ಎಸೆದ ಸಣ್ಣ ಭರ್ಜಿ ತನ್ನ ಗುರಿಯನ್ನು ತಪ್ಪಲಿಲ್ಲ. ಆದರೆ ಸಿಲ್ಹಾದಿಯೇನೂ ಗೊಂದಲಕ್ಕೊಳಗಾಗಲಿಲ್ಲ. ನಾವು ಅವನಿಂದ ಉಪಕೃತರಾಗಿದ್ದೇವೆಂಬುದನ್ನು ಅವನು ನಮಗೆ ತಿಳಿಸುವನು.

"ಕೇವಲ ವೈಯಕ್ತಿಕ ಭೇಟಿ ಅಷ್ಟೇ ಅಲ್ಲ ಸ್ವಾಮಿ. ನಿಮಗೆ ನೆರವಾಗುವ ಸಲುವಾಗಿ ಏಳು ಸಾವಿರ ವೀರಯೋಧರ ಪಡೆಯು ನನ್ನ. ಹಿಂದೆಯೇ ಸಾಗಿ ಬರುತ್ತಿದೆ".

"ಹಾಗಿದ್ದ ಮೇಲೆ ನಮಗೆ ಇಮ್ಮಡಿ ಗೌರವವನ್ನು ತೋರಿದಂತಾಯಿತು. ಹಾಗೂ ನಿಮಗೆ ಇನ್ನೊಮ್ಮೆ ಸ್ವಾಗತ. ತಾವು ನಮ್ಮೊಂದಿಗೆ ಭೋಜನ ಕೂಟಕ್ಕೆ ದಯಮಾಡಿಸುವಿರಲ್ಲವೆ?"

ಆ ಮನುಷ್ಯ ತನ್ನ ಮುಂದೆ ತಟ್ಟೆಯಲ್ಲಿದ್ದ ಗೌಜುಗ ಹಕ್ಕಿಯ ಉಪ್ಪಿನಕಾಯಿಯೊಂದಿಗೆ ಮತ್ತು ಸಾಸಿವೆ ಎಣ್ಣೆಯಿಂದ ಮಾಡಿದ ಗೊಜ್ಜಿನೊಡನೆ ಆಟವಾಡುತ್ತಿದ್ದನು. ದೀಪದ ಬೆಳಕಿನಲ್ಲಿ ಅವನ ಮುಖದ ಮೇಲೆ ಸರೀಸೃಪದ ಹೊಳಪು ಕಾಣಿಸಿಕೊಂಡಿತು. ನನಗೊಂದು ವಿಚಿತ್ರ ಭಾವನೆ ಉಂಟಾಯಿತು. ಅದೆಂದರೆ ವಾತಾವರಣ ಬದಲಾಗದೆ ಇರುವವರೆಗೆ ಹಾಗೂ ಗ್ರಹಗತಿಗಳು ಅನುಕೂಲಕರವಾಗಿರುವವರೆಗೆ ಆತನೊಬ್ಬ ತನ್ನ ಪಾಡಿಗೆ ತಾನು ಹಾಯಾಗಿರುವ ಮಿತ್ರನಾಗಿರುವನೆಂಬುದು ನಿಜಕ್ಕೂ ಅದು ಕಾಣುವಷ್ಟು ಪ್ರತಿಕೂಲ ಟೀಕೆಯೇನಾಗಿರಲಿಲ್ಲ.

ಸಂಗತಿಗಳು ತೀರ ಅಪರೂಪವಾಗಿ ಒಂದು ಇಕ್ಕಟ್ಟಿಗೆ ಬರುತ್ತವೆಂಬುದು ಮತ್ತು ಸ್ನೇಹಿತರನ್ನು ಬಹುವೇಳೆ ಒರೆ ಹಚ್ಚಲಾಗುವುದಿಲ್ಲ ಎಂಬುದು ಮನುಕುಲಕ್ಕೆ ಸಂತೋಷದ ವಿಚಾರ.

ಆಗತಾನೆ ಶಿರಾಜ್ ಆಲಿಯು ನನ್ನೊಂದಿಗೆ ಒಂದು ಮಾತನಾಡುವುದಿದೆ ಎಂದನು.

ಆಗ ಅದೆಷ್ಟು ತಡವಾಗಿತ್ತೆಂದು ಅರ್ಥಮಾಡಿಕೊಳ್ಳದೆ ಇದ್ದುದಕ್ಕೆ ಸೂರಜ್‌ರಾಯ್ ಕ್ಷಮಿಸಬೇಕೆಂದು ಕೋರಿದನು. ಅಲ್ಲದೆ ಇಷ್ಟೊಂದು ದೀರ್ಘ ಹಗಲಿನ ನಂತರ ತಾನು ತುಂಬ ಬಳಲಿದ್ದೇನೆಂದು ಸಿಲ್ಹಾದಿಗೆ ಗೊತ್ತಾಯಿತು.

ಅವರಿಬ್ಬರೂ ಅತ್ತ ತೆರಳಿದ ಮೇಲೆ ನಾನು ಶಿರಾಜ್ ಆಲಿಯನ್ನು ಒಳಗೆ ಬರುವಂತೆ ಸೂಚಿಸಿದೆ.

"ಸುಲ್ತಾನ್ ಹಾಗೂ ಆತನ ಸೇನಾಪಡೆಗಳು ಮಧ್ಯಾಹ್ನ ಒಂದು ಗಂಟೆ ತಡವೆಂದರೆ ಎರಡು ಗಂಟೆಯ ಹೊತ್ತಿಗೆ ಇಲ್ಲಿರುತ್ತವೆ".

* * *

ಶಿರಾಜ್ ಆಲಿಯ ಸಮಯ ಮುಗಿದು ಅರ್ಧಗಂಟೆಯಾಗಿತ್ತು. ಸುಲ್ತಾನನು ಮೇವಾಡದ ಲೂಟಿಗಾರರಿಂದ ತನ್ನ ರಾಜಧಾನಿಯನ್ನು ರಕ್ಷಿಸುವ ಅವಸರದಲ್ಲಿದ್ದನು. ಆಕಾರಣದಿಂದಲೇ ತನ್ನ ರಾತ್ರಿಯ ಶಿಬಿರವನ್ನು ಬೆಳಗಿನ ಆರುಗಂಟೆಗೇ ಬಿಟ್ಟಿರಬೇಕು. ಅವರು ಸಾಕಷ್ಟು ದೂರ ಸಾಗಿ ಬಂದಿದ್ದರು. ಆನೆಗಳು, ಒಂಟೆಗಳು, ಕುದುರೆಯ ಸೈನ್ಯ ಹಾಗೂ ಪದಾತಿದಳ ಇವೆಲ್ಲಾ ಆರೇಳು ಗಂಟೆಗಳ ಕಾಲ ಶ್ರಮದಿಂದ ಸಾಗಿ ಬರುತ್ತಿದ್ದಾಗ ಮನಸ್ಸನ್ನು ಸೆರೆ ಹಿಡಿದು ನಿಲ್ಲಿಸುವ ಪರ್ವತಗಳ ಆವರಣಕ್ಕೆ ಕಾಲಿಟ್ಟವು. ಆಗ ಮೇಲ್ನೋಟಕ್ಕೆ ಸುಲ್ತಾನ್ ಮಹಮ್ಮದ್ ಖಾಲ್ಜಿಯನ್ನು ತನ್ನ ಜನಗಳಿಂದಲೇ ರಕ್ಷಿಸುವ ಸಲುವಾಗಿಯೇ ಮಾಳ್ವದಲ್ಲಿ ಶಾಶ್ವತವಾಗಿ ನಿಯುಕ್ತವಾಗಿದ್ದ ಹೆಚ್ಚು ದ್ವೇಷಕ್ಕೆ ಗುರಿಯಾದ ಐದು ಸಾವಿರ ಕುದುರೆಯ ಬಲದ ಗುಜರಾತಿ ತುಕಡಿಯು ಮೊದಲಿಗೆ ಮುನ್ನುಗ್ಗಿತು. ಅದರ ಬೆನ್ನಿಗೇ ಮಾಳ್ವದ ಉಳಿದ ಸೈನ್ಯ ಹಿಂಬಾಲಿಸಿತು. ನಾವು ಮಾಳ್ವದ ರಾಜಧಾನಿಯಾದ 'ಮಂಡು'ವನ್ನು ಸುತ್ತುವರಿಯಬೇಕಿತ್ತು. ಧರಮ್‌ಪುರದಿಂದ ಎಂಬತ್ತು ಮೈಲಿ ದೂರದ ಸ್ಥಳದಲ್ಲಿ ಯಾವ ದೆವ್ವದ ಹೆಸರಿನಲ್ಲಿ ನಾವು ಯುದ್ಧವಾಡುತ್ತ ಮಾಡುತ್ತಿರುವುದೇನು? ಮೇವಾಡದ ಐವತ್ತೋ ಅರವತ್ತೋ ಸೇನಾ ಪಡೆಗಳೆಲ್ಲಿ ಹೋದುವು? ಆ ಕಣಿವೆಯಲ್ಲಿ ಎಲ್ಲ ಒಟ್ಟು ಸೇರಿ ಹತ್ತು ಸಾವಿರ ಕೂಡ ಇರಲಿಲ್ಲ. ತನ್ನ ಸೈನ್ಯಕ್ಕೆ ಮುಂದುವರಿಯದೆ ನಿಲ್ಲಿ ಎಂದು ಸೂಚಿಸಲು ಸುಲ್ತಾನನು ತನ್ನ ಕೈ ಎತ್ತಿದನು. ಮುಂದಿನ ಒಂದು ಗಂಟೆಯಲ್ಲಿ ಅವರೆಲ್ಲ ಬಂದು ಒಂಟೆ, ಅಶ್ವ ಮತ್ತು ಪದಾತಿ ದಳಗಳ ಆಯಾಯಾ ಘಟಕಗಳಲ್ಲಿ ತಮಗೆ ತಾವೆ ಹೋಗಿ ಸೇರಿಕೊಳ್ಳ ತೊಡಗಿದರು. ಸುಲ್ತಾನನಿಗೂ ಆತನ ದಳಪತಿಗಳಿಗೂ ತಮ್ಮ ಸುತ್ತ ಮುತ್ತ ನೋಡಲು ಸಮಯವಿತ್ತು. ಅವರು ತಬ್ಬಿಬ್ಬುಗೊಂಡಿದ್ದರು. ಸಿಲ್ಹಾದಿಯ ಕಡೆಯವರು ಉತ್ತರ ದಿಕ್ಕಿನ ಪರ್ವತಗಳ ಮೇಲಿದ್ದರು, ಸೂರಜ್‌ರಾಯ್ ಕಡೆಯವರು ಪಶ್ಚಿಮ ದಿಕ್ಕಿನ ಪರ್ವತಗಳ ಮೇಲಿದ್ದರು. ಮೇದಿನೀ ರಾಯ್ ಕಡೆಯ ಏಳು ಸಾವಿರದಷ್ಟು ಯೋಧರು ದಕ್ಷಿಣದ ಪರ್ವತದ ಇಳಿಜಾರಿನ ಮೇಲೆ ಕಾವಲು ನಿಂತಿದ್ದರು. ಪರ್ವತಗಳ ಮೇಲೆ ಇದ್ದ ಸೇನಾ ಪಡೆಗಳ ಯೋಧರ ಸಂಖ್ಯೆ ನಿಖರವಾಗಿ ಎಷ್ಟು? ಮೂವತ್ತು ನಲವತ್ತು, ಅರುವತ್ತು ಅಥವ ಕೇವಲ ಹತ್ತು ಸಾವಿರ? ಕಣಿವೆಯಲ್ಲಿ ಅವರ ಸೋದರರೊಂದಿಗೆ ಇರುವುದು ಬಿಟ್ಟು ಅವರೆಲ್ಲ ಅಲ್ಲಿ ಏನು ಮಾಡುತ್ತಿದ್ದರು? ಮೇದಿನೀ ರಾಯ್ ಮತ್ತು ಮೇವಾಡದ ಮಹಾರಾಜ್‌ಕುಮಾರ್ ಇಬ್ಬರೂ ಸೇರಿ ತಮ್ಮ ಕೇವಲ ಏಳೋ ಎಂಟೋ ಸಾವಿರ ಸೈನಿಕರನ್ನು ಕೂಡಿಕೊಂಡು ಸುಲ್ತಾನನ ನಲವತ್ತೈದು ಸಾವಿರ ಯೋಧರೊಂದಿಗೆ ಸೆಣಸಬೇಕೆಂದಿದ್ದರೆ? ಅಲ್ಲೊಂದು ಉಪಾಯದ ವಂಚನೆ ಆಗಲೇಬೇಕು. ಸುಲ್ತಾನನು ನೆಲದ ಮೇಲೆ ಇಡೀ ಅಶ್ವ ಸೈನ್ಯವನ್ನೆಲ್ಲ ಹೆಚ್ಚೆಂದರೆ ಒಂದು, ಒಂದೂವರೆ ಗಂಟೆಯೊಳಗಾಗಿ ತುಂಡರಿಸಬಲ್ಲನು. ಒಂದು ವೇಳೆ ಹಾಗಾಯಿತು ಅಂದರೆ ಆಗ, ಪರ್ವತದ ಅಂಚುಗಳಲ್ಲಿರುವ ಸಹಸ್ರಾರು ಸಂಖ್ಯೆಯ ಯೋಧರು– ಅವರ ಸಂಖ್ಯೆ ಎಷ್ಟೆಂದು ಖಚಿತಪಡಿಸಿಕೊಳ್ಳಲಾರದಷ್ಟು– ಮಾಳ್ವದ ಪಡೆಗಳ ಮೇಲೆರಗಿ ಅವಕ್ಕೆ ಮೃತ್ಯುಪ್ರಾಯರಾಗಿ ಬಿಡಬಹುದು. ಅಥವಾ ಒಂದು ತಾತ್ಕಾಲಿಕ ಕ್ರಮವಾಗಿ ಈ ಸ್ಥಳಗಳನ್ನು ನಾವು ಬೇಟೆಯ 'ಮಿಕ'ದ ಹಾಗೆ

ಹಿಡಿದಿದ್ದೇವೆಯೊ? ನಾವು ಸುಲ್ತಾನನಿಗೆ ತಡಮಾಡಿದಷ್ಟೂ, ನಮ್ಮ ಸೈನ್ಯದ ಬಹುಭಾಗ ಮಂಡೂನತ್ತ ಧಾವಿಸಿ ಅದರ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಳ್ಳಲಿದೆಯೆ?

ಅದೊಂದು ವಿಲಕ್ಷಣ ಸ್ತಬ್ದ ದೃಶ್ಯ. ಪರಸ್ಪರ ವಿರುದ್ಧವಾಗಿ ನಿಂತಿರುವ ಇಬ್ಬರು ಶತ್ರುಗಳು. ಒಬ್ಬ ಹತ್ತಿರ ಹತ್ತಿರ ಏಳು ಗಂಟೆಗಳ ಕಾಲ ಕುದುರೆಯ ಬೆನ್ನೇರಿ ಪ್ರಯಾಣ ಮಾಡಿ ಬಂದು ಒದ್ದೋಡಿಸಲು ತಹತಹಿಸುತ್ತಿದ್ದಾನೆ. ಇನ್ನೊಬ್ಬ ಹೊಟ್ಟೆ ತುಂಬ ತೃಪ್ತಿಯಾಗುವಷ್ಟು ತಿಂದು ಲವಲವಿಕೆಯಿಂದಿದ್ದಾನೆ ಹಾಗೂ ತಾನು ಮೊದಲ ಚಲನೆ ಮಾಡಲು ಸಿದ್ಧವಿಲ್ಲದವನು. ಮಾಳ್ವದ ಸುಲ್ತಾನನು ನಿಶ್ಚೇಷ್ಟಗೊಂಡವನಂತೆ ಕಂಡನು. ಅವನನ್ನು ಯಾತನೆಯಿಂದ ಮುಕ್ತಗೊಳಿಸಲು ಇದು ಸುಸಮಯ ಎಂದೆನಿಸಿತು. ತೇಜನು ನಮ್ಮಿಂದ ಕಳಚಿಕೊಂಡು, ನನ್ನ ಹಾಗೂ ರಾಯ್‌ಗಿಂತ ಮುಂದೆ ಸುಲ್ತಾನನಿಗಿಂತ ಹತ್ತಿರ ಹತ್ತಿರ ಎಪ್ಪತ್ತು ಅಡಿ ದೂರದಲ್ಲಿ ಒಂದು ಸ್ಥಳದಲ್ಲಿ ನಿಂತುಕೊಂಡು ಕಿನ್‌ಕಾಪಿನ ವಸ್ತ್ರದಲ್ಲಿ ಕಟ್ಟಿದ್ದ ಸುರುಳಿಯೊಂದನ್ನು ಹೊರತೆಗೆದನು.

"ನಾನು ಹೇಳಿದ್ದು ಕೇಳಿಸುತ್ತಾ ಇದೆಯೆ ಮಹಾಪ್ರಭು?" ನಿಲುಗಡೆ. "ಕೇಳಿಸದೆ ಇದ್ದರೆ ನಿಮಗೆ ಇನ್ನೂ ಸ್ವಲ್ಪ ಹತ್ತಿರ ಬರುತ್ತೇನೆ" ಆತನ ಉತ್ತರಕ್ಕೆ ಅವನು ಕಾಯಲಿಲ್ಲ. ಅದರ ಬದಲಿಗೆ ಇನ್ನೊಂದು ಇಪ್ಪತ್ತು ಅಡಿಗಳಷ್ಟು ಆತನ ಹತ್ತಿರಕ್ಕೆ ನಡೆದನು. ಮೇದಿನಿ ರಾಯ್ ಮಹಾಸ್ವಾಮಿಯವರು, ಹಾಗೂ ಸೂರಜ್ ರಾಯ್ ಮಹಾಸ್ವಾಮಿಯವರು ತಮಗೆ ಮೇವಾಡದ ಮಹಾಪ್ರಭು ರಾಣಾ ಸಂಗ್ರಾಮ್ ಸಿಂಹರ ಶುಭ ಸಂದೇಶಗಳನ್ನು ಕಳಿಸಿದ್ದಾರೆ. ಮಹಾಪ್ರಭು ರಾಣಾ ಅವರು ತಮ್ಮ ಆಳ್ವಿಕೆ ಅಭ್ಯುದಯದಿಂದ ಕೂಡಿದ್ದು ಸುದೀರ್ಘವಾಗಿರಲೆಂದು ಹಾರೈಸುತ್ತಾರೆ. ಆ ಕಾರಣದಿಂದಾಗಿಯೇ ಅವರು ತಮ್ಮ ವಿಷಯಕ್ಕೆ ಕೇವಲ ಸದ್ಭಾವನೆಯನ್ನು ಹೊಂದಿದ್ದಾರೆಂದು ಒತ್ತಿ ಹೇಳಲಿಚ್ಛಿಸುತ್ತಾರೆ ಹಾಗೂ ತಮ್ಮೊಂದಿಗೆ ಸಂಘರ್ಷವನ್ನು ತಪ್ಪಿಸಲಿಚ್ಛಸುತ್ತಾರೆ. ಮೇವಾಡ ಹಾಗೂ ಮಾಳ್ವ ಎರಡೂ ದೇಶದ ಜನತೆ ಶಾಂತಿಯನ್ನು ಬಯಸುತ್ತಾರೆ ಹಾಗೂ ಮೇವಾಡ ಮತ್ತು ಅದರ ಮಿತ್ರದೇಶಗಳೊಂದಿಗೆ ಹೋರಾಡಲು ತಮ್ಮನ್ನು ಪ್ರಚೋದಿಸುತ್ತಿರುವುದು ಹಾಗೂ ಅವುಗಳೊಂದಿಗೆ ಯುದ್ಧವನ್ನು ತಮ್ಮ ಮೇಲೆ ಹೇರುತ್ತಿರುವುದು ವಿದೇಶೀ ಶಕ್ತಿ ಎಂಬುದು ಅವರ ನಂಬಿಕೆ. ತಮ್ಮ ಸೈನಿಕರನ್ನು ಕೇಳಿನೋಡಿ. ತಮ್ಮ ರೈತರು ಹಾಗೂ ಹಳ್ಳಿಯ ಜನರನ್ನು ವಿಚಾರಿಸಿ. ತಮ್ಮ ಪಟ್ಟಣದ ಜನರು ಹೇಳುವುದನ್ನು ಕಿವಿಗೊಟ್ಟು ಕೇಳಿ. ತಮ್ಮ ಸಾರ್ವಭೌಮ ಪ್ರದೇಶವನ್ನು ತಮ್ಮ ಹಿಡುವಳಿಗೆ ಸೇರಿದ ಪ್ರದೇಶವೆಂದು ಹಾಗೂ ಅಲ್ಲಿಯ ಪ್ರಜೆಗಳನ್ನು ದ್ವಿತೀಯ ದರ್ಜೆಯ ಪೌರರೆಂದು ತಿಳಿಯುವ ಗುಜರಾತಿ ಸೇನಾ ಪಡೆಗಳಿಂದ ಅವರು ಬಿಡಿಸಿಕೊಳ್ಳ ಬಯಸಿದ್ದಾರೆಂದು ಹೇಳುತ್ತಾರೆ. ಅವರ ಪಾಡಿಗೆ ಅವರನ್ನು ಬಿಟ್ಟು ಬಿಡಬೇಕೆಂದಿಚ್ಛಿಸುತ್ತಾರೆ. ಅವರು ಶಾಂತಿಗಾಗಿ ಹಂಬಲಿಸುತ್ತಿದ್ದಾರೆ.

"ಮಹಾಪ್ರಭುಗಳು ಕೇಳುತ್ತಿರುವುದೆಲ್ಲ ನ್ಯಾಯ ಮತ್ತು ನಿಷ್ಪಕ್ಷಪಾತವನ್ನು. ನಿಮ್ಮ ಸಿಂಹಾಸನವನ್ನು, ಕಳೆದುಕೊಂಡಿದ್ದ ರಾಜಧಾನಿಯನ್ನು ಮರಳಿಪಡೆದುಕೊಳ್ಳಲು ನಿಮಗೆ ನೆರವಾದ ಹಾಗೂ ನಿಮಗೆ ಅತ್ಯಂತ ಆಪ್ತಮಿತ್ರರೆನಿಸಿದ ಮೇದಿನೀ ರಾಯ್ ಮಹಾಸ್ವಾಮಿಯವರಿಗೆ ಚಂಡೇರಿಯನ್ನು ನೀಡಿ. ಸಿಲ್ಹಾದಿ ಹಾಗೂ ಸೂರಜ್ ರಾಯ್ ಮಹಾಸ್ವಾಮಿಯರೊಂದಿಗೆ ಉದಾರವಾದ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಲು ಮಾಳ್ವದ ಸುಲ್ತಾನರಾದ ನಿಮಗೇ ಅಧಿಕಾರವಿದೆ. ನಮ್ಮ ತೊಂದರೆಗಳಿಗೆ ನೆರವಾದದ್ದರಿಂದ ಮೇವಾಡಕ್ಕಾದ ನಷ್ಟ ಪರಿಹಾರದ ಬಗ್ಗೆ, ಎರಡು ದೊಡ್ಡ ರಾಷ್ಟ್ರಗಳಾಗಿ ಮೈತ್ರಿ ಮತ್ತು ವಿಶ್ವಾಸದ ಹುಮ್ಮಸ್ಸಿನಲ್ಲಿ ನಾವು ಲೆಕ್ಕಹಾಕಬಹುದು.

"ನಾವು ಮತ್ತೊಮ್ಮೆ ನಮ್ಮ ಹಸ್ತವನ್ನು ನಿಮ್ಮತ್ತ ಚಾಚ ಬಯಸುತ್ತೇವೆ. ನೀವು ಅದನ್ನು ಸದಾಕಾಲ ಸ್ನೇಹದಲ್ಲಿ ಹಿಡಿದಿಟ್ಟುಕೊಳ್ಳುವಿರಾ?"

ತೇಜನು ಮಾತು ನಿಲ್ಲಿಸಿ ಸುಲ್ತಾನ್ ಹಾಗೂ ಅವನ ಸೇನಾಧಿಕಾರಿಗಳತ್ತ ನೋಡಿದನು. ಆ ನಂತರ, ಸಾಮಾನ್ಯ ಜನಗಳು ಮತ್ತು ಸೈನಿಕರತ್ತ ನೋಡಿದನು. ಈ ಮುಂಚೆ ಸುಲ್ತಾನನಾಗಲಿ, ಹಿಂದಿನ ಯಾವಾ ರಾಣಾ ಆಗಲಿ ಅವರುಗಳನ್ನು ಎಂದೂ ಗಮನಕ್ಕೆ ತಂದುಕೊಂಡಿರಲಿಲ್ಲ.

"ದಯವಿಟ್ಟು ಶಾಂತಿ ಒಪ್ಪಂದ ಮಾಡಿಕೊಳ್ಳಿ, ಮಹಾಸ್ವಾಮಿ. ಇಲ್ಲದೆ ಹೋದರೆ, ಈ ದಿನವನ್ನು ನೆನಪಿಸಿಕೊಳ್ಳುತ್ತ ನಿಮ್ಮ ಉಳಿದ ಜೀವನವಿಡೀ ಪಶ್ಚಾತ್ತಾಪ ಪಡುತ್ತೀರಿ. ಇಲ್ಲಿ ಏಳು ಸಾವಿರದ ಐದು ನೂರು ಮಂದಿ ಮಾಳ್ವದ ಮತ್ತು ಮಿತ್ರ ದೇಶಗಳ ಸೈನಿಕರಿದ್ದಾರೆ. ಯಾವ ನಾಗರಿಕ ಮನುಷ್ಯರೂ ತಿನ್ನದೆ ಇರುವ, ನಾಯಿ ಮತ್ತು ಕೋತಿಯ ಮಾಂಸವನ್ನು ಆತ್ಮ ಸಾಕ್ಷಿ ರಹಿತವಾಗಿ ಅಥವಾ ಹೃದಯ ಹೀನರಾಗಿ, ಆಹಾರದ ರೂಪದಲ್ಲಿ ಭಕ್ಷಿಸಿದ್ದಾರೆ. ಅದರಿಂದಾಗಿ ಅವರು ಅಜೇಯರಾಗಿದ್ದಾರೆ. ಯಮನೂ ಅವರನ್ನು ಮುಟ್ಟಲಾರ. ಈ ಸೈನಿಕರು ಇಲ್ಲಿರುವ ಮಾಳ್ವದ ಎಲ್ಲ ಸೈನಿಕರ ಮೇಲೆ ದಾಳಿ ಮಾಡಿ, ಕೊಚ್ಚಿಕೊಂದು, ಗುರುತೂ ಉಳಿಯದ ಹಾಗೆ ಒರೆಸಿಹಾಕಿ ನಾಶಮಾಡಿ ಬಿಡುತ್ತಾರೆ ಎಂದು ಆಣೆ ಮಾಡಿ ಹೇಳುತ್ತೇವೆ.

"ಇದು ಕೇವಲ ವ್ಯರ್ಥ ಬೆದರಿಕೆಯಲ್ಲ ಮಹಾಸ್ವಾಮಿ. ಕಾರಣ ಶತ್ರುವಿನೊಂದಿಗಿನ ಭೀಕರ ಹೋರಾಟದಲ್ಲಿ ಸೇರಿಕೊಳ್ಳುವ ಬದಲು, ದೂರದ ಪರ್ವತಗಳ ಮೇಲೆ ಪ್ರತ್ಯೇಕವಾಗಿ ಅಲುಗಾಡದೆ ನಿಂತಿರಬೇಕೆಂದು ನಮ್ಮ ಸೇನಾಪಡೆಗಳ ಆತಿಥೇಯರಿಗೆ ಹೇಳಲು ನಮಗೆ ಅನುಮತಿ ನೀಡಿದ ಆ ಅಲೌಕಿಕ ಆತ್ಮವಿಶ್ವಾಸವನ್ನು ಬೇರೆ ಹೇಗೆ ತಾನೆ ನೀವು ವಿವರಿಸಲು ಸಾಧ್ಯ?"

"ಯೋಚನೆ ಮಾಡಿ ಮಹಾಸ್ವಾಮಿ. ಹತ್ತು ನಿಮಿಷದೊಳಗಾಗಿ ಸೌಹಾರ್ದ ಪೂರ್ಣವಾದ ಉತ್ತರ ನಿಮ್ಮಿಂದ ನಮಗೆ ಬರದೆ ಹೋದಲ್ಲಿ, ನಲವತ್ತೈದು ಸಾವಿರ ಜನ ಮುಗ್ಧ ಸೈನಿಕರ ಸಾವಿಗೆ ನೀವು ಅಂದರೆ ನೀವು ಮಾತ್ರ ಹೊಣೆಗಾರರಾಗುವಿರಿ".

ಅವರಿಂದ ಬೀಳ್ಕೊಳ್ಳುವ ಸೂಚನೆಯಾಗಿ ತೇಜನು ಪಟ್ಟದಾನೆಯ ಅಂಬಾರಿಯ ಮೇಲೆ ಕುಳಿತಿದ್ದ ಮಾಳ್ವದ ಸುಲ್ತಾನರ ಸಮೀಪಕ್ಕೆ ಧಾವಿಸಿದನು. ಕಾಗದದ ಸುರುಳಿಯನ್ನು ಸುತ್ತಿ ದಾರದಿಂದ ಕಟ್ಟಿ ಗಂಟು ಹಾಕಿದನು. ಅತ್ಯಂತ ವಿನಯದಿಂದ ಬಾಗಿ ನಮಸ್ಕರಿಸಿ ಅದನ್ನು ಮಾಳ್ವದ ಸುಲ್ತಾನರಿಗೆ ನೀಡಿ ನಮ್ಮನ್ನು ಬಂದು ಸೇರಿಕೊಂಡನು. ನಾನು ಮತ್ತು ಮೇದಿನೀ ರಾಯ್ ಮುನ್ನೆಲೆಯಿಂದ ಗೌಣಸ್ಥಾನಕ್ಕೆ ಸರಿದುಕೊಂಡೆವು. ತೇಜ್, ಷಫಿ ಮತ್ತು ಹೇಮಕರಣ್ ಅವರುಗಳು ವಿಭಜನೆಗೊಂಡ ಸೇನೆಯ ಮೂರು ವಿಭಾಗಗಳ ಸೇನಾಧಿಪತ್ಯವನ್ನು ವಹಿಸಿಕೊಂಡರು.

ನಾನು ಬೆಳಿಗ್ಗೆ ಬೆಳಿಗ್ಗೆಯೇ ಎದ್ದಿದ್ದೆ. ಹೇಮಕರಣನನ್ನು ಯುದ್ಧಕ್ಕೆ ಕಳಿಸಿ ಅವನ ಜೀವವನ್ನು ಸಾವಿನ ಅಪಾಯಕ್ಕೆ ಒಡ್ಡಬಾರದೆಂಬ ನನ್ನ ನಿರ್ಧಾರವನ್ನು ತ್ಯಜಿಸಿದ್ದೆನು. ನಾನು ನನ್ನ ಅದೃಷ್ಟವನ್ನು ಇನ್ನಷ್ಟು ಹೆಚ್ಚು ಪರೀಕ್ಷಿಸಲು ಇಷ್ಟಪಡಲಿಲ್ಲ. ಆದರೆ ನಾವು ಯೋಧರು. ಅಲ್ಲದೆ ಭಾವಾವೇಶ ಎಂಬುದು ಭಯಕ್ಕೆ ಇನ್ನೊಂದು ಹೆಸರು. ನಾನು ಅದಕ್ಕೆ ನನ್ನ ಕಣ್ಣನ್ನು ಕುರುಡಾಗಿಸದೆ ನನ್ನ ಭಯಗಳೊಂದಿಗೆ ಬದುಕುವುದನ್ನು ಕಲಿಯಬೇಕಾಗಿತ್ತು.

ನಾನು ಆ ದಿನ ಬೆಳಿಗ್ಗೆಯೇ ನಮ್ಮ ಸೈನಿಕರಿಗೆ ಹೇಳಿದ್ದೆ– "ನಾವು ಪ್ರಾರಂಭಿಸಿ ಇದುವರೆಗೆ ನಡೆಸಿಕೊಂಡು ಬಂದಿರುವುದು ವಾಕ್ ಸಮರ. ಅದು ನೀವು ಕಣ್ಣಿಂದ

ನೋಡಲು ಸಾಧ್ಯವಾಗದ, ಹಾಗೂ ಮಕ್ಕಳಾಟದಂಥ ಇಲ್ಲವೆ ಸಮಯ ಹಾಳು ಎನ್ನುವಂಥದು. ಆದರೆ ಅದು ನಡೆಯುತ್ತದೆ ಎನ್ನುವುದಕ್ಕೆ ಎಂಥದೋ ಒಂದು ಪುರಾವೆ ಇದೆ. ನಾವು ನಮ್ಮ ರಕ್ತವನ್ನೇನೂ ಚೆಲ್ಲದೆ, ಹೇಮಕರಣ್ ಮತ್ತು ಅವನ ಯೋಧರು ನಮ್ಮೊಂದಿಗೆ ಇದ್ದಾರೆಂಬುದನ್ನು ನೀವು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ವಾಕ್ ಸಮರ ಎಂಬುದು ಸಾಂಪ್ರದಾಯಿಕ ಯುದ್ಧ ಮತ್ತು ಗುಪ್ತ ಯುದ್ಧಕ್ಕೆ (ಗೆರಿಲ್ಲಾ ಯುದ್ಧಕ್ಕೆ) ನೆರವಾಗುವ ಮೊದಲ ಮತ್ತು ಕೊನೆಯ ಸಾಧನ. ಅದರ ಉದ್ದೇಶ ನಾವು ಆಕ್ರಮಣ ಮಾಡುವ ಮುನ್ನ, ಶತ್ರುವಿನ ಬೆನ್ನೆಲುಬಾದ, ನೈತಿಕ ಸ್ಥೈರ್ಯವನ್ನು ಮುರಿಯುವುದು. ನಾವು ಅದರಲ್ಲಿ ಯಶಸ್ವಿಯಾಗಿದ್ದೇವೆಯೆ? ನನಗೆ ತಿಳಿಯದು. ಈ ಮಧ್ಯಾಹ್ನ, ಆ ಪ್ರಯೋಗದ, ಫಲಿತಾಂಶಗಳನ್ನು ನೀವೇ ತೀರ್ಮಾನಿಸಬಹುದು".

"ನಿಮ್ಮ ಖಡ್ಗಗಳು, ಸುಲ್ತಾನರ ಸೈನಿಕರು ಬಳಸುವ ಸಾಂಪ್ರದಾಯಿಕ ಖಡ್ಗಗಳಿಗಿಂತ ಏಳು ಅಂಗುಲಗಳಷ್ಟು ಉದ್ದವಾಗಿದ್ದು ಅವಕ್ಕಿಂತ ಸ್ವಲ್ಪ ಕಡಿಮೆ ತೂಕವಿರುವ ಖಡ್ಗಗಳಾಗಿವೆ. ಅವು ಹಗುರವಾಗಿವೆ ನಿಜ. ಆದರೆ ಗಟ್ಟಿ ಮುಟ್ಟಾಗಿರುವುದರಲ್ಲಿ ಲೇಶಮಾತ್ರವೂ ಕಡಿಮೆ ಇಲ್ಲ. ಅಷ್ಟೇ ಅಲ್ಲ ಅವಕ್ಕಿಂತ ಶೇಕಡಾ ಮೂವತ್ತರಷ್ಟು ಗಟ್ಟಿಯಾಗಿವೆ. ಸಂಕ್ಷೇಪದಲ್ಲಿ ಹೇಳಬೇಕೆಂದರೆ, ನಿಮ್ಮ ದಕ್ಷತೆ ಮತ್ತು ಸಾಮರ್ಥ್ಯಗಳು ಅವರಿಗಿಂತ ಮಿಗಿಲಾದವು".

"ರಾಜಕುಮಾರ ತೇಜ್ ಮತ್ತು ಅವನ ಕಡೆಯವರು ನಮ್ಮ ಜೊತೆ ಹಿಂದೆ ನಿಲ್ಲುತ್ತಾರೆ. ಅವರು ನಮ್ಮ ತುರ್ತು ಸಂದರ್ಭಕ್ಕೊದಗುವ ಪಡೆ (ಆಪತ್ಕಾಲದ ಪಡೆ). ಸುಲ್ತಾನನ ಕಡೆಯ ಸೈನಿಕರನ್ನು ಅವರು ಹೊರ ಬಂದ, ಅತ್ಯಂತ ಕಿರಿದಾದ ಕಂಡಿಗೆ ಅವರು ವಾಪಸಾಗುವಂತೆ ಬಲವಂತ ಪಡಿಸಲಾಗದಿದ್ದರೆ, ಅವರ ಬದಲಿಗೆ ನಮ್ಮನ್ನು ಅವರು ಹೊಡೆದೋಡಿಸುವ ಸಂದರ್ಭ ಬಂದಿದ್ದೇ ಆದರೆ ಆಗ ಪರ್ವತ ಶಿಖರದ ಮೇಲಿರುವ ಪಡೆಗಳನ್ನು ನಾವು ಕೆಳಗೆ ಬರಲಾಹ್ವಾನಿಸುತ್ತೇವೆ. ಹೀಗೆ ಆಗುವುದು ನಿಮಗೆ ಇಷ್ಟವೆ? ನಮ್ಮ ನೂತನ ಮಿತ್ರರು ಅವಕಾಶ ವಾದಿಗಳು. ಇಷ್ಟು ತಿಂಗಳುಗಳ ನಂತರ ಅವರು ನಮ್ಮೊಂದಿಗೆ ಸೇರಿಕೊಂಡಿರುವುದು, ನಮ್ಮ ಗೆಲ್ಲುವ ಅವಕಾಶಗಳು ಉತ್ತಮವಾಗಿವೆ ಹಾಗೂ ತಾವು ಯುದ್ಧದ ಯಶಸ್ಸಿನ ಫಲಗಳನ್ನು ಮತ್ತು ಕೀರ್ತಿಯನ್ನು ನಮ್ಮೊಂದಿಗೆ ಹಂಚಿಕೊಳ್ಳಬಹುದೆಂಬ ಕಾರಣಕ್ಕೆ. ಎಲ್ಲವನ್ನೂ ಮಾಡುವುದು ನೀವು, ವಿಜಯವನ್ನು ಪಡೆದುಕೊಳ್ಳುವುದಕ್ಕೆ ಅವರು ಬರುವುದು ಸ್ವಲ್ಪ ಅನ್ಯಾಯ ಎಂದು ನನಗೆ ಅನ್ನಿಸುತ್ತದೆ".

"ಅಷ್ಟು ಕಡಿಮೆ ಜನ ಅಷ್ಟೊಂದು ಜನ ಶತ್ರುಗಳನ್ನು ಸೋಲಿಸಲು ಸಾಧ್ಯವೆ? ಸಾಧ್ಯ ಅಂತ ನನಗನ್ನಿಸುತ್ತೆ, ಕೂಡಲೆ ಹೊರಡಿ ಮತ್ತು ಇತಿಹಾಸವನ್ನು ನಿರ್ಮಿಸಿ. ದೇವರು ಒಳ್ಳೆಯದು ಮಾಡಲಿ"

ಸುಲ್ತಾನರಿಗೆ ನೀಡಿದ್ದ ಹತ್ತು ನಿಮಿಷಗಳು ಆಗಿ ಹೋಗಿದ್ದುವು. ಗಟ್ಟಿಯಾಗಿ ನೆಲಕ್ಕೆ ನಾಟಿದ್ದ ಐವತ್ತು ಅಡಿ ಉದ್ದದ ಹಿಡಿಕೆಗಳುಳ್ಳ ಐವತ್ತು ದೊಡ್ಡ ಗಾತ್ರದ ಸೌಟುಗಳು ಇದ್ದಕ್ಕಿದ್ದಂತೆ, ಗುಂಡು ಎಸೆತಕ್ಕೆ ಸಿದ್ಧವಾದ ಬೃಹತ್ ಕಾಯದ ತೋಳುಗಳ ಹಾಗೆ ಚಿಮ್ಮಿ ಮೇಲೆದ್ದುವು. ಅಲ್ಲದೆ, ಅವು ಕೆಂಡದುಂಡೆಗಳನ್ನು ನೆಲಕ್ಕೆ ಅಪ್ಪಳಿಸುತ್ತ ಭಯಂಕರ ಸದ್ದುಮಾಡುವ ಬೃಹತ್ ಗಾತ್ರದ ಧೂಮಕೇತುಗಳನ್ನು ಒಗೆದುವು. ಎಣ್ಣೆಯಲ್ಲಿ ನೆಂದ ಬಟ್ಟೆಗಳು ಹಾಗೂ ಹತ್ತಿ ಮತ್ತು ಉಣ್ಣೆಯಿಂದ ಸುತ್ತಲ್ಪಟ್ಟ ಬಂಡೆಗಳು ಶತ್ರುವಿಗೆ ಹೆಚ್ಚಿನ ದೈಹಿಕ ಹಾನಿಯನ್ನು ಉಂಟುಮಾಡಿದ ಬಗ್ಗೆ ನನಗೆ ಸಂದೇಹವಿದೆ. ಆದರೆ ಅವು ಶತ್ರು ಸೈನಿಕರಲ್ಲಿ ಭಾರೀ ಕೋಲಾಹಲ ಎಬ್ಬಿಸಿದ್ದಂತೂ ಹೌದು. ಹಿಂದಿನ ದಿನವೇ ಸಾಕಷ್ಟು ಪರೀಕ್ಷಿಸಿದ ನಂತರವೇ ಸೌಟುಗಳನ್ನು ಮಧ್ಯೆ ಮಧ್ಯೆ ಅಂತರವಿರುವ ಹಾಗೆ ವ್ಯೂಹ ತಂತ್ರ

ವಿವೇಕದ ಪ್ರಕಾರವೇ ಶತ್ರುವಿನ ಮೇಲೆರಗಿ ಗುಂಡಿನ ಸುರಿಮಳೆ ಕರೆಯಲಸುವಾಗುವಂತೆ ಯೋಜಿಸಲಾಗಿತ್ತು.

ಬೆಂಕಿಯ ಮಳೆ ಉತ್ಕರ್ಷ ಸ್ಥಿತಿಯನ್ನು ತಲುಪಿದಾಗ, ಷಫಿ ಮತ್ತು ಅವನ ಕಡೆಯವರು ಒತ್ತಾದ ತ್ರಿಭುಜ ರೂಪದಲ್ಲಿ ತಮ್ಮನ್ನು ಯೋಜಿಸಿಕೊಂಡು ಗುಜರಾತಿ ಘಟಕದತ್ತ ಮುನ್ನಡೆದರು. ಅವರ ಕಾರ್ಯಕ್ರಮ ಪರಿಮಿತವಾದದ್ದಾಗಿತ್ತು. ಮೂವತ್ತು ನಿಮಿಷಗಳೊಳಗೆ ಗುಜರಾತೀ ರಾವುತ ಪಡೆಯನ್ನು ನಾಶಗೊಳಿಸುವುದು. ಅದೇ ಸಮಯಕ್ಕೆ ನೂರು ಭಾರೀ ಧ್ವನಿಗಳು ಸುಲ್ತಾನರ ಕಡೆಯವರನ್ನು ಉದ್ದೇಶಿಸಿ ಮಾತಾಡಿದುವು. "ಮಾಳ್ವದ ಸೋದರರೆ ನಿಮ್ಮನ್ನು ಕೊಲ್ಲುವ ಉದ್ದೇಶ ನಮಗಿಲ್ಲ. ನಿಮ್ಮ ಶಸ್ತ್ರಾಸ್ತ್ರಗಳನ್ನು ಕೆಳಕ್ಕೆ ಹಾಕಿ ಪಕ್ಕಕ್ಕೆ ಸರಿದು ಬಿಡಿ. ಯಾರೂ ನಿಮ್ಮ ಮೇಲೆ ಆಯುಧವನ್ನು ಎತ್ತಲಾರರು. ಸೋದರರು ಸೋದರರರೊಂದಿಗೆ ಸೆಣಸುವುದಿಲ್ಲ".

ಮಾಳ್ವದ ಪಡೆಗಳು, ಪಾರ್ಶ್ವದಲ್ಲಿದ್ದು ನೋಡುತ್ತಿದ್ದಂತೆ, ಷಫಿ ಹಾಗೂ ಅವನ ಕಡೆಯವರು ಮುಜ಼ಾಫರ್ ಷಾನ ಗುಜರಾತಿ ಪಡೆಗಳ ಮೇಲೆ ಆಕ್ರಮಣ ಮಾಡಿ ಧ್ವಂಸ ಮಾಡಿಬಿಟ್ಟರು ಎಂದು ನಾನು ವರದಿ ಮಾಡಿದ್ದೇ ಆದರೆ, ಅದೊಂದು ಸೊಗಸಾದ ಕತೆಯಾಗುತ್ತದೆ. ಅಂಥದ್ದೇನೂ ಆಗಲಿಲ್ಲ. ಅದರಲ್ಲಿ ಬಹುಪಾಲು ಮಂದಿ, ಕೆಚ್ಚಿನಿಂದ ಕೂಡಲೇ ಕಾರ್ಯ ಪ್ರವೃತ್ತರಾದರು. ಆದರೆ ಅಲ್ಲಿನ್ನೂ ಅನಿಶ್ಚಯತೆ ಇತ್ತು. ಒಡೆದ ಮನಃಸ್ಥಿತಿ ಶತ್ರುವಿನ ಪರವಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುವ ಹಾಗೆ ಬೇರಾವುದೂ ಮಾಡಲಾರದು. ಒಂದು ಕ್ಷಣ ಕಾಲ, ಆದರೆ ನಮ್ಮ ದೃಷ್ಟಿಯಲ್ಲಿ ಸಾಕಷ್ಟು ದೀರ್ಘಕಾಲ, ಗುಜರಾತಿಗಳು ಎಲ್ಲರಿಂದಲೂ ಬೇರ್ಪಟ್ಟಂತೆ ಭಾವಿಸಿದರು. ಅವರೆಲ್ಲ ಒಳ್ಳೆ ಅನುಭವೀ ಯೋಧರಾಗಿದ್ದರು. ಅಲ್ಲದೆ ಹೊಡೆದು ಸಾಯಿಸುವುದಕ್ಕೆಂದೇ ನಿಯುಕ್ತರಾದವರು. ಆದರೆ ಏಳು ಅಂಗುಲ ಉದ್ದದ ಅತ್ಯಂತ ಮಾರಕವಾದ ಅಲಗೊಂದು ಅವರ ಅಂಗಚ್ಛೇದ ಮಾಡಿ ಮುಗಿಸಲಿದೆಯೆಂದು ಅರಿತರು.

ಎಲ್ಲ ಸೈನ್ಯಗಳೂ ಅಮೀರರು, ರಾವ್‌ಗಳು, ರಾಜಾ ಸರದಾರ್ ಅಥವಾ ಸಾಮಂತರು ಇವರುಗಳ ನಾಯಕತ್ವದಲ್ಲಿ ರಚಿತವಾಗಿರುತ್ತವೆ. ಇವರುಗಳನ್ನು ಈ ಯಾವ ಗೌರವ ಸೂಚಕ ಶಬ್ದದಿಂದ ಕರೆದರೂ ಸರಿಯೆ. ಸಮಾನ ಶತ್ರು ಯಾರೇ ಆಗಿದ್ದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಎರಡು ಹಳ್ಳಿಗಳ ನಡುವಿನ ಎರಡು ರಾಜಮನೆತನಗಳ ನಡುವಿನ ಎರಡು ಉಪಜಾತಿಗಳ ನಡುವಿನ ಅಥವಾ ಎರಡು ಧಾರ್ಮಿಕ ಗುಂಪುಗಳ ನಡುವಿನ ವೈರ ಮತ್ತು ಪೈಪೋಟಿಯನ್ನು, ತಪ್ಪದೆ ರಣರಂಗಕ್ಕೆ ಕೊಂಡೊಯ್ದು ಅಲ್ಲಿ ಅದನ್ನು ಮುಂದುವರಿಸಲಾಗುತ್ತದೆ. ಹೇಮಕರಣನ ಕಡೆಯವರು ಒಳಗಡೆ ನುಸುಳಿಕೊಂಡು, ಅಲ್ಲಿಯ ಬಿರುಕುಗಳನ್ನು ಬಳಸಿಕೊಂಡು, ಬೆಣೆಗಳನ್ನು ಹೊಡೆದು, ಅವುಗಳನ್ನು ಅಗಲಗೊಳಿಸಿಬಿಟ್ಟರು. ಆ ಉದ್ದುದ್ದ ಖಡ್ಗಗಳು, ಮಾಗಿ ಕಾಲದಲ್ಲಿ ಬೆಳೆದು ನಿಂತ ಹುಲ್ಲನ್ನು ಕತ್ತರಿಸುವ ಹಾಗೆ, ಜನರನ್ನು ತುಂಡರಿಸತೊಡಗಿದಾಗ ಸುಲ್ತಾನರ ಕಡೆಯವರು ಧೈರ್ಯ ಕಳೆದುಕೊಳ್ಳತೊಡಗಿದರು. ಬಹು ಬೇಗನೆ ಅವರುಗಳು ಸ್ವಯಿಚ್ಛೆಯಿಂದ ಹಿಮ್ಮೆಟ್ಟ ತೊಡಗಿದರು. ಏನೇ ಆದರೂ ನನ್ನ ಯೋಜನೆಯಂತೆ ಯುದ್ಧ ನಡೆಯುತ್ತಿರಲಿಲ್ಲ. ಒಂದು ಗಂಟೆ ಹತ್ತು ನಿಮಿಷಗಳಿಂದಲೂ ಹೋರಾಡುತ್ತಿದ್ದೆವು. ಆದರೆ ನಾವು ಸುಲ್ತಾನ್ ಮಹಮ್ಮದ್ ಖಾಲ್ಜಿ ಎಂಬ ಒಬ್ಬ ವ್ಯಕ್ತಿಯ ಕಾರಣದಿಂದಾಗಿ ನಮ್ಮ ನಿಗದಿತ ಸಮಯಕ್ಕಿಂತ ಹಿಂದಿದ್ದೆವು.

ನಾನು ನನ್ನ ಕಾಲದ ಕೆಲವು ಅತ್ಯಂತ ಶ್ರೇಷ್ಠ ಯೋಧರಾದ ತಂದೆಯವರು, ರಾವ್ ವೀರಮ್ ದೇವ್, ರಾವ್ ಗಂಗಾ ಮಲಿಕ್ ಅಯಾಜ಼್ ಅವರುಗಳನ್ನು ನೋಡಿದ್ದೇನೆ.

ಆದರೆ ಅವರುಗಳು ಆ ದಿನದ ಸುಲ್ತಾನನ ಶ್ರೇಣಿಯಲ್ಲಿರಲಿಲ್ಲ. ಸುಲ್ತಾನನು ಆ ದಿನ ಅತ್ಯಂತ ಧೀರ ಹಾಗೂ ಕೊಲ್ಲುವಷ್ಟು ದೃಢ ಸಂಕಲ್ಪ ಹೊಂದಿದ ವ್ಯಕ್ತಿಯಾಗಿದ್ದನು. ನಮ್ಮ ಹತ್ತಿರ ಒಂದು ಗಜದಷ್ಟು ಉದ್ದದ ಖಡ್ಗಗಳಿದ್ದಿರಬಹುದು. ಆದರೆ ನಮ್ಮ ಯಾವ ತಂತ್ರವೂ ಅವರನ್ನು ಬಲೆಗೆ ಕೆಡವಲಾಗಲಿಲ್ಲ. ಅವನ ಕಡೆಯ ಜನರೇ ಅವನಿಗೆ ನೆರವಾಗಲು ಸುತ್ತ ಸೇರತೊಡಗಿದರು. ಇನ್ನೊಂದು ಮುಕ್ಕಾಲು ಗಂಟೆ. ಆಮೇಲೆ ಸಂಜೆಯ ಮಸುಕು ಕವಿದು ಏನೂ ಕಾಣದಂತಾಗುತ್ತದೆ. ನಿರ್ಣಾಯಕವಾಗಿ ಯಾರು ಗೆದ್ದರು ಅಥವಾ ಯಾರು ಸೋತರು ಎಂಬುದು ತಿಳಿಯದೆಯೇ ಆ ಹಗಲು ಕೊನೆಗೊಳ್ಳುತ್ತದೆ.

ತೇಜ್, ಮೇದಿನೀರಾಯ್ ಮತ್ತು ನಾನು ಐದುನೂರು ಯೋಧರೊಂದಿಗೆ ಹೊರ ಹೊರಟೆವು. ಕೆಲವೇ ನಿಮಿಷಗಳಲ್ಲಿ ನಾವು ಅತ್ಯಂತ ನಿಕಟವಾದ ಹೋರಾಟದಲ್ಲಿ ತೊಡಗಿಕೊಂಡೆವು. ಆಗ ನಾನು ಸುಲ್ತಾನನ್ನು ಮುಖಾಮುಗಿಯಾಗಿ ಎದುರಿಸುತ್ತಿದ್ದೆನು. ನನಗೆ ನಾನು ಸುಳ್ಳು ಹೇಳಿಕೊಂಡು ಬಿಟ್ಟಿದ್ದೆನು. ಅವನು ಒಳ್ಳೆಯವನು. ಅತ್ಯಂತ ಒಳ್ಳೆಯ ವ್ಯಕ್ತಿ. ಆದರೆ ನಾನು ಹೋರಾಟಕ್ಕಿಳಿದದ್ದು ಅದಕ್ಕಲ್ಲ. ಅವನು ಸಾಯುವುದು ನನಗೆ ಬೇಕಿತ್ತು. ಆಗ ಮಾಳ್ವವನ್ನು ತೆಗೆದುಕೊಂಡು ದೆಹಲಿಯನ್ನು ನಮ್ಮ ಪಾಲಿಗೆ ಇಲ್ಲವಾಗಿಸಿಬಿಡಬಹುದಾದ ಅವಿವೇಕಕ್ಕೆ ಕೊನೆ ಹಾಡಬಹುದು. ಮೊಹಮ್ಮದ್ ಖಾಲ್ಜಿಯ ಸುತ್ತಲೂ ಒಂದು ಮೋಡಿಯ ಮಂಡಲ ಸುತ್ತುವರಿದಿದ್ದು. ಇದುವರೆಗೂ ಅವನನ್ನು ಗಾಯಗೊಳಿಸುವುದು ಅಸಾಧ್ಯವಾಗಿದ್ದರೂ ಮೊಹಮ್ಮದ್ ಖಾಲ್ಜಿಯನ್ನು ಮುಗಿಸುವ ಹೊಣೆಗಾರಿಕೆ ನನ್ನದಾಗಿತ್ತು. ನನ್ನ ಖಡ್ಗ ಇನ್ನೇನು ಅವನ ಮೇಲೆ ಎರಗುವುದರಲ್ಲಿತ್ತು. ಆಗ ರಾಯ್ ತನ್ನ ತಲೆಯನ್ನು ಅಲ್ಲಾಡಿಸುತ್ತ ನನ್ನತ್ತ ತಿರಸ್ಕಾರದಿಂದ ನೋಡುತ್ತಿದ್ದುದನ್ನು ಕಂಡೆ. "ನೋಡಿ ಮಹಾಸ್ವಾಮಿಯವರೆ ಅದೊಂದು ಕೇವಲ ಆಕಸ್ಮಿಕ. ನನ್ನನ್ನು ಬೆಂಬಲಿಸಿ, ನಿಮ್ಮ ಸಲುವಾಗಿ ಮತ್ತು ಮೇವಾಡದ ಸಲುವಾಗಿ, ಮಹಾಪ್ರಭು ರಾಣಾ ಅವರಿಗೆ ನೀವು ಇದೊಂದು ಸುಳ್ಳು ಹೇಳುವಷ್ಟು ಕೃತಜ್ಞತೆಯನ್ನು ನನಗೆ ತೋರಿಸಬೇಕು. ನಮಗೆ ಮಾಳ್ವದ ಮೇಲೆ ಗೆಲುವು ಬೇಕಾಗಿಲ್ಲ. ಯೋಚನೆ ಮಾಡಿ. ನಮಗೆ ಬೇಕಾಗಿರುವುದು ಮಾಳ್ವವನ್ನು ಸ್ವಾಧೀನಪಡಿಸಿಕೊಳ್ಳುವುದು. ಅದೂ ಶಾಶ್ವತವಾಗಿ ಸ್ವಾಧೀನಪಡಿಸಿಕೊಳ್ಳುವುದು ಎಂದು ಹೇಳಬೇಕೆಂದಿದ್ದೆನು. ಆದರೆ ಅದುವರೆಗೆ ಆ ಗಳಿಗೆ ಕಳೆದು ಹೋಗಿತ್ತು. ಸುಲ್ತಾನನು ತನ್ನ ಖಡ್ಗವನ್ನು ನನ್ನ ಮೇಲೆ ತಂದನು. ನಾನು ತಕ್ಷಣ ಬಲಕ್ಕೆ ನುಗ್ಗಿದೆನು. ಖಡ್ಗ ಸಟ್ಟನೆ ಹಾಯ್ದು ನನ್ನ ಕವಚಕ್ಕೆ ತಾಕಿ ಕಿಡಿಗಳನ್ನು ಹೊಮ್ಮಿಸಿ ನನ್ನ ಎಡ ತೋಳಿನ ಮಾಂಸ ಖಂಡದೊಳಕ್ಕೆ ಪ್ರವೇಶಿಸಿತು. ಅವನು ಅಪಥಮನಿಗೇ ಹೊಡೆದಿರಬೇಕು. ಕಾರಣ ರಕ್ತ ಛಿಲ್ಲೆಂದು ಚಿಮ್ಮಿ ಅವನ ಮುಖವನ್ನು ನೆನೆಸಿತು. ಅವನ ಕಣ್ಣುಗಳು ಮುಚ್ಚಿದುವು. ಕೆಳಗೆ ಬಿದ್ದಿದ್ದ ನನ್ನ ಖಡ್ಗವನ್ನೆತ್ತಿಕೊಳ್ಳಲು ಬಂದಾಗ, ನನಗೆ ಸಂಪೂರ್ಣವಾಗಿ ಕತ್ತಲೆ ಕವಿದುಬಿಟ್ಟಂತಾಗಿರಬೇಕು. ಅದೆಷ್ಟು ಬೇಗ ರಕ್ತ ಹೆಪ್ಪುಗಟ್ಟಿ ಬಿಡುತ್ತದೆ. ಅವನು ರೋಷೋನ್ಮತ್ತನಾಗಿ ತನ್ನ ಕಣ್ಣುಗಳನ್ನು ತೆರೆಯಲು ಹಾಗೂ ರಕ್ತದ ಅಂಟನ್ನು ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದನು. ಸುಲ್ತಾನನ ಖಡ್ಗದ ತುದಿಯನ್ನು ಕವಚ ತೊಟ್ಟ ನನ್ನ ಬಲಗೈಯಿಂದ ಹಿಡಿದುಕೊಂಡೆ. ಆದರೆ ಅದನ್ನು ಭದ್ರವಾಗಿ ಬಿಗಿ ಹಿಡಿಯಲಾಗಲಿಲ್ಲ. ನಾನು ನನ್ನ ಎಡಗೈಯನ್ನು ಚಲಾಯಿಸದೆ ಗತ್ಯಂತರವಿರಲಿಲ್ಲ. ನಾನು ತಕ್ಷಣ ಮೇಲೆದ್ದು ಹೆಚ್ಚು ಅನುಕೂಲ ಪಡೆದುಕೊಳ್ಳಲೆಂದು ಮುಂದೆ ಬಾಗಿ ಅವನ ಖಡ್ಗದ ಹಿಡಿಕೆಯಿಂದ ಅದೆಷ್ಟು ಬಲವಾಗಿ ಅವನ ಎದೆಗೆ ತಿವಿದೆನೆಂದರೆ ಅವನು ತಟ್ಟಾಡುತ್ತ ತಲೆಕೆಳಗಾಗಿ ಬಿದ್ದು ಬಿಟ್ಟನು. ಅವನು ಅಸ್ತವ್ಯಸ್ತವಾಗಿ ನೆಲದ ಮೇಲೆ ಒರಗಿದನು. ಅವನ ಒಂದು ಪಾದ

ರಿಕಾಪಿನಲ್ಲಿ ಸಿಕ್ಕಿಕೊಂಡು ಬಿಟ್ಟಿತ್ತು. ನಾನು ಕುದುರೆಯಿಂದ ಕೆಳಗಿಳಿದೆ. ನನ್ನ ಖಡ್ಗ ನನ್ನ ಕೈಯಲ್ಲಿತ್ತು. ಸುಲ್ತಾನನ ಎದೆಯ ಮೇಲೆ ನನ್ನ ಬಲಗಾಲನ್ನು ಇಟ್ಟಿದ್ದೆನು. ಸುರಕ್ಷತೆಯ ಸಲುವಾಗಿ ಖಡ್ಗದ ಮೊನೆಯು ಅವನ ಗೋಮಾಳೆಯ ಕೆಳಗೆ ಇತ್ತು. ಹಲವು ವರ್ಷಗಳ ಹಿಂದೆ, ಕೋಳಿ ಮಾಂಸದಲ್ಲಿನ ಮೂಳೆಯೊಂದು ಅಲ್ಲಿ ಸಿಕ್ಕಿಕೊಂಡಿದ್ದರಿಂದ ತಂದೆಯವರು ನಿರುದ್ವೇಗದಿಂದ ನಮ್ಮ ತಾಯಿಗೆ ಕತ್ತಿಯಿಂದ ತಿವಿದಿದ್ದು ಅದೇ ಜಾಗದಲ್ಲಿ. ಸುಲ್ತಾನನು ತನ್ನ ಕಣ್ಣು ಮತ್ತು ಮುಖದ ಮೇಲಿನ ರಕ್ತವನ್ನು ಒರೆಸಿಕೊಂಡು ನನ್ನ ಕಡೆ ನೋಡಿದನು.

"ಏಕೆ ಮಹಾರಾಜ್‌ಕುಮಾರ್? ಏಕೆ ಈ ಹಿಂಜರಿತದ ಕ್ಷಣ? ನಾನು ಸಾಯಬೇಕು ಇಲ್ಲ ನೀವು" ಆತನದು ಬಾಲಿಶ ಧ್ವನಿ. ಅಹಿತಕರವಾದ್ದೇನಲ್ಲ. ಆದರೆ ವನವಿಹಾರದ ನಂತರ, ಆ ಕನಸುಗಣ್ಣಿನ ಬಾಲಕ ಹಿಂದೆ ಬಿದ್ದನೇನೋ ಎಂದು ಪತ್ತೆ ಹಚ್ಚಲು ನೀವು ಹಿಂದೆ ಹೋಗುವಂತೆ ಮಾಡುವ ಧ್ವನಿ. "ನನ್ನ ಖಡ್ಗ ತನ್ನ ಪ್ರಯತ್ನದಲ್ಲಿ ವಿಫಲವಾಗದೆ ಇದ್ದಿದ್ದರೆ ಖಂಡಿತಾ ನಾನು ನಿಮ್ಮನ್ನು ಉಳಿಸುತ್ತಿರಲಿಲ್ಲ?"

ನಾನು ಮುಗುಳ್ನಕ್ಕೆ. ಕನಸುಗಣ್ಣಿನ ವ್ಯಕ್ತಿಗಳು, ಕೂಲಿ ಸೈನಿಕರಿಗಿಂತಲೂ ಒಂದು ಕೈ ಹೆಚ್ಚು ಮರಣಾಂತಕರಾಗಬಲ್ಲರೆಂಬುದನ್ನು ನಾನು ಅನುಭವದಿಂದ ತಿಳಿದಿದ್ದೆ.

ನಾನು ಸುಲ್ತಾನನಿಗೆ ಏನು ಹೇಳಲಿ? ನನ್ನ ತಂದೆಯವರ ಮಾತನ್ನು ಮೀರದಿರುವ ಏಳು ವರ್ಷದ ಬಾಲಕ ನಾನೆಂದು ಹೇಳಲೆ?

ಕಷ್ಟಕ್ಕೆ ಸಿಕ್ಕಿದಾಗ ಅತ್ಯಂತ ಪ್ರಖ್ಯಾತವಾದ ಆಲಂಕಾರಿಕ ಮಾತನ್ನುರುಳಿಸುವುದು.

"ಯಾರೇ ಆದರೂ ಅಂಥ ಧೀರಯೋಧನಿಗೆ ಹೊಡೆಯುವುದಿಲ್ಲ ಸ್ವಾಮಿ."

ಬಹುಶಃ ಅದು ನಾನು ನನ್ನ ರಾಜಕುಮಾರತನವನ್ನು ಬಿಟ್ಟಿರಬೇಕಾದ ಹಾಗೂ ನನ್ನ ನಿಜವಾದ ವೃತ್ತಿಯನ್ನು ಕೈಗೆತ್ತಿಕೊಳ್ಳಬೇಕಾದ ಸಮಯ. ಅದೆಂದರೆ ಆಸ್ಥಾನ ಚರಿತ್ರಕಾರನಾಗುವುದು ಇಲ್ಲವೆ ಸೋಲುಗಳು ಮತ್ತು ಬಿಕ್ಕಟ್ಟುಗಳನ್ನು ಯಶೋಗಾಥೆಗಳಾಗಿ ಪರಿವರ್ತಿಸುವ ಚಾರಣನಾಗುವುದು.

ಅಧ್ಯಾಯ 36

ನಾನೊಬ್ಬ ಶಾಲಾ ಬಾಲಕನಂತೆ, ನಾನು ಯಾವಾಗಲೂ ಮನೆಯ ಕಡೆಗೆ ಧಾವಿಸುತ್ತಿರುತ್ತೇನೆ. ಇದಾರ್‌ನಿಂದ, ಕುಂಭಲ್‌ಗರ್‌ನಿಂದ ಮತ್ತು ಈಗ ಧರಮ್‌ಪುರದಿಂದ. ಅದು ಹೇಗೆ ಅಂದರೆ, ನನ್ನ ಮಧ್ಯ ಪ್ರವೇಶವಿಲ್ಲದೆ, ನಾನು ಸಂಜ್ಞೆ ಮಾಡದೆ ನನ್ನ ಸೂಚನೆ ಇಲ್ಲದೆ ಬಗೆಹರಿಯಲಾರದ ಬಿಕ್ಕಟ್ಟು, ಒಂದು ವಿಶೇಷ ಸಂದರ್ಭ ಸದಾ ಇದ್ದೇ ಇರುತ್ತದೆ ಎಂದು ನಾನು ತೋರಿಸಿಕೊಳ್ಳಬೇಕಾಗಿರುತ್ತದೇನೋ ಎಂಬಂತೆ. ಯಾವ ಮನುಷ್ಯನ ಮಧ್ಯ ಪ್ರವೇಶವೂ ವಿಧಿ ಲಿಖಿತವನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಲಾರದಷ್ಟು ಮೂರ್ಖನೇನು ನಾನು? ಬಹುಶಃ ಅಂಥ ಮೂರ್ಖನೇ ಇರಬೇಕು. ಆದರೆ ನನಗೆ ಆ ವಿವೇಕ ಬಂದ ದಿವಸ, ಅಥವಾ ಅದರ ಆದೇಶವನ್ನು ಅಂಗೀಕರಿಸಿದ ದಿನವೇ ನಾನು ದೊರೆಯಾಗಲು ಅನರ್ಹನೆನಿಸುತ್ತೇನೆ. ನಿಜಕ್ಕೂ ಕೈ ಚೆಲ್ಲಿ ಕುಳಿತುಕೊಳ್ಳಬೇಕಾದ ಕಾಲವೊಂದಿದೆ. ಅದು ಯಾವಾಗೆಂದು ನಾನು ನಿಮಗೆ ಹೇಳುವೆ. ಬಹುಶಃ ಅದು ನಾನು ಸತ್ತು ಇಲ್ಲವಾದ ಮೇಲೆ ಅಷ್ಟೆ.

ಈ ಬಾರಿ ನನ್ನ ಅಸಹನೆಗೊಂದು ಹತಾಶೆ ಕಾದಿದೆ. ಆದರೆ ಅದು ನನಗೆ ಹೊಸದು. ನನ್ನನ್ನು ಯಾವುದು ತಡೆದು ನಿಲ್ಲಿಸಬೇಕೆಂದು ನಾನು ನಿರೀಕ್ಷಿಸುತ್ತಿರುವೆನೋ ತಿಳಿಯೆ, ಆದರೆ ಎಲ್ಲ ರಾಯ್‌ಗಳು, ಸುಲ್ತಾನರು ಮತ್ತು ರಾಜಕುಮಾರರನ್ನು ಹಿಂದೆ ಬಿಟ್ಟು ಎಲ್ಲಿಯೂ ನಿಲ್ಲಿಸದಂತೆ ಒಂದೇ ಸಮನೆ ಬೇಫಿಕೀರ್ ಬೆನ್ನೇರಿ ಚಿತ್ತೂರಿಗೆ ಧಾವಿಸಿ ಹೋಗಲು ನನಗೆ ಅರೆ ಮನಸ್ಸು. ಒಂದು ವೇಳೆ ಬೇಫಿಕೀರ್ ಕುಸಿದು ಬಿದ್ದರೆ, ನಾನು ಮಂಗಳನ ಮನೆಯ ಬಾಗಿಲು ತಟ್ಟಲು ಕೊನೆಯ ಐವತ್ತು ಅರವತ್ತು ಮೈಲಿಗಳು ಓಡಲೂ ಸಿದ್ಧ.

ಈಗ ನನ್ನ ಮಾಮೂಲಿ ಯೋಗಾಸನಗಳೊಂದಿಗೆ ಒಂದು ಸಲದ ಬದಲು ದಿನಕ್ಕೆ ಎರಡುಸಲ ಧ್ಯಾನ ಮಾಡಲು ಪ್ರಾರಂಭಿಸಿದ್ದೇನೆ. ನಾನು ತುಂಬಾ ಚೆನ್ನಾಗಿಯೇನೂ ಮಾಡುತ್ತಿಲ್ಲವೆಂದೇ ನನ್ನ ಆತಂಕ. ಬಾಬರನು ತನ್ನೆಲ್ಲ ತಿರುಮಂತ್ರಗಳಿಂದ ನನ್ನ ಮನಸ್ಸನ್ನು ವಿಚಿದ್ರಗೊಳಿಸಿ ಪಲ್ಲಟಗೊಳಿಸುತ್ತಿದ್ದಾನಷ್ಟೇ ಅಲ್ಲ, ನಾನು ಜೋರಾಗಿ ಕಿರಿಚಾಡುವಂತೆ ಮಾಡುತ್ತಿದ್ದಾನೆ. ಈ ಮೂಲಕ ಸಮತೋಲನವನ್ನು ಕಾಯ್ದುಕೊಳ್ಳುವ ನನ್ನೆಲ್ಲ ಪ್ರಯತ್ನಗಳಿಗೂ ಅಡ್ಡಿಪಡಿಸುತ್ತಿದ್ದಾನೆ. ಅದೃಷ್ಟವಶಾತ್ ಎಲ್ಲರೂ ಒಳ್ಳೆ ಉತ್ಸಾಹದ ಮನಃಸ್ಥಿತಿಯಲ್ಲಿದ್ದಾರೆ. ಹಾಗಾಗಿ ನನ್ನನ್ನು ಲೆಕ್ಕಕ್ಕಿಟ್ಟಿಲ್ಲ.

ಸುಲ್ತಾನನು ತನ್ನನ್ನು ಯುದ್ಧ ಕೈದಿ ಎಂದು ಕೊಂಡನೋ ಅಥವಾ ಗೌರವಾನ್ವಿತ ಅತಿಥಿ ಎಂದು ಭಾವಿಸಿದನೋ ಹೇಳುವುದು ಕಷ್ಟ. ಆಗೊಮ್ಮೆ ಈಗೊಮ್ಮೆ ಸಿಟ್ಟಿಗೇಳುವ

ಸಂದರ್ಭಗಳನ್ನು ಬಿಟ್ಟರೆ. ಅವನು ಇಷ್ಟವಾಗುವಂಥ ವ್ಯಕ್ತಿ ಮತ್ತು ಅವನಿಗೆ ರಾಜಕುಮಾರ ಬಹಾದುರನ ದುರಹಂಕಾರವಿರಲಿಲ್ಲ. ಅವನಿಗಿದ್ದದ್ದು ಒಂದೇ ಸಮಸ್ಯೆ. ಅವನ ವೃತ್ತಿ ಅವನಿಗೆ ತಕ್ಕಂಥದಲ್ಲ. ವಜ್ರಗಳ ವ್ಯಾಪಾರವನ್ನೋ ಸೀರೆಗಳ ವ್ಯಾಪಾರವನ್ನೋ ಮಾಡುವ ಒಳ್ಳೆ ವ್ಯಾಪಾರಿಗಯಾಗಬಹುದಾದ ವ್ಯಕ್ತಿ. ಬಹಳ ಉಲ್ಲಾಸದ, ಮೋಜಿನ ಸ್ವಭಾವದ ವ್ಯಕ್ತಿ. ಮಾತಾಡಲು ಎಷ್ಟು ಇಷ್ಟವೋ ಬೇರೆಯವರ ಮಾತನ್ನು ಕೇಳಲೂ ಅಷ್ಟೇ ಇಷ್ಟ. ಯಾವನೇ ಒಬ್ಬ ಅತ್ಯಂತ ಕೆಳಸ್ತರದ ಸೈನಿಕನೋ ಅಥವಾ ಪರಿಚಾರಕನೋ ಅವನ ಬಳಿಗೆ ಹೋಗಿ ತನ್ನ ಪ್ರಥಮ ಪ್ರಣಯದ ಗೆಲುವನ್ನೋ ಅಥವಾ ತನ್ನ ಆರುತಿಂಗಳ ಮಗನು ಸತ್ತ ವಿಚಾರವನ್ನೋ ಹೇಳಿಕೊಳ್ಳಬಹುದಾಗಿತ್ತು. ಜನಸಾಮಾನ್ಯರ ಸುಖದುಃಖಗಳಲ್ಲಿ ಸಂದಿಗ್ಧಗಳಲ್ಲಿ ಪಾಲ್ಗೊಳ್ಳುವಂಥ, ದೊರೆಯೊಬ್ಬನಿಗಿರಬಹುದಾದ ತೀರಾ ಅಪರೂಪವಾದೊಂದು ವರ ಸುಲ್ತಾನನಿಗಿತ್ತು. ದುರ್ದೈವದ ಸಂಗತಿಯೆಂದರೆ, ಅದು ಆತನ ರಾಜಯೋಗ್ಯ ಗುಣಗಳಲ್ಲೊಂದಾಗಿತ್ತು. ಅಧಿಕಾರದಲ್ಲಿದ್ದಾಗ ಮಹಮದ್ ಖಾಲ್ಜಿ ಸುಲ್ತಾನನಾಗಲು ಪ್ರಯತ್ನಿಸಿದ. ಆದರೆ ತನ್ನ ಯತ್ನದಲ್ಲಿ ತೀರ ಕಳಪೆಯಾಗಿ ಸೋತು ಹೋದನು. ಈಗ ಅವನು ಕೇವಲ ಒಬ್ಬ ಸೈನಿಕ. ಆದರೂ ಒಬ್ಬ ರಾಜ ಖೈದಿ. ಅಲ್ಲದೆ ಮತ್ತೆಂದೂ ಸೋಗು ಹಾಕಬೇಕಾಗುವುದಿಲ್ಲ. ತನ್ನಷ್ಟಕ್ಕೆ ತಾನು ಅದೆಷ್ಟು ನಿರಾಳವಾಗಿದ್ದನೆಂಬುದನ್ನು ಹಾಗೂ ಎಷ್ಟು ಸುಖ ಸಂತೋಷದಿಂದಿದ್ದನೆಂಬುದನ್ನು ಕಾಣಬಹುದಿತ್ತು.

ನಾವಿನ್ನೂ ಮನೆ ತಲುಪಲು ಹತ್ತಿರ ಹತ್ತಿರ ಮೂರು ದಿನಗಳಿವೆ ಎನ್ನುವಾಗ, ಗುಜರಾತಿನ ಮುಜಾಫರ್ ಷಾನು ತೀರಿಕೊಂಡಿದ್ದು, ಅವನ ಹಿರಿಯ ಮಗ ಸಿಕಂದರನು ಸಿಂಹಾಸನವನ್ನು ಏರಿದ್ದಾನೆಂಬ ಸುದ್ದಿ ಬಂದಿತು. ಒಂದು ಕಾಲದ ನನ್ನ ಮಿತ್ರ ಹಾಗೂ ಅತಿಥಿ ರಾಜಕುಮಾರ್ ಬಹದ್ದೂರ್ ಎಲ್ಲಿದ್ದ? ಅವನಿನ್ನೂ ತನ್ನ ಹಿಂಬಾಲಕರನ್ನು ಮತ್ತು ರಾಜ್ಯಾಧಿಕಾರವನ್ನು ಹುಡುಕಿಕೊಂಡು ಅಲೆದಾಡುತ್ತಿದ್ದಾನೆಯೆ? ಗುಜರಾತಿನ ಹೊಸ ದೊರೆ ಸುಲ್ತಾನ್ ಸಿಕಂದರನು, ತನ್ನ ಸೋದರನ ತಲೆಗೆ ಫತ್ವಾ ಹೊರಡಿಸಿದ್ದಾನೆಯೆ? ಒಂದಂತೂ ಖಂಡಿತ. ಅದೆಂದರೆ, ಬಹಾದ್ದೂರನು, ಜೀವಂತವಾಗಿರುವವರೆಗೂ ಸಿಕಂದರನಾಗಲಿ, ಅವನ ಇತರ ಸೋದರರಾಗಲಿ ನಿರಾಳವಾಗಿರುವಂತಿಲ್ಲ.

ಮನೆಗೆ ಧಾವಿಸಿ ಹೋಗಲು ನಾನು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ದೆಹಲಿ ಬಾಬರನ ವಶವಾಗಿತ್ತು. ಸುಲ್ತಾನ್ ಇಬ್ರಾಹಿಂ ಲೂದಿ ಮತ್ತು ಕಾಬೂಲಿನ ದೊರೆ ಪಾಣಿಪತ್‌ನಲ್ಲಿ ಹೋರಾಟ ನಡೆಸಿದ್ದು ಸುಲ್ತಾನನು ಮೃತಿ ಹೊಂದಿದ್ದನು. ಹರಿಕಾರನು ಸಂದೇಶವನ್ನು ಓದಿದಾಗ ಅದೆಷ್ಟು ಸರಳವೆಂದು ತೋರಿತು. ಹಿಂದೂಸ್ತಾನದ ಅತಿಮುಖ್ಯ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳಲು ಅದು ತೆಗೆದುಕೊಂಡದ್ದು ಒಬ್ಬ ಏದುಸಿರು ಬಿಡುತ್ತಿರುವ ಕುದುರೆ ಸವಾರನೊಬ್ಬನ ಕೆಲವು ಮಾತುಗಳು ಅಷ್ಟೇನೆ? ಚಿತ್ತೂರಿಗೆ ನಾನು ಧಾವಿಸಿ ಹೋಗಿ, ಉನ್ಮತ್ತನಂತೆ ತಪ್ಪಿಸುವ ಭರವಸೆ ತಾಳಿದ್ದು ಇದೇ ಅನಾಹುತವನ್ನೆ? ಇಬ್ರಾಹಿಂ ಲೂದಿಯೊಂದಿಗೆ ಹೋರಾಡಿ, ದೆಹಲಿಯನ್ನು ವಶಕ್ಕೆ ತೆಗೆದುಕೊಳ್ಳಬೇಕಾಗಿದ್ದದ್ದು ಅಪ್ಪಾಜಿ, ನಾವೆ ಹೊರತು ಬಾಬರ್ ಅಲ್ಲ.

ಬಾಬರನು, ಐದುಬಾರಿ ಆಶ್ರಯ ವಿಹೀನವಾದ ಹಿಂದೂ ಕುಶ್ ಪರ್ವತಗಳ ಹೆಪ್ಪುಗಟ್ಟಿದ ಕಣಿವೆಗಳ ಮೂಲಕ ಹಾದು, ಖೈಬರ್ ಕಣಿವೆಗಳನ್ನು ದಾಟಿ ಬಂದಿದ್ದಾನೆ. ಅಷ್ಟೇ ಅಲ್ಲ, ಪ್ರತಿಸಲವೂ ಹಿಂದೂಸ್ತಾನದೊಳಕ್ಕೆ ಮತ್ತಷ್ಟು ಮುಂದುವರಿದು ಬಂದಿದ್ದಾನೆ. ಬಾಬರನ ಜೀವನದ ಗತಿಯನ್ನು ಎಷ್ಟು ವರ್ಷಗಳಿಂದ ನಾನು ಬೆನ್ನುಹತ್ತಿದ್ದೇನೆ? ಈಗ ನಾನು ಮಾಡಬೇಕಾದ್ದೇನಿದ್ದರೂ ದೆಹಲಿಗೆ ತೆರಳಿ ಹೊಸ ಬಾದಷಹನೊಂದಿಗೆ

ಷುಖಾಮುಖಿಯಾಗುವುದು. ನಾನು ಇನ್ನು ಮೇಲೆ ಅದನ್ನು ಕೂಡ ಮಾಡಬೇಕಾದ್ದಿಲ್ಲವೆಂದು ನನಗೆ ಸ್ಪಷ್ಟವಾಗಿ ತಿಳಿದಿತ್ತು. ಈಗಲೋ ಆಮೇಲೋ ನಾವು ಭೇಟಿಯಾಗಿಯೇ ತೀರಬೇಕಾಗುತ್ತದೆಂಬುದರಲ್ಲಿ ನನಗೆ ಯಾವ ಅನುಮಾನವೂ ಇರಲಿಲ್ಲ.

* * *

ಮಾಳ್ವದ ಸೇನಾ ಕಾರ್ಯಾಚರಣೆ ನಾನು ನಾನು ಇಷ್ಟಪಟ್ಟಂತೆಯೇ ಆಗಿತ್ತು. ಇದಾರ್‌ನ ಸಿಂಹಾಸನದ ಮೇಲೆ ರಾವ್ ರೈಮಲ್‌ನನ್ನು ಪ್ರತಿಷ್ಠಾಪಿಸಿದ ನಂತರದಲ್ಲಿ ನಾನು ಅಷ್ಟೆಲ್ಲ ಇಷ್ಟಪಟ್ಟಿದ್ದ ಗೆಲುವನ್ನು ನನಗೆ ತಂದುಕೊಟ್ಟಿತು. ಚಿತ್ತೂರಿನ ಮುಕ್ಕಾಲು ಭಾಗ ಜನ ಸಮುದಾಯ. ಗಂಭೀರಾ ನದಿಯ ಮೇಲಿನ ಸೇತುವೆಯನ್ನು ದಾಟಿ, ಇಡೀ ಆಸ್ಥಾನಿಕರ ಹಾಗೂ ಚಿತ್ತೂರಿನ ಮಹಾರಾಣಾನ ಹಿಂದೆ ಕಾಯುತ್ತಿತ್ತು. ಮಹಾಪ್ರಭು ಮಹಾರಾಣಾ ತಾನು ಏರಿದ್ದ ಆನೆಯಿಂದ ಕೆಳಗಿಳಿದು, ನನ್ನ ಮತ್ತು ಮೇದಿನಿ ರಾಯ್ ಕಡೆ ಎರಡು ಹೆಜ್ಜೆ ಹಾಕಿದರು. ಇದು ಎಲ್ಲ ಶಿಷ್ಟಾಚಾರ ಮತ್ತು ವಿಶೇಷ ಗೌರವಕ್ಕೆ ತೀರ ವಿರುದ್ಧವಾದ್ದು. ಸಂದರ್ಭದ ಗಾಂಭೀರ್ಯ, ತುರ್ತು, ಇಲ್ಲವೆ ಸಂತಸವನ್ನು ಲೆಕ್ಕಕ್ಕೆ ತಂದುಕೊಳ್ಳದೆ ಮಹಾರಾಣ ಭದ್ರವಾಗಿ ಕದಲದೆ ನಿಂತಿರುತ್ತಾನೆ. ಸಾಮಂತ ಅಥವಾ ರಾಜಕುಮಾರನ ಸ್ಥಾನಮಾನವೇನೇ ಇರಲಿ, ಮುಂದೆ ಹೆಜ್ಜೆ ಹಾಕಿ ಸಾರ್ವಭೌಮನಿಗೆ ಗೌರವ ತೋರಬೇಕಾದ್ದೇನಿದ್ದರೂ ಅವನೇ. ಮೇದಿನಿ ರಾಯ್ ಮಹಾಪ್ರಭುಗಳ ಆಶೀರ್ವಾದ ಪಡೆದುಕೊಳ್ಳಲು ಇನ್ನೇನು ಮುಂದಕ್ಕೆ ಬಾಗುವುದರಲ್ಲಿದ್ದರು. ಆಗ ಅವರನ್ನು ತಡೆಯಲು ತಂದೆಯವರು ರಾಯ್ ಹೆಗಲ ಮೇಲೆ ತಮ್ಮ ಕೈಯಿಟ್ಟರು.

"ಸ್ವಾಮಿ ಏಕಲಿಂಗಜೀ ಕೃಪೆ ನಿಮ್ಮ ಮೇಲೆ ಸದಾ ಇರಲಿ. ಮಾಳ್ವದ ಪ್ರಭುವಾದ ಸುಲ್ತಾನರನ್ನು ಸೋಲಿಸಿದ ಕೂಡಲೇ ನಮ್ಮನ್ನು ಭೇಟಿಯಾಗುವ ಮೂಲಕ ನಮಗೂ ಮೇವಾಡಕ್ಕೂ ಭಾರೀ ಗೌರವ ತೋರುತ್ತಿದ್ದೀರಿ" ತಂದೆಯವರು ತಮ್ಮ ಶಿರಸ್ಸನ್ನು ಕಿಂಚಿತ್ ಅತ್ತ ತಿರುಗಿಸಿದರು. ಪ್ರಧಾನಿ ಪೂರಣ್ ಮಲ್‌ಜೀಯವರು ಗೆಲುವಿನ ಪೇಟವನ್ನು ಅವರ ಕೈಗಳಲ್ಲಿಟ್ಟರು. 'ರಜಪೂತರ ಇತಿಹಾಸದಲ್ಲಿ ಯಾವತ್ತೂ ಇಷ್ಟೊಂದು ಜನರನ್ನು ಭಾವ ಪರವಶಗೊಳಿಸಿದವರು ಯಾರೂ ಇರಲೇ ಇಲ್ಲ. ಅಂಥ ವಿಜಯಶಾಲಿಗೆ ಈ ವೀರ ವಿಜಯ ಪೇಟದ ಗೌರವವನ್ನು ಪ್ರದಾನ ಮಾಡುವುದು ನಮ್ಮ ಸೌಭಾಗ್ಯ."

"ರಜಪೂತನೊಬ್ಬನಿಗೆ, ಮೇವಾಡದ ವೀರ ವಿಜಯ ಪ್ರಶಸ್ತಿಯನ್ನು ಸ್ವೀಕರಿಸುವುದಕ್ಕಿಂತಲೂ ಮಿಗಿಲಾದ ಗೌರವ ಮತ್ತೊಂದಿಲ್ಲ ಮಹಾಪ್ರಭು. ಅದನ್ನು ನಾನು ಯಾವತ್ತೂ ಹೆಮ್ಮೆಯಿಂದ ಧರಿಸುತ್ತೇನೆ. ಆದರೆ ಈ ಅಸಾಧಾರಣವಾದ ವಿಜಯದ ಕೀರ್ತಿ ಸಲ್ಲಬೇಕಾದ್ದು ಮಹಾರಾಜ್ ಕುಮಾರ್ ಅವರಿಗೇ ಹೊರತು ನನಗಲ್ಲ ಎಂಬುದನ್ನು ಅತ್ಯಂತ ಪ್ರಾಮಾಣಿಕತೆಯಿಂದ ನಾನು ಒಪ್ಪಿಕೊಳ್ಳಬೇಕು. ಆದ್ದರಿಂದ ವೀರ ವಿಜಯ ಪ್ರಶಸ್ತಿ ನ್ಯಾಯವಾಗಿ ಅವರಿಗೆ ಸಲ್ಲಬೇಕೇ ಹೊರತು ನನಗಲ್ಲ".

ಇದು ಮೇದಿನೀ ರಾಯ್ ಅವರ ಅತಿಯಾದ ಔದಾರ್ಯವೋ ಇಲ್ಲ ಅವರ ಮೂರ್ಖ ಕೃತಘ್ನತೆಯೋ ಎಂದು ಮೇವಾಡದ ಆಸ್ಥಾನಿಕರು ತಮ್ಮ ಉಸಿರು ಬಿಗಿ ಹಿಡಿದು ಆಶ್ಚರ್ಯ ಚಕಿತರಾದರು. ತಂದೆಯವರು ಈ ಅಪಚಾರವನ್ನು ಹೊರುವ ಮನಃಸ್ಥಿತಿಯಲ್ಲಂತೂ ಇರಲಿಲ್ಲ. ಹಾಗಾಗಿ ರಾಯ್‌ರನ್ನು ಲಘುವಾಗಿ ತರಾಟೆಗೆ ತೆಗೆದುಕೊಂಡರು.

"ಮಹಾಸ್ವಾಮಿ ಈ ಯುದ್ಧ ಸಿದ್ಧತೆಯು ನಮ್ಮ ಬೊಕ್ಕಸವನ್ನು ಹೆಚ್ಚು ಕಡಿಮೆ ಖಾಲಿ ಮಾಡಿರಬೇಕು. ಆದರೆ ನಮ್ಮ ಗೌರವಾನ್ವಿತ ಅರ್ಥ ಸಚಿವ ಆದಿನಾಥಜೀಯವರು

ಹೇಳುವುದೆಂದರೆ, ಈಗ ಖಜಾನೆ ಸ್ವಲ್ಪ ಖಾಲಿಯದಂತೆನಿಸಬಹುದು. ಆದರೆ ಮಹಮದ್ ಖಾಲ್ಜಿ ಮಹಾಪ್ರಭುಗಳು ನಮ್ಮ ಬೊಕ್ಕಸಕ್ಕೆ ಜೀವ ತುಂಬಬಹುದು. ಆಗ ನಾವು ನಮ್ಮ ಪುತ್ರನಿಗೆ ಬೇರೆಯದೇ ಆದ ವೀರ ವಿಜಯ ಪೇಟದ ಗೌರವವನ್ನು ಕೊಡಮಾಡಬಹುದು ಎಂದರು."

ಪೂರಣ್ ಮಲ್‌ಜೀಯುವರು ಇನ್ನೊಂದು ಪೇಟವನ್ನು ತಮ್ಮ ಕೈಯಲ್ಲಿ ಸಿದ್ಧವಾಗಿಟ್ಟುಕೊಂಡೇ ಇದ್ದರು. ತಂದೆಯವರು ಅದನ್ನು ನನ್ನ ತಲೆಯ ಮೇಲಿರಿಸಿದರು.

"ನೀನು ತುಂಬ ಸೊಗಸಾಗಿ ಆರೋಪ ಮುಕ್ತನಾಗಿದ್ದೀ ಎಂದು ಅವರು ಹೇಳುತ್ತಿದ್ದಾರೆ ಮಗು. ಅಲ್ಲದೆ ನನಗೆ ಅತ್ಯಂತ ಅಪರೂಪದ ಹಾಗೂ ಅಮೂಲ್ಯವಾದ ಉಡುಗೊರೆಯನ್ನು ತಂದು ಕೊಟ್ಟಿದ್ದೀಯೆ. ನಿಮ್ಮ ತಾಯಿಗೆ ನನಗೆ ಮತ್ತು ಕಿರಿಯ ಸಂತಳಿಗೆ ಎಲ್ಲರಿಗೂ ನಿನ್ನ ಬಗ್ಗೆ ತುಂಬ ಹೆಮ್ಮೆಯೆನಿಸಿದೆ".

ತೇಜ್ ಮತ್ತು ಷಫಿ ಮಹಾಪ್ರಭುಗಳ ಹಾಗೂ ಮಹಮದ್ ಖಾಲ್ಜಿಯವರ ಜೊತೆಯಲ್ಲಿ ಬೆಂಗಾವಲಾಗಿ ಸಾಗುತ್ತಿದ್ದಂತೆ, ನಮ್ಮ ಹಿಂದಿದ್ದ ಯೋಧರ ಸೇನಾ ಘಟಕಗಳು ನಮ್ಮಿಂದ ದೂರ ಸರಿದವು.

"ಮಹಾಪ್ರಭುಗಳೆ, ಮಾಳ್ವದ ಸುಲ್ತಾನ್ ಮಹಾಸ್ವಾಮಿಯವರನ್ನು ತಮಗೆ ಪರಿಚಯಿಸಲು ನಮಗೆ ಹರ್ಷವಾಗುತ್ತಿದೆ".

ತನಗೆ ತಾತ್ಕಾಲಿಕವಾಗಿಯಾದರೂ ಯಾರು ಒಡೆಯನೋ ಹಾಗೂ ಸದ್ಯದಲ್ಲಿ ತಾನು ಯಾರ ಸೆರೆಯಾಳಾಗಿದ್ದಾನೋ ಆತನ ಎದುರು, ತಾನು ಎಷ್ಟು ಬಾಗಬೇಕೆಂದು ಸುಲ್ತಾನನಿಗೆ ನಿಶ್ಚಿತವಾಗಿ ಗೊತ್ತಾಗಲಿಲ್ಲ. ಆದರೆ ತಂದೆಯವರು ಇಂದು ಅತ್ಯಂತ ಅನುಗ್ರಹವನ್ನು ತೋರುವ ಕೃಪೆ ಮಾಡಿದರು. "ತಮ್ಮಂಥ ಅತ್ಯುನ್ನತ ವ್ಯಕ್ತಿಗಳು ಇಂದು ಮೇವಾಡಕ್ಕೆ ಭೇಟಿ ಕೊಟ್ಟಿದ್ದರಿಂದಾಗಿ ನಾವು ಅದೆಷ್ಟು ಗೌರವಕ್ಕೆ ಪಾತ್ರರಾಗಿದ್ದೇವೆಂಬುದನ್ನು ಮಾತಿನಲ್ಲಿ ಹೇಳಲಾರೆವು ಮಹಾಸ್ವಾಮಿ. ಚಿತ್ತೂರು ತಮ್ಮನ್ನು ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ನಮ್ಮ ಆತಿಥ್ಯದಲ್ಲಿ ತಮಗೆ ಏನೊಂದು ಕೊರತೆಯೂ ಆಗಲಾರದೆಂದು ನಾವು ನಂಬಿದ್ದೇವೆ".

ತನ್ನನ್ನು ಸೆರೆಹಿಡಿದವನ ಮುಂದೆ ತಾನೀಗ ತಲೆ ಬಾಗುವುದು ಉಚಿತವೆಂದು ಸುಲ್ತಾನನು ತೀರ್ಮಾನಿಸಿದನು. ಆನಂತರ ಜನರ ಗುಂಪು ಹುಚ್ಚೆದ್ದು ಕುಣಿಯಿತು. ಪೂರ್ತಿ ಹತ್ತು ದಿನಗಳ ಪರ್ಯಂತ ಕೇಳಿ ಬಂದ ಘೋಷಗಳೆಂದರೆ ಜೈ ಮಹಾರಾಣಾ, ಜೈ ರಾಜಾ ಮೇದಿನೀ ರಾಯ್ ಮತ್ತು ಜೈ ಮಹಾರಾಜ್‌ಕುಮಾರ್. ಇದ್ದಕ್ಕಿದ್ದಂತೆ ನನ್ನ ಅದೃಷ್ಟದಲ್ಲಿ ಆದ ಪರಿವರ್ತನೆಯಿಂದ, ತಾಯಿಗೆ ಸ್ವಲ್ಪ ಸಂತಸವುಂಟಾಯಿತು. ಆಕೆ ನನ್ನ ಹಣೆ ಮತ್ತು ಕೆನ್ನೆಯ ಮೇಲೆ ಮುತ್ತಿಟ್ಟು "ಮಗು ಆ ಕೆಟ್ಟ ಮೋರೆಯ ಮನುಷ್ಯನನ್ನು ನೀನು ನಿಜಕ್ಕೂ ಸೋಲಿಸಿದೆಯ?" ಎಂದು ಕೇಳಿದಳು.

"ಇಲ್ಲ ಮಹಾರಾಣಿಯವರೆ. ನಮ್ಮ ಸೇನಾಪಡೆಗಳು ಅವನನ್ನು ಸೋಲಿಸಿದುವು. ನಾವೆಲ್ಲರೂ ಅವನಿಗೆ ತುಂಬಾ ಕೆಟ್ಟವರಾಗಿ ಕಂಡಿರಬೇಕೆಂದು ನನ್ನ ಆತಂಕ. ನನಗೆ ಅವನು ಸ್ವಲ್ಪ ದಾರಿ ತಪ್ಪಿದವನಂತೆ ತೋರುತ್ತಾನೆ".

"ಒಳ್ಳೆಯದು. ನೀನು ಕ್ಷೇಮವಾಗಿರುವ ತನಕ ನಾನು ಸಂತೋಷವಾಗಿರುತ್ತೀನಿ. ನೀನು ಊಟ ಮಾಡಿದೆಯಾ ಮಗು?"

ಆಗ ನನಗೆ ನಗದೆ ಇರಲಾಗಲಿಲ್ಲ. ನನ್ನ ಪ್ರೀತಿಯ ಸರಳ ತಾಯಿ. ನಮ್ಮ ವಿಜಯವನ್ನು ಅತ್ಯಂತ ವಾಸ್ತವದ ದೃಷ್ಟಿಯಿಂದ ಕಂಡವಳು ಆಕೆ ಮಾತ್ರ ಎಂದು ನನಗನ್ನಿಸುತ್ತದೆ.

ರಾಣಿ ಕರ್ಮವತಿ ನನ್ನ ಬಗ್ಗೆ ತನ್ನೊಂದು ಘನ ಘೋರವಾದ ಆಶೀರ್ವಚನವನ್ನು ಉಸಿರಿದಳು "ನನಗಿದೇನೂ ಭಾರಿ ಎಂದು ಅನ್ನಿಸಲಿಲ್ಲ. ಇದ್ದಕ್ಕಿದ್ದ ಹಾಗೆ ಅತಿ ಬೇಗ ಮೇಲಕ್ಕೆ ಏರಿದವರು ಅತಿ ಬೇಗ ಕೆಳಕ್ಕೆ ಬೀಳುತ್ತಾರೆ."

ನನ್ನೆಲ್ಲ ಅಹಿತ ಚಿಂತಕರ ಮಹಾರಾಣಿ, ನೀನು ಹೇಳಿದ ಮಾತನ್ನು ಒಪ್ಪುತ್ತೇನೆ. ನನ್ನ ವಿಜಯ ನನಗೂ ಕೂಡ ಏನೂ ದೊಡ್ಡದೆನಿಸಿಲ್ಲ. ನನ್ನನ್ನು ತಪ್ಪು ತಿಳಿಯಬೇಡ. ಅದೇನು ಮಹತ್ವವಲ್ಲದ ಯುದ್ಧವಲ್ಲ. ಅಲ್ಲದೆ ವಾಸ್ತವವಾದ ಯುದ್ಧಕ್ಕೆ ಅದೊಂದು ಪೂರ್ವ ಪೀಠಿಕೆ ಹಾಗೂ ಅತ್ಯುತ್ಕೃಷ್ಟವಾದ ತರಬೇತಿ ಮತ್ತು ಅನುಭವವನ್ನು ನೀಡಿದ ಯುದ್ಧ. ನಾವು ಮಾಳ್ವವನ್ನು ಮಣಿಸಿದ್ದೇವೆ, ಸೋಲಿಸಿಲ್ಲ. ದೆಹಲಿಯ ಸಿಂಹಾಸನದ ಮೇಲೆ ಹೊಸಬನೊಬ್ಬ ಬಂದು ಕೂರುತ್ತಾನೆ.

* * *

ಸದ್ಯಕ್ಕಂತೂ ಬಾಬರ್, ಮೇವಾಡದ ಜನತೆಗೆ ದೂರದಲ್ಲಿದ್ದಾನೆ ಮತ್ತು ಅವನೊಂದು ಮಿಥ್ಯೆ. ಈಗ ಮನೆಯಲ್ಲೊಂದು ಸಂಭ್ರಮವಿದೆ. ಅದನ್ನು ತಡೆಯುವುದು ನನಗೂ ಕಷ್ಟವಾಗುತ್ತಿದೆ. ಸುಲ್ತಾನ್ ಮಹಮದ್ ಖಾಲ್ಜಿಯು ಮಂದಾಸೌರ್ ಅನ್ನು ನಮಗೆ ಒಪ್ಪಿಸಿಕೊಟ್ಟಿದ್ದಾನೆ. ಮೇದಿನಿ ರಾಯ್ ಈಗ ಚಂದೇರಿಯ ರಾಯ್ ಆಗಿದ್ದಾರೆ. ಸಿಲ್ಹಾದಿಗೆ ಭಿಲ್ಸಾ, ರೈಸನ್ ಮತ್ತು ಸಾರಂಗ್ ಪುರಗಳನ್ನು ಜಹಗೀರಾಗಿ ನೀಡಲಾಗಿದೆ. ಚಿತ್ತೂರಿನಲ್ಲಿ ಹನ್ನೆರಡು ದಿವಸಗಳವರೆಗೆ ವಿಜಯೋತ್ಸವವನ್ನು ಆಚರಿಸಲಾಯಿತು. ಈ ಬಾರಿ ಮಹಾಪ್ರಭುಗಳು ಉತ್ಸವಗಳನ್ನು ಹತ್ತು ದಿನಗಳವರೆಗೂ ವಿಸ್ತರಿಸಬೇಕೆಂಬ ನಿರೂಪ ಹೊರಡಿಸಿದ್ದಾರೆ. ಕಳೆದ ಬಾರಿ ನನ್ನಿಂದ ಕಸಿದುಕೊಳ್ಳಲಾದ ವಿಜಯೋತ್ಸವವನ್ನು ಮಹಾರಾಣಾ ಅವರು ಸರಿಪಡಿಸಹೊರಟಿದ್ದಾರೆಯೆ? ಅಥವಾ ತಮ್ಮ ಅನುಮತಿ ಇಲ್ಲದೆ ರಣಥಂಬೂರ್‌ನಿಂದ ಹಿಂತಿರುಗಿರುವ ನನ್ನ ಸೋದರ ವಿಕ್ರಮಾದಿತ್ಯನಿಗೆ ಒಂದು ಅಂಶವನ್ನು ಮನದಟ್ಟು ಮಾಡಿಸಲು ಹೊರಟಿದ್ದಾರೆಯೆ?

"ರಾಜಕುಮಾರ ವಿಕ್ರಮಾದಿತ್ಯ, ರಾಜಧಾನಿಯಲ್ಲಿ ನಿನ್ನನ್ನು ಕಾಣುತ್ತಿರುವುದು ಅಧಿಕೃತವಲ್ಲದಿದ್ದರೂ, ಸಂತೋಷವೇ". ತಂದೆಯವರು ನನ್ನ ಸೋದರನನ್ನು ವೈಯಕ್ತಿಕವಾಗಿ ಭೇಟಿಯಾಗಲು ನಿರಾಕರಿಸಿದ್ದರು. ಮಾಳ್ವದ ಯುದ್ಧದಲ್ಲಿ ವಿಜಯಿಗಳಾದವರನ್ನು ಗೌರವಿಸುವ ಸಲುವಾಗಿ ಕರೆದಿದ್ದ ರಾಜದರ್ಬಾರಿನಲ್ಲಿ ಮಾತನಾಡುವುದನ್ನು ಆಯ್ಕೆಮಾಡಿಕೊಂಡಿದ್ದರು. 'ಆದರೆ ನಾವು ಆಹ್ವಾನ ಪತ್ರಿಕೆ ಕಳಿಸಿದ್ದು ನಿನ್ನ ಮಾವ ಸೂರಜ್ ಮಲ್‌ಗೆ. ಈಗ ನಾವು ರಣಥಂಬೂರ್ ರಕ್ಷಣೆಗೆ ಯಾರೂ ಇಲ್ಲೆಂದು ಹಾಗೂ ಯಾರಾದರೂ ಶತ್ರು ಅದರ ಮೇಲೇನಾದರೂ ಕಣ್ಣಿಟ್ಟಿದ್ದರೆ, ಹೆಚ್ಚಿನ ವಿರೋಧವಿಲ್ಲದೆ ಅದನ್ನು ವಶಪಡಿಸಿಕೊಳ್ಳಲೆಂದು ನಾವು ತಿಳಿಯಬೇಕೆ?"

ತನ್ನ ಮಗ ಅವಿವೇಕದ ಮಾತನ್ನೇನಾದರೂ ಆಡಿ ಬಿಡುವುದಕ್ಕೆ ಮುನ್ನವೆ, ರಾಣಿ ಕರ್ಮವತಿ ಬಾಯಿ ತೆರೆದಳು. "ಆ ತಪ್ಪಿಗೆಲ್ಲಾ ನಾನೇ ಹೊಣೆ ಮಹಾಪ್ರಭು". ನನ್ನ ಕೈಯನ್ನು ಹಿಡಿದೆಳೆಯುತ್ತ "ಅವನು ಇಲ್ಲದೆ ಇರುವುದು ನನಗೆ ತುಂಬ ಅಸಹನೀಯವಾಗಿತ್ತು. ಅಲ್ಲದೆ, ರಾಜಕುಮಾರ ವಿಕ್ರಮಾದಿತ್ಯ ಈ ಸಮಯದಲ್ಲಿ ಇಲ್ಲಿದ್ದು ಮಹಾರಾಜ್ ಕುಮಾರನ ವಿಜಯೋತ್ಸವದ ಸಂತೋಷವನ್ನು ಅವನೊಂದಿಗೆ ಹಂಚಿಕೊಳ್ಳದಿದ್ರೆ, ಮಹಾರಾಜ್‌ಕುಮಾರ್ ತುಂಬ ಆತಂಕಕೊಳಗಾಗುತ್ತಾನೆಂದು ನನಗೆ ಗೊತ್ತಿತ್ತು".

ಎಂದಿಗೂ ಎದೆಗೆಡದಿರುವ ನನ್ನ ಮಲತಾಯಿಯೇ, ಇದು ತುಂಬಾ ಒಳ್ಳೆಯ ಹೆಜ್ಜೆ.

"ಮಾನ್ಯ ಮಹಾರಾಣಿಯವರೆ. ಈ ಸಭೆಗೆ ತಮ್ಮ ಅತಿಯಾದ ಮಾತೃ ವಾತ್ಸಲ್ಯ ತೀರಾ ಅಸಹಜವಾಗಿ ಕಾಣುತ್ತಾ ಇದೆ. ಅಮ್ಮಂದಿರಿಗೆ ತಮ್ಮ ಮಕ್ಕಳನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಿರುವುದೇ ಕೆಲಸ ಹಾಗೂ ಅಪ್ಪಂದಿರಿಗೆ ಅವರನ್ನು ಮನೆಯಿಂದ ಹೊರಕ್ಕೆ ಕಳಿಸುತ್ತಿರುವುದೇ ಕೆಲಸ'.

ನನ್ನನ್ನು ನಾಟಕೀಯವಾದ ರೀತಿಯಲ್ಲಿ ಆಲಿಂಗಿಸಿಕೊಳ್ಳುತ್ತಾಳೇನೋ ಎಂದು ನಾನು ತಿಳಿದುಕೊಳ್ಳುವ ಮುನ್ನವೇ ರಾಣಿಯು ನನ್ನ ಕೈ ಬಿಟ್ಟಳು. "ನಿನ್ನ ಅದೃಷ್ಟ ಅತ್ಯಂತ ಎತ್ತರಕ್ಕೆ ಏರುವಂತಾಗಲಿ, ಸಾಧ್ಯವಾರೆ ಇನ್ನೂ ಎತ್ತರಕ್ಕೆ ಹೋಗಲಿ ಮಹಾರಾಜ್‌ಕುಮಾರ್. ನಿನ್ನ ತಮ್ಮ ವಿಕ್ರಮಾದಿತ್ಯನ ಯೋಗಕ್ಷೇಮವನ್ನೂ ನೋಡಿಕೋ".

ನಿಜವಾಗಿಯೂ ಕಾಳಜಿ ವಹಿಸಬೇಕಾಗಿದ್ದದ್ದು ಯಾರ ಬಗ್ಗೆಯಾದರೂ ಆಗಿದ್ದರೆ ಅದು ನನ್ನ ಬಗ್ಗೆ. ನಾನು ಮರಣವನ್ನಾಲಂಗಿಸುತ್ತಿದ್ದೇನೆಂಬ ಭಾವ ನನಗೆ ಉಂಟಾಗಿತ್ತು.

ನನ್ನ ಹೆಂಡತಿ ನನ್ನ ಕಡೆ ನೋಡುತ್ತಿದ್ದುದನ್ನು ಕೊಠಡಿಯೊಳಗಿನಿಂದ ನೋಡಿದೆ. ಅವಳು ಬೇಕೆಂದೇ ಯಾರ ಗಮನಕ್ಕೂ ಬಾರದ ಹಾಗೆ, ಹಿನ್ನೆಲೆಯಲ್ಲೇ ಇದ್ದು ಬಿಟ್ಟಿದ್ದಳು. ಕಾರಣ; ಮೇವಾಡದ ತೀರಾ ಸಾಮಾನ್ಯ ಜನರು ಹಾಗಿರಲಿ, ಆಸ್ಥಾನಿಕರು ಕೂಡ, ತಾವೆಲ್ಲಿದ್ದೇವೆಂಬುದನ್ನೇ ಮರೆತು ಯಾರೂ ಯೋಚಿಸಲೂ ಸಾಧ್ಯವಿಲ್ಲದಂಥದನ್ನು ಮಾಡಿಬಿಟ್ಟಾರೆಂಬ ಆತಂಕ. ಅದೆಂದರೆ ಮಹಾಪ್ರಭುಗಳತ್ತ ಬೆನ್ನು ತಿರುಗಿಸಿ, ಕಿರಿಯ ಸಂತಳ ಪಾದಗಳಿಗೆ ದೀರ್ಘ ದಂಡ ನಮಸ್ಕಾರ ಮಾಡಿ ಬಿಡುವುದು.

ನನ್ನ ತಮ್ಮನಲ್ಲಿ ಇದ್ದಕ್ಕಿದ್ದಂತೆ ಉಕ್ಕಿನಿಂತ ಸೋದರ ಭಾವದ ಉಕ್ಕಂದವನ್ನು ನಾನು ನಿಭಾಯಿಸಬಲ್ಲೆ. ಆದರೆ, ತಂದೆಯವರ ಹಾಗೂ ರಾಣಿ ಕರ್ಮವತಿಯ ನಡುವಿನ ಸಂಬಂಧ ಯಾವುದೋ ಒಂದು ಸಂಧಿಕಾಲವನ್ನು ತಲುಪಿದೆ ಎಂಬ ಪೂರ್ವ ಸೂಚನೆ ನನಗೆ ಸಿಕ್ಕಿತ್ತು. ಬೇರೆ ಯಾವುದೇ ರಾಣಿ ಅಥವ ಉಪಪತ್ನಿಗಿಂತ ಹೆಚ್ಚು ಬಾರಿ ಮಹಾರಾಜರೊಂದಿಗೆ ಈಗಲೂ ಕೂಡುತ್ತಿರುವ ಸಂಭವ ಇದೆ. ಆದರೆ ಆಕೆ ಅವರಿಂದ ಕಳಚಿಕೊಂಡು ಬಿಟ್ಟಿದ್ದಾಳೆಂಬ ಒಂದು ಮಾತಿನಿಂದ ವಿವರಿಸಲಾಗದ ಭಾವ ನನಗೆ ಉಂಟಾಗಿ ಬಿಟ್ಟಿತ್ತು. ಈ ಹಿಂದೆ, ಅವರಿಂದ ಆಕೆ ಎಷ್ಟೇ ಅಸಮಾಧಾನ ಗೊಂಡಿದ್ದರೂ, ಅಸಂತುಷ್ಟ ಗೊಂಡಿದ್ದರೂ, ಅಂತಿಮ ತೀರ್ಮಾನಕೊಡುವವರು ಅವರೇ ಆಗಿರುತ್ತಿದ್ದರು. ಆಕೆ ಅದರ ಪರಿಹಾರಕ್ಕೆ ಗತ್ಯಂತರವಿಲ್ಲದೆ, ಅವರತ್ತಲೇ ಹೋಗುತ್ತಿದ್ದಳು ಹಾಗೂ ಉಪಾಯವಾಗಿ ಮತ್ತೆ ಪುಸಲಾಯಿಸಿ ಅವರ ಪ್ರೀತಿಯನ್ನು ಪಡೆದುಕೊಂಡು ಬಿಡುತ್ತಿದ್ದಳು. ಈಗ ಆಕೆ ಒಬ್ಬ ಹತಾಶ ವ್ಯಕ್ತಿ ಎಂದೇ ನನ್ನ ಗುಮಾನಿ. ಬಹುಶಃ ನನ್ನ ಹೆಂಡತಿಯ ಸ್ಥಾನಮಾನದಲ್ಲಿನ ಏರಿಕೆಗೂ ಇದಕ್ಕೂ ಸಂಬಂಧವಿತ್ತೆನಿಸುತ್ತದೆ. ಮಹಾಪ್ರಭುಗಳಿಗೂ ರಾಜಕುಮಾರಿಗೂ ನಡುವೆ ಲೈಂಗಿಕ ಸಂಬಂಧದಂಥದೇನೂ ಇಲ್ಲವೆಂದು ಹಾಗೂ ಕಿರಿಯ ಸಂತಳಿಗೆ ತನ್ನ ಸ್ವಂತ ಲಾಭಕ್ಕಾಗಿ ರಾಜಕೀಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಕಲ್ಪನೆ ಕೂಡ ಇರಲಿಲ್ಲವೆಂದು ರಾಣಿಗೆ ತನ್ನ ಕಡೆಯ ಗುಪ್ತಚರದಿಂದ ತಿಳಿದಿತ್ತೆಂದು ನನಗೆ ಖಚಿತವಾಗಿ ಗೊತ್ತಿತ್ತು. ಇದು ಇರುವದನ್ನು ತೀರಾ ಸರಳಗೊಳಿಸಿ ಬಿಡುವುದುದಾಗಿದೆ. ನಾನು ಹಾಗೇಕೆ ಹೇಳುತ್ತಿದ್ದೇನೆಂದರೆ, ಪುರುಷನನ್ನು ನಿಯಂತ್ರಣದಲ್ಲಿಡುವ ದಾರಿಯೆಂದರೆ ಲೈಂಗಿಕತೆ ಎಂದು ರಾಣಿಯು ತನ್ನ ಅಂತರಂಗದ ಆಳದಲ್ಲಿ ನಂಬಿದ್ದಳು. ಸಮಯ ಮುಗಿಯುತ್ತಾ ಹೋಗುತ್ತಿತ್ತು ಈಗ ಆಕೆ ನಿರ್ಣಾಯಕವಾದ ಹೆಜ್ಜೆ ಹಾಕದಿದ್ದರೆ, ಆಕೆಯ ಮಗ ವಿಕ್ರಮಾದಿತ್ಯನಿಗೆ ಮೇವಾಡದ ಸಿಂಹಾಸನವನ್ನು ಸಾಧಿಸಿಕೊಳ್ಳುವುದು ಕಷ್ಟವಾದೀತು.

ಆಕೆಯ ಬಗ್ಗೆ ನನಗೆ ದಿಗಿಲಾಯಿತು. ಆದರೆ ಸದ್ಯಕ್ಕೆ ನನಗೆ ಭಯವುಂಟಾದದ್ದು ತಂದೆಯವರ ಸಲುವಾಗಿ.

ಅಧ್ಯಾಯ 37

ಬದುಕಿನ ಸತ್ವ ಕಾರಣ ಮತ್ತು ಪರಿಣಾಮಗಳಲ್ಲ. ಅದೇನಿದ್ದರೂ ವಕ್ರತೆ. ಯಾರೊಬ್ಬರ ಕ್ರಿಯೆಗಳ ಪರಿಣಾಮಗಳನ್ನು ಹೇಳುವಂಥದು ಇರುವುದಿಲ್ಲ. ಬಿತ್ತಿದಂತೆ ಬೆಳೆ ಎಂಬುದು ತುಂಬ ಸುಂದರವಾದ ಮಾತು ನಿಜ. ಆದರೆ ಅಂಥ ಅಗ್ಗದ ಭಾವನೆಯನ್ನು ನೀವು ನಂಬಿದಿರಾದರೆ ಭಾರೀ ಗಂಭೀರವಾದ ತಪ್ಪು ಮಾಡಿದಂತಾಗುತ್ತದೆ. ಕೇವಲ ಮರುಭೂಮಿಗಳು ಇಲ್ಲ. ಪಾಪದ ಪ್ರತಿಫಲ ನರಕವೇ ಆಗಬೇಕೆಂದಿಲ್ಲ. ಒಳ್ಳೆಯತನವೆಂಬುದು ಅನೇಕ ವೇಳೆ ದ್ರೋಹದೊಂದಿಗೆ ಕೂಡಿರುತ್ತದೆ. ಕಾರಣ ಜಗತ್ತು ದೃಢವಾಗಿ ಸ್ಥಾಪಿತವಾಗಿರುವುದೇ ಯಾದೃಚ್ಛಿಕತೆಯ ತತ್ತ್ವದ ಮೇಲೆ.

ಇಷ್ಟೆಲ್ಲ ಜನರಲ್ಲಿ ಮೇದಿನಿರಾಯ್ ನನ್ನನ್ನು ಮುಗಿಸಿ ಬಿಡುತ್ತಾರೆಂದು ಯಾರು ತಾನೆ ಊಹಿಸಿದ್ದರು?

"ನಿಮ್ಮ ಬಗ್ಗೆ ಹಾಗೂ ನಿಮ್ಮ ಕುಟುಂಬದ ಬಗ್ಗೆ ನನಗೆ ಅದೆಂಥ ಅಪಾರವಾದ ಗೌರವವಿದೆ ಎಂಬುದನ್ನು ನಾನು ಮತ್ತೆ ಒತ್ತಿ ಹೇಳಬೇಕಾಗಿಲ್ಲ ಮಹಾಸ್ವಾಮಿ. ಅದಕ್ಕೆ ಕಾರಣಗಳನ್ನು ಕೂಡಿ ಎಂದು ಕೇಳಬೇಡಿ. ಆದರೆ ಇದನ್ನು ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ."

"ಆದರೆ ಅದಕ್ಕೆ ತೀರಾ ತಡವಾಯಿತು ಮಹಾರಾಜ್‌ಕುಮಾರ್. ಈ ಕೆಲಸ ಆಗಿಹೋಯಿತು ಅಂತಲೇ ಲೆಕ್ಕ. ಸ್ವತಃ ರಾಣಾ ಅವರೇ ಇದಕ್ಕೆ ತಮ್ಮ ಒಪ್ಪಿಗೆ ಕೊಟ್ಟಿದ್ದಾರೆ".

ಮೇದಿನಿರಾಯ್ ಪಾನಗೋಷ್ಠಿಗೆಂದು ನನ್ನನ್ನು ಅತಿಥಿ ಅರಮನೆಗೆ ಕರೆಸಿಕೊಂಡಿದ್ದರು. ಅಲ್ಲಿ ಅರಮನೆಯ ಮಾಡಿನ ಮೇಲೆ ಸಂಜೆಯ ಕೊರೆಯುವ ಗಾಳಿಗೆ ಮೈಯೊಡ್ಡಿ ಕುಳಿತಿದ್ದೆವು.

"ಇದನ್ನು ಹೇಗೆ ಹೇಳಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ಆದರೆ ಬಹುಶಃ ಮೇವಾಡ ನಿಮಗೆ ಮಾಡಿದ್ದಕ್ಕೆ ಪ್ರತಿಯಾಗಿ ನೀವು ತುಂಬ ಋಣಿಗಳಾಗಿದ್ದೀರಿ ಎನಿಸುತ್ತದೆ".

"ನನ್ನನ್ನು ಯಾರೂ ಒತ್ತಾಯ ಮಾಡುತ್ತಿಲ್ಲ. ಮಹಾಪ್ರಭುಗಳಿಗೆ ಮತ್ತು ನಿಮಗೆ ನಾನು ಕೃತಜ್ಞ. ಕಳೆದ ಕೆಲವು ತಿಂಗಳುಗಳಲ್ಲಿ ನನಗೆ ನಿಮ್ಮ ವಿಷಯಕ್ಕೆ ತುಂಬ ಪ್ರೀತಿ ಉಂಟಾಗಿರುವ ಸಾಧ್ಯತೆ ಇದೆಯಲ್ಲವೆ?"

"ಈ ಗೌರವವನ್ನು ನಾನು ಲಘುವಾಗಿ ಪರಿಗಣಿಸುತ್ತಿಲ್ಲ ಅಥವಾ ನಾನು ಕೃತಘ್ನನೂ ಅಲ್ಲ. ಆದರೆ ನಮ್ಮನ್ನು ಯುದ್ಧಕ್ಕೆ ಆಹ್ವಾನಿಸುವ ನಗಾರಿಗಳು ಬಾಬರನ ಸೈನಿಕ ಶಿಬಿರದಲ್ಲಿ

ಮೊಳಗುತ್ತಿರುವುದು ನನಗೆ ಕೇಳಿಸುತ್ತಿದೆ. ಮೇವಾಡ ಮತ್ತು ಅದರ ಮಿತ್ರ ರಾಜ್ಯಗಳು ಕೈಗೊಳ್ಳಲಿರುವ ಕಾರ್ಯಾಚರಣೆ ಕುರಿತು ತೀರ್ಮಾನಿಸಿದ ಮೇಲೆ ನಾವು ಈ ವಿಷಯವನ್ನು ಕೈಗೆತ್ತಿಕೊಳ್ಳಬಹುದು".

"ದೆಹಲಿಯ ನೂತನ ದೊರೆಯೊಂದಿಗೆ ಹೋರಾಡಬೇಕೆಂದು ನಾವು ನಿರ್ಧರಿಸಿದ್ದೇ ಆದರೆ, ನಾನು ಊಹಿಸಿರುವಂತೆ ನಾವು ಹಾಗೆ ನಿರ್ಧರಿಸಿಯೇ ತೀರುತ್ತೇವೆ, ಯುದ್ಧದ ಫಲಿತಾಂಶ ಹೊರ ಬರುವವರೆಗೂ ನಮಗೆ ಕಾಯಲು ಹೇಳುವಿರಾ?"

"ಹಾಗೆ ಭಾವಿಸುವುದು ನ್ಯಾಯ ತಾನೆ? ನೀವೂ ಅದನ್ನು ಒಪ್ಪುತ್ತೀರಲ್ಲವೆ? ಯುದ್ಧದಿಂದ ಎಲ್ಲರೂ ವಾಪಸ್ ಬರಲ್ಲವಲ್ಲ".

"ಹೌದು ಹಾಗೇನೇ, ನಾನೊಂದು ವೇಳೆ ಹಿಂತಿರುಗಿ ಬರದೆ ಇದ್ದರೆ ನೀವು ನನ್ನ ಕುಟುಂಬದ ರಕ್ಷಾ ಕವಚ ಮತ್ತು ಬೆಳಕಾಗಬೇಕು".

"ನಮ್ಮ ಎರಡೂ ಕುಟುಂಬಗಳ ನಡುವೆ ಔಪಚಾರಿಕ ಮೈತ್ರಿ ಇಲ್ಲದೆ ಇದ್ದಾಗ್ಯೂ ನಾವು ಈಗಾಗಲೇ ಅದು ಆಗಿದ್ದೀವಿ ಮಹಾಸ್ವಾಮಿ".

ಬಹುಶಃ ನಾನು ಆ ಕೊನೆಯ ವಾಕ್ಯವನ್ನು ಸ್ವಲ್ಪ ಉದ್ವೇಗದಿಂದ ಹೇಳಿದ್ದಿರಬೇಕು. ಕಾರಣ ಮೇದಿನಿರಾಯ್ ಜೋರಾಗಿ ನಕ್ಕರು.

"ಮೆರ್ತಾದ ರಾಜಕುಮಾರಿಗೆ ನೀವೆಷ್ಟು ನಿಷ್ಠರಾಗಿದ್ದೀರಿ ಎಂದು ನಮಗೆ ಗೊತ್ತು. ಆದರೆ ಸಂತಳು ಹೆಂಡತಿಗೆ ಪರ್ಯಾಯವಲ್ಲ. ನನ್ನ ಮಗಳು ತುಂಬಾ ಪ್ರೀತಿಯ ಹುಡುಗಿ ಮಹಾಸ್ವಾಮಿ. ಯಾವುದೇ ಮನೆಗಾದರೂ ಆಕೆ ಸಂತಸವನ್ನು ತರಬಲ್ಲಳು. ಆದರೆ ಅವಳ ಹೃದಯದಲ್ಲಿ ಚಿತ್ತೂರಿಗೆ ವಿಶೇಷ ಸ್ಥಾನವಿದೆ. ಅವಳ ತಂದೆಯನ್ನೂ ಸೋದರನನ್ನೂ ನೀವು ರಕ್ಷಿಸಿದಂದಿನಿಂದ ಅವಳು ನಿಮ್ಮನ್ನು ಪೂಜಿಸುತ್ತಿದ್ದಾಳೆ."

"ನಾನು ಬಲಿಪೀಠದ ಮೇಲೆ ಕುಳಿತುಕೊಳ್ಳಲಿಚ್ಛಿಸುವುದಿಲ್ಲ. ಒಂದು ಕುಟುಂಬಕ್ಕೆ ಒಬ್ಬ ಸಂತಳು ಸಾಕುಬೇಕಾದಷ್ಟಾಯಿತು".

ನನ್ನ ದನಿಯಲ್ಲಿನ ತೀಕ್ಷ್ಣತೆಯಿಂದ ನಾನೆಷ್ಟು ದಿಗ್ಭ್ರಮೆಗೊಂಡೆನೋ, ರಾಯ್ ಕೂಡ ಅಷ್ಟೇ ದಿಗ್ಭ್ರಮೆಗೊಂಡರು.

"ನನ್ನ ಮಗಳಿಗೆ ರಾಜಕುಮಾರಿಯ ಜಗತ್ತು ಏನು ಎಂದು ತಿಳಿದಿದೆ. ನಮ್ಮ ರಾಜ್ಯದ ಬಹಳಷ್ಟು ಜನತೆಯ ಹಾಗೆ ಅವಳು ಕೂಡ ಆಕೆಯ ಸಂಗಡ ಇರಲು ಹಾಗೂ ಆಕೆಯ ಆಪ್ತಳಾಗಬೇಕೆಂದು ಬಯಸುತ್ತಾಳೆ. ಆದರೆ ಅವಳು ಸಂತಳಲ್ಲ ಮಹಾಸ್ವಾಮಿ. ಆಕೆ ತಮ್ಮ ಹಾಸಿಗೆಯಲ್ಲಿ ಎಲ್ಲ ಸಾಮಾನ್ಯರಂತೆ ರಕ್ತಮಾಂಸಗಳಿಂದಾದ ಜೀವಂತ ಹೆಣ್ಣಾಗಿರುತ್ತಾಳೆ."

ನಾನಲ್ಲದೆ, ನನ್ನ ಎರಡನೇ ಮದುವೆಯನ್ನು ವಿರೋಧಿಸಿದ ಏಕೈಕ ವ್ಯಕ್ತಿಯೆಂದರೆ, ರಾಣಿ ಕರ್ಮವತಿ.

ತಂದೆಯವರು ಮತ್ತು ನಾನು ಅತಿಥಿಗಳ ಪಟ್ಟಿಯ ಮೇಲೆ ಕಣ್ಣಾಡಿಸುತ್ತಿದ್ದಾಗ, ಆಕೆ ಮಧ್ಯೆ ಪ್ರವೇಶಿಸಿ "ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಿ. ಅವನು ಎಲ್ಲವನ್ನೂ ಹಾಳುಗೆಡವುತ್ತಾನೆ. ಮೇದಿನಿರಾಯ್‌ನೊಂದಿಗಿನ ನಮ್ಮ ಸಂಬಂಧವನ್ನು ಅವನು ಹಾಳುಮಾಡುತ್ತಾನೆ ಅನ್ನುವುದನ್ನು ಬಿಟ್ಟರೆ, ಅದಕ್ಕೆ ನಾನು ಅಷ್ಟೊಂದು ತಲೆಕೆಡಿಸಿಕೊಳ್ಳುವುದಿಲ್ಲ." ಆ ನಂತರ ಆಕೆ ನನ್ನತ್ತ ತಿರುಗಿದಳು. "ನೀವು ಬುದ್ಧಿ ಜೀವಿಗಳು ಎಂಥವರು ಎಂದು ನಮಗೆ

ಗೊತ್ತಿದೆ. ನೀವು ಕೈಯಿಂದ ಕಿವಿಯನ್ನು ಮುಚ್ಚಿಕೊಂಡು, ಸಮುದ್ರದ ಮೊರೆತ ನನಗೆ ಕೇಳಿಸುತ್ತಿದೆ ಎಂದು ಭಾವಿಸುವವರು ನೀವು ಎಂದು ನಮಗೆ ತಿಳಿದಿದೆ. ನಿಂತ ನೀರು ಯಾವಾಗಲೂ ಆಳವಾಗಿ ಹರಿಯುವುದಿಲ್ಲ ಮಹಾರಾಜ್‌ಕುಮಾರ್. ಅದು ಕೇವಲ ಖಾಲಿ ಸುರಂಗದೊಳಗೆ ಬೀಸುವ ಗಾಳಿಯಂತೆ".

ಎಂದಿನಂತೆ ನನ್ನ ಮಲತಾಯಿಯ ಗೂಢಾರ್ಥದ ಭಾಷೆ ನನ್ನ ಕುತೂಹಲ ಕೆರಳಿಸುತ್ತದೆ. ನನ್ನ ಮಲತಾಯಿಯ ಮಾತುಗಳು ಸೂಕ್ಷ್ಮ ಪರಿಶೀಲನೆಯನ್ನು ತಾಳಿಕೊಳ್ಳುವುದಿಲ್ಲವೆನ್ನುವುದು ಅಷ್ಟು ಮುಖ್ಯವಲ್ಲ. ಅವಳ ಮಾತಿನ ಸರಣಿಯಲ್ಲಿ ಗಾದೆ ಮಾತಿನಂಥ ಹರಳುಗಟ್ಟುವಿಕೆ ಇರುತ್ತದೆ. ಈ ವಾಕ್ ಸರಣಿಯು ಪರಸ್ಪರ ಹೊಂದಾಣಿಕೆಯಿಲ್ಲದ ಚಿತ್ರಗಳ ಸರಣಿಯೊಂದನ್ನು ನಿರ್ಮಿಸುವುದರಲ್ಲಿ ಯಶಸ್ವಿಯಾಗುತ್ತದೆ. ಆ ಚಿತ್ರಗಳು ರೂಪಕದ ಬಳಗಕ್ಕೆ ಸೇರಿರುವ ಕಾರಣದಿಂದಲೋ ಇಲ್ಲವೆ ಅವುಗಳಲ್ಲಿ ಸಾಮಾನ್ಯ ಎಳೆಯೊಂದು ಇರುವ ಕಾರಣದಿಂದಲೋ ಅವು ನಿರ್ಬಂಧಪಡಿಸುವಂಥವಾಗಿರುತ್ತವೆ. ಈ ತಾಯಿ ಕವಿ ಹೃದಯವುಳ್ಳವಳೆ? ಅವಳು ಏನು ಹೇಳುತ್ತಿದ್ದಾಳೆಂಬುದು ನಮಗೆ ಗೊತ್ತಾಗುವುದಿಲ್ಲ. ಅದಕ್ಕಿಂತ ಕೆಟ್ಟದಾದ್ದೆಂದರೆ ಅರ್ಥವಾಗದ ಹಾಗೆ ಕಿಚಪಿಚ ಎಂದು ಹೇಳುತ್ತಿದ್ದಾಗಲೂ ಅವಳು ಏನೋ ಗಹನವಾದ್ದನ್ನು ಹೇಳುತ್ತಿರುವಂತೆ ತೋರುತ್ತದೆ. ನನ್ನೊಂದಿಗೆ ಆಕೆಯ ಮಾತಿನ್ನೂ ಮುಗಿದಿಲ್ಲ.

"ಅತಿ ಹೆಚ್ಚು ಸದ್ದು ಮಾಡುವ ಕೊಡಗಳು ಯಾವುವೆಂದು ನಾನು ನಿನಗೆ ಹೇಳಬೇಕೆ? ಅಯ್ಯಾ ರಾಜಕುಮಾರ ನೀನು ಮದುವೆಯಾದ ದಿನ. ಪಶ್ಚಾತ್ತಾಪ ಪಡುತ್ತೀಯಾ. ಆ ಬಡಪಾಯಿ ಹುಡುಗಿಯನ್ನು ದೇವರು ಕಾಪಾಡಲಿ".

"ಮಹಾರಾಣಿಯವರೇ ನೀವು ಭವಿಷ್ಯ ಹೇಳುವುದು ಮುಗಿದಿದ್ದರೆ ರಾಜಕುಮಾರ ಮತ್ತು ನಾನು ತೀರಾ ತುರ್ತಾದ ಕೆಲವು ವ್ಯಾವಹಾರಿಕ ಕಾರ್ಯಗಳನ್ನು ಮಾಡುವುದಕ್ಕೆ ಮರಳಬಹುದು". ತಂದೆಯವರು ತೀರಾ ಅಸಹನೆಯಿಂದ ಪ್ರತಿಕ್ರಿಯಿಸಿದರು.

ನಂಜು ಮತ್ತು ಹೇಸಿಗೆ ತರಿಸುವ ದಾಹಕ ವಂಚನೆ, ವಿನಯ ಮತ್ತು ನಯ ನುಡಿ, ವಿಷಯದ ಅಂತರಾಳಕ್ಕೆ ನೇರವಾಗಿ ತಲುಪಬಲ್ಲುವೆ? ನನ್ನ ಸಂದೇಹಗಳು ನನಗೆ ಮನವರಿಕೆ ಮಾಡಿಕೊಟ್ಟದ್ದಕ್ಕಿಂತಲೂ ಮಿಗಿಲಾಗಿ ಮಹಾರಾಣಿಯು ಭವಿಷ್ಯವನ್ನು ಖಂಡಿತವಾಗಿಯೂ ಕಂಡುಕೊಂಡಳು.

ನನ್ನ ಹೆಂಡತಿ ಸುಗಂಧ ಹುಟ್ಟಿದಂದು ತಂದೆಯ ಮುಖ ಲಕ್ಷಣವನ್ನು ಹೊತ್ತಿರಲಿಲ್ಲ. ಆದರೆ ಅವಳ ಮುಗ್ಧತೆಯಲ್ಲಿ ಹಾಗೂ ಬೇರೆಯವರಿಗೆ ಸಂತಸವುಂಟು ಮಾಡುವ ವಿಷಯದಲ್ಲಿ ಮತ್ತು ಬೇರೆಯವರಿಗೂ ಅವಳು ಇಷ್ಟವಾಗುವ ವಿಚಾರದಲ್ಲಿ ಅವಳಲ್ಲಿ ಏನೋ ಒಂದು ಆಕರ್ಷಣೆ ಇತ್ತು. ಅವಳು ರಕ್ತಮಾಂಸಗಳಿಂದ ಕೂಡಿದ ಹೆಣ್ಣೆಂದು ಮೇದಿನಿ ರಾಯ್ ಅವಳ ಬಗ್ಗೆ ಹೇಳಿದಾಗ ಅದು ನಿಜಕ್ಕೂ ಉತ್ಪ್ರೇಕ್ಷೆಯಾಗಿರಲಿಲ್ಲ. ಅವಳು ದುಂಡು ದುಂಡಾದ ಶರೀರದವಳಲ್ಲ. ಆದರೆ ಅವಳ ಕೋಮಲತೆ ಮನಸ್ಸನ್ನು ಕ್ಷುಬ್ಧಗೊಳಿಸುವಂಥದಾಗಿತ್ತು. ನನ್ನ ತೋರು ಬೆರಳಿನಿಂದ ಅವಳ ತೋಳನ್ನು ಅಥವಾ ಹೊಕ್ಕುಳನ್ನು ಒತ್ತಿದ್ದೇ ಆದರೆ ಅವಳ ದೇಹದ ಕೊಬ್ಬು ಅದರ ಮೇಲೆಲ್ಲ ತುಂಬಿಕೊಂಡು ನನ್ನ ಮುಷ್ಟಿ ಮತ್ತೆ ನನಗೆ ಕಾಣುವುದೇ ಇಲ್ಲ ಎಂದು ನನಗೆ ಮನವರಿಕೆಯಾಗಿ ಬಿಟ್ಟಿತು.

ವಿವಾಹದ ರಾತ್ರಿಗಳು ನನಗೆ ಸರಿಹೊಂದುವುದಿಲ್ಲ ಎಂದು ನನಗೆ ಮನವರಿಕೆಯಾಗಿದೆ. ಇದು ತೀರಾ ತಡವಾಗಿ ಬಂದ ವಿವೇಕವಲ್ಲ. ವಿವಾಹ ಸಮಾರಂಭದಿಂದ ಓಡುವುದೊಂದು ಬಿಟ್ಟು ಎರಡನೇ ಬಾರಿಯ ನಿಶ್ಚಿತಾರ್ಥವನ್ನು ವಿರೋಧಿಸಲು ನನಗೆ ಸಾಧ್ಯವಾದದ್ದೆಲ್ಲವನ್ನೂ

ಮಾಡಿದ್ದೆ. ನಾನು ರಾಯ್ ಮೇಲೆ ನೇರವಾಗಿ ಆಕ್ರಮಣ ಮಾಡದಿದ್ದರೂ ನಯನಾಜೂಕಿಲ್ಲದ ಒರಟನಾಗಿದ್ದೆ. ನನ್ನ ಮಾವನವರಲ್ಲದೆ ಬೇರೆ ಇನ್ಯಾರಾದರೂ ಆಗಿದ್ದರೆ (ಮಾವನವರು ಎನ್ನುವ ಶಬ್ದ ನನ್ನ ನಾಲಿಗೆಯ ಮೇಲೆ ಅದೆಷ್ಟು ವಿಚಿತ್ರವಾಗಿರುತ್ತೆ) ಅಸಮಾಧಾನಪಟ್ಟುಕೊಂಡು ತಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಡುವುದು ಹಾಗಿರಲಿ, ಮೇವಾಡದ ವಿರುದ್ಧವಾಗಿ ಶಾಶ್ವತವಾದ ಸೇಡಿನ ದ್ವೇಷವನ್ನು ಸಾಧಿಸುತ್ತಿದ್ದರು. ಆದರೆ, ರಾಯ್ ನನ್ನನ್ನು ಸ್ನೇಹಿತ ಮತ್ತು ಹಿತೈಷಿಯೆಂದೇ ಕಾಣುತ್ತಾರೆ. ತನ್ನ ತಪ್ಪನ್ನು ಕಂಡುಕೊಳ್ಳಲು ಅವರಿಗೆ ಇನ್ನೆಷ್ಟು ದಿನ ಬೇಕಾದೀತೋ? ಅವರ ವಿಷಾದ ಯಾವ ರೂಪವನ್ನು ತಾಳುವುದೋ?

ಇನ್ನು ಕಿರಿಯ ಸಂತಳ ವಿಚಾರವೇನು? ನನ್ನ ಹೊಸ ಹೆಂಡತಿಯನ್ನು ಅವಳು ಅದು ಹೇಗೆ ಸರಿಗಟ್ಟಿ ನೋಡುವಳೋ? ಎಂದಿನ ಹಾಗೆ ಈ ವಿಷಯದಲ್ಲಿ ಯಾವ ಸುಳಿವೂ ಸಿಕ್ಕಿಲ್ಲ. ಮದುವೆಗೆ ಒಂದು ವಾರಕ್ಕೆ ಮುಂಚೆ ಅವಳು ನನ್ನ ಅಧ್ಯಯನ ಕೊಠಡಿಗೆ ಬಂದು ಸ್ವಲ್ಪ ನಾಟಕೀಯವಾಗಿ "ನಾನು ನನ್ನ ಕೋಣೆಯನ್ನು ಖಾಲಿ ಮಾಡುತ್ತೇನೆ" ಎಂದು ಹೇಳಿದಳು.

"ಏಕೆ?"

"ಮೇವಾಡದಲ್ಲಿ ಇಷ್ಟರಲ್ಲೇ ಸಂಭವಿಸಲಿರುವ ಬಹುಪ್ರಮುಖವಾದ ಘಟನೆಯ ಬಗ್ಗೆ ನಿಮಗೆ ಸಂದೇಹ ಇಲ್ಲದೆ ಇರಬಹುದು. ಆದರೆ ನನಗೆ ತೀರಾ ಅದರ ಅರಿವಿಲ್ಲದೆ ಇಲ್ಲ."

ಅವಳ ದನಿಯಲ್ಲಿದ್ದ ಅಣಕದ ಕುರುಹನ್ನು ನಾನು ಕಂಡುಕೊಂಡೆನೆ? ಅಥವಾ ಅದು ನಿಜಕ್ಕೂ ಘಾತಕ್ಕೊಳಗಾದವಳ ಕಟಕಿಯೆ? ನನ್ನ ಹೆಂಡತಿ ದ್ವಿಪತ್ನಿತ್ವದ ಪರಿಕಲ್ಪನೆಯ ತೀವ್ರ ಸಮರ್ಥಕಳಷ್ಟೇ ಅಲ್ಲ, ತಾನು ಹೇಳಿದ್ದನ್ನು ನಡೆಸಿಕೊಟ್ಟಿದ್ದಾಳೆ.

ಸವತಿಯು (ತನ್ನ ಗಂಡನ ಎರಡನೇ ಹೆಂಡತಿಯನ್ನು ಪತ್ನಿಯಾದವಳು ಹಾಗೆಯೇ ಕರೆಯುವುದು) ಹಸಿರುಗಣ್ಣಿನ ಚೆಲುವೆಯ ಮೇಲಿನ ಮನೆಗೆಲಸದ ಹೊರೆಯನ್ನು ಕಡಿಮೆಮಾಡುತ್ತಾಳೆ. ಇನ್ನು ಗಂಡನೆನಿಸಿಕೊಂಡವನೊಂದಿಗೆ ಆಡಬೇಕಾದ ಚಿಲ್ಲರೆ ಮಾತುಕತೆಗಳ ಗುರುತರವಾದ ಕಾರ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ ಹೇಳಬೇಕಾದ್ದೇ ಇಲ್ಲ. ಅದರಿಂದ ತಾನು ಕೃಷ್ಣನಿಗೆ ತನ್ನೆಲ್ಲಾ ಸಮಯವನ್ನು ಮೀಸಲಿಡಬಹುದು.

"ಹೊಸ ಹೆಣ್ಣಿನೊಂದಿಗೆ ನೀವು ಏಕಾಂತವನ್ನು ಬಯಸುವಿರಿ."

"ಮೇವಾಡದ ರಾಜ ಮನೆತನದಲ್ಲಿ ಎರಡನೇ ಮದುವೆ ಆಗುತ್ತಾ ಇರುವವರಲ್ಲಿ ನಾನು ಮೊದಲನೆಯವನೂ ಅಲ್ಲ, ಕೊನೆಯವನೂ ಅಲ್ಲ."

"ನಾನೊಂದು ವೇಳೆ ಇಷ್ಟಪಟ್ಟರೆ?"

ಏನು ಇಷ್ಟಪಟ್ಟರೆ?

ನಾನು ಬೇಕೆಂದೇ ಅರ್ಥವಾಗದವನಂತೆ ತೋರಿಸಿಕೊಂಡಿದ್ದೆನೆಂದು ಅವಳಿಗೆ ಗೊತ್ತಿತ್ತು. ಆದರೆ ಅವಳೇನೂ ತಬ್ಬಿಬ್ಬಾಗಲಿಲ್ಲ.

"ಮರು ಮದುವೆಯಾಗಲು ಇಷ್ಟಪಟ್ಟರೆ?"

"ಅರಮನೆಯಲ್ಲಿ ಸಾಕಷ್ಟು ಕೊಠಡಿಗಳಿವೆ. ಅದೂ ಅಲ್ಲದೆ ಅರಮನೆಯ ಒಂದು ಭಾಗವನ್ನೇ ಪುನರ್ನಿರ್ಮಿಸಲಾಗಿದೆ. ಅಂತ ನಾನು ಭಾವಿಸಿದ್ದೀನಿ" ನಾನಾ ಉದ್ದೇಶಗಳನ್ನಿಟ್ಟುಕೊಂಡು ನಾನು ಮಾತನ್ನು ಮುಂದುವರಿಸಿದೆ.

ಅಂತೂ ನಾನು ಅವಳಿಗೆ ಗೆಲ್ಲಲು ಅನುಕೂಲವಾಗುವ ಹಾಗೆ ಮಾತಾಡಿ ಬಿಟ್ಟಿದ್ದೆ. ಆದರೆ ಈಗ ಏನು ಮಾಡುವುದಕ್ಕೂ ಕಾಲ ಮಿಂಚಿ ಹೋಗಿತ್ತು.

"ಯಾರಿಗೋಸ್ಕರ? ನನಗೋ ನಿಮಗೋ?"

ನನಗಾದರೋ ಹರಿತವಾಗಿ ಪ್ರತಿವಾದಮಾಡುವ ಕೌಶಲ್ಯವಾಗಲಿ, ವಾಕ್ಚಾತುರ್ಯವಾಗಲಿ ಇಲ್ಲ. ಹಾಗಾಗಿ ಅರಮನೆಯಲ್ಲಿ ಪ್ರತ್ಯೇಕವಾದ ಭಾಗವಿರಲಿ ಬಿಡಲಿ, ಅವಳ ಹೃದಯಕ್ಕೆ ಪ್ರಿಯವಾದ, ತನ್ನ ಪ್ರಿಯಕರನ ಭೇಟಿಯಾಗುವುದಾಗಲಿ ಅವನೊಂದಿಗಿನ ಅವಳ ಪ್ರಣಯ ಪ್ರಸಂಗಗಳಾಗಲಿ ಅಬಾಧಿತವಾಗಿ ಮುಂದುವರಿದಿವೆ ಎಂದು ಎತ್ತಿ ಆಡುವುದರಲ್ಲಿ ನಾನು ಸೋತಿದ್ದೆ.

ನನ್ನ ಹೆಂಡತಿಯೆಂದರೆ ಉತ್ತರವೇ ಇಲ್ಲದಿರುವ ಒಂದು ಒಗಟೆ ಎಂದು ಅನೇಕ ಸಲ ನನಗೆ ಆಶ್ಚರ್ಯ. ಒಂದು ವೇಳೆ ಇದ್ದರೂ ಅದು ಬಹಳ ಹಿಂದೆಯೇ ಎಲ್ಲೋ ಕಳೆದುಹೋಗಿದೆ. ನನ್ನ ಹೊಸ ಹೆಂಡತಿಯ ಜೊತೆ ರಾಜಕುಮಾರಿ ನಡೆದುಕೊಳ್ಳುವ ರೀತಿ ಕುರಿತಂತೆ ಯಾರು ಏನೆಂದು ಕೊಳ್ಳುವರು? ನನ್ನ ಎರಡನೇ ಮದುವೆಯಾಗಿ ಒಂದು ವಾರವಾಗಿರಬಹುದು. ನನ್ನ ಕೆಲಸ ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದಾಗ ಕಿರಿಯ ಸಂತಳಿಗೆ ನನ್ನ ಹೆಂಡತಿ ಸುಗಂಧಳು ಸ್ವಲ್ಪ ತಾಳು, ತಾಳು, ತಾಳು ಎಂದು ಹೇಳುತ್ತಿದ್ದುದನ್ನು ಕಂಡೆ. ಮಹಡಿಯ ಮೆಟ್ಟಲಿನ ಕೆಳಗಡೆ ಹಸಿರುಗಣ್ಣಿನ ಚೆಲುವೆ ನಿಂತಳು. ಸುಗಂಧಳು ತನ್ನ ಜೊತೆಗೆ ಬಂದು ಕೂಡಿಕೊಳ್ಳಲು ಅವಕಾಶಮಾಡಿಕೊಟ್ಟಳು.

"ನಾನು ನಿಮ್ಮೊಂದಿಗೆ ದೇವಸ್ಥಾನಕ್ಕೆ ಬರಲು ಸಾಧ್ಯವೆ?" ಸರಿಯಾದ ಕ್ರಿಯಾಪದ 'ಬರಬಹುದೆ' ಎಂದು.

"ನೀನು ನನ್ನ ಜೊತೆ ದೇವಸ್ಥಾನಕ್ಕೆ ಬರಬಹುದು. ಆದರೆ ನೀನು ಬರುವುದು ಬೇಡ."

ಮೇದಿನಿ ರಾಯ್ ಮಗಳು ತೀರಾ ಭೋಳೇ ಸ್ವಭಾವದವಳು. ಹಾಗಾಗಿ ಕಿರಿಯ ಸಂತಳ ಒಣ ಪಾಂಡಿತ್ಯದ ದಬಾವಣೆಯ ಮಾತುಗಳನ್ನು ತಪ್ಪು ತಿಳಿದುಕೊಳ್ಳುವಂಥವಳಲ್ಲ.

"ಏಕೆ?"

"ನಿನ್ನ ಸ್ಥಾನವೇನಿದ್ದರೂ ನಿನ್ನ ಪತಿಯ ಬಳಿ, ನನ್ನ ಕೂದಲಲ್ಲಿ ಅಲ್ಲ".

ಇದೇಕೆ ಹಸಿರುಗಣ್ಣಿನ ಚೆಲುವೆ, ನಾನು ಅವಳನ್ನು ಮದುವೆಯಾದ ಮೇಲೆ ಇದೇ ಪ್ರಥಮ ಬಾರಿಗೆ ಶತ್ರುಗಳನ್ನು ಮಾಡಿಕೊಳ್ಳಲು ಮಾಮೂಲು ದಾರಿಯನ್ನು ಬಿಟ್ಟು ಹೋಗುತ್ತಿದ್ದಾಳಲ್ಲ? ಇದ್ದಕ್ಕಿದ್ದಂತೆ ನನ್ನ ಅದೃಷ್ಟವು ಉತ್ತಮ ತಿರುವು ಪಡೆದುಕೊಳ್ಳುತ್ತಿದೆಯೆ? ಅವಳು ಅಸೂಯಾ ಪರಳೂ ನನ್ನ ಮೇಲೆ ತನ್ನ ಸ್ವಾಮ್ಯ ಸ್ಥಾಪಿಸುವವಳೂ ಆಗುತ್ತಿದ್ದಾಳೆಯೆ?

ಸುಗಂಧ ನನ್ನ ಹೆಂಡತಿಯ ಕಡೆ ನೋಡಿದಳು, ಅನಂತರ ನನ್ನತ್ತ ನೋಡಿದಳು. ಮೆಟ್ಟಿಲು ಹತ್ತಿ ಕೊಠಡಿಗೆ ಧಾವಿಸಿ ಹೋಗಿ ಬಾಗಿಲು ಹಾಕಿಕೊಂಡಳು. ನಾನು ಅವಳ ಪರ ವಹಿಸುತ್ತೇನೆಂದು ಅವಳು ನಿರೀಕ್ಷಿಸಿದ್ದರೆ, ಅವಳು ನನ್ನನ್ನು ತಪ್ಪಾಗಿ ತಿಳಿದಿದ್ದಳೆಂದೇ ಅರ್ಥ. ನನ್ನ ಇಬ್ಬರು ಪತ್ನಿಯರ ನಡುವಿನ ವಿವಾದವನ್ನು ತೀರ್ಮಾನಿಸಲು ಮಧ್ಯಸ್ಥಿಕೆ ವಹಿಸುವವನೂ ಅಲ್ಲ ಅಥವಾ ಅವರಿಬ್ಬರ ಮಧ್ಯೆ ಮೊದಲನೇ ಸ್ಥಾನಕ್ಕೆ ನಡೆಯುವ ಪೈಪೋಟಿಯನ್ನು ಉತ್ತೇಜಿಸುವವನೂ ಅಲ್ಲ.

ರಾಯ್ ಮಗಳು ದೂರವಾಗುವುದನ್ನು ಕಿರಿಯ ಸಂತಳು ಬೇಗ ಆಗುವಂತೆ ಮಾಡಿರಬಹುದು. ಆದರೆ ಅದು ನನಗೆ ಎಷ್ಟೇ ಇಷ್ಟವಿಲ್ಲದೆ ಇದ್ದರೂ ಅದರ ಯಶಸ್ಸು,

ನನಗೆ ಮಾತ್ರವೇ ಸೇರಬೇಕು. ಹಾಗಾಗ ಬೇಕೆಂದು ನಾನು ಬಯಸಿರಲಿಲ್ಲ. ಅದಕ್ಕೆ ವಿರುದ್ಧವಾದದ್ದನ್ನೇ ಬಯಸಿದ್ದೆ. ಒಳ್ಳೆಯ ಉದ್ದೇಶಗಳ ಫಲಿತಾಂಶವನ್ನೆಲ್ಲಾ ತಲೆ ಕೆಳಗು ಮಾಡುವ ರೀತಿಯಲ್ಲಿಯೇ ನಮ್ಮ ಕೃತ್ಯ ಇರುವುದಾದರೆ ಆ ಉದ್ದೇಶಗಳ ಉಪಯೋಗವಾದರೂ ಏನು?

* * *

ನಿರ್ಲಿಪ್ತತೆ ಮತ್ತು ವಿರಾಗ ಭಾವದಿಂದ ನಾನು ಮದುವೆಯ ಸಮಾರಂಭದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದೆ. ಬದಲಿಗೆ ನಾನು ಅದರಲ್ಲಿ ತೊಡಗಿಸಿಕೊಂಡೆನು. ನನಗೆ ಮೊದಲಿದ್ದಷ್ಟು ಸಂಸ್ಕೃತದ ಜ್ಞಾನ ಈಗಿಲ್ಲ. ಆದರೆ ವಿವಾಹದ ಧಾರ್ಮಿಕ ಆಚರಣೆಗಳು ನಡೆದಿದ್ದಾಗ ನಡುವೆಯೇ ಬಹಳಷ್ಟು ಸ್ತೋತ್ರವನ್ನು ಮತ್ತು ಶ್ಲೋಕಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತೆಂದು ತಿಳಿದು ನನಗೆ ಸಂತೋಷವಾಯಿತು. ಅಲ್ಲೊಬ್ಬ ಯುವ ಪುರೋಹಿತನಿದ್ದ. ಒಂದು ಸಣ್ಣ ತಂತ್ರವನ್ನು ಬಳಸಿ ಸಂಸ್ಕೃತ ಭಾಷೆಯನ್ನು ಹೊಸದಾಗಿ ಕಂಡುಕೊಂಡನು. ಬಹುಶಃ ಸರಿಯಾದ ಶಬ್ದವೆಂದರೆ ತನ್ನ ಒಳನೋಟದಿಂದ ಎನ್ನಬೇಕು. ತಾನು ಉರು ಹೊಡೆದು ಕಲಿತಿದ್ದ ಮಂತ್ರಗಳನ್ನು ಅವನು ಹೇಳಲಿಲ್ಲ. ಸರಳ ಮೇವಾಡಿಯಲ್ಲಿ ಮಾತನಾಡಿದಷ್ಟೇ ಸರಾಗವಾಗಿ ಅವನು ಸಂಸ್ಕೃತದಲ್ಲಿ ಮಾತನಾಡುತ್ತಿದ್ದನು. ಸಂಸ್ಕೃತ ಪಂಡಿತರುಗಳು ಬಿಡದೆ ಒಂದೇ ಸಮನೆ ನಮಗೆ ಹೇಳುತ್ತಿದ್ದುದೆಂದರೆ, ಸ್ಫುಟವಾದ ಶಬ್ದೋಚ್ಚಾರಣೆಯೇ ಸಂಸ್ಕೃತಕ್ಕೆ ಬೀಗದ ಕೈ ಎಂದು. ಅವರು ಹೇಳುವುದು ಸರಿಯೇ. ನೂರಕ್ಕೆ ನೂರು ಸರಿ. ಆದರೆ ಅರ್ಥಮಾಡಿಕೊಂಡು ಮಾಡುವ ಶಬ್ದೋಚ್ಚಾರಣೆಗೊಂದು ಅರ್ಥವಿದೆ ಎಂದು ಹೇಳುವುದನ್ನವರು ಮರೆಯುತ್ತಾರೆ. ಅರ್ಥ ಮತ್ತು ಸಂದರ್ಭವನ್ನು ಕಿತ್ತು ಹಾಕಿದರೆ, ನಿಮ್ಮ ಮಾತೃಭಾಷೆಯೂ ಮೃತ ಭಾಷೆಯಂತೆಯೇ ಕೇಳಿಸುತ್ತದೆ. ಪುರೋಹಿತನು ಹೇಳುತ್ತಿದ್ದುದೆಂದರೆ, ತುಂಬ ಭಟ್ಟಿಯಿಳಿಸಿದಂತಿರುವ ಹಾಗೂ ಅತ್ಯಂತ ತರ್ಕಬದ್ಧವಾದ ರೂಪ ಅಥವ ಗೀತಾತ್ಮಕ ಶ್ಲೋಕವು ಆಡು ಭಾಷೆಯೇ ಹೊರತು ಛಂದಸ್ಸಾಗಲಿ, ಪ್ರಾಸವಾಗಲಿ ಅಲ್ಲ ಎಂದು.

ಸಂಸ್ಕೃತವನ್ನು ಸಾಯಿಸಿದವರು ಯಾರು? ಒಂದು ಭಾಷೆ ಹೇಗೆ ಸಾಯುತ್ತದೆ? ಪ್ರಳಯವಾಗಿ ದೇಶದ ಜನತೆಯೆಲ್ಲ ವಿನಾಶವಾಗಿ ಹೋದಂತೆಯೋ ಅಥವಾ ಅರಾಬಿಕ್ ಅಥವಾ ಆಫ್‌ಘನೀ ಭಾಷೆ ನಮ್ಮೆಲ್ಲ ಭಾಷೆಗಳ ಮಾತೃ ಭಾಷೆಯಾದ ಸಂಸ್ಕೃತದ ಜಾಗವನ್ನು ಆಕ್ರಮಿಸಬೇಕೆಂದು ಮುಸ್ಲಿಮರು ಆದೇಶ ಹೊರಡಿಸಿದಂತೆಯೋ ಅಲ್ಲ ಅದು. ಭಾಷೆಯೆಂಬುದು ನಾವು ಬಯಸಿದಾಗ ಬಿಟ್ಟು ಬಿಡಬಹುದಾದ ಜನಾನದಲ್ಲಿಯ ಹೆಂಗಸಿನಂತೆಯೆ? ಕೇವಲ ಬ್ರಾಹ್ಮಣರು ಮತ್ತು ರಾಜಾಸ್ಥಾನಗಳಷ್ಟೇ ಅಲ್ಲದೆ, ಇತರೆ ಎಲ್ಲ ಜಾತಿಗಳ ಜನರೂ ಸಂಸ್ಕೃತವನ್ನು ಮಾತನಾಡುತ್ತಿದ್ದರೆ ಅದು ಉಳಿಯುತ್ತಿತ್ತೆ? ಮೇವಾಡದ ಭಾಷೆಯೂ ಮೃತವಾದೀತೆ? ಭೂಗೋಳ ಮತ್ತು ಧರ್ಮದ ಹಾಗೆ ಒಂದು ತಾಯ್ನುಡಿಯೂ ಒಂದು ಜನಾಂಗದ ಹಣೆಯ ಬರಹ ಅಥವಾ ನಿಯತಿ. ನನಗೊಂದು ವಿಚಿತ್ರವಾದ ಆಲೋಚನೆ ಬರುತ್ತದೆ. ಅದೆಂದರೆ ಮನುಷ್ಯನು ಭಾಷೆಯನ್ನು ಸೃಷ್ಟಿಸಿದನು. ಆದರೆ ಈಗ ಅದು ನಮ್ಮನ್ನು ಸೃಷ್ಟಿಸುತ್ತದೆ ಎಂದು. ಇದೊಂದು ತೀರಾ ಹಿರಿದಾದ ಆಲೋಚನೆ. ನಾನು ತೀರಾ ಅಸಂಬದ್ಧವಾದ ಮಾತುಗಳನ್ನು ಆಡುತ್ತಿದ್ದೇನೆಯೇ? ನಾನು ಈ ಬಗ್ಗೆ ಇನ್ನಷ್ಟು ಆಪ್ತವಾಗಿ ವಿಚಾರ ವಿನಿಮಯ ಮಾಡಬೇಕಾಗಿದೆ.

ಇದ್ದಕ್ಕಿದ್ದಂತೆ ನಾನು ಮತ್ತು ನನ್ನ ನವ ವಧು ನನ್ನ ಮಲಗುವ ಕೋಣೆಯಲ್ಲಿ ಏಕಾಂತದಲ್ಲಿದ್ದೆವು. ಸುಗಂಧ ನನ್ನ ಕಡೆಗೆ ಬೆನ್ನು ಮಾಡಿ ನಿಂತಿದ್ದಳು. ಪ್ರತಿ ಮೇವಾಡಿ

ದಂಪತಿಯೂ ತಮ್ಮ ಮೊದಲ ರಾತ್ರಿಯಂದು ಒಟ್ಟಾಗಿ ಪುನರಭಿನಯಿಸುವಂಥ ದೃಶ್ಯವೇ ಅದು. ಬಹಳಷ್ಟು ಮದುವೆಗಳ ಹಣೆಬರಹ ನಿರ್ಧಾರವಾಗಿ ಬಿಡುವ ಸಮಯ ಅದು ಎಂದೇ ನನ್ನ ಭಾವನೆ. ದಯವಿಟ್ಟು ಹೆದರಬೇಡ. ನಾನು ನಿನ್ನನ್ನು ಸ್ಪರ್ಶಿಸುವುದಿಲ್ಲ. ನಿನ್ನೊಂದಿಗೆ ನಾನು ಮಲಗಬೇಕೆಂದು ನೀನು ಕೇಳುವ ತನಕ ನಾನು ನಿನ್ನನ್ನು ಮುಟ್ಟುವುದಿಲ್ಲ. ನಾನು ನಿನಗೆ ಮಾತು ಕೊಡುತ್ತೇನೆ. ನನ್ನ ಹತ್ತಿರ ಒಂದು ಪುಡಿ ಇದೆ. ನಾನದನ್ನು ಹಾಸಿಗೆಯ ಮೇಲೆಲ್ಲ ಬಳಿದು ಬಿಡುತ್ತೇನೆ. ಹಾಗಾಗಿ ನಾಳೆ ಕೊಠಡಿಯನ್ನು ಸ್ವಚ್ಛಗೊಳಿಸಲು ಬರುವ ಕೆಲಸದವಳು ಏನೇನೋ ಕತೆಗಳನ್ನು ಹರಡಕೂಡದು. ನಾನು ಹಾಸಿಗೆಯ ಮೇಲಿರುವ ಒಂದು ಹೊದಿಕೆಯನ್ನೆತ್ತಿಕೊಂಡು ಇಲ್ಲೇ ಒಂದು ಮೂಲೆಯಲ್ಲಿ ಮಲಗಿ ನಿದ್ದೆ ಮಾಡುತ್ತೇನೆ.

ನಾನು ಬಾಗಿಲೆದುರು ಚಲಿಸಲಾರದಂತೆ ನಿಂತೆ. ನಾನು ಅದೇ ವಾಕ್ಯಗಳನ್ನೇ ಮತ್ತೆ ಮತ್ತೆ ಆಡುತ್ತಾ ಇದ್ದೆ. ಕೊನೆಗೆ ಆಕೆ ನನ್ನತ್ತ ತಿರುಗಿ ನೋಡಿದಳು. ನಾನು ನಿಂತೆಡೆಯಿಂದಲೇ ಅವಳ ನಾಡಿಯ ಮಿಡಿತ ನನಗೆ ಕೇಳಿಸುತ್ತಿತ್ತು. ನನ್ನ ಕಡೆ ನೋಡಿದ ಆಕೆಯ ನಿರೀಕ್ಷೆಯ ನೋಟದಲ್ಲಿ ಒಂದು ಮುಗುಳ್ನಗೆ ಸುಳಿದದ್ದನ್ನು ಕಂಡೆ ಆಗ. ನನ್ನ ಅಂತರಂಗದ ಏಕಾಂತ ಸಂಭಾಷಣೆ ಎಲ್ಲೋ ಕಳೆದು ಹೋಗಿದೆ ಎಂದು ಅರ್ಥವಾಯಿತು. ಗಂಡನಾದವನು ಮಾಡಬೇಕಾದ ಕರ್ತವ್ಯವನ್ನು ಅವಳು ನನ್ನಿಂದ ಬಯಸಿದಳು. ಅವಳ ಕಣ್ಣುಗಳಲ್ಲಿ ತುಂಬಿದ್ದ ಅಪೇಕ್ಷೆಯೇ ನನ್ನಲ್ಲೂ ಹಠಾತ್ತಾಗಿ ಉಂಟಾಯಿತು. ನಾನು ಅವಳೆಡೆಗೆ ನಡೆದು. ಅವಳನ್ನು ಬೆತ್ತಲೆಗೊಳಿಸಿದೆ. ನಾವಿಬ್ಬರೂ ಪೂರ್ತಿ ಉದ್ರಿಕ್ತಗೊಳ್ಳುವವರೆಗೂ ಅವಳೊಂದಿಗೆ ರಮಿಸಿದೆ. ಅವಳು ಕಣ್ಣುಗಳನ್ನು ಮುಚ್ಚಿ ನನಗಾಗಿ ಕಾದಳು. ಅವಳು ಸಾಯುವವರೆಗೂ ನನಗಾಗಿ ಕಾದಿರುತ್ತಿದ್ದಳೇನೋ. ನಾನು ಅವಳನ್ನು ಸಂಭೋಗಿಸಲಾಗಲಿಲ್ಲ.

ನಾನು ನನ್ನಲ್ಲೇ ಮುದುಡಿಕೊಳ್ಳುತ್ತ ಭಯದಿಂದ ನನ್ನನ್ನು ನಾನೇ ಎಚ್ಚರಿಕೆಯಿಂದ ಗಮನಿಸಿದೆ. ನಾನು ಷಂಡ ಕೋಪದಲ್ಲಿದ್ದೆ. ನನ್ನ ಜಗತ್ತು ತನ್ನ ಆಧಾರವನ್ನು ನೀಗಿಕೊಂಡಿತ್ತು. ಶುದ್ಧಾಂಗವಾದ, ನೇರವಾದ ಕಾಮದ ಅವಲಂಬನೆಯಿಲ್ಲವೆಂದರೆ ನನಗೆ ಬದುಕಿನಲ್ಲಿ ಉಳಿದಿರುವುದಾದರೂ ಏನು? ಶಿಶ್ನದ ಗಡಸುತನದ ನಂತರದಲ್ಲಿ ಅದರ ಹೊರತಾಗಿ ಬೇರಾವ ನೆಚ್ಚಿಕೆಯೂ ಇಲ್ಲ. ಈಗ ಅದನ್ನೂ ನನ್ನಿಂದ ಕಸಿದುಕೊಳ್ಳಲಾಗಿದೆ. ನನ್ನ ದೇಹ ನನಗೆ ಬಗೆದ ದ್ರೋಹವನ್ನು ತಡೆದುಕೊಳ್ಳಲಾಗದೆ ನನ್ನ ನವವಧುವನ್ನು ಜರಿದು, ಒದರತೊಡಗಿದೆ. ಅವಳು ಮೊಣಕಾಲುಗಳ ಸಂದಿಗೆ ಗದ್ದವನ್ನು ಕೊಟ್ಟು ಒಂದು ಮುದ್ದೆಯಂತೆ ಮುದುಡಿ ಕುಳಿತಳು. ಅವಳು ನಾಚಿಕೆ ಮತ್ತು ಭಯದಿಂದ ಬಗ್ಗಿ ಕುಳಿತುಕೊಂಡಂತೆ ನಾನು ಹೊಡೆಯುತ್ತೇನೆಂದು ಕಾದಳು. ನಾನು ನನ್ನ ಕೈ ಎತ್ತಲಿಲ್ಲ. ಆದರೆ ನಾನು ಒದರಾಡುವುದನ್ನು ನಿಲ್ಲಿಸಲಾಗಲಿಲ್ಲ.

ನಾನು ಈ ಮದುವೆಯನ್ನು ವಿರೋಧಿಸಿದ್ದೆ. ನಾವಿಬ್ಬರೂ ಒಂದುಗೂಡುವುದರಿಂದಾಗುವ ನೋವು ಮತ್ತು ಅವಮಾನಗಳಿಂದ ನನ್ನನ್ನು ಮತ್ತು ಅವಳನ್ನು ಬಚಾವ್ ಮಾಡಲು ಮಾಡಬೇಕಾದ್ದೆಲ್ಲವನ್ನೂ ಮಾಡಿದ್ದೆನೆಂದು ನಾನು ಹೇಳಿದೆ. ಆದರೆ ನನ್ನ ಮಾತನ್ನು ಯಾರು ಕೇಳಬೇಕು? ನನಗೆ ಯಾವುದು ಒಳ್ಳೆಯದೆಂದು ನನ್ನನ್ನು ಬಿಟ್ಟು ಉಳಿದೆಲ್ಲರೂ ತಿಳಿದಿದ್ದಾರೆ. ನನ್ನ ಮನಸ್ಸು ಯಾವ ಯಾವ ಸಂಬಂಧಗಳನ್ನು ಮಾಡುತ್ತಿತ್ತೋ ಅಥವಾ ಕಳುಚುತ್ತಿತ್ತೋ ಅದರ ಕಲ್ಪನೆ ನನಗಿಲ್ಲ. ಆದರೆ ಬಾಬರ್ ಮತ್ತು ಅವನೊಂದಿಗಿನ ನಾಳಿನ ಯುದ್ಧದ ಚಿತ್ರವನ್ನು ನನ್ನ ಮನಸ್ಸಿಗೆ ತಂದುಕೊಂಡೆನು. ನಾನು ಸುತ್ತಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟಿದ್ದೇನೆಂಬುದು ಅವಳಿಗೆ ತಿಳಿದಿತ್ತೆ? ನನ್ನೆಲ್ಲ ತಮ್ಮಂದಿರ

ಕಣ್ಣು ಸಿಂಹಾಸನದ ಮೇಲಿತ್ತು. ಅವಳೂ ಅದನ್ನು ಬಯಸಿದ್ದಳೆ? ಕಾನೂನುಬದ್ಧ ಉತ್ತರಾಧಿಕಾರಿಗೆ ಅದು ಸಿಕ್ಕದೆ ಹೋದರೆ ಹೇಗೇ? ಅದಕ್ಕಾಗಿ ಅವಳು ನನ್ನನ್ನು ನಿಂದಿಸುತ್ತಾಳೆಯೆ? ನನ್ನಿಂದ ಜನರ ನಿರೀಕ್ಷಣೆಗಳಿಗೆ ಕೊನೆಯೇ ಇಲ್ಲ. ನಾನೇನು ಅತಿ ಮಾನವಲ್ಲ, ಅದು ಸ್ಪಷ್ಟವಾಯಿತು ತಾನೆ? ನಾನು ಅವಳಿಗೆ ಸಿಂಹಾಸನದ ಭರವಸೆಯನ್ನಾಗಲಿ, ಅಥವಾ ಬೇರಾವ ಭರವಸೆಯನ್ನಾಗಲಿ ನೀಡಲಾಗಲಿಲ್ಲ. ನಾನೊಬ್ಬ ಹೇಡಿ ಎಂದು ಜನ ಭಾವಿಸಿದ್ದಾರೆಂಬುದು ಅವಳಿಗೆ ಗೊತ್ತಿತ್ತೆ?

ನಾನು ಹುಟ್ಟಿದ ಗಳಿಗೆಯಿಂದ, ಬಹುಶಃ ನಾನು ತಾಯ ಗರ್ಭದಲ್ಲಿದ್ದ ಕಾಲದಿಂದಲೂ ನನ್ನ ಬದುಕಿನಲ್ಲಾಗಿರುವ ಎಲ್ಲ ಅನರ್ಥಗಳಿಗೂ ಅವಳು ಜವಾಬ್ದಾರಳೆಂಬುದಂತೂ ಸ್ಪಷ್ಟವೇ ಇತ್ತು. ಅಷ್ಟೇ ಅಲ್ಲ ಇನ್ನೂ ಹೆಚ್ಚಿನದಿತ್ತು. ಆದರೆ ವಸ್ತು ಸಂಗತಿಯೆಂದರೆ ನನ್ನ ಕೊರತೆಯ ದೊಡ್ಡ ಬಿರುಕನ್ನು ಬೇರಾವುದೂ ಮುಚ್ಚಲಾರದು. ನಾನು ಬಾಯಿ ಮುಚ್ಚಿಕೊಂಡಿರಬೇಕೆಂಬುದು ನನಗೆ ಗೊತ್ತಿತ್ತು. ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ನನ್ನ ಆರೋಗ್ಯ ಮತ್ತು ಅನಾರೋಗ್ಯಗಳಲ್ಲಿ ಈಕೆ ಮೇದಿನೀ ರಾಯ್ ಮಗಳು ಮತ್ತು ನನ್ನ ಹೆಂಡತಿ. ಸುಗಂಧಗಳು ತನ್ನ ತಂದೆಯ ಬಳಿಗೆ ಓಡಿ ಹೋಗಿ. ಇದೆಲ್ಲವನ್ನೂ ಹೇಳಿ ಬಿಡುತ್ತಾಳೆಂದು ಒಂದೇ ಒಂದು ಕ್ಷಣಕ್ಕಾದರೂ ನಾನು ಸಂದೇಹಿಸಿದ್ದೆನೆ? ಇಂಥೊಂದು ಸಂದಿಗ್ಧ ಸಮಯದಲ್ಲಿ ರಾಯ್ ಒಂದಿಗಿನ ಮೇವಾಡದ ಗೆಳೆತನವನ್ನು ಹಾಳುಗೆಡಹಲು ನಾನು ಬಯಸಿದ್ದೆನೆ?

"ನನ್ನನ್ನು ಕ್ಷಮಿಸಿ ಮಹಾಸ್ವಾಮಿ. ತಮಗೆ ನೋವುಂಟು ಮಾಡಿದ್ದಕ್ಕೆ ನನ್ನನ್ನು ಕ್ಷಮಿಸಿ" ಈಗಲೂ ಅವಳು ತನ್ನ ಮೊಣಕಾಲುಗಳ ಮಧ್ಯೆ ತಲೆ ಇಟ್ಟುಕೊಂಡಿದ್ದಳು. ಹಾಗಾಗಿ ಅವಳು ಹೇಳಿದ್ದು ನನಗೆ ಸರಿಯಾಗಿ ಕೇಳಲಿಲ್ಲ.

"ಏನದು? ಗೊಣಗಬೇಡ ಹೆಣ್ಣೆ, ಮರುಕಳಿಸಿದ ರೋಷದೊಂದಿಗೆ ನಾನು ಅವಳ ಮೇಲೆ ಕಶಾಪ್ರಹಾರ ಮಾಡಿದೆ. "ಮಾತಾಡು, ನೀನು ಏನು ಹೇಳಿದರೂ ಅದನ್ನು ತಡೆದುಕೊಳ್ಳುವಷ್ಟು ಗಂಡಸುತನ ನನಗಿದೆ." ಇಷ್ಟು ಹೊತ್ತಿಗೆ ಒಂದೇ ರೀತಿಯಲ್ಲಿ ಯೋಚಿಸಬಲ್ಲ ನನ್ನ ಮನಸ್ಸು ಅವಳ ಮಾತುಗಳನ್ನು ಅರ್ಥೈಸಿತ್ತು. ನಾನೀಗ ಮೊದಲಿಗಿಂತ ಹೆಚ್ಚು ಕೆರಳಿದ್ದೆ. "ನಾನು ನಿನ್ನನ್ನು ಹಂದಿಯ ಹಾಗೆ ನಡೆಸಿಕೊಂಡಿದ್ದೇನೆ. ನೀನು ಕ್ಷಮೆ ಕೇಳ್ತೀದ್ದೀಯ?" ಓ ದೇವರೆ ನಾನು ಈ ಹುತಾತ್ಮರನ್ನು ಅದೆಷ್ಟು ದ್ವೇಷಿಸುತ್ತೇನೆ. ನೀನು ಎದ್ದು ನಿಂತು ನನಗೆ– "ಬಾಯಿ ಮುಚ್ಚಿಕೊಂಡು ನನ್ನ ಪಾಡಿಗೆ ನನ್ನನ್ನು ಬಿಟ್ಟು ಹೊರಡಿ ಎಂದು ಹೇಳಲಾರೆಯಾ?"

ನಾನು ಅವಳ ಕಡೆಗೆ ಬೆನ್ನು ತಿರುಗಿಸಿ, ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಿದ್ದೆ. (ನನ್ನ ಗೌರವ ಮತ್ತು ಅತಿಶಿಷ್ಟತೆಯನ್ನು ಮರಳಿ ಪಡೆದಿದ್ದೆ) ಆಗ ನನ್ನ ಸೊಂಟ ಪಟ್ಟಿಯನ್ನು ತನ್ನತ್ತ ಸೆಳೆದಳು. ಏನಾಗುತ್ತಿದೆ ಎಂಬುದು ಗೊತ್ತಾಗುವುದಕ್ಕೆ ಮುನ್ನ ಅವಳು ನನ್ನ ಕುಡುಗತ್ತಿಯನ್ನು ಒರೆಯಿಂದ ಸೆಳೆದುಕೊಂಡು ತನ್ನ ಕೈಯನ್ನು ಹೊದಿಕೆಯ ಮೇಲೆ ಚಾಚಿ ತನ್ನ ತೋರು ಬೆರಳನ್ನು ಕತ್ತರಿಸಿಕೊಂಡು ಬಿಟ್ಟಳು.

* * *

ಗುರುಕುಲದಲ್ಲಿ ಸೈನಿಕರ ನಿರ್ಗಮನ ಕವಾಯಿತಿನ ಸಂದರ್ಭದಲ್ಲಿ ಮಾಡಬೇಕಾದ ಭಾಷಣವನ್ನು ಸಿದ್ಧಪಡಿಸುತ್ತಿದ್ದೆ. ಆಗ ಮಂಗಳನು, ತನ್ನ ಎಂದಿನ ವಾಡಿಕೆಯ ನಡಿಗೆಗಿಂತ ವೇಗವಾಗಿ ಧಾವಿಸಿ ಬಂದನು.

ಕುತೂಹಲದ ಸಂಗತಿಯೆಂದರೆ, ಮಂಗಳನು ಮೌನವಾಗಿದ್ದಾಗಲೂ ಪ್ರತಿಯೊಬ್ಬರೂ ಅವನಿಗೆ ಕಿವಿಗೊಡುತ್ತಾರೆ. ನಾನೂ ಅದಕ್ಕೆ ಅಪವಾದವಲ್ಲ. ಅವನು ಗುಪ್ತಚರ ವಿಭಾಗದ

ಮುಖ್ಯಸ್ಥನಾಗುವುದಕ್ಕೆ ಬಹಳ ಮುಂಚೆಯೇ ತನ್ನ ಮನಸ್ಸಿಗೆ ಬಂದಂಥ ಆಲೋಚನೆಗಳನ್ನು ಹೊರಗೆಡಹುವುದು ಅವನ ಸ್ವಭಾವಕ್ಕೆ ವಿರುದ್ಧವಾಗಿತ್ತು. ಅವನ ಬಗೆಗಿನ ಆ ವಿಶ್ವಾಸಕ್ಕೆ ತಕ್ಕ ಒಂದು ವಾಹಕವೆಂದರೆ ಬಹಿರಂಗದ ನಿರ್ವಿಕಾರ ಮುಖ ಮುದ್ರೆ, ತೀರಾ ಕನಿಷ್ಠವಾದ ಆಂಗಿಕ ಚಲನೆ ಮತ್ತು ಶೂನ್ಯವೇ ಎನ್ನುವಂಥ ಭಾವೋದ್ರೇಕ. ಆದರೆ ಇಲ್ಲೊಂದು ವಿರೋಧಾಭಾಸವಿದೆ. ಶಿಲಾಸದೃಶ ವ್ಯಕ್ತಿಯಾಗಿದ್ದೂ ಮಂಗಳನು ಯಾರು ಬೇಕಾದರೂ ಸಲೀಸಾಗಿ ಸಂಪರ್ಕಿಸಬಹುದಾದ ವ್ಯಕ್ತಿಯಾಗಿದ್ದನು. ಹಾಗಿಲ್ಲದೆ ಹೋಗಿದ್ದರೆ, ತನ್ನ ಕೆಲಸದಲ್ಲಿ ಅವನು ನಿಷ್ಪ್ರಯೋಜಕನಾಗಿ ಬಿಡುತ್ತಿದ್ದನು. ನಿಮಗೆ ಅವನೊಂದಿಗೆ ವಿಶೇಷ ಸಂಬಂಧವಿದೆ ಹಾಗೂ ಅನ್ಯೋನ್ಯ ಸಂಬಂಧವಿದೆ ಎಂದು ನೀವು ಭಾವಿಸುವ ಹಾಗೆ ಮಾಡುವುದು ಹಾಗೂ ಈ ವಿಷಯದಲ್ಲಿ ನಿಮ್ಮ ಲೆಕ್ಕಾಚಾರ ಎಷ್ಟು ತಪ್ಪು ಎಂಬುದು ನಿಮಗೆ ಯಾವತ್ತೂ ಗೊತ್ತಾಗದಂತೆ ನಡೆದುಕೊಳ್ಳುವುದೇ ಅವನ ಒಂದು ವಿಶಿಷ್ಟ ಗುಣ ಎಂದು ನನಗನ್ನಿಸಿದೆ. ಒಳ ಸಂಚು ಮುಗಿದು ಹೋದ ಮೇಲೂ ತನ್ನ ಒಂದು ಪಾತ್ರವನ್ನು ಬಿಟ್ಟು ಕೊಡುವುದೇ ಇಲ್ಲ. ಇದೆಲ್ಲ ಅವನಿಗೆ ಹೇಗೆ ಸಾಧ್ಯವಾಗುತ್ತದೆ? ಬಾಲ್ಯದಲ್ಲೆಲ್ಲಾ ಎಲ್ಲರ ಗಮನವನ್ನೂ ಸೆಳೆಯುತ್ತಿದ್ದುದು, ವಿವಿಧ ಮನೋಭಾವಗಳನ್ನು ತೋರ್ಪಡಿಸುತ್ತಿದ್ದುದು, ಸಿಡಿಮಿಡಿಗುಟ್ಟುತ್ತಿದ್ದುದು ನಾನು ಮಾತ್ರ. ಈ ಹೊತ್ತು ಅದಕ್ಕಿಂತ ತುಂಬ ಭಿನ್ನ ಎಂದೇನಲ್ಲ. ಅದೆಲ್ಲಾ ಸರಿಯೆ, ಅದು ಪೂರ್ತಿ ನ್ಯಾಯಯುತವಾದ ಜಗತ್ತು ಮತ್ತು ತಾನು ಯಾವುದೇ ಭಾವನೆಗಳು ಇಚ್ಛೆ, ಅನಿಚ್ಛೆಗಳಿಲ್ಲದ ವ್ಯಕ್ತಿ ಎಂದು ಅವನು ನಟಿಸಬೇಕಾಗುತ್ತಿತ್ತು. ಆದರೆ ಮಂಗಳನು ಬಾಲ್ಯದಿಂದ ವಂಚಿತನಾದದ್ದರ ಬಗ್ಗೆ ನಾನು ಅತಿಯಾಗಿ ವಿಷಾದ ಪಡಲಿಚ್ಛಿಸುವುದಿಲ್ಲ. ಅದರಿಂದ ಅವನು ಮೇವಾಡದಲ್ಲೇ ಅತ್ಯುತ್ತಮ ಶ್ರೋತೃವಾಗಿದ್ದಾನೆ ಮತ್ತು ರಾಜಧಾನಿಯಲ್ಲೇ ಎರಡನೇ ಅತ್ಯಂತ ಪ್ರಬಲ ವ್ಯಕ್ತಿಯಾಗಿದ್ದಾನೆ.

ಅವನು ನನ್ನ ಮೇಜಿನ ಮೇಲಿರಿಸಿದ್ದ ಟಿಪ್ಪಣಿಯತ್ತ ನೋಡಿದೆ. ಅದು ನನ್ನನ್ನು ಉದ್ದೇಶಿಸಿದ್ದಾಗಿತ್ತು. ಆದರೆ ಕೈಬರಹ ಪರಿಚಿತವಾದದ್ದಲ್ಲವಾದ್ದರಿಂದ ಹಾಗೂ ಮೊಹರು ಚಿತ್ತಾಗಿ ಕಲಸಿಕೊಂಡು ಬಿಟ್ಟದ್ದರಿಂದ, ಟಿಪ್ಪಣಿ ಯಾರಿಂದ ಎಂಬುದು ಗೊತ್ತಾಗಲಿಲ್ಲ.

> ಮಹಾಸ್ವಾಮಿ, ಮಹಾರಾಜ್‌ಕುಮಾರ್ ಅವರಿಗೆ
>
> ಶುಭಾಶಯಗಳು.
>
> ನಮ್ಮನ್ನು ಬಂದು ಕಾಣುವ ಕೃಪೆ ತೋರುವಿರಾ? ನಾವು ನಗರದ ಗಡಿಯಾಚೆ ತಮಗಾಗಿ ಕಾಯುತ್ತೇವೆ.
>
> ತಮ್ಮವ
>
> ರಾಜಕುಮಾರ ಬಹದ್ದೂರ್.

"ರಾಜಕುಮಾರ ಬಹದ್ದೂರ್ ಅವರು ನಿಜವಾಗಿಯೂ ನಮಗಾಗಿ ಕಾಯುತ್ತಿದ್ದಾರೆಯೆ?"

"ಆಲದ ತೋಪಿನ ಆಚೆ ಇರುವ ತೂಗುಮಂಜಿ (ಮಳೆಮರ) ಮರದ ನೆರಳಿನಲ್ಲಿ ಕಾಯುತ್ತಿದ್ದಾರೆ ಮಹಾಸ್ವಾಮಿ."

"ಸೈನ್ಯವನ್ನೇನಾದರೂ ಅಡಗಿಸಿಟ್ಟು ಹೊಂಚುಹಾಕುತ್ತಿರುವ ಸಾಧ್ಯತೆ ಇದೆಯೆ?"

"ಆ ಅನುಮಾನ ನನಗಿದೆ ಸ್ವಾಮಿ. ಆತನ ಜೊತೆಯಲ್ಲಿ ಕೇವಲ ಹನ್ನೊಂದು ಜನ ಸಂಗಾತಿಗಳಿದ್ದಾರೆ"

"ಕಳೆದ ಸಲ ಇಲ್ಲಿದ್ದಾಗ ಇಪ್ಪತ್ತೇಳು ಜನ ಇದ್ದರಲ್ಲ"

ಈಗಿನ ಪರಿಸ್ಥಿತಿಯಲ್ಲಿ ಷಹಜಾದನು ತೀರಾ ಕುಗ್ಗಿ ಹೋಗಿದ್ದಾನೆ.

ಬಹದ್ದೂರನ ವಿಷಯಕ್ಕೆ ನನಗೀಗ ಸಮ್ಮಿಶ್ರ ಭಾವನೆಗಳು. ನಾನು ಅವನನ್ನು ದ್ವೇಷಿಸಬೇಕು. ನನ್ನ ಒಂದು ಅಂಶ ಅವನು ರಾಜೇಂದ್ರನಿಗೆ ಏನು ಮಾಡಿದನೋ ಅದನ್ನು ಮಾಡುತ್ತದೆ. ಅವನೆಷ್ಟೇ ಪ್ರಚೋದನೆಗೊಳಗಾಗಿದ್ದರೂ, ಅವನ ವಿಷಯಕ್ಕೆ ನನಗಿರುವ ಪ್ರೀತಿಯನ್ನು ನಿರಾಕರಿಸಲಾರೆ. ನನ್ನ ನಾಡಿಯ ಮಿಡಿತದ ವೇಗ ಹೆಚ್ಚಾಗಿದೆ. ಬಹುಶಃ ಯುದ್ಧ ರಂಗದಲ್ಲಿ ಹೊರತು, ನಾನು ಮತ್ತೆ ಅಕಸ್ಮಾತ್ತಾಗಿ ಕಾಣುತ್ತೇನೆಂದು ಊಹೆ ಕೂಡ ಮಾಡದೆ ಇದ್ದ ಸ್ನೇಹಿತನನ್ನು ಮತ್ತೆ ಕಾಣುವ ಯೋಚನೆಯಿಂದ ಅದುಮಿಟ್ಟ ಭಾವೋದ್ವೇಗ ಉಂಟಾಗಿದೆ. ನನ್ನ ಹೊಸ ಸ್ನೇಹಿತ ಮತ್ತು ಸಂಭವನೀಯ ಶತ್ರುವಾದ ದೆಹಲಿಯ ಬಾದಶಾಹನನ್ನೂ ಸೇರಿಸಿಕೊಂಡಂತೆ ಇಡೀ ಜಗತ್ತಿನ ಜನರನ್ನೆಲ್ಲ ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಅದೇಂದರೆ ಬಹದ್ದೂರನು ಚಿತ್ತೂರಿನ ಹೊರವಲಯದಲ್ಲಿದ್ದುಕೊಂಡೇನು ಮಾಡುತ್ತಿದ್ದಾನೆ ಎಂದು. ಸಹಜವಾಗಿಯೇ ಈ ಒಂದು ಪ್ರಶ್ನೆಯನ್ನು ನನಗೆ ನಾನೇ ಸ್ಪಷ್ಟಪಡಿಸಕೊಳ್ಳ ಹೋಗುವುದಿಲ್ಲ.

ಮಂಗಳನು ಸರಿಯಾಗಿಯೇ ಊಹಿಸಿದ್ದನು. ಕಾಲ ಷಹಜಾದನ ವಿಷಯಕ್ಕೆ ಕರುಣೆಯಿಂದಿರಲಿಲ್ಲ. ಅವನು ಯಾವಾಗಲೂ ವಿಷಯಾಸಕ್ತನಾಗಿರುತ್ತಿದ್ದನು. ಆದರೆ ಈ ಹಿಂದೆ ಅವನು, ತನ್ನ ಹಾಸ್ಯ ಪ್ರವೃತ್ತಿ ಹಾಗೂ ಸರಳವಾದ ಮತ್ತು ಪ್ರಿಯವೆನಿಸುವ ಮಾರ್ಗಗಳ ಮೂಲಕ ತನ್ನ ಅಂತರಂಗದಲ್ಲಿ ಅಡಗಿದ್ದ ಈ ಕ್ರೂರತೆಯ ಕುರುಹನ್ನು ಮರೆಮಾಚುವಷ್ಟು ಎಚ್ಚರ ವಹಿಸಿದ್ದನು. ಆದರೆ ಅವನು ತನ್ನ ಪ್ರಯತ್ನವನ್ನು ಕೈಬಿಟ್ಟಿದ್ದನು. ಇಲ್ಲವೆ, ಈಗ ಅವನಿಗೆ ಅದರ ಅಜೀರ್ಣ ಉಂಟಾಗಿರುವ ಬಗ್ಗೆ ಸೋಗುಹಾಕಲು ಲೆಕ್ಕಿಸುತ್ತಿಲ್ಲ.

ಆಳವಾಗಿ ನೆಟ್ಟ ಅವನ ಕಣ್ಣುಗಳು ಮಣಿಯಂತೆ. ಸಣ್ಣಗಾಗಿ ಬಿಟ್ಟಿದ್ದುವು. ಅವು ನಿಮ್ಮನ್ನು ಯುಕ್ತಿಯಿಂದ ಗಮನಿಸುತ್ತಿದ್ದುವು. ಅವು ನಿಮ್ಮ ಅದೃಷ್ಟವನ್ನು ಅವನದಕ್ಕೆ ಹೋಲಿಸಿ ತೂಗಿನೋಡುತ್ತಿದ್ದವು. ಮಹತ್ವಾಕಾಂಕ್ಷೆ ಈಡೇರಲಾರದ ಹತಾಶೆ, ಕಷ್ಟದ ದಿನಗಳು, ತನ್ನ ಭವಿಷ್ಯ ಕುರಿತಾದ ಅನಿಶ್ಚಿತ ನಂಬಿಕೆ ಇವೆಲ್ಲವೂ ಅವನನ್ನು ಕಹಿಗೊಳಿಸಿದ್ದುವು ಮತ್ತು ಕೆಟ್ಟ ಕಣ್ಣು ನೀಡಿದ್ದುವು. ಜಗತ್ತಿನ ಎಲ್ಲ ಕೆಡುಕೂ ನಿಮಗೊದಗಲೆಂದು ಅವನು ಬಯಸಿಯೇ ತೀರುತ್ತಿದ್ದನು. ಯಾವುದರ ಮೇಲೇ ಆಗಲಿ ಕೆಲವು ನಿಮಿಷಕ್ಕಿಂತ ಹೆಚ್ಚಾಗಿ ತನ್ನ ದೃಷ್ಟಿಯನ್ನು ಕೇಂದ್ರಿಕರಿಸಲಾಗಲಿ, ಲಕ್ಷ್ಯ ಕೊಡಲಾಗಲಿ ಅವನಿಗೆ ಸಾಧ್ಯವಾಗುತ್ತಿರಲಿಲ್ಲ ಎಂಬುದೇ ಅವನಲ್ಲಿ ಕಂಡು ಬಂದ ಅತ್ಯಂತ ಆತಂಕದ ಬದಲಾವಣೆ. ಆತ ನಿಮಗೊಂದು ಪ್ರಶ್ನೆ ಕೇಳಬಹುದು. ಉದ್ದೇಶಪಟ್ಟು ನಿಮ್ಮ ಮಾತನ್ನು ಆಲಿಸಲಾರಂಭಿಸುತ್ತಾನೆ ಮತ್ತು ಆಸಕ್ತಿಯನ್ನೇ ನೀಗಿಕೊಳ್ಳುವನು. ಅಸಹನೆ ತುಂಬಿದ ಮನುಷ್ಯನಾದ ಅವನು ಈಗ ಯಾವೊತ್ತು ಬೇಕಾದರೂ ಅದರ ತುದಿಯನ್ನು ತಲುಪಿಬಿಡುತ್ತಾನೆ.

ನಾವು ಒಬ್ಬರನ್ನೊಬ್ಬರು ತಬ್ಬಿಕೊಂಡೆವು. ಕಂಡ ಹಾಗೆಯೇ ಅವನು ಒಂದೇ ಸಮನೆ ಕುಡಿಯುತ್ತಿದ್ದನು. ಮದ್ಯ ಬೆಳ್ಳುಳ್ಳಿಯ ಹಾಗೆ. ಅದರ ಹಾಳು ಹಳಸಲು ವಾಸನೆ ಶರೀರಾದ್ಯಂತ ಆವರಿಸಿಕೊಳ್ಳುತ್ತದೆ.

"ನನ್ನನ್ನು ನೋಡಿ ನಿಮಗೆ ಆಶ್ಚರ್ಯವಾಗುತ್ತಿದೆಯೆ ಮಹಾಸ್ವಾಮಿ?"

"ಸರಿಯಾಗಿ ಹೇಳಬೇಕೆಂದರೆ ನಿಮ್ಮನ್ನು ನೋಡಿ ಸಂತೋಷವಾಗುತ್ತಿದೆ".

"ನೀವು ಯಾವಾಗಲೂ ಒಬ್ಬ ಅತ್ಯಂತ ಸಂಭಾವಿತ ಮನುಷ್ಯರಾಗಿದ್ದಿರಿ ಮಹಾರಾಜ್‌ಕುಮಾರ್. ಅಂದ ಹಾಗೆ ಜೀವನ ನಿಮ್ಮ ಪಾಲಿಗೆ ಹೇಗಿದೆ?"

"ಅದೇ ಮಾಮೂಲಿ ಏರುಪೇರುಗಳು" ಮುಂದಿನ ಒಂದೆರಡು ದಿನಗಳಿಗೆ ನಾವಿಬ್ಬರೂ ಪರಸ್ಪರ ತೀರಾ ನೀರಸತೆಯನ್ನು ವಿನಿಮಯ ಮಾಡಿಕೊಳ್ಳುವೆವೇನೋ ಎಂದು ವಿಸ್ಮಿತನಾದೆ.

"ಅಂತಿಮವಾಗಿ ನಿಮ್ಮನ್ನು ಅಧಿಕೃತವಾಗಿ ಮಹಾಪ್ರಭು ರಾಣಾ ಅವರ ಉತ್ತರಾಧಿಕಾರಿ ಎಂದು ಘೋಷಿಸಲಾಗಿದೆಯೆ?"

"ಇಲ್ಲ ಮಹಾಸ್ವಾಮಿ. ಆದರೆ ದೇವರ ದಯೆ ಇದ್ದರೆ, ಮಹಾಪ್ರಭುಗಳು ಇನ್ನೂ ಹಲವಾರು ಪ್ರಶಸ್ತ ವರ್ಷಗಳು ಬದುಕಿರುತ್ತಾರೆ."

"ನನ್ನ ಮುದುಕ ಅಪ್ಪ ಸತ್ತಿದ್ದಾನೆ ಆದರೆ ನಾನಿನ್ನೂ ಗುಜರಾತಿನ ಸುಲ್ತಾನನಾಗಿಲ್ಲ"

"ಮಹಾರಾಜರ ಮರಣದ ವಿಷಯ ಕೇಳಿ ನನಗಲೆ ಬಹಳ ದುಃಖವಾಯಿತು. ಆದರೆ ಧೈರ್ಯ ತಂದುಕೊಳ್ಳಿ ರಾಜಕುಮಾರರೆ ನೀವು ಪ್ರಭುಗಳಾಗಬೇಕೆಂದು ನಿಮ್ಮ ಹಣೆಯಲ್ಲಿ ಬರೆದಿದ್ದರೆ, ಈ ಜಗತ್ತಿನಲ್ಲಿ ಯಾರೂ ಅದನ್ನು ತಪ್ಪಿಸಲು ಸಾಧ್ಯವಿಲ್ಲ. ನಮ್ಮ ಶುಭ ಹಾರೈಕೆಗಳು ಯಾವತ್ತೂ ನಿಮ್ಮೊಂದಿಗೆ ಇರುತ್ತವೆ".

"ಆದರೆ ಅದು ನನ್ನ ಹಣೆಯಲ್ಲಿ ಬರೆದಿದೆಯೆ ಮಹಾರಾಜ್‌ಕುಮಾರ್" ಹಾಗೆ ಹೇಳುವಾಗ ಕಹಿ ಇದ್ದಷ್ಟು ಆವೇಶವಿರಲಿಲ್ಲ.

"ಹಣೆ ಬರಹದ ಸಂಕೇತ ಲಿಪಿಯ ರಹಸ್ಯವನ್ನರಿಯಲು ನಾನೂ ನಿಮ್ಮಷ್ಟೇ ಕಾತರನಾಗಿದ್ದೇನೆ ಷಹಜಾದಾ."

"ಮಹಾಸ್ವಾಮಿ" ಆತನ ದನಿ ಒಮ್ಮೆಗೇ ಬದಲಾಗಿ ಬಿಟ್ಟಿತು. "ನಾನೊಬ್ಬ ನೆಲೆಯನ್ನು ಹುಡುತ್ತಿರುವ ನೆಲೆಗೆಟ್ಟ ಮನುಷ್ಯ. ನಾವು ಮಾಳ್ವಕ್ಕೆ ಹೋಗುತ್ತಿದ್ದೆವು. ಆಗ ನೀವು ಮಾಳ್ವದ ಸೇನೆಯನ್ನು ಸೋಲಿಸಿದ್ದಷ್ಟೇ ಅಲ್ಲ, ಮಹಮದ್ ಖಾಲ್ಜಿಯನ್ನು ಸೆರೆ ಹಿಡಿದಿದ್ದೀರೆಂದು ತಿಳಿದು ಬಂದಿತು. ಈಗ ನೀವು ಮಾಳ್ವದ ಬಾಗಿಲನ್ನು ನನ್ನ ಮುಖಕ್ಕೆ ರಾಚುವಂತೆ ಮುಚ್ಚಿದ್ದೀರಿ. ಅಲ್ಲಿ ಸುಲ್ತಾನನಿಲ್ಲದೆ ಅವರು ನನಗೆ ಆಶ್ರಯ ಕೊಡಲಾರರು".

ಸುಲ್ತಾನನು ಮಾಳ್ವದಲ್ಲೇ ಇದ್ದಿದ್ದರೆ, ಅಲ್ಲಿ ಮೇವಾಡದಲ್ಲಿ ಸಿಗುವಂಥ ಸ್ವಾಗತವೂ ಸಿಗುತ್ತಿರಲಿಲ್ಲವೆಂದು ಬಹಾದುರನಿಗೆ ಹೇಳುವುದನ್ನು ಸಂಯಮದಿಂದ ತಡೆದುಕೊಂಡೆನು. ಗುಜರಾತ್ ಮತ್ತು ಮಾಳ್ವ ಇತ್ತೀಚೆಗಷ್ಟೇ ಮಿತ್ರ ದೇಶಗಳಾಗಿದ್ದವು. ಆದರೆ ಗುಜರಾತಿನ ಉದ್ದೇಶಗಳನ್ನು ಕುರಿತಂತೆ ಸುಲ್ತಾನ್ ಮಹಮ್ಮದನಿಗೆ ಏನಾದರೂ ಭ್ರಮೆಗಳಿದ್ದುವೆಂದು ನನಗನ್ನಿಸುವುದಿಲ್ಲ. ಕಿಂಚಿನ್ಮಾತ್ರ ಪ್ರಚೋದನೆ ಹಾಗೂ ಗತಿಸಿದ ಶೋಕಪೀಡಿತ ಮುಜಫ್ಫರ್ ಷಾ ಅಥವಾ ಈಗ ಅವನ ಮಗ ಸಿಕಂದರ್ ಮಾಳ್ವವನ್ನು ಇಡಿಯಾಗಿ ನುಂಗಿ ಬಿಡುತ್ತಿದ್ದರು.

"ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆದೂ ಅಲೆದೂ ನನಗೆ ಸಾಕಾಗಿ ಹೋಗಿದೆ. ತಾತ್ಕಾಲಿಕವಾಗಿ ನನಗೊಂದು ನೆಲೆ ಬೇಕಾಗಿದೆ. ನೀವು ಕಳೆದು ಹೋದದ್ದು ಕಳೆದೇ ಹೋಗಲು ಬಿಟ್ಟು ಬಿಡುತ್ತೀರಾ."

"ನಾನು ಭೂತಕಾಲದಲ್ಲಿ ಬದುಕುತ್ತಿಲ್ಲ ರಾಜಕುಮಾರ. ನನ್ನ ವಿಚಾರಗಳೇನು ಎಂದು ಬಹಳ ಕಾಲದಿಂದ ತಿಳಿದಿದ್ದೀರಿ. ಗುಜರಾತ್ ಮತ್ತು ಮೇವಾಡಗಳು ಮಿತ್ರ ದೇಶಗಳಾಗಿರಬೇಕು ಮತ್ತು ಶಾಂತಿಯಿಂದಿರಬೇಕು. ಇನ್ನೇನಾದರೂ ಇದ್ದರೆ ಅದನ್ನು ಈಗ ಇನ್ನೂ ಹೆಚ್ಚಾಗಿ ನಂಬುತ್ತೇನೆ. ಈ ವಿಷಯ ನನಗೇ ಬಿಟ್ಟಿದ್ದಾಗಿದ್ದರೆ, ನೀವು ಇಷ್ಟಪಡುವಷ್ಟು ದಿನ ಇಲ್ಲಿ ಇರಬಹುದು. ಆದರೆ ನಾನು ನಿಮ್ಮ ಹತ್ತಿರ ಮುಚ್ಚುಮರೆಯಿಲ್ಲದೆ ಸೀದಾ ಸಾದಾ ಇರಬೇಕು. ಮೇವಾಡದ ಜನತೆ ನಿಮ್ಮನ್ನು ಸ್ವಾಗತಿಸುವುದಿಲ್ಲ. ಕಳೆದ ಸಲ ನೀವು ಭೇಟಿ ನೀಡಿದಾಗ ಏನಾಯಿತೋ ಅದರ ನಂತರವಂತೂ ಖಂಡಿತಾ ಸ್ವಾಗತಿಸುವುದಿಲ್ಲ".

“ನನಗೆ ಆಶ್ರಯ ನೀಡಬೇಕೆಂದು ನಾನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದರೂ ನೀವು ನನಗೆ 'ಇಲ್ಲ' ಎಂದು ಹೇಳುತ್ತಿದ್ದೀರಾ ಮಹಾಸ್ವಾಮಿ?”

“ಈ ವಿಷಯದಲ್ಲಿ ನಾನೇನೂ ಹೇಳುವಂತಿಲ್ಲ ರಾಜಕುಮಾರ. ಏನೇ ಆಗಲಿ ಮುಂದಿನ ಕೆಲ ದಿನಗಳವರೆಗೆ, ನಮ್ಮ ಯಾವುದಾದರೊಂದು ಹಳ್ಳಿಯಲ್ಲಿ ನೀವು ಅಜ್ಞಾತವಾಗಿ ಇದ್ದುಕೊಂಡು ಚೇತರಿಸಿ ಕೊಳ್ಳಲು ನಾನು ಏರ್ಪಾಟು ಮಾಡುತ್ತೇನೆ. ನನ್ನ ವೈಯಕ್ತಿಕ ನಿಧಿಯಿಂದ, ನಿಮಗೆ ಹಿಂತಿರುಗಿಸಲು ಸಾಧ್ಯವಾದಾಗ ಹಿಂತಿರುಗಿಸಬೇಕೆಂಬ ಷರತ್ತಿನ ಮೇಲೆ ನಿಮಗೆ ಹತ್ತು ಸಾವಿರ ರೂಪಾಯಿಗಳ ಸಾಲವನ್ನು ನೀಡುತ್ತಿದ್ದೇನೆ.

“ನಿಮ್ಮ ಆತಿಥ್ಯವನ್ನು ನಾನು ಅಂಗೀಕರಿಸುತ್ತೇನೆ” ಬಹಾದುರನು ದರ್ಪದಿಂದ ಹೇಳಿದನು. ನಾನು ಆತನ ದಯೆ ಮತ್ತು ಔದಾರ್ಯವನ್ನು ಸ್ವೀಕರಿಸುತ್ತಿರುವ ವ್ಯಕ್ತಿ ಎಂಬ ಭಾವ ಬರುವಂತೆ ನಡೆದುಕೊಂಡನು ಎಂದು ನಾನು ಒಪ್ಪಿಕೊಳ್ಳಬೇಕು.

“ನಿಮ್ಮ ಔದಾರ್ಯ ಅಪಾತ್ರನಲ್ಲಿ ಆಗಿದೆ. ಮಹಾಸ್ವಾಮಿ ನನ್ನದು ದೈತ್ಯ ನೆನಪು. ನೀವು ನನಗೆ ಆಶ್ರಯವನ್ನು ನಿರಾಕರಿಸಿದಿರಿ ಎಂಬುದನ್ನು ನಾನು ಮರೆಯಲಾರೆ. ಎಚ್ಚರಿಕೆಯಿಂದಿರಿ ಮಹಾರಾಜ್‌ಕುಮಾರ್. ನೀವು ಹತ್ತು ಸಾವಿರ ಗುಜರಾತಿ ಸೈನಿಕರನ್ನು ಕುತಂತ್ರದಿಂದ ಸಾವಿಗೆ ದೂಡಿದಿರಿ. ನೀವು ಗುಜರಾತಿ ಸೈನಿಕನ ಸೋಗಿನಲ್ಲಿ ಮಲಿಕ್ ಐಯಾಜ಼ನನ್ನು ಕೊಂದು ಹಾಕಿದಿರಿ, ನೀವು 'ಇದಾರ್' ಅನ್ನು ಮರಳಿ ಪಡೆದುಕೊಂಡಿರಿ. ಇದುವರೆಗೆ ಯಾರೂ ಗುಜರಾತಿಗೆ ಅಂಥ ವಿನಾಶಕರವಾದ ಪರಾಭವವನ್ನು ಉಂಟು ಮಾಡಿರಲಿಲ್ಲ. ಪ್ರತೀಕಾರ ನನ್ನದು ಮಹಾರಾಜ್‌ಕುಮಾರ್, ನನ್ನ ಮಾತುಗಳನ್ನು ಗಮನವಿಟ್ಟು ಕೇಳಿ ನಾನು ನಿಮ್ಮನ್ನು ಹಳ್ಳಿಯಿಂದ ಹಳ್ಳಿಗೆ, ಪಟ್ಟಣದಿಂದ ಪಟ್ಟಣಕ್ಕೆ ಅಟ್ಟಾಡಿಸಿ ಕಾಡುವೆ ಮತ್ತು ಇಡೀ ಮೇವಾಡದ ತುಂಬ ಸೈನ್ಯವನ್ನು ನುಗ್ಗಿಸುವೆ”.

ನಾನು ನಗದೆ ಇರದಾದೆ. ಇದೇನಿದು ಬೇಡುವವನ ಮಾತೆ ಅಥವಾ ಅಧಿಕಾರದ ತುತ್ತ ತುದಿಯಲ್ಲಿರುವ ಸರ್ವಾಧಿಕಾರಿಯ ಮಾತೆ?

“ನೀವು ತುಂಬಾ ಆಯಾಸಗೊಂಡಿದ್ದೀರಿ ಮತ್ತು ನಿಮ್ಮ ತಾಳ್ಮೆಯ ತುದಿಯಲ್ಲಿದ್ದೀರಿ. ಆದರೆ ಭರವಸೆಯ ನಿರೀಕ್ಷೆಯಂತೆ, ನಿಮ್ಮ ಅದೃಷ್ಟ ಬಹಳ ಬೇಗ ಪರಿವರ್ತನೆಯಾಗುತ್ತದೆ. ಆಗ ನಿಮ್ಮ ರಾಕ್ಷಸ ನೆನಪು ನನ್ನ ಮತ್ತು ನಿಮ್ಮ ಮಧ್ಯೆ ನಡೆದದ್ದನ್ನೆಲ್ಲಾ ನಿಮಗೆ ನೆನಪಿಸುತ್ತದೆ. ಇಬ್ಬರು ಪಾರಂಪರಿಕ ಶತ್ರುಗಳು ಒಟ್ಟಾಗಿ ಸೇರಿಕೊಂಡು ಸ್ನೇಹಿತರಾಗಿ, ಶಾಂತಿಗಾಗಿ ಹೋರಾಡುವ ಅವಕಾಶವೇನಾದರೂ ಇದ್ದರೆ ಅದು ಇದ್ದದ್ದು ಗುಜರಾತ್ ಮತ್ತು ಮೇವಾಡಕ್ಕೆ ಮಾತ್ರ”.

“ಗೌರವ ಮತ್ತು ಸೇಡಿನ ವಿಷಯ ಏನು?”

“ನಾವೇಕೆ ಗೌರವಯುತವಾದ ಶಾಂತಿಗೆ ಪ್ರಯತ್ನಿಸಬಾರದು ರಾಜಕುಮಾರ? ಅದರ ಪರಿಣಾಮಗಳು ವಿಸ್ಮಯಕ್ಕೆ ಕಿಂಚಿದೂನ. ಅದು ಹೊಸ ನಗರಗಳನ್ನು ನಿರ್ಮಿಸಲು ಮತ್ತು ಹಳೆಯ ನಗರಗಳನ್ನು ನವೀಕರಿಸಲು ಅಗತ್ಯವಾದ ಸಮಯ ಮತ್ತು ಸಂಪತ್ತನ್ನು ನೀಡುತ್ತದೆ. ಅದು ಕಲಾವಿದರು ಮತ್ತು ಸಂಗೀತಗಾರರನ್ನು ನಮ್ಮ ಆಸ್ಥಾನಗಳತ್ತ ಆಕರ್ಷಿಸುತ್ತದೆ. ಆಗ ನನ್ನ ಅತ್ಯಂತ ನೆಚ್ಚಿನ ಗೀಳಾದ 'ಮೇವಾಡದ ಒಳಚರಂಡಿಗಳಿಗೆ' ಸಮಯ ಸಿಗಬಹುದು.”

ಅವನು ಪರೀಕ್ಷಾರ್ಥಕ ನಗೆ ನಕ್ಕು ಕೇಳಿದ: “ಹಾಗಂತ ನೀವು ಭಾವಿಸುವಿರಾ?”

“ಹೌದು, ಅದನ್ನು ಹೃತ್ಪೂರ್ವಕವಾಗಿ ಮತ್ತು ಬುದ್ಧಿ ಪೂರ್ವಕವಾಗಿ ನಂಬುತ್ತೇನೆ”.

"ಖುದಾ ಹಾಫ್ಲಿಜ್ ಮಹಾರಾಜ್‌ಕುಮಾರ್"

"ಖುದಾ ಹಾಫ್ಲಿಜ್ ಷಹಜಾದಾ ಮತ್ತೆ ನಾವು ಭೇಟಿ ಆಗುವವರೆಗೆ".

* * *

ವಿಜಯೋತ್ಸವ ಸಮಾರಂಭಗಳ ಕೊನೆಯ ದಿನದ ಬೆಳಿಗ್ಗೆ ಮಾಳ್ವದ ಸುಲ್ತಾನರು ಮೇದಿನಿ ರಾಯ್ ಮತ್ತು ಮೇವಾಡದ ರಾಣಾ ಈ ಮೂವರೂ ಒಂದು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು. ಆ ರಾತ್ರಿ ಅರಮನೆಯಲ್ಲಿ ಸಜನೀ ಬಾಯಿ ನಮಗಾಗಿ ಗಾಯನ ಮಾಡಿದರು.

ನಾನು ಆತಿಥೇಯನಾಗಿದ್ದರಿಂದ ಸಾಮಾನ್ಯವಾಗಿ ಕೌಸಲ್ಯಳು ಆ ಏರ್ಪಾಟುಗಳನ್ನೆಲ್ಲ ನೋಡಿಕೊಳ್ಳುತ್ತಾಳೆ. ಆದರೆ ಕೌಸಲ್ಯ ಈಗ ನನ್ನನ್ನು ತೊರೆದಿದ್ದಾಳೆ. ನಾನು ಚಿತ್ತೂರಿಗೆ ಹಿಂತಿರುಗಿದಾಗ ನನ್ನನ್ನು ಸ್ವಾಗತಿಸಲು ಅವಳು ಬಂದಿರಲಿಲ್ಲ.

"ಒಂದು ತಿಂಗಳ ಹಿಂದೆ ಅವಳು ಮಮತಾಳಿಗೊಂದು ಸಂದೇಶ ಕಳಿಸಿದ್ದಳು. ತೀರಾ ತುರ್ತಾದ ಒಂದು ಕೆಲಸದ ಮೇಲೆ ತನ್ನ ಊರಿಗೆ ಹೋಗುತ್ತಿದ್ದೇನೆಂಬುದೇ ಆ ಸಂದೇಶ. ಆಗಿನಿಂದ ನಮಗೆ ಅವಳ ಸಮಾಚಾರ ಏನೂ ತಿಳಿದು ಬಂದಿಲ್ಲ" ಮಂಗಳ್ ಹೇಳಿದ.

"ನಾನು ಹಿಂತಿರುಗಿದ್ದೇನೆಂಬುದು ಅವಳಿಗೆ ಗೊತ್ತೆ?

"ಗೊತ್ತಿದೆ ಎಂದು ನನ್ನ ಊಹೆ".

ಅವನ ತಾಯಿಯ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ಮಂಗಳನ ಮಾತುಕತೆಗಳು ಯಾವಾಗಲೂ ಅದೇಕೆ ಮೊಂಡು ಮತ್ತು ಮಾಹಿತಿಯನ್ನು ನೀಡಲಿಚ್ಚೆಯಿಲ್ಲದವಾಗಿರುತ್ತವೆ?

"ಹಾಗಂದರೇನರ್ಥ? ನನ್ನ ಹತ್ತಿರ ನಿನ್ನ ಒಣ ಜಂಬ ತೋರಿಸಬೇಡ ಮಂಗಳ. ಅವಳಿಗೆ ಗೊತ್ತಿದೆಯೋ ಅಥವಾ ಇಲ್ಲವೋ?

"ನನಗೆ ಗೊತ್ತಿಲ್ಲ ಸ್ವಾಮಿ. ಅವಳಿಗೆ ಹೇಳಿಕಳಿಸಬೇಕೆಂಬುದು ನಿಮ್ಮ ಇಚ್ಛೆಯೆ?"

"ಹೌದು"

ಎರಡು ದಿನಗಳ ನಂತರ ಅವನು ಮರಳಿ ಬಂದ.

"ಅವಳು ಹಳ್ಳಿಯಲ್ಲಿ ಇಲ್ಲ ಮಹಾರಾಜ್ ಕುಮಾರ್ ಅವರೇ"

"ಎಲ್ಲಿ ಹಾಳಾಗಿ ಹೋಗಿದ್ದಾಳವಳು?"

"ನನಗೆ ಗೊತ್ತಿಲ್ಲ ಮಹಾಪ್ರಭು. ಆದರೆ ನನ್ನ ತಾಯಿ ಒಬ್ಬ ಸ್ವತಂತ್ರ ಹೆಂಗಸು ಹಾಗೂ ನನಗೆ ಅವಳು ಉತ್ತರ ಹೇಳಬೇಕಾದಂಥವಳಲ್ಲ ಎಂಬುದನ್ನು ನಾನು ತಮಗೆ ತಿಳಿಸಿ ಹೇಳಬೇಕಾದ್ದಿಲ್ಲ."

"ಹಳ್ಳಿಗೆ ಹೋದ ಮೇಲೆ ಅಲ್ಲಿಂದ ಎಲ್ಲಿಗಾದರೂ ಬೇರೆ ಕಡೆಗೆ ಹೋದಳೋ ಹೇಗೆ?"

"ಅವಳು ಹಳ್ಳಿಗೆ ಹೋಗಿಯೇ ಇಲ್ಲ"

"ಹಾಗಾದರೆ ಎಲ್ಲಿಗೆ ಹೋದಳು ಅವಳು?"

"ಅವಳು ಕಾಣೆಯಾಗಿರುವ ಬಗ್ಗೆ ನಾನು ನಗರ ರಕ್ಷಕರಿಗೆ (ಪೊಲೀಸರಿಗೆ) ವರದಿ ಮಾಡಿದ್ದೇನೆ ಅವರು ನಗರದ ಎಲ್ಲೆಡೆ ಹುಡುಕುತ್ತಿದ್ದಾರೆ ಮತ್ತು ಅವರು ತಮ್ಮ ಸಂಪರ್ಕದ ಭೂಗತ ವ್ಯಕ್ತಿಗಳನ್ನು ತಪಾಸಣೆ ಮಾಡುತ್ತಿದ್ದಾರೆ. ನಗರ ರಕ್ಷಕರ ಮುಖ್ಯಸ್ಥನ (ಪೊಲೀಸ್ ಐ.ಜಿ.) ಹತ್ತಿರ ನಾನೇ ವೈಯಕ್ತಿಕವಾಗಿ ಮಾತಾಡಿದ್ದೇನೆ. ಅವನು ಹರಿಕಾರರಿಗೆ ತಾಯಿಯ ಚಹರೆಯ ವಿವರಗಳನ್ನು ಕೊಟ್ಟು ರಾಜ್ಯದ ಎಲ್ಲ ಪಟ್ಟಣಗಳಿಗೆ ಕಳಿಸಿದ್ದಾನೆ".

"ಅವಳು ಚನ್ನಾಗಿದ್ದಾಳೆಯೇ ಮಂಗಳ್?"

ನಾನು ನನ್ನ ಮೇಲೆಯೇ ಹಿಡಿತ ಹೊಂದಬೇಕಾಗಿತ್ತು. ಮಂಗಳನು ಏನು ತಾನೆ ಹೇಳಿಯಾನು? ತಾಯಿ ಐದು ವಾರಗಳಿಂದ ಕಾಣೆಯಾಗಿದ್ದಾಳೆ, ಆದರೆ ತುಂಬಾ ಚೆನ್ನಾಗಿದ್ದಾಳೆ ಎಂದೆ?

"ನಾನು ನಮ್ಮ ಗುಪ್ತಚಾರ ಇಲಾಖೆಯ ಜಾಲವನ್ನು ಎಚ್ಚರಿಸಿದ್ದೇನೆ ಮಹಾಸ್ವಾಮಿ. ನಿಮ್ಮ ಚಿತ್ರ ಸಂಗ್ರಹದಿಂದ ಅವಳ ಒಂದು ಭಾವಚಿತ್ರವನ್ನು ಪಡೆದುಕೊಂಡು ಹೋಗಿ ದೇವಾಲಯದಲ್ಲಿರುವ ಒಬ್ಬ ಕಲಾವಿದನಿಗೆ ಕೊಟ್ಟು ಅದರ ಒಂದು ಹನ್ನೆರಡು ಪ್ರತಿಗಳನ್ನು ರಚಿಸಿಕೊಡಲು ಕೇಳಿದ್ದೇನೆ".

"ನಿನಗೆ ಧನ್ಯವಾದ ಮಂಗಳ್. ನಿನ್ನ ಈ ಕೆಲಸ ನನಗೆ ಬಹಳ ಮೆಚ್ಚಿಗೆಯಾಯಿತು". ಮಂಗಳನು ಒಂದು ವಕ್ರ ನಗೆ ನಕ್ಕನು. "ನಾವು ಎಲ್ಲ ಸಮಯದಲ್ಲೂ ಮುಂದುವರಿಯಲು ಸಾಧ್ಯವಿಲ್ಲ ಮಹಾಸ್ವಾಮಿ. ಆದರೆ ಆಕೆ ನನ್ನ ಹೆತ್ತ ತಾಯಿಯಲ್ಲವೆ. ನನಗೆ ಆಕೆಯ ಬಗ್ಗೆ ಕಾಳಜಿ ಇದೆ".

"ನೀನು ಹೇಳುವುದು ಸರಿ. ನಿನಗೇನಾದರೂ ಗೊತ್ತಾದರೆ ನನಗೆ ತಿಳಿಸು. ಏನೇ ಆದರೂ ಸರಿಯೆ."

ಅತಿಥಿಗಳ ವಿಚಾರದಲ್ಲಿನ ಆತಿಥ್ಯದ ಬಗ್ಗೆಯಾಗಲಿ ಶಿಷ್ಟಾಚಾರದ ಬಗ್ಗೆಯಾಗಲಿ ನಾನು ತಲೆಕೆಡಿಸಿಕೊಳ್ಳಬೇಕಾಗಿರಲಿಲ್ಲ. ನನ್ನ ಗೈರು ಹಾಜರಿಯಲ್ಲಿ ರಾಜಕುಮಾರಿಯು ಇಪ್ಪತ್ತೈದು ಜನರಿಂದ ಹಿಡಿದು ಎರಡೂವರೆ ಸಾವಿರ ಜನರವರೆಗೂ ಮಾಮೂಲಾಗಿ ಭೋಜನ ಕೂಟಗಳನ್ನು ಮತ್ತು ಔತಣಕೂಟಗಳನ್ನು ಏರ್ಪಡಿಸಿಬಿಡುತ್ತಿದ್ದಳು. ಅವಳು ಯೋಜನೆ ಹಾಕಿ ವ್ಯವಸ್ಥೆಗೊಳಿಸುತ್ತಿದ್ದಳು. ಮಂಗಳನ ಹೆಂಡತಿ ಮಮತ ಅವಳ ಆದೇಶಗಳನ್ನು ಕಾರ್ಯಗತಗೊಳಿಸುತ್ತಿದ್ದಳು. ಈ ದಿನಗಳಲ್ಲಿ ಅರಮನೆಯಲ್ಲಿ ಮರ್ತಾದ ತಿಂಡಿ ತಿನಸುಗಳ ಒಂದು ಚೂರು ಕುರುಹನ್ನು ಕಾಣಬಹುದಾಗಿತ್ತು. ಆದರೆ ರಾಜಕುಮಾರಿ ಯಾವಾಗಿನಂತೆ ಊಟದಲ್ಲಿ ದೆಹಲಿಯ ಅಥವಾ ಅಹಮದಾಬಾದಿನ ಕೆಲವು ತಿನಿಸುಗಳನ್ನು ಪರಿಚಯಿಸುವ ಮೂಲಕ, ಯಾರೊಬ್ಬರೂ ಅವಳ ಮೇಲೆ ಪಕ್ಷಪಾತದ ಆರೋಪವನ್ನು ಮಾಡದಂತೆ ಖಾತರಿಪಡಿಸಿಕೊಳ್ಳುತ್ತಿದ್ದಳು. ಆ ರಾತ್ರಿಯ ಹಾಡುಗಾರಿಕೆ ಸುಲ್ತಾನ್ ಮಹಮದ್ ಖಾಲ್ಜಿಯವರ ಗೌರವಾರ್ಥವಾಗಿ ಇದ್ದುದರಿಂದ ಭೋಜನಕ್ಕೆ ಭಕ್ಷ್ಯಗಳ ಪಟ್ಟಿ ಎಲ್ಲಾ ಮಾಳ್ವದ್ದೇ ಆಗಿತ್ತು. ನನ್ನ ಹೆಂಡತಿಯು ಸಿದ್ಧಪಡಿಸಿದ್ದ ದ್ರಾಕ್ಷಾರಸ ಸಹಜವಾಗಿಯೇ ಭರ್ಜರಿಯಾಗಿಯೇ ಇತ್ತು. ಕಾರಣ ಮಾಳ್ವದ ದೊರೆಯು ಭೋಜನದಿಂದ ತುಂಬ ಸಂತೃಪ್ತನಾಗಿದ್ದನು. ಭಾರೀ ಬೆನ್ನು ತಟ್ಟುವ ವಿನೋದದ ಮನಃಸ್ಥಿತಿಯಲ್ಲಿದ್ದನು. ನಾನು ಕೂಡ ಬಹುಶಃ ಮೈಮರೆತು ಎಲ್ಲವನ್ನೂ ಹೇಳಿ ಬಿಡುವ ಮನಃಸ್ಥಿತಿಯಲ್ಲಿದ್ದಿರಬೇಕು. ಕಾರಣ, ಊಟದ ನಂತರ ರಣಕುಂಭ ಸಭಾಂಗಣಕ್ಕೆ ನಡೆದುಹೋಗುತ್ತಿದ್ದಾಗ, ಒಂದು ಆಕ್ಷೇಪಕರವಾದ ಪ್ರಶ್ನೆಯಲ್ಲಿ ಅವನು ಜಾರಿದಾಗ ನಾನು ನನಗೇ ಅರಿವಿಲ್ಲದೆ ಸಿಕ್ಕು ಹಾಕಿಕೊಂಡು ಬಿಟ್ಟೆನು. ರಣಕುಂಭ ಸಭಾಂಗಣದಲ್ಲಿಯೇ ಅರಮನೆಯ ಸಂಗೀತ ಕಛೇರಿಗಳು ನಡೆಯುತ್ತಿದ್ದುದು.

"ಈಗ ಅದೆಲ್ಲ ಕೆಲಸಕ್ಕೆ ಬಾರದ ನೆನಪಷ್ಟೇ ಆಗಿರುವುದರಿಂದ ಮಾಳ್ವದ ಸೈನಿಕ ಕಾರ್ಯಾಚರಣೆಗೆ ನಿಮ್ಮ ಜೊತೆ ನೀವು ಐವತ್ತು ಸಾವಿರ ಯೋಧರ ಸೈನ್ಯ ತಂದಿದ್ದಿರೋ

ಅಥವಾ ಅದೆಲ್ಲ ಬರೀಗೊಡ್ಡು ಬೆದರಿಕೆ ಅಷ್ಟೇನೋ ಎಂಬುದನ್ನು ನೀವೀಗ ಹೇಳಬಹುದು ಅಂತ ಕಾಣಿಸುತ್ತೆ ಅಲ್ಲವೆ?"

ಈಗ ಅದರ ಬಗ್ಗೆ ಮರು ಆಲೋಚನೆ ಮಾಡಿದಾಗ, ನಾನು ನನ್ನ ಉತ್ತರವನ್ನು ಮೊದಲೇ ಅಭ್ಯಾಸ ಮಾಡಿ ಇಟ್ಟುಕೊಳ್ಳದೇ ಇದ್ದುದು ಒಳ್ಳೆಯದೇ ಆಗಿತ್ತು. ಕಾರಣ ಆಶ್ಚರ್ಯ ತುಂಬಿದ ನನ್ನ ನೋಟ. ಅದರ ಬಗ್ಗೆ ಸುಳ್ಳೇನೂ ಹೇಳಬೇಕಾಗಲಿಲ್ಲ. ನಿಧಾನವಾಗಿ ನಮ್ಮ ಜೊತೆ ನಡೆದುಕೊಂಡು ಬರುತ್ತಿದ್ದ ಮೇದಿನಿ ರಾಯ್, ನನ್ನ ಪ್ರತ್ಯುತ್ತರಕ್ಕಾಗಿ ಸುಲ್ತಾನನಷ್ಟೇ ಕುತೂಹಲದಿಂದ ಕಾಯುತ್ತಿದ್ದರೆಂದು ಈಗ ನನಗೆ ನೆನಪಾಗುತ್ತಿದೆ.

"ಅದು ಗೊಡ್ಡು ಬೆದರಿಕೇನೆ ಮಹಾಸ್ವಾಮಿ. ಆದರೆ ಒಂದು ಪೂರ್ಣ ಸಂಖ್ಯೆಗೆ ಸರಿಹೊಂದಿಸುವಂಥ ಗೊಡ್ಡು ಬೆದರಿಕೆ ಅಲ್ಲ".

"ಎಷ್ಟು ಹಾಗಿದ್ದರೆ?" ತನಗೆ ನಿಜಕ್ಕೂ ಸತ್ಯ ಸಂಗತಿ ಬೇಕಾಗಿದೆಯೇನೋ ಎನ್ನುವ ಹಾಗೆ ತನಗೆ ತಾನೆ ಹೇಳಿಕೊಳ್ಳುತ್ತ ಹೆಚ್ಚು ಕಡಿಮೆ ನಿಲ್ಲಿಸಿದನು.

"ನಾವು ನಲವತ್ತೇಳು ಸಾವಿರದ ಏಳು ನೂರು ಮೇವಾಡದ ಸೈನಿಕರು. ಅದು ಐವತ್ತು ಸಾವಿರ ಎಂದು ಹೇಳಿದಾಗ ಆಗುವ ಪರಿಣಾಮದ ಅರ್ಧದಷ್ಟೂ ಪರಿಣಾಮವಾಗುವುದಿಲ್ಲ. ಹಾಗಾಗಿ ನಾವು ಆ ಸಂಖ್ಯೆಯನ್ನು ಸ್ವಲ್ಪ ಉಬ್ಬಿಸಿದೆವು. ಯಾಕೆ, ಯಾಕದನ್ನು ಕೇಳ್ತಿದ್ದೀರಿ ಮಹಾಸ್ವಾಮಿ?"

ಅವನು ಸಮಾಧಾನಗೊಂಡವನಂತೆ ಕಂಡ. "ನೀವು ಒಂದು ಸೊನ್ನೆ ಸೇರಿಸಿ ನಾಲ್ಕು ಸಾವಿರದೈ ನೂರು ಸಂಖ್ಯೆಯ ಸೈನ್ಯವನ್ನು ನಲವತ್ತೈದು ಸಾವಿರಕ್ಕೆ ಬದಲಾಯಿಸುವ ಸ್ವಾತಂತ್ರ್ಯ ವಹಿಸಿದ್ದಿರಿ ಅಂತ ನಿನ್ನೆ ದಿನ ಯಾರೋ ಹೇಳಿದರು ಅಂತ ಅಂದುಕೊಂಡಿದ್ದೆ".

"ನಾನೊಬ್ಬ ಸಾಹಸಿಗನೆಂದು ಬಹುಮಟ್ಟಿಗೆ ಒಬ್ಬ ಅಲೌಕಿಕ ವೀರನೆಂದು ನಮ್ಮ ಮಕ್ಕಳು ನಂಬಬೇಕೆಂದು ಆಶಿಸುವವನು ನಾನು. ಆದರೆ, ನಾನು ಮೇವಾಡದವರ ನಗೆಪಾಟಲಿಗೆ ಗುರಿಯಾಗಲು ಇಷ್ಟವಿಲ್ಲ ಮಹಾಸ್ವಾಮಿ. ಜಗತ್ತಿನಲ್ಲಿ ಸೈನಿಕರಷ್ಟು ಕೆಟ್ಟ ಸುಳ್ಳುಗಾರರು ಇನ್ನೊಬ್ಬರಿಲ್ಲ. ಆದರೆ ನಿಮ್ಮ ಈ ಸುದ್ದಿ ಮೂಲ ವಿಷಯವನ್ನು ವಿಪರೀತ ಉತ್ಪ್ರೇಕ್ಷೆ ಮಾಡಿತು ಅಂತ ಕಾಣಿಸುತ್ತೆ".

ಸುಲ್ತಾನ್ ನನ್ನೊಂದಿಗೆ ತನ್ನ ಮಾತನ್ನಿನ್ನೂ ಮುಗಿಸಿರಲಿಲ್ಲ. "ಅಷ್ಟು ದೊಡ್ಡ ಸೈನ್ಯ ಅಷ್ಟೊಂದು ದೊಡ್ಡ ದೂರವನ್ನು, ಅಷ್ಟು ಅಲ್ಪ ಸಮಯದಲ್ಲಿ ಕ್ರಮಿಸಿಬಿಟ್ಟಿತಲ್ಲ, ನಿಖರವಾಗಿ ಹೇಳಬೇಕು ಅಂದರೆ ಕೇವಲ ಮೂರು ದಿನದಲ್ಲಿ. ಅದನ್ನು ಹೇಗೆ ವಿವರಿಸುತ್ತೀರಿ?"

"ನಿಮಗೆ ಅದನ್ನು ನಿಜವಾಗಿಯೂ ತಿಳಿದುಕೊಳ್ಳುವುದು ಬೇಕಿಲ್ಲ ಮಹಾಪ್ರಭು"

"ಇಲ್ಲ ನನಗೆ ತಿಳಿದುಕೊಳ್ಳಬೇಕಾಗಿದೆ"

"ಅದೊಂದು ಭಾರೀ ಸುಳ್ಳು, ನೀವು ನನ್ನನ್ನು ಕಂಡುಹಿಡಿದುಬಿಟ್ಟಿರಿ. ಈ ಸಲ ಅದು ಸೊನ್ನೆಯನ್ನು ಬಿಟ್ಟು ಬಿಡುವ ವಿಷಯ. ನೀವು ಮಂಡು ಬಿಟ್ಟ ಕೂಡಲೇ ಮೇದಿನಿ ರಾಯ್ ಅವರು ಮಹಾಪ್ರಭು ಮಹಾರಾಣಾ ಅವರನ್ನು ಸಹಾಯಕ್ಕಾಗಿ ಕೇಳಿದರು. ನಮಗೆ ಇದ್ದ ಸಮಯ ಅಲ್ಪ. ಹಾಗಾಗಿ ನಾವು ಹತ್ತು ಗುಂಪುಗಳಾಗಿ ವಿಭಜನೆಗೊಂಡೆವು. ಪ್ರತಿ ಗುಂಪೂ ಎರಡು ಮೂರು ದಿನಗಳ ಬಿಡುವಿನ ನಂತರ ಹೊರಡುವುದು. ಅದೇ ಮಾರ್ಗದ ಮೂಲಕವಂತೂ ಖಂಡಿತಾ ಅಲ್ಲ".

ಮುಂದಿನ ಪ್ರಶ್ನೆ ಏನಾಗಿರುತ್ತದೆಂದು ನನಗೆ ಗೊತ್ತಿತ್ತು.

"ಆ ಮೇಲೆ ಕೋತಿಗಳನ್ನೂ, ನಾಯಿಗಳನ್ನೂ ತಿಂದ ವಿಷಯ ಹೇಳಿ".

"ಅದು ಪೂರಾ ನಿಜ. ಅದನ್ನು ನಾವು ಕೆಲವು ವರ್ಷಗಳ ಹಿಂದೆ ನಮ್ಮ ರಾಜ್ಯಕ್ಕೆ ಭೇಟಿಕೊಟ್ಟಿದ್ದ ಚೀಣೀ ಪ್ರವಾಸಿಯಿಂದ ಕಲಿತೆವು. ಈ ಪ್ರಾಣಿಗಳ ಮಾಂಸ, ಅದರಲ್ಲೂ ವಿಶೇಷವಾಗಿ ಕೋತಿಗಳ ಮಿದುಳು, ಪ್ರಚೋದನೆ ಇಲ್ಲದೆ ಆಕ್ರಮಣ ಮಾಡುವುದನ್ನು ಮತ್ತು ಪುರುಷತ್ವವನ್ನು ಹತ್ತರಷ್ಟು ಹೆಚ್ಚು ಮಾಡುತ್ತದೆ ಎಂದು ಅವರ ನಂಬಿಕೆ. ನಾವು ಅಷ್ಟೊಂದು ಕಡಿಮೆ ಜನವಿದ್ದು ನಿಮ್ಮ ಅಷ್ಟೊಂದು ಹೆಚ್ಚು ಜನರೊಂದಿಗೆ ಹೋರಾಡಲು ಹೇಗೆ ಸಾಧ್ಯವಾಯಿತು ಎನ್ನುವುದನ್ನು ವಿವರಿಸುತ್ತದೆ".

"ಅದು ತೀರಾ ಅಸಹ್ಯದ ಸಂಗತಿ. ನಾಯಿ ಮನುಷ್ಯನ ಅತ್ಯುತ್ತಮ ಗೆಳೆಯ. ಎಂಥದೇ ಪ್ರಯೋಜನ ಸಿಗುತ್ತದೆ ಅಂದರೂ ನಾನು ಮಾತ್ರ ನಾಯಿ ಅಥವಾ ಕೋತಿಯ ಮಾಂಸ ತಿನ್ನಲ್ಲ. ನನಗೆ ವಾಂತಿ ಬರುವ ಹಾಗೆ ಆಗುತ್ತಿದೆ."

ಅವನು ವಾಂತಿ ಮಾಡಲಿಲ್ಲ. ಒಂದಂತೂ ನನಗೆ ಖಚಿತವಾಗಿತ್ತು. ತನ್ನ ದೇಶವಾದ ಮಾಳ್ವಕ್ಕೆ ಹೋದ ಮೇಲೆ, ದಿನಕ್ಕೆ ಒಂದು ಸಲವಾದರೂ ಕೋತಿಗಳ ಮಿದುಳನ್ನು ತಂದುಕೊಡಲು ಆದೇಶ ನೀಡುತ್ತಾನೆ. ಸುಲ್ತಾನನು ತನ್ನ ರಾಜ್ಯದ ವಿಷಯದಲ್ಲಿ ವಹಿಸಿದ ಕಾಳಜಿ ಮತ್ತು ಆಡಳಿತಕ್ಕಿಂತ ತನ್ನ ಅಂತಃಪುರದ ಸೇವೆಗೆ ಸಂಬಂಧಿಸಿದ ಕರ್ತವ್ಯವನ್ನು ಹೆಚ್ಚು ಗಂಭೀರವಾಗಿ ಮಾಡತೊಡಗಿದನು.

"ಮೇವಾಡದ ಜನತೆ ಮತ್ತು ರಾಜಕುಮಾರರು ತಮ್ಮೊಂದಿಗೆ ಇರಲು ನನ್ನನ್ನು ಕರೆಸಿಕೊಂಡದ್ದಕ್ಕೆ ನನಗೆಂಥ ಗೌರವ ಭಾವವುಂಟಾಗಿದೆ ಹಾಗೂ ನನ್ನ ಹೃದಯಕ್ಕೆ ಎಷ್ಟರ ಮಟ್ಟಿಗೆ ಇದು ತಟ್ಟಿದೆ ಎಂಬುದನ್ನು ನಾನು ಹೇಳುತ್ತಾ ಹೋಗಲಾರೆ. ಮಹಾಪ್ರಭು ರಾಣಾ ಅವರಿಗೆ ನನ್ನ ಪ್ರಣಾಮಗಳು. ಮಾಳ್ವದ ಸುಲ್ತಾನ್ ಮಹಾಸ್ವಾಮಿ ಅವರಿಗೆ ನನ್ನ ನಮಸ್ಕಾರಗಳು. ಮಹಾರಾಜ್‌ಕುಮಾರ್ ಮಹಾಸ್ವಾಮಿಯವರಿಗೆ ಹಾಗೂ ಮಹಾಸ್ವಾಮಿ ಲಕ್ಷ್ಮಣಸಿಂಹಜೀಯವರಿಗೆ ನನ್ನ ವಿಶೇಷ ಶುಭ ಕಾಮನೆಗಳು. ಈ ಗೌರವಾನ್ವಿತ ಸಭೆಯಲ್ಲಿರುವ ಪ್ರತಿಯೊಬ್ಬರೂ ನನಗೆ ವಿಶೇಷ ವ್ಯಕ್ತಿ. ನಾವು ನೀವು ಇಬ್ಬರೇ ಇದ್ದಾಗ, ನಿಮ್ಮಲ್ಲಿ ಒಬ್ಬೊಬ್ಬರನ್ನೂ ಪ್ರತ್ಯೇಕವಾಗಿ ಹೆಸರಿಸಿ ಕರೆಯುತ್ತೇನೆ, ನಾನು ನೀವು ಇಬ್ಬರೇ ಇದ್ದಾಗ" ಹಾಗೆ ಹೇಳಿ ಸಜನೀ ಬಾಯಿ ನಿಲ್ಲಿಸಿದಳು ಅವಳಿಗೆ ಬೇರೆ ದಾರಿ ಏನಿತ್ತು? ಅವಳು ಇಡೀ ಸಭೆಯನ್ನು ಕೆಳಕ್ಕೆ ತಂದಿದ್ದಳು. ಅವರು ಚಪ್ಪಾಳೆ ಹೊಡೆಯುವುದನ್ನು ನಿಲ್ಲಿಸುವುದೇ ಇಲ್ಲ. ಅವಳು ತನ್ನ ವೈಭವವನ್ನೇನನ್ನೂ ಕಳೆದುಕೊಂಡಿರಲಿಲ್ಲ. ಅವಳ ಪ್ರತಿಯೊಂದು ಶಬ್ದಕ್ಕೂ ಕಾದು ಕುಳಿತಿದ್ದ. ಆಸ್ಥಾನಿಕ ಶೋತೃಗಳಿದ್ದರು. ಶಬ್ದಗಳಿಗಿಂತ ಹೆಚ್ಚಾಗಿ ಅವಳ ಪ್ರತಿ ನಡೆಗೂ ಆಸ್ಥಾನಿಕರಿದ್ದರು. ಅವಳ ಪ್ರತಿಯೊಂದು ಬೆಡಗು ಬಿನ್ನಾಣ, ಒಯ್ಯಾರಗಳಿಂದಾಗಿ ಅವಳು ಯಾವುದೇ ದೊರೆಗೂ, ಚಕ್ರವರ್ತಿಗೂ ಸಮವಾಗಿದ್ದಳು. "ಆದರೆ ನಿಮ್ಮ ಮುಂದೆ ಹಾಡುವುದಕ್ಕೆ ಮೊದಲು ಪ್ರತಿಯೊಬ್ಬ ಕಲಾ ಪೋಷಕರಿಂದ ನಾನೊಂದು ಅನುಗ್ರಹವನ್ನು ಕೋರುತ್ತಿದ್ದೇನೆ. ನಮ್ಮೆಲ್ಲ ಸಂಗೀತ ಪ್ರೇಮಿಗಳೆಲ್ಲರ ಪರವಾಗಿ ಮಹಾಸ್ವಾಮಿ ರಾಜಾ ಮೇದಿನಿ ರಾಯ್ ಅವರು. ಒಂದು ಹಾಡನ್ನು ಹಾಡಬೇಕೆಂದು ಕೋರುತ್ತಿದ್ದೇನೆ."

ಗಂಡಸರು ರೋಷಗೊಂಡಿದ್ದರೆಂದು ನೀವು ಭಾವಿಸಿದರೆ, ನೀವು ಹೆಂಗಸರದ್ದನ್ನು ಕೇಳಬೇಕಿತ್ತು. ನಮ್ಮ ವೇಶ್ಯಾ ವಸತಿಗಳಿರುವ ಜಿಲ್ಲೆಗಳಲ್ಲಿ ವೇಶ್ಯಾವೃತ್ತಿ ಮಾಡುತ್ತಿರುವ

ಕಟ್ಟುಮಸ್ತಾದ ಸ್ತ್ರೀಯರೆಲ್ಲಾ ನಾಚಿಕೆಪಟ್ಟುಕೊಳ್ಳುವಂತೆ ಮಾಡಿಬಿಡುತ್ತಿದ್ದರು. ಕೀಚು ಸಿಳ್ಳೆಗಳು, ಗುಲ್ಲು, ಅರಚಾಟ, ಚೀರಾಟ, ತೋಳ, ನಾಯಿಗಳ ಹಾಗೆ ಊಳುವುದು, ಚಪ್ಪಾಳೆ ಎಲ್ಲ ಶುರುವಾದುವು. ಬಹಳ ಬೇಗ ಅವರೆಲ್ಲ ಪರಸ್ಪರ ಕೈಹಿಡಿದುಕೊಂಡು ಮಹಾರಾಜ ಮೇದಿನಿರಾಯ್ ಕುಳಿತಿದ್ದ ಕಡೆಗೆ ಗುಂಪು ಮಾಡಿಕೊಂಡು ಬಂದರು. ಆತನ ಸುತ್ತಲೂ ವೃತ್ತಾಕಾರದಲ್ಲಿ ನಿಂತು ಆ ಗಳಿಗೆಯಲ್ಲೇ ದಂಡಿಯಾ ನೃತ್ಯವನ್ನು ಮಾಡಿದರು. ಆ ಶ್ರೋತೃಗಳನ್ನು ಶಾಂತವಾಗಿಸಲು ಹಲವಾರು ಸಲ ರಾಯ್ ತನ್ನ ಕೈಗಳನ್ನು ಮೇಲೆತ್ತಿ ಅನಂತರ ಅದನ್ನು ಬಿಟ್ಟರು.

ನಾಚಿಕೊಳ್ಳಬೇಡಿ
ಮೇದಿನಿರಾಯ್
ನಾಚಿಕೊಳ್ಳಬೇಡಿ
ನಮಗೊಂದು ಜೋಗುಳದ
ಹಾಡುಹೇಳಿ
ಹೋಳೀ ಹಾಡು ಹೇಳಿ ಅಥವಾ
ಠುಮರೀ ಹಾಡಿ
ಇಲ್ಲದಿರೆ ನಾವು ನಿಮ್ಮನ್ನು
ಚಂಡೇರಿಗೆ ಹಿಂಬಾಲಿಸುವೆವು
ನಮಗೊಂದು ಜೋಗುಳ ಹಾಡಿ
ಅಥವಾ ಹೋಳಿ ಹಾಡಿ ಅಥವಾ
ಠುಮರಿ ಹಾಡಿ

ಚಂಡೇರಿಯ ರಾಜನು ಮುಗುಳ್ನಕ್ಕನು. ಚಿತ್ತೂರಿನ ಹೆಂಗಸರು ನಿಟ್ಟುಸಿರು ಬಿಟ್ಟು ಮೂರ್ಛೆ ಹೋದರು.

"ನನ್ನನ್ನು ಹಾಡಿ ಎಂದು ಕೋರುವುದರಲ್ಲಿ ಯಾವ ಅರ್ಥವೂ ಇಲ್ಲ". ಅವರ ಮುಗುಳ್ನಗೆ ದೊಡ್ಡದಾಗಿ ಅರಳಿತು. ಮತ್ತು ಅವರ ಕೆನ್ನೆಗಳಲ್ಲಿ ಮೂಡಿದ ಗುಳಿ ಅವರ ಜೊತೆ ಗಿಲ್ಲಿದಂಡಿಯಾ ಕುಣಿಯುವಷ್ಟು ಆಳವಾಯಿತು. 'ಸಜನೀ ಬಾಯಿಯೊಂದಿಗೆ ಹಾಡದೆ ನಿಮ್ಮನ್ನು ಹಾಗೆಯೇ ಹೋಗಗೊಡುತ್ತೇನೆಂದು ನೀವು ನಿಜಕ್ಕೂ ಭಾವಿಸಿದಿರಾ?"

ಕೇಳಿ ನೀವೀಗ ಅಳುವುದ ನಿಲ್ಲಿಸಿ.
ಮೊಳಕೆಯೊಳೇ
ಅದ ಚಿವುಟಿ ಹಾಕಿ
ಅದು ಬರೀ ಕಥೆ
ಅದರೊಳಿರುವವರೆಲ್ಲ ನನ್ನ ನಿಮ್ಮಂತೆ
ನಿಜಮನುಜರೇ ಆಗಿದ್ದರೂ
ಅದರೊಳೇನೂ ಹೊಸತಿಲ್ಲ
ಕೇವಲ ಒಬ್ಬ ಹುಡುಗ ಒಬ್ಬ ಹುಡುಗಿ
ಒಂದಿಷ್ಟು ರಕ್ತದ ಚೆಲ್ಲಾಟ!
ಕೇಳಿ ನೀವೀಗ ಅಳುವುದ ನಿಲ್ಲಿಸಿ.

ಮೊಳಕೆಯೊಳೇ
ಅದ ಚಿವುಟಿ ಹಾಕಿ
ನಾನಾಗಲಿ ನೀವಾಗಲಿ
ಧೋಲಾ ಇಲ್ಲವೆ ಮಾರು ಅಲ್ಲ.
ನೀವು ಧೊಲಾ ಮಾರುವೆ?

ಸಜನೀಬಾಯಿಯು ಪ್ರೇಮಿಗಳಾದ ಧೋಲಾ ಮತ್ತು ಮಾರು ಹಾಗೂ ಹಾಡು ಕೇಳುತ್ತಿದ್ದಾಗ ಪ್ರಾಣ ಬಿಟ್ಟ ನನ್ನ ಸೋದರ ಸಂಬಂಧಿ ರಾಜೇಂದ್ರ ಅವರಿಗಾಗಿ ತನ್ನ ಕಣ್ಣು ಮುಚ್ಚಿಕೊಂಡಳು. ಗಾಯ ಮಾಯುವ ಮುನ್ನವೇ ಚಂಡೇರಿಯ ಮೇದಿನಿರಾಯ್ ಅದೆಷ್ಟು ಮುಗ್ಧರಾಗಿ ಮತ್ತೆ ಗಾಯಗಳನ್ನು ಅರಳಿಸಿ ಬಿಟ್ಟಿದ್ದರು. ಸಜನೀ ಬಾಯಿ ನಮ್ಮನ್ನು ಕಾದುಕುಳ್ಳಿರಲು, ವಿಸ್ಮಿತರಾಗಿರಲು ಬಿಟ್ಟಿದ್ದಳು. ಅವಳು ಹಾಡುವಳೆ ಅಥವಾ ಬೇರೊಂದು ಹಾಡ ಪ್ರಾರಂಭಿಸುವಳೆ? ಆಗ ಅವಳ ಗಂಗಾ ಮೂಲದ (ಗಂಗೋತ್ರಿಯ) ಸ್ವಚ್ಛ ಕಂಠ ಆ ಗಾಯವನ್ನು ಬಗೆದು ರಕ್ತ ಚಿಮ್ಮಿಸಿ ನಮ್ಮೆಲ್ಲರನ್ನೂ ಪರಿಶುದ್ಧರನ್ನಾಗಿಸಿ ಬಿಟ್ಟಿತು.

ಸಾವು ಅವರನಗಲಿಸದು
ಹಾಗೆಂದು ಗಟ್ಟಿ ದನಿಯಲಿ
ಸಾರುತಿದೆ ಗೀತ. ನೀನೆಂತು ಬಲ್ಲೆ
ಎಲೆ ಗಾಯಕಿ, ನೀ ಸತ್ತು
ಬಗೆದು ನೋಡಿಹೆಯ ನಮ್ಮ ಕಥೆಯ?
ಸಾವಿನಾಚೆಯ ಬದುಕ ಕುರಿತು ಹೇಳದಿರು.
ವರ್ತಮಾನದ ಇಹದ ಬದುಕಿನಲಿ ನನ್ನೊಲವು.
ಧೋಲಾ ಮಾರುವನು ಬದುಕಿ
ಬರುವಂತೆ ಮಾಡಬಲ್ಲೆಯ ನೀನು?
ನಕ್ಷತ್ರಗಳಿಗೆ ಅಡ್ಡಿಪಡಿಸದಿರುವೆಯಾ?
ಅಂತ್ಯವನು ಮಾರ್ಪಡಿಸಬಲ್ಲೆಯಾ?
ಅಂತಲ್ಲದಿರೆ ಅಳುವ ನಿಲ್ಲಿಸು.
ಅದಕು ಮಿಗಿಲಾಗಿ ತುಟಿ ಬಿಗಿದು
ನಮ್ಮ ಆಜ್ಞೆಯನು ಪಾಲಿಸು
ಹೇಳು ನಿನ್ನಿಚ್ಛೆಯನು
ಕಥಿಸಲಾಗುವುದು ಕಥೆಯ
ಧೋಲಾ ಮಾರು ಪುನರ್
ಕಥನದಲಿ ಮಾತ್ರ ಬದುಕಿರಲಿ.

ಸಜನೀಬಾಯಿ ಹಾಡುವುದನ್ನು ನಿಲ್ಲಿಸಿ ಸುತ್ತಲೂ ನೋಡಿದಳು. ಇದು ರೂಢಿಯಲ್ಲಿ ಇಲ್ಲದೆ ಇರುವುದೇನಲ್ಲ. ನಮ್ಮ ಗಾಯಕರು ಮತ್ತು ವಾದ್ಯ ಸಂಗೀತಕಾರರು, ಶಾಸ್ತ್ರೀಯ ಸಂಗೀತಗಾರರು ಕೂಡ, ಒಂದು ತಾನ, ರಾಗ, ಭಜನೆ ಅಥವಾ ಜನಪದ ಗೀತೆಯ ವಿವರವನ್ನು ಹೇಳಲು ಮಧ್ಯೆ ಪ್ರವೇಶಿಸಿ, ಅದಕ್ಕೆ ಸಂಬಂಧಿಸಿದ ಒಂದು ಸ್ವಾರಸ್ಯವಾದ ಕಥೆ ಹೇಳುತ್ತಾರೆ. ವಿವಿಧ ಗಾಯಕರು ಅಥವಾ ಘರಾಣಾಗಳು ಅದೇ ಶಬ್ದಗಳನ್ನು ಹೇಗೆ ಹೇಳುತ್ತಾರೆಂದು ಹೇಳುತ್ತಾರೆ. ಅದರ ತೌಲನಿಕ ವಿಶ್ಲೇಷಣೆ ನೀಡಲು, ಅಥವಾ ವ್ಯಾಖ್ಯಾನಿಸಲು

ಮತ್ತು ಬೇರಿನ್ನಾವುದೇ ವಿಷಯವನ್ನು ತಾತ್ವಿಕಗೊಳಿಸಲು ಮಧ್ಯೆ ಪ್ರವೇಶಿಸುತ್ತಾರೆ. ಅದರ ಬದಲು ಸಜನೀ ಬಾಯಿ ನನ್ನ ಮೇಲೆ ತನ್ನ ಗಮನವನ್ನು ಕೇಂದ್ರಿಕರಿಸಿದಳು.

"ನಮ್ಮ ಹಾಡು ತಮಗೆ ಸಂತಸವುಂಟು ಮಾಡಿಲ್ಲವೆ ಮಹಾರಾಜ್‌ಕುಮಾರ್?"

"ಖಂಡಿತಾ ಉಂಟು ಮಾಡಿದೆ. ಅಮ್ಮನವರೆ. ಆದರೆ ಅದು ವೇದನಾಪೂರ್ಣ ಸ್ಮೃತಿಗಳನ್ನು ಜಾಗೃತಗೊಳಿಸಿತು ಎಂಬುದನ್ನು ನಾನು ನಿರಾಕರಿಸಲಾರೆ"

"ಹಿಂದಿನ ಸಮಾರಂಭದಲ್ಲಿ ಆದಂತೆ ಒಂದು ಭಯಂಕರ ಅನಾಹುತವಾಗಲಿದೆ ಎಂದು ನಿಮ್ಮ ಭಯವೆ? ಆದರೆ ಮಹಾಸ್ವಾಮಿ ಇಲ್ಲಿ ಆ ರೀತಿಯ ಕಾರಣ ಮತ್ತು ಪರಿಣಾಮದ ಕಾರ್ಯಾಚರಣೆ ಇಲ್ಲ. ನಮ್ಮದೇ ನೆನಪುಗಳ ಭಾರದ ಕಾರಣದಿಂದಾಗಿ ನಾವು ಒಂದು ಹಾಡನ್ನು ವಿಸ್ಮೃತಿಗೆ ತಳ್ಳಿದ್ದೇ ಆದರೆ, ಆಗ ಇಡೀ ಜನತೆ, ವಿಸ್ಮೃತಿ ಮತ್ತು ವಿಮೋಚನೆಯನ್ನು ಪಡೆಯುವುದಕ್ಕೋಸ್ಕರವೇ ತಮ್ಮ ಮೃಗೀಯ ವರ್ತನೆಯನ್ನು ಅಥವಾ ತಮ್ಮದೇ ಒಂದು ಬದುಕನ್ನು ವಿಸ್ಮರಣೆಯ ಕಪ್ಪು ರಂಧ್ರಕ್ಕೆ ತಳ್ಳಿಬಿಡುವ ಸಾಧ್ಯತೆ ಇದೆ".

"ಅಷ್ಟೊಂದು ಸುಲಭವಾಗಿ ಜನರನ್ನು ಮತ್ತು ಸಂಗತಿಯನ್ನು ಅಳಿಸಿ ಹಾಕಿಬಿಡಬಹುದೆಂದು ನೀವು ನಿಜಕ್ಕೂ ಭಾವಿಸುತ್ತೀರಾ?"

"ನಾವು ಪ್ರತಿದಿನವೂ ನಮ್ಮ ಅಭಿರುಚಿಗಳು ಮತ್ತು ಒಲವುಗಳಿಗೆ ಹೊಂದುವಂತೆ ನಮ್ಮದೇ ನೆನಪುಗಳನ್ನು ಮತ್ತೆ ಸಾಧಿಸಿ, ನಮ್ಮನ್ನೇ ಮತ್ತೆ ಕಂಡುಕೊಳ್ಳುತ್ತೇವೆ. ಇತಿಹಾಸದಲ್ಲಿ ಕೆಲವು ಶತಮಾನಗಳ ಹಿಂದೆ ನಡೆದಿರಬಹುದಾದ ಲೋಪವನ್ನು ಯಾರು ಗಮನಿಸಬೇಕು".

ತಂದೆಯವರು ಹೆಚ್ಚು ಕಡಿಮೆ ಕೇಳಿಸದ ಹಾಗೆ ಹೇಳಿದರು "ಅದನ್ನು ನೆನಪಿಟ್ಟುಕೊಳ್ಳುವುದು ಅಷ್ಟೇಕೆ ಮುಖ್ಯ ಸಜನಿ ಬಾಯಿ?"

"ಕಾರಣ, ಹಾಗಲ್ಲದೆ ಹೋದರೆ, ನಮ್ಮ ಬದುಕು ಸುಳ್ಳಿನ ಮಯವಾಗಿ ಬಿಡುತ್ತೆ. ಮತ್ತೆ ನಾವೆಂದೆಂದೂ ಸತ್ಯ ಹೇಳಿ ಎಂದು ನಮ್ಮ ಮಕ್ಕಳಿಗೆ ಹೇಳದೆ ಹೋಗಬಹುದು".

"ಸಜನೀ ಬಾಯಿ ನೀವು ಚಿತ್ತೂರಿನ ಸಾಲ ವಸೂಲಿ ಮಾಡುವ ಅಧಿಕಾರಿಯಾಗುವಿರಾ?"

"ಅದು ನನಗೆ ತುಂಬ ಗೌರವದ ವಿಷಯ ಮಹಾಪ್ರಭು"

"ಹಾಗಿದ್ದ ಮೇಲೆ ಕೊನೆಯ ಪಕ್ಷ ಮೇವಾಡದಲ್ಲಿ ಸತ್ಯ ಯಾವತ್ತೂ ಅಪಾಯದಲ್ಲಿರುವುದಿಲ್ಲ."

ಅಂಥದೊಂದು ಸಾರ್ವಜನಿಕ ಸಮಾರಂಭಕ್ಕೆ ಅತ್ಯಂತ ಯೋಗ್ಯವಾದ ರಾಜಘೋಷಣೆ ಅದು. ಅಷ್ಟಾದರೂ ಅತ್ಯಂತ ನೆಚ್ಚಿನ ಭರವಸೆಗಳು ಮುಂದೆ ಸಾಗಿದಂತೆ ಮಹಾಪ್ರಭುಗಳು ಸ್ವಲ್ಪ ಮಟ್ಟಿಗೆ ಮೈಮರೆತರೆಂದು ನನಗೆ ತೋರಿತು.

ಅಧ್ಯಾಯ 38

ಒಳ್ಳೆಯ ಕಾಲವೆಲ್ಲ ವ್ಯರ್ಥವಾಗಿ ಕಳೆದು ಹೋಗಿತ್ತು. ಸಂತೋಷ ಗೋಷ್ಠಿ ಮುಗಿದಿತ್ತು. ಮತ್ತೆ ಕೆಲಸಕ್ಕೆ ಮರಳುವ ಕಾಲ ಬಂದಿತ್ತು. ಅಗ್ರ ಪಟ್ಟಾಧಿಕಾರಿ, ಪ್ರಶ್ನಾರ್ಥಕ ಚಿಹ್ನೆ, ಕಿರಿಯ ಸಂತಳ ಪತಿ, ವಂಚಕ, ದಿಗಂತದ ಕಪ್ಪು ಮೋಡ, ಎಲ್ಲ ಕೇಡುಗಳ ಮೂಲ, ರಾಣಿ ಕರ್ಮವತಿ ಮತ್ತು ವಿಕ್ರಮಾದಿತ್ಯರಿಗೆ ದೊರೆತನಕ್ಕಿರುವ ಏಕೈಕ ಅಡ್ಡಿ , ರಾಜಾಪೂರಜೀ ಕೀಕಾನಿಗೆ ಗೈರು ಹಾಜರಿಯ ಮಿತ್ರ, ಸೊಗಸುಗಾರ ಮತ್ತು ಮಂಗಳನಿಗೆ ಮತ್ತೆ ಮತ್ತೆ ಋಣಿಯಾಗಿರುವವನು, ಪ್ರೇಮಿ ಹಾಗೂ ಕೌಸಲ್ಯಳಿಗಾಗಿ ಹತಾಶೆಯಿಂದ ಕಾಯುತ್ತಿರುವ, ವಿಧಿ ದೇವಿಯೆನಿಸಿದ ಭೂತಾನಿ ಮಾತೆಯ ಕೈನ ಆಟಿಕೆ, ಶೂನ್ಯದ ಹೊಡೆತ, ದಣಿವರಿಯದ, ಲೈಂಗಿಕ ಗರ್ಜನೆ ತೃಪ್ತ, ಬಾಬರನ ದಿನಚರಿಯ ಹಾಳೆಗಳು ಮತ್ತು ತುಣುಕುಗಳ ಓದುಗ, ಹತ್ತು ಸಾವಿರ ಗುಜರಾತಿ ಮುಗ್ಧ ಸೈನಿಕರ (ಅಂಥ ಜೀವಿಗಳು ಭೂಮಿಯ ಮೇಲೆ ಇದ್ದಾರೆಯೆ) ಕೊಲೆಗಾರ, ಮೇದಿನಿರಾಯ್‌ನ ಮಗಳ ನಿಷ್ಕ್ರಿಯ ಪತಿ, ವಂಚಕ ಮತ್ತು ತನ್ನ ಹೆಂಡತಿಯಾಗುವ ಮತ್ತು ಮೇವಾಡದ ಭಾವೀ ಮಹಾರಾಣಿಯಾಗುವ ಯೋಗ್ಯತೆ ಉಳ್ಳ ಲೀಲಾವತಿ ಎಂಬ ಹೆಂಗಸನ್ನು ನಾಶಮಾಡಿದವನು, ಇಷ್ಟೆಲ್ಲಾ ಆದ ಮಹಾರಾಜ್‌ಕುಮಾರ್ ಮುಂದೇನು? ಮುಂದೇನು ರಾಜಕುಮಾರ? ಇನ್ನೇನಾದರೂ ತುಂಬ ಬೇಕಾದ್ದು ಇದೆಯೆ? ಇನ್ನೇನಾದರೂ ನೀತಿ ಬೋಧೆ? ಇದೆ ಇದೆ ಇದೆ ಏನನ್ನೇ ಆಗಲಿ ಎದುರಿಸುವುದನ್ನು ತಪ್ಪಿಸಿಕೊಳ್ಳುವುದು. ಭವಿಷ್ಯವೆಂಬ ಪ್ರಶ್ನಾರ್ಥಕ ಚಿಹ್ನೆಯನ್ನೇ ತಪ್ಪಿಸಿಕೊಳ್ಳುವ ಮಟ್ಟದ ಕೆಟ್ಟತನ. ಇವನ್ನೆಲ್ಲಾ ಇನ್ನಷ್ಟು ಗೋಜಲು ಗೊಳಿಸಲು, ಯಾವುದೇ ಒಂದು ಗೊತ್ತಾದ ಕಾಲ ಘಟದಲ್ಲಿ ಕಣ್ಮುಂದೆ ಇರುವುದು ಒಂದು ಭವಿತವ್ಯವಲ್ಲ, ಆದರೆ ಅನೇಕ ಭವಿತವ್ಯಗಳು.

* * *

ಮೊದಲನೇ ಭವಿತವ್ಯ : ಮಾಳ್ವದ ಸುಲ್ತಾನನ ವಿಷಯದಲ್ಲಿ ನಾವು ಏನು ಮಾಡಬೇಕು?

ಮೇದಿನಿರಾಯ್ ಮತ್ತು ಸಿಲ್ಹಾದಿಯವರನ್ನು ವಿಶೇಷ ಸಲಹೆಗಾರರಾಗಿರಬೇಕೆಂದು ಆಹ್ವಾನಿಸಿದ್ದ ಮಂತ್ರಿ ಪರಿಷತ್ತಿನ ಸಭೆಯಲ್ಲಿ ಈ ಸರಳ ವಿಷಯವನ್ನು ನಾಲ್ಕೂವರೆ ಗಂಟೆಗಳ ಕಾಲ ಚರ್ಚಿಸಲಾಯಿತು. ಪ್ರಧಾನಿ ಪೂರಣ್ ಮಲ್‌ಜೀ ಮತ್ತು ಸಿಲ್ಹಾದಿ ಅವರಿಬ್ಬರೂ ಬೇರೆ ಬೇರೆ ಕಾರಣಗಳಿಗಾಗಿ ಒಂದೇ ಅಭಿಪ್ರಾಯವುಳ್ಳವರಾಗಿದ್ದರು. ಯುದ್ಧದ ನಷ್ಟ ಪರಿಹಾರಗಳನ್ನೆಲ್ಲಾ ಪೂರ್ತಿಯಾಗಿ ಪಡೆದುಕೊಳ್ಳುವವರೆಗೂ ಸುಲ್ತಾನನ್ನು ಆರು ತಿಂಗಳ ಕಾಲ ಒತ್ತೆಯಾಳಾಗಿ ಮತ್ತು ಕೈದಿಯಾಗಿ ಇಟ್ಟುಕೊಳ್ಳಬೇಕೆಂಬುದು

ಪೂರಣ್‌ಮಲ್‌ಜೀಯವರ ಅಭಿಪ್ರಾಯ. ನಾವು ಅತಿಮೂರ್ಖವಾಗಿ ನಮ್ಮ ಕಟ್ಟುನಿಟ್ಟನ್ನು ಸಡಿಲಿಸಿ, ಮೃದು ಧೋರಣೆ ತಳೆದಿದ್ದೆವೆಂದು ಮೇವಾಡದ ಹತ್ತರಲ್ಲಿ ಒಂಬತ್ತು ಭಾಗದ ಜನತೆಯ ಜೊತೆ ಸಿಲ್ಹಾದಿಗೂ ಪೂರ್ತಿಯಾಗಿ ಮನವರಿಕೆಯಾಯಿತು. ಆ ಹಾಳು ಖಾಲ್ಜಿಯನ್ನು ನೆಲಮಾಳಿಗೆಯ ಕತ್ತಲೆ ಕೋಣೆಗೆ ತಳ್ಳಿ ಒಂದು ಅಥವಾ ಎರಡು ವರ್ಷ ಅಲ್ಲೇ ಬಿಟ್ಟಿರಬೇಕು. ಮಂಡುವಿನಲ್ಲಿ ನಲವತ್ತು ಸಾವಿರ ಜನ ಕಗ್ಗೊಲೆಯಾದದ್ದನ್ನು, ರಾವ್ ಮೇದಿನಿ ರಾಯ್ ಮತ್ತು ಇತರೆ ಪೂರಬಿಯ ರಜಪೂತರು ಈ ಅಸಮರ್ಥ ದೊರೆಯ ಕೈಯಲ್ಲಿ ಅನುಭವಿಸಿದ ಅವಮಾನವನ್ನು ನಾವು ಮರೆತು ಬಿಟ್ಟೆವೆ ಇತ್ಯಾದಿ ಇತ್ಯಾದಿ?

ಲಕ್ಷ್ಮಣ ಸಿಂಹಜೀಯವರು ಮಾತ್ರ ಆ ದಿನ ಅತ್ಯಂತ ಗಮನಾರ್ಹ ವ್ಯಕ್ತಿಯಾದರು. ಸಿಲ್ಹಾದಿ ತನ್ನ ಅವಹೇಳನದ ಮಾತುಗಳನ್ನೆಲ್ಲ ಆಡಿ ಮುಗಿಸುವವರೆಗೂ ನನ್ನ ಮಾವ ತನ್ನ ಅಸಹನೆಯನ್ನು ಭದ್ರವಾಗಿ ಅದುಮಿಟ್ಟಿದ್ದರು. ಇನ್ನಷ್ಟು ವಿಸ್ಮಯಗಳು ನಮಗಾಗಿ ಕಾದಿದ್ದುವು. ಚಿತ್ತೂರಿನ ಅತ್ಯಂತ ನೇರ ನಡೆಯ ಹಾಗೂ ಇದ್ದದ್ದನ್ನು ಇದ್ದ ಹಾಗೆ ಆಡಿ ಬಿಡುವ ಖಂಡಿತವಾದಿಯು, ಸಿಲ್ಹಾದಿಯು ಕೊನೆಗಳಿಗೆಯವರೆಗೂ ಅಡ್ಡ ಗೋಡೆಯ ಮೇಲೆ ಕುಳಿತಿದ್ದನೆಂಬುದನ್ನು ಅವನಿಗೆ ನೆನಪಿಸುವಲ್ಲಿ ಸಂಯಮ ತೋರಿದರು; ಅಲ್ಲದೆ ತಮ್ಮ ಈ ವಿಳಂಬ ಪ್ರವೃತ್ತಿಯಿಂದಾಗಿ ಮೇದಿನಿರಾಯ್ ಗಾಗ್ರೋನ್ ಹಾಗೂ ರಾಜಕುಮಾರ ಹೇಮಕರಣ್ ಮತ್ತು ಅವನ ಅನುಯಾಯಿಗಳನ್ನು ಕಳೆದುಕೊಂಡಿರಬಹುದು, ಹಾಗೂ ಮಾಳ್ವದ ಸೇನಾ ಕಾರ್ಯಾಚರಣೆಗೆ ನೀಡಿದ ಈ ಅಸಾಧಾರಣ ಕೊಡುಗೆಗಾಗಿ ಸಿಲ್ಹಾದಿಗೆ ಮೂರು ಜಹಗೀರುಗಳಿಗೆ ಕಡಿಮೆ ಇಲ್ಲದಂತೆ ಪುರಸ್ಕಾರ ನೀಡಲಾಗಿದೆ ಎಂಬುದನ್ನು ನೆನಪಿಸುವಲ್ಲಿ ಸಂಯಮ ತೋರಿದರು. ಲಕ್ಷ್ಮಣ ಸಿಂಹಜೀವರು ಇದೀಗ ಅತ್ಯಂತ ಸೌಜನ್ಯದಿಂದ ನಡೆದುಕೊಂಡರು.

"ಹಾಗಾದರೆ ನಾವು ಒಂದೆರಡು ವರ್ಷಗಳವರೆಗೂ ಮಾಳ್ವವನ್ನು ಮುನ್ನಡೆಸುವ ಮುಖಂಡರಾರೂ ಇಲ್ಲದಂತೆ ಹಾಗೆಯೇ ಬಿಟ್ಟಿರಬೇಕೆಂದು ನೀವು ಹೇಳುತ್ತೀರಾ? ಅರಾಜಕತೆ ಉಂಟಾಗುತ್ತದೆ. ಪ್ರಕೃತಿ, ಶೂನ್ಯವನ್ನು ಸಹಿಸುವುದಿಲ್ಲ. ಸುಲ್ತಾನನಿಗೆ ಸಹೋದರರಿದ್ದಾರೆ. ದೊರೆಯಾಗುವಂಥ ದತ್ತು ಮಾಡಿಕೊಂಡ ಸೋದರಳಿಯನಿದ್ದಾನೆ. ಅಂತರ್ಯುದ್ಧದ ಸಾಧ್ಯತೆ ಇಲ್ಲವೆಂದು ಹೇಳುವಂತಿಲ್ಲ".

"ಒಳ್ಳೆಯದು. ನಾವು ಮಾಳ್ವವನ್ನು ವಿಭಾಗಿಸಿ ನಮ್ಮವನ್ನು ನಾವು ತೆಗೆದುಕೊಳ್ಳೋಣ".

"ನಿಮ್ಮದೇನು ಅನ್ನುವುದೇ ಈಗ ಚರ್ಚೆಯ ವಿಷಯ ಮಹಾಸ್ವಾಮಿ" ಮೊದಲು ಬಂದವರಿಗೆ ಮೊದಲಪಾಲು ಎಂಬ ಆಧಾರದ ಮೇಲೆ ನಿಮಗೆ ಎಷ್ಟು ಸಾಧ್ಯವೋ ಅಷ್ಟನ್ನು ನೀವು ಕಸಿದುಕೊಂಡರೆ, ಗುಜರಾತ್ ಅಥವಾ ಮಾಳ್ವದ ಇತರೆ ನೆರೆಹೊರೆಯ ರಾಜ್ಯಗಳವರು ಸುಮ್ಮನೆ ನೋಡುತ್ತಾ ಕುಳಿತಿರುತ್ತಾರೆ ಅಂತ ಅಂದುಕೊಂಡಿದ್ದೀರಾ? ಅವರೂ ಕಣಕ್ಕೆ ದುಮುಕಿ ಮಾಳ್ವದ ಒಂದು ತುಂಡು ತಮಗೂ ಬೇಕು ಅನ್ನುವುದಿಲ್ಲವೆ?"

"ಬಹುಶಃ ನಾನು ಈ ಸಂದರ್ಭದಲ್ಲಿ ಮಾತಾಡುವುದು ಸೂಕ್ತವಲ್ಲವೇನೋ. ಆದರೆ ಸುಲ್ತಾನರ ಹಣೆ ಬರಹವನ್ನು ನಿರ್ಧರಿಸುವುದಕ್ಕೆ ಮುಂಚೆ ನಾವು ನಮ್ಮಗಳ ಮನಸ್ಸನ್ನರಿತು ಕೊಳ್ಳಲು ನನ್ನ ಮಾತು ಸಹಾಯಕವಾಗಬಹುದು". ಆ ಮೃದುವಾದ ಕಂಠಧ್ವನಿ ಬೇರೆಯಾದರೂ ಆಗಿರದೆ, ಆದಿನಾಥಜೀಯವರದ್ದಾಗಿತ್ತು. ಅರ್ಥ ಸಚಿವರಾಗಿ ಅವರು ಎಲ್ಲರ ಕೂಗಾಟ, ಅರಚಾಟಗಳನ್ನು ಕೇಳಿಸಿಕೊಳ್ಳುತ್ತಾರೆ. ಆಮೇಲೆ ಯಾವಾಗಲೂ ವಿನಯವಾಗಿ ಕಾರ್ಯಪ್ರವೃತ್ತರಾಗುವುದಕ್ಕೆ ಮುಂದೆ ಇದರ ಖರ್ಚುವೆಚ್ಚ ಲೆಕ್ಕ ಹಾಕಿ ಎಂದು ಸಲಹೆ ಕೊಡುತ್ತಾರೆ. "ನಮಗೆ ಬೇಕಾಗಿರೋದೇನು? ಸೇಡು ಮತ್ತು ಅಲ್ಪಾವಧಿ

ಲಾಭ ತಾನೆ? ಅಥವಾ ಶಾಂತಿಯನ್ನು ಸ್ಥಾಪಿಸಿ ನಮ್ಮದೇ ಆದ ಸಾಮಂತ ರಾಜ್ಯವನ್ನು ಕಟ್ಟಿ ಬಲಪಡಿಸಬೇಕೆಂದಿದ್ದೇವೋ" ಒಂದು ವೇಳೆ ಎರಡನೆಯದು ನಮ್ಮ ಇಚ್ಛೆಯಾದರೆ, ಮೊದಲು ಆಗಬೇಕಾದ್ದು ಸ್ಥಿರತೆ. ಸ್ಥಿರತೆ, ಅದು ಎಷ್ಟೇ ಕ್ಷಣಿಕವೂ ಭ್ರಮಾತ್ಮಕವೂ ಆಗಿದ್ದರೂ ಅದು ಸಾಧಿತವಾಗುವುದು ಕಾನೂನು ಮತ್ತು ಸಹಜ ಕ್ರಮಗತಿಯಿಂದ. ಅದರರ್ಥ ಏನೆಂದರೆ ಮಾಳ್ವದ ಪ್ರಭು ಎಷ್ಟು ಬೇಗ ತನ್ನ ಸಿಂಹಾಸನಕ್ಕೆ ಮತ್ತು ಜನತೆಯ ಬಳಿಗೆ ಹಿಂತಿರುಗುತ್ತಾನೋ ಅಷ್ಟು ನಮಗೆ ಹೆಚ್ಚು ಲಾಭವಾಗುತ್ತೆ".

"ಮೇಲ್ನೋಟಕ್ಕೆ ಸಮಂಜಸವೆಂದು ತೋರುವ ಇದನ್ನು ನೀವು ಒಪ್ಪಿಕೊಳ್ಳುವಿರಾ ಮಹಾಸ್ವಾಮಿ?" ಮೇವಾಡಿಗಳೆಲ್ಲ ಅವರಿಬ್ಬರ ವಿರುದ್ಧ ಸಂಚು ಮಾಡುತ್ತಿದ್ದಾರೇನೋ ಎನ್ನುವ ಹಾಗೆ ಸಿಲ್ಹಾದಿ ರಾಯ್ ಮೇದಿನಿರಾಯ್ ಮೇಲೆ ತಿರುಗಿ ಬಿದ್ದನು. ಅಂಥ ಉತ್ಕೃಷ್ಟ ಮತ್ತು ಉದಾತ್ತವಾದ ಭಾವನೆಗಳನ್ನು ಒಂದು ಕಾರಣ, ಅದೂ ಒಂದೇ ಒಂದು ಕಾರಣಕ್ಕೆ ಮಾತ್ರ ಬಾಯಿ ತುಂಬ ಆಡಬಹುದು. ಕಾರಣ, ಗುಜರಾತಿನ ಮುಝಾಫರ್ ಷಾ ಮತ್ತು ದಾಸಾನುದಾಸ, ನೆಲದಲ್ಲಿ ಮಂಡಿ ಉಜ್ಜುವ ದೀನ ಭಟ್ಟಂಗಿ, ಮಾಳ್ವದ ಇಲಿ ಆ ದಿನ ನಮ್ಮ ಕುಟುಂಬದ ನಲವತ್ತು ಸಾವಿರ ಜನರ ಮೇಲೆ ಆಕ್ರಮಣ ಮಾಡಿ ಕುತ್ತಿಗೆಯ ಬಳಿ ಕತ್ತಿ ಹಿಡಿದು ನಿಂತಾಗ, ಅವರುಗಳು ಯಾರೂ ಒಬ್ಬನೇ ಒಬ್ಬ ಗಂಡಸನ್ನು, ಹೆಂಗಸನ್ನು ಅಥವಾ ಮಗುವನ್ನು ಕಳೆದುಕೊಳ್ಳಲಿಲ್ಲ. ಆ ಹೊತ್ತಿನಿಂದ ನಿದ್ದೆಯಿಲ್ಲದೆ' ಎಚ್ಚರವಾಗಿದ್ದ ಪ್ರತಿರಾತ್ರಿಯೂ ಮೇವಾಡದ ಸೈನ್ಯ ನಿಮ್ಮ ರಕ್ಷಣೆಗೆ ಬರದಂತೆ ತಡೆದು ನಿಲ್ಲಿಸಿದ್ದು ಯಾವುದು ಅಂತ ನಿಮಗೆ ಆಶ್ಚರ್ಯವಾಗಿಲ್ಲವೆ? ಅವರು ಮಾತು ತೆಗೆದುಕೊಂಡ ಕೂಡಲೇ ಹೊರಟು ಹೋದರು ಅಂತ ಲಕ್ಷ್ಮಣ ಸಿಂಹಜೀಯವರು ಹೇಳುತ್ತಾರೆ. ಸಂಶಯದ ಲಾಭವನ್ನು ಅವರಿಗೆ ಕೊಡಲು ನಾನು ಬಯಸಬಹುದು, ಆದರೆ ನಲವತ್ತು ಸಾವಿರ ಜನಕ್ಕೆ ಅವರು ಸಾವು ಮತ್ತು ಬದುಕಿನ ನಡುವಿನ ವ್ಯತ್ಯಾಸವೇನೆಂದು ತಿಳಿಸಿಕೊಡಬಹುದಾಗಿದ್ದಾಗ ಅವರು ಅಲ್ಲಿರಲಿಲ್ಲ".

"ಮಹಾರಾಜ್‌ಕುಮಾರ್ ಅವರು ನಿಮಗೆ ಸುಖಾಗಮನವಾಗಲೆಂದು ಹೇಳವಾಗಲೆಲ್ಲ ನಿಮ್ಮ ಮುಖದ ಮೇಲೆ ಕೇವಲ ಕೃತಜ್ಞತೆಯ ಮುಗುಳ್ನಗೆ ಕಾಣಿಸಿಕೊಳ್ಳುತ್ತಿದ್ದುದನ್ನು ನಾನು ಕಂಡಿದ್ದೇನೆ. ಗಾಗ್ರೋನ್ ಘೋರ ಕಷ್ಟದಲ್ಲಿತ್ತು ಹಾಗೂ ಖಾಲ್ಜಿಯ ಪೀಡನೆಗೆ ಸಿಲುಕುವುದರಲ್ಲಿತ್ತು. ರಾಜಕುಮಾರ ಪ್ರೇಮಕರಣನ ಮತ್ತು ಗಾಗ್ರೋನ್‌ನ ಬಿಡುಗಡೆಯ ಸಲುವಾಗಿ ಲಕ್ಷ್ಮಣ ಸಿಂಹಜೀಯವರು ಉಳಿಸಿಕೊಡಬಹುದಾಗಿದ್ದದ್ದು ಮೂರೂವರೆ ಸಾವಿರ ಜನರನ್ನು ಮಾತ್ರ. ನಲವತ್ತೇಳು ಸಾವಿರದ ಏಳು ನೂರು ಜನ ಸೈನಿಕರ ನೇತೃತ್ವವನ್ನು ತಾನು ವಹಿಸಿರುವುದಾಗಿ ಮಹಾರಾಜ್‌ಕುಮಾರ್ ಅವರು ಸುಲ್ತಾನನಿಗೆ ಹೇಳಿದರು. ಆ ಮೂರ್ಖ ಅದನ್ನು ನಂಬಿ ಬಿಟ್ಟನು. ನೀವು ಮತ್ತು ನಾನು ನಿನ್ನೆ ಮೊನ್ನೆ ಹುಟ್ಟಿದವರಲ್ಲ. ಹಾಗಾಗಿ ಈ ಬಾಲಿಶ ಕಟ್ಟು ಕಥೆಗಳಿಂದ ನಾವು ಆಕರ್ಷಿತರಾಗುವುದಿಲ್ಲ.

"ಆ ಉಡಾಫೆ ಕೆಲಸ ಮಾಡಿತು ಎಂದು ಒಪ್ಪುತ್ತೇನೆ. ಅದೊಂದು ಆಕಸ್ಮಿಕ ಅದೃಷ್ಟ. ಆದಿನ ಅದೃಷ್ಟ ಲಕ್ಷ್ಮಿ ಅವರ ಕೈ ಹಿಡಿದಳು. ಆದರೆ ಸುಲ್ತಾನನೇನಾದರೂ ಅದೊಂದು ಉಡಾಫೆ ಎಂದು ಹೇಳಿದ್ದರೆ ಏನಾಗುತ್ತಿತ್ತು? ಈ ಹೊತ್ತು ಎಲ್ಲಿರುತ್ತಿದ್ದೆವು? ಅದರ ಬಗ್ಗೆ ಯೋಚನೆ ಮಾಡಿ ರಾವ್. ಅದು ಯೋಚನೆಯನ್ನು ತಡೆದುಕೊಳ್ಳುವಂಥದಲ್ಲ".

"ಲಕ್ಷ್ಮಣ ಸಿಂಹಜೀ ಮತ್ತು ಜೈನ ಅರ್ಥ ಸಚಿವರು. ನಾವು ವ್ಯವಹಾರ ಕುಶಲಿಗಳೂ ಚತುರರೂ ಆಗಬೇಕೆಂದು ಬಯಸುತ್ತಾರೆ. ಅವರು ನಮ್ಮೊಳಗಿನ ಮುತ್ಸದ್ದಿಗೆ ಮನವಿ ಸಲ್ಲಿಸಿ, ಸುಲ್ತಾನನನ್ನು ತನ್ನ ನಾಡಿಗೆ ಹಿಂತಿರುಗಿ ಹೋಗಲು ಬಿಟ್ಟು ಬಿಡಬೇಕೆಂದು

ಕೇಳುತ್ತಿದ್ದಾರೆ. ಮಿಥ್ಯಾ ಕೃತಜ್ಞತೆ ನಿಮ್ಮನ್ನು ಭಾವ ಪರವಶಗೊಳಿಸುವುದಿಲ್ಲವೆಂದು ನಾನು ನಂಬುತ್ತೇನೆ. ಅಲ್ಲದೆ ನೀವು ಕೂಡ ಅದಕ್ಕೆ ಇಲ್ಲ ಎನ್ನುವಿರಿ. ಆ ಖಾಲ್ಜಿ ಹಂದಿ ಸರ್ವನಾಶದ ದಿನದವರೆಗೂ ಜೈಲಿನಲ್ಲಿ ಕೊಳೆಯಲಿ".

ಸಿಲ್ಹಾದಿಯ ದಾಳಿಯಿಂದ ಮೇದಿನಿ ರಾಯ್ ಎಚ್ಚೆತ್ತುಕೊಳ್ಳಲು ಒಂದು ಚೂರು ಅವಕಾಶ ಪಡೆದುಕೊಳ್ಳುವ ಮುನ್ನವೇ ಮಹಾಪ್ರಭುಗಳು ಮಧ್ಯೆ ಪ್ರವೇಶಿಸಿದರು.

"ಮೇದಿನಿರಾಯ್ ಮತ್ತು ಸಿಲ್ಹಾದಿ ರಾಯ್ ನಾವು ನಿಮ್ಮ ತಾಳ್ಮೆಯನ್ನು ಕೋರುತ್ತಿದ್ದೇವೆ. ನಿಮಗಾದ ಭಾರೀ ನಷ್ಟ ನಮಗೆ ಗೊತ್ತಿದೆ ಹಾಗೂ ಅದಕ್ಕಾಗಿ ನಮಗೆ ತುಂಬ ದುಃಖವಾಗಿದೆ. ಬಹುಶಃ ನಾವು ನಿಮ್ಮನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲಿಕ್ಕೆ ಆಗದೆ ಇದ್ದದ್ದು ಎಂದರೆ ಮಾಳ್ವದ ಪ್ರಭು, ಸುಲ್ತಾನರ, ವಿರುದ್ಧವಾಗಿರುವ ನಿಮ್ಮ ಭಾವನೆಗಳ ತೀವ್ರತೆಯನ್ನು. ಆದರೆ ಯುದ್ಧದಲ್ಲಿ ಸೈನ್ಯಕ್ಕೆ ಆಗುವ ಸೋಲೊಂದೇ ಶತ್ರುವಿಗೆ ಅದೆಷ್ಟು ವಿನಾಶಕರವಾದ ಹೊಡೆತ ಆಗಿರುತ್ತದೆ ಎಂದರೆ ತನ್ನ ಪ್ರದೇಶದ ಆಚೆಗಿನ ಯಾವುದೇ ಅವಮಾನವಾಗಲಿ, ಯುದ್ಧದ ನಷ್ಟ ಪರಿಹಾರವಾಗಲಿ ಉದ್ದೇಶಿತ ಪರಿಣಾಮಕ್ಕೆ ವಿರುದ್ಧವಾದ ಪರಿಣಾಮವನ್ನುಂಟು ಮಾಡುತ್ತವೆ ಎಂಬುದು ಇದುವರೆಗಿನ ನಮ್ಮ ಅನುಭವ.

"ಏನೇ ಆದರೂ ನೀವುಗಳು ನಮ್ಮ ಮಿತ್ರರಾಜ್ಯಗಳು ಹಾಗೂ ನಮ್ಮ ಆತ್ಮೀಯ ಮಿತ್ರರು. ಬೇರೆ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮೆಲ್ಲರ ಸಮಾನ ಆಸಕ್ತಿ, ಪರಸ್ಪರರು ಹಂಚುಕೊಳ್ಳುವ ಪರಂಪರೆ ಹಾಗೂ ಪ್ರತಿಯೊಬ್ಬರ ಅತ್ಯಂತ, ಆಳದ ಮತ್ತು ಅಂತರಾಳದ ಭಾವನೆಗಳನ್ನು ಗೌರವಿಸುವುದು ಇವುಗಳಿಂದ ಹೊರಹೊಮ್ಮುವ ಶಕ್ತಿಗೆ ಮೇವಾಡ ಹೆಚ್ಚಿನ ಬೆಲೆಕೊಡುತ್ತದೆ. ಸುಲ್ತಾನರು ನಮ್ಮ ಕೈದಿಯಾಗಿರುತ್ತಾರೆಂದು ನಿಮಗೆ ಭರವಸೆ ಕೊಡುತ್ತೇವೆ".

"ಈ ಹೊತ್ತು ಅತ್ಯಂತ ಭಾವೋದ್ವೇಗದ ಹಾಗೂ ಬಳಲಿಕೆಯ ದಿನ. ನಿಮಗೆಲ್ಲ ಸ್ವಲ್ಪ ವಿಶ್ರಾಂತಿ ಬೇಕಾಗಿದೆ ಎಂದು ನನಗೆ ಗೊತ್ತು. ನಮ್ಮ ಗೌರವಾನ್ವಿತ ಅತಿಥಿಗಳಿಗೆ ನಾನು ಹೇಳುವುದೆಂದರೆ, ನೀವು ಬಯಸಿದಷ್ಟು ದಿನ ಇಲ್ಲಿ ಇರಬಹುದು. ಚಿತ್ತೂರು ನಿಮ್ಮದೇ ಮನೆಯಾಗಿರುತ್ತೆ ಎಂದು ಹೇಳುವ ಸೋಗು ಹಾಕುವುದಿಲ್ಲ. ಆದರೆ ಅದನ್ನು ನ್ಯಾಯವಾಗಿಯೇ ನಿಮ್ಮ ಎರಡನೆಯ ಮನೆಯೆಂದು ಪರಿಗಣಿಸಬೇಕೆಂದು ಅದು ನಿಮ್ಮನ್ನು ಕೇಳಿಕೊಳ್ಳುತ್ತದೆ"

ಅರಮನೆಯ ಮಂತ್ರಾಲೋಚನಾ ಸಭೆಯನ್ನು ಎಂದಾದರೂ ಅಷ್ಟೊಂದು ಕೌಶಲ ಪೂರ್ವಕವಾಗಿ ಬರಖಾಸ್ತು ಗೊಳಿಸಲಾಗಿತ್ತೆ? ಬಹುಮಟ್ಟಿನ ಸಭೆಗಳು, ಅದರಲ್ಲಿ ಭಾಗವಹಿಸಿದವರು ಪರಸ್ಪರ ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳುವುದು, ಅಲ್ಲಿಂದ ಹೊರಡುವ ಮುನ್ನ, ಅಲ್ಲೇ ಠಳಾಯಿಸುವುದು, ತಿರುಗಾಡುತ್ತಾ ಇರುವುದು ಇವುಗಳಿಂದ ಕೊನೆಗೊಳ್ಳುತ್ತಿತ್ತು. ಆ ದಿನ ಪರಸ್ಪರ ಒಬ್ಬರನ್ನೊಬ್ಬರು ಕೂಡಲೇ ಬೀಳ್ಕೊಂಡೆವು ಮತ್ತು ನಮ್ಮ ನಮ್ಮ ದಾರಿ ಹಿಡಿದೆವು. ಸಿಲ್ಹಾದಿ ತನ್ನ ಕೃತ್ಯದಿಂದ ಏನನ್ನು ಪಡೆದುಕೊಂಡ ಅನ್ನುವುದು ನನಗೆ ಖಚಿತವಾಗಿ ತಿಳಿದಿಲ್ಲ. ಆದರೆ ಅವನ ಕಾರ್ಯ ವಿಧಾನ ಅಥವಾ ಉದ್ದೇಶಗಳನ್ನು ಕುರಿತಂತೆ ಹೆಚ್ಚು ರಹಸ್ಯವೇನೂ ಇರಲಿಲ್ಲ. ಅವನು ಮೇಲ್ನೋಟಕ್ಕೆ ಆದಿನಾಥಜೀ, ಲಕ್ಷ್ಮಣ ಸಿಂಹಜೀ ಮತ್ತು ನನ್ನ ನಡುವಿನ ರಾಜಕೀಯ ಸಂಬಂಧದ ಎಳೆಯನ್ನು ತನ್ನ ಗುರಿಯಾಗಿಸಿಕೊಂಡು, ನಮ್ಮ ಮತ್ತು ಮೇದಿನಿರಾಯ್ ನಡುವೆ ಮನಸ್ತಾಪವನ್ನು ಬಿತ್ತಿ ಬಿಟ್ಟಿದ್ದ ಇಲ್ಲವೆ ಆ ಬಗ್ಗೆ ಬಲವಾದ ಪ್ರಯತ್ನವನ್ನು ನಡೆಸಿದನು. ಆದರೆ ಅವನ ನಿಜವಾದ ಗುರಿಯಾಗಿದ್ದದ್ದು ರಾಣಾ. ಮಹಾಪ್ರಭುಗಳ ಮೇಲೆ ಅಂಥದೊಂದು ಹೆಚ್ಚು ಕಡಿಮೆ ನೇರವಾದ ಆಕ್ರಮಣಕ್ಕೆ ಸಿಲ್ಹಾದಿಯನ್ನು ಸಜ್ಜುಗೊಳಿಸಿದವರು ಯಾರು?

ನಾನು ಬಹುಕಾಲದಿಂದ ಕಾಪಿಟ್ಟುಕೊಂಡು ಬಂದಿದ್ದ ನನ್ನ ನೈತಿಕ ವಿವೇಚನೆಯನ್ನು ಪಕ್ಕಕ್ಕಿಟ್ಟು ಏನೊಂದೂ ಮಾತನಾಡದೆ (ಅದನ್ನು ಯಾರಾದರೂ ಹೇಗೆ ತಾನೆ ಮಾಡಿಯಾರು?) ರಾಣಿ ಕರ್ಮವತಿಯ ಮೇಲೊಂದು ಕಣ್ಣಿಟ್ಟಿರು ಎಂದು ಮಂಗಳನಿಗೆ ಹೇಳಲಿ? ಒಂದು ವೇಳೆ ಅವನು ಈಗಾಗಲೇ ಆ ಕೆಲಸ ಮಾಡುತ್ತಾ ಇದ್ದರೆ; ಕಾರಣ ಮಂಗಳನನ್ನು ಬಿಟ್ಟರೆ ರಾಣಾನ ರಕ್ಷಣೆಯ ಬಗ್ಗೆ ಬೇರಿನ್ನಾರಿಗೆ ತಾನೆ ಕಾಳಜಿ ಇದ್ದೀತು, ಅವನಿಂದ ಹೇಗೆ ತಾನೆ ಸಮಾಚಾರವನ್ನು ಹೊರಡಿಸಲಿ? ಅದಕ್ಕಿಂತ ಕೆಟ್ಟದ್ದೆಂದರೆ ಒಂದು ವೇಳೆ ಕೆಟ್ಟ ಸುದ್ದಿ ಇದ್ದರೆ ಮಹಾಪ್ರಭುಗಳ ಅತ್ಯಂತ ನೆಚ್ಚಿನ ರಾಣಿಯ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲು ಸಾಧ್ಯ?

* * *

ಎರಡನೇ ಭವಿತವ್ಯ: ಪಾರಿಜಾತ ವೃಕ್ಷ

ನನ್ನ ಪಾರಿಜಾತದ ಮರ ಸಾಯುತ್ತಿದೆ. ಕೊಂಬೆಗಳಲ್ಲಂತೂ ಎಲೆಗಳು ಬೇಕಾದ ಹಾಗಿವೆ. ಪ್ರತಿ ಬೆಳಿಗ್ಗೆ, ಮಂಜಿನಿಂದ ಒದ್ದೆಯಾದ ನೆಲದ ಮೇಲೆ ಪಾರಿಜಾತದ ಕುಸುಮ ಮಂಜರಿಯ ಹರಿವು ಕಾಣುತ್ತದೆ. ಆದರೆ ನನ್ನ ಮಿತ್ರ ನನಗೆ ಬೆನ್ನು ತಿರುಗಿಸಿ ಬಿಟ್ಟಿದೆ ಎಂದು ನನಗೆ ಗೊತ್ತು. ಆದರೆ ಯಾವ ಅನುಕ್ತವಾದ ಒಪ್ಪಂದವನ್ನು ನಾನು ಮುರಿದಿದ್ದೇನೆಂಬ, ಯಾವ ಅಲಿಖಿತ ಪ್ರಕೃತಿಯ ಶಾಸನವನ್ನು ನಾನು ಉಲ್ಲಂಘಿಸಿದ್ದೇನೆಂಬ ಅಥವಾ ಬೆಳಗಿನ ನನ್ನ ಉಲ್ಲಾಸೀ ಸಂಗಾತಿಯನ್ನು ಯಾವ ರೀತಿಯಲ್ಲಿ ನಿರಾಶೆಗೊಳಿಸಿದ್ದೇನೆಂಬ ಕಲ್ಪನೆ ನನಗಿಲ್ಲ. ನಮ್ಮ ಅತ್ಯಂತ ಪ್ರೀತಿ ಪಾತ್ರರಿಗೆ ಅದಾವ ನೋವನ್ನು ನಾವುಂಟು ಮಾಡುತ್ತೇವೋ ಯಾರು ಬಲ್ಲರು? ಇಷ್ಟಾದರೂ ಎಲೈ ಮರವೆ ಎಲೈ ಮರವೆ, ನನ್ನ ಮಾರ್ಗಗಳ ತಪ್ಪು ಎಷ್ಟೇ ಘೋರವಾಗಿದ್ದರೂ, ನನ್ನನ್ನು ನೋಡಿದ ಕೂಡಲೇ ನೀನು ಮುದುಡಿಕೊಂಡಾಗ, ನೀನು ನನಗುಂಟು ಮಾಡುವ ವೇದನೆಯನ್ನು ಅದರೊಂದಿಗೆ ಹೋಲಿಸಲಾಗದು ಎಂದು ನಿನಗೆ ಹೇಳುತ್ತೇನೆ.

ನೀನು ಒಣಗಿ ಸುಕ್ಕಾಗುವುದನ್ನು, ನಿನ್ನ ಸಸ್ಯರಸ (ಜೀವರಸ) ಕುಗ್ಗುತ್ತಿರುವುದನ್ನು, ನಿನ್ನ ಹೃದಯ ಬವಳಿಗೊಳ್ಳುವುದನ್ನು, ನಾನು ಕಾಣುತ್ತಿದ್ದೇನೆ. ಸಾವಿನ ಹೊಸ್ತಿನಲಲ್ಲಿರುವ ಸಂದರ್ಭಗಳಲ್ಲೂ, ಬದುಕಬೇಕೆಂಬ ಇಚ್ಛೆ ಪ್ರಬಲವಾಗಿದ್ದಲ್ಲಿ, ಕಾಯಿಲೆ ಮತ್ತು ಸಾವು ಎರಡನ್ನೂ ತಡೆಗಟ್ಟಬಹುದೆಂದು ವೈದ್ಯರು ನನಗೆ ಹೇಳಿದ್ದಾರೆ. ನಿನ್ನ ಇಚ್ಛಾಶಕ್ತಿಯನ್ನು ಕೊಂದವರು, ಯಾರು? ಅಥವಾ ಯಾವುದು?

ಏನದು ಎಲೆ ಮರವೆ? ನನ್ನೊಂದಿಗೆ ಮಾತಾಡು. ನೀನು ಮುನ್ನೂರು ಬಾಹುಗಳ ದೇವಿಯಂತಿದ್ದೆ. ಅಲ್ಲದೆ ನಿನ್ನ ಔದಾರ್ಯವಾದರೋ ಹಗಲೂ ರಾತ್ರಿ ಬೇಸಗೆಯ ಮಳೆಯಂತೆ ದುಂದುಗಾರ. ಮಾಳ್ವದ ಸೇನಾ ಕಾರ್ಯಾಚರಣೆಯಿಂದ ಹಿಂತಿರುಗಿದ ಮರುದಿನ ಬೆಳಿಗ್ಗೆ ನಿನ್ನ ಮುಖದ ಮೇಲೆ ಸಂತಸ ಕುಣಿಯುತ್ತಿದ್ದುದನ್ನು ಕಂಡೆ ಅಷ್ಟೇ ಅಲ್ಲ, ನಿನ್ನ ಮೈಮೇಲೆ ಸಂತಸದ ಗುಳ್ಳೆಗಳೆದ್ದುದನ್ನು ಕಂಡೆ. ಒಂದು ಸಹಸ್ರ ಪಾರಿಜಾತಗಳು ಹಾರಿ ಬಿದ್ದು ನನ್ನನ್ನು ಕವಿದು ಬಿಟ್ಟವು. ನಾನು ಬಾಲಕನಾಗಿದ್ದಾಗ ನನ್ನ ಹತ್ತಿರವಿದ್ದ ಸಾಕು ನಾಯಿಗಳೂ ನನ್ನ ಅಭಾವವನ್ನು ಅಷ್ಟೊಂದು ಹಚ್ಚಿಕೊಳ್ಳುತ್ತಿರಲಿಲ್ಲ ಮತ್ತು ನಾನು ಬಂದದ್ದಕ್ಕೆ ಅಷ್ಟೊಂದು ಸಂಭ್ರಮ ಪಡುತ್ತಿರಲಿಲ್ಲ. ಈಗ ಕೇವಲ ಹತ್ತು ವಾರಗಳ ನಂತರ, ನಿನ್ನ ಮುನ್ನೂರು ಕೈಗಳನ್ನು ಮುಗಿಯಲು ಬಯಸುತ್ತಿದ್ದೀ. ನಿನ್ನ ಬಿಗಿಯಾದ ಗೂಡಿನೊಳಕ್ಕೆ ಮುದುಡಿಕೊಳ್ಳಲು, ನಿನ್ನ ಎದೆಯಲ್ಲಿ ಗೂಡುಕಟ್ಟಿದ್ದ ಹಕ್ಕಿಗಳು, ಹುಳು ಹುಪ್ಪಟೆಗಳು ಹಾಗೂ ಜೇನುಗಳಿಗೆ ನೀನು ನಮಸ್ಕಾರ ಹೇಳುತ್ತಿದ್ದೀ.

ಜ್ವರವಿಲ್ಲ, ಜಜ್ಜುಗಾಯಗಳಿಲ್ಲ, ಇನ್ನಾವ ಚಿಹ್ನೆಗಳಿಲ್ಲ. ಇಷ್ಟಾದರೂ ಏನೋ ಒಂದು, ಏನೋ ಭಯಂಕರವಾದ್ದು ಆಗಿದೆ ಎಂದು ನನಗೆ ಗೊತ್ತು.

ಈ ಬಗ್ಗೆ ನಾವು ಮಾತಾಡೋಣವೇ? ನಾನು ಊಹಿಸುವುದಿಲ್ಲ. ಇನ್ನೊಬ್ಬರ ಬೆನ್ನಿನೊಂದಿಗೆ ಮಾತಾಡಲು ಆಗುವುದಿಲ್ಲ. ಅಥವಾ ಕೇಳಿಸಿಕೊಳ್ಳುವುದನ್ನು ನಿಲ್ಲಿಸಿ ಬಿಟ್ಟಿರುವವರ ಜೊತೆ ಮಾತನಾಡಲು ಸಾಧ್ಯವಿಲ್ಲ.

ನಾನು ಬೇಫ್ಲಿಕೀರನ ಗೊಬ್ಬರ ತಂದಿದ್ದೇನೆ. ಅದನ್ನು ಮಣ್ಣಿನ ಮೇಲ್ಪದರದ ಕೆಳಗೆ ಹೂತಿದ್ದೇನೆ. ದಿನವೂ ಎರಡು ಸಲ ಮಣ್ಣನ್ನು ತಿರುವಿ ಹಾಕುತ್ತೇನೆ. ನಾನೇ ಪಾತಿಗೆ ನೀರು ಹಾಯಿಸುತ್ತೇನೆ. ಎಷ್ಟೋ ಬಾರಿ ನನ್ನ ಕಛೇರಿ ವೇಳೆಯಲ್ಲೂ ತಳಮಳಗೊಂಡ ತಂದೆ ತಾಯಿಗಳ ಹಾಗೆ ಇಲ್ಲವೆ ಪ್ರೇಮಿಯ ಹಾಗೆ ನಿನ್ನೆಡೆಗೆ ಧಾವಿಸಿದ್ದೇನೆ. ನಿನ್ನ ಬಳಿ ಕುಳಿತು ನಿನಗಾಗಿ ಗಂಟೆಗಟ್ಟಲೆ ಕೊಳಲು ನುಡಿಸಿದ್ದೇನೆ. ನಿನ್ನನ್ನು ಬಿಗಿದಪ್ಪಿ ನೀನು ನನ್ನಿಂದ ಅಗಲಿ ಹೋಗಲು ಬಿಡುವುದಿಲ್ಲವೆಂದು ಹೇಳಿದ್ದೇನೆ. ನಾನು ನಿನ್ನನ್ನೂ ಕುಂಭಲ್‌ಗರ್‌ನಿಂದ ತಂದಾಗ ನೀನಿನ್ನೂ ಗರಿ ಮೂಡುತ್ತಿರುವ ಎಳೆಯ ಹಕ್ಕಿ. ನೀನು ನೆಲೆ ತಪ್ಪಿದೆಯೋ, ನೀನು ಹುಟ್ಟಿದ ಸ್ಥಳದಲ್ಲಿ ಸಿಕ್ಕ ಪೋಷಣೆ ಮತ್ತು ಭೂಪ್ರದೇಶ ಇಲ್ಲಿಗಿಂತ ಭಿನ್ನವೋ ಹೇಗೋ ನನಗೆ ತಿಳಿಯದು. ನೀನು ಹೆಚ್ಚು ಕಡಿಮೆ ಸತ್ತು ಹೋಗಿದ್ದೀ. ಆದರೆ ನೀನಿನ್ನೂ ಜೀವ ಬಿಟ್ಟಿಲ್ಲ. ನೀನೊಬ್ಬ ಭಯಂಕರ ಹೋರಾಟಗಾರನಾಗಿದ್ದೆ. ನೀನು ಹೂಬಿಡ ತೊಡಗಿದಾಗ ಅದೆಷ್ಟು ಯುವಕನಾಗಿದ್ದೆ ಎಂದು ನಿನಗೆ ತಿಳಿದಿದೆಯೆ? ಮಹಾರಾಣಿಯರು ಮತ್ತು ರಾಜಕುಮಾರರು ಮತ್ತು ಸುಂದರ ಉಪಪತ್ನಿಯರು ವಿಸ್ಮಿತರಾಗಿ ನಿಂತು ನೋಡುತ್ತಿದ್ದರು. ನಾನು ಮುದುಕನಾದ ಮೇಲೆ ನಿನ್ನ ನೆರಳಲ್ಲಿ ಕುಳಿತು ನಿನ್ನ ಹೂಗಳನ್ನು ನನ್ನ ಮೇಲೆ ಬೀಳಿಸಿಕೊಳ್ಳುತ್ತಾ ಕೂರುತ್ತೇನೆಂದುಕೊಂಡಿದ್ದೆ.

ನಾನು ಬಹುವಾಗಿ ಹೆದರಿದ್ದ ಆ ಗಳಿಗೆ ಬಂದು ಬಿಟ್ಟಿದೆಯೆ? ನನ್ನ ಸ್ಪರ್ಶದಲ್ಲಿ ಸಾವಿದೆಯೆ?

ಭೂತಾನಿ ಮಾತಾ ಇಲ್ಲಿಗೆ ಬಂದು ಹೋದಳೆ? ಅವಳು ನಿನ್ನ ಮೇಲೆ ತನ್ನ ಕೆಟ್ಟ ಕಣ್ಣು ಬೀರಿದಳೆ?

* * *

ಮೂರನೇ ಭವಿತವ್ಯ : ಸುಲ್ತಾನ್ ಬಹದ್ದೂರ್ ಷಾನನ್ನು ನಾವು ಹೇಗೆ ಅಭಿನಂದಿಸುವುದು?

ನಿಮ್ಮ ಭವಿತವ್ಯದ ನಾಯಕ ನೀವೇ ಎಂದು ನೀವು ನಂಬುವುದಾದಲ್ಲಿ ನಾನೂ ನಿಮ್ಮ ಆ ವಿಚಾರದಲ್ಲಿ ಭಾಗಿಯಾಗುತ್ತೇನೆ ಎಂದು ಹೇಳುವೆ. ಒಂದು ವೇಳೆ ನಿಮ್ಮ ಮಿತ್ರ, ನೆರೆಯ ವ್ಯಕ್ತಿ ಮತ್ತು ನಿಮ್ಮ ಹೆಂಡತಿ ಇವರೆಲ್ಲರೂ ಅಂತಿಮವಾಗಿ ಅದೆಲ್ಲವೂ ಇರುವುದು ವಿಧಿಗಿರುವ ಅನಂತ ಹಸ್ತಗಳಲ್ಲಿ ಎಂದು ಎಚ್ಚರಿಸಿದರೆ ನಾನು ಅವರ ಮಾತನ್ನೂ ಪ್ರಬಲವಾಗಿ ಸಮರ್ಥಿಸುತ್ತೇನೆ. ಗುಜರಾತಿನ ಸುಲ್ತಾನನಾದ ಸಿಕಂದರ್‌ಷಾನಿಗೆ ಏನಾಯಿತೆಂದು ನೋಡಿ. ಆಗ ಇದಾವುದಕ್ಕೂ ಅರ್ಥವಿಲ್ಲ ಎಂದು ನಿಮಗನಿಸತೊಡಗುತ್ತದೆ. ಹಾಗೂ ಅದು ಹಾಗೆಯೇ ಇರಬೇಕೆಂದಿತ್ತು ಎಂದೆನಿಸ ತೊಡಗುತ್ತದೆ. ವಿಧಿ ಮತ್ತು ದೈವದ ತಿರುಳೆಂದರೆ, ನಿಗೂಢ ಹಾದಿಗಳಲ್ಲಿ ಸಾಗುವುದೆಂದಷ್ಟೇ ಅಲ್ಲ, ಗ್ರಹಿಕೆಗೆ ನಿಲುಕದ್ದು ಎಂದು.

ಸುಲ್ತಾನ್ ಮುಝಾಫರ್ ಷಾ ಮಾರ್ಚ್ 16, 1526ರಂದು ಅಸುನೀಗಿದನು. ಎರಡು ತಿಂಗಳು ಒಂಬತ್ತು ದಿನಗಳ ನಂತರ ಅಂದರೆ ಮೇ 25 ರಂದು, ಸುಲ್ತಾನ್ ಸಿಕಂದರ್ ಷಾ ಕೂಡ ತೀರಿಕೊಂಡನು. ಜನ ಹೇಳುವುದೆಂದರೆ ಅವನದೊಂದು ದುಷ್ಟ ಏರ್ಪಾಟು ಇತ್ತು.

ಹಾಗಾಗಿ ಇಮದ್–ಉಲ್–ಮುಲ್ಕ್ ಎಂಬ ಅವನ ಒಬ್ಬ ಗುಲಾಮನು ಇತರೆಯವರೊಂದಿಗೆ ಸೇರಿಕೊಂಡು ಅವನ ಕತ್ತು ಹಿಸುಕಿ ಕೊಂದನು.

ಆ ದಿನ ನನಗೆ ನೆನಪಿದೆ. ನಾನು ವಿಜಯ ಸ್ತಂಭದ ಅಂತಿಮ ಅಂತಸ್ತಿನಲ್ಲಿದ್ದ ಕಿಟಕಿಯ ಬಳಿ ನಿಂತು ನಿಸರ್ಗದ ಸುಂದರ ದೃಶ್ಯವನ್ನು ನೋಡುತ್ತಿದ್ದೆ. ಆಗ ಷಹಜಾದಾ ಬಹದ್ದೂರ್‌ಷಾಹನು ಬೆಳಗಿನ ಮಂಜಿನಲ್ಲಿ ಎದ್ದು ಹೊರಟನು. ಅವನು ತನ್ನಿಂದ ಸದಾ ನುಣುಚಿಕೊಳ್ಳುತ್ತಿದ್ದ ತನ್ನ ತಂದೆಯ ಶಿರೋಭೂಷಣವಾದ ಆ ಕಿರೀಟದ ಹುಡುಕಾಟದಲ್ಲಿ ವರ್ಷಗಳನ್ನೇ ಕಳೆದಿದ್ದ. ಒಂದು ಕ್ಷಣದಲ್ಲಿ, ಅದೃಷ್ಟ ಸೂಚಕ ವಿಲಕ್ಷಣ ಕಥೆಪುಸ್ತಕವೊಂದು, ಸುವರ್ಣದ ಗೋಳಾಕಾರವೊಂದು ಅವನನ್ನು ಹುಡುಕಿಕೊಂಡು ಬರುತ್ತದೆಂದು ನಿರ್ಣಯ ಹೇಳಿತ್ತು. ಕಲ್ಪಿಸಿಕೊಳ್ಳಿ. ರಾಜಕುಮಾರ ಬಹದ್ದೂರನು ಬಾಬರನ ಸಂಪರ್ಕದಲ್ಲಿದ್ದನು. ಅವನನ್ನು ಹೋಗಿ ಸೇರಿಕೊಳ್ಳಬೇಕೆಂದಿದ್ದನು. ಆಗ ಗುಜರಾತಿನ ರಾಜ ತಾಂತ್ರಿಕ ಪ್ರತಿನಿಧಿಯೊಬ್ಬನು ಅವನನ್ನು ಸ್ವಾಗತಿಸಲು ಬಂದನು. ಅಲ್ಲದೆ ಅವನ ತಂದೆಯ ಸಿಂಹಾಸನವನ್ನೇರಬೇಕೆಂದು ಆಹ್ವಾನಿಸಿದನು.

ಅಭಿನಂದನೆಗಳು ಬಹದ್ದೂರ್ ಷಾ ನಿನ್ನ ಅದೃಷ್ಟದಲ್ಲಿ ನಾನು ಸಂತೋಷಿಸುತ್ತೇನೆ.

ಸಿಂಹಾಸನವನ್ನು ಏರಿದ ಕೂಡಲೇ ಮೊದಲು ಮಾಡಿದ ಕೆಲಸವೆಂದರೆ ತನ್ನ ಸೋದರನನ್ನು ಕೊಂದ ಗುಲಾಮ ಇಮದ್ ಉಲ್ ಮುಲ್ಕ್‌ನಿಗೆ ಹಾಗೂ ಅವನನ್ನು ಇದಕ್ಕೆ ಪ್ರಚೋದಿಸಿದ ಅಮೀರರಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿದ್ದು. ನೂತನ ಸುಲ್ತಾನನಿಗೆ, ಸದ್ಭಾವನೆಯ ನಿಯೋಗಿಯೊಬ್ಬನನ್ನು ಮತ್ತು ಉಡುಗೊರೆಗಳನ್ನು ಕಳಿಸಬಯಸುತ್ತೇನೆ. ಅಲ್ಲದೆ ಸೂಕ್ತವಾದ ಸಮಯನೋಡಿ, ನಾವು ಹಲವು ಬಾರಿ ಚರ್ಚಿಸಿದ ಶಾಂತಿ ಒಪ್ಪಂದವನ್ನು ಅವನಿಗೆ ನೆನಪಿಸುತ್ತೇನೆ. ಬಹುಶಃ ನಾವು ಅದಕ್ಕಿಂತಲೂ ಮುಂದೆ ಹೋಗಿ. ಯಾರಾದರೂ ಶತ್ರುವಿನೊಂದಿಗೆ ನಮ್ಮ ಮತ್ತು ಅವರ ರಾಜ್ಯಗಳಿಗೆ ಯುದ್ಧವೊದಗಿದ್ದೇ ಆದರೆ ಸೈನಿಕ ಒಪ್ಪಂದವೊಂದಕ್ಕೆ ಸಹಿಹಾಕಬಹುದು. ಗುಜರಾತಿನ ಹೊಸ ಸುಲ್ತಾನನೊಂದಿಗೆ ಸ್ನೇಹ ಹಸ್ತ ಚಾಚಲು ನಾನು ಮುಂದಾದಲ್ಲಿ ಮಂತ್ರಿಮಂಡಲದ ಸದಸ್ಯರ ಮನವೊಲಿಸುವಲ್ಲಿ ನನಗೆ ಎಷ್ಟರ ಮಟ್ಟಿಗೆ ಯಶಸ್ಸು ಸಿಕ್ಕೀತು?

ನನಗಿರುವ ಒಂದೇ ಅವಕಾಶವೆಂದರೆ, ಬಾಬರನ ವಿಷಯವನ್ನು ಉಲ್ಲೇಖಿಸುವುದು.

* * *

ನಾಲ್ಕನೇ ಭವಿತವ್ಯ : ಮಹಾಪ್ರಭು ರಾಣಾ ಅವರು ಏನು ಮಾಡಬೇಕೆಂದಿದ್ದಾರೆ ಎಂದು ದಯವಿಟ್ಟು ಯಾರಾದರೂ ನನಗೆ ಹೇಳುತ್ತೀರಾ?

ವಾಯವ್ಯ ದಿಕ್ಕಿನಿಂದ ಹಿಂದೂಸ್ತಾನದ ಮೇಲೆ ದಾಳಿ ಮಾಡಿದ ಇತರೆ ವಿದೇಶಿಯರಂತೆ ಬಾಬರನು ಇದ್ದಿದ್ದರೆ, ಅವನು ದೆಹಲಿಯನ್ನು ಕೊಳ್ಳೆ ಹೊಡೆದು, ಕೆಲವು ಸಹಸ್ರ ಜನರನ್ನು ಸಾಯಿಸಿ ಇಲ್ಲವೆ ಅಂಗವಿಕಲರನ್ನಾಗಿ ಮಾಡುತ್ತಿದ್ದ. ಹೆಸರಾಂತ, ಕಲಾವಿದರನ್ನು ಕುಶಲ ಕರ್ಮಿಗಳನ್ನು ಕರಕುಶಲ ಕಲೆ ಬಲ್ಲವರನ್ನು ಗುಲಾಮರನ್ನಾಗಿ ಮಾಡಿಕೊಂಡು ತನ್ನ ದೇಶಕ್ಕೆ ಕೊಂಡೊಯ್ಯುತ್ತಿದ್ದನು ಮತ್ತು ಪಾಣಿಪಟ್ ಯುದ್ಧದಲ್ಲಿ ತನ್ನ ಸೋದರ ಸುಲ್ತಾನ್ ಇಬ್ರಾಹಿಂನಂತೆ ಗಾಯಗೊಳ್ಳದೆ ತಪ್ಪಿಸಿಕೊಂಡು ಹೋಗಿದ್ದ ಮಹಮದ್ ಲೂದಿಗೆ ದೆಹಲಿ ಸಿಂಹಾಸನವನ್ನು ಹಸ್ತಾಂತರಿಸುತ್ತಿದ್ದನು. ಸದ್ಯಕ್ಕೆ ಮಹಮದ್ ಲೂದಿ ಕೂಡ, ಹಿಂದೂಸ್ಥಾನದ ಅನುಪಸ್ಥಿತಿಯ ಸುಲ್ತಾನನೆಂಬಷ್ಟಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗುತ್ತಿತ್ತು. ಯುದ್ಧ ಮತ್ತು ದುರದೃಷ್ಟಗಳು ವಿಲಕ್ಷಣ ವ್ಯಕ್ತಿಗಳನ್ನು ಮಿತ್ರರನ್ನಾಗಿಸುವುದಕ್ಕೆ ಹೆಸರಾದವು ಎಂದು ನನಗೆ

ಅರಿವಿದೆ. ಆದರೆ ತಂದೆಯವರು ಮಹಮದ್ ಲೂದಿಗೆ ಆಶ್ರಯವನ್ನಷ್ಟೇ ನೀಡಿರಲಿಲ್ಲ, ಅವನೊಂದಿಗೆ ಬಾಬರನನ್ನು ಹೊಡೆದೋಡಿಸುವ ಒಪ್ಪಂದವನ್ನು ಮಾಡಿಕೊಂಡಿದ್ದರು. ಯಾವ ಕಾರಣಕ್ಕಾಗಿ, ಈ ಮುಂಚಿನ ಶತ್ರುವಿನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅಂಥ ಒಂದು ಅನುಚಿತ ಅವಸರ ಮತ್ತು ಉತ್ಸಾಹವನ್ನು ತೋರಿಸಲಾಯಿತು? ಹೊಸಬನೊಬ್ಬ ಅದರಲ್ಲೂ ಆಕ್ರಮಣಕಾರಿಯೂ, ವಿಜಯದಿಂದ ಉತ್ಸಾಹಿತನೂ ಆದವನೊಬ್ಬನು ನೆರೆಗೆ ಬಂದಾಗ ಅವನನ್ನು ಕಾದು ನೋಡುವ ಸಾಂಪ್ರದಾಯಿಕ ನಿಯಮಗಳು ಎಲ್ಲಿ ಹೋದುವು? ತಂದೆಯವರು ಬಾಬರನಿಗೆ ಸವಾಲು ಹಾಕಬಯಸಿದ್ದಾರೆಯೆ? ಅವನು ಎಲ್ಲಿಯವರೆಗೂ ಹೋಗಬಹುದೆಂದು ನೋಡಬಯಸಿದ್ದಾರೆಯೆ? ಮಹಾಪ್ರಭುಗಳು ದೆಹಲಿಯ ಬಾದಷಹನನ್ನು ಪ್ರಚೋದಿಸಲು, ಬೇಕೆಂದೇ ತಮ್ಮ ಮಾಮೂಲಿ ರೀತಿ ಬಿಟ್ಟು ವಿಶೇಷ ಪ್ರಯತ್ನ ಮಾಡುತ್ತಿದ್ದಾರೆಂದು ನೀವು ಭಾವಿಸಿದರೆ, ಬಾಕಿ ಕಥೆಯನ್ನು ನೀವು ಕೇಳಿಲ್ಲ.

ತಂದೆಯವರು ಕಂದಾರ್‌ನ ದುರ್ಗಮ ಕೋಟೆಯನ್ನು ವಶಪಡಿಸಿಕೊಂಡು ಅದರ ಪ್ರಭು ಹಸನ್ ಅನ್ನು ಅಲ್ಲಿಂದ ಹೊಡೆದೋಡಿಸಿದ್ದಾರೆ. ಅದು ಕೇವಲ ಮುಂದೆ ಸಂಭವಿಸಲಿರುವ ಸಂಗತಿಗಳ ಮುನ್ಸೂಚನೆ ಅಷ್ಟೆ. ಕಾಲಮಿಂಚಿಹೋದ ದುಸ್ಸಾಹಸಿಯಂತೆ ಈ ಮುಂಚಿನ ಲೂದಿ ಸಾಮ್ರಾಜ್ಯದಿಂದ ನಗರಗಳು ಮತ್ತು ಪಟ್ಟಣಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದುವರೆಗಿನ ಲೆಕ್ಕಾಚಾರದ ಪ್ರಕಾರ, ಇನ್ನೂರು ಪ್ರದೇಶಗಳು, ಕೆಲವು ಸಣ್ಣವು ಮತ್ತು ಕ್ಷುಲ್ಲಕವಾದವು, ಇತರೆಯವು ಭಾರಿಯಾದವು. ಜನರು ಅವೆಲ್ಲ ಯುದ್ಧದಲ್ಲಿ ಲೂಟಿ ಮಾಡಿದವು ಎಂದು ಹೇಳುತ್ತಾರೆ. ಆದರೆ ವಾಸ್ತವಾಂಶವೆಂದರೆ ಲೂಟಿಗಳು. ಮಹಾಪ್ರಭುಗಳಿಗೆ ಸೇರಿದವಲ್ಲ. ರಾಣಾ ಇಬ್ರಾಹಿಂ ಲೂದಿಯ ವಿರುದ್ಧ ಹೋರಾಡಲೂ ಇಲ್ಲ, ಯುದ್ಧವನ್ನು ಗೆಲ್ಲಲೂ ಇಲ್ಲ. ಬಾಬರ್ ಯುದ್ಧ ಮಾಡಿದ ಮತ್ತು ಗೆದ್ದ. ಈ ಎಲ್ಲ ಭೂ ಕಬಳಿಕೆ ಅನೇಕ ಸ್ಥಾನಪಲ್ಲಟಗಳಿಗೆ ಕಾರಣವಾಯಿತು. ಕೆಲವು ಸಂದರ್ಭಗಳಲ್ಲಿ ಮುಸ್ಲಿಂ ಪ್ರಭುಗಳ ಸ್ಥಾನಕ್ಕೆ ಹಿಂದೂಗಳು ಬಂದಿದ್ದಾರೆ. ಸಹನಾಶೀಲರಾದವರು ಹಾಗೂ ತೆರೆದ ಮನಸ್ಸಿನವರಾರೂ ಹಾಗೆ ಸ್ಥಾನ ಚ್ಯುತರಾಗಿಲ್ಲ. ನಮಗೆ ಖಾತರಿಯಾಗುತ್ತಿರುವ ಅಂಶವೆಂದರೆ, ಎಲ್ಲ ಅತೃಪ್ತರು ಬಾಬರನತ್ತ ಆಕರ್ಷಿತರಾಗಿ ಬಾಬರನನ್ನು ತಮ್ಮ ನಾಯಕ ಮತ್ತು ರಕ್ಷಕ ಎಂದು ಕಾಣ ತೊಡಗಿದ್ದಾರೆ ಎಂಬುದು. ತಂದೆಯವರು ತನಗೇನೇನು ಸಾಧ್ಯವೋ ಅದೆಲ್ಲವನ್ನೂ ಮಾಡುತ್ತಿದ್ದರೆ ತೀವ್ರ ಆಸಕ್ತಿ ಹೊಂದಿರುವ ವ್ಯಕ್ತಿಗಳಾದ ಮಹಮದ್ ಲೂದಿ ಮತ್ತು ಬಾಬರ್ ತಮ್ಮ ಪ್ರದೇಶಗಳನ್ನು ಛಿದ್ರೀಕರಣ ಎಂದು ಪರಿಗಣಿಸಿ, ಅದನ್ನು ತೀವ್ರ ಅಸಮಾಧಾನದಿಂದ ನೋಡುತ್ತಿದ್ದಾರೆ. ಆ ಬಗ್ಗೆ ಮೊದಲನೆಯವರು (ತಂದೆಯವರು) ಏನೂ ಮಾಡಲಾರರು. ಎರಡನೆಯವರು ಮಾಡಬಲ್ಲರು ಹಾಗೂ ಮಾಡೇ ಮಾಡುತ್ತಾರೆಂಬುದು ನನ್ನ ಸಂದೇಹ.

ಒಂದಲ್ಲ ಒಂದು ಹಂತದಲ್ಲಿ ಬಾಬರನೊಂದಿಗೆ ಯುದ್ಧ ಅನಿವಾರ್ಯವಾಗಬಹುದು. ಆದರೆ, ಮಹಾಪ್ರಭುಗಳು ನೇರವಾಗಿ ಯುದ್ಧವನ್ನೇ ಬಯಸುವರೆ? ಬೇರೆ ಇನ್ನೇನು ತೀರ್ಮಾನಕ್ಕೆ ಯಾರಾದರೂ ಬರಬಹುದು? (ಈಗೇಕೆ? ಇಷ್ಟು ವರ್ಷಗಳೂ ದೆಹಲಿ ವಶಪಡಿಸಿಕೊಳ್ಳಲೋಸುಗವೇ ಇತ್ತು. ಆದರೆ ಅವರು ನನ್ನ ಮಾತಿಗೆ ಕಿವಿ ಕೊಡಲಿಲ್ಲ). ಇದು ಅನವಶ್ಯಕ ಹಾಗೂ ಹುಚ್ಚು ಸಾಹಸದ್ದು ಎನಿಸುತ್ತದೆ. ಬಾದಶಹನಿಗೆ, ತನ್ನ ಹಿತಾಸಕ್ತಿ ಯಾವುದು ಮತ್ತು ಯಾವುದು ವಿವೇಕ ಎನ್ನುವುದು ಅದ್ಭುತವಾಗಿ ತಿಳಿಯುತ್ತದೆ. ಕೊನೇ ಪಕ್ಷ ಈ ಕ್ಷಣಕ್ಕೆ ನಾವು ಮಾಡಬೇಕಾದ್ದೇನಿದ್ದರೂ ನಮಗಿರುವ ಸ್ಥಾನ ಬಲದಿಂದ,

ಎರಡೂ ಸಾಮ್ರಾಜ್ಯಗಳ ನಡುವಿನ ಗಡಿಗಳನ್ನು ಎರಡೂ ಕಡೆಯವರು ಗೌರವಿಸುವಂಥ ಒಂದು ಒಪ್ಪಂದವನ್ನು ಮುಂದಿಡುವುದು.

* * *

ಐದನೆಯ ಭವಿತವ್ಯ : ಕೌಸಲ್ಯ

ನಾನು ಮಂಗಳನನ್ನು ಪ್ರತಿ ಎರಡು ಮೂರು ದಿನಕ್ಕೊಮ್ಮೆ ಕೆಲವೊಮ್ಮೆ ಅದೇ ದಿನ ಎರಡು ಮೂರು ಸಲ ಅದೇ ಮೂರ್ಖ ಪ್ರಶ್ನೆಗಳನ್ನು ಕೇಳುತ್ತೇನೆ.

"ಅವಳು ಎಲ್ಲೋ ಕಾಣೆಯಾಗಿದ್ದಾಳೆ ಅನ್ನಿಸುತ್ತೆ ಅಂತ ಅದು ಹೇಗೆ ನೀನು ತಿಳಿದುಕೊಂಡಿದ್ದೀ? ಇದು ಚಿತ್ತೂರು, ಮಂಗಳ. ಮೇವಾಡದ ರಾಜಧಾನಿ. ಯಾವುದೋ ಅನಾಗರಿಕರಿಂದ ತುಂಬಿರುವ ಪುರಾತನ ಕಾಲದ ಹಳ್ಳಿ ಅಲ್ಲ. ನಾನು ಹೇಳ್ತೀನಿ, ಅವಳು ತಪ್ಪಿಸಿಕೊಳ್ಳೋದಕ್ಕೆ ಆಗುವುದಿಲ್ಲ ಅಂತ. ಅದಕ್ಕೇನೂ ಅರ್ಥವಿಲ್ಲ. ನೀನು ನಿನ್ನ ಕೆಲಸ ಸರಿಯಾಗಿ ಮಾಡುತ್ತಾ ಇಲ್ಲ ಅಷ್ಟೇ".

"ನಾನು ಪೊಲೀಸರ (ನಗರ ರಕ್ಷಕರ) ಕಡೆ ತಪಾಸಣೆ ಮಾಡಿದ್ದೀನಿ ಮಹಾಸ್ವಾಮಿ. ಅವರು ತಮ್ಮ ದಾಖಲೆಗಳನ್ನೆಲ್ಲ ತೋರಿಸಿದರು. ಪ್ರತಿ ವರ್ಷ ಚಿತ್ತೂರೊಂದರಿಂದಲೇ ಹತ್ತಿರ ಹತ್ತಿರ ಎಪ್ಪತ್ತು ಜನ ನಾಪತ್ತೆಯಾಗುತ್ತಾರೆ. ಮತ್ತೆ ಅವರ ಸಮಾಚಾರ ಏನೂಂತ ಎಂದೂ ಗೊತ್ತಾಗುವುದೇ ಇಲ್ಲ".

"...ಮಂಗಳ್ ನನಗೆ ಇದನ್ನು ಹೇಳಬೇಡ" ಇನ್ನು ಅವನನ್ನು ಬಯ್ಯುವುದನ್ನು ನಿಲ್ಲಿಸಬೇಕು. ಏನಾಗಿದೆ ನನಗೆ? ನಾನೊಬ್ಬ ಉದ್ರೇಕಗೊಳ್ಳುವ, ಸಿಡುಕ. ಎಲ್ಲರ ಮೇಲೂ ಕೋಪ ಮಾಡಿಕೊಳ್ಳುತ್ತೇನೆ. ಬರೀ ನನ್ನ ದುರದೃಷ್ಟದ ದಿನಗಳ ಮೇಲಲ್ಲ. ಆ ಧ್ಯಾನ ಗೀನ, ನನಗೆ ನಾನೇ ಮಾತಾಡಿಕೊಳ್ಳುವುದು ನನ್ನನ್ನು ಎಲ್ಲಿಗೂ ಒಯ್ಯುವುದಿಲ್ಲ. ನಾನಿನ್ನೂ ಕಿರಿಚಾಡುತ್ತಿದ್ದೀನಿ. "ನೀನು ಗುಪ್ತಚರ ವಿಭಾಗದ ಮುಖ್ಯಸ್ಥ. ತಂದೆಯವರಿಗೆ ಹೇಳಿ ನಿನ್ನನ್ನು ನೇಮಕ ಮಾಡಿಸಿದೆ. ನಿನಗೆ ನೋಡಿದರೆ, ನಿನ್ನ ತಾಯಿಯನ್ನೇ ಪತ್ತೆ ಮಾಡಲು ಆಗುತ್ತಿಲ್ಲ. 'ಪ್ರತಿದಿನವೂ ನೀನು ಅದೇ'– ನಾನು ಸರಿಯಾದ ಸಮಯಕ್ಕೆ ಪದವನ್ನು ಬದಲಾಯಿಸಿದೆ – "ಕಥೆ ಹೇಳ್ತಿದ್ದೀ. ಅದರ ಬದಲು ನೀನು ಅವಳನ್ನು ಯಾಕೆ ಹುಡುಕಬಾರದು?"

"ನಾನು ಪ್ರಯತ್ನ ಪಡುತ್ತಾ ಇದ್ದೀನಿ ದೊರೆಗಳೆ. ನಾನು ಮಾಳವ, ಗುಜರಾತ್ ಮತ್ತು ದೆಹಲಿ ನಗರ ರಕ್ಷಕರನ್ನೆಲ್ಲಾ ಸಂಪರ್ಕಿಸಿದ್ದೀನಿ. ನಮ್ಮ ಗುಪ್ತಚರ ವಿಭಾಗದ ಮಂದಿ, ಕಾಶಿ, ಮಥುರಾ, ಪ್ರಯಾಗ, ಕೇದಾರನಾಥ, ಮದುರೈನಿಂದ ಬರುವ ಯಾತ್ರಿಕರನ್ನೆಲ್ಲಾ ಪ್ರಶ್ನಿಸುತ್ತಾ ಇದ್ದಾರೆ. ನಾನು ಬಿಟ್ಟು ಬಿಟ್ಟಿಲ್ಲಾ".

"ಮಮತಾ ಏನಾದರೂ ಅವಳ ಜೊತೆ ಜಗಳ ಆಡಿದಳೆ? ನೀನೇನಾದರೂ ಅವಳಿಗೆ ಕೆಟ್ಟ ಮಾತು ಹೇಳಿದೆಯಾ?" "ಮಮತಾ ಏನು ಅಂತ ನಿಮಗೆ ಗೊತ್ತಲ್ಲಾ ದೊರೆಗಳೆ. ಅಮ್ಮ ಎಂದೂ ಯಾರ ಜೊತೇಲೂ ತೀರಾ ಆತ್ಮೀಯವಾಗಿರುತ್ತಿರಲಿಲ್ಲ. ಮಮತಾ ಕೂಡ ಅದಕ್ಕೆ ಅಪವಾದವಲ್ಲ. ಆದರೆ ಅಮ್ಮನ ಕಡೆ ಕಣ್ಣೆತ್ತಿ ನೋಡುವ ಮತ್ತು ಮಾತನಾಡುವ ಧೈರ್ಯ ಯಾವತ್ತೂ ಮಮತಾಳಿಗೆ ಇರಲಿಲ್ಲ. ಕಳೆದ ಸಲ ಅಮ್ಮ ಬಂದಿದ್ದಾಗ, ಮಮತಾ ಗರ್ಭಿಣಿ ಎನ್ನುವುದನ್ನು ತಿಳಿದು ತುಂಬ ಸಂತೋಷಪಟ್ಟಳು".

"ಹಾಗಾದರೆ ಮಗು ಹುಟ್ಟುವುದು ಯಾವಾಗ?"

"ಇನ್ನೊಂದು ತಿಂಗಳಿಗೆ ದೊರೆಗಳೆ"

"ಅದಕ್ಕೆ ಮುಂಚೆ ನೀನು ಕೌಸಲ್ಯಳನ್ನು ಪತ್ತೆ ಮಾಡುವುದು ಒಳ್ಳೆಯದು. ಅಲ್ಲವೆ? ಅಲ್ಲ ತನ್ನ ಮೊಮ್ಮಗಳು ಹುಟ್ಟುವ ಸಮಯದಲ್ಲಿ ಅವಳಿಲ್ಲದೆ ಹೋದರೆ. ಅವಳು ಏನು ಹೇಳಿಯಾಳು ಅನ್ನುವುದು ನನ್ನ ಮಾತಿನ ಅರ್ಥ".

"ಅವಳನ್ನು ಹುಡುಕಲು ನಾನು ಏನು ಬೇಕಾದರೂ ಮಾಡುತ್ತೀನಿ".

"ಲೀಲಾವತಿಯನ್ನು ಪತ್ತೆ ಹಚ್ಚಲು ಆಗದಿದ್ದಾಗ (ನಗರ ರಕ್ಷಕರು) ಪೊಲೀಸರು ಏನು ಹೇಳಿದರು ಅನ್ನುವುದು ನಿನಗೆ ನೆನಪಿದೆಯಾ? ಅವಳನ್ನು ಚಿತ್ತೂರಿನಿಂದ ಹೊರಕ್ಕೆ ಕಳ್ಳತನದಲ್ಲಿ ಸಾಗಿಸಲಾಗಿದೆ ಅಂತ ಹೇಳಿದರು. ಇಲ್ಲವೆ ಆದಿನಾಥ್ ಜೀಯವರೆ ಅವಳನ್ನು ಕೊನೆಗಾಣಿಸಿದ್ದಾರೆ ಎಂದರು. ನಾವು ಅವಳನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ಅವಳು ಇಲ್ಲೇ ಕೋಟೆಯಲ್ಲೇ ಇದ್ದಳು. ಅವಳು ಮುಖವೆಲ್ಲಾ ಬಿಳಿಚಿಕೊಂಡು, ಹೊಟ್ಟೆಗಿಲ್ಲದೆ ಹಸಿದ ಸ್ಥಿತಿಯಲ್ಲಿ ಸಿಕ್ಕಿದಾಗ, ಅವಳನ್ನು ಪತ್ತೆ ಹಚ್ಚಲು ನಾನು ಸಾಕಷ್ಟು ಶ್ರಮ ವಹಿಸಿದ್ದರೆ, ನನಗೆ ಅವಳು ಸಿಗುತ್ತಿದ್ದುದಾಗಿ ಹೇಳಿದಾಗ, ನನಗೆಷ್ಟು ಅವಮಾನ ಆಯಿತು ಎಂದು ನೀನು ಊಹಿಸಬಲ್ಲೆಯಾ? ಚಿತ್ತೂರಿನ ಪ್ರತಿಯೊಂದು ಮನೆಯನ್ನೂ, ಪ್ರತಿ ಗುಡಿಸಿಲನ್ನೂ ಶೋಧಿಸು ಮಂಗಳ್. ನಾನು (ನಗರ ರಕ್ಷಕರ ಮುಖ್ಯಾಧಿಕಾರಿಯೊಂದಿಗೆ) ಪೊಲೀಸ್ ಆಯುಕ್ತರೊಂದಿಗೆ ಮಾತನಾಡುತ್ತೇನೆ.

"ನಾನು ಈಗಾಗಲೇ ಅದೆಲ್ಲವನ್ನೂ ಮಾಡಿದ್ದೀನಿ. ಮನೆಗಳನ್ನು ಶೋಧಿಸುವ ಅನುಮತಿ ಪತ್ರಕ್ಕೆ ಮಹಾಪ್ರಭುಗಳು ಸಹಿಹಾಕಿದರು. ನಾವೀಗ ಮೂರನೇ ಮೊಹಲ್ಲಾವನ್ನೂ ಸಾದ್ಯಂತ ಶೋಧಿಸುತ್ತಿದ್ದೇವೆ".

"ಶ್ರೀಮಂತರ ಮನೆಗಳನ್ನು ಬಿಟ್ಟು ಬಿಡಬೇಡ. ಯಾರನ್ನೂ ಬಿಡಬೇಡ. ನಿನ್ನ ಭೂಗತ ಸಂಬಂಧಗಳ ವಿಷಯ ಏನಾಯಿತು?"

"ಅವಳನ್ನು ಅವಳ ಒಡವೆಗಳಿಗೋ, ಹಣ ತೆಗೆದುಕೊಂಡು ಬಿಡುಗಡೆ ಮಾಡಲೋ ಅವಳನ್ನು ಅಪಹರಿಸಲಾಗಿದೆ ಅಥವಾ ಕೊಲೆ ಮಾಡಲಾಗಿದೆ ಎಂದು ಅವರು ಅನುಮಾನ ಪಡುತ್ತಾರೆ. ಸಾಮಾನ್ಯವಾಗಿ ಅವರಿಗೆ ಇಂಥ ವಿಷಯಗಳು ಗೊತ್ತಿರುತ್ತವೆ. ಅಲ್ಲದೆ ಇದುವರೆಗೂ ಅವಳ ವಿಚಾರ ಏನೂ ತಿಳಿದು ಬಂದಿಲ್ಲ ಅವರಿಗೆ".

ನಾಳೆಯಿಂದ ಮತ್ತೆ ನಾನು ಹುಡುಕಲು ಶುರುಮಾಡುತ್ತೇನೆ ಎಂದು ನನಗೆ ಗೊತ್ತಿತ್ತು. ವಿಷಯವನ್ನು ಮರೆಸಿ ಬೇರೇನೋ ಮಾತಾಡುವುದು ಮತ್ತು ಅದೂ ಸುತ್ತು ಬಳಸಿ ಮಾತನಾಡುವುದು ನನ್ನನ್ನು ಎಲ್ಲಿಗೂ ಕೊಂಡೊಯ್ಯಲಿಲ್ಲ. ಆದರೆ ಅವಳನ್ನು ಜೀವಂತವಾಗಿ ಇರಿಸಿಕೊಳ್ಳಲು ನನಗೆ ಇದ್ದದ್ದು ಅದೊಂದೇ ಮಾರ್ಗ. ನಾನು ಮಾಡಿದ ಆ ಮೂರ್ಖತನವೊಂದನ್ನು ಬಿಟ್ಟರೆ, ಕೌಸಲ್ಯ ಮತ್ತು ನಾನು ಯಾವತ್ತೂ ಜಗಳಾಡಲಿಲ್ಲ ಎಂಬುದು ನನಗೆ ಹೊಳೆಯಿತು. ಇದನ್ನು ನಾನು ವಿವರಿಸಲಾರೆ. ಅವಳ ಬಗೆಗೆ ನನ್ನ ಮನಸ್ಸಿನಲ್ಲಿರುವ ಚಿತ್ರವೆಂದರೆ, ಅದು ಹುಲಿಸವಾರಿ ಮಾಡಿದಂತೆ, ಈ ಒಂದು ಅಂಶದಲ್ಲಿ ಸಂಗತಿಗಳು ಯಾವಾಗಲೂ ಕತ್ತಲೆಯಲ್ಲಿ ಮುಳುಗಿರುತ್ತವೆ. ಅವಳು ಹುಲಿಯೆ? ಅಥವಾ ಅವಳು ಹುಲಿ ಮೇಲೆ ಸವಾರಿ ಮಾಡುವ ಹೆಣ್ಣೆ? ಅಥವಾ ಅವಳೂ ಎರಡೂ ಹೌದೋ? ನಾನು ಅವಳಿಗೆ ಸೇರಿದವನಾಗಿದ್ದೆ. ನನ್ನನ್ನು ತನ್ನವನನ್ನಾಗಿ ಇಟ್ಟುಕೊಳ್ಳಲು ಅವಳು ನಾನು ಯಾರನ್ನು ಇಷ್ಟಪಟ್ಟರೆ ಅವರೊಂದಿಗೆ ನನ್ನನ್ನು ಹಂಚಿಕೊಳ್ಳುವಳು.

ಅವಳಿಲ್ಲದೆ ನಾನು ಅರಕ್ಷಿತನೆಂದೆನಿಸಿತು. ನನ್ನನ್ನೇ ನಾನು ಕಾಪಾಡಿಕೊಳ್ಳದಿದ್ದರೆ ನಾನು ಮಹಾರಾಜ್‌ಕುಮಾರನಾಗಿದ್ದು ಏನು ಬಂತು?

ಎಲ್ಲಿದ್ದೀಯೆ ನೀನು ಭೂತಾನಿ ಮಾತಾ? ಕೌಸಲ್ಯಳಿಗೆ ಏನು ಮಾಡಿದ್ದಿ?

* * *

ಆರನೇ ಭವಿತವ್ಯ: ದೆಹಲಿಯ ಬಾದಷಹ

ಸಂಗತಿಗಳು ಬದಲಾಗಬಹುದು. ಆದರೆ ಬಾಬರನು ಸುಲ್ತಾನ್ ಇಬ್ರಾಹಿಂ ಲೂದಿಯನ್ನು ಸೋಲಿಸಿ ದೆಹಲಿಯನ್ನು ವಶಪಡಿಸಿಕೊಂಡಾಗಿನಿಂದ, ಮೇವಾಡಕ್ಕೆ ವಾಸ್ತವವಾಗಿ ಇದ್ದ ಭವಿತವ್ಯವೊಂದೇ. ಮೊಗಲ್ ದೊರೆಯೊಂದಿಗೆ ನಮ್ಮ ಸಂಬಂಧವನ್ನು ಬೇರ್ಪಡಿಸಿಕೊಳ್ಳುವುದು. ನಮ್ಮ ಮಿತ್ರರಾಜ್ಯಗಳು ಹಾಗೂ ನಮ್ಮೆಲ್ಲಾ ಸಣ್ಣ ಮತ್ತು ದೊಡ್ಡ ಶತ್ರುಗಳಿಗೆಲ್ಲಾ ಇದು ಗೊತ್ತಿತ್ತು. ಅಕ್ಟೋಬರ್ ಹದಿನೇಳರಂದು ತಂದೆಯವರು ಮುಂದಿನ ಕಾರ್ಯ ಗತಿಯನ್ನು ನಿರ್ಧರಿಸಲು ಸಮಾಲೋಚನೆಗಾಗಿ ಯುದ್ಧ ಸಮಿತಿಯ ಸಭೆಗೆ ಬರಬೇಕೆಂದು ಎಲ್ಲ ಪ್ರಮುಖ ರಜಪೂತ, ಮುಸ್ಲಿಂ ಮತ್ತು ಭಿಲ್ ದೊರೆಗಳು ಮತ್ತು ರಾಜಕುಮಾರರನ್ನು ಆಹ್ವಾನಿಸಿದ್ದಾರೆ.

ಇಡೀ ರಜಪೂತರ ಒಕ್ಕೂಟ, ಅನೇಕ ಮುಸ್ಲಿಂ ಜಹಗೀರುದಾರರು, ಅಮೀರರು ಮತ್ತು ರಾಜರುಗಳು, ಬಾಬರನಿಗೆ ಅಷ್ಟೆಲ್ಲ ಪ್ರಾಮುಖ್ಯತೆಯನ್ನು ಅದೇಕೆ ಕೊಟ್ಟಿದ್ದರು ಮತ್ತು ಅವರ ಪ್ರದೇಶಕ್ಕೆ ಬೆದರಿಕೆ ಬರುವುದು ಅವನಿಂದಲೇ ಎಂದು ಅದೇಕೆ ಮನವರಿಕೆ ಮಾಡಿಕೊಂಡಿದ್ದರೆಂಬ ಪ್ರಶ್ನೆಗೆ ನಾನು ಸಮರ್ಪಕವಾಗಿ ಉತ್ತರಿಸಲಾರೆ. ತೀರ ಇತೀಚಿನವರೆಗೂ ಅವನೊಬ್ಬ ಪದಭ್ರಷ್ಟನಾದ ಕೇವಲ ಒಬ್ಬ ಸಣ್ಣ ದೊರೆ. ಅನೇಕ ಅಲೆದಾಟಗಳು ಮತ್ತು ಬದುಕಿನಲ್ಲುಂಟಾದ ಏರುಪೇರುಗಳ ನಂತರ ಅಷ್ಟೇನೂ ಮುಖ್ಯವಲ್ಲದ ಕಾಬೂಲ್‌ನ ಸಿಂಹಾಸನವನ್ನು ಪಡೆದುಕೊಂಡಿದ್ದನು. ದೆಹಲಿಗೂ ಅದಕ್ಕೂ ಏನಾದರೂ ಸಂಬಂಧವಿತ್ತೆ? ಪಾಣಿಪಟ್ ಕದನದಲ್ಲಾದ ದೆಹಲಿ ಸುಲ್ತಾನನ ಸೋಲು ಮತ್ತು ಸಾವು ಅವನ ಖ್ಯಾತಿಯನ್ನು ಹೆಚ್ಚಿಸಿತ್ತೆ ಹಾಗೂ ಅವನನ್ನು ನಮ್ಮ ಬದುಕುಗಳ ಕೇಂದ್ರ ಮತ್ತು ಕೇಂದ್ರ ಬಿಂದುವಾಗಿ ಮಾಡಿತ್ತೆ? ಅಥವಾ ಹಿಂದೂಸ್ತಾನವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು ಅವನ ಘೋಷಿತ ಹಕ್ಕಾಗಿತ್ತೆ ಅಥವಾ ಮತ್ತೆ ಮತ್ತೆ ಉಚ್ಚರಿಸುವ ಮಂತ್ರವಾಗಿತ್ತೆ? ಈ ಪ್ರಶ್ನೆಗಳಿಗೆ ಹಲವು ಉತ್ತರಗಳಿವೆ ಎಂದು ನನಗೆ ಖಚಿತವಾಗಿ ತಿಳಿದಿದೆ. ಇಷ್ಟಾದರೂ ಸಂಪೂರ್ಣವಾಗಿ ಮನವರಿಕೆಯಾಗುವಂಥ ಉತ್ತರವೊಂದನ್ನು ಯಾರಾದರೂ ಎಂದಾದರೂ ಕೊಡಬಲ್ಲರೆ ಎಂಬ ಬಗ್ಗೆ ನನಗೆ ಸಂದೇಹವಿದೆ.

ಮೊಗಲ್ ಬಾದಷಹನು ಪಯಣಗಳು, ಯುದ್ಧಗಳು, ಕಾಬೂಲ್‌ನಿಂದ ಹೋಗಬೇಕಾದ ಮತ್ತು ಕಾಬೂಲ್‌ಗೆ ಬರಬೇಕಾದ ಸುದ್ದಿಗಳು, ದೂರದ ರಾಜ್ಯಗಳಿಗೆ ರಾಯಭಾರಿಗಳ ನೇಮಕಾತಿಗಳು, ಇವುಗಳ ಚಿಂತೆಯಲ್ಲೇ ಮುಳುಗಿರುತ್ತಾನೆ. ಅವನ ಆಡಳಿತಾತ್ಮಕ ಕರ್ತವ್ಯಗಳು ಮುಪ್ಪಟ್ಟು ಆಗದಿದ್ದರೂ ದುಪ್ಪಟ್ಟಂತೂ ಆಗಿವೆ. ಈ ಕಾರಣಗಳಿಂದಾಗಿ ಅವನ ದಿನಚರಿಯಲ್ಲಿನ ಉಲ್ಲೇಖಗಳು ಪೂರ್ತಿಯಾಗಿ ಒಣಗಿ ಹೋಗಿರುತ್ತವೆ ಇಲ್ಲವೆ ಅಲಕ್ಷ್ಯಕ್ಕೀಡಾಗಿ ಬಿಟ್ಟಿರುತ್ತವೆ ಎಂದು ಯಾರಾದರೂ ನಿರೀಕ್ಷಿಸಿರುತ್ತಾರೆ. ಆದರೆ ಹಿಂದೂ ಕುಶ್ ಪರ್ವತದಲ್ಲಿನ ಅವನ ಪಕ್ಷಿಗಳ ಗೂಡಿಗಿಂತ ಕಡೇ ಪಕ್ಷ ಮುವ್ವತ್ತರಷ್ಟೋ, ಐವತ್ತರಷ್ಟೋ ಪಟ್ಟು ದೊಡ್ಡದಾದ ಸಾಮ್ರಾಜ್ಯವೊಂದನ್ನು ಗೆದ್ದುಕೊಳ್ಳುವುದು ಮತ್ತು ಸ್ವಾಧೀನ ಪಡಿಸಿಕೊಳ್ಳುವುದು ಸರಿಯಾಗಿ ವ್ಯತಿರಿಕ್ತ ಕಾಣುತ್ತದೆ. ಬಹುಶಃ ಅವನ ಬಳಿ ತಾನು ಹೇಳಿದ್ದನ್ನು ಟಿಪ್ಪಣಿ ಮಾಡಿಕೊಳ್ಳುವ ಮತ್ತು ಪ್ರತಿ ತೆಗೆಯುವ ಉಕ್ತ ಲೇಖಕರು ಮತ್ತು ಲಿಪಿಕಾರರು ಇಬ್ಬರಿಗಿಂತ ಹೆಚ್ಚಿರಬೇಕು.

ಹಿಂದೂಸ್ತಾನವು ಖಂಡಿತವಾಗಿಯೂ ಅವನ ಕುತೂಹಲವನ್ನು, ಅಲಕ್ಷ್ಯವನ್ನು, ಅಪಮಾನವನ್ನು ಹಾಗೂ ಆಶ್ಚರ್ಯ ಪ್ರಜ್ಞೆಯನ್ನು ಕೆರಳಿಸುತ್ತದೆ. ಈಗ ಅವನು ಮೊದಲಿಗಿಂತ ಹೆಚ್ಚು ಆತ್ಮ ವಿಶ್ವಾಸ ಉಳ್ಳವನಾಗಿ ಕಾಣುತ್ತಾನೆ. ಅದು ಸಕಾರಣವೂ ಹೌದು. ಆದರೆ,

ಅವನ ಸ್ವಪ್ರತಿಷ್ಠೆ ಅವನ ಜಾಣ್ಮೆಯನ್ನಾಗಲಿ ಅಥವಾ ಅವನ ಲಕ್ಷ್ಯದ ಮೊನಚನ್ನಾಗಲಿ ಮುಳುಗಿಸಿಲ್ಲ. ಅಲ್ಲದೆ ನಾನು ಕಂಡಿರುವಂತೆ ಎಂದಿನ ಹಾಗೆ ಅವನು ಭೂಗೋಳ ಮತ್ತು ಪ್ರಕೃತಿ ದೃಶ್ಯದ, ಜನಗಳ ಮತ್ತು ಅವರ ಅಭ್ಯಾಸಗಳು ಮತ್ತು ರೀತಿ ರಿವಾಜುಗಳ ಅತ್ಯಂತ ವಸ್ತು ನಿಷ್ಠ ವರದಿಗಾರ. ಆದರೆ ಈ ಬಗ್ಗೆ ಇನ್ಯಾವಾಗಲಾದರೂ ಹೆಚ್ಚಿನದನ್ನು ತಿಳಿಸುವೆ. ಮೇವಾಡಕ್ಕೆ ಈಗ ಕಾಳಜಿ ಇರುವುದು ಅವನ ಮನಃಸ್ಥಿತಿಯ ಬಗ್ಗೆ, ಅವನ ಕಂಠಧ್ವನಿಯ ಬಗ್ಗೆ ಹಾಗೂ ಪಾಣಿಪಟ್‌ನಲ್ಲಿ ಅವನು ಬಳಸಿದ ಯುದ್ಧ ತಂತ್ರದ ಕುರಿತಾಗಿ.

ಘಾಜ಼ಿಖಾನನ ವಿರುದ್ಧ ಲಘು ಸೇನಾ ಪಡೆಗಳನ್ನು ಕಳಿಸಿ ಕೊಟ್ಟ ಮೇಲೆ, ನಾನು ದೃಢ ನಿರ್ಧಾರದ ರಿಕಾಪಿನಲ್ಲಿ ಕಾಲಿಟ್ಟು, ದೇವರ ಮೇಲಿನ ನಂಬಿಕೆಯ ಲಗಾಮಿನ ಮೇಲೆ ನನ್ನ ಕೈಹಾಕಿ. ಸುಲ್ತಾನ್ ಇಬ್ರಾಹಿಂನ ವಿರುದ್ಧ ಚಲಾಯಿಸಿದೆನು. ಆ ಸಮಯದಲ್ಲಿ ಸುಲ್ತಾನ್ ಇಬ್ರಾಹಿಂನ ವಶದಲ್ಲಿ ರಾಜಧಾನಿ ದೆಹಲಿ ಮತ್ತು ಹಿಂದೂಸ್ತಾನದ ಆಧಿಪತ್ಯಗಳು ಇದ್ದುವು. ಅವನ ಸ್ಥಾಯಿ ಸೈನ್ಯವೆನ್ನುವುದು ಒಂದು ನೂರು ಸಾವಿರ (ಒಂದು ಲಕ್ಷ) ಅವನ ಸ್ವಂತ ಆನೆಗಳು ಮತ್ತು ಬೇರೆಯವರಿಂದ ಬೇಡಿ ಪಡೆದ ಆನೆಗಳು ಸುಮಾರು ಒಂದು ಸಾವಿರದಷ್ಟಿದ್ದುವು.

ಎಲ್ಲವೂ ಸಿದ್ಧವಾದಾಗ, ಸೈನಿಕ ವಿಷಯಗಳಲ್ಲಿ ಅನುಭವವಿದ್ದ ಎಲ್ಲರನ್ನೂ ; ತೀರ ಸಾಮಾನ್ಯರಿಂದ ಕೆಚ್ಚೆದೆಯ ಧೀರರವರೆಗೆ ಮಹಾ ಸಭೆಗೆ ಕರೆಸಲಾಯಿತು. ಎಲ್ಲರ ಅಭಿಪ್ರಾಯವನ್ನು ಪಡೆದು ಈ ನಿರ್ಣಯಕ್ಕೆ ಬರಲಾಯಿತು. ಪಾಣಿಪತ್ ಇರುವುದು ಮನೆಗಳಿಂದ, ಉಪನಗರಗಳಿಂದ ನಿಬಿಡವಾದ ಸ್ಥಳದಲ್ಲಿ, ಅದು ನಮ್ಮ ಒಂದು ಕಡೆಗಿರುತ್ತದೆ. ನಮ್ಮ ಇತರೆ ಪಾರ್ಶ್ವಗಳು, ಗಾಡಿಗಳು, ಗುಂಡಿನೇಟು ತಾಗದಂತೆ ಮಾಡುವ ರಕ್ಷಣೆಯ ತೆರೆಗಳು ಇವುಗಳಿಂದ ರಕ್ಷಿತವಾಗಿರಬೇಕು. ಅದರ ಹಿಂದೆ ನಮ್ಮ ಪದಾತಿ ಸೈನ್ಯ ಮತ್ತು ಬಂದೂಕನ್ನು (ಫಿರಂಗಿಯನ್ನು) ಹೊತ್ತಿಸುವ ಜನ ನಿಲ್ಲಬೇಕು. ಅಷ್ಟೆಲ್ಲ ಭದ್ರ ರಕ್ಷಣೆ ಏರ್ಪಡಿಸಿಕೊಂಡು ನಾವು ಮುಂದೆ ನಡೆದೆವು. ದಾರಿ ಮಧ್ಯದಲ್ಲಿ ಒಂದು ರಾತ್ರಿ ತಂಗಿದೆವು. ಏಪ್ರಿಲ್ 12, ರಂದು ಪಾಣಿಪತ್ ತಲುಪಿದೆವು.

ಬಾಬರನ ರಕ್ಷಣಾತ್ಮಕ ಯೋಜನೆಯನ್ನು ಹಾಗೂ ಅವನು ಸೈನ್ಯವನ್ನು ನಿಲ್ಲಿಸಿರುವ ರೀತಿ ಹಾಗೂ ಅವನ ಯುದ್ಧ ತಂತ್ರವನ್ನರಿಯಲು ನಾನು ಚಿತ್ರಗಳು ಮತ್ತು ರೇಖಾ ಚಿತ್ರಗಳನ್ನು ರಚಿಸಿದೆನು, ಅವನು ತನ್ನ ಸೈನ್ಯದಲ್ಲಿರುವ ಪ್ರತಿಯೊಬ್ಬರೂ ಗಾಡಿಗಳನ್ನು ಪಡೆದುಕೊಳ್ಳಬೇಕೆಂದು ಆದೇಶಿಸಿದ್ದನು. ಅಂತಿಮ ಲೆಕ್ಕಾಚಾರ ಏಳು ಸಾವಿರ ಗಾಡಿಗಳಿಗೆ ಬಂದು ನಿಂತಿತು. ಅದರ ಹಿಂದಿದ್ದ ಯೋಚನೆ ಎಂದರೆ ತೆರೆದ ಯುದ್ಧರಂಗವನ್ನು ಚಲಿಸುವ ಕೋಟೆಯೆಂದು ಪರಿಗಣಿಸಬೇಕೆಂಬುದು. ಬಂಡಿಗಳು ಮತ್ತು ಫಿರಂಗಿಯ ಗುಂಡು ತಾಕದಂತೆ ಯೋಜಿಸಿದ ಪೊದೆಗಳ ಅಥವಾ ಸಣ್ಣ ಮರಗಳ ಕೊಂಬೆಗಳನ್ನು ಪದಾತಿ ಸೈನ್ಯದ ಮುಂಭಾಗಕ್ಕೆ ರಕ್ಷಣೆಯ ತಡೆಗೋಡೆಯಂತೆ ನಿರ್ಮಿಸಲಾಗಿತ್ತು. ಬಾಬರನ ಸೇನಾ ಪಡೆಗಳನ್ನು ತರುಬಿ ಹಿಡಿಯ ಬೇಕೆಂದರೆ ಇಬ್ರಾಹಿಂ ಲೂದಿಯ ಸೈನಿಕರು ಆ ರಕ್ಷಣಾ ತಡೆಯನ್ನು ಭೇದಿಸಬೇಕಿತ್ತು. ಈ ನಡುವೆ ದೆಹಲಿಯ ಅಶ್ವ ಪಡೆ ಮತ್ತು ಪದಾತಿ ಸೈನ್ಯ ಹೆಚ್ಚು ಸಾವು ನೋವಿಗೆ ಈಡಾಗುತ್ತಿತ್ತು. ಬಾಬರನು ಪಾಣಿಪತ್ ಪಟ್ಟಣ ಮತ್ತು ಅದರ ಉಪನಗರಗಳನ್ನು

ಅಭೇದ್ಯ ಭಿತ್ತಿಯಂತೆ ಬಳಸುವ ಮೂಲಕ ಸರಿಯಾದ ರಕ್ಷಣಾತ್ಮಕ ತಡೆಗೋಡೆಯನ್ನಾಗಿ ಮಾಡಿಕೊಂಡು ಬಿಟ್ಟಿದ್ದನು. ತನ್ನ ಎಡಭಾಗದಲ್ಲಿ ಹಾಗೂ ಇತರೆಲ್ಲೆಡೆಗಳಲ್ಲಿ ಬಾಬರನು ಹೊಂಡಗಳನ್ನು ತೋಡಿಸಿದ್ದನು. ಬಾಣದ ನೆಗೆತಗಳ ಅಂತರದಲ್ಲಿ, ನೂರಿನ್ನೂರು ಕುದುರೆ ಸವಾರರು ದೃಢ ಸಂಕಲ್ಪ ಮಾಡಿಕೊಂಡು ಸಾಗಿ ಹೋಗುವಷ್ಟು ಜಾಗಪಿತ್ತು. ಇದೆಲ್ಲ ತುಂಬ ಆಸಕ್ತಿ ಉಂಟುಮಾಡುವಂಥದಷ್ಟೇ ಅಲ್ಲ. ಕಣ್ತೆರೆಸುವಂಥದೂ ಆಗಿತ್ತು. ಸುಲ್ತಾನ್ ಇಬ್ರಾಹಿಂ ಲೂದಿಯ ಹಾಗೂ ನಮ್ಮ ರಕ್ಷಣಾ ತಂತ್ರದಿಂದ ಟರ್ಕಿಯ ರಕ್ಷಣ ತಂತ್ರ ಎಲ್ಲಿ ಭಿನ್ನವಾಗಿತ್ತೆಂದರೆ, ಯುದ್ಧರಂಗದ ಪ್ರತಿ ಬಿಂದುವಿಗೂ ಅದು ರಕ್ಷಣೋಪಾಯಗಳನ್ನು ವಿಸ್ತರಿಸಿದ್ದರಲ್ಲಿ. ಉದಾಹರಣೆಗೆ ಅವನು ತೋಡಿಸಿದ್ದ ಹೊಂಡ ಕೋಟೆಯ ಸುತ್ತ ಇರುವ ಕಂದಕವೇ ಆಗಿತ್ತು.

"ಸುಲ್ತಾನ್ ಇಬ್ರಾಹಿಮನ ಮುಖದ ಮೇಲೆ ಮೊದಲಿಗೆ ಕಪ್ಪು ಕಾಣಿಸಿಕೊಂಡಾಗಿನಿಂದ, ಅವನು ವೇಗವಾಗಿ ನೇರವಾಗಿ ಎಲ್ಲೂ ನಿಲ್ಲದೆ ನಮ್ಮೆಡೆಗೆ ಸಾಗಿ ಬಂದನು. ನಮ್ಮ ಕಡೆಯ ಸೈನಿಕರ ದೊಡ್ಡ ಕಪ್ಪು ಪಡೆ ಕಣ್ಣಿಗೆ ಬೀಳುವವರೆಗೂ ನಿಲ್ಲಲಿಲ್ಲ. ಆಗ ಅಲ್ಲಿ ನಿಂತು ನಮ್ಮ ಸೇನಾ ರಚನೆ ಮತ್ತು ವ್ಯೂಹವನ್ನು ಗಮನಿಸಿ "ನಿಲ್ಲುವುದೋ ಇಲ್ಲವೋ" 'ಮುನ್ನುಗ್ಗುವುದೋ ಬಿಡುವುದೋ' ಎಂದು ಕೇಳುವವನಂತೆ ಮುಖಭಾವ ಮಾಡಿದನು. ಅವರು ನಿಲ್ಲಲಾಗಲಿಲ್ಲ. ಮೊದಲಿನ ಹಾಗೆ ಅವರಿಗೆ ವೇಗವಾಗಿ ಧಾವಿಸಿ ಹೋಗುವುದೂ ಆಗಲಿಲ್ಲ.

"ಆಕ್ರಮಣವೆಸಗುವ ಪಡೆಗಳಿಗೆ ನಮ್ಮ ಆದೇಶವಿದ್ದದ್ದು ಎಡದಿಂದ ಮತ್ತು ಬಲದಿಂದ ಶತ್ರುವಿನ ಹಿಂಭಾಗಕ್ಕೆ ತಿರುಗಿ ಬಾಣಗಳನ್ನು ಪ್ರಯೋಗಿಸಿ ಯುದ್ಧದಲ್ಲಿ ತೊಡಗಬೇಕೆಂಬುದಾಗಿತ್ತು. ಎಡಗಡೆಯ ಮತ್ತು ಬಲಗಡೆಯ ಪಡೆಗಳಿಗೆ ಮುನ್ನುಗ್ಗಿ ಅವನೊಂದಿಗಿನ ಯುದ್ಧದಲ್ಲಿ ಸೇರಿಕೊಳ್ಳಬೇಕೆಂದಾಗಿತ್ತು. ಮಹಮ್ಮದಿ ಕುಕುಲ್‌ದಷ್, ಷಾಮನ್‌ಸೂರ್ ಬರ್ಲಾಸ್, ಯೂಮಸ್-ಇ-ಆಲಿ ಮತ್ತು ಅಬ್ದುಲ್ಲಾ ಅವರುಗಳಿಗೆ ಕೇಂದ್ರದ ಮುಂಭಾಗದಲ್ಲಿರುವವರೊಂದಿಗೆ ಹೋರಾಡಲು ಆದೇಶ ನೀಡಲಾಗಿತ್ತು. ಅದೇ ಜಾಗ ಉಸ್ತಾದ್ ಆಲಿ-ಕುಲಿ- ಫಿರಂಗಿಗಳನ್ನು ಸರಿಯಾಗಿ ಗುರಿಯಿಟ್ಟು ಹಾರಿಸಿದನು, ಸೇನಾಧಿಕಾರಿ ಮುಸ್ತಾಫಾ ಕೇಂದ್ರ ಭಾಗದ ಎಡಗಡೆಯಿಂದ ಉತ್ಕೃಷ್ಟವಾದ ಝರ್ಬ್ ಝಾನ್ ಹೊಡೆತಗಳನ್ನು ಮಾಡಿದನು. ಬಲ ಎಡ ಮತ್ತು ಕೇಂದ್ರದಲ್ಲಿದ್ದ ನಮ್ಮ ಆಕ್ರಮಣ ಪಡೆಗಳು ಶತ್ರುವನ್ನು ಸುತ್ತುವರಿದು, ಮನಃಪೂರ್ವಕವಗಿ ಶತ್ರುವಿನ ಮೇಲೆ ಬಾಣಗಳ ಸುರಿ ಮಳೆಯನ್ನೇ ಕರೆದುವು... ದೇವರ ಕೃಪೆಯಿಂದ ಈ ಕಷ್ಟವಾದ ಕಾರ್ಯ ನಮ್ಮ ಪಾಲಿಗೆ ತುಂಬ ಸುಲಭವಾಗಿ ಆಗಿ ಬಿಟ್ಟಿತು. ಕೇವಲ ಅರ್ಧ ದಿನದಲ್ಲಿ ಆ ಶಸ್ತ್ರ ಸಜ್ಜಿತ ಸೇನಾಪಡೆಯನ್ನು ಮಗ್ಗುಲು ಮಲಗಿಸಲಾಯಿತು. ಒಂದೇ ಸ್ಥಳದಲ್ಲಿ ಐದಾರು ಸಾವಿರ ಜನರು ಇಬ್ರಾಹಿಮನ ಅತಿ ಸಮೀಪದಲ್ಲೇ ಕೊಲ್ಲಲ್ಪಟ್ಟರು. ಯುದ್ಧರಂಗದ ಇತರೆ ಎಲ್ಲ ಕಡೆ ಮಡಿದು ಉರುಳಿ ಬಿದ್ದಿದ್ದ ಸೈನಿಕರ ಸಂಖ್ಯೆ ನಮ್ಮ ಅಂದಾಜಿನ ಪ್ರಕಾರ ಹದಿನೈದರಿಂದ ಹದಿನಾರು ಸಾವಿರ. ಆದರೆ ಆ ನಂತರ ಹಿಂದುಸ್ತಾನೀಯರು ಹೇಳಿದ ಪ್ರಕಾರ ತಿಳಿದು ಬಂದದ್ದೆಂದರೆ ನಲವತ್ತು ನಲವತ್ತೈದು ಸಾವಿರ ಜನ ಆ ದಿನದ ಯುದ್ಧದಲ್ಲಿ ಸತ್ತಿರಬಹುದು."

ಫಿರಂಗಿ ಮತ್ತು ಝರ್ಬ್‌ಝಾನ್, ಅಂತಿಮವಾಗಿ ಹೊಸ ತಂತ್ರಜ್ಞಾನಕ್ಕೆ ನಾನು ಮುಖಾಮುಖಿಯಾದೆ. ನಮ್ಮಂತಲ್ಲದೆ ಬಾಬರನು ಮದ್ದನ್ನು ಹಚ್ಚುವಂಥ ಬಂದೂಕುಗಳನ್ನು ಮಾಮೂಲಾಗಿ ಬಳಸುತ್ತಿದ್ದುದಷ್ಟೇ ಅಲ್ಲದೆ ಯುದ್ಧರಂಗದಲ್ಲಿ ಸಾಗಿಸಲು ಅನುಕೂಲವಾದ ಹಗುರ ಫಿರಂಗಿಗಳನ್ನು ಬಳಸುತ್ತಿದ್ದನು. ಆ ಕಾರಣಕ್ಕಾಗಿಯೇ ಆ ಅದ್ಭುತ ಹೆಸರಿನ ಶಬ್ದಗಳು ಮಹತ್ವ ಪೂರ್ಣವಾಗಿದ್ದುವು. ಅವುಗಳನ್ನು ಎರಕ ಹೊಯ್ಯುವುದು ಹಾಗಿರಲಿ,

ವಿದೇಶದಿಂದ ಅವುಗಳನ್ನು ಕೇವಲ ಕೊಂಡು ಅಲ್ಲಿಂದ ತರಿಸುವುದಕ್ಕೆ ಕಡೇ ಪಕ್ಷ ಒಂದು ಅಥವಾ ಒಂದೂವರೆ ವರ್ಷ ಆಗುತ್ತೆ. ಈಗ, ಕಾಲಮಿತಿ ಕುರಿತು ಯೋಚಿಸುವುದರಲ್ಲಿ ಅರ್ಥವೇ ಇಲ್ಲ. ಬಹಳ ಮುಖ್ಯವಾದ ವಿಷಯವೆಂದರೆ. ಅದನ್ನು ನಮಗೆ ಮಾರುವವರು ಯಾರು ಎಂದು ಪತ್ತೆ ಹಚ್ಚುವುದು ಮತ್ತು ತಕ್ಷಣ ಅವನ್ನು ಒದಗಿಸಲು ಆದೇಶ ನೀಡುವುದು. ಈ ವಿಷಯದಲ್ಲಿ ಲಕ್ಷ್ಮಣ ಸಿಂಹಜಿಯವರು ನನ್ನ ಸಂಗಾತಿ. ಪೋರ್ಚುಗೀಸರು ಮತ್ತು ಪರ್ಶಿಯನ್ನರನ್ನು ಈ ಬಗ್ಗೆ ವಿಚಾರಿಸಲು ಅವರು ಮಂಗಳನಿಗೆ ಹೇಳಿದ್ದಾರೆ.

ಇದನ್ನು ನಮಗೆ ಸರಬರಾಜು ಮಾಡಲಿಚ್ಛಿಸುವುವರಿಂದ ಕಡೇ ಪಕ್ಷ ಆರು ಫಿರಂಗಿಗಳನ್ನು ಕೊಳ್ಳಲು ಮಂಗಳನಿಗೆ ತಿಳಿಸಲಾಗಿದೆ.

ಇದುವರೆಗೆ ಬಾದಷಹನ ದಿನಚರಿಯ ಹಾಳೆಗಳಲ್ಲಿ ನನ್ನ ಕಣ್ಣಿಗೆ ಬಿದ್ದ ವಿಚಿತ್ರ ಟಿಪ್ಪಣಿ ಇಲ್ಲಿದೆ.

ನಾವಿನ್ನೂ ಕಾಬೂಲ್‌ನಲ್ಲಿದ್ದಾಗ, ರಾಣಾ ಸಂಗನು ತನ್ನ ಶುಭಾಶಯಗಳನ್ನು ರುಜುವಾತುಪಡಿಸಲು ಮತ್ತು ಯೋಜನೆಯೊಂದರ ಪ್ರಸ್ತಾಪವನ್ನು ಮುಂದಿಡಲು ರಾಜಪ್ರತಿನಿಧಿಯೊಬ್ಬನನ್ನು ಕಳಿಸಿದ್ದನು. ಆ ಪ್ರಸ್ತಾಪ "ಗೌರವಾನ್ವಿತ ಬಾದಷಹರು ದೆಹಲಿಯ ಕಡೆ ಬರುವುದಾದಲ್ಲಿ ನಾನು ಈ ಕಡೆಯಿಂದ ಆಗ್ರಾ ಕಡೆ ಬರುತ್ತೇನೆ". ಆದರೆ ನಾನು ಇಬ್ರಾಹಿಂನನ್ನು ಸೋಲಿಸಿ ದೆಹಲಿ ಮತ್ತು ಆಗ್ರಾಗಳನ್ನು ವಶಪಡಿಸಿಕೊಂಡೆನು. ಇಲ್ಲಿಯವರೆಗೂ ಆ ಮುಸ್ಲಿಮೇತರ ಕ್ಷುದ್ರ ಧರ್ಮಿ ಸ್ವಲ್ಪವೂ ಕದಲುವ ಸೂಚನೆಯನ್ನೇ ನೀಡಿಲ್ಲ".

ಈ ಒಂದು ನಮೂದನ್ನು ನಾನು ನಂಬ ಬೇಕಾಗಿತ್ತೆ? ಒಂದು ವೇಳೆ ನಂಬಿದರೆ, ಬಾಬರನನ್ನು ಕುರಿತಂತೆ ಇದುವರೆಗಿನ ನನ್ನ ಅನುಭವ ಮತ್ತು ಅಭಿಪ್ರಾಯವೆಂದರೆ ಬಾಬರನು ಕಟ್ಟು ಕಥೆಗಳನ್ನು ಕಟ್ಟುವಂಥವನಲ್ಲ ಎಂದಿರುವ ಕಾರಣ ತಂದೆಯವರ ಬಗ್ಗೆ ಯಾರಾದರೂ ಏನೆಂದು ತಿಳಿಯಬೇಕು? ಅವನ ಉದ್ದೇಶಗಳೇನಿರಬಹುದು? ಇದರಿಂದ ಯಾವ ರೀತಿಯ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂಬುದು ಅವನ ನಿರೀಕ್ಷೆಯಾಗಿತ್ತು?

ನನ್ನ ಹಿಂದಿನ ಅನೇಕ ಪೂರ್ವಜರು ಮತ್ತು ರಜಪೂತ ಸೋದರರು ನಂಬಿದ್ದ ಹಾಗೆ "ನನ್ನ ಶತ್ರುವಿನ ಶತ್ರು ಮಿತ್ರ" ಎಂಬುದನ್ನು ಅವರು ನಿಜಕ್ಕೂ ನಂಬಿದ್ದರೆ? ಅವರೆಲ್ಲ ತಮ್ಮನ್ನು ಅದೆಷ್ಟು ಘೋರವಾಗಿ ತಪ್ಪಾಗಿ ತಿಳಿಯಲಾಗಿತ್ತೆಂದು ನಿಸ್ಸಂಶಯವಾಗಿ ಕಂಡುಕೊಂಡರಲ್ಲವೆ? ಮೇವಾಡದ ರಾಣಾ ಅವರು ಕೇವಲ ಯುದ್ಧದ ಕೊಡುಗೆಯನ್ನು ಭಾಗ ಮಾಡಿಕೊಳ್ಳಬಹುದೆಂಬ, ಅಷ್ಟೇ ಅಲ್ಲ ಬಹುಶಃ ದೆಹಲಿ ಸುಲ್ತಾನಿಯತ್ತನ್ನು ಕೂಡ ಭಾಗ ಮಾಡಿಕೊಳ್ಳಬಹುದೆಂಬ ಭರವಸೆಯಿಂದ ವಿದೇಶೀಯನೊಬ್ಬನನ್ನು ಹಿಂದೂಸ್ತಾನಕ್ಕೆ ಆಹ್ವಾನಿಸಲು ಇಚ್ಛಿಸುತ್ತಿದ್ದಾರೆಯೆ? ಈ ಪ್ರದೇಶದಲ್ಲಿ ಅವರದು ಅತ್ಯಂತ ಪ್ರಬಲ ಸಾಮ್ರಾಜ್ಯ. ಲಂಪಟನೂ ಅವನತ ಸ್ಥಿತಿಯಲ್ಲಿರುವವನೂ ಆಗಿದ್ದ ಇಬ್ರಾಹಿಂ ಲೂದಿಗೆ ದೆಹಲಿ ಸುಲ್ತಾನಿಯತ್ ಮೇಲಿನ ಹಿಡಿತ ಶೀಘ್ರವಾಗಿ ಕೈ ಜಾರಿ ಹೋಗುತ್ತಿತ್ತು. ಇಂಥದ್ದರಲ್ಲಿ ಅವನನ್ನು ಇಳಿಸಲು ಬಾಬರನ ಸಹಾಯವನ್ನು ಪಡೆದುಕೊಳ್ಳುವುದು ಅಗತ್ಯ ಎನ್ನುವಮಟ್ಟಿಗೆ ಅವರಲ್ಲಿ ಆತ್ಮವಿಶ್ವಾಸವಿಲ್ಲವಾಯಿತೆ? ಆದರೆ ಅದರಲ್ಲಿ ವಿವರಣೆಗೆ ಸಿಕ್ಕದ್ದು ಇನ್ನೂ ಹೆಚ್ಚಾಗಿಯೇ ಇದೆ. ನಿಮ್ಮ ಕ್ರಿಯೆಯಿಂದ ಅದನ್ನು ಬೆಂಬಲಿಸುವ ಉದ್ದೇಶವಿಲ್ಲದಿದ್ದರೆ, ಆಹ್ವಾನವನ್ನಾದರೂ ಏಕೆ ನೀಡಬೇಕು? ಅಪರಿಚಿತ ದೊರೆಯೊಬ್ಬನನ್ನು ಕೆಟ್ಟ ರೀತಿಯ ಪ್ರತೀಕಾರದ ಶತ್ರುವನ್ನಾಗಿ ಪರಿವರ್ತಿಸುವ ಖಚಿತ ವಿಧಾನವದು ಎಂಬುದು ಯಾರಿಗಾದರೂ ಸ್ಪಷ್ಟವಾಗಿ ತಿಳಿಯುತ್ತದೆ.

ಆದರೆ ಆ ಕೃತ್ಯ ಈಗ ಆಗಿ ಹೋಗಿದೆ. ಅಷ್ಟೊಂದು ನೀರು ಈಗಾಗಲೇ ಸೇತುವೆಯ ಕೆಳಗೆ ಹರಿದಿದೆ.

ಆಗ್ರಾದಲ್ಲಿ ಅಸಂತುಷ್ಟ ಬಂಡುಕೋರರಿಗೇನೂ ಕೊರತೆಯಿಲ್ಲ. ನಗರದಲ್ಲಿರುವ ಮಂಗಳನ ನಿಯೋಗಿಗಳ ಕಡೆಯಿಂದ ಬಾಬರನ ಆಸ್ಥಾನದಿಂದ ನಂಬಲರ್ಹವಾದ ಸುದ್ದಿಯನ್ನು ಪಡೆದುಕೊಳ್ಳಲು ನಮಗೇನೂ ಕೊರತೆಯಿಲ್ಲ. ಪ್ರತಿ ಸೋಮವಾರ ಬೆಳಿಗ್ಗೆ, ಕೆಲವೊಮ್ಮೆ ವಾರದ ಮಧ್ಯದಲ್ಲೂ, ಉದ್ಧೃತ ವಾಕ್ಯಗಳು, ವಿಶ್ಲೇಷಣೆಗಳು, ವರಮಾನದ ಅಂಕಿ ಅಂಶಗಳು, ಸೇನಾ ಚಲನವಲನಗಳು, ಯಾರು ನಮ್ಮ ಪರ, ಯಾರು ನಮ್ಮ ಪರವಲ್ಲ, ಮೇವಾಡಕ್ಕೆ ಸಂಬಂಧಿಸಿದಂತೆ ಆಗ್ರಾದಲ್ಲಿ ಯಾವ ರೀತಿಯ ಚಿಂತನೆ ಮತ್ತು ಚರ್ಚೆಗಳು ನಡೆಯುತ್ತಿವೆ ಎಂಬೆಲ್ಲಾ ವರದಿಗಳನ್ನು ಮಂಗಳನು ಕಳಿಸುತ್ತಾನೆ. ಒಂದಂತೂ ಸ್ಪಷ್ಟ. ಬಾಬರ್ ನಮ್ಮ ಬಗ್ಗೆ ತೀವ್ರವಾದ ದ್ವೇಷವನ್ನು ಹೊಂದಿದ್ದಾನಾದರೆ, ಅದೃಷ್ಟವಶಾತ್ ಅವನು ತನ್ನ ಈ ಹೊಸ ನೆಲೆಯಲ್ಲಿ ಅನೇಕ ತೊಂದರೆಗಳಲ್ಲಿ ಮುಳುಗಿದ್ದಾನೆ. ರೈತವರ್ಗ ಮತ್ತು ಹಿಂದಿನ ಸೈನಿಕವರ್ಗಕ್ಕೆ ಬಾಬರ್ ಮತ್ತು ಅವನ ಕಡೆಯವರೆಂದರೆ ಹೆದರಿಕೆ. ಅದಕ್ಕಿಂತ ಮುಖ್ಯವಾದ್ದೆಂದರೆ, ದಿವಂಗತ ಸುಲ್ತಾನನ ಸೇವೆಯಲ್ಲಿದ್ದ ಪ್ರತಿಯೊಬ್ಬ ಆಫ್‌ಘನ್ ಅಮೀರನೂ ಬಾದಷಹನೊಂದಿಗೆ ಗುಟ್ಟಾಗಿ ಇಲ್ಲವೆ ಬಹಿರಂಗವಾಗಿ ಬಂಡಾಯವೆದ್ದಿದ್ದಾನೆ. ಬಾಬರನ ಮಗ ಹುಮಾಯೂನನು ಹೆಚ್ಚು ತಂಟಿಕೋರ ಬಂಡಾಯಗಾರರನ್ನು ಮಣಿಸಲು ಈಗಾಗಲೇ ಪೂರ್ವದ ಜನ್‌ಪುರಕ್ಕೆ ದಂಡೆತ್ತಿ ಹೋಗಿದ್ದನು. ಇದೆಲ್ಲವೂ ಒಳ್ಳೆಯದಕ್ಕೇ. ಎಷ್ಟು ಸಾಧ್ಯವೋ ಅಷ್ಟು ಯುದ್ಧರಂಗದಲ್ಲಿ ಸಾಗಿಸಲು ಅನುಕೂಲವಾದ ಫಿರಂಗಿಗಳನ್ನು ಪಡೆದುಕೊಳ್ಳಲು, ಕಡೇ ಪಕ್ಷ ಹತ್ತು ಸಾವಿರ ಮದ್ದನ್ನು ಹಚ್ಚುವಂಥ ಬಂದೂಕುಗಳನ್ನು ಕೊಳ್ಳಲು ಹಾಗೂ ಅವುಗಳನ್ನು ಬಳಸುವುದರಲ್ಲಿ ನಮ್ಮ ಜನರಿಗೆ ತರಬೇತಿ ನೀಡಲು ನಮಗೆ ಕಾಲಾವಕಾಶ ಬೇಕಾಗಿದೆ. ಅದೂ ಅಲ್ಲದೆ, ಬಾಬರನ ಯುದ್ಧ ತಂತ್ರಗಳಿಗೆ ಪ್ರತಿಯಾಗಿ. ಆಕ್ರಮಣ ಮಾಡುವ ಮತ್ತು ರಕ್ಷಣೆ ಮಾಡಿಕೊಳ್ಳುವ ತಂತ್ರ ಕೌಶಲಗಳನ್ನು ಕುರಿತಂತೆ ನಾವು ಬಹು ಮುಖ್ಯವಾದ ಪುನರಾಲೋಚನೆ ಮಾಡಬೇಕಾಗಿದೆ.

ಆದರೆ ಶಕುನಗಳು ಸರಿಯಾಗಿಲ್ಲ. ಮೇವಾಡದ ಶತ್ರುಗಳಿಗೆ ಸಲ್ಲಿಸಬೇಕಾದ್ದನ್ನು ಸಲ್ಲಿಸಿ ಅವರಲ್ಲಿ ಅತ್ಯಂತ ದುರ್ಬಲನಾದವನನ್ನೂ ಗಂಭೀರವಾಗಿ ಪರಿಗಣಿಸುವುದು ನನ್ನ ಪದ್ಧತಿ. ಬಾಬರನು ಹೇಗೂ ಅದ್ವಿತೀಯನಷ್ಟೆ. ಅವನ ದಿನಚರಿಯ ಬರಹಗಳಿಂದ ಅವನ ಸಣ್ಣಪುಟ್ಟ ಸಂಗತಿಗಳು ಗೊತ್ತಾಗುತ್ತ ಹೋದಂತೆ ಅವನನ್ನು ಮೆಚ್ಚುವುದಷ್ಟೇ ಅಲ್ಲ; ಅವನನ್ನು ಗೌರವಿಸತೊಡಗಿದೆ. ಅವನೊಬ್ಬ ಒಳ್ಳೆಯ ಮಿತ್ರ ಹಾಗೂ ಒಬ್ಬ ಯೋಗ್ಯ ಶತ್ರುವಾಗಬಲ್ಲ ವ್ಯಕ್ತಿ ಎನಿಸಿತು. ಆದರೆ ಕಳೆದ ಕೆಲವು ತಿಂಗಳಲ್ಲಿ ಅವನು ನನ್ನ ಮನಸ್ಸನ್ನು ಕಲಕುವಂಥ ಮುಖಗಳನ್ನು ತೋರತೊಡಗಿದನು. ಇವು ನಿಸ್ಸಂದೇಹವಾಗಿ ಅವನ ನಂಬಿಕೆಯ ಪರಿಣಾಮ. ಆದರೆ, ನಂಬಿಕೆಯೆನ್ನುವುದು ಅದರಲ್ಲೂ ದೊರೆಯಾಗಿದ್ದ ಪಕ್ಷದಲ್ಲಿ ವಿವೇಕದಿಂದ ಹದಗೊಳ್ಳಬೇಕು. ಹಿಂದೂಸ್ತಾನಕ್ಕೆ ಬಂದಾಗಿನಿಂದ ಬಾಬರನ ಭಾಷೆ ಆಮೂಲಾಗ್ರವಾಗಿ ಬದಲಾಗಿದೆ. ನಮ್ಮೊಂದಿಗೆ ಯುದ್ಧದ ವಿಷಯ ಮಾತನಾಡುವಾಗ ಮಾತ್ರ ಅವನು ಪವಿತ್ರ ಯುದ್ಧದ ಬಗ್ಗೆ ಮತ್ತೆ ಮತ್ತೆ ಮಾತನಾಡುತ್ತಾನೆ. ಹಾಗಾದರೆ ಇಬ್ರಾಹಿಂ ಲೂದಿ ಮತ್ತು ಇತರೆ ಎಲ್ಲಾ ಷಿಯಾ ಮತ್ತು ಸುನ್ನಿ ಮುಖಂಡರೊಂದಿಗೆ ಅವನು ಮಾಡಿದ ಯುದ್ಧಗಳನ್ನು ಏನೆಂದು ಕರೆಯಬೇಕು. ರಾಜರುಗಳು ಮತ್ತು ಸುಲ್ತಾನರೊಂದಿಗೆ ಮಾಡಿದ ಯುದ್ಧಗಳನ್ನು ಹೆಸರಿಸುವುದೇ ಬೇಡ.

ತಾನು ಗೆದ್ದ ಜನತೆಯನ್ನು ಕುರಿತಂತೆ ಕೇವಲ ತಿರಸ್ಕಾರ ಹೊಂದಿದ್ದರೆ, ಹಾಗೂ ಬಾಬರನ ಮಾತಿನಲ್ಲಿ ಹೇಳುವುದಾದರೆ ಅವನು ಬಯಸುವುದು ವಿಗ್ರಹಾರಾಧಕರ ದೇವರುಗಳನ್ನು ನಾಶಮಾಡಬೇಕೆನ್ನುವುದೊಂದೇ ಆದರೆ ಅದು ವಿಷಾದನೀಯ. ಅದು

ಉದ್ದೇಶಿತ ಪರಿಣಾಮಕ್ಕೆ ವಿರುದ್ಧವಾದದ್ದನ್ನುಂಟು ಮಾಡುತ್ತದೆಂದು ಹೇಳಲೇಬೇಕಿಲ್ಲವಷ್ಟೇ. ಈ ಮಾರ್ಗವನ್ನನುಸರಿಸಿದ್ದೇ ಆದರೆ, ಪರಾಜಿತ ಪ್ರಜೆಗಳನ್ನು ನಿನ್ನದೇ ಪ್ರಜೆಗಳಂತೆ ಎಂದಿಗೂ ಕಾಣುವುದಿಲ್ಲ ಹಾಗೂ ತಂದೆಯು ಕಾಳಜಿ ವಹಿಸಬೇಕಾದಂತೆ, ಕಾಳಜಿ ವಹಿಸಬಯಸುವುದಿಲ್ಲ. ದೊರೆಯಾದವನು ಪ್ರಬಲನಾಗಿರಬೇಕೆಂದಾದರೆ, ತನ್ನ ಪ್ರಜೆಗಳಿಗೆ ಅವನು ಹತ್ತಿರವಾಗಿರಬೇಕು. ತಮ್ಮ ಜಾತಿ, ಮತ ಪಂಥಗಳ ಪರಿವೆಯಿಲ್ಲದೆ ಅವರೆಲ್ಲರೂ ಅವನೇ ತಮ್ಮ ಕತ್ತಿ ಮತ್ತು ಗುರಾಣಿ ಎಂದು ಭಾವಿಸಬೇಕು. ಇವೆಲ್ಲವೂ ಹೊಸ ವಿಷದ ಹಲ್ಲುಗಳ ವಿಚಾರಗಳು ಎಂದು ಯಾವನಾದರೂ ತಿಳಿದರೆ ಅವನೊಬ್ಬ ಮೂರ್ಖ. ಯಾರೇ ವಿವೇಕಿಯಾದ ಮುಖಂಡನು ಇದು ಕೇವಲ ಸ್ವಹಿತಾಸಕ್ತಿ ಎಂದು ಹೇಳುತ್ತಾನೆ. ಕಾರಣ ವಿಭಜನೆಯಲ್ಲಿ ಸಾಮ್ರಾಜ್ಯ ವಿನಾಶದ ಬೀಜಗಳು ಅಡಗಿವೆ ಎಂದು ಹೇಳುತ್ತಾನೆ.

ಭಾರತದ ಮೇಲೆ ಇದ್ದಕ್ಕಿದ್ದಂತೆ ಮಾಡಿದ ಮೊದಲ ಧಾಳಿಗಳಲ್ಲಿ ಒಂದಾದ ಬಿಜಾಪುರದ ಮೇಲಿನ ಧಾಳಿಯ ಸಂದರ್ಭದಲ್ಲೂ ಬಾಬರನು ತಾನು "ಧಾರ್ಮಿಕ ನಂಬಿಕೆಯ" ರಕ್ಷಕನೆಂದೇ ತಿಳಿದನು. ತನ್ನ ಪೂರ್ವಜನಾದ ತೈಮೂರನ ಹಾದಿಯನ್ನೇ ಹಿಡಿದು ನಗರದ ಜನರನ್ನು ಹೊರಸೆಳೆದನು. ಪೂರ್ವ ದಿಕ್ಕಿನ ಕಡೆಗೆ ತಪ್ಪಿಸಿಕೊಂಡು ಹೋಗಲು ಸಮರ್ಥರಾದ ಕೆಲವರನ್ನು ಬಿಟ್ಟು ಎಲ್ಲರನ್ನೂ ಕೊಚ್ಚಿ ಹಾಕಿದನು. ಹಾಗೆ ತಪ್ಪಿಸಿಕೊಂಡು ಹೋದವರು ನಿಜವಾದ ನಂಬಿಕೆ ಉಳ್ಳವರಾಗಿರಲಿಲ್ಲ. ಈಗಂತೂ ದೆಹಲಿಯ ಸಿಂಹಾಸನವನ್ನೇರಿರುವುದರಿಂದ, ದೇವರ ಹೆಸರಿನಲ್ಲಿ ಸೇಡು ತೀರಿಸಿಕೊಳ್ಳುವ ಮಹಮ್ಮದೀಯ ಧರ್ಮಾಧನಂತೆ ಬಿಂಬಿಸಿಕೊಳ್ಳುತ್ತಿದ್ದಾನೆ. 'ಪ್ರತೀಕಾರಿ' ಎಂಬುದು ವಿಚಿತ್ರ ಶಬ್ದ. ಯಾರ ಮೇಲೆ ತಾನು ತನ್ನ ಕಣ್ಣನ್ನೇ ಎಂದೂ ನೆಟ್ಟಿಲ್ಲವೋ ಯಾರೊಂದಿಗೆ ಯಾವುದೇ ಸಾಮಾಜಿಕ ಅಥವಾ ವಾಣಿಜ್ಯ ಸಂಬಂಧವನ್ನೇ ಹೊಂದಿಲ್ಲವೋ ಅಂಥ ನಾಸ್ತಿಕರ ಮೇಲೆ ಯಾವ ಅಸೌಜನ್ಯ ಮತ್ತು ಕುಂದು ಕೊರತೆಗಾಗಿ ಬಾಬರನು ಸೇಡು ತೀರಿಸಿಕೊಳ್ಳ ಬಯಸುತ್ತಾನೆ? ನಮ್ಮ ಒಂದೇ ಅಪರಾಧ, ಆಕಸ್ಮಿಕದಿಂದ ಆದುದೆಂದೆನಿಸುತ್ತದೆ. ಅದೆಂದರೆ ನಾವು ಬೇರೆ ಧಾರ್ಮಿಕ ನಂಬಿಕೆಯಲ್ಲಿ ಜನ್ಮ ತಳೆದವರು.

ಸುಲ್ತಾನ್ ಇಬ್ರಾಹಿಂ ಲೂದಿಯ ಮೇಲೆ ವಿಜಯವನ್ನು ಗಳಿಸಿದಂದಿನಿಂದ, ಬಾದಷಹನು ದೇವಸಾನಗಳನ್ನು ನೆಲಸಮ ಮಾಡಿ, ಅದೇ ಜಾಗದಲ್ಲಿ ಮಸೀದಿಗಳನ್ನು ನಿರ್ಮಿಸುತ್ತಿದ್ದಾನೆ, ಅಥವಾ ಕಾಲ ಮತ್ತು ಹಣದ ಕೊರತೆ ಇದೆಯೆಂದಾದರೆ, ಹಿಂದೂ ಪೂಜಾ ಸ್ಥಾನಗಳನ್ನು ಇಸ್ಲಾಮಿಗೆ ಪರಿವರ್ತಿಸುತ್ತಿದ್ದಾನೆ. ಅದರ ಬಗ್ಗೆ ವಿಶೇಷವಾದ್ದೇನಿಲ್ಲ. ಭಾರತದ ಮೇಲೆ ಮೊದಲು ದಾಳಿ ಮಾಡಿದಾಗಿನಿಂದ, ಮುಸ್ಲಿಮರು ನಮ್ಮ ದೇವಸ್ಥಾನಗಳ ವಿಷಯದಲ್ಲಿ ಏನು ಮಾಡುತ್ತಿದ್ದಾರೋ, ಬೌದ್ಧರ ಪವಿತ್ರ ಸ್ಥಳಗಳ ವಿಷಯದಲ್ಲಿ ಹಾಗೂ ಮಸೀದಿಗಳ ವಿಷಯದಲ್ಲಿ ನಾವು ಅದನ್ನೇ ಮಾಡಿದ್ದೇವೆ.

ಇದು ನಿಜಕ್ಕೂ ಬದುಕಿನ ಅತ್ಯಂತ ದೊಡ್ಡ ನಿಗೂಢಗಳಲ್ಲೊಂದು. ಪರಾಜಿತಗೊಂಡ ಜನರ ಮತಧರ್ಮದ ನಂಬಿಕೆಯ ಅದೇ ಆವರಣಗಳನ್ನೇ ವಶಪಡಿಸಿಕೊಳ್ಳಬೇಕೆಂಬ ಅತಿಯಾದ ಗೀಳಿನ ಹಂಬಲ ಏಕೆ? ಏನೇ ಆದರೂ, ಬೌದ್ಧ ಧರ್ಮ ಮತ್ತು ಹಿಂದೂ ಧರ್ಮಗಳ ಸಂಬಂಧ ಪರಸ್ಪರ ವೈರುಧ್ಯದಿಂದ ಕೂಡಿರಬಹುದು, ಆದರೆ ಒಂದು ಮತ್ತೊಂದನ್ನು ಕಳಂಕಿತ ಇಲ್ಲವೆ ಅಪವಿತ್ರ ಎಂದು ಭಾವಿಸುವುದಿಲ್ಲ. ಆದರೆ ಇಸ್ಲಾಮಿಗೆ ಹಿಂದೂ ದೇವರುಗಳ ದೇವಾಲಯಗಳಷ್ಟು ಹೆಚ್ಚು ಅಪವಿತ್ರವಾದ್ದು ಬೇರಿನ್ನೇನಿದ್ದೀತು?

ವಿಜಯಿಯಾದವನು ಇನ್ನೊಂದು ಧಾರ್ಮಿಕ ನಂಬಿಕೆಗೆ ಸೇರಿದವರ ಭೌಗೋಳಿಕ ಪ್ರದೇಶವನ್ನು ಬಲವಂತದಿಂದ ವಶಪಡಿಸಿಕೊಳ್ಳುತ್ತಾನೆ; ಆ ಜಾಗಕ್ಕೆ ಸಹಜವಾಗಿ ಬಂದಿರುವ

ಪಾವಿತ್ರ್ಯದ ಗುಣವಿರುವ ಕಾರಣ ಅದನ್ನು ತಾನು ಬಳಸಿಕೊಳ್ಳುವುದು ಅವನ ಉದ್ದೇಶ ಎಂದು ಹೇಳುವುದನ್ನ ನಾನು ಕೇಳಿದ್ದೇನೆ. ಈ ತರ್ಕಕ್ಕೊಂದು ಹುರುಳಿರುವಷ್ಟೇ ಅದಕ್ಕೊಂದು ಕುತರ್ಕವೂ ಇದೆ. ಬಹುಶಃ ತೀರಾ ಸರಳವಾದೊಂದು ವಿವರ ಸಾಕಾಗಬಹುದು. ಅದು ಕ್ರೂರ ಅಧಿಕಾರದ ನಗ್ನ ಪ್ರತಿಪಾದನೆ. ಹಳೆಯ ಪದ್ಧತಿ ಸತ್ತಿದೆ ಎಂದು ವಿಜೇತೃ ಸಂಕೇತಿಸುತ್ತಿದ್ದಾನೆ. ಹಾಗೂ ನೂತನ ಪ್ರಭು ಯಾರೆಂದು ನೂತನ ಪ್ರಜೆಗಳಿಗೆ ತಿಳಿಸುತ್ತಿದ್ದಾನೆ.

ಅಧ್ಯಾಯ 39

ಒಬ್ಬನೇ ಒಬ್ಬ ಪುರುಷನಿದ್ದಾನೆ ಅವನ ಹೆಸರು ಶ್ರೀಕೃಷ್ಣ

ಸುಗಂಧಭರಿತ ಹೊಂದಿಗಿನ ಗೊಂದಲದ ರಾತ್ರಿ, ಅವನು ನೇರವಾಗಿ ಕಿರಿಯ ಸಂತಳ ಕೊಠಡಿಗೆ ಹೋದನು.

"ನೀವು ಎಲ್ಲಿ ಹೋಗಿದ್ದಿರಿ?" ಎಂದು ಅವಳು ಅವನ ತೋಳನ್ನು ಹಿಡಿದು ಅಲುಗಾಡಿಸಿದಳು. ಅವಳು ಅಸಹನೆಯ ರೋಷದಲ್ಲಿ ಕುದಿಯುತ್ತಿದ್ದಳು. ಹಾಗಾಗಿ ಮಾತಾಡಲು ಕಷ್ಟಪಡುತ್ತಿದ್ದಳು. "ನಾನು ಹೇಗೆ ನರಳುವ ಹಾಗೆ ಮಾಡ್ತೀರಿ ನೀವು? ನೀವು ಅದು ಹೇಗೆ ಅಷ್ಟೊಂದು ಕ್ರೂರಿ ಮತ್ತು ಹೃದಯ ಹೀನರಾಗಬಲ್ಲಿರಿ?"

ಅವನು ಬರುವುದು ತಡಮಾಡಿದ್ದನೆ? ಕಳೆದ ರಾತ್ರಿ, ತಮ್ಮ ರಹಸ್ಯ ಭೇಟಿಗೆ ಸಮಯವನ್ನೇನೂ ನಿಗದಿಪಡಿಸಿಕೊಂಡಿರಲಿಲ್ಲ. ಯಾವತ್ತೂ ಅವರು ನಿಗದಿಪಡಿಸಿಕೊಂಡಿರಲಿಲ್ಲ. ಈ ಎಲ್ಲಾ ರಾತ್ರಿಗಳಂದೂ ಮಾಡಿದಂತೆಯೇ, ಅವನಿಗೆ ತಿಳಿದಂತೆ, ಅವನು ಹೆಚ್ಚು ಕಡಿಮೆ ಅದೇ ಸಮಯಕ್ಕೆ ಬಂದಿದ್ದನು. ಒಂದು ಅಥವಾ ಎರಡು ನಿಮಿಷ ಹೆಚ್ಚು ಅಥವಾ ಕಡಿಮೆ ಆಗಿರಬಹುದು.

'ಏನು ವಿಷಯ?'

'ನೀವು ಕೇಳಬೇಕು'

ಅದೇನು ಶ್ರೀ ಕೃಷ್ಣಜನ್ಮಾಷ್ಟಮಿಯೆ? ಇರಲಾರದು. ಹಾಗಿದ್ದಿದ್ದರೆ, ಇಡೀ ಚಿತ್ತೂರೇ ಆಚರಿಸುತ್ತಿತ್ತು

ಅವನು ಬುದ್ಧಿ ಶೂನ್ಯನಂತೆ ಕಣ್ಣು ಕಣ್ಣು ಬಿಡುತ್ತಿದ್ದಿರಬೇಕು. ಕಾರಣ ಅವಳೀಗ ಕೋಪಗೊಂಡಿದ್ದಳು.

"ನೀವು ಮರೆತು ಬಿಟ್ಟಿದ್ದೀರಿ. ನಿಜಕ್ಕೂ ನೀವು ಮರೆತು ಬಿಟ್ಟಿದ್ದೀರಿ". ಅವನ ಪಾದಗಳ ಮೇಲೆ ತನ್ನ ಪಾದದಿಂದ ಬಲವಾಗಿ ಒತ್ತಿದಳು.

"ಅದು ಹೋಳಿ ಹಬ್ಬ".

ಬಿರುಸಾಗಿ ಸಿಡಿಯುವ ಸರಪಟಾಕಿಯ ಹಾಗೆ ಅವನಲ್ಲಿ ಎಚ್ಚರಿಕೆಯ ಗಂಟೆಗಳು ಮೊಳಗಿದವು. ಅದು ಹೇಗೆ ಅವನ ನೆನಪಿನಿಂದ ತಪ್ಪಿಸಿಕೊಂಡಿತು?

ತನ್ನ ಕಣ್ಣುಗಳನ್ನವನು ಪಂಚಾಂಗಕ್ಕೆ ಕೀಲಿಸಿರಬೇಕೆಂದು ಆತ್ಮ ರಕ್ಷಣೆ ಮಾತ್ರ ಅವನಿಗೆ ಆಜ್ಞಾಪಿಸಿರಬೇಕಿತ್ತು. ಏನು ಮಾಡ ಹೊರಟಿದ್ದನವನು? ಅವರು ಕುಂಭಲ್‌ಗರ್‌ನಲ್ಲಿದ್ದಾಗ ಅವಳ ಕೊಠಡಿಗೆ ಅವನು ಕಾಲಿಟ್ಟ ಮೊದಲ ದಿನದಿಂದ ವಸಂತೋತ್ಸವದ ಯೋಚನೆ ಅವನ ಮನಸ್ಸಿನಲ್ಲಿತ್ತು. ಅವನು ಹೆದರುತ್ತಿದ್ದುದು ಬಣ್ಣದ ಪುಡಿಗಲ್ಲ; ಆದರೆ ಬಣ್ಣದನೀರಿಗೆ. ಪಿತ್ತಾಳೆಯ ಪಿಚಕಾರಿಯಿಂದ ಅವನ ಮೈಮೇಲೆ ಸಿಂಚನ ಮಾಡುತ್ತಿದತೆ ಅವನ ಚರ್ಮದ ನೀಲಿಬಣ್ಣ ಸೋರಿ ಕೆಳಗಿಳಿದು ಅವನನ್ನು ಬೆತ್ತಲೆಗೊಳಿಸಿ ಬಯಲು ಮಾಡಿದ್ದನ್ನು ಅವನು ನೋಡಬಹುದಿತ್ತು. ಅವನೂ ಅವಳತ್ತ ನುಗ್ಗಿ ಆಕ್ರಮಣ ಮಾಡಿ ಅವಳ ಮೈಗೆಲ್ಲ ಕುಂಕುಮ (ಬಣ್ಣ), ಹಳದಿ (ಬ), ನೇರಳೆ, ಹಸಿರು ಮತ್ತು ಊದಾ ಬಣ್ಣದ ಪುಡಿಯನ್ನು ಬಳಿದು ಅದನ್ನೇ ಒಂದಿಷ್ಟು ಕಣ್ಣುಗಳಿಗೂ ತೂರಿ ಅಲ್ಲಿಂದ ತಪ್ಪಿಸಿಕೊಂಡು ಬಿಡಬೇಕೆ?

“ಅಲ್ಲಾಡದೆ ನಿಂತುಕೊಂಡು, ಈ ಕುಪ್ಪಸವನ್ನು ತೊಟ್ಟುಕೊಳ್ಳಿ”. ಅದರಲ್ಲೇನೂ ಅನುಮಾನ ಉಳಿಯಲಿಲ್ಲ. ನಿಜಕ್ಕೂ ಅವಳ ಮನಸ್ಸು ಅವಳ ಕೈಯಲಿಲ್ಲ. “ನಾನು ಯಾತಕ್ಕೆ ಕುಪ್ಪಸವನ್ನು ತೊಟ್ಟುಕೊಳ್ಳಬೇಕು?”

“ಏಕೆ ಅಂದರೆ ನೀವು ಈ ಹೊತ್ತು ಹೆಣ್ಣು. ಅದು ಅಷ್ಟು ಸರಳ”

“ಜಗತ್ತಿನಲ್ಲಿರುವುದು ಒಬ್ಬನೇ ಒಬ್ಬ ಪುರುಷ. ಅದು ನೀಲಮೇಘ ಶ್ಯಾಮ. ಉಳಿದವರೆಲ್ಲರೂ ಸ್ತ್ರೀಯರು ಎಂದು ರೂಪಾಗೋಸ್ವಾಮಿಗೆ ನೀನು ಹೇಳಲಿಲ್ಲವೆ?”

“ಗಂಡಸರು ಮತ್ತು ಹೆಂಗಸರಿಗೆ ಲಿಂಗಗಳಿವೆ. ದೇವರುಗಳು ಎರಡೂ ಹೌದು. ಅದೇ ಕಾರಣಕ್ಕೆ ಅರ್ಧನಾರೀಶ್ವರನ ಹಾಗೆ ನೀವು ಸ್ತ್ರೀ ಮತ್ತು ಪುರುಷ ಎರಡೂ. ಬೇರೆಲ್ಲರಿಗಿಂತಲೂ ನಿಮಗದು ಚೆನ್ನಾಗಿ ಗೊತ್ತಿರಬೇಕು.”

“ಅದಕ್ಕೆ ಅರ್ಥವಿಲ್ಲ”

ಜೀವನಕ್ಕೇನೂ ಉದ್ದೇಶವಿಲ್ಲ. ಅನಿಶ್ಚತತೆಯೇ ಬದುಕಿನ ಸಾರ. ಅಥವಾ ಸಂದಿಗ್ಧತೆಯೇ ಬದುಕಿನ ತಿರುಳು. ಅದೂ ಅಲ್ಲದೆ ನಿಮ್ಮ ಪ್ರಿಯ ಗೋಪಿಕೆ ರಾಧಾಳೊಂದಿಗೆ ನೀವು ಇರುವಾಗ ಸ್ತ್ರೀ ವೇಷವನ್ನು ಧರಿಸುವುದರಿಂದ ನಿಮಗೇನೂ ಸಮಸ್ಯೆಯಾಗದು. ಈ ರಾಧೆ ಮತ್ತು ಆ ರಾಧೆ. ನಿಮ್ಮ ಹೆಸರು ಕೂಡಾ ರಾಧಾಕೃಷ್ಣ ಎಂದು ಬದಲಾಗುತ್ತದೆ”.

ಬೇರೆ ಮಾರ್ಗವೇ ಇಲ್ಲ. ಕುಪ್ಪಸವನ್ನು ತೊಟ್ಟುಕೊಳ್ಳುವುದರ ಹೊರತು ಖಂಡಿತವಾಗಿಯೂ ಇನ್ನಾವ ಮಾರ್ಗವೂ ಇಲ್ಲ. ಅವನೊಬ್ಬ ರಾಜಕುಮಾರ. ಬಹುಶಃ ನಿಶ್ಚಿತ ಉತ್ತರಾಧಿಕಾರಿಯೂ ಹೌದು. ಮೇವಾಡದ ಮಹಾರಾಜ್ ಕುಮಾರ್, ಅನ್ಯ ಲಿಂಗದವರಂತೆ ಉಡುಪು ಧರಿಸುವುದನ್ನು ಬಯಸುವ ವ್ಯಕ್ತಿ ಎಂದು ನೀವು ಕಲ್ಪಿಸಿಕೊಳ್ಳಬಲ್ಲಿರಾ? ಏರುಪೇರಿನ ಮತ್ತು ಡೋಲಾಯಮಾನ ಸ್ಥಿತಿಯಲ್ಲಿರುವ ಅವನ ಅದೃಷ್ಟವೂ ಈಗಾಗಲೇ ಅವನ ಮಹತ್ವಾಕಾಂಕ್ಷೆಗಳಿಗೆ ಅವನಿಂದ ಬೆಲೆ ಕಕ್ಕಿಸಿಲ್ಲದಿದ್ದರೆ, ಈ ಹೊಸ ನಿರಿಗೆ. ಖಂಡಿತವಾಗಿಯೂ ಅವನ ಹಣೆ ಬರಹವನ್ನು ನಿರ್ಧರಿಸಿ ಬಿಡುತ್ತದೆ.

ತಾನೊಬ್ಬ ಮೂರ್ಖ ಎಂದು ಅವನು ತನಗೆ ತಾನೆ ಹೇಳಿಕೊಂಡನು. ಅದೊಂದು ಸಂಚು ಎಂದು ಅವನು ಇಷ್ಟು ವರ್ಷವೂ ಅರ್ಥಮಾಡಿಕೊಳ್ಳದಿದ್ದುದು ಹೇಗೆ? ಅವನ ಹೆಂಡತಿ ನಿಜಕ್ಕೂ ವಿಕ್ರಮಾದಿತ್ಯ ಮತ್ತು ರಾಣಿ ಕರ್ಮವತಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾಳೆಯೆ? ಒಂದೊಂದಾಗಿ ತುಣುಕುಗಳು ಒಮ್ಮೆಗೇ ಕಳಚಿ ಬೀಳ ತೊಡಗಿದವು. ರಾಜಕುಮಾರಿ ಮತ್ತು ರಾಣಿ ಇಬ್ಬರೂ ಸೇರಿ ತೀರ ಮೊದಲಿಂದಲೂ ಒಂದು ಸಂಚು ಹೂಡಿದ್ದರು. ಅದೂ ಮಹಾರಾಜ್‌ಕುಮಾರನನ್ನು ಆಕೆ ಮದುವೆಯಾದ ಸಮಯದಿಂದಲೇ.

ರಾಣಿ ಕರ್ಮವತಿಯು ರಾಜಕುಮಾರಿಯನ್ನು ದ್ವೇಷಿಸುವ ಸೋಗು ಹಾಕಿದ್ದಳು. ಆದರೆ ಅವರಿಬ್ಬರೂ ಪರಸ್ಪರ ಕೈ ಹಿಡಿದುಕೊಂಡೇ ಕೆಲಸ ಮಾಡುತ್ತಿದ್ದರು. ಹೆಂಡತಿಯಾಗಿ ಅವನನ್ನು ನೆಲಗೊಳಿಸುವಂತೆಯೇ ಪ್ರತಿಯೊಂದು ಹಂತದಲ್ಲಿಯೂ ಅವನಿಗೆ ಅವಮಾನ ಮತ್ತು ಅವನನ್ನು ಮೇವಾಡದ ಪ್ರಥಮ ದರ್ಜೆಯ ಸತಿನಿಷ್ಠೆ ವಂಚಿತ ಪತಿ ಎಂದು ಮಾಡಿ ರಾಣಾನ ಮನೆಗೆ ಸಾರ್ವಜನಿಕರ ಕಡೆಯಿಂದ ಅಪಖ್ಯಾತಿ ಬರುವಂತೆ ಮಾಡಿ, ರಾಣಿ ಅವಳ ರಕ್ತಕ್ಕಾಗಿ ಹುಯ್ಯಲಿಡುತ್ತ ಬೇಕೆಂದೇ ಅಸೂಕ್ಷ್ಮವಾದ ರೀತಿಯಲ್ಲಿ ರಾಜಕುಮಾರಿಯ ಶತ್ರುವಿನ ಪಾತ್ರವನ್ನು ನಿರ್ವಹಿಸಿದಳು. ಅದರ ಉದ್ದೇಶ ಅದು ಅವಳ ಸಾರ್ವಜನಿಕ ವ್ಯಕ್ತಿತ್ವಕ್ಕೆ ಅನುಗುಣವೆಂಬಂತೆಯೇ ತೋರುತ್ತಿದ್ದು ಅವಮರ್ಯಾದೆಯತ್ತ ಜಾರುವುದನ್ನು ಇನ್ನಷ್ಟು ತೀವ್ರಗೊಳಿಸಿತು. ಈಗ ಅವನ ಹೆಂಡತಿ ಅಂತಿಮ ಹಾಗೂ ಮಾರಣಾಂತಿಕ ಹೊಡೆತವನ್ನು ಕೊಡಲು ಹೊರಟಿದ್ದಳು. ಅದೆಂದರೆ ಏಕಾಂತ ಕೋಣೆಯ ರಾಣಿಯನ್ನಾಗಿ ಬಯಲು ಮಾಡ ಹೊರಟಿದ್ದಳು. ಉಳಿದದ್ದನ್ನು ಕರ್ಮವತಿ ಮಾಡುವಳು. ಈ ಬಾರಿ ಅವನು ಶಾಶ್ವತವಾಗಿ ದೊರೆತನವನ್ನು ಕಳೆದುಕೊಂಡು ಬಿಡುವನು.

ಅವಳು ಅವನ ಬಲಗೈಯನ್ನು ಹಿಡಿದುಕೊಂಡು ಅವನ ತೋಳನ್ನು ಕುಪ್ಪಸದೊಳಕ್ಕೆ ಸರಿಸಿದಳು. ಆಮೇಲೆ ಎಡಗೈಯನ್ನು ಹಾಗೆಯೇ ರವಿಕೆಯೊಳಕ್ಕೆ ಸರಿಸಿದಳು. 'ಹಿಂದೆ ತಿರುಗಿ' ಎಂದು ಹೇಳಿ ಹಿಂಭಾಗ ಪೂರ್ತಿ ತೆರೆದಿದ್ದ ಚೋಲಿಯ ದಾರಗಳನ್ನು ಸೇರಿಸಿ ಗಂಟು ಹಾಕಿ. ಅವನನ್ನು ಪೂರ್ವಭಾವಿಯಾಗಿ ಒಮ್ಮೆ ಪರೀಕ್ಷಿಸಿದಳು. "ಎಲ್ಲ ಸರಿಯಾಗಿದೆ ಅನ್ನಿಸುತ್ತೆ. ನಿಮಗೇನನ್ನಿಸುತ್ತೆ?" ಅವಳು ಅವನ ಉತ್ತರಕ್ಕೆ ಕಾಯಲಿಲ್ಲ. "ತಾಳಿ, ತಾಳಿ ಒಂದು ನಿಮಿಷ. "ಯಾವುದೂ ಸರಿಯಾದ ಕ್ರಮದಲ್ಲಿಲ್ಲ. ಎಲ್ಲ ತಪ್ಪಾಗಿದೆ". ರವಿಕೆಯ ಗಂಟನ್ನು ಜಗ್ಗಿ ಎಳೆದು ರವಿಕೆಯನ್ನು ಕಿತ್ತೆಸೆದಳು. ಕೊಠಡಿಯಿಂದ ಆಚೆ ಓಡಿ ಹೋಗಿ ಒಂದು ಹರಿತವಾದ ಕತ್ತಿಯನ್ನು ತಂದಳು. ಏನವಳು ಅವನ ತಲೆಯನ್ನು ನುಣ್ಣಗೆ ಬೋಳಿಸಲು ಹೊರಟಿದ್ದಳೆ? ಕತ್ತಿಯ ಅಲಗಿನ ಮೇಲೆ ತನ್ನ ತೋರು ಬೆರಳಾಡಿಸಿ ಅದರ ಹರಿತವನ್ನು ಪರೀಕ್ಷಿಸಿದಳು. ಅನಂತರ ಅತ್ಯಂತ ವೇಗವಾಗಿ ಕತ್ತಿಯನ್ನೋಡಿಸಿ. ಅವನ ತೋಳಿನ ಮೇಲೆ ಕಂಕುಳಿನ ಕೆಳಗೆ, ಎದೆಯ ಮೇಲೆ ಮತ್ತು ಹಿಂಭಾಗದಲ್ಲಿ ಕ್ಷೌರ ಮಾಡಿದಳು.

"ಇದೇನು ಮಾಡ್ತಿದ್ದೀ ನೀನು?" ಅವನು ಅಪನಂಬಿಕೆಯಿಂದ ಪಿಸುಗುಟ್ಟಿದನು.

ಅವಳು ಅವನೊಂದಿಗೆ ಗಡುಸಾಗಿ "ಹೆಂಗಸಾದವಳಿಗೆ ಅದು ಹೇಗೆ ಕೂದಲು ಇರಬಾರದ ಜಾಗದಲ್ಲಿ ಕೂದಲು ಇರಲು ಸಾಧ್ಯ?"

ಅವಳ ಕೈ ಹಗುರವಾಗಿತ್ತು. ಆದರೂ ತನ್ನ ಶರೀರದಿಂದ ಮಾಂಸದ ತುಣುಕುಗಳನ್ನು ಕತ್ತರಿಸಿ ತೆಗೆದು ಬಿಡುವಳೇನೋ ಎಂಬಂತೆ ಹತೋಟಿಗೆ ಸಿಗದಂತೆ ಕೈಗಳನ್ನು ಎಳೆದುಕೊಂಡನು.

"ಏನದು? ನೀವೇಕೆ ಹಾಗೆ ನಡುಗುತ್ತಿದ್ದೀರಿ" ಅವಳು ಮೃದುವಾಗಿ ತನ್ನ ಕೈಯನ್ನು ಅವನ ದೇಹದ ಮೇಲಾಡಿಸಿ ಅವನನ್ನು ಸಂತೈಸಿದಳು. ಈಗ ಅವಳು ಅವನ ಧೋತಿಯನ್ನು ಕಳಚಿದಳು. ಅವಳ ಮುಂದೆ ಬೆತ್ತಲೆ ನಿಂತಿದ್ದನು. ಅವನು ಎಂದೂ ಅಷ್ಟೊಂದು ಅವಮಾನಿತನಾಗಿರಲಿಲ್ಲ. ಗುಜರಾತಿನ ಸೈನಿಕ ಕಾರ್ಯಾಚರಣೆಯಿಂದ ಅವನು ಮತ್ತು ಅವನ ಸೇನಾಪಡೆಗಳು ಹಿಂತಿರುಗಿದಾಗ ಚಿತ್ತೂರಿನ ಜನಗಳು ಅವನನ್ನು ಕುರಿತಂತೆ ತಿರಸ್ಕಾರದಿಂದ ಲೇವಡಿಯ ಮಾತುಗಳನ್ನಾಡಿದಾಗಲೂ ಅವನು ಅಷ್ಟೊಂದು ಅವಮಾನಿತನಾಗಿರಲಿಲ್ಲ. ನಗರದ ಪ್ರಮುಖ ಮಾರ್ಗಗಳಲ್ಲಿ ಅವಳು ತನ್ನನ್ನು ಮೆರವಣಿಗೆ ಮಾಡಿಕೊಂಡು ಕರೆದುಕೊಂಡು ಹೋಗಲು ಉದ್ದೇಶಿಸಿದ್ದಾಳೋ ಹೇಗೆ ಎಂದು ಅವನಿಗೆ

ಸೋಜಿಗವಾಯಿತು. ಅಥವಾ ತನ್ನನ್ನು ಪೂರ್ತಿ ಹೆಣ್ಣಾಗಿಸಲು ತನ್ನ ಶಿಶ್ನವನ್ನು ಕತ್ತರಿಸಿ ಹಾಕುವಳೋ ಹೇಗೆ? ಅವಳು ಅವನ ಕಿಬೊಟ್ಟೆಯ ಮೇಲೆ ಕತ್ತಿಯನ್ನು ಜಾರಿಸಿದಳು. ಅವನ ಕುಂಡಿಗಳ ಮೇಲಿದ್ದ ತ್ರಿಕೋಣಾಕಾರದ ಕೂದಲ ಪಟ್ಟಿಯ ಮೇಲೆ ಆ ನಂತರ ಕಾಲುಗಳ ಮೇಲಿನ ಕೂದಲುಗಳ ಮೇಲೆ ಕತ್ತಿಯನ್ನು ಸವರಿದಳು. ಏನು ಮಾಡುತ್ತಿದ್ದಾಳವಳು? ಅದಕ್ಕಿಂತ ಮುಖ್ಯವಾಗಿ ಅವನೇನು ಮಾಡುತ್ತಿದ್ದಾನೆ? ಅವನೇಕೆ ಅವಳ ಕೈಯಿಂದ ಕತ್ತಿಯನ್ನು ಥಟ್ಟನೆ ಕಿತ್ತುಕೊಂಡು ಅವಳ ಕೈಯನ್ನೇಕೆ ಕತ್ತರಿಸಿ ಹಾಕಲಿಲ್ಲ?

ಈಗ ಅವನಿಗೆ ಬಟ್ಟೆ ತೊಡಿಸಬೇಕಾದ ಸಮಯ. ಮೊದಲಿಗೆ ಮೃದುವಾದ ಢಾಕಾ ರೇಷ್ಮೆಯ ಒಳಪದರವನ್ನು ಹೊಂದಿದ್ದ ಕಪ್ಪು ಬಣ್ಣದ ರೇಷ್ಮೆಯ ಒಳಲಂಗ. ಆ ಮೇಲೆ ಕೆಂಪು ಮತ್ತು ಕಪ್ಪು ಬಣ್ಣದ, ಕಟ್ಟುವ ರವಿಕೆ. ಅಂತಿಮವಾಗಿ ಒಂದು ಕೆಂಪು ಹೊದಿಕೆ. ಬಣ್ಣದಲ್ಲಿ ಅವಳಿಗೆ ಒಳ್ಳೆಯ ಅಭಿರುಚಿ ಇತ್ತೆಂದು ಅವನು ಒಪ್ಪಿಕೊಳ್ಳಬೇಕಿತ್ತು. ತನ್ನ ಒಡವೆಗಳ ಪೆಟ್ಟಿಗೆಯನ್ನು ತಂದಳು. ಅವನ ಬೈತಲೆ ತೆಗೆದಳು. ಚಿನ್ನದ ಸರದ ಮೀನಾಕಾರದ ಪದಕ ಹಣೆಯ ಮೇಲೆ ನೇತಾಡುವ ಹಾಗೆ ಅವನ ಬೈತಲೆಯಲ್ಲಿ ಒಂದು ಚಿನ್ನದ ಸರವನ್ನು ಸಿಕ್ಕಿಸಿದಳು. ಅವನ ಉಡುಪಿನ ಬಣ್ಣಗಳಿಗೆ ಹೊಂದುವಂತಹ, ಕಪ್ಪು, ಕೆಂಪು ಮತ್ತು ಚಿನ್ನದ ಬಣ್ಣದ ಗಾಜಿನ ಬಳೆಗಳನ್ನು ತೊಡಿಸಿದಳು. ಆ ಬಳೆಗಳನ್ನು ತನ್ನ ಬೆರಳಿನ ಗೆಣ್ಣುಗಳಿಂದಾಚೆಗೆ ಅವಳಿಗೆ ತೊಡಿಸಲು ಸಾಧ್ಯವಾಗುವುದಿಲ್ಲವೆಂದು ಅವನಿಗೆ ಖಾತರಿ ಇತ್ತು. ಆದರೆ ಅವನೆಣಿಕೆ ತಪ್ಪಾಗಿತ್ತು. ಸುನೇರಿಯಾಳಂತೆ ಅವಳ ಕೈ ಮತ್ತು ಮಣಿಕಟ್ಟುಗಳು ಕೂಡ ಮೂಳೆ ರಹಿತವಾದವು. ಕೈ ಮತ್ತು ಮಣಿ ಕಟ್ಟುಗಳನ್ನು ಮೆಲ್ಲಗೆ ನೀವುತ್ತ ಬಳೆಗಳನ್ನು ಮೇಲಕ್ಕೆ ಏರಿಸಿ ಬಿಡುವುದೆಂಬುದು ಅನಂತರ ಹೊಳೆದದ್ದು ಎಂಬಂತೆ ನಟಿಸಿದಳು. ಕಾಲಂದುಗೆಗಳನ್ನು ತೊಡಿಸುವುದು ಅಷ್ಟು ಕಷ್ಟವಾಗಲಿಲ್ಲ. ಎರಡನ್ನೂ ಒಟ್ಟಾಗಿ ಜೋಡಿಸಿ, ಲಂಗವನ್ನು ಮೇಲೆತ್ತಿ ಅವನ ಪಾದಗಳ ಮೇಲಕ್ಕೆ ಕಟ್ಟಿದಳು.

"ನೀನೆಷ್ಟು ಮುದ್ದಾಗಿ ಕಾಣಿಸುವೆ"

ಅವಳು ಮುಂದೆ ಹಿಡಿದ ಕನ್ನಡಿಯಲ್ಲಿ ಅವನು ತನ್ನ ಪ್ರತಿಬಿಂಬವನ್ನು ನಿಟ್ಟಿಸಿ ನೋಡಿದನು. ಮಟ್ಟಸವಾಗಿಲ್ಲದ ವಿಕಾರವಾದ ನೀಲಿ ಮತ್ತು ಹೊರಗೆ ಅಂಟಿಕೊಂಡಿರುವ ಕೆಂಬಣ್ಣದ ತುಟಿಗಳು ಹಾಗೂ ಸಮತಲವಾದ ಕುಚಗಳನ್ನು ಹೊರತುಪಡಿಸಿದರೆ, ಬಹು ಸುಲಭವಾಗಿ ಯಾರಾದರೂ ಅವನನ್ನು ಹೆಣ್ಣು ಎಂದು ಒಪ್ಪಬಹುದಿತ್ತು.

ಅವಸರವಸರದಲ್ಲಿ ಅವಳು ತಾನು ಉಟ್ಟಿದ್ದ ಉಡುಪುಗಳನ್ನು ಕಳಚಿಹಾಕಿದಳು. ಈಗೇನು? ಅವನ ಕಣ್ಣುಗಳಲ್ಲಿನ ಗಲಿಬಿಲಿಗೊಂಡ ನೋಟವನ್ನು ಕಂಡಾಗ ಅವಳು ಜೋರಾಗಿ ಗಹಗಹಿಸಿ ನಕ್ಕಳು.

ಅಚ್ಚರಿ ಪಡುವಷ್ಟು ವೇಗದಲ್ಲಿ ಅವಳು ಅವನ ಪೀತಾಂಬರವನ್ನು ತನ್ನ ಸೊಂಟಕ್ಕೆ ಸುತ್ತಿಕೊಂಡಳು. ಅವಳು ಮಾಡಿದ್ದು ಸರಿ. ಅವನೇ ಮೂರ್ಖ. ಅವನು ರಾಧೆಯಾಗಿದ್ದರೆ (ಆ ಯೋಚನೆ ಹಾಳಾಗಲಿ. ಅವಳ ದಂತ ಕಥೆಯ ಪ್ರತಿಸ್ಪರ್ಧಿಯೇ ತಾನು ಎಂದು ಅವನು ತನ್ನನ್ನು ಗೊಂದಲಗೊಳಿಸುತ್ತಿದ್ದಾನೆಂದು ಅವಳು ಭಾವಿಸಿದರೆ, ಅವನ ಹೆಂಡತಿ ಅವನ ಕುತ್ತಿಗೆ ಕೊಯ್ಯಲೂ ಹಿಂದು ಮುಂದು ನೋಡಲಾರಳು) ಅವನು ರಾಜಕುಮಾರಿಯಾದರೆ, ಆಗ ಅವಳು ಶ್ರೀಕೃಷ್ಣ. ಅವಳು ತನ್ನ ತಲೆಪಟ್ಟಿಗೆ ನವಿಲು ಗರಿಯೊಂದನ್ನು ಸಿಕ್ಕಿಸಿಕೊಂಡಳು.

ಕಿರಿಯ ಸಂತಳು ಈ ಅಪಾಯಕರವಾದ ಮಾರ್ಗದಲ್ಲಿ ಎಲ್ಲಿಯವರೆಗೂ ಹೋಗಬಲ್ಲಳು? ವಿಲಕ್ಷಣವಾದ ಸಾಧನೆಗಳನ್ನು ಮಾಡುತ್ತಿದ್ದ ಬಿಡಿ ಧಾರ್ಮಿಕ ಪಂಥಕ್ಕೆ ಸೇರಿದ ಕೃಷ್ಣ ಭಕ್ತ

ಅನುಯಾಯಿಗಳ ಬಗ್ಗೆ ಅವನು ಅಸ್ಪಷ್ಟವಾಗಿ ಕೇಳಿದ್ದನು. ನಟನೆಯೇ ಅವರ ಆರಾಧನೆಯ ತಿರುಳಾಗಿತ್ತು. ಶ್ರೀ ಕೃಷ್ಣನಾಗುವಲ್ಲಿ ಅವರು ಅನೇಕ ತಿರುವುಗಳನ್ನು ತೆಗೆದುಕೊಳ್ಳುತ್ತಿದ್ದರು. ಲಿಂಗವೆನ್ನುವುದು ಒಂದು ಮಸುಕು ಮಸುಕಾದ ದಾರಿ. ಅದನ್ನು ಒಂದೇ ಸಮನೆ ದಾಟುತ್ತಿದ್ದರು. ಖಂಡಿತವಾಗಿಯೂ ಯಾವುದೋ ಒಂದು ಘಟ್ಟದಲ್ಲಿ ಆ ರೀತಿಯ ಲೈಂಗಿಕ ಬಯಕೆಯೇ ಉದ್ದೇಶವಾಗಿ ಬಿಡಬಹುದು. ಹಾಗೂ ಅದು ವಿಲಕ್ಷಣ ಪ್ರವೃತ್ತಿಗಳಿಗೆ ಮತ್ತು ಅವನತಿಯತ್ತ ಕೊಂಡೊಯ್ಯಬಹುದು.

ರಾಜಕುಮಾರಿ ತನ್ನ ಮುಂಗೈಗಳನ್ನು ಒಂದರ ಮೇಲೊಂದು ಅಡ್ಡವಾಗಿ ಇಟ್ಟುಕೊಂಡಳು. ಒಂದರ ಮೇಲೊಂದು ಅಡ್ಡವಾಗಿ ಇಟ್ಟುಕೊಂಡ ಅವನ ಕೈಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡಳು. ನಿಧಾನವಾಗಿ ಅವಳೊಂದು ಸುತ್ತು ಬರತೊಡಗಿದಳು. ಅವಳ ಮನಸ್ಸಿನಲ್ಲಿ ಏನಿದ್ದಿತೆಂಬುದು ಅವನಿಗೆ ತಿಳಿದಿರಲಿಲ್ಲ. ಆದರೆ ಅವಳನ್ನು ಸುಮ್ಮನೆ ಅನುಸರಿಸಿದನು. ಅವರು ಒಬ್ಬರಿಗೊಬ್ಬರು ಮುಖಾಮುಖಿಯಾಗಿದ್ದರು. ಆದರೂ ಅವನಿಗೆ ತಾವು ಒಬ್ಬರನ್ನೊಬ್ಬರು ಬೆನ್ನಟ್ಟಿದ್ದೇವೆಂಬ ಭಾವ ಉಂಟಾಗುತ್ತಿತ್ತು. ಈ ಬಾರಿ ಅದಾವ ಬೆಕ್ಕು ಇಲಿ ಆಟವನ್ನು ಅವಳು ಯೋಜಿಸಿದ್ದಳು?

ಅಂಥದ್ದೇನೂ ಇಲ್ಲ. ಅವಳು ಆಡುತ್ತಾ ಇದ್ದದ್ದೆಲ್ಲಾ ಕಿಕಲಿ ಆಟ ಎಂದು ಅವನು ಬಹುಬೇಗ ಅರ್ಥಮಾಡಿಕೊಂಡನು. ಅವರ ಕೈಗಳು ಪರಸ್ಪರ ಹೆಣೆದುಕೊಂಡವು. ಪಾದಗಳು ವೃತ್ತಾಕಾರದಲ್ಲಿ ಚಲಿಸುತ್ತಿದ್ದುದರಿಂದ ಅವು ಹೆಚ್ಚು ಕಡಮೆ ಮೇಲೇಳಲೇ ಇಲ್ಲ. ಅವು ನಿಧಾನವಾಗಿ ತಮ್ಮ ವೇಗವನ್ನು ಹೆಚ್ಚಿಸಿಕೊಂಡವು. ಅರಮನೆಯ ಗೋಡೆಗಳು, ಪಾರಿಜಾತದ ಮರ, ವಿಜಯಸ್ತಂಭ, ತುಳಸೀ ಗಿಡ, ಎಲ್ಲವೂ ರಭಸದಿಂದ ಸಾಗಿ ಹೋದವು. ಮತ್ತೆ ಅಷ್ಟೇ ವೇಗವಾಗಿ ಮತ್ತೆ ಕಾಣಿಸಿಕೊಂಡವು. ಅತ್ಯಂತ ವೇಗವಾಗಿ ಸಾಗುತ್ತಿದ್ದಂತೆ ಪ್ರತಿಯೊಬ್ಬರೂ ಎಷ್ಟು ಸಾಧ್ಯವೋ ಅಷ್ಟು ಹಿಂದಕ್ಕೆ ಮತ್ತು ಒಬ್ಬರು ಮತ್ತೊಬ್ಬರಿಂದ ದೂರ ದೂರಕ್ಕೆ ಸಾಗುತ್ತಿದ್ದರು. ಅವರಿಬ್ಬರ ಮೇಲು ಹೊದಿಕೆಗಳು (ದಾವಣಿಗಳು) ಜಾರಿದವು. ತುಂಡು ಲಂಗಗಳು ಮೇಲಕ್ಕೆ ಹಾರಿದವು ಮತ್ತು ಆಕಾಶ ಹೀಗೆ ಕಂಡು ಹಾಗೆ ಹೋಯಿತು. ಅವನಿಗೊಂದು ವಿಚಿತ್ರ ಹಿಗ್ಗಿನ ಭಾವವುಂಟಾಯಿತು. ಅವರ ದೇಹದಿಂದ ಬೆವರು ಹಾರಿತು. ಅವರು ತಮ್ಮ ಶಕ್ತಿ ಮೀರಿ ಕುಣಿದಿದ್ದರು. ಆದರೂ ನಿಲ್ಲಿಸಲೊಲ್ಲರು.

ಅವಳ ಸರಳ ಪ್ರಪಂಚವನ್ನು ಕಂಡು ಅವನಿಗೆ ಅಸೂಯೆಯಾಯಿತು. ಆ ಜಗತ್ತಿನಲ್ಲಿ ಅವಳು ಮಾಡುವ ಪ್ರತಿಯೊಂದು ಆಲೋಚನೆ ಮತ್ತು ಕ್ರಿಯೆ ಭಕ್ತಿಯೇ ಆಗಿರುತ್ತಿತ್ತು. 'ರತಿ' (ಲೈಂಗಿಕತೆ) ಎಂಬುದು ಪೂಜೆಯಾಗಿತ್ತು. ಹಾಗೆಯೇ ಅವನ ತಂದೆಯ ನಿಗಾವಹಿಸುವುದು, ಇಸ್ಪೀಟಾಡುವಾಗ ಉಯ್ಯಾಲೆ ಮೇಲೆ ನಿಂತು ನೆಲವನ್ನು ಮೆಟ್ಟಿ ಹಿಂದಕ್ಕೂ ಮುಂದಕ್ಕೂ ತೂಗಿಕೊಳ್ಳುವುದು, ಹಾಡುವುದು, ನರ್ತಿಸುವುದು ಎಲ್ಲವೂ ಭಕ್ತಿಯೇ. ಅವಳ ಇಡೀ ಬದುಕು, ಉನ್ನತಿ ಅವನತಿಗಳು, ಸಿಟ್ಟು, ಕೋಪಗಳು, ಸುಖ ಸಂತೋಷಗಳು ಎಲ್ಲವೂ ಹೇಗೆ ಸ್ವಯಾರ್ಪಿತವೋ ಹಾಗೆಯೇ ಭಗವದರ್ಪಿತವೂ ಆಗಿತ್ತು. ಶ್ರೀಕೃಷ್ಣನ ಕರ್ಮಯೋಗಿಯ ಅಥವಾ ಯೋಗಿನಿಯ ಪರಿಕಲ್ಪನೆಯ ಸಾರವೇ ಅವಳಾಗಿದ್ದಳು. ಅಂಥವಳಿಗೆ ಬದುಕಲರ್ಹವಾದ ಜೀವನವೆಂದರೆ ಕ್ರಿಯಾಶೀಲ ಜೀವನವೇ. ಬದುಕಿನಲ್ಲಿ ಅವಳೆಷ್ಟು ತೊಡಗಿಸಿಕೊಂಡಿದ್ದಳೆಂದರೆ ನಾಳೆ ಎಂಬುದು ಇಲ್ಲವೇನೋ ಎಂಬಂತೆ. ಬಹುಶಃ ಮೋಕ್ಷ ಎಂಬುದು ಇರುವುದು ಬದುಕಿನ ನಂತರದ ಬದುಕನ್ನು ಕುರಿತು ಚಿಂತಿಸುವುದರಲ್ಲಿ ಅಲ್ಲ.

"ನನ್ನ ರಾಜಕುಮಾರ" ಭೂತಾನಿ ಮಾತಾ ಪಾರಿಜಾತ ವೃಕ್ಷದ ಹಿಂದೆ ಕೃತಕ ವಿನಯದಿಂದ ನಿಂತಿದ್ದಳು.

"ಬಹಳ ದಿನಗಳಿಂದ ನಿನ್ನನ್ನು ನೋಡಿಲ್ಲ. ನೀನು ಯಾವುದೋ ಅಪಘಾತಕ್ಕೆ ಒಳಗಾಗಿರಬೇಕೆಂದು ನನಗೆ ಆತಂಕವಾಗ ತೊಡಗಿತ್ತು." ಅವಳೊಂದಿಗೆ ವ್ಯಂಗ್ಯದ ಮಾತಾಡುವುದರಲ್ಲಿ ಏನೂ ಅರ್ಥವಿಲ್ಲವೆಂಬುದನ್ನು ಅವನು ಇನ್ನೂ ತಿಳಿದುಕೊಂಡಿರಲಿಲ್ಲ.

"ನೀನು ನನ್ನನ್ನು ಅಷ್ಟೊಂದು ಕಳೆದುಕೊಂಡಂತಿದ್ದೆಯಾ? ನಾನು ಯಾವಾಗಲೂ ಒಂದು ಕೂಗಳತೆಯ ದೂರದಲ್ಲಿರುತ್ತೇನೆ ಎಂದು ಇದುವರೆಗೆ ನಿನಗೆ ಗೊತ್ತಾಗಿರಬೇಕಾಗಿತ್ತಲ್ಲ. ಮುಚ್ಚು ಮರೆಯಿಲ್ಲದೆ, ನೇರವಾಗಿ ಹೇಳಬೇಕೆಂದರೆ, ನಾನು ನಿನ್ನ ಪ್ರೇಯಸಿಯಂತೆ, ನಿನ್ನ ಹೃದಯದಲ್ಲಿ ನೆಲಸಿರುವವಳು".

"ನಿನ್ನ ಹಿತದೃಷ್ಟಿಯಿಂದ, ನನ್ನ ಹೆಂಡತಿಯಿಂದ ದೂರ ಇರು ಎಂದು ನಿನಗೆ ಬುದ್ಧಿ ಹೇಳುತ್ತಾ ಇದ್ದೇನೆ".

"ನಾನು ನಿನ್ನ ನೆನಪನ್ನು ಚುರುಕುಗೊಳಿಸಲೇ ದೊರೆಯೇ. ನೀನು ಗಂಟೆಗಂಟೆಗೂ ಅಳುತ್ತಾ ನನ್ನನ್ನು ಪ್ರಾರ್ಥಿಸುತ್ತಾ ಇದ್ದಾಗ, ನೀನು ನಿನ್ನ ಹೆಂಡತಿಯಿಂದ ದೂರ ಇರುವುದಷ್ಟೇ ಅಲ್ಲ" ಭೂತಾನಿ ಮಾತಾ ಆಕ್ಷೇಪಣೆಯ ನಗೆ ಬೀರುತ್ತ ಮುಂದುವರೆಸಿದಳು "ಪೂರ್ತಿಯಾಗಿ ಮರೆತು ಬಿಡಲು ಸಲಹೆ ಕೊಟ್ಟಿದ್ದೇ ನಾನು. ನಿನ್ನ ಹೆಂಡತಿಯ ಅದೃಷ್ಟದಲ್ಲಿ ಆಮೂಲಾಗ್ರ ಬದಲಾವಣೆಯಾಗಿರುವುದನ್ನು ತಿಳಿದು ನನಗೆ ತುಂಬ ಸಂತಸವಾಗಿದೆ. ದೇಶ ಅವಳನ್ನು ಇನ್ನೆಂದೂ ವೇಶ್ಯೆಯಂತೆ ಕಾಣುವುದಿಲ್ಲ. ಕಿರಿಯ ಸಂತಳು ಎಂದಲ್ಲವೆ ಅವರೆಲ್ಲಾ ಅವಳನ್ನೀಗ ಕರೆಯುವುದು? ನಗರದ ಜನಗಳು ಕಿರಿಯ ಸಂತಳ ಪ್ರತಿ ರಾತ್ರಿಯ ಸಂತ ಕೃತ್ಯಗಳಿಂದ ಬಹಳ ಪ್ರಭಾವಿತರಾಗುವರು"

"ನಿನ್ನ ವ್ಯಂಗ್ಯ ಸಾಕು"

"ಅಳುಕ ಬೇಡ ಮಹಾರಾಜ್‌ಕುಮಾರ್. ಸ್ವರ್ಗ ಮತ್ತು ನರಕಗಳು ತಮ್ಮ ಸ್ಥಾನಗಳನ್ನು ಬದಲಾಯಿಸಿದಾಗ ಮಾತ್ರ. ಯಾರು ಪಣ ಒಡ್ಡಿರುತ್ತಾರೋ ಅವರು ಮಿತ್ರರಾಗುವರು ಎಂದು ಗುಂಪುಗಳ ನಡುವೆ ಮರು ಮೈತ್ರಿ ಸ್ಥಾಪಿತವಾಗಿದೆ ಎಂದು ನೀನು ಒಪ್ಪುವೆ, ನಿನಗೆ ತಲೆ ಚಿಟ್ಟುಹಿಡಿದಂತೆ ಕಾಣುತ್ತಿದೆ. ನನ್ನಿಂದ ಯಾವಾಗ ಕಳಚಿಕೊಂಡೇನು ಎಂದು ಅಸಹನೆಯಿಂದ ಕುದಿಯುತ್ತಿರುವೆ."

"ನಾವು ವಿಷಯಕ್ಕೆ ಬರೋಣವೆ? ನನಗೆ ಮಾಡುವುದಕ್ಕೆ ಬೇರೆ ಕೆಲಸಗಳಿವೆ."

"ನಿನ್ನ ಪ್ರಣಯ ಚೇಷ್ಟೆಗೆ ತಡಮಾಡುವುದಕ್ಕೆ ನನಗೆ ಇಷ್ಟವಿಲ್ಲ. ನಿನಗೊಂದು ಶುಭ ಸಮಾಚಾರ ತಿಳಿಸುವುದಿದೆ. ಇಲ್ಲಿಂದ ಮುಂದಕ್ಕೆ ನಿನ್ನ ಸಂಪರ್ಕಕ್ಕೆ ಬರುವಂಥ ದುರದೃಷ್ಟ ಯಾರಿಗಿರುತ್ತೋ ಅವರು ಅಪಾಯದಲ್ಲಿರುತ್ತಾರೆ. ನನ್ನೊಂದಿಗೆ ನೀನು ಮಾಡಿಕೊಂಡಿರುವ ಒಪ್ಪಂದದ ಏನೊಂದೂ ಅರಿವಿಲ್ಲದವರು ನಿನ್ನ ಪಾಪಗಳಿಗೆ ಮತ್ತು ನಿನ್ನ ಮನಸ್ಸಿನ ಹುಚ್ಚಾಟಗಳಿಗೆ ಬೆಲೆ ತೆರಬೇಕಾಗುತ್ತೆ. ನೀನು ಅಪರಾಧಿ ಭಾವನೆಯಿಂದ ಮತ್ತು ಮುಗ್ಧ ಜನರ ಮೇಲೆ ನೀನು ಹರಿಯಬಿಟ್ಟ ಅನಾಹುತದ ಅಗಾಧತೆಯಿಂದ ಕೊಳೆತು ಹೋಗುವೆ ಎಂದು ಆಶಿಸುತ್ತೇನೆ. ದೊರೆಯೆ, ನಾವು ಇನ್ನೂ ಮುಯ್ಯಿತೀರಿಸಿಕೊಳ್ಳುವುದಿದೆ. ಈಗ ನಿನ್ನಿಂದ ಬೀಳ್ಕೊಳ್ಳಬೇಕಾಗಿದೆ."

ಅವಳು ಹೊರಡಲು ತಿರುಗಿದಳು. ತನ್ನೊಂದಿಗೆ ಅವಳದಿನ್ನೂ ಮಾತು ಮುಗಿದಿಲ್ಲ ಎಂದು ಅವನಿಗೆ ಗೊತ್ತಿತ್ತು.

"ಓಹ್, ನೀನು ಹೇಗೆ ಮರೆಯೋದಕ್ಕೆ ಸಾಧ್ಯ? ನೀನು ಪಾರಿಜಾತ ವೃಕ್ಷ ಮತ್ತು ಕೌಸಲ್ಯಳ ಬಗ್ಗೆ ಕೇಳುವುದಿಲ್ಲವೆ?"

"ಇಲ್ಲ"

"ಅವರ ಬಗ್ಗೆ ನಿನಗೆ ಕಾಳಜಿ ಇಲ್ಲವೆ?"

"ಅವರಿಗೇನಾಗಿದೆಯೋ ಅದರ ಕೀರ್ತಿಯನ್ನು ನಿನಗೆ ಕೊಡುವುದು ನನಗೆ ಬೇಕಿಲ್ಲ. ಅಂತ ಅಷ್ಟೆ. "

"ಅಯ್ಯಾ ಮಿತ್ರ, ಕಥೆಪುಸ್ತಕಗಳಲ್ಲಿರುವಂತೆ ಭೂಮಿ ತನ್ನ ಬಾಯಿ ತೆರೆದು, ಸೀತಾಳನ್ನು ನುಂಗಿದ ಹಾಗೆಯೇ ಕೌಸಲ್ಯಳನ್ನು ನುಂಗಿ ಬಿಟ್ಟಿತೆಂದು ಹಾಗೂ ಬಿಸಿಲಿನ ಧಗೆಯ ಒಂದು ಬೆಳಿಗ್ಗೆ ತೀವ್ರ ಬಳಲಿಕೆಯಿಂದ ನಿನ್ನ ಪಾರಿಜಾತ ವೃಕ್ಷ ಮುರುಟಿ ಬಿದ್ದಿತೆಂದು ತಿಳಿದೆಯಾ?"

"ನೀನೊಬ್ಬ ಸ್ವಪ್ರತಿಷ್ಠೆಯ ಭ್ರಾಂತಿ ಹಿಡಿದಿರುವ ಮನೋರೋಗಿಯಾಗುತ್ತಿದ್ದೀ ಭೂತಾನಿ ಮಾತಾ. ಈ ವರ್ಷ ವಿಜಯನಗರದಲ್ಲಿ ಬರಗಾಲ ಬಂದಿರುವುದು, ಪಾಣಿಪತ್‌ನಲ್ಲಿ ಬಾಬರನ ವಿಜಯ, ಇತ್ತೀಚೆಗೆ ಸೂರತ್ ಬಳಿ ಪೋರ್ಚುಗೀಸರ ಒಂದು ಹಡಗು ಮುಳುಗಿದ್ದು. ಇವೆಲ್ಲಾನೂ ನೀನೇ ಮಾಡಿದ್ದೇನು? ವಿಷಯ ಹಾಗಿದ್ದರೆ ನಿನ್ನ ಸಮಾನಸ್ಕಂಧರ ಜೊತೆ ಉದಾಹರಣೆಗೆ ಶ್ರೀಕೃಷ್ಣನ ಜೊತೆ ನೀನು ಯಾಕೆ ಆಟ ಆಡಬಾರದು? ನೀನು ಮೂರನೇ ದರ್ಜೆ, ಬಾಬಾಗಳು, ಗುರುಗಳು ಮತ್ತು ಜಗತ್ತಿನ ರಕ್ಷಕರ ಥರ. ಹಾಗಿದ್ದರೆ. ಸ್ತ್ರೀಪುರುಷರ ಭಯದ ಮೇಲೆ ಆಟ ಆಡುವುದಷ್ಟೆ ನೀನು ಮಾಡೋದೇನಿದ್ದರೂ. ಆದರೆ ನಾನು ಭಯವನ್ನು, ನೀನೇನು ತಾನೆ ಮಾಡೀಯ ಎನ್ನುವ ಭಯವನ್ನು ದಾಟಿ ಬಂದಿದ್ದೇನೆ".

ಅವನ ಪಾದಗಳು ಕುಗ್ಗ ತೊಡಗಿದವು. ಅದಕ್ಕಿಂತ ಕೆಟ್ಟದ್ದೆಂದರೆ ಕೈಗಳಲ್ಲಿನ ಬಳೆಯ ಕಡೆಗೆ ಇನ್ನು ಅವನ ಲಕ್ಷ್ಯ ಹೋಗಲಿಲ್ಲ. ತಾನು ಚಿಕ್ಕವನಾಗಿ ಬಿಟ್ಟಿದ್ದೇನೆ ಮತ್ತು ತೀರ ಸೂಕ್ಷ್ಮವಾಗಿ ಬಿಟ್ಟಿದ್ದೇನೆಂಬ ಸ್ಪಷ್ಟ ಭಾವ ಬರತೊಡಗಿತು. ಅನ್ಯ ಲಿಂಗಿಯ ಹಾಗೆ ಮುಖವಾಡ ಧರಿಸುತ್ತಿದ್ದೇನೆಂಬ ಯೋಚನೆಯಿಂದ ಅವನು ಗಾಬರಿಗೊಂಡಿದ್ದರೆ ತನ್ನ ಹೆಜ್ಜೆಗಳು ಹಗುರವಾಗಿವೆ ಮತ್ತು ದೇಹ ಬಳಕುತ್ತಿದೆ ಎಂದೇಕೆ ಕೆರಳಲಿಲ್ಲ? ಅಥವಾ ಇದರ ಕಾರಣಗಳು ತೀರ ಸರಳ ಮತ್ತು ಸಾಧಾರಣವಾಗಿದ್ದುವೆ? ಹೃದಯದಿಂದ ಅವನು ಹೆಣ್ಣೆಂದೆ ಅಥವಾ ಬಹುಶಃ ಎಲ್ಲ ಮಾನವರೂ ನಿಜಕ್ಕೂ ದ್ವಿಲಿಂಗಿಗಳೆ? ಒಬ್ಬ ವ್ಯಕ್ತಿಯ ಲಿಂಗದ ಮೂಲವೇನು? ಅದರಲ್ಲಿ ಉಡುಪಿನ ಪಾತ್ರವೂ ಇದೆಯೆ? ಹೆಣ್ಣಿನ ಲಂಗ ಮತ್ತು ರವಿಕೆಯನ್ನು ಧರಿಸಿದಾಕ್ಷಣಕ್ಕೆ ಅದರೊಳಗೆ ಹೆಣ್ಣಿನ ಧರ್ಮವನ್ನು ಬರಿಸಿಕೊಳ್ಳಲು ಸಾಧ್ಯವೆ? ಸ್ತ್ರೀ ಪುರುಷರಿಗಿರುವ ಒಂದೇ ವ್ಯತ್ಯಾಸವೆಂದರೆ ಅವರ ಶರೀರಗಳು ಎಂಬುದು ಇಷ್ಟು ವರ್ಷಗಳ ಅವನ ನಂಬಿಕೆಯಾಗಿತ್ತು. ಆದರೆ ಅವರ ಮನಸ್ಸುಗಳು ಬೇರೆ ರೀತಿಯಲ್ಲೇ ಆಗಿದ್ದುವೆ? ಹೆಣ್ಣಾಗಿರುವುದೆಂದರೆ ಏನು? ಉದ್ದನೆಯ ಇಳಿ ಬಿದ್ದ ಕೂದಲುಗಳನ್ನು ಹೆರಳಾಗಿ ಅಥವಾ ಮುಡಿಯಾಗಿ ಕಟ್ಟಿರುವುದೆ? ತುಂಬಿದ ಮೊಲೆಗಳೆ? ಶಕ್ತಿ ಮತ್ತು ಬುದ್ಧಿವಂತಿಕೆಯಷ್ಟೇ ಸಹನೆ ಮತ್ತು ತಾಯ ಪೋಷಣೆಯೆ? ಹೆಣ್ಣನ್ನು ಕುರಿತಂತೆ ಮನುಷ್ಯ ಜಾತಿಗೆ ಇರುವ ತುಂಬ ಪರಿಪೂರ್ಣವಾದ ಮತ್ತು ಪರ್ಯಾಪ್ತವಾದ ಪರಿಕಲ್ಪನೆ ಏನು? ಇನ್ನು ದೇವರು. ದೇವರಿಗೆ ಲಿಂಗವನ್ನು ಆರೋಪಿಸಿದರೂ, ಆಗ ಅವನಾಗಲಿ ಅವಳಾಗಲಿ ಸೀಮಿತ ಮತ್ತು ಅಪೂರ್ಣ.

ಅವಳ ರವಿಕೆ ಮತ್ತು ಅದರ ಮೇಲಿನ ಹೊದಿಕೆ ಎರಡೂ ಒದ್ದೆಯಾಗಿದ್ದವು. ಅವಳತ್ತ ಅವನು ನೋಡುತ್ತಿದ್ದುದನ್ನು ಕಂಡಳು. ತಿರುಗುತ್ತಿದ್ದ ಮತ್ತು ಒಂದು ಕಡೆಗೆ ವಾಲುತ್ತಿದ್ದ

ಆಕಾಶ ಇದ್ದಕ್ಕಿದ್ದಂತೆ ನಿಂತು ಬಿಟ್ಟಿತು. ಅವನ ತೋಳುಗಳೊಳಕ್ಕೆ ಅವಳು ಜಾರಿಕೊಂಡಳು. ಅವನು ಅವಳನ್ನು ಬಿಗಿದಪ್ಪಲು ಪ್ರಯತ್ನಿಸಿದನು. ಆದರೆ ಅವಳ ಸ್ನಿಗ್ಧ ಶರೀರ ನುಣುಚಿಕೊಳ್ಳುತ್ತಿತ್ತು. ಆ ಜಾರಿಕೆಯ ಸ್ಪರ್ಶದಿಂದ ಅವನು ತನ್ನನ್ನೇ ತಾನು ಮರೆತುಬಿಟ್ಟನು. ತಮ್ಮ ದೇಹಗಳ ವಿವಿಕ್ತತೆಯನ್ನು ಕೊನೆಗೊಳಿಸಿ ಅವಳೊಂದಿಗೆ ಒಂದಾಗ ಬಯಸಿದನು. ಅವರು ಒಬ್ಬರಿಗೊಬ್ಬರು ಅಂಟಿಕೊಂಡಿರಲು ಬೇರೆ ದಾರಿಯೇ ಇರಲಿಲ್ಲ. ಅವಳು ಕೆಳಗೆ ಬಾಗಿ, ನೆಲದ ಮೇಲೆಲ್ಲ ತಡಕಾಡಿದಳು. ಎದ್ದು ನಿಂತು ಉನ್ಮತ್ತಳಂತೆ ತನ್ನ ಮೇಲೆ ಮತ್ತು ಅವನ ಮೇಲೆ ಮಣ್ಣನ್ನು ತಿಕ್ಕಿದಳು. ಒದ್ದೆಯಾದ ಮಣ್ಣಿನ ವಾಸನೆ ಅವನ ತಲೆಯನ್ನು ತಿಳಿಗೊಳಿಸಿತು.

ಚೈತ್ರ ಎಲ್ಲ ಕಡೆ ತಾನೇ ತಾನಾಗಿ ವ್ಯಾಪಿಸಿತ್ತು. ಅವಳ ಶರೀರ ಅಗೋಚರವಾಗಿ ಬಳ್ಳಿಯಂತೆ ಕವಲೊಡೆಯಿತು. ಅವು ದ್ರಾಕ್ಷಿಯ ಹಂಬುಗಳಾದುವು. ಅವು ಅವಳ ತೋಳುಗಳ ಸುತ್ತ, ಸ್ತನಗಳ ಮೇಲೆ ಹಬ್ಬಿಕೊಂಡುವು. ಆ ಮೇಲೆ ಅವಳ ತೊಡೆಗಳು, ಮೊಳಕಾಲುಗಳು ಹೆಬ್ಬೆಟ್ಟುಗಳವರೆಗೂ ಹರಡಿಕೊಂಡವು. ಈ ಮಧ್ಯೆ ಚಿಕ್ಕ ಚಿಕ್ಕ ಹಸಿರೆಲೆಗಳು ನಳನಳಿಸುತ್ತ ಹೊರಹೊಮ್ಮಿದವು. ಲಜ್ಜೆಯಿಂದ ಮೆಲ್ಲಗೆ ಹಳದಿಯ ಮತ್ತು ಕೆಂಪು ಕುಡಿಗಳು ಹೊರಹೊಮ್ಮಿದವು. ಹೆಚ್ಚು ಕಡಿಮೆ ನೀರವವಾಗಿ ಕುಡಿಯೊಡೆದವು. ಹೂವನ್ನು ಮತ್ತು ಎಲೆಯನ್ನು ಸ್ಪರ್ಶಿಸಲು ಅವನು ತನ್ನೊಂದು ಬೆರಳನ್ನು ಚಾಚಿದನು. ಅವನಿಗೆ ಗೊತ್ತಾಗುವ ಮುನ್ನವೇ ಹಸಿರೆಲೆ ಮುನ್ನೆಗೆದು ಅವನ ಕೈಯ ಸುತ್ತಲೂ ಸುತ್ತಿಕೊಂಡು ಬಿಟ್ಟಿತ್ತು. ಅಲ್ಲದೆ ಲತಾ ಲಲನೆಯ ಬಳಿಗೆ ಅವನನ್ನು ಎಳೆತಂದಿತ್ತು. ಯಾವುದೂ ಅವರನ್ನು ದೂರಮಾಡಲಾಗದೆಂದು ಆಗ ಅವನಿಗೆ ಅರ್ಥವಾಯಿತು.

ಆಗ ಅವಳು ಕೃಷ್ಣಕನ್ಹಯ್ಯ, ಕೃಷ್ಣ ಕನ್ಹಯ್ಯ ಎಂದು ಅವನಿಗೆ ಭಯದಿಂದ ಮೊರೆಯಿಟ್ಟಳು.

ಅಧ್ಯಾಯ 40

ಅದು ಹೊರಬರುವುದನ್ನು ನಾನು ಕಂಡಿರಬೇಕಾಗಿತ್ತು. ಆದರೆ ಬಹಳವಾಗಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ನನ್ನ ಭವಿಷ್ಯತ್ ಜ್ಞಾನ ಸರಿಯಾಗಿ ಕೆಲಸ ಮಾಡುತ್ತಿಲ್ಲ ಇಲ್ಲವೆ ಅದು ಕೇವಲ ಒಂದು ಊಹೆಯಾಗಿತ್ತೆ ಹಾಗೂ ಯಾವುದೋ ಒಂದು ಅದೃಷ್ಟ ಇಷ್ಟು ವರ್ಷವೂ ಅತೀಂದ್ರಿಯ ಶಕ್ತಿಯ ಹಾಗೆ ಸೋಗು ಹಾಕಿತ್ತೆ? ರಾಜಕೀಯ ಪರಿಗಣನೆಗಳು ಮಾತ್ರವೇ ನನ್ನ ಎರಡನೇ ಹೆಂಡತಿಯಲ್ಲಿಗೆ ಹಿಂತಿರುಗಲು ನನ್ನನ್ನು ಒತ್ತಾಯಪಡಿಸಿರಬೇಕು. ಆ ಬಾಬರನಿಗೆ ಮೊದಲ ಹೆಂಡತಿಯ ವಿಷಯಕ್ಕೆ ಎಷ್ಟು ಅನಿಚ್ಛೆ ಇತ್ತೋ ನನಗೂ ಅಷ್ಟೆ ಅನಿಚ್ಛೆ ಇವಳ ವಿಷಯಕ್ಕೆ ಉಂಟಾಗಿತ್ತು. ಬಾಬರನು ತನ್ನ ವಧುವನ್ನು ನಲವತ್ತು ದಿನಗಳಿಗೊಮ್ಮೆಯಾದರೂ ಭೇಟಿಮಾಡಬೇಕೆಂದು ಅವನ ತಾಯಿ ಅವನನ್ನು ಪುಸಲಾಯಿಸಿದ್ದಳೆಂದು ತನ್ನ ದಿನಚರಿಯ ಹಾಳೆಗಳಲ್ಲಿ ಹೇಳುತ್ತಾನೆ. ನನ್ನ ತಾಯಿಯಾದರೋ ತನ್ನದೇ ಲೋಕದಲ್ಲಿ ವಾಸಿಸುತ್ತಿದ್ದಳು. ಅಲ್ಲದೆ ಬದುಕಿನಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಅತ್ಯುತ್ಸುಕಳಾಗೇನೂ ಇರಲಿಲ್ಲ. ನಾನು ಇತ್ತೀಚೆಗೆ ಎರಡನೇ ಮದುವೆಯಾಗಿದ್ದೇನೆ ಎಂಬುದು ಅವಳಿಗೆ ಗೊತ್ತಿತ್ತು. ಆದರೂ ನನಗೂ ನನ್ನ ಎರಡನೇ ಹೆಂಡತಿಗೂ ಹೇಗಿದೆ ಎಂದು ಕೇಳಬೇಕೆಂದು ಅವಳಿಗೆ ತೋಚಿರಲಿಲ್ಲ. ನನ್ನ ಅಂತಃ ಸಾಕ್ಷಿ ಅತ್ಯಂತ ಪ್ರಬಲವಾಗಿಯೇ ಇತ್ತು. ಆದರೆ ನಾನೆಷ್ಟೇ ಪ್ರಯತ್ನಿಸಿದರೂ ಸುಗಂಧಳನ್ನು ಭೇಟಿ ಮಾಆಡಲು ಮನಸ್ಸು ಮಾಡಲಾಗಲಿಲ್ಲ.

ಅರಮನೆಯಲ್ಲಿ ಯಾರೇ ಹೊಸ ಹೆಂಡತಿಯುನ್ನು ಅಂತಃಪುರವು ತನ್ನ ಪ್ರತಿಸ್ಪರ್ಧಿಯೆಂದೇ ಕಾಣುತ್ತದೆ. (ಬಹುಶಃ ಯಾವುದೇ ರಾಜಕುಟುಂಬದ ಪರಿಸ್ಥಿತಿ ಅದೇ) ಸೈನಿಕ ಶಾಲೆಯಲ್ಲಿ ಗೋಳು ಹೊಯ್ದುಕೊಳ್ಳುವುದಕ್ಕೆ ಸಮನಾದ್ದನ್ನು ಅಲ್ಲಿ ಅವಳು ಎದುರಿಸುತ್ತಿದ್ದಳು. ಮೊದಲ ಕೆಲವು ತಿಂಗಳುಗಳಲ್ಲಿ ತೇಜೋವಧೆಗೊಳಗಾಗದ, ಅವಮಾನಿತಳಾಗದ, ಪಿಗ್ಗಿ ಬೀಳದ ದಿನವೊಂದೂ ಇರುತ್ತಿರಲಿಲ್ಲ. ಎಲ್ಲ ಚುಚ್ಚುಗಳನ್ನು ಸುಗಂಧ ಬಹಳ ಸುಲಭವಾಗಿ ಸಹಿಸಿಕೊಂಡು ಬಿಡಬಹುದಿತ್ತು. ಹಾಗಾಗಿ ಬಹಳಷ್ಟು ಶೋಷಿತರ ಹಾಗೆ ಅವಳಿಗೂ ಅವಳದೇ ಆದ ಬೆಂಬಲಿಗರಿದ್ದರು. ಆದರೆ ಚಿತ್ತೂರಿನ ಅತಿದೊಡ್ಡ ಸ್ತ್ರೀಸಂಘವಾದ 'ರಾಣಿವಾಸ'ದ ಸ್ತ್ರೀಯರು ಸುಗಂಧಳ ತಲೆದಂಡ ಕೇಳಬೇಕೆಂದು ಕಿರಿಯ ಸಂತಳು ಯೋಜಿಸಿದ ನಿದರ್ಶನಕ್ಕೆ ಧನ್ಯವಾದಗಳು. ಅವರೆಲ್ಲ ಅವಳನ್ನು ತೊರೆದು ಬಿಟ್ಟರು. ಸುಗಂಧಳು ತುಂಬ ಭೋಳೇ ಸ್ವಭಾವದ, ಅತಿ ಮುದ್ದಿನಿಂದ ಹಾಳಾದ ಹೆಣ್ಣು. ಅವಳಿಂದ ಬಹಳ ಲಾಭ ಮಾಡಿಕೊಂಡಂಥ ಕುಟುಂಬದಿಂದ ಬಂದವಳು. ಮೇದಿನಿರಾಯ್ ಅವರ ರೂಪವನ್ನು ಪಡೆದುಕೊಂಡು ಹುಟ್ಟಿದವಳು ಬಹುಶಃ ಅವಳೊಬ್ಬಳೇ ಇರಬೇಕು. ಅವಳೊಬ್ಬಳೇ ಆಗಿ ಬಿಟ್ಟಾಗ ದಿಕ್ಕೆಟ್ಟಂತಾದಳು.

ಅವಳ ಈ ತೀವ್ರವಾದ ಏಕಾಂತದಿಂದುಂಟಾದ ಶೂನ್ಯಕ್ಕೆ ನನ್ನ ಮಲತಾಯಿ ಪ್ರವೇಶಿಸಿ ಅವಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಳು. ಅವಳು ಅವಳ ವಿಚಾರದಲ್ಲಿ ಅತಿ ದೈನ್ಯ ತೋರಲೂ ಇಲ್ಲ, ಅತಿ ಮಹತ್ವ ಕೊಡಲೂ ಇಲ್ಲ. ಅವಳನ್ನು ತನ್ನ ಪರಿವಾರದ ಭಾಗವಾಗಿ ಮಾಡಿಕೊಂಡಳು. ಅವಳು ಬಹಳ ದೃಢವಾಗಿದ್ದಳು ಮತ್ತು ಸುಗಂಧಳಿಗೆ ಬೆಂಬಲಿಗಳಾಗಿದ್ದಳು. ರಾಜವಂಶದವರ ಮಂಡಲದ ಯೋಜನೆಯಲ್ಲಿ ಅವಳಿಗೊಂದು ಪಾತ್ರವನ್ನು ನೀಡುವ ಮೂಲಕ ತಾನು ಅವಳಿಗೆ ಬೇಕಾದವಳೆಂಬ ಭಾವ ಸುಗಂಧಳಿಗೆ ಉಂಟಾಗುವಂತೆ ಮಾಡಿದಳು. ಮುಂದೇನಾಯಿತೆಂಬುದರಲ್ಲೊಂದು ಅನಿವಾರ್ಯತೆ ಇತ್ತು. ಇಷ್ಟಾದರೂ ನಾನು 'ನಿಗೂಢ ಅದಲು ಬದಲು' ವೈನೋದಿಕ ನಾಟಕದ ಪ್ರೇಕ್ಷಕನೇನೋ ಎಂಬಂತೆ ಅದನ್ನು ಎಚ್ಚರದಿಂದ ಗಮನಿಸುತ್ತಿದ್ದೆನು. ಈ ಪ್ರಕರಣದಲ್ಲಿ ರಾಣಿಯು ಕುಂಟಲಗಿತ್ತಿಯ ಪಾತ್ರವನ್ನು ನಿರ್ವಹಿಸಿದ್ದಳೆಂಬ ವದಂತಿಯಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿದ್ದೀತು. ಆದರೆ ವಿಕ್ರಮಾದಿತ್ಯನ ಬಾಹುಗಳಿಗೆ ನನ್ನ ಹೆಂಡತಿಯನ್ನು ಅಟ್ಟಿದವನು ನಾನೇ ಎಂಬುದನ್ನು ನಿರಾಕರಿಸುವಂತಿಲ್ಲ.

ವಿಕ್ರಮಾದಿತ್ಯನು ರಣಥಂಬೂರಿನಿಂದ ಹಿಂತಿರುಗಿದ್ದನು. ಅವನ ಮಾತುಗಳಲ್ಲೇ ಹೇಳುವುದಾದರೆ, ಹಿನ್ನೀರಿನಿಂದ ತಲೆ ಚಿಟ್ಟು ಹಿಡಿದು, ಚಿತ್ತೂರಿನ ಕಾರಂಜಿಯಲ್ಲಿ ಪುನಶ್ಚೇತನ ಗೊಳಿಸಿಕೊಳ್ಳುವುದು ಅಗತ್ಯವೆನಿಸಿದ್ದರಿಂದ ಹಿಂತಿರುಗಬೇಕಾಯಿತು ಎಂದು. ಅವನು ಎಂದೂ ಗೋಪ್ಯವನ್ನು ಕಾಪಾಡಿಕೊಳ್ಳುವಂಥ ವ್ಯಕ್ತಿಯಲ್ಲ. ಹಾಗಾಗಿ ವಿಶ್ವಾಸವನ್ನಿಡುವುದೆಂಬುದು ಅವನಿಗೆ ಅಪರಿಚಿತವಾಗಿತ್ತು. ನನ್ನ ಹೆಂಡತಿ ಸುಗಂಧಗಳನ್ನು ಗೆದ್ದುಕೊಂಡದ್ದೆಂಬುದೇನೂ ಅಪೂರ್ವವಾದ ವಿಜಯವಲ್ಲ. ಆದರೆ ಅದು ನನ್ನ ವಿರುದ್ಧ ಬಳಸಲು ಸಾಕಷ್ಟು ಸ್ಫೋಟಕವಾಗಿತ್ತು. ಅಲ್ಲದೆ ವಿಕ್ರಮಾದಿತ್ಯನು ಖಂಡಿತವಾಗಿಯೂ ತನ್ನ ಗೆಲುವಿನ ಮಹತ್ವವನ್ನು ತಗ್ಗಿಸುವವನಂತೂ ಅಲ್ಲ ಅಥವಾ ನನ್ನ ಪೌರುಷತನದ ಕೊರತೆಯನ್ನು ಕಡೆಗಣಿಸುವವನೂ ಅಲ್ಲ. ಚಿತ್ತೂರು ಅವನ ಮೇಲೆ ಪವಾಡಗಳನ್ನೇ ಮಾಡಿಬಿಟ್ಟಿತು. ಕಾರಂಜಿಯಲ್ಲಿ ಅವನು ಬಹಳಷ್ಟು ಕಾಲ ಕುಡಿದಿದ್ದನು ಹಾಗೂ ತಾನೆಂದಿಗೂ ಅಷ್ಟು ಮಟ್ಟಿಗೆ ಕುಡಿದಿರಲಾರೆನೆಂದು ನಿರ್ಧರಿಸಿ ತನ್ನ ವಾಸ್ತವ್ಯವನ್ನು ಅನಿಶ್ಚಿತವಾಗಿ ವಿಸ್ತರಿಸಿದನು. ಅವನು ಅತ್ಯಂತ ಉಲ್ಲಾಸದಲ್ಲಿದ್ದನು. ಸುಗಂಧಳೂ ಅಂತೆಯೇ ಇದ್ದಳು. ಈ ಅಪನಿಂದೆ ನನ್ನ ಎರಡನೇ ಹೆಂಡತಿಗೆ ತಾಗುವಂತಿತ್ತು. ಜನರು ಇದ್ದಕ್ಕಿದ್ದಂತೆ ಅವಳನ್ನು ಗಮನಕ್ಕೆ ತೆಗೆದುಕೊಳ್ಳತೊಡಗಿದರು. ಅದು ಅವಳಿಗೆ ಅವಳ ಆತ್ಮ ಪ್ರತಿಷ್ಠೆಯನ್ನು ಮತ್ತೆ ತಂದುಕೊಟ್ಟಿತು. ತಾನು ಆಡುತ್ತಿರುವುದು ಅಪಾಯದ ಆಟವೆಂದು ರಾಣಿ ಕರ್ಮವತಿಗೆ ಗೊತ್ತಿತ್ತು. ಆದರೆ ಅದು ಪಣವನ್ನು ಹೆಚ್ಚಿಸಿಕೊಳ್ಳಬೇಕೆಂಬ ಅವಳ ಯೋಜನೆಯ ಭಾಗವೇ ಆಗಿತ್ತೆಂಬುದು ಸ್ಪಷ್ಟವಿತ್ತು ಹಾಗೂ ಮಹಾಪ್ರಭುಗಳಿಂದ ತಾನು ಸ್ವತಂತ್ರಳೆಂದು ಒತ್ತಿಹೇಳುವುದಾಗಿತ್ತು.

ನಾನೊಬ್ಬ ನೀತಿಗೆಟ್ಟ ಹೆಂಡತಿಯ ಗಂಡ ಎಂಬುದನ್ನು ಎರಡನೇ ಬಾರಿಗೆ ಕಂಡುಕೊಂಡದ್ದಕ್ಕೆ ನನ್ನದೇ ಪ್ರತಿಕ್ರಿಯೆ ಸಮ್ಮಿಶ್ರವಾದದ್ದಾಗಿತ್ತು. ಅಲ್ಲದೆ ಅದು ನನಗೆ ಸಂಪೂರ್ಣವಾಗಿ ಗೌರವವನ್ನೇನೂ ತರಲಿಲ್ಲ. ಸುಗಂಧ ಯುವತಿ. ಅವಳಿಗೆ ಒಳ್ಳೆಯ ಕಾಲ. ನಾನು ಅವಳನ್ನು ಬೆಂಬಲಿಸಬೇಕೆಂದಿದ್ದೆ. ಕಾರಣ ನನ್ನಲ್ಲಿಗೆ ಹಿಂತಿರುಗಿದ ತೃಪ್ತಿ ಅವಳದಾಗಿತ್ತು. ಅದೂ ಅಲ್ಲದೆ ಅವಳಿಗೆ ರಕ್ಷಣೆ ನೀಡಬೇಕೆಂದೆನಿಸಿತು. ಜೀವನ ಎಂಬುದು ಹ್ರಸ್ವವಾದದ್ದೆಂದು ನಮ್ಮ ಕವಿಗಳಿಗೆ ಎಷ್ಟು ಸಲ ಹೇಳಿದರೂ ತೃಪ್ತಿ ಇಲ್ಲ. ಹಾಗಾಗಿ ಹೆಣ್ಣಿನ ಬಗೆಗಿನ ನನ್ನ ತಮ್ಮನ ಖಯಾಲಿ, ಇನ್ನೂ ಹ್ರಸ್ವವಾದ್ದು ಎಂದು ಸುಗಂಧಳಿಗೆ ಎಚ್ಚರಿಕೆ ನೀಡಬೇಕೆನಿಸಿತು. ಅದೂ ಅಲ್ಲದೆ ನನ್ನ ಮಲತಾಯಿಯ ಕುಟಿಲ ಹಸ್ತದ ಕೇವಲ ಕೈಗೊಂಬೆ ತಾನೆಂದು ಅವಳಿಗೆ ಅರ್ಥವಾಗಲಿಲ್ಲವೆ? ಆದರೆ ಎಲ್ಲೋ ಒಂದು ಕಡೆ

ನನಗೂ ನೆಮ್ಮದಿಯಾಯಿತು. ಚಿತ್ತೂರಿನಲ್ಲಿಯೇ ಉಳಿದುಕೊಂಡು, ನನ್ನ ಕೈಕೆಳಗೆ ತರಬೇತಿ ಹೊಂದಲು ತನಗೆ ಅವಕಾಶ ನೀಡಬೇಕೆಂದು ಕೆಲವು ತಿಂಗಳ ಹಿಂದೆ ನನ್ನನ್ನು ಬೇಡಿಕೊಂಡಿದ್ದ ಹೇಮಕರಣನು, ಇದೀಗ ಅವನ ತಂಗಿಯೊಂದಿಗೆ ನನ್ನ ಮದುವೆಯ ನಂತರ ನನ್ನ ವಿಷಯಕ್ಕೆ ಸ್ನೇಹಹೀನನಾಗಿಬಿಟ್ಟಿದ್ದನು. ಅವನ ತಿರಸ್ಕಾರ ತನ್ನ ವಿಷಯಕ್ಕೆ ಎಷ್ಟಿತ್ತೋ ನನ್ನ ವಿಷಯಕ್ಕೂ ಅಷ್ಟೇ ಇತ್ತು. ಅವನ ತಂಗಿಗೆ ನ್ಯಾಯಸಲ್ಲಿಸುವಷ್ಟು 'ಗಂಡಸು' ಕೂಡ ನಾನಾಗಿಲ್ಲದಿರುವಾಗ ನನ್ನನ್ನು ತನ್ನ ರಕ್ಷಕನೆಂದು ಹೇಗೆ ತಾನೆ ಪೂಜಿಸಿಯಾನು? ಈಗಂತೂ ಸುಗಂಧಳು ಮೇವಾಡದ ಮನೆಗೆ ಅಗೌರವವನ್ನು ಬೇರೆ ಉಂಟುಮಾಡಿದ್ದಳು. (ಅರಮನೆಗಳಲ್ಲಿ ಮೈದುನನೊಂದಿಗೆ ನಡೆದುಕೊಳ್ಳುವುದೇನೂ ವಿಶೇಷವಲ್ಲ, ಅದಕ್ಕಾಗಿ ಗರ್ವದಿಂದ ಮೆರೆದಾಡುವುದು ವಿಶೇಷವಾಗಿತ್ತು) ಹೇಮಕರಣನಿಗೆ ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಧೈರ್ಯವಿರಲಿಲ್ಲ. ಈಗ ನಾನು ನನ್ನ ತಪ್ಪಿನಿಂದ ಬಿಡುಗಡೆ ಹೊಂದಿದೆನೆಂದು ಭಾವಿಸಬಹುದು ಅಥವಾ ಹಾಗೆ ಸೋಗು ಹಾಕಬಹುದು. ಹೇಮಕರಣನ ಮುಜುಗರ ನನ್ನ ಆತ್ಮಕ್ಕೆ ಆಪ್ಯಾಯಮಾನವಾದ ಮುಲಾಮಾಗಿತ್ತು. ಸುಗಂಧ ಮತ್ತು ವಿಕ್ರಮಾದಿತ್ಯರು ಎಷ್ಟೆಷ್ಟು ಘೋರ ತಪ್ಪಿತಸ್ಥರು ಮತ್ತು ಲಜ್ಜೆ ಗೇಡಿಗಳಾಗಿರುತ್ತಿದ್ದರೋ ನನ್ನ ಅಂತಃಸ್ಸಾಕ್ಷಿ ಅಷ್ಟಷ್ಟೂ ಪರಿಶುದ್ಧವಾಗಿರುತ್ತಿತ್ತು.

ನಾನು ಹುತಾತ್ಮ ಪಟ್ಟವನ್ನರಸುತ್ತಿದ್ದೆ. ಅದಕ್ಕಿಂತ ಕಿಂಚಿತ್ತೂ ಕಡಿಮೆಯಾದ್ದಲ್ಲ. ನನ್ನ ತಾಳ್ಮೆ ಮತ್ತು ಪೂರ್ಣಘನತೆಯನ್ನು ಧೀರೋದಾತ್ತವೆಂಬುದಾಗಿ ಪರಿಗಣಿಸಲ್ಪಡಬೇಕೆಂದು ಬಯಸಿದ್ದೆ ಮತ್ತು ಇಡೀ ಮೇವಾಡವನ್ನು ನನ್ನ ಹೆಂಡತಿ ಮತ್ತು ತಮ್ಮನ ವಿರುದ್ಧ ತಿರುಗಿ ಬೀಳುವಂತೆ ಮಾಡಲು ಬಯಸಿದ್ದೆ. ಅವಮಾನವೆಂಬುದು ನನ್ನ ಪಾಲಿಗೆ ನೂತನ ಸಂವೇದನೆಯಲ್ಲ. ಅದರಲ್ಲಿ ನನಗಿದ್ದಷ್ಟು ಅನುಭವ ಮತ್ತು ಪರಿಣತಿ ಇನ್ನಾರಿಗೂ ಇರಲಿಲ್ಲ. ಇಷ್ಟಾದರೂ ನನ್ನ ಉದ್ದೇಶಗಳಿಗೆ ಅಷ್ಟೊಂದು ಸ್ಫುಟವಾಗಿ ಸ್ಪಷ್ಟ ರೂಪ ನೀಡಿದ್ದರೂ ಹಗಲಿನಲ್ಲಿ ನನ್ನ ವಿಸ್ತೃತ ಬಂಧು ಬಳಗಕ್ಕೆ ಮುಖ ತೋರಿಸಬೇಕೆಂದರೆ ಅಥವಾ ಅದಕ್ಕಿಂತ ಹೆಚ್ಚಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳಬೇಕೆಂದರೆ ಧೈರ್ಯವನ್ನು ಒಟ್ಟುಗೂಡಿಸಿಕೊಳ್ಳುವ ಮುನ್ನ ನನ್ನನ್ನು ನಾನೇ ಗಂಟೆಗಟ್ಟಲೆ ಪುಸಲಾಯಿಸಿಕೊಳ್ಳಬೇಕಾಗುತ್ತಿತ್ತು.

ಇನ್ನಿತರೆ ದುರದೃಷ್ಟಕರ ಅಡ್ಡಪರಿಣಾಮಗಳ ಪ್ರಾಮುಖ್ಯವನ್ನು ಕಡಮೆ ಮಾಡುವುದು ಬೇಡ. ದಿನಗಳು ಕಳೆದಂತೆ ನನ್ನ ಕೆಲಸದಲ್ಲಿ ಹಾಗೂ ಅಧಿಕಾರದ ಸರಣಿಯಲ್ಲಿ ನಾನು ಹೆಚ್ಚು ಹೆಚ್ಚು ನಿರರ್ಥಕನಾಗ ತೊಡಗಿದ್ದೆ. ಯುದ್ಧರಂಗದಲ್ಲಿ ನನ್ನ ಸಾಮರ್ಥ್ಯವನ್ನು ಮತ್ತೆ ಮತ್ತೆ ಸಾಧಿಸಿ ತೋರಿಸಿದ್ದೆ. ಆದರೆ ಯಾರೂ ಅದನ್ನು ಗುರುತಿಸುವ ಮನಃಸ್ಥಿತಿಯಲ್ಲಿರಲಿಲ್ಲ. ಹಾಸಿಗೆಯಲ್ಲಿ, ಕ್ಷಮತೆ ಇಲ್ಲವೆಂದಾದರೆ, ಪ್ರಯೋಜನವಿಲ್ಲದ ವ್ಯಕ್ತಿ. ಅಲ್ಲಿಗೆ ಅದು ಮುಗಿಯಿತು.

ಪ್ರಸ್ತದ ಹಾಸಿಗೆಯೇ ಪ್ರಭುತ್ವದ ಸಾಮರ್ಥ್ಯವನ್ನಳೆಯುವ ಮತ್ತು ಸಾಧಿಸುವ ಕ್ಷೇತ್ರವೆಂದು ಜನ ಭಾವಿಸುತ್ತಾರೆ. ನನಗೆ ಎರಡನೇ ಅವಕಾಶವನ್ನು ನೀಡಲಾಗಿತ್ತು. ಮತ್ತೆ ನಾನು ಋಜುವಾತುಪಡಿಸುವಲ್ಲಿ ಸೋತಿದ್ದೆ. ಹೆಂಡತಿಯನ್ನು ಹತೋಟಿಯಲ್ಲಿಡಲು ಸಾಧ್ಯವಾಗದಿದ್ದಲ್ಲಿ ಆಡಳಿತಾತ್ಮಕ ಅಥವಾ ಸೈನಿಕ ಕೌಶಲ ಏನು ಪ್ರಯೋಜನಕ್ಕೆ ಬಂದಾವು?

ಒಂದು ತಿಂಗಳ ಹಿಂದೆ, ಅಣ್ಣ ಮತ್ತು ತಂಗಿ ಅಡಗಿದ ದನಿಯಲ್ಲಿ ವಾಕ್ಕಲಹವಾಡುತ್ತಿದ್ದುದನ್ನು ಕೇಳಿದೆ ಅಥವಾ ಹೇಳಬೇಕೆಂದರೆ ಅಣ್ಣನು ಪಿಸುಗುಟ್ಟುತ್ತ ಮಾತನಾಡಲು ಪ್ರಯತ್ನಿಸುತ್ತಿದ್ದನು. ಆದರೆ ಸುಗಂಧಳು ಚಿತ್ತೂರು ನಗರವನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದಳು.

"ನಿನ್ನ ಯಜಮಾನರು ನಿನ್ನ ಜೊತೆ ಇರದೆ ಇದ್ದರೆ, ನೀನು ಷಿಕಾರಿಗೆ ಹೋಗುವುದಿಲ್ಲ"

"ನಾನು ಹೋಗುವುದಿಲ್ಲವೆ? ನೋಡುತ್ತಾ ಇರು"

"ಇದರ ಪರಿಣಾಮಗಳೇನು ಎಂದು ಯೋಚಿಸು ಸುಗಂಧ. ನಾವು ಮಿತ್ರ ರಾಜ್ಯಗಳು. ನಾವು ಬಂಧುಗಳು. ನಮ್ಮ ಜೀವಗಳಿಗೆ, ನಮ್ಮ ಸ್ವಾತಂತ್ರ್ಯಕ್ಕೆ ಮತ್ತು ಚಂದೇರಿಗೆ ನಾವು ಅವರಿಗೆ ಕೃತಜ್ಞರಾಗಿದ್ದೇವೆ. ನಾವು ಮತ್ತೊಮ್ಮೆ ಕಷ್ಟಕ್ಕೆ ಸಿಕ್ಕಿಕೊಂಡರೆ, ಯಾವ ರಜಪೂತ್ ರಾವ್ ಅಥವಾ ರಾವತ್ ನಮ್ಮ ಸಹಾಯಕ್ಕೆ ಬರುವುದಿಲ್ಲ. ಮಹಾರಾಣಾ ಅವರಂತೂ ಖಂಡಿತವಾಗಿಯೂ ಬರುವುದಿಲ್ಲ."

"ಬಾಬರನನ್ನು ಎದುರಿಸಲು ಮಹಾರಾಣಾ ಅವರಿಗೆ ನಮ್ಮ ಸಹಾಯ ಬೇಕಾಗಿದೆ. ಅವರ ಸಹಾಯ ನಮಗಲ್ಲ. ನಿನ್ನ ಸಲುವಾಗಿ ಆಗಲಿ, ಅಪ್ಪನ ಸಲುವಾಗಿ ಆಗಲಿ ನಾನು ನನ್ನ ಜೀವ ಬಲಿಕೊಡಲು ಹೋಗುವುದಿಲ್ಲ. ಈ ಗೋಜಲಿನಲ್ಲಿ ನನ್ನನ್ನು ಸಿಕ್ಕಿ ಹಾಕಿಸಿದ್ದು ಅಪ್ಪ. ಆದರೆ ನಾನು ಮಾತ್ರ ಇದರಿಂದ ಹೊರ ಬರಲು ಸಾಧ್ಯ."

"ಅಂಥ ಸಂದರ್ಭದಲ್ಲಿ ನನಗೆ ನಿನ್ನ ಜೊತೆ ಬರದೆ ಬೇರೆ ಮಾರ್ಗ ಇಲ್ಲ".

ಆಗ ನನಗೆ ಒಂದು ಹೃತ್ಪೂರ್ವಕವಾದ, ತಪ್ಪು ತಿಳಿಯಲು ಅವಕಾಶವೇ ಇಲ್ಲದಂಥ ಒಂದು ನಗೆ ಕೇಳಿಸಿತು. "ಅಪವಾದ ಬಾರದ ಹಾಗೆ ತರುಣಿಯ ಜೊತೆಯಲ್ಲಿರುವ ಒಬ್ಬ ವಿವಾಹಿತ ಮಹಿಳೆ" ಅಷ್ಟೇನೂ ಕೆಟ್ಟ ವಿಚಾರವಲ್ಲ.

ವಿಕ್ರಮಾದಿತ್ಯನು ಈ ಯೋಚನೆಗೆ ಕಾವೇರುತ್ತಿದ್ದನು.

"ನಾವಿಬ್ಬರೂ... ನೀನು ಗಮನಿಸುವೆಯಾ?"

ಹೇಮಕರಣನು ಕೋಪಮಾಡಿಕೊಂಡು ಹೊರಟು ಹೋದನು. ಅವನು ತನ್ನ ಮಾತನ್ನುಳಿಸಿಕೊಂಡನು. ಔಚಿತ್ಯದ ಕಾರಣಕ್ಕಾಗಿಯೋ ಏನೋ, ಈ ಸಂದರ್ಭದಲ್ಲಿ ಅವರು ಏನಾದರೂ ಆಗಲಿ ತನ್ನ ಸೋದರಿಯೊಂದಿಗೆ ಷಿಕಾರಿಗೆ ಹೋದನು.

ಬೇಟೆ ಮುಗಿದ ಕೂಡಲೆ ಒಂದು ರಾತ್ರಿ ಸುಗಂಧಳು ತನ್ನ ಗಂಟು ಮೂಟೆ ಕಟ್ಟಿಕೊಂಡು ಮನೆ ಬಿಟ್ಟು ಹೊರಟಳು. ಹಸಿರುಗಣ್ಣಿನ ಚೆಲುವೆ ಅವಳಿಗಾಗಿ ನಮ್ಮ ಖಾಸಗಿ ಕೊಠಡಿಗಳ ಹೊರಗಡೆ ಬಾಗಿಲ ಬಳಿ ಕಾಯುತ್ತಿದ್ದಳು.

"ಎಲ್ಲಿಗೆ ಹೋಗುತ್ತಾ ಇದ್ದೀ ನೀನು?"

"ನಾನು ಎಲ್ಲಿಗೆ ಹೋಗುತ್ತಾ ಇದ್ದೀನಿ ಅಂತ ನೀವು ತಿಳಿದು ಕೊಂಡಿದ್ದೀರಿ?"

"ನಾನು ಊಹಿಸುವ ಸಾಹಸ ಮಾಡಬಹುದು. ಆದರೆ ನೀನು ಹೇಳಬೇಕು ಎನ್ನುವುದು ನನ್ನ ಇಚ್ಛೆ".

ಸುಗಂಧ ಬೆಳಿಗ್ಗೆ ಅಥವಾ ಸಾಯಂಕಾಲ, ನಾನು ನನ್ನ ಕೆಲಸದಲ್ಲಿ ವ್ಯಸ್ತನಾಗಿದ್ದಾಗ, ಹಾಗೂ ಕಿರಿಯ ಸಂತಳು ಬೃಂದಾವನಿ ದೇವಸ್ಥಾನದಲ್ಲಿ ಆರತಿ ಮಾಡುತ್ತಿದ್ದಾಗ ಬಿಟ್ಟು ಹೊರಡಬಹುದಾಗಿತ್ತು. ಆದರೆ ಅದರಿಂದ ಅವಳ ಉದ್ದೇಶ ಈಡೇರುತ್ತಿರಲಿಲ್ಲ. ಅವಳಿಗೆ ನನ್ನ ಹಿಂದುಗಡೆ ಇದೆಲ್ಲ ಮಾಡುವುದಕ್ಕೆ ಇಷ್ಟವಿರಲಿಲ್ಲ. ಅಥವಾ ನಿರ್ದಾಕ್ಷಣ್ಯವಾಗಿ ಹೇಳಬೇಕೆಂದರೆ, ಅವಳು ಹೊಸದಾಗಿ ಕಂಡುಕೊಂಡ ತನ್ನ ಖಾಸಗಿ ಬದುಕಿನ ಹೊಲಸಿನ ವಿವರಗಳು ನನಗೆ ಗೊತ್ತಾಗುವ ಹಾಗೆ ಮಾಡಬೇಕೆಂದಿಚ್ಛಿಸಿದ್ದಳು.

"ನಾನು ವಿಕ್ರಮಾದಿತ್ಯನ ಕೊಠಡಿಗೆ ಹೋಗುತ್ತಾ ಇದ್ದೀನಿ"

"ಆದಷ್ಟು ಒಳ್ಳೆಯ ಯೋಚನೆ ಎಂದು ನನಗನ್ನಿಸಲ್ಲ ಚಿನ್ನ"

"ನನ್ನ ಚಿನ್ನ ಅಂತ ಹೇಳಬೇಡಿ"

"ನಿನ್ನ ಪಾಡಿಗೆ ನೀನೊಬ್ಬಳೇ ಇದ್ದಾಗ ಏನು ಮಾಡುತ್ತೀಯಾ ಅನ್ನುವುದು ನಿನ್ನ ವ್ಯವಹಾರ. ಆದರೆ ನಿನ್ನ ಸ್ಥಾನ ಏನಿದ್ದರೂ ಅದು ನಿನ್ನ ಗಂಡನ ಮನೆಯಲ್ಲಿ"

"ಎಂಥಾ ಗಂಡ ಯಾವ ಮನುಷ್ಯ ನನ್ನನ್ನು...?"

"ನಾವಿಬ್ಬರೂ ಒಬ್ಬನೇ ಪತಿಯನ್ನು ಹಂಚಿಕೊಂಡಿದ್ದೇವೆ ಅಂತ ನಾನು ನಂಬಿದ್ದೇನೆ. ಆದರೆ ಮಹಾಸ್ವಾಮಿ ಮಹಾರಾಜ್‌ಕುಮಾರ್ ಅವರ ಬಗ್ಗೆ ನೀನು ಕೆಟ್ಟ ಮಾತು ಆಡಲು ನಾನು ಅವಕಾಶಕೊಡುವುದಿಲ್ಲ".

"ನೀವು ಅವರಿಗೆ ಸೇರುತ್ತೀರಿ. ನಾನು ದೂರ ಹೋಗುತ್ತಿದ್ದೀನಿ. ನಾನು ಆಷಾಢ ಭೂತಿಯಾಗಿರುವುದಕ್ಕಿಂತ ಪ್ರಾಮಾಣಿಕವಾಗಿರಲಿಚ್ಛಿಸುತ್ತೇನೆ".

"ರಾಜತ್ವ ಎನ್ನುವುದು ಒಂದು ಸಂಸ್ಥೆ. ವಸ್ತು ಬಹಳ ಮುಖ್ಯವಾದ್ದು. ಆದರೆ ಅದರ ಗೈರು ಹಾಜರಿಯಲ್ಲಿ ವಸ್ತುವೂ ಬರುತ್ತದೆ ಎನ್ನುವ ಭರವಸೆಯಲ್ಲಿ 'ರೂಪ'ವೇ ಮುಂದುವರಿಯ ಬೇಕಾಗುತ್ತದೆ. ನಿನ್ನ ಸಾಮಾನುಗಳನ್ನೆಲ್ಲಾ ಎಲ್ಲಿದ್ದುವೋ ಅಲ್ಲೇ ಬಿಟ್ಟು ಬಿಡು".

"ನಾನು ಹಾಗೆ ಮಾಡದೆ ಇದ್ದರೆ ನೀವು ಏನು ಮಾಡುತ್ತೀರಿ ಅಂತ ಕೇಳಬಹುದೆ?"

ಕಿರಿಯ ಸಂತಳ ದನಿ ರಸಹೀನವಾಗಿತ್ತು "ನಾನು ನಿನ್ನ ಕಾಲು ಮುರಿದು, ಹೊರಗಡೆಯಿಂದ ನಿನ್ನ ಕೋಣೆಗೆ ಬೀಗಹಾಕ್ತೀನಿ"

"ಅದು ನನ್ನನ್ನು ತಡೆದು ನಿಲ್ಲಿಸುವುದಿಲ್ಲ. ನನ್ನ ಮನಸ್ಸು ಸ್ತಿಮಿತಕ್ಕೆ ಬಂದ ಮೇಲೆ, ನಾನು ಇಲ್ಲಿಂದ ಹೊರಡುತ್ತೇನೆ".

"ಇಲ್ಲ, ನೀನು ಹೊರಡಲ್ಲ. ನಾನು ತಿರುಗಿ ನಿನ್ನ ಕಾಲು ಮುರಿತೀನಿ"

ನನ್ನ ಎರಡನೇ ಹೆಂಡತಿ ಕಿರಿಯ ಸಂತಳ ನಿರ್ಧಾರವನ್ನು ಪರೀಕ್ಷಿಸುವ ಗೊಡವೆಗೆ ಹೋಗಲಿಲ್ಲ.

* * *

ಮಾಳ್ವದ ಮೇಲಿನ ನಮ್ಮ ವಿಜಯವನ್ನು ನಾವು ಸಂಭ್ರಮದಿಂದ ಆಚರಿಸಿದ್ದೆವು. ಆದರೆ ಕಾರ್ಯ ಕಲಾಪಗಳ ಒತ್ತಡದಲ್ಲಿ, ಪುಷ್ಕರದಲ್ಲಿ ರಾಣಾ ಅವರು ನಡೆಸಬೇಕಾಗಿದ್ದ ಅಭಿವಂದನಾ ಸಮಾರಂಭವನ್ನು ತಂದೆಯವರು ಮುಂದೆ ಹಾಕುತ್ತಲೇ ಇದ್ದರು. ಎಲ್ಲ ದೇವರುಗಳಲ್ಲಿ ಬ್ರಹ್ಮ ದೇವನು ಅತ್ಯಂತ ಸೌಮ್ಯ ಮತ್ತು ಯಾರ ಗಮನವನ್ನೂ ಸೆಳೆಯದ ದೇವರು. ಆದರೆ ಅವನು ಈ ವಿಶ್ವದ ಸೃಷ್ಟಿಕರ್ತ ಎಂಬುದನ್ನು ಯಾರೂ ಮರೆಯುವಂಥ ಧೈರ್ಯ ಮಾಡುವುದಿಲ್ಲ. ಪುಷ್ಕರಕ್ಕೆ ಭೇಟಿ ನೀಡಿದ್ದೆಂಬುದು ನಮಸ್ಕರಿಸಲೇ ಬೇಕಾದ ಅನಿವಾರ್ಯತೆಗಿಂತ ಹೆಚ್ಚಿನದು. ಕಾರಣ ಬ್ರಹ್ಮದೇವರು ಯಜ್ಞ ಮಾಡಬೇಕೆಂದಿದ್ದಾಗ, ಯಾವ ಜಾಗದಲ್ಲಿ ಕಮಲದ ಮೊಗ್ಗೊಂದನ್ನು ಎಚ್ಚರಿಕೆಯಿಂದ ಹಾಕಿ ಅದು ಅರಳುವಂತೆ ಮಾಡಿದ್ದನೋ ಆ ಜಾಗವೇ ಪುಷ್ಕರ. ಪುಷ್ಕರ ಸರೋವರ ಕೇವಲ ದೇಶದ ಅತ್ಯಂತ ಪವಿತ್ರ ಕ್ಷೇತ್ರಗಳಲ್ಲೊಂದು ಅಷ್ಟೇ ಅಲ್ಲ; ಪಾವಿತ್ರ್ಯ ಮತ್ತು ಪರಿಶುದ್ಧತೆಯಲ್ಲಿ ಹಿಮಾಲಯದ ಮಾನಸ ಸರೋವರಕ್ಕೆ ಮಾತ್ರ ಎರಡನೆಯದು. ನಿಜಕ್ಕೂ ಅದು ಈ ಮರುಭೂಮಿಯಲ್ಲೊಂದು ಮೋಹಕ ಬಳ್ಳಿ ಮಾಡ. ಅಲ್ಲದೆ ಅದು ನಮ್ಮ ಕುಟುಂಬಕ್ಕೆ ಅತ್ಯಂತ ಅಚ್ಚುಮೆಚ್ಚಿನದು.

ತಂದೆಯವರು ಮತ್ತು ನಾನು ಇಬ್ಬರೂ ನಮ್ಮ ಪಾಡಿಗೆ ನಾವು ಕುದುರೆಯ ಬೆನ್ನೇರಿ ಹೋಗಿ ಬಿಡುವುದೆಂದು ಲೆಕ್ಕಹಾಕಿದ್ದೆವು. ಆಗ ಹಸಿರುಗಣ್ಣಿನ ಚೆಲುವೆ ನಮ್ಮೊಂದಿಗೆ ಸೇರಿಕೊಳ್ಳಲು ತೀರ್ಮಾನಿಸಿದಳು.

"ನನ್ನ ಆತಂಕವೆಂದರೆ, ಅದು ಸಾಧ್ಯವಿಲ್ಲ ಎನ್ನುವುದು. ಕಾರಣ ನಾವು ಎಲ್ಲೂ ನಿಲ್ಲದೆ ನಿರಂತರವಾಗಿ ಕುದುರೆಯ ಬೆನ್ನೇರಿ ಹೋಗಿ ಸಮರ ಸಮಿತಿಯ ಸಭೆಗೆ ಸಿದ್ಧತೆ ನಡೆಸುವ ಸಲುವಾಗಿ ಒಂದು ವಾರದೊಳಗಾಗಿ ಹಿಂತಿರುಗಿ ಬಿಡುವುದೆಂದು ಯೋಜಿಸಿದ್ದೇವೆ".

"ನಾನು ಅತ್ಯಂತ ವೇಗವಾಗಿ ಸಾಗುವವರೊಂದಿಗೆ ಕುದುರೆಯೇರಿ ಬರಬಲ್ಲೆ. ಬೇಕಾದರೆ ಮಹಾರಾಜ್‌ಕುಮಾರ್ ಅವರನ್ನು ಕೇಳಿ" "ರಣಕ್‌ಪುರಕ್ಕೆ ಹೋಗುವಾಗ ಕುದುರೆ ಸವಾರಿ ಸ್ಪರ್ಧೆಯಲ್ಲಿ ನಾನು ಅವರನ್ನು ಸೋಲಿಸಿದ್ದೆ" ನನ್ನ ಹೆಂಡತಿ ಈ ವಿಷಯದಲ್ಲಿ ಆಗಲೇ ತಾನು ನಿರ್ಧಾರ ಮಾಡಿಬಿಟ್ಟಿದ್ದಳು. ಅದು ನಿಜವಲ್ಲ ಎಂದು ಹೇಳಿ ಅದನ್ನು ಇನ್ನೇನು ವಿರೋಧಿಸಬೇಕೆಂದಿದ್ದೆ. ಆದರೆ ಆಮೇಲೆ ಬೇರೆ ರೀತಿಯಲ್ಲಿ ಯೋಚಿಸಿದೆ.

ಇದ್ದಕ್ಕಿದ್ದಂತೆ ಪುಷ್ಕರವು ಈ ವರ್ಷದ ಒಂದು ವಿಶೇಷ ಘಟನೆಯಾಗಿ ಬಿಟ್ಟಿದೆ. ಮರುದಿನದಿಂದ ಎರಡೂವರೆ ಕಾಲು ಇರುವ ಕುದುರೆ ಹೊಂದಿದ್ದು ಅದರ ಮೇಲೆ ಕೂರಬಹುದಾದ ಪ್ರತಿಯೊಬ್ಬನೂ ನಮ್ಮ ಜೊತೆ ಬರುತ್ತಿದ್ದನು. ನಾವು ವನಭೋಜನಕ್ಕೆ ಹೋಗುತ್ತಾ ಇಲ್ಲ. ನಾವು ಹೋಗುತ್ತಾ ಇರುವುದು ಪವಿತ್ರ ಕಾರ್ಯಕ್ಕೆ ಎಂದು ತಂದೆಯವರು ಹೆಂಗಸರಿಗೆ ಖಡಾ ಖಂಡಿತವಾಗಿ ಹೇಳಲು ಪ್ರಯತ್ನಿಸಿದರು. ಆದರೆ ಈ ಬಾರಿ ಸಂಗತಿಗಳು ಅವರ ಹತೋಟಿ ಮೀರಿದ್ದುವು. ನನ್ನ ತಾಯಿ ಸ್ವತಃ ಮಹಾರಾಣಿಯೇ ಹೊರಟಿದ್ದರು. ಅದೇ ರೀತಿ ರಾಣಿ ಕರ್ಮವತಿ ಅವಳ ಮಗ ಮತ್ತು ಅವನ ಹೆಂಡತಿ ಹೊರಟಿದ್ದರು.

ಯಾರೂ ಅಧಿಕೃತವಾಗಿ ಅವಳನ್ನು ಕೇಳದೆ ಇದ್ದರೂ, ರಾಜಕುಮಾರಿ ಈ ಹೊರ ವಿಹಾರದ ನೇತೃತ್ವವನ್ನು ವಹಿಸಿಕೊಂಡಿದ್ದಳು. ನಮಗಿಂತ ಮುಂಚೆ ನಮ್ಮ ಸಾಮಾನು ಸರಂಜಾಮುಗಳನ್ನು ಹೊತ್ತ ಒಂದು ಯಾತ್ರಿಕರ ತಂಡ ಹೊರಡುವುದು. ನಾಲ್ಕುದಿನದ ಪ್ರಯಾಣ, ಐದು, ಆರನೇ ದಿನ ಪುಷ್ಕರದಲ್ಲಿ ಉಳಿಯುವುದು. ಮತ್ತೆ ಮರು ಪ್ರಯಾಣಕ್ಕೆ ನಾಲ್ಕು ದಿನ. ಪುರುಷರು ಮತ್ತು ಸ್ತ್ರೀಯರು ಇಬ್ಬರಿಗೂ ಅವರು ಧರಿಸಬೇಕಾದ ಉಡುಪಿನ ಸಂಬಂಧದಲ್ಲಿ ಪ್ರತಿಯೊಂದು ದಿನಕ್ಕೂ ಒಂದು ವಸ್ತ್ರ ಸಂಹಿತೆ ಗೊತ್ತು ಪಡಿಸಲಾಗಿತ್ತು. ಮೊದಲ ನಾಲ್ಕು ದಿನ ಸಾಯಂಕಾಲದ ಹೊತ್ತು ಧಾಕಾ, ಪೈಠನಿ, ಇಕ್ಕತ್ ಮತ್ತು ಬಾಲುಚೆರಿ; ಪುಷ್ಕರದಲ್ಲಿ ಮೊದಲ ದಿನ ಬಿಳಿಯ ಉಡುಪು, ಎರಡನೇ ದಿನ ನೇರಳೇ ಬಣ್ಣದ ಉಡುಪು. ಈ ರೀತಿಯ ತಕ್ಷಣದ ತಂತ್ರಗಳು ಮತ್ತು ನಿಯಮಗಳನ್ನು ವಿಧಿಸುತ್ತ ಅಪಾರ ಜನ ಸಂದಣಿಯ ತಲೆ ಬಿಸಿ ಮಾಡುತ್ತಿದ್ದವಳೆಂದರೆ ಕಿರಿಯ ಸಂತಳು ಎಂಬುದನ್ನು ನಂಬಿ. ಹೀಗೆ ಮಾಡಿದ್ದರಲ್ಲಿ ಅರಮನೆಯ ನಾರಿಯರಿಗೆ ಸಿದ್ಧತೆಯ ಹುಚ್ಚು ಕೆರಳಿಸುವುದು ಬಿಟ್ಟರೆ. ಅವರಿಗೆ ಇದರಿಂದ ಇನ್ನೇನೂ ಸಿಕ್ಕುತ್ತಿರಲಿಲ್ಲ.

ಬಟ್ಟೆಗಳಿಗೆ ಸಂಬಂಧ ಪಟ್ಟ ಹಾಗೆ, ಅರಮನೆಯ ನಾರಿಯರೇನೂ ಬಡವರಾಗಿರಲಿಲ್ಲ ಎಂದು ನೀವು ಊಹಿಸುತ್ತೀರಿ. ಆದರೆ ಅಂತಃಪುರದಲ್ಲಿ ಇದ್ದಕ್ಕಿದ್ದಂತೆ ನೇರಿಳೆ ಬಣ್ಣದ ರವಿಕೆಗಳು, ಧಾಕಾಗಳು, ಬಿಳಿಯ ವಸ್ತ್ರಗಳು ಅಥವಾ ಬಾಲುಚೆರಿಗಳು ಇಲ್ಲವಾದವು. ಅದೂ ಅಲ್ಲದೆ ಯಾರ ಜೊತೆಯಾದರೂ ಮಾತುಕತೆಯಾಡುವುದಾಗಲಿ ಅಥವಾ ರಾತ್ರಿಯ ಹೊತ್ತು ಕೆಲ ಗಂಟೆಗಳ ಕಾಲ ನಿದ್ದೆ ಮಾಡುವುದಾಗಲಿ ಸಾಧ್ಯವಾಗುತ್ತಿರಲಿಲ್ಲ. ಆ ಇಡೀ ಜಾಗ ಹುಚ್ಚರ ಸಂತೆಯಂತಿತ್ತು. ಇಡೀ ಚಿತ್ತೂರಿನ ಜವುಳಿ ಮಾರುಕಟ್ಟೆ

ಅರಮನೆಯಲ್ಲೇ ಬೀಡು ಬಿಟ್ಟಿತ್ತು. ಹಾಗೂ ಬಟ್ಟೆ ವ್ಯಾಪಾರಿಗಳು ರಾಣಿವಾಸವನ್ನು ಇಪ್ಪತ್ತ ನಾಲ್ಕು ಗಂಟೆಯೂ ಮುತ್ತಿರುತ್ತಿದ್ದರು. ದರ್ಜಿಗಳು, ದಾಸಿಯರು, ಹಿಜಡಾಗಳು, ರಾಣಿ ಕರ್ಮವತಿ ಹಾಗೂ ಮನೆಯ ಇತರೆ ಹೆಂಗಸರೊಂದಿಗೆ ಬಟ್ಟೆ ಕತ್ತರಿಸುವುದು, ಹೊಲಿಯುವುದು, ಚೋಳಿಗಳನ್ನು ಕಳಚುವುದು, ತಲೆಯ ಮೇಲಿನ ಹೊದಿಕೆಗಳಿಗೆ ಸುತ್ತುಗಟ್ಟು ಹೊಲಿಯುವುದರಲ್ಲಿ ತೊಡಗಿದ್ದರು. ನನ್ನ ಒಂದೇ ಒಂದು ಸಮಾಧಾನವೆಂದರೆ, ನಾವು ಇಲ್ಲಿಂದ ಹೊರಡುವ ವೇಳೆಗೆ, ಬಹಳಷ್ಟು ಜನ ಹೆಂಗಸರು ಮತ್ತು ಅವರ ಗಂಡಂದಿರು ಖಂಡಿತವಾಗಿಯೂ ಬರುವುದನ್ನು ಕೈ ಬಿಡುತ್ತಾರೆ ಎಂಬುದು. ಈ ವಿಷಯದಲ್ಲಿ ನನ್ನ ತಿಳುವಳಿಕೆ ಹೆಚ್ಚು ತಪ್ಪಾಗಿರಲು ಸಾಧ್ಯವಿಲ್ಲ.

ಬಿಕ್ಕಟ್ಟಿನ ಪರಿಸ್ಥಿತಿಗಳು ಜನರನ್ನು ಒಟ್ಟುಗೂಡಿಸುತ್ತದೆ ಎಂದು ನಾವು ಭಾವಿಸಿಕೊಂಡು ಬಿಡುತ್ತೇವೆ. ರಜಪೂತ ರಾಜ್ಯವೊಂದು ಸತತವಾಗಿ ಬಿಕ್ಕಟ್ಟಿನಲ್ಲಿದೆ ಮತ್ತು ಆ ತರ್ಕದ ಮೇರೆಗೆ, ಜಗತ್ತಿನಲ್ಲಿಯೇ ನಾವು ತೀರಾ ಒಟ್ಟಾಗಿ ಕೂಡಿದ ಜನವಾಗಿರಬೇಕು. ಆದರೆ ಯುದ್ಧದಿಂದ ಮತ್ತು ವಿಪತ್ತಿನಿಂದ ಏರ್ಪಡುವ ಐಕ್ಯತೆಯ ಮೂಲ ಭಯದಲ್ಲಿದೆ. ಭಯವೆಂಬುದು ಮಾನವ ಭಾವಗಳಲ್ಲಿ ಅತ್ಯಂತ ವಿನಾಶಾತ್ಮಕವಾದ್ದು. ಅದು ಆತ್ಮವನ್ನು ಹಾಳುಮಾಡುತ್ತದೆ ಹಾಗೂ ಅದರಿಂದ ಉಂಟಾಗುವ ಸ್ನೇಹಭಾವ ಮಿಥ್ಯ ಮತ್ತು ಬಲವಂತದಿಂದ ಆದದ್ದು. ಆ ನಾಲ್ಕು ದಿನಗಳ ಸಂತಸವೆಂಬುದು ನಮ್ಮೊಂದಿಗೆ ಉಳಿದಿರುತ್ತದೆ ಹಾಗೂ ನಾವು ಒಬ್ಬರು ಇನ್ನೊಬ್ಬರ ವಿಷಯಕ್ಕೆ ಹೆಚ್ಚು ಸಹನೆ ಉಳ್ಳವರಾಗುತ್ತೇವೆಯೆ ಎಂಬುದು ನನಗೆ ತಿಳಿಯದು. ಆದರೆ ಇದಕ್ಕೆ ನಾನು ಹೊಣೆ ಹೊರುತ್ತೇನೆ. ನೋವೊಂದೇ ಕಟು ವಾಸ್ತವವಿದ್ದೀತು. ಆದರೆ ಮನುಕುಲಕ್ಕೇನಾದರೂ ವಿವೇಕವಿದ್ದದ್ದೇ ಆದರೆ, ಅದು ಸುಖವೆಂಬ ಭ್ರಾಂತಿಯನ್ನು ಬೆನ್ನಟ್ಟಿ ಹೋಗುತ್ತದೆ. ವಿಶ್ವ ನಿಯಮದಲ್ಲಿ ನೋವು ಮತ್ತು ನರಳಿಕೆಗೆ ಸ್ಥಾನವುಂಟೆಂದು ಸಾರುವ ಎಲ್ಲ ದಾರ್ಶನಿಕರು ಮತ್ತು ಕವಿಗಳನ್ನು ಅವರು ಸ್ವಾಗತಿಸುತ್ತಾರೆ. ಅವರೆಲ್ಲರೂ ಮೋಸಗಾರರು. ನಾವು ನೋವನ್ನು ಸಮರ್ಥಿಸುತ್ತೇವೆ. ಕಾರಣ ಅದರಿಂದ ಏನು ಮಾಡಬೇಕೆಂದು ನಮಗೆ ತಿಳಿಯುತ್ತಿಲ್ಲ. ಅಲ್ಲದೆ ಅದನ್ನು ಸಹಿಸುವುದರ ಹೊರತು ನಮಗೆ ಬೇರೆ ಆಯ್ಕೆ ಇಲ್ಲ. ಸಂತೋಷವೊಂದೇ ತಾತ್ಕಾಲಿಕವಾಗಿಯಾದರೂ ನಮ್ಮನ್ನು ನಮಗಿಂತ ದೊಡ್ಡದಾಗಿ ಮಾಡಬಲ್ಲುದು. ಯಾವಾಗಲೂ ಅಲ್ಲದಿದ್ದರೂ ವಿಶೇಷ ಸಂದರ್ಭದಲ್ಲಾದರೂ ಸ್ವಾರ್ಥದ ಗೀಳಿನಿಂದ ನಮ್ಮನ್ನು ಬಿಡಿಸಬಲ್ಲುದು.

ಪುಷ್ಕರದ ನಮ್ಮ ಪ್ರವಾಸ ಸರಳ ಸುಂದರವಾಗಿತ್ತು. ನಾವು ನೂರಾ ಹದಿನೇಳು ಜನರಿದ್ದೆವು. ಹೆಂಗಸರು ಸಾಯಂಕಾಲದ ಹೊತ್ತು ಹಾಡುತ್ತಿದ್ದರು. ಮಕ್ಕಳು ಆಡಿ ಕುಣಿದಾಡುತ್ತಿದ್ದರು. ಸೂರ್ಯೋದಯ ಮತ್ತು ಸೂರ್ಯಾಸ್ತಗಳು ನಮ್ಮ ಬೆರಗನ್ನೂ ಮೀರಿದ್ದುವು. ನನ್ನ ಹೆಂಡತಿ ಸುಗಂಧ ವಿಕ್ರಮಾದಿತ್ಯನೊಂದಿಗೆ ಮುಂದೆ ಸಾಗಿದ್ದಳು.

ನಾನು ಆ ಕೊನೆಯ ವಾಕ್ಯ ಖಂಡವನ್ನು ಬರೆದು ನಿಲ್ಲಿಸಿದೆ. ಅದು ಅಗತ್ಯಕ್ಕೆ ತಕ್ಕ ಅಂತಸ್ತಿನ ನಾಗರಿಕ ವಿವಿಕ್ತತೆಯನ್ನು ಹೊಂದಿದ್ದು ಕುಂಚದ ವೇಗ ಚಲನೆಗಳು ಮತ್ತು ಕಿಂಚಿತ್ ಲೌಕಿಕ ನಿರಾಸಕ್ತಿಯ ಬಿಂಬಗಳಿಂದ ಕೂಡಿದ್ದಾಗಿದೆ. ಕಡೆಯ ವಾಕ್ಯದ ಕಡೆಯ ಭಾಗದಲ್ಲಿ ರಮಣೀಯ ಆವರಣ ಮತ್ತು ಅನುರಣನಗಳು ನಿರಾತಂಕವಾದ ವಾಸ್ತವಿಕ ವಿವರಗಳಿಂದ ಸೂಕ್ಷ್ಮವಾಗಿ ಶಿಥಿಲಗೊಂಡಿವೆ. ಆದರೆ ಅದೊಂದು ಚಿತ್ರ. ಪುಷ್ಕರವು ನನಗೆ ಮತ್ತು ಪ್ರಾಯಶಃ ನಮ್ಮೆಲ್ಲರಿಗೆ ಮನದಟ್ಟು ಮಾಡಿಕೊಟ್ಟ ವಿಷಯ ಒಂದಿದ್ದರೆ, ಅದು ನಾವು ನಿರ್ವಹಿಸುವ ಪಾತ್ರಗಳ ವಿನಾಶಕರ ನಿಷ್ಫಲತೆ.

ನಾವೆಷ್ಟೇ ನಿರಾಕರಿಸಿದರೂ ಚಲಾವಣೆಯಲ್ಲಿರುವ ಒಂದೇ ನಮೂನೆಗಳೊಂದಿಗೆ ನಾವು ವ್ಯವಹರಿಸುತ್ತೇವೆ. ನಮ್ಮ ಹೆಂಡತಿ, ಮಕ್ಕಳು, ಕಾರ್ಯದರ್ಶಿಗಳು, ಯಜಮಾನಿಯರು, ಮಂತ್ರಿಗಳು, ಇವರುಗಳೊಂದಿಗೆ ಹಾಗಿರಲಿ. ನಾವು ಜನಗಳನ್ನು ನೋಡುವುದಿಲ್ಲ. ಅವರ ಬಗೆಗಿನ ನಮ್ಮ ಪೂರ್ವಗ್ರಹಿಕೆಗಳೊಂದಿಗೆ ಅವರೊಂದಿಗೆ ನಾವು ಸಂವಾದ ಮಾಡುತ್ತೇವೆ. ಪುಷ್ಕರಕ್ಕೆ ಹೋಗುವ ಮಾರ್ಗದಲ್ಲಿ ನಾನು ಆಕಸ್ಮಿಕವಾಗಿ ನನ್ನ ಕುಟುಂಬವನ್ನು ವಿಸ್ತೃತ ಪರಿವಾರವನ್ನು ಕಂಡುಕೊಂಡೆನು. ಮೊದಲ ದಿನ ಸಂಜೆ, ನಾವು ಶಿಬಿರಾಗ್ನಿಯ ಸುತ್ತ ಕುಳಿತಿದ್ದೆವು. ಆಗ ನಾನು ಬೆಚ್ಚಿ ಬೀಳಿಸುವಂಥ ನನ್ನ ದನಿಯ ಅಧಿಕೃತ ಅನುಕರಣೆಯನ್ನು ಕೇಳಿದೆ.

"ಮಾಳ್ವದ ಮೇಲಿನ ನಮ್ಮ ವಿಜಯದ ಯಶಸ್ಸನ್ನು ನಾನು ಪಡೆಯಲರ್ಹನಲ್ಲವೆಂಬುದು ನನ್ನ ಆತಂಕ. ಪ್ರಭು ಮೇದಿನಿರಾಯ್ ಅವರು ಸೇನೆಯ ಪ್ರಧಾನ ದಂಡನಾಯಕರಾಗಿದ್ದರು. ಎಲ್ಲ ವ್ಯತ್ಯಾಸಕ್ಕೆ ಅದೇ ಕಾರಣ. ಅದರ ಯಶಸ್ಸಿನ ಒಂದು ಭಾಗ ಹೇಮಕರಣನಿಗೆ ಸೇರಬೇಕು. ಅವನೊಬ್ಬ ಬದ್ಧತೆಯುಳ್ಳ ಬುದ್ಧಿವಂತ ಯುವಕ. ನನ್ನ ಮಿತ್ರರಾದ ತೇಜ್ ಮತ್ತು ಷಫಿ ಅವರ ಧೈರ್ಯ, ಕ್ರೌರ್ಯ ಮತ್ತು ಕೌಶಲ್ಯ ಪೂರ್ಣ ವ್ಯೂಹ ರಚನೆಗಳನ್ನು ಹೇಳದಿದ್ದರೆ, ಮೇವಾಡ ಮತ್ತು ಅದರ ಮಿತ್ರದೇಶಗಳಿಗೆ ನಾನು ಅಪಕಾರ ಮಾಡಿದಂತಾಗುತ್ತದೆ. ನಮ್ಮ ಯೋಧರ ಏಕನಿಷ್ಠೆ, ಶೌರ್ಯ, ವೇಗ ಇವುಗಳ ಮುಂದೆ ನಾನು ತಲೆಬಾಗದಿದ್ದರೆ, ಅದು ಅಕ್ಷಮ್ಯವಾಗುತ್ತದೆ. ಕಡೆಯ ಆದರೆ ಕಡಮೆಯಲ್ಲದ್ದು ಎಂದರೆ, ಮಾಳ್ವದ ಪ್ರಭು ಸುಲ್ತಾನರ ಸಹಾಯವಿಲ್ಲದಿದ್ದರೆ, ನಾವು ಹೇಗೆ ಆ ಮಹಾಯುದ್ಧವನ್ನು ಗೆಲ್ಲಲಾಗುತ್ತಿತ್ತು? ಈ ಪರಿಸ್ಥಿತಿಯಲ್ಲಿ, ಯೋಧನೊಬ್ಬನಿಗೆ ಮೇವಾಡವು ಕೊಡಮಾಡುವ ಅತ್ಯುನ್ನತ ಗೌರವವಾದ 'ವೀರವಿಜಯ'ವನ್ನು ಹಿಂತಿರುಗಿಸಲೇ ಬೇಕಾದ ಒತ್ತಾಯಕ್ಕೆ, ಸಿಲುಕಿದ್ದೇನೆ, ಇಲ್ಲ ನನಗೆ ಬೇರೆ ಆಯ್ಕೆಯೇ ಇಲ್ಲ.

"ನನ್ನನ್ನು ತಪ್ಪು ತಿಳಿಯಬಾರದೆಂದು ನಾನು ಬೇಡಿಕೊಳ್ಳುತ್ತೇನೆ. ಮೇವಾಡದ ಜನಗಳಿಗಾಗಲಿ, ಅಥವಾ ಮಹಾಪ್ರಭು ರಾಣಾ ಅವರಿಗಾಗಲಿ ಅಗೌರವ ತೋರುವುದು ನನಗಿಷ್ಟವಿಲ್ಲ" ನನ್ನ ನಾದಿನಿ, ರತನ್ ಸಿಂಹನ ಹೆಂಡತಿ ಅಷ್ಟು ಹೇಳಿ ನಿಲ್ಲಿಸಿದಳು. ಆಗ ಪ್ರೇಕ್ಷಕರು ಅಂತಿಮವಾಗಿ ನಗುವುದನ್ನು ನಿಲ್ಲಿಸಿದರು. "ಮಹಾರಾಣಾ ಅವರು ದೀರ್ಘಾಯುಷಿಗಳಾಗಿ ಬಾಳಲಿ ಹಾಗೂ ಅವರು ಸದಾ ಪ್ರವರ್ಧಮಾನಕ್ಕೆ ಬರಲಿ ನಿಮ್ಮೆಲ್ಲರಿಗೆ ನನ್ನ ಮನಃಪೂರ್ವಕ ಕೃತಜ್ಞತೆಯ ರೂಪವಾಗಿ, ಒತ್ತಾಯಕ್ಕೆ ಒಳಗಾಗಿ ನಾನು ಕಿರೀಟವನ್ನು ಯಾವಾಗಬೇಕಾದರೂ ಒಪ್ಪಿಕೊಳ್ಳುವೆನೆಂದು ನಿಮಗೆ ತಿಳಿಸಲಿಚ್ಛಿಸುತ್ತೇನೆ".

ಇವಳು ನಾಚಿಕೆ ಸ್ವಭಾವದ, ಸ್ವಲ್ಪ ಉಗ್ಗುವ ನನ್ನ ಮೊದಲನೇ ತಮ್ಮನ ಐದನೇ ಹೆಂಡತಿ ಅದೇ ದೀಪಮಾಲಾನೇ! ಕಳೆದ ನಾಲ್ಕು ವರ್ಷಗಳಲ್ಲಿ ಇದುವರೆಗೆ ಅವಳಿಗೆ ಏಳು ಬಾರಿ 'ಹೋಯ್!' ಅನ್ನುವುದಕ್ಕಿಂತ ಹೆಚ್ಚಿಗೆ ಎಂದೂ ಹೇಳಿಲ್ಲ. ಖಂಡಿತಾಗಿಯೂ ಮೇವಾಡದ ರಾಜಕೀಯ ಸನ್ನಿವೇಶವನ್ನು ಬಹು ಸೂಕ್ಷ್ಮವಾಗಿ ಗಮನಿಸುತ್ತಿರುವವರಲ್ಲಿ ಅವಳೊಬ್ಬಳಾಗಿದ್ದಿರಲೇಬೇಕು. ಆಮೇಲೆ ಅವಳು ರಾಣಿ ಕರ್ಮವತಿಯ ಭಯಂಕರ ಚಿತ್ರವೊಂದನ್ನು ನೀಡಿದಳು. ಅದು ರಾಣಿ ಕರ್ಮವತಿಯು ಉಪಪತ್ನಿಯೊಬ್ಬಳಿಗೆ ಸಾಲವನ್ನು ಕೊಟ್ಟಿದ್ದು, ಅವಳು ಪಡೆದುಕೊಂಡ ಸಾಲದ, ಕಡೇ ಪಕ್ಷ ಒಂದು ಸಾವಿರಪಟ್ಟು ಬೆಲೆಬಾಳುವ ಆಸ್ತಿಯೊಂದನ್ನು ಸಾಲದ ಭದ್ರತೆಗಾಗಿ ಅವಳಿಂದ ಪಡೆದುಕೊಂಡದ್ದೇ ಅಲ್ಲದೆ, ಯಾರೂ ಕೇಳರಿಯದಷ್ಟು ಬಡ್ಡಿಯನ್ನು ಬೇರೆ ಹಾಕುತ್ತಿರುವ ಚಿತ್ರ. ಅದನ್ನು ಅವಳು ವಿಕ್ರಮಾದಿತ್ಯನಿಗೂ ಒಬ್ಬ ಸೇವಕಿಗೂ ನಡೆದ ಮಾತುಕತೆಯ ಮೂಲಕ ಗ್ರಹಿಸಿದ್ದಳು. ದಾಸಿಯು, ಗುಲಾಬಿ ತೋಟದಲ್ಲಿ ವಿಕ್ರಮಾದಿತ್ಯನ್ನು ಭೇಟಿಯಾಗಲು ಸಾಧ್ಯವಾಗದೆ ಇದ್ದದಕ್ಕೆ ಕಾರಣಗಳಾಗಿ,

ತನಗೆ ದಡಾರವಾಗಿದ್ದದ್ದು, ತಾನು ಮುಟ್ಟಾಗಿದ್ದು, ಅವಳ ಗಂಡ, ಹಸಿರು ಗಣ್ಣಿನ ಚೆಲುವೆಗೆ ಕಾವಲುಗಾರಳಾಗಿ ತಾನು ಕೆಲಸ ಮಾಡಬೇಕಾಗಿರುವುದು, ಮಿದುಳು ಜ್ವರ, ಅತ್ತೆ ಬಂದು ಹೋದದ್ದು, ಹೀಗೆ ಇನ್ನಿತರ ಕಾರಣಗಳನ್ನು ಹೇಳಿದ್ದಾಗ್ಯೂ, ಪ್ರತಿಯೊಂದು ಅಡಚಣೆಯನ್ನು ನಿವಾರಿಸಿಕೊಂಡು ರಾಜಕುಮಾರ ವಿಕ್ರಮಾದಿತ್ಯನು ಅವಳ ಸಂಗ ಮಾಡಿದ್ದಕ್ಕೆ ಸಂತೋಷಿಸಿದಳು.

ಬಡಪಾಯಿ ವಿಕ್ರಮನು ಇಡೀ ಪ್ರಪಂಚವನ್ನೇ ಆಡಿಕೊಳ್ಳುತ್ತಾನೆ, ಆದರೆ ತಾನೇ ಅಸಭ್ಯ ಗೇಲಿಗೆ ಗುರಿಯಾದಾಗ ಮಿದುಳಿನ ರಕ್ತಸ್ರಾವಕ್ಕೆ ಗುರಿಯಾದಂತಾದನು. ವರ್ಣಪಟಕದ ಎಲ್ಲ ಬಣ್ಣಗಳ ಮೂಲಕವೂ ಹಾದು ಹೋದನು. ಪ್ರತಿಸಲವೂ 'ಎಂದಿಗೂ ಇಲ್ಲ' 'ಎಂದಿಗೂ ಇಲ್ಲ' ಎಂದು ಗುರುಗುಟ್ಟಿದನು. ಆಗ ಅವನ ನಾದಿನಿಯು ಅವನ ಕಾಲುಮಟ್ಟಿ ಕ್ಷಮೆ ಕೋರಿದಳು. ಅವನ ತಾಯಿಯು ಅತ್ಯಂತ ಚಾಣಾಕ್ಷಳಿದ್ದಳು. ಹಾಗಾಗಿ ತನ್ನ ಮಲಸೊಸೆಯನ್ನು ಆಶೀರ್ವದಿಸಿದಳು.

"ಓಹ್! ಮಹಾಸ್ವಾಮಿ, ತಾವು ಅತ್ಯಂತ ಜೋರಾಗಿ ನಕ್ಕಿರಿ" ಎಂದು ದೀಪಮಾಲ ನನ್ನ ಸಮೀಪ ಬಂದಾಗ, ಪಿಸುಗುಟ್ಟಿದ್ದಳು. ಮತ್ತೆ ಕೇಳಿದಳು "ನನ್ನ ಉದ್ಧಟತನವನ್ನು ಕ್ಷಮಿಸಿ. ತಾವು ನಿಜಕ್ಕೂ ಅಯೋಗ್ಯರೆಂದು ತೋರಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೀರೋ ಅಥವಾ ಈ ಸಭೆಯಲ್ಲಿ ತಾವು ಅತ್ಯಂತ ದೊಡ್ಡ ಕಪಟಿಗಳೋ?"

"ಎರಡೂ, ಎರಡೂ ರಾಜಕುಮಾರಿ" ನನ್ನ ಮಾಣಿಕ್ಯದ ಉಂಗುರವನ್ನು ಅವಳಿಗೆ ಕೊಡುತ್ತ ಹೇಳಿದೆ.

"ಮಹಾಸ್ವಾಮಿ ತಾವು ಎರಡನೆಯದಕ್ಕೆ ಅಂಟಿಕೊಳ್ಳಿ ಅದು ತಮ್ಮನ್ನು ಬಹುದೂರ ಒಯ್ಯಲಿದೆ".

ಮೇವಾಡದಲ್ಲಿ ಕಿರಿಯ ಸಂತಳಿಗಿಂತ ಒಳ್ಳೆಯ ಸಾರ್ವಜನಿಕ ವಿನೋದ ಗೋಷ್ಠಿಗಳ ವ್ಯವಸ್ಥಾಪಕರಿದ್ದಾರೆಯೆ ಎಂದು ನನ್ನ ಸಂದೇಹ. ದೀಪಮಾಲಾ ಅವಳ ವಿಸ್ಮಯಗಳಲ್ಲಿ ಮೊದಲನೆಯವಳು. ಎರಡನೇ ದಿನ ತೇಜನನ್ನು ಐಂದ್ರಜಾಲಿಕನನ್ನಾಗಿ ವೇದಿಕೆಗೆ ತಂದು ನಿಲ್ಲಿಸಿದಳು. (ಅವನು ಹಸಿರುಗಣ್ಣಿನ ಚೆಲುವೆಯನ್ನು ಗರಗಸದಿಂದ ಕತ್ತರಿಸಿ, ರಕ್ತ ಬಸಿಯುತ್ತಿರುವ ಅವಳ ಕೈಕಾಲುಗಳನ್ನು ಪ್ರೇಕ್ಷಕರ ಕಡೆಗೆ ಗಾಳಿಯಲ್ಲಿ ಎಸೆದನು. ಮತ್ತೆ ಅವುಗಳನ್ನು ಜೋಡಿಸಿದನು) ಅನಂತರ ನಂಬಿದರೆ ನಂಬಿ, ಬಿಟ್ಟರೆ ಬಿಡಿ, ನನ್ನ ಎರಡನೇ ಹೆಂಡತಿಯನ್ನು ವೇದಿಕೆಗೆ ತಂದಳು.

ಸುಗಂಧ ಏನು ಪ್ರದರ್ಶನ ನೀಡುವಳು? ಒಬ್ಬ ಉಪಪತ್ನಿಯೊಡನೆ ಅವಳು ವೇದಿಕೆಯ ಮೇಲೆ ಕುಳಿತ ನಂತರ, ಇಬ್ಬರು ಸೇವಕರು ಒಂದು ವೀಣೆ ಮತ್ತು ಒಂದು ಪಕ್ಕವಾದ್ಯವನ್ನು ಹೊತ್ತು ತಂದರು. ವೀಣೆ ದೊಡ್ಡ ಮತ್ತು ಸಣ್ಣ ಬುರುಡೆಗಳಿಂದ ಕೂಡಿದ್ದು ನಿರ್ವಹಿಸಲು ಕಷ್ಟ ಸಾಧ್ಯವಾದ ದೊಡ್ಡ ಗಾತ್ರದ ವಾದ್ಯ. ವೇದಿಕೆಯ ಮಧ್ಯಭಾಗದಲ್ಲಿ ಜಾಜ್ವಲ್ಯ ಮಾನವಾದ ದೀಪದ ಕೆಳಗೆ ಅತ್ತ ಇತ್ತ ಕಾಲು ಹಾಕಿಕೊಂಡು ಟೊಂಯ್ ಟೊಂಯ್ ಎಂದು ವೀಣೆಯನ್ನು ನುಡಿಸುತ್ತಿರುವ ನನ್ನ ಎರಡನೇ ಹೆಂಡತಿ ಸುಗಂಧಳ ವಿಷಯಕ್ಕೆ ನನಗೆ ಹಗೆತನದ ಭಾವ ಉಂಟಾಯಿತು.

ಬೇರೆಲ್ಲ ಸಂಗೀತ ವಾದ್ಯಗಳಿಗಿಂತ ವೀಣೆ ಎಂದರೆ ನನಗೆ ತುಂಬ ಇಷ್ಟ ಎಂದು ಸ್ಪಷ್ಟವಾಗಿ ಒಪ್ಪಿಕೊಂಡು ಬಿಡುವೆ. ಅದನ್ನು ತಾತ್ಸಾರವಾಗಿ ನುಡಿಸಿ ನನ್ನ ಸಂತೋಷವನ್ನು ಅವಳು ಹಾಳು ಮಾಡದಿರಲೆಂದು ಆಶಿಸಿದೆ.

ಸುಗಂಧಳು ಆತ್ಮ ವಿಶ್ವಾಸವಿಲ್ಲವಳಂತೆ ಸಂಕೋಚದಿಂದಾಗಲಿ ತಾತ್ಸಾರದಿಂದಾಗಲಿ ನುಡಿಸಲಿಲ್ಲ. ಅವಳ ಆರಂಭಿಕ ಧ್ಯಾನ ಲಘು ಅವಧಿಯದಾಗಿತ್ತು. ಆದರೆ ಸೂಕ್ಷ್ಮವಾದ ಬಾಗುಗಳಿರುವ ವಿಳಂಬಿತದಿಂದ ಅದನ್ನು ಸರಿಯಾಗಿಸಿದಳು. ಅವಳು ಏನು ಮಾಡುತ್ತಿದ್ದಾಳೆಂಬುದರ ಮರ್ಮವನ್ನು ಗ್ರಹಿಸಲು ನನಗೆ ಕೊಂಚ ಕಾಲ ಬೇಕಾಯಿತು. ಉಗ್ರ ಅಭಿಮಾನಿಗಳ ಹಾಗೆ ಅವಳು ಮಡಿವಂತಳೇನಲ್ಲ. ಅವಳ ಗುರು ದಕ್ಷಿಣದವರಾಗಿದ್ದುದರಿಂದ, ಅವಳ ತರಬೇತಿ ಮತ್ತು ಶಾಸ್ತ್ರ ನಿಷ್ಠೆ ಅವಳ ಕಲ್ಪನೆ ಮತ್ತು ಹಾಡಿನ ಭಾಗದಲ್ಲಿ ವ್ಯಕ್ತವಾಗುತ್ತಿತ್ತು. ಆದರೆ ಅವಳ ಮನಸ್ಸಿನ ಸಹಜ ಒಲವು ಕರ್ನಾಟಕ ಸಂಗೀತದ ದುರ್ಗಮ ಮಾದರಿಯನ್ನು ವಿರೋಧಿಸುತ್ತಿತ್ತು. ಎರಡು ಪ್ರವೃತ್ತಿಗಳ ನಡುವಣ ಕರ್ಷಣವು ಬಿಡುಗಡೆಯದಾಗಿರುತ್ತಿತ್ತು. ಅವಳು ಏನು ಮಾಡಬೇಕೆಂದು ಯತ್ನಿಸುತ್ತಿದ್ದಳೋ ಅದರಲ್ಲಿ ಎಲ್ಲ ಸಂದರ್ಭಗಳಲ್ಲೂ ಅವಳಿಗೆ ಯಶಸ್ಸು ದೊರೆಯಲಿಲ್ಲ. ಅದಕ್ಕೆ ಕಾರಣ ಅವಳಿನ್ನೂ ಅನುಭವ ಸಾಲದ ಯುವತಿ. ಬಹಳ ಮುಖ್ಯವಾದ್ದೇನೆಂದರೆ, ಅವಳು ನಿಗೂಢತೆಯ ಹಾಗೂ ಭಾವೋದ್ರೇಕದ ಒಂದು ತೋರಿಕೆಯನ್ನು ಸೃಷ್ಟಿಸಬಲ್ಲವಳಾಗಿದ್ದಳು. ಅದರಿಂದ ಅಲ್ಲಿ ಇದ್ದು ಕುಳಿತು ಕೇಳುವದು ಸಾರ್ಥಕವೆನ್ನುವ ಹಾಗೆ ಅವಳು ನುಡಿಸಿಯಾಳೆ ಎಂದು ನೀವು ಕುತೂಹಲ ತಾಳುವಂತಾಗುತ್ತಿತ್ತು.

ಅವಳು ನನ್ನನ್ನಾಗಲಿ ಅಲ್ಲಿ ಸೇರಿದ್ದ ಶ್ರೋತೃಗಳನ್ನಾಗಲಿ ನಿರಾಶೆಗೊಳಿಸಲಿಲ್ಲ.

ಸಂಜೆಯಲ್ಲಿ ಎರಡು ಪ್ರದರ್ಶನಗಳಿದ್ದುವು. ಒಂದು ರಾಜಕುಮಾರಿ ಪ್ರಸ್ತುತಪಡಿಸಿದ್ದು ಇನ್ನೊಂದು ಆಕಾಶ ಪ್ರಸ್ತುತಪಡಿಸಿದ್ದು. ನೀವು ಈ ವಿಶ್ವದ ನಿರ್ಮಾತೃ ಬ್ರಹ್ಮನೆಂದಾದರೆ ಸೌಂದರ್ಯ ಶಾಸ್ತ್ರದ ಎಲ್ಲ ನಿಯಮಗಳ ಮೇಲೆ ಉಗುಳಿ ಎಲ್ಲ ಸೌಂದರ್ಯ ಶಾಸ್ತ್ರಜ್ಞರು, ವರ್ಣ ಮತ್ತು ವರ್ಣ ಫಲಕದ ಸಮತೋಲನಕ್ಕೆ ಸಂಬಂಧಿಸಿದ ತಮ್ಮ ಮಾತುಗಳನ್ನು ತಮ್ಮ ಬಾಯಿಗೆ ಗಿಡಿದುಕೊಳ್ಳಲು ಹೇಳಬಹುದು. ಸಂಜೆಯ ಸಮಯದಲ್ಲಿ ಬ್ರಹ್ಮನು, ಇಡೀ ಬ್ರಹ್ಮಾಂಡವನ್ನೇ ಅಡಗಿಸಿಕೊಳ್ಳಬಲ್ಲಷ್ಟು ಅಗಲವಾದ ತನ್ನ ಅಂಗೈಗಳನ್ನು ಗಾಢ ವರ್ಣಗಳ ಕಡಾಯಿಯಲ್ಲಿ ಮುಳುಗಿಸಿ ದಿಗಂತದತ್ತ ದಿಕ್ಕಾಪಾಲಾಗಿ ಬೀಸಿ ಎರಚಿಬಿಟ್ಟನು.

ನಾನು ಸ್ವಭಾವತಃ ಅಭಿಜಾತದ ಪ್ರತಿಪಾದಕ. ನನ್ನ ಸ್ವಂತ ಬದುಕು, ಬರಹ ಹಾಗೂ ಇನ್ನಿತರೆ ಕೃತ್ಯಗಳು ಇದು ಸುಳ್ಳೆಂದು ಸಾಧಿಸಬಹುದು, ಆದರೆ ಅದು ನನ್ನ ಮನದ ಒಲವನ್ನು ವ್ಯತ್ಯಸ್ತಗೊಳಿಸಲು ಸಾಧ್ಯವಿಲ್ಲ. ನಾನು ಸ್ಪಂದಿಸುವುದೇನಿದ್ದರೂ ಅತೀವ ಸರಳತೆ, ಸ್ಫುಟವಾದ ರೇಖೆಗಳು, ವಿಶಾಲವಾದ ನೋಟಗಳು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ, ಸ್ಪಷ್ಟತೆ ಮತ್ತು ಸಂಗತಿಗಳ ತಿರುಳಿಗೆ ಹೋಗುವಂಥದ್ದು ಇವೆಲ್ಲಕ್ಕೆ. ಪುಷ್ಕರದ ಅಧಿದೈವ ಪ್ರದರ್ಶನ ಪ್ರವೃತ್ತಿಯ, ಆಡಂಬರದ, ನೀತಿ ಬಾಹಿರ, ಲಂಪಟ ಹಾಗೂ ದುಂದುಗಾರಿಕೆಯ ದೈವ. ಪ್ರದರ್ಶನ ಮಾಡದೆ ಇರಲಾರನವನು. ಅವನೊಬ್ಬ ರುಚಿಹೀನ ವಿಷಯ ಲೋಲುಪ, ಉತ್ಪ್ರೇಕ್ಷೆಯ ಮಿತಿಗಳನ್ನು ಅತಿಯಾಗಿ ಮೀರಿದವನು. ಆದರೆ ಅದಾವುದೂ ಮುಖ್ಯವಲ್ಲ, ಖಂಡಿತಾ ಅಲ್ಲ. ಅವನ ವರ್ಣಫಲಕ ಎಷ್ಟೇ ವೈದೃಶ್ಯವುಳ್ಳದ್ದು ಮತ್ತು ವೈರುಧ್ಯವುಳ್ಳದ್ದಾದರೂ, ಮುಖ್ಯವಾಗುವುದು ಒಂದೇ ಒಂದು. ಅದೆಂದರೆ ಅದು ಕೆಲಸಕ್ಕೆ ಬರುತ್ತದೆಯೆ? ಎಂಬುದು. ಉತ್ತರ ಹೌದು, ಹೌದು ಮತ್ತೆಯೂ ಹೌದು ಎಂದು. ಅದು ಬರಬಾರದು ಆದರೆ ಬರುತ್ತದೆ. ನಾನು ಹೇಳಿದ್ದನ್ನು ನಂಬುವುದು ಬೇಡ. ಪುಷ್ಕರಕ್ಕೆ ಬಂದು ನೀವೇ ನೋಡಬಹುದು.

ಅವನು ಸೂರ್ಯಾಸ್ತಗಳನ್ನು ಕಾಳಕೂಟದಂತೆ ಕರಿದು ಮಾಡುತ್ತಾನೆ. ದೇವತೆಗಳು ಮತ್ತು ರಾಕ್ಷಸರು ಸೇರಿಕೊಂಡು ವಾಸುಕಿಯನ್ನು ಹಗ್ಗವಾಗಿ ಮಾಡಿಕೊಂಡು ಅಮೃತದ ಸಲುವಾಗಿ ಸಮುದ್ರ ಮಥನ ಮಾಡಿದಾಗ, ಆ ವಾಸುಕಿಯ ಬಾಯಿಂದ ಹೊರಹೊಮ್ಮಿದ

ಕಾಳಕೂಟ ಘೋರ ಮಹಾವಿಷ. ಇಪ್ಪತ್ತು ನಿಮಿಷಗಳ ಕಾಲಾವಧಿಯಲ್ಲಿ ಗ್ರಹ ಗ್ರಹಾಂತರಗಳಲ್ಲಿ ಬೆಂಕಿ ಪ್ರಜ್ವಲಿಸುವಂತೆ ಮಾಡಿ, ಅತ್ಯಂತ ಮೃದುವಾದ, ತಣ್ಣುಗೊಳಿಸುವ ಮುಲಾಮಿನಿಂದ ಅದನ್ನು ಶಮನಗೊಳಿಸುತ್ತಾನೆ. ಮರಳಿನ ಬಿರುಗಾಳಿಗಳನ್ನು ವರ್ಷಧಾರೆಯಾಗಿ ಮತ್ತು ಪ್ರಚಂಡ ಪ್ರವಾಹಗಳಾಗಿ ಪರಿವರ್ತಿಸುತ್ತಾನೆ. ಅದು ಹೊಲಿಗೆಯ ಗುರುತಿಲ್ಲದ ಪರಿವರ್ತನೆ. ಚಂದೇರಿ ಹತ್ತಿಯ ನೆಯ್ಗೆ ಕಾಂಚೀ ಪಟ್ಟಣದ ದಪ್ಪ ರೇಷ್ಮೆಯಾಗಿ ಬಿಡುತ್ತದೆ. ಕಾವಿ ಬಣ್ಣದ ಬಟ್ಟೆ ಆಕಾಶನೀಲಿಯಾಗಿ ಬಿಡುತ್ತದೆ. ರಜಪೂತರ ಎಲ್ಲ ವೈರುಧ್ಯಗಳು, ಅತಿಗಳು ಮತ್ತು ಚರ್ವಿತ ಚರ್ವಣಗಳು, ಬೆಂಕಿ ಮತ್ತು ಮಂಜುಬಂಡೆ ಮತ್ತು ಸ್ರಾವ, ದುರಹಂಕಾರ ಮತ್ತು ಅತಿ ವಿನಯಗಳು ಎಲ್ಲಿಂದ ಹೊರಹೊಮ್ಮುತ್ತವೆಂದು ಈಗ ನಿಮಗೆ ಗೊತ್ತಾಗಿದೆ. ಹೌದು ಪುಷ್ಕರದಲ್ಲಿ ನಿಮಗೆ ಕಪ್ಪು ಮತ್ತು ಶ್ವೇತ ಸೂರ್ಯಾಸ್ತಗಳು ಕಾಣ ಸಿಗುತ್ತವೆ.

ನನಗೆ ಗೊತ್ತಿಲ್ಲದೆ ಇದ್ದ ಮರುಭೂಮಿಯ ಬೆಳಕಿನ ಬಗ್ಗೆ ನನ್ನ ಹೆಂಡತಿಗೆ ಸ್ವಲ್ಪ ವಿಚಾರ ತಿಳಿದಿತ್ತೆ? ಪುಷ್ಕರದಲ್ಲಿ ಮೊದಲ ದಿನ ಎಲ್ಲರೂ ಬಿಳಿ ಬಟ್ಟೆಯನ್ನು ಧರಿಸುವಂತೆ ಆಕೆ ಮಾಡಿದ್ದು ಅದೇ ಕಾರಣಕ್ಕೇನೆ? ಸೂರ್ಯ ಮತ್ತು ನೆರಳಿನ ಪರಸ್ಪರ ಪ್ರಭಾವವೇ ಬಹುಶಃ ಹೆಂಗಸರು ಗಂಡಸರು ದೇವಸ್ಥಾನಗಳು ಎಲ್ಲವನ್ನೂ ಅರೆಪಾರದರ್ಶಕವಾಗಿ ಮಾಡಿರಬೇಕು. ಬಿಸಿಲುಗುದುರೆಗಳೇ ನಮ್ಮಲ್ಲಿ ಯಾರೊಬ್ಬರಿಗಿಂತಲೂ ಹೆಚ್ಚು ಸತ್ವಪೂರ್ಣವಾಗಿದ್ದುವು. ಒಂದು ಸಣ್ಣ ಸುಳಿಗಾಳಿಯೂ, ನಮ್ಮನ್ನು ಛಿದ್ರಗೊಳಿಸಿ ಪವಿತ್ರ ತೀರ್ಥಕ್ಕೆ ತೂರಿಕೊಂಡು ಬಿಡುತ್ತಿತ್ತೆಂದು ನನಗೆ ಖಚಿತವಾತ್ತು.

ಪುಷ್ಕರ ತೀರ್ಥ ಜಲದ ಬಗ್ಗೆ ಒಂದು ನಿಗೂಢತೆಯಿದೆ. ತೀರ್ಥಜಲವು ನಮ್ಮನ್ನು ಪವಿತ್ರಗೊಳಿಸಿ ನಮ್ಮೆಲ್ಲ ಪಾಪಗಳನ್ನೂ ತೊಡೆದು ಹಾಕುತ್ತದೆಂದಾದರೆ, ಪುನರ್ಜನ್ಮವೆಂಬುದು ಮಿಥ್ಯೆ ಅಥವಾ ಕೊನೇ ಪಕ್ಷ ಅದು ಅನಗತ್ಯ. ಪುಷ್ಕರ ತೀರ್ಥದಲ್ಲಿ ಒಂದೇ ಒಂದು ಮುಳುಗು ಹಾಕುವುದರಿಂದ, ನಮ್ಮ ಪುನರ್ಜನ್ಮದ ಚಕ್ರವನ್ನು ಕತ್ತರಿಸಿ ಹಾಕಬಹುದು ಮತ್ತು ಮೋಕ್ಷವನ್ನು ಸಾಧಿಸಬಹುದು. ಅದೇ ರೀತಿ ಮುಸ್ಲಿಮರು ಮೆಕ್ಕಾ ಯಾತ್ರೆಯಿಂದ ಅಂಥದೇ ಸಾಧನೆ ಮಾಡಬಹುದೆಂದು ಕೇಳಿದ್ದೇನೆ. ಹಾಗೆಯೇ ಕ್ರಿಸ್ತೀಯರು ಕೇವಲ ತಮ್ಮ ತಪ್ಪೊಪ್ಪಿಗೆ ಮತ್ತು ಪಶ್ಚಾತ್ತಾಪದಿಂದ ತಮ್ಮ ಪಾಪ ಕೃತ್ಯಗಳಿಗೆ ತೆರೆ ಎಳೆಯಬಹುದೆಂದು ಕೇಳಿದ್ದೇನೆ. ಬೌದ್ಧ ಧರ್ಮ ಜಗತ್ತಿನಲ್ಲಿ ಅತ್ಯಂತ ಕಠಿಣವಾದ ಧರ್ಮವೆಂದು ಅನೇಕ ಸಲ ನನಗೆ ಅನ್ನಿಸಿದೆ. ಅದು ದೇವರ ಕುರಿತಾದ ಎಲ್ಲ ಮಾತುಗಳನ್ನೂ ದೂರವಿಡುತ್ತದಷ್ಟೇ ಅಲ್ಲ, ಅದು ತಕ್ಷಣದ ಪರಿಹಾರೋಪಾಯಗಳೇನನ್ನೂ ಒದಗಿಸುವುದಿಲ್ಲ. ಅವರು ಮಾಡಿದ ಕೃತ್ಯಗಳಿಗೆ ಅವರೇ ಹೊಣೆ ಎಂಬುದೇ ಅದರ ಆಧ್ಯಾತ್ಮಿಕತೆ.

ಹಾಗಾಗಿ ನಾನು ಪುಷ್ಕರದಲ್ಲಿ ಮುಳುಗು ಹಾಕುವುದನ್ನು ಕೈ ಬಿಟ್ಟೆನೆ? ನೀವು ಕೈ ಬಿಡುವಿರಾ? ನಾನೊಬ್ಬ ಸಂದೇಹ ವಾದಿಯಾಗಿರಬಹುದು. ಆ ಸಂದೇಹಕ್ಕೆ ಮತ್ತೆ ಮತ್ತೆ ಹೋಗುತ್ತೇನೆ. ಅಪಾಯವಾಗದಷ್ಟು ಎಚ್ಚರಿಕೆ ವಹಿಸುವಂಥ ಹಾಗೂ ಆ ನೀರಿನಲ್ಲಿ ನನ್ನ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ನಾನು ಕಪಟಿ, ಇಲ್ಲ ಅದೊಂದು ಸರಾಗವಾದ ಉತ್ತರ. ಪಾಪಗಳನ್ನು ತೊಳೆದು ಕೊಳ್ಳುವುದೆಂದರೆ. ಅದು ಇರಬಾರದಾಗಿತ್ತೆಂದು ಹೇಳಿ ಅದನ್ನು ತೊಡೆದುಕೊಳ್ಳುವುದೇ ಆಗಿದೆ. ಇಷ್ಟಾದರೂ ಗುಣಪಡಿಸುವ ಮತ್ತು ಪರಿಶುದ್ಧಗೊಳಿಸುವ ಪುಷ್ಕರ ತೀರ್ಥದ ಸಾಮರ್ಥ್ಯವನ್ನು ನಾನು ಯಾವತ್ತೂ ಅನುಮಾನಿಸಿಲ್ಲ. ನಾನು ನನ್ನ ಉಸಿರು ಬಿಗಿಹಿಡಿದು ನನ್ನ ಮನಸ್ಸು ಮರಗಟ್ಟುವವರೆಗೂ ನೀರಿನಲ್ಲೇ ಉಳಿದು ಬಿಟ್ಟೆ.

ಸೂರ್ಯದೇವನು ಬ್ರಹ್ಮದೇಗುಲದ ಅತ್ಯುನ್ನತ ಶಿಖರದ ತುದಿಯನ್ನು ಸ್ಪರ್ಶಿಸಿದಾಗ, ನಾನು ಮತ್ತು ತಂದೆಯವರು ದೇಗುಲದ ಪ್ರವೇಶದ್ವಾರದ ಬಳಿಗೆ ಹೋದೆವು. ಬ್ರಹ್ಮನ ವಾಹನವಾದ ಹಂಸವು ಎಲ್ಲ ಭಕ್ತರ ಮೇಲೆ ತನ್ನ ದೃಷ್ಟಿಯನ್ನು ಹಾಯಿಸುವುದು ಅಲ್ಲಿಯೇ. ನಾವು ಸೃಷ್ಟಿಕರ್ತನ ಎದುರಿನಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದೆವು. ನನ್ನಲ್ಲಿ ಜೀವ ಚೈತನ್ಯವನ್ನುಂಟು ಮಾಡಿದ್ದಕ್ಕೆ. ಗಾಗ್ರೋನ್‌ನಿಂದ ಹೇಮಕರಣ ತಪ್ಪಿಸಿಕೊಂಡದ್ದಕ್ಕೆ ಮಾಳ್ವದ ಸುಲ್ತಾನನ ಮೇಲೆ ನಮಗೆ ವಿಜಯವನ್ನು ಕರುಣಿಸಿದ್ದಕ್ಕೆ ನಾನು ಅವನಿಗೆ ಅತ್ಯಂತ ಕೃತಜ್ಞ. ಇಷ್ಟಾದರೂ ಆ ದೇವನಿಗೆ ವಂದನೆಗಳನ್ನರ್ಪಿಸುತ್ತಿದ್ದಾಗಲೇ ನನ್ನ ಆಲೋಚನೆಗಳು ದೆಹಲಿಯ ಬಾದಷಹನ ಸುತ್ತ ಸುತ್ತತೊಡಗಿದವು. ಬಾಬರನಿಗೆ ಅವನ ದೇವರದಲ್ಲಿದ್ದ ಸಂಪೂರ್ಣ ಭಕ್ತಿ ಮತ್ತು ನಂಬಿಕೆ ನನ್ನಲ್ಲಿತ್ತೆ? ಅವನು ಯುದ್ಧದಲ್ಲಿ ಸೋತಾಗ, 'ಹಾಗೆ ತಪ್ಪಾಗುವಂತೆ ದೇವರು ಮಾಡಿದ' ಎಂದು ಹೇಳಿದನೆ, ಅಥವಾ ಸೋಲುಗಳೆಂದರೆ, ತಾನು ಮಾಡಿದ ಪಾಪಕೃತ್ಯಗಳಿಗೆ ತೆರಬೇಕಾಗಿ ಬಂದ ದಂಡ ಎಂದು ಅವನು ಪರಿಗಣಿಸಿದನೆ? ಇಷ್ಟರಲ್ಲೇ ಮೊಗಲ್ ಬಾದಷಹನೊಂದಿಗೆ ನಾವು ಮಾಡಲೇಬೇಕಾಗಿರುವ ಯುದ್ಧದಲ್ಲಿ ಮಧ್ಯೆ ಪ್ರವೇಶಿಸಿ ಯಶಸ್ಸು ದೊರಕಿಸಿಕೊಡಬೇಕೆಂದು ನನ್ನನ್ನು ಸೃಷ್ಟಿಸಿದ ಸೃಷ್ಟಿಕರ್ತ ಬ್ರಹ್ಮನನ್ನು ಕೋರಲು ನಾನು ಹಿಂದೆ ಮುಂದೆ ನೋಡಿದ್ದು ಯುದ್ಧದ ಫಲಿತಾಂಶವನ್ನೇ ಪ್ರಭಾವಿಸಿ ಬಿಡುವುದೆ?

ಮಹಾಪ್ರಭುಗಳು ಮತ್ತು ನಾನು ದೇವಸ್ಥಾನದ ಮೆಟ್ಟಿಲಿನ ತುದಿಯಲ್ಲಿ ಒಂದು ಕ್ಷಣ ನಿಂತೆವು. ಸರೋವರವು ದಟ್ಟನಾಗಿ ಕೆನೆಗಟ್ಟಿದ ಹಾಲಿನಂತೆ ಹೊಳೆಯುತ್ತ ಪ್ರಶಾಂತವಾಗಿತ್ತು. ಇಡೀ ಕುಟುಂಬ ಈಗ ಹೊರಟು ನಿಂತಿತ್ತು. ಬೇಸಗೆಯ ವಿಶಾಲ ಸೌಧದ ಮೊಗಸಾಲೆಗಳೊಂದಿಗೆ ಅದೂ ಕಣ್ಣು ಕೋರೈಸುವ ಬಿಳಿ ಉಡುಪನ್ನು ತೊಟ್ಟಿತ್ತು. ಬೆಳಕು ಮತ್ತು ಗಾಳಿಗಳು ನವುರಾದ ಜಾಲರಿಗಳಿಂದ ಮತ್ತು ಢಾಕಾ ಮಸ್ಲಿನ್ ಪರದೆಗಳಿಂದ ತೂರಿ ಬರುತ್ತಿದ್ದಂತೆನಿಸುತ್ತಿತ್ತು. ಬೆಳಗಿನ ಒಂದು ಉಪನ್ಯಾಸವನ್ನು ಹೊರತು ಪಡಿಸಿದರೆ, ಹಸಿರುಗಣ್ಣಿನ ಚೆಲುವೆಯು ಸರೋವರದ ಪಕ್ಕದಲ್ಲಿ ದೀರ್ಘವಾದ ಮತ್ತು ಆಲಸ್ಯಪೂರ್ಣವಾದ ವನವಿಹಾರಕ್ಕೆ ಆ ದಿನವನ್ನು ಮೀಸಲಿಟ್ಟಿದ್ದಳು.

ಉಪನ್ಯಾಸಕ್ಕೆ ಹೋಗುವ ವಿಷಯದಲ್ಲಿ ನನಗೆ ಎರಡು ಮನಸ್ಸು. ನಾನು ಪ್ರಜ್ಞಾಪೂರ್ವಕವಾಗಿ ತಪ್ಪಿಸುವ ಎರಡು ವಿಷಯಗಳಿವೆ. ಅದರಲ್ಲಿ ಯಾವಾಗಲೂ ಯಶಸ್ವಿಯಾಗಿದ್ದೇನೆಂದು ಹೇಳಲಾರೆ. ಆದರೆ ಪ್ರಯತ್ನಿಸುತ್ತೇನೆ. ಒಂದು ಹವೆಗೆ ಸಂಬಂಧಿಸಿದ್ದು. ಮೇವಾಡದ್ದು ಮೈ ಸುಡುವ ಬಿಸಿ ಹವೆ ಇಲ್ಲವೆ ಕೊರೆದು ತಿನ್ನುವಂಥ ಶೀತ ಹವೆ. ಅದರ ವಿಷಯ ಹೆಚ್ಚು ಹೇಳುವಂಥದೇನಿಲ್ಲ.

ಇನ್ನೊಂದು ವಿಷಯವೆಂದರೆ ಅರಮನೆಯಲ್ಲಿರುವ ಹಿಜಡಾಗಳದ್ದು. ಹಿಜಡಾಗಳ ಮಧ್ಯೆ ನನಗೆ ದೈಹಿಕವಾಗಿ ತೀರ ಇರುಸು ಮುರಿಸೆನಿಸುತ್ತದೆ. ಇದು ಅವರ ತಪ್ಪಲ್ಲ. ಅವರು ತಾವು ಮಾಡಿದ ಅಪರಾಧಕ್ಕಿಂತ ಹೆಚ್ಚಾಗಿ ಇತರರಿಂದ ಅಪರಾಧಕ್ಕೆ ಬಲಿಯಾದವರು. ಆದರೆ ಅವರೊಂದು ಅಪಾಯಕಾರಿ ವರ್ಗ. ಅವರುಗಳು ಎಲ್ಲಿದ್ದರೂ ಅಲ್ಲಿಯ ವಾತಾವರಣವನ್ನು ಭಯಂಕರವಾಗಿ ಕಾವೇರುವಂತೆ ಮಾಡಿ ಬಿಡುತ್ತಾರೆ. ಅವರು ಸಂಚು, ಒಳಸಂಚು ಮತ್ತು ತಂತ್ರಗಳನ್ನು, ತಮ್ಮ ಜೀವನದ ಸರ್ವಸ್ವವೂ ಅದೇ ಎಂಬಂತೆ ಮಾಡುತ್ತಾರೆ. ಅವರು ಎಲ್ಲಿದ್ದರೂ ಅಲ್ಲಿ ತೊಂದರೆ ಉಂಟೆಂದೇ ಅರ್ಥ. ಅನೇಕ ಸಲ ತೀಕ್ಷ್ಣವಾದ ತೊಂದರೆಗಳು. ಈ ಹೊತ್ತಿನ ಉಪನ್ಯಾಸ ಬೃಹನ್ನದನಿಂದ. ಚಿತ್ತೂರಿನ ಹಿಜಡಾಗಳ ಪೈಕಿ ಅತ್ಯಂತ ಪ್ರಬಲ, ದುರಹಂಕಾರಿ ಮತ್ತು ಕುಟಿಲ ವ್ಯಕ್ತಿ. ಈ ಮಾತುಗಳು ಆ ಮನುಷ್ಯನ

ಬಗ್ಗೆ ಅಥವಾ ಯಾವ ಲಿಂಗದಿಂದಾದರೂ ಆತನನ್ನು ಕರೆಯಿರಿ ಕೆಲವೊಂದು ವಿಷಯಗಳನ್ನು ತಿಳಿಸುತ್ತವೆ. ರಾಣಿ ಕರ್ಮವತಿಯ ಮುಖ್ಯ ಹಿಜಡಾ ಮತ್ತು ಆಕೆಯ ಅತ್ಯಂತ ನೆಚ್ಚಿಗೆಯ ಬಂಟನಾಗಿರುವ ಕಾರಣ ಸಂಪುಟ ದರ್ಜೆಯ ಸಚಿವರಷ್ಟೇ ಅಲ್ಲ ಚಿತ್ತೂರಿನ ಅರಮನೆಗೆ ಭೇಟಿ ನೀಡುವ ರಾಜರುಗಳು ಮತ್ತು ರಾವತ್‌ಗಳು ಅವನ ಸಲಹೆ ಕೇಳುತ್ತಾರೆ. ಈ ಇಷ್ಟೂ ವರ್ಷಗಳು ದೃಢ ನಿರ್ಧಾರ ಮಾಡಿ ಅವನ ಸಂಪರ್ಕದಿಂದ ನಾನು ದೂರವಿದ್ದೇನೆ. ಈ ದಿನವೂ ಹಾಗೆಯೇ ಮಾಡುವುದು ನನ್ನ ಅಪೇಕ್ಷೆ. ಆದರೆ ವಿಷಯ ನನ್ನ ಕುತೂಹಲವನ್ನು ಕೆರಳಿಸುವಂಥದು. 'ಮಹಾಭಾರತದಲ್ಲಿ ಸ್ವಯಂ ನಿರಾಕರಣೆ'.

ನಾನಲ್ಲಿಗೆ ಹೋಗುವ ವೇಳೆಗೆ ಇಡೀ ಶಾಮಿಯಾನ ಭರ್ತಿಯಾಗಿತ್ತು. ಅಂದ ಹಾಗೆ ಬೃಹನ್ನದನ ಮುಖ ಲಕ್ಷಣ ನನಗೆ ಹಿಡಿಸದೆ ಇದ್ದರೂ, ಅವನು ಅದ್ಭುತವಾದ ರೀತಿಯಲ್ಲಿ ಸ್ಫುರದ್ರೂಪಿ. ಅಲ್ಲದೆ ಅವನಿಗೆ ಇಷ್ಟವಾದರೆ ಅವನೊಬ್ಬ ಖುಷಿ ಕೊಂಡುವ ಸಂಗಾತಿಯಾಗಬಲ್ಲ. ಬೃಹನ್ನದನಿಗೆ ಅವನ ಮಹಾಭಾರತ ನಮ್ಮೆಲ್ಲರಿಗಿಂತ ಚೆನ್ನಾಗಿ ತಿಳಿದಿತ್ತು. ಅಲ್ಲದೆ ಅವನಿಗೆ ತಾನು ಮುಂದಿಡಬೇಕಾದ ಸಿದ್ಧಾಂತವೊಂದಿತ್ತು. ಅವನು, ಮಹಾಭಾರತ ಕಾವ್ಯದ ಮಹಾಬ್ರಹ್ಮಚಾರಿ ಎನಿಸಿದ, ಭೀಷ್ಮನ ಪಾತ್ರವನ್ನು ತನ್ನದಲ್ಲದ ಆಯ್ಕೆಯಾದ ಸಂಯಮದ ಸಂಕೇತವಾಗಿ ಆಯ್ದುಕೊಂಡನು. ಇದು ನಿಜಕ್ಕೂ ಒಂದು ವಿಷಯದಲ್ಲಿ ಇನ್ನೂ ಸ್ಪಷ್ಟವಾಗದ ಭಾಗ. ಎಲ್ಲರಿಗೂ ತಿಳಿದಿರುವಂತೆ, ಭೀಷ್ಮನ ಮುದಿ ತಂದೆ ಶಂತನು ಸುಂದರಿಯಾದ ಸತ್ಯವತಿಯನ್ನು ಪ್ರೇಮಿಸಿದನು. ಆದರೆ ಭೀಷ್ಮನ ಬದಲು ಅವಳ ಮಗನು ಸಿಂಹಾಸನಕ್ಕೆ ಅಧಿಕಾರಿಯಾಗದ ಹೊರತು, ಮದುವೆಗೆ ಒಪ್ಪಲೊಲ್ಲಳು. ಆದರೆ ಈ ಮಹಾತ್ಯಾಗ ಮಾಡು ಎಂದು ತಂದೆ ಮಗನನ್ನು ಕೇಳಲೊಲ್ಲನು. ಇಷ್ಟಾದರೂ, ಸಿಂಹಾಸನವನ್ನು ತ್ಯಜಿಸಿದ್ದೇ ಅಲ್ಲದೆ. ಶಾಶ್ವತವಾಗಿ ಬ್ರಹ್ಮಚಾರಿಯಾಗಿದ್ದು ಬಿಡುವ ಪ್ರತಿಜ್ಞೆಯನ್ನು ಕೈಕೊಂಡನು.

ಹೆಚ್ಚು ಮಾತುಗಳನ್ನು ಬಳಸದೆ, ಭೀಷ್ಮ ಹಾಗೂ ನಪುಂಸಕರ ನಡುವೆ ಇರುವ ಪರಸ್ಪರ ಸಾದೃಶ್ಯಗಳನ್ನು ಸೂಚಿಸುತ್ತಿರುವಂತೆ ಕಂಡಿತು. ಇಲ್ಲ, ಅವನು ಇನ್ನೂ ಮುಂದೆ ಹೋದನು. ಅವರಿಬ್ಬರೂ ಒಂದೇ ವಂಶಕ್ಕೆ ಸೇರಿದವರೆಂಬ ಸುಳಿವು ನೀಡಿದನು. ಅವರಿಬ್ಬರೂ ನಪುಂಸಕಸ್ಥಿಯನ್ನು ಅನುಭವಿಸಬೇಕು. ಅವನು ಅಷ್ಟಕ್ಕೆ ನಿಲ್ಲಿಸಲಿಲ್ಲ. ಬಲವಂತವಾಗಿ ಹೇರಲಾದ ಈ ಪರಿಸ್ಥಿತಿಯನ್ನು ನೀವು ಹೇಗೆ ಬಳಸಿಕೊಳ್ಳುತ್ತೀರಿ. ಜೀವನ ಪರ್ಯಂತ ನಿಮ್ಮ ದುರದೃಷ್ಟವನ್ನು ಹಳಿಯುತ್ತ ನೀವು ಕಳೆದಿರಾದರೆ ಆಗ ನಿಮ್ಮದು ಸಂಪೂರ್ಣ ಸಮರ್ಥನೀಯ. ಆದರೆ ಇನ್ನೊಂದು ಆಯ್ಕೆಯೂ ಇದೆ. ನಿಮ್ಮ ವಿಧಿಯನ್ನು ಮೀರಿ ನೀವು ಮೇಲೇಳುವುದು. ಭೀಷ್ಮನು ಮಾಡಿದಂತೆ ನಿಮಗಾದ ಆಪತ್ತನ್ನು ಆಂತರ್ಯದಲ್ಲಿ ನೆಲೆಗೊಳಿಸಿ ಅದಕ್ಕೊಂದು ಉದಾತ್ತ ಆಯಾಮವನ್ನು ನೀಡುವುದು. ಅದೊಂದು ವಿವೇಚನಾ ಪೂರ್ಣವಾದ ಉಪನ್ಯಾಸವಾಗಿತ್ತು. ಅದರ ಮುಖ್ಯ ಒಳನೋಟ ನಮ್ಮೆಲ್ಲರಿಗೂ ಅನ್ವಯಿಸುವಂಥದೇ. ಕಾರಣ ಒಂದಿಲ್ಲೊಂದು ಕೊರತೆಯಿಲ್ಲದೆ ಇರುವಂಥ ಮನುಷ್ಯರಾರೂ ಈ ಲೋಕದಲ್ಲಿ ಹುಟ್ಟಿಲ್ಲ. ಹಾಗಾಗಿ ಈ ಅಸಮರ್ಪಕತೆಯನ್ನು ಉತ್ಕೃಷ್ಟವಾಗಿ ಮಾರ್ಪಡಿಸಿ ಕೊಳ್ಳುವುದು ನಮಗೆ ಬಿಟ್ಟದ್ದು.

ಉಪಾಹಾರದ ನಂತರ ನಾವು ಮೃಕಂಡ ಮುನಿಕುಂಡಕ್ಕೆ ಹೋದೆವು. ಅದು ವಿವೇಕದ ವರವನ್ನು ಕೊಡುವಂಥದು. ಅದು ಸರೋವರದ ತೀರದಲ್ಲಿರುವ ದಟ್ಟ ಅರಣ್ಯಕ್ಕೆ ಹತ್ತಿರವಿದೆ. ಅಲ್ಲದೆ ಅದು ಅತ್ಯಂತ ವಿವಿಕ್ತವಾದ ಸ್ಥಳ. ಅಂಥದೊಂದು ಪ್ರಶಾಂತವಾದ ದಿನವನ್ನು ನಾನು ಕಳೆಯುವುದನ್ನು ಮುಂದೆ ಪಡೆದುಕೊಳ್ಳಲು ಬಹಳ ದಿನಗಳು ಬೇಕಾಗುತ್ತವೆಂದು

ನನಗೆ ತಿಳಿದಿತ್ತು. ಹಾಗಾಗಿ ಅದರ ಗರಿಷ್ಠ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಬಯಸಿದೆನು. ನನ್ನ ಸೋದರರಾದ ವಿಕ್ರಮಾದಿತ್ಯ, ರತ್ತನ್ ಮತ್ತು ಅವರ ಒಂಬತ್ತು ಜನ ಮಕ್ಕಳು. ತೇಜ್, ಮಂಗಳ್ ಮತ್ತು ನಾನು ಆಟಗಳನ್ನು ಆಡಿದೆವು. ಆಟಗಳ ನಂತರ, ನಾನು ಬಹಳ ಹೊತ್ತು ಈಜಾಡಿ ದಡದ ಮೇಲೆ ಅಂಗಾತನಾಗಿ ಮಲಗಿದೆ. ನಿಧಾನವಾಗಿ, ಮಂಜುಳ ನಿನಾದ ಮಾಡುತ್ತ ಮಿದುವಾಗಿ ದಡಕ್ಕೆ ಬಂದು ತಾಗುವ ನೀರಿನ ಶಬ್ದಕ್ಕಿಂತಲೂ ಹೆಚ್ಚು ಸಾಂತ್ವನಗೊಳಿಸುವ ಶಬ್ದ ಜಗತ್ತಿನಲ್ಲಿ ಇನ್ನೊಂದಿಲ್ಲ. ಪ್ರತಿ ಆಗೊಮ್ಮೆ ಈಗೊಮ್ಮೆ ಪಕ್ಕಕ್ಕೆ ತಿರುಗಿ ದೂರದಲ್ಲಿದ್ದ ಸ್ತ್ರೀಯರ ಕಡೆ ನೋಡುತ್ತಿದ್ದೆ. ಇದೆಲ್ಲವೂ ನನ್ನ ಕುಟುಂಬವೆ? ಅಷ್ಟೊಂದು ಜನ ಸುಂದರಸ್ತ್ರೀಯರು ಒಟ್ಟಿಗಿರುವುದನ್ನು ನಾನು ಬಹು ಅಪರೂಪವಾಗಿ ನೋಡಿದ್ದೆ. ಅವರು ಕಣ್ಣಾಮುಚ್ಚಾಲೆ ಆಟ ಆಡುತ್ತಿದ್ದರು. ಕೆಲವರು ಹಾರಗಳನ್ನು ಕಟ್ಟುತ್ತಿದ್ದರೆ ಇನ್ನು ಕೆಲವರು ಹರಟೆ ಹೊಡೆಯುತ್ತಲೋ ಮಕ್ಕಳನ್ನು ಗದರಿಸುತ್ತಲೋ ಇದ್ದರು.

ಅವಳ ಕಂಠಧ್ವನಿ ಬಹಳ ದೂರದಿಂದ ಕೇಳಿ ಬಂದಂತೆನಿಸುತ್ತಿತ್ತು. ನಾನು ತೂಕಡಿಕೆಯಲ್ಲಿ ನನ್ನ ಕೈಯನ್ನು ನೀರಿನಲ್ಲಿ ಇಳಿಬಿಟ್ಟೆ.

'ವಿಚ್..... ವಿಚ್..... ವ್ಹಿಚ್.... ವ್ಹೀ.... ವ್ಹೀ... ವಿಚ್?

ಕಪ್ಪು ಮತ್ತು ಕೆಂಪು ಬಣ್ಣದ ಕಿರೀಟ ಹೊಂದಿರುವ, ಮರುಕುಟಿಗನ ಹಕ್ಕಿಯಲ್ಲದೆ, ಬೇರಾವ ಹಕ್ಕಿತಾನೆ ಅಷ್ಟೊಂದು ಜೀವನೋತ್ಸಾಹ ಮತ್ತು ಬದುಕಿನ ಬಗ್ಗೆ ಕುತೂಹಲ ಹೊಂದಿರಬಲ್ಲುದು? ಅಲ್ಲೆಲ್ಲಾದರೂ ಹತ್ತಿರದಲ್ಲೊಂದು ಕೊಳವೋ ನದಿಯೋ ಇದ್ದಿತೆಂದರೆ ಅಲ್ಲೇ ಸುತ್ತಮುತ್ತ ಕೆಂಪು ಮುನಿಯಾ ಹಕ್ಕಿ ಇರಲೇ ಬೇಕು. ಮುನಿಯಾ ಹಕ್ಕಿಯನ್ನು ಕಂಡರೆ ನನಗೆ ಮಗುವಿನ ನೆನಪಾಗುತ್ತದೆ. ಅದೊಂದು ಹಾಡುಹಕ್ಕಿ. ಅದೊಂದು ಸದಾ ಏದುಸಿರು ಬಿಡುವ ಹಾಡು ಹಕ್ಕಿ. ಈ ಹಕ್ಕಿ ಕೂಡ ಅಲ್ಲಲ್ಲಿ ತುಂಡರಿಸಿ, ಕ್ಷೀಣದನಿಯಲ್ಲಿ ಒಂದು ಹಾಡು ಹಾಡಿತು. ಇಷ್ಟು ವರ್ಷ ನಾವೆಲ್ಲಿ ಹೋಗಿದ್ದೆ? ನಾನು ಮತ್ತು ರಾಜಾ ಪೂರಜೀ ಕೀಕಾ ಚಿಕ್ಕಂದಿನಲ್ಲಿ ಶಾಲೆಯಲ್ಲಿ ಜೊತೆಯಲ್ಲಿ ಓದುತ್ತಿದ್ದಾಗ, ರಜಾ ದಿನಗಳಲ್ಲಿ ಪಕ್ಷಿ ವೀಕ್ಷಣೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ರಜಾ ದಿನಗಳಲ್ಲಿ ವೀಕ್ಷಣೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ರಾಜಾ ಪೂರಜೀ ಕೀಕಾ ನನಗೆ ತೆರೆದು ತೋರಿದ್ದ ಆ ಪ್ರಪಂಚವನ್ನು ನಾನು ಹೇಗೆ ತಾನೆ ಕಡೆಗಣಿಸಿ ಬಿಡಲು ಸಾಧ್ಯ? ಜೇಡ ಮತ್ತಿನ್ನಿತರೆ ಹುಳುಗಳನ್ನು ಕುಕ್ಕುವ, ಕೆಂಪು ಮತ್ತು ಕಪ್ಪು ಬಣ್ಣದ ಆ ಹಕ್ಕಿ ಬಹುಶಃ ಕೆಂಪು ಬಾಲದ ಹಕ್ಕಿ. ವ್ಹಿಟ್... ವ್ಹಿಟ್.... ವ್ಹಿಟ್ ಎಂದು ಕೂಗಲಾರದಷ್ಟು ಹುಳು ಹುಪಟ್ಟೆಗಳನ್ನು ಕುಕ್ಕುವುದರಲ್ಲಿ ಮಗ್ನವಾಗಿ ಬಿಟ್ಟಿರುತ್ತದೆ. ಚಳಿಗಾಲದಲ್ಲಿ ಕಾಣಿಸಿಕೊಳ್ಳುವ ಆ ನಾಚಿಕೆ ಸ್ವಭಾವದ ಹಕ್ಕಿ ಕಂಬಳಿ ಹುಳುಗಳನ್ನು ಮತ್ತು ಜೊಂಡಗಳಲ್ಲಿರುವ ಇತರೆ ಜೀರುಂಡೆಗಳನ್ನು ತಿನ್ನುತ್ತಿದ್ದ ಆ ನೀಲಕಂಠ ಹಕ್ಕಿಯನ್ನು ಗಮನಿಸುತ್ತಿದ್ದಾಗಲೇ ನಾನು ನಿದ್ದೆ ಹೋಗಿರಬೇಕು.

ಎಷ್ಟು ಹೊತ್ತಿನವರೆಗೆ ಹಾಗೆ ನಿದ್ದೆ ಹೋಗಿದ್ದೆನೋ ನನಗೆ ಗೊತ್ತಿಲ್ಲ. ಹಿನ್ನೆಲೆಯ ಧ್ವನಿಗಳೆಲ್ಲವೂ ಅಡಗಿ ಹೋಗಿದ್ದವು. ಪ್ರತಿಯೊಬ್ಬರೂ ಮಧ್ಯಾಹ್ನದ ಊಟ ಮುಗಿಸಿ ಮಲಗಿ ನಿದ್ರೆ ಮಾಡುತ್ತಿದ್ದಿರಬೇಕು. ನನಗೆ ಏಳಲು ಇಷ್ಟವಿರಲಿಲ್ಲ. ಆದರೆ ಯಾರೋ ನನ್ನನ್ನು ಗಮನಿಸುತ್ತಿದ್ದಾರೆಂಬ ವಿಲಕ್ಷಣ ಯೋಚನೆ ಬರುತ್ತಿತ್ತು. ಹಾಗೆ ಗಮನಿಸುತ್ತಿದ್ದದ್ದು ಸುಗಂಧ. ಅವಳು ತನ್ನ ಮಂಡಿಯ ಮೇಲೆ ಮುದುಡಿಕೊಂಡು, ಕೈಗಳನ್ನು ಸುತ್ತಲೂ ಬಿಗಿದುಕೊಂಡು ಕುಳಿತಿದ್ದಳು. ಪ್ರತಿ ಅರ್ಧ ನಿಮಿಷಕ್ಕೊಂದು ಸಲವೋ ಏನೋ ಅವಳ ದೇಹ ಕುಲುಕುತ್ತಿತ್ತು. ಅವಳ ಗಂಟಲು ಮತ್ತು ನಾಲಗೆ ಅತ್ಯಂತ ಆಳವಾದ ಮತ್ತು ಹೇಳಲಾರದ ಏನೋ ಸಂಕಟವನ್ನು ಹೊರಗೆಡಹಲು ಬಹು ಕಷ್ಟಪಡುತ್ತಿದ್ದವು. ಅಷ್ಟೆಲ್ಲಾ

ಕಷ್ಟಪಟ್ಟರೂ ಆಗೊಮ್ಮೆ ಈಗೊಮ್ಮೆ ಬಿಕ್ಕಳಿಕೆಯ ಶಬ್ದದಂಥದನ್ನು ಹೊರಹೊಮ್ಮಿಸುತ್ತಿದ್ದವು. ಆದರೆ ನನ್ನನ್ನು ಸೆರೆಹಿಡಿದು ನಿಲ್ಲಿಸಿದ್ದು ಅವಳ ಕಣ್ಣುಗಳು. ಅವು ನನ್ನ ಕಡೆ ನೋಡುತ್ತಿರಲಿಲ್ಲ. ಅವುಗಳಲ್ಲಿ ಭಯ ನೆಲಸಿತ್ತು. ಅದರಿಂದಾಗಿ ಅವಳ ಕಣ್ಣುಗಳು ಮರಗಳಿಂದ ಸರೋವರದ ಕಡೆಗೆ ಸರೋವರದಿಂದ ಆಕಾಶದತ್ತ ಆಮೇಲೆ ಅಲ್ಲಿಂದ ಏರಿಳಿಯುತ್ತಿರುವ ನನ್ನ ಹೊಟ್ಟೆಯಕಡೆಗೆ ಥಟ್ಟನೆ ಚಲಿಸುತ್ತಿದ್ದುವು. ನಾನು ನಿಧಾನವಾಗಿ ಮತ್ತು ಮೆಲ್ಲಗೆ ಎದ್ದು ಕುಳಿತೆ ಮತ್ತು ಅತ್ಯಂತ ಮೃದುವಾಗಿ ಅವಳ ಹೆಗಲ ಮೇಲೆ ನನ್ನ ಕೈಯಿಟ್ಟೆ. ನನ್ನ ಕೈಗಳ ಸ್ಪರ್ಶದಿಂದ ಅವಳ ದೇಹ ಸೆಟೆದುಕೊಂಡಿತು. ಅವಳು ಕಣ್ಣುಗಳನ್ನು ತಿರುಗಿಸುತ್ತ ಮೂರ್ಛೆ ಬಂದವಳ ಹಾಗೆ ನೆಲದ ಮೇಲೆ ಬಿದ್ದು ಬಿಡುತ್ತಾಳೆಂದು ಭಾವಿಸಿದೆ.

ಅದು ಏನೇ ಇದ್ದರೂ ಅದು ಅವಳ ಮನಸ್ಸಿನಲ್ಲಿತ್ತು. ನನ್ನ ಹತ್ತಿರ ಬರಬೇಕೆಂದೇಕೆ ಅವಳು ಬಯಸಿದಳು? ವಿಕ್ರಮಾದಿತ್ಯನು ಅವಳ ಗೆಳೆಯ. ಅದರಲ್ಲೇನೂ ವ್ಯಂಗ್ಯವಿಲ್ಲ. ಅವಳು ಅವನ ಹತ್ತಿರ ಹೋಗಬೇಕಿತ್ತು. ನಾನು ಮೊದಲು ಬರಿದೆ ಅವಳ ಬೆನ್ನ ಮೇಲೆ ತಟ್ಟಿದೆನು. ಆಮೇಲೆ ದೃಢವಾಗಿ ತಟ್ಟಿದೆ. ಅವಳ ಹೊಟ್ಟೆಯ ತಳದವರೆಗೂ ಅವಳನ್ನು ಅಲುಗಾಡಿಸುತ್ತಿದ್ದ ಸೆಳವುಗಳ ತೀವ್ರತೆ ಕಡಿಮೆಯಾಗಿತ್ತು. ಆದರೆ ಇನ್ನೂ ಮಾತನಾಡಲಾಗುತ್ತಿರಲಿಲ್ಲ. ಅವಳು ನನ್ನ ಕೈಯನ್ನು ತನ್ನ ಕೈಗಳಲ್ಲಿ ತೆಗೆದುಕೊಂಡಳು. ಹಾಗೆ ಕೈ ಕೈ ಹಿಡಿದುಕೊಂಡು ನಾವು ಒಂದು ನಿಮಿಷ ಮುಂದಕ್ಕೆ ಹೆಜ್ಜೆ ಹಾಕಿದೆವು. ಏನೋ ಒಂದು ಭಯಂಕರ ಅವಸರದಿಂದ ಅವಳು ಓಡಹತ್ತಿದಳು. ಮರಗಳ ಮಧ್ಯೆ ಬಳಸುದಾರಿಯಲ್ಲಿ ಸಾಗಿ ಸರೋವರದ ನೀರದಲ್ಲಿ ನಾವು ನಿಂತೆವು. ಅಲ್ಲಿ ಎದೆಯ ಮೇಲೆ ತಲೆಯಿಟ್ಟುಕೊಂಡ ಸ್ಥಿತಿಯಲ್ಲಿದ್ದ ದೇಹವೊಂದು ಆಳವಿಲ್ಲದ ನೀರಿನಲ್ಲಿ ಮುಕ್ಕಾಲು ಭಾಗ ಮುಳುಗಿದ ಸ್ಥಿತಿಯಲ್ಲಿದ್ದದ್ದು ಕಂಡಿತು. ಅದರ ಸುತ್ತಲೂ ಕೆಂಪು ನೀರು ಹರಡಿಕೊಂಡಿತ್ತು. ಬಿಳಿಯ ಬಟ್ಟೆ ಕೊಳಕಾಗಿತ್ತು. ನಾನು ಅದರ ತಲೆಯನ್ನು ಮೇಲೆತ್ತಿದೆ. ಅದು ಬೃಹನ್ನದ.

ಸ್ವಲ್ಪ ಕಷ್ಟಪಟ್ಟು ಅವನನ್ನು ನೀರಿನಿಂದ ಮೇಲಕ್ಕೆಳೆದೆ. ಅವನ ಬಲಗಾಲು ಕೆಸರಿನಲ್ಲಿ ಸಿಕ್ಕಿಕೊಂಡು ಬಿಟ್ಟಿತ್ತು. ಬಟ್ಟೆ ನೀರಿನಲ್ಲಿ ನೆನೆದದ್ದರಿಂದ ಅವನ ದೇಹ ಭಾರವಾಗಿತ್ತು. ಅವನ ಎದೆಯ ಮೇಲೆಲ್ಲ ಇರಿತದ ಗಾಯಗಳಿದ್ದುವು. ಆದರೆ ಬೆನ್ನ ಮೇಲೆ ಒಂದೂ ಇರಿತದ ಗಾಯವಿರಲಿಲ್ಲ. ಅವನ ಗುಪ್ತಾಂಗಗಳಿಗೆ ಮತ್ತೆ ಮತ್ತೆ ಹೊಡೆದ ಗುರುತುಗಳಿದ್ದುವು. ಯಾರೇ ಆಗಲಿ, ನಪುಂಸಕನೊಬ್ಬನ ಗುಪ್ತಾಂಗಗಳನ್ನೇಕಾದರೂ ಜಖಂಗೊಳಿಸುತ್ತಾರೆಂದು ನನಗೆ ಆಶ್ಚರ್ಯವಾಯಿತು. ಅವನ ತುಟಿಗಳು ಬೂದಿಯಂತೆ ಬೆಳ್ಳಗೆ ಬಿಳಿಚಿಕೊಂಡಿದ್ದುವು. ಅವನ ನಾಡಿ ಆಡುತ್ತಿದ್ದಂತೆ ತೋರಲಿಲ್ಲ. ಆದರೆ ಅವನ ಎದೆಯ ಮೇಲೆ ಕಿವಿಯಿಟ್ಟಾಗ, ತುಂಬ ಕ್ಷೀಣವಾದ ಆದರೆ ಅನಿಯತವಾದ ಹೃದಯದ ಬಡಿತ ಕೇಳಿಸಿತು.

"ನೀನು ಸ್ವಲ್ಪ ಹೊತ್ತು ಇವನೊಂದಿಗೆ ಇರುವೆಯಾ? ಅಷ್ಟರಲ್ಲಿ ಯಾರನ್ನಾದರೂ ಸಹಾಯಕ್ಕೆ ಕರೆದುಕೊಂಡು ಬರುತ್ತೇನೆ" ಎಂದು ಸುಗಂಧಳಿಗೆ ಕೇಳಿದೆ".

"ನನ್ನೊಬ್ಬಳನ್ನೇ ಬಿಟ್ಟು ಹೋಗಬೇಡಿ"

"ಅವನಿಗೆ ಕೂಡಲೇ ವೈದ್ಯಕೀಯ ನೆರವು. ಬೇಕಾಗಿದೆ"

"ಅದನ್ನು ನೀವು ಒದಗಿಸುವಷ್ಟರಲ್ಲಿ ಅವನು ಸತ್ತು ಹೋಗಬಹುದು."

"ಆದರೆ ಅದೊಂದು ಸಂಭಾವ್ಯ. ಅದನ್ನು ನಾವು ತೆಗೆದುಕೊಳ್ಳಲೇಬೇಕು"

ನಾನು ಹಿಂತಿರುಗಿದಾಗ, ನನ್ನ ಎರಡನೇ ಹೆಂಡತಿ ಅಲ್ಲಿರಲಿಲ್ಲ.

* * *

ಹಸಿರುಗಣ್ಣಿನ ಚೆಲುವೆಯು ಪುಷ್ಕರದಲ್ಲಿ ಎರಡು ದಿನ ತಂಗುವ ಯೋಜನೆ ಹಾಕಿದ್ದಳು. ನಾವೆಲ್ಲಾ ಅದೆಷ್ಟು ನಿಶ್ಚಿಂತೆಯಿಂದ ಸುಖವಾಗಿದ್ದೆವೆಂದರೆ ತಂದೆಯವರು ಅದನ್ನು ಇನ್ನೂ ಒಂದು ದಿವಸ ವಿಸ್ತರಿಸುವ ಬಗ್ಗೆ ಕೂಡ ಪರಿಶೀಲಿಸುತ್ತಿದ್ದರು. ಆದರೆ ಸ್ವರ್ಗ ಯಾವತ್ತೂ ಅಲ್ಪಾಯುವೇ. ಪುಷ್ಕರದ ನೀರು ಒಮ್ಮೆಲೇ ಹೆಪ್ಪು ಗಟ್ಟಿತು. ಬೇಸಗೆಯ ಸೌಧಗಳು ಅವುಗಳ ಲವಲವಿಕೆಯನ್ನು ಕಳೆದುಕೊಂಡಿದ್ದುವು. ಹೆಂಗಸರೆಲ್ಲಾ ಕಿರಿಯ ಸಂತಳ ಸುತ್ತ ಗುಂಪುಗೂಡಿದ್ದರು. ಎಂದಿನಂತೆ ಅವಳು ಅದರ ನೇತೃತ್ವವನ್ನು ವಹಿಸಿಕೊಂಡಿದ್ದಳು. ಹಾಗಾಗಿ ಗುಡಾರಗಳನ್ನು ಕೀಳಲು ಆದೇಶ ನೀಡಿದ್ದಳು. ಮರುಪ್ರಯಾಣದ ಮೇಲ್ವಿಚಾರಣೆ ನೋಡಿಕೊಳ್ಳಲು ತಂದೆಯವರು ರತ್ತನ್‌ನನ್ನು ನೇಮಿಸಿದ್ದರು. ಮಂಗಳ ನಾನು ಮನೆಯತ್ತ ಮುಖಮಾಡಿದೆವು.

ನಾವಿನ್ನೇನು ಚಿತ್ತೂರನ್ನು ಪ್ರವೇಶಿಸುತ್ತಿದ್ದೆವೆನ್ನುವಾಗ, ತಂದೆಯವರು "ತನಿಖೆಯನ್ನು ಮಂಗಳನು ನೋಡಿಕೊಳ್ಳುವನು. ನೀನು ಅದರ ವಿಚಾರಣೆಯನ್ನು ನಡೆಸುವೆ" ಎಂದು ನನಗೆ ಹೇಳಿದರು.

"ಮಂಗಳನು ಗೃಹ ಸಚಿವಾಲಯದಲ್ಲಿ ಇಲ್ಲ ಮಹಾಪ್ರಭು ಮತ್ತು ನಾನೇನಿದ್ದರೂ ಸಣ್ಣ ವಿವಾದಗಳ ನ್ಯಾಯಾಲಯದಲ್ಲಿ ನ್ಯಾಯಾಧೀಶ."

"ಯಾರು ಯಾವ ಇಲಾಖೆಯಲ್ಲಿದ್ದಾರೆ ಎಂದು ನನಗೆ ಗೊತ್ತು ರಾಜಕುಮಾರ. ಇದು ಅರಮನೆಯ ವಿಷಯ. ಅದು ಅರಮನೆಯಲ್ಲೇ ಇರಬೇಕು ಎನ್ನುವುದು ನನ್ನ ಇಚ್ಛೆ. ಅದೂ ಅಲ್ಲದೆ ಅಪರಾಧಿಗಳಿಗೆ ಬೇಗ ತಕ್ಕ ಶಾಸ್ತಿಯಾಗಬೇಕು ಎನ್ನುವುದು ನನ್ನ ಇಚ್ಛೆ. ನೀನೊಂದು ಒಳ್ಳೆಯ ಕೆಲಸ ಮಾಡು."

"ನನ್ನನ್ನು ಕ್ಷಮಿಸಿ ಮಹಾಪ್ರಭು. ನಾನು ಕುಟುಂಬದೊಳಗಿನವನು. ಹೊರಗಿನವರು ಯಾರನ್ನಾದರೂ ನೇಮಿಸಿದರೆ ಉತ್ತಮ ನ್ಯಾಯ ಸಲ್ಲಿಸಿದ ಹಾಗೆ ಆಗಬಹುದು";.

"ನಾವು ನಿಜವಾದ ಕಾರಣವನ್ನು ಕಂಡು ಹಿಡಿಯುವ ಅಗತ್ಯವಿಲ್ಲ. ಹೊರಗಿನವನಾದರೆ ಅವನಿಗೆ ಬೆದರಿಕೆ ಹಾಕಬಹುದು ಎನ್ನುವ ಕಾರಣಕ್ಕೆ ನಾನು ನಿನ್ನನ್ನು ನೇಮಿಸುತ್ತಾ ಇದ್ದೇನೆ. ಈ ಕೆಲಸವನ್ನು ನಿಭಾಯಿಸುತ್ತೀಯೋ ಅಥವಾ ನನ್ನ ಕೆಲಸ ನಾನು ಹೇಗೆ ಮಾಡಬೇಕು ಎನ್ನುವುದನ್ನೇ ಹೇಳುತ್ತಾ ಹೋಗುತ್ತೀಯೋ?"

ಅಧ್ಯಾಯ 41

“ಅವರಿಗೆ ನಮ್ಮನ್ನು ಕಂಡರೆ ಹೆದರಿಕೆ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಹಾಗಲ್ಲದೆ ಹೋದರೆ. ಇನ್ಯಾತಕ್ಕೆ ತಾನೆ ಬಾಬರ್ ತನ್ನ ಮಗ ಹುಮಾಯೂನನನ್ನು ಜನ್‌ಪುರ್‌ದಿಂದ ವಾಪಸ್ ಕರೆಸಿಕೊಳ್ಳುತ್ತಿದ್ದ?” ಯುದ್ಧ ಸಮಿತಿಯ ಸಭೆಯಲ್ಲಿ ಸಿಲ್ಹಾದಿ ನಿರ್ದಿಷ್ಟವಾಗಿ ಯಾರನ್ನೂ ಉದ್ದೇಶಿಸದೆ ಈ ಪ್ರಶ್ನೆ ಕೇಳಿದ್ದನು. ಅವನು ಬಹಳ ಉತ್ಸಾಹದಲ್ಲಿದ್ದ ಮತ್ತು ತಾನು ಕಳೆದ ಸಲ ಚಿತ್ತೂರಿಗೆ ಬಂದಿದ್ದಾಗ, ಅಧಿಕಪ್ರಸಂಗಿತನದಿಂದ ಸಿಡುಕಿದ್ದನ್ನು ಮರೆತು ಬಿಟ್ಟಂತೆ ಕಂಡಿತು. (ರಾಯ್ ಹೊರಟು ಹೋದನಂತರ, ಮಾಳ್ವದ ಸುಲ್ತಾನರನ್ನು ಬೆಂಗಾವಲ ಪಡೆಯೊಂದಿಗೆ ಅವನ ರಾಜಧಾನಿಗೆ ಯಾವ ಆಧಾರದ ಮೇಲೆ ಕಳಿಸಿಕೊಡಲಾಯಿತೆಂಬುದನ್ನು ಕೇಳಲು ಇದು ಸರಿಯಾದ ಸುಸಂಧಿಯಲ್ಲವೆಂದು ಭಾವಿಸಿರುವ ಸಾಧ್ಯತೆಯೂ ಇರಬೇಕು)

ನನ್ನ ಹೆಂಡತಿಯ ಮಾವ ರಾವ್ ವೀರಮ್‌ದೇವ್ ಅವರು ಸಿಲ್ಹಾದಿಯನ್ನು “ನಾವು ಬಾದಷಹರನ್ನು ಎದುರಿಸಲು ದಂಡೆತ್ತಿ ಹೋಗಬೇಕೆಂದು ಈ ಯುದ್ಧ ಸಮಿತಿ ತೀರ್ಮಾನಿಸಿದರೆ ನೀವು ನಿಮ್ಮ ಬಲಗೈ ಬಂಟ, ನಿಮ್ಮ ಜೊತೆ ಇರಬೇಕೆಂದು ಹೇಳಿ ವಾಪಸ್ ಕರೆಸಿಕೊಳ್ಳುವುದಿಲ್ಲವೇ?

“ಸಹಜವಾಗಿಯೇ ನಾನು ಕರೆಸಿಕೊಂಡೇ ಕರೆಸಿಕೊಳ್ಳುವೆ”

“ಹಾಗಾದರೆ ರಜಪೂತರು ತನಗೆ ಹೆದರುತ್ತಾರೆ ಎಂದು ಬಾಬರನು ತೀರ್ಮಾನಕ್ಕೆ ಬರಬೇಕೆ?”

ತನ್ನ ಮಾತಿನ ಬಲೆಯಲ್ಲಿ ತಾನೇ ಸಿಕ್ಕಿಕೊಂಡಿದ್ದೇನೆ ಹಾಗೂ ಅದು ಜುಗುಪ್ಸೆ ಉಂಟು ಮಾಡುವಂಥದಾಗಿದೆ ಎಂಬುದು ಸಿಲ್ಹಾದಿಗೆ ಅರ್ಥವಾಗುವ ಮುನ್ನ ಪ್ರಧಾನಿಯವರು ವಿಷಯವನ್ನು ಬದಲಾಯಿಸಿದರು.

“ಪಾಣೀಪತ್ತದ ಕದನಕ್ಕಿಂತ ಮುಂಚೆ ಬಾಬರ್ ಮತ್ತು ಇಬ್ರಾಹಿಂ ಲೂದಿ ಇಬ್ಬರೂ ಮೇವಾಡದ ಸಹಾಯ ಕೇಳಿದ್ದರು ಅಂತ ನಿಮಗೆ ಗೊತ್ತಿತ್ತೇನು? ಮೇವಾಡ ಮತ್ತು ಅದರ ಮಿತ್ರ ರಾಜ್ಯಗಳನ್ನು ಒಟ್ಟಾಗಿ ಹಿಡಿದಿಟ್ಟಿರುವ ಸಂಘಟನೆ ಏನಿದೆ, ಅದು ಈ ಹೊತ್ತು ಇಡೀ ಹಿಂದೂಸ್ತಾನದಲ್ಲೇ ಅತ್ಯಂತ ಶಕ್ತಿಯುತವಾದ ಒಕ್ಕೂಟ ಎನ್ನುವುದನ್ನು ನಾವೆಲ್ಲ ಒಪ್ಪಿದ್ದೇವೆ ಎಂದು ಭಾವಿಸಿದ್ದೇನೆ. ಕಬ್ಬಿಣ ಕಾದಿದ್ದಾಗಲೇ ಹೊಡೆಯೋಣ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಬಾಬರನೊಂದಿಗೆ ಯುದ್ಧ ಹೂಡೋಣ”.

ಯುದ್ಧ ಸಮಿತಿಯು ಯುದ್ಧದ ವಿಷಯವನ್ನು ಚರ್ಚಿಸಲಾಗಲಿ, ಸಂಘರ್ಷವನ್ನು ಕೆಲಕಾಲ ಅಥವಾ ಒಂದೆರಡು ವರ್ಷಗಳ ಕಾಲ ಮುಂದೂಡುವುದರ ಗುಣಾವಗುಣಗಳನ್ನು ತೂಗಿ ನೋಡಲಾಗಲಿ ಇಷ್ಟಪಡಲಿಲ್ಲವೆನಿಸುತ್ತದೆ. ಅವರು ಹೋಗಿ ಬಾಬರನನ್ನು ಮುಗಿಸಿ ಬಿಡುವ ತವಕದಲ್ಲಿದ್ದರು.

"ಅಂಥ ಬಹಳ ಮುಖ್ಯವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಮುಂಚೆ ಬಾಬರನ ಸೇನೆಯಂಥ ಒಂದು ಅಷ್ಟೊಂದು ಸಣ್ಣ ಸೇನೆ ಸಂಖ್ಯೆಯಲ್ಲಿ ಅತ್ಯಂತ ಹೆಚ್ಚಿನದಾದ ಇಬ್ರಾಹಿಂ ಲೂದಿಯ ಸೈನ್ಯಗಳನ್ನು ಹೇಗೆ ಸೋಲಿಸಿತು ಎಂಬುದನ್ನು ಪರೀಕ್ಷಿಸುವುದು ಒಳ್ಳೆಯದಲ್ಲವೆ?" ಸ್ವಲ್ಪ ಸಂಕೋಚದಿಂದಲೇ ನಾನು ವೀರಮ್ ದೇವ್‌ಗೆ ನನ್ನ ಈ ಪ್ರಶ್ನೆಯನ್ನು ಹಾಕಿದೆ. ಅದರ ಉದ್ದೇಶ, ಈ ಸಂಗತಿಯನ್ನು ಆ ಕ್ಷಣದ ಬಿಸಿಯಲ್ಲಿ ತೀರ್ಮಾನಿಸದೆ ಅದರ ಗುಣ ಮತ್ತು ಅರ್ಹತೆಗಳ ಆಧಾರದ ಮೇಲೆ ಪರಿಶೀಲಿಸುತ್ತಾರೆನ್ನುವುದು.

"ಅದು ಯಾಕೆ ಆ ಒಗಟಿನ ಪ್ರಶ್ನೆ?" ನನ್ನ ಪ್ರಶ್ನೆಯನ್ನು ಎದುರಿಸಿದ್ದು ಲಕ್ಷ್ಮಣಸಿಂಹಜೀ. "ದೆಹಲಿ ರಾಜವಂಶವೆಂಬುದು ಮುಗಿದು ಹೋಗಿರುವ ಶಕ್ತಿ. ಹಾಗೂ ನಾಶಗಳು ಸಿದ್ಧವಾಗಿದೆ ಎಂದು ನೀವು ನಮಗೆ ವರ್ಷಗಳಿಂದ ಹೇಳಿಯೇ ಇದ್ದೀರಲ್ಲವೆ?"

ಪ್ರಧಾನಿ ಪೂರಣ್‌ಮಲ್‌ಜೀಯವರು ದೊಡ್ಡದಾಗಿ ಹಲ್ಲು ಗಿಂಜುತ್ತ "ಅದೂ ಅಲ್ಲದೆ ನಿಮ್ಮ ಮತ್ತು ಮೇದಿನಿ ರಾಯ್ ನೇತೃತ್ವದ ನಿಷ್ಠಾವಂತ ಯೋಧರ ಪುಟಾಣಿ ತಂಡವೊಂದು, ಮಾಳ್ವದ ಮತ್ತು ಗುಜರಾತಿನ ಒಟ್ಟು ಸೇನಾಪಡೆಗಳನ್ನು ಹೇಗೆ ಸೋಲಿಸಬಲ್ಲುದು ಎಂದು ಇತ್ತೀಚೆಗೆ ತಾನೆ ಕಿಂಚಿತ್ತೂ ಅನುಮಾನಕ್ಕಾಸ್ಪದವಿಲ್ಲದಂತೆ ಅತ್ಯಂತ ಸೊಗಸಾಗಿ ತೋರಿಸಲಿಲ್ಲವೆ?"

ನಾನು ಕೇಳಿದೆ– "ರಜಪೂತರ ಸೇನಾಪಡೆಗಳ ಶೌರ್ಯ ಕೆಚ್ಚುಗಳ ಬಗ್ಗೆ ಅಗೌರವ ತೋರುವುದು ನನ್ನ ಮಾತಿನ ಅರ್ಥವಲ್ಲ. ಆದರೆ ಕೇವಲ ಒಂದು ಊಹಾತ್ಮಕ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಮ್ಮದೇ ಥರದ ಅದ್ಭುತ ಸಾಧನೆಯನ್ನು ಬಾದಷಹನು ಪುನರಾವರ್ತನೆಗೊಳಿಸುವುದನ್ನು ತಡೆಯುವುದು ಯಾವುದು ಮತ್ತು ಮೇವಾಡದ ಸಂಯುಕ್ತ ಸೇನಾಪಡೆಗಳಿಗೆ ಅದ್ಭುತ ವಿಜಯವನ್ನು ದೊರಕಿಸುವುದು ಏನು?"

ಪ್ರಧಾನಿಯವರು ನಾನು ಹೇಳಿದ್ದನ್ನು ತಾಳ್ಮೆಯಿಂದ ಕೇಳಿಸಿಕೊಂಡರು. "ಕಾರಣ ದೆಹಲಿ ಮತ್ತು ಮಾಳ್ವಗಳಂತಲ್ಲದೆ ಮೇವಾಡವು ಅದರ ಶಕ್ತಿಯ ಉತ್ತುಂಗದಲ್ಲಿದೆ. ರಜಪೂತರು ಹಿಂದೆಂದೂ ಇಷ್ಟರ ಮಟ್ಟಿಗೆ ಒಗ್ಗಟ್ಟಿನಿಂದಿರಲಿಲ್ಲ ಹಾಗೂ ಅವರ ನಾಯಕತ್ವವು ಇಷ್ಟೊಂದು ವಿವಾದಾತೀತವಾಗಿರಲಿಲ್ಲ."

ರಾವ್ ವೀರಮ್‌ದೇವ್ ನಾನು ಮೊದಲು ಪ್ರಸ್ತಾಪಿಸಿದ್ದ ಅಂಶಕ್ಕೆ ಮತ್ತೆ ಚಾಲನೆ ನೀಡಿದರು "ನೀವು ಏನೋ ಹೇಳುವುದಕ್ಕೆ ಹೊರಟಿದ್ದೀರಿ ಮಹಾರಾಜ್‌ಕುಮಾರ್. ಲೂದಿಯ ಸಾಮ್ರಾಜ್ಯ ದುಃಸ್ಥಿತಿಯಲ್ಲಿದ್ದಿರಬಹುದು. ಆದರೆ ಸುಲ್ತಾನನ ಬಳಿ ನಿಸ್ಸಂದೇಹವಾಗಿ ದುರ್ದಮವಾದ ಸಮರ ಯಂತ್ರವಿತ್ತು. ಅವನ ಸೋಲಿಗೆ ಕಾರಣಗಳು ಯಾವುವು ಅಂತ ನೀವು ಹೇಳುತ್ತೀರಿ?"

"ನಾಲ್ಕು ಕಾರಣಗಳಿವೆ. ಮೊಗಲರ ಬಿಲ್ಲುಗಳು ಅತ್ಯುತ್ತಮವಾಗಿ ವಿನ್ಯಾಸಗೊಂಡಂಥವು. ಅಲ್ಲದೆ ಅವರ ಉಕ್ಕಿನ ಬಿಲ್ಲುಗಳು ಹೆಚ್ಚು ಆಳಕ್ಕೆ ಭೇದಿಸುವ ಶಕ್ತಿ ಉಳ್ಳವು. ನಮ್ಮಂತಲ್ಲದೆ, ಅವರು ಫಿರಂಗಿ ಬಂದೂಕುಗಳನ್ನು ವಿಪುಲವಾಗಿ ಮತ್ತು ಮಾಮೂಲಿಯಾಗಿ ಬಳಸುತ್ತಾರೆ.

ಯಾರೇ ಆದರೂ ಅದನ್ನು ತುಂಬ ದೂರದಿಂದ ಹೊಡೆಯಬಹುದು. ಅಲ್ಲದೆ ಬಾಣಗಳಿಗಿಂತ ಹೆಚ್ಚು ಕರಾರುವಾಕ್ಕಾಗಿ ಮತ್ತು ಮಾರಣಾಂತಿಕವಾಗಿ ಹೊಡೆಯಬಹುದು. ಅವರು ಕೇವಲ ಮೇಲ್ಮಟ್ಟದ ಸಾಂಪ್ರದಾಯಿಕ ಶಸ್ತ್ರಗಳನ್ನಷ್ಟೇ ತರುವುದಿಲ್ಲ. ಅವರು ಯುದ್ಧರಂಗದಲ್ಲೇ ರಕ್ಷಣೋಪಾಯಗಳನ್ನು ಮಾಡುತ್ತಿರುತ್ತಾರೆ." ನಾನು ಪಾಣೀಪತ್‌ನಲ್ಲಿಯ ಬಾಬರನ ಸಮರ ಯೋಜನೆಯ ರೇಖಾ ಚಿತ್ರವನ್ನು ರಚಿಸಿ, ಅವನ ಸಮರ ತಂತ್ರ ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ವಿವರಿಸಿದೆ. "ನಾಲ್ಕನೆಯದು ಬಾದಷಹನು ಸಮರ ಫಿರಂಗಿಗಳೆಂಬ ನೂತನ ಮಾರಕಾಸ್ತ್ರಗಳನ್ನು ಬಳಸುತ್ತಾನೆ. ಅವು ಶತ್ರುಗಳ ಮಧ್ಯಕ್ಕೆ ತುಂಬ ದೂರದಿಂದ ಬೃಹತ್ತಾದ ಹಾರುವ ಕಲ್ಲು ಗುಂಡುಗಳನ್ನು ತೂರುತ್ತವೆ. ಇಬ್ರಾಹಿಂ ಲೂದಿಯ ಸೇನಾಪಡೆಗಳು ಬಾಬರನ ಪದಾತಿ ಇಲ್ಲವೆ ರಾವುತ ಪಡೆಯೊಂದಿಗೆ ಯುದ್ಧಕ್ಕೆ ತೊಡಗಿಕೊಳ್ಳುವುದಕ್ಕೆ ಬಹಳ ಮುಂಚೆಯೇ ಫಿರಂಗಿ ಗುಂಡುಗಳು ಅನಾಹುತ ಮಾಡಿಬಿಡುತ್ತಿದ್ದುವು."

"ನೀವು ಹೇಳ್ತಿರೋದು ಅದೇ ಒಂದಕ್ಕೊಂದು ಕಟ್ಟಿದ ಗಾಡಿಗಳು ಮತ್ತು ತೋಡುಗಳು ಹಾಗೂ ಅವುಗಳ ದಡಕ್ಕೆ ಮರದ ಕೊಂಬೆಗಳನ್ನು ತುಂಬಿ ಭದ್ರಪಡಿಸಿದವುಗಳು ತಾನೆ?" ಎಂದು ಸಿಲ್ಹಾದಿ ತೀರ ತಿರಸ್ಕಾರದಿಂದ ಕೇಳಿದನು. "ನಮ್ಮ ಆನೆಗಳು ಅವುಗಳನ್ನು ಅಪ್ಪಚ್ಚಿ ಮಾಡಿಬಿಡುತ್ತವೆ".

"ಇಬ್ರಾಹಿಂ ಲೂದಿಯ ಹತ್ತಿರ ಒಂದು ಸಾವಿರ ಆನೆಗಳಿದ್ದವು".

"ಬಾದಷಹನ ಹತ್ತಿರ ಎಷ್ಟು ಫಿರಂಗಿಗಳಿವೆ?" ರಾವ್ ವೀರಮ್‌ದೇವ್ ಮತ್ತೆ ಕೇಳಿದರು.

"ಮೂರೋ ನಾಲ್ಕೋ ಇರಬೇಕು. ಖಚಿತವಾದ ಸಂಖ್ಯೆ ನನಗೆ ಗೊತ್ತಿಲ್ಲ. ಆದರೆ ಈಗ ಅವನು ತುರ್ಕಿ ದೇಶಕ್ಕೆ ಸೇರಿದ ಉಸ್ತಾದ್ ಆಲಿಕಾಲಿ ಎಂಬ ಒಬ್ಬ ಮಹಾನ್ ಫಿರಂಗಿನಿಪುಣ ಮತ್ತು ಫಿರಂಗಿ ನಿರ್ಮಾಪಕನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾನೆ. ಈಚೆಗೆ ಅವನು ಬೃಹತ್ತಾದೊಂದು ಫಿರಂಗಿಯನ್ನು ತಯಾರಿಸಿದ್ದಾನೆ. ಈ ಹೊಸ ಫಿರಂಗಿ ಕಬ್ಬಿಣದ ಗುಂಡುಗಳನ್ನು ಸಾವಿರದ ಆರು ನೂರು ಹೆಜ್ಜೆಗಳಷ್ಟು ದೂರದವರೆಗೂ ಎತ್ತರಕ್ಕೆ ಹೊಡೆಯಬಲ್ಲುದೆಂದು ಲೆಕ್ಕ ಹಾಕಲಾಗಿದೆ"

"ನಾವು ಯಾವ ರೀತಿಯಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ನೀವು ಹೇಳುವಿರಿ?" ಎಂದು ಹೇಳಿ ರಾವ್ ವೀರಮ್ ದೇವ್ ನಾವು ಸಾಗಬೇಕಾದ ಹಾದಿ ಕುರಿತು ಚರ್ಚೆಯನ್ನು ಪ್ರಾರಂಭಿಸಿದರು.

"ಸದ್ಯಕ್ಕೆ ಆಟ ಆಡುವುದು"

"ಯಾವ ಉದ್ದೇಶಕ್ಕೆ?"

"ನಾವು ವಿಚಾರಿಸುತ್ತಾ ಇದ್ದೀವಿ. ಒಂದು ಒಂದೂವರೆ ವರ್ಷಗಳಲ್ಲಿ ಪೋರ್ಚುಗೀಸರು ನಾಲ್ಕು ಸಮರ ಕ್ಷೇತ್ರದ ಬಂದೂಕುಗಳನ್ನು ನಮಗೆ ಮಾರುವ ಸಾಧ್ಯತೆ ಇರುವ ಹಾಗೆ ಕಾಣುತ್ತದೆ. ಅದು ನಮಗೆ ಕಡೇ ಪಕ್ಷ ಒಂದೆರಡು ಸಾವಿರ ಫಿರಂಗಿ ಬಂದೂಕುಗಳನ್ನು ಕೊಳ್ಳುವಷ್ಟು ಕಾಲಾವಕಾಶ ನೀಡುತ್ತದೆ. ಅದೂ ಅಲ್ಲದೆ ಬಾಬರನ ಒಂದುಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಹುದಾದ ರಕ್ಷಣೋಪಾಯಗಳನ್ನು ಮೀರಿಸುವಂಥ ಸಮರ ತಂತ್ರವನ್ನು ವಿನ್ಯಾಸಗೊಳಿಸಲೂ ನಮಗೆ ಕಾಲಾವಕಾಶ ನೀಡುತ್ತದೆ".

"ಅದು ಯಾವ ರೀತಿಯ ಸಮರ ತಂತ್ರವಾಗಿರುತ್ತದೆ ಮಹಾರಾಜ್‌ಕುಮಾರ್?" ಎಂದು ರಾಜಾಪೂರಜಿ ಕೀಕಾ ನನ್ನನ್ನು ಅಲ್ಲಾಡದಂತೆ ಕಟ್ಟಿ ಹಾಕಿದನು. "ಅದರ ಬಗ್ಗೆ ನೀವು ಖಂಡಿತವಾಗಿಯೂ ಯೋಚನೆ ಮಾಡಿರಲೇಬೇಕು."

"ಎಲ್ಲ ಸಂಘರ್ಷಗಳನ್ನು ತ್ಯಜಿಸುವುದು. ಶತ್ರುತ್ವವನ್ನು ನಿವಾರಿಸಲಾಗದಿದ್ದರೆ, ಗೋಳಾಡಿಸುವುದು ಮತ್ತು ಕಾಟ ಕೊಡುವುದು. ಶತ್ರುವಿನ ಅಕ್ಕಪಕ್ಕ ಹೊಡೆದು ಅದೃಶ್ಯವಾಗಿ ಬಿಡುವುದು".

"ನೀವು ಮಾಳ್ವದ ಸುಲ್ತಾನನ ಮೇಲೆ ಸಾಂಪ್ರದಾಯಿಕ ಯುದ್ಧವನ್ನು ಮಾಡಿ ಗೆದ್ದಾದ ಮೇಲೆ ನಿಮ್ಮ ತಮಾಷೆ ವಿನೋದದ ಆಟಗಳ ಹಂತವನ್ನು ನೀವು ಮೀರಿದ್ದೀರಿ ಅಂತ ಅಂದುಕೊಂಡಿದ್ದೆವು. ಈಗ ಗಂಭೀರವಾಗಿ ಯೋಚನೆ ಮಾಡುವ ಕಾಲ ಮಹಾರಾಜ್‌ಕುಮಾರ್. ನಾವೀಗ ಮಾತಾಡುತ್ತ ಇರುವುದು ಯುದ್ಧದ ವಿಷಯ."

ರಾಜಾ ಪೂರಜೀ ಕೀಕಾ, ಸಿಲ್ಹಾದಿ ನನ್ನ ಬಗ್ಗೆ ಆಡಿದ ಚುಚ್ಚು ಮಾತನ್ನು ನಿರ್ಲಕ್ಷಿಸಿದನು. "ಇಂಥ ತಂತ್ರಗಳಿಂದ ಎಲ್ಲಿಯವರೆಗೂ ಮುಂದುವರೆಸಿಕೊಂಡು ಹೋಗುತ್ತೀರಿ ನೀವು? ನೀವೇ ಈಗಾಗಲೇ ನಮಗೆ ಮನವರಿಕೆ ಮಾಡಿಕೊಟ್ಟಿರುವ ಹಾಗೆ ಬಾದಷಹನೇನೂ ಯಃಕಶ್ಚಿತ್ ಮೂರ್ಖನಲ್ಲ".

"ಈ ಬಗೆಯ ನುಣುಚಿಕೊಳ್ಳುವ ತಂತ್ರಗಳನ್ನೇನಿದ್ದರೂ ಅವಲಂಬಿಸುವುದು, ಬೇರೆ ಇನ್ನೇನೂ ಮಾರ್ಗವೇ ಇಲ್ಲ ಎನ್ನುವಾಗ ಮಾತ್ರ. ಈ ತಕ್ಷಣ ಅಲ್ಲದೆ ಹೋದರೂ, ನಮ್ಮ ಶಸ್ತ್ರಾಸ್ತ್ರಗಳ ಕಾರ್ಖಾನೆ, ಬಾಬರನದಕ್ಕೆ ಸರಿಸಮಾನವಾದ ಕೂಡಲೇ, ಬಾದಷಹನನ್ನು ನಾವು ಮುಖಾಮುಖಿಯಾಗಿ ಎದುರಿಸಲೇಬೇಕು ಎನ್ನುವ ಸಂಗತಿ ನನಗೆ ಸಂಪೂರ್ಣವಾಗಿ ಅರಿವಾಗಿದೆ".

ಈ ವಿಷಯದ ಬಗ್ಗೆ ಬಹಳ ಹೊತ್ತಿನಿಂದಲೂ ಯೋಚನೆ ಮಾಡುತ್ತಿದ್ದವನ ಹಾಗೆ ಮೇದಿನಿ ರಾಯ್ ಹೇಳಿದರು "ಇಬ್ರಾಹಿಂ ಲೂದಿಯನ್ನು ನೆಲಕ್ಕೆ ಕೆಡವಿದ್ದು ಕೇವಲ ನಾಲ್ಕು ಫಿರಂಗಿ ಮತ್ತು ಒಂದು ಸಾವಿರ ಫಿರಂಗಿ ಬಂದೂಕುಗಳಷ್ಟೇ ಆಗಿರಲು ಸಾಧ್ಯವಿಲ್ಲ ಅಂತ ನನ್ನ ಯೋಚನೆ".

"ಸುಲ್ತಾನನ ಸೇನಾ ತುಕಡಿಗಳಲ್ಲಿ ನೈತಿಕ ಸ್ಥೈರ್ಯದ ಗಂಭೀರ ಸಮಸ್ಯೆಯಿತ್ತು. ತನ್ನ ಕಡೆಯ ಬಹಳಷ್ಟು ಜನರನ್ನು ಆಗಲೆ ದೂರಮಾಡಿಕೊಂಡಿದ್ದನು. ಅಲ್ಲದೆ ಅವನ ಬಹಳಷ್ಟು ಜನ ಅಮೀರರು ಮತ್ತು ಸೇನಾ ನಾಯಕರು ಅವನೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. ನಮ್ಮ ಜೊತೆ ಯುದ್ಧ ಮಾಡಬೇಕಾದರೆ ಪರಸ್ಪರ ಐಕಮತ್ಯದಿಂದ ಕೆಲಸ ಮಾಡುವ, ಸಮಾನವಾದ ಗುರಿ ಮತ್ತು ಆಕಾಂಕ್ಷೆಗಳನ್ನು ಹೊಂದಿರುವ ನಾಯಕರಿಂದ ಕೂಡಿದ ಸಂಯುಕ್ತ ಸೇನೆಯನ್ನು ಎದುರಿಸುತ್ತಾನೆ ಎಂದು ನನ್ನ ನಂಬಿಕೆ".

"ತಾವು ಪ್ರಸ್ತಾಪಿಸಿರುವ ಅಂಶಗಳ ಸತ್ಯತೆಯನ್ನು ನಾನು ನಿರಾಕರಿಸುವುದಿಲ್ಲ ಮಹಾಸ್ವಾಮಿ. ನಮ್ಮದು ಬೃಹತ್ತಾದ, ಬಲವಾದ ಮತ್ತು ಒಗ್ಗಟಿನಿಂದ ಕೂಡಿದ ಸೇನೆ. ಕಳೆದ ಸಲದ ಸೇನಾ ಕಾರ್ಯಾಚರಣೆಯ ಸಂದರ್ಭದಲ್ಲಿ ನಾವು ಕಂಡುಕೊಂಡಂತೆ. ಪರಸ್ಪರ ಸಂಬದ್ಧವಾಗಿರುವುದು ಮತ್ತು ಅಚ್ಚುಕಟ್ಟುತನ, ವ್ಯಾಪಕವಾದ ಶಿಸ್ತಿನ ತರಬೇತಿಯಿಂದ ಬರುತ್ತದೆ. ಸ್ವಲ್ಪ ಕಾಲಹರಣ ಮಾಡುವುದರಿಂದ ಏನು ತೊಂದರೆ ಆಗುತ್ತೆ? ಅದರಿಂದ ನಾವೂ ಸಣ್ಣ ಮತ್ತು ದೊಡ್ಡ ಸ್ಫೋಟಕ ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಿ ಇನ್ನಷ್ಟು ಬಲಶಾಲಿಗಳಾಗಬಹುದಲ್ಲವೆ?"

"ಆದರೆ ಅಲ್ಲಿಯವರೆಗೆ ಬಾದಷಹನನ್ನು ಹೇಗೆ ತಡೆದು ನಿಲ್ಲಿಸುವಿರಿ?"

"ಚಾಣಾಕ್ಷ ರೀತಿಯ ಆಕ್ರಮಣದಿಂದ. ಬಾದಷಹನಿಗೆ, ರಾಜಕುಮಾರ ಹುಮಾಯೂನನಿಗೆ ಮತ್ತು ಅರಮನೆಯ ಇನ್ನಿತರರಿಗೆ ಉಡುಗೊರೆಗಳನ್ನು ಕೊಟ್ಟು ಆಗ್ರಾಕ್ಕೆ ರಾಯಭಾರಿಯನ್ನು

ಕಳಿಸಿಕೊಡುತ್ತೇವೆ. ಬಾಬರನಿಗೆ ಅಭಿನಂದನೆ ಸಲ್ಲಿಸಿ, ಸ್ನೇಹ ಸಂಧಾನಗಳನ್ನು ನಡೆಸುತ್ತೇವೆ. ಅಗತ್ಯ ಬಿದ್ದರೆ, ಅವನೊಂದಿಗೆ ಗಡಿ ಮತ್ತು ಸೀಮೆಗಳ ಬಗ್ಗೆ ಚರ್ಚಿಸುತ್ತೇವೆ. ಅದು ಅವನ ಸಮತೋಲನವನ್ನು ತಪ್ಪಿಸುತ್ತದೆ. ಅದರಿಂದಾಗಿ ನಮ್ಮ ಉದ್ದೇಶಗಳನ್ನು ಕುರಿತಂತೆ ಗೊಂದಲವುಂಟು ಮಾಡುವುದು".

"ತಿಂಗಳುಗಟ್ಟಲೆ ವೈರವನ್ನು ಬೆಳೆಸಿಕೊಂಡು ಬಂದ ಮೇಲೆ ನಿಮ್ಮ ಪಾರದರ್ಶಕ ತಂತ್ರಗಳಿಂದ ಬಾದಷಹನು ಮೋಸ ಹೋಗುತ್ತಾನೆಂದು ನೀವು ಸೂಚಿಸುತ್ತಿದ್ದೀರಿ ತಾನೆ?" ಸಿಲ್ಹಾದಿಯ ತಿರಸ್ಕಾರ ಸರಿಯಾದ್ದೇ ಆಗಿತ್ತು.

"ಅದು ಪ್ರಯತ್ನ ಮಾಡಿ ನೋಡಲು ಅರ್ಹವಾದ್ದು. ಈಗ ಅವನ ಕೈಯಲ್ಲಿ ಅಷ್ಟೆಲ್ಲ ದಂಗೆಗಳು, ದಂಗೆಕೋರರು, ಮತ್ತಿತರೆ ಸಮಸ್ಯೆಗಳಿರುವಾಗ ಅವನು ಹೇಳುವ ಮೇವಾಡದ ನಾಸ್ತಿಕ ಸಮಸ್ಯೆಯಿಂದ ಸ್ವಲ್ಪ ಬಿಡುವು ಸಿಗುವುದಾದರೆ ಬಾಬರನಿಗೂ ಅದರಿಂದ ಸಂತೋಷವೇ ಆಗುತ್ತದೆ ಎಂದು ನನ್ನ ನಂಬಿಕೆ."

"ನೀವು ಹೇಳುತ್ತಾ ಇರುವುದು ಸರಿಯಾಗಿದೆ ಮಹಾರಾಜ್‌ಕುಮಾರ್. ಕಾಲವೇ ಎಲ್ಲಕ್ಕಿಂತ ಬಹಳ ಮಹತ್ವದ್ದು. ಶತ್ರುವಿನ ಮೇಲೆ ಆಕ್ರಮಣ ಮಾಡಲು ಅತ್ಯಂತ ಸೂಕ್ತವಾದ ಸಮಯವೆಂದರೆ ಅವನ ಸ್ವಂತ ದೇಶ ಅಣಿಯಾಗಿಲ್ಲದೆ ಇದ್ದಾಗ. ಶತ್ರುವಿನ ಮೇಲೆ ಈಗ ನಾವು ಆಕ್ರಮಣ ಮಾಡದೆ ಹೋದರೆ, ಅವನ ಕೈ ಮೇಲಾಗುವುದು. ದೇಶದಲ್ಲಿ ನಮ್ಮದೇ ಅತ್ಯುನ್ನತ ಶಕ್ತಿಯಾಗಿದೆ ಅಂತ ಆದರೆ, ನಾವೆಲ್ಲರೂ ಒಂದು ಎನ್ನುವ ಹಾಗೆ ಇರಬೇಕು" ಪೂರಣ್ ಮಲ್‌ಜೀಯವರು ನನ್ನೊಂದಿಗೆ ಸಾವಧಾನವಾಗಿ ತರ್ಕಿಸಿದರು.

ಆ ದಿನ ತಂದೆಯವರು ಮೊದಲನೇ ಸಲ ಮಾತನಾಡಿದರು. "ಹಾಗಾದರೆ ನಾವು ಅತ್ಯಂತ ಜಾಗ್ರತೆಯಾಗಿ ಬಾದಷಹನ ವಿರುದ್ಧ ದಂಡೆತ್ತಿ ಹೋಗಬೇಕು ಎನ್ನುವುದು ಇತ್ಯರ್ಥವಾದ ಹಾಗೆ ಆಯಿತು ತಾನೆ?"

ನಾನಿನ್ನೂ ಚೆನ್ನಾಗಿ ತಿಳಿದುಕೊಂಡಿರಬೇಕಾಗಿತ್ತು. ಯುದ್ಧ ಸಮಿತಿಯ ಸಭೆಯನ್ನು ಕರೆಯುವ ಮುನ್ನವೇ ಮಹಾಪ್ರಭುಗಳು ನಿರ್ಧಾರಕ್ಕೆ ಬಂದು ಬಿಟ್ಟಿದ್ದರು.

* * *

ಆ ಮಧ್ಯಾಹ್ನ ಮೇದಿನಿ ರಾವ್ ಮತ್ತು ರಾಜಾ ಪೂರಜೀ ಕೀಕಾ ಎಂದಿನಂತಿಲ್ಲದೆ ಇರುವುದನ್ನು ಕಂಡೆ.

ನಾವು ಕುದುರೆ ಏರಿ ಕೆಳಗೆ ಸಾಗುತ್ತಿದ್ದಂತೆ ಮೇದಿನಿ ರಾಯ್ ಕೇಳಿದರು "ಅದೇಕೆ ಚಿತ್ತೂರಿನ ಅರ್ಧದಷ್ಟು ಭಾಗ ಯಾವಾಗಲೂ ಅಗೆದಿರುತ್ತದಲ್ಲ?"

"ವಿಜಯನಗರದಲ್ಲಿರುವಂತೆ ನಾವು ಮೇಲ್ಗಾಲುವೆ ವ್ಯವಸ್ಥೆಯನ್ನು ಏರ್ಪಡಿಸಲು ಯತ್ನಿಸುತ್ತಿದ್ದೇವೆ".

"ಅದೇ ಕಾರಣ ಮಹಾಸ್ವಾಮಿ, ಅವರು ಯುದ್ಧ ಮಾಡಲಿಚ್ಛಿಸುತ್ತಿಲ್ಲ." ಹಾಗೆಂದು ರಾಜಾ ಪೂರಜೀ ಕೀಕಾ ಮೇದಿನಿರಾಯ್‌ಗೆ ಹೇಳಿದನು. "ಯುದ್ಧವಾದರೆ ಅವರಿಗೆ ಪ್ರಿಯವಾಗಿರುವ ಯೋಜನೆಯಿಂದ ಹಣಕಾಸನ್ನು ಆ ಕಡೆಗೆ ಹೊರಳಿಸುತ್ತಾರೆ ಎಂದು."

"ನಾನು ಅದರ ಬಗ್ಗೆ ಯೋಚನೆ ಮಾಡಿರಲಿಲ್ಲ. ಆದರೆ ನೀವು ಹೇಳಿದ್ದು ಸರಿ. ನಾವು ವಾಪಸ್ ಬರುವ ಹೊತ್ತಿಗೆ ಎಲ್ಲವೂ ಒಂದು ನಿಲುಗಡೆಗೆ ಬಂದಿರುತ್ತೆ".

"ಹಾಗಾದರೆ ಇದು ತುಂಬ ದೊಡ್ಡದು ಅಂತ ನೀವು ಅಂದುಕೊಂಡಿದ್ದೀರೇನು?" ಮೇದಿನಿರಾಯ್ ನನ್ನನ್ನು ಕೇಳಿದರು.

"ಹೌದು ಅದು ಹಾಗೇ ಅಂತ ನನ್ನ ಊಹೆ. ನೀವೇನು ಅಂದುಕೊಂಡಿದ್ದೀರಿ?"

"ಈ ಆಗ್ರಾದ ಹೊಸ ಮನುಷ್ಯನು ಏರುತ್ತಿರುವ ಜ್ವರದ ಹಾಗೆ. ಯುದ್ಧರಂಗಕ್ಕೆ ಹೋಗುವ ಹೊತ್ತಿಗೆ ನಾವೆಲ್ಲರೂ ಸನ್ನಿ ಹಿಡಿದವರಂತಾಗುವುದಿಲ್ಲ ಎಂದು ನನಗೆ ವಿಶ್ವಾಸವಿದೆ" ಮೇದಿನಿರಾಯ್ ಹೇಳಿದ್ದು ಸರಿಯಾಗೇ ಇತ್ತು. ನಾವು ಬಾಬರ್ ವಿಷಯ ಬಿಟ್ಟು ಬೇರೆ ಏನನ್ನೂ ಯೋಚಿಸುವಂತಿರಲಿಲ್ಲ. "ನಮ್ಮ ಮಿತ್ರ ಪಡೆಗಳು ಯುದ್ಧ ಪ್ರಾರಂಭಿಸಲು ಹೋಗುವ ಉತ್ಸಾಹದಲ್ಲಿದ್ದಾರೆ. ಆ ರೀತಿಯ ಭಾವಾವೇಶ ಮತ್ತು ಆತ್ಮವಿಶ್ವಾಸದಿಂದ ನಮಗೇನೂ ತೊಂದರೆಯಿಲ್ಲ. ಬಾಬರ್ ಅದೆಷ್ಟು ಧರ್ಮಾಂಧತೆಯ ಆವೇಶದಿಂದ ಈ ಯುದ್ಧದತ್ತ ಮುಮದುವರಿಯುತ್ತಿದ್ದಾನೆಂಬುದನ್ನು ನೀವೇಕೆ ಹೇಳಲಿಲ್ಲ?"

"ನಾನು ಚರ್ಚೆಯ ವೇಗವನ್ನು ಅತಿಯಾದ ದೇಶಭಕ್ತಿಯ ಹಂತದಿಂದ ವೈಚಾರಿಕ ಹಂತಕ್ಕೆ ನಿಧಾನಗೊಳಿಸುವೆನೆಂಬ ವಿಶ್ವಾಸದಿಂದಿದ್ದೆ. ಬಾಬರನನ್ನು ಕುರಿತ ಯಾವುದೇ ಅತಿಯಾದ ರೀತಿಯ ಮಾತು ಅವರನ್ನು ಇಂದೇ ಯುದ್ಧಕ್ಕೆ ತೆರಳುವಂತೆ ಮಾಡಿ ಬಿಡುತ್ತಿತ್ತು."

ಮೇದಿನಿರಾಯ್ ನನ್ನ ಮಾತನ್ನು ತುಂಡರಿಸಿ.

"ಅದು ನಾವು ಅದನ್ನು ಹೇಗೆ ಎದುರಿಸುತ್ತೇವೆಂಬ ಪ್ರಶ್ನೆಗೆ ಉತ್ತವಲ್ಲ."

"ನಿಮಗೇನಾದರೂ ಈ ಬಗ್ಗೆ ಅಭಿಪ್ರಾಯಗಳಿವೆಯಾ?"

"ಬಹುಶಃ ನಾವೂ ಇದನ್ನು ಧಾರ್ಮಿಕ ಯುದ್ಧವಾಗಿ ಮಾಡಬೇಕಾಗುತ್ತದೆ".

"ಅಂದರೆ ಮುಸ್ಲಿಂ ದೊರೆಗಳು ಮತ್ತು ಜನತೆಯ ಬೆಂಬಲವನ್ನು ಕಳೆದುಕೊಳ್ಳುವುದೆ?"

"ಹಾಗಾದರೆ ಏನು ಮಾಡೋಣ?"

"ಪವಿತ್ರ ಯುದ್ಧಕ್ಕೆ ಎರಡೇ ಎರಡು ತಡೆಗಳಿವೆ. ನಮಗೆ ಎಷ್ಟು ಜನ ಸಾಧ್ಯವೋ ಅಷ್ಟು ಜನ ಮುಸ್ಲಿಮರನ್ನು ಸ್ವಯಿಚ್ಚೆಯಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವುದು. ಅರ್ಹತೆಯೊಂದನ್ನೇ ಪ್ರಗತಿಯ ಅಳತೆಗೋಲನ್ನಾಗಿ ಪರಿಗಣಿಸಬೇಕೇ ಹೊರತು, ಧರ್ಮವನ್ನಲ್ಲ. ಎರಡನೆಯದೆಂದರೆ, ತಾಂತ್ರಿಕತೆ. ಇಡೀ ಸಭೆಯ ಉದ್ದಕ್ಕೂ ಅದನ್ನೇ ನಾನು ಮುಂದಿಡುತ್ತಿದ್ದೆ. ನಾವು ಅವರಿಗಿಂತ ತಾಂತ್ರಿಕತೆಯಲ್ಲಿ ಮುಂದಿಲ್ಲದೆ ಹೋದರೂ, ಕೊನೇ ಪಕ್ಷ ಅವರಿಗೆ ಸಮನಾಗಿಯಾದರೂ ಇರಬೇಕು. ಸೈನಿಕವಾಗಿ ಹತ್ತು ತಂಡಗಳು ಹತ್ತು ದಿಕ್ಕುಗಳಲ್ಲಿ ಚಲಿಸುವ ಬದಲು ನಾವು ಒಂದು ಘಟಕದಂತೆ ಯೋಚಿಸಬೇಕು ಮತ್ತು ಮುಂದುವರಿಯಬೇಕು". ನಾನು ಹೇಳಿದ್ದೆಲ್ಲವನ್ನೂ ರಾಯ್ ಮನಸ್ಸಿಟ್ಟು ಕೇಳಿದರು. ಆದರೆ ಆ ನಂತರ ನಾನು ಏನು ಹೇಳಬೇಕೆಂದಿದ್ದೆ ಅದರಿಂದ ಅವರು ಕೋಪದಿಂದ ಹುಬ್ಬುಗಂಟಿಕ್ಕಿ ಮುಖ ಸಿಂಡರಿಸುವಂತಾಯಿತು.

"ಬಾಬರ್ ನಮ್ಮ ಬಗ್ಗೆ ಏನು ಹೇಳುತ್ತಾನೆ ಅಂತ ನಿಮಗೆ ಗೊತ್ತೇನು?"

'ಕೆಲವು ಹಿಂದೂಸ್ತಾನೀಯರು ಖಡ್ಗ ವೀರರೇ ಆದರೂ, ಅವರಲ್ಲಿ ಬಹಳಷ್ಟು ಜನ ಸೈನಿಕ ನಡೆ ನಿಲುವುಗಳಲ್ಲಿ ಸೈನಿಕ ಆಪ್ತಾಲೋಚನೆ ಮತ್ತು ಕ್ರಮದಲ್ಲಿ ಅಜ್ಞಾನಿಗಳು ಹಾಗೂ ಕೌಶಲ್ಯವಿಲ್ಲದವರು.' "ನಾವು ಅವನ ತಿಳುವಳಿಕೆ ತಪ್ಪು ಎಂದು ಸಾಧಿಸಿ ತೋರಿಸಬೇಕು."

"ತನ್ನ ಬಳಕೆಗೆ ಲಭ್ಯವಿದ್ದ ಮಿತವಾದ ಸಂಪನ್ಮೂಲಗಳನ್ನು ತುಂಬ ಬುದ್ಧಿವಂತಿಕೆಯಿಂದ ನಿರ್ವಹಿಸಿದ್ದಕ್ಕೆ ಬಾಬರ್‌ನನ್ನು ನಿಂದಿಸಿದಷ್ಟೇ ಇಬ್ರಾಹಿಂ ಲೂದಿಯನ್ನು ನಿಂದಿಸಬೇಕೆಂದು ನಾನು ಸೂಚಿಸಿದ್ದು ತಪ್ಪಾಯಿತೆಂದು ತೋರುತ್ತದೆ."

ಮೇದಿನಿರಾಯ್ ಪುನರ್ ಪರಿಶೀಲಿಸುವ ಕೆಚ್ಚು ತೋರಿದರೆಂದು ತಿಳಿದು ನನಗೆ ಸಂತೋಷವಾಯಿತು.

"ಅದು ಶಸ್ತ್ರಾಸ್ತ್ರಗಳ ತಾಂತ್ರಿಕತೆಯಲ್ಲಿ ಬಾಬರನ ಸರ್ವೋತ್ಕೃಷ್ಟತೆಯಿಂದ ಬೇರೆ ಕಡೆಗೆ ಗಮನವನ್ನು ತಿರುಗಿಸಿತು".

"ಸ್ವಲ್ಪ ಮಟ್ಟಿಗೆ ಮಾತ್ರ. ಸಮರ ಸಮಿತಿಯಲ್ಲಿರುವ ಪ್ರತಿಯೊಬ್ಬರೂ, ರಣ ಫಿರಂಗಿಗಳು ಮತ್ತು ಫಿರಂಗಿಬಂದೂಕುಗಳು ನಮ್ಮ ಸೇನಾಪಡೆಗಳಿಗೆ ಅಂಥದೇನೂ ಗಂಭೀರವಾದ ಹಾನಿ ಉಂಟು ಮಾಡಲಾರರೆಂದೇ ಭಾವಿಸಿದ್ದಾರೆ."

"ನಾನು ಇನ್ನೊಂದು ವಿಷಯಕ್ಕೆ ಮಹಾಪ್ರಭು ರಾಣಾ ಮತ್ತು ನಿಮ್ಮ ಕ್ಷಮೆ ಕೋರಬೇಕಾಗಿದೆ. ಅದು ಬಹಳ ಕಾಲದಿಂದ ಬಾಕಿ ಇದೆ. ಕಳೆದ ಸಲ ನಾವು ಮಾಳ್ವದ ಸುಲ್ತಾನನ ಹಣೆಯ ಬರಹವನ್ನು ನಿರ್ಧರಿಸಲು ಸಭೆ ಸೇರಿದ್ದಾಗ ಸಿಲ್ಹಾದಿ ಮಹಾಸ್ವಾಮಿಯವರು ಬಹಳ ಉದ್ವೇಗಕ್ಕೆ ಒಳಗಾಗಿದ್ದರು. ನಾನು ನಿಮ್ಮ ಬಗೆಗಿನ ನನ್ನ ಮೆಚ್ಚಿಗೆ ವ್ಯಕ್ತಪಡಿಸುವಲ್ಲಿ ಏನೂ ಕೊರೆ ಮಾಡಿಲ್ಲ ಮಹಾಸ್ವಾಮಿ. ನೀವಿಲ್ಲದಿದ್ದರೆ ನಾನು ನನ್ನ ಮಗನನ್ನೂ ಗ್ಯಾಗ್ರೋನನ್ನು ಕಳೆದುಕೊಂಡು ಬಿಡುತ್ತಿದ್ದೆನು. ಅಲ್ಲದೆ ನಾನು ಖಂಡಿತವಾಗಿಯೂ ಯುದ್ಧದಲ್ಲಿ ಜಯ ಸಂಪಾದಿಸಲಾಗುತ್ತಿರಲಿಲ್ಲ".

"ಆ ಬಗ್ಗೆ ತಾವು ಚಿಂತಿಸಬೇಕಾದ್ದಿಲ್ಲ ಮಹಾಸ್ವಾಮಿ. ನಾನು ನಿಮ್ಮನ್ನು ಸಿಲ್ಹಾದಿ ಎಂದು ತಿಳಿದಿಲ್ಲ"

* * *

ನಾನು ಕಛೇರಿಯಲ್ಲಿ ವೇಳೆ ಮೀರಿ ಬಹಳ ಹೊತ್ತಿನವರೆಗೆ ಕೆಲಸ ಮಾಡುತ್ತಿದ್ದೆನು. (ನಾವೆಲ್ಲ ಅಲ್ಲಿ ಇದ್ದೆವು. ನಾವು ಅಲ್ಲಿಂದ ಹೊರಡುವುದಕ್ಕೆ ತೀರ ಅಲ್ಪ ಸಮಯವಿತ್ತು). ಆಗ ನನ್ನನ್ನು ನೋಡಲು ತಂದೆಯವರು ಬಂದರು.

"ಒಂದು ಸ್ಪಷ್ಟನೆಯನ್ನು ನೀಡುವುದು ಸರಿಯಾದ್ದು ಎಂದು ಅನ್ನಿಸುತ್ತದೆ. ಮೊಗಲ್ ಬಾದಷಹನಿಗೆ, ಆತನ ದಿನಚರಿ ಸೂಚಿಸುವಂತೆ ನಾನು ಪತ್ರ ಬರೆಯಲಿಲ್ಲ. ಆತನೇ ನನ್ನನ್ನು ಕೇಳಿದಾನೆ."

"ಯಾರು ಯಾರನ್ನು ಕೇಳಿದರು ಎನ್ನುವುದು ಮುಖ್ಯವಲ್ಲ ಮಹಾಪ್ರಭು. ನಾವು ಆತನನ್ನು ಬೆಂಬಲಿಸುತ್ತೇವೆ ಹಾಗೂ ದಕ್ಷಿಣದ ಕಡೆಯಿಂದ ಆಗ್ರಾದ ಮೇಲೆ ಆಕ್ರಮಣ ಮಾಡುತ್ತೇವೆ ಎಂದು ತಾವು ಬರೆದದ್ದರಿಂದ ಬಾಬರನಿಗೆ ತಾನು ದ್ರೋಹಕ್ಕೊಳಗಾದೆನೆಂಬ ಭಾವನೆ ಉಂಟಾಗಿದೆ. ತನಗಾದ ಅಸಮಾಧಾನವನ್ನು ಅಷ್ಟು ಸುಲಭವಾಗಿ ಮರೆತು ಬಿಡುವಂಥ ಮನುಷ್ಯನಲ್ಲ ಬಾಬರ್. ಈ ಸಂಘರ್ಷಕ್ಕೆ ಅವನು ವೈರತ್ವದ ಹೆಚ್ಚಿನ ತೂಕವನ್ನು ಹೇರುತ್ತಾನೆಂದೇ ನನ್ನ ಗುಮಾನಿ. ಅದಕ್ಕೆ ಕಾರಣ ನಾವು ಮಹಮ್ಮದೀಯರಲ್ಲ ಎಂಬುದಷ್ಟೇ ಅಲ್ಲ, ನಮ್ಮೊಂದಿಗೆ ಬೇರೆ ಕೆಲವು ಮುಯ್ಯಿ ಕೂಡ ತೀರಿಸಿಕೊಳ್ಳುವುದು ಅವನ ಆಸೆ."

"ನನ್ನ ಲೆಕ್ಕಾಚಾರಗಳು ಬೇರೆಯದೇ ಆದ ಗ್ರಹಿಕೆಗಳನ್ನಾಧರಿಸಿತ್ತು. ಇಬ್ರಾಹಿಂ ಲೋದಿ ಬಾಬರನ ಕಡಿಮೆ ಸಂಖ್ಯೆಯ ಸೇನಾ ಬಲಗಳ ಮೇಲೆ ದಾಳಿ ಮಾಡುತ್ತಾನೆಂದೂ ಆದರೆ ಆ ವ್ಯತಿಕರದಲ್ಲಿ ಭಾರೀ ಸಾವು ನೋವುಗಳಾಗತ್ತವೆಂದು ನಾನು ನೆಚ್ಚಿಕೊಂಡಿದ್ದೆ. ಇನ್ನೊಂದುಕಡೆ, ಬಾಬರನು ದೆಹಲಿಯ ಸುಲ್ತಾನನ್ನು ಸೋಲಿಸಿದ್ದೇ ಆದರೆ, ಅವನು ಬಹಳ ದೊಡ್ಡ ಮೊತ್ತದ ಹಣವನ್ನು ಕೂಡಿಸಿಕೊಂಡು, ಹೆಚ್ಚೆಂದರೆ, ಒಂದೋ ಎರಡೋ

ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳುವನೆಂದು ಲೆಕ್ಕ ಹಾಕಿದ್ದೆ. ಹೇಗೇ ಆದರೂ, ಇಬ್ರಾಹಿಂ ಲೂದಿಯ ಮೇಲೆ ಆಕ್ರಮಣ ಮಾಡಲು ಅತ್ಯಂತ ಸೂಕ್ತವಾದ ಸಮಯವೆಂದರೆ, ಬಾಬರನೊಂದಿಗೆ ಅವನು ಸಂಘರ್ಷಕ್ಕೆ ತೊಡಗಿದ ಮೇಲೆ ಎಂದು ನನಗನ್ನಿಸಿತ್ತು. ಬಾಬರನು ದೆಹಲಿಯನ್ನು ವಶಪಡಿಸಿಕೊಳ್ಳುವನೆಂದು ಯಾರು ತಾನೆ ಊಹಿಸಿದ್ದರು?"

ಜನರು ಬಹಿರಂಗವಾಗಿ ಘೋಷಿಸಿಕೊಂಡ ಅವರ ಆಶಯಗಳನ್ನು ಅದು ಹೇಗೆ ನಾವು ಅಸಡ್ಡೆ ಮಾಡಿ ಬಿಡುತ್ತೇವೆ ಎಂಬುದು ನನಗೆ ಯಾವತ್ತೂ ಆಶ್ಚರ್ಯದ ಸಂಗತಿ. ಬಾಬರನ ದಿನಚರಿಯ ಹಾಳೆಗಳ ತುಣುಕುಗಳ ಮತ್ತು ಚೂರುಗಳ ಅನುವಾದದ ಪ್ರತಿಗಳನ್ನು ಸಂಪುಟದ ಎಲ್ಲ ಸಚಿವರಿಗೆ ಕಳಿಸಿಕೊಡಲಾಗಿತ್ತು. ತನ್ನ ಪೂರ್ವಜನಾದ ತೈಮೂರನು ಕೆಲವು ತಲೆಮಾರುಗಳ ಹಿಂದೆ ದೆಹಲಿ ಸಂಸ್ಥಾನವನ್ನು ಜಯಿಸಿದ್ದರಿಂದಾಗಿ, ಅದು ತನ್ನದೆಂದು ತಾನು ಪರಿಗಣಿಸುವುದಾಗಿ ಬಾಬರನು ಬಹಳ ಹಿಂದೆಯೇ ಘೋಷಿಸಿದ್ದ ಸಂಗತಿ ತಂದೆಯವರಿಗೆ ಖಂಡಿತವಾಗಿಯೂ ತಿಳಿದಿತ್ತು.

"ಬಹುಶಃ ನಾವು ಸ್ವಲ್ಪ ಭೋಳೇ ಸ್ವಭಾವದವರಿರಬೇಕು." ಅದು ಮಹಾಪ್ರಭುಗಳು ತಮ್ಮ ಒಂದು ತಪ್ಪನ್ನು ಯಾವತ್ತಾದರೂ ಹೆಚ್ಚು ಕಡಿಮೆ ಒಪ್ಪಿಕೊಳ್ಳುವುದಕ್ಕೆ ಹತ್ತಿರವಾದದ್ದು.

"ತಾವು ಅಲ್ಲಿಗೆ ನಿಲ್ಲಲಿಲ್ಲ. ಪಾಣಿಪತ್ ಕದನದ ನಂತರ, ದೆಹಲಿ ಸಿಂಹಾಸನಕ್ಕೆ ಮುಂದಿನ ಉತ್ತರಾಧಿಕಾರಿಯ ಸ್ಥಾನದಲ್ಲಿದ್ದ ಇಬ್ರಾಹಿಂ ಲೂದಿಯ ತಮ್ಮ ಮಹಮೂದ್‌ನಿಗೆ ಚಿತ್ತೂರಿನಲ್ಲಿ ಸ್ವಾಗತವನ್ನು ಮಾಡಿದಿರಿ. ಆಮೇಲೆ ತಾವು ಕಂದಾರ್ ಅನ್ನು ವಶಪಡಿಸಿಕೊಂಡಿರಿ. ಅದು ದೆಹಲಿ ಸುಲ್ತಾನಿಯತ್‌ಗೆ ಸೇರಿದ್ದು. ತಾನು ಇಬ್ರಾಹಿಂ ಲೂದಿಯನ್ನು ಸೋಲಿಸಿದ್ದರಿಂದ ಬಾಬರ್ ಅದು ತನ್ನ ಪ್ರದೇಶವೆಂದು ಪರಿಗಣಿಸುತ್ತಾನೆ. ಅದಷ್ಟು ಸಾಲದೇನೋ ಎನ್ನುವ ಹಾಗೆ ತಾವು ರಹಸ್ಯವಾಗಿ ಬಾಬರ್ ತನ್ನದೆಂದು ಭಾವಿಸುವ ಇನ್ನೊಂದು ನೂರಾ ತೊಂಬತ್ತೋ ಇನ್ನೂರೋ ನಗರ ಮತ್ತು ಹಳ್ಳಿಗಳನ್ನು ವಶಪಡಿಸಿಕೊಂಡಿದ್ದೀರಿ. ಬಾಬರನಿಗೆ ಬಹಳ ಗಂಭೀರವಾದ ರೀತಿಯಲ್ಲೇ ನಾವು ಪ್ರಚೋದನೆಯನ್ನು ನೀಡಿದ್ದೇವೆ ಎಂಬುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ ಅಪ್ಪಾಜಿ". ನಾನಾಗ ನಕ್ಕೆ. "ಅದೇ ನಿಮ್ಮ ಉದ್ದೇಶವಾಗಿತ್ತು ಎಂದು ನನ್ನ ಸಂದೇಹ."

"ಅದನ್ನು ಹಾಗೆ ಹೇಳಲು ನಾನು ಅಷ್ಟು ದೂರ ಹೋಗಲ್ಲ".

"ಈಗ ಅದು ಅಷ್ಟೇನೂ ಮುಖ್ಯವಲ್ಲ ಅಪ್ಪಾಜಿ. ಬಾದಷಹನು ಈಗ ಆಗ್ರಾದಲ್ಲಿದ್ದಾನೆ. ಈಗ ಹೋರಾಟವನ್ನು ತಪ್ಪಿಸುವಂತೆಯೇ ಇಲ್ಲ. ಈಗ ನಾನು ಅದೇ ಹಳೇ ವಿಷಯಕ್ಕೆ ಮತ್ತೆ ಬರುವುದನ್ನು ಕ್ಷಮಿಸುವ ಹಾಗಿದ್ದರೆ, ಅದನ್ನು ಮುಂದೆ ಹಾಕುವುದನ್ನು ಪುನರ್ ಪರಿಶೀಲಿಸುವಿರಾ?"

"ರಜಪೂತರ ಇತಿಹಾಸದಲ್ಲಿ ನೀನು ಅತ್ಯಂತ ದೃಢವಾದ ಸೇನಾಧಿಕಾರಿಗಳಲ್ಲೊಬ್ಬ ಎಂಬುದು ನನಗೆ ಗೊತ್ತಿಲ್ಲದೆ ಇದ್ದರೆ, ನೀನು ಸ್ಥೈರ್ಯ ಕಳೆದುಕೊಂಡವನು ಎಂದು ನಾನು ಹೇಳುತ್ತೀನಿ. ಈ ಅತಿಯಾದ ಎಚ್ಚರ ನಿನ್ನನ್ನು ಹೇಡಿಯನ್ನಾಗಿ ಮಾಡುತ್ತಿದೆ. ನಾವು ತಡಮಾಡಿದಷ್ಟು ಅವನು ಬಲಿಷ್ಠನಾಗುತ್ತಾನೆ. ಬಾದಷಹನು ಇನ್ನೂ ಆತಂಕಗೊಂಡಿರುವ ಈ ಸಮಯವೇ ಅವನ ಮೇಲೆ ಆಕ್ರಮಣ ಮಾಡಲು ಸೂಕ್ತವಾದ ಸಮಯ. ಅಲ್ಲದೆ ಇಬ್ರಾಹಿಂ ಲೂದಿಯ ಸಾಮಂತರೆಲ್ಲಾ ದಂಗೆಗಳನ್ನು ಉಲ್ಬಣಗೊಳಿಸುವುದರಲ್ಲಿ ವ್ಯಸ್ತರಾಗಿದ್ದಾರೆ".

ಅಧ್ಯಾಯ 42

"ಯಾರು, ಮಂಗಳ್, ಯಾರು?"

ನ್ಯಾಯಾಲಯದ ಅಧಿಕೃತ ವಾರ್ತಾಪತ್ರ 'ಅಪಘಾತ' ಎಂದು ಕರೆಯಲಿಚ್ಛಿಸುವ ಆ ಘಟನೆ ನಡೆದು ಹದಿನೇಳು ದಿನ ಆಗಿತ್ತು.

"ನೂರಾ ಹದಿನಾಲ್ಕು ಜನರಲ್ಲಿ ಯಾರು ಬೇಕಾದರೂ ಆಗಿರಬಹುದು."

ನಾನು ಮಂಗಳನ ಕಡೆ ತೀಕ್ಷ್ಣವಾಗಿ ನೋಡಿದೆ. ಪುಷ್ಕರ ತೀರ್ಥಕ್ಕೆ ಹೋದ ನೂರಾ ಹದಿನೇಳು ಜನರಲ್ಲಿ ಏಕೆ ಒಂದು ಪೂರ್ಣ ಸಂಖ್ಯೆ ನೂರಾಗಲಿ, ತೊಂಬತ್ತ ಮೂರಾಗಲಿ ಅಲ್ಲ? ಮಾಹಿತಿಯನ್ನು ಕೊಡಲು ಇಷ್ಟವಿಲ್ಲದೆ ಇದ್ದಾಗ ಮಂಗಳನು ಲೇವಡಿ ಮಾಡತೊಡಗುತ್ತಾನೆ. ಆದರೆ ತಾನು ಹೇಳಿದ್ದರ ಉದ್ದೇಶ ಅವನಿಗೆ ತಿಳಿದಿದೆ. ಅಲ್ಲದೆ ಅವನು ಹೇಳಿದ್ದು ಸರಿಯಾಗಿಯೂ ಇತ್ತು. ರಾಣಿ ಕರ್ಮವತಿಯ ಮುಖ್ಯ ಹಿಜಡಾನು ಕೇವಲ ಅಧಿಕಾರದಿಂದ ಪ್ರಬಲನಷ್ಟೇ ಅಲ್ಲ. ಆ ಅಧಿಕಾರ ಪ್ರಾಬಲ್ಯವನ್ನು ಜನಗಳನ್ನು ಆಘಾತಗೊಳಿಸಲು ಹಾಗೂ ನಾಶಗೊಳಿಸಲು ಬಳಸುತ್ತಿದ್ದನು. ಅಂತಃಪುರದ ಹೆಂಗಸರು ತನಗೆ ಕೃತಜ್ಞರಾಗಿರಬೇಕೆಂದು ಅವನು ಬಯುಸುತ್ತಿದ್ದನು. ಅದರ ಉದ್ದೇಶ, ಯಾವುದಾದರೊಂದು ಸಂದಿಗ್ಧ ಸಮಯದಲ್ಲಿ ಅವರ ಕಡೆಯಿಂದ ದುಬಾರಿಯಾದೊಂದು ನೆರವನ್ನು ಕೇಳುವುದು ಇಲ್ಲವೆ ಒಂದು ದುಬಾರಿ ಬೆಲೆಯನ್ನು ವಸೂಲಿ ಮಾಡಿಕೊಳ್ಳುವುದು. ಅವನು ಯಾವಾಗಲೂ ಬಹಳ ಆಕರ್ಷಕವಾಗಿರುತ್ತಿದ್ದ. ಆದರೆ ಅದರ ಹಿಂದೆ ಒಂದು ರಹಸ್ಯ ಉದ್ದೇಶ ಇದ್ದೇ ಇರುತ್ತಿತ್ತು. ರಾಣಿಯರು ಕೂಡಾ ಅವನನ್ನು ಕಂಡರೆ ಹೆದರುತ್ತಿದ್ದರು. ಮಂಗಳ ಹೇಳಿದ್ದು ಸರಿಯಾಗೇ ಇತ್ತು. ರಾಣಿ ಕರ್ಮವತಿ ಮತ್ತು ವಿಕ್ರಮಾದಿತ್ಯನನ್ನು ಬಿಟ್ಟು, ಪುಷ್ಕರದಲ್ಲಿದ್ದ ನಾವೆಲ್ಲರೂ, ಆ ಹಿಜಡಾನ ಭಯಂಕರ ದುರುದ್ದೇಶವನ್ನು ಹೊರಬೇಕಾಗಬಹುದಾಗಿತ್ತು.

"ಅವನಿಗೆ ಮರಳಿ ಪ್ರಜ್ಞೆ ಬಂದಿದೆಯೆ?"

"ಇಲ್ಲ"

"ಅವನ ಸ್ಥಿತಿ ಸ್ಥಿರವಾಗಿದೆಯೆ?"

"ಇಲ್ಲ. ಅವನಿಗೆ ಬಹಳ ರಕ್ತ ಸ್ರಾವ ಆಗಿದೆ. ಅದೂ ಅಲ್ಲದೆ ಅವನ ದೇಹ ತುಂಬ ಯಾತನೆಗೊಳಗಾಗಿದೆ ಎಂದು ವೈದ್ಯರು ಹೇಳುತ್ತಾರೆ. ಅವನು ಸರಿ ಹೋಗುತ್ತಾನೋ ಇಲ್ಲವೋ ಇನ್ನೂ ಹೇಳಕ್ಕಾಗಲ್ಲ."

"ಬೃಹನ್ನದನ ಬೆನ್ನಿನ ಮೇಲೆ ಒಂದೇ ಒಂದು ಹೊಡೆತವಾಗಲಿ ಗಾಯವಾಗಲಿ ಇರಲಿಲ್ಲ. ತನ್ನ ಮೇಲೆ ಆಕ್ರಮಣ ಮಾಡಿದವರು ಯಾರು ಎಂದು ಆವನಿಗೆ ಗೊತ್ತಿತ್ತು. ಆದರೆ ಅದಕ್ಕೆ ಅವನು ಪ್ರತಿಯಾಗಿ ಹೊಡೆದಿಲ್ಲ. ಅಥವಾ ತನ್ನನ್ನೂ ರಕ್ಷಿಸಿಕೊಂಡಿಲ್ಲ. ಅಥವಾ ಓಡಿ ಹೋಗುವುದಕ್ಕೂ ಪ್ರಯತ್ನಿಸಿಲ್ಲ. ಅವನು ಮಾಡಿರುವುದೆಲ್ಲ ತನ್ನ ಕೈಗಳು ಮತ್ತು ತೋಳುಗಳಿಂದ, ಏಟುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಯತ್ನಿಸಿದಂತೆ ಕಾಣುತ್ತದೆ. ತಾನು ಸಾಯಲು ತಕ್ಕನಾದವನೆಂದು ಅವನು ನಂಬಿದ್ದನೆಂದು ನೀನು ಭಾವಿಸುವೆಯಾ?"

"ಪ್ರಾಯಶಃ". ಮಂಗಳನಿಗೆ ಆ ಹೊತ್ತು ಏಕ ಶಬ್ದದ ದಿನವಾಗಿತ್ತು.

"ಅದು ಯಾರು, ಮಂಗಳ್, ಯಾರು? ಬೃಹನ್ನದನ ಮೇಲೆ ಹಲ್ಲೆ ಮಾಡಿದವರು. ಯಾರು ಅಂದರೆ ಬೃಹನ್ನದನಿಗೆ ತನ್ನ ಆತ್ಮರಕ್ಷಣೆಗಾಗಿ ಕೈ ಎತ್ತದೆ ತನ್ನ ದೇಹದ ಮೇಲೆ ಆಗುತ್ತಿದ್ದ ಹಲ್ಲೆಯನ್ನು ಸಹಿಸಿಕೊಳ್ಳದೆ ಬೇರೆ ಆಯ್ಕೆಯೇ ಇರಲಿಲ್ಲ ಎನ್ನುವಷ್ಟು ಪ್ರಬಲ ವ್ಯಕ್ತಿ ಎನ್ನುತ್ತೀಯಾ?"

"ಆ ಯೋಚನೆ ನನ್ನ ಮನಸ್ಸಿನಲ್ಲಿ ಸುಳಿದು ಹೋಗಿದೆ ಮಹಾಸ್ವಾಮಿ"

"ನೀನು ನನ್ನ ಹತ್ತಿರ ಅಧಿಕ ಪ್ರಸಂಗಿತನ ಮಾಡುವುದು ಬಿಟ್ಟು ಹೆಚ್ಚು ಸರಿಯಾಗಿ ಕಾಣಿಸಿಕೋ. ಈ ಅಪರಾಧ, ಮಹಾಪ್ರಭುಗಳಿಂದ ಕೂಗಳತೆಯ ದೂರದಲ್ಲಿ ಆಗಿರುವಂಥದ್ದು. ಬೃಹನ್ನದನ ಹತ್ತಿರಕ್ಕೆ ಬರುವ ಯಾರೇ ಆದರೂ ಮಹಾಪ್ರಭುಗಳ ಸಮೀಪಕ್ಕೂ ಬಂದು ಬಿಡಬಹುದಾಗಿತ್ತು."

"ಪೊಲೀಸರಿಗೆ ಭದ್ರತೆಯಲ್ಲಿರುವ ಕೊರತೆಯ ಅರಿವಾಗಿದೆ ಮಹಾಸ್ವಾಮಿ. ಇದರ ತನಿಖೆಯ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟಿರುವುದಕ್ಕೆ ಅವರಿಗೆ ಅಸಂತೋಷವಾಗಿದೆ. ಹಾಗಾಗಿ ಅವರು ನಿಖರವಾದ ರೀತಿಯಲ್ಲಿ ಸಹಕರಿಸುತ್ತಿಲ್ಲ."

"ಅಂದರೆ ಅವರನ್ನು ಬೆದರಿಸಿ ಏನಾದರೂ ಮಾಡುವ ಹಾಗೆ ಯಾರೋ ಬಲಾತ್ಕರಿಸುತ್ತಿದ್ದಾರೆ ಎಂದು ನೀನು ಭಾವಿಸುತ್ತೀಯಾ?"

"ಅದು ಹಾಗೆ ಇರಬಹುದು".

"ರಾಣಿ ಕರ್ಮವತಿಯೊಂದಿಗೆ ನೀನು ಮಾತಾಡಿದ್ದೀಯಾ?"

"ನಾನು ಪೊಲೀಸ್ ಇಲಾಖೆಯಲ್ಲಿರದೆ ಗುಪ್ತಚರ ವಿಭಾಗದಲ್ಲಿರುವ ಕಾರಣ ನನ್ನ ಹತ್ತಿರ ತಾನು ಮಾತನಾಡಬೇಕು ಎನ್ನುವ ಒತ್ತಾಯವೇನೂ ತನಗಿಲ್ಲ ಎಂದು ಹೇಳಿದರು. ಆದರೆ ಅಂತಿಮವಾಗಿ ನಿನ್ನೆದಿನ ನಾನು ಹೇಳಿದ್ದನ್ನು ಕೇಳಿಸಿಕೊಂಡರು."

"ಆಮೇಲೆ?"

"ನನ್ನ ಮೇಲೆ ಅವರು ಸಿಟ್ಟಾಗಿದ್ದರು. ಯಾರು ಮಾಡಿದ್ದಾರೆ ಅಂತ ನನಗೆ ಗೊತ್ತಿದ್ರೆ ನಾನು ನಿಮಗೆ ಹೇಳದೆ ಇರುತ್ತಿದ್ದೆನೆ ಎಂದು ಅವರು ನನ್ನನ್ನು ಕೇಳಿದರು."

"ಆಕೆಗೆ ಯಾರ ಮೇಲಾದರೂ ಅನುಮಾನವಿದೆಯೆ?"

"ಎಲ್ಲರ ಮೇಲೂ. ಅಂದರೆ ಎಲ್ಲರ ಮೇಲೂ ಎಂದರು ಆಕೆ".

"ಆಕೆ ದೋಷ ರಹಿತವಾಗಿ ಹೊರಬರುತ್ತಾಳೆಂದು ನಿನಗನ್ನಿಸಿದೆಯೆ?"

"ನನಗೆ ಗೊತ್ತಿಲ್ಲ".

"ನೀನು ನನ್ನ ಎರಡನೇ ಹೆಂಡತಿಯನ್ನು ಪ್ರಶ್ನಿಸಿದೆಯಾ?"

ಮಂಗಳನು ಶೂನ್ಯ ಭಾವದಿಂದ ನನ್ನತ್ತ ನೋಡಿದನು.

"ನನ್ನ ಹತ್ತಿರ ಆಟ ಆಡಬೇಡ ಮಂಗಳ್. ಬೃಹನ್ನದನನ್ನು ವಿಕಲಾಂಗ ಸ್ಥಿತಿಯಲ್ಲಿ ನೋಡಿದ್ದು ಅವಳೇ".

"ಬೆಳಿಗ್ಗೆ ಹೊತ್ತು ತುಂಬ ಚಳಿ ಅನ್ನಿಸುವ ಕಾರಣದಿಂದ ಅವರು ತಾನು ಬೆಳಗಿನ ಸ್ನಾನವನ್ನು ತಪ್ಪಿಸಿ ಮಧ್ಯಾಹ್ನದ ಹೊತ್ತು ಪ್ರಶಾಂತವಾದ ಸ್ಥಳದಲ್ಲಿ ಸ್ನಾನ ಮಾಡುವೆ ಎಂದು ಹೇಳಿದರು. ಆಗ ನೀರು ಸುಮಾರಾಗಿ ಬೆಚ್ಚಗಿರುತ್ತೆ ಎನ್ನುವ ಕಾರಣದಿಂದ"

"ಅವಳು ಹೇಳಿದ ಕಥೆಯನ್ನು ನೀನು ನಂಬುತ್ತೀಯಾ?"

"ಅದನ್ನು ಸಂದೇಹಿಸಲು ಕಾರಣವಿಲ್ಲ ಮಹಾಸ್ವಾಮಿ" ಮಂಗಳನ ಮನಸ್ಸಿನಲ್ಲೇನಿದೆ ಎಂಬುದನ್ನು ನಾನು ಓದಬಲ್ಲೆ. 'ಅಲ್ಲದೆ ನೀವೇ ಏಕೆ ನಿಮ್ಮ ಹೆಂಡತಿಯನ್ನು ಕೇಳಿ ಎಲ್ಲ ವಿವರಗಳನ್ನು ನೇರವಾಗಿಯೇ ತಿಳಿದುಕೊಳ್ಳಬಾರದು' ಎಂದು ಹೇಳುವುದು ಕೇಳಿಸುವಂತಿತ್ತು. "ಸುತ್ತ ಮುತ್ತ ಬೇರೆ ಇನ್ಯಾರನ್ನಾದರೂ ಆಕೆ ಕಂಡಳಂತೇನು?

"ಇಲ್ಲ ಅಂತ ಅವರು ಹೇಳಿದರು."

ನಾನು ಬೇಗನೆ ಕೆರಳುವ ವ್ಯಕ್ತಿಯಾಗಿದ್ದೆ ಮತ್ತು ತುಂಬ ಹತಾಶನಾಗಿದ್ದೆ. ಪೊಲೀಸ್ ಆಯುಕ್ತರು ಮತ್ತು ಅವರ ಕಡೆಯವರು ಉತ್ತರಗಳನ್ನು ತೆಗೆದುಕೊಂಡು ಬರುತ್ತಾರೆಂದು ನಾನು ನಿರೀಕ್ಷಿಸಿರಲಿಲ್ಲವಾದ್ದರಿಂದ ಈ ಎಲ್ಲ ಹಾಳು ಕೆಲಸವನ್ನು ಮಂಗಳನು ಮಾಡುವ ಹಾಗೆ ಮಾಡುತ್ತಾ ಇದ್ದೀನಿ ಅಂತ ನನಗೆ ಗೊತ್ತಿತ್ತು. ಇದು ಅರಮನೆಯ ವಿಷಯವಾಗಿತ್ತು. ಅವರು ತಮ್ಮ ಶಕ್ತಿಗೆ ಮೀರಿ ತಪಾಸಣೆ ಮಾಡಲು ಹೋಗುತ್ತಾರೆ. ಆದರೆ ಇದುವರೆಗೆ ನಾನಾಗಲಿ ಅವನಾಗಲಿ ಹುಡುಕಾಡಿದ್ದು ಕುರುಡು ಸಂದುಗೊಂದುಗಳು ಇಲ್ಲವೆ ಖಾಲಿ ಖಾಲಿ.

"ಏನಾದರೂ ಬೆಳವಣಿಗೆ ಆಗಿದ್ದರೆ ತಿಳಿಸು".

"ಮಹಾರಾಣಿಯು ತನ್ನ ಆಪ್ತ ಸೇವಕಿ ಊರ್ವಶಿಗೆ ಹಳ್ಳಿಯ ಬುಂಡಿಯಲ್ಲಿನ ಅವಳ ಮನೆಗೆ ಹಿಂತಿರುಗಿ ಹೋಗಲು ತಿಳಿಸಿರುವಂತೆ ಕಾಣಿಸುತ್ತದೆ".

"ರಾಣಿ ಕರ್ಮವತಿಗೆ ತನ್ನೊಬ್ಬಳು ದಾಸಿಯೊಂದಿಗೆ ಜಗಳ ಆಡುವುದೇನೂ ಹೊಸದಲ್ಲ".

"ಊರ್ವಶಿ ಈಗ ಎರಡು ತಿಂಗಳಿನಿಂದ ಈಚೆ ಆಗಿಲ್ಲ ಎನ್ನುವ ಮಾತು ಕೇಳಿ ಬರುತ್ತಿದೆ."

"ಊರ್ವಶಿಯ ಋತು ಚಕ್ರದ ವಿಷಯ ಕಟ್ಟಿಕೊಂಡು ನನಗೆ ಆಗಬೇಕಾದ್ದೇನು? ತನ್ನ ತಾಯಿಯ ಸೇವಕಿಯರಲ್ಲೊಬ್ಬಳೊಂದಿಗೆ ನನ್ನ ತಮ್ಮ ವಿಕ್ರಮಾದಿತ್ಯನು ಸಂಸಾರ ನಡೆಸಿರೋದು ಇದೇ ಏನು ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ".

"ಆದರೆ ನಿಜಕ್ಕೂ ಒಂದು ವೇಳೆ ಆ ಹೆಂಗಸು ರಾಜಕುಮಾರ ವಿಕ್ರಮಾದಿತ್ಯನ ಮಗುವಿಗೆ ನಿಜಕ್ಕೂ ಬಸುರಾಗಿದ್ದು ಅದಕ್ಕಾಗಿ ಚಿತ್ತೂರಿನಿಂದ ಆಚೆಗೆ ಕಳಿಸುತ್ತಾ ಇದ್ದರೆ, ಅದು ಅಂಥ ಒಳ್ಳೆಯ ನಿದರ್ಶನ ಅಲ್ಲ".

"ನನಗೆ ಇದರ ಕೊಂಡಿ ಸಿಕ್ಕುತ್ತಾ ಇಲ್ಲ ಮಂಗಳ್"

"ನನಗೂ ಇದರ ಎಳೆ ಸಿಕ್ತಾ ಇಲ್ಲವಲ್ಲ ಎನ್ನುವುದು ನನ್ನ ಚಿಂತೆಯಾಗಿದೆ ಮಹಾಸ್ವಾಮಿ"

"ಬಹುಶಃ ಯಾರೂ ಇದ್ದಿರಲಾರದು. ನೀನು ರಾಣಿಯ ಅಸಂತೋಷಕ್ಕೆ ವಿಪರೀತ ವ್ಯಾಖ್ಯಾನ ಮಾಡುತ್ತಾ ಇದ್ದೀ".

"ಆ ಹೆಂಗಸು ಮನೆಗೆ ಹೋಗ್ತಾ ಇರೋವಾಗ ದಾರಿಯಲ್ಲಿ ಸ್ವಲ್ಪ ಜಬರ್ದಸ್ತ್ ಮಾಡಿ ಪರೀಕ್ಷೆ ಮಾಡಿ ಯಾಕೆ ನೋಡಬಾರದು?"

"ನಾನೂ ಹಾಗೆ ಅಂದುಕೊಂಡಿದ್ದೀನಿ ಮಹಾಸ್ವಾಮಿ"

ಮಂಗಳ್ ತನ್ನ ಕಛೇರಿ ಕಡೆಗೆ ಅರ್ಧ ದಾರಿ ಹೋಗಿದ್ದಿರಬಹುದು. ಆಗ ನಾನು ಅವನ ಹಿಂದೆ ಓಡಿದೆ.

"ಅವನನ್ನು ಎಲ್ಲಿ ಇರಿಸಿದ್ದೀ ಮಂಗಳ್?"

"ಅತಿಥಿ ಅರಮನೆಯಲ್ಲಿ ಪ್ರತ್ಯೇಕವಾಗಿದ್ದ ವಿಭಾಗದ ಒಂದು ಕೊಠಡಿಯಲ್ಲಿ ಮಹಾಸ್ವಾಮಿ. ನನ್ನ ಸ್ವಂತ ಒಬ್ಬ ಮನುಷ್ಯನನ್ನು ಅಲ್ಲಿಗೆ ನೇಮಕ ಮಾಡಿದ್ದೀನಿ".

"ಯಾರಿಗೂ ಗೊತ್ತಾಗದ ಹಾಗೆ ನಾವು ಅವನನ್ನು ಸಾಗಿಸಲು ಸಾಧ್ಯವೆ?"

"ಹುಣಿಸೆಮರದ ಸಾಲುಗಳ ಹಿಂದೆ ಇರುವ ತನ್ನ ಕೆಲವು ಹೊರ ಮನೆಗಳನ್ನು, ರಸಿಕಾ ಬಾಯಿ, ನಗರದ ಹೊರಗಿನಿಂದ ಬಂದ ಪ್ರವಾಸಿಗರಿಗೆ ಬಾಡಿಗೆಗೆ ಕೊಡುತ್ತಾಳೆ ಎಂದು ನನ್ನ ತಿಳುವಳಿಕೆ".

"ಅವನನ್ನು ಅಲ್ಲಿಗೆ ಸಾಗಿಸು. ಎರಡೆರಡು ಪದರ ಪೂರ್ತಿಯಾಗಿ ಗಾಯದ ಮೇಲೆ ಪಟ್ಟಿಕಟ್ಟಿದ ಮೇಲೆ ಹೊರತು ಮುಂಚೆ ಅಲ್ಲ. ಕಡೇ ಪಕ್ಷ ಅಂದರೆ ಒಂದೆರಡು ವಾರ, ಅಥವಾ ಒಂದು ತಿಂಗಳಾದರೂ ಆಗಬಹುದು. ಅಲ್ಲಿಯವರೆಗೂ ಒಬ್ಬನನ್ನೇ ಬಂಧನದಲ್ಲಿ ಇಟ್ಟಿರುವುದಕ್ಕೆ ಸಾಧ್ಯವಾಗುವ ಹಾಗೆ ಪಟ್ಟಿ ಮಾಡಿಸಬೇಕು."

"ಅದನ್ನು ಯಾವಾಗ ಮಾಡಬೇಕು?"

"ಸಾಧ್ಯವಾದರೆ ಇವತ್ತು ರಾತ್ರಿ. ಕೊನೇಪಕ್ಷ ಇನ್ನೊಂದಾರು ಬದಲಿ ವಸತಿ ಕೊಠಡಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರು. ಅವಶ್ಯಕತೆ ಬಿದ್ದಾಗೆಲ್ಲ ಆಗಿಂದಾಗ್ಗೆ ಈ ಹಿಜಡಾನನ್ನು ನಾವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುತ್ತಾ ಇರೋಣ."

ಬೃಹನ್ನದನನ್ನು ನಾವು ಅತಿಥಿ ಅರಮನೆಗೆ ವರ್ಗಾಯಿಸಿದ ಎರಡುದಿನಗಳ ನಂತರ, ಸೋಂಕು ರೋಗಗಳ ವಿಭಾಗವನ್ನು ಒಳಗೊಂಡಿರುವ ಅತಿಥಿ ಅರಮನೆಯ ಹಿಂಭಾಗ ಅಗ್ನಿಗೆ ಆಹುತಿಯಾಯಿತು. ಶೇಕಡ ಇಪ್ಪತ್ತೈದರಷ್ಟು ಸುಟ್ಟಗಾಯಕ್ಕೊಳಗಾಗುವಷ್ಟರಲ್ಲೇ ಅವನನ್ನು ಬೇರೆಡೆಗೆ ಸಾಗಿಸಿ ಪಾರು ಮಾಡಲು ಸಾಧ್ಯವಾದದ್ದೊಂದು ಅದೃಷ್ಟ.

ಮೊದಲನೇ ದಿನದಿಂದಲೂ ಅದೇ ಪ್ರಶ್ನೆ ಮತ್ತೆ ಮತ್ತೆ ನನ್ನ ಮುಂದೆ ಸುಳಿದು ಹೋಗುತ್ತಾ ಇದೆ. ಯಾರೇ ಆದರೂ ಹಿಜಡಾನೊಬ್ಬನ ಗುಪ್ತಾಂಗಗಳನ್ನು ಏಕಾದರೂ ಜಖಂಗೊಳಿಸುತ್ತಾರೆ? ಅದು ಏನೆಂದು ಅರ್ಥವಾಗಲಿಲ್ಲ. ಬೃಹನ್ನದನ ಮುಖವನ್ನು ವಿರೂಪಗೊಳಿಸುತ್ತಾರೆಂದರೆ, ಅದು ನನಗೆ ಅರ್ಥವಾಗುತ್ತದೆ. ಇಲ್ಲಿ ಏನೋ ಒಂದು ರೀತಿಯ ಉದ್ದೇಶವಿದೆ ಎಂದು ಗ್ರಹಿಸಬಹುದು. ಪ್ರಧಾನ ಹಿಜಡಾ ನೋಡಲು ಲಕ್ಷಣವಾಗಿದ್ದ ಮನುಷ್ಯ. ಅಲ್ಲದೆ ಅವನಿಗೂ ಅದರ ಅರಿವಿತ್ತು. ಯಾರಾದರೂ ಅವನಿಗೆ ಕೆಡುಕುಮಾಡಬೇಕು ಎಂದು ಬಯಸಿದ್ದರೆ ಅದನ್ನು ಪ್ರಾರಂಭಿಸುವುದಕ್ಕೆ ಮುಖವೇ ಸರಿಯಾದ ಅಂಗ. ನಾವು ಯಾರನ್ನು ಎದುರು ನೋಡುತ್ತಿದೀವಿ ಎನ್ನುವುದು ನನಗೆ ಖಚಿತವಿರಲಿಲ್ಲ. ಅದು ವೈಯಕ್ತಿಕ ಪ್ರತೀಕಾರವೋ ಅಥವಾ ರಾಜಕೀಯ ಸೇಡೋ? ಆ ವ್ಯಕ್ತಿ ಗಂಡಸೋ, ಹೆಂಗಸೋ? ಅದು ಯಾರಾದರೂ ಆಗಿರಲಿ, ಅಥವಾ ಅವರು ಯಾರಾದರೂ ಆಗಿರಲಿ, ಹಿಜಡಾನು ತನ್ನ ಆತ್ಮರಕ್ಷಣೆಯನ್ನೇಕೆ ಮಾಡಿಕೊಳ್ಳಲಿಲ್ಲ?

ನಾನು ಮತ್ತು ಮಂಗಳ ಇಬ್ಬರೂ ಗಂಭೀರಾ ನದಿಯಲ್ಲಿ ಈಜಲು ಹೋದೆವು. ಬೃಹನ್ನದನ ಪ್ರಕರಣವನ್ನು ಬಗೆಹರಿಸಲು ನಾವು ತೊಡಗಿದಾಗಿನಿಂದ, ಪ್ರತಿರಾತ್ರಿಯೂ ನಾವು ಅಲ್ಲೇ ಭೇಟಿಮಾಡಬೇಕೆಂದು ನಿರ್ಧರಿಸಿದ್ದೆವು. ನಾವಿಬ್ಬರೂ ಸ್ವಲ್ಪ ಮಟ್ಟಿನ ಏಕಾಂತವನ್ನು ಹೊಂದಬಹುದಾದ ಜಾಗ ಅದೊಂದೇ. ನಮಗೆ ಸಮಯವೇ ಸಿಗುತ್ತಿರಲಿಲ್ಲ. ತಂದೆಯವರಂತೂ ತಾಳ್ಮೆ ಕಳೆದುಕೊಳ್ಳುತ್ತಿದ್ದಾರೆ. ದೆಹಲಿಯ ಬಾದಷಹನ ವಿಷಯವಂತೂ, ನನ್ನ ಮತ್ತು ಮಂಗಳನ ಗಮನವನ್ನೆಲ್ಲಾ ಸೆರೆ ಹಿಡಿದಿಟ್ಟಿತ್ತು. ಅರಮನೆಯ ವಾತಾವರಣವಂತೂ ಗುಜರಾತಿನ ಸೈನಿಕ ಕಾರ್ಯಾಚರಣೆಯ ಆ ದಿನದ ಸಂಜೆಯನ್ನು ನೆನಪಿಸುತ್ತಿತ್ತು. ಆ ಸಂಜೆ ಎಮ್ಮೆಯೊಂದರ ಕತ್ತನ್ನು ಕತ್ತರಿಸುತ್ತಿದ್ದಾಗ, ಉಳಿದ ದನಗಳು ಭಯ, ಆತಂಕಗಳಿಂದ ತಮ್ಮ ಸರದಿಗಾಗಿ ಬಾಗಿ ಕಾಯುತ್ತಿದ್ದುವು.

ಅಂತಃಪುರದ ಹೆಂಗಸರು ಮೂರು ಮಂದಿ ಅಥವಾ ಹೆಚ್ಚಿನ ಸಂಖ್ಯೆ ಗುಂಪುಗಳಲ್ಲಿ ಹೊರತಾಗಿ ಒಬ್ಬೊಬ್ಬರೇ ಸ್ನಾನಕ್ಕಾಗಲಿ, ಶೌಚಕ್ಕಾಗಲಿ ಹೋಗುತ್ತಿರಲಿಲ್ಲ. ಅವರಲ್ಲಿ ಯಾರಾದರೊಬ್ಬರು ಕಿರುಚಲು ಒಂದು ಪರದೆಯೋ ಅಥವಾ ನೆರಳೋ ಅತ್ತ ಇತ್ತ ಸರಿದಾಡಿದ್ದು ಕಣ್ಣಿಗೆ ಬಿದ್ದರೆ ಅದಷ್ಟೇ ಸಾಕಾಗುತ್ತಿತ್ತು. ತಮ್ಮನ್ನು ಇನ್ನೇನು ಕೊಲೆಗೈಯಲಾಗುತ್ತದೆಂದು ಇಡೀ ಸ್ತ್ರೀ ಸಮೂಹಕ್ಕೆ ಮನವರಿಕೆಯಾಗಿ ಬಿಟ್ಟು ಜೋರಾಗಿ ಕಿರುಚಿಕೊಂಡು ರಕ್ಷಣೆಗಾಗಿ ಓಡುತ್ತಿದ್ದರು. ಅದರರ್ಥ ಚಿತ್ತೂರಿಗೆ ಅಪರಾಧವೆಂದರೆ ಏನೇನೂ ಗೊತ್ತಿಲ್ಲ ಎಂದಲ್ಲ. ಹೆಂಡತಿಯನ್ನು ಹೊಡೆಯುವುದು, ಕಳ್ಳತನಗಳು, ಇರಿತಗಳು, ಹೆದ್ದಾರಿ ದರೋಡೆಗಳು ಮತ್ತು ಕೊಲೆಗಳು ಈ ಎಲ್ಲಾ ಅಪರಾಧಗಳಲ್ಲಿ ಚಿತ್ತೂರಿಗೂ ಪಾಲಿತ್ತು. ನಪುಂಸಕನೊಬ್ಬನ ಮೇಲೆ ಹಲ್ಲೆ ಮಾಡುವಂಥ ಕ್ರೌರ್ಯ ಮತ್ತು ಕೇಡಿಗತನವನ್ನು ಕುರಿತಂತೆ ಹೆಂಗಸರ ಕಲ್ಪನೆ ತತ್ತರಿಸಿದೆ ಮತ್ತು ಅವರನ್ನು ಅತ್ಯಂತ ಆತಂಕ ಮತ್ತು ಭಯ ಪೀಡಿತರನ್ನಾಗಿ ಮಾಡಿದೆ.

ಅರಮನೆಯ ಹಿಜಡಾಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ನಗರದ ಹಿಜಡಾಗಳು ಬೃಹನ್ನದನನ್ನು ತಮ್ಮ ಪೋಷಕನನ್ನಾಗಿ ಮಾಡಿಕೊಂಡಿದ್ದಾರೆ. ಹಾಗಾಗಿ ಅವನ ಬಗೆಗಿನ ಗೌರವದ ಸಂಕೇತವಾಗಿ ಹಾಗೂ ತಮ್ಮ ಸಂಕಷ್ಟವನ್ನು ಎತ್ತಿ ಹಿಡಿಯುವ ಸಲುವಾಗಿ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ನಗರದ ಸುತ್ತ ಮೌನ ಮೆರವಣಿಗೆ ತೆಗೆಯಲಿದ್ದಾರೆ. ಇದು ನಿಜಕ್ಕೂ ಸನ್ನಿವೇಶಗಳ ಕುತೂಹಲಕಾರಿಘಟ್ಟ. ಇದು ಬೇರೆಲ್ಲರಿಗಿಂತ ಬೃಹನ್ನದನ್ನಿಗೇ ಹೆಚ್ಚು ವಿಸ್ಮಯವನ್ನುಂಟು ಮಾಡುವಂಥ ಘಟ್ಟ. ಅವನ ಹಾಗೂ ಅರಮನೆಯಲ್ಲಿರುವ ಎಲ್ಲ ಹಿಜಡಾಗಳ ತೀರ ಭಯಂಕರ ದುಃಸ್ವಪ್ನವೆಂದರೆ ಹಿಜಡಾಗಳೊಂದಿಗಿನ ಗೊಂದಲವೇ ಆಗಿದೆ. ಅತ್ಯಂತ ಕುತೂಹಲದ ಮತ್ತು ಪ್ರಸ್ತುತಕ್ಕೆ ಸಂಬಂಧಿಸಿದ ವಿಷಯವೆಂದರೆ, ನನಗೆ ಯಾರ ಬಗ್ಗೆ ಅಪಾರವಾದ ದ್ವೇಷ ಮತ್ತು ತಿರಸ್ಕಾರವಿದೆಯೋ ಅಂಥ ಒಬ್ಬ ಮನುಷ್ಯನನ್ನು ರಕ್ಷಿಸಲು ನನ್ನನ್ನು ನಿಯೋಜಿಸಿರುವುದು.

ರಾಣಿ ಕರ್ಮವತಿಯ ಯೋಜನೆಗಳ ಹಿಂದಿರುವ ಮೆದುಳು ಮತ್ತು ಚಾಣಾಕ್ಷತನವೆಲ್ಲ ಆಕೆಯ ಪ್ರಧಾನ ಹಿಜಡಾನದು ಎಂದು ನಾನು ಮತ್ತು ಮಂಗಳ್ ಎಂದಿನಿಂದಲೂ ಊಹಿಸಿದ್ದೆವು. ತನಗೇನು ಬೇಕೆಂಬುದು ಅವನಿಗೆ ಗೊತ್ತು ಮತ್ತು ಅದನ್ನು ಪಡೆಯಲು ಏನು ಮಾಡಬೇಕೆಂಬುದೂ ಅವನಿಗೆ ಗೊತ್ತು. ಅಲ್ಲದೆ ಅವನಿಗೊಂದು ವಿರಳಾತಿ ವಿರಳ ದೈವದತ್ತ ಸಾಮರ್ಥ್ಯವೂ ಇತ್ತು. ಅದೆಂದರೆ ಸಂತತವಾಗಿ ತೊಡಗಿಕೊಳ್ಳುವ ಗುಣ. ತೆರೆಯ ಮರೆಯಲ್ಲಿದ್ದುಕೊಂಡು, ರಾಜಪ್ರತಿಷ್ಠಾಪಕನಾಗಿ ಹಿಂದಿನಿಂದ ಆಳುವ ಅಧಿಕಾರ ಅವನಿಗೆ ಬೇಕಿದ್ದದ್ದು. ಅವನು ತನ್ನ ದಾರಿಯನ್ನು ಅತ್ಯಂತ ಎಚ್ಚರಿಕೆಯಿಂದ

ಆರಿಸ್ಕೊಂಡಿದ್ದಾನೆ. ಅವನು ವಿಕ್ರಮಾದಿತ್ಯನನ್ನು, ಅವನ ತಾಯಿಯಷ್ಟು ಪ್ರೀತಿಸದಿರಬಹುದು. ಆದರೆ ಅವನು ಅತಿ ಹೆಚ್ಚು ವಿವೇಕದಿಂದ ಪ್ರೀತಿಸುತ್ತಾನೆ.

ಅದು ಈಗ ಅವನು ತನ್ನ ಅಧಿಕಾರದ ತುತ್ತತುದಿಯಲ್ಲಿದ್ದಾಗ, ಅಲ್ಲದೆ ಬಹುಶಃ ಅರಮನೆಯಲ್ಲಿ ಎಲ್ಲರೂ ಅತ್ಯಂತ ಹೆದರುವ ಮನುಷ್ಯನಾಗಿರುವಾಗ ಅವನನ್ನು ಮುಟ್ಟುವ ಧೈರ್ಯ ಯಾರಿಗಿದ್ದೀತು ಹಾಗೂ ಅವನು ಹಾಗೆ ತನ್ನ ಸಮೀಪಕ್ಕೆ ಅವರನ್ನು ಏಕಾದರೂ ಬಿಟ್ಟುಕೊಳ್ಳುವನು?

"ಈ ದಿನ ರಾಣಿ ಕರ್ಮವತಿ ನನ್ನನ್ನು ಕರೆದು ಬೃಹನ್ನದನನ್ನು ನೋಡಿಕೊಳ್ಳಲು ನಾನು ಅಸಮರ್ಥನಾದ್ದರಿಂದ, ಬೃಹನ್ನದನನ್ನು ತನಗೆ ಒಪ್ಪಿಸಬೇಕೆಂದು ಹೇಳಿದರು".

"ಈಗ ಆ ಬಗ್ಗೆ ಏನು ಮಾಡುವುದಕ್ಕೂ ತೀರ ತಡವಾಗಿದೆ ಎಂದು ನೀನೇಕೆ ಆಕೆಗೆ ಹೇಳಲಿಲ್ಲ ಮಂಗಳ್?".

"ನಾನು ಹೇಳಿದೆ. ನಾನು ಅವನ ಬೂದಿಯನ್ನೂ, ಮೂಳೆಗಳನ್ನು ಕೊಟ್ಟೆ. ಅವರು ಮುಗುಳ್ನಕ್ಕು ಈ ಅಡುಗೂಲಜ್ಜಿ ಕತೆಗಳನ್ನು ನಿನ್ನ ಹೆಂಡತಿಗೋ ಇಲ್ಲ. ಬಹಳ ಸುಲಭವಾಗಿ ನಂಬುವಂಥ ಬೇರೆ ಯಾರಾದರೂ ಮೂರ್ಖರಿಗೋ ಹೇಳು ಎಂದು ಹೇಳಿದರು. ಅವರ ಕಡೆಯ ಮುಖ್ಯ ಹಿಜಡಾವನ್ನು ಕೊಲ್ಲಲು ನನಗೆ ಅವಕಾಶ ನೀಡುವ ಉದ್ದೇಶ ಆಕೆಗಿರಲಿಲ್ಲ".

ನಮ್ಮ ಮೇಲೆ ಯಾರು ಕಳ್ಳತನದಲ್ಲಿ ನಿಗಾ ಇಟ್ಟದ್ದಾರೆ ಎಂದು ಮಂಗಳನನ್ನು ಇನ್ನೇನು ಕೇಳಬೇಕೆಂದಿದ್ದೆ. ಆಗ ನನಗೆ ನನ್ನ ಪ್ರಶ್ನೆಯ ಮೂರ್ಖತನದ ಅರಿವಾಯಿತು. ಯಾವುದು, ಯಾವುದೊಂದೂ ರಾಣಿ ಕರ್ಮವತಿಯ ಕಿವಿಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

"ಅವಳ ಆಪ್ತ ಸೇವಕಿ ಊರ್ವಶಿಯ ವಿಷಯ ಏನಾಯಿತು. ನೀನು ಅವಳನ್ನು ಪ್ರಶ್ನಿಸಿದೆಯಾ?"

"ಅವಳು ಮಾತಾಡಲ್ಲ ಮಹಾಸ್ವಾಮಿ"

"ಆಕೆ ಗರ್ಭಿಣಿಯೆ?"

"ಸೂಲಗಿತ್ತಿಗೆ ಅವಳು ಗರ್ಭಿಣಿ ಎನ್ನುವುದು ಮನವರಿಕೆಯಾಗಿದೆ"

"ಅದು ವಿಕ್ರಮಾದಿತ್ಯನ ಮಗುವೇನು?"

"ಅದರ ಬಗ್ಗೆ ನನಗೆ ಅನುಮಾನವಿದೆ. ಅವಳು ಮಾತನಾಡದೆ ಇದ್ದಾಗ, ವಿಕ್ರಮಾದಿತ್ಯನನ್ನು ಕರೆಯುವುದಾಗಿ ಹೆದರಿಸಿದೆ. ಮೊದಲು ಅದನ್ನು ಮಾಡಿ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೀನಿ ಎಂದು ಹೇಳಿದಳು. ಅವಳು ಹೇಳಿದ ಹಾಗೇ ಮಾಡುತ್ತಿದ್ದಳು ಅಂತ ನನಗನ್ನಿಸಿತು."

"ಅವಳು ಬುಂಡಿಯಲ್ಲಿನ ಅವರ ಅಪ್ಪ ಅಮ್ಮನ ಮನೆಗೆ ಹೋಗಲಿ ಮಂಗಳ್. ಒಂದು ವೇಳೆ ವಿಕ್ರಮನಿಗೋ ಅವನ ತಾಯಿಗೋ ನಾವು ಅವಳನ್ನು ದಾರಿಯಲ್ಲಿ ಅಡ್ಡಗಟ್ಟಿದೆವು ಎಂದು ಗೊತ್ತಾದರೆ, ನಾವು ಅವಳ ಜೊತೆಯಲ್ಲಿ ಅಸಭ್ಯವಾಗಿ ವರ್ತಿಸಲು ಯತ್ನಿಸಿದೆವು ಎಂದು ಮಹಾಪ್ರಭುಗಳಿಗೆ ಹೇಳುವಳು."

"ಅವಳನ್ನು ಇನ್ನೊಂದೋ ಎರಡೋ ವಾರ ಇರಿಸಿಕೊಳ್ಳೋಣಾಂತ ಇದ್ದೀನಿ"

"ಏಕೆ?"

"ನಾನು ಊರ್ವಶಿಯ ಹತ್ತಿರ ನನ್ನ ಮಾತುಕತೆಯನ್ನು ಇನ್ನೇನು ಮುಗಿಸಬೇಕೆನ್ನುವ ಹೊತ್ತಿನಲ್ಲಿ ಅವಳು ಬೃಹನ್ನದನ ಬಗ್ಗೆ ವಿಚಾರಿಸಿದಳು"

"ಯಾಕೆ ವಿಚಾರಿಸಬಾರದು. ಇಡೀ ಜಗತ್ತೇ ಅವನ ವಿಚಾರ ಮಾತಾಡ್ತಾ ಇದೆ"

"ಆದರೂ, ಜಗತ್ತಿನ ಎಲ್ಲ ಮನುಷ್ಯರ ಪೈಕಿ ಅವಳು ಅವನ ಬಗ್ಗೆ ವಿಚಾರಿಸುವುದು ಸ್ವಲ್ಪ ವಿಲಕ್ಷಣವೇ."

"ಅದು ನಿನಗೆ ಬಿಟ್ಟದ್ದು. ಅವಳು ಎಲ್ಲಿದ್ದಾಳೆ ಎನ್ನುವುದು ವಿಕ್ರಮನಿಗಾಗಲಿ, ಅವರ ಅಮ್ಮನಿಗಾಗಲಿ ಗೊತ್ತಾಗಿಲ್ಲ ಎನ್ನುವುದನ್ನು ಖಚಿತಪಡಿಸಿಕೋ. ಆ ಹಿಜಡಾನನ್ನು ಈ ಹೊತ್ತು ರಾತ್ರಿ ಬೇರೆ ಕಡೆ ಸ್ಥಳಾಂತರಿಸುತ್ತಾ ಇದ್ದೀಯಾ?"

"ನಾನಾಗಲೇ ಸ್ಥಳಾಂತರಿಸಿದ್ದೇನೆ. ಅವನನ್ನು ಪಡೆದುಕೊಳ್ಳಲು ಯಾರು ಹೊರಟದ್ದಾನೆ ಅವರಿಗೆ ಅವನು ಇರುವ ಜಾಗದ ಬಗ್ಗೆ ರಾಣಿಕರ್ಮವತಿಗೆ ಗೊತ್ತಿರುವಷ್ಟೇ ಚೆನ್ನಾಗಿ ಗೊತ್ತಿರುತ್ತೆ"

"ರಾಜ ವೈದ್ಯರು ಏನು ಹೇಳುತ್ತಾರೆ? ಅವನಿಗೆ ಯಾವಾಗ ಪ್ರಜ್ಞೆ ಬರುತ್ತೆ?"

"ಅವರು ಊಹಿಸುವ ಧೈರ್ಯ ಮಾಡುತ್ತಿಲ್ಲ".

"ನಾವೇನನ್ನೋ ಕಳೆದುಕೊಳ್ಳುತ್ತಿದ್ದೇವೆ ಎನ್ನುವ ಭಾವನೆ ನನಗೆ ಬರುತ್ತಾ ಇದೆ"

"ಈ ಹೊತ್ತು ನಪುಂಸಕನಿಗೆ ಯಾವ ಉಡುಪನ್ನು ಹಾಕಿಸುವೆ?"

"ವಾಸ್ತವವಾಗಿ ಹೆಚ್ಚಿನದೇನೂ ಇಲ್ಲ. ವಿಕ್ರಮಾದಿತ್ಯನಿಗೆ ಒಂದು ಬದಲಾವಣೆಯ ಹೆಜ್ಜೆ ಬೇಕು ಎನ್ನಿಸಿದಾಗ, ಅವನು ನಪುಂಸಕನನ್ನು ಆಗಿಂದಾಗ್ಗೆ ಪುರುಷ ಮೈಥುನಕ್ಕೆ ಬಳಸುತ್ತಿದ್ದನು".

"ಬೃಹನ್ನದನಿಗೆ ಇನ್ನೊಬ್ಬ ಪ್ರೇಮಿ ಇದ್ದನೆ? ಯಾರಾದರೂ ಯುವಕ ಅಥವಾ ಇನ್ನೊಬ್ಬ ರಾಜಕುಮಾರ?"

"ನನಗೆ ಹಾಗನ್ನಿಸುವುದಿಲ್ಲ. ಲೈಂಗಿಕತೆಯಲ್ಲಿ ಅವನಿಗೆ ಅಷ್ಟೊಂದು ಆಸಕ್ತಿ ಇರಲಿಲ್ಲ ಅಂತ ಅನ್ನಿಸುತ್ತೆ. ಮಹಾಸ್ವಾಮಿಯವರೊಂದಿಗೇ ಆದರೂ ಅಷ್ಟೆ".

"ನಾವು ತಪ್ಪುದಾರಿ ತುಳಿಯುತ್ತಿದ್ದೇವೆ ಅಂತ ನಿನಗೆ ಅನ್ನಿಸುತ್ತಿದೆಯಾ? ಅದು ಲೈಂಗಿಕ ಅಪರಾಧವೇ ಅಲ್ಲದೆ ಇರಬಹುದು. ಅದನ್ನು ಯಾರೇ ಮಾಡಿದ್ದರೂ ನಾವು ಹಾಗೆಂದು ತಿಳಿಯಬೇಕೆಂಬುದು ಅವರ ಇಚ್ಛೆಯಾಗಿತ್ತು".

"ಹಾಗಾದರೆ ಅದು ಯಾವ ರೀತಿಯ ಅಪರಾಧ?"

ನಾವು ಎಲ್ಲಿಂದ ಹೊರಟಿದ್ದೆವೋ ಅಲ್ಲಿಗೇ ವಾಪಸ್ ಬಂದಿದ್ದೆವು. ಬೇರೆಲ್ಲಿಗೂ ಅಲ್ಲ.

ಆ ರಾತ್ರಿ ನಾನು ಈಜು ಮುಗಿಸಿಕೊಂಡು ಮನೆಗೆ ಬಂದಾಗ ನನ್ನ ಕೊಠಡಿಯಲ್ಲಿ ದೀಪವಿರಲಿಲ್ಲ. ಬೃಹನ್ನದನನ್ನು ಕುರಿತಾದ ಚಿಂತೆಯೇ ನನ್ನನ್ನು ಆವರಿಸಿತ್ತು. ನನ್ನ ಕೈ ನನ್ನ ಖಡ್ಗದ ಹಿಡಿಕೆಯ ಮೇಲಿತ್ತು. ಕತ್ತಲೆಗೆ ನನ್ನ ಕಣ್ಣುಗಳು ಹೊಂದಿಕೊಳ್ಳುವುದನ್ನು ನಾನು ಕಾಯುತ್ತಿದ್ದೆ.

ಆಗ ಎರಡು ಕೈಗಳು ನನ್ನ ಕಾಲಿನ ಹರಡನ್ನು ಹಿಡಿದವು.

"ದೀಪಗಳನ್ನು ಹೊತ್ತಿಸಬೇಡಿರೆಂದು ಬೇಡುತ್ತೇನೆ"

ಅದೊಂದು ಧ್ವನಿ. ಅದನ್ನೊಂದು ಧ್ವನಿ ಎಂದೇ ಹೇಳಲು ಸಾಧ್ಯವಿರಲಿಲ್ಲ. ಅದು ಅಧೋಲೋಕಕ್ಕೆ ಪ್ರಯಾಣ ಹೊರಟಿರುವ ಮನುಷ್ಯನ ಭಗ್ನಾವಶೇಷದಂತಿತ್ತು. ಅರ್ಧಕ್ಷಣದ ನಂತರ ನನಗೆ ಸುಗಂಧಳ ಧ್ವನಿ ಕೇಳಿ ಬಂದಿದ್ದರೆ ಹೇಗಾಗುತ್ತಿತ್ತು? ನಿಷ್ಠೆ ಇಲ್ಲದ ನನ್ನ ಹೆಂಡತಿಯನ್ನು ನಾನು ಆಕಸ್ಮಿಕವಾಗಿ ಕೊಂದೆನೆಂದು ಹೇಳಿದ್ದರೆ, ಯಾರು ತಾನೆ ನಂಬುತ್ತಿದ್ದರು? ನಾನು ನನ್ನ ಖಡ್ಗವನ್ನು ಕೆಳಗೆ ಹಾಕಿ ಅವಳನ್ನು ಮೇಲೆಬ್ಬಿಸಿದೆ.

"ದಯವಿಟ್ಟು ನನ್ನ ಕಡೆ ನೋಡಬೇಡಿ".

ಕೊಠಡಿಯ ಕತ್ತಲೆಯಲ್ಲೂ ಅವಳ ಜಜ್ಜುಗಾಯಗಳ ನೇರಿಳೆ ಬಣ್ಣ ಕಾಂಚೀಪುರದ ರೇಷ್ಮೆಯ ಹಾಗೆ ಹೊಳೆಯಿತು. ಅವಳ ದೇಹ ವಿಕಾರವಾಗಿ ಊದಿಕೊಂಡಿತ್ತು.

"ನಿನಗೆ ಯಾರು ಇದನ್ನು ಮಾಡಿದ್ದು ಸುಗಂಧ?"

"ಅದಷ್ಟು ಮುಖ್ಯವಲ್ಲ. ನಿಮ್ಮ ಹೆಸರಿಗೆ ನಾನು ಮಾಡಿದ ಅವಮಾನಕ್ಕೆ ತಕ್ಕುನಾದ ಶಿಕ್ಷೆ ನರಕದಲ್ಲೂ ಇಲ್ಲ". ನನ್ನ ತೋಳುಗಳ ನಡುವೆ ಅವಳ ದೇಹ ಪಾದರಸದಂತೆ ತೊನೆದಾಡಿತು. ಅವಳು ನೋವಿನಿಂದ ನರಳಿದಳು.

"ನನ್ನನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ. ನೀವು ಎಂದಿಗೂ ನನ್ನನ್ನು ಹೋಗಗೊಡುವುದಿಲ್ಲ ಎಂದು ಮಾತು ಕೊಡಿ, ಎಂದೆಂದಿಗೂ".

ನನಗೆ ಅವಳ ವಿಷಯಕ್ಕೆ ಆಗ ಅದೆಷ್ಟು ತಾಳಲಾಗದ ಪ್ರೇಮಭಾವ ಮತ್ತು ಮಾರ್ದವ ಭಾವ ಉಂಟಾಯಿತೆಂದರೆ, ನಾನು ಮೂರ್ಖನಂತೆ ಅವಳಿಗಾಗಿ ಏನನ್ನು ಬೇಕಾದರೂ ಸ್ವಯಿಚ್ಛೆಯಿಂದ ಮಾತುಕೊಡಲು ಸಿದ್ಧನಿದ್ದೆ. ಅವಳನ್ನು ಕೈಬಿಟ್ಟ ನಷ್ಟಭರ್ತಿಗಾಗಿ ನನ್ನ ಉಳಿದ ಜೀವನ ಪರ್ಯಂತವೂ ಅವಳ ದಾಸನಾಗಿರಲು ಸಿದ್ಧನೆಂದು ಘೋಷಿಸಲು ಬಯಸಿದ್ದೆ. ಆದರೂ ಅದೇನೋ ಒಂದು ನನ್ನನ್ನು ತಡೆದು ನಿಲ್ಲಿಸಿತು. ಇದು ಅವಳ ಬಗೆಗಿನ ನನ್ನ ಕನಿಕರವೋ ಅಥವಾ ನನ್ನ ಬಗೆಗಿನದೋ?

ಅವಳ ಮಗುಮುಖದತ್ತ ನೋಡಿದೆ. ಓ ದೇವರೆ ಈ ಬಾಲಿಶ ಮತ್ತು ಮಗುವಿನಂಥ ಮುಗ್ಧಮನಸ್ಸಿನ ಹೆಂಗಸಿಗೆ ನಾನೇನು ಮಾಡಿದ್ದೆ? ಅವಳು ವಿಕ್ರಮಾದಿತ್ಯನ ಬಳಿಗೆ ಹೋಗಲು ನಾನು ಹೇಗಾದರೂ ಬಿಟ್ಟಿದ್ದೆ? ತನ್ನನ್ನು ಹಾಳು ಮಾಡಬೇಕೆಂಬ ಹಾಗೂ ಭಂಗಪಡಿಸಬೇಕೆಂಬ ಅವಳ ಶರೀರದ ಆಹ್ವಾನವನ್ನು ನನ್ನ ತಮ್ಮ ವಿಕ್ರಮಾದಿತ್ಯನಿಗೆ ಹತ್ತಿಕ್ಕಲಾಗುವುದಿಲ್ಲ ಎಂದು ನನಗೆ ಗೊತ್ತಿರಲಿಲ್ಲವೆ? ತಕ್ಷಣ ನಾನೇನಾಗಿದ್ದೆ ಎಂದು ನನ್ನನ್ನೇ ನೋಡಿಕೊಂಡೆ. ತಾನು ಮಾತ್ರ ಸ್ವಚ್ಛ ಆತ್ಮ ಸಾಕ್ಷಿಯನ್ನಿಟ್ಟುಕೊಂಡು ನನ್ನ ಮಾವನ ವಿಷಯಕ್ಕೆ ನಾನು ಯಾವುದೇ ತಪ್ಪು ಮಾಡಿಲ್ಲವೆಂಬ ಅಪರಾಧಿ ಮನೋಭಾವದಿಂದ ಮುಕ್ತನಾಗಲು ನನ್ನ ಹೆಂಡತಿ ಹಾದರ ಮಾಡುತ್ತಿದ್ದುದಕ್ಕೆ ನಿರಾಳವಾಗಿದ್ದ ಅತ್ಯಂತ ಕ್ಷುದ್ರ, ಸೇಡಿನ ಮನುಷ್ಯ. ನನ್ನ ತಮ್ಮ ಅವಳಿಗೇನು ಮಾಡಿದ್ದ? ರಜಪೂತ ಮರ್ಯಾದೆ ನನ್ನಿಂದ ಏನನ್ನು ನಿರೀಕ್ಷಿಸಿತ್ತು? ವಿಕ್ರಮನನ್ನು ಖಡ್ಗ ಯುದ್ಧಕ್ಕೆ ಆಹ್ವಾನಿಸಬೇಕಿತ್ತೆ? ಅವನ ತಲೆಯನ್ನು ಒಡೆದು ನಾನು ಅವನ ಮಿದುಳನ್ನು ಈಡಾಡಬೇಕಿತ್ತೆ? ನಾನು ಅವನ ಬಟ್ಟೆಗಳನ್ನು ಎಲ್ಲರೆದುರು ಹರಿದು ಹಾಕಿ ಮೇವಾಡದ ಬೀದಿಗಳಲ್ಲಿ ಬೆತ್ತಲೆ ತಿರುಗಾಡಲು ಅವನನ್ನು ಒತ್ತಾಯಿಸಲೆ? ಇಷ್ಟಾದರೂ ನಾನು ಅಂದುಕೊಂಡಿರುವಂತೆ. ಅವನಿಗೆ ತಕ್ಕುದಾದ ಏಕೈಕ ಕುಖ್ಯಾತಿ ಎಂದರೆ, ರಜಪೂತರಿಗೆ ತಕ್ಕುದಲ್ಲದ, ಅತ್ಯಂತ ಕೀಳು ರೀತಿಯದಾದ, ಅವನನ್ನು ಹಿಂದಿನಿಂದ ಇರಿದು ಅವನ ಹೃದಯವನ್ನು ಕತ್ತರಿಸಿ ಹಾಕಿ ರಕ್ತಸಿಕ್ತವಾದ ಅದು ನೆಲದ ಮೇಲೆ ಒದ್ದಾಡುವ ಮೀನಿನಂತೆ ಡವಗುಟ್ಟುವುದನ್ನು ನೋಡುವುದು. ಇಷ್ಟಾದರೂ

ನಾನು ಇದಾವುದನ್ನೂ ಮಾಡುವುದಿಲ್ಲವೆಂದು ನನಗೆ ಗೊತ್ತಿತ್ತು. ಅದರ ಬದಲು, ಎಕ್ಕಡಕ್ಕೆ ಅಂಟಿದ ಮಲದಂತೆ ಈಗಾಗಲೇ ನನ್ನ ಹೆಸರಿಗೆ ಸಾಕಷ್ಟು ಅಪಖ್ಯಾತಿ ಹತ್ತಿರುವುದರಿಂದ ನಾನು ಜಾಗರೂಕನಾಗುವೆ. ನಾನು ಈಗಾಗಲೇ ಊರಿರುವ ಆಳಕ್ಕಿಂತ ಇನ್ನೂ ಹೆಚ್ಚಿನ ಆಳಕ್ಕೆ ನನ್ನ ಪಾದವನ್ನು ಊರುವುದು ಬೇಕಿಲ್ಲವೆಂದು ನನಗೆ ನಾನೇ ಹೇಳಿಕೊಳ್ಳುವೆ. ನನ್ನ ಸಂಯಮ ಗುಣದಲ್ಲಿ ನಾನು ಉದಾತ್ತನಾಗಿ ಮೆರೆದು ವಿಕ್ರಮನಿಗೆ ಮುಖಾಮುಖಿಯಾಗದಿರಲು ಏನಾದರೂ ನೆಪ ಹುಡುಕುವೆ.

ನನ್ನ ವಿರುದ್ಧವಾಗಿಯೇ ನನಗೆ ಎಂಥ ಹೇವರಿಕೆಯ ಭಾವವುಂಟಾಯಿತೆಂದರೆ, ನನ್ನ ಹೆಂಡತಿಯನ್ನು ಅಪ್ಪುಗೆಯಲ್ಲಿ ನುಗ್ಗು ನುರಿ ಮಾಡುವ ಮೂಲಕ ಅದನ್ನು ನಂದಿಸಲು ಯತ್ನಿಸಿದೆ. ಅವಳ ತುಟಿಗಳು ನನ್ನ ತುಟಿಗಳನ್ನು ಉಜ್ಜಿದವು. ಅವಳ ಮೊಲೆಗಳು ನನ್ನ ಎದೆಗೆ ಘಲ್ಲಿಸಿದವು.

ನಮ್ಮ ಬಗ್ಗೆಯೇ ನಾವು ಕೇಳಿಕೊಳ್ಳುವ ತುಂಬ ಹಳೆಯ ಪ್ರಶ್ನೆಗಳಿಗೆ ಎಂದಿಗೂ ಉತ್ತರ ಸಿಗುವುದಿಲ್ಲವೇಕೆ? ಹಿಂಸೆ ಮತ್ತು ನೋವಿನ ನಿಲುಗಡೆ ಎಲ್ಲಿ ಮತ್ತು ಕಾಮಕ್ರೀಡೆಯ ಆರಂಭವೆಲ್ಲಿ? ಪ್ರಣಯದಾಟವೆಂದರೆ ಏಕಾಂತತೆಯು ಹೊರಹೊಮ್ಮುವ ಪ್ರಯತ್ನವಲ್ಲದೆ ಬೇರೆಯಲ್ಲವೆಂದೆ? ಆನಂತರ ಅವಳ ಮೊಲೆಯ ಮೇಲೆ ನಿರಾಳವಾಗಿ ಮಲಗಿಕೊಂಡು ಅವಳನ್ನು ಕೇಳಿದೆ– “ಅದೇಕೆ ರಾಜಕುಮಾರಿ ಈ ಹೊತ್ತು ನನ್ನ ತಮ್ಮ ಅಷ್ಟೊಂದು ಕೆರಳಿ ಬಿಟ್ಟ?”

“ಅವನು ಪ್ರತಿದಿನವೂ ಅದನ್ನೇ ಮಾಡುತ್ತಾ ಇದ್ದಾನೆ. ಈ ಹೊತ್ತು ಅವನ ಹತೋಟಿ ಮೀರಿ ಹೋಯಿತು. ಪುಷ್ಕರದ ಯಾತ್ರೆಯ ನಂತರ ಅವನ ಮನಃಸ್ಥಿತಿ ಅನಿಶ್ಚಿತವಾಗಿದೆ. ನನಗೇನೋ ಗೊತ್ತಿದೆ ಎಂದು ಅವನಿಗೆ ಹೆದರಿಕೆ”.

“ನಿನಗೆ ಗೊತ್ತೆ?”

“ನಾನು ಹೇಳಿದರೆ ನೀವು ನಂಬುತ್ತೀರಾ?”

“ಹೌದು ನಾನು ನಂಬುತ್ತೇನೆ”

“ನಾನು ಏನನ್ನು ತಿಳಿದುಕೊಂಡಿರಬೇಕಿತ್ತೆಂಬುದು ನನಗೆ ತಿಳಿದಿಲ್ಲ.”

ಮರುದಿನ ಒಂದು ಒಳ್ಳೆಯ ಸುದ್ದಿ ಇತ್ತು. ಬೃಹನ್ನದನಿಗೆ ಮರಳಿ ಪ್ರಜ್ಞೆ ಬಂದಿತ್ತು.

ನಾನು ಅವನನ್ನು ನೋಡಿದೆ. ಅವನ ಆರೋಗ್ಯದ ಬಗ್ಗೆ ವಿಚಾರಿಸಿ ಅಲ್ಲಿಂದ ಹೊರಟೆ. ಅವನಿಗೆ ಮೊದಲಿನ ಹಾಗೆ ಶಕ್ತಿ ಬರಲೆಂದು ನಾನು ಅವನಿಗಿನ್ನೊಂದು ದಿವಸ ಬಿಡುವು ನೀಡಿದೆ. ಆದರೆ ನನಗೂ ಗೌರವಾರ್ಹವಾದ ಉದ್ದೇಶಗಳಿಗಿಂತ ಕಡಿಮೆ ಉದ್ದೇಶಗಳಿದ್ದುವು. ಅವನೊಬ್ಬ ಲಕ್ಷಣವಾದ ಮನುಷ್ಯ. ಜಗತ್ತು ಹೇಗೆ ನಡೆಯುತ್ತದೆ ಎಂಬುದರ ಬಗ್ಗೆ ಅವನಿಗೆ ಒಳ್ಳೆಯ ವ್ಯಾವಹಾರಿಕವಾದ ಕಲ್ಪನೆ ಇತ್ತು. ಆದರೆ ಅವನು ದುರಹಂಕಾರಿಯೂ ಹೌದು. ಅವನಿಗೆ ಅದೆಲ್ಲ ಸುಮ್ಮನೆ ಗೊತ್ತಿದ್ದುದಷ್ಟೇ ಅಲ್ಲ. ಅದೆಲ್ಲವೂ ಬಹಳ ಚೆನ್ನಾಗಿ ಗೊತ್ತಿತ್ತು. ಕೂಡಲೇ ತನ್ನನ್ನು ಇಪ್ಪತ್ತು ನಾಲ್ಕು ಗಂಟೆಯೂ ಕಿರುಗುಟ್ಟಿಸುವ ಪ್ರಶ್ನಾವಳಿಗೆ ಒಳಪಡಿಸುವರೆಂದು ಅವನು ನಿರೀಕ್ಷಿಸುವನು. ಅವನೊಬ್ಬನನ್ನೇ ಬಿಟ್ಟು, ಏನಾಗುತ್ತಿದೆ ಎಂಬುದರ ಬಗ್ಗೆ ಅವನಿಗೆ ವಿಸ್ಮಯವುಂಟಾಗುವಂತೆ ಮಾಡುವುದೇ ಸರಿಯಾದ್ದು ಎಂದು ನನಗನ್ನಿಸಿತು. ಕಿಂಚಿತ್ ಅನಿಶ್ಚಿತತೆ ಯಾರಿಗೂ ಎಂದಿಗೂ ಯಾವ ತೊಂದರೆಯನ್ನೂ ಮಾಡಿಲ್ಲ.

"ಎಷ್ಟು ದಿವಸದಿಂದ ನಿನಗೆ ಗೊತ್ತು?" ನಾನು ಮಂಗಳನನ್ನು ಕೇಳಿದೆ.

"ಗೊತ್ತಿರುವುದು ಏನು ಮಹಾಸ್ವಾಮಿ?"

"ಏನು ಅಥವಾ ಯಾರ ಬಗ್ಗೆ ನಾನು ಕೇಳ್ತಿರೋದು ಅಂತ ನಿನಗೆ ಗೊತ್ತು".

"ನಾನು ಮನೋತಜ್ಞನಲ್ಲ. ತಾವು ತೀರಾ ಒಗಟಿನ ಹಾಗೆ ಅನ್ನಿಸುತ್ತಾ ಇದ್ದೀರಿ ಮಹಾಸ್ವಾಮಿ"

"ನನ್ನ ತಾಳ್ಮೆಯನ್ನು ಪರೀಕ್ಷೆ ಮಾಡಬೇಡ ಮಂಗಳ್." ನನ್ನ ಮುಖದ ಮೇಲೂ ಈಗ ಅದೃಶ್ಯದ ಹುಚ್ಚು ನಗೆ ಕಾಣಿಸಿಕೊಳ್ಳುತ್ತಿದ್ದರೂ, ಅವನ ಮುಖದ ಮೇಲಿನ ಹುಚ್ಚು ನಗೆಯನ್ನು ಅಳಿಸಿ ಹಾಕಲು ನನಗಾಗಲಿಲ್ಲ. "ಇಷ್ಟರಲ್ಲೇ ನಾನು ನಿನ್ನ ಜಂಬ ಇಳಿಸ್ತೀನಿ. ಈಗ ನೀನು ಮಾತಾಡ್ತೀಯೋ ಅಥವಾ ಇನ್ನೂ ಸ್ವಲ್ಪ ಹೊತ್ತು ಹೀಗೆ ನುಣುಚಿಕೊಳ್ಳುತ್ತ ಇರ್ತೀಯೊ?"

"ಒಂದೆರಡು ದಿನ ಮಹಾಸ್ವಾಮಿ ಇನ್ನೂ ಅದು ಕೇವಲ ಊಹೇನೇ ಆದರೂ. ಆದರೆ ತಾವು ನನಗಿಂತಲೂ ಹೆಚ್ಚು ತಿಳಿದಿದ್ದೀರಿ ಅಂತ ಅನ್ನಿಸುತ್ತಾ ಇದೆ"

"ಕೇವಲ ಒಂದು ಊಹೆ ಅಷ್ಟೆ ಮಂಗಳ್, ನಿನ್ನ ಹಾಗೇನೇ. ಅದಕ್ಕಿಂತ ಹೆಚ್ಚಿಲ್ಲ. ನಮಗಿನ್ನೂ ಹೆಚ್ಚಿನ ಸಾಕ್ಷ್ಯ ಬೇಕಾಗಿದೆ".

ದಾರಿಯಲ್ಲಿ ಕೇಳಿಸಿಕೊಂಡು ಹೋಗುತ್ತಾ ಇರುವ ಯಾವುದಾದರೂ ಕೇಳುಗನಿಗೆ ನಮ್ಮ ಸಂಭಾಷಣೆ ಅರ್ಥಹೀನ ಎಂದು ಅನ್ನಿಸಿರಲೇಬೇಕು. ಆದರೆ ಮಂಗಳ್ ಮತ್ತು ನಾನು ಇಬ್ಬರೂ ಅದೆಷ್ಟರ ಮಟ್ಟಿಗೆ ಜೊತೆಯಲ್ಲಿರುತ್ತಿದ್ದೆವೆಂದರೆ, ನನ್ನ ಅತ್ಯಂತ ಆಂತರ್ಯದ ಆಳದ ಆಲೋಚನೆಗಳಿಗೂ ಅವನಿಗೆ ಪ್ರವೇಶ ಸಿಕ್ಕಿಬಿಟ್ಟಿರಬೇಕು ಎಂದು ನನ್ನ ಪಾಡಿಗೆ ನಾನು ಭಾವಿಸಿಕೊಂಡು ಬಿಟ್ಟಿದ್ದೆ. ಇಡಿಯಾಗಿ ನನ್ನೆಲ್ಲ ಆಲೋಚನೆಗಳಿಗೂ ಪ್ರವೇಶ ಸಿಕ್ಕಿರಲಿಲ್ಲವೆಂದು ನನ್ನ ನಂಬಿಕೆ.

ಹಿಂದಿನ ರಾತ್ರಿ ಸುಗಂಧ ನನಗೆ ಸುಳ್ಳು ಹೇಳಿದ್ದಳೆಂದು ನನಗೆ ಗೊತ್ತಿತ್ತು. ನನ್ನೊಂದಿಗೆ ಅಥವಾ ಬೇರೆ ಯಾರಾದರೊಂದಿಗೆ ಸುಗಂಧಳು ಹಂಚಿಕೊಳ್ಳಬಹುದಾದ ತನ್ನ ರಹಸ್ಯವೊಂದು ಅವಳಿಗೆ ತಿಳಿದಿದೆ ಎಂದು ವಿಕ್ರಮ್ ಹೆದರಿದ್ದನು. ಅವಳು ಏನನ್ನಾದರೂ ಮುಚ್ಚಿಡುತ್ತಿದ್ದಾಳೆಂದಾಗಲಿ ಅಥವಾ ವಿಕ್ರಮನು ಅವಳನ್ನು ಪ್ರಚೋದಿಸುತ್ತಿದ್ದಾನೆಂದಾಗಲಿ ನಾನು ಭಾವಿಸಿರಲಿಲ್ಲ. ನನ್ನ ಊಹೆ ಅವಳು ನನ್ನನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಳು. ಬಹಳ ಬೇಗ ನಿರ್ಧಾರಕ್ಕೆ ಧಾವಿಸಿ ಬಿಡುವ ಬಹಳಷ್ಟು ಜನರಂತೆ, ವಿಕ್ರಮನೂ ಸ್ವಭಾವತಃ ಆಳವಾದ ಅನುಮಾನ ಬುದ್ಧಿಯುಳ್ಳವನು. ಆದರೆ ಅವನದೊಂದು ನೇರ ಮತ್ತು ಸೀಮಿತ ಮನಸ್ಸು. ಅದು ವಿಶ್ಲೇಷಿಸಿ ನೋಡುವಂಥದಲ್ಲ ಅಥವ ಒಂದು ಆಲೋಚನೆಯನ್ನು ಸಾದ್ಯಂತವಾಗಿ ಚಿಂತಿಸಿ ನೋಡುವಂಥದಲ್ಲ. ಸುಗಂಧಳಿಗೆ ಏನಾದರೂ ಸಂಗತಿ ಗೊತ್ತಿಲ್ಲದ ಹೊರತು, ಅವಳ ಬಾಯಿ ಮುಚ್ಚಿಸಬೇಕೆಂಬ ಯೋಚನೆ ಅವನಿಗೆ ಬರುವುದಿಲ್ಲ. ನನ್ನ ಯೋಚನೆ ತಪ್ಪಿರಬಹುದು. ಆದರೆ, ಅವಳು ಬೃಹನ್ನದನ ಮೇಲೆ ಹಲ್ಲೆಯ ಅಪರಾಧ ನಡೆದ ದಿವಸ ಹೊತ್ತಲ್ಲದ ಹೊತ್ತಿನಲ್ಲಿ ವಿಕ್ರಮನ ಬಳಿಗೆ ಧಾವಿಸಿದ್ದಳು. ನನ್ನ ಈ ನಿಲುವನ್ನು ಮಂಗಳನೊಂದಿಗೆ ಮಾತಾಡಿ ಪರೀಕ್ಷಿಸಿ ನೋಡಬೇಕೆಂದಿದ್ದೆ. ಆದರೆ ಈ ವಿಷಯಗಳಲ್ಲಿ ಅವನು ಎಂದಿನಂತೆ ಬಹಳ ಉತ್ತಮವಾಗಿ ಯೋಚಿಸಿರುತ್ತಾನೆ ಹಾಗೂ ನನಗಿಂತ ಮುಂಚೆ ಸಂಶಯಾಸ್ಪದ ವ್ಯಕ್ತಿಯ ಮೇಲೆ ತನ್ನ ಗಮನವನ್ನೆಲ್ಲ ಕೇಂದ್ರೀಕರಿಸಿರುತ್ತಾನೆ. ಆದರೆ ಒಂದು ಪ್ರಶ್ನೆಗೆ ಮಂಗಳನ ಬಳಿಯೂ ಉತ್ತರವಿರಲಿಲ್ಲ. ವಿಕ್ರಮನು ತನ್ನ ಅತ್ಯಂತ

ನಿಷ್ಠಾವಂತ ಮಿತ್ರನನ್ನು ಏಕಾದರೂ ಕೊಲ್ಲ ಬಯಸುತ್ತಾನೆ? ಮಹಾಪ್ರಭುಗಳು ನಾನು ನಾಳೆ ತಮಗೆ ಒಂದು ವರದಿಯನ್ನು ಸಲ್ಲಿಸಬೇಕೆಂದು ಕೇಳಿದ್ದೇ ಆದರೆ, ವಿಕ್ರಮಾದಿತ್ಯನೇ ನಮ್ಮ ಪ್ರಮುಖ ಸಂಶಯಾಸ್ಪದ ವ್ಯಕ್ತಿ ಎಂದು ನಾನು ಅವರಿಗೆ ಹೇಳದೆ ವಿಧಿಯಿಲ್ಲ. ಹಳೆಯ ವೈಷಮ್ಯದ ಕಾರಣವಾಗಿ, ತನ್ನ ಸೋದರನನ್ನು ಕುಶಲವಾಗಿ ಇದರಲ್ಲಿ ಸಿಕ್ಕಿಸುವ ಒಬ್ಬ ಮನುಷ್ಯನನ್ನಾಗಿ ಮಾತ್ರ ನನ್ನನ್ನು ಕಾಣಲಾಗುತ್ತದೆ.

ನಾನು ರಾತ್ರಿ ಮನೆಗೆ ಹಿಂತಿರುಗಿದಾಗ ಹನ್ನೊಂದೂ ನಲವತ್ತಾಗಿತ್ತು. ಸುಗಂಧಳು ದೀಪವನ್ನು ಹೊತ್ತಿಸಲು ನನಗೆ ಬಿಡುವುದಿಲ್ಲ.

"ಕತ್ತಲೆಯಲ್ಲೇ ಎಷ್ಟು ಕಾಲ ಇರಬೇಕು ಅಂತ ಯೋಜನೆ ಹಾಕಿದ್ದೀ?"

"ನಾನೊಬ್ಬ ನಿಷ್ಪ್ರಯೋಜಕ ಹೆಣ್ಣಲ್ಲ ಮಹಾಸ್ವಾಮಿ. ನಾನು ಅತ್ಯಂತ ಅಂದವಾದ ಹೆಣ್ಣೂ ಅಲ್ಲ" ಹಾಗೆಂದು ಆಕೆ ಕೃತ್ರಿಮವಲ್ಲದ ಸರಳ ರೀತಿಯಲ್ಲಿ ಹೇಳಿದಳು. "ನಾನು ಈಗ ಇರುವಂಥ ಸ್ಥಿತಿಯಲ್ಲಿ ನನ್ನನ್ನು ನೋಡಿ, ನೀವು ನನ್ನ ಬಗ್ಗೆ ಇಟ್ಟುಕೊಂಡಿರಬಹುದಾದ ಅಲ್ಪ ಸ್ವಲ್ಪ ಪ್ರೀತಿಯನ್ನು ಕಳೆದುಕೊಳ್ಳಲು ನನಗಿಷ್ಟವಿಲ್ಲ. ತಾವು ತಮ್ಮ ತಮ್ಮನನ್ನು ಪ್ರಚೋದಿಸಬಾರದಾಗಿತ್ತು ಮಹಾಸ್ವಾಮಿ. ಅವನೆಂಥ ಸೇಡಿನ ಹಾಗೂ ಅಪಾಯಕಾರಿಯಾದ ಮನುಷ್ಯ ಎನ್ನುವುದು ನಿಮಗೆ ಗೊತ್ತಿಲ್ಲ".

ಸುಗಂಧಳು ನಾನು ಹಿಂದಿನ ದಿನ ಬೆಳಿಗ್ಗೆ ಕೈಗೊಂಡಿದ್ದ ಒಂದು ಸಣ್ಣ ಪ್ರಯಾಣವನ್ನು ಕುರಿತು ಹೇಳುತ್ತಿದ್ದಳು. ನಿನ್ನೆ ಬೆಳಿಗ್ಗೆ ನಾನು ಮತ್ತು ಮಂಗಳ್, ಯಾರಿಗೂ ಹೇಳದೆ ವಿಕ್ರಮಾದಿತ್ಯನ ಅರಮನೆಯೊಳಕ್ಕೆ ದಾಪುಗಾಲಿಟ್ಟು ಧಾವಿಸಿದಾಗ, ವಿಕ್ರಮಾದಿತ್ಯನ ಭದ್ರತಾ ಪಡೆ ಮತ್ತು ಅವನ ಸೇವಕ ಪರಿವಾರದಲ್ಲಿ ವಿಪರೀತ ಗಾಬರಿ ಕಾಣಿಸಿಕೊಂಡಿತು. ಅವನ ಸಹಾಯಕ ಸೈನ್ಯಾಧಿಕಾರಿಯಂತೂ ಅದೆಷ್ಟು ಸ್ತಂಭೀಭೂತನಾದನೆಂದರೆ "ಯಾರು ಕರೆಯುತ್ತ ಇದ್ದಾರೆ ಎಂದು ನಾನು ಹೇಳಲಿ?" ಎಂದು ನನ್ನನ್ನು ಕೇಳಿದನು. ನಾನು ಅವನನ್ನು ಅಲಕ್ಷ್ಯ ಮಾಡಿ ನನ್ನ ತಮ್ಮನ ಮಲಗುವ ಕೋಣೆಗೆ ಕಾಲಿಟ್ಟೆ. ಅವನಿನ್ನೂ ರಸಿಕಾ ಬಾಯಿಯ ಸಿಬ್ಬಂದಿಯ ಕಡೆಯಿಂದ ಬಂದಿದ್ದ ಹೆಣ್ಣೊಬ್ಬಳೊಂದಿಗೆ ಮಲಗಿದ್ದನು. ತನ್ನ ಘನತೆ ಮತ್ತು ಗೌರವಕ್ಕೆ ಚ್ಯುತಿಯುಂಟಾಗುತ್ತಿದೆ ಎಂದು ಅವಳು ಸಾಕಷ್ಟು ಗಲಿಬಿಲಿ ಮಾಡಿದಳು. ನಾನು ಅವಳ ಉಡುಪುಗಳನ್ನು ಅವಳತ್ತ ಎಸೆದು ಜಾಗ ಬಿಡುವಂತೆ ಹೇಳಿದೆ.

"ನನ್ನ ಒಬ್ಬ ಅತಿಥಿಯನ್ನು ನನ್ನ ಮನೆಯಿಂದ ಆಚೆಗೆ ಹೋಗು ಎಂದು ಆಜ್ಞೆ ಮಾಡಲು ನೀನು ನಿನ್ನನ್ನು ಯಾರು ಎಂದು ತಿಳಿದಿದ್ದೀ?" ಎಂದು ವಿಕ್ರಮನು ನನ್ನ ಮೇಲೆ ಜೋರಾಗಿ ಕೂಗಾಡಿದನು. "ಸೈನ್ಯಾಧಿಕಾರಿಗಳೇ, ಭದ್ರತಾ ಪಡೆಯವರೇ"

"ಯಾರು ಕರೆಯುತ್ತಿದ್ದಾರೆ ಎಂದು ಹೇಳಲಿ" ಎಂದು ಕೇಳಿದವನು ನಾನು ಒಳಗೆ ಧಾವಿಸುತ್ತಿದ್ದುದನ್ನು ನೋಡಿ ಇನ್ನೂ ಎಚ್ಚೆತ್ತುಕೊಂಡಿರಲಿಲ್ಲ. ಆದರೆ ತಮ್ಮ ಯಜಮಾನನಿಗೇನಾದರೂ ಅಪಾಯವುಂಟಾದಲ್ಲಿ ನಮ್ಮನ್ನು ಹಿಂಬಾಲಿಸುವಷ್ಟು ಪ್ರಸಂಗಾವಧಾನತೆ ಹೊಂದಿದ್ದನು. ಆ ಹೆಂಗಸು ಅಲ್ಲಿಂದ ಹೊರಡುವವರೆಗೂ ನಾನು ಕಾದೆ.

"ಬಾಯಿ ಮುಚ್ಚು ವಿಕ್ರಮ್. ನಾನು ಹೇಳುವುದನ್ನು ಎಚ್ಚರಿಕೆಯಿಂದ ಕೇಳು. ನನ್ನ ಹೆಂಡತಿಯ ಮೇಲೇನಾದರೂ ಇನ್ನೊಂದು ಸಲ ಕೈ ಎತ್ತಿದ್ದೇ ಆದರೆ, ಆಕಸ್ಮಿಕವಾಗಿ ಅವಳಿದ್ದ ಜಾಗದಿಂದ ನೂರು ಗಜ ದೂರದಲ್ಲಿದ್ದರೂ ಸಾಕು, ನೀನಾಗಲಿ ನಿನ್ನ ಬಾಡಿಗೆಯ ಕೈಗಳಾಗಲಿ, ಅವಳನ್ನೇನಾದರೂ ಕೀಟಲೆ ಮಾಡಿದ್ದೇ ಆದರೆ, ಅಥವಾ ಇನ್ನಷ್ಟು ಖಚಿತವಾಗಿ ಹೇಳ್ತೀನಿ ಕೇಳು. ಅವಳಿಗೇನಾದರೂ ವಿಶಮ ಶೀತಜ್ವರವೋ, ಶ್ವಾಸ ಜ್ವರವೋ ಆದರೆ

ಅಥವಾ ಕುದುರೆಯಿಂದ ಉರುಳಿಬಿದ್ದರೆ, ಅವಳ ಒಳಗಡೆ ಏನಾದರೂ ಹಾನಿಕಾರಕವಲ್ಲದ ಬೆಂಕಿ ಹೊತ್ತಿಕೊಂಡರೆ ಅಥವಾ ಅವಳು ತಿನ್ನುವ ಆಹಾರದಲ್ಲೇನಾದರೂ ವಿಷ ಸೇರಿತು ಅಂದರೆ ನಿನ್ನನ್ನು ಕೊಲ್ಲುತ್ತೀನಿ. ಅದರ ಪರಿಣಾಮಗಳೇನಾದರೂ ಆಗಲಿ". ನಾನು ಅವನ ಸಹಾಯಕ ಸೈನ್ಯಾಧಿಕಾರಿ. ಭದ್ರತಾ ಸಿಬ್ಬಂದಿ ಮತ್ತು ಸೇವಕರ ಕಡೆ ತಿರುಗಿ ಕೇಳಿದೆ "ನಾನು ಹೇಳಿದ್ದು ಅರ್ಥವಾಯಿತೆ ನಿಮಗೆ?"

"ಎಲಾ ನಿಷ್ಠೆಯಿಲ್ಲದ ಹೆಂಡತಿಯ ಗಂಡ, ನಿನ್ನ ನಿಷ್ಠೆಯಿಲ್ಲದ ಯಾವ ಹೆಂಡತಿಯ ಬಗ್ಗೆ ಹೇಳುತ್ತಾ ಇದ್ದೀ ನೀನು?"

ನಾನು ವಿಕ್ರಮಾದಿತ್ಯನ ಹಾಸಿಗೆಯ ಸಮೀಪಕ್ಕೆ ಹೋದೆ. ಏನು ಕಾರಣಕ್ಕೋ, ಏನೋ, ತನ್ನ ಉಡುಪಿನ ಘನತೆಯನ್ನು ಕಾಪಾಡಿಕೊಳ್ಳುವವನಂತೆ, ತಾನು ಹೊದ್ದಿದ್ದ ಹೊದಿಕೆಯನ್ನು ಕುತ್ತಿಗೆಯವರೆಗೂ ಎಳೆದುಕೊಂಡನು. ನಾನು ಕೈಬೀಸಿ ಅವನ ಕಪಾಳಕ್ಕೆ ಜೋರಾಗಿ ಹೊಡೆದೆ.

"ಇಷ್ಟು ವರ್ಷ ನಾನಿದನ್ನು ಏಕಾದರೂ ಮಾಡಲಿಲ್ಲ" ಎಂದು ದಿಗ್ಭ್ರಮೆಗೊಂಡು ನನ್ನನ್ನು ನಾನೇ ಕೇಳಿಕೊಂಡೆನು. "ಯಾರಾದರೂ ಒಬ್ಬರು, ವಿಕ್ರಮ್, ಇಲ್ಲವೆ ಅವರಲ್ಲಿ ಯಾರಾದರೂ ಒಬ್ಬರು".

* * *

"ಅವನು ಇನ್ನು ಮೇಲೆ ನಿನ್ನನ್ನು ಮುಟ್ಟುವ ಧೈರ್ಯ ಮಾಡತ್ತಾನೆ ಅಂತ ನಾನು ಭಾವಿಸಿಲ್ಲ ಸುಗಂಧ."

"ನಾನು ನನ್ನ ಬಗ್ಗೆ ಚಿಂತೆ ಮಾಡ್ತಾ ಇಲ್ಲ. ನಿಮ್ಮ ಜೀವ ಅಪಾಯದಲ್ಲಿದೆ"

"ಒಂದು ಉಪಕಾರ ಮಾಡು ಅಂತ ಕೇಳಲೆ ರಾಜಕುಮಾರಿ?"

"ತಾವು ವಿಷಯಾಂತರ ಮಾಡುತ್ತಿದ್ದೀರಾ ಮಹಾಸ್ವಾಮಿ?"

"ಇಲ್ಲ ಇದು ನಿನ್ನೆ ದಿನ ನನಗೆ ಹೊಳೆದದ್ದು"

"ಏನದು?"

"ನನಗೆ ವೀಣೆ ನುಡಿಸುವುದನ್ನು ಹೇಳಿ ಕೊಡುತ್ತೀಯಾ?"

"ನನ್ನನ್ನು ನೀವು ತಮಾಷೆ ಮಾಡುತ್ತಿಲ್ಲ ತಾನೆ?"

ನಾನು ತಲೆ ಅಲ್ಲಾಡಿಸಿದೆ.

"ನೀವು ಕಲಿಯಬೇಕೆಂದು ಉದ್ದೇಶಿಸಿದ್ದೀರಿ?"

"ಹೌದು, ಸರೋದ್ ಒಂದನ್ನು ಬಿಟ್ಟರೆ ಬೇರೆ ಯಾವುದೇ ವಾದ್ಯ ವೀಣೆಯಷ್ಟು ನಾದದ ಆಳ ಮತ್ತು ಶ್ರೀಮಂತಿಕೆಯನ್ನು ಹೊಂದಿದೆ ಎಂದು ನನಗನ್ನಿಸುವುದಿಲ್ಲ. ನಮ್ಮ ಮುತ್ತಾತ ರಾಣಾಕುಂಭ ಅವರು ಬಹಳ ಸೊಗಸಾಗಿ ವೀಣೆ ನುಡಿಸುತ್ತಿದ್ದುದಷ್ಟೇ ಅಲ್ಲ. ಸಂಗೀತದ ಮೇಲೆ ಹಲವು ಗ್ರಂಥಗಳನ್ನು ಬರೆದಿದ್ದರು ಎನ್ನುವುದು ನಿನಗೆ ಗೊತ್ತಿತ್ತೇ?"

"ನನಗೆ ಗೊತ್ತು. ನಾನು ಅವರು ಬರೆದದ್ದನ್ನು ಅಧ್ಯಯನ ಮಾಡಬೇಕಿತ್ತು."

"ಅವರ ಶೈಲಿ ಬಹು ಪ್ರಯಾಸದ, ನಿರ್ವಹಿಸಲು ಕಷ್ಟವಾದ ಶೈಲಿ. ಸಂಗತಿಗೆ ಬರುವುದಕ್ಕೆ ಬಹಳ ವೇಳೆ ತೆಗೆದುಕೊಳ್ಳುತ್ತದೆ. ಆದರೆ ಕುತೂಹಲದ ಸಂಗತಿಯೆಂದರೆ ಈಗ ಅವರನ್ನು ಅಭ್ಯಾಸ ಮಾಡಲು ಅಥವಾ ವೀಣೆ ನುಡಿಸಲು ಯಾರೂ ನನ್ನನ್ನು

ಒತ್ತಾಯಿಸುತ್ತಾ ಇಲ್ಲ. ಈಗ ನಾನು ಅವರ ಅಧ್ಯಯನಕ್ಕೆ ತೊಡಗುತ್ತಿದ್ದೇನೆ. ಸಂಗೀತದ ಮೇಲೆ ಗ್ರಂಥಗಳನ್ನು ಬರೆದಿರುವ ಬೇರೆಲ್ಲ ಅಭಿಜಾತ ಸಂಗೀತ ಚಿಂತಕರಿಗಿಂತ ಅವರದು ಬೇರೆಯದೇ ಹಾದಿ. ನೀವು ಹೀಗೆ ಎಂದು ಭಾವಿಸಿಕೊಂಡು ಬಿಟ್ಟಿರುವ ಅನೇಕ ವಿಷಯಗಳ ಬಗ್ಗೆ ನೀವು ಪುನರಾಲೋಚಿಸುವಂತೆ ಮಾಡುತ್ತಾರೆ ಅವರು.

"ನಿನಗೊಂದು ಗುಟ್ಟು ಹೇಳುತ್ತಾ ಇದ್ದೀನಿ. ಇಷ್ಟರವರೆಗೂ ನಾನು ಅವರನ್ನು ಓದಿಲ್ಲ"

"ಆದರೆ ನೀವು ಓದಲೇಬೇಕು".

"ನಾನು ಓದುತ್ತೇನೆ. ಆದರೆ ಮೊಧಲು ವೀಣಾ ಪಾಠ"

"ಯಾವಾಗ ಶುರುಮಾಡಬೇಕೆಂದಿದ್ದೀರಿ?"

"ನಾಳೆ ಬೆಳಿಗ್ಗೆ ಆರುಗಂಟೆಗೆ. ಆಗ ನಿನಗಾಗುತ್ತೆ ತಾನೆ?"

"ನಾನು ಅಷ್ಟು ಮುಂಚೆ ಯಾವೊತ್ತೂ ಎದ್ದಿಲ್ಲ"

"ಹಾಗಾದರೆ ನಾವು ಆ ವಿಚಾರ ಬಿಟ್ಟು ಬಿಡೋಣ"

"ತಾವಿನ್ನೂ ನನ್ನನ್ನು ಒಳ್ಳೆಯ ಹೆಂಡತಿಯನ್ನಾಗಿ ಮಾಡಬೇಕಾಗಿದೆ ಮಹಾಸ್ವಾಮಿ. ನಾನು ಆರುಗಂಟೆಗೆ ಸಿದ್ಧವಾಗಿರುತ್ತೀನಿ".

ಪ್ರಶ್ನೆ ಇರುವುದು ನಾನು ಒಳ್ಳೆಯ ಗಂಡನಾಗಬಲ್ಲೆನೆ ಎಂಬುದು?

ನಪುಂಸಕತ್ವ ಎನ್ನುವುದು ಒಂದು ವಿಚಿತ್ರ ಸಂಗತಿ. ಅದು ಜೀವಮಾನದಲ್ಲಿ ಒಂದು ಸಲ ನಿಮ್ಮ ಮೇಲೆ ಧಾಳಿ ಮಾಡಬಹುದು. ಹಾಗಾಯಿತೆಂದರೆ ನೀವು ಅಪಾಯಕ್ಕೆ ಗುರಿಯಾದಿರಿ ಎಂದು ಅರ್ಥ. ಅದು ಮತ್ತೆ ಯಾವಾಗ ನಿಮ್ಮಲ್ಲಿ ಕಾಣಿಸಿಕೊಳ್ಳುತ್ತದೆಯೋ ಎನ್ನುವ ನಿರಂತರ ಭಯದಲ್ಲಿ ನೀವಿರುತ್ತೀರಿ. ಶರೀರ ಇನ್ನೆಂದೂ ನಿಮ್ಮ ಅಡಿಯಾಳಲ್ಲ, ನೀವು ಅದರ ಕೈನ ಆಟಿಕೆ ಎಂದು ಮೊದಲ ಬಾರಿಗೆ ತಿಳಿದುಕೊಳ್ಳುವಿರಿ. ಅದೊಂದು ಭಯಂಕರ ಮತ್ತು ತಲ್ಲಣ ಗೊಳಿಸುವಂಥ ಅರಿವು. ಆದರೆ ಅದಕ್ಕಿಂತ ಇನ್ನೂ ಕೆಟ್ಟದಾದ್ದು ಕಾದಿದೆ. ಅದು ಅರ್ಥವಾಗುವುದಿಲ್ಲ. ಅದು ಪೂರ್ತಿ ಅಸಂಬದ್ಧವಾದ್ದು. ಯುದ್ಧರಂಗದಲ್ಲಿನ ಸೋಲಾಗಲಿ ಅಥವಾ ಬೇರೆಲ್ಲಿಯಾದರೂ ಉಂಟಾಗುವ ಸೋಲಾಗಲಿ, ಒಬ್ಬ ಮನುಷ್ಯನಿಗೆ ಅವನ ಶಿಶ್ನ ಕೈಕೊಡುವುದರಿಂದುಂಟಾಗುವಷ್ಟು ವ್ಯಥೆ ಉಂಟು ಮಾಡಲಾರದು. ಇಷ್ಟರಲ್ಲೇ ಯಾವೊತ್ತಾದರೂ ಒಂದು ದಿನ ಅದು ಯಾವಾಗ ಅನ್ನುವುದು ಅಷ್ಟು ಮುಖ್ಯವಲ್ಲ. ಅದು ಮತ್ತೆ ಆಗುತ್ತದೆ. ನನ್ನ ವೈಫಲ್ಯವನ್ನು ನನಗೆ ತೋರಿಸಿಕೊಟ್ಟದ್ದಕ್ಕೆ ನಾನು ಸುಗಂಧಳ ಬಗ್ಗೆ ತೀವ್ರ ಅಸಮಾಧಾನಗೊಳ್ಳಲು ತೊಡಗುತ್ತೇನೆ. ಅವಳನ್ನು ದ್ವೇಷಿಸುವುದರಲ್ಲಿ ಇದು ಕೊನೆಗೊಳ್ಳುತ್ತದೆಯೆ? ಯಾರಿಗೆ ಗೊತ್ತು, ಸದ್ಯಕ್ಕಂತೂ ಸಂತಸದ ದಿನಗಳು ಮತ್ತೆ ಪ್ರಾರಂಭವಾಗಿವೆ.

ಸುಗಂಧಗಳಿಗೆ ಸಂತೋಷವುಂಟು ಮಾಡಲು ಏನೂ ಮಾಡಬೇಕಾಗಲಿಲ್ಲ. ಅವಳ ಕಡೆಗೊಂದು ಚೂರು ಗಮನಕೊಟ್ಟು ಪ್ರೀತಿ ತೋರಿಸಿದ್ದೇ ಸಾಕಾಯಿತು. ಅವಳು ಎಲ್ಲೆಡೆ ನನ್ನೊಂದಿಗೆ ಬಂದಳು ಹಾಗೂ ನಾನು ಹೇಳಿದನ್ನೆಲ್ಲ ಮಾಡಿದಳು.

"ನಾನು ತಪ್ಪೊಪ್ಪಿಕೊಳ್ಳುವಂಥದಿದೆ ಮಹಾಸ್ವಾಮಿ. ನಿಮಗೆ ನಿನ್ನೆ ನಾನು ಸುಳ್ಳು ಹೇಳಿದ್ದೆ". ಸುಗಂಧ ನಾನು ಬೆನ್ನು ಮೇಲಾಗಿ ಮಲಗುವಂತೆ ಮಾಡಿ, ನಾನು ಕೇಳದೆ ಇದ್ದರೂ ನನ್ನ ಬೆನ್ನ ಮತ್ತು ಕುತ್ತಿಗೆಯನ್ನು ನೀವ ತೊಡಗಿದ್ದಳು. ನಾನು ಹಾಸಿಗೆಯಲ್ಲಿ ಆಳವಾಗಿ ಮುಖವನ್ನು ಹುದುಗಿಸಿದ್ದೆ ಮತ್ತು ನನ್ನ ಉತ್ತರ ಸ್ವಲ್ಪ ತಿರುಚಿಕೊಂಡು ಹೊರಬಿತ್ತು.

"ಏನು ಹೇಳಿದಿರಿ ನೀವು?" ಎಂದು ನನ್ನ ಮಾತುಗಳನ್ನು ಸರಿಯಾಗಿ ಕೇಳಿಸಿಕೊಳ್ಳಲು ಕಳಕ್ಕೆ ಬಾಗಿದಳು.

"ನನಗೆ ಗೊತ್ತಿದೆ ಎಂದು ಹೇಳಿದೆ".

"ನಿಮಗೆ ಗೊತ್ತಿದೆಯೆ? ಹೇಗೆ?"

"ನನ್ನ ತಮ್ಮ ತನ್ನ ಎಂದಿನ ಸ್ನೇಹ ಪೂರ್ಣ ಧಾಟಿಯಲ್ಲಿ. ಆ ದಿನ ನೀನು ಏನೇನು ನೋಡಿದೆ ಅದೆಲ್ಲವನ್ನೂ ನಿನ್ನ ಮೇಲು ಹೊದಿಕೆಯೊಳಗಡೆಯೇ ಮುಚ್ಚಿಟ್ಟು ಕೊಳ್ಳಬೇಕು. ಹಾಗಲ್ಲದೆ ಹೋದರೆ, ಎಂದು ಎಚ್ಚರಿಕೆ ನೀಡುತ್ತಿದ್ದನೆಂದು ನಾನು ಊಹಿಸಿದೆ".

"ನಾನು ನಿಮಗಾಗಲಿ, ಬೇರೆ ಯಾರಿಗಾದರೂ ಆಗಲಿ, ಏನಾದರೂ ಹೇಳಿದ್ದೇ ಆದರೆ, ಅವನು ನಿಮ್ಮನ್ನು ಕೊಲ್ಲುವುದಾಗಿ ಹೇಳಿದನು".

"ಸೋದರನ ಕೊಲೆಗೆ ಅವನನ್ನು ಪ್ರಚೋದಿಸುವುದು ಯಾವುದೆಂದು ನೀನು ಹೇಳುವೆಯಾ?"

"ನಿಮಗೆ ನಿಜಕ್ಕೂ ಇದನ್ನು ಕೇಳಿಸಿಕೊಳ್ಳುವ ಇಚ್ಛೆ ಇದೆಯೆ? ನಿಮ್ಮನ್ನು ಮತ್ತೆಲ್ಲಿ ಪೂರ್ತಿಯಾಗಿ ಕಳೆದುಕೊಂಡು ಬಿಡುವೆನೋ ಎಂದು ನನಗೆ ಆತಂಕ".

"ಹಿಂದಿನ ಹಾಳು ಮೂರ್ಖ ವಿಷಯ ನಮ್ಮಿಬ್ಬರ ಮಧ್ಯೆ ಬರದೆ ಇರುವ ಹಾಗೆ ನೋಡಿಕೊಳ್ಳುವುದು ನಮ್ಮಿಬ್ಬರಿಗೂ ಬಿಟ್ಟದ್ದು".

ಅವಳು ಮಾತು ಪ್ರಾರಂಭಿಸುವುದಕ್ಕೆ ಮುನ್ನ ಒಂದು ನಿಮಿಷ ಮೌನವಾಗಿದ್ದಳು. "ಮೃಕಂಡಮುನಿ ಕುಂಡದ ಘಟ್ಟದ ಸಮೀಪದಲ್ಲಿರುವ ಕಾಡಿನಲ್ಲಿ ನಾವು ರಹಸ್ಯವಾಗಿ ಸೇರುವುದೆಂದು ನಿಶ್ಚಿತವಾಗಿತ್ತು. ಆ ದಿನಗಳಲ್ಲಿ ನನ್ನ ಮನಸ್ಸನ್ನೇ ಕಳೆದುಕೊಂಡು ಬಿಟ್ಟಿದ್ದೆ. ರಾಜಕುಮಾರನ ಜೊತೆ ಇರಲು ನಾನು ಕಾತರದಿಂದಿದ್ದೆನು. ನಾನಲ್ಲಿ ಇರಬೇಕಾದ ಸಮಯಕ್ಕಿಂತ ಇಪ್ಪತ್ತು ನಿಮಿಷ ಮುಂಚೇನೆ ಹೋಗಿದ್ದೆ. ನನಗೆ ಅವನ ದನಿ ಕೇಳಿಸಿತು. ಅದರಲ್ಲಿ ಒಂದು ರೀತಿಯ ಉನ್ಮಾದದ ಧ್ವನಿ ಸೇರಿತ್ತು. ಹಾಗಾಗಿ ನಾನು ಮುಂದೆ ಚಲಿಸದಾದೆ. ನನಗೆ ಅವನು ಕಾಣಿಸುತ್ತಿರಲಿಲ್ಲ. ಆದರೆ ಅವನು ಮತ್ತೆ ಮತ್ತೆ ಅದೇ "ನೋಡೋಣ ನೀನು ಅದು ಹೇಗೆ..." ಎಂಬ ವಾಕ್ಯವನ್ನು ಪುನರುಚ್ಚರಿಸುತ್ತಿದ್ದುದು ಕೇಳಿಸಿತು. "ಅವನು ಏನು ಹೇಳಿದ ಎನ್ನುವುದನ್ನು ನೀವು ನಿಜಕ್ಕೂ ತಿಳಿದುಕೊಳ್ಳಬೇಕೆಂದಿದ್ದೀರಾ?"

"ಹೌದು. ಅದು ಬಹುಶಃ ಬಹಳ ಮುಖ್ಯವಾದದ್ದಿರಬಹುದು"

"ನೋಡೋಣ ನೀನು ಯಾರನ್ನೇ ಆದರೂ ಇನ್ನು ಮೇಲೆ ಅದು ಹೇಗೆ ದೆಂಗುತ್ತೀಯಾ"

"ನಿನಗೆ ಹೊಡೆದಾಟದ ಸದ್ದು ಕೇಳಿಸಿತೆ?"

"ಇಲ್ಲ. ಆಗ ರಾಜಕುಮಾರನು ಭಯಂಕರವಾಗಿ ಹೆದರಿದ ಮಗುವಿನಂತೆ ಅಳತೊಡಗಿದನು. ನಾನು ಓಡಿಹೋಗಿ "ಎಲ್ಲವೂ ಚೆನ್ನಾಗಿದೆ. ಚಿಂತೆ ಮಾಡಬೇಡಿ" ಎಂದು ಹೇಳುತ್ತ ಅವನನ್ನು ತಬ್ಬಿಕೊಂಡೆನು. "ಏ ಮೂರ್ಖ ಹೆಣ್ಣೆ, ಏನು ಚೆನ್ನಾಗಿರೋದು?" ಎಂದು ಹೇಳಿ ನನ್ನತ್ತ ತಿರುಗಿ "ಇಷ್ಟು ಬೇಗ ಇಲ್ಲಿಗೆ ಬಂದು ಏನು ಮಾಡುತ್ತಿದ್ದೀಯಾ? ಎರಡು ಗಂಟೆಗೆ ಸರಿಯಾಗಿ ನಾವು ಭೇಟಿ ಮಾಡಬೇಕಾಗಿತ್ತಲ್ಲವೆ? ನಿನಗೆ ಹೇಳಿದಷ್ಟು ಮಾಡೋದಕ್ಕೆ ಯಾವಾಗಲೂ ನಿನಗೆ ಆಗುವುದಿಲ್ಲವೆ?" ಆಮೇಲೆ ನನಗೆ ಏಟು ಕೊಟ್ಟು ತುಂಬ ರೇಗಾಡಿಕೊಂಡು ಹೊರಟುಹೋದ.

ನಾವು ಪ್ರಗತಿ ಸಾಧಿಸಿದ್ದೆವು. ಅಪರಾಧಿ ಯಾರೆಂಬುದನ್ನು ನಾವು ಗುರುತಿಸಿದ್ದೇವೆಂದು ತಂದೆಯವರಿಗೆ ವರದಿ ಮಾಡಲು ಕೊನೆಗೂ ನನಗೆ ಸಾಧ್ಯವಾಗಿತ್ತು. ಆದರೂ ಕೂಡ ನಾವು ಪತ್ತೆ ಮಾಡಲು ಪ್ರಾರಂಭಿಸಿದಾಗಿಗಿಂತ ಹೇಗೋ ಏನೋ ಈಗ ನಾವಿನ್ನೂ ಹೆಚ್ಚು ಕತ್ತಲೆಯಲ್ಲಿದ್ದೆವು.

ನನ್ನ ತಮ್ಮ ನಪುಂಸಕನ ಜೊತೆ ಏತಕ್ಕೆ ಜಗಳಾಡಿದ. ನೀನು "ಯಾರನ್ನೇ ಆದರೂ ಇನ್ನು ಅದು ಹೇಗೆ ಸಂಭೋಗಿಸುತ್ತೀಯಾ ನೋಡೋಣ ಅಂತ ಅವನು ಹೇಳಿದ್ದರ ಅರ್ಥವಾದರೂ ಏನು?"

ಒಬ್ಬ ನಪುಸಂಕನ ಬಗ್ಗೆ ಇಂಥದ್ದು ತೀರಾ ವಿಲಕ್ಷಣವಾದ ಮಾತು. ಅಥವಾ ವಿಕ್ರಮನು ಆ ನಾಲ್ಕು ಅಕ್ಷರಗಳ ಶಬ್ದವನ್ನು ಅಲಂಕಾರಿಕವಾಗಿ ಬಳಸುತ್ತಿದ್ದನೆ? ಬಹುಶಃ ಬೃಹನ್ನದನು ವಿಕ್ರಮನಿಗೆ ಪ್ರೀತಿ ಪಾತ್ರರಾದವರಾರನ್ನೋ ಹಾಳು ಮಾಡುವ ಅಥವಾ ಅವರಿಗೆ ಕೆಡುಕುಂಟು ಮಾಡುವ ಪ್ರಯತ್ನ ಮಾಡಿದ್ದಕ್ಕೆ ಅವನು ಕೆರಳಿರಬೇಕು.

ನಮ್ಮೆಲ್ಲರಿಗೆ ಹೇಗೋ ಹಾಗೆಯೇ ಬೃಹನ್ನದನ ಮೇಲೆ ಆದ ಕೊಲೆಯ ಪ್ರಯತ್ನ ರಾಣಿ ಕರ್ಮವತಿಗೂ ಆಘಾತವುಂಟು ಮಾಡಿತ್ತೆಂಬುದು ನಿಶ್ಚಿತವೇ ಆಗಿತ್ತು. ತನ್ನ ಅತ್ಯಂತ ನೆಚ್ಚಿನ ನಪುಂಸಕ ಹಾಗೂ ಸಲಹೆಗಾರನ ಮೇಲಿನ ಹೆಚ್ಚು ಕಡಮೆ ಮಾರಣಾಂತಿಕ ಎನ್ನುವಂಥ ಹಲ್ಲೆಯಿಂದ ರಾಣಿಯು ತೀವ್ರವಾಗಿ ಆತಂಕಗೊಂಡಿದ್ದಳು. ಅಷ್ಟೇ ಅಲ್ಲ ಮೊದಲ ಬಾರಿಗೆ ತಾಯಿ ಮಗನ ನಡುವೆ ಗಂಭೀರ ಸ್ವರೂಪದ ಭಿನ್ನಾಭಿಪ್ರಾಯ ಉಂಟಾಗಿದ್ದಂತೆ ಕಂಡಿತು.

ಆದರೆ ಅಲ್ಲಿಂದೀಚೆಗೆ ಆ ಸಂದರ್ಭದ ಗ್ರಹಿಕೆಯಲ್ಲಿ ತೀವ್ರವಾದ ಬದಲಾವಣೆ ಕಂಡು ಬಂದಿತು. ಎರಡೆರಡು ಬಾರಿ ನಿರ್ವೀರ್ಯಗೊಳಿಸಲಾದ ನಪುಂಸಕನು ಬದುಕಿದ್ದರೆ ಅವನು ತಮ್ಮಿಬ್ಬರಿಗೂ ಒಪ್ಪಲು ಅಸಾಧ್ಯವಾದ ಬೆದರಿಕೆಯನ್ನು ಒಡ್ಡುವನೆಂದು ವಿಕ್ರಮನು ಅವಳಿಗೆ ಮನವರಿಕೆ ಮಾಡಿಕೊಟ್ಟಿದ್ದನು. ಅದು ಅಷ್ಟೊಂದು ಅಪಾಯಕಾರಿಯಾಗಬಹುದೆಂದು ಬೃಹನ್ನದನಿಗೆ ಗೊತ್ತಿತ್ತೆ?

ಒಂದಂತೂ ನಾನು ಕಣ್ಣು ಮುಚ್ಚಿಕೊಂಡು ಪ್ರಮಾಣ ಮಾಡಬಲ್ಲೆ. ವಿಕ್ರಮಾದಿತ್ಯ ಅವನ ತಾಯಿ ಇಬ್ಬರೂ ತಮ್ಮ ಸೇವಕನ ಬಗ್ಗೆ ತಪ್ಪು ಲೆಕ್ಕಾಚಾರ ಹಾಕಿದ್ದಾರೆ. ಅವನು ಮಾತನಾಡುವ ಪೈಕಿಯಾಗಲಿ ಹರಟೆ ಮಲ್ಲನ ಪೈಕಿಯಾಗಲಿ ಅಲ್ಲ.

"ಬಲಾತ್ಕಾರ ಮಾಡಿದರೆ ನಾನು ವಿವೇಚನೆಯಿಲ್ಲದೆ ರಹಸ್ಯಗಳನ್ನು ಉದುರಿಸಿಬಿಡುವೆನೆಂದು ನೀವು ತಿಳಿದಿದ್ದೀರಾ?" ಎಂದು ನಪುಂಸಕನು ನನ್ನನ್ನು ತಿರಸ್ಕಾರದ ನಗೆಯಿಂದ ಕೇಳಿದನು. ಆ ತಿರಸ್ಕಾರದ ನಗೆ ಅವನ ಮುಖದ ಮೇಲೆ ಕಿಂಚಿತ್ ಹೆಚ್ಚೇ ಇತ್ತು.

ನನ್ನ ಉತ್ತರ ಎಷ್ಟು ಪ್ರಕೃತವೋ ಅಷ್ಟೇ ನೀರಸವಾದ್ದು. "ನಾನು ಹಾಗೆಂದು ತಿಳಿದಿಲ್ಲ. ಆದರೆ ನಿನ್ನನ್ನು ಒಂದು ಸಲವಲ್ಲ ನಾಲ್ಕು ಸಲ ಕೊಲ್ಲಬೇಕೆಂದು ಪ್ರಯತ್ನಿಸಿದವರು ಹಾಗೆಂದು ನಂಬಿರುವಂತೆ ತೋರುತ್ತದೆ. ಹಾಗಾಗಿ ಶಾಶ್ವತವಾಗಿ ನಿನ್ನ ಬಾಯಿ ಮುಚ್ಚಿಸಬೇಕೆಂದಿದ್ದಾರೆ".

"ಹಾಗಾದರೆ ಇದರಲ್ಲಿ ತಮ್ಮದೇನು ಆಸಕ್ತಿ ಮಹಾಸ್ವಾಮಿ" ಅವನ ದಮ್ಮು ತೀವ್ರವಾಗಿತ್ತು. ತನ್ನ ಏದುಸಿರನ್ನು ಕಡಮೆ ಮಾಡಿಕೊಳ್ಳಲು ಬಿಸಿ ನೀರು ಕುಡಿಯ ಬೇಕಾಯಿತು. ಆದರೆ ಅವನ ಆತ್ಮ ವಿಶ್ವಾಸವಾಗಲಿ, ದುರಹಂಕಾರವಾಗಲಿ ಇಳಿದಿರಲಿಲ್ಲ.

"ಮಹಾಪ್ರಭುಗಳು ಮೊಕದ್ದಮೆಯ ಅಧಿಕಾರವನ್ನು ನನಗೆ ವಹಿಸಿದ್ದಾರೆ, ನಿನ್ನ ಮೇಲೆ ಹಲ್ಲೆ ಮಾಡಿದವರನ್ನು ನ್ಯಾಯ ವಿಚಾರಣೆಗೆ ಗುರಿಪಡಿಸುವುದು ಇದರ ಉದ್ದೇಶ."

"ನ್ಯಾಯ ಎನ್ನುವ ಶಬ್ದ ಇದೆಯಲ್ಲ, ಅದು ಬಹಳ ಒಳ್ಳೆಯ ಶಬ್ದ. ನನ್ನ ಮೇಲೆ ಹಿಂಸಾಪ್ರಯೋಗ ಮಾಡಿ ನಾನು ಬಾಲಕನಾಗಿದ್ದಾಗ ನನ್ನನ್ನು ನಿರ್ವೀರ್ಯಗೊಳಿಸಿ ನಪುಂಸಕನನ್ನಾಗಿ ಮಾಡಿದಾಗ ಯಾರೂ ಯಾರನ್ನೂ ವಿಚಾರಣೆಗೆ ಗುರಿಪಡಿಸಲಿಲ್ಲ. ಈಗ ಅದೇ ಕೆಲಸ ಮಾಡಿದ್ದಕ್ಕೆ ಯಾರಾದರೂ ಯಾಕೆ ಅದರಲ್ಲಿ ಆಸಕ್ತಿ ವಹಿಸಿ, ಅದನ್ನು ಅಪರಾಧ ಎಂದು ಪರಿಗಣಿಸಬೇಕು?"

"ಹಿಂದೆ ಆದದ್ದನ್ನು ನಾನೀಗ ಸರಿಪಡಿಸಲು ಸಾಧ್ಯವಿಲ್ಲ ಬೃಹನ್ನದ. ಆದರೆ ಈಗಿನದರ ಬಗ್ಗೆ ಸರಿಪಡಿಸಲು ಪ್ರಯತ್ನಿಸುತ್ತೇನೆ"

"ತಮಗೆ ಒಳ್ಳೆಯದಾಗಲಿ ಮಹಾಸ್ವಾಮಿಯವರೆ, ಆದರೆ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾನು ಹೇಳಬೇಕಾಗಿರುವುದೇನೆಂದರೆ, ಅದು ನನ್ನ ಆತ್ಮಹತ್ಯೆಯ ಪ್ರಯತ್ನವಾಗಿತ್ತು" ಮತ್ತೊಮ್ಮೆ ಅವನು ಇಡೀ ಸನ್ನಿವೇಶದ ಮೇಲೆ ನಿಯಂತ್ರಣವನ್ನು ಸಾಧಿಸಿದ್ದನು. ಅಲ್ಲದೆ ನನ್ನೊಂದಿಗೆ ಆಟ ಆಡುವುದು ಅವನ ಪಾಲಿಗೆ ಸಂತಸದ ಅನುಭವವಾಗಿತ್ತು. ಈ ಸಂಭಾಷಣೆಯನ್ನು ಮುಂದುವರೆಸುವುದರಲ್ಲೇನೂ ಅರ್ಥವಿಲ್ಲ ಎನ್ನಿಸಿತು.

ಬೇಗ ಹುಷಾರಾಗು ಎಂದು ಅವನಿಗೆ ಹಾರೈಸಿ ಇನ್ನೇನು ಹೊರಡಬೇಕೆಂದಿದ್ದೆ. ಆ ಸಮಯಕ್ಕೆ ಸರಿಯಾಗಿ ಮಂಗಳನು ನನ್ನ ತಮ್ಮನ ಒಂದು ಕಾಲದ ಉಪಪತ್ನಿ ಊರ್ವಶಿಯನ್ನು ಒಳಗೆ ಕರೆತಂದನು. ಅದೊಂದು ದೀರ್ಘ ಪ್ರಯತ್ನ. ಅದು ಬೃಹನ್ನದ ಮತ್ತು ಊರ್ವಶಿ ಇಬ್ಬರಿಗೂ ಆಶ್ಚರ್ಯಕರವೆನಿಸಬೇಕೆಂದು ಮಂಗಳನು ಬಯಸಿದ್ದನು.

ಅದು ಅವರಿಬ್ಬರಿಗೂ ಆಶ್ಚರ್ಯಕರವೇ ಆಗಿತ್ತು.

ಬೃಹನ್ನದನು ತನ್ನ ಸಮತೋಲನವನ್ನು ಕಳೆದುಕೊಂಡನು. ಆದರೆ ಕಿಂಚಿನ್ಮಾತ್ರ, ಒಂದು ಕ್ಷಣಕ್ಕೆ ಅವನ ಒಣಪ್ರತಿಷ್ಠೆಯ ನಾಗರಿಕತೆ ಬಿರುಕು ಬಿಟ್ಟಿತು. ಆದರೆ ಹೆಚ್ಚು ಕಡಿಮೆ ಆ ಕ್ಷಣವೇ ಅದನ್ನು ಮತ್ತೆ ಪಡೆದುಕೊಂಡು ಬಿಟ್ಟನು. ಊರ್ವಶಿ ಅವನಿಗಿಂತಲೂ ಹೆಚ್ಚು ಬೇಗ ಸ್ವಯಂಪ್ರೇರಿತಳಾಗಿ ಸರಿಪಡಿಸಿಕೊಂಡು ಬಿಟ್ಟಳು. ಅವನ ತೋಳಿನೊಳಕ್ಕೆ ಧಾವಿಸುತ್ತಿದ್ದ ಅವಳ ಸಂತಸಕ್ಕೆ ತಡೆಯೇ ಇರಲಿಲ್ಲ. "ಓ ದೇವರೆ! ನೀನು ಬದುಕಿದ್ದೀ ಮತ್ತು ಕ್ಷೇಮವಾಗಿದ್ದೀ!"

ಯಾರೇ ಆಗಲಿ ಮಂಗಳನ ಭಾವನೆಗಳನ್ನು ನಂಬದಿರಬೇಕೆಂದರೆ ತಮ್ಮನ್ನು ಅಪಾಯಕ್ಕೊಡ್ಡಿಕೊಂಡು ಮಾತ್ರ. ರಾಣಿಯ ಮುಖ್ಯ ನಪುಂಸಕ ಮತ್ತು ಅವಳ ಸೇವಕಿಯ ನಡುವೆ ಏನೋ ಒಂದು ನಡೆದಿದೆಯೆಂದು ಅವನ ಆಲೋಚನೆ ಮತ್ತು ಅವನ ಆಲೋಚನೆ ಸರಿಯಾದದ್ದೇ ಆಗಿತ್ತು. ಪ್ರಶ್ನೆಯೇನೆಂದರೆ ಆ ಏನೋ ಒಂದು ಏನೆಂಬುದು?

ಆಗ ನಾನು ಅಲ್ಲಿಂದ ಹೊರಟೆ.

* * *

ಮುಖ್ಯ ನಪುಂಸಕನ ಮೇಲೆ ಒತ್ತಡ ಹಾಕುವುದು ಸರಿಯಾದ ವಿಚಾರ ಎಂಬುದು ನನ್ನ ಆಲೋಚನೆ.

"ನನ್ನ ಜೀವ ಅದೆಷ್ಟು ಅಪಾಯದಲ್ಲಿದೆ ಎಂದು ತೋರಿಕೆಯ ಆಟ ಆಡಲು ತಾವು ದಿನವೂ ನನ್ನಲ್ಲಿಗೆ ಬರುತ್ತಿದ್ದೀರಾ?" ಮಾರನೆಯ ದಿನದ ಹೊತ್ತಿಗೆ ಬೃಹನ್ನದನು ತನ್ನ ಗೇಲಿ ಮಾಡುವ ಹುರುಪನ್ನು ಮತ್ತೆ ಪಡೆದುಕೊಂಡು ಬಿಟ್ಟಿದ್ದನೆಂಬುದು ಸ್ಪಷ್ಟವೇ ಇತ್ತು.

"ಇರಬಹುದು. ನೀನು ಅದೇ ಜಾಗದಲ್ಲಿಯೇ ಇರಲಿಚ್ಛಿಸುತ್ತೀಯಾ?"

"ಇಲ್ಲ. ನಾನು ಉದ್ದಕ್ಕೂ ಅಭಿನಯಿಸುತ್ತೇನೆ. ನಿಮಗೆ ನಾಟಕರಂಗ ಎಷ್ಟು ಇಷ್ಟವೋ ನನಗೂ ಅಷ್ಟೇ ಇಷ್ಟ".

"ನೀನು ಮಹಾಭಾರತದ ಮೇಲೆ ಮಾಡಿದ ಭಾಷಣ ಬಹಳ ವಿಚಾರ ಪ್ರಚೋದಕವಾಗಿತ್ತು. ಅದು ಕೆಲವು ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಿತು."

ಮುಖ್ಯ ನಪುಂಸಕನು ಸಂಕೋಚದಿಂದ ತನ್ನ ತಲೆಯನ್ನು ಅತ್ತಿಂದಿತ್ತ ಅಲ್ಲಾಡಿಸುತ್ತ "ಈ ಹುಸಿ ಹೊಗಳಿಕೆ ನಮ್ಮನ್ನು ಎಲ್ಲಿಗೂ ಮುಟ್ಟಿಸಲಾರದು ಮಹಾಸ್ವಾಮಿ" ಎಂದನು.

"ನಿನ್ನ ಜೊತೆ ಎಲ್ಲಿಗೆ ಹೋಗಲಿ ನಾನು ಬೃಹನ್ನದ? ನಿನ್ನ ಬದುಕು ಕೊನೆಯ ನಿಲುಗಡೆಗೆ ಬಂದು ಕೂತಿದೆ" ಇದನ್ನು ಯಾವುದೇ ಹಗೆಯಿಲ್ಲದೆ ಹೇಳಿದೆ. ಆದರೆ ಅದು ನಿರೀಕ್ಷಿತ ಪರಿಣಾಮವನ್ನುಂಟು ಮಾಡಿತು.

"ನೀನು ನನಗೆ ಮಾತನಾಡಲು ಬಿಟ್ಟರೆ, ನಾನು ನಿನ್ನ ಭಾಷಣದ ವಿಷಯಕ್ಕೆ ಬರೋಣ ಅಂತ ಇದ್ದೀನಿ. ನಾನು ಆ ವಿಷಯಕ್ಕೆ ಬರಲೆ?"

"ಆಗಬಹುದು" ಈಗ ಅವನಿಗೇ ಅಷ್ಟು ನಂಬಿಕೆ ಬರಲಿಲ್ಲ.

"ಆಗಬಹುದು. ದಯವಿಟ್ಟು ಹೇಳಿ."

"ನನಗೆ ಅನಿಸುತ್ತೆ, ನಮ್ಮ ಜನಕ್ಕೆ ನಿಷ್ಠೆಯ ಬಗ್ಗೆ ವಕ್ರ ವಿಚಾರಗಳಿವೆ. ಭೀಷ್ಮನು ತ್ಯಾಗ ಮತ್ತು ನಿಷ್ಠೆಯನ್ನು ಕುರಿತ ನಮ್ಮ ಕಲ್ಪನೆಯ ಪರಮ ಪ್ರತೀಕ. ಅವನು ತನ್ನ ನಂಬಿಕೆಗಳನ್ನು ಪ್ರಶ್ನಿಸುವ ಧೈರ್ಯ ತೋರಿದ್ದರೆ ಚೆನ್ನಾಗಿರುತ್ತಿತ್ತು. ನಾವು ನಮ್ಮ ನೈತಿಕ ಆಯ್ಕೆಯನ್ನು ತ್ಯಜಿಸಿ ಆ ಮೂಲಕ ನಮ್ಮ ಕೃತ್ಯಗಳ ಹೊಣೆಗಾರಿಕೆಯನ್ನು ಕೈ ಬಿಡಬೇಕು ಎಂದು ಅವನು ನಮಗೆ ಶಿಫಾರಸು ಮಾಡುತ್ತಿದ್ದಾನೆಯೆ? ನಾವು ಅವರ ಕಡೆ ಹುಟ್ಟಿದ್ದೇವೆ, ಅಥವಾ ಕೌಟುಂಬಿಕ ನಂಟುಗಳನ್ನು ಹೊಂದಿದ್ದೇವೆಂಬಷ್ಟೇ ಕಾರಣಕ್ಕೆ ಜನ ಎಷ್ಟೇ ಕೆಟ್ಟದ್ದು ಮಾಡಿರಲಿ ಇಲ್ಲವೆ ಕೆಟ್ಟವರಾಗಿರಲಿ ಅಂಥವರಿಗೆ ನಾವು ಅಂಟಿಕೊಂಡಿರಬೇಕೆ? ಅಥವಾ ವ್ಯಕ್ತಿಗಳಿಗಾಗಲಿ, ಸಂಸ್ಥೆಗಳಿಗಾಗಲಿ ನಮ್ಮ ನಿಷ್ಠೆ ತೋರದೆ ಮೌಲ್ಯಗಳಿಗೆ ತೋರಬೇಕೆ? ಮುಖ್ಯವಾಗಿ ಭೀಷ್ಮನನ್ನು ಮಹಾನ್ ನೈತಿಕ ಸತ್ವವುಳ್ಳವನೆಂದು ಪರಿಗಣಿಸುವ ಕಾರಣ, ಅವನು ಕುರುಡು ಕುರುಡಾಗಿ ಸಂಪ್ರದಾಯವನ್ನನುಸರಿಸದಿರುವಷ್ಟು ಕೆಚ್ಚನ್ನು ತೋರಿ, ನ್ಯಾಯದ ಕಡೆ ತೂಗಿ ನೋಡಿದ್ದರೆ ಅವನು ಮಾನವತೆಗೆ ಇನ್ನೂ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದಂತಾಗುತ್ತಿತ್ತು."

"ತಾವು ತಪ್ಪಾಗಿ ತಿಳಿದಿದ್ದೀರಿ ಮಹಾಸ್ವಾಮಿ. ಈಗ ನಿಮ್ಮ ಭಗವದ್ಗೀತೆಗೇ ಹೋಗಿ. ನೀವು ನದಿಯ ಯಾವ ದಡದಲ್ಲಾದರೂ ಹುಟ್ಟಿರಿ, ಯಾವ ಜಾತಿಗಾದರೂ ಸೇರಿರಿ, ಯಾವ ವೃತ್ತಿಯವರಾದರೂ ಆಗಿರಿ. ಅದಕ್ಕೆ ನಿಷ್ಠರಾಗಿರಿ ಎಂದು ಭಗವದ್ಗೀತೆಯ ದೇವನು ಹೇಳುತ್ತಾನೆ".

"ಹೌದು ಬೃಹನ್ನದ ಅವನು ಹಾಗೆ ಹೇಳುತ್ತಾನೆ. ಆದರೆ ದೇವರುಗಳೂ ಕೆಲವೊಮ್ಮೆ ತಪ್ಪಿರಬಹುದು. ಆ ಕಾರಣಕ್ಕಾಗಿ ಅವರ ವಿರುದ್ಧ ಕೂಡ ಹೋಗುವಷ್ಟು ಧೈರ್ಯ ತೋರಬೇಕು. ಬಹುಶಃ ಅವರ ಶಾಸನವನ್ನು ವಿರೋಧಿಸಬೇಕಾಗುತ್ತೆ".

"ಎಚ್ಚರ ಇರಲಿ ಮಹಾರಾಜ್ ಕುಮಾರ್ ಅವರೆ. ನೀವು ದೇವರುಗಳನ್ನು ಮೀರಿ ಹೋಗಿ ಅವರ ಕೋಪವನ್ನು ಆಹ್ವಾನಿಸುತ್ತಿದ್ದೀರಿ. ಭೀಷ್ಮನು ಋಜುತ್ವದ ಅತ್ಯುನ್ನತ ಅಭಿವ್ಯಕ್ತಿ ಎಂಬುದನ್ನು ನಾನು ತಮಗೆ ನೆನಪಿಸಬೇಕಾಗಿದೆ".

"ಋಜುತ್ವವೊಂದೇ ಸಾಕಾಗುವುದಿಲ್ಲ ಎಂಬುದು ನನ್ನ ಆತಂಕ ಬೃಹನ್ನದ. ಅದು ಸರಿಯಾದ ಕಾರಣಕ್ಕಾಗಿದ್ದರೆ ಮಾತ್ರ ಅದಕ್ಕೆ ಬೆಲೆ ಬರುತ್ತದೆ"

"ಹಾಗಿದ್ದರೆ ತಾವು ಮಹಾಭಾರತವನ್ನು ತಿದ್ದಿ ಬರೆಯಿರಿ ಮಹಾರಾಜ್‌ಕುಮಾರ್ ಅವರೆ"

"ನೀನು ನಪುಂಸಕರ ಪರಂಪರೆಯ ಜಾಡನ್ನು ಭೀಷ್ಮನ ತನಕ ಗುರುತಿಸಿದಾಗ ನೀನು ಅದೇ ಕೆಲಸ ಮಾಡುತ್ತಿದ್ದೆ ಅಂತ ನಾನು ನಂಬಿದ್ದೀನಿ"

"ಈ ಹರಟೆ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತೆ ಮಹಾಸ್ವಾಮಿ? ನನ್ನ ಹೆಂಡತಿ ಮತ್ತು ಮಗುವಿನ ಭವಿಷ್ಯವನ್ನು ಜೋಪಾನ ಮಾಡಿಕೊಳ್ಳದ ಹೊರತು ನಿಮ್ಮೊಂದಿಗೆ ಯಾವುದೇ ರೀತಿಯ ವ್ಯವಹಾರ ಮಾಡಲು ನನಗೆ ಆಸಕ್ತಿ ಇಲ್ಲ. ಊರ್ವಶಿಗೂ ಅವಳು ಹೆರಲಿರುವ ಮಗುವಿಗೂ ಯಾವುದೇ ರೀತಿಯ ಅಪಾಯ ಉಂಟಾಗುವುದಿಲ್ಲ ಎಂಬ ಬಗ್ಗೆ ಪೂರ್ತಿ ರಾಜಮುದ್ರಾಧಿಕಾರ ಹೊಂದಿರುವ ಆಶ್ವಾಸನೆ ಬೇಕು. ಒಂದು ವೇಳೆ ನನ್ನ ಮಗು ಹೆಣ್ಣಾದರೆ ಅದು ಉಪಪತ್ನಿಯಾಗುವುದಿಲ್ಲ ಹಾಗೂ ಗಂಡಾದರೆ ಅದು ನಪುಂಸಕನಾಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಅದರಲ್ಲಿ ಹೇಳಿರಬೇಕೆಂದು ನನ್ನ ಇಚ್ಛೆ. ನೀವೇ ನೋಡಿದಂತೆ ಈ ಹಾಳಾದ ವೈದ್ಯರು ಅನ್ನಿಸಿಕೊಂಡವರು ಶುದ್ಧ ಒರಟರು. ನನ್ನ ವಿಷಯದಲ್ಲಿ ಅದನ್ನೂ ಸರಿಯಾಗಿ ಮಾಡಕ್ಕಾಗಲಿಲ್ಲ ಅವರಿಗೆ"

"ಯಾವುದೇ ವ್ಯವಹಾರದ ಮಾತಿಲ್ಲ ಬೃಹನ್ನದ" ನಾನು ಅದರ ಬಗ್ಗೆನೇ ಗಾಢವಾಗಿ ಯೋಚಿಸುತ್ತಿದ್ದೆ. ಅದೇ ಸಮಯಕ್ಕೆ ಊರ್ವಶಿಯ ಗರ್ಭಸ್ಥ ಶಿಶುವಿಗೆ ಬೃಹನ್ನದನೇ ತಂದೆ ಎಂಬ ವಾಸ್ತವಾಂಶವನ್ನು ಗ್ರಹಿಸಲು ಯತ್ನಿಸುತ್ತಿದ್ದೆ. "ಹೆಂಗಸರು ಮತ್ತು ಮಕ್ಕಳನ್ನು ಬಂದಿಗಳನ್ನಾಗಿಟ್ಟುಕೊಂಡು ಅವರ ಬಂಧಮುಕ್ತಿಗಾಗಿ ಯಾವುದೇ ವ್ಯವಹಾರದ ಒಪ್ಪಂದ ಮಾಡಿಕೊಳ್ಳುವುದಿಲ್ಲ. ನನ್ನ ನಿನ್ನ ಮಧ್ಯೆ ಏನೇ ನಡೆಯಲಿ, ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಊರ್ವಶಿಗಾಗಲಿ, ನಿನ್ನ ಮಗ ಅಥವಾ ಮಗಳಿಗಾಗಲಿ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ ಎಂದು ಮಹಾಪ್ರಭುಗಳು ನಿನಗೆ ಮಾತು ಕೊಡುತ್ತಾರೆ".

ಆ ಮನುಷ್ಯನ ಕಡೆಯ ವ್ಯಾಪಾರ ವ್ಯವಹಾರದ ವಿಷಯ ನನಗೆ ಸಾಕು ಸಾಕಾಗಿ ಹೋಗಿತ್ತು. ನಾನು ಬಾಗಿಲಿನ ಹತ್ತಿರಕ್ಕೆ ಬಂದಾಗ ಹಿಂದಕ್ಕೆ ತಿರುಗಿದೆ. "ನೀನು ಯಾವೊತ್ತಾದರೂ ನಿನ್ನ ನೈತಿಕ ಆಯ್ಕೆಯ ಹಕ್ಕನ್ನು ಚಲಾಯಿಸಲು ಯತ್ನಿಸಿದೆಯಾ ಬೃಹನ್ನದ? ನಿನಗೆ ಆಶ್ಚರ್ಯವಾಗಬಹುದು, ಸತ್ಯಕ್ಕೂ ತನ್ನದೇ ಆದ ಆಕರ್ಷಣೆ ಮತ್ತು ಸಂತೃಪ್ತಿಗಳಿರುತ್ತವೆ. ಮುಖ್ಯವಾದ ವಿಷಯ ಅಂದರೆ ಋಜುತ್ವಕ್ಕೆ ಒಬ್ಬ ಭೀಷ್ಮ ಬೇಕಾಗುತ್ತಾನೆ."

ಈ ನನ್ನ ಯಾವುದಾದರೂ ಹುಚ್ಚುಚ್ಚು ಮಾತುಗಳನ್ನು ನಾನು ನಿಜಕ್ಕೂ ಉದ್ದೇಶಿಸಿದ್ದೇನೆ? ನಿಮಗೆ ಆಶ್ಚರ್ಯವಾಗಲಿದೆ.

* * *

"ನಿನ್ನಲ್ಲಿಯ ಪುರುಷತ್ವದ ಅಂಶ ಪೂರ್ತಿಯಾಗಿ ನಿರ್ಮೂಲವಾಗಿಲ್ಲ ಎಂದು ನಿನಗೆ ಯಾವಾಗ ಗೊತ್ತಾಯಿತು?"

"ನನ್ನ ಹದಿ ವಯಸ್ಸಿನಲ್ಲಿ, ಆಗಾಗ್ಗೆ ರಾತ್ರಿಯ ವೇಳೆ ವೀರ್ಯ ಸ್ಖಲನವಾಗುತ್ತಾ ಇದ್ದದ್ದರಿಂದ ನನಗೆ ಗಲಿಬಿಲಿಯಾಯಿತು. ಆದರೆ ನನ್ನ ಖೋಜಾತನಕ್ಕೆ ಅದು ವಿರುದ್ಧವಾದ್ದು ಎನ್ನುವುದು ಗೊತ್ತಾಗಲಿಲ್ಲ".

"ಎರಡು ಸ್ಖಲನಗಳ ಮಧ್ಯದ ಅಂದಾಜು ಅಂತರ ಎಷ್ಟಿರುತ್ತಿತ್ತು ಅಂತ ಹೇಳಲು ಸಾಧ್ಯವೆ?"

"ಸರಿಸುಮಾರು ನಾಲ್ಕರಿಂದ ಏಳು ತಿಂಗಳುಗಳ ನಡುವೆ".

ಅದು ಬೃಹನ್ನದನ ವಿಚಾರಣೆಯ ಮೂರನೇ ದಿನ. ವಿಚಾರಣಾ ಆಯೋಗ ರಹಸ್ಯವಾಗಿ ವಿಚಾರಣೆ ನಡೆಸುತ್ತಿದ್ದುದರಿಂದ, ಮಂಗಳನು ಬಲಿಪಶುವಾದ ಬೃಹನ್ನದನ ಸಾಕ್ಷ್ಯವನ್ನು ಬರೆದುಕೊಳ್ಳಬೇಕಾಗಿತ್ತು. ಪ್ರತಿದಿವಸ ಕೊನೆಯಲ್ಲಿ, ನಪುಂಸಕನು ತನ್ನ ಮಾತು ತಾಳೆ ನೋಡಲು, ತನ್ನ ಸಾಕ್ಷ್ಯವನ್ನು ಪೂರ್ತಿ ಓದಿದ ಮೇಲೆ ಮೂಲ ಪ್ರತಿಗೆ ಸಹಿ ಮಾಡುತ್ತಿದ್ದನು.

"ನೀನು ಪ್ರಾಯಕ್ಕೆ ಬಂದಾಗ ನಿನ್ನ ಲಿಂಗದ ಗ್ರಹಿಕೆಯಲ್ಲಿ ಏನಾದರೂ ವ್ಯತ್ಯಾಸವಾಯಿತೆ?"

"ನನಗೆ ಖಚಿತವಿರಲಿಲ್ಲ. ಆದರೆ ನನ್ನ ಇಪ್ಪತ್ತೈದರ ಸುಮಾರಿನಲ್ಲಿ, ನಾನು ಪೂರ್ತಿ ನಪುಂಸಕನಾಗಿಲ್ಲದೆ ಇರಬಹುದೇನೋ ಎನಿಸಿತು".

"ಇದನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಏಕೆ ಹೇಳಲಿಲ್ಲ?"

"ಪ್ರತಿಯೊಬ್ಬ ನಪುಂಸಕನಿಗೂ ಕೇವಲ ಒಂದು ವಿಷಾದ ಮತ್ತು ಒಂದು ಕನಸಿರುತ್ತದೆ: ಅದೆಂದರೆ ತನಗೆ ಲಿಂಗವಿಲ್ಲವೆಂಬ ವಿಷಾದ ಮತ್ತು ಲಿಂಗವಿರಬೇಕಾಗಿತ್ತೆಂಬ ಬಯಕೆ. ಆಗೊಮ್ಮೆ ಈಗೊಮ್ಮೆ ನಾನು ಪುರುಷನಾಗಿದ್ದರೂ, ನನ್ನ ಈ ಒಳ್ಳೆಯ ಅದೃಷ್ಟವನ್ನು ನಾನಾಗಿ ನಾನು ಹಾಳು ಮಾಡಿಕೊಳ್ಳಲು ಸಿದ್ಧನಿರಲಿಲ್ಲ. ಅದೂ ಅಲ್ಲದೆ ನನ್ನ ಸ್ಥಾನವೇನು ಎಂಬುದು ಖಚಿತವಿರಲಿಲ್ಲ. ಹಾಗಾಗಿ ಯಾರೊಂದಿಗೂ ಅದನ್ನು ಚರ್ಚಿಸುವ ಧೈರ್ಯವಾಗಲಿಲ್ಲ".

"ನಿನಗೆ ಊರ್ವಶಿಯ ಪರಿಚಯ ಯಾವಾಗ ಆಯಿತು?"

"ಹತ್ತು ವರ್ಷದ ಹಿಂದೆ, ಅವಳು ಮೊದಲು ಚಿತ್ತೂರಿಗೆ ಬಂದಾಗ ಹಾಗೂ ನನ್ನ ಮೇಲ್ವಿಚಾರಣೆಯಲ್ಲಿ ಅವಳನ್ನು ಇಟ್ಟಿದ್ದಾಗ"

"ಅವಳು ವಿಕ್ರಮಾದಿತ್ಯನ ಉಪಪತ್ನಿ ಎಂಬುದು ನಿನಗೆ ಗೊತ್ತಿತ್ತೆ?"

"ಹೌದು ಗೊತ್ತಿತ್ತು. ಆದರೆ ಮೊದಲನೇ ತಿಂಗಳಿಗೆ ಮಾತ್ರ. ಆ ಮೇಲೆ ಅವರು ಅವಳಲ್ಲಿ ಆಸಕ್ತಿಯನ್ನು ಕಳೆದುಕೊಂಡರು"

"ಯಾವತ್ತಿನಿಂದ ಅವಳನ್ನು ಭೇಟಿ ಮಾಡಲು ಪ್ರಾರಂಭಿಸಿದೆ?"

"ಏಳು ವರ್ಷಗಳ ಹಿಂದೆ"

"ಅವಳೊಂದಿಗೆ ನೀನು ರಹಸ್ಯವಾಗಿ ಸೇರುತ್ತಿದ್ದಾಗ ರಾಜಕುಮಾರನು ಕೇಳಿದನೆ?"

"ಒಂದು ಸಲವೂ ಕೇಳಲಿಲ್ಲ ಸ್ವಾಮಿ. ಅವಳು ಅದೆಷ್ಟು ನಾಚಿಕೆಯ ಸ್ವಭಾವದವಳು ಮತ್ತು ತಣ್ಣನೆಯ, ಲೈಂಗಿಕ ನಿರಾಸಕ್ತಿಯವಳು ಎಂದರೆ, ನಮ್ಮ ಮಾತುಕತೆಯ ನಡುವೆ ಯಾವಾಗಲಾದರೂ ಅವಳ ಹೆಸರನ್ನು ನಾನು ಎತ್ತಿದ್ದೇ ಆದರೆ, ಅಥವಾ ಅವಳ ಜೊತೆ ಮಲಗುವುದಕ್ಕೆ ಅವರಿಗೆ ಸೂಚಿಸಿದ್ದೇ ಆದರೆ ನನ್ನನ್ನು ಕೆಲಸದಿಂದ ಕಿತ್ತು ಹಾಕುವುದಾಗಿ ಹೇಳಿಬಿಟ್ಟರು"

"ಊರ್ವಶಿ ಗರ್ಭಿಣಿ ಎಂದು ಯಾವಾಗ ನಿನಗೆ ಗೊತ್ತಾಯಿತು?"

"ಸುಮಾರು ನಾಲ್ಕು ತಿಂಗಳ ಹಿಂದೆ. ತಾನು ಹೊರಗಾಗಿಲ್ಲ ಎಂದು ಮೊದಲು ಅವಳು ಹೇಳಿದಾಗ ಅವಳ ಮಾತನ್ನು ನಾನು ನಂಬಲಿಲ್ಲ. ಆದರೆ ಎರಡನೇ ತಿಂಗಳಲ್ಲಿ ತಪ್ಪು ತಿಳಿಯುವ ಸಂಭವವೇ ಇರಲಿಲ್ಲ. ಊರ್ವಶಿ ನಿಜಕ್ಕೂ ಗರ್ಭಿಣಿಯಾಗಿದ್ದಳು".

"ಅದು ನಿನ್ನ ಮಗು ಅಂತ ನಿನಗೆ ಹೇಗೆ ಗೊತ್ತಾಯಿತು?"

"ರಾಣಿ ಕರ್ಮವತಿಯ ಅರಮನೆ ಮತ್ತು ರಾಜಕುಮಾರಿಯ ಅರಮನೆಯಲ್ಲಿ ಯಾರು ಯಾರೊಂದಿಗೆ ಮಲಗುತ್ತಾರೆ ಎಂದು ತಿಳಿದುಕೊಳ್ಳುವುದೇ ನನ್ನ ಕೆಲಸ".

"ರಾಣಿ ವಾಸದಲ್ಲಿ, ಊರ್ವಶಿಯು ಗರ್ಭಿಣಿಯಾಗಿರುವ ಸಂಗತಿಯನ್ನು ನೀನು ನಿಭಾಯಿಸಲು ಯಾವ ರೀತಿಯ ಯೋಜನೆ ಹಾಕಿದೆ?"

"ಮೂರನೇ ತಿಂಗಳಿನ ನಂತರ ಅವಳನ್ನು ಅವಳ ತೌರೂರಿಗೆ ಕಳಿಸುವ ಯೋಚನೆ ಮಾಡಿದ್ದೆ"

"ಊರ್ವಶಿ ಗರ್ಭಿಣಿಯಾಗಿದ್ದಾಳೆ ಎಂಬ ಸಂಗತಿಯನ್ನು ರಾಜಕುಮಾರನು ಯಾವಾಗ ಕಂಡುಕೊಂಡನು?"

ಅವರು ಕೊಂಡುಕೊಳ್ಳಲಿಲ್ಲ. ಕಡೇ ಪಕ್ಷ ಆಗಂತೂ ಅಲ್ಲ. ಅನಂತರ ನನ್ನ ಅತ್ಯುತ್ತಮ ಮುನ್ನೆಚ್ಚರಿಕೆಗಳ ಹೊರತಾಗಿಯೂ, ಊರ್ವಶಿಗೆ ಎರಡನೇ ತಿಂಗಳು ನಡೆಯುತ್ತಿದ್ದಾಗ ಅವಳೊಂದಿಗೆ ನಾನಿರುವಾಗ ನನ್ನನ್ನು ಹಿಡಿದು ಬಿಟ್ಟರು.

"ಅವನೇನು ಹೇಳಿದ ನಿನಗೆ?"

"ನನ್ನ ಯಜಮಾನರಿಗೆ ವಿಲಕ್ಷಣವಾದದ್ದು ಅತ್ಯಂತ ಪ್ರಚೋದನಕಾರಿಯಾಗಿ ಬಿಡುತ್ತದೆ. ಅವರು ಹುಚ್ಚರಂತೆ ಉದ್ರಿಕ್ತಗೊಳ್ಳುತ್ತಾರೆ."

"ಊರ್ವಶಿಯೊಂದಿಗಿನ ನಿನ್ನ ಸಂಬಂಧವನ್ನು ಕಂಡುಕೊಂಡ ಮೇಲೆ ರಾಜಕುಮಾರನು ತನಗೆ ಹಾಸಿಗೆ ಸಂಗಾತಿಗಳನ್ನೊದಗಿಸುವ ನಿನ್ನ ಸೇವೆಯನ್ನು ಬಳಸಿಕೊಂಡನೆ?"

ನಾನು ವಿಷಯಗಳನ್ನು ಬದಲಾಯಿಸುತ್ತಿದ್ದುದು ನಪುಂಸಕನಿಗೆ ಅಸಂಬದ್ಧವೆಂದು ಅನ್ನಿಸಿದರೂ ಅವನು ಅದನ್ನು ತೋರಿಸಿಕೊಳ್ಳಲಿಲ್ಲ.

"ಅವರು ನಾನೊಂದು ರೀತಿಯ ವಿಲಕ್ಷಣ ಪ್ರಾಣಿ ಎಂದುಕೊಂಡು ನನ್ನನ್ನೊಬ್ಬನನ್ನೇ ಇರಲು ಬಿಡುತ್ತಿರಲಿಲ್ಲ"

'ನಿನ್ನ ಮತ್ತು ಊರ್ವಶಿಯ ಪ್ರಣಯ ವ್ಯವಹಾರ ಗೊತ್ತಾದ ಮೇಲೆ ಊರ್ವಶಿಯಲ್ಲಿನ ಅವನ ಆಸಕ್ತಿ ಮತ್ತೆ ಕೆರಳಿತೆ?"

ಆಗ ನಪುಂಸಕನು, ಅಥವಾ ಸರಿಯಾಗಿ ಹೇಳಬೇಕೆಂದರೆ ಮೊದಲಿನ ನಪುಂಸಕನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ನಾನು ಅವನನ್ನು ಪ್ರಶ್ನಿಸಲು ಪ್ರಾರಂಭಿಸಿದ ಮೇಲೆ ಅವನು ಭಾವೋದ್ವಿಗ್ನತೆಯ ಕುರುಹನ್ನೇನಾದರೂ ತೋರಿಸಿದ್ದೆಂದರೆ ಅದು ಇದೇ ಮೊದಲ ಬಾರಿಗೆ.

"ಅದು ಪ್ರಣಯ ವ್ಯವಹಾರವಾಗಿರಲಿಲ್ಲ ಮಹಾಸ್ವಾಮಿ. ಬಹಳ ಹಿಂದೆಯೇ ನಾನು ಮತ್ತು ಊರ್ವಶಿ ರಹಸ್ಯವಾಗಿ ವಿವಾಹವಾಗಿದ್ದೆವು".

"ಅದನ್ನು ನಾನು ಗುರುತು ಮಾಡಿಕೊಳ್ಳುವೆ. ಆದರೆ ನನ್ನ ಪ್ರಶ್ನೆಗೆ ಅದು ಉತ್ತರವಲ್ಲ".

"ಊರ್ವಶಿಯು ನಿಜವಾಗಿಯೂ 'ಗಂಡಾದ' ತನ್ನಂಥವನಿಗೆ ಸ್ಪಂದಿಸದೆ ನಪುಂಸಕನೊಬ್ಬನಿಗೆ ಸ್ಪಂದಿಸಿದ್ದಳೆಂದು ರಾಜಕುಮಾರರು ಮೊದಲಿಗೆ ಅವಳಲ್ಲಿಗೆ ಹೋಗುವ ಇಂಗಿತವನ್ನು ವ್ಯಕ್ತಪಡಿಸಿದ್ದರು. ಆಮೇಲೆ ಕೆಲವು ವಾರಗಳ ನಂತರ, ಅವಳೇ ನನ್ನಲ್ಲಿಗೆ ಬರುವುದೊಳ್ಳೆಯದು ಎಂದರು. ಆ ರಾತ್ರಿ ಅವರಿಗಾಗಿ ಇಬ್ಬರು ಕನ್ಯೆಯರ ವ್ಯವಸ್ಥೆ ಮಾಡಿದ್ದೇನೆ ಎಂದು ಹೇಳಿದೆ. ನುಣುಚಿಕೊಳ್ಳುವುದನ್ನು ನಿಲ್ಲಿಸು ಎಂದು ಅವರು

ಹೇಳಿದರು. 'ನನಗೆ ಊರ್ವಶಿಯೇ ಬೇಕು. ಬೇರೆ ಯಾರೂ ಅಲ್ಲ, ಗೊತ್ತಾಯಿತ ನಿನಗೆ?' ಎಂದರು. ಆಗ ನಾನು ಅವರಿಗೆ ಊರ್ವಶಿ ನನ್ನ ಹೆಂಡತಿ ಎಂದು ಹೇಳಿದೆ. ಆ ಮಾತೇ ಅವರಿಗೆ ಎಲ್ಲಕ್ಕಿಂತ ಹೆಚ್ಚು ಪ್ರಚೋದನಕಾರಿಯಾಗಿದ್ದಂತಿತ್ತೆಂಬುದನ್ನು ನಾನು ಸರಿಯಾಗಿ ತಿಳಿದುಕೊಳ್ಳಬೇಕಿತ್ತು. ಅವರು ಅವಳನ್ನು ಭೋಗಿಸಿದರು. ಒಂದು ಸಲವಲ್ಲ, ಮತ್ತೆ ಮತ್ತೆ. ನಾನು 'ದ್ವೇಷ' ಎಂಬ ಮಾತನ್ನು ಬಳಸುವುದಿಲ್ಲ. ಕಾರಣ ಅದು ಯುಕ್ತವಾದ ಶಬ್ದವಲ್ಲ. ಅವಳು ಎಷ್ಟೆಷ್ಟು ಮಟ್ಟಿಗೆ ತನ್ನಲ್ಲಿ ತಾನೇ ಮುದುಡಿಕೊಳ್ಳ ಹತ್ತಿ ವಿರೋಧಿಸ ತೊಡಗಿದಳೋ ಅಷ್ಟಷ್ಟು ಮಟ್ಟಿಗೆ ಅವರು ಅವಳನ್ನು ಬಯಸ ತೊಡಗಿದರು".

"ನಿನ್ನನ್ನು ಅವನು ಕೊಲ್ಲುವ ಹಂಚಿಕೆ ಹಾಕಿರುವ ಸುಳಿವೇನಾದರೂ ನಿನಗೆ ಸಿಕ್ಕಿತ್ತೆ?"

"ನನ್ನ ಯಜಮಾನರು, ಏನನ್ನಾದರೂ ಹಿಂದು ಮುಂದು ನೋಡದೆ ಮಾಡಿಬಿಡುವ ಪ್ರವೃತ್ತಿಯವರು. ಒಂದೊಂದು ಸಲ ಅವರು ನಿಜಕ್ಕೂ ಚಿತ್ತ ಸ್ವಾಸ್ಥ್ಯವಿಲ್ಲದ ಮನುಷ್ಯ ಎಂದು ಅಂದುಕೊಳ್ಳುತ್ತೇನೆ. ಅವರು ನನ್ನೊಂದಿಗೆ ಸ್ನೇಹದಿಂದಲೇ ಇದ್ದರು. ನಾವು ಪುಷ್ಕರ ತೀರ್ಥಕ್ಕೆ ಹೋಗುತ್ತಿದ್ದಾಗಲೂ ಅವರು ನನ್ನೊಂದಿಗೆ ದಾಕ್ಷಿಣ್ಯದಿಂದಲೇ ಇದ್ದರು. ಅವರೊಂದಿಗೆ ನಾನು ಶಿಬಿರದಲ್ಲಿರಬೇಕೆಂದು ಒತ್ತಾಯಿಸಿದರು. ಮಧ್ಯಾಹ್ನದ ಊಟದ ನಂತರ ಎಲ್ಲರೂ ನಿದ್ದೆ ಮಾಡುವುದೋ ಇಲ್ಲವೆ ಪುಷ್ಕರ ತೀರ್ಥದಲ್ಲಿ ದೋಣಿಯಲ್ಲಿ ತೇಲುವುದೋ ಮಾಡುತ್ತ ಇದ್ದಾಗ ತಮ್ಮನ್ನು ಕಾಣಬೇಕೆಂದು ಹೇಳಿದ್ದರು. ಬಹುಶಃ ಅವರಿಗೆ ನನ್ನೊಂದಿಗೆ ರಮಿಸುವ ಇಚ್ಛೆಯಾಗಿದೆ ಎಂದುಕೊಂಡು, ಅವರು ಹೇಳಿದಾಗ ಬಟ್ಟೆ ಬಿಚ್ಚ ತೊಡಗಿದೆ".

'ನೀನೇಕೆ ಆತ್ಮ ರಕ್ಷಣೆ ಮಾಡಿಕೊಳ್ಳಲಿಲ್ಲ?'

"ನಾನು ಈ ಮನೆಯ ಉಪ್ಪು ತಿಂದಿದ್ದೇನೆ ಮಹಾಸ್ವಾಮಿ. ನಾನು ಅದಕ್ಕೆ ದ್ರೋಹ ಬಗೆಯಲಾರೆ".

ನಾವು ವಿಚಾರಣೆಯ ಅಂತ್ಯಕ್ಕೆ ಬಂದಿದ್ದೆವು. ನನಗೆ ಬೃಹನ್ನದನ ಬಗ್ಗೆ ಅನುಕಂಪವಿರಲಿಲ್ಲ. ಆದರೆ ಅವನು ನಡೆದುಕೊಂಡ ರೀತಿಯ ಬಗ್ಗೆ ನನಗೆ ಗೌರವವಿತ್ತು. ನನಗೆ ತೀರ ಬೇಸರ ಬಂದು ಬಿಟ್ಟಿತ್ತು. ಅದು ಬಹುಮಟ್ಟಿಗೆ ನನ್ನ ತಮ್ಮನಿಂದಾಗಿ. ವಿಕ್ರಮನಂಥವರೊಂದಿಗೆ ಜನ ಏನು ಮಾಡುತ್ತಾರೆ? ವಿಷಯ ಲೋಲುಪತೆ ತುಂಬ ಕೆಟ್ಟದ್ದೇ. ಅದರೊಂದಿಗೆ ಅಧಿಕಾರ ಮತ್ತು ಕ್ರೌರ್ಯದ ಹಸಿವೂ ಸೇರಿ ಬಿಟ್ಟರೆ ಆಗ ದುಷ್ಟತನಕ್ಕೆ ಕೊನೆಯೇ ಇರುವುದಿಲ್ಲ. ನಿಮ್ಮ ಸಂತೋಷವೊಂದೇ ಕಾನೂನು ಮತ್ತು ಅದರ ಹುಡುಕಾಟದಲ್ಲಿ ನಿಮ್ಮ ಅತ್ಯಂತ ಆಪ್ತ ಸಂಗಾತಿಯನ್ನು ನಾಶ ಮಾಡುವಷ್ಟೇ ಸಲೀಸಾಗಿ ಒಬ್ಬ ಅಪರಿಚಿತನನ್ನು ನಾಶ ಮಾಡಿ ಬಿಡಬಹುದು.

ಬೇರೆಲ್ಲರದಕ್ಕಿಂತಲೂ ತನ್ನ ಬಯಕೆಗಳು ಅಗ್ರ ಮಾನ್ಯತೆ ಪಡೆಯ ಬೇಕೆನ್ನುವ ರೀತಿಯಲ್ಲಿ ಬೃಹನ್ನದನು ನನ್ನ ತಮ್ಮನನ್ನು ಹುರಿದುಂಬಿಸಿದ್ದನು. ಅವನು ವಿಕ್ರಮನ ತಲೆ ಹಿಡುಕನಾಗಿದ್ದನು. ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಹಾಗೂ ಅವನ ಭೋಗ ಲೋಲುಪತೆಗೆ ಸಂಬಂಧಪಟ್ಟಂತೆ ಅವನು ಹವಣಿಸುವವನಾಗಿದ್ದನು. ನಾನೊಬ್ಬ ನೈತಿಕ ಸ್ವಪ್ರತಿಷ್ಠೆಯುಳ್ಳವನಾಗಿ, ಬೃಹನ್ನದನಿಗೆ ತಕ್ಕನಾಗಿ ಆಗಿದೆ ಎಂದು ಸಂತೃಪ್ತಿ ಪಟ್ಟುಕೊಳ್ಳಬಹುದು. ನನಗೀಗ ನಪುಂಸಕನನ್ನು ಶಾಶ್ವತವಾಗಿ ಸೆರೆಗೆ ತಳ್ಳಿ ಬಿಡುವ ಅಧಿಕಾರವಿತ್ತು. ಸ್ವಧರ್ಮ ನಿಷ್ಠರಾದವರು ಅಸಹನೆಯಿಂದಿರುವುದು ಮತ್ತು ಬೇಕೆಂದೇ ಕುರುಡರಂತಿರುವುದು ವಿಕ್ರಮನಂಥವರ ಅತಿಯಾದ ವಿನಾಶಕ್ಕಿಂತ ಹೆಚ್ಚು ಅಪಾಯಕಾರಿಯದ್ದು ಮತ್ತು ಅಮಾನವೀಯವಾದ್ದು.

"ರಾಣಿ ಮತ್ತು ಆಕೆಯ ಮಗ ಈಗ ನಿನ್ನನ್ನು ಕೊಲ್ಲಲು ಅಷ್ಟೆಲ್ಲಾ ತೀವ್ರವಾಗಿ ಏಕೆ ಪ್ರಯತ್ನಿಸುತ್ತಿದ್ದಾರೆ? ನೀನವರಿಗೆ ಯಾವ ರೀತಿಯ ಬೆದರಿಕೆಯನ್ನೊಡ್ಡ ಬಲ್ಲೆ?"

"ಅತ್ಯಂತ ಒಳ್ಳೆಯ ಸ್ನೇಹಿತರು ಅತ್ಯಂತ ಕೆಟ್ಟ ಶತ್ರುಗಳಾಗುತ್ತಾರೆ ಮಹಾಸ್ವಾಮಿ".

ಈ ವಿಷಯವನ್ನು ಇನ್ನೂ ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಬೃಹನ್ನದನು. ಸಾಯಲು ತಾನು ಹೆದರುವುದಿಲ್ಲವೆಂದು ಸಿದ್ಧಮಾಡಿದ್ದನು. ಹಾಗೂ ತಾನು ಅತಿಯಾಗಿ ಪ್ರೀತಿಸುವ ಇಬ್ಬರು ವ್ಯಕ್ತಿಗಳಿಗೆ ತನ್ನ ನಿಷ್ಠೆಯನ್ನು ತೊರೆಯಲು ಸಿದ್ಧನಿರಲಿಲ್ಲ.

"ನನ್ನ ವಿಷಯ ಏನು ಮಾಡಬೇಕು ಅಂತ ಇದ್ದೀರಿ ಮಹಾಸ್ವಾಮಿ?"

"ನೀನು ಈ ನಾಡಿನ ಹಾಗೂ ಈ ಮನೆಯ ಕಾನೂನನ್ನು ಮುರಿದಿದ್ದೀ ಬೃಹನ್ನದ ಹಾಗೂ ಸಾಮಾನ್ಯವಾದ ಸನ್ನಿವೇಶದಲ್ಲಿ ನೀನು ನಿನ್ನ ತಲೆ ಕಳೆದುಕೊಳ್ಳುವೆ ಇಲ್ಲವೆ ನೀನು ಆಜೀವ ಪರ್ಯಂತ ಕಾರಾಗೃಹದಲ್ಲಿರಬೇಕಾಗುತ್ತೆ. ಆದರೆ ನೀನೀಗಾಗಲೇ ಭಯಂಕರ ದಂಡ ತೆತ್ತಿದ್ದೀ. ನೀನು ನಿರಾಳವಾಗಿದ್ದು ಬಿಡಲು ಬಿಟ್ಟು ಬಿಡುವಂತೆ ಮಹಾಪ್ರಭುಗಳಿಗೆ ನಾನು ಶಿಫಾರಸು ಮಾಡಬೇಕೆಂದಿದ್ದೇನೆ."

ಅವನು ನನ್ನತ್ತ ಪ್ರಶ್ನಾರ್ಥಕವಾಗಿ ನೋಡಿ ಜೋರಾಗಿ ನಕ್ಕನು. "ನಿಮ್ಮನ್ನು ನಾನು ನಂಬಬೇಕೆಂಬುದು ನಿಮ್ಮ ನಿರೀಕ್ಷೆಯೆ? ನಾವು ಅಷ್ಟೊಂದು ದೀರ್ಘ ಕಾಲದಿಂದಲೂ ಶತ್ರುಗಳಾಗಿರುವುದರಿಂದ ಈಗ ನನ್ನ ಮೇಲೆ ಸೇಡು ತೀರಿಸಿಕೊಳ್ಳಲು ಈ ಸಮಯವನ್ನು ಬಳಸಿಕೊಳ್ಳುತ್ತೀರಿ"

"ನನಗೆ ನಿನ್ನನ್ನು ಕಂಡರೆ ಆಗದೆ ಇರಬಹುದು ಬೃಹನ್ನದ. ಆದರೆ ನನ್ನನ್ನು ನೀನು ಅಥವಾ ನಿನ್ನ ಸ್ನೇಹಿತರು ಅಂತ ತಪ್ಪು ತಿಳಿಯಬೇಡ. ನ್ಯಾಯದಾನದ ಉದ್ದೇಶ, ವೈಯಕ್ತಿಕ ಸೇಡುಗಳನ್ನಾಗಲಿ ಪ್ರತೀಕಾರವನ್ನಾಗಲಿ ತೀರಿಸಿ ಕೊಳ್ಳುವುದಲ್ಲ. ನಿನ್ನ ಬಿಡುಗಡೆಯ ಕಾಗದ ಪತ್ರಗಳಿಗೆ ಮಹಾಪ್ರಭುಗಳು ತಮ್ಮ ಅಂಕಿತ ಹಾಕಿದ ಕೂಡಲೇ ನಿನ್ನ ಬಿಡುಗಡೆ ಆಗುತ್ತೆ".

"ಅದು ಬಹಳ ಅಚ್ಚುಕಟ್ಟಾಗಿ ಆಯಿತು. ನನ್ನನ್ನೂ ನನ್ನ ಹೆಂಡತಿಯನ್ನೂ ಮುಗಿಸಿ ಬಿಡುವ ಹೊಲಸು ಕೆಲಸವನ್ನು ವಿಕ್ರಮಾದಿತ್ಯರು ನಿಮ್ಮ ಪರವಾಗಿ ಮಾಡಿ ಬಿಡುತ್ತಾರೆನ್ನುವುದನ್ನು ತಿಳಿದೂ ನೀವು ನನ್ನಿಂದ ನಿಮ್ಮ ಕೈ ತೊಳೆದುಕೊಂಡು ಬಿಡುತ್ತೀರಿ".

"ನೀನು ಎಲ್ಲಿ ಇರುವುದಕ್ಕೆ ಇಷ್ಟ ಪಡುವೆಯೋ ಅಲ್ಲಿ ರಾಜ್ಯ ನಿನಗೆ ನೆಲೆ ಕಲ್ಪಿಸುವುದು. ಮೇವಾಡದೊಳಗಾಗಬಹುದು ಇಲ್ಲವೆ ಹೊರಗಡೆ ಆಗಬಹುದು. ನಿನಗೂ ನಿನ್ನ ಹೆಂಡತಿಗೂ ಹೊಸ ಗುರುತನ್ನು ನೀಡಲಾಗುವುದು ಹಾಗೂ ಹೊಸದಾಗಿ ಜೀವನವನ್ನು ಶುರು ಮಾಡಲು ಸ್ವಲ್ಪ ಹಣವನ್ನು ನೀಡಲಾಗುವುದು. ನೀನು ಮೇವಾಡದ ಅತ್ಯಂತ ಶ್ರೀಮಂತರಲ್ಲಿ ಒಬ್ಬ ಹಾಗೂ ಆ ಹಣದ ಅಗತ್ಯ ನಿನಗಿಲ್ಲವೆಂದು ನನಗೆ ಗೊತ್ತಿದ್ದರೂ ಕೂಡ ಸ್ವಲ್ಪ ಹಣವನ್ನು ನೀಡಲಾಗುವುದು."

ಊರ್ವಶಿ ಮತ್ತು ಬೃಹನ್ನದರ ವಲಸೆಯ ವ್ಯವಸ್ಥೆ ಮಾಡಲು ತನಗೆ ಎರಡು ವಾರಗಳು ಬೇಗಾಗಬಹುದೆಂದು ಮಂಗಳನು ನನಗೆ ತಿಳಿಸಿದನು. ದಂಪತಿಗಳನ್ನು ಎಲ್ಲಿ ನೆಲೆಗೊಳಿಸಲು ಯೋಜನೆ ಹಾಕಿದ್ದಾನೆಂದು ಕೇಳಲು ನನಗೆ ಅರೆ ಮನಸ್ಸು. ಅವನ ಉತ್ತರ ಏನಾಗಿರುತ್ತದೆಂಬುದು ನನಗೆ ಗೊತ್ತು. ನೀವು ಏತಕ್ಕೆ ಅದನ್ನು ತಿಳಿದುಕೊಳ್ಳಬೇಕು? ಅವನು ಕೇಳುವುದೂ ಸರಿಯೆ? ಕೆಲವು ವಿಷಯಗಳಿಗೆ ಸಂಬಂಧಿಸಿದ ಹಾಗೆ ಅಜ್ಞಾನವು ವಿವೇಕದ ಹೆಂಡತಿ. ಅಂದ ಹಾಗೆ ವಿಕ್ರಮಾದಿತ್ಯನ ವಿಚಾರವೇನು? ಮಗನ ಹಾಗೂ ಈ

ದೇಶದ ರಾಜಕುಮಾರನ ಮುಖವಾಡ ಹೊತ್ತಿರುವ ಈ ಬರ್ಬರ ಕೊಲೆಗಡುಕನಿಗೆ ಏನು ಮಾಡಬೇಕೆಂದು ಇದ್ದೀರಿ ಎಂದು ತಂದೆಯವರನ್ನು ಕೇಳಬೇಕೆಂದಿದ್ದೆ? ಆದರೆ ಅಂಥದ್ದೇನನ್ನೂ ನಾನು ಮಾಡಲಿಲ್ಲ. ನಿನ್ನ ಕೆಲಸ ನೀನು ನೋಡಿಕೋ ಎಂದು ಹೇಳಿಸಿಕೊಳ್ಳಲು ನನಗಿಷ್ಟವಿರಲಿಲ್ಲ. ಅದಕ್ಕಿಂತ ಕೆಟ್ಟದ್ದೆಂದರೆ. ಅವನ ಅಪರಾಧಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಚಿತ್ತೂರಿನಲ್ಲಿರುವ ರಾಜ್ಯದ ಅನಾಥಾಲಯವಾದ 'ನಂದನ'ವನದಲ್ಲಿರುವ ಮಕ್ಕಳಿಗೆ ನಿರಂತರವಾಗಿ ಮೂರು ಸಂಜೆಗಳು ಕಥೆಗಳನ್ನು ಓದಿ ಹೇಳಲು ಆದೇಶಿಸಿದೆ ಎಂದು ಕೇಳಿಸಿಕೊಳ್ಳಲು ನನಗಿಷ್ಟವಿರಲಿಲ್ಲ.

ಅದೃಷ್ಟವಶಾತ್ ಈ ಮೂರ್ಖ ವಿಷಯಗಳನ್ನು ಕುರಿತು ಟೀಕೆ ಮಾಡಲು ನನಗೆ ಬಿಡುವಿರಲಿಲ್ಲ. ಈ ದಿನಗಳಲ್ಲಿ ನಾನು ನನ್ನ ಕೆಲಸದಲ್ಲಿ ಹಿಂದಿದ್ದೆ. ಅಲ್ಲದೆ ಸುಗಂಧಳ ಪ್ರಶ್ನೆಯೂ ಇತ್ತು. ಈಗ ನಿಜಕ್ಕೂ ಅವಳು ಏಕಾಂಗಿಯಾಗಿದ್ದಳು. ಅವಳ ಒಂದು ಕಾಲದ ಆಶ್ರಯದಾತೆಯಾಗಿದ್ದ ಮಹಾರಾಣಿಯು ಅವಳನ್ನು ತ್ಯಜಿಸಿದ್ದಳು. ಹಾಗೆಯೇ ಆಕೆಯ ಮಗನೂ ತ್ಯಜಿಸಿದ್ದನು. ಆತಂಕದ ಸಂಗತಿಯೆಂದರೆ ಕಿರಿಯ ಸಂತಳು ಸಂತರಿಗೆ ವಿರುದ್ಧವಾದ ರೀತಿಯಲ್ಲಿ ವಿಲಕ್ಷಣವಾಗಿ ನಡೆದುಕೊಳ್ಳುತ್ತಿದ್ದಳು. ನಾವು ಪುಷ್ಕರ ತೀರ್ಥಕ್ಕೆ ಯಾತ್ರೆ ಹೊರಟ ಸಂದರ್ಭದಲ್ಲಿ ಹಸಿರು ಗಣ್ಣಿನ ಚೆಲುವೆ ಸುಗಂಧಳನ್ನು ವೀಣೆ ನುಡಿಸಲು ಗೊತ್ತು ಮಾಡಿದಾಗ ಅವರಿಬ್ಬರ ಸಂಬಂಧದಲ್ಲಿ ವೈಮನಸ್ಯವುಂಟಾಗಿತ್ತೆಂದು ನಾನು ಕಂಡುಕೊಂಡಿದ್ದೆ. ಆದರೆ ವಿಕ್ರಮನೊಂದಿಗೆ ಸುಗಂಧಳ ಸಂಬಂಧ ಕಡಿದು ಹೋಗಿದ್ದು, ಅದರ ಪರಿಣಾಮವಾಗಿ ನನ್ನ ಅವಳ ನಡುವೆ ಸೌಹಾರ್ದಯುತ ಸಂಬಂಧ ಪುನಃಸ್ಥಾಪನೆಯಾದದ್ದು ಹಸಿರುಗಣ್ಣಿನ ಚೆಲುವೆಯಲ್ಲಿ ಸ್ವಭಾವಸಿದ್ಧ ವೈರವನ್ನು ಮತ್ತೆ ಕೆರಳಿಸಿತ್ತು. ಹಸಿರುಗಣ್ಣಿನ ಚೆಲುವೆಯು ಸುಗಂಧಳನ್ನು ಸತ್ತಂತೆ ಪರಿಗಣಿಸಿ ತೊರೆದದ್ದರಿಂದ ಅಥವಾ ಕಡೆಗಣಿಸಿದ್ದರಿಂದ, ರಾಣಿವಾಸದ ಇತರೆ ಹೆಂಗಸರು ಅವಳನ್ನೂ ಬಹಿಷ್ಕರಿಸಬೇಕೆಂದು ನಿರ್ಧರಿಸಿ ಬಿಟ್ಟಿದ್ದರು. ಕಿರಿಯ ಸಂತಳ ಅಸಂತೋಷಕ್ಕೆ ಗುರಿಯಾಗುವ ಅಪಾಯಕ್ಕೆ ಈಗ ಯಾರು ತಾನೆ ಒಳಗಾದಾರು?

ಸುಗಂಧಳಿಗೆ ಜೊತೆ ಕೊಡುವುದಕ್ಕೋಸ್ಕರವೇ ನಾನು ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗತೊಡಗಿದೆ. ನನ್ನನ್ನು ಹೋಗಗೊಡಲು ಅವಳಿಗೆ ಸ್ವಲ್ಪವೂ ಇಷ್ಟವಿರುತ್ತಿರಲಿಲ್ಲ. ವೀಣೆಯ ಎರಡನೇ ಪಾಠಕ್ಕೆ ನಾನು ಅವಳೊಂದಿಗೆ ಕುಳಿತುಕೊಳ್ಳತೊಡಗಿದೆ. ಅಂಥ ವೇಳೆಗಳಲ್ಲಿ ಅವಳ ಮುಖ ಹೊಳೆಯುತ್ತಿತ್ತು ಮತ್ತು ಕೃತಜ್ಞತೆಯಿಂದ ನನ್ನನ್ನು ತಬ್ಬಿ ಹಿಡಿಯುತ್ತಿದ್ದಳು. ಆದರೆ ಈ ಸಾಹಚರ್ಯದ ಸಂತೋಷ ಅಲ್ಪಾಯುವಾಗಿತ್ತು. ಒಂದು ದಿನ ನಾನು ಮನೆಗೆ ಬಂದಾಗ ಕಿರಿಯ ಸಂತಳು ಅಲ್ಲಿ ನನಗಾಗಿ ಕಾಯುತ್ತಿದ್ದಳು.

"ಸುಗಂಧ ಇನ್ನು ಮುಂದೆ ನಿಮಗೆ ಊಟ ಬಡಿಸುವುದಿಲ್ಲ".

"ಏಕೆ? ಅವಳಿಗೆ ಹುಷಾರಿಲ್ಲವೆ?"

"ಅವಳ ಬಗ್ಗೆ ನೀವು ಅನಗತ್ಯವಾಗಿ ತಲೆಕೆಡಿಸಿಕೊಳ್ಳುವುದು ಬೇಕಿಲ್ಲ. ಅವಳು ಎಮ್ಮೆಯಷ್ಟೇ ಗಟ್ಟಿಗಿತ್ತಿ. ಮತ್ತು ಆ ಎಮ್ಮೆಯ ಅನೇಕ ಗುಣಗಳು ಅವಳಿಗೂ ಬಂದು ಬಿಟ್ಟಿವೆ. ಅವುಗಳಲ್ಲೊಂದು ಸೋಂಬೇರಿತನ. ಅವಳ ಕುಲಗೋತ್ರದಲ್ಲಿ ನನಗೆ ಆಸಕ್ತಿಯಿಲ್ಲ. ಎಲ್ಲಿದ್ದಾಳೆ ಅವಳು?"

"ಒಂದು ಬದಲಾವಣೆಗಾಗಿ, ಒಂದು ಸ್ವಲ್ಪ ಕೆಲಸವನ್ನು ಅವಳಿಗೆ ವಹಿಸಿದ್ದೀನಿ. ಹೆಂಗಸರ ವಸತಿ ಗೃಹಗಳ ವಾರ್ಷಿಕ ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆಯನ್ನು ಮಾಡಲು ಹೇಳಿದ್ದೀನಿ".

ಅಂತಃಪುರದ ರಾಜಕೀಯದಲ್ಲಿ ತಲೆಹಾಕುವವನಲ್ಲ ನಾನು. ಹಾಗಾಗಿ ಬೇಗ ಅಲ್ಲಿಂದ ಹೊರಟೆ ಆದರೆ ಸುಗಂಧ ಮರುದಿನವೂ ಮನೆಯಲ್ಲಿರಲಿಲ್ಲ.

ಹಸಿರು ಗಣ್ಣಿನ ಚೆಲುವೆ ನನ್ನನ್ನು ಸ್ವಾಗತಿಸಲು ಅಲ್ಲಿದ್ದಳು. "ಭೋಜನಾನಂತರದ ನಿಮ್ಮ ಚಕ್ಕಂದವನ್ನು ನೀವು ತ್ಯಜಿಸಿದರೆ ಮೇವಾಡಕ್ಕೆ ಅದರಿಂದ ಅನುಕೂಲವಾಗುತ್ತೆ ಅಂತ ನಿಮಗನ್ನಿಸುವುದಿಲ್ಲವೆ ಮಹಾಸ್ವಾಮಿ?"

"ನನ್ನ ಕಛೇರಿಯ ವ್ಯವಹಾರವನ್ನು ಹೇಗೆ ನಡೆಸಬೇಕೆನ್ನುವ ವಿಷಯದಲ್ಲಿ ಅಮ್ಮನವರೆ, ನಿಮ್ಮ ಸಲಹೆ ಬೇಕಾಗಿದ್ದರೆ, ಆಗ ನಿಮ್ಮ ಸೇವೆಯನ್ನು ಬಾಡಿಗೆಗೆ ತೆಗೆದುಕೊಳ್ಳುತ್ತೇನೆ. ಸದ್ಯಕ್ಕೆ ನೀವು ಪುಕ್ಕಟೆ ಉಪದೇಶವನ್ನು ಕೊಡುವುದನ್ನು ತಡೆದುಕೊಂಡರೆ ನಿಮಗೆ ಷಹಬ್ಬಾಸ್ ಗಿರಿ ಕೊಡ್ತೀನಿ."

ಸುಗಂಧಳಿಗೆ ಹೇಳಿ ಕಳುಹಿಸು ಎಂದು ಅವಳಿಗೆ ಇನ್ನೇನು ಹೇಳಿಬಿಡಬೇಕೆಂದಿದ್ದೆ. ಅಷ್ಟರಲ್ಲಿ ಮತ್ತೆ ಯೋಚನೆ ಮಾಡಿ ಸರಿಯಾದ ಅಭಿಪ್ರಾಯಕ್ಕೆ ಬಂದೆ. ಹಾಗೆ ಮಾಡಿದ್ದರೆ ಕಿರಿಯ ಸಂತಳು ಮತ್ತು ಉಳಿದ ರಾಣಿವಾಸದವರು ಇಬ್ಬರೂ ಅವಳ ಅವಮಾನ ಮಾಡಿ, ಅವಳನ್ನು ಎಲ್ಲರಿಂದ ಪ್ರತ್ಯೇಕ ಮಾಡುತ್ತಾರೆ ಎನಿಸಿತು.

"ಕರುಣೆಯಾಗಲಿ, ಕರ್ತವ್ಯವಾಗಲಿ ಪ್ರೀತಿಗೆ ಪರ್ಯಾಯವಲ್ಲ ಎಂಬುದನ್ನು ನಾನು ತಮಗೆ ಸೂಚಿಸಲೆ ಮಹಾಸ್ವಾಮಿ?"

ನನ್ನ ಹೆಂಡತಿಯಾಗದ ಅಥವಾ ಬೇರೆ ಯಾರನ್ನೂ ಆಗಗೊಡದ ಈ ಹೆಂಗಸು ಮನಸ್ಸನ್ನು ಓದಬಲ್ಲಳೇನು?

ತಾನು ನೇರವಾದ ಚುಚ್ಚು ಮಾತನ್ನು ಸಾಧಿಸಿಬಿಟ್ಟೆನೆಂದು ಅವಳಿಗೆ ಗೊತ್ತಾಗಿತ್ತು. ಆಮೇಲೆ ತನ್ನ ಸಂತ ಮುಗುಳ್ನಗೆಯನ್ನು ನಕ್ಕಳು.

ಅಧ್ಯಾಯ 43

ಬೃಹನ್ನದ ಮತ್ತು ಅವನ ಹೆಂಡತಿ ಚಿತ್ತೂರನ್ನು ಬಿಡುವ ಹಿಂದಿನ ದಿನ ನಾವು ಅವನನ್ನು ಭೇಟಿಯಾಗಲು ಸಾಧ್ಯವೆ ಎಂದು ಕೇಳಿ ನನಗೊಂದು ಸಂದೇಶವನ್ನು ಕಳಿಸಿದನು.

"ನಾನೇ ಬರಲು ಸಾಧ್ಯವಾಗದೆ ಇರುವುದಕ್ಕೆ ಮಹಾಸ್ವಾಮಿಯವರು ಮನ್ನಿಸಬೇಕು. ಆದರೆ ತಮಗೆ ತಿಳಿದಿರುವಂತೆ ನಾನು ಮನೆ ಬಿಟ್ಟು ಕದಲುವುದು ವಿವೇಕವಲ್ಲ".

ಬೃಹನ್ನದನ ವಿಷಯಕ್ಕೆ ನಾನು ಸ್ವಲ್ಪವೂ ತವಕಗೊಳ್ಳಲಿಲ್ಲ. ಕಾರಣ ಆ ಅಹಿತಕರ ಅಧ್ಯಾಯ ಮುಗಿದು ಹೋದದ್ದು ಎಂದು ನಾನು ಭಾವಿಸಿದೆ. ಅದನ್ನು ನೆನಪಿಸಿಕೊಳ್ಳುವುದೇ ಜುಗುಪ್ಸೆ ಉಂಟು ಮಾಡುವಂಥದ್ದಾಗಿತ್ತು. ನಿರೀಕ್ಷಿಸಿದಂತೆಯೇ ಮಹಾಪ್ರಭುಗಳು ತಮ್ಮ ಅಚ್ಚುಮೆಚ್ಚಿನ ಪುತ್ರನ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

"ಸ್ವಲ್ಪ ಸಮಯದ ಹಿಂದೆ ತಾವು ಹೇಳಿದ್ದರ ಬಗ್ಗೆ ನಾನು ಯೋಚಿಸುತ್ತಾ ಇದ್ದೆ ಮಹಾಸ್ವಾಮಿ. ಮಹಾಭಾರತದಲ್ಲಿ ಅತ್ಯಂತ ಗೌರವಾನ್ವಿತವಾದ ವ್ಯಕ್ತಿ ಧರ್ಮವನ್ನು ಬೆಂಬಲಿಸಿದ್ದರೆ ಏನಾಗುತ್ತಿತ್ತು?"

"ಆ ಜಿಜ್ಞಾಸೆಯ ವಿಷಯವನ್ನು ಚರ್ಚಿಸಲು ನಮಗೆ ಇನ್ನಷ್ಟು ಅನುಕೂಲವಾದ ಸಮಯ ಬೇಕಾಗುತ್ತೆ ಎನ್ನುವುದು ನನ್ನ ಆತಂಕ ಬೃಹನ್ನದ. ನೀನು ನಾಳೆ ಇಲ್ಲಿಂದ ಹೊರಡುತ್ತಿರುವುದರಿಂದ, ನಿನಗೇ ತಿಳಿದಂತೆ ಆ ಸಮಯ ನಮಗೆ ಸಿಗುವುದಿಲ್ಲ".

"ಮೇವಾಡದ ಸಾರ್ವಭೌಮ ಅಧಿಕಾರವನ್ನು ಅಸ್ಥಿರಗೊಳಿಸುವ ಸಂಚನ್ನು ತಾವು ಜಿಜ್ಞಾಸೆಯ ವಿಷಯವೆನ್ನುತ್ತೀರಾ?"

ನಪುಂಸಕನ ಉಸಿರಾಟ ತುಂಬ ಪ್ರಯಾಸಕರವಾಗಿ ಹಾಗು ದಮ್ಮಿನ ಎಳೆತದಿಂದ ಕೂಡಿದ್ದಿರಬೇಕು. ಆದರೆ ಬಹುಶಃ ಅದೇ ಅವನ ಮಾತುಗಳನ್ನು ಹೆಚ್ಚು ಪರಿಣಾಮಕಾರಿಯಾಗಿಯೂ ಮಾಡಲು ಕಾರಣವಾಗಿರಬೇಕು. ನನ್ನದು ಭಾವ ರಹಿತ ಮುಖವಾಗಿತ್ತು ಆದರೆ ನಾನು ಕೇವಲ ತೋರ್ಪಡಿಕೆಗೆ ಈ ರೀತಿಯ ಕೆಟ್ಟದಾದ ಮುಖ ಭಾವನ್ನಿಟ್ಟು ಕೊಂಡಿದ್ದೇನೆ; ಆದರೆ ವಾಸ್ತವವಾಗಿ ಆ ಗಳಿಗೆಯಲ್ಲೇ ಅತ್ಯಂತ ಜಾಗರೂಕನಾಗಿಯೂ ಪೂರ್ಣ ಲಕ್ಷ್ಯದಿಂದ ಕೂಡಿರುವುದಾಗಿಯೂ ಇದ್ದೇನೆಂದು ನನಗೆ ಖಾತರಿಯಾಗಿತ್ತು.

"ಮಹಾಸ್ವಾಮಿ ನನ್ನ ಸಾಕ್ಷ್ಯವನ್ನು ತಾವು ದಾಖಲು ಮಾಡುವಿರಾ ಅಥವಾ ಮಹಾಪ್ರಭುಗಳು ನಮ್ಮ ನಾಡಿನಲ್ಲಿ ಅತ್ಯುನ್ನತವಾದ ನ್ಯಾಯ ಪೀಠವನ್ನು ಸ್ಥಾಪಿಸಲೆಂದು ಸೂಚಿಸುವಿರಾ?"

"ಒಂದು ವೇಳೆ ದೇಶದ್ರೋಹದ ವಿಷಯದ ಬಗ್ಗೆ ನಾವು ಮಾತನಾಡುತ್ತಿದ್ದರೆ, ನಿನಗೆ ಗೊತ್ತಿರುವ ಹಾಗೆ ನಾನು ಮೊದಲು ಮಹಾಪ್ರಭುಗಳಿಗೆ ತಿಳಿಸಲೇ ಬೇಕಾಗುತ್ತದೆ. ನಾನು ಅದನ್ನು ಮಾಡುವ ಮೊದಲು, ನೀನು ಅದನ್ನು ಪುನರ್ ಪರಿಶೀಲಿಸುವಂತೆ ಕೇಳುವುದು ನನ್ನ ಕರ್ತವ್ಯ. ಕಾರಣ ನೀನೊಂದು ವೇಳೆ, ಸಂಚಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ, ರಾಜ್ಯದ ಪರವಾಗಿ ಸಾಕ್ಷಿಯನ್ನಾಗಿ ಬದಲಾಯಿಸುವುದರಿಂದ, ನಿನ್ನನ್ನು ರಕ್ಷಿಸಬೇಕೆಂದೇನಿಲ್ಲ ಅಥವಾ ನಿನಗೆ ವಿನಾಯಿತಿಯೂ ಸಿಕ್ಕುವುದಿಲ್ಲ".

"ನಿಮ್ಮ ಎಚ್ಚರಿಕೆಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ ಮಹಾಸ್ವಾಮಿ. ಆದರೆ, ಸಾಕಷ್ಟು ಯೋಚನೆ ಮಾಡದೆ, ಹಿಂತಿರುಗಲು ಸಾಧ್ಯವೇ ಇಲ್ಲದಂಥ ಹೆಜ್ಜೆಯನ್ನು ನಾನಿಡುತ್ತೇನೆ ಎಂದು ತಾವು ನಿಜವಾಗಿಯೂ ನಂಬುವಿರಾ ಮಹಾಸ್ವಾಮಿ?"

ವಿಲಕ್ಷಣವಾದ ರೀತಿಯಲ್ಲಿ ನನ್ನನ್ನು ಮಣಿಸಿರುವುದನ್ನು ಕಂಡುಕೊಂಡೆನು. "ಇಲ್ಲ ಬೃಹನ್ನದ. ಯಾರಿಗೂ ಬದುಕಲು ಎರಡನೇ ಅವಕಾಶ ಸಿಕ್ಕುವುದಿಲ್ಲ. ಈಗ ನೀನು ಮೂರನೇ ಬಾರಿಗೆ ಅದೃಷ್ಟವನ್ನು ಪ್ರಲೋಭನೆಗೆ ಒಳಪಡಿಸುತ್ತಿದ್ದೀ. ನಿನ್ನ ಹೆಂಡತಿ ಊರ್ವಶಿ ಮತ್ತು ನಿನ್ನ ಹುಟ್ಟಲಿರುವ ಮಗುವಿನ ಗತಿ ಏನಾದೀತು?"

"ನಾನು ತಮ್ಮನ್ನು ಕ್ಷಿಪ್ರವಾಗಿ ಕೆಲವೊಂದು ವೈರುಧ್ಯ ಪೂರ್ಣ ಪ್ರಸ್ತಾವಗಳ ಮೂಲಕ ಕರೆದೊಯ್ಯುವೆ. ಆದರೆ ಅದೇನಿದ್ದರೂ, ನನ್ನ ಬದುಕಿನ ಈ ಹಂತದಲ್ಲಿಯ ನನ್ನ ಮನಸ್ಸಿನ ತರ್ಕ. ಹಾಗೆಂದೇ ನಾನು ನನ್ನ ತೀರ್ಮಾನಕ್ಕೆ ಬಂದಿದ್ದೇನೆ. ಈಗ ನಾನು ಮೊದಲಿಗೆ ನನ್ನ ಬದುಕಿನ ದಾರಿಯನ್ನು ಹೇಗೆ ಪ್ರಾರಂಭಿಸಿದೆನೋ ಅದಾಗಿದ್ದೇನೆ. ಅರ್ಥಾತ್ ಹಿಜಡಾ, ಊರ್ವಶಿಯು ಕರುಣಾಳುವೂ, ಸೌಮ್ಯಳೂ ಆದ ಹೆಣ್ಣು. ಕಾಲ ಸರಿಂದತೆ, ಅವಳೂ ಕೂಡ ತನಗೆ ಸುಖ ಕೊಡಲಾಗದ ಗಂಡನೆಂದರೆ ಬೇಸರಗೊಳ್ಳುವಳು". ಬೃಹನ್ನದನು ಸ್ವಲ್ಪ ಬಿಸಿ ನೀರು ಕುಡಿಯುವ ಸಲುವಾಗಿ ಮಾತಾಡುವುದನ್ನು ನಿಲ್ಲಿಸಿದನು. ಅವನ ಗಂಟಲಿನ ಮತ್ತು ಎದೆಯ ಕಫದ ಬಿಗಿತ ಸ್ವಲ್ಪ ಸಡಿಲಗೊಂಡ ಮೇಲೆ, ಅವನು ಮುಂದುವರಿಸಿದನು. "ನಾನು ಇನ್ನೊಬ್ಬರ ಕನಿಕರಕ್ಕೆ ಭಾಜನನಾಗುವ ವಿಚಾರದಲ್ಲಿ ನನಗೆ ಅಂಥ ಒಳ್ಳೆಯ ನೈಪುಣ್ಯವಿಲ್ಲ ಮಹಾಸ್ವಾಮಿ. ಆದರೆ ನಿಜ ಹೇಳಬೇಕೆಂದರೆ, ನನ್ನನ್ನು ಕೊಲ್ಲುವುದೇನಿದ್ದರೂ ನನ್ನ ಬದುಕು ಏನಾಗಿದೆಯೋ ಅದನ್ನು ಕುರಿತಾದ ನನ್ನದೇ ಆದ ಕಹಿ ಭಾವನೆ".

"ಇದನ್ನು ನಂಬಲು ತಮಗೆ ಕಷ್ಟವಾಗಬಹುದು. ಆದರೆ ನನ್ನಲ್ಲಿ ಪ್ರತೀಕಾರ ಭಾವವಿಲ್ಲ. ನನ್ನ ಅದೃಷ್ಟ ಮತ್ತು ನನ್ನ ಶಕ್ತಿಯ ಮೂಲ ಇರುವುದು ನನ್ನ ಸ್ವಾಮಿ ನಿಷ್ಠೆಯಲ್ಲಿ. ಅದಕ್ಕೆ ಎದುರಾಗಲು ನನಗೆಷ್ಟೇ ಇಚ್ಚೆಯಿಲ್ಲದಿದ್ದರೂ. ತಾವು ನನ್ನ ಸ್ವಾಮಿ ನಿಷ್ಠೆಯ ಕಲ್ಪನೆಗೇ ಸವಾಲೊಡ್ಡಿದ್ದೀರಿ. ಈಗಲೂ ನನ್ನ ಬದುಕನ್ನು ಸಾರ್ಥಕವಾಗಿ ಮಾಡಿಕೊಳ್ಳಬಲ್ಲೆನೆ ಎಂಬುದನ್ನು ನಾನು ಕಂಡುಕೊಳ್ಳಬೇಕಿದೆ".

ನಪುಂಸಕನ ದೇಹ ನನಗೆ ಯಾವಾಗಲೂ ಹೇವರಿಕೆಯನ್ನುಂಟು ಮಾಡುವಂಥದು. ಆದರೂ ಬೃಹನ್ನದನ ಹೆಗಲ ಮೇಲೆ ನನ್ನ ಕೈ ಹೋಯಿತು. ಹೇಳಿದೆ "ನೀನೊಬ್ಬ ಕೆಚ್ಚುಳ್ಳ ಮನುಷ್ಯ ಬೃಹನ್ನದ".

ಈ ಸಂದರ್ಭದ ಎಲ್ಲ ಸ್ವತಃಸಿದ್ಧವಾದ ವ್ಯಂಗ್ಯಗಳ ಮಹತ್ವ ತಡೆಯಲಾಗದಷ್ಟಾಗಿತ್ತು. ಮೊಗಲ್ ಬಾದಷಹ ಬಾಬರನ ಮೇಲಿನ ವಿಜಯವೊಂದನ್ನು ಹೊರತು ಪಡಿಸಿ, ವಿಕ್ರಮನ ಭವಿಷ್ಯವನ್ನು ಕಾಯುವ ರಾಣಿ ಕರ್ಮವತಿಯ ಜಟಿಲ ಯೋಜನೆಗಳನ್ನು ರೂಪಿಸಿದವನೆಂದು,

ಯಾರನ್ನು ನಾನು ಮತ್ತು ಮಂಗಳ ಸಂದೇಹಿಸಿದ್ದೆವೋ ಅಂಥ ವ್ಯಕ್ತಿಯೊಬ್ಬನ ತಪ್ಪೊಪ್ಪಿಗೆಗಿಂತ ಮಿಗಿಲಾದ ವರವನ್ನು ನಮ್ಮ ಮನೆದೇವರಾದ ಏಕಲಿಂಗಜೀಯಿಂದ ನಾನು ಬಯಸಿದ್ದಿರಲಾರೆ. ಇಷ್ಟಾದರೂ, ಬೃಹನ್ನದನ ನಂಬಿಕೆ ಮತ್ತು ಸ್ವಾಮಿನಿಷ್ಠೆ ನಾಶವಾದ ಬಗ್ಗೆ, ವಿನಾಶಕಾರಕ ಎಂದು ಹೇಳಲಾಗಿದ್ದರೂ, ಏನೋ ಒಂದು ರೀತಿಯ ಮನಕಲಕುವಂಥದಿತ್ತು. ಅದರೊಂದಿಗೆ ರಾಜಿ ಮಾಡಿಕೊಳ್ಳುವುದು ನನಗೆ ಯಾವಾಗಲೂ ಕಷ್ಟವಾಗುತ್ತಿತ್ತು. ಒಂದು ವೇಳೆ ರಾಣಿ ಮತ್ತು ಆಕೆಯ ಮಗ ಇಬ್ಬರೂ ತಮ್ಮ ಸೇವಕನನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಂಡು ನಂಬಿದ್ದರೆ ಮಾತ್ರ, ಅವರ ಬಗೆಗಿನ ತನ್ನ ನಿಷ್ಠೆಯನ್ನು ಪುನರ್ ಪರಿಶೀಲಿಸಬೇಕೆಂದು ಅವನಿಗೆಂದೂ ಅನ್ನಿಸುತ್ತಿರಲಿಲ್ಲ; ಆ ಹಿಜಡಾನನ್ನು ನನ್ನ ತಮ್ಮನು ಕೊಚ್ಚಿ ಹಾಕಲು ಪ್ರಯತ್ನಿಸಿದ ನಂತರವೂ ಅವನಿಗೆಂದೂ ಹಾಗನ್ನಿಸುತ್ತಿರಲಿಲ್ಲ.

ಸಂಗತಿಗಳನ್ನು ಅವುಗಳ ಪಾಡಿಗೆ ಅವನ್ನು ಯಾವಾಗ ಬಿಟ್ಟು ಬಿಡಬೇಕೆಂದು ನಮ್ಮಲ್ಲಿ ಎಷ್ಟು ಜನರಿಗೆ ಎಷ್ಟರ ಮಟ್ಟಿಗೆ ಗೊತ್ತು?

* * *

ನನ್ನ ಜೊತೆಯ ನ್ಯಾಯಮೂರ್ತಿಗಳು ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳುವುದನ್ನು ನಾನು ಕುತೂಹಲಭರಿತ ನಿರ್ಲಿಪ್ತತೆಯಿಂದ ಗಮನಿಸಿದೆ. ನಾನೊಂದು ವೇಳೆ ಹಾಸ್ಯದ ಮನೋಧರ್ಮದಲ್ಲಿದ್ದರೆ ಅದೇ ಪ್ರಧಾನಿ ಪೂರಣ್‌ಮಲ್‌ಜೀ ನನ್ನ ಮಾವ ಲಕ್ಷ್ಮಣ ಸಿಂಹರು ಮತ್ತು ಅರ್ಥಮಂತ್ರಿ ಆದಿನಾಥಜೀಯವರ ಅದೇ ಮುದುಕರ ಗುಂಪು ಎಂದು ಹೇಳುತ್ತಿದ್ದೆ. ವಿಕ್ರಮಾದಿತ್ಯನ ದ್ರೋಹದ ವಿಚಾರಣೆಯ ಸಲುವಾಗಿ ನಾವೆಲ್ಲ ಒಟ್ಟು ಸೇರಿ ಆಗಲೇ ಎಷ್ಟೊಂದು ವರ್ಷಗಳು ಆಗಿ ಹೋಗಿದ್ದುವು ಎನ್ನುವುದು ನನಗೆ ಮರೆತು ಹೋಗಿತ್ತು. ಚಿಕ್ಕ ವಯಸ್ಸಿನಲ್ಲೇ ಬೊಕ್ಕ ತಲೆಯವರಾಗಿ ಬಿಡುವ ಬಹಳಷ್ಟು ಜನರಂತೆ ಲಕ್ಷ್ಮಣ ಸಿಂಹಜೀಯವರ ತಲೆಯ ಪಾರ್ಶ್ವಗಳಲ್ಲಿ ಕೂದಲು ಉದ್ದವಾಗಿ ಬೆಳೆದುಕೊಂಡಿತ್ತು. ಅದರಿಂದ ಅವರು ತಮ್ಮ ನೆತ್ತಿಯನ್ನು ಮುಚ್ಚಿಕೊಳ್ಳುವ ಯತ್ನ ಮಾಡಬಹುದಾಗಿತ್ತು. ಆದರೆ ಅವರ ಕಿವಿಗಳ ಮೇಲಿನ ಭಾಗದಲ್ಲಿ ಅದೆಷ್ಟು ಕಡಿಮೆ ಕೂದಲು ಉಳಿದಿತ್ತು ಅಂದರೆ ಅದು ಬೆಕ್ಕಿನ ಮೀಸೆಯ ಹಾಗೆ ಅಂಟಿಕೊಂಡಿತ್ತು. ಪೂರಣ್ ಮಲ್‌ಜೀಯವರು ಕೃಶರಾಗಿದ್ದರು ಹಾಗೂ ಅವರ ಎರಡೂ ಕಣ್ಣುಗಳಿಗೆ ಪರೆ ಬಂದಿತ್ತು. ಲೀಲಾವತಿಯ ಮುತ್ತಾತನ ಮೈ ಮೇಲೆ ಒಂದೇ ಒಂದು ಸುಕ್ಕು ಕೂಡ ಬಂದಿರಲಿಲ್ಲ. ಆದರೆ ಚರ್ಮದ ಕಾಂತಿ ಹೋಗಿ ಬಿಟ್ಟಿತ್ತು. ಅಲ್ಲದೆ ಆದಿನಾಥಜೀಯವರ ಓಡಾಟ ತೀರಾ ಮಂದಗತಿಯದಾಗಿ ಬಿಟ್ಟಿತ್ತು ಮತ್ತು ಅದರಲ್ಲಿ ಸ್ತಿಮಿತತೆ ಇರಲಿಲ್ಲ. ಬೇರೆಯವರಿಗೆ ವಯಸ್ಸಾಗುತ್ತಿರುವುದು ನಮ್ಮ ಕಣ್ಣಿಗೆ ಕಾಣುತ್ತದೆ, ಅದೇ ನಮಗೆ ಯಾವತ್ತೂ ವಯಸ್ಸಾಗುವುದೇ ಇಲ್ಲ ಎಂದು ಆಗ ನನಗೆ ಹೊಳೆಯಿತು. ತಮ್ಮ ಸಮಕಾಲೀನರನ್ನು ಕುರಿತು ಹೇಳುವಾಗ ಹಿರಿಯರು 'ಆ ಮುದುಕ' ಎಂದು ಹೇಳುವುದನ್ನು ನೀವು ಯಾವಾಗಲೂ ಕಾಣುತ್ತೀರಿ. ಆದರೆ ತಾವೇ ತೊಂಬತ್ತರ ಹತ್ತಿರ ಹತ್ತಿರ ಬಂದಿರುವುದನ್ನು ಅವರು ಮರೆತಿರುತ್ತಾರೆ.

ನ್ಯಾಯಪೀಠದಲ್ಲಿರುವ ಇತರೆ ಮೂರು ಜನರ ಕಣ್ಣಿಗೆ ನಾನು ಹೇಗೆ ಕಾಣುತ್ತೇನೆ? ವಯಸ್ಸಾಗಿ ನವೆದು ಹೋಗಿರುವ ಆದರೆ, ಹಣೆಯ ಮೇಲೆ ವಿವೇಕದ ಒಂದಾದರೂ ಗೆರೆ ಇಲ್ಲದಿರುವ ವ್ಯಕ್ತಿಯಾಗಿಯೆ? ಅವರ ಪಾಲಿಗೆ ನಾನೊಬ್ಬ ಅಧಿಕೃತ ನ್ಯಾಯಾಲಯದ ನಿಷ್ಠೆಯಿಲ್ಲದ ಸತಿಯ ಗಂಡನಾಗಿ ಕಾಣುತ್ತೇನೆಯೆ? ಬೇರೆ ಯಾರಾದರೂ ಜೊತೆಯಲ್ಲಿ

ಅವಳು ಮಲಗಿದ್ದಿರಬೇಕು ಎಂಬ ಷರತ್ತನ್ನು ವಿಧಿಸಿಯೇ ಹೊಸ ಹೆಂಡತಿಯನ್ನು ಸ್ವೀಕರಿಸುವ ರಾಜಕುಮಾರನೆಂದೆ?

ಆ ವಿಷಯಕ್ಕೆ ತಂದೆಯವರು ನನ್ನನ್ನು ಹೇಗೆ ಕಾಣುತ್ತಾರೆ? ಕೆಟ್ಟ ಸುದ್ದಿಗಳ ಹರಿಕಾರನೆಂದೆ ಅಥವಾ ನಾನೇ ಒಂದು ಕೆಟ್ಟ ಸುದ್ದಿಯೆಂದೆ? ನಿನ್ನೆಯ ದಿನ ಅವರು, ಒಂದೂ ಮಾತಾಡದೆ ತಮ್ಮ ಕಛೇರಿಯಲ್ಲಿ ಅತಿ ದೀರ್ಘಕಾಲ ಕುಳಿತಿದ್ದರು. ಅವರು ಶತಪಥ ತಿರುಗುತ್ತ, ಬಿಗಿಯಾಗಿ ಕಣ್ಣುಗಳನ್ನು ಮುಚ್ಚಿಕೊಂಡು, ಇನ್ನೆಂದೂ ನಿನ್ನ ಹಾಳು ಮುಖ ತೋರಿಸಿ ಬೇಡ ಇಲ್ಲಿಂದ ತೊಲಗಿ ಹೋಗು ಎಂದು ಹೇಳ ಬೇಕೆಂದಿದ್ದರೆಂದು ನನಗೆ ಗೊತ್ತಿತ್ತು. ಆದರೆ ಅವರು ನಿರ್ಣಾಯಕತೆಯಲ್ಲಿ ದೊರೆಗಳು. ಅವರದೇ ಅಧಿಕಾರದ ತೀರ್ಮಾನದಲ್ಲಿ ಅವರು ಸಿಕ್ಕಿಕೊಂಡು ಬಿಟ್ಟಿದ್ದರು.

"ಯಾವುದೇ ಶಿಕ್ಷೆಗೆ ಸಿಕ್ಕಿಕೊಳ್ಳದ ಹಾಗೆ ತಪ್ಪಿಸಿಕೊಂಡು ಹೋಗಿ ಬಿಡುವ ಹಿಜಡಾನ ಹಂಚಿಕೆ ಇದಲ್ಲವೆಂದು ನಿನಗೆ ಹೇಗೆ ಗೊತ್ತು?"

"ಬೃಹನ್ನದನು ಸ್ವತಂತ್ರ ವ್ಯಕ್ತಿ ಮಹಾಪ್ರಭು, ತಾವು ಅವನನ್ನು ಕ್ಷಮಿಸಿ, ಮುಕ್ತಗೊಳಿಸಿ ಬಿಟ್ಟಿದ್ದೀರಿ"

"ಅವನಿಗೆ ಮುಯ್ಯಿ ತೀರಿಸಿಕೊಳ್ಳಬೇಕಾಗಿದೆ, ಅದೇ ಇರೋದು. ಅವನು ವಾಪಸ್ ಹೋಗಬೇಕಾಗಿದೆ. ಅದಕ್ಕೇನೂ ಅರ್ಥವಿಲ್ಲ. ಕಾರಣ ಆ ಪ್ರಕ್ರಿಯೆಯಲ್ಲಿ ಅವನು ತನ್ನ ತಲೆಯನ್ನು ನೀಗಿಕೊಳ್ಳುತ್ತಾನೆ".

"ಇಲ್ಲ ಅದಕ್ಕೆ ಅರ್ಥವಿದೆ ಮಹಾಪ್ರಭು. ಹಿಜಡಾನು ತನ್ನ ಹಿಂದಿನ ಯಜಮಾನರುಗಳನ್ನು, ಎಷ್ಟು ದ್ವೇಷಿಸುತ್ತಿದ್ದನೆಂದರೆ, ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ ಅವರನ್ನು ಕೊಲ್ಲಬೇಕೆಂದಿದ್ದಾನೆ ಎಂಬ ಆಲೋಚನೆ ನನಗೆ ಬಂದಿತ್ತು. ಆದರೆ ತಾನು ಹೇಳುವ ಪ್ರತಿಯೊಂದಕ್ಕೂ ಸಾಕ್ಷ್ಯವನ್ನು ಒದಗಿಸಬೇಕಾಗುತ್ತದೆ. ನ್ಯಾಯಾಲಯವು ಅವನ ಎಲ್ಲಾ ಆಪಾದನೆಗಳನ್ನೂ ಸತ್ಯವೆ ಎಂದು ಪರೀಕ್ಷಿಸಿ ನೋಡುತ್ತದೆ"

"ಸ್ಥಳವನ್ನು ನೀವು ಗೊತ್ತು ಪಡಿಸಿದ್ದೀರಾ?"

"ಇನ್ನೂ ಇಲ್ಲ. ತಮ್ಮ ನೇತೃತ್ವದಲ್ಲಿ ರಚನೆಯಾಗಲಿರುವ ನ್ಯಾಯಪೀಠದಲ್ಲಿ ಸೇರ್ಪಡೆಯಾಗಲಿರುವ ನ್ಯಾಯ ಮೂರ್ತಿಗಳ ನೇಮಕಾತಿಯನ್ನು ತಾವು ಮಾಡಿದ ಮೇಲೆಯೇ ಸ್ಥಳವನ್ನು ಆಯ್ಕೆ ಮಾಡಲು ಮಂಗಳನು ಇಚ್ಛಿಸುತ್ತಾನೆ".

"ಒಳ್ಳೆಯ ಕಾರ್ಯವನ್ನು ಯಾವತ್ತೂ ತಡ ಮಾಡಬಾರದು. ಆದರೆ ಅಹಿತಕರವಾದವನ್ನು ಇನ್ನೂ ಬೇಗ ಮಾಡಿ ಬಿಡಬೇಕು. ನಾಳೆಯೇ ನಡೆವಳಿಗಳೆಲ್ಲಾ ಪ್ರಾರಂಭವಾಗುತ್ತವೆ. ರಾಜಕುಮಾರ ವಿಕ್ರಮಾದಿತ್ಯನ ವಿರುದ್ಧವಾದ ಬಲೇಚ್ ಅವರ ಆಪಾದನೆಗಳನ್ನು ಆಲಿಸಿದ ಅದೇ ನ್ಯಾಯಾಲಯದ ಮುಖ್ಯ ನ್ಯಾಯ ಮೂರ್ತಿಯಾಗಿ ನೀನಿರುವೆ"

"ನಾನೇ?" ನಂಬದವನಂತೆ ನಾನು ಕೇಳಿದೆ? "ಮಹಾಪ್ರಭುಗಳು ಮೇವಾಡದ ಮುಖ್ಯ ನ್ಯಾಯಮೂರ್ತಿಗಳು. ಇದು ತಾವು ಮಾತ್ರವೇ ತೀರ್ಮಾನ ಮಾಡಬೇಕಾದಂಥ ವಿಷಯ".

"ಏನೋ ಒಂದು ಸ್ವಲ್ಪ ಮುಜುಗರ ಪಡುತ್ತಿರುವ ಹಾಗಿದೆಯಲ್ಲವೆ ರಾಜಕುಮಾರ? ಸಿಂಹಾಸನವನ್ನೇರುವ ಬಯಕೆ ನಿನಗಿರುವುದರಿಂದ ಸಾಕ್ಷಿಗಳನ್ನು ತೂಗಿ ನೋಡುವಲ್ಲಿ ನೀನು ಎರಡರಷ್ಟು ಎಚ್ಚರಿಕೆಯಿಂದಿರಬೇಕಾಗುತ್ತೆ ಎಂದು ನನಗೆ ಖಂಡಿತಾ ಗೊತ್ತಿದೆ"

“ಈ ಪ್ರಕರಣದ ಕವಲುಗಳು, ಕೇವಲ ಮೇವಾಡಕ್ಕೆಷ್ಟೇ ಸೀಮಿತಗೊಳ್ಳದೆ ರಾಜ್ಯಗಳ ಮೈತ್ರಿಕೂಟಕ್ಕೆಲ್ಲಾ ವ್ಯಾಪಿಸಿದರೆ ಹೇಗೆ ಅಂತ?”

ತಂದೆಯವರು ತನ್ನ ಸರಿಯಾಗಿರುವ ಕಣ್ಣನ್ನು ನನ್ನ ಕಡೆ ತಿರುಗಿಸಿದರು. ಅಲ್ಲಿ ಜುಗುಪ್ಸೆಯಿತ್ತೋ ಭಯದ ನಿಶ್ಚಯವಿತ್ತೋ ನನಗೆ ಖಾತರಿ ಇರಲಿಲ್ಲ. ನಾನು ತುಂಬಾ ಮುಂದೆ ಹೋಗಿಬಿಟ್ಟಿದ್ದೇನೆಂದು ಆಗ ಅರ್ಥವಾಯಿತು.

“ಹಾಗೆ ಯೋಚನೆ ಮಾಡಲು ಏನು ಕಾರಣ?”

“ಬೃಹನ್ನದನು ಮಹತ್ವಾಕಾಂಕ್ಷಿಯಾದ ಆದರೆ ಎಚ್ಚರಿಕೆಯುಳ್ಳ ವ್ಯಕ್ತಿ ಮಹಾಪ್ರಭು. ಅವನು ಅಷ್ಟೊಂದು ಹಗುರವಾಗಿ ತನ್ನ ಖ್ಯಾತಿ ಮತ್ತು ಜೀವ ಎರಡನ್ನೂ ಪಣಕ್ಕೊಡ್ಡಲಾರ.”

“ಸತ್ಯ ಏನೇ ಆಗಿರಲಿ, ನಾನು ನಿನ್ನೊಂದಿಗೆ ಇರುವೆ ರಾಜಕುಮಾರ. ನಿನಗೆ ಅಗತ್ಯ ಬಿದ್ದಾಗ, ನನ್ನ ಜೊತೆ ಸಮಾಲೋಚನೆ ಮಾಡು”. ತಂದೆಯವರ ಧ್ವನಿಯಲ್ಲೊಂದು ನಿರುತ್ಸಾಹವಿತ್ತು. ಅವರೊಳಗಿನ ಭೂತಗಳೊಂದಿಗೆ ಅವರು ತಾತ್ಕಾಲಿಕವಾಗಿ ಸಂಧಿ ಮಾಡಿಕೊಂಡಿದ್ದಾರೆಂಬುದನ್ನು ಅದು ಧ್ವನಿಸುತ್ತಿತ್ತು.

ಹಿಂದಿನ ರಾತ್ರಿ, ಮಂಗಳನು ಹಿಜಡಾನನ್ನು ಯಾವ ಸುರಕ್ಷಿತವಾದ ಸ್ಥಳದಲ್ಲಿರಿಸಿದ್ದನೆಂಬುದರ ಕಲ್ಪನೆ ನನಗಿರಲಿಲ್ಲ. ಆದರೆ, ಮಂಗಳನ ಕಡೆಯ ನಾಲ್ವರೊಂದಿಗೆ, ಅತಿಥಿ. ಅರಮನೆಯ ಖಾಸಗಿ ದರ್ಬಾರ್. ಕೊಠಡಿಯನ್ನು ಅವನು ಪ್ರವೇಶಿಸುತ್ತಿದ್ದುದನ್ನು ಕಂಡು ನನಗೆ ನಿರಾಳವೆನಿಸಿತು. ಬೃಹನ್ನದನೂ ನನ್ನ ಹಾಗೆಯೇ ಕಳವಳದ ರಾತ್ರಿಯನ್ನು ಕಳೆದಿದ್ದನೆಂಬುದು ಸ್ಪಷ್ಟವೇ ಇತ್ತು. ಅವನ ಮುಖ ಇಳಿ ಬಿದ್ದಿತ್ತು. ತನ್ನ ಭೂತ ಕಾಲದ ದೆವ್ವಗಳನ್ನು ಸ್ತಬ್ಧಗೊಳಿಸಲು ಒದ್ದಾಡಿರುವ, ಆದರೆ ಅದರಲ್ಲಿ ಯಶಸ್ವಿಯಾಗದ ಮನುಷ್ಯನ ಮುಖದ ಮೇಲಿರುವಂಥ ಯಾತನಾಮಯ ನೋಟ ಅವನ ಮುಖದ ಮೇಲಿತ್ತು. ಹಿಂದಿನ ರಾತ್ರಿ ಉಬ್ಬಿಸ ಅವನನ್ನು ಕಾಡಿರಬೇಕೆಂಬುದರ ಏಕೈಕ ಸೂಚನೆ ಎಂದರೆ ಅವನು ಏದುಸಿರು ಬಿಡುತ್ತಿದ್ದುದು ಮತ್ತು ಆಗಾಗ್ಗೆ ತನಗೆ ತಾನೇ ಬರುತ್ತಿದ್ದ ಸೀನುಗಳು. ಮಂಗಳನು ಹಿಜಡಾನ ಪಕ್ಕದಲ್ಲೊಂದು ಬಿಸಿ ನೀರು ತುಂಬಿದ ಲೋಟ ಇಡಲು ಮರೆತಿರಲಿಲ್ಲ. ಆದರೆ ಬೃಹನ್ನದನು ಭಗವದ್ಗೀತೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿದಾಗ ಅವನ ಧ್ವನಿ ದೃಢವಾಗಿತ್ತು. ತಾನೇ ಈ ವಿಚಾರಣಾ ರಂಗದ ಕೇಂದ್ರ ಬಿಂದು ಎಂಬುದು ಅವನಿಗೆ ತಿಳಿದಿತ್ತು. ಆದರೆ ಆ ತಿಳಿವು ಅವನನ್ನು ನಾಟಕೀಯವಾಗಿಸುವುದರ ಬದಲು ನಿಶ್ಚಿಂತಗೊಳಿಸಿತ್ತು.

“ಭಗವದ್ಗೀತೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿದ್ದರಿಂದ ಸಾಕ್ಷ್ಯಕ್ಕೆ ಸುಳ್ಳಿನಿಂದ ತಡೆಯೇನೂ ಸಿಗುವುದಿಲ್ಲ” ಎಂಬ ಪ್ರಧಾನಿಗಳ ಮಾತು ನನ್ನ ಕಿವಿಗೆ ಬಿದ್ದೂ ಬೀಳದ ಹಾಗಿತ್ತು. ಅವರ ದನಿ ಪಿಸುಮಾತಿಗಿಂತ ಕ್ಷೀಣವಾಗಿತ್ತು. ಆದರೆ ಅದರಲ್ಲಿನ ಉಗ್ರತೆಯನ್ನು ತಪ್ಪಾಗಿ ತಿಳಿಯುವ ಹಾಗಿರಲೇ ಇಲ್ಲ. ಅದೇನೂ ವ್ಯರ್ಥ ಬೆದರಿಕೆಯಾಗಿರಲಿಲ್ಲ. ಆದರೆ ಅದು ಸದ್ಯದಲ್ಲೇ ಸಂಭವಿಸಲಿರುವ ಅಪಾಯದ ಮತ್ತು ವಿನಾಶದ ಮುನ್‌ಸೂಚನೆಯಾಗಿತ್ತು. “ಎಷ್ಟೇ ಅಹಿತಕರವಾದರೂ, ಸುಳ್ಳು ಸಾಕ್ಷ್ಯವೆನ್ನುವುದು ನ್ಯಾಯ ಪ್ರಕ್ರಿಯೆಯಲ್ಲಿ ಅನಿವಾರ್ಯವಾದ ಅಂಶ. ನಾವು ವಿಚಾರಣೆಯನ್ನು ನಡೆಸುತ್ತಿಲ್ಲ, ಆದರೆ ಈ ಹೊತ್ತಿನ ವಿಚಾರಣೆ. ಅವುಗಳಲ್ಲಿ ಯಾವುದಾದರೂ ಒಂದಕ್ಕೋ ಇಲ್ಲ ಹಲವಕ್ಕೋ ನಮ್ಮನ್ನೊಯ್ಯಬಹುದು. ನೀನು ನೀನಾಗಿಯೇ ಸ್ವಯಿಚ್ಛೆಯಿಂದ ಮುಂದೆ ಬಂದಿದ್ದೀ

ಹಾಗೂ ನೀನು ಅತ್ಯಂತ ಗಂಭೀರತರವಾದ ಆಪಾದನೆಗಳನ್ನು ಇನ್ನೇನು ಮಾಡಲಿದ್ದೀ ಎಂದು ನಾನು ತಿಳಿದಿದ್ದೇನೆ. ಅವುಗಳಿಂದ ಕೀರ್ತಿ ಹಾಳಾಗಬಹುದು, ಜನರ ಸ್ಥಾನಚ್ಯುತಿಯಾಗಬಹುದು. ಹಾಗೂ ತಲೆಗಳು ಬೀಳಬಹುದು. ಸಾಕ್ಷ್ಯದಲ್ಲಿ ಏನಾದರೂ ಹಸ್ತಕ್ಷೇಪ ಮಾಡುವುದಾಗಲಿ ಅಥವಾ ಸತ್ಯವನ್ನು ತಿರುಚುವುದಾಗಲಿ ಮಾಡಿದರೆ ತಾಳೆ ಮಾಡಿ ನೋಡಿದಾಗ ನಿಲ್ಲದ ಯಾವುದೇ ಹೇಳಿಕೆಗಳನ್ನು ನೀಡಿದ್ದೇ ಆದರೆ ಅದರಿಂದ ಈ ನೆಲದಲ್ಲಿ ಸಿಗಬಹುದಾದ ಅತ್ಯುಗ್ರ ಶಿಕ್ಷೆಗೆ ನಿನ್ನನ್ನು ಗುರಿಪಡಿಸಬಹುದು ಎಂಬ ಎಚ್ಚರ ನಿನಗಿರಲಿ. ನಿನ್ನ ದೇಹದ ಅಂಗಾಂಗಗಳನ್ನು ಛಿದ್ರಗೊಳಿಸಲಾಗುವುದು. ನಿನ್ನ ಕೈಕಾಲುಗಳನ್ನು ಕತ್ತರಿಸಿ ವಿಶ್ವದ ಎಂಟೂ ದಿಕ್ಕುಗಳಿಗೆ ಎಸೆದು ಬಿಡಲಾಗುವುದು, ನಿನ್ನನ್ನು ಮರಕ್ಕೆ ನೇಣು ಹಾಕಲಾಗುವುದು. ಸ್ವಂತ ಲಾಭಕ್ಕೋಸ್ಕರ ಅಥವಾ ತಮ್ಮ ಶತ್ರುಗಳ ಮೇಲೆ ಆಪಾದನೆಗಳನ್ನು ಮಾಡುವವರೆಲ್ಲರಿಗೂ ಅದೊಂದು ರೀತಿಯಲ್ಲಿ ಮುನ್ನೆಚ್ಚರಿಕೆಯಾಗಿರುತ್ತದೆ".

ಅಂತಿಮ ಆಸರೆ ಎನಿಸಿದ ನ್ಯಾಯಾಲಯದ ಯಾವುದೇ ನ್ಯಾಯಾಧೀಶರು ತಮ್ಮ ಕಾರ್ಯವನ್ನು ಹಗುರವಾಗಿ ತೆಗೆದುಕೊಳ್ಳುತ್ತಾರೆಂದು ನಾನು ನಂಬುವುದಿಲ್ಲ. ಆದರೆ ಪೂರಣ್‌ಮಲ್‌ಜೀಯವರ ಮಾತುಗಳ ಭಾರ ಬಗ್ಗುಬಡಿಯುವಂಥದಾಗಿತ್ತು. ಆ ಮಾತುಗಳ ಭಾರದಿಂದ ನಾವೆಲ್ಲ ಸ್ವಲ್ಪಮಟ್ಟಿಗೆ ಭಯಗ್ರಸ್ತರಾದೆವು ಮತ್ತು ಮಣಿದೆವು. ಬೃಹನ್ನದನ ಹೊರತು ಉಳಿದೆಲ್ಲರೂ. ಅವನು ತನ್ನ ಗಂಟಲನ್ನು ಸರಿಪಡಿಸಿಕೊಂಡು ಜೋಕೆಯಿಂದ ತೂಕವಾದ ಭಾಷೆಯಲ್ಲಿ ಮಾತನಾಡಿದನು.

"ಮಾನ್ಯ ಪ್ರಧಾನಮಂತ್ರಿಗಳ ಮಾತುಗಳನ್ನು ನಾನು ಹಗುರವಾಗಿ ತೆಗೆದುಕೊಳ್ಳುತ್ತಿಲ್ಲ. ನಾನು ಈಗ ಇನ್ನೇನು ಮಾಡಲಿರುವ ಆಪಾದನೆಗಳ ಗುರುತ್ವವನ್ನು ನಾನು ಗ್ರಹಿಸಿದ್ದೇನೆಂದು ತಮಗೆ ಹೇಳಬಯಸುತ್ತೇನೆ ನಾನು ಇಲ್ಲಿ ಆಪಾದನೆಗಳನ್ನು ಮಾಡುವವನಾಗಿ ಅಷ್ಟೇ ಅಲ್ಲ, ಪ್ರಮುಖ ಆಪಾದಿತರಲ್ಲೊಬ್ಬನಾಗಿಯೂ ಇಲ್ಲಿ ನಿಂತಿದ್ದೇನೆ."

"ಹದಿನಾಲ್ಕು ತಿಂಗಳುಗಳ ಹಿಂದೆ ನಮ್ಮ ಸಾಮ್ರಾಜ್ಯದ ವ್ಯವಹಾರಗಳ ವಿಷಯದಲ್ಲಿ ಆಳವಾಗಿ ಅತೃಪ್ತಗೊಂಡಿರುವ ಮೇವಾಡದ ಹೊರಗಿನ ಹಾಗೂ ಒಳಗಿನ ಅತ್ಯಂತ ನಂಬಿಕೆಗರ್ಹವಾದ ವ್ಯಕ್ತಿಗಳ ಒಂದು ಗುಂಪನ್ನು ಒಟ್ಟುಗೂಡಿಸಬೇಕೆಂದು ನನಗೆ ಹೇಳಲಾಯಿತು. ನನ್ನ ಹೊಣೆ ಹೊತ್ತವರು ಮಹಾಸ್ವಾಮಿಗಳಾದ ಮಹಾರಾಜ್‌ಕುಮಾರ್ ಅವರ ಹೆಚ್ಚುತ್ತಿರುವ ಅಧಿಕಾರಗಳ ಬಗ್ಗೆ ಹೆಚ್ಚು ಆತಂಕಗೊಂಡಿದ್ದರು. ಅವರ ದೃಷ್ಟಿಯಲ್ಲಿ ಮಹಾರಾಜ್‌ಕುಮಾರ್ ಎಂದರೆ ಮೇವಾಡಕ್ಕೆ ಅಗೌರವವನ್ನುಂಟು ಮಾಡಿದ ವ್ಯಕ್ತಿ. ಮಹಾಪ್ರಭು ಮಹಾರಾಣಾ ಸಂಗ ಅವರು ಮಹಾರಾಜ್‌ಕುಮಾರ್ ಅವರ ಮೇಲೆ ಹೆಚ್ಚು ಹೆಚ್ಚು ಅವಲಂಬಿಸುತ್ತಿದ್ದ ರೀತಿಯಿಂದ ಅವರು ಚಿಂತಿತರಾಗಿದ್ದರು. ಮಹಾಪ್ರಭುಗಳು ವೃದ್ಧರೂ, ಅರುಳು ಮರಳಿನವರೂ ಆಗುತ್ತಿದ್ದಾರೆಂದು ದಿಗಿಲುಗೊಂಡಿದ್ದರು ಮತ್ತು ಉತ್ತರಾಧಿಕಾರತ್ವದ ವಿಷಯದಲ್ಲಿ ಆತಂಕಗೊಂಡಿದ್ದರು. ಸಿಂಹಾಸನಕ್ಕೆ ತಮಗೆ ಬೇಕಾದವರೊಬ್ಬರನ್ನು ನೇಮಕ ಮಾಡಿ ಮೇವಾಡವನ್ನು ಮಹಾರಾಜ್‌ಕುಮಾರ್ ಅವರಿಂದ ರಕ್ಷಿಸಲು ಬಯಸುತ್ತಿದ್ದರು. ಮುಂದಿನ ಹನ್ನೊಂದು ತಿಂಗಳಲ್ಲಿ ನಾನು ವಿಪುಲವಾಗಿ ಪ್ರಯಾಣಗಳನ್ನು ಕೈಕೊಂಡು ಕೆಲವರು ಅತ್ಯಂತ ಪ್ರಬಲ ಹಾಗೂ ಅತೃಪ್ತ ಶ್ರೀಮಂತರನ್ನು ಸಾಮಂತರನ್ನು, ಮೇವಾಡದ ಮಿತ್ರ ರಾಜರನ್ನು ಭೇಟಿ ಮಾಡಿ ಒಟ್ಟಾರೆ ಹದಿನೇಳು ಜನರ ಸಮಿತಿಯನ್ನು ಸೇರಿಸಿದೆ. ಆ ಸಮಿತಿಯ ಪ್ರಧಾನ ಸಂಚಾಲಕನಾಗಿ, ಎಲ್ಲ ರೀತಿಯ ಸಂಪರ್ಕಗಳಿಗೆ ನಾನು ನಿಯಮಿಸಿದ ಒಂದು ಆಧಾರ ಭೂತ ನಿಯಮವೆಂದರೆ, ಯಾವುದೇ ಸಂದರ್ಭದಲ್ಲೂ ಯಾವುದನ್ನೂ ಬರಹದಲ್ಲಿಡಕೂಡದು ಎಂಬುದು.

ಪ್ರತಿಯೊಂದು ಅನುಕೂಲ ಸಂದರ್ಭದಲ್ಲೂ ಮಹಾಪ್ರಭುಗಳು ಹಾಗೂ ಮಹಾಸ್ವಾಮಿಯವರಾದ ಮಹಾರಾಜ್‌ಕುಮಾರ್ ಅವರ ಅಧಿಕಾರದ ಬುಡಕ್ಕೆ ಒಳಗೊಳಗೇ ನೀರು ತಿದ್ದುವುದೇ ನಮ್ಮ ಕ್ರಿಯಾ ಯೋಜನೆಯಾಗಿತ್ತು. ಆದರೆ, ದೆಹಲಿಯ ಬಾದಷಹ ಮತ್ತು ಮೇವಾಡ ಹಾಗೂ ಅದರ ಮಿತ್ರ ರಾಜ್ಯಗಳು ಪರಸ್ಪರ ಸಂಧಿಸಿ, ಯುದ್ಧದ ಫಲಿತಾಂಶ ಹೊರಬರುವವರೆಗೂ ಘಟನಾವಳಿಯ ಗತಿಯಲ್ಲಿ ಮಧ್ಯೆ ಪ್ರವೇಶಿಸಕೂಡದು ಎಂಬುದಾಗಿತ್ತು. ನಾವೊಂದು ವೇಳೆ ಸೋತರೆ, ಮಹಾಪ್ರಭುಗಳು, ಅಸಮರ್ಥರೆಂಬುದಕ್ಕೆ ನಮಗೆ ಬೇರೆ ಸಾಕ್ಷ್ಯ ಬೇಕಿಲ್ಲ, ಅವರೊಂದು ವೇಳೆ ಗೆದ್ದಿದ್ದೇ ಆದರೆ, ಆಗ ನಮ್ಮ ತಂತ್ರಗಳ ಬಗ್ಗೆ ಪುನರಾಲೋಚಿಸುವುದು".

"ಈಗ ನನ್ನನ್ನು ತಾವು ಪ್ರಶ್ನಿಸಬಹುದು."

ಬೃಹನ್ನದನ ಧ್ವನಿ ಈಗ ಕರಕರ ಎಂದು ಕರ್ಕಶ ಸದ್ದು ಮಾಡಿತು. ವಿಪರೀತವಾಗಿ ಒಂದೇ ಸಮನೆ ಕೆಮ್ಮ ತೊಡಗಿದನು. ಅವನಿಗೆ ಸ್ವಲ್ಪ ಉಸಿರಾಡಲು ಸಾಧ್ಯವಾದಾಗ, ತನ್ನ ಪಕ್ಕದಲ್ಲಿ ಲೋಟದಿಂದ ಸ್ವಲ್ಪ ಬಿಸಿ ನೀರನ್ನು ಸುರಿದುಕೊಂಡು ಕುಡಿದನು. ಮೊದಲ ಒಂದೆರಡು ಗುಟುಕುಗಳನ್ನು ಕುಡಿಯುತ್ತಿದ್ದ ಹಾಗೆಯೇ ಮಂಗಳನು, ನೀರನ್ನು ತುಂಬಿಟ್ಟಿದ್ದ ತಾಮ್ರದ ಪಾತ್ರೆಯನ್ನು ನೋಡುತ್ತಲೇ ಅದರಿಂದ ಗರಬಡಿದವನಂತೆ ಥಟ್ಟನೆ ಮೇಲೆದ್ದು 'ನೀರು ಕುಡಿಯಬೇಡ, ಕುಡಿಯ ಬೇಡ' ಎಂದು ಕಿರುಚಿದನು.

ಅದಾಗಲೇ ತೀರಾ ತಡವಾಗಿತ್ತು. ಬೃಹನ್ನದನ ಕೈಯಿಂದ ಲೋಟ ಕೆಳಗೆ ಬಿದ್ದಿತ್ತು, ಅವನಿಗೆ ಉಸಿರು ಕಟ್ಟಿತು. ಸುದೀರ್ಘವಾದ ಏಳು ಮೇಲುಸಿರುಗಳು ಬಂದವು. ಕೊನೆಯಲ್ಲಿ ಅವನ ಕಣ್ಣಿನಲ್ಲಿ ಕಾಣಿಸಿಕೊಂಡ ಬಿಳುಪು ಅವನು ಸತ್ತಿದ್ದನೆಂದು ಹೇಳಿತು.

ವಿಚಾರಣೆಯ ದಿನ, ಸರಿಯಾಗಿ ಹೇಳಬೇಕೆಂದರೆ, ಆ ರಾತ್ರಿ, ಬೃಹನ್ನದನ ಅಂತ್ಯಕ್ರಿಯೆಯನ್ನು ಮುಗಿಸಿಕೊಂಡು ಬಂದೆನು. ಆಗ, ಘಟನೆಗಳನ್ನು ಹಿಂತಿರುಗಿ ನೋಡಿದಾಗ, ನಾನು ಇನ್ನೊಂದು ಸ್ವಲ್ಪ ಹೆಚ್ಚಿನ ಆಸಕ್ತಿ ತೋರಿದ್ದರೆ ಸುಗಂಧಗಳಿಗೆ ಸಂಬಂಧಿಸಿದಂತೆ, ಸಂಗತಿಗಳು ಬೇರೆ ರೀತಿಯಲ್ಲಿ ಆಗುತ್ತಿದ್ದುವೆ ಎಂದು ನನ್ನನ್ನೇ ನಾನು ಕೇಳಿಕೊಳ್ಳ ತೊಡಗಿದೆ. ಮಹಾಪ್ರಭುಗಳಿಗೆ, ನಾವು ವಿಷಯ ತಿಳಿಸಿದಾಗ, ಬೆಳಗಿನ ಜಾವ ಮೂರೂವರೆ ದಾಟಿತ್ತು. ಬೃಹನ್ನದನ ಹೆಂಡತಿ ಊರ್ವಶಿಗೂ ತಿಳಿಸಲಾಯಿತು. ಬೃಹನ್ನದನನ್ನು ಬೀಳ್ಕೊಡುವ ವ್ಯಂಗ್ಯವೆಂಬಂತೆ, ಅವನ ಹೆಣವನ್ನು ಇರಿಸಿದ್ದ ಚಿತೆಯ ಮೇಲಿನ ಸೌದೆಯ ಮೇಲೆ ತುಪ್ಪವನ್ನು ಸುರಿದು ಚಿತೆಗೆ ಬೆಂಕಿ ಹಚ್ಚಿದೆ. ಮೃತ ಶರೀರದ ಬಳಿ ನನ್ನವೇ ಕೊನೆಯ ಮಾತುಗಳು.

"ಮಹಾಭಾರತದ ಪ್ರಕಾರ, ಭೀಷ್ಮನಿಗಿಂತ ಮಿಗಿಲಾದ ಋಜುತ್ವದ ವ್ಯಕ್ತಿ ಇನ್ನೊಬ್ಬನಿಲ್ಲ. ಬೃಹನ್ನದನ ಜೀವನದ ಅತ್ಯಂತ ಆದರ್ಶ ವ್ಯಕ್ತಿಯೆಂದರೆ ಭೀಷ್ಮ. ಭೀಷ್ಮನ ಸಹನೆ, ಆತ್ಮ ಸಂಯಮ ಮತ್ತು ಭೋಗ ನಿರಾಕರಣೆಗಳು ಪರೀಕ್ಷೆಗೊಳಪಟ್ಟಂತೆ ಬೇರೆ ಯಾರೊಬ್ಬರದೂ ಒಳಪಡಲಿಲ್ಲವೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಸ್ವಾಮಿ ನಿಷ್ಠೆಯ ವಿಷಯಕ್ಕೆ ಬಂದರೆ, ಬೃಹನ್ನದನು ಕಠಿಣ ಪರೀಕ್ಷೆಗೆ ಗುರಿಯಾದಂತೆ ಮಹಾಭಾರತದ ಮಹಾನ್ ಭೀಷ್ಮನೂ ಗುರಿಯಾಗಿದ್ದನೆ ಎಂಬ ಬಗ್ಗೆ ನನಗೆ ಸಂದೇಹವಿದೆ. ತಾನೇನೋ ವಿಶೇಷವಾದದ್ದನ್ನು, ಅತಿಮಾನುಷವಾದದ್ದನ್ನು ಮಾಡುತ್ತಿದ್ದೇನೆಂಬುದನ್ನು ಅರಿವಿಗೆ ತಂದುಕೊಳ್ಳದೆಯೇ ಅವನು ಇದರಲ್ಲಿ ಜಯಶಾಲಿಯಾಗಿ ಹೊರಬಂದನು. ಭಗವದ್ಗೀತೆಯ

ಉಪದೇಶದಲ್ಲಿ ನಂಬಿಕೆಯಿದ್ದದ್ದರಿಂದ ಅವನು ಹಾಗೆ ಮಾಡಿದನು. ಕಾರಣ ಅದು ಅವನ ಕರ್ತವ್ಯವಾಗಿತ್ತೇ ಹೊರತು ಅದಕ್ಕಿಂತ ಹೆಚ್ಚಿನದಲ್ಲ.

ಆದರೆ ಅವನ ದೊಡ್ಡತನವಿರುವುದು ಅದರಲ್ಲಲ್ಲ. ಅವನ ಧೈರ್ಯ ಮತ್ತು ಸಾಹಸಗಳು ಇದ್ದದ್ದು ಅವನ ಮನಸ್ಸು ಮತ್ತು ಆತ್ಮದ ಉತ್ಕೃಷ್ಟತೆಯಲ್ಲಿ. ಅವನಿಗೆ ವಿರಳಾತಿವಿರಳವಾದ ಸಾಮರ್ಥ್ಯವಿತ್ತು. ಅವನ ಬದುಕಿನ ಧ್ರುವತಾರೆಯಂತಿದ್ದ ತತ್ತ್ವಗಳನ್ನೆ ಅವನು ಪ್ರಶ್ನಿಸಬಲ್ಲವನಾಗಿದ್ದನು. ಆ ತತ್ತ್ವಗಳಿಗಾಗಿ ಹೆಚ್ಚು ಕಡಮೆ ಅವನು ತನ್ನ ಜೀವವನ್ನೇ ತೆರಬೇಕಾಯಿತು. ಪ್ರತೀಕಾರ, ಅಥವಾ ಹತಾಶೆ ಮತ್ತು ಭ್ರಮನಿರಸನದ ಭಾವದಿಂದ ಅಲ್ಲ, ಆದರೆ, ತಾನು ಆಚರಿಸುತ್ತಿದ್ದುದಕ್ಕಿಂತ ಹೆಚ್ಚು ಗೌರವಾನ್ವಿತವೂ, ಅರ್ಥಪೂರ್ಣವೂ ಆದ ಸ್ವಾಮಿನಿಷ್ಠೆಯ ಸಾಧ್ಯತೆಯನ್ನು ಅವನು ಗ್ರಹಿಸಿದ್ದ ಕಾರಣ ತಾನು ನಂಬಿದ ತತ್ತ್ವಗಳನ್ನು ಪ್ರಶ್ನಿಸಬಲ್ಲವನಾಗಿದ್ದನು. ನ್ಯಾಯಪೂರ್ಣವಾದ ಕಾರಣಗಳಲ್ಲಿ ಸರಿ ತಪ್ಪುಗಳಲ್ಲಿ ಸರಿಯಾದದ್ದರ ಬೆಲೆಯಲ್ಲಿದ್ದ ನಂಬಿಕೆ ಅದು ಎಂಬುದನ್ನು ತಾವುಗಳು ಅರಿತುಕೊಳ್ಳಬೇಕು.

'ಅತಿ ಬುದ್ಧಿವಂತಿಕೆ ಮಾಡಲು ಹೋಗಿ ಸೋತನು' ಎಂದು ಅವನ ಮೇಲೆ ಆರೋಪ ಮಾಡಬಹುದು. ಈಗಾಗಲೇ ಎಲ್ಲರೂ ಒಪ್ಪಿಕೊಂಡು ಬಂದಿರುವ ವಿವೇಕಕ್ಕೆ ಸವಾಲು ಹಾಕುವವನು ಸೋಲುತ್ತಾನೆ. ತನ್ನ ಹೊಸ ಪರಿಕಲ್ಪನೆಯ ಕರ್ತವ್ಯವನ್ನು ಪರೀಕ್ಷೆ ಮಾಡಿ ನೋಡಲು ಸಾಧ್ಯವಾಗುವ ಮುನ್ನವೇ ಅದು ಅವನ ಜೀವನಕ್ಕೇ ಮುಳುವಾಯಿತೆನ್ನುವುದೇ ವಿಷಾದ ಪೂರ್ಣವಾದ ಸತ್ಯ.

ಅವನು ಭೀಷ್ಮನಿಗಿಂತ ದೊಡ್ಡವನೆ? ಅದೊಂದು ಅಪ್ರಸ್ತುತ ಹಾಗೂ ಅರ್ಥರಹಿತ ಪ್ರಶ್ನೆ. ಮುಖ್ಯವಾದ ಸಂಗತಿ ಎಂದರೆ, ಅವನು ಕೇವಲ ನಮ್ಮೆಲ್ಲರನ್ನಷ್ಟೇ ಅಲ್ಲ; ಮಹಾಮಹಿಮ ಭೀಷ್ಮನನ್ನೂ, ಸ್ವಾಮಿನಿಷ್ಠೆಯ ಪರಿಕಲ್ಪನೆಯ ಬಗ್ಗೆ ಪುನರಾಲೋಚಿಸುವಂತೆ ಮಾಡಿದ್ದಾನೆನಿಸುತ್ತದೆ".

"ಆ ಮಾತನ್ನು ನಾವು ಹೇಳಲು ಸಾಧ್ಯವಿರುವಂಥ ಜನರು ಬಹಳ ಇಲ್ಲ"

ಆ ನಂತರ ನಾನು ಆ ಬೆಳಗಿನ ಕತ್ತಲೆಯಲ್ಲಿ ಭಗವದ್ಗೀತೆಯ ಶ್ಲೋಕಗಳನ್ನು ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ ಹಾಡಿದೆ. ಸಾವಿರಾರು ಸಂದರ್ಭಗಳಲ್ಲಿ ನಾನು ಕೇಳಿದ್ದ ಶ್ಲೋಕಗಳೇ ಅವು. ನಾನು ಹೆಚ್ಚು ಹೆಚ್ಚು ಕೇಳಿದಷ್ಟೂ, ಅವುಗಳ ಅರ್ಥ ಮತ್ತು ದರ್ಶನ ಹೆಚ್ಚುತ್ತಲೇ ಹೋಗಿದೆ.

ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋನಿತ್ಯಃ ಶಾಶ್ವತೋಽಯಂ ಪುರಾಣಃ
ನ ಹನ್ಯತೇ ಹನ್ಯಮಾನೇ ಶರೀರೇ ॥

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ ॥

ನೈನಂ ಛಿಂದಂತಿ ಶಸ್ತ್ರಾಣಿ
ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯತ್ಯಾಪಃ
ನ ಶೋಷಯತಿ ಮಾರುತಃ ॥

ಅಚ್ಛೇದ್ಯೋಽ ಯಮದಾಹ್ಯೋಽಯಮ್
ಅಕ್ಲೇದ್ಯೋಽ ಶೋಷ್ಯ ಏವ ಚ ।
ನಿತ್ಯಃ ಸರ್ವಗತಃ ಸ್ಥಾಣು:
ಅಚಲೋಽಯಂ ಸನಾತನಃ ॥

ಜಾತಸ್ಯ ಹಿ ಧ್ರುವೋ ಮೃತ್ಯುಃ
ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ
ನ ತ್ವಂ ಶೋಚಿತುಮರ್ಹಸೀ ॥

ನಾನು ಮನೆಗೆ ಬಂದಾಗ, ಸುಗಂಧಳು ಮೊದಲ ಮಹಡಿಯ ನಿಲುಗಡೆಯ ಕಟಾಂಜನಕ್ಕೆ ಒರಗಿ ನಿದ್ರಿಸುತ್ತಿದ್ದಳು. ಹಸಿರುಗಣ್ಣಿನ ಚೆಲುವೆ ಅವಳನ್ನು ಕೂಡಿಹಾಕಿದ್ದಾಳೋ ಹೇಗೆ ಎಂದು ನಾನು ವಿಸ್ಮಿತನಾದೆ.

ಸುಗಂಧಳು, ಕಿರಿಯ ಸಂತಳ ವಿರುದ್ಧವಾಗಿಯೇ ಆಗಲಿ, ಅಂತಃಪುರದಲ್ಲಿನ ಇನ್ಯಾರ ವಿರುದ್ಧವಾಗಿಯೇ ಆಗಲಿ ಎಂದೂ ಏನೂ ಹರಟುತ್ತಿರಲಿಲ್ಲವಾದ್ದರಿಂದ, ನನಗೆ ಅವಳ ಬಗ್ಗೆ ಆಕ್ಷೇಪಿಸಲು ಕಾರಣವೇ ಇರಲಿಲ್ಲ. ಆದರೂ ಸದ್ಯ ಇನ್ನೊಂದು ಮೌನದ ಶೀತಲ ಸಮರ ಆಗದಿರಲಿ ಎಂದು ನನಗೆ ನಾನೇ ಹೇಳಿಕೊಂಡೆ. ನಾನು ನನ್ನ ಪಾದರಕ್ಷೆಗಳನ್ನು ಕಳಚಿ ಬೆರಳುಗಳನ್ನು ಮೆಟ್ಟಿಕೊಂಡೇ ಹೋದೆ. ಆದರೂ ಅವಳು ಎಚ್ಚರಗೊಳ್ಳುವುದನ್ನು ಅದು ತಡೆಯಲಿಲ್ಲ.

ನನ್ನತ್ತ ತಿರಸ್ಕಾರದ ನೋಟ ಬೀರುತ್ತ ಮುಗುಳ್ನಕ್ಕಳು.

"ನಾನು ಗರ್ಭಿಣಿ"

ಅವಳು ನನ್ನನ್ನು ಸ್ಪರ್ಶಿಸಲು ನನ್ನತ್ತ ತನ್ನ ಕೈ ಚಾಚಿದಳು. ಅಂತ್ಯಕ್ರಿಯೆಯ ನಂತರ ನಾನ್ನಿನ್ನೂ ಸೂತಕದ ಸ್ನಾನ ಮಾಡಿರಲಿಲ್ಲವಾದ್ದರಿಂದ ನಾನು ಹಿಂದೆ ಸರಿದೆ. ನಾನು ಅವಳನ್ನು ಮುಟ್ಟಿಸಿಕೊಳ್ಳದಿರಲು ಅನಂತರ ಕಾರಣವನ್ನು ಹೇಳುವವನಿದ್ದೆ. ಅವು ಕ್ಷಮಾಯಾಚನೆಯ ಮಾತುಗಳಂತಿದ್ದುವೇನೋ. ಹಾಗಾಗಿ ಆಗಬೇಕಾದ ಹಾನಿ ಆಗಿಬಿಟ್ಟಿತ್ತು.

'ಅದು ನಿಮ್ಮ ತಮ್ಮನದು ಎಂದು ಯೋಚಿಸುತ್ತಿರುವಿರಾ?'

"ಏನದು"

"ಅದೇ ಮಗು"

"ಅದರ ಬಗ್ಗೆ ನಾನು ಯೋಚನೆ ಮಾಡಿಲ್ಲ". ನಾನು ಯೋಚಿಸಿದ್ದೆ. ಅದೊಂದು ಕ್ಷುದ್ರ ಗಮನಿಕೆ. ನನ್ನ ಬಗ್ಗೆಯಾಗಲಿ ಬೇರೆಯವರ ಬಗ್ಗೆಯಾಗಲಿ, ಒಳ್ಳೆಯದನ್ನು ಯೋಚಿಸುವ ಮುನ್ನ, ನನ್ನ ಬಗ್ಗೆಯಾಗಲಿ ಬೇರೆಯವರ ಬಗ್ಗೆಯೇ ಆಗಲಿ ನಾನು ಕೆಟ್ಟದಾಗಿಯೇ ಯೋಚಿಸ ತೊಡಗುತ್ತೇನೆ.

"ನೀವು ಯೋಚನೆ ಮಾಡಿದ್ದೀರಿ, ಅದಲ್ಲ. ನನಗೆ ಹಾಗೆ ಅನ್ನಿಸುವುದಿಲ್ಲ". ಅವಳ ಮುಖ ಮುರಿಯಿತು. ನಾನು ಅವಳ ಶುಭ ಸಮಾಚಾರದಿಂದ ಸಂತೋಷವನ್ನು ಹಿಂಡಿ ಬಿಟ್ಟಿದ್ದೆ. ಅವಳು ನನ್ನಿಂದ ಮುಖ ತಿರುವಿಕೊಂಡು ತನ್ನ ಕೊಠಡಿಯತ್ತ ನಡೆಯ ತೊಡಗಿದಳು.

"ಅಂದರೆ ನನ್ನ ಮನಸ್ಸಿನಲ್ಲಿ ಏನಿದೆ ಎನ್ನುವುದು ನನಗಿಂತ ಚೆನ್ನಾಗಿ ನಿನಗೆ ಗೊತ್ತಿದೆ ಅಂತ ನನಗೆ ನೀನು ಹೇಳುತ್ತಿದ್ದೀಯಾ?" ಮೇದಿನಿ ರಾಯ್‌ನ ಈ ಮಗಳಿಗೆ, ನಾನಾಡಿದ ಮಾತುಗಳನ್ನು ಸಂಪಡಿಸಲು ಹೋದದ್ದು ಎಷ್ಟು ಕೆಟ್ಟದಾಗಿತ್ತೆಂದರೆ ನಾನೇ ಕೆಟ್ಟದಾಗಿ ಬಿಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದಿದ್ದೆ.

"ತಾವು ಬಹಳ ಒಳ್ಳೆಯ ನಟ, ಮಹಾಸ್ವಾಮಿಯವರೇ. ಆದರೆ ಕೆಲವು ವೇಳೆ ನಟನೆ ಎದ್ದು ಕಾಣುತ್ತದೆ. ಯಾರ ಕೂಸು ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಾ ಇದೆ ಎಂಬ ಬಗ್ಗೆ ನಿಮಗೆಂದಿಗೂ ನಂಬಿಕೆ ಬರುವುದಿಲ್ಲ ಎಂದು ನನಗೆ ಗೊತ್ತು".

ನಾನು ಮತ್ತೊಮ್ಮೆ ನನ್ನ ತಂತ್ರವನ್ನು ಬದಲಾಯಿಸಿ ಅವಳಿಗೆ– "ನಾನು ಕೇಳಿದ ಪ್ರತಿಯೊಂದೂ ಬರೀ ಕೆಟ್ಟದಷ್ಟೇ ಅಲ್ಲ, ಅನರ್ಥಕಾರಿಯಾಗಿದ್ದಾಗ, ನೀನು ಈ ದಿನದ ಕೇವಲ ಶುಭ ಸಮಾಚಾರವನ್ನು ನೀಡಿದ್ದೀ. ಈ ಸಣ್ಣ ಸಂತಸವನ್ನು ದಯವಿಟ್ಟು ಹಾಳುಗೆಡಹಬೇಡ" ಎಂದು ಗಟ್ಟಿಯಾಗಿ ವಿನಂತಿಸಿಕೊಂಡೆ.

ಅವಳು ಆ ಕೂಡಲೇ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದಳು "ನನ್ನನ್ನು ಕ್ಷಮಿಸಿ. ನಾನು ಗರ್ಭಿಣಿ. ನೀವು ನಿಜಕ್ಕೂ ನನ್ನನ್ನು ನಂಬುವಿರಾ?"

"ಖಂಡಿತವಾಗಿಯೂ ನಂಬುತ್ತೇನೆ". ನನಗೂ ಹಾಗನ್ನಿಸಿರಬೇಕು. ಅಗಸನ ಮಾತನ್ನು ಕೇಳಿಸಿಕೊಂಡು ಭಗವಾನ್ ಶ್ರೀರಾಮನಂಥ ದೇವನೇ ತನ್ನ ಹೆಂಡತಿಯ ಶೀಲವನ್ನು ಶಂಕಿಸಿ ಮಾಡಿದ ಹಾಗೆ, ಮೇದಿನಿರಾಯ್‌ನೊಂದಿಗಿನ ಸ್ನೇಹವನ್ನು ಕಡಿದುಕೊಳ್ಳುವುದಾಗಲಿ, ಸಾಮ್ರಾಜ್ಯದ ಶಾಂತಿಯನ್ನು ನಾಶಮಾಡುವುದಾಗಲಿ ನನಗೆ ಖಂಡಿತವಾಗಿಯೂ ಇಷ್ಟವಿರಲಿಲ್ಲ. ಸುಗಂಧಗಳೊಂದಿಗೆ ನನ್ನ ಅದೃಷ್ಟವನ್ನು ಇನ್ನು ಎಷ್ಟು ಮಾತ್ರಕ್ಕೂ ಪರೀಕ್ಷೆಗೊಡ್ಡಿಕೊಳ್ಳಲು ನನಗಿಷ್ಟವಿರಲಿಲ್ಲವಾದ್ದರಿಂದ ನನ್ನ ಅಶುದ್ಧ ಕೈಗಳಿಂದ ಅವಳನ್ನು ಬಳಸಿದೆ.

* * *

ಮಾನವ ಮನಸ್ಸು ಕೆಲಸ ಮಾಡುವ ಪರಿಯನ್ನು ಕುರಿತು ಯಾರಾದರೂ ನನಗೆ ಬೆಳಕು ಚೆಲ್ಲಲು ಸಾಧ್ಯವೆ? ನಾನು ಅವಳನ್ನು ಮದುವೆಯಾದ ದಿನದಿಂದಲೂ, ಹಸಿರು ಕಣ್ಣಿನ ಚೆಲುವೆಯು ನಾನು ಅವಳಿಂದ ದೂರವಿರಬೇಕೆಂದು ಹೇಳಿ ಬಿಟ್ಟಿದ್ದಾಳೆ. ಈಗ ನಾನು ಇನ್ನೊಂದು ಮದುವೆಯಾದೆ. ಅದು ನನ್ನ ಇಚ್ಛೆಗೆ ವಿರುದ್ಧವಾದದ್ದು ಎಂಬುದನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ, ಅವಳು ತನ್ನೆಲ್ಲಾ ಸಮಯವನ್ನು ನನ್ನನ್ನು ಒಲಿಸುವುದರಲ್ಲೇ ಕಳೆಯುತ್ತಾಳೆ. ಅವಳ ತಂತ್ರಗಳು ಮಾಮೂಲಿಗಿಂತ ಭಿನ್ನವಾದವು. ಸಂಕ್ಷೇಪದಲ್ಲಿ ಹೇಳಬೇಕೆಂದರೆ ಅವಳ ಬಳಿ ಅಸಾಧಾರಣವಾದ ಆಯುಧಗಳ ಭಂಡಾರವೇ ಇದೆ. ಬಣ್ಣ ಮತ್ತು ಬಟ್ಟೆಯ ವಿಷಯಕ್ಕೆ ಅವಳಿಗೊಂದು ಜನ್ಮ ಜಾತವಾದ ಶಕ್ತಿ ಇತ್ತು. ಆದರೆ ಇಷ್ಟೂ ವರ್ಷಗಳು ಅವುಗಳ ವಿಷಯದಲ್ಲಿ ತಲೆ ಕೆಡಿಸಿಕೊಳ್ಳದೆ ಮಾಮೂಲಾಗಿದ್ದಳು. 'ನೀರಸತೆ' ಎಂದು ಕರೆಯುತ್ತಿರುವುದಕ್ಕೆ ಕ್ಷಮಿಸಿ. ಆದರೆ ಆಕೆಯ ಉದ್ದೇಶಗಳನ್ನು ವರ್ಣಿಸಲು ಇರುವ ಮಾರ್ಗ ಅದೊಂದೇ. ಈಗ ಅವಳು ಕೊಲ್ಲಲು ಉಡುಪು ಧರಿಸುತ್ತಾಳೆ. ಕಳೆದ ಏಳು ದಿನಗಳು ಅವಳು ಹಸುರಿನ ಬಗೆ ಹುಚ್ಚು ಹುಚ್ಚು ಆವೇಶ ತಾಳಿದ್ದಾಳೆ. ಅವಳು ಯಾವ ಬಣ್ಣದ ಉಡುಪನ್ನಾದರೂ ಧರಿಸಬಹುದು, ಕಣ್ಣು ಕುಕ್ಕುವಂಥ ಹಳದಿ ಅಥವಾ ಥಳುಕಿನ ಕಂದು ಬಣ್ಣವನ್ನು ವಿನಾಶಕರ ಪರಿಣಾಮದ ಸಲುವಾಗಿ ಬಳಸಬಹುದು. ಆದರೆ ಅವಳ ಮೈಮೇಲೆ ಮಾರಕದಂತೆ ಕಾಣುವುದು ಹಸಿರು ಬಣ್ಣ. ಇದು ಆಕೆಗೆ

ಚೆನ್ನಾಗಿ ಗೊತ್ತು. ಆ ಕಾರಣದಿಂದಲೇ ಹಸಿರು ಛಾಯೆಯ ನೂರು ಅಲ್ಲ ಬಹುಶಃ ಇನ್ನೂರು ಮೇಲು ಹೊದಿಕೆಗಳು. ಪರಕಾರಗಳು (ಲಂಗಗಳು) ಮತ್ತು ರವಿಕೆಗಳು ಅವಳ ಬಳಿ ಇವೆ.

ನಾನು ಕೆಲಸಕ್ಕೆ ಹೊರಡುವ ಮುನ್ನ ತಪ್ಪದೆ ಪೂರಾ ಅಲಂಕರಿಸಿಕೊಳ್ಳುವುದು ಅವಳ ಗುರಿ. ನಾನು ಅವಳನ್ನು ಅಲಕ್ಷಿಸಬಹುದು (ಇಲ್ಲ, ಅದು ಸಾಧ್ಯವಿಲ್ಲ). ಆದರೆ ನನಗೆ ಅವಳ ವರ್ತನೆ ಕಡಿಮೆ ಸೋಜಿಗವೆನಿಸಲಿಲ್ಲವೆಂಬುದನ್ನು ಹೇಳಲೇ ಬೇಕು. ತನ್ನನ್ನು ಕಂಡ ಮೊದಲ ದಿನದಿಂದಲೇ ಅವಳವನಾಗಿದ್ದ ಮತ್ತು ತನ್ನ ಮನಸ್ಸು ಬದಲಾಯಿಸುವ ಯಾವುದೇ ಕುರುಹನ್ನು ಎಂದೂ ತೋರಿಸದೆ ಇದ್ದಾಗ ಅಂಥ ವ್ಯಕ್ತಿಯನ್ನು ಆಕರ್ಷಿಸುವ ಪ್ರಯತ್ನವಾದರೂ ಏಕೆ ಬೇಕು? ಮೆರ್ತಾದ ರಾಜಕುಮಾರಿಯ ಎದುರು ನಿಲ್ಲಲು ಬಡಪಾಯಿ ಸುಗಂಧಳಿಗೆ, ಅವಕಾಶ ಸಿಗುವ ಸಂಭವವೇ ಇಲ್ಲ. ಆದರೆ ಮುಚ್ಚು ಮರೆಯಿಲ್ಲದೆ ಹೇಳಬೇಕೆಂದರೆ. ಈ ಅವತಾರದಲ್ಲಿ ಅಂತಃಪುರದ ಯಾವೊಬ್ಬ ಹೆಣ್ಣೂ ಹಸಿರುಗಣ್ಣಿನ ಚೆಲುವೆಯನ್ನು ಸರಿಗಟ್ಟಲಾರಳು.

ಕಿರಿಯ ಸಂತಳಿಗೆ ಏನು ಬೇಕಾಗಿದೆ? ನನ್ನನ್ನು ಕಳೆದುಕೊಂಡ ದೂರ ಸಂಭಾವ್ಯತೆಯದರೂ ಉಂಟೆ? ಮುಂದೆ ನಾನೆಂದಾದರೂ, ಮೇವಾಡದ ರಾಣಾ ಆದಲ್ಲಿ, ಭಾವೀ ಮಹಾರಾಣಿಯ ತನ್ನ ಸ್ಥಾನವನ್ನು ಕಳೆದುಕೊಂಡುಬಿಡುತ್ತೇನೆಂಬ ಅಭದ್ರತೆಯ ಭಯ ಆಕೆಗಿದೆಯೆ? ಹಾಗಲ್ಲದಿದ್ದರೆ ಸುಗಂಧ ಗರ್ಭಿಣಿಯಾಗಿದ್ದಕ್ಕೆ ಅವಳಾದರೂ ಅದೇಕೆ ಹೊಟ್ಟೆ ಕಿಚ್ಚು ಪಡಬೇಕು ಮತ್ತು ಈಗಾಗಲೇ ಅಸ್ಥಿರವಾಗಿರುವ ನನ್ನ ವಿವಾಹಸಂಬಂಧವನ್ನು ಅದೇಕೆ ಮುರಿಯಬೇಕು?

ಸುಗಂಧಳು ಗರ್ಭಿಣಿ ಎಂದು ಗೊತ್ತಾದ ಮೇಲೆ ನನ್ನ ಎರಡನೇ ಹೆಂಡತಿಯೊಂದಿಗಿನ ತನ್ನ ಮರೆಯ ಯುದ್ಧಕ್ಕೆ ಹಸಿರು ಗಣ್ಣಿನ ಚೆಲುವೆ ವಿರಾಮ ಹಾಕಿದಳು. ಈಗ ಅದು ಬಹಿರಂಗ ಸಮರವಾಗಿತ್ತು.

ಸುಗಂಧಳ ಗರ್ಭದಲ್ಲಿರುವ ಮಗುವಿಗೆ ವಿಕ್ರಮಾದಿತ್ಯನೂ ತಂದೆಯಾಗಿದ್ದಾನೆಂಬುದಕ್ಕೆ ಯಾವ ಖಾತರಿಯೂ ಇಲ್ಲ ಎಂದು ಎಲ್ಲರಿಗೂ ಗೊತ್ತಾಗುವಂತೆ ಮಾಡಿದಳು. ಏನೇ ಆದರೂ ನನ್ನ ಎರಡನೇ ಹೆಂಡತಿಯು ತನ್ನ ದಾಂಪತ್ಯ ದ್ರೋಹದ ವಿಷಯವನ್ನು ಎಷ್ಟರ ಮಟ್ಟಿಗೆ ಎಲ್ಲ ಕಡೆ ಹರಡಿದ್ದಾಳೆಂದು ತಿಳಿದುಕೊಳ್ಳಬೇಕಾದವರು ಯಾರು? ಸುಗಂಧಳನ್ನು ನೀಚಳೆಂದು ಬಿಂಬಿಸಲು ನನ್ನನ್ನು ಅತ್ಯುತ್ತಮ ಆದರ್ಶ ವ್ಯಕ್ತಿ ಎಂದು ಸಾರುವುದು ಹಸಿರು ಗಣ್ಣಿನ ಚೆಲುವೆಗೆ ಅಗತ್ಯವಾಗಿತ್ತು. ಆಕೆ, ಅಂಥ ಸಾಮರ್ಥ್ಯವುಳ್ಳ ಹೆಣ್ಣಿನಿಂದ ನಿರೀಕ್ಷಿಸಿದ್ದಂತೆಯೇ, ಅಂಥ ಕೆಲಸಕ್ಕೆ ತಕ್ಕವಳಾಗಿದ್ದಳು. ನನ್ನ ದೈವೀಕರಣ ಈಗಾಗಲೇ ಚೆನ್ನಾಗಿ ಪ್ರಾರಂಭವಾಗಿತ್ತು. ಆದರೆ, ದುರದೃಷ್ಟವಶಾತ್, ಹೆಚ್ಚು ಕೆಸರು ಮತ್ತು ಅಪನಿಂದೆ ಸುಗಂಧಳಿಗೆ ಹತ್ತುವುದಿಲ್ಲ. ನನ್ನ ಮೊದಲನೇ ಹೆಂಡತಿ ತಾನೇ ನಿರ್ಮಿಸಿಕೊಂಡ ಬಲೆಯಿಂದ ಈಗ ತಪ್ಪಿಸಿಕೊಳ್ಳುವಂತಿರಲಿಲ್ಲ. ನನ್ನ ಎರಡನೇ ಹೆಂಡತಿಯ ಗರ್ಭದ ಪಿತೃತ್ವಕ್ಕೆ ಸಂಬಂಧಿಸಿದಂತೆ ಆಕೆ ಹೆಚ್ಚು ಹೆಚ್ಚು ಮಾತಾಡಿದಷ್ಟೂ, ಸುಗಂಧಳು ಹೆಚ್ಚು ಹೆಚ್ಚು ಆತ್ಮತೃಪ್ತಿ ಹೊಂದತೊಡಗಿದಳು.

"ಮಗುವಿನ ತಂದೆ ಒಬ್ಬ ನಪುಂಸಕನೋ, ಮಾಲಿಯೋ ಅಥವಾ ಹಾಲಿನವನೋ ಯಾರೋ ಅನ್ನುವುದು ನನಗೆ ಸರಿಯಾಗಿ ನೆನಪಿಲ್ಲ" ಸುಗಂಧ ಅದರ ಬಗ್ಗೆ ವಿಪರೀತ ತಲೆಕೆಡಿಸಿಕೊಂಡಂತಿದ್ದಾಗ ಹಸಿರು ಕಣ್ಣಿನ ಚೆಲುವೆಯ ಬಳಿಗೋಡಿ "ಯಾರಾದರೂ

ಅದಕ್ಕೆ ಕಾರಣರಾಗಿಲಿ. ಇಷ್ಟರಲ್ಲೇ ನನಗೆ ಹೆರಿಗೆಯಾಗಲಿದೆ. ಇಷ್ಟು ವರ್ಷಗಳ ನಂತರವಾದರೂ ನೀನೊಂದು ಹುಸಿ ಗರ್ಭವನ್ನೇ ಆದರೂ ಕಟ್ಟಿಕೊಳ್ಳೋದಕ್ಕೆ ಸಾಧ್ಯವಾಯಿತಾ ರಾಜಕುಮಾರಿ?" ಎಂದಳು.

ಹಸಿರುಗಣ್ಣಿನ ಚೆಲುವೆಯಲ್ಲಿ ಒಮ್ಮೆಲೇ ಹತಾಶೆ ಮತ್ತು ನೋವು ಕಾಣಿಸಿಕೊಂಡಿತು. ಅದನ್ನವಳು ಅಡಗಿಸಿಡಲಾಗಲಿಲ್ಲ. ಸುಗಂಧಳು ಸ್ವಭಾವ ಸಹಜವಾಗಿ ಅವಳ ಬಾಯಿಗೆ ಅಗಳಿ ಹಾಕಿ ಬಿಟ್ಟಿದ್ದಳು. ಹಸಿರುಗಣ್ಣಿನ ಚೆಲುವೆ ತನಗೆ ಬೇಕು ಅನ್ನಿಸಿದಷ್ಟು ಗೊಣಗಿಕೊಂಡು ಮಾತಾಡಿಕೊಳ್ಳಬಹುದಾಗಿತ್ತು. ಸುಗಂಧ ಮಾಡಬೇಕಾಗಿದ್ದು ಏನಿದ್ದರೂ ತನ್ನ ಗರ್ಭವನ್ನು ಆ ಹೊತ್ತಿಗೆ ಬೆಳೆಸಿಕೊಳ್ಳುವುದು.

ಕೌಟಿಲ್ಯನು ರಾಜನಿಗೆ ನೀಡಿದ ಉಪದೇಶ ನಿಮಗೆ ನೆನಪಿದೆಯೆ? (ಲೀಲಾವತಿಯು ಅವನ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಅರ್ಥಶಾಸ್ತ್ರ ಗ್ರಂಥವನ್ನು ನನಗೆ ತುಂಬ ಎಚ್ಚರಿಕೆಯಿಂದ ಪ್ರತಿ ಮಾಡಿಕೊಟ್ಟಿದ್ದಳು) ಯಾರನ್ನೇ ಆಗಲಿ ನಂಬುವುದು ರಾಜ ಅಥವಾ ರಾಜಕುಮಾರನಿಗೆ ವಿವೇಕವಲ್ಲ. ಸೈನಿಕ ಗುರುಕುಲದಲ್ಲಿ (ಸೈನಿಕ ಅಕಾಡೆಮಿ) ನನ್ನ ತಲೆಯೊಳಕ್ಕೆ ಅದನ್ನು ಒಂದೇ ಸಮನೆ ಗಿಡಿಯಲಾಗಿತ್ತು. ನಾನು ದೊಡ್ಡವನಾಗಿ, ಪ್ರಭುವಾಗುವ ಹಂಬಲ ಬೆಳೆಸಿಕೊಳ್ಳುವವರೆಗೂ ಒಂದು ಹಂತದವರೆಗೆ ಅದನ್ನು ರೂಢಿಸಿಕೊಂಡೆನು. ನಾನದನ್ನು ಕೃತಕವಾಗಿ ಮಾಡುತ್ತಿದ್ದೆನೆಂದು ಈಗ ನನಗೆ ಅರ್ಥವಾಗುತ್ತಿದೆ. ನನ್ನ ಹೃದಯ ಅದರಲ್ಲಿ ನಿಜಕ್ಕೂ ನೆಲೆಸಿರಲಿಲ್ಲ. ಅದು ದೀರ್ಘ ಸಮಯವಲ್ಲವಾದರೂ. ಬೃಹನ್ನದನು ಸುಮ್ಮನೆ ಸತ್ತಿರಲಿಲ್ಲ. ಅವನಿಂದ ನನಗೆ ಇದು ಪಿತ್ರಾರ್ಜಿತವಾಗಿ ಬಂದಿತೆಂಬಂತೆ, ನಾನೀಗ ಎಲ್ಲರನ್ನೂ ಅನುಮಾನಿಸುತ್ತೇನೆ. ಗುಪ್ತವಾಗಿ ಅಡಗಿಕೊಂಡು ಮೇವಾಡವನ್ನು ಅಸ್ಥಿರಗೊಳಿಸುವ ಕಾರ್ಯದಲ್ಲಿ, ತೊಡಗಿರುವ ಹಾಗೂ ಮಹಾಪ್ರಭುಗಳನ್ನು ಮತ್ತು ನನ್ನನ್ನು ತೊಡೆದು ಹಾಕಲು ಪ್ರವೃತ್ತರಾಗಿರುವ ಆ ಹದಿನೇಳು ಜನ ಸಂಚುಗಾರರು ಯಾರು?

ಬೃಹನ್ನದನು ಧೀರನಾಗುವ ಮತ್ತು ಭೀಷ್ಮನನ್ನು ಮೀರಿಸುವ ಪ್ರಯತ್ನ ಮಾಡದೆ ಇದ್ದಿದ್ದರೆ ಮಹಾಪ್ರಭುಗಳಿಗೆ, ಮಂಗಳನಿಗೆ, ನನಗೆ ಹಾಗೂ ನ್ಯಾಯ ಮಂಡಳಿಯ ಮೂರು ಜನ ನ್ಯಾಯಾಧೀಶರುಗಳಿಗೆ ತುಂಬ ಒಳ್ಳೆಯದಾಗುತ್ತಿತ್ತೆಂದು, ನನ್ನ ಅತ್ಯಂತ ದೋಷೈಕ ದೃಷ್ಟಿಯ ಕ್ಷಣಗಳಲ್ಲಿ ನನಗೆ ಮನವರಿಕೆಯಾಗಿದೆ. ಈಗ ಅವನು ಸತ್ತಿದ್ದಾನೆ. ಅಲ್ಲದೆ ನಮ್ಮಲ್ಲಿ ಯಾರೊಬ್ಬರೂ ಅವನಿಗಿಂತ ವಿವೇಕಿಗಳೇನಲ್ಲ. ಹೆಸರಿಗೆ ಮಂಗಳನ ಉಸ್ತುವಾರಿಯಲ್ಲಿದ್ದಾಗಲೇ ಬೃಹನ್ನದನು ಸತ್ತದ್ದರಿಂದ ಮಂಗಳನು ರಾಜೀನಾಮೆ ಕೊಡಲು ಮುಂದೆ ಬಂದಿದ್ದಾನೆ. ಊರ್ವಶಿಯನ್ನು ಅವಳ ತೌರು ಮನೆಗೆ ಕಳಿಸಿಕೊಡಲಾಗಿದೆ. ಬೃಹನ್ನದನು ಹುಟ್ಟಿಸಿದ್ದು ಗಂಡು ಮಗುವನ್ನೋ ಹೆಣ್ಣು ಮಗುವನ್ನೋ ಅಥವಾ ಎರಡೂ ಅಲ್ಲದ್ದನ್ನೋ ಎಂದು ಯಾರಾದರೂ ಜರಿಯುತ್ತಾರೆಯೇ ಎಂಬುದರ ಬಗ್ಗೆ ನನಗೆ ಅನುಮಾನವಿದೆ. ಅದು ವಿಕ್ರಮಾದಿತ್ಯನನ್ನು ಬಿಟ್ಟುಕೊಡುತ್ತದೆ. ಕೊನೆಗೂ ಮಹಾಪ್ರಭುಗಳು, ದುರ್ಬಲವಾಗಿಯೇ ಇರಬಹುದು ಈ ತಮ್ಮ ಮಗನು ಒಡ್ಡಿರುವ ಬೆದರಿಕೆಗೆ ಎಚ್ಚತ್ತು ಅವನನ್ನು ರಣಥಂಬೂರಿಗೆ ರವಾನೆ ಹಾಕಿ ಅಲ್ಲಿ ಗೃಹ ಬಂಧನದಲ್ಲಿರಿಸಿದ್ದಾರೆ. ಬೃಹನ್ನದನು, ಹಿಜಡಾಗಳ ನೀತಿಸಂಹಿತೆಯನ್ನು ಉಲ್ಲಂಘಿಸಿದ್ದನ್ನು ಕಂಡಾಗ, ತರಡಿಲ್ಲದ ಮಹಾರಾಜ್‌ಕುಮಾರನನ್ನು ಹೊರತುಪಡಿಸಿ (ಇದು ಆಕೆಯ ಮಾತು) ಬೇರೆ ಯಾವುದೇ ರಾಜಕುಮಾರನು ಏನು ಮಾಡಬಹುದೋ ವಿಕ್ರಮಾದಿತ್ಯನು ಅದನ್ನೇ ಅವನಿಗೆ ಮಾಡಿದ್ದಾನೆಂದು ರಾಣಿ ಕರ್ಮವತಿಯು ಜೋರು ದನಿಯಲ್ಲಿ ಪ್ರತಿಭಟಿಸಿದಳೆಂದು ನಾನು ನಂಬಿದ್ದೇನೆ.

ತಂದೆಯವರು ಸಂಚನ್ನು ಕುರಿತ ಅಲ್ಪ ವಿಷಯವನ್ನು ಮುಂದುವರಿಸಲಿಲ್ಲ. ಕಾರಣ ನಮಗೆ ಅದಕ್ಕಿದ್ದ ಆಧಾರ ಹಿಜಡಾನ ಮಾತು ಮಾತ್ರ. ದ್ರೋಹದ ವಿಚಾರಣೆ ಪ್ರಾರಂಭವಾಗುವುದಕ್ಕೆ ಮುಂಚೆಯೇ ಅವನು ತಿಳಿಸಿದ್ದಂತೆಯೇ ಅದು ಸೇಡಷ್ಟೇ ಹೊರತು ಬೇರೇನೂ ಆಗಿದ್ದಿರಲಾರದು. ಯಾವುದೇ ಹೆಸರುಗಳನ್ನು ಹೇಳುವುದಕ್ಕೆ ಮುಂಚೆಯೇ ಬೃಹನ್ನದನು ಕೊನೆಯುಸಿರೆಳೆದ ನಂತರವೂ, ಮಹಾಪ್ರಭುಗಳು ಈ ಕಾಗಕ್ಕ ಗುಬ್ಬಕ್ಕ ಕತೆಯನ್ನು ನಿಜಕ್ಕೂ ನಂಬುತ್ತಾರೆಯೆ?

ತಂದೆಯವರದು ಸರಿ. ಸಂಚಿಕೆಗೆ ಸಂಬಂಧಿಸಿದಂತೆ, ಸಾಕ್ಷ್ಯ, ದಿನಾಂಕ, ಯೋಜನೆಗಳು, ಹೆಸರುಗಳು ಹೀಗೆ ಪ್ರತಿಯೊಂದೂ ಬೇಕಾಗಿತ್ತು. ಮಹಾಪ್ರಭುಗಳು, ನನ್ನ ತಮ್ಮನ ಮೇಲೆ ಸ್ವಲ್ಪ ಮಟ್ಟಿನ ಒತ್ತಡಕ್ಕೆ ಮತ್ತು ಮನವೊಲಿಕೆಗೆ ಮನಸ್ಸು ಮಾಡಿದ್ದರೆ ಮಾತ್ರ ನಾವು ಅವುಗಳನ್ನೆಲ್ಲ ಅಷ್ಟೇ ಏಕೆ ಇನ್ನೂ ಹೆಚ್ಚಿನವನ್ನು ಸುಲಭವಾಗಿ ಒಟ್ಟುಗೂಡಿಸಬಹುದಿತ್ತು. ಇನ್ನೊಬ್ಬರಿಗೆ ನೋವುಕೊಟ್ಟು ಸಂತೋಷಪಡುವಂಥ ಜನರು, ಅವರೇ ಇನ್ನೊಬ್ಬರಿಂದ ಅಹಿತವಾದದ್ದನ್ನು ಅನುಭವಿಸಬೇಕಾಗಿ ಬಂದಾಗ, ಅವರು ನಿಷ್ಪ್ರಯೋಜಕರು ಎಂಬುದು ಸ್ವಯಂವೇದ್ಯವೇ ಇದೆ. ಈ ಕ್ಷಣದಲ್ಲಿ ವಿಕ್ರಮಾದಿತ್ಯನು ಯಾವುದೇ ರಜಪೂತನಷ್ಟೇ ಅಂಗುಲ ಅಂಗುಲವೂ ಧೀರನೆಂದು ನಾನು ಸೂಚಿಸುತ್ತಿಲ್ಲ. ಆದರೆ ಯುದ್ಧದಂಥ ಒಂದು ಸಶಸ್ತ್ರ ಸಂಘರ್ಷವು ಅತ್ಯಂತ ಎಚ್ಚರಿಕೆಯಿಂದ ಯೋಜಿಸಲಾದ ಒಂದು ಸಮೂಹ ಸನ್ನಿ. ನಾಲ್ಕರಿಂದ ಆರು ಗಂಟೆಗಳೊಳಗೆ, ಯಾರೇ ಆದರೂ ರಕ್ತದ ಕಾಲುವೆ ಹರಿಯಲಿ, ಸಾಯಲು ಮತ್ತು ಸಾಯಿಸಲು ಮಾನಸಿಕವಾಗಿ ಸಿದ್ಧವಾಗಲು ಸಾಮಾನ್ಯವಾಗಿ ಸಾಕಷ್ಟು ಕಾಲಾವಕಾಶವಿರುತ್ತದೆ. (ಅಂಗವಿಕಲರಾಗುವ ಯೋಚನೆಯನ್ನು ನಾವು ಯಾವತ್ತೂ ತಂದುಕೊಳ್ಳುವುದಿಲ್ಲ)

ಚಿತ್ರ ಹಿಂಸೆ, ಅದರಲ್ಲೂ ನಮ್ಮವರಿಂದಲೇ ಚಿತ್ರಹಿಂಸೆ ಅನುಭವಿಸುವುದು ಅದೊಂದು ಬೇರೆಯೇ ಆದ ಪ್ರಸ್ತಾವ. ನಮ್ಮದೇ ಗೆಳೆಯರು ಮತ್ತು ಬಂಧುಗಳು ನಮ್ಮ ಬಗ್ಗೆ ಅಪನಂಬಿಕೆ ತಾಳುವುದು, ನಮಗೆ ಎಲ್ಲ ರೀತಿಯ ಅಮಾನವೀಯ ಕೃತ್ಯಗಳನ್ನು ಮಾಡುವಂಥದು ಇರುತ್ತದೆ. ಇನ್ನೊಂದು ವಾಸ್ತವಾಂಶವೆಂದರೆ ಯಾವುದೂ ಕಾಲಬದ್ಧವಲ್ಲ ಅಥವಾ ಕಾಲಾತೀತವೂ ಅಲ್ಲ. ಅದು ಒಂದು ದಿನ ತೆಗೆದುಕೊಳ್ಳಬಹುದು, ಒಂದು ವಾರ ತೆಗೆದುಕೊಳ್ಳಬಹುದು; ಅಲ್ಲದೆ ಅವರು ಯಾವತ್ತು ನಿಲ್ಲಿಸುತ್ತಾರೆ ಎಂದೂ ಹೇಳುವಂತಿರುವುದಿಲ್ಲ.

ಅಂಥದೊಂದು ಅನುಭವದಿಂದ ಏನೂ ಆಗದೆ ನಿರಾತಂಕವಾಗಿ ಹೊರ ಬರಬೇಕೆಂದರೆ, ದೈಹಿಕವಾಗಿ ದೀರ್ಘಕಾಲ ಸಹಿಸಿಕೊಳ್ಳುವುದಕ್ಕಿಂತ ಬೇರೆಯದೇ ರೀತಿಯ ಮನಃಸ್ಥಿತಿ ಹೊಂದಿರಬೇಕಾಗುತ್ತದೆ. ಸ್ಪಷ್ಟವಾಗಿ ಹೇಳಬೇಕೆಂದರೆ ವಿಕ್ರಮನನ್ನು ಮಾತಾಡಿಸಬೇಕೆಂದರೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆಯೆ ಎಂಬ ಬಗ್ಗೆ ನನಗೆ ಸಂದೇಹವಿದೆ. ನನ್ನ ತಮ್ಮನಿಗೆ ಹೆಚ್ಚು ಕಡಿಮೆ ಅನಾರೋಗ್ಯಕರವಾಗಿ ಒಗ್ಗದಿರುವ ಸಂಗತಿಯೆಂದರೆ, ಒಬ್ಬನೇ ಇರುವುದು. ಒಂದೆರಡು ದಿನಗಳ ಕಾಲ ಅವನೊಬ್ಬನನ್ನೇ ಬಂಧನದಲ್ಲಿಟ್ಟು, ಹೊರಗಡೆ ಮೂರು ಜನರನ್ನು ಕಾವಲು ಹಾಕಿದರೆ, ಹೆಚ್ಚು ಪುಸಲಾಯಿಸದೆ ತನ್ನ ಒಳಗಡೆ ಇರುವುದನ್ನೆಲ್ಲ ಕಕ್ಕಿ ಬಿಡುತ್ತಾನೆ. ಅವನು ದೀರ್ಘಾಲೋಚನೆ ಮಾಡಲಾರ. ಅವನಿಗೇನಾದರೂ ಸಂದೇಹ ಉಂಟಾದರೆ ಅಥವಾ ಹತಾಶೆ ಎನ್ನಿಸಿದರೆ, ತನ್ನ ತಾಯಿಯನ್ನೇ ಆದರೂ ಅತ್ತ ತಳ್ಳಿ ಬಿಡುತ್ತಾನೆ.

ಕಾನೂನಿಗೆ ಅತೀತವಾದ ಕೆಲವು ಕ್ರಮಗಳನ್ನು ಕೈಗೊಂಡು ನನ್ನ ತಮ್ಮ ರಣಥಂಬೂರಿಗೆ ಮುಂದುವರಿಯುವುದನ್ನು ತಡೆದು ನಿಲ್ಲಿಸುವ ತೀವ್ರವಾದ ತುಡಿತ ನನಗುಂಟಾಯಿತು.

ಒಂದು ಸಣ್ಣ ಸುತ್ತು ಬಳಸಿನ ಮಾರ್ಗವನ್ನು ಹಿಡಿದರೆ, ಅವನಿಗೆ ತೀರಾ ಅನಾನುಕೂಲವೇನೂ ಆಗುವುದಿಲ್ಲ. ಅದರಿಂದಾಗಿ ನಾವು ಸಂಚಿನ ಯೋಜನೆಯ ರಹಸ್ಯಗಳನ್ನೆಲ್ಲಾ ತಿಳಿದುಕೊಂಡು ಬಿಡಬಹುದು. ಸಾಂಪ್ರದಾಯಿಕವಲ್ಲದ ಕೃತ್ಯವನ್ನು ಮಾಡುವ ಧೈರ್ಯ ನನಗಿರಲಿಲ್ಲವೋ ಅಥವಾ ನಾನು ವಿವೇಕದಿಂದ ನಡೆದುಕೊಂಡೆನೋ ನನಗೆಂದೂ ಗೊತ್ತಾಗುವುದಿಲ್ಲ. ಬಹುಶಃ ನನ್ನಲ್ಲಿದ್ದ ಮಾರಕವಾದ ಬಿರುಕು ಇದೇ. ಏನೇ ಬೆಲೆ ತೆತ್ತಾದರೂ ಅಗತ್ಯವಾಗಿ ಮಾಡಬೇಕಾಗಿರುವುದನ್ನು ಮಾಡುವುದು ನನ್ನಲ್ಲಿ ಇಲ್ಲ. ನಾನು ವಿಕ್ರಮನನ್ನು ಸೆರೆ ಹಿಡಿದದ್ದೇ ಆದರೆ, ಅವನಿಂದ ಹೊರಡಿಸಿದಷ್ಟು ಸಮಾಚಾರವನ್ನು ಮಹಾಪ್ರಭುಗಳಿಗೆ ನಾನು ಮುಟ್ಟಿಸಬಹುದು. ತಾಯಿ ಮಗ ಮತ್ತು ಇನ್ನಿತರೆ ಕುಲೀನ ಶ್ರೀಮಂತರು ಸೇರಿಕೊಂಡು ಹೂಡಿದ ಅಕ್ರಮ ಸಂಚಿನ ವಿವರಗಳನ್ನಿಟ್ಟುಕೊಂಡು ಅವರೊಂದಿಗೆ ಮುಖಾಮುಖಿಯಾಗಬಹುದು. ಆದರೆ ಅದು ನನ್ನನ್ನು ಎಲ್ಲಿಗೆ ಮುಟ್ಟಿಸುತ್ತದೆ. ತಂದೆಯವರು ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಿದಂತೆ ಭಾವಿಸುತ್ತಾರೆ. ನನಗೆ ಏನಾದರೊಂದನ್ನು ಮಾಡುವ ಧೈರ್ಯವಿದೆಯೆಂಬುದನ್ನು ಅವರು ಗುರುತಿಸಬೇಕಾಗುತ್ತದೆ. ತನ್ನ ನೆಚ್ಚಿನ ರಾಣಿ ಮತ್ತು ವಿಕ್ರಮನ ಮೇಲೆ ಕ್ರಮ ತೆಗೆದುಕೊಳ್ಳದೆ ಅವರಿಗೆ ಅನ್ಯ ಮಾರ್ಗವಿಲ್ಲವೆನ್ನುವಂತಾಗುತ್ತದೆ. ಎಲ್ಲವೂ ಒಳ್ಳೆಯದಕ್ಕೆ, ಸಾಮಂತರು ಮತ್ತು ಮಿತ್ರ ರಾಜರಲ್ಲಿ ತನ್ನ ಮಿತ್ರರಾರು ಶತ್ರುಗಳಾರು ಎಂಬುದು ಅವರಿಗೆ ಗೊತ್ತಾಗುತ್ತದೆ. ಈ ವಿಷಯದಲ್ಲಿ ನಾನು ಮುಂದಾಗಿದ್ದಕ್ಕೆ ಹಾಗೂ ಅವರ ಮೊದಲಿನ ಆದೇಶವನ್ನು ರದ್ದು ಮಾಡುವಂತೆ ಮಾಡಿದ್ದಕ್ಕೆ, ಅದಕ್ಕಿಂತಲೂ ಕೆಟ್ಟದ್ದೆಂದರೆ ಅವರಿಗೆ ಸಂಕೋಚವಾಗುವಂತೆ ಮಾಡಿದ್ದಕ್ಕೆ ಅವರೆಂದಿಗೂ ನನ್ನನ್ನು ಕ್ಷಮಿಸುವುದಿಲ್ಲ. ಇನ್ನೆಂದೂ ಅವರು ನನ್ನನ್ನು ನಂಬುವುದಿಲ್ಲ. ನನಗಿದ್ದ ಏಕೈಕ ಕಾರ್ಯಸಾಧ್ಯವಾದ ಆಯ್ಕೆ ಎಂದರೆ, ನನ್ನ ತಮ್ಮನನ್ನು ಪ್ರಶ್ನಿಸಿ ಅವನನ್ನು ಆಕಸ್ಮಿಕವಾಗಿ ಸಾಯಿಸುವುದು. ಆಗ ನಮ್ಮ ಸಾಮ್ರಾಜ್ಯದೊಳಗಡೆ ಮತ್ತು ಮೈತ್ರಿಕೂಟದಲ್ಲಿ ಶತ್ರುಗಳು ಯಾರು ಎಂಬುದು ಗೊತ್ತಾಗುತ್ತದೆ. ಮಂಗಳನ ಕಡೆಯವರು ಅವರುಗಳನ್ನು ಅಲ್ಲಿಂದ ವಶಪಡಿಸಿಕೊಂಡು, ಅವರುಗಳನ್ನು ತೀವ್ರ ನಿಗಾದಲ್ಲಿರಿಸಿ, ಅಪರಾಧ ಮಾಡುತ್ತಿರುವಾಗಲೇ ಅವರನ್ನು ಹಿಡಿದು ಬಿಡುವರು. ಸಹಜವಾಗಿಯೂ ಈ ಯೋಜನೆ ವಿಫಲವಾಗಲೂಬಹುದು. ಆದರೆ ಪ್ರಯತ್ನಿಸಲು ಅರ್ಹವಾದ ಯೋಜನೆ.

ಹೀಗೆ ಮಾಡುವುದರ ಬದಲು ನಾನು ಮತ್ತೆ ತಂದೆಯವರ ಬಳಿಗೆ ಹೋದೆ.

"ಮಹಾಪ್ರಭು, ಮೇವಾಡವು ಅತಿ ಶೀಘ್ರದಲ್ಲಿಯೇ ಈ ಕಾಲದ ಅತ್ಯಂತ ಮಾರಕನಾದ ವೈರಿಯನ್ನು ಎದುರಿಸಬೇಕಾಗಿ ಬರಬಹುದು. ದೆಹಲಿಯ ಬಾದಷಹನು ನಮ್ಮ ಸೇನಾ ವ್ಯೂಹದಲ್ಲಿರುವ ಯಾವುದೇ ದೌರ್ಬಲ್ಯವನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಬೃಹನ್ನದನ ಎಚ್ಚರಿಕೆಗಳ ಹೊರತಾಗಿಯೂ ನಮ್ಮ ಸಾಮ್ರಾಜ್ಯದ ವಿರುದ್ಧ ಸಂಚು ಮಾಡುತ್ತಿರುವವರನ್ನು ಗುರುತಿಸಿ ನಾವು ಬಯಲಿಗೆಳೆಯದೆ ಹೋದರೆ ಅವನ ಸಾವು ವ್ಯರ್ಥವೇ ಆಗುತ್ತದೆ. ಅವರ ವಿರುದ್ಧ ನಾವು ಅತ್ಯಂತ ಉಗ್ರವಾದ ಕ್ರಮವನ್ನು ಕೈಗೊಳ್ಳಬೇಕಾಗಿದೆ".

"ಒಂದುಕ್ಷಣ, ಬೃಹನ್ನದನು, ನಿಜವನ್ನೇ ಹೇಳುತ್ತಿದ್ದನೆಂದು ಭಾವಿಸೋಣ. ಆದರೆ ಅವನನ್ನು ಮತ್ತೆ ಬದುಕಿಸದ ಹೊರತು, ಸಂಚಿನಲ್ಲಿ ಸೇರಿರುವ ಜನರನ್ನು ಹೆಸರು ಸಮೇತ ಪತ್ತೆ ಹಚ್ಚುವುದು ಹೇಗೆ ಎಂದು ನನಗೆ ತಿಳಿಯುತ್ತಿಲ್ಲ".

"ನಾವು", ತಂದೆಯವರ ಪ್ರತಿಕ್ರಿಯೆ ಏನಾಗಿರಬಹುದೆಂಬ ಖಾತರಿ ಇಲ್ಲವಾದ್ದರಿಂದ ನಾನು ತಡೆದು, "ವಿಕ್ರಮಾದಿತ್ಯನನ್ನು ಪ್ರಶ್ನಿಸಬಹುದು" ಎಂದೆ.

"ರಣಥಂಬೂರ್‌ನಿಂದ ಅವನನ್ನು ಹಿಂದಕ್ಕೆ ಕರೆಸುವುದೆ?"

"ಅಥವಾ ಪ್ರಶ್ನಿಸುವವರ ಒಂದು ತಂಡವನ್ನು ನಾವು ಕಳುಹಿಸಬಹುದು".

"ಈ ಸಮಾಚಾರವನ್ನು ಅವನಿಂದ ಹೊರಡಿಸುವ ಯಾವ ಉಪಾಯವಿದೆ ನಿನ್ನಲ್ಲಿ?"

"ಅವನನ್ನು ಎಲ್ಲರಿಂದ ಪ್ರತ್ಯೇಕಿಸಿ ಕೆಲವು ಬೆದರಿಕೆಗಳನ್ನು ಹಾಕಿದರೆ ಯಶಸ್ವಿಯಾಗಬಹುದು".

"ಅಗತ್ಯ ಬಿದ್ದರೆ, ಹಿಂಸಾ ವಿಧಾನವನ್ನು ಬಳಸಲೂ ನೀನು ಹಿಂಜರಿಯುವುದಿಲ್ಲ?"

ಅದರ ಬಗ್ಗೆ ಒಂದು ಕ್ಷಣ ಯೋಚನೆ ಮಾಡಿದೆ ನಿಜ ಹೇಳಲೋ ಬೇಡವೋ?

'ಹೌದು' ಅವರು ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುತ್ತಿದ್ದಂತೆ ಕಂಡಿತು. "ವಿಕ್ರಮಾದಿತ್ಯನು ಮುಗ್ಧನೇ ಆಗಿದ್ದರೂ, ಸಾಮ್ರಾಜ್ಯದ ಹಿತದ ಹೆಸರಿನಲ್ಲಿ ನಿನ್ನ ತಮ್ಮನನ್ನು ಮುಗಿಸಿ ಬಿಡಲು ನೀನು ಹಿಂಜರಿಯುವುದಿಲ್ಲ ಎಂದು ನನ್ನ ನಂಬಿಕೆ".

"ಅದು ಸುಳ್ಳು ಮತ್ತು ಅನ್ಯಾಯ ಮಹಾಪ್ರಭು"

"ಹೌದೆ? ನನ್ನ ಅಣ್ಣಂದಿಬ್ಬರೂ ತಮ್ಮ ಸ್ವಾರ್ಥ ಹಿತ ಸಾಧನೆಗಾಗಿ ನನ್ನನ್ನು ಬಲಿಕೊಡಲು ಪ್ರಯತ್ನಿಸಿದರು"

ಪೂರ್ತಿ ಸುಳ್ಳಲ್ಲವಾದರೂ ತಂದೆಯವರ ಈ ಸಂದಿಗ್ಧದ ಮಾತುಗಳಿಂದ ನಾನು ಆಘಾತಗೊಂಡೆ. ತನ್ನ ಅಣ್ಣಂದಿರ ಬಗ್ಗೆ ಹಾಗೂ ಸಿಂಹಾಸನದ ಉತ್ತರಾಧಿಕಾರಕ್ಕೆ ನಡೆದ ಅಂತಃಕಲಹದ ಬಗ್ಗೆ ಅವರು ಪ್ರಸ್ತಾವಿಸಿದ್ದು ಇದೇ ಮೊದಲು.

ಅವರ ಮತ್ತು ಮೇವಾಡದ ವಿರುದ್ಧ ಸಂಚು ನಡೆಸಿದವರನ್ನು ಬೆನ್ನಟ್ಟಿ ಹೋಗಬೇಕೆಂಬ ನನ್ನ ಬಯಕೆಯನ್ನು ಅವರು, ಅವರ ಅಣ್ಣಂದಿರಾದ ಪೃಥ್ವೀರಾಜ್ ಮತ್ತು ಜೈಸ್ ಮಲ್ಲರು ಸಿಂಹಾಸನಕ್ಕಾಗಿ ನಡೆಸಿದ ಮಾರಕ ಸ್ಪರ್ಧೆಗೆ ಹೋಲಿಸುವ ಕಾಠಿಣ್ಯವನ್ನು ತೋರಿದ್ದರು. ಅವರು ಸ್ಪಷ್ಟವಾಗಿಯೇ ತಮ್ಮನ್ನು ವಿಕ್ರಮಾದಿತ್ಯನೊಂದಿಗೆ ಗುರುತಿಸಿಕೊಳ್ಳುತ್ತಿದ್ದರು. ಕಾರಣ ಅವರಿಬ್ಬರೂ ತಮ್ಮಂದಿರಾಗಿದ್ದುದು ಮತ್ತು ಸಿಂಹಾಸನದ ಉತ್ತರಾಧಿಕಾರತ್ವದ ಸಾಲಿನಲ್ಲಿ ಮೂರನೆಯವರಾಗಿದ್ದುದು. ನನ್ನ ತಮ್ಮನ ತಪ್ಪಾಗಲಿ, ಅಪರಾಧವಾಗಲಿ ಎಷ್ಟೇ ಗುರುತರವಾಗಿದ್ದರೂ, ತಂದೆಯವರ ಪಾಲಿಗೆ ಅವನು ಶೋಷಿತ ದುರ್ಬಲ ವ್ಯಕ್ತಿ. ಅದು ಅನೇಕ ವರ್ಷಗಳಿಂದ ತಂದೆಯವರು ನನ್ನೊಂದಿಗೆ ನಡೆದುಕೊಳ್ಳುತ್ತಿರುವ ರೀತಿಯನ್ನು ವಿವರಿಸಲು ನೆರವಾಗಬಹುದು. ಆದರೆ ಮಾನವ ದೌರ್ಬಲ್ಯವನ್ನು ಕುರಿತಂತೆ ಅದು ಮನಕಲಕುವ ವ್ಯಾಖ್ಯೆ. ಇಲ್ಲೊಬ್ಬ ತನ್ನ ಜನರನ್ನು ಮತ್ತು ರಾಜ್ಯವನ್ನು ಒಂದು ರೀತಿಯ ಸ್ಫೋಟಕ ಸ್ವರೂಪದ್ದೂ, ಕಷ್ಟಕರವೂ ಆದ ಕಾಲದಲ್ಲಿ ಮುನ್ನಡೆಸಿದ್ದ ಚಿಂತನಪರ, ವಿಚಾರ ಶೀಲ ಹಾಗೂ ಚತುರ ವ್ಯಕ್ತಿ ಇದ್ದಾನೆ. ಅವನಾದರೋ ತನ್ನ ಅತ್ಯಂತ ಅಪಾಯಕಾರಿ ಎದುರಾಳಿಯನ್ನು ಭೇಟಿಯಾಗಲು ಸಿದ್ಧನಾಗುತ್ತಿದ್ದಾನೆ. ಇಷ್ಟಾದರೂ ಈ ಆದರ್ಶ ಪ್ರಭು ತೆರೆದ ಮನಸ್ಸಿನಿಂದ ಯೋಚಿಸಲಾರದೆ ಅತ್ಯಂತ ತೋರಿಕೆಯ ಪಿತೃತ್ವದ ಭಾವಾತಿರೇಕವು ತನ್ನ ದೇಶದ ಭವಿಷ್ಯವನ್ನೇ ಅಪಾಯಕ್ಕೀಡುಮಾಡಲು ಅವಕಾಶ ಮಾಡಿಕೊಡುತ್ತಿದ್ದಾರೆ.

"ನಾವು ವಿಕ್ರಮಾದಿತ್ಯನನ್ನು ದೇಶ ಭ್ರಷ್ಟಗೊಳಿಸಿದ್ದೇವೆ. ಅದು ನಮ್ಮ ವಿರುದ್ಧ ಸಂಚು ನಡೆಸುವುದರಲ್ಲಿ ತೊಡಗಿಸಿಕೊಂಡಿರುವರಿಗೆಲ್ಲಾ ಒಂದು ಒಳ್ಳೆಯ ಎಚ್ಚರಿಕೆ ಇದ್ದಂತೆ. ನಿದ್ದೆ ಮಾಡುತ್ತಿರುವ ನಾಯಿ ಅಲ್ಲೇ ಮಲಗಿರಲಿ ಮಗೂ, ಕಡೇ ಪಕ್ಷ ನಾವು ಈ ಮೊಗಲ್ ದುರಹಂಕಾರಿಯನ್ನು ಸೋಲಿಸುವವರೆಗಾದರೂ".

ನಾನು ನಮ್ಮ ತಂದೆಗೆ ಹೆಚ್ಚಿಗೆ ಇನ್ನೇನೂ ಹೇಳುವುದು ಇರಲಿಲ್ಲ.

"ನೀನು ಇಷ್ಟರಲ್ಲೇ ತಂದೆಯಾಗಲಿದ್ದಿ ಎಂದು ಕೇಳಿದೆ. ನಿನಗೇ ಮಕ್ಕಳಾದಾಗ ಮತ್ತು ಅವರೆಲ್ಲರೂ ನಿನ್ನಷ್ಟೇ ಮಾದರಿ ವ್ಯಕ್ತಿಗಳಾಗಿಲ್ಲದೆ ಹೋದಾಗ ಹಾಗೂ ಅವರಲ್ಲಿ ಕೆಲವರು ನಿನ್ನನ್ನು ತಾಳ್ಮೆ ಮೀರುವ ಘಟ್ಟದವರೆಗೂ ತೆಗೆದುಕೊಂಡು ಹೋದಾಗ ನೀನು ನನ್ನ ವಿಷಯಕ್ಕೆ ಕಡಿಮೆ ಕಠಿಣತೆಯಿಂದ ತೀರ್ಮಾನಕ್ಕೆ ಬರುತ್ತೀ."

ಏಕಲಿಂಗನಾದ ಶಿವನೇ ಈಗ ನನ್ನ ಧರ್ಮವೇನು?. ರಾಜ್ಯಕ್ಕೆ, ಮೇವಾಡದ ಜನತೆಯ ವಿಷಯಕ್ಕೆ, ಮುಸ್ಲಿಂ ಮತ್ತು ಹಿಂದೂ ಮಿತ್ರ ರಾಜ್ಯಗಳಿಗೆ, ಹಾಗೂ ನನ್ನ ವಿಷಯಕ್ಕೆ ನನ್ನ ಕರ್ತವ್ಯವೇನು? ನಾನು ಕೇವಲ ಕ್ಷತ್ರಿಯನಲ್ಲ. ನನಗೆ ರಾಜನಾಗುವ ಹಂಬಲವಿದೆ. ಮೇವಾಡವನ್ನು ಉಳಿಸಿ ರಕ್ಷಿಸುವುದು ನನ್ನ ಕರ್ತವ್ಯ. ಹಾಗಿದ್ದ ಮೇಲೆ ನಾನು ಹೇಗೆ ನಡೆದುಕೊಳ್ಳಬೇಕು? ಪಿತೂರಿಯ ವಿಷಯಕ್ಕೆ ತಂದೆಯವರ ನಿರುತ್ಸಾಹಕರವಾದ ಪ್ರತಿಕ್ರಿಯೆಯನ್ನು ನಾನು ಕಡೆಗಣಿಸಿ ಎಲ್ಲ ವಿಷಯಗಳನ್ನು ನನ್ನ ಕೈಗೆ ತೆಗೆದುಕೊಳ್ಳಬೇಕೆ? ನನ್ನ ತಮ್ಮನನ್ನು ಹಿಡಿತಕ್ಕೆ ತೆಗೆದುಕೊಂಡು ಏನೇ ಬೆಲೆ ತೆತ್ತಾದರೂ ಅವನಿಂದ ಸಮಾಚಾರವನ್ನು ಹೊರಡಿಸುವುದೆ? ತನಗೆ ಜವಾಬ್ದಾರಿ ಇತ್ತು, ಆದರೆ ರಾಣಾ ಅವರ ಆಜ್ಞೆಯನ್ನು ವಿರೋಧಿಸಿ, ತಾನೇ ಸ್ವತಂತ್ರವಾಗಿ ಕಾರ್ಯ ಪ್ರವೃತ್ತನಾಗುವ ಶಕ್ತಿ ಮತ್ತು ಅಧಿಕಾರ ಇರಲಿಲ್ಲ ಎಂದು ಹೇಳುವುದಕ್ಕೋಸ್ಕರ ತನ್ನ ಸಾಮ್ರಾಜ್ಯವನ್ನು ನೀಗಿಕೊಂಡರೆ ಆ ಮನುಷ್ಯನಿಗೆ ಏನು ಬಂದ ಹಾಗಾಯಿತು?

ಇವೆಲ್ಲಕ್ಕೂ ಆಧಾರವಾಗಿರುವ, ಉತ್ತರಿಸಲಾಗದ ಪ್ರಶ್ನೆಯೊಂದಿದೆ. ನಾನು ವಿಕ್ರಮನನ್ನು ವಿಚಾರಿಸಿಕೊಳ್ಳುವ ಹಾಗೂ ಅಗತ್ಯ ಬಿದ್ದರೆ ಅವನನ್ನು ಮುಗಿಸಿ ಬಿಡುವ ಎಲ್ಲ ಸಾಧ್ಯತೆಗಳನ್ನು ನಿವಾರಿಸಿ ಬಿಡುವುದೊಂದನ್ನು ಬಿಟ್ಟು ತಂದೆಯವರನ್ನು ವಿನಂತಿಸಿಕೊಳ್ಳಲು ನಾನು ಹೋದದ್ದಾದರೂ ಏಕೆ?

ಅಧ್ಯಾಯ 44

ರಾತ್ರಿಯಾದದ್ದನ್ನೂ ಗಮನಿಸದಷ್ಟು ಮಟ್ಟಿಗೆ, ಯುದ್ಧಕ್ಕೆ ಹಣವನ್ನು ಒಟ್ಟುಗೂಡಿಸುವ ಸಲುವಾಗಿ ಹೊಸ ತೆರಿಗೆಗಳ ಪ್ರಸ್ತಾವಗಳನ್ನು ರೂಪಿಸುವುದರಲ್ಲಿ ನಾನು ನಿಜಕ್ಕೂ ಮುಳುಗಿ ಬಿಟ್ಟಿದ್ದೆನೆ? ಅದು ಹೇಗೆ ಸಾಧ್ಯ? ನಾನು ಕಛೇರಿಗೆ ಬಂದು ಖಂಡಿತಾ ಎರಡೂವರೆ ಗಂಟೆಗಿಂತ ಹೆಚ್ಚು ಸಮಯ ಆಗಿಲ್ಲ. ಎಲ್ಲೋ ಏನೋ ತಪ್ಪಾಗಿದೆ, ಭಯಂಕರ ತಪ್ಪಾಗಿದೆ. ಹಕ್ಕಿ ಪಕ್ಷಿಗಳ ದನಿಗಳು ಒಮ್ಮೆಲೇ ಅದು ಹೇಗೆ ಅಡಗಿ ಹೋಗಲು ಸಾಧ್ಯ? ಚಿತ್ತೂರಿನ ಜನವೆಲ್ಲಾ ಎಲ್ಲಿ ಮಾಯವಾದರು: ಬೀದಿಗಳಲ್ಲಿ ಗೋಲಿ ಆಡುತ್ತಿರುವ ಮತ್ತು ಬುಗುರಿ ಆಡಿಸುತ್ತಿರುವ ಹುಡುಗರು, ನಿದ್ದೆ ಬರಿಸುವಂತೆ ಒಂದೇ ಸಮನೆ ಆಡುತ್ತಿರುವ ಉಯ್ಯಾಲೆಗಳು, ನದಿ ಹತ್ತಿರದ ಧೋಬಿ ಘಾಟ್‌ಗಳಲ್ಲಿ ಬಟ್ಟೆಗಳನ್ನು ಒಗೆಯುವ ಶಬ್ದ, ತರಕಾರಿಗಳು, ಹಣ್ಣುಗಳು, ಹರಳುಗಳು ಮುತ್ತುಗಳನ್ನು ಬೀದಿಗಳಲ್ಲಿ ಕೂಗಿಕೊಂಡು ಮಾರಾಟ ಮಾಡುವವರ ದನಿಗಳು, ಬೆದರಿಕೆ ಹಾಕುತ್ತ ತಿರುಗಾಡುವ ದಾರಿಹೋಕರು ಹಾಗೂ ಸಾಹಸಮಲ್‌ನ ಜಲ ಮತ್ತು ಒಳಚರಂಡಿ ಯೋಜನೆಗೆ ಕಲ್ಲುಗಳನ್ನು ಒಟ್ಟುಗೂಡಿಸುತ್ತಿರುವ ಕಲ್ಲು ಗಣಿಗಾರಿಕೆಯ ಶಬ್ದ ಇದೆಲ್ಲಾ ಎಲ್ಲಿ ಮಾಯವಾಯಿತು?

ನನಗೆ ಏನೋ ಒಂದು ರೀತಿಯ ಕಳವಳವಾಯಿತು. ಏನಾಗುತ್ತಿದೆ ಎನ್ನುವುದನ್ನು ಪತ್ತೆ ಮಾಡಬೇಕೆಂದು ತೀರ್ಮಾನಿಸಿದೆ. ಬೀದಿಗಳಲ್ಲಿ ಬೆಕ್ಕಾಗಲಿ, ನಾಯಿಯಾಗಲಿ, ಹಕ್ಕಿಯಾಗಲಿ, ಹುಡುಗರಾಗಲಿ, ದೊಡ್ಡವರಾಗಲಿ ಕಾಣುತ್ತಿಲ್ಲ. ನನ್ನ ಹೊಟ್ಟೆಯ ಆಳದಲ್ಲಿ ಭಯ ಗಟ್ಟಿಗೊಳ್ಳುತ್ತಿತ್ತು. ವಾಂತಿ, ಭೇದಿ ಹರಡಿದ ಸಂದರ್ಭದಲ್ಲಾಗಲಿ ಅಥವಾ ನಮ್ಮ ತಾತ ರಾಣಾ ರೈಮಲ್‌ನ ಅಂತಿಮ ಯಾತ್ರೆಯ ಸಂದರ್ಭದಲ್ಲಾಗಲಿ ಅಂಥ ನಿಗೂಢ ಭಯ ಹುಟ್ಟಿಸುವಂಥ ನಿಶ್ಶಬ್ದತೆ ಇರಲಿಲ್ಲ. ಬಾಬರನೇನಾರೂ ಗುಟ್ಟಾಗಿ ಚಿತ್ತೂರಿಗೆ ನುಸುಳಿ ಎಲ್ಲ ಜೀವಂತ ಪ್ರಾಣಿಗಳ ಮೇಲೆ ತನ್ನ ಖಡ್ಗವನ್ನು ಆಡಿಸಿ ಕಗ್ಗೊಲೆ ಗೈದನೋ ಹೇಗೆ? ತಂದೆಯವರು ಹುಷಾರಾಗಿದ್ದಾರೆಯೆ? ನಾನು ಹುಚ್ಚು ಹಿಡಿದವನಂತೆ ಮಂಗಳನನ್ನು ಕೂಗಿ ಕರೆಯುತ್ತ ಓಡ ತೊಡಗಿದೆ. ಏಕೆ ಎಂದು ನನಗೆ ಗೊತ್ತಿಲ್ಲ.

ಆ ಮೇಲೆ ನಾನು ಆಕಾಶದತ್ತ ನೋಡಿದೆ.

ನಕ್ಷತ್ರ ರಹಿತ ಆಕಾಶದ ನಡು ನೆತ್ತಿಯಲ್ಲಿ ಪೂರ್ತಿ ಕಪ್ಪು ಹಿಡಿದ ಚಂದ್ರ ಕಾಣುತ್ತಿದ್ದ. ಅದರ ಸುತ್ತಲೂ ಮಸಕು ಮಸಕಾದ ಪ್ರಭಾವಲಯವಿತ್ತು. ಆಕಾಶದ ಹಣೆಯಲ್ಲಿ ಇದೇನಿದು ಈ ಅಪಶಕುನದ ಹಣೆಬೊಟ್ಟು?

ನನ್ನ ಆತ್ಮೀಯ ಮಿತ್ರ ಮತ್ತು ರಕ್ಷಕ ಮಂಗಳನು ಕೈಯಲ್ಲಿ ಕಾಗದ ಪತ್ರಗಳನ್ನು ಹಿಡಿದು, ನನ್ನ ಬೆನ್ನಟ್ಟಿ ಬರುತ್ತಿರಬಹುದಾದ ದೆವ್ವಗಳಿಂದ ನನ್ನನ್ನು ರಕ್ಷಿಸುವ ಸಲುವಾಗಿ, ಆ ಕತ್ತಲೆಯಲ್ಲಿ ಓಡಿ ಬಂದನು.

ಮಂಗಳನು ನನ್ನ ಕಡೆ ಗಟ್ಟಿಯಾಗಿ ಕೂಗುತ್ತಿದ್ದ– "ಸೂರ್ಯಗ್ರಹಣದ ಕಡೆ ದಯವಿಟ್ಟು ನೋಡಬೇಡಿ ಮಹಾಸ್ವಾಮಿ." ಅವನು ನನ್ನ ಕಣ್ಣುಗಳ ಸುತ್ತ ತನ್ನ ಕೈಗಳನ್ನು ಚಾಚಿ, ನನ್ನ ತಲೆಯನ್ನು ತನ್ನ ಎದೆಯಲ್ಲಿ ಹುದುಗಿಸಿಕೊಂಡನು. "ನಿಮಗೇನೂ ಆಗದೆ ಸರಿಯಾಗಿದ್ದೀರಿ ತಾನೆ ಮಹಾರಾಜ್‌ಕುಮಾರ್?"

ಅದು ಪೂರ್ಣ ಸೂರ್ಯಗ್ರಹಣ. ತನ್ನನ್ನು ತಾನು ಇಲ್ಲವಾಗಿಸಿಕೊಳ್ಳಲು ಸೂರ್ಯದೇವನು ಇನ್ಯಾವುದಾದರೂ ಸ್ಥಳ ಮತ್ತು ವೇಳೆಯನ್ನು ಆಯ್ಕೆ ಮಾಡಿಕೊಳ್ಳಬಾರದಿತ್ತೆ? ನನ್ನ ವಂಶದ ಪೂರ್ವಜ ನನಗೇನು ಹೇಳಲು ಹೊರಟಿದ್ದನು? ಮೊಗಲರಿಂದ ಬರಬಹುದಾದ ಅಪಾಯವನ್ನು ಎದುರಿಸಲು ನಾವು ಅದೆಂಥ ಅಶುಭ ಗಳಿಗೆಯನ್ನು ಆಯ್ದುಕೊಂಡಿದ್ದೇವೆಂದು ಬೆಳಕಿನ ದೇವನು ಕಳಿಸುತ್ತಿರುವ ನಿಸ್ಸಂದಿಗ್ಧ ಸಂದೇಶವೇ ಅದು? ಆದರೆ ಆಗ್ರಾದಲ್ಲೂ ಇದೇ ಸಮಯಕ್ಕೆ ಗ್ರಹಣ ಹಿಡಿದಿರಬೇಕು ಮತ್ತು ಬಾದಷಹನೂ ಅದನ್ನು ನೋಡಿರಲೇಬೇಕು. ಸೂರ್ಯದೇವನು ಯಾರ ಕಡೆ ಇದ್ದನು? ಸೂರ್ಯ ಮತ್ತು ಚಂದ್ರರು ಸಂಧಿಸುವ ಈ ಗ್ರಹಣ ಮೇವಾಡಕ್ಕೆ ವಿನಾಶವನ್ನು ಸೂಚಿಸುತ್ತಿದೆಯೋ ಅಥವಾ ಮೊಗಲ್ ಬಾದಷಹನಿಗೆ ಸೂಚಿಸುತ್ತಿದೆಯೋ? ನನಗೆ ಅದು ಗೊತ್ತಿರಲಿಲ್ಲ ಮತ್ತು ನಾನು ಅದನ್ನು ಲೆಕ್ಕಿಸಿರಲೂ ಇಲ್ಲ. ಮುಂಬರಲಿರುವ ಬಾಬರನೊಂದಿಗಿನ ಯುದ್ಧವನ್ನು ಮುಂದಕ್ಕೆ ಹಾಕಲು ಮೂಢನಂಬಿಕೆಯ ಪೂರ್ಣ ಪ್ರಭಾವ ಮತ್ತು ಒತ್ತಡವನ್ನು ನಾನು ಬಳಸಿಕೊಳ್ಳುವ ಸಮಯವೆಂದರೆ ಇದೊಂದೇ.

"ಗ್ರಹಣದ ಕಡೆ ಒಂದೇ ಸಮ ನಿಟ್ಟಿಸಿ ನೋಡುತ್ತ ನೀವು ಏನು ಮಾಡುತ್ತಿದ್ದಿರಿ ಮಹಾಸ್ವಾಮಿ? ನಿಮ್ಮ ಕಣ್ಣುಗಳಿಗೆ ಚಿಕಿತ್ಸೆ ನೀಡಲು ನಾವು ಕೂಡಲೇ ರಾಜ ವೈದ್ಯರನ್ನು ಸಂಪರ್ಕಿಸಬೇಕು"

"ಆಮೇಲೆ, ಆಮೇಲೆ. ನಾನು ಮೊದಲು ಮಹಾಪ್ರಭುಗಳನ್ನು ಕಾಣಬೇಕು" ನನ್ನ ಕಣ್ಣುಗಳ ಮಧ್ಯೆ ಉರಿಯುವ ವೃತ್ತಗಳಿದ್ದುವು. ನಾನು ಓಡುತ್ತಿದ್ದಂತೆ ಎಡವಿದೆ ಆದರೆ ನಾನು ನಿಲ್ಲಲಿಲ್ಲ.

'ಮಹಾಪ್ರಭು' ನಾನು ಸ್ವಲ್ಪ ಏದುಸಿರು ಬಿಡುತ್ತಿದ್ದೆ. "ಶಕುನಗಳು ಮತ್ತು ಸಂಕೇತಗಳಿಗೆ ನೀವು ಲಕ್ಷ್ಯ ಕೊಡಬೇಕು ಅಂತ ಒತ್ತಾಯ ಮಾಡುತ್ತೇನೆ. ಸರಿಯಾದ ವಿವೇಕದ ಸಲಹೆಗೆ ನೀವು ಬೆಲೆ ಕೊಡುವಂತಾಗಲಿ. ಮೊಗಲ್ ಬಾದಷಹನ ವಿರುದ್ಧ ಹೋರಾಡಲು ಇದು ಸೂಕ್ತವಾದ ಸಮಯವಲ್ಲ ಎಂದು ನಮ್ಮ ವಂಶದ ಪೂರ್ವಜ ಸಾಕ್ಷಾತ್ ಸೂರ್ಯದೇವನೇ ನಮ್ಮನ್ನು ಎಚ್ಚರಿಸುತ್ತಿದ್ದಾನೆ".

"ನೀನು ಹೇಳಿದ್ದಕ್ಕೆ ಪೂರ್ತಿ ವಿರುದ್ಧವಾಗಿದೆ ಮಗನೆ." ಮಹಾಪ್ರಭುಗಳು ಜೋರಾಗಿ ನಕ್ಕು ನನ್ನ ಬೆನ್ನ ಮೇಲೆ ಕೈಯಾಡಿಸಿದರು. "ಬಾಬರನು ಸಾಯುತ್ತಿದ್ದಾನೆಂದು ನಮ್ಮ ಪೂರ್ವಜನು ಕಳಿಸಿದ ಹರಿಕಾರನೊಬ್ಬನು ಈಗ ತಾನೆ ನಮಗೆ ತಿಳಿಸಿದ್ದಾನೆ".

ಎಲ್ಲವೂ ನಿಲುಗಡೆಗೆ ಬಂದು ಬಿಟ್ಟಿದೆ. ಯುದ್ಧ ಸಿದ್ಧತೆಗಳನ್ನು ಮುಂದೂಡಲು ಆದೇಶ ಹೊರಡಿಸಲಾಗಿದೆ. ನಾವು ಹೇಮಂತ ಋತುವಿನಲ್ಲಿ ದೀಪಾವಳಿಯನ್ನು ಆಚರಿಸುತ್ತಿದ್ದೇವೆಂದು ನೀವು ತಿಳಿಯುವಿರಿ. ಗುಮಾಸ್ತರು ವಾಕ್ಯ ಮಧ್ಯದಲ್ಲಿಯೆ ಬರೆಯುವುದನ್ನು ನಿಲ್ಲಿಸಿದರು.

ಕುದುರೆಗಳ ಮೂರು ಕಾಲಿಗೆ ಲಾಳ ಹೊಡೆದ ಕುದುರೆ ಲಾಯದ ಯಜಮಾನ ನಾಲ್ಕನೆಯದನ್ನು ಹಾಗೆಯೇ ಬಿಟ್ಟನು. ಖಡ್ಗಗಳನ್ನು ತಯಾರಿಸುವವರು ಕುಲುಮೆಯನ್ನು ಆರಿಸಿ ಕಮ್ಮಾರಸಾಲೆಯನ್ನು ಮುಚ್ಚಿ ಬಿಟ್ಟು ನೌಟಂಕಿಗೆ ಹೋಗಿ ಬಿಟ್ಟದ್ದಾರೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ ಕೆಲವು ಪ್ರದೇಶಗಳಲ್ಲಿ ಅವರುಗಳೆಲ್ಲಾ ಸಿಹಿ ಹಂಚುತ್ತಿದ್ದಾರೆ. ಕಳೆದ ಮೂರು ತಿಂಗಳಿನಿಂದ ಅವಧಿ ಮೀರಿ ಕೆಲಸ ಮಾಡುತ್ತಿದ್ದ ಸರ್ಕಾರಿ ಕಛೇರಿಗಳು ಮತ್ತು ಸಂಪುಟದ ದರ್ಜೆ ಸಚಿವರು ಕಳೆದ ಎರಡು ದಿನಗಳು ರಜೆ ತೆಗೆದುಕೊಂಡಿದ್ದಾರೆ. ದೇವಾಲಯಗಳಲ್ಲಿ ಇಡೀ ದಿನವೆಲ್ಲಾ ಘಂಟಾನಾದ ಆಗುತ್ತಿದೆ. ನಮ್ಮ ಮುಸ್ಲಿಂ ಬಂಧುಗಳನ್ನೂ ಒಳಗೊಂಡಂತೆ ಪ್ರತಿಯೊಬ್ಬರೂ ಧನ್ಯವಾದಗಳನ್ನು ತಿಳಿಸುತ್ತಿದ್ದಾರೆ.

ಮೊಗಲ್ ಆಕ್ರಮಣಕಾರಿಯಾದ ಬಾಬರನು, ಇಬ್ರಾಹಿಂ ಲೂದಿಯ ತಾಯಿಯನ್ನು, ಆಕೆ ವಯಸ್ಸಾದ ಹೆಂಗಸು ಎಂಬ ಕಾರಣಕ್ಕೆ ಕರುಣೆ ತೋರಿ, ಆಗ್ರಾದಲ್ಲಿ ತಾನು ವಾಸವಿದ್ದೆಡೆಯೇ ಆಶ್ರಯ ಕೊಟ್ಟು ಇಟ್ಟು ಕೊಂಡಿದ್ದನು. ಅವಳು ತನ್ನ ಸೇವಕಿಯೊಬ್ಬಳ ಮೂಲಕ ಬಾದಷಹನಿಗೆ ವಿಷ ಹಾಕಿಸಿದ್ದಳು. ಕಳೆದ ಇಪ್ಪತ್ತ ನಾಲ್ಕು ಗಂಟೆಗಳಿಂದ ಬಾಬರನು ವಿಪರೀತ ವಾಂತಿ ಮಾಡಲಾರಂಭಿಸಿದ್ದನು.

"ಬಾದಷಹನು ಈಗ ಯಾವ ಕ್ಷಣದಲ್ಲಾದರೂ ಕೊನೆಯುಸಿರೆಳೆಯಲಿದ್ದಾನೆ. ಅವನ ಆತ್ಮ ಸ್ವರ್ಗಕ್ಕೆ ಹೋಗಲಿ" ಎಂದು ಷಫ್ಲಿಯ ತಂದೆ ನನಗೆ ಹೇಳಿದರು.

ಅವರ ನಂತರ ಸ್ವಯಂ ಮಹಾಪ್ರಭುಗಳೇ ಬಂದರು. ಚರ್ಚಿಸುವಂಥ ಸಮಸ್ಯೆ ಏನಾದರೂ ಇದ್ದರೆ, ತಾವು ದೊರೆ ಎನ್ನುವ ಸ್ಥಾನ ಗೌರವಕ್ಕೆ ಅಂಟಿಸಿಕೊಂಡು ನನ್ನನ್ನು ಕರೆಸಿಕೊಳ್ಳುವ ಬದಲು ಅವರೇ ಬಂದು ಬಿಡುತ್ತಾರೆ. ನಾವಿಬ್ಬರೂ ಸೇರಿಕೊಂಡು ಸ್ಥಳದಲ್ಲೇ ಶೇಕಡಾ ತೊಂಬತ್ತೈದರಷ್ಟು ಸಮಸ್ಯೆಯನ್ನೂ, ಕಡತವನ್ನೂ ಇತ್ಯರ್ಥಗೊಳಿಸಿಬಿಡುತ್ತಿದ್ದೆವು.

"ನನಗೆ ತಾವು ಹೇಳಿ ಕಳಿಸಬೇಕಾಗಿತ್ತು ಮಹಾಪ್ರಭು"

"ನಿನ್ನನ್ನು ಹೇಳಿ ಕಳಿಸಿ ಕರೆಸಿಕೊಳ್ಳುವುದು ಯಾತಕ್ಕೆ? ಈಗ ರಜೆ. ಅದೂ ಕೂಡ ಅಧಿಕೃತ ರಜೆ. ಚಿತ್ತೂರಿನಲ್ಲಿ ಕೆಲಸ ಮಾಡುತ್ತಿರುವವರು ನೀನು ಮತ್ತು ಮಂಗಳ್ ಇಬ್ಬರೇ".

ನಾನು ಮುಗುಳ್ನಕ್ಕು ಎದ್ದು ನಿಂತು ನನ್ನ ಆಸನವನ್ನು ಅವರಿಗೆ ಬಿಟ್ಟುಕೊಟ್ಟೆ.

"ನೀನು ಅದೆಂಥಾ ನಿರಾಶಾವಾದಿಯಪ್ಪಾ ಮಗನೆ. ಬಾಬರ್ ಸಾಯೋದಿಲ್ಲ ಅಥವಾ ಅವನು ಈಗಾಗಲೇ ಸತ್ತಿಲ್ಲ ಅಂತ ನೀನು ಯಾತಕ್ಕೆ ಅಂದುಕೊಳ್ಳುತ್ತೀ."

"ಮುದುಕಿಯ ಸೇವಕಿ ಕೆಲಸ ಕೆಡಿಸಿದ್ದಾಳೆ ಅಂತ ನನ್ನ ಅನುಮಾನ. ವಿಷ ಹಾಕಿದ ಸಂದರ್ಭಗಳಲ್ಲಿ ಹನ್ನೆರಡು ಗಂಟೆ ಒಳಗೆ ಸಾಯಲಿಲ್ಲ ಅಂದರೆ, ಬದುಕುವ ಸಾಧ್ಯತೆಯೇ ಹೆಚ್ಚು".

"ಅಷ್ಟೊಂದು ಖಚಿತವಾಗಿ ಹೇಗೆ ಹೇಳುತ್ತೀ?"

"ದೇವರು ಅವನ ಕಡೆ ಇದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ವರ್ಷವೂ ಅವನು ದೇವರ ಮೇಲಿನ ನಂಬಿಕೆಯಿಂದಲೇ ಬದುಕಿದ್ದಾನೆ ಮತ್ತು ಅವನ ಈ ನಂಬಿಕೆ ಅನೇಕ ಕಷ್ಟಕರವಾದ ಸನ್ನಿವೇಶಗಳಲ್ಲಿ ನಿಜವನ್ನು ಅರ್ಥಮಾಡಿಕೊಂಡು ಮೋಸಹೋಗದಂತೆ ಮಾಡಿದೆ. ಬೆಕ್ಕುಗಳಿಗೆ ಒಂಬತ್ತು ಜನ್ಮ ಇರುತ್ತೆ ಅಪ್ಪ; ಬಾಬರ್ ಈಗಾಗಲೇ ಹತ್ತೊಂಬತ್ತನೆಯದೋ ಇಪ್ಪತ್ತೈದನೆಯದೋ ಜನ್ಮದ ಮುಖಾಂತರ ಸಾಗಿ ಬಂದಿದ್ದಾನೆ"

"ಈ ಸೈನಿಕ ಕಾರ್ಯಾಚರಣೆಯಲ್ಲಿ ನಿನಗೆ ವಿಧಿಯೇ ಸರ್ವಶಕ್ತ, ಮನುಷ್ಯ ನಿಸ್ಸಹಾಯಕ ಎನ್ನುವ ಭಾವನೆ ಬಂದಿದೆಯಾ ಮಗೂ?"

"ಇಲ್ಲ. ನನಗೆ ಯಾವುದನ್ನೂ ಅದೃಷ್ಟಕ್ಕೆ ಬಿಟ್ಟುಬಿಡಲು ಇಷ್ಟವಿಲ್ಲ"

"ಹಾಗಿದ್ದ ಮೇಲೆ ನಾನೂ ಕೆಲಸಕ್ಕೆ ತೊಡಗಿಕೊಳ್ಳುವುದೇ ಒಳ್ಳೆಯದು".

"ಅಪ್ಪಾ ನೀವು ಹೊರಡುವುದಕ್ಕೆ ಮುಂಚೆ ನಿಮ್ಮನ್ನು ಒಂದು ಪ್ರಶ್ನೆ ಕೇಳಲೆ?"

"ಕೇಳಬಹುದು".

"ನಾವು ಇಲ್ಲಿಂದ ಹೊರಗಡೆ ಹೋದಾಗ, ಮೇವಾಡದ ರಾಜ್ಯಪಾಲ ಮತ್ತು ಹಂಗಾಮಿ ಮುಖ್ಯಸ್ಥರನ್ನಾಗಿ ತಾವು ಯಾರನ್ನು ನೇಮಿಸಬೇಕೆಂದಿದ್ದೀರಿ?"

"ನಾನು ಹಲವಾರು ವಾರಗಳಿಂದ ಅದರ ಬಗ್ಗೆನೇ ತಲೆ ಕೆಡಿಸಿಕೊಳ್ಳುತ್ತಾ ಇದ್ದು ಯಾವುದೇ ತೀರ್ಮಾನಕ್ಕೆ ಬರುವುದಕ್ಕಾಗಿಲ್ಲ. ಬೆಕ್ಕುಗಳು ದೂರ ಹೋಗಿದ್ದಾಗ ಇಲಿಗಳದೇ ಆಟ. ಇತರೆ ಬೆಕ್ಕುಗಳೂ ನಮ್ಮ ಪ್ರಾಂತದ ಮೇಲೆ ಕಣ್ಣಿಟ್ಟಿರುತ್ತವೆ. ನನ್ನ ಹಳೆ ಸ್ನೇಹಿತ ಲಕ್ಷ್ಮಣಸಿಂಹಜೀ ಹತ್ತಿರ ಈ ವಿಷಯ ಪ್ರಸ್ತಾಪಿಸುವುದಕ್ಕೆ ಪ್ರಯತ್ನಿಸಿದೆ. ಆದರೆ ಈ ಸಲ ಆ ಮನುಷ್ಯ ಭಾರೀ ಹಟಮಾರಿ ಆಗಿ ಬಿಟ್ಟಿದ್ದಾನೆ. ಅವನು ನನ್ನ ಕುರುಡಗಣ್ಣಿನ ಪಕ್ಕ ಇರಲು ಇಷ್ಟ ಪಡುತ್ತಾನೆ. ಹಾಗೆ ಮಾಡುವುದರಿಂದ ನನ್ನ ಪರವಾಗಿ ನೋಡಿ ನನ್ನನ್ನು ಕಾಪಾಡಬಹುದು ಅನ್ನುವುದು ಆತನ ಲೆಕ್ಕಾಚಾರ. ನಿನ್ನ ಮನಸ್ಸಿನಲ್ಲಿ ಯಾರಿದ್ದಾರೆ?"

"ಮಂಗಳ ಸಿಂಹ".

"ಅವರಮ್ಮ ಎಲ್ಲಿದ್ದಾಳೆ ಅಂತ ಏನಾದರೂ ಗೊತ್ತಾಯಿತೆ?"

"ಇಲ್ಲ ಮಹಾಪ್ರಭು"

"ಅವನು ಬಹಳ ಒಳ್ಳೆಯ ಮನುಷ್ಯ. ತೆರೆದ ದೃಷ್ಟಿಯುಳ್ಳ ಕಠೋರ ಮತ್ತು ನ್ಯಾಯ ನಿಷ್ಠುರವಾದ ವ್ಯಕ್ತಿ. ಸಿಂಹಾಸನಕ್ಕೆ ಅತಿಯಾದ ನಿಷ್ಠೆ ಇರುವಂಥ ಮನುಷ್ಯ. ಆದರೆ ಅವನನ್ನು ಅವರೆಲ್ಲ ಸಹಿಸಲ್ಲ. ಅವನು ಯುವಕ. ಅವನು ನೇರವಾಗಿ ರಾಜವಂಶಕ್ಕೆ ಸೇರಿದವನಲ್ಲ. ಅದಷ್ಟೇ ಆಗಿದ್ದರೆ, ಅವನಿಗೆ ಈಗಲೂ ಒಂದು ಅವಕಾಶ ಇದೆ. ಆದರೆ ನಮ್ಮ ಪ್ರಧಾನಿ ರಾವ್ ಪೂರಣ್ ಮಲ್‌ಜೀಯವರು, ಅವರನ್ನು ಮೇವಾಡದ ಹಂಗಾಮಿ ಮುಖ್ಯಸ್ಥರನ್ನಾಗಿ ಮಾಡದಿದ್ದರೆ, ಭಾರೀ ತಪ್ಪು ತಿಳಿದುಕೊಳ್ಳುತ್ತಾರೆ. ಏನೇ ಆದರೂ ಒಂದು ಪರಿಹಾರ ನನಗೆ ತೋಚುತ್ತಿದೆ. ಮಂಗಳನನ್ನು ನಾನು ಚಿತ್ತೂರಿನ ರಾಜ್ಯಪಾಲನನ್ನಾಗಿ ನೇಮಿಸುತ್ತೇನೆ. ಹಾಗೆ ಮಾಡಿದರೆ ಯಾರೂ ಮನಸ್ಸು ಕೆಡಿಸಿಕೊಳ್ಳುವುದಿಲ್ಲ. ಮಂಗಳನು ಒಳಗಿನ ಮತ್ತು ಹೊರಗಿನ ವಿದ್ಯಮಾನಗಳ ಮೇಲೆ ಒಂದು ಕಣ್ಣಿಟ್ಟಿರಬಹುದು".

* * *

ಈಚಿನ ದಿನಗಳಲ್ಲಿ ನಾನು ವೀಣೆ ನುಡಿಸುವ ರೀತಿಯಲ್ಲೇ ಏನೋ ಒಂದು ರೀತಿಯ ದಂಡನಾರ್ಹವಾದಂಥದ್ದು ಇದೆ. ಅದು ಬಹುಮಟ್ಟಿಗೆ ಪಶ್ಚಾತ್ತಾಪ ಪಡುತ್ತಿರುವಂತೆ ಮತ್ತು ಹತಾಶ ವ್ಯಕ್ತಿಯೊಬ್ಬ ಸುಗಂಧಳಿಂದ ಬಿಡುಗಡೆಯನ್ನು ಕೋರುತ್ತಿರುವಂತೆ ಅಲ್ಲದಿದ್ದರೂ ಅವಳ ಕ್ಷಮೆಯನ್ನು ಯಾಚಿಸುತ್ತಿರುವಂತೆ ಇರುತ್ತಿತ್ತು. ನನಗೆ ಯಾವಾಗ ಸಾಧ್ಯ ಆಗುತ್ತೋ ಆಗ ಅಭ್ಯಾಸ ಮಾಡುತ್ತಿದ್ದೆ. ಬೆಳಗಿನ ಹೊತ್ತು ನನಗೆ ಬಿಡುವಿರುತ್ತಿರಲಿಲ್ಲವಾದ್ದರಿಂದ ನಾನು ನನ್ನ ನಿದ್ರೆಯ ಸಮಯದಲ್ಲಿ ಕಡಿತ ಮಾಡಬೇಕಾಗುತ್ತದೆ. ನನಗೆ ಕೊಳಲು ನುಡಿಸಲು ಚೆನ್ನಾಗಿ ಬರುವುದು ಹಾಗೂ ಸಂಗೀತದ

ಶಾಸ್ತ್ರೀಯ ಸಿದ್ಧಾಂತಗಳ ಸ್ವಲ್ಪ ಮಟ್ಟಿನ ಪರಿಚಯ ಇರುವುದು ನನಗೆ ಅನುಕೂಲಕರವಾಗಿದ್ದಿರಲೇಬೇಕೆಂದು ನನ್ನ ಊಹೆ. ಈಗ ನನ್ನ ಬೆರಳುಗಳು ಜಡ್ಡುಗಟ್ಟುತ್ತಿರುವುದರಿಂದ ಮೊದಲಿನ ಹಾಗೆ ಅವುಗಳಿಂದ ರಕ್ತ ಬರುವುದಿಲ್ಲ. ಆಗೊಮ್ಮೆ ಈಗೊಮ್ಮೆ ಜಾರುವುದು ಬಿಟ್ಟರೆ ಬೆರಳುಗಳನ್ನು ಮೀಟುವುದು ಬಹುಮಟ್ಟಿಗೆ ಚೆನ್ನಾಗಿ ಆಗುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ನಾನು ಅಭ್ಯಾಸ ಮಾಡುತ್ತಿರುವ ಹಾಗೆಯೇ ಕಠಿಣವಾಗಿ ಅಭ್ಯಾಸ ಮಾಡುವುದನ್ನು ಮುಂದುವರಿಸಿದರೆ ಮಹಾವೀಣಾವಾದನ ಪಟು ರಾಣಾ ಕುಂಭ, ಅವನ ಆತ್ಮ ಎಲ್ಲೇ ಅಲೆದಾಡುತ್ತಿದ್ದರೂ ಅಲ್ಲಿಂದಲೇ, ತನ್ನ ಹೆಜ್ಜೆಯಲ್ಲೇ ತನ್ನ ಮುಮ್ಮಗನೂ ಸಾಗಿ ಬರುತ್ತಿರುವುದಕ್ಕೆ ಮೆಚ್ಚಿಗೆ ಸೂಚಿಸಬಹುದು.

ಅಂತರಂಗದಲ್ಲಿ ನಾನೊಬ್ಬ, ಆಡಂಬರ ಪ್ರದರ್ಶನ ಮತ್ತು ಪ್ರದರ್ಶಕ ಪ್ರವೃತ್ತಿ ಆಳವಾಗಿ ಬೇರು ಬಿಟ್ಟಿರುವಂಥ ವ್ಯಕ್ತಿ. ನನಗೆ ವೀಣೆ ನುಡಿಸುವುದು ಇನ್ನೂ ಒಂದು ಸ್ವಲ್ಪ ಚೆನ್ನಾಗಿ ಬರುತ್ತಿದ್ದರೆ, ಈ ಹೊತ್ತೇ ನಾನು ಸಾರ್ವಜನಿಕವಾಗಿ ಘೋಷಿಸಿ ಎಲ್ಲ ಪ್ರಮುಖ ರಾಜರುಗಳ ಆಸ್ಥಾನದಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ ಬಿಡುತ್ತಿದ್ದೆ. ಗುಜರಾತ್ ಸುಲ್ತಾನನ ಆಸ್ಥಾನಕ್ಕೆ ಅಷ್ಟೇ ಏಕೆ ಬಹುಶಃ ದೆಹಲಿಯ ನೂತನ ಬಾದಷಹನ ಆಸ್ಥಾನಕ್ಕೂ ವೀಣೆ ನುಡಿಸಲು ಆಹ್ವಾನ ಬರುವಂತೆ ನೋಡಿಕೊಳ್ಳುತ್ತಿದ್ದೆ. ದುರದೃಷ್ಟವಶಾತ್, ನಿರಂತರವಾದ ಶ್ಲಾಘನೆಯ ಚಪ್ಪಾಳೆ ಗಿಟ್ಟಿಸಬೇಕೆಂಬ ನನ್ನ ಆಸೆಗೆ ತಕ್ಕಂತೆ ನನ್ನ ವೀಣಾ ಸಾಮರ್ಥ್ಯ ಇಲ್ಲ; ಕೊನೆಯ ಪಕ್ಷ ಸದ್ಯಕ್ಕಂತೂ ಇಲ್ಲ. ಪ್ರತಿಸಲವೂ ನನ್ನ ವ್ಯಾವಹಾರಿಕ ಜ್ಞಾನಕ್ಕಿಂತ ನನ್ನ ವೀಣೆ ನುಡಿಸಬೇಕೆಂಬ ಮಹತ್ವಾಕಾಂಕ್ಷೆಯೇ ಮೇಲಾಗುತ್ತದೆ. ಆಗ ಸಂಗೀತ ಪ್ರೇಮಿಗಳ ಒಂದು ಆಯ್ದ ಗುಂಪಿನ ಮುಂದೆ ವೀಣೆ ನುಡಿಸಬೇಕೆನಿಸುತ್ತದೆ. ಆಗ ನನ್ನ ಗುರುವಿನ ಬಗ್ಗೆ ಯೋಚಿಸುತ್ತೇನೆ. ಆಕೆ ಕಂಡೂ ಕಾಣದಂತೆ ಸೌಮ್ಯವಾದ ರೀತಿಯಲ್ಲಿ ತನ್ನ ತಲೆ ಅಲುಗಾಡಿಸಿ, ತಾಳ್ಮೆಯಿಂದಿರುವಂತೆ ಬುದ್ಧಿ ಹೇಳುತ್ತಾಳೆ.

ಇದೊಂದು ಕುತೂಹಲಕಾರಿ ಸಂಗತಿ. 'ಸಹನೆ' ಎನ್ನುವ ಶಬ್ದ ಎಲ್ಲವನ್ನು ಸಹಿಸುವುದು, ಅಂದ ಮೇಲೆ ರೋಗಿಗಳು ಮತ್ತು ಕಾಯಿಲೆಯಿಂದ ಪೀಡಿತರಾದವರಿಗೆ ಸಂಬಂಧಿಸಿದ್ದಾಗಿರಬೇಕು ಎಂಬುದು ನನ್ನ ಮನಸ್ಸಿಗೆ ಮೊದಲ ಬಾರಿಗೆ ಹೊಳೆಯಿತು. ಸಹನೆ, ಸಂಯಮ, ತಾಳ್ಮೆ ಮತ್ತು ಕಷ್ಟ ಸಹಿಷ್ಣುಗಳಾಗಿರಬೇಕೆಂದು ನಾವು ನಿರೀಕ್ಷಿಸುವಂಥವರು, ಚೇತರಿಸಿಕೊಳ್ಳಬೇಕಾಗುತ್ತದೆ ಅಥವಾ ಸಾಯಬೇಕಾಗುತ್ತದೆ. ಸುಗಂಧಳು ಏಕೆ ರೋಗಿಯಾಗಿದ್ದಳೋ ಅದೂ ನಾನೆಲ್ಲೂ ಕಾಣದಷ್ಟು ಘೋರ ರೋಗಿಯಾಗಿ, ಎನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ. ಅವಳೇಕೆ ಅತ್ತು ಗೋಳಾಡಿ ಚೀರಾಡಲಿಲ್ಲ? ಏಕೆ ಆಕಾಶವನ್ನು ಹರಿದುಹಾಕಲಿಲ್ಲ? ಕಣ್ಣಿಗೆ ಕಂಡದ್ದನ್ನೆಲ್ಲಾ ಏಕೆ ಚೂರು ಚೂರು ಮಾಡಲಿಲ್ಲ? ಆರೋಗ್ಯವಾಗಿದ್ದು ನಡೆದಾಡುತ್ತಿದ್ದವರನ್ನೆಲ್ಲಾ ಏಕೆ ಹಲ್ಲೆ ಮಾಡಿ ಇರಿಯಲಿಲ್ಲ? ಅಂಥಾ ಒಂದು ಪೈಶಾಚಿಕ ನೋವನ್ನು ಆಕೆ ಏಕಾದರೂ ಸಹಿಸಿದಳು? ಈ ವಿಷಯದಲ್ಲಿ ಯಾರಿಗೂ ಸಹಿಸದೆ ಅನ್ಯ ಮಾರ್ಗವಿಲ್ಲ ಎಂದು ನನಗೆ ಗೊತ್ತು. ಆಕ್ರಂದನ ಮಾಡಿ ದೇವರುಗಳಿಗೆ ಶಾಪ ಹಾಕಲು ಅದೇ ಒಂದು ಕಾರಣ ಆಗಬೇಕಲ್ಲವೆ? ಮನುಷ್ಯ ಜಾತಿಗೆ ಶಕ್ತಿ ಇಲ್ಲದೆ ಇರಬಹುದು, ಆದರೆ ನಪುಂಸಕನೂ ಶಾಪ ಹಾಕಬಹುದು ಎನ್ನುವುದು ಅವಳಿಗೆ ಗೊತ್ತಿರಲಿಲ್ಲವೇ? ಯಾರಿಗೆ ಗೊತ್ತು, ದೇವತೆಗಳೂ ಕೆಲವು ಸಲ ಸೇಡು ತೀರಿಸಿಕೊಳ್ಳಲು ಸಾಧ್ಯವಿಲ್ಲದೆ ಇರುವಂಥ ಜೀವಿಗಳ ಕೋಪಕ್ಕೆ ಹೆದರಲೇ ಬೇಕಾಗುತ್ತದೆ. ಸುಗಂಧಳಾದರೋ ಮೂರ್ಖಳು. ಅವಳು ತನ್ನ ಹಣೆಯಲ್ಲಿ ಬರೆದದ್ದನ್ನು ಅದ್ಭುತವಾಗಿ ಅನುಭವಿಸಿದಳು. ನೋವನ್ನು ಸಹಿಸುವುದರಲ್ಲಿ ಏನು ಪರಾಕ್ರಮ ಇದೆ? ಎಲ್ಲ ನೋವೂ

ಅಪಮಾನಕ್ಕೆ ಈಡು ಮಾಡುತ್ತದೆ ಮತ್ತು ಕೀಳ್ಮಾಡುತ್ತದೆ. ಅವಳು ಕನಿಷ್ಠವಾಗಿ ಮಾಡಬಹುದಾಗಿದ್ದದ್ದೆಂದರೆ, ನಮ್ಮ ಸೃಷ್ಟಿಕರ್ತನ ಸಣ್ಣತನ ಮತ್ತು ಕೀಳ್ತನಕ್ಕೆ ಇಡೀ ಚಿತ್ತೂರಿಗೆ ಚಿತ್ತೂರೇ ಸಾಕ್ಷಿಯಾಗಿರುವಂತೆ ಮಾಡುವುದು.

ನಾವೆಲ್ಲರೂ, ಮಹಾಪ್ರಭುಗಳು, ರಾಣಿ ಕರ್ಮವತಿ, ಸುಗಂಧಳ ಸೋದರ ಹೇಮಕರಣ, ಅಲ್ಲಿಗೆ ಕರೆಸಲಾಗಿದ್ದ ಅವಳ ತಂದೆ ಎಲ್ಲರೂ ಅವಳ ಬಳಿಯಲ್ಲೇ ಠಳಾಯಿಸುತ್ತಿದ್ದೆವು. ಅವಳು ಬದುಕುವ ಯಾವ ಭರವಸೆಯೂ ಇಲ್ಲ ಎಂಬುದು ನಿಧಾನವಾಗಿ ಸ್ಪಷ್ಟವಾಯಿತು. ಹೌದು, ಕಿರಿಯ ಸಂತಳು ಮತ್ತು ನಾನು ಇಬ್ಬರೂ ಮೌನವಾಗಿ ಅಪರಾಧದಲ್ಲಿ ಸಹಭಾಗಿಗಳಂತೆ ಅವಳನ್ನು ಗಮನಿಸಿದೆವು. ಅವಳಿಗೆ ಘಾಸಿಯಾಗಿತ್ತು. ನಮಗಲ್ಲ. ತಪ್ಪು ತಿಳಿಯಬೇಡಿ. ನಾವು ಅವಳಿಗಾಗಿ ವ್ಯಥೆಪಟ್ಟೆವು. ಅನುಕಂಪೆ ತೋರಿದೆವು. ಪರಿತಾಪ ಮತ್ತು ಕಳವಳದಿಂದ ನಮ್ಮ ಹಾಸಿಗೆಗಳಲ್ಲಿ ಹೊರಳಾಡಿದೆವು. ಹಸಿರುಗಣ್ಣಿನ ಚೆಲುವೆ ತನ್ನ ಪೂಜೆ ಪ್ರಾರ್ಥನೆಗಳಿಂದ ಶ್ರೀಕೃಷ್ಣನಿಗೆ ಅಂಗಲಾಚಿ ಮೊರೆಯಿಟ್ಟು ಆಗ್ರಹಪಡಿಸಿದಳು. ಅದು ಎಷ್ಟರ ಮಟ್ಟಿಗೆ ಇತ್ತು ಅಂದರೆ ಅವನು ಅರಮನೆ, ಚಿತ್ತೂರನ್ನಷ್ಟೇ ಏಕೆ ಬಹುಶಃ ಈ ವಿಶ್ವವನ್ನೇ ಬಿಟ್ಟು ಓಡಿ ಹೋದ. ಆದರೆ ಹೋಗುವಾಗ, ಸುಗಂಧಳ ಕಡೆಗೆ ಒಂದು ಓರೆನೋಟ ಬೀರದೆ ಹೋಗಲಿಲ್ಲ.

ಮತ್ತೆ, ನಾನು ಮಾಡಿದ್ದೇನು? ಒಳಗಡೆಯೇ ನನಗೆ ರಕ್ತಸ್ರಾವ ಆಯಿತು. ನನ್ನ ಸ್ವಯಂ ಪ್ರತಿಷ್ಠೆಯ ಅಪರಾಧಿ ಭಾವದ ಭಾರದಿಂದ ನನ್ನ ಮೆದುಳು ಮತ್ತು ಬೆನ್ನು ಮೂಳೆ ಸೀಳಿ ಹೋದವು ಅಂತ ಬಾಜಿ ಕಟ್ಟುತ್ತೇನೆ. ಸುಗಂಧಳ ಈ ಸ್ಥಿತಿಗೆ ನಾನೇ ಹೊಣೆ ಎಂಬುದರಲ್ಲಿ ನನಗೆ ಕಿಂಚಿತ್ತೂ ಅನುಮಾನವಿರಲಿಲ್ಲ. ನನ್ನ ಶಿಶ್ನ ನನಗೆ ಕೈಕೊಟ್ಟದ್ದು ಇನ್ನೂ ಆಗತಾನೆ. ಅವಳ ಅಂಡನಾಳದಲ್ಲಿದ್ದು ಬೆಳೆಯುತ್ತಿದ್ದ ಬೀಜ ನನ್ನದೋ ಇಲ್ಲ. ವಿಕ್ರಮಾದಿತ್ಯನದೋ? ಒಂದು ವೇಳೆ ಸುಗಂಧ ಬದುಕಿದ್ದು, ತನ್ನ ತಂದೆ ಯಾರು. ಎಂಬುದು ಸದಾ ಸಂದೇಹಾಸ್ಪದವಾಗಿರುವಂಥ ರಾಜಕುಮಾರನಿಗೋ ರಾಜಕುಮಾರಿಗೋ ಜನ್ಮ ನೀಡಿದ್ದರೇನಾಗುತ್ತಿತ್ತು. ಬಹುಶಃ ಸುಗಂಧಳು ಸಾಯಬೇಕೆಂದು ನಿರ್ಧರಿಸಿದ್ದರಿಂದಲೇ ನಾನು ನನ್ನ ಕರುಣೆ ಕಾಳಜಿ ಮತ್ತು ಯಾತನೆ ತೋರಿಸುತ್ತಿರಬೇಕು.

ಅವಳು ಸಾಯುವ ಹಿಂದಿನ ದಿನದ ರಾತ್ರಿ ನನ್ನ ಕಡೆ ನೋಡಿ "ನಾನು ಸಾಯುತ್ತಿದ್ದೇನೆ ನಮ್ಮ ಮಗುವೂ ಕೂಡ ಸಾಯುತ್ತಿದೆ. ಯಾಕಂದರೆ ನಾನು ನಿಮಗೆ ನಿಷ್ಠಳಾಗಿರಲಿಲ್ಲ. ಅದಕ್ಕೇ ಅಲ್ಲವೆ?"

"ಅದು ಸತ್ಯವಲ್ಲ". ನಾನು ಉನ್ಮಾದ ಹಿಡಿದವನಂತೆ ಜೋರಾಗಿ ಕಿರುಚಿದೆ. "ಅದು ಸತ್ಯವಲ್ಲವೇ ಅಲ್ಲ. ಈ ಭೂಮಿಯ ಮೇಲೆ ನ್ಯಾಯ ಇಲ್ಲ. ಮುಯ್ಯಿಗೆ ಮುಯ್ಯಿ ಎನ್ನುವುದಿಲ್ಲ. ಒಂದು ವೇಳೆ ಅದು ಇದ್ದಿದ್ದರೆ, ವಿಕ್ರಮಾದಿತ್ಯ ಬಹಳ ಹಿಂದೆಯೇ ಸತ್ತು ಹೋಗಿರಬೇಕಾಗಿತ್ತು. ಅಲ್ಲದೆ ಇದಾರ್ ಯುದ್ಧದ ಸಮಯದಲ್ಲಿ ನಾನು ಕೊಂದ ಜನಗಳ ಲೆಕ್ಕ ಹಿಡಿದರೆ, ನಾನು ಕಡೇ ಪಕ್ಷ ಹತ್ತು ಸಾವಿರ ಸಲ ಸಾಯಬೇಕು. ಆಮೇಲೆ ನಿನ್ನನ್ನು ನಾನು ನೋಡಿಕೊಂಡ ರೀತಿಗೆ ಅದರ ಮೇಲಿನ್ನೊಂದು ಸಲ ಸಾಯಬೇಕು".

ಆದರೆ ಅವಳಿಗೆ ಕೇಳಿಸಿಕೊಳ್ಳಲಾಗುತ್ತಿರಲಿಲ್ಲ. ಅವಳ ಭ್ರೂಣ ಗರ್ಭದೊಳಗೇ ಸುತ್ತಿಕೊಳ್ಳ ತೊಡಗಿತ್ತು. ಅದು ಸತ್ತು ಅವಳೂ ಜೀವ ತೆರುವುದು ಖಚಿತವಾಗಿತ್ತು.

ಜೊತೆಗೆ ಏನೇ ಆದರೂ ನನ್ನನ್ನು ನಂಬುತ್ತಿರಲಿಲ್ಲ.

* * *

ಆಗ ಬೆಳಿಗ್ಗೆ ಆರು ಗಂಟೆಯ ಸಮಯವಿರಬೇಕು. ಪೂರ್ಣಸೂರ್ಯಗ್ರಹಣದ ದಿನ ನನಗೂ, ನಾನು ಆ ದಿನ ಏನೇನು ನೋಡಿದೆನೋ ಅವುಗಳಿಗೂ ನಡುವೆ ಬಂದ ಉರಿವ ಆಕಾಶ ಕಾಯಗಳು ಈಗ ನನ್ನ ಶಾಶ್ವತ ಸಂಗಾತಿಗಳಾಗಿ ಬಿಟ್ಟಿವೆ. ನಾನು ರಾತ್ರಿ ಹೊತ್ತು ನಿದ್ದೆ ಮಾಡುತ್ತಿದ್ದಾಗಲೂ ಅವೇ ಬರುತ್ತವೆ. ರಾಜ ವೈದ್ಯರನ್ನು ಮತ್ತೆ ಮತ್ತೆ ಕರೆಸಿ ಕೇಳಿದ್ದೀನಿ. ಅವರು ನನಗೆ ಕರ್ಪೂರ ಮತ್ತು ಇನ್ನಿತರೆ ಗಿಡಮೂಲಿಕೆಗಳಿಂದ ಕೂಡಿದ ಕಣ್ಣಿನ ಔಷಧಿಕೊಟ್ಟಿದ್ದಾರೆ. ಅವು ಕಣ್ಣಿನ ಉರಿಯನ್ನು ಕಡಿಮೆ ಮಾಡಬೇಕಾಗಿತ್ತು. ಆದರೆ ಅದು ಉರಿಯನ್ನು ಹೋಗಿಸಿಲ್ಲ. ಗ್ರಹಣದ ಪರಿಣಾಮ ಎಷ್ಟು ದಿನ ಇರುತ್ತೆ ಅಂತ ಕೇಳಿದರೆ ಹಾರಿಕೆ ಉತ್ತರ ಕೊಡುತ್ತಾರೆ. ಸೂರ್ಯದೇವನು ನನ್ನ ಕಣ್ಣುಗಳಿಂದ ಬೆಳಕನ್ನು ಕಿತ್ತುಕೊಂಡು ನನ್ನ ಸಂಬಂಧವನ್ನು ತ್ಯಜಿಸಿ ಬಿಟ್ಟನೆ? ಸುಮಾರು ಎರಡು ಗಂಟೆ ಹೊತ್ತು ನಿದ್ದೆ ಮಾಡಿದೆ. ಆ ಮೇಲೆ ಸ್ನಾನ ಮಾಡುತ್ತಿದ್ದಾಗ ಒಬ್ಬ ಸೇವಕಿ ಬಾಗಿಲು ತಟ್ಟಿದಳು.

"ಮುಖ್ಯ ನಗರ ರಕ್ಷಕನು (ಪೊಲೀಸ್ ಕಮೀಷನರ್) ಒಬ್ಬ ಮನುಷ್ಯನನ್ನು ಕಳಿಸಿಕೊಟ್ಟು ಅವರು ತಮ್ಮನ್ನು ಇನ್ನು ಒಂದೂವರೆ ಗಂಟೆಗಳೊಳಗೆ ಬಂದು ನೋಡಬಹುದೆ ಎಂದು ಹೇಳಿಕಳಿಸಿದ್ದಾರೆ. ನಗರ ರಕ್ಷಕರಿಗೊಬ್ಬ ಸಂಶಯಾಸ್ಪದ ಹೆಂಗಸು ಸಿಕ್ಕಿದ್ದಾರಂತೆ. ಅವರು ತಾವು ಹುಡುಕುತ್ತಾ ಇದ್ದ ಹೆಂಗಸು ಇರಬಹುದೆ ಎಂದು ಆ ದೂತ ಹೇಳುತ್ತಿದ್ದಾನೆ". "ಇನ್ನು ಏಳು ನಿಮಿಷಗಳಲ್ಲಿ ನಾನು ಅವರ ಕಛೇರಿಯಲ್ಲಿರುತ್ತೇನೆಂದು ಆ ಮನುಷ್ಯನಿಗೆ ಹೇಳು".

ಪೋಲೀಸ್ ಕಮೀಷನರ್ (ನಗರ ರಕ್ಷಕರು) ಸಂದೇಹ ಪಟ್ಟ ಹೆಣ್ಣನ್ನು ನೋಡಲು ಇನ್ನೂ ಒಂದೂವರೆ ಗಂಟೆ ಕಾಯುತ್ತಾ ಕೂತರೆ ಹಾಳಾದವನಾಗುತ್ತೇನೆ. ಕೌಸಲ್ಯಳನ್ನು ಸಂದೇಹಿತ ವ್ಯಕ್ತಿಯಾಗಿ ನಾನೆಂದೂ ಯೋಚಿಸಿರಲೇ ಇಲ್ಲ. ನಾನು ಇನ್ನೂ ಮೈ ಸರಿಯಾಗಿ ಒರೆಸಿಕೊಂಡಿರಲಿಲ್ಲ. ಅತ್ಯಂತ ಅವಸರದಲ್ಲಿದ್ದೆ ಎನ್ನುವುದೇ ಸರಿಯಾದ ಶಬ್ದ. ಕಾರಣ ನನ್ನ ನಿಲುವಂಗಿಯನ್ನು ತೊಟ್ಟುಕೊಳ್ಳುವಾಗ, ಬಲಗೈಯನ್ನು ತೂರಿಸುತ್ತಿದ್ದಾಗ ಅದನ್ನು ಹರಿದೇ ಬಿಟ್ಟೆ. ಭೇಫ಼ಿಕೀರನ ಬೆನ್ನೇರುತ್ತಿದ್ದಾಗ ಗುಂಡಿಗಳನ್ನು ಹಾಕಿಕೊಂಡೆ. ಏಳು ನಿಮಿಷಗಳಿಗಿಂತ ಮುಂಚೆಯೇ ನಗರ ರಕ್ಷಕರ ಚೌಕಿಯಲ್ಲಿದ್ದೆ. ಅದರ ಒಳಗಡೆ ತುಂಬ ಕತ್ತಲೆ ಇತ್ತು. ಆದರೆ ಆ ಹೆಂಗಸು ನಿಜಕ್ಕೂ ಕೌಸಲ್ಯಳ ಥರವೇ ಕಂಡಳು. ನನಗೆ ನೆನಪಿದ್ದಂತೆ ಅವಳಿಗಿಂತ ಕಿಂಚಿತ್ ಕೃಶವಾಗಿ. ಅವಳ ಕೂದಲು ಬೆಳ್ಳಗಾಗುತ್ತಿತ್ತು. ಬಹುಶಃ ಕಷ್ಟಗಳು, ಚಿಂತೆಗಳಿಂದ ಹಾಗಾಗಿರಬಹುದು. ಅವಳ ಬಟ್ಟೆಗಳು ಕೊಳಕಾಗಿದ್ದವು. ಮತ್ತು ತಲೆ ಬಾಚಿಕೊಂಡಿರಲಿಲ್ಲ. ಅವಳು ನನ್ನ ಕಡೆ ನೋಡುತ್ತಿರಲಿಲ್ಲ. ಕಾರಣ ಅವಳು ನನಗೆ ಹೆದರಿದ್ದಳೆಂದಲ್ಲ, ಆದರೆ ನನ್ನ ವಿಷಯದಲ್ಲಿ ಅವಳಿಗೆ ಆಸಕ್ತಿ ಇರಲಿಲ್ಲ. ನನ್ನಲ್ಲಷ್ಟೇ ಏಕೆ, ಹಾಗೆ ನೋಡಿದರೆ ಯಾವುದರಲ್ಲೂ ಅವಳಿಗೆ ಆಸಕ್ತಿ ಇರಲಿಲ್ಲ.

"ಅವಳನ್ನು ಎಲ್ಲಿ ಪತ್ತೆ ಮಾಡಿದರು" ಎಂದು ನಾನು ಕೆಲಸದ ಮೇಲಿದ್ದ (ನಗರದ ರಕ್ಷಕ) ಪೊಲೀಸ್ ನೌಕರನನ್ನು ಕೇಳಿದೆ.

"ಮಂಗಳ ಸಿಂಹರ ಕಡೆಯ ವ್ಯಕ್ತಿಯೊಬ್ಬ ಹೃಷಿಕೇಶದಲ್ಲಿ ಆಕೆಯನ್ನು ಗುರುತಿಸಿದನು".

"ನಮ್ಮ ಪಾಡಿಗೆ ನಮ್ಮನ್ನು ಬಿಡಿ" ಎಂದು ಹೇಳಿ ಆ ಹೆಂಗಸು ಎದ್ದು ನಗರ ರಕ್ಷಕ ನೌಕರನ ಜೊತೆ ಹೊರಡಲನುವಾದಳು. ಆದರೆ ಆಕೆ ಮುಗ್ಗರಿಸಿದಳು.

"ಆಕೆಯನ್ನು ಯಾತಕ್ಕೆ ನೀವು ಕಟ್ಟಿಹಾಕಿದ್ದೀರಿ?"

"ಅದಕ್ಕೋಸ್ಕರವೇ ಅವಳನ್ನು ಇಲ್ಲಿಗೆ ಕರೆದುಕೊಂಡು ಬಂದಿರುವುದು. ಆಕೆಗೆ ಚಿತ್ತೂರಿಗೆ ಬರಲು ಇಷ್ಟವಿರಲಿಲ್ಲ ಎಂದು ನನ್ನ ಊಹೆ"

"ಅವಳ ಕಟ್ಟುಗಳನ್ನು ಬಿಚ್ಚು"

ಗಂಟನ್ನು ಬಿಚ್ಚಲು ಸ್ವಲ್ಪ ಸಮಯ ತೆಗೆದುಕೊಂಡಿತು. ಆ ಹೆಂಗಸು ತಾಳ್ಮೆಯಿಂದಿದ್ದಳು. ಆದರೆ ಹಗ್ಗ ಬಿಚ್ಚಿದ ಕೂಡಲೇ ಅವಳು ಹೊರ ನಡೆದಳು. (ರಕ್ಷಕ ನೌಕರನು) ಪೊಲೀಸಿನವನು ಅವಳ ಹಿಂದೆಯೇ ಓಡಿ ಹೋಗಿ ಒಂದಕ್ಕೆ ಕರೆತಂದನು.

"ನಿನ್ನ ಹತ್ತಿರ ನಾನು ಮಾತಾಡಬೇಕೆಂದಿದ್ದೀನಿ". ಅವಳು ಕುಳಿತಳು. ಆದರೆ ಹಾಗೆ ಕುಳಿತದ್ದರಲ್ಲಿ ಸಂತೋಷವಾಗಲಿ ಬೇಸರವಾಗಲಿ ಇರಲಿಲ್ಲ. ಅವಳು ಭಾವರಹಿತಳಾಗಿದ್ದಂತೆ ಕಂಡಿತು.

"ನಿನಗೆ ಹಸಿವಾಗಿದೆಯಾ? ಏನಾದರೂ ತಿನ್ನುತ್ತೀಯೇನು?"

"ಇಲ್ಲ".

"ನಿನ್ನ ಹೆಸರೇನು?"

"ಹೆಸರಿಲ್ಲ".

"ನಿನ್ನ ಊರು ಯಾವುದು?"

"ನಾನೆಲ್ಲಿದ್ದೇನೋ ಅದೇ"

"ಎಲ್ಲಿಗೆ ಹೋಗುತ್ತಿದ್ದೀಯಾ ಅಂತ ನಾನು ಕೇಳಬಹುದೆ?"

"ಅದಕ್ಕೂ ಅಂಥ ವ್ಯತ್ಯಾಸವಿಲ್ಲ".

"ನಿನಗೆ ಮಕ್ಕಳಿದ್ದಾರೆಯೆ?"

"ನಾನು ನನ್ನ ನಾಯಿ ಹತ್ತಿರ ವಾಪಸ್ ಹೋಗಲೇನು? ಅದು ಹೃಷಿಕೇಶದಲ್ಲಿ ನನಗೋಸ್ಕರ ಕಾಯುತ್ತಾ ಇರಬಹುದು"

ಅವಳ ಭಾಷೆ, ಧ್ವನಿ ಮತ್ತು ಒತ್ತುಗಳು ಅದೆಷ್ಟು ಸಾಧಾರಣವಾಗಿ ನಿರ್ವಿಶೇಷವಾಗಿದ್ದುವೆಂದರೆ, ಅವುಗಳಿಂದ ಏನೂ ಸುಳಿವು ಸಿಗುತ್ತಿರಲಿಲ್ಲ.

"ಅವನ ಹೆಸರೇನು?"

"ಆನಂದ್"

"ನಾಯಿಗೆ ಆ ಹೆಸರು ಬಹಳ ವಿಚಿತ್ರವಾಗಿದೆಯಲ್ಲ"

"ಅಲ್ಲವೇ ಅಲ್ಲ. ಅದೇ ಅದು, ನನ್ನ ಜೀವನದ ಆನಂದ". ಅವಳು ನನ್ನ ಸಮೀಪಕ್ಕೆ ಬಂದು ಇದಕ್ಕಿದ್ದ ಹಾಗೆ ನನ್ನ ತೋಳು ಹಿಡಿದುಕೊಂಡಳು. ನನ್ನ ತೋಳಿನ ಸಂದಿಯಲ್ಲಿ ಅವಳ ಬಲಗೈ ಸ್ಪರ್ಶ ನನ್ನ ಅನುಭವಕ್ಕೆ ಬಂದಿತು.

"ದಯವಿಟ್ಟು ನನ್ನ ಆನಂದ್ ಹತ್ತಿರ ಹೋಗುವುದಕ್ಕೆ ಬಿಟ್ಟು ಬಿಡಿ".

ಅವಳ ದೇಹವನ್ನೊಮ್ಮೆ ನಾನು ಪರೀಕ್ಷಿಸಿ ನೋಡಬೇಕೆ ಎಂದು ವಿಸ್ಮಯ ಪಡುತ್ತಿದ್ದೆ. ಆ ರಕ್ಷಕ ನೌಕರನಿಗೆ, ಅವರ ಮುಖ್ಯಾಧಿಕಾರಿಗೆ ಮಹಾಪ್ರಭುಗಳಿಗೆ, ಮಂಗಳನಿಗೆ ಅಥವಾ ಆ ಹೆಂಗಸಿಗೇ ಆಗಲಿ ನಾನು ಏನು ಹೇಳಲು ಹೊರಟಿದ್ದೆ? ನಿನ್ನನ್ನು ಬೆತ್ತಲೆ ನೋಡಬೇಕೆಂದಿದ್ದೀನಿ. ನನ್ನ ಜೊತೆ ರಮಿಸುವೆಯಾ ಅಂತಲೆ? ಅದು ಕೌಸಲ್ಯ ಅಲ್ಲ. ಆ ಹೆಂಗಸಿನ ಕೈಗಳು ಹಾಗೆಂದು ನನಗೆ ಹೇಳಿದವು. ಅದನ್ನು ಖಚಿತ ಪಡಿಸಿಕೊಳ್ಳಲು ಅವಳ ಕೈಗಳನ್ನು ನನ್ನ ಕೈಗಳಿಂದ ಹಿಡಿದೆ. ಅವುಗಳ ಅಂಗೈ ಕೋಮಲವಾಗಿ, ಮೃದುವಾಗಿದ್ದವು. ಆದರೆ ಅವು ಕೌಸಲ್ಯಳದಾಗಿರಲಿಲ್ಲ.

ಆ ಸಮಯಕ್ಕೆ ಮಂಗಳ್ ಒಳಗೆ ಬಂದನು.

"ದಯವಿಟ್ಟು ಕ್ಷಮಿಸಿ. ಬರಲು ತಡವಾಯಿತು. ನಾನು ಒಂದು ಸಭೆಯಲ್ಲಿ ಸಿಕ್ಕಿ ಹಾಕಿಕೊಂಡು ಬಿಟ್ಟಿದ್ದೆ. ಆಕೆ ನನ್ನ ತಾಯಿನೇ?"

"ನೀನು ಹೇಳು."

ಅವನು ಹಿಂದೆ ಮುಂದೆ ನೋಡಿದ. ತನಗೆ ಅವಳು ಗೊತ್ತಿದ್ದುದಕ್ಕಿಂತಲೂ ನನಗೇ ಬಹಳ ಚೆನ್ನಾಗಿ ಗೊತ್ತು ಎಂದು ಹೇಳಬೇಕೆಂದಿದ್ದನೆ? ಹಾಗೆ ಹೇಳಬೇಕೆಂದಿದ್ದರೆ ಅದನ್ನು ಬೇರೆ ರೀತಿಯಲ್ಲಿ ಹೇಳಿದನು.

"ಹತ್ತಿರ ಹತ್ತಿರ ಹದಿನಾಲ್ಕು ವರ್ಷಗಳಿಂದ ನಾನು ನನ್ನ ತಾಯಿ ಜೊತೆ ಇರಲಿಲ್ಲ. ಆಕೆಯೇನೋ ಅವಳ ಹಾಗೇ ಕಾಣುತ್ತಾಳೆ. ಆದರೆ ನನಗೆ ಗೊತ್ತಿಲ್ಲ."

"ಆಕೆ ಕೌಸಲ್ಯ ಅಲ್ಲ".

ನಾನು ಆ ಹೆಂಗಸಿಗೆ ಸ್ವಲ್ಪ ಹಣಕೊಟ್ಟೆ. ಅದು ಅವಳಿಗೂ ಆಕೆಯ ನಾಯಿ ಆನಂದ್‌ಗೂ ಇನ್ನೊಂದೆರಡು ವರ್ಷ ಜೀವನ ಮಾಡೋದಕ್ಕೆ ಸಾಕಾಗುವಷ್ಟು.

"ನೀನು ಹೃಷಿಕೇಶಕ್ಕೆ ವಾಪಸ್ ಹೋಗಬೇಕೆ?"

"ಆನಂದ್ ಅಲ್ಲಿ ಇರುವುದಾದರೆ"

ನಾನು ನಗರ ರಕ್ಷಕ ನೌಕರನನ್ನು ಕರೆದು ಉತ್ತರದ ಕಡೆಗೆ ಪವಿತ್ರ ಸ್ಥಳಗಳಿಗೆ ತೀರ್ಥ ಯಾತ್ರೆಗೆ ಹೋಗುವ ಯಾತ್ರಿಕರ ಗುಂಪಿನ ಜೊತೆ ವಾಪಸ್ ಕಳಿಸಿ ಕೊಡಲು ಹೇಳಿದೆ.

'ನೀನು ಎಂದೂ ನಿದ್ದೆ ಮಾಡುವುದಿಲ್ಲವೆ ಮಂಗಳ್?'

"ತಾವೆಷ್ಟು ಮಾಡುತ್ತೀರೋ ಅಷ್ಟೆ ಮಹಾಸ್ವಾಮಿ. ಈಗ ತಾನೆ ಸುದ್ದಿ ಬಂದಿದೆ. ನಮ್ಮಿಂದ ಅದಕ್ಕೆ ಅಪಾಯ ಉಂಟಾಗಬಹುದು ಎನ್ನುವ ಕಾರಣಕ್ಕೆ ಬಯಾನಾದಲ್ಲಿರುವ ಕೋಟೆಗೆ ಬಾಬರನು ಯೋಧರನ್ನು ನುಗ್ಗಿಸುತ್ತಿದ್ದಾನಂತೆ"

"ಸೇನಾಪಡೆಗಳ ನಾಯಕತ್ವವನ್ನು ಯಾರು ವಹಿಸಿರುವುದು?"

"ಮಹಮ್ಮದ್ ಸುಲ್ತಾನ್ ಮಿರ್ಜಾ, ಯುಮಾಸ್-ಇ-ಆಲಿ, ಷಾ ಮನ್ಸೂರ್ ಬಾರ್ಲಾಸ್, ಕಿಟ್ಟಬೇಗ್, ಕಿಸ್ಮತಿ ಮತ್ತು ಬುಜ್ಕಾ"

"ನೀನು ಈಗ ತಾನೆ ತಿಳಿಸಿದ ಪ್ರಕಾರ ಬಾಬರನು ಕೂದಲೆಳೆಯಷ್ಟು ಅಂತರದಲ್ಲಿ ಗಂಡಾಂತರದಿಂದ ಪಾರಾದ ಹಾಗೆ ಕಾಣಿಸಿದರೂ ಅವನು ವಿಷ ಪ್ರಾಶನಕ್ಕೆ ಬಲಿಯಾಗಿಲ್ಲ. ಜೊತೆಗೆ ತನ್ನ ಜೀವವನ್ನು ಉಳಿಸಿದ್ದಕ್ಕೆ ದೇವರಿಗೆ ವಂದನೆಗಳನ್ನು ಅರ್ಪಿಸಿದನಂತೆ".

* * *

ನನ್ನ ಕಾರ್ಯದರ್ಶಿ ಚಳಿಜ್ವರದಿಂದ ಹಾಸಿಗೆ ಹಿಡಿದು ಮಲಗಿ ಬಿಟ್ಟಿದ್ದ. ಹಾಗಾಗಿ ಅಂಚೆ ಪತ್ರಗಳನ್ನು ಹೊತ್ತ ಚೀಲ ಬಂದಾಗ ನಾನೇ ಅದನ್ನು ತೆರೆದು ನೋಡಬೇಕಾಯಿತು. ಯುದ್ಧಕ್ಕೆ ಸರಬರಾಜು ಮಾಡುವ ಬಗ್ಗೆ ಧಾನ್ಯ ವ್ಯಾಪಾರಿಗಳಿಂದ ಬಂದ ಪತ್ರಗಳಿದ್ದುವು. ಕುದುರೆ ವ್ಯಾಪಾರಿ ತನ್ನ ಪತ್ರದಲ್ಲಿ ನಾಲ್ಕು ನೂರಾ ಎಪ್ಪತ್ತು ಕುದುರೆಗಳ ಕೊರತೆ ಆಗಬಹುದು ಎಂದು ಹೇಳಿದ್ದಾನೆ. ರೈಸನ್‌ನಲ್ಲಿರುವ ಆಯುಧ ಶಾಲೆಗೆ ಐದು ಸಾವಿರ ಖಡ್ಗಗಳಿಗೆ ಮುಂಗಡ ಹಣ ಬೇಕಾಗಿದೆ. ಇವುಗಳಲ್ಲದೆ ಇನ್ನೂ ಮುವ್ವತ್ತು ಮುವ್ವತ್ತೈದು ಪತ್ರಗಳಿವೆ. ಮುಂದೆ ನಾನು ಒಡೆದು ನೋಡಿದ ಪತ್ರದಲ್ಲಿ ಅಧಿಕೃತ ಮುದ್ರೆ ಇರಲಿಲ್ಲ.

ಆದರೆ 'ವೈಯಕ್ತಿಕ' ಎಂದು ಅದರ ಮೇಲೆ ಗುರುತು ಮಾಡಲಾಗಿತ್ತು. ನನಗೆ ಆ ಕೈ ಬರಹ ಪರಿಚಿತವಾದದ್ದು. ಆದರೆ ಯಾರದೆಂದು ಹೆಸರಿಸಲಾಗಲಿಲ್ಲ.

ಮಾನ್ಯ ಮಹಾಸ್ವಾಮಿಗಳವರಾದ ಮಹಾರಾಜ್‌ಕುಮಾರ್ ಅವರಿಗೆ,

ಪರಮಾತ್ಮ ಏಕಲಿಂಗಜೀ ತಮ್ಮ ರಕ್ಷಾ ಕವಚ ಮತ್ತು ಪ್ರೇರಣೆಯಾಗಿರಲಿ. ಅವನು ಯಾವಾಗಲೂ ನಿಮ್ಮನ್ನು ಕಾಪಾಡಲಿ ಮತ್ತು ಸುರಕ್ಷಿತವಾಗಿಟ್ಟಿರಲಿ.

ನಿಮ್ಮ ಎರಡನೇ ಹೆಂಡತಿ ತೀರಿಕೊಂಡಿದ್ದಕ್ಕೆ ನನ್ನ ಸಂತಾಪವನ್ನು ಸೂಚಿಸುತ್ತಿದ್ದೇನೆ. ನನಗೆ ಆಕೆಯ ಪರಿಚಯವಿರಲಿಲ್ಲ. ಹಾಗಾಗಿ ಆಕೆಯ ಬಗ್ಗೆ ಕೆಟ್ಟ ಮಾತುಗಳನ್ನಾಗಲಿ, ಉಜ್ವಲವಾದ ಹೊಗಳಿಕೆಯ ಮಾತುಗಳನ್ನಾಗಲಿ ಆಡುವುದಿಲ್ಲ. ಏನೇ ಆದರೂ ಈ ಪತ್ರಕ್ಕೆ ಅವಳು ಕಾರಣಳಲ್ಲ.

ಕಳೆದ ಸಲ ನಾವು ಭೇಟಿಯಾದ ನಂತರ 'ಹೆಂಡತಿ' ಮತ್ತು ಅಥವಾ ಸ್ನೇಹಿತೆ ಎಂಬ ಮಾತಿನ ಅರ್ಥವೇನೆಂದು ನನ್ನನ್ನೇ ನಾನು ಕೇಳಿಕೊಂಡಿದ್ದೇನೆ. ಹಾಗೂ ನನಗೆ ಆ ಅರ್ಹತೆಯ ಕೊರತೆ ಇದೆ ಎಂದು ಗೊತ್ತಾಗಿದೆ. ನಮ್ಮ ಅತ್ಯಂತ ಆತ್ಮೀಯ ಸ್ನೇಹಿತರನ್ನು ನೋಯಿಸಬೇಕಾಗುತ್ತದೆಂದು ಹೆದರಿ ಸತ್ಯವನ್ನು ಹೇಳದೆ ಹೋದರೆ, ಆಗ ನಾವು ನಮಗೂ ನಮ್ಮ ಸೇಹಿತರಿಗೂ ದ್ರೋಹ ಬಗೆದಂತಾಗುತ್ತದೆ. ನೀವು ನನಗೆ 'ಮಗೂ' ಎಂದು ಹೇಳುತ್ತಿದ್ದುದು, ನಾವಿಬ್ಬರೂ ನಮ್ಮ ಸ್ನೇಹವನ್ನು ಗಳಿಸಬೇಕೆಂದು ಹೇಳುತ್ತಿದ್ದುದು ನೆನಪಾಗುತ್ತಿದೆ ನಾನು ನಿಮಗೆ ಹೆಂಡತಿಯೂ ಹೌದು, ಸ್ನೇಹಿತೆಯೂ ಹೌದು. ನಾನು ಹಾಗೆಯೇ ಇರಬೇಕೆಂದರೆ, ನಾನು ಈಗ ಮಾತಾಡಲೇ ಬೇಕು. ನೀವು ನನ್ನ ಗೆಳೆಯ ಮತ್ತು ಪತಿ ಆಗಿದ್ದರೆ, ನನ್ನ ಮಾತುಗಳು ಕಠಿಣವೆನಿಸಿದರೂ ಅವುಗಳ ಯೋಗ್ಯತೆಯ ಆಧಾರದ ಮೇಲೆ ಅವುಗಳನ್ನು ಪರಿಗಣಿಸಬೇಕೆಂದು ನೀವು ತಿಳಿಯುವಿರಿ. ಅಷ್ಟೇ ಅಲ್ಲ ಅವುಗಳಿಂದ ನೀವು ಕೆರಳುವುದಾಗಲಿ, ಮುಜುಗರ ಪಡುವುದಾಗಲಿ, ನನಗೆ ನಿಮ್ಮ ಬಗ್ಗೆ ಅಸೂಯೆಯಿದೆಯೆಂದಾಗಲಿ ಅಥವಾ ನಾನು ನಿಮ್ಮನ್ನು ಇಷ್ಟರಲ್ಲೇ ತ್ಯಜಿಸಲಿದ್ದೇನೆಂದಾಗಲಿ ಭಾವಿಸುವುದಿಲ್ಲ.

ಕೌಸಲ್ಯ ಅದರ ಬಗ್ಗೆ ನಿಮ್ಮ ಹತ್ತಿರ ಮಾತಾಡಿಲ್ಲ. ರಾಜಕುಮಾರಿಯು ನಿಮಗೆ ಅದರ ಬಗ್ಗೆ ಹೇಳುವುದಿಲ್ಲ. ಸುನೇರಿಯಾ ಸತ್ತಿದ್ದಾಳೆ. ಆದರೆ ಅವಳಾದರೂ ಕೂಡ ಈ ವಿಷಯವನ್ನು ನಿಮ್ಮೊಂದಿಗೆ ಪ್ರಸ್ತಾಪಿಸಿರಲಾರಳು. ನಾನು ಪ್ರಸ್ತಾಪಿಸುತ್ತೇನೆ.

ನಿಮ್ಮ ಮತ್ತು ರಾಜಕುಮಾರಿಯ ನಡುವೆ ಏನೂ ಇಲ್ಲ. ಮುಂಚೆಯೂ ಏನೂ ಇರಲಿಲ್ಲ ಮತ್ತು ಮುಂದೆಯೂ ಎಂದೂ ಏನೂ ಇರುವುದಿಲ್ಲ. ಸಾಮೀಪ್ಯ ನಿಮ್ಮನ್ನು ಹತ್ತಿರ ತಂದಿರಬಹುದು. ಅದು ಖಂಡಿತವಾಗಿಯೂ ನನ್ನನ್ನೂ ನನ್ನ ಪತಿಯನ್ನೂ ಹತ್ತಿರ ತಂದಿದೆ. ಆಕೆಯ ಮೇಲೆ ಹಿಂಸಾ ಪ್ರಯೋಗ ಮಾಡಿ, ಹಾಸಿಗೆಯಲ್ಲಿ ಹಾಗೂ ಬದುಕಿನಲ್ಲಿ ನಿಮ್ಮ

ಹೆಂಡತಿಯಾಗಿರುವಂತೆ ಆಕೆಯನ್ನು ಬಲವಂತ ಪಡಿಸುವ ಅಧಿಕಾರ ನಿಮಗಿತ್ತು. ಆದರೆ ನೀವು ಆತ್ಮ ಗೌರವ ಇರುವ ವ್ಯಕ್ತಿ. ಹಾಗಾಗಿ ಬಲಾತ್ಕರಿಸುವ ಮಟ್ಟಕ್ಕಿಳಿಯುವುದಿಲ್ಲ. ಹಾಗಿದ್ದ ಮೇಲೆ ಆಕೆ ಹೆಚ್ಚೆಂದರೆ ನಿಮ್ಮ ಸ್ನೇಹಿತೆ, ಅದಕ್ಕಿಂತ ಹೆಚ್ಚಲ್ಲ.

ಇಷ್ಟು ವರ್ಷಗಳ ನಂತರ, ನೀವು ನಿಮ್ಮ ಹೆಂಡತಿಯನ್ನು ಪ್ರೀತಿಸುತ್ತಿದ್ದರೆ ಅಥವಾ ಆಕೆಯ ಬಗ್ಗೆ ಹುಚ್ಚು ಹಿಡಿದಿದ್ದರೆ, ಅದಕ್ಕೆ ಕಾರಣ ಆಕೆ ಬೇರೆ ಯಾರನ್ನೋ ಪ್ರೀತಿಸುತ್ತಿರುವುದು ಎನ್ನುವುದು ನಿಮಗೆ ಗೊತ್ತಿಲ್ಲ. ಅವಳನ್ನು ನೀವು ಹಂಬಲಿಸಲು ಇರುವ ಏಕೈಕ ಕಾರಣ, ಆಕೆ ನಿಮ್ಮನ್ನು ತಿರಸ್ಕರಿಸಿರುವುದು. ನೀವು ಕ್ಷಮಿಸಲು ಸಾಧ್ಯವಿಲ್ಲದ ಏಕೈಕ ಸಂಗತಿ ಎಂದರೆ ಬೇರೆಯವನಿಗೋಸ್ಕರ ಆಕೆ ನಿಮ್ಮನ್ನು ತಿರಸ್ಕರಿಸಿದ್ದಾಳೆಂಬುದು. ಆಕೆಯನ್ನು ನೀವು ದ್ವೇಷಿಸುತ್ತಿರುವುದಕ್ಕೆ ಮತ್ತು ನಿರಂತರವಾಗಿ ಹಂಬಲಿಸುತ್ತಿರುವುದಕ್ಕೆ ಅದೊಂದೇ ಕಾರಣ. ಸಂತರಿಗಿಂತ ಹೆಚ್ಚು ಸ್ವಕೇಂದ್ರಿತರಾಗಿರಲು ಯಾವ ಜೀವಂತ ಪ್ರಾಣಿಗೂ ಸಾಧ್ಯವಿಲ್ಲ. ಅವರು ಸ್ವಯಂಪೂರ್ಣರು. ತಮ್ಮಿಂದಾಚೆಗೆ ಅವರಿಗೆ ಬೇರಾವ ಜೀವವೂ ಇಲ್ಲ. ಅವರಿಗೆ ನಿಮ್ಮ ಅಗತ್ಯ ಬಿದ್ದಾಗ, ನಿಮ್ಮನ್ನು ಬಳಸಿಕೊಳ್ಳುತ್ತಾರೆ. ಅವರಲ್ಲಿ ಹಗೆತನವಿಲ್ಲ. ನೆನಪೂ ಇಲ್ಲ.

ಅವರಲ್ಲಿ ಆತ್ಮ ವಂಚನೆ ಸಾಕಷ್ಟಿದೆ. ಅದನ್ನು ಕೊನೆಗಾಣಿಸಲು ಇದು ಸಕಾಲ.

ಎರಡು ಯುದ್ಧಗಳನ್ನು ಎರಡು ನೆಲೆಗಳಲ್ಲಿ ಏಕಕಾಲದಲ್ಲಿ ನೀವು ಎದುರಿಸಲು ಹೊರಟರೆ ಅದು ನಿಮ್ಮ ತಲೆಗೆ ಸಂಚಕಾರವನ್ನು ತರದಿದ್ದರೂ ಸಂಕಷ್ಟವನ್ನು ಆಹ್ವಾನಿಸಿದಂತೆ ಎಂದು ನಿಮಗೂ ನನಗೂ ಇಬ್ಬರಿಗೂ ಗೊತ್ತಿದೆ. ನೀವು ನೇರವಾಗಿ ರಾಜಪರಂಪರೆಗೆ ಸೇರಿದವರು. ನಿಮ್ಮ ಹೆಂಡತಿಯ ಪ್ರೇಮಿ ನಿಮ್ಮ ಶತ್ರುವಲ್ಲ. ಬಾಬರ್ ನಿಮ್ಮ ಶತ್ರು. ನಿಮ್ಮ ಎಲ್ಲ, ತಂತ್ರಗಳನ್ನು, ಛಲ, ಕಲ್ಪನೆ, ನಾವೀನ್ಯ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ, ಹೊಂದಾಣಿಕೆಯ ಗುಣಗಳನ್ನು ತೋರಿಸಲು ಅರ್ಹನಾದ ವ್ಯಕ್ತಿ ಆ ಮೊಗಲ್. ಅವನನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಯಾರೊಬ್ಬರೂ ನಿಮ್ಮ ಜೊತೆ ಚರ್ಚಿಸುವುದಿಲ್ಲ ಎನ್ನುವುದು ನನಗೆ ಖಂಡಿತ ಗೊತ್ತು. ನೀವು ಯಾವಾಗಿನಂತೆ ಒಂಟಿಯಾಗಿಯೇ ಇದ್ದೀರಿ. ನಿಮ್ಮ ಮನೆಯಲ್ಲಿ ಶತ್ರುಗಳು ಇದ್ದಾರೆ. ಮುಖ್ಯವಾದ ವ್ಯಕ್ತಿಗಳ ಹಾಗೆ ಕಾಣಿಸುವ ಆದರೆ ಮೇವಾಡದ ಹಿತಾಸಕ್ತಿಗಳನ್ನು ಕಾಪಾಡುವುದು ಹೇಗೆ ಎನ್ನುವುದು ಗೊತ್ತಿಲ್ಲದ ಜನರಿದ್ದಾರೆ. ಅದರಿಂದಾಗಿಯೇ ಇಂಥವರಿದ್ದಾಗ್ಯೂ ನೀವು ಪಟ್ಟು ಹಿಡಿದು ನಿರಂತರವಾಗಿ ಪ್ರಯತ್ನಿಸಬೇಕು ಮತ್ತು ಸೋಲಿಸಬೇಕು.

ರಾಜಕುಮಾರಿ ಹಾಗೆಯೇ ಇರಲಿ. ಆಕೆಯನ್ನು ದೇವರಿಗೆ ಬಿಟ್ಟುಬಿಡಿ.

ಇಬ್ಬರು ಕೃಷ್ಣರಿದ್ದಾರೆ ಎಂದು ನೀವು ನನಗೆ ಹೇಳುತ್ತಿದ್ದಿರಿ. ಯೋಧ ಮತ್ತು ಪ್ರೇಮಿ. ಯೋಧನನ್ನು ಕುರಿತು ನಾವು ಅಧ್ಯಯನ ಮಾಡಬೇಕಿದೆ. ಅದರ ಬದಲು ರಾಜಕುಮಾರಿ ತನ್ನ ಪ್ರಿಯಕರನ ಹಿಂದೆ ಬಿದ್ದಿರುವುದು. ಪ್ರಣಯವಿಲಾಸಿ ನೀಲ ಮೇಘ ಶ್ಯಾಮನನ್ನೇ ಮೇವಾಡದ

ಆದರ್ಶವೆಂಬಂತೆ ಮಾಡಿದೆ. ಇದು ಬಹಳ ವಿಷಾದದ ಸಂಗತಿ. ನಾವು ಯೋಧ ಕುಲಕ್ಕೆ ಸೇರಿದವರು. ನಮ್ಮ ಕಾಡಿನ ಕಣಿವೆಗಳಲ್ಲಿ ಯುವತಿಯರೊಂದಿಗೆ ಚಕ್ಕಂದವಾಡುತ್ತ ತಿರುಗಾಡುವ ವ್ಯಭಿಚಾರಿಗಳು ಮತ್ತು ಸ್ವೇಚ್ಛಾ ವಿಹಾರಿಗಳ ಕುಲಕ್ಕೆ ಸೇರಿದವರಲ್ಲ.

ಶ್ರೀಕೃಷ್ಣನ ಅತ್ಯುನ್ನತ ಸಾಧನೆಯೆಂದರೆ ಭಗವದ್‌ಗೀತೆಯೆಂದು ಮೇವಾಡದ ಜನತೆಗೆ ನೆನಪಿಸುವುದು ಸಕಾಲಿಕವಾದ್ದು. ಅದರ ಘೋಷಿತ ಉದ್ದೇಶವೇ, ಯುದ್ಧ ಮಾಡಬೇಕೋ ಬೇಡವೋ ಎಂಬ ಡೋಲಾಯಮಾನ ಮನಃಸ್ಥಿತಿಯಲ್ಲಿದ್ದ ಅರ್ಜುನನೆಂಬ ಯೋಧನಿಗೆ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ಧರ್ಮಯುತವಾದ ಯುದ್ಧವನ್ನು ಮಾಡು ಎಂದು ಹೇಳುವುದು.

ಕೊನೆಯದಾಗಿ ಒಂದು ಮಾತು. ನೀವು ನನ್ನ ಪತಿ. ಬೇರೆ ಯಾವುದೇ ಪುರುಷನನ್ನಾಗಲಿ ಸ್ತ್ರೀಯನ್ನಾಗಲಿ ನಾನು ಪ್ರೀತಿಸದ ರೀತಿಯಲ್ಲಿ ನಿಮ್ಮನ್ನು ಪ್ರೀತಿಸುತ್ತೇನೆ. ನೀವೀಗ ಅತ್ಯಂತ ಒಬ್ಬಂಟಿ ಜೀವಿ ಎಂದು ನನಗೆ ಗೊತ್ತು. ನಿಮಗೆ ತಕ್ಕವಳೆನಿಸಿಕೊಳ್ಳಲು ನಾನು ತೀವ್ರವಾಗಿ ಪ್ರಯತ್ನಿಸುತ್ತಿದ್ದರೆ ನೀವು ಕೂಡ ನನಗೆ ತಕ್ಕವನೆನಿಸಿಕೊಳ್ಳಲು ತೀವ್ರವಾಗಿ ಪ್ರಯತ್ನಿಸುತ್ತೀರೆಂದು ನಾನು ನಂಬಿದ್ದೇನೆ. ನಾನು ಒಳ್ಳೆಯ, ಗಟ್ಟಿ ಮುಟ್ಟಾದ ವಿವೇಕವಂತಳಾದ ಹೆಣ್ಣು. ನಾನು ನಿಮ್ಮ ಜೀವನ ಸಂಗಾತಿಯಾಗಿದ್ದುಕೊಂಡು ನಿಮ್ಮ ಕೆಲಸದಲ್ಲಿಯ ಜವಾಬ್ದಾರಿಗಳನ್ನು ಮತ್ತು ಸಂತಸಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವೆ. ಆದರೆ ನನ್ನ ತಾಳ್ಮೆಯನ್ನು ಪರೀಕ್ಷಿಸಬೇಡಿ. ಅದು ಅನಂತವಲ್ಲ.

ಬಾದಷಹನನ್ನು ಸೋಲಿಸಿ ಮತ್ತು ನೀವು ಹಿಂತಿರುಗಿ ಹೋಗುವಾಗ ನನ್ನನ್ನು ಮನೆಗೆ ಕರೆದೊಯ್ಯಿರಿ.

ಸೂರ್ಯದೇವನು ಮೇಲೆ ಸದಾ ಬೆಳಗುತ್ತಿರಲಿ.

ಲೀಲಾವತಿ

ಅಧ್ಯಾಯ 45

ನೀವು ಹೆಣ್ಣೊಬ್ಬಳ ಚರ್ಮವನ್ನು ವಶಕ್ಕೆ ತಂದುಕೊಳ್ಳಬಹುದು. ಬಹುಶಃ ಅವಳೊಡನೆ ಒಂದಾಗಲೂಬಹುದು. ಆದರೆ ದೇವರೊಳಗೆ ಸೇರಿಕೊಂಡಿರೋ ಆಗ ಮುಂದೆ ಕಷ್ಟವಿದೆ.

'ಕೃಷ್ಣ ಕನ್ಹಯ್ಯಾ, ಕೃಷ್ಣ ಕನ್ಹಯ್ಯಾ' ಎಂದು ಅವಳು ಅವನನ್ನು ಕೂಗಿ ಕರೆದಳು. ತಾನೆಂದೂ, ಸಾವಿನ ನೋವು ಅನುಭವಿಸುತ್ತಿದ್ದರೂ ಅವಳ ಶಯ್ಯೆಯನ್ನು ಪ್ರವೇಶಿಸುವುದಿಲ್ಲವೆಂದು ಆ ರಾತ್ರಿ ಅವನು ನಿರ್ಧರಿಸಿದ್ದನು. ಇಷ್ಟಾದರೂ ಮೇಲೆ ಕಾಣುವಂತೆ ಮತ್ತೆ ನೀಲಿಯ ಬಣ್ಣವನ್ನು ತೊಡೆದುಕೊಂಡು ಅವನು ಇಂದು ಇಲ್ಲಿದ್ದಾನೆ.

ಆದರೆ ಏನೋ ಒಂದು ತಪ್ಪಾಗಿತ್ತು. ನೀಲಿ ದ್ರಾವಣವನ್ನು ಮೈಮೇಲೆ ಹಚ್ಚಿಕೊಂಡ ಕೂಡಲೆ ಅವನ ದೇಹ ಊದ ತೊಡಗಿತು. ವಿಚಿತ್ರವಾದ ರೋಗಿಷ್ಟ ನವೆಯಿಂದ ಅವನು ಪೀಡಿತನಾದ. ಅವನಿಗೆ ಎಂದೂ ಉದ್ದ ಉಗುರುಗಳು ಇರಲಿಲ್ಲ. ಆದರೆ ಅವನ ಶರೀರದ ಮೇಲೆ ಆಳವಾದ ಗೀರುಗಳನ್ನು ಗೀಚಿಕೊಂಡನು ಎಷ್ಟೇ ಜೋರಾಗಿ ಉಜ್ಜಿಕೊಂಡರೂ ನವೆ ಕಡಮೆಯಾಗಲಿಲ್ಲ. ತನ್ನ ಬೆರಳುಗಳಿಂದ ಒರಟು ಒರಟಾಗಿ ತಿವಿಯುತ್ತಾ ಇದ್ದನು. ತನ್ನ ಶರೀರದಲ್ಲಿ ಉಂಟಾಗಿದ್ದ ಮಡಿಕೆಗಳೊಳಕ್ಕೆ ಕೈ ಬೆರಳೂರಿ ಎಬ್ಬಿ ತೆಗೆಯುತ್ತಿದ್ದನು. ಚರ್ಮದ ಮೇಲೆ ಆದ ಗೀರುಗಳು, ಮಳೆಗಾಲದಲ್ಲಿ ಚಿತ್ತೂರಿನ ಕೊಳಕಾದ ರಸ್ತೆಗಳ ಮೇಲೆ ಬಂಡಿ ಜಾಡಿನಿಂದಾದ ಅಡ್ಡಗೆರೆಗಳಂತೆ ಕಾಣುತ್ತಿದ್ದವು. ದೇಹದ ಮೇಲೆ ಆದ ಆಳವಾದ ಗಾಯಗಳು ಕೀತುಕೊಂಡು ಅವುಗಳಿಂದ ಪಕ್ವವಾದ ಸೀಬೆಹಣ್ಣುಗಳ ಬಣ್ಣವನ್ನು ಹೋಲುವಂಥ ಹಳದಿ-ಹಸಿರು ಬಣ್ಣದ ದ್ರವ ದೇಹಾದ್ಯಂತ ಸುರಿಯ ತೊಡಗಿತು.

ನೀಲಿ ತನ್ನ ದೇಹಕ್ಕೆ ಒಗ್ಗುತ್ತಿಲ್ಲ ಎಂದು ಅವನಿಗೆ ಅರ್ಥವಾಯಿತು. ಪ್ರತಿರಾತ್ರಿಯೂ ಅವನು ತಾನು ನೀಲಮೇಘಶಾಮನಂತೆ ನಟಿಸಿದ್ದನು. ಅವನ ಹಾಗೆಯೇ ಕೊಳಲು ನುಡಿಸಿದ್ದನು. ಕೋಲಾಟ ಆಡಿದ್ದನು. ತನ್ನ ಹಾಗೆಯೇ ಇರುವ ಹೆಣ್ಣಿನಂತೆಯೂ ಬದಲಾಗಿದ್ದನು. ತನ್ನ ಹೆಂಡತಿಗೆ ಅದೆಲ್ಲವೂ ನಟನೆ ಎಂಬುದು ಗೊತ್ತಿತ್ತೆಂದು ಅವನು ತನಗೆ ತಾನೇ ಸಾವಿರ ಸಲ ಹೇಳಿಕೊಂಡಿದ್ದನು. ಇಷ್ಟರಲ್ಲೇ ಒಂದು ದಿವಸ ಅವನು ತನ್ನ ಮುಖವಾಡವನ್ನು ಕಳಚಿ ಹಾಕುವನು. ನೀಲಿಬಣ್ಣವೂ ಇಲ್ಲ, ಪೀತಾಂಬರವೂ ಇರುವುದಿಲ್ಲ. ಅವನ ಬತ್ತಲೆ ಶರೀರ ಅಷ್ಟೆ. ತಾವಿಬ್ಬರೂ ಗಂಡ ಹೆಂಡತಿಯರಂತೆ ಜೊತೆಯಲ್ಲಿ ವಾಸ

ಮಾಡುವರು. ಇಷ್ಟಾದರೂ ತಾನು ಎರಡನೇ ಮದುವೆಯಾದ ರಾತ್ರಿ ಅವಳು ಇದ್ದಕ್ಕಿದ್ದಂತೆ ದೇವರ ಹೆಸರಿನಿಂದ ಅವನನ್ನು ಕರೆದಿದ್ದಾಗ, ಅವಳು ತನ್ನ ಶಿಶ್ನವನ್ನು, ಅಂಗಾಂಗಳನ್ನು ಕತ್ತರಿಸಿ ಹಾಕಿದಂತೆನಿಸಿತ್ತು. ಅರಮನೆಯ ಹಿಜಡಾಗಳ ಸಾಲಿಗೆ ಸೇರಿಕೊಂಡು ಬಿಡಬಹುದಾಗಿತ್ತು. ಅಷ್ಟೇ ಅಲ್ಲ ರಾಣಿಯರ ಮೊಲೆಗಳ ಮೇಲೆ ಸಾಸಿವೆ ಎಣ್ಣೆಯನ್ನೋ ಕಡಲೆಕಾಯಿ ಎಣ್ಣೆಯನ್ನೋ ಉಜ್ಜಿ, ರಾಣಿಯರ ಮತ್ತು ಉಪಪತ್ನಿಯರ ಯೋನಿಗಳೊಳಕ್ಕೆ ತನ್ನ ಬೆರಳನ್ನು ತೂರಿಸಿ ಹಿಂದಕ್ಕೂ ಮುಂದಕ್ಕೂ ಆಡಿಸಿ ಬಿಡಬಹುದಿತ್ತು. ಆದರೆ ಹಿಂದಿನ ಕಾಲದ ನೆನಪುಗಳ ಹೊರತಾಗಿ ತನ್ನ ತೊಡೆಗಳ ನಡುವೆ ಕರ್ಷಣದ ಅನುಭವವಾಗಿರಲಿಲ್ಲ.

ಅವಳು ಅವನನ್ನು ಪ್ರೀತಿಸಲಿಲ್ಲ. ಅವಳ ರಾತ್ರಿಯ ಜೀವನದಲ್ಲಿ ಅವನು ಕಾಣಿಸಿಕೊಳ್ಳಲಿಲ್ಲ. ಅವಳು ತೋಳುಗಳಲ್ಲಿ ಅಪ್ಪಿಕೊಂಡದ್ದು ಮಾತಾಡಿದ್ದು ರಮಿಸಿದ್ದು ಹಾಗೂ ಪ್ರೇಮದ ಹೊಸ ಮಾರ್ಗಗಳನ್ನು ಕಂಡುಕೊಂಡದ್ದು ಅವನೊಂದಿಗಲ್ಲ. ಅವಳ ಪ್ರೇಮಿ ಮತ್ತು ದೇವನೊಂದಿಗೆ. ಅವಳಿಗೆ ಅವನ ಅರಿವಿರಲಿಲ್ಲ ಹಾಗಾಗಿ ಅವನೊಂದು ಮಿಥ್ಯೆ ಕೂಡ ಆಗಿರಲಿಲ್ಲ. ಅವನ ಆಟದಿಂದ ಅವಳೆಂದೂ ಮೋಸಹೋಗಿರಲಿಲ್ಲ. ತನಗೆ ತಾನೇ ಮೋಸ ಮಾಡಿಕೊಳ್ಳಲು ನಿರ್ಧರಿಸಿದ್ದು ಅವನೇ, ಅಷ್ಟೆ. ಬಿಗಿದ ಕೆಂಡದಂಥ ಕೋಪವು ಭರ್ಜಿಯ ಹಾಗೆ ಅವನ ಚರ್ಮದ ಆಳಕ್ಕೆ ನಾಟಿ ಬಿಟ್ಟಿತ್ತು. ಅದು ಅವನನ್ನು ಕುರುಡಾಗಿಸಿತು. ಆದರೆ ಅದು ಅಷ್ಟು ಮುಖ್ಯವಾಗಲಿಲ್ಲ. ತನ್ನ ಕಣ್ಣಿಗೆ ಕಾಣುವಂಥದ್ದು ಹಾಗೂ ತನ್ನ ಕಣ್ಣಿನ ನೋಟದಾಚೆ ಇರುವಂಥದೆಲ್ಲವನ್ನೂ ಅವನು ನಾಶಮಾಡಬಲ್ಲವನಾಗಿದ್ದನು. ಏನು ಬೇಕಾದರೂ ಆಗಲಿ, ಅವನು ತನ್ನ ಈ ನಿಷ್ಠೆಯಿಲ್ಲದ ಹೆಂಡತಿಯನ್ನು ಕೊಲ್ಲುವನು, ಆ ಮಾಟಗಾತಿ ಭೂತಾನಿ ಮಾತಾಳಿಗೆ ಸಿಟ್ಟು ಮತ್ತು ಸೇಡಿನ ಬಗ್ಗೆ ಏನು ಗೊತ್ತಿದೆ? ಶಿವನು ಅವನ ಇಷ್ಟ ದೈವ ಮತ್ತು ಅವನ ಕುಲದೇವರು. ಆ ಶಿವನಿಂದ ಅವನು ಚೈತನ್ಯದಾಯಕವೂ, ಆನಂದ ಮಯವೂ ಆದ ಸಾವಿನ ಮತ್ತು ವಿನಾಶದ ನೃತ್ಯವಾದ ತಾಂಡವ ನೃತ್ಯವನ್ನು ಕಲಿಯುವನು. ಹೌದು ಅವನು ತಾಂಡವ ನೃತ್ಯ ಮಾಡುವನು. ಒಂದೊಂದು ಹೆಜ್ಜೆಗೆ ಒಂದೊಂದು ಖಂಡವನ್ನು ಪುಡಿ ಮಾಡಿ ಒಂದೊಂದು ಸಾಗರವನ್ನು ತಲೆಕೆಳಗಾಗಿಸುವನು. ಇಡೀ ಭೂಮಿಯನ್ನು, ಹಕ್ಕಿ ಪಕ್ಷಿಗಳನ್ನು, ಮೀನು ಮೊಸಳೆಗಳನ್ನು ಗಿಡಮರಗಳನ್ನು ಹಾಗೂ ಮನುಕುಲವನ್ನೆಲ್ಲ ಅವನು ಒರೆಸಿ ಹಾಕುವನು. ಆ ನಂತರ ದೇವರುಗಳ ಬಳಿಗೆ ತೆರಳುವನು. ಎಲ್ಲರ ಬಳಿಗೆ ಅಲ್ಲ, ಕೇವಲ ನೀಲ ಮೇಘ ಶ್ಯಾಮನ ಬಳಿಗೆ.

ನವಿಲು ಗರಿಯನ್ನು ಧರಿಸಿದವವನೊಂದಿಗೆ ಅವನು ಮಾಡಲಿರುವ ಯುದ್ಧಕ್ಕೆ ಹೋಲಿಸಿದರೆ, ಬಾಬರನೊಂದಿಗಿನ ಯುದ್ಧವು ಮಕ್ಕಳಾಟ ಅಷ್ಟೆ. ಮಾಡಬೇಕಾದದ್ದು ಇನ್ನು ಒಂದೇ ಒಂದು. ಅದನ್ನು ಅವನೇ ಮಾಡಬೇಕು. ಭೂತಾನಿ ಮಾತಾಳಿಗೆ ಬಿಡುವಂಥದಲ್ಲ ಅದು. ಏನೇ ಆದರೂ ಸರಿ ಅದನ್ನು ಅವನೇ ಮಾಡುವನು. ಅದು ತನಗೆ ತಾನೇ ಕೊಟ್ಟುಕೊಂಡ ಮತ್ತು ದೇವರಿಗೆ ಕೊಟ್ಟ ವಚನ. ಈ ಬಾದಷಹನೊಂದಿಗಿನ ಗುದ್ದಾಟ ಒಂದು ಮುಗಿದು ಹೋಗಲಿ. ಅವನ ಚರ್ಮ ಬಾತುಕೊಂಡು ಕೀವಾಗಲು ಶುರುವಾಗಿತ್ತು. ಅವನ ಶರೀರದ ಮೇಲೆಲ್ಲಾ ತೀಕ್ಷ್ಣವಾದ ಒಡೆದ ಗಾಯಗಳಾಗಿದ್ದವು. ಕೆಂಪು ಬಾಸುಂಡೆಗಳು ಒಂದರ ಬುಡಕ್ಕೊಂದು ಹಬ್ಬಿ ಹರಡಿಕೊಂಡಿದ್ದುವು. ಕೊಳೆತು ನಾರುತ್ತಿದ್ದ ಹೊಲಸು ವ್ರಣಗಳಿಂದ ಕೊಳೆತ ಸಾರಾಯಿಯ ಹಾಗೆ ಹುಳಿ ವಾಸನೆ ಹೊರಹೊಮ್ಮುತ್ತಿತ್ತು. ಕೆಲವೊಮ್ಮೆ ದಣಿವಿನಿಂದಾಗಿ ಮೈ ಕೆರೆದುಕೊಳ್ಳುವುದನ್ನು ನಿಲ್ಲಿಸುವನು. ಆದರೆ ಆ ಸಮಯಕ್ಕೆ ಸರಿಯಾಗಿ ಎಲ್ಲೋ ಅಡಗಿದ್ದ ನವೆಯ ಇನ್ನೊಂದು ಅಲೆ ಅವನ

ಬಲಗಾಲಿನ ಬೆರಳಿನಿಂದಲೋ, ಹೊಟ್ಟೆಯ ಮೇಲಿನ ಹೊಕ್ಕುಳಿನಿಂದಲೋ ಅಥವಾ ಅವನ ಗುಪ್ತಾಂಗದ ಸಂದುಗಳಿಂದಲೋ ಶುರುವಾಗಿ ಪೀಡಿಸುತ್ತಿತ್ತು.

ಅವನು ಮೈಯೆಲ್ಲ ಬೆಂಕಿಯಿಟ್ಟಂತಾಗಿ ಭಯಂಕರ ನೋವಿನಿಂದ ನರಳಿದನು. ಅವನಿಗೆ ನೋವು ನಿಂತಾಗ, ಅವನ ತಲೆ ಅವಳ ತೊಡೆಯ ಮೇಲಿತ್ತು ಮತ್ತು ಅವನನ್ನು ಉಪಚರಿಸುತ್ತಿದ್ದಳು. ಅವಳು ಅವನ ಹುಬ್ಬುಗಳನ್ನು ಒರೆಸಿ, ಬಲವಂತವಾಗಿ ಅವನ ತುಟಿಗಳನ್ನು ತೆರೆಸಿ ಅವಳ ಜೊಲ್ಲು ಅವನ ಬಾಯೊಳಗೆ ಬೀಳುವಂತೆ ಮಾಡಿದಳು. ನನ್ನನ್ನು ಬಿಟ್ಟು ಬಿಡು, ನನ್ನಿಂದ ದೂರ ಹೊರಟು ಹೋಗು. ನಿನ್ನ ಆ ಕೃಷ್ಣನ ಹತ್ತಿರಕ್ಕೆ ಹೊರಟು ಹೋಗು ಎಂದು ಅವನು ತನ್ನ ಗಂಟಲು ಹರಿದುಕೊಂಡು ಕಿರಿಚುತ್ತಿದ್ದನು. ಆದರೆ ಅವನ ನಾಲಿಗೆಯಿಂದ ಶಬ್ದವೇ ಹೊಮ್ಮುತ್ತಿಲ್ಲ. ಏ ದ್ವಾಪರಯುಗದ ದೇವನ ವಧುವೆ ಮತ್ತೆ ನಿನ್ನ ಮುಖವನ್ನು ನೋಡಲು ನನಗಿಷ್ಟವಿಲ್ಲ. ಇನ್ನು ನಾನು ನಿನ್ನೊಂದಿಗೆ ಏಗುವುದಿಲ್ಲ. ಕಟ್ಟ ಕಡೆಯದಾಗಿ ಎಂದೆಂದಿಗೂ ಇರಲ್ಲ. ಅವಳನ್ನು ಅದೆಷ್ಟೊಂದು ದ್ವೇಷಿಸುತ್ತಿದ್ದನೆಂದರೆ, ವಿಜಯ ಸ್ತಂಭದ ಮೇಲಿನಿಂದ ಅಥವಾ ಕೋಟೆಯ ಗೋಡೆಯ ಮೇಲಿನಿಂದ ಅವಳನ್ನು ಬೀಸಿ ಎಸೆದು ಬಿಡುವನು.

ಅವಳು ತನ್ನ ಬಾಯನ್ನು ತೆರೆದು, ಅವನ ಗಾಯಗಳಿಂದ ಹೊಲಸನ್ನೆಲ್ಲ ಮೆಲ್ಲಗೆ ಹೀರಿ ತೆಗೆದಳು. ಅವಳ ಶೀತಲ ನಾಲಗೆಯ ಶೀತಲ ಅಲೆ ಅವನ ಗಾಯಗಳ ಉರಿಯನ್ನು ಸಾಂತ್ವನ ಗೊಳಿಸಿ, ಅವನ ದೇಹದ ಉದ್ದಗಲಕ್ಕೂ ವ್ಯಾಪಿಸಿ ಆ ಕ್ಷಣಕ್ಕೆ ಮೈಮರೆವನ್ನುಂಟು ಮಾಡಿತು.

ಜ್ವರ ತಗ್ಗಿತು. ಅಲ್ಲದೆ ಆ ಭಯಂಕರವಾದ ನವೆಯಿಂದ ಸ್ವಲ್ಪ ವಿಶ್ರಾಂತಿ ಸಿಕ್ಕಿತು. ಆ ಹೆಂಗಸು ಮರುಳು ಮಾಡಿ ಮತ್ತೆ ನಿನ್ನನ್ನು ಬಲೆಗೆ ಬೀಳಿಸಿಕೊಳ್ಳುವುದಕ್ಕಿಂತ ಮುಂಚೆ, ಇಲ್ಲಿಂದ ಓಡು, ಮಹಾರಾಜ್‌ಕುಮಾರ್ ಓಡು. ಅವಳಿಂದ ದೂರ ಹೊರಟು ಹೋಗಲು ಅವನು ಯತ್ನಿಸಿದನು. ಆದರೆ ಆ ಶಕ್ತಿಯಾಗಲಿ, ಇಚ್ಛೆಯಾಗಲಿ ಅವನಲ್ಲಿ ಇರಲಿಲ್ಲ.

ಅವಳು ಹೇಳಿದಳು "ನಿಮ್ಮ ಜ್ವರವನ್ನು ನನಗೆ ಕೊಡಿ. ಈ ಉಗ್ರವಾದ ಉರಿಯನ್ನು ನಾನು ಶಮನಗೊಳಿಸುತ್ತೇನೆ ಮತ್ತು ನಿಮ್ಮೆಲ್ಲ ನೋವು ಮತ್ತು ನರಳಾಟವನ್ನು ನಾನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಅಲ್ಲದೆ ಓ ನನ್ನ ನೀಲ ಮೇಘ ಶ್ಯಾಮನೆ, ಸಂತೋಷದಿಂದ ನನ್ನ ಮನಸ್ಸಿನಿಂದ ದೂರ ಹೋಗಿಬಿಡು".

ಆಗ ಅವನಿಗೆ ತನ್ನ ಹೆಂಡತಿಯೊಂದಿಗೆ ತನ್ನನ್ನು ಮುಗಿಸಲಾಗಿದೆ ಎಂದು ಗೊತ್ತಾಯಿತು.

ಅವನು ನರಳುತ್ತ ಎದ್ದು ಕುಳಿತನು. ಅವಳಿಗೆ ಬೆನ್ನು ತಿರುಗಿಸಿ ಕೊಠಡಿಯಿಂದ ಅವನು ಹೊರನಡೆದನು.

* * *

ಯುದ್ಧಕ್ಕೆ ಹೊರಡುವ ಹಿಂದಿನ ದಿನ, ಕಿರಿಯ ಸಂತಳ ಕೊಠಡಿಯ ಬಾಗಿಲು ಅರ್ಧ ತೆರೆದದ್ದನ್ನು ಮಹಾರಾಜ್‌ಕುಮಾರ್ ಕಂಡನು. ಮೊದಲ ಸಲ ತಾನಾಗಿ ಅವಳ ಬಳಿ ಹೋದಾಗ, ಒಲವಿನ ಉತ್ಕಟತೆಯಲ್ಲಿ ಅವಳು ಮೈಮರೆತಿದ್ದಳು. ಆಗ ಬಹು ಮಟ್ಟಿಗೆ ಇದಾರ್ ಯುದ್ಧಕ್ಕೆ ಅವನು ಹೋಗಿರಲಿಲ್ಲ. ದೂರ ಇರು. ಕಣ್ಣಿಗೆ ಕಣ್ಣು ಪಟ್ಟಿಯನ್ನು ಕಟ್ಟಿಕೊಂಡು ಮುಂದೆ ನಡೆದರೆ ನಿನಗೆ ಗೊತ್ತಾಗುವುದಕ್ಕಿಂತ ಮುಂಚೆ ಆಕೆ ತನ್ನ ಮಾಟವನ್ನು ನಿನ್ನ ಮೇಲೆ ಪ್ರಯೋಗಿಸಿ ಬಿಡುವಳು. ಹಾಗಾಗಿ ಬಾಬರನನ್ನು ಸಂಧಿಸಬೇಕೆಂಬ ನಿನ್ನ ಉದ್ದೇಶವನ್ನು ನಿನ್ನ ಜೀವನದ ಅತ್ಯಂತ ಮುಖ್ಯವಾದ ಉದ್ದೇಶವನ್ನು ನೀನು

ಈಡೇರಿಸಿಕೊಳ್ಳಲು ನಿರಾಕರಿಸುವೆ. ಬಾಗಿಲನ್ನು ಸ್ವಲ್ಪ ತಳ್ಳಿದನು. ಬಾಗಿಲಿನ ಕೀಲು ಕಿರ್ರೆಂದು ಸದ್ದು ಮಾಡಿತು. ಆದರೆ ತುಕ್ಕು ಹಿಡಿದ ಅದರ ಸದ್ದು ಅವಳಿಗೆ ಕೇಳಿಸಲಿಲ್ಲ. ಅವಳು ಕೃಷ್ಣನ ಮುಂದೆ ಕುಳಿತಿದ್ದಳು. ಅವಳ ಪಾರ್ಶ್ವ ನೋಟ ಅವನಿಗೆ ಕಾಣುತ್ತಿತ್ತು. ಆಕರ್ಷಕವಾದ ಕಂದು ಹಳದಿ ಬಣ್ಣದ ನಯವಾದ ರವಿಕೆ ಮತ್ತು ಪರಕಾರವನ್ನು ಅವಳು ತೊಟ್ಟಿದ್ದಳು. ತಲೆಯ ಮೇಲೆ ಹಸಿರು ಬಣ್ಣದ ಸೆರಗನ್ನು ಹೊದ್ದಿದ್ದಳು. ಚೆಂಡು ಹೂವಿನ ಹಾರವನ್ನು ಕೊರಳಲ್ಲಿ ಧರಿಸಿದ್ದಳು. ಅಂಥ ಮೂರು ಹಾರಗಳನ್ನು ಧರಿಸಿದ್ದಳು. ತನ್ನ ಹೆಬ್ಬೆರಳನ್ನು ಅರಿಶಿನದಲ್ಲಿ ಅದ್ದಿ ಅದನ್ನು ಹಣೆಯಲ್ಲಿ ಹಚ್ಚಿಕೊಂಡಿದ್ದಳು. ಅದರ ಮೇಲೆ ಕುಂಕುಮದ ಬೊಟ್ಟಿಟ್ಟುಕೊಂಡಿದ್ದಳು. ತೆಂಗಿನ ಕಾಯನ್ನು ಸರಿಯಾಗಿ ಎರಡು ಹೋಳಾಗಿ ಒಡೆದು ಅವುಗಳನ್ನು ತನ್ನ ಮುಂದಿರಿಸಿಕೊಂಡಿದ್ದಳು.

ತನ್ನ ಕಣ್ಣುಗಳನ್ನು ಮುಚ್ಚಿಕೊಂಡಿದ್ದಳು.

ಶ್ರೀ ಕೃಷ್ಣನಿಗೆ "ನನ್ನನ್ನು ಪೂಜಿಸು. ನಿನ್ನಲ್ಲಿರುವಷ್ಟೇ ದೈವತ್ವ ನನ್ನಲ್ಲಿದೆ" ಎಂದು ಹೇಳಿದಳು.

ಅಲ್ಲಿ ಅವಳು ಅದನ್ನು ಮಾಡಿದ್ದಳು. ಹೇಳಬಾರದ್ದನ್ನು ಹೇಳಿದಳು. ಅದರ ಉದ್ಧಟತನ ಮತ್ತು ಧಾರ್ಷ್ಟ್ಯಕ್ಕೆ ಮಹಾರಾಜ್‌ಕುಮಾರ್ ದಿಗ್ಭ್ರಮೆಗೊಂಡಿದ್ದನು. ಅಷ್ಟಾದರೂ, ಅವಳು ಹಾಗೆ ಹೇಳುವುದು ಅತ್ಯಂತ ತರ್ಕಬದ್ಧವೂ ಸಹಜವೂ ಆದದ್ದೆಂಬುದನ್ನು ಅವನು ಒಪ್ಪಲೇ ಬೇಕಾಗಿತ್ತು. ತನ್ನ ಪ್ರಾಯದಲ್ಲಿ 'ಸೋಹಂ' ಎಂಬ ಮಂತ್ರದಲ್ಲಿ ನಂಬಿಕೆಯಿಟ್ಟು ಅದನ್ನು ಬಾಯಿಪಾಠ ಮಾಡಿರಲಿಲ್ಲವೆ? ಯಾವುದು ನಮ್ಮನ್ನು ಸ್ಫೂರ್ತಿಗೊಳಿಸುತ್ತದೋ, ಎಲ್ಲವನ್ನೂ ವ್ಯಾಪಿಸಿದೆಯೋ, ಇಡೀ ವಿಶ್ವವನ್ನೆಲ್ಲಾ ಆವರಿಸಿದೆಯೋ ಆ ಅದೇ ನಾನು. ಇಷ್ಟಾದರೂ ಅವು ಕೇವಲ ಖಾಲೀ ಶಬ್ದಗಳಾಗಿದ್ದುವು. ಕಿರಿಯ ಸಂತಳ ನಂಬಿಕೆ ಅಂತಿಮ ಸಗೆತವನ್ನು ನಿರ್ಮಿಸಿತ್ತು. ಶ್ರೀಕೃಷ್ಣನೊಂದಿಗೆ ಅವಳು ತನ್ನ ಪಾತ್ರವನ್ನು ಬದಲಿಸಬಲ್ಲವಳಾಗಿದ್ದಳು. ಅವಳು ದೇವರ ಸತ್ವವೂ, ಶಕ್ತಿಯೂ, ಬಲವೂ ಆಗಿದ್ದಳು.

ಅಧ್ಯಾಯ 46

ಮೇವಾಡದ ಸೇನಾಪಡೆಗಳು ಇಡಿಯಾಗಿ ರಕ್ಷಾ ಕವಚ ಧರಿಸಿ, ವೈಭವದಿಂದ ಮತ್ತು ಹೆಮ್ಮೆಯಿಂದ ಪಥ ಸಂಚಲನದಲ್ಲಿ ಸಾಗುತ್ತಿದ್ದು ತಂದೆಯವರು ಗೌರವ ರಕ್ಷೆಯನ್ನು ಸ್ವೀಕರಿಸುತ್ತಿದ್ದರೆ ನೋಡಲು ಅದೆಂಥ ಅದ್ಭುತ ದೃಶ್ಯ! (ಈ ಹೊತ್ತು ಅದೇ ಹಳಸಲು ದಿನ. ವಾಸ್ತವದಲ್ಲಿ ಯಾವನೇ ಮೇವಾಡಿಗಿಂತ ನಾನು ಕೆಟ್ಟ ಭಾವುಕ ವ್ಯಕ್ತಿ). ನಮ್ಮ ಯೋಧರು ಅದೆಷ್ಟು ಹೆಮ್ಮೆಯ ಎತ್ತರದ ಸ್ಫುರದ್ರೂಪಿಗಳು! ಅವರುಗಳು ಅದೆಂಥ ಸೊಗಸಾಗಿ ಮಿರುಗುವ ಪೋಷಾಕನ್ನು ಧರಿಸಿದ್ದಾರೆಂದರೆ, ಅವರೇನು ಮದುವೆಗೆ ಹೋಗುತ್ತಿದ್ದಾರೇನೋ ಎಂದು ನಿಮಗನ್ನಿಸುತ್ತದೆ. ಮೊದಲಿಗೆ ಅಶ್ವದಳ ಅನಂತರ ಒಂಟೆ ಸೈನ್ಯ, ಆಮೇಲೆ ಗಜ ಸೇನೆ, ಆ ನಂತರ ಪದಾತಿ ಸೇನೆ. ಹೆಗಲಿಗೆ ಧನುಸ್ಸು, ಹಿಂದೆ ಬೆನ್ನ ಮೇಲೆ ಬತ್ತಳಿಕೆಯಲ್ಲಿ ಬಾಣಗಳು. ಸೊಂಟದಲ್ಲಿ ಖಡ್ಗಗಳು, ಕೈಯಲ್ಲಿ ಗುರಾಣಿಗಳು. ಕೊನೆಯಲ್ಲಿ ಬಂದೂಕುಗಳನ್ನು ಹೊತ್ತ ನೂರು ಜನರ ತಂಡ. ಮೇವಾಡದ ಪಡೆಗಳ ಹಿಂದೆ, ನಮ್ಮೊಡನೆ ಬಂದು ಸೇರಿರುವ ಮಿತ್ರ ದೇಶಗಳ ಪಡೆಗಳು. ಸೇನಾ ಪಡೆಗಳ ಈ ಮೆರವಣಿಗೆಯ ವೈಭವ ಮತ್ತು ಆಡಂಬರ ಮುಗಿಯುವುದೇ ಇಲ್ಲವೇನೋ ಎಂಬಂತೆ ಕಾಣುತ್ತಿತ್ತು. ಕೇವಲ ಪ್ರಮಾಣ ಒಂದು ಗುಣವೋ ಅಥವಾ ಅನಾನುಕೂಲವೋ? ಭುಜಕ್ಕೆ ಭುಜ ಸೋಕಿಸಿಕೊಂಡು, ಒತ್ತೊತ್ತಾಗಿ, ವೀರ ಯೋಧರಿಂದ ಕೂಡಿದ ಅಂಥದೊಂದು ಬೃಹತ್ ಸೇನೆ ಸಾಗಿ ಹೋಗುತ್ತಿರುವ ದೃಶ್ಯವೇ ಶತ್ರುವನ್ನು ನಿಶ್ಚೇಷ್ಟಿತಗೊಳಿಸಿ, ಮಂತ್ರ ಮುಗ್ಧಗೊಳಿಸಿಬಿಡಬಹುದು. ಒಂದು ವೇಳೆ ಶತ್ರುವು ದೊಡ್ಡ ಮತ್ತು ಸಣ್ಣ ಬಂದೂಕುಗಳಿಂದ ಸಜ್ಜುಗೊಂಡಿದ್ದರೆ, ಆಗ ಪರಸ್ಪರ ಹೊಂದಾಣಿಕೆ ಮತ್ತು ಸುಲಭ ಚಲನೆ ಇಲ್ಲದಂತಾಗಿಸಿ ನಮ್ಮ ಸೇನೆಯನ್ನು ತಪ್ಪದೆ ತನ್ನ ಗುರಿ ಮಾಡಬಹುದು. ಎಲ್ಲಿ ಗುಂಡು ಹಾರಿಸಿದರೂ, ಶತ್ರುವು ಮೃತ ಸೈನಿಕರ ಬೆಳೆಯನ್ನು ಕೊಯ್ಯಬಹುದು. ಒಮ್ಮೆಗೇ ನಮ್ಮ ಸೈನಿಕರು ಅಂಥ ದುರ್ದಮನೀಯ ಸೈನಿಕರೆಂದು ತೋರಲಿಲ್ಲ.

ಈಗ ಅಲ್ಲಿಗೆ ಮತ್ತೆ ನನ್ನ ಸಂಶಯಗಳೊಂದಿಗೆ ಹೋಗುತ್ತಿದ್ದೇನೆ. ಕಳೆದ ಕೆಲವು ತಿಂಗಳುಗಳಿಂದ ನನ್ನನ್ನೇ ನಾನು ಎಚ್ಚರಿಕೆಯಿಂದ ಗಮನಿಸುತ್ತಿದ್ದೇನೆ. ನಾನೀಗ ಮುರಿದ ಮತ್ತು ಒಡೆದ ವ್ಯಕ್ತಿಯಾಗಿ ಬಿಟ್ಟಿರುವಂತೆನಿಸುತ್ತಿದೆ. ಇದು ಅಂತಿಮ ಯುದ್ಧವಲ್ಲ ಎಂದು ನನಗೆ ನಾನೇ ಸ್ಪಷ್ಟವಾಗಿ ಹೇಳಿಕೊಳ್ಳುತ್ತೇನೆ. ನಾವು ಗೆಲ್ಲಲು ಏನೇನು ಕೆಟ್ಟದ್ದನ್ನು ಮಾಡಬಹುದೋ ಅದೆಲ್ಲವನ್ನೂ ಮಾಡಿ ಬಾದಷಹನು ಇಲ್ಲಿಂದ ಕಾಬೂಲಿಗೆ ಕಾಲ್ತೆಗೆಯುವಂತೆ ಮಾಡುತ್ತೇವೆ. ಅಕಸ್ಮಾತ್ ನಮಗೇನಾದರೂ ಈ ಸಲ ಗೆಲುವಾಗದೆ

ಹೋದರೆ, ಅದು ನಮಗೆ ಕೇವಲ ಒಂದು ತಾತ್ಕಾಲಿಕ ಹಿನ್ನಡೆಯಾಗುತ್ತದೆ ಅಷ್ಟೆ. ಅಷ್ಟು ಹೊತ್ತಿಗೆ ನಾವು ಪಾಠ ಕಲಿತಿರುತ್ತೇವೆ ಮತ್ತು ಹೆಚ್ಚು ಚತುರರೂ, ಚಾಣಾಕ್ಷರೂ, ಅತ್ಯುತ್ತಮವಾಗಿ ಸಜ್ಜುಗೊಂಡವರೂ ಆಗಿರುತ್ತೇವೆ. ನಾವು ಕಾರ್ಯಯೋಜನೆಯೊಂದಿಗೆ ಹೋಗೋಣ ಮತ್ತು ಶತ್ರುವನ್ನು ಶಾಶ್ವತವಾಗಿ ನಿರ್ಮೂಲ ಮಾಡೋಣ.

ರಾಜಕುಮಾರಿಯು ಅನ್ಯಮನಸ್ಕಳಾಗಿ ಕೈಯಾಡಿಸುತ್ತಿದ್ದಳು. ಯಾರೊಬ್ಬರಿಗೂ ನಿಶ್ಚಿತವಾಗಿ ಏಂದಲ್ಲ. ಅವಳ ನ್ಯಾಯಬದ್ಧ ಪತಿಯು ಯುದ್ಧ ಮಾಡಲು ಹೋಗುತ್ತಿದ್ದಾನೆಂದು ಆಕೆಗೆ ಗೊತ್ತಿತ್ತೆ? ಅದರಿಂದ ಅವಳಿಗೇನಾದರೂ ವ್ಯತ್ಯಾಸ ಎಂದು ಅನ್ನಿಸಿತೆ? ದೇವರಿಗಿಂತ ಕಡಿಮೆಯಲ್ಲದ, ಇನ್ನೂ ಮಹತ್ವದ ಸಂಗತಿಗಳಲ್ಲಿ ಆಕೆ ಮುಳುಗಿ ಹೋಗಿದ್ದಿರಬೇಕೆಂದು ನಾನು ಊಹಿಸಿದೆ.

ಯುದ್ಧವು ಸೂಕ್ತವೆಂದು ಹೇಳಲು ಬೇಕಾದ ಕೆಲವು ಸಂಗತಿಗಳನ್ನು ಒಳಗೊಂಡಿತ್ತೆಂದು ನಾನು ಒಪ್ಪಲೇಬೇಕು. ಕಳೆದ ಎರಡೂವರೆ ವಾರಗಳಿಂದ, ಎಷ್ಟು ಎಚ್ಚರಿಕೆಯಿಂದ ಸಾಧ್ಯವೋ ಅಷ್ಟು ಎಚ್ಚರಿಕೆಯಿಂದ ಅವಳನ್ನು ಭೇಟಿಯಾಗುವುದನ್ನು ನಾನು ತಪ್ಪಿಸಿದ್ದೆ. ಆದರೆ ಎಲ್ಲ ಸಮಯದಲ್ಲೂ ಯಶಸ್ವಿಯಾಗಿ ತಪ್ಪಿಸಲಾಗಿರಲಿಲ್ಲ. ಈಗ ನಾನು ದೂರ ಹೋಗುತ್ತಿದ್ದೆ. ಹಾಗಾಗಿ ಆಕಸ್ಮಿಕವಾಗಿಯಾದರೂ ಅವಳೆಡೆಗೆ ಹೋಗುವ ಅಥವಾ ಅವಳ ಮುಖವನ್ನು ನೋಡುವ ಸಂದರ್ಭವಾಗಲಿ ಇರಲಿಲ್ಲ. ಅವಳಿಂದ ಬಿಡುಗಡೆಯೊಂದರ ಹೊರತಾಗಿ ನಾನು ಹೆಚ್ಚು ತೀವ್ರವಾಗಿ ಬಯಸಿದ್ದು ಬೇರಾವುದೂ ಇರಲಿಲ್ಲ.

* * *

ಬಯಾನಾದಿಂದ ಐವತ್ತು ಮೈಲಿಗಳ ದೂರದಲ್ಲಿದ್ದಾಗ ಮಂಗಳನ ಮಾತುಗಳು ನನಗೆ ಮರಳಿ ತಲುಪಿದವು. ಬಾದಷಹ ಬಾಬರನು, ಕೋಟೆಯಲ್ಲಿದ್ದ ತನ್ನ ರಕ್ಷಕ ಪಡೆಯನ್ನು ಬಲಪಡಿಸಲು ಸಾಕಷ್ಟು ಜನರನ್ನು ಕಳಿಸುತ್ತಿದ್ದಾನೆ. ನಮ್ಮಿಂದ ಅದಕ್ಕೆ ಅಪಾಯವುಂಟಾಗಬಹುದೆಂಬುದೇ ಅದಕ್ಕೆ ಕಾರಣ. ಬಹುಶಃ ನಾವು ಅವನಿಗೆ ನಿರಾಶೆ ಉಂಟು ಮಾಡಬಾರದು. ಯುದ್ಧಕ್ಕೆ ಮುಂಚೆ ಅದು ತಕ್ಕ ವಾತಾವರಣವನ್ನು ನಿರ್ಮಿಸಲು ಸಹಾಯವಾಗಬಹುದು.

ಕಡೇ ಗಳಿಗೆಯ ಈ ನನ್ನ ಹುಚ್ಚು ಯೋಜನೆಯನ್ನು ತಂದೆಯವರು ಒಪ್ಪುತ್ತಾರೆಂಬುದು ಅನುಮಾನವೇ. ಆದರೆ ನಾನು ಅದೃಷ್ಟ ಪರೀಕ್ಷಿಸಿ ನೋಡಲು ತೀರ್ಮಾನಿಸಿದೆ. ನನ್ನ ದೊಡ್ಡ ಮನವಿಯನ್ನು ನಿರಾಕರಿಸಿದ ಮೇಲೆ ಅಷ್ಟೇನೂ ಮಹತ್ವದ್ದಲ್ಲದ ವಿಷಯಗಳಲ್ಲಿ ಅವರು ನನ್ನ ಆಸೆಯನ್ನು ಪೂರೈಸಲಪೇಕ್ಷಿಸಿದ್ದರು. ಅವರ ವಿಷಯದಲ್ಲಿ ನಾನು ನ್ಯಾಯವಾಗಿ ನಡೆದು ಕೊಂಡಿಲ್ಲ. ಮುಖ್ಯ ಸೈನಿಕ ಕಾರ್ಯಾಚರಣೆಗಿಂತ ಮೊದಲು ಭಯಪಡಿಸುವ ಒಂದು ಘೋಷಣೆಯನ್ನು ಹೊರಡಿಸುವ ವಿಚಾರವನ್ನು ಅವರು ಇಷ್ಟಪಟ್ಟರು.

"ಕೋಟೆಯನ್ನೊಮ್ಮೆಗೆ ನೀವು ಸುರಕ್ಷಿತವಾಗಿ ವಶಪಡಿಸಿಕೊಂಡಿರೆಂದರೆ ಆಗ ನಾವು ನಿಮ್ಮೊಂದಿಗೆ ಸೇರುತ್ತೇವೆ. ಮಂಡಕೂರಿಗೆ ನಾವು ಜೊತೆಯಲ್ಲೇ ಹೊರಡೋಣ".

ಬಾಬರನ ಕಡೆಯವರು ನಮ್ಮ ಒಂದು ಸಣ್ಣ ತಂಡವನ್ನು ಕೊಚ್ಚಿ ಹಾಕಿ ಬಿಡಬಹುದಾದ ಸಾಧ್ಯತೆಯನ್ನು ಅವರೇಕೆ ಪರಿಗಣಿಸಲಿಲ್ಲ ಎಂದು ತಂದೆಯವರನ್ನು ನಾನು ಕೇಳಲಿಲ್ಲ.

ತೇಜ್, ಷಫಿ ಮತ್ತು ನಾನು ಐದು ನೂರು ಜನ ರಾವುತ ಪಡೆಯೊಂದಿಗೆ ಅಲ್ಲಿಂದ ಹೊರಟೆವು. ಬಾದಷಹನ ಕಡೆಯವರಿಗಿಂತ ಆ ಭೂಪ್ರದೇಶದ ದಿಕ್ಕು ದೆಸೆಗಳು ನಮಗೆ ಚೆನ್ನಾಗಿ ಗೊತ್ತಿತ್ತು. ನಾವೆಲ್ಲ ಕೂಡಿ ಕೆಲಸ ಮಾಡಿದ್ದೆವು. ನಾವು ಪರಸ್ಪರರಲ್ಲಿ

ಹೊಂದಾಣಿಕೆಗಳನ್ನು ಸಾಧಿಸಿದ್ದೆವು. ಅದು ಹೆಚ್ಚು ಕಡಿಮೆ, ಒಬ್ಬೊಬ್ಬರೂ ಇನ್ನೊಬ್ಬರ ಮನಸ್ಸನ್ನು ಅರ್ಥಮಾಡಿಕೊಂಡಿದ್ದಕ್ಕೆ ಸಮನಾಗಿತ್ತು. ನಾವು ಅತ್ಯಂತ ಹತ್ತಿರದ ಮಾರ್ಗವನ್ನು ಹಿಡಿದು ಸಮಯವನ್ನು ಸರಿತೂಗಿಸಿ, ಬಾಬರನ ಕಡೆಯವರು ಮತ್ತು ಅವರ ಸಾಮಾನು ಸರಂಜಾಮು ಬಂದು ತಲುಪುವುದಕ್ಕೆ ಪೂರ್ತಿ ಹನ್ನೊಂದು ಗಂಟೆ ಮುಂಚೆ ಆ ಜಾಗವನ್ನು ತಲುಪಿದ್ದೆವು. ಬಾಬರನು ಕಳಿಸಿದ್ದ ಬಲವರ್ಧಕ ಪಡೆಗೆ ಒಳಗೆ ಪ್ರವೇಶಿಸಲು ಬಯಾನಾ ಕೋಟೆಯ ಅಧಿಕಾರಿಯು ಬಾಗಿಲುಗಳನ್ನು ತೆರೆಯುತ್ತಿದ್ದ ಹಾಗೆಯೇ ನಾವು ಅವರ ಮೇಲೆ ಬಿದ್ದೆವು. ಅದೃಷ್ಟ ನಮ್ಮ ಕಡೆಯೇ ಹೆಚ್ಚಾಗಿತ್ತು. ಹಾಗಾಗಿ ನಾವು ಅದರ ಸದುಪಯೋಗ ಮಾಡಿಕೊಂಡೆವು. ಒಂದು ಗಂಟೆಯೊಳಗಾಗಿ ಶತ್ರುವು ತಮ್ಮ ಕಡೆಯ ಅನೇಕ ಯೋಧರು ಮತ್ತು ದಳದ ನಾಯಕರನ್ನು ಕಳೆದುಕೊಂಡಿದ್ದನು. ನಾವು ಇದ್ದಕ್ಕಿದ್ದಂತೆ ಮುತ್ತಿಗೆ ಹಾಕಿದ್ದೆವು. ಸಂಗೂತ್ ಖಾನ್ ಜಂಜುಹಾನು ಮತ್ತೆ ಮೇಲೇಳಲೇ ಇಲ್ಲ. ನಮ್ಮ ಯೋಧನೊಬ್ಬನು ಶತ್ರುವಿನ ಕಡೆಯಿಂದ ಖಡ್ಗವನ್ನು ಕಸಿದುಕೊಂಡು ಕೊಟ್ಟು ಖಾನನಿಗೆ ಭುಜದ ಮೇಲೆ ಘಾತಿಸಿದಾಗ, ದುಸ್ಸಾಧ್ಯ ಖಾನನು ಆ ಯೋಧನನ್ನು ಹೆಚ್ಚು ಕಡಿಮೆ ಸಾಯಿಸಿ ಬಿಟ್ಟಿದ್ದನು.

ಈಗ ಹಿಂತಿರುಗಿ ನೋಡಿದಾಗ, ಬಯಾನಾದ ಮೇಲೆ ನಾವು ಆಕ್ರಮಣ ಮಾಡಿದ್ದು ಅಷ್ಟೊಂದು ವಿವೇಕದ ವಿಚಾರವೇನಲ್ಲ. ಯುದ್ಧಕ್ಕೆ ಮೊದಲಿನ ಆ ದಾಳಿಯ ಗೆಲುವು ನಾವು ಅತಿಯಾದ ಆತ್ಮವಿಶ್ವಾಸದಿಂದ ಬೀಗುವಂತೆ ಮಾಡಿರಬೇಕು. ಬಾಬರನ ಸೈನಿಕರಲ್ಲಿ ಮತ್ತು ದಳಪತಿಗಳಲ್ಲಿ ಅದು ನಿಜಕ್ಕೂ ವಿಪರೀತವಾದ ಭಯದ ಅಲೆಯೊಂದನ್ನು ಎಬ್ಬಿಸಿತು. ಅದರಿಂದ ಯುದ್ಧದ ಫಲಿತಾಂಶದ ಮೇಲೆ ಅತ್ಯಂತ ಗಂಭೀರ ಪರಿಣಾಮವನ್ನುಂಟು ಮಾಡುವಂಥ ತೀರ್ಮಾನವನ್ನು ಬಾಬರ್ ಕೈಗೊಳ್ಳುವಂತೆ ಒತ್ತಾಯಿಸಿತು.

ನಾವು ಮಹಾಪ್ರಭುಗಳಿಗಾಗಿ ಹಾಗೂ ಇತರೆ ಸೇನಾಪಡೆಗಳಿಗಾಗಿ ಕಾಯುತ್ತಿದ್ದೆವು. ಆಗ ಗಂಭೀರಾ ನದಿಗೆ ವಿದಾಯ ಹೇಳದೆ, ಹಾಗೂ ಕೋಟೆಯ ಮತ್ತು ವಿಜಯ ಸ್ತಂಭದ ಪರಿಸರದ ನನ್ನ ಅಧಿಕೃತ ಸಂಚಾರವನ್ನು ಕೈಗೊಳ್ಳದೆ ಚಿತ್ತೂರಿನಿಂದ ನಾನು ಹೊರಟಿದ್ದೆ ಎಂಬುದು ಅರಿವಾಯಿತು. ನಾನು ಕೂಡ ನನ್ನ ಸಮಾಧಾನ ಮತ್ತು ಶಾಂತ ಚಿತ್ತತೆಯನ್ನು ಕಳೆದುಕೊಳ್ಳತೊಡಗಿದ್ದೆನೆ? ತವರೂರಿನಲ್ಲಿ ಜನಜೀವನ ಯಥಾ ಪ್ರಕಾರ ಸಾಗಬೇಕು. ಜಲ ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ಸುರಂಗಗಳ ಕೆಲಸ ಯೋಜಿಸಿದ್ದಂತೆ ಮುಂದುವರಿಯಬೇಕೆಂಬ ನನ್ನ ಸಲಹೆಗೆ ತಂದೆಯವರು ಸಮ್ಮತಿಸಿದ್ದರು. ಕೆಲಸಗಳಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಆದಿನಾಥಜೀಯವರಿಗೆ ತಿಳಿಸುವ, ಮಹಾಪ್ರಭುಗಳ ಮುದ್ರಿತ ಲಕೋಟೆಯನ್ನು ನಗರ ಯೋಜನಾಧಿಕಾರಿಗೆ ತಲುಪಿಸುವುದನ್ನು ನಾನು ಮರೆತು ಬಿಟ್ಟದ್ದೊಂದೇ ತೊಡಕು. ಅದನ್ನು ಕಛೇರಿಯ ನನ್ನ ಮೇಜಿನ ಎರಡನೇ ಖಾನೆಯಲ್ಲಿ ಬೀಗ ಹಾಕಿ ಇಡಲಾಗಿತ್ತು. ಚಿತ್ತೂರಿಗೆ ಪತ್ರಗಳನ್ನು ಕೊಂಡೊಯ್ಯಲಿರುವ ಹರಿಕಾರನ ಕೈಯಲ್ಲಿ ಬೀಗದ ಕೈಗಳನ್ನು ಕಳಿಸಲು ನಾನು ಮರೆಯಕೂಡದು.

ಮಹಾಪ್ರಭುಗಳು ಮತ್ತು ನಮ್ಮ ಮಿತ್ರ ರಾಜ್ಯಗಳ ಸೇನೆಗಳು ಬಂದಾಗ ಅವರು ಅತ್ಯುತ್ಸಾಹದಲ್ಲಿದ್ದರು. ಬಯಾನಾ ಕೋಟೆ ಉರುಳಿದ್ದು ಶುಭ ಶಕುನವೆಂದು ಅವರು ಭಾವಿಸಿದರು. ನಾವು ನೂತನವಾಗಿ ವಶಪಡಿಸಿಕೊಂಡ ಕೋಟೆಗೆ ತಂದೆಯವರು ರಾವ್ ಪ್ರಣಮಲ್ ಅವರನ್ನು ಮುಖ್ಯಾಧಿಕಾರಿಯಾಗಿ ನೇಮಿಸಿದರು. ಮರುದಿನ ಬೆಳಿಗ್ಗೆ ನಾವು ಅಲ್ಲಿಂದ ಹೊರಟೆವು. ಇಲ್ಲಿಯವರೆಗೆ ನಾವು ಅತ್ಯುತ್ತಮವಾದ ಪ್ರಗತಿಯನ್ನು ಸಾಧಿಸಿದ್ದೆವು.

ತಂದೆಯವರು ನಮಗಾಗಿದ್ದ ಅನುಕೂಲವನ್ನು ಪ್ರತಿಪಾದಿಸಲಿಚ್ಛಿಸಿದ್ದು ನನಗೆ ತುಂಬ ಸಂತಸವನ್ನುಂಟು ಮಾಡಿತ್ತು. ಬಾಬರನಿಗೆ ಸಿದ್ಧವಾಗಲು ಕಡಿಮೆ ಕಾಲಾವಕಾಶ ದೊರೆತಷ್ಟೂ ಶತ್ರುವನ್ನು ನಾವು ಸಂಪೂರ್ಣವಾಗಿ ತೊಡೆದು ಹಾಕುವ ಅವಕಾಶಗಳೇ ಹೆಚ್ಚಾಗಿದ್ದವು. ಅದೂ ಅಲ್ಲದೆ ನಮ್ಮ ಮಿಂಚಿನ ಆಕ್ರಮಣದಿಂದಾಗಿ ಬಾದಷಹನ ಸೇನಾ ಶಿಬಿರವು ತೀರಾ ಕೆಟ್ಟದಾಗಿ ಸ್ಥೈರ್ಯಗುಂದಿತ್ತೆಂಬ ಸುದ್ದಿ ಹರಡಿತ್ತು.

ಆಗ ರಾಣಾ ಅವರು ಮಾಡಿದ್ದನ್ನು ನಾನು ಇವತ್ತಿನವರೆಗೂ ವಿವರಿಸಲು ಸಾಧ್ಯವಾಗಿಲ್ಲ.

ಬಾಬರನು ಪ್ರಾರಂಭದಲ್ಲಿ ಆಗ್ರಾ ಮತ್ತು ಸಿಕ್ರಿಯ ಮಧ್ಯೆ ಇರುವ ಮಂಡಕೂರಿನಲ್ಲಿ ತನ್ನ ಪಾಳೆಯವನ್ನು ಹಾಕಿದ್ದನು. ಅವನ ಸೈನಿಕರು ಶಿಬಿರಗಳನ್ನು ಹಾಕಿದ್ದರು. ಅವನ ಬೃಹತ್ ಫಿರಂಗಿದಳ ಅಲ್ಲಿತ್ತು. ಆಗ ಅವನಿಗೆ ಈ ಬಯಲಿನಲ್ಲಿ ಸಾಕಷ್ಟು ನೀರಿನ ಪೂರೈಕೆ ಇರಲಿಲ್ಲ ಎಂದು ಗೊತ್ತಾಯಿತು. ಆಗ ಅವನು ಸರೋವರದ ಪಕ್ಕದಲ್ಲಿದ್ದ ಫತೇಪುರ್ ಸಿಕ್ರಿಯತ್ತ ಹೋಗಲು ನಿರ್ಧರಿಸಿದನು. ನಾವು ಬಯಾನದಿಂದ ಈಶಾನ್ಯಕ್ಕೆ ಹೆಚ್ಚು ಕಡಮೆ ಒಂದು ದಿನ, ಅಥವಾ ಸುತ್ತ ಮುತ್ತಣ ಪ್ರಕೃತಿ ಪರಿಸರದ ಕಡೆಯಿಂದ ಹೋಗಬೇಕೆಂದುಕೊಂಡರೆ ಒಂದೂವರೆದಿನ – ಈಗ ಅಂಥ ದೃಶ್ಯಗಳಾವೂ ಇಲ್ಲ – ಸಾಗಿದರೆ ನಾವು ಬಾದಷಹನ ಸೈನ್ಯಕ್ಕೆ ಮುಖಾಮುಖಿಯಾಗಿರುತ್ತಿದ್ದೆವು. ಶತ್ರುವಿಗೆ ಒತ್ತಡ ಹಾಕಿ ಅವನಿಗೆ ಅರಿವಿಲ್ಲದಂತೆ ಶತ್ರು ಇನ್ನೂ ಗಂಟು ಮುಟೆಗಳನ್ನು ಬಿಚ್ಚುವುದಕ್ಕೆ ಮುಂಚೆಯೇ ಹಿಡಿಯುವ ಬದಲು ತಂದೆಯವರು ವಾಯವ್ಯಕ್ಕೆ ಹೋಗಲು ಆಯ್ಕೆ ಮಾಡಿಕೊಂಡು ಭುಸಾವರ್‌ನಲ್ಲಿ ತಂಗಿದರು. ನನ್ನ ಮಕ್ಕಳಾಗಲಿ ಅಥವಾ ಯಾರೇ ಆಗಲಿ ಇದನ್ನು ನಂಬುವರೆ ಎಂದು ನನಗೆ ಅನುಮಾನ. ಆದರೆ ತಂದೆಯವರು ಕೊಟ್ಟ ಕಾರಣಗಳು, ಬಾಬರನ ಸರಬರಾಜುಗಳನ್ನು ತಡೆಯುವುದು ಉದ್ದೇಶ ಎಂದು. ಮಹಾಪ್ರಭುಗಳು ಎಂದೂ ನೇರವಾಗಿ ಯೋಚಿಸಿ ಸರಳವಾದ ಲೆಕ್ಕಾಚಾರ ಹಾಕಲಾರರೆ? ಅವರಿಗೇನು ಹಾಳು ಹುಚ್ಚು ಹಿಡಿದಿತ್ತೆ? ಸಿಡಿಮಿಡಿಗುಟ್ಟುವುದರಲ್ಲಿ ಏನರ್ಥ ಇದೆ. ಅದರಿಂದ ನಿಮಗೆ ಸತ್ವ ಹೀನ ಎಂದು ಅನ್ನಿಸಬಹುದು. ಹಾಗೆ ತಡಮಾಡಿದ್ದರಿಂದ ಹತ್ತಿರ ಹತ್ತಿರ ಒಂದು ತಿಂಗಳು ನಾವು ದಂಡ ಮಾಡಬೇಕಾಯಿತು. ಬಾದಷಹನು ಇದಕ್ಕಿಂತ ಹೆಚ್ಚು ಉಪಕಾರ ಮಾಡುವ ಶತ್ರುಬೇಕು ಎಂದು ಕೇಳಿರಲಾರ.

ಸಿಕ್ರಿಯಿಂದ ಹತ್ತು ಮೈಲಿ ದೂರದಲ್ಲಿದ್ದ ಖನುಆ ಎಂಬ ಹಳ್ಳಿಯಾದ ಮೇಲೆ ಬರುವ ಒಂದು ಮಟ್ಟಸವಾದ ಪ್ರದೇಶವನ್ನು ಯುದ್ಧಭೂಮಿಯನ್ನಾಗಿ ಬಾಬರ್ ಆಯ್ಕೆ ಮಾಡಿದ್ದಾನೆಂದು ನಮ್ಮ ಗುಪ್ತಚರ ವಿಭಾಗದ ಮುಖ್ಯ ಕ್ಷೇತ್ರಾಧಿಕಾರಿ ಶಿರಾಜ್ ಆಲಿ ಹೇಳಿದನು. ತನ್ನ ಕೆಲಸವನ್ನು ಒಬ್ಬ ಕಟ್ಟಡ ನಿರ್ಮಾಣ ತಂತ್ರಜ್ಞನಷ್ಟು ನಿಷ್ಕೃಷ್ಟತೆಯಿಂದ ಪ್ರಾರಂಭಿಸಿ ತನ್ನ ಯುದ್ಧ ಫಿರಂಗಿಗಳನ್ನು ಶತ್ರುವಿಗೆ ಮುಖಾಮುಖಿಯಾಗಿ ಮುಂದುಗಡೆ ಸ್ಥಾಪಿಸಿದನು. ಚಕ್ರಗಳುಳ್ಳ ಮರದ ತ್ರಿಪಾದಿಗಳ ಮೇಲೆ ಅವನ್ನು ಇರಿಸಲಾಗಿತ್ತು. ಅವುಗಳು ಬಂದೂಕು ಧಾರಿಗಳಿಗೂ ಆಶ್ರಯಸ್ಥಾನಗಳಾಗಿದ್ದುವು. ಅವುಗಳ ಹಿಂದೆ ಏಳೆಂಟು ಗಜಗಳಷ್ಟು ದೂರದಲ್ಲಿ ಒಂದರಿಂದೊಂದು ಪ್ರತ್ಯೇಕವಾಗಿ ಗಾಡಿಗಳನ್ನು ನಿಲ್ಲಿಸಿದ್ದನು. ಬಲವಾದ ಕಬ್ಬಿಣದ ಸರಪಳಿಗಳಿಂದ ಬಿಗಿದು ಗಾಡಿಗಳನ್ನು ಭದ್ರಪಡಿಸಿದ್ದನು. ಅವುಗಳು ಬಿಗಿಯಾಗಿ ಭದ್ರವಾಗಿವೆಯೋ ಇಲ್ಲವೋ ಎಂದು ಮತ್ತೆ ಮತ್ತೆ ಪರೀಕ್ಷಿಸಲಾಗಿತ್ತು. ಅದು ಅವನ ರಕ್ಷಣೆಯ ಎರಡನೆಯ ಸರಣಿಯಾಗಿತ್ತು. ಅದರ ಹಿಂದೆ ಫಿರಂಗಿ ದಳ; ಬಂದೂಕುಗಳೊಂದಿಗೆ ಸಜ್ಜುಗೊಂಡ ಯೋಧರು ಆಶ್ರಯ ಪಡೆದಿದ್ದರು. ಗಾಡಿಗಳ ರಕ್ಷಣೆಯಿರದಿದ್ದ ಸಂದರ್ಭದಲ್ಲಿ ಬಾಬರನು ತನ್ನ ಸಹಾಯಕ ಸೈನ್ಯಾಧಿಕಾರಿ ಖುರಸಾನಿ ಮತ್ತು ಸ್ಥಳೀಯ ಗಣಿ ಕೆಲಸಗಾರರಿಗೆ ಹೇಳಿ ಹಳ್ಳಗಳನ್ನು ತೋಡಿಸಿದ್ದನು.

ಬಯಾನಾದ ಮೇಲೆ ಇದ್ದಕ್ಕಿದ್ದಂತೆ ಮುತ್ತಿಗೆ ಹಾಕಿದ್ದು ಬಾಬರನ ಸೇನಾ ಪಡೆಗಳಲ್ಲಿ ಕಂಪನದ ಅಲೆಗಳನ್ನು ಎಬ್ಬಿಸಿತ್ತು. ನಮ್ಮ ಉಗ್ರತೆ ಮತ್ತು ಶೌರ್ಯ ಕುರಿತಾದ ಕತೆಗಳು ಬಾದಷಹನ ಪಾಳೆಯದಲ್ಲೆಲ್ಲ ಹರಡಿದ್ದವು. ಅದರ ಜೊತೆಗೆ ಇತ್ತೀಚೆಗೆ ಕಾಬೂಲಿನಿಂದ ಬಂದಿದ್ದ ಜ್ಯೋತಿಷಿ ಮಹಮ್ಮದ್ ಷರೀಫನು – 'ಕುಜನು ಈಗ ಪಶ್ಚಿಮಕ್ಕೆ ಬಂದಿದ್ದಾನೆ ಪೂರ್ವದ ಕಡೆಯಿಂದ ಯಾರು ಯುದ್ಧಕ್ಕೆ ಬರುತ್ತಾರೋ ಅವರು ಸೋಲುತ್ತಾರೆ ಎಂದು ಕಣಿ ನುಡಿದಿದ್ದನು. ಎಷ್ಟೇ ಪ್ರಯತ್ನ ಪಟ್ಟಿರಬಹುದಾದರೂ ಬಾಬರನಿಗೆ ತನ್ನ ಕಡೆಯವರ ಭಯ ಮತ್ತು ಆತಂಕಗಳನ್ನು ನಿವಾರಿಸಲಾಗಿರಲಿಲ್ಲ. ಈ ಬಿಕ್ಕಟ್ಟಿನ ಸಂದರ್ಭಕ್ಕೆ ಈ ಎಲ್ಲ ಮಾತುಗಳಿಂದ ಅವನು ಸ್ವಲ್ಪವೂ ವಿಚಲಿತನಾಗಿರಲಿಲ್ಲ. ಅಲ್ಲದೆ ತನ್ನ ಜೀವನದ ಎರಡು ಬಹುಮುಖ್ಯ ನಾಟಕೀಯ ನಡೆಗಳನ್ನು ತೋರಿಸಲು ನಿರ್ಧರಿಸಿದನು. ಪ್ರಾಮಾಣಿಕತೆಯಿಂದಲೇ ಅದನ್ನು ಮಾಡಲಾಗಿತ್ತೆಂಬುದರಲ್ಲಿ ನನಗೆ ಕಿಂಚಿತ್ತೂ ಅನುಮಾನವಿಲ್ಲ. ಎಲ್ಲ ಮಹಾನ್ ನೇತಾರರಂತೆ ಅವನಿಗೂ ಅತ್ಯುನ್ನತ ಮಟ್ಟದ ಸಮಯದ ಪರಿಜ್ಞಾನ ಮತ್ತು ರಂಗಪ್ರಜ್ಞೆ ಇತ್ತು. ಮೊದಲನೆಯದು ತನ್ನ ದೊಡ್ಡ ದುಶ್ಚಟವಾದ ಮದ್ಯವನ್ನು ತ್ಯಜಿಸುವುದು. ಬಾಬರನು ತನ್ನ ಆಳ್ವಿಕೆಯ ಪ್ರದೇಶಗಳಲ್ಲೆಲ್ಲಾ ಒಂದು ಫರ್ಮಾನು ಹೊರಡಿಸಿ ಅದನ್ನು ಪ್ರಕಟಿಸಿದ್ದನು. ಅದನ್ನು ಅಲಂಕಾರಿಕ ಶೈಲಿಯಲ್ಲಿ ಬರೆಯಲಾಗಿದ್ದು ವಾಗಾಡಂಬರದಿಂದ ಕೂಡಿ, ಕಂಡ ಹಾಗೆಯೇ ಅದು ನನಗೆ ಗೊತ್ತಿರುವ ದಿನಚರಿ ಬರೆಯುವವನ ಬರವಣಿಗೆಯ ಕೆಲಸವಲ್ಲ. ಅವನ ಕಾರ್ಯದರ್ಶಿಗಳಲ್ಲೊಬ್ಬನದೋ ಅಥವಾ ಮುಲ್ಲಾಗಳದೋ ಆಗಿರಬೇಕು. ಇಲ್ಲಿ ಅದರ ಕೆಲವು ಉದ್ಧೃತ ಭಾಗಗಳು:

"ನಾಸ್ತಿಕರನ್ನು ಕೊಲ್ಲಬೇಕೆಂದು ಉದ್ದೇಶಿಸಿ, ನಾವು ಪವಿತ್ರ ಯೋಧನ ಪೋಷಾಕನ್ನು ಧರಿಸಿ ನಾಸ್ತಿಕರ ವಿರುದ್ಧ, ಇಸ್ಲಾಮೀ ಸೇನೆಯೊಂದಿಗೆ ಬೀಡು ಬಿಟ್ಟಿದ್ದಾಗ ನನಗೆ ರಹಸ್ಯ ಸ್ಫೂರ್ತಿ ಬಂದಿತು. ಹಾಗೂ ಅಮೋಘವಾದ ದನಿಯೊಂದು 'ದೇವರನ್ನು ಬುದ್ಧಿವಾದಕ್ಕೆ ಹಾಗೂ ಈಗಾಗಲೇ ಗೋಚರವಾಗಿರುವ ಆ ಸತ್ಯಕ್ಕೆ ತಮ್ಮನ್ನು ನಿವೇದಿಸಿಕೊಳ್ಳುವ ಸಮಯವಿನ್ನೂ ಬಂದಿಲ್ಲವೆ?' ಎಂದು ಹೇಳುತ್ತಿದ್ದುದು ಕೇಳಿಸಿತು. ಆ ಮೇಲೆ ನಮ್ಮಷ್ಟಕ್ಕೆ ನಾವು ಕೆಟ್ಟ ವಿಷಯಗಳನ್ನು ನಿರ್ಮೂಲ ಮಾಡಲು ದೃಢ ಸಂಕಲ್ಪ ಮಾಡಿದೆವು... ನನ್ನ ಎದೆಯ ಖಜಾನೆಯಲ್ಲಿ ಅಡಗಿದ್ದ ಮದ್ಯವನ್ನು ಸೇವಿಸುವುದಿಲ್ಲವೆಂಬ ನನ್ನ ನಿರ್ಧಾರವನ್ನು ಬಹಿರಂಗಪಡಿಸಿದೆನು. ವಿಜಯೀ ಸೇವಕರು, ಪ್ರಖ್ಯಾತ ಆದೇಶಕ್ಕನುಸಾರವಾಗಿ ಸಂಖ್ಯೆಯಲ್ಲಿ ಮತ್ತು ಹೊಳೆಯುವುದರಲ್ಲಿ ನಕ್ಷತ್ರಗಳನ್ನು ಹೋಲುವಂತಿದ್ದ ಬಟ್ಟಲುಗಳನ್ನು, ಮದಿರಾ ಪಾತ್ರೆಗಳನ್ನು, ಚಿನ್ನದ ಮತ್ತು ಬೆಳ್ಳಿಯ ಇತರೆ ಪಾತ್ರೆಗಳನ್ನು, ನೆಲದ ಮೇಲೆ ಜೋರಾಗಿ ಅಪ್ಪಳಿಸಿದರು. ದೈವೇಚ್ಛೆಯಂತೆ ಅವರು ಇಷ್ಟರಲ್ಲೇ ವಿಗ್ರಹಾರಾಧಕರ ದೇವತೆಗಳನ್ನು ಅಪ್ಪಳಿಸುವ ಹಾಗೆ ಅವುಗಳನ್ನು ಅಪ್ಪಳಿಸಿ ಚೂರು ಚೂರು ಮಾಡಿದರು. ಅವುಗಳ ಚೂರುಗಳನ್ನು ಬಡವರಿಗೆ ಮತ್ತು ಅಗತ್ಯವಿದ್ದವರಿಗೆ ಹಂಚಿದರು."

ಬಾಬರನು ಕೈಗೊಂಡ ದಾನ–ಧರ್ಮದ ಕಾರ್ಯಕ್ರಮ ಮೇಲೆ ಹೆಸರಿಸಲಾದದ್ದಷ್ಟೇ ಅಲ್ಲ. ತನ್ನ ಸಾಮ್ರಾಜ್ಯದ ಮುಸ್ಲಿಮ್ ಜನಾಂಗದ ಬೆಂಬಲವನ್ನು ಗಳಿಸುವ ಪ್ರಯತ್ನವಾಗಿ ಇನ್ನು ಮುಂದೆ ಮುಸಲ್ಮಾನರಾರೂ ತೆರಿಗೆ ಕೊಡಬೇಕಾಗಿಲ್ಲವೆಂದು ಆದೇಶ ಮಾಡಿದನು.

ಇಷ್ಟಾದರೂ, ಈ ಮಹಾ ವಾಗ್ದಾನ ಮತ್ತು ತ್ಯಾಗವೂ ಅಪೇಕ್ಷಿತ ಪರಿಣಾಮವನ್ನುಂಟು ಮಾಡಿದಂತೆ ಕಾಣಲಿಲ್ಲ. ಷಿರಾಜ್ ಆಲಿ ನನಗೆ ಕಳಿಸಿರುವ ಬಾಬರನ ದಿನಚರಿಯ ಒಂದು ಟಿಪ್ಪಣಿ ಇಲ್ಲಿದೆ.

"ಕಟ್ಟ ಕಡೆಗೆ, ಜನರ ಹೃದಯದ ಬಯಕೆಗಳೇನೆಂದು ವಿಚಾರಿಸಿಕೊಂಡ ಮೇಲೆ

ಮತ್ತು ಅವರ ಸೋಮಾರಿತನವನ್ನು ನಾನೇ ಕಣ್ಣಾರೆ ಕಂಡ ಮೇಲೆ, ನನಗೊಂದು ಉಪಾಯ ಹೊಳೆಯಿತು. ದಟ್ಟ ದರಿದ್ರರು ಮತ್ತು ಸಾಹಸಿಗಳನ್ನೆಲ್ಲ ಕರೆದು ಹೇಳಿದೆ:"

'ಬಡವರೆ ಮತ್ತು ವೀರರೆ! ಕೆಟ್ಟ ಹೆಸರು ತೆಗೆದುಕೊಂಡು ಬದುಕುವುದಕ್ಕಿಂತ, ಒಳ್ಳೆಯ ಹೆಸರು ಗಳಿಸಿ ಸಾಯುವುದು ಒಳ್ಳೆಯದು.'

'ನಾನು ಒಳ್ಳೆಯ ಹೆಸರುಗಳಿಸಿ ಸಾಯುವುದಾದರೆ ನನಗೆ ಅದೇ ಒಳ್ಳೆಯದು!'

ನಾನು ಒಳ್ಳೆಯ ಹೆಸರನ್ನು ಗಳಿಸಬೇಕು. ಯಾಕಂದರೆ ಶರೀರ ಯಾವತ್ತಾದರೂ ಸಾಯುವುದೇ.

"ಅತ್ಯುನ್ನತನಾದ ಆ ದೇವನು ನಮಗೆ ಎಂಥ ಒಂದು ಸಂತೋಷವನ್ನು ಕರುಣಿಸಿದ್ದಾನೆಂದರೆ, ಹಾಗೂ ನಮಗೆಲ್ಲ ಎಂಥ ಒಂದು ಅದೃಷ್ಟವನ್ನು ನಿರ್ಮಿಸಿದ್ದಾನೆಂದರೆ, ನಾವು ಹುತಾತ್ಮರಾಗಿ ಸಾಯುತ್ತೇವೆ. ಆ ದೇವನ ಉದ್ದೇಶದ ಈಡೇರಿಕೆಗಾಗಿ ನಾವು ಪ್ರತೀಕಾರದಿಂದ ಕೊಲ್ಲುತ್ತೇವೆ. ಆದ್ದರಿಂದ ನೀವು ಪ್ರತಿಯೊಬ್ಬರೂ ಆ ದೇವನ ಪವಿತ್ರ ವಾಣಿಯ ಮೇಲೆ, ಆಣೆಯಿಟ್ಟು "ನನ್ನ ದೇಹದಲ್ಲಿ ಉಸಿರಿರುವ ತನಕ ಶತ್ರುವಿನ ಎದುರಿನಿಂದ ತನ್ನ ಮುಖ ತಿರುಗಿಸಿಕೊಳ್ಳುವ ಯೋಚನೆಯನ್ನಾಗಲಿ, ಈ ಘೋರ ಯುದ್ಧದಿಂದ ಹಿಂತೆಗೆಯುವುದಾಗಲಿ ಮಾಡುವುದಿಲ್ಲವೆಂದು ಪ್ರತಿಯೊಬ್ಬನೂ ಪ್ರತಿಜ್ಞೆ ಮಾಡಬೇಕು" ಅಲ್ಲಿದ್ದ ಭಿಕ್ಷುಕರು, ಸೇವಕರು, ದೊಡ್ಡ ಮನುಷ್ಯರು, ಸಾಮಾನ್ಯರು ಎಲ್ಲರೂ ಪವಿತ್ರ ಗ್ರಂಥವನ್ನು ಸಂತಸದಿಂದ ತಮ್ಮ ಕೈಗಳಲ್ಲಿ ಹಿಡಿದು ಈ ಅರ್ಥ ಬರುವಂತೆ ಪ್ರತಿಜ್ಞೆ ಮತ್ತು ಒಪ್ಪಂದ ಮಾಡಿದರು."

ಅಂತಿಮವಾಗಿ ನಾವು ಖನುವಾಕ್ಕೆ ಬಂದಾಗ, ಬಾಬರ್ ನಮಗಾಗಿ ಸಿದ್ಧವಾಗಿ ಕಾಯುತ್ತಿದ್ದನು.

ಅಧ್ಯಾಯ 47

ಯುದ್ಧದ ಹಿಂದಿನ ದಿನದ ರಾತ್ರಿ ನಡೆದ ಯುದ್ಧ ಸಮಿತಿಯ ಅಂತಿಮ ಸಭೆಯಲ್ಲಿಯ ಮನೋಭಾವ, ಉಲ್ಲಾಸದ, ಅಷ್ಟೇ ಅಲ್ಲ ವಿನೋದದ್ದೂ ಆಗಿತ್ತು. ಹೆಚ್ಚಿನ ಮಾತುಕತೆಯೆಲ್ಲ ಬಾದಷಹನ ಸೈನ್ಯ ಅದೆಷ್ಟು ಸಣ್ಣದು ಹಾಗೂ ಗುಂಡಿಗಳನ್ನು ತೋಡಿದ್ದು, ಸತ್ತ ಮೊಗಲನನ್ನು ಹೂಳಲೆಂದೆ ಎಂಬ ಬಗ್ಗೆ ನಡೆದಿತ್ತು. ಸಭೆಯ ನಡವಳಿಗಳಲ್ಲಿ ಕಹಿಯಾದ ಟಿಪ್ಪಣಿಯ ಪ್ರವೇಶ ಮಾಡಿಸಿದ್ದು ನಾನೊಬ್ಬ ಮಾತ್ರ ಎನ್ನುವುದಕ್ಕೆ ಸಭೆ ಸಾಕ್ಷಿಯಾಯಿತು. ಅವರು ನನ್ನನ್ನು ಪುಸಲಾಯಿಸಿದರು. ಆದರೆ ಅದನ್ನು ಬಿಟ್ಟುಕೊಡುವುದು ಹೇಗೆ ಎಂದು ನನಗೆ ತಿಳಿಯಲಿಲ್ಲ.

"ನಮಗಿರುವ ಯುದ್ಧದ ಯೋಜನೆ ಒಂದೇ. ಅದು ನಮ್ಮ ಸಾವಿರ ಆನೆಗಳ ಕಾಲುಗಳಡಿಯಲ್ಲಿ ಶತ್ರುವನ್ನು ಮೆತ್ತಗೆ ಮಾಡುವುದು. ಆಮೇಲೆ ಮೇಲ್ನೋಟಕ್ಕೆ ಅಖಂಡವೆಂಬಂತೆ ತೋರುವ ನಮ್ಮ ಸೇನೆಯ ನಾಲ್ಕು ವಿಭಾಗಗಳನ್ನು ಮುನ್ನಡೆಸಿ ಶತ್ರುವಿನ ಮೇಲೆ ಆಕ್ರಮಣ ಮಾಡುವುದು. ನಮಗೊಂದು ಸಮಗ್ರವಾದ ಯುದ್ಧ ತಂತ್ರವಿಲ್ಲ. ಯುದ್ಧದ ಪ್ರಗತಿಯನ್ನು ನಿರ್ವಹಿಸುವ ಮಾರ್ಗವಿಲ್ಲ. ಅಲ್ಲದೆ ಶತ್ರುವಿನ ದೌರ್ಬಲ್ಯಗಳನ್ನು ಅನುಕೂಲಕ್ಕೆ ಬಳಸಿಕೊಳ್ಳುವ ಸಲುವಾಗಿ ನಿರಂತರವಾದ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಮತ್ತು ಶತ್ರುವಿನ ಸ್ಥೈರ್ಯ ಕುಂದಿಸಲು ಅಥವಾ ನಾವು ಸೋಲುವ ಸಂದರ್ಭಗಳಲ್ಲಿ ಸಹಾಯಕ್ಕೆ ಧಾವಿಸಲು ಮತ್ತು ಬಲ ಪಡಿಸಲು ಮಾರ್ಗವಿಲ್ಲ. ಇದಕ್ಕೆ ಬೇಕಾದ ಪ್ರಪ್ರಥಮ ಪೂರ್ವ ಅಗತ್ಯವೆಂದರೆ ಇಡೀ ಯುದ್ಧಭೂಮಿಯಲ್ಲಿ ಕ್ಷಣಕ್ಷಣಕ್ಕೆ ಆಗುತ್ತಿರುವ ಬೆಳವಣಿಗೆಗಳನ್ನು ನಾವು ಒಂದೆಡೆ ನಿಂತು ನೋಡಬಹುದಾದ ಒಂದು ಒಟ್ಟಾರೆ ನೋಟದ ಅನುಕೂಲ. ಆ ನಂತರ ನಿಮಗೆ ಸುದ್ದಿ ಗೊತ್ತಾಗಬೇಕು. ಆದರೆ ಅದರ ಗುಟ್ಟು ನೆಲದ ಮೇಲಿನ ಯಾರಿಗೂ– ನಿಮ್ಮ ಕಡೆಯವರು ಮತ್ತು ಶತ್ರು ಪಕ್ಷದ ಕಡೆಯವರೂ ಸೇರಿ– ಗೊತ್ತಾಗ ಕೂಡದು. ನಮ್ಮ ಬಳಿ ಬಹಳ ದೊಡ್ಡ ಸೈನ್ಯವಿದೆ. ನಾವು ಒಬ್ಬ ಮನುಷ್ಯನನ್ನು ಅನುಕೂಲವಾದೊಂದು ಜಾಗದಲ್ಲಿ ಇಡಿಸಿದರೆ ಅವನು ಸೇನೆಯ ತುಣುಕುಗಳನ್ನು ಹಿಂದಕ್ಕೆ ಪಕ್ಕಕ್ಕೆ ಓಡಾಡಿಸುತ್ತಾ ಇರಬಹುದು. ಅವನು ಎರಡು ಪಾರ್ಶ್ವಗಳಿಂದ ಆಕ್ರಮಣ ಮಾಡಿಸಿ ಶತ್ರುವನ್ನು ಬಲೆಗೆ ಬೀಳಿಸಬಹುದು. ನಮಗಿರುವ ಈ ಅನುಕೂಲವೊಂದರಿಂದಲೇ ಸೈನಿಕರ ಸಂಖ್ಯಾ ಬಲವಷ್ಟನ್ನೇ ನಮಗಿಂತ ಉತ್ತಮವಾಗಿ ಸಜ್ಜುಗೊಂಡಿರುವ ಮತ್ತು ಬಲಪಡಿಸಲಾದ ಮೊಗಲ್ ಸೇನಾಪಡೆಗಳನ್ನು ನುಗ್ಗು ನುರಿ ಮಾಡಲು ಬಳಸಬಹುದು".

ಮೇವಾಡದ ಹಸನ್‌ಖಾನನು "ನೀವು ಹೇಳುವಂಥ ವಿಶಾಲ ನೋಟವನ್ನು ನಾವು ಪಡೆದುಕೊಳ್ಳಬಹುದಾದ ಗುಡ್ಡವೋ, ಬೆಟ್ಟವೋ ಇಲ್ಲಿ ಹತ್ತಿರದಲ್ಲಿ ಎಲ್ಲಿದೆ?" ಎಂದು ನನ್ನನ್ನು ಕೇಳಿದನು.

"ಎಲ್ಲೂ ಅಂಥದ್ದಿಲ್ಲ ಮಹಾಸ್ವಾಮಿ. ಆ ಕಾರಣದಿಂದಲೇ ನಾನು ಮತ್ತು ನಮ್ಮ ಕಡೆಯವರು ಸೇರಿಕೊಂಡು ಒಂದು ಸಂಚಾರಿ ವೀಕ್ಷಣಾ ಗೋಪುರವನ್ನು ನಿರ್ಮಿಸಿದ್ದೇವೆ. ಅದು ತುಂಬ ಗಟ್ಟಿಯಾಗಿದೆ ಹಾಗೂ ಅದಕ್ಕೆ ಗಾಲಿಗಳಿರುವುದರಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಹುದಾದಂಥದು. ಅಲ್ಲದೆ ಅದು ಫಿರಂಗಿ ಗುಂಡುಗಳ ಹೊಡೆತಕ್ಕೆ ಯಾವಾಗಲೂ ಸಿಕ್ಕದೆ ಇರುವಂಥದು".

"ಎಷ್ಟು ಎತ್ತರ ಇದೆ ಅದು?" ನಾನು ಹೇಳಿದ ಮಾತುಗಳನ್ನು ಅತ್ಯಂತ ಗಮನವಿಟ್ಟು ಕೇಳುತ್ತಿದ್ದ ಇನ್ನೊಬ್ಬ ವ್ಯಕ್ತಿಯಾದ ರಾವ್ ಮೇದಿನಿರಾಯ್ ನನ್ನನ್ನು ಕೇಳಿದರು.

"ಐವತ್ತು ಅಡಿ".

"ನೀವು ಅದರ ಮೇಲೇರಿ, ಮಹಾಪ್ರಭುಗಳೂ ಸೇರಿದಂತೆ ಸುತ್ತ ಇರುವ ನಮ್ಮೆಲ್ಲರಿಗೂ ಆದೇಶ ನೀಡುತ್ತಿರುವುದನ್ನು ಸ್ವತಃ ನೀವೇ ಕಾಣುವಿರಾ?" ಸಿಲ್ಹಾದಿ ಹೀಗೆ ಮತ್ತೆ ನನ್ನನ್ನೇ ಗುರಿ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದನು.

"ಕೇವಲ ಮೇವಾಡದ ಹಿತಾಸಕ್ತಿಯನ್ನಷ್ಟೇ ಅಂತರಂಗದಲ್ಲಿ ಹೊಂದಿರುವುದಲ್ಲ, ಇಂದು ಇಲ್ಲಿ ಸೇರಿರುವ ರಜಪೂತರು ಮತ್ತು ಮುಸ್ಲಿಮರ ಇಡೀ ಮಹಾ ಮೈತ್ರಿಕೂಟದ ಹಿತಾಸಕ್ತಿಯನ್ನೂ ಹೊಂದಿದ್ದಾರೆಂಬ ಕಾರಣಕ್ಕೆ ನಾವೆಲ್ಲರೂ ಗೌರವಿಸುವಂಥ ಕಾಣ್ಕೆಯನ್ನು ಹೊಂದಿರುವ ವ್ಯಕ್ತಿ ಒಬ್ಬರೇ ಒಬ್ಬರು. ಅವರು ನಮ್ಮಲ್ಲಿ ಯಾರೊಬ್ಬರಿಗಿಂತಲೂ ಅತಿ ಹೆಚ್ಚು ಯುದ್ಧಗಳನ್ನು ಮಾಡಿ ಗೆದ್ದಿದ್ದಾರೆ. ಅವರ ಅನುಭವ ಮತ್ತು ನೈಪುಣ್ಯಗಳು ನಮ್ಮ ಬಹು ದೊಡ್ಡ ಸಂಪನ್ಮೂಲ. ಒಟ್ಟು ನೋಟವನ್ನು ವಿಶ್ಲೇಷಿಸಲು ಮತ್ತು ಅರ್ಥೈಸಲು ಅವರು ಮಾತ್ರ ಸಮರ್ಥರು. ಅಲ್ಲದೆ ಏನು ಕಾರ್ಯ ಮಾಡಬೇಕೆಂಬುದನ್ನು ನಿರ್ಧರಿಸಲೂ ಅವರು ಮಾತ್ರ ಸಮರ್ಥರು. ಮುಖ್ಯ ಏಣಿಯ ಉದ್ದಕ್ಕೂ ಹರಿಕಾರರ ಒಂದು ಶ್ರೇಣಿ ನಿಂತು ಅವರ ಸಂದೇಶವನ್ನು ನಮ್ಮ ಸೇನೆಯ ವಿವಿಧ ಭಾಗಗಳಿಗೆ ಮತ್ತು ಅವುಗಳ ಮುಖಂಡರಿಗೆ ತಲುಪಿಸಲಿದೆ.

ಇನ್ನೊಂದು ಸಂಗತಿಯನ್ನೂ ಪರಿಗಣಿಸಬೇಕಾಗಿದೆ. ಮೇವಾಡದ ನಮಗೆ ಒಬ್ಬ ಯಃಕಶ್ಚಿತ್ ಸೈನಿಕನ ಜೀವ ಅತ್ಯಮೂಲ್ಯವಾದ್ದು. ನೀವೆಲ್ಲರೂ ನಮ್ಮ ಅತ್ಯಂತ ಪ್ರೀತಿ ಪಾತ್ರ ಮಿತ್ರರು ಮತ್ತು ಎರಡರಷ್ಟು ಬೆಲೆ ಬಾಳುವವರು. ನಾಳೆ ದಿನದ ಅಂತ್ಯದಲ್ಲಿ ವಿಜಯೋತ್ಸವದ ಸಲುವಾಗಿ ಈ ಸಮಿತಿಯಲ್ಲಿನ ಪ್ರತಿಯೊಬ್ಬರನ್ನೂ ನಾವು ಅಪ್ಪಿಕೊಳ್ಳುತ್ತೇವೆಂಬ ಜ್ವಲಂತ ಭರವಸೆ ನಮಗಿದೆ. ಆ ಕಾರಣದಿಂದಾಗಿಯೇ ಮಹಾಪ್ರಭುಗಳು ನಮಗೆ ಮಾರ್ಗದರ್ಶನ ಮಾಡುವುದು ಬಹಳ ಮುಖ್ಯ ಹಾಗೂ ಮೊಗಲ್ ಪಡೆಯ ಸೇನಾನಿಯೊಬ್ಬನ ಮನಸ್ಸಿನ ಫಿರಂಗಿ ಹೊಡೆತಕ್ಕೋ ಅಥವಾ ಬಾಣಕ್ಕೋ ಅಥವಾ ಖಡ್ಗಕ್ಕೋ ಬಲಿಯಾಗಕೂಡದು".

"ಆ ಬಗ್ಗೆ ಪ್ರಶ್ನೆಯೇ ಇಲ್ಲ" ರಾವ್ ವೀರಮ್‌ದೇವ್ ಅವರು ನನ್ನ ಸುತ್ತು ಬಳಸಿನ ಮಾತಿನ ಪ್ರವಾಹಕ್ಕೆ ಸಿಕ್ಕಿ ಬಿಟ್ಟಿದ್ದರು. ಅಷ್ಟೇ ಅಲ್ಲ, ನಮ್ಮೆಲ್ಲರಲ್ಲಿ ಮಹಾಪ್ರಭುಗಳ ಜೀವವು ಅತ್ಯಮೂಲ್ಯವಾದದ್ದೆಂಬ ಭಾವನೆಯನ್ನು ನಾನಲ್ಲ. ಅವರು ನಮ್ಮೆಲ್ಲರಿಗೂ ಸ್ಪಷ್ಟಪಡಿಸಬೇಕೆಂದು ಅರ್ಥಮಾಡಿಕೊಂಡರು. ಪೂರ್ತಿ ನಮ್ಮ ಸ್ವಾರ್ಥದ ಕಾರಣಗಳಿಗೆ,

ಮಹಾಪ್ರಭುಗಳ ಜೀವವನ್ನು ಗಂಡಾಂತರಕ್ಕೊಡ್ಡಲಾರೆವು. ಮಹಾರಾಜ್ ಕುಮಾರ್ ಅವರು ಸೂಚಿಸಿದ ರೀತಿಯಲ್ಲಿ ಅವನು ಯುದ್ಧವನ್ನು ನಡೆಸಿದರೆ ಆಗ ನಾವು ಬಾದಷಹನನ್ನು ಸೋಲಿಸಬಹುದು."

"ಅದೊಂದು ಉಜ್ವಲ ಸೇನಾ ವ್ಯವಸ್ಥೆ. ನಾವು ಕೂಡ ಒಂದು ಧರ್ಮ ಯುದ್ಧ (ಜಿಹಾದ್) ವನ್ನು ನಡೆಸುತ್ತಿದ್ದೇವೆಂದು ಹೇಳಿ ಬಾಬರನಿಗೆ ಪಾಠ ಕಲಿಸುವೆವು" ಮೇವಾತ್‌ನ ಮುಖ್ಯಸ್ಥ ಹಸನ್ ಖಾನ್‌ಗೆ ಮುಸಲ್ಮಾನನಾಗಿ ತಾನು ಕೂಡ ಒಂದು ಪವಿತ್ರ ಯುದ್ಧವನ್ನು ಮಾಡುತ್ತಿದ್ದೇನೆಂದು ಭಾವಿಸಲು ಕಾರಣವಿತ್ತು. "ಅದಷ್ಟೇ ಅಲ್ಲ ಏನೇ ಆದರೂ ಸರಿ. ಮಹಾಪ್ರಭುಗಳ ಜೀವವನ್ನು ನಾವು ರಕ್ಷಿಸಬೇಕು".

ಎಲ್ಲ ಕಡೆಯಲ್ಲೂ ಹೌದು, ಇಲ್ಲ ಇತ್ಯಾದಿ ಗೊಣಗಾಟಗಳು ಶುರುವಾದವು.

"ರಜಪೂತ ರಾಜನೊಬ್ಬ ಅದರಲ್ಲೂ ಮೇವಾಡದ ಮಹಾ ರಾಣಾ ಅವರು ಯುದ್ಧರಂಗದಿಂದ ಬೆದರಿದ ಕೋಳಿಯಂತೆ ಅಥವಾ ಪರಕಾರ ಮತ್ತು ರವಿಕೆ ತೊಟ್ಟ ಹೆಣ್ಣಿನ ಹಾಗೆ ಓಡಿಹೋಗುವುದು ಅಂದರೆ? ಎಂಥ ಆಭಾಸದ ಸಂಗತಿ? ಬಾಬರ್ ಮತ್ತು ಅವನ ಸೈನ್ಯಕ್ಕೆ ಏನು ಸಂದೇಶ ಕಳಿಸಿದ ಹಾಗೆ ಆಗುತ್ತೆ? ಮಹಾಪ್ರಭುಗಳು ಅವನಿಗೆ ಹೆದರುವುದೆ?"

"ಅದಕ್ಕೆ ತದ್ವಿರುದ್ಧ. ಸಂದೇಶವೇನೆಂದರೆ, ಯುದ್ಧದ ಮೇಲೆ ಪೂರ್ಣ ಹತೋಟಿಯನ್ನು ಹೊಂದಿರುವಂಥ ನಾಯಕನೊಬ್ಬನಿದ್ದರೆ, ಆಗ ಅವನು ಮಾತ್ರವೇ ಆ ದಿನವನ್ನು ಗೆಲ್ಲುವನು".

ನನ್ನ ಪ್ರಸ್ತಾವ ಆಗಲೇ ಸೋತು ಹೋಗಿದೆ ಎಂದು ನನಗೆ ಗೊತ್ತಾಗಿತ್ತು. ಸಿಲ್ಹಾದಿಯು ತಂದೆಯವರ ಅತ್ಯಂತ ಸೂಕ್ಷ್ಮವಾದ ನರವನ್ನು ಗುರುತಿಸಿ ಅದನ್ನು ಮಿಡಿದಿದ್ದನು. ಹಲವು ವರ್ಷಗಳ ಹಿಂದೆ, ಅವರು ತಮ್ಮ ಅಣ್ಣಂದಿರ ಅನಿರೀಕ್ಷಿತವೂ ಮೃಗೀಯವೂ ಆದ ಧಾಳಿಯಿಂದ ಘೋರವಾಗಿ ಗಾಯಗೊಂಡು, ಜೋತಾಡುವ ಸ್ಥಿತಿಯಲ್ಲಿ ಒಂದು ಕಣ್ಣು ಗುಡ್ಡೆಯನ್ನು ಹೊತ್ತು ಓಡಿ ಹೋದ ದಿನದಿಂದಲೂ, ಹೇಡಿತನದ ಆಪಾದನೆಗೆ ತಂದೆಯವರಷ್ಟು ಶೀಘ್ರವಾಗಿ ವ್ಯಗ್ರಗೊಳ್ಳುವ ವ್ಯಕ್ತಿ ಮೇವಾಡದಲ್ಲಿ ಯಾರೂ ಇಲ್ಲ.

"ನಮ್ಮ ಸೇನಾ ಪಡೆಗಳಿಗೆ, ಮಹಾಪ್ರಭುಗಳು ಗೈರು ಹಾಜರಾಗುವುದನ್ನು ಅದು ಹೇಗೆ ನೀವು ವಿವರಿಸುತ್ತೀರಿ? ದಯವಿಟ್ಟು ಹೇಳಿ. ಮಹಾರಾಣಾ ಎಂಥ ಒಂದು ನಿದರ್ಶನವನ್ನು ಸ್ಥಾಪಿಸುವರು?"

"ಮಹಾಪ್ರಭುಗಳ ಅತ್ಯಂತ ಆಪ್ತಮಿತ್ರ ರಾಜ್ಯಗಳು ಮತ್ತು ಹಿತ ಚಿಂತಕರಾದ ನಾವು ಪ್ರತಿಯೊಬ್ಬರು ಅವರ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡದ್ದೇ ಆದರೆ ಅವರು ನಮ್ಮ ಸೇನಾ ವ್ಯವಸ್ಥೆಯನ್ನು ಅರ್ಥಮಾಡಿಕೊಂಡು ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾರೆಂಬುದರಲ್ಲಿ ನನಗೆ ಕಿಂಚಿತ್ತೂ ಅನುಮಾನವಿಲ್ಲ".

ರಾವ್ ವೀರಮ್ ದೇವ್ ವಿವೇಕದ ಮಾತುಗಳನ್ನೇ ಹೇಳಿದ್ದರು. ಆದರೆ ತಂದೆಯವರು ಸಿಲ್ಹಾದಿಗೆ ತಾನು ಅವನ ಚುಚ್ಚುಮಾತಿನ ಪ್ರಚೋದನೆಗೆ ಒಳಗಾಗಲು ಸಿದ್ಧನಿಲ್ಲ ಆದರೆ ಒಕ್ಕೂಟದ ಭವಿಷ್ಯಕ್ಕೆ ಯಾವುದು ಒಳ್ಳೆಯದೆಂದು ತಾನು ಭಾವಿಸುತ್ತೇನೋ ಅದೇ ಪ್ರಕಾರ ನಡೆದುಕೊಳ್ಳುವುದಾಗಿ ಹೇಳ ಹೋಗಲಿಲ್ಲ. "ನನ್ನ ಸುರಕ್ಷತೆಯ ಬಗ್ಗೆ ನಿಮಗಿರುವ ಕಾಳಜಿಗಾಗಿ ನಾನು ನಿಮ್ಮೆಲ್ಲರಿಗೆ ಧನ್ಯವಾದ ಹೇಳುತ್ತೇನೆ. ಆದರೆ ನನ್ನ ಸ್ಥಾನ ಏನಿದ್ದರೂ ಅದು ನಮ್ಮ ಸೇನಾಪಡೆಗಳಲ್ಲಿ. ಈಗ ವೀಕ್ಷಣಾ ಗೋಪುರದ ಬಗ್ಗೆ ಹೆಚ್ಚು ಮಾತು ಬೇಡ. ಈಗ ರಾತ್ರಿಯ ವಿಶ್ರಾಂತಿ ತೆಗೆದುಕೊಳ್ಳುವ ಸಮಯ".

"ಅದು ನಿಮ್ಮ ಬಗೆಗಿನ ಕಾಳಜಿಯ ಮಾತಲ್ಲ ಮಹಾಪ್ರಭು. ನಮಗೆ ಬೇಕಾಗಿರುವ ನಾಯಕ ನಮ್ಮನ್ನು ಮುನ್ನಡೆಸುವ ನಾಯಕ. ಒಂದು ಲಕ್ಷದ ಇಪ್ಪತ್ತು ಸಾವಿರ ಸೈನಿಕರಲ್ಲಿ ಕಳೆದು ಹೋಗಿ ಬಿಡುವಂಥವನಲ್ಲ" ಇದು ನಾನು ಬಹಿರಂಗವಾಗಿಯೇ ತಂದೆಯವರ ಅಭಿಪ್ರಾಯಕ್ಕೆ ವಿರುದ್ಧವೆಂಬುದರ ಹತ್ತಿರ ಹತ್ತಿರ ಮಾತಾಡಿದ್ದು.

"ಮಹಾರಾಜ್‌ಕುಮಾರ್, ನಾನು ಹೇಳಿದ್ದು, ಆ ವಿಷಯ ಮುಗಿದು ಹೋಯಿತು ಅಂತ, ಹೌದೋ ಇಲ್ಲವೋ? ಇಲ್ಲಿ ನಮ್ಮ ಸೈನ್ಯವನ್ನು ನನ್ನಷ್ಟೇ ಸಮರ್ಥವಾಗಿ ಮುನ್ನಡೆಸುವ ಸಾಕಷ್ಟು ಸಮರ್ಥ ನಾಯಕರಿದ್ದಾರೆ".

* * *

1527ನೇ ಮಾರ್ಚ್ 17ನೇ ತಾರೀಕು. ನಾನು ಎದ್ದಾಗ ಚಳಿ ಇತ್ತು. ಹಿಂದಿನ ದಿನ ಬಹಳಷ್ಟು ಜನ ಸೈನಿಕರು ಹತ್ತಿಸಿದ್ದ ಬೆಂಕಿ ಆರಿ ಹೋಗಿತ್ತು. ರಾತ್ರಿ ನಾನು ಮರದ ಕೆಳಗೆ ನಿದ್ದೆ ಮಾಡುತ್ತಿದ್ದೆ. ನಾನು ಎದ್ದು ಕುಳಿತದ್ದು ತಗ್ಗಿನಲ್ಲಿದ್ದ ಆ ಮರದ ಕೊಂಬೆಯ ಮೇಲೆ ಕುಳಿತಿದ್ದ ಕಡುಗೆಂಪು ಬಣ್ಣದ ಕಳಿಂಗಪಕ್ಷಿಗೆ ಗಾಬರಿ ಉಂಟು ಮಾಡಿರಬೇಕು. ಅದು ಆ ನಸುಕಿನ ಬೆಳಕಿನಲ್ಲಿ, ಆಕಾಶದಿಂದ ನೆಲಕ್ಕೆ ಅಪ್ಪಳಿಸುವ ಬದಲು ಕೆಂಪು ಉಲ್ಕೆಯಂತೆ ಆಕಾಶಕ್ಕೆ ಹಾರಿತು. ದಿನದ ಬಣ್ಣವೂ ಕೆಂಪು.

ನನಗೆ ಚೇತರಿಸಿಕೊಂಡಂತೆನಿಸಿತು. ನಮಗೆ ಮುಂದೇನು ಕಾದಿದೆ ಎಂಬ ಬಗ್ಗೆ ನನಗೆ ಯಾವ ಆತಂಕಗಳೂ ಇರಲಿಲ್ಲ. ಒಂದರೆಕ್ಷಣ, ನನಗೆ ನಾನು ಮತ್ತು ಬಾಬರ್ ಇಬ್ಬರೂ ಕನ್ನಡಿ ಬಿಂಬಗಳೆಂಬ ಭಾವವುಂಟಾಯಿತು. ಮೂಲ ವ್ಯಕ್ತಿ ಯಾರು ಮತ್ತು ಅದರ ಪ್ರತಿಬಿಂಬ ಯಾರು? ಅವನು ಕೂಡ ಸಮಾಧಾನಿ ಹಾಗೂ ತನ್ನ ಉದ್ದೇಶ ಕುರಿತಂತೆ ದೃಢವಾದ ವ್ಯಕ್ತಿ ಎಂದು ನನಗೆ ಖಚಿತವಾಗಿತ್ತು. ಅವನೂ ಸಹ ಎದ್ದು ತಣ್ಣೀರಿನಲ್ಲಿ ಸ್ನಾನ ಮಾಡುತ್ತಿರಬೇಕು. ಬಹುಶಃ ನಾವು ಸ್ಥಳಗಳನ್ನು ಬದಲಾಯಿಸಿದರೆ, ಅದೇನೂ ಅಂಥ ಲಕ್ಷ್ಯ ಕೊಡಬೇಕಾದಂಥ ವಿಷಯವಲ್ಲ. ನಾನು ಸುತ್ತಲೂ ನೋಡಿದೆ. ಜನಸಾಗರ ಎಂದು ಜನ ಹೇಳುವ ಮಾತಿನ ಅರ್ಥ ಇದೇ ಏನು? ಮೇವಾಡದ ಮತ್ತು ಮಿತ್ರ ರಾಜ್ಯಗಳ ಸೇನಾಪಡೆಗಳು ದಿಗಂತವರೆಗೂ ಚಾಚಿದ್ದವು.

ಸ್ನಾನ, ಯೋಗ, ಧ್ಯಾನ, ಉಪಹಾರ ಎಲ್ಲ ಮುಗಿಸಿ ನನ್ನ ಯುದ್ಧ ಕವಚವನ್ನು ಧರಿಸಿ ಯುದ್ಧ ರಂಗದಲ್ಲಿದ್ದೆ. ದೂರದಿಂದಲೇ ಫಿರಂಗಿಗಳು ಕಣ್ಣಿಗೆ ಬೀಳುತ್ತಿದ್ದುವು. ನಾನು ತೇಜ್, ಷಫಿ, ಮತ್ತು ಹೇಮ್ ಕರಣ್, ರಾತ್ರಿ ಆ ಕಡೆ ಹೋಗಿ ನಮ್ಮ ಕಡೆಗೆ ಅವುಗಳನ್ನು ಯಾಕೆ ಉರುಳಿಸಿಕೊಂಡು ಬರಲಿಲ್ಲ ಎಂದು ಆಶ್ಚರ್ಯಪಟ್ಟೆ. ಎರಡೂ ಸೇನೆಗಳು ಈಗ ತಮಗೆ ಅನುಕೂಲಕರವಾದ ಸ್ಥಾನಗಳಲ್ಲಿದ್ದುವು. ಆ ಚಿತ್ರಪಕ್ಷಿ ತನ್ನ ಕೊಕ್ಕಿನಲ್ಲಿ ಒಂದೆರಡು ಹುಳುಗಳನ್ನಿಟ್ಟುಕೊಂಡು ಪೂರ್ವದಿಂದ ಪಶ್ಚಿಮದ ಕಡೆಗೆ ಹಾರಿಕೊಂಡು ಹೋಯಿತು. ನಮ್ಮ ಎಡೆಬಿಡದ ತೀವ್ರ ಯುದ್ಧ ಚಟುವಟಿಕೆಗಳ ವಿಷಯಕ್ಕೆ ಅದಕ್ಕೆ ನಿರ್ಲಕ್ಷ್ಯ. ಯುದ್ಧವೇನಿದ್ದರೂ ಮನುಷ್ಯರೆಂಬ ಹುಂಬರಿಗಷ್ಟೇ (ಇದಕ್ಕೆ ಹುಂಬರು ಎಂಬರು ಯುದ್ಧ). ಅದಕ್ಕೆ ಇದಕ್ಕಿಂತಲೂ ತುರ್ತಿನ ವಿಷಯಗಳು ಎಟುಕಿನಲ್ಲಿದ್ದುವು. ನಾನು ಗೂಡಿನಲ್ಲಿ ಕೂತಿದ್ದ ಎರಡು ಮರಿ ಚಿತ್ರಪಕ್ಷಿಗಳನ್ನು ನೋಡಿದ್ದೆ. ಆ ಹಕ್ಕಿಗಳ ಅಪ್ಪ ಹದಿನೈದು ನಿಮಿಷಕ್ಕೊಂದು ಸಲ ಹೊರಗಡೆ ಎಲ್ಲೋ ಹೋಗಿದ್ದಾಗ, ಈ ಮೂರ್ಖ ಮರಿಹಕ್ಕಿಗಳು ಏನಾದರೂ ಒಂದು ಚೂರು ಆಹಾರ ಬಾಯಿಗೆ ಬೀಳಲಿ ಎಂದು ಕೊಕ್ಕುಗಳನ್ನು ತೆರೆದುಕೊಂಡು ಕೂತಿರುತ್ತಿದ್ದುವು.

ಮೊಗಲ್ ಸೇನಾಪಡೆಗಳನ್ನು ಅಡ್ಡಗಟ್ಟಿ, ನೋಡಲು ಘೋರವಾದ ಗಾಡಿಗಳು ಮತ್ತು ಹೊಂಡಗಳು ಇದ್ದುವು. ಬಾದಷಹನು ಎಲ್ಲಿದ್ದ? ಮೇವಾಡದ ನನ್ನ ಬಹಳಷ್ಟು ಸಂಗಾತಿಗಳಿಗಿಂತ ನನಗೆ ಚೆನ್ನಾಗಿ ಪರಿಚಯವಿದ್ದ ವ್ಯಕ್ತಿಯನ್ನು ನಾನು ಗುರುತಿಸುವೆನೆ? ತಂದೆಯವರೇನಾದರೂ ತಮ್ಮ ಮನಸ್ಸು ಬದಲಾಯಿಸಿದರೆ ಇರಲಿ ಎಂದು ವೀಕ್ಷಣಾ ಗೋಪುರವನ್ನು ಸಿದ್ಧಪಡಿಸಲಾಗಿತ್ತು. ನಾನು ಅಲ್ಲಿಗೆ ಕುದುರೆಯ ಬೆನ್ನೇರಿ ಓಡಿದೆ. ಸೇನೆಯ ಬಡಗಿಗಳು ಅದನ್ನು ಮೂರು ಭಾಗಗಳನ್ನು ಸೇರಿಸಿ ನಿರ್ಮಿಸಿದ್ದರು. ಅತ್ಯಂತ ಚಿಕ್ಕದೆನಿಸಿದ್ದು ಇಪ್ಪತ್ತೈದು ಅಡಿ ಎತ್ತರವಿತ್ತು. ಮೇಲ್ ಭಾಗದಲ್ಲಿ ವೇದಿಕೆ ಇರುವ ಗಾಲಿಗಳ ಮೇಲೆ, ಅದನ್ನು ಕೂಡಿಸಿಡಲಾಗಿತು. ಎರಡನೇ ಭಾಗ ಹದಿನೈದು ಅಡಿ ಎತ್ತರವಿತ್ತು. ಅದರ ಮೇಲೆಯೂ ಚಪ್ಪಡಿಯಾದ ವೇದಿಕೆ ಇತ್ತು. ಬಹಳ ಸುಲಭವಾಗಿ ಕಳಚ ಬಹುದಾದ ಗಾಲಿಗಳಿದ್ದುವು. ಎಲ್ಲದಕ್ಕಿಂತ ಮೇಲು ಭಾಗದಲ್ಲಿದ್ದ ಭಾಗ ಅತ್ಯಂತ ಬಲಿಷ್ಠವಾದ ರಕ್ಷಣಾ ಕವಚದಿಂದ ಆವರಿಸಲ್ಪಟ್ಟಿತ್ತು. ಅದಕ್ಕೆ ಸುತ್ತಲೂ ಕಣ್ಣಿನ ಮಟ್ಟದಲ್ಲಿ ತೆರೆದ ರಂಧ್ರಗಳಿದ್ದುವೆಂಬುದೊಂದೇ ಅಪವಾದ. ನೋಡಲು ಸ್ವಲ್ಪ ವಕ್ರವಾಗಿ ಕಂಡರೂ ಉದ್ದೇಶದ ಈಡೇರಿಕೆಗೆ ಅದು ಸಾಕಾಗಿತ್ತು. ನಾನು ಅದರ ತುದಿಗೆ ಏರಿದೆ.

ಈಗ ನನಗೆ ಯುದ್ಧರಂಗ ವಿಶದವಾಗಿ ಕಾಣುತ್ತಿತ್ತು. ನನ್ನ ನೋಟದ ಮಧ್ಯಕ್ಕೆ ಸರಿಯಾಗಿ ಗ್ರಹಣದಷ್ಟು ಆಕೃತಿಯ ರಂಧ್ರವಿತ್ತು. ನನ್ನ ಕಣ್ಣಿನ ದೃಷ್ಟಿ ಕೆಲವೊಮ್ಮೆ ಗಂಟೆಗೊಂದು ಸಲ ವ್ಯತ್ಯಸ್ತಗೊಳ್ಳುತ್ತಿತ್ತು. ಅದಕ್ಕೊಂದು ತರ್ಕವಿರಲಿಲ್ಲ. ಒಳ್ಳೆ ಮಾಮೂಲಿ ದಿನಗಳಂದು, ನಾನು ಬಹುಮಟ್ಟಿಗೆ ಮಾಮೂಲಿಯಾಗಿ ನೋಡಬಲ್ಲವನಾಗಿದ್ದೆ. ಬೇರೆ ಸಮಯದಲ್ಲಿ ನನ್ನ ಹೊರಮೈ ನೋಟ ತಕ್ಕಮಟ್ಟಿಗಿದ್ದಿತಾದರೆ, ನಾನು ನೇರವಾಗಿ ಮುಂದೆ ನೋಡಿದಾಗ, ನನಗೆ ಕಾಣುತ್ತಿದ್ದುದು ಕೇವಲ ಅಸ್ಪಷ್ಟ, ಬಣ್ಣ ಕಳೆದ ಮತ್ತು ಹಾಳಾದ ಬಿಂಬಗಳು. ಬಾದಷಹ ಬಾಬರನೊಂದಿಗೆ ಯುದ್ಧಕ್ಕೆ ತೊಡಗುವ ಅತ್ಯುತ್ತಮ ಮಾರ್ಗವೆಂದರೆ, ನಾನು ಚೆನ್ನಾಗಿ ನೋಡಬೇಕೆಂದರೆ ನೀನು ಸ್ವಲ್ಪ ಪಕ್ಕಕ್ಕೆ ಸರಿಯಬೇಕೆಂದು ಅವನನ್ನು ಕೇಳಿಕೊಳ್ಳಬೇಕು ಅಷ್ಟೆ. ಭವಿಷ್ಯತ್ತಿನಲ್ಲಿ ಚರಿತ್ರೆಕಾರರ ಪಂಥವೊಂದು ಹುಟ್ಟಿಕೊಳ್ಳುತ್ತದೆಂದು ನನಗೆ ಖಾತರಿ ಇದೆ. ನನ್ನ ನೋಟಕ್ಕೆ ಕಪ್ಪು ಸೂರ್ಯ ಕಾಣಿಸಿಕೊಂಡದ್ದು ಆಕಸ್ಮಿಕ ಇಲ್ಲವೆ ದುರದೃಷ್ಟವಶಾತ್ ಅಲ್ಲ ಎಂಬ ಸಿದ್ಧಾಂತವನ್ನವರು ಮುಂದಿಡುತ್ತಾರೆ. ಎಲ್ಲೋ ನನ್ನ ಅಂತರಂಗದ ಆಳದಲ್ಲಿ ಯುದ್ಧದಿಂದ ನಾನು ದೂರವಾಗಲಿಷ್ಟಪಟ್ಟೆ, ಆ ಕಾರಣದಿಂದಲೇ ನಾನು ಬೇಕೆಂದೇ ಒಂದು ಆಕಸ್ಮಿಕವಾಗುವಂತೆ ಏರ್ಪಾಟು ಮಾಡಿದ್ದೆ ಎಂದು ಅವರು ಹೇಳುತ್ತಾರೆ. ಅದೃಷ್ಟವಶಾತ್, ನಾನು ಯಾವಾಗಿನಂತೆ, ಎಷ್ಟು ಶತ್ರುಗಳನ್ನು ಕೊಲ್ಲಲು ಸಾಧ್ಯವೋ ಅಷ್ಟು ಜನರನ್ನು ಕೊಲ್ಲುತ್ತೇನೆ. ಅದೇ ಸಮಯಕ್ಕೆ ನಮ್ಮ ಮೈತ್ರಿ ಪಡೆಗಳು ಇತಿಹಾಸದಲ್ಲೇ ಅತ್ಯುಗ್ರರೆನಿಸಿದಂಥ ಕೆಲವು ಯೋಧರಿಂದ ತುಂಬಿವೆ.

ನಾನೊಂದು ವೇಳೆ ತಡವರಿಸಿದರೆ, ಕಣ್ಣು ಕಣ್ಣು ಬಿಟ್ಟರೆ ಮತ್ತು ಎಡವಿದರೆ ಅದರಿಂದ ಯುದ್ಧದ ಫಲಿತಾಂಶದ ಮೇಲೆ ಹೆಚ್ಚೇನೂ ವ್ಯತ್ಯಾಸವಾಗಬಾರದು.

ನಮ್ಮ ಯುದ್ಧರಂಗದ ವಿನ್ಯಾಸ ಅತ್ಯಂತ ಉತ್ಕೃಷ್ಟವಾದ್ದು. ಅದು ಅದೆಷ್ಟು ನೂರು ವರ್ಷಗಳಿಂದ ಅದೇ ಆಗಿತ್ತೋ ನನಗೆ ತಿಳಿಯದು. ಅದೆಂದರೆ ಅರ್ಧಚಂದ್ರಾಕೃತಿಯಲ್ಲಿ ಆನೆಗಳು, ಅದರ ಹಿಂದೆ ದಟ್ಟವಾಗಿ ಸಾಲಾಗಿ ನಿಲ್ಲಿಸಿದ ಮೂರು ಸೇನೆಗಳು. ಮೇವಾಡದ ಸಾಮಂತರು, ಜಮೀನುದಾರ ಒಡೆಯರು ಮಧ್ಯದಲ್ಲಿ ನಿಂತರೆ, ಮಿತ್ರ ರಾಜ್ಯ ಪಡೆಗಳು ಎಡಕ್ಕೆ ಮತ್ತು ಬಲಕ್ಕೆ ಒತ್ತೊತ್ತಾಗಿ ಇರುತ್ತಿದ್ದುವು. ಈ ಅಭೇದ್ಯವಾದ ಸೇನಾವ್ಯೂಹದ ಹಿಂದೆ ಮಹಾಪ್ರಭುಗಳು, ಮೇವಾಡದ ಮತ್ತು ಮೈತ್ರಿ ಪಡೆಗಳ ಸೇನಾಧಿಪತಿಗಳು,

ಮತ್ತು ಇಲ್ಲಿಂದ ಕೆಳಕ್ಕಿಳಿದ ಮೇಲೆ ನಾನು. ನಮ್ಮ ಹಿಂದೆ ಸರಿಯಾಗಿ ಮಧ್ಯಕ್ಕೆ ನಮಗೆ ಬೆಂಬಲವಾಗಿ ಇನ್ನೊಂದು ಸೈನಿಕರ ತಂಡ ಇತ್ತು. ಮೊಗಲ್ ಸೇನಾ ಪಡೆಗಳ ಕೇಂದ್ರ ಭಾಗದಲ್ಲೆಲ್ಲೋ ಅವರ ಮೀಸಲು ಪಡೆಗಿಂತ ಮುಂಚೆ ಒತ್ತೊತ್ತಾಗಿನಿಂತ ಜನಗಳದೊಂದು ಗುಂಪು ಇತ್ತು. ಅದರಲ್ಲೊಬ್ಬ ಬಾಬರ್ ಎಂದು ನನಗೆ ಖಚಿತವಾಗಿತ್ತು.

ಇದ್ದಕ್ಕಿದ್ದಂತೆ, ನನಗೆ ಲೀಲಾವತಿಯೊಂದಿಗೆ ನಾನು ಅದೆಷ್ಟು ವರ್ಷಗಳಿಂದ ಸಂವಾದ ಮಾಡಿಕೊಂಡು ಬಂದಿದ್ದೀನಿ ಎಂಬುದರ ಸಂಖ್ಯೆ ನನಗೆ ತಪ್ಪಿ ಹೋಯಿತು ಎಂಬುದು ಹೊಳೆಯಿತು. ನನ್ನ ಮೂಗಿನ ಎದುರು ಇರುವುದನ್ನು ಕಾಣಲಾಗದ ನಾನೆಂಥ ಸ್ವಪ್ರತಿಷ್ಠೆಯ ಕತ್ತೆ ಆಗಿದ್ದೆ. ನನ್ನ ತಂಗಿ ಸುಮಿತ್ರಾಳ ಸಾವಿಗೆ ನನ್ನನ್ನು ನಾನೇ ನಿಂದಿಸಿಕೊಂಡಿದ್ದೆ. ಅವಳು ಕುಂಟುವುದನ್ನು ನಾನು ಗಂಭೀರವಾಗಿ ತೆಗೆದುಕೊಂಡಿದ್ದರೆ... ನಾನು ನಮ್ಮ ತಂದೆಯವರ ಮಾತನ್ನು ಉಲ್ಲಂಘಿಸಿ ಅವಳ ಕಾಲನ್ನು ಕತ್ತರಿಸಲು ಶಸ್ತ್ರ ವೈದ್ಯರಿಗೆ ಹೇಳಿದ್ದರೆ... ಲೀಲಾವತಿ ನನ್ನ ಪ್ರಾಯಶ್ಚಿತ್ತ, ತನ್ನ ತಪ್ಪಿಗೆ ತೆರಬೇಕಾಗಿ ಬಂದ ದಂಡ ಎಂದು ನಾನು ನಿರ್ಧರಿಸಿದ್ದೆ. ಎಂದೂ ಮಾಡದೆ ಇರುವುದಕ್ಕಿಂತ ತಡವಾದರೂ ಸರಿಯೆ. ಈಗ ಆದದ್ದು ಸಾಕು. ರಜಪೂತ ಮತ್ತು ಜೈನರ ನಡುವಿನ ವಿವಾಹವನ್ನು ಮೇವಾಡದ ಸಾಮಾಜಿಕ ರೀತಿ ರಿವಾಜು ಮಾನ್ಯ ಮಾಡುತ್ತದೆಯೆ ಎಂಬ ಬಗ್ಗೆ ನಾನು ಇನ್ನು ಶಾಪ ಹಾಕಲು ಹೋಗುವುದಿಲ್ಲ. ಹೆಚ್ಚೆಂದರೆ, ಒಂದು ಹಗರಣವಾಗುತ್ತದೆ. ಅದನ್ನು ನಿಭಾಯಿಸುವುದು ಕಷ್ಟ. ಆದರೆ ನನ್ನ ಹೆಂಡತಿಯು ಅಂಥ ವಿಷಯಗಳಲ್ಲಿ ನನಗೆ ಹೇಳಿಕೊಟ್ಟಿದ್ದಳು. ಸಾಯಂಕಾಲ ಲೀಲಾವತಿಗೆ ನನ್ನೊಂದಿಗೆ ಇನ್ನು ಸಹನೆಯಿಂದಿರುವ ಅಗತ್ಯವಿಲ್ಲವೆಂದು ತಿಳಿಸುವ ಪತ್ರವನ್ನು ಹರಿಕಾರನ ಮೂಲಕ ನಾನು ಕಳಿಸುವುದು ಒಳ್ಳೆಯದು. ಮಂಡುವಿನಿಂದ ಕರೆದುಕೊಂಡು ಹೋಗಲು ನಾನು ಬರುತ್ತಿದ್ದೇನೆ. ನನಗೆ ಬರಲಾಗದಿದ್ದರೆ ಮಂಗಳನು ಅವಳನ್ನು ವಾಪಸ್ ಕರೆದುಕೊಂಡು ಬರುವನು.

ನಾನು ಕೆಳಗಿಳಿದು ತಂದೆಯವರಿಂದ ಕೆಲವೇ ಗಜ ದೂರದಲ್ಲಿದ್ದ ನನ್ನ ಸ್ಥಳಕ್ಕೆ ಹಿಂತಿರುಗಿದೆ. ಇದ್ದಕ್ಕಿದ್ದಂತೆ ಭೂಮಿಯನ್ನು ಥರಗುಟ್ಟಿಸುವಂಥದೊಂದು ಶಬ್ದ ಕೇಳಿ ಬಂತು ಮತ್ತು ಆಕಾಶದ ಕಡೆಯಿಂದ ಕ್ಷಿಪಣಿಯೊಂದು ದೇವರ ಕೋಪವೋ ಎಂಬಂತೆ ನಮ್ಮತ್ತ ನುಗ್ಗಿತು. ಅದರ ಗುಡು ಗುಡು ಶಬ್ದದ ಜೊತೆಗೆ, ಮೆಲ್ಲಗೆ ಜಾರಾಡಿಕೊಂಡು ಹೋಗುವ ಶಬ್ದವೂ ಕೂಡಿಕೊಂಡು, ಅವೆರಡೂ ಒಟ್ಟಾಗಿ ಸೇರಿ ಕಿವಿಯ ತಮಟೆಯನ್ನು ಭೇದಿಸಿಕೊಂಡು ಹೋಗಿ ಶರೀರದಲ್ಲಿಯ ನರನರವನ್ನು ಚುಚ್ಚುವ ಅದುರುಸೂಜಿಯ ಹಾಗೆ ಮೆದುಳನ್ನು ಹೊಕ್ಕಿ ಬಿಟ್ಟಿತು.

ರಾವ್ ರಾಜ್ ಮತ್ತು ರಾವತ್ ಸೋಮನಾಥ್ ನಿಂತಿದ್ದ ಜಾಗದಲ್ಲಿ ಐದು ಅಡಿ ಆಳ ಮತ್ತು ಮೂರು ಅಡಿ ಅಗಲವಿರುವ ಒಂದು ದೊಡ್ಡ ಹಳ್ಳ ನಿರ್ಮಾಣವಾಗಿತ್ತು. ಯುದ್ಧ ಪ್ರಾರಂಭವಾಗಿ ಬಿಟ್ಟಿತ್ತು. ಆದರೆ ರಜಪೂತ ಸೇನಾ ಪಡೆಗಳು ನಿಂತ ಜಾಗದಲ್ಲಿಯೇ ಶಿಲೆಗಳಂತಾಗಿ ಬಿಟ್ಟಿದ್ದರು. ಅವರು ಗೊಂದಲ ಮತ್ತು ದಿಗ್ಭ್ರಮೆಗೊಂಡಷ್ಟು, ಭೀತಿಗೊಂಡಿದ್ದಂತೆ ನನಗನ್ನಿಸುತ್ತಿಲ್ಲವೆಂದು ಮುಚ್ಚು ಮರೆಯಿಲ್ಲದೆ ಹೇಳಬೇಕು. ಈ ಹಾರುವ ಕ್ಷಿಪಣಿಗಳೆಂಬವು ಎಲ್ಲಿಂದ ಬರುತ್ತಿವೆ? ಇನ್ನೊಂದಾರು ಅಂಥವೇ ಬೇರೆ ಬೇರೆ ಜಾಗದಲ್ಲಿ ಬಂದು ಕುಳಿತವು. ನಾವು ಮಾಡಬಹುದಾಗಿದ್ದು ಏನಿದ್ದರೂ ನಮ್ಮ ಹೆಸರುಗಳನ್ನು ಬರೆದಿರುವಂಥವು ನಮ್ಮ ನಡುವೆ ಬಿದ್ದು ನಮ್ಮನ್ನು ಕೊಲ್ಲಲೆಂದು ತಾಳ್ಮೆಯಿಂದ ಕಾಯುವುದಷ್ಟೆ. ಬಾಬರನ ಬಲಭಾಗದ ಎದುರಿನಲ್ಲಿದ್ದ ದಳದ ಮೇಲೆ ಕ್ಷಿಪಣಿ ಹಾರಿ, ಮೊದಲ ದಿಗ್ಭ್ರಮೆ ಹೊಮ್ಮಿದಾಗ, ಅದೃಷ್ಟವಶಾತ್ ರಾವ್ ಮೇದಿನಿರಾಯ್ ಮತ್ತು ರಾವ್ ಮಾಲ್‌ದೇವ್ ಅವರುಗಳು

ನಮ್ಮ ಎಡಭಾಗದ ಸೇನಾ ಪಡೆಯನ್ನು ಮುನ್ನಡೆಸುತ್ತಿದ್ದರು. ಅದು ನಮ್ಮ ಜನಗಳಿಗೆ ಅಮರಿಕೊಂಡಿದ್ದ ಅಸಾಮರ್ಥ್ಯವನ್ನು ತೊಡೆದು ಹಾಕುವಂತೆ ಕಂಡಿತು. ಬಾದಷಹನ ಬಂದೂಕು ಪಡೆಯಿಂದ ಒಂದೇ ಸಮನೆ ಗುಂಡುಗಳ ಸುರಿ ಮಳೆ ಸಾಗಿತು. ಅವರು ಯಾರನ್ನೂ ನಿಶ್ಚಿತವಾಗಿ ಗುರಿಯಿಟ್ಟು ಹೊಡೆಯುತ್ತಿರಲಿಲ್ಲ. ಆದರೆ ಆ ಹೊಡೆತಗಳು ನಮ್ಮ ಯೋಧರು ನೂರಾರು ಜನರನ್ನು ಎಲ್ಲೆಂದರಲ್ಲಿ ಬಲಿ ತೆಗೆದುಕೊಂಡವು. ಮೇದಿನಿರಾಯ್ ಮತ್ತು ಮಾಲ್‌ದೇವ್ ತಮ್ಮ ಸೇನಾಪಡೆಗಳಿಂದ ಶತ್ರುಪಡೆಯನ್ನು ಸದೆ ಬಡಿದರು ಮತ್ತು ಒತ್ತಡವನ್ನು ಸಡಿಲಗೊಳಿಸಲಿಲ್ಲ. ಅತ್ತ ಇನ್ನೊಂದು ಕಡೆ, ಅಖಿಲ್‌ರಾಜ್, ರೈಮಲ್ ರಾಥೋಡ್, ಮತ್ತು ಹಸನ್ ಖಾನ್ ಮೇವಾಟಿ ಬಾದಷಹನ ಎಡ ಪಾರ್ಶ್ವದಲ್ಲಿದ್ದ ಪಡೆಯೊಂದಿಗೆ ತೊಡಗಿಕೊಂಡರು. ಅವರ ಕ್ರೂರ ಆಕ್ರಮಣದಿಂದ ಬಾಬರನ ಕಡೆಯವರು ಕುಸಿಯತೊಡಗಿದರು. ಆಗ ಬಾಬರನ ಸಂಚಾರಿ ಪಾರ್ಶ್ವ ಪಡೆಯೊಂದು ಅವರ ರಕ್ಷಣೆಗೆ ಧಾವಿಸಿತು. ಫಿರಂಗಿ ಬಂದೂಕುಗಳು ಅನಾಹುತ ಮಾಡದಿದ್ದರೆ, ಪರಸ್ಪರ ಸರಿ ಸರಿಯಾಗಿದ್ದ ಎರಡೂ ಪಡೆಗಳು ಸಾಯಂಕಾಲದವರೆಗೂ ಹೋರಾಟ ಮಾಡಿಕೊಂಡೇ ಇದ್ದು ಬಿಡುತ್ತಿದ್ದುವು. ಸ್ವಲ್ಪ ಹೊತ್ತಿನಲ್ಲೇ ಮೊಗಲರು ದಾಳಿ ಮಾಡ ತೊಡಗಿದರು. ಬಲಪಾರ್ಶ್ವದ ಪಡೆ ಮತ್ತು ರಜಪೂತರ ಕೇಂದ್ರ ಭಾಗದ ನಡುವೆ ದೊಡ್ಡ ಕಂದರ ಉಂಟಾಯಿತು.

ಬೂಮ್ ಬೂಮ್ ಬೂಮ್ ಬೂಮ್. ನೀವು ಬಾಯಿಂದಲೂ ಆ ರೀತಿ ಶಬ್ದ ಮಾಡಬಹುದು. ಹೆದರಿಕೆಯನ್ನುಂಟು ಮಾಡುವಂಥದಲ್ಲವೇ ಅಲ್ಲ. ನಿಜ ತಾನೆ? ಯಾವುದೋ ಒಂದು ಫಿರಂಗಿ ನಿಮ್ಮ ಕಿವಿಯ ತಮಟೆಗಳನ್ನು ನುಚ್ಚು ನುರಿ ಮಾಡುತ್ತಿರುವುದನ್ನು ಕೇಳಿಸಿಕೊಳ್ಳಿ. ಅದರಿಂದಾಗಿ ನೀವು ನಿಮ್ಮ ಆತ್ಮ ವಿಶ್ವಾಸ ಮತ್ತು ಉದ್ದೇಶದ ಅರಿವನ್ನೇ ಕಳೆದುಕೊಂಡು ಬಿಡುವಿರಿ. ಫಿರಂಗಿಗಳು ನಮ್ಮ ಜನರಿಗೂ ವ್ಯಾಪಕವಾದ ಹಾನಿಯನ್ನೇನೂ ಮಾಡಲಿಲ್ಲ ಎಂಬುದನ್ನು ಎತ್ತಿ ಹೇಳಬೇಕು. ಏನೇ ಆದರೂ ಬಾಬರನ ಹತ್ತಿರ ಇದ್ದದ್ದು ಏಳು ಫಿರಂಗಿಗಳು ಮಾತ್ರ. ಬಂದೂಕಿನ ಮದ್ದಿನ ಪುಡಿಯನ್ನು ತುಂಬುವ ಫಿರಂಗಿಯ ಆ ಭಾಗ ತಣ್ಣಗಾಗಲು ಸ್ವಲ್ಪ ಹೊತ್ತು ಬೇಕಾಗುತ್ತದೆ. ಆ ನಂತರವೇ ಕೊಳವೆಯನ್ನು ಸ್ವಚ್ಛಗೊಳಿಸಿ, ಪುನಃ ಮದ್ದಿನ ಪುಡಿಯನ್ನು ತುಂಬಿ ಸಿಡಿಸಬೇಕು.

ನಮ್ಮನ್ನು ಧೂಳೀಪಟ ಮಾಡಿದ್ದು ಯಾವುದೆಂದರೆ, ಗಾಳಿಯಲ್ಲಿ ಹಾರಿಕೊಂಡು ಬಂದು ವಿಚಿತ್ರವಾದ ರೀತಿಯಲ್ಲಿ ಅದುಮಿದಂತಾಗಿ ಧಡ್ ಎಂದು ಭಯಂಕರವಾಗಿ ಶಬ್ದ ಮಾಡುತ್ತ ನೆಲದಲ್ಲಿ ಹಳ್ಳ ಮಾಡುತ್ತ ಬಂದು ಬೀಳುತ್ತಿದ್ದ ಆ ಬಿಸಿಯಾದ ಉಂಡೆಗಳ ಸದ್ದು. ಜೊತೆಗೆ ಮುಂದೆ ಮೃತ್ಯುಶಿಲೆ ಯಾವಾಗ ಮತ್ತು ಎಲ್ಲಿ ಬಂದೆರಗುವುದೋ ಎಂಬುದರ ಅರಿವಿಲ್ಲದ ಭಯ. ಆಗ ಏನಾಯಿತು? ನನಗೆ ಅದರ ಕಲ್ಪನೆ ಇಲ್ಲ. ಇಡೀ ಯುದ್ಧದ ಒಂದು ಒಟ್ಟಾರೆ ಚಿತ್ರ ತಿಳಿಯಲು ನಮ್ಮವರನ್ನು ಹುರಿದುಂಬಿಸುವ, ಮೊಗಲರ, ಅಪಾಯವನ್ನು ನೆಲದ ಮೇಲೆ ಮತ್ತು ಆಕಾಶದಲ್ಲಿ ಎದುರಿಸುವ ತಕ್ಷಣದ ಕಾರ್ಯದಲ್ಲಿ ನಾನು ಅತಿಯಾಗಿ ಮುಳುಗಿ ಬಿಟ್ಟಿದ್ದೆ.

ಬಂದೂಕುಗಳು ನಮ್ಮನ್ನು ಪೀಡಿಸುತ್ತಲೇ ಇದ್ದುವು. ಒಂದು ಸಲಕ್ಕೆ ಒಬ್ಬ ಯೋಧನಂತೆ ಅದು ಬಲಿತೆಗೆದುಕೊಳ್ಳುತ್ತಿತ್ತು. ಗುಂಡು ಎಲ್ಲಿಂದ ಬರುತ್ತಿದೆ ಎಂಬುದು ಗೊತ್ತಾಗುತ್ತಲೇ ಇರಲಿಲ್ಲ. ಅದು ತಾಕಿದಾಗ ಮಾತ್ರ ಗೊತ್ತಾಗುತ್ತಿತ್ತು. ಹೇಗೇ ಆದರೂ ಗುಂಡನ್ನು ಯಾರು ಹಾರಿಸುತ್ತಿದ್ದಾರೆ ಎಂಬುದು ಯೋಧನಿಗೆ ಗೊತ್ತಾದರೂ ಅದರಿಂದ ಏನು ವ್ಯತ್ಯಾಸ ಆಗುತ್ತಿತ್ತು? ಅವನಿಗೆ ಇದ್ದ ಅತ್ಯುತ್ತಮ ಆಯ್ಕೆ ಎಂದರೆ, ಶತ್ರುವಿನತ್ತ ತನ್ನ ಗುರಾಣಿಯನ್ನು ಎಸೆಯುವುದು, ಆದರೆ ಅವನು ಗುರಾಣಿಯನ್ನೆತ್ತಿಕೊಳ್ಳಲು ತನ್ನ ತೋಳನ್ನು

ಹಿಂದಕ್ಕೆ ಚಾಚುವ ಮುಂಚೆಯೇ ಬಂದೂಕಿನಿಂದ ಹೊರ ಹೊಮ್ಮಿದ ಗುಂಡು ಅವನ ಮಿದುಳನ್ನು ದೂರಕ್ಕೆ ಜೀಸಿ ಒಗೆದಿರಬೇಕು ಅಥವಾ ಅಚ್ಚು ಕಟ್ಟಾಗಿ ಅವನ ಹೃದಯದಲ್ಲಿ ಹುದುಗಿಕೊಂಡಿರಬೇಕು ಅಥವಾ ಅವನ ಕರುಳಿನ ಮೇಲು ಭಾಗದ ಮೂಲಕ ಅದು ತೂರಿ ಹೋಗಿರಬೇಕು ಅಥವಾ ಅವನು ಅದೃಷ್ಟವಂತನಾಗಿದ್ದರೆ ಅವನ ತೊಡೆಯಲ್ಲಿ ಹುದುಗಿರಬೇಕು.

ಒಂದು ಸಲಕ್ಕೆ ಒಂದು ಗುಂಡಿನಂತೆ. ಒಂದು ಲಕ್ಷದ ಇಪ್ಪತ್ತು ಸಾವಿರ ಮೇವಾಡದ ಅಥವಾ ಮಿತ್ರ ಪಡೆಯ ಸೈನಿಕರನ್ನು ಕೊಲ್ಲಲು, ಅಥವಾ ವಿಕಲಾಂಗರನ್ನಾಗಿಸಲು ಒಂದು ಅಥವಾ ಎರಡು ತಿಂಗಳು ತೆಗೆದುಕೊಳ್ಳಬೇಕು. ಆದರೆ ಸ್ವಲ್ಪ ಗಣಿತ ಲೆಕ್ಕ ಹಾಕೋಣ. ನನ್ನ ಊಹೆಯ ಪ್ರಕಾರ ಬಾಬರನ ಐದು ಸಾವಿರ, ಬಹುಶಃ ಏಳು ಸಾವಿರ ಸೈನಿಕರ ಬಳಿ ತುಪಾಕಿಗಳಿದ್ದಿರಬೇಕು. ಆದರೆ ಪರಿಮಿತ ಸಂಖ್ಯೆಯಷ್ಟೇ ಸಾಕು. ಬಹುಶಃ ಬಾದಷಹನು ತನ್ನ ಎದುರು ಸಾಲಾಗಿ ನಿಂತಿರುವ ಒಂದು ಲಕ್ಷದ ಇಪ್ಪತ್ತು ಸಾವಿರದಷ್ಟು ಬೃಹತ್ ಸಂಖ್ಯೆಯ ಸೈನಿಕರನ್ನು ನೋಡಿದ್ದಾನೆಂದು ನನ್ನೆಣಿಕೆ. ತನ್ನ ದೇವರಿಗೆ ನಮಸ್ಕಾರ ಹೇಳುವ ಪ್ರಾರ್ಥನೆಯನ್ನು ಮಾಡಿದ್ದಾನೆ. ಮೊದಲ ಸಾಲಿನಲ್ಲಿ ನಿಂತಿರುವ ಬಂದೂಕು ಹೊಂದಿರುವ ಯೋಧರನ್ನು ಹೊರತು ಪಡಿಸಿ, ಅವನು ತಮ್ಮ ಬಂದೂಕುಗಳನ್ನು 45^0 ಗೆ ಸರಿಯಾಗಿ ಗುರಿ ಮಾಡಿ ನಿಲ್ಲಲು ಹೇಳಿದ್ದಾನೆ. ಗುಂಡುಗಳು ಹೊರಹೊಮ್ಮಿ ಕ್ಷಣಕ್ಕೆ ಎಂಬತ್ತರಿಂದ ನೂರಾ ಐದು ಗಜಗಳಷ್ಟು ವಕ್ರಾಕಾರದಲ್ಲಿ ಕೆಳಕ್ಕೆ ಬಾಗಿದವು. ಕ್ಷಣಕ್ಕೆ ಅರುವತ್ತೈದು ಗಜ ದೂರಕ್ಕೆ ಹಾರಿದ ಗುಂಡು ಕೂಡ ತಲೆಬುರುಡೆಯನ್ನು ಭೇದಿಸಿಕೊಂಡು ಹೋಗುತ್ತದೆ. ಗುರಿಯಿಡಬೇಕಾದ ಅಗತ್ಯವೇ ಇಲ್ಲ. ಸುಮ್ಮನೆ ಬಂದೂಕನ್ನು ಹಾರಿಸಲು ಸಿದ್ಧನಾಗಿ ನಿಲ್ಲಿಸಿ ಸಿಡಿಸಿದರೆ ಆಯಿತು.

ನಮ್ಮ ಕಡೆಯವರು ಮುಂದೆ ಮುಂದೆ ಹೋಗುತ್ತಿದ್ದರು ಮತ್ತು ಒಂದೇ ಸಮನೆ ಗಂಟೆಗಳು ಕಳೆಯುತ್ತಿದ್ದಂತೆ ಉರುಳ ತೊಡಗಿದರು. ಮತ್ತೆ ಹೇಳಬೇಕಾದ್ದೆಂದರೆ ಅಷ್ಟೊಂದು ಭಯಂಕರ ಸಾವು ನೋವುಗಳನ್ನು ನಮಗೆ ಉಂಟು ಮಾಡಿದ್ದು ಬಂದೂಕಿನ ಗುಂಡುಗಳಲ್ಲ. ನೂತನ ಶಸ್ತ್ರಾಸ್ತ್ರಗಳ ತಂತ್ರಜ್ಞಾನ ಮಾಡಿದ್ದೆಂದರೆ ಮೊದಲ ಒಂದು ಗಂಟೆ ಕಳೆದು ಅರ್ಧ ಗಂಟೆಯಾಗಿದ್ದಾಗ ನಮ್ಮ ನೈತಿಕ ಸ್ಥೈರ್ಯವನ್ನು ನಿರ್ನಾಮ ಮಾಡಿದ್ದು. ಒಂದು ಫಿರಂಗಿ ಗುಂಡು ತನ್ನಷ್ಟಕ್ಕೆ ಎರಡು ಅಥವಾ ಹೆಚ್ಚೆಂದರೆ ಐದು ಜನ ಸೈನಿಕರನ್ನು ಕೊಲ್ಲಬಹುದು. ಅದರಲ್ಲೂ ಅವರುಗಳು ಗುಂಡು ಹಾಯುವ ಮಾರ್ಗದಲ್ಲಿ ಒಟ್ಟಾಗಿ ಸೇರಿ ಕೊಂಡಿದ್ದರೆ ಮಾತ್ರ, ಆದರೆ ನೆಲದ ಮೇಲೆ ಅದು ಬಿದ್ದಾಗ ಮಾಡುತ್ತಿದ್ದ ಪರಿಣಾಮವೇ ಹೆಚ್ಚು ಮಾರಕವಾಗಬಹುದಾಗಿತ್ತು. ದೊಡ್ಡ, ಚಿಕ್ಕ, ಮಧ್ಯಮ ಗಾತ್ರದ ಕಲ್ಲಿನ ಚೂರುಗಳು, ಮರದ ಬೇರುಗಳು, ಕೊಂಬೆಗಳು ಭೂಮಿಯಿಂದ ಕಡಿದ ಮಣ್ಣಿನ ಹೆಂಟೆಯ ಭಾಗಗಳು ಕಿತ್ತುಕೊಂಡು ಭಯಂಕರ ವೇಗದಲ್ಲಿ ನಮ್ಮ ಮಧ್ಯಕ್ಕೆ ಬಂದು ಬೀಳುತ್ತಿದ್ದುವು. ನಮ್ಮ ಕಣ್ಣು ಕತ್ತಲಿಟ್ಟುಕೊಳ್ಳುತ್ತಿದ್ದುವು. ಕೆಳಗೆ ಬೀಳುತ್ತಿದ್ದೆವು, ದಿಗ್ಭ್ರಮೆಗೊಳ್ಳುತ್ತಿದ್ದೆವು. ಇಷ್ಟಾದರೂ, ಬಹುಪಾಲು ನಮ್ಮೆಲ್ಲಾ ಸೈನಿಕರ ಕುತ್ತಿಗೆಯನ್ನು ಹಿಸುಕಿ ಬಿಡಲು ನನಗೆ ಸಾಧ್ಯವಾಗಿದ್ದಿದ್ದರೆ, ನನ್ನ ಸುತ್ತ ಉಂಟಾಗ ಬಹುದಾಗಿದ್ದ ಭಾರಿ ಹುಯಿಲನ್ನು ನಾನು ಲೆಕ್ಕಿಸುತ್ತಿರಲಿಲ್ಲ.

ಆ ಹೊತ್ತು ನಾನು ಕೇಳಿದಂಥ ಕೂಗಾಟ, ಕಿರುಚಾಟ, ನರಳಾಟ, ಅಳುಗಳ ರೀತಿಯನ್ನು ನಾನೆಂದೂ ಕೇಳಿದ್ದಿಲ್ಲ. ನಂಬಲು ಸಾಧ್ಯವಿಲ್ಲದ ಹಾಗೆ ಹೆಗಲಿನಿಂದ ತೋಳು ಕಡಿದು ಬೇರೆಯಾಗಿ ನೆಲದ ಮೇಲೆ ಅಪ್ಪಳಿಸುವಂಥದ್ದು, ಭರ್ಜಿಯೊಂದು, ಸುರುಳಿಯಾಗಿ ಹೊಟ್ಟೆಯೊಳಕ್ಕೆ ಹೊರಳಿಕೊಂಡು ನುಗ್ಗುವಂಥ ಗಾಬರಿ, ಖಡ್ಗವೊಂದು ಒಳ ನುಸುಳಿದಾಗ,

ಭುಜದ ಮೂಳೆ ಬಿರಿಯುವ, ಹಾಗೂ ಬೆನ್ನು ಮೂಳೆ ಮುರಿಯುವವರೆಗೂ ಅದು ಹಾಗೆಯೇ ಮುಂದಕ್ಕೆ ಸಾಗಿ ಬೆನ್ನೆಲುಬಿನ ಏಳನೆಯ ಕಶೇರುವನ್ನು ಎಂಟನೆಯದರಿಂದ ಬೇರ್ಪಡಿಸಿ ಬಿಡುವಂಥ ಭಯಾನಕ ನೋವು, ಬಾಣವೊಂದು ಕುತ್ತಿಗೆಯಲ್ಲಿ ವಾಯು ದಿಕ್ಸೂಚಿಯ ಹಾಗೆ ಸಿಕ್ಕಿಕೊಂಡು ಬಿಟ್ಟಿರುವುದನ್ನು ಕಂಡಾಗಿನ ಆಶ್ಚರ್ಯ, ಪಕ್ಕೆಲುಬುಗಳು ಮತ್ತು ಜಠರ ಇರಬೇಕಾದ ರಂಧ್ರದ ಜಾಗವು ಬೆನ್ನಿಗೆ ಗಾಳಿಯು ಸಂಚರಿಸುವ ಸರಾಗ ಮಾರ್ಗವಾಗಿದೆ ಎಂಬ ತಿಳಿವು, ಎಲ್ಲಕ್ಕಿಂತ ಮಿಗಿಲಾಗಿ ಸಾವು ಸಮೀಪಿಸಿದಾಗ ಉಸಿರು ತೆಗೆದುಕೊಳ್ಳುವಾಗ ಆಶ್ಚರ್ಯದ ಏದುಸಿರು ಮತ್ತು ತಕ್ಷಣದ ತಡೆ. ಅನೇಕ ಯುದ್ಧಗಳಲ್ಲಿ ಭಾಗವಹಿಸಿದ ಅನುಭವಿ ನಾನು. ಈ ಯುದ್ಧದಲ್ಲಿನ ಜನರ ನರಳಾಟ. ಆ ಎಲ್ಲ ಯುದ್ಧಗಳಲ್ಲಿನ ನರಳಾಟಕ್ಕಿಂತ ಭಿನ್ನವೇನಲ್ಲ. ಹಾಗಾದರೆ, ನನ್ನ ಆಶ್ಚರ್ಯ ಮತ್ತು ಅಸಹನೆ ಯಾವ ಕಾರಣಕ್ಕೆ? ಅದು ನನ್ನ ಕಣ್ಣಿನ ನೋಟ ಹಾಳಾಯಿತೆಂದೆ ಮತ್ತು ನನ್ನ ಶ್ರವಣ ಶಕ್ತಿ ಹೆಚ್ಚು ತೀಕ್ಷ್ಣವಾಯಿತೆಂದೆ? ಅಥವಾ ಆ ಪ್ರತಿಯೊಂದು ಯಾತನೆಯ ಕರೆಯೂ ನಮ್ಮ ಪಲಾಯನವನ್ನೇ ದೃಢಪಡಿಸುತ್ತಿತ್ತೆಂದು ನಾನು ಕಟುವಾಗಿ ಪ್ರತಿಕ್ರಿಯೆ ತೋರಿದೆನೆ?

ಈಗ ಅವರೆಲ್ಲರು ಮರಳುತ್ತಿದ್ದರು. ಉಸಿರು ಕಟ್ಟದ ಆ ಹತ್ತು ಸಾವಿರ ಗುಜರಾತಿ ಯೋಧರು ಆ ಮುಂಜಾನೆಯಲ್ಲಿ ತಂಡ ತಂಡವಾಗಿ, ಹತ್ತು ಸಾವಿರ ಮುಖಗಳು ಕೊನೆಯಿಲ್ಲದ ಯಾತನೆಯಲ್ಲಿ ಮುಳುಗಿ, ಬಾಯಿ ತೆರೆದುಕೊಂಡು, ನೀರವವಾಗಿ, ಮಂಜು ಮುಸುಕಿದ ಜೌಗು ಮತ್ತು ಹೂಳು ತುಂಬಿದ ಮಾರ್ಗವಾಗಿ ಮರಳುತ್ತಿದ್ದರು. ಒಮ್ಮೆ ನಗಿ, ನಗಿ ಎಂದು ಅವರನ್ನು ನಾನು ಬೇಡಿಕೊಂಡೆ. ನಾವು ನಿಮಗೆ ಮಾಡಿದ್ದಕ್ಕೆ ತಕ್ಕ ದಂಡ ತೆರುತ್ತಿದ್ದೇವೆ ಕೈಗಳು, ಕಾಲುಗಳು, ಹೃದಯಗಳು, ಪಿತ್ತಕೋಶಗಳು, ಮೂತ್ರ ಪಿಂಡಗಳು ಮತ್ತು ದೇಹದ ಒಳ ಅಂಗಗಳೆಲ್ಲ ಗಾಳಿಗೆ ಒಲೆದಾಡುತ್ತ, ಜೋತಾಡುತ್ತ ಇರುವುದನ್ನು ನೋಡಿ. ಸರಾಗವಾಗಿ ಉಸಿರಾಡಿ ಈಗ. ನಾವು ಮಾಡಿದ ಕರ್ಮಕ್ಕೆ ದಂಡತೆರಲೇಬೇಕು. ಕೆಲವು ಸಲ ಈ ಜನ್ಮದಲ್ಲಿಯೇ. ನಿಮಗೆ ಸಾಧ್ಯವಾದಾಗ ಸಂತೋಷ ಪಡಿ. ಇದು ಸೇಡು ಸ್ನೇಹಿತರೆ, ಜೀವನವು ದಯಪಾಲಿಸುವ ಅತ್ಯಂತ ಮಧುರವಾದ ಸಂತೃಪ್ತಿ. ಆದರೆ ಅವರು ಮುಗುಳ್‌ನಗಲಿಲ್ಲ. ಮುಖದ ಮುರುಕು ಮತ್ತು ಭೀತಿ ಹೋಗಲಿಲ್ಲ. ಇಡೀ ದಿನ, ಗಾಯಾಳುಗಳು ದಿಕ್ಕಾಪಾಲಾಗಿ ಮರ್ಯಾದೆ ಬಿಟ್ಟು ಕೆಲವರು ತಮ್ಮ ಎದೆಗಳು, ಹೊಟ್ಟೆಗಳು ಮತ್ತು ಗುಪ್ತಾಂಗಗಳನ್ನು ತೆರೆದುಕೊಂಡು ಬಿದ್ದರು. ಸತ್ತವರ ದೇಹಗಳು ಒಂದರ ಮೇಲೊಂದು ರಾಶಿಯಾದವು. ಇದನ್ನೆಲ್ಲ ರಣಪಿಶಾಚಿ ಗುಜರಾತಿ ಪಡೆಗಳೂ ಸದ್ದಿಲ್ಲದೆ ಗಮನಿಸಿದವು. ನನಗೆ ಬಿಡುಗಡೆ ನೀಡಲಾಗದಿದ್ದರೆ, ವಿಸ್ಮೃತಿಯನ್ನು ನೀಡಿ ಎಂದು ನಾನು ಜೋರಾಗಿ ಚೀರಿದೆ. ಅವರು ನಾನು ಹೇಳಿದ್ದನ್ನು ಕೇಳಿಸಿಕೊಳ್ಳಲಿಲ್ಲ. ಒಂದು ವೇಳೆ ಕೇಳಿಸಿಕೊಂಡಿದ್ದರೂ ನನ್ನ ಮಾತಿಗೆ ಓಗೊಟ್ಟು ಉಪಕರಿಸುವಂತಿರಲಿಲ್ಲ ಅವರು.

ಬಾಬರನು ತನ್ನ ಸಿದ್ಧತೆಯ ಕೆಲಸವನ್ನು ಎಚ್ಚರಿಕೆಯಿಂದ ಮಾಡಿದ್ದನು. ನಾವು ಒಂದು ಸೈನ್ಯವಲ್ಲ. ಕಡೇ ಪಕ್ಷ ಐವತ್ತು ಸೈನ್ಯಗಳು ಎಂಬುದು ಅವನಿಗೆ ಗೊತ್ತಿತ್ತು. ನಮ್ಮ ಬೇರೆ ಬೇರೆ ಸೇನಾಪಡೆಗಳನ್ನು ಬಂಧಿಸಿಟ್ಟಿದ್ದ ಆ ಸೂಕ್ಷ್ಮವಾದ, ಅಭದ್ರವಾದ, ಹೊಲಿಗೆಯ ಅಂಚನ್ನು ಹರಿದು ಹಾಕುವತ್ತ ತನ್ನ ಗಮನವನ್ನು ಕೇಂದ್ರಿಕರಿಸಿದ್ದನು. ನಾವು ಬೇರೆಯಾಗಿ ಕಿತ್ತು ಬರುವವರೆಗೂ, ಈ ದೋಷಪೂರ್ಣವಾದ ಗೆರೆಗಳ ಮೇಲೆಯೇ ತನ್ನ ಒತ್ತಡವನ್ನು ಹಾಕಿದನು. ಅದು ಅಷ್ಟೊಂದು ಕಷ್ಟವಾಗಿರಲಿಲ್ಲ. ನಮ್ಮಲ್ಲಿ ಒಗ್ಗಟ್ಟಿನ ಶಿಸ್ತು ಇರಲಿಲ್ಲ.

(ಷಫಿ, ತೇಜ್ ಮತ್ತು ಹೇಮ್ ಕರಣನ ಎಂಟು ಹತ್ತು ಸಾವಿರ ಮಂದಿ ಏಕಘಟಕವಾದ ಪ್ರಾರಕಸೇನೆ ಆಗಬಹುದಿತ್ತು. ಆದರೆ ಆ ಜನರೆಲ್ಲ ಬೇರೆ ಬೇರೆ ವಿಭಾಗಗಳಿಗೆ ಸೇರಿದವರಾಗಿದ್ದರು). ಅದೇ ಬಾಬರನ ಇಪ್ಪತ್ತು ಸಾವಿರ ಯೋಧರು ಭಾರತದಲ್ಲೇ ಕಡೇ ಪಕ್ಷ ಐದು ಯುದ್ಧಗಳನ್ನು ಮಾಡಿದ್ದರು ಹಾಗೂ ಅವೆಲ್ಲವೂ ಅಚ್ಚುಕಟ್ಟಾದ ಘಟಕಗಳಾಗಿದ್ದು ಬಾಬರನು ಒಬ್ಬ ಮಹಾನ್ ಯಕ್ಷಿಣಿಗಾರನಂತೆ ಅವನ್ನು ನಿರ್ವಹಿಸುತ್ತಿದ್ದನು.

ಚದುರಂಗದ ಆಟವನ್ನು ನೆನಪಿಸಿಕೊಳ್ಳಿ. ಪ್ಯಾದೆಗಳು (ಕಾಯಿಗಳು) ರಾಜ, ಆನೆಗಳು, ಮಂತ್ರಿ, ಕುದುರೆಗಳು, ಎರಡೂ ಕಡೆ ಆಟದ ಅರ್ಧಕ್ಕೆ ಬಂದಿದ್ದಾಗ, ಬಾಬರನು ಎಷ್ಟು ಕೌಶಲದಿಂದ ಮತ್ತು ವೇಗದಿಂದ ತನ್ನ ಕಾಯಿಗಳನ್ನು ನಡೆಸಿದ್ದನೆಂದರೆ, ನಾವು ಎಲ್ಲ ಕಡೆಯಿಂದಲೂ ಆಕ್ರಮಣಕ್ಕೆ ಒಳಗಾಗಿದ್ದೆವು ಮತ್ತು ತತ್ತರಿಸುವಷ್ಟು ವೇಗದಲ್ಲಿ ನಾವು ನಮ್ಮ ಕಡೆಯವರನ್ನು ಕಳೆದುಕೊಳ್ಳುತ್ತಿದ್ದೆವು. ಮುಖಂಡರಲ್ಲಿ ಸಜ್ಜಾ ಚುಂಡಾವತ್, ರಾವತ್ ಜಗ್ಗ ಸಾರಂಗ ದೇವ, ನನ್ನ ಮಾವ ಲಕ್ಷ್ಮಣ ಸಿಂಹರು, ರಾವತ್ ಬಾಘ್, ಸಜ್ಜಾ ಅಜ್ಜ ಮತ್ತು ಕರಮ್ ಚಂದ್, ಚಂದ್ರಭಾನ್ ಚೌಹಾನ್, ಭೋಪತ್ ರಾಯ್, ದಲ್‌ಪತ್ ಮತ್ತು ಮಾಣಿಕ್ ಚಂದ್ರ ಇವರೆಲ್ಲರೂ ಸತ್ತಿದ್ದರು. ಮೊಗಲರು ರಾಣಾ ಅವರ ವ್ಯಾಯಾಮ ದಳವನ್ನು ವಶಪಡಿಸಿಕೊಂಡಿದ್ದರು. ಆದರೆ ಕರಣ್ ಸಿಂಹ ಡೋಡಿಯಾ ತನ್ನ ಜೀವವನ್ನು ತೆತ್ತು ಅವರನ್ನುಳಿಸಿದ್ದನು.

ನಾವು ಹತಾಶಕರವಾದ ಕಷ್ಟ ಪರಿಸ್ಥಿತಿಯಲ್ಲಿದ್ದೆವು. ಬಹುಶಃ ಷಫಿಯ 'ಹಿಂದೆಗೆತ' ಕುರಿತ ಪುಸ್ತಕದಲ್ಲಿ ಹೇಳಿರುವ ಮೂರನೇ ಸಮರ ತಂತ್ರವನ್ನು ಬಳಸಿಕೊಳ್ಳುವುದು ಸರಿಯಾದೀತು. ಅದು ಹೇಳುವುದು: "ನಿಧಾನವಾಗಿ ಮತ್ತು ಎದ್ದು ಕಾಣದ ಹಾಗೆ ಹಿಂದೆ ಸರಿಯಿರಿ. ಚದುರಿ ಹೋಗಿ ಮುಂಚೆಯೇ ನಿರ್ಧರಿಸಿದ, ಶತ್ರು ನಿಮ್ಮನ್ನು ಹಿಂಬಾಲಿಸಿಕೊಂಡು ಬರದಂಥ ಒಂದು ಜಾಗದಲ್ಲಿ ಸೇರಿಕೊಳ್ಳಿ. ಆ ಮೇಲೆ ಎಲ್ಲವೂ ಹಾಳಾಗದಿದ್ದಲ್ಲಿ, ಉದ್ದನೆಯ ಬಳಸು ದಾರಿಯನ್ನು ಹಿಡಿದು ಶತ್ರುವಿನ ಹಿಂದುಗಡೆ ಎಲ್ಲರೂ ಒಟ್ಟಾಗಿ ಸೇರಿ ಆಕ್ರಮಣ ಮಾಡಿ" ನಮ್ಮ ನಾಯಕರಲ್ಲಿ ಯಾರೊಬ್ಬರೂ ರಣದಿಂದ ಹಿಮ್ಮೆಟ್ಟುವುದು ಹಾಗಿರಲಿ, ಸೋಲನ್ನೇ ಎಣಿಸಿರಲಿಲ್ಲ. ಹಾಗಾಗಿ ಮುಂಚೆಯೇ ಮನಸ್ಸಿನಲ್ಲಿ ಚಿಂತಿಸಿದಂಥ ಹಾಗು ಕ್ರಮಬದ್ಧವಾದ ಹಿಮ್ಮೆಟ್ಟುವಿಕೆಯ ಪ್ರಶ್ನೆಯೇ ಇರಲಿಲ್ಲ. ಈ ಮಧ್ಯೆ ಮಹಾಪ್ರಭುಗಳು ನಮ್ಮ ಸೇನಾಪಡೆಗಳ ನಿರಾಶಾದಾಯಕವಾದ ಸ್ಥಿತಿಯನ್ನು ನೋಡಿದರು ಮತ್ತು ತಮ್ಮ ಜೀವಮಾನದ ಅತ್ಯಂತ ಘೋರವಾದ, ಮೂರ್ಖ ಪ್ರಮಾದವೊಂದನ್ನು ಮಾಡಲು ನಿರ್ಧರಿಸಿದರು. ಅವರೆಲ್ಲರನ್ನೂ ಜವಾಯಿಸಿ, ಹುರಿದುಂಬಿಸುವ ಕೆಲಸವನ್ನು ತಾವೇ ಮಾಡತೊಡಗಿದರು. ಎರಡು ಸೇನಾ ಪಡೆಗಳ ನಡುವೆ ಅವರು ಕಾಣಿಸಿಕೊಂಡರು. ಆಗ ಎಲ್ಲಿದಂದಲೋ ಒಂದು ಬಾಣ ಅವರನ್ನು ಹೊಡೆದು ಕೆಳಗುರುಳಿಸಿತು. ಅದೊಂದು ಪ್ರಾಣಾಂತಿಕವಾದ ಹೊಡೆತ. ಆದರೆ ಅವರ ದೇಹಕ್ಕೆ ಎಂಬತ್ತೇಳೋ ತೊಂಬತ್ತೋ ಗಾಯಗಳಾದ ಮೇಲೆ ಮಹಾಪ್ರಭುಗಳು ಅಮರರಾಗಿದ್ದು ಬಿಟ್ಟಿದ್ದರೆಂಬುದನ್ನು ನೀವು ಮರೆಯುತ್ತೀರಿ.ನಾವು ಅವರನ್ನು ನಿಧಾನವಾಗಿ ನೆಲದಿಂದ ಮೇಲೆತ್ತಿದ್ದೆವು. ಅವರು ಪ್ರಜ್ಞಾ ಹೀನರಾಗಿದ್ದರು ಮತ್ತು ವಿಪರೀತ ರಕ್ತಸ್ರಾವವಾಯಿತು. ಹಾಗಾಗಿ ನಾವು ಅವರನ್ನು ಒಂದು ಡೋಲಿಯಲ್ಲಿ ದೂರದ ಬಾಸ್ವಾ ಎಂಬಲ್ಲಿಗೆ ಸಾಗಿಸಿದೆವು. ಬಾಬರನೇ ಒಂದು ವೇಳೆ ಅವರಿಗಾಗಿ ಹುಡುಕುತ್ತ ಬರುವುದೋ ಅಥವಾ ಅವರನ್ನು ಮುಗಿಸಿ ಬಿಡಲು ಯಾರನ್ನಾದರೂ ಕಳಿಸಿದರೆ ಹೇಗೆ ಎಂದು ಹಾಗೆ ಮಾಡಿದೆವು.

ನಾನು ಹೇಳಬೇಕಾದ ಸಂಗತಿಗಳು ಇನ್ನೆರಡೇ. ನಮ್ಮ ಸೇನೆಗಾಗಲಿ, ಬಾಬರನ ಸೇನೆಗಾಗಲಿ, ಮಹಾಪ್ರಭುಗಳ ನಿರ್ಗಮನದ ಸುದ್ದಿ ತಿಳಿಯಬಾರದೆಂದು, ಇಚ್ಛಿಸಿ, ಎಷ್ಟು ಸಾಧ್ಯವೋ, ಅಷ್ಟು ರಹಸ್ಯವಾಗಿ ಅವರನ್ನು ಅಲ್ಲಿಂದ ಸಾಗಿಸಿದ್ದೆವು. ಹಿರಿಯರು ಹಾಲವಾಡದ ಚುಂದರ್ ಆಗಿದ್ದ ರಾಜಾ ರಾಣಾ ಅಜ್ಜಾ ಅವರನ್ನು ತಂದೆಯವರ ಅನುಪಸ್ಥಿತಿಯಲ್ಲಿ ಯುದ್ಧವನ್ನು ಮುನ್ನಡೆಸಲು ನೇಮಿಸಿದರು. ಒಂದು ಸಲ ರಾಜಾ ಅಜ್ಜ ಅವರನ್ನು ತಂದೆಯವರ ಆನೆಯ ಮೇಲೆ ಕೂಡಿಸಿಬಿಟ್ಟರೆ ಯಾರ ಗಮನಕ್ಕೂ ಈ ಒಂದು ವ್ಯತ್ಯಾಸ ಬರುವುದಿಲ್ಲ ಎಂದು ಅವರು ಭರವಸೆ ಹೊಂದಿದರು. ಆದರೆ ಯಾರಿಗೇ ಆದರೂ ತಂದೆಯವರಂತೆ ಅಭಿನಯಿಸಲು ಕಷ್ಟ. ಅದಕ್ಕೆ ಒಂದು ಕಣ್ಣು ಕಳೆದುಕೊಂಡು ಕೆಲವು ಅಂಗಗಳು ನಿಷ್ಕ್ರಿಯವಾಗಬೇಕಾಗುತ್ತದೆ. ರಾಜಾ ಅಜ್ಜಾ, ನಿಜವಾದ ರಾಣಾ ಅವರ ಎರಡರಷ್ಟಿದ್ದರೇನೋ ಎಂದು ನನಗೆ ಅನುಮಾನವಿತ್ತು. ಆದರೆ ಯಾವುದನ್ನೇ ಆಗಲಿ ಒಮ್ಮೆ ಪ್ರಯತ್ನಿಸಿ ನೋಡಬಹುದಲ್ಲ ಎನಿಸಿ ನಾನು ಅದಕ್ಕೆ ಸಮ್ಮತಿಸಿದೆ. ತಂದೆಯವರ ಆನೆಯ ಮೇಲೆ ಶ್ವೇತಛತ್ರವನ್ನೂ ಒಳಗೊಂಡಂತೆ ಉಳಿದ ರಾಜ ಲಾಂಛನಗಳೆಲ್ಲವೂ ಇದ್ದುವು. ಯುದ್ಧವು ಮತ್ತೆ ಮುಂದುವರೆಯಿತು. ನಾವು ತಕ್ಷಣವೇ ಕಾರ್ಯಪ್ರವೃತ್ತರಾಗಿದ್ದರಿಂದ, ತಂದೆಯವರ ಗಾಯದ ವಿಷಯ ಸುತ್ತ ಎಲ್ಲೂ ಹರಡುವುದಿಲ್ಲ ಎಂದು ನಾವು ನಂಬಿದ್ದೆವು. ಇದೇ ಸಮಯಕ್ಕೆ ಸರಿಯಾಗಿ ಸಿಲ್ಹಾದಿಯು ನಮ್ಮನ್ನು ತೊರೆದು ಬಾಬರನನ್ನು ಸೇರಿಕೊಂಡನು. ಹಂಗಾಮಿ ಸುಳ್ಳು ಹಕ್ಕುದಾರನೊಬ್ಬನು ರಾಣಾ ಅವರ ಆನೆಯ ಮೇಲೆ ಕುಳಿತಿದ್ದಾನೆಂದು ಬಾದಷಹನಿಗೆ ತಿಳಿಸುವ ಒಂದು ಉಪಕಾರವನ್ನು ಅವನು ನಮಗೆ ಮಾಡಿದನು. ನಾನು ಅವನು ಮಾಡಿದ ದ್ರೋಹಕ್ಕೆ ಕೆರಳಬೇಕಾಗಿತ್ತು. ಆದರೆ ಅದನ್ನು ಸಂಗತಿಯಾಗಿ ತೆಗೆದುಕೊಂಡೆ. ಸಿಲ್ಹಾದಿ ಗೆಲ್ಲುವ ಪಕ್ಷದಲ್ಲಿರಲು ಬಯಸಿದನು.ಜೊತೆಗೆ ಅವನ ಹಾಜರಿ ಅಥವಾ ಗೈರು ಹಾಜರಿಯಿಂದ ಅಷ್ಟೇನೂ ವ್ಯತ್ಯಾಸವಾಗುವುದಿಲ್ಲ. ಯುದ್ಧದ ಕೊನೆ ಹತ್ತಿರ ಬಂದಿತ್ತು.

ಸಾಯಂಕಾಲ, ಯುದ್ಧದಲ್ಲಿ ಸತ್ತ ಶತ್ರುಗಳ ತಲೆಗಳನ್ನೆಲ್ಲಾ ಒಟ್ಟುಗೂಡಿಸಿ ಅದನ್ನೊಂದು ಸ್ತಂಭಾಕೃತಿಯಲ್ಲಿ ಪೇರಿಸುವಂತೆ ಬಾದಷಹನು ಆಜ್ಞಾಪಿಸಿದನು. ಆ ಭಯಂಕರ ವಿಜಯಸ್ತಂಭವನ್ನು ನೋಡಲು ನಾನು ಅಲ್ಲಿರಲಿಲ್ಲ. ಆದರೆ ಅದು ಮಹಾಪ್ರಭುಗಳಿಗಾಗಿ ನಾನು ನಿರ್ಮಿಸಿದ ಐವತ್ತು ಅಡಿ ಎತ್ತರದ ವೀಕ್ಷಣಾ ಗೋಪುರಕ್ಕಿಂತ ಸ್ವಲ್ಪ ಎತ್ತರಕ್ಕಿತ್ತೆಂದೂ ಮತ್ತು ಅಷ್ಟೇ ಭದ್ರವಾಗಿತ್ತೆಂದೂ ಜನ ನನಗೆ ಹೇಳಿದರು.

ಅಧ್ಯಾಯ 48

ನಾನು ಬಾಸ್ವಾದ ಬೆಟ್ಟದ ಮೇಲಿನ ಅರಮನೆಗೆ ರಾತ್ರಿ ತಡವಾಗಿ ತಲುಪಿದೆ. ಅಲ್ಲಿ ತಂದೆಯವರ ಸಂಗಡ ಬಹಳ ಜನವೇನೂ ಇರಲಿಲ್ಲ. ಭೂಮಿಯ ಮೇಲಿನ ಸಂಘರ್ಷಕ್ಕೆ ಸಮುದ್ರಯಾನದ ಸಂದರ್ಭದ ಪ್ರತಿಮೆಯನ್ನು ಬಳಸಿ ಹೇಳುವುದಾದರೆ ಬಹುಶಃ ಹಡಗನ್ನು ತೊರೆಯುವುದೇ ವಿವೇಕವೆನಿಸಿರಬೇಕು. ಅಲ್ಲಿದ್ದ ಕೆಲವೇ ಜನರು ನನ್ನನ್ನೂ ಉದಾಸೀನವಾಗಿಯೇ ಕಂಡರು ಮತ್ತು ದೂರದಲ್ಲೇ ಇಟ್ಟರು. (ನನಗೇ ಅರಿವಿಲ್ಲದಂತೆ ನಾನು ಸಮುದ್ರಯಾನದ ಪ್ರತಿಮೆಗೆ ಹೊರಳಿದ್ದು ನನಗೇನನ್ನಾದರೂ ಸೂಚಿಸುತ್ತಿದೆಯೆ? ನಾನು ಈ ಭೂಮಿಯ ತೀರವನ್ನು ಶಾಶ್ವತವಾಗಿ ತೊರೆಯಲಿಚ್ಛಿಸಿದ್ದೇನೆಯೆ?) ಖನುವಾ ಯುದ್ಧವನ್ನು ನಾವು ಒಂದು ಅಥವಾ ಎರಡು ವರ್ಷ ಮುಂದೆ ಹಾಕಬೇಕೆಂದು ನಾನು ತುಂಬ ಒತ್ತಾಯಿಸಿದ್ದು, ಅವರೆಲ್ಲರೂ ನನ್ನ ವಾದಗಳನ್ನು ನಿರಾಕರಿಸಿದ್ದರು. ಹಾಗಾಗಿ ಈ ಹೊತ್ತಿನ ಈ ಪಲಾಯನಕ್ಕೆ ಹೇಗೋ ಏನೋ ನನ್ನನ್ನೇ ಹೊಣೆಗಾರನನ್ನಾಗಿ ಮಾಡಲಾಗಿತ್ತು.

"ನಮಗೆ ನಿಮ್ಮದೇ ಚಿಂತೆಯಾಗಿ ಬಿಟ್ಟಿತ್ತು. ನೀವು ಅಖಂಡವಾಗಿ ಬರಲು ಸಾಧ್ಯವಾಗಿದ್ದಕ್ಕೆ ನಾನು ಬಹಳ ಧನ್ಯವಾದಗಳನ್ನರ್ಪಿಸುತ್ತೇನೆ" ಎಂದು ಮೇದಿನಿರಾಯ್ ನನ್ನನ್ನು ಸ್ವಾಗತಿಸಿದರು.

"ತಂದೆಯವರು ಹೇಗಿದ್ದಾರೆ?"

"ಅವರಿಗಾಗಿರುವ ಗಾಯಗಳನ್ನು ಲೆಕ್ಕ ಹಾಕಿದರೆ, ಅವರು ನಿಜಕ್ಕೂ ತುಂಬ ಚೆನ್ನಾಗಿದ್ದಾರೆ. ಅವರು ಇಲ್ಲಿಗೆ ಬಂದಾಗ, ಅವರು ತಮ್ಮ ಕವಚ ಮತ್ತು ಕುದುರೆ ಬೇಕು ಎಂದು ಹೇಳಿದರು. ಯುದ್ಧಕ್ಕೆ ತಕ್ಷಣ ಹಿಂತಿರುಗಬಹುದು ಎಂಬುದು ಉದ್ದೇಶ. ಅವರು ತುಂಬಾ ದುರ್ಬಲವಾಗಿದ್ದಾರೆ. ಆದರೆ ಪ್ರತಿ ಐದು ನಿಮಿಷಕ್ಕೊಂದು ಸಲ ನಿಮ್ಮನ್ನು ಕೇಳುತ್ತಿದ್ದರು".

"ಬಾದಷಹನ ಕಡೆಯ ಯೋಧರು ಯುದ್ಧರಂಗವನ್ನು ಬಿಟ್ಟು ತೆರಳಿದ ಕೂಡಲೇ, ಗಾಯಗೊಂಡವರನ್ನೆಲ್ಲ ಇಲ್ಲಿಗೆ ಕರೆದುಕೊಂಡು ಬರುವ ಏರ್ಪಾಟು ಮಾಡಬೇಕೆಂದು ರಾಜಕುಮಾರ ಹೇಮಕರಣ್, ತೇಜ್ ಮತ್ತು ಷಫಿಗೆ ನಾನು ಹೇಳಿದ್ದೆ. ಕಡೇ ಪಕ್ಷ ತೀರ ತಡ ಅಂದರೂ ನಾಳೆ ಬೆಳಿಗ್ಗೆ ಹೊತ್ತಿಗೆ ಅವರೆಲ್ಲ ನಮ್ಮ ಜೊತೆ ಇರಬೇಕು".

ತಂದೆಯವರು ಒಮ್ಮೆಲೇ ತೀರ ದುರ್ಬಲರೂ ಕೃಶರೂ ಆಗಿ ಕಾಣುತ್ತಾರೆ. ಅವರ ತುಟಿಗಳು ಮತ್ತು ಚರ್ಮ ಬೂದಿ ಬಣ್ಣಕ್ಕೆ ತಿರುಗಿದ್ದುವು. ನಾಡಿಯ ಬಡಿತ ಕೂಡ ಒಂದೇ ಸಮನಾಗಿರಲಿಲ್ಲ. ನಾನು ಮೌನವಾಗಿ ಅವರ ಪಕ್ಕ ಕುಳಿತೆ. ನನ್ನ ನಾಲಿಗೆ ಸತ್ತಂತಿತ್ತು.

"ನಿಮ್ಮ ತಂದೆಯ ವಿಷಯಕ್ಕೆ ನಿನಗೆ ನಿರಾಶೆ ಆಯಿತಾ ಮಗನೆ?" ಮಹಾಪ್ರಭುಗಳು ನನ್ನಿಂದ ದೂರ ಇದ್ದು ಬಿಗುವಾಗಿಯೇ ಇರುವುದು ನನಗೆ ಇಷ್ಟ. "ಇನ್ನೊಂದು ವಾರದಲ್ಲಿ ನೀವು ಎಚ್ಚೆತ್ತುಕೊಳ್ಳದೆ ಇದ್ದರೆ ನನಗೆ ನಿರಾಶೆಯಾಗುತ್ತೆ. ಬಾದಷಹನೊಂದಿಗೆ ನಾವು ಮತ್ತೆ ಹೋರಾಟ ಪ್ರಾರಂಭಿಸುವ ಮುನ್ನ ಬಹಳಷ್ಟು ಕೆಲಸ ಮಾಡುವುದು ಬಾಕಿ ಇದೆ".

"ನೀನು ಹೆಜ್ಜೆ ಹೆಜ್ಜೆಗೂ ನನಗೆ ಎಚ್ಚರಿಕೆಕೊಡುತ್ತಿದ್ದೆ. ಆದರೆ ನಾನು ನಿನ್ನ ಮಾತು ಕೇಳಿಸಿಕೊಳ್ಳಲಿಲ್ಲ".

"ಯಾರ ಮುಖ ಕಂಡರೆ ನನಗೆ ಆಗುವುದಿಲ್ಲ ಅಂಥ ಜನ ಯಾರು ಅಂತ ತಮಗೆ ಗೊತ್ತೆ? ನಿಮಗೆ ಆಗಲೆ ಹಾಗಂತ ಹೇಳಿದ್ದೆನಲ್ಲ ಅನ್ನುವಂಥ ಜನರು?"

"ಹಾಗಿದ್ದರೆ ಈಗ ನಾವು ಏನು ಮಾಡಬೇಕು ಎಂದು ನಿನ್ನ ಸಲಹೆ?"

"ನಾನು ಮನಃಪೂರ್ವಕವಾಗಿ ಹೇಳುತ್ತಿದ್ದೇನೆ ಮಹಾಪ್ರಭು. ನಾನು ಇಲ್ಲಿಂದ ಹೊರಗಡೆ ನಿಮ್ಮನ್ನು ಆರೈಕೆ ಮಾಡಿ, ಒಂದು ವಾರ ಅಥವಾ ಹತ್ತು ದಿವಸದಲ್ಲಿ ಮತ್ತೆ ಮೊದಲಿನ ಆರೋಗ್ಯ ಸ್ಥಿತಿಗೆ ತರುತ್ತೇನೆ ಇನ್ನು ಹದಿನೈದು ದಿನದಲ್ಲಿ ನಾವು ಚಿತ್ತೂರಿಗೆ ಹಿಂತಿರುಗಿ ನಮ್ಮ ಕೆಲಸಕ್ಕೆ ತೊಡಗೋಣ"

"ನಾನು ಚಿತ್ತೂರಿಗೆ ಹೋಗಲ್ಲ" ಅವರ ಮಾತು ನನಗೆ ಹೆಚ್ಚು ಕಡಿಮೆ ಕೇಳಿಸುತ್ತಲೇ ಇರಲಿಲ್ಲ.

"ಈಗಲ್ಲ ಮಹಾಪ್ರಭು. ನಿಮಗೆ ಚೆನ್ನಾಗಿ ಗುಣವಾದ ಮೇಲೆ ಸ್ವಲ್ಪ ತಡೆದು. ನಾವು ನಮ್ಮ ಹಣಕಾಸಿನ ಬಗ್ಗೆ ವಿಚಾರ ಮಾಡಬೇಕು. ನಾವು ಬಾದಷಹನೊಂದಿಗೆ ಯಾವುದಾದರೂ ಒಂದು ರೀತಿಯ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿಂದ ಇನ್ನೊಂದು ಅಥವಾ ಎರಡು ವರ್ಷ ಅವನ ಜೊತೆ ನಾವು ಸ್ನೇಹದಿಂದ ಇರೋಣ ಎಂದು ನನ್ನ ಅಭಿಪ್ರಾಯ. ಮುಂದಿನ ಜುಲೈ, ಆಗಸ್ಟ್ ಹೊತ್ತಿಗೆ ನಮಗೆ ನಮ್ಮ ಯುದ್ಧ ಫಿರಂಗಿಗಳು ಬಂದಿರುತ್ತವೆ. ಒಂದಾರು ತಿಂಗಳು ಅಥವಾ ಒಂದು ವರ್ಷ ಅವುಗಳ ಮತ್ತು ಬಂದೂಕುಗಳ ಅಭ್ಯಾಸ ಮಾಡಿಕೊಳ್ಳುವುದು ಮತ್ತು ನಮ್ಮ ಸೇನಾ ಪಡೆಗಳ ವ್ಯೂಹವನ್ನು ಯಾವ ರೀತಿಯಲ್ಲಿ ರಚಿಸಬೇಕು ಎಂಬ ಬಗ್ಗೆ ಸ್ವಲ್ಪ ಗಾಢವಾಗಿ ಪುನರಾಲೋಚನೆ ಮಾಡೋಣ. ಆ ಮೇಲೆ ಬಾಬರನೊಂದಿಗೆ ಹೋರಾಡಲು ನಾವು ಸಿದ್ಧ".

ನಾನು ಯಾರನ್ನು ಹುರಿದುಂಬಿಸಲು ಪ್ರಯತ್ನಿಸುತ್ತಿದ್ದೆ. ತಂದೆಯವರನ್ನೋ ನನ್ನನ್ನೋ? ಇಷ್ಟಾದರೂ ನಾನಾಡಿದ ಪ್ರತಿಯೊಂದು ಮಾತನ್ನೂ ಉದ್ದೇಶಪಟ್ಟೇ ಆಡಿದ್ದೆ.

"ನಾನು ಹೇಳಿದ್ದು ನಿನಗೆ ಕೇಳಿಸಲಿಲ್ಲವೆ?" ಮಹಾಪ್ರಭುಗಳು ನನ್ನ ವಿಷಯಕ್ಕೆ ಸಿಡಿಮಿಡಿಗೊಂಡಂತಿತ್ತು. "ಬಾದಷಹನನ್ನು ಸೋಲಿಸದ ಹೊರತು ನಾನು ಚಿತ್ತೂರಿಗೆ ಹೋಗುವುದಿಲ್ಲ".

ನಾನು ಬಹಳ ಕಷ್ಟಪಟ್ಟು ನಗುವುದನ್ನು ತಡೆದುಕೊಂಡೆ. "ನಾವು ವಾಪಸ್ ಹೋಗಬೇಕಾಗಿರುವುದು ಅದಕ್ಕೋಸ್ಕರವೇ. ನಾವು ಈಗ ನಮ್ಮ ತೌರಿನಲ್ಲಿರಬೇಕು. ರಾಣಾ ಅವರು ತಮ್ಮ ಪ್ರಭುತ್ವದ ಸಕಲ ಅಧಿಕಾರ, ಗೌರವ ಮತ್ತು ಪ್ರಭುತ್ವದ ಅಂಗಗಳೊಂದಿಗೆ ತಮ್ಮ ಸಿಂಹಾಸನದ ಮೇಲಿರಬೇಕು. ಆಗಲೇ ನಾವು ನಮ್ಮೆಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಮೊಗಲ್ ಆಕ್ರಮಣಕಾರಿಯ ಮೇಲೆ ನಾವು ನಮ್ಮ ಮುಂದಿನ ಆಕ್ರಮಣ ಮಾಡಲು ಸಾಧ್ಯ".

"ಈ ಹೊತ್ತು ಮಧ್ಯಾಹ್ನ ನನಗೆ ಪ್ರಜ್ಞೆ ಬಂದಾಗ, ನಮ್ಮ ಮಿತ್ರರ ಎದುರು ನಾನೊಂದು ಪ್ರತಿಜ್ಞೆ ಮಾಡಿದ್ದೇನೆ".

"ಈಗ ನಾವು ಅದನ್ನು ಮುರಿಯೋಣ. ಅದನ್ನು ಯಾರೂ ನಿಮ್ಮ ಮುಖಕ್ಕೇ ಹಿಡಿಯುವುದಿಲ್ಲ. ಹೇಳಿ ಕೇಳಿ ನೀವು ಆಘಾತಕ್ಕೆ ಒಳಗಾಗಿದ್ದಿರಿ ಮತ್ತು ತುಂಬ ರಕ್ತ ಹೋಗಿತ್ತು".

"ನಿನಗೆ ಅರ್ಥ ಆಗುವುದಿಲ್ಲವೆ?" ಅವರು ತಮ್ಮ ತಲೆಯನ್ನು ಅತ್ತ ತಿರುಗಿಸಿದರು. "ಊರಿನಲ್ಲಿ ನಾನು ಯಾರಿಗೂ ಮುಖ ತೋರಿಸುವುದಕ್ಕಾಗುವುದಿಲ್ಲ."

"ಮೇವಾಡ ಹೊಡೆತ ತಿಂದಿರುವುದು ಇದೇ ಮೊದಲನೆಯ ಸಲವೂ ಅಲ್ಲ ಮತ್ತದು ಕೊನೆಯದೂ ಆಗುವುದಿಲ್ಲ. ಬಾಬರನನ್ನೇ ನೋಡಿ. ಅವನದ್ದು ಸೋಲಿನ ಜೀವನ ಯಾತ್ರೆ. ಆದರೆ ತನ್ನ ವಿಧಿ ಮತ್ತು ಭಾಗ್ಯಗಳು ತನ್ನ ಅದೃಷ್ಟವನ್ನು ಬದಲಾಯಿಸುವವರೆಗೂ ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸಿದನು".

"ನಾನು ಊರಿಗೆ ಹೋಗುವುದಿಲ್ಲ"

"ನೀವೀಗ ವಿಶ್ರಾಂತಿ ತೆಗೆದುಕೊಳ್ಳಿ, ಅದರ ಬಗ್ಗೆ ನಾವು ನಾಳೆ ಮಾತನಾಡೋಣ".

ಮೊದಲಿಗೆ ಬಾಸ್ವಾದಲ್ಲಿದ್ದದ್ದು ಸ್ವಲ್ಪ ನಿರುತ್ಸಾಹದ, ಕೆಲವೊಮ್ಮೆ ವ್ಯಾಕುಲದ ಮನಃಸ್ಥಿತಿ. ಆದರೆ ಒಂದು ಸಣ್ಣ ಸ್ಥಳದಲ್ಲಿ ಅಷ್ಟೊಂದು ಜನ ಇರುವಂಥದ್ದೇ ಅದಕ್ಕೊಂದು ಚಟುವಟಿಕೆಯ, ಉದ್ದೇಶದ ತೋರಿಕೆಯನ್ನು ತಂದು ಕೊಟ್ಟಿತ್ತು. ಈಗ ಇದ್ದಕ್ಕಿದ್ದಂತೆ ಬಾಸ್ವಾ ನಿಗೂಢವಾದ ಭಯವನ್ನು ಹುಟ್ಟಿಸುವ ರೀತಿಯಲ್ಲಿ ಶಾಂತವಾಗಿ ಬಿಟ್ಟಿದೆ. ರಾಯ್ ಅವರ ರಾಜಧಾನಿಯು ಬಾಬರನ ಆಕ್ರಮಣಕ್ಕೊಳಗಾಗುವ ಭೀತಿ ಇದೆ ಎಂಬ ಸುದ್ದಿ ನಮಗೆ ಬಂದದ್ದರಿಂದ ನನ್ನ ಮಾವ ಮೇದಿನಿರಾಯ್ ಅವರು ಚಂಡೇರಿಗೆ ಧಾವಿಸಬೇಕಾಯಿತು. ದೆಹಲಿಯ ಬಾದಷಹನು, ಸಣ್ಣ ಸಣ್ಣ ಸಾಮ್ರಾಜ್ಯಗಳನ್ನು ಮತ್ತು ಸಂಸ್ಥಾನಗಳನ್ನು ವಶಪಡಿಸಿಕೊಳ್ಳುತ್ತ ವೇಗವಾಗಿ ಸಾಗಿ ಹೋಗುತ್ತಿದ್ದನು. ಹಾಗಾಗಿ ಮುಂದೆ ಯಾರ ಮೇಲೆ ಅವನು ಆಕ್ರಮಣ ಮಾಡಿಯಾನೆಂಬ ವಿಷಯದಲ್ಲಿ ಸಕಷ್ಟು ಅನಿಶ್ಚಿತತೆ ಇತ್ತು. ನಮ್ಮ ಮಿತ್ರ ರಾಜ್ಯಗಳಾದ ಅಂಬರ್, ಜೋಧ್‌ಪುರ, ಸಿರೋಹಿಗಳ ಮುಖ್ಯಸ್ಥರೆಲ್ಲ ಬಾಬರನು ತಮ್ಮ ಕಡೆಗೆ ತನ್ನ ಗಮನವನ್ನು ತಿರುಗಿಸಬಹುದೆಂಬ ಭೀತಿಯಿಂದ ಹೆಚ್ಚು ಕಡಿಮೆ. ರಾತ್ರಿಯೋ ರಾತ್ರಿಯೇ ತಮ್ಮ ತಮ್ಮ ರಾಜಧಾನಿಗಳಿಗೆ ಹೊರಟುಬಿಟ್ಟರು.

ಬಾಸ್ವಾದಲ್ಲಿ ನಾವು ಕೇವಲ ಮೂವತ್ತು ಜನರಿದ್ದೆವು: ತಂದೆಯವರು, ನಾನು ಮಹಾಪ್ರಭುಗಳಿಗೆ ಲಗತ್ತಾಗಿದ್ದ. ಇಪ್ಪತ್ತು ಜನ ಕಾವಲು ಸಿಬ್ಬಂದಿಯ ಉನ್ನತ ಭದ್ರತಾ ದಳದ ಮುಖ್ಯಸ್ಥರಾದ ರಾವತ್ ರಾಮಸಿಂಹ. ಯೋಧರು ಕರ್ತವ್ಯದ ಮೇಲಿಲ್ಲದೆ ಇದ್ದಾಗ, ಇಸ್ಪೀಟಾಡುತ್ತಾರೆ ಚದುರಂಗದಾಟ ಆಡುತ್ತಾರೆ, ಇಲ್ಲವೆ ನಿದ್ದೆ ಮಾಡುತ್ತಾರೆ. ಆದರೆ ಅವರ ನೈತಿಕ ಸ್ಥೈರ್ಯ ಉತ್ಸಾಹ ಪೂರ್ಣವಾಗೇನೂ ಇಲ್ಲ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ನನ್ನ ಹಾಗೆಯೇ ಯೋಧರು ಮನೆಗೆ ಹೋಗಲಿಚ್ಛಿಸುತ್ತಾರೆ. ನಮ್ಮೆಲ್ಲರಿಗೂ ಅದೇ ಅಸ್ವಸ್ಥತೆಯ ಬೇಸರದ ಜಡ್ಡು ಹಿಡಿದಿತ್ತು.

ಕೆಲವು ದಿನಗಳ ಹಿಂದೆ ನಮ್ಮ ತಾಯಿ ರಾಣಾ ಅವರ ಜೊತೆಯಲ್ಲಿದ್ದು, ಅವರನ್ನು ನೋಡಿಕೊಳ್ಳುವುದಕ್ಕೋಸ್ಕರ ಬಾಸ್ವಾಕ್ಕೆ ಬರುತ್ತಿರುವುದಾಗಿ ಪತ್ರ ಬರೆದರು. ತಂದೆಯವರು, ಆಕೆ ಬಾಸ್ವಾದಲ್ಲಿ ಬೇರೆ ಯಾರದೋ ಅರಮನೆಯನ್ನು ನೋಡಿಕೊಳ್ಳುವುದಕ್ಕಿಂತ, ಚಿತ್ತೂರಿನಲ್ಲೇ

ಇದ್ದುಕೊಂಡು, ತನ್ನ ಮನೆಯನ್ನು ನೋಡಿಕೊಳ್ಳುವುದನ್ನೇ ತಾನು ಇಷ್ಟಪಡುತ್ತೇನೆಂಬ ಎಂಬ ಸೌಜನ್ಯ ರಹಿತವಾದ ಟಿಪ್ಪಣಿಯನ್ನು ಕಳಿಸಿದರು.

ಒಂದು ತಿಂಗಳು ಕಳೆದಿದೆ. ಇನ್ನೂ ನಾನು ತಂದೆಯವರನ್ನು ಚಿತ್ತೂರಿಗೆ ಹಿಂತಿರುಗುವಂತೆ ಮನವೊಲಿಸಲಾಗಿಲ್ಲ.

"ಸಾಮ್ರಾಜ್ಯದ ಆಡಳಿತ, ಪೌರ, ಸೇನೆ ಮತ್ತು ಆರ್ಥಿಕ ವ್ಯವಹಾರಗಳನ್ನು ಯಾರು ನೋಡಿಕೊಳ್ಳುತ್ತಾರೆ? ಒಂದು ಸಾರ್ವಭೌಮ ರಾಷ್ಟ್ರ ಪ್ರಭುವಿಲ್ಲದೆ ವ್ಯವಹರಿಸಲಾರದು ಮತ್ತು ವ್ಯವಹರಿಸಬಾರದು".

"ಪ್ರಧಾನ ಮಂತ್ರಿಯವರು ಮತ್ತು ಮಂಗಳ್ ಇಬ್ಬರೂ ಮೇವಾಡವನ್ನು ನೋಡಿಕೊಳ್ಳಲು ಅತ್ಯಂತ ಸಮರ್ಥರು. ಯಾರೇ ಆದರೂ, ಅವನು ರಾಜಕುಮಾರನೇ ಆಗಲಿ, ಇಲ್ಲ ದಟ್ಟದರಿದ್ರನೇ ಆಗಲಿ ಅನಿವಾರ್ಯನಲ್ಲ".

"ಮಂಗಳ್ ಹೆಚ್ಚು ಕಡಿಮೆ ಪ್ರತಿದಿನವೂ ಹರಿಕಾರನನ್ನು ಕಳಿಸುತ್ತ ಹಿಂತಿರುಗಬೇಕೆಂದು ಹೇಳುತ್ತಿದ್ದಾನೆ. ತಾವು ಅವನ ವರದಿಗಳನ್ನು ಓದುತ್ತಾ ಇದ್ದೀರಾ ಮಹಾಪ್ರಭು? ರಾಜಧಾನಿಯಲ್ಲಿ ಒಂದು ಗಂಭೀರ ತೊಂದರೆ ಶುರುವಾಗುತ್ತಿದೆ. ವಿಕ್ರಮಾದಿತ್ಯ ಮತ್ತು ಮಹಾರಾಣಿ ಕರ್ಮವತಿ ಇಬ್ಬರೂ ಪ್ರಧಾನಿ ಪೂರಣ್ ಮಲ್‌ಜೀಯವರನ್ನು ಅಧಿಕಾರದಿಂದ ಕೆಳಗಿಳಿಸುವ ಮಾತನಾಡುತ್ತಿದ್ದಾರೆ. ತಾವು ಈ ಕೂಡಲೇ ಚಿತ್ತೂರಿನಲ್ಲಿ ಕಾಣಿಸಿಕೊಂಡು, ಸಾಮ್ರಾಜ್ಯದ ಅಧಿಕಾರ ಸೂತ್ರಗಳನ್ನು ನಿಮ್ಮ ಕೈಗೆ ತೆಗೆದುಕೊಳ್ಳದೆ ಹೋದರೆ, ಆಗ ತೀರಾ ತಡವಾಗುತ್ತದೆ".

"ತೀರಾ ತಡ ಯಾತಕ್ಕೆ?"

"ಯುದ್ಧ ಮುಗಿದು ವಾರಗಳೇ ಕಳೆದು ಹೋಗಿವೆ. ನಿಮ್ಮ ಪ್ರಜೆಗಳು, ನೀವು ಯಾತಕ್ಕೆ ಹಿಂತಿರುಗುತ್ತಿಲ್ಲ ಮತ್ತು ಅಧಿಕಾರ ವಹಿಸಿಕೊಳ್ಳುತ್ತಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಲಾರರು. ಪೂರಣ್ ಮಲ್‌ಜೀಯವರು ಮುದುಕರೂ ಅಶಕ್ತರೂ ಆಗಿದ್ದಾರೆ. ಎಂದಿಗಿಂತ ಹೆಚ್ಚಾಗಿ ಈಗ ಮೇವಾಡಕ್ಕೆ ಒಂದು ದೃಢವಾದ ವಿವೇಕದ ಮಾರ್ಗದರ್ಶನ ಅಗತ್ಯವಿದೆ. ಆದರೆ ಅದರ ಬದಲಿಗೆ ಈಗ ಅವರಿಗೆ ಸಿಕ್ಕಿರುವುದು ಒಂದು ಖಂಡುಗ ವದಂತಿಗಳು ಮತ್ತು ತಮಗೆ ಮುಂದೇನು ಕಾದಿದೆಯೋ ಎಂಬ ಭಯ. ಸಾಮ್ರಜ್ಯದ ಆಡಳಿತಯಂತ್ರ ಪೂರ್ತಿ ಕುಸಿದು ಬೀಳುವುದಕ್ಕೆ ಮುಂಚೆ ನೀವು ಅಲ್ಲಿಗೆ ಹೋಗಬೇಕು".

"ನಾನು ಅಲ್ಲಿಗೆ ಹೋಗಬೇಕೆಂದು ನೀನು ಹೇಳಲು ಇದೇ ನಿಜವಾದ ಕಾರಣವೆ? ನಾನು ಅಧಿಕಾರ ವಹಿಸಿಕೊಳ್ಳುವುದು ನಿನಗೆ ಇಷ್ಟ ಅಂತಲೋ ಅಥವಾ ನೀನು ನಿನಗಾಗಿ ಅದನ್ನು ರಕ್ಷಿಸಿಕೊಳ್ಳಲು ಬಯಸುತ್ತಿರುವೆಯೋ?"

"ತಾವು ಮಹಾಪ್ರಭುಗಳು, ಆ ಕಾರಣದಿಂದಲೇ ತಾವು ಹೋಗಲೇಬೇಕು ಮತ್ತು ತಮ್ಮ ಅಧಿಕಾರವನ್ನು ವಹಿಸಿಕೊಳ್ಳಬೇಕು. ನನಗೆ ರಾಜ್ಯಾಧಿಕಾರ ಬೇಕು ಎನ್ನುವುದು ನಿಜ. ನಾನು ಜೇಷ್ಠ ಪುತ್ರ ಮತ್ತು ಖಚಿತ ಉತ್ತರಾಧಿಕಾರಿ (ಮಹಾರಾಜ್‌ಕುಮಾರ್). ಅದು ತಮ್ಮಿಂದ ನನಗೆ ಬರುತ್ತದೆ. ಆದರೆ ತಾವು ತಮ್ಮ ಪೂರ್ಣಾಯುಷ್ಯವನ್ನು ಸವೆಸಿದ ಮೇಲೆ ಹಾಗೂ ಬಾದಷಹನನ್ನು ಹಿಂದೂ ಕುಶ್ ಪರ್ವತಕ್ಕೆ ವಾಪಸ್ ಓಡಿಸಿದ ಮೇಲೆ ಬಹಳ ಕಾಲದ ನಂತರ".

ತಂದೆಯವರಿಗೆ ಏನಾಗಿತ್ತು? ಅವರು ಯುದ್ಧ ಭೂಮಿಯಲ್ಲಿ ಆನೆಯ ಮೇಲಿಂದ ಬಿದ್ದು ಪ್ರಜ್ಞಾ ಹೀನರಾದಾಗ ಆದ ಗಾಯ ಮತ್ತು ತಲೆಗೆ ಆದ ಪೆಟ್ಟಿನ ಪರಿಣಾಮವೇ ಇದು? ಅಥವಾ ಅವರು ತಮ್ಮ ಧೈರ್ಯ ಕಳೆದುಕೊಂಡಿದ್ದಾರೆಯೆ? ಮೇವಾಡದ ಜನ ತನ್ನನ್ನು ಲೇವಡಿ ಮಾಡುತ್ತಾರೆಂದು ಅವರು ನಿಜಕ್ಕೂ ಭಾವಿಸಿದರೆ? ಒಂದು ವೇಳೆ ಅವರು ಲೇವಡಿ ಮಾಡಿದರೂ ಬಾಡಿಗೆಯ ಮನುಷ್ಯರೇನಿದ್ದರೂ ಗಿಳಿಗಳು. ಅವರೇನಿದ್ದರೂ ಹೇಳಿಕೊಟ್ಟಷ್ಟನ್ನು ಹೇಳುತ್ತಾರೆ ಎಂಬುದು ಅವರಿಗೆ ಗೊತ್ತಿಲ್ಲವೆ? ಕಾಲ ಮೀರಿ ಹೋಗುತ್ತಾ ಇದೆ ಎನ್ನುವುದು ನನಗೆ ಗೊತ್ತಿರುವುದರಿಂದ, ಈಗ ತಂದೆಯವರ ವಿಷಯಕ್ಕೆ ನಾನು ಬಹಳ ಬೇಗ ಕೆರಳುತ್ತೇನೆ ಮತ್ತು ಅಸಹನೆ ಇದೆ. ಆದರೆ ಅದು ನಾನೊಬ್ಬ ಮೊದ್ದು ಮತ್ತು ಅವಿವೇಕಿ ಎಂಬ ವಸ್ತು ಸತ್ಯವನ್ನು ತಗ್ಗಿಸುವುದಿಲ್ಲ. ಅವರು ಭಯಂಕರ ಸೋಲನ್ನನುಭವಿಸಿದ್ದಾರೆ ಹಾಗಾಗಿ ಅವರ ಉತ್ಸಾಹ ನುಚ್ಚುನೂರಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

* * *

ಎರಡು ದಿನಗಳ ನಂತರ, ಲೀಲಾವತಿಗೆ ಪತ್ರ ಬರೆಯಲು ಕುಳಿತೆ. ಆ ಪತ್ರ ಬರೆಯಲು ಒಂದು ತಿಂಗಳು ತೆಗೆದುಕೊಂಡಿದ್ದೆ. ಅಂತೂ ಕೊನೆಗೂ ಬರೆಯಲು ಕುಳಿತೆ. ಯುದ್ಧಕ್ಕೆ ಮುಂಚೆ ನಾನು ಸ್ವಲ್ಪ ಭಾವೋದ್ವೇಗಕ್ಕೆ ಒಳಗಾಗಿದ್ದಿರಬೇಕು. ಆದರೆ ಒಂದು ವಿಷಯದಲ್ಲಿ ನನ್ನ ಮನಸ್ಸು ಬದಲಾಗಿಲ್ಲ. ಬಾದಷಹನು ನಮಗೆ ಸೋಲಿನ ಹೊರೆಯನ್ನು ಹೊರಿಸಿದಾಗ್ಯೂ ಆಕೆಗೆ ನಾನು ಬೇಕೆಂದಾದರೆ, ನಾವು ಜೊತೆಯಾಗಿ ಬಾಳತೊಡಗಬಹುದು. ಏನೇ ಆದರೂ ಅದು ಅಷ್ಟು ಸುಲಭವಂತೂ ಅಲ್ಲ. ಅವಳು ತನ್ನ ಗಂಡನಿಗೇನು ಹೇಳುವಳು? ಅವಳು ಓಡಿಹೋಗುವಳೆ? ನಮ್ಮ ಉದ್ದೇಶ ಗೊತ್ತಾದ ಕ್ಷಣವೇ ಅವಳ ಮುತ್ತಾತ ಬಹುಶಃ ರಾಜೀನಾಮೆ ಸಲ್ಲಿಸುತ್ತಾರೆ. ನನ್ನ ವಿಷಯಕ್ಕಾದರೆ ಅದು ಸರಿ. ನಾವು ಅವರಿಗೆ ಅಷ್ಟೊಂದು ಹಣ ಕೊಡಬೇಕಾಗಿದೆ. ಪ್ರಾಯಶಃ ಅದನ್ನು ಕೈ ಬಿಡಲಾಗುತ್ತದೆ. ಲೀಲಾವತಿ ಅವರ ಕಾರ್ಯಭಾರವನ್ನು ವಹಿಸಿಕೊಳ್ಳಬಹುದು. ತಮಾಷೆಯ ಮಾತಲ್ಲ. ಅದು ತುಂಬಾ ಕಷ್ಟವಾಗುತ್ತದೆ. ಬಹುಮಟ್ಟಿಗೆ ದುಸ್ತರವೇ. ರಜಪೂತ ರಾಜಕುಮಾರನೊಬ್ಬನಿಗೆ ಈ ಪ್ರಕರಣದಲ್ಲಿ ಮಹಾರಾಜ್‌ಕುಮಾರ್– ಇನ್ನೊಬ್ಬರ ಹೆಂಡತಿಯನ್ನು ಮದುವೆಯಾಗಲು ಅವಕಾಶ ನೀಡಲಾಗಿತ್ತೆ? ಅದಕ್ಕಿಂತ ಮುಖ್ಯವಾದ್ದೆಂದರೆ ಮಹಾರಾಜ್‌ಕುಮಾರ್ ಎನಿಸಿಕೊಂಡ ವ್ಯಕ್ತಿ ತನಗಿಂತ ಕಡಿಮೆ ಅಂತಸ್ತಿನ ಅದೂ ಒಬ್ಬ ಜೈನ ಮಾರವಾಡಿಯ ಮಗಳನ್ನು ಮದುವೆಯಾಗಬಹುದೆ? ಇಲ್ಲ. ಅದನ್ನು ಯೋಚನೆ ಮಾಡಲೂ ಸಾಧ್ಯವಿಲ್ಲ. ಹಾಗಿದ್ದ ಮೇಲೆ ನಾವೇ ಒಂದು ಪೂರ್ವ ನಿದರ್ಶನವನ್ನು ಸಿದ್ಧಪಡಿಸಬೇಕು. ಮಹಾಪ್ರಭುಗಳ ಅನುಮೋದನೆಯ ಪ್ರಶ್ನೆಯಂತೂ ಇದ್ದೇ ಇದೆ. ಆಮೇಲೆ ಮಹಾರಾಣಿ ಕರ್ಮವತಿ ಇದ್ದಾರೆ. ಆದರೆ ಕೊನೆಯದರ ಬಗ್ಗೆ ನಾನು ಚಿಂತೆ ಮಾಡಬೇಕಾದ್ದಿಲ್ಲ. ಲೀಲಾವತಿ ರಾಣಿಗಿಂತ ಒಂದು ಕೈ ಮಿಗಿಲಾದವಳು.

ಈ ಒಂದು ಪ್ರಣಯದ ಗೆರೆ ಇದ್ದಕ್ಕಿದ್ದಂತೆ ನನ್ನಲ್ಲಿ ಹೇಗೆ ಕಾಣಿಸಿಕೊಂಡಿತು? ಹದಿಹರೆಯದ ಯುವಕನಂತೆ ನಾನೇಕೆ ವಿಚಿತ್ರ ಕಲ್ಪನೆಗಳಲ್ಲಿ ವಿಹರಿಸುತ್ತಿದ್ದೆ? ನನಗೇನು ಬುದ್ಧಿ ಕೆಟ್ಟಿದೆಯೆ? ಅದು ಇನ್ನು ಮುಖ್ಯವೆನಿಸುವುದೇ ಇಲ್ಲ. ಇಷ್ಟರಲ್ಲೇ ಒಂದು ದಿನ ನಾನು ದೊರೆಯಾಗುವೆ. ನನಗೆ ಕೇವಲ ನನ್ನ ಮನೆಯನ್ನು ನಿಭಾಯಿಸಿಕೊಂಡು ನನ್ನ ಮಕ್ಕಳಿಗೆ ತಾಯಿಯಾಗಬಲ್ಲಂಥವಳಷ್ಟೇ ಅಲ್ಲ. ಸಾಮ್ರಾಜ್ಯದ ಆರ್ಥಿಕತೆಯ ನಿಗಾ ನೋಡಿಕೊಂಡು ಮೇವಾಡದ ರಾಣಿಯಾಗಿಯೂ ಇರಬಲ್ಲಂಥ ಒಬ್ಬ ಹೆಣ್ಣಿನ ಅಗತ್ಯವಿತ್ತು.

ತಂದೆಯ ಹೆಜ್ಜೆಯ ಸಪ್ಪಳ ಕೇಳಿಸಿತು. "ನಾಡಿದ್ದು ಬೆಳಿಗ್ಗೆ ಏಳು ಗಂಟೆಗೆ ನಾವು ಚಿತ್ತೂರಿಗೆ ಹೊರಡೋಣ ಮಹಾರಾಜ್‌ಕುಮಾರ್. ಅಲೆದಾಡಿದ್ದು, ಅಲ್ಲಿ ಇಲ್ಲಿ ಠಳಾಯಿಸಿದ್ದು ಸಾಕಾಯಿತು. ಹಾಸಿಗೆಯಲ್ಲಿ ಬಿದ್ದು ಕೊಂಡಿರುವುದೇ ಒಂದು ರೋಗವಾಗಿ ಬಿಟ್ಟಿರುವಂಥ ರೋಗಿ ಆಗಿದ್ದೀನಿ ನಾನು. ನೀನು ಹೇಳಿದ ಹಾಗೇನೇ ನಾವು ಕೆಲಸದಲ್ಲಿ ತೊಡಗಿಕೊಳ್ಳಬೇಕು".

ಮಹಾರಾಜ್‌ಕುಮಾರ್, ಮಹಾಪ್ರಭುಗಳ ಬಾಯಿಂದ ಆ ಶಬ್ದಗಳನ್ನು ಕೇಳಲು ಅದೆಷ್ಟು ವರ್ಷ ನಾನು ಕಾದಿದ್ದೆ?

"ನಾಳೆ ಸಾಯಂಕಾಲದ ಹೊತ್ತಿಗೆ ಇಲ್ಲಿಂದ ಹೊರಡುವುದಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಟ್ಟಿರಲು ನಾನು ರಾಮಸಿಂಹನಿಗೆ ಹೇಳುತ್ತೇನೆ".

ನಾನು ಭದ್ರತಾ ಕಾವಲು ಪಡೆಯ ಮುಖ್ಯಸ್ಥ ರಾವತ್ ರಾಮಸಿಂಹನನ್ನು ಕರೆದು ರಾಣಾ ಅವರ ನಿರ್ಧಾರದ ಬಗ್ಗೆ ತಿಳಿಸಿದೆ. ಅವನ ಗೆರೆಗಟ್ಟಿದ ಮುದಿ ಮುಖದಲ್ಲಿ ನಗೆ ಚಿಮ್ಮಿತು.

"ಮಹಾಪ್ರಭುಗಳ ಮನಸ್ಸು ಮೊದಲಿನ ಹಾಗೆ ಆಗಿರುವುದಕ್ಕೆ ಶ್ರೀ ಏಕಲಿಂಗಜೀಗೆ ನಮಸ್ಕಾರ ಹೇಳಬೇಕು. ಕಾಬೂಲಿನ ಆ ದೊರೆಗೆ ನಾವು ಈಗಲೂ ಒಂದು ಪಾಠ ಕಲಿಸೋಣ".

"ದೆಹಲಿಯ ದೊರೆ" ಎಂದು ನಾನು ಅವನಿಗೆ ನೆನಪಿಸಿದೆ. "ಹೆಚ್ಚು ಕಾಲ ಇರುವುದಿಲ್ಲ. ಮಹಾಪ್ರಭುಗಳು ಬೇಗನೆ ಅವನನ್ನು ಅವನ ಪರ್ವತಗಳ ಅಡಗು ತಾಣಕ್ಕೆ ಅಟ್ಟುವರು".

ಇಷ್ಟು ಹೊತ್ತಿಗೆ ರಕ್ಷಣಾ ಸಿಬ್ಬಂಧಿಯವರೆಲ್ಲ ನಮ್ಮ ಸುತ್ತ ಸೇರಿ ಬಿಟ್ಟಿದ್ದರು. ಅದು ಹೇಗಿತ್ತು ಅಂದರೆ ಈಗಾಗಲೇ ನಾವು ಬಾಬರನನ್ನು ನಾಶಮಾಡಿ ಬಿಟ್ಟಿದ್ದೇವೇನೋ ಎನ್ನುವ ಹಾಗೆ. "ಮಹಾಪ್ರಭುಗಳು ಚಿರಾಯುವಾಗಲಿ, ಮೇವಾಡ ಚಿರಾಯುವಾಗಲಿ" ಎಂದು ಅವರುಗಳು ಮತ್ತೆ ಮತ್ತೆ ಘೋಷಿಸಿದರು. ಅಷ್ಟು ಹೊತ್ತಿಗೆ ರಾಣಾ ಅವರು ಉಪ್ಪರಿಗೆಯಲ್ಲಿ ಕಾಣಿಸಿಕೊಂಡು ಅವರಿಗೆ ಕೈ ಬೀಸಿದರು.

* * *

ಕಳೆದ ನಾಲ್ಕು ದಿನಗಳಲ್ಲಿ ಮಂಗಳನು ಒಂದು ಶಬ್ದವನ್ನೂ ಬರೆದಿಲ್ಲ. ಯಾರ ಮೂಲಕವೂ ಒಂದು ಮಾತನ್ನು ಹೇಳಿ ಕಳಿಸಿಲ್ಲ. ಮೂರು ಸಾಲಿನ ಒಂದು ಟಿಪ್ಪಣಿಯೇ ಇದ್ದರೂ ಸರಿ, ಅವನು ಒಂದು ಪತ್ರ ಕಳಿಸಿಕೊಡುತ್ತಾನೆ ಮತ್ತು ಪ್ರತಿದಿನವೂ ಒಂದು ವರದಿ ಕಳಿಸಿಕೊಡುತ್ತಾನೆ. ಅವನು ಚೆನ್ನಾಗಿ ಇದ್ದಾನೆಯೆ? ಕಳೆದ ಕೆಲವು ವಾರಗಳಲ್ಲಿ, ರಾಣಿ ಕರ್ಮವತಿ ಮತ್ತು ಕಿರಿಯ ಸಂತಳ ನಡುವಣ ಸಂಬಂಧ ತೀರಾ ಮುರಿಯುವ ಹಂತಕ್ಕೆ ಬಂದು ಬಿಟ್ಟಿದೆ. ಬದುಕು ಪ್ರತಿದಿನ ನೂರು ಸಂಗತಿಗಳನ್ನು ಕಲಿಸುತ್ತದೆ. ನಾನಾದರೋ ಅವುಗಳಲ್ಲಿ ತೊಂಬತ್ತೊಂಬತ್ತನ್ನು ಮರಯುತ್ತೇನೆ. ಕೆಲವೊಮ್ಮೆ ನೂರನ್ನೂ. ಯಾವುದೇ ವಿಷಯಗಳನ್ನೇ ಆದರೂ, ಆದ ಹಾಗೆ ಎಂದು ಭಾವಿಸಿಕೊಂಡು ಬಿಡಬಾರದೆಂಬುದನ್ನು ಮರೆತೆ. ಎಲ್ಲಕ್ಕಿಂತ ಕಡಿಮೆಯದಾದ ಅಧಿಕಾರ ಮತ್ತು ದೊಡ್ಡದರ ಶಾಶ್ವತತೆಯನ್ನು ಹಾಗೆ ಭಾವಿಸಿಕೊಂಡು ಬಿಡಬಾರದೆಂಬುದನ್ನು ಮರೆತೆ. ನನ್ನ ಹೆಂಡತಿ ಚಿತ್ತೂರಿನಲ್ಲಿ ಅಷ್ಟೇ ಏಕೆ, ಮೇವಾಡದಲ್ಲೇ ಎರಡನೇ ಅತಿದೊಡ್ಡ ಪ್ರಭಾವೀ ವ್ಯಕ್ತಿ. ಅಷ್ಟೇ ಅಲ್ಲ ಆಕೆ ಧಾರ್ಮಿಕ ಅಥವಾ ಲೌಕಿಕ ಯಾವುದೇ ಸಂಗತಿಗಳಲ್ಲಾದರೂ ಆಕೆ ತನ್ನದೇ ದಾರಿ ಹಿಡಿಯಬಹುದು. ಹದಿನೈದು ದಿನಗಳ ಹಿಂದೆ ಆಕೆ ಬೃಂದಾವನಿ ದೇವಸ್ಥಾನಕ್ಕೆ ಸಂಜೆಯ ಆರತಿಗೆ ಹೋದಳು. ದೇವಸ್ಥಾನದ ಬಾಗಿಲು ಹಾಕಿದ್ದನ್ನು ಕಂಡಳು. ರಾಣಿ ಕರ್ಮವತಿ ಮತ್ತು ಕಿರಿಯ ಸಂತಳು, ಸಂತಪದವಿಯನ್ನು ಗಳಿಸಿಕೊಂಡ ಮೇಲೆ ಹಾಗೂ ಜನತೆಯ ನಿಷ್ಠೆಯನ್ನು

ಪಡೆದುಕೊಂಡ ಮೇಲೆ ಅವಳನ್ನು ದ್ವೇಷಿಸುತ್ತಿದ್ದ ಪೂಜಾರಿಗಳು ಒಂದಾಗಿ ರಾಣಿಯೊಂದಿಗೆ ಕೈಜೋಡಿಸಿದ್ದರು. ದೇವಸ್ಥಾನದ ಶಿಖರವು ಕುಸಿದು ಬೀಳಲಿರುವುದರಿಂದ, ಕೃಷ್ಣ ಭಕ್ತರಿಗೆ ಅದರಲ್ಲೂ ಮುಖ್ಯವಾಗಿ ಕಿರಿಯ ಸಂತಳಿಗೆ ಅಪಾಯವಿದೆ ಎಂದು ಹೇಳಿದ್ದರು. ಆಧ್ಯಾತ್ಮದ ಬಹುದೊಡ್ಡ ಭಂಡಾರವಾದ, ಕಿರಿಯ ಸಂತಳ ಜೀವವನ್ನು ರಕ್ಷಿಸುವುದು ತಮ್ಮ ಕರ್ತವ್ಯ. ಹಾಗಾಗಿ ಮುಂದೆ ತಿಳಿಸುವವರೆಗೆ ದೇವಸ್ಥಾನದ ಪ್ರವೇಶವನ್ನು ಎಲ್ಲರಿಗೂ ನಿಷೇಧಿಸಲಾಗಿತ್ತು.

ರಾಣಿ ಕರ್ಮವತಿ ನನ್ನ ಶತ್ರುವಾಗದೆ ಮಿತ್ರಳಾಗಿದ್ದರೆ ಹೇಗಿತ್ತು ಎಂದು ಭಾವಿಸಿದೆ. ಯಾವುದೇ ಅಡಚಣೆಯನ್ನು ನಿವಾರಿಸಿಕೊಂಡು ಶೀಘ್ರವಾಗಿಯೋ, ತಡವಾಗಿಯೋ ಅಂತೂ ಸಿಂಹಾಸನವನ್ನು ನಾನು ಪಡೆದುಕೊಳ್ಳುವುದನ್ನು ಆಕೆ ಖಚಿತಪಡಿಸಿಕೊಳ್ಳುತ್ತಿದ್ದಳು. ಬೃಂದಾವನಿ ದೇವಸ್ಥಾನ ಬಹಳಷ್ಟು ರೀತಿಯಲ್ಲಿ ದುರಸ್ತಿಗೊಳಪಟ್ಟು ಅದರ ಅಕ್ಕಪಕ್ಕದ ಕಟ್ಟಡಗಳು ಮತ್ತು ಆವರಣ ಏಳುಪಟ್ಟು ವಿಸ್ತಾರಗೊಂಡು ಇನ್ನೂ ಒಂದು ವರ್ಷ ಕೂಡ ಆಗಿಲ್ಲ. ಈಗ ಇದ್ದಕ್ಕಿದ್ದಂತೆ ದೇವಸ್ಥಾನ ಸುರಕ್ಷಿತವಲ್ಲ ಅಂತ ಅವರಿಗನ್ನಿಸಿಬಿಟ್ಟಿತೆ. ಬೇಷ್! ನನ್ನ ಮಲತಾಯಿ! ಈ ಮಧ್ಯೆ ಈಗ ದೇವಸ್ಥಾನದ ರಚನೆಯಲ್ಲಿ ಸಮಸ್ಯೆ ಇದೆ ಎಂದು ಕಂಡುಹಿಡಿದು ದೇವಸ್ಥಾನವನ್ನು ಮುಚ್ಚಬೇಕು ಎಂದು ಆದೇಶ ಮಾಡಿದ ಕಟ್ಟಡದ ಶಿಲ್ಪಿ ಯಾರಿದ್ದಾನು? ನನ್ನ ಮಿತ್ರ ಸಾಹಸಮಲ್ ಈಗ ಆ ಪಕ್ಷವನ್ನು ಸೇರಿರುವಂತಿದೆ. ಬಹುಶಃ ರಾಣಿ ಕರ್ಮವತಿಯು ತನ್ನ ವಿಜಯಗಳನ್ನು ಮೆರೆಯಲು ರಾಣಾ ಕುಂಭ ಕಟ್ಟಿಸಿದ ವಿಜಯಸ್ತಂಭಕ್ಕಿಂತ ಎತ್ತರದ ವಿಜಯಸ್ತಂಭವನ್ನು ಕಟ್ಟಿಸಲು ಅವನಿಗೆ ವಹಿಸಿಕೊಡಬಹುದು.

ಈ ಮಧ್ಯೆ ನನ್ನ ಹೆಂಡತಿಯು ತನ್ನ ಪ್ರಿಯತಮನ ಜನ್ಮಸ್ಥಳವಾದ ಮಥುರಾಕ್ಕೆ ಹೋಗಿದ್ದಾಳೆ.

ಅಧ್ಯಾಯ 49

ಆ ದಿನ ಮಧ್ಯಾಹ್ನ ಮಹಾಪ್ರಭುಗಳನ್ನು ಭೇಟಿಯಾಗಲು ಏಳು ಜನರ ಒಂದು ತಂಡ ಮೇವಾಡದಿಂದ ಬಂದಿತು. ಅವರ ಒಡನಾಟ ಮತ್ತು ಅವರು ತೋರಿಸಿದ ಆಸಕ್ತಿಯಿಂದ ತಂದೆಯವರಿಗೆ ತುಂಬ ಸಂತಸವಾಯಿತು. ಬಾಸ್ವಾವನ್ನು ಆಳುವ ರಾವ್ ಹಿಮ್ಮತ್ ಸಿಂಹ ಒಳ್ಳೆ ಆತಿಥೇಯ, ಬಹಳ ಸೌಜನ್ಯಶೀಲ ವ್ಯಕ್ತಿ. ತಂದೆಯವರಿಗೆ ತಾನು ರಾವ್ ಹಿಮ್ಮತ್ ಸಿಂಹನ ಸುಖ ಸಂತೋಷಕ್ಕೆ ಅಡ್ಡಿಯಾಗಿದ್ದೇನೆಂಬ ಭಾವನೆ ಬರದೆ ಇರಲಿ ಎಂದು ಆತ ಬಾಸ್ವಾದಿಂದ ಹತ್ತು ಮೈಲಿ ದೂರದ ಊರಿನ ಒಂದು ಸಣ್ಣ ಅರಮನೆಗೆ ಹೋಗಿ ಬಿಟ್ಟಿದ್ದಾನೆ. ಇಷ್ಟಾದರೂ ಈ ಬಾಸ್ವಾ ಒಂದು ಹಾಳೂರೇ. ರಾವ್ ಹಿಮ್ಮತ್ ಸಿಂಹನು ತಂದೆಯವರಿಗೆ ಎಲ್ಲ ಅನುಕೂಲವಾಗಿದೆಯೋ ಹೇಗೆ, ಅವರಿಗೆ ಯಾವುದರ ಕೊರತೆಯೂ ಇಲ್ಲವೋ ಹೇಗೆ ಎಂದು ಖಚಿತಪಡಿಸಿಕೊಡಲು ದಿನವೂ ಇಲ್ಲಿಗೆ ಕುದುರೆಯ ಬೆನ್ನೇರಿ ಬರುತ್ತಾನೆ. ದುರದೃಷ್ಟವಶಾತ್, ತಂದೆಯವರಿಗೆ ಇರುವ ಒಂದೇ ಒಂದು ಕೊರತೆಯನ್ನು ನಾನಾಗಲಿ ರಾವ್ ಹಿಮ್ಮತ್ ಸಿಂಹ್ ಆಗಲಿ ಹೋಗಲಾಡಿಸಲು ಸಾಧ್ಯವಿಲ್ಲ. ತಂದೆಯವರಿಗೆ ಅವರ ಸ್ನೇಹಿತರು ಮತ್ತು ಸಂಗಡಿಗರು ಬೇಕು. ಲವಲವಿಕೆಯ ಮಾತುಕತೆ. ಸಡಗರದ ಓಡಾಟ ಬೇಕು. ಸ್ತ್ರೀಯರ ನಿಕಟತೆ, ಖನುವಾದಲ್ಲಿ ಆದಂಥ ಅನಾಹುತದ ದುರಂತದಿಂದ ಅವರ ಮನಸ್ಸನ್ನು ಬಹುದೂರ ಕೊಂಡೊಯ್ಯುವಂಥದ್ಯಾವುದಾದರೂ ಸರಿ ಅಂಥದು ಬೇಕು. ಮುಚ್ಚುಮರೆ ಇಲ್ಲದೆ ನೇರವಾಗಿ ಹೇಳಬೇಕೆಂದರೆ ಸಾಮೂಹಿಕ ಕಗ್ಗೊಲೆಯ ಇಲ್ಲವೆ ಸೋಲಿನ ಆಳ ಅಗಲಗಳನ್ನು ನಾನಿನ್ನೂ ಗ್ರಹಿಸಲು ಸಾಧ್ಯವಾಗಿಲ್ಲ.

ಮೇವಾಡದ ಕಡೆಯಿಂದಾದ ಈ ಅನಿರೀಕ್ಷಿತ ಧಾಳಿಯಿಂದ ನಾನು ಸ್ವಲ್ಪ ಮಟ್ಟಿಗೆ ಆಶ್ಚರ್ಯಚಕಿತನಾಗಿದ್ದೇನೆಂದು ಒಪ್ಪಲೇಬೇಕು. ಇಷ್ಟು ವಾರಗಳೂ ಇವರೆಲ್ಲ ಎಲ್ಲಿದ್ದರು? ಇದ್ದಕ್ಕಿದ್ದಂತೆ ಈ ವೈಯಕ್ತಿಕ ಕಾಳಜಿ ಮತ್ತು ಉತ್ಸುಕತೆ ಎಲ್ಲ ಯಾತಕ್ಕೆ? ನಮ್ಮ ಅತಿಥಿಗಳ ವಿಷಯದಲ್ಲಿ ಹೀಗೆ ಹೇಳುವುದು ಧರ್ಮವಲ್ಲ. ಅವರು ಹೆಚ್ಚು ಕಡಮೆ ಇಲ್ಲಿಗೆ ಬಂದ ಕೂಡಲೇ ತಮ್ಮ ಭೇಟಿಯ ಉದ್ದೇಶವನ್ನು ವಿವರಿಸಿದ್ದರು. ಮಹಾಪ್ರಭುಗಳು ಅವರೊಂದಿಗೆ ಚಿತ್ತೂರಿಗೆ ತೆರಳಬೇಕೆಂಬುದು ಅವರ ಇಷ್ಟ.

ರಾವ್ ಭೂಪತ್ ಸಿಂಹ, ರಾವತ್ ಮಾಣಿಕ್ ಭಾನ್ ಮತ್ತು ಉಳಿದ ಐದು ಜನರು ಆಸ್ಥಾನದಲ್ಲಿ ನನ್ನ ಅಚ್ಚುಮೆಚ್ಚಿನವರೇನಲ್ಲ. ಒಂದರ್ಥದಲ್ಲಿ ಅವರು ನಂಬಿಕೆಗರ್ಹರು. ಅವರು ಯಾರ ಸಂಗ ಬೆಳೆಸುತ್ತಾರೋ ಅಥವಾ ಯಾರ ಸಂಗ ತ್ಯಜಿಸುತ್ತಾರೋ ಎಂಬುದರ ಮೇಲಿನಿಂದ ಗಾಳಿ ಯಾವ ಕಡೆ ಬೀಸುತ್ತಿದೆ ಎಂಬುದು ನಿಮಗೆ ಯಾವಾಗಲೂ

ತಿಳಿಯುತ್ತೆ. ನನ್ನಷ್ಟಕ್ಕೆ ನಾನೇ ಮುಖ ಸೊಟ್ಟಗೆ ಮಾಡಿಕೊಂಡು ನೋಡಿಕೊಂಡೆ. ಮಹಾಪ್ರಭುಗಳು ಚಿತ್ತೂರಿಗೆ ಹೋಗುವ ಪರವಾಗಿ ಇರಬೇಕಾಗಿದೆ.

ಭೂಪತ್, ಸಿಂಹ ತಂದೆಯವರಿಗೆ ಹೇಳಿದರು "ನಾವು ತಮ್ಮಿಂದ 'ಇಲ್ಲ' ಅಂತ ಹೇಳಿಸಿಕೊಳ್ಳುವುದಿಲ್ಲ ಮಹಾಪ್ರಭೂ. ನಾಳೆ ನಿಮ್ಮನ್ನು ನಮ್ಮೊಂದಿಗೆ ಕರೆದೊಯ್ಯುತ್ತಿದ್ದೇವೆ". ಚಿತ್ತೂರಿನಲ್ಲಿ ಎಲ್ಲರೂ ತಮಗಾಗಿ ತವಕದಿಂದ ಕಾದಿದ್ದಾರೆ ಎಂದು ತಿಳಿದು ತಂದೆಯವರಿಗೆ ತುಂಬ ಸಂತಸವಾಯಿತು.

"ನಾಳೆ ಅಲ್ಲ. ನಾಳೆ ಸಾಯಂಕಾಲ ಇಲ್ಲಿಗೆ ಭೇಟಿಕೊಡಲಿರುವ ನನ್ನ ಆತಿಥೇಯನಿಗೆ ನಾನು ಧನ್ಯವಾದಗಳನ್ನು ಹೇಳಬೇಕಾಗಿದೆ. ಆದರೆ ನಾಡಿದ್ದಾದರೆ ಆಗಬಹುದು. ನಾನು ಚಿತ್ತೂರಿಗೆ ವಾಪಸಾಗಲೇ ಬೇಕಾದ್ದು ವಿಧಿ ಲಿಖಿತ. ಈಗ ಕೇವಲ ಒಂದು ಗಂಟೆಯ ಹಿಂದೆ ತಾನೆ ಮಹಾರಾಜ್ ಕುಮಾರ್‌ಗೆ ನಾವು ಇನ್ನೊಂದೆರಡು ದಿನದಲ್ಲಿ ಊರಿಗೆ ಹೊರಡುತ್ತಾ ಇದ್ದೀವಿ ಎಂದು ಹೇಳಿದೆ".

"ಅದರ ಸಲುವಾಗಿ ನಾವು ಮದ್ಯ ಸೇವಿಸೋಣ ಮಹಾಪ್ರಭು. ದಾರಿಯಲ್ಲಿ ಬರುತ್ತಿರಬೇಕಾದರೆ ರಾವತ್ ಮಾಣಿಕ್, ಭಾನ್ ಒಂದು ಜಿಂಕೆಯನ್ನು, ಮುಖ್ಯವಾಗಿ ನಿಮಗೋಸ್ಕರವೇ ಹೊಡೆದಿದ್ದಾರೆ. ನಿಮಗೆ ಹೇಗೂ ಜಿಂಕೆ ಮಾಂಸ ಅಂದರೆ ಪಂಚಪ್ರಾಣ ಅಲ್ಲವೆ?"

ತಂದೆಯವರು ಈಗ ಬಹಳ ಉಲ್ಲಾಸದಿಂದಿದ್ದರು. ಭೂಪತ್ ಸಿಂಹರ ಭುಜದ ಮೇಲೆ ಕೈಯಿಟ್ಟು ಹೇಳಿದರು. "ಅದು ಬಹಳ ಭೇಷ್ ಆಯಿತು. ನೀವು ಅದನ್ನು ಜ್ಞಾಪಕ ಇಟ್ಟುಕೊಂಡಿದ್ದಿರಿ ಎಂಬ ಮಾತಿನಿಂದ ನನ್ನ ಹೃದಯ ತುಂಬಿ ಬಂದಿದೆ".

"ಹಾಗಿದ್ದ ಮೇಲೆ ನಾವು ಮತ್ತೆ ನಿಮ್ಮನ್ನು ತುಂಬಿಸುತ್ತೇವೆ" ಭೂಪತ್ ಸಿಂಹನಿಗೆ ತನ್ನ ಮಾತಿನ ಶ್ಲೇಷೆ ಬಹಳ ಮುದ ನೀಡಿದಂತೆ ಕಂಡಿತು "ನಿಮಗೆ ತುಂಬ ಪ್ರಿಯವಾದ ಮದ್ಯವನ್ನು ತಂದಿದ್ದೇವೆ".

ಸೇವಕರು ಮಧು ಪಾತ್ರೆಗಳನ್ನು ತಂದರು. ಮಾಣಿಕ್ ಭಾನ್ ನಮ್ಮೆಲ್ಲರಿಗೂ ಮದ್ಯಗಳನ್ನು ತುಂಬಿದರು.

"ಮಹಾಸ್ವಾಮಿ ಮಹಾರಾಜ್‌ಕುಮಾರ್ ಅವರೇ, ಈ ಹೊತ್ತು ರಾತ್ರಿಯ ಭೋಜನ ಕೂಟದ ಎರಡನೇ ಗೌರವಾನ್ವಿತ ಅತಿಥಿ ನೀವೇ ಎನ್ನುವುದನ್ನು ನಾನು ಹೇಳಲೇಬೇಕಾಗಿಲ್ಲ".

ನಮ್ಮ ವಯೋಮಾನ ಬೇರೆ ಬೇರೆ ಆದದ್ದರಿಂದ, ಕ್ಷಮಿಸಿ ನಾನು ಬರುವುದಿಲ್ಲ ಎಂದು ಹೇಳುವ ಯೋಚನೆ ಮಾಡುತ್ತಿದ್ದೆ. ಇಲ್ಲ, ಅದಲ್ಲ ಕಾರಣ. ನನಗೆ ಹೊಗಳು ಭಟ್ಟರ ಸಂಗ ಇಷ್ಟವಾಗುವುದಿಲ್ಲ ಮತ್ತು ಈ ಏಳು ಜನರ ಗುಂಪು ನನ್ನ ಇಷ್ಟಕ್ಕೆ ತೀರಾ ವಿರುದ್ಧವಾಗಿ ಅದನ್ನು ಹೆಚ್ಚಾಗಿಯೇ ಮಾಡುತ್ತಿದ್ದರು. ಅದೃಷ್ಟವಶಾತ್ ನನಗೊಂದು ಸರಿಯಾದ ಒಳ್ಳೆಯ ಕಾರಣವೇ ಇತ್ತು. "ಅದು ನನಗೆ ತುಂಬ ಇಷ್ಟವಾಗುತ್ತಿತ್ತು. ಇಲ್ಲಿ ಊರಿನವರ ಜೊತೆಯಲ್ಲಿ ಈ ಸಂಜೆ ತಿರುಗಾಡಲು ಬರುತ್ತೇನೆ ಮತ್ತು ಆ ಮೇಲೆ ಅವರ ಜೊತೆ ಊಟ ಮಾಡುತ್ತೇನೆ ಎಂದು ಹೇಳಿ ಅವರಿಗೆ ಮಾತು ಕೊಟ್ಟಿದ್ದೇನೆ."

ಅವರು ನಿಜಕ್ಕೂ ನಿರಾಶರಾದಂತೆ ಕಂಡರು. "ನಾವು ನಿಮಗೋಸ್ಕರ ಒಂದು ಸ್ವಲ್ಪ ಜಿಂಕೆ ಮಾಂಸ ಇಟ್ಟಿರುತ್ತೇವೆ. ನೀವು ವಾಪಸ್ ಬಂದಾಗ ಅದನ್ನೊಂದು ಚೂರು ರುಚಿ ನೋಡಬಹುದು. ಅದೃಷ್ಟವಶಾತ್ ಈಗಿನ್ನೂ ಶೀತದ ಹವಾಗುಣ ಇದೆ. ಹಾಗಾಗಿ ಜಿಂಕೆ ಮಾಂಸವನ್ನು ಕಡೇ ಪಕ್ಷ ಒಂದೆರಡು ದಿನ ಹಾಳಾಗದೆ ಇಟ್ಟಿರಬಹುದು".

"ಧನ್ಯವಾದಗಳು. ಅದು ನಿಮ್ಮ ಕೃಪೆ".

"ರಾವತ್ ರಾವ್ ಸಿಂಹ ಅವರೆ, ನಿಮಗೆ ಯಾವುದೂ ಮೊದಲೇ ನಿಗದಿ ಪಡಿಸಿದ ಕಾರ್ಯಕ್ರಮ ಇಲ್ಲ ಎಂದು ಭಾವಿಸುತ್ತೇನೆ".

"ನನ್ನ ಏಕೈಕ ಕಾರ್ಯಕ್ರಮವೆಂದರೆ ನನ್ನ ಪ್ರಭುಗಳ ಪಕ್ಕದಲ್ಲಿ ಇರುವುದು. ಉನ್ನತ ಭದ್ರತಾ ದಳದ ಮುಖ್ಯಸ್ಥ ಅದನ್ನು ಸ್ವಲ್ಪ ಆಡಂಬರದಿಂದ ಹೇಳಿದರೂ, ಅವನ ಮಾತಿನಲ್ಲಿನ ಪ್ರಾಮಾಣಿಕತೆಯನ್ನು ಶಂಕಿಸುವಂತಿರಲಿಲ್ಲ".

"ಬಹಳ ಶ್ರೇಷ್ಠವಾದ ಮಾತುಗಳು ರಾವತ್. ಸೈನಿಕ ಶಾಲೆಯಲ್ಲಿ (ಮಿಲಿಟರಿ ಅಕಾಡೆಮಿ) ನಾನು ಮತ್ತು ಭದ್ರತಾ ದಳದ ಮುಖ್ಯಸ್ಥ ಇಬ್ಬರೂ ಒಂದೇ ತಂಡದಲ್ಲಿದ್ದೆವು ಎಂದು ತಮಗೆ ಗೊತ್ತಿತ್ತೆ ಮಹಾಪ್ರಭು?"

"ಹೌದು ನನಗೆ ಸ್ಪಷ್ಟವಾಗಿ ನೆನಪಿದೆ. ನಾನು ನಿಮಗಿಂತ ಎರಡು ವರ್ಷ ಹಿಂದಿದ್ದೆ". ತಂದೆಯವರ ಮುಖ ತುಂಟತನದಿಂದ ನೆರಿಗೆಗಟ್ಟಿತು. "ಜೊತೆಗೆ ನೀವು ನಮ್ಮ ತಂದೆ ರಾಣಾ ಅವರ ಹತ್ತಿರ ಹೋಗಿ ನಾನು ಶಾಲೆಯಲ್ಲಿರಬೇಕಾದ ಹೊತ್ತಿನಲ್ಲಿ ಹುಣಿಸೇ ತೋಪಿನಲ್ಲಿ ಯಾರೋ ಸೂಳೆಯ ಸೀರೆ ಒಳಗಡೆ ಮೈ ಬಿಸಿ ಮಾಡಿಕೊಳ್ಳುತ್ತಾ ಇದ್ದೆ ಅಂತ ಚಾಡಿ ಹೇಳಿದ್ದರಿಂದ ನನಗೆ ಬಿದ್ದ ಹೊಡೆತ ಕೂಡ ಜ್ಞಾಪಕ ಇದೆ".

ಭೂಪತ್ ಸಿಂಹನ ಮುಖ ಕೆಂಪಾಯಿತು. ಮುಖ್ಯಸ್ಥ ಮಧ್ಯೆ ಬಾಯಿ ಹಾಕಿ "ಅದು ಯಾತಕ್ಕೆ ಅಂದರೆ, ತಾವು ಇದ್ದ ಕಡೇನೇ ಅವರು ಬಿಡಾರ ಹೂಡಬೇಕೆಂದಿದ್ದರು".

"ನನ್ನ ಗುಟ್ಟುಗಳನ್ನೆಲ್ಲ ರಟ್ಟುಮಾಡಿದ್ದಕ್ಕೆ ನಿನಗೆ ನಾಚಿಕೆಯಾಗಬೇಕು ರಾವತ್ ಸಿಂಹ". ಭೂಪತ್ ಸಿಂಹ ತನ್ನ ಮನಸ್ಸಿನ ಸ್ತಿಮಿತತೆಯನ್ನು ಮತ್ತೆ ಚೆನ್ನಾಗಿಯೇ ಪಡೆದುಕೊಂಡಿದ್ದನು. "ಈ ಹೊತ್ತು ರಾತ್ರಿ ನಾವು ಅದೆಂಥ ಹಬ್ಬ ಮಾಡುತ್ತಿದ್ದೀವಿ ಅಂದರೆ ತಾವು ಜೀವಮಾನ ಪರ್ಯಂತ ಅದನ್ನು ನೆನಪಿಟ್ಟುಕೊಂಡಿರುವಿರಿ". ಅವನು ಕಿಟಕಿ ಹತ್ತಿರ ಹೋಗಿ ಭದ್ರತಾ ಸಿಬ್ಬಂದಿಗೆ ಜೋರಾಗಿ ಕೂಗಿ ಹೇಳಿದನು– "ಯಾರಲ್ಲಿ ನೀವು ಒಂದು ಒಲೆ ಗುಂಡಿ ಅಗಿಯಿರಿ. ನಾನು ಈ ಹೊತ್ತು ಮೇವಾಡದಲ್ಲೇ ಉತ್ಕೃಷ್ಟವಾದ ಜಿಂಕೆ ಮಾಂಸವನ್ನು ಬೇಯಿಸುತ್ತೇನೆ. ನೀವೆಲ್ಲರೂ ಊಟಕ್ಕೂ, ಮದ್ಯಸೇವನೆಗೂ ಬರಬಹುದು. ನಾವು ಮಹಾಪ್ರಭುಗಳ ಚಿತ್ತೂರಿನ ಸದ್ಯದ ಮರುಪ್ರಯಾಣವನ್ನು ಸಂಭ್ರಮದಿಂದ ಆಚರಿಸೋಣ".

ಸಾಯಂಕಾಲ ಭಾರೀ ಅಬ್ಬರದ ಭೋಜನ ಕೂಟವಾಗಲಿದೆಯೆಂದು ನನಗೆ ಕಂಡಿತು.

"ಚಿತ್ತೂರು ಅಂದ ಕೂಡಲೇ ನೆನಪಾಯಿತು. ಪ್ರಧಾನಮಂತ್ರಿ ಪೂರಣ್ ಮಲ್ ಜೀ ಮತ್ತು ಮಂಗಳ ಸಿಂಹ ಹೇಗಿದ್ದಾರೆ?" ನಾನು ನನ್ನ ಕೊಠಡಿಗೆ ಹೋಗುತ್ತಿದ್ದಾಗ ಕೇಳಿದೆ.

"ನಿಜಕ್ಕೂ ಬಹಳ ಚೆನ್ನಾಗಿದ್ದಾರೆ, ಬಹಳ ಚೆನ್ನಾಗಿ. ಮಹಾಪ್ರಭುಗಳನ್ನೂ ನಿಮ್ಮನ್ನು ಕಾಣುವ ನಿರೀಕ್ಷೆಯಲ್ಲಿದ್ದಾರೆ".

* * *

ಭವಾಯ್ ಜನಪದ ನಾಟಕ ಬಹಳ ಅಬ್ಬರದಿಂದ ಕೂಡಿತ್ತು. ಅನೇಕ ವರ್ಷಗಳಿಂದ ನಾನು ಅಷ್ಟೊಂದು ನಕ್ಕಿರಲಿಲ್ಲ. ನಮ್ಮ ಜನಪದ ರಂಗಭೂಮಿಗಳಲ್ಲಿ ಯಾವಾಗಲೂ ಬರುವ ಹಾಗೆ ದೇವರುಗಳು, ಉಲ್ಲಾಸದಿಂದ ಕಣ್ಣಿಗೆ ಮಂಕು ಬೂದಿ ಎರಚುವುದಕ್ಕೆ ಬಂದರು. ಅದರ ಜೊತೆಗೆ, ಒಂದು ರಾಜಕೀಯ ವಿಡಂಬನೆ ಇತ್ತು. ಅದು ಪ್ರಾಸಂಗಿಕವಾಗಿ ನನ್ನನ್ನೂ ಮಹಾಪ್ರಭುಗಳನ್ನೂ ಒಳಗೊಂಡಿತ್ತು. ನಾವಿಬ್ಬರೂ ಕೆಲಸವಿಲ್ಲದ ನಿರುದ್ಯೋಗಿಗಳು. ಕೆಲಸಕ್ಕಾಗಿ ಬಹಳ ಹತಾಶರಾಗಿ ಕಾಯುತ್ತಿದ್ದೆವು. ಅಡಿಗೆ ಭಟ್ಟರಾಗಿ, ಅಗಸರ

ಕುದುರೆಯಾಳುಗಳಾಗಿ, ಕಟ್ಟಡ ಕಾರ್ಮಿಕರಾಗಿ, ಚಿನಿವಾರರಾಗಿ, ಬಡಗಿಗಳಾಗಿ ಹೀಗೆ ಯಾವುದೇ ಕೆಲಸಕ್ಕೆ ನಾವು ನಾಲಾಯಕ್ಕು. ಕಾರಣ ನಮಗೆ ಯಾವುದೇ ರೀತಿಯ ಕೆಲಸದ ಕೌಶಲವಿರಲಿಲ್ಲ. ಹಾಗೂ ನಮ್ಮ ಕೈಗಳು ಯಾವಾಗಲೂ ಗಲ್ಲಾ ಪೆಟ್ಟಿಗೆಯಲ್ಲಿರುತ್ತಿದ್ದವು. ಅಂತಿಮವಾಗಿ ನಮಗೆ ಅಗತ್ಯವಾಗಿರುವುದಕ್ಕಿಂತಲೂ, ಇಲ್ಲವೆ ನಾವು ನಿಭಾಯಿಸಲು ಸಾಧ್ಯವಿದ್ದುದಕ್ಕಿಂತಲೂ ಹೆಚ್ಚು ಜನ ಹೆಂಡಂದಿರು ಮತ್ತು ಹೆಂಗಸರು ಇದ್ದರೆಂಬುದನ್ನು ಪತ್ತೆ ಹಚ್ಚಲಾಯಿತು. ಹಾಗಾಗಿ ನಮ್ಮ ರಾಜ್ಯದ ಪ್ರಜೆಗಳು ನಮ್ಮನ್ನು ತಲೆ ಹಿಡುಕರ ಕಸಬಿನಲ್ಲಿ ತೊಡಗಿಸಬಹುದು.

ಆ ಊರಿನ ಮುಖ್ಯಸ್ಥನ ಕಛೇರಿಯಲ್ಲಿ ಊರಿನ ಪ್ರಮುಖರೊಂದಿಗೆ ಕುಳಿತು ಊಟ ಮಾಡುತ್ತಿದ್ದೆ. ಆಗ ಸೇವಕನೊಬ್ಬನು ಬಂದು ನನ್ನ ಭೇಟಿಗೆ ಯಾರೋ ಬಂದಿದ್ದಾರೆಂದು ತಿಳಿಸಿದನು.

"ಅವನಿಗೆ ಕಾಯುವುದಕ್ಕೆ ಹೇಳು ಇನ್ನೈದು ನಿಮಿಷದಲ್ಲಿ ನಾನು ಇಲ್ಲಿಂದ ಹೊರಡುತ್ತೀನಿ".

ಆ ಸೇವಕ ಮರುಕ್ಷಣವೇ ವಾಪಸ್ ಬಂದು "ಅವನು ಅದು ಬಹಳ ತುರ್ತಿನದು ಎನ್ನುತ್ತಿದ್ದಾನೆ" ಎಂದನು. ನನ್ನ ಆತಿಥೇಯರು ನನ್ನ ಜೊತೆಯಲ್ಲೇ ಹೊರ ಬಂದರು. ಆಗ ಕತ್ತಲೆ ಇತ್ತು. ಆ ಮನುಷ್ಯನ ಮುಖ ಕಾಣಲಿಲ್ಲ. ಅವನು ದೀರ್ಘ ದಂಡ ನಮಸ್ಕಾರ ಮಾಡಿ ನನ್ನ ಪಾದಗಳನ್ನು ಸ್ಪರ್ಶಿಸಿದನು.

"ಘನತೆವೆತ್ತ ದೊರೆಗಳೇ ತಮ್ಮ ಊಟಕ್ಕೆ ಅಡ್ಡಿಪಡಿಸಿದ್ದಕ್ಕೆ ದಯವಿಟ್ಟು ಕ್ಷಮಿಸಬೇಕು"

ಅವನ ಮಾತಿನ ಉಚ್ಚಾರಣಾ ರೀತಿ ಸ್ಪಷ್ಟವಾಗಿ ಚಿತ್ತೂರಿನ ಅಧಿಕಾರಿಗಳ ಹಾಗಿತ್ತು. ಮಹಾಪ್ರಭುಗಳ ಭೇಟಿಗೆ ಬಂದಿರುವ ಏಳು ಜನರ ಬಂಟನೆ ಇವನು? ನಾನು ಅವನೊಂದಿಗೆ ಗಡುಸಾಗಿದ್ದೆ.

"ಏನದು?"

"ನನ್ನ ಹೆಸರು ಈಶ್ವರ ಸಿಂಹ. ನಾನು ಚಿತ್ತೂರಿನಿಂದ ಬಂದಿದ್ದೇನೆ".

"ಹಾಗಿದ್ದ ಮೇಲೆ ನೀನು ಯಾಕೆ ನನಗೆ ಬಾಸ್ವಾ ಅರಮನೆಯಲ್ಲಿ ಕಾಯಲಿಲ್ಲ?"

"ನಾನು ಹಳ್ಳಿಯವನೊಬ್ಬನನ್ನು ಯಾವ ಕಡೆ ಹೋಗಬೇಕು ಎಂದು ಕೇಳಿದೆ. ತಾವು ಇಲ್ಲಿದ್ದೀರಿ ಎಂದು ಅವನು ಹೇಳಿದ. ಮಹಾಸ್ವಾಮಿ, ನಾನು ತಮ್ಮೊಂದಿಗೆ ಏಕಾಂತದಲ್ಲಿ ಮಾತಾಡಬಹುದೆ?"

ಈಗ ಅವನು ಮೊದಲಿಗಿಂತ ಸ್ವಲ್ಪ ಸರಿಯಾಗಿ ಕಾಣುತ್ತಾ ಇದ್ದ. ಅವನ ಬಟ್ಟೆಗಳು ಕೊಳಕಾಗಿದ್ದವು. ಅವನ ಮುಖದ ಮೇಲಿನ ಧೂಳು ಮತ್ತು ಬೆವರು ಒಣಗಿ ಅದು ಮಣ್ಣಿನ ಕಂದು ಬಣ್ಣಕ್ಕೆ ತಿರುಗಿತ್ತು. ಅವನು ಪೇಟವನ್ನು ತೋಳಿಗೆ ಸುತ್ತಿಕೊಂಡಿದ್ದನು. ಅವನ ಕಾಲುಗಳು ನಡುಗುತ್ತಿದ್ದುವು. ನಾನು ಅವನನ್ನು ಹಿಡಿದು ನಿಲ್ಲಿಸಬೇಕಾಯಿತು. ಪೇಟದ ಬಟ್ಟೆ ಒದ್ದೆಯಾಗಿ ಅಂಟಂಟಾಗಿತ್ತು. ಅವನು ತೋಳಿಗೆ ಕಟ್ಟಿಕೊಂಡ ಪಟ್ಟಿಯಲ್ಲಿ ಮತ್ತು ಅವನ ಚಹರೆಯಲ್ಲಿ ಏನೋ ಒಂದು ಬಗೆಯ ನಾಟಕೀಯತೆ ಇತ್ತು.

ಈ ಮನುಷ್ಯ ನನಗೆ ಏನು ಸಂದೇಶ ತಂದಿರಬಹುದು? ಅವನು ನಿಜಕ್ಕೂ ಒಬ್ಬನೇ ಇದ್ದನೆ? ನನ್ನನ್ನು ಪಿಗ್ಗಿ ಬೀಳಿಸಲಾಗುತ್ತಿದೆಯೆ? ಅವನ ಕುದುರೆ ಎಲ್ಲಿ? ಇಷ್ಟು ವಾರಗಳ ನಂತರ ಚಿತ್ತೂರಿನಿಂದ ಇಷ್ಟೊಂದು ಜನರ ಒಳಪ್ರವಾಹ ಹೇಗೆ ಸಾಧ್ಯವಾಯಿತು? ನಾನು ಪಟ್ಟಿಯನ್ನು ಬಿಚ್ಚಿ ಅವನ ಗಾಯವನ್ನು ಪರೀಕ್ಷಿಸಿದೆ. ಗಾಯವಾಗಿರುವುದು ನಿಜ.

ರಕ್ತ ಉಕ್ಕಿತು. ಅವನು ಅದನ್ನು ಹೊರ ಚೆಲ್ಲಿದನು. ಗ್ರಾಮಸ್ಥರು ಅವನನ್ನು ಮನೆಯೊಳಕ್ಕೆ ಕರೆದೊಯ್ದರು.

"ದಯವಿಟ್ಟು ಸ್ವಲ್ಪ ಬಿಸಿ ನೀರು ತನ್ನಿ. ಆಮೇಲೆ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ಹೋಗಿ".

ಅವನ ತೋಳಿನಲ್ಲಿ ಆಳವಾದ ಕತ್ತರಿಸಿದ ಗಾಯವಾಗಿತ್ತು. ಅದು ಖಡ್ಗದಿಂದ ಆದ ಗಾಯವೆಂಬುದು ಸ್ಪಷ್ಟವಿತ್ತು. ನಾನು ಅವನ ಪೇಟವನ್ನು ಬಿಚ್ಚಿದೆ. ಅವನ ಅಂಗಿಯ ತೋಳನ್ನು ಹರಿದು ತೆಗೆದು ಅವನ ಗಾಯ ಮತ್ತು ಮುಖವನ್ನು ತೊಳೆದೆ.

'ನಿನ್ನನ್ನು ಯಾರು ಕಳಿಸಿದರು?' ಎಂದು ಅವನು ಕಣ್ಣು ತೆರೆದಾಗ ನಾನು ಕೇಳಿದೆ. ಒಂದು ವೇಳೆ ಅವನು ಹರಿಕಾರನೇ ಆಗಿದ್ದರೆ ಅವನ ಕಾರ್ಯೋದ್ದೇಶವನ್ನು ನಾನು ಎಷ್ಟು ಬೇಗ ತಿಳಿದರೆ ಅಷ್ಟು ಒಳ್ಳೆಯದು ಎಂದು ಭಾವಿಸಿದೆ'.

"ಶಿರಾಜ್ ಆಲಿ ಮಹಾಸ್ವಾಮಿ, ರಾವ್ ಭೂಪತ್ ಸಿಂಹ, ರಾವ್ ಮಾಣಿಕ್ ಖಾನ್ ಮತ್ತು ಇನ್ನಿತರೆ ಐದು ಜನರು ಬಾಸ್ವಾದ ಹಾದಿಯಲ್ಲಿದ್ದಾರೆ ಎಂದು ಮಹಾಪ್ರಭುಗಳಿಗೂ ತಮಗೂ ನಾನು ಎಚ್ಚರಿಸಬೇಕಿತ್ತು".

"ಮಹಾಪ್ರಭುಗಳಿಗೆ ಅಪಾಯವಿದೆ ಎಂಬುದು ಶಿರಾಜ್ ಆಲಿಯವರ ಆತಂಕವೆ?"

"ತಾವು ಎಚ್ಚರಿಕೆಯಿಂದಿದ್ದು, ಮಹಾಪ್ರಭುಗಳನ್ನು ನಿಮ್ಮ ಕಣ್ಣಿಂದ ಮರೆಯಾಗದ ಹಾಗೆ ನೋಡಿಕೊಳ್ಳಬೇಕೆಂದು ಅವರು ಹೇಳಿದರು".

"ಅದಕ್ಕೀಗ ಸ್ವಲ್ಪ ತಡವಾಯಿತು. ಮಹಾಪ್ರಭುಗಳು ಕಳೆದ ಕೆಲವಾರು ಗಂಟೆಗಳ ಕಾಲದಿಂದ ಅವರುಗಳ ಜೊತೆಯಲ್ಲಿ ಇದ್ದಾರೆ"

"ಮಹಾಪ್ರಭುಗಳ ಹಾಗೂ ತಮ್ಮ ವಿಷಯದಲ್ಲಿ ನಾನು ಕರ್ತವ್ಯ ಲೋಪ ಮಾಡಿದ್ದೇನೆ. ಅದಕ್ಕೆ ದಂಡವಾಗಿ ನನ್ನ ಜೀವವನ್ನು ತಾವು ವಶಪಡಿಸಿಕೊಳ್ಳಲು ನಾನು ಲಾಯಕ್ ಆಗಿದ್ದೇನೆ."

"ಅದನ್ನು ನಾನು ತೀರ್ಮಾನಿಸುತ್ತೇನೆ. ಈಗ ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನಷ್ಟು ಕೊಡು. ಅಷ್ಟೊಂದು ಕಾಲ ಯಾತಕ್ಕೆ ತೆಗೆದುಕೊಂಡೆ ನೀನು?"

"ರಾಜಕುಮಾರ್ ವಿಕ್ರಮಾದಿತ್ಯನ ಕಡೆಯವರು ನನ್ನ ಬೆನ್ನಟ್ಟಿ ಬಂದರು. ಅವರು ಚಂದರ್‌ನಲ್ಲಿ ನನ್ನ ಕುದುರೆಗೆ ಆಘಾತ ಮಾಡಿದರು. ಹಾಗಾಗಿ ನಾನು ಅದನ್ನು ತ್ಯಜಿಸಬೇಕಾಯಿತು".

"ನಿನ್ನ ತೋಳಿಗೆ ಗಾಯವಾದದ್ದು ಆಗಲೇ ತಾನೆ?"

"ಇಲ್ಲ ಮಹಾಸ್ವಾಮಿ ಅದು ಆಮೇಲೆ, ನಾನು ಬಾಸ್ವಾ ತಲುಪಲು ಯಾವ ಯಾವ ಗಲ್ಲಿ ಸಾಧ್ಯವೋ ಆ ಗಲ್ಲಿ ಹಿಡಿಯಲು ಹೋದಾಗ ಆದದ್ದು".

"ಮಂಗಳ್ ಸಿಂಹ ಎಲ್ಲಿದ್ದಾನೆ?"

"ನಾಲ್ಕು ದಿನಗಳ ಹಿಂದೆ ಗಂಭೀರಾ ನದಿಯಲ್ಲಿ, ಚಿತ್ತೂರಿನಿಂದ ಏಳು ಮೈಲಿ ಕೆಳಹರಿವಿನಿಲ್ಲಿ ಅವನ ದೇಹ ಪತ್ತೆಯಾಯಿತು. ಗುರುತು ಹಿಡಿಯಲಾಗದಷ್ಟು ಅದನ್ನು ಛಿದ್ರಗೊಳಿಸಲಾಗಿತ್ತು. ಅವನ ಹೆಂಡತಿ ಉಂಗುರದಿಂದ ಅವನನ್ನು ಗುರುತಿಸಿದಳು".

"ನಿನಗೆ ಧನ್ಯವಾದಗಳು ಗೆಳೆಯ. ನನಗೋಸ್ಕರ ಇಲ್ಲೇ ಕಾಯುತ್ತಾ ಇರು. ನಾನು ವಾಪಸ್ ಬರುವವರೆಗೂ ಇಲ್ಲಿಂದ ಹೊರಡಬೇಡ".

"ಇನ್ನೊಂದು ವಿಷಯ ಮಹಾಸ್ವಾಮಿ. ಮಂಗಳಸಿಂಹನು ಸಾಯುವುದಕ್ಕೆ ಒಂದು ದಿನ ಮುಂಚೆ ನಿಮ್ಮನ್ನು ಉದ್ದೇಶಿಸಿ ಬರೆದಿದ್ದ ಒಂದು ಪತ್ರವನ್ನು ಸುರಕ್ಷಿತವಾಗಿಡಬೇಕೆಂದು ಶಿರಾಜ್ ಆಲಿಯವರ ಕೈಗೆ ಕೊಟ್ಟಿದ್ದನು. ಅಕಸ್ಮಾತ್ ತನಗೇನಾದರೂ ಆದರೆ ಶಿರಾಜ್ ಆಲಿಯವರು ಇದನ್ನು ತಮಗೆ ಒಪ್ಪಿಸಬೇಕೆಂದು ತಿಳಿಸಿದ್ದನು".

ಆ ಪತ್ರವನ್ನು ತೆಗೆದು ಜೇಬಿಗಿರಿಸಿದೆ. ಸಂದೇಶವಾಹಕನಿಗೆ ಊಟ ನೀಡಲು ನನ್ನ ಆತಿಥೇಯರಿಗೆ ತಿಳಿಸಿದೆ.

ಜಗತ್ತಿನ ರೀತಿ ನೀತಿಗಳು ನನಗೆ ಗೊತ್ತು, ಒಳಿತು ಕೆಡುಕುಗಳನ್ನು ನಾನು ಚೆನ್ನಾಗಿ ಪರೀಕ್ಷಿಸಿ ನೋಡಿದ್ದೇನೆ. ಹಾಗಾಗಿ ನನಗೆ ಯಾವುದೂ ವಿಸ್ಮಯವನ್ನುಂಟು ಮಾಡಲಾರದು ಎಂದು ಎಲ್ಲೋ ನನ್ನ ಹೃದಯದಲ್ಲಿ ನಾನು ಭಾವಿಸಿದ್ದೆ. ಮನುಷ್ಯ ಸ್ವಭಾವದ ಬಗ್ಗೆ ನನಗೆ ಏನೇನೂ ತಿಳಿದಿಲ್ಲ ಎಂಬುದು ಇದೀಗ ಸ್ಪಷ್ಟವಾಯಿತು. ನಾನು, ಅದು ಹೇಗೆ ಅಷ್ಟೊಂದು ಕುರುಡಾಗಿರಲು ಸಾಧ್ಯ? ಹೇಗಾದರೂ ನನಗೆ ನಾನೇ ಈ ವ್ಯರ್ಥ ಪ್ರಶ್ನೆಯನ್ನು ಹಾಕಿಕೊಳ್ಳುತ್ತಿದ್ದಂತೆ, ರಾಣಿ ಕರ್ಮವತಿ ಮತ್ತು ವಿಕ್ರಮಾದಿತ್ಯ ಇವರುಗಳ ಮಹತ್ವಾಕಾಂಕ್ಷೆ ಮಹಾಪ್ರಭುಗಳ ದೇಹವನ್ನು ಮುಟ್ಟುವಷ್ಟು ಧೈರ್ಯ ಮಾಡಿತಲ್ಲ ಎಂಬುದನ್ನು ನಂಬುವುದು ನನಗೆ ಅಸಾಧ್ಯವಲ್ಲದಿದ್ದರೂ ಕಷ್ಟವಾಯಿತು.

ನಮ್ಮ ತಂದೆ ಇನ್ನೂ ಬದುಕಿದ್ದರೆ? ಅದನ್ನು ಪತ್ತೆ ಹಚ್ಚಲು ಒಂದೇ ಒಂದು ದಾರಿ ಇದೆ.

ಚಿತ್ತೂರಿನಿಂದ ಬಂದಿದ್ದ ಆಗಂತುಕರು ನಾನು ಅರಮನೆಗೆ ಹಿಂತಿರುಗುವುದನ್ನೇ ಕಾಯುತ್ತಿರುತ್ತಾರೆ. ಬೇಪಿಕೀರ್‌ನ್ನು ನಾನು ಹಳ್ಳಿಯಲ್ಲೇ ಬಿಟ್ಟೆ. ನಾನು ದೀರ್ಘವಾದ ಸುತ್ತು ಬಳಸಿನ ಹಾದಿಗಳನ್ನು ಹಿಡಿದು ಅರಮನೆಯ ಹಿಂಭಾಗವನ್ನು ತಲುಪಿದೆ. ಅದು ಸಾವಿನಂತೆ ನಿಸ್ತಬ್ಧವಾಗಿತ್ತು. ಇಂಥ ನಿರ್ಜನ ಪ್ರದೇಶಗಳಲ್ಲಿ ಪ್ರತಿ ರಾತ್ರಿಯೂ ಇದು ಹೀಗೆಯೇ ಇರುತ್ತಿತ್ತು. ನನ್ನ ಮತ್ತು ಶಿರಾಜ್ ಆಲಿಯ ಭಯ ನಿರಾಧಾರವಾಗಿದ್ದುವೆ? ಕಿಂಚಿತ್ ತಾಳ್ಮೆ ವಹಿಸಿದ್ದರಿಂದ ಗೊತ್ತಾದದ್ದೇನೆಂದರೆ, ತಂದೆಯವರನ್ನು ಕಾಣಲು ಬಂದವರ ಪೈಕಿ ಒಬ್ಬನು ಸೇವಕರು ಕಾವಲು ಕಾಯುವ ಪ್ರವೇಶದ್ವಾರದಲ್ಲಿ ರಕ್ಷಣೆಗೆ ನಿಂತಿದ್ದಾನೆಂಬುದು. ನಾನು ಆ ರಾತ್ರಿ ಮರೆತು ಹೋದ ಹಾಗೆ ಯಾವತ್ತೂ ನನ್ನ ಬಿಲ್ಲು ಮತ್ತು ಬಾಣವನ್ನು ಬಿಟ್ಟಿದ್ದಿಲ್ಲ.

"ಎಚ್ಚರಿಕೆಯಿಂದ ಇರಿ. ದೇವರ ಒಂದು ಕಣ್ಣು ನಮ್ಮ ಮೇಲಿರಲಿ" ಎಂಬ ನನ್ನ ಧ್ವನಿ ಆ ದಟ್ಟ ನೀರವತೆಯಲ್ಲಿ ವಿಚಿತ್ರವಾಗಿ ಕೇಳಿಸಿತು. ಕರ್ತವ್ಯದ ಮೇಲಿದ್ದ ಮನುಷ್ಯನು ಹೊರಹೊರಟದ್ದನು. ಖಡ್ಗ ಅವನ ಕೈಯಲ್ಲಿತ್ತು. ನಾನು ಕಾವಲಿನವನೆಂದು ಮನವರಿಕೆಮಾಡಿದೆನೆ? ನಾನು ಈಗಲೂ ದೂರವೇ ಇದ್ದೆ. ಅದೂ ಅಲ್ಲದೆ ರಾತ್ರಿ ಪಹರೆಯವನದು ಅಷ್ಟೊಂದು ಅಪರಿಚಿತ ದೃಶ್ಯವೇನಲ್ಲ. ಪ್ರತಿ ಅರಮನೆಯಲ್ಲಿ ಹಳ್ಳಿ ಮತ್ತು ನಗರದಲ್ಲಿ ಕಡೇ ಪಕ್ಷ ರಾತ್ರಿ ಕಾವಲಿನವನು ಇರುತ್ತಿದ್ದನು. ಅವನು ಪ್ರತಿ ಗಂಟೆಗೊಂದು ಸಲ, ಬೆಳಗಾಗುವವರೆಗೂ ಒಂದು ಗಸ್ತು ಹೊಡೆಯುತ್ತಿದ್ದನು. ನಾನು ದೃಢವಾಗಿ ಅವನೆಡೆಗೆ ಸಾಗಿದೆ.

ಎಚ್ಚರದಿಂದ ಇರು. ಎಲ್ಲ ಸರಿ ಇದೆ.

ಅವನ ಬಿಗುವು ಕಡಿಮೆಯಾಯಿತು. ಆದರೆ ಖಡ್ಗ ಇನ್ನೂ ಹೊರಚಾಚಿಯೇ ಇತ್ತು. ಈಗ ನಾನು ಅವನ ಪಕ್ಕದಲ್ಲಿದ್ದೆ. "ದೇವರು ನಮ್ಮ ಮೇಲೊಂದು ಕಣ್ಣಿಟ್ಟಿರಲಿ". ನನ್ನ ಎಡಗೈ

ಅವನ ಬಾಯ ಮೇಲಿತ್ತು ಮತ್ತು ನನ್ನ ಖಡ್ಗ ಅವನ ಹೃದಯವನ್ನು ಭೇದಿಸಿತ್ತು. ನಾನು ಅವನನ್ನು ಎತ್ತಿ ಕುದುರೆಯಲಾಯದೊಳಕ್ಕೆ ಎಳೆದು ಹಾಕಿದೆ. ಅವನು ಬಹಳ ಭಾರವಾಗಿದ್ದ. ಅವನನ್ನು ಕೆಳಗಿಳಿಸಿದ್ದು ಆರಾಮವೆನಿಸಿತು. ಆ ಅಂಗಳದಲ್ಲಿದ್ದ ಎಣ್ಣೆ ದೀಪದ ಮಸಕು ಬೆಳಕಿನಲ್ಲಿ ನನ್ನ ಮೈನೆರಳು ಲಾಯದಲ್ಲಿದ್ದ ಕುದುರೆಗಳ ಮೇಲೆ ಬಿದ್ದಾಗ ಅವು ಸ್ವಲ್ಪ ಬೆದರಿದವು. ನಾನು ಲಾಯದ ಬಾಗಿಲನ್ನು ತೆರೆದು ಒಂದೊಂದಾಗಿ ಕುದುರೆಗಳನ್ನು ಬಿಚ್ಚಿ ಹೊರಗೆ ಬಿಟ್ಟೆ.

ಒಂದು ಸಣ್ಣ ಬೆಂಕಿ ಅನಾಹುತ ಮಾಡಲು ಇದು ಸರಿಯಾದ ಸಮಯ. ನಾನು ಹಿಂದಕ್ಕೆ ಹೋಗಿ ದೀಪವನ್ನು ಕೈಗೆತ್ತಿಕೊಂಡು (ಅದರಲ್ಲಿ ಎಣ್ಣೆ ಹೆಚ್ಚೇನೂ ಉಳಿದಿರಲಿಲ್ಲ) ಅದರಲ್ಲಿದ್ದ ಎಣ್ಣೆಯನ್ನು ಒಣ ಹುಲ್ಲಿನ ಮೇಲೆ ಚೆಲ್ಲಿದೆ. ಅದು ನಮ್ಮ ಆತಿಥೇಯನಿಗೆ ಅವನ ಆತಿಥ್ಯಕ್ಕೆ ಪ್ರತಿಯಾಗಿ ಭಯಂಕರವಾಗಿ ಪ್ರತಿಫಲ ನೀಡುವ ರೀತಿ. ಆದರೆ ಚಿತ್ತೂರಿನಿಂದ ಬಂದ ಆಗಂತುಕರನ್ನು ಹೊರಹಾಕಲು ನನಗೆ ಅನ್ಯ ಮಾರ್ಗವಿರಲಿಲ್ಲ. ಕೆಲವೇ ನಿಮಿಷಗಳಲ್ಲಿ ಲಾಯದ ಮಾಳಿಗೆಗೆ ಹಾಕಿದ್ದ ತೊಲೆಗಳು ಮತ್ತು ಅರಮನೆಯ ಎಡ ಪಾರ್ಶ್ವದ ಕೆಲವು ತೀರುಗಳು ಇವೆಲ್ಲ ಹೊತ್ತಿ ಉರಿಯತೊಡಗಿದವು. ಕುದುರೆಗಳು ಭಯಗ್ರಸ್ತವಾಗಿ ಅರಮನೆಯ ಹಿಂಭಾಗದ ಕಾಡಿನೊಳಕ್ಕೆ ಹುಚ್ಚಾಪಟ್ಟೆ ಓಡ ತೊಡಗಿದವು. ಕೆಲವು ಆಳುಕಾಳುಗಳು ಎದ್ದು ಉದ್ರಿಕ್ತರಂತೆ ಕಿರುಚತೊಡಗಿದರು. ಮಹಾಪ್ರಭುಗಳ ಮೂರು ಜನ ಭದ್ರತಾ ದಳದವರು ಅವರ ಜೊತೆ ಸೇರಿ ನೀರು ತರಲು ಬಾವಿಯ ಬಳಿಗೆ ಓಡಿದರು.

ನಾನು ಮೆಟ್ಟಲುಗಳ ಹಿಂದಿನ ಅಡಗು ತಾಣದಲ್ಲಿ ನಿಂತಿದ್ದೆ. ಆಗ ನಮ್ಮ ಆಗಂತುಕರು ಧಾವಿಸಿ ಕೆಳಗಿಳಿದು ಬಂದರು. ಎಲ್ಲ ಏಳು ಜನರನ್ನೂ ನಾನು ಒಟ್ಟಾಗಿ ಎದುರಿಸಲೆ? ಸರಿಯಾಗಿ ಹೇಳಬೇಕೆಂದರೆ ಈಗ ಆರು ಜನ. ಅದು ಶೌರ್ಯ ಪ್ರಕಟನೆಯ ಸಮಯವಲ್ಲ.

"ಕುದುರೆಗಳು, ಕುದುರೆಗಳನ್ನು ಉಳಿಸಿ" ಎಂದು ಅವರು ಕಟ್ಟಡದಿಂದ ಹೊರಗೆ ಧಾವಿಸುತ್ತಿದ್ದಂತೆ ಒಬ್ಬರತ್ತ ಒಬ್ಬರು ನೋಡುತ್ತ ಕಿರುಚಿದರು.

ನಾನು ಮಹಾಪ್ರಭುಗಳಿಗಾಗಿ ಕಾದೆ. ನಮ್ಮ ಅತಿಥಿಗಳ ಹಿಂದೆ ಅವರು ಕೆಳಗಿಳಿದು ಬರಲಿಲ್ಲ. ಭದ್ರತಾ ದಳದ ಮುಖ್ಯಸ್ಥ ರಾವತ್ ರಾಮ್ ಸಿಂಹನೂ ಬರಲಿಲ್ಲ. ಉಳಿದ ಗಣ್ಯ ಭದ್ರತಾ ದಳದವರಿಗೇನಾಯಿತು?

"ಅಪ್ಪಾ ನೀವು ಎಲ್ಲಿದ್ದೀರಿ?"

ನಾನು ಒಲ್ಲದ ಮನಸ್ಸಿನಿಂದ ಮಹಡಿಯ ಮೆಟ್ಟಲುಗಳನ್ನು ಹತ್ತಿದೆ. ಓ ಏಕಲಿಂಗ ದೇವನೆ, ಅವರು ರಾತ್ರಿಯ ನಿದ್ರೆಯ ವಿಸ್ಮೃತಿಯಲ್ಲಿ ಮುಳುಗಿ ಹೋಗಿರಲಿ, ಶಾಶ್ವತ ನಿದ್ರೆಯಲ್ಲಿ ಅಲ್ಲ. ಅವರ ಕೊಠಡಿಯ ಬಾಗಿಲು ತೆರೆದಿತ್ತು. ದೀಪಗಳು ಇನ್ನೂ ಉಜ್ವಲವಾಗಿ ಉರಿಯುತ್ತಿದ್ದುವು. ನಾನು ನಿಂತಿದ್ದಲ್ಲಿಂದಲೇ ಅವರ ತುಟಿಗಳು ಹಸಿರಾಗಿ ಕಾಣುತ್ತಿದ್ದುವು. ವಿಷ ತನ್ನ ಕೆಲಸ ಮಾಡಿತ್ತು. ಆದರೆ ನೋವು ರಹಿತವಾಗಿ ಅಲ್ಲ. ಅವರ ಬಲಗೈ ಮುಷ್ಟಿ ತನ್ನ ಗಂಟಲನ್ನು ಕಿತ್ತು ತೆರೆಯಲು ಕಷ್ಟ ಪಡುತ್ತಿತ್ತು. ಅವರ ಕಣ್ಣುಗಳು ಗಾಳಿಗಾಗಿ ಹುಡುಕಾಡುತ್ತಿರುವಂತೆ ಕಂಡಿತು. ಆದರೆ ತೆರೆದ ಬಾಯಿಯ ನೋವು ಮತ್ತು ಅವರ ಮುಖದ ಮೇಲಿನ ಆ ಭೀತಿ ಇಡೀ ಜಗತ್ತಿನಲ್ಲಿರುವ ಗಾಳಿಯೆಲ್ಲಾ ಸೇರಿದರೂ ಅವರಿಗಾವ ಒಳಿತನ್ನೂ ಮಾಡದೆಂಬುದನ್ನು ಸೂಚಿಸುತ್ತಿತ್ತು. ನಾನು ಮೇಲೆ ಹತ್ತಿ ಹೋಗಿ ಅವರ ಕಣ್ಣುಗಳನ್ನು ಮತ್ತು ಬಾಯಿಯನ್ನು ಮುಚ್ಚಿದೆ. ಓ ಪ್ರಿಯ ದೇವನೆ, ಮನುಷ್ಯ ಅದೆಷ್ಟು ಬೇಗ ಸತ್ತು ತಣ್ಣಗಾಗುತ್ತಾನೆ! ಅಪ್ಪಾ ನನ್ನನ್ನು ಕ್ಷಮಿಸಿ. ಆ ಮೇಲೆ ನಿಮಗಾಗಿ ದುಃಖಿಸುವೆ.

ಬಟ್ಟಲಿನಲ್ಲಿಟ್ಟದ್ದ ಜಿಂಕೆಯ ಮಾಂಸ ಮತ್ತು ಒಂದು ಚೂರು ಕಾಳು ಮೆಣಸಿನ ಪುಡಿ ನನ್ನ ಕೊಠಡಿಯಲ್ಲಿ ನನಗಾಗಿ ಕಾಯುತ್ತಿತ್ತು.

ಕೇವಲ ನನ್ನ ಅನುಮಾನಗಳನ್ನು ಖಾತರಿಪಡಿಸಿಕೊಳ್ಳುವುದಕ್ಕೋಸ್ಕರ, ಭದ್ರತಾ ಸಿಬ್ಬಂದಿಯ ಮುಖ್ಯಸ್ಥನನ್ನೂ ಅವನ ತಂಡದ ಜನರನ್ನೂ ಪರೀಕ್ಷಿಸಿ ನೋಡಲು ಹೋದೆ. ಚಿತ್ತೂರಿನಿಂದ ತಂದೆಯವರನ್ನು ಭೇಟಿ ಮಾಡಲು ಬಂದಿದ್ದವರು ನಿಜಕ್ಕೂ ಒಂದು ಔತಣವನ್ನು, ಅಲ್ಲ ಸಾವಿನ ಔತಣವನ್ನು ನೀಡಿದ್ದರು. ಇವರಿಗೆ ಬಂದ ಗತಿಯೇ ಅವರಿಗೂ ಏಕೆ ಬರಲಿಲ್ಲವೆಂಬುದನ್ನು ಊಹಿಸುವುದೇನೂ ಕಷ್ಟವಾಗಲಿಲ್ಲ. ವಿಷ ಇದ್ದದ್ದು ಜಿಂಕೆಯ ಮಾಂಸದಲ್ಲಲ್ಲ. ನಾವು ರಜಪೂತರು ನಮ್ಮ ಖಾದ್ಯಗಳ ಮೇಲೆ, ಅದರಲ್ಲೂ ಬೇಯಿಸಿದ ಮಾಂಸಾಹಾರದ ಮೇಲೆ ಯಥೇಚ್ಛವಾಗಿ ಸುರಿದುಕೊಳ್ಳುವ ಕಾಳು ಮೆಣಸಿನ ಪುಡಿಯಲ್ಲಿ ಎಂದು ರಾಜ್ಯ ತಂತ್ರ ಮತ್ತು ಸಂಚನ್ನು ಕುರಿತ ಯಾವುದೇ ಬಾಲಬೋಧೆಯಾದರೂ ತಿಳಿಸುತ್ತದೆ. ಮೆಣಸಿನ ಪುಡಿಯನ್ನು ಹಾಕಿಕೊಳ್ಳದಿರುವುದಷ್ಟೇ ಮಾಡಬೇಕಾದ್ದು. ಆಗ ಏನೂ ಆಗುತ್ತಿರಲಿಲ್ಲ. ಕೆಳಗಡೆ ಜಿಂಕೆಯನ್ನಾರಿಸುವುದರಲ್ಲಿ ತೊಡಗಿದ್ದ ಮೂರೂ ಜನ ಭದ್ರತಾ ದಳದವರು, ಕಾಳು ಮೆಣಸಿನ ಪುಡಿಯನ್ನು ಹಾಕಿಕೊಂಡಿರಲಿಲ್ಲವೆಂಬುದು ಸ್ಪಷ್ಟವಿತ್ತು.

ವಂದಿಮಾಗಧರು ಮತ್ತು ಭಟ್ಟಂಗಿಗಳಿಗೆ ತಮ್ಮ ಸ್ವಹಿತಾಸಕ್ತಿ ಮತ್ತು ತಾವು ಉಳಿಯುವುದು ಬಿಟ್ಟರೆ ಬೇರಾವುದೂ ಮುಖ್ಯವಲ್ಲ. ಕೊಲೆಗಡುಕರು ತಮ್ಮ ಕುದುರೆಗಳು ಎಲ್ಲಿವೆ ಎಂದು ಕಂಡುಕೊಂಡು ತಾವು ಸುರಕ್ಷಿತವಾಗಿ ಹಿಂತಿರುಗುವುದನ್ನು ಖಚಿತ ಪಡಿಸಿಕೊಂಡ ನಂತರವೇ ನನ್ನನ್ನು ಹುಡುಕಿಕೊಂಡು ಬರುವರು.

ನಾನು ಹಳ್ಳಿಗೆ ಹಿಂತಿರುಗಿದೆ. ಎಲ್ಲರೂ ಮಲಗಿದ್ದರು. ಚಿತ್ತೂರಿನಿಂದ ಬಂದಿದ್ದ ಸಂದೇಶ ವಾಹಕ ಈಶ್ವರ ಸಿಂಹನು, ಊರ ಮುಖ್ಯಸ್ಥನ ಮನೆಯಲ್ಲಿ ನನಗಾಗಿ ಇನ್ನೂ ಕಾಯುತ್ತಿದ್ದಾನೋ ಹೇಗೋ ಎಂಬುದು ಖಚಿತವಿರಲಿಲ್ಲ. ನಾನು ತಲೆಕೆಡಿಸಿಕೊಳ್ಳುವುದು ಬೇಕಿರಲಿಲ್ಲ. ಮಂಗಳನು ಅಪ್ರಾಮಾಣಿಕರನ್ನು ಇಲ್ಲವೆ ಅಂಜುಕುಳಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿರಲಿಲ್ಲ. ಮಂಗಳನಿಲ್ಲದ ಬದುಕು, ಅಂಥ ಒಂದು ಸಾಧ್ಯತೆ ಈಗ ಕಣ್ಣೆದುರು ಇತ್ತು. ಅದು ನನಗೆ ಯಾವತ್ತೂ ಹೊಳೆದೇ ಇರಲಿಲ್ಲ.

"ಮಹಾಸ್ವಾಮಿ, ಮಹಾಪ್ರಭುಗಳು ಹೇಗಿದ್ದಾರೆ?"

"ಮೃತರಾಗಿದ್ದಾರೆ"

ಅವನು ನನಗೆ ಇನ್ನೇನು ಅನುಕಂಪದ ಮಾತುಗಳನ್ನು ಹೇಳ ಹೊರಟಿದ್ದ. ಆದರೆ ನಾನು ಅವನನ್ನು ತಡೆದೆ.

"ನಾನು ನಿನಗೆ ಕೆಲವು ಮೊಹರು ಹಾಕಿದ ಕಾಗದ ಪತ್ರಗಳನ್ನು ಕೊಡುತ್ತೇನೆ. ನೀನು ಅವುಗಳನ್ನು ಚಿತ್ತೂರಿನ ಆಸ್ಥಾನ ವಿದುಷಿ ಸಜನೀ ಬಾಯಿಗೆ ತಲುಪಿಸು. ಇಲ್ಲಿ ನನ್ನ ಸರ ಇದೆ. ಅದು ನಿನ್ನ ಕಷ್ಟಕ್ಕೆ ಪ್ರತಿಫಲ. ಹೊರಗಡೆ ನನಗೆ ಕಾದಿದ್ದು ಎಚ್ಚರಿಕೆಯಿಂದ ಗಮನಿಸುತ್ತಿರು".

ಅವನು ಹೊರಗೆ ಹೋದಾಗ, ಮಂಗಳನು ಕಳಿಸಿದ್ದ ಪತ್ರದ ಮೊಹರನ್ನು ಒಡೆದೆ.

ಅದು ಬಹುಮಟ್ಟಿಗೆ ಓದಲು ಸಾಧ್ಯವೇ ಇಲ್ಲದ ಹಾಗೆ ಗೀಚಿತ್ತು.

"ಜೈ ಶ್ರೀ ಏಕಲಿಂಗಜೀ"

ಅತ್ಯಂತ ಸಂಕ್ಷಿಪ್ತವಾದ ಪತ್ರ ಮಹಾಸ್ವಾಮಿ. ಮೇವಾಡಕ್ಕೆ ಅತ್ಯಂತ ಕೇಡು ಸನ್ನಿಹಿತವಾಗಿದೆ ಎಂದು ನನ್ನ ಸಂದೇಹ. ಮಹಾಪ್ರಭುಗಳನ್ನೂ ನಿಮ್ಮನ್ನೂ ಕೊಲೆ ಮಾಡುವ ಸಂಚೊಂದು ರಹಸ್ಯವಾಗಿ ತಳವೂರಿದೆ. ನಿಮ್ಮಿಬ್ಬರ ಜೀವವನ್ನು ರಕ್ಷಿಸಿಕೊಳ್ಳುವ ಅತ್ಯಂತ ತೀವ್ರವಾದ ಕ್ರಮಗಳನ್ನು ದಯವಿಟ್ಟು ತೆಗೆದುಕೊಳ್ಳಿ.

ನಾನೂ ವಿಕ್ರಮಾದಿತ್ಯನ ಕಡೆಯವರ ಗುರಿ ಆಗಿರುವ ಸಾಧ್ಯತೆ ಇರುವುದರಿಂದ ನಾನು ನಿಮ್ಮೊಂದಿಗೆ ಹಂಚಿಕೊಳ್ಳಬೇಕಾದ ಇನ್ನೊಂದು ವಿಷಯವಿದೆ. ಇದರ ಜೊತೆಯಲ್ಲಿರುವ ಪತ್ರದ ಸಂಗತಿಗಳನ್ನು ತಿಳಿದುಕೊಂಡ ಮೇಲೆ ನೀವು ಎಂದಿಗೂ ನನ್ನನ್ನು ಕ್ಷಮಿಸುವುದಿಲ್ಲವೆಂದು ನನಗೆ ತಿಳಿದಿದೆ. ಆದರೆ ನಾನು ನನ್ನ ತಾಯಿಗೆ ಮಾತುಕೊಟ್ಟಿದ್ದೇನೆ. ಹಾಗಾಗಿ ನನಗೆ ಸಹಿಸಿಕೊಳ್ಳಲು ಅಸಾಧ್ಯವಾದೊಂದನ್ನು ನಾನು ಅನುಭವಿಸಬೇಕಾಗಿದೆ. ಅದೆಂದರೆ ನಿಮ್ಮ ಅಸಂತೋಷ.

ಹಾರಿ ನನ್ನ ಮಹಾಸ್ವಾಮಿ, ಹಾರಿ.

ನಿಮ್ಮ ಸೇವಕ, ಮಂಗಳ್

ನಾನು ಇನ್ನೊಂದು ಪತ್ರಕ್ಕೆ ಕೈ ಹಾಕಿದೆ.

ಮಹಾಸ್ವಾಮಿಯವರಾದ ಮಹಾರಾಜ್‌ಕುಮಾರ್ ಅವರಿಗೆ.

ಏಕಲಿಂಗಜೀ ದೇವನ ಕೃಪಾಶೀರ್ವಾದ ತಮ್ಮ ಮೇಲಿರಲಿ ಮತ್ತು ಎಲ್ಲ ಕಷ್ಟಗಳಿಂದ ಅವನು ನಿಮ್ಮನ್ನು ಪಾರು ಮಾಡಲಿ.

ಈ ಟಿಪ್ಪಣಿಯನ್ನು ನನಗೋಸ್ಕರ ಬರೆದು ಕೊಡಲು ಮಂಗಳನಿಗೆ ಹೇಳಿದ್ದೇನೆ. ಈ ಪತ್ರದಲ್ಲಿನ ಸಂಗತಿಗಳನ್ನು ಅವನಿಗೆ ಮಾತ್ರ ನಾನು ನಂಬಿಕೊಡಬಲ್ಲೆ.

ನೀವು ನನ್ನ ಮತ್ತು ಮೇವಾಡದ ಮಹಾನ್ ಭರವಸೆ ಆಗಿದ್ದಿರಿ. ಮೇವಾಡದ ಭವಿತವ್ಯ ನಿಮಗೆ ಸೇರಿದ್ದಾಗಿತ್ತು. ನೀವು ನನ್ನವನಾಗಿದ್ದಿರಿ. ಆದರೆ ನಿಮ್ಮ ಬಗೆಗಿನ ಮಹತ್ವಾಕಾಂಕ್ಷೆಗಳೇನಿದ್ದರೂ ನನ್ನ ದೇಶದ ವಿಷಯಕ್ಕೆ ನನಗಿದ್ದ ಮಹಾತ್ವಾಕಾಂಕ್ಷೆಯೇ ಆಗಿತ್ತು. ನಾನು ತುಂಬ ಸ್ವಾಧೀನ ಮಾಡಿಕೊಳ್ಳುವ ಪ್ರವೃತ್ತಿಯವಳು. ನಾನು ನಿಮ್ಮನ್ನೇನಾದರೂ ನನ್ನ ಬಳಿ ಇಟ್ಟುಕೊಂಡಿದ್ದರೆ, ನಾನು ನಿಮ್ಮಿಂದ ದೂರ ಹೋಗಬೇಕಾಗುತ್ತಿತ್ತು.

ನಾನು ನಿಮಗೆ ಮೊದಲು ಮೊಲೆ ಹಾಲು ನೀಡಿದಂದಿನಿಂದಲೇ ನಾನೇ ನಿಮ್ಮ ಮದುವೆಗೆ ಸಿದ್ಧಳಾಗಿದ್ದೆ. ಆದರೆ ಬೇರಾವುದೂ ನನ್ನನ್ನು ರಾಜಕುಮಾರಿಯಾಗಿ ಮಾಡುತ್ತಿರಲಿಲ್ಲ. ಆಕೆ ನಿಷ್ಠಾವಂತ ಸತಿ, ಆದರೆ ನಿಮಗಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ನನಗೆ ಬಹಳ ಕಾಲ ಹಿಡಿಯಿತು. ಆದರೆ ಆಕೆ ಮೇವಾಡವನ್ನು ನಾಶಗೈಯುವವಳೆಂದು ಅಂತಿಮವಾಗಿ ನನಗೆ ಅನಿಸಿತು. ಇದರಲ್ಲೆಲ್ಲ ಅತ್ಯಂತ

ದುಃಖಕರವಾದದ್ದೆಂದರೆ ನಿಮ್ಮ ಮೇಲೆ ಅವಳಿಗಿದ್ದ ಪ್ರಭಾವ. ನೀವು ಅವಳೊಂದಿಗಿದ್ದಾಗ ನಿಮ್ಮ ಮನಸ್ಸು ನಿಮ್ಮ ಅಧೀನದಲ್ಲಿರುತ್ತಿರಲಿಲ್ಲ. ಅವಳು ನಿಮಗೊಬ್ಬ ಮಗನನ್ನು ಕೊಡಲಾರಳು. ಅಲ್ಲದೆ ಆಕೆ ನಿಮ್ಮನ್ನು ಮೇವಾಡದಲ್ಲಿ ಹಾಸ್ಯಾಸ್ಪದ ವ್ಯಕ್ತಿಯನ್ನಾಗಿ ಮಾಡಿದಳು. ಅದು ಮೇವಾಡದವರು ಮತ್ತು ನಮ್ಮ ಮಿತ್ರ ಕೂಟದವರೆಲ್ಲ ನಿಮ್ಮ ವಿಷಯಕ್ಕೆ ಅನಾದರವುಂಟಾಗುದಕ್ಕಿಂತ ಮೊದಲಿನ ಸಮಯದ ಸಂಗತಿ.

ನಾನು ರಾಜಕುಮಾರಿಗೆ ಎಚ್ಚರಿಕೆ ನೀಡಿ ತನ್ನ ನಡತೆಯನ್ನು ತಿದ್ದಿಕೊಳ್ಳಲು ಹೇಳಿದ್ದೆ. ಅವಳು ನನ್ನ ಮಾತಿಗೆ ಕಿವಿಗೊಡಲಿಲ್ಲ. ನಾನು ಕ್ರಮತೆಗೆದುಕೊಳ್ಳಲು ನಿರ್ಧರಿಸಿದೆ. ನಿಮ್ಮ ಶತ್ರುಗಳಿಗೂ ಅಂಥದೇ ಯೋಚನೆ ಬಂದಿತ್ತು. ಆದರೆ ಅವರು ಎಲ್ಲವನ್ನೂ ಕಲಸುಮೇಲೋಗರ ಮಾಡಿಬಿಟ್ಟರು. ರಾಜಕುಮಾರಿಯ ಬದಲು ಅವರು ಆಕೆಯ ದಾಸಿ, ಮುಗ್ಧಳಾದ ಕುಂಕುಮ್ ಕನ್ವರ್‌ಳನ್ನು ಸಾಯಿಸಿದರು.

ರಾಜಕುಮಾರಿಯ ಸಾವನ್ನು ಅತ್ಯಂತ ಜಾಗರೂಕತೆಯಿಂದ ನಾನು ಹಂಚಿಕೆ ಹಾಕಿದೆ. ಸಿಕ್ಕಿ ಹಾಕಿಕೊಳ್ಳದೆ ಇರುವಂತೆ ಒಳ್ಳೆಯ ಎಚ್ಚರಿಕೆ ವಹಿಸಿದೆ. ಅವಳ ಮತ್ತು ನನ್ನ ಊಟ ಎರಡರಲ್ಲೂ ವಿಷ ಬೆರೆಸಿದೆ. ವ್ಯತ್ಯಾಸವೆಂದರೆ ಅವಳ ಊಟದಲ್ಲಿ ಬೆರಸಿದ ವಿಷ ನನ್ನದಕ್ಕಿಂತ ಹತ್ತರಷ್ಟು ಹೆಚ್ಚು ವಿಷಪೂರಿತವಾಗಿತ್ತು. ನಾನೂ ವಿಷ ಪ್ರಾಶನಕ್ಕೆ ಬಲಿಯಾಗಿದ್ದರಿಂದ, ಯಾರೂ ನನ್ನನ್ನು ಅನುಮಾನಿಸಲಿಲ್ಲ. ದುರದೃಷ್ಟವಶಾತ್ ರಾಜಕುಮಾರಿಯಿಂದ ಮೇವಾಡಕ್ಕೆ ಬಿಡುಗಡೆಕೊಡಿಸಲು ನನಗೂ ಸಾಧ್ಯವಾಗಲಿಲ್ಲ.

ಅವಳನ್ನು ಕಾಪಾಡುತ್ತಿರುವುದು ಯಾರು ದುಷ್ಟಶಕ್ತಿಯೋ ದೇವತೆಗಳೋ? ಕೆಲವು ಸಲ ನನಗೆ ಅವೆರಡು ಒಂದೆಯೋ ಹೇಗೆ ಎಂದು ಆಶ್ಚರ್ಯವಾಗುತ್ತದೆ. ನನ್ನ ಕೃತ್ಯಗಳ ಬಗ್ಗೆ ನನಗೆ ವಿಷಾದವಿಲ್ಲ. ರಾಜಕುಮಾರಿ ಮತ್ತು ನೀವು ಹಲವು ವರ್ಷಗಳಲ್ಲಿ ನಿಕಟವಾಗಿದ್ದೀರಿ. ಆದರೆ, ನಿಮ್ಮ ಸಂಬಂಧ ಸುಳ್ಳಿನ ಮೇಲೆ ನಿಂತಿರುವುದರಿಂದ, ಅದರಿಂದೇನೂ ಒಳ್ಳೆಯದಾಗುವುದಿಲ್ಲ. ನಿಮ್ಮನ್ನುಳಿಸುವ ಶಕ್ತಿ ನನಗಿಲ್ಲ. ನಿಮ್ಮನ್ನುಳಿಸಬೇಕೆಂದು ನೀವು ಬಯಸುವುದಿಲ್ಲ ಎಂದು ಹೇಳುವ ಅಗತ್ಯವಿಲ್ಲ. ಎಲ್ಲವನ್ನೂ ಕಳೆದುಕೊಳ್ಳುತ್ತಿರುವುದು ನೀವೇ ಹೊರತು ಅವಳಲ್ಲ ಎಂಬುದನ್ನೂ ನೀವು ಕಂಡುಕೊಳ್ಳುತ್ತಿಲ್ಲ.

ಕಿರಿಯ ಸಂತಳನ್ನು ಕುರಿತ ದಂತ ಕಥೆ ಮಹತ್ವದ್ದಾಗುತ್ತ ಹೋಗುತ್ತದೆ. ಪ್ರೇಮಿಯನ್ನು ಇಡೀ ಜಗತ್ತು ಪ್ರೀತಿಸುತ್ತದೆ. ಪ್ರೇಮ ಮತ್ತು ತುಂಬ ಕಾವಿನ ಕಾವ್ಯ ಅವಳನ್ನು ಅಮರಳಾಗಿಸುತ್ತದೆ. ನಿಮ್ಮ ಬಗ್ಗೆ ಹೇಳಬೇಕೆಂದರೆ ಮಹಾಸ್ವಾಮಿ, ರಾಣಿ ಕರ್ಮವತಿ ಮತ್ತು ವಿಕ್ರಮಾದಿತ್ಯನಿಗೆ ನೀವು ಸಿಗದಿದ್ದರೆ, ರಾಜಕುಮಾರಿ ಮತ್ತು ಅವಳ ಪ್ರಿಯಕರನಿಗೆ ನೀವು ಸಿಕ್ಕುವಿರಿ. ಹೇಗೇ ಆದರೂ ನಿಮ್ಮ ನೆನಪನ್ನು ಅವರು ತೊಡೆದು ಹಾಕುವರು.

ಮಹಾನ್ ಕಾರ್ಯಗಳಿಗೆಂದೇ ಇದ್ದವರು ನೀವು ಮಹಾಸ್ವಾಮಿ. ದೇಶ ಕಂಡ ದೊಡ್ಡ ರಜಪೂತ ದೊರೆಯಾಗುವ ಅರ್ಹತೆಗಳೆಲ್ಲವೂ

ನಿಮ್ಮಲ್ಲಿವೆ. ನಮ್ಮ ಶತ್ರುಗಳನ್ನೆಲ್ಲ ಮಣಿಸಿ ಸಮಗ್ರ ಭಾರತದ ಮಹಾರಾಣಾ ಆಗುವಂಥ ಕಾಣ್ಕೆ ಮತ್ತು ಯುಕ್ತಿಗಳು ನಿಮಗಿವೆ. ನೀವು ನಿಮ್ಮ ಹೆಂಡತಿಯ ಸಂಬಂಧವನ್ನು ಕಡಿದುಕೊಳ್ಳಬಲ್ಲಿರಾ? ಆಗ ಮಾತ್ರ ನೀವು ನಿಮ್ಮ ತಮ್ಮನನ್ನು ಮತ್ತು ಅವನ ತಾಯಿಯನ್ನು ಸೋಲಿಸಬಲ್ಲಿರಿ ಹಾಗೂ ಬಾಬರ್ ಮತ್ತು ಇನ್ನಿತರ ಶತ್ರುಗಳ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಬಲ್ಲಿರಿ. ಅದನ್ನು ನೀವು ಮಾಡುವಿರಾ? ನೀವು ಮಾಡುವುದಿಲ್ಲವೆಂದು ನನ್ನ ಹೃದಯಕ್ಕೆ ತಿಳಿದಿದೆ. ನಿಮಗಿರುವುದು ಒಬ್ಬಳೇ ಹೆಣ್ಣು. ಅದು ರಾಜಕುಮಾರಿ. ಆಕೆ ನಿಮ್ಮನ್ನೂ ಪ್ರೀತಿಸಿದ್ದರೆ ಒಳಿತಾಗುತ್ತಿತ್ತು. ಏನೂ ಚಿಂತೆ ಇಲ್ಲ. ನೀವು ಅದನ್ನು ನಿಮ್ಮಿಬ್ಬರಿಗೂ ಕೂಡಿಯೇ ಮಾಡುತ್ತೀರಿ.

ನಾನು ಹೊರಡುತ್ತಿದ್ದೇನೆ ರಾಜಕುಮಾರ, ಕೊಲೆಗಾರ್ತಿಗೆ, ಯಶಸ್ವಿ ಕೊಲೆಗಾರ್ತಿ ಅಲ್ಲದವಳಿಗೂ ಮೇವಾಡದಲ್ಲಿ ಸ್ಥಳವಿಲ್ಲ. ಆದರೆ ನಾನು ನಿಮಗೆ ಬೆಂಬಲವಾಗಿ ನಿಂತು ನಿಮ್ಮ ಪತನವನ್ನು ನೋಡಲೂ ಆರೆ.

ನನ್ನ ಮಾತುಗಳನ್ನು ಸುಳ್ಳು ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ನಿಮ್ಮ ದಾಸಿ

ಕೌಸಲ್ಯ

ನಾನು ಹೆಚ್ಚು ಕಡಿಮೆ ನನ್ನ ಕೊನೆಯ ನಮೂದನ್ನು ಮುಗಿಸಿದ್ದೇನೆ. ಇನ್ನೊಂದು ನಿಮಿಷದಲ್ಲಿ ನಾನೀಗ ನನ್ನ ಈ ನೆನಪಿನ ತುಣುಕುಗಳನ್ನೆಲ್ಲ ಮೊಹರು ಮಾಡಿ ಸಂದೇಶ ವಾಹಕನ ಕೈಗಿತ್ತು ಚಿತ್ತೂರಿಗೆ ತೆರಳುವಂತೆ ಅವನಿಗೆ ತಿಳಿಸುತ್ತೇನೆ. ಮಹಾಪ್ರಭುಗಳ ಕೊಲೆಗಾರರು ನನ್ನನ್ನು ಹುಡುಕಿಕೊಂಡು ಯಾವ ಕ್ಷಣದಲ್ಲಿ ಬೇಕಾದರೂ ಬರಬಹುದು. ಆದರೆ ನಾನು ಮಾಡಬೇಕಾದ ಇನ್ನೂ ಒಂದು ಕೆಲಸವಿದೆ. ಅದನ್ನು ನಾನು ವರ್ಷಗಟ್ಟಲೆಯಿಂದ ಮುಂದೂಡುತ್ತಲೇ ಬಂದಿದ್ದೇನೆ. ಅದನ್ನು ಇನ್ನು ಸ್ವಲ್ಪವೂ ತಡಮಾಡುವಂತಿಲ್ಲ. ದೇವಸ್ಥಾನದಲ್ಲಿ ಯಾರೋ ಒಬ್ಬರೊಂದಿಗೆ ಮುಯ್ಯಿ ತೀರಿಸಿಕೊಳ್ಳಬೇಕಾಗಿದೆ.

ಅದೂ ಅಲ್ಲದೆ, ನಾನು ಬಯಸಿದರೆ, ರಾಣಿ ಕರ್ಮವತಿ, ವಿಕ್ರಮಾದಿತ್ಯ ಅಥವಾ ಅವರು ಆರು ಜನ ಅಡಿಯಾಳುಗಳಿಗೆ ನಾನು ಅಷ್ಟು ಸುಲಭವಾಗಿ ಗುರಿಯಾಗುವುದಿಲ್ಲ. ನನ್ನ ಬಳಿ ಈಗಲೂ ಬೇಫಿಕೀರ್ ಇದೆ ಹಾಗೂ ರಾಜಾಪೂರಜೀ ಕೀಕಾ ಮತ್ತು ಪರ್ವತಗಳು ಇಲ್ಲಿಂದ ದೂರದಲ್ಲಿಲ್ಲ. ಜೊತೆಗೆ ನಾನು ಲೀಲಾವತಿಯ ತೋಳುಗಳಲ್ಲಿರ ಬಯಸುತ್ತೇನೆ.

ನಾನೇಕೆ ನನ್ನನ್ನೇ ಮೋಸಗೊಳಿಸಿಕೊಳ್ಳುತ್ತಿದ್ದೇನೆ?

ಕೌಸಲ್ಯ ಮತ್ತು ಲೀಲಾವತಿ ಇಬ್ಬರೂ ಪೂರ್ತಿ ಸರಿ ಎಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಪ್ರಶ್ನೆಯೇ ಇಲ್ಲ. ಅವರ ಸಲಹೆಗಳನ್ನು ಅಬದ್ಧವೆಂದು ನಿರಾಕರಿಸಲಾಗುವುದಿಲ್ಲ. ನನ್ನನ್ನು ಏನಾದರೂ ನಾನು ಸಾರ್ಥಕಗೊಳಿಸಿಕೊಳ್ಳಬೇಕೆಂದಿದ್ದರೆ, ನಾನು ಆ ಹೆಂಗಸಿಗೆ ನನ್ನ ಬೆನ್ನು ತಿರುಗಿಸಬೇಕು. ನನ್ನ ಬದುಕಿನಿಂದ ಅವಳನ್ನು ತೊಲಗಿಸಬೇಕು.

ಹೌದು. ನಾನು ತೊಲಗಿಸಬೇಕು.

ಆದರೆ ನನಗಿರುವವಳು ಒಬ್ಬಳೇ ಹೆಣ್ಣು. ಅದು ಲೀಲಾವತಿಯೂ ಅಲ್ಲ ಕೌಸಲ್ಯಳೂ ಅಲ್ಲ. ಅದು ನನ್ನ ಹೆಂಡತಿ. ನಾನು ಅವಳನ್ನು ಹಿಂಬಾಲಿಸಿಕೊಂಡು ಬೃಂದಾವನ, ಮಥುರಾ, ನರಕದ ಬಾಗಿಲುಗಳಿಗೆ, ದೇವರುಗಳು ನನ್ನನ್ನು ಸೇರಿಸಿಕೊಳ್ಳುವುದಾದಲ್ಲಿ ಸ್ವರ್ಗಕ್ಕೂ ಹೋಗುತ್ತೇನೆ.

ಮುಗಿವು

ನಾನು ಕಳೆದು ಹೋಗದಂಥ, ಆದರೆ ಕಳೆದು ಹೋಗಿರುವ ಪುಟ. ಹಾರಿಸಿಕೊಂಡು ಹೋಗಬಹುದಾದ ಗ್ರಂಥಪಾತ.

ಮತ್ತೆ ಯಾರೂ ಮಹಾರಾಜ್‌ಕುಮಾರನನ್ನು ನೋಡಲೂ ಇಲ್ಲ. ಅವನಿಂದ ಏನನ್ನೂ ಕೇಳಲೂ ಇಲ್ಲ. ಅವನು ಕಾಣೆಯಾದ ರೀತಿಯ ಬಗ್ಗೆ ಅನೇಕ ಕಥೆಗಳು ಹರಡಿವೆ. ರಾಣಿ ಕರ್ಮವತಿ ಮತ್ತು ರಾಜಕುಮಾರ ವಿಕ್ರಮಾದಿತ್ಯನ ಅನುಚರರಾದ ಆರು ಜನ ಕೊಲೆಗಡುಕರು ಅವನನ್ನು ಕೊಂದು ಹಾಕಿದರೆಂದು ಒಬ್ಬ ಹೇಳಿದ. ಮಹಾರಾಜ್‌ಕುಮಾರನು ಮಂಡುಗೆ ತಪ್ಪಿಸಿಕೊಂಡು ಹೋಗಿ, ರಾಜಾಪೂರಜೀ ಕೀಕಾನ ಆಧಿಪತ್ಯದಲ್ಲಿದ್ದ ಬೆಟ್ಟಗುಡ್ಡಗಳ ಕಡೆಗೆ ಲೀಲಾವತಿಯೊಂದಿಗೆ ಪಲಾಯನ ಗೈದ ಎಂದು ಇನ್ನೊಬ್ಬನ ಅಭಿಪ್ರಾಯ. ಇನ್ನೂ ಒಬ್ಬನು ಮಥುರಾದಲ್ಲಿ ಅವನನ್ನು ಗುರುತಿಸಲಾಗಿದೆ ಎಂದು ಹೇಳಿದನು. ಅವನು ಭಿಕ್ಷುಕನಾಗಿ ಬಿಟ್ಟಿದ್ದಾನೆ ಮತ್ತು ಕಿರಿಯ ಸಂತಳು ಹೋದೆಡೆಯಲ್ಲೆಲ್ಲಾ ಅವಳನ್ನು ಹಿಂಬಾಲಿಸಿಕೊಂಡು ಹೋಗುವ ಜನರ ಗುಂಪಿನಲ್ಲಿ ಅವನೂ ಒಬ್ಬ. ನಾಲ್ಕನೇ ಹೇಳಿಕೆ ತುಂಬ ಗೋಜಲು ಗೋಜಲಾದದ್ದನ್ನು ಸೂಚಿಸುತ್ತಿತ್ತು.

ಆರು ಜನರಿಂದ ಬೆನ್ನಟ್ಟಲ್ಪಟ್ಟ ಮಹಾರಾಜ್‌ಕುಮಾರ್ ಬಾಸ್ವಾದಲ್ಲಿದ್ದ ಶ್ರೀಕೃಷ್ಣನ ದೇಗುಲಕ್ಕೆ ಓಡಿದನು. ಅವನು ತನ್ನ ಕೇಸರಿವೇಷದ ಮೇಲೆ ಅಂತಿಮ ಸಂಘರ್ಷದ ಪೇಟವನ್ನು ಧರಿಸಿದ್ದನು. ದೇವತೆಗಳು ಕೂಡ ತಮ್ಮ ಯೋಗ್ಯತೆಗೆ ತಕ್ಕ ಮರಳುಗಾಡನ್ನು ಹೊಂದಬೇಕು ಎಂದು ಗೊಣಗಿದನು.

ಬಾಸ್ವಾದಲ್ಲಿದ್ದ ಶ್ರೀಕೃಷ್ಣನ ಅಮೃತಶಿಲಾವಿಗ್ರಹವು ಚಿತ್ತೂರಿನ ಬೃಂದಾವನಿ ದೇವಸ್ಥಾನದಲ್ಲಿದ್ದ ಮೂರ್ತಿಯ ಅರ್ಧದಷ್ಟು ಎತ್ತರವೂ ಇರಲಿಲ್ಲ. ಆದರೆ ಅದು ಅಪೂರ್ವವಾದೊಂದು ಸೌಂದರ್ಯದಿಂದ ಕೂಡಿತ್ತು. ಮಹಾರಾಜ್‌ಕುಮಾರ್‌ಗೆ ಒಪ್ಪಲು ಕಷ್ಟವಾದರೂ, ಎಲ್ಲಕ್ಕಿಂತ ಹೆಚ್ಚಾಗಿ ಅದು ವಿಪರ್ಯಾಸವೆಂಬಂತೆ ನೆಮ್ಮದಿಯನ್ನುಂಟು ಮಾಡುವಂಥ ಶಾಂತ ಭಾವದಿಂದ ಕೂಡಿತ್ತು. ಇದಾರ್ ಸೇನಾ ಕಾರ್ಯಾಚರಣೆಯ ಸಂದರ್ಭದಲ್ಲಿ ಮಹಾರಾಜ್‌ಕುಮಾರ್. ಏಳು ದಿನಗಳ ಕಾಲ ಕಾಣದೆ ಹೋದಾಗ, ಅವನು ಮರಳಿನಲ್ಲಿ ಅಳಿಸಿ ಹಾಕಿದ ಅಲೆಗಳಂತೆ, ಆ ಮೂರ್ತಿಯ ಪೀತಾಂಬರದ ಮಡಿಕೆಗಳನ್ನು ಅತ್ಯಂತ

ಸೂಕ್ಷ್ಮವಾದ ರೀತಿಯಲ್ಲಿ ಕೆತ್ತನೆ ಮಾಡಲಾಗಿತು. ಆ ಮೂರ್ತಿಯ ಶಿರೋ ವೇಷ್ಟನದಲ್ಲಿ ಕೆತ್ತನೆ ಕೆಲಸ ಮಾಡಿದ ನಪಿಲು ಗರಿಯನ್ನು ಉಲ್ಲಾಸದಿಂದ ಸೆಕ್ಕಿಸಲಾಗಿತ್ತು. ಹಾಗೂ ಅದೆಷ್ಟು ಸೂಕ್ಷ್ಮವಾದ ಕುಸುರಿ ಕೆಲಸದಿಂದ ಕೂಡಿತ್ತೆಂದರೆ, ಅದು ಹೆಚ್ಚು ಕಡಿಮೆ. ಪಾರದರ್ಶಕವಾಗಿತ್ತು. ಆದರೆ ಮಹಾರಾಜ್‌ಕುಮಾರ್‌ನ ಹೃದಯದ ತಂತಿಯನ್ನು ಮಿಡಿದದ್ದೆಂದರೆ ಆ ಮೂರ್ತಿಯ ಮುಖಭಾವ ಮತ್ತು ಅದು ತನ್ನ ತಲೆಯನ್ನು ಇಟ್ಟುಕೊಂಡಿದ್ದ ಭಂಗಿ. ಅವನು ಶ್ರೀ ಕೃಷ್ಣನನ್ನು ತಾನೇ ಎಂದು ಬಹುಮಟ್ಟಿಗೆ ಭ್ರಮಿಸಿರಬೇಕು. ಅವನು ಕೊಳಲು ನುಡಿಸುತ್ತಿದ್ದನು ಹಾಗೂ ಅವನು ಕೇಳಿಸಿಕೊಳ್ಳುತ್ತಿದ್ದ ಹಾಡು ಅವನ ಕಣ್ಣುಗಳನ್ನು ಮುಚ್ಚಿತ್ತು. ಸಂಗೀತಕ್ಕಿಂತ ನಿಜವಾದ ಧ್ಯಾನ ಇನ್ನೊಂದಿಲ್ಲ. ಅಂತರಂಗ ವೀಕ್ಷಣೆಗಿಂತ ದೊಡ್ಡವಾದ ಶೋಧಪ್ರಯಾಣ ಇನ್ನೊಂದಿಲ್ಲ. ಶಿಲ್ಪಕಲಾ ಸೌಂದರ್ಯ ಹಾಗೂ ಅದರ ಅನುರಣವನ್ನು ಕುರಿತಂತೆ ಯೋಚಿಸಲು ಅತ್ಯಂತ ಸೂಕ್ತವಾದ ಸಮಯ. ಇನ್ನು ಕಾಲಹರಣದ ಮಾತೇ ಇಲ್ಲ. ಇಲ್ಲ, ಸ್ವಲ್ಪವೂ ಇಲ್ಲ. ದೇವರು ಸಕಲ ವಸ್ತುಗಳಲ್ಲೂ ನೆಲೆಸಿರುತ್ತಾನೆಂದು ಜನ ಹೇಳುತ್ತಾರೆ ಎಂದು ರಾಜಕುಮಾರನು ತನಗೆ ತಾನೇ ಹೇಳಿಕೊಂಡನು. ಅವನು ಖಂಡಿತಕ್ಕೂ ತನ್ನದೇ ಮೂರ್ತಿಯಲ್ಲಿ ಇರಲೇಬೇಕು.

ಒರೆಯಿಂದ ಕತ್ತಿಯನ್ನು ಸೆಳೆದುಕೋ. ಬಲಗೈಯನ್ನು ನಿನ್ನ ಎಡಭುಜದಿಂದ ಮೇಲಕ್ಕೆ ಎತ್ತು. ಈಗ ಅವನ ಮುಖದಲ್ಲಿ ಕಣ್ಣಿಟ್ಟು ನೋಡು. ಚಿಂತಿಸಬೇಡ ಅವನು ತನ್ನ ಕಣ್ಣುಗಳನ್ನು ತೆರೆಯನು ಮತ್ತು ಕೊಳಲು ನುಡಿಸುವುದನ್ನು ನಿಲ್ಲಿಸನು. ಆ ಮೇಲೆ ಒಮ್ಮೆಲೇ ಮಿಂಚಿನ ವೇಗದಲ್ಲಿ ಬಲಗೈಯನ್ನು ಕೆಳಗಿಳಿಸು. ಎಡದಿಂದ ಬಲಕ್ಕೆ ಒಂದು ಸರಿಯಾದ ಹೊಡೆತ ಹೊಡೆದರೆ ಅವನ ತಲೆ ನೆಲಕ್ಕುರಳಬೇಕು.

"ಎಲ್ಲಿಯುವರೆಗೆ ಈ ಶತ್ರುತ್ವವನ್ನು ನೀನು ಮನಸ್ಸಿನಲ್ಲಿ ಪೋಷಿಸಿಕೊಂಡು ಬರುವೆ? ಎಲ್ಲಿಯವರೆಗೆ ಈ ವೈಯಕ್ತಿಕ ಯುದ್ಧವನ್ನು ಮಾಡುವೆ? ಮತ್ತು ಇದು ಯಾವ ಉದ್ದೇಶಕ್ಕಾಗಿ? ನೀನು ಮತ್ತು ನಾನು ಇಬ್ಬರೂ ಒಂದೇ ಎಂಬುದು ನಿನಗೆ ಗೊತ್ತೆ? ನನ್ನ ಕೊಳಲು ಮತ್ತು ಹಾಡು ನಿನ್ನ ತುಟಿಗಳ ಮೇಲಿವೆ. ನಾವಿಬ್ಬರೂ ಒಂದೇ ಹೆಣ್ಣನ್ನು ಪ್ರೀತಿಸುತ್ತೇವೆ. ಏಕೆ ಮೂರ್ಖ, ಭೂಮಿಯ ಮೇಲಿನ ಯಾವುದೇ ಶಕ್ತಿ ನಮ್ಮನ್ನು ವಿಭಾಗಿಸುವುದಾಗಲಿ, ಬೇರೆ ಮಾಡುವುದಾಗಲಿ ಸಾಧ್ಯವಿಲ್ಲ".

ನೀಲ ಮೇಘ ಶ್ಯಾಮನು ದ್ವಂದ್ವಾರ್ಥದ ಮಾತಾಡುತ್ತಿದ್ದಾನೆಯೆ ಎಂದು ಮಹಾರಾಜ್‌ಕುಮಾರ್ ತನ್ನನ್ನು ತಾನೇ ಕೇಳಿಕೊಂಡನು. ಹಾಗೆ ನೋಡಿದರೆ ಅವನೊಬ್ಬ ಅಪಾರ ಸುಳ್ಳುಗಳ ದೇವ. ಇಲ್ಲವೆ ತಿಳಿದೂ ತಿಳಿದೂ ಸುಳ್ಳು ಹೇಳುತ್ತಾನೆ, ಸೋಗು ಹಾಕುತ್ತಾನೆ; ಒಂದು ಇಕ್ಕಟ್ಟಾದ ಸನ್ನಿವೇಶದಿಂದ ಪಾರಾಗಲು ಇಲ್ಲವೆ ಉದ್ದೇಶವನ್ನು ಸಾಧಿಸಲು ಏನು ಬೇಕಾದರೂ ಮಾಡುತ್ತಾನೆ. ಅವನೊಬ್ಬ ಎಲ್ಲ ಕಾಲದ ಮಹಾನ್ ಮುತ್ಸದ್ದಿಗಳಲ್ಲೊಬ್ಬ ಎಂದು ಮಹಾರಾಜ್‌ಕುಮಾರ್ ಭಾವಿಸಿದ್ದಕ್ಕೆ ಅದೊಂದು ಕಾರಣ. ಹಾಗೂ ಮೇವಾಡದ ಜನತೆ ರಾಜತಂತ್ರ ನೈಪುಣ್ಯ ಮತ್ತು ಯುದ್ಧ ಕೌಶಲವನ್ನು ಅವನಿಂದ ಕಲಿಯುವರು ಎಂದು ಆಶಿಸಿದ್ದನು.

ರಾಜಕುಮಾರನಿಗೆ ಡೋಲಾಯಮಾನ ಮನಸ್ಸು. ತನ್ನ ಕೈಯನ್ನು ಮೇಲೆತ್ತಿ ಹೊಡೆದು ಸಾಯಿಸಬೇಕೆ? ಅಥವಾ...

ತಾನು ತರುತ್ತೇನೆಂದುಕೊಂಡ ಹಾಗೆಯೇ ತನ್ನ ಇರ್ಬಾಯ ಖಡ್ಗವನ್ನು ವೇಗವಾಗಿ ಖಡಕ್ ಆಗಿ, ಕೆಳಗೆ ತಂದನು. ಅವನ ಕೈ ನಡುವೆಯೇ ನಿಂತು ಬಿಟ್ಟಿತೆ? ಸುಂದರವಾಗಿ

ಮುಗುಳ್ನಗೆ ಸೂಸುತ್ತಿರುವ. ಶ್ರೀ ಕೃಷ್ಣನ ಅಮೃತಶಿಲೆಯ ಮುಖದಲ್ಲಿ ಇಲ್ಲವೆ ದೇಹದ ಭಾಗದಲ್ಲಿ ಕಡೇ ಪಕ್ಷ ಅದು ಒಂದು ಸಣ್ಣ ಕಚ್ಚನ್ನಾದರೂ ಮಾಡಿತೆ? ಸಜನೀ ಬಾಯಿ ಈ ವಿಷಯದಲ್ಲಿ ಮೌನವಹಿಸಿದ್ದಾಳೆ.

ಆರು ಜನರು ಆಗಲೇ ಅವನನ್ನು ಸುತ್ತುವರಿಯುತ್ತಿದ್ದರು. ಖಡ್ಗಗಳು ಕೊಲ್ಲಲು ಸಿದ್ಧವಾಗಿದ್ದವು. ಆಗಲೇ ಶ್ರೀಕೃಷ್ಣನು ಮಹಾರಾಜ್‌ಕುಮಾರನನ್ನು ಆಲಿಂಗಿಸಿದನು. ಆರು ಜನರನ್ನು ಭಯ ಮತ್ತು ಬೆರಗು ಆವರಿಸಿತು. ಒಂದು ನಿಮಿಷ ಮಹಾರಾಜ್‌ಕುಮಾರ್ ಅಲ್ಲಿದ್ದರೆ, ಮರುನಿಮಿಷ ಅವನು ಕಣ್ಣಿಗೆ ಬೀಳುತ್ತಿರಲಿಲ್ಲ. ಅವರೇನು ಕನಸು ಕಾಣುತ್ತಿದ್ದರೆ? ಶ್ರೀ ಕೃಷ್ಣನ ಮೂರ್ತಿಯ ಎದೆಯ ಎಡಭಾಗದ ತುದಿಯಲ್ಲಿ ಹೊರಭಾಗದಲ್ಲಿ ಮಹಾರಾಜ್‌ಕುಮಾರನ ಪೇಟ ಮತ್ತು ಕೇಸರಿ ವೇಷದ ಅಂಚು ಕಾಣಿಸುತ್ತಿತ್ತು.

ಯಾರೇ ಆದರೂ ದೇವಸ್ಥಾನಕ್ಕೆ ಹೋದಾಗಲೆಲ್ಲ ಅಮೃತಶಿಲಾ ವಿಗ್ರಹದೊಂದಿಗೆ ಅಭೇದ್ಯವೆಂಬಂತೆ ಸಿಕ್ಕಿಕೊಂಡಿರುವ ಬಟ್ಟೆಯು ಗಾಳಿಯಲ್ಲಿ ಕಿಂಚಿತ್ ಅಲುಗಾಡುತ್ತದೆ.

ಅನಂತರದಲ್ಲಿ

ಅಂತಿಮವಾಗಿ ನಾನು ಮಾಡಬೇಕಿಂದಿದ್ದುದು ಚಾರಿತ್ರಿಕ ಸತ್ಯವನ್ನೊಳಗೊಂಡ ಪುಸ್ತಕವೊಂದನ್ನು ಬರೆಯುವುದು. ನಾನು ಬರೆಯುತ್ತಿದ್ದುದು ಕಾದಂಬರಿಯನ್ನು, ಚರಿತ್ರೆಯನ್ನಲ್ಲ. ನಾನು ಭೂಗೋಳವನ್ನು ಮತ್ತು ಪರಿಸರವನ್ನು ನಿರ್ಮಿಸ ಹೊರಟಿದ್ದೆ. ದೇವ ದೇವಿಯರ ವಂಶವೃಕ್ಷಗಳನ್ನು, ಮೂಲಗಳನ್ನು ಕೆದಕಲು, ದಂಗೆಗಳನ್ನು, ಸಾಂಕ್ರಾಮಿಕ ರೋಗಗಳನ್ನು ಹುಟ್ಟು ಹಾಕಲು, ಉಪಕಥೆಗಳನ್ನು, ಆರ್ಥಿಕ ಸ್ಥಿತಿಗತಿಗಳನ್ನು ಅನುಗೊಳಿಸಲು, ದಿನಾಂಕಗಳಲ್ಲಿ ಕೈಯಾಡಿಸಿ ನೋಡಲು ಬಯಸಿದ್ದೆ. ಅದೃಷ್ಟವಶಾತ್ ನಮ್ಮ ಮುಖ್ಯ ಕಥಾ ನಾಯಕನ ಸಂದರ್ಭದಲ್ಲಿ ಹೊರತು ಉಳಿದಂತೆ ನಾನು ಹೆಚ್ಚು ಕೈ ಚಳಕ ತೋರಿಸುವ ಸಂದರ್ಭ ಒದಗಿ ಬರಲಿಲ್ಲ. ಕಾರಣ ಆತ ಹುಟ್ಟಿದ, ಮದುವೆಯಾದ ಮತ್ತು ಮೃತನಾದ ಎಂಬುದಷ್ಟು ಬಿಟ್ಟರೆ, ಅವನ ಬಗ್ಗೆ ನಮಗೇನೂ ಗೊತ್ತಿಲ್ಲ. ಪ್ರಸಿದ್ಧಿಗಿರುವ ಅವನ ಒಂದೇ ಒಂದು ಹಕ್ಕು ಬಾಧ್ಯತೆಯೆಂದರೆ ಭಾರತದ ಚರಿತ್ರೆಯಲ್ಲಿ ನಮ್ಮ ಕಾಲದವರೆಗೂ ಬಹುಶಃ ಮತ್ತೆ ಮತ್ತೆ ಉಲ್ಲೇಖಿಸಲಾಗುವ, ಮತ್ತೆ ಮತ್ತೆ ಮತ್ತೆ ನೆನಪಿಸಿಕೊಳ್ಳುವ ರಾಜಕುಮಾರಿಯೊಂದಿಗೆ ಆತನ ಮದುವೆ ನಿಶ್ಚಿತವಾಗಿತ್ತೆಂಬುದು.

ನನ್ನ ಉದ್ದೇಶಗಳ ಹೊರತಾಗಿಯೂ, ಗಣನೀಯ ಪ್ರಮಾಣದ ಇತಿಹಾಸ ಕಾದಂಬರಿಯೊಳಕ್ಕೆ ಸಂಚಿನಿಂದ ನುಸುಳಿ ಬಿಟ್ಟಿದೆ. ಅದಕ್ಕೆ ಕಾರಣ ರಾಜಕುಮಾರಿ ಮತ್ತು ಆಕೆಯ ಪತಿ ಇಬ್ಬರೂ ಬಹು ಪ್ರಮುಖ ಕಾಲಘಟ್ಟದಲ್ಲಿ ಜೀವಿಸಿದ್ದುದು. ಆತ ಹದಿನಾರನೇ ಶತಮಾನದ ಪ್ರಾರಂಭದಲ್ಲಿ ಅತ್ಯಂತ ಪ್ರಬಲ ರಜಪೂತ ಸಾಮ್ರಾಜ್ಯವೆನಿಸಿದ್ದ ಮೇವಾಡದ ಅಗ್ರ ಪಟ್ಟಾಧಿಕಾರಿಯಾಗಿದ್ದ. (ಖಚಿತ ಉತ್ತರಾಧಿಕಾರಿ). ಆತನ ತಂದೆ ರಾಣಾ ಸಂಗನು ಅನೇಕ ತಲೆಮಾರುಗಳ ನಂತರ ಮೊದಲ ಬಾರಿಗೆ ನಿರಂತರವಾಗಿ ಹಗೆಸಾಧಿಸುತ್ತ ಕಾದಾಡುತ್ತಿದ್ದ ರಜಪೂತ ಸಾಮ್ರಾಜ್ಯಗಳು ಮತ್ತು ಸಂಸ್ಥಾನಗಳನ್ನು ಒಗ್ಗೂಡಿಸಲು ಸಮರ್ಥನಾಗಿದ್ದನು. ಅವನು ಮೂರು ಕಡೆಗಳಲ್ಲಿ ಶತ್ರು ಪಡೆಗಳಿಂದ ಸುತ್ತುವರಿಯಲ್ಪಟ್ಟಿದ್ದನು. ಅವನ ರಾಜ್ಯದ ಈಶಾನ್ಯದಲ್ಲಿ ಲೂದಿ ವಂಶ ಇತ್ತು. ಅದರ ಆಫ್‌ಘನ್ ದೊರೆಗಳು ಮಹತ್ವಾಕಾಂಕ್ಷೆಯಿಂದ ತಮ್ಮನ್ನು ಹಿಂದೂಸ್ಥಾನದ ಸುಲ್ತಾನರೆಂದು ಕರೆದುಕೊಂಡರು. ಸಂಗಾನ ಎಡಭಾಗದಲ್ಲಿ, ನೈಋತ್ಯದಲ್ಲಿ ಎರಡನೇ ಮುಝಫರ್‌ಷಾನ ಒಡೆತನದಲ್ಲಿದ್ದ ಗುಜರಾತ್ ರಾಜ್ಯವಿತ್ತು. ಆಗ್ನೇಯದಲ್ಲಿ ಮಾಳ್ವದ ಎರಡನೇ ಸುಲ್ತಾನ್ ಮಹಮ್ಮದ ಖಾಲ್ಜಿ ಇದ್ದನು.

ಮೇವಾಡಕ್ಕೆ ಸಂಬಂಧಿಸಿದ ಸಂಶೋಧನೆಯ ಸ್ಥಿತಿ ಆದರ್ಶ ಪ್ರಾಯವೇನಲ್ಲ. ಆದರೆ ಮುಜಫರ್‌ಷಾನ ಎರಡನೇ ಮಗ ರಾಜಕುಮಾರ ಬಹದೂರನು ಮೇವಾಡದಲ್ಲಿ ಆಶ್ರಯ ಪಡೆದನೆಂದು ಲಭ್ಯವಿರುವ ಇತಿಹಾಸ ಗ್ರಂಥಗಳು ಸೂಚಿಸುತ್ತವೆ. ಅವನನ್ನು ಬಹಳ ಔದಾರ್ಯದಿಂದ ಕಂಡರು. ಆದರೆ ಒಂದು ಸಂತೋಷ ಕೂಟದಲ್ಲಿ ಷಹಜಾದನು, ರಾಜಕುಟುಂಬಕ್ಕೆ ಸೇರಿದ ರಾಜಕುಮಾರನೊಬ್ಬನನ್ನು ಕೊಂದದ್ದರಿಂದ, ಸಂಗತಿಗಳು ಕಹಿಯಾದವು. ರಾಜಮಾತೆಗೆ ರಾಜಕುಮಾರ ಬಹಾದುರನ ವಿಷಯಕ್ಕೆ ಮಮತೆ ಉಂಟಾಗಿತ್ತು. ಮಧ್ಯೆ ಪ್ರವೇಶಿಸಿ ಅವನ ಜೀವವನ್ನು ಉಳಿಸಿದ್ದು ಆಕೆಯೇ. ಮೇವಾಡವು ಮುಖ್ಯವಾಗಿ ಇದಾರ್ ಎಂಬ ಸಂಸ್ಥಾನಕ್ಕಾಗಿ ಗುಜರಾತ್‌ನೊಂದಿಗೆ ಹೋರಾಡಿತು. ಮಾಳ್ವದೊಂದಿಗಿನ ಯುದ್ಧದಲ್ಲಿ ಮೇವಾಡವು ಸುಲ್ತಾನ್ ಮಹಮ್ಮದ್ ಖಾಲ್ಜಿಯನ್ನು ಸೋಲಿಸಿ ಅವನನ್ನು ಸೆರೆ ಹಿಡಿಯಿತು.

1520ರ ದಶಕದ ಸುಮಾರಿನಲ್ಲಿ ಬಾಬರನು ಭಾರತದಲ್ಲಿ ಎಲ್ಲರಿಗೂ ತನ್ನ ಉಪಸ್ಥಿತಿಯ ಅರಿವಾಗುವಂತೆ ಮಾಡಿದನು. ಅವನು ಹಿಂದೂಸ್ತಾನದ ಮೇಲೆ ಒಟ್ಟು ಐದು ಹಠಾತ್ ದಾಳಿಗಳನ್ನು ಮಾಡಿದನು. ಯುದ್ಧದ ಸಲುವಾಗಿ ಸೈನ್ಯದ ಮೊದಲ ಪ್ರಯಾಣ 1516ರಲ್ಲಿ ಆಯಿತು. ಇಬ್ರಾಹಿಂ ಲೂದಿಯ ಮೇಲೆ ಏಕಕಾಲದಲ್ಲಿ ಅಂದರೆ, ಪಾಣಿಪತ್ ಕಡೆಯಿಂದ ಮತ್ತು ಆಗ್ರಾ ಕಡೆಯಿಂದ ಹೀಗೆ ಎರಡೂ ಕಡೆಗಳಿಂದ, ಆಕ್ರಮಣ ಮಾಡುವ ಬಗ್ಗೆ ಸಂಗಾನಿಗೂ ಬಾಬರನಿಗೂ ಏನೋ ಒಂದು ರೀತಿಯ ಪತ್ರವ್ಯವಹಾರ ನಡೆದಿರುವ ಬಗ್ಗೆ ಬಾಬರನಿಗೂ ಮೇವಾಡದ ಐತಿಹಾಸಿಕ ದಾಖಲೆಗಳಿಗೂ ಹೊಂದಿಕೆ ಇದೆ.

ಬಹಳಷ್ಟು ಬ್ರಿಟಿಷ್ ಮತ್ತು ಭಾರತೀಯ ಇತಿಹಾಸಕಾರರು ಸಾಮಾನ್ಯವಾಗಿ ಖನುವಾದಲ್ಲಿ ಬಾಬರನಿಗೂ ರಜಪೂತರಿಗೂ ನಡೆದ ಯುದ್ಧದ ಮಹತ್ವವನ್ನು ತಗ್ಗಿಸುತ್ತಾರೆ ಮತ್ತು ಒಂದು ವಾಕ್ಯದಲ್ಲಿ ಇಲ್ಲವೆ ಒಂದು ವಾಕ್ಯ ಖಂಡದಲ್ಲಿ ಅದನ್ನು ಮುಗಿಸಿಬಿಡುತ್ತಾರೆ. ದೆಹಲಿಯನ್ನು ಭಾರತದ ಅಧಿಕಾರ ಕೇಂದ್ರ ಬಿಂದುವಾಗಿ ಕಾಣುವ ಪ್ರವೃತ್ತಿ ಅವರದು. ಇದಕ್ಕೆ ಮೂಲ ಕಾರಣ, ಬಾಬರನು ಸ್ಥಾಪಿಸಿದ ಮೊಗಲ್ ರಾಜ ಮನೆತನ ಬಹುಮಟ್ಟಿಗೆ ದೆಹಲಿಯಿಂದ ಆಳ್ವಿಕೆ ನಡೆಸಿತು. ಆದರೆ ಮಹಾರಾಣಾ ಸಂಗ ಮತ್ತು ರಜಪೂತರನ್ನು ಕುರಿತ ಬಾಬರನ ಗ್ರಹಿಕೆಯಲ್ಲಿ ಮಹತ್ತರ ವ್ಯತ್ಯಾಸವಿದೆ.

ಪ್ರಖ್ಯಾತವಾದ ಎರಡನೇ ಪಾಣಿಪತ್ ಯುದ್ಧದಲ್ಲಿ ಬಾಬರನು ಸುಲ್ತಾನ್ ಇಬ್ರಾಹಿಂ ಲೂದಿಯನ್ನು ಸೋಲಿಸಿದ ಮೇಲೆ ಬಾದಷಹನು ದೆಹಲಿ ಮತ್ತು ಆಗ್ರಾವನ್ನು ಸ್ವಾಧೀನಪಡಿಸಿಕೊಂಡು, ಕ್ರಮೇಣ ಬಾಕಿ ಲೂದಿ ಸಾಮ್ರಾಜ್ಯವನ್ನು ಮಣಿಸಿದನು. ಇಬ್ರಾಹಿಂ ಲೂದಿಯು ಅವನದೇ ಬಂಧು ಬಳಗದವರಲ್ಲಿ, ಕುಲೀನರು ಮತ್ತು ಶ್ರೀಮಂತರಲ್ಲಿ ಬಹಳಷ್ಟು ದ್ವೇಷ ಮತ್ತು ಆಕ್ರೋಶಕ್ಕೆ ಗುರಿಯಾದ ವ್ಯಕ್ತಿಯಾಗಿದ್ದನು ಹಾಗೂ ಲೂದಿ ಸುಲ್ತಾನಿಯತ್ ಆಗಲೇ ಛಿದ್ರ ಛಿದ್ರವಾಗ ತೊಡಗಿತ್ತೆಂಬುದನ್ನು ನೆನಪಿನಲ್ಲಿಡುವುದು ಒಳಿತು. ತನ್ನ ಅತ್ಯಂತ ನಿರ್ಣಾಯಕ ಶಕ್ತಿಪರೀಕ್ಷೆ ಮುಂದಿದೆ ಎಂಬುದು ಬಾಬರನಿಗೆ ಗೊತ್ತಿತ್ತು. ಆ ಪ್ರದೇಶದಲ್ಲಿ ನಿಜವಾದ ಅಧಿಕಾರ ಇದ್ದದ್ದು ರಾಣಾ ಸಂಗ ಮತ್ತು ಹಿಂದೂ ಮುಸ್ಲಿಂ ರಾಜರುಗಳು ಮತ್ತು ನೇತಾರರ ಮೈತ್ರಿ ಕೂಟದಲ್ಲಿ. ಬಾಬರನ ಸೈನಿಕರು ಕಾಬೂಲ್‌ಗೆ ಹಿಂತಿರುಗಲಿಚ್ಛಿಸಿದ್ದರು. ಅಲ್ಲದೆ ಅವನೇ ಬರೆದಿರುವಂತೆ, ರಾಣಾ ಸಂಗ ಮತ್ತು ಅವನ ಮೈತ್ರಿ ಪಡೆಗಳ ಸಂಘಟಿತ ಸೈನ್ಯಗಳಿಂದ ಅವರು ಭೀತಿಗೊಳಗಾಗಿದ್ದರು. ಹಾಗಾಗಿ ಅವರೊಂದಿಗೆ ಹೋರಾಡಲು ಅವರಿಗೆ ಎಷ್ಟು ಮಾತ್ರಕ್ಕೂ ಒಲವಿರಲಿಲ್ಲ.

ಸಾಯುವವರೆಗೂ ಹೋರಾಡಬೇಕಾದ ಯುದ್ಧಕ್ಕೆ ತನ್ನ ಸೈನಿಕರ ಮನವೊಲಿಸಲು ಬಾಬರನು ಅಸಾಧಾರಣವಾದ ಕ್ರಮಗಳನ್ನು ಆಶ್ರಯಿಸಬೇಕಾಯಿತು. ಎರಡು ಸೈನ್ಯಗಳು ಸಂಧಿಸಿದ ಖನುವಾ ಯುದ್ಧದ ಮಹತ್ವವನ್ನು ಸಾಮಾನ್ಯವಾಗಿ ಕಡಿಮೆಯಾಗಿ ಅಂದಾಜಿಸಲಾಗಿದೆ. ಕೇವಲ ಬಾದಷಹ ಬಾಬರ್, ರಾಣಾ ಸಂಗ ಮತ್ತು ಅವನ ಮಿತ್ರರ ಹಣೆ ಬರಹವನ್ನಷ್ಟೇ ಅಲ್ಲ, ಭಾರತದ ಹಣೆ ಬರಹವನ್ನೇ ಪಣಕ್ಕೆ ಒಡ್ಡಲಾಗಿತ್ತು. ಆ ಯುದ್ಧವೊಂದಿಲ್ಲದಿದ್ದರೆ, ಭಾರತದ ಇತಿಹಾಸವೇ ತೀರ ಭಿನ್ನವಾಗಿರುತ್ತಿತ್ತು ಎಂಬ ಮಾತಿನಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಅದೇ ಸಮಯದಲ್ಲಿ ಒಂದು ವೇಳೆ ಬಾಬರನೇ ಸೋತು ಹೋಗಿದ್ದರೆ, ಅದರ ಮುಂದಿನ ಪರಿಣಾಮವೇನಾಗುತ್ತಿತ್ತೆಂದು ಮಾಡುವ ಊಹೆ ಇತ್ಯಾದಿಗಳೆಲ್ಲ ನಿರರ್ಥಕ ಮತ್ತು ವ್ಯರ್ಥ.

ಖನುವಾ ಯುದ್ಧದಲ್ಲಿ ಸೋತ ನಂತರ, ಬಾಬರನನ್ನು ಸೋಲಿಸಿದ ಹೊರತು ಚಿತ್ತೂರಿಗೆ ಹಿಂತಿರುಗುವುದಿಲ್ಲವೆಂದು ರಾಣಾ ಸಂಗನು ಪ್ರತಿಜ್ಞೆ ಮಾಡಿದನು. ಈ ಮಧ್ಯಾವಧಿಯಲ್ಲಿ ಅವನಿಗೆ ವಿಷಹಾಕಲಾಯಿತೆಂದು ಅನೇಕ ಜನ ಇತಿಹಾಸಕಾರರು ನಂಬುತ್ತಾರೆ. ಈ ಅಪರಾಧದ ಹಿಂದೆ ಯಾರಿದ್ದರು ಎಂಬುದು ಅಷ್ಟು ಸ್ಪಷ್ಟವಿಲ್ಲದಿದ್ದರೂ.

ರಾಣಾ ಸಂಗನು ಪತ್ನೀ ವ್ಯಾಮೋಹದಲ್ಲಿ ಮುಳುಗಿದ್ದನೆಂದೂ, ರಾಣಿ ಕರ್ಮವತಿಯು ಅವನ ಮೇಲೆ ಅತಿಯಾದ ಮತ್ತು ಅನಾರೋಗ್ಯಕರವಾದ ಪ್ರಭಾವವನ್ನು ಹೊಂದಿದ್ದಳೆಂದು ಕರ್ನಲ್ ಟಾಡ್, ತನ್ನ ರಾಜಾಸ್ತಾನದ ಚರಿತ್ರೆಯಲ್ಲಿ ಅಭಿಪ್ರಾಯಪಟ್ಟಿದ್ದಾನೆ. ಇತರೆ ಇತಿಹಾಸಕಾರರು ಕೂಡ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ, ರಾಣಾ ತನ್ನ ರಾಜಕೀಯ ಆಳ್ವಿಕೆಯ ಉತ್ತುಂಗದಲ್ಲಿದ್ದಾಗ, ರಾಜಕುಮಾರ ವಿಕ್ರಮಾದಿತ್ಯ ಮತ್ತು ಅವನ ತಮ್ಮನಿಗೆ ರಣಥಂಬೂರ್ ಸಾಮ್ರಾಜ್ಯವನ್ನು ಪುರಸ್ಕಾರವಾಗಿ ಒಂದು ವೇಳೆ ನೀಡಿದ್ದರೆ, ಈ ಅಕ್ರಮ ಕೊಡುಗೆಯ ಶ್ರೇಯಸ್ಸೂ ಅವನ ತಾಯಿಗೆ ಸೇರಿದ್ದು. ವಿಕ್ರಮಾದಿತ್ಯನು ಭ್ರಷ್ಟನೂ ಅಧಿಕಾರ ಪಿಪಾಸುವೂ ಆಗಿದ್ದನು. ಉದ್ಧಾರವಾಗುವ ಯಾವ ಲಕ್ಷಣಗಳೂ ಇರಲಿಲ್ಲ ಮತ್ತು ತೀರ ಕುಲಗೆಟ್ಟ ದೊರೆಯೆಂದು ಸಾಧಿಸಿ ತೋರಿಸಿದನು. ರಾಣಿ ಮತ್ತು ಅವಳ ಮಗ ಇಬ್ಬರೂ ಮೇವಾಡ ಹೆಮ್ಮೆ ಪಡುವಂತೆ ಮಾಡಲಿಲ್ಲ.

ಇದಿಷ್ಟು ವಾಸ್ತವಾಂಶಗಳು.

ಇನ್ನು ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ ಹೇಳಬೇಕೆಂದರೆ ಕತೆಗಾರರು ಸುಳ್ಳುಗಾರರು. ನಮ್ಮೆಲ್ಲರಿಗೂ ಅದು ಗೊತ್ತು.

ಐತಿಹಾಸಿಕ ಟಿಪ್ಪಣಿ

ರಾಣಿ ಕರ್ಮವತಿ ಕೈಗೊಂಡ ಕಾರ್ಯ ಮತ್ತು ಪ್ರಯತ್ನಗಳಾವುವೂ ವ್ಯರ್ಥವಾಗಲಿಲ್ಲ. ವಿಕ್ರಮಾದಿತ್ಯನು ಚಿತ್ತೂರಿನ ರಾಣಾ ಆದನು. ಬಹಳ ಸಮಯದವರೆಗೇನಲ್ಲ; ಆದರೆ ಅದು ಸಂಬಂಧಪಡದೆ ಇರುವ ವಿಷಯ. ಚಿತ್ತೂರು ಈಗ ಕೇವಲ ತನ್ನ ಹಿಂದಿನ ಬಲಿಷ್ಠ ಆತ್ಮದ ನೆರಳಾಗಿತ್ತು. ಹಾಗಾಗಿ ಮಹಾರಾಜ್‌ಕುಮಾರನ ಒಂದು ಕಾಲದ ಅತಿಥಿ, ಸುಲ್ತಾನ್ ಬಹಾದುರ್‌ಷಾನು ಕೋಟೆಯನ್ನು ಮುತ್ತಿದನು. ಅಣಕದ ಸಂಗತಿಯೆಂದರೆ, ರಾಣಿ ಕರ್ಮವತಿಯು, ಇದೀಗ ಮೊಗಲ್ ಬಾದಷಹನಾಗಿದ್ದ ಬಾಬರನ ಮಗ ಹುಮಾಯೂನನಿಗೆ, ಚಿತ್ತೂರಿನ ರಕ್ಷಣೆಗೆ ಬರಬೇಕೆಂದು ಉದ್ವೇಗದಿಂದ ಸಂದೇಶಗಳನ್ನು ಕಳಿಸಿದಳು. ಸ್ವಲ್ಪ ಕಾಲ ಅವನು ತನ್ನ ಸೇನಾ ಪಡೆಗಳೊಂದಿಗೆ ಬಂದು ಚಿತ್ತೂರನ್ನು ಬಿಡುಗಡೆಗೊಳಿಸಬಹುದೆಂದು ತೋರಿತು. ಆದರೆ ಅವನು ಬರಲೇ ಇಲ್ಲ. ಇನ್ನೇನೂ ಭರವಸೆ ಕಾಣದಿದ್ದಾಗ ರಾಣಿ ಕರ್ಮವತಿ ಮತ್ತು ಚಿತ್ತೂರಿನ ಹದಿಮೂರು ಸಾವಿರ ಜನ ಹೆಂಗಳೆಯರು, ಚಿತೆಗೆ ಹಾರುವ ಮೂಲಕ ತಮ್ಮ ಮಾನವನ್ನು ರಕ್ಷಿಸಿಕೊಂಡರು.

* * *

ಹಿಂದೂಸ್ತಾನದ ಬಾದಷಹನಾಗಬೇಕೆಂಬ ಉದ್ದೇಶದಿಂದ, ಟ್ರಾನ್ಸೋಕ್ಸಿಯಾನಾದಿಂದ ಹೊರಗೆ ಹೊರಡದಿದ್ದ ಟರ್ಕಿಯ ನಾಯಕ ಬಾಬರನು ಜಗತ್ತಿನ ಅತ್ಯಂತ ಸ್ಮರಣೀಯವಾದ ರಾಜಮನೆತನಗಳಲ್ಲಿ ಒಂದಾದ ಮೊಗಲ್ ರಾಜಮನೆತನವನ್ನು ಸ್ಥಾಪಿಸಿದನು.

ಭಾರತಕ್ಕೆ ಮತ್ತು ಮನುಷ್ಯ ನಾಗರಿಕತೆಗೆ ಅವನ ಅತ್ಯಂತ ಮಹತ್ವದ ಕೊಡುಗೆಯೆಂದರೆ, ಅವನ ಮೊಮ್ಮಗ ಚಕ್ರವರ್ತಿ ಅಕ್ಬರ್. ಅಕ್ಬರನು ಮೊದಲನೇ ಎಲಿಜಬೆತ್ ರಾಣಿಯ ಸಮಕಾಲೀನ. ಅವನ ತಾತನು ಅವನ ಬಗ್ಗೆ ಹೆಮ್ಮೆ ತಾಳುತ್ತಿದ್ದನು. ಅವನು ವಾಸ್ತವವಾಗಿ ಭಾರತದ ಮೂರನೇ ಎರಡು ಭಾಗದಷ್ಟಕ್ಕೆ ಸಾಮ್ರಾಜ್ಯವನ್ನು ವಿಸ್ತರಿಸಿದನು. ಅವನೊಬ್ಬ ಮಹಾನ್ ನಿರ್ಮಾಪಕ. ಫತೇಪುರ್ ಸಿಕ್ರಿಯನ್ನು ತನ್ನ ನೂತನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅದು ಬಾಬರನು ರಾಣಾ ಸಂಗಾನನ್ನು ಯುದ್ಧದಲ್ಲಿ ಸೋಲಿಸಿದ ಖನುವಾಕ್ಕೆ ತೀರ ಸಮೀಪದಲ್ಲಿದೆ. ಅವನ ಅತ್ಯುನ್ನತ ಸಾಧನೆಯೆಂಬುದು ಅವನ ತಾತ ಏನೇನೂ ಸಂತಸ ಪಡದೆ ಇರುವಂಥದು. ತನ್ನ ಸಾಮ್ರಾಜ್ಯದಲ್ಲಿ ಅತ್ಯುನ್ನತವಾದ ನಾಗರಿಕ ಮತ್ತು ಸೇನಾ ಹುದ್ದೆಗಳಿಗೆ, ಹಿಂದೂಗಳು, ಮುಸಲ್ಮಾನರು, ಜೈನರು ಮತ್ತು ಜರತುಷ್ಟ್ರರನ್ನು (ಪಾರ್ಸಿಗಳನ್ನು) ನೇಮಿಸಿದನು. ಬೇರೆ ಬೇರೆ ಧಾರ್ಮಿಕ ನಂಬಿಕೆಗಳು ಜೊತೆ ಜೊತೆಯಲ್ಲಿ

ಬಾಳಬಹುದೆಂಬುದರಲ್ಲಿ ಅವನಿಗೆ ನಂಬಿಕೆ ಇತ್ತು. ವಾಸ್ತವವೆಂದರೆ. ದೀನ್-ಇ-ಇಲಾಹಿ ಎಂಬ ನೂತನ ಧರ್ಮವನ್ನು ಹುಟ್ಟು ಹಾಕಲು ಯತ್ನಿಸಿದನು. ಅದು ಬೇರೆ ಬೇರೆ ಧರ್ಮಗಳ ಅತ್ಯುತ್ಕೃಷ್ಟ ಅಂಶಗಳೆಂದು ಯಾವುದನ್ನು ಅವನು ಭಾವಿಸಿದನೋ ಅವುಗಳ ಸಮನ್ವಯವಾಗಿತ್ತು. ಅವನು ನಿರಕ್ಷರಕುಕ್ಷಿ. ಜ್ಞಾನ ಮತ್ತು ತಾಳ್ಮೆಗೂ ಅಕ್ಷರ ಅಥವಾ ಅನಕ್ಷರತೆಗೂ ಸಂಬಂಧವೇ ಇಲ್ಲವೆನಿಸುತ್ತದೆ.

ಅವನ ಮಗ ಜಹಾಂಗೀರನು 1605ರಿಂದ 1627ರ ವರೆಗೂ ಆಳಿದನು. ಅವನ ಆಳ್ವಿಕೆಯ ಕಾಲದಲ್ಲಿ ಬ್ರಿಟಿಷರು ಸೂರತ್‌ನಲ್ಲಿ ತಮ್ಮ ಮೊದಲ ನೆಲೆಯನ್ನು ಸ್ಥಾಪಿಸಿದರು. ಅಕ್ಬರನ ಮೊಮ್ಮಗ ಷಹಜಹಾನನು ಮೊಗಲ್ ರಾಜಮನೆತನದ ಮಹಾನ್ ನಿರ್ಮಾಪಕ. ಆಗ್ರಾದ ಕೋಟೆ, ದೆಹಲಿಯ ಕೆಂಪು ಕೋಟೆಗಳನ್ನು ನಿರ್ಮಿಸಿದನು. ಜೊತೆಗೆ ತನ್ನ ಹೆಂಡತಿಯ ಜ್ಞಾಪಕಾರ್ಥವಾಗಿ. ಜಗತ್ತಿನ ಅತ್ಯಂತ ಸುಂದರ ಸ್ಮಾರಕ ಟಾಜ್ ಮಹಲನ್ನು ಕಟ್ಟಿಸಿದನು.

* * *

ಗುಜರಾತಿನ ಸುಲ್ತಾನ್ ಬಹದ್ದೂರ್ ಷಾ ನು ಕಟ್ಟಕಡೆಗೆ ಚಿತ್ತೂರು ಮತ್ತು ಮಾಳ್ವ ಎರಡನ್ನೂ ನುಂಗಿ ಹಾಕಿದನು. ಬಾಬರನ ಮಗ ಹುಮಾಯೂನನು ಗುಜರಾತಿನ ಮೇಲೆ ದಾಳಿ ಮಾಡಬೇಕೆಂದು ತೀರ್ಮಾನಿಸಿದಾಗ, ಬಹಾದುರನು ಪೋರ್ಚ್‌ಗೀಸರ ಸಹಾಯವನ್ನು ಕೋರಿದನು. ಅದಕ್ಕೆ ವಿನಿಮಯವಾಗಿ ಆಗ ಗುಜರಾತಿನ ಭಾಗವಾಗಿದ್ದ ಮುಂಬಯಿಯ ಏಳು ದ್ವೀಪಗಳನ್ನು ನೀಡಲೊಪ್ಪಿದನು. ತಮ್ಮ ಒಂದು ಹಡಗಕ್ಕೆ ಅವನನ್ನು ಆಹ್ವಾನಿಸಿದರೆಂದು ಹೇಳಲಾಗುತ್ತದೆ. ಅವನು ಹಡಗಿನಲ್ಲಿ ಹಿಂಭಾಗದಲ್ಲಿ ಮುಂಭಾಗದಲ್ಲಿ, ಬಲಪಕ್ಕದಲ್ಲಿ ಮತ್ತು ಬಂದರಿನಲ್ಲಿ ಅಥವಾ ಪೋರ್ಚ್‌ಗಲ್ ಭಾಷೆಯಲ್ಲಿ ಇವಕ್ಕೆಲ್ಲಾ ಏನು ಹೇಳುತ್ತಾರೋ, ರಾಜ ಯಾನ ಮಾಡುತ್ತಿದ್ದಾಗ ಅವರು ಒಂದು ಅಪಘಾತವಾಗುವಂತೆ ಸಂಚು ಹೂಡಿದರು. ಅದು ಅವನನ್ನು ಬಲಿ ತೆಗೆದುಕೊಂಡಿತು.

* * *

ಪಾಶ್ಚಾತ್ಯ ಸಂಪ್ರದಾಯದಲ್ಲಿರುವಂತೆ ಭಾರತದಲ್ಲಿ ಸಂತರು ಬ್ರಹ್ಮಚರ್ಯವನ್ನು ಪಾಲಿಸಲೇ ಬೇಕಾದ ನಿರ್ಬಂಧವಿಲ್ಲ ಅಥವಾ ಅವರನ್ನು ಸಂತರೆಂದು ಘೋಷಿಸಲು ಅವರು ಪವಾಡಗಳನ್ನು ಮಾಡಬೇಕಾಗಿಯೂ ಇಲ್ಲ. ಅನುಭಾವಿಕ ಭಕ್ತಿ ಪದ್ಧತಿಯು, ದೇವರ ಮೇಲಿನ ಬ್ರಾಹ್ಮಣರ ಸರ್ವಾಧಿಕಾರ ಮತ್ತು ಧಾರ್ಮಿಕ ಆಚರಣೆಗಳಿಂದ ಒಮ್ಮೆಲೇ ಸಂಬಂಧವನ್ನು ಕಡಿದುಕೊಂಡಿತು. ಇದರಲ್ಲಿ ಉಚ್ಚ ಜಾತಿಯ ಯಾವನೇ ವ್ಯಕ್ತಿಯಿಂದ ಹಿಡಿದು, ಕಿರಾಣಿ ವ್ಯಾಪಾರಿಗಳು ಭಿಕ್ಷುಕರವರೆಗೆ ಹಾಗೂ ಅಸ್ಪೃಶ್ಯ ಜಾತಿಗಳಾದ ಚಮ್ಮಾರ, ಕುಂಬಾರರವರೆಗೆ ಎಲ್ಲರಿಗೂ ದೇವರ ಸಾನ್ನಿಧ್ಯಕ್ಕೆ ದಾರಿ ತೆರೆದಿತ್ತು. ಆಳವಾದ ಭಕ್ತಿಯೊಂದಿತ್ತೆಂದರೆ ದೇವರು ವಶನಾದಂತೆಯೇ. ದೇವರೊಂದಿಗಿನ ಈ ಆಪ್ತ ಸಂಬಂಧದ ವಿಶಿಷ್ಟ ಲಕ್ಷಣದಿಂದಾಗಿ (ರಾಮ, ವಿಠಲ, ಕೃಷ್ಣ, ಶಿವ ಇತ್ಯಾದಿ ಎಲ್ಲ ಹೆಸರುಗಳೂ ಅವನವೇ) ಭಾರತದಾದ್ಯಂತ ಅನುಭಾವಿಗಳು ದೇವರೊಂದಿಗೆ ಕಾವ್ಯದಲ್ಲಿ ಸಂವಾದಿಸುವ ಅನಿವಾರ್ಯತೆಯನ್ನು ಕಂಡುಕೊಂಡರು. ಅತ್ಯಧಿಕ ಸಂಖ್ಯೆಯಲ್ಲಿ ಭಕ್ತರು ಶ್ರೇಷ್ಠ ಭಾವಗೀತಾತ್ಮಕವಾದ ಗಾಥಾನುರಕ್ತಿಯ ಆಡುಭಾಷೆಯ ಜಟಿಲವಾದ, ಪೆಡಸಾದ, ಹಾಸ್ಯ ಪೂರ್ಣವಾದ. ರಮ್ಯಭಾವಗಳ. ಕಠೋರವಾದ, ಸಂಕೀರ್ಣವಾದ, ವಿನೋದ ಪೂರ್ಣವಾದ ಕವಿತೆಗಳನ್ನು, ಹಾಡುಗಳನ್ನು ಬರೆದರು. ಕವಿತೆಯ ವಿಷಯವಂತೂ ಯಾವಾಗಲೂ ಅದೇ ದೇವರನ್ನು ಕುರಿತದ್ದೇ. ಅವನು ತಂದೆ. ಸ್ನೇಹಿತ, ಪ್ರೇಮಿ, ಸಂಗಾತಿ, ಆತ್ಮ ಸಖಿ.

ಅವನು ತುಂಬ ಎತ್ತರದವನಲ್ಲ, ಪ್ರತಿಷ್ಠೆಯವನೂ ಅಲ್ಲ. ಅವನನ್ನು ಕೀಟಲೆ ಮಾಡಬಹುದು. ಅವನಿಗೆ ಆಜ್ಞೆ ಮಾಡಬಹುದು, ಹಗಲೋ. ರಾತ್ರಿಯೋ ಯಾವಾಗ ಬೇಕಾದರೂ ಅವನನ್ನು ಎಬ್ಬಿಸಬಹುದು. ಇವನ್ನೆಲ್ಲ ಮಾಡಲು ಸಾಧ್ಯವಾಗುವುದು. ದೇವರೂ ತಾನೂ ಬೇರೆ ಅಲ್ಲ, ಒಂದೇ ಎಂದು ಭಾವಿಸುವುದರಿಂದ ಹಾಗೂ ದೇವರು ಮತ್ತು ಭಕ್ತನ ನಡುವೆ ಪ್ರತ್ಯೇಕತೆಯ ಗೆರೆ ಇಲ್ಲದಿರುವುದರಿಂದ.

ಕಬೀರ್, ಜ್ಞಾನೇಶ್ವರ್ ಕೃಷ್ಣಚೈತನ್ಯ, ತ್ಯಾಗರಾಜ, ತುಕಾರಾಮ್, ಲಲ್ಲ, ನಾಮದೇವ, ನರಸೀ ಭಾಗವತ್ ಮತ್ತು ಕಿರಿಯ ಸಂತಳಾದ ಮೀರಾ. ಅವರೆಲ್ಲರಿಗಿಂತ ಭಿನ್ನವಾಗಿ ರಾಜಕುಮಾರಿಯಾಗಿದ್ದವಳು ಅವಳೊಬ್ಬಳೇ. ಆಕೆ ಹುಟ್ಟಿದ್ದು 1498ರ ಸುಮಾರಿನಲ್ಲಿ. 1516ರಲ್ಲಿ ರಾಣಾ ಸಂಗನ ಮಗ ಮಹಾರಾಜಕುಮಾರ್ ಭೋಜರಾಜನೊಂದಿಗೆ ಅವಳಿಗೆ ಮದುವೆಯಾಯಿತು. ಅವಳ ಪ್ರೇಮ ಪ್ರಕರಣ ದೇವರೊಂದಿಗೇ ಆಗಿದ್ದರೂ, ಅದೊಂದು ಭಾರೀ ಹಗರಣವೇ ಆಗಿತ್ತು. ಆ ಕಾರಣಕ್ಕಾಗಿ ಅರಮನೆಯಲ್ಲಿ ಅವಳನ್ನು ಒಂದೇ ಸಮನೆ ಟೀಕಿಸಲಾಗುತ್ತಿತ್ತು ಮತ್ತು ಪೀಡಿಸಲಾಗುತ್ತಿತ್ತು. ಅವಳದೆಂದು ಹೇಳಲಾದ ಒಂದು ಹಾಡಿನಲ್ಲಿ, ಅತ್ತೆ, ಓರಗಿತ್ತಿ, ಮತ್ತು ರಾಣಾ (ವಿಕ್ರಮಾದಿತ್ಯ) ಇವರುಗಳಿಂದ ತನ್ನನ್ನು ಕಾಪಾಡಬೇಕೆಂದು ಶ್ರೀ ಕೃಷ್ಣನಿಗೆ ಮೊರೆಯಿಟ್ಟಿದ್ದಾಳೆ. ಬಹುಶಃ ವಿಷಪ್ರಾಶನದಿಂದಲೋ ಅಥವಾ ಬೇರಾವುದೋ ರೀತಿಯಲ್ಲಿ ಅವಳನ್ನು ನಿಜಕ್ಕೂ ಸಾಯಿಸಲು ಪ್ರಯತ್ನಿಸಿರಬೇಕು. ಅವಳ ಹೆಸರಿನ ಸುತ್ತಲೂ ಬೆಳೆದುಕೊಂಡ ದಂತಕತೆಗಳು ಮತ್ತು ಐತಿಹ್ಯಗಳಿಂದ ಅವಳ ಜೀವನ ವಿವರಗಳನ್ನು ಬೇರ್ಪಡಿಸುವುದು ಅಸಾಧ್ಯ. ರಾಜಕುಮಾರಿ ಹಾಗೂ ಅವಳ ದೈವೀ ಸಖನೊಂದಿಗಿನ ಪ್ರಣಯ ಕತೆಗೆ ಹಾಗೂ ಅವಳ ಅತ್ತೆ, ಓರಗಿತ್ತಿಯರಿಂದ ಅವಳು ಅನುಭವಿಸಿದ ಯಾತನೆಗೆ ಭಾರತೀಯ ಪ್ರತಿಭೆ ಅತ್ಯಂತ ಆಪ್ತವಾಗಿ ಸ್ಪಂದಿಸಿದೆ. ಅವಳದು ಸಾಕಷ್ಟು ಸಮೃದ್ಧವಾದ ಬರವಣಿಗೆ. ಅವಳ ಪ್ರೇಮ ಕಾವ್ಯ ಪಾಪ ನಿವೇದನೆಯ ರೂಪದಲ್ಲಿದೆ ಮತ್ತು ಈ ಆಧುನಿಕ ಕಾಲದಲ್ಲೂ ಅವಳಿಗೆ ಅಸಂಖ್ಯಾತ ಅನುಯಾಯಿಗಳಿದ್ದಾರೆ. ಅವಳ ರೂಪಕ ವಿನ್ಯಾಸ, ಮಾತಿನ ಭಂಗಿ ಮತ್ತು ಅವಳ ರಚನೆಗಳೆಲ್ಲವೂ ಭಾರತೀಯರ ಪ್ರಜ್ಞಾಪೂರ್ವಕ ಮತ್ತು ಅಪ್ರಜ್ಞಾಪೂರ್ವಕ ಶಬ್ದ ಭಂಡಾರದ ಭಾಗವಾಗಿ ಬಿಟ್ಟಿವೆ. ಅವಳ ಚಿತ್ರವನ್ನು ಎಲ್ಲಿ ಬೇಕಾದರೂ ಗುರುತಿಸಬಹುದು. ಕೃಷ್ಣನು ಯೋಗಿಯಾದರೆ ಅವಳು ಯೋಗಿಣಿ ಅಥವಾ ಭಕ್ತೆ. ಅವಳು ಸದಾ ಶ್ವೇತವಸನಧಾರಿಯಾಗಿ ಏಕತಾರಿಯನ್ನು ಮೀಟುತ್ತಿರುತ್ತಾಳೆ. ಅವಳು ಲೋಕದ ಕಡೆಗೆ ಎಂದಿಗೂ ಕಣ್ಣು ಹಾಯಿಸುವುದಿಲ್ಲ. ಅವಳೂ ತನ್ನ ದೇವನಲ್ಲಿಯೇ ಮುಳುಗಿ ಹೋಗಿ, ಅವನೆದುರಿನಲ್ಲಿ ಧ್ಯಾನಸ್ಥಿತಿಯಲ್ಲಿ ನಾಟ್ಯವಾಡುತ್ತಿರುತ್ತಾಳೆ.

ನಮಗೆಲ್ಲಾ ತಿಳಿದಿರುವಂತೆ ಕಿರಿಯ ಸಂತಳು ದೊಡ್ಡ ಸಂತಳಾದಳು. ಭಾರತದಲ್ಲಿ ಸಿನೆಮಾ ಎನ್ನುವುದು ಬದುಕಿನ ಅಳತೆಗೋಲು. ಭಾರತೀಯ ಚಲನಚಿತ್ರವು ಮತ್ತೆ ಮತ್ತೆ ಕಿರಿಯ ಸಂತಳ ಬದುಕಿಗೆ ಹೋಗುತ್ತಿರುತ್ತದೆ. ನ್ಯೂಯಾರ್ಕ್, ಮಾಸ್ಕೋ, ಲಂಡನ್ ಮತ್ತು ಇತರೆಡೆಗಳಲ್ಲಿರುವ ಹರೇಕೃಷ್ಣ ಪಂಥವೂ ಸೇರಿದಂತೆ ಎಲ್ಲ ಕೃಷ್ಣ ಪಂಥಗಳು ಹಸಿರುಗಣ್ಣಿನ ಚೆಲುವೆಗೆ ಅಪಾರವಾಗಿ ಋಣಿಯಾಗಿವೆ. ಸಂತ ಜೋನ್ ಆಫ್ ಆರ್ಕ್‌ಳಂತೆ, ಅವಳು ಅತ್ಯಂತ ಪ್ರಾಚೀನ ಸ್ತ್ರೀವಾದಿಯರಲ್ಲೊಬ್ಬಳು ಎಂದು ಎಂಬತ್ತರ ದಶಕದಲ್ಲಿ ಕಂಡುಕೊಳ್ಳಲಾಯಿತು. ಮೀರಳು, ನಾಟಕಗಳ, ನೃತ್ಯಗಳ, ಕಾವ್ಯದ ಮತ್ತು ಚಿತ್ರಕಲೆಯ ವಿಷಯವಾಗಿದ್ದಾಳೆ. ದೇಶಾದ್ಯಂತ ಅವಳ ಭಜನೆಗಳನ್ನು, ಪ್ರೇಮಕಾವ್ಯವನ್ನು ಮತ್ತು ಇತರೆ ರೀತಿಯ ಹಾಡುಗಳನ್ನು ಹಾಡುತ್ತಾರೆ. ಬೇರೆ ಯಾವುದೇ ಕವಿ ಅಥವಾ ಸಂತರ

ಹಾಡುಗಳಿಗಿಂತ ಬಹಳಷ್ಟು ಗಾಯಕರು ಅವಳ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡಿದ್ದಾರೆ. ಭಾರತದ ಇತರೆ ಭಕ್ತಿಪಂಥದ ಸಂತರು ಬೌದ್ಧಿಕವಾಗಿ ಮೀರಾಳಿಗಿಂತ ಹೆಚ್ಚು ಪ್ರಗಲ್ಭರಾಗಿದ್ದಿರಬಹುದು. ಆದರೆ ಅವರ ಪ್ರಸಿದ್ಧಿ ಏನಿದ್ದರೂ ಬಹುಮಟ್ಟಿಗೆ ಪ್ರಾದೇಶಿಕ. ಅವಳ ಹೆಸರು ಪ್ರತಿಯೊಬ್ಬ ಭಾರತೀಯನ ತುಟಿಗಳ ಮೇಲೆ ನಲಿಯುತ್ತಿದೆ.





ಕಿರಣ್ ನಗರ್‌ಕರ್: 1942ರಲ್ಲಿ ಮುಂಬೈಯಲ್ಲಿ ಜನಿಸಿದ ಇವರು ವಸಾಹತೋತ್ತರ ಭಾರತದ ಮಹತ್ವದ ಲೇಖಕರಲ್ಲೊಬ್ಬರು. ಕಾದಂಬರಿಕಾರ, ನಾಟಕಕಾರ, ಚಿತ್ರ ಮತ್ತು ನಾಟಕ ವಿಮರ್ಶಕ ಹಾಗು ಇಂಗ್ಲಿಷ್ ಮತ್ತು ಮರಾಠಿ ಚಿತ್ರಕಥಾ ಲೇಖಕ ಎಂದು ಹೆಸರಾದವರು. 'ಸಾತ್ ಸಕ್ಕಮ್ ತ್ರಿ ಚಾಲೀಸ್' ಅವರ ಪ್ರಸಿದ್ಧ ಮರಾಠಿ ಕಾದಂಬರಿ. ಇತ್ತೀಚೆಗೆ ಅದು 'Seven Sixes are Forty Three' ಎಂಬ ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದವಾಗಿದೆ. ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದಲ್ಲಿ ಅದೊಂದು ಮೈಲಿಗಲ್ಲೆಂದು ಹೆಸರಾಗಿದೆ. ಅವರ ಇಂಗ್ಲಿಷ್ ಕಾದಂಬರಿ Ravan and Eddie ಬಹು ಜನಪ್ರಿಯ ಕೃತಿಯೆಂದು ಹೇಳಲಾಗುತ್ತದೆ. ಅದು ಮರಾಠಿಗೂ ಅನುವಾದಿತವಾಗಿದೆ. ಅವರ ಇತ್ತೀಚಿನ ಕೃತಿ (2012) ಇದರ ಮುಂದುವರಿದ ಭಾಗವಾದ Extras.

ಕಿರಣ್ ನಗರ್‌ಕರ್ ಅವರ ಬರವಣಿಗೆಗೆ ಸರಾಗವಾಗಿ ಓದಿಸಿಕೊಂಡು ಹೋಗುವ ಗುಣದ ಜೊತೆಗೆ ಸ್ಪಷ್ಟತೆ ಇದೆ. ಅತ್ಯಂತ ಸಂಕೀರ್ಣವೂ ಸೂಕ್ಷ್ಮವೂ ಆದ ತಾತ್ವಿಕ ಪರಿಕಲ್ಪನೆಗಳ ಮೇಲೆ ತೀರ ಆಪ್ತವೂ ನೇರವೂ ಆದ ರೀತಿಯಲ್ಲಿ ಬೆಳಕು ಚೆಲ್ಲುವಲ್ಲಿ ಅವರ ಬರವಣಿಗೆಯ ಈ ಗುಣ ಅವರಿಗೆ ನೆರವಾಗಿದೆ. 'ಕಕೋಲ್ಡ್' ಕಾದಂಬರಿಯನ್ನು ಓದಿ ಮುಗಿಸಿದ ಬಹುಕಾಲದ ನಂತರವೂ ಅದು ನಿಮ್ಮ ಮನಸ್ಸನ್ನು ಕಾಡುತ್ತಿರುತ್ತದೆ.

ಆರ್. ಲಕ್ಷ್ಮೀನಾರಾಯಣ: 1949ರಲ್ಲಿ ಹುಟ್ಟಿದ ಇವರು ಅವರು ಹತ್ತಿರ ಹತ್ತಿರ ನಾಲ್ಕು ದಶಕಗಳ ಕಾಲ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕ, ಪ್ರಾಧ್ಯಾಪಕ, ಪ್ರಿನ್ಸಿಪಾಲ್ ಮತ್ತು ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ 2007ರಲ್ಲಿ ನಿವೃತ್ತರಾದವರು.

ಕುಂತಕನ 'ವಕ್ರೋಕ್ತಿ ಜೀವಿತ' ಕೃತಿಯನ್ನು 'ಕನ್ನಡ ವಕ್ರೋಕ್ತಿ ಜೀವಿತ' ಎಂಬ ಹೆಸರಿನಲ್ಲಿ ಅನುವಾದಿಸಿರುವುದಲ್ಲದೆ ಅದಕ್ಕೆ 2004ರ ರಾಜ್ಯ ಸಾಹಿತ್ಯ ಅಕಾಡೆಮಿಯ ಭಾಷಾಂತರ ಪ್ರಶಸ್ತಿ ಹಾಗೂ ಅದೇ ಕೃತಿಗೆ 2007ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪುರಸ್ಕಾರಗಳನ್ನು ಪಡೆದಿದ್ದಾರೆ. ಅವರ ಇತ್ತೀಚಿನ ಅನುವಾದಿತ ಕೃತಿ– 'ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು'.

Begudi (Kannada)

₹ 350

ISBN 81-260-4383-0

9 788126 043835